Reg. No. M. 1050,
'KODAGU' MERCARA, (Coorg).

ಕೊಡಗು

ಸಂಪಾದಕರು—ಟಿ. ವಿ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. 5-0-0

ಸಂಪುಟ ೨೯ | ತಾರೀಕು ೫-೧-೧೯೫೧ನೇ ಶುಕ್ರವಾರ | ಸಂಚಿಕೆ ೨೯

ಮಹರ್ಷಿ ಅರವಿಂದ ಘೋಷ್

ಲೇ:- ಶ್ರೀ. ಪಿ. ಎಸ್. ರಾಮಕೃಷ್ಣ ಬಿ ಎಸ್ಸಿ (ಆನರ್ಸ್) ಬಿ. ಟಿ

ಅರವಿಂದವು ಅರಳಿತು. ತನ್ನ ಮಂದಸ್ಮಿತ ಮಧುರ ಸೌರಭವನ್ನು ಜಗತ್ತಿಗೆ ಹರಡಿತು. ಬಾಲರವಿಯ ವಿಮಲ ಪ್ರಭೆಯಿಂದ ಅರಳಿದ ಅರವಿಂದವು ತನ್ನ ವರ್ಣರಂಜಿತ ಜೀವನ ವಿನ್ಯಾಸವನ್ನು ಮುಗಿಸಿ ಬಾಡಿತು. ಅರವಿಂದದ ಸುವಸೌರಭವು ಸನಾತನ ಭಾರತದ ವಿಶಾಲ ವಾತಾವರಣದಲ್ಲಿ ಸಮಾವೇಶಗೊಂಡು ವಿಶ್ವವ್ಯಾಪಿಯಾಯಿತು.

ಭರತಖಂಡವು ವೈದಿಕನಾಗರೀಕತೆಯ ನೆಲೆವೀಡು. ಸನಾತನ ಧರ್ಮದ ತವರೂರು. ಜ್ಞಾನಪಿಪಾಸುಗಳನ್ನು ತಣಿಸಲು ತವಕಗೊಂಡು ವಿಶ್ವದ ಮಹಾರಹಸ್ಯವನ್ನು ಒಡೆದು ಒಳಗಿನ ಅದ್ಭುತರಮ್ಯ ಚೈತನ್ಯತೆಯನ್ನು ಸಂದರ್ಶಿಸಿ ಕೃತಕೃತ್ಯರಾದ ಪ್ರಾಚೀನ ಮಹರ್ಷಿಗಳನ್ನು ಹೆತ್ತನಾಡು. ತಮ್ಮ ಸಾಧನೆಯಿಂದ ಆತ್ಮದ ಪರಮ ದುರ್ಲಭ ಶಾಂತಿಯನ್ನು ಗಳಿಸಿ ಮಾನವ ಕೋಟಿಯನ್ನು ಉದ್ಧರಿಸಿದ ಯಶೋಜೀವಿಗಳು ಭರತಖಂಡದಲ್ಲಿಯೇ ಅನೇಕರಿದ್ದು ಆಧ್ಯಾತ್ಮಿಕ ತತ್ವವನ್ನು ಸಾರಿದರು. ಅಂಥಹ ಪುಣ್ಯಭೂಮಿಯಲ್ಲಿ ಪ್ರಾಚೀನದಾರ್ಶನಿಕರಿಗೆ ಸರ್ವವಿಧದಿಂದಲೂ ಸಾಟಿಯಾದ ಯೋಗಿ ಅರವಿಂದ ಘೋಷರು ಜನಿಸಿ ೭೮ ವರ್ಷಗಳು ಜೀವಿಸಿ ವಿಶ್ವಕ್ಕೆ ಪರಮ ಪಾವನವಾದ ಸನಾತನ ಧರ್ಮರಹಸ್ಯವನ್ನು ಬೋಧಿಸಿ ಕೃತಕೃತ್ಯರಾಗಿ ತಮ್ಮ ಜೀವನಪ್ರವಾಹವನ್ನು ಡಿಸೆಂಬರ್ ೫ರಂದು ಅಂತ್ಯಗೊಳಿಸಿ ನಿರ್ಯಾಣರಾದರು. ಮಹಾ ಪ್ರತಿಭಾನ್ವಿತರೂ ಜ್ಞಾನಯೋಗಿಗಳೂ ಮಾನವ ಕುಟುಂಬದ ಐಕ್ಯತೆಯನ್ನು ಸಾರಿದ ತೇಜೋನ್ವಿತರೂ ಭಗವತ್ ಸಾಕ್ಷಾತ್ಕಾರದಿಂದ ಅಮರತ್ವವನ್ನು ಹೊಂದಿದವರೂ ಆದ ಮಹರ್ಷಿ ಅರವಿಂದಘೋಷರ ಜೀವನ ಚರಿತ್ರೆಯು ಭಾರತೀಯರಿಗೆ ಸರ್ವದಾ ಆದರ್ಶಮಯವೂ ಅನುಕರಣೀಯವೂ ಪ್ರಾತಃಸ್ಮರಣಾರ್ಹವೂ ಆಗಿ ದಿವ್ಯ ಜ್ಯೋತಿಸ್ಸಿನಿಂದ ವಿಭ್ರಾಜಿಸುತ್ತಲಿರುವುದು.

ತಮ್ಮ ಯೋಗಸಾಧನೆಯಿಂದ ವಿಶ್ವಪ್ರೇಮಿಕ ಪುರುಷನಾದ ಭಗವಂತನನ್ನು ಸಾಕ್ಷಾತ್ಕರಿಸಿ ಬ್ರಹ್ಮಜ್ಞಾನ ಸಂಪನ್ನರಾದ ಅರವಿಂದಘೋಷರು ಭರತಖಂಡಕ್ಕೆ ಆಶ್ಚರ್ಯರತ್ನಗಳನ್ನು ದಾನಮಾಡಿದ ಬಂಗಾಳ ದೇಶದ ಪ್ರಸಿದ್ಧ ಕುಟುಂಬವೊಂದರಲ್ಲಿ ಕಳೆದ ಶತಮಾನದ ಅಂತ್ಯದಲ್ಲಿ ಕ್ರಿ. ಶ. ೧೮೭೨ರ ಆಗಸ್ಟ್ ೧೫ರಲ್ಲಿ ಅವತರಿಸಿದರು. ಅವರು ತಮ್ಮ ಕೋಮಲ ವಯಸ್ಸಿನಲ್ಲಿ ತಮ್ಮ ೭ನೇ [illegible] ಜೊತೆಗೂಡಿ ಆಂಗ್ಲ ದೇಶಕ್ಕೆ ವಿದ್ಯಾಭ್ಯಾಸಕ್ಕಾಗಿ ತೆರಳಿ ಇಂಗ್ಲೆಂಡಿನ ಮ್ಯಾಂಚೆಸ್ಟರಿನಲ್ಲಿ ಆಂಗ್ಲ ಕುಟುಂಬವೊಂದರಲ್ಲಿ ಪ್ರೈಮರಿ ಶಿಕ್ಷಣವನ್ನು ಪಡೆದು ಲಂಡನಿನ ಸೆಂಟ್ ಪಾಲ್ಸ್ ಪ್ರೌಢಶಾಲೆಗೆ ೧೮೮೪ರಲ್ಲಿ ಸೇರಿದರು. ಸೆಂಟ್ ಪಾಲ್ಸ್ ಶಾಲೆಯಿಂದ ಉಚ್ಚ ತರಗತಿಯಲ್ಲಿ ತೇರ್ಗಡೆಹೊಂದಿ ವಿದ್ಯಾರ್ಥಿ ವೇತನ ಪಡೆದು ಕೇಂಬ್ರಿಜ್ಜ್ ವಿಶ್ವವಿದ್ಯಾನಿಲಯದ ಕಿಂಗ್ಸ್ ಕಾಲೇಜಿನಲ್ಲಿ ವಿದ್ಯಾರ್ಥಿಯಾಗಿ ಎರಡು ವರ್ಷ ವ್ಯಾಸಂಗ ಮಾಡಿದರು. ಇವರ ಕೇಂಬ್ರಿಜ್ಜ್ ವ್ಯಾಸಂಗದ ಸಮಯದಲ್ಲೇ ಗ್ರೀಕ್ ಮತ್ತು ಲ್ಯಾಟಿನ್ ಭಾಷೆಗಳ ಕವಿತೆಗಳಲ್ಲಿ ಇವರಿಗೆ ಅನೇಕ ಬಹುಮಾನಗಳು ದೊರೆತುವು. ವಿದ್ಯಾರ್ಥಿಜೀವನದಲ್ಲೇ ಕವಿಗಳಾದ ಅರವಿಂದರು ಕೇಂಬ್ರಿಜ್ಜಿನಲ್ಲಿ ಪ್ರಾರಂಭಿಸಲ್ಪಟ್ಟ ಭಾರತೀಯ ರಾಜಕೀಯ ಸಂಸ್ಥೆಯೊಂದರ ಸದಸ್ಯರಾಗಿ ಭಾರತದಲ್ಲಿ ಆಂಗ್ಲ ಶಾಸನವನ್ನು ಖಂಡಿಸುವುದರಲ್ಲಿ [illegible] ಪ್ರಬಲ ಸಾಹಸದಿಂದ ದುಡಿದರು. ಆದ್ದರಿಂದಲೇ ಇವರು ಐ. ಸಿ. ಎಸ್. ಸ್ಪರ್ಧಾ ಪರೀಕ್ಷೆಯಲ್ಲಿ ಎಲ್ಲ ಭಾಗದಲ್ಲೂ ತೇರ್ಗಡೆ ಹೊಂದಿದರೂ ಕುದುರೆ ಸವಾರಿಯಲ್ಲಿ ಯಶಸ್ವಿಗಳಾಗಲಿಲ್ಲವೆಂಬ ಕಾರಣದ ನೆವದಿಂದ ಆಂಗ್ಲ ಸರಕಾರವು ಇವರಿಗೆ ಐ. ಸಿ. ಎಸ್. ಪ್ರಶಸ್ತಿ ಕೊಡಲಿಲ್ಲ. ಇದರಿಂದ ಭಾರತದ ಆಧ್ಯಾತ್ಮಿಕ ಪ್ರಪಂಚಕ್ಕೆ ಅದ್ಭುತವಾದ ಉಪಕಾರವೇ ಆಯಿತು. ಏಕೆಂದರೆ ಆಂಗ್ಲ ಶಾಸನ ಯಂತ್ರದಲ್ಲಿ ಸಿಕ್ಕಿದ್ದರೆ ಯೋಗಿ ಅರವಿಂದರು ತಮ್ಮ ಸಾಧನೆಯನ್ನು ಮುಂದುವರಿಸಿ ಆತ್ಮಸಾಕ್ಷಾತ್ಕಾರ ಪಡೆದು ಸನಾತನಧರ್ಮದ ಪರಮ ದುರ್ಲಭ ಸುಧಾರಸವನ್ನು ಭಾರತೀಯರಿಗೆ ಉಣಿಸಲು ಶಕ್ತರಾಗುತ್ತಿದ್ದರೋ ಇಲ್ಲವೋ ಹೇಳಬಲ್ಲವರಾರು?

ಆಂಗ್ಲ ದೇಶದ ದೀರ್ಘಕಾಲದ ಅನುಭವ ಜ್ಞಾನಗಳನ್ನು ಸಂಪಾದಿಸಿದ ಅರವಿಂದರು ಮಾತೃಭೂಮಿಗೆ ೧೮೯೩ರಲ್ಲಿ ಆಗಮಿಸಿದರು. ಆ ಅವಧಿಯಿಂದ ೧೩ ದೀರ್ಘ ವರ್ಷಗಳ ವರೆಗೆ ಬರೋಡಾ ಸಂಸ್ಥಾನದ ಸರಕಾರದಲ್ಲಿ ಗಣ್ಯ ಅಧಿಕಾರ ವಹಿಸಿ ದುಡಿದರು. ಪ್ರಥಮತಃ ರೆವೆನ್ಯೂ ಇಲಾಖೆಯಲ್ಲಿದ್ದ ಅರವಿಂದರು ಶೈಕ್ಷಣಿಕ ಕ್ಷೇತ್ರಕ್ಕೆ ಕಾಲಿಟ್ಟು ಕಾಲೇಜಿನಲ್ಲಿ ಆಂಗ್ಲ ಸಾಹಿತ್ಯ ಪ್ರಾಧ್ಯಾಪಕರಾಗಿ [illegible] ಕಾಲೇಜಿನ ಉಪ ಪ್ರಾಧ್ಯಾಪಕರಾಗಿ ಕೆಲಸಮಾಡಿದರು. ಇದೇ ಸಮಯದಲ್ಲಿ [illegible] ಕಾಲದ [illegible] ಲೇಖನಿಯಿಂದ ಪ್ರಕಟಿಸಿದ ಲೋಕೋತ್ತರ ಲೇಖನಗಳನ್ನು ಓದಿದ [illegible] ಮಾತೃ ಪ್ರಾಂತ್ಯದ ಕರೆ ಬರುವ ವರೆಗೂ ಬರೋಡದಲ್ಲಿ ತಮ್ಮ ಅಮೂಲ್ಯ ಸೇವೆ ಸಲ್ಲಿಸಿ ೧೯೦೬ರಲ್ಲಿ ಕಲ್ಕತ್ತೆಗೆ ಆಗಮಿಸಿ ಅಲ್ಲಿ ಆಗ ತಾನೇ ಸ್ಥಾಪಿತವಾಗಿದ್ದ ವಂಗರಾಷ್ಟ್ರೀಯ ಕಲಾಶಾಲೆಯ ಪ್ರಧಾನಾಧಿಕಾರಿಯಾಗಿ ನಿಯಮಿತರಾದರು.

ವಿದ್ಯಾಗುರುವಾಗಿ, ಕವಿಗಳಾಗಿ ರಾಷ್ಟ್ರಮಾತೆಯ ಸೇವೆಸಲ್ಲಿಸಿದ ಅರವಿಂದರನ್ನು ರಾಜಕೀಯ ರಂಗಕ್ಕೆ ಎಳೆಯುವ ಮಹಾ ಘಟನೆಯೊಂದು ಸಂಪ್ರಾಪ್ತವಾಯಿತು. ವಂಗಮಾತೆಯು ತನ್ನ ಅವಿಚ್ಛಿನ್ನವಾದ ವೇದನೆಯನ್ನು ಸಹಿಸಲಾರದೆ ನಿರ್ಗಳವಾಗಿ ರೋದಿಸಿದಳು. ಮಾತೆಯ ನಿರವರೋದನದಿಂದ ಸುತರಲ್ಲಿ ಅಂತರ್ಗತವಾದ ರಾಜಕೀಯ ಪ್ರವೃತ್ತಿ ಪ್ರಚೋದನೆಗೊಂಡಿತು. ರಾಷ್ಟ್ರೀಯ ಸ್ವಾತಂತ್ರ್ಯಕ್ಕಾಗಿ ತಿಲಕ, ಗೋಖಲೆ ಮುಂತಾದವರ ಪ್ರಯತ್ನ ಮಿಂಚುತ್ತಿದ್ದ ಆ ಕಾಲದಲ್ಲೇ ಬಂಗಾಳವನ್ನು ಇಬ್ಭಾಗವಾಗಿ ಒಡೆಯಬೇಕೆಂದು ಅಂದಿನ ವೈಸರಾಯನಾದ ಲಾರ್ಡ್ ಕರ್ಜನನು ಹಂಚಿಕೆಹಾಕಿದನು. ಅರವಿಂದರು ತಮ್ಮ ಮಾತೃ ಪ್ರಾಂತ್ಯದ ವಿಭಜನೆಯ ಹಂಚಿಕೆಯಿಂದ ಉದ್ವೇಗಗೊಂಡು ಕೆರಳಿದ ಸಿಂಹದಂತೆ ಘರ್ಜಿಸಿ ರಾಜಕೀಯ ರಣಕಣಕ್ಕಿಳಿದರು. 'ವಂದೇ ಮಾತರಂ' 'ಕರ್ಮಯೋಗಿ' 'ಧರ್ಮ' ಮುಂತಾದ ಪತ್ರಿಕೆಗಳಿಂದ ತಮ್ಮ ಮೇಘಗಂಭೀರವಾಣಿಯನ್ನು ರಾಷ್ಟ್ರದ ನಾಲ್ದೆಸೆಗೆ ಹರಡಿ ಸುಪ್ತಾವಸ್ಥೆಯಲ್ಲಿದ್ದ ರಾಷ್ಟ್ರದ ಆತ್ಮವನ್ನು ಎಚ್ಚರಿಸಿದರು. ಸ್ವದೇಶೀ ಚಳುವಳಿ, ವಿದೇಶೀ ವಸ್ತುಗಳ ಬಹಿಷ್ಕಾರ, ರಾಷ್ಟ್ರೀಯ ಶಿಕ್ಷಣ ಕೇಂದ್ರಗಳ ಸ್ಥಾಪನೆ ಮುಂತಾದ ಉದ್ಯಮಗಳು ಕ್ರಾಂತಿಸಂಗದ ಪ್ರಧಾನಾಂಗಗಳಾದುವು. ವಂಗವಿಭಜನಾ ಸಮಸ್ಯೆಯು ರಾಷ್ಟ್ರೀಯ ಸಮಸ್ಯೆಯಾಯಿತು. ಉಗ್ರಕ್ರಾಂತಿವಾದಿಗಳಾದ ಅರವಿಂದರನ್ನು ಬ್ರಿಟಿಷ್ ಸರಕಾರವು ೧೯೦೭ರಲ್ಲೊಮ್ಮೆ ಬಂಧಿಸಿ ಕೆಲ ದಿನಗಳಲ್ಲೇ ಬಂಧಮುಕ್ತನನ್ನಾಗಿ ಮಾಡಿತಾದರೂ ೧೯೦೮ರಲ್ಲಿ ಮತ್ತೊಮ್ಮೆ ಬಂಧಿಸಿ ಪಿತೂರಿಯ ಆರೋಪ ಹೊರಿಸಿ, ಆಲೀಪುರ ಕಾರಾಗಾರದಲ್ಲಿ ಬಂಧಿಯಾಗಿ ಇರಿಸಿತು. ಈ ಸಮಯದಲ್ಲೇ ಅದ್ಭುತ ಪ್ರತಿಭಾನ್ವಿತರಾದ ಚಿತ್ತರಂಜನದಾಸರ ವಾದದಿಂದ ಅವರ ಬಿಡುಗಡೆಯಾಯಿತು. ೧೯೧೦ರಲ್ಲಿ ಮೂರನೆಯ ಸಲ ಸರಕಾರವು ಅವರನ್ನು ಬಂಧಿಸಲು ಸನ್ನಿಹಿತವಾಗಿದ್ದಾಗಲೇ ಅರವಿಂದರು ಬಂಗಾಳದಿಂದ ಪಲಾಯನಮಾಡಿ ಫ್ರೆಂಚ್ ವಸಾಹತಾದ ಪಾಂಡಿಚೇರಿಗೆ ಬಂದು ನೆಲೆನಿಂತರು. ೧೯೧೦ರ ಏಪ್ರೀಲ್ ೪ರಿಂದ ೧೯೫೦ರ ಡಿಸೆಂಬರ್ ೫ನೇ ತಾರೀಕಿನ ವರೆಗಿನ ೪೦ ವರ್ಷಗಳ ದೀರ್ಘ ಅವಧಿಯಲ್ಲಿ ಅರವಿಂದರು ಪ್ರಚಂಡ ಮಾನಸಿಕ ಸಂಯಮಪ್ರಗತಿಯನ್ನು ಗಳಿಸಲು ಯೋಗಾಭ್ಯಾಸಮಾಡಿ ಮಾನಸಿಕ ಶಾಂತಿ ಗಳಿಸಿ ಆತ್ಮಕಲ್ಯಾಣವನ್ನು ಸಾಧಿಸಿ [illegible] ಯಶೋಶರೀರಿಗಳಾದರು.

ಅರವಿಂದರು ಅಲಿಪುರ ಜೈಲಿನಲ್ಲಿದ್ದಾಗ ಅವರಿಗೆ ಜೀವನದ [illegible] ಅದ್ಭುತವಾದ ಅನುಭವವೊಂದುಂಟಾಯಿತು. ಅವರ ಬದ್ಧ ಕಣ್ಣುಗಳಿಗೆ ದೇದೀಪ್ಯಮಾನವಾದ ಪೆಟ್ಟಿಗೆಗಳೆಲ್ಲೂ ವ್ಯಾಪ್ತವಾದ ಅಮಾನುಷ ತೇಜವೊಂದು ಗೋಚರವಾಯಿತು. ಆ ತೇಜೋರಾಶಿಯು ಎಲ್ಲಿಂದ ಆವಿರ್ಭವಿಸಿದೆ ಎಂದು ನೋಡು ನೋಡುತ್ತಿರುವಲ್ಲೇ ವಿಶ್ವಪ್ರೇಮಿಕ ಪುರುಷನೂ ಗೋಪಿಜನ ಹೃದಯ ಸಾಮ್ರಾಜ್ಯ ಅಧಿನಾಯಕನೂ ಆದ ಭಗವಾನ್ ಶ್ರೀಕೃಷ್ಣನು ಅವರಿಗೆ ಗೋಚರಿಸಿದನು. ಇದೇ ಅನುಭವವು ಅವರಿಗೆ ನ್ಯಾಯಾಸ್ಥಾನದಲ್ಲೂ ಉಂಟಾಯಿತು. ಆ ದಿವ್ಯತೇಜಃಪುಂಜ ಲೀಲಾಮಾನುಷ ವಿಗ್ರಹನಾದ ಸನಾತನ ಪುರುಷನು ಅರವಿಂದರನ್ನು ಉದ್ದೇಶಿಸಿ, 'ಅರವಿಂದನೇ, ನಿನ್ನ [illegible] ಸಂದೇಹವಾದಗಳನ್ನು ಬಿಟ್ಟು ಕೇಳು. ಇದೋ ನಾನಿಲ್ಲಿ ನಿನ್ನ ಅಜ್ಞಾನಾಂಧಕಾರವನ್ನು ಕಡಿದಿಕ್ಕಿ ಜಗತ್ತಿಗೆ ನಿನ್ನಿಂದ ವೈದಿಕ ನಾಗರಿಕತೆಯ ಅಮರ ತತ್ವಗಳನ್ನು ಬಿತ್ತರಿಸಲು ಬದ್ಧಕಂಕಣನಾಗಿದ್ದೇನೆ. ಸನಾತನವಾದ ಆರ್ಯಧರ್ಮವನ್ನು ನಾನು ಪ್ರಾಚೀನ ಆರ್ಯರ ಮೂಲಕ, ವೇದೋಪನಿಷತ್ತುಗಳ ಮೂಲಕ ಜ್ಞಾನಿಗಳಾದ ಯೋಗಿಜೀವಿಗಳ ಮೂಲಕ ಜಗತ್ತಿಗೆ ಸಾರಿದ್ದೇನೆ. ಆ ಸನಾತನವಾದ ಆರ್ಯಧರ್ಮದ ಪುನರುತ್ಥಾನಕ್ಕೆ ನಿನ್ನನ್ನು ನಿಯಮಿಸಿದ್ದೇನೆ. ಹೋಗು! ಎದ್ದೇಳು! ಹಿಂದೂಧರ್ಮದ ಪರಮಪೀಯೂಷವನ್ನು ಜಗತ್ತಿಗೆ ಉಣಿಸು.' ಎಂದು ಸ್ಪಷ್ಟ ಶಬ್ದದಿಂದ ಉಚ್ಚರಿಸಿ ಅದೃಶ್ಯನಾದನು. ಕಂಡ ಅರವಿಂದರಲ್ಲಿ ಪ್ರಾಚೀನ ಆರ್ಯರ ತೇಜಸ್ಸು ಆವಿರ್ಭವಿಸಿ ರಾಜಕೀಯದಿಂದ ಆಧ್ಯಾತ್ಮಿಕ ಕ್ಷೇತ್ರಕ್ಕೆ ಅವರ ಜೀವಿತ ವಿನ್ಯಾಸವು ಪರಿವರ್ತನೆಗೊಂಡು ವಿಶ್ವವ್ಯಾಪಿಯಾದ ವಿರಾಟ್‌ಶಕ್ತಿಯ ಸಾಕ್ಷಾತ್ಕಾರಕ್ಕಾಗಿ ಆತುರಗೊಂಡ ಆ ಮಹನೀಯರು ಯೋಗಸಾಧನೆಗೈದು ಯೋಗಿ ಅರವಿಂದರಾಗಿ ತಮ್ಮ ಜ್ಞಾನಸಿದ್ಧಿಗಳನ್ನು ಎಲ್ಲೆಡೆಗಳಲ್ಲೂ ಹರಡಿದರು.

ಪಾಂಡಿಚೇರಿಗೆ ಆಗಮಿಸಿದ ಅರವಿಂದರು ತಮ್ಮ ಯೋಗಾಭ್ಯಾಸದಲ್ಲಿ ನಿರತರಾದರು. ಯೋಗಸಾಧನೆಯಲ್ಲಿ ೧೯೧೪ರಿಂದಲೂ ತೀವ್ರಾಸಕ್ತರಾದ ಆ ಪ್ರಾಜ್ಞರಿಗೆ ಮಹಾರಾಷ್ಟ್ರದ ವಿಷ್ಣುಭಾಸ್ಕರಲೀಲೆ ಎಂಬವರಿಂದ ಯೋಗಾಭ್ಯಾಸದ ಮಹಾರಹಸ್ಯವು ಉಪದೇಶಿಸಲ್ಪಟ್ಟಿತು. ಮನಸ್ಸಿನ ಆತುರದರ್ಪವನ್ನು ನಿಗ್ರಹಿಸಿ ವಿಶ್ವದಲ್ಲಿ ಲಯಹೊಂದಿಸಿದಾಗ ಯಾವ ಶಬ್ದ ನಿರ್ಮಾಣಕ್ಕಾದರೂ ಮೊದಲಿಗೆ ಸಂಬಂಧಿಸಿದ ಮನಸ್ಸಿಗೆ ತೀರಾ ಹೊರತಾದ ಅದ್ಭುತ ಮನಸ್ಸೊಂದರಿಂದ ಆಜ್ಞೆಗಳು ಬರುವವೆಂಬ ಅಸಾಧಾರಣ ರಹಸ್ಯವನ್ನು ಮಹಾರಾಷ್ಟ್ರದ ಯೋಗಿಯಿಂದ ಅರಿತ ಮೇಲೆ ಯೋಗಾಭ್ಯಾಸಿಗಳಾದ ಅರವಿಂದರು ಅಮಾನುಷ ಮನಸ್ಸನ್ನು ಆರಾಧಿಸಿ ಅದರ ಸಂಶೋಧಕರಾಗಿ ಆ ಅಮಾನುಷ ಮನಸ್ಸಿನೊಡನೆ ಆತ್ಮಸಂಧಾನಮಾಡಿ ಸಚ್ಚಿದಾನಂದವನ್ನು ಪಡೆದರು.

Reg. N

1951 JAN TO DEC

ಸಂಪಾದಕರು

ಸಂಪುಟ ೨೯ | ತಾರೀಕು ೫-೧-೧೯೫೧ನೇ ಶುಕ್ರವಾರ | ಸಂಚಿಕೆ ೨೯

ಮಹರ್ಷಿ ಅರವಿಂದ ಘೋಷ್

ಲೇ:- ಶ್ರೀ. ವಿ. ಎಸ್. ರಾಮಕೃಷ್ಣ ಬಿ ಎಸ್ಸಿ (ಆನರ್ಸ್) ಬಿ. ಟಿ

ಅರವಿಂದವು ಅರಳಿತು. ತನ್ನ ಮಂದಸ್ಮಿತ ಮಧುರ ಸೌರಭವನ್ನು ಜಗತ್ತಿಗೆ ಹರಡಿತು. ಬಾಲರವಿಯ ವಿಮಲ ಪ್ರಭೆಯಿಂದ ಅರಳಿದ ಅರವಿಂದವು ತನ್ನ ವರ್ಣರಂಜಿತ ಜೀವನ ವಿನ್ಯಾಸವನ್ನು ಮುಗಿಸಿ ಬಾಡಿತು. ಅರವಿಂದದ ನವಸೌರಭವು ಮಾತ್ರ ಬಾಡದೆ ವಿಶಾಲ ವಾತಾವರಣದಲ್ಲಿ ಸಮಾವೇಶಗೊಂಡು ವಿಶ್ವವ್ಯಾಪಿಯಾಯಿತು.

ಭರತಖಂಡವು ವೈದಿಕನಾಗರೀಕತೆಯ ನೆಲೆವೀಡು. ಸನಾತನ ಧರ್ಮದ ತವರೂರು. ಜ್ಞಾನಪಿಪಾಸುವನ್ನು ಪಾನಿಸಲು ತವಕಗೊಂಡ ವಿಶ್ವದ ಮಹಾರಹಸ್ಯವನ್ನು ಒಡೆದು ಒಳಗಿನ ಅದ್ಭುತತರ ಪ್ರಜ್ಯೋತಿಯನ್ನು ಸಂದರ್ಶಿಸಿ ಕೃತಕೃತ್ಯರಾದ ಪ್ರಾಚೀನ ಮಹರ್ಷಿಗಳನ್ನು ಹೆತ್ತನಾಡು. ತಮ್ಮ ಸಾಧನೆಯಿಂದ ಆತ್ಮದ ಪರಮ ದುರ್ಲಭ ಶಾಂತಿಯನ್ನು ಗಳಿಸಿ ಮಾನವ ಕೋಟಿಯನ್ನು ಉದ್ಧರಿಸಿದ ತಪೋಜೀವಿಗಳು ಭರತಖಂಡದಲ್ಲಿಯೇ ಅವತರಿಸಿ ಆಧ್ಯಾತ್ಮಿಕ ತತ್ವವನ್ನು ಸಾರಿದರು. ಇಂತಹ ಪುಣ್ಯಭೂಮಿಯಲ್ಲಿ ಪ್ರಾಚೀನದಾರ್ಶನಿಕರಿಗೆ ಸರ್ವವಿಧದಿಂದಲೂ ಸಾಟಿಯಾದ ಯೋಗಿ ಅರವಿಂದ ಘೋಷರು ಜನಿಸಿ ೭೮ ವರ್ಷಗಳು ಜೀವಿಸಿ ವಿಶ್ವಕ್ಕೆ ಪರಮಪಾವನವಾದ ಸನಾತನ ಧರ್ಮರಹಸ್ಯವನ್ನು ಬೋಧಿಸಿ ಕೃತಕೃತ್ಯರಾಗಿ ತಮ್ಮ ಜೀವನಪ್ರವಾಹವನ್ನು ಡಿಸೆಂಬರ್ ೫ರಂದು ಅಂತ್ಯಗೊಳಿಸಿ ನಿರ್ಯಾಣರಾದರು. ಮಹಾ ಪ್ರತಿಭಾನ್ವಿತರೂ ಜ್ಞಾನಯೋಗಿಗಳೂ ಮಾನವ ಕುಟುಂಬದ ಏಕೈಕ ಐಕ್ಯತೆಯನ್ನು ಸಾರಿದ ತೇಜೋನ್ವಿತರೂ ಭಗವತ್ ಸಾಕ್ಷಾತ್ಕಾರದಿಂದ ಅಮರತ್ವವನ್ನು ಹೊಂದಿದವರೂ ಆದ ಮಹರ್ಷಿ ಅರವಿಂದ ಘೋಷರ ಜೀವನ ಚರಿತ್ರೆಯು ಭಾರತೀಯರಿಗೆ ಸರ್ವದಾ ಆದರ್ಶಮಯವೂ ಅನುಕರಣೀಯವೂ ಪ್ರಾತಃಸ್ಮರಣಾರ್ಹವೂ ಆಗಿ ದಿವ್ಯ ಜ್ಯೋತಿಸ್ಸಿನಿಂದ ವಿರಾಜಿಸುತ್ತಲಿರುವುದು.

ತಮ್ಮ ಯೋಗಸಾಧನೆಯಿಂದ ವಿಶ್ವಪ್ರೇಮಿಕ ಪುರುಷನಾದ ಭಗವಂತನನ್ನು ಸಾಕ್ಷಾತ್ಕರಿಸಿ ಬ್ರಹ್ಮಜ್ಞಾನ ಸಮಾವಿಷ್ಟರಾದ ಅರವಿಂದಘೋಷರು ಭರತಖಂಡಕ್ಕೆ ಅಧ್ಯಾತ್ಮರಹಸ್ಯಗಳನ್ನು ದಾನಮಾಡಿದರು. ಬಂಗಾಳ ದೇಶದ ಪ್ರಸಿದ್ಧ ಕುಟುಂಬವೊಂದರಲ್ಲಿ ಕಳೆದ ಶತಮಾನದ ಅಂತ್ಯದಲ್ಲಿ ಕ್ರಿ. ಶ ೧೮೭೨ರ ಆಗಸ್ಟ್ ೧೫ರಲ್ಲಿ ಅವತರಿಸಿದರು. ಅವರು ತಮ್ಮ ಕೇವಲ ಏಳನೆಯ ವಯಸ್ಸಿನಲ್ಲಿ ತಮ್ಮ ಅಣ್ಣಂದಿರೊಡನೆ ಆಂಗ್ಲ ದೇಶಕ್ಕೆ ವಿದ್ಯಾಭ್ಯಾಸಕ್ಕಾಗಿ ತೆರಳಿ ಇಂಗ್ಲೆಂಡಿನ ಮ್ಯಾಂಚೆಸ್ಟರಿನಲ್ಲಿ ಆಂಗ್ಲ ಕುಟುಂಬವೊಂದರಲ್ಲಿ ಶೈಶವ ಶಿಕ್ಷಣವನ್ನು ಪಡೆದು ಲಂಡನ್ನಿನ ಸೆಂಟ್ ಪಾಲ್ಸ್ ಪ್ರೌಢಶಾಲೆಗೆ ೧೮೮೫ರಲ್ಲಿ ಸೇರಿದರು. ಸೆಂಟ್ ಪಾಲ್ಸ್ ಶಾಲೆಯಿಂದ ಉಚ್ಚತರಗತಿಯಲ್ಲಿ ತೇರ್ಗಡೆಹೊಂದಿ ವಿದ್ಯಾರ್ಥಿ ವೇತನ ಪಡೆದು ಕೇಂಬ್ರಿಜ್ಜ್ ವಿಶ್ವವಿದ್ಯಾನಿಲಯದ ಕಿಂಗ್ಸ್ ಕಾಲೇಜಿನಲ್ಲಿ ವಿದ್ಯಾರ್ಥಿಯಾಗಿ ಎರಡು ವರ್ಷ ವ್ಯಾಸಂಗ ಮಾಡಿದರು. ಇವರ ಕೇಂಬ್ರಿಜ್ಜ್ ವ್ಯಾಸಂಗದ ಸಮಯದಲ್ಲೇ ಗ್ರೀಕ್ ಮತ್ತು ಲ್ಯಾಟಿನ್ ಭಾಷೆಗಳ ಕವಿತೆಗಳಲ್ಲಿ ಇವರಿಗೆ ಅನೇಕ ಬಹುಮಾನಗಳು ದೊರೆತುವು. ವಿದ್ಯಾರ್ಥಿಜೀವನದಲ್ಲೇ ಕವಿಗಳಾದ ಅರವಿಂದರು ಕೇಂಬ್ರಿಜ್ಜಿನಲ್ಲಿ ಪ್ರಾರಂಭಿಸಲ್ಪಟ್ಟ ಭಾರತೀಯ ರಾಜಕೀಯ ಸಂಸ್ಥೆಯೊಂದರ ಸದಸ್ಯರಾಗಿ ಭಾರತದಲ್ಲಿ ಆಂಗ್ಲ ಶಾಸನವನ್ನು [illegible] ಪ್ರಬಲ ಸಾಹಸದಿಂದ ನುಡಿದರು. ಆದ್ದರಿಂದಲೇ ಇವರು ಐ. ಸಿ. ಎಸ್. ಸ್ಪರ್ಧಾ ಪರೀಕ್ಷೆಯಲ್ಲಿ ಎಲ್ಲ ಭಾಗದಲ್ಲೂ ತೇರ್ಗಡೆ ಹೊಂದಿದರೂ ಕುದುರೆ ಸವಾರಿಯಲ್ಲಿ ಯಶಸ್ವಿಗಳಾಗಲಿಲ್ಲವೆಂಬ ಕಾರಣ ನೆಪಹೂಡಿ ಆಂಗ್ಲ ಸರಕಾರವು ಇವರಿಗೆ ಐ. ಸಿ. ಎಸ್. ಪ್ರಶಸ್ತಿ ಕೊಡಲಿಲ್ಲ. ಇದರಿಂದ ಭಾರತದ ಆಧ್ಯಾತ್ಮಿಕ ಪ್ರಪಂಚಕ್ಕೆ ಅದ್ಭುತವಾದ ಉಪಕಾರವೇ ಆಯಿತು. ಏಕೆಂದರೆ ಆಂಗ್ಲ ಶಾಸನ ಯಂತ್ರದಲ್ಲಿ ಸಿಕ್ಕಿದ್ದರೆ ಯೋಗಿ ಅರವಿಂದರು ತಮ್ಮ ಸಾಧನೆಯನ್ನು ಮುಂದುವರಿಸಿ ಆತ್ಮಸಾಕ್ಷಾತ್ಕಾರ ಪಡೆದು ಸನಾತನಧರ್ಮದ ಪರಮ ದುರ್ಲಭ ಸುಧಾರಸವನ್ನು ಭಾರತೀಯರಿಗೆ ಉಣಿಸಲು ಶಕ್ತರಾಗುತ್ತಿದ್ದರೋ ಇಲ್ಲವೋ ಹೇಳಬಲ್ಲವರಾರು?

ಆಂಗ್ಲ ದೇಶದ ದೀರ್ಘಕಾಲದ ಅನುಭವ ಜ್ಞಾನಗಳನ್ನು ಸಂಪಾದಿಸಿದ ಅರವಿಂದರು ಮಾತೃಭೂಮಿಗೆ ೧೮೯೩ರಲ್ಲಿ ಆಗಮಿಸಿದರು. ಆ ಅವಧಿಯಿಂದ ೧೩ ದೀರ್ಘ ವರ್ಷಗಳ ವರೆಗೆ ಬರೋಡಾ ಸಂಸ್ಥಾನದ ಸರಕಾರದಲ್ಲಿ ಗಣ್ಯ ಅಧಿಕಾರ ವಹಿಸಿ ದುಡಿದರು. ಪ್ರಥಮ ರೆವಿನ್ಯೂ ಇಲಾಖೆಯಲ್ಲಿದ್ದ ಅರವಿಂದರು ಶೈಕ್ಷಣಿಕ ಕ್ಷೇತ್ರಕ್ಕೆ ಕಾಲಿಟ್ಟು ಕಾಲೇಜಿನಲ್ಲಿ ಆಂಗ್ಲ ಸಾಹಿತ್ಯ ಪ್ರಾಧ್ಯಾಪಕರಾಗಿ ತರುವಾಯ ಕಾಲೇಜಿನ ಉಪ ಪ್ರಾಧಿಕಾರಿಯಾಗಿ ಕೆಲಸ ಮಾಡಿದರು. ಇದೇ ಸಮಯದಲ್ಲಿ ಅವರು ಕೆಲಕಾಲದ ಬಳಿಕ ಪಾಂಡಿಚೇರಿಯಿಂದ ಪ್ರಕಟಿಸಿದ ಲೋಕೋತ್ತರ ಗ್ರಂಥಗಳನ್ನು ಬರೆದರು. ತಮ್ಮ ಮಾತೃಪ್ರಾಂತ್ಯದ ಕರೆ ಬರುವ ವರೆಗೂ ಬರೋಡದಲ್ಲಿ ತಮ್ಮ ಅಮೂಲ್ಯ ಸೇವೆ ಸಲ್ಲಿಸಿ ೧೯೦೬ರಲ್ಲಿ ಕಲಕತ್ತೆಗೆ ಆಗಮಿಸಿ ಅಲ್ಲಿ ಆಗ ತಾನೇ ಸ್ಥಾಪಿತವಾಗಿದ್ದ ವಂಗರಾಷ್ಟ್ರೀಯ ಕಲಾಶಾಲೆಯ ಪ್ರಧಾನಾಧಿಕಾರಿಯಾಗಿ ನಿಯಮಿತರಾದರು.

ವಿದ್ಯಾಗುರುವಾಗಿ, ಕವಿಗಳಾಗಿ ರಾಷ್ಟ್ರಮಾತೆಯ ಸೇವೆ ಸಲ್ಲಿಸಿದ ಅರವಿಂದರನ್ನು ರಾಜಕೀಯ ರಂಗಕ್ಕೆ ಎಳೆಯುವ ಮಹಾಘಟನೆಯೊಂದು ಸಂಪ್ರಾಪ್ತವಾಯಿತು. ವಂಗಮಾತೆಯು ತನ್ನ ಅವಿಶ್ರಾಂತವಾದ ವೇದನೆಯನ್ನು ಸಹಿಸಲಾರದೆ ನಿರ್ಗಳವಾಗಿ ರೋದಿಸಿದಳು. ಮಾತೆಯ ನೀರವರೋದನದಿಂದ ಸುತನಲ್ಲಿ ಅಂತರ್ಗತವಾದ ರಾಜಕೀಯ ಪ್ರವೃತ್ತಿ ಪ್ರಚೋದನೆಗೊಂಡಿತು. ರಾಷ್ಟ್ರೀಯ ಸ್ವಾತಂತ್ರ್ಯಕ್ಕಾಗಿ ತಿಲಕ, ಗೋಖಲೆ ಮುಂತಾದವರು ಶ್ರಮಿಸುತ್ತಿದ್ದ ಆ ಕಾಲದಲ್ಲೇ ಬಂಗಾಳವನ್ನು ಇಬ್ಭಾಗವಾಗಿ ಒಡೆಯಬೇಕೆಂದು ಅಂದಿನ ವೈಸರಾಯನಾದ ಲಾರ್ಡ್ ಕರ್ಜನನು ಹಂಚಿಕೆ ಹಾಕಿದನು. ಅರವಿಂದರು ತಮ್ಮ ಮಾತೃ ಪ್ರಾಂತ್ಯದ ವಿಭಜನೆಯ ಹಂಚಿಕೆಯಿಂದ ಉದ್ವೇಗಗೊಂಡು ಕೆರಳಿದ ಸಿಂಹದಂತೆ ಘರ್ಜಿಸಿ ರಾಜಕೀಯ ರಣಕಣಕ್ಕಿಳಿದರು. 'ವಂದೇ ಮಾತರಂ' 'ಕರ್ಮಯೋಗಿ' 'ಧರ್ಮ' ಮುಂತಾದ ಪತ್ರಿಕೆಗಳಿಂದ ತಮ್ಮ ಮೇಘಗಂಭೀರವಾಣಿಯನ್ನು ರಾಷ್ಟ್ರದ ನಾಲ್ದೆಸೆಗೆ ಹರಡಿ ಸುಪ್ತಾವಸ್ಥೆಯಲ್ಲಿದ್ದ ರಾಷ್ಟ್ರದ ಆತ್ಮವನ್ನು ಎಚ್ಚರಿಸಿದರು. ಸ್ವದೇಶೀ ಚಳುವಳಿ, ವಿದೇಶೀ ವಸ್ತುಗಳ ಬಹಿಷ್ಕಾರ, ರಾಷ್ಟ್ರೀಯ ಶಿಕ್ಷಣ ಕೇಂದ್ರಗಳ ಸ್ಥಾಪನೆ ಮುಂತಾದ ಉದ್ಯಮಗಳು ಕ್ರಾಂತಿಯುಗದ ಪ್ರಧಾನಾಂಗಗಳಾದುವು. ವಂಗವಿಭಜನಾ ಸಮಸ್ಯೆಯು ರಾಷ್ಟ್ರೀಯ ಸಮಸ್ಯೆಯಾಯಿತು. ಉಗ್ರಕ್ರಾಂತಿವಾದಿಗಳಾದ ಅರವಿಂದರನ್ನು ಬ್ರಿಟಿಷ್ ಸರಕಾರವು ೧೯೦೭ರಲ್ಲೊಮ್ಮೆ ಬಂಧಿಸಿ ಕೆಲ ದಿನಗಳಲ್ಲೇ ಬಂಧವಿಮುಕ್ತರನ್ನಾಗಿ ಮಾಡಿತಾದರೂ ೧೯೦೮ರಲ್ಲಿ ಮತ್ತೊಮ್ಮೆ ಬಂಧಿಸಿ ಸಿತೂರಿಯ ಆರೋಪ ಹೊರಿಸಿ, ಅಲೀಪುರ ಕಾರಾಗಾರದಲ್ಲಿ ಬಂಧಿಯಾಗಿ ಇರಿಸಿತು. ಈ ಸಮಯದಲ್ಲೇ ಅದ್ಭುತ ಪ್ರತಿಭಾನ್ವಿತರಾದ ಚಿತ್ತರಂಜನದಾಸರ ವಾದದಿಂದ ಅವರ ಬಿಡುಗಡೆಯಾಯಿತು. ೧೯೧೦ರಲ್ಲಿ ಮೂರನೆಯ ಸಲ ಸರಕಾರವು ಅವರನ್ನು ಬಂಧಿಸಲು ಸನ್ನಿಹಿತವಾಗಿದ್ದಾಗಲೇ ಅರವಿಂದರು ಬಂಗಾಳದಿಂದ ಪಲಾಯನಮಾಡಿ ಫ್ರೆಂಚ್ ವಸಾಹತಾದ ಪಾಂಡಿಚೇರಿಗೆ ಬಂದು ನೆಲೆನಿಂತರು. ೧೯೧೦ರ ಏಪ್ರೀಲ್ ೪ರಿಂದ ೧೯೫೦ರ ಡಿಸೆಂಬರ್ ೫ನೇ ತಾರೀಕಿನ ವರೆಗಿನ ೪೦ ವರ್ಷಗಳ ದೀರ್ಘ ಅವಧಿಯಲ್ಲಿ ಅರವಿಂದರು ಪ್ರಚಂಡ ಮಾನಸೀಕ ಸಂಯಮಗಳನ್ನು ಗಳಿಸಲು ಯೋಗಾಭ್ಯಾಸಮಾಡಿ ಮಾನಸೀಕ ಶಾಂತಿಗಳಿಸಿ ಆತ್ಮಕಲ್ಯಾಣವನ್ನು ಸಾಧಿಸಿಕೊಂಡು ಯಶಃಶರೀರಿಗಳಾದರು.

ಅರವಿಂದರು ಅಲಿಪುರ ಜೈಲಿನಲ್ಲಿದ್ದಾಗ ಅವರಿಗೆ ಅಮೂಲ್ಯವಾದ ಅದ್ಭುತವಾದ ಅನುಭವವೊಂದುಂಟಾಯಿತು. ಅವರ ಬಾಹ್ಯ ಕಣ್ಣುಗಳಿಗೆ ದೇದೀಪ್ಯಮಾನವಾದ ಎಲ್ಲೆಡೆಗಳಲ್ಲೂ ವ್ಯಾಪ್ತವಾದ ಅಮಾನುಷ ತೇಜವೊಂದು ಗೋಚರವಾಯಿತು. ಆ ತೇಜೋರಾಶಿಯು ಎಲ್ಲಿಂದ ಆವಿರ್ಭವಿಸಿದೆ ಎಂದು ನೋಡು ನೋಡುತ್ತಿರುವಲ್ಲೇ ವಿಶ್ವಪ್ರೇಮಿಕ ಪುರುಷನೂ ಗೋಪಿಜನಹೃದಯ ಸಾಮ್ರಾಜ್ಯ ಅಧಿನಾಯಕನೂ ಆದ ಭಗವಾನ್ ಶ್ರೀಕೃಷ್ಣನು ಅವರಿಗೆ ಗೋಚರಿಸಿದನು. ಇದೇ ಅನುಭವವು ಅವರಿಗೆ ನ್ಯಾಯಾಸ್ಥಾನದಲ್ಲೂ ಉಂಟಾಯಿತು. ಆ ದಿವ್ಯತೇಜಃಪುಂಜ ಲೀಲಾಮಾನುಷ ವಿಗ್ರಹನಾದ ಸನಾತನ ಪುರುಷನು ಅರವಿಂದರನ್ನು ಉದ್ದೇಶಿಸಿ, 'ಅರವಿಂದನೇ, ನಿನ್ನ [illegible] ಸಂದೇಹವಾದಗಳನ್ನು ಬಿಟ್ಟು ಕೇಳು. ಇದೋ ನಾನಿಲ್ಲಿ ನಿನ್ನ ಅಜ್ಞಾನಾಂಧಕಾರವನ್ನು ಕಡಿದಿಕ್ಕಿ ಜಗತ್ತಿಗೆ ನಿನ್ನಿಂದ ವೈದಿಕ ನಾಗರಿಕತೆಯ ಅಮರ ತತ್ವವನ್ನು ಬಿತ್ತರಿಸಲು ಬದ್ಧಕಂಕಣನಾಗಿದ್ದೇನೆ. ಸನಾತನವಾದ ಆರ್ಯಧರ್ಮವನ್ನು ನಾನು ಪ್ರಾಚೀನ ಋಷಿಗಳ ಮೂಲಕ, ವೇದೋಪನಿಷತ್ತುಗಳ ಮೂಲಕ ಜ್ಞಾನಿಗಳಾದ ಯೋಗಿಜೀವಿಗಳ ಮೂಲಕ ಜಗತ್ತಿಗೆ ಸಾರಿದ್ದೇನೆ. ಆ ಸನಾತನವಾದ ಆರ್ಯಧರ್ಮದ ಪುನರುತ್ಥಾನಕ್ಕೆ ನಿನ್ನನ್ನು ನಿಯಮಿಸಿದ್ದೇನೆ. ಹೋಗು! ಎದ್ದೇಳು! ಹಿಂದೂಧರ್ಮದ ಪರಮಪೀಯೂಷವನ್ನು ಜಗತ್ತಿಗೆ ಉಣಿಸು.' ಎಂದು ಸ್ಪಷ್ಟ ಶಬ್ದದಿಂದ ಉಚ್ಚರಿಸಿ ಅದೃಶ್ಯನಾದನು. ಕಂಡ ಅರವಿಂದರಲ್ಲಿ ಪ್ರಾಚೀನ ಆರ್ಯರ ತೇಜಸ್ಸು ಆವಿರ್ಭವಿಸಿ ರಾಜಕೀಯದಿಂದ ಆಧ್ಯಾತ್ಮಿಕ ಕ್ಷೇತ್ರಕ್ಕೆ ಅವರ ಜೀವಿತ ವಿನ್ಯಾಸವು ಪರಿವರ್ತನೆಗೊಂಡು ವಿಶ್ವವ್ಯಾಪಿಯಾದ ವಿರಾಟಶಕ್ತಿಯ ಸಾಕ್ಷಾತ್ಕಾರಕ್ಕಾಗಿ ಆತುರಗೊಂಡ ಆ ಮಹನೀಯರು ಯೋಗಸಾಧನೆಗೈದು ಯೋಗಿ ಅರವಿಂದರಾಗಿ ತಮ್ಮ ಜ್ಞಾನಸಂದೇಶವನ್ನು ಎಲ್ಲೆಡೆಗಳಲ್ಲೂ ಹರಡಿದರು.

ಪಾಂಡಿಚೇರಿಗೆ ಆಗಮಿಸಿದ ಅರವಿಂದರು ತಮ್ಮ ಯೋಗಭ್ಯಾಸದಲ್ಲಿ ನಿರತರಾದರು. ಯೋಗಸಾಧನೆಯಲ್ಲಿ ೧೯೦೮ರಿಂದಲೂ ತೀವ್ರಾಸಕ್ತರಾದ ಆ ಪ್ರಾಜ್ಞರಿಗೆ ಮಹಾರಾಷ್ಟ್ರದ ವಿಷ್ಣುಭಾಸ್ಕರಲೇಲೆ ಎಂಬವರಿಂದ ಯೋಗಾಭ್ಯಾಸದ ಮಹಾರಹಸ್ಯವು ಉಪದೇಶಿಸಲ್ಪಟ್ಟಿತು. ಮನಸ್ಸಿನ ಅತುಳದರ್ಪವನ್ನು ನಿಗ್ರಹಿಸಿ ವಿಶ್ವಶಕ್ತಿಯಲ್ಲಿ ಲಯಹೊಂದಿಸಿದಾಗ ಯಾವ ಕಲುಷ ನಿವಾರಣಕ್ಕಾದರೂ ಮನುಜನಿಗೆ ಸಂಬಂಧಿಸಿದ ಮನಸ್ಸಿಗೆ ತೀರಾ ಹೊರತಾದ ಅದ್ಭುತ ಮನಸ್ಸೊಂದರಿಂದ ಆಜ್ಞೆಗಳು ಬರುವವೆಂಬ ಅಸಾಧಾರಣ ರಹಸ್ಯವನ್ನು ಮಹಾರಾಷ್ಟ್ರದ ಯೋಗಿಯಿಂದ ಅರಿತ ಮೇಲೆ ಯೋಗಾಭ್ಯಾಸಿಗಳಾದ ಅರವಿಂದರು ಅಮಾನುಷ ಮನಸ್ಸನ್ನು ಆರಾಧಿಸಿ ಅದರ ಸಂಶೋಧಕರಾಗಿ ಆ ಅಮಾನುಷ ಮನಸ್ಸಿನೊಡನೆ ಆತ್ಮಸಂಧಾನಮಾಡಿ ಸಚ್ಚಿದಾನಂದವನ್ನು ಪಡೆದರು.

೧೯೧೪ ರಲ್ಲಿ ಅರವಿಂದರು 'ಆರ್ಯ' ಎಂಬ ಪತ್ರಿಕೆಯನ್ನು ಪಾಂಡಿಚೇರಿಯಿಂದ ಹೊರಡಿಸಿ ವೈದಿಕ ಧರ್ಮ, ಯೋಗ, ಗೀತಾರಹಸ್ಯ, ಉಪನಿಷತ್ತು, ಮುಂತಾದ ಸನಾತನ ತತ್ವಗಳ ಕುರಿತು ಲೇಖನಗಳನ್ನು ಬರೆದರು. ೧೯೨೬ರಿಂದ ಸಾರ್ವಜನಿಕ ಕಾರ್ಯಗಳಿಂದ ನಿವೃತ್ತರಾಗಿ ಏಕಾಂತಜೀವನವನ್ನು ಕೈಗೊಂಡು ಭಕ್ತರಿಗೆ ವರ್ಷದ ಕೆಲವೇ ದಿನಗಳಲ್ಲಿ ಮಾತ್ರ ದರ್ಶನವೀಯುತ್ತಿದ್ದರಾದರೂ ಅವರ ಮಹಾನಿರ್ಯಾಣ ಕಾಲದ ವರೆಗೂ ಭಾರತದ ರಾಜಕೀಯದಲ್ಲೂ ವಿಶ್ವರಾಜಕೀಯದಲ್ಲೂ ತೀವ್ರಾಸಕ್ತಿಯುಳ್ಳವರಾಗಿದ್ದರು. ಅವರ ಪಾಂಡಿಚೇರಿಯ ಆಶ್ರಮವು ಬೆಳೆಯುತ್ತಾಗಿ ೮೦೦ಕ್ಕಿಂತಲೂ ಹೆಚ್ಚು ಸಾಧಕರಿಗೆ ಆವಾಸ ಭೂಮಿಯಾಯಿತು. ಪಾರಕರಿಗೆ ಅವಾಸ ಭೂಮಿಯಾಗಿತು. ಮಹಾಧಾರ್ಮಿಕ ಜೀವಿಯಾದ ಫ್ರಾನ್ಸಿನ ಮಹಿಳೆಯೊಬ್ಬರು 'ಮದರ್' ಎಂದು ಸಂಬೋಧಿಸಲ್ಪಡುತ್ತ ಆಶ್ರಮವಾಸಿನಿಯಾಗಿ ಆಶ್ರಮದ ಯಜಮಾನ್ಯವನ್ನು ವಹಿಸಿಕೊಂಡಳು.

ಯೋಗಾಭ್ಯಾಸದ ಮೂಲಕ ವಿರಾಟ ವಿಶ್ವವ್ಯಾಪಿ ತತ್ವದಲ್ಲಿ ತಿರಿಯ ಆತ್ಮವನ್ನು ಲಯಗೊಳಿಸಿ ಮಾನವ ಜನ್ಮಸಾಫಲ್ಯವನ್ನು ಪಡೆದ ಅರವಿಂದರು ಕೆಲವೇ ದಿನಗಳ ಅಸ್ವಸ್ಥತೆಯಿಂದ ಮಹಾಸಮಾಧಿಯನ್ನು ಪಡೆದರು. ಡಿಸೆಂಬರ್ ೫ ರಂದು ಆ ಮಹೋನ್ನತ ಶರೀರದಲ್ಲಿ ಅಡಗಿದ್ದ ದಿವ್ಯಜ್ಯೋತಿ ಬಂಧಮುಕ್ತವಾಗಿ ವಿಶ್ವದ ಮಹಾಜ್ಯೋತಿಯಲ್ಲಿ ಲೀನವಾಯಿತು. ಥಳಥಳಿಸುವ ಆ ಶರೀರವಾದರೋ ಯೋಗಾಭ್ಯಾಸದ ಬಲದಿಂದ ದೀಪ್ತವಾಗಿದ್ದರಿಂದ ಬಹುಕಾಲದ ವರೆಗೂ ಕೆಡದೆ ಉಳಿದಿದ್ದು ಯುಕ್ತಕಾಲದಲ್ಲಿ ಸಮಾಧಿಮಾಡಲ್ಪಟ್ಟಿತು. ಪಾಂಡಿಚೇರಿಯ ಆಶ್ರಮವು ಭಾರತೀಯರ ಯಾತ್ರಾಸ್ಥಳವಾಗಿ ಭಾರತದ ಹೃದಯದಂತೆ ದಿವ್ಯತೇಜಸ್ಸಿನಿಂದ ರಂಜಿಸಿತು.

ಯೋಗೀಶ್ವರರಾಗಿ ಮಾನವಜೀವನದ ಮಹಾಸೋಪಾನವನ್ನೇರಿ ಅರ್ಷೇಯ ಸನಾತನ ತತ್ವವನ್ನು ಜಗತ್ತಿಗೆ ಸಾರಿ ವಿಶ್ವಶಕ್ತಿಯೊಂದಿಗೆ ಲೀನವಾದ ಮಹರ್ಷಿ ಅರವಿಂದಘೋಷರ ಅಮರ ತತ್ವದಿಂದ ಭಾರತೀಯರು ವಿಶ್ವತತ್ವ ವೇದಾಂತ ಜನನಿಯ ಸ್ತನ್ಯಪಾನದಿಂದ ತೃಪ್ತಿ ಹೊಂದಿ ಇಹಪರ ಯಶಸ್ಸನ್ನು ಗಳಿಸಿ ಆದರ್ಶ ಜೀವಿಗಳಾಗಿ ಬಾಳಲಿ!!!

ಓಂ ಶಾಂತಿಃ

ಕನ್ನಡ ಸಾಹಿತ್ಯ ಸಮ್ಮೇಳನ.

ಕನ್ನಡ ಸಾಹಿತ್ಯ ಸಮ್ಮೇಳನದ ೩೪ನೇ ಅಧಿವೇಶನವು ಮುಂಬಯಿಯ ಕವಾಸ್ಜಿ ಜಹಾಂಗೀರ್ ಸಭಾ ಭವನದಲ್ಲಿ ನಡೆಯಿತು. ಭಾರತ ಸರಕಾರದ ಪ್ರಚಾರ ಮತ್ತು ಬಾನುಲಿ ಮಂತ್ರಿಗಳಾದ ಶ್ರೀ. ರಂಗನಾಥ ರಾಮಚಂದ್ರ ದಿವಾಕರರವರು ಪರಿಷತ್ತನ್ನು ಉದ್ಘಾಟಿಸಿದರು. ಅವರು ತಮ್ಮ ಭಾಷಣದಲ್ಲಿ—

ಇತ್ತೀಚೆಗೆ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಸಾಕಷ್ಟು ಕಾರ್ಯ ನಡೆದಿದೆಯಾದರೂ ಮಾಡಬೇಕಾದ ಕೆಲಸ ಬಹಳವಾಗಿರುತ್ತದೆ. ಇತರ ಸಾಹಿತ್ಯಗಳಲ್ಲಿ ಉಂಟಾಗಿರುವ ಬೆಳವಣಿಗೆಯನ್ನು ತಿಳಿದುಕೊಂಡು ಕನ್ನಡಿಗರು ತಾವು ಹಿಂದೆ ಬಿದ್ದಿದ್ದೇವೆ ಎಂಬುದನ್ನು ಗಮನಿಸಬೇಕು. ಕೆಲವು ವಿಷಯಗಳಲ್ಲಿ ನಾವು ಮುಂದೆ ಬಿದ್ದಿರುವೆವಾದರೂ ಆ ಬಗ್ಗೆ ಹೆಮ್ಮೆ ಪಡಬೇಕ.

ಸಾಹಿತ್ಯ ವಾಹಿನಿಯು ನಮ್ಮ ಜೀವನದಿಂದ ಹರಿಯುವ ಮಹಾ ನದಿ. ಹೂವಿನಿಂದ ಮಾಧುರ್ಯವು ಯಾವ ರೀತಿಯಲ್ಲಿ ಹೊರಹೊಮ್ಮುವುದೋ ಅದೇ ರೀತಿಯಲ್ಲಿ ಸಾಹಿತ್ಯವೂ ಹೊರಹೊಮ್ಮುವುದು. ನಮ್ಮ ಬಾಳು ಕಲಾಮಯವಾಗಿದ್ದರೆ ಸಾಹಿತ್ಯವೂ ಶ್ರೇಷ್ಠವಾಗಿರುವುದು. ಕನ್ನಡ ಸಾಹಿತ್ಯಕ್ಕೆ ಉಜ್ವಲ ಭವಿತವ್ಯವಿದೆ ಎಂದರು.

ರಾಷ್ಟ್ರಕವಿ ಶ್ರೀ. ಮಂಜೇಶ್ವರ ಗೋವಿಂದ ಪೈಗಳವರು ಅಧ್ಯಕ್ಷ ಭಾಷಣದಲ್ಲಿ 'ಕನ್ನಡ ಸಾಹಿತ್ಯವು ಯಾವಿಂದ ತೊಡಗಿತು ಎಂಬುದು ಇದುವರೆಗೆ ಸ್ಪಷ್ಟವಾಗಿ ತಿಳಿದಿಲ್ಲ. ಕ್ರಿ. ಶ. ಎರಡನೆಯ ಶತಮಾನದಲ್ಲಿ ರಚಿತವಾದುದೆಂಬ ತೊಗಟೆಯ ಗ್ರೀಕ್ ಭಾಷೆಯ ಒಂದು ಪ್ರಹಸನದಲ್ಲಿ ಕನ್ನಡ ಮಾತುಗಳು ಇರುವುದರಿಂದ ಅದರ ರಂಗಭೂಮಿ ಪಶ್ಚಿಮ ಸಮುದ್ರ ತೀರದ ತುಳುನಾಡು ಎಂದೂ ಅದರಲ್ಲಿ ಸೋಮೇಶ್ವರ ಎಂಬ ಶಿವಾಲಯದ ಹೆಸರು ಇರುವುದರಿಂದ ಅದು ಉಡುಪಿಯ ಬಳಿಯ ಸೋಮೇಶ್ವರ ದೇವಾಲಯವಿರುವ ಉದ್ಯಾವರ ಎಂಬ ಊರಾಗಿರಬೇಕೆಂದೂ ನಾನು ನಿರ್ಣಯಿಸಿದ್ದೇನೆ. ಇದಕ್ಕಿಂತ ಹಿಂದೆ ನಾನು ಕನ್ನಡವನ್ನು ಎಲ್ಲಿಯೂ ಕಂಡಿಲ್ಲ. ಆಗ ಕನ್ನಡ ಸಾಹಿತ್ಯವಿದ್ದಿರಬೇಕೆಂದೂ ಸಾಕಷ್ಟು ಧೈರ್ಯದಿಂದ ಅನುಮೋದಿಸಬಹುದು. ಜೈನ ಗ್ರಂಥಗಳಿಂದ ಹಿಡಿದು ಮುದ್ದಣನ ವರೆಗೆ ಆ ನಂತರ ಈಗಿನ ವರೆಗೆ ಕನ್ನಡ ಸಾಹಿತ್ಯ ಬೆಳೆಯುತ್ತಿದೆ. ಮುಂದೆ ಕನ್ನಡ ಸಾಹಿತ್ಯದಲ್ಲಿ ಷಟ್ಪದಿಗಳು, ನಂತರ ವೀರಶೈವ ಪ್ರಭಾವದಲ್ಲಿ ಶಕ್ತಿ ಬೆಳೆದು ಬಂದಿದೆ. ನಂತರ ಕನ್ನಡ ಸಾಹಿತ್ಯದಲ್ಲಿಯು ಯಕ್ಷಗಾನ ಮೊದಲಾಯಿತು. ಇದು ಕೇರಳದಿಂದ ಕರ್ನಾಟಕ್ಕೆ ಬಂದಿತೊ ಅಥವಾ ಕರ್ನಾಟಕದಿಂದ ಕೇರಳಕ್ಕೆ ಹೋಯಿತೋ ಎಂದು ಇತ್ಯರ್ಥಿಸಲಾರೆ. ಕನ್ನಡದ ಮಟ್ಟಿಗೆ ಹೇಳುವುದಾದರೆ ಇಂದಿಗೆ ೩೦೦ ವರ್ಷಗಳ ಹಿಂದೆ ತುಳುನಾಡಿನಲ್ಲಿ ಅನೇಕ ಯಕ್ಷಗಾನ ಕವಿಗಳು ಆಗಿ ಹೋದರು. ಕುಂಬಳೆಯ ಪಾರ್ತಿಸುಬ್ಬ ಆ ಮೇಲೆ ಮೂಲಿಕೆಯ ವಾಸುದೇವ ಪ್ರಭು ಮತ್ತು ಇನ್ನೂ ಕೆಲವರು ಯಕ್ಷಗಾನದಲ್ಲಿ ಮಹಾ ಕವಿಯೆನಿಸಿಕೊಂಡರು. ಈಗಲೂ ನಮ್ಮ ಜಿಲ್ಲೆಯ ಹಳ್ಳಿಗಳಲ್ಲಿ ಯಕ್ಷಗಾನ ರಚನೆಯಾಗುತ್ತಲಿದೆ.

ಕನ್ನಡದ ಭವಿತವ್ಯದ ವಿಚಾರವಾಗಿ ನಾನು ಹೇಳಬೇಕೆಂದು ತಾವು ನಿರೀಕ್ಷಿಸಿದರೆ ತಮ್ಮ ತಪ್ಪಿಲ್ಲ. ಆ ನಿರೀಕ್ಷೆಯನ್ನು ಸಲ್ಲಿಸದಿದ್ದರೆ ತನ್ನ ತಪ್ಪು. ಆ ಕಾರಣ ಆ ಭವಿಷ್ಯ ಹೇಗೆ ಇದ್ದೀತೆಂಬ ಕಳವಳವಿಲ್ಲ ಹೀಗೆ ಇದ್ದರೆ ಲೇಸೆಂಬ ಬಯಕೆಯನ್ನು ಕುರಿತು ಕೇಳಿ; ಕೇಳದಿರಿ ಊದುವ ಶಂಖ ಊದಿ ಬಿಡುತ್ತೇನೆ.

ಹೊಸ ಹೊಸ ಛಂದಸ್ಸುಗಳನ್ನು ಮಾಡಬೇಕು, ರಚನ ಕಾರ್ಯಗಳನ್ನು ಗಗಿಸಬೇಕು. ರಾಮಾಯಣ ಮಹಾಭಾರತ ಇತ್ಯಾದಿ ನಮ್ಮ ಪ್ರಾಚೀನ ಗ್ರಂಥಗಳೆಂದರೆ ಅಗೆದು ಮುಗಿಯದ ಗಣಿ, ಮೊಗೆದು ಮುಗಿಯದ ಕಡಲು. ಅವುಗಳಿಂದ ಎತ್ತಿಕೊಳ್ಳುವ ವಸ್ತುಗಳನ್ನು ಎತ್ತಿಕೊಳ್ಳಲೇಬೇಕು. ಆದರೂ ನಮ್ಮ ಪ್ರಾಚೀನ ಹಾಗೂ ಸಮಸಾಮಯಿಕ ಇತಿಹಾಸದಿಂದ, ಕನ್ನಡ ಇತಿಹಾಸದಿಂದಲೇ ಇಲ್ಲ ಭಾರತದ ಐಕ್ಯವೂ ಐಕ್ಯಮತ್ಯವೂ ಕಾಣ ಬರುವಂತೆ ಭಾರತದ ಇತಿಹಾಸದಿಂದಲೂ ಅಥವಾ ಬೇಕಾದರೆ ಪ್ರಪಂಚದ ಇತಿಹಾಸದಿಂದ ಕೂಡ. ಸಾಧಕವೂ ಬೋಧಕವೂ ಎನಿಸುವ ಉತ್ತಮವಾದ ವಿಷಯಗಳನ್ನು ಕುರಿತು ಕಾವ್ಯಗಳನ್ನು ಕಟ್ಟಬೇಕು, ಕಥೆಗಳನ್ನೂ ಕಾದಂಬರಿಗಳನ್ನೂ ಬರೆಯಬೇಕು. ಮಾತ್ರವಲ್ಲ ಸಾಮಾಜಿಕ ವಿಷಯಗಳನ್ನೂ ಆರಿಸಿಕೊಂಡು ಸಾಹಿತ್ಯವನ್ನು ಸೃಷ್ಟಿಸಬೇಕು. ನೀರಸವಾಗ ನಿರುಪಯೋಗಿಯಾದ ಗೊಡ್ಡು ಅಲಂಕಾರಗಳಿಗೆ ಇನ್ನು ಎಡೆಕೊಡದಿದ್ದರೆ ಲೇಸು.

ಕೈಲಾದ ಮಟ್ಟಿಗೆ ಹೊಸ ಹೊಸ ಶಬ್ದಗಳನ್ನು ಸೃಷ್ಟಿಸಿ ನಮ್ಮ ಶಬ್ದಸ್ತೋಮವನ್ನು ಹೆಚ್ಚಿಸಬೇಕ. ಏಕೆಂದರೆ ಈಗ ಹೊಸ ಹೊಸ ಭಾವನೆಗಳು ಹುಟ್ಟುತ್ತಿರುವಲ್ಲಿ ಅವುಗಳನ್ನು ಯಥಾವತ್ತಾಗಿ ಮಾಡಿಸಲಿಕ್ಕೆ ಹಳೆಯ ಶಬ್ದ ಸಂಗ್ರಹ ಸಾಲದು. ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಎಷ್ಟೋ ಕಾಲದಿಂದ ನಿದ್ದೆ ಹೋಗುವಲ್ಲಿಂದ ಕನ್ನಡ ಶಬ್ದಗಳನ್ನು ಎಬ್ಬಿಸಬೇಕು. ಕನ್ನಡದ ಸೋದರಿಯರಾದ ಇತರ ದ್ರಾವಿಡ ಭಾಷೆಗಳಿಂದ ಬೇಕಾದ ಶಬ್ದಗಳನ್ನು ಬೇಕಾದಂತೆ ಕನ್ನಡಿಸಿ ಎರವಲ್ಗೊಳ್ಳಬೇಕ. ಇತರ ಭಾಷೆಗಳ ನುಡಿಗಟ್ಟುಗಳನ್ನು ಅನುವಾದಿಸಿ ನಮ್ಮದಾಗಿಸಿಕೊಳ್ಳಬೇಕು.

ಕೊನೆಯದಾಗಿ ಹೇಳುವುದಾದರೆ ಹುಡುಕಾಡದೆ ದೊರೆಯದು. ಎಡಹದೆ ನೆಟ್ಟನೆ ನಡೆಯಲಾಗದು. ಆ ಬಗ್ಗೆ ಸರ್ವಥಾ ಎದೆಗುಂದಬಾರದು. ಮುಂದುವರಿ ನೀ ತಾ, ಹೋದರೆ ಇಂದಲ್ಲ ಮುಂದೆ ಗುರಿ ಮುಟ್ಟಲೇಬೇಕು.

ಕನ್ನಡ ಪರಿಷತ್ತು ಕನ್ನಡ–ಕನ್ನಡ ಕೋಶವನ್ನು ನಿರ್ಮಿಸತೊಡಗಿದೆ, ವಿಶ್ವಕೋಶವನ್ನು ನಿರ್ಮಿಸಬೇಕೆಂಬ ಯೋಜನೆಯನ್ನೂ ತನ್ನ ಗುರಿಯಾಗಿಟ್ಟುಕೊಂಡಿದೆ. ಈ ಕೋಶಗಳಲ್ಲಿ ಕನ್ನಡ–ಕನ್ನಡ ಕೋಶವನ್ನು ಮುಗಿಸಿದ ಬಳಿಕ ತಾನೆ ವಿಶ್ವಕೋಶದ ಕೆಲಸಕ್ಕೆ ಕೈಹಚ್ಚುವುದು ವಾಸಿ ಎಂದು ನನಗೆ ತೋರುತ್ತದೆ. ಕನ್ನಡ ಲಿಪಿಯ ಸುಧಾರಣೆಯನ್ನು ಕೂಡಲೇ ಕೈಕೊಳ್ಳಬೇಕು ಎಂಬಷ್ಟರ ಒತ್ತಾಯವೂ ಇಲ್ಲ.

ನಾನು ಬೋಧಕನಲ್ಲ, ಸಾಧಕ, ಪರರಿಂದ ಕಲಿಯತಕ್ಕವನಲ್ಲದೆ ಪರರಿಗೆ ಕಲಿಸ ತಕ್ಕವನಲ್ಲ. ಈ ಭಾಷಣವನ್ನು ಕೇಳಿರುವಲ್ಲಿ ಆ ತಪ್ಪುಒಪ್ಪು ದಯಮಾಡಿ ಮರೆಯಬಾರದಾಗಿ ಕೇಳಿಕೊಳ್ಳುತ್ತೇನೆ. ಇಷ್ಟು ತಾಳ್ಮೆಯಿಂದ ನನ್ನ ಭಾಷಣ ಕೇಳಿರುವ ಬಗ್ಗೆ ತಮಗೆ ತುಂಬಾ ಕೃತಜ್ಞನಾಗಿರುತ್ತೇನೆ. ಕನ್ನಡ ಭಾಷೆಯನ್ನು ಕನ್ನಡ ಸಾಹಿತ್ಯವನ್ನು ಪ್ರಪಂಚದ ಮುಂದಿನಲ್ಲಿ ಮುಂದಿನದಾದ ಯಾವ ಭಾಷೆಗೂ ಯಾವ ಸಾಹಿತ್ಯಕ್ಕೂ ಹಿಂದೆ ಬೀಳದಂತೆ ಉತ್ತರೋತ್ತರವಾಗಿ ಬೆಳೆಸಲಿ ಕನ್ನಡಿಗರಿಗೆ ಕನ್ನಡ ಜನವೇ [illegible] ಭಾರತ ಜನವೂ ಅಂತೇ, ಎರಡು ಕಣ್ಣುಗಳಂತೆ ಅಭಿನ್ನವಾಗಿರುವಂತೆ ಹರಸಲಿ. ನವ ಭಾರತ ಮಾತೆಯು ಅಖಂಡವಾದ ಐಕ್ಯಶ್ರೀಯೂ ಸ್ವಾತಂತ್ರ್ಯ ಸೌಭಾಗ್ಯವೂ ಆಚಂದ್ರಾರ್ಕವಾಗಿ ಬಾಳುವಂತೆ ಅನುಗ್ರಹಿಸಲಿ.

ನ ಬಾ.

ಕೇಂದ್ರ ಮಂತ್ರಿಮಂಡಳದ ಪುನರ್ಘಟನೆ

ರಾಜಾಜಿಯವರಿಗೆ ಗೃಹ ಮಂತ್ರಿ ಪದ

ಭಾರತ ಸರಕಾರದ ಆಡಳಿತೆಯಲ್ಲಿ ಹೆಚ್ಚಿನ ಕಾರ್ಯದಕ್ಷತೆ ಹಾಗೂ ಮಿತವ್ಯಯವನ್ನುಂಟುಮಾಡುವ ಸಲುವಾಗಿ ಕೆಲವು ಖಾತೆಗಳನ್ನು ಪುನರ್ಘಟಿಸಲಾಗಿದೆ. ಸರದಾರ ವಲ್ಲಭಭಾಯಿ ಪಟೇಲರ ನಿಧನದಿಂದ ತೆರವಾದ ಸ್ಥಳವನ್ನು ತುಂಬಿಸುವ ಸಲುವಾಗಿ ಗೃಹ ಮಂತ್ರಿ ಪದವನ್ನು ಶ್ರೀ ರಾಜಗೋಪಾಲಾಚಾರ್ಯರಿಗೆ ಕೊಡಲಾಗಿದೆ. ಉಪಮುಖ್ಯ ಮಂತ್ರಿಗಳ ಸ್ಥಾನವನ್ನು ಯಾರಿಗೂ ಕೊಡಲಾಗಿಲ್ಲ.

ಕೇಂದ್ರ ಮಂತ್ರಿಮಂಡಳದ ಪುನರ್ಘಟನೆಯು ಈ ರೀತಿಯಿದೆ.

ಶ್ರೀ ಜವಾಹರಲಾಲ ನೆಹರು–ಮುಖ್ಯ ಮಂತ್ರಿ, ಪರರಾಷ್ಟ್ರ ಮಂತ್ರಿ ಮತ್ತು ಕಾಮನ್‌ವೆಲ್ತ್ ಸಂಬಂಧ ಮಂತ್ರಿ.

ಶ್ರೀ ಸಿ. ರಾಜಗೋಪಾಲಾಚಾರಿ–ಗೃಹ ಖಾತೆ.

ಶ್ರೀ ಚಿಂತಾಮಣಿ ದೇಶಮುಖ–ಆರ್ಥಿಕ ಖಾತೆ.

ಮೌಲನಾ ಅಬುಲ್ ಕಲಂ ಅಜಾದ್–ಶಿಕ್ಷಣ ಖಾತೆ

ಶ್ರೀ ಎನ್. ಗೋಪಾಲಸ್ವಾಮಿ ಅಯ್ಯಂಗಾರ್–ಸಾರಿಗೆ ಮತ್ತು ಸಂಸ್ಥಾನ ಖಾತೆಗಳು.

ಶ್ರೀ| ಹರೇಕೃಷ್ಣ ಮೆಹತಾಬ್–ವಾಣಿಜ್ಯ ಮತ್ತು ಉದ್ಯಮ ಖಾತೆಗಳು.

ಶ್ರೀ| ಎನ್. ವಿ. ಗಾಡ್ಗಿಲ್–ಲೋಕೋಪಯೋಗಿ ಖಾತೆ ಉತ್ಪಾದನೆ ಮತ್ತು ಪೂರೈಕೆ ಖಾತೆಗಳು

ಶ್ರೀ| ಶ್ರೀಪ್ರಕಾಶ–ನೈಸರ್ಗಿಕ ಸಂಪತ್ತು ಮತ್ತು ವೈಜ್ಞಾನಿಕ ಸಂಶೋಧನೆ ಖಾತೆಗಳು.

ಶ್ರೀ| ಬಲದೇವ ಸಿಂಘ–ಸಂರಕ್ಷಣಾ ಖಾತೆ.

ಶ್ರೀ| ಕೆ. ಎಮ್. ಮುನ್ಷಿ– ಆಹಾರ ಮತ್ತು ಒಕ್ಕಲತನ ಖಾತೆಗಳು.

ಶ್ರೀ| ರಾಫಿ ಅಹಮ್ಮದ್ ಕಿದ್ವಾಯಿ–ಸಂಪರ್ಕ ಖಾತೆ.

ಶ್ರೀಮತಿ ರಾಜಕುಮಾರಿ ಅಮೃತಕೌರ್–ಆರೋಗ್ಯ ಖಾತೆ.

ಶ್ರೀ| ಜಗಜ್ಜೀವನ ರಾಮ್–ಕೂಲಿಕಾರ ಖಾತೆ.

ಡಾ| ಬಿ ಆರ್ ಅಂಬೇಡಕರ–ನ್ಯಾಯ–ಖಾತೆ.

ಶ್ರೀ| ಆರ್. ಆರ್. ದಿವಾಕರ (ಉಪ ಮಂತ್ರಿ) ಸುದ್ದಿ ಮತ್ತು ಆಕಾಶವಾಣಿ ಖಾತೆಗಳು.

ಶ್ರೀ ಕೆ. ಸಂತಾನಮ್–(ಉಪಮಂತ್ರಿ) ಸಾರಿಗೆ ಖಾತೆ.

ಶ್ರೀ| ಅಜಿತ ಪ್ರಸಾದ ಜೈನ್– ಉಪಮಂತ್ರಿ) ಪುನರ್ನಿವೇಶನ ಖಾತೆ.

ಶ್ರೀ ಸತ್ಯನಾರಾಯಣ ಸಿಂಹ–(ಉಪಮಂತ್ರಿ) ಪಾರ್ಲಿಮೆಂಟರಿ ವ್ಯವಹಾರ

ಶ್ರೀ ಸಿ. ಸಿ. ಬಿಸ್ವಾಸ–(
ಅಲ್ಪಸಂಖ್ಯಾಕರ ಖಾತೆ.

ಸ್ಟಾಲಿನ ನಂತರ ರಷ್ಯಾದಲ್ಲೇನಾದೀತು ?

ಲೇ:-ಸರ್ ಆರ್. ಬಿ. ಲೋಂಕಾರ್ಟ್.

[illegible] ಸ್ಟಾಲಿನ [illegible] ಜನ್ಮದಿನವನ್ನು ಆಚರಿಸಿ [illegible] ತಿಯನ್ನು ಸಂಭ್ರಮಿಸಿದ [illegible] ನಷ್ಟದಲ್ಲಿ ಸ್ಟಾಲಿನರೊಬ್ಬರೇ ಜೀವಂತವಿರುವವರಾಗಿದ್ದಾರೆ. ಇಂದು ಸ್ಟಾಲಿನರ ಸ್ಥಾನವು ಏಕೈಕವಾಗಿದೆ. ಅಧಿಕಾರವೆಲ್ಲ ಜನತೆಯಲ್ಲಿದೆ ಎಂಬ ತತ್ವವು ಏಕವ್ಯಕ್ತಿಯ ಅಧಿಕಾರದಲ್ಲಿ ಪರ್ಯವಸಾನ ಹೊಂದಿದೆ. ಇಂದು ಸ್ಟಾಲಿನರು ರಷ್ಯಾದ ಝಾರ್ ಚಕ್ರವರ್ತಿ ಮಾತ್ರವಲ್ಲ. ಇಡೀ ಕಮ್ಯೂನಿಸ್ಟ್ ಜಗತ್ತಿನ ಸ್ವಾಮಿಯಾಗಿದ್ದಾರೆ. ಸ್ಟಾಲಿನರ ಶರೀರ ಪ್ರಕೃತಿ ಚೆನ್ನಾಗಿದೆ. ಕಾಯಿಲೆಯ ವಾರ್ತೆಗಳು ಅಲ್ಲಲ್ಲಿ ಒಮ್ಮೊಮ್ಮೆ ಹಬ್ಬಿದರೂ ಅಧಿಕೃತವಾಗಿ ಯಾವುದೂ ಹೇಳಲ್ಪಡುವುದಿಲ್ಲ. ಸ್ಟಾಲಿನರನ್ನು ಕಂಡವರು ಕೆಲವರು ಹೇಳುವಂತೆ ಅವರ ಆರೋಗ್ಯವು ಉತ್ತಮವಾಗಿದೆ. ಆದರೆ ಕಾಲನ ಹೊಡೆತವನ್ನು ಯಾರಿಗೂ ಮೀರಲಾಗುವುದಿಲ್ಲ. ಇಂದು ೭೧ಕ್ಕೆ ತಲುಪಿರುವ ಸ್ಟಾಲಿನರು ಬಹುಕಾಲ ಉಳಿಯಲಾರರು. ಅದ್ದರಿಂದಲೇ ಸ್ಟಾಲಿನರ ನಂತರ ರಷ್ಯಾದಲ್ಲೇನಾದೀತು ಎಂಬ ಪ್ರಶ್ನೆ ಪದೇ ಪದೇ ಕೇಳಲ್ಪಡುತ್ತಿದೆ. ಸ್ಟಾಲಿನರ ಕೈಯಿಂದ ಕಟ್ಟಲ್ಪಟ್ಟ ರಷ್ಯಾದ ಯೂ ಕಮ್ಯೂನಿಸ್ಟ್ ರಾಜ್ಯವು ಅವರ ನಂತರವೂ ಹೀಗೆಯೇ ಉಳಿದೀತೆ? ಸ್ಟಾಲಿನರ ಮರುದಿನಕ್ಕೆ ಬರುವ ವ್ಯಕ್ತಿಯೂ ವ್ಯಕ್ತಿ ಸಮೂಹವು ಸ್ಟಾಲಿನರ ಕೆಲಸವನ್ನು ಆತಂಕವಿಲ್ಲದೆ ಮುಂದೆ ಸಾಗಿಸಬಹುದೇ?

ನಂತರ ಯಾರು?

ಸ್ಟಾಲಿನರ ನಂತರ ಯಾರು ಬರುವರೆಂಬ ವಿಚಾರದಲ್ಲಿ ಒಂದು ವಿಚಾರವನ್ನು ಸ್ಪಷ್ಟವಾಗಿ ಹೇಳಬಹುದು. ಸ್ಟಾಲಿನರು ಇಂದಿನ ಸ್ಥಾನವನ್ನು ಗಳಿಸಲು ೧೭ ವರ್ಷಗಳ ವರೆಗೆ ಅವಿಶ್ರಮ ದುಡಿದುದಲ್ಲದೆ ಕಳೆದ ಯುದ್ಧದಲ್ಲಿ ವಿಜಯವನ್ನು ಸಂಪಾದಿಸಿದರು. ತನ್ನ ೨೬ ವರ್ಷಗಳ ರಾಜ್ಯಭಾರದಲ್ಲಿ ತಾನು ಪಡೆದಿರುವ ಜನಾನುರಾಗವನ್ನು ಸ್ಟಾಲಿನರನಂತರ ಪಡೆದು ಮೆರೆಸುವಷ್ಟು ಜನಪ್ರಿಯರಾದ ವ್ಯಕ್ತಿಗಳು ಸದ್ಯಕ್ಕಿಲ್ಲ. ಲೆನಿನರು ಸಾಯುವಾಗ ರಷ್ಯಾದ ಮುಂದಾಳ್ತನದ ಸ್ಪರ್ಧೆಯು ಸ್ಟಾಲಿನ್ ಮತ್ತು ಟ್ರಾಟ್‌ಸ್ಕಿ ಇವರೊಳಗೆ ನಡೆಯಿತು. ಸ್ಟಾಲಿನರ ಕೈಯಲ್ಲಿ ರಷ್ಯಾದ ರಾಜಕೀಯ ಯಂತ್ರದ ಹಿಡಿತವಿದ್ದುದರಿಂದ ಅವರು ಜಯಶೀಲರಾದರು. ಸ್ಟಾಲಿನರ ನಂತರ ಆ ರೀತಿಯ ಸ್ಪರ್ಧೆ ನಡೆಯುವ ಸಾಧ್ಯತೆ ಇಲ್ಲ. ಸ್ಟಾಲಿನರು ತನ್ನ ಮತ್ತು ಜನಾನುರಾಗಿಯಾಗಿ ತನ್ನ ಹತ್ತಿರ ಬೆಳೆಯಲು ಯಾರನ್ನೂ ಬಿಟ್ಟಿರುವುದಿಲ್ಲ. ಆದ್ದರಿಂದ ಇಂದು ಅವರ ವಿಶ್ವಾಸಕ್ಕೆ ಪಾತ್ರರಾಗಿ ಹತ್ತಿರದಲ್ಲಿರುವವರನ್ನೇ ಲೆಕ್ಕ ಹಾಕಬೇಕಾಗುತ್ತದೆ.

ಈ ಪಟ್ಟಿಯಲ್ಲಿ ಮೊಲಟೋವ್‌ರವರ ಹೆಸರು ಮೊದಲು ಬರುತ್ತದೆ. ಜಗತ್ತಿನ ಪ್ರಥಮ ಯುದ್ಧದ ಕಾಲಕ್ಕೆ ಇವರು 'ಪ್ರಾವ್ಡಾ' ಪತ್ರಿಕೆಯಲ್ಲಿ ಸ್ಟಾಲಿನರ ಜೊತೆ ಕೆಲಸಗಾರರಾಗಿದ್ದರು [illegible] ಬಿನ [illegible] [illegible] ರಾಜ್ಯಾಂಗ ಮಂತ್ರಿ [illegible] ರಂತೆ ಕೆಲಸ ಮಾಡುತ್ತಿದ್ದಾರೆ [illegible] ಜನಾನುರಾಗಿಯೂ ಇಲ್ಲ [illegible] ದಾಳಿಗಳಲ್ಲಿ [illegible] ಯಿಲ್ಲ.

ಭಯಂಕರ ವ್ಯಕ್ತಿ.

ಇವರಿಗಿಂತ ಭಯಂಕರ ವ್ಯಕ್ತಿ, ಎಂದರೆ ಇವರಿಗಿಂತ ಬಹು ಕಿರಿಯವರಾದ ಮೆಲೆಂಕೋವರು. ಕಳೆದ ಯುದ್ಧದ ಕಾಲಕ್ಕೆ ಸ್ಟಾಲಿನ್‌ಗ್ರೇಡ್ ಜರ್ಮನರ ವಶವಾಗಲಿದ್ದ ಬಿಕ್ಕಟ್ಟಿನಲ್ಲಿ ಸ್ಟಾಲಿನರು ಇವರನ್ನು ಆ ರಣರಂಗಕ್ಕೆ ಕಳುಹಿಸಿದರು. ಈಗ ಅವರು ಕಮ್ಯೂನಿಸ್ಟ್ ಪಾರ್ಟಿಯ ಸೆಕ್ರೆಟರಿಯಾಗಿದ್ದಾರೆ. ಇವರ ನಂತರ ಒಳರಕ್ಷಣೆಯ ಮಂತ್ರಿ ಜನಾಬ್ ಬೆರಿಯಾ ಎಂಬವರಿದ್ದಾರೆ. ಇನ್ನು ಳಿದ ಹಲವರಲ್ಲಿ ಮಿ. ವೊರೋಶಿಲೋವ್ ಎಂಬವರೇ ದಕ್ಷರೂ, ನಿಪುಣರೂ ಆಗಿದ್ದಾರೆ. ಹೀಗೆ ಹಿನ್ನೆಲೆಯಲ್ಲಿ ಅನೇಕ ಜನರಿದ್ದರೂ ಸ್ಟಾಲಿನರ ಸ್ಥಳವನ್ನು ಸಮರ್ಪಕವಾಗಿ ತುಂಬಬಲ್ಲವರು ಯಾರೂ ಇಲ್ಲ. ಯುದ್ಧದ ಸಮಯದಲ್ಲಿ ರಷ್ಯಾದಲ್ಲಿ ಸೈನ್ಯಾಧಿಕಾರಿಗಳಿಗೆ ಪರ್ವಮಾನ್ಯತೆ, ಅಧಿಕಾರಗಳಿದ್ದವು. ಆದರೆ ಈಗ ಅವರು ಹಿನ್ನಲೆಯಲ್ಲಿದ್ದಾರೆ. ಆದ್ದರಿಂದ ಬೇರೆ ಸೈನಿಕ ಆಡಳಿತ ನಡೆದೀತೆಂದು ಹೇಳಲೂ ಬರುವದಿಲ್ಲ.

ರಷ್ಯಾದಲ್ಲಿ ಸರ್ವವೂ ಸೂಕ್ತವಾಗಿ ನಡೆಯುತ್ತಿದೆ. ಅಲ್ಲಿ ಅಸಮಾಧಾನಕ್ಕೆ ಎಡೆ ಇಲ್ಲವೆಂದು ಪ್ರಚಾರ ಮಾಡುವವರಿದ್ದಾರೆ. ಆದರೆ ಪರಿಸ್ಥಿತಿ ಹಾಗಿಲ್ಲ. ರಷ್ಯಾದ ಪರಿಸ್ಥಿತಿಯನ್ನು ಪರಿಶೀಲಿಸಿದವರು ಹೇಳುತ್ತಿರುವಂತೆ ಅಲ್ಲಿ ಅತೃಪ್ತಿ ತುಂಬಾ ಇದೆ. ಈ ಅತೃಪ್ತಿಯೇ ಸ್ಟಾಲಿನರ ನಂತರ ರಷ್ಯಾದ ಆಡಳಿತ ಯಂತ್ರವನ್ನು ಅಲ್ಲಾಡಿಸಬಹುದೆಂದು ಹೇಳುವವರೂ ಇದ್ದಾರೆ. ೧೯೪೬ರಿಂದ ೧೯೪೯ರ ವರೆಗೆ ರಷ್ಯಾದಲ್ಲಿ ರಾಯಭಾರಿಯಾಗಿದ್ದ ಜನರಲ್ ಬೆಡೆಲ್ ಸ್ಮಿತ್ ಎಂಬವರು ಹೇಳುವಂತೆ ರಷ್ಯಾದಲ್ಲಿರುವ ಬಹುಮಂದಿಯರಿಗೆ ವ್ಯಕ್ತಿ ಸ್ವಾತಂತ್ರ್ಯವೇನೆಂದು ಗೊತ್ತಿರುವದಿಲ್ಲ. ಪ್ರಜಾಪ್ರಭುತ್ವ, ವ್ಯಕ್ತಿ ಸ್ವಾತಂತ್ರ್ಯವನ್ನು ಗುರ್ತಿಸಬಲ್ಲವರಿಗೆ ಅಲ್ಲಿ ಸ್ಥಳವಿಲ್ಲ. ಒಂದೋ ದೇಶದಿಂದ ನಿರ್ವಾಸಿತರಾಗಬೇಕು, ಜೈಲು ಸೇರಬೇಕು, ಇಲ್ಲವೇ ಗುಂಡಿಗೆ ಎರವಾಗಬೇಕು. ಸರ್. ಮೋರಿಸ್ ಪೀಟರ್‌ಸನ್ ಎಂಬ ರಷ್ಯಾದಲ್ಲಿದ್ದ ಬ್ರಿಟಿಷ್ ರಾಯಭಾರಿಯಾದರೂ ತನ್ನ ಅಭಿಪ್ರಾಯ ವ್ಯಕ್ತಮಾಡುತ್ತಾ ರಷ್ಯನರು ಉತ್ತಮ ದಿನಗಳಿಗಾಗಿ ಮುನ್ನೋಡುತ್ತಿರುವರು. ಜೀವನ ಸೌಂದರ್ಯಕ್ಕಾಗಿ, ಪ್ರಪಂಚದ ಅರಿವಿಗಾಗಿ ಅವರು ಭವಿಷ್ಯವನ್ನು ಕಾತರ ದೃಷ್ಟಿಯಿಂದ ಕಾಯುತ್ತಿರುವರು ಎಂದಿರುವರು.

ಹೊಸ ವರ್ಗದ ಜನನ.

ಕಮ್ಯೂನಿಸ್ಟ್ ಪಕ್ಷದಿಂದ ಹೊರಬಂದವರನೇಕರು ಅಲ್ಲಿಕಿದ್ದಾರೆ. ಇಗ್ನೇಶಿಯೊ ಸಿಲೋನ್‌ನಂತವರು ರಷ್ಯಾ ಆಡಳಿತದ ಬಗ್ಗೆ ತಮ್ಮ ಅಭಿಪ್ರಾಯವನ್ನು ವ್ಯಕ್ತ ಮಾಡುತ್ತಿರುವರು. ಅವರ ಪಕ್ಷದ ಅಭಿಪ್ರಾಯದಂತೆ 'ಸಮಾಜಿಕ ವರ್ಗಗಳು' ರಷ್ಯಾದಲ್ಲಿ ಇಲ್ಲದಿದ್ದರೂ ಅಲ್ಲಿ ಹೊಸ ಒಂದು ವರ್ಗ ರೂಪುಗೊಳ್ಳುತ್ತಿದೆ. ಅಧಿಕಾರ ಚಲಾಯಿಸುವವರ ಈ ಹೊಸ ವರ್ಗವು ಸ್ಟಾಲಿನರಿಂದ ಹಿಡಿದು ಕೆಳಗಿನ ಚಿಕ್ಕ ಉದ್ಯೋಗಿಯ ವರೆಗೂ ಒಂದೇ ಆಗಿದೆ. ಇವರಲ್ಲಿ ಎಲ್ಲಾ ಅಧಿಕಾರವೂ, ಅನುಕೂಲತೆಗಳೂ ಸಮಾವೇಶವಾಗಿವೆ. ರಷ್ಯಾದ ಜನಸಂಖ್ಯೆಯ ಶೇಕಡ ೮೦ರಷ್ಟಿರುವ ಕೆಲಸಗಾರರು, ರೈತರು ಇವರೇ ಒಳ್ಳೆ ಕೆಳಜಾತಿಯವರು. ಪಶ್ಚಿಮ ಪ್ರಜಾಪ್ರಭುತ್ವಕ್ಕೆ ತಿಳಿಯದ ಒಂದು ರೀತಿಯಲ್ಲಿ ಈ ಕೆಲಸಗಾರರ ಪಾಲಿಗೆ ನಡೆದಿದೆ. ಅತೃಪ್ತಿಯು ಸರ್ವೆಡೆ ಹರಡಿದ್ದರೂ ಆಡಳಿತಗಾರರ ಹಿಡಿತದಿಂದಾಗಿ ಅದಕ್ಕೆ ವಿರುದ್ಧ ನಡೆಯಲು ಎಡೆಯಿಲ್ಲ. ಈ ಅತೃಪ್ತ ಜನರ ಕ್ರೋಧವು ಎಂದು ಒಡೆದೊಮ್ಮೆ ಹೊರಬೀಳದಿರದು.

ಪ್ರಚಾರದ ಗುರಿ.

ಸ್ಟಾಲಿನರು ಒಂದು ಗುಟ್ಟನ್ನು ತಿಳಿದಿರುವರು. ದೇಶದೊಳಗೆ ಶಾಂತಿಯನ್ನು ಪಡೆಯಲು ಯಾವಾಗಲೂ ಅವರು ಬಾಹ್ಯಗಂಡಾಂತರದ ಪ್ರಸ್ತಾಪವೆತ್ತುತ್ತಿದ್ದಾರೆ. ರಷ್ಯಾದ ಪ್ರಚಾರವು ಈ ಗುರಿಗಾಗಿ. ರಷ್ಯಾದ ಜನತೆಯಲ್ಲಿ ಹೊರ ಶತ್ರುಗಳ ಭಯವನ್ನು ಉತ್ಪಾದಿಸಿ ಅದಕ್ಕಾಗಿ ಸಿದ್ಧರಾಗುವ ಏರ್ಪಾಡುಗಳನ್ನು ನಡಸುತ್ತಿರುವರು. ಈ ಬಾಹ್ಯಶತ್ರುವನ್ನು ಲೆಕ್ಕಿಸಿಯೇ ಇಂದು ರಷ್ಯವು ಒಮ್ಮುಖವಾಗಿ ಕೆಲಸ ಮಾಡುತ್ತಿದೆ. ಆದರೆ ಇದು ಭಯಂಕರ ಮಾರ್ಗ. ಬಹು ಕಾಲದ ವರೆಗೆ ಹೀಗೆ ನಡೆಯಲಾರದು. ಸ್ಟಾಲಿನರ ಹಿಡಿತ ತಪ್ಪಿದ ನಂತರ ಪರಿಸ್ಥಿತಿ ಬಿಗಡಾಯಿಸಬಹುದು. ಭವಿಷ್ಯದಲ್ಲಿ ಸಿಡಿಯಬಹುದಾದ ಈ ಅವ್ಯವಸ್ಥೆ ಯಾವ ರೀತಿಯಿಂದ ಸಾಗಬಹುದೆಂದು ಇಂದು ಊಹಿಸಲು ಸಾಧ್ಯವಿಲ್ಲ. ಆದರೂ ಕ್ರಾಂತಿಯಿಂದ ದಲ್ಲಿ ಸಾಗಿ ಅಧಿಕಾರ ಹಿಡಿದ ನಂತರ ಇಂದಿನ ವರೆಗೆ ಸ್ಟಾಲಿನ್ ಆಡಳಿತವು ಭೌತಿಕ ದೃಷ್ಟಿಯಿಂದ ಅಸಾಧ್ಯವಾದುದನ್ನು ಸಾಧಿಸಿದೆ. ಕಳೆದ ೩೦ ವರ್ಷಗಳಲ್ಲಿ ಜನಜೀವನವು ಹಗುರವಾಗಿದೆ. ಅಭಿವೃದ್ಧಿ ಪಥದಲ್ಲಿ ಮುನ್ನಡೆದಿದೆ. ಅದ್ದರಿಂದ ಸ್ಟಾಲಿನರ ನಂತರ ಆಡಳಿತ ವಿಚಾರದಲ್ಲಿ ಘರ್ಷಣೆ ಉಂಟಾಗಬಹುದಾದರೂ ಆರ್ಥಿಕ ನೀತಿಯಲ್ಲಿ ವ್ಯತ್ಯಾಸವಾಗಲಾರದು.

ರಷ್ಯಾದ ಜನರು ವ್ಯಕ್ತಿಗತವಾಗಿ ಸಾಧು ಸ್ವಭಾವದವರು. ಅವರು ಯುದ್ಧಪ್ರಿಯ ಜನರಲ್ಲ. ಆದರೂ ಕೂಡ ಅವರ ಚರಿತ್ರೆಯಲ್ಲಿ ಅನೇಕಬಾರಿ ಅನಿಷ್ಟ ಆಡಳಿತದ ಬಗ್ಗೆ ದಂಗೆ ಎದ್ದು ರಕ್ತದ ಕಾಲುವೆ ಹರಿಸಿದ್ದಾರೆ. ರಷ್ಯಾ ಜನತೆಯ ಈ ಸ್ವಭಾವವು ಶೀಘ್ರ ಮಾರ್ಪಾಡು ಹೊಂದುವಂಥಾದ್ದಲ್ಲ. ಆದರೆ ಗತಕಾಲದ ಕಾಲದ ರಷ್ಯಾಕ್ಕೂ, ಇಂದಿನ ಸ್ಟಾಲಿನರ ಕಾಲದ ರಷ್ಯಾಕ್ಕೂ ಒಂದೇ ಭಿನ್ನತೆ ಇದೆ. ಇಂದಿನ ರಷ್ಯನರೆಲ್ಲರಿಗೆ ಓದಲು ತಿಳಿದಿದೆ. ಬರೆಯಲು ಗೊತ್ತಿದೆ. ಅವರ ಸಾಹಿತ್ಯ ಪ್ರಪಂಚಕ್ಕೆ ಚಿರಪರಿಚಿತವಾಗಿದ್ದ ಪುಷ್ಕಿನ್, ಗೊಗೊಲ್, ಡಿಕನ್ಸ್, ಶೇಕ್ಸ್‌ಪಿಯರ್ ಮೊದಲಾದವರ ಪುಸ್ತಕಗಳಿಗೆ ಅಲ್ಲಿ ತಡೆ ಇಲ್ಲ. ರಷ್ಯಾದ ಜನತೆಯಲ್ಲಿ ಹೊಸ ಜ್ವಾಲೆಯನ್ನು ಹಚ್ಚಲು ಈ ಪುಸ್ತಕಗಳೇ ಸಾಕಾಗಬಹುದು.

ಧರ್ಮದ ಪ್ರಕೋಪ.

ಧರ್ಮ, ಮತ ಪ್ರಚಾರಗಳಿಗೆ ಕಮ್ಯೂನಿಸ್ಟ್ ತತ್ವವು ಬದ್ಧ ವಿರೋಧವಾದುದು. ರಷ್ಯಾದಲ್ಲಿ ಬಲಾತ್ಕಾರದಿಂದ ದೇವರ ಹೆಸರನ್ನು ಕಿತ್ತೊಗೆದರೂ ದೈವೀ ಭಾವನೆ ಇನ್ನೂ ಹೋಗಿಲ್ಲ. ಮತಗಳ ಪ್ರಭಾವ ಇನ್ನೂ ಅಳಿಯಲಿಲ್ಲ. ಕಳೆದ ಯುದ್ಧದ ಸಮಯದಲ್ಲಿ ತಕ್ಕ ಸ್ಟಾಲಿನರು ಆಡಳಿತದ ಭದ್ರತೆಯ ಹಾಗೂ ರಾಷ್ಟ್ರ ಹಿತದ ದೃಷ್ಟಿಯಿಂದ ದೇವರ ವಿರುದ್ಧದ ಪ್ರಚಾರವನ್ನು ಕಡಿಮೆ ಮಾಡಿ, ಮತ ವಿಚಾರದ ಭಾವನೆಗೆ ಸ್ವಲ್ಪ ಅವಕಾಶಮಾಡಿದ್ದರು. ಇಂದು ರಷ್ಯಾದಲ್ಲಿರುವ ದೊಡ್ಡ ದೊಡ್ಡ ಇಗರ್ಜಿಗಳಲ್ಲಿ ಕೇವಲ ಮುದುಕರು ಮಾತ್ರವೇ ಅಲ್ಲ, ಯುವಕರೂ ಕೂಡ ಭಾಗವಹಿಸುತ್ತಾರೆ. ಧರ್ಮವು ರಷ್ಯಾದಲ್ಲಿ ಕತ್ತರಿಸಲ್ಪಟ್ಟರೂ ಸಾಯದೆ ಪುನಹ ಚಿಗುರತೊಡಗಿದೆ. ಇಂದಿನ ಈ ಬೆಳವಣಿಗೆಯಿಂದಾಗಿ ಮತಪ್ರಚಾರದ ವಿರುದ್ಧ ಇನ್ನೂ ಕಠಿಣ ಕಾರ್ಯಕ್ರಮ ಕೈಕೊಳ್ಳಬೇಕೆಂದು ಅನೇಕ ಸೈನಿಕ ಅಧಿಕಾರಿಗಳು ಆಗ್ರಹ ಪಡಿಸುತ್ತಿರುವರಂತೆ. ಕ್ರಮಶಃ ಈ ಮತದ ಸಮಸ್ಯೆಯೇ ಸ್ಟಾಲಿನರ ನಂತರ ಅಶಾಂತಿಗೆ ಕಾರಣವಾಗಬಹುದು.

ಹತ್ತಿಕ್ಕಲ್ಪಟ್ಟ ರಾಷ್ಟ್ರೀಯತೆ.

ದೇಶದ ಶಾಂತಿಸ್ಥಾಪನೆಗೆಂದು ನಡೆದ ಹತ್ಯಾಕಾಂಡವು ರಷ್ಯಾದಲ್ಲಿ ಹದ್ದುಮೀರಿದ್ದು, ರಷ್ಯಾದಲ್ಲಿ ಈ ಕರಾಳ ಹಸ್ತದಿಂದ ಒಬ್ಬೊಬ್ಬರನ್ನಾದರೂ ಕಳಕೊಳ್ಳದ ಕುಟುಂಬಗಳು ಕೇರಿ ವಿರಳವೆನ್ನಬೇಕು. ಈಗ ಹದಿನಾರು ಸೋವಿಯಟ್‌ಗಳೆಂದಿರುವ ದೇಶದ ಭಾಗಗಳು ಈ ಮೊದಲು ೨೫ ವರ್ಷಗಳ ವರೆಗೆ ಭದ್ರವಾಗ ಕೇಂದ್ರದ ಹಿಡಿತದಲ್ಲಿದ್ದು ಸ್ಟಾಲಿನರ ಆಶಯದಂತೆ ಸರ್ವವೂ ನಡೆಯುತಿತ್ತು. ಇಂದಿನ ಈ ರಿಪಬ್ಲಿಕ್‌ಗಳಲ್ಲಿ ಮತ್ತಿತರ ಕಮ್ಯೂನಿಸ್ಟ್ ಅಧಿಕಾರ ಬದ್ಧ ರಾಷ್ಟ್ರಗಳಲ್ಲಿ ಹಿಡಿದು ಕೆಳಗೊತ್ತಲ್ಪಟ್ಟ ರಾಷ್ಟ್ರೀಯ ಭಾವನೆಯು ಇನ್ನೂ ಜೀವಂತವಿದೆ. ಲೆನಿನರೊಬ್ಬರನ್ನು ಬಿಟ್ಟು ಅಕ್ಟೋಬರ್ ಕ್ರಾಂತಿಗೆ ಕಾರಣರಾದವರ ಸರಾಸರಿ ವಯಸ್ಸು ೩೦ಕ್ಕೆ ಮೀರಿರಲಿಲ್ಲ. ಆದರೆ ಇಂದು ಕಮ್ಯೂನಿಸ್ಟ್ 'ಪೋಲಿಟ್‌ಬ್ಯೂರೋ'ದಲ್ಲಿರುವವರ ಸರಾಸರಿ ವಯಸ್ಸು ೬೦ನ್ನು ದಾಟಿದೆ. ಅಂದರೆ ರಷ್ಯಾದ ಹಿಡಿತ ಇಂದು ವಯಸ್ಸಾದವರ ಕೈಯಲ್ಲೇ ಇದೆ. ಹೊಸ ರಾಷ್ಟ್ರಗಳ ಮೇಲೆ ಹಳೆ ಜನರ ಹಿಡಿತವೆಂದರೆ ಆ ಹಿಡಿತ ಎಂದೂ ಬಲವಾದುದಲ್ಲ. ಅದ್ದರಿಂದ ಬದಲಾವಣೆಗಳು ಸ್ಟಾಲಿನರ ನಂತರ ನಡೆದು ರಷ್ಯಾದ ಚರಿತ್ರೆಯ ಒಂದು ಅಧ್ಯಾಯವು ಸಮಾಪ್ತಿಗೊಂಡರೂ ಗೊಳ್ಳಬಹುದು.

ಕೊಡಗು

ತಾ. ೫-೧-೧೯೫೧ನೇ ಶುಕ್ರವಾರ

ಕಲಿಯಬೇಕಾದ ಪಾಠ

ಮಡಿಕೇರಿ ಪುರಸಭೆಯ ಚುನಾವಣೆಯು ತಾ|| ೪ರಂದು ನಡೆಯಿತು. ಪ್ರೌಢ ಮತದಾನ ಪದ್ಧತಿಯ ಮೇರೆಗೆ ಕೊಡಗಿನಲ್ಲಿ ನಡೆದ ಪ್ರಥಮ ಚುನಾವಣೆ ಇದು. ಈ ಚುನಾವಣೆಯಿಂದ ಕಲಿತ ಪಾಠವು ಮುಂಬರುವ ಸಾರ್ವತ್ರಿಕ ಚುನಾವಣೆಗೆ ಪೀಠಿಕೆಯಂತಿರುವದರಿಂದ ಈ ಚುನಾವಣೆಯ ಆಗುಹೋಗುಗಳನ್ನು ಪರಿಶೀಲಿಸುವದು ಯುಕ್ತವಾಗಿದೆ.

ನಮಗೆ ಸ್ವಾತಂತ್ರ್ಯ ೧೯೪೭ರಲ್ಲಿ ಬಂತು. ನಮ್ಮ ಹೊಸ ರಾಜ್ಯ ಘಟನೆಯ ಮೇರೆಗೆ ನಮಗೆ ಪ್ರೌಢ ಮತದಾನದ ಹಕ್ಕು ದೊರೆಯಿತು. ೨೧ ವರ್ಷಕ್ಕೆ ಮೇಲ್ಪಟ್ಟವರೆಲ್ಲರೂ ಇಂದು ಮತದಾರರಾಗಿದ್ದಾರೆ. ನಮ್ಮ ದೇಶ ವಿಸ್ತೀರ್ಣದಷ್ಟಿಗೆ ಸ್ವಲ್ಪ ಮುಂದರಿದಿದ್ದರೂ ಇಂತು ಓಟಿನ ಹಕ್ಕು ದೊರೆತವರೆಲ್ಲ ವಿದ್ಯಾವಂತರಲ್ಲ. ಮತ್ತು ದರದಲ್ಲಿ ನೂರಕ್ಕೆ ಎಂಟರಷ್ಟು ಜನರು ಅಕ್ಷರಸ್ಥರು. ಹಾಗಿರುವಾಗ ಅವರಿಗೆ ಬಂದಿರುವ ಓಟಿನ ಹಕ್ಕು, ಅದರ ಬೆಲೆ ಮೊದಲಾದುವನ್ನು ವಿವರಿಸಿ ಅವರಲ್ಲಿ ಯೋಗ್ಯ ಜಾಗೃತಿಯನ್ನು ಉಂಟುಮಾಡುವದು ಪ್ರಜಾಪ್ರಭುತ್ವದಲ್ಲಿ ವಿಶ್ವಾಸವಿರುವ ಹಾಗೂ ಉಮೇದುವಾರರಾಗಿ ನಿಂತಿರುವವರ ಕರ್ತವ್ಯವಾಗಿತ್ತು. ಆದರೆ ದೇಶಕ್ಕೆ ಸ್ವಾತಂತ್ರ್ಯ ಬಂತು; ಜನತೆಗೆ ಹೆಚ್ಚಿನ ಹಕ್ಕು ಬಂದೊಡನೆ ಕ್ಷಣ ಅವರಲ್ಲಿ ಯೋಗ್ಯತೆ ಹೆಚ್ಚಿತೆಂದು ಹೇಳಲು ಬರುವದಿಲ್ಲ. ಮಡಿಕೇರಿ ಪುರಸಭೆಯ ಚುನಾವಣೆಯಲ್ಲಿ ನಡೆದಿರುವದಾಗಿ ನಮ್ಮ ಅವಗಾಹನೆಗೆ ಬಂದ ಕೆಲವು ವಿಚಾರಗಳನ್ನು ಇಲ್ಲಿ ಉಲ್ಲೇಖಿಸಬೇಕಾಗಿದೆ.

ಮತದಾರರಲ್ಲಿ ಹೋಗಿ ತಾವು ಮಾಡಲಿರುವ ಕೆಲಸ ಕಾರ್ಯಗಳನ್ನು ವಿವರಿಸಿ ಅವರ ಮತ ತನಗೆ ಕೊಡಬೇಕೆಂದು ಕೇಳುವದು ನ್ಯಾಯಬದ್ಧವಾದುದು. ಆದರೆ "ನನ್ನ ಮನೆಯಲ್ಲಿ ಕೆಲಸ ಮಾಡುವ ನೀನು ನನಗೆ ಓಟು ಕೊಡದಿದ್ದರೆ ನಾಳೆಯಿಂದ ನಿನಗೆ ಕೆಲಸವಿಲ್ಲ" ವೆಂದು ಗದರಿಸುವದೂ 'ನನಗೆ ಓಟು ಕೊಟ್ಟರೆ ಪ್ರತಿ ಓಟಿಗೆ ಎರಡು ರೂಪಾಯಿಯಂತೆ ಕೊಡುತ್ತೇನೆ'ಂದು ಹೇಳುವದೂ, ಅನಕ್ಷರಸ್ಥ ಮತದಾರರಿಗೆ ಸೇಂದಿ ಕುಡಿಸಿ ಪುಸಲಾಯಿಸುವದೂ ಈ ಯುಗದಲ್ಲಿ ಅನೀತಿಯೆಂದು ಕರೆಯಲ್ಪಡಬೇಕು. 'ನಾನು ಹೇಳಿದವರಿಗೆ ಓಟು ಕೊಡದಿದ್ದರೆ ನಮ್ಮ ಜಾಗದಲ್ಲಿ ಮನೆ ಕಟ್ಟಿಕೊಂಡಿರುವ ನಿನ್ನನ್ನು ಇಲ್ಲಿಂದ ಹೊರಡಿಸಲಾದೀತು' ಎಂದು ಹರಿಜನರೊಬ್ಬರನ್ನು ಹೆದರಿಸಿದುದೂ ಇದೆಯಂತೆ. ಇದೇ ಅಲ್ಲ, ತನಗೇ ಓಟು ಕೊಡಬೇಕೆಂದು ರಸ್ತೆ ಕೆಲಸಗಾರರಿಂದ ಮೊದಲೇ ಸಹಿ ತೆಗೆದುಕೊಂಡ ನಿದರ್ಶನಗಳೂ ಇವೆಯಂತೆ. ಈ ಎಲ್ಲ ವರ್ತಮಾನಗಳು ನಿಜವೆಂದಾದರೆ ಇವರಿಂದ ಪ್ರಜಾಪ್ರಭುತ್ವದ ಕೊಲೆ ನಡೆದಿದೆಯೆನ್ನಬೇಕು.

ತುಂಬಾ ಅನಕ್ಷರಸ್ಥರಿರುವಲ್ಲಿ ಓಟಿನ ದುರುಪಯೋಗವಾಗುವದು ಸ್ವಾಭಾವಿಕ. ಪ್ರಜಾಪ್ರಭುತ್ವವು ಸರಿಯಾಗಿ ಕೆಲಸ ಮಾಡಬೇಕಾದರೆ ಎಲ್ಲರಿಗೂ ತಮ್ಮ ಓಟಿನ ಬೆಲೆ ತಿಳಿದಿರಬೇಕು. ಈ ಪರಿಸ್ಥಿತಿ ಇಂದು ಹಿಂದೂದೇಶದಲ್ಲಿ ಇಲ್ಲದಿರುವ ಕಾರಣ ವಿದ್ಯಾವಂತರೂ, ಮುಂದಾಳುಗಳೂ, ದೇಶ ಹಿತವನ್ನು ಬಯಸುವ ಉಮೇದುವಾರರೂ ಅಡ್ಡದಾರಿ ಹಿಡಿಯದೆ ಮತದಾನದ ಬಗ್ಗೆ ಜನಜಾಗೃತಿ ಮಾಡುವದು ವಿಹಿತವಾದುದಾಗಿತ್ತು. ಆದರೆ ಸ್ವಾರ್ಥಕ್ಕೆ, ಸಂಕೀರ್ಣತೆಗಳು ಎಲ್ಲದಕ್ಕಿಂತಾ ಮಿಗಿಲೆಂದೆಣಿಸಲ್ಪಟ್ಟಿರುವ ಕಾಲದಲ್ಲಿ ತನ್ನ ಸಾಧನೆಗಾಗಿ ತತ್ವಗಳ ಕೊಲೆಮಾಡಲು, ತನ್ನ ಜಯಕ್ಕಾಗಿ ಅಡ್ಡದಾರಿ ಹಿಡಿಯಲು ಸಂಕೀರ್ಣ ದೃಷ್ಟಿಯ ಮಾನವನು ಹೇಸನು!

ಇಂಥಾದ್ದಕ್ಕೆ ಎಡೆ ಇರಬಾರದು. ಪ್ರಜಾಪ್ರಭುತ್ವ ಸರಿಯಾಗಿ ಕೆಲಸ ಮಾಡುವಂತಾಗಬೇಕೆಂದೇ ಮೊನ್ನೆಯಾಗಿ ಕೇಂದ್ರ ಶಾಸನ ಸಭೆಯು ಅಂಗೀಕರಿಸಿದ ಚುನಾವಣಾ ಶಾಸನಗಳಲ್ಲಿ ಮತದಾರರಿಗೆ ದುಡ್ಡಿನ ಮೋಹ, ಇತರ ಆಶೆ ತೋರಿಸುವವರು ಮತ್ತು ಮತದಾರರನ್ನು ಸಾಗಿಸಲು ಬಾಡಿಗೆಯ ಲಾರಿ ಕಾರುಗಳನ್ನು ಉಪಯೋಗಿಸುವವರು ಶಿಕ್ಷಾರ್ಹರೆಂದು ವಿಧಿಸಲಾಗಿದೆ. ಹಾಗಿರುವಾಗ ಇದನ್ನೆಲ್ಲಾ ತಿಳಿದ ವಿದ್ಯಾವಂತ ಉಮೇದುವಾರರು ಅವಕ್ಕನುಗುಣ ವರ್ತಿಸಬೇಕಿತ್ತು. ಯಾವುದೋ ಅಡ್ಡದಾರಿಯಿಂದ ಸದಸ್ಯನಾಗಿ ಆರಿಸಿ ಬರುವದಕ್ಕಿಂತಾ ಯೋಗ್ಯ ಪಥದಲ್ಲಿ, ತತ್ವಬದ್ಧನಾಗಿ ಜನತೆಗೆ ಅರಿವು ಕೊಟ್ಟು, ಅಪಜಯವನ್ನು ಆಲಿಂಗಿಸುವದೇ ಹೆಚ್ಚಿನ ದೇಶಸೇವೆಯಾಯಿತೆಂದು ಗಣಿಸಬೇಕಾಗಿದೆ.

ಮಡಿಕೇರಿ ಪುರಸಭೆಯ ಚುನಾವಣೆಯು ಸ್ವಾತಂತ್ರ್ಯ ಯುಗದ ಪ್ರಜಾತತ್ವಕ್ಕನುಗುಣ ನಡೆಯಿತೆಂದು ಹೇಳಲು ಬರುವದಿಲ್ಲ. ಪಾರ್ಟಿ, ಜಾತಿಯ ಹೊಯ್ದಾಟ ಪ್ರತ್ಯಕ್ಷವಲ್ಲದಿದ್ದರೂ ಅಪ್ರತ್ಯಕ್ಷವಾಗಿ ಇದ್ದಿತ್ತು. ತಮ್ಮ ಗುರಿಯ ಸಾಧನೆಗಾಗಿ ಅಡ್ಡದಾರಿ ಹಿಡಿದವರು ಹೆಚ್ಚು. ಉಮೇದುವಾರರಿಗೆ ಸಂಕೇತಗಳನ್ನು ನಿಶ್ಚಯಿಸುವದರಲ್ಲಿ ಪಕ್ಷಸಾಧನೆಯ ವಾಸನೆ ಇತ್ತೆಂದು ಹೇಳಲ್ಪಡುತ್ತಿದೆ. ಬಹುಶಃ ಇದು ಚುನಾವಣೆಗೆ ನಿಂತ ಉಮೇದುವಾರನೇ ಚುನಾವಣಾ ಅಧಿಕಾರಿಯಾದ ಕಾರಣದಿಂದಿರಬಹುದು. ಹೇಗೂ ಈ ಚುನಾವಣೆಯಿಂದ ದೇಶವು ಒಂದು ಪಾಠ ಕಲಿಯಬೇಕಿದೆ. ಸ್ವಾತಂತ್ರ್ಯ ಬಂದರೂ ದುಡ್ಡಿನ ಆಸೆ ತೋರಿ, ಅಧಿಕಾರದ ದರ್ಪತೋರಿ, ಕಟ್ಟಿ ಆಶೆಗಳನ್ನು ಹುಟ್ಟಿಸಿ ಓಟು ಪಡೆಯುವ ಮನೋವೃತ್ತಿ ತುಂಬಾ ಇದೆ. ಇಂದು ಚಿಕ್ಕ ಪ್ರಮಾಣದಲ್ಲಿ ಮಡಿಕೇರಿ ಪುರಸಭೆಯ ಚುನಾವಣೆಯಲ್ಲಿ ನಡೆದುದು ನಾಳೆ ದೊಡ್ಡ ಪರಿಮಾಣದಲ್ಲಿ ಸಾರ್ವತ್ರಿಕ ಚುನಾವಣೆಯಲ್ಲಿ ನಡೆಯದಿರದು. ಆಗ ಪ್ಲಾಂಟರುಗಳು, ಶ್ರೀಮಂತರು, ತಮ್ಮ ಅಧೀನದಲ್ಲಿರುವವರ ಗಂಟಲು ಹಿಡಿದು ಓಟು ಪಡೆಯಲೆಳಸಬಹುದು. ಆದ್ದರಿಂದ ದೇಶದ ಹಿತವನ್ನು ಲೆಕ್ಕಿಸುವವರು ಈಗಲಿಂದಲೇ ಜನಜಾಗೃತಿಗೊಳಿಸಬೇಕು. ಅಮೂಲ್ಯವಾದ ಓಟಿನ ಬೆಲೆಯನ್ನು ತಿಳಿಸಬೇಕು. ದುಡ್ಡು ದುಗ್ಗಾಣಿಗೂ, ಅಧಿಕಾರ ಆಡಂಬರಗಳಿಗೂ ಮಾರುವ ವಸ್ತು ಇದಲ್ಲವೆಂಬುದನ್ನು ಮನದಟ್ಟು ಪಡಿಸಬೇಕು. ಜನಹಿತವನ್ನು ಲೆಕ್ಕಿಸುವವರು ನಾಡಿನ ಹಿತವನ್ನು ಬಯಸುವವರು, ಪ್ರಜಾಪ್ರಭುತ್ವದಲ್ಲಿ ವಿಶ್ವಾಸವುಳ್ಳವರು ಆ ರೀತಿಯ ಜನಜಾಗೃತಿಗಾಗಿ ಕಂಕಣಬದ್ಧರಾಗಿ ದುಡಿಯುವರೇ?

ವರ್ತಮಾನ.

ಪೊನ್ನಂಪೇಟೆ ರೀಜನಲ್ ಜಾನವಾರುಗಳ ಜಾತ್ರೆಯು ತಾ ೧೭-೧೨-೫೦ ರಲ್ಲಿ ಪೊನ್ನಂಪೇಟೆ ಶಾಲಾ ಆಟದ ಮೈದಾನದಲ್ಲಿ ಶ್ರೀ ಸಿ. ಎಂ. ಪೂಣಚ್ಚನವರ ಅಧ್ಯಕ್ಷತೆಯಲ್ಲಿ ನಡೆಯಿತು.

ವೈದ್ಯಶಾಸ್ತ್ರದಲ್ಲಿ ಹೆಚ್ಚಿನ ವ್ಯಾಸಂಗಕ್ಕಾಗಿ ಇಂಗ್ಲೆಂಡಿಗೆ ತೆರಳಿದ್ದ ಡಾ. ಜೊಕ್ಕೀರ ಅಯ್ಯಪ್ಪನವರು ತಮ್ಮ ಮೂರು ವರ್ಷಗಳ ವ್ಯಾಸಂಗ ಮುಗಿಸಿ ಕೊಡಗಿಗೆ ಬಂದಿರುವರು.

ತಾ. ೧೭-೧೨-೫೦ರಲ್ಲಿ ಬೇಗೂರು ಮಾಧ್ಯಮಿಕ ಶಾಲೆಯ ಒಳಗೆ ವಿದ್ಯಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಬಳ್ಳೂರ, ನಲ್ಲೂರ್, ಹೈಸೊಡ್ಲೂರ್, ಬಾಳೆಲೆ ಮತ್ತು ಕಾನೂರಿನ ಹಲವು ಮಹನೀಯರ ಸಾರ್ವಜನಿಕ ಸಭೆಯೊಂದು ನಡೆದು ಬೇಗೂರಿನಲ್ಲಿ ಹೈಸ್ಕೂಲೊಂದನ್ನು ಸ್ಥಾಪಿಸುವ ನಿರ್ಣಯ ಮಾಡಲಾಯಿತು. ಇದರ ಆವಶ್ಯಕತೆಯನ್ನು ಕುರಿತು ಶ್ರೀಗಳಾದ ಬಿ. ಕೆ. ಗೋಪಾಲದಾಸ್, ಎಚ್. ನಂದಮ್ಮಯ್ಯ, ಪಿ. ಎಸ್. ಕೆ. ಶಂಕರ್, ಬಿ. ಡಿ. ಬೆಳ್ಯಪ್ಪ ಮತ್ತು ಎಚ್. ಬಿ. ಕುಶಾಲಪ್ಪ ಇವರುಗಳು ಭಾಷಣ ಮಾಡಿದರು.

ರೈತರ ಅವಗಾಹನೆಗೆ

ಹೆಚ್ಚು ಆಹಾರ ಬೆಳೆಯುವ ಯೋಜನೆಯಲ್ಲಿ ಕೆರೆ, ಕಟ್ಟೆ, ತೋಡು, ದನದ ಕೊಟ್ಟಿಗೆ, ಗೊಬ್ಬರಗುಂಡಿ ಮೊದಲಾದುವುಗಳನ್ನು ಕಟ್ಟಲು ರೈತರಿಗೆ ಸೀಮೆಂಟ್ ಒದಗಿಸಿಕೊಡುವ ನಿಮಿತ್ತ, ಕೊಡಗು ವ್ಯವಸಾಯ ಇಲಾಖೆಯು ಕೋಆಪರೇಟಿವ್ ಮಾರ್ಕೆಟಿಂಗ್ ಫೆಡರೇಷನ್ನಿನ ಮೂಲಕ ಸೀಮೆಂಟನ್ನು ತರಿಸಿ ವಿರಾಜಪೇಟೆ ಮತ್ತು ಮಡಿಕೇರಿ ಫೆಡರೇಷನ್ ಸ್ಟೋರುಗಳಲ್ಲಿ ಮಾರಾಟ ಮಾಡುವ ಏರ್ಪಾಡು ಮಾಡಿದೆಯೆಂದೂ ಮತ್ತು ಮೇಲಿನ ಕೆಲಸಗಳಿಗೆ ಸೀಮೆಂಟ್ ಬೇಕಾದವರು ವ್ಯವಸಾಯ ಇಲಾಖೆಯ ಮುಖ್ಯಾಧಿಕಾರಿಗಳಿಗೆ ಪಡೆಯಲು ಅರ್ಜಿ ಹಾಕಿಕೊಳ್ಳಬೇಕೆಂದೂ ಈ ಮೂಲಕ ತಿಳಿಸಲಾಗಿದೆ. ಎಷ್ಟು ಚೀಲ ಸೀಮೆಂಟ್ ಬೇಕು ಮತ್ತು ಯಾವ ಕೆಲಸಕ್ಕಾಗಿ ಎಂಬುದನ್ನು ಅರ್ಜಿಯಲ್ಲಿ ತೋರಿಸಬೇಕು. ಅಲ್ಲದೆ ವ್ಯವಸಾಯಕ್ಕೆ ಬೇಕಾದ ಗುದ್ದಲಿ, ಪಿಕಾಸಿ, ಕೊಡಲಿ, ಜಗತಿ ಮೊದಲಾದ ಹತ್ಯಾರುಗಳನ್ನು ತರಿಸಿ ಕೊಡಗಿನ ಎಲ್ಲಾ ವ್ಯವಸಾಯ ಇಲಾಖಾ ಡಿಪೋಗಳಲ್ಲಿ ಮಾರಾಟ ಮಾಡುವ ಏರ್ಪಾಡು ಮಾಡಲಾಗಿದೆಯೆಂದೂ, ಮತ್ತು ಮೇಲಿನ ಹತ್ಯಾರುಗಳ ಆವಶ್ಯಕತೆ ಇರುವವರು ವ್ಯವಸಾಯ ಇಲಾಖಾ ಡಿಪೋಗಳಿಂದ ಅವುಗಳನ್ನು ಕೊಂಡುಕೊಳ್ಳಬಹುದೆಂದೂ, ಕೊಡಗು ವ್ಯವಸಾಯ ಇಲಾಖೆಯು ಪ್ರಕಟಿಸಿರುತ್ತದೆ.

ರಾಜಿ ಪ್ರಯತ್ನದ ಕೂಟ.

ಕೊಡಗಿನಲ್ಲಿರುವ ಪ್ರತ್ಯೇಕ ಮತ್ತು ಸಂಯೋಜನಾ ಪಕ್ಷಗಳೊಳಗೆ ರಾಜಿಯನ್ನು ಸಾಧಿಸುವ ಬಗ್ಗೆ ಈ ತಿಂಗಳ ೧ನೇ ಸೋಮವಾರ ಮಡಿಕೇರಿ ಮರ್ಕಂಟೈಲ್ ಸಹಕಾರಿ ಬ್ಯಾಂಕಿನ ಹಾಲಿನಲ್ಲಿ ಒಂದು ಸಭೆ ಸೇರಿತ್ತು. ೧೩ ಚುನಾಯಿತ ಕೌನ್ಸಿಲು ಮೆಂಬರುಗಳೂ, ಒಂದೊಂದು ಪಕ್ಷದಿಂದ ೧೦ರಂತೆ ಪ್ರತಿನಿಧಿಗಳೂ ಹಾಜರಿದ್ದರು. ರಾ|| ಬಾ|| ಕೆ. ಉತ್ತಯ್ಯನವರು ಅಧ್ಯಕ್ಷರಾಗಿದ್ದರು. ಬೆಳಗ್ಗೆ ೧೧ಕ್ಕೆ ಗಂಟೆಯಿಂದ ಸಾಯಂಕಾಲ ೬ ಗಂಟೆಯವರೆಗೆ ದೀರ್ಘ ಚರ್ಚೆ ನಡೆದು, ಹಾಜರಿದ್ದ ಹಲವು ಮೆಂಬರುಗಳು ಕೊಡಗಿಗೆ ಜವಾಬ್ದಾರಿ ಸರಕಾರವನ್ನು ಪಡೆಯುವ ಮತ್ತು ಅದನ್ನು ನಡೆಸುವ ವಿಚಾರ ಮೂಲತತ್ವಾಧಾರದಂತೆ, ಉಭಯ ಪಕ್ಷದವರೂ ಒಪ್ಪುವಂಥಾ ಮತ್ತು ಒಗ್ಗಟ್ಟಾಗಿ ಕೆಲಸ ಮಾಡಲು ಅನುಕೂಲವಾಗುವಂಥ ಒಂದು ಯೋಜನೆಯನ್ನು ತಯಾರಿಸಲು ಒಂದೊಂದು ಪಕ್ಷದಿಂದ ಐದೈದು ಮೆಂಬರುಗಳಿಂದ ಕೂಡಿದ ಸಮಿತಿಯೊಂದನ್ನು ಸದಸ್ಯರುಗಳಾದ ಶ್ರೀ ಎನ್. ಸೋಮಣ್ಣನವರು ಮತ್ತು ಶ್ರೀ ಪಿ. ಐ. ಬೆಳ್ಯಪ್ಪನವರು ಏರ್ಪಡಿಸುವಂತೆಯೂ, ಈ ಸಮಿತಿಯು ಫೆಬ್ರವರಿ ೧ರೊಳಗೆ ತನ್ನ ವರದಿಯನ್ನು ಇನ್ನೊಂದು ಇಂಥಾ ಸಭೆಯ ಮುಂದಿಡುವಂತೆಯೂ ತೀರ್ಮಾನಿಸಲಾಯಿತು.

ತಿಳಿಸಿರಿ

ಭೂಮಿ, ತೋಟ, ಜಾಗ ಪೇಟೆಯಲ್ಲಿ ಮನೆ ಅಥವ ಮನೆ ಸೈಟು ಮಾರಲಿರುವವರು ಮತ್ತು ಕೊಂಡುಕೊಳ್ಳಲಿಚ್ಛಿಸುವವರು ಈ ಕೆಳಗಿನ ಪತ್ತೆಯಲ್ಲಿ ವಿಚಾರಿಸಿರಿ. ಅಲ್ಲದೆ ಬೇಕಾದವರಿಗೆ ಕರೆಯುವ ಎಮ್ಮೆ, ಹಸು ಮತ್ತು ಉಳುವ ಎತ್ತು ಮತ್ತು ಕೋಣಗಳನ್ನೂ ಒದಗಿಸಿ ಕೊಡಲಾಗುವುದು. ವಿವರಗಳಿಗೆ ಈ ಪತ್ತೆಗೆ ಬರೆಯಬಹುದು.

P. A & Sons,
Commission Agent.
Gonicoppal
2-1 S Coorg

ಕೃತಜ್ಞತಾವಂದನೆ.

ತಾ. 7-11-50 ರಲ್ಲಿ ಶಿವಾಧೀನರಾದ ನನ್ನ ತಂದೆಯವರ ವಿಯೋಗದ ದುಃಖದ ಸಂದರ್ಭದಲ್ಲಿ ಖುದ್ದಾಗಿ ಬಂದು ಮತ್ತು ಪತ್ರ ಮೂಲಕ ತಮ್ಮ ಸಂತಾಪವನ್ನು ಸೂಚಿಸಿ ನನ್ನ ದುಃಖದಲ್ಲಿ ಭಾಗಿಗಳಾದ ನನ್ನ ಬಂಧುಮಿತ್ರರಿಗೆ ಪ್ರತ್ಯೇಕವಾಗಿ ಬರೆದು ವಂದಿಸಲು ಅಸಾಧ್ಯವಾದ ಕಾರಣ ಈ ಮೂಲಕ ಅವರೆಲ್ಲರಿಗೆ ನನ್ನ ಹೃತ್ಪೂರ್ವಕ ಕೃತಜ್ಞತೆಗಳನ್ನರ್ಪಿಸುತ್ತೇನೆ.

ಮೂವೇರ ಎ. ಜೋಯಪ್ಪ,
ಬಲ್ಲಮಾವಟಿ
ನಾಪೋಕ್ಲು.

ಕೇಲೆಂಡರ್ ೧೯೫೧.	ಕೊಡಗು	CALENDAR. 1951.

ದಿನಗಳು	ಜನವರಿ	ಫೆಬ್ರವರಿ	ಮಾರ್ಚಿ	ಏಪ್ರಿಲ್	ಮೇ	ಜೂನ್	ಜುಲೈ	ಆಗೊಸ್ಟು	ಸೆಪ್ಟೆಂಬರ್	ಅಕ್ಟೋಬರ್	ನವಂಬರ್	ಡಿಸೆಂಬರ್
ಆದಿತ್ಯ.	....	....	....	1	....	....	1 ಜ. ½ ವರ್ಷದ ಬ್ಯಾಂಕ್ ಲೆಕ್ಕ	....	....	....	....	....
ಸೋಮ.	1 ಜ. ಹೊಸ ವರ್ಷಾರಂಭ	....	..	2	....	....	2	....	...	1 ಜ. ಮಹಾಲಯ ●	....	....
ಮಂಗಳ.	2	....	..	3	1	....	3	....	....	2 ಗಾಂಧೀ ಜಯಂತಿ	....	....
ಬುಧ.	3	....	....	4	2	....	4 ●	1	....	3	....	....
ಗುರು.	4	1	1	5	3	....	5	2 ●	....	4	1	....
ಶುಕ್ರ.	5	2	2	6 ●	4	1	6 ಜ. ರಮಜಾನ್	3	....	5	2	....
ಶನಿ.	6	3	3	7 ಜ. ಯುಗಾದಿ	5	2	7	4	1 ●	6	3	1
ಆದಿತ್ಯ.	7 ●	4	4	8	6 ●	3	8	5	2	7 ಶಾರದಾ ಪೂಜೆ	4	2
ಸೋಮ.	8	5	5	9	7	4 ●	9	6	3 ಜ. ಕೈಲ್ ಮುಹೂರ್ತ	8	5	3
ಮಂಗಳ.	9	6 ●	6 ಜ. ಮಹಾಶಿವರಾತ್ರಿ	10	8	5	10	7	4 ಗೌರಿವ್ರತ	9 ಜ. ಆಯುಧ ಪೂಜೆ	6	4 ಜ. ಸುಬ್ರಹ್ಮಣ್ಯ ಷಷ್ಠಿ
ಬುಧ.	10	7	7 ●	11	9	6	11	8	5 ಜ. ವಿನಾಯಕ ವ್ರತ	10 ವಿಜಯ ದಶಮಿ	7	5
ಗುರು.	11	8	8	12	10	7	12	9	6	11	8	6
ಶುಕ್ರ.	12	9	9 ರಾಮಕೃಷ್ಣ ಜಯಂತಿ	13 ಮೇಷ ಸಂಕ್ರಮಣ	11	8	13	10	7	12 ಜ. ಮೊಹರಂ	9	7
ಶನಿ.	13	10	10	14 ಜ. ಸೌರ ಯುಗಾದಿ	12	9	14	11	8	13	10	8
ಆದಿತ್ಯ.	14 ಮಕರ ಸಂಕ್ರಮಣ	11	11	15 ಶ್ರೀರಾಮ ನವಮಿ	13	10	15	12	9	14 ○	11	9
ಸೋಮ.	15	12 ಕುಂಭ ಸಂಕ್ರಮಣ	12	16	14 ವೃಷಭ ಸಂಕ್ರಮಣ	12	16 ಕರ್ಕಾಟಕ ಸಂಕ್ರಮಣ	13	10	15	12	10
ಮಂಗಳ.	16	13	13	17	15	11	17	14	11	16	13 ○	11
ಬುಧ.	17	14	14 ಮೀನ ಸಂಕ್ರಮಣ	18	16	13	18 ○	15 ಜ. ಸ್ವಾತಂತ್ರ್ಯ ದಿನ	12	17 } ಜ. ಕಾವೇರಿ ಸಂಕ್ರಮಣ	14	12 ಜ. ಮಿಲಾದ್ ನಬಿ
ಗುರು.	18	15	15	19	17	14	19	16 ಜ. ಉಪಾಕರ್ಮ	13 ಜ. ಬಕ್ರೀದ್	18 }	15	13 } ○ ಜ. ಹುತ್ತರಿ
ಶುಕ್ರ.	19	16	16	20	18	15 ಮಿಥುನ ಸಂಕ್ರಮಣ	20	17 ○	14	19	16 ವೃಶ್ಚಿಕ ಸಂಕ್ರಮಣ	14 }
ಶನಿ.	20	17	17	21 ○	19	16	21	18	15 ○	20	17	15 ಧನು ಸಂಕ್ರಮಣ
ಆದಿತ್ಯ.	21	18	18	22	20	17	22	19	16	21	18	16
ಸೋಮ.	22	19	19	23	21 ○	18	23	20	17 ಕನ್ಯಾ ಸಂಕ್ರಮಣ	22	19	17
ಮಂಗಳ.	23 ○	20	20	24	22	19 ○	24	21	18	23	20	18
ಬುಧ.	24	21 ○	21	25	23	20	25	22	19	24	21	19
ಗುರು.	25	22	22	26	24	21	26	23	20	25	22	20
ಶುಕ್ರ.	26 ಜ. ಪ್ರಜಾಪ್ರಭುತ್ವ ದಿನ	23	23 ○ ಜ. ಗುಡ್ ಫ್ರೈಡೆ	27	25	22	27	24 ಜ. ಶ್ರೀಕೃಷ್ಣ ಜಯಂತಿ	21	26	23	21
ಶನಿ.	27 ಕಡೇ ಶನಿವಾರ	24 ಕಡೇ ಶನಿವಾರ	24	28 ಕಡೇ ಶನಿವಾರ	26 ಕಡೇ ಶನಿವಾರ	23	28 ಕಡೇ ಶನಿವಾರ	25 ಕಡೇ ಶನಿವಾರ	22	27 ಕಡೇ ಶನಿವಾರ	24 ಕಡೇ ಶನಿವಾರ	22
ಆದಿತ್ಯ.	28	25	25	29	27	24	29	26	23	28	25	23
ಸೋಮ.	29	26	26	30	28	25	30	27	24	29 ಜ. ದೀಪಾವಳಿ	26	24
ಮಂಗಳ.	30	27	27	....	29	26	31	28	25	30 ●	27	25 ಜ. ಕ್ರಿಸ್ಮಸ್
ಬುಧ.	31	28	28	....	30	27	....	29	26	31	28	26
ಗುರು.	....	....	29	....	31	28	....	30	27	....	29	27
ಶುಕ್ರ.	....	....	30	....	....	29	....	31	28	....	30 ●	28 ●
ಶನಿ.	....	....	31 ಕಡೇ ಶನಿವಾರ	....	...	30 ಕಡೇ ಶನಿವಾರ	....	....	29 ಕಡೇ ಶನಿವಾರ	....	....	29 ಕಡೇ ಶನಿವಾರ
ಆದಿತ್ಯ.	....	....	....	....	....	....	....	....	30	....	....	30
ಸೋಮ.	....	....	....	....	....	....	....	....	....	....	....	

ಸೂಚನೆ:—ಜ=ಸರ್ಕಾರಿ ರಜೆ. ○=ಹುಣ್ಣಿಮೆ. ●=ಅಮಾವಾಸ್ಯೆ.

ಓದುಗರ ಓಲೆಗಳು

ನಮ್ಮ ಶಾಸನ ಸಭಾಂಗಣ

ಕೌನ್ಸಿಲು ಮೀಟಿಂಗಿಗೆ ನಾನು ಹೋಗಿದ್ದೆ. ಕೌನ್ಸಿಲು ಸಭಾಂಗಣದಲ್ಲಿ ಇಟ್ಟಿರುವ ಮಹಾತ್ಮಾ ಗಾಂಧೀ, ರಾಜೇಂದ್ರಪ್ರಸಾದ ಮತ್ತು ಪಂಡಿತ ಜವಾಹರರ ಚಿತ್ರಗಳನ್ನು ನೋಡಿ ವ್ಯಸನವಾಯಿತು. ನಮ್ಮ ದೇಶದ ಈ ನಂದಾದೀಪಗಳಿಗೆ ಯಾವ ರೀತಿಯ ಗೌರವ ಸಲ್ಲಿಸಲ್ಪಟ್ಟಿದೆ ಎಂಬುದು ಇಲ್ಲಿ ಒಡೆದು ಕಾಣುತ್ತಿದೆ. ಪೇಟೆಯಲ್ಲಿ ಆರಾಣ ಎಂಟಾಣೆಗೆ ದೊರೆಯುವ ವಿಕಾರರೂಪಿನ ಈ ಚಿತ್ರಗಳನ್ನು ಇಲ್ಲಿ ಮರ್ಯಾದೆಯ ಮುಂಭಾಗದಲ್ಲಿ ತೆಗೆದು ಹಾಕುವುದು ಯೋಗ್ಯವಾದುದು. ಕೌನ್ಸಿಲ್ ಹಾಲ್‌ನಲ್ಲಿ ಕೊಡಗಿನ ಹಿಂದಿನ ಚೀಫ್ ಕಮಿಷನರೊಬ್ಬರಾದ ದಿ ಬಿ ಕೆ ಚಟರ್ಜಿಯವರ [illegible] ಆಯಿಲ್ ಪೈಂಟ್ ಛಾಯಾಚಿತ್ರವೊಂದನ್ನು ಇಟ್ಟಿದ್ದಾರೆ. ಆದರೆ ಭಾರತ ಭಾಗ್ಯವಿಧಾತರಾದ ನಮ್ಮಂದ ಮಹನೀಯರ [illegible] ಯೋಗ್ಯತೆ ನಮ್ಮ ಸರಕಾರಕ್ಕಿಲ್ಲ. ಆದ್ದರಿಂದ ಒಮ್ಮೆ [illegible] ಅಲ್ಲಿರುವ ಚಿತ್ರಗಳನ್ನು ತೆಗೆದು [illegible] ಯೋಗ್ಯ [illegible] ಕಲಾತ್ಮಕ ಚಿತ್ರಗಳನ್ನು ಇಡಬೇಕು. [illegible] ಕೊಡಗಿನ ಸಾರ್ವಜನಿಕರಿಂದ [illegible] ಕೌನ್ಸಿಲ್ ಹಾಲಿಗೆ [illegible] ಉತ್ತಮ ಚಿತ್ರಗಳನ್ನು [illegible] ಈಗಿರುವ ಅವಮಾನವನ್ನು ಹೋಗಲಾಡಿಸಲಿ.

ಪ್ರೇಕ್ಷಕ.

ಕಾಲೇಜ್ ಪ್ರಿನ್ಸಿಪಾಲರು

ಕೊಡಗು ಸರಕಾರಿ ಕಾಲೇಜಿನ ಪ್ರಿನ್ಸಿಪಾಲರ ಒಂದು ತಿಂಗಳು ರಜೆಯಲ್ಲಿ ಹೋಗಿರುವರಂತೆ. ಅವರ ರಜೆ ಕೇಳಿದಾಗ ಈ ಸಮಯದಲ್ಲಿ ರಜೆ ತೆಗೆಯುವುದು ಅತೀ ಅನವಶ್ಯ ಎಂದು ಸರಕಾರ ಕೇಳಿತ್ತಂತೆ. ಆದರೂ ಪ್ರಿನ್ಸಿಪಾಲರು ರಜೆಯಲ್ಲಿ ಹೋಗಿರುವರು. ವಿಚಾರಿಸಿ ತಿಳಿದ ಮಟ್ಟಿಗೆ ಈ ರಜಕ್ಕೆ ಅನಿವಾರ್ಯವಾದ ಮಹಾಕಾರಣಗಳೇನೂ ತೋರುತ್ತಿಲ್ಲ. ಗಳಿಸಿದ ರಜೆ ಇರುವಾಗ ಅದನ್ನು ತೆಗೆಯುವ ಹಕ್ಕು ಆಯಾಯ ನೌಕರರಿಗಿರಬಹುದು. ಆದರೆ ರಜೆ ಇದೆಯೆಂದು ಜವಾಬ್ದಾರಿಯನ್ನು ಮರೆತ ಯಾರೂ ವರ್ತಿಸಬಾರದು. ಕೊಡಗಿನ ಕಾಲೇಜು ಈ ವರ್ಷ ಪ್ರಥಮವಾಗಿ ವಿಶ್ವವಿದ್ಯಾಲಯದ ಪರೀಕ್ಷೆಗೆ ವಿದ್ಯಾರ್ಥಿಗಳನ್ನು ಕಳುಹಿಸಲಿದೆ. ಹೀಗಿರುವಾಗ ಉತ್ತಮ ಫಲಿತಾಂಶ ದೊರೆಯುವ ಬಗ್ಗೆ ಜವಾಬ್ದಾರಿ ಹೊತ್ತವರೆಲ್ಲರೂ ಪ್ರಯತ್ನಿಸಬೇಕು. [illegible] ವರೆಗೆ ಈ ವರ್ಷದ ಪರೀಕ್ಷಾ ಫಲಿತಾಂಶದ ಮೇಲೆಯೇ ಕಾಲೇಜಿನ ಭವಿಷ್ಯ [illegible] ಕಾರಣ ಸರ್ವರೂ [illegible] ಶ್ರಮವಹಿಸಬೇಕಿದೆ. ಕಾಲೇಜಿನ ವಿದ್ಯಾರ್ಥಿಗಳ ಈ ವರೆಗಿನ [illegible] ಪರಿಶೀಲಿಸಿದರೆ ತೃಪ್ತಿಕರ [illegible] ಪರೀಕ್ಷೆಯಲ್ಲಿ [illegible] ಭಾಗಗಳಲ್ಲಿಯೂ [illegible] ಕೇವಲ [illegible] ಕನಿಷ್ಠ ಸಂಖ್ಯೆ! ಈ ಕಾಲೇಜಿನ [illegible] ತರಗತಿಯಲ್ಲಿರುವ ಎಂಭತ್ತು ವಿದ್ಯಾರ್ಥಿಗಳಲ್ಲಿ! ಇನ್ನು ಪರೀಕ್ಷೆಗೆ ಕೇವಲ ಮೂರು ತಿಂಗಳ ಗಳಿವೆ. ಈ [illegible] ಕಾಲೇಜಿನ ಅಧಿಕಾರಿಗಳು ಈ

[illegible] ಪರೀಕ್ಷಾ ಫಲಿತಾಂಶ [illegible] ಗರಿಷ್ಟ ಇನ್ನೂ ಹೆಚ್ಚಿನ [illegible] [illegible] ಮಾನ್ಯ ದೇಶ [illegible] ಪಡಿಸುವರೆ?

'ಹಿತಚಿಂತಕ'

ಕಾಲೇಜು ಕಟ್ಟಡ

ಎರಡು ವಾರಗಳ ಹಿಂದಿನ ಪತ್ರಿಕೆಯಲ್ಲಿ ಬರುವ ವರ್ಷದಿಂದ ಕೊಡಗಿನ ಕಾಲೇಜಿನಲ್ಲಿ ಮುಂದಿನ ತರಗತಿಯನ್ನು ತೆರೆಯುವದಿಲ್ಲವೆಂದೂ ಕಾಲೇಜು ಕಟ್ಟಡವಾಗದ ವರೆಗೆ ಕೊಡಗು ಕಾಲೇಜು ಇಂಟರ್ ಮೀಡಿಯೇಟ್ ಕಾಲೇಜಾಗಿಯೇ ಇರುವದೆಂದೂ ಸೂಚನೆ ಒಂದು ವರ್ತಮಾನ ಓದಿದೆನು. ಕೊಡಗು ಕಾಲೇಜಿನ ಕಟ್ಟಡಕ್ಕಾಗಿ ಹತ್ತು ಲಕ್ಷ ರೂಪಾಯಿ ಸಂಚಯವಾಗಿದೆ. ಕಾಲೇಜು ಕ[illegible] [illegible] ಅದರಿಂದ ಈ ಕೆಲಸ ಸಾಧ್ಯವಾಗದಿದ್ದರೆ ಬೇರೆ ಕಟ್ಟಡ ಏರ್ಪಡಿಸಬಾರದೇಕೆ? ಜನರು ಬಹಳ ಕಾಲದಿಂದ ಕಟ್ಟಡ ಕೆಲಸ ಪ್ರಾರಂಭಿಸಲಾಗುವದೆಂದು ಸರಕಾರ ಹೇಳಿದ ಪ್ರಕಾರ [illegible] ಸರಕಾರವು ಈ ವಿಚಾರದಲ್ಲಿ ಆಸಕ್ತಿ ವಹಿಸಿ ಮುಂದಿನ ವರ್ಷ ಕಟ್ಟಡ ಪ್ರಾರಂಭವಾಗುವಂತೆ ಮಾಡಬೇಕು. [illegible] ಆದ್ದರಿಂದ ಶೀಘ್ರ ಕೆಲಸ ಪ್ರಾರಂಭಿಸುವಂತಾದರೆ ಬಡ ವಿದ್ಯಾರ್ಥಿಗಳಿಗೆ ಹಿತವಾಗುವುದು. [illegible] ತರಗತಿ ತೆರೆಯಲ್ಪಡದ ಕಾರಣ ಅನೇಕ ವಿದ್ಯಾರ್ಥಿಗಳು ಇಂಟರ್ ಮೀಡಿಯೇಟ್ ಮುಗಿಸಿ ಮುಂದೆ ವ್ಯಾಸಂಗಕ್ಕೆ ಹೋಗದೆ ನಿಲ್ಲಬೇಕಾಗುವದು. ಆದ್ದರಿಂದ ಸರಕಾರವು ಶೀಘ್ರ ವರ್ತಿಸಬೇಕಾಗಿದೆ.

ಬೋಪಯ್ಯ ಪಿ.

ಮಲೆನಾಡು

ಮಲೆನಾಡು ಭಾಗಗಳ ಅಭಿವೃದ್ಧಿ ಯೋಜನೆಯನು ತಯಾರಿಸಿ ಅವಗಳ ಪುರೋಭಿವೃದ್ಧಿಗಾಗಿ ತಕ್ಕ ಕಾರ್ಯಕ್ರಮಗಳನ್ನು ಕೈಕೊಳ್ಳಲು ಕೇಂದ್ರ ಸರಕಾರವು ಮಲೆನಾಡ ಸಮಿತಿಯೊಂದನ್ನು ನೇಮಿಸಿ ಅದರಲ್ಲಿ ಕೊಡಗಿಗೆ ಒಂದು ಸ್ಥಳವಿತ್ತುದು ಸಂತೋಷದ ಸಂಗತಿ. ಆದರೆ ಕೊಡಗಿನ ಪಶ್ಚಿಮ ಘಟ್ಟಗಳ ಕೆಲವು ಭಾಗಗಳನ್ನು ಮಾತ್ರ ಮಲೆನಾಡೆಂದು ವರ್ಗೀಕರಿಸಿ ಆ ಕ್ಷೇತ್ರದ ಮಟ್ಟಿಗೆ ಮಾತ್ರ ಮಲೆನಾಡು ಸಮಿತಿಯು ತನ್ನ ದೃಷ್ಟಿಯನ್ನು ಹರಿಸುತ್ತಿದೆಯೆಂದು ವರ್ತಮಾನ. ಇದು ಸರಿಯಲ್ಲ. ಇಡೀ ಕೊಡಗೇ ಮಲೆನಾಡು. ಆದ್ದರಿಂದ ಸಮಸ್ತ ಕೊಡಗನ್ನು ಮಲೆನಾಡೆಂದು ಭಾವಿಸಿ ಇಡೀ ಕೊಡಗನ್ನು ತಮ್ಮ ಕಾರ್ಯಕ್ಷೇತ್ರದಲ್ಲಿ ಸೇರಿಸಿಕೊಂಡು ಮಲೆನಾಡು ಸಮಿತಿಯವರು ತಕ್ಕ ಸಲಹೆಗಳನ್ನು [illegible] ಅಧಿಕಾರ [illegible] ಅಭಿಪ್ರಾಯವನ್ನು [illegible] ಮಲೆನಾಡು ಸಮಿತಿಯ [illegible] ಕ್ಷೇತ್ರಕ್ಕೊಳಗಾಗ [illegible] ಬೇಕಾಗಿದೆ.

ಬಿ. ಡಿ. ಬೆಳ್ಯಪ್ಪ

ಬತ್ತದ ಬೆಲೆ

ಯಾವ ರೈತರು ತಮ್ಮ ಉಳುವರಿ ಬತ್ತವನ್ನು ನಿಶ್ಚಿತ ಕೇಂದ್ರಗಳಲ್ಲಿಯೋ ಯಾ ಟೌನುಗಳಲ್ಲಿಯೋ ತಂದು ಕೊಡುತ್ತಾರೋ ಅವರಿಗೆ ಗಾಡಿಗೆ ರೂ ೧೮-೬-೦ ದೊರೆಯುವುದೆಂದೂ ಹಳ್ಳಿಗಳಲ್ಲಾದರೆ ರೂ ೧೭-೦-೦ ದೊರೆಯುವದೆಂದೂ ತಾ ೩೦-೧೨-೫೦ ರಲ್ಲಿ ಶನಿವಾರಸಂತೆಯಲ್ಲಿ ನಡೆದ ಜನಾಬಂದಿಯಲ್ಲಿ ನನಗೆ ತಿಳಿದು ಬಂತು. ಈ ರೀತಿಯ ದರದಿಂದ ಬಡ ರೈತನಿಗೆ ಅನ್ಯಾಯವಾಗುತ್ತಿದೆ. ಗ್ರಾಮಾಂತರಗಳಲ್ಲಿರುವ ರೈತರ ಕಣದಿಂದ ಬತ್ತ ಸಂಗ್ರಹಿಸಲು ಕಷ್ಟವಾಗುತ್ತಿರುವುದು ರೈತರ ಕಾರಣವಾಗಿ ಅಲ್ಲ. ಸರಕಾರವು ಬಡ ರೈತರ ಗ್ರಾಮಗಳಿಗೆ ಯೋಗ್ಯ ರಸ್ತೆ ಮಾಡಿಸಿ ಕೊಡದಿರುವುದರಿಂದ! ಆದ್ದರಿಂದ [illegible] ಕೊತು, ರೈತನಿಗೆ ೧೮ ವರೆ ದೊರೆಯುವಂತೆ ಮಾಡ ಬೇಕಾದದ್ದು ಸರಕಾರದ ಆದ್ಯ ಕರ್ತವ್ಯವಾಗಿದೆ.

ಶಂಭು ಲಿಂಗಪ್ಪ

ಸೇಂದಿ ಅಂಗಡಿಗಳು

ಕೊಡಗಿನ ಹಾದಿ ಬೀದಿಯಲ್ಲಿದ್ದ ಸೇಂದಿ ಅಂಗಡಿಗಳನ್ನೆಲ್ಲ ಕಡಿಮೆ ಮಾಡಿ ಈಗ ಕೆಲವೊಂದು ನಿಶ್ಚಿತ ಸ್ಥಳಗಳಲ್ಲಿ ಮಾತ್ರ ಅಂಗಡಿ ಇಡಲಾಗಿದೆ. ಅಂಗಡಿ ಕಡಿಮೆಯಾಯಿತೆಂದು ಕುಡಿಯುವವರ ಸಂಖ್ಯೆ ಸ್ವಲ್ಪವೂ ಕಡಿಮೆಯಾಗಿಲ್ಲ. ಅದರಿಂದ ಈ ಸೇಂದಿ ಅಂಗಡಿಗಳಲ್ಲಿ ವಿಪರೀತ ಜನ [illegible] ಕೆಲವು ಅಂಗಡಿಗಳಲ್ಲಿ ಸೇಂದಿ ಇಲ್ಲದೆ ಕೆಲವು ವಿಶಿಷ್ಟ ಸಾಧನಗಳನ್ನು ಉಪಯೋಗಿಸಿ ಕೃತಕ ಸೇಂದಿಯನ್ನು ತಯಾರಿಸಿ ಕೊಡುವರೆಂದು ತಿಳಿದುಬಂದಿದೆ. ಇದು [illegible] ಜನರ ಆರೋಗ್ಯಕ್ಕೆ [illegible] ಕೆಡುಕುಂಟು ಮಾಡುವುದಾಗಿದೆ. ಇದಲ್ಲದೆ ಯಾವುದೇ [illegible] ಸರಿ ಇಲ್ಲವೆಂದು ಹೇಳಬೇಕು. ಕೊಡಗಿನ ಗಿರಿಜನಗಳಲ್ಲಿ ಅಳೆದು ಕೊಡುವ ಪಾತ್ರವೇ [illegible] ಇವನ್ನೆಲ್ಲ ಪರಿಶೀಲಿಸಿ ಅಧಿಕಾರಿಗಳು ಸೇಂದಿ ಅಂಗಡಿಗಳಲ್ಲಿ ಒಂದು ಕ್ರಮ, ಶಿಸ್ತು ಬರುವಂತೆ ಏರ್ಪಡಿಸುವರೇ?

ಬೋರಣ್ಣ

ಮಡಿಕೇರಿ ಪುರಸಭೆಯ ಹೊಸ ಸದಸ್ಯರುಗಳಲ್ಲಿ ವಿನಂತಿ

ಮಡಿಕೇರಿ ಪುರಸಭೆಯ ಹೊಸ ಚುನಾವಣೆಯು ಈಗ ನಡೆದಿದೆ. ಮುಂಬರುವ [illegible] ಈ ವಿಷಯಗಳಿಗೆ ಪ್ರಥಮ ಸ್ಥಾನ ಕೊಡಬೇಕೆಂದು ಈ ಓಲೆಯನ್ನು [illegible] ದ್ವಾರ [illegible] ನೀರಿನ ಅಭಾವ [illegible] ಆರೋಗ್ಯದ ದೃಷ್ಟಿ

ಈಗಿನ ಸ್ಥಿತಿಯಲ್ಲಿ ಪಟ್ಟಣದ ಮಧ್ಯಭಾಗದ ಜನ [illegible] ಇತರ [illegible] ಮಲವಿಸರ್ಜನೆಯು [illegible] ಪಟ್ಟಣದ ಪಕ್ಕದಲ್ಲಿ ಹರಿಯುವ [illegible] ನೀರನ್ನು [illegible] ಕುಡಿಯಲು ಮತ್ತು [illegible] ಉಪಯೋಗಿಸುವ ಕ್ರಮ [illegible] ಆದುದರಿಂದ

ಶೇಖರಿಸುವುದಕ್ಕೆ ತಕ್ಕ ಏರ್ಪಾಡ ಮಾಡಿ ಆದರಿಂದ ಉತ್ತಮವಾದ ಕಂಪೋಸ್ಟ್ ಗೊಬ್ಬರದ ತಯಾರಿಕೆಗೆ ಪ್ರೋತ್ಸಾಹಕೊಡಬೇಕು. ಇದಲ್ಲದೆ ತೋಡುಗಳಲ್ಲಿದ್ದ ಕಡೆಗಳಲ್ಲಿ ಮನೆಗಳ ಬದಿಗಳಲ್ಲಿ ಹಾಕುವ ಕ್ರಮವನ್ನು ಕೂಡ ನಿಲ್ಲಿಸಬೇಕು. ಇದನ್ನು ಸಾಗಿಸುವ ಸಿಬ್ಬಂದಿಗಳಿಗೆ ತಕ್ಕ ಅನುಕೂಲತೆಗಳನ್ನು ನಗರ ಸಭೆಯು ಒದಗಿಸಬೇಕಲ್ಲದೆ ಅವರ ಸಂಖ್ಯೆಯು ಕಡಿಮೆ ಇದ್ದರೆ ಹೆಚ್ಚಿಸಿ ಅವರಿಗೆ ಇದರ ಒಯ್ಯುವಿಕೆಗೆ ತಕ್ಕ ಸಲಕರಣೆಗಳನ್ನು ಕೊಡಬೇಕು. ಹರಿಯುವ ಜಲಾಶಯಗಳಲ್ಲಿ ಬಿಡುವುದರಿಂದ ಆ ತೋಡಿನಲ್ಲಿ ಒಗೆಯುವ ಬಟ್ಟೆಗಳ ಪಾಡೇನೆಂಬದನ್ನು ಎಲ್ಲರೂ ತಿಳಿದುಕೊಳ್ಳಬೇಕು. ಶುಚಿತ್ವದ ದೃಷ್ಟಿಯಿಂದ ಇದು ಶ್ರೇಯಸ್ಕರದ ಕೆಲಸವಲ್ಲ. ಚುನಾವಣೆಯಾದನಂತರ ತಟಸ್ಥರಾಗಿ, ನಿದ್ರಿಸಿರುವ ಕ್ರಮ ಸರಿಯಲ್ಲ. ನಮ್ಮ ನೆರೆ ಸಂಸ್ಥಾನಗಳ ಪಟ್ಟಣಗಳಲ್ಲಿ ಯಾವ ರೀತಿಯಿಂದ ಪಟ್ಟಣದ ಹೊಲಸನ್ನು ಸಾಗಿಸುತ್ತಾರೆಂಬದನ್ನು ವಿಚಾರಿಸಿ ಆ ರೀತಿಯ ಕ್ರಮವನ್ನು ಕೈಗೊಳ್ಳುವುದು ನಗರ ಸಭೆಯವರ ಕರ್ತವ್ಯ. ಪಟ್ಟಣದಲ್ಲಿ ಜನಸಂಖ್ಯೆಯು ದಿನವಹಿ ಹೆಚ್ಚಾಗುತ್ತಾ ಇರುವ ಸಂದರ್ಭದಲ್ಲಿ ಈ ವಿಷಯಕ್ಕೆ ಲಕ್ಷ್ಯ ಗಮನಕೊಡದಿದ್ದರೆ ಒಂದಲ್ಲ ಒಂದು ಕಾಲದಲ್ಲಿ ಖಂಡಿತವಾಗಿ ಭಯಾನಕ ರೋಗಗಳು ತಲೆದೋರದೆ ಇರಲಿಕ್ಕಿಲ್ಲ.

ಎರಡನೇ ವಿಷಯ: ನೀರಿನ ಸೌಕರ್ಯ. ಪಟ್ಟಣದ ಉತ್ತರ ಮುಕ್ಕಾಲಿನ ಕೇರಿಗಳ ನೀರನ್ನು ಶಾಸ್ತ್ರೀಯ ರೀತಿಯಲ್ಲಿ ಶೇಖರಿಸಿದರೆ ಮಡಿಕೇರಿಯ ಪಟ್ಟಣ ನೀರಿನ ಅಭಾವ ಬರಲಿಕ್ಕಿಲ್ಲವೆಂದೇ ಹೇಳಬೇಕು. ಪಕ್ಷರಾಜಕೀಯ ಮತ್ತು ವ್ಯಕ್ತಿದ್ವೇಷದ ದೃಷ್ಟಿಯಿಂದ ಕೆಲಸಮಾಡಿದರೆ ಶ್ರೇಯಸ್ಕರವಾಗಿ ನಡೆಯಲಿಕ್ಕಿಲ್ಲ. ನಗರ ಸಭೆಗಳಲ್ಲಿ ಪಕ್ಷ ಪಂಗಡಗಳ ಒಳಜಗಳದ ಮೂಲಕತನದಿಂದ ಕಲಹ [illegible] ಗಾಗಿರುವುದು ಎಂಬುದನ್ನು ತಿಳಿಯಬೇಕು. (Party is the madness of many for the benefit of a few) ಪ್ರಜಾಸರಕಾರವು ಮತ್ತು [illegible] ಉತ್ತಮವಾಗಿ ನಡೆಯುವ [illegible] ನಾಯಕರು [illegible] ಸ್ವಾರ್ಥ [illegible] ನ್ಯಾಯ, ಸಮದೃಷ್ಟಿ [illegible] ಇತರರ ಕಷ್ಟಗಳನ್ನು ಅರಿಯುವಂತಿದ್ದರೆ ಮಾತ್ರ ಅದು ಹಿತಕರವಾಗಿ ನಡೆಯುವುದೆಂದು ಶ್ರೀ [illegible] ದಿನಗಳ ಹಿಂದೆ ಬೆಂಗಳೂರಿನಲ್ಲಿ ನಡೆದ [illegible] ಸಮ್ಮೇಳನದಲ್ಲಿ ಹೇಳಿರುವರು ("If democracy is to succeed it can work only if the citizens are inspired by public spirit, justice fair play and a consideration for others") ಮನಸ್ಸಿನ ಮನೋಭಾವದಲ್ಲಿ ದೊಡ್ಡ ಪರಿವರ್ತನೆ ಆ ವೇಳೆ ಹೇಳಿದಂತೆ ಆದರೆ ಪ್ರಾಮಾಣಿಕತೆಯಿಂದ ನಡೆದುಕೊಂಡರೆ ನಂಬಿಕೆಗೆ ಯಾವ ಸಂಶಯವು ಬೇಡ.

'ನಾಗರಿಕ'

ಭತ್ತ ವ್ಯವಸಾಯಗಾರರ ಸಭೆ.

ಕೊಡಗಿನ ಭತ್ತ ಬೆಳೆಸುವವರ ಸಾರ್ವಜನಿಕ ಸಭೆಯೊಂದು ಈ ತಾ. ೩ರಲ್ಲಿ ವೀರಾಜಪೇಟೆಯಲ್ಲಿ ನಡೆಯಿತು. ಜನರು ಕಿಕ್ಕಿರಿದು ನೆರೆದಿದ್ದರು. ಶ್ರೀ ಮಾತಂಡ ಚಂಗಪ್ಪನವರು ಅಧ್ಯಕ್ಷರಾಗಿದ್ದರು. ಕಳೆದ ಬುಧವಾರ ಇಲ್ಲಿ ನಡೆದ ಪಬ್ಲಿಕ್ ಸಭೆಯ ತೀರ್ಮಾನದಂತೆ ಭತ್ತದ ಕ್ರಯ ಮತ್ತು ಭತ್ತ ಸಂಗ್ರಹದ ವಿಚಾರ ರೈತರ ಹವಾಲನ್ನು ಸೀದಾ ಚೀಫ್ ಕಮಿಷನರಲ್ಲಿ ಬಿನ್ನವಿಸಲು ಈ ದಿನ ನಡೆಯುವ ಸಭೆಗೆ ಬರಬೇಕೆಂದು ಚೀಫ್ ಕಮಿಷನರಿಗೆ ಬರೆದ ಪತ್ರಕ್ಕೆ ವ್ಯವಸಾಯಗಾರರ ಪ್ರತಿನಿಧಿಗಳ ಮೂಲಕ ಅವರ ಕಷ್ಟ ಸುಖಗಳನ್ನು ಕೇಳಲು ತಾನು ಸಿದ್ಧನಿರುವೆನೆಂದು ಅವರು ಕೊಟ್ಟ ಜವಾಬನ್ನು ಅಧ್ಯಕ್ಷರು ಓದಿ ಹೇಳಿದರು. ನಂತರ ಚೀಫ್ ಕಮಿಷನರು ಈ ದಿನ ಬಾರದ್ದರಿಂದ ಜನರಲ್ಲಿ ಉಂಟಾದ ನಿರಾಶೆಯನ್ನು ಕುರಿತು ಕೆಲವರು ಮಾತಾಡಿದನಂತರ ಅಧ್ಯಕ್ಷರೇ ಈ ಠರಾವನ್ನು ಸೂಚಿಸಿದರು.

೧. 'ಹಿಂದೂದೇಶಕ್ಕೆ ಸ್ವಾತಂತ್ರ್ಯ ದೊರೆತು ಪ್ರಜಾಪ್ರಭುತ್ವ ಸರ್ಕಾರವು ಜಾರಿಯಲ್ಲಿರುವ ಈ ಸಮಯದಲ್ಲಿ ರೈತರ ಕೋರಿಕೆಯ ಮೇರೆ ತನ್ನ ಸರ್ಕಾರದ ಮುಖ್ಯ ಅಧಿಕಾರಿಯಾದ ಚೀಫ್ ಕಮಿಷನರವರು ನಮ್ಮ ಹವಾಲುಗಳನ್ನು ಕೇಳಲು ಈ ದಿನ ಈ ಸಭೆಗೆ ಬಾರದೆ ಇದ್ದದ್ದು ತುಂಬಾ ವಿಷಾದಕರವಾಗಿದೆ''

ಠರಾವು ಸರ್ವ ಸಮ್ಮತದಿಂದ ಪಾಸಾಯಿತು.

ನಂತರ ಅಧ್ಯಕ್ಷರ ಕೋರಿಕೆ ಮೇರೆ ಶ್ರೀ ಪಿ ಐ ಬೆಳ್ಯಪ್ಪನವರು ನಿನ್ನೆ ದಿನ ಈ ಸಂಬಂಧ ಚೀಫ್ ಕಮಿಷನರೊಂದಿಗೆ ನಡೆಸಿದ ಸಂಭಾಷಣೆಯನ್ನು ವಿವರಿಸಿ ಹೇಳಿದರು.

೨. 'ಮೈಸೂರಿನಲ್ಲಿ ಜಾರಿಯಲ್ಲಿರುವ ಭತ್ತದ ಕ್ರಯವನ್ನಾದರೂ ಇಲ್ಲಿಗೆ ಮಂಜೂರು ಮಾಡಿಕೊಡಬೇಕೆಂದು ಈ ಸಭೆಯು ಇಂಡಿಯಾ ಸರ್ಕಾರವನ್ನು ಕೋರುತ್ತದೆ.' ಶ್ರೀ ಚೇಂದಂಡ ಸೋಮಯ್ಯನವರು ಸೂಚಿಸಿದ ಈ ಗೊತ್ತುವಳಿಯು ವಿರೋಧವಿಲ್ಲದೆ ಪಾಸಾಯಿತು.

೩. ಭತ್ತ ಸಂಗ್ರಹಕ್ಕಾಗಿ ನಿರ್ಧಿಷ್ಟ ಸ್ಥಳಗಳನ್ನು ಕೊಂಡುಕೊಳ್ಳುವ ವಿಲ್ ಯೂ ಕಾಫಿ ತೋಟದ ಮಾಲೀಕರಿಗೆ ಕಾದಿರುವ ಹೊಸ ಏರ್ಪಾಡನ್ನು ರೈತರ ಹಿತ ದೃಷ್ಟಿಯಿಂದ ರದ್ದು ಮಾಡಬೇಕೆಂದೂ, ಈ ಮೊದಲಿದ್ದಂತೆಯೇ ಭತ್ತವನ್ನು ನೇರಾಗವಾಗಿ ಮಾರಾಟ ಮಾಡುವ ಅನುಕೂಲವನ್ನು ರೈತರಿಗೆ ಮಾಡಿಕೊಡಬೇಕೆಂದೂ ಈ ಸಭೆಯು ಸರ್ಕಾರವನ್ನು ಕೇಳಿಕೊಳ್ಳುತ್ತದೆ.' ಶ್ರೀ. ಪಿ. ಐ. ಚಂಗಪ್ಪನವರಿಂದ ಸೂಚಿಸಲ್ಪಟ್ಟ ಈ ಠರಾವು ಒಮ್ಮತದಿಂದ ಮಂಜೂರಾಯಿತು.

೪. ರೈತರು ಬೆಳೆಯುವ ಭತ್ತವನ್ನು ಭತ್ತದ ರೂಪದಲ್ಲೇ ಮಾರಬೇಕೆಂದು ಖಾತ್ರಿಯ ಪಡಿಸುವುದರ ಬದಲು ಅಕ್ಕಿಯ ರೂಪದಲ್ಲೂ ಕೇರಳ ಅಂಗಡಿಗಳಿಗಾಗಲೀ ಮೈಸೂರಿಗಾಗಲೀ ಮಾರಾಟ ಮಾಡುವ ಅನುಮಾಡಿಕೊಡಬೇಕು. ಸೂಚಕರು:— ಶ್ರೀ. ಬಿದ್ದಂಡ ಕಾರ್ಯಪ್ಪನವರು. ಸರ್ವ ಸಮ್ಮತದಿಂದ ಪಾಸಾಯಿತು.

೫. 'ಸಬ್ ಏಜಂಟರುಗಳನ್ನು ಇಟ್ಟುಕೊಳ್ಳಲು ಮತ್ತು ಲೋಡಿಂಗ್ ಸೆಂಟರುಗಳನ್ನು ಹೆಚ್ಚಿಸಲು ಸರ್ಕಾರದವರು ಮಾಡಿದ ತೀರ್ಮಾನವು ಈ ಸಭೆಗೆ ತೃಪ್ತಿಯನ್ನುಂಟು ಮಾಡಿದೆ. ಅದರೊಂದಿಗೆ ಚೀಫ್ ಏಜೆಂಟರುಗಳನ್ನು ಈ ಮೊದಲಿದ್ದಂತೆಯೇ ಭತ್ತ ಬೆಳೆಸುವವರ ಹಿತದ ದೃಷ್ಟಿಯಿಂದಲೂ, ಸಂಗ್ರಹದ ಒಳ್ಳೇ ಏರ್ಪಾಡಿಗಾಗಿಯೂ ಇಟ್ಟುಕೊಳ್ಳುವುದು ಅತ್ಯಗತ್ಯವೆಂದು ಈ ಸಭೆಯು ಒತ್ತಿಹೇಳುತ್ತದೆ.' ಶ್ರೀ. ನೆಲ್ಲಮಕ್ಕಡ ಅಚ್ಚಪ್ಪನವರು ಮಂಡಿಸಿದ ಈ ಠರಾವು ವಿರೋಧವಿಲ್ಲದೆ ಪಾಸಾಯಿತು.

೬. ಶ್ರೀ. ಬಲ್ಲಡಿಚಂಡ ಕಾರ್ಯಪ್ಪನವರು ಸೂಚಿಸಿದ 'ವರ್ಷಕ್ಕೊಮ್ಮೆ ಪರಿಗಳನ್ನು ಸರ್ಕಾರದವರು ಬದಲು ಮಾಡಿಸಬೇಕು.' ಎಂಬ ಠರಾವು ಒಮ್ಮತದಿಂದ ಮಂಜೂರಾಯಿತು.

೭. ಶ್ರೀ. ಕಾಕಮಾಡ ಅಪ್ಪಯ್ಯನವರ ಸೂಚನೆಯಂತೆ ಸಬ್ ಏಜೆಂಟರುಗಳು ಸೆಕ್ಯೂರಿಟಿ ಡಿಪಾಜಿಟ್ಟು ಕೊಡಬೇಕೆಂಬುದನ್ನು ವಜಾ ಮಾಡಬೇಕೆಂಬ ಗೊತ್ತುವಳಿಯು ಸರ್ವರ ಒಪ್ಪಿಗೆಯಿಂದ ಪಾಸಾಯಿತು.

೮. 'ಮೈಸೂರಿನಲ್ಲಿರುವಷ್ಟೇ ಭತ್ತದ ಕ್ರಯವು ಇಲ್ಲಿ ನಿಶ್ಚಯವಾಗುವ ವರೆಗೆ ಮಾರಾಟಕ್ಕೆ ತಯಾರಾದ ಭತ್ತವನ್ನು ಸಹಕಾರ ಸ್ಟೋರುಗಳಲ್ಲಿ ದಾಸ್ತಾನು ಇಟ್ಟು ಶೇಕಡ ೭೫ರಷ್ಟು ಬೆಲೆಯನ್ನು ರೈತರಿಗೆ ಮುಂಗಡ ಕೊಡುವ ಏರ್ಪಾಡನ್ನು ಸಹಕಾರಿ ಫೆಡರೇಶನು ಮಾಡತಕ್ಕದ್ದು.' ಶ್ರೀ ಕೆ ಅಪ್ಪಯ್ಯನವರು ಸೂಚಿಸಿದ ಈ ಗೊತ್ತುವಳಿಯು ವಿರೋಧವಿಲ್ಲದೆ ಪಾಸಾಯಿತು.

೯. 'ಈ ದಿನ ಈ ಸಭೆಯಲ್ಲಿ ಪಾಸು ಮಾಡಿದ ಠರಾವುಗಳಿಗೆ ವಿರುದ್ಧವಾಗಿ ಕೌನ್ಸಿಲು ಸಭೆಯಲ್ಲಿ ಅಭಿಪ್ರಾಯ ಕೊಟ್ಟ ಕೌನ್ಸಿಲು ಮೆಂಬರುಗಳ ಮೇಲೆ ಜನರಿಗೆ ವಿಶ್ವಾಸವಿಲ್ಲವೆಂಬುದನ್ನು ಈ ಸಭೆಯು ಸ್ಪಷ್ಟೀಕರಿಸುತ್ತದೆ.' ಸೂಚಕರು ಶ್ರೀ ಚೆ.ಬಾಂಡ ಮಾದಪ್ಪನವರು. ಒಮ್ಮತದಿಂದ ಒಪ್ಪಲಾಯಿತು.

೧೦. 'ರೈತರ ಹವಾಲನ್ನು ಸರಕಾರಕ್ಕೆ ತಿಳಿಸುವುದು ಅವಶ್ಯವಾದುದರಿಂದಲೂ ಚೀಫ್ ಕಮಿಶನರು ರೈತರ ಪ್ರತಿನಿಧಿಗಳನ್ನು ಭೇಟಿಯಾಗಲು ಒಪ್ಪಿರುವುದರಿಂದಲೂ ಈ ಸಭೆಯು ಮಂಜೂರು ಮಾಡಿದ ಠರಾವುಗಳನ್ನು ಚೀಫ್ ಕಮಿಷನರ ಮುಂದಿಡಲು ಈ ಕೆಳಗಿನ ಮಹನೀಯರನ್ನು ಪ್ರತಿನಿಧಿಗಳಾಗಿ ಆರಿಸತಕ್ಕದ್ದು.' ಶ್ರೀಗಳಾದ (೧) ಕೆ. ಪಿ. ಕರುಂಬಯ್ಯ, (೨) ಕಾಕಮಾಡ ಗಣಪತಿ, (೩) ಕಾಟ್ಯಮಾಡ ಐಯ್ಯಮ್ಮ, (೪) ಹೆಚ್. ಬಿ. ಅಣ್ಣಯ್ಯ, (೫) ಕೆ. ಕೆ. ಅಪ್ಪಯ್ಯ, (೬) ಚಿಪ್ಪುಡಿರ ಎಸ್. ಪೊನ್ನಪ್ಪ, (೭) ಪಂದ್ಯಂಡ ಚೆಂಗಪ್ಪ (೮) ಹಾಜಿ ನಬಿಬುಲ್ಲಾ ಖಾನ್, (೯) ಪಿ. ಸಿ. ಉತ್ತಯ್ಯ, (೧೦) ಮಾತಂಡ ಚಂಗಪ್ಪ, (೧೧) ಪಿ. ಐ ಬೆಳ್ಯಪ್ಪ, (೧೨) ಕೋಟೆರ ಐಯ್ಯಪ್ಪ, (೧೩) ಪಳಂಗಂಡ ನಂಜಪ್ಪ, (೧೪) ಬಂಬೆಕೋಡಿ ಅಪ್ಪಚ್ಚು, (೧೫) ಕಂಬೆಯಂಡ ಪೊಣ್ಣಪ್ಪ, (೧೬) ಪಿ. ಎ. ಐಯ್ಯಪ್ಪ (೧೭) ಬಿ ಪಿ ಮಾಚಯ್ಯ, (೧೮) ಚೇಂದಂಡ ಸೋಮಯ್ಯ, (೧೯) ಅಜ್ಜಿಕುಟ್ಟಿರ ಚಿಣ್ಣಪ್ಪ ಮತ್ತು (೨೦) ಪೊಡಮಾಡ ನಾಚಪ್ಪ ಇವರುಗಳು.

ಶ್ರೀ ಪುಗ್ಗೆರ ಕರುಂಬಯ್ಯನವರ ಈ ಸೂಚನೆಗೆ ಎಲ್ಲರೂ ಒಪ್ಪಿಗೆಯನ್ನಿತ್ತರು.

೧೧ '' ಡೆಪ್ಯುಟೇಶನವರಿಗೆ ಚೀಫ್ ಕಮಿಷನರಿಂದ ತೃಪ್ತಿಕರವಾದ ಜವಾಬು ಸಿಕ್ಕದಿದ್ದರೆ, ಈ ವಿಚಾರ ಇಂಡಿಯಾ ಸರಕಾರಕ್ಕೆ ಡೆಪ್ಯುಟೇಶನ್ ಕಳುಹಿಸಲು ಈ ಪ್ರತಿನಿಧಿಗಳು ಏರ್ಪಡಿಸುವುದು ಅಗತ್ಯವಾಗಿದೆ.' ಎಂಬ ಶ್ರೀ. ಶ್ರೀ ಪಿ. ಎ. ನಂಜಪ್ಪನವರ ಸೂಚನೆಗೆ ಸರ್ವಸಮ್ಮತಿಯನ್ನೀಯಲಾಯಿತು.

೧೨ '' ಇಂಡಿಯಾ ಸರಕಾರಕ್ಕೆ ಡೆಪ್ಯುಟೇಶನ್ ಹೋದಲ್ಲಿ, ಅಲ್ಲಿಂದ ತೃಪ್ತಿಕರವಾದ ಜವಾಬು ದೊರೆಯುವವರೆಗೆ ರೈತರು ಬಹುಮಟ್ಟಿಗೆ ಭತ್ತವನ್ನು ಮಾರಲು ಹಿಂಜರಿಯುವರು ಎಂಬುದರಲ್ಲಿ ಸಂಶಯವಿಲ್ಲ' ಎಂಬ ಠರಾವನ್ನು ಶ್ರೀ ಕೆ. ಯಂ. ಪೊಣ್ಣಪ್ಪನವರು ಮಂಡಿಸಿದರು. ಇದಕ್ಕೆ ಸರ್ವಸಮ್ಮತಿ ದೊರೆಯಿತು.

ಇಂತು ಆರಿಸಲ್ಪಟ್ಟ ಪ್ರತಿನಿಧಿಗಳ ಡೆಪ್ಯುಟೇಶನು ಈ ತಾ. ೬ನೇ ಸೋಮವಾರ ಚೀಫ್ ಕಮಿಷನರ ಭೆಟ್ಟಿ ಹೋಗಲು ಅವರೆಲ್ಲರೂ ಮಡಿಕೇರಿಗೆ ಬರಬೇಕೆಂದು ಶ್ರೀ ಪಿ ಐ. ಬೆಳ್ಯಪ್ಪನವರ ಹೆಸರನ್ನು ಸೂಚಿಸಲಾಯಿತು. ಅನಂತರ ಅಧ್ಯಕ್ಷರ ಸಮಾಪ್ತಿ ಭಾಷಣದೊಂದಿಗೆ ಸಭೆಯು ಬರಕಾಸ್ತಾಯಿತು.

ಯಂ. ಕೆ. ಚಂಗಪ್ಪ,
೩-೧-೫೧ (ಅಧ್ಯಕ್ಷ)

ಪ್ರಕಟಣೆ.

ಮಡಿಕೇರಿ ಓಂಕಾರೇಶ್ವರ ಮತ್ತು ಭಾಗಮಂಡಲ ದೇವಸ್ಥಾನಗಳಿಗೆ ಅಂದಾಜು 25 ಗಾಡಿ ಬತ್ತವೂ ಇಲ್ಲಿನ ಓಂಕಾರೇಶ್ವರ ದೇವಸ್ಥಾನಕ್ಕೆ 20 ಗಾಡಿ ಮತ್ತು ರಾಜರ ಗದ್ದುಗೆಗೆ 10 ಗಾಡಿ ಸವುದೆಯೂ ಬೇಕಾಗುತ್ತೆ. ಈ ಮೇರೆ ಬತ್ತ ಮತ್ತು ಸೌದೆ ಸಪ್ಲೈ ಮಾಡಲು ಖಾಯಿಸ್ ಪಡುವವರು 1951ನೇ ಜನವರಿ ತಾರೀಕು 25ರ ವಳಗೆ ದೇವಸ್ಥಾನ ಪ್ರೆಸಿಡೆಂಟರವರ ಹೆಸರಿಗೆ ಟೆಂಡರ್ ಅರ್ಜಿ ಒಪ್ಪಿಕೊಳ್ಳತಕ್ಕದ್ದು. ಮಾಯಿದೆ ಮೀರಿ ಬಂದ ಅರ್ಜಿಯನ್ನು ಅಂಗೀಕರಿಸಲಾಗದು. ಮಂಜೂರಾದ ಅರ್ಜಿದಾರರಿಗೆ ಕೂಡಲೇ ತಿಳುವಳಿಕೆ ಕೊಡಲಾಗುತ್ತೆ.

ಕೋದಂಡ ಮುದ್ದಪ್ಪ,
ಪ್ರೆಸಿಡೆಂಟ್.

ಶ್ರೀ ಟಿ ಯಂ. ಮೊಗಪ್ಪನವರು,
"ಕೊಡಗು" ಏಜೆಂಟರು,
ಸೋಮವಾರಪೇಟೆ.

ಹರಾಜು ನೋಟೀಸು.

ಈ ಕೆಳಗಿನ ಸಂತೆ ಮತ್ತು ಟೋಲ್‌ಗೇಟುಗಳು ಸುಂಕ ವಸೂಲಿಯ ಬಗ್ಗೆ ಆಯಾಯ ಸ್ಥಳಗಳ ಎದುರು ಕೊಟ್ಟಿರುವ ತಾರೀಕು ಮತ್ತು ಸ್ಥಳಗಳಲ್ಲಿ ಹರಾಜು ಮಾಡಲ್ಪಡುತ್ತವೆ.

ನಂ.	ಸಂತೆಯ ಹೆಸರು		ತಾರೀಕು	ಮಾರಾಟ ಸ್ಥಳ
1	ಗೋಣಿಕೊಪ್ಪ ಮಾರ್ಕೆಟು		28-1-51	ಗೋಣಿಕೊಪ್ಪ ನಾಡುಕಚೇರಿ
2	ಹುದಿಕೇರಿ	,,	29-1-51	ಹುದಿಕೇರಿ
3	ಸಿದ್ದಾಪುರ	,,	21-1-51	ಸಿದ್ದಾಪುರ
4	ಅಮ್ಮತಿ	,,	21-1-51	ಸಿದ್ದಾಪುರ
5	ಆನೆ ಚೌಕೂರು ಟೋಲ್‌ಗೇಟ್		31-1-51	ವೀರಾಜಪೇಟೆ ನಾಡುಕಚೇರಿ
6	ಕುಟ್ಟ	,,	,,	,,
7	ಸಿದ್ದೇಶ್ವರ ಗದ್ದಿಗೆ	,,	,,	,,
8	ಮಾವುಕೂಟ	,,	,,	,,
9	ಮೂರ್ನಾಡು ಮಾರ್ಕೆಟು		2-2-51	ಮಡಿಕೇರಿ ನಾಡುಕಚೇರಿ
10	ಕೋಯನಾಡು	,,	,,	,,
11	ಚೆಟ್ಟಳ್ಳಿ	,,	,,	,,
12	ಸಂಪಾಜೆ ಟೋಲ್‌ಗೇಟ್		,,	,,
13	ಫ್ರೇಜರ್‌ಪೇಟೆ	,,	,,	,,
14	ತಿರಂಗಾಲ	,,	,,	,,
15	ಶನಿವಾರಸಂತೆ ಮಾರ್ಕೆಟು		3-2-51	ಶನಿವಾರಸಂತೆ ನಾಡುಕಚೇರಿ
16	ಎಡೆಹಳ್ಳಿ ಟೋಲ್‌ಗೇಟ್		,,	,,
17	ಹೆಬ್ಬಾಲುಸೆ	,,	,,	,,
18	ನಿಲುವಾಗಿಲು	,,	,,	,,
19	ಸುಂಟಿಕೊಪ್ಪ ಮಾರ್ಕೆಟು		4-2-51	ಸುಂಟಿಕೊಪ್ಪ ನಾಡುಕಚೇರಿ
20	ಜಂಬೂರು		,,	,,

ಕೊಡಗು ಜಿಲ್ಲಾ ಬೋರ್ಡು ಆಫೀಸು,
ತಾರೀಕು 28-12-50.

ಐ. ಪಿ. ಕಾರ್ಯಪ್ಪ,
ಪ್ರೆಸಿಡೆಂಟ್.

2-1

ಶ್ರೀಮದ್ಭಗವದ್ಗೀತಾ.

ಬಾಳಿನಲ್ಲಿ ನಿಯಮಿತ ಆಚರಣೆ.

[ಶ್ರೀ ಕಾವೇರಿ ಆಶ್ರಮ ಇವರಿಂದ]

ಶ್ರೀ ಆಂಜನೇಯನು ಶಕ್ತಿ ಸ್ವರೂಪ ಆರಾಧ್ಯ ದೇವತೆ. ಶಾರೀರಕ ಮತ್ತು ಆತ್ಮಶಕ್ತಿಯನ್ನು ಸಂಪಾದಿಸಲು ಆಂಜನೇಯನನ್ನು ಪೂಜಿಸುತ್ತೇವೆ. ಆಂಜನೇಯನನ್ನು ಪೂಜಿಸುವಾಗ ಆತ್ಮ ಶಕ್ತಿಯನ್ನು ಸಂಪಾದಿಸುವ ಉದ್ದೇಶ್ಯ ನಮ್ಮಲ್ಲಿರುತ್ತದೆ. ಈ ಆತ್ಮ ಶಕ್ತಿ ಎಲ್ಲಿರುತ್ತದೆ? ಎಲ್ಲಿಂದ ಬರುತ್ತದೆ? ಎಂಬುದನ್ನು ತಿಳಿಯಬೇಕು. ಈ ಶಕ್ತಿಯು ನಮ್ಮಲ್ಲಿಯೇ ಇರುತ್ತದೆ. ಅದನ್ನು ಹೆಚ್ಚು ಹೆಚ್ಚು ಬೆಳೆಸಿಕೊಳ್ಳಬೇಕು. ಅಭಿವೃದ್ಧಿ ಪಡಿಸಿಕೊಳ್ಳಬೇಕು. ಇದಕ್ಕಾಗಿ ಮೊದಲು ಆತ್ಮವಿಶ್ವಾಸಬೇಕು. ತನ್ನಲ್ಲಿ ತನಗೆ ನಂಬಿಕೆ ಇರಬೇಕು. ಇಂದ್ರಿಯಗಳನ್ನೂ, ಮನಸ್ಸನ್ನೂ ತನ್ನ ವಶದಲ್ಲಿಟ್ಟುಕೊಳ್ಳಬೇಕು. ಅವುಗಳಲ್ಲಿ ತನ್ನ ಶಕ್ತಿಯನ್ನು ತುಂಬಿ ಸ್ವಧರ್ಮ ಕಾರ್ಯಗಳಲ್ಲಿ ನಿರತನಾಗಬೇಕು.

ಇದನ್ನೇ ಭಗವದ್ಗೀತೆಯ ಆರನೇ ಅಧ್ಯಾಯದಲ್ಲಿ ಮನುಷ್ಯನು ತನ್ನ ಆತ್ಮಶಕ್ತಿಯನ್ನು ಹೇಗೆ ಬೆಳೆಸಿಕೊಳ್ಳಬೇಕು ಮತ್ತು ಆ ಶಕ್ತಿಯನ್ನು ಹೇಗೆ ಉಪಯೋಗಿಸಬೇಕು ಎನ್ನುವುದನ್ನು ಹೇಳಿದೆ. ಆರನೇ ಅಧ್ಯಾಯವು ವ್ಯಾಯಾಮ ಶಾಲೆಯ ವರ್ಣನೆ ಎನ್ನಬಹುದು.

ಸಾಧಕನಿಗೆ ಎಲ್ಲಕ್ಕಿಂತಲೂ ಮೊದಲು ಆತ್ಮವಿಶ್ವಾಸಬೇಕು. ಎಲೈ ಜೀವವೇ! ನೀನು ನಿಷ್ಪ್ರಯೋಜಕ ವಸ್ತುವಲ್ಲ. ನೀನು ಒಂದಲ್ಲ ಒಂದು ದಿನ ದೇವತೆಯಾಗ ಬಲ್ಲೆ. ಈ ದಿವ್ಯ ಆಕಾಂಕ್ಷೆ ಯಾವಾಗಲೂ ಸಾಧಕನಲ್ಲಿರಬೇಕು. "ದೇವತೆಯಾಗ ಬಲ್ಲೆ ಮತ್ತು ಆಗುತ್ತೇನೆ" ಎಂಬ ನಂಬಿಕೆಯಿಂದ ಮನುಷ್ಯನು ಮುಂದರಿಯಬೇಕು. ಈ ಉದ್ದೇಶಕ್ಕಾಗಿ ಮನುಷ್ಯನು ಆತ್ಮ ಶಕ್ತಿಯನ್ನು ಸಂಪಾದಿಸಬೇಕು. ಮನುಷ್ಯನಿಗೆ ಇರುವ ಮಾನಸಿಕ ಮತ್ತು ಶಾರೀರಕ ಶಕ್ತಿ ಎಲ್ಲವನ್ನೂ ಒಂದು ಕಡೆಗೆ ಕೂಡಿಸಬೇಕು.

ಶರೀರದ ಶಕ್ತಿಯನ್ನು ಒಂದೇ ಕಡೆ ಉಪಯೋಗಿಸುವುದು ಹೆಚ್ಚು ಕಷ್ಟವಿ... ಆರನೇ ಅಧ್ಯಾಯದಲ್ಲಿ ಆಸನವೇ ಮೊದಲಾದ ವಿಧಿಗಳನ್ನೂ ಹೇಳಿದೆ. ಇಷ್ಟು ಎತ್ತರವಾದ ಆಸನದಲ್ಲಿ ದರ್ಭೆ, ಕೃಷ್ಣಾಜಿನ ಮೊದಲಾದುವುಗಳ ಮೇಲೆ ಪದ್ಮಾಸನವನ್ನು ಹಾಕಿ ಕೂರಬೇಕು; ತಲೆಯನ್ನು ಇವು ನೆಟ್ಟಗೆ ಇರಬೇಕು; ಕಣ್ಣು ಅರ್ಧ ತೆರೆದಿರಬೇಕು; ದೃಷ್ಟಿಯು ಮೂಗಿನ ತುದಿಗಿರಬೇಕು ಎಂದು ನಾನಾ ಕ್ರಮಗಳನ್ನು ಹೇಳಿದೆ. ಇವೆಲ್ಲಾ ಬಾಹ್ಯ ಸಾಧನೆಗಳು. ಇವುಗಳನ್ನು ಹೆಚ್ಚು ಕಷ್ಟವಿಲ್ಲದೆ ಒಂದು ನಿಯಮಕ್ಕೆ ತರಬಹುದು. ಇವೆಲ್ಲಕ್ಕಿಂತಲೂ ಮುಖ್ಯವಾದ ಮನಸ್ಸನ್ನು ನಿಯಮಕ್ಕೆ ತರುವುದು ಅತಿ ಕಠಿಣವಾದ ಕೆಲಸ. ಆರನೇ ಅಧ್ಯಾಯದಲ್ಲಿ ಮುಖ್ಯವಾಗಿ ಹೇಳಿರುವುದು ಮನೋನಿಗ್ರಹ ಸಾಧನೆಯ ವಿಷಯ. ಮನೋನಿಗ್ರಹವೆಂದರೆ ಚಿತ್ತದ ಏಕಾಗ್ರತೆ; ಇದರ ಸಾಧನೆ ಮೊದಲನೆ ವಿಷಯ. ಇದಕ್ಕೆ ಸಹಾಯಕವಾದ ಇನ್ನು ಕೆಲವು ಅಂಶಗಳನ್ನು ಇಲ್ಲಿ ವಿವರಿಸಿದೆ. ಜೀವನದಲ್ಲಿ 'ಪರಿಮಿತ ತನ' ಸಾತ್ವಿಕತೆ ಅಥವಾ ಸರ್ವೋತ್ಕೃಷ್ಟ ಅಭ್ಯಾಸ ಮತ್ತು ವೈರಾಗ್ಯ ಈ ಎಲ್ಲಾ ವಿಷಯಗಳೂ ಚಿತ್ತದ ಏಕಾಗ್ರತೆಗೆ ಸಹಾಯಕವಾದವುಗಳು.

ಮನಸ್ಸಿನ ಏಕಾಗ್ರತೆಯು ಮನುಷ್ಯನ ಪ್ರತಿ ಒಂದು ಕೆಲಸಕ್ಕೂ ಬಹಳ ಮುಖ್ಯವಾದುದು. ವ್ಯವಹಾರಿಕ ವಿಷಯಗಳಿಗೂ ಇದು ಅತಿ ಅಗತ್ಯವಾದುದು. ಪರಮಾರ್ಥ ಮತ್ತು ವ್ಯವಹಾರ ಇವುಗಳ ಗುಣ ಬೇರೆ ಬೇರೆ ಏನೂ ಅಲ್ಲ. ವ್ಯವಹಾರವನ್ನು ಶುದ್ಧಿಗೊಳಿಸುವುದೇ ಪರಮಾರ್ಥ.

ನಮ್ಮ ವ್ಯವಹಾರ ಯಾವುದಿದ್ದರೂ ಅದರಲ್ಲಿ ಸೋಲು ಗೆಲುವು ನಮ್ಮ ಮನಸ್ಸಿನ ಏಕಾಗ್ರತೆಯನ್ನು ಹೊಂದಿಕೊಂಡಿದೆ. ವ್ಯಾಪಾರ, ವ್ಯವಸಾಯ, ಶಾಸ್ತ್ರ ಶೋಧನೆ, ರಾಜಕೀಯ ಮತ್ತು ಇತರ ಯಾವುದೇ ವ್ಯವಹಾರದಲ್ಲೂ ಯಶಸ್ಸು ಸಿಕ್ಕಬೇಕಾದರೆ ಅವನವನ ಮನಸ್ಸಿನ ಏಕಾಗ್ರತೆಯೇ ಮುಖ್ಯ ಕಾರಣ.

ಚರಿತ್ರೆಯಲ್ಲಿ ನೆಪೋಲಿಯನ್ನನ ಕಥೆಯನ್ನು ಕೇಳಿದರೆ ಅವನಲ್ಲಿ ಈ ಏಕಾಗ್ರತೆಯು ಎಷ್ಟರ ಮಟ್ಟಿಗಿದ್ದಿತೆಂಬುದು ನಮಗೆ ತಿಳಿಯುತ್ತದೆ. ರಣರಂಗದಲ್ಲಿ ಯುದ್ಧಕ್ಕೆ ಬೇಕಾದ ಏರ್ಪಾಡುಗಳನ್ನೆಲ್ಲಾ ಮಾಡಿ ತನ್ನ ಡೇರೆಗೆ ಬಂದು ಕುಳಿತು ಗಣಿತದ ಸಮಸ್ಯೆಗಳನ್ನು ಬಿಡಿಸುತ್ತಿದ್ದನಂತೆ. ಆ ಸಮಯದಲ್ಲಿ ಯಾರು ಸಾಯುತ್ತಿದ್ದರೂ ತನ್ನ ಡೇರೆಯ ಮೇಲೆ ಗುಂಡು ಬೀಳುತ್ತಿದ್ದರೂ ಸಹ ಆ ಸಮಯದಲ್ಲಿ ಅವನಿಗೆ ಗೊತ್ತಾಗುತ್ತಿರಲಿಲ್ಲವಂತೆ. ಮನಸ್ಸನ್ನು ಏಕಾಗ್ರಗೊಳಿಸುವ ಅಭ್ಯಾಸ ಅವನಲ್ಲಿ ಹೆಚ್ಚಾಗಿದ್ದಿತು. ಇಲ್ಲಿ ನೆಪೋಲಿಯನ್ನನ್ನು ಉದಾಹರಣೆಗೆ ತೆಗೆದುಕೊಂಡಿದೆ. ಅವನಿಗಿಂತಲೂ ಹೆಚ್ಚು ಏಕಾಗ್ರತೆ ಉಳ್ಳವರು ಇದ್ದಾರೆ.

ಮಹಮ್ಮದೀಯ ಧರ್ಮ ಪ್ರಚಾರಕರಲ್ಲಿಯೂ ಸಹ ಇಂಥಾ ಗುಣಗಳನ್ನು ನಾವು ಕೇಳಿದ್ದೇವೆ. ಧರ್ಮ ಧುರೀಣರಾದ ಮಹಮ್ಮದೀಯರು ಯುದ್ಧ ಮಾಡುತ್ತಿರುವಾಗಲೂ ಸಹ ದೇವರ ಪ್ರಾರ್ಥನೆಯನ್ನು ಆಯಾ ಕಾಲದಲ್ಲಿ ಮಾಡದೆ ಬಿಡುತ್ತಿರಲಿಲ್ಲ. ಪ್ರಾರ್ಥನೆ ಮಾಡುವ ಸಮಯ ಬಂದಿತೆಂದರೆ ಯುದ್ಧವು ಯಾವ ಸ್ಥಿತಿಯಲ್ಲೇ ಇರಲಿ, ಇರುವ ಜಾಗದಲ್ಲೇ ನೆಲದ ಮೇಲೆ ಬಟ್ಟೆಯನ್ನು ಹಾಸಿಕೊಂಡು ಪ್ರಾರ್ಥನೆ ಮಾಡುತ್ತಿದ್ದರು. ಅವರು ಭಗವಂತನ ಧ್ಯಾನದಲ್ಲಿ ಮಗ್ನರಾಗಿರುವಾಗ ಯಾರು ಮೇಲೆ ಬಿದ್ದರೂ ಅವರಿಗೆ ಗೊತ್ತಾಗುತ್ತಿರಲಿಲ್ಲ. ಮಹಮ್ಮದೀಯ ಸಾಧುವಿನ ಶರೀರಕ್ಕೆ ಬಾಣತಗಲಿ ತೆಗೆಯಲಾಗದೆ ಆ ಸಾಧುವನ್ನು ಚೆನ್ನಾಗಿ ತಿಳಿದವನೊಬ್ಬನು ಹೇಳಿದನಂತೆ. 'ಏಕೆ ಯೋಚನೆ ಮಾಡುತ್ತೀರಿ ಈಗ ಸುಮ್ಮನಿರಿ; ಅವರು ದೇವರ ಪ್ರಾರ್ಥನೆಗೆ ತೊಡಗಿದ ವೇಳೆ ಅದನ್ನು ಸುಲಭವಾಗಿ ತೆಗೆಯಬಹುದು' ಎಂದನಂತೆ. ಕಡೆಗೆ ಅವನು ಪ್ರಾರ್ಥನೆಗೆ ತೊಡಗಿದಾಗ ಆ ಬಾಣವನ್ನು ಹೊರಗೆ ತೆಗೆದು ಹಾಕಿದರಂತೆ. ಸಾಧುವಿಗೆ ಬಾಣವನ್ನು ತೆಗೆದದರ ಅರಿವೇ ಆಗಲಿಲ್ಲವಂತೆ. ಮನಸ್ಸಿನ ಏಕಾಗ್ರತೆ ಅವನಲ್ಲಿ ಎಷ್ಟರ ಮಟ್ಟಿಗೆ ಇದ್ದಿತು ಎನ್ನಲು ಇದು ಒಂದು ಉದಾಹರಣೆ.

ಎಲ್ಲಾ ಕಾರ್ಯಗಳ ಸಾಧನೆಗೂ ಇಂತಹ ಏಕಾಗ್ರತೆ ಬೇಕು. ಆಗಲೇ ಆ ಕೆಲಸವೂ ಚೆನ್ನಾಗಿ ನಡೆದೀತು. ಮತ್ತು ಜಯ ಲಭಿಸೀತು. ಬೇರೆ ಎಲ್ಲಾ ಇಂದ್ರಿಯಗಳನ್ನು ಒಂದು ಹಿಡಿತಕ್ಕೆ ತಂದು ನಿಲ್ಲಿಸಬಹುದು. ಶರೀರ ಯಂತ್ರದ ಎಲ್ಲಾ ಚಕ್ರಗಳನ್ನು ತಡೆಯಬಹುದು ಆದರೆ ಒಳಗೇ ಇರುವ ಈ ಮನೋಯಂತ್ರದ ಚಕ್ರವನ್ನು ನಿಲ್ಲಿಸಲು ಬಹಳ ಶ್ರಮಪಡಬೇಕಾಗುತ್ತದೆ. ಆಸನ ಹಾಕಿ ಬೆನ್ನು ನೆಟ್ಟಗೆ ಮಾಡಿ, ಕಣ್ಣುಮುಚ್ಚಿ ದಿನವೆಲ್ಲಾ ಕುಳಿತುಕೊಳ್ಳಲು ಅಭ್ಯಾಸ ಮಾಡಿದರೂ ಸಹ ಮನಸ್ಸು ಮಾತ್ರ ಎಲ್ಲೆಲ್ಲೋ ಓಡಾಡುತ್ತಿರುತ್ತದೆ. ಅದನ್ನು ಹಿಡಿದು ನಿಲ್ಲಿಸಬೇಕು. ಇದಕ್ಕೆ ಮೊದಲನೇ ಉಪಾಯವನ್ನು ಆರನೇ ಅಧ್ಯಾಯದಲ್ಲಿಯೇ ಹೇಳಿದೆ. 'ನಕಿಂಚಿದಪಿ ಚಿಂತಯೇತ್' ಬೇರೆ ಏನನ್ನೂ ಯೋಚಿಸಬಾರದು, ಎಂದು. ಒಂದು ಕೆಲಸಕ್ಕೆ ತೊಡಗಿದ ಮೇಲೆ ಅದರಲ್ಲಿಯೇ ಮನಸ್ಸಿರಬೇಕು. ಇತರ ಯಾವ ತರದ ಯೋಚನೆಯನ್ನು ನಾವು ಮಾಡಬಾರದು. ಬೇರೆಲ್ಲವನ್ನು ಮರೆಯಲು ಪ್ರಯತ್ನ ಮಾಡಬೇಕು.

ನಿಜವಾಗಿಯೂ ಮನುಷ್ಯನಿಗೆ ಏಕಾಗ್ರತೆಯು ಸ್ವಭಾವವಾದುದು. ಚಿಕ್ಕಂದಿನಿಂದಲೂ ನಮ್ಮಲ್ಲಿ ಆ ಗುಣ ಇದೆ. ಸಣ್ಣ ಮಕ್ಕಳನ್ನು ನೋಡಿ; ಅದು ಯಾವುದಾದರೂ ಒಂದು ವಸ್ತುವನ್ನು ನೋಡುವಾಗ ಸರ್ವೇಂದ್ರಿಯಗಳನ್ನು ಒಂದುಮಾಡಿ ಅದರಲ್ಲಿಯೇ ತಲ್ಲೀನವಾಗಿ ಬಿದ್ದಿರುತ್ತದೆ. ಒಂದು ವಸ್ತು ಕೈಗೆ ಸಿಕ್ಕಿದರೆ ಅದರ ಪೂರ್ಣ ಪರಿಚಯವಾಗುವ ವರೆಗೂ ಬಿಡುವುದಿಲ್ಲ. ಆ ಸಮಯದಲ್ಲಿ ಮಗುವು ಪ್ರಪಂಚದ ಬೇರೆ ಎಲ್ಲವನ್ನು ಮರೆತು ಆ ವಸ್ತು ಪರಿಚಯ ಮಾಡಿಕೊಳ್ಳುವುದರಲ್ಲಿ ತಲ್ಲೀನವಾಗಿರುತ್ತದೆ. ಚಿತ್ತದ ಏಕಾಗ್ರತೆಯು ನಮ್ಮ ಸ್ವಭಾವ ಗುಣ. ಅದನ್ನು ನಾವೇ ಕಳೆದುಕೊಂಡಿರುತ್ತೇವೆ. ನಮಗೆ ಏಕಾಗ್ರತೆಗೆ ಬದಲು ಅನೇಕಾಗ್ರತೆ ಬಂದು ಬಿಟ್ಟಿದೆ. ಪುಸ್ತಕ ಓದಲು ಕುಳಿತರೆ ಕಣ್ಣು ಅಕ್ಷರದ ಮೇಲಿದ್ದರೂ, ಬಾಯಿಯಲ್ಲಿ ಪಾಠ ಓದುತ್ತಿದ್ದರೂ, ಮನಸ್ಸು ಮಾತ್ರ ಊಟ ಮಾಡುವುದರ ಮೇಲೆಯೋ, ಚೆಂಡಾಟದಲ್ಲಿಯೋ ಇದ್ದರೆ ಅವನು ಏನನ್ನು ಕಲಿತಾನು? ಪಾಠ ಓದುವಾಗ ಬೇರೆ ಯಾವ ಯೋಚನೆಯೂ ಇರಬಾರದು. ಪ್ರಯತ್ನ ಪೂರ್ವಕವಾಗಿ ಪಾಠದ ಕಡೆಗೇ ಮನಸ್ಸನ್ನು ಸೇರಿಸಬೇಕು. ಹೀಗೆ ಎಲ್ಲಾ ಕೆಲಸಗಳಲ್ಲಿಯೂ ಅಭ್ಯಾಸವಾಗಬೇಕು. ಗಡಿಯಾರಕ್ಕೆ ಕೀಲು ಕೊಡುವಾಗ ಎಲ್ಲೋ ಮನಸ್ಸಿದ್ದರೆ ಜೋರಾಗಿ ತಿರುಗಿಸಿ ಗಡಿಯಾರವೇ ಹಾಳಾಗುತ್ತದೆ. ಸೈಕಲಿನ ಮೇಲೆ ಹೋಗುತ್ತಿರುವಾಗ ಅಥವಾ ಮೋಟಾರನ್ನು ಬಿಡುತ್ತಿರುವಾಗ ಅಪರಿಚಿತರೊಡನೆ ಮಾತನಾಡುವುದು, ಕೈ ಬಿಟ್ಟು ಸಿಗರೇಟು ಹಚ್ಚಿಕೊಳ್ಳುವುದು ಮಾಡಿದರೆ ಯಾರನ್ನಾದರೂ ಕೊಲ್ಲುತ್ತಾನೆ ಅಥವಾ ತಾನೇ ಡಿಕ್ಕಿ ಹೊಡೆದು ಸಾಯುತ್ತಾನೆ. ಯಾವಾಗ ಏನು ಕೆಲಸ ಮಾಡುತ್ತೇವೆಯೋ ಅದರಲ್ಲಿಯೇ ಮನಸ್ಸಿರಬೇಕು. ಆಗ ಆ ಕೆಲಸ ಸರಿಯಾಗಿ ನಡೆಯುತ್ತದೆ.

ನಾವು ಮನಸ್ಸನ್ನು ಹಲವು ಬಟ್ಟು ನಾನಾ ಕಡೆಗೆ ಹೋಗಗೊಡುತ್ತೇವೆ. ಬೇಡದ ಕೆಲಸಗಳನ್ನೆಲ್ಲಾ ಮಾಡಲು ಮನಶ್ಶಕ್ತಿಯನ್ನೂ ಉಪಯೋಗಿಸುತ್ತೇವೆ. ನಾನಾ ಕ್ಷುದ್ರ ಕೆಲಸಗಳಲ್ಲಿ ನಮ್ಮ ಮನಶ್ಶಕ್ತಿ ಮರುಪಯೋಗವಾಗುತ್ತದೆ. ಈ ಹೊಳೆಗೆ ಇಷ್ಟು ಕಲ್ಲುಉಪ್ಪು ಜಾಸ್ತಿಯಾಗಿದೆ. ಎರಡು ಚಂಚ ಮೆಣಸಿನ ಹುಡಿ ಕಡಿಮೆ ಹಾಕಬೇಕಿತ್ತು, ನೀರು ಒಂದು ಸೇರು ಹೆಚ್ಚಾಯಿತು. ಇಂತಹ ವಿಷಯಗಳನ್ನು ಚರ್ಚೆ ಮಾಡುವುದರಲ್ಲಿ ನಮ್ಮ ಮನಸ್ಸನ್ನು ಉಪಯೋಗಿಸುತ್ತಿದ್ದೇವೆ. ಈ ರೀತಿ ಬೇಡದ ನಾನಾ ರೀತಿಯ ಯೋಚನೆಯಿಂದ ಮನಸ್ಸನ್ನು ಸ್ಥಿರಗೊಳಿಸಲು ನಮಗೆ ಸಾಧ್ಯವಾಗುವುದಿಲ್ಲ. ಇದರಿಂದ ನಮಗೆ ಮರವು ಜಾಸ್ತಿಯಾಗುತ್ತದೆ. ವಯಸ್ಸಾದ ಹಾಗೆಲ್ಲಾ ಬುದ್ಧಿ ಶಕ್ತಿಯು ಕಡಿಮೆಯಾಗುವುದು ಸ್ವಭಾವ ಎನ್ನುವುದನ್ನು ನಾವು ನಂಬುತ್ತೇವೆ. 'ಈಗೀಗ ನನಗೆ ಜ್ಞಾಪಕ ಶಕ್ತಿಯೇ ಕಡಿಮೆ' 'ವಯಸ್ಸಾಯಿತು ನೋಡಿ' ಎನ್ನುತ್ತೇವೆ. ಇವೆಲ್ಲಾ ಶುದ್ಧ ತಪ್ಪು ತಿಳುವಳಿಕೆ. ಮನುಷ್ಯನ ಸ್ಮರಣ ಶಕ್ತಿಯು ವಯಸ್ಸಾದಷ್ಟು ಹೆಚ್ಚಾಗಿಯೇ ಇರುತ್ತದೆ. ಆದರೆ ಇವನು ಆ ವಯಸ್ಸಿನೊಳಗೆ ತನ್ನ ಶಕ್ತಿಯನ್ನು ಯಾವ ಯಾವ ರೀತಿಯಲ್ಲಿ ಉಪಯೋಗಿಸಿದ್ದಾನೆ ಎನ್ನುವುದನ್ನು ಅವನು ಮರೆತು ಜ್ಞಾಪಕಶಕ್ತಿ ಕಡಿಮೆಯಾಗಲು ವಯಸ್ಸಾದ ಹಾಗೆಲ್ಲಾ ಶರೀರದ ಎಲ್ಲಾ ಅಂಗಗಳೂ ಶಿಥಿಲವಾಗುತ್ತಾ ಬಂದರೂ ಸಹ ಸ್ಮರಣ ಶಕ್ತಿಯು ಅವನಿಗೆ ಹೆಚ್ಚಾಗುತ್ತಾ ಬರುವುದು ಸ್ವಭಾವ. ಆ ಶಕ್ತಿ ನಾನಾ ಕಡೆಗೆ ಬೇಡದುದಕ್ಕೆ ಉಪಯೋಗವಾದರೆ ಬೇಕಾದುದಕ್ಕೆ ಸಾಲದಾಗುತ್ತದೆ. ಅದನ್ನೇ 'ಮರೆವು' ಎನ್ನುವುದು. ಬುದ್ಧಿ ಶಕ್ತಿ, ಸ್ಮರಣಶಕ್ತಿ, ಮನುಷ್ಯನ ಸಾರಸರ್ವಸ್ವ. ಇದು ಮನುಷ್ಯನ ಶಕ್ತಿಯ ತಿರುಳು. ಮಾವಿನ ಹಣ್ಣನ್ನು ನೋಡಿ, ಅದು ಹೆಚ್ಚಾಗಿ ಕಾಯಿಯಾಗಿ, ಬಲಿತು ಹಣ್ಣಾಗಿ ಕೊನೆಗೆ ಕೊಳೆತು ಹೋಗುತ್ತದೆ. ಆದರೆ ಅದರೊಳಗಿನ ಬೀಜವು ಗಟ್ಟಿಯಾಗಿ ನಾಶವಾಗದೆ ಶಕ್ತಿಯುತವಾಗಿ ಬೇರೆ ಮರವನ್ನು ಬೆಳೆಸಲು ಸಿದ್ಧವಾಗಿರುತ್ತದೆ. ಇದೇ ರೀತಿ ಮನುಷ್ಯನ ಸ್ಮರಣ ಶಕ್ತಿಯೂ ಸಹ. ಕೈ ಕಾಲು ಒಣಗಿ ಕಣ್ಣು ಕುರುಡಾಗಿ ಶಿಥಿಲಿಸಿದ್ದರೂ ಅವನ ಜ್ಞಾನಶಕ್ತಿ, ಸ್ಮರಣಶಕ್ತಿ ಹೆಚ್ಚಾಗಿಲ್ಲದಿರುವುದಕ್ಕೆ ಏಕಾಗ್ರತೆಯಿಂದ ಒಂದುಗೂಡಿಸದಿರುವುದೇ ತಪ್ಪು.

ಮಹಾತ್ಮಾ ಗಾಂಧಿಯವರು ಎಂಭತ್ತನೇ ವಯಸ್ಸಿನಲ್ಲಿಯೂ ತಮ್ಮ ಜ್ಞಾಪಕ ಶಕ್ತಿಯನ್ನು ಚೆನ್ನಾಗಿಯೇ ಇಟ್ಟುಕೊಂಡಿದ್ದರು. ಕೆಲವು ದಿನಗಳ ಹಿಂದೆ ಮರಣ ಹೊಂದಿದ ಜಾರ್ಜ್ ಬರ್ನಾರ್ಡ್ ಷಾರವರು ತಮ್ಮ ೯೩ನೇ ವಯಸ್ಸಿನಲ್ಲಿಯೂ ಸಹ ಪುಸ್ತಕ ಬರೆಯುತ್ತಿದ್ದರೆಂದು ನಾವು ಕೇಳಿದ್ದೇವೆ. ವಯಸ್ಸಾದ ಹಾಗೆಲ್ಲಾ ಸ್ಮರ

ರಘುಲಾಲ್ & ಕಂಪೆನಿ,

ಔಷಧ ವ್ಯಾಪಾರಿಗಳು, ಮೈಸೂರು.

ಕರ್ನಾಟಕದಲ್ಲೆಲ್ಲಾ ಚೆನ್ನಾಗಿ ಸಂಗ್ರಹಿತವಾದ ಮತ್ತು ವಿಶ್ವಾಸಪೂರಿತವಾದ ಔಷಧಿ ಅಂಗಡಿ

Also at:

೨೦ ಆರ್ಕಾಟ್ ಶ್ರೀನಿವಾಸಾಚಾರ್ ಬೀದಿ,

26-15 ಬೆಂಗಳೂರು ೨.

RAGHULAL & CO., CHEMISTS

MYSORE.

ಕೊಡಗು ಪ್ರಾಂತೀಯ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

[illegible] (1933ರಲ್ಲಿ ಸ್ಥಾಪಿತವಾಯಿತು.)

ಅಧಿಕೃತ ಶೇರು ಭಂಡವಾಳ	ರೂ.	10,00,000.
ವಸೂಲಾದ ಶೇರು ಮೊಬಲಗು	ರೂ.	1,79,000.
ಕ್ಷೇಮನಿಧಿ	ರೂ.	56,000.
ಇತರ ನಿಧಿಗಳು	ರೂ.	28,000.

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನು ಕೈಕೊಳ್ಳಲಾಗುವುದು.

ಈ ಬ್ಯಾಂಕಿನಿಂದ ಮುಖ್ಯವಾಗಿ ಸಹಕಾರ ಸಂಘಗಳಿಗೆ [illegible] ಸಾಲ ಕೊಡಲಾಗುವುದು. [illegible] ನಗರಗಳ್ಲ [illegible] ಸಾಲ ಕೊಡಲಾಗುವುದು. [illegible] ಡ್ರಾಫ್ಟ್‌ಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರಸ್ಟಿ ಮತ್ತು [illegible] ಇನ್ಸೂರೆನ್ಸ್ ಕಂಪೆನಿಗಳ ಠೇವಣಿಯು ಹಣವನ್ನು ತೆಗೆದುಕೊಳ್ಳಲಾಗುವುದು.

ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಗೌ. ಕಾರ್ಯದರ್ಶಿ,

[illegible] ಅಪ್ಪಯ್ಯ, M. L. C. ಪ್ರೆಸಿಡೆಂಟ್ ಮತ್ತು ಖಜಾಂಚಿ.

ಕೊಡಗು ಪ್ರಾಂತೀಯ ಸಹಕಾರಿ, ಮಾರ್ಕೆಟಿಂಗ್, ಫೆಡರೇಷನ್ ಲಿಮಿಟೆಡ್., ವೀರಾಜಪೇಟೆ.

ನಮ್ಮಲ್ಲಿ ಕೋವಿಗಳು, ತೋಟಗಳು ಮತ್ತು ಎಲ್ಲಾ ತರಹದ ವ್ಯವಸಾಯದ ಹತ್ಯಾರುಗಳು ದೊರೆಯುತ್ತವೆ.

1. 32 ಪಿಸ್ತೂಲುಗಳು (Pistols) ಕ್ರಯ ರೂ. 162 ರಿಂದ 245ರ ವರೆಗೆ.
2. 12ನೇ ನಂಬರಿನ ಒಂಟಿ ಕೊಳವಿನ ಕೋವಿ ಕ್ರಯ ರೂ. 320-0-0
3. 12ನೇ ನಂಬರಿನ ಜೋಡು ಕೊಳವಿನ ಕೋವಿ (Webley & Scott)
4. 12ನೇ ನಂಬರಿನ ಜೋಡು ಕೊಳವಿನ ಕೋವಿ (Spanish make)
5. 6 ಗಜದ (Hand loom) ಕೈಮಗ್ಗದ ಸೀರೆಗಳು ಕ್ರಯ ರೂ. 4-10-0
6. 32 ಪಿಸ್ತೂಲು [illegible] ತೋಟಗಳು [illegible] ದೊರೆಯುತ್ತವೆ.
7. [illegible] ಮತ್ತು [illegible] ಗಿಡಗಳಿಗೆ [illegible] (Spraing Pumps)
8. [illegible] ಮತ್ತು [illegible] ಕಬ್ಬಿಣದ [illegible]

ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

(ಅವಶ್ಯವಿರುವ ಕೋವಿಗಳಿಗೂ, ತೋಟಗಳಿಗೂ ಜಿಲ್ಲಾ ಮ್ಯಾಜಿಸ್ಟ್ರೇಟರಿಂದ ವಿಶೇಷ [illegible] "Special permit" [illegible] ಬೇಕಾಗುವುದು)

62-15 ಎಂ. ಎಸ್. ಸೋಮಯ್ಯ, ಗೌರವ ಕಾರ್ಯದರ್ಶಿ.

ಶಕ್ತಿಯು ಚೆನ್ನಾಗಿರುತ್ತದೆನ್ನುವುದಕ್ಕೆ ಅನೇಕ ಇಂತಹ ಉದಾಹರಣೆಗಳಿವೆ. [illegible]

[illegible]

Edited Printed and Published by P. I. Belliappa at 'Kodagu' Press, Mercara, for 'Kodagu' Ltd.

Reg. No. M. 1330,
'KODAGU' MERCARA, (Coorg).

ಕೊಡಗು

[illegible] [ವಾರ್ಷಿಕ ಚಂದಾ ರೂ. 5-0-0.

[illegible] | [illegible] | [illegible]

[illegible]

ಮಡಿಕೇರಿ ಮುನ್ಸಿಪಲ್ ಚುನಾವಣೆ.

[illegible]

ಫಲಿತಾಂಶ.

[illegible]

[illegible]

ರಘುಲಾಲ್ & ಕಂಪೆನಿ,

ಔಷಧ ವ್ಯಾಪಾರಿಗಳು, ಮೈಸೂರು.

ಕರ್ನಾಟಕದಲ್ಲೆಲ್ಲಾ ಚೆನ್ನಾಗಿ ಸಂಗ್ರಹಿತವಾದ ಮತ್ತು ವಿಶ್ವಾಸಪೂರಿತವಾದ ಔಷಧಿ ಅಂಗಡಿ

Also at:

೨೦ ಅರ್ಕಾಟ್ ಶ್ರೀನಿವಾಸಾಚಾರ್ ಬೀದಿ,

26-15 ಬೆಂಗಳೂರು ೨.

RAGHULAL & CO., CHEMISTS, MYSORE.

ಕೊಡಗು ಪ್ರಾಂತೀಯ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ. (19…)ರಲ್ಲಿ ಸ್ಥಾಪಿತವಾಗಿದೆ.

ಅಧಿಕೃತ ಶೇರು ಭಂಡವಾಳ	ರೂ.	10,00,000.
ವಸೂಲಾದ ಶೇರು ಮೊಬಲಗು	ರೂ.	1,79,000.
ಕ್ಷೇಮನಿಧಿ	ರೂ.	55,000.
ಇತರ ನಿಧಿಗಳು	ರೂ.	28,000.

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನೂ ಕೈಕೊಳ್ಳಲಾಗುವುದು.

ಈ ಬ್ಯಾಂಕಿನಿಂದ ಜಿಲ್ಲಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ, ಬೆಳ್ಳಿ ನಗಗಳ ಆಧಾರದ ಮೇಲೆ ಸಹ ಸಾಲ ಕೊಡಲಾಗುವುದು. ಬಿಲ್ ಮತ್ತು ಡ್ರಾಫ್ಟುಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರಿನಿಟಿ ಮತ್ತು ನಾರ್ದರ್ನ್ ಇನ್ಶೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು.

ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಗೌ. ಕಾರ್ಯದರ್ಶಿ. — ಕೆ. ಪಿ. ಅಪ್ಪಯ್ಯ, M. L. C. ಪ್ರೆಸಿಡೆಂಟ್ ಮತ್ತು ಖಜಾಂಚಿ.

ಕೊಡಗು ಪ್ರಾಂತೀಯ ಸಹಕಾರಿ, ಮಾರ್ಕೆಟಿಂಗ್, ಫೆಡರೇಷನ್ ಲಿಮಿಟೆಡ್., ವೀರಾಜಪೇಟೆ.

ನಮ್ಮಲ್ಲಿ ಕೋವಿಗಳು, ತೋಟಗಳು ಮತ್ತು ಎಲ್ಲಾ ತರಹದ ವ್ಯವಸಾಯದ ಹತ್ಯಾರುಗಳು ದೊರೆಯುತ್ತವೆ.

1. 32 ಪಿಸ್ತೂಲುಗಳು (Pistols) ಕ್ರಯ ರೂ. 162 ರಿಂದ 245ರ ವರೆಗೆ.
2. 12ನೇ ನಂಬರಿನ ಒಂಟಿ ಹೊಳವಿನ ಕೋವಿ ಕ್ರಯ ರೂ. 320-0-0
3. 12ನೇ ನಂಬರಿನ ಜೋಡು ಹೊಳವಿನ ಕೋವಿ (Webley & Scott)
4. 12ನೇ ನಂಬರಿನ ಜೋಡು ಹೊಳವಿನ ಕೋವಿ (Spanish make)
5. 6 ಗಜದ (Hand loom) ಕೈಮಗ್ಗದ ಸೀರೆಗಳು ಕ್ರಯ ರೂ. 4-10-0.
6. .32 ಪಿಸ್ತೂಲು ಮತ್ತು ರಿವಾಲ್ವರುಗಳ ತೋಟೆಗಳೂ ಸಹ ದೊರೆಯುತ್ತವೆ.
7. ಕಾಫಿ ಮತ್ತು ಕಿತ್ತಳೆ ಗಿಡಗಳಿಗೆ ಸ್ಪ್ರೇ ಮಾಡುವ ಪಂಪುಗಳು (Spraing Pumps)
8. ½" ಮತ್ತು ¾" ಕಬ್ಬಿಣದ ಸಲಾಕೆಗಳು.

ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

(ಅವಶ್ಯವಿರುವ ಕೋವಿಗಳಿಗೂ, ತೋಟೆಗಳಿಗೂ ಜಿಲ್ಲಾ ಮೆಜಿಸ್ಟ್ರೇಟರಿಂದ ವಿಶೇಷ ಪರ್ಮಿಟು "Special permit" ಪಡೆದುಕೊಳ್ಳಬೇಕಾಗಿರುವುದು)

ಎಂ. ಎಸ್. ಸೋಮಯ್ಯ, ಗೌರವ ಕಾರ್ಯದರ್ಶಿ.

52-15

Edited Printed and Published by P. I. Bellappa at 'Kodagu' Press, Mercara; for 'Kodagu' Ltd.

ಜ್ಞಾನಶಕ್ತಿಯು ಚೆನ್ನಾಗಿರುತ್ತವೆನ್ನುವುದಕ್ಕೆ ಅನೇಕ ರೀತಿಯ ಉದಾಹರಣೆಗಳಿವೆ. ಆದುದರಿಂದ ಮನಸ್ಸಿನ ಏಕಾಗ್ರತೆಯಿಂದ ಜ್ಞಾನಶಕ್ತಿಯು ಹೆಚ್ಚಾಗುತ್ತದೆಂಬ ತಿಳುವಳಿಕೆಯು ತಪ್ಪಲ್ಲದ್ದು. ಮನಸ್ಸನ್ನು ಏಕಾಗ್ರಗೊಳಿಸಿ, ಆ ಶಕ್ತಿಯನ್ನು ಸ್ವಧರ್ಮ ಆಚರಣೆಯಲ್ಲಿ ಉಪಯೋಗಿಸಬೇಕಾದುದು ನಮ್ಮ ಕರ್ತವ್ಯ.

ಹೊರಗಿನ ಬೇಡವಾದ ಯೋಚನೆಗಳು ನಮ್ಮಲ್ಲಿ ಬಹಳ ಇವೆ. ಆ ಯೋಚನೆಯನ್ನು ನಿಲ್ಲಿಸದೆ ಏಕಾಗ್ರತೆ ಸಾಧ್ಯವಾಗದು. ಧರ್ಮ ಮಾರ್ಗದಿಂದ ಇತರರ ತಲೆ ಒಡೆಯದೆ, ಒಬ್ಬನು ಹಣ ಸಂಪಾದಿಸಿದರೆ ಅವನು ಆ ಹಣವನ್ನು ವ್ಯರ್ಥವಾಗಿ ಪೋಲುಮಾಡುವುದಿಲ್ಲ. ಅದೇ ರೀತಿಯಲ್ಲಿ ಮನುಷ್ಯನ ಅತ್ಯಂತ ಜ್ಞಾನಶಕ್ತಿಯೆಂಬ ನಿಧಿಯನ್ನು ಕ್ಷುದ್ರ ವಸ್ತುಗಳ ಚಿಂತನೆಯಲ್ಲಿ ಹಾಳುಮಾಡಬಾರದು.

ಮನಸ್ಸನ್ನು ನಾನಾ ಕಡೆಗೆ ಹೋಗಗೊಡದಂತೆ ಮಾಡಲು ಬರೀ ಆಸನ ಹಾಕಿ ಕೂರುವುದರಿಂದಾಗಲೀ, ಕಣ್ಣು ಮುಚ್ಚಿ ಕುಳಿತದರಿಂದಾಗಲೀ ಬರುವುದಿಲ್ಲ. ಏಕಾಗ್ರತೆ ಬರಬೇಕಾದರೆ ನಮ್ಮ ವ್ಯವಹಾರದಲ್ಲಿ ಶುದ್ಧವಾಗಿರಬೇಕು. ಇದು ಅಗತ್ಯ. ವ್ಯವಹಾರವು ಶುದ್ಧವಾಗಿರಬೇಕಾದರೆ ಆ ವ್ಯವಹಾರದ ಉದ್ದೇಶ್ಯ ಒಳ್ಳೆಯದಾಗಿರಬೇಕು. ಲಾಭ ಸಂಪಾದಿಸುವುದು, ಇಂದ್ರಿಯ ಸೌಖ್ಯದ ಉದ್ದೇಶ್ಯ ಇಂಥಾ ಬಾಹ್ಯ ವಿಷಯಗಳಿಗಾಗಿ ವ್ಯವಹಾರ ಮಾಡಬಾರದು. ದಿನವೆಲ್ಲಾ ನಾವು ವ್ಯವಹಾರ ಮಾಡುವುದರ ಉದ್ದೇಶ್ಯವು ನಮ್ಮ ಜೀವನದ ಅಂತ್ಯವು ಮಧುರವಾಗಲೆಂದು. ಜೀವಿಸಿಯೂ ಬೇವು ತಿನ್ನಬೇಕೆನ್ನುವುದರ ಉದ್ದೇಶ್ಯವು ಆ ಕೊನೇಗಳಿಗೆ, ಆ ಸಾವು ಪವಿತ್ರವಾಗಲೆಂದು. ಪ್ರತಿ ದಿನದ ಕಾರ್ಯವೂ ಪವಿತ್ರ ಭಾವನೆಯಿಂದ ನಡೆದಿದ್ದರೆ ಆ ದಿನದ ಅಂತ್ಯವು ಪವಿತ್ರವಾಗುತ್ತದೆ. ಆಗ ಅವನ ಮನಸ್ಸಿನಲ್ಲಿ ಏನೂ ಗಡಿಬಿಡಿ ಇರುವುದಿಲ್ಲ. ಶಾಂತಿ ಇರುತ್ತದೆ. ಆಗ ಮನಸ್ಸಿನ ಏಕಾಗ್ರತೆಯು ಸಾಧ್ಯ.

ಏಕಾಗ್ರತೆಗಾಗಿ ವ್ಯವಹಾರದಲ್ಲೂ ಪವಿತ್ರತೆಯು ಅಗತ್ಯವಾದದ್ದು. ಹೊರಗಿನ ವಸ್ತುಗಳ ಯೋಚನೆ ನಿಲ್ಲಬೇಕು. ಪರಮೇಶ್ವರನ ಸುಖವನ್ನು ಅನುಭವಿಸಲು ಈ ಸ್ಥಿತಿಯು ಅತೀ ಮುಖ್ಯ. ಮನುಷ್ಯನ ಈ ಅಲ್ಪ ಆಯುಸ್ಸಿನಲ್ಲಿಯೇ ಈ ಪರಮೇಶ್ವರನ ಸುಖವನ್ನು ಅನುಭವಿಸಿದವರು ಇದ್ದಾರೆ. ಅದು ಸಾಧ್ಯವೆಂದು ನಮಗೆ ತೋರಿಸಿ ಕೊಟ್ಟಿದ್ದಾರೆ. ಹಿಂದೆ ಎಷ್ಟೋ ಜನ ಸಂತರು ಆಗಿ ಹೋದರು. ಇಂದು ಎಷ್ಟೋ ಜನರು ಇದ್ದಾರೆ. ಅವರು ನಮ್ಮಂತೆಯೇ ಹುಟ್ಟಿದವರು. ಒಬ್ಬನೇ ದೇವರು ಇವರನ್ನೂ ನಮ್ಮನ್ನೂ ಸೃಷ್ಟಿಸಿದವನು. ಇದೇ ದೇಹ, ಇಬ್ಬರದ್ದೂ ಒಂದೇ, ಇಬ್ಬರಿಗೂ ಎರಡು ಕಣ್ಣು, ಅದರ ನಡುವೆ ಮೂಗು, ಎಲ್ಲವೂ ಒಂದೇ ರೀತಿಯಾದರೂ, ಒಬ್ಬ ದೇವತ್ವಕ್ಕೇರುತ್ತಾನೆ, ಇನ್ನೊಬ್ಬ ರಾಕ್ಷಸನಾಗುತ್ತಾನೆ. ಈ ಅಂತರವನ್ನು ನೋಡಿದರೆ ಇಬ್ಬರ ಜಾತಿ ಬೇರೆ ಬೇರೆ ಎನಿಸುತ್ತದೆ. ಒಬ್ಬ ಧರ್ಮದಿಂದ ನಾರಾಯಣನಾದರೆ ಮತ್ತೊಬ್ಬ ಅಧರ್ಮದಿಂದ ವಾನರನಾಗುತ್ತಾನೆ. ಈ ದೇಹವನ್ನು ನೀಡಿ ಕಳುಹಿಸಿದ ಒಬ್ಬ ನರ ನಾರಾಯಣನಾಗಲೆಂದು [illegible] ಆಗಬಾರದು ಎಂದು ಯೋಚಿಸಿ ನಡೆಯಬೇಕು. ನಮ್ಮ ಜೀವನಕ್ಕೆ ಜಗದ ಭಾವನೆ [illegible]. ಯಾವನು ತನ್ನ [illegible] ದೇಹದಲ್ಲಿದ್ದುಕೊಂಡು, ನರಕದಲ್ಲಿದ್ದುಕೊಂಡು ನಾನು ಹೀಗೇಕೆ ಹೀನಸ್ಥಿತಿಯಲ್ಲಿ ಇದ್ದೇನೆ ಎಂದು ಯೋಚಿಸಿದರೆ, ನಮ್ಮಲ್ಲಿ ಏನೋ ತಪ್ಪಿದೆ ಎಂಬ ತಿಳುವಳಿಕೆ ನಮಗೆ ಬರುತ್ತದೆ. ನಮ್ಮ ತಪ್ಪು ಏನೆಂದು ಹುಡುಕಬೇಕು.

ನಮ್ಮ ಮನಸ್ಸು ಯಾವಾಗಲೂ ಹೊರಕ್ಕೆ ಧಾವಿಸುತ್ತಿರುತ್ತದೆ. ಬೇರೆಯವರ ತಪ್ಪು ಹುಡುಕುವುದರಲ್ಲೇ ನಮ್ಮ ಶಕ್ತಿ ಹಾಳಾಗುತ್ತಿದೆ. ಇನ್ನೊಬ್ಬರ ಎಲೆಯಲ್ಲಿ ಬಿದ್ದಿರುವ ನೊಣದ ಯೋಚನೆ ನಮಗೇಕೆ ಬೇಕು. ನಮ್ಮ ತಪ್ಪು ಏನೆಂದು ನಮ್ಮನ್ನು ನಮ್ಮ ಕಡೆಗೆ ಎಳೆಯಬೇಕು. ಇದು ಧ್ಯಾನಯೋಗದಲ್ಲೂ ಹೇಳಿರುವ ವಿಷಯ.

[illegible] ಮನಸ್ಸಿನ ಏಕಾಗ್ರತೆಗೆ ಸಹಾಯಕವಾಗುವ ಇತರ ವಿಷಯಗಳಲ್ಲಿ ನಮ್ಮ ಜೀವನ ಕ್ರಮಗಳ ಬದಲಾವಣೆ ಮುಖ್ಯ. "ಗಣಿತ [illegible]" ನಮ್ಮ ಕ್ರಿಯೆಯ ಪ್ರತಿ ಅಂಗವೂ ಗಣಿತಶಾಸ್ತ್ರದಂತೆ ನಿಶ್ಚಯವಾಗಿರಬೇಕು. ಗಣಿತಶಾಸ್ತ್ರದ ರಹಸ್ಯವನ್ನು ಎಲ್ಲಾ ಕ್ರಿಯೆಯಲ್ಲೂ ಇಡಬೇಕು. ರೋಗಿಗೆ ಸಮಯಕ್ಕೆ ಸರಿಯಾಗಿ ಮಾತ್ರೆಯನ್ನು ಎಣಿಸಿ ಇಷ್ಟೇ ಎಂದು ಕೊಡುವಂತೆ ಆಹಾರ, ನಿದ್ರೆ ಮೊದಲಾದುವನ್ನು ಲೆಕ್ಕದಲ್ಲಿಡಬೇಕು. ಯಾವ ಕ್ರಿಯೆಯಲ್ಲೂ ಎಣಿಕೆ, ಅಳತೆ, ಇರಬೇಕು. ಎಲ್ಲಾ ಇಂದ್ರಿಯಗಳನ್ನು ಗಣಿತದ ಕಾವಲಿನಲ್ಲಿಡತಕ್ಕದ್ದು. ಲೆಕ್ಕದ ರಕ್ಷೆಯಲ್ಲಿಡಬೇಕು. ಮಿತಿ ಮೀರಿ ತಿನ್ನಲಿಲ್ಲವಷ್ಟೆ, ಅತಿ ನಿದ್ರೆ ಮಾಡಲಿಲ್ಲವಷ್ಟೆ, ಹೆಚ್ಚು ದೃಷ್ಟಿಸುತ್ತಿಲ್ಲವಷ್ಟೆ ಎಂದು ಯಾವಾಗಲೂ ನಮ್ಮ ಎಲ್ಲಾ ಕ್ರಿಯೆಗಳನ್ನು ಸೂಕ್ಷ್ಮವಾಗಿ ಪರೀಕ್ಷಿಸುತ್ತಿರಬೇಕು. ಬಾಳಿನಲ್ಲಿ ಸಂಯಮತೆ ತನ ಪಾಲಿಸಬೇಕು. ಕೆಟ್ಟ ವಸ್ತುಗಳ ಕಡೆ ನೋಡಬಾರದು. ಕೆಟ್ಟ ಪುಸ್ತಕ ಓದಬಾರದು. ಸಿನಿಮಾ, ಸ್ಮಶಾನಗಳಿಗೆ ಹೋಗಬಾರದು. ಮಾದಕ ದ್ರವ್ಯಗಳು, ಮಸಾಲೆಗಳು, ಬೇಡವೇ ಬೇಡ. ಬಾಳೆ ಹಣ್ಣು, ಹಾಲು, ಸಕ್ಕರೆ ಸಹ ಹೆಚ್ಚಿಗೆ ಬೇಡ. ದೋಷ ಪೂರ್ಣವಾದ ವಸ್ತುವು ಬೇಡವೇ ಬೇಡ. ದೋಷ ಇಲ್ಲದ ವಸ್ತು ಸಹ ಅತಿ ಇರಬಾರದು. ಫಲಾಹಾರ ಮಾಡುವುದರ ಉದ್ದೇಶ್ಯ ಶುದ್ಧವಾದ ಆಹಾರ ಸೇವನೆ. ಅದೂ ಸಹ ಯಥೇಚ್ಛವಾಗಿರಬಾರದು. [illegible] ಹಣ್ಣುಗಳು ಚೆನ್ನಾಗಿದೆಯೆಂದು ಅವನ್ನು ಸಿಕ್ಕಿದಷ್ಟು ತಿನ್ನಬಾರದು. ನಾಲಿಗೆಯನ್ನು ಬಿಗಿಯಲ್ಲಿಡಬೇಕು. ಹೀಗೆ ಪ್ರತಿಯೊಂದು ಇಂದ್ರಿಯಗಳನ್ನೂ ಅಂಕೆಯಲ್ಲಿಡಬೇಕು. ಬಾಳಿನಲ್ಲಿ ಪರಿಮಿತಿ ತನವೆಂದರೆ ನಿಯಮಿತ ಆಚರಣೆ ಎಂದರ್ಥ. ಈ ನಿಯಮಿತ ಆಚರಣೆಯು ಮನಸ್ಸನ್ನು ಏಕಾಗ್ರಗೊಳಿಸಲು ಸಹಾಯಕವಾದುದು.

ಪ್ರೌಢ ಮತದಾನ ಪದ್ಧತಿಯ ಮೇರೆ ಕೊಡಗಿನಲ್ಲಿ ಪ್ರಥಮವಾಗಿ ಮಡಿಕೇರಿ ಪುರಸಭೆಯ ಚುನಾವಣೆಯು ತಾ ೪ ರಲ್ಲಿ ನಡೆದು ತಾ. ೫ ರಲ್ಲಿ ಚುನಾವಣಾ ಫಲಿತಾಂಶವು ಪ್ರಕಟಿಸಲ್ಪಟ್ಟಿತು. ಈ ಚುನಾವಣೆಯು ಅಖಿಲ ಕೊಡಗಿನ ದೃಷ್ಟಿಯಿಂದ ಮಹತ್ವದಲ್ಲದಿದ್ದರೂ ಮುಂದಿನ ಸಾರ್ವತ್ರಿಕ ಚುನಾವಣೆಯೂ ಇದೇ ರೀತಿ ಆಗಬಹುದಾದ ಕಾರಣ ಮಡಿಕೇರಿ ಪುರಸಭೆಯ ಚುನಾವಣೆಯ ವಿಚಾರವನ್ನು ವಿಮರ್ಶಿಸುವದು ಹಿತವಾಗಿದೆ. ಈ ಚುನಾವಣೆಯಲ್ಲಿ ನಿವಾರಿಸಬಹುದಾಗಿದ್ದ ಹಲವು ತಪ್ಪುಗಳು ಕಂಡುಬಂದವು.

Reg. No. M. 1530.
'KODAGU' MERCARA. (Coorg).

ಕೊಡಗು

ಸಂಪಾದಕರು—ಬಿ. ಪಿ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. 5-0-0.
ಸಂಪುಟ ೨೯ | ತಾರೀಖು ೧೬-೨-೧೯೫೧ನೇ ಶುಕ್ರವಾರ | ಸಂಚಿಕೆ ೩೦

ಆರಿಸಲ್ಪಡುವರೆಂದು ಹೇಳಲಾಗುವದಿಲ್ಲ. ಏಕೆಂದರೆ ಮಡಿಕೇರಿಯಲ್ಲಿ ಹಾಗಾಗಲಿಲ್ಲ. ಈಗ ಚುನಾಯಿಸಿ ಬಂದವರೆಲ್ಲ ಯೋಗ್ಯರೂ, ನಗರದ ಜವಾಬ್ದಾರಿ ವಹಿಸಿ, ಹಿತಕೆಲಸ ಮಾಡುವವರೂ ಎಂದು ಹೇಳಲು ಬರುವಂತಿಲ್ಲ. ಯಾವದೋ ಪಾರ್ಟಿ ಇಲ್ಲವೇ ಸತ್ತಾಪುರುಷರ ಪ್ರಭಾವದಿಂದ ಅನೇಕರು ಓಟು ಪಡೆದಿದ್ದಾರೆ. ದುಡ್ಡಿರುವವರು, ಮೋಟಾರು ಕಾರುಗಳಲ್ಲಿ ಸಂಚರಿಸುವವರು, ಬುದ್ಧಿವಂತರೂ, ದಕ್ಷರೂ ಆಗಿರಬೇಕೆಂಬ ಭಾವನೆ ಇನ್ನೂ ಜನರಲ್ಲಿದೆ. ಆದ್ದರಿಂದ ಕೆಲವರಿಗೆ ಇಂದು ಓಟು ದೊರಕಿದ್ದರೆ ಒಂದೋ ಪಾರ್ಟಿಯ ತ

ಮಡಿಕೇರಿ ಮುನ್ಸಿಪಲ್ ಚುನಾವಣೆ.

ಪುರಸಭೆಯ ಚುನಾವಣೆಗಳಲ್ಲಿ ಸಾಧಾರಣವಾಗಿ ಮುನ್ಸಿಪಲ್ ಆಫೀಸಿನವರುಗಳಿದ್ದರೆ ಅವರು ಇಲ್ಲವೇ ಬೇರೆ ಉದ್ಯೋಗದವರು ಚುನಾವಣಾ ಅಧಿಕಾರಿಗಳಾಗುವದು ವಾಡಿಕೆ. ಆದರೆ ಚುನಾವಣೆಯ ಉಮೇದುವಾರನೊಬ್ಬನೇ ಚುನಾವಣಾ ಅಧಿಕಾರಿಯಾಗುವದು ಖಂಡಿತಾ ಸಮರ್ಪಕವಾದುದಲ್ಲ. ಅವರಲ್ಲೂ ಅಂಥಾ ಚುನಾವಣಾ ಅಧಿಕಾರಿಯು ಪಾರ್ಟಿಕಟ್ಟಿ ಚುನಾವಣೆಗಿಳಿದರೆ ಮತ್ತೆ ತೀರಿತು. ವಿವಿಧ ವಾರ್ಡುಗಳಲ್ಲಿರುವ ತಮ್ಮ ಪಕ್ಷದವರಿಗೆಲ್ಲ ಒಂದೇ ರೀತಿಯ ಸಂಕೇತಗಳನ್ನು ಕೊಟ್ಟು ಸುಲಭ ಪ್ರಚಾರದ ಮಾರ್ಗವನ್ನು ಅವರು ಮಾಡಿಕೊಳ್ಳುವರು. ಮಡಿಕೇರಿ ಚುನಾವಣೆಯಲ್ಲಿ ಹಿಂದಿನ ಅಧ್ಯಕ್ಷರಾಗಿದ್ದವರು, ಚುನಾವಣೆಯ ಅಧಿಕಾರಿಯಾಗಿ, ಉಮೇದುವಾರರಾಗಿ, ಪಾರ್ಟಿಯ ಸಂಘಟಕರಾಗಿ ಕೆಲಸ ಮಾಡಿದರು. ಇದು ಪ್ರಜಾಜವಾಬ್ದಾರಿ ತತ್ವದ ದೃಷ್ಟಿಯಿಂದ ಸಮರ್ಪಕವೆನಿಸದು. ಉದಾಹರಣೆಗೆ ಹೇಳುವದಾದರೆ ನಾನು ಕೇಳಿದ ಹತ್ತಾರು ಓಟರುಗಳಲ್ಲಿ ಒಂದೆರಡು ಜನರಿಗೆ ಕೇವಲ ಹಸು ಮತ್ತು ಕುಮರಿಯ ಸಂಕೇತಗಳಿಗೆ ಓಟು ಕೊಡಬೇಕೆಂಬುದು ಗೊತ್ತಿತ್ತೇ ವಿನಾ ಓಟು ಪಡೆಯುವ ಆ ವ್ಯಕ್ತಿಗಳಾರೆಂದು ತಿಳಿದಿರಲಿಲ್ಲ! ಇದು ಯೋಗ್ಯತೆಯನ್ನು ಅಳೆದ ಆಯ್ಕೆಯಲ್ಲ; ಕೇವಲ 'ಮಲ್ಲಪ್ಪ ಲಾಯರ ಪಾರ್ಟಿ'ಯೂದ ಕಾರಣದಿಂದ ಅವರಿಗೆ ಓಟು!

ಮಡಿಕೇರಿ ಪುರಸಭೆಯ ಓಟರುಗಳ ಸಂಖ್ಯೆ ಸುಮಾರು ೪೦೦೦. ಇವರ ಮತವನ್ನು ತೆಗೆಯುವ ಬಗ್ಗೆ ಯೋಗ್ಯ ಏರ್ಪಾಡುಗಳಾಗಿರಲಿಲ್ಲವೆಂದು ಹೇಳಬೇಕು. ಮೂರು ಮತದಾನ ಕೇಂದ್ರಗಳನ್ನು ನಿಶ್ಚಯಿಸಿ ಕೇವಲ ೩ ಜನ ಪೋಲಿಂಗ್ ಅಧಿಕಾರಿಗಳನ್ನು ನೇಮಿಸಿದ ಕಾರಣ ದಕ್ಷ ರೀತಿಯಿಂದ 'ಓಟ್ ರೆಕಾರ್ಡಿಂಗ್' ಆಗಲಿಲ್ಲ. ಅನೇಕ ಜನರು ನುಗ್ಗಾಟದ ಕಾರಣ ಓಟು ಕೊಡಲಿಲ್ಲ. ಸಾಯಂಕಾಲದ ವರೆಗೂ ಓಟು ಕೊಟ್ಟು ಮುಗಿಯದೆ ರಾತ್ರಿ ೧೦ ಗಂಟೆಯ ವರೆಗೂ ಓಟುಗಳು ನಡೆಯಿತಂತೆ! ಇದು ಸಮರ್ಪಕವಲ್ಲ. ಮೇಲಾಗಿ 'ಓಟಿಂಗ್ ಬೂತಿ'ನೊಳಗೆ ಕೇವಲ ಪೋಲಿಂಗ್ ಆಫೀಸರು ಮತ್ತು ಉಮೇದುವಾರರ ಏಜಂಟರು ಮಾತ್ರ ಇರಬೇಕಿತ್ತು. ಇದು ಬಿಟ್ಟು ಎಲ್ಲ ಜನರು ನುಗ್ಗಿಕೊಂಡು ಆ ಕೂಗಾಟ, ಮತಯಾಚನೆ, ಪೈಪೋಟಿ ಅಸಹನೀಯವಾಗಿತ್ತು. ಶಿಸ್ತು ತಪ್ಪಿದ ಈ ರೀತಿಯಿಂದಾಗಿ ಮತದಾನವು ಸರಿಯಾಗಿ ನಡೆಯಲಿಲ್ಲ. ಫಲಿತಾಂಶವೆಂದರೆ, ಒಬ್ಬರೇ ಎರಡು ಸಾರಿ, ಇಲ್ಲವೇ ಮಡಿಕೇರಿಯಲ್ಲಿ ಆ ದಿನ ಇಲ್ಲದವರ ಹೆಸರಿನಲ್ಲಿ ಬೇರೆಯವರು ಓಟು ಮಾಡಿದ ನಿದರ್ಶನಗಳಿವೆಯಂತೆ. ಇವು ನಿಜವಾದರೆ ಈ ಅನ್ಯಾಯಕ್ಕೆ ಕಾರಣರಾದವರನ್ನು ಟೀಕಿಸದೆ ಇರಲಾಗುವದಿಲ್ಲ. ನಾಲ್ಕು ವಾರ್ಡುಗಳಿಗೆ ಒಬ್ಬ ಪೋಲಿಂಗ್ ಆಫೀಸರಾಗಿ ಅವರು ಒಂದು ವಾರ್ಡ ಮುಗಿಸಿ ಮತ್ತೊಂದರ ಮತದಾರರನ್ನು ಮಾತಾಡಿಸುವ ಮನೋಭಾವ ತಳೆದಿದ್ದು ಅವರಿಂದ ಹಲವು ಮತದಾರರಿಗೆ ತೊಂದರೆಯುಂಟಾಯಿತು.

ಮಡಿಕೇರಿ ಪುರಸಭೆಯ ಚುನಾವಣೆಯಲ್ಲಿ ತೋರಿಬಂದ ಒಂದು ಹೊಸ ಚೇತನವು ಗಮನೀಯವಾದುದು. ಜನರು ತಮಗೆ ಬಂದಿರುವ ಮತದಾನದ ಹಕ್ಕನ್ನು ಉಪಯೋಗಿಸಿದರು. ಬಹುಮತ ಸಂಖ್ಯೆಯಲ್ಲಿ ಮತದಾರರು ಮತಚಲಾವಣೆ ಮಾಡಿದರು. ನಡೆಯಲಾರದ ಮುದುಕರು, ಗೋಷಾ ಮಹಿಳೆಯರು, ಕಾಯಿಲಸ್ಥರು ಹೆಚ್ಚೇಕೆ? ಹೆತ್ತು ಹತ್ತಾರು ದಿನವಾಗದ ಬಾಣಂತಿಯು ಕೂಡ ಬಂದು ಮತವಿತ್ತರೆಂದರೆ ಜನತೆಯ ಆಸಕ್ತಿಯನ್ನು ಬೇರೆ ವಿವರಿಸುವ ಅಗತ್ಯವಿಲ್ಲ. ಆದರೆ ಜನತೆಯ ಈ ಸ್ಫೂರ್ತಿಗೆ ಸರಿಯಾದ ಬೋಧನೆಕೊಟ್ಟು ಅವರನ್ನು ಜಾಗೃತಿಗೊಳಿಸುವ ಕೆಲಸವು ನ್ಯಾಯಬದ್ಧ ರೀತಿಯಲ್ಲಿ ಉಮೇದುವಾರರಿಂದ ನಡೆಯಲಿಲ್ಲ. ತಮ್ಮ ಪಕ್ಷ, ಚಾ, ತಿಂಡಿ, ಸುಳ್ಳು ದುಡ್ಡು ಈ ಮೊದಲಾದ ಅಡ್ಡದಾರಿಯನ್ನು ಇನ್ನಾದರೂ ಬಿಡದಿದ್ದರೆ ಪ್ರಜಾಪ್ರಭುತ್ವವು ಅಪಹಾಸ್ಯವಾದೀತು. ಪ್ರೌಢ ಮತದಾನ ಪದ್ಧತಿಯು ನಕಲಿ ಎನಿಸೀತು.

ಮಡಿಕೇರಿ ಪುರಸಭೆಯ ಚುನಾವಣೆಯ ರೀತಿಯಲ್ಲಿಯೇ ಮುಂಬರುವ ಕೊಡಗಿನ ಸಾರ್ವತ್ರಿಕ ಚುನಾವಣೆ ನಡೆಯುವುದಾದರೆ ಆಯ್ಕೆಯಲ್ಲಿ ಯೋಗ್ಯರು ಮತ್ತು ದಕ್ಷರು

ತ್ವದಿಂದ, ಇಲ್ಲವೇ ಅವರಲ್ಲಿನ ದುಡ್ಡಿನ ಬಲೆಯಿಂದ! ಮೇಲಾಗಿ ಧನವಂತರು ತಮ್ಮ ದುಡ್ಡಿನ ಬಲದಿಂದ ಕಾರು ಲಾರಿಗಳನ್ನು ಉಪಯೋಗಿಸಿ ಜನರ ಓಟನ್ನು ಪಡೆದರು. ಏನೂ ತಿಳಿಯದ ಅಬೋಧ ಓಟರನು ಉಮೇದುವಾರರ ಈ ಪೈಪೋಟಿಯಲ್ಲಿ ದಿಕ್ಕುತೋಚದವನಾಗಿ ಹೆಚ್ಚು ಬಲತ್ಕಾರ ಮಾಡಿದವರಿಗೆ, ಓಟನ್ನು ಕೊಡುವುದು ಸ್ವಾಭಾವಿಕ. ಈ ಜನರ ಓಟನ್ನು ಪಡೆಯಲು ಉಪಯೋಗಿಸಿದ ಕಟ್ಟು ಕಥೆಗಳಿಗೂ, ಸುಳ್ಳು ಪ್ರಚಾರಗಳಿಗೂ ಎಣೆಯಿಲ್ಲ. ಕೆಲವರು ಅಕ್ಕಿಯ ಜಾದುವನ್ನು ಉಪಯೋಗಿಸಿದ್ದರೆ ಕೆಲವರು ಸುರೆಯ ಮಾಯೆಯನ್ನು ಉಪಯೋಗಿಸಿದ್ದಾರೆ. ಕೆಲವರು ಅಧಿಕಾರ ದರ್ಪವನ್ನು ಉಪಯೋಗಿಸಿದ್ದರೆ ಕೆಲವರು ಕೋಮುವಾರು ವಿಷ ಪ್ರಯೋಗ ಮಾಡಿದ್ದಾರೆ!

ಮಡಿಕೇರಿ ಚುನಾವಣೆಯು ಈ ಹಲವಾರು ನ್ಯೂನತೆಗಳಿಂದಾಗಿ ದೊಡ್ಡ ಅನ್ಯಾಯವೊಂದಾಗಿದೆ. ಓಟಿನಲ್ಲಿ ಯಾರೇ ಚುನಾಯಿಸಿ ಬರಲಿ; ಆದರೆ ಪ್ರತಿಯೊಬ್ಬ ಮತದಾರನಿಗೆ ತನ್ನ ಓಟು ಕೊಡುವ ಅವಕಾಶ ಬೇಕಾದುದು ಆತನ ಹಕ್ಕು. ತಾರೀಕು ೪ ರಲ್ಲಿ ಬೆಳಗೆ ಏಳು ಗಂಟೆಯಿಂದ ಓಟು ರೆಕಾರ್ಡು ಮಾಡಲು ಪ್ರಾರಂಭಿಸಿದರೂ ಹನ್ನೆರಡು ವಾರ್ಡುಗಳಿಗೆ ಕೇವಲ ಮೂರೇ ಪೋಲಿಂಗ್ ಆಫೀಸರಿದ್ದ ಕಾರಣ ನಿಶ್ಚಿತ ಸಮಯದಲ್ಲಿ ಮತದಾನ ಮುಗಿಯಲಿಲ್ಲ. ಆದ್ದರಿಂದ ಸಾಯಂಕಾಲ ಆರು ಗಂಟೆಯ ನಂತರವೂ ಓಟು ನಡೆಯಿತು. ಇದು ಹಲವರಿಗೆ ತಿಳಿಯದೆ ಇದರ ಸದವಕಾಶಮಾಡಿಕೊಳ್ಳುವದು ಅವರಿಗೆ ಆಗಲಿಲ್ಲ. ಈ ಲೇಖನ ಬರೆಯುತ್ತಿರುವ ನನ್ನ ಮನೆಯ ಪಕ್ಕದ ಮನೆಯಲ್ಲಿರುವ ಎರಡು ಜನ ಗಂಡಸರು ಮತ್ತೆರಡು ಹೆಂಗಸರು ಎರಡು ಬಾರಿ ಪೋಲಿಂಗ್ ಬೂತಿಗೆ ಹೋಗಿ ಓಟು ಕೊಡಲಾರದೆ ಹಿಂದಿರುಗಿದರು. ರಾತ್ರಿ ಹತ್ತು ಗಂಟೆಯ ವರೆಗೆ ನಿಯಮಬಾಹಿರವಾಗಿ ಮತದಾನ ನಡೆದರೂ ಇವರಿಗೆ ಓಟು ಕೊಡುವದಾಗಲಿಲ್ಲ. ಈ ರೀತಿ ಓಟು ಕೊಡದೆ ಬಿಟ್ಟುಹೋದವರು ಅನೇಕರಿರಬಹುದು. ಇದು ನಾಗರಿಕ ಹಕ್ಕು ಬಾಧ್ಯತೆಯ ಕೊಲೆಯೆನ್ನಬೇಕು. ಚುನಾವಣೆಯನ್ನು ಏರ್ಪಡಿಸಿದ ಅಧಿಕಾರಿಗಳು ಇದಕ್ಕೆ ತಕ್ಕ ಏರ್ಪಾಡುಗಳನ್ನು ಮಾಡಬೇಕಿತ್ತು. ಆದರೆ ಅವರು ಹಾಗೆ ಮಾಡಲಿಲ್ಲ. ಆದ್ದರಿಂದ

ಫಲಿತಾಂಶ.

ವಾರ್ಡ್ ನಂಬರು ೧ (ಒಂದು ಸೀಟು)

ಕೆ. ಮಲ್ಲಪ್ಪನವರು	೧೬೩
ಎಂ. ಬಿ. ಕರಿಯಪ್ಪ	,, ೨೭

ವಾರ್ಡ್ ನಂಬರು ೨ (ಒಂದು ಸೀಟು)

ದೇವಾಂಗದ ತಿರುಮಾಣಪ್ಪ	,, ೧೩೬
ಮಣವಟ್ಟೀರ ಪೂಜಯ್ಯ	,, ೧೬
ಎಂ. ಎಂ. ಸಯ್ಯದ್ ಜಾಫರ್	,, ೭

ವಾರ್ಡ್ ನಂಬರು ೩ (ಒಂದು ಸೀಟು)

ಮಹಮ್ಮದ್ ಹುಸೇನ್ ಬಿ.	,, ೧೩೪
ಕೀಕಿಯಂಡ ಬೆಳ್ಯಪ್ಪ	,, ೧೮
ಸಿ. ಎಸ್. ವೀರಪ್ಪ	,, ೧೦
ಪಿ ಎಸ್. ಚೆಂಗಪ್ಪ	,, ೩

ವಾರ್ಡ್ ನಂಬರು ೪ (ಎರಡು ಸೀಟು)

ಮಹಮ್ಮದ್ ಗೌಸ್	,, ೧೯೪
ಹಕೀಮ್ ಶೇಕ್ ಅಹಮ್ಮದ್	,, ೧೬೦
ವಿ. ಪಿ ಮುನಿಸ್ವಾಮಿ	,, ೩೭
ವಿ. ಎನ್ ನಂಜಪ್ಪ ಶೆಟ್ಟಿ	,, ೩೮
ಬಾಣದ ಅಪ್ಪಯ್ಯ	,, ೩೧

ವಾರ್ಡ್ ನಂಬರು ೫ (ಒಂದು ಸೀಟು)

ಪಿ. ಎ ಮೊಹಿದಿನ್ ಇವರು	,, ೧೫೭
ಬೊಳಿಯಂಡ ಅಪ್ಪಚ್ಚು	,, ೮
ಎಂ. ಜಿ. ವಿಶ್ವನಾಥಯ್ಯ	,, ೬

ವಾರ್ಡ್ ನಂಬರು ೬ (ಒಂದು ಸೀಟು)

ಬಿ. ಜಿ. ಬೆಳ್ಯಪ್ಪನವರು	,, ೧೦೫
ವೈ. ಟಿ. ಐಯ್ಯಪ್ಪ	,, ೬೭
ಎಂ ಎನ್. ಅಪ್ಪಣ್ಣ	,, ೧೦

ವಾರ್ಡ್ ನಂಬರು ೭ (ಎರಡು ಸೀಟು)

ಬಿ. ಎಂ. ಮುತ್ತಣ್ಣ	,, ೨೧೨
ಎನ್. ಸೋಮಣ್ಣ	,, ೨೧೧
ಪಟ್ಟಮಾಡ ವೆಂಕಣ್ಣ	,, ೩೭
ಎಂ ಕೆ. ಐಯ್ಯಪ್ಪ	,, ೨೭

ವಾರ್ಡ್ ನಂಬರು ೮ (ಒಂದು ಸೀಟು)

ಸಿ. ಎ ಮಂದಣ್ಣ	,, ೧೭೯
ಕೆ. ಎ. ಮುದ್ದಯ್ಯ	,, ೩೩
ಎಚ. ಎಸ್. ಪದ್ಮನಾಭಯ್ಯ	,, ೨೧

ವಾರ್ಡ್ ನಂಬರು ೯ (ಒಂದು ಸೀಟು)

ಕೆ. ಎಸ್. ಅಪ್ಪಚ್ಚು	,, ೧೬೧
ಪಿ. ಮಂದಪ್ಪ	,, ೨೭

ವಾರ್ಡ್ ನಂಬರು ೧೦ (ಒಂದು ಸೀಟು)

ಬಿ ಕೆ ನಂಜುಂಡೇಶ್ವರ	,, ೧೩೨
ಕೆ. ಜಿ. ಬೆಳ್ಯಪ್ಪ	,, ೮೭
ಜಿ. ಎನ್. ರಾಮಚಂದ್ರ	,, ೨೭

ವಾರ್ಡ್ ನಂಬರು ೧೧ (ಎರಡು ಸೀಟು)

ಪಿ ಎ. ಚೆಂಗಪ್ಪ	,, ೧೯೪
ಎ. ಪಿ ಗೋಪಾಲಕೃಷ್ಣ	,, ೧೪೮
ಸಿ. ಡಿ ಬೋಪಣ್ಣ	,, ೧೧೮
ಎಂ ಶೇಷಗಿರಿರಾವ್	,, ೮೬

ವಾರ್ಡ್ ನಂಬರು ೧೨ (ಎರಡು ಸೀಟು)

ಯಂ. ಯಂ. ಬೆಳ್ಯಪ್ಪ	,, ೨೨೧
ಎಂ ಉಗ್ಗಪ್ಪ ಅಚ್ಚಣ್ಣ	,, ೧೭೮
ಕೆ. ಎ ತಮ್ಮಯ್ಯ	,, ೧೨೭
ಸಿ. ಡಿ. ಅಪ್ಪಯ್ಯ.	,, ೩೪

ಚುನಾವಣೆ ನಡೆಸುವವರ ಅನ್ಯವಸ್ಥೆಯಿಂದಾಗಿ ತಮ್ಮ ನಿಯಮಬದ್ಧ ಹಕ್ಕಾದ ಓಟನ್ನು ಕೊಡಲು ತೊಂದರೆಯಾದ ಪ್ರತಿ ಓಟರಿಗೂ ಅನ್ಯಾಯವಾಗಿದೆ. ಅವರ ಅಭಿಮತವನ್ನು ಓಟಿನ ಮೂಲಕ ಕೊಡದಿರುವಾಗ, ನಡೆದ ಪುರಸಭಾ ಚುನಾವಣೆಯು ಸಮರ್ಪಕ ಚುನಾವಣೆಯೆಂದು ಹೇಳಬರುವದಿಲ್ಲ. ಹೀಗೆ ಓಟು ಮಾಡಲಾರದವರು ಒಬ್ಬರಿರಲಿ, ಹತ್ತಿರಲಿ ಎಷ್ಟಿದ್ದರೂ ನಾಗರಿಕರ ಮಟ್ಟಿಗಾದ ಈ ಅನ್ಯಾಯವು ಕ್ಷಮ್ಯಾರ್ಹವಾದುದಲ್ಲ.

ಪ್ರೌಢ ಮತದಾನ ತತ್ವದ ಮೇಲೆ ನಡೆದ ಪ್ರಥಮ ಚುನಾವಣೆಯು ಇದಾದ ಕಾರಣ ನ್ಯೂನತೆಗಳಿಗೆ ಅಸ್ಪದವಿರುವದು ಸಹಜ. ಆದರೆ ಆ ನ್ಯೂನತೆಗಳು ನಾಗರಿಕ ಹಕ್ಕು ಬಾಧ್ಯತೆಗಳಿಗೇ ಕೊಡಲಿ ಹಾಕುವಂತಿದ್ದರೆ ಅವು ಅಸಹನೀಯವಾದವುಗಳು. ಆದ್ದರಿಂದ ಮಡಿಕೇರಿ ಪುರಸಭೆಯ ಚುನಾವಣೆಯಿಂದ ಎಲ್ಲರೂ ಹೊಸಪಾಠ ಕಲಿಯಬೇಕು. ಓಟರುಗಳು ತಮ್ಮ ಪಾಲಿನ ಕರ್ತವ್ಯವನ್ನು ತಿಳಿಯಬೇಕು. ಅವರಿಗೆ ತಕ್ಕ ಸಲಹೆ ಕೊಟ್ಟು ಅವರ ಜಾಗೃತಿಗಾಗಿ ಸರ್ವರೂ ದುಡಿಯಬೇಕು. ಚುನಾವಣಾ ಅಧಿಕಾರಿಗಳು ಯೋಗ್ಯ ರೀತಿಯ ಏರ್ಪಾಡುಗಳನ್ನು ಮಾಡಬೇಕು. ಮುಂದಿನ ಸಾರ್ವತ್ರಿಕ ಚುನಾವಣೆಗೆ ಕೇಂದ್ರದಲ್ಲಿ ಪಾಸಾಗಿರುವ ಮಸೂದೆಯು ಆಕ್ಟಾಗಿ ಜಾರಿಯಲ್ಲಿ ಬರುವದರಿಂದ ಹಲವು ನ್ಯೂನತೆಗಳ ಪರಿಹಾರವಾಗಬಹುದಾದರೂ ಚುನಾವಣೆಯು ಯೋಗ್ಯರೀತಿಯಲ್ಲಿ ನಡೆಯಬೇಕಾದರೆ ಸರ್ವರೂ ಎಚ್ಚರ ವಹಿಸಿ ತಮ್ಮ ಪಾಲಿನ ಕರ್ತವ್ಯವನ್ನು ನ್ಯಾಯ ದೃಷ್ಟಿಯಿಂದ ಸಲ್ಲಿಸಬೇಕು.

ಕೊಡಗಿನ ಮುಂಬರುವ ಚುನಾವಣೆಯು ಬಹು ಪ್ರಾಮುಖ್ಯವಾದುದು. ಅಗು ಕೊಡಗಿನ ಜೀವನ ಮರಣದ ಸಮಸ್ಯೆ ಎನ್ನಬಹುದು. ಕೊಡಗಿನ ಭವಿಷ್ಯ ನಿರ್ಣಯವೂ ಆ ಚುನಾವಣೆಯಲ್ಲೇ ಆಗಬಹುದು. ಕೊಡಗಿನಲ್ಲಿ ಹಲವಾರು ಪಕ್ಷಗಳೂ, ವ್ಯಕ್ತಿಗಳೂ ತಲೆಎತ್ತಿ ಚುನಾವಣಾರಂಗದಲ್ಲಿ ಕೋಲಾಹಲ ನಡೆಯಬಹುದು. ಅಗ್ಗ ಏರ್ಪಾಡುಗಳು ಸಮರ್ಪಕವಾಗಿರದಿದ್ದರೆ ಪರಿಸ್ಥಿತಿಯಲ್ಲಿ ಕಾಣೇರುವ ಸಂದರ್ಭವಿದೆ. ಆದ್ದರಿಂದ ಈಗಲೇ ಸರ್ವರೂ ಪಾಠಕಲಿತು ಎಚ್ಚರಿಕೆಯಿಂದ ವರ್ತಿಸಬೇಕಿದೆ.

ಲೇ:— "ನಿರೀಕ್ಷಕ"

---

30 ವರ್ಷಗಳ ಸೇವೆ

ದಿ ಕ್ರೆಸೆಂಟ್
ಇನ್ಶೂರೆನ್ಸ್ ಕಂಪೆನಿ
ಲಿಮಿಟೆಡ್.,
(ಸ್ಥಾಪನೆ: ೧೯೧೯.)

ಪ್ರಗತಿಯ ಹೆಗ್ಗುರುತುಗಳು.

- ೧೯೪೯ರಲ್ಲಿ ಕಂಪೆನಿಯು ಹೊಸ ವ್ಯಾಪಾರವು ಶೇಕಡಾ ೧೧ರಷ್ಟು ಹೆಚ್ಚಾಗಿರುವುದು
- ಒಂದು ವರ್ಷದ ಹಿಂದೆ ಅದರ ವಸೂಲು ಬಂಡವಾಳವು ರೂ ೫,೫೦,೦೦೦ ಆಗಿತ್ತು. ಇಂದಿಗೆ ಅದು ರೂಪಾ ೧೦,೧೦ ಲಕ್ಷಕ್ಕೆ ಏರಿದೆ. ಅಂದರೆ ಶೇಕಡಾ ೧೦೦ರಷ್ಟು ವೃದ್ಧಿ.
- ಕಂಪೆನಿಯ ಶಾಖೆಗಳು ಭಾರತದ ಎಲ್ಲಾ ದೊಡ್ಡ ನಗರಗಳಲ್ಲಿಯೂ ಇರುವೆ
ಕಂಪೆನಿಯು ತೀವ್ರವಾಗಿ ವಿಸ್ತಾರವಾಗುತ್ತಿದೆ. ಪ್ರತಿಷ್ಠಿತ ಸಮಾಜದಲ್ಲಿ ಸಂಬಂಧವಿಟ್ಟುಕೊಂಡವರು ನಮ್ಮನ್ನು ಸೇರಿಕೊಂಡರೆ ಅವರಿಗೆ ಒಳ್ಳೆ ನಿಶ್ಚಯ


CRESCENT INSURANCE BUILDING MADRAS


CRESCENT INSURANCE BUILDING, GAMDEVI BOMBAY


HEAD OFFICE — CRESCENT CHAMBERS BOMBAY

The
CRESCENT INSURAN
Head Office: CRESCENT CHAMBERS

ಪ್ರಧಾನ ಖಚೇರಿ
"ಕ್ರೆಸೆಂಟ್ ಚೇಂಬರ್ಸ್"
ಬೊಂಬಾಯಿ.

ಚೇರ್ ಮೆನ್
ಶ್ರೀ ಪ್ರಭಾಶಂಕರ ರಾಮಚಂದ್ರ ಭಟ್, ಜೆ. ಪಿ.

ಮ್ಯಾನೇಜಿಂಗ್ ಡೈರೆಕ್ಟರು.
ಶ್ರೀ ಎಂ ಸುಂದರರಾಂ ಶಟ್ಟಿ

ಜನರಲ್ ಮ್ಯಾನೇಜರ್:
ಶ್ರೀ ಎಂ. ರಾಮರಾವ್, ಬಿ ಎ, ಬಿ ಎಲ್, ಜೆ ಪಿ.

ಎಲ್ಲಾ ತರಹೆಯ ಜೀವ ವಿಮಾ ನಡೆಸಲ್ಪಡುತ್ತದೆ.

ಶಾಖಾ ಖಚೇರಿಗಳು

ಅಲಹಾಬಾದ್	ಬೆಂಗಳೂರು
ಕಲ್ಕತ್ತ	ಮದರಾಸು
ಹೈದ್ರಾಬಾದ್	ಮಂಗಳೂರು
ಕಾನ್ಪುರ	ನಾಗಪುರ
ಲಕ್ನೋ	ಟ್ರಿವಾಂಡ್ರಂ

ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ —

ಬೆಂಗಳೂರು ಶಾಖಾ ಖಚೇರಿ: (ಮೈಸೂರು ಸಂಸ್ಥಾನ, ಕೊಡಗು ಮತ್ತು ರಾಯಲ ಸೀಮೆ

12-4

ಡಿವಿಜನಲ್ ಮ್ಯಾನೇಜರ್,
ನಂ. ೧೧೩ ಬಿ. ಬ್ರಿಗೇಡ್ ರೋಡ್,
ಬೆಂಗಳೂರು ೧.
Telephone No. 424.

ಅಥವಾ

ಬಿ. ಎ. ಪೂವಯ್ಯ,
ಆರ್ಗನೈಸರ್
ಪೊನ್ನಂಪೇಟೆ, ಕೊಡಗು.

Telegram "LifeInsure" *BANGALORE.*

ಜನಾಂಗಕ್ಕೆ ಹೊಸ ವರ್ಷದ ಕರೆ.

ಕಳೆದ ಡಿಸೆಂಬರ್ ೩೧ರಂದು ರಾತ್ರೆ ೮-೩೦ ಗಂಟೆಗೆ ಭಾರತದ ರಾಜಧಾನಿ ನವದೆಹಲಿಯಿಂದ ಪ್ರಧಾನಮಂತ್ರಿ ಪಂಡಿತ ಜವಾಹರಲಾಲ ನೆಹರೂರವರು ಜನಾಂಗವನ್ನುದ್ದೇಶಿಸಿ ಬ್ರಾಡ್‌ಕಾಸ್ಟ್ ಮಾಡಿದ ಭಾಷಣದ ಸಂದೇಶ ಈ ರೀತಿಯಾಗಿದೆ:

'೧೯೫೦ರ ಅಂತ್ಯವು ಅರ್ಧಶತಮಾನದ ಅಂತ್ಯವನ್ನೂ ಸೂಚಿಸಿ ೨೦ನೇ ಶತಮಾನದ ಪೂರ್ವಾರ್ಧವು ಯುದ್ಧ ಮತ್ತು ಗಲಭೆಗಳಿಂದ ತುಂಬಿಹೋಗಿತ್ತು. ರಾಜಕೀಯ ವೈಜ್ಞಾನಿಕ ಸಾಂಸ್ಕೃತಿಕ, ಸಾಮಾಜಿಕ ಮತ್ತು ಆರ್ಥಿಕ ಕ್ಷೇತ್ರಗಳಲ್ಲಿ ಹಲವು ಉಲ್ಲೇಖನೀಯ ಬದಲಾವಣೆಗಳು ಈ ಅರ್ಧಶತಮಾನದಲ್ಲಿ ನಡೆದುಹೋದುವು. ಹಲವು ರಾಷ್ಟ್ರಗಳ ರೂಪಗಳನ್ನೇ ಬದಲಾಯಿಸಿದ ಮಹಾ ಕ್ರಾಂತಿಗಳನ್ನು ಈ ಅರ್ಧ ಶತಮಾನದಲ್ಲಿ ನಾವು ಕಂಡಿದ್ದೇವೆ. ನಾನು ಚಿಕ್ಕವನಾಗಿದ್ದಾಗ ಇದ್ದ ರೀತಿ ಜಗತ್ತು ಈಗ ಪೂರ್ಣ ರೂಪ ಬದಲಾಯಿಸಿದೆ. ನವವರ್ಷದ ಶತಮಾನದ ಉತ್ತರಾರ್ಧದ ಈ ಉದಯಕಾಲದಲ್ಲಿ ಅಶಾಂತಿಯ ಕಗ್ಗತ್ತಲೆಯೇ ಎಲ್ಲೆಲ್ಲಿಯೂ ಆವರಿಸಿದುದನ್ನು ನಾವು ಕಾಣುತ್ತಿದ್ದೇವೆ.

ಸರ್ದಾರ್ ಪಟೇಲ್.

ಬಹು ದೀರ್ಘ ಕಾಲದ ನಂತರ ಇದೀಗ ಜನಾಂಗವನ್ನುದ್ದೇಶಿಸಿ ನಾನು ಆಕಾಶವಾಣಿಯಲ್ಲಿ ಮಾತನಾಡುವುದಾಗಿದೆ. ಈ ಅವಧಿಯಲ್ಲಿ ಹಲವು ಗಂಡಾಂತರಗಳು ಬಂದು ಹೋದುವು. ಅವುಗಳಲ್ಲಿ ಅತಿ ದೊಡ್ಡ ಗಂಡಾಂತರವೆಂದರೆ ನಮ್ಮ ಉಕ್ಕಿನ ಮನುಷ್ಯರಾದ ಸರದಾರರು ನಮ್ಮನ್ನು ಅಗಲಿದುದು. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಅವರು ನಮ್ಮ ವೀರಯೋಧರಾಗಿದ್ದರು. ಸ್ವತಂತ್ರ ಭಾರತದ ಆಧಾರಸ್ತಂಭವಾಗಿದ್ದರು. ಹೀಗೆ ಸ್ವಾತಂತ್ರ್ಯ ಚಳವಳಿಯ ಓರ್ವ ಮಹಾ ಮುಖಂಡರು ಮಾತ್ರವಲ್ಲ, ನವಭಾರತದ ನಿರ್ಮಾಪಕರು, ಸಂಘಟನಾ ಶೂರರು ಎಂಬುದಾಗಿ ನಮ್ಮ ದೇಶದ ಇತಿಹಾಸದಲ್ಲಿ ಅವರ ಹೆಸರು ಚಿರಸ್ಥಾಯಿಯಾಗಿ ಬಾಳುವುದು. ಆಪತ್ತು ಒದಗಿದಾಗ ಮಂತ್ರಾಲೋಚನೆಗಾಗಿ, ಸೂಕ್ತ ಸಲಹೆಗಾಗಿ ಅವರಲ್ಲಿಗೆ ಹೋಗುತ್ತಿದ್ದೆವು. ಸಮಯೋಚಿತ ಸಲಹೆಗಳೂ ಅವರಿಂದ ನಮಗೆ ಸಿಗುತಿದ್ದುವು. ಅವರು ತನ್ನ ಹೆಗಲಲ್ಲಿ ಹೊತ್ತುಕೊಂಡು ಅತ್ಯಂತ ಹಗುರವೆಂದು ತೋರ್ಪಡಿಸುತ್ತಿದ್ದ ಆ ದೊಡ್ಡ ಜವಾಬ್ದಾರಿಕೆಯ ಹೊರೆ ಈಗ ನಮ್ಮೆಲ್ಲರ ಹೆಗಲಿಗೆ ಬಂದಿದೆ. ಸಮಷ್ಟಿರೂಪವಾಗಿ ನಾವೆಲ್ಲರೂ ಆ ಭಾರವನ್ನು ಹಂಚಿಕೊಳ್ಳಬೇಕಾಗಿದೆ.

ಲಂಡನ್ ಪರಿಷತ್ತು.

ನಾಳೆಯ ಸೂರ್ಯನು ಉದಯಿಸಬೇಕಾದರೆ ನಾನು ಭಾರತ ತೊರೆದು ಲಂಡನಿಗೆ ತೆರಳಬೇಕಾಗಿದೆ. ಜಗತ್ತನ್ನು ಇಂದು ಹಲವು ಗಹನ ಸಮಸ್ಯೆಗಳು ಎದುರಿಸುತ್ತಿವೆ. ಲಂಡನ್ ಪರಿಷತ್ತು ಈ ಸಮಸ್ಯೆಗಳಲ್ಲಿ ಯಾವುದನ್ನಾದರೂ ಬಗೆಹರಿಸುವ ನಿರ್ಧಾರ ಕೈಕೊಳ್ಳುವುದೆಂದು ನಾನು ಹೇಳಲಾರೆ. ಆದರೆ ಈ ಪರಿಷತ್ತು ಇಂದಿನ ಸಂಕಟ ಪರಿಸ್ಥಿತಿಯ [illegible]ಬಹುದು.

ಹೀಗಾಗಿ ನಾನು ಲಂಡನ್ ಪರಿಷತ್ತಿಗೆ ಪ್ರಯಾಣ ಬೆಳೆಸಿ ಅಲ್ಲಿ ನಡೆಯುವ ಸಮಾಲೋಚನೆಗಳಲ್ಲಿ ಭಾಗವಹಿಸಲು ನಿರ್ಧರಿಸಿದ್ದೇನೆ. ಭಾರತವು ಶಾಂತಿ ಸ್ಥಾಪನೆಗಾಗಿ ಕೂಡಿದಷ್ಟು ಶ್ರಮವಹಿಸಿದೆ, ವಹಿಸುತ್ತಿದೆ. ನಮ್ಮ ಶಾಂತಿಯತ್ನಗಳ ಕುರಿತು ಹಲವರು ಅಸಮಾಧಾನ ಎಣಿಸಿದ್ದಾರೆ. ಯುದ್ಧವು ಯಾವ ಕಾಲಕ್ಕೂ ಸುಖಸಂತೋಷಗಳನ್ನು ತಾರದು. ಆ ಚಿಕ್ಕ ರಾಷ್ಟ್ರವಾದ ಕೊರಿಯದಲ್ಲಿ ನಡೆಯುತ್ತಿರುವ ಭೀಷಣ ಸಂಗ್ರಾಮ ಏನೆಲ್ಲಾ ಬನ್ನಬವಣೆಗಳನ್ನು ತಂದಿರುವುದೆಂಬುದು ನಿಮಗೆಲ್ಲರಿಗೂ ಗೊತ್ತೇ ಇದೆ. ಈ ಯುದ್ಧದ ದೆಸೆಯಿಂದ ನಿರಪರಾಧಿ ಪ್ರಜೆಗಳು ಸಾವುನೋವುಗಳನ್ನು ಅನುಭವಿಸಬೇಕಾಗಿ ಬಂದಿದೆ. ಇಷ್ಟಾದರೂ ಕೊರಿಯದ ಜನರಿಗೆ ಸ್ವಾತಂತ್ರ್ಯ ದೊರಕಿಸಿಕೊಳ್ಳುವ ಕಾರಣ ಮುಂದಿಟ್ಟು ಯುದ್ಧ ಮುಂದುವರಿಯುತ್ತಿದೆ. ಕೆಡಕನ್ನು ಒಳ್ಳೆಯದರಿಂದ ಸ್ಥಾಪಿಸುವುದು ಎಂದಿಗೂ ಸಾಧ್ಯವಿಲ್ಲ. ಕೆಡುಕಿಗೆ ಶರಣು ಬಂದು ಶಾಂತಿಯನ್ನು ಗೆಲ್ಲಲಾರೆವು. ನಮ್ಮ ಜನಕರಾದ ಗಾಂಧೀಜಿಯವರು ಬೋಧಿಸಿದ ರೀತಿ, ನಮ್ಮನ್ನು ಸದೆಬಡಿಯಲು ಬಯಸುವ ಶತ್ರುವಿನೊಡನೆಯೂ ಮಿತ್ರತ್ವ ಕಟ್ಟಿಕೊಳ್ಳುವ ಸಮೋಪಾಯದಿಂದ ಮಾತ್ರ ಶಾಂತಿಯನ್ನು ಗಳಿಸಬಹುದು.

ಆಹಾರ ಸಮಸ್ಯೆ.

ನಮ್ಮ ದೇಶದಲ್ಲೇ ಬಿಡಿಸಬೇಕಾದ ಹಲವಾರು ಸಮಸ್ಯೆಗಳಿವೆ. ಇವುಗಳಲ್ಲಿ ಮೊದಲನೆಯದು ಆಹಾರದ ಕೊರತೆಯು. ಕಳೆದ ಆರು ತಿಂಗಳಲ್ಲಿ ಹಲವು ಅನಿರೀಕ್ಷಿತ ನೈಸರ್ಗಿಕ ಅವಾಂತರಗಳು ನೆರೆ ಪ್ರವಾಹ, ಭೂಕಂಪಗಳ ರೂಪದಲ್ಲಿ ನಮ್ಮ ದೇಶದ ಮೇಲೆ ಸವಾರಿ ನಡೆಸಿ ನಮ್ಮ ಬಾಯ ತುತ್ತನ್ನು ಕಸಿದುವು. ಪ್ರಾಯಶಃ ಇದು ವಿಧಿಯು ನಡೆಸುವ ಪರೀಕ್ಷೆಯಿರಬಹುದು. ಆ ಪರೀಕ್ಷೆಯನ್ನು ಖಂಡಿತವಾಗಿಯೂ ನಾವು ಗೆಲ್ಲುವೆವು. ಜಗತ್ತಿನ ಬೇರೆ ಬೇರೆ ಭಾಗಗಳಿಂದ ಆಹಾರ ಸಾಮಗ್ರಿಗಳನ್ನು ತರಿಸಲು ಸಾಧ್ಯವಾದ ಪ್ರಯತ್ನಗಳನ್ನೆಲ್ಲಾ ನಾವು ನಡೆಸುತ್ತಿದ್ದೇವೆ. ಸಾಧ್ಯವಾದಲ್ಲೆಲ್ಲಾ ಉಪವಾಸ ಮತ್ತು ಕ್ಷಾಮ ಡಾಮರಗಳನ್ನು ತಪ್ಪಿಸುವುದೇ ನಮ್ಮ ಸತತ ಯತ್ನವಾಗಿರುತ್ತದೆ. ನಮ್ಮ ಎಲ್ಲಾ ಆಹಾರ ಆವಶ್ಯಕತೆಗಳನ್ನು ಪೂರೈಸುವಷ್ಟು ಆಹಾರ ಸಾಮಗ್ರಿಗಳು ಹೊರಗಿಂದ ದೊರೆಯುವುದಿಲ್ಲವಾದುದರಿಂದ, ನಮ್ಮಲ್ಲಿದ್ದುದನ್ನೇ ಸಮಾನವಾಗಿ ಹಂಚಿಕೊಂಡು ಕೊರತೆಯನ್ನು ನೀಗಾಡಿಸಲು ಪ್ರಯತ್ನಿಸಬೇಕಾಗಿದೆ. ಹೀಗೆ ಎಲ್ಲರೂ ಕೊರತೆಯನ್ನು ಸರಿಯಾಗಿ ಹಂಚಿಕೊಂಡು ಕಷ್ಟಸಹಿಷ್ಣುತೆಯಲ್ಲಿ ಸಹಭಾಗಿಗಳಾದರೆ ಮಾತ್ರ ಈ ಸಂದಿಗ್ಧಾವಸ್ಥೆಯಿಂದ ಪಾರಾಗಲು ಸಾಧ್ಯವಿದೆ. ಅನಾವೃಷ್ಟಿಯ ಸನ್ನಿವೇಶದಲ್ಲಿ ಸಂಗ್ರಹಿಸಿತ ವಸ್ತುದಾಸ್ತಾನುಗಳಿಂದ ಎಲ್ಲಿಯೂ ಆಹಾರಾಭಾವದ ಸಂಕಷ್ಟಗಳನ್ನು ಕೊಡದಂತೆ ಭವಿಷ್ಯದಲ್ಲಿ ಎಚ್ಚರಿಸುವೆ.

ಕಾಂಗ್ರೆಸಿಗರ ಕರ್ತವ್ಯ.

ಪ್ರಧಾನ ಮಂತ್ರಿ ಸ್ಥಾನದಲ್ಲಿದ್ದು ನಾನು ಎಲ್ಲಾ ಪ್ರಜೆಗಳ ಸೇವಕನಾಗಿರುವೆ. ಆದುದರಿಂದ ನಾನು ಪಕ್ಷಪಾತ ಇಲ್ಲವೇ ಭೇದಾಭೇದ ಮಾಡಲು ಬರುವುದಿಲ್ಲ. ಆದರೆ ಮತ್ತೊಂದು ಜವಾಬ್ದಾರಿಕೆಯನ್ನು ನಾನು ಪ್ರತ್ಯೇಕವಾಗಿ ಹೊತ್ತಿದ್ದೇನೆ. ನಾನು ಓರ್ವ ಕಾಂಗ್ರೆಸ್ಸಿಗನಾಗಿದ್ದು ಆ ಸಂಸ್ಥೆಯಲ್ಲಿ ಕಳೆದ ೩೦ ವರ್ಷಗಳ ಸೇವೆ ನಡೆಸಿಕೊಂಡು ಬಂದಿದ್ದೇನೆ. ಈ ದೇಶವನ್ನು ಆಕ್ರಮಿಸಿಕೊಂಡಿದ್ದ ದೊಡ್ಡ ಚಕ್ರಾಧಿಪತ್ಯದ ಕೈಯಿಂದ ಭಾರತಕ್ಕೆ ಸ್ವಾತಂತ್ರ್ಯ ಒದಗಿಸಿ ಕೊಟ್ಟ ಸಂಸ್ಥೆ ಕಾಂಗ್ರೆಸ್. ಭಾರತಕ್ಕೆ ಸ್ವಾತಂತ್ರ್ಯ ದೊರೆತ ಮೇಲಂತೂ ಎಲ್ಲಾ ಕಾಂಗ್ರೆಸ್ಸಿಗರ ಜವಾಬ್ದಾರಿಕೆ ಇನ್ನಷ್ಟು ಹೆಚ್ಚಿದೆ. ಆ ಜವಾಬ್ದಾರಿಕೆ ಎಂದರೆ ಅಧಿಕಾರ ಗದ್ದುಗೆಯನ್ನು ಬಯಸುವುದು ಮಾತ್ರವಲ್ಲ. ಹಿಂದಿನ ಸ್ವಾತಂತ್ರ್ಯ ಪ್ರೇರಕ ಜ್ಯೋತಿಯನ್ನು ನಿರಂತರ ತೈಲವೆರೆದು, ಆ ಕೀರ್ತಿ ಉತ್ಸಾಹಗಳನ್ನು ಆರದಂತೆ ನೋಡಿಕೊಂಡು ನಮ್ಮ ದೇಶದ ಜನರ ಸೇವೆಯನ್ನು ನಮ್ಮಿಂದ ಸಾಧ್ಯವಾದಷ್ಟು ಯೋಗ್ಯ ರೀತಿಯಿಂದ ಮಾಡುವುದು. ಈ ಕರ್ತವ್ಯದ ಕಡೆ ನಮ್ಮಲ್ಲಿ ಸದಾ ಜಾಗ್ರತವಾಗಿರಬೇಕು. ಈ ಜವಾಬ್ದಾರಿಕೆಯನ್ನು ನಾವು ಎಷ್ಟರ ಮಟ್ಟಿಗೆ ಪೂರೈಸಿದ್ದೇವೆ? ಈ ಕಡೆ ಸಫಲತೆಯನ್ನು ನಾವು ಗಳಿಸಿದ್ದೇವೆಂದು ನಾನು ಹೇಳಲಾರೆ. ಆದರೆ ಇದು ಮೋಸಹೋಗುವ ಮತ್ತು ಕೋಪಿಸುವ ಸಮಯವಲ್ಲ. ಕಾಂಗ್ರೆಸ್ಸಿನಲ್ಲಿ ಒಡಕನ್ನುಂಟುಮಾಡುವ, ದೇಶದಲ್ಲಿ ಅಶಾಂತತೆಗೆ ಎಡೆಗೊಡುವ ಎಲ್ಲಾ ದುಷ್ಟ ಪ್ರೇರಣೆಗಳನ್ನು ನಾವು ಒತ್ತಿಡಬೇಕು. ಜನಾಂಗ ಜನಕನು ನಮಗೆ ಉಪದೇಶಿಸಿದ ವ್ರತಗಳನ್ನು ನಾವು ಮರೆತಿಲ್ಲವಾದರೆ ಎಂದೂ ಕರ್ತವ್ಯ ಪರಾಙ್ಮುಖರಾಗಲು ಅವಕಾಶವಿಲ್ಲ.

'ಹೊಸ ವರ್ಷವು ನಮ್ಮೆಲ್ಲರ ಜೀವನದಲ್ಲಿ ಹೊಸ ಮನ್ವಂತರವನ್ನು ತರಲಿ. ನಮ್ಮ ರಾಷ್ಟ್ರೀಯ ಜೀವನದಲ್ಲಿ ಉಲ್ಲೇಖನೀಯ ಮಾರ್ಪಾಟವನ್ನು ಕಾಣಲಿ. ನಮ್ಮಲ್ಲಿ ಸ್ವಾತಂತ್ರ್ಯ ಸಂಗ್ರಾಮ ಕಾಲದ ಸ್ಫೂರ್ತಿ ಚೇತನಗಳನ್ನು ತುಂಬಿಸಿದ ಆ ಪರಮಗುರುವು ಪ್ರಜ್ವಲಿಸಲಿ, ಭಾರತದ ಸೇವೆಯಲ್ಲಿ ಸಹೋದರಭಾವ ಕಟ್ಟಿಕೊಂಡು ಸಹಕರಿಸುವ.'

ಗಡೀನಾಡಿನ ಗಾಂಧಿ.

ಪಾಕಿಸ್ತಾನ ಜೈಲಿನೊಳಗೆ ಗಡಿನಾಡಿನ ಗಾಂಧಿ ಖಾನ್ ಅಬ್ದುಲ್ ಗಫಾರ್ ಖಾನರ ಆರೋಗ್ಯವು ಕೆಳಮುಖವಾಗುತ್ತಿರುವ ಬಗ್ಗೆ ಹಲವು ಅಫಘಾನ್ ಪತ್ರಿಕೆಗಳು ವಿಷಾದ ವ್ಯಕ್ತಪಡಿಸುವ ಉಲ್ಲೇಖಗಳನ್ನು ಪ್ರಚುರಪಡಿಸಿವೆ. ಅಫಘಾನ್ ವೃತ್ತಪತ್ರಿಕೆ 'ಇಸ್ಲಾಂ'ದಲ್ಲಿ ಇತ್ತೀಚೆಗೆ ಪ್ರಕಟವಾಗಿರುವ ಅಗ್ರಲೇಖನದಲ್ಲಿ ಬಾದಷಾ ಖಾನರ ಕುರಿತು ಈ ರೀತಿಯು ಉಲ್ಲೇಖಿಸಿತ್ತು:

'ಪಾಕ್‌ತೂನಿಸ್ತಾನದ ಅಧೀರ ಕುವರನು ಪಾಕಿಸ್ತಾನದ ತುರಂಗದೊಳಗೆ ಅವಸಾನದ ದಿವಸವನ್ನು ಕಾಣಬೇಕಾದರೆ ಪಾಕ್‌ತೂನಿಸ್ತಾನ ಚಳವಳಿಗಾರರ ರೋಧನ ಕೇಳಿಸುವುದೂ ನಿಶ್ಚಯ. ಪ್ರತೀಕಾರ ಮತ್ತು ಕ್ರಾಂತಿಯ ದೊಡ್ಡ ದಾವಾನಲವೇ ಎದ್ದು ಇಡೀ ಗಡಿನಾಡು ಪ್ರದೇಶವು ಕ್ಷೋಭೆಯ ಕ್ಷೇತ್ರವಾಗುವುದರಲ್ಲಿ ಸಂದೇಹವಿಲ್ಲ. ಅವರ ಮರಣಕ್ಕೆ ಕಾರಣರಾದವರು ಕಠಿಣ ಶಿಕ್ಷೆಗೊಳಗಾಗದೆ ಇರಲಾರರು.'

ಕ್ರೂರ ಚಿತ್ರಹಿಂಸೆ.

'ಪಾಕ್‌ತೂನರ ನಿಷ್ಪಕ್ಷ ಮುಖಂಡರನ್ನು ಪಾಕಿಸ್ತಾನವು ಕಾಣುವ ರೀತಿ, ಅತ್ಯಂತ [illegible]ಕರದ್ದಾಗಿದೆ. ಭಾರತದಲ್ಲಿ ಬ್ರಿಟಿಷರ ಆಳ್ವಿಕೆಯ ಸಮಯದಲ್ಲಿ ಗಾಂಧೀಜಿಯವರಿಗೆ ಕಾರಾಗೃಹವಾಸವನ್ನು ಬ್ರಿಟಿಷ್ ಸರಕಾರ ವಿಧಿಸಿದಾಗ, ತುರಂಗದಲ್ಲಿ ಗಾಂಧೀಜಿಯವರಿಗೆ ಯೋಗ್ಯ ಸೌಕರ್ಯಗಳನ್ನು ಬ್ರಿಟಿಷ್ ಸರಕಾರ ಒದಗಿಸಿಕೊಡುತಿತ್ತು. ಮುಖ್ಯವಾಗಿ ಗಾಂಧೀಜಿಯವರು ಜೈಲಿನಲ್ಲಿ ಉಪವಾಸ ವ್ರತ ಹಿಡಿದಾಗ, ಅವರ ಆರೋಗ್ಯಕ್ಕೆ ಅಪಾಯಬಾರದ ಹಾಗೆ ಬ್ರಿಟಿಷ್ ಸರಕಾರ ಒಳ್ಳೆ ಜಾಗ್ರತೆ ವಹಿಸುತಿತ್ತು. ದುರ್ದೈವವಶಾತ್ ಗಾಂಧೀಜಿಯವರು ಜೈಲಿನಲ್ಲಿ ಕಣ್ಮುಚ್ಚುವಂತಾದರೆ ಇಡೀ ಜಗತ್ತಿನ ಶಾಪ ಮತ್ತು ನಿಂದೆಯನ್ನು ತಾವು ಎದುರಿಸಬೇಕಾಗಿ ಬರಬಹುದೆಂಬ ಅಂಜಿಕೆ ಅಂದಿನ ಆಳುವ ಸರಕಾರಕ್ಕಿತ್ತು. ಆದರೆ ಇಂದು ಕರಾಚಿಯಲ್ಲಿ ದಯಾದಾಕ್ಷಿಣ್ಯಗಳೆಂದರೇನೆಂಬುದನ್ನು ಅರಿಯದ, ಕರುಣೆ ಎಂಬ ಶಬ್ದವನ್ನೇ ಕೇಳದ ಕಟುಕ ಹೃದಯದ ಅಧಿಕಾರಿಗಳು ತುಂಬಿರುವರು. ಅವರು ಜಗತ್ತಿನ ಪ್ರತೀಕಾರಕ್ಕಾಗಲಿ, ನಿಂದೆಗಾಗಲಿ ಎಳ್ಳಷ್ಟೂ ಅಂಜುವುದಿಲ್ಲ.

ಕದಲದೆ, ಬದಲದೆ ಸ್ಥಿರವಾಗಿದ್ದಾರೆ.

'ಬಾದಷಾ ಖಾನರಿಗೆ ದೃಷ್ಟಿಯು ಸಂಪೂರ್ಣ ಹೋಗಿದೆ ಎಂಬ ಸುದ್ದಿಗಳೂ ಕೇಳಿಸುತ್ತಿವೆ. ಅವರನ್ನು ಭೇಟಿಯಾಗಿ ಅವರೊಡನೆ ಮಾತುಕತೆ ನಡೆಸಲು ಯಾರಿಗೂ ಅನುಮತಿ ದೊರೆಯುವುದಿಲ್ಲ. ಒಂದು ವೇಳೆ ಅವರನ್ನು ಕಾಣುವ ಸುಯೋಗ ಯಾರಿಗಾದರೂ ಒದಗಿದರೆ, ಪ್ರಶಾಂತಚಿತ್ತರು, ಕದಲದ, ಬದಲದೆ ಮೊದಲಿನಂತೆ ಸ್ಥಿರವಾಗಿರುವ ಬಾದಷಾ ಖಾನರನ್ನೇ ಅವರು ಪಾಕಿಸ್ತಾನ ತುರಂಗದೊಳಗೆ ಕಾಣಬಹುದು. ಕ್ರೂರ ಚಿತ್ರಹಿಂಸೆ ಅನುಭವಿಸಿಯೂ, ಇಷ್ಟು ದೀರ್ಘಕಾಲ ಸೆರೆಮನೆಯ ಕಷ್ಟಗಳನ್ನು ಸಹಿಸಿಯೂ ಖಾನರು ನಿರಾಶರಾದುದಿಲ್ಲ. ಸ್ವತಂತ್ರ ಪಾಕ್‌ತೂನಿಸ್ತಾನದ ಸ್ಥಾಪನೆಯನ್ನು ಕಣ್ಣಾರೆ ಕಾಣಬೇಕೆಂಬುದೇ ಅವರ ಜೀವನದ ಮುಖ್ಯ ಆಕಾಂಕ್ಷೆಯಾಗಿರುತ್ತದೆ.'

ಪ್ರಭಾತ.

ಕೊಡಗು

ತಾ. ೧೨-೧-೧೯೫೧ನೇ ಶುಕ್ರವಾರ

ಬತ್ತದ ಕ್ರಯ ಮತ್ತು ಸಂಗ್ರಹದ ಏರ್ಪಾಡು.

ಈ ವರ್ಷವೂ ಬತ್ತದ ಬೆಲೆಯನ್ನು ಕಳೆದ ವರ್ಷದಂತೆಯೇ ಇಟ್ಟದ್ದರಿಂದಲೂ ಮತ್ತು ಉಳುವರಿ ಬತ್ತ ಸಂಗ್ರಹದ ಏರ್ಪಾಡಿನಲ್ಲಿ ಬದಲಾವಣೆಯನ್ನು ಮಾಡಿದ್ದರಿಂದಲೂ ವ್ಯವಸಾಯಗಾರರಲ್ಲಿ ಅತೃಪ್ತಿಯುಂಟಾಗಿ ಕಳೆದ ಒಂದೂವರೆ ತಿಂಗಳಿಂದ ದೇಶದಲ್ಲಿ ಮುಖ್ಯವಾಗಿ ಬತ್ತ ಹೆಚ್ಚು ಬೆಳೆಯುವ ದಕ್ಷಿಣ ಕೊಡಗಿನಲ್ಲಿ ಬಲವಾದ ಚಳವಳ ನಡೆಯಿತು. ರೈತರು ಅಲ್ಲಲ್ಲಿ ತಮ್ಮ ತಮ್ಮ ಸಭೆಗಳನ್ನು ನಡೆಸಿ ತೀರ್ಮಾನಗಳನ್ನು ಮಾಡಿ ಸರಕಾರಕ್ಕೆ ಕಳುಹಿಸಿದಲ್ಲದೆ ಚೀಫ್ ಕಮಿಷನರಲ್ಲಿಗೆ ಡೆಪ್ಯುಟೇಶನ್ ಹೋಗಿದ್ದರು. ಕೌನ್ಸಿಲು ಸಭೆಯಲ್ಲೂ ಕೂಡ ಪ್ರತಿನಿಧಿಗಳು ಈ ವಿಚಾರ ದೀರ್ಘ ಚರ್ಚೆ ನಡೆಸಿದರು. ಇವೆಲ್ಲದರ ಫಲಿತಾಂಶವಾಗಿ ಬತ್ತ ಬೆಳೆಸುವವರಿಗೆ ತೃಪ್ತಿಕರವಾದ ಒಂದು ತೀರ್ಮಾನವು ಆದದ್ದು ಸಂತೋಷದ ವಿಷಯವಾಗಿದೆ.

ಇಂಡಿಯಾ ಸರಕಾರವು ಕೊಂಡು ಕೊಂಡು ಉಪಯೋಗಿಸುವವರ ಹಿತದೃಷ್ಟಿಯಿಂದ ಈ ವರ್ಷ ಆಹಾರ ಪದಾರ್ಥಗಳ ಬೆಲೆಯನ್ನು ಏರಿಸದೆ ಕಳೆದ ವರ್ಷದಂತೆಯೇ ಇಟ್ಟುಕೊಳ್ಳಬೇಕೆಂದು ತೀರ್ಮಾನಿಸಿರುವದು. ಅದೇ ಮೇರೆ ಕೊಡಗಿನಲ್ಲಿ ಕಳೆದ ವರ್ಷವಿದ್ದ ಗಾಡಿ ಒಂದರ ೧೭೯ ರೂಪಾಯಿ ಕ್ರಯವೇ ಈ ವರ್ಷವೂ ನಿಶ್ಚಿತವಾಗಿದೆ. ಆದರೆ ಕೊಡಗಿನ ಉಳುವರಿ ಬತ್ತವನ್ನು ಕಳುಹಿಸುತ್ತಿರುವ ಮೈಸೂರು ಮತ್ತು ಮಲಬಾರುಗಳಲ್ಲಿ ಬತ್ತದ ಕ್ರಯವು ಕೊಡಗಿಗಿಂತಾ ಹೆಚ್ಚಾಗಿದೆಯೆಂದೂ ಮೈಸೂರಿನ ಗ್ರಾಮಗಳಲ್ಲಿ ರೈತನ ಕಣದಲ್ಲಿ ಗಾಡಿಯೊಂದಕ್ಕೆ ರೂ. ೧೯೦-೪-೦ ಯೂ, ಮಲಬಾರಿನಲ್ಲಿ ರೂ. ೨೦೦ಕ್ಕೆ ಮಿಗಿಲಾಗಿ ಬೆಲೆ ಇದೆಯೆಂದೂ ತಿಳಿಯಬಂದಿದೆ. ಕಳೆದ ವರ್ಷ ಮೈಸೂರಿನಲ್ಲಿ ಈ ವರ್ಷದ ಧಾರಣೆಯೇ ಇದ್ದರೂ ಕೂಡ ಇದರಿಂದ ಮೈಸೂರಿನವರು ಕೊಡುತ್ತಿದ್ದ ಸಂಗ್ರಹದ ಖರ್ಚು ೧೨ ರೂಪಾಯಿಗಳನ್ನು ಬೆಲೆಯಿಂದ ವಜಾ ಹಾಕಿ ಬರೀ ೧೭೯ ರೂಪಾಯಿ ಇಲ್ಲಿ ಬೆಲೆ ನಿಶ್ಚಯಿಸಲಾಗಿತ್ತು. ಸಂಗ್ರಹದ ಖರ್ಚನ್ನು ಕೊಂಡುಕೊಳ್ಳುವವರೇ ಕೊಡಬೇಕಾದುದರಿಂದ ಅದನ್ನು ಬೆಲೆಯಿಂದ ಕಡಿಮೆ ಮಾಡಿಕೊಡುವದು ನ್ಯಾಯವಲ್ಲವೆಂದೂ, ಮೈಸೂರಿನ ರೈತನಿಗೆ ಸಿಕ್ಕುವ ಬೆಲೆಯೇ ಕೊಡಗಿನ ರೈತನಿಗೂ ಆತನ ಕಣದಲ್ಲಿ ಸಿಕ್ಕಬೇಕೆಂದೂ ಇಲ್ಲಿಯ ರೈತರು ಮಾಡಿದ ಹೋರಾಟವು ನ್ಯಾಯಸಮ್ಮತವಾಗಿದೆ. ಇದರ ಫಲಿತಾಂಶವಾಗಿ ಕೊಡಗಿನ ಸರಕಾರವು ಕೊಡಗಿನ ರೈತನಿಗೂ ಆತನ ಕಣದಲ್ಲಿ ರೂ. ೧೯೦ ಬೆಲೆಯನ್ನು ನಿಶ್ಚಯಿಸಬೇಕೆಂದು ಇಂಡಿಯಾ ಸರಕಾರಕ್ಕೆ ಶಿಫಾರಸ್ಸು ಮಾಡಿರುವರೆಂದು ತಿಳಿಯಬರುತ್ತದೆ. ಇದನ್ನು ಇಂಡಿಯಾ ಸರಕಾರದವರು ಮಂಜೂರುಮಾಡುವದು ಯೋಗ್ಯವೂ, ಆವಶ್ಯವೂ ಆಗಿದೆ. ಇದನ್ನು ಅವರು ಮಂಜೂರುಮಾಡಿದ್ದೇ ಆದರೆ ರೈತನಿಗೆ ಆತನ ಕಣದಲ್ಲಿ ಗಾಡಿಗೆ ರೂ. ೧೯೦ ಬೆಲೆಯೂ, ಲೋಡಿಂಗ್ ಸೆಂಟರುಗಳಲ್ಲಿ ಲಾರಿಗಳಿಗೆ ತುಂಬಿಕೊಟ್ಟರೆ ಗಾಡಿಗೆ ಸಂಗ್ರಹದ ಖರ್ಚು ರೂ. ೧೦-೬-೦ ಹೆಚ್ಚಿಗೆಯೂ ದೊರೆಯುವದು. ಇದು ಮಂಜೂರಾಗಿ ಬರುವ ವರೆಗೆ ಕಣದಲ್ಲಿ ರೂ. ೧೭೯ ಯೂ, ಲೋಡಿಂಗ್ ಸೆಂಟರುಗಳಲ್ಲಿ ಲಾರಿಗಳಿಗೆ ತುಂಬಿಕೊಟ್ಟರೆ ಹೆಚ್ಚಿನ ರೂ. ೧೦-೬-೦ ಯೂ ದೊರೆಯುವದು. ಹೆಚ್ಚಿನ ಬೆಲೆಯು ಮಂಜೂರಾಗಿ ಬಂದರೆ ಈಗ ಕಡಿಮೆ ಬೆಲೆಯಲ್ಲಿ ಮಾರಿದವರಿಗೂ ಹೆಚ್ಚಿನ ದರದ ಬೆಲೆಯೇ ಕೊಡಲ್ಪಡುವದು.

ಬತ್ತದ ಬೆಲೆಯು ನಿಯಂತ್ರಣವಾಗಿ ಉಳುವರಿ ಬತ್ತವನ್ನು ನೆರೆ ಪ್ರಾಂತ್ಯಗಳಿಗೆ ಮಾರಲು ಸಂಗ್ರಹದ ಏರ್ಪಾಡು ಕಳೆದ ಆರೇಳು ವರ್ಷಗಳಿಂದ ನಡೆಯುತ್ತಾ ಬಂದು ಒಂದು ರೀತಿಯ ಪೂರ್ಣತೆಯನ್ನು ಹೊಂದಿತ್ತು. ಆದರೆ ಕಳೆದ ವರ್ಷ ಕೊಡಗಿನಿಂದ ಹೊರಗೆ ರವಾನಿಸುವ ಬತ್ತವನ್ನೆಲ್ಲಾ ಮಿಲ್ ಮಾಲೀಕರು ಅಕ್ಕಿ ಮಾಡಿಯೇ ಕಳುಹಿಸಬೇಕೆಂಬ ನಿರ್ಧಾರವಾದದ್ದರಿಂದ ಮೈಸೂರು ಯಾ ಮಲಬಾರಿಗೆ ಬತ್ತ ರವಾನಿಸುವದು ನಿಲ್ಲಿಸಲ್ಪಟ್ಟ ಕಾರಣ ಲೋಡಿಂಗ್ ಸೆಂಟರುಗಳಲ್ಲಿ ಬತ್ತ ಮಾರಾಟವಾಗುವದರ ಬದಲು ಮಿಲ್ ಮಾಲೀಕರು ಮತ್ತು ಪ್ಲಾಂಟರುಗಳು ಗ್ರಾಮದೊಳನುಗ್ಗಿ ಮನೆಮನೆಯಿಂದ ಬತ್ತ ಕೊಂಡುಕೊಳ್ಳುವ ಅವಕಾಶವಾಯಿತು. ಈ ಅನುವು ದೊರೆತ ಕಾರಣ ಕೆಲವು ಮಿಲ್ ಮಾಲೀಕರು ಹೆಚ್ಚಿನ ಅಕ್ಕಿ ಇಳುವರಿ ಬರುವ ಉತ್ತಮವಾದ ಬತ್ತಕ್ಕೆ ಸ್ವಲ್ಪ ಹೆಚ್ಚಿನ ಬೆಲೆ ಕೊಡಲು ಪ್ರಾರಂಭಿಸಿದರು. ಈ ಅವಕಾಶವನ್ನು ಉಪಯೋಗಿಸಿಕೊಂಡು ವಯುಕ್ತಿಕ ಸಬ್ ಏಜಂಟರುಗಳು ಲಾಭ ಮಾಡತೊಡಗಿದರು. ಪ್ಲಾಂಟರುಗಳೂ ಹೆಚ್ಚಿನ ಬೆಲೆ ಕೊಡಲಾರಂಭಿಸಿದರು. ಇದನ್ನೆಲ್ಲ ನೋಡಿದ ಬತ್ತ ಬೆಳೆಸುವವನೂ ಹೆಚ್ಚಿನ ಬೆಲೆ ಪಡೆಯಲು ಯತ್ನಿಸಿದನು. ಹೀಗೆಲ್ಲ ಕಪ್ಪುಸಂತೆ ನಡೆಯುತಿದ್ದುದನ್ನು ನೋಡಿಯೂ ಸಂಬಂಧಿಸಿದ ಅಧಿಕಾರಿಗಳು ಹೆಚ್ಚಿನ ಗಮನಕೊಡಲಿಲ್ಲ. ಕಳೆದ ವರ್ಷದ ಈ ಪರಿಸ್ಥಿತಿಯನ್ನು ಸುಧಾರಿಸಲೋಸ್ಕರ ಸರಕಾರದವರು ಸಂಗ್ರಹದ ಏರ್ಪಾಡಿನಲ್ಲೇ ದೊಡ್ಡ ಬದಲಾವಣೆಗಳನ್ನು ಮಾಡಲು ಯತ್ನಿಸಿದರು. ಸಬ್ ಏಜೆಂಟರುಗಳೇ ಈ ಕಳ್ಳಸಂತೆಗೆ ಕಾರಣರೆಂಬ ಭಾವನೆಯಿಂದ ಸಬ್ ಏಜೆಂಟರುಗಳನ್ನೆಲ್ಲಾ ವಜಾ ಮಾಡಿ ಭತ್ತ ಸಂಗ್ರಹದ ಏರ್ಪಾಡು ಮಾಡಬೇಕೆಂದು ಯೋಚಿಸಿದರು. ಆದರೆ ಇದು ಕಾರ್ಯತಃ ಸಾಧ್ಯವಾಗದ ವಿಚಾರವೆಂದು ನಂತರ ತಿಳಿದು ಸಬ್ ಏಜೆಂಟರುಗಳನ್ನು ಇಟ್ಟುಕೊಳ್ಳಲು ಒಪ್ಪಿದರು. ಸಂಗ್ರಹದಲ್ಲಿ ಸ್ಪರ್ಧೆಯನ್ನು ತಪ್ಪಿಸಿದರೆ ಕಳ್ಳಸಂತೆ ನಿಲ್ಲುವದೆಂದು ಕೊಂಡುಕೊಳ್ಳುವ ಮಿಲ್ ಮಾಲೀಕರು ಮತ್ತು ಪ್ಲಾಂಟರುಗಳಿಗೆ ನಿರ್ದಿಷ್ಟ ಪ್ರದೇಶಗಳನ್ನು ಕಾದಿರುವ ಯೋಜನೆ ಮಾಡಿದರು. ಇದರಿಂದ ಮಿಲ್ ಮಾಲೀಕರಿಂದ ಕಷ್ಟಕಾಲದಲ್ಲಿ ಹಣ ಸಹಾಯ ಪಡೆದಿದ್ದ ರೈತನಿಗೆ ತನ್ನ ಬತ್ತವನ್ನು ಆತನಿಗೇ ಕೊಡುವ ಅವಕಾಶವಿಲ್ಲದಾಗಿ ಮುಂದಕ್ಕೆ ಇಂಥಾ ಸಹಾಯವು ಇಲ್ಲದಾಗುವದೂ, ನಿರ್ದಿಷ್ಟವಾದ ಕೊಂಡುಕೊಳ್ಳುವವನು ತನ್ನ ಇಚ್ಛೆಯಂತೆ ಬಂದು ಬತ್ತ ಸಾಗಿಸುವವರೆಗೆ ರೈತನು ಕಾಯಬೇಕಾದುದೂ, ತಾನು ಬೆಳೆದ ಬತ್ತವನ್ನು ತನಗಿಷ್ಟವಿಲ್ಲದವರಿಗೆ ಮಾರಾಟ ಮಾಡಬೇಕೆಂಬ ಬಲತ್ಕಾರವೂ, ಬತ್ತ ಬೆಳೆಸುವವರಿಗೆ ಆಗುತಿತ್ತು. ಈ ರೀತಿಯ ತೊಂದರೆಗಳನ್ನು ರೈತರ ಮೇಲೆ ಹೊರಿಸುವದು ಸರಿಯಲ್ಲವೆಂದೂ ಇದರಿಂದ ಹೆಚ್ಚು ಬೆಳೆಯಲು ಪ್ರೋತ್ಸಾಹವಿತ್ತಂತಾಗುವದಿಲ್ಲವೆಂದೂ ವ್ಯವಸಾಯಗಾರರು ಹಲವು ರೀತಿಗಳಲ್ಲಿ ಸರಕಾರಕ್ಕೆ ತಿಳಿಸಿದ್ದಲ್ಲದೆ ಈ ತಾ॥ ೮ ರಲ್ಲಿ ಚೀಫ್ ಕಮಿಷನರಲ್ಲಿಗೆ ನಿಯೋಗ ಗೋಷ್ಟಿ ಹೋಗಿ ಮುದ್ದಾಗಿ ಮುಂದಿಟ್ಟು ಮಾಡಿದ ಫಲಿತಾಂಶವಾಗಿ ಈ ಬದಲಾವಣೆಯನ್ನು ಸರಕಾರದವರು ವಜಾಮಾಡಲು ಒಪ್ಪಿಕೊಂಡದ್ದು ಜನರಲ್ಲಿದ್ದ ಅಸಮಾಧಾನವನ್ನು ಹೋಗಲಾಡಿಸಿದೆ. ಅಲ್ಲದೆ ಲೋಡಿಂಗ್ ಸೆಂಟರುಗಳನ್ನು ಸುಮಾರು ೧೩೫ ಕ್ಕೆ ಹೆಚ್ಚಿಸಿ ಅಂದರೆ ಲಾರಿ ಹೋಗುವ ಗ್ರಾಮಗಳನ್ನೆಲ್ಲಾ ನಿಶ್ಚಯಿಸಿದ್ದು ರೈತನಿಗೆ ಹೆಚ್ಚಿನ ಅನುಕೂಲತೆಯನ್ನು ಒದಗಿಸಿಕೊಟ್ಟಂತಾಗಿದೆ. ಅದರೊಂದಿಗೆ ಕಳ್ಳಸಂತೆಯನ್ನು ನಿಲ್ಲಿಸಲೋಸ್ಕರ ಸಂಗ್ರಹದ ಏರ್ಪಾಡನ್ನು ಸಹಕಾರಿ ಸಂಸ್ಥೆಗಳ ಮೂಲಕವೇ ಮಾಡಬೇಕೆಂದು ನಿಶ್ಚಯಿಸಿರುವದು ಮಾತ್ರವಲ್ಲ; ರೇಶನ್ ಅಂಗಡಿಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಸಹಕಾರ ಸಂಘಗಳೇ ನಡೆಸಬೇಕೆಂದು ತೀರ್ಮಾನಿಸಿರುವರು. ಆದರೆ ರೇಶನ್ ಅಂಗಡಿಗಳಿಗೆ ಅಕ್ಕಿ ಸರಬರಾಯಿ ಮಾಡುವ ಜವಾಬ್ದಾರಿಯು ಮಿಲ್ಲಿನವರದಾಗಿರುವದು. ಕೊಡಗಿನ ಉಳುವರಿ ಬತ್ತವನ್ನೆಲ್ಲಾ ಅಕ್ಕಿ ಮಾಡುವ ಅನುಕೂಲವನ್ನು ಕಳೆದ ವರ್ಷದಂತೆ ಮಿಲ್ಲಿನವರಿಗೆ ಕೊಡುವದರಿಂದ ರೇಶನ್ ಅಂಗಡಿಗಳಿಗೆ ಅಕ್ಕಿ ಒದಗಿಸುವ ಜವಾಬ್ದಾರಿಯನ್ನು ವಹಿಸಿ ಕೊಳ್ಳುವದು ಯುಕ್ತವಾಗಿದೆ.

ಕಳೆದ ವರ್ಷದ ಆಖೈರು ಭಾಗದಲ್ಲಿ ರೇಶನ್ ಅಂಗಡಿಗಳಲ್ಲಿ ಅಕ್ಕಿ ಇಲ್ಲದೆ ತೊಂದರೆ ಉಂಟಾಗಿತ್ತು. ಇದಕ್ಕೆ ಪ್ರಾಂತೀಕ ನಿಕ್ಷೇಪವಾಗಿ ಬತ್ತ ಇಡದಿದ್ದದ್ದೂ ಮತ್ತು ಹೊರಗಿನಿಂದ ಜಂಗಾಮಿಯಾಗಿ ಬಂದ ಹೆಚ್ಚಿನ ಜನ ಸಂಖ್ಯೆಯೂ ಕಾರಣಗಳಾಗಿವೆ. ಈ ವರ್ಷ ೨ ಲಕ್ಷಕ್ಕಿಂಥಾ ಹೆಚ್ಚಿನ ಜನರಿಗೆ ಬೇಕಾದ ಬತ್ತವನ್ನು ಕೊಡಗಿನಲ್ಲಿ ಇಡುವ ಏರ್ಪಾಡು ಮಾಡಿರುವದಲ್ಲದೆ ಪ್ರಾಂತೀಕ ನಿಕ್ಷೇಪವಿಡುವ ನಿಶ್ಚಯ ಮಾಡಿರುವದು ಸಮಂಜಸವಾಗಿದೆ. ಈ ಎಚ್ಚರಿಕೆಯಿಂದ ಕಳೆದ ವರ್ಷದ ತೊಂದರೆಗಳು ಉಂಟಾಗಲಾರವೆಂದು ನಂಬಬಹುದಾಗಿದೆ. ಕೇಂದ್ರ ಸರಕಾರದ ಧ್ಯೇಯದಂತೆ ಹಿಂದೂದೇಶದ ಹಲವು ಭಾಗಗಳಲ್ಲಿ ಜಾರಿಯಲ್ಲಿರುವ ಮೇರೆ ಈ ವರ್ಷ ಉಳುವರಿ ಬತ್ತದ ಸಂಗ್ರಹವನ್ನೂ ರೇಶನ್ ಅಂಗಡಿಗಳನ್ನು ನಡೆಸುವ ಹೆಚ್ಚಿನ ಜವಾಬ್ದಾರಿಯನ್ನೂ ಸಹಕಾರಿ ಸಂಘಗಳಿಗೆ ಬಿಟ್ಟಿರುವದರಿಂದ ಈ ದೊಡ್ಡ ಜವಾಬ್ದಾರಿಯನ್ನು ದೇಶದ ಸಹಕಾರಿಗಳೆಲ್ಲರೂ ಚೆನ್ನಾಗಿ ಅರಿತುಕೊಂಡು ಹಿಂದಿನ ಅನುಭವದಿಂದ ಉಂಟಾಗಿದ್ದ ಕುಂದುಕೊರತೆಗಳಿಗೆ ಅವಕಾಶಕೊಡದೆ ಕಳ್ಳಸಂತೆಯನ್ನು ತಪ್ಪಿಸಿ, ಕೊಂಡು ಉಪಯೋಗಿಸುವವರಿಗೆ ಸರಿಯಾಗಿ ದೊರೆಯುವಂತೆ ಏರ್ಪಡಿಸುವರೆಂದು ಆಶಿಸುತ್ತೇವೆ.

ವರ್ತಮಾನ.

ಕೊಡಗಿನ ವ್ಯವಸಾಯ ಆದಾಯ ತೆರಿಗೆಯ ಮಸೂದೆಯ ಸಿಲೆಕ್ಟ್ ಕಮಿಟಿಯ ವರದಿಯನ್ನು ಪರ್ಯಾಲೋಚಿಸಲು ಕೊಡಗು ಶಾಸನ ಸಭೆಯ ವಿಶೇಷ ಮೀಟಿಂಗೊಂದು ತಾ॥ ೧೫ರಲ್ಲಿ ನಡೆಯುವದು.

ಹಿಂದೂದೇಶದ ಮುಖ್ಯ ಸೇನಾನಿಯಾದ ಜನರಲ್ ಕಾರ್ಯಪ್ಪನವರು ತಾ ೧೧-೧-೫೧ರಲ್ಲಿ ಮಡಿಕೇರಿಗೆ ಬಂದಿರುವರು.

ಪೊಳ್ಳಿಬೆಟ್ಟದ ಟೇಂಬಲ್ ಕ್ಲಬ್ಬಿನ ಮೇನೇಜರಾಗಿದ್ದ ಶ್ರೀ ಚೇಂದ್ರಿಮಾಡ ಉತ್ತಯ್ಯನವರು ತಾ ೩ರಲ್ಲಿ ಬೆಂಗಳೂರಿನಲ್ಲಿ ಸ್ವರ್ಗಸ್ಥರಾದರು.

ಕೊಡಗು ಹಿಂದೂಸ್ಥಾನಿ ಪ್ರಚಾರ ಸಭೆಯ ತೃತೀಯ ವಾರ್ಷಿಕೋತ್ಸವವು ತಾ. ೨೦ರಲ್ಲಿ ಅಪರಾಹ್ನ ೩.೩೦ ಗಂಟೆಗೆ ಮಡಿಕೇರಿ ಸೆಂಟ್ರಲ್ ಹೈಸ್ಕೂಲಿನಲ್ಲಿ ನಡೆಯುವದು. ಬಹುಮಾನ ವಿತರಣೆಯನ್ನು ಚೀಫ್ ಕಮಿಷನರಾದ ಟಿ. ಕೆ. ಬೇಡಿಯವರು ನಡೆಸುವರು. ಆ ಸಂದರ್ಭದಲ್ಲಿ ಮೈಸೂರು ಕಾಮರ್ಸ್ ಕಾಲೇಜಿನ ಶ್ರೀ ಕೆ. ರಾಘವೇಂದ್ರರಾವ್, ಬನುಮಯ್ಯ ಹೈಸ್ಕೂಲಿನ ಶ್ರೀ ಎನ್. ವಿನಾಯಕರಾವ್ ಮೊದಲಾದವರ ಭಾಷಣಗಳವೆ.

ಕೊಡ್ಲಿಪೇಟೆ ನೋಟಿಫೈಡ್ ಏರಿಯಾದ ಆಶ್ರಯದಲ್ಲಿ ಗೌಂಕಟ್ಟೆ ಬಾಣೆಯಲ್ಲಿ ತಾ. ೩೦-೧-೫೧ ರಿಂದ ೪-೨-೫೧ರ ವರೆಗೆ ಜಾನುವಾರುಗಳ ಜಾತ್ರೆ ನಡೆಯುವದು.

ತಾರೀಕು ೨೪-೧೨-೫೦ರಲ್ಲಿ ಪೂನಾದಲ್ಲಿರುವ ಕೊಡಗರು ಹುತ್ತರಿ ಹಬ್ಬವನ್ನು ಡಕ್ಕನ್ ಜಿಮಖಾನದಲ್ಲಿರುವ ಮಹಿಳಾ ಸಂಘದ ಆಶ್ರಯದಲ್ಲಿ ನಡಸಿದರು. ಅದೇ ದಿನ ಕೊಡಗು ಸಂಘದ ವಾರ್ಷಿಕ ಸಭೆ ನಡೆದು ಶ್ರೀ ಪಾರುವಂಗಡ ಅಕ್ಕವ ಬೋಪಯ್ಯನವರನ್ನು ಅಧ್ಯಕ್ಷರಾಗಿಯೂ ಶ್ರೀ ಕೇತಿಯಂಡ ದೇವಯ್ಯನವರನ್ನು ಕಾರ್ಯದರ್ಶಿಯಾಗಿಯೂ ಶ್ರೀ ಕರೋಡಾರ ಐಯ್ಯಪ್ಪನವರನ್ನು ಖಜಾಂಜಿಯಾಗಿಯೂ ಆರಿಸಲಾಯಿತು.

ಕೂರ್ಗ್ ಯೂನಿಯನ್ ಸರ್ವಿಸಿನ ಮಾಲೀಕರಾದ ಶ್ರೀ ಅಮ್ಮಾಟಕುಟ್ಟಂಡ ಗಣಪತಿಯವರು ಕೊಡಗು ವಿದ್ಯಾನಿಧಿಗೆ ರೂ ೫೦೦ ಕೊಟ್ಟು ಜೀವಾವಧಿ ಸದಸ್ಯರಾಗಿರುವದಲ್ಲದೆ ಮಡಿಕೇರಿಯ ಕೊಡವ ಸಮಾಜದ ಕಟ್ಟಡಕ್ಕೆ ರೂ. ೫೦೧ ದಾನ ಮಾಡಿರುವರು.

ಮಡಿಕೇರಿ ಹೊಸ ಮುನ್ಸಿಪಲ್ ಕಮಿಟಿಯ ಮೀಟಿಂಗು ತಾ. ೭ರಲ್ಲಿ ನಡೆದು ಶ್ರೀ ಕೆ. ಮಲ್ಲಪ್ಪನವರನ್ನು ಪ್ರೆಸಿಡೆಂಟರಾಗಿಯೂ ಶ್ರೀ ಪಿ. ಎ. ಮೊಯಿದೀನ್‌ರವರನ್ನು ವೈಸ್ ಪ್ರೆಸಿಡೆಂಟರಾಗಿಯೂ ಆರಿಸಲಾಗಿದೆ.

ಕೊಡಗು ಜಿಲ್ಲಾ ಬೋರ್ಡಿನ ಸಾಮಾನ್ಯ ಮೀಟಿಂಗೊಂದು ತಾ. ೨೦-೧-೫೧ರಲ್ಲಿ ಕೊಡಗು ಕೌನ್ಸಿಲು ಸಭಾಂಗಣದಲ್ಲಿ ನಡೆಯುವದು.

ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದ ಶ್ರೀ ಎಸ್. ನಿಜಲಿಂಗಪ್ಪನವರು ತಾ. ೧೯ರಲ್ಲಿ ಕೊಡಗಿಗೆ ಬರುವರೆಂದೂ ತಾ. ೧೭ರಲ್ಲಿ ಮೈಸೂರಿಗೆ ಗೋಣಿಕೊಪ್ಪಲು ಮಾರ್ಗವಾಗಿ ಹೋಗುವರೆಂದೂ ತಿಳಿದು ಬಂದಿದೆ.

ಅಮ್ಮತ್ತಿ ಮಾಧ್ಯಮಿಕ ಶಾಲಾ ವಿದ್ಯಾರ್ಥಿಗಳು ನೇತಾಜಿ ಸುಭಾಷರ ಜ್ಞಾಪಕಾರ್ಥವಾಗಿ 'ನೇತಾಜಿ ಸುಭಾಷ್ ಮೆಮೋರಿಯಲ್ ಹಾಕಿ ಕಪ್' ಒಂದನ್ನು ಇಟ್ಟು ಎಲ್ಲಾ ಮಾಧ್ಯಮಿಕ ಶಾಲೆಗಳು ಅದರಲ್ಲಿ ಭಾಗವಹಿಸುವಂತೆ ಏರ್ಪಡಿಸಿ ಈ ತಾರೀಕು ೨೨ ರಿಂದ ಪಂದ್ಯಾಟವನ್ನು ಏರ್ಪಡಿಸಿರುವರು.

ಭತ್ತದ ಬೆಲೆ ಮತ್ತು ಸಂಗ್ರಹದ ಏರ್ಪಾಡು.

ಈ ವರ್ಷ ಭತ್ತದ ಬೆಲೆ ಗಾಡಿಗೆ ರೂ. ೧೭೫ರಂತೆ ನಿಶ್ಚಯವಾದ್ದು ಮತ್ತು ಮಾರಾಟ ಭತ್ತದ ಸಂಗ್ರಹದ ಹೊಸ ಏರ್ಪಾಡು ಭತ್ತ ವ್ಯಾಪಾರಗಾರರಲ್ಲಿ ತುಂಬಾ ಅತೃಪ್ತಿಯನ್ನುಂಟುಮಾಡಿತ್ತು. ಈ ಸಂಬಂಧ ಕಳೆದ ಡಿಸೆಂಬರ ತಾರೀಕು ೮ರಲ್ಲಿ ಕೌನ್ಸಿಲು ಹಾಲ್‌ನಲ್ಲಿ ಚೀಫ್ ಕಮಿಶನರ ಅಧ್ಯಕ್ಷತೆಯಲ್ಲಿ ಪ್ಲಾಂಟರುಗಳ ಭತ್ತ ಬೆಳೆಯುವವರ ಮತ್ತು ಸಹಕಾರಿ ಸಂಸ್ಥೆಗಳ ಪ್ರತಿನಿಧಿಗಳ ಮತ್ತು ಮಾಲೀಕರ ಸಭೆಯೊಂದು ಸೇರಿ ಚರ್ಚೆ ನಡಿಸಲಾಗಿತ್ತು. ಕಳೆದ ತಾ. ೨೯ರಲ್ಲು ಕೌನ್ಸಿಲು ಮೀಟಿಂಗಿನಲ್ಲಿ ಹಲವು ಕೌನ್ಸಿಲ್ ಮೆಂಬರಗಳು ಈ ವಿಚಾರವನ್ನು ಕುರಿತು ತಮ್ಮ ಅಭಿಪ್ರಾಯಗಳನ್ನು ಸೂಚಿಸಿದ್ದರು. ಆದರೂ ಬತ್ತ ಸಂಗ್ರಹಕ್ಕಾಗಿ ನಿರ್ದಿಷ್ಟ ಪ್ರದೇಶಗಳನ್ನು ಒಪ್ಪಿಸಿದ್ದ ಮಿಲ್ ಮಾಲೀಕರಿಗೆ ಯೂ ಕಾಫಿ ಪ್ಲಾಂಟರುಗಳಿಗೆ ಕಾಯ್ದಿಡುವ ಹೊಸ ಏರ್ಪಾಡಿನಲ್ಲಿ ಬದಲಾವಣೆಯಾಗಲಿಲ್ಲ. ಇದರಿಂದ ಅಸಮಾಧಾನಗೊಂಡ ರೈತರು ಹಲವು ಕಡೆಗಳಲ್ಲಿ ಸಭೆ ಸೇರಿ ತಮ್ಮ ಕಷ್ಟಗಳನ್ನು ಠರಾವುಗಳ ಮೂಲಕ ಸೂಚಿಸಿದ್ದಲ್ಲದೆ, ಅವುಗಳನ್ನು ಚೀಫ್ ಕಮಿಶನರಿಗೆ ಸಂದಟು ಮಾಡಲು ಪ್ರತಿನಿಧಿಗಳನ್ನೂ ಆರಿಸಿದರು. ತಾ. ೨೭-೧೨-೫೦ರಲ್ಲಿ ವೀರಾಜಪೇಟೆಯಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಜನವರಿ ೩ರಲ್ಲಿ ಅಲ್ಲಿಯೇ ನಡೆಯುವ ಪಬ್ಲಿಕ್ ಮೀಟಿಂಗಿಗೆ ಚೀಫ್ ಕಮಿಶನರೇ ಖುದ್ದು ಬಂದು ರೈತರ ಕಷ್ಟ ಸುಖಗಳನ್ನು ಕೇಳಬೇಕೆಂದು ಠರಾವು ಮಾಡಿ ಚೀಫ್ ಕಮಿಷನರಿಗೆ ಪತ್ರ ಬರೆಯಲಾಗಿತ್ತು. ಪುನಃ ಭತ್ತ ಬೆಳೆಯುವವರು ಈ ತಾ. ೩ರಲ್ಲಿ ವೀರಾಜಪೇಟೆಯಲ್ಲಿ ಸಭೆ ಸೇರಿ ಚೀಫ್ ಕಮಿಶನರು ಅಲ್ಲಿಗೆ ಬಾರದ್ದಕ್ಕೆ ವ್ಯಸನ ಸೂಚಿಸಿದ್ದಲ್ಲದೆ, ಚೀಫ್ ಕಮಿಶನರ ಸೂಚನೆಯಂತೆ ಅವರಲ್ಲಿಗೆ ಡೆಪ್ಯುಟೇಶನ್ ಹೋಗಲು ೨೦ ಜನ ಪ್ರತಿನಿಧಿಗಳನ್ನು ಆರಿಸಿ, ತಮ್ಮ ಕೋರಿಕೆಗಳನ್ನೆಲ್ಲಾ ಠರಾವುಗಳ ರೂಪದಲ್ಲಿ ಪಾಸು ಮಾಡಿದರು. ಸದರಿ ಡೆಪ್ಯುಟೇಶನು ಶ್ರೀ ಪಿ. ಐ. ಬೆಳ್ಯಪ್ಪನವರ ಮುಂದಾಳುತನದಲ್ಲಿ ಈ ತಾ. ೮ರಲ್ಲಿ ಕೌನ್ಸಿಲ್ ಹಾಲ್‌ನಲ್ಲಿ ಚೀಫ್ ಕಮಿಷನರನ್ನು ಭೇಟಿಮಾಡಿ ಚರ್ಚೆ ನಡಿಸಿದರು. ಇದರ ನಂತರ ಸಹಕಾರಿ ಫೆಡರೇಶನಿನ ಮತ್ತು ಸಹಕಾರಿ ಭಕ್ತ ಸ್ಟೋರುಗಳ ಪ್ರತಿನಿಧಿಗಳ ಡೆಪ್ಯುಟೇಶನೂ ಚೀಫ್ ಕಮಿಷನರನ್ನು ಭೇಟಿಮಾಡಿತು. ಈ ಡೆಪ್ಯುಟೇಶನುಗಳ ಚರ್ಚೆಯ ಫಲಿತಾಂಶವಾಗಿ ಚೀಫ್ ಕಮಿಷನರವರು ಭತ್ತ ಸಂಗ್ರಹಕ್ಕಾಗಿ ನಿರ್ದಿಷ್ಟ ಪ್ರದೇಶಗಳನ್ನು ಕಾಯ್ದಿಡುವ ಏರ್ಪಾಡನ್ನು ವಜಮಾಡಿ ವ್ಯವಸಾಯಗಾರರು ಕಂಟ್ರೋಲ್ ಬೆಲೆಯಲ್ಲಿ ಸರಾಗವಾಗಿ ಯಾರಿಗಾದರೂ ಲೋಡಿಂಗ್ ಸೆಂಟರಿನಲ್ಲಿ ಬತ್ತ ಮಾರಾಟ ಮಾಡಬಹುದೆಂದೂ, ಇದಕ್ಕಾಗಿ ಸಹಕಾರಿ ಫೆಡರೇಶನು ಚೀಫ್ ಏಜಂಟಾಗಿಯೂ, ಎಲ್ಲಾ ಸಹಕಾರಿ ಸಂಘಗಳು ಸಬ್ ಏಜೆಂಟುಗಳಾಗಿಯೂ ವರ್ತಿಸಬೇಕೆಂದೂ, ವಯುಕ್ತಿಕ ಸಬ್ ಏಜೆಂಟರುಗಳು ಇರಕೂಡದೆಂದೂ ಸಾಧ್ಯವಾದಷ್ಟು ಮಟ್ಟಿಗೆ ಸಹಕಾರಿ ಸಂಸ್ಥೆಗಳ ಮೂಲಕವೇ ರೇಶನ್ ಅಂಗಡಿಗಳನ್ನು ನಡಿಸಬೇಕೆಂದೂ, ಅವುಗಳಿಗೆ ಬೇಕಾದ ಅಕ್ಕಿ ಸರಬರಾಯನ್ನು ಮಿಲ್ ಮಾಲೀಕರು ಮಾಡುವರೆಂದೂ ಒಪ್ಪಿದಲ್ಲದೆ ಮೈಸೂರಿನಲ್ಲಿರುವಂತೆಯೇ ಬತ್ತ ಗಾಡಿಯೊಂದಕ್ಕೆ ರೂ. ೧೯೦ ಕ್ರಯ ಕೊಡಗಿನಲ್ಲಿಯೂ ನಿಶ್ಚಯಿಸುವಂತೆ ಇಂಡಿಯಾ ಸರ್ಕಾರಕ್ಕೆ ಬರೆದಿರುವೆನೆಂದೂ, ಅದು ಮಂಜೂರಾಗಿ ಬರುವ ವರೆಗೆ ಕಳೆದ ವರ್ಷದಂತೆ ಗಾಡಿಯೊಂದಕ್ಕೆ ರೂ. ೧೭೫ ಕ್ರಯ ಮತ್ತು ಲೋಡಿಂಗ್ ಸೆಂಟರಿನಲ್ಲಿ ತಂದು ಲಾರಿಗೆ ತುಂಬಿ ಕೊಟ್ಟವರಿಗೆ ರೂ ೧೨-೬-೦ ಸಂಗ್ರಹದ ಚಾರ್ಜು ಕೊಡಲಾಗುವದೆಂದೂ ಈ ವರ್ಷ ಲೋಡಿಂಗ್ ಸೆಂಟರುಗಳ ಸಂಖ್ಯೆಯನ್ನು ೧೩೫ಕ್ಕೆ ಏರಿಸಲಾಗಿದೆಯೆಂದೂ ಪ್ರೊವಿನ್ಸಿಯಲ್ ರಿಸರ್ವ್ ಭತ್ತ ಇಡಲಾಗುವದೆಂದೂ ಹೇಳಿ ಎಲ್ಲರೂ ಸಹಕರಿಸಿ ಕಪ್ಪು ಸಂತೆಯನ್ನು ನಿಲ್ಲಿಸಬೇಕೆಂದೂ ಅಪ್ಪೀಲು ಮಾಡಿದರು.

ತಿಳಿಸಿರಿ

ಭೂಮಿ, ತೋಟ, ಜಾಗ ಪೇಟೆಯಲ್ಲಿ ಮನೆ ಅಥವ ಮನೆ ಸೈಟು ಮಾರಲಿರುವವರು ಮತ್ತು ಕೊಂಡು ಕೊಳ್ಳಲಿಚ್ಛಿಸುವವರು ಈ ಕೆಳಗಿನ ಪತ್ತೆಯಲ್ಲಿ ವಿಚಾರಿಸಿರಿ. ಅಲ್ಲದೆ ಬೇಕಾದವರಿಗೆ ಕರೆಯುವ ಎಮ್ಮೆ, ಹಸ ಮತ್ತು ಉಳುವ ಎತ್ತು ಮತ್ತು ಕೋಣಗಳನ್ನೂ ಒದಗಿಸಿ ಕೊಡಲಾಗುವುದು. ವಿವರಗಳಿಗೆ ಈ ಪತ್ತೆಗೆ ಬರೆಯಬಹುದು.

26-1

P. A. N. & Sons,
Commission Agent.
Gonicoppal
S. Coorg

ದಿ. ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬ್ಯಾಂಕು ಲಿಮಿಟೆಡ್.
ಸೋಮವಾರಪೇಟೆ. (ಕೊಡಗು)
ನೋಟೀಸು.

ಈ ಮೂಲಕ ಯಾವತ್ತೂ ಜನರಿಗೆ ತಿಳಿಸ ಪಡಿಸುವುದೇನೆಂದರೆ:— ಈ ಕೆಳಗೆ ನಮೂದಿಸಿದವರು ಈ ಬ್ಯಾಂಕಿನಿಂದ ಆಭರಣಗಳ ಈಡಿನಲ್ಲಿ ಪಡೆದ ಸಾಲಗಳ ಅಸಲು ಮತ್ತು ಬಡ್ಡಿ ವಗೈರೆಗಳನ್ನು ಬಾಕಿ ಮಾಡಿರುವುದರಿಂದಲೂ, ಸದ್ರಿಯವರಿಗೆ ರಿಜಿಸ್ಟರು ನೋಟೀಸು ಕಳುಹಿಸಿದಲ್ಲಿ ಕೆಲವರು ಮೃತರಾಗಿರುವರೆಂದು ನೋಟೀಸು ವಾಪಾಸು ಬಂದಿರುವುದರಿಂದಲೂ ಕೆಲವು ನೋಟೀಸು ವಿಳಾಸದಾರರು ಸ್ಥಳಬಿಟ್ಟು ಇರುವುದಾಗಿಯೂ, ಕೆಲವು ನೋಟೀಸು ಇನ್ಕಾರಾಗಿ ವಾಪಾಸು ಬಂದಿರುವುದರಿಂದಲೂ, ಸದರಿ ಸಾಲಗಳ ಬಾಬ್ತು ಈಡಿಟ್ಟ ಯಾವತ್ತೂ ಒಡವೆಗಳನ್ನು ಇದೇ ಬರುವ ತಾರೀಕು 20-1-1951ನೇ ಶನಿವಾರ ಮಧ್ಯಾಹ್ನ 1 ಗಂಟೆಗೆ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು. ಸದರಿ ಏಲಂ ತಾರೀಕನ್ನು ಬ್ಯಾಂಕಿನವರಿಗೆ ಯುಕ್ತ ಕಂಡಲ್ಲಿ ಮುಂದುವರಿಸಲಾದೀತು. ತಿಳಿದಿರಲಿ.

ಸಾಲದ ನಂಬ್ರ	ಹೆಸರು ಮತ್ತು ವಿಳಾಸ	ಈಡಿಟ್ಟ ತಾರೀಕು	ಸಾಲದ ಅಸಲು ರೂಪಾಯಿ
548/48	ಯು. ವೆಂಕಟರಮಣ, ತಿಮ್ಮರಾಯಸೆಟ್ಟರ ಮಗ, ಪ್ಲ್ಯಾನ್ ಫಿಶರಿ ಡಿಪಾರ್ಟ್‌ಮೆಂಟ್ ಸೋಮವಾರಪೇಟೆ.	30-8-48	5 0 0
46/49	ಇರಾವೇಸ್ತ್ರಿ, ಮೋರಿದಯರ ಮಗ ಆಲ್ರಿಕಟ್ಟೆ ಎಸ್ಟೇಟ್, ಸೋಮವಾರಪೇಟೆ.	2-2-49	8 0 0
285/49	ಮಲ್ಲಪ್ಪ, ಈರಪ್ಪರ ಮಗ, ಕಲ್ಲಂಗಲೆ ಎಸ್ಟೇಟ್ ಸೋಮವಾರಪೇಟೆ.	6-6-49	6 0 0
380/49	ಲಿಂಗಪ್ಪ ಆಚಾರಿ, ತಿಮ್ಮಯ್ಯ ಆಚಾರ್ಯರ ಮಗ, ಚಿನಿವಾರ ಸೋಮವಾರಪೇಟೆ.	11-7-49	18 0 0
747/49	ಎಂ. ಪಿ ರಹಿಮಾನ್ ಖಾನ್, ಪೀರ್ ಖಾನರ ಮಗ, ಶನಿವಾರಸಂತೆ.	28-11-49	275 0 0
304/49	ಪ ಶೀಲಾ ಬಾಯಿ, ಸೋಮವಾರಪೇಟೆ.	30-11-49	500 0 0
31/50	ಬಿ. ಕೆ. ನರಸಯ್ಯಶೆಟ್ಟಿ, ನರಸಯ್ಯಶೆಟ್ರ ಮಗ, ಪೆಂಕರೆಬೀಡು, ಸೋಮವಾರಪೇಟೆ.	25-2-50	12 0 0
110/50	ಗಣಪತಿ ಆಚಾರ್ಯ, ಮಂಜುನಾಥ ಆಚಾರ್ಯರ ಮಗ, ಚಿನಿವಾರ, ಸೋಮವಾರಪೇಟೆ.	30-5-50	100 0 0
299/50	ಹೈದರ್ ಶರೀಫ, ಬುಡಾನ ಶರೀಫರ ಮಗ, ಸೋಮವಾರಪೇಟೆ.	2-9-50	35 0 0

ಬ್ಯಾಂಕಿನ ಆಫೀಸು ಸೋಮವಾರಪೇಟೆ 9-1-51

ಕೆ. ಕಮಲಾಕ್ಷ ನಾಯಕ್
ಏಜಂಟ್.

ಹರಾಜು ನೋಟೀಸು.

ಈ ಕೆಳಗಿನ ಸಂತೆ ಮತ್ತು ಟೋಲ್‌ಗೇಟುಗಳ ಸುಂಕ ವಸೂಲಿಯ ಬಗೆ ಆಯಾಯ ಸ್ಥಳಗಳ ಎದುರು ಕೊಟ್ಟಿರುವ ತಾರೀಕು ಮತ್ತು ಸ್ಥಳಗಳಲ್ಲಿ ಹರಾಜು ಮಾಡಲ್ಪಡುತ್ತವೆ.

ನಂ.	ಸಂತೆಯ ಹೆಸರು		ತಾರೀಕು	ಮಾರಾಟ ಸ್ಥಳ
1	ಗೋಣಿಕೊಪ್ಪ ಮಾರ್ಕೆಟು		28-1-51	ಗೋಣಿಕೊಪ್ಪ ನಾಡುಕಚೇರಿ
2	ಹುದಿಕೇರಿ	,,	29-1-51	ಹುದಿಕೇರಿ
3	ಸಿದ್ದಾಪುರ	,,	21-1-51	ಸಿದ್ದಾಪುರ
4	ಅಮ್ಮತ್ತಿ	,,	21-1-51	ಸಿದ್ದಾಪುರ
5	ಆನೆ ಚೌಕೂರು ಟೋಲ್‌ಗೇಟ್		31-1-51	ವೀರಾಜಪೇಟೆ ನಾಡುಕಚೇರಿ
6	ಕುಟ್ಟ	,,	,,	,,
7	ಸಿದ್ದೇಶ್ವರ ಗದ್ದಿಗೆ	,,	,,	,,
8	ಮಾಕೂಟ	,,	,,	,,
9	ಮೂರ್ನಾಡು ಮಾರ್ಕೆಟು		2-2-51	ಮಡಿಕೇರಿ ನಾಡುಕಚೇರಿ
10	ಕೊಯನಾಡು	,,	,,	,,
11	ಚೆಟ್ಟಳ್ಳಿ	,,	,,	,,
12	ಸಂಪಾಜೆ ಟೋಲ್‌ಗೇಟ್		,,	,,
13	ಫ್ರೇಜರ್‌ಪೇಟೆ	,,	,,	,,
14	ಶಿರಂಗಾಲ	,,	,,	,,
15	ಶನಿವಾರಸಂತೆ ಮಾರ್ಕೆಟು		3-2-51	ಶನಿವಾರಸಂತೆ ನಾಡುಕಚೇರಿ
16	ಎಡೆಹಳ್ಳಿ ಟೋಲ್‌ಗೇಟ್		,,	,,
17	ಹೆಬ್ಬುಲುಸೆ	,,	,,	,,
18	ನಿಲವಾಗಿಲು	,,	,,	,,
19	ಸುಂಟಿಕೊಪ್ಪ ಮಾರ್ಕೆಟು		4-2-51	ಸುಂಟಿಕೊಪ್ಪ ನಾಡುಕಚೇರಿ
20	ಮಾದಾಪುರ		,,	,,

ಕೊಡಗು ಜಿಲ್ಲಾ ಬೋರ್ಡ ಆಫೀಸು,
ತಾರೀಕು 28-12-50.

ಐ. ಪಿ. ಕಾರ್ಯಪ್ಪ,
ಪ್ರೆಸಿಡೆಂಟ್.

ಓದುಗರ ಓಲೆಗಳು.

ಮಡಿಕೇರಿ ಮುನ್ಸಿಪಾಲಿಟಿ.

ಮುನ್ಸಿಪಲ್ ಚುನಾವಣೆ ನಡೆಯಿತು. ಚುನಾವಣೆಯ ಬಿ ಅವ್ಯವಸ್ಥೆ ಇದ್ದರೂ ಅದದ್ದು ಆಯಿತು. ಈಗ ಚುನಾಯಿತರಾಗಿರುವ ಸದಸ್ಯರು ಚುನಾವಣಾ ಕಾಲಕ್ಕೆ ತೋರಿಸಿದ ನಗರಹಿತದ ಹುರುಪನ್ನೆ ಮುಂದೆಯೂ ತೋರಿಸಬೇಕು. ಮಡಿಕೇರಿಯ ಪುರಜನರಿಗೆ ಅನೇಕ ಸೌಲಭ್ಯಗಳನ್ನು ಒದಗಿಸಿ ಕೊಡುವದು ಸಮಿತಿಯವರಿಗೆ ಸಾಧ್ಯವಿದೆ. ಕಳೆದ ಕೆಲವು ವರ್ಷಗಳಿಂದ ಪುರಸಭೆಯ ಕೆಲಸವು ಪೂರ್ಣ ತೃಪ್ತಿಕರವಲ್ಲದಿದ್ದರೂ ಜನಹಿತ ಕೆಲಸಗಳು ಅನೇಕ ನಡೆದಿವೆ. ಇದಕ್ಕಾಗಿ ಹಿಂದಿನ ಪ್ರೆಸಿಡೆಂಟರನ್ನು, ಸಮಿತಿಯವರನ್ನು ವಂದಿಸಬೇಕಿದೆ. ಈಗ ಪುನಃ ಹಿಂದಿನ ಪ್ರೆಸಿಡೆಂಟರೇ ಮುಂದಿನ ಸಾರಿಗೂ ಪ್ರೆಸಿಡೆಂಟರಾಗಿ ಆರಿಸಲ್ಪಟ್ಟಿದ್ದಾರೆ. ಅವರು ಇನ್ನೂ ಹೆಚ್ಚಿನ ಶ್ರಮವಹಿಸಿ ಪುರವಾಸಿಗಳ ಹಿತಕ್ಕಾಗಿ ದುಡಿಯುವರೆಂದು ನಂಬಲಾಗಿದೆ. ಆದರೆ ಒಂದು ವಿಚಾರ ಅವರು ಗಮನದಲ್ಲಿಡಬೇಕು. ಹಿಂದಿನ ಸಮಿತಿಯಲ್ಲಿ ತಮ್ಮ ಕೈಗೊಂಬೆಗಳಾಗಿ ಕೆಲವರನ್ನು ಇಟ್ಟುಕೊಂಡು ಪ್ರೆಸಿಡೆಂಟರು ಏಕಪಕ್ಷ ರೀತಿಯಿಂದ ವರ್ತಿಸಿದರೆಂಬ ಟೀಕೆಯಿತ್ತು. ಈ ಸಾರಿಯ ಚುನಾವಣೆಯಲ್ಲೂ ಪ್ರೆಸಿಡೆಂಟರ ಪಾರ್ಟಿಯವರು ಹೆಚ್ಚಿನ ಬಹುಮತದವರು ಆರಿಸಿ ಬಂದಿದ್ದಾರೆ. ಪುನಃ ಮುನ್ಸಿಪಲ್ ಸಮಿತಿಯಲ್ಲಿ ಅನೈಕ್ಯತೆ ಬಾರದಂತೆ ಎಚ್ಚರಿಕೆ ವಹಿಸಬೇಕು. ಬಹುಮತವಿದೆಯೆಂದು ಉಳಿದವರನ್ನು ಕಡೆಗಣಿಸಿ ವರ್ತಿಸಬಾರದು. ಸಮಿತಿಯವರೆಲ್ಲರೂ ಒಗ್ಗಟ್ಟಾಗಿ ಮಡಿಕೇರಿಯ ಅಭಿವೃದ್ಧಿಗಾಗಿ ದುಡಿಯುವುದು ಅವಶ್ಯವಿದೆ. ಇದರ ಜವಾಬ್ದಾರಿ ಹೆಚ್ಚಾಗಿ ಪ್ರೆಸಿಡೆಂಟರ ಮೇಲಿದೆ. ಅವರು ಅದಕ್ಕೆ ತಕ್ಕಂತೆ ವರ್ತಿಸುವರೆಂದು ಆಶಿಸಲಾಗಿದೆ.

'ಪುರನಿವಾಸಿ'

ಹುಣಸೂರ ಟಿಂಬರ್ ಡಿಪೋ

ಹುಣಸೂರಿನಲ್ಲಿರುವ ಕೊಡಗು ಫಾರೆಸ್ಟ್ ಟಿಂಬರ್ ಡಿಪೋವನ್ನು ಸಾಕಷ್ಟು ಉತ್ತಮ ಸ್ಥಿತಿಯಲ್ಲಿಡಲಿಲ್ಲವೆಂದು ನೋಡಿದವರಿಗೆ ತಿಳಿಯುತ್ತದೆ. ಬೇರೆ ಯಾವ ನ್ಯೂನತೆ ಇದ್ದರೂ ಎತ್ತಿತೋರುವ ಒಂದು ವಿಚಾರ ಹೇಳಬೇಕಿದೆ. ಈ ಸರಕಾರಿ ಟಿಂಬರ್ ಡಿಪೋವಿಗೆ ಇಟ್ಟಿರುವ ರಸ್ತೆಯು ಹಳ್ಳದಲ್ಲಿರುವ ಬೋರ್ಡು ಯಾವ ಓಬೀರಾಯನ ಕಾಲದ್ದೋ ದೇವರೇ ಬಲ್ಲ. ಅದನ್ನಾದರೂ ಇಳಿಸಿಯುವರು. ಬದಲಾಯಿಸಿ ಉತ್ತಮವಾದ ಬೋರ್ಡಿಸಬೇಕಾಗಿ ಈ ಮೂಲಕ ಸೂಚನೆ.

"X"

ದಿವಂಗತ ಗೌರಮ್ಮ ಸ್ಮಾರಕ ಸಮಿತಿ. ಮಡಿಕೇರಿ. ಕೊಡಗು.

ಸುಪ್ರಸಿದ್ಧ ಕತೆಗಾರ್ತಿ ದಿವಂಗತ ಶ್ರೀ. ಗೌರಮ್ಮನವರ (ಮಿಸೆಸ್. ಬಿ.ಟಿ.ಜಿ ಕೃಷ್ಣ) ಜ್ಞಾಪಕಾರ್ಥವಾಗಿ ಮೇಲ್ಕಂಡ ಸಮಿತಿಯು ಈ ವರ್ಷ ಒಂದು ಕಥಾಸ್ಪರ್ಧೆಯನ್ನು ಏರ್ಪಡಿಸುವುದು. ಈ ಸ್ಪರ್ಧೆಗೆ ಕನ್ನಡ ನಾಡಿನ ಎಲ್ಲಾ ಕತೆಗಾರರು ತಮ್ಮ ಕಥೆಗಳನ್ನು ಕಳುಹಿಸಬಹುದು.

(೨) ಸ್ಪರ್ಧೆಗಾಗಿ ಮೂರು ಬಹುಮಾನಗಳನ್ನು ಇಡಲಾಗಿದೆ. ಮೊದಲನೇ ಬಹುಮಾನವು ರೂ ೨೦ ಎರಡನೇ ಬಹುಮಾನವು ರೂ ೧೦|- ಮೂರನೇ ಬಹುಮಾನವು ರೂ ೧೦|- ಬೆಲೆಬಾಳುವ ಕನ್ನಡ ಪುಸ್ತಕಗಳು (ಇವುಗಳಲ್ಲಿ ಒಂದು ಬಹುಮಾನವು ಸ್ತ್ರೀಯರಿಗಾಗಿ ಮೀಸಲಾಗಿಡಲಾಗಿದೆ)

(೩) ಬಹುಮಾನವನ್ನು ಪಡೆದ ಕಥೆಗಳು ಸಮಿತಿಯ ಸೊತ್ತಾಗುವುದು. ಮೂವರು ಪ್ರಸಿದ್ಧ ಸಾಹಿತಿಗಳಿಂದ ಕೂಡಿದ ಒಂದು ಮಂಡಳಿಯು ಈ ಕಥೆಗಳನ್ನು ಪರಿಶೀಲಿಸುವುದು.

(೪) ಕಥೆಗಳು ಚಿಕ್ಕವಾಗಿದ್ದು ಫುಲ್ಸ್ಕೇಪ್ ಕಾಗದದ ಎಂಟು ಪುಟಗಳನ್ನು ಮೀರಕೂಡದು. ಕಾಗದದ ಒಂದೇ ಬದಿಯಲ್ಲಿ ಬರೆದು ಕಳುಹಿಸಬೇಕು. ಸ್ಪರ್ಧೆಗೆ ಬಂದ ಕಥೆಗಳ ಪ್ರತಿಗಳನ್ನು ಹಿಂದಕ್ಕೆ ಕಳುಹಿಸಲಾಗುವುದಿಲ್ಲ. ಫಲಿತಾಂಶಗಳನ್ನು ಬಹುಮಾನ ಪಡೆದವರಿಗೆ ಮಾತ್ರ ತಿಳಿಸಲಾಗುವುದು. ಉತ್ತರ ಬಯಸತಕ್ಕವರು ಅಂಚೆ ಚೀಟುಗಳನ್ನು ಕಳುಹಿಸಬೇಕು.

(೫) ಕಥೆಗಳು ಸ್ವತಂತ್ರವಾಗಿದ್ದು ಇದುವರೆಗೆ ಎಲ್ಲೂ ಪ್ರಕಟವಾಗಿರ ಕೂಡದು. ಪರಿಶೀಲಕರ ಮತ್ತು ಸಮಿತಿಯವರ ಅಭಿಪ್ರಾಯದಲ್ಲಿ ಕಥೆಗಳು ಬಹುಮಾನ ಪಡೆಯಲು ಅರ್ಹತೆಯುಳ್ಳವಾಗಿಲ್ಲದಿದ್ದರೆ ಬಹುಮಾನ ಕೊಡುವುದನ್ನು ನಿಲ್ಲಿಸಲಾಗುವುದು.

(೬) ಕಥೆಗಳು ಸಮಿತಿಯ ಕಚೇರಿಗೆ ಇದೇ ಫೆಬ್ರವರಿ ತಿಂಗಳ ಅಂತ್ಯದೊಳಗೆ ತಲುಪಬೇಕು. ಕಥೆಬರೆದ ಕಾಗದದ ಯಾವ ಭಾಗದಲ್ಲೂ ಹೆಸರು ಗಳಾಗಲೀ ಗುರುತುಗಳಾಗಲೀ ಇರಕೂಡದು. ಪ್ರತ್ಯೇಕ ಕಾಗದದಲ್ಲಿ ಹೆಸರು ವಿಳಾಸಗಳನ್ನು ಕಳುಹಿಸಬೇಕು. ಹೆಚ್ಚಿನ ವಿವರ ಬೇಕಾಗಿದ್ದಲ್ಲಿ ಕೆಳಗಿನ ವಿಳಾಸಕ್ಕೆ ಬರೆಯಬಹುದು.

ಗೌರಮ್ಮ ಸ್ಮಾರಕ ಸಮಿತಿ
C/o ಶ್ರೀ ಕಾವೇರಿ ಪ್ರಕಟಣಾಲಯ,
೫-೧-೧೯೫೦. ಮಡಿಕೇರಿ.

ಮಾರಾಟಕ್ಕಿದೆ.

ಬೇಟೋಳಿ ಗ್ರಾಮದಲ್ಲಿ ವೀರಾಜಪೇಟೆ ಮುನ್ಸಿಪಾಲಿಟಿಯಿಂದ ಎರಡು ಮೈಲು ದೂರದಲ್ಲಿ ೩೨ ಎಕರು ರಿಡೀಮ್ಡ್ ಜಾಡ್ಯ, ಅದರ ಪೈಕಿ ೨ ಎಕರು ರೊಬಸ್ಟಾ ಕಾಫಿ ಮತ್ತು ಕಿತ್ತಳೆ ೩ ಎಕರು ಕಿತ್ತಳೆ ಎರಡೂ ಫಸಲಿಗೆ ಬಂದಿದೆ. ೬೦ ಸೆಂಟು ಮಕ್ಕಿ ನೀರಾವರಿ ಗದ್ದೆ ಮಾಡಲು ಲಾಯಕ್ಕಾಗಿದೆ. ಖಾಯಿಸ್ದಾರರು ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬಹುದು ಯಾ ಖುದ್ದಾಗಿ ಪ್ರಸ್ತಾಪಿಸಬಹುದು. ೧೫೦೦ ರೂಪಾಯಿ ಬೆಲೆಯ ಮರಗಳೂ ಇವೆ.

ಪಿ. ಪಿ. ಮೊಣ್ಣಪ್ಪ,
3-1. ತಾಲೂಕು ರಸ್ತೆ,
ವೀರಾಜಪೇಟೆ.

ದಿ ಟ್ರಾಪಿಕಲ್

ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

ಮೇನೇಜಿಂಗ್ ಡೈರೆಕ್ಟರ್.— ಲಾಲ ಶಂಕರ್ ಲಾಲ್
ಮುಖ್ಯ ಕಚೇರಿ:— ಹೊಸ ಡೆಲ್ಲಿ
ಸ್ಥಾಪಿಸಿದ ಡೈರೆಕ್ಟರರು

ಪಂಡಿತ ಮೋತಿಲಾಲ್ ನಹರು	ಎಸ್ ಶ್ರೀನಿವಾಸ ಅಯ್ಯಂಗಾರ್
ಹಕೀಮ್ ಅಜಮಲಖಾನ್	ಡಾ॥ ಎಂ ಎ ಅನ್ಸಾರಿ

Transacts—Life, Fire, Motor and Marine

ಯಂ ಎಂ ಅಪ್ಪಣ್ಣ,	ಎಂ. ಎ ಪಿಳ್ಳೈಪ್ಪ,
ಏಜನ್ಸಿ ಸುಪರಿಂಟೆಂಡೆಂಟ್,	ಬ್ರಾಂಚ್ ಸಕ್ರೆಟರಿ,
ಮಡಿಕೇರಿ, ಕೊಡಗು.	ಪಂಪನಕಟ್ಟೆ, ಮಂಗಳೂರು.

ಮತ್ತೊಂದು ಉಜ್ವಲ ವರ್ಷ.

1948ನೇ ವರ್ಷದ ವಾರ್ಷಿಕ ವರದಿಯ ಪ್ರಾಮುಖ್ಯಾಂಶಗಳು

ಹೊಸ ಉದ್ಯಮ ರೂ	6,13,00,000	ಮೀರಿದೆ
ಚಾಲ್ತಿಯಲ್ಲಿರುವ ಒಟ್ಟು ಉದ್ಯಮ ರೂ. ...	27,73,00,000	,,
ಒಟ್ಟು ನಿಧಿ ರೂ.	8,30,00,000	,,
ಪಾಲಿಸಿದಾರರಿಗೆ ಕೊಟ್ಟ ಮೊತ್ತಗಳು	10,96,00,000	,,

1,28,000 ಕ್ಕೆ ಮೀರಿದ ತೃಪ್ತಿ ಪಡೆದ ಪಾಲಿಸಿದಾರರು

ಶಕ್ತಿ ಸೇವೆ ಭದ್ರತೆ

ಎಂಪೈರ್ ಆಫ್ ಇಂಡಿಯಾ

ಲೈಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಸ್ಥಾಪನೆ,—1897
ರೋಶನ್‌ಲಾಲ್, ಜನರಲ್ ಮೇನೇಜರ್
ಪಿ ಡಿ ಗೋರವಾರ-ಬ್ರಾಂಚ್ ಮೇನೇಜರ್

ಪ್ರಧಾನ ಕಛೇರಿ	ಅಂಗ ಕಛೇರಿ
ಎಂಪೈರ್ ಹೌಸ್, ಹಾರ್ನ್‌ಬಿ	ಡಿಸ್ಟ್ರಿಕ್ಟ್ ಬೋರ್ಡ್ ಬಿಲ್ಡಿಂಗ್,
ರೋಡ್, ಫೋರ್ಟ್, ಬೊಂಬಾಯಿ	ಕೆಂಪೇಗೌಡರಸ್ತೆ, ಬೆಂಗಳೂರು

KIRLOSKAR BROTHERS LTD
23 SRI NARASIMHARAJA ROAD
BANGALORE 2

ವಿದ್ಯುಚ್ಛಕ್ತಿಯಿಲ್ಲದ ಹಳ್ಳಿಗಳಲ್ಲಿ ವ್ಯವಸಾಯಕ್ಕೆ ಅತ್ಯವಶ್ಯಕವಾದ

ಕಿರ್ಲೋಸ್ಕರ್ - ಪೆಟ್ಟರ್

ಐದು (5) B H P ಡೀಸೆಲ್ ಎಂಜಿನ್ ಪಂಪುಸೆಟ್ಟುಗಳು



ಸಿದ್ಧ ಸಂಗ್ರಹದಿಂದ ದೊರೆಯುತ್ತವೆ.

ಹೆಚ್ಚಿನ ವಿವರಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ:—

ಕಿರ್ಲೋಸ್ಕರ್ ಬಂಧುಗಳು, ಲಿಮಿಟೆಡ್,
23, ಶ್ರೀ ನರಸಿಂಹ ರಾಜರಸ್ತೆ,
4-1 ಬೆಂಗಳೂರು ೨

ಆಧುನಿಕ ರಷ್ಯದ ಶಿಕ್ಷಣ ಕ್ರಮಗಳು.

ಲೇ:- ಶ್ರೀ ಕೆ. ಬಿ. ಐಯ್ಯಪ್ಪ, ಬಿ. ಎ., ಬಿ. ಟಿ., ನಾಪೋಕ್ಲು.

ಪೂರ್ವಾರ್ಧ ಗೋಳದಲ್ಲಿ ಪ್ರಚಂಡ ಪ್ರಭಲತೆಯನ್ನು ಪಡೆದು ಬಾಹ್ಯ ಪ್ರಪಂಚಕ್ಕೆ ಪ್ರಭಾವ ಬೀರುತ್ತಿರುವ ಸಮತಾವಾದಿ ರಷ್ಯವು ಇಡೀ ವಿಶ್ವವನ್ನೇ ತನ್ನಡಿಯಲ್ಲಿಟ್ಟುಕೊಳ್ಳುವ ಭಗೀರಥ ಪ್ರಯತ್ನ ಮಾಡುತ್ತಿರುವದು ಗಮನಾರ್ಹವಾದ ವಿಷಯವಾಗಿದೆ. ಸಮತಾವಾದವೇ ಪ್ರಪಂಚದ ಪ್ರಜೆಗಳ ಪ್ರಗತಿಗೆ ಶ್ರೇಷ್ಠ ಹಾದಿಯೆಂದೂ, ಸಕಲ ಕಷ್ಟಗಳನ್ನು ದೂರೀಕರಿಸುವ ಅತ್ಯುತ್ತಮ ಸಾಧನವೆಂದೂ ಘೋಷಿಸುತ್ತಿರುವ ರಷ್ಯದ ಸಿಂಹನಾದವು ಸರ್ವರಿಗೂ ಕೇಳಿಸುತ್ತಿದೆ. ಈ ರೀತಿ, ಇಂದು ರಷ್ಯವು ಅತೀ ಬಲಶಾಲಿ ರಾಷ್ಟ್ರವಾಗ ಬೇಕಾದರೆ, ಅವರ ವಿದ್ಯಾ ರೀತಿ ನೀತಿಗಳೇ ಮೂಲ ಕಾರಣವಾಗಿದೆ.

೧೯೧೭ರಲ್ಲಿ ನಡೆದ ಘೋರ ಕ್ರಾಂತಿಗೆ ಮುನ್ನ, ಅಜ್ಞಾನ ಹೀನಸ್ಥಿತಿ, ಈ ರಾಷ್ಟ್ರದಲ್ಲಿ ಅತ್ಯಧಿಕವಾಗಿತ್ತು. ಚಳವಳವು ಅಂತ್ಯಗೊಂಡು, ಪ್ರಜಾರಾಜ್ಯವು ಉದಯಿಸಿದ ಕೂಡಲೆ ಸಾರ್ವತ್ರಿಕ ಬಿಡ್ಡಾಯ ವಿದ್ಯಾಕ್ರಮವು ಆರಂಭಿಸಿತು. ಪ್ರಾಚೀನ ಕಲೆ, ಸಂಸ್ಕೃತಿ ಮತ್ತು ಸಾಹಿತ್ಯ ಜ್ಞಾನವನ್ನು ಸಾಮಾನ್ಯರಲ್ಲಿ ಪ್ರಚಾರ ಮಾಡುವ ಕಾರ್ಯಾರಂಭವಾಯಿತು. ಪುಟ್ಟಪುಟ್ಟ ವಿದ್ಯಾರ್ಥಿಗಳ ಗುಂಗಡಗಳನ್ನೇ ರಚಿಸಿ ಒಬ್ಬೊಬ್ಬ ಅಧ್ಯಾಪಕನ ಕೈಗೊಪ್ಪಿಸಲಾಯಿತು. ಇವರು ಇಷ್ಟ ಬಂದಾಗೆಲ್ಲಾ ವಿಷಯ ಸಂಗ್ರಹಣ ಸಮಾಲೋಚನೆ ನಡೆಸುತ್ತಿದ್ದರು. ನಿಶ್ಚಿತ ಸಮಯವಿತ್ತಿಲ್ಲ. ಇದರಿಂದ ಕಾರ್ಮಿಕರ ಮಕ್ಕಳಿಗೆ ತುಂಬಾ ತೊಂದರೆಯಾಗುತಿತ್ತು. ಈ ರೀತಿಯ ಅತಿಯಾದ ಸ್ವಾತಂತ್ರ್ಯದಿಂದ ಕಷ್ಟಗಳು ಅನೇಕ ಉತ್ಪನ್ನವಾಗುತಿತ್ತು. ಈ ಯೋಜಿತ ಪದ್ಧತಿಯು ಕಡಿಮೆಯಾಗುತಾ, ಬಂದು ಅಧ್ಯಾಪಕರ ಕೈಮೇಲಾಯಿತು.

ಅನಂತರ, ಪ್ರಥಮ ಪಂಚವಾರ್ಷಿಕ ಯೋಜನೆಯ ಮುಖೇನ, ಸಕಲ ಉದ್ಯೋಗಗಳಿಗೆ ಸಂಬಂಧಿಸಿದ ಶಿಕ್ಷಣವು ಬಿರುಸಾಗಿ ಆರಂಭಿಸಿತು. ಪ್ರತಿಯೊಬ್ಬ ವಿದ್ಯಾರ್ಥಿಯು ತನ್ನ ಉದ್ಯೋಗಕ್ಕೆ ಮೂಲಭೂತವಾದ, ಕಲಾಜ್ಞಾನವನ್ನು ಗುಡಿಮೆ ಮತ್ತು ಸಮಯದ ಬೆಲೆಯನ್ನು ಅರಿಯತಕ್ಕದ್ದು. ಒಂದು ರಾಷ್ಟ್ರವನ್ನು ಉತ್ಪಾದನೆಯಲ್ಲಿ ಸ್ವಾವಲಂಬಿಯಾಗಿ ಮಾಡಬೇಕಾದರೆ, ಉದ್ಯೋಗ ಜ್ಞಾನ ಮತ್ತು ಸಾರ್ವತ್ರಿಕ ಶಿಕ್ಷಣದಿಂದಲೇ ಸಾಧ್ಯ. ಪುಸ್ತಕ ಜ್ಞಾನಕ್ಕಿಂತ ಅನುಭವ ಜ್ಞಾನವೇ ಪ್ರಧಾನ. ಈ ರೀತಿಯ ಉತ್ತಮ ನೀತಿಯಿಂದ, ವಿದ್ಯಾರ್ಥಿಯಲ್ಲಿ ಆತ್ಮವಿಶ್ವಾಸ, ಶರೀರ ಶ್ರಮದ ಹಿರಿಮೆ, ಕಾರ್ಯದ ಮಹತ್ವ, ಮನೋವಿಕಾಸ ಮತ್ತು ರಾಷ್ಟ್ರೀಯ ಶೀಲ ಉಂಟಾಗುವುದು. ಅಸತ್ಯ, ಐಶ್ವರ್ಯ ಅಹಂಕಾರ ಮತ್ತು ಅತಿಕ್ರಮಣಗಳಲ್ಲಿಯೇ ಆನಂದಿಸುವ ಆಸುರೀ ಪ್ರವೃತ್ತಿಯ ಪ್ರಜೆಗಳ ಬದಲು ಶಾಂತಿಪ್ರಿಯ ರಾಷ್ಟ್ರಪ್ರೇಮಿಗಳ ಸಂಖ್ಯೆ ಅಧಿಕವಾಗಬೇಕೆಂಬುದೇ ಈ ನೀತಿಯ ಮೂಲಲಕ್ಷ್ಯವು. ಕೃಷಿ ಮತ್ತು ಔದ್ಯೋಗಿಕ ಉತ್ಪನ್ನಗಳನ್ನೊಳಗೊಂಡ ಕಾರ್ಯಶಾಲೆಗಳು ಸ್ಥಾಪನೆಯಾದವು. ವಿದ್ಯಾರ್ಥಿಗಳು, ಮರದ, ಲೋಹದ, ಮತ್ತು ಮಣ್ಣಿನ ಸಾಮಾನುಗಳನ್ನು ಮಾಡುವದನ್ನು ಇತರ ಶಿಕ್ಷಣ ಸಾಹಿತ್ಯ ಅಭ್ಯಾಸದೊಡನೆ ಕಲಿಯಬೇಕು. ಕೈಗಾರಿಕೆ ವಸ್ತುಗಳ ತಯಾರಿಕೆಯಲ್ಲಿ ಸಂಪೂರ್ಣ ನೈಪುಣ್ಯತೆಯನ್ನು ಪಡೆಯದಿದ್ದರೆ ಆತನು ಮೇಲಿನ ತರಗತಿಗೆ ತೇರ್ಗಡೆಯಾಗಲಾರನು.

ಸದ್ಗುಣಗಳಾದ, ಪ್ರೇಮ, ಸತ್ಯಸಂಧತೆ, ತ್ಯಾಗಶಕ್ತಿ ಮತ್ತು ನವ ಭಾವನೆಗಳು ಮನುಷ್ಯನ ಶಾಸ್ತ್ರೀಯ ಶಿಕ್ಷಣದ ಮೂಲ [illegible] ವಸ್ತು ಜ್ಞಾನವನ್ನು ಕೊಟ್ಟರೆ, ಮಕ್ಕಳಿಗೆ, ತಮ್ಮ ವ್ಯಕ್ತಿಗಳಲ್ಲಿ ಅಭಿರುಚಿಯುಂಟಾಗಿ ಮನೋರಚನೆಯು ವಿಶಾಲವಾಗುವುದು. ಶಾಸ್ತ್ರೀಯ ಯಾಂತ್ರಿಕ ವಿದ್ಯೆಯನ್ನು ಕೊಟ್ಟು, ಸಾಮ್ಯವಾದ ತತ್ವವನ್ನನುಸರಿಸಿ, ಶ್ರಮಜೀವಿ ಬೌದ್ಧಿಕಜೀವಿ ವರ್ಗವನ್ನು ನಿರ್ಮೂಲ ಮಾಡಿ, ವರ್ಗರಹಿತ ಮಾನವ ಸಮಾಜದ ರಚನೆಯೇ ರಷ್ಯದ ಶಿಕ್ಷಣ ಧ್ಯೇಯವಾಗಿದೆ. ವಿದ್ಯಾರ್ಥಿಯೊಬ್ಬನು ಶಾಲೆಬಿಟ್ಟು ಹೋಗುವಷ್ಟರಲ್ಲಿ ತನ್ನ ವಿವಿಧ ಬಗೆಯ ಶ್ರಮಗಳ ಅನುಭವಗಳನ್ನು, ಲೋಕದ ವಸ್ತುಸ್ಥಿತಿಯಲ್ಲಿ ಸ್ವತಂತ್ರ ನಿರ್ಣಯಿಸುವ ಮಹಾಶಕ್ತಿ ಆತನಲ್ಲಿ ಸಂಪೂರ್ಣ ಇರಬೇಕು.

ಆದರೆ ಇತ್ತೀಚೆಗೆ ರಷ್ಯದಲ್ಲಿ ಶಿಕ್ಷಣ ಕ್ರಮವು ವಿಪರೀತ ಕೇಂದ್ರೀಕೃತವಾಗಿ, ಮಾತಾಪಿತೃಗಳಿಗೆ ತಮ್ಮ ಮಕ್ಕಳ ಮೇಲೆ ಹತೋಟಿಯೇ ಕಡಿಮೆಯಾಗಿದೆ. ಚರಿತ್ರೆ, ಭೂಶಾಸ್ತ್ರ, ಮತ್ತು ಯಾವುದಾದರೊಂದು ವಿಶೇಷ ಭಾಷೆ ಕಲಿಯಲೇ ಬೇಕು. ಸಾಮ್ಯವಾದೀ ರಾಜಕೀಯ ಶಿಕ್ಷಣಗಳಲ್ಲಿ ಪ್ರತಿಯೊಬ್ಬನು ಬಿಡ್ಡಾಯವಾಗಿ ತರಬೇತು ಆಗಬೇಕು. ರೈಲ್ವೆಗಳಲ್ಲಿ, ಗಣಿಕೆಲಸಗಳಲ್ಲಿ, ರಾಸಾಯನಿಕ ಪಾಠಶಾಲೆಗಳಲ್ಲಿ ವಿದ್ಯಾರ್ಥಿಗಳು ಎರಡೆರಡು ವರ್ಷ ಬಿಡ್ಡಾಯವಾಗಿ ಕೆಲಸಮಾಡಬೇಕೆಂಬ ನಿರ್ಬಂಧವಿದೆ. ಈ ರೀತಿ ಪುಸ್ತಕೀ ಜ್ಞಾನದೊಡನೆ, ಕಾರ್ಖಾನೆಗಳಲ್ಲಿ ದುಡಿಯುವುದರಿಂದ ರಾಷ್ಟ್ರಕ್ಕೂ ಮತ್ತು ವ್ಯಕ್ತಿಗಳಿಗೂ ತುಂಬಾ ಪ್ರಯೋಜನಗಳಿವೆ.

ಲೋಕದ ಅನೇಕ ರಾಷ್ಟ್ರಗಳಲ್ಲಿರುವಂತೆ ಶಿಶುವಿಹಾರಗಳು, ನರ್ಸರಿ ವಿದ್ಯಾನಿಲಯಗಳು, ಪ್ರಾಥಮಿಕ, ಮಾಧ್ಯಮಿಕ ಮತ್ತು ಪ್ರೌಢ ಶಾಲೆಗಳು ರಷ್ಯದಲ್ಲಿವೆ. ಸಮತಾವಾದ ಸಮಾಜವನ್ನು ಸಂಘಟಿಸಬಲ್ಲ ತತ್ವ ಸ್ವರೂಪವೇ ಅಲ್ಲಿರುವ ಅನೇಕ ಶಿಕ್ಷಣಾಲಯಗಳ ಗುರಿ. ರಾಷ್ಟ್ರದ ಆರ್ಥಿಕ ಭದ್ರತೆಯ [illegible], ಕೌಶಲ್ಯ, ವ್ಯಕ್ತಿತ್ವದ ಸಂಪೂರ್ಣ ವಿಕಾಸ, ದೈಹಿಕ ಮತ್ತು ಮನೋಸ್ಥೈರ್ಯ, ಶಿಸ್ತು ಮತ್ತು ಸಮಯ ಪಾಲನೆ, ಆತ್ಮಸಂಯಮ—ಈ ರೀತಿಯ ಮಾನವ ಗುಣ ವಿಶೇಷಗಳನ್ನು ಬಲಪಡಿಸುವುದು ಅವುಗಳದೊಂದು ಶ್ರೇಷ್ಠ ಧ್ಯೇಯ.

ವಿದ್ಯೋನ್ನತಿಯ ರೂಪರೇಖೆಗಳು

ಮಾತಾಪಿತೃಗಳಿಂದಲೂ, ರಾಷ್ಟ್ರದ ಆರೋಗ್ಯ ಇಲಾಖೆಗಳಿಂದಲೂ ನಡೆಸಲ್ಪಡುವ ಶಿಶುವಿಹಾರ ಹಾಗೂ ನರ್ಸರಿ ಶಾಲೆಗಳಿಗೆ ಮೊಟ್ಟಮೊದಲು ಎಳೆ ಶಿಶುಗಳನ್ನು ಕಳುಹಿಸುತ್ತಾರೆ. ಈ ರೀತಿಯ ವಿಹಾರಗಳು ರಷ್ಯದ ಪ್ರತಿಯೊಂದು ಉದ್ಯಮ ಕ್ಷೇತ್ರದಲ್ಲಿ ಇವೆ. ಅವಯವಗಳ ಉಪಯೋಗ, ಸರಳ ಗಾಯನ, ನೃತ್ಯ, ಬಣ್ಣಗಳ ಅರಿವು, ಓದುವಿಕೆ ಮತ್ತು ಹಲವು ಸುಲಭ ಹಾಗೂ ಅತ್ಯಗತ್ಯ ಮನೆಸಾಮಾನುಗಳ ಉಪಯೋಗ ಇವುಗಳನ್ನು ಪ್ರಥಮತಃ ಕಲಿಸುವರು. ಅನಂತರ ಎಂಟು ವಯಸ್ಸು ತುಂಬುತ್ತಲೇ, ಬಿಡ್ಡಾಯ ಶಿಕ್ಷಣವನ್ನು ಆರಂಭಿಸಿ, ಹದಿನೆಂಟು ವಯಸ್ಸಿನ ವರೆಗೆ ಎಡೆಬಿಡದೆ ಮುಂದುವರಿಯುತ್ತದೆ. ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳಲ್ಲಿ ಧರ್ಮಾರ್ಥ ಬಿಡ್ಡಾಯ ಶಿಕ್ಷಣವು ಕೊಡಲ್ಪಡುವುದು, ರಷ್ಯ ಹಾಗೂ ಪ್ರಾಂತೀಯ ಭಾಷೆ, ಗಣಿತ, ಸಂಗೀತ, ಚರಿತ್ರೆ, ಭೂವಿವರಣೆ, ವಿಜ್ಞಾನ ಶಾಸ್ತ್ರ, ಮೊದಲಾದವುಗಳನ್ನು ವಿದ್ಯಾರ್ಥಿಗಳು ಮನನ ಮಾಡುತ್ತಾರೆ. ಮಾಧ್ಯಮಿಕ ವಿದ್ಯಾರ್ಜನೆಯಲ್ಲಿ ಪ್ರಾಂತ ಭಾಷೆಯೊಂದನ್ನು ಬಲತ್ಕಾರವಾಗಿ ಕಲಿಯಲೇ ಬೇಕು. ಹೈಸ್ಕೂಲಿನಲ್ಲಿ ಧರ್ಮಾರ್ಥ ಶಿಕ್ಷಣವು ಮಾಯವಾಗುತ್ತದೆ. ವಿದ್ಯಾರ್ಥಿಗಳು ನಿಯಮಿತ ದರದ ಫೀಜು ಕೊಡಬೇಕು. ಇದರನಂತರ ಯೋಗ್ಯತೆ ಇರುವವರನ್ನು ಮಾತ್ರ ವಿಶ್ವವಿದ್ಯಾಲಕ್ಕೆ ಸರಕಾರವು ಸೇರಿಸುತ್ತದೆ. ಉಳಿದವರು ವೃತ್ತಿ ಶಾಲೆಗಳನ್ನಾಗಲೀ, ಕಲಾಮಂದಿರಗಳನ್ನಾಗಲೀ ಅಥವಾ ಕರ್ಮಶಾಲೆಗಳನ್ನಾಗಲೀ ಪ್ರವೇಶಿಸಿ ಉತ್ಪಾದನೆಯಲ್ಲಿ ತೊಡಗುತ್ತಾರೆ. ಉತ್ಪಾದನೆ ವೇಳೆಯಲ್ಲಿಯೂ ಸಹ, ಪುರನೀತಿ, ರಾಷ್ಟ್ರೀಯ ಶಿಕ್ಷಣ ಮತ್ತು ವೃತ್ತಿ ಜ್ಞಾನವನ್ನು ಕೊಡಲಾಗುವುದು. ಈ ರೀತಿಯ ಕ್ರಿಯಾತ್ಮಕ ಮತ್ತು ರಚನಾತ್ಮಕ ಶಿಕ್ಷಣ ಕ್ರಮಗಳು ನಿಜಕ್ಕೂ ನಮ್ಮಲ್ಲಿ ಅಭಿವೃದ್ಧಿಯಾಗಿ, ಸಂಪ್ರದಾಯವಾಗಿ ಬಳಕೆಯಲ್ಲಿರುವ ಬರೀ ಪುಸ್ತಕ ತಿಳುವಳಿಕೆಯು ಕಡಿಮೆಯಾಗಬೇಕು.

ಹಲವು ಪಾಠಗಳನ್ನು ಬಿಡ್ಡಾಯವಾಗಿ ಕಲಿಯಬೇಕಾದರೂ ಹೆಚ್ಚಿನ ಅಭಿರುಚಿ ಇರುವ ವಿಷಯದಲ್ಲಿ ಸಾಕಷ್ಟು ನಿಪುಣತೆಯನ್ನು ಸಂಪಾದಿಸಲು ಎಡೆಯಿದೆ. ಆಯಾ ವಿದ್ಯಾರ್ಥಿಯ ಯೋಗ್ಯತೆಗನುಸಾರವಾಗಿ ಮಾತ್ರ ರಾಷ್ಟ್ರವು ಅಧಿಕೃತ ಶಿಕ್ಷಣವನ್ನು ಕೊಡುವದು. ನಮ್ಮ ದೇಶದ ವಿದ್ಯಾಕ್ರಮದಲ್ಲಿ ಇದೊಂದು ದೊಡ್ಡ ನ್ಯೂನತೆಯಾಗಿದೆ. ಒಂದು ವರ್ಷದಲ್ಲಿ ಹಿಂದುಳಿದರೆ, ಅವನಿಗೆ ತೇರ್ಗಡೆಯಿಲ್ಲ, ಅಂದ ಮಾತ್ರಕ್ಕೆ ಆತನು ದಡ್ಡನೆಂದಲ್ಲ. ಕಾಲ ಮತ್ತು ಸಂದರ್ಭ ದೊರೆಯುವ ವೇಳೆಯಲ್ಲಿ ಆತನು ತನ್ನ ಜೀವನ ಸಂಗ್ರಾಮದಲ್ಲಿ ಇತರರಿಗಿಂತ ಯಶಸ್ವಿಯಾಗುವನು. ಇಂತಹ ನಿದರ್ಶನಗಳು ಅನೇಕ ಇವೆ. ತೇರ್ಗಡೆ ಹೊಂದದ ವಿದ್ಯಾರ್ಥಿಯು ಮನಸ್ಸಿನಲ್ಲಿ ಒಂದು ರೀತಿಯ ಜಿಗುಪ್ಸೆ ಮತ್ತು ತಾತ್ಸಾರ ಭಾವ, ಮನಸ್ಸಿನ ಅಂತರಾಳದಲ್ಲಿ ಬೇರೂರಿ, ತನ್ನ ಮಾನಸಿಕ ಅಂಧಕಾರವು ಹೆಚ್ಚಾಗಿ, ಭವ್ಯ ಜೀವನವನ್ನು ಹಾಳುಮಾಡಿಕೊಳ್ಳುವನು. ಆದ್ದರಿಂದ ಕೇವಲ ನಮ್ಮ ದೇಶದಲ್ಲಿ ನಡೆಯುತ್ತಿರುವ ಪರೀಕ್ಷಾ ಕ್ರಮಗಳಿಂದ, ವಿದ್ಯಾರ್ಥಿಯೊಬ್ಬನ ಯೋಗ್ಯತೆಯನ್ನು ಅಳೆಯಲು ಸಾಧ್ಯವೇ ಇಲ್ಲ.

ಸೆಕೆಂಡರಿ ಮತ್ತು ಕಾಲೇಜುಗಳಲ್ಲಿ ಬಲಾತ್ಕಾರ ಸೈನ್ಯ ತರಬೇತು ಕೊಡಲ್ಪಡುತ್ತದೆ. ಪ್ರಯೋಗ ಶಿಕ್ಷಣ ಮತ್ತು ರಾಷ್ಟ್ರೀಯ ಶಿಕ್ಷಣ ಈ ಅವಧಿಯಲ್ಲಿ ಅಧಿಕವಾಗಿ ಕಲಿಯುತ್ತಾರೆ. ಸಮಯದ ಬೆಲೆ, ಶಿಸ್ತಿನ ಜೀವನ, ಮತ್ತು ಸ್ವದೇಶ ಪ್ರೇಮ, ಇದರಿಂದ ಬಹುಬೇಗನೆ ಮಕ್ಕಳ ಮನಸ್ಸಿನಲ್ಲಿ ಉಳಿಯುತ್ತದೆ.

ರಷ್ಯದ ಸಮಾಜವೆಲ್ಲಾ ಮಜೂರ ಸಂಘಗಳ ಗುಂಪಾದ್ದರಿಂದ, ಪ್ರತಿ ಸಂಘವು ತಮ್ಮ ಮಕ್ಕಳಿಗೆ ವಿದ್ಯೆನೀಡಲು ಶಾಲೆಗಳಿಗೆ ಧನ ಸಹಾಯಮಾಡುತ್ತದೆ. ಇದರಿಂದ ಶಾಲೆಗಳಿಗೂ ಕಾರ್ಖಾನೆಗಳಿಗೂ ಅತೀ ನಿಕಟ ಸಂಬಂಧವಿದೆ. ಶಾಲೆಯ ಹೊರಗೆ ಹೆಚ್ಚಿನ ಶಿಕ್ಷಣ ಕೊಡಲಿಕ್ಕಾಗಿ, ಮಜೂರ ಸಂಸ್ಥೆಗಳು, ನಾಟಕ, ಚಲನಚಿತ್ರ ಪ್ರದರ್ಶನ ಮತ್ತು ವಾಚನಾಲಯಗಳ ಏರ್ಪಾಡು ಇದೆ. ಪೋಷಕರ ಮತ್ತು ಅಧ್ಯಾಪಕರ ವೃಂದದ ಸ್ನೇಹ, ಪರಸ್ಪರ ಸಹಾಯ ಸಹಾನುಭೂತಿಯನ್ನು ಬೆಳೆಸಲು, ವರ್ಷಂಪ್ರತಿ ಅನೇಕಾನೇಕ ಪೋಷಕರ ಸಭೆಗಳು ಜರಗುತವೆ. ಉಪಾಧ್ಯಾಯರು ಪೋಷಕರ ಮನೆಗೆ ಭೇಟಿ ಕೊಡುತ್ತಾರೆ ವಿದ್ಯಾರ್ಥಿ ಮತ್ತು ಅಧ್ಯಾಪಕರ ಕೂಟಗಳಿಗೆ, ಪೋಷಕರನ್ನು ಆಹ್ವಾನಿಸಿ ಶಾಲೆಗಳ ಪ್ರತಿಯೊಂದು ನಡವಳಿಕೆಯನ್ನು ತಿಳಿಸುವರು. ವಿದ್ಯಾರ್ಥಿಗಳ ಅಭಿವೃದ್ಧಿಯಲ್ಲಿ, ಅಧ್ಯಾಪಕರಷ್ಟೇ ಜವಾಬ್ದಾರಿ—ಬಹುಶಃ ಹೆಚ್ಚಾದ—ಪೋಷಕರಿಗಿದೆ. ಶಾಲೆಯ ಹೊರಗಿನ ವಾತಾವರಣದಲ್ಲಿ, ಅವರ ನೀತಿ ನಡತೆಗಳನ್ನು ತಿದ್ದಿ ಸನ್ಮಾರ್ಗದಲ್ಲಿ ಕೊಂಡೊಯ್ಯುವ ಹೊಣೆಗಾರಿಕೆ ಪೋಷಕರದು. ತಂದೆ ತಾಯಿಗಳು ಉಪಾಧ್ಯಾಯರೊಡನೆ ಸಹಕರಿಸಬೇಕು. ವಿದ್ಯಾರ್ಥಿಯೊಬ್ಬನಿಗೆ ಶಿಕ್ಷೆ ವಿಧಿಸಿದಲ್ಲಿ, ಅವನ ಪಕ್ಷ ವಹಿಸಿ ವಾದಾಡುವ ಪೋಷಕರಿಂದ ವಿದ್ಯಾರ್ಥಿಯ ಉನ್ನತಿಯಾಗಲಾರದು.

ಮಕ್ಕಳು ಮನೆಯಲ್ಲಿ ದೂರು ಹೇಳಿದರೆ, ಅದರ ನಿಜಾಂಶವನ್ನು ಅರಿತು ವರ್ತಿಸುವುದು ತಂದೆ ತಾಯಂದಿರ ಕರ್ತವ್ಯ; ಇದನ್ನು ಬಿಟ್ಟು ತಮ್ಮ ಮಕ್ಕಳ ನುಡಿಗಳೆಲ್ಲಾ ಅಕ್ಷರಶಃ ಸರಿಯೆಂದು ಭಾವಿಸಿ, ತಿಳಿಗೇಡಿತನದಿಂದ ವಿದ್ಯಾಲಯಗಳ ವ್ಯವಹಾರದಲ್ಲಿ ಬೆರೆಯುವುದು ಹಿತಕರವಲ್ಲ. ಮಕ್ಕಳ ಹಿತಚಿಂತನೆಯೇ ಅಧ್ಯಾಪಕರ ಕಠಿನ ನುಡಿಗಳಲ್ಲಿ ಅಡಗಿರುವುದೆಂಬುದು ಪೋಷಕರೆಲ್ಲರೂ ಮನಗಾಣಬೇಕು. ರಷ್ಯದಲ್ಲಿರುವ ಪೋಷಕರೆಲ್ಲರೂ, ತನು,ಮನ ಧನಗಳನ್ನು ಮತ್ತು ತಮ್ಮ ಅಸಾಮಾನ್ಯ ಸಹಕಾರವನ್ನು ಶಾಲೆಗಳಿಗೆ ಕೊಡುತ್ತಿರುವುದರಿಂದಲೇ, ಇಂದು ಅದು ಬಲಶಾಲಿ ರಾಷ್ಟ್ರವಾಗಿದೆ. ವಿದ್ಯಾರ್ಥಿಗಳೆಲ್ಲರೂ ಶಿಕ್ಷಣ ಸಂಪನ್ನರಾಗಿ, ಜೀವನದ ಸುಸೂತ್ರವಾದ ಹೊಂಬೆಳಕನ್ನು ಪ್ರೇಕ್ಷಿಸಬೇಕಾದರೆ ತಂದೆ ತಾಯಿಗಳು, ಶಾಲೆ

ರಘುಲಾಲ್ & ಕಂಪೆನಿ,

ಔಷಧ ವ್ಯಾಪಾರಿಗಳು, ಮೈಸೂರು.

ಕರ್ನಾಟಕದಲ್ಲೆಲ್ಲಾ ಚೆನ್ನಾಗಿ ಸಂಗ್ರಹಿತವಾದ ಮತ್ತು ವಿಶ್ವಾಸಪೂರಿತವಾದ ಔಷಧಿ ಅಂಗಡಿ

Also at :

೭೦ ಆರ್ಕಾಟ್ ಶ್ರೀನಿವಾಸಾಚಾರ್ ಬೀದಿ,

26–16 ಬೆಂಗಳೂರು ೨.

RAGHULAL & CO., CHEMISTS, MYSORE.

ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಕೋ. ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ. (1921ರಲ್ಲಿ ಸ್ಥಾಪಿತವಾಗಿದೆ.

ಅಧಿಕೃತ ಶೇರು ಭಂಡವಾಳ	ರೂ.	10,00,000.
ವಸೂಲಾದ ಶೇರು ಮೊಬಲಗು	ರೂ.	1,79,000.
ಕ್ಷೇಮನಿಧಿ	ರೂ.	55,000.
ಇತರ ನಿಧಿಗಳು	ರೂ.	28,000.

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನೂ ಕೈಕೊಳ್ಳಲಾಗುವುದು ಈ ಬ್ಯಾಂಕಿನಿಂದ ಮುಖ್ಯವಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ, ಬೆಳ್ಳಿ ನಗಗಳ ಈಡಿನ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ ಯಾ ಡ್ರಾಫ್ಟ್‌ಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರಿನಿಟಿ ಮತ್ತು ನಾರ್ದರ್ನ್ ಇನ್ಶೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಗೌ. ಕಾರ್ಯದರ್ಶಿ, ಕೆ. ೨. ಅಪ್ಪಯ್ಯ, M. L. C. ಪ್ರೆಸಿಡೆಂಟ್ ಮತ್ತು ಖಜಾಂಚಿ.

ಕೊಡಗು ಪ್ರಾಂತೀಕ ಸಹಕಾರಿ, ಮಾರ್ಕೆಟಿಂಗ್, ಫೆಡರೇಷನ್ ಲಿಮಿಟೆಡ್., ವೀರಾಜಪೇಟೆ.

ನಮ್ಮಲ್ಲಿ ಕೋವಿಗಳು, ತೋಟೆಗಳು ಮತ್ತು ಎಲ್ಲಾ ತರಹದ ವ್ಯವಸಾಯದ ಹತ್ಯಾರುಗಳು ದೊರೆಯುತ್ತವೆ.

1. 32 ಪಿಸ್ತೂಲುಗಳು (Pistols) ಕ್ರಯ ರೂ. 162 ರಿಂದ 245ರ ವರೆಗೆ.
2. 12ನೇ ನಂಬರಿನ ಒಂಟಿ ಹೊಳವಿನ ಕೋವಿ ಕ್ರಯ ರೂ. 320–0–0
3. 12ನೇ ನಂಬರಿನ ಜೋಡು ಹೊಳವಿನ ಕೋವಿ (Webley & Scott)
4. 12ನೇ ನಂಬರಿನ ಜೋಡು ಹೊಳವಿನ ಕೋವಿ (Spanish make)
5. 6 ಗಜದ (Hand loom) ಕೈಮಗ್ಗದ ಸೀರೆಗಳು ಕ್ರಯ ರೂ. 4-10-0.
6. .32 ಪಿಸ್ತೂಲು ಮತ್ತು ರಿವಾಲ್ವರುಗಳ ತೋಟೆಗಳೂ ಸಹ ದೊರೆಯುತ್ತವೆ.
7. ಕಾಫಿ ಮತ್ತು ಕಿತ್ತಳೆ ಗಿಡಗಳಿಗೆ ಸ್ಪ್ರೇ ಮಾಡುವ ಪಂಪುಗಳು (Spraing Pumps)
8. ೩"೪ ಮತ್ತು ೬" ಕಬ್ಬಿಣದ ಸಲಾಕೆಗಳು.

ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

(ಆವಶ್ಯವಿರುವ ಕೋವಿಗಳಿಗೂ, ತೋಟೆಗಳಿಗೂ ಜಿಲ್ಲಾ ಮೇಜಿಸ್ಟ್ರೇಟರಿಂದ ವಿಶೇಷ ಪರ್ಮಿಟು "Special permit" ಪಡೆದಿರ ಬೇಕು ತಿಳಿ ಯುವದು)

52–16 ಎಂ. ಎಸ್. ಸೋಮಯ್ಯ, ಗೌರವ ಕಾರ್ಯದರ್ಶಿ.

Edited, Printed and Published by P. I. Belliappa at 'Kodagu' Press, Mercara, for 'Kodagu' Ltd.

ಯು ಸಕಲ ಚಟುವಟಿಕೆಗಳಲ್ಲಿ, ಮನಸಾಕ್ಷಿಯಾದ ಯೋಗ್ಯ ಪ್ರದರ್ಶನ ನೀಡಬೇಕು.

ಅಧ್ಯಾಪಕರ ತರಬೇತು ಮತ್ತು ಬೋಧನಾ ಕ್ರಮಗಳು

ರಶ್ಯದ ಪ್ರತಿಯೊಬ್ಬ ಉಪಾಧ್ಯಾಯನು ಸಮಾಜವಾದವನ್ನು ಖಂಡಿತವಾಗಿ ಮನನಮಾಡಬೇಕು. ರಾಜಕೀಯ ಶಿಕ್ಷಣದಲ್ಲಿ ತಕ್ಕಷ್ಟು ಪ್ರವೀಣತೆಯನ್ನು ಪಡೆಯಲೇಬೇಕು. ರಾಜಕೀಯ ಜ್ಞಾನವನ್ನು ಕೊಡಲು ಮಾಸ್ಕೋನಗರದಲ್ಲಿ ಕೇಂದ್ರ ವಿದ್ಯಾಸಮಿತಿಯೊಂದಿದೆ. "ವಿಜ್ಞಾನ ನಿಷ್ಠ ಸಮತಾವಾದ" ವನ್ನು ಪ್ರತಿಯೊಬ್ಬ ಬಾಲಕನ ಮನಸ್ಸಿನಲ್ಲಿ ಚಿರಸ್ಥಾಯಿಯಾಗಿ ನೆಲೆಗೊಳ್ಳುವಂತೆ ಇವರು ಯುಕ್ತಿ ಸತಕ್ಕದ್ದು. ಪ್ರಾಥಮಿಕ ಮಾಧ್ಯಮಿಕ ಮತ್ತು ಪ್ರೌಢ ಶಾಲೆಗಳಿಗೆ ಪ್ರತ್ಯೇಕ ಪ್ರತ್ಯೇಕ ತರಬೇತನ್ನು ಕೊಡುವ ಶಿಕ್ಷಣಾಲಯಗಳಿವೆ. ಅವರೆ ಪ್ರತಿಯೊಬ್ಬ ಅಧ್ಯಾಪಕನು ಬಲಾತ್ಕಾರವಾಗಿ ರಶ್ಯನ್ ಭಾಷೆ, ಮತ್ತು ಕಮ್ಯೂನಿಸಮನ್ನು ಕಲಿಯಲೇಬೇಕು.

ಹಲವು ಶಾಲೆಗಳಲ್ಲಿ ಕೆಂಪು ಅಂಗಿ ಪಡೆಯ ಸೈನ್ಯಾಧಿಕಾರಿಗಳು, ಸರಕಾರದ ಕಟ್ಟಾಜ್ಞೆಯಂತೆ ರಾಜಕೀಯ ವಿದ್ಯೆಯನ್ನು ನಿರ್ಬಂಧ ಪ್ರತಿ ಉಪಾಧ್ಯಾಯರಿಗೆ ಬೋಧಿಸುವರು. ಲೆನಿನ್ ಮತ್ತು ಸ್ಟೇಲಿನ್‌ರ ವಾದಗಳನ್ನು ಕಂಠಪಾಠ ಮಾಡಬೇಕು. ಸಮತಾವಾದವು ರಶ್ಯದಲ್ಲಿ ಹೇಗೆ ಪ್ರಬಲಕ್ಕೆ ಬಂತೆಂಬುದೇ ಇದರ ತಿರುಳು. ಇದರ ಹೊರತು ಶ್ರೇಷ್ಠರಾಜಕೀಯ ನೀತಿ ಬೇರೆಲ್ಲಿಯೂ ಇಲ್ಲವೆಂದು ಅಧ್ಯಾಪಕರು, ಇಷ್ಟವಿಲ್ಲದಿದ್ದರೂ ಒಪ್ಪಲೇ ಬೇಕು. ಟೀಕಿಸಿದರೆ ಮರುಕ್ಷಣವೇ ಕಾರಾಗೃಹವಾಸ. ಕಡಿವಾಣ ಕಟ್ಟಿದ ಅಶ್ವದ ರೀತಿ ರಾಷ್ಟ್ರವು ವಿಧಿಸಿದ ರಾಜಕೀಯ ತತ್ತ್ವದ ಹಾದಿಯಲ್ಲೇ ತಾವು ನಡೆಯುತ್ತಿದ್ದು ತಮ್ಮ ವಿದ್ಯಾರ್ಥಿಗಳನ್ನು ನಡೆಸುತ್ತಿರಬೇಕು.

ಮಾರ್ಕ್ಸ್, ಲೆನಿನ್ ಮತ್ತು ಸ್ಟೇಲಿನ್ ಈ ತ್ರಿಮೂರ್ತಿಗಳು ಸಂವಿಧಾನಮಾಡಿದ ತತ್ತ್ವಗಳೇ, ಅತ್ಯುತ್ತಮವೆಂದೂ, ದೈವ ಪ್ರೇರಿತ ವಚನಗಳೆಂದೂ ಎಲ್ಲಾ ವಿದ್ಯಾರ್ಥಿಗಳು ತಿಳಿಯಬೇಕು. ಪುರಾಣಗಳ ಮಹಾಪುರುಷರ ಮತ್ತು ಅಗ್ರಗಣ್ಯ ರಾಜಕೀಯ ಪಟುಗಳ ದಿವ್ಯ ತತ್ತ್ವಗಳ ಸಾರವನ್ನಾಗಲೀ, ಸಾಹಿತ್ಯ ಮಹಿಮೆಯನ್ನಾಗಲೀ, ವಿಪರೀತವಾಗಿ ಕಲಿಯ ಕೂಡದು ದ್ವೇಷ ಪೂರಿತ ಕೋಮುವಾರು ತತ್ತ್ವವನ್ನು ಪ್ರತಿವಾದಿಸುತ್ತಾ, ಅಂತರಾಷ್ಟ್ರೀಯ ಶಾಂತಿಗೆ ಭಂಗ ತರುತ್ತಿದ್ದ, ಆ ಅತ್ಯುಗ್ರ ಸಮತಾವಾದವನ್ನು ಆಧ್ಯಾತ್ಮಿಕ ವಿಷಯ ಸಂಕಲನದಲ್ಲಿ ವಿಲೀನಿಕರಿಸಿ, ಅದಕ್ಕನುಸಾರವಾದ ಎಲ್ಲಾ ಪಠ್ಯಪುಸ್ತಕಗಳನ್ನು ರಚಿಸಿ "ರಶ್ಯವೇ ಇಡೀ ಪ್ರಪಂಚ,, ವೆಂಬ ಸಂಕೋಚ ಭಾವನೆ ಪ್ರತಿಯೊಬ್ಬ ವಿದ್ಯಾರ್ಥಿಯ ಮನಸ್ಸಿನಲ್ಲಿ ಸ್ಥಿರಗೊಳ್ಳುವಂತೆ ಪ್ರಯತ್ನಿಸುವುದು, ಅಲ್ಲಿನ ಶಿಕ್ಷಣದ ಮುಖ್ಯಾಂಗವಾಗಿದೆ. ವಿಜ್ಞಾನ, ಇತಿಹಾಸ, ಸಂಗೀತ, ರಾಜಕೀಯ ಜಟಿಲ ಭ್ರಮೆಯನ್ನು ವಿದ್ಯಾರ್ಥಿಗಳ ಮನಸ್ಸಿನಲ್ಲಿ ಮೂಳೆಯಿಸುತ್ತಾರೆ.

ಕೆಲವು ವಿಷಯಗಳನ್ನು ಪರಿಶೀಲಿಸುವಾಗ, ಬೋಧನಾ ಕ್ರಮವು ವಿಚಿತ್ರವಾಗಿ ಕಂಡುಬರುತಿದೆ. ಕೇಂದ್ರ ವಿದ್ಯಾಸಮಿತಿಯು ಅಧ್ಯಾಪಕರುಗಳಿಗೆಗಳನ್ನು ಪಾಠಗಳಿ ಪಾಠ ಪಟ್ಟಿಯನ್ನು ರಚಿಸಿ, ಪುಸ್ತಕಗಳನ್ನು, ಪ್ರಮಾಣಿಸಿ ಕೊಡುವ, ಹಲವು ಆಜ್ಞೆಯ ಸನ್ನಿವೇಶಗಳಿವೆ. ಪ್ರತಿಯೊಂದು ಗಂಟೆಯಲ್ಲಿ ಪಾಠಕೇಳುವಾಗ—ಗಣಿತವೇ ಆಗಲಿ, ವಿಜ್ಞಾನ ಶಾಸ್ತ್ರವೇ ಆಗಲಿ—ಮೊಟ್ಟಮೊದಲು ಸಮತಾವಾದ ಪೀಠಿಕೆಯೊಡನೆ ಪಾಠ ಆರಂಭವಾಗತಕ್ಕದೆಂಬ ಆಜ್ಞೆ ಇದೆ. ಈ ರಾಜಕೀಯ ಪೀಠಿಕೆ ಹೇಗೆ ಸಾಧ್ಯವೆಂಬ ಪ್ರಶ್ನೆ ಸಿದ್ದ ಒಬ್ಬ ಸೋವಿಯಟ್ ಅಧಿಕಾರಿಯು ಹೀಗೆಂದು ನುಡಿದಿದ್ದಾನೆ. "ಬಂಡವಾಳಶಾಹೀ ಸರಕಾರವು ವಿಜ್ಞಾನ ಪ್ರಗತಿಗೆ ತಡೆಯನ್ನುಂಟು ಮಾಡಿದೆ. ಅಮೇರಿಕ ಮತ್ತು ಇಂಗ್ಲೆಂಡು ದೇಶಗಳು ತಮ್ಮ ಕಾರ್ಮಿಕರನ್ನು ಅನರಕ್ಷರಸ್ಥರನ್ನಾಗಿಯೂ, ಬಲಹೀನರನ್ನಾಗಿಯೂ ಮಾಡಲಿಕ್ಕೆಂದು, ಅವರಿಗೆ ವಿದ್ಯೆಯ ಏರ್ಪಾಡು ಮಾಡಿರುವುದಿಲ್ಲ.,, ವಿಷಯ ಅರ್ಥಗರ್ಭಿತವಾಗಿರ ಬಹುದು. ಆದರೆ ಗಣಿತ ಪಾಠವನ್ನು ಸಹ ಈ ರೀತಿಯ ಪೀಠಿಕೆಯಲ್ಲಿ ಪ್ರಾರಂಭಿಸಿದರೆ, ಮಕ್ಕಳ ಮನಸ್ಸು ಯಾವ ಕಡೆಗೆ ಹೋಗಬೇಕೆ ರಾಜಕೀಯದ ಕಡೆ ಹಾರ ಪ್ರದು.

ಇದರಿಂದ ಪ ರಮಾರ್ಥಿಕ ಮನೋಭಾವ ಮಾತ್ರ, ತರುಣಾವಸ್ಥೆಯ ವಿದ್ಯಾರ್ಥಿಗಳಲ್ಲಿ ನೆಲೆನಿಲ್ಲುವುದಕ್ಕೆ ಸಾಧ್ಯತೆ ಅತೀ ಕಡಿಮೆ. ಧರ್ಮರಹಿತ, ವಿಜ್ಞಾನ ರೀತಿ ಸಾಕ್ಷ್ಯವಾಗ, ಈ ಪಟ್ಟಿಗೆ ಸ್ವಲ್ಪ ಕೆಡ ಕಂಡು ನನ್ನ ಧೃಢ ನಿಶ್ಚಯ. ಮನ್ಷ್ಯೈ ಸೈನಿಕ ಶಿಷ್ಯ ಚಾರಗಳನ್ನೂ ಯೋಚನಾ ಶಕ್ತಿಯನ್ನೂ, ಸ್ಫೂರ್ತಿ ಧಾಯಕ ಪನೋಧರ್ಮಾತ್ಮವನ್ನೂ, ನೈಜ್ಯತಿಕ ಅತ್ಮ ಸಂಯಮವನ್ನೂ, ಈ ಶಿಕ್ಷಣ ಕ್ರಮವು ಬೆಳೆಸುತ್ತಿದೆ. ತಮ್ಮದೆಲ್ಲಾ ಸುಲಕ್ಷಣ ಮತ್ತು ಜಗತ್ಪ್ರಸಿದ್ಧವೆಂಬ, ಇತರದೆಲ್ಲಾ ಅಸಹನೀಯವಾದದೆಂಬ ಬುದ್ಧಿಯನ್ನುಂಟು ಮಾಡುತ್ತದೆ. ಹೀಗೂ ರಾಷ್ಟ್ರಕಲ್ಯಾಣ ಪ್ರವೃತ್ತಿಗಳನ್ನು ಸಾಧಿಸುವುದಕ್ಕೋಸ್ಕರ, ವಿಶ್ವವಿದ್ಯಾಲಯವನ್ನು ಪ್ರವೇಶಿಸದವರು, ಉದ್ಯಮವನ್ನಾಗಲೀ ಕೈಗೊಳ್ಳುವರು. ಸ್ವದೇಶ ಪ್ರೇಮ, ಸ್ವರಾಷ್ಟ್ರಕ್ಕಾಗಿ ತ್ಯಾಗಬುದ್ಧಿ ಮತ್ತು ಕಠಿಣ ಕಾರ್ಯಸಹಿಷ್ಣುತೆ ವಿದ್ಯಾರ್ಥಿಗಳಲ್ಲಿ ಬೆಳೆಯುವುದು, ಆದರೆ ವಿಶಾಲವಾದ ಪ್ರಶಾಂತ ಮನೋವಿಕಾಸ ನಿರೀಕ್ಷಿಸಿದಷ್ಟು ಆಗಲಾರದು. ಆದರೆ ಅಲ್ಪ ಅವಧಿಯಲ್ಲಿ, ಇಡೀ ರಾಷ್ಟ್ರದ ಪ್ರಜೆಗಳನ್ನು ಅಕ್ಷರಸ್ಥರನ್ನಾಗಿ ಮಾಡಿದ ಈ ಶಿಕ್ಷಣ ಕ್ರಮವು ಗಮನಾರ್ಹವಾಗಿಯೂ ನಿರಕ್ಷರ ಕುಕ್ಷಿಗಳಿಂದ ತುಂಬಿತುಳುಕುತ್ತಿರುವ ರಾಷ್ಟ್ರಗಳಿಗೆ ಮಾರ್ಗದರ್ಶಕವಾಗಿ ಇದೆ.

ಅಧ್ಯಾಪಕ ವೃತ್ತಿಯಲ್ಲಿ ಅಭಿರುಚಿ, ಪ್ರೇಮ ಮತ್ತು ಆಸಕ್ತಿ ಇರುವವರನ್ನು ಮಾತ್ರ ಕೇಂದ್ರ ವಿದ್ಯಾ ಸಮಿತಿಯು ಆರಿಸುವುದು ಹೆಚ್ಚಿನ ಗೌರವ, ಮರ್ಯಾದೆ ಮತ್ತು ಅದರ ಉಪಾಧ್ಯಾಯರಿಗೆ ದೊರೆಯುವುದರಿಂದಲೂ, ಮತ್ತು ನಾನಾ ವಿಧದ ಸುಖಸೌಲಭ್ಯ ಮತ್ತು ಸಹಾಯ ಸಿಕ್ಕುವುದರಿಂದಲೂ ವಿದ್ಯಾವಂತ ಪ್ರಜೆಗಳು ಈ ವೃತ್ತಿಯನ್ನು ಕೈಗೊಳ್ಳಲು ಬಹಳ ಕುತೂಹಲವುಳ್ಳವರಾಗಿದ್ದಾರೆ. ರಶ್ಯದಲ್ಲಿ ಅಧ್ಯಾಪಕರಕೈ ದೇಶದ ಜನತೆಯನ್ನೂ ಸಹ ರೂಪಿಸುತ್ತಿದೆಯೆಂದರೆ ತಪ್ಪಾಗಲಿಕ್ಕಿಲ್ಲ.

Reg. No. M. 1550.
'KODAGU' MERCARA, (Coorg).

ಕೊಡಗು

ಸಂಪಾದಕರು—ಪಿ. ಬಿ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. 5-0-0.
ಸಂಪುಟ ೮] ತಾರೀಕು ೧೯-೧-೧೯೫೧ನೇ ಶುಕ್ರವಾರ [ಸಂಚಿಕೆ ೩೦

ಕಾಮನ್‌ವೆಲ್ತ್ ಸಮ್ಮೇಳನ.

ಕಾಮನ್‌ವೆಲ್ತ್ ರಾಷ್ಟ್ರಗಳ ಮುಖ್ಯ ಮಂತ್ರಿಗಳ ಕೂಟವು ಲಂಡನಿನಲ್ಲಿ ಕಳೆದ ವಾರ ನಡೆಯಿತು. ಈ ಸಮ್ಮೇಳನದಲ್ಲಿ ದೂರ ಪೂರ್ವದ ರಾಷ್ಟ್ರಗಳ ವಿಚಾರ ವಿನಿಮಯ ನಡೆಯಿತು. ಭಾರತದ ಮುಖ್ಯ ಮಂತ್ರಿ ಜವಾಹರರು ಹೋಗಿದ್ದರು. ಪಾಕಿಸ್ಥಾನದ ಪ್ರಧಾನ ಮಂತ್ರಿ ಲಿಯಾಖತ್ ಆಲೀಖಾನರು ಕಾಶ್ಮೀರ ಸಮಸ್ಯೆಯನ್ನು ಈ ಸಮ್ಮೇಳನದಲ್ಲಿ ಚರ್ಚಿಸಬೇಕೆಂದೂ ಅದು ಆಗದಿಲ್ಲದಿದ್ದರೆ ತಾನು ಸಮ್ಮೇಳನಕ್ಕೆ ಬರುವುದರಿಂದ ಪ್ರಯೋಜನವಿಲ್ಲವೆಂದೂ ಮೊದಲು ತಿಳಿಸಿದ್ದನು. ಆದರೆ ಕಾಶ್ಮೀರ ಸಮಸ್ಯೆಯು ಸಂಯುಕ್ತ ರಾಷ್ಟ್ರ ಸಂಘದ ಮುಂದಿದ್ದು ಅವರು ಆ ಬಗ್ಗೆ ವಿಚಾರಿಸುತ್ತಿರುವಾಗ ಕಾಮನ್‌ವೆಲ್ತ್ ಸಮ್ಮೇಳನದಲ್ಲಿ ಅದನ್ನು ಪರಿಶೀಲಿಸುವುದು ಸರಿಯಿಲ್ಲವೆಂದೂ ಹಾಗೆ ಅನಧಿಕೃತವಾಗಿ ಆ ವಿಚಾರ ಮಾತಾಡಲು ಅಭ್ಯಂತರವಿಲ್ಲವೆಂದೂ ಹೇಗೂ ಲಿಯಾಖತರು ಬಂದೇ ತೀರಬೇಕೆಂದೂ ಬ್ರಿಟಿಷ ಪ್ರಧಾನರು ಆಗ್ರಹ ಪಡಿಸಿದ್ದರು. ಕಡೆಯ ವರೆಗೂ ಲಿಯಾಖತರ ಹೋಗುವ ನಿರ್ಧಾರ [illegible]. ನಂತರ ಮನಸ್ಸು ಮಾಡಿ ಲಂಡನಿಗೆ ಹೋಗಿ ಪ್ರಥಮ ದಿನಗಳ ಮಾತುಕತೆಯಲ್ಲಿಲ್ಲದಿದ್ದರೂ ಸಮ್ಮೇಳನದಲ್ಲಿ ಭಾಗವಹಿಸಿದರು.

ವರ್ಷಾರಂಭದಲ್ಲಿಯೇ ಜಾಗತಿಕ ಬಿಕ್ಕಟ್ಟಿನ [illegible] ಕಾಮನ್‌ವೆಲ್ತ್ ಮುಖ್ಯ ಮಂತ್ರಿಗಳ ಸಮ್ಮೇಳನ ಸೇರಿದ್ದುದು. ಆದರೆ ಇದರಿಂದ ಬಿಕ್ಕಟ್ಟಿನ ಪರಿಹಾರವೇನೂ ಹೊರಬಿದ್ದಂತೆ ತೋರುವುದಿಲ್ಲ. ದಿನ ಕಳೆದಂತೆ ಇಲ್ಲಿಯೂ ಶಿಥಿಲತೆ ತೋರಿ ಬರುತ್ತಿದೆ. ಅಂತರ್ರಾಷ್ಟ್ರೀಯ ರಂಗದಲ್ಲಿಯಂತೆಯೇ ಇಲ್ಲಿಯೂ ಕಥೆ ನಡೆಯುತ್ತಿದೆ. ಅಲ್ಲಿ ರಷ್ಯಾ ತನ್ನ [illegible] ಯಂತೆ ಉಳಿದವರು ನಡೆಯಬೇಕೆಂದು ಪ್ರಯತ್ನಿಸುತ್ತಿದ್ದರೆ ಅಮೇರಿಕಾವು ತನ್ನ ನಿಲುವೆಯನ್ನು [illegible] ಬಲಿಸದ [illegible] ಗರ್ಜಿಸುತ್ತಿದೆ. ಇಲ್ಲಿ ಲಿಯಾಖತರು ತಮ್ಮ ಸಮಸ್ಯೆಯ ಉಳಿದವರು [illegible] ಎನ್ನುವಂತಿದೆ. ಹೇಗೂ ಕಾಮನ್‌ವೆಲ್ತ್ ಸಮ್ಮೇಳನವು ಕೂಡಿತು. ಚರ್ಚೆ ನಡೆಯಿತು. [illegible] ಕಾಮನ್‌ವೆಲ್ತ್ ರಾಷ್ಟ್ರಗಳ ಪ್ರತಿನಿಧಿಗಳು ಪೂರ್ವ ಏಷ್ಯದ ಸಮಸ್ಯೆ ಬಗ್ಗೆ ನಿಶ್ಚಲಿತವನ್ನೂ, ಚೈನಾದ ಮಾಘ್ರೋದವನ್ನೂ ಕಂಡು ಮಾತುಕತೆ ನಡೆಸುವ ಅಭಿಪ್ರಾಯ ಪಟ್ಟಿದ್ದಾರೆ. ಈ ಭಯಂಕರ ಪರಿಸ್ಥಿತಿಯ ದಿನಗಳಲ್ಲಿ ಇವರ ಪ್ರಯತ್ನವು ಶಾಂತಿಯ ಮಾರ್ಗವನ್ನು ತೋರಿಸೀತೇ ನೋಡಬೇಕು.

ಜಗತ್ತಿನಲ್ಲಿ ನೆಹರೂರವರ ಸ್ಥಾನ

ಇಂದಿನ ಅಂತರ್ರಾಷ್ಟ್ರೀಯ ರಂಗದಲ್ಲಿ ಜವಾಹರರ ವ್ಯಕ್ತಿತ್ವವು ಸ್ಪಷ್ಟವಾಗಿದೆ. ಹಿಂದೂಸ್ಥಾನ ಅವರ ಅಂತರ್ರಾಷ್ಟ್ರೀಯ ನೀತಿಯ ಬಗ್ಗೆ ಅಮೇರಿಕಾವು, ರಷ್ಯಾವೂ ಸಂಶಯ ಪಟ್ಟುಕೊಂಡಿದ್ದವು. ಆದರೆ ಇತ್ತೀಚೆಗೆ ಹಿಂದೂದೇಶದ ನಿಲುವೆಯು ಅರಿವು ಜಗತ್ತಿಗಾಗ ತೊಡಗಿದೆ. ಯುದ್ಧ ಕತ್ತಲೆ ಕವಿದ ಜಗತ್ತಿನ ಬಾಂದಳದಲ್ಲಿ ನೆಹರೂರವರು ಬೆಳಕಿನ ಕಿರಣದಂತೆ ಎಂದು ಜನ ಕಣ್ಣು ತೆರೆಯತೊಡಗಿದ್ದಾರೆ. ಚೈನಾದ ಬಗ್ಗೆ ಹಿಂದೂದೇಶವು ತಳೆದ ನೀತಿಯು [illegible] ಬಹು ರಾಷ್ಟ್ರಗಳಿಂದ ಮಾನ್ಯತೆ ಪಡೆದಿದೆ. ಬ್ರಿಟನೂ ಕೂಡ ಚೈನಾದ ಬಗ್ಗೆ ಭಾರತವು ತಳೆದ ನೀತಿಯನ್ನೇ ಒಪ್ಪಿದೆ. ನೆಹರೂರವರ ಪ್ರಯತ್ನವಲ್ಲ ಜಗತ್ತಿನ ಶಾಂತಿಗಾಗಿ ಎಂಬುದು ಜಗಜ್ಜನಿತವಾಗಿದೆ.

ಕೊರಿಯಾ ಮತ್ತು ಚೈನಾ.

ಕೊರಿಯಾ ಸಮಸ್ಯೆಯು ಬಗೆಹರಿಯುವಂತೆ ತೋರುವುದಿಲ್ಲ. ಉತ್ತರ ಕೊರಿಯನರು ಚೈನೀಯರ ಬೆಂಬಲ ಪಡೆದು ಪ್ರತಿಗತಿಯಿಂದ ಮುಂದರಿಯುತ್ತಿರುವರು. ಕ್ರಮೇಣ ಒಂದೊಂದಾಗಿ ಪಟ್ಟಣಗಳನ್ನು ಆಕ್ರಮಿಸಿ ಟೋಕಿಯೋ ವರೆಗೆ ಬಂದಿರುವರು. ಸಂಯುಕ್ತ ರಾಷ್ಟ್ರ ಸಂಘದ ದಳಗಳು ಪ್ರತಿಭಟಿಸುತ್ತಿದ್ದರೂ ಹೆಚ್ಚಿನ ತಡೆಯಿಲ್ಲದ [illegible] ಬರುತ್ತಿರುವರು. ಕ್ರಮೇಣ ಸಂಯುಕ್ತ ರಾಷ್ಟ್ರ ಸಂಘದ ಸೇನೆಗಳು ಕೊರಿಯಾವನ್ನು ಸಂಪೂರ್ಣ ಬಿಡಬೇಕಾಗುವ ದಿನಗಳು ದೂರವಿರಲಾರವು. ಯುದ್ಧ ಪರಿಸ್ಥಿತಿ ಈ ರೀತಿ ಕ್ಷಿಪ್ರವಿರುವಾಗ ಸಂಯುಕ್ತ ರಾಷ್ಟ್ರ ಸಂಘವು ಚೀನೀ ಪ್ರತಿನಿಧಿಗಳನ್ನು ಕರೆದು ಮಾತುಕತೆ ನಡೆಸಿತು. ಭಾರತದ ಪ್ರತಿನಿಧಿ ಬಿ. ಎನ್. ರಾವ್‌ರವರು ಮಧ್ಯಸ್ಥಿಕೆ ವಹಿಸಿ ಬಹು ಪ್ರಯತ್ನಪಟ್ಟರು. ಆದರೆ ಅದರಿಂದ ಹೆಚ್ಚಿನದೇನೂ ಸಾಧಿಸಲ್ಪಡಲಿಲ್ಲ. ಚೈನೀ ಪ್ರತಿನಿಧಿಗಳು ಹಿಂತೆರಳಿದರು. ಕೊರಿಯಾದ ಸ್ಥಿತಿ ದಿನ ಕಳೆದಂತೆ ಚಿಂತಾಜನಕವಾಗುತ್ತಿದೆ. ಚೈನಾದ ಸುಸಜ್ಜಿತ ದಳಗಳು ಶೀಘ್ರದಿಂದ ಮುಂದರಿಯುತ್ತಿವೆ. ಸಂಯುಕ್ತ ರಾಷ್ಟ್ರ ಸಂಘದ ದಳಗಳು ಬಹಳ ಕಷ್ಟ ಸಂಖ್ಯೆಯಲ್ಲಿ ಇವೆ. ವಿಮಾನ ಪಡೆ ಸಹ ಕಷ್ಟ ಬಾಂಬು ಹಾಕಿದರೂ ಪ್ರಯೋಜನವಾಗುತ್ತಿಲ್ಲ.

ಕೊರಿಯಾದಿಂದ ಸಂಯುಕ್ತ ರಾಷ್ಟ್ರ ಸಂಘದ ಸೇನೆಗಳು ಓಡಿಸಲ್ಪಟ್ಟರೆ ಏನಾಗಬಹುದು? ಚೈನಾ [illegible] ವನ್ನು ಒಂದಾಗೂಡಿಸಿ ಬಲಯುತ ಪ್ರಜಾ ಜನಾಂಗದ ಸರಕಾರದ ಎಡೆ ಮಾಡಬಹುದು. ಅಷ್ಟರಿಂದ ಅದು ತನ್ನ ಕೆಲಸವನ್ನು ಮುಗಿಸಲಿಕ್ಕಿಲ್ಲ. ಮುಂದಿನ ಹೆಜ್ಜೆಯಾಗಿ ಫ್ರೆಂಚ್ ಇಂಡೋಚೀನ, ಮಲಯಾಗಳ ಮೇಲೆಯೂ ಬೀಳಬಹುದು. ಫಾರ್ಮೋಸಾ ದ್ವೀಪದ ಮೇಲೆ ಮೊದಲೇ ಕಣ್ಣಿರುವ ಚೀನಾವು (ಆ ನಡುವಿನ ಒಪ್ಪಂದದಂತೆ ಅದು ಚೀನಾಕ್ಕೆ ಸೇರಬೇಕಾದುದು) ಅದನ್ನು ಆಕ್ರಮಿಸಲು ಯತ್ನಿಸಬಹುದು. ಆದರೆ ಆ ದ್ವೀಪವನ್ನು ಅಮೇರಿಕಾವು ಕಾಪಾಡುವ ಕಾರಣ ನೇರವಾಗಿ ಚೈನಾವು ಅದರ ಮೇಲೆ ಸದ್ಯಕ್ಕೆ ಧಾಳಿ ಮಾಡಲಾರದು. ಈಗ ಇಂಡೋಚೀನಾ, ಮಲಯಾಗಳಲ್ಲಿ ಕಮ್ಯೂನಿಸ್ಟ್ ಧಾಳಿ ನಡೆದಿದೆ. ಮುಂದೆ ಬರ್ಮಾವೂ ಈ ಪಟ್ಟಿಯಲ್ಲಿ ಬಂದರೆ ಆಶ್ಚರ್ಯಪಡುವ ಅಗತ್ಯವಿಲ್ಲ. ಹೇಗೂ ನಿಧಾನವಾಗಿ ಮಾತ್ರ ಚೀನಾವು ಎದ್ದಿದೆ. ಜಗತ್ತಿನ [illegible] ರಕ್ತಯುಗಿರುವ ಅದರ ಚಲನವಲನಗಳನ್ನು ನಿರೀಕ್ಷಿಸುವುದು ಅಗತ್ಯವಾಗಿದೆ.

ಯೂರೋಪಿನ ಸ್ಥಿತಿ.

ಯೂರೋಪಿನ ಸ್ಥಿತಿಯೂ ಕೂಡ ಪೂರ್ವ ಏಷ್ಯದ ಕಥೆಯಂತೆಯೇ ಆಗಿದೆ. ರಷ್ಯಾವು ತನ್ನ ಪರವಿರುವ ಯೂರೋಪಿನ ಭಾಗಗಳಲ್ಲಿ ಅಪರಿಮಿತ ಸೇನೆಗಳನ್ನು ಸಂಗ್ರಹಿಸಿದೆಯೆಂಬ ವಾರ್ತೆ ಆಗಾಗ ಕೇಳಿಬರುತ್ತದೆ. ಇದು ಪಶ್ಚಿಮ ಯೂರೋಪಿನ ಧಾಳಿಗಾಗಿ ಎಂದು ಹೇಳಲ್ಪಡುತ್ತದೆ. ಹಾಗಾದರೆ ರಷ್ಯಾವು ಯುದ್ಧ ಬಯಸುವುದೇಕೆ? ಪಶ್ಚಿಮ ಯೂರೋಪಿನ ರಾಷ್ಟ್ರಗಳು ಒಟ್ಟಾಗಿ ಸಿದ್ಧತೆ ಮಾಡಿಕೊಳ್ಳತೊಡಗಿವೆ. ಅಮೇರಿಕಾದ ಜನರಲ್ ಐಸೆನ್‌ಹೋವರರನ್ನು ಸರ್ವಸೇನಾನಿಯನ್ನಾಗಿ ಆರಿಸಿ ಸಂಘಟನೆ ಮಾಡಿಕೊಳ್ಳುತ್ತಿವೆ. ಪಶ್ಚಿಮ ಜರ್ಮನಿಯಲ್ಲಿ ಜರ್ಮನ್ ಸೇನೆಯನ್ನು ತಯಾರಿಸುವ ವಿಚಾರಗಳಾಗುತ್ತಿವೆ. ಈ ರೀತಿ ಯೂರೋಪಿನಲ್ಲಿ ಯುದ್ಧ ಜ್ವರವು ಪುನಹ ಹೆಚ್ಚಿದೆ.

ಇಂಥಾ ಯುದ್ಧಾಸಕ್ತರಾಗಿಯೂ ಯುದ್ಧ ಜ್ವರ ಪೀಡಿತ ಜಗತ್ತಿನಲ್ಲಿ ನೆಹರೂರವರ ಎಚ್ಚರಿಕೆ ಕೇಳುತ್ತಿದೆ. ಲಂಡನಿನಲ್ಲಿ ಅವರು ಮಾತ್ರ ಯುದ್ಧದ ಸೊಲ್ಲು ಹೇಳತೊಡಗಿದ ಜನ ಯುದ್ಧ ಭೀತಿಯಿಂದ ನರಳುತ್ತಿದ್ದಾರೆ. ಯುದ್ಧದ ಮಾತನ್ನು ಬಿಡಬೇಕು. ಅದಷ್ಟು ಶಾಂತಿಯ ಸಂದೇಶ ಸಾರಬೇಕು ಎಂದು ಹೇಳಿದರು. ಆದರೆ ಬಾಯಲ್ಲಿ ಶಾಂತಿಯ ಮಾತನಾಡಿ ಯಾತ್ರೆ ಒಳಗೆ ಯುದ್ಧ ಸಿದ್ಧತೆ ನಡೆಸುವ ರಾಜಕಾರಣಿಗಳಿಂದ ತುಂಬಿದ ಈ ಜಗತ್ತಿನಲ್ಲಿ ಶಾಂತಿಯು ಎಷ್ಟು ಸಾಧ್ಯ? ಅದರಿಂದಲೇ ಜವಾಹರರ ಆ ಕರೆ ಭಾರತದ ಶಾಂತಿಯ ಕರೆ ಅರಣ್ಯ ರೋದನವಾಗಿದೆ.

ಮಂತ್ರಿ ಹುದ್ದೆಯಿಂದ ವಜಾ

ಟರ್ಕಿಯಲ್ಲಿ ಚಿಲಿ ದೇಶದ ರಾಯಭಾರಿಯಾಗಿ [illegible] ಮಂತ್ರಿಯಾಗಿರುವ ಸಿನಾರ್‌ನ್ಯೂ ಯಲ್ ಗ್ಯಾರ್ಟಿನ್‌ರವರು ಅನಧಿಕೃತವಾದ ಬಂಗಾರದ ವ್ಯಾಪಾರದಲ್ಲಿ ನಿರತರಾಗಿದ್ದರಿಂದ ಅವರನ್ನು ರಾಯಭಾರ ಹುದ್ದೆಯಿಂದ ವಜಾ ಮಾಡಲಾಗಿದೆ. ಪ್ರಪಂಚ ಸಂಸ್ಥೆಯ ಕೊರಿಯಾ ಪುನರ್ರಚನೆ ಸಮಿತಿಯಲ್ಲಿ ಗ್ಯಾರ್ಟಿನ್‌ರವರು ಸಹಾ ಒಬ್ಬ ಸದಸ್ಯರು.

ಈಜುವ ಕೊಳದಲ್ಲಿ ಗಾಂಧೀಜಿ ಚಿತ್ರಗಳು

ಮಹಾತ್ಮ ಗಾಂಧಿಯವರ [illegible] ದ ಚಿತ್ರಗಳನ್ನು ಬೊಂಬಾಯಿ ನಗರದ ದಾದರ ಶಿವಾಜಿ ಪಾರ್ಕಿನಲ್ಲಿ ಕಟ್ಟುತ್ತಿರುವ ಈಜುವ ಕೊಳದ ಸುಂದರವಾದ ಗೋಡೆಗಳಲ್ಲಿ ಚಿತ್ರಿಸಲಾಗುವುದು. ಈ ಚಿತ್ರಗಳ ರಚನೆಗೆ ೫ ಸಾವಿರ ರೂಪಾಯಿಗಳು ಖರ್ಚಾಗುವುವು. ಒರಿಸ್ಸಾ ವಿಶ್ವವಿದ್ಯಾಲಯದ ಶ್ರೀ ಎಸ್. ಎಸ್. ಬೇಂದ್ರೆಯವರು ಆ ಚಿತ್ರಗಳನ್ನು ರಚಿಸುವರು.

ಭಾರತದಲ್ಲಿ ಉಪಾಧ್ಯಾಯ ವೃತ್ತಿಯಲ್ಲಿರುವವರ ಶೋಚನೀಯ ಪರಿಸ್ಥಿತಿ

ಭಾರತದಲ್ಲಿ ಉಪಾಧ್ಯಾಯ ವೃತ್ತಿಗಳವರ ಶೋಚನೀಯ ಅವಸ್ಥೆಯನ್ನು ಭಾರತ ಸರಕಾರದ ವಿದ್ಯಾ ಖಾತೆಯ ಜತೆ ಕಾರ್ಯದರ್ಶಿಗಳಾದ ಪ್ರೊಫೆಸರ್ ಹುಮಾಯೂನ್ ಕಬೀರರವರು ಇತ್ತೀಚೆಗೆ ವಿವರಿಸಿದರು.

ಜೈಪುರದ ಒಬ್ಬ ಉಪಾಧ್ಯಾಯರು ತಾವು ಪಡುವ ಕಷ್ಟವನ್ನು ಸಹಿಸಲಾಗದೆ ತಾವು ಸಾಯುವಾಗ ಉಯಿಲಿನಲ್ಲಿ ತಮ್ಮ ಮುಂದಿನ ಕುಟುಂಬದ ಏಳು ಪೀಳಿಗೆಯ ವರೆಗೆ ಯಾರೂ ಉಪಾಧ್ಯಾಯ [illegible] ಯಬಾರದು ಎಂದು [illegible].

ವೈಮಾನಿಕನಿಲ್ಲದ ವಿಮಾನ ಬರಲಿದೆ.

ದಿನ [illegible] ಹೆಚ್ಚುತ್ತಿರುವ ವೇಗದಿಂದ ಹಾರುವ ವಿಮಾನಗಳನ್ನು ಕಂಡು ಹಿಡಿಯಲಾಗುತ್ತಿದ್ದು ಈ ವೇಗದ ವಿಮಾನಗಳಲ್ಲಿ ವೈಮಾನಿಕ [illegible] ಜರುಗು ಇರಬೇಕಾಗಿದೆ. ವೇಗದಿಂದ ಚಲಿಸುವ ವಿಮಾನಗಳ ವೈಮಾನಿಕರು ಕ್ಷಣ ತಪ್ಪನ್ನು ಮಾಡಿಬಿಟ್ಟರೆ ವಿಮಾನವೇ ನಾಶವಾಗುವುದು. ಆದುದರಿಂದ ಸುರಕ್ಷಿತವಾಗಿ ವಿಮಾನ ನಡೆಸುವ ಸಲುವಾಗಿ ಯಾಂತ್ರಿಕ ವೈಮಾನಿಕರನ್ನು ಶೀಘ್ರದಲ್ಲೇ ಏರ್ಪಡಿಸಲಾಗುವುದು. ನೆಲದ ಮೇಲೆ ನಿಂತು ಕೊಂಡು ರೇಡಿಯೋ ಶಕ್ತಿಯ ಮೂಲಕ ವಿಮಾನಗಳನ್ನು ಬೇಕಾದಂತೆ ಹಾರಾಡಿಸಬಹುದು.

ಶ್ರೀ ಟಿ. ಎನ್. ಗೋವಿಂದರಾಜು,
'ಕೊಡಗು' ಏಜೆಂಟರು,
ವೀರಾಜಪೇಟೆ.

ಹರಟೆ.

ಕಾಲೇಜು ಅನುಭವ.

ಲೇ:– 'ಗೌರೀತನಯ'

'ಕಲಿಯುಗದ ಮಹಿಮೆಯಿಂ ಕಾಣ ಬಂತೀಗ| ಜಲಜಾಕ್ಷ ಪೋಲ್ಗಿಯ ಶ್ರೀ ವೆಂಕಟೇಶ'........

ಒಂದು ಗಳಿಗೆ ಭಾವನಾಪೋಷ ಬಂದಿತ್ತು. ಹಾಡುತ್ತಾ ಸಾಗಿದೆ. ನೋಡಿ, ಆಗಲೇ ಇನ್ನೊಂದು ವಿಚಾರವು ಹೇಳಿಯಬೇಕೆ? ಅದೂ ಭಯಂಕರ ಪರೂರಷ್ಕರಗಳು! ಪರೀಕ್ಷೆ!

'ಪ್ರತ್ಯಕ್ಷ ಯಮನೇ ಬಂದರೂ ಪರೀಕ್ಷೆ ಬರಬಾರದು' ಇದು ಸಾಮಾನ್ಯ ವಿದ್ಯಾರ್ಥಿಗಳಿಗೆಲ್ಲಾ ಇರುವ ಭಯ. ಪ್ರಾಥ ಶಾಲೆಗಳಿಂದ ಸ ಲಭವಾಗಿ ಹುಟುಬರ ಹುದಾದರೂ ಕಲಾ ಶಾಲೆಗಳು ಅಗಾಧ ಜಲಪಾತಗಳು! ಅಲ್ಲಿ ಅಭ್ಯಾಸದ ದೋಣಿಯು ಮಂದಗಾಮಿ. ನಿಯೋಗಿದ್ದರೆ ಇಲ್ಲಿ ಉಗ್ರಗಾಮಿನಿ! ಮೊದಲ ಸಾರಿ ನಾನು ಕಂತಮಾರ್ಧ್ಯಮಿಕ (Intermediate) ತರಗತಿಗೆ ಕಾಲಿರಿಸಿದೆ. ಪರೀಕ್ಷೆಗಳು ಬರುತ್ತಾ ಹೋಗುತ್ತಾ ಇದ್ದುವು. ಈ ಕಷ್ಟದಿಂದಾಗಿ 'ಪರೀಕ್ಷೆ ದೇವಿ' ಎಂಬ ಚಿಕ್ಕ ಕವಿತೆಯನ್ನೂ ಬರೆಯುವಂತಾಯಿತ್ತು ನನ್ನ ಸ್ಥಿತಿ! ಸ್ಥಳ ಮತ್ತು ಕಾಲದ ಉಳಿತಗಾಗಿ ಅದರ ಭಾವಾರ್ಥವನ್ನೇ ಹೇಳುತ್ತೇನೆ:– 'ಪರೀಕ್ಷೆಯೆಂಬುದೊಂದು ಭೂತ; ಅದು ಕಾಗದ ಹರಳಿಗು 'ನೊಂದಿ'ಯೊಡನೆ, ಪ್ರಶ್ನೆಯು ಹುಟ್ಟಿಯೊಡನೆ ಪಕ್ಕಳ ತಲೆಯನ್ನೇ ಆಹುತಿ ತೆಗೆದುಕೊಳ್ಳಲು ಬರುತ್ತಿದೆ! ಅದನ್ನು ಶಮನ ಪಡಿಸಲು ಹಗಲೂ ಇರುಳೂ ತೈಲವನ್ನುರಿಸಿ, ಸಿಗರೇಟನ್ನೇ ಧೂಪದ ಹೊಗೆಯಾಗಿಸಿ, ನಸ್ಯವನ್ನೇ 'ಅರಸಿನಪುಡಿ'ಯಾಗಿ ಸ್ವೀಕರಿಸಿ, ಕಾಫಿ ಯಾ ಚಾ ವ ತೀರ್ಥವನ್ನು ಪಾನಮಾಡಿ, ಪೂಜಿಸುತ್ತಾರೆ–ಮಕ್ಕಳು! ಉಪಾಧ್ಯಾಯರೆಂಬ ಪೂಜಾರಿಗಳು ಅದಾ ಆಯುಧವನ್ನು ಧರಿಸಿ ಮುಕ್ಕಳಿದರು ತನ್ನ ದರ್ಶವನ್ನೆಲ್ಲಾ ತೋರಿಸಿ ಅವರ 'ಕೋಲ'ವನ್ನು ಮುಗಿಸುತ್ತಾರೆ. ಭಯ ಭಕ್ತಿಗಳಿಗಾಗಿ, ಗುಣ ನಡತೆಗಳಿಗಾಗಿ ದೊರಕುವ 'ಮಾರ್ಕು'ಗಳು ಭೂತದ ಸಂತೃಪ್ತಿಯನ್ನೂ ಅತೃಪ್ತಿಯನ್ನೂ ತೋರಿಸುತ್ತವೆಯೆಂಬುದೇ ಅದರ ತಿರುಳು.

ಅಂಥದೊಂದು ಪರೀಕ್ಷೆಯು ಮುಗಿದು ದೊಡ್ಡದಾದ ಎಂದರೆ ಮೂರು ತಿಂಗಳು ವಿರಾಮವಾಗಿರುವ, ರಜೆಯು ದೊರಕಿತ್ತು. ಸಾಧಾರಣ ತಪ್ಪು ಮಾಡಿದ ಕೈದಿಗಳು ಮೂರು ತಿಂಗಳು ಕಾರಾಗೃಹದಲ್ಲಿ ತನ್ನ ಆಯುಷ್ಯವನ್ನು ಕಳೆಯಬೇಕಂತೆ! ಅದೇ ಅವಸ್ಥೆಯಾಯಿತು. ನನ್ನಂಥವರಿಗೆ ಪರೀಕ್ಷೆಯೆಂಬ ತೊಂದರೆಯಿಲ್ಲದಿದ್ದರೆ ಕಾಲೇಜಿನ ಜೀವನವು ಅಮೃತಮಯ! ಇದು ಕೆಲವರ ಅನುಭವವೇನೋ! ನಮ್ಮ ಪರೀಕ್ಷೆ ದೇವಿಯ ಪೂಜೆಯು ಅದ್ದೂರಿಯಾಗಿ ನಡೆದು ನಾನು ಕಡೆಗೆ ಮನೆಗೆ ಹೊರಟೆ–ಮನಸ್ಸಿಲ್ಲದ ಮನಸ್ಸಿನಿಂದ! ಕಾಲನಿಯಾಮಕ ಪಟ್ಟಿಯನ್ನು ಮೊದಲೇ ಮಾಡಿದ್ದೆ. ಒಂದು ತಿಂಗಳು ಜನ ಜಾತ್ರೆಗೆ, ಇನ್ನೊಂದು ತಿಂಗಳು ಮದುವೆಗಳಿಗೆ ಮತ್ತು ನೆಂಟರ ಮನೆಗಳಿಗೆ ಎಂದು! ಉಳಿದೊಂದು ತಿಂಗಳನ್ನು ಸಿದ್ಧತೆಯಲ್ಲಿ ಕಳೆಯಬೇಕೆಂದೂ ಗೊತ್ತು ಮಾಡಿದ್ದೆ.

'ದ ಹಬ್ಬ ಕೊಟ್ಟು ಹೊಳೆ ಈಸಿ ನೊಸಳೆ ಬಾಯಿಗೆ ಬಿದ್ದಂತೆ' ನನಗೆ ಪರೀಕ್ಷೆಗಾಗಿ ಹೋರಾಡಿ, ಗುದ್ದಾಡಿ, ಸಾಕಾಗಿ ಫಲಿತಾಂಶಕ್ಕೆ ಬಾಯ್ಬಿಡುವ ಆಗತ್ಯವು ಅತಿಯಾಗಿರಲಿಲ್ಲ. ಕೇವಲ ಒಂದುವಾರ–ಏಳೇ ಏಳು ದಿನಗಳು! ಈ ಕಾಲವು ಪತ್ರಿಕೆಗಳ 'ವಾರದ ಭವಿಷ್ಯ'ಗಳನ್ನು ನೋಡುವುದರಲ್ಲೇ ಕಳೆಯಿತು. ನಮಸ್ಕಾರ ಜಾತ್ರೆಯೂ ಬಂದಿತ್ತು. ನನಗೆ ಸ್ವಗನಕ್ಕೆ ಎಡೆಯೇ ಇದ್ದಿಲ್ಲ. ಆದರೆ ಹಬ್ಬಕ್ಕೆ ಹೋಗುವುದು ಒಂದು ಸಮಸ್ಯೆ! ಯಾರೀತಿಯಿಂದ ಹೋಗಲಿ ಎಂದು! ನವನಾಗರಿಕತೆಯಿಂದ ಹೊಸ ಉಡುಪುಗಳನ್ನು ಧರಿಸಲು ಧೈರ್ಯವಿದ್ದಿಲ್ಲ. ಪರೀಕ್ಷೆ ಫಲಿತಾಂಶ ತಿಳಿದಿರುವ ಮೊದಲೇ ಶೃಂಗಾರಗೊಂಡ ಎಲ್ಲರ ಕಣ್ಣು ನೋಟ ವಿಗೂ ಗುರಿಯಾಗಿ ಕಡೆಗೆ ಮುಖಕ್ಕೆ ಮಸಿ ಬಳಿದಂತಾದರೆ! ಹೇಗೂ ಒಂದು ಮೊದರಿಯ ಪ್ರತ್ಯಕ್ಷ ಹೋಟೆ! ನನ್ನಂಥ ಹುಳ. ಕಾಲೇಜಿನಲ್ಲಿ ಓದುವವರೆಂದರೆ ಜನಗಿಗೆ ತುಂಬಾ ಗೌರವ. ಮನೆಯಿಂದ ಹೊರಬಿದ್ದೊಡನೆ ಪ್ರಶ್ನೆಗಳಾರಂಭ!

"ನೀನು ಯಾವ ಕ್ಲಾಸು? (ಕ್ಲಾಸಿನ ತದ್ಭವ)

"ಇಂಟರ್ ಮೀಡಿಯೆಟ್" ನನ್ನ ಉತ್ತರ.

"ಏನು ಇಂಟರ್ಮೀಡಿಯೇಟೋ? ಇಂಗ್ಲಿಷ್ ಚೆನ್ನಾಗಿ ಬರುತ್ತದೋ?"

"ಚೆನ್ನಾಗಿ ಬರುತ್ತದೆ"

"ಸ್ವಲ್ಪ ಮಾತಾಡಿ ತೋರಿಸಪ್ಪ"

ಸ್ಟೋಚಾಟಿಕ್ಕಿಟ್ಟು ಕೊಂಡಿತು. ಹುಚ್ಚನಂತೆ ಒಬ್ಬನೇ ಮಾತಾಡಬೇಕು.

"ಕಮ್, ಗೋ, ಡಾಗ್, ಫೂಲ್" ಎಂದು ಹೇಳಿ ಅವರಿಂದ ತಪ್ಪಿಸಿ ಕೊಂಡೆ!

ಜನರಲ್ಲಿ ಹಲವರು ನನ್ನನ್ನೇ ನಖಶಿಖಾಂತವಾಗಿ ನೋಡುತ್ತಿದ್ದರು. ನನ್ನ ಜೊತೆಯಲ್ಲಿದ್ದ ನಮ್ಮ ಮನೆಯವರಿಗೂ ಹೆಮ್ಮೆಯೆಂದು ತೋರಿರಬೇಕು. ಮನೆಗೆ ಬಂದ ಮೇಲೆ ಅಪ್ಪನೇ ಹೇಳಿದರು. "ಕಾಲೇಜಿಗೆ ಸೇರಿದ ಮೇಲೆ ಒಂದು ಕೈಗಡಿಯಾರ ಅವಶ್ಯ"ವೆಂದು! ನನಗೂ ಹಲವು ಬಾರಿ ಈ ಯೋಚನೆ ಬಂದಿತ್ತು. ಅದೃಷ್ಟವಶಾತ್ ಪರೀಕ್ಷೆಯಲ್ಲಿ ಪಾಸಾಗಿದ್ದೆ. ಜೂನಿಯರ್ ತರಗತಿಯಲ್ಲವೇ?

ಫಲಿತಾಂಶದ ಶುಭ ಸಂದೇಶದೊಡನೆ "ವಾಟರ್ ಪ್ರೂಫ್, ಡಸ್ಟ್ ಪ್ರೂಫ್, ಷಾಕ್ ಪ್ರೂಫ್ ಕೈ ಗಡಿಯಾರವೂ ಕೈ ಸೇರಿತು! ಅದರ ದುಂಡನೆಯ ಗಾತ್ರ, ಬೆಳ್ಳಿಯ ಹೊಳಪು ಸಣ್ಣಗಿವೈಗಳಿಂದ ನಾನು ತುಂಬಾ ಮೋಹಿತನಾದೆ! –ಚಂದ್ರನನ್ನು ನೋಡಿದ ಚಕೋರಿಯಂತೆ, ಸೂರ್ಯನನ್ನು ನೋಡಿದ ತಾವರೆಯಂತೆ! ಇನ್ನೂ ಹೇಗೋ ಹೇಗೋ! ನೀವೇ ಊಹಿಸಿ.

ಆಗಾಗ ಕೈಯೆಡೆಗೆ ನೋಡುವ ದೃಷ್ಟಿಗೆ ಮನಸ್ಸಿನ ಕಡಿವಾಣವಿರಲೇ ಇಲ್ಲ! ಪ್ರತಿಯೊಬ್ಬರ ಎದುರು ಮಾತಾಡುವಾಗ, ಸ್ವಾಭಾವಿಕವಾಗಿ ನನ್ನ ಎಡಗೈಯು ಮೇಲೇರಿ ತಲೆಯ ಕೂದಲನ್ನು ನೇವರಿಸುತ್ತಿತ್ತು! ಆಗಾಗ ಅದರ ಕಡೆಗೆ ನೋಡುವುದೇ ಹವ್ಯಾಸವಾಗಿತ್ತು! ಯಾವಾಗಲು ಪರಿಚಿತರಿದ್ದರು ನಮಸ್ಕಾರ ಪ್ರತಿ ನಮಸ್ಕಾರವನ್ನು ಎರಡು ಕೈಯಿಂದಲೂ ಮಾಡಲು ಆರಂಭಿಸಿದೆ! (ಅಸ್ಪೃಶ್ಯರಿಗೆ ಒಂದು ಕೈಯೆತ್ತಲೂ ಸಂಕಟವಾಗುತ್ತಿತ್ತು!!) ಇನ್ನೇನು? ಉದ್ದವಿರುವ ಅಂಗಿಯ ಕೈಯನ್ನು ಅರ್ಧ ಮಡಚಿಕೊಳ್ಳುವಂತೆಯೂ ಆಯಿತು!!

ಎಂಥ ಸ್ವಭಾವವೋ! ಬಲಗೈಗೆ ವಿರಾಮ ದೊರೆತಿತ್ತು. ಎಲ್ಲ ಕೆಲಸ ಕಾರ್ಯಗಳಿಗೂ ಎಡಗೈಯೇ ಮುಂದೆ ಇರುತ್ತಿತ್ತು! ಆಶ್ಚರ್ಯವೇಕೆ; ನೀವು ಎಡಗೈ ಕಿಸೆಯೊಳಗೆ ಹಾಕಿ ಕೊಂಡಿರುವಿರಿ?

ಸರಿ ಸರಿ! ಗಡಿಯಾರ ಬಲಗೈಗೆ ಕಟ್ಟುವುದಿಲ್ಲವೇ? ಅದೇ ಕಾಲೇಜ್ 'ಫೇಶನ್'!

ಚೀಫ್ ಕಮಿಷನರ ಪ್ರಕಟಣೆ

ಸಾರಾಯಿ, ವಿದೇಶೀ ಪಾನೀಯ, ಅಫೀಮು ಮತ್ತು ಗಾಂಜಾ ಈ ಮಾದಕ ಪದಾರ್ಥಗಳನ್ನು ಕೊಡಲು ಜಾರಿಯಲ್ಲಿರುವ ರೇಶನ್ ಯೋಜನೆಯು ೧೯೫೧–೫೨ರಲ್ಲೂ ಮುಂದರಿಸಲ್ಪಡುವುದೆಂದು ಈ ಮೂಲಕ ಸಾರ್ವಜನಿಕರಿಗೆ ಪ್ರಕಟಿಸಲಾಗಿದೆ. ೧೯೫೧ನೇ ಏಪ್ರಿಲ್ ೧ರಿಂದ ೩೫ ಡಿಗ್ರಿ ಅಂಡರ್ ಪ್ರೂಫ್ ಎಂಟುಡ್ರಾಮುಗಳ ಸಾರಾಯಿ ಕುಪ್ಪಿಯ ಮಾರಾಟದ ಬೆಲೆಯು ನಾಲ್ಕು (೪–೦–೦) ರುಪಾಯಿಗಳು. ಸಾರಾಯಿ ಡಿಪ್ಪೋ ಮತ್ತು ಡಿಪ್ಪೋ ಕೆಲಸಗಾರರ ಸಂಖ್ಯೆಯು ಈಗಿರುವಷ್ಟೇ ಇರುವದು. ೨೧ ವರ್ಷಗಳಿಗೆ ಮೇಲ್ಪಟ್ಟಿರುವ ಮತ್ತು ಮಾದಕ ಪದಾರ್ಥಗಳ ಅಭ್ಯಾಸವಿರುವವರು ರೇಶನ್ ಕಾರ್ಡು ಹಾಜರು ಪಡಿಸಿ ಇವುಗಳನ್ನು ಪಡೆಯಬಹುದಾಗಿದೆ.

೧೯೫೧–೫೨ರಲ್ಲಿ ಮಾದಕ ಪದಾರ್ಥಗಳ ಅಭ್ಯಾಸವಿರುವವರಿಗೆ ನಿಶ್ಚಯಿಸಿದ ಪರಿಮಾಣವು ಈ ಕೆಳಗಿನಂತಿದೆ.

ಮಾದಕ ಪಾನೀಯ ಮತ್ತು ಪದಾರ್ಥ	ತಿಂಗಳಿಗೆ ಕೊಡಲ್ಪಡುವ ರೇಶನ್
ಸಾರಾಯಿ	ಎಂಟು ಡ್ರಾಮುಗಳ ಒಂದು ಕಪ್ಪಿ (ಕೈಲ್ ಮೂಹೂರ್ತ, ದಸರಾ, ಕಕ್ಕಡ ಮತ್ತು ಕ್ರಿಸ್‌ಮಸ್ ಹಬ್ಬಗಳಿಗೆ ಒಂದೊಂದು ಕುಪ್ಪಿ ಹೆಚ್ಚಿಗೆ.
ವಿದೇಶೀ ಪಾನೀಯಗಳು	ಮೂರು ಯೂನಿಟುಗಳಿಗೆ ಮೀರದೆ. ಒಂದು ಯೂನಿಟೆಂದರೆ ಕಾಲು ಕುಪ್ಪಿ ವಿಸ್ಕಿ ಯಾ ಲಿಕ್ಕರ್ ಸೇರಿದ ಸ್ಪಿರಿಟ್‌ಗಳು ಅಥವಾ ಮುಕ್ಕಾಲು ಕಪ್ಪಿ ವೈನ್ ಮತ್ತು ಶರ್ಬತ್ ಅಥವಾ ೧೨ ಕ್ವಾರ್ಟ್‌ಗಳ ಬೀರ್ ಯಾ ಸಿಡಾರ್ ಕುಪ್ಪಿಗಳು.
ಅಫೀಮು	ವೈದ್ಯಕೀಯ ಸರ್ಟಿಫಿಕೇಟ್ ಪ್ರಕಾರ ತಿಂಗಳಿಗೆ ಒಂದು ತೊಲದ ಪರಿಮಿತಿಗೊಳಪಟ್ಟು
ಗಾಂಜ	ವೈದ್ಯಕೀಯ ಸರ್ಟಿಫಿಕೇಟ್ ಪ್ರಕಾರ ತಿಂಗಳಿಗೆ ೨೦ ತೊಲದ ಪರಿಮಿತಿಗೆ ಒಳಪಟ್ಟು.

ಸಾರಾಯಿಯು ಸರಬರಾಯಿಯನ್ನು ಸೀಲು ಹಾಕಿದ ಕಪ್ಪಿಗಳಲ್ಲಿ ಮಾಡಲಾಗುವದು. ಸಾರಾಯಿಯ ಶಕ್ತಿಯು ೩೫ ಡಿಗ್ರಿ ಅಂಡರ್ ಪ್ರೂಫ್ ಆಗಿರುವದು.

ಈ ಮೇಲಿನ ಪಾನೀಯ ಮತ್ತು ಪದಾರ್ಥಗಳಿಗಾಗಿ ರೇಶನ್ ಕಾರ್ಡುಗಳಿಗೆ ಅರ್ಜಿಯನ್ನು ಆಯಾಯ ನಾಡು ಯಾ ಹೋಬಳಿಯ ಪಾರುಪತ್ತೆಗಾರರಿಗೆ ತಾರೀಕು ೧೫–೩–೫೧ರೊಳಗೆ ಕೊಡಬೇಕು. ಪ್ರತಿ ಅರ್ಜಿಗೂ ಒಂದಾಣೆಯ ಕೋರ್ಟು ಫೀಜು ಸ್ಟಾಂಪು ಹಾಕಿರುವದಲ್ಲದೆ ಈ ಕೆಳಗಿನ ದರದ ಪರ್ಮಿಟ್ ಫೀಜನ್ನು ಆಯಾಯ ಖಜಾನೆಗೆ ಪಾವತಿ ಮಾಡಿದ ರಶೀತಿಯನ್ನು ಲಗತ್ತಿಸಬೇಕು. ಪ್ರತಿ ಅರ್ಜಿದಾರನೂ ಮಾದಕ ಪಾನೀಯ ಯಾ ಪದಾರ್ಥದ ಪರ್ಮಿಟಿಗೆ ಪ್ರತ್ಯೇಕವಾಗಿ ಸ್ಟಾಂಪಿಟ್ಟು ಅರ್ಜಿ ಮಾಡತಕ್ಕದ್ದು.

ರೇಶನ್‌ಕಾರ್ಡ್ ಬೇಕಾದ ಪಾನೀಯ ಯಾ ಪದಾರ್ಥ	೧೯೫೧–೫೨ಕ್ಕೆ ನಿಶ್ಚಯಿಸಿದ ಫೀಜಿನ ದರ.
ಸಾರಾಯಿ	ರೂ. ೨–೦–೦
ವಿದೇಶೀ ಪಾನೀಯಗಳು	,, ೩–೦–೦ ಒಂದು ಯೂನಿಟಿಗೆ
	,, ೬–೦–೦ ಎರಡು ,,
	,, ೯–೦–೦ ಮೂರು ,,
ಅಫೀಮು ಮತ್ತು ಗಾಂಜಾ	,, ೧–೦–೦

ಅಫೀಮು ಮತ್ತು ಗಾಂಜಾಗಳ ಪರ್ಮಿಟಿಗೆ ಅರ್ಜಿ ಬರೆಯುವವರು ತಮ್ಮ ಅರ್ಜಿಯನ್ನು ಪಾರುಪತ್ತೆಗಾರರಿಗೆ ಕೊಡುವ ಮೊದಲು ಹತ್ತಿರದ ಸ. ಅ. ಸರ್ಜನರಿಂದ ಮೆಡಿಕಲ್ ಸರ್ಟಿಫಿಕೇಟನ್ನು ಪಡೆದು ಲಗತ್ತಿಸಬೇಕು. ಸರ್ಟಿಫಿಕೇಟು ಎಲ್ಲಿ ಸಾಧ್ಯವೋ ಅಲ್ಲಿ ಈ ಕೆಳಗಿನ ರೀತಿ ಅರ್ಜಿಯ ಮೇಲೆಯೇ ಬರೆಸಲ್ಪಡಬೇಕು

ಅರ್ಜಿದಾರನಾದ ಶ್ರೀ .... ವಯಸ್ಸು .... ನು ಅಫೀಮು / ಗಾಂಜಾ ತಿನ್ನುವ / ಸೇದುವ ಅಭ್ಯಾಸವುಳ್ಳವನಾಗಿರುವನೆಂದು ಸರ್ಟಿಫೈ ಮಾಡುತ್ತೇನೆ. ಅವನಿಗೆ / ಅವಳಿಗೆ........... ತೊಲ ಅಫೀಮು | ಗಾಂಜಾವು ಆತನ | ಆಕೆಯ ಸ್ವಂತ ಉಪಯೋಗಕ್ಕಾಗಿ ಬೇಕಾಗಿದೆ.

ಸ್ಥಳ...............

ತಾ. .... ಸಹಿ.

ಈ ಸರ್ಟಿಫಿಕೇಟಿಗಾಗಿ ಯಾವ ಚಾರ್ಜೂ ಕೊಡಬೇಕಾಗಿಲ್ಲ.

ಮಡಿಕೇರಿ } ೧೨–೧–೫೧. }

ಕೆ. ಪಿ. ಕುಟ್ಟಪ್ಪ,
ಚೀಫ್ ಕಮಿಷನರಿಗೆ ಸೆಕ್ರೆಟರಿ.

ಜನವರಿ ಮೂವತ್ತು

ಗಾಂಧೀಜಿಯವರ ನಿರ್ವಾಣ ದಿನದ ಸಂಕಲ್ಪ.

ಜನವರಿ ೩೦ನೇ ತಾರೀಖು ಪ್ರತಿ ವರ್ಷ ಬಂದು ಹೋಗುತ್ತಲೇ ಇರುವುದು. ೩೦ನೇ ಜನವರಿಯಿಂದ ಫೆಬ್ರವರಿ ೧೨ರ ವರೆಗೆ [illegible] ಪಕ್ಷವನ್ನು ಆಚರಿಸುವ [illegible] ಪ್ರಚಾರದಲ್ಲಿ ನಡೆಸಬೇಕಿದೆ. ಭಾರತದ ಉದ್ದಗಲಕ್ಕೂ [illegible] ಕೋಟಿ ಕೋಟಿ [illegible] ಶ್ರದ್ಧಾಂಜಲಿಯನ್ನು ಅರ್ಪಿಸಿ ಹೋಗುತ್ತಾರೆ. ಆದರೆ ಈ ದಿನದ ವೈಶಿಷ್ಟ್ಯವೇನು? ಈ ಅವಧಿಯಲ್ಲಿ ನಾವು ಏನನ್ನು ಮಾಡಬೇಕು? ಏನು ಮಾಡಬೇಕು? ಮುಂತಾದ ಪ್ರಶ್ನೆಗಳ ನಡುವೆ ಎಷ್ಟು ಜನರ ಅಂತಃಕರಣವನ್ನು [illegible] ಗಾಂಧೀಜಿಯವರು ಬಂದರು, ಹಾಗೂ ಹೋದರು. ಆದರೇನು? ಅವರ ಹುಟ್ಟು ಹಾಗೂ ಸಾವು ಇತರ ಅಸಂಖ್ಯ ಜನರಂತೆಯೇ ಇದ್ದವೆ? ಅಥವಾ ಪ್ರಪಂಚದಲ್ಲಿಯ ಸಹಸ್ರಾವಧಿ ವರ್ಷಗಳ [illegible] ನ್ನು ಪರದೇಶೀಯರ ದಾಸ್ಯದಿಂದ ವಿಮೋಚನೆಮಾಡುವ ಸಲುವಾಗಿ ಮಾತ್ರವೇ ಇದ್ದುವೆ? ನಿಜವಾಗಿಯೆಂದರೆ ಅವರ ಜೀವನವು ಹಲವು ರಂಗಗಳ ಸಮಸ್ಯೆಗಳನ್ನು ಬಿಡಿಸುವ ಸಲುವಾಗಿತ್ತು. ಇಂದು ಪ್ರಪಂಚದಲ್ಲಿ ಎತ್ತ ನೋಡಿದರತ್ತ [illegible] ಹಾಗೂ [illegible] ಕೇಳಬರುತ್ತಿವೆ. ಜಗತ್ತಿನ ಜನತೆಯು [illegible] ವರ್ಗ ಅಥವಾ ಹಿಂಗಡದಿಂದ ಶೋಷಿತವಾಗುತ್ತಿದೆ, ತಳಮಳಿಸುತ್ತಿದೆ. ಈ ಶೋಷಣ ಪದ್ಧತಿ ನಿರ್ದಯತೆಯಿಂದ [illegible] ಗೊಳಿಸಿ ಜನತೆಯನ್ನು ಮೇಲೆತ್ತುವ ಕಲವಾಗಿಯೇ ಗಾಂಧಿಜಿಯವರ ಜನ್ಮವಾಗಿದ್ದರೆ, [illegible] ಸಮಾಜವನ್ನು ಆ ಶೋಷಣವಾದ ಸರ್ಪನಾಶದಿಂದ ಬಿಡಿಸಿ ಅದನ್ನು ಉಳಿಸುವ [illegible] ಹಾಗೆ [illegible] ಕೊಂಡಿದ್ದಾರೆ.

ಪದ್ಧತಿಯ ವಿರುದ್ಧ ಹೋರಾಟ

ಯುಗಯುಗಾಂತರಗಳಿಂದ ಜನತೆಯು ತನ್ನ ಉದ್ಧಾರಕ್ಕಾಗಿ ಹೆಣಗುತ್ತಲೇ ಇತ್ತು. ಆದರೆ [illegible] ಪ್ರಯತ್ನಗಳೆಲ್ಲ ಶೋಷಕರನ್ನೂ, ನಿರ್ದಯಿಗಳನ್ನೂ ನಾಶಮಾಡುವ ಪಟ್ಟಿಗೆ ಮಾತ್ರ ಮರ್ಯಾದಿತವಾಗಿದ್ದುವು. [illegible] ಇದರಿಂದ ಹೊಸ ಹೊಸ ರಾಕ್ಷಸರು ದಂಡೆತ್ತಿ ಬಂದರೂ ಜನತೆಯು ಎಂದಿಗೂ ಮೇಲೆ ಕಾಣುವ ಪಕ್ಷದಲ್ಲ. ಗಾಂಧೀಜಿಯವರು ಇದನ್ನು ಕಂಡು ಜನತೆಗೆ ತಿಳಿಸಿದರು. "ಜನತೆಯ ಸಂಕಷ್ಟಗಳಿಗೆ ವ್ಯಕ್ತಿಗಳು ಕಾರಣವಲ್ಲ, ಪದ್ಧತಿಯೇ ಕಾರಣ. ಪದ್ಧತಿಯು ದೂಷಿತವಾಗಿರುವುದರಿಂದ ಜನತೆಯ ಸಮಸ್ಯೆಗಳ ಪರಿಹಾರವಾಗಲಿಲ್ಲ. ಆದುದರಿಂದ ನಿಮ್ಮ ಹೋರಾಟವು ವ್ಯಕ್ತಿಗಳ ವಿರುದ್ಧವಾಗಿರದೆ ಪದ್ಧತಿಯ ವಿರುದ್ಧವಾಗಿರತಕ್ಕದ್ದು." ಭಾರತೀಯರು ಆಂಗ್ಲ [illegible] ವಿರುದ್ಧ ಹೋರಾಡಿದರು, ಆದರೆ ಅವರ ಪದ್ಧತಿಯನ್ನು ನಾಶಮಾಡಲು ಅಂಗೀಕರಿಸಿದರು. ಆದರ ಫಲವನ್ನೇ ಭಾರತವು ಈಗ ಅನುಭವಿಸುತ್ತಿದೆ. ಆದ್ದರಿಂದ ಈ ದಿನ ಭಾರತೀಯರು ಈ ವಿಷಯವನ್ನು ಆಲೋಚಿಸಿ ತಿಳಿದುಕೊಳ್ಳತಕ್ಕದ್ದು. ಇಂದಿನ ಸಮಾಜ ಪದ್ಧತಿಯಲ್ಲಿ ದೋಷಗಳಿವೆಯೆ? ಶಿಕ್ಷಣಗಳನ್ನು ನಾವು ಬೇರೆಬೇರೆಯಾಗಿ ಗುರುತಿಸಿಕೊಂಡುದನ್ನು ನಾವು ಅರಿಯಬೇಕು. ಗಾಂಧಿಜಿಯವರ ಹೇಳಿಕೆ ಹೀಗಿದೆ: "ಇಂದು ಜ್ಯಮೀನ್ದಾರರು ಜನತೆಯನ್ನು ಶೋಷಿಸುತ್ತಿದ್ದಾರೆ. ಬಂಡವಾಳಶಾಹಿಗಳು ಜನರನ್ನು ಶೋಷಿಸುತ್ತಿದ್ದಾರೆ." ಅಂದರೆ, ಜನತೆಯು ತನ್ನ ಶ್ರಮದ ಫಲವನ್ನು ಬಿಟ್ಟು ಸರಕಾರದ ವಶದಲ್ಲಿರುವ [illegible] ಕಳೆದುಕೊಳ್ಳುತ್ತಿದೆ. ರಾಜ್ಯದ [illegible] ಜನರ ಎದೆಯ ಮೇಲೆ ಕಾಲಿಟ್ಟು ಹತ್ತಿಕ್ಕಿ ದಬ್ಬಾಳಿಕೆ ನಡೆಸುತ್ತಿದೆ. ಹಾಗೂ ಜನರು ತಮ್ಮ ಆವಶ್ಯಕತೆಗಳ ಪ್ರಾಪ್ತಿಗಾಗಿ ಬಂಡವಾಳಶಾಹಿಯ ಆ ಯೋಜನೆಗಳನ್ನು ಹೊಂದಿರುವ ತನಕ ಬಂಡವಾಳಶಾಹಿಯು ಅವರನ್ನು ಹೆಚ್ಚು ಹೆಚ್ಚಾಗಿ ಶೋಷಿಸುವುದು. ಬಂಡವಾಳದ ತಳಹದಿಯ ಮೇಲೆ ಜೀವನವನ್ನು ಸ್ಥಿರಗೊಳಿಸಿ ಸದ್ಧತಿಯನ್ನು ಇದ್ದಕ್ಕಿದ್ದಂತೆಯೇ ಇಟ್ಟು ಬಂಡವಾಳಶಾಹಿಯನ್ನು ನಾಶಗೊಳಿಸುವ ಪ್ರಯೋಗಗಳನ್ನು ಸರ್ವಜನರು ಮಾಡಿ ನೋಡಿತು. ಆದರೆ ಬಂಡವಾಳಗಾರರ ನಾಶದಲ್ಲಿ ದಂಡನೆ ಯಾರಿಗೆ [illegible] ಜನತೆಯನ್ನು ತನ್ನ ಬಿಗಿಯಾದ ಹಿಡಿಯಲ್ಲಿ ಜನ್ಮಕ್ಕೆ ಹಿಡಿದರ [illegible] ಹಿಂದಿಯ [illegible] ರಾಜ್ಯದಿಂದ ಬಂಡವಾಳವಾದಗಳನ್ನು

ಮುಕ್ತಾಯಗೊಳಿಸುವ ರೀತಿ

ಈ ರಾಜ್ಯವಾದ ಪಕ್ಷ ಬಂಡವಾಳವಾದಗಳನ್ನು ಸಮಸ್ತಗೊಳಿಸಿ [illegible] ಜನವಾದ [illegible] ಗಾಂಧೀಜಿಯವರಿಗೆ ಶ್ರದ್ಧಾಂಜಲಿಯನ್ನು ಸಲ್ಲಿಸಲು ಬಯಸುವವರೆಲ್ಲ ತಮ್ಮನ್ನಾಗಿ ಗಂಭೀರವಾಗಿ ಯೋಚಿಸಬೇಕು. [illegible] ಅಲ್ಲದೆ ಆ ಕಾಲದಲ್ಲಿಯೂ ಕೋಟ್ಯಾಂತರ ಜನರಲ್ಲಿ ಜನತೆಯ [illegible] ಕೇಂದ್ರೀಕೃತ [illegible] ಮೂಲಕ ನಡೆಸುವ [illegible] ದಿನ [illegible] ಹಿಡಿವ ಶಕ್ತಿಯನ್ನು ಸಂಚಯಿಸಬೇಕು, [illegible] ಶ್ರಮವಹಿಸುವವರ [illegible] ಉತ್ಪನ್ನಗೊಳಿಸಿ [illegible] ಜನರಿಗೆ [illegible] ಕೊಳ್ಳುವ [illegible] ನಿಶ್ಚಯವನ್ನು ಮಾಡಬೇಕು. ಇದಕ್ಕೆ ನಿಜಸ್ವರೂಪದ ಕಾರ್ಯಕ್ರಮಗಳನ್ನು ನಾವು ಹಾಕಿಕೊಳ್ಳಬೇಕು. [illegible] ಸಂಕಲ್ಪ ಹಿಡಿಯಬೇಕು, [illegible] ಸೂಕ್ತವಾದ [illegible] ಬೇಕು.

ಆದಕಾರಣ ಈ ನಿರ್ವಾಣ ದಿನವನ್ನು ಆ ನಿತ್ಯ ಸಂಕಲ್ಪ ಶಕ್ತಿಯ ದಿನವನ್ನಾಗಿ ಸಂಪೂರ್ಣವಾಗಿ ಆಚರಿಸಬೇಕು. [illegible] ಈ ದಿನ [illegible] ಈ ದಿನವು [illegible] ಶಕ್ತಿ [illegible] ಸಂಯಮಗಳನ್ನು [illegible] ನಿಶ್ಚಯ [illegible] ಕರ್ತವ್ಯ ಪೂರ್ತಿಗಾಗಿ ಈ ದಿನದ [illegible] ಕ್ರಮವನ್ನು ಇಡೀ ದೇಶದಲ್ಲೆಲ್ಲಾ ಕೈಗೊಳ್ಳಬೇಕೆಂದು ಕೋಟ್ಯಾಂತರ ಬಂಧುಗಳ [illegible] ಗಳಿಗೆ [illegible] ಜನರೆಲ್ಲರೂ ಆ ದಿನ [illegible] ಪ್ರಗತಿ [illegible] ಆಚರಿಸಬೇಕು [illegible]

(೫) ಪ್ರಾರ್ಥನಾ ಸ್ತುತಿ – [illegible]

(೬) ಸಾಮೂಹಿಕ ಸೂತ್ರಯಜ್ಞ [illegible] ವುದು.

( ) ಸಾಮೂಹಿಕ [illegible] – [illegible] (ಧನ) [illegible] ಮಾಡುವುದು [illegible] ಎಂದು [illegible] ಸಂಘದ ಅಧ್ಯಕ್ಷರು [illegible]

ಪ್ರಕಟಣೆ.

[illegible] 250 [illegible] ಇದರ ಶ್ರಮದ [illegible] ಲಾಟರಿ [illegible] 20 ರ ವರೆಗೆ [illegible] ಅರ್ಜಿದಾರರು [illegible] ತಿಳಿಸಲಾಗಿದೆ.

ತಾರೀಕು 16-1-51 [illegible] ಪ್ರಸಿಡೆಂಟ್

ದಿ ಟ್ರಿಪ್ಲಿಕೇಟ್

ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

ಮೇನೇಜಿಂಗ್ ಡೈರೆಕ್ಟರ್ ಲಾಲ ಶಂಕರ್ ಲಾಲ್

[illegible] – ದೂಸ ಡೆಲ್ಲಿ

ಸ್ಥಾಪಿಸಿದ ಡೈರೆಕ್ಟರರು

[illegible] ಲಾಲ್ [illegible] — ಎ. [illegible] ಶ್ರೀನಿವಾಸ ಅಯ್ಯಂಗಾರ್

[illegible] — ಡಾ|| [illegible] ಎ. [illegible]

Transacts —Life, Fire, Motor and Marine

[illegible] — ಎಂ. ಎ. ಚಿಕ್ಕಪ್ಪ,

[illegible] — [illegible] ಸಕ್ರೆಟರಿ,

[illegible] — [illegible], ಬೆಂಗಳೂರು

KIRLOSKAR BROTHERS LTD
23 SRI NARASIMHARAJA ROAD
BANGALORE 2

[illegible] ಅತ್ಯುಪಯುಕ್ತವಾದ

ಕಿರ್ಲೋಸ್ಕರ್ – ಪೆಟ್ಟರ್

ಐದು (5) B H P [illegible]



ನಿಮ್ಮ ಸಂಗ್ರಹದಿಂದ ದೊರೆಯುತ್ತವೆ.

[illegible] ಈ ಕೆಳಗಿನ ವಿಳಾಸಕ್ಕೆ ಬರೆಯಿರಿ –

ಕಿರ್ಲೋಸ್ಕರ್ ಬಂಧುಗಳು, ಲಿಮಿಟೆಡ್,

23, ಶ್ರೀ ನರಸಿಂಹರಾಜ ರಸ್ತೆ,

ಬೆಂಗಳೂರು ೨

4 2

ಕೊಡಗು

ತಾ. ೧೯-೧-೧೯೫೧ನೇ ಸಂಕ್ರಮಣ

ವ್ಯವಸಾಯ ಆದಾಯ ತೆರಿಗೆ

ಕೊಡಗಿನಲ್ಲಿ ವ್ಯವಸಾಯ ಆದಾಯ ತೆರಿಗೆಯ ಮಸೂದೆಯು ದೀರ್ಘ ಕಾಲದಿಂದ ಚರ್ಚಿಸಲ್ಪಡುತ್ತಿದ್ದ ಪ್ರಶ್ನೆಯಾಗಿದೆ. ೧೯೪೯ನೇ ಮಾರ್ಚ್ ತಿಂಗಳಲ್ಲಿ ಕೌನ್ಸಿಲ್ ಮೆಂಬರುಗಳ ದೊಡ್ಡ ಪಂಗಡದ ವಿರೋಧವನ್ನು ಜಾಗೆ ತಂದರೆ ಮಾತ್ರ ಈ ಮಸೂದೆಯನ್ನು ಅಂಗೀಕರಿಸಬಹುದೆಂದು ಹೇಳಿ ಅದನ್ನು ವಿರೋಧಿಸಿದರು. ಅದೇ ವರ್ಷ ಸ್ಥಳೀಯ ಸರಕಾರವು ಇಂಡಿಯಾ ಸರಕಾರದ ಸೂಚನೆಯಂತೆ ವ್ಯವಸಾಯದ ಬಗ್ಗೆ ನಿಯಂತ್ರಣವನ್ನು ಜಾರಿಗೆ ತಂದು ಪುನಹ ಈ ಮಸೂದೆಯನ್ನು ಕೌನ್ಸಿಲಿನ ಮಂದೆ ಇಟ್ಟರು. ಆಗ ಕೌನ್ಸಿಲ್ ಸದಸ್ಯರು ಇದರ ತತ್ವವನ್ನು ಒಪ್ಪಿ ಚರ್ಚೆಯನ್ನು ಮುಂದಕ್ಕಿಟ್ಟರು. ೧೯೫೦ನೇ ಏಪ್ರಿಲ್ ತಿಂಗಳ ಕೌನ್ಸಿಲ್ ಮೀಟಿಂಗಿನಲ್ಲಿ ಈ ಮಸೂದೆಯಲ್ಲಿ ಯೋಗ್ಯ ತಿದ್ದುಪಡಿ ಮಾಡಲು ಒಂದು ಸಿಲೆಕ್ಟ್ ಕಮಿಟಿಗೆ ಬಿಡಲಾಯಿತು. ಈ ಕಮಿಟಿಯು ಅಸ್ವಾಭಾವಿಕವಾಗಿ ಈ ಬಗ್ಗೆ ಹತ್ತು ಮೀಟಿಂಗುಗಳನ್ನು ಮಾಡಿ ಮಸೂದೆಯ ಪ್ರತಿಯೊಂದು ಭಾಗವನ್ನು ಕೂಲಂಕಷವಾಗಿ ಪರೀಕ್ಷಿಸಿ ಕಡೆಗೆ ತನ್ನ ವರದಿಯನ್ನು ಮಾಡಿದರು. ಈ ವರದಿಗೆ ಇಂಡಿಯಾ ಸರಕಾರದ ಅನುಮತಿ ದೊರೆಯದ್ದರಿಂದಲೂ, ಮಸೂದೆಯು ಪ್ರಿಂಟಾಗಿ ಬಾರದೆಯಿದ್ದ ಕಾರಣವೂ ನವೆಂಬರಿನಲ್ಲಿ ನಡೆದ ಕೌನ್ಸಿಲು ಸಭೆಯಲ್ಲಿ ಇದನ್ನು ಚರ್ಚಿಸಲಾಗಲಿಲ್ಲ. ಆದ್ದರಿಂದ ಈ ವಿಶೇಷ ಸಭೆಯೊಂದನ್ನು ಏರ್ಪಡಿಸಿ ಈ ಮಸೂದೆಯ ಚರ್ಚೆಗೆ ಏರ್ಪಡಿಸಲಾಯಿತು. ಈ ಮಸೂದೆಯ ಬಗ್ಗೆ ಈ ಮೊದಲು ದೇಶದಲ್ಲಿ ಸಾರ್ವಜನಿಕ ಸಭೆಗಳಲ್ಲಿ ವಿಮರ್ಶೆ ನಡೆದು ಜನರು ತಮ್ಮ ಅಭಿಪ್ರಾಯವನ್ನು ಸೂಚಿಸಿರುವರು. ಈ ರೀತಿ ಹಲವು ವರ್ಷಗಳಿಂದ ಪರಿಶೀಲಿಸಲ್ಪಟ್ಟು ಕೌನ್ಸಿಲಿನ ಮುಂದೆ ಬಂದ ಈ ಮಸೂದೆಯನ್ನು ಅವಿರೋಧವಾಗಿ ಅಂಗೀಕರಿಸಬಹುದೆಂದು ನಿರೀಕ್ಷಿಸಲಾಗಿತ್ತು. ಆದರೆ ಮಸೂದೆಯ ತತ್ವವನ್ನು ಒಪ್ಪಿಕೊಂಡು ಸಿಲೆಕ್ಟ್ ಕಮಿಟಿಯಲ್ಲಿ ದೀರ್ಘ ಚರ್ಚೆಮಾಡಿ ತಿದ್ದುಪಡಿಗಳನ್ನು ಮಾಡಿದ ಕೆಲವು ಮೆಂಬರುಗಳೇ ಬಿಲ್ಲನ್ನು ವಿರೋಧಿಸಿದ್ದು ಆಶ್ಚರ್ಯಕರವಾಗಿದೆ.

ಈ ಮಸೂದೆಗೆ ಇನ್ನೂ ತಿದ್ದುಪಡಿ ಆವಶ್ಯವಿದೆಯೆಂಬುದೇ ವಿರೋಧ ಮಾಡಿದವರು ಕೊಟ್ಟ ಪ್ರಧಾನ ಕಾರಣವಾಗಿದೆ. ಆದರೆ ಮಸೂದೆಯನ್ನು ಸಿಲೆಕ್ಟ್ ಕಮಿಟಿಯು ತನ್ನ ಹತ್ತು ಮೀಟಿಂಗುಗಳಲ್ಲಿ ಕೂಲಂಕಷ ಚರ್ಚೆ ಮಾಡಿ ವರದಿ ಮಾಡಿದ ಸದಸ್ಯರೇ ಈಗ ವಿರೋಧ ಮಾಡಿದ್ದು ಅರ್ಥರಹಿತವೂ ವಿಸ್ಮಯಕಾರಕವೂ ಆಗಿದೆ. ಅವರು ವರದಿ ಮಾಡಿದನಂತರ ಪರಿಸ್ಥಿತಿಯಲ್ಲಿ ಯಾವ ಬದಲಾವಣೆಯೂ ಆಗಿಲ್ಲ. ಹಾಗಿರುವಾಗ ಒಮ್ಮೆ ಒಪ್ಪಿದ ಮಸೂದೆಗೆ ಈಗ ವಿರೋಧಿಸಲು ಬಲವಾದ ಬೇರೆ ಕಾರಣಗಳಿರಬೇಕಲ್ಲವೇ?

ಅವರ ವಿರೋಧಕ್ಕೆ ಎರಡನೇ ಕಾರಣವಾದರೂ ಕೊಡಗಿಗೆ ಇನ್ನೂ ಸುಧಾರಣೆ ದೊರೆತಿಲ್ಲವೆಂಬುದು. ಈ ಪರಿಸ್ಥಿತಿಯೇ ಅವರ ಬಿಲ್ಲಿಗೆ ಒಪ್ಪಿದಾಗಲೂ ಇತ್ತು. ಅಲ್ಲದೆ ಕೊಡಗಿಗೆ ಸುಧಾರಣೆ ದೊರೆತ ನಂತರ ದರೂ ಪ್ರಮುಖ್ಯವಾಗಿ ಇಲ್ಲಿಯ ಸರಕಾರದ ಆರ್ಥಿಕ ಸ್ಥಿತಿಯನ್ನು ಹೊಂದಿಕೊಂಡಿವೆ. ಇಂಥಾ ತೆರಿಗೆಯಿಂದ ಇಲ್ಲಿಯ ಸರಕಾರದ ಆರ್ಥಿಕ ಸ್ಥಿತಿಯನ್ನು ಇನ್ನೂ ಉತ್ತಮಗೊಳಿಸಿ ಬಜೆಟ್ಟನ್ನು ಸರಿಗಟ್ಟಲು ಸಾಧ್ಯವಾದರೆ ಕೊಡಗಿಗೆ ಬೇಗನೆ ಸುಧಾರಣೆ ದೊರೆಯುವಂಥಾ ಅವಕಾಶವುಂಟಾಗುವುದರಲ್ಲಿ ಸಂದೇಹವಿಲ್ಲ. ಕಳೆದ ವರ್ಷ ಡೆಲ್ಲಿಯಲ್ಲಿ ನಡೆದ ಸಮ್ಮೇಳನದ ಕಾಲಕ್ಕೆ ಕೊಡಗಿನ ಆರ್ಥಿಕ ಸ್ಥಿತಿಯು ಚೆನ್ನಾಗಿಲ್ಲದ್ದರಿಂದ ಅದು ತನ್ನ ಕಾಲಿನಲ್ಲಿ ನಿಲ್ಲಲಾರದೆಂದು ಹೇಳಿದ ಕೆಲವು ಸಂಯೋಜನವಾದಿಗಳು ಇಂದು ಸುಧಾರಣೆ ಸಿಕ್ಕಿದನಂತರ ಆ ತೆರಿಗೆಗಳನ್ನು ಹಾಕಿ ಆರ್ಥಿಕ ಸ್ಥಿತಿಯನ್ನು ಸಧಾರಿಸಿ ಕೊಳ್ಳಬಹುದೆಂದು ಹೇಳುವುದರ ಉದ್ದೇಶ್ಯವೇನಿರಬೇಕೆಂದು ವಾಚಕರೇ ಊಹಿಸಿಕೊಳ್ಳಬೇಕಾಗಿದೆ. ಕೊಡಗನ್ನು ಪ್ರತ್ಯೇಕ ಇಟ್ಟುಕೊಂಡು ಜವಾಬ್ದಾರಿ ಸರಕಾರವನ್ನು ನಡೆಸಬೇಕೆಂದಾದರೆ ಇಲ್ಲಿಯ ಆರ್ಥಿಕ ಸ್ಥಿತಿಯು ಉತ್ತಮವಿದೆಯೆಂದು ತೋರಿಸಬೇಕಾದುದು ಅಗತ್ಯ. ಪ್ರಧಾನ ಮಂತ್ರಿ ನೆಹರೂರವರು ಕೆಲವು ದಿನಗಳ ಹಿಂದೆ ಪಾರ್ಲಿಮೆಂಟಿನಲ್ಲಿ ಹೇಳಿದಂತೆ ಬಹು ಬೇಗನೆ ಇಲ್ಲಿಗೆ ಸುಧಾರಣೆ ಕೊಡುವ ವಿಚಾರ ಆಲೋಚಿಸುವಾಗ್ಗೆ ಇಲ್ಲಿಯ ಆರ್ಥಿಕ ಸ್ಥಿತಿಯು ಭದ್ರ ತಳಹದಿಯಲ್ಲಿದೆಯೆಂದು ತೋರಿಸಿ ಕೊಡುವುದು ಆವಶ್ಯ. ಹಾಗಿದ್ದರೇನೇ ಕೊಡಗಿಗೆ ಜವಾಬ್ದಾರಿ ಸರಕಾರವು ದೊರೆಯುವುದು. ಕೊಡಗನ್ನು ಬೇರೆ ಪ್ರಾಂತಗಳೊಡನೆ ಸಂಯೋಜನೆಗೊಳಿಸಬೇಕೆನ್ನುವವರ ದೃಷ್ಟಿಯಿಂದ ಇಂಥಾ ತೆರಿಗೆಗಳನ್ನು ವಿರೋಧಿಸಿ ಇಲ್ಲಿಯ ಆರ್ಥಿಕ ಸ್ಥಿತಿಯನ್ನು ನಿರ್ಬಲಗೊಳಿಸುವುದು ಅವರ ಸಂಯೋಜನಾವಾದಕ್ಕೆ ಸರಿ ಹೋಗುವುದೆಂದು ದಿಗಿಲ್ಲ ಸಂಶಯವಿಲ್ಲ.

ಕೌನ್ಸಿಲಿನ ಚುನಾಯಿತ ಸದಸ್ಯರಲ್ಲಿ ಬಹುಮತದವರು ವಿರೋಧಿಸಿದ ಈ ಬಿಲ್ಲು ನ್ಯಾಯದೃಷ್ಟಿಯಿಂದ ಜನರ ಅಭಿಪ್ರಾಯದಂತೆ ಅಂಗೀಕಾರವಾದದಲ್ಲವೆಂಬುದಕ್ಕೆ ಸಂಯೋಜನಾ ಪಕ್ಷದ ಸದಸ್ಯರಾದವರೊಬ್ಬರೇ ಉತ್ತರವಿತ್ತಿದ್ದಾರೆ. ಅವರ ಹೇಳಿಕೆಯಂತೆ ೧೯೪೫ರಲ್ಲಿ ಚುನಾಯಿತರಾದ ಕೌನ್ಸಿಲು ಸದಸ್ಯರು ನಿಜವಾದ ದೇಶದ ಅಭಿಪ್ರಾಯವನ್ನು ಪ್ರತಿಬಿಂಬಿಸುವ ಪ್ರತಿನಿಧಿಗಳಲ್ಲ. ಹಾಗಿರುವಾಗ ಮಸೂದೆಗೆ ವಿರೋಧಿಸಿದವರ ಅಭಿಪ್ರಾಯವು ರೈತರ ಅಭಿಪ್ರಾಯವೆಂದು ಹೇಗೆ ಹೇಳುವುದು ಸಾಧ್ಯ?

ಮೇಲಾಗಿ ಈ ಮಸೂದೆಗೆ ರೈತರು ವಿರೋಧಿಸುವ ಕಾರಣವೇ ಇಲ್ಲ. ಇದು ರೈತರ ಮೇಲೆ ಬೀಳುವ ಕಂದಾಯವಲ್ಲ. ಸಾಮಾನ್ಯವಾಗಿ ವರ್ಷಕ್ಕೆ ೩೫೦೦ ನಿವ್ವಳ ಉತ್ಪತ್ತಿ ಇರುವ ರೈತರು ಬಹು ಕಡಿಮೆ. ಸಾವಿರ ಬಟ್ಟೆ ಭೂವ್ಯವಸಾಯದಿಂದಲೂ ಈ ಉತ್ಪತ್ತಿ ಬರಲಾರದು. ಏಕೆಂದರೆ ವ್ಯವಸಾಯದಲ್ಲಿ ಖರ್ಚು ವಿಪರೀತ ಆದ್ದರಿಂದ ಈ ಕಂದಾಯವು ಹೆಚ್ಚಾಗಿ ಕಾಫಿ ಪ್ಲಾಂಟರ್ಸ್ ಬಹು ಸಿರಿವಂತರಿಗೆ ಮಾತ್ರ ಬೀಳುವುದು. ಕೊಡಗಿನಲ್ಲಿ ನೋಡಿದ್ದೆಂದರೆ ಈ ಕಂದಾಯವು ೫೦೦ ಜನರಿಗೆ ಬೀಳಬಹುದು. ಕೊಡಗಿನಲ್ಲಿ ಆವಶ್ಯ ಆಗಬೇಕಾದ ಜನಹಿತ ಕೆಲಸಗಳು ನೂರಾರು ಇವೆ. ಉದಾಹರಣೆಗೆ, ಲಕ್ಷ್ಮಣತೀರ್ಥ ಯೋಜನೆಯೇ, ಬೇತರಿ ಕೊಟ್ಟವಾಡಿ ಸೇತುವೆಯೋ ಹೈಸ್ಕೂಲು ಕಾಲೇಜು ಕಟ್ಟಡವೇ ಹೀಗೆ ಹಲವಾರು ದೊಡ್ಡ ಖರ್ಚಿನ ಬಾಬುಗಳಿರುವಾಗ ಅವುಗಳಿಗೆ ಹಣ ಒದಗಿಸುವುದು ಕರ್ತವ್ಯ. ಇಂಥಾದ್ದಕ್ಕಾಗಿ ಸಿರಿವಂತರಿಂದ ಕರ ವಸೂಲು ಮಾಡಿ ಸರ್ವರ ಹಿತಕ್ಕಾಗಿ ವಿನಿಯೋಗಿಸುವ ಮಾರ್ಗವೇ ಈ ಕಂದಾಯದ ಮಾರ್ಗವಲ್ಲದೆ ಬೇರೇನಿದೆ? ಇದಕ್ಕೆ ಜನ ಪ್ರತಿನಿಧಿಗಳೆನ್ನುವವರು ವಿರೋಧಿಸುವುದರಲ್ಲಿ ಅರ್ಥವೇನಿದೆ? ಕೊಡಗಿನ ಎರಡು ಲಕ್ಷ ಜನರ ಹಿತದೃಷ್ಟಿಯಿಂದ ಹೆಚ್ಚು ಆದಾಯ ಬರುವ ಕೆಲವರ ಸ್ವಲ್ಪ ಮಟ್ಟಿನ ತ್ಯಾಗ ಮಾಡಬೇಕಾದುದು ಆವಶ್ಯ.

ಇಂಥ ದ್ದನ್ನು ಬಿಟ್ಟು ಮಸೂದೆಯ ಬಗ್ಗೆ ನಿರ್ಧಿಷ್ಟ ಅಭಿಪ್ರಾಯವಿಲ್ಲದೆ ತತ್ವದ ಸೊಪ್ಪಿದ್ದೇವೆನ್ನುವರು, ಮುಂದರಿಸಬೇಕೆನ್ನುವರು, ವರದಿ ಮಾಡಿದ ಸಂತರವೂ ತಿದ್ದುಪಡಿ ಇವೆ ಎನ್ನುವರು ಈ ರೀತಿಯ ಆಳ್ವಿಕೆಯ ವರ್ತನೆಗಿಂಥಾ ನೇರವಾಗಿ ತಮ್ಮ ಅಭಿಪ್ರಾಯವನ್ನು ವ್ಯಕ್ತಮಾಡಿ ಮಸೂದೆಯನ್ನು ವಿರೋಧಿಸಿ ತಮ್ಮ ಆಶಯವನ್ನು ಕೊಡಗಿನ ಸಂಯೋಜನೆಯೆಂಬುದನ್ನು ಹೇಳಿದ್ದರೆ ಅವರ ನೇರವಾಗ ವರ್ತನೆಗಾಗಿ ಎಲ್ಲರೂ ಅವರನ್ನು ಮೆಚ್ಚುತ್ತಿದ್ದರು. ಅದು ಬಿಟ್ಟು ಹಲವಾರು ಕವಲೊಡೆದ ಹೇಳಿಕೆಯಿಂದ ದಾರಿಯಲ್ಲಿ ಮಸೂದೆಗೆ ವಿರೋಧ ಮಾಡಿದ ಈ ಜನಪ್ರತಿನಿಧಿಗಳೆನ್ನುವವರ ಸಂಖ್ಯಾ ಬಲವೇತಕೆ?

ರೈತರ ಪ್ರಶ್ನೆಯನ್ನು ಕಾಪಾಡಬೇಕಾದರೆ ಅದಕ್ಕೆ ಜನಹಿತವಾದ ಆಡಳಿತವನ್ನು ನಡೆಸಿಕೊಂಡು ಹೋಗುವ ಚೇತನವೂ, ಆದಾಯವೂ ಇವೆ ಎಂಬುದನ್ನು ಸ್ಪಷ್ಟಪಡಿಸಬೇಕು. ಆದ್ದರಿಂದ ಈ ಮಸೂದೆಯು ಮುನ್ನೂರಾಗಿ ಜಾರಿಯಲ್ಲಿ ಬಂದನಂತರ ಜನತೆಯು ಸಹಕರಿಸಿ ವರ್ತಿಸಬೇಕಿದೆ. ನಾಡಿನ ಬೆಳವಣಿಗೆಗೆ, ಜನತೆಯ ಪ್ರಗತಿಗೆ ಇಂಥಾ ಕಂದಾಯವು ಅಗತ್ಯ. ಕೊಡಗು ಶಾಸನ ಸಭೆಯು ಈ ಮಸೂದೆಯನ್ನು ಪಾಸುಮಾಡಿ ಉತ್ತಮ ಕಾರ್ಯ ಹೊಂದನ್ನು ಮಾಡಿತೆಂದು ನಿಸ್ಸಂಶಯವಾಗಿ ಹೇಳಬಹುದು.

ವರ್ತಮಾನ.

ಕಾಲೇಜ್ ಹಾಕಿ ಕಪ್ಪಿನ ಕಡೇ ಆಟವು 'ಕಾಲೇಜ್' ಟೀಮಿನವರಿಗೂ ಮಾಂಡರ್ಸ್ ಟೀಮಿನವರಿಗೂ ನಡೆದು ಕಾಲೇಜ್ ಟೀಮಿನವರು ಮಾಂಡರ್ಸ್ ಟೀಮನ್ನು ಮೂರು ಗೋಲುಗಳಿಂದ ಸೋಲಿಸಿ ಕಪ್ಪನ್ನು ಪಡೆದು ಜಯಶೀಲರಾದರು. ಜಯಶೀಲರಿಗೆ ಶ್ರೀ ಕಡೇಮಾಡ ಟೀಕ್ಯಪ್ಪನವರು ಕಪ್ಪನ್ನು ಕೊಟ್ಟರು.

ನಾಲ್ಕು ದಿನಗಳ ಅವಧಿಯಲ್ಲಿ ಕೊಡಗಿಗೆ ಬಂದಿದ್ದ ಭಾರತ ಸೇನಾನಾಯಕ ಜನರಲ್ ಕಾರ್ಯಪ್ಪನವರು ತಾರೀಕು ೧೩ರಲ್ಲಿ ಕೊಡಗಿನ ಮಾಜಿ ಸಿಪಾಯಿಗಳನ್ನು ಕಂಡು ಅವರ ಹಿತವನ್ನು ವಿಚಾರಿಸಿದಲ್ಲದೆ ತಾ. ೧೪ರಲ್ಲಿ ಮಿಲಿಟರಿ ಸ್ಪೋರ್ಟ್ಸ್‌ಮೀಟಿನ ಬಹುಮಾನಗಳನ್ನು ವಿತರಿಸುವ ಡೆಟ್ ಗಳನ್ನು ಸಂದರ್ಶಿಸಿದರು. ಅವರು ತಾ. ೧೬ರಲ್ಲಿ ಪ್ರವಾಸ ಹೊರಟರು.

ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದ ಶ್ರೀ ನಿಜಲಿಂಗಪ್ಪನವರು. ಕಾರ್ಯದರ್ಶಿ ಹಳ್ಳಿಕೇರಿಯವರು ಮತ್ತು ಕರ್ನಾಟಕದ ನಾಯಕ ಶ್ರೀ ನೆಸ್ವಿ ಪತ್ರಿತರು ತಾರೀಕು ೧೪ರಲ್ಲಿ ಕೊಡಗಿಗೆ ಬಂದು ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಭೆಗೆ ಹಣ ಸಂಗ್ರಹ ಮಾಡಿದರು. ತಾರೀಕು ೧೫ರಲ್ಲಿ ಕಾಲೇಜ್ ಯೂನಿಯನ್ನಿನ ಆಶ್ರಯದಲ್ಲಿ ಅವರ ಭಾಷಣ ನಡೆಯಿತು.

ಕೊಡಗಿನ ಸೆಟ್ಲ್‌ಮೆಂಟ್ ಆಫೀಸರಾದ ಶ್ರೀ ಗಿಂಡಾರಾವ್ ರವರ ಪ್ರವಾಸ ತಾ. ೧೮ರಲ್ಲಿ ಹಡಗಲಿ, ೨೦ರಲ್ಲಿ ಬೇಗೂರು, ೨೧ರಲ್ಲಿ ಹೆಗ್ಗಡದೇವನಕೋಟೆ, ಬೆಕ್ಕರೆ, ೨೪ರಲ್ಲಿ ಸಿದ್ದಾಪುರ, ೨೫ರಲ್ಲಿ ಬಾಡಗ, ಕೊಂಡಾಪುರ, ೨೬ರಲ್ಲಿ ತಿತಿಮತಿ, ೩೦ರಲ್ಲಿ ಪೆಬ್ಬಿ, ಭಗ್ಯಗೂಳಿಗಳಲ್ಲಿ ಮೊಕ್ಕಾಂ ಮಾಡುವರು.

ಇಂಡಿಯನ್ ರೆಡ್‌ಕ್ರಾಸ್ ಸಂಸ್ಥೆಯ ಕೊಡಗು ಶಾಖೆಯ ಆಶ್ರಯದಲ್ಲಿ ೧೯೫೧ರಲ್ಲಿ ನಡೆಯಬೇಕಾಗಿದ್ದ ಶಿಶು ಮತ್ತು ಆರೋಗ್ಯ ಪ್ರದರ್ಶನವು ತಾ. ೧೬-೨-೫೧ರಲ್ಲಿ ನಡೆಯುವದು. ಆ ದಿವಸ ರೆಡ್‌ಕ್ರಾಸ್ ಸಂಸ್ಥೆಯ ಸಹಾಯಾರ್ಥವಾಗಿ ಸಂಗೀತ ಕಚೇರಿ ಮತ್ತು ಇತರ ವಿನೋದಗಳು ನಡೆಯುವವು.

ವಿಶ್ವಾಸ್ತವಾಗಿ ಕೊಡಗಿಗೆ ಸುಧಾರಣೆ ಕೊಡುವ ವಿಚಾರದಲ್ಲಿ ಕೊಡಗಿನ ಸಂಯೋಜನ ವಾದಿ ಮತ್ತು ಪ್ರತ್ಯೇಕವಾದಿ ಪಕ್ಷಗಳು ಒಂದಾಗಿ ತಮ್ಮ ಹೇಳಿಕೆಯನ್ನು ಮಂಡಿಸಲು ಮಾನ್ಯ ಗವರ್ನರಂತೆ ಒಂದು ಒಪ್ಪಂದಕ್ಕೆ ಬರಲು ರಾಜಿ ಪಂಚಾಯಿತಿಗಾಗಿ ಕರೆದ ಮೀಟಿಂಗಿನಲ್ಲಿ ಸೇರಿದ್ದ ಕಮಿಷನರುಗಳು ಎರಡು ಕಡೆಯಿಂದ ಐದೈದು ಪ್ರತಿನಿಧಿಗಳಿಂದ ಕೂಡಿದ ಒಂದು ಮೀಟಿಂಗನ್ನು ತಾ. ೧೪ರಲ್ಲಿ ನಡೆಸಿ ಬಹು ದೀರ್ಘ ಚರ್ಚೆ ನಡೆಸಿ, ತಾ. ೨೨ರಲ್ಲಿ ಪುನಹ ಚರ್ಚೆಯನ್ನು ಮುಂದರಿಸುವಂತೆ ಏರ್ಪಡಿಸಿದರು.

ಮಡಿಕೇರಿ ಪುರಸಭೆ ಚುನಾವಣೆಯು ನ್ಯಾಯಸಮ್ಮತವಾಗಿ ನಡೆಯಲಿಲ್ಲವೆಂದ ಹನ್ನೆರಡು ವಾರ್ಡುಗಳ ಪೈಕಿ ಎಂಟು ವಾರ್ಡುಗಳಲ್ಲಿ ಉಮೇದುವಾರರು ಇಲೆಕ್ಷನ್ ಪೆಟಿಷನನ್ನು ಕೋರ್ಟಿನಲ್ಲಿ ದಾಖಲು ಮಾಡಿರುವರು.

ರಷ್ಯದ ಯುದ್ಧ ಸಿದ್ಧತೆ.

ಶೀಘ್ರದಲ್ಲಿಗೆ ಸಾತ ಸೋವಿಯಟ್ ರಷ್ಯದ ಶಕ್ತಿಯು ನೆರೆಗೆ ಪ್ರವಹಿಸುತ್ತಿದೆ ಹೊರಕ್ಕೂ ಒಳಗಿಂದೊಳಗೆ ರಷ್ಯನರ ಯುದ್ಧ ಸಿದ್ಧತೆಗಳು ನಡೆಯುತ್ತಲೇ ಇವೆ. ಒಂದು ವೇಳೆ ಅಮೇರಿಕದ ಕಡೆಯಿಂದ ಆಟಂಬಾಂಬು ಪ್ರಯೋಗ ನಡೆಯುವುದಾದರೆ ಅದನ್ನು ತಡೆಯಲು ಸರ್ವ ಸಾಧನಗಳ ಎಲ್ಲಾ ಪ್ರಮುಖ ಸೋವಿಯಟ್ ನಗರಗಳಲ್ಲಿ ಅದನ್ನು ತಡೆವ ನಾಗರಿಕ ರಕ್ಷಣೆಗಳು ನಡೆದಿದೆ. ಮುಖ್ಯವಾಗಿ ಕಲ ರಾಜಧಾನಿ ಸಹ ದೇಶದಲ್ಲಿ ರಕ್ಷಣಾ ಸಿದ್ಧತೆ ಭರದಿಂದ ನಡೆದುಕೊಂಡು ಬಂದಿದೆ. ಆ ಗತ್ಯಬಿದ್ದಾಗ ಮೊಸ್ಕೋ ನಗರವನ್ನು ತೆರವು ಮಾಡುವ ದೀರ್ಘಕಾಲೀನ ಯೋಜನೆಗಳೂ ನಡೆದಿವೆ. ಒಂದುವೇಳೆ ಯುದ್ಧ ಸಂಭವಿಸಿದರೆ ಒಂದೇ ಸಲ ಆರು ಮಿಲಿಯ ಜನರನ್ನು ಸೋವಿಯಟ್ ರಾಜಧಾನಿಯಿಂದ ಸಂರಕ್ಷಿತ ಸ್ಥಳಗಳಿಗೊಯ್ಯುವ ತಯಾರಿಯು ಪೂರ್ಣಗೊಂಡಿದೆ.

ವ್ಯವಸಾಯ ಆದಾಯ ತೆರಿಗೆಯ ಮಸೂದೆ ಪಾಸಾಯಿತು.

ಕೊಡಗು ಲೆಜಿಸ್ಲೇಟಿವ್ ಕೌನ್ಸಿಲಿನ ಮೀಟಿಂಗು ಈ ತಾ ೧೫ ರಲ್ಲಿ ಚೀಫ್ ಕಮಿಷನರವರ ಅಧ್ಯಕ್ಷತೆಯಲ್ಲಿ ನಡೆಯಿತು. ಬೆಳಿಗ್ಗೆ ೧೧ ಗಂಟೆಗೆ ಸಭೆಯು ಪ್ರಾರಂಭವಾದೊಡನೆ, ವ್ಯವಸಾಯ ಆದಾಯ ತೆರಿಗೆಯ ಮಸೂದೆಯನ್ನು ಸಿಲೆಕ್ಟ್ ಕಮಿಟಿಯ ವರದಿಯೊಡನೆ ಚರ್ಚೆಗೆ ತೆಗೆದುಕೊಳ್ಳಬೇಕೆಂದು ಫೈನಾನ್ಸ್ ಮೆಂಬರು ಸೂಚನೆ ಮಾಡಿದರು. ಈ ಮಸೂದೆಯಲ್ಲಿ ಇನ್ನೂ ಕೆಲವು ತಿದ್ದುಪಡಿಗಳನ್ನು ಮಾಡಲಿಕ್ಕಿರುವುದರಿಂದ ಅದನ್ನು ಪುನಹ ಸಿಲೆಕ್ಟ್ ಕಮಿಟಿಗೆ ಕಳುಹಿಸಬೇಕೆಂದೂ, ಅದನ್ನು ಈಗ ಚರ್ಚೆ ಮಾಡಬಾರದೆಂದೂ ಶ್ರೀ. ಸಿ. ಎಂ. ಪೂಣಚ್ಚನವರು ಸೂಚಿಸಿದರು. ಈ ಸೂಚನೆಯನ್ನು ಶ್ರೀ. ಸಿ. ಎಂ. ಪೂಣಚ್ಚನವರು [illegible] ಸಿಲೆಕ್ಟ್ ಸಮಿತಿಯು ಮೀಟಿಂಗುಗಳನ್ನು ನಡೆಸಿ ದೀರ್ಘ ಚರ್ಚೆಗಳನ್ನು ನಡೆಸಿ ವರದಿ ಮಾಡಿರುವ ಕಾರಣ ಇದರ ಚರ್ಚೆಯನ್ನು ಪುನಃ ಸಿಲೆಕ್ಟ್ ಕಮಿಟಿಗೆ ಕಳುಹಿಸುವುದರಲ್ಲಿ ಅರ್ಥವಿಲ್ಲವೆಂದೂ, ದೀರ್ಘ ಕಾಲದಿಂದ ಈ ಸಭೆಯ ಮುಂದಿರುವ ಈ ಮಸೂದೆಯನ್ನು ಈ ದಿವಸವೇ ಚರ್ಚೆಮಾಡಿ ಪಾಸುಮಾಡುವುದು ಯುಕ್ತವೆಂದೂ ಫೈನಾನ್ಸ್ ಮೆಂಬರು ಜವಾಬು ಇತ್ತರು. ಚರ್ಚೆಯನ್ನು ಈ ದಿನ ಬಾಕಿ ಮಾಡಿ ಮುಂದರಿಸಬೇಕೆಂಬ ಶ್ರೀ ಪೂಣಚ್ಚನವರ ಸೂಚನೆಯನ್ನು ಓಟಿಗೆ ಹಾಕಲಾಗಿ ಶ್ರೀಗಳಾದ ಎನ್. ಸೋಮಣ್ಣನವರು, ಕೆ. ಮಲ್ಲಪ್ಪನವರು, ಎಸ್. ನಾರಾಯಣಮೂರ್ತಿಯವರು, ಕೆ. ಎ. ದೇವಯ್ಯನವರು, ಹೆಚ್. ಬಿ ಅಣ್ಣಯ್ಯನವರು, ಪಿ. ಎಂ. ನಾಣಯ್ಯನವರು, ಸಿ ಎಂ. ಪೂಣಚ್ಚನವರು ಪರವಾಗಿಯೂ, ಶ್ರೀಗಳಾದ ಕೆ. ಎಂ. ಕಾರ್ಯಪ್ಪನವರು, ಪಿ. ಐ ಬೆಳ್ಯಪ್ಪನವರು, ಕೆ. ಪಿ. ಅಪ್ಪಯ್ಯನವರು, ಕೆ ಪಿ ಕರುಂಬಯ್ಯನವರು, ಕೆ. ಕೆ. ಬೆಳ್ಯಪ್ಪನವರು, ಎ ಅಬ್ದುಲ್ ರಹಮಾನ್‌ರವರು, ಮತ್ತು ನಾಲ್ಕು ಉದ್ಯೋಗಸ್ಥ ಮೆಂಬರುಗಳು ವಿರೋಧವಾಗಿಯೂ ಓಟು ಮಾಡಿದ್ದರಿಂದ ಸೂಚನೆಯು ಸೋಲಿಸಲ್ಪಟ್ಟಿತು. ಅನಂತರ ಶ್ರೀ. ಎನ್. ಸೋಮಣ್ಣನವರು ಮತ್ತು ಕೆ. ಎಂ. [illegible]ನವರು ಸೂಚನೆಕೊಟ್ಟಿದ್ದ ತಿದ್ದುಪಡಿಗಳನ್ನು ಚರ್ಚಿಸಲು ಇಂಡಿಯಾ ಸರಕಾರದವರು ಅನುಮತಿ ಕೊಟ್ಟಿರುವುದಿಲ್ಲವೆಂದು ಅಧ್ಯಕ್ಷರು ತಿಳಿಸಿದರು. ಕೂಡಲೇ ಫೈನಾನ್ಸ್ ಮೆಂಬರು ಕಳೆದ ಏಪ್ರಿಲ್ ತಿಂಗಳಲ್ಲಿ ಈ ಸಭೆಯು ತತ್ವವನ್ನು ಒಪ್ಪಿ [illegible] ಬಗ್ಗೆ ಈ ಮಸೂದೆಯು ಒಂದು ಸಿಲೆಕ್ಟ್ ಕಮಿಟಿಗೆ ಒಪ್ಪಿಸಲ್ಪಟ್ಟಿತು. ಈ ಸಮಿತಿ ಬಹು ವಿಶೇಷ ರೀತಿಯಲ್ಲಿ ದೀರ್ಘ ಚರ್ಚೆಯನ್ನು ಮಾಡ ಹತ್ತು [illegible] ಮೀಟಿಂಗುಗಳನ್ನು ನಡೆಸಿ ಕೂಲಂಕುಷವಾಗಿ ಆಲೋಚನೆ ಮಾಡಿ ವರದಿಯನ್ನು ಮಾಡಿದೆ. ಹಿಂದೂ ದೇಶದ ಇತರ ಭಾಗಗಳಲ್ಲಿರುವ ಈ ರೀತಿಯ ಕೆಲವು ಮಸೂದೆಗಳನ್ನು ತರಿಸಿಕೊಂಡು ವಿವರವಾಗಿ ಪರ್ಯಾಲೋಚನೆ ಮಾಡಿದೆ.

ಆದಾಯ ತೆರಿಗೆಯ ದರ

ವರ್ಷಕ್ಕೆ ಏಳು ಸಾವಿರ ರೂಪಾಯಿ ಉತ್ಪತ್ತಿಗೆ ಕಡಿಮೆ ಇರುವ ಅವಿಭಕ್ತ ಹಿಂದೂ ಕುಟುಂಬಗಳಿಗೂ [illegible] ಸಾವಿರ ಉತ್ಪತ್ತಿಗೆ ಕಡಿಮೆ ಇರುವ ಇತರ ವ್ಯಕ್ತಿಗಳಿಗೂ ಆದಾಯ ತೆರಿಗೆ ಹಾಕಲ್ಪಡುವದಿಲ್ಲ. ರೂ. ೩೫೦೦ ರ ಮೇಲೆ ಆದಾಯ ಇರುವವರಿಗೆ ಮೊದಲನೆಯ ೧೫೦೦ ರೂಪಾಯಿಗಳಿಗೆ ತೆರಿಗೆಯಿಲ್ಲ; ೧೫೦೦ರ ಮೇಲಿನ ಆದಾಯದ ದರವು ಹೀಗಿದೆ:—

೧೫೦೧ ರಿಂದ	೫೦೦೦ ದ ವರೆಗೆ	ರೂಪಾಯಿಗೆ		೦ ೦ ೬
೫೦೦೧ ರಿಂದ	೧೦೦೦೦ ದ	,,	,,	೦ ೦ ೯
೧೦೦೦೧ ರಿಂದ	೧೫೦೦೦	,,	,,	೦ ೧ ೦
೧೫೦೦೧ ರಿಂದ	೨೦೦೦೦	,,	,,	೦ ೧ ೬
೨೦೦೦೧ ರಿಂದ	೨೫೦೦೦	,,	,,	೦ ೨ ೦
೨೫೦೦೧ ರಿಂದ	೩೫೦೦೦	,,	,,	೦ ೨ ೬
೩೫೦೦೧ ರಿಂದ	೫೦೦೦೦	,,	,,	೦ ೩ ೦
೫೦೦೦೦ ರ ಮೇಲಿನ ಆದಾಯಕ್ಕೆ			,,	೦ ೪ ೦

ಈ ಮಸೂದೆಯ ಉದ್ದೇಶದಲ್ಲಿ ಹೇಳಿರುವಂತೆ ಪಂಚವಾರ್ಷಿಕ [illegible] ಉಂಟಾಗಿರುವ [illegible] ಭರ್ತಿ ಮಾಡಲಿಕ್ಕೂ, ದೇಶಾಭಿವೃದ್ಧಿಗೆ ಬೇಕಾದ ಪ್ರಾಮುಖ್ಯವಾದ ಉದ್ಯಮಗಳನ್ನು ಕೈಕೊಳ್ಳಲಿಕ್ಕೂ ಸರಕಾರದ ಆದಾಯವನ್ನು ಹೆಚ್ಚಿಸಬೇಕಾದ್ದು ಅವಶ್ಯವಾಗಿದೆ. ಆದ ಕಾರಣ ಈ ಮಸೂದೆಯನ್ನು ಈಗಲೇ ಪಾಸುಮಾಡುವದು ಅತ್ಯವಶ್ಯವಾಗಿದೆಯೆಂದು ಹೇಳಿ ಮಸೂದೆಯ ಮಂಜೂರಾತಿಯ ಠರಾವನ್ನು ಸಭೆಯ ಮುಂದೆ ಸೂಚಿಸಿದರು.

ಶ್ರೀ ಎನ್. ಸೋಮಣ್ಣನವರು ಠರಾವನ್ನು ವಿರೋಧಿಸುತ್ತಾ, ಹೇಳಿದ್ದೇನೆಂದರೆ ಈ ಮಸೂದೆಯ ತೆರಿಗೆಯ ದರದಲ್ಲಿ ನಾವು ಸೂಚನೆ ಮಾಡಿದ ತಿದ್ದುಪಡಿಯನ್ನು ಇಂಡಿಯಾ ಸರಕಾರದವರು ಚರ್ಚೆಗೆ ಬಿಡದೇ ಇರುವುದು ನ್ಯಾಯವಲ್ಲ. ಇದರಿಂದ ಈ ಸಭೆಯಲ್ಲಿರುವ ಪ್ರತಿನಿಧಿಗಳ ಅಭಿಪ್ರಾಯ ಸೂಚನೆಗೆ ಅಡ್ಡಿಮಾಡಿದಂತಾಗಿದೆ. ಅಲ್ಲದೆ [illegible] ಕಂದಾಯದ ಮಸೂದೆಯು ಇನ್ನೂ ಸಿಲೆಕ್ಟ್ ಕಮಿಟಿಯವರ ಚರ್ಚೆಯಲ್ಲಿದೆ ಅದರ ತೀರ್ಮಾನವಾಗದೆ ಈ ದಿವಸ ಮಸೂದೆಯನ್ನು ಪಾಸುಮಾಡುವುದು ಸರಿಯಲ್ಲ. ಜನರ ಮೇಲೆ ಏಕಕಾಲದಲ್ಲಿ ಎರಡು ತರದ ಕಂದಾಯವನ್ನು ಹೊರಿಸುವುದು ಎಂದೂ ನ್ಯಾಯವಲ್ಲ. ಇದರೊಂದಿಗೆ ನಮ್ಮ ಪ್ರಾಂತ್ಯಕ್ಕೆ ಕೇಂದ್ರ ಸರಕಾರದವರು ಇನ್ನೂ [illegible] ಕೊಟ್ಟಿರುವುದಿಲ್ಲ. ಕೊಡಗಿನ ಭವಿಷ್ಯತ್ತಿನ ವಿಚಾರದಲ್ಲಿ ಏನೊಂದೂ ತೀರ್ಮಾನ ಮಾಡಿರುವುದಿಲ್ಲ. [illegible] ಬಜೆಟ್ ಮೀಟಿಂಗಿನಲ್ಲಿ ಕೊಡಗಿಗೆ ಜವಾಬ್ದಾರಿ ಸರಕಾರ ಕೊಡಬೇಕೆಂದು [illegible] ಠರಾವನ್ನು ಪಾಸುಮಾಡಿದ್ದರೂ ಇಂಡಿಯಾ ಸರಕಾರವು ಅದಕ್ಕೆ ಏನೊಂದೂ ಗಮನ ಕೊಟ್ಟಿರುವುದಿಲ್ಲ. ಬದಲು, ಶ್ರೀ ರಾಜಗೋಪಾಲಾಚಾರ್ಯರವರು ಕೆಲವು ದಿವಸಗಳ ಹಿಂದೆ ಕೇಂದ್ರ ಪಾರ್ಲಿಮೆಂಟ್ ಸಭೆಯಲ್ಲಿ ಒಂದು ಪ್ರಶ್ನೆಗೆ ಜವಾಬು ಕೊಡುತ್ತಾ ಕೊಡಗಿನಲ್ಲಿ [illegible] ರುವುದರಿಂದ ತತ್ಕಾಲ ಅಲ್ಲಿಗೆ [illegible] ಕೊಡುವ ಆಲೋಚನೆ ಇಲ್ಲವೆಂದು ಹೇಳಿರುವರು. ಈ ಸೂಚನೆಯನ್ನು ನಾವು ಸಂಪೂರ್ಣ ವಿರೋಧಿಸಬೇಕು. ಇದು ಮಾತ್ರವಲ್ಲ ಇಂದು ಈ ಸಭೆಯಲ್ಲಿರುವ ನಾವು ನಾಲ್ಕು ವರ್ಷಗಳ ಹಿಂದೆ ಚುನಾಯಿಸಲ್ಪಟ್ಟವರು. ಇಂದು ನಾವು ಜನರ ನಿಜವಾದ ಪ್ರತಿನಿಧಿಗಳೆಂದು ಹೇಳಲು ಸಾಧ್ಯವಿಲ್ಲ. ಆದ ಕಾರಣ ಜನರ ಮೇಲೆ ತೆರಿಗೆಯನ್ನು ಹೊರಿಸುವಂಥಾ ಅಧಿಕಾರ ನಮಗೆ ಇಂದು ಇಲ್ಲ. ಆದುದರಿಂದ ಈ ಮಸೂದೆಯು ಮುಂದೆ ಬರುವ ಜನರಲ್ ಚುನಾವಣೆಯ ನಂತರ ಚರ್ಚಿಸಲ್ಪಡಬೇಕಾಗಿದೆ. ಒಂದು ವೇಳೆ ಈ ಮಸೂದೆಯನ್ನು ಇಂದು ನಾವು ಪಾಸುಮಾಡಿದ್ದೇ ಆದರೆ ಇಂಡಿಯಾ ಸರಕಾರದವರು ಈ ಪ್ರಾಂತ್ಯವನ್ನು ಪ್ರತ್ಯೇಕವಿಡಲು ಬದಲು ಬೇರೆ ಪ್ರಾಂತ್ಯದೊಂದಿಗೆ ಸಂಯೋಜನೆ ಮಾಡಿದ್ದೇ ಆದರೆ ಆ ಪ್ರಾಂತ್ಯದವರು ಈ ತರದ ತೆರಿಗೆಯನ್ನು ಕೊಡುತ್ತಿಲ್ಲವಾದರೂ ನಾವು ಮಾತ್ರ ತೆರಬೇಕಾಗುವುದು. ಇವೆಲ್ಲಾ ಕಾರಣಗಳಿಗಾಗಿ ನಾನು ಈ ಮಸೂದೆಯನ್ನು ವಿರೋಧಿಸುತ್ತೇನೆ.

ಶ್ರೀ ಕೆ ಪಿ ಕರುಂಬಯ್ಯನವರು ಮಸೂದೆಗೆ ಒತ್ತಾಸೆ ಕೊಡುತ್ತಾ ಹೇಳಿದ್ದು—ಈ ಸಭೆಯವರು ಮಸೂದೆಯ ತತ್ವವನ್ನು ಒಪ್ಪಿ, ಅದನ್ನು ಸಿಲೆಕ್ಟ್ ಕಮಿಟಿಗೆ ಬಿಟ್ಟು ಈಗ ಮಸೂದೆಯನ್ನು ವಿರೋಧಿಸುವುದರಲ್ಲಿ ಅರ್ಥವಿಲ್ಲ. ಸಿಲೆಕ್ಟ್ ಕಮಿಟಿಯು ಒಪ್ಪಿದ ಮೇರೆಗೆ ನಾನು ಅದರ ವರದಿಯನ್ನು ಒಪ್ಪಿಕೊಳ್ಳುತ್ತೇನೆ. ಈ ಮಸೂದೆಯನ್ನು ಪಾಸು ಮಾಡುವುದರಿಂದ ನಾವು ಈ ಸಭೆಯಲ್ಲಿ ಒಮ್ಮತದಿಂದ ಮಂಜೂರುಮಾಡಿದ ಜವಾಬ್ದಾರಿ ಸರಕಾರದ ಠರಾವಿಗೆ [illegible] ಕೊಟ್ಟಂತಾಗುವದೆ. ಜವಾಬ್ದಾರಿ ಸರಕಾರವನ್ನು ನಡೆಸುವುದಕ್ಕೆ ಸರಕಾರದ ಆರ್ಥಿಕ [illegible]. ಕಳೆದ ವರ್ಷ ದಿಲ್ಲಿಯಲ್ಲಿ ನಡೆದ ಕಾನ್ಫರೆನ್ಸಿನಲ್ಲಿ—ಇಲ್ಲಿಗೆ ಜವಾಬ್ದಾರಿ ಸರಕಾರ ಕೊಡುವ ಮೊದಲು ಇಲ್ಲಿಯ ಆರ್ಥಿಕ ಸ್ಥಿತಿಯನ್ನು [illegible] ಸ್ಪಷ್ಟಪಡಿಸಲಾಯಿತು. ಕೊಡಗಿಗೆ ರಾಜಕೀಯ ಸುಧಾರಣೆ ಕೊಡುವ ವಿಚಾರದಲ್ಲಿ ನನಗೆ ಸಂಶಯವಿಲ್ಲ. ಕೇಂದ್ರ ಸರಕಾರದ ಪ್ರಧಾನ ಮಂತ್ರಿಯವರಾದ ಪಂಡಿತ ನೆಹರೂರವರು—ಚೀಫ್ ಕಮಿಷನರ ಪ್ರಾಂತ್ಯಗಳಿಗೆ ಸುಧಾರಣೆ ಕೊಡುವ ವಿಚಾರ ಬೇಗನೆ ಆಲೋಚಿಸಲ್ಪಡುವುದೆಂದು ಪಾರ್ಲಿಮೆಂಟಿನಲ್ಲಿ ಹೇಳಿದ ಮಾತು ನಮಗೆ ಜವಾಬ್ದಾರಿ ಸರಕಾರವನ್ನು ಕೊಡುವ ಭರವಸೆಯನ್ನು ಹೆಚ್ಚಿಸಿದೆಯೆಂಬುದರಲ್ಲಿ ಸಂಶಯವಿಲ್ಲ. ಸಮ್ಮಿಳಿತ ಕಂದಾಯ ಮಸೂದೆಯನ್ನು ನಾವು ಒಪ್ಪಿಕೊಂಡದ್ದಾದರೂ ಆ ಮಸೂದೆಯನ್ನು ತಿರಸ್ಕರಿಸಿದ್ದರಿಂದಾಗಿ [illegible] ಈ ಮಸೂದೆಯ ತತ್ವವನ್ನು ಈ ಸಭೆಯು ಒಪ್ಪಿಕೊಂಡು ಸಿಲೆಕ್ಟ್ ಕಮಿಟಿಗೆ ಬಿಟ್ಟದ್ದರಿಂದ ಸಮ್ಮಿಳಿತ ಕಂದಾಯ ಮಸೂದೆಯನ್ನು ವಿರೋಧಿಸಬೇಕೆಂದು ನಾವು ಒಮ್ಮತದಿಂದ ಆ ಮಸೂದೆಯ ಸಿಲೆಕ್ಟ್ ಕಮಿಟಿಯಲ್ಲಿ ಸೂಚಿಸಿದ್ದೇವೆ. ಸಮ್ಮಿಳಿತ ಕಂದಾಯದ ಮಸೂದೆಯು ಜಾರಿಗೆ ಬಂದರೂ [illegible] ಮಾತ್ರ. ಅಷ್ಟರಲ್ಲಿ ರಿಸೆಟ್ಲ್‌ಮೆಂಟ್ ಪ್ರಾರಂಭವಾಗಿಯೇ ಇರುವುದು. ಸಮ್ಮಿಳಿತ ಕಂದಾಯದ ಮಸೂದೆಯನ್ನು ಕೇಂದ್ರ ಸರಕಾರದವರು ಹಿಂತೆಗೆಯಬೇಕೆಂದೂ, ಇಲ್ಲವಾದರೆ ರೂಪಾಯಿಗೆ ಬರೇ ಎರಡು ಆಣೆ ಮಾತ್ರ ಹೆಚ್ಚಿಸಲಾಗುವದೆಂದೂ ಇದು ಸಿಲೆಕ್ಟ್ ಕಮಿಟಿಯವರು ವರದಿ ಮಾಡಿರುವರು. ಇದರ ಮೇರೆ [illegible] ರೂ. ೨೦,೦೦೦ ದೊರೆಯಬಹುದು. ಇದು ಅಷ್ಟೊಂದು ದೊಡ್ಡ ಹೊರೆಯೇನೂ ಅಲ್ಲ. ಆದಾಯ ತೆರಿಗೆಯು [illegible] ತೆರಿಗೆಯಾಗಿದೆ. ಇದು ಕೊಡಗಿನ ೨ ಲಕ್ಷ ಜನರ [illegible] ಮೇಲೆ ಮಾತ್ರ ಬೀಳುವದಾಗಿದೆ. ಆದುದರಿಂದ ಇದು ಸಾಮಾನ್ಯ ಜನರ ಮೇಲೆ ಬೀಳುವ ತೆರಿಗೆಯಲ್ಲ. ಈ ಮಸೂದೆಯನ್ನು ಮಂಜೂರು ಮಾಡಿದರೆ ನಮ್ಮ ಸರಕಾರದ ಆರ್ಥಿಕ ಸ್ಥಿತಿಯು ಉತ್ತಮಗೊಂಡು ದೇಶಾಭಿವೃದ್ಧಿಯ ಕೆಲಸ ಕಾರ್ಯಗಳನ್ನು ಮಾಡಲು ಅನುಕೂಲವಾಗುವದು. ಆದ ಕಾರಣ ಇದನ್ನು ಪಾಸ ಮಾಡುವುದು ಯುಕ್ತ.

ಶ್ರೀ ಸಿ. ಎಂ. ಪೂಣಚ್ಚನವರು ಠರಾವನ್ನು ವಿರೋಧಿಸುತ್ತಾ ಹೇಳಿದ್ದೇನೆಂದರೆ— ಈ ಮಸೂದೆಯ ತತ್ವವನ್ನು ನಾವು ಒಪ್ಪಿಕೊಂಡದ್ದು ನಿಜ. ಆದರೆ ಈ ಮಸೂದೆಯಲ್ಲಿ ಇನ್ನೂ ತಿದ್ದುಪಡಿ ಮಾಡಬೇಕಾದ್ದರಿಂದ ಇದರ ಚರ್ಚೆಯನ್ನು ಈಗ ಮಾಡದೆ ಬರುವ ಬಜೆಟ್ ಮೀಟಿಂಗಿನವರೆಗೆ ಮುಂದರಿಸಬೇಕೆಂದು ನಾನು ಸೂಚಿಸಿದೆನು. ಆದರೆ ಈ ಸಭೆಯು ಒಪ್ಪಿಗೆಯನ್ನೀಯಲಿಲ್ಲ. ಈ ಕೌನ್ಸಿಲಿನ ಅಧಿಕಾರವು ಬಹು ಕಡಿಮೆ. ಕೇಂದ್ರ ಸರಕಾರವು ಕೆಲವು ಮೆಂಬರುಗಳು ಕಳುಹಿಸಿದ ತಿದ್ದುಪಡಿಗಳನ್ನು ತಿರಸ್ಕರಿಸಿ, [illegible] ರೀತಿಯ ಬದಲಾವಣೆಗಳನ್ನು ಮಾಡಲು ಅವಕಾಶಕೊಡದ್ದು ವ್ಯಸನಕರ. ಶ್ರೀ ಸೋಮಣ್ಣನವರು ಹೇಳಿದಂತೆ ಕೊಡಗಿಗೆ ಇನ್ನೂ ಸುಧಾರಣೆ ದೊರೆತಿಲ್ಲ. ಆದುದರಿಂದ ಈ ಮಸೂದೆಯನ್ನು ಈಗ ಪಾಸು ಮಾಡದೆ ಬಾಕಿ ಇಟ್ಟು, ಇಂಡಿಯಾ ಸರಕಾರವನ್ನು ಸುಧಾರಣೆಯ ವಿಚಾರ ಕೇಳಿ ಪ್ರ

ಕೌನ್ಸಿಲ್ ಮೀಟಿಂಗು.

ಷ್ಟು ಮಾಡಿಕೊಂಡು ನಂತರ ಬಜೆಟ್ ಮೀಟಿಂಗಿನಲ್ಲಿ ಇದನ್ನು ಚರ್ಚಿಸುವುದು ಉತ್ತಮವಾಗಿದೆ. ಸರ್ಕಾರದಲ್ಲಿ ಜನರಿಗೆ ಪ್ರಾತಿನಿಧ್ಯವಿಲ್ಲದೆ ತೆರಿಗೆ ಹಾಕಬಾರದೆಂಬುದು ಜನರ ಪ್ರಾಥಮಿಕ ಹಕ್ಕಾಗಿದೆ. ಈಗ ನಮ್ಮ ಸರ್ಕಾರದ ರೀತಿ ನೀತಿಗಳನ್ನು ರೂಪಿಸುವ ಹಕ್ಕಾಗಲೀ, ಅದರ ಹಣಕಾಸಿನ ವಿಚಾರದ ಅಧಿಕಾರವಾಗಲೀ ನಮಗಿಲ್ಲ. ನಮ್ಮ ಸರ್ಕಾರವು ತಲೆಭಾರವಾಗಿದೆ. ಅವನ್ನು ಖೋತಾ ಮಾಡುವ ಅಧಿಕಾರ ನಮಗಿಲ್ಲ. ಕಳೆದ ಹತ್ತೆಂಟು ವರ್ಷಗಳಿಂದ ನಮ್ಮ ಸರ್ಕಾರದ ಬಜೆಟ್ಟು ಉಳಿತಾಯದ್ದಾಗಿದೆ. ಆದ ಕಾರಣ ಇಲ್ಲಿಯ ಆದಾಯದಲ್ಲಿ ಅಪಘಾತವೇನೂ ಇಲ್ಲ. ಅಂದ ಮೇಲೆ ಈ ತೆರಿಗೆಯ ಆವಶ್ಯಕತೆ ಈಗಿಲ್ಲ. ಆದುದರಿಂದಲೇ ಇದನ್ನು ೩ ತಿಂಗಳವರೆಗಾದರೂ ಮುಂದರಿಸಬೇಕೆಂದು ನಾನು ಸೂಚಿಸಿದ್ದಾಗಿದೆ. ಹಿಂದೂದೇಶದ ಹಲವು ಪ್ರಾಂತ್ಯಗಳ ಸರಾಸರಿ ಎಕರೆ ಒಂದರ ಕಂದಾಯದ ಅಧಿಕಾರಿಯ ಕೃತದ ಪಟ್ಟಿಯು ನನ್ನಲ್ಲಿದೆ. ಅದರ ಪ್ರಕಾರ ಕೊಡಗಿನಲ್ಲಿರುವ ಕಂದಾಯದ ದರವು ಕೆಲವು ಮಾದರಿಯಂತೆ ಕ... ಕ ಪಿ ಕಂದಾಯ... ವಾದರೂ ಇಲ್ಲಿ ಏರಿ ಪ್ರಡೇಶಗಳಿಗಿಂತ ಕಡಿಮೆಯಾಗಿಲ್ಲ. ಕೃಷಿ ವ್ಯವಸಾಯವು ಕೊಡಗಿನ ಅಭಿವೃದ್ಧಿಗೆ ಒಂದು ಮುಖ್ಯವಾದ ಸಾಧನವಾಗಿದೆ. ಇದರ ಮೇಲೆ ದೊಡ್ಡ ತೆರಿಗೆಯನ್ನು ಹೊರಿಸುವುದು ಸರಿಯಲ್ಲ. ಪ್ಲಾಂಟರುಗಳಿಗೆ ಲೆಕ್ಕಗಳನ್ನು ಸರಿಯಾಗಿ ಇಡಲು ಅವಕಾಶ ದೊರೆಯುವುದರಿಂದ ಇದೊಂದು ವರ್ಷ ಕಳೆದ ಮೇಲೆ ಈ ತೆರಿಗೆ ಹಾಕುವುದು ಯುಕ್ತವೆಂದೂ ಸೂಚನೆ ಕೊಡಲಾಗಿತ್ತು. ಇವೆಲ್ಲಾ ಕಾರಣಗಳಿಗಾಗಿ ಈ ಮಸೂದೆಗೆ ನನ್ನ ಒಪ್ಪಿಗೆ ಕೊಡಲಾರೆನು.

ಶ್ರೀ ಪಿ ಐ ಬೆಳ್ಯಪ್ಪನವರು ಮಸೂದೆಗೆ ಒತ್ತಾಸೆಯಾಗಿ ಮಾತನಾಡುತ್ತಾ— ಈ ಮಸೂದೆಯು ಸಿಲೆಕ್ಟ್ ಕಮಿಟಿಯ ಮೆಂಬರುಗಳೇ ಈಗ ಮಸೂದೆಗೆ ವಿರೋಧಿಸುತ್ತಿರುವುದು ಆಶ್ಚರ್ಯಕರ. ೧೯೪೯ನೇ ಮಾರ್ಚಿಯಲ್ಲಿ ಸರ್ಕಾರದವರು ಈ ಮಸೂದೆಯನ್ನು ಮಂಡಿಸಿದಾಗ್ಯೂ ನಿಷಾನಿಷೇಧವನ್ನು ಸಾಧಿಸಲಿಲ್ಲವೆಂಬ ಕಾರಣದಿಂದ ನಾವು ಬಹುಮತದಲ್ಲಿ ಅದನ್ನು ವಿರೋಧಿಸಿದೆವು. ನಂತರ ಇಲ್ಲಿಯ ಸರ್ಕಾರದವರು ಇಂಡಿಯಾ ಸರ್ಕಾರದ ಸೂಚನೆಯಂತೆ ಪೂರ್ತಿ ನಿಷಾನಿಷೇಧಕ್ಕೆ ಧಮ್ಮ ಕೊಟ್ಟು, ಸರಿಯಾದ ಮಾರ್ಚಿ ಟಿನಲ್ಲಿ ರೇಶನಿಂಗ್ ಪದ್ಧತಿಯನ್ನು ಜಾರಿಗೆ ತಂದು, ಈ ಮಸೂದೆಯನ್ನು ಪುನಹ ಕೌನ್ಸಿಲಿನ ಮುಂದೆ ತಂದರು. ಈ ಸಭೆ ಅಗ್ಯ ಇತರ ತತ್ವವನ್ನು ಒಪ್ಪಿಕೊಂಡು, ಇನ್ನೊಂದು ಮೀಟಿಂಗಿನಲ್ಲಿ ಅದರಲ್ಲಿ ಬೇಕಾದ ತಿದ್ದುಪಡಿ ಮಾಡಲು ಒಂದು ಸಿಲೆಕ್ಟ್ ಕಮಿಟಿಗೆ ಬಿಡಲಾಯಿತು. ಈ ಕಮಿಟಿಯು ಅಸಾಧಾರಣವಾಗಿ ೧೦ ಮೀಟಿಂಗುಗಳನ್ನು ನಡಿಸಿ, ಕೂಲಂಕುಷವಾಗಿ ಚರ್ಚೆ ನಡಿಸಿ, ಬೇಕಾದ ಬದಲಾವಣೆಗಳನ್ನು ಮಾಡಿ ಇಂದು ಕೌನ್ಸಿಲಿನ ಮುಂದೆ ಒಪ್ಪಿಗೆಗೆ ಇಟ್ಟಿರುವಾಗ್ಯೆ ಸಿಲೆಕ್ಟ್ ಕಮಿಟಿಯ ಮೆಂಬರುಗಳೇ ಅದರಲ್ಲಿ ಇನ್ನೂ ತಿದ್ದುಪಡಿಗಳಾಗಬೇಕೆನ್ನುತ್ತಾ, ಅದರ ಚರ್ಚೆಯನ್ನು ಕೆಲವು ತಿಂಗಳವರೆಗೆ ಮುಂದರಿಸಬೇಕೆಂದೂ, ಮಸೂದೆಗೇ ವಿರೋಧಿ ಪಕ್ಷದವರು ಹೇಳುವುದು ಯಾವ ನ್ಯಾಯವೂ ತಿಳಿಯದು. ಕಳೆದ ವರ್ಷ ಮಸೂದೆಯ ತತ್ವವನ್ನು ಒಪ್ಪಿಕೊಂಡಾಗ್ಯೂ ಇದ್ದ ಸ್ಥಿತಿಗತಿಗಳೇ ಈಗಲೂ ಇವೆ. ಈಗ ಕೊಡಗಿಗೆ ಸುಧಾರಣೆ ದೊರೆಯದೆ ಇದ್ದರೆ ಆಗಲೂ ದೊರೆಯುತ್ತಿರಲಿಲ್ಲ! ಕೊಡಗಿನ ಆರ್ಥಿಕ ಸ್ಥಿತಿಯ ವಿಚಾರ ಆಗಿನಂತೆಯೇ ಆಗಲೂ ತೀರ್ಮಾನವಾಗಿರಲಿಲ್ಲ! ಅಂದ ಮೇಲೆ ಒಮ್ಮೆ ಒಪ್ಪಿದ ಮಸೂದೆಗೆ ಈಗ ವಿರೋಧಿಸುವುದರಲ್ಲಿ ಅರ್ಥವೇನಿದೆ? ಸುಧಾರಣೆಯು ಪಟ್ಟಿಗ ವಾತಾವರಣವು ಅಪಾಯಕರವಾಗಿದೆ. ಶ್ರೀ ರಾಜಗೋಪಾಲಾಚಾರ್ಯರು ಹೇಳಿದ ನಂತರ ಪ್ರಧಾನ ಮಂತ್ರಿ ಸ್ಥಾನಕ್ಕೆ ಹೋಗುವವರು... ವೆಂಟಿನಲ್ಲಿ ಕೊಟ್ಟ ಬಜೆಟ್ಟಿನ ನಮ್ಮ ಸುಧಾರಣೆಯು ನಿರೀಕ್ಷಿತಕ್ಕೆ ಶಕ್ತಿಯನ್ನು ಹೆಚ್ಚಿಸಿದೆ. ಸುಧಾರಣೆ ದೊರೆಯುತ್ತಿದ್ದ ಕಾಲದಲ್ಲಿ ನಮ್ಮ ಕೊಡಗಿನವರು ಬರ್ಮಾ ಮತ್ತು ಅನ್ಯ ದೇಶಗಳಲ್ಲಿ ನಾನಾ ಕಷ್ಟಗಳನ್ನು ಅನುಭವಿಸಿದ್ದು ಭಾರತ ಭೂಮಿಯ ಸ್ವಾತಂತ್ರ್ಯಕ್ಕಾಗಿ ಹೇಗೆ ಇತರರೊಂದಿಗೆ ಕೊಡಗಿನವರು ಕಷ್ಟನಷ್ಟಗಳನ್ನು ಅನುಭವಿಸಿದರೋ ಅದರಂತೆಯೇ ಕೊಡಗಿನ ಜವಾಬ್ದಾರಿ ಸರ್ಕಾರಕ್ಕಾಗಿ ತ್ಯಾಗಮಾಡಲು ನಮ್ಮ ದೇಶಿಯರು ಸಿದ್ಧರಿರುವರು. ಕೊಡಗನ್ನು ಈಗಿರುವಂತೆ ಪ್ರತ್ಯೇಕ ಪ್ರಾಂತ್ಯವಾಗಿಯೇ ಇಟ್ಟುಕೊಂಡು ಜವಾಬ್ದಾರಿ ಸರ್ಕಾರ ಸ್ಥಾಪಿಸಬೇಕೆಂದು ದೃಢವಿಶ್ವಾಸವಿರುವ ಬಹುಮತದವರು ಇದನ್ನು ಬೇರೆ ಪ್ರಾಂತ್ಯದೊಂದಿಗೆ ಸಂಯೋಜನೆಯಾಗಲು ಎಂದೂ ಬಿಡಲಾರರು. ಆದುದರಿಂದಲೇ ಬೇಗನೆ ಸುಧಾರಣೆ ಪಡೆಯಲು ಅನುಕೂಲಿಸುವಂತೆ ಇಲ್ಲಿಯ ಸರ್ಕಾರದ ಆದಾಯವನ್ನು ಹೆಚ್ಚಿಸಲು ಇಂಥಾ ತೆರಿಗೆಗಳನ್ನು ಕೊಡಲು ಒಪ್ಪುವುದಾಗಿದೆ. ಪೂರ್ತಿ ನಿಷಾನಿಷೇಧವನ್ನೇ ಸಾಧಿಸಬೇಕೆನ್ನುವ ಕಾಂಗ್ರೆಸಿಗರು ಸರಿಯಾದ ರೇಶನಿಂಗನ್ನು ತೆಗೆಯಬೇಕೆಂದು ಹೇಳಲಾರರು. ಅಂದ ಮೇಲೆ ರೇಶನಿಂಗಿನಿಂದ ಉಂಟಾದ ಆರೇಳು ಲಕ್ಷ ರೂಪಾಯಿಯ ನಷ್ಟ ಭರ್ತಿಮಾಡಲಾದರೂ ಈ ಮಸೂದೆಯನ್ನು ಪಾಸು ಮಾಡಬೇಕಲ್ಲವೇ? ಮತ್ತಲ್ಲ, ಕೊಡಗಿನ ಅಭಿವೃದ್ಧಿಗೆ ಅತ್ಯಾವಶ್ಯಕವಾದ ಕಾಲೇಜು ಮತ್ತು ಹೈಸ್ಕೂಲು ಕಟ್ಟಡಗಳು, ಬೇತ್ರಿ ಮುಂತಾದ ಸೇತುವೆಗಳು, ಲಕ್ಷ್ಮಣ ತೀರ್ಥ ನಗ್ಗೆರೆ ಕಟ್ಟೆಗಳು, ಕ್ಷಯರೋಗ ಸ್ಯಾನಿಟೋರಿಯಂ, ಹೆಂಗಸರ ಆಸ್ಪತ್ರೆ, ಡಿ ಬೋರ್ಡಿಗೆ ಧನಸಹಾಯ ಮುಂತಾದವುಗಳಿಗಾಗಿ ತೆರಿಗೆ ಸ್ವೀಕರಿಸಬೇಕಲ್ಲವೇ? ಕಳೆದ ವರ್ಷ ಡೆಲ್ಲಿಯಲ್ಲಿ ಕಾನ್ಫರೆನ್ಸಿನಲ್ಲಿ ಕೊಡಗಿನ ಸರಕಾರದ ಆರ್ಥಿಕ ಅಭಾವದಿಂದ ಕೊಡಗು ತನ್ನ ಕಾಲಮೇಲೆ ನಿಲ್ಲಲಾರದ, ಬೇರೆ ಪ್ರಾಂತ್ಯಕ್ಕೆ ಸೇರಲೇಬೇಕಾಗುವದೆಂದು ಹೇಳಿದ ಶ್ರೀ ಪೂಣಚ್ಚನವರು ಇಂದು ಕೊಡಗಿನ ಬಜೆಟ್ಟು ಕಳೆದ ಎಂಟ್ಹತ್ತು ವರ್ಷಗಳಿಂದ ಉಳಿತಾಯದ್ದಾಗಿದ್ದು, ಇಲ್ಲಿ ಹಣದ ಕೊರತೆ ಇಲ್ಲವೆಂದು ಒಪ್ಪಿಕೊಂಡದ್ದು ಗಂಭೀರವಾದ ವಿಚಾರ. ಈಗ ಇಲ್ಲಿ ನಮಗೆ ಜವಾಬ್ದಾರಿ ಸರಕಾರವಿಲ್ಲದಿದ್ದರೂ, ಕಾಂಗ್ರೆಸು ಸರಕಾರ ಕೇಂದ್ರದಲ್ಲಿದ್ದು ಅದರ ಸೀದಾ ಆಡಳಿತದಲ್ಲಿ ಈ ಸರ್ಕಾರಕ್ಕೆ ಈ ಕೌನ್ಸಿಲು ಸಲಹೆ ಕೊಡಲು ತಕ್ಕ ಅವಕಾಶವಿದೆ. ನಾವು ಕೊಡುವ ತೆರಿಗೆಗಳ ಹಣವು ದೇಶಾಭಿವೃದ್ಧಿ ಕೆಲಸಗಳಿಗೆ ವಿನಿಯೋಗಿಸಲ್ಪಡುತ್ತಿದೆ. ಇಂಥಾ ತೆರಿಗೆಯಿಂದ ಬಜೆಟ್ಟಿನಲ್ಲಿ ಉಳಿತಾಯ ಮಾಡಿದರೆ ಬೇಗನೆ ಜವಾಬ್ದಾರಿ ಸರಕಾರ ಪಡೆಯಲು ಸಾಧ್ಯವಾಗುವುದು. ಕೊಡಗಿನ ಭವಿಷ್ಯತ್ತಿನ ವಿಚಾರ ಅಭಿಪ್ರಾಯ ಕೊಡಲು ಈ ಕೌನ್ಸಿಲಿನ ಮೆಂಬರುಗಳು ಜನರ ನಿಜವಾದ ಪ್ರತಿನಿಧಿಗಳೆಂದೂ, ಅವರ ಬಹುಮತದ ಅಭಿಪ್ರಾಯವನ್ನು ಸರ್ಕಾರದವರು ಅಂಗೀಕರಿಸಬೇಕೆಂದೂ ಒಪ್ಪಿಕೊಳ್ಳುವೆನೆಂದೂ ಈ ಮೊದಲು ಸಭೆಯ ಶ್ರೀ ಸೋಮಣ್ಣನವರು ಇಂದು ತೆರಿಗೆ ಹಾಕಲು ಇಲ್ಲಿಯ ಮೆಂಬರುಗಳಿಗೆ ಹಕ್ಕಿಲ್ಲವೆನ್ನುತ್ತಾರಲ್ಲಾ ಅದು ಹೇಗೆ? ಸರ್ಕಾರವನ್ನು ನಡಿಸಲು ಜವಾಬ್ದಾರಿಯುಕ್ತರಾದ ಕೌನ್ಸಿಲು ಮೆಂಬರುಗಳು ತಮ್ಮ ಅಭಿಪ್ರಾಯಗಳನ್ನು ಕೊಡಬೇಕೆಂಬುದು ... ಯೋಗ್ಯವಲ್ಲ. ಕೊಡಗಿಗೆ ಸುಧಾರಣೆಯನ್ನು ಸಿದ್ಧಿಸುವ ಈ ವರ್ಷವೇ ಈ ತೆರಿಗೆಯನ್ನು ಹಾಕಿ ಆದಾಯವನ್ನು ಹೆಚ್ಚಿಸಬೇಕಾದದ್ದು ಅವಶ್ಯ. ಇದಕ್ಕಾಗಿ ಪ್ಲಾಂಟರು ಸ್ನೇಹಿತರುಗಳೂ ಸ್ವಲ್ಪ ತ್ಯಾಗ ಮಾಡುವರೆಂಬ ನನ್ನ ನಂಬಿಕೆ. ಹೇಗೂ ಕೊಡಗಿಗೆ ಕೂಡಲೆ ಜವಾಬ್ದಾರಿ ಸರಕಾರ ಪಡೆಯಬಲ್ಲೆಸುವ ವರೆಗಾದರೂ ಈ ಮಸೂದೆಗೆ ಒತ್ತಾಸೆ ಅಪೇಕ್ಷಿಸುತ್ತೇನೆ.

ಶ್ರೀ ಕೆ ಕೆ ಬೆಳ್ಯಪ್ಪನವರು — ನಾನೊಬ್ಬ ಸಿಲೆಕ್ಟ್ ಕಮಿಟಿಯ ಮೆಂಬರನಾಗಿ ಸಿಲೆಕ್ಟ್ ಕಮಿಟಿಯ ವರದಿಯಲ್ಲಿ ಪ್ರತ್ಯೇಕ ರೀತಿಯನ್ನು ಬರೆದಿರುವೆನು. ಅದರಂತೆ ವ್ಯವಸಾಯಗಾರರ ಮೇಲೆ ಹೆಚ್ಚಿನ ಹೊರೆ ಹೊರಿಸುವುದು ಸರಿಯಲ್ಲ. ಈಗಲೇ ಅವರು ಕೊಡುವ ತೆರಿಗೆ ಹೆಚ್ಚಾಗಿದೆ. ಇದರೊಂದಿಗೆ ಕೃಷಿ ಆದಾಯ ಮಸೂದೆಯೊಂದು ಸಿಲೆಕ್ಟ್ ಕಮಿಟಿಯ ವಿಚಾರದಲ್ಲಿ. ಅದಕ್ಕೆ ನನ್ನ ವಿರೋಧವಿದೆ. ಕೃಷಿ ವ್ಯವಸಾಯದ ಮೇಲೆ ಹೆಚ್ಚಿನ ಹೊರೆ ಹಾಕಿ ಅದನ್ನು ನಾಶಗೊಳಿಸುವುದು ಯೋಗ್ಯವಲ್ಲ. ಇದರ ಬದಲು ಸರಕಾರಕ್ಕೆ ಹಣ ಸಾಲದಿದ್ದರೆ ಮಾರಾಟ ತೆರಿಗೆ (ಸೇಲ್ಸ್ ಟ್ಯಾಕ್ಸ್) ಮೊದಲಾದವುಗಳನ್ನು ಹಾಕಿ ಆದಾಯ ಮಾಡಿಕೊಳ್ಳಬಹುದು. ಕಾಂಗ್ರೆಸಿನವರ ತತ್ವದಂತೆ ನಿಷಾನಿಷೇಧ ಅಥವಾ ರೇಶನಿಂಗ್ ಪದ್ಧತಿಯನ್ನು ಜಾರಿಯಲ್ಲಿಡುವುದು ಸರಿಯಲ್ಲ. ಅದರಿಂದಲೇ ಸರ್ಕಾರದ ಉತ್ಪತ್ತಿ ಕಡಿಮೆಯಾಗುವುದಾಗಿದೆ. ಈ ಮಸೂದೆಯನ್ನು ಕೌನ್ಸಿಲಿನ ಹೊಸ ಚುನಾವಣೆಯಾದ ನಂತರ ಚರ್ಚಿಸುವುದು ಯೋಗ್ಯವೆಂದು ನಾನು ಈ ಮೊದಲು ಹೇಳಿದ್ದರೂ ಸಿಲೆಕ್ಟ್ ಕಮಿಟಿಯು ಈ ವಿಚಾರ ತುಂಬಾ ಚರ್ಚಿಸಿ ವರದಿಮಾಡಿರುವುದರಿಂದ ಇಂದು ಒಪ್ಪಿಕೊಂಡು, ಮಸೂದೆಯನ್ನು ಪಾಸುಮಾಡುವುದು ಯುಕ್ತವೆಂದು ನನ್ನ ಅಭಿಪ್ರಾಯವಾಗಿದೆ.

ಕಡೆಗೆ ಫೈನಾನ್ಸ್ ಮೆಂಬರು ಜವಾಬು ಕೊಡುತ್ತಾ—ಮಸೂದೆಯ ತತ್ವವನ್ನು ಈ ಮೊದಲು ಒಪ್ಪಿಕೊಂಡು ಸಿಲೆಕ್ಟ್ ಕಮಿಟಿಯಲ್ಲಿ ಧೀರ್ಘ ಚರ್ಚೆಮಾಡಿ ಬೇಕಾದ ತಿದ್ದುಪಡಿಗಳನ್ನು ಮಾಡಿದ್ದು ಈಗ ಮಸೂದೆಗೇ ವಿರೋಧ ಮಾಡಿದ ಶ್ರೀಗಳಾದ ಯನ್ ಸೋಮಣ್ಣನವರ ಮತ್ತು ಸಿ ಯಂ ಪೂಣಚ್ಚನವರುಗಳಿಗೆ ತಕ್ಕುದಾದ ಉತ್ತರಗಳನ್ನು ಕೊಟ್ಟು ನನ್ನ ಜವಾಬ್ದಾರಿಯನ್ನು ಹಗುರ ಮಾಡಿದ ಶ್ರೀಗಳಾದ ಕೆ ಪಿ ಕರುಂಬಯ್ಯನವರು ಮತ್ತು ಪಿ ಐ ಬೆಳ್ಯಪ್ಪನವರುಗಳಿಗೆ ನನ್ನ ವಂದನೆಗಳು. ಈ ತೆರಿಗೆಯು ಜನರ ಮೇಲೆ ದೊಡ್ಡ ಹೊರೆಯೇನೂ ಅಲ್ಲ. ಇದು ಸುಮಾರು ೪೦೦ ಜನ ಶ್ರೀಮಂತ ಪ್ಲಾಂಟರುಗಳ ಮೇಲೆ ಮಾತ್ರ ಬೀಳುತ್ತದೆ. ಸರ್ಕಾರವನ್ನು ಜನರ ಹಿತದ ದೃಷ್ಟಿಯಿಂದ ನಡಿಸಲು ಹಣಗಾರರು ಸರ್ಕಾರಕ್ಕೆ ಯೋಗ್ಯ ಸಹಾಯ ಮಾಡಬೇಕು. ... ವನ್ನೂ ಇಟ್ಟು ... ಸರಿಯಲ್ಲ. ಈ ಕೌನ್ಸಿಲಿನ ಮುಖ್ಯಕರ್ತರು ಟೀ ತೋಟಗಳಲ್ಲಿ ಚೀಪ್ ಕಮಿಷನರು ಜನರ ಪ್ರತಿನಿಧಿಗಳ ಅಭಿಪ್ರಾಯವನ್ನು ಮುಖ್ಯ ವಿಚಾರಗಳಲ್ಲಿ ಬಗ್ಗೆ ಕೇಳುತ್ತಿದ್ದರೆ ಕೊಡಗಿನಲ್ಲಿ ತಲೆದೋರಿದ ಸಮಸ್ಯೆಯನ್ನು ಪರಿಹರಿಸಲು ಅರ್ಥವಿಲ್ಲ. ಕೆಲವು ವರ್ಷಗಳಿಂದ ಇದ್ದ ಗಜೆಟೆಡ್ ಉದ್ಯೋಗಸ್ಥರುಗಳ ಸಂಖ್ಯೆಯು ಈಗ ಬಹಳ ಕಡಿಮೆಯಾಗಿದೆ. ಈ ಕೌನ್ಸಿಲಿನ ಮೆಂಬರುಗಳ ತೀರ್ಮಾನದಂತೆಯೇ ಸರಿಯಾದ ಮಾರ್ಚಿಯಲ್ಲಿ ರೇಶನಿಂಗ್ ಜಾರಿಗೆ ತಂದದ್ದಾಗಿದೆ. ಅದರಿಂದುಂಟಾಗಿರುವ ನಷ್ಟವನ್ನು ಭರ್ತಿಮಾಡಬೇಕಾಗಿದೆ. ಅಲ್ಲದೆ ಜನರ ಹಿತಕ್ಕಾಗಿ ಆಗಬೇಕಾದ ಕಟ್ಟಡ, ಸೇತುವೆ, ಕಾಲೇಜು, ಜಿಲ್ಲಾ ಬೋರ್ಡಿಗೆ ಧನಸಹಾಯ ಮುಂತಾದವುಗಳಿಗೆ ಹಣಬೇಕಾಗಿದೆ. ಜನರು ತೆರಿಗೆ ಕೊಡದಿದ್ದರೆ ಸರ್ಕಾರ ನಡೆಯಲಾರದು ಎಂದು ಮಾತ್ರ ಹೇಳಬಯಸುತ್ತೇನೆ.

ಅಧ್ಯಕ್ಷರು— ತಿದ್ದುಪಡಿಯಾದ ಮಸೂದೆಯನ್ನು ಮಂಜೂರು ಮಾಡಬೇಕು ಎಂಬ ಠರಾವನ್ನು ಓಟಿಗೆ ಹಾಕಲಾಗಿ ಶ್ರೀಗಳಾದ ಕೆ ಯಂ ಕಾಲಪ್ಪನವರು, ಪಿ ಐ ಬೆಳ್ಯಪ್ಪನವರು, ಕೆ ಪಿ ಅಪ್ಪಯ್ಯನವರು, ಕೆ ಪಿ ಕರುಂಬಯ್ಯನವರು, ಕೆ ಕೆ ಬೆಳ್ಯಪ್ಪನವರು ಮತ್ತು ನಾಲ್ಕು ಉದ್ಯೋಗಸ್ಥ ಮೆಂಬರುಗಳು ಪರವಾಗಿ ಓಟು ಮಾಡಿದ್ದರಿಂದ ಮಸೂದೆ ಪಾಸಾಯಿತು. ಶ್ರೀಗಳಾದ ಯನ್ ಸೋಮಣ್ಣನವರು, ಕೆ ಮಲ್ಲಪ್ಪನವರು, ಸಿ ಯಂ ಪೂಣಚ್ಚನವರು, ಯ. ಸ್. ನಾರಾಯಣ ಮೂರ್ತಿಯವರು, ಕೆ. ಯ. ದೇವಯ್ಯನವರು, ಹೆಚ್ ಬಿ ಅಣ್ಣಯ್ಯನವರು, ಪಿ ಯಂ ನಾಣಯ್ಯನವರು ಮತ್ತು ಅಬ್ದುಲ್ ರಹೀಮಾನ್ ಖಾನ್‌ರವರು ಯಾವ ಕಡೆಗೂ ಓಟು ಮಾಡಲಿಲ್ಲ. ನಂತರ ಮೀಟಿಂಗು ಅಂತ್ಯವಾಯಿತು.

ಓದುಗರ ಓಲೆಗಳು

ಬೇಗನೆ ಆಗಬೇಕು.

ವೀರಾಜಪೇಟೆ ಮಡಿಕೇರಿಗಳ ಬಸ್ ಪ್ರಯಾಣಿಕರ ಕೇಂದ್ರಗಳಾಗಿವೆ. ದಿನಕ್ಕೆ ಬಸ್ಸು-ಸ್ಟ್ಯಾಂಡುಗಳಲ್ಲಿ ದಾಗಿ ಅನೇಕ ಜನ [illegible] ಬಿಸಿಲು ತಾಳಿ ಅನೇಕ ಜನಗಳು ಅತ್ತಿತ್ತ ಹಾಯುತ್ತಾರೆ. ಇಂಥಹ ಪ್ರಸಂಗಗಳಲ್ಲಿ ಬಸ್ಸುಗಳು ತಲಪುವ-ಹೊರಡುವ ಸಮಯವು [illegible]

ಈ ತಪ್ಪಿಗೆ (ಮುನ್ಸಿಪಾಲಿಟಿಯೂ ಸರಕಾರ) ಸಂಬಂಧಪಟ್ಟವರು ತಯಾರಿಸಿ, ಪ್ರಯಾಣಿಕರಿಗೆ ಸಹಕರಿಸಬೇಕಾಗಿ ವಿನಂತಿ. ಈ ಪಟ್ಟಿಯು ಕನ್ನಡದಲ್ಲಿಯೇ ಇರಬೇಕಾಗಿಯೂ ಹಳೆ ಪದ್ಧತಿಯಂತೆ ಇಂಗ್ಲಿಷಿನಲ್ಲಿ ಆಗಬಾರದೆಂದೂ ವಿನಂತಿ.

'ವಿಚಾರ'

ಹೆಲ್ತ್ ಆಫೀಸರಿಗೊಂದು ಪ್ರಶ್ನೆ

ಹೆಲ್ತ್ ಆಫೀಸರ್, ಸಂತೆ ಪೇಟೆಯಲ್ಲಿ ಅಕ್ಕಿ ಮಾರುವ ವ್ಯಾಪಾರಸ್ಥರ ಬಳಿ ಇದ್ದ ಅಕ್ಕಿ ತೊಳೆಯುವುದೇ ಬೇಡವೆಂದಿದ್ದರು. ಅದರಿಂದಾಗಿ ಅಕ್ಕಿಯಲ್ಲಿರುವ 'ಮೊಳಕೆ' ಹಾಳಾಗಿ ಬಯಲಿಗೆ ಬರುತ್ತಿದ್ದವು.

ಮಿಲ್ ಮಾಡಿದ ಅಕ್ಕಿಯಿಂದ ಈ ಮೊಳಕೆಗಳು ಹಾಳಾಗುತ್ತವೆ. ಇವನ್ನು ರಕ್ಷಿಸಲು ಅಕ್ಕಿ ಕುಟ್ಟುವುದೇ ಉತ್ತಮವೆಂದಿದ್ದಾರೆ. ಇಂಥಹ ದಿನಗಳಲ್ಲಿ ಹೆಲ್ತ್ ಆಫೀಸರರು ನಮಗೆ ಕೊಟ್ಟ ಉಪದೇಶವನ್ನು ಸುಲಭದಲ್ಲಿ ನಡೆಸಲು ಒಂದು ಉಪಾಯವಿದೆ. 'ರೈಸ್‌ಮಿಲ್'ಗಳಲ್ಲಿ ಒತ್ತುವಿಲ್ ಮಾಡುವುದನ್ನೇ ನಿಲ್ಲಿಸಿದರೆ ಒಳಿತಲ್ಲವೇ? ಈ ಕಾರಣದಿಂದ 'ರೈಸ್‌ಮಿಲ್'ಗಳನ್ನು 'ಬೀಗ' ಮಾಡಬೇಡವೇ? ಈ ಕಾರ್ಯಗಳಲ್ಲಿ ಏನಾದರೂ ಯೋಚಿಸಿರುವರೇ?

'ನಾ ಶಾ. ವಿದ್ಯಾರ್ಥಿ'

ಗಾಂಧೀ ತತ್ತ್ವೋಪಾಸಕರಿಗೆ ಸುಸಂಧಿ,

ಜೀವನವನ್ನೆಲ್ಲಾ ಸೇವೆಯಲ್ಲಿಳಿಸಿ ಸಕಲವನ್ನೂ ತ್ಯಾಗಮಾಡಿದ ಗಾಂಧೀಜಿಯವರ ಪಟ್ಟ ಪ್ರಥಮ ಶಿಷ್ಯರಾದ ಕಾಂಗ್ರೆಸ್ಸಿಗರು 'ಪ್ರತಿಪಲ' ಸಾಧನೆಯಲ್ಲಿ ತೊಡಗಿರುವಾಗ 'ಸರ್ವೋದಯ ಸೇವಕ ಸವಾಜ' ಆಚರಣೆಯಿಡೆಯೆಂದು ಸಪ ಮರೆತು ಹೋದಂತಿದೆ!

ಅಂತಹಲ್ಲಿ ಸಂಭ್ರಮ, ಜನವರಿ ಮೂವತ್ತರ ವರೆಗಿನ ಸಪ್ತಾಹದಲ್ಲಿ ಭಜನ, ಉಪವಾಸ, ಗ್ರಾಮಸೇವ, ಶ್ರಮದಾನ, ವಸ್ತ್ರಯಜ್ಞ, ಶುಚೀಕರಣ ಮೊದಲಾಗವುಗಳಿಗೆ ಅನೇಕ ಸಂದರ್ಭ ಇವೆ. ಪ್ರಾದೇಶಿಕ ಕಾಂಗ್ರೆಸ್ ಮುಂದಾಳುಗಳಲ್ಲೊಬ್ಬರಿಗೆ ಈ ವಿಚಾರ ತಿಳಿದಿರಲಿಲ್ಲ! ಇವರಂತೆ ಭಾರತವನ್ನು ಕಟ್ಟುವ ಇವರಂಥಹ ಅನೇಕರಿಗೆ ಈ ವಿಷಯ ಮರೆತಿರಬಹುದೆಂದು ಇದೊಂದು ಜ್ಞಾಪನೆ.

'ವಿರಾಜ'

ಕಾಲೇಜು ಕಟ್ಟಡ

ಕೊಡಗಿನ ಚೀಫ್ ಕಮಿಷನರ್‌ವರಲ್ಲಿ ನನ್ನ ವಿನಂತಿ.

ಕೊಡಗು ಕಾಲೇಜಿಗೆ ಸ್ಥಳ ಸಂಕೋಚದಿಂದಾಗಿ ಈ ವರ್ಷ B A ತರಗತಿ ತೆರೆಯ ಪದಿಲ್ಲವೆಂಬ ಜವಾಬನ್ನು ಕೌನ್ಸಿಲ್ ಮಿನಿಟಿನ ಪ್ರೊಸೀಡಿಂಗ್ಸನಲ್ಲಿ ಓದಿದೆನು. ಹಾಗಾದರೆ ಕೊಡಗಿನ ಜೋರು ಓದಲು ಅನುಕೂಲವಿಲ್ಲದವರು ಕಟ್ಟಡ ಪೂರ್ತಿಯಾಗುವವರೆಗೆ ಓದುವುದನ್ನು ಬಾಕಿ ಮಾಡಬೇಕಾಗುತ್ತೆ. ಹೀಗೆ ಮಾಡುವುದರ ಬದಲು ನಾಪೋಕ್ಲು ಹೈಸ್ಕೂಲ ಕಟ್ಟಡಕ್ಕೆ ಕಾಲೇಜನ್ನು ವರ್ಗಾಯಿಸಿ ಕಾಲೇಜು ಕಟ್ಟಡ ಪೂರ್ತಿಯಾಗುವವರೆಗೆ ಅಲ್ಲಿ ಕಾಲೇಜು ತೆರೆದು ಗರೀಬರಿಗೆ ಬಹಳ ಕೂಲ ಮಾಡಿಕೊಡುವುದು ದರ್ಮವಲ್ಲವೇ?

ಇಲ್ಲವೇ ಮಡಿಕೇರಿ ಹೈಸ್ಕೂಲಿನಲ್ಲಿರುವ ಕೆಳಗಿನ ತರಗತಿಗಳನ್ನು ರದ್ದು ಮಾಡಿ ಕಾಲೇಜಿಗೆ ಸ್ಥಳ ಒದಗಿಸಬೇಕು. ಕೆಳಗಿನ ತರಗತಿಯ ಬಾಲಕರು ಮಡಿಕೇರಿಯಲ್ಲೇ ಇರುವ ಮುಹಮ್ಮದೀಯ ಸ್ಕೂಲು ಎವಿ ಸ್ಕೂಲು, ಕಾನ್ವೆಂಟ್ ಪತ್ತು ಚರ್ಚ್ ಸ್ಕೂಲುಗಳಲ್ಲಿ ಸೇರಿಕೊಳ್ಳಲಿ. ಯಾವತೊಂದರೆಯೂ ಇಲ್ಲ-ಹೇಗೂ ಬಿ ಎ ತರಗತಿ ತೆರೆಯಲ್ಪಡಲೇ ಬೇಕಾಗಿದೆ.

P M P

ಕೋಳಿ ಜೂಜು

ಈಗಾಗಲೇ ಕೆಲವು ಸೇಂದಿ ಅಂಗಡಿಗಳ ಆಶ್ರಯದಲ್ಲಿ ಕೋಳಿ ಜೂಜುಗಳು ಪ್ರಾರಂಭವಾಗಿವೆ. ಕಾಟಿಕೇರಿಯಲ್ಲಿ ಒಂದು ನಡೆಯಿತು. ಸಿದ್ದಾಪುರದಲ್ಲೂ ನಡೆದಿದೆ. ಕೋಳಿ ಜೂಜಿನ ಜೊತೆಯಲ್ಲಿ ಇತರ ಜುಗಾರಗಳೂ ನಡೆಯುತ್ತವೆ. ಇಂದಾದ್ದನ್ನು ನಿಲ್ಲಿಸಬೇಕೆಂದು ಪತ್ರಿಕೆಯಲ್ಲಿ ಈ ಮೊದಲು ಬರೆದುದನ್ನು ನಾನು ಓದಿದ್ದೇನೆ. ಕೆಲಸವಿಲ್ಲದವರು ಪತ್ರಿಕೆಗೆ ಬರೆಯುವರೆಂದು ಸಂಬಂಧಿಸಿದ ಅಧಿಕಾರಿಗಳು ಯೋಚಿಸಿರಬೇಕು! ಇಲ್ಲದಿದ್ದರೆ ಈ ಜೂಜಾಟ ಅವ್ಯಾಹತವಾಗಿ ಏಕೆ ನಡೆಯುತ್ತಿರಬೇಕು? ಇನ್ನಾದರೂ ಅಧಿಕಾರಿಗಳು ಕಣ್ಣು ತೆರೆಯುವರೇ?

'ಗ್ರಾಮಸ್ಥ'

ಬಸ್ ಲೈನ್

ಮಡಿಕೇರಿಯಿಂದ ತಲಚೇರಿಗೆ ಒಂದು ಬಸ್ ಲೈನನ್ನು ಕೊಡಗು ಮಾಜಿ ಸಿಪಾಯಿಗಳ ಸಂಘಕ್ಕೆ ಕೊಟ್ಟಿರುವರೆಂದು ಪತ್ರಿಕೆಯಲ್ಲಿ ಓದಿದೆನು. ಮಾಜಿ ಸಿಪಾಯಿಗಳ ಸಂಘಕ್ಕೇನು ಒಂದು ಲೈನು ಕೊಟ್ಟ ಟ್ರಾನ್ಸ್‌ಪೋರ್ಟ್ ಅಧಿಕಾರಿಗಳನ್ನು ಮೆಚ್ಚಬೇಕು. ಆದರೆ ಅದೇ ಲೈನಿನಲ್ಲಿ ಕುರ್ಗ್ ಟ್ರಾನ್ಸ್‌ಪೋರ್ಟ್ ಬಸ್ ಒಂದು ಕೆಲವು ದಿನಗಳಿಂದ ಓಡಾಡುತ್ತಿರುವುದು ಕಂಡು ಬಂದಿದೆ. ಈ ಬಸ್ ಕಂಪೆನಿಯವರಿಗೆ ಈ ಲೈನನ್ನು ಕೊಟ್ಟವರಾರು? ಟ್ರಾನ್ಸ್‌ಪೋರ್ಟ್ ಅಧಿಕಾರಿಗಳೇ ಕೊಟ್ಟಿರುವುದಾದರೆ ಸೈನಿಕ ಅದೇ ಲೈನನ್ನು ಪತ್ರೊಬ್ಬರಿಗೆ ಕೊಡುವುದರ ಅರ್ಥವೇನು? ಅಲ್ಲ; ಈ ಲೈನಿಗೆ ಎರಡು ಬಸ್ಸುಗಳ ಏರ್ಪಾಡನ್ನು ಟ್ರಾನ್ಸ್‌ಪೋರ್ಟ್ ಅಧಿಕಾರಿಗಳು ಆಲೋಚಿಸಿರುವರೇ?

ಪ್ರಯಾಣಿಕ

ಭಾಗಮಂಡಲ ಅಂಚೆ ಆಫೀಸು.

ಭಾಗಮಂಡಲ ನಾಡಿಗೆ ಸಂಬಂಧಪಟ್ಟ ಪೋಸ್ಟಾಫೀಸಿಗೆ ಅಂಚೆ ವ್ಯವಹಾರಕ್ಕೆಂದು ಹನ್ನೆರಡು ಗ್ರಾಮಗಳು ಒಳಪಟ್ಟಿವೆ. ಈ ಗ್ರಾಮಗಳಲ್ಲಿ ಹೆಚ್ಚಿನ ಭಾಗವು ಬೆಟ್ಟಗುಡ್ಡಗಳಿಂದ ಕೂಡಿ ಮನೆ ಮಾರುಗಳು ಒಂದಕ್ಕೊಂದು ಬಹು ಅಂತರದಲ್ಲಿದ್ದು ಹೋಗಿ ಬರಲು ಬಹು ಪ್ರಯಾಸಕರವಾಗಿವೆ. ಪ್ರತಿಯೊಂದು ಗ್ರಾಮವನ್ನೂ ಸುತ್ತಿ ಕಾಗದ ಪತ್ರಗಳನ್ನು ಬಟವಾಡೆ ಮಾಡಿ ಬರಲು ಒಬ್ಬ ಪೋಸ್ಟುಮ್ಯಾನಿಗೆ ಸಾಧ್ಯವಾಗುವುದಿಲ್ಲ. ಅದರಲ್ಲೂ ಭಾಗಮಂಡಲದಿಂದ 17ಮೈಲು ದೂರದಲ್ಲಿರುವ ಕರಿಕೆಯಂಥಾ ಗ್ರಾಮಗಳಿಗ್ಹರಿಕೆ ಹೇಗೆ ಸಾಧ್ಯ?

ಆದಕಾರಣ ಊರಿನ ಜನತೆಯು ತಮ್ಮ ಗೋಳನ್ನು ಸರಕಾರದ ಮುಂದಿಟ್ಟು, ಇನ್ನು ಮುಂದಾದರೂ ಸರಿಯಾದ ವ್ಯವಸ್ಥೆಯನ್ನು ಮಾಡಬೇಕೆಂದು ಪ್ರಾರ್ಥಿಸಿದರೆ ಸಂಬಂಧಪಟ್ಟ ಅಧಿಕಾರಿಗಳು ಕಿವಿಮುಚ್ಚಿಕೊಂಡು ಕುಳಿತುಕೊಳ್ಳುವುದೆ? ಈ ಮೊದಲೊಮ್ಮೆ ಪ್ರಕಟಿಸಿದ ಮನವಿಗೆ ಅಲ್ಪ ಸ್ವಲ್ಪವಾದರೂ ಮನ್ನಣೆ ದೊರಕಿದೆಯೆ?

ಪೋಸ್ಟಾಫೀಸಿನವರ ಆಡಳಿತವು ಒಂದು ಕಣ್ಣಿಗೆ ಬೆಣ್ಣೆ ಮತ್ತೊಂದಕ್ಕೆ ಸುಣ್ಣವೆಂದು ನಡೆಯುವಂತಿದೆ. ಮಡಿಕೇರಿಯಿಂದ ಭಾಗಮಂಡಲಕ್ಕೆ ಬರುವ ದಾರಿಯಲ್ಲಿ ಭಾಗಮಂಡಲ ನಾಡಿನ ಮೂರು ಅಂಚೆ ಆಫೀಸುಗಳಿವೆ. ಇವು ಮೂರೂ ಬ್ರಾಂಚ್ ಆಫೀಸುಗಳು. ಈ ಮಧ್ಯೆ ಕೊಟ್ಟೂರು ಪೋಸ್ಟಾಫೀಸು ತೆರೆಯಲ್ಪಟ್ಟು ಎರಡು ಮೂರು ವರ್ಷಗಳಾದುವು. ಈ ಪೋಸ್ಟಾಫೀಸಿಗೆ ಕೇವಲ ನಾಲ್ಕೈದು ಗ್ರಾಮಗಳು ಮಾತ್ರ ಒಳಪಟ್ಟಿವೆ! ಭಾಗಮಂಡಲ ಪೋಸ್ಟ್‌ಮಾಸ್ಟರಿಗೂ ಈ ಹೊಸದಾಗಿ ಪ್ರಾರಂಭವಾದ ಕೊಟ್ಟೂರು ಪೋಸ್ಟ್‌ಮಾಸ್ತರಿಗೂ ವೇತನದಲ್ಲಿ ವ್ಯತ್ಯಾಸವಿದೆ. ಭಾಗಮಂಡಲ ಪೋಸ್ಟ್‌ಮಾಸ್ಟರಿಗೆ ಕೇವಲ ರೂ ೧೪ ಮಾತ್ರ. ಆದರೆ ಕೊಟ್ಟೂರು ಪೋಸ್ಟ್‌ಮಾಸ್ಟರಿಗೆ ಐದಾರು ರೂಪಾಯಿ ಹೆಚ್ಚು. ಇದಕ್ಕಿಂತಲೂ ಕಡಿಮೆ ಸಂಬಳ ಅಂದರೆ ರೂ ೧೧ ಚೆಟ್ಟಿಗೇರಿ ಪೋಸ್ಟ್‌ಮಾಸ್ತರಿಗೆ. ಈ ನ್ಯಾಯವೇಕೆ? ಇದರ ಜೊತೆಗೆ ಅಂಚೆ ಆಫೀಸ್ ಬಾಡಿಗೆ, ಪೆಟ್ಟಿಗೆ ಕಾಗದ, ಶಾಯಿ, ಸಿಬ್, ಬ್ಲಾಟಿಂಗ್ ಮತ್ತು ಕುರ್ಚಿ, ಮೇಜು ಸಮೇತ ಇವರೇ ತಮ್ಮ ಖರ್ಚಿನಿಂದ ಮಾಡಿಕೊಳ್ಳಬೇಕು!

ಭಾಗಮಂಡಲ ಪೋಸ್ಟಾಫೀಸಿನಲ್ಲಿ ರಿಜಿಸ್ಟರೇಷನ್, ಸೇವಿಂಗ್ಸ್, ವಿ ಪಿ ಪಿ. ಮನಿಯಾರ್ಡರು ಇನ್ನು ಮುಂತಾದ ಅಂಚೆ ವ್ಯವಹಾರಗಳು ನಡೆಯುತ್ತಿವೆ. ತಿಂಗಳಿಗೆ ಸರಾಸರಿ ನಾಲ್ಕೈದು ಸಹಸ್ರ ರೂಪಾಯಿಗಳ ಲೆಕ್ಕಾಚಾರ ನಡೆಯುತ್ತಿದ್ದ ಪೋಸ್ಟ್‌ಮಾಸ್ಟರಿಗೆ ಬಿಡುವಿಲ್ಲದ ಕೆಲಸವಿದೆ. ಇಷ್ಟರ ಬ್ರಾಂಚ್ [illegible] ಒಂದು ಸಬ್ ಆಫೀಸಿಗೆ ಯೋಗ್ಯವೆನಿಸಿರುವಾಗ, ಇದನ್ನೇಕೆ ಸಬ್ ಆಫೀಸನ್ನಾಗಿ ಮಾಡಿ, ಹೆಚ್ಚಿಗೆ ಅಂಚೆಯಾಳನ್ನು ನೇಮಿಸಿ ಬಡ ರೈತರ ಕೋರಿಕೆಯನ್ನು ನೆರವೇರಿಸಿ ಕೊಡಬಾರದು?

'ನಾಡಿಗ'

ಕೊಡಗು ಸರಕಾರದ ಉದಾಸೀನತೆ

ಪೊನ್ನಂಪೇಟೆ ನಾಡು ನಿಟ್ಟೂರು ಗ್ರಾಮದ ಪಾಲದಳ ಹೊಳೆಗೆ ಕಟ್ಟೆ ಕಟ್ಟಿ, ಗದ್ದೆಗೆ ನೀರು ಹರಬಲಾಗುವಂತೆ ಮಾಡಬೇಕೆಂದು ೧೯೪೪ನೇ ಇಸವಿಯಲ್ಲಿ ಬಾಳೆಲೆ ಗ್ರಾಮಕ್ಕೆ ಆಗಿನ ಚೀಫ್ ಕಮಿಷನರ್ ಸಾಹೇಬರು ಬಂದಿದ್ದಾಗ, ಗ್ರಾಮಸ್ಥರು ಕೊಟ್ಟ ಅರ್ಜಿಯನ್ನು ಸರಕಾರ [illegible] ರಿಸಿದಲ್ಲದೆ ರೈತರು ಅರ್ಧ ಖರ್ಚನ್ನು ಕೊಡುತ್ತೇವೆಂದು ಒಪ್ಪಿ ಗ್ರಾಮದವರೇ ಕೆಲಸ ಸಹ ಮಾಡಿಸುವದಾಗಿ ಒಪ್ಪಿಕೊಂಡರು. ಈ ವಿಷಯ ೧೯೫೬ನೇ ಇಸವೀ ಏಪ್ರಿಲ್ ತಿಂಗಳಲ್ಲಿ ನಡೆದ [illegible] ನಿಲು ಮೀಟಿಂಗಿನಲ್ಲಿ ಈ ಕಟ್ಟೆಯನ್ನು ಒಡನೆ ಮಾಡಿಸುವುದಾಗಿ ಸರಕಾರದ ಮೆಂಬರು ಒಪ್ಪಿಕೊಂಡಿದ್ದರು [illegible] ಮಸ್ಥರಿಗೆ ಯಾವದೊಂದು [illegible] ಕೊಡದಿರುವುದು ವಿಷಾದಕರ. ಹೆಚ್ಚಿನ ಬೆಳೆ ಬೆಳೆಸಬೇಕೆನ್ನುವ ಇಂಡಿಯಾ ಸರಕಾರದ ಯೋಜನೆಯನ್ನು ಕೊಡಗು ಸರಕಾರವು ಎಷ್ಟರ ಮಟ್ಟಿಗೆ [illegible] ದೆಯೆಂಬುದು ಇದರಿಂದ ತಿಳಿಯುತ್ತೆ. ಅರ್ಜಿ ಬರೆದುಕೊಂಡು ವರ್ಷ ಎರಡು-ದರೂ ಜವಾಬು ಕೊಡಲು ಇನ್ನೂ ಮನಸಿಲ್ಲದ (ಅದರಲ್ಲೂ ರೈತರು ಅರ್ಧ ಖರ್ಚು ಹಾಕಿ ಅವರೇ ಕೆಲಸ ಕೈಗೊಳ್ಳುವ ಈ ಕೆಲಸದ ಬಗ್ಗೆ) ಸರಕಾರದ ಪಕ್ಕ [illegible] ಬೇಕಾಗಿದೆ. ಇನ್ನಾದರೂ [illegible] ಯಲ್ಲಿ ಹಣಬರುವ ಸಾಗಿ [illegible] ದ ಒಡನೆ ಸರಕಾರ ಕೆಲಸವನ್ನು [illegible] ಳ್ಳುವದೆಂದು ನಂಬಿದ್ದೇನೆ.

ಎ ದೇಸ್ ಪೊನ್ನಪ್ಪ

ಮಾರಾಟಕ್ಕಿದೆ.

ಬೇಟೋಳಿ ಗ್ರಾಮದಲ್ಲಿ ವೀರಾಜಪೇಟೆ ಮುನ್ಸಿಪಾಲಿಟಿಯಿಂದ ಎರಡು ಮೈಲು ದೂರದಲ್ಲಿ ೩೩ ಎಕರೆ ರಿಸರ್ವ್ದ್ ಕಾಡು, ಇದರ ಪೈಕಿ ೨ ಎಕರೆ ರೋಬಸ್ಟಾ ಕಾಫಿ ಮತ್ತು ಕಿತ್ತಳೆ ೩ ಎಕರೆ ಕಿತ್ತಳೆ ಎರಡೂ ಫಸಲಿಗೆ ಬಂದಿದೆ. ೬೦ ಸೆಂಟು ವಕ್ಕಿ ನೀರಾವರಿ ಗದ್ದೆ ಮಾಡಲು ಲಾಗೇಕಾಗಿದೆ. ಸಾಯಿ ಸ್ವಾದಾರರು ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬಹುದು. ಯಾ ಖುದ್ದಾಗಿ ಭೇಟಿಯಾಗಿ ವಿಚಾರಿಸಬಹುದು. ೧೨೦೦೦ ರೂಪಾಯಿ ಬೆಲೆಯ ಮರಗಳೂ ಇವೆ.

ಪಿ ಪಿ ಪೊಣ್ಣಪ್ಪ,
ತಲಚೇರಿ ರಸ್ತೆ,
ವೀರಾಜಪೇಟೆ

3-2

ಶ್ರೀ ಕೆ ದಂ. ಪೊಗಪ್ಪನವರು,
"ಕೊಡಗು" ಏಜೆಂಟರು,
ಸೋಮವಾರ ಪೇಟೆ.

ರಘುಲಾಲ್ & ಕಂಪೆನಿ,
ಔಷಧ ವ್ಯಾಪಾರಿಗಳು, ಮೈಸೂರು.
ಕರ್ನಾಟಕದಲ್ಲೆಲ್ಲಾ ಚೆನ್ನಾಗಿ ಸಂಗ್ರಹಿತವಾದ ಮತ್ತು ವಿಶ್ವಾಸಪೂರಿತವಾದ ಔಷಧಿ ಅಂಗಡಿ

Also at:

೭೦ ಆರ್ಕಾಟ್ ಶ್ರೀನಿವಾಸಾಚಾರ್ ಬೀದಿ,

26-17 ಬೆಂಗಳೂರು ೨.

RAGHULAL & CO., CHEMISTS, **MYSORE.**

ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.
ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟ್ರಾಗಿದೆ (1921ರಲ್ಲಿ ಸ್ಥಾಪಿತವಾಗಿದೆ.

ಅಧಿಕೃತ ಶೇರು ಭಂಡವಾಳ	ರೂ.	10,00,000.
ವಸೂಲಾದ ಶೇರು ಮೊಬಲಗು	ರೂ.	1,79,000.
ಕ್ಷೇಮನಿಧಿ	ರೂ.	53,000.
ಇತರ ನಿಧಿಗಳು	ರೂ.	28,000.

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನೂ ಕೈಕೊಳ್ಳಲಾಗುವುದು

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ, ಬೆಳ್ಳಿ ನಗಗಳ ಈಡಿನ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ ಯಾ ಡ್ರಾಫ್ಟ್‌ಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರಿನಿಟಿ ಮತ್ತು ವಾರ್ಡನ್ ಇನ್ಶೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಗೌ. ಕಾರ್ಯದರ್ಶಿ,

ಕೆ. ಪಿ. ಅಪ್ಪಯ್ಯ, M. L. C. ಪ್ರೆಸಿಡೆಂಟ್ ಮತ್ತು ಖಜಾಂಚಿ.

ಕೊಡಗು ಪ್ರಾಂತೀಕ ಸಹಕಾರಿ, ಮಾರ್ಕೆಟಿಂಗ್, ಫೆಡರೇಷನ್ ಲಿಮಿಟೆಡ್., ವೀರಾಜಪೇಟೆ.
ನಮ್ಮಲ್ಲಿ ಕೋವಿಗಳು, ತೋಟಗಳು ಮತ್ತು ಎಲ್ಲಾ ತರಹದ ವ್ಯವಸಾಯದ ಹತ್ಯಾರುಗಳು ದೊರೆಯುತ್ತವೆ.

1. 32 ಪಿಸ್ತೂಲುಗಳು (Pistols) ಕ್ರಯ ರೂ. 162 ರಿಂದ 245ರ ವರೆಗೆ.
2. 12ನೇ ನಂಬರಿನ ಒಂಟಿ ಕೊಳವಿನ ಕೋವಿ ಕ್ರಯ ರೂ. 320-0-0
3. 12ನೇ ನಂಬರಿನ ಜೋಡು ಕೊಳವಿನ ಕೋವಿ (Webley & Scott)
4. 12ನೇ ನಂಬರಿನ ಜೋಡು ಕೊಳವಿನ ಕೋವಿ (Spanish make)
5. 6 ಗಜದ (Hand loom) ಕೈಮಗ್ಗದ ಸೀರೆಗಳು ಕ್ರಯ ರೂ. 4-10-0.
6. ೨ .32 ಪಿಸ್ತೂಲು ಮತ್ತು ರಿವಾಲ್ವರುಗಳ ತೋಟಗಳೂ ಸಹ ದೊರೆಯುತ್ತವೆ.
7. ಕಾಫಿ ಮತ್ತು ಕಿತ್ತಳೆ ಗಿಡಗಳಿಗೆ ಸ್ಪ್ರೇ ಮಾಡುವ ಪಂಪುಗಳು (Spraing Pumps)
8. ¾" ಮತ್ತು ⅞" ಕಬ್ಬಿಣದ ಸಲಾಕೆಗಳು.

ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

(ಅವಶ್ಯವಿರುವ ಕೋವಿಗಳಿಗೂ, ತೋಟಗಳಿಗೂ ಜಿಲ್ಲಾ ಮೇಜಿಸ್ಟ್ರೇಟರಿಂದ ವಿಶೇಷ ಪರ್ಮಿಟು "Special permit" ತರತಕ್ಕದ್ದು ಬೇಕಾಗುವುದು)

ಎಂ. ಎಸ್. ಸೋಮಯ್ಯ, ಗೌರವ ಕಾರ್ಯದರ್ಶಿ.

52-17

Edited Printed and Published by P. I. Belliappa at 'Kodagu' Press, Mercara, for 'Kodagu' Ltd.

ಜೀವನ

ಲೇಖಕಿ:- ಮಿಸ್. ಕೆ. ಎಂ. ಟೈನಿ, ಗೋಣಿಕೊಪ್ಪ.

ಅಮೋಘವಾದ ನದಿಯ ಪ್ರವಾಹದಂತೆ ಹರಿಯುತ್ತಿದೆ ಈ ಜೀವನ. ಇದರ ಹುಟ್ಟು ಸಾವುಗಳೆಲ್ಲಿ? ಇದಕ್ಕೆ ಹುಟ್ಟು ಸಾವುಗಳಿವೆಯೇ? ಇದರ ಉದ್ದೇಶವಾದರೂ ಏನು?

ಯೋಗಿ, ತಪಸ್ವಿ, ಮುನಿ, ಜ್ಞಾನಿಗಳು ಅನಾದಿಯಿಂದ ಹೋರಾಡಿದ, ಹೋರಾಡುತ್ತಿರುವ ಉದ್ದಿಶ್ಯವೇ ಈ ಜೀವನದ ಮೂಲ. ಆದರೆ ಮನುಷ್ಯ ಮಾತ್ರ ಬಗೆಹರಿಸಲಿಲ್ಲ. ಅದಿಅಂತ್ಯವಿಲ್ಲದೆ ಕಾಲದ ಪ್ರವಾಹದಂತೆ ಹರಿಯುತ್ತಿದೆ ಜೀವನ. ಅಣು ರೇಣುಗಳಲ್ಲಿ ಹರಿದಾಡುತಿರುವ ಜೀವನ ಮಾನವನಲ್ಲಿರುವುದು. ಅಪಾರ ವಿಕಾಸತೆಯನ್ನು ಹೊಂದಿದ.

ಎರಡು ಪ್ರೇಮಿಗಳ ಅನುರಾಗದ ದೇವತ್ವದ ಫಲಿತಾಂಶವೇ ಒಂದು ಮಾನವ ಜೀವಿಯ ಹುಟ್ಟು. ಎರಡು ಗೋಡೆಗಳ ನಿಸ್ಸಹಾಯ, ನಿರ್ಬಲ ಕೈಗೂಸಿನಂತಾದ ಒಂದು ಜೀವಿಯದು. ಎಳೆ ಜೀವಿಯ ನಿರ್ಮಲತೆಯೇ ಅದರ ಬಲ, ನಿಸ್ಸಾಯಕತನವೇ ಕವಚ, ಎರಡು ಗೋಡೆಗಳ ಪ್ರೇಮಲೋಕದ ಕಾವಲಿನ ಕುರುಹು, ಸುಕೋಮಲತೆಯೇ ಲಕ್ಷಣ. ಬ್ರಹ್ಮಾಂಡದ ಮೂಲೆಯಲ್ಲಿ ಕೇವಲ ಬಿಂದುವಿನಂತೆ, ಈ ಲೋಕದ ಬಂಧನಕ್ಕೋಸ್ಕರ ಧರಣಿಯಲ್ಲಿ ಜನಿಸಿದೊಡನೆಯೇ ಆರ್ತತೆಯಿಂದ ಅದು ಕೂಗುವುದು. ಅದೇ ಬಂಧನಕೋಸ್ಕರದ ಅಪರ ಕಾರಣ ಜೀವಿಗಳಿಗೆ ಆ ರೋಧನವೇ ದಿವ್ಯಸಂಗೀತ! ಅದನ್ನು ಕೇಳಿದೊಡನೆಯೇ ತಾಯಿ ದೇವಿ ತನ್ನ ಅಪಾರ ವೇದನೆಯನ್ನೇ ಮರೆವಳು. ಯುಗಾಂತರಗಳಿಂದ ಹರಿಯುವ ಪ್ರವಾಹ ತನ್ನಿಂದ ಸಾರ್ಥಕವೆಂದು ತಂದೆಯು ಜೀವಕ್ಕೆ ಹೇಳಲಸಾಧ್ಯವಾದ ಸಂತಸ!

ಆದರೆ ಇನ್ನದು ಮಾನವ ಜೀವಿ. ಆಹಾರ, ನಿದ್ರೆ ನೋವುಗಳಿಂದ ಬಂಧಿತವಾದ ಪ್ರಾಣಿ. ಬಾಲ್ಯದಲ್ಲಿ ಬಹಳ ಸಮಯ ತಾಯಿಯ ಆಶ್ರಯವೇ ಈ ಜೀವಿಯ ವಿಶ್ವ. ಪ್ರೇಮಾಭಿಮಾನಗಳಿಂದ ಪ್ರಫುಲ್ಲವಾದ ತಾಯಿಯ ಮುಖವನ್ನು ಎವೆಯಿಕ್ಕದೆ ನೋಡಿ ತನಗೂ, ಆಕೆಗೂ ಇರುವ ಸಂಬಂಧವನ್ನು ಕಂಡುಕೊಳ್ಳುತ್ತದೆ. ಪ್ರೇಮ ಸೌಂದರ್ಯಗಳಿಗೆ ಆನಂದವೂ, ಗದ್ದಲ, ಕರ್ಕಶಕ್ಕೆ ಭಯವೂ ಸ್ವಾಭಾವಿಕವಾಗಿ ಅದಕ್ಕೆ ಬರುತ್ತದೆ. ತಾಯಿಯ ಉಜ್ವಲ ಪ್ರೇಮ, ಪಿತನ ಮಾತ್ರದ ಪ್ರೀತಿ ಇವುಗಳೇ ನಿತ್ಯವೂ ಬೆಂಬಲವಾಗಿರುವಾಗ ಹೆದರುವ ಸಂಭವವೇ ಬಾಲ್ಯದಲ್ಲಿ ಬರಲಾರದು. ತನ್ನ ತಂದೆ ತಾಯಿಗಳ ಶ್ರಯದಲ್ಲಿ ತನ್ನ ಜೀವನದ ಕಾಲು ಭಾಗವನ್ನು ಕಳೆದು ನಂತರ ಬರುವುದು ಯೌವನ.

ಈಗ ಯೌವನದ ಎರಡನೆಯ ಅಂಕದ ಬಂಧನಕ್ಕೋಸ್ಕರ ಪ್ರಪಂಚದ ರಂಗಮಂಟಪದಲ್ಲಿ ಪಾತ್ರಧಾರಿಯಾಗಿ ವ್ಯವಹಾರಗಳ ಮಹಾರಂಗದಲ್ಲಿ ಧುಮುಕುವನು. ಆದರೂ ಆ ಬಂಧನ ಪ್ರೇಮಬಂಧನ. ಸ್ವಾತಂತ್ರ್ಯದ ಅನ್ಯಾಶವನ್ನು ಸೇವಿಸುವ ಬಂಧನ. ಜೀವನದೆಗೆಯಲ್ಲಿನಾನಾತರದ ಎಡರುಗಳನ್ನು ಎಡವಿಯೇ ಜೀವನ ಸಾಗುತ್ತದೆ. ಆದರೆ ಅವೆಲ್ಲಾ ಕ್ಷಣದಲ್ಲೇ ಮರೆಗಿದು ನಗು ನಗುತ್ತಾ ಮುಂದೆ ಪ್ರಕಾಶಮಾನನಾಗುವನು

ನಂತರ ಮಾತಾಪಿತರ, ಗುರುಗಳ ಸನ್ನಿಧಿಯಲ್ಲಿ ಪಡೆದ ಜ್ಞಾನವನ್ನು ಅನೇಕ ಅನುಭವಗಳಿಂದ ಪರಿಶೀಲಿಸುವನು. ಆದರೆ ವಿವೇಚನಾ ಶಕ್ತಿ ಸಾಲದು. ಸಾವಧಾನದಿಂದ ಮತ್ತೊಮ್ಮೆ ಪರಿಶೀಲಿಸುವನು. ಪ್ರಪಂಚದ ಕರಾಳ ದೃಶ್ಯವನ್ನು ಚೆನ್ನಾಗಿ ಅರಿಯುವನು.

ಈ ಯೌವನದಲ್ಲಿ ಇನ್ನೊಂದು ಗೊಂದಲದಲ್ಲಿ ಸಿಕ್ಕಿ ಬೀಳುವನು. ಆಗ ಅವನಲ್ಲಿ ನೂತನ ಯೋಚನೆಗಳು ವಿಕಾಸವಾಗುತ್ತವೆ. ಇದು ಅವನ ಮಧುರ ಜೀವನವನ್ನು ಬೆಳಗುತ್ತದೆ. ಆಗ ತಾನೇ ತನ್ನ ಭಾವನಾ ರಾಜ್ಯದಲ್ಲಿ ತನ್ನ ಬಾಳಗೆಳತಿಯ ಆಲೋಚನೆಯನ್ನು ತಂದು ಸುಖಮಯ ಕನಸನ್ನು ಕಾಣುವನು. ಅಂಥಾ ಮನೋಬಲವನ್ನು ತಂದು ಹೇಗೂ ಅರಿಯ್ಯನ್ನೂ ತನ್ನ ಜೀವನದಲ್ಲಿ ವಿಲೀನವಮಾಡಿಕೊಳ್ಳುವನು. ಈ ಕನಸು ನಿಜವಾಗಿ ಕಂಡವಲ್ಲಿ ಅವನ ಯೌವನವು ಮಾಗಿದಂತೆ!

ಗೃಹಸ್ಥನೆಂಬ ನಾಮಧಾರಿಯಾದ ಆತನು ಸಂಸಾರ ರಥದ ಧುರೀಣನಾಗಿ ಚಕ್ರಾಣಿಯಿಲ್ಲದ ನಾವೆಯಲ್ಲಿ ಕೂರುವನಂತೆ ತೊಳಲುತ್ತಿರುವನು. ಆಗ ಮಹಾ ಆಶೆ ಅವನನ್ನಾವರಿಸುತ್ತದೆ. ತನ್ನ ಮನೆ, ಮಠ ಆಸ್ತಿ, ಸತಿ, ಸುತರ ಸುಖದ ಕಾಳಜಿ. ಇದರಿಂದ ತನ್ನ ದೇಹವನ್ನು ಕೆಲವೇ ಜೀವಕ್ಕಾಗಿ ವಿನಿಯೋಗಿಸುವನು ಈ ಸಂದರ್ಭದಲ್ಲಿ ಬಹು ಜನರಲ್ಲಿ ಚಿಕ್ಕ ದೃಷ್ಟಿ ಉದಯವಾಗುತ್ತದೆ.

ಇನ್ನು ಅಂತ್ಯಕಾಲವು ಸಮೀಪಿಸುತ್ತದೆ. ತನ್ನ ಬಾಳುವೆಯೆಂಬ ಹಸುರು ಗಿಡದಲ್ಲಿ ಅರಳಿನಲಿದ ಸುಂದರ ಕುಸುಮಗಳು ಶಿಥಿಲವಾಗಿ ಉದುರತೊಡಗುವವು, ಬಾಳಿನ ಸಂಧ್ಯೆಯು ಸಮೀಪಿಸುವದು. ಆದರೆ ಆತನು ಅಳಿದರೂ ಸುಂದರ ಪ್ರಪಂಚ ಅಳಿಯಲಾರದು.

ತನ್ನ ಜನನಾರಭ್ಯ ಕಳೆದ ದಿನಗಳನ್ನು ಚಿಂತಿಸಿ, ಆನಂದದಲ್ಲಿ ತೇಲಿಯೂ ತನ್ನ ಅಂತ್ಯದಲ್ಲಿ ಸಗ್ಗ ನರಕಗಳ ಜೀವನದ ಹೋರಾಟವು ಮನದಲ್ಲಿ ಬಗೆಹರಿಯದ ಸಮಸ್ಯೆಯಾಗಿ ನಿಲ್ಲುವದು. ಆದರೂ ತನ್ನ ಬಾಳಕೆಳೆಯ ನಯ ನಮ್ರತೆಗಳಿಗಾಗಿ, ತನ್ನ ಸಂತಸಮಾಹದ ಆತ್ಮಕ್ಕಾಗಿ ಹೋರಾಡಿ ಜೀವ ಶಾಂತಿಯನ್ನು ಬಯಸುವುದು.

ಇದರಲ್ಲಿ ದುಡುಕಿನಿಂದ ಸಾಗಿದ ಜೀವನ, ಕಡೆಯಲ್ಲಿ ಶಾಂತವಾತಾವರಣದ ಸೃಷ್ಟಿಗೆಯಲ್ಲಿ ಮಲಗಲು ಹಾತೊರೆಯುವ ಮನಸ್ಸೇ ಎಂಟು ಗೇಣಿನ ದೇಹದಿಂದ 'ಜೀವ' ಎಂಬ ವಸ್ತು ಬೇರೆ 'ಜೀವನ' ಸಾಗಿಸಲು ಹೊರಟೇ ಹೋಗುತ್ತದೆ. ದೇಹ ಅನಿತ್ಯವಾದರೂ 'ಜೀವ' ನಿತ್ಯ.

ಆಧಾರದಿಂದ.

Reg. No. M. 1550.
'KODAGU' MERCARA, (Coorg).

ಕೊಡಗು

ಸಂಪಾದಕರು—ಟಿ. ಎ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. 5—0—0.

ಸಂಪುಟ ೨೯	ತಾರೀಕು ೨೬—೧—೧೯೫೧ನೇ ಶುಕ್ರವಾರ	ಸಂಚಿಕೆ ೩೨

ನಮ್ಮ ಪ್ರಜಾಧಿಪತ್ಯ - ಒಂದು ವಿವೇಚನೆ.

"ನ್ಯಾಯ ಶೀಲವಲ್ಲದ ಯಾವ ಸರಕಾರವೂ ಗೌರವ ಯೋಗ್ಯವಾದುದಲ್ಲ"

ವಿವೇಚಿಸಿದವರು:—ಶ್ರೀ ಬಿ. ಡಿ. ಗಣಪತಿ.

ಪ್ರಜಾ ಪ್ರಭುತ್ವವಲ್ಲ.

ಕೇಂದ್ರದಲ್ಲಿ ಇಂದು ಆಳುತ್ತಿರುವ ನಮ್ಮ ಸರಕಾರವು ಪ್ರಜಾಜವಾಬ್ದಾರಿ ಸರಕಾರವೆನ್ನುವುದು ಜಚ್ಚ ಕಪ್ಪಗಿನ ಮನುಷ್ಯನಿಗೆ ಸೂರ್ಯನಾರಾಯಣನೆಂದು ಇಲ್ಲವೇ ಒಂಟಿ ಮರವನ್ನು ವನವೆಂದು ಕರೆದಂತೆ! ಭರತ ಖಂಡವು ಪ್ರಜಾಪ್ರಭುತ್ವ ರಾಷ್ಟ್ರವೆಂದು ಸಾರಲ್ಪಟ್ಟು ಎರಡು ವರ್ಷಗಳು ಕಳೆದರೂ ಪ್ರಜಾಪ್ರಭುತ್ವ ಮಹಾರಥದ ಚಕ್ರ ಇನ್ನೂ ಉರುಳಲು ತೊಡಗಿಲ್ಲ. ಇಂದು ಕೇಂದ್ರದಲ್ಲಿರುವ ಸಮ್ಮಿಶ್ರ ಸರಕಾರವು ಭಾರತದ ಸರ್ವ ಪ್ರಜೆಗಳ ಅಭಿಮತದಿಂದ ಆರಿಸಿ ಬಂದುದಲ್ಲ. ಬ್ರಿಟಿಷರು ಭಾರತವನ್ನು ಬಿಟ್ಟು ಹೋಗುವಾಗ ಭಾರತದಲ್ಲಿದ್ದ ಬಲಯುತ ಸಂಸ್ಥೆಯಾದ ಕಾಂಗ್ರೆಸ್ಸಿಗೆ ಅಧಿಕಾರವನ್ನು ಬಿಟ್ಟುಕೊಟ್ಟರು. ಕಾಂಗ್ರೆಸು ತಾನು ದೇಶದ ಸರ್ವ ಪಂಗಡಗಳ ಅಭಿಪ್ರಾಯವನ್ನು ಪ್ರತಿಬಿಂಬಿಸುವದಿಲ್ಲವೆಂದು ತಿಳಿದೇ ಕಾಂಗ್ರೆಸಿಗರಲ್ಲದ ಇತರರನೇಕರನ್ನು ಸೇರಿಸಿಕೊಂಡು ಆಡಳಿತ ಜವಾಬ್ದಾರಿಯನ್ನು ವಹಿಸಿತು. ಇಂದೂ ಅದೇ ತತ್ವ ಪ್ರಕಾರ ನಡೆಯುತ್ತಿದೆ. ಅಂದು 'ಚಳವಳಿನ ಕಾಲಕ್ಕೆ 'ಕಾಂಗ್ರೆಸೆಂದರೆ ಭಾರತ' ವೆಂದು ನಾವು ಹೇಳಿದವಾದರೂ ಕಾಂಗ್ರೆಸು ಸರ್ವಗ್ರಾಹಿ ಸಂಸ್ಥೆಯಲ್ಲ. ಆದ್ದರಿಂದ ಪ್ರಜಾಪ್ರಭುತ್ವ ರಾಷ್ಟ್ರದ ರಚನೆ ಒಂದು ಸಂಸ್ಥೆಯಿಂದ ಆಗುವಂಥಾದ್ದಲ್ಲ. ತತ್ಫಲವಾಗಿ ಇಂದಿನ ಕೇಂದ್ರ ಸರಕಾರದಲ್ಲಿ ಜನತೆಯ ಅಭಿಮತ ಪ್ರತಿಬಿಂಬಿತವಾಗಿಲ್ಲ. ಕೇಂದ್ರದಲ್ಲಿರುವ ನೆಹರೂರವರಂಥವರು ಸರ್ವಜನಾನುರಾಗಿಯಾಗಿರಬಹುದು. ಅಂದ ಮಾತ್ರಕ್ಕೆ ಅವರಿಂದ ರಚಿತವಾದ ಸರಕಾರವು ಪ್ರಜಾತಂತ್ರದ ಸರಕಾರವೆಂದು ಹೇಳಲಾಗದು. ಪ್ರೌಢ ಮತದಾನ ಪದ್ಧತಿಯ ಮೇರೆ ಪ್ರತಿಯೊಬ್ಬನೂ ತನ್ನ ಮತವಿತ್ತು ಆ ಮತಗಳ ಆಧಾರದ ಮೇಲೆ ಚುನಾಯಿಸಲ್ಪಟ್ಟ ಪ್ರತಿನಿಧಿಗಳಿಂದ ರೂಪುಗೊಳ್ಳುವ ಸರಕಾರವು ನಿಜವಾದ ಪ್ರಜಾಜವಾಬ್ದಾರಿ ಸರಕಾರವಾಗುವದು. ಇಂಥಾ ಸರಕಾರದ ರಚನೆ ಮುಂದಿನ ಸಾರ್ವತ್ರಿಕ ಚುನಾವಣೆಯ ನಂತರ ಆಗಬೇಕಿದೆ.

ಕಾಂಗ್ರೆಸಿನ ಆಡಳಿತ.

ಹಿಂದೂದೇಶದಲ್ಲಿ ಸ್ವಾತಂತ್ರ್ಯದ ಉದಯದಿಂದ ಇಂದಿನ ವರೆಗೆ ನಡೆದ ಆಡಳಿತವು ಜನ ಆಡಳಿತವಲ್ಲ ಬದಲು ಕಾಂಗ್ರೆಸಿನ ಆಡಳಿತವೆನ್ನಬೇಕಾಗಿದೆ. ಈ ನಾಲ್ಕು ವರ್ಷಗಳ ಆಡಳಿತ ಕಾಲದಲ್ಲಿ ಕಾಂಗ್ರೆಸು ಬಹು ಮಟ್ಟಿಗೆ ಜನತೆಯ ದೃಷ್ಟಿಯಲ್ಲಿ ಕೆಳಗಿಳಿದಿದೆ. ಅಂದು ಸಂಗ್ರಾಮದ ಕಾಲದಲ್ಲಿ ದೇಶಕ್ಕಾಗಿ ಕಾಂಗ್ರೆಸಿಗರು ಕಷ್ಟಗಳನ್ನು ಸಹಿಸಿ, ಎದೆ ಮುಂದೆ ಮಾಡಿ ಮುನ್ನುಗ್ಗಿ ಆತ್ಮಾರ್ಪಣ ಮಾಡಿದಾಗ ಇಡೀ ದೇಶವೇ ಅವರಿಗೆ ಬೆಂಬಲವಿತ್ತಿತು. ಅವರನ್ನು ಪುಷ್ಪಹಾರಗಳಿಂದ ಅಲಂಕರಿಸಿ ಗಗನಕ್ಕೆತ್ತಿ ಘೋಷಿಸಿತು. ಕಾಂಗ್ರೆಸು 'ಬಡವರ ಕಾಮಧೇನು' ಎನ್ನಲ್ಪಟ್ಟಿತು. ಆ ಕಾರಣವೇ ೧೯೪೭ರಲ್ಲಿ ಸ್ವಾತಂತ್ರ್ಯ ಬಂದಾಗ ಜನತೆಯು ಎರಡು ನುಡಿಯದೆ ಅಧಿಕಾರವನ್ನು ಅವರ ಕೈಗೊಪ್ಪಿಸಿತು. ಭಾರತದ ಬಿಡುಗಡೆಗಾಗಿ ಪ್ರಾಣವನ್ನು ಪಣವಾಗಿ ಇಟ್ಟು ಅಹೋರಾತ್ರಿ ದುಡಿದ ಕಾಂಗ್ರೆಸು ಬಡಜನರ ಹಿತವನ್ನು ಸಾಧಿಸದೆ ವಿಶ್ರಾಂತಿ ಪಡೆಯದೆಂದು ಜನತೆ ನಂಬಿ ಅಧಿಕಾರ ಸೂತ್ರಗಳನ್ನು ಅದರ ಕೈಯಲ್ಲಿಟ್ಟಿತು. ಆದರೆ 'ಅಧಿಕಾರವು ಮಾನುಷ್ಯನನ್ನು ಕೆಡಿಸುವದು; ಸಂಪೂರ್ಣ ಅಧಿಕಾರವು ಸಂಪೂರ್ಣವಾಗಿ ಹೊಲೆಗೆಡಿಸುವದು' ಎಂಬ ನಾಣ್ಣುಡಿಯಂತೆ ನಡೆಯಿತು. ತ್ಯಾಗ, ಸೇವೆಗೆ ಜೀವನವು ಮುಡಿಪೆಂದು ಹೇಳುತ್ತಿದ್ದ ಕೆಲವು ಕಾಂಗ್ರೆಸಿಗರು ಅಧಿಕಾರದ ದುರುಪಯೋಗಕ್ಕೆ ತೊಡಗಿದರು. ಈ ನಾಲ್ಕು ವರ್ಷಗಳ ಆಡಳಿತದಲ್ಲಿ ಈ ಕೆಲವು ಸಂಕೀರ್ಣ ಭಾವನೆಯ ಜನರ ತಪ್ಪು ವರ್ತನೆಯಿಂದಾಗಿ ಕಾಂಗ್ರೆಸ್ ಸಂಸ್ಥೆಯು ಜಡಿಗಲ್ಲು ಉರುಳುತ ತೊಡಗಿದೆ. ಕಾಂಗ್ರೆಸ್ಸೆಂದರೆ ಸಾಮಾನ್ಯ ಜನರು ಮೂಗು ಮುರಿಯುವ ಪರಿಸ್ಥಿತಿ ಬಂದಿದೆ. ಅಂದೊಮ್ಮೆ ಪವಿತ್ರವೆಂದೂ ಜನಗಳ ಮತ್ತು ತ್ಯಾಗ ಜೀವನದ ಸಂಕೇತವೆಂದೂ ಪೂಜಿಸಲ್ಪಟ್ಟ ಬಿಳಿ ಟೊಪ್ಪಿಯು ಇಂದು ಲಾಭಬಡಕರ, ಕಳ್ಳಸಂತೆಯವರ, ಅಧಿಕಾರ ಲಾಲಸಿಗಳ ಕುರುಹೆಂದು ಕರೆಯಲ್ಪಡುತ್ತಿದೆ!

ಒಬ್ಬನೇ ಗಾಂಧಿ.

ಜನತೆಯು ಮೇಲೆ ಮಹಾತ್ಮಾಗಾಂಧಿಯವರ ವ್ಯಕ್ತಿತ್ವದ ಆ ಮೋಹಕತೆಯು ಸಾರ್ವತ್ರಿಕವಾಗಿತ್ತು. ಜನತೆಯನ್ನು ಗಾಂಧಿ ಅರಿತುಕೊಂಡಂತೆಯೇ ಗಾಂಧೀಜಿಯನ್ನು ಜನರು ಅರಿತುಕೊಂಡಿದ್ದರು. ಅದು ಸಾಮಾಜಿಕ, ರಾಜಕೀಯ, ಧಾರ್ಮಿಕ ಜೀವನವೇ ಆಗಿದ್ದರೂ ಗಾಂಧಿಯವರ ನುಡಿಯು ರಾಷ್ಟ್ರದ ನುಡಿಯಾಗಿತ್ತು. ಗಾಂಧಿಯವರ ಜೀವನವು ರಾಷ್ಟ್ರದ ಜೀವನವಾಗಿತ್ತು. ಗಾಂಧಿಯವರು, ಜನತೆ ಎಂಬ ಭೇಧಕ್ಕೆಡೆಯಿಲ್ಲದಂತೆ ಆ ಎರಡರ ಪರಸ್ಪರ ಮಿಲನವಾಗಿತ್ತು. ಆದ್ದರಿಂದ ಅವರ ನೇತೃತ್ವದಲ್ಲಿ ಅಸಾಧ್ಯವು ಸಾಧ್ಯವಾಯಿತು. ಕನಸಿಗೂ ಸಿಲುಕದ ಪವಾಡಗಳೇ ನಡೆದವೆನ್ನಬಹುದು. ಹಿಂದೂದೇಶದಲ್ಲಿ ವಿವಿಧ ಜಾತಿಯ, ವಿವಿಧ ಮತಗಳ, ವಿವಿಧ ಸಂಸ್ಕೃತಿಯ, ವಿವಿಧ ಮನೋಭಾವದ ಜನತೆಯ ಪ್ರತಿ ಮಹಾತ್ಮಾಗಾಂಧಿಯವರ ವ್ಯಕ್ತಿತ್ವವೂ ವೈವಿಧ್ಯ ಪೂರ್ಣವಾಗಿತ್ತು. ಕೆಲವರಿಗೆ ಅವರು ರಾಜಕೀಯ ಗುರುವಾದರೆ ಕೆಲವರಿಗೆ ಧಾರ್ಮಿಕ ಪಥ ದರ್ಶಕರು. ಕೆಲವರಿಗೆ ಆದರ್ಶವ್ಯಕ್ತಿಯಾದರೆ ಕೆಲವರಿಗೆ ಕರ್ಮಯೋಗಿ. ಕೆಲವರಿಗೆ ಹಾಸ್ಯ ಪಟುವಾದರೆ ಕೆಲವರಿಗೆ ನಿಷ್ಠಾಜೀವಿ. ಈ ರೀತಿಯ ವೈವಿಧ್ಯ ಪೂರ್ಣ ಜೀವನವು ಅವರದಾದ ಕಾರಣ ಸರ್ವರಿಗೂ ಅವ್ರ ಅಸರೆ ಇತ್ತು. ಸರ್ವರಿಗೂ ಬೇಕಾದುದು ಅಲ್ಲಿತ್ತು. ಗಾಂಧೀಯವರು ಒಬ್ಬ ವ್ಯಕ್ತಿಯಾಗಿರದೆ ಸರ್ವರ ಆಶೆ ಆಕಾಂಕ್ಷೆಗಳನ್ನೊಳಗೊಂಡ ಯುಗ ಧರ್ಮದಂತಿದ್ದರು! ಅವರ ಆಳಿಕೆ ಕೋಲಿನಂತೆ-ಭಾರತದ ಉತ್ಕರ್ಷವೆಂದರೆ ಬಡ ಜನರ ಉದ್ಧಾರ. ಭೌತಿಕ ಪ್ರಗತಿಯು ನೈತಿಕ ತಳಹದಿಯಲ್ಲಿ ನಿಲ್ಲದಿದ್ದರೆ ಅದು ಅನಿಷ್ಟಕರ. ಮಾನವನ ಯೋಗ್ಯತೆಯನ್ನು ಬ್ಯಾಂಕಿನ ಲೆಕ್ಕ ಯಾ ಜೀವನದ ಆಡಂಬರದಿಂದ ಅಳೆಯದೆ ಜನತೆಯ ಸೇವೆ, ಹೃದಯದ ವಿಶಾಲತೆ, ಗುಣ, ನಡತೆಗಳಿಂದ ಅಳೆಯುವದು. ಅಂಥಾ ಒಂದು ವ್ಯಕ್ತಿ ಜೀವಂತವಿದ್ದವರೆಗೆ ಕಾಂಗ್ರೆಸಿಗೆ ಚ್ಯುತಿ ಇರಲಿಲ್ಲ, ದೇಶದ ಸೌಭಾಗ್ಯಕ್ಕೆ ಕುಂದಿರಲಿಲ್ಲ. ಆದರೆ ಗಾಂಧಿ ಒಬ್ಬನೇ ಇದ್ದದು. ಪಾರ್ಥಿವ ಶರೀರಧಾರಿಯಾದ ಅವರು ಚಿರಂಜೀವಿ ಆಗಿರಲು ಸಾಧ್ಯವಿರಲಿಲ್ಲ.

ಮುಂದಾಳುಗಳು.

ಭರತ ಖಂಡವು ಸ್ವತಂತ್ರವಾಗುವ ಮೊದಲೇ ಭಾರತದೇಶವು ಮುಂದೆ ಹೀಗಿರಬೇಕೆಂಬ ಕಲ್ಪನೆಯನ್ನು ಹಲವರು ಮಾಡಿಕೊಂಡಿದ್ದರು. ಯಾವನೇ ವ್ಯಕ್ತಿ ಎಂಥಾದ್ದೇ ಭವಿಷ್ಯದ ಹೊಂಗನಸನ್ನು ಕಂಡರೂ ಮಹಾತ್ಮರು ಇದ್ದ ವರೆಗೆ ಅವರ ಅಭಿಪ್ರಾಯಕ್ಕೆ ಎಲ್ಲರೂ ತಲೆಬಾಗಬೇಕಿತ್ತು. ಏಕೆಂದರೆ ಭಾರತದ ಜೀವನಾಡಿಯ ಪರಿಚಯ ಅವರಿಗಿದ್ದಷ್ಟು ಬೇರೆ ಜನರಿಗಿರಲಿಲ್ಲ. ಆದರೆ ಅವರನಂತರ ಮುಂದಾಳುಗಳ ವಯುಕ್ತಿಕ ಅಭಿಪ್ರಾಯಗಳಿಗೆ ಚಾಲನೆ ದೊರೆತು ಸರ್ವವೂ ಕಲಸುಮೇಲೋಗರವಾಯಿತು. ಅಂತರ್ರಾಷ್ಟ್ರೀಯ ವರ್ಣರಂಜಿತ ರಂಗಸ್ಥಳದಲ್ಲಿ ಭಾರತವು ಪ್ರಧಾನ ಪಾತ್ರ ವಹಿಸಿ ಸಕಲರಿಂದ ಹೊಗಳಿಸಿಕೊಂಡರೆ ತಮಗೆ ತೃಪ್ತಿಯೆಂದು ಕೆಲವರು ಆಶಿಸಿದರೆ, ಹಿಂದೂದೇಶದ ಉದ್ದಗಲವೂ ಕಾರ್ಖಾನೆಗಳು ಹೊಗೆಯುಗುಳುವಂತಾಗಿ, ಭರತಖಂಡವು ಅರಮನೆಗಳ ಆಗರವಾಗಿ 'ರೋಲ್ಸ್ ರಾಯ್ಸ್' ಕಾರುಗಳೇ ವಾಹನಗಳಾಗಬೇಕೆಂದು ಕೆಲವರು ಆಶಿಸುತ್ತಾರೆ. ಹಿಂದೂದೇಶವು ತನ್ನದೇ ಭಾಷೆಯನ್ನಾಡುತ್ತಾ, ತನ್ನದೇ ದೇವದೇವತೆಗಳ ಪೂಜೆ ಮಾಡುತ್ತಾ, ತನ್ನದೇ ಜೀವನ ಕ್ರಮವನ್ನು ಅನುಸರಿಸಬೇಕೆಂದು ಆಶಿಸುವವರು ಕೆಲವರಾದರೆ, ಅಖಂಡ ಸೇನೆಯನ್ನು ಕಟ್ಟಿ ಭರತಖಂಡವನ್ನು ಬಲಾಢ್ಯ ರಾಷ್ಟ್ರವೆಂದು ಮೆರೆಯಿಸಬೇಕೆನ್ನುವವರು ಕೆಲವರು. ಈ ರೀತಿಯ ತಮಗೆ ಹಿಡಿಸುವ ಕನಸುಗಳನ್ನು ಕಾಣುವದರಲ್ಲಿ ಹಲವರು ಮಗ್ನರಾಗಿದ್ದು ನಿಜವಾದ ಭಾರತದ ಅಜ್ಞಾನ, ಬಡತನ, ಹಸಿವು, ನಗ್ನತೆಗಳನ್ನು ತಿಳಿದು, ಅವರ ಜೀವನದ ಬಳಲನ್ನು ಅರಿತು ದುಡಿಯುವವರು ಕೆಲವರು ಮಾತ್ರ ಉಳಿದಿದ್ದಾರೆ! ಆದ್ದರಿಂದ ಕಳೆದ ನಾಲ್ಕು ವರ್ಷಗಳ ಆಡಳಿತದಲ್ಲಿ ಆಶಿಸಿದ್ದು ಬಹಳವಾದರೂ ಸಾಧಿಸಿದ್ದು ವಿರಳ.

ಭೂಸುಧಾರಣೆ.

ಕಾಂಗ್ರೆಸ್ ಆಡಳಿತವನ್ನು ಟೀಕಿಸುತ್ತಿರುವವರ ವಾದದಲ್ಲಿ ತಿರುಳಿದೆಯೇ ಎಂಬುದನ್ನು ಪರಿಶೀಲಿಸಲು ಕೆಲವು ಪ್ರಾಮುಖ್ಯ ವಿಚಾರಗಳನ್ನು ಪರಿಶೀಲಿಸಬೇಕು. ದೇಶದ ಉದ್ದಗಲಕ್ಕೂ ಹರಡಿ ಬಡ ಜನರ ಸುಲಿಗೆಗೆ ಕಾರಣವಾಗಿದ್ದ ಜಮೀನ್ದಾರ ಪದ್ಧತಿಯನ್ನು ರದ್ದು ಮಾಡಿದ ನಿಯಮವು ಉತ್ತಮವಾದುದು. ಆದರೆ ಜಮೀನ್ದಾರರಿಗೆ ಪರಿಹಾರ ಕೊಡತಕ್ಕ ವಿಷಯ ಒಂದು ದೃಷ್ಟಿಯಿಂದ ಸಮರ್ಪಕವಲ್ಲ. ಮೇಲಾಗಿ ಭೂಮಿಯ ಮೇಲಿದ್ದ ಜಮೀನ್ದಾರರ ವ್ಯಕ್ತಿ ಒಡೆತನವನ್ನು ರದ್ದುಮಾಡಿ ಭೂವ್ಯವಸಾಯ ಮಾಡುವವರಿಗೆ ಭೂಮಿಯ ಮೇಲಿನ ಹಕ್ಕನ್ನು ಕೊಟ್ಟುದರಿಂದ ಹೆಚ್ಚಿನ ಪ್ರಯತ್ನ ಸವಾಗಲಾರದು. ಏಕೆಂದರೆ ಚಿಕ್ಕ ಭೂವ್ಯವಸಾಯಗಾರನಲ್ಲಿ ತನ್ನ ಭೂಮಿಯನ್ನು ರೂಪಿಸಿಕೊಳ್ಳುವ ಚೇತನ ವಿರುವದಿಲ್ಲ. ಪ್ರಸಕ್ತ ಈ ಭೂಮಿಯು ಶ್ರೀಮಂತನ ಕೈಸೇರುವ ಸಾಧ್ಯತೆ ಇದೆ. ಬದಲು ಭೂಮಿಯನ್ನು ರಾಷ್ಟ್ರೀಕರಿಸಿ ಸಹಕಾರ ವ್ಯವಸಾಯ ಪದ್ಧತಿ ಜಾರಿಗೆ ತರುವದು ಯೋಗ್ಯ ಸೂಚನೆಯಾಗಿತ್ತು. ಅದೇ ರೀತಿಯಲ್ಲಿ ಸಂಸ್ಥಾನಗಳ ವಿಲೀನೀಕರಣವು ಉತ್ತಮವಾದುದು. ಆದರೆ ಆ ನಿರಂಕುಶ ಪ್ರಭುಗಳ ಕೈಯಲ್ಲಿದ್ದ ಅಧಿಕಾರವನ್ನು ಕೆಲವೊಂದು ಸ್ವಾರ್ಥಿ ಪಂಗಡಗಳ ವಶಮಾಡಿದ ಕಾರಣ ಹೆಚ್ಚಿನ ದೇಶವನ್ನು ಸಾಧಿಸಿದಂತಾಗಲಿಲ್ಲ.

ಸೈನಿಕ ಸಿದ್ಧತೆ.

ಹಿಂದೂದೇಶದ ಸೈನ್ಯ ಬಡಾವಣೆ ಹಾಗೂ ತಯಾರಿಯು ಸಮರ್ಪಕವೆನ್ನಲಾಗದು. ಇದರಿಂದ ಪೂರ್ಣವಾಗಿ ಕಾಂಗ್ರೆಸ್ ಸರಕಾರವು ಗಾಂಧೀ ತತ್ವವನ್ನು ಬದಿಗೊತ್ತಿರುವದು. ಹಿಂದೂ ದೇಶವು ಏನೇ ಸಿದ್ಧತೆ ನಡೆಸಿ, ಅತುಳ ವೆಚ್ಚ ಮಾಡಿದರೂ, ಆಧುನಿಕ ಮಹಾರಾಷ್ಟ್ರಗಳ ಸಾಲಿನಲ್ಲಿ ತಾನೂ ಬಲಾಢ್ಯ ರಾಷ್ಟ್ರವೆಂದು ಸರಿಮಟ್ಟದಲ್ಲಿ ನಿಲ್ಲುವದು ಸದ್ಯಕ್ಕೆ ಸಾಧ್ಯವಿಲ್ಲ. ಅಂತರಿಕ ಶಾಂತಿಗೆ ಆಗತ್ಯವಾದಷ್ಟು ಸೈನಿಕ ಪಡೆಯನ್ನಿಟ್ಟುಕೊಳ್ಳುವದು ಹಿತವಾಗಿತ್ತು. ಹೊರಗಿನ ಯಾವ ಶಕ್ತಿಗೂ ಭರತಖಂಡವು

ಬೆದರುವ ಅವಶ್ಯಕತೆ ಇಲ್ಲ. ದಿನೇ ದಿನೇ ಬೆಳೆಯುತ್ತಿರುವ ರಷ್ಯಾದ ಶಕ್ತಿಯನ್ನು ನೋಡಿಯೂ ಭಾರತವು ಬೆದರಬೇಕಿಲ್ಲ. ಆದರೆ ದೇಶದೊಳಗಿರುವ ಅಂತರಿಕ ಒಡಕುಗಳಿಗಾಗಿ ಭಾರತವು ಹೆದರಬೇಕು. ದೇಶದೊಳಗೆ ತಲೆಎತ್ತುತ್ತಿರುವ ಕಮ್ಯೂನಿಜಂ ತತ್ವಕ್ಕೆ ಹೆದರಬೇಕು. ಇವುಗಳಿಗೆ ಉತ್ತರ ಸೈನ್ಯ ಸಿದ್ಧತೆಯಲ್ಲ. ಇಲ್ಲವೇ ಸಿಕ್ಕಿ ಸಿಕ್ಕಿದವರನ್ನು ಕಮ್ಯೂನಿಷ್ಟ್ ಹೆಸರಿಟ್ಟು ಗುಂಡಿಕ್ಕುವದೂ ಅಲ್ಲ. ಬದಲು ಕಮ್ಯೂನಿಸಂ ಬೆಳೆಯಲು ಕಾರಣವಾದ ಬಡತನ, ಉಪವಾಸಗಳನ್ನು ನಿವಾರಿಸುವದು. ಆದ್ದರಿಂದ ಹದ್ದುಮೀರಿ ಸೈನ್ಯ ಸಿದ್ಧತೆಗೆ ಖರ್ಚು ಮಾಡದೆ ದೇಶದ ಅಂತರಿಕ ಸುಧಾರಣೆಗೆ ವ್ಯಯಮಾಡಬೇಕಿತ್ತು. ಇಂದು ಬಡ ಜನರು ಯಾವುದಕ್ಕಾಗಿ, ಯಾವುದನ್ನು ರಕ್ಷಿಸಲಿಕ್ಕಾಗಿ ಸೈನ್ಯಕ್ಕೆ ಸೇರಬೇಕು? ತನ್ನದೆನ್ನುವ ಒಂದೂ ವಸ್ತುವಿಲ್ಲದ ನಿರ್ಗತಿಕನು ಯಾವುದರ ರಕ್ಷಣೆಗಾಗಿ ಹೋರಾಡಬೇಕು?

ಆಂತರಿಕ ಆಡಳಿತ.

ಈ ವರೆಗಿನ ಆಂತರಿಕ ಆಡಳಿತವು ಒಂದೋ ಪಕ್ಷಗಳನ್ನು ತೃಪ್ತಿಪಡಿಸಲು ಇಲ್ಲವೇ ಮುಷ್ಕರಗಳನ್ನು ತಪ್ಪಿಸಲು ಪ್ರಯತ್ನಿಸಿದೆ. ದೇಶಕ್ಕಾಗಿ ತ್ಯಾಗಮಾಡಿದೆವೆನ್ನುವವರಿಗೆ ತಲೆಯೊಂದರ ಸಹಸ್ರಾರು ರೂಪಾಯಿಗಳಂತೆ ಬಹುಮಾನ ಕೊಟ್ಟರೂ ದೇಶಕ್ಕೆ ನಷ್ಟವಿರಲಿಲ್ಲ. ಆದರೆ ತ್ಯಾಗಮಾಡಿದವರೆಂಬ ಒಂದೇ ಕಾರಣದಿಂದ ಅದಕ್ಕೆ ಅರ್ಹತೆ ಇಲ್ಲದವರ ಕೈಗೆ ಆಡಳಿತ ಜವಾಬ್ದಾರಿ ಕೊಟ್ಟದ್ದರಿಂದ ಅವರ್ಣನೀಯ ತೊಂದರೆಯಾಗಿದೆ. ಸರಕಾರಿ ಆಡಳಿತ ಯಂತ್ರದಲ್ಲಿ ಅಣ್ಣ, ತಮ್ಮ, ನೆಂಟರಿಷ್ಟರೆಂಬ ಭಾವನೆ ಹೆಚ್ಚಿ ಹೊಲಗೆಟ್ಟಿದೆ. ಮೇಲಿನ ಮುಖ್ಯ ಮಂತ್ರಿಯಿಂದ ಕೆಳಗಿನ ಗುಮಾಸ್ತನ ವರೆಗೆ ಇದು ನಡೆದಿದೆ. (ಮೊನ್ನೆಯಾಗಿ ಬಸ್‌ನಲ್ಲಿ ಪ್ರಯಾಣ ಮಾಡುತ್ತಿದ್ದಾಗ ಜೂನಿಯರ್ ಬಿ. ಎ. ಯಲ್ಲಿ ಓದುತ್ತಿರುವ ನನ್ನ ಸ್ನೇಹಿತನೊಬ್ಬನು ಹೇಳಿದ ಮಾತಿದು. 'ಜವಾಹರರನ್ನೇ ನೋಡಿ. ಒಮ್ಮೆ ಅವರನ್ನು ನಾವು ಪೂಜೆ ಮಾಡುತ್ತಿದ್ದೆವು. ಆದರೆ ಅವರೂ ಕೂಡ ಸಾಮಾನ್ಯ ವ್ಯಕ್ತಿಗಳಂತೆ ನೆಂಟರಿಷ್ಟರು ಸ್ನೇಹಿತರು ಎಂಬ ಕಟ್ಟಿನಲ್ಲಿ ಬಿದ್ದವರು. ನೋಡಿ, ತಮ್ಮ ನೆಂಟರನ್ನು, ಕುಟುಂಬದವರನ್ನು ಅಲ್ಲಲ್ಲಿ ಕೆಲಸಕ್ಕೆ ನೇಮಿಸಿರುವರು. ತಮ್ಮ ತಂಗಿಯನ್ನು ರಾಯಭಾರಿ ಮಾಡಿರುವರು, ಮತ್ತೊಬ್ಬ ತಂಗಿಯನ್ನು ಅಮೇರಿಕಾಕ್ಕೆ ಜ್ಞಾನಗಳಿಸಲೆಂದು ಕಳುಹಿಸಿದ್ದರು. ಇತರ ನೆಂಟರಿಷ್ಟರಿಗೆ ದೊಡ್ಡ ದೊಡ್ಡ ಹುದ್ದೆ ಕೊಡಲ್ಪಟ್ಟಿದೆ. ಅದೇ ರೀತಿ ಕೇಂದ್ರ ಹಾಗೂ ಪ್ರಾಂತೀಯ ಮಂತ್ರಿಗಳೂ ನಡೆಸಿದರೆ ಆಶ್ಚರ್ಯವೇನ?)

ತಮ್ಮನ್ನು ಅಧಿಕಾರ ಪಟ್ಟಗಳಲ್ಲಿ ಕೂರಿಸಿದವರಿಗಾಗಿ ದಾರಿತಪ್ಪಿ ಅನೇಕರು ವರ್ತಿಸಿದ್ದಾರೆ. ಅವರಿಗಾಗಿ ಸರಕಾರದ ಬೊಕ್ಕಸವನ್ನು ಅನೇಕರು ಬರಿದು ಮಾಡಿದ್ದಾರೆ. ಈ ಕಾರಣದಿಂದ ದೇಶದಲ್ಲಿ ಕಪ್ಪುಸಂತೆ, ಕಳ್ಳಮಾರಾಟ, ಲಾಭಬಡಕತನ ಮೇರೆಮೀರಿ ಹಬ್ಬಿತು. ಕಾಂಗ್ರೆಸ್ ಆಡಳಿತಕ್ಕೂ, ಜನತೆಯ ನೀತಿನಿಯಮಗಳಿಗೂ ಹಿಡಿದ ಈ ವಿನಾಶಕಾರಿ ತುಕ್ಕಿನಿಂದಾಗಿ ಕಾಂಗ್ರೆಸ್ ಸಂಸ್ಥೆ ಶಕ್ತಿಗುಂದಿತು.

ನಿಯಂತ್ರಣಗಳು

ಮಹಾತ್ಮಾಗಾಂಧಿಯವರು ನಿಯಂತ್ರಣಗಳಿರಬಾರದೆಂದು ಅಭಿಪ್ರಾಯಪಟ್ಟಿದ್ದರು. ಆದರೆ ಇಂದಿನ ಪರಿಸ್ಥಿಯಲ್ಲಿ ನಿಯಂತ್ರಣಗಳು ಕೆಲವು ವಸ್ತುಗಳಿಗೆ ಅವಶ್ಯವೆಂದು ತೋರಬಹುದು. ಆದರೆ ಆ ನಿಯಂತ್ರಣಗಳನ್ನು ಜಾರಿಯಲ್ಲಿ ತರಬೇಕಾದ ಅಧಿಕಾರಿಗಳು ಯೋಗ್ಯರಲ್ಲದಿದ್ದರೆ ಅದರಿಂದ ಯಾವ ಪ್ರಯೋಜನವೂ ಆಗಬಾರದು. ಆದರಂತೆ ಹಿಂದೂ ದೇಶದಲ್ಲಿ ನಿಯಂತ್ರಣದ ಕಥೆಯಾಯಿತು. ವ್ಯಾಪಾರಸ್ಥರಿಗೆ ಮತ್ತು ನಿಯಂತ್ರಣಾಧಿಕಾರಿಗಳಿಗೆ ಕ್ಷಿಪ್ರ ಸಮಯದಲ್ಲಿ ಹಣಗಳಿಸುವ ಮಾರ್ಗ ಇದಾಯಿತೇ ವಿನಾ ಇದರಿಂದ ಬಡಜನರಿಗೆ ಹೆಚ್ಚಿನ ಸಹಾಯವಾಗಲಿಲ್ಲ. ನಿಯಂತ್ರಣಗಳನ್ನು ಜಾರಿಗೆ ತಂದು ಸರಕಾರವೇ ಜೀವನಾವಶ್ಯಕ ವಸ್ತುಗಳ ಮಾರಾಟ ಮಾಡಬೇಕಿತ್ತು. ಅವರು ಅಂಥಾವರು ಇವರು ಇಂಥಾವರೆಂದು ಪಕ್ಷಪಾತ ತೋರಿಸದೆ ಎಲ್ಲರೂ ನಿಯಂತ್ರಿತ ಅಂಗಡಿಯಿಂದಲೇ ಸಮಾನ ದೃಷ್ಟಿಯಿಂದ ವಸ್ತುಗಳನ್ನು ಪಡೆಯುವ ಏರ್ಪಾಡು ಮಾಡಬೇಕಿತ್ತು. ರಷ್ಯಾದಲ್ಲಿ ಸ್ಟಾಲಿನನೂ ಕೂಡ ತನಗೆ ಅವಶ್ಯವಿರುವ ನಿಯಂತ್ರಿತ ವಸ್ತುಗಳನ್ನು ರೇಷನ್ ಅಂಗಡಿಯಲ್ಲಿ ಪಡೆಯುವಂತೆ ಇಲ್ಲಿಯೂ ಆಗಬೇಕಿತ್ತು. ಆದರೆ ಇಲ್ಲಿ ಅಧಿಕಾರದಲ್ಲಿರುವರಿಗೆ ನಿಯಂತ್ರಣ ಅನ್ವಯಿಸುವದಿಲ್ಲ. ನೇರವಾಗಿ ಅವರ ಮನೆಗೆ ಸಾಹಿತ್ಯಗಳು ಹೋಗುತ್ತವೆ. ಸಾಮಾನ್ಯರು ನಿಯಂತ್ರಿತ ಅಂಗಡಿಗೆ ಬಂದರೂ ಅಧಿಕಾರ ನೋಡಿ ವಿತರಣೆ, ಮುಖ ನೋಡಿ ಮಣೆ ಯಾದರೆ ಹೇಗೆ? ಈ ರೀತಿಯ ತಪ್ಪುನಡೆಯಿಂದ ಭಾರತದ ನಿಯಂತ್ರಣ ಕತೆಯು ಕಾಂಗ್ರೆಸ್ ಆಡಳಿತದ ಅಭಿಪ್ರಾಯವನ್ನೇ ಹಾಳುಮಾಡಿತು.

ಪಾನನಿರೋಧ.

ಕಾಂಗ್ರೆಸ್ ಸರಕಾರವು ಕೈಕೊಂಡ ತಪ್ಪು ಮಾರ್ಗಗಳಲ್ಲಿ ಇದೊಂದು. ಕೇವಲ ಶಾಸನಗಳಿಂದ ಜನರ ಸ್ವಭಾವವನ್ನು ಮಾರ್ಪಡಿಸುವದು ಯಾವ ಸರಕಾರಕ್ಕೂ ಸಾಧ್ಯವಿಲ್ಲ. ಪಾನನಿರೋಧ ಶಾಸನವನ್ನು ಜಾರಿಗೆ ತಂದುದರಿಂದ ಕುಡುಕನ ಮಾನಸಿಕ ಬದಲಾವಣೆಯಾಗಲಾರದು. ಅದರ ಬದಲು ಪಾನನಿರೋಧದ ಬಗ್ಗೆ ಉತ್ತಮ ಪ್ರಚಾರ ನಡೆದು ಸಮಾಜದಲ್ಲಿ ಒಂದು ರೀತಿಯ ಜಾಗೃತಿಯನ್ನುಂಟುಮಾಡಿ ಕುಡುಕತನವು ಮಾನವನ ಗೌರವಕ್ಕೆ ಕಳಂಕ ತರುವಂಥಾದ್ದೆಂಬ ಭಾವನೆಯನ್ನು ಪ್ರಚೋದಿಸಿ ನಂತರ ಪಾನನಿರೋಧ ಶಾಸನವನ್ನು ಜಾರಿಯಲ್ಲಿ ತರಬೇಕಿತ್ತು. ಈಗಿನ ಶಾಸನದಿಂದ ಸರಕಾರದ ಬೊಕ್ಕಸಕ್ಕೆ ಪೆಟ್ಟಾಯಿತೇ ವಿನಹ ಜನಹಿತವಾಗಲಿಲ್ಲ. ಬದಲು ಅಲ್ಲಿಯೂ ಕಳ್ಳವ್ಯಾಪಾರ, ಲಾಭ ಬಡಕತನಕ್ಕೆ ಆಸ್ಪದವಾಗಿ ಕಪ್ಪು ಸಂತೆಯು ಮರೆಹೋದವರು ಶೀಘ್ರ ಶ್ರೀಮಂತರಾಗುವ ಅನುವಾಯಿತು.

ವಿನಾಶಕಾರಿ ಪ್ರಶಂಸೆ

ಭರತ ಖಂಡವು ಸ್ವತಂತ್ರವಾದಂದಿನಿಂದ ಭಾರತವನ್ನು ಪ್ರಶಂಸಿಸುವ ಜಗತ್ತಿನ ರಾಷ್ಟ್ರಗಳಿಗೆ ಮಿತಿ ಇಲ್ಲ. ಜಗತ್ತಿನ ಮಹಾರಾಜಕಾರಣಿಗಳೂ ಇತರರೂ ಭಾರತವನ್ನೂ ಭಾರತದ ರಾಜಕೀಯ ಮುಂದಾಳುಗಳನ್ನೂ ಹೊಗಳ ತೊಡಗಿದರು. ಇಂದೂ ಹೊಗಳುತ್ತಿದ್ದಾರೆ. ಈ ಹೊಗಳಿಕೆಯಿಂದ ಭಾರತೀಯರಾದ ನಮ್ಮ ತಲೆ ತಿರುಗಿತು. ಮನಸ್ಸಿಗೆ ಆನಂದವಾಯಿತು. ಭಾರತವು ಏಷ್ಯಾ ಖಂಡದ ಉದಿತ ಭಾನುವೆಂಬ ಕನಸನ್ನು ಕಂಡೆವು. ಅಂತರಾಷ್ಟ್ರೀಯ ರಂಗದಲ್ಲಿ ಹೊಗಳಲ್ಪಡುವ ನೆಹರೂ, ನಮ್ಮ ವಿದೇಶ ನೀತಿಗಳನ್ನು ನೆನೆದು ನಮ್ಮ ಆಂತರಿಕ ಹೀನಸ್ಥಿತಿಯನ್ನು ಮರೆತೆವು. ಭಾರತೀಯ ಆಡಳಿತಗಾರರಲ್ಲೂ, ಜನತೆಯಲ್ಲೂ ಒಂದು ವಿಧದ ಆತ್ಮತೃಪ್ತಿ ತಲೆದೋರ ತೊಡಗಿದೆ. ಭರತಖಂಡದಲ್ಲಿ ಜಗದ್ವಿಖ್ಯಾತ ಕೆಲವು ವ್ಯಕ್ತಿಗಳಿದ್ದಾರೆ ನಿಜ. ಪಂಡಿತ ನೆಹರೂರವರಿಗೆ ಅಮೇರಿಕಾ, ಕೆನಡಾಗಳಲ್ಲಿ ದೊರೆತ ಅಭೂತ ಪೂರ್ವ ಸ್ವಾಗತದಿಂದ ನಾವು ಉಬ್ಬಿಕೊಂಡೆವು. ವಿಜಯ ಲಕ್ಷ್ಮಿಯವರನ್ನು ಜಗತ್ತಿನ ಅತೀ ಹಿರಿಯ ಮಹಿಳೆಯರಲ್ಲಿ ಒಬ್ಬರೆಂದು ಗಣಿಸಿ ಸಂತೋಷಿಸಿದೆವು. ಮಹಾ ಪಂಡಿತರಾದ ರಾಧಾಕೃಷ್ಣನ್‌ರವರನ್ನು ಸಂಯುಕ್ತ ರಾಷ್ಟ್ರ ಸಭೆಯ ವಿದ್ಯಾ ಸಮಾಜಿಕ ಪ್ರಗತಿಗಿರುವ ಶಾಖೆಯ ಅಧ್ಯಕ್ಷರಾಗಿ ಆರಿಸಿದಾಗ ಹೆಮ್ಮೆಪಟ್ಟುಕೊಂಡೆವು. ಆರ್ಥಿಕ ಮತ್ತು ಸಾಮಾಜಿಕ ಸಮಿತಿಯ ಪ್ರೆಸಿಡೆಂಟರಾಗಿ ರಾಮಸ್ವಾಮಿ ಮುದಲಿಯಾರರವರು ಆರಿಸಲ್ಪಟ್ಟಾಗ ಸಂತೋಷಿಸಿದೆವು. ಸರ್ ಸಿ. ವಿ. ರಾಮನ್‌ರವರನ್ನು ಹೊಗಳಿದಾಗ ಅವರ ಶಿಷ್ಯ ಚಂದ್ರಶೇಖರನವರನ್ನು ಅಮೇರಿಕಾವು ಕೊಂಡಾಡಿದಾಗ ಮೆಚ್ಚಿದೆವು. ಜಗತ್ತಿನ ಆರೋಗ್ಯ ಸಂಸ್ಥೆಯ ಅಧ್ಯಕ್ಷೆಯಾಗಿ ರಾಜಕುಮಾರಿ ಅಮೃತಕೌರ, ಲೇಬರ್ ಸಂಸ್ಥೆಯ ಅಧ್ಯಕ್ಷರಾಗಿ ಜಗಜೀವನರಾಮ್ ಅವರು ಆರಿಸಲ್ಪಟ್ಟಾಗ ಇನ್ನೂ ಆನಂದಿಸಿದೆವು. ಈ ರೀತಿ ಪರದೇಶಗಳು ಭಾರತವನ್ನು ಹೊಗಳಿದ್ದರಿಂದ ಭಾರತೀಯರಿಗೆ ಹೊರಗೆ ಗೌರವ ದೊರೆತದ್ದರಿಂದ ಭಾರತದ ಪರಿಸ್ಥಿತಿ ಉತ್ತಮಗೊಂಡಂತಾಗಲಿಲ್ಲ. ಯೋಗ್ಯ ಅವಕಾಶ ದೊರೆತರೆ ಭಾರತೀಯರೂ ಜಗತ್ತಿನ ಇತರ ಜನಾಂಗಗಳಂತೆ ಮುಂದರಿಯಬಲ್ಲರೆಂಬುದನ್ನು ಇದು ಸಾಬೀತು ಪಡಿಸಿತೇ ವಿನಹ ಭಾರತದ ಸಮಾನ್ಯ ಜನತೆಯ ಉತ್ಕರ್ಷವಾಗಲಿಲ್ಲ. ಅಂತರಾಷ್ಟ್ರೀಯ ರಂಗದಲ್ಲಿ ಭಾರತವು ಜಯದ ಮೇಲೆ ಜಯ ಪಡೆಯುತ್ತಿರಬಹುದು. ಆದರೆ ಅಂತರಿಕ ಸಮಸ್ಯೆಗಳನ್ನು ಎದುರಿಸುವದರಲ್ಲಿ ಅಪಜಯದ ಮೇಲೆ ಅಪಜಯವನ್ನು ಆಲಿಂಗಿಸುತ್ತಿದೆಯೆಂಬುದನ್ನು ಮರೆಯಲಾಗದು.

ಸಂಯುಕ್ತ ರಾಷ್ಟ್ರ ಸಂಘದಲ್ಲಿ ರಷ್ಯಾದ ಪ್ರತಿನಿಧಿ ಮಾಲಿಕ್ ರವರು ಬ್ರಿಟನಿನ ಆಸ್ಟಿನ್, ಅಮೇರಿಕಾದ ಜೆಬ್ ಮತ್ತು ಜಗತ್ತಿನ ಇತರರೊಡನೆ ಭಾರತದ ಬಿ. ಎನ್. ರಾವ್‌ರವರು ಕೂತಿದ್ದಾರೆ. ರಾವ್‌ರವರ ಯೋಗ್ಯತೆಯ ಮಟ್ಟಿಗೆ ಇಡೀ ಜಗತ್ತೇ ಅವರನ್ನು ಹೊಗಳುತ್ತಿದೆ. ಆದರೆ ಮುಂದುವರಿದಿರುವ ಆಧುನಿಕ ರಾಷ್ಟ್ರಗಳ ಜೊತೆಯಲ್ಲಿ ನಾವು ಕೂತಿವೆಂಬಷ್ಟರಿಂದ ನಮ್ಮ ಸ್ಥಿತಿ ಸುಧಾರಿಸಿತೆನ್ನಲಾಗುವದೇ?

ಒಂದು ತುಲನೆ.

ಆರ್ಥಿಕ ದೃಷ್ಟಿಯಿಂದ ಭಾರತವು ಬಹಳ ಹಿಂದೆ ಬಿದ್ದಿದೆ. ಬೇರೆ ರಾಷ್ಟ್ರಗಳೊಡನೆ ಹೋಲಿಸಲು ನಮ್ಮಲ್ಲಿ ಏನೂ ಸಾಧ್ಯವಿಲ್ಲ. ಹಿಂದೂದೇಶದ ಸಂಸ್ಕೃತಿ, ದೇವಸ್ಥಾನಗಳು, ನೈತಿಕ ಮುಂದಾಳುತನ, ಹಾಗೂ ಆರ್ಷೇಯ ನಾಗರೀಕತೆ ಹೊಗಳತಕ್ಕಂಥವೇ. ಆದರೆ ಆಧುನಿಕ ಪ್ರಪಂಚದಲ್ಲಿ ರಾಷ್ಟ್ರದ ಘನತೆ ಪ್ರಾಮುಖ್ಯವಾಗಿ ಅದರ ಆರ್ಥಿಕ ಬಲದ ಮೇಲೆಯೇ ನಿಂತಿದೆ. ಅಮೇರಿಕವು ತನ್ನ ರಾಷ್ಟ್ರೀಯ ಸಾಲದ ಮೇಲೆ ಪ್ರತಿವರ್ಷ ಆರು ಬಿಲಿಯನ್ ಡಾಲರ್‌ಗಳ ಬಡ್ಡಿ ಕೊಡುತ್ತದೆ. ಇದು ೨೮೦೦ಕೋಟಿ ರೂಪಾಯಿಗಳಿಗೆ ಅಂದರೆ ಹಿಂದೂದೇಶದ ವಾರ್ಷಿಕ ವರಮಾನದ ಆರು ಪಟ್ಟು ಹೆಚ್ಚು! ಕೆರೀಬಿಯನ್ ಸಮುದ್ರಗಳಲ್ಲಿ ಕ್ಯೂಬಾ ಎಂಬ ದ್ವೀಪ ಇದೆ. ಅದರ ವಿಸ್ತೀರ್ಣವು ಹಿಂದೂದೇಶದ ನಲವತ್ತನೇ ಒಂದು ಅಂಶ. ಅದರ ಜನ ಸಂಖ್ಯೆ ೫½ ಮಿಲಿಯ. ಅಂದರೆ ಮದ್ರಾಸು ನಗರದ ಮೂರು ಪಾಲು. ಈ ದ್ವೀಪವು ಭರತ ಖಂಡವು ಉತ್ಪಾದಿಸುವ ಸಕ್ಕರೆಯ ಐದು ಪಟ್ಟು ಹೆಚ್ಚು ಉತ್ಪಾದಿಸುತ್ತದೆ. ಕೂರ್ಗದಷ್ಟು ವಿಸ್ತಾರದ ಲಕ್ಸೆಂಬರ್ಗನ್ನು ತೆಗೆದುಕೊಂಡರೆ ಅದರ ಜನ ಸಂಖ್ಯೆ ಮೂರು ಲಕ್ಷ. ಆದರೆ ಹಿಂದೂದೇಶಕ್ಕಿಂತ ನಾಲ್ಕು ಪಟ್ಟು ಉಕ್ಕನ್ನು ಉತ್ಪಾದಿಸುತ್ತದೆ. ಹಿಂದೂದೇಶವು ಒಂದು ವರ್ಷಕ್ಕೆ ಉತ್ಪಾದಿಸುವ ರಬ್ಬರು ಸುಮಾರು ೨೦,೦೦೦ ಟನ್ನುಗಳು. ಇದು ಮಲಯಾವು ಒಬ್ಬ ವ್ಯಾಪಾರ ಸಮುದ್ರದಲ್ಲಿ ತನ್ನ ಬಂದರುಗಳಿಂದ ಹೊರಗೆ ಕಳುಹಿಸುವ ಒಂದು ದಿನದ ಲೆಕ್ಕದಷ್ಟು! ಭಾರತದ ಜೀವನ ಮಟ್ಟ, ಕೃಷಿಯ ಪ್ರತಿ ಫಲ, ರೋಗ, ಅಕಾಲ ಮೃತ್ಯು, ಮಕ್ಕಳ, ಜಾನುವಾರುಗಳ ಸ್ಥಿತಿಯನ್ನು ವಿವರಿಸುವ ಅಗತ್ಯವಿಲ್ಲ. ನಾವು ಸಾಧಾರಣ ಹಲವು ವರ್ಷಗಳ ಕೇಂದ್ರೀಕೃತ ದುಡಿತಬೇಕು. ನಮ್ಮ ಆಂತರಿಕ ಸ್ಥಿತಿಯನ್ನು ಸುಧಾರಿಸಿ, ನಾವು ಭದ್ರತಳಹದಿಯಲ್ಲಿ ನಿಂತು ಜಗತ್ತಿನ ರಂಗಕ್ಕೆ ಕಾಲಿಕ್ಕಬೇಕು.

ಹೊಟ್ಟೆಯ ಪ್ರಶ್ನೆ.

ಇದೆಲ್ಲ ದೂರದ ಮಾತು. ನಮ್ಮ ಹೊಟ್ಟೆಯ ಪ್ರಶ್ನೆಯೇ ಬಗೆ ಹರಿಯದಿರುವಾಗ ಬೇರೆ ವಿಚಾರಗಳಿಗೆಡೆಯೆಲ್ಲಿ? ಇಂದು ಜನವರಿ ೨೬ನೇ ಪ್ರಜಾ ಪ್ರಭುತ್ವದ ದಿನವೆಂದು ಕಣ್ತೆರೆದು ಸುತ್ತುಮುತ್ತ ನೋಡಿದ ಲಕ್ಷಾಂತರ ಭಾರತೀಯರ ಹೊಟ್ಟೆ ಬರಿದು. ಮನೆ ಬರಿದು. ರೇಷನ್ ಅಂಗಡಿಗಳೇ ಬರಿದು! ಜೀವಿಸಲು ಪ್ರಾಮುಖ್ಯವಾದ ಅನ್ನದ ಸಮಸ್ಯೆಯೇ ಭಾರತದ ಈ ನಾಲ್ಕು ವರ್ಷಗಳ ಸ್ವತಂತ್ರ ಆಡಳಿತದಲ್ಲಿ ಬಗೆ ಹರಿಯಲಿಲ್ಲ. ಹಸಿದ ಹೊಟ್ಟೆಯ ಈ ಜನರಿಗೆ ಬೇರೆ ಯಾವ ಸವಲತ್ತು ಬಂದೇನು? ಪ್ರೌಢ ಮತದಾನ ಪದ್ಧತಿ ಇರಲಿ ಯಾ ಬೇರೆ ರಾಜಕೀಯ ಸಮಸ್ಯೆಯಾಗಲೀ ಬರಿ ಹೊಟ್ಟೆಯವನಿಗೆ ಅರ್ಥವಾಗದವುಗಳು. ವಿಚಿತ್ರದ ವಿಷಯವೆಂದರೆ ಭಾರತದಲ್ಲಿ ಶೇಕಡ ೮೦ ರಷ್ಟು ಜನರು ಭೂವ್ಯವಸಾಯ ಮಾಡುವವರು. ಇಷ್ಟು ಜನರು ವ್ಯವಸಾಯ ಮಾಡಿದರೂ ಜನತೆಗೆ ಉಣ್ಣಲು ಅನ್ನವಿಲ್ಲ. ಇದಕ್ಕೆ ಕಾರಣಗಳೆಲ್ಲದೆ ಇಲ್ಲ. ಮಳೆಯ ಅಭಾವ, ನೀರಿ ಇಲ್ಲದೆ, ಬೆಳೆಯುತ್ತಿರುವ ಜನಸಂಖ್ಯೆ, ಲಾಭ ಬಡುಕ ಜನರು ಮಾಡುವ ಅನೀತಿಯುತ ಸಂಗ್ರಹ ಇವುಗಳಿಂದ ಬಡ ಜನರು ಬಹು ತೊಂದರೆಗೆ ಈಡಾಗಿದ್ದಾರೆ. ಪರಿಣಾಮವಾಗಿ ಬಡ ಜನರು ಭರತಖಂಡಕ್ಕೆ ಸ್ವಾತಂತ್ರ್ಯ ಬಂದಿದೆ ಎಂಬ ಮಾತನ್ನು ಒಪ್ಪುವಂತಿಲ್ಲ. ಹಿಂದಿಗಿಂತ ಇಂದಿನ ಅವರ ಸ್ಥಿತಿಯು ಚಿಂತಾಜನಕವಾಗಿದೆ. ಹೊಟ್ಟೆಗೆ ತುತ್ತು ಅನ್ನಕ್ಕೇ

(ಎಂಟನೇ ಪುಟ ನೋಡಿ)

ಪ್ರಜಾ ಪಾಲಿತಳಾದ

॥ ಭಾ ರ ತ ಮಾ ತೆ ॥

ಲೇ:-ಶ್ರೀ ವಿ. ಎಸ್. ರಾಮಕೃಷ್ಣ, ಬಿ. ಎಸ್. ಸಿ. (ಆನರ್ಸ್) ಬಿ. ಟಿ.

"ಭಾರತ ಮಾತಕಿ ಜೈ" ಎಂಬ ಜಯ ಘೋಷವನ್ನು ಕೇಳಿದೊಡನೆ ನಮ್ಮಲ್ಲಿ ಚೈತನ್ಯದ ಮಹಾ ವಿದ್ಯುದಲೆಯೊಂದು ಸಂಚಾರವಾಗಿ ಭಕ್ತಿ, ಶೌರ್ಯ ಸಾಹಸಗಳು ಉಕ್ಕೇರಿ ಹೊರ ಹೊಮ್ಮುವುದೇಕೆ? ನಮ್ಮನ್ನು ಕಾರ್ಯದ ರಣರಂಗದಲ್ಲಿ ಧುಮ್ಮಿಕ್ಕಿಸಿ ಕರ್ತವ್ಯ ತತ್ಪರತೆಯ ಪ್ರಚೋದನೆಯನ್ನು ಮಾಡಿ ತ್ಯಾಗ ಸಹನೆಗಳನ್ನು ಆ ಜಯ ಘೋಷ ರವವು ನಮ್ಮಲ್ಲಿ ಉತ್ಪಾದಿಸಲು ಕಾರಣವೇನು? ಯಾರಿಗೆ ಜಯವಾಗಲೆಂದು ನಾವು ಬಯಸುತ್ತಲಿರುವುದು? ಆ ಮಾತೆ ಯಾರು? ಯಾರ ಅಭ್ಯುದಯವನ್ನು ಬಯಸಿ ಜನವರಿ ೨೬ನೇ ತಾರೀಕಿನಂದು ನಾವು ಸಾಮೂಹಿಕವಾಗಿಯೂ ವ್ಯಕ್ತಿಗತವಾಗಿಯೂ ಪ್ರಾರ್ಥಿಸುವೆವು?

ಯಾರ ಜಯಕ್ಕೋಸುಗ ನಾವು ಜನವರಿ ೨೬ನೇ ತಾರೀಕಿನಂದು ಪ್ರಾರ್ಥಿಸುವೆವೋ ಆ ಭರತ ಮಾತೆಯು ನಮ್ಮನ್ನು ಹಡೆದವಳಾದ ಪೂಜ್ಯ ಜನನಿ. ಆಕೆಯು ಬಹು ಪುರಾತನಳು. ಆಕೆಯ ಉತ್ಪತ್ತಿ ಬೆಳವಣಿಗೆಗಳು ಎಂತಾಯಿತೆಂದು ಯಾರೂ ನಿರ್ದಿಷ್ಟವಾಗಿ ಹೇಳಲಾರರು. ಅನೇಕ ತೇಜೋನ್ವಿತರಾದ ವ್ಯಕ್ತಿಪುಂಗವರನ್ನು ಪಡೆದು ವಿಶ್ವಖ್ಯಾತಿಯಾದ ಭಾರತ ಮಾತೆಯು ಕಾಲ ವೈಪರೀತ್ಯದಿಂದ ಅನ್ಯರ ಆಕ್ರಮಣಕ್ಕೊಳಗಾಗಿ ಒಂದೆರಡು ಶತಮಾನಗಳ ಕಾಲ ಪರಿತಪಿಸಿದಳು. ಆದರೆ ಮಾತೆಯ ವೀರರಾದ ಪುತ್ರರು ಸತತ ಪರಿಶ್ರಮದಿಂದ ಅನ್ಯಾಕ್ರಮಣವನ್ನು ಕಿತ್ತೊಗೆದು ಜನನಿಯ ಬಂಧ ವಿಮೋಚನೆ ಮಾಡಿ ಆಕೆಯನ್ನು ಪರಿಪಾಲಿಸಲಾರಂಭಿಸಿದರು. ಭಾರತ ಮಾತೆ ಎಷ್ಟು ಪ್ರಾಚೀನಳೋ ಅಷ್ಟೇ ಆಧುನಿಕಳೂ ಹೌದು. ಸ್ವತಂತ್ರಳೂ ಪ್ರಜಾ ಪಾಲಿತಳೂ ಪರಮ ಪಾವನಳೂ ಕೀರ್ತಿವೆತ್ತ ಪುಣ್ಯತಮಳೂ ಆದ ಭಾರತ ಮಾತೆಯನ್ನು ಆಕೆಯು ಪ್ರಜಾರಾಜ್ಯವನ್ನು ಪಡೆದ ದಿವಸ ಸ್ಮರಿಸಿ ಕೊಂಡಾಡಿ ಪ್ರಾರ್ಥಿಸಿ ಆಕೆಯ ಸರ್ವತೋಮುಖವಾದ ಅಭ್ಯುದಯಕ್ಕೆ ಸಾಧಕರಾಗುವುದು ಭಾರತೀಯರ ಕರ್ತವ್ಯವಲ್ಲವೇ?

ಮನುಷ್ಯನು ಭಾವನಾಜೀವಿಯು. ತನ್ನನ್ನು ಪೋಷಿಸುವ ಸರ್ವ ವಸ್ತುಗಳಲ್ಲೂ ಆತನು ದೈವೀಕ ಶಕ್ತಿಯನ್ನು ಆರೋಪಿಸಿ ಪೂಜಿಸಿದ್ದಾನೆ. ಚೈತನ್ಯವುಳ್ಳ ಸರ್ವ ವಸ್ತುಗಳಲ್ಲೂ ತಾನು ಆವಿರ್ಭವಿಸಿರುವೆನೆಂದು ಭಗವಂತನಾದ ಶ್ರೀಕೃಷ್ಣನು ಹೇಳಿದ ಮಾತನ್ನೇ ಮಾನವನು ಅನುಷ್ಠಿಸಿದ್ದಾನೆ. ತನ್ನ ಅಭಿವೃದ್ಧಿಗೆ ಹೇತುಭೂತಗಳಾದ ಭೂಮಿ, ವಾಯು, ಅಂತರಿಕ್ಷ, ಅಗ್ನಿ, ನೀರುಗಳನ್ನು ಮನುಷ್ಯನು ಪೂಜಿಸಿದ್ದಾನೆ. ತನ್ನ ಜೀವನಾಧಾರವಾದ ಅನ್ನ, ತನ್ನ ಜ್ಞಾನ ಹೇತುಕವಾದ ವಿದ್ಯೆ, ತನ್ನ ಅಭ್ಯುದಯಕ್ಕೆ ಕಾರಣವಾದ ಸಂಪತ್ತು ಇವುಗಳೆಲ್ಲವನ್ನೂ ಮನುಷ್ಯನು ಪೂಜಿಸಿರುವನು. ಮಾತ್ರವಲ್ಲದೆ ತೇಜೋರಾಶಿಯಿಂದ ಬೆಳಗುವ ಪ್ರಾಕೃತಿಕ ಶಕ್ತಿಗಳನ್ನು ನದಿ ನದ ಪರ್ವತಗಳನ್ನು ಮಾನವನು ಪೂಜಿಸಿರುವನು. ಹೀಗಿರುವಾಗ ಇಂತಹ ಎಲ್ಲ ಶಕ್ತಿ ಚೈತನ್ಯಗಳಿಗೂ ಆವಾಸ ಭೂಮಿಯಾಗಿ ಶಕ್ತಿಯ ಕೇಂದ್ರೀಕೃತವಾದ ಭಾರತ ವರ್ಷವನ್ನು 'ಭಾರತ ಮಾತೆ' ಎಂದು ಸಂಬೋಧಿಸಿ ಭಾರತೀಯನು ಅರ್ಚಿಸುವುದರಲ್ಲಿ ಆಶ್ಚರ್ಯವೇನಿದೆ? ತನಗೆ ಯಾರು ಜನ್ಮದಾಯಿನಿಯೋ, ಯಾರ ಅನ್ನವನ್ನು ತಿಂದು ತಾನು ಜೀವಿಸುವನೋ ಯಾರ ಸ್ವಚ್ಛಂದ ಪ್ರಾಣವಾಯುವನ್ನು ಭಾರತೀಯನು ಸತತವೂ ಸೇವಿಸುವನೋ ಯಾರ ನಿರ್ಮಲವಾದ ನೀರು ಕುಡಿದು ಜೀವನ ಯಾತ್ರೆಯನ್ನು ಮುಗಿಸುವನೋ ಯಾರ ಲಾವಣ್ಯ ಪೂರ್ಣ ಭದ್ರಾಕೃತಿಯನ್ನು ನೋಡಿ ಪುಳಕಿತಾಂಗನಾಗುವನೋ ಅಂತಹ ಭಾರತ ಮಾತೆಯನ್ನು ಆರಾಧಿಸಿ ಆಕೆಯ ಆಶೀರ್ವಚನಕ್ಕಾಗಿ ಪ್ರತೀ ಭಾರತೀಯನೂ ಕಾತರನಾಗಿರುವುದರಲ್ಲಿ ಆತಿಶಯವೇನಿದೆ?

ವಿಸ್ತಾರವೂ ವಿಶಾಲವೂ ಆದ ನಮ್ಮ ದೇಶವನ್ನು ಅಖಂಡ ದೃಷ್ಟಿಯಿಂದ ನಾವು ಪರಿಶೀಲಿಸಿದರೆ ಭಾರತ ಮಾತೆಯ ವಿರಾಟ ಆಕೃತಿಯು ನಮ್ಮನ್ನು ಭಯ ಭಕ್ತಿಗಳಿಂದ ಚಕಿತರನ್ನಾಗಿಸುವುದು. 'ಭಾರತ' 'ಭರತಖಂಡ' 'ಭಾರತವರ್ಷ' 'ಜಂಬೂದ್ವೀಪ' 'ಹಿಂದೂದೇಶ' 'ಇಂಡಿಯ.' ಮುಂತಾದ ಹೆಸರಿನಿಂದ ನಾವು ಸಂಬೋಧಿಸುವ ನಮ್ಮ ಜನ್ಮ ಭೂಮಿಯ ಅಧಿನಾಯಕಿಯೇ ಭಾರತಮಾತೆ. ಆ ಮಾತೆಯ ಸ್ವರ್ಣರಂಜಿತ ಕಿರೀಟವು ಧವಳ ತುಷಾರಮಯವಾದ ಹಿಮಾಲಯದಲ್ಲಿ ರಾರಾಜಿಸುತ್ತಲಿರುವುದು. ಪ್ರಖರವಾದ ಹಿಮಾಲಯವಾದರೋ ಪ್ರಾಚೀನ ಕಾಲದಿಂದಲೂ ಗಂಭೀರ ತೇಜಸ್ಸಿನಿಂದ ಮೆರೆಯುತ್ತ ಹಿಂದೂದೇಶದ ಸ್ವಾಭಾವಿಕ ಮೇರೆಯಾಗಿ ಶೋಭಿಸುತ್ತಿರುವುದು. ಶುಭ್ರ ಜ್ಯೋತ್ಸ್ನೆಯಿಂದ ಪ್ರಸ್ಫುಟಿತಳಾದ ಮಾತೆಯ ವದನಾರವಿಂದವು ಕಾಶ್ಮೀರದ ರಮ್ಯ ಭೂಮಿಯಲ್ಲಿ ರಂಜಿಸುತ್ತಲಿರುವುದು. ಮಾತೆಯ ವಿಶಾಲವಕ್ಷಸ್ಥಳವು ಪುಣ್ಯಭೂಮಿಯಾದ ಆರ್ಯಾವರ್ತದಲ್ಲಿ ವ್ಯಾಪಿಸಿರುವುದು. ಆ ವಿಶಾಲ ಪಾರ್ಶ್ವದಲ್ಲಿ ಗಂಗಾ, ಸಿಂಧು, ಬ್ರಹ್ಮಪುತ್ರ ನದಿಗಳು ಸರ್ವದಾ ಕಿಲಕಿಲನಿನಾದದಿಂದ ಹರಿದು ಸಾಗರ ಚುಂಬಿತಗಳಾಗಿರುವುವು. ಆ ಮಾತೆಯ ಕಟಿಪ್ರದೇಶದಲ್ಲಿ ಮನೋಹರವಾದ ವಿಂಧ್ಯಾ ಪರ್ವತವು ವೈಭವ ಪೂರ್ಣವಾಗಿ ಮೆರೆಯುತ್ತಲಿರುವುದು. ಆಕೆಯ ಶರೀರಾರ್ಧದ ಇಕ್ಕಡೆಗಳಲ್ಲೂ ಸಹ್ಯಾದ್ರಿ ಮಹೇಂದ್ರಗಿರಿ ಶ್ರೇಣಿಗಳು ವ್ಯಾಪಿಸಿದ್ದು ಪವಿತ್ರವಾದ ನರ್ಮದಾ, ಗೋದಾವರಿ, ಕೃಷ್ಣಾ, ಕಾವೇರಿ, ತಾಮ್ರಪರ್ಣಿ ಮುಂತಾದ ನದಿಗಳು ಸರ್ವದಾ ಮೈದೊಳೆಯುತ್ತಲಿರುವವು. ಆಕೆಯ ಎರಡು ಕೈಗಳು ರಜಪುತಾನ, ಅಸ್ಸಾಂ ಪ್ರಾಂತಗಳಲ್ಲಿ ಹರಡಿರುವುವು. ಭದ್ರಾಕೃತಿಯುಳ್ಳ ಮಾತೆಯ ಕಾಲುಗಳು ಕನ್ಯಾಕುಮಾರಿಯ ಭೂಮ್ಯಗ್ರದವರೆಗೂ ಚಾಚಿದ್ದು ವಿಶಾಲ ಹಿಂದೂ ಸಾಗರದ ತೆರೆಗಳಿಂದ ತೊಳೆಯಲ್ಪಡುತ್ತಿರುವುವು. ಭಾರತ ಮಾತೆಯ ದಕ್ಷಿಣಾರ್ಧ ಭಾಗದ ಮೂರು ಕಡೆಗಳಲ್ಲೂ ಸಾಗರ ಸಮುದ್ರಗಳು ಭೋರ್ಗರೆಯುತ್ತಲಿರುವುವು. ಉಪಖಂಡವೆಂದು ಪ್ರಖ್ಯಾತವಾದ ಭಾರತ ದೇಶದ ಉತ್ತರಾರ್ಧವು ಸಮಶೀತೋಷ್ಣ ವಲಯದಲ್ಲೂ ದಕ್ಷಿಣಾರ್ಧವು ಉಷ್ಣವಲಯದಲ್ಲೂ ವ್ಯಾಪಿಸಿರುವುದು.

ಭೌಗೋಳಿಕ ದೃಷ್ಟಿಯಿಂದ ವೈವಿಧ್ಯಪೂರ್ಣವಾದ ಭಾರತದ ಜನ ಸಮುದಾಯವು ವೈವಿಧ್ಯಪೂರ್ಣ ಆಚಾರ, ಸಂಸ್ಕೃತಿ, ಜಾತಿ, ಮತ, ಕುಲಗಳಿಂದ ಸಮಾವಿಷ್ಟವಾಗಿರುವುದು. ಭಾರತೀಯರಲ್ಲಿ ಆರ್ಯ, ದ್ರಾವಿಡ, ಮಂಗೋಲಿಯನ್ ಬುಡಕಟ್ಟಿಗೆ ಸೇರಿದ ಜನರಿರುವರು. ಹಿಂದೂ, ಮುಸ್ಲಿಂ, ಕ್ರಿಶ್ಚಿಯನ್, ಪಾರಸೀ, ಜೈನ, ಬುದ್ಧ, ಸಿಕ್ಕ ಮತಗಳೆಂಬ ಮಹಾಮತಗಳನ್ನು ಅನುಷ್ಠಿಸುವ ಭಾರತೀಯರಿಗೆ ಭಾರತ ಖಂಡವು ಆವಾಸಭೂಮಿಯಾಗಿರುವುದು. ಆರ್ಯ ಮತ್ತು ದ್ರಾವಿಡ ಎಂಬೆರಡು ಬುಡಕಟ್ಟಿಗೆ ಸೇರಿದ ಹಿಂದೀ, ಬಂಗಾಳೀ, ಅಸಾಮೀ, ಪಂಚಾಬೀ, ಕಾಶ್ಮೀರೀ, ರಾಜಸ್ಥಾನೀ, ಗುಜರಾತೀ, ಒರಿಯ, ಮರಾಠಿ, ಕನ್ನಡ, ತಮಿಳು, ತೆಲುಗು ಮಲೆಯಾಳ ಭಾಷೆಗಳನ್ನೂ ಇನ್ನೂ ಅಮಿತ ಸಂಖ್ಯೆಯ ಮಿತ್ರ ಅಸಂಪೂರ್ಣ ಭಾಷೆಗಳನ್ನೂ ಆಡುವ ಭಾರತೀಯರು ಭಾರತ ವರ್ಷದಲ್ಲಿ ವಾಸಿಸುವರು. ಇಂಥ ಮಿಲಿಯ ಭಾರತೀಯರಿಂದೊಡಗೂಡಿದ ಈ ವಿಶಾಲ ಭೂಮಿಯ ಉತ್ತರಾಗ್ರದಿಂದ ದಕ್ಷಿಣಾಗ್ರದ ವರೆಗೆ ಪಯಣ ಬೆಳೆಸುವ ಮನುಷ್ಯನೊಬ್ಬನಿಗೆ ವೈವಿಧ್ಯಪೂರ್ಣ ಸಂಸ್ಕೃತಿ ಭಾಷೆಗಳನ್ನೂ ಆಚಾರ ವಿಚಾರಗಳನ್ನೂ ಅನುಷ್ಠಿಸುವ ಜನತೆಯ ಸಂದರ್ಶನವಾಗಿ ಹೊಸಲೋಕಕ್ಕೆ ಹೋದಂತೆ ಭಾಸವಾಗುವುದು. ಹಿಮಾಲಯದಿಂದ ಕನ್ಯಾಕುಮಾರಿಯ ವರೆಗೆ ಕಾಶಿಯಿಂದ ರಾಮೇಶ್ವರದ ವರೆಗೆ ದ್ವಾರಕೆಯಿಂದ ಪುರಿಯವರೆಗೆ ಪಾವನಗಳಾದ ಪುಣ್ಯಸ್ಥಳಗಳಿಂದ ನಿಬಿಡವಾದ ಈ ಭೂಮಿಯು ವರ್ಣರಂಜಿತ ವಿನ್ಯಾಸದಿಂದ ಬೆಳಗುತ್ತಲಿರುವುದು. ಆದರೂ ಈ ವೈವಿಧ್ಯದ ಮಹಾ ಹೊರಪಾರ್ಶ್ವದೊಳಗೆ ರಹಸ್ಯಪೂರ್ಣವಾದ ಭಾರತದ ಏಕಾತ್ಮವು ಸಕಲ ಮಾನವ ಜೀವಿಗಳನ್ನೂ ಏಕಾಭಿಪ್ರಾಯದೆಡೆಗೆ ಏಕೈಕ ಧ್ಯೇಯದೆಡೆಗೆ ಎಳೆದು ಏಕರಾಷ್ಟ್ರವಾಗಿ ಸಂಘಟಿಸುವಂತೆ ರಾಷ್ಟ್ರದ ಮಹಾ ಶರೀರ ನಿರ್ಮಾಣ ಮಾಡುತ್ತಿರುವುದು.

ನಮ್ಮ ಈ ಪವಿತ್ರ ದೇಶದ ಘಟನಾ ವಿಶೇಷಗಳು ಇತಿಹಾಸಾತೀತವಾದುವುಗಳು. ಆರ್ಯರು ಬಂದು ಆರ್ಯಾವರ್ತದಲ್ಲಿ ನೆಲೆಗೊಂಡು ವೇದೋಪನಿಷತ್ತು ಮುಂತಾದ ಅಮರಸಾಹಿತ್ಯಗಳನ್ನು ಎಂದು ಬರೆದರೆಂದು ನಿರ್ದಿಷ್ಟವಾಗಿ ಇನ್ನೂ ಹೇಳಲು ಸಾಧ್ಯವಾಗಲಿಲ್ಲ. ಆ ಪೌರಾಣಿಕ ವೈದಿಕ ಕಾಲದಲ್ಲಿ ಶ್ರೀರಾಮಚಂದ್ರ, ಯುಧಿಷ್ಠಿರ, ನಳ, ನಹುಷ ಅಂಬರೀಷ ಮುಂತಾದ ರಾಜರ್ಷಿಗಳು ಭಾರತವನ್ನಾಳಿ ಆದರ್ಶ ಪೂರ್ಣವಾದ ಧ್ಯೇಯಗಳನ್ನು ಭಾರತದ ಮುಂದಿಟ್ಟರು. ಭಗವಾನ್ ಶ್ರೀಕೃಷ್ಣನು ಕೌರವ ಪಾಂಡವರ ಯುದ್ಧದ ಹಿನ್ನಲೆಯಲ್ಲಿ ಜಗತ್ತಿಗೆ ಆಚಂದ್ರಾರ್ಕವಾಗಿ ಜ್ಞಾನಾಮೃತವನ್ನೂ ಉಣಿಸುವ ಭಗವದ್ಗೀತೆಯನ್ನು ಬೋಧಿಸಿ ಭಾರತೀಯರ ಹೃನ್ಮಂದಿರದಲ್ಲಿ ನಿತ್ಯಶುದ್ಧನಾಗಿ ವಾಸಿಸಿದನು. ಭಗವಾನ್ ಬುದ್ಧದೇವ, ಶಂಕರಾಚಾರ್ಯ, ರಾಮಾನುಜಾಚಾರ್ಯ, ಮಧ್ವಾಚಾರ್ಯ, ಶ್ರೀಕೃಷ್ಣಚೈತನ್ಯದೇವ, ಕಬೀರ, ಶ್ರೀರಾಮಕೃಷ್ಣ ಪರಮಹಂಸ, ಸ್ವಾಮಿ ವಿವೇಕಾನಂದ, ಭಗವಾನ್ ರಮಣಮಹರ್ಷಿ, ಯೋಗಿ ಅರವಿಂದಘೋಷ ಮುಂತಾದ ತೇಜೋಜೀವಿಗಳು ಕಾಲಕಾಲಕ್ಕೆ ತಕ್ಕಂತೆ ಅವತರಿಸಿ ವಿಶ್ವದ ವಿರಾಟ್ ಚೈತನ್ಯವನ್ನು ಆರಾಧಿಸುವ ವಿವಿಧ ಮಾರ್ಗಗಳನ್ನೂ ಅವುಗಳ ಮೂಲ ಐಕ್ಯತೆಯನ್ನೂ ಸಾರಿ ಯಶೋಜೀವಿಗಳಾಗಿ ಮಾನವಗಣದ ಉದ್ಧಾರವೆಸಗಿ ಕೃತಕಾರ್ಯರಾದರು. ಚಂದ್ರಗುಪ್ತ ಮೌರ್ಯ, ಧರ್ಮಾತ್ಮ ಅಶೋಕ, ಹರ್ಷ, ಚಂದ್ರಗುಪ್ತ ವಿಕ್ರಮಾದಿತ್ಯ, ಸಮುದ್ರಗುಪ್ತ, ಅಕ್ಬರ ಮುಂತಾದ ಚಾರಿತ್ರಿಕ ಚಕ್ರವರ್ತಿಗಳು ಧರ್ಮ ಕೇಂದ್ರವಾದ ಸಾಮ್ರಾಜ್ಯವನ್ನು ಕಟ್ಟಿ ಆಧ್ಯಾತ್ಮಿಕ, ರಾಜಕೀಯ, ಸಾಂಸ್ಕೃತಿಕ ಪ್ರಗತಿಗೆ ಕಾರಣರಾದರು. ಆದಿಕವಿ ವಾಲ್ಮೀಕಿ, ಭಗವಾನ್ ವ್ಯಾಸ, ಕವಿಚಕ್ರವರ್ತಿ ಕಾಳಿದಾಸ, ವಿಶ್ವಕವಿ ರವೀಂದ್ರ ಮುಂತಾದ ರಸಋಷಿಗಳು ಜಗತ್ತಿನ ಲಾವಣ್ಯದಲ್ಲಿ ತನ್ಮಯರಾಗಿ ವಿಶ್ವಶಕ್ತಿಯನ್ನು ಕಲಾದೃಷ್ಟಿಯಿಂದ ಪೂಜಿಸಿ ಅಮರ ಜೀವಿಗಳಾದರು. ಸೀತಾಮಾತೆ, ದ್ರೌಪದಿ, ಸತೀ ಶಾರದಾಮಣಿ, ಕಸ್ತೂರಿಬಾ ಮೊದಲಾದ ಭಾರತದ ಆದರ್ಶನಾರಿಯರು ಪ್ರಾತಃಸ್ಮರಣೀಯರಾಗಿ ಆದರ್ಶ ಸಾಧ್ವೀಮಣಿಗಳಾಗಿ ಬಾಳಿಬದುಕಿದರು. ಭಾರತ ಮಾತೆಯ ಪುಣ್ಯಗರ್ಭ ಸುಧಾಂಬುಧಿಯಲ್ಲಿ ಕಾಲಕಾಲಕ್ಕೆ ತಕ್ಕಂತೆ ಧರ್ಮದ ಪುನರುತ್ಥಾನಕ್ಕಾಗಿ ತೇಜೋರಾಶಿಗಳೆಂದ ಖ್ಯಾತಿಸ್ವೀಕರಾದ ಪುತ್ರರತ್ನರು ಜನಿಸಿರುವರು.

ಭರತಮಾತೆ ಇಷ್ಟೊಂದು ತೇಜೋವಂತಳಾದರೂ ಕಾಲವೈಪರೀತ್ಯದಿಂದ ಆಕೆಗೆ ದಾಸ್ಯದ ಮ್ಲಾನತೆ ಆವರಿಸಿತು. ಆಂಗ್ಲ ಶಾಸನದ ಶೃಂಖಲೆಯಿಂದ ಒಂದೆರಡು ಶತಮಾನಗಳ ದೀರ್ಘ ಅವಧಿಯಲ್ಲಿ ಆಕೆ ಬಳಲಿದಳು, ನೊಂದಳು; ಬೆಂದಳು; ಬೇಗುದಿಗೊಂಡಳು. ಅರಾತಿಯ ರಜೋಗುಣ ಸಮನ್ವಿತ ಗರ್ಭಸಿಂಧಾಂಬುಧಿಯುಳ್ಳ ಮಾತೆಯ ಬಂಧಮುಕ್ತಿಯನ್ನು ಮಾಡಲು ಕ್ಷಾತ್ರತೇಜಸ್ಸಿನಿಂದ ಸಮಾವಿಷ್ಟರಾದ ಪುತ್ರರು ಉದಯಿಸದಿರಲಿಲ್ಲ. ಭಾರತಮಾತೆಯ ಹೆಮ್ಮೆಯ ಕಂದನಾದ ಪೂಜ್ಯ ಮಹಾತ್ಮಗಾಂಧೀಜಿಯು ಸತ್ಯ, ಅಹಿಂಸೆ, ಶಾಂತಿಗಳ ಮಾರ್ಗದಿಂದ ಬ್ರಿಟಿಷರ ಬಂಧನಕ್ಕೊಳಗಾದ ಭಾರತವನ್ನು ಬಿಡಿಸಿ ಸತ್ಯ ಧರ್ಮ ಕೇಂದ್ರವಾದ ಸ್ವತಂತ್ರಭಾರತವನ್ನು ಸ್ಥಾಪಿಸಿದರು. ೧೯೪೭ನೆಯ ಇಸವಿ ಆಗಸ್ಟ ೧೫ರಲ್ಲಿ ಭಾರತವು ಸ್ವಾತಂತ್ರ್ಯವನ್ನು ಪಡೆದು ತನ್ನ ಸ್ವೇಚ್ಛೆಯಿಂದಲೇ

(೬ನೇ ಪುಟಕ್ಕೆ ಸಾಗಿದೆ.)

ಕೊಡಗು

ತಾ. ೨೬-೧-೧೯೫೧ನೇ ಶುಕ್ರವಾರ

ಥಕ್ಕರ್ ಬಾಪಾರ ನಿಧನ.

ಗುಜರಾಥವು ಹಿಂದೂದೇಶದ ಸೇವೆಗೆ ನೀಡಿದ ಪುತ್ರರತ್ನಗಳಾದ ಮಹಾತ್ಮಾ ಗಾಂಧಿ, ಸರ್ದಾರ್ ಪಟೇಲರ ಸಾಲಿನಲ್ಲಿ ನಿಲ್ಲಲು ಯೋಗ್ಯರಾದ ಶ್ರೀ. ಅಮೃತಲಾಲ ಥಕ್ಕರ್‌ರವರು ತಾ. ೧೯ ರಲ್ಲಿ ನಿಧನರಾದರು, ೧೮೬೯ ರಲ್ಲಿ ಜನಿಸಿದ ಇವರು ಚಿಕ್ಕಂದಿನಿಂದಲೆ ಗಣಿತಶಾಸ್ತ್ರದಲ್ಲಿ ನಿಷ್ಣಾತರಾಗಿ ಪ್ರಥಮ ಶ್ರೇಣಿಯಲ್ಲಿ ತೇರ್ಗಡೆಯಾಗುತ್ತಾ ಇಂಜಿನಿಯರಿಂಗ್ ಶಿಕ್ಷಣ ಪಡೆದು ಇಂಜಿನಿಯರಾದರು. ಕೆಲವೇ ಸಮಯದಲ್ಲಿ ಆಫ್ರಿಕಾದ ಉಗಾಂಡ ರೈಲ್ವೆಯಲ್ಲಿ ಕೆಲಸ ಪಡೆದು ಅಲ್ಲಿಗೆ ಹೋದರು. ೧೯೦೦ರಲ್ಲಿ ಭಾರತದಾತ್ಯಂತ ನಡೆದ ಬರಗಾಲವು ಇವರಲ್ಲಿ ಸೇವಾಪ್ರವೃತ್ತಿಯನ್ನು ಪ್ರಚೋದಿಸಿತು. ಅವರು ಹಿಂದೂದೇಶಕ್ಕೆ ಬಂದು ತಮ್ಮ ಕಾರ್ಯದಕ್ಷತೆಯಿಂದ ಕೆಲವೇ ವರ್ಷಗಳಲ್ಲಿ ಬೊಂಬಾಯಿ ಪುರಸಭೆಯ ರೋಡ್ ಸುಪರಿಂಟೆಂಡೆಂಟರಾದರು. ಈ ಸಮಯದಲ್ಲಿ ಇವರು ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿಯ ಸಂಬಂಧ ಬೆಳೆಸಿ ಜನಹಿತ ಕೆಲಸಕ್ಕೆ ತೊಡಗಿದರು. ಉದ್ಯೋಗ ಮಾಡಿಕೊಂಡು ಜನಸೇವೆ ಮಾಡುವದು ಅಸಾಧ್ಯವೆಂದು ತೋರಿಬಂದು ಇವರು ೧೯೧೪ ರಲ್ಲಿ ತಮ್ಮ ಕೆಲಸಕ್ಕೆ ರಾಜಿನಾಮೆ ಇತ್ತು, ಪೂರ್ಣ ಮನಸ್ಸಿನಿಂದ ಸೇವೆಗೆ ತೊಡಗಿದರು. ಇವರ ತ್ಯಾಗ, ಸೇವಾತುರತೆಗಳನ್ನು ಕಂಡು ಗೋಪಾಲಕೃಷ್ಣ ಗೋಖಲೆಯವರು ಇವರನ್ನು ಮೆಚ್ಚಿದರು.

ನಂತರ ಥಕ್ಕರ್ ಬಾಪಾರವರ ಜೀವನವು ಪೂರ್ಣ ಸೇವಾಜೀವನ. ದೇಶದ ಉದ್ದಗಲಕ್ಕೂ ಅವರು ಸುತ್ತಿ ದುಃಖಿತರ ಕಣ್ಣೀರೊರಸಿದರು. ಬರಗಾಲ, ರೋಗರುಜೆ ಮತ್ತಿತರ ಹಾವಳಿಗಳಿಗೆ ಸಿಲುಕಿದವರ ಸೇವೆಯೇ ಅವರ ಜೀವನ ಗುರಿಯಾಯಿತು. ಯಾವದೇ ನಾಗರಿಕತೆಯ ಬೆಳಕು ಕಾಣದಿರುವ ಮೂಲನಿವಾಸಿಗಳ ಹಿತಕ್ಕಾಗಿ ಅವರು ಕಡೇ ಉಸಿರಿನ ತನಕ ದುಡಿದರು. ಇವರ ನಿಷ್ಕಾಮಸೇವೆಯಿಂದ ಗಾಂಧಿಯವರು ಪ್ರಭಾವಿತರಾದರು. ಗಾಂಧಿಯವರ ಆಶಯದಂತೆ ೧೯೩೨ ರಲ್ಲಿ ಇವರು ಹರಿಜನ ಸೇವಕ ಸಂಘದ ಜವಾಬ್ದಾರಿ ವಹಿಸಿ ದುಡಿದರು. ಹರಿಜನೋದ್ಧಾರದ ನಿಮಿತ್ತ ಮಹಾತ್ಮಗಾಂಧಿಯವರು ಇಡೀ ಹಿಂದೂದೇಶವನ್ನು ಸುತ್ತಿದಾಗ ಅವರೊಡನೆ ಇವರೂ ಸುತ್ತಿದರು. ಅದೇ ಕಾಲಕ್ಕೆ ಅಂದರೆ ೧೯೩೪ ರಲ್ಲಿ ಇವರು ಕೊಡಗಿಗೆ ಬಂದಿದ್ದರು. ೧೯೪೩ ರಲ್ಲಿ ಬಂಗಾಳ ಬರಗಾಲದ ಕಾಲಕ್ಕೆ ಅವರು ಅಹೋರಾತ್ರಿ ದುಡಿದರು. ಕಸ್ತೂರ್ಬಾ ಸ್ಮಾರಕ ನಿಧಿಯ ಜವಾಬ್ದಾರಿ ವಹಿಸಿ ಸೇವೆ ಸಲ್ಲಿಸಿದರು. ಮಹಾತ್ಮರ 'ಮಾಡು ಇಲ್ಲವೇ ಮಡಿ' ಘೋಷಣೆಯಂತೆ ಭೀಕರ ಹತ್ಯಾಕಾಂಡದ ಕಾಲಕ್ಕೆ ನವಖಾಲಿಯಲ್ಲಿ ಶ್ರಮಿಸಿದರು. ೧೯೪೮ ರಲ್ಲಿ ಅವರು ರಾಜ್ಯಘಟನಾ ಸಮಿತಿಗೆ ಆರಿಸಲ್ಪಟ್ಟರೂ ಶರೀರ ಚೆನ್ನಾಗಿಲ್ಲದ ಕಾರಣ ರಾಜಿನಾಮೆ ಇತ್ತರು. ಅವರ ಸೇವೆಯ ವಿಚಾರ ಮಹಾತ್ಮರು "ಅವರು ಅಪೂರ್ವ ಕೆಲಸಗಾರರು. ಯಾವದೇ ಆಡಂಬರ ಅವರಲ್ಲಿಲ್ಲ. ಅವರಿಗೆ ಹೊಗಳಿಕೆ ಅಗತ್ಯವಿಲ್ಲ. ಆತ್ಮದ ತೃಪ್ತಿಗಾಗಿ, ಆತ್ಮದ ಆನಂದಕ್ಕಾಗಿ ಅವರ ದುಡಿಮೆ. ಅವರೊಂದು ವ್ಯಕ್ತಿಯಲ್ಲ. ಅವರೊಂದು ಸಂಸ್ಥೆ" ಎಂದು ಹೇಳಿದ್ದಾರೆ.

ಬೆಟ್ಟಕಾಡಿನ ಕುಡಿಯರಾಗಿರಲಿ, ಹಳ್ಳಿಯ ಹರಿಜನರಾಗಿರಲಿ, ಬೀದಿಯ ಜಾಡಮಾಲಿಯಾಗಿರಲಿ, ಇವರೇ ಥಕ್ಕರ್‌ರವರ ಸೇವಾ ಮಂದಿರಗಳು. ಇಲ್ಲೇ ಅವರ ಪೂಜೆ! ತನ್ನ ಜೀವಮಾನವಿಡೀ ಈ ದುಃಖಿತರಿಗಾಗಿ ಕೆಳಗೆ ತಳ್ಳಲ್ಪಟ್ಟವರಿಗಾಗಿ ಅವರು ದುಡಿದು ತನ್ನ ಬಾಳನ್ನು ಸಾರ್ಥಕಗೊಳಿಸಿದರು. ಅವರ ಜೀವನ ದೈವಿಕ ಜೀವನ. ಮಾನವರ ಮಧ್ಯದಲ್ಲಿ ಅವರು ದೇವತೆಗಳಂತೆ. ತಾನು ತನ್ನದೆಂಬುದನ್ನಿಡದೆ ನಿರ್ಗತಿಕರ, ನಿರಾಶ್ರಿತರ, ದುಃಖಿತರ ದಲಿತರ ಹಿತಕ್ಕಾಗಿ, ಅವರ ಉತ್ಕರ್ಷಕ್ಕಾಗಿ ದುಡಿದ ಥಕ್ಕರ್ ಬಾಪಾರವರು ಧನ್ಯರು. ಅವರ ಅಮರ ಜೀವನವು ಸಕಲರಿಗೆ ಮಾರ್ಗದರ್ಶಕವಾಗಿ ಅಂಥಾ ಸೇವಾ ಪುತ್ರರ ಸಂಖ್ಯೆ ಭಾರತದಲ್ಲಿ ನೂರ್ಮಡಿ ಹೆಚ್ಚಲಿ.

ವರ್ತಮಾನ.

ಇಬ್ನಿವಳವಾಡಿ ಗ್ರಾಮದ ಶ್ರೀ. ಪೊನ್ನಚೆಟ್ಟಿರ ಉತ್ತಯ್ಯನವರ ದನಗಳ ಜೊತೆಯಲ್ಲಿ ಕೆಂಪು ವರ್ಣದ ನಾಲ್ಕು ಅಡಿ ಎತ್ತರವಿರಬಹುದಾದ ಎತ್ತೊಂದು ಸೇರಿಕೊಂಡಿದೆಯೆಂದೂ ವಾರೀಸುದಾರರು ತಕ್ಕ ರುಜುವಾತಿನಿಂದ ಇದನ್ನು ಹೊಡಕೊಂಡು ಹೋಗಬಹುದಾಗಿಯೂ ಅವರು ತಿಳಿಸುತ್ತಾರೆ.

ಸೀಮೆ‌ಎಣ್ಣೆಯ ಬೆಲೆ, ವಹಿವಾಟು, ಮಾರಾಟ ಮತ್ತು ವಿತರಣೆಯ ಮೇಲಿದ್ದ ನಿಯಂತ್ರಣವನ್ನು ಕೊಡಗಿನಲ್ಲಿ ತೆಗೆದು ಹಾಕಲಾಗಿದೆ

ಗಿಂಡಿಯ ಇಂಜಿನಿಯರಿಂಗ್ ಕಾಲೇಜಿನಲ್ಲಿ ಲೆಕ್ಚರರಾಗಿದ್ದ ಶ್ರೀ. ಕೊಕ್ಕೆಂಗಡ ಬಿ. ಸುಬ್ಬಯ್ಯನವರನ್ನು ಡೆಲ್ಲಿಯ ಸಯಂಟಿಫಿಕ್ ರಿಸರ್ಚ್ ಇನ್‌ಸ್ಟಿಟ್ಯೂಟಿನ ಅಸಿಸ್ಟೆಂಟ್ ರಿಸರ್ಚ್ ಆಫೀಸರಾಗಿ ನೇಮಿಸಿರುವರು.

ಈಗ ಕೊಡುತ್ತಿರುವ ರೇಶನ್ ದರದಲ್ಲಿ ಶೇಕಡ ೨೫ರಷ್ಟು ಕಡಿಮೆ ಮಾಡಬೇಕೆಂಬ ಇಂಡಿಯಾ ಸರಕಾರದ ಆಜ್ಞೆಯು ಕೊಡಗಿನಲ್ಲೂ ಜಾರಿಯಲ್ಲಿ ಬರುವದೆಂದೂ ಈ ಆಜ್ಞೆಯು ತಾತ್ಕಾಲಿಕವಾದುದೆಂದೂ ಹೇಳಲ್ಪಟ್ಟಿದೆ.

ತಾರೀಕು ೪-೧-೫೧ರಲ್ಲಿ ನಡೆದ ಮಡಿಕೇರಿ ಪುರಸಭೆಯ ಚುನಾವಣೆಯು ನ್ಯಾಯಬದ್ಧವಾಗಿ ನಡೆದಿಲ್ಲವೆಂದೂ ಸಾಯಂಕಾಲ ಆರು ಗಂಟೆಯ ನಂತರ ಚುನಾವಣೆ ನಡೆಸಿದ್ದು, ಚುನಾವಣಾ ಅಧಿಕಾರಿಯೇ ಉಮೇದುವಾರನಾಗಿ ನಿಂತದ್ದು ಮತ್ತಿತರ ಹಲವು ನ್ಯೂನತೆಗಳನ್ನು ಸೂಚಿಸಿ ಹನ್ನೆರಡು ವಾರ್ಡುಗಳ ಪೈಕಿ ಎಂಟು ವಾರ್ಡಿನ ಸೋತ ಉಮೇದುವಾರರು ಚುನಾವಣೆಯು ರದ್ದಾಗಬೇಕೆಂದು ಮಡಿಕೇರಿ ಮುನ್ಸೀಫ್ ಕೋರ್ಟಿನಲ್ಲಿ ಅರ್ಜಿ ದಾಖಲು ಮಾಡಿರುವರು.

ನಲ್ಲೂರು ಗ್ರಾಮದ ಶ್ರೀ. ಪುಚ್ಚಿಮಾಡ ಅಪ್ಪಯ್ಯನವರನ್ನು ಕೊಲೆ ಮಾಡಿದ ಕೇಸಿನಲ್ಲಿ ತಪ್ಪಿತಸ್ಥರೆಂದು ವಿಚಾರಣೆಗೊಳಗಾಗಿದ್ದ ಶ್ರೀ. ಪುಚ್ಚಿಮಾಡ ಮೇದಯ್ಯ ಮತ್ತು ಚಂಡಂಗಡ ಪೂವಯ್ಯ ಇವರ ಮೇಲಿನ ಮೊಕದ್ದಮೆಯು ಕೊಡಗು ಸೆಷನ್ಸ್ ಕೋರ್ಟಿನಲ್ಲಿ ವಿಚಾರವಾಗಿ ಅವರು ಅಪರಾಧಿಗಳಲ್ಲವೆಂದು ತಾ ೨೪-೧-೫೧ ರಲ್ಲಿ ತೀರ್ಮಾನ ಕೊಡಲಾಗಿದೆ.

ಸಂಯೋಜನಾ ಪಕ್ಷದ ಕೆಲವು ಸದಸ್ಯರಿಗೆ ಬರಲು ಅನಾನುಕೂಲವೆಂದೂ ಮೀಟಿಂಗನ್ನು ಮುಂದರಿಸಬೇಕೆಂದೂ ಆ ಪಕ್ಷದ ಕನ್ವೀನರು ಶನಿವಾರದಿನ ರಾತ್ರಿ ತಿಳಿಸಿ ಮರುದಿನ ೨೧ರಲ್ಲಿ ಅವರಾರೂ ಬಾರದ ಕಾರಣ ಕೊಡಗಿನ ಸುಧಾರಣೆಯನ್ನು ಕುರಿತು ರಾಜಿಸಂಧಾನದ ಜಂಟಿ ಕಮಿಟಿ ಮೀಟಿಂಗು ನಡೆಯಲಿಲ್ಲ.

ತಾರೀಕು ೧೮ರ ರಾತ್ರಿ ನೈತಾಡಿ ಗ್ರಾಮದಲ್ಲಿ ಚೋವಂಡಿರ ಮೇದಪ್ಪನೆಂಬವರು ಹರಿಜನ ಕಾರಿ ಎಂಬವನನ್ನು ಗುಂಡಿಕ್ಕಿ ಕೊಂದರೆಂದು ಅವರ ದಸ್ತಗಿರಿಯಾಗಿ ಪೋಲೀಸು ತನಿಖೆ ನಡೆಯುತ್ತಿದೆ.

ದೇವಣಗೇರಿ ಹೊಸ ಶಾಲೆಯ ಹೊಸ ಸೇದು ಬಾವಿಗೆ ಕಾರಣಾಂತರದಿಂದ ಅದೇ ಗ್ರಾಮದ ಜೈನರ ನಾಗಪ್ಪನೆಂಬವರ ಪತ್ನಿಯು ಬಿದ್ದು ಪ್ರಾಣಹತ್ಯ ಮಾಡಿಕೊಂಡಿರುವಳು.

ತಾರೀಕು ೧೦ರ ರಾತ್ರಿ ನಾಪೋಕ್ಲು ಗ್ರಾಮದ ಹೆಗ್ಗಡೆ ಮಚ್ಚಂಡ ನಂಜುಂಡನೆಂಬವರು ಶ್ರೀ ಬಾಳೆಡ ಉತ್ತಯ್ಯನೆಂಬವರನ್ನು ಗುಂಡು ಹೊಡೆದು ಕೊಂದಿರುವದಾಗಿಯೂ, ಪೋಲೀಸ್ ತನಿಕೆ ನಡೆಯುತ್ತಿದೆಯಾಗಿಯೂ ತಿಳಿಯ ಬಂದಿದೆ

ತಾರೀಕು ೧೩ರ ರಾತ್ರಿ ಕಣ್ಣಂಗಾಲ ಗ್ರಾಮದ ಮುಕ್ಕಾಟಿರ ಬಿ. ನಂಜಪ್ಪನೆಂಬುವವರು ಕಾರಣಾಂತರದಿಂದ ಗುಂಡು ಹೊಡೆದು ಕೊಂಡು ಆತ್ಮಹತ್ಯ ಮಾಡಿಕೊಂಡಿರುವರು.

ತಾರೀಕು ೧೦ರಲ್ಲಿ ಸುಂಟಿಕೊಪ್ಪದ ಬ್ರುಕ್ಸ್ ಕಾಫಿತೋಟದ ಬಳಿ ಬಿಲ್ಲವರ ದೇಮು ಎಂಬವಳು ಹರದೂರು ಹೊಳೆಯಲ್ಲಿ ಮುಳುಗಿ ಮೃತಳಾದಳೆಂದು ತಿಳಿಯ ಬಂದಿದೆ.

ಉಳುವರಿ ಬತ್ತ ಸಂಗ್ರಹದ ಏರ್ಪಾಡು.

ಈ ಮೊದಲು ಪ್ರಕಟಿಸಿದ್ದಂತೆ ಉಳುವರಿ ಬತ್ತದ ಸಂಗ್ರಹವನ್ನು ಸಹಕಾರಿ ಮಾರ್ಕೆಟಿಂಗ್ ಫೆಡರೇಶನು ಸಹಕಾರಿ ಸಂಸ್ಥೆಗಳ ಮೂಲಕವೇ ಮಾಡಬೇಕೆಂದು ಚೀಫ್ ಕಮಿಷನರು ತೀರ್ಮಾನಿಸಿದ್ದರೂ ನಂತರ ಈ ಮೊದಲಿನಂತೆಯೇ ತಮ್ಮನ್ನೂ ಕೂಡ ಈ ವರ್ಷವೂ ಚೀಫ್ ಏಜಂಟರುಗಳ ಪೈಕಿ ಒಬ್ಬರಾಗಿ ಇಟ್ಟುಕೊಂಡು ಸಹಕಾರಿ ಸಂಸ್ಥೆಗಳು ಮತ್ತು ವಯಕ್ತಿಕ ಸಬ್ ಏಜಂಟರುಗಳ ಮೂಲಕ ಬತ್ತ ಸಂಗ್ರಹ ಮಾಡಬೇಕೆಂದು ಬತ್ತ ವ್ಯಾಪಾರಸ್ಥರ ಸಂಘದವರು ಚೀಫ್ ಕಮಿಷನರಲ್ಲಿಗೆ ಡಿಪ್ಯುಟೇಶನ್ ಹೋದಾಗ್ಗೆ ಮಾರ್ಕೆಟಿಂಗ್ ಫೆಡರೇಶನಿನವರು ಇದಕ್ಕೆ ವಿರೋಧ ಮಾಡದ್ದರಿಂದ ಚೀಫ್ ಕಮಿಷನರು ಮೊದಲಿನ ತೀರ್ಮಾನವನ್ನು ವಜಮಾಡಿ ಎರಡು ವರ್ಷಗಳ ಹಿಂದೆ ಇದ್ದಂತೆಯೇ ಫೆಡರೇಶನ್ ಮತ್ತು ವ್ಯಾಪಾರಸ್ಥರ ಸಂಘದವರು ಮುಖ್ಯ ಏಜಂಟಾಗಿ ಬತ್ತ ಸಂಗ್ರಹ ಮಾಡಬಹುದೆಂದು ಒಪ್ಪಿದರು. ಅದೇ ಮೇರೆ ಸಂಗ್ರಹದ ಏರ್ಪಾಡನ್ನು ನಿಶ್ಚಯಿಸಲು ಈ ತಾರೀಕು ೨೩ರಲ್ಲಿ ಕೌನ್ಸಿಲ್ ಹಾಲ್‌ನಲ್ಲಿ ಒಂದು ಸಭೆಸೇರಿತು. ಅಲ್ಲಿ ಫೆಡರೇಶನಿನ, ವ್ಯಾಪಾರಿ ಸಂಘದ, ಪ್ಲಾಂಟರುಗಳ ಸಂಘದ, ಬತ್ತ ಬೆಳೆಸುವವರ ಪ್ರತಿನಿಧಿಗಳು ಮತ್ತು ಮಿಲ್ ಮಾಲೀಕರು ಹಾಜರಿದ್ದರು. ಆ ಕಮಿಷನರು ಅಧ್ಯಕ್ಷರಾಗಿದ್ದರು. ಸಹಕಾರಿ ಸಂಘಗಳ ರಿಜಿಸ್ಟ್ರಾರವರೂ, ರೇಶನಿಂಗ್ ಆಫೀಸರರೂ ಹಾಜರಿದ್ದರು. ಎಲ್ಲಾ ವಿಚಾರಗಳನ್ನು ಕೂಲಂಕುಶವಾಗಿ ಚರ್ಚಿಸಿ ಈ ಎರಡು ವರ್ಷಗಳಿಗೆ ಹಿಂದೆ ಇದ್ದಂಥಾ ಸಂಗ್ರಹದ ಏರ್ಪಾಡನ್ನೇ ಜಾರಿಗೆ ತರಬೇಕೆಂದೂ ಅದರಂತೆ ಎರಡು ಚೀಫ್ ಏಜಂಟರುಗಳ ಅಧೀನದಲ್ಲಿ ಸಹಕಾರಿ ಸಂಸ್ಥೆಗಳು ಮತ್ತು ವಯಕ್ತಿಕ ಮಹನಿಯರು ಸಬ್ ಏಜಂಟರುಗಳಾಗಿಯಾಗಲೀ ಅಥವಾ ರೈತರೇ ತಮ್ಮ ಬತ್ತವನ್ನು ತಾವಾಗಿಯಾಗಲೀ ಸಂಗ್ರಹಮಾಡಿ, ರೇಶನಿಂಗ್ ಆಫೀಸರು, ಚೀಫ್ ಏಜಂಟರುಗಳ ಸಮೇತ ವಾರಕೊಮ್ಮೆ ನಿಶ್ಚಯಿಸುವ ಕಾರ್ಯಕ್ರಮದಂತೆ ಲೋಡಿಂಗ್ ಸೆಂಟರುಗಳಲ್ಲೇ ಬತ್ತವನ್ನು ಮಿಲ್ ಮಾಲೀಕರಿಗೂ ಮತ್ತು ತೋಟದ ಮಾಲೀಕರಿಗೂ ಸರಕಾರಿ ಇನ್ಸ್‌ಪೆಕ್ಟರ ಮತ್ತು ಚೀಫ್ ಏಜಂಟರುಗಳ ಪ್ರತಿನಿಧಿಗಳ ಸಮಕ್ಷಮದಲ್ಲಿ ಮಾರಾಟಮಾಡಿ ಬತ್ತದ ಕ್ರಯವನ್ನು ಅಲ್ಲಿಯೇ ನಗದು ಕೊಡುವಂತೆ ತೀರ್ಮಾನಿಸಲಾಯಿತು. ಹೆಚ್ಚು ಕಡಿಮೆ ಲಾರಿಹೋಗುವ ಎಲ್ಲಾ ಗ್ರಾಮಗಳಲ್ಲೂ ಅಂದರೆ ೧೩೧ ಸ್ಥಳಗಳನ್ನು ಲೋಡಿಂಗ್ ಸೆಂಟರುಗಳಾಗಿ ಸರಕಾರದವರು ನಿಶ್ಚಯಿಸಿರುವರೆಂದೂ ಸಬ್ ಏಜಂಟರುಗಳಾಗಿ ವರ್ತಿಸುವ ಸಹಕಾರಿ ಸಂಸ್ಥೆಗಳು ರೂಪಾಯಿ ೫೦ ವ್ಯಕ್ತಿಗತ ಸಬ್ ಏಜಂಟರು ರೂ. ೨೫೦ ಭದ್ರತಾ ಹಣವನ್ನು ಸರಕಾರದಲ್ಲಿ ಠೇವಣಾತಿ ಇಡಬೇಕೆಂದೂ ಅಧ್ಯಕ್ಷರು ತಿಳಿಸಿದರು. ಬತ್ತದ ಕ್ರಯವು ತತ್ಕಾಲ ಕಳೆದ ವರ್ಷವಿದ್ದಂತೆಯೇ ಬಿಳಿಯ ಬತ್ತ ಗಾಡಿಯೊಂದಕ್ಕೆ ರೈತನ ಕಣದಲ್ಲಿ ಕ್ರಯ ರೂ. ೧೭೫ ಆಗಿದೆ ಲೋಡಿಂಗ್ ಸೆಂಟರಿಗೆ ತಂದು ಲಾರಿಗೆ ತುಂಬಿಕೊಟ್ಟರೆ ಗಾಡಿಬಾಡಿಗೆ ಮತ್ತು ಸಂಗ್ರಹದ ಖರ್ಚಿನ ಬಗ್ಗೆ ರೂ. ೧೦-೬-೦ ಯು ಹೆಚ್ಚಿಗೆ ದೊರೆಯುವದು. ಆದರೆ ಬತ್ತದ ಕ್ರಯವನ್ನು ಗಾಡಿಗೆ ರೂ. ೧೯೦ ಕ್ಕೆ ಏರಿಸಬೇಕೆಂದು ಸ್ಥಳೀಯ ಸರಕಾರವು ಇಂಡಿಯಾ ಸರಕಾರಕ್ಕೆ ಮಾಡಿರುವ ಶಿಫಾರಸ್ಸಿಗೆ ಇನ್ನೂ ಉತ್ತರ ಬಂದಿರುವದಿಲ್ಲ. ಈ ಶಿಫಾರಸನ್ನು ಇಂಡಿಯಾ ಸರಕಾರವು ಮಂಜೂರ್ಮಾಡಿದ್ದಾದರೆ ಹೀಗೆ ಹೆಚ್ಚಿಗೆ ದೊರೆಯುವ ಬೆಲೆ ಗಾಡಿಗೆ ರೂ. ೧೧ ನ್ನು ಮಾರಾಟ ಮಾಡಿದವರಿಗೆ ಕೊಂಡುಕೊಂಡವರಿಂದ ಕೊಡಿಸಲಾಗುವದೆಂದೂ ಆ ಬಗ್ಗೆ ಈಗ ಮಾರಾಟಮಾಡುವವರು ಬತ್ತ ಕೊಟ್ಟದ್ದಕ್ಕಾಗಿ ಯೋಗ್ಯ ರಶೀತಿಯನ್ನು ಕೊಂಡುಕೊಂಡವರಿಂದ ಪಡೆದು ಇಟ್ಟುಕೊಂಡು ನಂತರ ತಮಗೆ ಸಲ್ಲಬೇಕಾದ ಹೆಚ್ಚಿನ ಬೆಲೆಯನ್ನು ಪಡೆದುಕೊಳ್ಳಬೇಕೆಂದೂ ಅಧ್ಯಕ್ಷರು ಹೇಳಿದರು. ಈ ಯೋಜನೆಯನ್ನು ಸರಕಾರದವರು ಮಂಜೂರ್ಮಾಡಿದ ಕೂಡಲೇ ಹೆಚ್ಚಿನ ವಿವರವನ್ನು ಪ್ರಕಟಿಸಲಾಗುವದು.

ಓದುಗರ ಓಲೆಗಳು

ಇಲ್ಲೂ ಕಪ್ಪು ಸಂತೆಯೇ?

ತಾ|| ೧೪-೧-೫೧ ನೇ ಆದಿತ್ಯವಾರ ಸಕ್ಕರೆಗೆಂದು ಸುಂಟಿಕೊಪ್ಪಕ್ಕೆ ಹೋಗಿದ್ದೆ. ಸಕ್ಕರೆ ದೊರೆಯಬೇಕಾದರೆ ಅದರೊಂದಿಗೆ ಅವರು ಕೊಡುತ್ತಿದ್ದ ಕ್ಷಯರೋಗ ನಿವಾರಣಾ ಸ್ಟಾಂಪುಗಳನ್ನು ಕೊಂಡುಕೊಳ್ಳಬೇಕಾಗಿತ್ತು. ನಾನು ಈ ಮೊದಲೇ ಮಡಿಕೇರಿಯಲ್ಲಿ ಸ್ಟಾಂಪಿಗೆ ಒಂದು ಆಣೆಯಂತೆ ಕೆಲವು ಸ್ಟಾಂಪುಗಳನ್ನು ಕೊಂಡುಕೊಂಡಿದ್ದೆ. ಸುಂಟಿಕೊಪ್ಪದಲ್ಲಿ ಸಕ್ಕರೆ ದೊರೆಯಬೇಕಾದರೆ ಕೊಂಡುಕೊಳ್ಳಲೇಬೇಕೆಂಬ ಬಲಾತ್ಕಾರವಿತ್ತು. ಅದೂ ಸ್ಟಾಂಪಿಗೆ ೦-೧-೬ ಆಣೆಯಂತೆ ಸ್ಟಾಂಪು ಕೊಂಡುಕೊಳ್ಳದಿದ್ದರೆ ಸಕ್ಕರೆ ದೊರೆಯಲಾರದು. ಆದ್ದರಿಂದ ಬಡ ರೈತರು ಒಂದಾಣೆಯ ಸ್ಟಾಂಪಿಗೆ ಒಂದೂವರೆ ಆಣೆ ತೆತ್ತು ಕೊಂಡುಕೊಳ್ಳಬೇಕಾಗಿತ್ತು. ಈ ರೀತಿಯಲ್ಲಿ ಕಪ್ಪುಸಂತೆ ನಡೆಸಿದರೆ ಇದಕ್ಕೇನನ್ನಬೇಕು? ಇಂಥಾ ವಿಷಯಗಳನ್ನು ಅಧಿಕಾರಿಗಳು ಗಮನಿಸಿ ತಕ್ಕ ಶಾಸ್ತಿ ಮಾಡದಿದ್ದರೆ ಬಡ ಜನರಿಗೆ ವಿಪರೀತ ತೊಂದರೆಯಾಗುವುದು.

ಬಿ. ಪೂವಯ್ಯ

'ಮಹಿಳೆಯರಿಗೆ ಮಾತ್ರ'

ನನಗೂ ಬಸ್ಸಿನಲ್ಲಿ ಆಗಾಗ ತಿರುಗುವ ಆವಶ್ಯಕತೆ ಇದೆ. ಪ್ರತಿ ಬಸ್ಸಿನ ಎರಡನೇ ಸೀಟು 'ಮಹಿಳೆಯರಿಗೆ ಮಾತ್ರ' ಎಂದು ಬರೆಯಲ್ಪಟ್ಟಿರುತ್ತದೆ. ಆದರೆ ಕಾರ್ಯತಃ ಉಪಯೋಗವಾಗುತ್ತಿಲ್ಲ. ಮಹಿಳೆಯರಿಗಾಗಿ ಕಾದಿಟ್ಟ ಈ ಸೀಟಿನಲ್ಲಿ ಮಹನೀಯರು ಕೂತಿರುತ್ತಾರೆ. ದಾರಿಯಲ್ಲಿ ಮಹಿಳೆಯರು ಯಾರಾದರೂ ಬಂದಾಗ ಆ ಸೀಟಿನಿಂದ ಇಳಿದು ಜಾಗ ಕೊಡುವ ಸಭ್ಯರು ಕೆಲವರೆನ್ನಬಹುದಾದರೂ ಮುಖ ಸಿಂಡರಿಸಿ ಆ ಸೀಟಿಗೇ ಅಂಟಿ ಕೂರಲೆತ್ನಿಸುವವರು ಹಲವರು. ಬಸ್ ಹತ್ತಲು ಬಂದ ಮಹಿಳೆಯು ಸ್ವಲ್ಪ ಜೋರಾಗಿ ಆರ್ಥಿಕ ಸಂಪನ್ನ ಸಮಾಜದವಳಾದರೆ ಹೇಗೂ ಆಕೆಗೆ ಸ್ಥಳ ನಿರ್ಗತಿಯೇ ದೊರೆಯುತ್ತೆ. ಆದರೆ ಸ್ವಲ್ಪ ಕೆಳವರ್ಗದವರಾದರೆ ಅವರಿಗೆ 'ಮೊದ್ದು'ಯೇ ಗತಿ. ಎರಡನೇ ಸೀಟಿನಲ್ಲಿಯ ಗಂಡಸರು ಅಂಥಾ ಸಂದರ್ಭದಲ್ಲಿ ತಿರುಗಿ ನೋಡುವುದು ಕೂಡ ಇಲ್ಲ. ಎರಡನೇ ಸೀಟು 'ಮಹಿಳೆಯರಿಗೆ ಮಾತ್ರ'ವೆಂದರೆ ಸಂಪನ್ನ ಸುಂದರ ಮಹಿಳೆಯರಿಗೆ ಮಾತ್ರವೇ?

'ಹೊಗೆಬತ್ತಿ ಸೇದಕೂಡದು' ಎಂಬುದನ್ನು ಎದುರುಗಡೆ ದೊಡ್ಡಕ್ಷರಗಳಲ್ಲಿ ಬರೆದಿದ್ದಾರೆ. ಆದರೆ ಯಾರೂ ಇದನ್ನು ಪಾಲಿಸುವುದಿಲ್ಲ. ಆಗ ಮಾರ್ಗಸೂಚಿಯನ್ನು ತಡೆಗಟ್ಟುವ ಕರ್ತವ್ಯವನ್ನು [illegible] ಗುಮಾಸ್ತರು [illegible] ವಹಿಸಬೇಕಾದ [illegible] ಯಾರೂ ಗಮನಿಸಬಾರದೇ? ಈ ತೂಗಿಸಿಯ ಬೋರ್ಡುಗಳಿಂದ ಪ್ರಯೋಜನವೇನು? ಅಧಿಕಾರಿಗಳು ಇತ್ತ ನೋಡಬೇಕು. ಡ್ರೈವರು ಕಂಡಕ್ಟರುಗಳು ಈ ನಿಯಮಗಳು ಪಾಲಿಸಲ್ಪಡುವಂತೆ ಆಸ್ಥೆ ವಹಿಸಬೇಕು.

ವಿ. ಶ್. ನೀನಾ

ಖಾಯಂ ರೋಗ

ಮಡಿಕೇರಿಯ ವಿದ್ಯುಚ್ಛಕ್ತಿ ಸರಬರಾಯಿಯ ಕಥೆಯು ಎಂದೂ ಬಿಡದ ಹಳೇ ರೋಗದಂತಾಗಿದೆ. ಒಂದು ತಿಂಗಳು ಲೈಟಿದ್ದರೆ ಒಂದು ತಿಂಗಳು ಇರಲಾರದು. ಈ ಅವ್ಯವಸ್ಥೆಯಿಂದಾಗಿ ಪುರಜನರಿಗೆ ವಿಪರೀತ ತೊಂದರೆಯಾಗುತ್ತದೆ. ವಿದ್ಯುಚ್ಛಕ್ತಿಯ ನಂಬಿಕೆ ಇಲ್ಲದ ಕಾರಣ ಪ್ರತಿ ಮನೆ, ಅಂಗಡಿಗಳಲ್ಲಿ ಪ್ರತ್ಯೇಕ ದೀಪಗಳ ಏರ್ಪಾಡು ಸದಾ ಇರಬೇಕಾಗಿದೆ. ಓದುವ ವಿದ್ಯಾರ್ಥಿಗಳಿಗೆ ಇದರಿಂದ ವಿಪರೀತ ತೊಂದರೆಯಾಗಿದೆ. ಪ್ರತಿ ವರ್ಷವೂ ಪರೀಕ್ಷೆ ಸಮಯದಲ್ಲಿಯೇ ಈ ರೋಗವಾಗಿದೆ. ಒಂದೋ ವಿದ್ಯುಚ್ಛಕ್ತಿ ಕಂಪನಿಯವರು ಸರಿಯಾಗಿ ಅದನ್ನು ನಡೆಸಬೇಕು ಇಲ್ಲವೇ ಪಟ್ಟಿ ಹೋಗಬೇಕು. ಇದಿಲ್ಲದೆ ಅತ್ತ 'ಹಾವು ಸಾಯಬಾರದು, ಇತ್ತ ಕೋಲು ಮುರಿಯಬಾರದು' ಎಂಬಂತೆ ವರ್ತಿಸುತ್ತಿರುವುದು ವಿಷಾದಕರ. ಮೈಸೂರಿನಿಂದ ವಿದ್ಯುಚ್ಛಕ್ತಿ ತರುವ ಸರಕಾರದ ಯೋಜನೆಯೊಂದು 'ಗಣಪತಿಯ ಮದುವೆ'ಯಂತಾಗಿದೆ! ಸರಕಾರವು ಇನ್ನಾದರೂ ಒಂದು ವ್ಯವಸ್ಥೆ ಮಾಡಬೇಡವೇ? ಮಡಿಕೇರಿಯಲ್ಲಿ ವಿದ್ಯುಚ್ಛಕ್ತಿ ಬಂದ ಪ್ರಥಮ ವರ್ಷಗಳಲ್ಲಿ ಅಲ್ಲಲ್ಲಿ ಹಲವು ಕೈಗಾರಿಕೆಗಳು ತಲೆದೋರಿದ್ದವು. ಅನಿರೀಕ್ಷಿತ ನಿಂತು ಹೋಗುವ ವಿದ್ಯುಚ್ಛಕ್ತಿಯ ಅತೃಪ್ತಿಕಾರಕ ವ್ಯವಸ್ಥೆಯಿಂದಾಗಿ ಎಲ್ಲವೂ ನಿಂತು ಹೋದವು. ಕೊಡಗಿಗೆ ಸರಿಯಾದ ವಿದ್ಯುಚ್ಛಕ್ತಿ ಸರಬರಾಯಿಯಾಗದಿದ್ದರೆ ನೂರಾರು ಕೈಗಾರಿಕೆಗಳು ಬೆಳೆದು ಅವಿತ ಹಿತವಾಗುವುದು. ಇನ್ನಾದರೂ ಕೊಡಗು ಸರಕಾರವು ಈ ಮಾರ್ಗದಲ್ಲಿ ಹೆಚ್ಚು ನಿಗವಹಿಸಬೇಕು.

ಕುಶಾಲಪ್ಪ ಬಿ.

ಶಾಲೆಗಳಲ್ಲಿ ಶಿಸ್ತು

ಹತ್ತು ವರ್ಷಗಳ ಹಿಂದಿನ ಸ್ಥಿತಿಗೂ ಇಂದಿನದಕ್ಕೂ ಬಹಳ ವ್ಯತ್ಯಾಸವಾಗಿದೆ. ನಾನು ಶಾಲೆಯಲ್ಲಿ ಓದುತ್ತಿದ್ದಾಗ ಇದ್ದ ಅಧ್ಯಾಪಕರೆಲ್ಲ ಆದರ್ಶರು ಎಂದು ಹೇಳುವಂತಿರಲಿಲ್ಲವಾದರೂ ಶಾಲೆಯ ಆವರಣದೊಳಗೆ ಅವರ ವ್ಯವಹಾರವು ಆದರ್ಶ ರೀತಿಯಲ್ಲಿರುತಿತ್ತು. ನನಗೆ ತಿಳಿದಂತೆ ಸಿಗರೇಟು ಸೇದುವ ಅನೇಕ ಉಪಾಧ್ಯಾಯರಿದ್ದರು. ಆದರೆ ಅವರಾರೂ ಮಕ್ಕಳ ಮುಂದೆ ಶಾಲಾ ಆವರಣದಲ್ಲಿ ಹೊಗೆಬತ್ತಿ ಸೇದುತ್ತಿರಲಿಲ್ಲ. ಆದರೆ ಇಂದಿನ ಪರಿಸ್ಥಿತಿ ಭಿನ್ನವಾಗಿದೆ. ಏನೋ ಪುಣ್ಯಕ್ಕೆ ಶಾಲೆಗಳೊಳಗೆ ಸೇದುವ ಸ್ವಾತಂತ್ರ್ಯ ಬಂದಿದ್ದರೂ ಶಾಲಾ ಆವರಣದಲ್ಲಿ ಯಥೇಚ್ಛವಾಗಿ ನಡೆಯುತ್ತದೆ. ಸ್ವಾರಸ್ಯವಾಗಿ ಇಂದಿನ ತರುಣ ಅಧ್ಯಾಪಕರಲ್ಲಿ ಹಲವರು ತರಗತಿಗೆ ಹೋಗುವ ವರೆಗೆ ಸೇದುತ್ತಿರುತ್ತಾರೆ. ಸಿಗರೇಟು ಬಿಸಾಡಿ ತರಗತಿಗೆ ಹೋಗುವ ಇವರ ಈ ಅಭ್ಯಾಸವನ್ನು ಕಂಡು ಮಕ್ಕಳು [illegible] ಪರಿಣಾಮವಾಗಿ ಇಂದು ಬಹು ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಹೊಗೆಬತ್ತಿಯ ಭಕ್ತರಾಗಿದ್ದಾರೆ. ಅಧ್ಯಾಪಕರು ಹೇಳುವ ಪಾಠಗಳಿಗಿಂಥಾ ಹೆಚ್ಚಾಗಿ ಅವರು ಮಾಡುವ ಕೃತಿ, ಅನುಸರಿಸುವ ರೀತಿಗಳೇ ಹೆಚ್ಚಾಗಿ ವಿದ್ಯಾರ್ಥಿಗಳ ಮೇಲೆ ಪ್ರಭಾವ ಬೀರುವವಾದ ಕಾರಣ ಅಧ್ಯಾಪಕರು ಶಾಲಾ ಆವರಣದಲ್ಲಿ ತಮ್ಮ ದುರ್ನಡತೆ, ದುರಭ್ಯಾಸಗಳನ್ನು ಬಿಟ್ಟು ಆದರ್ಶರಾಗಿ ವ್ಯವಹರಿಸುವರೇ? ಶಾಲೆಗಳೆಂದರೆ ದೇವರ ಪ್ರತೀಕಗಳಂಥಾ ಮಕ್ಕಳಿರುವ ದೇವಮಂದಿರಗಳು. ಅಧ್ಯಾಪಕರು ಸಾಕಷ್ಟು ಪವಿತ್ರತೆಯಿಂದ ಅಲ್ಲಿರದಿದ್ದರೆ ಅಶಿಸ್ತು ಹಬ್ಬದೆ ಇರಲು ಸಾಧ್ಯವಿಲ್ಲ. ಇನ್ನಾದರೂ ಅಧ್ಯಾಪಕರು ಎಚ್ಚರ ವಹಿಸುವರೇ?

'ವಿದ್ಯಾಭಿಮಾನಿ'

ಜಿಲ್ಲಾ ಬೋರ್ಡ್ ಉದ್ಯೋಗಿಗಳು

ತಮ್ಮ ಬೇಡಿಕೆಗಳು ಇನ್ನೂ ಕೈಗೂಡದ ಕಾರಣ ಮುಷ್ಕರ ಹೂಡುವುದು ಅಗತ್ಯವೆಂಬ ಅಭಿಪ್ರಾಯವು ಈ ಉದ್ಯೋಗಿಗಳಲ್ಲಿ ಬಂದು ಆ ಬಗ್ಗೆ ಅವರೆಲ್ಲರ ಅಭಿಪ್ರಾಯವನ್ನು ಬೇಲೆಟ್ ಮೂಲಕ ತೆಗೆಯಲಾಯಿತಂತೆ. ಈ ಬೇಲೆಟ್ಟಿನಲ್ಲಿ ಶೇಕಡ ೯೦ರಷ್ಟು ಜನರು ಕೂಡಲೇ ಮುಷ್ಕರ ಹೂಡಬೇಕೆಂದೂ, ಶೇಕಡ ೭ರಷ್ಟು ಜನರು ವ್ಯವಸಾಯ ಆದಾಯ ತೆರಿಗೆ ಬಿಲ್ಲು ಪಾಸಾಗಿರುವುದರಿಂದ ಮುಂದಿನ ಬಜೆಟ್ಟಿನಲ್ಲಿ ನಮಗಾಗಿ ಹಣವಿಡಬಹುದೆಂದೂ ಆದ್ದರಿಂದ ಆ ವರೆಗೆ ಮುಷ್ಕರ ಬೇಡವೆಂದೂ, ಶೇಕಡ ೩ರಷ್ಟು ಜನರು ಏನೇ ಆದರೂ ತಮ್ಮ ದೇಶಸೇವೆಯ ದೃಷ್ಟಿಯಿಂದ ತಮ್ಮ ಪಾಲಿನ ಕರ್ತವ್ಯವನ್ನು ಸಲ್ಲಿಸುವೆವೆಂದೂ, ಮುಷ್ಕರದ ಮಾರ್ಗ ದೇಶ ಹಿತಕಾರಕವಲ್ಲವೆಂದೂ ಅಭಿಪ್ರಾಯ ವ್ಯಕ್ತಮಾಡಿರುವುದಾಗಿ ತಾ|| ೨೦-೧-೫೧ ರಲ್ಲಿ ನಡೆದ ಕಮಿಟಿ ಮೀಟಿಂಗಿನಲ್ಲಿ ವ್ಯಕ್ತವಾಯಿತು. ಜಿಲ್ಲಾ ಬೋರ್ಡ್ ಉದ್ಯೋಗಿಗಳ ಕೋರಿಕೆಯು ನ್ಯಾಯಬದ್ಧವಾದುದೆಂಬುದನ್ನು ಸರ್ವರೂ ಒಪ್ಪಿದ್ದಾರೆ. ಸರಕಾರವೂ ಕೂಡ ಅವರ ಬೇಡಿಕೆಯ ತತ್ವದ ಬಗ್ಗೆ ವಿರುದ್ಧವಿರಲಾರದು. ಆದರೆ ಅದನ್ನು ಸಲ್ಲಿಸಬೇಕಾದ ಹಣದ ಅಡಚಣೆಯನ್ನು ಹೇಳುತ್ತಿದೆ. ಈ ಹಾಡನ್ನೇ ಇನ್ನೂ ಹಾಡುತ್ತಿರಬಾರದು. ಅಧ್ಯಾಪಕರ ಅತೃಪ್ತಿಯಿಂದ ವಿದ್ಯಾಪ್ರಗತಿಗೆ ಈಗಾಗಲೇ ಸಾಕಷ್ಟು ನಷ್ಟವಾಗಿದೆ. ಇನ್ನಾದರೂ ಆ ನಷ್ಟವನ್ನು ತಡೆಗಟ್ಟುವ ಪ್ರಯತ್ನವನ್ನು ಸರಕಾರವು ಮಾಡಬೇಕು.

ಜಿಲ್ಲಾ ಬೋರ್ಡ್ ಉದ್ಯೋಗಿಗಳ ಸಂಘವು ಏನೇ ಆದರೂ ಮುಷ್ಕರ ಮಾಡದೆ ದೇಶಸೇವೆ ಮಾಡುವೆವೆನ್ನುವ ಶೇಕಡ ೩ ಜನರನ್ನು ಉದ್ಯೋಗಿಗಳನ್ನಿಟ್ಟುಕೊಂಡದಕ್ಕೆ ಹೆಮ್ಮೆ ಪಡಬೇಕು. ಈ ಸಂಘದ ಘನತೆಗೆ ಕಾರಣರಿವರು. ಇಂಥಾ ಶಾಂತಿಯುತ ಮಾರ್ಗವೇ ಶ್ರೇಷ್ಠವಾಗಿ ಸಂಘವು ಬೇಡಿಕೆಯನ್ನು ಸಲ್ಲಿಸುವವರಲ್ಲದೆ ಮುಷ್ಕರದ ಹಾದಿ ಸಲ್ಲವೆಂಬುದನ್ನು ಸಂಸ್ಥೆಯು ತಿಳಿಯುವುದು ಅವಶ್ಯವಾಗಿದೆ.

ನಿರೀಕ್ಷಕ

ಮರ ಮಾರಾಟ.

ಬಡ ರೈತನು ಮರಕ್ಕೆ ಕ್ರಯ ಬಂದ ಸಮಯದಲ್ಲಿ ತನ್ನ ಕಾಡಿನ ಮರಗಳಲ್ಲಿ ಕೆಲವನ್ನು ಮಾರಿ ತನಗೆ ಈಗಿನ ಕಾಲದ ಭೂವ್ಯವಸಾಯದಿಂದ ಬಂದ ಹೋಲಾರದ ಸಾಲವನ್ನು ತೀರಿಸಿಕೊಳ್ಳಲಿಕ್ಕಾಗಿ ವ್ಯಾಪಾರಸ್ಥರಿಂದ ಮರಗಳ ಅಡಿನಿಂದ ಮುಂಗಡಗಳನ್ನು ಹೊಂದಿಕೊಂಡಿದ್ದಿದೆ. ಆದರೆ ಅಷ್ಟರಲ್ಲಿಯೇ ಸರಕಾರವು ಮರಮಾರಾಟದ ಬಗ್ಗೆ ಒಂದು ಹೊಸ ಕಾನೂನನ್ನು ಜಾರಿಗೆ ತಂದು ಮರಮಾರಾಟಕ್ಕೆ ತೊಂದರೆಯಾಗಿದೆ.

ಕೆಲವರು ತೋಟಮಾಡುವ ಉದ್ದೇಶವಾಗಿ ತಮ್ಮ ಮರಗಳನ್ನು ಮಾರಲು ಹುಕುಂ ಕೊಡಬೇಕೆಂದು ಅರ್ಜಿ ಬರೆಕೊಂಡರೂ ಕೂಡ ಸರಕಾರವು ತನ್ನ ಕಾನೂನನ್ನು ಬಿಡದಿರುವುದು. ಹಾಗಾದರೆ ಸರಕಾರವನ್ನು ಕೇಳದೆ ಅದೆಷ್ಟು ಮಂದಿ ಬಲ್ಲಿದರು ತೋಟ ಮಾಡುವದಕ್ಕಾಗಿ ಮರಗಳನ್ನು ಕಡಿದು ಹಾಕುತ್ತಿಲ್ಲ? ಅವರಿಗೆ ಮರದಿಂದ ಹಣ ಬೇಕಾಗಿಲ್ಲ. ಅವರ ಹೊಟ್ಟೆ ತುಂಬಿದೆ. ಆದರಿಂದ ಹಾಗೆ ಮಾಡುತ್ತಾರೆ. ಆದರೆ ಈ ಅರೆಹೊಟ್ಟೆಯಲ್ಲಿರುವ ರೈತನು ತನ್ನ ಸರಕಾರವನ್ನು ಮೀರಿ ಹೋಕ್ಕರೆ ಅಷ್ಟಿಯ [illegible] ಆತನಿಗೆ ಧಿಕ್ಕಾರವೇ? ಬಡವನಿಗೆ ಮರಕಡಿಯಲು ಕೊಟ್ಟರೂ ಕೂಡ ಆತನು ಕಡಿಸಿದ ಮರಗಳ ಸಂಖ್ಯೆಯಷ್ಟು ಸಸಿಗಳನ್ನು ನೆಡಬೇಕಂತೆ. ಇಲ್ಲವಾದರೆ ಆತನ ಮರದ ಬೆಲೆಯಿಂದ ೧೦% ರಷ್ಟನ್ನು ಸರಕಾರವು ಒಡಿಯುವದಾಗಿ ತಿಳಿಯಬಂದಿದೆ. ಇದು ಸರಿ ಎನ್ನೋಣ, ಹಾಗಾದರೆ ಈಗ ಕಾಫಿ ತೋಟಮಾಡಿದ ಮತ್ತು ಮಾಡುವ ದೊಡ್ಡ ದೊಡ್ಡ ಪ್ಲಾಂಟರುಗಳು ಅದೆಷ್ಟು ಮರಗಳನ್ನು ಕಡಿಸಿ ಹಾಕುತ್ತಿಲ್ಲ? ಇದಕ್ಕೆ ಸರಕಾರದ ಪ್ರತಿಬಂಧ ಇದೆಯೇ? ರೈತನ ಕಡಿಸಿದಷ್ಟು ಮರಗಳನ್ನು ಬೇರೆ ಅತನ ಬಾಣೆ ಜಾಗದಲ್ಲಿ ನೆಡಬೇಕೆಂದರೆ ಸರಕಾರವು ಆತನಿಗೆ ಬೇಕಾಗುವ ಸಸಿಗಳನ್ನು ಸಮಯಕ್ಕೆ ಸರಿಯಾಗಿ ಅವರವರ ನಾಡು ಖಜಾನೆಗಳಲ್ಲಿ ಮಾರಾಟಕ್ಕಾಗಿ ದೊರಕುವಂತೆ ನಡಿಕೊಡಬೇಕು. ಇಲ್ಲವೆ ಒಳ್ಳೆ ಬಿತ್ತುವ ಬೀಜಗಳನ್ನಾದರೂ ಕೊಡಿಸಬೇಕು. ಇಲ್ಲವಾದರೆ ರೈತನು ಏನನ್ನು ಎಲ್ಲಿಂದ ನೆಡುವುದು?"

ರೈತ

ಗೋಣಿಕೊಪ್ಪಲಲ್ಲಿ ಬಸ್ ಸ್ಟೇಂಡ್.

ಕೊಡಗಿನಲ್ಲಿ ಸಂತೆಗೆ ಪ್ರಸಿದ್ಧಿಹೊಂದಿದ ಗೋಣಿಕೊಪ್ಪಲಲ್ಲಿ ಒಂದು ಬಸ್ ನಿಲ್ದಾಣವಾಗಬೇಕೆಂದು ಜನರ ಕೂಗು ಎಂಟೆರಡು ವರ್ಷಗಳಿಂದ ಕೇಳುತ್ತಾ ಇದೆ. ಕಳೆದ ವರ್ಷ ಸ್ಥಳೀಯ ಜನರು ಈ ವಿಷಯದಲ್ಲಿ ಬಹಳ ಚಳವಳಿ ನಡೆಸಿದಾಗ ಇದಕ್ಕೆ ಸಂಬಂಧಿಸಿದ ಅಧಿಕಾರಿಗಳು, ಟೌನಿನಲ್ಲಿ ಒಂದು ಸ್ಥಳವನ್ನು ಗೊತ್ತುಮಾಡಿ, ಸ್ವಲ್ಪ ವಿಸ್ತೀರ್ಣದಷ್ಟು ಅಗೆದು, ನೆಲವನ್ನು ಸಮ ಮಾಡಿ ಕೆಂಪು ಮಣ್ಣು ಹಾಕಿಸಿದರೇ ವಿನಹ ಅದನ್ನು ಕಾರ್ಯರೂಪಕ್ಕೆ ತರಲಿಲ್ಲ. ಈ ಮಧ್ಯೆ ಎಂದರೆ ಕಳೆದ ಮಳೆಗಾಲದಲ್ಲಿ ಗೋಣಿಕೊಪ್ಪಲಲ್ಲಿ ಸಹಕಾರ ಬ್ಯಾಂಕು ತೆರೆಯಲು ಚೀಫ್ ಕಮಿ

ಕಮಿಷನರ್ ಸಾಹೇಬರವರು ದಯಮಾಡಿಸಿದಾಗ, ಇಲ್ಲಿಯ ಸ್ಥಳೀಕರು ಒಂದು ಬಿನ್ನವತ್ತಳೆಯನ್ನು ಅರ್ಪಿಸಿ, ಆ ಮೂಲಕವೂ ಇಲ್ಲಿ ಒಂದು ಬಸ್ ಸ್ಟೇಂಡ್ ಒಡನೇ ಮಾಡಿಸಿ ಕೊಡಬೇಕೆಂದು ಕೇಳಿಕೊಂಡದ್ದಕ್ಕೆ ಬರೇ ಬಾಯಿ ಸಮಾಧಾನ ಮಾಡಿಬಿಟ್ಟ ಹಾಗೆ ತೋರುತ್ತೆ.

ದಿವಸ ಪ್ರತಿ ಈ ಪಟ್ಟಣದ ಮುಖಾಂತರ ಹಾದು ಹೋಗುವಂಥಾ ಸಾಧಾರಣ ೩೦ ಲೈನುಗಳಿವೆ. ಇದಲ್ಲದೆ ಇಲ್ಲಿಯ ಮಿಲ್ ಮಾಲೀಕರು, ಇತರ ವ್ಯಾಪಾರಸ್ಥರೂ, ಸ್ವಂತಕ್ಕೆ ಇಟ್ಟುಕೊಂಡಂಥ ಇಲ್ಲಿ ಯವರದೇ ಆದ ಸಾಧಾರಣ ೨೦ ಲಾರಿಗಳಿವೆ. ಪ್ರತಿ ದಿನ ಕಡಮೆ ಪಕ್ಷ ಸಾಧಾರಣ ೨೦, ೩೦ ಮರ ಲಾರಿಗಳು ಈ ಪಟ್ಟಣದ ಮುಖಾಂತರ ಆ ಕಡೆ ಹಾದು ಹೋಗುತ್ತವೆ. ಇಲ್ಲಿ ನಾಲ್ಕೈದು ಅಕ್ಕಿ ಗಿರಣಿಗಳಿರುವುದರಿಂದ ಬೇಕಾದಷ್ಟು ಎತ್ತಿನ ಗಾಡಿಗಳು ಸಹ ಪಟ್ಟಣದ ಆಚೆ, ಈಚೆ ಹೋಗುತ್ತಲೇ ಇರುವವು. ಮರವನ್ನು ತುಂಬಿಕೊಂಡು ಬಂದ ಲಾರಿಗಳೋ, ಲೈನು ಬಸ್ಸುಗಳೋ, ಯಾವುದಾದರೊಂದು ಹೋಟೇಲಿನ ಮುಂಭಾಗದಲ್ಲೋ, ಯಾ ಅಂಗಡಿಗಳ ಎದುರುಗಡೆಯೋ ಕೆಲವು ಕಾಲಗಳ ತನಕ ನಿಲ್ಲಬೇಕಾದುದರಿಂದ ಹೋಗುವ ಬರುವ ವಾಹನಗಳಿಗೆ ಮಾತ್ರವಲ್ಲ. ಪ್ರಯಾಣಿಕರಿಗೂ ಬಹಳ ತೊಂದರೆಯಾಗುತ್ತದೆ. ಈಗಲಂತೂ ಬೇಸಿಗೆ ಕಾಲ. ಅಕ್ಕಿ ಮಾರಾಟ, ಮರ ಸಾಗಿಸುವಿಕೆ, ಮತ್ತು ಭತ್ತವನ್ನು ಸಾಗಿಸುವದರಿಂದಾಗಿ ಈ ಪಟ್ಟಣದಲ್ಲಿ ವಾಹನಗಳ ಓಡಾಟ ಬಹು ಹೆಚ್ಚಿದೆ. ಆದುದರಿಂದ ಸಂಬಂಧಿಸಿದ ಅಧಿಕಾರಿಗಳು ಒಡನೆಯೇ ಈ ವಿಚಾರಕ್ಕೆ ನಿಗ ಕೊಟ್ಟು, ಸಾರ್ವಜನಿಕರ ಹಿತಕ್ಕಾಗಿ ಈ ವಿಷಯದಲ್ಲಿ ತಕ್ಕ ಏರ್ಪಾಡು ಮಾಡಬೇಕಾಗಿದೆ.

ಪಟ್ಟಣಿಗ.

ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಕೊ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ. (1921ರಲ್ಲಿ ಸ್ಥಾಪಿತವಾಗಿದೆ.

ಅಧಿಕೃತ ಶೇರು ಭಂಡವಾಳ	ರೂ.	10,00,000.
ವಸೂಲಾದ ಶೇರು ಮೊಬಲಗು	ರೂ.	1,79,000.
ಕ್ಷೇಮನಿಧಿ	ರೂ.	65,000.
ಇತರ ನಿಧಿಗಳು	ರೂ.	28,000.

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನೂ ಕೈಕೊಳ್ಳಲಾಗುವುದು

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ, ಬೆಳ್ಳಿ ನಗಗಳ ಈಡಿನ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ ಯೂ ಡ್ರಾಫ್ಟುಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರಿಪಿಟ ಮತ್ತು ವಾರ್ಡನ್ ಇನ್ಶೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಗೌ. ಕಾರ್ಯದರ್ಶಿ,

ಕೆ. ಪಿ. ಅಪ್ಪಯ್ಯ, M. L. C. ಪ್ರೆಸಿಡೆಂಟ್ ಮತ್ತು ಏಜಂಟ್.

ಕೊಡಗು ಪ್ರಾಂತೀಕ ಸಹಕಾರಿ, ಮಾರ್ಕೆಟಿಂಗ್, ಫೆಡರೇಷನ್ ಲಿಮಿಟೆಡ್., ವೀರಾಜಪೇಟೆ.

ನಮ್ಮಲ್ಲಿ ಕೋವಿಗಳು, ತೋಟೆಗಳು ಮತ್ತು ಎಲ್ಲಾ ತರಹದ ವ್ಯವಸಾಯದ ಹತ್ಯಾರುಗಳು ದೊರೆಯುತ್ತವೆ.

1. 32 ಪಿಸ್ತೂಲುಗಳು (Pistols) ಕ್ರಯ ರೂ. 162 ರಿಂದ 245ರ ವರೆಗೆ.
2. 12ನೇ ನಂಬರಿನ ಒಂಟಿ ಹೊಳವಿನ ಕೋವಿ ಕ್ರಯ ರೂ. 320-0-0
3. 12ನೇ ನಂಬರಿನ ಜೋಡು ಹೊಳವಿನ ಕೋವಿ (Webley & Scott)
4. 12ನೇ ನಂಬರಿನ ಜೋಡು ಹೊಳವಿನ ಕೋವಿ (Spanish make)
5. 6 ಗಜದ (Hand loom) ಕೈಮಗ್ಗದ ಸೀರೆಗಳು ಕ್ರಯ ರೂ. 4-10-0.
6. .32 ಪಿಸ್ತೂಲು ಮತ್ತು ರಿವಾಲ್ವರುಗಳ ತೋಟೆಗಳೂ ಸಹ ದೊರೆಯುತ್ತವೆ.
7. ಕಾಫಿ ಮತ್ತು ಕಿತ್ತಳೆ ಗಿಡಗಳಿಗೆ ಸ್ಪ್ರೇ ಮಾಡುವ ಪಂಪುಗಳು (Spraing Pumps)
8. ½" ಮತ್ತು ¾" ಕಬ್ಬಿಣದ ಸಲಾಕೆಗಳು.

ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

(ಅವಶ್ಯವಿರುವ ಕೋವಿಗಳಿಗೂ, ತೋಟೆಗಳಿಗೂ ಜಿಲ್ಲಾ ಮೇಜಿಸ್ಟ್ರೇಟರಿಂದ ವಿಶೇಷ ಪರ್ಮಿಟು "Special permit" ಪಡೆದವರಿಗೆ ಮಾತ್ರ ದೊರೆಯುವದು)

ಎಂ. ಎಸ್. ಸೋಮಯ್ಯ, ಗೌರವ ಕಾರ್ಯದರ್ಶಿ.

52-16

ಪಿತನನಂತರ.

ಗುಂಡಿಂದು ಸಿಡಿದಂದು
ಕತ್ತಲೆಯು ಕವಿದಂದು
ಎದೆ ಒಡೆದು ರೋಧನವ ಗೈಯ್ದಿದ್ದೆವು.
ನಿಟ್ಟುಸಿರ ಸೂಸುತ್ತ
ಕಂಬನಿಯು ಮಿಡಿಯುತ್ತ
ಎದೆ ತಟ್ಟಿ ಶಪಥವನು ಮಾಡಿದ್ದೆವು.
ಕಣ್ಣೀರು ನಿಂತಾಯ್ತು
ಶಪಥವನು ಮರೆತಾಯ್ತು
ನಮ್ಮಂತೆ ನಾವಾಗಿ ಮೆರೆದಿರುವೆವು.
ನಾಯಿ ಬಾಲದ ಕಥೆಯು
ಹರಿಯದಾಗಿದೆ ವ್ಯಥೆಯು
ಅರಿಗೊರೆಯಲಿ ಪಿತನ ಮರೆತಿರುವೆವು.
ಹೊಸಕಾಲ ಬಹುದೆಂದು
ಜೀವನಕ್ಕೆ ಬೆಳಕೆಂದು
ನಮಗಾಗ ಸುಖವೆಂದು ನಂಬಿದ್ದೆವು.
ತಂದೆಯೊಬ್ಬನ ಬದಲು
ಕೆಲ ಜನರ ಒಕ್ಕೊರಲು
ಕೇಳುವದು ನಿಜವೆಂದು ಬಯಸಿದ್ದೆವು.
ಅಪ್ಪ ಹೇಳಿದ ಮಾತ
ಒಪ್ಪುವವರನವರತ
ಯಾರಿದರು ನೋಡಿಲ್ಲಿ ಹಾಳು ಗುಡಿಯು
ಹಿಂದೆಂದ ಸಿಹಿಬಾಳು
ದೊರೆಯುವದೆ ನೀ ಹೇಳು
ಎಲ್ಲ ಕಾರ್ಗತ್ತಲಿನ ಕಪ್ಪು ಕಡಲು.
ನಮ್ಮವರು ನಮಗೆಂದು
ಬೇರಾರು ಬೇಡೆಂದು
ನಮ್ಮವರ ಬಗೆಯಲ್ಲಿ ನಮಗೆ ಭಕ್ತಿ.
ನೆರೆನಂಬಿ ತಾಳಿದೆವು
ಬಿಸಿಯುಸಿರ ಸಹಿಸಿದೆವು
ಕೊಡಲಿ ಹಿಡಿಯೇ ತನ್ನ ಕುಲಘಾತಕಿ.
ಏರಿಳಿತ ಸರಿಮಾಡಿ
ಹೊಲಸೆಲ್ಲ ಶುಚಿಮಾಡಿ
ಮನೆ ಶುದ್ಧವಿರಲೆಂದು ಬಗೆದಿದ್ದೆವು
'ನನ್ನವರೆ ನನಗೆಂದು
ನನ್ನ ಸುಖ ಬೇಕೆಂದು'
ನಂಬಿದಾ ಜನರಿಂದ ಬಗೆಗೆಟ್ಟೆವು.
ಇದ್ದನೊಬ್ಬನೆ ಗಾಂಧಿ
ಆವನ ತತ್ವವು ಬಂಧಿ
ಯಾಗಿಹುದು ಭಾರತದಿ ನಿಜವಲ್ಲವೇ?
ಜಗಕೆ ಗುರುವಿನ ಭಾಗ್ಯ
ತತ್ವದರ್ಶನ ಯೋಗ್ಯ
ನಾಗುವಾ ಸಾಧ್ಯತೆಯು ಕನಸಲ್ಲವೇ?
ಅಮೃತ ಹುಟ್ಟಲು ಬೇಕು
ಸತತ ಮಥನದ ಝಳಕು
ಭಾರತದಿ ನಡೆಯುತ್ತಿದೆ ಅಮೃತ ಮಥನ
ಮಥನ ಮುಂದಿರದಿಂದ
ಉದಯವಾಗಲಿ ಚಂದ
ಸುಖಶಾಂತಿ ಸೌಹಾರ್ದ ಪ್ರೇಮಕಥನ.

(ಸದ್ಯದಲ್ಲೇ ಪ್ರಕಾಶಿತವಾಗಲಿರುವ ಶ್ರೀ. ಜಿ' ಯವರ 'ಪ್ರತಿಧ್ವನಿ'ಯಿಂದ.)

(೩ನೇ ಪುಟದಿಂದ ಸಾಗಿದ್ದು)

ಬ್ರಿಟಿಷರ ಸಾಮ್ರಾಜ್ಯದೊಳಗೆ ಡೊಮಿನಿಯನ್ ಸ್ಥಾನವನ್ನು ಗಳಿಸಿ ಪಂಡಿತ ಜವಾಹರರ ಮಹಾಮಂತ್ರಿತ್ವದಲ್ಲಿ ಆಳಲ್ಪಡುತ್ತಿದೆ. ಅಹಿಂಸೆಯ ಮೂರ್ತಿವೆತ್ತ ಪ್ರತಿಬಿಂಬನಾದ ಪೂಜ್ಯ ಮಹಾತ್ಮನ ಶರೀರವು ಅಂಧಶ್ರದ್ಧಾವಾದಿಯೊಬ್ಬನ ಹಿಂಸೆಗೆ ಗುರಿಯಾಯಿತಾದರೂ ಆ ಶರೀರದಲ್ಲಿ ಅಂತರ್ಗತವಾದ ಮಹಾ ಆತ್ಮವು ಭಾರತವನ್ನೆಲ್ಲ ಪಸರಿಸಿ ೧೯೪೮ನೇ ಜನವರಿ ೩೦ ರಂದು ವಿಶ್ವಶಕ್ತಿಯಲ್ಲಿ ಲೀನವಾಯಿತು.

೧೯೪೯ನೇ ನವಂಬರ್ ೨೬ ರಲ್ಲಿ ಭಾರತ ಪ್ರಜಾಪ್ರಭುತ್ವದ ಮಹಾಘಟನೆಯು ಭಾರತದ ಸ್ವತಂತ್ರ ಪ್ರತಿನಿಧಿಗಳಿಂದ ಕೂಡಿದ ಘಟನಾಸಭೆಯಲ್ಲಿ ಅಂಗೀಕಾರ ಹೊಂದಿತು. ೧೯೫೦ನೇ ಜನವರಿ ೨೬ನೇ ತಾರೀಕಿನಂದು ಭಾರತವು ಡೊಮಿನಿಯನ್ ಪ್ರತಿಪತ್ತಿಯನ್ನು ಕಿತ್ತೊಗೆದು ಪ್ರಜಾರಾಜ್ಯವನ್ನು ಘೋಷಿಸಿತು. ಬ್ರಿಟಿಷ್ ರಾಜರ ಪ್ರತಿನಿಧಿಯಾದ ಗವರ್ನರ್ ಜನರಲರ ಸ್ಥಾನವು ಮಾಯವಾಗಿ ಪ್ರಜಾಪ್ರತಿನಿಧಿಯಾದ ಪ್ರೆಸಿಡೆಂಟರ ಸ್ಥಾನವು ಏರ್ಪಟ್ಟಿತು. ಸರಳಜೀವಿಗಳೂ ವಿಶಾಲಮತಿಗಳೂ ಗಾಂಧೀತತ್ವಪಾಲಕರೂ ಆದ ಬಾಬು ರಾಜೇಂದ್ರ ಪ್ರಸಾದರು ಭಾರತ ರಿಪಬ್ಲಿಕಿನ ಪ್ರಥಮ ಪ್ರೆಸಿಡೆಂಟರಾದರು. ಭಾರತವು ರಿಪಬ್ಲಿಕ್ ಆದರೂ ಪಾಶ್ಚಾತ್ಯ ದೇಶಗಳೊಡನೆ ಉಂಟಾದ ಸಾಂಸ್ಕೃತಿಕ ಮಿಲನವನ್ನು ಕಾಪಾಡುವ ದೃಷ್ಟಿಯಿಂದ ತನ್ನ ಸ್ವಂತ ಇಚ್ಛೆಯಿಂದಲೇ ಬ್ರಿಟಿಷ್ ರಾಜ್ಯಗಳ ಒಕ್ಕೂಟದಲ್ಲಿ ಸಮಾವೇಶಗೊಂಡು ವಿಶ್ವಶಾಂತಿಗಾಗಿ ಪ್ರಯತ್ನಿಸುತ್ತಲಿರುವುದು.

ಭಾರತದ ಘಟನೆಯಲ್ಲಿ ವ್ಯಕ್ತಿಗತ ಸ್ವಾತಂತ್ರ್ಯಕ್ಕೆ ಸರ್ವಮಾನ್ಯತೆಯಿದೆ. ೧೮ ಕೋಟಿ ಮತದಾರರಿಂದ ಕೂಡಿದ ಈ ಪ್ರಜಾಪ್ರಭುತ್ವವು ಪಂಡಿತ ಜವಹರರ ಪ್ರಧಾನತ್ವದಲ್ಲಿ ವಿಶ್ವಕ್ಕೆ ಆದರ್ಶವನ್ನು ತೋರುತ್ತಲಿದೆ. ಧರ್ಮ ಕೇಂದ್ರವಾದ ರಾಜಕೀಯದಿಂದ ಕೂಡಿದ ಭಾರತದ ತ್ರಿವರ್ಣ ರಂಜಿತ ಧ್ವಜದಲ್ಲಿ ಅಶೋಕನ ಧರ್ಮಚಕ್ರವು ಸ್ಥಾಪಿಸಲ್ಪಟ್ಟು ಪ್ರಾಚೀನ ಕಾಲದಿಂದ ಆಧುನಿಕ ಕಾಲದ ವರೆಗೆ, ಉರುಳುತ್ತಿರುವ ಧರ್ಮ ಮಹಾರಥದ ಚಕ್ರವನ್ನು ಪ್ರತಿಬಿಂಬಿಸುತ್ತಲಿರುವುದು—ಭಾರತೀಯರು ಈ ಚಕ್ರದ ಸಂದೇಶವನ್ನರಿತು ಧಾರ್ಮಿಕ ಜೀವಿಗಳಾಗಿ ಬಾಳಿ ಒಂದುಗೂಡುವಿಕೆಯಿಂದಲೂ ಒಮ್ಮನಸ್ಸಿನಿಂದಲೂ ಏಕಾತ್ಮ ಭಾವನೆಯಿಂದಲೂ ಪ್ರಸ್ಫುಟಿತ ಪದ್ಮವದನೆಯಾದ ಭಾರತಮಾತೆಯ ಸರ್ವತೋಮುಖವಾದ ಅಭ್ಯುದಯಕ್ಕಾಗಿ ಅಹರ್ನಿಶಿ ದುಡಿಯಲಿ! ಜೈ ಹಿಂದ್.

ಸ್ವಾತಂತ್ರ್ಯೋದಯ.

ಲೇ:—'ಗೌರೀತನಯ.'

ಸ್ವಾತಂತ್ರ್ಯೋದಯ
ವಾಗಿದೆ ನಾಡಿಗೆ
ಅರುಣೆಸಿತಾಗಲೆ
ಮೂಡುದೆಸೆ

ಕೋಗಿಲೆ ಕುಕ್ಕುಟ
ಕೂಗುತ, ನರ್ತನ—
ವಾಡಿತು ಮೆರೆಯುವ
ಚೆಲುವಿನುಷೆ

ನೀಲಾಂಬರವನು
ಮೇಲುದಮುಗಿಲನು
ಸುತ್ತುತ ಪೊದ್ದಳು
ದಿಗ್ವಣ್ಣ

ಹುಯ್ಯಲು ಹುಯ್ಯಿತು
ತಂಗಾಳಿಯು ಚೆಲು—
ವರಳಿತು ವನದಾ
ಪೂಗಣ್ಣು

ಮುಗಿಲಿನ ಮುಸುಕನು
ಸರಿಸುತಲರ್ಕನು
ಸುರಿಸಿದ ಕಿರಣದ
ಕೆಂಗಾಂತಿ

ಜಗವೇ ನಲಿಯಿತು
ಜಗಿಯುತ ನಗೆಯಿತು
ತೋರಿದುದು ಮನದಾ
ಹಿರಿಭ್ರಾಂತಿ

ಕಾಳರಾತ್ರಿಯೂ
ಕರಾಳ ರಾಜ್ಯವ
ತೊಳೆದನು ತೊಳೆದನು
ಉದಿತರವಿ

ಕಾಲವು ನಿಲ್ಲದೆ
ಕಷ್ಟವೆ ಆದರೂ
ಬೆಳಗಿದೆ ದೇಶಕೆ
ಭಾಗ್ಯರವಿ

॥= ನಿಮ್ಮ ಮಣ್ಣು =॥

ಎಲ್ಲಾ ವಸ್ತುಗಳಿಗಿಂತಲೂ ಹೆಚ್ಚಾಗಿ ನೀವು ಆಹಾರ, ಬಟ್ಟೆ, ಸೌದೆ ಮತ್ತು ವಸತಿಗಳಿಗಾಗಿ ಒಂದಲ್ಲ ಒಂದು ರೀತಿಯಲ್ಲಿ ನಿಮ್ಮ ಮಣ್ಣನ್ನು ಹೊಂದಿಕೊಂಡಿದ್ದೀರಿ. ಈ ಕಾರಣದಿಂದ ಕೊಡಗಿನ ಫಲವತ್ತಾದ ಮಣ್ಣನ್ನು ದೇಶದ ಔನ್ನತ್ಯಕ್ಕಾಗಿಯೂ ಉತ್ತಮವಾದ ಜೀವನಕ್ಕಾಗಿಯೂ ಸಾರವತ್ತಾದ ವಸ್ತುಸಂಗ್ರಹಗಳ ದ ಜೋಪಾನ ಮಾಡಿಕೊಳ್ಳಬೇಕಾದ್ದು ಅತ್ಯವಶ್ಯವಾಗಿದೆ.

ವರ್ಷಾವಧಿ ಮಳೆಯು ಸರಾಸರಿಯಾಗಿ ಕೊಡಗಿಗೆ ೨೮೦೦೦೦೦೦೦೦೦೦೦ ಗ್ಯಾಲನು ನೀರು ಆಕಾಶದಿಂದ ಕೆಳಕ್ಕಿಳಿದು ಹೊಳೆಗಳ ಮೂಲಕ ಹರಿದು ಹೋಗಿ ನಿಷ್ಪ್ರಯೋಜನವಾಗುತ್ತದೆ. ಹೀಗೆ ಹರಿಯುವ ನೀರಿನಲ್ಲಿ ಸಸ್ಯಗಳಿಗೆ ಸಾರಭೂತ ಪದಾರ್ಥಗಳು ಆ ಜನ ವಣ್ಣು ಕೊಚ್ಚಿಹೋಗುತ್ತದೆ. ಇಂದಿನ ವರೆಗೆ ಮಿಲಿಯ ಟನ್‌ಗಟ್ಟಲೆ ಕಾಫಿ ಬತ್ತ, ಕಿತ್ತಳೆ ಇತ್ಯಾದಿ ಉತ್ಪನ್ನಗಳು ಈ ಚಿಕ್ಕ ಸಂಸ್ಥಾನದಿಂದ ಪರದೇಶಗಳಿಗೆ ಒಯ್ಯಲ್ಪಡುತ್ತಿವೆ. ಎಟ ವಿಚಾರವು ನಿಮ್ಮೆಲ್ಲರಿಗೂ ತಿಳಿದ ವಿಷಯ. ಆದರೂ ಇಲ್ಲಿಗೆ ಹೊರಗಿನಿಂದ ವ್ಯವಸಾಯ ಪದಾರ್ಥಗಳು ಈ ಚಿಕ್ಕ ಭಾಗ್ಯ ಪ್ರದೇಶದಿಂದ ಬಿಡುಗಡೆ ಹೊಂದುತ್ತಿವೆ. ವಿಚಾರ ಮಾಡಿದರೆ ನಿಮ್ಮ ಕಲಿತ ಬಡ ವಣ್ಣು ತನ್ನ ಸಾರವನ್ನು ಆಹಾರ ಪದಾರ್ಥಗಳ ರೂಪದಲ್ಲಿ ವರ್ಷಗಟ್ಟಲೆ ಕಳೆದುಕೊಂಡು ಬಂದು ಜಾಂಗಡ ಹಿಂದಿನ ಕಾಲದ ಸಂಪತ್ತು ಶೂನ್ಯವಾಗಿದೆ. ಈ ತರದ ಫಲವತ್ತಾದ ಮಣ್ಣಿನ ಧಾಳಿ ನಿರಂತರವಾಗಿ ದಿನದಿಂದ ದಿನಕ್ಕೆ ವಿಪರೀತವಾಗುತ್ತಿದೆ. ಆಪಾರವಾಗಿರುವ ಮಣ್ಣಿನ ಸಾರದಿಂದ ಈ ವಿಚಾರ ನಿಮ್ಮ ಮನಸ್ಸಿಗೆ ತಟ್ಟಿಗೆ ನೀವು ಇದನ್ನು ಸ್ವಾಭಾವಿಕವೆಂದು ತಿಳಿಯುತ್ತೀರಿ. ಹೀಗೆ ನಿಮಗಾಗಿ ಕಳೆದು ಹೋಗುವುದನ್ನು ನೋಡುತ್ತಿರುವುದು ಮಹಾ ಅವಿವೇಕ.

ಮಣ್ಣಿನ ವಿಶೇಷ ಗುಣಗಳನ್ನು ಎಲ್ಲಾ ವಿಧದಲ್ಲೂ ಚೆನ್ನಾಗಿ ತಿಳಿದು ತರದ ಸಾರವನ್ನು ವಿವಿಧ ರೀತಿಯಲ್ಲಿ ಜೋಪಾನವಾಡುವ ಜ್ಞಾನವನ್ನು ಸಂಪಾದಿಸಿಕೊಂಡರೆ ಪ್ರತಿಯೊಬ್ಬನ ತನ್ನ ಜಮೀನಿನ ಸತ್ವವನ್ನು ಉಳಿಸಿಕೊಳ್ಳುವುದಲ್ಲದೆ ಅದನ್ನು ಸಾಧ್ಯವಾದಷ್ಟು ಹೆಚ್ಚು ಫಲವತ್ತಾಗಿ ಮಾಡಲು ಸಹ ಯತ್ನಿಸಬಹುದು. ದ [illegible] ಇಲ್ಲ ಜಮೀನಿನ ವಿಚಾರ [illegible] ತಿಳಿದು ಕೊಂಡು ಕಂಡು ಉಪಯೋಗಿಸುತ್ತಿರುತ್ತಾರೆ. ಸರಿಯಾದ ಫಲವನ್ನು ಬೆಳೆಯಬೇಕಾದರೆ ಮಣ್ಣಿನ ಗುಣವನ್ನು ಚೆನ್ನಾಗಿ ತಿಳಿದುಕೊಂಡು ಅಲ್ಲಿ ತಾನು ಬೆಳೆಸಬಹುದಾದ ಗಿಡಗಳಿಗೆ ಬೇಕಾಗಿರುವ ಸಾರಪದಾರ್ಥಗಳ ಕುಂದುಕೊರತೆಗಳನ್ನು ತಿಳಿದಿರಬೇಕಾಗಿರುವುದು. ಮೊದಲನೆಯ ಮೆಟ್ಟಿಲು. ಈ ಉದ್ದೇಶಕ್ಕಾಗಿ ಮಡಿಕೇರಿಯಲ್ಲಿ ವ್ಯವಸಾಯ ಇಲಾಖೆಯ ಒಂದು ಪ್ರಯೋಗಶಾಲೆಯು ತೆರೆಯಲ್ಪಟ್ಟು ಮಣ್ಣಿನ ಪರೀಕ್ಷೆಯನ್ನು ಕ್ರಮ ಪ್ರಕಾರವಾಗಿ ಮಾಡುವ ಏರ್ಪಾಡು ಮಾಡಲಾಗಿದೆ. ದೇಶದ ಕೃಷಿಕರು ಈ ಪ್ರಯೋಗಾಲಯದಲ್ಲಿ ಯಾವ ವೇಳೆಗೂ ಶಾಸ್ತ್ರೀಯವಾದ ಸಲಹೆಗಳನ್ನು ಹೊಂದಿಕೊಳ್ಳಬಹುದು. ಮೊದಲಾಗಿ ಮಾದರಿ ಮಣ್ಣನ್ನು ಕಳುಹಿಸಿ ಅದರ ಪರೀಕ್ಷೆ ಮಾಡಿಸಿ ತಕ್ಕ ಸಲಹೆಗಳನ್ನು ಹೊಂದಿಕೊಳ್ಳಬಹುದು. ಮಣ್ಣಿನ ಪರೀಕ್ಷೆ ಮತ್ತು ಶಾಸ್ತ್ರೀಯ ಸಲಹೆಗಳಿಗಾಗಿ ಅತಿ ಕಡಿಮೆ ದರದಲ್ಲಿ ಸಹಾಯ ದೊರೆಯುವ ಏರ್ಪಾಡು ಮಾಡಲಾಗಿದೆ.

ಪರೀಕ್ಷೆಗಾಗಿ ಮಾದರಿಯ ಮಣ್ಣನ್ನು ಮತ್ತು ಗೊಬ್ಬರವನ್ನು ಕಳುಹಿಸಲು ಸಲಹೆಗಳು.

I ಮಣ್ಣು—ಬೆಳೆ ಬೆಳೆಯಲು ಮಣ್ಣಿನ ಶಕ್ತಿಯನ್ನು ಹೆಚ್ಚಿಸುವ ವಿಧಾನಗಳು ಹಲವು ತರವಾಗಿವೆ. ಆದರೆ ಅದರಲ್ಲಿ [illegible] ಸಂಶೋಧನೆಯಿಂದ ಮಣ್ಣಿನ ಸಾರವನ್ನು [illegible] ಜಾಗದ ವಿಷಯವಾಗಿ ದೊರೆಯುವ [illegible] ಇತರ ವಿಶೇಷ ಸಂಗತಿಗಳಿಂದ ಮಣ್ಣಿಗೆ ಅನುಗುಣವಾದ ವ್ಯವಸಾಯವನ್ನು ಮತ್ತು [illegible] ನಿಯಮಗಳಿಗನುಸಾರವಾದ ಬೆಳೆ ಬೆಳೆಸುವ ವಿಧಾನವನ್ನು ಪ್ರಯೋಜನಕಾರಿಯಾಗ ಸಲಹೆಗಳನ್ನು ಕೊಡಬಹುದಾಗಿದೆ. ಪರೀಕ್ಷೆಗೆ ಮಾದರಿ ಮಣ್ಣನ್ನು ಕಳುಹಿಸಬೇಕಾದರೆ ನೀವು ವ್ಯವಸಾಯ ಮಾಡಬೇಕಾಗಿರುವ ಜಾಗದ ವಿವಿಧ ವಿಸ್ತೀರ್ಣದ ಮಣ್ಣನ್ನು ಬೇರೆ ಬೇರೆ ಕಳುಹಿಸಬೇಕಾದ್ದು ಮುಖ್ಯವಾಗಿದೆ. ಉತ್ತಮವಾದ ಫಲಿತಾಂಶ ದೊರಕಬೇಕಾದರೆ ನಿಮ್ಮ ಜಾಗದಲ್ಲಿ ಹಲವಾರು ಕಡೆ ಗುರುತು ಮಾಡಿ ಮೇಲಿನ ಕಸ ಕಡ್ಡಿಗಳನ್ನು ತೆಗೆದು ಮಣ್ಣಿನ ಮೇಲ್ಭಾಗದಿಂದ ೯ ಇಂಚು ಆಳದವರೆಗೆ ಮಣ್ಣನ್ನು ಗದ್ದಲಿಯಿಂದ ಅಗೆದು ತೆಗೆಯಿರಿ. ಹೀಗೆ ಪ್ರತಿ ಜಾಗದಿಂದ ಸ್ವಲ್ಪ ಸ್ವಲ್ಪವಾಗಿ ಸಂಗ್ರಹಿಸಿದ ಮಣ್ಣನ್ನು ಚೆನ್ನಾಗಿ ಮಿಶ್ರಮಾಡಿ ಗಾಳಿಯಲ್ಲಿ ಆರಿಸಲು ಒಣಗಬಿಟ್ಟು, ಅನಂತರ ಮೂರ್ ಪೌಂಡಿಗೆ ಕಡಿಮೆಯಾಗದಷ್ಟು ಮಣ್ಣನ್ನು ಬಟ್ಟೆಯ ಚೀಲದಲ್ಲಿ ತುಂಬಿ ಗೋಣಿಚೀಲದಲ್ಲಿ ಗಟ್ಟಿಯಾಗಿ ಕಟ್ಟಿದ ಮೇಲೆ ಆ ಪಾಕೆಟನ್ನು ಕೊಡಗು ಎಗ್ರಿಕಲ್ಚರಲ್ ಆಫೀಸರ್, ಮಡಿಕೇರಿ ಎಂದು ವಿಳಾಸ ಬರೆದು ಒಳಗೆ ಒಂದು ಕಾಗದದಲ್ಲಿ ಕಳುಹಿಸುವವನ ಸಂಪೂರ್ಣ ಹೆಸರು ಮತ್ತು ವಿಳಾಸವನ್ನು ಮತ್ತು ತನ್ನ ಚೀಲಕ್ಕೆ ಹಚ್ಚಿದ ಗುರುತನ್ನು [illegible] ಇದನ್ನು ಈ ಕೆಳಗಿನ ವಿವರವಾಗಿ ಬರೆಯುವ ಪಕ್ಷದಲ್ಲಿ ಒಂದು ಪ್ಯಾಕೆಟಿಗಿಂತ ಹೆಚ್ಚಾಗಿ ಕಳುಹಿಸುವ ಸಂದರ್ಭದಲ್ಲಿ ಒಂದಕ್ಕೊಂದು ವಿಶ್ವಾಸಗವೆಂತೆ ಎಚ್ಚರಿಕೆ ವಹಿಸಿಕೊಳ್ಳತಕ್ಕದ್ದು.

ಮಾದರಿ ಮಣ್ಣನ್ನು ಪಡೆಯಾಗಿ ಮತ್ತು ಒಬ್ಬರಿಗೆ ಎಂದರೆ ಕಳುಹಿಸಕೂಡದು. ಜೊತೆಯಲ್ಲಿ ವ್ಯವಸಾಯ ಅಧಿಕಾರಿಗಳಿಗೆ ಈ ಕೆಳಗಿನ ವಿಶೇಷಗಳನ್ನು ಬರೆದು ಕಳುಹಿಸತಕ್ಕದ್ದು.

(೧) ಕಳುಹಿಸುವವನ ಸಂಪೂರ್ಣ ಹೆಸರು ಮತ್ತು ವಿಳಾಸ

(೨) ಸ್ಥಳ, ಗ್ರಾಮ.

(೩) ಜಾಗದ ಸರ್ವೆ ನಂಬ್ರ ಮತ್ತು ತೋಟದ ಹೆಸರು

(೪) ಜಾಗದ ವಿವರ (ಗದ್ದೆಯೋ ತೋಟವೋ ಯಾ ಇತರ ತೋಟವೋ)

(೫) ಸರ್ವಸಾಮಾನ್ಯವಾಗಿ ಬೆಳೆಸುವ ಬೆಳೆ

(೬) ಬೆಳೆ ತೆಗೆಯಬಹುದಾದ ಕಾಲ ಅಥವಾ ಕ್ರಿಮಿ ಉಪದ್ರ

(೭) ಅನುಸರಿಸುತ್ತಿರುವ ವ್ಯವಸಾಯ ಕ್ರಮ

(೮) ಹಿಂದಿನ ೩ ವರ್ಷಗಳಿಂದ ಉಪಯೋಗಿಸುತ್ತಿರುವ ಗೊಬ್ಬರ

(೯) ಜಾಗದ ಮಟ್ಟ (ಇಳಿಜಾರಿನ ಭೂಮಿಯೋ ಬಯಲು ಭೂಮಿಯೋ ಮಣ್ಣಿನದೋ ಎಂಬುದು)

(೧೦) ನೀರು ಹರಿಸಲು ಹಾಗೆ ಕಾಲುವೆ ತೋಡಬಹುದಾದ ಅನುಕೂಲತೆಯೋ ಯಾ ಅನನುಕೂಲತೆಯೋ

(೧೧) ಕಾಲುವೆ ಮತ್ತು ಕಡೆ ಇತ್ಯಾದಿ [illegible]

(೧೨) [illegible] ಇಲಾಖೆಯವರಿಂದ ಪಡೆದ [illegible]

II ಗೊಬ್ಬರ

ಪರೀಕ್ಷೆಗಾಗಿ ಕಳುಹಿಸುವ ಗೊಬ್ಬರ ವಿವಿಧ ಸಂಗ್ರಹದ ಬೇರೆಬೇರೆಯಾಗಿರಬೇಕಾದ್ದು ಮುಖ್ಯವಿಷಯ. ಗೊಬ್ಬರದ ಸಂಗ್ರಹದ ಹೊಂಡದಲ್ಲಿ ಅದರಿಂದ ಸ್ವಲ್ಪ ಭಾಗವನ್ನು ಸಂಗ್ರಹಿಸಿ ಹರಡಿ ಗೊಬ್ಬರವನ್ನು ಮಾಡಿ ಪ್ರತಿ ಗದ್ದೆಯಿಂದ ಸ್ವಲ್ಪ ತೆಗೆದು ಚೆನ್ನಾಗಿ ಮಿಶ್ರಮಾಡಿ ಒಂದು ಪೌಂಡಿಗೆ ಕಡಿಮೆಯಾಗದಷ್ಟನ್ನು ಚೀಲದಲ್ಲಿ ತುಂಬಿ ಕಳುಹಿಸಬೇಕು. ಗೊಬ್ಬರದ ಗಡ್ಡೆ ಉಕ್ಕಿದ ಸಲ್ಲ ಅದನ್ನೇ ಒಣಗಿ ಮಿಶ್ರಮಾಡಿ ಒಂದು ಪೌಂಡಿಗೆ ಕಡಿಮೆಯಾಗದಷ್ಟು [illegible] ಗೊಬ್ಬರವನ್ನು ಮಾದರಿಯಾಗಿ ಕಳುಹಿಸುವ [illegible] ಬೇರೆಯಾದ ಚಿನ್ನಗಳಲ್ಲಿ ಕಳುಹಿಸಿ [illegible] ದಗೆ ಈ ಕೆಳಗಿನ ವಿಶೇಷಗಳನ್ನು ಬರೆಯತಕ್ಕದ್ದು.

(೧) ಕಳುಹಿಸುವವರ ಹೆಸರು ಮತ್ತು ವಿಳಾಸ

(೨) ಮಾದರಿ ಗೊಬ್ಬರದ ವಿವರ

(೩) ಗೊಬ್ಬರವನ್ನು ಯಾವ ಬೆಳೆಗೆ ಉಪಯೋಗಿಸುವ ನಿರ್ಧಾರ

(೪) [illegible] ಮಾಡಿ ಸಲಹೆ ತೆಗೆದು ಬೇಕಾಗಿರುವ ದಿವಸದ ಬೆಳೆಯ ವ್ಯವಸಾಯ [illegible] ಗೊಬ್ಬರವನ್ನು ತಯಾರು ಮಾಡುವ ವಿಧಾನದ ಸೂಚನೆಯು ಬೇಕೇ.

[illegible] ಗೊಬ್ಬರವನ್ನು ಪರೀಕ್ಷೆ ಮಾಡುವ ಮಾದರಿಯ [illegible] ಇಲ್ಲವೆ ಯಾರಿಗೆ ಪರೀಕ್ಷೆ ಮಾಡಲಾಗುವುದು [illegible] ಕಳುಹಿಸುವ ಗೊಬ್ಬರದ ಪರೀಕ್ಷೆ ಆಗಿರುವ ರಾಸಾಯನ ಪದಾರ್ಥಗಳ ಕ್ಲುಪ್ತ ಪಟ್ಟಿಯು ನ್ಯಾಯಸಮ್ಮತ ಪ್ರಕಾರ ವ್ಯವಸಾಯ ಇಲಾಖೆಯ ಮುಖಾಂತರ ದಿಲ್ಲ.

ಫೀಜಿನ ದರ

ಈ ಕೆಳಗಿನ ಪಟ್ಟಿಯಲ್ಲಿ ವಿಧಿಸಿರುವ ಫೀಜನ್ನು ಮುಂಗಡವಾಗಿ ಪಾವತಿ ಮಾಡತಕ್ಕದ್ದು. ಫೀಜನ್ನು ಖಜಾನೆಗೆ ಚಲನ್ ಮೂಲಕ 'XXIX Agriculture Agriculture Receipts from ryot on account of analysis of soil manure sample' ಎಂದು ಬರೆಯಿಸಿ ಹಣ ಪಾವತಿಯಾದ ಚಲನಿನ ನಕಲಿನೊಡನೆ ಕಳುಹಿಸಲಾದ ಮಣ್ಣು ಯಾ ಗೊಬ್ಬರವನ್ನು ಮಾತ್ರ ಪರೀಕ್ಷಿಸಲಾಗುವುದು.

A ಮಣ್ಣು

(೧) ಸಂಪೂರ್ಣ ರಾಸಾಯನಿಕ ಪರೀಕ್ಷೆ ಮಾಡಿ ಪೊಟಾಶ್ ಮತ್ತು ಫಾಸ್ಫೇಟಿಕ ಸತ್ವ ಎಷ್ಟಿದೆಯೆಂದು ತಿಳಿಸುವ ಬಗ್ಗೆ	೧೫ ೦ ೦
(೨) ಸ್ಥೂಲ ಪರೀಕ್ಷೆ ಬಗ್ಗೆ	೫ ೦ ೦
(೩) ಸಂಪೂರ್ಣ ಸ್ಥೂಲ ಮತ್ತು ರಾಸಾಯನಿಕ ಪರೀಕ್ಷೆ ಬಗ್ಗೆ	೨೦ ೦ ೦
(೪) ಲವಣ ಪರೀಕ್ಷೆ (ಹೆಚ್ಚಿನ ಫೀಜು)	೧೦ ೦ ೦
(೫) ಸುಣ್ಣ ಮತ್ತು P H ಅಂದಾಜು ಮಾಡುವ ಬಗ್ಗೆ ಮಾತ್ರ	೫ ೦ ೦

B ಗೊಬ್ಬರ

(೧) ನೈಟ್ರೋಜನ್ ಗೊಬ್ಬರ	೫ ೦ ೦
(೨) ಪೊಟಾಷಿಕ್ ಗೊಬ್ಬರ	೩ ೦ ೦
(೩) ಪೊಟಾಷ್ ಗೊಬ್ಬರ	೫ ೦ ೦
(೪) ಗೊಬ್ಬರಗಳ ಮಿಶ್ರಣ (ಸಾರಜನಕ, ರಂಜಕ, ಪೊಟ್ಯಾಷ್ ಮತ್ತು [illegible])	೧೫ ೦ ೦
(೫) ಗೊಬ್ಬರಗಳ ಮಿಶ್ರಣ (ಮೂರು ರಾಸಾಯನಿಕಗಳು ಮಾತ್ರ)	೧೦ ೦ ೦
(೬) ಗೊಬ್ಬರಗಳ ಮಿಶ್ರಣ (ಎರಡು ರಾಸಾಯನಿಕಗಳು ಮಾತ್ರ)	೭ ೦ ೦
(೭) ಕಾಂಪೋಸ್ಟು ಗೊಬ್ಬರ, ಹಟ್ಟಿ ಗೊಬ್ಬರ	೫ ೦ ೦

ಬಿ. ಎಂ. ಸಿ. ವರದರಾಜನ್,
ವ್ಯವಸಾಯ ಇಲಾಖಾಧಿಕಾರಿ,
ಕೊಡಗು, ಮಡಿಕೇರಿ.

ಮಾರಾಟಕ್ಕಿದೆ.

ಬೇಟೋಳಿ ಗ್ರಾಮ ಪಕ್ಕ ವಿರಾಜಪೇಟೆ ಮಡಿಕೇರಿ ರೋಡು ಬೈಲು ದಾರಿಯಲ್ಲಿ ೩೩ ಎಕರೆ ರಿಜಿಸ್ಟರ್ಡು ಕಾಫಿ [illegible] ಎಕರೆ ರಿಬನ್ನು ಕಾಫಿ ಮತ್ತು ಕಿತ್ತಳೆ ಎಕರೆ ಕಿತ್ತಳೆ ಎಂಬ ಫಸಲಿಗೆ ಬಂದಿದೆ. ೬೦ ಸೆಂಟು ನೀರಾವರಿ ಗದ್ದೆ ಮಾಡಲು ಅನುಕೂಲವಾಗಿದೆ. ಎಲ್ಲಾ ಸೌಕರ್ಯಗಳು [illegible] ಹಾರವಾದ ಮಾವು ಮದ್ದಾಗಿ ಪ್ರಾಪ್ತಿಸಿ ಬಹು [illegible] ಬೆಲೆಯು ಮರಗಳೂ ಇವೆ.

೩೩ ಪಿ. ಪಿ. ಪೊನ್ನಪ್ಪ,
ಪಾಲಿಬೆಟ್ಟ,
ವಿರಾಜಪೇಟೆ.

ರಘುಲಾಲ್ & ಕಂಪೆನಿ,

ಔಷಧ ವ್ಯಾಪಾರಿಗಳು, ಮೈಸೂರು.

ಕರ್ನಾಟಕದಲ್ಲೆಲ್ಲಾ ಚೆನ್ನಾಗಿ ಸಂಗ್ರಹಿತವಾದ ಮತ್ತು ವಿಶ್ವಾಸಪೂರಿತವಾದ ಔಷಧಿ ಅಂಗಡಿ

Also at:

೨೦ ಆರ್ಕಾಟ್ ಶ್ರೀನಿವಾಸಾಚಾರ್ ಬೀದಿ,

26-18 ಬೆಂಗಳೂರು ೨.

RAGHULAL & CO., CHEMISTS MYSORE.

ದಿ ಟ್ರಾಪಿಕಲ್

ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

ಮೇನೇಜಿಂಗ್ ಡೈರೆಕ್ಟರ್:— ಲಾಲ ಶಂಕರ್ ಲಾಲ್.

ಮುಖ್ಯ ಕಚೇರಿ:— ಹೊಸ ಡಲ್ಲಿ.

ಸ್ಥಾಪಿಸಿದ ಡೈರೆಕ್ಟರರು:

ಪಂಡಿತ ಮೋತಿಲಾಲ್ ನೆಹರು | ಎಸ್. ಶ್ರೀನಿವಾಸ ಅಯ್ಯಂಗಾರ್

ಹಕೀಮ್ ಅಜಮಲಖಾನ್. | ಡಾ|| ಎಂ. ಎ. ಅನ್ಸಾರಿ.

Transacts:—Life, Fire, Motor and Marine.

ಯೇಗ ಯು ಅಚ್ಚಣ್ಣ, ಏಜನ್ಸಿ ಸುಪರಿಂಟೆಂಡೆಂಟ್, ಮಡಿಕೇರಿ, ಕೊಡಗು.

ಎಂ. ಎ. ಬೆಳ್ಯಪ್ಪ, ಬ್ರಾಂಚ್ ಸೆಕ್ರೆಟರಿ, ಹಂಪನಕಟ್ಟಾ, ಮಂಗಳೂರು.

KIRLOSKAR BROTHERS, LTD.
23, SRI NARASIMHARAJA ROAD
BANGALORE 2.

ವಿದ್ಯುಚ್ಛಕ್ತಿಯು ಇಲ್ಲದ ಕಡೆಗಳಲ್ಲಿ ವ್ಯವಸಾಯಕ್ಕೆ ಅತ್ಯುಪಯುಕ್ತವಾದ

ಕಿರ್ಲೋಸ್ಕರ್ - ಪೆಟ್ಟರ್

ಐದು (5) B. H. P. ಡಿಸೆಲ್ ಎನ್‌ಜಿನ್ ಪಂಪ್ಪುಸೆಟ್ಟುಗಳು



ಸಿದ್ಧ ಸಂಗ್ರಹದಿಂದ ದೊರೆಯುತ್ತವೆ.

ಹೆಚ್ಚಿನ ವಿವರಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ:—

ಕಿರ್ಲೋಸ್ಕರ್ ಬಂಧುಗಳು, ಲಿಮಿಟೆಡ್,

23, ಶ್ರೀ ನರಸಿಂಹ ರಾಜರಸ್ತೆ,

ಬೆಂಗಳೂರು ೨

4-3

Edited Printed and Published by P. I. Belliappa at Kodagu Press, Mercara, for 'Kodagu Ltd.'

(ಎರಡನೆ ಪುಟದಿಂದ ಮುಂದುವರಿದದ್ದು)

ಗತಿ ಇಲ್ಲದಿರುವಾಗ ಇದು ಸ್ವತಂತ್ರ ದೇಶವೆಂದು ಹೇಗೆ ಹೇಳೋ?

ಭಾರತೀಯರ ವ್ಯವಸಾಯ ಕ್ರಮ ಆಧುನಿಕ ಕಾಲಕ್ಕನುಗುಣವಾದುದಲ್ಲ. ಆದ್ದರಿಂದ ಉತ್ಪತ್ತಿಯೂ ಕಡಿಮೆ. ಬೆಳೆ ಸಿದ್ಧಕ್ಕೆ ಪ್ರೊಕ್ಯೂರ್‌ಮೆಂಟ್, ರೇಶನ್ ಪದ್ಧತಿಗಳನ್ನು ತಂದು ಹಾಳುಮಾಡುವ ಕೆಲಸ ಹೆಚ್ಚಾಗಿ ನಡೆಯುತ್ತಿದೆಯೇ ವಿನಹ ಉತ್ಪಾದನೆಯಲ್ಲ!

ಒಂದು ಉದಾಹರಣೆ.

ಈ ವಿಚಾರದಲ್ಲಿ ಚೈನಾದಿಂದ ಭಾರತವು ಒಂದು ಪಾಠ ಕಲಿಯಬಹುದಾಗಿದೆ. ಚೈನಾದಲ್ಲಿ ಅಂತರ್ಯುದ್ಧವು ನಡೆದು ಕಮ್ಯೂನಿಸ್ಟ್ ದಳವು ಜಯಶೀಲವಾದಾಗ ಚೈನಾದ ಆಹಾರ ಸ್ಥಿತಿಯು ಬಹು ಚಿಂತಾಜನಕವಾಗಿತ್ತು. ಅಲ್ಲಿನ ಕಮ್ಯೂನಿಸ್ಟರು ವ್ಯವಸಾಯದಲ್ಲಿ ಯೂರೋಪಿನ ಪಾಶ್ಚಾತ್ಯ ತತ್ವವನ್ನಾಗಲೀ ಅನುಸರಿಸದೆ ತಮ್ಮ ಸ್ವಂತ ಮಾರ್ಗವನ್ನವಲಂಬಿಸಿದರು. ಈ ಯೋಜನೆಯ ಮುಖ್ಯ ಗುರಿಯೆಂದರೆ ರೈತನ ತೃಪ್ತಿ. ತೃಪ್ತ ರೈತನೇ ಹೆಚ್ಚು ಬೆಳೆಯನ್ನು ಬೆಳೆಸಬಲ್ಲನಲ್ಲದೆ ಅತೃಪ್ತನು ಎಂದೂ ಮನಮುಟ್ಟಿ ಪ್ರಯತ್ನಿಸಲಾರನು. ಆದ್ದರಿಂದ ಅವರು ಶೇಕಡ ೬೦ ರಷ್ಟು ಭೂಕಂದಾಯವನ್ನು ಇಳಿಸಿದರು. ಇದರಿಂದ ರೈತನ ಕೈಯಲ್ಲಿ ಹೆಚ್ಚು ಉಳಿದು ಜೀವನವು ಹಗುರವಾಯಿತು. ಇದೇ ಸಮಯದಲ್ಲಿ ರೈತರ ಗ್ರಾಮ ಕೂಟಗಳನ್ನು ಏರ್ಪಡಿಸಿ ಶಾಸ್ತ್ರೀಯ ರೀತಿಯ ವ್ಯವಸಾಯ, ನೀರಾವರಿಯ ಏರ್ಪಾಡುಗಳ ವ್ಯವಸ್ಥೆ ಮಾಡಲಾಯಿತು. ಉಳಿದ ಧಾನ್ಯವನ್ನು ರೈತರಿಂದ ರೈತರ ಸಮಿತಿಗಳೇ ಪಡೆದು ಕೊಡುವ ಏರ್ಪಾಡಾಯಿತು. ಪೂರ್ಣ ಗ್ರಾಮೀಣ ರೈತರ ಜವಾಬ್ದಾರಿಯುಳ್ಳ ನಡೆಯುವ ಈ ಯೋಜನೆಯಲ್ಲಿ ರೈತರು ಹೃತ್ಪೂರ್ವಕ ಸಹಕರಿಸಿದರು. ಅವರು ಮಾರಾಟ ಮಾಡಿದ ಧಾನ್ಯಗಳಿಗೆ ನ್ಯಾಯಬದ್ಧ ಬೆಲೆ ದೊರೆಯುತ್ತಿತ್ತು. ಉತ್ತಮ ಬೆಲೆ ದೊರೆಯುತ್ತಿದ್ದ ಕಾರಣ ಯಾರೂ ಕಪ್ಪುಸಂತೆಗೆ ಆಸೆಪಡುತ್ತಿರಲಿಲ್ಲ. ಈ ರೀತಿ ಚೈನಾವು ತನ್ನ ಆಹಾರ ಸಮಸ್ಯೆಯನ್ನು ಕೆಲವೇ ಸಮಯದಲ್ಲಿ ಬಗೆಹರಿಸಿಕೊಂಡಿತು. ಆ ರೀತಿಯ ಒಂದು ಯೋಜನೆ ಆಗಬೇಕು. ಇಲ್ಲದಿದ್ದರೆ ಭರತಖಂಡವು ಕುಂಟುತ್ತಾ ನಡೆಯಬೇಕಾಗುವುದು.

ವ್ಯಕ್ತಿಗೌರವ.

ಇದೆಲ್ಲ ಸಾಧ್ಯವಾಗಲು ಆಳುವವರಲ್ಲೂ, ಆಳಿಸಿಕೊಳ್ಳುವವರಲ್ಲೂ ಘನತೆಬೇಕು. ಚೈನಾದ ಕಮ್ಯೂನಿಸ್ಟ್ ಮುಂದಾಳು ಮಾವೋ-ತ್ಸೆ-ಟೂಂಗರ ನೇತೃತ್ವದಲ್ಲಿ ಕಮ್ಯೂನಿಸ್ಟ್ ಸೇನೆಯು ತಾವು ಜಯಿಸಿದ ಚೀನಾದಲ್ಲಿ ಯಾವ ರೀತಿ ವರ್ತಿಸಿತೆಂಬುದನ್ನು ಎಲ್ಲರೂ ಗಮನಿಸತಕ್ಕದ್ದು. ಅವರ ಸೈನ್ಯಗಳು ಒಂದೇ ಹೀನಕೃತ್ಯವನ್ನು ಮಾಡಲಿಲ್ಲ. ಒಂದು ಕಾಳು ಧಾನ್ಯವನ್ನು ತಮಗಾಗಿ ವಶಪಡಿಸಿಕೊಳ್ಳಲಿಲ್ಲ. ಒಂದು ಕೋಳಿಮರಿಯನ್ನು ತಮಗಾಗಿ ಪಡೆಯಲಿಲ್ಲ. ಒಬ್ಬಳೇ ಒಬ್ಬ ಹೆಂಗಸಿನ ಮಾನಭಂಗಮಾಡಲಿಲ್ಲ. ಈ ರೀತಿಯಲ್ಲಿ ಆದರ್ಶವನ್ನು ಮುಂದಿಟ್ಟ ಕಾರಣ ಇಡೀ ಚೀನೀ ಜನತೆ ಅವರನ್ನು ಸ್ವಾಗತಿಸಿತು. ಅವರಿಗೆ ಆಹಾರವನ್ನು ಕೇಳದೇ ಕೊಟ್ಟಿತು. ಅದೇ ರೀತಿ ಕಾಂಗ್ರೆಸು ವರ್ತಿಸಬೇಕಿತ್ತು. ಅಧಿಕಾರ ಸೂತ್ರವನ್ನು ಹಿಡಿದವರು ತ್ಯಾಗದೃಷ್ಟಿಯಿಂದ ದುಡಿಯಬೇಕಿತ್ತು.

ಬದಲು ನಾವು ಕಂಡದ್ದೇನು? ಆತ್ಮಶ್ಲಾಘೆ, ಸ್ವಾರ್ಥ ಭಾವನೆ, ಸಂಕೀರ್ಣ ದೃಷ್ಟಿಯು ಆಡಳಿತಗಾರರು. ಸರಳ ಜೀವನ, ಸರಳ ಉಡುಪಿನವರೆಂದು ತೋರಿಸಿ ಕೊಂಡರೂ ರೋಲ್ಸ್‌ರಾಯ್ಸ್ ಕಾರುಗಳಲ್ಲಿ, ಆಡಂಭರದ ಬಂಗ್ಲೆಗಳಲ್ಲಿ ವಾಸಿಸತೊಡಗಿದರು. ಹಿಂದಿನ ತ್ಯಾಗ, ಜನಸೇವೆಯ ತತ್ವಗಳನ್ನು ಬಲಿಕೊಟ್ಟು 'ಸೂರ್ಯ ಬೆಳಗುತ್ತಿರಲು ಸಾಧ್ಯವಾದಷ್ಟು ಸಂಗ್ರಹಿಸಿಕೋ' ಎಂಬ ತತ್ವವನ್ನು ಅವಲಂಭಿಸಿ ಎಲ್ಲವೂ ಹದಗೆಟ್ಟಿತು.

ಇವರ ಪ್ರಭಾವವೋ ಏನೋ ದೇಶದ ಜನತೆಯ ನೀತಿಯು ಮಟ್ಟವೂ ಕೆಳಗಿಳಿಯಿತು. ಇಂದು ನಾವೆಲ್ಲರೂ ಅಧಿಕಾರಲು ಸ್ವಾರ್ಥಿಗಳು. ಯಾವುದೇ ಮಾರ್ಗದಿಂದ ಹಣ ಸಂಪಾದಿಸುವುದೇ ಪ್ರತಿಯೊಬ್ಬನ ಗುರಿ. ಕಷ್ಟಕ್ಕೆ ನಾವು ತಯಾರಿಲ್ಲ. ದುಡಿಯದೆ ಜೀವಿಸಬೇಕೆಂಬ ಆಸೆಯೇ ಹೆಚ್ಚು. ನಮ್ಮ ಇಂದಿನ ಪ್ರಜಾವರ್ಗವನ್ನು ಮೂರು ಭಾಗವಾಗಿ ವಿಂಗಡಿಸಬಹುದು. ಒಂದನೇ ಭಾಗ ಅತೀ ಉತ್ತಮರು. ಸ್ವಾರ್ಥದ ಗಡಿಯನ್ನು ದಾಟಿದವರಿವರು. ಅವರ ಜೀವನವು ಸೇವೆಗಾಗಿ, ಸಿನ್ನೆಯೂಗಿ ಗತಿಸಿದ ಥಕ್ಕರ್ ಬಾಪಾ, ನೆಹರೂ, ವಿನೋಬಾ ಮೊದಲಾದವರು ಈ ಗುಂಪಿಗೆ ಸೇರಿದವರು. ಇವರ ಸಂಖ್ಯೆ ಬಹು ಕಡಿಮೆ. ಎರಡನೆಯ ಭಾಗ ಅತೀ ನಿಕೃಷ್ಟರು. ದೇಶದ್ರೋಹಿಗಳವರು. ಇನ್ನೊಬ್ಬರ ಹಿತವನ್ನು ಲೆಕ್ಕಿಸದವರು, ಲಾಭ ಬಡಕರು, ಲಂಚಕೋರರು, ಕಪ್ಪು ಸಂತೆಯವರು, ಅಧಿಕಾರದ ದುರುಪಯೋಗ ಮಾಡುವವರು, ಸಾರ್ವಜನಿಕ ಸೇವೆಯಿಂದ ಸ್ವಾರ್ಥ ಸಾಧಿಸುವವರು ಇವರೆಲ್ಲ ಈ ಗುಂಪಿಗೆ ಸೇರಿದವರು. ಇವರ ಸಂಖ್ಯೆಯು ಸಾಕಷ್ಟು ಹೆಚ್ಚಿದ್ದರೂ ಬಹುಮಾನ ಇವರಿಗಿಲ್ಲ. ಇನ್ನುಳಿದ ಪಕ್ಷವೆಂದರೆ ಸಾಮಾನ್ಯ ಜನತೆ. ಅವರು ನ್ಯಾಯಕ್ಕೆ ವಿರುದ್ಧ ದೊಡ್ಡ ತಪ್ಪು ಮಾಡುವವರಲ್ಲ. ಅವರವರ ಚಿಕ್ಕ ಕ್ಷೇತ್ರಗಳಿಗೆ ಒಳಪಟ್ಟ ಮೋಸ, ಅಹಿತ ಕೆಲಸಗಳನ್ನು ಮಾಡುವವರು. ಲಾಭಬಡಕರು, ಕಪ್ಪು ಸಂತೆಯ ವರ್ಗದವರು ಸಮಾಜಕ್ಕೆ ಕೊಲೆ ಪಾತಕಿಗಳಂತೆ ಇಲ್ಲವೇ ಭಯಂಕರ ಸಿಡುಬಿನ ರೋಗದಂತಾದರೆ ಈ ಮಧ್ಯಮ ವರ್ಗದವರು ಕ್ಷಯರೋಗದಂತೆ! ಹೊರಗೆ ರೋಗದ ಯಾವ ಸಂಕೇತವೂ ಕಾಣದು. ಒಳಗಿಂದಲೇ ಕ್ರಮಶಃ ಶಕ್ತಿಯು ಹ್ರಾಸವಾಗಿ ಅವನತಿಯು ಬರುವುದು. ಆದ್ದರಿಂದ ಸಾಮಾನ್ಯ ಪ್ರಜೆಗಳು ತಮ್ಮ ಜವಾಬ್ದಾರಿಯನ್ನರಿಯದಿದ್ದರೆ ಅವರ ತಪ್ಪುಗಳಿಂದಾಗಿಯೇ ಇಂದಲ್ಲದಿದ್ದರೆ ನಾಳೆ ರಾಷ್ಟ್ರದ ಅವನತಿಯಾಗುವುದು. ಆದ್ದರಿಂದ ಈ ವರ್ಗವು ಎಚ್ಚರಗೊಳ್ಳಬೇಕು. ರಾಷ್ಟ್ರವನ್ನು ರಚಿಸುವ, ಯೋಗ್ಯರನ್ನು ಮೇಲೇರಿಸುವ ಸರ್ವಶಕ್ತಿ ಇವರಲ್ಲಿದೆ. ಈ ಬಹು ಜನರ ನಾಡಿಯಲ್ಲಿ ನೀತಿಯ ಶುದ್ಧ ರಕ್ತವಿರಲಿ. ಅವರ ಜೀವನವೆಂಬ ಹೃದಯಸ್ಪಂದನವು ಆರೋಗ್ಯಕರವಿರಲಿ. ಹಾಗಿದ್ದರೆ ಇಂದಲ್ಲ ನಾಳೆಯಾದರೂ ರಾಷ್ಟ್ರವು ಮೇಲೇಳಬಹುದು.

ಆದ್ದರಿಂದ ತಮ್ಮ ನೀತಿ ನಡತೆಯನ್ನು ಜನತೆಯು ಸುಧಾರಿಸಿಕೊಂಡರೆ ಅಧಿಕಾರ ನಡೆಸುವವರು ತಪ್ಪುದಾರಿಯಲ್ಲಿ ನಡೆಯುವುದು ಸಾಧ್ಯವಾಗದು. ಸ್ವಾತಂತ್ರ್ಯ ಬಂದ ಈ ನಾಲ್ಕು ವರ್ಷಗಳ ಕಟು ಅನುಭವದಿಂದಾದರೂ ನಾವು ಚೇತನಗೊಂಡು ಕಾರ್ಯ ಪ್ರವರ್ತರಾಗದಿದ್ದರೆ ನಾವು ನಿಜವಾಗಿಯೂ ಸ್ವಾತಂತ್ರ್ಯಕ್ಕೆ ಅರ್ಹರೇ ಎಂಬ ಪ್ರಶ್ನೆಯನ್ನು ಕೇಳಬೇಕಾಗುವುದು.

Reg. No. M. 1880.
'KODAGU' MERCARA, (Coorg).

ಕೊಡಗು

ಸಂಪಾದಕರು—ಬಿ. ಐ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. 5-0-0.

| ಸಂಪುಟ ೨೮ | ತಾರೀಖು ೨-೨-೧೯೫೧ನೇ ಶುಕ್ರವಾರ | ಸಂಚಿಕೆ ೩೩ |

ಅಂತರಾಷ್ಟ್ರೀಯ ರಂಗದಲ್ಲಿ

ಭಾರತದ ನಿಲುಮೆ.

ಭಾರತ ಹಾಗೂ ಸಾಮ್ಯವಾದಿ ತಂಡ.

ಭಾರತದ ವಿದೇಶಾಂಗ ನೀತಿಯ ಪರಮೋದ್ದೇಶವು ಪ್ರಪಂಚದ ರಾಷ್ಟ್ರಗಳೊಡನೆ ಮೈತ್ರಿತ್ವದಲ್ಲಿರುವುದಾಗಿರುತ್ತದೆ. ಹೀಗೆ ಭಾರತವೂ ಇತರ ರಾಷ್ಟ್ರಗಳೂ ಪರಸ್ಪರ ಹೊಂದಿಕೆಯಲ್ಲಿ ಈ ದಿನ ಇಲ್ಲದಿರುವ ಪಕ್ಷ ಇದಕ್ಕೆ ಜಗತ್ತಿನ ಒಡಕು ಕಾರಣವೆನ್ನಬೇಕು. 'ನಿನಗೆ ವಿರೋಧಿಯಲ್ಲದವನು ನಿನ್ನ ಮಿತ್ರನು' ಎಂಬ ಸತ್ಯವೇದದ ವಾಕ್ಯವು ಈ ವಿಪರೀತ ಪ್ರಪಂಚದಲ್ಲಿ 'ನಿನಗೆ ಮಿತ್ರನಲ್ಲದವನು ನಿನ್ನ ವಿರೋಧಿ' ಎಂದು ಪಲ್ಲಟವಾಗಿರುವುದು. ಕಳೆದ ಆಕ್ಟೋಬರದಲ್ಲಿ ನಾವು ಹಿಂದೆ ಮುಂದೆ ವಿವೇಚನೆ ಮಾಡುತ್ತಿದ್ದ ಕಾಲಕ್ಕೆ ಅಮೇರಿಕದಲ್ಲಿ ನಮಗೆ 'ಏಶಿಯದ ಹ್ಯಾಮ್ಲೆಟ್' (ಚಂಚಲಪ್ರವೃತ್ತಿಯ ಪಾತ್ರ) ಎಂಬ ಬಿರುದು ದಕ್ಕಿತು. ನಾವು ಕೈಗೊಂಡ ತಟಸ್ಥ ಮಧ್ಯ ಮಾರ್ಗವನ್ನು ಸಾಮ್ಯವಾದಿಗಳ ತಂಡವು ಹಳಿಯುವುದನ್ನು ಬೇರೆ ಯಾರೂ ಖಂಡಿಸಲಾರರೆನಲು, ಟಿಬೆಟ್ ಪ್ರಕರಣದಲ್ಲಿ ಪೆಕಿನ್ ಸರಕಾರವು 'ಭಾರತವು ಪರಕೀಯ ಉತ್ತೇಜನಗೊಳಗಾಗಿ ವರ್ತಿಸುತ್ತಿದೆ' ಎಂದು ಆರೋಪಿಸಿದುದು ಸಾಕ್ಷಿಯಾಗಿದೆ.

ಸತ್ಯ ಸಂಗತಿಗೆ ಬೆನ್ನು ಹಾಕುವುದು ಬೇಡ. ಕಮ್ಯೂನಿಸ್ಟ ರಶಿಯ, ಚೀನ ಉತ್ತರ ಕೊರಿಯಗಳಲ್ಲಿ ನಮ್ಮನ್ನು ಅಮೇರಿಕನಾಂಗ್ಲ ಪಕ್ಷೀಯರೆಂದು ಈಗಾಗಲೇ ಪರಿಗಣಿಸಲಾಗಿದೆ. ಹಾಗವರು ಭಾವಿಸಿದುದರಲ್ಲಿ ತಪ್ಪೂ ಇಲ್ಲ. (೧) ಭಾರತ ಒಂದು ಪ್ರಜಾತಂತ್ರಾತ್ಮಕ ರಾಷ್ಟ್ರ, ನಮ್ಮ ಘಟನೆ ಬ್ರಿಟಿಷ್ ಪಾರ್ಲಿಮೆಂಟ್ ಪದ್ಧತಿಯಿಂದಲೇ ಪ್ರೇರಿತವಾದುದು. (೨) ನಾವು ಕಾಮನ್‌ವೆಲ್ತಿನ ಸದಸ್ಯರು. (೩) ನಮ್ಮ ವ್ಯಾಪಾರ ವಹಿವಾಟು ಪ್ರಜಾತಂತ್ರದ ರಾಷ್ಟ್ರಗಳೊಡನೆಯೇ ಹೆಚ್ಚಾಗಿ ಜರಗುತ್ತದೆ (೪) ವಿಶ್ವಸಂಘದಲ್ಲಿ ಸೋವಿಯೆಟ್ ರಾಷ್ಟ್ರದ ಜತೆಗೆ ನಾವು ಮತ ಪ್ರದರ್ಶನ ಮಾಡಿದುದಕ್ಕಿಂತ, ಅದಕ್ಕೆ ವಿರುದ್ಧ ಕೈ ಎತ್ತಿದುದೇ ಹೆಚ್ಚು ಸಲ. (೫) ನಮ್ಮ ಪತ್ರಿಕೋದ್ಯಮವು ಎಡಪಕ್ಷದ ಕಡೆಗೆ ಒಲವು ತೋರಿಸುವುದರಿಂದ, ಕಮ್ಯೂನಿಸಮ್ಮಿನ ಏಳ್ಗೆಗೆ ಬಹು ದ್ವೇಷಿಯಾಗಿದೆ.

ಕ್ರೆಮ್ಲಿನ್.

ಕ್ರೆಮ್ಲಿನ್ (ರಷ್ಯ) ನಮ್ಮನ್ನು ಹೇಗೆ ನೋಡುತ್ತಿದೆಯೋ? ಎಂದು ಇದುವರೆಗೂ ಚಿತ್ರಕ್ಕೆ ನಿಲುಕಿಲ್ಲ. ಶ್ರೀಮತಿ ವಿಜಯಲಕ್ಷ್ಮಿಯವರಿಗೆ ಸಿಗದಿದ್ದ ಸ್ಟಾಲಿನ ದರ್ಶನ ವೇದಾಂತಿ ರಾಧಾಕೃಷ್ಣನರಿಗೆ ದೊರೆತರೂ 'ಪ್ರಾವದಾ' ಪತ್ರಿಕೆಯ ಸರಣಿಯನ್ನು ನೋಡಿದಾಗ ನಮಗೆ ಭರವಸೆಯಾಗುವುದಿಲ್ಲ. ನಮ್ಮ ಜನ ಭಿನ್ನಾಭಿಪ್ರಾಯಕ್ಕೆ ರಶಿಯದಲ್ಲಿ ಹೇಗೆ ಮನ್ನಣೆ ಇಲ್ಲವೋ, ಅಂತೆಯೇ ನಮ್ಮ ಬೆನಗಲ್ ರಾಯರ ಶಾಂತಿದೌತ್ಯಕ್ಕೆ ಸಾಮ್ಯವಾದಿ ತಂಡದ ಬೆಂಬಲವಿಲ್ಲ. ಪ್ರಧಾನಿ ನೆಹರೂ ಸ್ಟಾಲಿನ್ ಪ್ರಭೃತಿಗೆ ಬರೆದ ಕಾಗದವು ವಿಫಲವಾಗದಿರಲಿ. ಕಾರಣವೇನೆಂದರೆ ಚೀನಕ್ಕೆ ಭದ್ರತಾ ಮಂಡಲದಲ್ಲಿ ಪ್ರಾತಿನಿಧ್ಯ ದೊರಕಿಸುವ ಕೃಷಿ ಸೋವಿಯೆಟ್ ರಾಷ್ಟ್ರಕ್ಕೆ ಅತ್ಯಾವಶ್ಯಕವಾಗಿತ್ತು. ಅದಕ್ಕೆ ನೆರವಾಗುವೆನೆಂದು ಮುಂದೆ ಬರುವವರಿಗೆ ಪ್ರೋತ್ಸಾಹ ಕೊಡುವುದು ಸ್ವಾರ್ಥಕ್ಕೆ ಉಪಯುಕ್ತವಾದುದಷ್ಟೆ. ಡಾ. ರಾಧಾಕೃಷ್ಣನ್ ಅವರು ಮಾಸ್ಕೋ ರಾಯಭಾರಿ ಕಚೇರಿಯ ಒಳಗಿರುವುದಕ್ಕಿಂತ ಬಹು ದೀರ್ಘಕಾಲ ಹೊರಗೆ ರಜೆಯಲ್ಲಿ ಅಡ್ಡಾಡುತ್ತಿರುವುದನ್ನು ನೋಡಿದರೆ ನಮ್ಮ ಮಾಸ್ಕೋ ಖಚೇರಿ ಅಪ್ರಧಾನವೆಂದು ನಾವು ಗಣಿಸಿದಂತಿದೆ

ಸೂರ್ಯೋದಯದ ನಾಡಿನಲ್ಲಿ.

ಚೀನದ ನವ ಜನತಾ ರಾಜ್ಯದೊಡನೆ ನಮ್ಮ ಬಳಕೆ ವಿಶಾಲವಾಗಿ ಹರಡಿದೆಯಾದರೂ ಅಲ್ಲಿಯೂ ನಮಗೆ ಸ್ನೇಹವಿಲ್ಲ. ನಾವೆಷ್ಟು ಆಸಕ್ತಿ ಅನುರಕ್ತಿಗಳಿಂದ ಚೀನವನ್ನು ತಬ್ಬಿದರೂ, ಬಾಲಹಿಡಿದರೂ ನಮ್ಮನ್ನವರು ನಿರಾದರಿಸುವ ತಾತ್ಸಾರ ಬುದ್ಧಿಯು ಟಿಬೆಟ ಪ್ರಕರಣದಲ್ಲಿ ಕಣ್ಣು ಕುಕ್ಕುವಂತೆ ಪ್ರಕಟವಾಯಿತು. ಸರದಾರ ಪಣಿಕ್ಕರು ಅಪ್ರತಿಮ ರಾಯಭಾರಿ ಎಂಬ ಪ್ರತೀತಿ ಇತ್ತೆಂಬುದನ್ನು ನಾವು ನಂಬಿದರೂ ಈಗವರು ಪೆಕಿನ್ ಸರಕಾರದ ಒಲುಮೆಗೆ ಅಪಾತ್ರನಾಗಿರುತ್ತಾರೆ. ಬೆನಗಲ್-ವೂ ಸಂವಾದದಲ್ಲಿ ಸಾಮ್ಯವಾದಿ ವೂ-ಅವರ ಚಂಡಿತನವನ್ನು ಬಿಡಿಸಲು ಬೆನಗಲರಂಥ ಚಾಣಾಕ್ಷರಿಗೂ ಸಾಧ್ಯವಾಗಲಿಲ್ಲ. ಚೀನ-ಭಾರತ ಜನಾಂಗಗಳು ಮಿತ್ರ ರಾಷ್ಟ್ರಗಳೆಂದೂ ಅಕ್ಕ-ತಂಗಿಯರೆಂದು ಇಷ್ಟರವರೆಗೆ ನಾವು ತಿಳಿಯುತ್ತಿದ್ದೆವು. ನಾವೇನೂ ಮಾಡಿದರೂ ನಮ್ಮನ್ನು ಸಾಮ್ಯವಾದಿ ತಂಡವು ನಂಬಿ, ಒಪ್ಪಿಕೊಳ್ಳುವಂತೆ ತೋರುವುದಿಲ್ಲ

ಯುದ್ಧ ಬಂದಾಗ.

ಶಾಂತಿ ಕಾಲದಲ್ಲಿ ನಮ್ಮ ಮಿತ್ರತ್ವವನ್ನುಳಿಸಿಕೊಳ್ಳುವುದು ಸುಲಭ. ಚೀನದೊಡನೆ ನಮ್ಮ ವ್ಯಾಪಾರ ಅಷ್ಟು ಕಮ್ಮೀ ಇದೆ. ಆದರೆ ಯುದ್ಧ ಬಂದರೆ ಸ್ನೇಹ ಗಹನತರವಾಗುವುದು. ಈಗಿನ ಕೊರಿಯ ಸಮರದಲ್ಲೇ ಆದರೂ ಯುನೈಟೆಡ್ ನೇಶನ್ಸ್ ಮುಖಾಂತರವಾಗಿ ನಾವು ಚೀನವನ್ನು ಪ್ರತಿಭಟಿಸುತ್ತಿರುವುದರಿಂದ ನಾವು ಅವರ ಶತ್ರುಗಳು. ಚೀನವು ಇಂಡೋಚೀನದಲ್ಲಿ ತನ್ನ ಪ್ರಭಾವ ವ್ಯಾಪಿಸಿದಂತೆ ನಮ್ಮ ಸಂಬಂಧವು ಮತ್ತಷ್ಟು ಕೆಡುವುದು. ಜಾಗತಿಕ ಸಮರವು ಆರಂಭವಾದಲ್ಲಿ ನಾವು ತಟಸ್ಥರಾಗಿ ನಿಂತರೂ ಸಾಮ್ಯವಾದಿ ಬಣದೊಡನೆ ನಾವು ಸಂಪರ್ಕ ಕಡಿಮೆ ಮಾಡುವ ಪ್ರಸಂಗ ಬಂದೇ ಬರುವುದು. ಏಕೆಂದರೆ ಚೀನದ ಆರ್ಥಿಕ ದಿಗ್ಬಂಧನ ನಡೆಯುತ್ತಿರುವಾಗ ರಾಜಕೀಯ ಸಂಬಂಧವನ್ನು, ಆರ್ಥಿಕ ಸಂಪರ್ಕವನ್ನು ಪ್ರಜಾತಂತ್ರದ ರಾಷ್ಟ್ರಗಳೊಡನೆಯೇ ಇಟ್ಟುಕೊಂಡಿರುವ ಭಾರತದ ಅವಸ್ಥೆಯು ವಿಲಕ್ಷಣ ರೂಪಕ್ಕೆ ಬಂದು ನಿಲ್ಲುವುದು. ಸಾಮ್ಯವಾದಿ ಸೇನೆಗಳ ಮುಟ್ಟಿಗೆಯಿಂದ ತಟಸ್ಥ ಭಾರತವು ತಪ್ಪಿಸಿಕೊಳ್ಳುತ್ತದೆಯೆ? ಕಾಣೆವು. ನಮ್ಮ ಉತ್ತರ ಗಡಿಯಲ್ಲೇ ಸಾಮ್ಯವಾದಿಗಳು ಠಾಣ್ಯ ಹೂಡಿ ನಮ್ಮ ಪರಿಸ್ಥಿತಿ ಗಂಭೀರವಾಗಿದೆ ಎಂದರೂ ಸಾಲದು. ಇದಕ್ಕೇನೆ ಯುದ್ಧವು ವ್ಯಾಪಿಸದಂತೆ ನಾವು ಭಗೀರಥ ಪ್ರಯತ್ನದಲ್ಲಿರುವುದು.

ಸಾಮ್ಯವಾದಿ ತಂಡದೊಡನೆ ನಮ್ಮ ಸಂಬಂಧ ಹೇಗಿರಬೇಕೆಂದು ನಿರ್ಣಯಿಸುವ ಹೊಣೆ ಸಂಪೂರ್ಣವಾಗಿ ನಮ್ಮ ಮೇಲಿಲ್ಲವೆಂಬುದು ಇಲ್ಲಿ ಮುಖ್ಯವಾಯಿತು. ಮಹಾಸಮರ ಬೀಜ ಎಸೆಯುವವರು ನಾವಾದರೂ ಅದನ್ನವಲಂಬಿಸುವ ಸ್ನೇಹಿತರು ಬೇರೆ ಕಡೆ ಇದ್ದಾರೆ. ಯುದ್ಧದಲ್ಲಿ ನಮ್ಮ ಭಾಗ್ಯವೂ ನಿರ್ಣಯಿಸಲ್ಪಡಲಿರುವುದು. ಈ ಪಂಗಡಗಳ ಬಲಾಬಲವನ್ನು ತೂಗಿ ನೋಡುವುದವಶ್ಯವಾಗಿದೆ

ಬಲಾಬಲದ ಸಮತೋಲ

ಚೀನವು ಸಾಮ್ಯವಾದಿಗಳ ತಂಡಕ್ಕೆ ಸೇರ್ಪಡೆಯಾಗುವ ಮುನ್ನ ಪ್ರಪಂಚದ ರಾಜಕೀಯ ದತ್ತಾಂಶಗಳು ಮತ್ತು ಶಕ್ತಿಗಳು ಸಮಾನಾಂತರವಾಗಿದ್ದರೂ, ಚೀನವು ಬಣ್ಣ ಬದಲಾಯಿಸಿದುದರಿಂದ ಇತ್ತಂಡಗಳ ಬಲಾಬಲಗಳ ಮೇಲೆ ಭಾರೀ ಪರಿಣಾಮವಾಗಿದೆ. ಆಗ್ನೇಯ ಏಶಿಯದಲ್ಲಿ ಪ್ರತ್ಯಕ್ಷವಾಗಿಯೂ, ಪರೋಕ್ಷವಾಗಿಯೂ ತನ್ನ ಪ್ರಭಾವವನ್ನು ಹರಡುವುದು ಚೀನ ರಶಿಯಗಳಿಗೆ ಬೇಕಾದ ಸಮಾನ ಧೋರಣೆಯಾಗಿದೆ. ರಶಿಯವು ಚೀನಕ್ಕೆ ಮುಂದಿನ ಪಂಚವರ್ಷಗಳಲ್ಲಿ ಸಾಲಕ್ಕಿಂತಲೂ ಸೈನ್ಯ ಸಾಮಗ್ರಿಯ ಸಹಾಯ ಕೊಡುವುದು ಅಧಿಕ ಮಹತ್ವದಾಗಿದೆ. ಹೀಗೆ ಚೀನ ರಶಿಯಗಳ ಸೈನ್ಯ ಮತ್ತು ಆರ್ಥಿಕ ಬಾಂಧವ್ಯದಿಂದಾಗಿ ಎರಡರ ಧೋರಣೆಯೂ ಏಕಮುಖವಾಗಿರುವುದರಿಂದ ನಾವು ಏಶಿಯದ ನಾಡಾದ ಚೀನಕ್ಕೆ ಪ್ರತ್ಯೇಕ ನೀತಿಯನ್ನವಲಂಬಿಸುವ ಸ್ವಾತಂತ್ರ್ಯವಿದೆಯೆಂದು ನಂಬುವುದು ಮೂರ್ಖತನವಾದೀತು. ಮಾಸ್ಕೋ, ಪೆಕಿನ್ ಏಕಮೇವಾದ್ವಿತೀಯವಾಗಿವೆ. ಈ ರಾಷ್ಟ್ರಗಳ ಬಲಾಬಲ ಹೀಗಿದೆ.

ಸೈನ್ಯದ ಬಲಾಬಲ

ಸಾಮ್ಯವಾದಿ ತಂಡ

ಸೋವಿಯಟ್	೨೫೦೦೦೦೦
ಪೂರ್ವ ಯುರೋಪ	೧೩೬೦೦೦೦
ಚೀನ	೨೦೦೦೦೦೦
ಕೊರಿಯಾ	೪೦೦೦೦೦
ಫಿಲಿಪ್ಪೈನ	೧೨೦೦೦
ಇಂಡೋಚೀನ	೧೫೦೦೦೦
ಮಲಯ	೬೦೦೦
	೬,೪೩೮,೦೦೦

ಪ್ರಜಾತಂತ್ರದ ತಂಡ.

ಪಶ್ಚಿಮ ಯುರೋಪು	೧,೨೫೦,೦೦೦
ಸಂಯುಕ್ತ ರಾಜ್ಯ	೫೦೦,೦೦೦
ಕೆನಡ	೨೦,೦೦೦
ಮಧ್ಯ ಪ್ರಾಚ್ಯ	೪೭೫,೦೦೦
ಆಸ್ಟ್ರೇಲಿಯ	೨೦,೦೦೦
ಕೊರಿಯ	೨೮೦,೦೦೦
ಇಂಡೋ ಚೀನ	೧೯೦,೦೦೦
ಫಾರ್ಮೋಸಾ	೪೦೦,೦೦೦
ಮಲಯಾ	೧೮,೦೦೦
ಫಿಲಿಪ್ಪೈನ	೩೭,೦೦೦
	೩,೨೨೫,೦೦೦

ನೌಕಾದಳ

ಸಾಮ್ಯವಾದಿ ತಂಡ	೫೦೦,೦೦೦
ಪ್ರಜಾತಂತ್ರದ ತಂಡ	೬,೦೦೦,೦೦೦

ವಿಮಾನದಳ

ಸಾಮ್ಯವಾದಿ ತಂಡ ೨೭,೦೦೦ ವಿಮಾನಗಳು.

ಪ್ರಜಾತಂತ್ರದ ತಂಡ ೩೮,೦೦೦ ವಿಮಾನಗಳು.

ಆರ್ಥಿಕಬಲ

ಅಮೇರಿಕದ ಸಂಯುಕ್ತ ರಾಜ್ಯಗಳ ಆರ್ಥಿಕ ಸತ್ವ ಒಂದಲ್ಲವಾಗಿದ್ದರೆ ಇಷ್ಟು ಹೊತ್ತಿಗಾಗಲೇ ಸಾಮ್ಯವಾದದ ಘೋಷ ಪ್ರಪಂಚದಲ್ಲಿ ಸರ್ವತ್ರ ಮೊಳಗುತ್ತಿತ್ತು. ಸಂಯುಕ್ತ ರಾಜ್ಯದ ಅರ್ಧದಷ್ಟು ಔದ್ಯೋಗಿಕ ಬಲವೂ, ಧಾರಣಾಶಕ್ತಿಯೂ ಸಾಮ್ಯವಾದಿ ತಂಡಕ್ಕಿಲ್ಲ. ಟ್ರೂಮನ್ ಅಭಿಪ್ರಾಯದಂತೆ ಒಂದು ವರ್ಷದಲ್ಲಿ ಅಮೇರಿಕದ ಉತ್ಪಾದನೆಯನ್ನು ೨೫% ರಷ್ಟು ಹೆಚ್ಚಿಸಬಹುದು. ಇಷ್ಟು ವೇಗದ ಪ್ರಗತಿ ಸಾಮ್ಯವಾದಿಗಳಿಗಸಾಧ್ಯ.

ಅಮೇರಿಕದ ಆರ್ಥಿಕ ಬಲ

೧. ಯಂತ್ರಗಳಿಗೆ ಹಾಕಿರುವ ದುಡ್ಡು ೪೭,೫೦೦ ಕೋಟಿ ರೂಪಾಯಿ.

೨ ವರ್ಷ ಒಂದಕ್ಕೆ ತಯಾರಾಗುವ ಉಕ್ಕು ೧೦ ಕೋಟಿ ಟನ್.

೩. ವಿದ್ಯುಚ್ಛಕ್ತಿ ೩,೦೦೦ ಕೋಟಿ ಕಿಲೋವಾಟ್ ಗಂಟೆ.

೪ ಕೆಲಸಗಾರರು ೬ ಕೋಟಿ.

ಭಾರತದ ವಿದೇಶಾಂಗ ನೀತಿ

ಯುರೋಪಿನಲ್ಲಿ ಪಶ್ಚಿಮದ ಪ್ರಜಾತಂತ್ರದ ರಾಷ್ಟ್ರಗಳು ಉಳಿಯಬೇಕಾದರೆ ಅಮೇರಿಕದ ಶಸ್ತ್ರಾಸ್ತ್ರ ಬಲಬೇಕು. ಹಾಗೆಯೇ ಯುದ್ಧರಂಗವಾಗಿ ಪರಿಣಮಿಸಿ ಇಂಡೋಚೀನವನ್ನು ಸಾಮ್ಯವಾದಿಗಳು ಆಕ್ರಮಿಸಿದಲ್ಲಿ ಯುದ್ಧವು ನಮ್ಮ ಬಾಗಿಲಿಗೆಯೆ ಬಂತೆಂದು ತಿಳಿಯಬಹುದು. ಆಗ ಆದರ ಬೇಗೆಯನ್ನು ನಿವಾರಿಸಲು ಬರ್ಮಾ ಭಾರತ ಪಾಕಿಸ್ತಾನಗಳಿಗೆ ಅಮೇರಿಕದ ಸಹಾಯ 'ಇಲ್ಲ' ಎಂಬ ಉತ್ತರವಾದರೆ ನಮಗೆ ಸ್ವತಂತ್ರ ವಿದೇಶಾಂಗ ನೀತಿಯನ್ನು ಆಳುವ ಹಕ್ಕಿಲ್ಲ. ಈಗಿನ ಪರಿಸ್ಥಿತಿಯಲ್ಲಿ ಇಂಥ ಹಕ್ಕು ಸಂಯುಕ್ತ ರಾಜ್ಯ ಮತ್ತು ಸೋವಿಯಟ್ ಹೊರತು ಬೇರೆ ಯಾವ ರಾಷ್ಟ್ರ

॥ ಇಂದಿನ ವಿದ್ಯಾರ್ಥಿಗಳು ॥

[ಲೇಖಕ—ಕೃಷ್ಣ ಕುಮಾರ್.]

ರಾಕೇಶ್, ದಿನೇಶ್, ಉಮೇಶ್, ಅವಿನಾಶ್, ಸುಭಾಷ್, ಮಂಗೇಶ್ ಯಾವುದೇ ಹೆಸರಿನಿಂದ ಕರೆಯಲ್ಪಡಬಹುದು. ಈ ಲೇಖನಕ್ಕಾಗಿ ದಿನೇಶನನ್ನುವ. ದಿನೇಶನು ಸುಮಾರು ೨೦ ವರ್ಷದ ಸುಂದರ ಹಾಗೂ ಆರೋಗ್ಯ ಪೂರ್ಣ ಯುವಕನು. ಹೈಸ್ಕೂಲು ವ್ಯಾಸಂಗ ಮುಗಿಸಿ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದಾನೆ. ಇಂಟರ್ ಮೀಡಿಯೇಟ್ ಯಾ ಬಿ. ಎ. ಯಾವುದೂ ಆಗಬಹುದು. ಆತನ ತಂದೆಯವರು ಸರಕಾರಿ ಉದ್ಯೋಗದಲ್ಲಿದ್ದಾರೆ. ಸಂಬಳದ ಜೊತೆಗೆ ಬೇರೆ ಸಂಪಾದನೆಯೂ ಅವರಿಗೆ ಇದೆ. ದಿನೇಶನಿಗೆ ತಿಂಗಳಿಗೊಮ್ಮೆ ನೂರು ರೂಪಾಯಿಯ ಹಣದ ನೋಟೊಂದು ಬರುತ್ತದೆ. ದಿನೇಶನ ಬಟ್ಟೆಬರೆ ಮನೆಯಿಂದಲೇ ಬರುತ್ತದೆ. ಹಾಸ್ಟೆಲಿನಲ್ಲಿರುವ ಆತನಿಗೆ ಹದಿನೈದು ದಿನಗಳಿಗೊಮ್ಮೆ ತುಪ್ಪ, ಜೇನು, ಹಣ್ಣು ಹಂಪಲುಗಳ ಬುಟ್ಟಿ ಮನೆಯಿಂದ ಬರುತ್ತದೆ.

ದಿನೇಶನು ರಾಜಕೀಯ, ಅರ್ಥಶಾಸ್ತ್ರಗಳನ್ನು ಐಚ್ಛಿಕ ವಿಷಯವಾಗಿ ತೆಗೆದುಕೊಂಡಿದ್ದರೂ ಪತ್ರಿಕೆಗಳನ್ನು ಓದುವದಿಲ್ಲ. ಓದಿದರೂ ನೈಸಿಕರು ಓದಿದಂತೆ! ಪತ್ರಿಕೆಯಲ್ಲಿ ಸಿನೆಮಾ ತಾರೆಯರ ಚಿತ್ರಗಳೋ, ಸಿನೆಮಾ ಸುದ್ದಿಯೋ ಇದ್ದರೆ ಅದನ್ನು ಮಾತ್ರ. ಅದಕ್ಕೆ ಬಿಟ್ಟರೆ ಕ್ರಿಕೆಟ್ ಆಟಗಾರರ ವಿಚಾರ. ಆತನು ಯಾವದೇ ಪತ್ರಿಕೆಯ ಚಂದಾದಾರನಾಗಿರಲಿಲ್ಲ. ಹಾಸ್ಟೆಲಿಗೆ ಬರುತ್ತಿದ್ದ ಒಂದೆರಡು ಪತ್ರಿಕೆಗಳನ್ನು ಓದುತ್ತಿದ್ದ. ಹಾಸ್ಟೆಲಿಗೆ 'ಫಿಲ್ಮ್ ಇಂಡಿಯಾ' ಬರುತ್ತಿರಲಿಲ್ಲ. ಆದ್ದರಿಂದ ತಿಂಗಳಿಗೆ ಮೂರು ರೂಪಾಯಿ ಕೊಟ್ಟು ಅದನ್ನು ತರಿಸುತ್ತಿದ್ದ. ಸಿನೆಮಾ ಪ್ರಪಂಚದ ಆ ಪತ್ರಿಕೆ ಬರುವದು ಆತನಿಗೆ ಮನೆಯಿಂದ ತಿಂಡಿ ಪದಾರ್ಥ ಬರುವದಕ್ಕಿಂತಲೂ ಆನಂದದ ವಿಚಾರವಾಗಿತ್ತು.

ಪರೀಕ್ಷೆಯ ಸಮಯವೇ ಆದರೂ ದಿನೇಶನಿಗೆ ಬೆಳಗ್ಗೆ ಏಳುವದಾಗುತ್ತಿರಲಿಲ್ಲ. ಸಾಯಂಕಾಲ ಸಿಗರೇಟ್, ಟೀ ಗಳನ್ನಿಟ್ಟುಕೊಂಡು ಇಳಿ ರಾತ್ರಿಯ ವರೆಗೆ ನಿದ್ದೆಗೆಡಲು ಹಿಂಜರಿಯುತ್ತಿರಲಿಲ್ಲ. ಆಗಾಗ್ಗೆ ರಾತ್ರಿ ಎರಡನೇ ಸಿನೆಮಾ ಪ್ರದರ್ಶನಕ್ಕೆ ಹೋಗುವ ಅಭ್ಯಾಸವಿಟ್ಟುಕೊಂಡಿದ್ದ ಕಾರಣ ರಾತ್ರಿ ನಿದ್ರೆ ಕಡಿಮೆ. ಬದಲು ಬೆಳಗಾದನಂತರ ನಿದ್ರೆ. ಕಾಲೇಜಿನಲ್ಲಿ ಕೂತರೆ ತಲೆ ಭಾರವಾಗಿ ಕಣ್ಣು ಮುಚ್ಚುವದು.

ದಿನಚರಿ

ದಿನೇಶನ ದಿನವು ಸಾಧಾರಣ ಬೆಳಗ್ಗೆ ಏಳು ಗಂಟೆಗೆ ಪ್ರಾರಂಭವಾಗುತ್ತಿತ್ತು. ಎದ್ದೊಡನೆ ಮುಖವನ್ನು ಸಾಬೂನು ಹಾಕಿ ತೊಳೆಯುವದು. ತಲೆ ಕೂದಲಿಗೆ ಸುವಾಸನೆ ಎಣ್ಣೆ ಹಚ್ಚುವದು. ಮುಖಕ್ಕೆ ಸ್ನೋ ಪೌಡರು ಬಳಿಯುವದು. ಅಂದರೆ ಕಡಿಮೆ ಒಂದು ಗಂಟೆ ಇದಕ್ಕಾಗಿ! ಕ್ಷೌರ ಮಾಡುವದಕ್ಕೆ ಅರ್ಧಗಂಟೆ ಬೇಕು. ತಲೆಯ ಕೂದಲನ್ನು ಸರಿಪಡಿಸುವದು ಅವಶ್ಯ ತೋರಿದಾಗಲೆಲ್ಲ! ಅದಕ್ಕಾಗಿಯೇ ಜೇಬಿನಲ್ಲಿ 'ಕೋಂಬು' ಒಂದು ಇರತಿತ್ತು! ಈ ಕೆಲಸವೆಲ್ಲ ಸಿನೆಮಾದ ಯಾವದೋ ಹಾಡಿನ ಸೀಟಿಗನುಗುಣ ನಡೆಯುತ್ತಿತ್ತು. ಕನ್ನಡಿಯ ಮುಂದೆ ನಾಲ್ಕಾರು ಬಾರಿ ಹಿಂದು ಮುಂದು ನೋಡಿಕೊಂಡು ತೃಪ್ತಿಯ ನಿಟ್ಟುಸಿರೊಂದನ್ನು ಬಿಟ್ಟು ಸಿಗರೇಟೊಂದನ್ನು ಹಚ್ಚುವನು! ಅಷ್ಟರಲ್ಲಿ ಬೆಳಗಿನ ಕಾಫಿ ತಯಾರಾಗಿರುವದು. ಕಾಫಿಯನಂತರ ಪುಸ್ತಕಗಳ ಯೋಚನೆಯಾಗುವದು. ಪುಸ್ತಕದ ಹಾಳೆ ಮಗುಚುತ್ತಿರುವಷ್ಟರಲ್ಲಿ ಕಾಲೇಜಿಗೆ ಹೊತ್ತಾಗುವದು.

ಯಾವ ರೀತಿಯ ಬಟ್ಟೆ ಹಾಕಬೇಕೆಂಬುದೊಂದು ಪ್ರಶ್ನೆ ಬಹು ಸಮಯವನ್ನು ವ್ಯರ್ಥಗೊಳಿಸುವದು. ಬುಶ್ ಶರ್ಟ್ ಹಾಕುವದೆಂದರೆ ಗುಂಡಿ ಇರಲಾರದು. ಜೇರಿ ಪೇಂಟ್ ಹಾಕುವದೆಂದರೆ ಇಸ್ತ್ರಿ ಚೆನ್ನಾಗಿರಲಾರದು. ಕಡೆಗೆ ಜೇ[illegible] ಸಿಗಯಾದರೂ [illegible] ಧರಿಸಬೇಕಾಗುವದ! ಬಟ್ಟೆ ಧರಿಸಿ ಕನ್ನಡಿಯಲ್ಲಿ ನೋಡಿ, ಜೇಬಿನಲ್ಲಿ ಸಿಗರೆಟ್ ಡಬ್ಬಿ ಇಟ್ಟು ಕಾಲೇಜಿಗೆ ಹೋಗುವನು.

ತರಗತಿಯಲ್ಲಿ ವಿದ್ಯಾರ್ಥಿನಿಯರು ಇರುವದರಿಂದ ನಡಿಗೆ, ನುಡಿ ಎಲ್ಲದರಲ್ಲಿ ಒಂದು ಗಂಭೀರತೆ! ಆನಂದದಿಂದಲೇ ಸ್ವಲ್ಪ ಸರಳ ಸ್ವಭಾವದ, ಬಡ ವಿದ್ಯಾರ್ಥಿಗಳನ್ನು ಹಾಸ್ಯಮಾಡುವದು; ಲೆಕ್ಚರರುಗಳನ್ನು ಅಪಹಾಸ್ಯ ಮಾಡುವದು! ಹಾಜರಿ ಹಾಕುತ್ತಾರು ಜ್ಯೂಲಿಯೆಟ್‌ಗ[illegible] ಸೋಡಾ[illegible] ಬೆಂಚಿ ಬೋರ್‌ಗಳು ಸುಮ್ಮನಿರಲಾಗುವದೇ?

ಕನ್ನಡ ತರಗತಿಯಲ್ಲಿ ದಿನೇಶನು ಎಂದೂ ಕೂತವನಲ್ಲ. ಏಕೆಂದರೆ ಪಂಡಿತರು ಹಾಜರಿ ತೆಗೆಯುತ್ತಿರಲಿಲ್ಲ. ಅವರ ಪಾಠದ ಬಗ್ಗೆ ವಿದ್ಯಾರ್ಥಿಗಳಿಗೆ ಆಸಕ್ತಿ ಇರಲಿಲ್ಲ. ಪ್ರತಿ ದಿನ ಆ ಸಮಯದಲ್ಲಿ ದಿನೇಶನು ಹತ್ತಿರದ ಫಲಾಹಾರ ಭವನದಲ್ಲಿರುತ್ತಿದ್ದನು.

ತರಗತಿಯ ಎರಡು ಪೀರಿಯೆಡ್‌ಗಳ ಅಂತರದಲ್ಲಿ ದೊರೆಯುವ ವಿರಾಮ ಕಾಲದಲ್ಲಿ ದಿನೇಶನು, ರಾಕೇಶ, [illegible] ಜೀವರ ಜೊತೆಯಲ್ಲಿ ವಿದ್ಯಾರ್ಥಿನಿಯರ ವಿರಾಮ ಕೋಣೆಯ ಸುತ್ತ ಸುತ್ತು ಸುತ್ತುವನು. ಇಲ್ಲವೇ ತರಗತಿಯ ವರಾಂಡದಲ್ಲಿ ನಿಂತು ಲೆಕ್ಚರರ ವಿಚಾರ ಟೀಕೆ ಟಿಪ್ಪಣಿ ಮಾಡುವನು. ಇದು ಮುಂದರಿದು ಅವರ ಪತ್ನಿಯರ, ಸೋದರಿಯರವರೆಗೂ ಮುಟ್ಟುವದು. ಇಲ್ಲವೇ ಆ ದಿನ ತರಗತಿಗೆ [illegible] ಬಾಗಿಲಲ್ಲಿ ಕದ ಬಳಿ ಸೊಕ್ಕಿ ಬೆಳೆದಿರುವದರಿಂದ ಆಕೆಯ ಆಕಾರ ಹಾಳಾಗುತ್ತಿದೆ ಎನ್ನುವನು. ಪ್ರತಿ ದಿನ ಸೀರೆ ಬದಲು ಮಾಡುತ್ತಾಳೆ ಈ ವಿಚಾರದಲ್ಲಿ ತಲ್ಲೀನನಾಗುವನು! ಮತ್ತೆ ತರಗತಿಗೆ ವಿದ್ಯಾರ್ಥಿನಿಯರು ಬರಲು ಅವರ ಅಂಗರಕ್ಷಕನಂತೆ ಹಿಂದಿನಿಂದ ಬರುವನು! ಸಾಯಂಕಾಲ ಸಿನೆಮಾದ ಕಾರ್ಯಕ್ರಮವಿಲ್ಲದಿದ್ದರೆ ಗಾಳಿ ವಿಹಾರಕ್ಕೆ ಹೋಗುವನು. ಸಂಗಡಿಗರೊಡನೆ ಪ್ರಸಹ ಶಾಲಾ ವಿದ್ಯಾರ್ಥಿನಿಯರ, ಇಲ್ಲವೇ ಹೊಂದಿದವರ ವಿಚಾರ ನಡೆದಾಗ [illegible] ಗಾಳಿ ವಿಹಾರಕ್ಕೆ ಹೋದ ದಿನೇಶನು ಅಂದೊಮ್ಮೆ ಬ್ಯಾನೇ ಹಿಂತಿರುಗಿದ್ದನು. ಸ್ವಲ್ಪ ದೂರದಲ್ಲಿ ಯುವತಿಯೊಬ್ಬಳು ಹೋಗುತ್ತಿದ್ದಳು. ದಿನೇಶನು ಬಗೆ ಬಗೆಯಿಂದ ನಡೆದು ಹತ್ತಿರ ಬಂದನು. ಹತ್ತಿರ ಬಂದ ಕೂಡಲೇ ಬಂದಿತು. ಸತ್ತ ಮೇಲೆ ನೋಡಿ ದಿನೇಶನು ಆಕೆಯ ಹತ್ತಿರ ಹೋಗಿ "ನಮಸ್ತೆ [illegible]" ಎಂದನು. ದಿನೇಶನು ಎರಡು ಹೆಜ್ಜೆ ಮುಂದಿಟ್ಟಿರಬಹುದು. ಅಷ್ಟರಲ್ಲಿ ಪಾವಲಿ? ದಿನೇಶನು ಅಂದಿನಿಂದ ಒಲವಾಗಿ ಆತನ ಬೆನ್ನಿಗೆ ಸಾಗಲಿ ಕೆಳಗೆ ಬಿತ್ತು. ದಿನೇಶನು ಈ ಕಥೆಯನ್ನು ಯಾರೊಂದಿಗೂ ಈ ವರೆಗೆ ಹೇಳಲಿಲ್ಲ.

ಸಾಯಂಕಾಲ ಊಟವಾದನಂತರ ಗೆಳೆಯರೊಡನೆ ಮಾತುಕತೆ! ರಾಜಕೀಯ ವಿಚಾರವಲ್ಲ, ತನ್ನ ಪಾಠ್ಯವಿಷಯಗಳ ವಿಚಾರವೂ ಅಲ್ಲ. ಬದಲು — ಸುರೈಯಾಳ ಕಂಠದಂತಿಲ್ಲದಿದ್ದರೂ ಉತ್ತಮ ನಟಿ. ಮಧುಬಾಲ "ಮಧುಬಾಲ"ದಲ್ಲಿ ಪಾತ್ರವಹಿಸಿದ್ದಳೆ? ಆಕೆಯ ಕೃತಿ ಚಿತ್ರದ ಕಂಟ್ರಾಕ್ಟು ಒಂದು ಲಕ್ಷಕ್ಕೆ ಏರಿದೆ. ನರ್ಗೀಸಳ ಮುಖ ಸಪ್ಪೆಯೆಂತಿದೆ. ಕಾಮಿನಿಯು ರಜತ ಪರದೆಯಿಂದ ಮರೆಯಾದ ಮಾರುದಿನದಿಂದ ದಿಲೀಪ್ ಕುಮಾರನೂ ಪಾತ್ರವಹಿಸುವದನ್ನು ಬಿಡಬಹುದು. ನಿಮ್ಮಿ ಚೆನ್ನಾಗಿದ್ದಾಳೆ. ಈ ರೀತಿಯ ಮಾತಿನಿಂದ ಮಧ್ಯರಾತ್ರಿ ಹನ್ನೆರಡು ಗಂಟೆಯಾಗುವದು! ದಿನೇಶನು ದಿನದ ಅಂತಿಮ ಸಿಗರೇಟ್ ಹಚ್ಚಿ ತಿಂಗಳ ಪ್ರಥಮ ತಾರೀಖನ್ನು ಆಲೋಚಿಸುತ್ತಾ ಮಲಗುವನು.

ವ್ಯಾಸಂಗದ ಗುರಿ.

ಕಾನೂ ಓದುವ ಉದ್ದೇಶವು ಪರೀಕ್ಷೆಯಲ್ಲಿ ತೇರ್ಗಡೆಯಾಗಲು. ಆತನ ಸಿದ್ಧಾಂತ. ಆದ್ದರಿಂದ ಪರೀಕ್ಷೆಯಲ್ಲಿ ಉತ್ತೀರ್ಣನಾಗಲು ಬೇಕಾದ ಉಪಾಯಗಳನ್ನು ಆತನು ಹುಡುಕುವನು. ವರ್ಷವಿಡೀ ಸಿನೆಮಾ ಮುಂತಾದ ವಿಚಾರಗಳಲ್ಲಿ ಕಾಲ ಕಳೆದು ಪರೀಕ್ಷೆ ಹತ್ತಿರ ಬಂದಾಗ ಅನೇಕ ನಿಷ್ಠೆಯಿಂದ ವಿವಿಧ ಶೋಧಕ್ಕೆ ಯತ್ನಿಸುವನು. ಪರೀಕ್ಷೆಯಲ್ಲಿ "ಕಾಪಿ" ಮಾಡಲು ಬೇಕಾದ ಸಾಧನಗಳನ್ನು ಸರಿಪಡಿಸುವದೇ ಆತನ ಗುರಿ! ಪರೀಕ್ಷೆ ಸಮಯದಲ್ಲಿ ಮೇಜು ಕೂಡ ಬದಲಾಯಿಸಿ "ಕಾಪಿ" ಮಾಡಲು ಅನುಕೂಲವಾದ ಸಂಚಿ ಜುಬ್ಬಗಳನ್ನು ಧರಿಸುವನು. ಕೆಲವು ಸಮಯದಲ್ಲಿ ಲೆಕ್ಚರರೊಡನೆ ಅಧಿಕ ಮೈತ್ರಿ ಬೆಳಸಿ, ಅವರನ್ನು ತೃಪ್ತಿಗೊಳಿಸಿ ತನ್ನಗುರಿಯನ್ನು ಸಾಧಿಸುವನು! ಇಷ್ಟೆಲ್ಲ ಮಾಡಿಯೂ ತನಗೆ ವಿಶ್ವಾಸವಾಗದಿದ್ದರೆ ಪರೀಕ್ಷೆ ಪತ್ರ ತಿದ್ದುವವರಲ್ಲಿಗೆ ಹೋಗಿ ಅವರ ಕೈ ಬೆಚ್ಚಗೆ ಮಾಡಿಯೋ ಇಲ್ಲವೇ ಬೇರೆ ವಿಧದಿಂದಲೋ ಕಾರ್ಯಸಾಧಿಸಲೆತ್ನಿಸುವನು. ಇಷ್ಟೆಲ್ಲ ಮಾಡಿ ತೇರ್ಗಡೆಯಾಗದಿದ್ದರೆ, "ಪ್ರಥಮ ತರಗತಿಯಲ್ಲೇ ಪಾಸಾಗಬೇಕು. ಅದಕ್ಕೆ ಬೇಕಾದ ಸಿದ್ಧತೆ ಆಗಲಿಲ್ಲ. ಆದ್ದರಿಂದ ಫಸ್ಟ್ ಗ್ರೂಪಿಗೆ ಕೂರಲೇ ಇಲ್ಲ" ಎನ್ನುವನು!

ಇದು ಇಂದಿನ ವಿದ್ಯಾರ್ಥಿಯ ಜೀವನ. ಆತನು ಕಾಲೇಜಿನಲ್ಲಿರಲಿ ಯಾ ಹೈಸ್ಕೂಲಿನಲ್ಲಿರಲಿ ಅವನ ಜೀವನ ಧಾಟಿ ಇದು. ರಾಷ್ಟ್ರ ಸ್ವತಂತ್ರವಾಯಿತು ನಿಜ. ಆದರೆ ವಿದ್ಯಾರ್ಥಿಗಳಲ್ಲಿ ತಮ್ಮ ಕರ್ತವ್ಯದ ಜ್ಞಾನವಾದಂತೆ ತೋರುವದಿಲ್ಲ. ದಿನೇಶನ ದಿನಚರಿಯೇ ಇಂದು ಬಹು ಸಂಖ್ಯೆಯ ವಿದ್ಯಾರ್ಥಿಗಳದಾಗಿದೆ. ಅವರಿಗೆ ಉತ್ತಮ ಆದರ್ಶವಿಲ್ಲ. ಉತ್ತಮ ಧ್ಯೇಯವಿಲ್ಲ. ತಂದೆತಾಯಿಯರಿಗೆ ಭಾರವಾಗಿ, ರಾಷ್ಟ್ರಕ್ಕೆ ಕಳಂಕ ಪ್ರಾಯರಾಗಿ, ಕರ್ತವ್ಯದಲ್ಲಿ ಅನಭಿಜ್ಞರಾಗಿ, ಭೌತಿಕವಾದದಿಂದ ಪ್ರೇರಿತರಾಗಿ ಇಂದಿನ ವಿದ್ಯಾರ್ಥಿಗಳು ಸಾಗುತ್ತಿರುವ ಮಾರ್ಗವು ಯಾರಿಗೂ ಹಿತಕಾರಕವಲ್ಲ. ಅವರನ್ನು ಸತ್ಪಥದಲ್ಲಿ ನಡೆಸಲು ಸಮಾಜವೂ, ಸರಕಾರವೂ ಕಾಲದಲ್ಲಿ ಯತ್ನಿಸದಿದ್ದರೆ ಇಂದಿನ ಸ್ವಾತಂತ್ರ್ಯದ ಅರ್ಥವು ವಿಸ್ಮೃತಿಯ ಜೀವನವೆಂದಾಗಿ ಸಾರ್ವತ್ರಿಕ ಹಾನಿಯಾದೀತು.

ಶಕ್ಯ ಇಲ್ಲ. ಭಾರತವು ನಿಷ್ಪಕ್ಷಪಾತ ದೃಷ್ಟಿಯಿಂದ ಜಾಗರೂಕ ಧೋರಣೆಯನ್ನು ವಹಿಸಲು ಸತತ ಯತ್ನ ಮಾಡುತ್ತಿದ್ದರೂ ನಮ್ಮ ಬಲ ಪ್ರಜಾಪ್ರಭುತ್ವದ ಕಡೆಗೆ ಒಲಿಯಲು ನಮ್ಮ ರಕ್ಷಣೆ, ಆರ್ಥಿಕ ಪರಿಸ್ಥಿತಿಯು ಕಾರಣವಾಗಿರುತ್ತದೆ. ಕೊರಿಯಾದಲ್ಲಿ ನಾವು ನಮ್ಮ ತಾಟಸ್ಥ್ಯವನ್ನೇ ಶ್ರೇಷ್ಠವಾಗಿರಿಸಿದುದಕ್ಕೂ ಇದೇ ಕಾರಣ. ಟ್ರೂಮನ್ ಅವರ ಪಾಯಿಂಟ್ ಫೋರ್ ಯೋಜನೆಯು ಈಗಾಗಲೇ ಕಾರ್ಯರೂಪಕ್ಕೆ ಬರಲಿದೆ. ಇದರ ಜತೆಗೆ ಅಮೇರಿಕದ ಅಭಿಪ್ರಾಯವು ಭಾರತಕ್ಕೆ ೨೦ ಲಕ್ಷ ಟನ್ ಧಾನ್ಯ ಕಳಿಸಬೇಕೆಂದು ಒತ್ತಾಯಪಡಿಸುತ್ತಿದೆ. ನಮ್ಮ ಯೋಜನೆಗಳಿಗೆ ಬೇಕಾದ ಯಂತ್ರ ಸಾಮಗ್ರಿ ಕೊಡತಕ್ಕವರೂ ಅಮೇರಿಕನರೇ. ಇಂಥ ಅನೇಕ ಕಾರಣಗಳ ದೆಸೆಯಿಂದ ನಾವು ಅಮೇರಿಕಕ್ಕೆ ವಿರುದ್ಧವಾಗಿ ವರ್ತಿಸುವ ಪ್ರಸಂಗ ಬಲುದೂರ ಸರಿದಿದೆ.

ಭಾರತ—ಪಾಕಿಸ್ತಾನ

ಭಾರತ ಪಾಕಿಸ್ತಾನ ಸಂಬಂಧದ ದೃಷ್ಟಿಯಲ್ಲಿ ಕಳೆದ ವರ್ಷದ ವರದಿ ನಿರಾಶಾಜನಕವಾಗಿದೆ. ನಮ್ಮ ವಿನಿಮಯ ದರದ ಚರ್ಚೆ ಇನ್ನೂ ಇದ್ದಲ್ಲೇ ಇದೆ. ನೀರಿನ ಜಗಳ ಇನ್ನೂ ತೀರಿಲ್ಲ. ಡಿಕ್ಸನ್ ಯತ್ನ ಭಗ್ನವಾಯಿತು. ಇಬ್ಬರು ಪ್ರಧಾನಿಗಳ ಏಕೀಕರಣದಿಂದ ಕಳೆದ ಮಾರ್ಚಿನಲ್ಲಿ ನಮ್ಮೊಳಗಿನ ಕಲಾಟವೊಂದು ನಿಂತಂತಾಯಿತು. ಕಾಶ್ಮೀರ ಬಗೆಹರಿಯದೆ ನಮ್ಮ ಒಡನಾಟ ಅಷ್ಟು ಚೆನ್ನಾಗುವ ಲಕ್ಷಣವಿಲ್ಲ. ಆದರೆ ಸಾಮ್ರಾಜ್ಯವಾದಿ ತಂಡದ ಭಯವು ನಮ್ಮ ಸ್ವಾರ್ಥಕ್ಕಾಗಿ ನಾವು ಏಕರೂಪವಾದ ಧೋರಣೆ ಅವಲಂಬಿಸಬೇಕಾಗಿದೆ. ಬರುವ ಯುದ್ಧ ನಮ್ಮನ್ನೊಂದುಗೂಡಿಸದಿದ್ದರೂ ನಮ್ಮ ವಿದೇಶ ನೀತಿಯನ್ನೊಂದಾಗಿಸುವುದು. ಅಂತೂ ಬೇಕಾಗಿಯೋ ಬೇಡವಾಗಿಯೋ ನಮ್ಮ ಪ್ರಯತ್ನವಿಲ್ಲದೆನೇ ನಾವು ಪ್ರಜಾತಂತ್ರವಾದಿಗಳ ತಂಡಕ್ಕೆ ಸೇರಿಹೋಗಿರುವೆವು. ನಮ್ಮ ವಿದೇಶಾಂಗ ನೀತಿಯು ಸ್ವಪ್ರಯತ್ನವಿಲ್ಲದೇನೆ ಬೇರೆಯೇ ಕಡೆ ನಿರ್ಣಯಿಸಲ್ಪಡುತ್ತದೆ. ನಮ್ಮಲ್ಲಿ ಮಹಾ ಮಹಾ ನಾಯಕರಿದ್ದಾರೆ ನಿಜ. ಇತಿಹಾಸದ ಒಂದು ಪರ್ವಕಾಲದಲ್ಲಿ ನಾವು ಸ್ವತಂತ್ರರಾಗಿರುವುದೂ ನಿಜ. ನೆಹರೂ ಅಂಥ ಪ್ರಧಾನಿ ನಮ್ಮವರೇ ಆದುದು ನಿಜ. ಆದರೆ ಜಾಗತಿಕ ಕಾಲಪುರುಷನು ಇಂದು ತನ್ನ ಭವಿಷ್ಯದ ಆಯ್ಕೆಯ ಅಧಿಕಾರವನ್ನು ಇತರ ರಾಷ್ಟ್ರಗಳಿಗೆ ಕೊಟ್ಟು, ನಮ್ಮ ಅದೃಷ್ಟವನ್ನು ಅವರ ಭಾಗ್ಯದ ಕಾಲಿಗೆ ಕಟ್ಟಿ ಕೆಡಿಸುತ್ತಿದ್ದಾನೆ.

—ವಿಲ್ಲಿಯಂ ಈಸ್ಟರ್ನ್ ಇಕಾನಮಿಸ್ಟ್

'ನವಯುಗ'

ಕಾಶ್ಮೀರದ ಕೆಲವು ಹಳೆಯ ನೆನಹುಗಳು

ಕಾಶ್ಮೀರವು ಜಗತ್ತನ್ನೇ ಆಕರ್ಷಿಸಿರುವ ಸ್ವರ್ಗ ಸದೃಶ ಸಂಸ್ಥಾನ ಅನ್ನುವುದರಲ್ಲಿ ಸ್ವತಂತ್ರ ಸಂಚಾರ ಪ್ರದೇಶ ಎನ್ನುವುದರಲ್ಲಿ ಎರಡಾಡುವವರಿಲ್ಲ

ವಿಸ್ತೀರ್ಣದಲ್ಲಿ ಚಿಕ್ಕದು. ಕಾಶ್ಮೀರ ಮತ್ತು ಜಮ್ಮು ಈ ಎರಡು ಸಂಸ್ಥಾನಗಳ ಒಟ್ಟು ವಿಸ್ತೀರ್ಣ ೮೫,೦೦೦ ಚದರ ಮೈಲುಗಳು ಅದರಲ್ಲಿ ಕಾಶ್ಮೀರವು ಬರೀ ಎರಡು ಸಾವಿರ ಚದರ ಮೈಲುಗಳಷ್ಟೆಂದು. ಕಾಶ್ಮೀರಿಗಳ ಅಂಬೋಣ ಕಾಶ್ಮೀರಿಗಳು ಅದನ್ನು ಕಾಶ್ಮೀರ್ ಎಂದು ಕರೆಯುವರು.

ನೈಸರ್ಗಿಕ ಸಂಪತ್ತಿನಲ್ಲಿ ಕಾಶ್ಮೀರ ಹಿಂದುಳಿದಿಲ್ಲ ಅಲ್ಲಿ ಚಿನ್ನ ಇಲ್ಲವೆ ಇತರ ಅಮೂಲ್ಯ ಕಲ್ಲುಗಳು ದೊರೆಯುವುದಿಲ್ಲ. ಕಾಶ್ಮೀರದ ಉಣ್ಣೆಯ ಶಾಲು ಜಗತ್ಪ್ರಸಿದ್ಧವಾದುದು ಆದರೆ ಈ ಶಾಲು ತಯಾರಾಗಬೇಕಾದರೂ ಉಣ್ಣೆ ಬರಬೇಕು ಟಿಬೇಟಿನ ಚಾಂಗ್ ಥಾಂಗ್ ಎಂಬಲ್ಲಿಂದ ಅಲ್ಲಿಯ ಯವತಿಯರ ಚೆಲುವು, ನೇಯ್ಗೆಯಲ್ಲಿ ಕಾಶ್ಮೀರಿಗಳ ಕೈಚಳಕ, ನಯನ ಮನೋಹರ ಸುಂದರ ದೃಶ್ಯಗಳು ಇವು ಕಾಶ್ಮೀರಕ್ಕೆ ಅದು ಗಳಿಸಿರುವ ಹೆಗ್ಗಳಿಕೆಯ ಸ್ಥಾನ ಒದಗಿಸಿಕೊಟ್ಟಿವೆ ಈ ಆಕರ್ಷಣೆ ನಿನ್ನೆ ಮೊನ್ನೆಯದಲ್ಲ ಹಲವು ಶತಮಾನಗಳ ಹಿಂದಿನಿಂದಲೂ ಇದ್ದುದು ಪ್ರಾಚೀನ ಗ್ರೀಕರೂ ಈ ಸಂಸ್ಥಾನದ ಕುರಿತು ತಿಳಿದಿದ್ದರು ಇಲ್ಲವೆ ಕೇಳಿದ್ದರು ಚೀನಿಯರು, ಅರಬರ, ಪರ್ಶಿಯನರು ಇವರೆಲ್ಲರೂ ಕಾಶ್ಮೀರದ ಕುರಿತು ಆಡಿರುವರು; ಬರೆದಿರುವರು. ಅಲ್ಲದೆ ಆಧುನಿಕ ಕಾಲದಲ್ಲಿ ಕಾಶ್ಮೀರದ ಕುರಿತಾಗಿ ಬರೆಯಲ್ಪಟ್ಟಷ್ಟು ಪುಸ್ತಕಗಳು ಬೇರಾವ ಭಾರತೀಯ ಸಂಸ್ಥಾನದ ಕುರಿತು ಬರೆಯಲ್ಪಟ್ಟಿಲ್ಲ.

ಪ್ರಾಚೀನ ಭಾರತೀಯ ಗ್ರಂಥಗಳಲ್ಲಿ ಕಾಶ್ಮೀರಕ್ಕೆ ಒಂದು ಪವಿತ್ರ ಸ್ಥಾನವು ಕೊಡಲ್ಪಟ್ಟಿದೆ ಹಿಮಾಲಯ ಪರ್ವತ ಶ್ರೇಣಿಯು ದೇವತೆಗಳ ವಾಸಸ್ಥಾನವೆಂದು ಪ್ರಸಿದ್ಧವಾಗಿದೆಯಲ್ಲವೇ? ಅದರ ತಪ್ಪಲಲ್ಲಿರುವ ಕಾಶ್ಮೀರವನ್ನು ಪೂಜ್ಯ ಭಾವನೆಯಿಂದ ಕಾಣುವುದರಲ್ಲಿ ಆಶ್ಚರ್ಯ ಏನಂತೆ? ಆದರೆ, ಶ್ರೀ ರ. ರಾ. ಶ್ರೀರಂಗ ಹಳೆಯ ಕಥೆ ಕಾಶ್ಮೀರದ ಮೂಲವನ್ನು ಕೊಂಚ ವಿಶದ ಪಡಿಸುವುದು

ಹನ್ನೊಂದನೇ ಶತಮಾನದ ಆದಿಯಲ್ಲಿ ಜೀವಿಸಿಕೊಂಡಿದ್ದ ಅರಬ್ ಸಾಹಿತಿ ಅಲ್ಬಿರೂನಿಯು ಕಾಶ್ಮೀರವು ಬನಾರಸ ಮತ್ತು ಕುರುಕ್ಷೇತ್ರಗಳಷ್ಟೇ ಪವಿತ್ರವಾಗಿತ್ತೆಂಬುದನ್ನು ತನ್ನ ಬರಹಗಳಲ್ಲಿ ಉಲ್ಲೇಖಿಸಿದ್ದಾನೆ ಇವರ ಕಾಲದಿಂದ ಈಗ, ಹಲವು ಶತಮಾನಗಳ ನಂತರವೂ ನಾವು ಕಾಶ್ಮೀರದಲ್ಲಿ ಕಾಣಬಹುದಾಗಿದೆ ದೇವ ದೇವತೆಗಳ ಹೆಸರುಗಳನ್ನು ಅಲ್ಲಿಯ ಹಳ್ಳಿಗಳಲ್ಲಿ, ಉದ್ಯಾನಗಳಲ್ಲಿ, ಕಾರಂಜಿಗಳಲ್ಲಿ ಮತ್ತು ನದಿಗಳಲ್ಲಿ ಕೇಳಬಹುದಾಗಿದೆ ಕಾಶ್ಮೀರದ ಪ್ರತಿಯೊಂದು ಕೆರೆ ಕುಂಟೆಗಳು ಶಿವನ ಮಡದಿ ಪಾರ್ವತಿಯ ಕುರಿತಾದ ಒಂದಲ್ಲ ಒಂದು ಕಥೆಯನ್ನು ಕಟ್ಟಿಕೊಳ್ಳದಿಲ್ಲ

ಕಾಶ್ಮೀರದಲ್ಲಿ ಚಿಕ್ಕ ದೊಡ್ಡ ತೀರ್ಥಗಳು ಮತ್ತು ಸಿಂಧೂ ನದಿಗಳು ಕೂಡುವ ಪ್ರಯಾಗ ಅಲ್ಲದೆ ಪ್ರತಿವರ್ಷ ಕುಂಭಮೇಳವು ಬಹಳ ಸಂಭ್ರಮದಿಂದ ಇಲ್ಲಿ ನಡೆಯುತ್ತಿದ ಪರ್ವತ ಪ್ರದೇಶದಲ್ಲಿ ಸುಮಾರು ೧೩,೦೦೦ ಅಡಿ ಎತ್ತರದಲ್ಲಿ ಗಂಗಾಬಲ ಎಂಬ ಪವಿತ್ರ ಸರೋವರವಿದೆ ಕಾಶ್ಮೀರಿ ಹಿಂದೂಗಳು ಗತಿಸಿ ಹೋದವರ ಅಸ್ಥಿಗಳನ್ನು ಮುಳುಗಿಸಲು ಈಗಲೂ ಅಲ್ಲಿಗೆ ಹೋಗುತ್ತಾರೆ. ಹರಿದ್ವಾರದಲ್ಲಿ ಗಂಗೆಯಲ್ಲಿ ಅಸ್ಥಿಗಳನ್ನು ಮುಳುಗಿಸಿದಷ್ಟೇ ಪುಣ್ಯ ಈ ಸರೋವರದ ನೀರಿನಲ್ಲಿ ಮುಳುಗಿಸುವುದರಿಂದ ದೊರಕುವುದೆಂಬ ನಂಬಿಕೆ ಕಾಶ್ಮೀರಿಗಳದಾಗಿದೆ ಗಂಗಾಬಲವನ್ನು 'ಹರಮುಕುಟ ಗಂಗಾ' ಎಂದು ಕರೆಯುವುದೂ ಇದೆ ಈ ಸರೋವರದಿಂದ ಹರಮುಖವೆಂಬ ೧೬,೦೦೦ ಅಡಿ ಉನ್ನತ ಪರ್ವತ ಶ್ರೇಣಿಯು ಎದ್ದು ದರಿಂದ ಆ ಹೆಸರು ಬಂದುದಾಗಿದ ಈ ಪರ್ವತದ ತಪ್ಪಲ ಪ್ರದೇಶದಲ್ಲೇ ಕೆಲವು ಪವಿತ್ರ ದೇವಾಲಯಗಳಿವೆ

ಹರಿಪರ್ವತಗಿರಿಯ ಕುರಿತು ಪ್ರಚಾರದಲ್ಲಿರುವ ಒಂದು ದಂತಕಥೆ ಈ ರೀತಿಯಾಗಿದೆ ಬಹಳ ಪ್ರಾಚೀನಕಾಲದಲ್ಲಿ ಇಲ್ಲಿಯ ಇಡೀ ಕಣಿವೆಯು ಒಂದು ದೊಡ್ಡ ಸರೋವರವಾಗಿತ್ತು 'ಸತೀಸರ' ಎಂದು ಅದನ್ನು ಕರೆಯುತ್ತಿದ್ದರು. (ಶಿವನ ಮಡದಿ ಪಾರ್ವತಿಯನ್ನು 'ಸತಿ' ಎಂದೂ ಕರೆಯುವರು) ಸರೋವರದ ಆಸುಪಾಸಿನ ಪ್ರದೇಶ ನಿರ್ಜನವಾಗಿತ್ತು. ಸರೋವರದಲ್ಲಿ ವಾಸವಾಗಿರುವ ಜಲೋದ್ಭವ ಎಂಬ ರಾಕ್ಷಸನ ಹಾವಳಿಯ ಭೀತಿಯಿಂದ ಜನರು ಇಲ್ಲಿ ವಾಸಿಸಲು ಶಂಕಿಸುತ್ತಿದ್ದರು. ದೇವತೆಗಳಿಂದಲೂ ಜಯಿಸಲು ಸಾಧ್ಯವಾಗದೆ ಅಮರತ್ವವನ್ನು ಪಡೆದ ಆ ರಕ್ಕಸನ ಆ ಸರಸಿನಲ್ಲಿ ಗುಪ್ತವಾಗಿದ್ದನು ಇವನ ಕತೆಯೂಟ ಪಾರ್ವತಿಗೆ ತಿಳಿದು ಬಂದ ಆಕೆ ಮೈನಾ ಹಕ್ಕಿಯ ರೂಪತಾಳಿ ಬಂದು ಚಿಕ್ಕ ಕಲ್ಲನ್ನು ಕೊಕ್ಕಿನಿಂದೆತ್ತಿ ಆ ಸರೋವರದ ನೀರಿಗೆ ಎಸೆದಳು. ಆ ಚಿಕ್ಕ ಕಲ್ಲೇ ಬೃಹದಾಕಾರ ತಾಳಿ 'ಹರಿಪರ್ವತ' ವಾಯಿತೆನ್ನುತ್ತಾರೆ (ಶಾರಿಕಾ ಪರ್ವತ ಎಂದರೆ ಮೈನಾ ಹಕ್ಕಿಯ ಪರ್ವತವೆಂದೂ ಇದನ್ನು ಹೇಳುವುದುಂಟು) ಈ ಪರ್ವತದ ಅಡಿಯಲ್ಲಿ ಈಗಲೂ ಆ ರಾಕ್ಷಸನು ವಾಸವಾಗಿದ್ದಾನೆಂದು ಹೇಳುವರು. ಆದರೆ ಅವನು ಸದಾ ಶೂನ್ಯನಾಗಿ ಇಲ್ಲಿ ಬಿದ್ದುಕೊಂಡಿರಬೇಕು ಅವನಿಂದ ಈಗ ಯಾವ ಅಪಾಯ ಭಯವೂ ಇರುವುದಿಲ್ಲ ಭೂಕಂಪಗಳು ಸಂಭವಿಸುವ ಕಾಲದಲ್ಲಿ, 'ಜಲೋದ್ಭವನು ಮುಚ್ಚಿಡಿಕೊಂಡಿದ್ದ ತನ್ನ ಕೈಕಾಲುಗಳನ್ನು ಜಾಡಿಸುತ್ತಿದ್ದಾನೆ' ಎನ್ನುವುದಿದೆ

ಜಲೋದ್ಭವನ ಬಾಧೆಯು ಪರಿಹಾರವಾದ ನಂತರ ಸರೋವರದ ತಟಾಕದಲ್ಲಿ ಎಂದು ನೆಲಸಿದ ಮೂಲನಿವಾಸಿಗಳೆಂದ ನಾಗ ಪಿಶಾಚಿಗಳೆಂಬ ಕರೆಯಲ್ಪಡುವ ನಾಗರಿಕತೆಯ ಗಂಧಗಾಳಿಯರಿಯದ ಕಾಡು ಜನರು ಆ ವೇಳೆ ಬಂದ ಆರ್ಯರು ಈ ಕಾಡುಜನರನ್ನು ಹೊಡೆದೋಡಿಸಲು ಶಕ್ತರಾಗಿದರು ಆ ಅಸಂಸ್ಕೃತ ಜನರ ಮೇಲೆ ಮೇಲ್ಮೆಯ ಸ್ಥಾಪಿಸಿದ ನಂತರ ಕಶ್ಯಪ ಋಷಿಗೆ ಈ ಪ್ರದೇಶವನ್ನು ವಹಿಸಿಕೊಟ್ಟ ವಿತಸ್ತ ನದಿಯನ್ನೇ ಈಗ ಝೀಲಮ್ ಎಂದು ಕರೆಯುವರು

ಕಾಶ್ಮೀರದ ಕುರಿತಾದ ಹಳೆಯ ನೆನಪುಗಳಲ್ಲಿ ಇವು ಒಂದೆರಡು ಮಾತ್ರ

'ಪ್ರಭಾತ್'

ವಾರ್ತೆಗಳು.

ಹಿಂದಿ ಸ್ಥಾನವನ್ನು ಆಹಾರ ಸ್ವಾವಲಂಬಿಯಾಗಿ ಮಾಡಬೇಕೆಂಬ ಹುಚ್ಚನ್ನು ಬಿಟ್ಟು ಕೆಟ್ಟ ಪರದೇಶಗಳಿಂದ ಎಂದಿನಂತೆ ಆಹಾರ ಪದಾರ್ಥಗಳನ್ನು ಆಯಾತ ಮಾಡುತ್ತ ಹೋಗಬೇಕೆಂದು ಇಂಡಿಯನ್ ಸಿವಿಲ್ ಸರ್ವಿಸಿನಲ್ಲಿದ್ದ ಎ. ಡಿ. ಗೋರವಾಲಾ ಇವರು ಮುಂಬಯಿಯ ಲಿಬರಲ್ ಪ್ರೊಗ್ರೆಸಿವ್ ಗ್ರೂಪಿನ ಸಭೆಯಲ್ಲಿ ಮಾತನಾಡುತ್ತ ಹೇಳಿದರು

ಭಿಕ್ಷುಕರ ಹಾವಳಿಯ ವಿರುದ್ಧ ಸಾರ್ವಜನಿಕರಲ್ಲಿ ಜಾಗ್ರತೆಯನ್ನು ಉಂಟು ಮಾಡಲು ಮದ್ರಾಸಿನಲ್ಲಿ ಮಾರ್ಚ್ ೫ರಿಂದ ಭಿಕ್ಷುಕ ನಿರೋಧ ಸಪ್ತಾಹವನ್ನು ಆಚರಿಸಲಾಗುವುದು.

ಫೆಬ್ರುವರಿ ೯ರಿಂದ ಡಿಲ್ಲಿ ಪ್ರಾಂತದಲ್ಲಿ ಪ್ರಾರಂಭವಾಗಲಿರುವ ಜನಗಣನೆಯಲ್ಲಿ ಜನಗಣನಾ ಲೇಖಕರು ಅಧ್ಯಕ್ಷ ಡಾ|| ರಾಜೇಂದ್ರ ಪ್ರಸಾದರಿಂದ ತಮ್ಮ ಜನಗಣನೆಯನ್ನು ಪ್ರಾರಂಭಿಸುವರು ಅಧ್ಯಕ್ಷರು ಮೊದಲು ಜನಗಣನೆಯ ಪ್ರಶ್ನಾವಲಿಕೆಗೆ ಉತ್ತರಕೊಟ್ಟ ಜನಗಣನೆಯ ಕೆಲಸಗಾರರಿಗೆ ಶುಭಾಶಯವನ್ನು ಕೋರಿದ ನಂತರ ಮುಂದಿನ ಕಾರ್ಯ ಪ್ರಾರಂಭವಾಗುವುದು

ಪಾಕಿಸ್ತಾನದ ಮೊದಲನೆಯ ಜನಗಣನೆಗಾಗಿ ರಚಿಸಿದ ಉದ್ಯೋಗ ಸೂಚಕ ಕಲಮಿನಲ್ಲಿ ವೇಶ್ಯೆಯರು ಮತ್ತು ಪತ್ರಿಕೋದ್ಯಮಿಗಳನ್ನು ಒಂದೇ ವರ್ಗದಲ್ಲಿ ಸೇರಿಸಲಾಗಿದೆ ಈ ವರ್ಗದಲ್ಲಿ ಕಲಾವಿದರು, ಲೇಖಕರು, ಮನೋರಂಜಕರು ಈ ಮೊದಲು ವರ್ಗದವರ ಸಮಾವೇಶವಾಗುತ್ತದೆ.

ಮಾರಾಟಕ್ಕಿದೆ.

ಮಾರುವರೆ ವರ್ಷ ಪ್ರಾಯದ ಸಿಂಧೀ ಜಾತಿಯ ಗೂಳಿ ಒಂದು ಮಾರಾಟಕ್ಕಿದೆ ಖರೀದಾರರು ಈ ಕೆಳಗಿನ ಅಡ್ರೆಸ್ಸಿಗೆ ಬರೆಯಬಹುದು. ಬೆಲೆ ರೂ ೩೫೦/- ಯೂ ಇದರ ಸಮೀಪ

X
C/o "ಕೊಡಗು"
ಮಡಿಕೇರಿ

ಕೃತಜ್ಞತಾವಂದನೆ.

ನನ್ನ ಪ್ರಿಯ ಪತ್ನಿಯ ನಿಧನಕ್ಕಾಗಿ ನನ್ನ ಸಹಪಾಠಿಗಳೂ, ಬಂಧು ಬಾಂಧವರೂ ಮತ್ತು ಇಷ್ಟ ಮಿತ್ರರೂ ಸಹ ನನಗೆ ಸಂತಾಪ ಸೂಚನಾ ಪತ್ರಗಳನ್ನು ಬರೆದು ಮತ್ತು ಖುದ್ದಾಗಿ ಬಂದು ನನ್ನ ದುಃಖದಲ್ಲಿ ಭಾಗಿಗಳಾಗಿದ್ದಾರೆ ಇವರಿಗೆಲ್ಲಾ ಪ್ರತ್ಯ ಪ್ರತ್ಯೇಕವಾಗಿ ಪತ್ರ ಬರೆಯಲು ಅನಾನುಕೂಲವಾದ ಕಾರಣ ಈ ಮೂಲಕ ನನ್ನ ವಂದನೆಯನ್ನು ಅವರಿಗೆ ಅರ್ಪಿಸುತ್ತೇನೆ.

ಕೊಂಗಂಡ ಯಂ ಕಾರ್ಯಪ್ಪ.
ವೀರಾಜಪೇಟೆ.

ಸ್ವತಂತ್ರ ಭಾರತದ

ಪ್ರಥಮ ಖಾನೇಸುಮಾರಿ.

ಖಾನೇಸುಮಾರಿ ದಾಖಲು ಮಾಡುವವರು ನಿಮ್ಮ ಮನೆಯನ್ನು ಎರಡು ಬಾರಿ ಸಂದರ್ಶಿಸುತ್ತಾರೆ. ಮೊದಲನೆಯದಾಗಿ 1951ನೇ ಫೆಬ್ರುವರಿ 9ನೇ ತಾರೀಕಿನಿಂದ 23ನೇ ತಾರೀಖಿನ ಒಳಗೆ ಎರಡನೆಯ ಪುನಃ ಪರಿಶೀಲನೆಗೆ 1951ನೇ ಮಾರ್ಚ್ 1ನೇ ತಾರೀಕಿನಿಂದ ೪ನೇ ತಾರೀಕಿನ ಒಳಗೆ ಇನ್ನೊಮ್ಮೆ.

ದಯವಿಟ್ಟು ಅವರು ಕೇಳುವ ಎಲ್ಲಾ ಪ್ರಶ್ನೆಗಳಿಗೂ ನಿಮ್ಮದಾದ ಮತ್ತು ನಿಮ್ಮ ಮನೆ ವಾಸಿಸುವ ನಿಮ್ಮ ಸಂಬಂಧಿಕರ ವಿಷಯವಾದ ಎಲ್ಲಾ ವಿವರಗಳನ್ನು ಸಂಪೂರ್ಣವಾಗಿಯೂ, ಸರಿಯಾಗಿಯೂ ಕೊಡಿ ನೀವು ಕೊಡುವ ಉತ್ತರವು ಎಲ್ಲಾ ರೀತಿಯಲ್ಲಿಯೂ ಗೋಪ್ಯವಾಗಿ ರಕ್ಷಿಸಲ್ಪಡುತ್ತವೆ 1948ನೇ ಖಾನೇಸುಮಾರಿ ಆಕ್ಟಿನ ಪ್ರಕಾರ ನಿಮ್ಮ ಉತ್ತರವನ್ನು, ಖಾನೇಸುಮಾರಿಯ ಸಂಬಂಧವಾದ ಕೋರ್ಟು ವಿಚಾರಣೆಯಲ್ಲಲ್ಲದೆ ಇನ್ನಾವ ರೀತಿಯಲ್ಲಿಯೂ ಬಹಿರಂಗಪಡಿಸಲು ಅಧಿಕಾರವಿಲ್ಲ. ಖಾನೇಸುಮಾರಿ ಲೆಕ್ಕ ತೆಗೆಯುವವರು ಕೇಳುವ ಪ್ರಶ್ನೆಗಳಲ್ಲಿ ನಿಮಗೇನಾದರೂ ಸಂಶಯವಿದ್ದರೆ ನೀವು ಉತ್ತರ ಕೊಡುವ ಮೊದಲಿಗೆ ನೀವು ಅವರೊಡನೆ ಪ್ರಶ್ನೆಕೇಳಿ ಆ ಸಂಶಯವನ್ನು ನಿವಾರಿಸಿಕೊಳ್ಳಿರಿ

1, 9, 10 ಮತ್ತು 11 ನೇ ಪ್ರಶ್ನೆಗಳು ಅತಿ ಮುಖ್ಯವಾದುವು ಮನೆಯ ಯಜಮಾನರಿಗೆ ನೀವು ಯಾವ ರೀತಿಯಲ್ಲಿ ಸಂಬಂಧ ನಿಮ್ಮ ಜೀವನೋಪಾಯ ಮತ್ತು ಆರ್ಥಿಕ ಸ್ಥಿತಿಗಳನ್ನು ಕುರಿತದ್ದಾಗಿದೆ

ನಿಮ್ಮ ದಾಖಲೆ ಒಪ್ಪಿಯಾದರೆ ತೀರಿಸು. ಮೇಲಿಂದ ಮೇಲೆ ದಾಖಲೆಯಾಗದಂತೆ ದಯವಿಟ್ಟು ನೋಡಿಕೊಳ್ಳಿರಿ—

ಖಾನೇಸುಮಾರಿ ಲೆಕ್ಕ ತೆಗೆಯುವವರ ಕೆಲಸವನ್ನು ಪರೀಕ್ಷಿಸುವುದಕ್ಕಾಗಿಯೆಂದು ನೇಮಕವಾಗಿರುವ ಇನ್ಸ್ಪೆಕ್ಟಿಂಗ್ ಆಫೀಸರು ಪರೀಕ್ಷೆಗಾಗಿ ನಿಮ್ಮ ಮನೆಯನ್ನು ಸಂದರ್ಶಿಸ ಬಹುದು

ದಯವಿಟ್ಟು ಖಾನೇಸುಮಾರಿ ಲೆಕ್ಕ ತೆಗೆಯುವ ಎನ್ಯುಮರೇಟರ್ ಮತ್ತು ಸುಪರ್ವೈಸರರ ಕಾರ್ಯವು ಸಾಂಗವಾಗಿ ನೆರವೇರಿ, 1951ನೇ ಸ್ವತಂತ್ರ ಹಿಂದೂಸ್ಥಾನದ ಮೊದಲನೆಯ ಖಾನೇಸುಮಾರಿಯನ್ನು ಜಯಪ್ರದವಾಗಿ ಮಾಡುವ ಕೆಲಸವು ನಿಮ್ಮಿಂದ ಹೊಂದುವುದೆಂದು ನಾನು ವಿನಯದಿಂದ ವಿಜ್ಞಾಪಿಸುತ್ತೇನೆ

ಎಸ್ ವೆಂಕಟೇಶ್ವರನ್,
ಮದ್ರಾಸು ಮತ್ತು ಕೊಡಗಿನ
ಖಾನೇಸುಮಾರಿ ಸೂಪರಿಂಟೆಂಡೆಂಟರು

2-1

ಕೊಡಗು

ತಾ. ೨-೨-೧೯೫೧ನೇ ಶುಕ್ರವಾರ

ಕಾಂಗ್ರೆಸಿನ ಮುಂದಿನ ಜವಾಬ್ದಾರಿ.

ಕಾಂಗ್ರೆಸ್ ಸಂಸ್ಥೆಯ ಸೂತ್ರಧಾರಿಯಾಗಿದ್ದ ಮಹಾತ್ಮಾಗಾಂಧಿಯವರು ನಿಧನ ಹೊಂದಿ ಮೂರು ವರ್ಷಗಳಾದವು. ಈ ಅಲ್ಪ ಕಾಲದಲ್ಲಿ ಕಾಂಗ್ರೆಸ್ಸಿನ ಶಕ್ತಿ ಯಾವರೂ ಬಹುವ ಟ್ಟಿಗೆ ಕುಂದಿ ಹೋಗಿರುವದೆಂಬುದರಲ್ಲಿ ಸಂಶಯವಿಲ್ಲ. ಮಹಾತ್ಮಾಜಿಯವರ ಮುಂದಾಳ್ತನದಲ್ಲಿ ಬಹು ಬಲಾಢ್ಯವಾದ ಬ್ರಿಟಿಷ್ ಸರಕಾರವನ್ನೇ ಎದುರಿಸಿ ಭರತ ಖಂಡಕ್ಕೆ ಸ್ವಾತಂತ್ರ್ಯವನ್ನು ಪಡೆದಂಥಾ ಮಹಾ ಸಂಸ್ಥೆಯು ಇಂದು ಅಸ್ಥಿರತೆಯ ಮನೆಯಾಗಿ ಪರಿಣಮಿಸಿದೆ. ಪಂಡಿತ ನೆಹರೂರವರು ಮೊನ್ನೆ ತಾನೆ ನಡೆದ ಅಖಿಲ ಭಾರತ ಕಾಂಗ್ರೆಸ್ ಸಭೆಯಲ್ಲಿ ಮಾತಾಡುತ್ತ, ಕಾಂಗ್ರೆಸು ತನ್ನ ಪ್ರಾಮುಖ್ಯವಾದ ಧ್ಯೇಯವಾದ ಜನತಾ ಸೇವೆ ಮತ್ತು ಐಕ್ಯಮತ್ಯವನ್ನು ಮರೆತು ಬಿಟ್ಟಿದೆ. ಬದಲು ಅದರ ಕೆಲಸಗಾರರು ವ್ಯಕ್ತಿಕ ಹಾಗೂ ಪಕ್ಷಗಳಾಗಿ ರಾಜಕೀಯ ಅಧಿಕಾರಕ್ಕಾಗಿ ಹೆಣಗಾಡುತ್ತಿರುವರು. ಹೆಚ್ಚಿನವರ ದೃಷ್ಟಿಯು ಮುಂಬರುವ ಸಾರ್ವತ್ರಿಕ ಚುನಾವಣೆಯ ಮೇಲೆ ನಿಂತಿರುವಂತೆ ಕಾಣುತ್ತದೆ. ಕಾಂಗ್ರೆಸ್ಸಿನ ಉದಾತ್ತ ತತ್ವವಾದ ವಿಧಾಯಕ ಕಾರ್ಯಕ್ರಮವು ಇಂದು ಸರ್ವೋದಯ ಸಂಘದ ಪಾಲಿನ ಕರ್ತವ್ಯವೆಂಬಂತಾಗಿದೆ. ಪ್ರತಿ ಗ್ರಾಮ ಗ್ರಾಮಗಳಲ್ಲಿ ಕೇಳಿಬರುತ್ತಿದ್ದ ಚರಖಾದ ಮಂಜುಳನಾದ, ಅಸ್ಪೃಶ್ಯತಾ ನಿವಾರಣಾ ಕಾರ್ಯಕ್ರಮದ ಸೊಲ್ಲು, ಪಾನನಿರೋಧ ಮೊದಲಾದ ಕೆಲಸಗಳ ಬದಲು ಇಂದು ಕಾಂಗ್ರೆಸಿನೊಳಗೆ ಅಧಿಕಾರಕ್ಕಾಗಿ ಹೋರಾಡುವ ಪಕ್ಷಗಳ ಗುಲ್ಲು ಮಾತ್ರ ಕೇಳಿ ಬರುತ್ತಿದೆ. ಕೆಲವರು ಕಾಂಗ್ರೆಸಿನಲ್ಲಿ ಈ ರೀತಿ ಅಡ್ಡದಾರಿ ಹಿಡಿದಿದ್ದರೆ ಇನ್ನು ಕೆಲವರು ಖಾದಿಟೊಪ್ಪಿ, ರಾಷ್ಟ್ರೀಯ ಪತಾಕೆ, ನಾಲ್ಕಾಣೆ ಸದಸ್ಯತನ ಇವೇ ಕಾಂಗ್ರೆಸ್ಸೆಂದು ಭಾವಿಸಿ ತಮ್ಮ ವಿಚಾರಶಕ್ತಿಯನ್ನು ತೋರಿದು ವರ್ತಿಸುತ್ತಿರುವರು. ಈ ದುರ್ಬಲತೆಗಳಿಂದಾಗಿ ಇಂದೊಮ್ಮೆ ಜನತೆಯ ಜೀವಾಳವೆನಿಸಿದ್ದ ಕಾಂಗ್ರೆಸಿನಿಂದ ಜನತೆಗೆ ಸಾಕಷ್ಟು ಪ್ರಯೋಜನವಾಗುತ್ತಿಲ್ಲ. ಆದರೂ ಕೂಡ ಹಿಂದೂ ದೇಶದಲ್ಲಿ ಕಾಂಗ್ರೆಸ್ಸೇ ಸುವ್ಯವಸ್ಥಿತವಾದ ಸಂಸ್ಥೆಯಾಗಿದೆ. ಗಾಂಧೀಜಿಯವರ ಸತತ ಪರಿಶ್ರಮ ಮತ್ತು ದೂರದರ್ಶಿತ್ವದಿಂದ ಅಂದು ಹಾಕಲ್ಪಟ್ಟ ಕಾಂಗ್ರೆಸ್ ಅಡಿಪಾಯವು ಇಂದೂ ಭದ್ರವಾಗಿದೆ. ಕಾಂಗ್ರೆಸ್ಸೆಂಬ ಮನೆಯ ಮೇಲ್ಛಾವಣಿಯು ಕಾಂಗ್ರೆಸಿನೊಳಗಿನ ಅಧಿಕಾರ ಪ್ರಿಯರ ಮತ್ತು ಸಂಕೀರ್ಣ ದೃಷ್ಟಿಯವರ ಅಹಿತ ಕೆಲಸಗಳಿಂದ ಶಿಥಿಲಗೊಂಡಿದ್ದರೂ ಸಂಸ್ಥೆಯ ಅಡಿಗಲ್ಲು ಬಲವಾಗಿದೆ. ಜನತೆಗೆ ಕಾಂಗ್ರೆಸ್ಸಿನ ಮೇಲಿನ ಆ ಪ್ರೀತಿ, ವಿಶ್ವಾಸಗಳು ಇನ್ನೂ ಇವೆ. ಅಲ್ಲಿ ಇಲ್ಲಿ ಕಾಂಗ್ರೆಸಿನ ವ್ಯಕ್ತಿಗಳನ್ನು ಜನತೆ ದೂರಿದರೂ ಕಾಂಗ್ರೆಸ್ ಸಂಸ್ಥೆಯ ಬಗ್ಗೆ ಇನ್ನೂ ಅವರಲ್ಲಿ ಆದರವಿದೆ. ಇಂಥಾ ಬಿಕ್ಕಟ್ಟಿನ ಸಮಯದಲ್ಲಿ ಅಖಿಲ ಭಾರತ ಕಾಂಗ್ರೆಸ್ ಸಮಿತಿಯು ಸಭೆ ಸೇರಿ ಸಂಸ್ಥೆಯ ಪುನರುಜ್ಜೀವನದ ಬಗ್ಗೆ ಮಾಡಿರುವ ತೀರ್ಮಾನವು ಸಕಾಲಿಕವಾಗಿದೆ. ಕಾಂಗ್ರೆಸ್ ಕಾರ್ಯಕಾರಿ ಮಂಡಳಿಯು ಬಯಸಿದಂತೆ ಕಾಂಗ್ರೆಸ್ ಸಂಸ್ಥೆಯ ಅಧಿಕಾರದಲ್ಲಿರುವವರು, ಕಾಂಗ್ರೆಸ್ ಸಮಿತಿಗಳನ್ನು ಬಿಟ್ಟು ಹೊರಗೆ ನಿಂತಿರುವವರು ಮತ್ತು ಕಾಂಗ್ರೆಸ್ ಧ್ಯೇಯವನ್ನು ಒಪ್ಪಿದರೂ ಹೊರಗಿರುವವರು ಒಟ್ಟುಗೂಡಿ ಸಂಸ್ಥೆಯ ಶಕ್ತಿಯನ್ನು ಈ ಹಿಂದೆ ಇದ್ದಂತೆ ಹೆಚ್ಚಿಸಲು ಸರ್ವಪ್ರಯತ್ನ ಮಾಡಬೇಕಾಗಿದೆ. ಹಿಂದೂಸ್ಥಾನಕ್ಕೆ ಸ್ವಾತಂತ್ರ್ಯವನ್ನು ಒದಗಿಸಿದ ಕಾಂಗ್ರೆಸ್ಸು ಕೆಲವೊಂದು ಗುಂಪಿನವರ ಸಂಸ್ಥೆಯಾಗಿರಲು ಬಿಡಬಾರದು. ದೇಶದ ಹಿತವನ್ನು ಬಯಸುವವರೆಲ್ಲರಿಗೆ ಅದರಲ್ಲಿ ಸ್ಥಳವಿರುವಂತೆ ಮಾಡಬೇಕು. ಗಾಂಧೀಜಿಯವರು ಸ್ಪಷ್ಟವಾಗಿ ಹೇಳಿದಂತೆ ಆರ್ಥಿಕ, ಸಾಮಾಜಿಕ ಮತ್ತು ನೈತಿಕ ಅಭಿವೃದ್ಧಿಗೆ ಅವಕಾಶವಿಲ್ಲದ ರಾಜಕೀಯ ಸ್ವಾತಂತ್ರ್ಯದಲ್ಲಿ ಅರ್ಥವಿಲ್ಲ. ಕಾಂಗ್ರೆಸು ಹಿಂದೆ ಜನಾನುರಾಗಿಯಾಗಿದ್ದು ಆ ಖಂಡಶಕ್ತಿಯುತ ಸಂಸ್ಥೆಯೆಂದೆನಿಸಿದ್ದರೆ ಅದು ಅಂದು ಜನತೆಯ ಹಿತಕ್ಕಾಗಿ ಹಾಕಿದ ವಿಧಾಯಕ ಕಾರ್ಯಕ್ರಮಗಳ ಆಧಾರದ ಮೇಲೆ. ವಿಧಾಯಕ ಕಾರ್ಯಕ್ರಮಗಳಿಗೆ ಸಾಕಷ್ಟು ಗಮನಕೊಡದ ಕಾರಣವೇ ಇಂದು ಕಾಂಗ್ರೆಸ್ಸು ಜನತೆಯ ದೃಷ್ಟಿಯಲ್ಲಿ ಕೆಳಗಿಳಿಯತೊಡಗಿದೆ. ಆದ್ದರಿಂದ ಕಾಂಗ್ರೆಸು ಪುನಹ ಜನತೆಯ ನಚ್ಚಿನ ಸಂಸ್ಥೆಯಾಗಿ, ಭರತಖಂಡದ ಸಾರ್ವಭೌಮವಾಗಬೇಕಾದರೆ ಜನಹಿತಕ್ಕಾಗಿ ಕೆಲಸ ಮಾಡುವ ಸರಕಾರದೊಡನೆ ಕಾಂಗ್ರೆಸ್ಸೂ ತನ್ನ ಪಾಲಿನ ಕರ್ತವ್ಯವನ್ನು ಸಕ್ರಿಯವಾಗಿ ನಡೆಸಬೇಕು. ಆದ್ದರಿಂದ ಕಾಂಗ್ರೆಸನ್ನು ಉಳಿಸಿ ಅದರ ಹಿಂದಿನ ಘನತೆಯನ್ನು ಮತ್ತಷ್ಟು ಬೆಳಗಿಸುವ ಜವಾಬ್ದಾರಿ ಕಾಂಗ್ರೆಸ್ ಕೆಲಸಗಾರರ ಮೇಲಿದೆ. ಕೆಲಸಗಾರರೆಲ್ಲರೂ ಸಹಕರಿಸಿ ರಾಷ್ಟ್ರ ಸಂಸ್ಥೆಯನ್ನು ಪುನರುಜ್ಜೀವನಗೊಳಿಸುವದು ಅದ್ಯಕರ್ತವ್ಯವಾಗಿದೆ.

ವರ್ತಮಾನ.

ಮಡಿಕೇರಿ ಮಹಿಳಾ ಸಹಕಾರ ಸಂಘದವರು ಮಹಾತ್ಮಾಗಾಂಧಿಯವರ ನಿಧನ ದಿನವನ್ನು ತಾರೀಕು ೩೦-೧-೫೧ರಲ್ಲಿ ಆಚರಿಸಿದರು. ಮಹಾತ್ಮರ ಭಾವಚಿತ್ರವಿಟ್ಟು ಎಲ್ಲರೂ ಸೇರಿ ರಾಮಧೂನ್ ಮತ್ತಿತರ ಗಾಂಧೀಜಿಗೆ ಪ್ರಿಯವಾದ ಕೀರ್ತನೆಗಳನ್ನು ಹಾಡಿದರು.

ಕೊಡಗು ಅಂತರ್ ಹೈಸ್ಕೂಲು ಆಟೋಟಗಳ ಸ್ಪರ್ಧೆಯು ತಾ. ೩೦ರಿಂದ ೬-೨-೫೧ರ ವರೆಗೆ ವೀರಾಜಪೇಟೆಯಲ್ಲಿ ನಡೆಯುವದು. ಕಡೇದಿನ ಜಿಲ್ಲಾ ವಿದ್ಯಾಧಿಕಾರಿಗಳಾದ ಶ್ರೀ. ಬಿ. ಎಸ್. ಕುಶಾಲಪ್ಪನವರು ಬಹುಮಾನ ವಿತರಣೆ ಮಾಡುವರು.

ಅಖಿಲ ಭಾರತ ಗ್ರಾಮೋದ್ಯೋಗ ಸಂಘದ ಅಧ್ಯಕ್ಷರಾದ ಶ್ರೀ. ಜೆ. ಸಿ. ಕುಮಾರಪ್ಪನವರಿಂದ ಪಶ್ಚಿಮವಾಹಿನಿಯಲ್ಲಿ ಉದ್ಘಾಟಿಸಲ್ಪಡುವ ಸರ್ವೋದಯ ಪಕ್ಷ ಆಚರಣೆಗೆ ಶನಿವಾರಸಂತೆಯ ಶ್ರೀ. ಬಿ. ಕೆ. ಶಾಂತವೀರಪ್ಪನವರನ್ನು ಕೊಡಗಿನ ಪರವಾಗಿ ಬದನವಾಳ ಖಾದಿ ಕೇಂದ್ರದವರು ಆರಿಸಿಕೊಂಡಿರುವರು.

ಗೋಣಿಕೊಪ್ಪಲು ಜಾನುವಾರುಗಳ ಜಾತ್ರೆಯು ತಾ. ೧೪-೨-೫೧ ರಿಂದ ೧೮-೨-೫೧ರ ವರೆಗೆ ನಡೆಯುವದೆಂದು ತಿಳಿಯಬಂದಿದೆ.

ಮಡಿಕೇರಿ ಮುನ್ಸಿಪಾಲಿಟಿಯೋಗರುವ ಉತ್ತಮ ಹೂತೋಟಗಳಿಗೆ ಬಹುಮಾನ ಕೊಡಲ್ಪಡುವದೆಂದೂ, ಈ ಸ್ಪರ್ಧೆಯಲ್ಲಿ ಭಾಗವಹಿಸಲಿಚ್ಛಿಸುವವರು ಎರಡು ರೂಪಾಯಿ ಪ್ರವೇಶ ಧನದೊಂದಿಗೆ ರೆಡ್‌ಕ್ರಾಸ್ ಸಂಘದ ಮಡಿಕೇರಿ ಶಾಖೆಯ ಕಾರ್ಯದರ್ಶಿಗೆ ಬರೆಕೊಳ್ಳಬಹುದೆಂದೂ ತಿಳಿಸುತ್ತಾರೆ.

ನ್ಯೂಸ್ಟಾರ್ ಬ್ಯಾಡ್‌ಮಿಂಟನ್ ಕ್ಲಬಿನ ಸ್ಪರ್ಧೆಯು ಶೀಘ್ರ ನಡೆಯಲಿದೆಯೆಂದೂ ತಾ. ೧೦ರಲ್ಲಿ ಟೈಸ್ ಡ್ರಾ ಮಾಡುವ ಕಾರಣ ಸ್ಪರ್ಧಿಸಲಿಚ್ಛಿಸುವವರು ರೂ. ೫ ಗ್ರೌಂಡ್ ಫೀಜಿನೊಡನೆ ಬರೆಕೊಳ್ಳಬಹುದೆಂದೂ, ವಿನ್ನರ್ಸ್ ಮತ್ತು ರನ್ನರ್ಸ್ ಅವರ್‌ಗಳಿಗೂ ಪ್ರತ್ಯೇಕ ಬಹುಮಾನ ಕೊಡಲ್ಪಡುವದೆಂದೂ ತಿಳಿಸುತ್ತಾರೆ.

ಕಡಗದಾಳು ಗ್ರಾಮದ ಹರಿಜನ ಮುಗ್ಗ ಎಂಬುವವನು ಕೋವಿ ಹಿಡಿದುಕೊಂಡು ಕಾಡಿನಲ್ಲಿ ಹೋಗುತ್ತಿದ್ದಾಗ ಬಳ್ಳಿ ತಡೆದು ಗುಂಡು ಹಾರಿ ಅದು ಆತನ ಕಾಲಿಗೆ ತಗಲಿ ಜಖಂ ಆಯಿತೆಂದೂ ಆತನನ್ನು ಆಸ್ಪತ್ರೆಗೆ ತಂದು ಕಾಲು ಕತ್ತರಿಸಿ ಉಪಚಾರ ಮಾಡಿದರೂ ಆತನು ಮೃತನಾದನೆಂದೂ ತಿಳಿಯಬರುತ್ತದೆ.

ಮಡಿಕೇರಿ ಮಾಂಸ ವ್ಯಾಪಾರ ಮಾಡುವ ಎಚ್. ಜಿ. ಅಬೂಬಕರ್ ಸಾಹೇಬರವರು ತೂಕ ಕಡಿಮೆ ಮಾಡಿ ಮಾಂಸ ಮಾರಿದರೆಂಬ ಕಾರಣ ಕೇಸು ಮಾಡಲಾಗಿ ಮಡಿಕೇರಿ ಫಸ್ಟ್‌ಕ್ಲಾಸ್ ಮೇಜಿಸ್ಟ್ರೇಟರು ಅವರಿಗೆ ೫೦ ರೂ ಜುಲ್ಮಾನೆ, ಜುಲ್ಮಾನೆ ಕೊಡಲು ತಪ್ಪಿದರೆ ಒಂದು ತಿಂಗಳ ಕಠಿಣ ಸಜೆ ವಿಧಿಸಿರುವರೆಂದು ವರ್ತಮಾನ.

ಬೂದುವರ್ಣದ ಎತ್ತೊಂದು ಹದಿಕೇರಿಯ ಶ್ರೀ. ಕಿರಿಯಮಾಡ ಚೆಳ್ಳಪ್ಪನವರ ದನಗಳ ಜೊತೆಯಲ್ಲಿ ಕಳೆದ ಎರಡು ವಾರಗಳಿಂದ ಸೇರಿಕೊಂಡಿದೆಯೆಂದೂ ಮಾಲೀಕರು ತಕ್ಕ ರುಜುವಾತಿನಿಂದ ಹೊಡೆದುಕೊಂಡು ಹೋಗಬಹುದಾಗಿಯೂ ತಿಳಿಸುತ್ತಾರೆ.

ಕೊಡಗು ಮಾಜಿ ಸಿಪಾಯಿಗಳ ಸಂಘದ ವಾರ್ಷಿಕ ಮಹಾಸಭೆಯು ತಾರೀಕು ೧೧ ರಲ್ಲಿ ನಡೆಯುವುದು.

ಕಾಲೇಜು ಕಟ್ಟಡ ಕೆಲಸದ ಕಂಟ್ರಾಕ್ಟನ್ನು ಕೆ. ಸಿ. ದಾವರ್ ಕಂಪೆನಿಯವರಿಗೆ ಕೊಟ್ಟಿದ್ದು ಅವರು ತಾರೀಕು ೧-೨-೫೧ರಿಂದ ಕೆಲಸ ಪ್ರಾರಂಭಿಸಿರುವರು.

ಕೊಡಗಿಗೆ ವಿದ್ಯುಚ್ಛಕ್ತಿಯ ಸರಬರಾಯಿಯ ಬಗ್ಗೆ ಮಾತುಕತೆ ನಡೆಸಲು ಚೀಫ್ ಕಮಿಷನರು ತಾ. ೨೯ರಲ್ಲಿ ಬೆಂಗಳೂರಿಗೆ ಹೋಗಿದ್ದು ತಾ. ೧-೨-೫೧ರಲ್ಲಿ ವಾಪಾಸು ಬಂದರು.

ಮಾರಾಟ ಬತ್ತ ಸಂಗ್ರಹದ ವಿಷಾರ್ಡು.

ಈ ವಿಚಾರವನ್ನು ಕುರಿತು ಕಳೆದ ವಾರ ಪ್ರಕಟಿಸಿದ ನಂತರ ಇನ್ನೂ ಸ್ವಲ್ಪ ಬದಲಾವಣೆಗಳಾಗಿವೆ. ಕಳೆದ ತಾ ೨೭ನೇ ಶನಿವಾರ ಸಹಕಾರಿ ಫೆಡರೇಷನಿನ ಮತ್ತು ಬತ್ತ ವ್ಯಾಪಾರಸ್ಥರ ಸಂಘದ ಪ್ರತಿನಿಧಿಗಳು ರೇಶನಿಂಗ್ ಡೈರೆಕ್ಟರೊಂದಿಗೆ ನಡೆಸಿದ ಮತ್ತು ಫೆಡರೇಶನ್ ಪ್ರೆಸಿಡೆಂಟರು ತಾ ೨೮ರ ಬೆಳಿಗ್ಗೆ ಚೀಫ್ ಕಮಿಷನರೊಂದಿಗೆ ನಡೆಸಿದ ಚರ್ಚೆಯ ಫಲಿತಾಂಶವಾಗಿ ಬತ್ತ ಸಂಗ್ರಹದಲ್ಲಿ ಈ ಕೆಳಗಿನ ಬದಲಾವಣೆಗಳು ಮಾಡಲ್ಪಟ್ಟಿವೆ.

ಈ ಮೊದಲಿನಂತೆಯೇ ಮಾರ್ಕೆಟಿಂಗ್ ಫೆಡರೇಶನ್ ಮತ್ತು ವ್ಯಾಪಾರಸ್ಥರ ಸಂಘದವರು ಚೀಫ್ ಏಜಂಟರಾಗಿ ಕೆಲಸ ಮಾಡುವರು. ಪ್ಲಾಂಟರುಗಳು ಮುಖ್ಯವಾಗಿ ಅವರ ತೋಟಗಳ ಸುತ್ತುಮುತ್ತಲಿನ ಪ್ರದೇಶಗಳಲ್ಲಿ ನಿರ್ದಿಷ್ಟ ರೈತರು ತಮ್ಮ ಮಾರಾಟ ಬತ್ತದ ಪರ್ಮಿಟ್ಟನ್ನು ಹೊಂದಿಕೊಂಡವರಿಂದ ಅವರಿಗೆ ನಿಶ್ಚಯಿಸಲ್ಪಟ್ಟಷ್ಟು ಬತ್ತವನ್ನು ನೇರವಾಗಲೀ ಯಾ ಲೈಸೆನ್ಸು ಪಡೆದ ಸಬ್ ಏಜಂಟರ ಮೂಲಕವಾಗಲೀ ಪಡೆಕೊಳ್ಳಬಹುದು. ಎರಡು ಚೀಫ್ ಏಜಂಟರುಗಳ ಅಧೀನದಲ್ಲಿ ಸಹಕಾರಿ ಸಂಸ್ಥೆಗಳು ಮತ್ತು ವಯಕ್ತಿಕ ಹೆಸರಿಯರು ಸಬ್ ಏಜಂಟರುಗಳಾಗಲೀ ಯಾ ರೈತರೇ ತಮ್ಮ ಬತ್ತವನ್ನು ತಾವಾಗಿಯಾಗಲೀ ಸಂಗ್ರಹಮಾಡಿ ರೇಶನಿಂಗ್ ಆಫೀಸರು, ಚೀಫ್ ಏಜೆಂಟರ ಸವೇತ ವಾರಕ್ಕೊಮ್ಮೆ ನಿಶ್ಚಯಿಸುವ ಕಾರ್ಯಕ್ರಮದಂತೆ ಲೋಡಿಂಗ್ ಸೆಂಟರುಗಳಲ್ಲಿ (ಮುಖ್ಯವಾಗಿ ದಕ್ಷಿಣ ಕೊಡಗಿನಲ್ಲಿ) ಬತ್ತವನ್ನು ಮಿಲ್ಲು ಮಾಲೀಕರಿಗೂ ಇತರ ಪರ್ಮಿಟ್ಟು ಹೊಂದಿಕೊಂಡವರಿಗೂ ಸರಕಾರಿ ಇನ್ಸ್‌ಪೆಕ್ಟರ ಮತ್ತು ಚೀಫ್ ಏಜಂಟರ ಪ್ರತಿನಿಧಿಗಳ ಸಮ್ಮುಖದಲ್ಲಿ ಮಾರಾಟ ಮಾಡಿ ಬತ್ತದ ಕ್ರಯವನ್ನು ಪಡೆಯತಕ್ಕದ್ದು. ಲೋಡಿಂಗ್ ದಿನಗಳಲ್ಲಿ ಲೋಡಿಂಗ್ ಸೆಂಟರಿನಿಂದ ಲಾರಿಗಳು ಹೋಗಬಹುದಾದ ಸಮೀಪ ಸ್ಥಳಗಳಿಂದ ಬತ್ತವನ್ನು ಲಾರಿಗಳಲ್ಲಿ ತುಂಬಿ ತಂದು ಸಂಬಂಧಪಟ್ಟ ಸೆಂಟರುಗಳಲ್ಲಿ ಸರಕಾರಿ ಇನ್ಸ್‌ಪೆಕ್ಟರ ಮುಂದೆ ಲೆಕ್ಕಚಾರವನ್ನು ತೀರಿಸಬೇಕಾಗುವದು. ಮಿಲ್ ಮಾಲೀಕರು ಬತ್ತವನ್ನು ಕೊಂಡುಕೊಂಡು ಅಕ್ಕಿ ಮಾಡಿ ಹೊರ ಪ್ರದೇಶಗಳಿಗೆ ರವಾನಿಸಬೇಕಿರುವದರಿಂದ ಅವರು ಲೈಸೆನ್ಸ್ ಪಡೆದ ಸಬ್ ಏಜಂಟರುಗಳಾಗಿರತಕ್ಕದ್ದು. ಉಳಿದ ನಿರ್ಧಾರಗಳು ಈ ಮೊದಲು ಪ್ರಕಟಿಸಿದಂತೆ ಇರುವವು. ಬತ್ತದ ಕ್ರಯವನ್ನು ಏರಿಸಬೇಕೆಂದು ಸ್ಥಳೀಯ ಸರಕಾರವು ಇಂಡಿಯಾ ಸರಕಾರಕ್ಕೆ ಬರೆದುದಕ್ಕೆ ಇನ್ನೂ ಜವಾಬು ಬರಲಿಲ್ಲವೆಂದು ತಿಳಿಯ ಬರುತ್ತದೆ. ಇವೇ ವಿಚಾರಗಳನ್ನು ಚೀಫ್ ಕಮಿಷನರವರು ತಾರೀಕು ೨೮ರ ರಾತ್ರೆಗೆ ಕರೆಕೊಳ್ಳಲಿಸ ಬತ್ತ ಮಾರಾಟ ಮಾಡುವವರ ಪರ ನಿಯೋಗಗೋಷ್ಠಿ ಬಂದವರಿಗೆ ತಿಳಿಸಿರುವರೆಂದೂ ಗೊತ್ತಾಗಿದೆ.

ಸಾರ್ವಜನಿಕರಲ್ಲಿ ವಿನಂತಿ.

ನನ್ನ ಬಾಪ್ತು ಕಪ್ಪು ಮತ್ತು ಕೆಂಪು ಮಿಶ್ರ ಬಣ್ಣದ, ಹೊಟ್ಟೆಯ ಕೆಳಗಡೆ ಬಿಳಿಪು ಚುಕ್ಕೆ ಇರುವ, ಅ ದಾಜು 3½ ಅಡಿ ಎತ್ತರದ ಒಂದು ಎರಡು ಇಂಚು ಉದ್ದ, ಸಾಧಾರಣ ಅಡ್ಡ ಕೋಡಿನ ಎತ್ತು ಬೀದಿ ಕಳೆದ ಎರಡು ವಾರಗಳಿಂದ ಕಾಣದಿಯಾಗಿದೆ. ಮಹನೀಯರುಗಳು ಯಾರಾದರೂ ಪತ್ತೆ ಮಾಡಿ ಕೊಟ್ಟವರಿಗೆ ಹತ್ತು ರೂಪಾಯಿ ಇನಾಮು ಕೊಡಲಾಗುತ್ತದೆ. ಪತ್ತೆ ಹಚ್ಚಿ ಈ ಕೆಳಗಿನ ಅಡ್ರೆಸಿಗೆ ತಿಳಿಸಬೇಕಾಗಿ ಕೋರುತ್ತೇನೆ.

ಉಳ್ಳಿಯಡ ಕೆ. ಮುದ್ದಪ್ಪ.
ಮರ್ಚೆಂಟ್,
ವೀರರಾಜಪೇಟೆ.

2-1

ಓದುಗರ ಓಲೆಗಳು

ಆಂಟಿಮಲೇರಿಯಾ ಆಫೀಸರಲ್ಲಿ.

ನಮ್ಮ ಊರು ಈ ಇಲಾಖೆಯವರ ಗೊತ್ತಿನಲ್ಲಿ ಇಲ್ಲ! ನಾಪೋಕ್ಲಿನಿಂದ ಮಲೇರಿಯಾ ಡಿಪಾರ್ಟ್ಮೆಂಟಿನವರು ಬರುವುದಿಲ್ಲ; ಮಡಿಕೇರಿ ಪಾರ್ಟಿಯವರು ಅದಕ್ಕಿಂತ ಮೊದಲೇ ಬರುವುದಿಲ್ಲ. ಸರಕಾರ ಸಂಸ್ಥೆ ಕೊಡಗಿನಲ್ಲಿ ಸ್ಥಾಪನೆಯಾಗಿ ಇಲ್ಲಿಯ ತನಕ ಒಂದೇ ಒಂದು ಸಾರಿ ನಮಗೆ ಬಂದು ಮದ್ದು ಸ್ಪ್ರೇ ಮಾಡಿರುತ್ತಾರೆ ಎಂದು ಹೇಳಿದರೆ ಯಾರಿಗೆ ತಾನೆ ಆಶ್ಚರ್ಯವಾಗಲಿಕ್ಕಿಲ್ಲ? ವರ್ಷಕೊಮ್ಮೆ ಕಾವೇರಿ ಸಂಕ್ರಮಣಕ್ಕೆ ವ್ಯಾನ್ ತೆಗೆದುಕೊಂಡು ರಥಸದಲ್ಲಿ ಬರುತ್ತಾರೆ; ಹೋಗುತ್ತಾರೆ! ಈ ಸಲ ಅಲ್ಲೆ ಭಾಗಮಂಡಲ ಹತ್ತಿರ ನೆರೆಕರೆಗಳಲ್ಲಿ ಸ್ಪ್ರೇ ಮಾಡಿರುತ್ತಾರೆ. ಆದರೆ ನಮ್ಮೂರು ನ ಕೂರು ಅಂದರೆ ಬಂಗತ್ಲೂರು, ಚೆರಂಡೇಟಿ, ಕುಂದಚೇರಿ ಮತ್ತು ಕದಕಲ್ಲು; ದೃಷ್ಟಿಗೆ ಬೀಳುವುದೇ ಇಲ್ಲವೆಂದು ಊಹಿಸಬೇಕಾಗಿದೆ. ನಾವು ಕೂಗುವ ಮಗ ಜಿನ ಗುಂಪಿಗೆ ಸೇರಲಿಲ್ಲವಾದುದರಿಂದ ನಮ್ಮ ಪರಿಸ್ಥಿತಿಯು ಅವರಿಗೆ ತಿಳಿಯಲಿಲ್ಲವೆಂದು ಕಾಣುತ್ತೆ.

ಹಾಗಾದರೆ ನಮ್ಮೂರಿನಲ್ಲಿ ಮಲೇರಿಯಾ ಇಲ್ಲವೋ? ವರ್ಷಕ್ಕೊಮ್ಮೆ ಭಾಗಮಂಡಲ ಜಾತ್ರೆಗೆ ಬಂದಿದ್ದಾಗ ಇಲ್ಲಿ ಡೇರೆ ಹೊಡೆದು ಔಷಧಿ ಮತ್ತು ಸಂಸ್ಥೆಯ ಕಾರ್ಯಚರಣೆ ವಿಷಯ ಕಾಗದಪತ್ರಗಳನ್ನು ತೂಗಹಾಕಿದರೆ ಮಲೇರಿಯಾ ನಿವಾರಣೆಯಾದಂತಾಯಿತೆ? ಕೊಡಗಿನ ಕೆಲವು ಕಡೆಗಳಲ್ಲಿ ವರ್ಷಕ್ಕೆ ಎರಡು ಮೂರು ಸಾರಿ ಸ್ಪ್ರೇ ಮಾಡುತ್ತಿದ್ದಾರೆಂದು ಕೇಳಬಲ್ಲೆವು. ಪೇಟೆ ಪಟ್ಟಣಗಳಲ್ಲಿಯನ್ನು ಇದೇ ರೀತಿ ಡಿ ಡಿ ಟಿಯಿಂದ ಶುದ್ಧೀಕರಣ ನಡೆಸುತ್ತಲಿದ್ದಾರೆ. ಹಾಗಿರುವಾಗ ಮಲೆನಾಡಿನಂತಿರುವ ಭಾಗಮಂಡಲನಾಡಿನ ಮೇಲೆ ದೃಷ್ಟಿ ಬೀಳುವುದಿಲ್ಲವೆಂದರೆ ಏನರ್ಥ? ಹತ್ತು ಹನ್ನೆರಡು ಗ್ರಾಮಗಳಿಂದ ಕೂಡಿ ಇದೊಂದು ನಾಡಾಗಿರುವಾಗ ಇಲ್ಲೊಂದು ಮಲೇರಿಯಾ ಶಾಖೆಯನ್ನೇ ತೆರೆಯಬಹುದಾಗಿತ್ತು. ಅದು ಅಸಾಧ್ಯವಾದರೂ ವರ್ಷಕ್ಕೆ ಎರಡು ಸಾರಿ ಯೂ ನಮ್ಮ ಬಾರದಿದ್ದರೆ ಹೇಗೆ? ಸರಕಾರ ಸಂಸ್ಥೆಯವರು ಇದನ್ನು ಪರಿಶೀಲಿಸಿ ತಂದು ನಮ್ಮ ಮನವಿಗೆ ಮನ್ನಣೆ ಕೊಡಬೇಕೆಂದು ಪ್ರಾರ್ಥಿಸುತ್ತೇವೆ.

(ನಾಡಿಗ.)

ಬಸ್ಸಿನ ಅನಾನುಕೂಲ.

ಕೊಡಗಿನಲ್ಲಿ ದಿನೇ ದಿನೆ ಬಸ್ಸು ಹೆಚ್ಚುತ್ತಲೇ ಇವೆ. ಮಡಿಕೇರಿಯಿಂದ ಸಿದ್ಧಾಪುರ ಮಾರ್ಗವಾಗಿ ಹಲವು ಬಸ್ಸುಗಳು ಇವೆ. ಆದರೆ ಮಡಿಕೇರಿಯಿಂದ ಮೂರ್ನಾಡು ಮಾರ್ಗವಾಗಿ ಬೆಳಗ್ಗೆ ೮ ಗಂಟೆಗೆ ಒಂದು ಬಸ್ಸು ಮಾತ್ರ ಹೊರಡುತ್ತೆ. ತಪ್ಪಿದರೆ ಮೂರ್ನಾಡಿನಿಂದ ಬರುವ ಜನರು ರಾತ್ರೆ ಗಂಟೆಯ ವರೆಗೆ ಪರಿತಪಿಸುವಂಥಾ ಅವಸ್ಥೆಯಾಗುತ್ತೆ. ಇದರಿಂದ ಬೆಳಗ್ಗೆ ಬರುವ ಪ್ರಯಾಣಿಕರಿಗೆ ಬಹಳ ತೊಂದರೆಯುಂಟಾಗುತ್ತೆ. ಇದನ್ನು ಬಿಟ್ಟು ಈ ಪೊಪಲು ಇನ್ನಂತೆ ಬೆಳಗ್ಗೆ ೮ ಗಂಟೆಗೆ ಒಂದು ಬಸ್ಸು, ೯ ಗಂಟೆ ಸಮಯಕ್ಕೆ ಒಂದು ಬಸ್ಸು ಬಂದರೆ ಜನರಿಗೆ ಅನುಕೂಲವಾಗುತ್ತೆ. ಹೇಗೂ ವೀರಾಜಪೇಟೆಯಿಂದ ಮೂರ್ನಾಡು ಮಾರ್ಗವಾಗಿ ಮಧ್ಯಾಹ್ನ ೧೨ ಗಂಟೆಗೆ ಜಗದೀಶ್ವರ ಬಸ್ಸು ನಾಪೋಕ್ಲಿಗೆ ಹೋಗುತ್ತೆ. ಇದು ಬಿಟ್ಟು ನೆಟ್ಟಗೆ ಮಡಿಕೇರಿಗೆ ಹೋಗಿ ವಾಪಾಸು ಬರುವುದಾದರೆ, ಈ ಮೊದಲಿನಂತೆ ಬೆಳಗ್ಗೆ ಎರಡು ಬಸ್ಸು ಸಾಯಂಕಾಲ ಎರಡು ಬಸ್ಸು ಆಗುತ್ತೆ. ಪ್ರಯಾಣಕ್ಕೆ ಅನುಕೂಲವಾಗುತ್ತೆ. ಒಡನೆಯೇ ಈ ವಿಚಾರಕ್ಕೆ ವಿಗಕೊಟ್ಟು ಸಾರ್ವಜನಿಕರ ಹಿತಕ್ಕಾಗಿ ಈ ವಿಷಯದಲ್ಲಿ ತಕ್ಕ ಏರ್ಪಾಡು ಮಾಡಬೇಕಾಗಿದೆ.

ಪ್ರಯಾಣಿಕ.

ಅವಶ್ಯ ಓದಬೇಕಾದ ಮೂರು ಪುಸ್ತಕಗಳು.

ಕೊಡಗು ಸುಭಿಕ್ಷೆಯ ನಾಡೆಂದೆನಿಸಿದರೂ, ಕವಿಗಳಿಗೆ, ಸಾಹಿತಿಗಳಿಗೆ ಇಲ್ಲಿ ಬರಗಾಲವಿದೆ. ಈ ನ್ಯೂನತೆಯನ್ನು ಪರಿಹರಿಸುವಂತೆ ಸರಳ ಶೈಲಿ, ಉತ್ತುಂಗ ಭಾವದಿಂದ ಕೂಡಿ ಬರೆಯಲ್ಪಟ್ಟಿರುವ ಜೀವನ ಮಾರ್ಗದಲ್ಲಿ ಬೆಳಕು ಚೆಲ್ಲಬಲ್ಲ

ಪ್ರತಿಧ್ವನಿ (ಕವನ ಸಂಗ್ರಹ)

ಕುಸುಮುಚಯ (ಚಿಕ್ಕ ಕಥೆಗಳ ಸಂಗ್ರಹ)

ಪತ್ರಾವಳಿ (ರಾಗ ಪತ್ರಗಳು)

ಎಂಬ ಮೂರು ಪುಸ್ತಗಳು ಶೀಘ್ರ ಪ್ರಕಟವಾಗಲಿವೆ. ಪ್ರಕಟಣಾ ತಾರೀಕನ್ನು ಗಮನಿಸಿರಿ.

ಸಮ್ಬಂಧಪಟ್ಟ ಅಧಿಕಾರಿಗಳಲ್ಲಿ ವಿನಂತಿ.

ಹೊದ್ದೂರು ಗ್ರಾಮದ ಮಧ್ಯದಲ್ಲಿರುವ ಶಾಲೆಯು ಮೂರ್ನಾಡು, ನಾಪೋಕ್ಲು ಮಧ್ಯವಾಗಿ ಹಾದುಹೋಗುವ ರಸ್ತೆಯ ಕರೆಯಲ್ಲಿರುತ್ತೆ. ಶಾಲೆಯ ಎರಡು ಕಡೆಗಳಿಂದ ಸ್ವಲ್ಪ ದೂರದಿಂದಲೇ ರಸ್ತೆಯು ಡೊಂಕು ಡೊಂಕು ಇರುತ್ತೆ. ಅದರಲ್ಲೂ ಶಾಲೆಯು ಇರುವ ಸ್ಥಳದಲ್ಲಿ ರಸ್ತೆಯು ಶಾಲೆಯನ್ನು ಸುತ್ತಿಕೊಂಡು ಹಾದುಹೋಗುವಂತಿದೆ. ಗಾಡಿಯ ರಸ್ತೆಯು ಹೆಚ್ಚು ಅಗಲವಿಲ್ಲದೆ ಒಂದೊಂದು ಸ್ಥಳದಲ್ಲಿ ಬಸ್ಸು ಯಾ ಲಾರಿ ಹೋಗಲು ಮಾತ್ರ ಸ್ಥಳವಿರುತ್ತೆ. ಈ ರಸ್ತೆಯಲ್ಲಿ ಹಲವು ಬಸ್ಸುಗಳೂ, ಮರವ್ಯಾಪಾರಿಗಳ ಲಾರಿಗಳೂ ಬೇಕಾದಷ್ಟು ಓಡಾಡುತ್ತವೆ. ಅವುಗಳಿಗೆ ಬರ್ತ ವ್ಯಾಪಾರದ ಸಮಯ. ಲಾರಿ ಮಾಲೀಕರಿಗೆ ಲೆಕ್ಕವಿಲ್ಲ. ಈ ಶಾಲೆಗೆ ಗ್ರಾಮದಿಂದ ಸಣ್ಣ ಸಣ್ಣ ಮಕ್ಕಳು ಬರುವುದರಿಂದ ರಭಸದಿಂದ ಬರುತ್ತಿರುವ ವಾಹನಗಳಿಗೆ ಥಕ್ಕನೆ ಹಾದುಬಿಡುವ ಅವಕಾಶವಿರುವುದಲ್ಲ. ಆದ ಕಾರಣ ಸಮ್ಬಂಧಪಟ್ಟ ಅಧಿಕಾರಿಗಳು ಶಾಲೆಯಿಂದ ಎರಡು ಫರ್ಲಾಂಗು ದೂರದಲ್ಲಿ ರಸ್ತೆಯ ಇಕ್ಕೆಡೆಯಲ್ಲಿಯೂ ವಾಹನ ಚಲಾಯಿಸುವವರು ನಿಧಾನವಾಗಿ ಬಿಡುವಂತೆ ಎಚ್ಚರಿಕೆ ಬೋರ್ಡು ಇರಿಸುವಂತೆ ಒಡನೆ ಮಾಡಬೇಕಾಗಿದೆ.

N. P. K.

ವೀರಾಜಪೇಟೆ ಮುನ್ಸಿಪಲ್ ಪ್ರೆಸಿಡೆಂಟರಲ್ಲಿ

ರೇಶನಿಂಗ್ ಬಂದ ಲಾಗಾಯಿತಿನಿಂದ ನಿಯಂತ್ರಿತ ಸಾಮಾನುಗಳು ಪುರಜನರಿಗೆ ಸಿಕ್ಕದೆ ತುಂಬಾ ತೊಂದರೆಯಾಯಿತು. ಆದರೆ ಕಳೆದ ತಿಂಗಳಿನಿಂದ ಸಕ್ಕರೆ ಕೂಪನ್ ಹಂಚುವ ವಿಷಯದಲ್ಲಿ ಮುನ್ಸಿಪಾಲಿಟಿ ಪ್ರಸಿಡೆಂಟರಾದ ನಿಮ್ಮ ಆಜ್ಞೆಯಂತೆ ಮುನ್ಸಿಪಲ್ ಉದ್ಯೋಗಸ್ಥರು ಸರಕಾರಿ ನಿಯಂತ್ರಣ ಅಧಿಕಾರಿಗಳಿಗೆಸಹಾಯವಿತ್ತು ಮುನ್ಸಿಪಾಲಿಟಿಯಲ್ಲಿರುವ ಪ್ರತಿಯೊಬ್ಬನಿಗೂ ಸರಿಯಾದ ರೀತಿಯಲ್ಲಿ ಸಕ್ಕರೆ ಕೂಪನ್ ದೊರೆಯುವಂತೆ ಏರ್ಪಡಿಸಿದ್ದಕ್ಕೆ ತುಂಬಾ ಕೃತಜ್ಞರಾಗಿರುವೆವು. ಇದೇ ರೀತಿ ಅಕ್ಕಿಯ ರೇಶನ್ ಕಾರ್ಡನ್ನೂ ಮುನ್ಸಿಪಾಲಿಟಿಯಲ್ಲಿರುವ ಕೊಡುಕೊಂಡು ಉಪಯೋಗಿಸುವವರ ಲೆಕ್ಕ ತೆಗಿಸಿ ಅವರಿಗೆ ಸರಿಯಾಗಿ ಕೂಪನ್ ಕೊಡಿಸುವ ಏರ್ಪಾಡು ಮಾಡಬೇಕಾಗಿ ಕೇಳುವದಾಗಿದೆ.

ಪಟ್ಟಣಿಗರು.

ಬಿ ಎ ತರಗತಿ.

ಬರುವ ವರ್ಷ ಕೊಡಗಿನ ಸರಕಾರಿ ಕಾಲೇಜಿನಲ್ಲಿ ಬಿ. ಎ ತರಗತಿ ತೆರೆಯಲ್ಪಡುವುದಿಲ್ಲವೆಂದೂ ಇದಕ್ಕೆ ಕಟ್ಟಡವಾಗದಿರುವದೇ ಕಾರಣವೆಂದೂ ತಿಳಿದೆನು. ಈ ವರ್ಷ ಈ ಕಾಲೇಜಿನಿಂದ ನೂರಾರು ಎಂಭತ್ತು ವಿದ್ಯಾರ್ಥಿಗಳು ಪರೀಕ್ಷೆಗೆ ಕೂರಲಿದ್ದಾರೆ. ಇವರಲ್ಲಿ ತೇರ್ಗಡೆಯಾಗುವವರೆಲ್ಲರೂ ಹೊರಗೆ ಹೋಗಿ ತಮ್ಮ ವ್ಯಾಸಂಗವನ್ನು ಮುಂದರಿಸುವಷ್ಟು ಶ್ರೀಮಂತರಲ್ಲ. ಆದ್ದರಿಂದ ಈ ಬಡ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಈ ವರ್ಷ ಹೆಚ್ಚಿನ ತರಗತಿಯನ್ನು ತೆರೆಯಲೇಬೇಕು. ಕಟ್ಟಡವಿಲ್ಲದಿದ್ದರೆ ಕಾಲೇಜನ್ನು ನಾಪೋಕ್ಲಿಗೆ ವರ್ಗಾಯಿಸಬೇಕು ಇಲ್ಲವೇ ಮಡಿಕೇರಿ ಹೈಸ್ಕೂಲಿನ ಕೆಳಗಿನ ಕೆಲವು ತರಗತಿಗಳನ್ನು ತೆಗೆದು ಹಾಕಬೇಕು ಎಂದು ಕೆಲವು ವಾರಗಳ ಹಿಂದೆ "ಪಿ. ಎಂ. ಪಿ." ಇವರು ಮಾಡಿದ ಸೂಚನೆ ಸಮಂಜಸವಾಗಿದೆ. ಮಡಿಕೇರಿಯಲ್ಲಿ ಐದಾರು ಪ್ರಾಥಮಿಕ ಶಾಲೆಗಳಿರುವಾಗ ಸೆಂಟ್ರಲ್ ಹೈಸ್ಕೂಲಿನ ಪ್ರಾಥಮಿಕ ಸೆಕ್ಷನನ್ನು ರದ್ದು ಮಾಡಿದರೆ ದೊಡ್ಡ ತೊಂದರೆಯಾಗಲಾರದು. ಆದ್ದರಿಂದ ದೇಶದ ಮುಂದಾಳುಗಳೂ, ಸರಕಾರವೂ ಈ ವಿಚಾರದಲ್ಲಿ ಶ್ರದ್ಧೆ ವಹಿಸುವದು ಅತ್ಯಗತ್ಯವಾಗಿದೆ.

ಕುಶಾಲಪ್ಪ.

ಸೆಂಟ್ರಲ್ ಪಿ. ಡಬ್ಲ್ಯು. ಡಿ

ಈ ಇಲಾಖೆಯ ಕೆಲಸವು ತೃಪ್ತಿಕರವಾಗಿಲ್ಲವೆಂದು ಪತ್ರಿಕೆಗಳಲ್ಲಿ ಹಲವು ಬಾರಿ ಟೀಕೆ ಬಂದಿದೆ. ಕೌನ್ಸಿಲಿನಲ್ಲೂ ಜನಪ್ರತಿನಿಧಿಗಳು ತುಂಬಾ ಟೀಕಿಸಿದ್ದಾರೆ. ಆದರೂ ಇಲಾಖೆಯ ಕೆಲಸ ಕ್ರಮವು ಸುಧಾರಿಸಿಲ್ಲ. ಉದಾಹರಣೆಗೆ ಮಡಿಕೇರಿಯ ಮಹದೇವಪೇಟೆ ರಸ್ತೆಯ ಸ್ಥಿತಿಯನ್ನೇ ಹೇಳಬಹುದು. ಪ್ರತಿ ವರ್ಷ ಈ ರಸ್ತೆಯಲ್ಲಿ ಒಂದು ವಿಶೇಷ ರೀತಿಯ ರಿಪೇರಿ ನಡೆಯುತ್ತಿದೆ. ಮಳೆಗಾಲ ಕಳೆದೊಡನೆ ರಸ್ತೆಯಲ್ಲಿನ ಗುಂಡಿಗಳಿಗೆ ಕಲ್ಲು ಹಾಕಿ ಕೆಂಪುಮಣ್ಣಿನಿಂದ ಮುಚ್ಚಿದರು. ಆ ಕಲ್ಲುಗಳೆಲ್ಲ ರಸ್ತೆಯಲ್ಲಿ ಹರಡಿ ನಡೆಯುವದೇ ಪ್ರಯಾಸವಾಯಿತು. ರಸ್ತೆಯ ಗುಂಡಿಗಳು ಎಂದಿನಂತೆ ಬಾಯಿತೆರೆದು ನಿಂತವು. ಕೆಲವು ದಿನಗಳ ಹಿಂದೆ ಆ ಗುಂಡಿಗಳಿಗೆ ಜಲ್ಲಿ ತಾರು ಹಾಕಿ ಮರಳು ಹಾಕಿದರು. ಪರಿಸ್ಥಿತಿಯೇನು ಸುಧಾರಿಸಲಿಲ್ಲ. ಈಗ ರಸ್ತೆ ಅಗಲ ಮಾಡುವ ಮತ್ತೊಂದು ವಿಶೇಷ ಕೆಲಸ ತೊಡಗಿದ್ದಾರೆ. ಸೆಂಟ್ರಲ್ ಪಿ. ಡಬ್ಲ್ಯು. ಡಿ ಯವರು ಮಾಡುತ್ತಿರುವ ಈ ಕೆಲಸವೂ, ಹತ್ತಿರದಲ್ಲೇ ಮುನ್ಸಿಪಾಲಿಟಿಯವರು ಮಾಡುತ್ತಿರುವ ಕೆಲಸವೂ, ಪ್ರತಿ ದಿನ ನಮಗೆ ಕಾಣುತ್ತದೆ. ಮುನ್ಸಿಪಾಲಿಟಿಯವರಷ್ಟು ದಕ್ಷತೆಯಿಂದ ಇವರ ಕೆಲಸ ನಡೆಯುತ್ತಿಲ್ಲವೆಂದು ಹೇಳಬೇಕಾಗಿದೆ. ಇವರ ಈ ರೀತಿಯ ಕೆಲಸಗಳಿಂದ ಬಡ ಜನರ ದುಡ್ಡಿನ ವ್ಯಯವಾಗುತ್ತಿದೆಯೇ ವಿನಾ ಜನಹಿತವೇನೂ ಆಗುತ್ತಿಲ್ಲ. ಈ ಇಲಾಖೆಯನ್ನು ಎಷ್ಟು ಶೀಘ್ರವಾಗಿ ಸ್ಥಳೀಯ ಸರಕಾರದ ಅಧೀನಕ್ಕೆ ತರಲಾಗುವದೋ ಅಷ್ಟು ಹಿತವಾಗುವದು. ಕೊಡಗು ಸರಕಾರವೂ, ದೇಶದ ಮುಂದಾಳುಗಳೂ ಇದಕ್ಕಾಗಿ ಶ್ರಮ ವಹಿಸಬೇಕು.

ನಾಗೇಶ,

ಶ್ರೀ ಕೆ ಯಂ. ಪೊಗಪ್ಪನವರು, "ಕೊಡಗು" ಏಜೆಂಟರು, ಸೋಮವಾರಪೇಟೆ.

ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಕೋ. ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ. (1931ರಲ್ಲಿ ಸ್ಥಾಪಿತವಾಗಿದೆ.

ಅಧಿಕೃತ ಶೇರು ಭಂಡವಾಳ	ರೂ.	10,00,000.
ವಸೂಲಾದ ಶೇರು ಮೊಬಲಗು	ರೂ.	1,79,000.
ಕ್ಷೇಮನಿಧಿ	ರೂ.	55,000.
ಇತರ ನಿಧಿಗಳು	ರೂ.	28,000.

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನೂ ಕೈಕೊಳ್ಳಲಾಗುವುದು.

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡಲ್ಪಡುವುದು. ಚೆಕ್ಕಿಲ್ಲದೆ ಚಿನ್ನ, ಬೆಳ್ಳಿ ನಗಗಳ ಈಡಿನ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ಕು ಡ್ರಾಫ್ಟುಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರಿನಿಟಿ ಮತ್ತು ವಾರ್ಡನ್ ಇನ್ಶೂರೆನ್ಸ್ ಕಂಪನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಗೌ. ಕಾರ್ಯದರ್ಶಿ,

ಕೆ. ಪಿ. ಅಪ್ಪಯ್ಯ, M. L. C. ಪ್ರೆಸಿಡೆಂಟ್ ಮತ್ತು ಏಜೆಂಟ್.

ಕೊಡಗು ಪ್ರಾಂತೀಕ ಸಹಕಾರಿ, ಮಾರ್ಕೆಟಿಂಗ್, ಫೆಡರೇಷನ್ ಲಿಮಿಟೆಡ್., ವೀರಾಜಪೇಟೆ.

ನಮ್ಮಲ್ಲಿ ಕೋವಿಗಳು, ತೋಟಗಳು ಮತ್ತು ಎಲ್ಲಾ ತರಹದ ವ್ಯವಸಾಯದ ಹತ್ಯಾರುಗಳು ದೊರೆಯುತ್ತವೆ.

1. 32 ಪಿಸ್ತೂಲುಗಳು (Pistols) ಕ್ರಯ ರೂ. 162 ರಿಂದ 245ರ ವರೆಗೆ.
2. 12ನೇ ನಂಬರಿನ ಒಂಟಿ ಹೊಳವಿನ ಕೋವಿ ಕ್ರಯ ರೂ. 320-0-0
3. 12ನೇ ನಂಬರಿನ ಜೋಡು ಹೊಳವಿನ ಕೋವಿ (Webley & Scott)
4. 12ನೇ ನಂಬರಿನ ಜೋಡು ಹೊಳವಿನ ಕೋವಿ (Spanish make)
5. 6 ಗಜದ (Hand loom) ಕೈಮಗ್ಗದ ಸೀರೆಗಳು ಕ್ರಯ ರೂ. 4-10-0.
6. .32 ಪಿಸ್ತೂಲು ಮತ್ತು ರಿವಾಲ್ವರುಗಳ ತೋಟಗಳೂ ಸಹ ದೊರೆಯುತ್ತವೆ.
7. ಕಾಫಿ ಮತ್ತು ಕಿತ್ತಳೆ ಗಿಡಗಳಿಗೆ ಸ್ಪ್ರೇ ಮಾಡುವ ಪಂಪುಗಳು (Spraing Pumps)
8. ⅜" ಮತ್ತು ½" ಕಬ್ಬಿಣದ ಸಲಾಕೆಗಳು.

ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

(ಅವಶ್ಯವಿರುವ ಕೋವಿಗಳಿಗೂ, ತೋಟಗಳಿಗೂ ಜಿಲ್ಲಾ ಮೇಜಿಸ್ಟ್ರೇಟರಿಂದ ವಿಶೇಷ ಪರ್ಮಿಟು "Special permit" ಪಡೆದಾಗ ಮಾತ್ರ ದೊರೆಯುವದು)

ಎಂ. ಎಸ್. ಸೋಮಯ್ಯ, ಗೌರವ ಕಾರ್ಯದರ್ಶಿ.

52-19

ಮತ್ತೊಂದು ಉಜ್ವಲ ವರ್ಷ.

1948ನೇ ವರ್ಷದ ವಾರ್ಷಿಕ ವರದಿಯ ಪ್ರಾಮುಖ್ಯಾಂಶಗಳು.

ಹೊಸ ಉದ್ಯಮ ರೂ.	6,13,00,000	ಮೀರಿದೆ.
ಚಾಲ್ತಿಯಲ್ಲಿರುದ ಒಟ್ಟು ಉದ್ಯಮ ರೂ.	27,73,00,000	„
ಒಟ್ಟು ನಿಧಿ. ರೂ.	8,30,00,000	„
ಸಾ ಪಿತವಾದಂದಿನಿಂದ ಪಾವತಿಯಾದ ಕ್ಲೈಮುಗಳು	10,96,00,000	„

1,28,000 ಕ್ಕೆ ಮೀರಿದ ಕ್ಲೈಂಟ್ ಪಡೆದ ಪಾಲಿಸಿದಾರರು.

ಶಕ್ತಿ. ಸೇವೆ ಭದ್ರತೆ.

ಎಂಪೈರ್ ಆಫ್ ಇಂಡಿಯಾ ಲೈಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಸ್ಥಾಪನೆ,—1897

ಕೋಶನ್‌ಲಾಲ್, ಜನರಲ್ ಮೇನೇಜರ್.

ಪಿ. ಡಿ. ಗೋರವಾರ-ಬ್ರಾಂಚ್ ಮೇನೇಜರ್.

ಪ್ರಧಾನ ಕಛೇರಿ: ಎಂಪೈರ್ ಹೌಸ್, ಹಾರ್ನಬಿ, ರೋಡ್, ಪೋರ್ಟ್, ಬೊಂಬಾಯಿ.

ಬ್ರಾಂಚ್ ಕಛೇರಿ: ಫಸ್ಟ್ ಬೋರ್ಡ್ ಬಿಲ್ಡಿಂಗ್, ಕೆಂಪೇಗೌಡರಸ್ತೆ, ಬೆಂಗಳೂರು.

ನಿವೃತ್ತರಾಗಲಿರುವ ಅಧಿಕಾರಿಗಳಿಗೆ ಜೀವದಾನ?

ಲೇ:— "ಕ್ರೈತ"

ಈ ಬರುವ ಮೂರು ತಿಂಗಳೊಳಗೆ ಕೊಡಗಿನ ಅಸಿಸ್ಟೆಂಟ್ ಕಮಿಷನರು, ಫಾರೆಸ್ಟ್ ಆಫೀಸರು, ವಿದ್ಯಾ ಅಧಿಕಾರಿಗಳು, ಮೊದಲಾದವರು ನಿವೃತ್ತರಾಗಬೇಕಿದೆ. ಅವರು ಸರಕಾರದಲ್ಲಿ ಒಂದೋ ಮೂವತ್ತು ವರ್ಷಗಳ ಸೇವೆ ಸಲ್ಲಿಸಿರುವರು; ಇಲ್ಲವೇ ಐವತ್ತೈದು ವರ್ಷ ಪ್ರಾಯವನ್ನು ದಾಟಿರುವರು ಹಾಗಿರುವದರಿಂದ ಅವರು ನಿವೃತ್ತರಾಗಲೇಬೇಕು. ಈ ವರೆಗಿನ ತಮ್ಮ ಆಡಳಿತದ ಕಾಲದಲ್ಲಿ ಅವರು ಮಾಡಿದ ದೇಶಹಿತ ಕೆಲಸಗಳ, ಅವರು ತೋರಿಸಿದ ನ್ಯಾಯ, ಶೀಲಗಳು ಜನತೆಗೆ ಮನವರಿಕೆ ಇದೆ. ಅವರ ಸತತ ಹಾಗೂ ದೀರ್ಘ ಸೇವೆಗಾಗಿ ದೇಶವು ಅವರನ್ನು ವಂದಿಸುತ್ತದೆ. ಅವರು ಗೌರವ ಪೂರ್ವಕವಾಗಿ, ಸಾರ್ವಜನಿಕರು ಅವರ ಯೋಗ್ಯತೆಗನುಸಾರ ಕೊಡುವ ಮರ್ಯಾದೆಯನ್ನು ಸ್ವೀಕರಿಸಿ ನಿವೃತ್ತರಾಗಿ ವಿಶ್ರಾಂತಿಯನ್ನು ಪಡೆಯುವದು ಸೂಕ್ತವಾಗಿದೆ.

ಆದರೆ ವಿಷಾದದ ಮಾತೆಂದರೆ ಈ ರೀತಿಯ ಬುದ್ಧಿಯು ಹಲವರಲ್ಲಿ ಇಲ್ಲದಾಗಿದೆ ಅಧಿಕಾರವು ಯಾವಾಗಲೂ ಮನುಷ್ಯನ ಮಹತ್ವಾಕಾಂಕ್ಷೆಗಳಲ್ಲೊಂದು ಅಧಿಕಾರಕ್ಕೇರಿದವನು ಆತನನ್ನು ಅಲ್ಲಿಂದ ಕೆಳಗೆ ತಳ್ಳುವ ವರೆಗೆ ಅಲ್ಲಿಯೇ ಅಂಟಿಕೊಂಡಿರಲು ಯತ್ನಿಸುವನು. ಗೌರವ ಪೂರ್ವಕವಾಗಿ ನಿವೃತ್ತರಾಗುವ ಬುದ್ಧಿ ಕಡಿಮೆ. ಆದ ಕಾರಣವೇ ನಿವೃತ್ತರಾಗಲಿರುವವರ ಕೆಲವರು ಜೀವದಾನಕ್ಕಾಗಿ ಪ್ರಯತ್ನಿಸುತ್ತಿದ್ದಾರೆ. ಕೆಲವರು ಮೊನ್ನೆ ಮೊನ್ನೆಯಿಂದ ಹಲವು ಸಾರಿ ಚೀಫ್ ಕಮಿಷನರನ್ನು ಹೊಗಳತೊಡಗಿದ್ದಾರೆ. ಚೀಫ್ ಕಮಿಷನರು ರಾಜ ಮನೆತನದವರೆನ್ನತೊಡಗಿದ್ದಾರೆ! ಪ್ರತಿಯೊಬ್ಬನು ತನ್ನ ಉತ್ಕರ್ಷಕ್ಕಾಗಿ ಪ್ರಯತ್ನ ಮಾಡುವದು ಸ್ವಾಭಾವಿಕವಾದರೂ ನ್ಯಾಯ ನೀತಿಗಳನ್ನು ಬಿಟ್ಟು ಅಡ್ಡದಾರಿ ಹಿಡಿಯುವದು ತಪ್ಪು. ಅವರಲ್ಲೂ ಕೆಲವು ಜನ ಪ್ರತಿನಿಧಿಗಳೆನ್ನುವವರು ಪಾರ್ಟಿ, ಬಂಧು ಮಿತ್ರರೆಂಬ ದೃಷ್ಟಿಯಿಂದ ಕೆಲವರಿಗೆ ಅಧಿಕಾರ ಜೀವದಾನ ಕೊಡಬೇಕೆಂದು ಪ್ರಯತ್ನಿಸುವದು ಅನಿಷ್ಟಕಾರಕವಾದುದು. ಮೊನ್ನೆಯಾಗಿ ಯಾವುದೋ ಅಧಿಕಾರಿಯ ಪರ ಕೆಲವರು ಚೀಫ್ ಕಮಿಷನರಲ್ಲಿಗೆ ನಿಯೋಗ ಹೋಗಿದ್ದರಂತೆ. ಆ ಅಧಿಕಾರಿಗೆ ವಿಶೇಷ ಪರಿಜ್ಞಾನವಿದೆಯೆಂದೂ, ಅವರು ಆಡಳಿತಕ್ಕೆ ಅನಿವಾರ್ಯವೆಂದೂ ಅವರು ಹೇಳಿರುವರಂತೆ! ಅಧಿಕಾರಿಯ ಯೋಗ್ಯತೆ, ಆಡಳಿತ ದಕ್ಷತೆಯನ್ನು ಪರೀಕ್ಷಿಸಿ ತಿಳಿಯುವವರು ಸಾಮಾನ್ಯ ಜನರು. ಅಧಿಕಾರಿಯಿಂದಾಗಿ ಜನರಿಗೆ ಏನು ಹಿತವಾಗಿದೆಯೆಂಬುದು ಜನರಿಗೆ ಗೊತ್ತಿಲ್ಲವೆ ಅಂತಹ ಕಾರ್ಯ ರಾಜಕೀಯವಾದಿಗಳಿಗಾಗಲೀ ಸ್ಥಾನ ಪಡೆದು ಜನತೆಯಿಂದ ದೂರವಾಗಿರುವ ಜನ ಪ್ರತಿನಿಧಿಗಳೆನ್ನುವವರಿಗಾಗಲೀ ತಿಳಿಯಲಾರದು. ವಿಶೇಷ ಕಾರಣಗಳಿಲ್ಲದೆ ಒಬ್ಬ ವ್ಯಕ್ತಿಯ ಪರ ಹೋಗಿ ಅವರ ಅಧಿಕಾರವನ್ನು ಉಳಿಸಿಕೊಡಬೇಕೆಂದು ಕೇಳುವ ಜನ ಪ್ರತಿನಿಧಿಗಳಿಗೆ ನಾಚಿಕೆ ಎನಿಸಬೇಕು.

ಈಗ ನಿವೃತ್ತರಾಗಲಿರುವವರು ಅಧಿಕಾರ ಬಿಟ್ಟು ಹೋಗುವದರಿಂದ ಕೊಡಗಿನ ಆಡಳಿತಕ್ಕೆ ಧಕ್ಕೆ ತಗಲುವದೆಂದು ಯಾರಾದರೂ ಭಾವಿಸಿದ್ದರೆ ಅದು ಕೇವಲ ಭ್ರಮೆ. ಯಾಕೆಂದರೆ ದೇಶದ ಆಡಳಿತದಲ್ಲಿ ವ್ಯಕ್ತಿಗಳ ಪ್ರಾಧಾನ್ಯತೆ ಅತ್ಯಕಷ್ಟ. ಯಾವ ವ್ಯಕ್ತಿ ಬಂದು ಯಾವ ವ್ಯಕ್ತಿ ಹೋದರೂ ಆಡಳಿತ ಚಕ್ರವು ಯಥಾಸ್ಥಿತಿ ಸುತ್ತುತ್ತಿರುವದು. ಮೇಲಾಗಿ ಈ ನಿವೃತ್ತರಾಗಲಿರುವ ಅಧಿಕಾರಿಗಳು ತಮ್ಮ ಆಡಳಿತ ಕಾಲದಲ್ಲಿ ಯಾವದೇ ದೂರದರ್ಶಿತ್ವವನ್ನಾಗಲೀ, ಪ್ರಗತಿಶೀಲ ಕಾರ್ಯಕ್ರಮವನ್ನಾಗಲೀ ಕೈಕೊಂಡಿಲ್ಲ. ಈ ಹಿಂದೆ ಅಧಿಕಾರಕ್ಕೆ ಬಂದು ಹೋದ ನೂರಾರು ಜನರಂತೆ ಇವರೂ ಕೂಡ.

ಕೊಡಗಿನಲ್ಲಿ ಒಂದು ಅನಿಷ್ಟ ಪರಂಪರೆ ಹಲವು ವರ್ಷಗಳಿಂದ ನಡೆದು ಬಂದಿದೆ. ನಿವೃತ್ತ ಮುಂದಾಳರ ಮೇಲೆ ಮಮತೆ ಹೆಚ್ಚು. ಕೊಡಗಿನ ಜನರೂ ಕೂಡ ಈ ವಿಚಾರದಲ್ಲಿ ಒಳಗೊಳಗೆ ವಾಕರಿಕೆಗೊಂಡರೂ ತಮ್ಮ ವಿರೋಧವನ್ನು ಬಹಿರಂಗವಾಗಿ ಪ್ರಕಟಿಸಿಲ್ಲ. ಕೊಡಗಿಗೆ ಚೀಫ್ ಕಮಿಷನರು ಬಬೇಕಾದರೆ ನಿವೃತ್ತರಾದವರೂ ಬರಬೇಕು. ಕಳೆದ ಎಳೆಂಟು ವರ್ಷಗಳಿಂದಲೂ ನಿವೃತ್ತ ಅಧಿಕಾರಿಗಳೇ ಕೊಡಗಿನ ಚೀಫ್ ಕಮಿಷನರುಗಳು. ಅದು ಕೆ. ಚಂಗಪ್ಪನವರಿರಲಿ, ಸಿ. ಟಿ. ಮುದಲಿಯಾರರಿರಲೀ ಎಲ್ಲರೂ ನಿವೃತ್ತರೇ! ಅದರಿಂದಲೇ ದಿವಂಗತ ಸಿ.ರ್ದಾರ ಪಟೇಲರು ಕೊಡಗಿನವರ ತಂಗಳನ್ನ ಸ್ವಭಾವವನ್ನು ನೋಡಿ, ಯಾವದೇ ನಿವೃತ್ತ ಅಧಿಕಾರಿಯನ್ನು ಕೊಡಗಿಗೆ ಕಳುಹಿಸಿದರೂ ಅವರು ಸತ್ತು ಅಧಿಕಾರದಿಂದ ನಿವೃತ್ತಿಯನ್ನು ಪಡೆಯ ಬೇಕೇ ವಿನಾ ಬೇರೆ ತೊಂದರೆಯುಂಟಾಗದು ಎಂದು ಹೇಳಿದುದಾಗಿದೆ. ಆಡಳಿತದ ಪ್ರಾಮುಖ್ಯತೆಯಿಂದ ಸ್ಥಿತಿಯೇ ಹೀಗಾದ ಮೇಲೆ ಆಡಳಿತದ ಉಳಿದ ಅಂತಸ್ತುಗಳಲ್ಲಿ ಈ ಕಥೆಯ ಪುನರಾವರ್ತನೆ ಆಶ್ಚರ್ಯವಲ್ಲ.

ಕಾಲ ಬದಲಾಯಿಸಿದೆ. ದಾಸ್ಯಭಾರತದಲ್ಲಿ, ಅಂದಿನ ಸರಕಾರಕ್ಕೆ ಶಿರಬಾಗಿ ಆ ರೀತಿ ಬೆಳೆದು ಬಾಳಿದ ಅಧಿಕಾರಿಗಳು ಇಂದಿನ ಹೊಸ ಸ್ವಾತಂತ್ರ್ಯ ವಾತಾವರಣದಲ್ಲಿ ಎಷ್ಟೇ ಮಾರ್ಪಾಡಾಗಿದ್ದೇವೆಂದು ತೋರಿಸಿಕೊಂಡರೂ ಅವರು ಕಾಲನ ಕರೆಗೂ, ನವಚೇತನದ ಪ್ರಗತಿಗೂ ಸರಿಯಾಗಿ ಓ ಕೊಡಲಾರರು ಹಳೇ ಹೆಣ್ಣಿಗೆ ಹೊಸ ಸೀರೆ ಉಡಿಸಿದ ಮಾತ್ರಕ್ಕೆ ಹೊಸ ಚೇತನ ಬಂದಂತಾಗಲಿಲ್ಲ. ಆದ್ದರಿಂದ ಯಾವ ಅಧಿಕಾರಿಗೂ ಅಧಿಕಾರ ಜೀವದಾನವನ್ನು ಖಂಡಿತಾ ಮಾಡಕೂಡದು.

ಈ ವರೆಗೆ ಇವರು ಹೊತ್ತಿದ್ದ ಜವಾಬ್ದಾರಿ ಸ್ಥಾನಗಳನ್ನು ಅಲಂಕರಿಸಲು ಸರಿಯಾದವರಿಲ್ಲವೆಂದು ಹೇಳುವ ಪಿಸುಮಾತುಗಳೂ ಕೇಳುತ್ತಿವೆ ಅದಕ್ಕಾಗಿ ಚಿಂತಿಸುವ ಕಾರಣವಿಲ್ಲ. ಯೋಗ್ಯರಿಲ್ಲದ ಇಲಾಖೆಗಳಿಗೆ ಬೇರೆ ಕಡೆಯಿಂದ 'ಡೈರೆಕ್ಟ್ ರಿಕ್ರೂಟ್' ಮಾಡಲಿ. ಮದ್ರಾಸ್ ಪ್ರಾಂತದಲ್ಲಿ ಜಿಲ್ಲಾ ಮೇಜಿಸ್ಟ್ರೇಟರ ಅಧಿಕಾರಕ್ಕೆ ಡೈರೆಕ್ಟ್ ರಿಕ್ರೂಟ್‌ಮೆಂಟ್ ನಡೆಯುವಂತೆ ಇಲ್ಲಿಯೂ ನಡೆಯಬಾರದೇಕೆ? ಆಡಳಿತದ ಗುರಿ ಜನರ ಹಿತಸಾಧನೆಯಲ್ಲದೆ ವ್ಯಕ್ತಿಗಳ ಸ್ವಾರ್ಥಸಾಧನೆಯಲ್ಲ. ಯೋಗ್ಯ ಆಡಳಿತ ನಡೆಸಲು ಸ್ಥಳೀಯರು ದೊರೆಯದಿದ್ದರೆ ಹೊರಗಿನ ದಕ್ಷರನ್ನೂ, ನ್ಯಾಯ ಶೀಲರನ್ನೂ ಆರಿಸಿ ತರುವದು ಅಹಿತವಲ್ಲ. ಆದ್ದರಿಂದ ಚೀಫ್ ಕಮಿಷನರು ನಿವೃತ್ತರಾಗಲಿರುವವರಿಗೆ ಜೀವದಾನ ಮಾಡುವ ಅಪರಾಧವನ್ನು ಮಾಡದೆ ಹೊಸಬರೂ, ಯೋಗ್ಯರೂ ಈ ಅಧಿಕಾರಗಳಿಗೆ ನೇಮಿಸಲ್ಪಡುವಂತೆ ಮಾಡುವದರಲ್ಲೇ ಜನಹಿತವಿದೆಯೆಂದು ತಿಳಿದು ಆ ರೀತಿ ಮಾರ್ಗದರ್ಶನ ಪರವಾಗಿ ಆಶಿಸಲಾಗಿದೆ

——

ಕೊಡಗಿನಲ್ಲಿ ಮೂರು ದಿನಗಳು.

(ಕೆಲವು ದಿನಗಳಿಗೆ ಹಿಂದೆ ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರೊಡನೆ ಕೊಡಗಿಗೆ ಬಂದಿದ್ದ ಹುಬ್ಬಳ್ಳಿಯ 'ನವಯುಗ' ಪತ್ರಿಕೆಯ ವಿಶೇಷ ಪ್ರತಿನಿಧಿಗಳೊಬ್ಬರು ಆ ಪತ್ರಿಕೆಯಲ್ಲಿ ಕೊಡಗಿನ ವಿಚಾರದಲ್ಲಿ ಬರೆದ ಈ ಲೇಖನವನ್ನು ನಮ್ಮ ವಾಚಕರಿಗಾಗಿ ಇಲ್ಲಿ ಪ್ರಕಟಿಸಿರುವೆವು)

ಕೊಡಗಿನ ಪೀಠಿಕೆ

ಪುತ್ತೂರನ್ನು ಬಿಟ್ಟೊಡನೆಯೇ ಬೆಟ್ಟಸೀಮೆಯ ಹವೆ ತಟ್ಟನೆ ತಣ್ಣಗಾಯಿತು. ಇನ್ನೂ ದಕ್ಷಿಣ ಕನ್ನಡ ಜಿಲ್ಲೆಯ ಹದ್ದಿನಲ್ಲಿಯೇ ಇರುವೆವಾದರೂ ಕೊಡಗಿನ ಕಂಪು ನಮ್ಮ ಎದೆಗೆ ತಾಗುತ್ತಲಿತ್ತು. ಮಧ್ಯಾಹ್ನದ ೨ ಗಂಟೆಯ ಸುಮಾರಿಗೆ ಅರುಷ್ಟ ಘಂಟೆಯಂತೆ ಕಾಣುತ್ತಿದ್ದಿತು. ಈ ಬದಲಾವಣೆಯನ್ನು ನಾವು ನಿರೀಕ್ಷಿಸುತ್ತಲೇ ಮಡಿಕೇರಿಯ ಕಡೆಗೆ ಸಾಗಿದೆವು. ಮಡಿಕೇರಿ ಕೊಡಗಿನ ರಾಜಧಾನಿ.

ಕೊಡಗು, ಕಾಡಿನ ಕೊಡಗು. ಕಡಿಯದ ಕಾಡು, ಕಡಿದಾದ ದಾರಿ, ಗುಡ್ಡಗಳ ಕಾಡ, ಕಲ್ಲು ಬಂಡೆಗಳ ಕಾಣಿಸಿ ನಿಡುಗ ಮು ಎಕೆಗಳು, ಮಳೆಗಾಲ, ಇವುಗಳ ಬೀಡು ಕೊಡಗಿನ ನಾಡು.

ಕಾಡೊಂದರೆ ಪೈರುಗಳನ್ನು ಬೆಳೆಗಿಸುವ ಕಾಡಲ್ಲ. ಸಾಲಾಗಿ ಮುಗಿದ ಮಲೆಗಳ ಮಧ್ಯದಲ್ಲೇ ಬಾಳೆಯ ಎಲೆಗಳ, ಹಸಿರು ಮರಗಳ, ನಗುವ ಚಿಗುರುಗಳ, ಬಗೆಯನ್ನು ಅರಳಿಸುವ ಬಗೆ ಬಗೆಯ ಲತಾಬಳ್ಳಿಗಳು ಇದರ ತಡಿದ. ಕಣ್ಣಿನ ನೋಟ ಕಾರಿನ ವೇಗವನ್ನು ಹಬ್ಬುವ ವರೆಗೆ ಅಚ್ಚ ಹಸುರಿನ ಕಾಡು ಕಾಣುವುದು. ಎತ್ತರಕ್ಕೆ ಏರುವಂತೆಲ್ಲ ಹಿಂದಿರುಗಿ ನೋಡಿದರೆ, ಚಿತ್ರ ಸೌಂದರ್ಯದ ಸೊಗಸನ್ನು ನೋಡಲು ಬೊಗಸೆ ಕಣ್ಣು ಸಾಲದು. ನಮಗೆ ಪುತ್ತೂರಿನಿಂದ ದಾರಿ ತೋರಿಸುತ್ತಿರುವ ಮಹೇಶ್ವರಿ. ಮರದೆಲೆಯ ಬಣ್ಣದ ಸೀರೆಯನ್ನುಟ್ಟು ಗಿಡಮರಗಳ ಮಧ್ಯದಲ್ಲಿ ಜಲತರಂಗವಾಗಿ ಹರಿಯುತ್ತಿರುವ ಈ ಮಹೇಶ್ವರಿ ಹಸಿರು ಎಲೆಗಳಿಗೆ ಹಸನ್ಮುಖಿಗಳಾಗಿ ಬನ್ನಿರಿ ಎಂದು ಸ್ವಾಗತಿಸುತ್ತಿದ್ದಳು.

ಹುದುಂಗಿಕೊಂಡಿರುವ ಊರು.

ಪೈರುಗಳು ಮುಗಿಯುತ್ತ ಬಂದರೂ ಊರೇ ಕಾಣಿಸಲಿಲ್ಲ. ಸಣ್ಣದ ಮನೆ, ಒಣ್ಣದ ಗೋಡೆ, ಇವೊಂದೂ ಕಣ್ಣಿಗೇ ಕಾಣಿಸುತ್ತಿರಲಿಲ್ಲ. ಊರು ಎಲ್ಲಿದೆಯೋ ಎಂದು ಸುತ್ತಲೂ ಹುಡುಕಿದರೂ ಕಂಡುಬರಲಿಲ್ಲ. ಇದೇ ಕೊಡಗಿನ ವೈಶಿಷ್ಟ್ಯ. ಎತ್ತರದ ಮರಗಳ ಹೊಂಗಿರುವ ಗಿಡಗಳ ಗವಿಯಲ್ಲಿರುವ ಊರುಗಳನ್ನು ಹುಡುಕಿ ತೆಗೆಯಬೇಕು. ಆರಿಸಿ ತೆಗೆಯಬೇಕು. [illegible]

ಇತಿಹಾಸ.

ಮನುಷ್ಯನ ಹುಟ್ಟು ಮನುಷ್ಯನ ಓಟವನ್ನು ತಿಳಿಯುವುದಕ್ಕೆ ಮುಂಚೆ ಕೊಡಗಿನ ಪೂರ್ವ ಇತಿಹಾಸವನ್ನು ತಿಳಿಯಲು ನಾವು ಆತುರಗೊಂಡಿದ್ದೆವು.

ಕೊಡಗು ೧೫೮೩ ಚದರ ಮೈಲುಗಳ ವಿಸ್ತಾರದ ಸೀಮೆ. ಪೈಗೂರು ಪ್ರಾಂತದ ಪಶ್ಚಿಮ ಗಡಿಗೆ ಚಾಚಿಕೊಂಡಿರುವ ಒಂದು ಗುಡ್ಡಗಾಡಿನ ಭಾಗ.

೧೯೪೧ರ ಜನಗಣತಿಯ ಪ್ರಕಾರ ಈ ಸಣ್ಣ ಪ್ರಾಂತದ ಜನಸಂಖ್ಯೆ ಒಂದು ಲಕ್ಷ ಅರುವತ್ತೆಂಟು ಸಾವಿರವಿದ್ದಿತು. ೧೯೫೧ರ ಜನಗಣತಿಯಲ್ಲಿ ಎರಡು ಲಕ್ಷ ಜನಸಂಖ್ಯೆಯಾಗಬಹುದು. ಕೇಂದ್ರದ ನೇರವಾದ ಆಡಳಿತಕ್ಕೆ ಒಳಪಟ್ಟಿರುವ ಸಣ್ಣ ಪ್ರಾಂತವಿದು. ಚೀಫ್ ಕಮಿಷನರು ಈ ಪ್ರಾಂತದ ಆಡಳಿತಗಾರರು. ಹೆಸರಿಗೆ ಮಾತ್ರ ವರ್ಷಕ್ಕೆ ಆರು ದಿವಸ ಕೂಡುವ ಶಾಸನ ಸಭೆಯೊಂದಿದೆ. ಈ ಶಾಸನ ಸಭೆಯ ಅಧ್ಯಕ್ಷ ಚೀಫ್ ಕಮಿಷನರೇ. ಈ ಶಾಸನ ಸಭೆ ಎಂತಹುದು, ಇದರ ಕಾರ್ಯಕಲಾಪಗಳೇನು ಎಂಬುದರ ಬಗ್ಗೆ ನನಗೆ ಪ್ರತ್ಯಕ್ಷ ಅನುಭವದೊರೆಯಿತು. ಒಕ್ಕಲು ಜನರ ಹಿಟ್ಟು ವಳಿಯ ಮೇಲೆ ಕರ ಹಾಕುವ ಕಾಯಿದೆಗೆ ಶಾಸನ ಸಭೆಯ ಅಂಗೀಕಾರವನ್ನು ಪಡೆಯಲು ನಾವು ಮಡಿಕೇರಿಗೆ ಹೋದ ದಿನವೇ ಒಂದು ವಿಶೇಷ ಅಧಿವೇಶನ ಸಭೆಯನ್ನು ಕರೆಯಲಾಗಿದ್ದಿತು. ಈ ಶಾಸನ ಸಭೆಗೆ ಹೋಗಲು ನನಗೆ ಅವಕಾಶ ಸಿಕ್ಕಿತು. ಆ ಅನುಭವಗಳನ್ನು ಕುರಿತು ಪ್ರತ್ಯೇಕ ಬರೆಯುವೆನು, ಒಂದು ಮಾತಿನಲ್ಲಿ ಹೇಳುವುದೆಂದರೆ ಇದೊಂದು ಜನಕ ಶಾಸನ ಸಭೆಯೆಂದು ಕರೆಯಬಹುದು.

ಕೊಡಗಿನ ಕನ್ನಡತನ.

ಕೊಡಗಿನಲ್ಲಿ 'ಕೊಡವ' ಅಥವಾ ಕೊಡವರು ಎಂಬುವರು ಕೇವಲ ೪೦ ಸಾವಿರ ಜನರಿರಬಹುದು. ಬ್ರಾಹ್ಮಣರು ಎರಡು ಸಾವಿರವಿರಬಹುದು. ಲಿಂಗಾಯತರ ಸಂಖ್ಯೆ ಸಾವಿರ ಜನರಿರಬಹುದು. ಇನ್ನುಳಿದವರೆಲ್ಲ ಒಕ್ಕಲಿಗರು, ಕ್ಷತ್ರಿಯರ ಜಾತಿಗಳವರಿರುವರು. ಕೊಡಗು ಸಣ್ಣದಾದರೂ ಅದಕ್ಕೆ ಒಳ್ಳೆಯ ಇತಿಹಾಸವಿದೆ. ಇಲ್ಲಿ ಬಳಕೆಯ ಮಾತು, ಲಿಪಿ ಇಲ್ಲದ ಕೊಡವ ಭಾಷೆಯಾದರೂ, ಅದಕ್ಕಿಂತ ಕನ್ನಡ ಇವರ ದೇಶಭಾಷೆ. ಆಡಳಿತ ಭಾಷೆ, ಶಾಲೆಯ ಭಾಷೆ, ವ್ಯವಹಾರ ಭಾಷೆ ಕನ್ನಡ. ಇದಕ್ಕೆ ಕಾರಣವಿಲ್ಲದಿಲ್ಲ. ಕೊಡಗಿನ ರಾಜ್ಯವನ್ನು ಕಟ್ಟಿದವರು ಇಕ್ಕೇರಿಯ ಒಡೆಯರು. ಇವರು ಶಿವಮೊಗ್ಗ ಜಿಲ್ಲೆಯಿಂದ ಹಾಲೇರಿನಾಡಿನಲ್ಲಿ ಮೊದಲು ಜಂಗಮ ರಾಗಿ ಬಂದು ನೆಲಸಿದರು. ತಮ್ಮ ಪ್ರತಿಷ್ಠೆಯ ವರ್ಚಸ್ಸಿನಿಂದ ಆಗ ಕೊಡಗಿನಲ್ಲಿದ್ದ ಸಣ್ಣ ಸಣ್ಣ ಪಾಳೆಯಪಟ್ಟುಗಳನ್ನೆಲ್ಲ ಒಂದುಗೂಡಿಸಿ ಹಾಲೇರಿ ಅರಸರ ವಂಶವನ್ನು ಸ್ಥಾಪಿಸಿ ಕೊಡಗಿನ ರಾಜ್ಯವನ್ನು ಆರಂಭಿಸಿದರು. ವೀರರಾಜನವರೆಗೆ ಈ ರಾಜ್ಯ ರಾಜನ ರಾಜ್ಯವಾಗಿದ್ದಿತು. ೧೮೩೪ರಲ್ಲಿ ಬ್ರಿಟಿಷ್ ಸರಕಾರ ಇದನ್ನು ತನ್ನ ವಶಕ್ಕೆ ತೆಗೆದುಕೊಂಡಿತು. ಆಗ ಮಂಗಳೂರು ಜಿಲ್ಲೆಗೆ ಪುತ್ತೂರು ಮತ್ತು ಸುಳ್ಯಗಳನ್ನು ಕೊಡಗಿನಿಂದ ಬೇರೆ ಮಾಡಿ ಕೊಟ್ಟರು. ಅಂದಿನಿಂದಲೇ ನಮಗೆ ಪುತ್ತೂರಿಗೆ ಬಂದಾಗಲೇ ಕೊಡಗಿಗೆ ಒಂದಂತೆ ಭಾಸವಾಯಿತು. ಅಚ್ಚ ಕನ್ನಡದ ನಾಡಾದ ಇಕ್ಕೇರಿ ಒಡೆಯರಿಂದ ಕಟ್ಟಲ್ಪಟ್ಟ ಮೈಸೂರಿನ ಒಂದು ಭಾಗದಂತಿ-

ರುವ ಕೊಡಗಿನ ನೆಲ ಹೊಲಗಳಲ್ಲಿ ಕನ್ನಡವು ಬೇರು ಬಿಟ್ಟಿದೆ. ಇಲ್ಲಿರುವ ಕೊಡಗಿನ ಜನರಾದರೂ ಚಂದ್ರವರ್ಮನೆಂಬ ಕದಂಬ ರಾಜಕುಮಾರನ ವಂಶಜರೆಂದು ಪೂರ್ವೇತಿಹಾಸದಿಂದ ಕಂಡು ಬರುವಾಗ, ಇಂದು ಅವರು 'ನಾವು ಕನ್ನಡಿಗರಲ್ಲ. ಕೊಡಗಿನವರು' ಎಂದಾಡಿಕೊಂಡರೆ ಅವರನ್ನು ಕನ್ನಡತನ ಬಿಟ್ಟು ಕೊಟ್ಟೀತೆ?

೧೪ನೇ ಶತಮಾನದ ವಿಜಯನಗರದ ಇತಿಹಾಸವನ್ನು ನೋಡಿದರೂ ಆಗಿನ ಕನ್ನಡ ಸಾಮ್ರಾಜ್ಯದಲ್ಲಿ ಕೊಡಗೆಂದು ಪಾಳೆಯಪಟ್ಟಾಗಿದ್ದಿತೆಂದು ಇತಿಹಾಸ ಹೇಳುತ್ತದೆ.

ಕೊಡಗಿನ ಭವಿಷ್ಯ.

ಇಷ್ಟೆಲ್ಲವನ್ನು ಇಲ್ಲಿ ಹೇಳುವುದರ ಪ್ರಕೃತವೆಂದರೆ, ಈಗಲೀಗ ಇಲ್ಲಿನ ಕೆಲವರು ಕೊಡಗು ಕನ್ನಡ ಪ್ರಾಂತದಿಂದ ಅನ್ಯವಾಗಿ ಸ್ವತಂತ್ರವಾಗಿರಬೇಕೆಂದು ವಾದಿಸಲಾರಂಭಿಸಿರುವರು. ಮೂರು ದಿನಗಳ ನಮ್ಮ ಕೊಡಗಿನ ಸಂಚಾರದಲ್ಲಿ ಅಲ್ಲಿನ ಜನರ ನಾಡಿಯನ್ನು ಹಿಡಿದು ನೋಡಿದೆವು. ಅಲ್ಲಿನ ಪ್ರಬಲ ರಾಜಕೀಯ ಪಕ್ಷವೆಂದರೆ ಕಾಂಗ್ರೆಸು. ಇದರಲ್ಲಿ ಕೆಲವು ಮಾತ್ರ ಕೊಡಗಿನ ವಿಲಯನಕ್ಕೆ ವಿರುದ್ಧವಾಗಿದ್ದಾರೆ. ಉಳಿದವರು, ಮತ್ತು ಜನಸಾಮಾನ್ಯರೆಲ್ಲ, ಕೊಡಗು ನೆರೆಯ ಪ್ರಾಂತದಲ್ಲಿ ವಿಲೀನವಾಗಬೇಕೆಂದು ಒತ್ತಾಯ ಪಡಿಸಲಾರಂಭಿಸಿರುವರು. ಕೊಡಗಿನ ಆದಾಯ, ಪ್ರಗತಿ, ಇವುಗಳ ನೆಲೆ ನಿರ್ದೇಶದಿಂದ ಸಿಂಹಾವಲೋಕನ ಮಾಡಿದರೆ ಯಾರಿಗಾದರೂ ಅನ್ನಿಸುವುದು ಕೊಡಗು ಸ್ವತಂತ್ರವಾದ ಒಂದು ಪ್ರಾಂತವಾಗಿ ನಿಲ್ಲಲಾರದೆಂಬುದು. ಕಾಲಿಲ್ಲದ ಹೇಳುವ ಓಡಲು ಬಣ ಕಟ್ಟಿದಂತಾಗುವುದು ಕೊಡಗಿನ ವಿಲಯನದ ವಿರುದ್ಧದ ವಾದವೆಂಬುದೂ ಮನವರಿಕೆಯಾಗುವುದು.

ಗೆಸ್ಟ್ ಹೌಸಿನಿಂದ

ಪ್ರಾಂತಾಧ್ಯಕ್ಷ ಶ್ರೀ ನಿಜಲಿಂಗಪ್ಪ, ಉಪಾಧ್ಯಕ್ಷ ಶ್ರೀ ನೆಸ್ಸಿ ಇವರ ಜೊತೆಯಲ್ಲಿ ಹೋಗಿರುವ ನಮಗೆ ಮಡಿಕೇರಿಯ 'ಗೆಸ್ಟ್ ಹೌಸ್' ಬಿಡಾರವಾಯಿತು. ಇಲ್ಲಿರುವ ಅಗಲವಾದ ಕಿಟಕಿಗಳಿಂದ ಮಡಿಕೇರಿಯ ಸೌಂದರ್ಯವನ್ನು ನೋಡಿ ತಣಿಯಬೇಕು. ಒಂದೊಂದು ಕಿಟಕಿಯಿಂದ ಒಂದೊಂದು ಬಗೆ ನೋಟಗಳು. ನೋಟದ ಪರದೆಗಳು ಶೂನ್ಯವಾದರೆ, ಎದೆತುಂಬಿ ಬರುವ ಪ್ರಕೃತಿ ಸೌಂದರ್ಯ ಕ್ಷಣ ಕ್ಷಣಕ್ಕೂ ಹೊಸ ಹೊಸದಾಗಿ ಎದ್ದು ತೋರುತ್ತಿದ್ದಿತು.

ರಾಜ ಸೀಟಿನ ಸೌಂದರ್ಯದ ರಂಜನೆಗಿನ್ನು ಬಿಸಿಲು ಕಾಣಿಸದ ಬೆಳಗಿನಿಂದ ಸಮುದ್ರಗಳನ್ನು ನೋಡಿದಾಗ ಆಕಾಶಕ್ಕೆ ಕೊಡಗಿಗೂ ಅಂತರವೇ ಕಾಣದು. ಬೆಳ್ಳಿಯ ಮಂಜು ಆವರಿಸಿ ಗುಡ್ಡಬೆಟ್ಟಗಳಿಗೂ ಮಧ್ಯೆ ಹೊದಿಸಿರುವ ಶ್ವೇತ ವಸನದಂತೆ ತೋರುವುದು. ನೀಲಾಕಾಶದ ಮಧ್ಯದಲ್ಲಿ ನಾವು ಮೋಡದಿಂದೇರುವವೋ

ಎಂಬ ಭ್ರಮೆಯೂ ಒಂದೊಂದು ಸಾರಿ ನಮಗಾಗುವುದು.

ಜ. ಕಾರ್ಯಪ್ಪನವರೊಂದಿಗೆ

ಜನವರಿ ೧೪ನೇ ತಾರೀಖು ಸಂಜೆಯನ್ನು ನಾವು ನಮ್ಮ ವಿಶ್ರಾಂತಿಗಾಗಿ ಉಪಯೋಗಿಸಿಕೊಂಡೆವು. ಮರುದಿನ ಮುಂಜಾನೆ, ತನ್ನ ಹುಟ್ಟೂರಿಗೆ ಆಗಲೇ ಬಂದಿದ್ದ ಜನರಲ್ ಕಾರ್ಯಪ್ಪನವರೊಂದಿಗೆ ಅವರ ಸ್ವಗೃಹದಲ್ಲಿ ನಡೆದ ಸಂದರ್ಶನವೇ ಅಂದಿನ ಮುಖ್ಯ ವಿಷಯ. ಮುಂಜಾನೆ ಶ್ರೀ ನಿಜಲಿಂಗಪ್ಪ, ಶ್ರೀ ನೆಸ್ಸಿ, ಹಳ್ಳಿಕೇರಿ ಗುದ್ಲೆಪ್ಪ, ರಾಜಾರಾಮ ದುಬೆ, ಪೂಣಚ್ಚ ಇವರು ಕಾರ್ಯಪ್ಪನವರನ್ನು ಕಂಡು ಯೋಗಕ್ಷೇಮದ ವಿಚಾರವನ್ನು ಮಾಡಿಕೊಂಡು ಬಂದರು. ಕರ್ನಾಟಕದ ಏಕೀಕರಣದ ವಿಚಾರವಾಗಿಯೂ ಮಾತುಕತೆ ನಡೆಯಿತಂತೆ. ಮಾತುಕತೆಯ ಫಲಶ್ರುತಿಯ ಬಗ್ಗೆ ಹೋದವರಲ್ಲಿ ಒಬ್ಬರೂ ಏನೂ ಹೇಳಲು ಇಚ್ಛಿಸಲಿಲ್ಲ. ಏಕೀಕರಣದ ಬಗ್ಗೆ ಅವರು ವಿರುದ್ಧರಿರುವರೆಂದು ಮಾತ್ರ ಹೇಳಿದರು. ಮುಖ್ಯವಾಗಿ ನನಗೆ ಈ ಕಾರಣದಿಂದಲೇ ಕಾರ್ಯಪ್ಪನವರನ್ನು ನೋಡಲು ಕುತೂಹಲ ಹೆಚ್ಚಿತು. ಸಂಜೆ ನಾಲ್ಕು ಘಂಟೆಗೆ ನಾನು ಮತ್ತು ನನ್ನ ಉಳಿದ ಮಿತ್ರಮಂಡಳಿಯು ಹೋಗಬೇಕೆಂದು ಸಂದರ್ಶನವನ್ನು ಗೊತ್ತುಮಾಡಿಕೊಂಡು ಬಂದಿದ್ದರು. ಸಲ್ಲಕ್ಕೆ ಸರಿಯಾಗಿ ಹೋದೆವು. ಯೋಗಕ್ಷೇಮ ಸಮಾಚಾರದ ನಂತರ ನಾನು ಈ ಸಂದರ್ಭವನ್ನು ಸಣ್ಣ ಪತ್ರಿಕಾ ಪ್ರತಿನಿಧಿ ಸಂದರ್ಶನವನ್ನಾಗಿ ಮಾರ್ಪಡಿಸಿಕೊಂಡೆನು.

ನಾನು ಸಾವಧಾನವಾಗಿ ಭಾಷಾವಾರು ಪ್ರಾಂತರಚನೆಯ ಪ್ರಶ್ನೆಯನ್ನು ತೆಗೆದು ನೀವು ಇದರ ನಿವಾರಣೆಗೇತ ನೆರವಾಗುವಿರಿ ಎಂದು ಕೇಳಿದೆನು. ಅವರು ಗಂಭೀರವಾಗಿಯೇ 'ನಾನೊಬ್ಬ ಸೈನಿಕ, ನಾನೇನು ಮಾಡಬಲ್ಲೆ?' ಎಂದು ಉತ್ತರ ಕೊಟ್ಟರು. ಉತ್ತರ ಸೌಜನ್ಯಭರಿತವಾಗಿದ್ದಿತು. ನಾನು ಈ ಪ್ರಶ್ನೆಯನ್ನು ಇಷ್ಟಕ್ಕೇ ಬಿಡದೆ, 'ತಮ್ಮನ್ನು ಭಾರತದ ಮಹಾದಂಡನಾಯಕರೆಂದು ಈ ಪ್ರಶ್ನೆಯನ್ನು ಕೇಳುತ್ತಿಲ್ಲ. ಕನ್ನಡಿಗರೆಂದು ಕೇಳುತ್ತಿರುವೆನು' ಎಂದು ಹೇಳಿ ಮುಗಿಸುವುದರಲ್ಲಿಯೇ ಅವರು 'ನಾನು ಕನ್ನಡಿಗನಲ್ಲ, ನಾನು ಕೂರ್ಗಿ' ಎಂದು ತಡಬಡಿಸಿ ಹೇಳಿ, ಪುನಃ ಅದನ್ನು ತಿದ್ದಿಕೊಳ್ಳುವಂತೆ, 'ನಾನು ಮೊದಲು ಭಾರತೀಯ' ಎಂದು ಗಾಬರಿಯ ಧ್ವನಿಯಲ್ಲಿ ಉಚ್ಚರಿಸಿದರು. ಈ ಶಬ್ದಸ್ಪಂದಗಳ ಅರ್ಥವನ್ನು ನಾನು ಮಾಡಿಕೊಳ್ಳುತ್ತಿರುವಾಗಲೇ ಅವರು ತನ್ನ ಹೃದಯವನ್ನು ಬಿಚ್ಚಿಟ್ಟರು.

ಕಠಿಣವಾದ ಶೈಲಿಯಲ್ಲಿ ಅವರು 'ಕೊಡಗನ್ನು ಕೊಡಗಿನ ಪಾಡಿಗೆ ಬಿಟ್ಟುಬಿಡಿರಿ. ನಾವಿರುವುದು ಕಾಡು, ನಮ್ಮನ್ನು ಕಾಡಿನಲ್ಲಿಯೇ ನಮ್ಮಷ್ಟಕ್ಕೆ ಬಿಟ್ಟುಬಿಡಿರಿ. ನಮ್ಮ ತಂಟೆ ನಿಮಗೇಕೆ? ನಾವಿಲ್ಲಿ ಸುಖವಾಗಿರುವೆವು. ಅನ್ಯ ನಾಡುಗಳಿಗೆ ಸೇರಲಿಚ್ಛಿಸಿಲ್ಲ. ಕನ್ನಡತನದ ಭಾವನೆಯಿಲ್ಲ. ಆಕಾಂಕ್ಷೆಗಳ ಹಾವಳಿಯಿಲ್ಲ. ನೀಗಾದರೂ ಇನ್ನೇರಡು ವರ್ಷ ನಾವೇ ಆಳುವಿಕೆ [illegible] ಅನಂತರ ನಾನೂ ಈ ಕಾಡಿ-

ರಘುಲಾಲ್ & ಕಂಪೆನಿ,
ಔಷಧ ವ್ಯಾಪಾರಿಗಳು, ಮೈಸೂರು.
ಕರ್ನಾಟಕದಲ್ಲೆಲ್ಲಾ ಚೆನ್ನಾಗಿ ಸಂಗ್ರಹಿತವಾದ ಮತ್ತು ವಿಶ್ವಾಸಪೂರಿತವಾದ ಔಷಧಿ ಅಂಗಡಿ

Also at :
೭೦ ಆರ್ಕಾಟ್ ಶ್ರೀನಿವಾಸಾಚಾರ್ ಬೀದಿ,
26-19 ಬೆಂಗಳೂರು ೨.

RAGHULAL & CO., CHEMISTS, MYSORE.

ದಿ ಟ್ರಾಪಿಕಲ್
ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

ಮೇನೇಜಿಂಗ್ ಡೈರೆಕ್ಟರ್:– ಲಾಲ ಶಂಕರ್ ಲಾಲ್
ಮುಖ್ಯ ಕಛೇರಿ – ಹೊಸ ಡೆಲ್ಲಿ.
ಸ್ಥಾಪಿಸಿದ ಡೈರೆಕ್ಟರರು:

ಪಂಡಿತ ಮೋತಿಲಾಲ್ ನೆಹರು.	ಎಸ್ ಶ್ರೀನಿವಾಸ ಅಯ್ಯಂಗಾರ್
ಹಕೀಮ್ ಅಜಮಲಖಾನ್	ಡಾ॥ ಎಂ. ಎ. ಅನ್ಸಾರಿ

Transacts—Life, Fire, Motor and Marine.

ಯಂ. ಯು ಅಪ್ಪಣ್ಣ,	ಎಂ. ಎ. ಬೆಳ್ಯಪ್ಪ,
ಏಜೆನ್ಸಿ ಸುಪರಿಂಟೆಂಡೆಂಟ್,	ಬ್ರಾಂಚ್ ಸೆಕ್ರೆಟರಿ,
ಮಡಿಕೇರಿ, ಕೊಡಗು.	ಹಂಪನಕಟ್ಟಾ, ಮಂಗಳೂರು.

KIRLOSKAR BROTHERS, LTD
23, SRI NARASIMHARAJA ROAD
BANGALORE 2

ವಿದ್ಯುಚ್ಛಕ್ತಿಯು ಇಲ್ಲದ ಕಡೆಗಳಲ್ಲಿ ವ್ಯವಸಾಯಕ್ಕೆ ಅತ್ಯುಪಯುಕ್ತವಾದ
ಕಿರ್ಲೋಸ್ಕರ್ - ಪೆಟ್ಟರ್
ಐದು (5) B. H. P. ಡಿಸೆಲ್ ಎನ್‌ಜಿನ್ ಪಂಪುಸೆಟ್ಟುಗಳು



ಸಿದ್ಧಸಂಗ್ರಹದಿಂದ ದೊರೆಯುತ್ತವೆ.
ಹೆಚ್ಚಿನ ವಿವರಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ:–
ಕಿರ್ಲೋಸ್ಕರ್ ಬಂಧುಗಳು, ಲಿಮಿಟೆಡ್,
23, ಶ್ರೀ ನರಸಿಂಹ ರಾಜಪೇಟೆ,
4-4 ಬೆಂಗಳೂರು ೨

Edited Printed and Published by P. I. Belliappa at 'Kodagu' Press, Mercara, for 'Kodagu' Ltd.

ನಲ್ಲಿ ಇದ್ದು ಬಿಡುವೆನು' ಎಂದು ಕಾರ್ಯಪ್ಪನವರು ಕಾವ್ಯಮಯ ಶೈಲಿಯಲ್ಲಿ ತಮ್ಮ ಮಾತನ್ನು ಮುಗಿಸಿದರು. ಅವರು ಹತ್ತಿರವಿರುವ ವನಸಿರಿಯ ವೈಭವದ ಕಡೆಗೆ ಕೈ ಮಾಡಿ 'ಇದು ಬರಿಯ ಕಾಡ. ಇದರ ಶೋಷಣೆ ನಿಮಗೇಕೆ?' ಎಂದೆನ್ನುವಾಗ ನಾನು ತಡೆಯದೆ, ಇದನ್ನು ಬಯಲಿಟ್ಟ ಕಾಡೆಂಬ ಉಗ್ರಶಬ್ದದಿಂದ ಕರೆಯಬೇಡಿ ರೆಂದೆನು

ಒಂದು ದೃಶ್ಯ.

ಕಾರ್ಯಪ್ಪನವರು ನಮಸ್ಕರು ಬಾಯಲ್ಲಿ ಸಿಳ್ಳುಹಾಕಿ ತಮ್ಮ ಮಕ್ಕಳಿಬ್ಬರನ್ನೂ ಕರೆದರು. ನಳಿನಿ ಮಗಳ ಹೆಸರು. ನಂದ ಮಗನ ಹೆಸರು. ಇಬ್ಬರೂ ಮುದ್ದು ಮಕ್ಕಳು. ಇಬ್ಬರೂ ಸಣ್ಣ ಸೈನಿಕರಂತೆ ನಿಂತು ನಮಗೆ ವಂದಿಸಿದರು. 'ನಿಮಗೆ ಕನ್ನಡ ಬರುತ್ತದೆಯೇ?' ಎಂದು ಕಾರ್ಯಪ್ಪನವರು ಕನ್ನಡದಲ್ಲಿಯೇ ತಮ್ಮ ಮಕ್ಕಳಿಬ್ಬರನ್ನು ಪ್ರಶ್ನಿಸಿದರು. ಅವರಿಬ್ಬರೂ 'ಇಲ್ಲ ಇಲ್ಲ' ವೆಂದು ಕನ್ನಡದಲ್ಲಿಯೇ ಉತ್ತರಕೊಟ್ಟರು. ಆ ನಂತರ ಸ್ವಲ್ಪ ಸ್ವಲ್ಪ ಬರುವುದೇ ಎಂದು ತಂದೆ ಮಕ್ಕಳನ್ನು ಮರುಪ್ರಶ್ನಿಸಿದರು. ಅವರು ಅದಕ್ಕೆ ಇಲ್ಲವೆಂದು ಮುದ್ದಾದ ಕನ್ನಡದಲ್ಲೇ ಉತ್ತರ ಹೇಳಿದರು. ಅನಂತರ ಅಪ್ಪನ ಸಂಜ್ಞೆಯಂತೆ ಅವರು ಹೊರಗಡೆಗೆ ಹೋದರು. ಕಾರ್ಯಪ್ಪನವರು ಈ ದೃಶ್ಯವನ್ನ ತಾವು ಕನ್ನಡಿಗರಲ್ಲವೆಂಬುದಕ್ಕೆ ಮಾಡಿತೋರಿಸಿದರೆಂಬುದು ನಮಗೆ ತಿಳಿದಂತಾಯಿತ.

ನಾನು ಈ ಪ್ರಶ್ನೆಯನ್ನು ಹೆಚ್ಚಿಗೆ ಬೆಳೆಸದೆ ಕೋರಿಯಾ ಯುದ್ಧದ ಬಗ್ಗೆ ಒಂದೆರಡು ಪ್ರಶ್ನೆಗಳನ್ನೂ ಕೇಳಿದೆನು. ಅವರು ಅದಕ್ಕೆ 'ಇಂದು ಯುದ್ಧ ಮಾಡತಕ್ಕವರು ರಾಜಕಾರಣಿಗಳು. ಸೈನಿಕರು ಅವರಿಸಿಡೆಗೆ ಹೋಗುವ ಕಾಯಿಗಳು. ಆದ್ದರಿಂದ ಯುದ್ಧದ ಪಲಶ್ರುತಿಯನ್ನ ಅವರೇ ಬಲ್ಲರು' ಎಂದು ಉತ್ತರ ಕೊಟ್ಟರು. ಕೊರಿಯಾ ಯುದ್ಧದ ಬೇಗೆಯಿಂದ ಭಾರತಕ್ಕೆ ಕ್ಷೇಮವೇ ಎಂದು ಕೇಳಿದ ಪ್ರಶ್ನೆಗ ಕ್ಷೇಮವೆಂದು ನಾನು ಹೇಳಬೇಕೆ ಎಂದರು. ಅನಂತರ ನಾವು ಅವರಿಂದ ಬೀಳ್ಕೊಂಡು ಕೊಡಗಿನ ಕಾಲೇಜಿನಲ್ಲಿ ಭಾಷಣ ಮಾಡುತ್ತಿದ್ದ, ಶ್ರೀ ನೆಸ್ವಿ, ನಿಜಲಿಂಗಪ್ಪ, ಹಳ್ಳಿಕೇರಿಯವರನ್ನ ಕಾಣಹೋದೆವು. ಶ್ರೀ ನಿಜಲಿಂಗಪ್ಪನವರು ವಿದ್ಯಾರ್ಥಿಗಳ ಭವಿಷ್ಯವನ್ನು ಕುರಿತು, ನೆಸ್ವಿಯವರು ಭಾರತದ ವೇದಾಂತವನ್ನು ಕುರಿತು, ಹಳ್ಳಿಕೇರಿಯವರು ವಿದ್ಯಾರ್ಥಿ ಮತ್ತು ರಾಜಕೀಯ ಎಂಬ ವಿಷಯದ ಮೇಲೂ ಭಾಷಣ ಮಾಡಿದರು. 'ಕರ್ನಾಟಕದ ಧುರೀಣರ ಕಡೆಗೆ ನೆಟ್ಟಗಣ್ಣಿನಿಂದ ನೋಡುತ್ತಿರುವ ವಿದ್ಯಾರ್ಥಿ ವೃಂದವು ಕರ್ನಾಟಕ ಏಕೀಕರಣದ ಮಾತು ಬಂದಾಗಲೆಲ್ಲಾ ಹರ್ಷರವದಿಂದ ಅದಕ್ಕೆ ತಮ್ಮ ಬೆಂಬಲವನ್ನ ಸೂಚಿಸುವಂತೆ ಕರತಾಡನ ಮಾಡುತ್ತಿದ್ದರು. ಸಂಜೆ ನಾವು ಕಾಫಿಯ ತೋಟಗಳನ್ನು ನೋಡಲು ಕಾರಿನಲ್ಲಿ ಸುಂಟಿಕೊಪ್ಪದ ಕಡೆಗೆ ಹೊರಟೆವು

ಶ್ರೀ. ಜಗದೀಶ್ವ ಮೋಟಾರು ಸರ್ವಿಸ್.

ಈ ಸರ್ವಿಸಿನ ಬಸ್ಸು ಬೆಳಿಗ್ಗೆ ೭ ಗಂಟೆಗೆ ಕುಟ್ಟದಿಂದ ಹೊರಟು ವೀರಾಜಪೇಟೆಗೆ ೮–೪೦ ಕ್ಕೆ ತಲಪಿ ವೀರಾಜಪೇಟೆಯಿಂದ ೧೧ ಗಂಟೆಗೆ ಹೊರಟು ಮಾರ್ನಾಡಿಗಾಗಿ ನಾಪೋಕ್ಲಿಗೆ ೧೨–೩೦ ಕ್ಕೆ ತಲಪುವದು. ಪುನಹ ವಾಪಾಸು ೧೨–೪೫ ಕ್ಕೆ ಹೊರಟು ಅದೇ ಮಾರ್ಗವಾಗಿ ವೀರಾಜಪೇಟೆಗೆ ೨–೧೫ ಕ್ಕೆ ತಲಪಿ. ಅಲ್ಲಿಂದ ೨–೩೦ ಕ್ಕೆ ಹೊರಟು ಕುಟ್ಟಕ್ಕೆ ೫–೧೫ ಕ್ಕೆ ತಲಪುತ್ತೆ. ವೀರಾಜಪೇಟೆಯಿಂದ ೧೧ ಗಂಟೆಗೆ ಹೊರಡುವದರಿಂದ ಕಣ್ಣನೂರು, ತಲಚೇರಿ ಸೋಮವಾರಪೇಟೆ, ಪೊನ್ನಂಪೇಟೆ ಬಸ್ಸುಗಳಿಗೆ ಕನೆಕ್ಷನ್ ದೊರೆಯುತ್ತದೆ ನಾಪೋಕ್ಲಿನಿಂದ ಹೊರಡುವವರಿಗೂ ಕಣ್ಣನೂರು, ತಲಚೇರಿ ಪೊನ್ನಂಪೇಟೆ, ಸಿದ್ದಾಪುರ ಬಸ್ಸುಗಳು ದೊರೆಯುತ್ತವೆ

ಎಂ. ಎಂ. ಬೋಜಪ್ಪ,
ಪ್ರೊಪ್ರೈಯಿಟರ್

ಮುಜರಾಯಿ ಇಲಾಖಾ ಪ್ರೆಸಿಡೆಂಟರ ಆಫೀಸಿನಿಂದ.

ಶ್ರೀಮೂಲ ಕಾವೇರಪ್ಪನವರ ದೇವಸ್ಥಾನಕ್ಕೆ ಇಡೀ ಕೊಡಗಿನಲ್ಲಿ ಧರ್ಮದಾಯ ಬತ್ತ ಯಾ ಮೊಬಲಗು ವಸೂಲಾತಿ ಬಗ್ಗೆ ಏಜೆಂಟರು ಬೇಕಾಗಿದೆ. ಇವರಿಗೆ ವಸೂಲ್ಮಾಡಿದ ಮೊಬಲಗಿನಲ್ಲು ಶೇಕಡ 25 ರೂಪಾಯಿ ಮೇರೆ ಕಮಿಷನ್ ಕೊಡಲಾಗುತ್ತೆ. ಖಾಯಿಸ್‌ದಾರರು ಬರುವ ಫೆಬ್ರುವರಿ ತಿಂಗಳು 20 ರ ಒಳಗೆ ದೇವಸ್ಥಾನದ ಪ್ರೆಸಿಡೆಂಟರ ಹೆಸರಿಗೆ ಅರ್ಜಿ ಬರೆದು ಮಂಜೂರಾತಿ ಪಡಕೊಂಡು ಈ ಬಗ್ಗೆ ರಶೀತಿ ಪುಸ್ತಕ ಹೊಂದಿಕೊಳ್ಳಬಹುದಾಗಿ ಈ ಮೂಲಕ ತಿಳಿಸೋಣಾಗಿದೆ

28-1-51 ಸಿ. ಬಿ. ಮುದ್ದಪ್ಪ,
ಪ್ರೆಸಿಡೆಂಟ್.

ಮಾರಾಟಕ್ಕಿದೆ.

ವಿರಾಜಪೇಟೆ ನಾಡು ನಾಲ್ಕೇರಿ ಗ್ರಾಮದಲ್ಲು (ಬೇತರಿಗೆ ಸಮೀಪ) 10½ ಏಕರು ಭೂಮಿ, 4⅓ ಏಕರು ಫಸಲಿಗೆ ಬರಲಿಕ್ಕಾಗಿರುವ ರೋಬಸ್ಟ ಕಾಫಿ, 10 ಏಕರು ಕಾಫಿ ಮತ್ತು ಯಾಲಕ್ಕಿ ವ್ಯವಸಾಯಕ್ಕೆ ಯೋಗ್ಯವಾದ ಜಾಗ ಮತ್ತು 25 ಏಕರು ಕಾಡು ಜಾಗ ಅಲ್ಲದೆ, ವಾಸದ ಹಂಚಿನ ಮನೆ ಸಹ. ಹೆಚ್ಚಿನ ವಿವರಕ್ಕೆ ಈ ಕೆಳಗಿನ ವಿಳಾಸಕ್ಕೆ ತಾ. 15-4-1951 ರ ಒಳಗ ಮಾತ್ರ ಪತ್ರವ್ಯವಹಾರ ಮಾಡಬಹುದು.

ಚಂದ್ರತ-ಡ ನೆ ಗಪ್ಪ,
ನಾಲ್ಕೇರಿ ಗ್ರಾಮ,
ಕಾಕೋಟು ಪರಂಬು.

Reg. No. M. 1500.
'KODAGU' MERCARA, (Coorg).

ಕೊಡಗು

ಸಂಪಾದಕರು—ಟಿ. ಪಿ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. ೬-೦-೦.

ಸಂಪುಟ ೨೯	ತಾರೀಕು ೯-೨-೧೯೫೧ನೇ ಶುಕ್ರವಾರ	ಸಂಚಿಕೆ ೩೪

೧೯೫೧ನೇ ಖಾನೇಸುಮಾರಿ.

ಸಂಸ್ಥೆಯ ರಚನೆ.

ತಾರೀಕು ೧೧-೯-೫೦ನೇ ಕೊಡಗು ಗಜೆಟ್ಟಿನ ವಿಶೇಷ ಸಂಚಿಕೆಯಲ್ಲಿ ಮತ್ತು ಸ್ಥಳೀಯ ಪತ್ರಿಕೆಗಳಲ್ಲಿ ನಾನು ಈ ಮೊದಲು ಖಾನೇಸುಮಾರಿಯ ರೀತಿ ನೀತಿಗಳ ಕುರಿತು ಕೆಲವು ವಿಷಯಗಳನ್ನು ಪ್ರಕಟಪಡಿಸಿದ್ದೆ. ಈ ಸಲ ಸಾರ್ವಜನಿಕರ ತಿಳುವಳಿಕೆಗಾಗಿ ಕೊಡಗಿನ ಖಾನೇಸುಮಾರಿನ ಕಾರ್ಯ ಕಲಾಪಗಳ, ಖಾನೇಸುಮಾರಿಯ ಪ್ರಶ್ನೆಗಳು ಮತ್ತು ಅದನ್ನು ತಿಳಿಸಲು ಮಾಡುವ ರೀತಿಯ ವಿಷಯ ಸವಿಸ್ತಾರವಾಗಿ ವಿವರಿಸಿ ಬರೆಯುತ್ತೇನೆ.

ಕೊಡಗಿನ ಖಾನೇಸುಮಾರಿ ಇಡೀ ಹಿಂದೂಸ್ಥಾನದ ಖಾನೇಸುಮಾರಿಯ ಸಂಸ್ಥೆಯ ಒಂದು ಅಂಗ— ಇದೇ ಫೆಬ್ರವರಿ ೯ನೇ ತಾರೀಕಿನಿಂದ ೨೮ನೇ ತಾರೀಕಿನವರೆಗೆ ಭಾರತದ ಉದ್ದಗಲಕ್ಕೂ ಏಕ ಪ್ರಕಾರ ಜನಗಣತಿ ಪ್ರಾರಂಭವಾಗಿ ಮುಕ್ತಾಯವಾಗುತ್ತದೆ. ಪ್ರಪಂಚದಲ್ಲೇ ಇದು ಅತಿ ದೊಡ್ಡ ಖಾನೇಸುಮಾರಿ. ಹಾಗೆಯೇ ಅತೀ ಕಡಿಮೆ ಖರ್ಚಿನಿಂದ ನಡೆಯುವಂಥಾದ್ದೂ ಆಗಿದೆ. ಕೊಡಗು, ಮೈಸೂರು ಪ್ರಾಂತದೊಡನೆ ಒಂದು ಖಾನೇಸುಮಾರಿಯ ಜಿಲ್ಲೆಯಾಗಿ ಸೇರಿಸಲ್ಪಟ್ಟು ೬ ಎಂಬ ಸಂಜ್ಞಾಕ ನಂಬರಿನಿಂದ ಗುರುತಿಸಲಾಗಿದೆ. ಕೊಡಗನ್ನು ಎರಡು ತಾಲೂಕುಗಳಾಗಿಯೂ ನಾಲ್ಕು ಛಾರ್ಜುಗಳಾಗಿಯೂ ವಿಂಗಡಿಸಲ್ಪಟ್ಟು ಪ್ರತಿ ಛಾರ್ಜಿನಲ್ಲಿರುವ ಮುನಿಸಿಪಾಲಿಟಿ ನೋಟಿಫೈಡ್ ಏರ್‍ಯ, ಪಂಚಾಯತ್ ಮತ್ತು ಗ್ರಾಮಗಳಿಗೆ ಸಂಜ್ಞಾಕ ನಂಬರನ್ನು ಕೊಡಲಾಗಿದೆ. ಉತ್ತರ ಕೊಡಗು ತಾಲೂಕಿಗೆ ೧, ದಕ್ಷಿಣ ಕೊಡಗು ತಾಲೂಕಿಗೆ ೨ ಎಂಬದಾಗಿ ನಂಬರು ಕೊಡಲಾಗಿದೆ. ಈ ನಾಲ್ಕು ಛಾರ್ಜುಗಳು ತಾಲೂಕಿನ ಸಬ್‌ಡಿವಿಜನಲ್ ಆಫೀಸರ್‌ಯಲ್ಲೂ ಮತ್ತು ಎರಡು ಮುನಿಸಿಪಾಲಿಟಿಗಳು ಆಯಾ ಪ್ರೆಸಿಡೆಂಟರ ಸುಪರ್ದಿನಲ್ಲೂ ಕಾರ್ಯ ಕಲಾಪಗಳನ್ನು ನಡೆಸಬೇಕಾಗಿದೆ. ಕೊಡಗಿನ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರವರು ಈ ನಾಲ್ಕು ಛಾರ್ಜಿನ ಮೇಲ್ವಿಚಾರಣೆಯುಳ್ಳದ್ದು ಅವರ ನೇತೃತ್ವದಲ್ಲಿ ಖಾನೇಸುಮಾರಿ ಕೆಲಸವು ನಡೆಯಬೇಕಾಗಿದೆ. ಕೊಡಗಿನ ಚೀಫ್ ಕಮಿಷನರ್ ಸಾಹೇಬರವರು ದಿವಾನ ಖಾನೇಸುಮಾರಿ ಅಧಿಕಾರಿಗಳಾಗಿದ್ದು ಪ್ರತಿಯೊಂದು ಕೆಲಸವೂ ಅವರ ಆಜ್ಞಾನುಸಾರವಾಗಿ ಬರಬೇಕಾದ್ದು. ಇವೆಲ್ಲವನ್ನೂ ಸುವ್ಯವಸ್ಥಿತವಾಗಿ ನಡೆಸಲು ಮದ್ರಾಸು ಮತ್ತು ಕೊಡಗಿನ ಖಾನೇಸುಮಾರಿಯ ಸೂಪರಿಂಟೆಂಡೆಂಟರು ಮೇಲಾಧಿಕಾರಿಗಳಾಗಿದ್ದು ಮದ್ರಾಸಿನಿಂದ ಎಲ್ಲಾ ಕಲಾಪಗಳನ್ನು ನಡೆಸುತ್ತಾರೆ. ಪ್ರತಿಯೊಂದು ಛಾರ್ಜಿನ ... ಸಹಾಯಕರಾಗಿ ... ಛಾರ್ಜ್ ಸೂಪರಿಂಟೆಂಡರು ... ಆಗಿರುತ್ತಾರೆ. ... ರಿಸರ್ವ್ ಫಾರೆಸ್ಟಿನ ಒಳಗೆ ಖಾನೇಸುಮಾರಿಯನ್ನು ದಾಖಲು ಮಾಡಲು ... ಛಾರ್ಜ್ ಸೂಪರಿಂಟೆಂಡೆಂಟಿಗೆ ಸಹಾಯಕನಾಗುವಂತೆ ಕೊಡಗಿನ ಚೀಫ್ ... ಅಧಿಕಾರಿಗಳು ಒಬ್ಬ ... ಅಧಿಕಾರಿಯನ್ನು ನೇಮಕ ಮಾಡಿದ್ದಾರೆ.

ಹಿಂದೂಸ್ತಾನದ ಮನೆಯ ಯಜಮಾನನು ತನ್ನ ಕಾರ್ಯಭಾರವನ್ನು ಸುವ್ಯವಸ್ಥಿತವಾಗಿ ನಡೆಸಲು ತನ್ನ ಆಸ್ತಿಯ ವಿವರ ಪಟ್ಟಿ, ಅದರ ನಷ್ಟ ಲಾಭಗಳನ್ನು ಇಟ್ಟುಕೊಳ್ಳುತ್ತಾನೆ. ಅದೇ ರೀತಿ ಒಂದು ಜನಾಂಗವೂ ತನ್ನ ಆಡಳಿತದ ಕೆಲಸಕ್ಕೆ ಖಾನೇಸುಮಾರಿಯ ದಾಖಲೆಯನ್ನು ಹೊಂದಿ ಕೊಂಡಿರುತ್ತದೆ. ಹತ್ತು ವರ್ಷಗಳಿಗೊಮ್ಮೆ ಈ ಬದಲಾವಣೆಗಳನ್ನು ಕಂಡುಹಿಡಿಸಿ ಕೊಳ್ಳುತ್ತದೆ. ಈ ಕಾರಣದಿಂದ ದೇಶದ ಸಾಮಾಜಿಕ ಸ್ಥಿತಿಗತಿಗಳನ್ನು ತಿಳಿದುಕೊಳ್ಳಬೇಕು. ಪ್ರತಿಯೊಬ್ಬ ನಾಗರಿಕನೂ ತನ್ನ ವಿಷಯವಾದ ಮತ್ತು ತನ್ನೊಡನೆ ವಾಸಿಸುವ ಸಂಬಂಧಿಕರ ವಿಷಯವಾಗಿ ಸರಿಯಾದ ಉತ್ತರವನ್ನು ಕೊಟ್ಟರೆ ಮಾತ್ರ ಇದರ ಫಲ ಲಭ್ಯವಾಗುತ್ತದೆ. ಇಡೀ ಹಿಂದೂಸ್ಥಾನದ ಜನರ ಸಂಖ್ಯೆ ಸರಿಯಾಗಿ ಸಿಕ್ಕಬಹುದೋ ಎಂಬ ಸಂಶಯ ಕೆಲವರಲ್ಲುಂಟು. ಈ ವಿಚಾರ ಮಾಡಿದರೆ ಖಾನೇಸುಮಾರಿ ತೆಗೆಯಲು ಏರ್ಪಡಿಸಿರುವ ರಚನೆ ಇದಕ್ಕೆ ಸರಿಯಾಗಿದೆ. ಫೆಬ್ರವರಿ ೯ನೇ ತಾರೀಕಿನಿಂದ ೨೮ನೇ ತಾರೀಕಿನ ಸಂಜೆಯವರೆಗೆ ದೇಶದಲ್ಲಿ ಖಾನೇಸುಮಾರಿಯ ... ಪ್ರತಿಯೊಬ್ಬ ವ್ಯಕ್ತಿಯನ್ನೂ ... ಅವರವರ ಮನೆಗಳಲ್ಲಿ ಸಂಗತಿಸಿ ಯಾ ಅವರು ... ತರದಂತೆ ... ವಿಷಯವನ್ನು ಸಂಗ್ರಹಿಸುವುದು ... ಬಾರದ ... ನೋಡಲಿಕ್ಕೆ ದಾಗಿ ... ಈ ಮೊದಲು ... ?" ಎಂಬ ಪ್ರಶ್ನೆ ಕೇಳಲಾಗುವುದು. ೯ನೇ ತಾರೀಕಿನಿಂದ ಮಾರ್ಚಿ ೧ನೇ ತಾರೀಕಿನ ಒಳಗೆ ... ದೂರ ಹೋಗಿರುವ ವ್ಯಕ್ತಿಗಳನ್ನು ಮಾತ್ರ ದಾಖಲು ಮಾಡಲಾಗುವುದಿಲ್ಲ. ಹಾಗೆಯೇ ಮನೆಗೆ ಬಂದಿರುವ ಅತಿಥಿ ... ಅವರ ಸ್ವಂತ ... ದಾಖಲು ... ಈ ಕ್ರಮವನ್ನು ... ನೋಡಿದರೆ ... ಗಣನೆಗೆ ಸಿಕ್ಕದೆ ... ತಪ್ಪದೆ. ... ಮನೆ ... ಪ್ರತಿಯೊಬ್ಬ ಎನ್ಯುಮರೇಟರಿಗೆ ಒಂದು ಬ್ಲಾಕು ಕೊಡಲ್ಪಟ್ಟು ಆ ಬ್ಲಾಕಿನ ಆ ವರಣದಲ್ಲಿರ ... ಮನೆಗೆ ... ಆ ಎನ್ಯುಮರೇಟರ ೧... ನೇ ತಾರೀಕಿನ ... ಜನಾಂಗ ... ದೇಶದ ... ಗ್ರಾಮ ... ಬ್ಲಾಕುಗಳಾಗಿ ವಿಂಗಡಿಸಿ ... (ಹ ... ಬರೆಯಲ್ಪಟ್ಟ) ಅದರಲ್ಲಿ ...

ವಿದ್ಯಾವಂತರನ್ನು ಗೌರವಾರ್ಥವಾಗಿ ಎನ್ಯುಮರೇಟರ್ ಎಂಬದಾಗಿ ನೇಮಿಸಲ್ಪಟ್ಟು ಈ ಕೆಲಸವನ್ನು ನಡೆಸುವುದರಿಂದ ಲೆಕ್ಕವು ಎಂದೂ ತಪ್ಪಲಾರದು. ಪ್ರತಿಯೊಬ್ಬ ಎನ್ಯುಮರೇಟರ್ (ದಾಖಲು ಮಾಡುವವರು) ಈ ಬಗ್ಗೆ ವಿವರವಾದ ತರಬೇತಿಗಳನ್ನು ಆಜ್ಞಾ ಪುಸ್ತಕಗಳ ಮೂಲಕವೂ ತರಬೇತಿ ಕ್ಲಾಸುಗಳ ಮೂಲಕವೂ ಹೊಂದಿಕೊಂಡಿರುತ್ತಾರೆ. ಅವರಿಗೆ ಮನೆಪಟ್ಟಿ, ನಕಾಶೆ, ಆಜ್ಞಾ ಪುಸ್ತಕ ಇತ್ಯಾದಿಗಳನ್ನು ಕೊಡಲಾಗಿದೆ. ಪ್ರತಿ ಎನ್ಯುಮರೇಟರುಗಳ ಗುಂಪಿಗೆ ಅವರ ಕೆಲಸವನ್ನು ಪರಿಶೀಲಿಸಲು ಸೂಪರ್‌ವೈಜರೆಂಬ ಇನ್ನೊಬ್ಬ ಅಧಿಕಾರಿಗಳು ನೇಮಕ ಮಾಡಲ್ಪಟ್ಟಿರುವರು. ಇವರಲ್ಲರೂ ಗೌರವಾರ್ಥವಾಗಿ ಕೆಲಸ ಮಾಡುವ ಸ್ವಯಂಸೇವಕರು. ಎವರು ನಿಮ್ಮ ಮನೆಯನ್ನು ಈ ತಿಂಗಳಲ್ಲಿ ಒಮ್ಮೆ ಮಾರ್ಚಿ ತಿಂಗಳು ೩ನೇ ತಾರೀಕಿಗೆ ಒಮ್ಮೆ ಬಂದು ... ನಿಮ್ಮನ್ನು ... ಕೊಟ್ಟಿರುವ ಹದಿನಾಲ್ಕು ಪ್ರಶ್ನೆಗಳನ್ನು ಕೇಳುತ್ತಾರೆ. ಪ್ರತಿಯೊಂದು ಪ್ರಶ್ನೆಯೂ ... ವಿಧಿಸಿರುವ ಪ್ರಶ್ನೆಗಳನ್ನು ... ಮಾತ್ರ ಕೇಳಬೇಕು ... ದೆ. ಪ್ರತಿಯೊಬ್ಬನೂ ಕೇಳುವ ಪ್ರಶ್ನೆಗೆ ಸಮರ್ಪಕವಾದ ಉತ್ತರವನ್ನು ಕೊಡಬೇಕು. ನಿರಕ್ಷರಿಗಳಲ್ಲಿ ... ಗಾಬರಿಪಡಿಸಲಾರದು. ನಿಮ್ಮ ... ಉತ್ತರವು ... ಆಗಿ ... ಯಾವುದೇ ... ಖಾನೇಸುಮಾರಿ ದಾಖಲು ... ದೇಶದ ... ಟ್ಯಾಕ್ಸ್, ... ಇತ್ಯಾದಿ ... ಕೊಡಲಾಗುತ್ತಿದ್ದಿಲ್ಲ. ಪ್ರತಿಯೊಬ್ಬ ದೇಶದ ನಿವಾಸಿಯೂ ಈ ವಿಷಯವನ್ನು ತಿಳಿದು ಸರಕಾರದೊಡನೆ ಸಹಕರಿಸಬೇಕು.

ಫೆಬ್ರವರಿ ೯ನೇ ತಾರೀಕಿನಿಂದ ೨೮ನೇ ತಾರೀಕಿನವರೆಗೆ ದಾಖಲಾದ ನಂತರ ... ಜನರ ... ಅದನ್ನು ... ತಾರೀಕಿನ ಒಳಗೆ ನಿಮ್ಮ ಮನೆಗೆ ಇನ್ನೊಮ್ಮೆ ... ನೀವು ಅವರನ್ನು ಗೌರವವಾಗಿ ... ಅವರು ಕೇಳುವ ಪ್ರಶ್ನೆಗೆ ಸರಿಯಾದ ಉತ್ತರವನ್ನು ಕೊಟ್ಟು ... ನೀವು ... ದ ... ಕೆಲಸ ಮಾಡುವ ಸ್ವಯಂಸೇವಕರು ಒಟ್ಟುಗೂಡಿ ಮಾಡುವ ಈ ಮಹಾ ಕಾರ್ಯದ ಫಲವಾಗಿ ಮಾರ್ಚಿ ನಾಲ್ಕನೇ ತಾರೀಕಿಗೆ ಸ್ವತಂತ್ರ ಭಾರತದ ಸರಿಯಾದ ಜನಸಂಖ್ಯೆ ಸ್ಥಿತಿಗತಿ ಮುಂತಾದ ವಿವರವು ಸಂಗ್ರಹವಾಗಿ ಕ್ರಮೇಣ ಪ್ರಚುರಪಡಿಸಲಾಗುತ್ತದೆ.

ಖಾನೇಸುಮಾರಿಯ ಪ್ರಶ್ನೆಗಳು—

ಪ್ರತಿಯೊಬ್ಬ ಎನ್ಯುಮರೇಟರುಗಳು ನಿಮ್ಮನ್ನು ಕುರಿತು ಈ ಕೆಳಗಿನ ೧೪ ಪ್ರಶ್ನೆಗಳನ್ನು ಕೇಳುತ್ತಾರೆ. ಉತ್ತರವನ್ನು ಅಚ್ಚಾಗಿ ಕೊಡಲ್ಪಟ್ಟ ಒಂದು ಚೀಟಿಯಲ್ಲಿ ಸಂಜ್ಞಾಕ ನಂಬರುಗಳ ಮೂಲಕ ಬರೆಕೊಳ್ಳುತ್ತಾರೆ.

೧. ನಿಮ್ಮ ಹೆಸರು ಮತ್ತು ಕುಟುಂಬದ ಸಂಬಂಧ ೨ (ಎ) ಜನಾಂಗ (ಬಿ) ಮತ (ಸಿ) ಜಾತಿ (೩) ಮದುವೆಯಾಗಿದೆಯೋ ಇಲ್ಲವೋ ಇತ್ಯಾದಿ (೪) ಪ್ರಾಯ (೫) ಜನ್ಮಸ್ಥಳ ಮತ್ತು ತಂದೆಯ ಗಂಡನ ಅಥವಾ ಪೋಷಕನ ಹೆಸರು (೬) ವಾಕಿಂಗಿನಿಂದ ಬಂದ ನಿರಾಶ್ರಿತರೋ (೭) ಮಾತೃಭಾಷೆ (೮) ನಿಮಗೆ ತಿಳಿದಿರುವ ಇತರ ಹಿಂದೂಸ್ಥಾನದ ಭಾಷೆ (೯) ಮುಖ್ಯ ಜೀವನೋಪಾಯ ಮತ್ತು ವಿವರ (ಉದ್ಯೋಗ) (೧೦) ಹೆಚ್ಚಿನ ಹೇರು ಅಥವಾ ನಿಮ್ಮ ಉದ್ಯೋಗದ ವಿವರ (೧೧) ಇತರ ಜೀವನೋಪಾಯ (೧೨) ವಿದ್ಯಾಭ್ಯಾಸ ಅಥವಾ ಓದಿ ಬರೆಯಬಲ್ಲವರೋ (೧೩) ... ಸಂಬಂಧ ಇತ್ಯಾದಿ ಇದೆಯೋ (೧೪) ಗಂಡಸೋ ಹೆಂಗಸೋ ಎಂಬ ವಿವರ.

ಮೇಲೆ ನಮೂದಿಸಿರುವ ಪ್ರಶ್ನೆಗಳನ್ನು ಸಂಕ್ಷೇಪವಾಗಿ ಇಲ್ಲಿ ಕೊಡಲಾಗಿದೆ. ಅವುಗಳ ವಿವರಗಳನ್ನು ದಾಖಲಾತಿ ಮಾಡುವವರು ನಿಮಗೆ ವಿವರಿಸುತ್ತಾರೆ. ಚೆನ್ನಾಗಿ ತಿಳಿದುಕೊಳ್ಳಲು ನೀವು ಅವರೊಡನೆ ಪ್ರಶ್ನೆ ಕೇಳಿ ತಿಳಿದುಕೊಳ್ಳಬಹುದು. ನಿಮ್ಮ ಸಂಸಾರದ ಎಲ್ಲಾ ... ಪ್ರಶ್ನೆಗಳನ್ನು ಎನ್ಯುಮರೇಟರು ಕೇಳಿಕೊಡರು. ... ಬೇಕಾಗಿರುವುದಿಲ್ಲ. ನಿಮಗೆ ... ಯೊಂದು ಮಾತ್ರ ಕೇಳಲಾಗುತ್ತೆ.

ಉಪಸಂಹಾರವಾಗಿ ನಾನು ಹೇಳುವ ಮಾತು ಇಷ್ಟೆ, ಸ್ವತಂತ್ರ ಭಾರತದ ಪ್ರಥಮ ಖಾನೇಸುಮಾರಿಯ ಕೆಲಸವನ್ನು ನಾವು ಕೈಗೊಂಡಿದ್ದೇವೆ. ಕೊಡಗಿನ ಎರಡು ತಾಲೋಕುಗಳು ಎರಡು ಮುನಿಸಿಪಾಲಿಟಿ ನಾಲ್ಕು ನೋಟಿಫೈಡ್ ಏರ್‍ಯ ನಾಲ್ಕು ಪಂಚಾಯಿತಿ ... ಗ್ರಾಮಗಳ ದಾಖಲಾತಿಯ ಬಗ್ಗೆ ೬೦೦ ಜನ ಎನ್ಯುಮರೇಟರುಗಳು ಮತ್ತು ೧೫೦ ಜನ ಸುಪರ್‌ವೈಸರುಗಳು ಗೌರವಾರ್ಥವಾಗಿ ನೇಮಿಸಲ್ಪಟ್ಟು ಸ್ವಯಂ ಸೇವಕರಾಗಿದ್ದಾರೆ. ಮಾನ್ಯ ಗೃಹಮಂತ್ರಿ ಶ್ರೀ ಸಿ. ರಾಜಗೋಪಾಲಾಚಾರ್ಯರು ಪತ್ರಿಕೆಗಳಲ್ಲಿ ಕಳುಹಿಸಿರುವ ಸಂದೇಶದಂತೆ ದೇಶದ ಹಳ್ಳಿಗಳು ... ದೇಶದ ... ಹಣವಾಗ ... ಕಟ್ಟುವಂತೆ ನೀವೆಲ್ಲರೂ ಸಹಕರಿಸಿ ೧೯೫೧ನೇ ಖಾನೇಸುಮಾರಿಯ ಕೆಲಸವನ್ನು ಯಶಸ್ವಿಯಾಗಿ ಮಾಡಬೇಕೆಂದು ನಾನು ಕೋರುತ್ತೇನೆ.

ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್.

ಪ್ರಾಪ್ತವಯಸ್ಕರ

ಮತದಾನ ಪದ್ಧತಿ.

ನಮ್ಮ ಭಾರತದ ನೂತನ ರಾಜ್ಯಾಂಗ ಶಾಸನದ ಪ್ರಕಾರ ೨೧ ವರ್ಷ ವಯಸ್ಸಿನ ಪ್ರತಿಯೊಬ್ಬರಿಗೂ, ಗಂಡಸಾಗಲಿ, ಹೆಂಗಸಾಗಲೀ, ಓಟಿನ ಅಧಿಕಾರವುಂಟು. ಇದು ಅಸಾಧಾರಣವಾದ ಅಧಿಕಾರ. ಹಿಂದಿನ ಕಾಲದಲ್ಲಿ ಓಟಿನ ಅಧಿಕಾರ ದೊರೆಯಬೇಕಾದರೆ, ಆಸ್ತಿ ಪಾಸ್ತಿಯಿರಬೇಕು. ಕಂದಾಯ ಕಟ್ಟಬೇಕು, ಒಂದು ಮಟ್ಟದ ವಿದ್ಯಾಭ್ಯಾಸವಿರಬೇಕು, ಎಂಬುದಾಗಿ ಇತ್ತು. ಈಗ ಆ ರೀತಿಯಾದ ಯಾವ ನಿರ್ಬಂಧವೂ ಇಲ್ಲದೆ ಮನುಷ್ಯನೆಂಬ ಕಾರಣದಿಂದಲೆ, ಇಪ್ಪತ್ತೊಂದು ವರ್ಷವಾಗುತ್ತಲೇ ವಿವೇಚನಾ ಶಕ್ತಿ ಬರುತ್ತದೆಂಬ ಊಹೆಯ ಮೇಲೆಯೇ ಈ ಓಟಿನ ಅಧಿಕಾರವನ್ನು ಕೊಡಲಾಗಿದೆ

ನಿರೀಕ್ಷಿಸಿದ ಫಲ ಬರುವುದೇ?

ಈ ಅಸಾಧಾರಣಾ ಅಧಿಕಾರದ ಮಹತ್ವವನ್ನು ನಮ್ಮ ಜನರು ತಿಳಿದಿರುವರೇ? ಅದರ ಉಪಯೋಗವು ನಿರೀಕ್ಷಿಸಿದ ಫಲವನ್ನು ಕೊಡುವುದೇ ಎಂಬುದು ಈಗಿನ ಜಿಜ್ಞಾಸೆ. ೨೧ ವರ್ಷ ವಯಸ್ಸಿನವರಿಗೆಲ್ಲಾ ಓಟಿನ ಅಧಿಕಾರವನ್ನು ಕೊಟ್ಟಾಯಿತು. ಈಗ ಈ ವಿಮರ್ಶೆಯಿಂದ ಪ್ರಯೋಜನವೇನು? ಎಂದು ಕೇಳಬಹುದು. ಈ ವಿಮರ್ಶೆಯು ಅತ್ಯಂತ ಆವಶ್ಯಕ ಏಕೆಂದರೆ ೨೧ ವರ್ಷ ವಯಸ್ಸಿನವರೆಲ್ಲರೂ ತಮಗೆ ದೊರೆತಿರುವ ಈ ಅಧಿಕಾರದ ಮಹತ್ವವನ್ನು ಚೆನ್ನಾಗಿ ಆಲೋಚಿಸಬೇಕು, ಮತ್ತು ಅದನ್ನು ಸರಿಯಾಗಿ ಉಪಯೋಗಿಸಬೇಕು ಎಂಬ ಮನೋ ನಿಶ್ಚಯವೂ ಅವರಿಗೆ ಉಂಟಾಗಬೇಕು ಇದಕ್ಕೆ ಬೇಕಾದಷ್ಟು ಪ್ರಚಾರವು ಆವಶ್ಯಕ. ಪತ್ರಿಕೆಗಳ ಮುಖಾಂತರವೂ, ಭಾಷಣಗಳ ಮುಖಾಂತರವೂ ಈ ಪ್ರಚಾರವು ನಡೆಯಬೇಕು, ಓಟೆಂಬುದು ವ್ಯರ್ಥವಾಗಬಾರದು; ಅದರ ದುರುಪಯೋಗವಾಗಬಾರದು,

ಓಟೆಂಬುದು ಪವಿತ್ರವಾದ ಅಧಿಕಾರ. ಯಾವ ದೇಶದಲ್ಲಿ ಜನರು ಓಟಿನ ಬೆಲೆಯನ್ನು ಅರಿತು, ಅದನ್ನು ನ್ಯಾಯವಾದ ರೀತಿಯಲ್ಲಿ ಉಪಯೋಗಿಸುವರೋ ಆ ದೇಶವು ಮುಂದೆ ಬರುವುದೇ ವಿನಾ ಬೇರೆ ದೇಶವು ಬರುವುದಿಲ್ಲ ಡೆಮಾಕ್ರಸಿ ಅಥವಾ ಪ್ರಜಾ ಪ್ರಭುತ್ವ ಪದ್ಧತಿಯು ನಡೆಯಬೇಕಾದರೆ ಓಟರುಗಳು ತಮ್ಮ ಜವಾಬ್ದಾರಿಯನ್ನರಿತು ಓಟು ಮಾಡಬೇಕು, ನಿರಂಕುಶ ರಾಜ್ಯ ಪದ್ಧತಿಯು ಎಷ್ಟೇ ದಕ್ಷತೆಯಿಂದ ಕೂಡಿದ್ದರೂ ಅದಕ್ಕಿಂತಲೂ ಪ್ರಜಾ ಪ್ರಭುತ್ವವೇ ಮೇಲು, ಜನರು ಸ್ವತಂತ್ರರಾಗಿ ಓಟು ನೀಡಿದ ಮುಖಂಡರ ಕೈಯಲ್ಲಿಯೇ ಅಧಿಕಾರವಿರಬೇಕೆಂದು ಚಳುವಳಿಗಳು, ಆಂದೋಲನಗಳು, ನಡೆದು ಜಯವನ್ನು ಗಳಿಸಿದೆವು. ಎಷ್ಟು ಸ್ವಾರ್ಥತ್ಯಾಗ ಮಾಡಿ ಸ್ವಾತಂತ್ರ್ಯ ಸಂಪಾದಿಸಿದೆವು? ಓಟು ಕೊಡುವ ಕಾಲದಲ್ಲಿ ಇದೆಲ್ಲವನ್ನೂ ನೆನಪಿನಲ್ಲಿಟ್ಟುಕೊಳ್ಳಬೇಕು.

ಚುನಾವಣೆಯ ಕಾಲದಲ್ಲಿ ವಿವಿಧ ಪಕ್ಷಗಳು ಮತ್ತು ವ್ಯಕ್ತಿಗಳು ಚುನಾವಣೆಯನ್ನು ಬಿರುಸಾಗಿ ನಡೆಸುತ್ತಾರೆ. ಬಿರುಗಾಳಿಯಂತೆ ಪ್ರಚಾರ ನಡೆಯುತ್ತದೆ. ಒಂದರೊಂದು ಸಂಖ್ಯೆಯಾಗಿ ಚರ್ಚೆಗೆ ಬರುತ್ತದೆ ಈ ಸಮಯದಲ್ಲಿ ಓಟರುಗಳು ತಮ್ಮ ಮನಸ್ಸನ್ನು ಚೆನ್ನಾಗಿ ಓಡಿಸಿ, ಆಲೋಚನೆ ಮಾಡಬೇಕು ಯಾವ ಪಾರ್ಟಿಗೆ ಓಟು ಕೊಟ್ಟರೆ ದೇಶಕ್ಕೆ ಹಿತವೆಂಬುದನ್ನು ತಿಳಿಯಬೇಕು, ಓಟರುಗಳು ಚೆನ್ನಾಗಿ ವಿಮರ್ಶೆ ಮಾಡಬೇಕಾದರೆ, ಅವರಿಗೆ ತಕ್ಕ ಮಟ್ಟಿಗೆ ಮೂಲ ಶಿಕ್ಷಣವಿರಬೇಕು ಸಾಮಾನ್ಯ ರಾಜಕೀಯ ಶಾಸ್ತ್ರ, ಅರ್ಥಶಾಸ್ತ್ರ ಹಣಕಾಸಿನ ಶಾಸ್ತ್ರ, ಇವುಗಳ ಜ್ಞಾನವಿರಬೇಕು. ಇದನ್ನು ಮಾಡಿಕೊಡ ಪರು ಪತ್ರಿಕೆಗಳ ಮತ್ತು ರಾಜಕೀಯ ಪಕ್ಷಗಳು

ಕುರುಡು ಓಟು

ಇದಕ್ಕೆ ಒಡನೆಯೇ ಎಲ್ಲ ಓಟರುಗಳಿಗೂ ಓದು ಬರಹ ಬರಬೇಕು, ಪತ್ರಿಕೆಗಳನ್ನೂ, ಪುಸ್ತಕಗಳನ್ನೂ ಓದುವ ಶಕ್ತಿ ಹೊಂದಬೇಕು. ಎಂದ ಮೇಲೆ ಪ್ರತಿಯೊಬ್ಬ ಓಟರಿಗೂ ಓದು ಬರಹ ಬರಬೇಕು ಎಂದ ಹಾಗಾಯಿತು. ಇದು ಸಿದ್ಧವಾದ ಮಾತು. ಆದ್ದರಿಂದ ಈಗ ೨೧ ವಯಸ್ಸಿನ ಪ್ರತಿಯೊಬ್ಬರಿಗೂ, ಓಟಿನ ಅಧಿಕಾರ ಕೊಟ್ಟ ಹಾಗೆಯೇ ಓದು ಬರಹ ಕಲಿಯಲು ಏರ್ಪಾಡು ಮಾಡಬೇಕು ಓದು ಬರಹ ಬಂದ ಮಾತ್ರದಿಂದಲೇ ಓಟನ್ನು ಸರಿಯಾಗಿ ಕೊಡುತ್ತಾರೆಯೇ? ಎಂದು ಕೇಳಬಹುದು.

ಓದು ಬರಹದಿಂದ ಬಹು ಮಟ್ಟಿನ ಅಜ್ಞಾನವು ಪರಿಹಾರವಾಗುತ್ತದೆಂಬುದನ್ನು ಎಲ್ಲರೂ ಮನಗಾಣಲೇ ಬೇಕು ಓದು ಬರಹ ಬಂದವನು, ಸರಿಯಾಗಿ ಓಟು ಮಾಡದೆ ಇದ್ದರೆ ಅದು ಅಜ್ಞಾನದಿಂದ ಮಾಡಿದ ಓಟು ಎಂದು ಹೇಳುವ ಹಾಗಿಲ್ಲ. ಬೇರೆ ಕಾರಣವಿರಬೇಕು ಓದು ಬರಹ ಬಂದವನು ಬಹಳ ಮಟ್ಟಿಗೆ ವಿಚಾರಶೀಲನೆಯನ್ನು ಬೆಳೆಸಿಕೊಂಡಿರುತ್ತಾನೆ. ಆದ್ದರಿಂದ ಪ್ರಾಪ್ತವಯಸ್ಕರ ಓಟಿನ ಪದ್ಧತಿಯು ಜಾರಿಗೆ ಬಂದ ಮೇಲೆ ನೂರಕ್ಕೆ ನೂರರಷ್ಟು ಜನ ಓದು ಬರಹ ಬಲ್ಲವರಾಗಿರಬೇಕು. ಈಗ ಆ ಸ್ಥಿತಿಯಿಲ್ಲದೆ ಇರುವ ಕಾರಣ ಅದು ಬೇಗ ಸಿದ್ಧಿಸುವಂತೆ ಮಾಡಬೇಕು. ಯಾವ್ಯಾವ ಓಟರುಗಳಿಗೆ ಓದು ಬರಹ ಬರುವುದಿಲ್ಲವೋ ಆ ಓಟುಗಳೆಲ್ಲವೂ ಕುರುಡು ಓಟುಗಳೆಂದು ತಿಳಿಯಬೇಕು. ಈ ಕುರುಡು ಓಟುಗಳಿಂದ ರಾಜ್ಯ ಭಾರವು ಚೆನ್ನಾಗಿ ನಡೆಯುವುದೇ? ಈ ಪ್ರಶ್ನೆಗೆ ವಾಚಕರೇ ಉತ್ತರ ಹೇಳಬೇಕು

"ಕಾಯಿಸಾಡ"

ಕಾಂಗ್ರೆಸ್ ಸದಸ್ಯತನ 'ಫೀ' ಒಂದು ರೂಪಾಯಿ

ಕಾಂಗ್ರೆಸ್ ಕಮಿಟಿಯು, ೧೯೪೮ ರ ಕಾಂಗ್ರೆಸ್ಸಿನ ಪ್ರಾಥಮಿಕ ಸದಸ್ಯತನ 'ಫೀ' ಯನ್ನು ರದ್ದುಗೊಳಿಸಿತ್ತು. ಅದಕ್ಕೆ ಹಿಂದಲು, ಪ್ರಾಥಮಿಕ ಸದಸ್ಯ ವರ್ಗಣಿಯು ನಾಲ್ಕು ಆಣೆಗಳಾಗಿದ್ದವು. ಈಗ, ಅಹಮದಾಬಾದಿನಲ್ಲಿ ಸೇರಿದ ಅಖಿಲ ಭಾರತ ಕಾಂಗ್ರೆಸ್ ಕಮಿಟಿಯಲ್ಲಿ, ಪುನಃ ಪ್ರಾಥಮಿಕ ಸದಸ್ಯತನ ವರ್ಗಣಿಯನ್ನು ಜಾರಿಗೆ ತರಬೇಕೆಂದೂ, ಒಂದು ರೂಪಾಯಿಯಂತೆ ಈ ವರ್ಗಣಿ ಇರತಕ್ಕದೆಂದೂ ಗೊತ್ತುಪಡಿಸಲಾಗಿದೆ

ಸಬರಮತಿಯಲ್ಲಿ ಸರ್ವೋದಯ ದಿನಾಚರಣೆ

ಸಬರಮತಿ ಆಶ್ರಮದಲ್ಲಿ ನಡೆದ ಸರ್ವೋದಯ ದಿನಾಚರಣೆಯ ಕಾರ್ಯಕ್ರಮದಲ್ಲಿ ಭಾಷಣ ಮಾಡುತ್ತ ಕಾಂಗ್ರೆಸ್ ಅಧ್ಯಕ್ಷ ಬಾಬು ಪುರುಷೋತ್ತಮದಾಸ ಟಂಡನರು, "ಮಹಾತ್ಮ ಗಾಂಧಿಯವರ ಜತೆಗೆ ಕೇವಲ ಬಾಯಿಮಾತಿನ ಸಹಾನುಭೂತಿ ಸಾಲದು. ಬದಲು ಅವರು ಸೂಚಿಸಿದ ತತ್ವಗಳನ್ನು ದೇಶದ ನೈತಿಕ ಮಟ್ಟವನ್ನು ಏರಿಸಲು ಪ್ರಯತ್ನಿಸಬೇಕು. ದೇಶದ ಜನತೆಗೆ ಚಿಕ್ಕ ಉದ್ಯೋಗಗಳ ಎಲ್ಲೆಡೆ ಕಡೆ ವಿಸ್ತರಿಸಬೇಕು. ಎಂದ ಮತ್ತು ಇಳಿದ ಧರಣೆಗಳ ಕಾಲಕ್ಕೆ ಮಾತ್ರ ಯೋಚಿಸುವುದಲ್ಲ ಪ್ರತಿಯೊಬ್ಬ ಮಾನವ ಜೀವಿಗೆ ಉದ್ಯೋಗ ದೊರೆಯುವಂತೆ ಪ್ರಯತ್ನಿಸಬೇಕು." ಎಂದು ವಿನಂತಿಸಿಕೊಂಡರು.

ಜಗತ್ತಿನಲ್ಲಿ ಅಕ್ಕಿಯ ಉತ್ಪಾದನೆ.

ಜಗತ್ತಿನಲ್ಲಿ ಅಕ್ಕಿಯ ಬೆಳೆ ಈ ವರ್ಷದಲ್ಲಿ ನಿಕೃಷ್ಟಾವಸ್ಥೆಗೆ ಇಳಿದಿದೆಯೆಂದು ಸಂಯುಕ್ತ ರಾಷ್ಟ್ರ ಜಾಗತಿಕ ಆಹಾರ ಸಂಸ್ಥೆಯು ವರದಿ ಮಾಡಿದೆ ಬರ್ಮದಲ್ಲಿ ಅಕ್ಕಿ ಬೆಳೆಗೆ ಆತಂಕ, ಚೀನದಲ್ಲಿ ಬರಗಾಲ, ಏಶಿಯದಲ್ಲಿ ಇನ್ನಿತರ ತೊಂದರೆಗಳೇ ಉತ್ಪಾದನೆಗೆ ಹಾನಿಕರವೊದಗಿದೆಯಂತೆ.

೧೯೪೯-೫೦ ನೇ ವರ್ಷದಲ್ಲಿ ಚೀನದಲ್ಲಿ ೧೭೩,೪೧೪,೦೦೦ ಎಕ್ರೆಗಳಲ್ಲಿ ಭತ್ತದ ಬೆಳೆ ಬೆಳೆಯಲಾಗಿದೆ. ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ೮,೨೫೮,೦೦೦ ಎಕ್ರೆಗಳಲ್ಲಿ ಭತ್ತ ಬೆಳೆಯಲಾಯಿತು. ಮಧ್ಯ ಪ್ರಾಚ್ಯದಲ್ಲಿ ೨,೪೭೧,೦೦೦ ಎಕ್ರೆ. ಆಫ್ರಿಕ ಮತ್ತು ಓಶಿಯಾನಿಯಾ ೫,೯೭೫,೦೦೦ ಎಕ್ರೆಗಳ ಸ್ಥಳದಲ್ಲಿ ಪ್ರದೇಶದಲ್ಲಿ ಅಕ್ಕಿ ಬೆಳೆಯಲಾಗಿದೆ.

ತಪ್ಪದೆ ಓದಬೇಕಾದ

ಮೂರು ಪುಸ್ತಕಗಳು.

ಲೇಖಕರು:— ಶ್ರೀ ಬಿ. ಡಿ. ಗಣಪತಿ

ಕುಸುಮಾಂಜಲಿ	ಪತ್ರಾವಳಿ	ಪ್ರತಿಧ್ವನಿ
ನರ್ತಕಿ	ತೀರ್ಥಯಾತ್ರೆ	ಕಾವೇರಿ
ಆಸ್ಪತ್ರೆ	ಬಾಳಿನ ಗುರಿ	ಪೂಜೆ
ಕಲಾವಿದ	ಜೈಲು ಅನುಭವ	ನಗು
ನ್ಯಾಯ	ಪ್ರೇಮ	ಸುಂದರಿ
ಕವಿಜೀವ	ವಿವಾಹ ಪದ್ಧತಿ	ಬಡತನ
ಮರಳಿನ ಮನೆ	ಸಮಾಜ	ಕಹಳೆ
'ಅದು ನಾನು'	ಮಹಿಳೆಯರು	ಪಥಿಕ
ಮೊದಲಾದ ಹೃದಯಂಗಮ ವಾದ ೧೫ ಕಥೆಗಳು.	ಮೊದಲಾದ ನನ್ನ ಸ್ವಂತ ವಿಚಾರ ಪ್ರತಿಬಿಂಬದ ೩೦ ಪತ್ರಗಳು	ಮೊದಲಾದ ಭಾವೋತ್ತೇಜಕ ೫೦ ಕವನಗಳು

ಮೂರು ಪುಸ್ತಕಗಳ ಬೆಲೆ ರೂ. ೩—೦—೦

ಪ್ರಕಟಣಾ ತಾರೀಕನ್ನು ನಿರೀಕ್ಷಿಸಿರಿ.

ದಿ ಟ್ರಾಪಿಕಲ್

ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

ಮೇನೇಜಿಂಗ್ ಡೈರೆಕ್ಟರ್:— ಲಾಲಾ ಶಂಕರ್ ಲಾಲ್.

ಮುಖ್ಯ ಕಚೇರಿ:— ಹೊಸ ಡೆಲ್ಲಿ.

ಸ್ಥಾಪಿಸಿದ ಡೈರೆಕ್ಟರರು:

ಪಂಡಿತ ಮೋತಿಲಾಲ್ ನೆಹರು.	ಎಸ್. ಶ್ರೀನಿವಾಸ ಅಯ್ಯಂಗಾರ್
ಹಕೀಮ್ ಅಜಮಲಖಾನ್.	ಡಾ|| ಎಮ್. ಎ. ಅನ್ಸಾರಿ.

Transacts:—Life, Fire, Motor and Marine.

ಯಂ. ಯು. ಅಚ್ಚಣ್ಣ,	ಎಂ. ಎ. ವಿಶ್ವಾಸ್,
ಏಜೆನ್ಸಿ ಸುಪರಿಂಟೆಂಡೆಂಟ್,	ಬ್ರಾಂಚ್ ಸೆಕ್ರೆಟರಿ,
ಮಡಿಕೇರಿ, ಕೊಡಗು.	ಹಂಪನಕಟ್ಟಾ, ಮಂಗಳೂರು.

ಸರಕಾರಿ ಕಾಲೇಜಿನ

ದ್ವಿತಿಯ ವಾರ್ಷಿಕೋತ್ಸವ.

ಕೊಡಗು ಸರಕಾರಿ ಕಾಲೇಜಿನ ದ್ವಿತೀಯ ವಾರ್ಷಿಕೋತ್ಸವವು ತಾರೀಕು ೩-೨-೫೧ ರಲ್ಲಿ ಕೊಡಗಿನ ಚೀಫ್ ಕಮಿಷನರಾದ ಲೆ. ಕರ್ನಲ್ ದಯಾಸಿಂಗ್ ಬೇಡಿಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಕಾಲೇಜಿನ ಆಟೋಟಗಳ ಸ್ಪರ್ಧೆಯು ತಾ. ೨-೧-೫೧ ರಲ್ಲಿ ನಡೆದು ಶ್ರೀ. ಅಪ್ಪಾರಂಡ ತಿಮ್ಮಯ್ಯನವರು ಬಹುಮಾನ ವಿತರಣೆ ಮಾಡಿದರು. ವಿದ್ಯಾರ್ಥಿಗಳಲ್ಲಿ ಶ್ರೀ. ಕಲಿಯಂಡ ಕೆ. ಪೊನ್ನಪ್ಪನವರೂ ವಿದ್ಯಾರ್ಥಿನಿಯರಲ್ಲಿ ಶ್ರೀ. ಚನ್ನಿರ ಕೆ. ಚಿಣ್ಣಮ್ಮನವರೂ ಛಾಂಪಿಯನ್‌ಶಿಪ್ ಕಪ್ಪನ್ನು ಗೆದ್ದರು.

ತಾರೀಕು ೩ ನೇ ಶನಿವಾರ ಸಾಯಂಕಾಲ ನಾಲ್ಕುವರೆ ಗಂಟೆಗೆ ಕಾಲೇಜು ಉತ್ಸವವು ಪ್ರಾರಂಭವಾಯಿತು. ಮಕ್ಕಳ ಪೋಷಕರೂ, ಇತರ ಸಾರ್ವಜನಿಕರೂ ನೆರೆದಿದ್ದರು. 'ವಂದೇ ಮಾತರಂ' ಹಾಡಲ್ಪಟ್ಟ ನಂತರ ಅಧ್ಯಕ್ಷರು ತಮ್ಮ ಪ್ರಾರಂಭದ ಮಾತುಗಳನ್ನಾಡಿದರು. ಕಾಲೇಜ್ ದಿನಾಚರಣೆಯು ಜಯಪ್ರದವಾಗಲೆಂದು ಶುಭಾಶಯಗಳನ್ನು ಕೋರಿ ಹಿಂದಿನ ಚೀಫ್ ಕಮಿಷನರಾಗಿದ್ದ ಶ್ರೀ. ಸಿ. ಟಿ. ಮೊದಲಿಯಾರ್ ಮತ್ತಿತರರು ಕಳುಹಿಸಿದ್ದ ಸಂದೇಶಗಳನ್ನು ಓದಲಾಯಿತು. ಕಾಲೇಜಿನ ಪ್ರಿನ್ಸಿಪಾಲರಾದ ಶ್ರೀ. ಆರ್. ಎಚ್. ಪಿ. ಹೋಲ್‌ನೆಸ್‌ರವರು ಕಾಲೇಜಿನ ಕಾರ್ಯಕಲಾಪಗಳ ವರದಿಯನ್ನು ಓದಿದರು. ಕಾಲೇಜು ಈ ವರ್ಷ ಎದರು ತೊಡರುಗಳಿದ್ದರೂ ಸುಸೂತ್ರವಾಗಿ ಕೆಲಸ ಮಾಡಿದೆಯೆಂದೂ, ಕಾಲೇಜು ಲೇಬರೇಟರಿ, ವಾಚನಾಲಯಗಳು ಕ್ರಮಶಃ ಪರಿಪೂರ್ಣತೆಯನ್ನು ಪಡೆಯುತ್ತಿವೆಯೆಂದೂ, ಕಾಲೇಜು ವಿದ್ಯಾರ್ಥಿನಿವಾಸಗೃಹದಲ್ಲಿ ವಿದ್ಯಾರ್ಥಿಗಳಿಗೆ ಊಟಕ್ಕೆ ತಲಾ ತಿಂಗಳಿಗೆ ರೂ ೩೦ ಆಗುವದೆಂದೂ ಬಾಡಿಗೆ ಮತ್ತಿತರ ಲೆಕ್ಕದಂತೆ ರೂ. ೫ ಹೀಗೆ ಒಟ್ಟು ರೂ. ೩೫ ಖರ್ಚು ತಗಲುವದೆಂದೂ ಹೇಳಿದರು. ನಂತರ ಕಳೆದ ಪರೀಕ್ಷೆಯಲ್ಲಿ ಪ್ರಶಂಸನೀಯ ರೀತಿ ತೇರ್ಗಡೆಯಾದವರಿಗೆ, ಸಂಗೀತ, ವಾಕ್ ಸ್ಪರ್ಧೆಗಳಲ್ಲಿ ಬಹುಮಾನ ಪಡೆದವರಿಗೆ ಇನಾಮುಗಳನ್ನು ಹಂಚಲಾಯಿತು.

ಶ್ರೀ. ಕೋಳೆರ ಪಿ. ಕರುಂಬಯ್ಯನವರು ನಂತರ ಕಾಲೇಜಿನ ಪುರೋಭಿವೃದ್ಧಿಯನ್ನು ಕುರಿತು ಮಾತಾಡಿದರು. ಕಾಲೇಜು ಸ್ಥಾಪನೆಗಿದ್ದ ಎಡರು ತೊಡರುಗಳು, ಕಾಲೇಜು ಸ್ಥಾಪಿಸಿದ್ದರಿಂದಾದ ಪ್ರಯೋಜನ, ಕಾಲೇಜಿನ ಕೀರ್ತಿಯನ್ನು ಎತ್ತಿಹಿಡಿದು ಇದನ್ನು ಆದರ್ಶಕಾಲೇಜಾಗಿ ಮಾಡಲು ಲೆಕ್ಚರರುಗಳೂ ವಿದ್ಯಾರ್ಥಿಗಳೂ ಹೊರಬೇಕಾದ ಜವಾಬ್ದಾರಿಯನ್ನು ವಿವರಿಸುತ್ತಾ, ವಿದ್ಯಾರ್ಥಿಗಳು, ಶಿಸ್ತು ಸಂಘಟನೆಗಳಲ್ಲಿ ಆದರ್ಶರಾಗಬೇಕೆಂದು ಆಶಿಸಿದರು. ಮುಂದಿನ ಪರೀಕ್ಷೆಯ ಫಲಿತಾಂಶದ ಮೇಲೆಯೇ ಕಾಲೇಜಿನ ಕಾರ್ಯಕಲಾಪಗಳನ್ನು ಸಾರ್ವಜನಿಕರು ನಿರ್ಧರಿಸುವರಾದ ಕಾರಣ ಉತ್ತಮ ಫಲಿತಾಂಶದೊರೆಯುವಂತೆ ಪ್ರಯತ್ನಿಸಬೇಕೆಂದರು. ಕೊಡಗಿನ ಕಾಲೇಜಿಗೆ ನೇಶನಲ್ ಕೇಡೆಟ್‌ಕೋರ್ ಬೇಕೆಂದೂ, ಎಲ್ಲಾ ಸಲಕರಣೆಗಳನ್ನೊಳಗೊಂಡು ಕಾಲೇಜು ಪರಿಪೂರ್ಣವೆನಿಸಬೇಕೆಂದೂ ಆಶಿಸಿದರು.

ಇದಕ್ಕೆ ಉತ್ತರ ರೂಪದಲ್ಲಿ ಮಾತಾಡುತ್ತಾ, ಕಾಲೇಜ್ ಯೂನಿಯನಿನ ವಿದ್ಯಾರ್ಥಿ ಕಾರ್ಯದರ್ಶಿಯಾದ ಶ್ರೀ ಮಾದೇಟಿರ ಪೂಣಚ್ಚನವರು ಕಾಲೇಜು ಕ್ರಮಶಃ ಮುಂದಡಿ ಇಡುತ್ತಿದೆಯೆಂದೂ ವಿದ್ಯಾರ್ಥಿಗಳು ಶಿಸ್ತು ಸಂಘಟನೆಯಲ್ಲಿ ಟೀಕಾರ್ಹರಾಗಿಲ್ಲವೆಂದೂ ಮುಂದಿನ ಪರೀಕ್ಷೆಯಲ್ಲಿ ಯೋಗ್ಯ ಫಲಿತಾಂಶ ದೊರೆಯುವಂತೆ ಪ್ರಯತ್ನಿಸುವರೆಂದೂ, ಕಾಲೇಜಿಗೆ ನೇಶನಲ್ ಕೇಡೆಟ್ ದಳವಿಲ್ಲದಿರುವದೂ, ಬರುವ ವರ್ಷ ಬಿ ಎ. ತರಗತಿ ತೆರೆಯದಿರುವದೂ ದೊಡ್ಡ ನ್ಯೂನತೆಯೆಂದೂ ಹೇಳಿದರು.

ಅಧ್ಯಕ್ಷರಾದ ದಯಾಸಿಂಗ್ ಬೇಡಿಯವರು ಮಾತಾಡುತ್ತಾ "ಕಟ್ಟಡ ಕೆಲಸವಾಗದ್ದಕ್ಕೆ ಅನೇಕರು ಟೀಕಿಸುತ್ತಾರೆ. ಆದರೆ ಅದು ಸುಲಭವಲ್ಲ. ಹಿಂದಿನ ಕಾಲದಂತೆ ಇಂದಲ್ಲ. ಇಂದು ಪ್ರಜಾಭಿಪ್ರಾಯದ ಕಾಲ. ಸರಕಾರದಿಂದ ಒಂದು ಕೆಲಸವಾಗಬೇಕಾದರೆ ವಿವಿಧ ಇಲಾಖೆಗಳ ಒಪ್ಪಿಗೆ ಅನುಮತಿಗಳಾಗಬೇಕು. ಕಾಲೇಜು ಕಟ್ಟಡ ಕೆಲಸ ಪ್ರಾರಂಭವಾಗಿದೆ. ಮಳೆಗಾಲ ಪ್ರಾರಂಭವಾಗುವದರೊಳಗೆ ಸುಮಾರು ರೂ೫೦,೦೦೦ ವೆಚ್ಚದಿಂದ ಅಡಿಪಾಯ ಹಾಕಲ್ಪಡುವದು. ಮುಂದಿನ ಎರಡು ವರ್ಷಗಳಲ್ಲಿ ಕಟ್ಟಡವು ಪೂರ್ತಿಯಾಗಬಹುದೆಂದು ಊಹಿಸಲಾಗಿದೆ. ಕಾಲೇಜು ಉತ್ತಮ ಫಲಿತಾಂಶವನ್ನು ಹೊರಡಿಸಬೇಕು. ಶೇಕಡ ೨೦ಕ್ಕೆ ಮೀರಿ ಫಲಿತಾಂಶ ಹೊರಡಿಸಲಾರದ ಕೆಲವು ಹೈಸ್ಕೂಲುಗಳಂತಾಗ ಬಾರದು. ಆದ್ದರಿಂದ ಕಾಲೇಜಿನ ಜವಾಬ್ದಾರಿ ಹೊತ್ತವರೂ, ವಿದ್ಯಾರ್ಥಿಗಳೂ ಶ್ರಮವಹಿಸಿ ಕಾಲೇಜಿಗೆ ಗೌರವ ತರಬೇಕು. ವಿದ್ಯಾರ್ಥಿಗಳ ಜೀವನ ಕೇವಲ ಪುಸ್ತಕ ಓದುವದರಲ್ಲೇ ಅಲ್ಲ. ಆಟ ಓಟಗಳಲ್ಲಿ ಇತರ ಕಾರ್ಯಕ್ಷೇತ್ರಗಳಲ್ಲೂ ಬೇಕು. ಪರಸ್ಪರರು ಕಲೆತು ಒಗ್ಗಟ್ಟಾಗಿ ನಾಡಿನ ಉನ್ನತಿಗಾಗಿ ದುಡಿಯಲು ಕಲಿಯಬೇಕಾದರೆ ಆಟೋಟಗಳು ಅವಶ್ಯ. ಶಿಸ್ತಿಲ್ಲದ ಜೀವನವು ಯೋಗ್ಯ ಜೀವನವೆನಿಸದು. ಕೊಡಗಿನ ಹೈಸ್ಕೂಲುಗಳಲ್ಲಿರುವ ನೇಶನಲ್ ಕೇಡೆಟ್ ಕೋರುಗಳು ಯೋಗ್ಯ ರೀತಿಯಲ್ಲಿರದೆ ಅವಮಾನಾಸ್ಪದವಾಗಿ ಇವೆ. ಆದ್ದರಿಂದ ಅವುಗಳು ಸರಿಯಾಗಿ ಕೆಲಸ ಮಾಡದೆ ಕಾಲೇಜಿನಲ್ಲಿ ಒಂದು ಶಾಖೆ ತೆರೆಯುವ ಬಗ್ಗೆ ಸರಕಾರವು ತಯಾರಿಲ್ಲ ಎಂದರು."

ಕಾಲೇಜ್ ಯೂನಿಯನಿನ ಜತೆ ಕಾರ್ಯದರ್ಶಿಯವರಾದ ಮಿಸ್ ಮಾಚಿಮಂಡ ಜಯ ಇವರು ವಂದನಾರ್ಪಣೆಯನ್ನು ಮಾಡಿದರು. ನಂತರ 'ಜನಗಣಮನ' ಗೀತೆಯಿಂದ ಕಾರ್ಯಕಲಾಪಗಳು ಮುಕ್ತಾಯವಾದವು.

ಸಾಯಂಕಾಲ ೬.೩೦ ರನಂತರ ವಿವಿಧ ವಿನೋದಾವಳಿಯು ಏರ್ಪಾಡಿತ್ತು. "ಶೆರಿಡನ್ಸ್ ರೈವಲ್" ಎಂಬ ಇಂಗ್ಲಿಷ್ ನಾಟಕವೂ, "ಲಕ್ಕಿ ಲಕ್ಷ್ಮಣ" ಎಂಬ ಕನ್ನಡ ನಾಟಕವೂ, 'ದಸ್‌ಹಜಾರ್' ಎಂಬ ಹಿಂದೀ ನಾಟಕವೂ ಅಭಿನಯಿಸಲ್ಪಟ್ಟವು. ಇದರ ಮಧ್ಯ ಸುಶ್ರಾವ್ಯ ಸಂಗೀತ, ವೇಶಪಲ್ಲಟ, "ಟೇಬ್ಲೊ" ಗಳ ಏರ್ಪಾಡಿತ್ತು. ಇಂಗ್ಲಿಷ್ ನಾಟಕದಲ್ಲಿ ಉತ್ತಮ ಅಭಿನಯಕ್ಕಾಗಿ ಮಿಸ್ ಬಿದ್ದಂಡ ಕೆ. ಬೋಜಮ್ಮ, ಮಿಸ್ ಬಿದ್ದಂಡ ಮುತ್ತಮ್ಮ ಇವರಿಗೂ, ಕನ್ನಡ ನಾಟಕದಲ್ಲಿ ಶ್ರೀ ಪಲಂದರ ಅಪ್ಪಯ್ಯ, ವಿ ಕೃಷ್ಣಸ್ವಾಮಿ ಮತ್ತು ಕಾಡ್ಯಮಾಡ ಮುತ್ತಣ್ಣನವರಿಗೂ, ಹಿಂದೀ ನಾಟಕದಲ್ಲಿ ಮಿಸ್ ಪಾಂಡಂಡ ಪೊನ್ನಮ್ಮ, ಮಿಸ್ ಬಿದ್ದಂಡ ಮುತ್ತಮ್ಮನವರಿಗೂ ಬಹುಮಾನಗಳು ದೊರಕಿದವು. "ಉಪಗುಪ್ತ – ವಾಸವದತ್ತ" ಟೇಬ್ಲೋ ಅಭಿನಯಿಸಿದ ಶ್ರೀಮತಿ ಪಾಂಡಂಡ ಪೊನ್ನಮ್ಮ ಮತ್ತು ಬಿದ್ದಂಡ ಕೆ. ಬೊಳ್ಳಮ್ಮನವರಿಗೂ, ಮಾಪಿಳ್ಳೆಯ ವೇಶ ಹಾಕಿದ ಶ್ರೀ ಶ್ರೀನಿವಾಸರ್ಸೈ ಇವರಿಗೂ ಬಹುಮಾನಗಳು ಕೊಡಲ್ಪಟ್ಟವು. ಕೊಡಗಿನ ಅ. ಕಮಿಷನರಾದ ಶ್ರೀ ಎನ್. ಸಿ. ಸುಬ್ಬಯ್ಯನವರು ಬಹುಮಾನ ವಿತರಣೆ ಮಾಡಿದರು. ಸಮಾರಂಭವು ವಂದನಾರ್ಪಣೆಯಿಂದ ಯಶಸ್ವಿಯಾಗಿ ಕೊನೆಗೊಂಡಿತು.

ಪ್ರಕಟಣೆ.

ಶ್ರೀಮಂಗಲನಾಡು ಕೋತೂರು ಗ್ರಾಮದ ವಕ್ಕಲಿಗರ ಗಿರಿಗೌಡರು ಈ ಮೂಲಕ ತಿಳಿಯಪಡಿಸುವದೇನೆಂದರೆ:—

ಸದ್ರಿನಾಡು ಸದ್ರಿ ಗ್ರಾಮದಲ್ಲು ನನ್ನ ಹೆಸರಿನಲ್ಲು ಜಮಾಬಂದಿ ನಡೆದು ನನ್ನ ಅಣ್ಣ ಕರಿಗೌಡನ ಮಗ ಕೆಂಪಯ್ಯನವರ ಅನುಭವದ ಅಂದಾಜು 6 ಎಕ್ರೆ ಸಾಗಿನ ಭೂಮಿ ಮತ್ತು ಅದಕ್ಕೆ ಸೇರಿದ ಬಾಣೆಯನ್ನು ಆತನಿಗೆ ಹೆಂಡತಿ ಯಾ ಮಕ್ಕಳಿಲ್ಲದರಿಂದ ನನಗೆ ತಿಳಿಯದೆ ಸದ್ರಿ ಸೊತ್ತನ್ನು ಇತರರಿಗೆ ಸ್ವಾಧೀನ ಮಾಡುವುದಾಗಿ ತಿಳಿದು ಬಂದಿದೆ. ಸದ್ರಿ ಈ ಸೊತ್ತು ನನ್ನ ಪಿತ್ರಾರ್ಜಿತ ಸೊತ್ತಾಗಿದ್ದು ಈಗ ಅವರ ಅನುಭವದಲ್ಲಿದೆ. ಈ ಸೊತ್ತನ್ನು ನನ್ನ ಅನುಮತಿ ಯಿಲ್ಲದೆ ಯಾರಾದರು ಗಿರ್ವಿ, ಭೋಗ್ಯ ಯಾ ಕ್ರಯ ಪತ್ರ ಬರೆಸಿಕೊಂಡಲ್ಲಿ ಸದ್ರಿ ಸೊತ್ತು ಅವರಿಗೆ ಹಕ್ಕಾಗಲಾರದು. ಮತ್ತು ಹಾಗೆ ಬರೆಸಿಕೊಂಡವರು ಈ ಸೊತ್ತಿನ ವಿಶಯ ಬರತಕ್ಕ ಕೋರ್ಟ್ ವ್ಯವಹಾರಕ್ಕೂ ಮತ್ತು ನಷ್ಟಕ್ಕೂ ತಯಾರಾಗಿರಬೇಕಾಗಿ ಈ ಮೂಲಕ ತಿಳಿಸುವನಾಗಿದ್ದೇನೆ.

ಕೋತೂರು. ವಕ್ಕಲಿಗರ ಗಿರಿಗೌಡರು,
4-2-51

ತಿಳಿಸಿರಿ.

ಭೂಮಿ, ತೋಟ, ಬಾಗ ಪೇಟೆಯಲ್ಲಿ ಮನೆ ಅಥವ ಮನೆ ಸೈಟು ಮಾರಲಿಚ್ಛಿಸುವವರು ಮತ್ತು ಕೊಂಡುಕೊಳ್ಳಲಿಚ್ಛಿಸುವವರು ಈ ಕೆಳಗಿನ ಪತ್ತೆಯಲ್ಲಿ ವಿಚಾರಿಸಿರಿ. ಅಲ್ಲದೆ ಬೇಕಾದವರಿಗೆ ಕರೆಯುವ ಎಮ್ಮೆ, ಹಸು ಮತ್ತು ಉಳುವ ಎತ್ತು ಮತ್ತು ಕೋಣಗಳನ್ನೂ ಒದಗಿಸಿ ಕೊಡಲಾಗುವುದು. ಬೇಕಿರುವವರು ತಮಗೆ ಬೇಕಾದ ತಾರೀಕಿನ ಎಂಟು ದಿನಗಳಿಗೆ ಮುಂದೆ ತಿಳಿಸಬೇಕಾಗಿದೆ. ವಿವರಗಳಿಗೆ ಈ ಪತ್ತೆಗೆ ಬರೆಯಬಹುದು.

D. A. N. & SONS.
Commission Agent,
Gonicoppal
26-1 S. Coorg.

ಅವಿವಾಹಿತರ ಸಂಘ.

ನ್ಯೂಯಾರ್ಕ್ ನಗರದ ಸುಮಾರು ೧೦೦ ಮಂದಿ ಅವಿವಾಹಿತ ತರುಣರು ಒಂದು ಸಂಘವನ್ನು ಏರ್ಪಡಿಸಿರುವರು. 'ಅವಿವಾಹಿತರ ಸಂಘ' ಎಂದೇ ಇದಕ್ಕೆ ನಾಮಕರಣ ಮಾಡಿರುತ್ತಾರೆ.

ಪುರುಷರು ಸ್ತ್ರೀಯರ ಮಾಯಾಜಾಲದಿಂದ ತಪ್ಪಿಸಿಕೊಳ್ಳುವ ವಿಧಾನಗಳನ್ನು ಈ ಸಂಘದ ಸದಸ್ಯರು ಸಾರ್ವಜನಿಕರಿಗೆ ತಿಳಿಸುವರಂತೆ.

ಸ್ವತಂತ್ರ ಭಾರತದ ಮೊದಲನೆಯ—ಖಾನೇಸುಮಾರಿ-
೧೯೫೧ ನೇ ಫೆಬ್ರವರಿ ೯ ರಿಂದ ೨೮ರ ವರೆಗೆ—
ಇಂಡಿಯಾ ಸರಕಾರದ ಪ್ರಚಾರ ಇಲಾಖೆಯವರಿಂದ
ತಯಾರಾದ ಖಾನೇಸುಮಾರಿಯ
"ಜನಗಣತಿ"
ಎಂಬ ಚಿಕ್ಕ ಕನ್ನಡದ ಚಲಚಿತ್ರವನ್ನು ಈ ತಿಂಗಳಲ್ಲಿ ಕೊಡಗಿನ ಪ್ರತಿ ಸಿನೆಮಾ ಮಂದಿರದಲ್ಲಿ ಪ್ರದರ್ಶಿಸಲಾಗುವುದು. ವಿಶಾಲ ಹಿಂದೂಸ್ಥಾನ, ವಿವಿಧ ಜನಜೀವನ–ಖಾನೇಸುಮಾರಿಯನ್ನು ದಾಖಲು ಮಾಡುವ ರೀತಿ ಮೊದಲಾದ ವಿಷಯಗಳು ಬೋಧಪ್ರದವಾಗಿಯೂ ಮನೋರಂಜಕವಾಗಿಯೂ ಚಿತ್ರಿಸಲ್ಪಟ್ಟಿವೆ. ಇಂದಿನಿಂದ ಒಂದು ವಾರ ಈ ಚಿತ್ರವನ್ನು ಮಡಿಕೇರಿಯಲ್ಲಿ ಪ್ರದರ್ಶಿಸಲಾಗುತ್ತೆ. ಮುಂದಿನ ವಾರ ವೀರರಾಜಪೇಟೆ, ಗೋಣಿಕೊಪ್ಪ ಮತ್ತು ಸೋಮವಾರಪೇಟೆಯಲ್ಲಿ ಪ್ರದರ್ಶಿಸುತ್ತಾರೆ. ದಯವಿಟ್ಟು ಸಂದರ್ಶಿಸಿರಿ.

ಕೊಡಗು

ತಾ. ೯-೨-೧೯೫೧ನೇ ಶುಕ್ರವಾರ

"ಆಕ್ರಮಕ" ರಾಷ್ಟ್ರ ಚೀನಾ!

ಕೊರಿಯಾ ಯುದ್ಧ ಪ್ರಾರಂಭವಾಗಿ ವರ್ಷಗಳು ಉರುಳಿದರೂ, ಸಂಯುಕ್ತರಾಷ್ಟ್ರ ಸಂಘವು ಇದರಲ್ಲಿ ಕೈ ಹಾಕಿ ಶಾಂತಿ ಸ್ಥಾಪನೆಯ ಪ್ರಯತ್ನ ನಡೆಸಿದರೂ ಪರಿಸ್ಥಿತಿ ಸುಧಾರಿಸದೆ ದಿನದಿಂದ ದಿನಕ್ಕೆ ಹದಗೆಡುತ್ತಿದೆ. ಕೊರಿಯಾ ಪ್ರಕರಣದಲ್ಲಿ ಅಮೇರಿಕಾ ಚೀನಾಗಳೊಳಗಿನ ಸಂಬಂಧವನ್ನು ಸುಸೂತ್ರಗೊಳಿಸಿ ಕೊರಿಯಾ ಯುದ್ಧವು ಗಂಡಾಂತರ ರೀತಿಯಲ್ಲಿ ಹಬ್ಬದಂತೆ ಮಾಡಲು ಭಾರತವು ಮಾಡಿದ ಮತ್ತು ಮಾಡುತ್ತಿರುವ ಪ್ರಯತ್ನವು ಅತುಳವಾದುದು. ಇಂದು ಚೈನಾ ಅಮೇರಿಕಗಳ ಮಧ್ಯೆ ಮಧ್ಯಸ್ಥಿಕೆ ವಹಿಸಿ ಕೆಲಸ ಮಾಡುವಂತೆ ಆ ಎರಡು ರಾಷ್ಟ್ರಗಳ ವಿಶ್ವಾಸಕ್ಕೆ ಪಾತ್ರವಾದ ರಾಷ್ಟ್ರವು ಭಾರತ ಒಂದೇ! ಏಕೆಂದರೆ ಇಂದು ಪ್ರಪಂಚದ ಯಾವದೇ ರಾಷ್ಟ್ರವನ್ನು ತೆಗೆದು ಕೊಂಡರೂ ಅಂತರಾಷ್ಟ್ರೀಯ ರಂಗದಲ್ಲಿ ನಿರ್ಲಿಪ್ತತೆಯಿಂದ ಯಾವದೇ ಪಕ್ಷಕ್ಕೆ ತಿರಬಾಗದೆ ಇರುವ ರಾಷ್ಟ್ರವು ಭಾರತ ಮಾತ್ರ! ಭಾರತದ ಪ್ರಯತ್ನದಿಂದಲೆ ಸಂಧಾನ ಮಾತುಕತೆಗಳು ಹೆಚ್ಚಿನ ಆಸಕ್ತಿಯಿಂದ ನಡೆದವೆನ್ನಬಹುದು.

ಸಂಯುಕ್ತ ರಾಷ್ಟ್ರಸಂಘವು ಚೀನಾದ ಪ್ರತಿನಿಧಿಗಳನ್ನು ಆಮಂತ್ರಿಸಿ ಲೇಕ್ ಸಕ್ಸೆಸ್ಸಿನಲ್ಲಿ ಸಂಧಾನದ ಪ್ರಯತ್ನ ನಡೆಸಿದರೂ ಅಮೇರಿಕದ ಬಗ್ಗದ ನೀತಿಯು ಕಾರಣ ಚೀನೀ ಪ್ರತಿನಿಧಿಗಳು ಸಂಧಾನ ಮಾತುಕತೆಯನ್ನು ತ್ಯಜಿಸಿ ಹಿಂತೆರಳಬೇಕಾಯಿತು. ಆದರೂ ಭಾರತವು ಬಿಡದೆ ಪುನಹ ಪ್ರಯತ್ನಿಸಿತು. ಈ ಸತತ ಪ್ರಯತ್ನದ ಫಲವಾಗಿಯೇ ಇತ್ತೀಚೆಗೆ ಕೆಂಪುಚೀನಾವು ಕೊರಿಯಾ ಯುದ್ಧ ವಿರಾಮಕ್ಕೆ ಒಪ್ಪುವ ಸಾಧ್ಯತೆ ಕಂಡು ಬಂತು. ಅವರು ಭಾರತದ ಮೂಲಕ ಹೊಸ ಸೂಚನೆ ಮಾಡಿದ್ದರು. ಈ ಬಗ್ಗೆ ಅರಬ ಹಾಗೂ ಏಷ್ಯಾದ ಹನ್ನೆರಡು ರಾಷ್ಟ್ರಗಳು ಒಂದು ಗೊತ್ತುವಳಿಯನ್ನು ಮಂಡಿಸಿ ಸಪ್ತರಾಷ್ಟ್ರ ಪ್ರತಿನಿಧಿಗಳ ಪರಿಷತ್ತು ನಡೆಯ ಬೇಕೆಂದು ಸೂಚಿಸಿದ್ದರು. ಇದರಿಂದ ಪುನಹ ಒಮ್ಮೆ ಕೊರಿಯಾ ಯುದ್ಧ ನಿಂತು ಶಾಂತಿಯು ಸಾಧ್ಯತೆಯಾಗುವದೆಂದೂ ಅನಿಸಿತ್ತು. ಆದರೆ ಯುಕ್ತ ರಾಷ್ಟ್ರಸಂಘದ ರಾಜಕೀಯ ಸಮಿತಿಯು ಚೀನಾವನ್ನು 'ಆಕ್ರಮಕ' ರಾಷ್ಟ್ರವೆಂದು ಸಾರಿಯೇ ಬಿಟ್ಟಿತು. ಈ ಬಗ್ಗೆ ೪೪ ರಾಷ್ಟ್ರಗಳು ಅಮೇರಿಕೆಗೆ ಬೆಂಬಲವಿತ್ತವು. ಭಾರತವು ಮತ್ತಿತರ ಆರು ರಾಷ್ಟ್ರಗಳು ಠರಾವನ್ನು ವಿರೋಧಿಸಿದವು. ಎಂಟು ರಾಷ್ಟ್ರಗಳು ತಟಸ್ಥವಾಗಿದ್ದವು. ಸಂಯುಕ್ತ ರಾಷ್ಟ್ರ ಸಂಘವು ಕೈಗೊಂಡ ಈ ಮಾರ್ಗದಿಂದಾಗಿ ಕೊರಿಯಾದ ಬಗ್ಗೆ ಸಂಧಾನದ ಬಾಗಿಲು ಮುಚ್ಚಿದಂತಾಯಿತೆನ್ನಬಹುದು.

ಯುಕ್ತ ರಾಷ್ಟ್ರದ ಈ ಗೊತ್ತುವಳಿಯಿಂದ ಶಾಂತಿಯ ಕಾಂಕ್ಷೆಯಲ್ಲಿರುವವರಿಗೆ ಮಹಾ ಆಘಾತವಾದಂತಾಗಿದೆ. ಕಾಶ್ಮೀರದಲ್ಲಿ ಪಾಕಿಸ್ಥಾನದ ಆಕ್ರಮಣವಾದಾಗ ಪಾಕಿಸ್ಥಾನವನ್ನು 'ಆಕ್ರಮಕ' ರಾಷ್ಟ್ರವೆಂದು ಸಾರಲು ತಯಾರಿಲ್ಲದ ಯುಕ್ತ ಸಂಘವು ಚೀನಾವನ್ನು 'ಆಕ್ರಮಕ' ರಾಷ್ಟ್ರವೆಂದು ಸಾರಿದ್ದು ಭಾರತೀಯರಿಗೆ ಆಶ್ಚರ್ಯವನ್ನು ಉಂಟುಮಾಡಿದೆ. ಉತ್ತರ ಕೊರಿಯಾವು ದಕ್ಷಿಣ ಕೊರಿಯಾದ ಮೇಲೆ ದಂಡೆತ್ತಿ ನುಗ್ಗಿದಾಗ ಯುಕ್ತ ರಾಷ್ಟ್ರ ಸಂಘವು ಉತ್ತರ ಕೊರಿಯಾವನ್ನು 'ಆಕ್ರಮಕ' ರಾಷ್ಟ್ರವೆಂದು ಸಾರಿತು. ಇಂದು ಚೀನಾವನ್ನೂ ಅದೇ ಸಾಲಿನಲ್ಲಿ ನಿಲ್ಲಿಸಿದೆ. ಜಗತ್ತಿನಲ್ಲಿ ಎಲ್ಲದಕ್ಕಿಂಥಲೂ ದೊಡ್ಡ ದೇಶವಾದ ಕೆಂಪು ಚೀನಾಕ್ಕೆ ಯುಕ್ತ ರಾಷ್ಟ್ರ ಸಂಘದಲ್ಲಿ ಸ್ಥಳ ಕೊಡದೆ ಇನ್ನೂ ಅಳಿದುಹೋದ ಚಿಯಾಂಗಕೈಶೇಕ್ ಆಡಳಿತದ ಪ್ರತಿನಿಧಿಯ ಬೆನ್ನುತಟ್ಟುತ್ತಿರುವ ನೀತಿಯು ಎಂದೂ ಸಮರ್ಥನೀಯವಾದುದಲ್ಲ. ಸಂಧಾನದ ಹಸ್ತವನ್ನು ನಿರಾಕರಿಸಿ ಚೀನಾವನ್ನು 'ಆಕ್ರಮಕ' ರಾಷ್ಟ್ರವೆಂದ ಸಂಯುಕ್ತ ರಾಷ್ಟ್ರ ಸಂಘವು ಸಾರಿರುವ ಕಾರಣ ಚೀನಾದ ಹದ್ದಿನ ವರೆಗೆ ಕೊರಿಯಾದಿಂದ ಚೀನೀಯರನ್ನು ಹಿಮ್ಮೆಟ್ಟಿಸಲು ಹೋರಾಡುವದೆಂದು ಹೇಳಬಹುದಾಗಿದೆ. ಅದೇ ರೀತಿ ಹಿಂದೋಡುತ್ತಿದ್ದ ಯುಕ್ತರಾಷ್ಟ್ರದ ಸೇನೆಗಳು ಕೊರಿಯಾದಲ್ಲಿ ಈಗ ಪ್ರಖರವಾಗಿ ಕಾದುತ್ತಿವೆ. ಕೊರಿಯಾದವರ ಪ್ರಗತಿಯು ಇದರಿಂದ ಕಡಿಮೆಯಾಗಿದೆ.

ಈ ನಿರ್ಣಯದಿಂದ ಕೊರಿಯಾ ಯುದ್ಧ ನಿಲ್ಲುವ, ಶಾಂತಿ ನೆಲೆಸುವ ಪರಿಸ್ಥಿತಿ ಮಾಯವಾಗಿ ಶಾಂತಿ ಯುದ್ಧಗಳ ಮಧ್ಯೆ ಜಗತ್ತು ತೂಗಾಡುತಿದ್ದ ಪರಿಸ್ಥಿತಿಯಲ್ಲಿ ಗಂಡಾಂತರಕಾರಕ ಸ್ಥಿತಿ ನಿರ್ಮಿಟ್ಟಿದೆ. ಇಂಥಾ ವಿಷಮಸ್ಥಿತಿ ಉಂಟಾಗಬಾರದಿತ್ತು. ಅಮೇರಿಕಾದ ನೀತಿಯು ದಿನದಿಂದ ದಿನಕ್ಕೆ ಕಠಿಣಗೊಳ್ಳುತ್ತಿದೆ. ಟ್ರೂಮನರ ನೀತಿಯು ಜನರಲ್ ಮೆಕಾರ್ಥರರವರ ಅಭಿಪ್ರಾಯದ ಕಡೆಯೇ ವಾಲುತ್ತಿದೆ. ಈ ನೀತಿಯಿಂದ ಬ್ರಿಟನೂ ಗಾಬರಿಗೊಂಡಿದೆ. ಯಾವದೇ ಕಾಲಕ್ಕೆ ಅಮೇರಿಕದ ಬೆನ್ನು ಬಿಡಲು ಬ್ರಿಟನು ತಯಾರಿಲ್ಲದಿದ್ದರೂ ಈ ಪರಿಸ್ಥಿತಿಯಲ್ಲಿ ತನ್ನ ಮನಸ್ಸಿನ ತಳಮಳವನ್ನು ವ್ಯಕ್ತಮಾಡಿದೆ. ಮುಂದೆ ಅಂತರಾಷ್ಟ್ರೀಯ ರಂಗದಲ್ಲಿ ಯಾವ ರೀತಿಯ ಘಟನೆಗಳಾಗುವವು ಎಂದು ನೋಡಬೇಕಿದೆ. ಆದರೆ ಜಗತ್ತು ಇಂದಿನಷ್ಟು ಎಂದೂ ಮೂರನೆ ಮಹಾಯುದ್ಧದ ಹತ್ತಿರದಲ್ಲಿರಲಿಲ್ಲವೆಂದು ಮಾತ್ರ ಸ್ಪಷ್ಟವಾಗಿ ಹೇಳಬಹುದು.

ವರ್ತಮಾನ.

ಇದೇ ಫೆಬ್ರವರಿ ತಾರೀಕು ೧೮ ನೇ ಆದಿತ್ಯವಾರ ದಿನ ಅಪರಾಹ್ನ ೩ ಗಂಟೆಗೆ ವೀರಾಜಪೇಟೆ ಮುನ್ಸಿಪಲ್ ಹಾಲಿನಲ್ಲು ವೀರಾಜಪೇಟೆ ಕೊಡವ ಸಮಾಜದ ಅರ್ಧ ವಾರ್ಷಿಕ ಮಹಾಸಭೆ ನಡೆಯುವುದು.

ಕೊಡಗಿನ ಚೀಫ್ ಕಮೀಷನರು ತಾ. ೧೦-೨-೫೧ ರಲ್ಲಿ ದೆಲ್ಲಿಗೆ ಹೋಗಲಿರುವರು.

ಇಂಡಿಯಾ ರೆಡ್‌ಕ್ರಾಸ್ ಸೊಸೈಟಿಯ ಮಡಿಕೇರಿ ಶಾಖೆಯ ಪ್ರೆಸಿಡೆಂಟರಾದ ಚೀಫ್ ಕಮೀಷನರ ಆಶಯದಂತೆ ಮಡಿಕೇರಿಯಲ್ಲಿ ನಡೆಯಬೇಕಿದ್ದ ಶಿಶು ಪ್ರದರ್ಶನವನ್ನು ತಾ. ೧೬-೩-೫೧ ಕ್ಕೆ ಮುಂದರಿಸಲಾಗಿದೆ.

ಶ್ರೀಮತಿ ಕಂಬೀರಂಡ ತಿಮ್ಮಯ್ಯ ಮೆಮೋರಿಯಲ್ ಬೇಡ್‌ಮಿಂಟನ್ ಪಂದ್ಯಾಟವು ತಾ. ೧೫-೨-೫೧ ರಿಂದ ಸಿದ್ದಾಪುರದಲ್ಲಿ ಪ್ರಾರಂಭವಾಗುವದೆಂದು, ತಿಳಿಯಬಂದಿದೆ.

ವೀರಾಜಪೇಟೆಯ ಸೈಂಟ್ ಏನ್ಸ್ ಹೈಸ್ಕೂಲಿನ ಹೊಸ ಕಟ್ಟಡ ತೆರೆಯುವ ಸಮಾರಂಭವು ಚೀಫ್ ಕಮೀಷನರಾದ ದಯಾಸಿಂಗ್ ಬೇಡಿಯವರಿಂದ ತಾರೀಕು ೮-೨-೫೧ ರಲ್ಲಿ ನಡೆಯಿತು.

ಮೈಸೂರು ಮತ್ತು ಕೊಡಗಿನ ಕೆಥೋಲಿಕ್ ಬಿಷಪ್ಪರಾದ ರೆ. ಪ್ಯಾಗಾರವರು ಮಡಿಕೇರಿಗೆ ಬಂದ ಮತ್ತು ಫಾತಿಮಾ ದೇವಮಾತೆಯ ಉತ್ಸವಗಳನ್ನು ತಾ. ೪-೨-೫೧ ರಲ್ಲಿ ವಿಜೃಂಭಣೆಯಿಂದ ಮಡಿಕೇರಿಯ ಕೆಥೋಲಿಕ್ ಚರ್ಚಿನವರು ಆಚರಿಸಿದರು.

ಕೊಡವ ವಿದ್ಯಾನಿಧಿಯ ಕಾರ್ಯಕಾರಿ ಮಂಡಳಿಯವರು ತಾ. ೧೫ ರಿಂದ ತಿಂಗಳ ಅಂತ್ಯದ ವರೆಗೆ ದೇಶದ ಉದ್ದಗಲಕ್ಕೂ ವಿದ್ಯಾವಾರವನ್ನಾಚರಿಸಿ ನಿಧಿಗೆ ಹಣ ಸಂಗ್ರಹಿಸುವರು.

ಹಿಂದೂದೇಶದಲ್ಲಿ ಆಸ್ಟ್ರೇಲಿಯಾದ ಹೈ ಕಮಿಷನರಾಗಿರುವ ಮಿ. ಆರ್. ಗೊಲನ್‌ರವರು ತಾ. ೬-೨-೫೧ ರಲ್ಲಿ ಪತ್ನಿ ಸಮೇತ ಮಡಿಕೇರಿಗೆ ಬಂದಿರುವರು. ಸಾರ್ವಜನಿಕರು ಅವರಿಗೆ ಒಂದು ಬಿನ್ನವತ್ತಳೆಯನ್ನರ್ಪಿಸಿ ಸ್ವಾಗತಿಸಿದರು. ಅವರು ಕೊಡಗಿನ ವಿವಿಧ ಭಾಗಗಳನ್ನು ನೋಡಲು ಕೆಲವು ದಿನ ಇಲ್ಲಿ ಇರುವರು.

ಕಲ್ಕತ್ತದಲ್ಲಿ ಅಸಿಸ್ಟೆಂಟ್ ಇಂಜೀನಿಯರ್ ಆಗಿದ್ದ ಶ್ರೀ ಮುಂಡಿರ ಸಿ. ಅಪ್ಪಣ್ಣನವರು ಮೈಸೂರಿನ ಡಾಕೀಸ್ಟರ್ ಮೋಟರ್ಸ್ ಲಿಮಿಟೆಡ್. ಇವರ ಡಿವಿಜನಲ್ ಡಿಸ್ಟ್ರಿಕ್ಟ್ ಆಫೀಸರಾಗಿ ನಿಯಾಮಿಸಲ್ಪಟ್ಟಿರುವರು.

ಸೈಂಟ್ ಎಲೋಸಿಯಸ್ ಕಾಲೇಜು ಯೂನಿಯನ್ ವಾರ್ಷಿಕ ಸಮಾರಂಭ

ಮಂಗಳೂರಿನ ಸೈಂಟ್ ಎಲೋಸಿಯಸ್ ಕಾಲೇಜ್ ಯೂನಿಯನ್ ದಿನಾಚರಣೆಯು ತಾ. ೫-೨-೫೧ನೇ ಸೋಮವಾರ ಸಾಯಂಕಾಲ ಕೊಡಗಿನ ಸಹಕಾರ ಸಂಘಗಳ ರಿಜಿಸ್ಟ್ರಾರರಾದ ಶ್ರೀಮಾನ್ ಪಿ. ಎಂ. ಚಂಗಪ್ಪನವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ನೆರವೇರಿತು. ಸುಮಾರು ಒಂದು ಕಾಲು ಸಾವಿರ ವಿದ್ಯಾರ್ಥಿಗಳಿರುವ ಈ ಕಾಲೇಜು ಪಶ್ಚಿಮ ಕರಾವಳಿಯಲ್ಲಿಯ ಅತ್ಯುತ್ತಮ ಮತ್ತು ಅತಿ ದೊಡ್ಡ ಕಾಲೇಜುಗಳಲ್ಲಿ ಒಂದಾಗಿದೆ. ಕಾಲೇಜು ಹೈಸ್ಕೂಲು ಮುಂದಿರುವ ವಿಶಾಲ ಪ್ರಾಂಗಣದಲ್ಲಿ ಅತಿಥಿಗಳೂ ವಿದ್ಯಾರ್ಥಿಗಳೂ ೫.೩೦ ಗಂಟೆ ಸಂಜೆಗೆ ಸರಿಯಾಗಿ ಸೇರಿದರು. ಪ್ರಾರ್ಥನೆ, ಯೂನಿಯನ್ ಅಧ್ಯಕ್ಷರು ಶ್ರೀ ಎಂ. ಶೀಶನ್‌ಭಟ್ ಇವರಿಂದ ಸ್ವಾಗತ ಭಾಷಣಗಳಾದನಂತರ ಸಭಿಕರೆಲ್ಲರಿಗೂ ಉಪಾಹಾರವಾಯಿತು. ವಿದ್ಯಾರ್ಥಿಗಳಿಂದ ಕಾಲೇಜಿನ ವಿಷಯವಾದ, ಯೂನಿಯನ್ ವಿಷಯವಾದ ಭಾಷಣಗಳೂ, ಪ್ರಿನ್ಸಿಪಾಲರಿಂದ ಇದಕ್ಕೆ ಉಚಿತವಾದ ಉತ್ತರ ರೂಪವಾದ ಭಾಷಣವೂ ಆದುವು. ಬಹುಮಾನ ವಿತರಣೆಯೂ ನಡೆಯಿತು.

ಶ್ರೀ ಚಂಗಪ್ಪನವರ ಅಧ್ಯಕ್ಷ ಭಾಷಣವನ್ನು ಸಾವಧಾನದಿಂದಲೂ, ಮೌನದಿಂದಲೂ ಸಭಿಕರು ಆಲಿಸಿದರು. ಸ್ವಾತಂತ್ರ್ಯಾಗಮನಾನಂತರ ಜನರಲ್ಲಿ ಒಂದು ವಿಧವಾದ ಶೂನ್ಯತಾ ಭಾವನೆಯು ಉದಯಿಸಿರುವುದು. ಕಾಂಗ್ರೆಸ್ ಸರಕಾರವು ಮಾಡಿದ ಪ್ರತಿಯೊಂದು ಕಾರ್ಯದಲ್ಲಿಯೂ ತಪ್ಪನ್ನು, ಹುಳುಕನ್ನು ಕಂಡು ಹಿಡಿದು ಶುಷ್ಕವಾದ ಟೀಕೆಯನ್ನು ಮಾಡುವುದರಲ್ಲಿ ಸಾಮಾನ್ಯ ಜನರು ಮಗ್ನರಾಗಿದ್ದಾರೆ. ಇದು ಸರಿಯಲ್ಲ. ಅತ್ಯುತ್ತಮವಾದ ಸರಕಾರವೇ ಈಗ ನಮಗೆ ಕೇಂದ್ರದಲ್ಲಿದೆ. ಅಲ್ಲಿನ ಮಹಾಪುರುಷರಿಗೆ ಕೆಲಸ ಮಾಡಲು ತಕ್ಕ ಪ್ರೋತ್ಸಾಹ, ಅವಧಿಗಳನ್ನು ಕೊಡಬೇಕು. ವಿದ್ಯಾರ್ಥಿಗಳು ಈ ವಿಷಯವನ್ನು ಈಗಿನಿಂದಲೇ ಅಭ್ಯಾಸಿಸಬೇಕು. ಜ್ಞಾನಾರ್ಜನೆಯನ್ನು ಚೆನ್ನಾಗಿ ಮಾಡಬೇಕು. ಎಂದು ಅಧ್ಯಕ್ಷರು. ಘೋಷಿಸಿದರು. ವಿವಿಧ ವಿನೋದಾವಳಿಗಳು ಇದ್ದುವು ಜನಗಣಮನದಿಂದ ಆ ವಾರ್ಷಿಕ ಸಮಾರಂಭವು ಕೊನೆಗಂಡಿತು.

ವರುಷಾಂತ್ಯದಲ್ಲಿ ಚುನಾವಣೆ.

ಭಾರತ ಸರಕಾರದ ಚುನಾವಣೆ ಕಮೀಷನರರಾದ ಶ್ರೀ. ಎಸ್. ಸೇನರು ಬೃಹನ್ಮುಂಬಯಿಯಲ್ಲಿಯ ಚುನಾವಣಾ ವಿಭಾಗಗಳನ್ನು ಗುರುತಿಸುವ ವಿಷಯವನ್ನು ಚರ್ಚಿಸಲು ಮುಂಬಯಿಗೆ ಆಗಮಿಸಿದ್ದಾರೆ. ಈ ವರುಷದ ಕೊನೆಯಲ್ಲಿ ಸಾರ್ವತ್ರಿಕ ಚುನಾವಣೆಯು ನಡೆಯುವ ವಿಶ್ವಾಸ ತಮಗಿದೆಯೆಂದು ಅಲ್ಲಿ ಶ್ರೀ ಸೇನರು ಹೇಳಿದರು.

ರಶಿಯಾದಲ್ಲಿ ಹೊಸ ಚುನಾವಣೆ.

ರಶಿಯಾದ ೧೬ ಘಟನಾತ್ಮಕ ಪ್ರಜಾರಾಜ್ಯಗಳ ವರಿಷ್ಟ ಸಭೆಯ ಸದಸ್ಯರನ್ನು ಚುನಾಯಿಸಲು ೧೧ ಕೋಟಿ ಪ್ರೌಢರು ಮತದಾನ ಮಾಡಲು ಹೋಗಲಿದ್ದಾರೆ. ಪ್ರಜಾರಾಜ್ಯಗಳು ಫೆಬ್ರವರಿ ೧೮ಕ್ಕೆ ಮತದಾನ ಮಾಡುವವು. ಚುನಾವಣೆಯ ಕಾಲಕ್ಕೆ ಕೆಳಗಿನ ಸಂಗತಿಗಳು ಎದ್ದು ಕಂಡಿವೆ ಮತದಾನಕ್ಕೆ ಹೋಗುವ ಮತದಾರರ ನಿಶ್ಚಿತ ಪ್ರಮಾಣ ಮಂಜೂರಾದ ಉಮೇದುವಾರರಿಗೆ ಬಿದ್ದ ಮತಗಳ ನಿಶ್ಚಿತ ಪ್ರಮಾಣ. ರಶಿಯಾದಲ್ಲಿ ವಿರೋಧಿ ಪಕ್ಷದ ಉಮೇದವಾರರು ಇರುವದಿಲ್ಲ. ಈ ಎರಡರಲ್ಲಿಯೂ ಸಾಮಾನ್ಯವಾಗಿ ಅಧಿಕಾರಿ ಸಂಖ್ಯೆಯು ಶೇಕಡಾ ೯೫ ರಷ್ಟು ಇರುತ್ತದೆ. ಹೋದ ವರ್ಷ ವರಿಷ್ಟ ಸಭೆಯ ಚುನಾವಣೆಯ ಕಾಲಕ್ಕೆ ಒಟ್ಟು ಶೇಕಡ ೯೫-೯೬ ರಷ್ಟು ಮತದಾರರು ಮತಕೊಟ್ಟಿದ್ದು ಶೇಕಡ ೯೨-೯೩ ರಷ್ಟು ಮತದಾರರು ನಾಮಕರಣ ಉಮೇದವಾರರಿಗೆ ಮತಕೊಟ್ಟರು. ಸದ್ಯದ ಚುನಾವಣೆಯಲ್ಲಿ ಆರಿಸಿಬಂದ ಪ್ರತಿನಿಧಿಗಳ ಕಾಲವು ನಾಲ್ಕು ವರ್ಷವಿದ್ದು ಕೇವಲ ಸ್ಥಾನಿಕ ಸಂಗತಿಗಳ ಸಂಪರ್ಕ ಮಾತ್ರ ಅವರಿಗಿರುವದು. ಆದರೆ ಯುಕ್ರೇನಿಯಾ, ಬೈಲೊರಶಿಯನ್ ಪ್ರಜಾರಾಜ್ಯಗಳು ಮಾತ್ರ ಪರದೇಶಿ ವಿಷಯ ಖಾತೆಗೆ ಸಂಬಂಧವನ್ನಿಟ್ಟುಕೊಳ್ಳುವವು.

॥ ಮಾತಾ ಶಿಕ್ಷಣ ॥

[ಲೇ:—ಮಿಸ್ ಕೆ. ಎಂ ಟೈನಿ, ಗೋಣಿಕೊಪ್ಪ]

ಮನೆಯೇ ಮಾನವ ಕುಲದ ಸರ್ವಮಂಗಳ ತೋಟ. ಮಾನವಗಣದ ಮಂಗಳಮಯವಾದ ಮನೆಯೆಂಬ ಸುಂದರ ಬೃಂದಾವನ ನಗುತ್ತಿದ್ದರೆ ನಾಡೂ ನಗುತ್ತಿರುತ್ತದೆ. ಹಾಗೆ ಮನೆಯು ನಗುತ್ತಿರಬೇಕಾದರೆ ಮನೆಯ ಜೀವನಾಧಾರವಾದ ಮನೆಯೊಡತಿ ನಗುತ್ತಿರಬೇಕು. ಹಾಗೆ ಕಷ್ಟಸುಖಗಳಲ್ಲಿ ತೂಕ ತಪ್ಪದೆ ನಗುತ್ತಿರಬೇಕಾದರೆ ಮಂಗಳಾಂಗಿಯರು ಪರಿಶುದ್ಧರಾಗಬೇಕು. ಸುಶಿಕ್ಷಿತೆಯರಾಗಬೇಕು. ಕಲಾಕುಶಲೆಯರಾಗಬೇಕು. ಆದ್ದರಿಂದಲೇ ಮಾತೆಯರ ಸುಶಿಕ್ಷಣಕ್ಕೆ ಅಷ್ಟೊಂದು ಮಹತ್ವ.

ಇಂದಿನ ಪ್ರಾಥಮಿಕ ಶಾಲೆಯ ಚಿಕ್ಕ ಬಾಲಕಿಯರು, ಹೈಸ್ಕೂಲಿನ ವಿದ್ಯಾರ್ಥಿನಿಯರು, ಕಾಲೇಜಿನ ಯುವತಿಯರು ನಾಳೆಯ ಮಹಾಮಾತೆಯರು. ಆದ್ದರಿಂದ ಇವರ ಸುಶಿಕ್ಷಣದಲ್ಲಿಯೇ ನಾಳಿನ ಸಮಾಜವೂ, ಮಾನವಗಣವೂ ಅವಲಂಬಿಸಿ ನಿಂತಿವೆ. ಇಂದಿನ ಈ ತರುಣಿಯರು ಸುಶಿಕ್ಷಿತೆಯರಾದರೆ, ಬಾಳಿನ ಸಮಸ್ಯೆಗಳನ್ನು ಎದುರಿಸುವ ಕಲೆಯನ್ನು ಕಲಿತವರಾದರೆ ನಾಳಿನ ನಾಡು ನಂದನವನವಾಗಿ, ಶಾಂತಿಯ ಆಗರವೆನಿಸುವುದು. ಒಮ್ಮೆ ನಮ್ಮ ನಾಡು ನಂದನವನವೆನಿಸಿತ್ತು. ಹೆಂಗಳೆಯರು ಎಲೆಯ ಮರೆಯ ಸುಂದರ ಕುಸುಮಗಳಂತೆ ಹೊರಗೆ ತೋರದಿದ್ದರೂ ಹಿನ್ನೆಲೆಯಲ್ಲಿ ನಿಂತು ತಮ್ಮ ಸದ್ಗುಣಗಂಧವನ್ನು ಸಮಾಜದ ಸರ್ವಸಂಧಿಗಳಲ್ಲಿ ಪಸರಿಸಿದ್ದರು. ಅವರು ಎತ್ತಿ ಹಿಡಿದ ಆ ಭಾರತ ಮಹಿಳೆಯರ ಕೀರ್ತಿಯೇ ಇಂದೂ ಹಾಡಲ್ಪಡುತ್ತಿದೆ. ಅಂದಿನ ಸೀತಾ, ಸಾವಿತ್ರಿ ದಮಯಂತಿಯರ ಹೆಸರೇ ಇಂದೂ ಹೇಳಲ್ಪಡುತ್ತಿದೆ. ಹಾಗಾದರೆ ಇಂದಿನ ಸಮಾಜದಲ್ಲಿ ಸೀತಾ, ಸಾವಿತ್ರಿಯರಿಲ್ಲವೇ ?

ಇಲ್ಲವೆಂದು ಉತ್ತರಿಸಿದರೆ ಅದು ಸ್ತ್ರೀ ಸಮಾಜದ ತಪ್ಪಲ್ಲ! ಪಾಶ್ಚಾತ್ಯ ವಿದ್ಯಾಭ್ಯಾಸದಿಂದ ಹಿಂದಿನ ಹಿರಿಯತತ್ವಗಳಾದ ಗುಣನಡತೆ, ರೀತಿ ನೀತಿಗಳು ಬದಲಾಗಿ ಪಾಶ್ಚಾತ್ಯ ನಾಗರಿಕತೆಯೇ ಯೋಗ್ಯತೆಯನ್ನು ಅಳೆಯುವ ಕೋಲೆಂದು ಸಮಾಜವು ಪರಿಗಣಿಸಲು ತೊಡಗಿದುದರಿಂದ ಸ್ತ್ರೀ ಸಮಾಜವೂ ಕೂಡ ಅದ್ದ ಧಾವಿಸತೊಡಗಿತು. ಇಂದಿನ ನಾಗರಿಕ ಸ್ತ್ರೀಗೆ ಸೀತೆ, ದಮಯಂತಿ, ತಾರಾ, ಮಂಡೋದರಿಯರು ಆದರ್ಶರಲ್ಲ. ಶೆಲ್ಕನೈಗೆಯ ಕುಪ್ಪಸ, ಮೇಡಿಗಿನ ಅಂಚಿನ ಸೀರೆ, ಅದರ ತೋಳಿನ ದವಲೆ, ವಿವಿಧ ಬಣ್ಣಗಳಿಂದಲಂಕೃತರಾಗಿ ಎತ್ತರ ಹಿಮ್ಮಡಿಯ ಪಾದರಕ್ಷೆಗಳಲ್ಲಿ ಉತ್ತಮ ಕಾರುಗಳಲ್ಲಿ ಸುತ್ತಾಡುವ ನಾರಿಯರು ಆದರ್ಶರಾಗಿದ್ದಾರೆ. ಆದು ಹೆಚ್ಚಿನ ಗೊಡ್ಡೇ ಇರಲೀ ಯಾರೇ ಆಗಲೀ ಜೀವನದ ಗುರಿ ಈ ಕಡೆಗೆ. ಇಂದಿನದು ಹಿಂದಿನ ತ್ಯಾಗಜೀವನವಲ್ಲ. ಬದಲು ಭೋಗಜೀವನದ ಸುಖದ ಕಾಂಕ್ಷೆಯೇ ನೀತಿ ನಡತೆಗಳಿಗಿಂತಾ ಹಿರಿದು ಎನಿಸಿದೆ.

ಇಂದಿನ ತರುಣಿಗೆ ಡಿಗ್ರಿ ಪಡೆಯಬೇಕೆಂಬ ಆಶೆ ಇದೆಯಾದರೂ ಗೃಹಕೃತ್ಯದ ಶಿಕ್ಷಣ ಅಗತ್ಯವಿಲ್ಲ. ಸುಖಪಡಬೇಕೆಂಬ ಆಶೆ ಇದೆಯಾದರೂ ಕೆಲಸಮಾಡುವ ಮನಸ್ಸಿಲ್ಲ. ತಾನೂ ಉದ್ಯೋಗ ಪಡೆದು ಸ್ವಚ್ಛಂದವಾಗಿ ವರ್ತಿಸಬೇಕೆಂಬ ಬಯಕೆಯೇ ಹೆಚ್ಚು. ಪಾಕಶಾಲೆಯ ಅಡಿಗೆ ರುಚಿಸುವ ಬದಲು ಹೋಟೇಲಿನ ಅಡಿಗೆಯೇ ಅವಳಿಗೆ ರುಚಿಸ ತೊಡಗಿದೆ. ಈ ಪರಿಸ್ಥಿತಿಯಿಂದಾಗಿ ಮದುವೆಯ ಕಟ್ಟೆಯಲ್ಲಿ ಡಿಗ್ರಿಯ ಬೆಲೆ ಇಳಿದು, ಒಲೆ ಉರಿಸುವ ಒಲೆಗೆ ಬೆಲೆ ಕೊಡುವ ಮನೋಭಾವ ಹೆಚ್ಚುತ್ತಿದೆ. ಇದು ಶುಭ ಚಿಹ್ನೆ ಎನ್ನಬೇಕು. ನಾಲ್ಕಕ್ಷರ ಓದುವವನನ್ನು ವಿದ್ಯಾವಂತನೆಂದರೂ ಅನುಭವ ಮಂಟಪದಲ್ಲಿ ತೇದು ಅರಗಿಸಿದ್ದೇ ನಿಜವಾದ ವಿದ್ಯೆ. ಆದ್ದರಿಂದ ಅಕ್ಷರ ತಿಳಿಯದವರು ಒಂದು ದೃಷ್ಟಿಯಿಂದ ಅವಿದ್ಯಾವಂತರೆನ್ನಲಾಗದು. ಅದ್ದರಿಂದ ಗೃಹಕೃತ್ಯವನ್ನು ಸರಿಯಾಗಿ ನಡೆಸಲು ಶಕ್ತಳಾದ ತರುಣಿಗೆ ಓದಲು ಬರೆಯಲು ಗೊತ್ತಿಲ್ಲವೆಂದು ಅವಿದ್ಯಾವತಿಯೆನ್ನಲಾಗದು. ಮಹಾತ್ಮಾ ಗಾಂಧೀಜಿಯವರ ಧರ್ಮಪತ್ನಿ ಕಸ್ತೂರ್ಬಾ ಯಾವ ಡಿಗ್ರಿ ಪಡೆದವರು? ಆದರೆ ಜೀವನದ ಪಥದಲ್ಲಿ, ಸ್ವಾತಂತ್ರ್ಯ ಸಂಗ್ರಾಮದ ಸಮರದಲ್ಲಿ ಅವರು ಮಹಾತ್ಮರಿಗಿತ್ತ ನೆರವು ಅಳೆಯಲಾರದಂತಾದ್ದು. ಮಹಾತ್ಮರ ವ್ಯಕ್ತಿಗೆ ಕಸ್ತೂರ್ಬಾ ಸ್ವಯಂ ಪ್ರಭೆಯು ಬೆಳಕನ್ನು ಕೊಡಿಸಿಲ್ಲವೇ? ಅವರು ಭಾರತದ ಮಹಿಳಾವೃಂದಕ್ಕೆ ಬೀರಿದ ದಿವ್ಯತುಂಲ, ದೇಶಸೇವಾ ಕಾಂಕ್ಷೆ, ಕುಟುಂಬವನ್ನು ನಿರ್ವಹಿಸುವ ಆದರ್ಶ ಇವು ಅನುಕರಣೀಯವಲ್ಲವೇ? ಎಲ್ಲರೂ ಅವರಂತಾಗಲಾರರು ನಿಜ. ಆದರೆ ಆದರ್ಶಕ್ಕೆ ಗುರಿ ಇಟ್ಟರೆ ಮರದ ಉನ್ನತಿಗಾದರೂ ತಲುಪಬಹುದು.

ಅದ್ದರಿಂದಲೇ ಇಂದಿನ ನಾಗರಿಕತೆಯ ಸೋಗಿಗೆ ಸಿಲುಕಿ ಜೋತು ಹಿಡಿದ ವಿದ್ಯಾಭ್ಯಾಸವನ್ನು ಪರಿವರ್ತಿಸಬೇಕು. ಭಾರತದ ಭಾವೀ ಗೃಹಿಣಿಯರ ಭವಿಷ್ಯ ಜೀವನವು ಭವ್ಯವಾಗಿ ಬೆಳಗಬೇಕಾದರೆ ಇಂದಿನ ಮಾತೆಯರಾಗಲಿರುವ ಇಂದಿನ ಬಾಲಕಿಯರ ಜೀವನ ದೃಷ್ಟಿ ಬದಲಾಗಿ ಅವಶ್ಯಕವಾದ ವಿದ್ಯೆ ಕಲಿಸಲ್ಪಡಬೇಕು. ನಮಗೆ ಜಗತ್ತಿನ ಸರ್ವವಿಚಾರಗಳು ಇಂದು ತಿಳಿದಿವೆ. ಆದರೆ ಕುಟುಂಬದಲ್ಲಿ, ಸಮಾಜದಲ್ಲಿ ತಂಗಿಯಾಗಿ, ಪತಿಯ ರಾಣಿ, ಮಾತೆಯಾಗಿ ಬದುಕುವುದು ತಿಳಿಯದು. ಅದರಿಂದ ಮಹಿಳಾವೃಂದದಲ್ಲಿ ಮಹಾಪರಿವರ್ತನೆಯಾಗಬೇಕು. ನಮ್ಮ ಆದರ್ಶರು ಮಾತೃಶ್ರೇಷ್ಠ ಸೀತಾ, ಸಾವಿತ್ರಿ, ಗಾರ್ಗಿ, ಮೈತ್ರೇಯಿ ಕಸ್ತೂರ್ ಬಾರಂತೆ ಬೇಕು. ಹಾಗಾದರೆ ಮಾತ್ರ ಕುಟುಂಬವನ್ನು ಸದಾ ನಗುನಗಿಸಲು, ಸಂಸಾರ ಜೀವನವನ್ನು ಸುಗಮಗೊಳಿಸಲು ಸಾಧ್ಯ. 'ತೊಟ್ಟಿಲನ್ನು ತೂಗುವ ಕೈ ಜಗತ್ತನ್ನಾಳುವವು' ಸಹಜ. ಆದರೆ ಜಗತ್ತಿನ ತೊಟ್ಟಿಲಾದವ ಕೈಯು ಬಲಿಷ್ಠವಾದರೆ ಮಾತ್ರ ಜಗವು ಪ್ರಗತಿಯ ನೆಲೆಯೆನಿಸುವದು.

ಓದುಗರ ಓಲೆಗಳು

ಮಡಿಕೇರಿ ಮುನ್ಸಿಪಾಲಿಟಿ.

ಮಡಿಕೇರಿ ಮುನ್ಸಿಪಾಲಿಟಿಯ ಜವಾಬ್ದಾರಿ ಹೊತ್ತವರು ಪುರಜನರ ಹಿತದೃಷ್ಟಿಯಿಂದ ಹಲಕೆಲವು ಕೆಲಸ ಮಾಡಿದ್ದಾರೆ. ಆದರೆ ಇವರ ದೃಷ್ಟಿ ಕೆಲವು ಭಾಗಗಳಲ್ಲೇ ಕೇಂದ್ರೀಕೃತವಾಗಿ ಕೆಲವು ಭಾಗಗಳು ಇವರ ದೃಷ್ಟಿಗೆ ಗೋಚರವಾಗದಂತೆ ತೋರುತ್ತಿದೆ. ಮಡಿಕೇರಿ ವಿದ್ಯುಚ್ಛಕ್ತಿ ಮನೆಯ ಕೆಳಗಿರುವ ರಸ್ತೆಯಲ್ಲಿ ಹೋದರೆ ಈ ಕಡೆ ಮುನ್ಸಿಪಾಲಿಟಿ ಅಧಿಕಾರಿಗಳ ದೃಷ್ಟಿ ಹರಿದಿಲ್ಲವೆಂಬುದು ಗೊತ್ತಾಗುವದು. ವಿದ್ಯುಚ್ಛಕ್ತಿ ಮನೆಯಿಂದ ಹರಿಯುವ ಎಣ್ಣೆ ನೀರಿನಿಂದ ತುಂಬಾ ಹೇಸಿಕೆಯಾಗಿದೆ. ಮುಂದೆ ಚರಂಡಿಯ ಪಕ್ಕದಲ್ಲಿ ಅಲ್ಲಲ್ಲಿ ಹೇಸಿಗೆ ಇದೆ. ಪೊಲೀಸ್ ಲೈನಿನ ಹಾಗೂ ಕಕ್ಕೂಸಿನ ನೀರು ರಸ್ತೆಗಾಗಿ ಹರಿದು ಹೊಲಸಾಗಿದೆ. ಇದನ್ನೆಲ್ಲಾ ನೋಡಿ ಪುರಸಭೆಯವರು ಸರಿಪಡಿಸಬೇಕಾಗಿ ವಿನಂತಿ.

'X'

ಮಿಶನರಿ ಶಾಲಾ ಉದ್ಯೋಗಿಗಳು

ಕೊಡಗಿನಲ್ಲಿ ಮೂರು ನಾಲ್ಕು ಮಿಶನರಿ ಶಾಲೆಗಳಿವೆ. ಇವುಗಳಲ್ಲಿ ಮೂರು ಹೈಸ್ಕೂಲುಗಳು. ಕಾನ್ವೆಂಟ್, ವೈಕೇಲ್ ಹೈಸ್ಕೂಲ್ ಮತ್ತು ಸೆಂಟ್ ಎನ್ ಹೈಸ್ಕೂಲು. ಇವುಗಳಲ್ಲಿ ಕೆಲಸ ಮಾಡುವ ಹಲವು ಅಧ್ಯಾಪಕರಿದ್ದಾರೆ. ಈ ಸಂಸ್ಥೆಗಳು ತಮ್ಮ ನೌಕರರಿಗೆ ಯೋಗ್ಯ ವೇತನ ಮತ್ತು ತುಟ್ಟಿ ಭತ್ಯವನ್ನು ಕೊಡುತ್ತಿರುವರೇ? ಇವರ ತುಟ್ಟಿ ಭತ್ಯಕ್ಕಾಗಿ ಕೊಡಗು ಸರಕಾರವು ಏನಾದರೂ ಧನ ಸಹಾಯ ಕೊಡುತ್ತಿವೆಯೆ? ನನಗೆ ತಿಳುವಳಿಕೆ ದೊರೆತ ಮಟ್ಟಿಗೆ ಈ ಶಾಲೆಗಳಲ್ಲಿ ಸರಕಾರಿ ದರದ ವೇತನ ಮತ್ತು ತುಟ್ಟಿ ಭತ್ಯದ ಲೆಕ್ಕ ತೋರಿಸಿ ಸರಕಾರದಿಂದ ಸಹಾಯ ಪಡೆಯುತ್ತಿರುವರೆಂದೂ ಆದರೆ ವಾಸ್ತವವಾಗಿ ಅಧ್ಯಾಪಕರಿಗೆ ಆ ರೀತಿಯ ದರದಲ್ಲಿ ವೇತನ ಕೊಡದೆ ಕಡಿಮೆ ಕೊಡುವರೆಂದೂ, ಆದರೆ ವೇತನ ಪಟ್ಟಿಗೆ ಮಾತ್ರ ಹೆಚ್ಚಿನ ದರದ ಲೆಕ್ಕಕ್ಕೆ ಸಹಿ ತೆಗೆದು ಕೊಳ್ಳುತ್ತಿರುವರೆಂದೂ ಗೊತ್ತಾಗಿದೆ. ಇದು ನಿಜವೋ ಎಂಬುದನ್ನು ಸಂಬಂಧಿಸಿದ ಅಧಿಕಾರಿಗಳು ವಿಚಾರಿಸುವರೇ?

ವಿದ್ಯಾಭಿಮಾನಿ.

ಅಧಿಕಾರಿಗಳಿಗೆ ಜೀವದಾನ

ಕಳೆದ ಸಂಚಿಕೆಯಲ್ಲಿ 'ಶೈನ್' ರು ಬರೆದ ಪೆನ್ಶನಿನ ತಲೆಕಟ್ಟಿನ ಲೇಖನವನ್ನು ಓದಿದೆನು. ತುಂಬಾ ಯುಕ್ತವಾದ ಅವರ ಅಭಿಪ್ರಾಯವು ಸರ್ವಮಾನ್ಯವಾದುದಾಗಿದೆ. ನಾನು ಇವನ್ನು ಬರೆಯುವ ಕಾರಣವೆಂದರೆ ಕೊಡಗಿನ ಸರಕಾರದ ನಿವೃತ್ತ ಉದ್ಯೋಗಿಗಳ ಪೆನ್ಶನ್ನು ಪಡೆದು ಮಿಲಿಟ್ರಿ ಡಿಫೆಂಡ್ ರೀಸರ್ವ್, ಕೊಡಗಿನಲ್ಲಿ ಪ್ರೊಕ್ಯೂರ್‌ಮೆಂಟ್ ಇಲಾಖೆಯೊಂದನ್ನು ಏರ್ಪಡಿಸಿ ಅದಕ್ಕೆ ಸಿಬ್ಬಂದಿಗಳನ್ನು ನೇಮಿಸಿದಾಗ ಬಹಳ ಜನ ನಿವೃತ್ತ ಜನರನ್ನೇ ನೇಮಿಸಿದ್ದಾರೆ. ಅದು ಸಿವಿಲ್ ಇನ್ಸ್‌ಪೆಕ್ಟರ್ ಹುದ್ದೆ, ಡಾಲಿ, ಬೇರೆ ಯಾವುದೇ ಇರಲೀ ನಿವೃತ್ತ ಅಧಿಕಾರಿಗಳನ್ನು ನೇಮಿಸುವ ಅಭ್ಯಾಸವು ನಮ್ಮ ಸರಕಾರಕ್ಕೆ ಬಹುಹೆಚ್ಚು. ಕೊಡಗಿನಲ್ಲಿ ನಿರುದ್ಯೋಗಿಗಳಾಗಿ, ಉದ್ಯೋಗ ದೊರೆತರೂ ಸರಿಯಾದ ಪ್ರಮೋಶನ್ ಇಲ್ಲದವರಾಗಿ ನೂರಾರು ಜನರಿದ್ದಾರೆ. ಒಂದು ಖಾಲಿಸ್ಥಳಕ್ಕೆ ನೂರಾರು ಅರ್ಜಿಗಳು ಬರುತ್ತವೆ. ಹೀಗೆ ಪರಿಸ್ಥಿತಿ ಇರುವಾಗ ಈ ನಿವೃತ್ತರಿಗೆ ಜೀವದಾನ ಕೊಡಲೇಕೆ? ಯಾವದೇ ಅಧಿಕಾರಿ ಇರಲಿ ತಮ್ಮ ಸರ್ವಿಸು ಮುಗಿದನಂತರ ನಿವೃತ್ತರಾಗಲೇ ಬೇಕು. ಸರಕಾರವೂ ಈ ಖಾನೂನನ್ನು ಖಡ್ಡಾಯವಾಗಿ ಜಾರಿಯಲ್ಲಿ ತರಬೇಕು.

ಕುಶಾಲಪ್ಪ.

ಕೊಡಗರು ಕನ್ನಡಿಗರೇ?

ಕಳೆದ ವಾರದ ಪತ್ರಿಕೆಯಲ್ಲಿ "ನವಯುಗ"ದ ವಿಶೇಷ ಸುದ್ದಿಗಾರರೊಬ್ಬರು ಬರೆದ "ಕೊಡಗಿನಲ್ಲಿ ಮೂರು ದಿನಗಳು" ಎಂಬ ಲೇಖನವನ್ನು ಓದಿದೆನು. ಜ. ಕಾರ್ಯಪ್ಪನವರ ಮಕ್ಕಳು "ಇಲ್ಲ" ಎಂದು ಕನ್ನಡದಲ್ಲಿ ಉತ್ತರವಿದ್ದುದೇ ಕೊಡಗರು ಕನ್ನಡಿಗರೆಂಬುದಕ್ಕೆ ಸಾಕ್ಷಿ ಎಂದು ಲೇಖಕರು ಬರೆದಂತಿದೆ. "ನಾವು ಕನ್ನಡಿಗರಲ್ಲವೆಂದು ಕೊಡಗಿನವರು ಅಡಿಕೊಂಡರೆ ಕನ್ನಡತನ ಬಿಟ್ಟು ಕೊಟ್ಟೇ?" ಎಂದು ಕೇಳಿದ್ದಾರೆ. ಕನ್ನಡ ಮಾತಾಡಲು ತಿಳಿದಿರುವವರೆಲ್ಲರೂ ಕನ್ನಡಿಗರೆಂದು ಹೇಳಲು ಸಾಧ್ಯವಿಲ್ಲ. ಹಾಗ ಹೇಳುವದಾದರೆ ಇಂಗ್ಲಿಷ್ ಮಾತಾಡುವವರೆಲ್ಲ ಯೂರೋಪಿಯನರೆಂದಂತಾದೀತು. ಪೂರ್ವದಲ್ಲಿ ಲಿಂಗಾಯಿತ ರಾಜರು ಆಳುತ್ತಿದ್ದರೆಂದು ಹೇಳಿದಾಕ್ಷಣ ಕೊಡಗು ಕನ್ನಡ ನಾಡಾಗಲಾರದು. ಹಿಂದೂಸ್ಥಾನದಲ್ಲಿ ಹಿಂದೆ ಮಹಮ್ಮದೀಯರು ಆಳುತ್ತಿದ್ದರೆಂದು ಹಿಂದೂ ದೇಶವನ್ನು ಮುಸ್ಲಿಂ ರಾಷ್ಟ್ರವೆನ್ನಲಾಗುವದೇ?

ಮೂರು ದಿನ ಕೊಡಗಿನಲ್ಲಿ ಕಾರಿನಲ್ಲಿ ಕುಳಿತು ಸುತ್ತಾಡಿದ ಮಾತ್ರಕ್ಕೆ ಕೊಡಗಿನ ಪರಿಚಯವಾದಂತಾಗಲಿಲ್ಲ. ಇವರು ಕೊಡಗಿನಲ್ಲಿ ಕೇವಲ ಮುಖಂಡರುಗಳನ್ನೇ ಹೆಚ್ಚಾಗಿ ಕಂಡಿದ್ದಾರೆ ವಿನಾ ಜನನಿಬಿಡವಾದ ಭಾಗಗಳಿಗೆ ಹೋಗಿಲ್ಲ. ಈ ಮೂರು ದಿನಗಳ ಅವಧಿಯಲ್ಲಿ ಕೊಡಗಿನವರ ಸಂಸ್ಕೃತಿ ಏನು, ಅವರ ಜೀವನ ವೈಶಿಷ್ಟ್ಯವೇನು? ಎಂಬುದನ್ನು ಅರಿಯಲು ಇವರಿಗೆಲ್ಲಿ ಸಾಧ್ಯ? ಜನರಲ್ ಕಾರ್ಯಪ್ಪನವರು 'ನಾವು ಕನ್ನಡಿಗರಲ್ಲ'ವೆಂದು ಹೇಳಿದ್ದು ಅಕ್ಷರಶಃ ಸರಿ. ಕನ್ನಡನಾಡಿನ ಜನರಿಂದ ಭಿನ್ನವಾದ ಸಂಪ್ರದಾಯ, ನೀತಿ, ಆಚಾರ, ಸಂಸ್ಕೃತಿಗಳು ಇಲ್ಲಿವೆ. ಅಂಥಾ ಸಂಸ್ಕೃತಿ ನೀತಿಗಳ ಭಾಗ ನೋಡಲು 'ನವಯುಗ'ದ ವರದಿಗಾರರಿಗೆ ಅವಕಾಶವಿದೆ. ಅವರು ಕೊಡಗಿಗೆ ಬಂದು ಕೆಲವು ದಿನಗಳು ಇದ್ದು ಇಲ್ಲಿಯ ಜನರೊಡನೆ ಒಡನಾಡಿ ಸಮನಂತರ ತಮ್ಮ ಅಭಿಪ್ರಾಯ ಹೇಳುವದೊಳಿತು.

ಸಿ. ಬಿದ್ದಯ್ಯ.

ಶ್ರೀ ಸಿ. ರಾಜಗೋಪಾಲಾಚಾರ್ಯರು ಇಂಡಿಯಾದ ಪ್ರತಿ ಸೆನ್ಸಸ್ ಎನ್ಯೂಮರೇಟರಿಗೆ ಕೊಟ್ಟ ಸಂದೇಶ.

ಖಾನೇಸುಮಾರಿಯ ಕೆಲಸದಲ್ಲಿ ತೊಡಗಿದ ಪ್ರಿಯ ಸಹೋದ್ಯೋಗಿಗಳೇ,

ಈ ಖಾನೇಸುಮಾರಿಯು ಸ್ವತಂತ್ರ ಭಾರತ ಗಣರಾಜ್ಯದ ಆಜ್ಞೆಯ ಮೇರೆಗೆ ನಡೆಯುವ ಮೊತ್ತ ಮೊದಲನೆಯ ಖಾನೇಸುಮಾರಿಯಾಗಿದೆ. ಈ ವಿಷಯದಲ್ಲಿ ನಾನು ಮುಖ್ಯವಾಗಿ ಎನ್ಯೂಮರೇಟರುಗಳನ್ನೇ ಉದ್ದೇಶಿಸಿ ಮಾತನಾಡುತಿದ್ದೇನೆ. ನೀವು ಸ್ವತಂತ್ರ ಭಾರತದ ಮೊತ್ತ ಮೊದಲನೇ ಖಾನೇಸುಮಾರಿಯಲ್ಲಿ ಭಾಗವಹಿಸುವ ಸುಯೋಗವನ್ನೂ ಗೌರವವನ್ನೂ ಪಡೆಯುತ್ತೀರಿ. ಮುಂದಿನ ಖಾನೇಸುಮಾರಿಯು ಇನ್ನು ಹತ್ತು ವರ್ಷಗಳ ತರುವಾಯ ನಡೆಯುವುದು. ಈ ವಿಷಯದಲ್ಲಿ ಮೊದಲನೆಯ ಸುಯೋಗವು ನಿಮಗೆ ದೊರೆತಿದೆ. ನೀವು ಎನ್ಯೂಮರೇಟರಾಗಿರುವ ಕಾರಣ ಈ ಇಡೀ ದೊಡ್ಡ ಕಟ್ಟಡದ ತಳಹದಿಯನ್ನೇ ನೀವು ಕಟ್ಟುತಿದ್ದೀರಿ. ಯಾವ ಕಟ್ಟಡಕ್ಕಾದರೂ ತಳಹದಿಯೇ ಅತ್ಯಂತ ಮುಖ್ಯವಾದ ಭಾಗವೆಂಬುದು ನಿಮಗೆ ತಿಳಿದ ವಿಷಯವೇ ಆಗಿದೆ. ನೀವು ಮಾಡಿದ ಕೆಲಸದ ದಾಖಲೆಯನ್ನು ಮುಂದಿನ ಹತ್ತು ವರ್ಷಗಳಲ್ಲೆಲ್ಲಾ ಉಪಯೋಗದ ಬಗ್ಗೆ ಎಚ್ಚರಿಕೆಯಿಂದ ಕಾಯ್ದಿರಿಸಲಾಗುವುದು.

ಎನ್ಯೂಮರೇಶನ್ ಕೆಲಸವು ಫೆಬ್ರವರಿ ೯ನೇ ತಾರೀಕಿನಂದು ಸೂರ್ಯೋದಯ ಕಾಲದಲ್ಲಿ ಪ್ರಾರಂಭವಾಗುವುದು. ಆ ಹೊತ್ತಿನಿಂದ ಮಾರ್ಚ್ ೧ನೇ ತಾರೀಕಿನ ಸೂರ್ಯೋದಯದ ವರೆಗೂ, ನೀವು ನಿಮ್ಮ ಬ್ಲಾಕಿನಲ್ಲಿಯ ಎಲ್ಲ ಮನೆಗಳಿಗೂ ಹೋಗಿ, ನೀವು ಯಾರನ್ನು ಎನ್ಯೂಮರೇಟ್ ಮಾಡುವ ಬಗ್ಗೆ ಜವಾಬ್ದಾರರಾಗಿದ್ದೀರೋ ಆ ಸಮಸ್ತ ಜನರೂ ಇರುವ ಸ್ಥಳವನ್ನು ನೋಡಿ ತಿಳಿದುಕೊಳ್ಳಬೇಕು ಮತ್ತು ಅವರೆಲ್ಲರ ವಿಷಯದಲ್ಲಿಯೂ ಖಾನೇಸುಮಾರಿಯ ಸಂಬಂಧವಾಗಿ ನಿರ್ದೇಶಿಸಲ್ಪಟ್ಟ ಪ್ರಶ್ನೆಗಳಿಗೆ ನೀವು ಉತ್ತರಗಳನ್ನು ಪಡೆದುಕೊಂಡು ಅವುಗಳನ್ನು ಬರೆದುಕೊಳ್ಳಬೇಕು. ಮಾರ್ಚ್ ತಿಂಗಳ ೧ನೇ ೨ನೇ ಮತ್ತು ೩ನೇ ತಾರೀಕುಗಳಲ್ಲಿ ಕೊನೆಯ ಸಾರಿ ಚೆಕ್ ಮಾಡುವ ಬಗ್ಗೆ ನೀವು ಎಲ್ಲ ಮನೆಗಳಿಗೂ ಹೋಗಿ ಬರಬೇಕು. ಆ ಮೇಲೆ ನೀವು ಅನುಜ್ಞೆ ಕೊಡಲ್ಪಟ್ಟಂತೆ, ಸಕಲ ವಿಷಯಗಳಲ್ಲಿಯೂ ಖಾನೇಸುಮಾರಿಯ ಎನ್ಯೂಮರೇಷನಿನ ದಾಖಲೆಯನ್ನು ನೀವು ಸಿದ್ಧಪಡಿಸಿರುತ್ತೀರೆಂಬುದನ್ನು ದೃಢಪಡಿಸಿಕೊಂಡು, ಅದನ್ನು ಸೂಪರ್‌ವೈಸರಿಗೆ ಒಪ್ಪಿಸಿಕೊಡಬೇಕು.

ಈ ಕೆಲಸವನ್ನು ನೀವೊಬ್ಬರೇ ಮಾಡುವುದಲ್ಲ. ಸುಮಾರು ಆರು ಲಕ್ಷ ಮಂದಿ ದೇಶಾಭಿಮಾನಿಗಳು ಈ ಕೆಲಸದಲ್ಲಿ ಏಕ ಕಾಲದಲ್ಲಿ ತೊಡಗಿದ್ದಾರೆ. ನೀವು ಅವರಲ್ಲೊಬ್ಬರು. ಸಮಸ್ತ ಜನರನ್ನು ಎನ್ಯೂಮರೇಟ್ ಮಾಡುವ ಬಗ್ಗೆ ನೀವೆಲ್ಲರೂ ಒಟ್ಟಿಗೆ ಜವಾಬ್ದಾರರಾಗಿದ್ದೀರಿ. ಈ ನಮ್ಮ ಗಣರಾಜ್ಯದಲ್ಲಿಯ ಸಕಲ ಪ್ರಜೆಗಳ ಮತ್ತು ಕುಟುಂಬಗಳ ಜೀವನಕ್ಕೂ ಜೀವನೋಪಾಯಕ್ಕೂ ಸಂಬಂಧಿಸಿದ ಮುಖ್ಯ ವಿಷಯಗಳ ಒಂದು ದಾಖಲೆಯನ್ನು ನೀವು ಸಮಷ್ಟಿಯಾಗಿ ಸಿದ್ಧಪಡಿಸಬೇಕು.

ಈ ದಾಖಲೆಯು ಸರಿಯಾಗಿಯೂ ಸಂಪೂರ್ಣವಾಗಿಯೂ ಇರಬೇಕಾದರೆ ನೀವು ನಿಮ್ಮ ಪಾಲಿನ ಕೆಲಸವನ್ನು ಸರಿಯಾಗಿಯೂ ಸಂಪೂರ್ಣವಾಗಿಯೂ ನಿರ್ವಹಿಸತಕ್ಕದ್ದು. ನೀವು ಚೆನ್ನಾಗಿ ಮನದಟ್ಟು ಮಾಡಿಕೊಂಡು ಅವುಗಳನ್ನು ಏಕರೀತಿಯಾಗಿಯೂ ಪ್ರಾಮಾಣಿಕವಾಗಿಯೂ ಅನ್ವಯಿಸಬೇಕು. ಈ ಅನುಜ್ಞೆಗಳು ಇಡೀ ದೇಶದ ಬಗ್ಗೆ ನಿರ್ಧರಿಸಿರುವ ಒಂದು ಯೋಜನೆಯನ್ನು ಆಧರಿಸಿಕೊಂಡಿದೆ. ಜೇನುನೊಣಗಳ ಒಂದು ಹಿಂಡಿನಲ್ಲಿರುವ ಪ್ರತಿಯೊಂದು ಜೇನುನೊಣವೂ ಯಾವುದೋ ಒಂದು ಗೂಢವಾದ ಪ್ರೇರಣೆಗೆ ತಲೆಬಾಗಿ ತನ್ನ ಪಾಲಿನ ಕೆಲಸವನ್ನು ನಿರ್ವಹಿಸುತ್ತಾ ತನ್ಮೂಲಕ ಆ ಇಡೀ ಹಿಂಡು ಐಕ್ಯತೆಯ ಸೂತ್ರಗಳಿಗನುಸಾರವಾಗಿ ಸುಂದರವಾದ ಒಂದು ಗೂಡನ್ನು ನಿರ್ಮಿಸುವಂತೆ ಆತ್ಮಸಾಕ್ಷಿಗೂ ನಮ್ಮೆಲ್ಲರಲ್ಲಿ ಸ್ವಾಭಾವಿಕವಾಗಿ ಇರುವ ಸತ್ಯದೃಷ್ಟಿಗೂ ಅನುಸಾರವಾಗಿ ನೀವು ನಿಮ್ಮ ಪಾಲಿನ ಕೆಲಸವನ್ನು ನಿರ್ವಹಿಸತಕ್ಕದ್ದು.

ಮೊದಲನೆಯದಾಗಿ ಪ್ರತಿಯೊಬ್ಬ ಮನುಷ್ಯನನ್ನು ಒಂದು ಸಲ ಮಾತ್ರ ಎನ್ಯೂಮರೇಟ್ ಮಾಡತಕ್ಕದ್ದೇ ಹೊರತು ಒಂದಕ್ಕಿಂತ ಅಧಿಕ ಸಲ ಎನ್ಯೂಮರೇಟ್ ಮಾಡತಕ್ಕದ್ದಲ್ಲ. ಹೆಚ್ಚಾಗಿ ಜನರನ್ನು ಅವರವರ ವಾಡಿಕೆಯ ಸ್ಥಳದಲ್ಲಿಯೇ ಎನ್ಯೂಮರೇಟ್ ಮಾಡಲಾಗುವುದು. ಆದರೆ ಕೆಲವು ಜನರನ್ನು ಅವರು ಎಲ್ಲಿ ಕಂಡುಬಂದರೂ ಎನ್ಯೂಮರೇಟ್ ಮಾಡತಕ್ಕದ್ದು

ಎರಡನೆಯದಾಗಿ, ಆರ್ಥಿಕ ಸ್ಥಾನಮಾನಕ್ಕೂ ಜೀವನೋಪಾಯಕ್ಕೂ ಸಂಬಂಧಿಸಿದ ಪ್ರಶ್ನೆಗಳಿಗೆ ಸರಿಯಾದ ಮತ್ತು ಸಂಪೂರ್ಣವಾದ ಉತ್ತರಗಳನ್ನು ಪಡೆಯಲು ಅವಶ್ಯವಾಗಿ ತಗಲುವ ಸಮಯದ ಮತ್ತು ಮಾಡಬೇಕಾಗುವ ಪ್ರಯತ್ನದ ವಿಷಯದಲ್ಲಿ ಒಂದಿಷ್ಟಾದರೂ ಅಸಂತೋಷವನ್ನು ತೋರ್ಪಡಿಸಬೇಡಿರಿ.

ದೇಶದ ಅದ್ಯಂತವೂ ನಡೆಯುವ ಈ ಉದ್ಯಮದಲ್ಲಿ ನೀವು ನಿಮ್ಮ ಶಕ್ತಿಮೀರಿ ಕೆಲಸ ಮಾಡುವಿರೆಂದೂ, ನೀವು ನಿರ್ವಹಿಸಿದ ಕೆಲಸದ ಯೋಗ್ಯತೆಯ ಕುರಿತು ನೀವು ಹೆಮ್ಮೆ ಪಡುವಿರೆಂದೂ ನಾನು ಹಾರೈಸುತ್ತೇನೆ. ಭಗವಂತನು ನಿಮ್ಮನ್ನು ಅನುಗ್ರಹಿಸಲಿ.

೫೬ ವರ್ಷ ಉಪವಾಸ!

ಕ್ರಿಯಾ ಯೋಗದ ಕಥೆ.

ಶ್ರೀ ಪರಮಹಂಸ ಯೋಗಾನಂದರೆಂಬ ಸಾಧುಗಳು ಬರೆದ ಜೀವನ ಚರಿತ್ರೆಯಲ್ಲಿ ಐವತ್ತಾರು ವರ್ಷ ಊಟವಿಲ್ಲದೆಯೂ ಆರೋಗ್ಯಕರವಾಗಿ ಬದುಕಿರುವ ಗಿರಿಬಾಲೆ ಎಂಬೊಬ್ಬ ಮಹಿಳೆಯ ಪ್ರಸ್ತಾಪ ಬಂದಿರುವುದು. ಆ ಗಿರಿಬಾಲೆಯ ಕತೆ ಇದು; ಸಾಧುಗಳು ಬಂಗಾಳದ ಪುರುಲಿಯಾ ಹಳ್ಳಿಯಲ್ಲಿರುವ ಆಕೆಯ ಅಣ್ಣ ಲಂಬೋದರ ದೇಯವರ ಮನೆಗೆ ಹೋಗಿ ಆಕೆಯನ್ನು ಕಂಡರಂತೆ. ಅಣ್ಣನನ್ನು ವಿಚಾರಿಸಿದಾಗ ಒಮ್ಮೊಮ್ಮೆ ತನ್ನ ಮನೆಯಲ್ಲಿಯೂ, ಮತ್ತೆ ಕೆಲವು ಸಲ ಬಿಯೂರಿನ ತನ್ನ ಸಂಬಂಧಿಕರಲ್ಲಿಯೂ ಗಿರಿಬಾಲೆ ವಾಸಿಸುವಳೆಂಬುದು ಕಂಡುಬಂತು. ಈಗ್ಗೆ ಐವತ್ತು ವರ್ಷಗಳಿಂದ ತಂಗಿ ಒಂದೇ ಒಂದು ದಿನ ಅನ್ನದ ಅಗುಳು ಬಾಯಿಗಿಟ್ಟುದನ್ನು ಲಂಬೋದರ ದೇಯವರು ನೋಡಲಿಲ್ಲವಂತೆ. ಗಿರಿಬಾಲೆಯ ಯೋಗಕ್ಕೆ, ಏಕಾಂತ ಸ್ಥಳದ ಅವಶ್ಯಕತೆ ಇಲ್ಲ ಆಸುಪಾಸಿನವರಿಗೆಲ್ಲ ಆಕೆ ಒಂದು ವಿಚಿತ್ರ ವ್ಯಕ್ತಿ ಎಂಬುದು ಗೊತ್ತಿದೆ.

ಸಾಧುಗಳು ಬಿಯೂರಿಗೆ ತೆರಳಿದರು. ಗುರಿ ಮುಟ್ಟಿದರು. ಬಿಯೂರು ಕಾನನಾಂತರದ ಒಂದು ಗ್ರಾಮ. ಬಾಂಕುರಾ ಜಿಲ್ಲೆಯಲ್ಲಿದೆ. ಅವರು ಹೋದಾಗ ಗಿರಿಬಾಲೆ ನಾರುಮಡಿ ಉಟ್ಟಿದ್ದಳು. ಮುಖದಲ್ಲಿ ಗಂಭೀರವೂ, ಶಾಂತವೂ ಆದ ವರ್ಚಸ್ಸಿದ್ದಿತು. ಐಹಿಕ ಸುಖವನ್ನು ತ್ಯಜಿಸಿ, ಪಾರಮಾರ್ಥಿಕ ಕ್ಷೇಮವನ್ನೂ ಆತ್ಮವನ್ನೂ ಗಳಿಸಿಕೊಂಡ ಕಳೆ ಮುಖದಲ್ಲಿ ಖಂಡಿತವಾಗಿಯೂ ನಲಿದಾಡುತಿತ್ತು. 'ನಿಜಕ್ಕೂ ಉಣ್ಣುವುದಿಲ್ಲವೆ?" ಎಂದು ಸ್ವಾಮೀಜಿ ಕೇಳಿದಾಗ ಆಕೆ "ಹನ್ನೆರಡು ವರ್ಷ ನಾಲ್ಕು ತಿಂಗಳಿದ್ದಾಗಿನಿಂದ ಈಗಿನ ವರೆಗೆ (೬೮ ವರ್ಷ ಈಗ) — ಒಟ್ಟು ೫೬ ವರ್ಷ— ಊಟ ಮಾಡಲೂ ಇಲ್ಲ, ದ್ರವಗಳನ್ನು ಸ್ವೀಕರಿಸಲೂ ಇಲ್ಲ ....ಈ ಕಾಡುಗಳ ಮಧ್ಯೆ ನಾನು ಹುಟ್ಟಿ ಬೆಳೆದೆ. ಬಾಲ್ಯದಲ್ಲಿ ವಿಶೇಷ ಘಟನೆ ಏನೂ ನಡೆಯಲಿಲ್ಲ. ಒಂದು ವಿಶಯ—ನನಗಾಗ ಅತಿರೇಕ ಹಸಿವು ಬಾಧಿಸುತಿತ್ತು ನನ್ನ ತಾಯಿ ಆಗಾಗ ಮಗೂ, ಹೊಟ್ಟೆ ಕಟ್ಟಿಕೊಳ್ಳುವುದನ್ನು ಕಲಿ. ಗಂಡನ ಮನೆಯಲ್ಲಿಯೂ ಹೀಗೆ ಮಾಡಿದರೆ ಹೇಗಾದೀತು.? ಎನ್ನುತ್ತಿದ್ದಳು. ಗಿರಿಬಾಲೆಯು ಗಂಡನ ಮನೆಗೆ ಹೋದಾಗ ಅವಳ ಅತ್ತೆ ಹಗಲು ರಾತ್ರಿ ಅವಳ ಹೊಟ್ಟೆಬಾಕತನವನ್ನು ಹಳಿಯುತ್ತಿದ್ದಳು. ಅವಳ ಬೈಗಳು ಗಿರಿಬಾಲೆಯ ಮಟ್ಟಿಗೆ ಆಶೀರ್ವಾದ ವಾಕ್ಯಗಳಾಗಿ ಪರಿಣಮಿಸಿದುವು. ಸುಪ್ತವಾದ ಆತ್ಮತೇಜವನ್ನು ಅವು ಕೆಣಕಿ ಎಬ್ಬಿಸಿದುವು. ಒಂದು ದಿನ ಬಹಳ ಬೇಸರಬಂದು 'ಇನ್ನು ನಾನು ಅನ್ನ ಮುಟ್ಟುವುದಿಲ್ಲ' ಎಂದಾಕೆ ಅತ್ತೆಗೆ ತಿಳಿಸಿದಳು. ಅನುಪಮವಾದ ಸ್ಥೈರ್ಯದಿಂದ ಹನ್ನೆರಡು ವರ್ಷ ವಯಸ್ಸಿನ ಬಾಲೆ ಭಗವಂತನನ್ನು ಪ್ರಾರ್ಥಿಸಿಕೊಂಡಳು. 'ದೇವರೇ, ಅನ್ನವಿಲ್ಲದೆ ಬರೇ ನಿನ್ನ ನೆರವಿನಿಂದ, ತೇಜಸ್ಸಿನಿಂದ ಬದುಕುವ ಮಾರ್ಗವನ್ನು ತೋರಿಸಲು ನನಗೊಬ್ಬ ಗುರುವನ್ನು ದಯಪಾಲಿಸು.' ಎಂಬುದು ಆಕೆಯ ಅನುದಿನದ ಪಲ್ಲವಿಯಾಗಿತ್ತು. ಮೈಮೇಲೆ ಆವೇಶ ಬಂದವಳಂತೆ ಒಂದು ದಿನ ಗಂಗಾನದಿಯ ನವಾಬಗಂಜ ಘಾಟಿಗೆ ಗಿರಿಬಾಲೆ ತೆರಳಿದಳು. ದಾರಿಯಲ್ಲಿ ಸಿಕ್ಕ ತನ್ನ ಮಾವನ ಮನೆಯ ಪುರೋಹಿತನ ಹತ್ತಿರ ಊಟವಿಲ್ಲದೆ ಬದುಕಲೆಂತು? ಎಂದು ವಿಚಾರಿಸಿದಳು. ಪುರೋಹಿತನು ಆಕೆಯನ್ನು ದೇವಾಲಯಕ್ಕೆ ಬರಹೇಳಿದನು. ಗಂಗೆಯಲ್ಲಿ ಮಿಂದು ಶುಚಿರ್ಭೂತೆಯಾಗಿ ದೇವಾಲಯಕ್ಕೆ ಬಂದಾಗ ಅವಳ ಪ್ರಾರ್ಥನೆಯ ಗುರು ಆಕೆಯ ಮುಂದೆ ಆವಿರ್ಭವಿಸಿ 'ಈ ಹೊತ್ತಿನಿಂದ ನಿನ್ನ ದೇಹಕ್ಕೆ ಸ್ವರ್ಗೀಯ ಬೆಳಕು ಅಶನವೀಯುವುದು. ನಿನ್ನ ಶರೀರದ ಅಣುಗಳಿಗೆ ಅನಂತ ಪ್ರವಾಹದಿಂದ ಶಕ್ತಿಯೊದಗುವುದು' ಎಂದು ಆಶ್ವಾಸನೆಕೊಟ್ಟನು. ಆ ಮೇಲೆ ಇದನ್ನು ಸಾಧಿಸುವ ಕ್ರಿಯಾಯೋಗವನ್ನೂ ಕಲಿಸಿದನು. ಮಂತ್ರ ಒಂದು, ಆ ಮೇಲೆ ಸಾಮಾನ್ಯರಿಗೆ ಸಾಧ್ಯವಾಗದ ಒಂದು ಬಗೆಯ ಪ್ರಾಣಾಯಾಮ—ಇಷ್ಟೇ ಸರಳ ಕಾರ್ಯಕ್ರಮದಲ್ಲಿ ಊಟದ ಮಾತೆ ಬಿಟ್ಟುಹೋಯಿತು. ದೇವಸಾನ್ನಿಧ್ಯದಲ್ಲೇ ಬದುಕು ಸಾಗಿತು—ಒಂದಲ್ಲ ಎರಡಲ್ಲ,—ಐವತ್ತಾರು ವರ್ಷ!

ಗಿರಿಬಾಲೆ ಅಸ್ವಸ್ಥಳಾಗಿ ಬಿದ್ದುದಿಲ್ಲ. ಮನುಷ್ಯರಿಗೆ ಸಹಜವಾದ ಶೌಚಕ್ರಿಯೆಗಳು ಆಕೆಗಿಲ್ಲ. ಏನಾದರೂ ಗಾಯವಾದರೆ ಕೊಂಚ ಮಾತ್ರ ನೋವು ಬೇಕಾದಾಗ ಶ್ವಾಸೋಚ್ಛ್ವಾಸವನ್ನೂ, ಹೃತ್ಕಮಲವನ್ನೂ ಗಿರಿಬಾಲೆ ನಿಯಂತ್ರಿಸಬಲ್ಲಳು. ಕನಸಿನಲ್ಲಿ ಆಕೆಯ ಗುರುವು ಇತರ ಮಹಾನ್ ಆತ್ಮಗಳೂ ಆಕೆಗೆ ಗೋಚರವಾಗುವುವು. ಆದರೆ ಈ ನಿರಶನ ವಿದ್ಯೆಯನ್ನು ಇತರರಿಗೆ ಕಲಿಸಬಾರದೆಂದು ಗುರುವು ಖಡ್ಡಾಯಮಾಡಿರುವುದರಿಂದ ಲೋಕದ ಜನರಿಗೆ ಉಪಯೋಗವಿಲ್ಲವಾಗಿದೆ.

ಇದು ಕಟ್ಟು ಕಥೆಯಲ್ಲ. ನವಾಬಗಂಜಿನ ಮಹಾರಾಜರು ಪರೀಕ್ಷಾರ್ಥವಾಗಿ ಆಕೆಯನ್ನು ತಮ್ಮ ಅರಮನೆಯ ಕೊಠಡಿಯಲ್ಲಿ ಎರಡು ತಿಂಗಳ ಕಾಲ ಬಂಧಿಸಿಟ್ಟಿರಂತೆ. ಆಕೆಗೆ ಇದರಿಂದ ಏನೂ ಹಾನಿಯಾಗಲಿಲ್ಲವಂತೆ.

'ನವಯುಗ.'

ಶ್ರೀ ಟಿ. ಎನ್. ಗೋವಿಂದರಾಜು,
'ಕೊಡಗು' ಏಜೆಂಟರು,
ವೀರಾಜಪೇಟೆ.

ಕೊಡಗಿನ ಎರಡು ಮುಖಗಳು.

(ಕೊಡಗಿನ ಬಗ್ಗೆ ಎಷ್ಟೇ ಆಂತರಿಕ ಸ್ಪರ್ಧೆಯಿದ್ದರೂ ತಮ್ಮ ಗುರಿಯ ಸಾಧನೆಗಾಗಿ ಹೊಸ ದೀಕ್ಷೆಯಲ್ಲಿ ಸಹ್ಯಾಂತರಗಳನ್ನು ಮರೆಯಬಹ ರಾಜಕೀಯ ಪ್ರಚಾರವಾಗುತ್ತದೆ ಎಂಬುದಕ್ಕೆ ಮಾದರಿಯಾಗಿ ಈ ಲೇಖನವನ್ನು 'ನವಯುಗ' ದಿನ ಪತ್ರಿಕೆಯಿಂದ ನಮ್ಮ ವಾಚಕರಿಗಾಗಿ ಉದ್ಧರಿಸಿ ಕೊಡಲಾಗಿದೆ. ಸಂ)

ಸುಟ್ಟಿಕೊಪ್ಪದ ದಾರಿಯಲ್ಲಿ ಗುಡ್ಡ ತಗ್ಗು ಹಾವು ಹರಿದಂತೆ ಹೋಗುತ್ತಿರುವ ಕಾರಿನಲ್ಲಿದ್ದ ನನಗೆ ತಲೆಸುತ್ತು ಬಂದಂತಾಗುತ್ತಿತ್ತು. ಆದರೆ ಪ್ರಕೃತಿಸೌಂದರ್ಯದ ಗಮತ್ತಿನಲ್ಲಿ, ಸಂಜೆಯ ನೀಲಿಬಾನಿನಲ್ಲಿ, ನನ್ನ ತಲೆತಿರುಗಿದರೂ ತನಗೆ ಕಾಣಿಸದೆ ತನ್ನ ವ್ಯಾಪಾರ ನಡೆಯುತ್ತಿತ್ತು.

ಒಂದು ಕೊರಗು.

ತಲೆತಿರುಗಿ ನಿಂತಿತು, ಹೃದಯದ ಒಂದು ಕೊರಗು ನಿಲ್ಲಲಿಲ್ಲ. ಜನರಲ್ ಕಾರಿಯಪ್ಪನವರು ತನ್ನ ತಿಗರದೊಂದು ಜಾತಿ, ಕೊಡಗಿನವರದಿನ್ನೊಂದು ಜಾತಿ ಎಂದು ಇಟ್ಟುಗೆ ಮಾಡಿ ಹೇಳಿದ ಮಾತು, ತಾವು ಕನ್ನಡಿಗರಲ್ಲವೆಂಬುದಕ್ಕೆ ತಮ್ಮ ಆಮುಗ್ಧ ಮಕ್ಕಳನ್ನು 'ಫಾಲ್ಕನ್' 'ಫಾಬ್ ಬೈಟ್' ಮಾಡಿಸಿದ ದೃಶ್ಯ ಮನದ ಬೊಬ್ಬೆಯಾಗಿ ಬಾಧಿಸುತ್ತಿದ್ದಿತು. ಭಾರತದ ಪ್ರತಿಯೊಬ್ಬನೂ ಭಾರತೀಯನೇ, ಅದಾರಿಗೆ ಗೊತ್ತಿಲ್ಲ? ಅದನ್ನಾರೂ ಯಾರು ಯಾರಿಗೆ ಹೇಳಿಕೊಡಬೇಕಾಗಿಲ್ಲ. ಆದರೆ ಕನ್ನಡತನ ಭಾರತತನಕ್ಕೆ ಅನ್ಯವೆಂದು ಯೋಚಿಸುವವರ ವಿವೇಚನೆಯ ಬಗ್ಗೆ ನನಗೆ ಸಂದೇಹ ವ್ಯಕ್ತವಾಗುತ್ತಿದೆ.

ತಾನಾವ ಭಾವನೆಯಿಂದ, ತಾನು ಸ್ವಭಾಷೆಯಿಂದ ಭಾರತೀಯನೆಂದು ತಿಳಿದುಕೊಳ್ಳಲು ಸಹಾಯವಾಗುವುದಿಲ್ಲವೆ? ಅದನ್ನೇ ಈಗ ಮರೆಯುತ್ತಿರುವ ತಾಯಿ ಮಾಲೆಯಾಳನ್ನು ನೆನೆಯುತ್ತಿಲ್ಲವೇ? ಹೀಗೆ ನಾನು ಯೋಚನೆಯ ತರಂಗಗಳಲ್ಲಿ ತೂಗುತ್ತಿರುವಾಗ, ಕಾರು ಸರಸರನೆ ಗಿರ್ರನೆ ತಿರುಗಿಕೊಂಡು ಒಂದೆಡೆ ನಿಂತಿತು. ಸುಂಟಿಕೊಪ್ಪದ ಬಂಗಲೆ. ಅದರ ಬಾಗಿಲಲ್ಲಿ ಕಾರು ನಿಂತಿತು. ಎಲ್ಲರೂ ಇಳಿದೆವು. ಆ ರಾತ್ರಿ ನಮಗಲ್ಲಿ ಇಳಿದುಕೊಳ್ಳಬೇಕಾಗಿದ್ದಿತು. ತೋಟದ ಕಾಫಿ ತೋಟದ ಮಾಲಿಕರ ಬಂಗಲೆಯದು. ಇಲ್ಲಿ ವಿಸಿದೆ ಎಂದು ಹೇಳುವುದಕ್ಕೆಂತಲೂ ವಿಶ್ರಮಿಸಿದೆವು ಎನ್ನುವುದು ಸರಿಯಾದ ದಾರಿ. ತೋಟದ ಮಾಲಿಕರು ಸುತ್ತುಗಳ ಕೋಣೆ ತೋರಿಸಿದರು. ನಮ್ಮೆಲ್ಲರ ಬರವು ಅವರಿಗೆ ಹೆಚ್ಚು ಸಡಗರವನ್ನು ತಂದಂತಿತ್ತು. ಗಂಡ-ಹೆಂಡತಿಯರಿಬ್ಬರೂ ಕಿತ್ತಳೆಹಣ್ಣಿನ ಪೆಟ್ಟಿಗೆಗಳನ್ನು ತಂದಿಟ್ಟರು. ತೋಟದ ಕಾಯಿ ಗಳ ತಿತ್ತಳೆ ಹಣ್ಣುಗಳಿಗೂ ಕಡಿಮೆಯಿಲ್ಲ. ನಾವೆಲ್ಲ ಎಷ್ಟು ತಿಂದರೂ ಬೇಕು ಎಂಬ ಭಾವದಿಂದ ತಿನ್ನುತ್ತಿದ್ದ ಬಣ್ಣದ ಕಾಯಿಯಿಂದ ಹಸ್ತಪರ್ಣದ ಹಿಕಳಿಯನ್ನು ನನ್ನ ಮುಖಕ್ಕೆ ಚಿಮ್ಮಿಸುತ್ತಿದ್ದವು. ಎಷ್ಟು ಸಾಹಸಪಡುತ್ತಿದ್ದರೂ ಪೆಟ್ಟಿಯನ್ನು ಬರಿದುಮಾಡ ಲೂ ನಮ್ಮಿಂದಾಗಲಿಲ್ಲ. ಆ ಹಣ್ಣು ಹಣ್ಣಾದ ಕಿತ್ತಳೆ ಹಣ್ಣುಗಳೇ ಗಿದ್ದವು. ನಾವು ನೋಡಿದೆವು.

ತೋಕಡಿಕೆಯಲ್ಲಿ.

ರಾತ್ರಿ ಸುಖಭೋಜನವಾಯಿತು. ಕಾಂಗ್ರೆಸ್ ಅಧ್ಯಕ್ಷರಿಗೆ ಕಾಣಿಕೆ ಕೊಟ್ಟು ನಮಗೆ ಪ್ರೀತಿಯ ನಮಸ್ಕಾರಗಳನ್ನು ಕೊಟ್ಟು ಸಹಿತರುಗಳು ಬೀಳ್ಕೊಟ್ಟರು. ನನ್ನ ಮಟ್ಟಿಗೆ ನಾನು ಆ ಸುಖದ ದಿನವಿಡೀ ನಾನೇನೋ ಈ ಕೊಡಗಿನ ಬಯಲಲ್ಲಿ ಹಬ್ಬದಂತಿತ್ತು. ನನಗೇನೋ ಈ ವನಶ್ರೀಯ ನಿಬಿಡತೆಯಿಂದ ವರೆಗೆ ಭೋಗಿಸುವ ಸೌಭಾಗ್ಯವಿಲ್ಲ ಎಂದು ಗೊಣಗುತ್ತ ತೋಕಡಿಕೆಯನ್ನು. ಈ ತೋಕಡಿಕೆಯಲ್ಲಿ ನಾನು ನೋಡಿದ ಪರ್ವತಶ್ರೇಣಿಗಳು, ಶ್ಯಾಮಲ ರಾತ್ರಿಯಿಂತಿ, ಅಪಾರ ಅರಣ್ಯದ ಗಂಭೀರ ಮೌನ, ಗೌರವವನ್ನು ಮಿಟುಗಿಸಿ ಜೋಗುಳದ ದನಿ ಹಕ್ಕಿಗಳ ಮನೋಹರ ವಾತಾವರಣದ ಉದಯರ್ಕನಾಗಿ ಕೆಂಪಾದ ಪ್ರಶಾಂತ ಕಾಂತಿ, ನಾನಾ ಬಗೆಯ ಸೌಂದರ್ಯ ಕಾಣುವ ವಿವಿಧ ವೈಚಿತ್ರ್ಯ—ಇವು ಒಂದೊಂದೂ ತೆರೆಯಾಗಿ, ಅಲೆಯಾಗಿ, ಚಿತ್ರವಾಗಿ ಸ್ಮೃತಿಯ ಒಂದೊಂದು ಭಿತ್ತಿಯಲ್ಲಿ ಅಚ್ಚುಮಿಟ್ಟವು. ಎಚ್ಚರದ ನನ್ನ ಆತ್ಮದಲ್ಲಿ ಸಾಲು ಸಾಲಾಗಿ ಹಬ್ಬಿವೆ. ಕನಸೋ ಎಚ್ಚರವೋ ಎನ್ನುವಂತೆ ಕಣ್ಣು ಬಿಡುವ ವೇಳೆಗೆ 'ಗೆಸ್ಟ್ ಹೌಸ್' ಬಾಗಿಲಿಗೆ ಬಂದು ನಿಂತಿತ್ತು.

ಕೊಡಗಿನ ಬಯಲಲ್ಲಿ.

ಮಲಗಿದಂತಹ ನೆನಪಿಲ್ಲ. ಎಚ್ಚರವಾದಾಗ ಹೊಸ ಜಗತ್ತಿನಲ್ಲಿ ಇದ್ದಂತೆ ಸಂತಸವಾಗಿದ್ದಿತು. ಆ ಸ್ವಪ್ನದ ಭಾವ ನನಗಾಗಿದ್ದಿತು. ಇಲ್ಲಿ ಎಲ್ಲರೂ ಪರಿಚಿತರು, ಯಾರಿಗೇನೂ ಕೊರತೆಯಿಲ್ಲ ಎಂದು ಕಾಫಿ ತೋಟದ ದೊರೆಗಳು ಆರೈಕೆಯ ಮನೋಭಾವದಿಂದ ಕಾಣುತ್ತಿದ್ದರು. ಅದ್ಭುತ ಕೃತ್ಯವನ್ನು ನಮ್ಮ ಕಣ್ಣಿಗೆ ನಿಲ್ಲಿಸಿ ಇದ್ದಿದ್ದವು. ಸ್ವರ್ಗವಲ್ಲದ ಎಲ್ಲರೂ ಸುಖಿಗಳೇ ಎಂದು ಆ ರಾಜಕಾರಣಿ ಹೇಳುವುದನ್ನು ನಂಬಬಹುದು. ನಾನು ಕಾರ್ಯಕರ್ತನವರ ಮಾತನ್ನು ನಂಬಲು ಸಾಧ್ಯವೆ? ಅದರೂ ಇಲ್ಲಿನ ವರೆಗೆ ನನ್ನ ಕಣ್ಣಿಗೆ ಕಂಡ ಕೊಡಗು ಯಾವ ಬಡತನವನ್ನೂ ಮುಂದುಮಾಡಿರಲಿಲ್ಲ. ನಾವು ನೋಡಬೇಕಾದ್ದು ಇನ್ನೂ ಬಹಳವಿದ್ದುದರಿಂದ ಈ ವಿಚಾರದಲ್ಲಿ ಅಂತ್ಯ ತೀರ್ಮಾನ ಮಾಡಲಿಲ್ಲ.

ಕೊಡಗಿನ ಬಯಲನ್ನು ಹೊಕ್ಕೆವು. ಕಂಡ ಜನರನ್ನೆಲ್ಲಾ ಅವರ ಜೀವನ, ಅವರ ನೆಮ್ಮದಿ, ಅವರ ಸಂಪಾದನೆಯ ಬಗ್ಗೆ ಕೇಳತೊಡಗಿದೆವು. ಗದ್ದೆಯೊಳಗಿನ ಹೆಂಗಸು ನಮ್ಮನ್ನು ಆದರದಿಂದಲೇ ಬರಮಾಡಿಕೊಂಡು ತಮ್ಮ ಸಂಸಾರದ ಸ್ಥಿತಿಗತಿಯನ್ನು ವಿವರಿಸಲು ತೊಡಗಿದರು. ಮಳೆಗಾಲ ಬಂತು. ನಮ್ಮ ಗುಡಿಸಲು ಸೋರುತ್ತಿದೆ. ಹೊದಿಕೆ ಕೊಡುವವರಿಲ್ಲ...

ಯಲ್ಲಿ ಕಂಡಾಗ ಗಿಡದ ಗುಲಾಬಿಗೂ ಇಲ್ಲಿ ಸೈವೈ ಬರುತ್ತಿವೆಯೇ ಎಂದು ಭ್ರಮಿತನಾಗಿದ್ದ ನಾನು, ಕಾಡುಗಳ ಮಧ್ಯ ಇಂತಹವರನ್ನು ಕಾಣಲಿಲ್ಲ. ಅಲ್ಲಿ ಕಂಡದ್ದೇ ಬೇರೆ. ಅವರ ಕಷ್ಟ ಸುಖಗಳೇ ಬೇರೆ ಬಗೆಯವು. ಅಲ್ಲಿ ನಾವು ಕೊಡಗಿನ ಇನ್ನೊಂದು ಮುಖವನ್ನು ನೋಡಲಾರಂಭಿಸಿದೆವು.

ಪುಣ್ಯಾತ್ಮರು!

ಶ್ರೀಮಂತರನ್ನು ಶ್ರೀಮಂತರನ್ನಾಗಿ ಮಾಡಿರುವ ಮೂಢ ಸ್ತ್ರೀಯರ ಪುಣ್ಯಾತ್ಮರನ್ನು ನಾವಿಲ್ಲಿ ಸಂಧಿಸಿದೆವು. ಅವರು ತಮ್ಮ ಶಕ್ತಿ ತಮ್ಮ ಜೀವನ ಎಲ್ಲವೂ ತಮ್ಮ ಧನಿಗಳಿಗಾಗಿ ಎಂದು ಅರಿ ಬೆತ್ತಲೆಯಾಗಿರುವ ದಂಡಿಕರನ್ನು ಕಂಡೆವು. ಅವರ ಜಾತಿ-ಗೋತ್ರ-ದೇಶ ಇವುಗಳ ವಿಚಾರ ನಮಗೆ ಬೇಕಾಗಿರಲಿಲ್ಲ. ಅವರು ಸುಖವಾಗಿರುವರೇ ಎಂಬುದನ್ನು ತಿಳಿದುಕೊಳ್ಳಬೇಕಾಗಿದ್ದಿತು. ಅಲ್ಲಿಬ್ಬನನ್ನು ನೀನು ಸುಖವಾಗಿರುವೆಯಾ ಎಂದು ಕೇಳಿದಾಗ ಆ ಸ್ವಾಮಿನ ಮನೆ, ಕಾಣಸಿಕ್ಕಿರುವ ಬಟ್ಟೆ, ತನ್ನ ಮಕ್ಕಳುಗಳಿರುವ ಸ್ಥಿತಿಯನ್ನು ಮಾತನಾಡದೆ ಮೂಕನಂತೆ ತೋರಿಸಿದನು.

ಬಡತನದ ಬವಣೆ ಹೇಳಲು ಬಾಯಿ ಬಾರದೆ ಅವನ್ನು ಅದುಮಿ ಹಿಡಿದಂತಿತ್ತು. ಒಂದಾಗಿಗೆ ದಿನದ ಕೂಲಿ ದುಡಿಯಲಿಕ್ಕೆ ಸಿಕ್ಕುವ ಹಣದಿಂದ ಆವನು ತನ್ನ ಸಂಸಾರವನ್ನು ಸಾಗಬೇಕು. ಸೂರ್ಯೋದಯ-ಚಂದ್ರೋದಯಗಳೆರಡರ ನಡುವೆ ಇವನ ಮನೆ ತಂಗುವನು. ಚಳಿಯಾದಾಗ ಹೊದ್ದುಕೊಳ್ಳಲು ಗಟ್ಟಿಯಾದ ಕಂಬಳಿ ಈ ಜೀವನ ದಲ್ಲಿ ಎಲ್ಲಿಗೂ ಇದ್ದಿಲ್ಲ. ಈತನಿಗೆ ಇಬ್ಬರು ಹೆಂಡಿರು... ನೆಯ ತನ್ನ ಕಷ್ಟದ ಸ್ಥಿತಿಯನ್ನು ತನ್ನ ಸ್ನೇಹಿತರಿಗೆ ಹೇಳಲು ಕರೆದನು. ಅವರ ಸರಿಕಲ ತೆಗೆದು ನೋಡುತ್ತಾ... ಇವರ ಕಣ್ಣಿನ ನೋಟದಲ್ಲಿ ಇವರೂ ಗಾತ್ರದಲ್ಲಿ ಹೇಳಿದಾಗ, 'ನಾವೆಲ್ಲರೂ ಸುಖಿಗಳಾಗಿದ್ದೇವೆ' ಎಂದು ಹೇಳುವ ಕೊಡಗಿನ ವರಪುತ್ರ ಶ್ರೀ. ಕಾರಿಯಪ್ಪನವರ ದೃಷ್ಟಿಯಲ್ಲಿ ಸಾವೆಲ್ಲರೂ ಎಂದರೆ ಕೈಬೆರಳಿನಲ್ಲಿ ಎಣಿಸುವಷ್ಟು ಎಸ್ಟೇಟು ಮಾಲಿಕರು, ಸರಕಾರದ ಅಧಿಕಾರಿಗಳು ಮತ್ತು ಶ್ರೀಮಂತರು ಎಂದೇನು?

ಬಡತನದ ಚಿತ್ರ.

ಕೊಡಗಿನ ಬಡತನ ಬಣ್ಣಿಸಲು ಒಲ್ಲೆನು. ಕಾಫೀ ತೋಟದ ಕೂಲಿಯ ಬೆಳೆಯ ಮತ್ತು ಕಟ್ಟೆ ಮುಡಿಸುತ್ತಿರುವ ಒಣ್ಣಕೀಳ ವರಗಳನ್ನು ನಾಲ್ಕು ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಕಟ್ಟಲು ಕೊಡಗಿನ ಆದಾಯ ಪ್ರಾಪ್ತಿಕಕ್ಕೆ ಸಾಗಿಲ್ಲ. ಕಲೆಗಾಗಿ ಮಾಡುವಷ್ಟು ಹಣ ಗಳಿಸಲಾರಿಗೆ ಈ ಕೆಲಸಗಳನ್ನು ಎಟ್ಟಿಕ ಲು ಅಲ್ಲಿನ ಸರ್ಕಾರ ವಿದ್ಯೆನವಿಲ್ಲವಲ್ಲದೆ ಎಂದಿದೆ. ಅಗತ್ಯ ತಾನೇ ಒಬ್ಬ ಕನ್ನಡದ

ಒಂದು ಆರ್ಟ್ಸ್ ಸಾಯನ್ಸ ಇಂಟರ ಕಾಲೇಜು ಆರಂಭವಾಗಿದೆ, ಒಟ್ಟು ಪ್ರಾಂತದಲ್ಲಿ ಇರುವ ಎಂಟು ಹಾಯಸ್ಕೂಲುಗಳಲ್ಲಿ ಒಂದಾದರೂ ಸರಕಾರದಿಂದ ಸ್ಥಾಪಿತವಾಗಿಲ್ಲ. ಆದಾಯವನ್ನು ಅತಿರಂಜಿಸಿ ಅಂದಾಜು ಹಾಕಿಟ್ಟು ವೆಚ್ಚವನ್ನು ಲೆಕ್ಕಕ್ಕೆ ಮಾತ್ರ ತೋರಿಸಿ ಉಳಿತಾಯದ ಮುಂಗಡ ಪತ್ರಿಕೆಯನ್ನು ತೋರಿಸುತ್ತಿರುವ ಈ ಕೊಡಗಿನ ಸರಕಾರದ ಆಡಳಿತವೇ ಒಂದು ವೈಶಿಷ್ಟ್ಯವಾಗಿರುವುದು.

ತನ್ನ ವಾರ್ಷಿಕ ಆದಾಯದಲ್ಲಿ ನೂರರಷ್ಟು ಹತ್ತರಷ್ಟನ್ನು ಸಹ ತನ್ನ ಪ್ರಾಂತದ ಶಿಕ್ಷಣಕ್ಕಾಗಿ ವೆಚ್ಚ ಮಾಡಲಾಗದಿರುವ ಕೊಡಗು, ತನ್ನ ಆದಾಯ ವೆಚ್ಚಗಳನ್ನು ಸರಿತೂಗಿಸಿಕೊಳ್ಳಲಾರದೆ ಒಕ್ಕಲುತನದ ಹುಟ್ಟುವಳಿಯ ಮೇಲೆ ಕರಹಾಕಿ ತನ್ನ ಬರವನ್ನು ನೀಗಿಸಿಕೊಳ್ಳಲೆತ್ನಿಸುತ್ತಿರುವ ಕೊಡಗು, ಪ್ರತಿಯೊಬ್ಬನಿಗೆ ವರ್ಷಕ್ಕೆ ನಾಲ್ಕಾಣೆಯಂತೆ ಸಹ ವೈದ್ಯಕೀಯ ವೆಚ್ಚವನ್ನು ಮಾಡಲಾರದಿರುವ ಕೊಡಗು 'ಸ್ವಯಂ ಸಮೃದ್ಧವಾಗಿದೆ, ಅದರ ಪಾಡಿಗೆ ಅದನ್ನು ಬಿಡಿ' ಎಂದು ವಾದಿಸಿದರೆ ಅದರಲ್ಲಿ ಏನೂ ಅರ್ಥವಿಲ್ಲದ ಅಭಿಮಾನ ಇರುವುದೇ ಹೊರತು, ವಿವೇಚನಾಪೂರ್ಣವಾದ ದೂರ ದೃಷ್ಟಿಯಿದೆ ಎಂದು ಹೇಳಬರುವಂತಿಲ್ಲ.

ಕೊಡಗು ನೆರೆಯ ದೊಡ್ಡ ಪ್ರಾಂತದೊಡನೆ ಸೇರಿದರೆ, ಅದರ ಬೆಳವಣಿಗೆ ಹೆಚ್ಚುವದೆಂಬುದನ್ನು ಗಟ್ಟಿಯಾಗಿಯೇ ನಾವು ಹೇಳುವೆವು. ಜನರೂ ಅತಿ ಸ್ವತಂತ್ರಮುಕ್ಕೆ ಆಗ ಉತ್ತಮ ಸ್ಥಿತಿಯಲ್ಲಿದ್ದ ಕೊಡಗಿನ ಹೋಲಬಿಡಿಸುವ ಸಂಘವು ಗವರ್ನರ ಜನರಲ್ಲಿಗೆ ಒಪ್ಪಿಸಿದ ಬಿನ್ನವತ್ತಳೆಯೇ ಸಾಕ್ಷಿಯಾಗಿದೆ. ಈ ಬಿನ್ನವತ್ತಳೆಯಲ್ಲಿ ಭಾಷಾವಾರ ತತ್ವದ ಮೇಲೆ ರಚಿತವಾಗಲಿರುವ ಮಹಾ ಕರ್ನಾಟಕ ಪ್ರಾಂತ ರಚನೆಗೆ ಒಪ್ಪಿರುವುದಲ್ಲದೆ, ಕೊಡಗು ಮಹಾ ಕರ್ನಾಟಕದ ಒಂದು ಜಿಲ್ಲೆಯೆಂಬುದನ್ನು ಅಗಲೇ ಉಲ್ಲೇಖಿಸಿದ್ದರು.

ಗವರ್ನರ ರಿಂದೀಚೆಗೆ ಕೊಡಗು ಬೆಳೆದಿಲ್ಲ. ಪ್ರಗತಿ ಹೊಂದಿಲ್ಲ. ಇದರ ಅರಣ್ಯ ಸಂಪತ್ತೆಲ್ಲಾ ಸರಕಪ್ಪ ವಿನಿಯೋಗವಾಗಿದ್ದರೂ ಅದರಿಂದ ಕೊಡಗಿನ ಆರ್ಥಿಕ ಪ್ರಗತಿಗೆ ಯಾವ ನೆರವೂ ಸಿಕ್ಕಿಲ್ಲ. ಇಲ್ಲಿಯ ಅರಣ್ಯದಲ್ಲಿ ಸಿಗುವ ಗಂಧದ ಮರ ಎಲ್ಲ ಹೆಚ್ಚು ಕಡಿಮೆ ಪೂರ್ಣವಾಗಿ ಕಡಿದು ಹೋಗಿದೆ. ಇನ್ನು ಸಿಕ್ಕುವ ಬಿದಿರು ತನ್ನ ಪ್ರೌಢ ಮಾರ ಇದ್ದಲ್ಲೂ ಅದ ಕ್ಕವ ಹಾಗಿ ನಾದಕ್ಕೆ ಏನು ತರಲಿಯೂ ಉಂ ರಿಂಬೆಗೆ ನಿಸಿಯೇಗವಾಗಿದೆ. ಹೀಗಾಗಿ ಕೊಡಗು ಬಡತನಕ್ಕೆ ಬಡವಾಗುತ್ತಿದೆಯೋ ಹೊರತು ಅಭಿವೃದ್ಧಿಯನ್ನು ಹೊಂದುತ್ತಿಲ್ಲ. ಇದಕ್ಕೆ ಕಾರಣ ಮುಖ್ಯವಾಗಿ ಇಲ್ಲಿ ಸರಕಪ್ಪ ಜನರಿಲ್ಲ. ಮಾರಾಟ ಸಿಗುವ ಬೆಳೆಯ ಕಳಿಂಗಳ ಮೇಲೆಯೇ ಇಲ್ಲಿಯ ಬಾಳು ಬದುಕಿನ ಅವಲಂಬನೆ. ಅದು ಪ್ರತ್ಯೇಕವಾಗಿರುವ ಇತ್ತ ಮಲೆಯಾಳದ ನೆರೆಗಿಂದ ಬರದು ಬಂದರೆ ಇಲ್ಲಿನ ಭತ್ತದ ಗದ್ದೆ, ಕಾಫಿಯ ತೋಟ, ಕಿತ್ತಳೆವನ, ಇವಕ್ಕೆ ಉಳಿವು, ಏಳ್ಗೆಯೇ ಇಲ್ಲ. ಹೀಗೆ

ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಕೊ.ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ. (1921ರಲ್ಲಿ ಸ್ಥಾಪಿತವಾಗಿದೆ.

ಅಧಿಕೃತ ಶೇರು ಭಂಡವಾಳ	ರೂ.	10,00,000.
ವಸೂಲಾದ ಶೇರು ಮೊಬಲಗು	ರೂ.	1,79,000.
ಕ್ಷೇಮನಿಧಿ	ರೂ.	1,55,000.
ಇತರ ನಿಧಿಗಳು	ರೂ.	28,000

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನೂ ಕೈಕೊಳ್ಳಲಾಗುವುದು

ಈ ಬ್ಯಾಂಕಿನಿಂದ ಜಿಲ್ಲಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದ ಲ್ಲದೆ ಚಿನ್ನ, ಬೆಳ್ಳಿ ನಗಗಳ ಈಡಿನ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ ಯೂ ಡ್ರಾಫ್ಟ್‌ಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರಿನಿಟಿ ಮತ್ತು ವಾರ್ಡನ್ ಇನ್ಶೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಗೌ. ಕಾರ್ಯದರ್ಶಿ,

ಕೆ. ಸಿ. ಅಪ್ಪಯ್ಯ, M. L. C. ಪ್ರೆಸಿಡೆಂಟ್ ಮತ್ತು ಖಜಾಂಚಿ.

ಕೊಡಗು ಪ್ರಾಂತೀಕ ಸಹಕಾರಿ, ಮಾರ್ಕೆಟಿಂಗ್, ಫೆಡರೇಷನ್ ಲಿಮಿಟೆಡ್., ವೀರರಾಜಪೇಟೆ.

ನಮ್ಮಲ್ಲಿ ಕೋವಿಗಳು, ತೋಟಗಳು ಮತ್ತು ಎಲ್ಲಾ ತರಹದ ವ್ಯವಸಾಯದ ಹತ್ಯಾರುಗಳು ದೊರೆಯುತ್ತವೆ.

1. 32 ಪಿಸ್ತೂಲುಗಳು (Pistols) ಕ್ರಯ ರೂ. 162 ರಿಂದ 245ರ ವರೆಗೆ.
2. 12ನೇ ನಂಬರಿನ ಒಂಟಿ ಹೊಳವಿನ ಕೋವಿ ಕ್ರಯ ರೂ 320-0-0
3. 12ನೇ ನಂಬರಿನ ಜೋಡು ಹೊಳವಿನ ಕೋವಿ (Webley & Scots)
4. 12ನೇ ನಂಬರಿನ ಜೋಡು ಹೊಳವಿನ ಕೋವಿ (Spanish make)
5. 6 ಗಜದ (Hand loom) ಕೈಮಗ್ಗದ ಸೀರೆಗಳು ಕ್ರಯ ರೂ. 4-10-0
6. .32 ಪಿಸ್ತೂಲು ಮತ್ತು ರಿವಾಲ್ವರುಗಳ ತೋಟೆಗಳೂ ಸಹ ದೊರೆಯುತ್ತವೆ.
7. ಕಾಫಿ ಮತ್ತು ಕಿತ್ತಳೆ ಗಿಡಗಳಿಗೆ ಸ್ಪ್ರೇ ಮಾಡುವ ಪಂಪುಗಳು)Spraying Pumps)
8. ¼" ಮತ್ತು ⅜" ಕಬ್ಬಿಣದ ಸಲಾಕೆಗಳು.

ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

(ಅವಶ್ಯವಿರುವ ಕೋವಿಗಳಿಗೂ, ತೋಟೆಗಳಿಗೂ ಜಿಲ್ಲಾ ಮೇಜಿಸ್ಟ್ರೇಟರಿಂದ ವಿಶೇಷ ಪರ್ಮಿಟು "Special permit" ಪಡೆದಿರಬೇಕು ಮತ್ತು ದೊರೆಯುವುದು)

ಎಂ. ಎಸ್. ಸೋಮಯ್ಯ, ಗೌರವ ಕಾರ್ಯದರ್ಶಿ.

62-20

ರಘುಲಾಲ್ & ಕಂಪೆನಿ,

ಔಷಧ ವ್ಯಾಪಾರಿಗಳು, ಮೈಸೂರು.

ಕರ್ನಾಟಕದಲ್ಲೆಲ್ಲಾ ಚೆನ್ನಾಗಿ ಸಂಗ್ರಹಿತವಾದ ಮತ್ತು ವಿಶ್ವಾಸಪೂರಿತವಾದ ಔಷಧಿ ಅಂಗಡಿ

Also at:

೭೦ ಅವೆನ್ಯೂ ರೋಡ್ ಶ್ರೀನಿವಾಸಸಾಹುಕಾರ್ ಬೀದಿ,

26-23 ಬೆಂಗಳೂರು ೨.

RAGHULAL & CO., CHEMISTS, MYSORE.

Edited, Printed and Published by P. I. Peherira at 'Kodagu' Press, Mercara, for 'Kodagu' Ltd.

ಕಾಡಿನ ನೀರು ಉಣ್ಣುವ ಅನ್ನ ಇವುಗಳಿಗೆ ಪರರ ನೆರವು ಬೇಕಾಗಿರುವ ಕೊಡಗು ಪಕ್ಕದ ಪ್ರಾಂತದಲ್ಲಿ ವಿಲೀನವಾಗುವುದನ್ನು ತಡೆಯಲೆತ್ನಿಸುವರು ಕೊಡಗಿನ ಅಂಧಾಭಿಮಾನಿಗಳಲ್ಲ, ಕೊಡಗಿನ ಹಿತಚಿಂತಕರಲ್ಲ, ಕೊಡಗಿನ ಹಿತಶತ್ರುಗಳೆಂಬ ವಿಚಾರವಾಹಿನಿಯು ನನ್ನ ಕೊಡಗಿನ ಮೂರು ದಿನಗಳ ಸಂಚಾರದ ಫಲವಾಹಿನಿಯಾಗಿ ಹೇಯ ತೊಡಗಿದೆ. ನನ್ನ ಅಂದಾಜಿನಲ್ಲಿ ಅಂಕೆ ಸಂಖ್ಯೆಗಳಲ್ಲಿ ಸ್ವಲ್ಪ ತಪ್ಪಿದ್ದರೂ ಇರಬಹುದು. ಆದರೆ ನನ್ನ ಮನಸ್ಸಿನ ಮೇಲೆ ಚಿಬಿತವಾಗಿರುವ ಈ ಕೊಡಗಿನ ಬಡತನವು ಜನರಲ್ ಕಾರ್ಯಪ್ಪನವರ ಸ್ವಾಭಿಮಾನದ ಮಾತುಗಳಿಂದೇನು ಅಳಿಸುವುದಿಲ್ಲ

ಕೊಡಗಿನಲ್ಲಿ ನೂರಿಪ್ಪತ್ತು ಇಂಚು ಮಳೆ ಬಿದ್ದರೂ ಈ ಮಳೆಯ ನೀರೆಲ್ಲಾ ಸಮುದ್ರಕ್ಕೆ ಕೊಚ್ಚಿಕೊಂಡು ಹೋಗುತ್ತಿದೆ. ಇಲ್ಲಿನ ಕೂಲಿಯವನು ಅಕ್ಕಿಯನ್ನು ಬೇಯಿಸಿ, ಅದಕ್ಕೆ ಮೆಣಸಿನ ಪುಡಿಯನ್ನು ಹಾಕಿ ಉಪ್ಪು ಹಾಕಿ ಕಲಸಿ ತಿನ್ನುವ ಸ್ಥಿತಿಯಲ್ಲಿರುವನು. ಪ್ರಕೃತಿಯು ಒಲಿದು ಒಲಿಯುವಂತಿರುವವಳು ತಾಂತ್ರಿಕ, ಕೈಗಾರಿಕೆ, ಉದ್ದಿಮೆ. ಇವುಗಳಿಗೆ ಆಧಾರಭೂತವಾದ ವಿದ್ಯುಚ್ಛಕ್ತಿಯೇ ನ ಕಟ್ಟು ಇಲ್ಲಿಲ್ಲ. ಮೈಸೂರಿನಿಂದ ಇಲ್ಲಿಗೆ ವಿದ್ಯುಚ್ಛಕ್ತಿ ದೊರೆಯುವ ಏರ್ಪಾಡು ಇದೆಯಂತೆ. ಕೊಡಗಿನ ರಾಜಧಾನಿಯಾದ ಮಡಿಕೇರಿಯಲ್ಲಿ ಕನ್ನಡದ ಒಂದು ದಿನ ಪತ್ರಿಕೆ ಇಲ್ಲ. ಹೆಚ್ಚು ಕಲಿತವರು ಜನರು ಹೊರಗೆ ಹೋಗಬೇಕು. ಕಲಿತ ಮೇಲೂ ಊರಿನಿಂದ ಹೊರಗಡೆಯೇ ಜೀವನ ಸ್ಥಾನಮಾನಗಳನ್ನು ಕಂಡುಕೊಳ್ಳಬೇಕು. ಒಳಗಿನಿಂದ ನೋಡಲು ಆರೋಗ್ಯಧಾಮ ವಿಶ್ರಾಂತಿ ಸ್ಥಳವಾಗಿದ್ದರೆ, ಕೆಲಸಗಾರರ ಬಡತನ ಬೇಡಿಕೆಗಳಿದ್ದರೆ, ಹಲವಾಗ ದುಃಖದ ಗೂಡಾಗಿದೆ. ಹೀಗಿರುವಾಗ ಇದರ ಏರ್ಪಡಿಕೆ ಮಾಡುವವರಿಗೆ ಸೇರಲು ಅನುವಾದ ಪ್ರಾಂತದ ವಿಲೀನವನ್ನು ವಿರೋಧಿಸಲು ಯಾರಿಗೂ ಯಾವ ದೃಷ್ಟಿಯಲ್ಲೂ ತರ್ಕಶುದ್ಧವಾದ ವಿವಾದವಿಲ್ಲವೆಂದು ನನಗನ್ನಿಸಿದೆ. ಸೋಮವಾರಪೇಟೆಯಲ್ಲಿ ಕೂಡಿದ್ದ ಸಾರ್ವಜನಿಕ ಸಭೆಯಲ್ಲಿ ಶ್ರೀ. ಶಿವಲಿಂಗಪ್ಪ, ಶ್ರೀ ನಂಜಪ್ಪ, ಹಾಗೂ ಶ್ರೀ ಗುಂಡಪ್ಪ ಇವರು ಇದೇ ವಿಷಯವನ್ನು ಕುರಿತು ಬಿಚ್ಚು ಮಾತುಗಳಲ್ಲಿ, ಕೊಡಗು ಪಕ್ಕದ ಪ್ರಾಂತಕ್ಕೆ ಸೇರದಿದ್ದರೆ ಅದಕ್ಕೆ ಮೋಕ್ಷವಿಲ್ಲವೆಂಬುದನ್ನು ಆಲೋಚಿಸಿದರು.

ನನ್ನ ಮೂರು ದಿನಗಳ ಸಂಚಾರದಲ್ಲಿ ಐದಾರು ತೋಟಗಳನ್ನು ನೋಡಿದೆನು. ಸುತ್ತಾಡಿದ ರೀತಿಯಲ್ಲಿ ಸಿಹಿ ಕಹಿ ಕಂಡೆನು. ಇಲ್ಲಿನ ತೋಟದ ಮಾಲೀಕರು ಇತ್ತೀಚೆಗೆ ತುಂಬ ಶ್ರೀಮಂತರಾಗಿರುವರೆಂದು ತಿಳಿದು ಬಂದಿದೆ. 'ಇಂದಿನ ಕಾಫಿ ಬೆಲೆ' ಇವೆಲ್ಲಾಗೂ ಒಂದು ಒಲಿದ ವರವಾಗಿದೆ. ಅವರಿಗೆ ಬಂದಿರುವ ಆದಾಯ ಅಭೂತಪೂರ್ವವಾಗಿದೆ. ಅವರು ಉದಾರಿಯಾಗಿದ್ದು ಅವರಿಗೇ ಸುಖವೆಂದು ಕಾಣುತ್ತದೆ. ಒಳಗಿನ ಅಂತಃಪ್ರಕೃತಿ ಉಭಯತಃ ಇನ್ನೂ ಸುಖಸಂಗರ

ದಲ್ಲಿ ಓಲಾಡಬಲ್ಲರು. ಕಾಫಿ, ಕಿತ್ತಳೆ, ಇವುಗಳ ಜೊತೆಗೆ ಅಡಿಕೆ ಮೆಣಸು ಏಲಕ್ಕಿ ಉತ್ಪಾದನೆಯಲ್ಲಿ ಹೆಚ್ಚು ಲಾಭದಾಯಕವಾಗಿರುವ ಏಲಕ್ಕಿಯನ್ನು ಬೆಳೆಯಲಾರಂಭಿಸಿದವರು. ಇಗೋ ಒಂದು ಮಣಕ್ಕೆ ೩೫೦ ರೂ ಗಳವರೆಗೆ ಬೆಲೆಯನ್ನು ತಂದುಕೊಡುತ್ತಿದೆ. ಒಟ್ಟಿನಲ್ಲಿ ಹೇಳುವುದಾದರೆ ಕೊಡಗು ಬೆಳೆಯಬೇಕಾದರೆ ಅದರ ವನಸಂಪತ್ತಿ, ರಾಷ್ಟ್ರದ ಸಂಪತ್ತಿನ ಬೆಳವಣಿಗೆಗೆ ನೆರವಾಗಬೇಕಾದರೆ, ಖಂಡಿತವಾಗಿಯೂ ಈ ಸಣ್ಣ ಕೊಡಗು ದೊಡ್ಡ ಪ್ರಾಂತದಲ್ಲಿ ವಿಲೀನವಾಗದೆ ಗತಿಯಿಲ್ಲ. ಇಲ್ಲಿನ ಪರ್ಜನ್ಯ ಮುಖಂಡರೆಲ್ಲಾ ಈ ವಾದದ ಕಡೆಗೇ ವಾಲಿರುವುದರಿಂದ ಕೊಡಗು ಏಕೀಕೃತ ಕರ್ನಾಟಕದ ಒಂದು ಜಿಲ್ಲೆಯಾಗುವುದರಲ್ಲಿ ಯಾರೂ ಏನೂ ಸಂದೇಹ ಪಡಬೇಕಾಗಿಲ್ಲ

ನಾನು ಮಡಿಕೇರಿಯಿಂದ ಮೈಸೂರಿಗೆ ಬಂದ ಕೂಡಲೇ ಅಲ್ಲಿನ ವಿದ್ಯಾರ್ಥಿಯು ನನ್ನನ್ನು ಕೊಡಗು ಹೇಗಿದ್ದಿತು ಎಂದು ಕೇಳಿದರು. ನಾನಿನ್ನೂ ಆ ಕಲ್ಪನೆ, ಆ ದೃಶ್ಯಗಳ ಧ್ಯಾನಾನುಭವದಲ್ಲಿಯೇ ಇದ್ದೆ. ಆಗ ನಾನು ಆ ವಿದ್ಯಾರ್ಥಿಗೆ ಹೇಳಿದ ಮಾತುಗಳು ಕೆಳಗಿನಂತಿವೆ

"ಕೊಡಗು ಬೆಡಗಿನ ಹೆಣ್ಣು. ಇಲ್ಲಿ ಪ್ರಕೃತಿದೇವಿ ಸೌಂದರ್ಯಾತಿಶಯವಾಗಿ ರುವಳು, ಶೃಂಗಾರ ರಸಾತಿಶಯ ಲಜ್ಜೆ ಬೆರೆತಂತಹ ಪ್ರತ್ಯೇಕ ಶಕ್ತಿ ದೇವತೆಯಂತೆ ದಿನಗಳ ಬಿಸಿ ರಂಗೇರಿದ ಕನ್ಯೆಯ ಕೆನ್ನೆಯಂತೆ ಈ ಕೊಡಗಿನ ಹಂಪು ತೋಟಗಳಲ್ಲಿರುವ ಕನಸಿನ ತಾನೇ ಗಿಡವಾಗಿ ಮರವಾಗಿ ಹೂ ಬಿಟ್ಟು ಕಾಯಾಗಿ ಹಣ್ಣಾಗಿ ಫಲವಾಗಿ ಫಲಭರಿತ ವನಶ್ರೀ ಕೊಡಗಿನಲ್ಲಿ ಅವತರಿಸಿದವಳು. ತನ್ನ ಒಡಲಿನ ತೀಟಬಂದ ಗುಲಾಬಿಯ ರಂಗನ್ನು ಎಲ್ಲರ ಮುಖಕ್ಕೆ ಎರಚಿರುವಳು. ಸಾಮಿನನ್ನು ಮುದ್ದು ಮಾಡಲು ಇಲ್ಲಿ ಎಲ್ಲರ ಸರಾಗನ್ನು ಈ ವನಶ್ರೀ ಕದ್ದಿರುವಳು. ಗಿಡ ಮರಗಳು ಗಂಡು ಮರಗಳು ಇರುವವು. ಕೊರಕಲು ಬಗ್ಗದ ತಗ್ಗಿನ ಸುಗ್ಗಿ ಹೋದ ಕೊಟ್ಟ ಹೂಗಳಗಳು ಇಲ್ಲಿ ಇಲ್ಲವೇ ಇಲ್ಲ.

ಅಂದಿನ ಈ ಕೊಡಗು ಈ ವನಸಿರಿಯ ಯೌವನ ಇವುಗಳನ್ನು ಅಲ್ಲಿನ ಜನರು ಅರಗಿಸಿ ಕೊಳ್ಳಲಾರದಷ್ಟು ಅತಿ ಇದೆ. ಈ ಅತಿಯಾದ ಯೌವನಕ್ಕೆ ಸರಿಯಾದ ಗತಿ ಇಂದು ಬೇಕಾಗಿದೆ."

ಸಾರ್ವಜನಿಕರಲ್ಲಿ ವಿನಂತಿ.

ನನ್ನ ಬಾಪ್ತು, ಕಪ್ಪು ಮತ್ತು ಕೆಂಪು ಮಿಶ್ರ ಬಣ್ಣದ, ಹೊಟ್ಟೆಯ ಕೆಳಗಡೆ ಬಿಳುಪು ಚುಕ್ಕೆಯ ಹಸುವಿನ, ಆ ದನವು 3½ ಅಡಿ ಎತ್ತರದ ಅಂದಾಜು ಎರಡು ಇಂಚು ಉದ್ದ, ಸಾಧಾರಣ ತನ್ನೆ ಗೋವಿನ ಎತ್ತು, ಒಂದು ಕಳೆದ ಎರಡು ವಾರಗಳಿಂದ ಕಾಣೆಯಾಗಿದೆ. ಮಹನೀಯರುಗಳು ಯಾರಾದರೂ ಪತ್ತೆ ಮಾಡಿ ತಿಳಿಸಿದವರಿಗೆ ಹತ್ತು ರೂಪಾಯಿ ಇನಾಮು ಕೊಡಲಾಗುತ್ತದೆ. ಪತ್ತೆ ಹಚ್ಚಿ ಈ ಕೆಳಗಿನ ಅಡ್ರೆಸಿಗೆ ತಿಳಿಸ ಬೇಕಾಗಿ ಕೇಳಿಕೊಳ್ಳುತ್ತೇನೆ

ಉಕ್ಕುಡ ಕೆ. ಮುದ್ದಪ್ಪ. ಮರ್ಚೆಂಟ್, ವೀರರಾಜಪೇಟೆ

2-2

Reg. No. M. 1800,
'KODAGU' MERCARA, (Coorg).

ಕೊಡಗು

ಸಂಪಾದಕರು—ಪಿ. ಐ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. 5-0-0.

ಸಂಪುಟ ೨೯ | ತಾರೀಕು ೧೬-೩-೧೯೫೦ನೇ ಶುಕ್ರವಾರ | ಸಂಚಿಕೆ ೩೫

"ಕೊಡಗನ್ನು ಕೊಡಗಿನ ಪಾಲಿಗೆ ಬಿಡಿರಿ."

ಲೇಖಕ:— "ಕೊಡಗಿನ ಕುವರ"

ಕೈ ಗೊಂಬೆ!

ಹುಬ್ಬಳ್ಳಿಯ 'ನವಯುಗ' ದೈನಿಕ ಪತ್ರಿಕೆಯಲ್ಲಿ "ಕೊಡಗಿನಲ್ಲಿ ಮೂರು ದಿನಗಳು" ಮತ್ತು "ಕೊಡಗಿನ ಎರಡು ಮುಖಗಳು." ಎಂಬ ಬರೆದ ಎರಡು ಲೇಖನಗಳನ್ನು ಓದುವ ಅವು ನನಗೆ ದೊರೆಯಿತು. ಅವರ ಲೇಖನಕ್ಕೆ ಉತ್ತರ ಬರೆಯುವ ಮೊದಲು ಲೇಖಕರ ವಿಚಾರ ಒಂದು ಮಾತು ಹೇಳಬೇಕಿದೆ. ಪತ್ರಿಕೆ ಉದ್ಯೋಗದಲ್ಲಿರುವವರು ಎಂದೂ ಬೇಜವಾಬ್ದಾರಿಯಿಂದ ವರ್ತಿಸಬಾರದು. ಸಾರ್ವಜನಿಕರ ಮುಂದೆ ಇಡುವ ಅಭಿಪ್ರಾಯಗಳನ್ನು ಪರಿಶೀಲಿಸಿ ಸತ್ಯ ಚಿತ್ರವನ್ನೇ ಜನತೆಯ ಮುಂದಿಡಬೇಕಾದುದು ಅವರ ಕರ್ತವ್ಯ. ಇಲ್ಲದಿದ್ದರೆ ತಮ್ಮ ಅಯೋಗ್ಯತೆಯಿಂದಾಗಿ ಪವಿತ್ರವಾದ ಪತ್ರಿಕೋದ್ಯೋಗವನ್ನೂ ಕೆಡಿಸಿಗೊಳಿಸುವಂತಾಗುವದು. ಮೇಲಿನ ಎರಡು ಲೇಖನಗಳನ್ನು ಬರೆದವರು ಕೆಲವೊಂದು ಪಕ್ಷ ರಾಜಕೀಯವಾದಿಗಳ ಕೈಗೊಂಬೆಯಾಗಿ ತಮ್ಮ ವ್ಯಕ್ತಿತ್ವವನ್ನು ಹಾಳು ಮಾಡಿಕೊಂಡಿದ್ದಾರೆ. ಲೇಖಕರು ಕೊಡಗನ್ನು ಪ್ರಥಮ ಕಂಡವರಾಗಿರಬೇಕು. ಅದ್ದರಿಂದ ಅವರ ಪುರಸಾಂದರ್ಯದಲ್ಲಿ ವೈಪರೀತ್ಯ ಪ್ರಜ್ಞಾಶೂನ್ಯರಂತೆ ಕನವರಿಸಿದ್ದಾರೆ. ಅವರ ಈ ಮೈಮರೆವಿನಲ್ಲಿ ಅವರನ್ನು ತಮ್ಮ ಪಕ್ಷಸಾಧನೆಗೆ ಏಕೀಕರಣವಾದಿಗಳು ಉಪಯೋಗಿಸಿಕೊಂಡದ್ದು ಬಹುಶಃ ಅವರಿಗೆ ತಿಳಿದಿರಲಾರದು. ಇಲ್ಲವೇ ಲೇಖಕರೇ ಏಕೀಕರಣವಾದದ ರೋಗಪೀಡಿತರಿರಬೇಕು. ಹೇಗೂ ಅವರು ಈ ಕೆಳಗಿನ ವಿಚಾರಗಳನ್ನು ಗಮನಿಸುವರೋ ಕೇಳುತ್ತ.

ಭೌಗೋಳಿಕ ಸ್ಥಾನ

ಕೊಡಗು ತನ್ನ ಪ್ರತ್ಯೇಕ ಅಸ್ತಿತ್ವವನ್ನು ಶತಮಾನಗಳಿಂದ ಉಳಿಸಿಕೊಂಡು ಬಂದಿದೆ. ಆ ಪ್ರತ್ಯೇಕ ಜೀವನದಲ್ಲಿ ಅಗು ಪ್ರಗತಿ ಪಥದಲ್ಲಿ ನಡೆಯುತ್ತಾ ಸರ್ವಾಂಗೀಣ ಉನ್ನತಿಯನ್ನು ಸಾಧಿಸಿದೆ. ಲೇಖಕರು ಒಪ್ಪುವಂತೆ ಕೊಡಗು ಹಿಂದೆ ಇಂದಿಗಿಂಥಲೂ ವಿಸ್ತಾರವಾಗಿತ್ತು. ನೆರೆಯ ಪ್ರಾಂತ್ಯಗಳು ಮತ್ತು ಅವರ ಸುಳ್ಯಗಳು ಕೊಡಗಿಗೆ ಸೇರಿದ್ದವು. ಕೊಡಗು ಎಂದೂ ಯಾವದೇ ರಾಜ್ಯದ ಭಾಗವಾಗಿರಲಿಲ್ಲ. ಭೌಗೋಳಿಕ ದೃಷ್ಟಿಯಿಂದಲೂ ಈ ಸುಂದರನಾಡು ಯಾವದೇ ಭಾಗದ ಅಂಗದಂತಿರದೆ ತನ್ನದೇ ರೂಪರೇಖೆಗಳಿಂದ ಕೂಡಿದೆ. ಕೊಡಗು ಎಂದಿಗಾದರೂ ಸ್ವತಂತ್ರವಾಗಿ ನಿಲ್ಲಲಾರದು. ಅದು ಪ್ರತ್ಯೇಕವಿದ್ದೀತೆಂಬ ಭಾವನೆಯು 'ಕಾಲಿಲ್ಲದ ಹೆಳವ ಓಡಲು ಹಣಕಬ್ಬಿದಂತೆ' ಎಂದು ಲೇಖಕರು ಬರೆದಿದ್ದಾರೆ. ಕಾಲಿಲ್ಲದ ಹೆಳವನಾಗಿಂಬಹುದಾದರೂ ಈ ಹಲವು ಶತಮಾನಗಳಿಂದ ಅದು ಪ್ರತ್ಯೇಕವಿದ್ದು ಓಡಿದೆ. ಆ ಓಟದಲ್ಲಿ ಕನ್ನಡ ನಾಡಿನ ಏಕೆ? ಇಡೀ ಹಿಂದೂದೇಶದ ಬಹು ಪ್ರಾಂತಗಳನ್ನು ಹಿಂದೆ ಹಾಕಿದೆ. ವಿದ್ಯೆಯಲ್ಲಿ, ಆರ್ಥಿಕ ಸ್ಥಿತಿಯಲ್ಲಿ, ಆಡಳಿತದಲ್ಲಿ, ಜನಜೀವನದ ಪ್ರತಿಯೊಂದು ಅಂಗದಲ್ಲಿ ಅದು ಆದರ್ಶವಾಗಿ ಬಾಳಿದೆ. ರಾಜಾಸೀಟಿನಲ್ಲಿ ನಿಂತು ನೋಡಿದ ಲೇಖಕರು ಕೊಡಗಿಗೂ ಆಕಾಶಕ್ಕೂ ಯಾವ ರೀತಿ ಅಂತರವನ್ನು ಕಾಣಲಿಲ್ಲವೋ ಅದೇ ರೀತಿ ಕೊಡಗಿನ ಜನ ಜೀವನವು ಸುಖ ಸೌಖ್ಯಗಳಿಂದ ಭಿನ್ನವಾಗಿಲ್ಲ. ಕೊಡಗಿನ ವನಸಿರಿಯಿಂದ ವೈಪರೀತ್ಯ ಪ್ರಭಾವಿತರಾಗಿ "ನಾನೇಕೆ ಈ ಸ್ವರ್ಗದಲ್ಲಿ ಹುಟ್ಟಲಿಲ್ಲ" ವೆಂದು ವ್ಯಸನಪಟ್ಟ ಇವರು ಇಲ್ಲಿಯ ಜನ ಜೀವನವನ್ನು ಆಸ್ಥೆಯಿಂದ ಪರಿಶೀಲಿಸಿದ್ದರೆ 'ರಾಮರಾಜ್ಯ' ದ ಕನಸು ಇಲ್ಲಿ ನನಸಾಗಿದೆ ಎಂದು ಹುಡಿಯುತ್ತಿದ್ದರು!

ಕೊಡಗಿನ ಜನತೆ.

ನಾಲ್ಕು ಪ್ಲಾಂಟರುಗಳು, ಜನರಲ್ ಕಾರ್ಯಪ್ಪ, ತೋಟದ ಕೆಲವು ಕೆಲಸಗಾರರನ್ನು ಕಂಡು ಅವರ ಅನುಭವದಿಂದ ಕೊಡಗಿನ ಜನತೆಯನ್ನು ಇವರು ಅಳೆದಿದ್ದಾರೆ. ಈ ತಲನೆಯಲ್ಲಿ ಸುಖದ ಸುಗ್ಗಿಯಲ್ಲಿ ನಲಿಯುವ ಪ್ಲಾಂಟರುಗಳು, ಬಡತನದ ಬವಣೆಯಲ್ಲಿ ಬಳಲುವ ಕೆಲಸಗಾರರು ಹೀಗೆ ಕೊಡಗಿನಲ್ಲಿ ಎರಡು ಮುಖಗಳನ್ನು ಕಂಡಿದ್ದಾರೆ. ಅವರು ವಿವರಿಸಿದ ಈ ಎರಡು ಮುಖಗಳೇ ಕೊಡಗಿನ ಜನತೆಯಲ್ಲ. ಲೇಖಕರು ಹಳ್ಳಿಗಳನ್ನು ಸುತ್ತಬೇಕಿತ್ತು. ಹೊಲ ಗದ್ದೆಗಳಲ್ಲಿ ದುಡಿಯುವ ರೈತರನ್ನು ಕಾಣಬೇಕಿತ್ತು. ಅವರ ಜೀವನವನ್ನು ಅಭ್ಯಾಸ ಮಾಡಬೇಕಿತ್ತು. ಅವರ ಸಂಸ್ಕೃತಿ, ನೀತಿ, ಸರಳ ಸೌಂದರ್ಯವನ್ನು ನೋಡಬೇಕಿತ್ತು. ಇಂದಿನ ನಾಗರಿಕ ಯುಗದ ಬಾಹ್ಯ ಸಂಪರ್ಕದಿಂದ ಹಾಳಾಗಿದ್ದರೂ ಇನ್ನೂ ಉಳಿದಿರುವ, ಆತಿಥ್ಯ ಸತ್ಕಾರ, ಸಹನೆ, ಸೌಹಾರ್ದತೆಗಳನ್ನು ತಿಳಿಯ ಬೇಕಿತ್ತು. ಆದರೆ ಲೇಖಕರು ಕಂಡದ್ದು ಮೈಲು ಮೈಲುಗಳ ಹಸಿರು ಬನಸಿರಿಯನ್ನಲ್ಲದೆ ಜನರು ಜೀವಿಸುವ ನಾಡನ್ನಲ್ಲ. ಅವರು ಕಂಡದ್ದು ವರ್ಣರಂಜಿತ ತಟ್ಟೆಯ ಮೇಲಿನ ಚಿತ್ರವನ್ನಲ್ಲದೆ ಕೊಡಗಿನ ಜೀವನಾಡಿಯಾದ ರೈತರನ್ನಲ್ಲ.

ಕೊಡಗಿನ ಭಾಷೆ.

ಕೊಡಗಿನ ಭಾಷೆ ಕನ್ನಡವಾದ ಕಾರಣ ಕೊಡಗು ಕರ್ನಾಟಕದ ಒಂದು ಭಾಗವೆಂಬ ಇವರ ಅಪ್ರಮಾಣ ಪ್ರವರ್ತಿಯು ಹಾಸ್ಯಾಸ್ಪದವಾದುದು. ಕೊಡಗಿನಲ್ಲಿ ಕನ್ನಡ ಅರಸರು ಒಮ್ಮೆ ಆಳಿದ್ದಾರೆ ನಿಜ. ಬ್ರಿಟಿಷರ ಆಳಿಕೆಯ ಪ್ರಭಾವದಿಂದ ಇಂದೂ ಭಾರತದಲ್ಲಿ ಇಂಗ್ಲಿಷು ಉಳಿದು ರಾಜಭಾಷೆ ಎನಿಸಿರುವಂತೆ ಕೊಡಗಿನಲ್ಲಿ ಕನ್ನಡದ ಸ್ಥಾನವಾಗಿದೆ. ಕೊಡಗಿನ ನಿವಾಸಿಗಳಾದ ಕೊಡವರು ಆಡುವ ಕೊಡಗು ಭಾಷೆ, ಇತರರು ಆಡುವ ತುಳು ಮುಂತಾದ ಭಾಷೆಗಳಲ್ಲಿ ಕನ್ನಡಕ್ಕಿಂಥಾ ಮಲಯಾಳ ಮಿಶ್ರಣವೇ ಹೆಚ್ಚು. "ಕೊಡಗಿನಲ್ಲಿ ಕನ್ನಡ ಬೇರು ಬಿಟ್ಟಿದೆ" ಎನ್ನುವ ಇವರು ತಮ್ಮ ಈ ಹೇಳಿಕೆಯಿಂದ ಕನ್ನಡ ಇಲ್ಲಿಯ ಮೂಲ ಭಾಷೆಯಲ್ಲವೆಂಬುದನ್ನು ಒಪ್ಪಿದಂತಾಗದೇ?

ಜನಾಭಿಪ್ರಾಯ.

ಅತಿ ಭಾವುಕ ವ್ಯಕ್ತಿಯು ಬಿರುಗಣ್ಣ ನೋಟವನ್ನು ಪ್ರೇಮ ದೃಷ್ಟಿಯೆಂದು ಭಾವಿಸುವಂತೆ, ನಿಂದೆಯನ್ನು ಪ್ರಶಂಸೆಯೆಂದು ಬಗೆವಂತೆ ಈ ಲೇಖಕರ ಸ್ಥಿತಿಯಾಗಿದೆ. ಕಾಲೇಜಿನ ವಿದ್ಯಾರ್ಥಿಗಳು ಇವರ ಭಾಷಣ ಮುಗಿಸಲೆಂದು ನಿಶೇಧದ ಕರತಾಡನ ಮಾಡಿದರೆ ಇವರು ಪ್ರಶಂಸೆಯೆಂದು ಕೊಂಡರು! ಸಂಯೋಜನಾ ಪಕ್ಷದ ಕೆಲವರು ಇವರೊಡನೆ ಸುತ್ತಿ ಇಲ್ಲಸಲ್ಲದುದನ್ನು ಹೇಳಿದುದೇ ದೇಶದ ಅಭಿಪ್ರಾಯವೆಂದು ಕೊಂಡರು. ಲೇಖಕರು ಪತ್ರಿಕೋದ್ಯೋಗದಲ್ಲಿ ಎಷ್ಟು ಪಳಗಿದವರಲ್ಲವೋ ಅಷ್ಟೇ ರಾಜಕೀಯದಲ್ಲೂ ಕೂಡ! ಇಲ್ಲದಿದ್ದರೆ ನಾಲ್ಕು ಪ್ಲಾಂಟರುಗಳನ್ನು, ಕೆಲವು ಮಜೂರರನ್ನು, ಮತ್ತೆ ಕೆಲವು ಕರ್ನಾಟಕದ ಮುಂದಾಳುಗಳ ಬಾಲ ಹಿಡಿದವರನ್ನು ಕಂಡು 'ಇಡೀ ದೇಶವು ಏಕೀಕರಣಕ್ಕಾಗಿ ತವಕಿಸುತ್ತಿದೆ' ಎಂದು ಹೇಳುತ್ತಿರಲಿಲ್ಲ. ಹುಂಟೆಕೊಪ್ಪದ ಕಿತ್ತಳೆಯನ್ನು ನೋಡಿ ಬಾಯಿ ನೀರು ಬಿಟ್ಟು ಆದರ್ಶ ಆತಿಥಿಸತ್ಕಾರವನ್ನು ಪರಿಪೂರ್ಣವಾಗಿ ಉಪಯೋಗಿಸಿಕೊಂಡರೇ ವಿನಾ ಆ ಜನರ ಆತಿಥ್ಯದ ಬಗ್ಗೆ ಹೇಳಲು ಎರಡು ಮಾತು ಇವರಿಗಿರಲಿಲ್ಲ. ಅವರ ನೀತಿ, ಸಂಸ್ಕೃತಿಯನ್ನು ಮೆಚ್ಚುವ ಗೌರವವಿರಲಿಲ್ಲ. ಭೋಜನಕ್ಕೆ ಬಂದವರಿಗೆ ಬಟ್ಟಲಲ್ಲಿರುವ ದೇನೆಂಬುದು ಮುಖ್ಯವೇ ವಿನಾ ಬೇರೆಯಲ್ಲ. ಆದರಂತೆ ಕೊಡಗಿನ ಸಂಯೋಜನೆ ಕರ್ನಾಟಕದೊಡನೆ ಆಗಲೇ ಬೇಕೆಂಬುವವರಿಗೆ ಅದರ ಸಾಧನೆ ಮುಖ್ಯವಲ್ಲದೆ ಜನತೆಯ ರೀತಿ, ನೀತಿ, ಸಂಸ್ಕೃತಿ, ಸಂಪ್ರದಾಯಗಳ ಗೊಡವೆಯೇಕೆ?

"ಪುಣ್ಯವಂತರು"

"ಸ್ವರ್ಗದಲ್ಲಿ ಎಲ್ಲರೂ ಸುಖಿಗಳೆಂದು ಆಕಾಶವಾಣಿ ಹೇಳಿದರೂ ನಂಬಲಾರೆನು. ನೀವು ಕೊಡಗಿನಲ್ಲಿ ಎಲ್ಲರೂ ಸುಖಿಗಳೆಂದು ಜಾಪಾಲಿಸಿದಾಗ ನಂಬುವೆನೇ?" ಎಂದು ಲೇಖಕರು ಕೇಳಿದ್ದಾರೆ. ಆ ಅಭಿಪ್ರಾಯದಲ್ಲೇ ಕೋಟೆ ಮೂಲೆಕಲೆ ಕೊಡಗಿನವರೆಲ್ಲರೂ ಅನುಭವಿಸು ಇವರು ಹುಡುಕಾಡಿ ಆ ಸ್ಥಿತಿ ಇಲ್ಲದ್ದರಿಂದ "ಕೊಡಗಿಗೆ ಎರಡು ಮುಖ" ವೆಂದು ಹೇಳಿದಬೇಕು. ಕೊಡಗಿನವರು ಸುಖಿಗಳಾಗಿದ್ದಾರೆ ಎಂದಾಗ ಕೊಡಗಿನಲ್ಲಿ ಎಲ್ಲರೂ ಸಿರಿವಂತರೆಂದು ಅರ್ಥವೇ? ಎಲ್ಲರೂ ಸಮಾನ ರೀತಿಯಿಂದ ಸುಖವನ್ನು ಅನುಭವಿಸುತ್ತಿದ್ದಾರೆಂದು ಹೇಳಿದಂತಾಯಿತೇ? ಕೊಡಗಿನವರು ಸುಖಿಗಳಾಗಿರುವರೆಂದಾಗ ಅವರು ನೆರೆಹೊರೆಯ ಪ್ರಾಂತದ ಜನರಿಗಿಂಥಾ ಸುಖಿಗಳಾಗಿರುವರು ಕನ್ನಡನಾಡಿನ ಜನತೆಗಿಂಥಾ ಸುಖಿಗಳಾಗಿರುವರು ಎಂದರ್ಥ. ಕೊಡಗಿನ ತೋಟದ ಕೆಲಸಗಾರನು ನಿರ್ಗತಿಕನಾಗಿದ್ದಾನೆ ಆತನಿಗೆ ಅನ್ನದೊಡನೆ ಮನೆಯ ಸಿರಿ ಗತಿ ಎನ್ನುವುದಾದರೆ ಕನ್ನಡ ನಾಡಿನ ಮಜೂರನ ಸ್ಥಿತಿಯನ್ನು ನೆನೆಯಬೇಕು. ಕೊಡಗಿನ ತೋಟಗಳಲ್ಲಿ ಕೆಲಸ ಮಾಡುತ್ತಿರುವ ಆಳುಗಳು ಬಹುತೇಕ ದಕ್ಷಿಣ ಕನ್ನಡದವರು, ಇಲ್ಲವೇ ಮಲಬಾರಿನವರು. ಅವರು ಕೊಡಗಿಗೆ ಕೆಲಸಕ್ಕೆ ಬರುವದು ಕೊಡಗಿನವರಿಗೆ ಹಿತಮಾಡಿಕೊಟ್ಟು ಅವರ ದೊಕ್ಕಸವನ್ನು ತುಂಬಿ ಕೊಡುವ ಪರೋಪಕಾರದೃಷ್ಟಿಯಿಂದೆಂದು ಲೇಖಕರು ಭಾವಿಸಿರುವರೇ? ಕೊಡಗಿನ ಕೆಲಸಗಾರರು ಬಂದು ಲೇಖಕರು ವಿವರಿಸಿರುವಂತೆ ಕಷ್ಟಪಡುತ್ತಿದ್ದರೆ ನೆರೆ ಪ್ರಾಂತಗಳಲ್ಲಿ ಅದೂ ದೊರೆಯದ ಕಾರಣದಿಂದ ಕೊಡಗಿನ ಈ ಭೀಕರ ಪರಿಸ್ಥಿತಿಯ ಕೆಲಸಗಳಲ್ಲಿ ದುಡಿದು ಸಂಪಾದಿಸುವ ಅಳುಗಳು ದ ಹೋಗುವ ಸಹಸ್ರಾರು ರೂಪಾಯಿಗಳಿಂದ ಹೊರ ಪ್ರಾಂತಗಳಲ್ಲಿರುವ ಅವರ ಎಷ್ಟು ಕುಟುಂಬಗಳು ಜೀವನ ನಡೆಸುತ್ತಿಲ್ಲ? ಕೊಡಗಿನ ರೈತನನ್ನು, ಮಜೂರನನ್ನು, ಇತರ ಯಾವದೇ ವರ್ಗದವನನ್ನು ತೆಗೆದುಕೊಂಡು ಹೊರಗಿನ ಅದೇ ಕೆಲಸದವನೊಡನೆ ತುಲನೆ ನಡೆಯಲಿ ಜನರಲ್ ಕಾರ್ಯಪ್ಪನವರ 'ಕೊಡಗಿನವರು ಸುಖಿಗಳಾಗಿದ್ದಾರೆ' ಎಂಬುದರ ಸತ್ಯಾಂಶ ತಿಳಿಯುತ್ತದೆ. ಹಾಗೆಂದಾಗ ಕೊಡಗಿನ ತೋಟ ಕೆಲಸಗಾರರ ಸ್ಥಿತಿ ಸುಧಾರಿಸಬೇಕವೆಂದು ನನ್ನ ಭಾವನೆಯಲ್ಲ. ಅವರು ಇನ್ನೂ ಅನುಕೂಲತೆಗಳನ್ನು ಖಂಡಿತಾ ಪಡೆಯ ಬೇಕು. ಆದರೆ ಅವರ ಇಂದಿನ ಸ್ಥಿತಿಯು ನೆರೆಯ ಪ್ರಾಂತದ ಕೆಲಸಗಾರರದ್ದಕ್ಕಿಂಥಾ ಉತ್ತಮವಾಗಿದೆಯೆಂಬುದು ಪ್ರತ್ಯಕ್ಷ ಸಾಕು.

ಬಡತನ

ಕೊಡಗಿನ ಸರಕಾರದ ಆದಾಯವನ್ನು ಲೇಖಕರು ಎಪ್ಪತ್ತೇಳು ನಾಲ್ಕು ಲಕ್ಷ ಒಂದು ಕೋಟಿ ಆದಾಯವೇ ಸಾಧ್ಯವಿಲ್ಲವೆಂದು ಹೇಳಿದ್ದಾರೆ. ಬೇಜಾರಿ, ಕೊಟ್ಟ

ಮುಂಡಿ ಸೇತುವೆಗಳು ಆಗದಿರುವದು ಕೊಡಗಿನ ಸರಕಾರದಲ್ಲಿ ಹಣವಿಲ್ಲದ ಕಾರಣದಿಂದಲ್ಲ. ಬದಲು ಕೊಡಗು ಸರಕಾರದ ಹಿಡಿತದಲ್ಲಿರದೆ ಕೇಂದ್ರದ ಉಸ್ತುವಾರಿಯಲ್ಲಿರುವ ಪಿ. ಡಬ್ಲ್ಯು. ಡಿ ಇಲಾಖೆಯ ಅಶಕ್ತತೆಯು ಕಾರಣ ಇಲ್ಲವೇ ಅಧಿಕಾರಿಗಳ ಅನಾಸಕ್ತಿಯು ಕಾರಣ. ಮೇಲಾಗಿ ಈ ಸೇತುವೆಗಳಿಗೆ ಕೇಂದ್ರದಿಂದ ಹಣ ಮಂಜೂರಾಗುವ ಸಾಧ್ಯತೆಗಳಿರುವದರಿಂದ ಅವುಗಳ ಕಥೆ ತ್ರಿಶಂಕು ಸ್ವರ್ಗವಾಗಿದೆ. ಕೊಡಗು ಸರಕಾರದ ನಿವ್ವಳ ಉಳುವರಿಯು ಅರುವತ್ತು ಲಕ್ಷಕ್ಕೂ ಮೀರಿ ಇರುವಾಗ ನಾಲ್ಕು ಲಕ್ಷದ ಸೇತುವೆಯು ಕೆಲಸ ದೊಡ್ಡದಲ್ಲ. ಕೊಡಗಿನ ಬಡತನವರಿಯಲು ಕೊಡಗಿನ ಸರಕಾರದ ಹತ್ತು ಭಾವೀ ಕರ್ನಾಟಕ ಸರಕಾರದ ಆರ್ಥಿಕ ಸ್ಥಿತಿಯನ್ನು ತುಲನೆ ಮಾಡುವದೊಳಿತು. ಕೊಡಗು ಸರಕಾರದ ಸರಾಸರಿ ಉತ್ಪತ್ತಿಯು ಕಳೆದ ಮೂರು ವರ್ಷಗಳಿಂದ ೮೫ ಲಕ್ಷವನ್ನು ಮೀರಿದೆ. ಕೊಡಗಿನ ೨ಲಕ್ಷ ಜನಸಂಖ್ಯೆಗೆ ಈ ಉತ್ಪತ್ತಿಯೆಂದರೆ ತಲಾ ರೂ. ೪೨½ ಎಂದಾಯಿತು. ಭಾವೀ ಕರ್ನಾಟಕದ ಜನ ಸಂಖ್ಯೆಯು ೨ ಕೋಟಿಯೆಂದೂ ಆದಾಯವು ರೂ. ೨೦ ಕೋಟಿಯೆಂದೂ ಅಂದಾಜು ಮಾಡಲಾಗಿದೆ. ಇದು ತಲಾ ರೂ. ೧೦ಕ್ಕೂ ಮೀರಲಾರದು. ಅಂದಮೇಲೆ ಕೊಡಗಿನ ಸರಕಾರದ ಆರ್ಥಿಕ ಸ್ಥಿತಿಯು ಅಖಂಡ ಕರ್ನಾಟಕದ ಆರ್ಥಿಕ ಸ್ಥಿತಿಗಿಂತಾ ಉತ್ತಮವೆಂಬುದನ್ನು ಲೇಖಕರು ಒಪ್ಪಲೇ ಬೇಕು. ಕೊಡಗು ಸರಕಾರದ ಆಯವ್ಯಯದ ಯಾವದೇ ಪರಿಜ್ಞಾನವಿಲ್ಲದೆ ಬೇಜವಾಬ್ದಾರಿಯಿಂದ ಲೇಖಕರು ಬರೆದಿದ್ದಾರೆ. ಸರಕಾರದ ಆದಾಯದ ಶೇಕಡ ಹತ್ತರಷ್ಟು ವೈದ್ಯಕೀಯ ಇಲಾಖೆಗೆ ವಿನಿಯೋಗಿಸುವದಿಲ್ಲವೆಂದು ಇವರು ಹೇಳಿದ್ದಾರೆ. ಕೊಡಗು ವೈದ್ಯಕೀಯ ಇಲಾಖೆಗಾಗಿ ಸರಕಾರವು ಅತ್ತ ಲಕ್ಷವನ್ನೂ, (ಕೇಂದ್ರದಿಂದ ದೊರೆಯುವ ಮಲೇರಿಯಾ ಗ್ರಾಂಟು ರೂ ೧,೯೮,೦೦೦ವನ್ನು ಬಿಟ್ಟು) ಜಿಲ್ಲಾ ಬೋರ್ಡು ರೂ. ೬೫,೦೦೦ವನ್ನೂ ವೆಚ್ಚ ಮಾಡುತ್ತದೆ. ಇದು ೧೯೪೯-೫೦ ನೇ ವರ್ಷದ ಸರಕಾರದ ಬಡ್ಜೆಟ್ ಲೆಕ್ಕ. ಇದರಂತೆ ಕೊಡಗಿನ ಪ್ರತಿಯೊಬ್ಬನಿಗೆ ಸರಕಾರವು ತಲಾ ರೂ ೩ ವೆಚ್ಚ ಮಾಡಿದಂತಾಯಿತು. ಹಿಂದೂಸ್ಥಾನದಲ್ಲಿ ಯಾವ ಪ್ರಾಂತವಾಗಲೀ, ಸಂಸ್ಥಾನವಾಗಲೀ ಇಷ್ಟು ವೆಚ್ಚ ಮಾಡುತ್ತಿಲ್ಲ. ಇದಕ್ಕೆ ಆಧಾರ ಬೇಕಿದ್ದರೆ ಲೇಖಕರು ತಾರೀಖು ೨೬-೧-೫೧ರ 'ಹಿಂದೂ' ಪತ್ರಿಕೆಯಲ್ಲಿ ಭಾರತ ಸರಕಾರದ ಆರೋಗ್ಯ ಮಂತ್ರಿ ರಾಜಕುಮಾರಿ ಅಮೃತ ಕೌರ್‌ರವರ ಬರೆದ ಲೇಖನವನ್ನು ನೋಡಬೇಕು. ವಿದ್ಯೆಯ ಮಟ್ಟಿಗೆ ಕೊಡಗು ಹಿಂದೂದೇಶದಲ್ಲಿ ತೃತೀಯ ಸ್ಥಾನವನ್ನು ಪಡೆದಿದೆ. ವರ್ಷಕ್ಕೆ ಕೊಡಗು ಸರಕಾರವು ರೂ೪,೦೫,೦೦೦ವನ್ನೂ ಜಿಲ್ಲಾ ಬೋರ್ಡು ರೂ. ೧,೩೭,೦೦೦ವನ್ನೂ ವೆಚ್ಚ ಮಾಡುತ್ತದೆ. (೧೯೪೯-೫೦ನೇ ವರ್ಷದ ಬಡ್ಜೆಟ್ಟು ಲೆಕ್ಕದಿಂದ) ಇದು ತಲಾ ರೂ. ೨ ದಕ್ಕೂ ಮೀರಿದಂತಾಯಿತು. ಕೊಡಗಿನಂಥಾ ೧೫೦೬ ಚೌರಸ ಮೈಲು ವಿಸ್ತೀರ್ಣದ ಪ್ರದೇಶದಲ್ಲಿ ಒಂದು ಕಾಲೇಜು, ಒಂಭತ್ತು ಹೈಸ್ಕೂಲುಗಳು ೩೦ ಹೈಯರ್ ಎಲಿಮೆಂಟರಿ ಶಾಲೆಗಳು ಎಂಭತ್ತೆಂಟು ಪ್ರಾಥಮಿಕ ಶಾಲೆಗಳಿವೆ. ಕನ್ನಡ ನಾಡಿನಲ್ಲಾಗಲೀ ಇತರ ಯಾವದೇ ಭಾಗದಲ್ಲಾಗಲೀ ಇದಕ್ಕೆ ಸಂವಾದಿಯಾದ ಉದಾಹರಣೆಯನ್ನು ಲೇಖಕರು ಕೊಡಲಿ. ಕೊಡಗಿನಲ್ಲಿ ಒಕ್ಕಲುತನ ಕರ ಹಾಕಿದ್ದರೆ ಅದು ಪಾರ್ಲಿಮೆಂಟಿನ ನಿರೋಧದಿಂದ ಕೊಡಗು ಸರಕಾರಕ್ಕೆ ತಗಲುತ್ತಿರುವ ಅರೆಲಕ್ಷ ರೂಪಾಯಿಗಳ ನಷ್ಟವನ್ನು ಭರ್ತಿಮಾಡಲಿಕ್ಕಾಗಿ. ಒಕ್ಕಲುತನ ಕರವನ್ನು ಮದ್ರಾಸ್, ಮೊದಲಾದ ಪ್ರಾಂತಗಳು [illegible] ವೇ? ಭಾವೀ ಕರ್ನಾಟಕ ಪ್ರಾಂತವು [illegible] ರೂ [illegible] ಜನತೆಯಿಂದ ಕಂದಾಯ [illegible] ಎತ್ತ ನಡೆಸಲಿದೆಯೇ? ಕೊಡಗಿನ [illegible] ಸಂಪತ್ತನ್ನು ಹೊರಗಿನ ಆ ವಿಪುಲ ಸಂಪತ್ತನ್ನು ಸರಿಯಾಗಿ ಉಪಯೋಗಿಸಿಕೊಳ್ಳದ [illegible] ಗರ್ವವಾಗಬೇಕಿಲ್ಲ [illegible] ಲೇಖಕರ ಮತ್ತೊಂದೆಡೆ ಕೊಡಗಿನ [illegible] ಯಾಗಿದೆ. ಗಂಧ, ತಿಂಡ್ರು ಸಂಪತ್ತುಗಳು ಶೇಕಡ ೭೦ರಷ್ಟು ಕಡಿಮೆ [illegible]ಗಿವೆ. ಇತರ ಅರಣ್ಯ ಸಂಪತ್ತು ಇಳಿಮುಖವಾಗಿ ಕೊಡಗು ದಿನದಿಂದ ದಿನಕ್ಕೆ ಬರಡಾಗುತ್ತಿದೆ ಎಂದಿದ್ದಾರೆ. ಒಂದಕ್ಕೊಂದು ವಿರುದ್ಧವಾದ ಈ ಪಂಕ ವಾದವು ಅವರ ಅಜ್ಞಾನತೆಯನ್ನು ಎತ್ತಿಹೇಳುತ್ತಿದೆ. ಹೊರಗಿನ ಆಳುಗಳು ಬಾರದಿದ್ದರೆ ಕೊಡಗಿನ ಕಾಫಿ ತೋಟಗಳು, ಕಿತ್ತಳೆ ವನಗಳು, ಬತ್ತದ ಗದ್ದೆಗಳು ಬಂಜರಾಗಬಹುದು. ಹೊರಗಿನ ಆಳುಗಳ ಕಾರಣವೇ ಇವು ಉಳಿದುಕೊಂಡಿವೆಯೆನ್ನುವ ಇವರ ವಾದವನ್ನು ನೆನೆದಾಗ ನಗು ಬಾರದಿಂದು. ಕೊಡಗಿನಲ್ಲಿ ತೋಟದ ಕೆಲವು ಪ್ಲಾಂಟರುಗಳಲ್ಲದೆ, ದುಡಿಯದೆ ಉಣ್ಣುವ ವರ್ಗವಿಲ್ಲ. ಪ್ರತಿಯೊಬ್ಬನೂ ತನಗೆ ಬೇಕಿರುವದನ್ನು ತಾನೇ ಬೆಳೆಯುತ್ತಾನೆ. ಕೊಡಗಿನ ಜನತೆಯಲ್ಲಿ ಶೇಕಡ ೯೦ರಷ್ಟು ಜನರು ಭೂಮಾಲೀಕರಾದ ಕೃಷಿಕರು. ಪ್ರತಿಯೊಬ್ಬನೂ ಈ ರೀತಿ ದುಡಿಯುವ ಕಾರಣವೇ ಕೊಡಗು ಆಹಾರ ಧಾನ್ಯಗಳಲ್ಲಿ ಉಳಿತಾಯ ಪ್ರಾಂತವಾಗಿದೆ. ಒಡಲಿಗಿಲ್ಲದ ಕರ್ನಾಟಕದ ಭಾಗಗಳಿಗೆ ಈ ಪರಿಶ್ರಮದ ಫಲವಾಗಿಯೇ ಸುಮಾರು ೨೦,೦೦೦ ಟನ್ ಬತ್ತವನ್ನು ಒದಗಿಸುತ್ತಿದೆ!

ಹೀನ ಪರಂಪರೆ

ಕಳೆದ ಅನೇಕ ವರ್ಷಗಳಿಂದ ಕೊಡಗಿಗೆ ಕರ್ನಾಟಕದ ಮುಂದಾಳುಗಳ ಸಂಚುವು ಒಂದಿಲ್ಲೊಂದು ರೀತಿಯಲ್ಲಿ ಆಗಿದೆ. ಕೊಡಗನ್ನು ಯಾವುದೇ ರೀತಿಯಿಂದಲಾದರೂ ತಮ್ಮ ಕಕ್ಷೆಯೊಳಗೆ ಸೇರಿಸಿಕೊಳ್ಳಬೇಕೆಂಬುದೇ ಇವರ ಕಾಂಕ್ಷೆಯಲ್ಲದೆ ಬೇರಿಲ್ಲ. ಅವರು ಕರ್ನಾಟಕ ಸಾಹಿತ್ಯ ಸಂಘದ ಹೆಸರಿನಿಂದಲೇ ಬರಲಿ, ಬೇರೆ ವೇಷದಿಂದಲೇ ಬರಲಿ, ಕೊಡಗಿನ ಹೆಸರಾಂತ ಅಸ್ತಿತ್ವವನ್ನು ಪಡೆದು ಕೊಡಗಿನ ಬಗಲನ್ನು ತಿವಿಯುವ ಕೆಲಸ ಮಾಡಿರುವರೇ ವಿನಾ ಮತ್ತಿಲ್ಲ. ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿಯ ಆಶ್ರಯದಲ್ಲಿರುವ ಕೊಡಗು ಜಿಲ್ಲಾ ಕಾಂಗ್ರೆಸಿನ ಹೆಸರಿನಿಂದ ಅವರು ಮಾಡಿದ ಮತ್ತು ಮಾಡುತ್ತಿರುವ ಅಕೃತ್ಯಗಳು ಒಂದೆರಡಲ್ಲ. ನ್ಯಾಯ ನೀತಿಗಳನ್ನು ಬಿಟ್ಟು ತಮ್ಮ ಏಕೀಕರಣವಾದಕ್ಕೆ ಸೈಗುಟ್ಟದವರ ಬೆನ್ನು ತಟ್ಟಿ ದೇಶದಲ್ಲಿ ಬಣಗಳನ್ನು ಸ್ಥಾಪಿಸಿದ ಪ್ರಥಮ ಜವಾಬ್ದಾರಿ ಕರ್ನಾಟಕದ ಮುಂದಾಳುಗಳದು. ಅವರ ಆ ಪಕ್ಷವಾದಕ್ಕೆ ಬಲಿಬಿದ್ದೇ ಕೊಡಗಿನಲ್ಲಿ ಆದರ್ಶವಾಗಿ ಕೆಲಸಮಾಡುತ್ತಿದ್ದ ಕಾಂಗ್ರೆಸ್ ಚಿರ ಸಮಾಧಿಯನ್ನು ಪಡೆದಿದೆ.

೧೯೫೦ರಲ್ಲಿ ಅವ ನಿರ್ಣಯವೇ ಇಂದೂ ಸರಿಹೋಗಬೇಕೆಂದು ವಾದಿಸುವುದು [illegible]ರುಡುತನ. ದೇಶದ ಹಿತ ಚಿಂತನೆಯಿಂ ಪ್ರಾಸಂಗಿಕವಿಚಾರವಲ್ಲವೆ? ಅಲ್ಪನಷ್ಟ [illegible] ಆವರ [illegible] ಬೆಯಿಂದ [illegible] ಕರ್ನಾಟಕ ಏಕೀಕರಣದ ಬಗ್ಗೆ ಕೊಡಗಿನ [illegible] ಈ ರೀತಿ ಬದಲಾಗಲು ಕರ್ನಾಟಕ ಮುಂದಾಳುಗಳ ಕಪಟತಂತ್ರಕಿಯ ಹಾಗೂ ದೊಂಬ ಹಾದಿಯ ನರ್ತನೆಯೇ ಕಾರಣ. ಇದಾ ಜನರ ಆದರ್ಶಕ್ಕೆ ಕೊಡಗು ಸಿಕ್ಕದರೆ ಅದಕ್ಕೆ ಉಳಿಗಾಲವಿಲ್ಲವೆಂಬುದು ಕೊಡಗಿನವರಿಗೆ ಪೂರ್ಣ ಮನದಟ್ಟಾಗಿದೆ.

ಪ್ರತ್ಯೇಕತೆಯ ದದ ಅರ್ಥ.

ಕೊಡಗಿನವರು ಕೊಡಗು ಪ್ರತ್ಯೇಕವಿರಬೇಕೆಂದು ಹೇಳುವದು ಸಂಕೀರ್ಣ ದೃಷ್ಟಿಯಿಂದೆಂದು ಕೆಲವರು ಹೇಳುತ್ತಾರೆ. ಹಿಂದೂದೇಶದ ಸರ್ವತೋಮುಖ ಏಳಿಗೆಗೆ ತನ್ನ ಶಕ್ತಿಯಿಲ್ಲದ ಸಹಾಯವನ್ನು ಕೊಡುವ ಕಾರಣದಿಂದಲೇ ಕೊಡಗು ಪ್ರತ್ಯೇಕವಿರಬೇಕಾಗಿದೆ. ಉತ್ತಮ ಹಾಗೂ ದಕ್ಷ ಆಡಳಿತದಿಂದ ತನ್ನ ಅಂತರಿಕ ಶಾಂತಿ ಪ್ರಗತಿಗಳನ್ನು ಕಾಯ್ದುಕೊಂಡಿರುವದರಿಂದಲೇ ಕೊಡಗು ಇಂದು ಚಿಕ್ಕದಾದರೂ ಎಲ್ಲರಿಂದ ಗಣನೆಗೆ ಬರುವಂಥಾ ಸ್ಥಿತಿಯಲ್ಲಿದೆ. ಇದರ ಆಡಳಿತ ಭಾರವು ಯಾರ ತಲೆಹೊರೆಯೂ ಆಗಿರದೆ ಅದು ತನ್ನ ಕಾಲಿನಲ್ಲಿ ನಿಂತಿದೆ. ತನ್ನದೇ ಆದ ವ್ಯಕ್ತಿತ್ವ, ಸಂಪ್ರದಾಯ, ನೀತಿ ನಡತೆಗಳಿಂದ ಕೊಡಗು ಆದರ್ಶವಾಗಿದೆ. ಇಂಥಾ ಕೊಡಗು ಕರ್ನಾಟಕದ ಮಹಾ ಸಮುದ್ರದ [illegible]ನವಲ್ಲಿ ಸೇರಿಲ್ಲದೆ ಮುಳುಗುವದೇ ವಿನಾ ಆದರಿಂದ ಭಾರತಕ್ಕೆ ಹೆಚ್ಚಿನ ಹಿತವಾಗದು. ಇಂದು ಮದ್ರಾಸಿನ ಆಡಳಿತಕ್ಕೆ ಸಿಕ್ಕ ಯಾವದೇ ಪ್ರಗತಿ ಅಭಿವೃದ್ಧಿಗಳಿಲ್ಲದ ಕನ್ನಡದ [illegible] ದಕ್ಷಿಣ ಕನ್ನಡ ಜಿಲ್ಲೆಯಂತೆ ಕೊಡಗು ಆಗಲು ಎಂದೂ ಇಷ್ಟಪಡಲಾರದು. ಕೊಡಗು ಪ್ರತ್ಯೇಕವಾಗಿ ಉಳಿದಾಗ ಬೇರೆಯವರ ಸಂಬಂಧವಿಲ್ಲದ ಸಂತತಿ ನೀಡ ಕೋಳವಾಗುವದೆಂದು ಯಾರೂ ಭಾವಿಸಬೇಕಿಲ್ಲ. ಇಂದಿನ ಪ್ರಪಂಚದಲ್ಲಿ ಹೀಗಿರಲು ಯಾರಿಗೂ ಸಾಧ್ಯವಿಲ್ಲ. ಕೊಡಗು ಯಾರ ವಿರೋಧವನ್ನೂ ಕಟ್ಟಿಕೊಂಡಿಲ್ಲ. ಅವರಿಗೆ ಭಾರತದ ಇತರ ಪಕ್ಷ ಹೇಗೆಯೋ ಹಾಗೆಯೇ ಕನ್ನಡಿಗರ ಭಾರತದ ಹಿತ[illegible]ಗಳ ಬಗ್ಗೆ ಕೊಡಗ ಸರ್ವರೊಡನೆ ಒಂದಾಗಿ ಕಲೆತು ದುಡಿಯುವರು. ಆದರೆ ತನ್ನ ಅಂತರಿಕ ಆಡಳಿತದ ಬಗ್ಗೆ ಅದು ಬೇರೆ ಯಾವದೇ ಭಾಗದ ಅಂಗವಾಗಲು ಬಾರದು ಹಾಗೆ ಪ್ರತ್ಯೇಕ ಇರುವದರಿಂದಲೇ ಅದು ಕೊಡಗನ್ನು ಆದರ್ಶನಾಡಾಗಿ ಕಟ್ಟಬಲ್ಲದು. ಅ[illegible]ರಿಕ ಬಾಂಧವ್ಯದ ಉತ್ಕರ್ಷಕ್ಕೂ ಕಾರಣವಾಗಬಲ್ಲದು. ಅದ್ದರಿಂದ ಕೊಡಗಿನ ಹಾಲನ್ನು ಕರ್ನಾಟಕದ ಹಾಲಿನೊಂದಿಗೆ ಸೇರಿಸಲು ಯಾರೂ ಇಚ್ಛಿಸಲಾರರು.

ಎಲ್ಲಾ ಗುಲಾಬಿಯಾದೀತೆ?

ಕೊಡಗಿನಲ್ಲಿ ಗುಲಾಬಿ ಹೂವಿಗೂ ಕೈ ಚಾಚಲು ಬಂದುದನ್ನು ಕಂಡ ಲೇಖಕರು ಕೊಡಗಿನ ಹೂ ತೋಟದಲ್ಲಿ ಕೇವಲ ಗುಲಾಬಿಗಳೇ ಇಲ್ಲದೆ ಬೇರೆ ಹೂವುಗಳು ಇರುವದನ್ನು ಕಂಡು ಅಸಮಾಧಾನಪಟ್ಟಿದ್ದರೆ ಹೂತೋಟವೆಂದಾಗ ಸರ್ವ ಬಗೆಯ ಹೂಗಳಿರಬೇಕು. ಅದರಲ್ಲೂ ಕೊಡಗು ಶ್ರಮಜೀವಿ, ಗೊಬ್ಬರ ಹಾಕಿ ಬೆಳೆಸಿದ ಕೃತ್ರಿಮ ಕೈ ತೋಟವಲ್ಲ. ನೈಸರ್ಗಿಕವಾಗಿ ಬೆಳೆದು ಬೆಳೆಯುತ್ತಿರುವ ಬನಸಿರಿಯ ಉದ್ಯಾನ. [illegible] ಬೇಲಿಯಲ್ಲಿ ಗುಲಾಬಿ [illegible] ಕಂಡ [illegible] ಗೆ ಕೋಗಿದ್ದರೆ ಕಿತ್ತಳೆ ಹೂವಿನ [illegible] ನಡತೆಯದನ್ನೂ, ಒತ್ತಾಗಿ ಬೆಳೆಯುವ [illegible] ನೋಡಬಹುದಿತ್ತು. ಇವರು ಬೇಲಿಯ [illegible] ಕೆಸರಗಿಡಯನ್ನು ಕಂಡ ಆ ಭಾಗ್ಯವೇ ಎಲ್ಲೆಡೆ ಇರಬೇಕೆಂದು ಅಪೇಕ್ಷೆ ವಿನಾ ಒಳಿಯ ಹಿತದಲ್ಲಿ ಸಗಣೆಯ ಉಪಯೋಗವನ್ನು ಅರಿಯಲಾರರು [illegible] ಹೆಳವನ್ನೂ, ತೋಟದ ಹೂವುಗಳ [illegible] ಪರಂಗಲನ್ನು ಚೆಲ್ಲುವ ಭೂಮಿಯನ್ನು ನೋಡುವ ಪ್ರಯತ್ನ ಮಾಡಲಿಲ್ಲ. ಕೊಡಗು ನಿಸರ್ಗ ನಿರ್ಮಿತವಾದುದು. ಅಲ್ಲಿ ಕೃತ್ರಿಮತೆಗೆ ಎಡೆಯಿಲ್ಲ. ಅಲ್ಲಿಯ ಜೀವಳ ಸತ್ವದ ಶ್ರೀಹರಿಯಲ್ಲಿ ನಿಂತುದೇ ವಿನಹ ಕೃತಿಮದ ಕೃಪೆಗಳಿಂದಲ್ಲ. ಕೊಡಗಿನ ಬೆಡಗ ಪೆಣ್ಣಿನ ರೀತಿ ನೀತಿ ಬೇಡಿಕಟ್ಟಿದ ಹೆಂಗಸಿನಂತಲ್ಲ; ಮನೆಯ ಬೆಳಕಾದ ನಾಚಿಕೆಯ ಮುಗುಳ್ನಗೆಯಂತೆ!

ಕೊಡಗಿನ ಕೆಲವು ಪ್ಲಾಂಟರುಗಳನ್ನು ಮತ್ತವರ ತೋಟದ ಕೆಲಸಗಾರರನ್ನು ನೋಡಿ ಅದೇ ಕೊಡಗು, ಕೊಡಗಿನ ಎರಡು ಮುಖಗಳವು ಎಂದು ತೃಪ್ತಿಪಟ್ಟುಕೊಂಡ ಲೇಖಕರು ಕೊಡಗಿನ ಹಲವು ಮುಖಗಳನ್ನು ನೋಡಬೇಕಿತ್ತು.

"ಆಳು ಎಂಬುವರಿಲ್ಲ
ಅರಸನೆಂದರು ಎಲ್ಲ
ಆಳಾಗಿ ದುಡಿದು
ಅರಸನ ರೀತಿ ಉಂಡು
ತಾಳಿ ಬಾಳ ತಲಿಹರು
ಈ ನಾಡಿನವರು."

ಎಂದು ಹಾಡಿದ ಕವಿಯ ಮಾತಿನ ಸತ್ಯತೆಯನ್ನು ಇವರು ಪರಾಂಬರಿಸಬೇಕಿತ್ತು. ಈ ಮಾತುಗಳನ್ನೇ ಜನರಲ್ ಕಾರ್ಯಪ್ಪನವರು ನುಡಿದರು. ಆದರೆ ಲೇಖಕರು ನಿಜವಾದ ಕೊಡಗನ್ನು ನೋಡಲು ಬಂದವರಲ್ಲ. ಕೊಡಗಿನ ಕೊಡುಗೆಯ ಸಹಾಯವನ್ನು ಅಪೇಕ್ಷಿಸಿ ಬಂದ ಕೆ-

(ಅನೇ ಪುರಕ್ಕೆ ಸಾಗಿದೆ)

ಕೂರ್ಗ್ ಎಸೋಸಿಯೇಶನ್ ಆಫ್ ಕಾಮರ್ಸ್ ಖಚೇರಿ. ವೀರಾಜಪೇಟೆ

ಕೊಡಗಿನ ಉಳುವರ ಬತ್ತವನ್ನು ಸಂಗ್ರಹಿಸಲಿಕ್ಕಾಗಿ ಸರಕಾರದವರು ದಿ ಕೂರ್ಗ್ ಎಸೋಸಿಯೇಶನ್ ಆಫ್ ಕಾಮರ್ಸ್‌ನ್ನೂ ಮತ್ತು ದಿ ಕೂರ್ಗ್ ಮಾರ್ಕೆಟಿಂಗ್ ಕೋಆಪರೇಟಿಯು ಫೆಡರೇಶನನ್ನೂ ಚೀಫ್ ಏಜಂಟರುಗಳನ್ನಾಗಿ ನೇಮಿಸಿರುವರು. ಈ ಚೀಫ್ ಏಜಂಟರ ಸಬ್ ಏಜಂಟರುಗಳಾಗಿ ಕೆಲಸಮಾಡುವಂತೆ ಅರ್ಜಿ ಬರಕೊಂಡವರೆಲ್ಲರೂ ಮಡಿಕೇರಿ ಖಜಾನೆಯಲ್ಲಿ ರೂಪಾಯಿ 250/-ನ್ನು ಕೂಡಲೇ ಡಿಪಾಜಿಟ್ಟು ಮಾಡಿ ಡೈರೆಕ್ಟರ್ ಆಫ್ ರೇಶನಿಂಗ್‌ರವರಿಂದ ಸಬ್ ಏಜನ್ಸಿ ಲೈಸೆನ್ಸ್ ತೆಗೆದುಕೊಳ್ಳಬೇಕು. ಹೀಗೆ ಲೈಸೆನ್ಸ್ ಪಡೆದ ಸಬ್ ಏಜಂಟರುಗಳು ಉಳುವರ ಬತ್ತವನ್ನು ಸಂಗ್ರಹಿಸಿ ಚೀಫ್ ಏಜಂಟರುಗಳು ನಿಶ್ಚೈಸುವಂತೆ ಸರಿಯಾದ ಅಳತೆಯಲ್ಲಿ ಹಸನಾದ ಬತ್ತವನ್ನು ಗಾಡಿಗೆ ಒಂದರ ಕಮಿಷನ್ ರೂ 5-8-0 ಮತ್ತು ಗಾಡಿ ಬಾಡಿಗೆ ರೂ 4-14-0 ಸೇರಿ ರೂ 189-6-0 ರ ದರದಲ್ಲಿ ಸೆಂಟರುಗಳಲ್ಲಿ ಡಲಿವರಿ ಕೊಡತಕ್ಕದ್ದು.

ಈ ಸಬ್ ಏಜಂಟರುಗಳ ಕೆಲಸವನ್ನು ಭತ್ತ ಬೆಳೆಯುವವರೇ ಮಾಡಿ ಡೆಲಿವರಿ ಕೊಟ್ಟಲ್ಲಿ ಬೆಳೆಸುವವರಿಗೆ ಖರ್ಚು ಗಾಡಿ ಬಾಡಿಗೆ ಮತ್ತು ಕಮಿಶನು ಸಿಕ್ಕುವುದು.

ಲೈಸೆನ್ಸ್ ಇಲ್ಲದೆ ವ್ಯಾಪಾರ ಮಾಡಿದಲ್ಲಿ ಸರಕಾರದ ಕಾನೂನನ್ನು ಉಲ್ಲಂಘಿಸಿದ ತಪ್ಪೀರಿಗೆ ಗುರಿಯಾಗುವರು.

ಮೇಲ್ಕಿಚಾರದ ಬಗ್ಗೆ ಎಲ್ಲಾ ಸೆಂಟರುಗಳಲ್ಲಿ ಪ್ರೊಗ್ರೇಮ್ ಮೇರೆ ಸರಕಾರದವರ ಇನಸ್ಪೆಕ್ಟರುಗಳೂ ಮತ್ತು ಚೀಫ್ ಏಜಂಟರುಗಳ ಸುಪರ್ ವೈಸರವರೂ ಇರುವರು. ಪುಕಾರುಗಳು ಏನಾದರೂ ಇದ್ದಲ್ಲಿ ಮೇಲ್ಕಂಡವರಿಗೆ ತಿಳಿಸ ತಕ್ಕದ್ದು. ಭತ್ತಕ್ಕೆ ಹೆಚ್ಚಿನ ಬೆಲೆ ಸಿಕ್ಕಬೇಕೆಂದು ದೇಶದವರ ಕೇಳಿಕೆಯನ್ನು ಕೊಡಗು ಸರಕಾರವು ಶಿಫಾರಸ್ಸು ಮಾಡಿ ಕಳುಹಿಸಿದ್ದಕ್ಕೆ ಇಂಡಿಯಾ ಸರಕಾರದ ಮಂಜೂರಾತಿ ದೊರೆಯಲಿಲ್ಲವೆಂದು ತಿಳಿಯುತ್ತೇವೆ.

ಬಿ. ಪಿ ಬೋಪಯ್ಯ,
ಗೌರವ ಕಾರ್ಯದರ್ಶಿ
ಎಸೋಸಿಯೇಶನ್ ಆಫ್ ಕಾಮರ್ಸ್
ಎಂ. ಎಸ್. ಸೋಮಯ್ಯ,
ಗೌರವ ಕಾರ್ಯದರ್ಶಿ
ಸಹಕಾರ ಫೆಡರೇಶನ್

ನೋಟೀಸ್.

ನನ್ನ ಪಾಲಿ ಅಣ್ಣ ರಾಮಯ್ಯನವರ ವಿಧವೆ ಸಾವಿತ್ರಮ್ಮನವರು, ಕಂಡಂಗಾಲ ನಾಡು ದೇವಣಗೇರಿಯಲ್ಲಿ ಇರುವ ಸ. ನಂ. 317/2 ರ 6 50 ಏಕರು ಭೂಮಿ 319ರ 318/2 ರ 14 47 ಏಕರು ಬಾಣೆ, ಈ ಸ್ಥಿರ ಆಸ್ತಿಗಳನ್ನು ನನಗೆ ಮತ್ತು ನನ್ನ ತಮ್ಮನಿಗೆ ಮೋಸ ಮಾಡುವ ಉದ್ದೇಶ್ಯ ವಿಕ್ರಯಿಸುವ ಇರಾದೆಯಲ್ಲಿ ಇರುವ ಬಾಗ ತಿಳಿದು ಬಂದಿದೆ.

ಸದ್ರಿ ಆಸ್ತಿಗಳು ಪಿತ್ರಾರ್ಜಿತದ ಆಸ್ತಿಗಳನ್ನು ವಿಕ್ರಯಿಸಿ, ಸದ್ರಿ ಆಸ್ತಿಗಳು ಸದ್ರಿ ಸಾವಿತ್ರಮ್ಮನವರು ವಿಕ್ರಯಿಸುವ ಯಾ ಪರಬಾರೆ ಮಾಡ.. ಹಕ್ಕು ಆಕ್ಷೇಪ ಇರುವದಿಲ್ಲ. ಆದ್ದರಿಂದ ಸದ್ರಿ ಆಸ್ತಿಗಳನ್ನು ಯಾರೂ ಖರೀದಿಸಬಾರದು. ಖರೀದಿಸಿದಲ್ಲಿ ನಷ್ಟಕ್ಕೆ ಗುರಿಯಾಗಬೇಕಾಗುತ್ತದೆ. ಕ್ರಯ ಪತ್ರ ಪಡೆದವರಿಗೆ ಏನೊಂದೂ ಹಕ್ಕು ಸದ್ರಿ ಆಸ್ತಿಯಲ್ಲಿ ಸಿಕ್ಕಲಾರದು ಎಂಬ ಸಂಗ್ತಿ ತಿಳಿಸಿದೆ.

ಕೆಪಿ ರಾಮ ಸುಬ್ಬಾಯ.
ತಾರೀಖು. 5-2-1951. ಬೇಟೋಳಿ ಗ್ರಾಮ, ವೀರಾಜಪೇಟೆ

WANTED.

Two Salesmen one for North Coorg and another for South Coorg on a fixed Salary of Rs. 100 - per month. Candidates must be proficient in Kannada A cash Security of Rs. 500/- essential Apply for details to:-

'G'
C/o 'Kodagu'
Mercara, Coorg.

ವಾರ್ತೆಗಳು.

ರಾತ್ರಿಯಲ್ಲಿ ಮಿಂಚು ಹುಳಗಳಂತೆ ಮಿನುಗುವ ಹೊಸತರದ ಮೋಟಾರುಕಾರುಗಳು ಅಮೇರಿಕದಲ್ಲಿ ತಯಾರಾಗುತ್ತಿವೆ. ಈ ಹೊಸ ಮಾದರಿಯ ಮೋಟಾರುಗಳಿಂದ ಮಾರ್ಗದಲ್ಲಿ ಅಪಘಾತಗಳು ಕಡಿಮೆಯಾಗುವವಂತೆ. ಮೋಟಾರುಕಾರುಗಳ ಹಿಂಬಾಗಕ್ಕೆ ಮಿಂಚುವ ಒಂದು ತರದ ರಂಗನ್ನು ಹಚ್ಚುವುದು ಈ ನೂತನ ಪ್ರಯೋಗ. ಈ ರಂಗಿನಿಂದ ದೂರದಿಂದಲೇ ಮೋಟಾರು ಹೋಗುವುದನ್ನು ಸ್ಪಷ್ಟವಾಗಿ ಕಾಣಬಹುದು.

ಶಬ್ದವನ್ನು ಒಂದೆಡೆಯಿಂದ ಇನ್ನೊಂದೆಡೆ ರವಾನಿಸಿ ಕೇಳಿಸುವ ವಾಯರ್‌ಲೆಸ್ ಯಂತ್ರಗಳು ಈಗ ದೊಡ್ಡ ವಿಚಿತ್ರವಲ್ಲ. ಆದರೆ ಮುಂದೆ ಪ ಸುಷ್ಮರನ್ನೂ ಇನ್ನಿತರ ವಸ್ತುಗಳನ್ನೂ ಒಂದೆಡೆಯಿಂದ ಇನ್ನೊಂದೆಡೆಗೆ ರವಾನಿಸಬಹುದಾದ ಒಂದು ಯಂತ್ರವನ್ನು ನಿರ್ಮಿಸುವುದು ಸಾಧ್ಯವೆಂದು ಓರ್ವ ವಿಜ್ಞಾನಿ ಹೇಳಿರುವನು. ಈ ವಿಜ್ಞಾನಿಯು ಹೇಳಿಕೆ ಪ್ರಕಾರ ಒಬ್ಬ ಮನುಷ್ಯನನ್ನು ಒಂದೆಡೆಯಿಂದ ಯಂತ್ರಗಳ ಮೂಲಕ ಇನ್ನೊಂದೆಡೆಗೆ ಕಳುಹಿಸಬಹುದು ಮಾತ್ರವಲ್ಲ ಮನುಷ್ಯರು ಗೋಡೆಗಳ ಒಳಗಿಂದ ಹಾದು ಹೋಗಬಹುದಂತೆ.

ಎಲೆಕ್ಸಾಂಡರ್ ಡ್ಯೂಮಾಸ್‌ರವರ ಸಾಹಿತ್ಯವೀರ ಮಾಂಟೆ ಕ್ರಿಸ್ಟೋನನ್ನು ಬಂಧಿಯಾಗಿರಿಸಿದ ಸುರಂಗ 'ಲ್ಲೀ ಸ ಯ ಬೇಕೆಂಬ ಉತ್ಕಟ ಆಕಾಂಕ್ಷೆ ಮೇಜರ್ ವಾಯ್ನ್ ಕ್ರಾಸೆಟ್ ಎಂಬ ಫ್ರೆಂಚ್ ಸೇನಾನಿಯದಾಗಿತ್ತು. ಇತ್ತೀಚೆಗೆ ಆತ ಅದೇ ಸುರಂಗದಲ್ಲೇ ತನ್ನ ಸ್ವಂತ ಕೋವಿಯಿಂದ ತನ್ನ ಎದೆಗೇನೆ ಗುಂಡಿಟ್ಟು ವಿಚಿತ್ರ ಆತ್ಮಹತ್ಯೆ ಮಾಡಿಕೊಂಡನು.

೧೬ನೇ ಶತಮಾನದಲ್ಲಿ ಇಂಗ್ಲೆಂಡಿನ ಲ್ಲಿ ನ ಹಾರ ಜೆ 'ಸಿಗದ್ದ ಎಲಿಜಬೆತ್ ರಾಣಿ ತಯಾರಿಸಿದ ಗಡಿ ಕಾರವು ಇನ್ನೂ ಕೆಲಸವಾಗಿ ನಡೆಯ ಕೋರಿಸುತ್ತಿದೆಯಂತೆ. ಇತ್ತೀಚೆಗೆ ಏವ ನ್ಯಾ ನಗರದಲ್ಲಿ ಈ ಗಡಿಯಾರವನ್ನು ೯೩,೦೦೦ ರೂಪಾಯಿಗಳಿಗೆ ವಿಕ್ರಯಿಸಲಾಯಿತ.

ಕೊರಿಯಾ ಯುದ್ಧಕ್ಕೆ ಟಿಗ್-ಆಫ್-ವಾರ್ ಸ್ವರೂಪ ಬಂದಿದೆ. ಒಮ್ಮೆ ಕಮ್ಯೂನಿಸ್ಟರು ದಕ್ಷಿಣ ರಾಷ್ಟ್ರದವರನ್ನು ದರದರನೆ ಎಳೆಯುತ್ತಾರೆ; ಮತ್ತೊಮ್ಮೆ ಯುನೈಟೆಡ್ ರಾಷ್ಟ್ರದವರು ಕಮ್ಯೂನಿಸ್ಟರನ್ನು ತಮ್ಮ ಕಡೆಗೆ ಎಳೆಯುತ್ತಾರೆ.

ದಿ ಟ್ರಾಪಿಕಲ್

ಇನ್ಶುರೆನ್ಸ್ ಕಂಪೆನಿ ಲಿಮಿಟೆಡ್.

ಮೇನೇಜಿಂಗ್ ಡೈರೆಕ್ಟರ್:- ಲಾಲಾ ಶಂಕರ್ ಲಾಲ್
ಮುಖ್ಯ ಖಚೇರಿ:- ಹೊಸ ಡೆಲ್ಲಿ.
ಸ್ಥಾಪಿಸಿದ ಡೈರೆಕ್ಟರರು:

ಪಂಡಿತ ಮೋತಿಲಾಲ್ ನೆಹರು — ಎಸ್. ಶ್ರೀನಿವಾಸ ಅಯ್ಯಂಗಾರ್
ಹಕೀಮ್ ಅಜಮಲಖಾನ್. — ಡಾ|| ಎಂ. ಎ. ಅನ್ಸಾರಿ.

Transacts:—Life, Fire, Motor and Marine.

ಯಂ. ಯು. ಅಪ್ಪಣ್ಣ, ಏಜನ್ಸಿ ಸುಪರಿಂಟೆಂಡೆಂಟ್, ಮಡಿಕೇರಿ, ಕೊಡಗು.
ಎಂ. ಎ. ಪಿಲ್ಲಿಪ್ಸ್, ಬ್ರಾಂಚ್ ಸೆಕ್ರಟರಿ, ಹಂಪನಕಟ್ಟೆ, ಮಂಗಳೂರು.

ನೋಟೀಸು.

ಈ ಮೂಲಕ ತಿಳಿಯ ಪಡಿಸುವುದೇನೆಂದರೆ, ಈ ಕೆಳಗೆ ನಮೂದಿಸಿದವರಿಗೆ ಈ ಬ್ಯಾಂಕಿನಲ್ಲಿ ಅಡಿಟ್ಟ ಮಾಲುಗಳನ್ನು ತಾ. 23-1-51ರ ಒಳಗೆ ಬಿಡಿಸಿಕೊಂಡು ಹೋಗಬೇಕೆಂದು ರಿಜಿಸ್ಟರ್ಡ್ ನೋಟೀಸ್ ಮುಖಾಂತರ ತಿಳಿಸಿದರೂ ಪತ್ತೆಯಾಗದೆ ವಾಪಾಸು ಬಂದಿರುವುದರಿಂದಲೂ, ಕೆಲವರಿಗೆ ಕಳುಹಿಸಿದ ರಿಜಿಸ್ಟರ್ಡ್ ನೋಟೀಸುಗಳು ವಾಪಸ್ ಬಂದಿರುವುದರಿಂದಲೂ, ಇನ್ನು ಕೆಲವರು ಸೌಕರ್ಯಗಳ ದೃಷ್ಟಿಯಿಂದಲೂ ಸದ್ರಿ ಮಾಲುಗಳನ್ನು ಇದೇ ಫೆಬ್ರವರಿ ಮಾಹೆ 19-2-51 ನೇ ಸೋಮವಾರ ಹಗಲು 11 ಘಂಟೆಗೆ ಬ್ಯಾಂಕಿನ ಆವರಣದಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು. ಅಲ್ಲದೆ ಈ ಮೇಲ್ಕಂಡ ಏಲಂನಲ್ಲಿ ನಷ್ಟ ಸಂಭವಿಸಿದಲ್ಲಿ ಉಳಿದ ಬಾಕಿಗೆ ಅಗತ್ಯವುಳ್ಳ ವ್ಯವಹಾರ ನಡೆಸಲಾಗುವುದೆಂತಲೂ ಈ ಮೂಲಕ ತಿಳಿಸಲಾಗಿದೆ:—

ಸಾಲದ ನಂಬ್ರ	ತಾರೀಖು	ಹೆಸರು ಮತ್ತು ವಿಳಾಸ	ಮೊಬಲಗು		
120/46	16—4—46	ಬಿ ಪಿ. ಮಾದಪ್ಪ, ಕದನೂರು, ವೀರಾಜಪೇಟೆ	28	5	೦
537/46	21-11—46	ಸಯ್ಯದ್ ಗೌಸ್, ಗೋಣಿಕೊಪ್ಪ	35	11	೦
360/47	26—7—47	ಮಹಮ್ಮದ್ ಶಾಕ, ಹೊಟೇಲ್ ಕೀಪರ್ ವೀರಾಜಪೇಟೆ	25	೦	೦
524/47	11-10—47	ಬಿ ನಾರಾಯಣಶೆಟ್ಟಿ, ಸರಾಫ್, ವೀರಾಜಪೇಟೆ	976	11	೦
500/47	26—9—47	ಮುರುವಂಡ್ರ ನಾಣಯ್ಯ, ಟೈಲರ್, ವೀರಾಜಪೇಟೆ	16	೨	೦
206/48	26—4—48	ಅಬ್ದುಲ್ ರಹಿಮಾನ್, ಮರ್ಚೆಂಟ್, ವೀರಾಜಪೇಟೆ	33	13	೦
363/48	24—6—48	ಐಚೆಟ್ಟಿರ ಸೋಮಯ್ಯ S/O ಕರುಂಬಯ್ಯ, ಕದನೂರು, ವೀರಾಜಪೇಟೆ	23	11	೦
603/48	18—9—48	ಕೆ ಕೆ. ಅಬ್ದುಲ್ ಖಾದಿರ್, ಮರ್ಚೆಂಟ್, ಸಿದ್ದಾಪುರ	369	2	೦
25/49	22—1—49	ಎಚ್. ಎಂ. ಎಲ್. ಗೋವರ್ಧನ್‌ಲಾಲ್ C/O ಎಸ್. ರಾಮಲಾಲ್ ವೀರಾಜಪೇಟೆ	68	9	೦
137/49	7-3-49	ದುರ್ಗಯ್ಯಶೆಟ್ಟಿ, ಆಚಾರಿ, ಪೊನ್ನಂಪೇಟೆ	119	11	೦
299/49	23-6-49	ಪಿ ಯಂ ಹುಸೇನ್ S/O ಮೊಹಮ್ಮದ್ ಸಿದ್ದಾಪುರ	100	15	೦
439/49	22-8-49	ಸಿ. ಕೆ ತಿಮ್ಮಯ್ಯ, ಹರಿಹರಗ್ರಾಮ, ಶ್ರೀಮಂಗಲ	35	15	೦
447/49	24-8-49	ಎಂ. ಎಂ. ಅಲಿಸಾಹೆಬ್, ಮರ್ಚೆಂಟ್, ವೀರಾಜಪೇಟೆ	58	13	೦
97/50	8-3-50	ಯಂ. ಯು. ಐಯಣ್ಣ, ಬೆಳ್ಳುಮಾಡು, ಮೂರ್ನಾಡು	55	14	೦
99/50	9-3-50	ಮುಂಡುಮಂಡ ಎಸ್. ನಂಜಪ್ಪ ಕೊಳ್ತೋಡು ಗೋಣಿಕೊಪ್ಪ	139	11	೦
117/50	16-3-50	ಚೊಟ್ಟೆಯಂಡ ಕಾರ್ಯಪ್ಪ ನಾಂಗಾಲ, ವೀರಾಜಪೇಟೆ	93	1	೦
140/50	28-3-50	ಮಾದಗೌಡ S/O ಸುಬ್ಬಯ್ಯಗೌಡ, ಅಮ್ಮಲಗೂಡು ರಾಮಪುರಹೊಳ	188	10	೦
228/50	12-5-50	ಹೆಚ್. ಯುನ್ ಪೊನ್ನಯ್ಯ ಅರ್ಜಿ, ವೀರಾಜಪೇಟೆ	32	9	10
329/50	19-7-50	ಹೆಚ್. ಸಿ ಬೋರಲಿಂಗಯ್ಯ, ಸಾತೂರು ಹಾತೂರು ಪೊನ್ನಂಪೇಟೆ	105	9	8

ದಿ. ಎಗ್ರಿಕಲ್ಚರಲ್ & ಇಂಡಸ್ಟ್ರಿಯಲ್ ಬ್ಯಾಂಕ್, ಲಿಮಿಟೆಡ್., ಬ್ರಾಂಚ್:-ವೀರಾಜಪೇಟೆ.

ಎಸ್. ನಾರಾಯಣರಾವ್.
ಏಜೆಂಟ್.

ಕೊಡಗು

ತಾ. ೧೬-೨-೧೯೫೧ನೇ ಶುಕ್ರವಾರ

೧೯೫೧ರ ಜನಗಣತಿ.

ಜನಗಣತಿ

ಈ ತಾರೀಕು ೯ರಿಂದ ಮಾರ್ಚ್ ತಾರೀಕು ೧೮ರ ವರೆಗೆ ಹಿಂದೂದೇಶದ ಆದ್ಯಂತಕ್ಕೂ ಜನಗಣತಿ ನಡೆಯುತ್ತಿದೆ. ಸ್ವತಂತ್ರ ಭಾರತದಲ್ಲಿ ಇದು ಪ್ರಥಮ ಜನಗಣತಿಯಾಗಿದೆ. ಈ ಜನಗಣತಿಯು ತೀರಾ ಯಶಸ್ವಿಯಾಗಿ ನಡೆಯಬೇಕಾದುದು ಆವಶ್ಯ. ಏಕೆಂದರೆ ಈ ಜನಗಣತಿಯ ಪರಿಣಾಮಕ್ಕನುಸಾರವಾಗಿಯೇ ವಿವಿಧ ಪ್ರಾಂತಗಳ ರಾಜಕೀಯ ಆರ್ಥಿಕ ಮತ್ತು ಸಾಮಾಜಿಕ ಸಮಸ್ಯೆಗಳಿಗನ್ವಯಿಸುವ ಯೋಜನೆಗಳು ಭಾವೀ ಸರಕಾರಗಳಿಂದ ರೂಪಿಸಲ್ಪಡುವವು. ಈ ಜನಗಣತಿಯು ಕೇವಲ ಹಿಂದೂದೇಶದ ಆಂತರಿಕ ಹಿತದ ದೃಷ್ಟಿಯಿಂದ ಮಾತ್ರವಲ್ಲ; ಇದೀ ಜಗತ್ತಿನ ಹಿತದೃಷ್ಟಿಯಿಂದಾಗಿದೆ. ಆದ್ದರಿಂದಲೇ ಜನಗಣತಿಯಲ್ಲಿ ಕೇಳಲ್ಪಡುವ ಬಹುಪೇಕ ಪ್ರಶ್ನೆಗಳು ರಾಷ್ಟ್ರ ಸಂಘದಿಂದ ನಿಶ್ಚಯಿಸಲ್ಪಟ್ಟ ರೀತಿಗಳ ಮೇಲೆ ಆಧರಿತವಾಗಿವೆ

ಹಿನ್ನೆಲೆ

ಜನಗಣತಾ ಪದ್ಧತಿಯು ಹಿಂದಿನ ಕಾಲದಿಂದಲೂ ಜಾರಿಯಲ್ಲಿತ್ತೆಂಬುದು ಚರಿತ್ರೆಯಿಂದ ತಿಳಿದು ಬರುತ್ತದೆ. ಇತಿಹಾಸದ ಲೇಖಕರ ಅಭಿಮತದಂತೆ ಪ್ರಥಮ ಜನಗಣತಿಯು ಯುದ್ಧ ಸಂದರ್ಭಗಳಲ್ಲಿ ತನ್ನ ಪಕ್ಷದಲ್ಲಿ ಎಷ್ಟು ಜನರಿರುವರೆಂಬುದನ್ನು ತಿಳಿಯಲು ಎಣಿಕೆ ಹಾಕುವದರಿಂದ ಪ್ರಾರಂಭವಾಗಿರಬಹುದು. ಹಿಂದಿನ ಕಾಲದ ಅಧಿಕಾರಿಗಳಿಗೆ ತಮ್ಮ ರಾಜ್ಯದ ಎಲ್ಲಾ ಜನಸಂಖ್ಯೆ ಎಷ್ಟೆಂಬುದನ್ನು ತಿಳಿಯುವ ಆವಶ್ಯಕತೆ ಇರಲಿಲ್ಲ. ತಮ್ಮ ಉಪಯೋಗಕ್ಕೆ ಬರುವ ಸೈನಿಕರ ಲೆಕ್ಕದ ಆವಶ್ಯಕತೆ ಮಾತ್ರ ಅವರಿಗಿತ್ತು. ಆದರೆ ಪ್ರಾಚೀನ ಭಾರತದ ಅಶೋಕ, ಚಂದ್ರಗುಪ್ತ, ವಿಕ್ರಮಾದಿತ್ಯ ಮೊದಲಾದ ಅರಸರ ಕಾಲದಲ್ಲಿ ಜನಗಣತಿಯು ಪದ್ಧತಿ ಇತ್ತೆಂಬುದು ಇತಿಹಾಸದಿಂದ ತಿಳಿಯಬರುತ್ತದೆ. ಆದರೆ ಆ ಜನಗಣತಿಗಳು ದೇಶದ ಜನಸಂಖ್ಯೆಯ ಮಾಹಿತಿಯನ್ನು ಸಂಗ್ರಹಿಸಲು ಅಗಿರದೆ ಯುದ್ಧ ಯೋಗ್ಯರಾದವರೆಷ್ಟಿರುವರೆಂಬುದನ್ನು ತಿಳಿಯಲಿಕ್ಕಾಗಿ ಆಗಿದ್ದವು. ೧೭೧೧ರಲ್ಲಿ ಚೀನಾದಲ್ಲಿ ಈ ರೀತಿಯ ಜನಗಣತಿ ನಡೆದ ಉಲ್ಲೇಖವಿದೆ. ಆದರೆ ೧೯ನೇ ಶತಮಾನದಲ್ಲಿ ಬ್ರಿಟನ್, ಭಾರತ, ಅಮೇರಿಕಾ ಮೊದಲಾದ ದೇಶಗಳು ಜನಗಣತಿಯನ್ನು ನಿಶ್ಚಿತ ಸಮಯಗಳಲ್ಲಿ ತೆಗೆಯಲು ಪ್ರಾರಂಭಿಸಿದವು.

ಜನರ ಭೀತಿ

೧೮೦೧ರಲ್ಲಿ ಇಂಗ್ಲೆಂಡಿನ ಪ್ರಥಮ ಜನಗಣತಿ ನಡೆಯಿತು. ಪ್ರಾರಂಭದಲ್ಲಿ ಅಲ್ಲಿಯ ಜನರು ಇದನ್ನು ವಿರೋಧಿಸತೊಡಗಿದ್ದರು. ಜನಗಣತಿಯಿಂದ ದೇಶದ ಜನರ ಮೇಲೆ ದೈವಕೋಪ ಬರುವದೆಂದು ಆಗ ಅವರ ನಂಬಿಕೆ ಇತ್ತು. ಈಗಲೂ ಕೂಡ ಹಿಂದೂದೇಶದಲ್ಲಿ ಇಂಥಾ ಭಾವನೆಗಳಿವೆ. ಜನರು ನೆರೆದಿರುವಾಗ, ಕುಟುಂಬದ ಜನರು ಒಂದೆಡೆ ಸೇರಿದ್ದಾಗ ಲೆಕ್ಕ ಕೂಡಿಸುವದು ಅಶುಭವೆಂಬ ಭಾವನೆ ಈಗಲೂ ಇದೆ. ಆದರೆ ಈ ಭಾವನೆಗಳು ದೂರವಾಗ ತೊಡಗಿವೆ. ದೇಶದ ಪರಿಜ್ಞಾನವು ಪೂರ್ಣ ದೊರೆಯಬೇಕಾದರೆ ಈ ಜನಗಣತಿಯು ಎಷ್ಟು ಅತ್ಯಾವಶ್ಯವೆಂಬುದು ಈಗ ಸರ್ವರಿಗೆ ಮನವರಿಕೆಯಾಗಿದೆ.

ಜಗತ್ತಿನ ಜನಗಣತಿ.

ಕೆಲವು ಸಮಯದ ಹಿಂದೆ ರಾಷ್ಟ್ರಸಂಘವು ಜಗತ್ತಿನ ವಿವಿಧ ರಾಷ್ಟ್ರಗಳ ಜನಗಣತಿಯನ್ನು ತೆಗೆದು ಸಂಗ್ರಹಿಸುವ ನಿರ್ಧಾರಮಾಡಿ ಒಂದು ಸಮಿತಿಯನ್ನು ನೇಮಿಸಿತು. ಈ ಸಮಿತಿಯು ಆಯಾ ದೇಶದ ಹಳ್ಳಿಯ ಹಾಗೂ ನಗರಗಳ ಜನಸಂಖ್ಯೆಯನ್ನು ಪ್ರತ್ಯೇಕ ವರ್ಗೀಕರಿಸುವರು. ಜಗತ್ತಿನ ಜನಸಂಖ್ಯೆಯನ್ನು ಯೋಗ್ಯ ರೀತಿ ಸಂಗ್ರಹಿಸಲು ರಾಷ್ಟ್ರಸಂಘದ ಸಮಿತಿಯು ವಿವಿಧ ಯೋಜನೆಗಳನ್ನು ಮಾಡಿತು. ಈ ಯೋಜನೆಗಳಿಗನುಸಾರ ಅಮೇರಿಕಾ, ಭಾರತ, ಪಾಕಿಸ್ಥಾನ ಮೊದಲಾದುವು ಜನಗಣತಿಯನ್ನು ಮಾಡುತ್ತಿವೆ. ಜನಗಣತಿಯ ಆವಶ್ಯಕತೆ ಮತ್ತು ಉಪಯೋಗದ ಪರಿಚಯ ಎಲ್ಲರಿಗಿದ್ದರೂ ಜಗತ್ತಿನ ಐದರಲ್ಲಿ ಮೂರು ಅಂಶದ ರಾಷ್ಟ್ರಗಳಲ್ಲಿ ಮಾತ್ರ ತೃಪ್ತಿಕರವಾದ ಜನಗಣತಿಯಾಗಿದೆ. ಉಳಿದ ಹಲವು ರಾಷ್ಟ್ರಗಳ ಉದಾಸೀನತೆ, ಅಸಹಕಾರಗಳಿಂದ ಜಗತ್ತಿನ ಜನಸಂಖ್ಯೆಯು ಇಷ್ಟೆಂದು ನಿರ್ದಿಷ್ಟವಾಗಿ ಹೇಳಲು ಬರುವಂತಿಲ್ಲ. ಇಂದು ನಾವು ಹೇಳುತ್ತಿರುವ ೨೦೦ ಕೋಟಿ ಜನಸಂಖ್ಯೆಯು ಕೇವಲ ಅಂದಾಜಿನ ಲೆಕ್ಕ.

ಕಳೆದ ಜನಗಣತಿ

ಭಾರತದಲ್ಲಿ ಕಳೆದ ಜನಗಣತಿಯು ೧೯೪೧ರಲ್ಲಿ ನಡೆಯಿತು. ಆಗ ಹಿಂದೂದೇಶದ, ಜನಸಂಖ್ಯೆಯು ೪೦ ಕೋಟಿ ಎಂದು ಲೆಕ್ಕ ಹಾಕಲ್ಪಟ್ಟಿತು. ಆ ಜನಗಣತಿಯ ಅನುಸಾರ ಹಿಂದೂದೇಶವನ್ನು ೧೭ ಪ್ರಾಂತಗಳು, ೩೩ ದೊಡ್ಡ ಸಂಸ್ಥಾನಗಳು, ೨೩೧ ಜಿಲ್ಲೆಗಳು, ೭೬೪ ದೊಡ್ಡ ಮುನ್ಸಿಪಾಲಿಟಿ (೧೦,೦೦೦ಕ್ಕೆ ಹೆಚ್ಚು ಜನಸಂಖ್ಯೆ ಇರುವವು) ೬೪೦ ನಗರಗಳು, ೪,೫೯,೨೯೧ ದೊಡ್ಡ ಗ್ರಾಮ (೫೦೦೦ಕ್ಕೆ ಮಿಕ್ಕಿ ಜನಸಂಖ್ಯೆ ಇರುವವು) ೯೭೯ ಚಿಕ್ಕ ಮುನ್ಸಿಪಾಲಿಟಿ (೬,೦೦೦ಕ್ಕೆ ಕಡಿಮೆ ಜನಸಂಖ್ಯೆಯವು) ಮತ್ತು ೧,೯೬,೫೦೧ ಚಿಕ್ಕ ಗ್ರಾಮ (೫೦೦೦ ಜನಸಂಖ್ಯೆಗೆ ಕಡಿಮೆ ಇರುವವು) ಎಂದು ವಿಭಾಗಿಸಲಾಗಿತ್ತು. ಆದರೆ ಕಳೆದ ಜನಗಣತಿಯ ನಂತರ ಹಿಂದೂ ದೇಶವು ವಿಭಾಗವಾಗಿದೆ. ಹಿಂದಿನ ನೂರಾರು ಸಂಸ್ಥಾನಗಳು ಇಂದಿಲ್ಲ. ಈ ವರೆಗಿನ ಲೆಕ್ಕದಂತೆ ಪ್ರತಿ ಜನಗಣತಿಯಲ್ಲಿ ಭಾರತದ ಜನಸಂಖ್ಯೆಯು ಶೇಕಡ ೧೦ ರಷ್ಟು ಹೆಚ್ಚುತ್ತಿರುವದು ಕಂಡುಬಂದಿದೆ. ಆ ಲೆಕ್ಕ ಪ್ರಕಾರ ಇಂದು ಹಿಂದೂದೇಶದ ಜನಸಂಖ್ಯೆ ೩೫ ಕೋಟಿಯನ್ನು ಮೀರಬಹುದೆಂದು ಅಂದಾಜು ಮಾಡಲಾಗಿದೆ. ಜಗತ್ತಿನಲ್ಲೇ ದೊಡ್ಡದೆನಿಸಿದ ಈ ಜನಗಣತಿಯನ್ನು ಮಾಡಲು ೬ ಲಕ್ಷ ಎನ್ಯುಮರೇಟರುಗಳು ತಾ. ೯ ರಿಂದ ಬದ್ಧಕಂಕಣರಾಗಿ ದುಡಿಯುತ್ತಿದ್ದಾರೆ.

ಪಾಕಿಸ್ತಾನದಲ್ಲಿ

ಭಾರತದಂತೆಯೇ ಪಾಕಿಸ್ತಾನದಲ್ಲೂ ಫೆಬ್ರವರಿ ೯ ರಿಂದ ಜನಗಣತಿ ನಡೆಯುತ್ತಿದೆ, ೨೫,೦೦೦ ಎನ್ಯುಮರೇಟರುಗಳು ಅಲ್ಲಿ ಕೆಲಸ ಪ್ರಾರಂಭಿಸಿದ್ದಾರೆ. ಬಲೂಚಿಸ್ಥಾನ, ಉತ್ತರ ಸಿಂಧ್ ಮೊದಲಾದ ಮರುಭೂಮಿ ಸದೃಶಭಾಗಗಳಲ್ಲಿ ಜನಗಣತಿ ಮಾಡಲಿಕ್ಕಾಗಿ ಎನ್ಯುಮರೇಟರಗಳಿಗೆ ಕುದುರೆ, ಒಂಟೆಗಳ ಸಹಾಯವನ್ನು ಒದಗಿಸಿದ್ದು ಅವರು ಅತಿ ಪರಿಶ್ರಮದಿಂದ ದುಡಿಯುತ್ತಿದ್ದಾರೆ. ಪಾಕಿಸ್ಥಾನದ ಪ್ರಶ್ನಾವಳಿಗೂ ಭಾರತದ ಪ್ರಶ್ನಾವಳಿಗೂ ಸ್ವಲ್ಪ ಭೇದವಿದೆ. ಯಾವ ಧರ್ಮದವರೆಂಬ ಪ್ರಶ್ನೆಗೆ ಅವರು ಪ್ರಾಮುಖ್ಯತೆ ಕೊಟ್ಟಿದ್ದಾರೆ. ಭಾರತ ಸರಕಾರದಂತೆಯೇ ಅದೇ ಸಮಯದಲ್ಲಿ ಪಾಕಿಸ್ತಾನವೂ ಜನಗಣತಿ ಮಾಡುವುದರಿಂದ ಹಿಂದೂಸ್ಥಾನ, ಪಾಕಿಸ್ಥಾನಗಳ ಸರಿಯಾದ ಜನಲೆಕ್ಕವು ದೊರೆಯುವದರಲ್ಲಿ ಸಂಶಯವಿಲ್ಲ.

ಸರ್ವಸಹಾಯ ಅಗತ್ಯ.

ಭಾರತದಲ್ಲಿ ಜನಗಣತಿಯನ್ನು ಮಾಡುವ ಜವಾಬ್ದಾರಿ ಹೊತ್ತಿರುವ ಎನ್ಯುಮರೇಟರೆಲ್ಲರೂ ಗೌರವಾರ್ಥ ಕೆಲಸ ಮಾಡುವರು. ಇಂಥ ಈ ಗೌರವ ಕೆಲಸದಿಂದಾಗಿ ಜನಗಣತಿಯ ಖರ್ಚು ಹಿಂದೂದೇಶದಲ್ಲಿ ಎಲ್ಲ ದೇಶಗಳಿಗಿಂತಾ ಕಡಿಮೆಯಾಗಿದೆ. ಈ ಎನ್ಯುಮರೇಟರುಗಳು ದೇಶಹಿತದೃಷ್ಟಿಯಿಂದ ಪ್ರತಿ ಮನೆಬಾಗಿಲಿಗೆ ಬಂದು ಲೆಕ್ಕ ತೆಗೆಯುತ್ತಾರೆ. ಅವರು ಕೇಳುವ ಪ್ರಶ್ನೆಗಳನ್ನು ಅರಿತುಕೊಂಡು ಅವರಿಗೆ ಸಮರ್ಪಕ ಉತ್ತರಕೊಟ್ಟು ದೇಶದ ಈ ಮಹಾಕಾರ್ಯದಲ್ಲಿ ಸಹಕರಿಸುವದು ಪ್ರತಿಯೊಬ್ಬನ ಕರ್ತವ್ಯವಾಗಿದೆ. ಏಕೆಂದರೆ ಪ್ರತಿ ಎನ್ಯುಮರೇಟರುಗಳು ಸರಿಯಾದ ಲೆಕ್ಕ ಬರೆಯುವ ಅನುವಾದರೆ ಮಾತ್ರ ಕೊಡಗಿನ ಯಾ ಹಿಂದೂದೇಶದ ಜನಸಂಖ್ಯೆಯ ಸರಿಯಾದ ಲೆಕ್ಕ ದೊರೆಯುವದು. ಒಬ್ಬ ಎನ್ಯುಮರೇಟರನ ಲೆಕ್ಕ ತಪ್ಪಿದರೆ ಇಡೀ ಲೆಕ್ಕ ತಪ್ಪುವದು. ಆದ್ದರಿಂದ ಪ್ರತಿಯೊಬ್ಬನೂ ಸಹಕರಿಸಿ ಈ ಜನಗಣತಿಯು ಸರಿಯಾಗಿ ಆಗುವಂತೆ ಪ್ರಯತ್ನಿಸಬೇಕು. ಏಕೆಂದರೆ ಮುಂಬರುವ ಹತ್ತು ವರ್ಷಗಳ ವರೆಗೆ ಈ ಜನಗಣತಿಯ ಅಂಕೆಸಂಖ್ಯೆಗಳೇ ಆಡಳಿತ, ರಾಜಕೀಯ, ಆರ್ಥಿಕ ಯಾ ಸಾಮಾಜಿಕ ಕ್ಷೇತ್ರಗಳಲ್ಲಿ ಉಪಯೋಗಿಸಲ್ಪಡುವವು. ಈ ಅಂಕೆಸಂಖ್ಯೆಗಳ ತಳಹದಿಯ ಮೇಲೆಯೇ ಪ್ರಾಂತಗಳಾಗಲೀ, ಬೃಹದ್ರಾಷ್ಟ್ರವಾಗಲೀ ಆಳಲ್ಪಡುವವು.

ವರ್ತಮಾನ.

೧೯೫೦ರಲ್ಲಿ ನಡೆದ ಮೈಸೂರು ಆಯುರ್ವೇದ ಕಾಲೇಜಿನ ಎಲ್. ಎ. ಎಂ. ಎಸ್. ಪರೀಕ್ಷೆಯಲ್ಲಿ ಪ್ರಥಮ ತರಗತಿಯಲ್ಲಿ ಶ್ರೀ ಕೆ. ಎಸ್. ಶಿವರಾಮ ಇವರು ತೇರ್ಗಡೆಯಾಗಿ ಶ್ರೀ ಸಿ ಆರ್. ರೆಡ್ಡಿ ಚಿನ್ನದ ಪದಕವನ್ನು ಪಡೆದಿರುವರು.

ಸೆಟ್ಲ್‌ಮೆಂಟ್ ಆಫೀಸರು ತಾ ೧೯ರಲ್ಲಿ ಹುದಿಕೇರಿಯಲ್ಲೂ, ೨೦, ೨೧ ರಲ್ಲಿ ತೆರಾಲಿನಲ್ಲೂ, ತಾ ೨೨, ೨೩, ರಲ್ಲಿ ಕುಟ್ಟದಲ್ಲೂ, ತಾ. ೨೪ರಲ್ಲಿ ಶ್ರೀಮಂಗಲದಲ್ಲೂ ಇರುವರು.

ಕೊಡಗಿನ ಹೆಸರಿನಲ್ಲಿ ಕಾಶಿಯಲ್ಲಿ ಶ್ರೀ ಸ್ವಾಮಿ ಸುಬೋಧಯಾನಂದಜೀಯವರಿಂದ ಸ್ಥಾಪಿಸಲ್ಪಟ್ಟಿರುವ ಅಗಸ್ತ್ಯಮಂದಿರದ ಆರನೆ ವಾರ್ಷಿಕೋತ್ಸವವು ತಾ. ೨೧-೨-೫೧ರಲ್ಲಿ ನಡೆಯುವದು.

ಮುಂದರಿಸಲ್ಪಟ್ಟ ಗೋಣಿಕೊಪ್ಪಲು ಜಾನುವಾರುಗಳ ಜಾತ್ರೆಯು ತಾರೀಕು ೨೭-೨-೫೧ ರಿಂದ ೨೫-೨-೫೧ರ ವರೆಗೆ ನಡೆಯುವುದು.

ಸ್ಕೂಲ್ ಫೈನಲ್ ಪಾಸಾಗಿ ೧೮ ರಿಂದ ೨೧ರ ವರೆಗಿನ ವಯಸ್ಸಿನವರು ವಿಮಾನ ದಳಕ್ಕೆ ಸೇರಲು ಬೇಕಿರುವರೆಂದೂ ಹೆಚ್ಚಿನ ಮಾಹಿತಿಯನ್ನು ಎಂಪ್ಲಾಯಿಮೆಂಟ್ ಆಫೀಸಿನಿಂದ ತಿಳಿದುಕೊಳ್ಳಬಹುದೆಂದೂ ತಿಳಿಸುತ್ತಾರೆ.

ತಾರೀಕು ೧೦ ಮತ್ತು ೧೧ ರಲ್ಲಿ ಮೈಸೂರಿನ ಸನ್ನಿಸೈಡ್ ಕ್ಲಬಿನವರಿಗೂ ಕೊಡಗಿನ ಕಂಬೈಂಡ್ ಇಲೆವೆನ್ ಟೀಮಿನವರಿಗೂ ಮಡಿಕೇರಿಯಲ್ಲಿ ಕ್ರಿಕೆಟ್ ಆಟ ನಡೆಯಿತು. ಮೈಸೂರಿನವರು ೩೫೪ ರನ್ನುಗಳನ್ನೂ, ಕೊಡಗಿನವರು ೨೬೧ ರನ್ನುಗಳನ್ನೂ ಮಾಡಿದರು. ಮೈಸೂರು ಟೀಮು ಜಯವನ್ನು ಪಡೆಯಿತು.

ಮಡಿಕೇರಿಯಲ್ಲಿರುವ ಕರ್ನಲ್ ಮೆಕ್‌ಫರ್ಸನ್‌ರವರ ಪೂರ್ವಿನ್ ಲಾಡ್ಜ್ ಬಂಗ್ಲೆಯನ್ನು ತನಗೆ ಮಾರಾಟ ಮಾಡಲು ಒಪ್ಪಿ ನಂತರ ಒಪ್ಪಂದವನ್ನು ಮುರಿದು ಶ್ರೀ ನಿತ್ಯಮಲೆ ಮುದ್ದಪ್ಪನವರಿಗೆ ಮಾರಿದರೆಂಬ ಬಗ್ಗೆ ಶ್ರೀ ಮುಕ್ಕಾಟಿರ ಅಪ್ಪಣ್ಣನವರು ಹೂಡಿದ್ದ ಕೇಸು ಬೆಂಗಳೂರಿನಲ್ಲಿ ವಿಚಾರವಾಗಿ ಶ್ರೀ ಅಪ್ಪಣ್ಣನವರಿಗೆ ಒಪ್ಪಂದ ಮುರಿದ ಕಾರಣ ಮೆ. ಕ್ ಫರ್ಸನ್ನರು ರೂ ೩,೦೦೦ ಕೊಡಬೇಕಾಗಿ ನಿರ್ಣಯವಾಗಿತ್ತು. ಆ ನಿರ್ಣಯದ ಮೇಲೆ ಮೆಕ್‌ಫರ್ಸನ್‌ರವರು ಪ್ರಿವೀ ಕೌನ್ಸಿಲಿಗೆ ಅಪೀಲು ಮಾಡಿದ್ದು ಅದು ದೆಹ್ಲಿಯ ಸುಪ್ರೀಮ್ ಕೋರ್ಟಿನಲ್ಲಿ ವಿಚಾರವಾಗಿ ಕೆಳಗಿನ ಕೋರ್ಟಿನ ತೀರ್ಮಾನವು ತಪ್ಪೆಂದೂ ಈ ಮೊಕದ್ದಮೆಯಲ್ಲಿ ಒಪ್ಪಂದ ಮುರಿದ ತಕ್ಸೀರಿಲ್ಲವೆಂದೂ ತೀರ್ಮಾನ ಕೊಡಲಾಗಿದೆ.

ಮೈಸೂರಿನ ಶ್ರೇಷ್ಠ ನ್ಯಾಯಾಧಿಪತಿಗಳಾದ ಶ್ರೀ ಪ ಲೇಕಂಡ ಮೇದಪ್ಪನವರ ಆಳುಗಳನ್ನು ಬಗಲಿಗೆ ಹಾಕಿಕೊಂಡು ಅವರ ಮೂಲಕ ಅವರಿಗೆ ಕೊಡುವ ಚಹಾದಲ್ಲಿ ವಿಷ ಬೆರೆಸಿ ಅವರ ಕೊಲೆ ಮಾಡಲೆತ್ನಿಸಿದರೆಂದೂ, ಸೇವಕರು ಒಳಗೊಳಗೆ ಗುರು ಗುಟ್ಟುತಿದ್ದುದರಿಂದ ಅನುಮಾನವಾಗಿ ಮೇದಪ್ಪನವರು ಚಹಾ ಕುಡಿಯದೆ ಅದನ್ನು ಪರೀಕ್ಷೆ ಮಾಡಿಸಲಾಗಿ ಅದರಲ್ಲಿ ಸುಮಾರು ೧೫೦ ಮಂದಿಯ ಪ್ರಾಣ ತೆಗೆಯಲು ಸಾಕಾದಷ್ಟು "ಮರ್ಕ್ಯೂರಿಕ್ ಕ್ಲೋರೈಡ್" ವಿಷವಾಗಿತ್ತೆಂದೂ, ತನಿಖೆ ನಡೆಯುತ್ತಿದೆಯೆಂದೂ 'ಸಂಯುಕ್ತ ಕರ್ನಾಟಕ' ಪತ್ರಿಕೆಯಲ್ಲಿ ಪ್ರಕಟವಾಗಿದೆ.

ಸ್ಥಳೀಯ ಸರಕಾರವು ಬತ್ತಕ್ಕೆ ಹೆಚ್ಚಿನ ಬೆಲೆ ದೊರೆಯಬೇಕೆಂದು ಶಿಫಾರಸ್ಸು ಮಾಡಿ ಕಳುಹಿಸಿದುದನ್ನು ಕೇಂದ್ರ ಸರಕಾರವು ಒಪ್ಪಿಲ್ಲವೆಂದೂ ಕೊಡಗಿನಲ್ಲಿ ಬತ್ತದ ಕ್ರಯವು ಜೀರಿಗೆ ಸಣ್ಣ ಗಾಡಿಗೆ ರೂ ೨೩೨. ಕೊಯಮತ್ತೂರು ಸಣ್ಣ ೧೮೭. ಬಿಳಿಯ, ಕಂಬತ್ತಿ, ಮುಳ್ಳ ರೂ. ೧೭೯. ದೊಡ್ಡ ಮತ್ತು ಕರ್ತ ರೂ. ೧೭೨ ಎಂದು ನಿಶ್ಚಯಿಸಲ್ಪಟ್ಟಿದೆ.

ಓದುಗರ ಓಲೆಗಳು

'ಕೈತ' ಪುನರಾಲೋಚಿಸಲಿ.

'ಅಧಿಕಾರಿಗಳ ಜೀವದಾನ' ಎಂದು ಕೈತ ಬರೆದರು. ಪ್ರತಿಯೊಬ್ಬನಿಗೂ ಒಂದೊಂದು ಅಭಿಪ್ರಾಯ. ಹಾಗೇ 'ಕೈತ'ನೂ 'ಡೈರೆಕ್ಟ್ ರಿಕ್ರೂಟ್‌ಮೆಂಟ್' ಆಗಲಿ ಎಂದರು ಅಷ್ಟೆ.

ಆದರೆ ಈಗ ಹೋಗುವ ಮೂರು ಅಧಿಕಾರಿಗಳು ಸಾಮಾನ್ಯವಾಗಿ ಇಂಥವರೇ ಎಂದು ಗೊತ್ತಿದೆ. ಇವರು ಮೂವರು ನಿವೃತ್ತರಾದರೆ ಭಾರತದ ನಿರುದ್ಯೋಗಿಗಳಲ್ಲಿ ಮೂರು ಜನರು ಹೇಗೋ ಎಲ್ಲೋ ಏನೋ ಭರ್ತಿಯಾದಾರು. ಅಷ್ಟಕ್ಕಾದರೂ ನಿರುದ್ಯೋಗ ಕಮ್ಮಿಯಾದೀತು. ಆರಣ್ಯ ಖಾತೆ ಎಲ್ಲೆಲ್ಲೂ ಒಂದೆ. ಅದು ವ್ಯತ್ಯಾಸವಿಲ್ಲ. ಎಡಮಿನಿಸ್ಟ್ರೇಶನ್ ಸಹ ಅಷ್ಟೆ. ಆದರೆ ವಿದ್ಯಾಖಾತೆ ಹಾಗಲ್ಲ 'ಕೈತ'ರೇ!

ಡೈರೆಕ್ಟ್ ರಿಕ್ರೂಟ್ ಮಾಡಿದಂದ ವಿದ್ಯಾಧಿಕಾರಿಗೆ ಕೊಡಗಿನ ಶಾಲೆಗಳ ಪರಿಚಯಕ್ಕೆ, ಅಲ್ಲಿಯ ಬಾಲಕ ಬಾಲಕಿಯರ ವಿಚಾರ, ದೃಷ್ಟಿಕೋನಗಳನ್ನು ಅರ್ಥಮಾಡಿಕೊಳ್ಳಲಿಕ್ಕೆ; ಈ ತರದ ಇತರ ಸಂಗತಿಗಳಿಗೆ ಅನೇಕ ಕಾಲ ಹಿಡಿಯುತ್ತೆ. ಈ ಪರಿಸ್ಥಿತಿಯಲ್ಲಿ ಹೊಸ ವೈದ್ಯನಿಗಿಂತ ಹಳೇ ರೋಗಿಯೇ ಮೇಲೆಂಬುದು ಸಹಜವಾಗಿ ಕಾಣುವುದು. ಆದ್ದರಿಂದ ವಿದ್ಯಾಧಿಕಾರಿ ನಮ್ಮಗೆ ಕೊಡಗಿನವರೇ ಆಗಬೇಕು. ಜೀವದಾನ ಕೊಟ್ಟರೂ ಚಿಂತೆಯಿಲ್ಲ; ಕೊಡಗಿನವರೇ ಆಗಬೇಕೆಂಬುದು ನನ್ನ ಅಭಿಪ್ರಾಯ. 'ಕೈತ'ರೂ [illegible] ತಿಳಿಯಲಪೇಕ್ಷಿಸುವ.

'ವಿರಾಜ'

"ವಿರಾಜ"ರಿಗೆ

ನಾನು ತಾ. ೨-೨-೧೯೫೧ ರ ಪತ್ರಿಕೆಯಲ್ಲಿ 'ಅಧಿಕಾರಿಗಳ ಜೀವದಾನ'ವೆಂಬ ಬರೆದ ಲೇಖನದ ಬಗ್ಗೆ 'ವಿರಾಜ'ರೆಂಬುವರು ನಾನು ಪುನರಾಲೋಚಿಸಬೇಕೆಂದು ಬರೆದ ಓಲೆಯ ಪ್ರತಿಯನ್ನು ನನಗೆ ಕಳುಹಿಸಿ ಈ ಉತ್ತರ ಕೊಡ ಮಾಡಿದ ಸಹಕರಿಸಿದ ಸಂಪಾದಕರಿಗೆ ನಾನು ಚಿರಋಣಿಯು.

ವಿದ್ಯಾಧಿಕಾರಿಯ ಬಗ್ಗೆ ಡೈರೆಕ್ಟ್ ರಿಕ್ರೂಟ್‌ಮೆಂಟ್ ಬೇಡವೆಂದೂ ಅವರಿಗೆ ಜೀವದಾನ ಕೊಡಬಹುದೆಂದೂ 'ವಿರಾಜ'ರು ಹೇಳಿ ಅದಕ್ಕೆ ಅವರು ಕೊಡುವ ಕಾರಣವನ್ನು ನೋಡಿದರೆ ಇವರ ಲೇಖನವು ಕೇವಲ ನೆಚ್ಚುಗೆಯ [illegible] ಕಾಣುತ್ತದೆ. ಡೈರೆಕ್ಟ್ ರಿಕ್ರೂಟ್‌ಮೆಂಟ್ ಮಾಡಬೇಕೆಂದು ನಾನು ಹೇಳಿದ್ದು ಯೋಗ್ಯ [illegible] ದೊರೆಯಬಹುದಾಗ ಮಾತ್ರ. ಈಗಿನವರಿಗೆ ವಿಶೇಷ ಪರಿಶ್ರಮವಿದೆಯೆಂದೂ ಅವರ ಸೇವೆ ಅನಿವಾರ್ಯವೆಂದೂ 'ವಿರಾಜ'ರು ಅನ್ನುವದಾದರೆ ಇವರ ಮೊದಲಿದ್ದ ವಿದ್ಯಾಧಿಕಾರಿಗಳಿಗೆ ಭಿನ್ನವಾಗಿ ಪ್ರಗತಿಶೀಲವಾದ ಕಾರ್ಯಕ್ರಮಗಳೇನಾದರು ಇವರಿಂದ ಸಾಧಿಸಲ್ಪಟ್ಟಿದ್ದರೆ 'ವಿರಾಜ'ರು ಉಲ್ಲೇಖಿಸಲಿ. ಇವರು ಈ ವರೆಗೆ ಮಾಡಿದಂತೆ ಕೆಲಸವನ್ನು ಮುಂದುವರಿಸಿಕೊಂಡು ಹೋಗುವ ಯೋಗ್ಯತೆಯುವರು ಕೊಡಗಿನಲ್ಲಿ ಬಹುಮಂದಿ ಇರಬಹುದು. ಹೊಸಬರು ಬಂದರೆ ಕೊಡಗಿನ ಶಾಲೆಗಳ ಪರಿಚಯ ಮಾಡಿಕೊಳ್ಳಲಿಕ್ಕೆ ಅನೇಕ ಕಾಲಹಿಡಿಯುತ್ತೆ ಎಂದಿರುವದು ಆಶ್ಚರ್ಯದ ವಿಚಾರ. ಪ್ರಗತಿಶೀಲ ವಿದ್ಯಾಭ್ಯಾಸವು ಎಲ್ಲೆಡೆಯಲ್ಲೂ ಒಂದೆ. ಪಾಠ ಹೇಳುವವರು ಅಧ್ಯಾಪಕರಲ್ಲದೆ ವಿದ್ಯಾಧಿಕಾರಿಗಳಲ್ಲ. ವಿದ್ಯಾಧಿಕಾರಿಗಳು ನಿರೀಕ್ಷಕರು ಮಾತ್ರ! ಈಗಿನ ವಿದ್ಯಾಧಿಕಾರಿಗಳು ಇಂಗ್ಲೆಂಡ್ ವಿದ್ಯಾಪಾರಂಗತರಾಗಿ ಇಂದಿನ ಸ್ವಾತಂತ್ರ್ಯ ಯುಗದಲ್ಲೂ ಕೂಡ ಇಂಗ್ಲೀಷೇ ಪ್ರಧಾನ, ಶೇಕ್ಸ್‌ಪಿಯರನೇ ಸರ್ವಸ್ವವೆಂಬ ಮನೋವೃತ್ತಿಯುಳ್ಳವರಾದುದೆಂಬುದು 'ವಿರಾಜ'ರಿಗೆ ತಿಳಿದಿರಲಾರದು. ಬೇರೆ ಯಾರು ಬಂದರೂ ಕೂಡ ಇವರು ಭಾರತೀಯ ಸಂಸ್ಕೃತಿಗೆ ಇವರಷ್ಟು ದೂರವಿದ್ದಾರೆಯೇ?

ಕೈತ.

'ಕೊಡಗಿನ ಎರಡು ಮುಖಗಳು'

'ಆಪತ್ತಿಗೆ ರಕ್ಷಣೆ ಏನು?' ಅಂದಂತೆ 'ನವಯುಗದ' ವಿಶೇಷ ಸುದ್ದಿಗಾರರ ಕಥೆ.

'ಕೊಡಗು ದೇಶವನ್ನು 'ಕಾಡಿನ ಕೊಡಗು, ಕಡಿಯದ ಕಾಡ, ಕಡಿದಾದ ಕಾಡು.......ಕೊಡಗು ಬೆಡಗಿನ ಹೆಣ್ಣು'.... ಈ ಜಾತಿಯಾದ ಯೌವನಕ್ಕೆ ಸರಿಯಾದ ಗತಿ ಇಂದು ಬೇಕಾಗಿದೆ' ಎಂದು [illegible] ಹೊಗಳುತ್ತಾ, ರಾವಣನು ಸೀತೆಯನ್ನು ಮೋಹಿಸಿ ಹಿತಘಾತುಕನಾದಂತೆ ತಲೆಯ ಮೇಲೆ ಕಳಚಿಕೊಂಡ ಬಿದ್ದಂತೆ [illegible] ಹಾಸ್ಯಕ್ಕೆಡೆಯಿತ್ತಂತೆ, ಈ ಸುದ್ದಿಗಾರರಿಗೇಕೆ ಕೊಡಗಿನ ಹೆಣ್ಣು? ಜನರಲ್ ಕಾರ್ಯಪ್ಪನವರೊಡನೆ ಸೈನ್ಯದ ಸಂಗತಿ ಬಿಟ್ಟು ರಾಜಕೀಯ ಮಾತೇಕೆ? ಆ ಜನರಲ್‌ರವರೊಡನೆ ಅಪಚಾರದ ಮಾತುಗಳನ್ನಾಡಿದ್ದರಿಂದಲೇ ಆ ಪಾಪದ ಸುದ್ದಿಗಾರರಿಗೆ ಸಂಕಟವಾಗಿದ್ದಲ್ಲಿ ಕಿತ್ತಳೆ ಹಣ್ಣು ತಿಂದು ತೇಗನವರಿಗೆ ಹೃದಯದ ಕೊರಗು ನಿಲ್ಲಲಿಲ್ಲ!

ಅಪಪ್ರಚಾರವಾದರೂ ಅದಕ್ಕೊಂದು ರೀತಿ ಇಲ್ಲವೇ? ಆಗ್ಗೆಯನ್ನು ಆಂಗಾಲು ಎಂದರೆ ಅದು ಸರಿ ಹೋಗಲಾರದು. 'ವೃದ್ಧಾಶ್ರಮ ನೆಲೆವೀಡಿನಲ್ಲಿ (ಕೊಡಗಿನಲ್ಲಿ) ಅರೆಬೆತ್ತಲೆಯಾದ ಜೀತಗಾರರನ್ನು ಕಂಡೆವು' ಎಂಬುದು ಆ ಸುದ್ದಿಗಾರರ ಸುದ್ದಿ. ಇವರಲ್ಲಿ ವಿಶೇಷವೇನಿದೆ? ಅರೆಬೆತ್ತಲೆಯ ದುಡಿತಗಾರರಿಲ್ಲದ ಊರು ಯಾವುದಿದೆ? ಕೊಡಗಿನಲ್ಲಿ ಕೊಡಗಿನವರೇ ಆದ ಭಿಕ್ಷುಕರಾಗಲೀ, ನಿತ್ಯದರಿದ್ರರಾಗಲೀ ಇಲ್ಲವೆಂಬುವವನ್ನು ಸುದ್ದಿಗಾರರು ತಿಳಿಯದೆ ಇರುವುದು ಯಾರ ತಪ್ಪು? ಈ ಸುದ್ದಿಗಾರರ ಊರಿನಲ್ಲಿ ಸರ್ವಸುಭಿಕ್ಷವಾಗಿದ್ದರೆ ಆ ಕಡೆಗಳಿಂದ 'ಕಡಿಯದ ಕಾಡಿನ ಕೊಡಗಿಗೆ' ಅರೆಬೆತ್ತಲೆ ಜನರೇಕೆ ಓಡಿಬರಬೇಕು? ಹಲವು ಕಾರಣಗಳಿಂದ ಕೊಡಗಿನ ನೆರೆಹೊರೆಗಳಲ್ಲಿ ತುತ್ತನ್ನಕ್ಕೆ ಸಹ ಇಲ್ಲದೆ ಹರಿಜನರು ಇಲ್ಲಿಗೆ ಬಂದು ನೆಲಸಿ ಜೀತ ಮಾಡಿ ಬಾಳುತ್ತಿರುವರು. ಇಲ್ಲಿಗೆ ಬಂದವರ ಸ್ಥಿತಿ ಹೊರಗಿರುವವರ ಸ್ಥಿತಿಗಿಂತಾ ನೂರು ಪಾಲು ಉತ್ತಮ.

ಹಿಂದೂದೇಶವನ್ನು ಎಷ್ಟು ಸಂಗಡವರು ಆಳಲಿಲ್ಲ? ಮುಸ್ಲಿಮರು 'ಮುಸ್ಲಿಂ ಇಂಡಿಯಾ' ಅನ್ನುತ್ತಿದ್ದರು; ಆಂಗ್ಲರು 'ಬ್ರಿಟಿಷ್ ಇಂಡಿಯಾ' ಅನುತ್ತಿದ್ದರು. ಅಂದಮಾತ್ರಕ್ಕೆ ಇಂಡಿಯಾ ದೇಶವು ಭಾಷೆಗಳವರ ದೇಶವಾಗಲಿಲ್ಲ. ಕನ್ನಡ ಬಳಕೆಯಲ್ಲಿರುವ ಕೊಡಗು ಕರ್ನಾಟಕವಾದೀತೆ?

ಇನ್ನು ಕೊಡಗಿನ ಆದಾಯ, ಪ್ರಗತಿ ವೈದ್ಯಕೀಯ ಸಲಕರಣೆ, ವಿದ್ಯಾಭ್ಯಾಸಕ್ಕೆ ಆನೇನ ಕೊಲಕೆಗಳ ವಿಚಾರವಾಗಿ 'ಸುದ್ದಿಗಾರರ' ಉಲ್ಲೇಖಿಸಿದ್ದುದನ್ನು ನೋಡಿದರೆ 'ಅಯ್ಯೋ ಪೆಚ್ಚೇ?' ಅಂದು ಹೋಗತ್ತೆ ಬಾಯಿಯಿಂದ! ಮೂರುದಿನದ ವಾಯು ಸಂಚಾರದಿಂದ ಕೊಡಗನ್ನು ಅಳೆಯ ಬಲ್ಲ 'ಸುದ್ದಿಗಾರರು' ಬಹುಶಃ ತಾವಿಷ್ಣುವಿನ ವಾಮನಾವತಾರವೆ? ನಿಜಸ್ಥಿತಿಯೊಂದಾದರೆ, ಪ್ರಚಾರ ಮಾಡಿದ್ದೊಂದು! 'ಸುದ್ದಿಗಾರರು' 'ಗೆಸ್ಟಪೋ' ದಳದವರಂತೆ ಯಾವುದೋ ಕುಟಿಲ ಸಂಗಡದವರ ಕೈಯಾಳೋ ಎಂಬ ಸಂದೇಹವಾಗಿದೆ. ತಮ್ಮ ಲೇಖನಿಯನ್ನು ವ್ಯರ್ಥವಾದ ಶಕ್ತಿಗಳಿಗಾಗಿ ಸವೆಸುತ್ತಿರುವುದರಿಂದ ಕೇವಲವಾಗಿ ಕಾಣುವದಿಲ್ಲವೇ?

'ನೆಪೋಲಿಯನ್'

ವೀರಾಜಪೇಟೆ ಮುನ್ಸಿಪಲ್ ಪ್ರೆಸಿಡೆಂಟರು.

ತಾ. ೭-೨-೫೧ ರ 'ಕೊಡಗು' ಪತ್ರಿಕೆಯಲ್ಲಿ ಪ್ರೆಸಿಡೆಂಟರ ಸಹಾಯದಿಂದ ಸಕ್ಕರೆ ಹಂಚಿಕೆ ಸರಿಯಾಗಿ ಆಗುತ್ತದೆಂದೂ ಹಾಗೆಯೆ ಅಕ್ಕಿಯ ಹಂಚಿಕೆಯೂ ಸಹ ಆಗಬೇಕೆಂದೂ ಪ್ರಕಟವಾದ ಓಲೆಯನ್ನು ಓದಿದೆನು. ನನಗೆ ತಿಳಿದ ಮಟ್ಟಿಗೆ ಈಗಿನ ದಕ್ಷಿಣ ಕೊಡಗು ರೇಷನಿಂಗ್ ಆಫೀಸರವರ ಪ್ರಯತ್ನದಿಂದ ಸಕ್ಕರೆ, ಅಕ್ಕಿ ಇತರ ಕಂಟ್ರೋಲ್ ಸಾಮಾನುಗಳ ಮೇಲೆ ಅಪಚಾರ ಇರುವುದಿಲ್ಲ. ಇದು ಪ್ರೆಸಿಡೆಂಟರ ಸಹಾಯದಿಂದ ಎಂದು ಪ್ರಕಟಿಸಿದ ವ್ಯಕ್ತಿ ಆಶ್ಚರ್ಯಪಡುತ್ತೇನೆ. ಪ್ರೆಸಿಡೆಂಟರವರು ಲಾಯರು. ಅವರು ಮಾಡಿದ ಮತ್ತು ಮಾಡುವ ಒಂದೆರಡು ಕೆಲಸಗಳನ್ನು ಉದಾಹರಣೆಗೆ ಹೇಳುತ್ತೇನೆ. ವೀರಾಜಪೇಟೆಯ ಜವುಳಿ ವ್ಯಾಪಾರಿ ಒಬ್ಬರು, [illegible] ಕೊಡದೆ ತಪ್ಪಿಸಿ ಬಂದರೆಂದು ಮುನಿಸಿಪಾಲ್ಟಿ ಖರ್ಚಿನಿಂದ ಒಂದು ಕ್ರಿಮಿನಲ್ ಕೇಸು ಅವರ ಮೇಲೆ ಹೂಡಿದರು. ಅದು ರುಜುವಾತು ಇಲ್ಲವೆಂದು ಜಡ್ಜಿಯವರು ಡಿಸ್‌ಚಾರ್ಜ್ ಮಾಡಿದರು. ಮುನಿಸಿಪಾಲ್ಟಿ ಆಳೊಬ್ಬನ ಏನೋ ತಪ್ಪು ಮಾಡಿದನೆಂದು ಟವುನ್ ಪಾಸಿ ಒಬ್ಬರು ಮಾರ್ಕೆಟಿನಲ್ಲಿ ಆತನಿಗೆ ಒಂದು ಪೆಟ್ಟು ಕೊಟ್ಟರೆಂದು ಕೇಸು ಹೂಡಲು ಹೋಗಿದ್ದರು. ಮುನ್ಸಿಪಲ್ ಮೆಂಬರುಗಳು ವಿರೋಧಿಸಿ ಮುನ್ಸಿಪಾಲ್ಟಿ ಖರ್ಚಿನಿಂದ ಕೇಸು ಕೂಡದೆಂದು ಹಟ ಹಿಡಿದದ್ದರಿಂದ ಒಬ್ಬ ಮೆಂಬರರು ಕೇಸು ಹೂಡಿಸಿದರು, ಅದನ್ನು ಸಹ ಬೆಂಚು ಮೇಜಿಸ್ಟ್ರೇಟರವರು ಖುಲಾಸು ಮಾಡಿದರು. ಸಾಲದಕ್ಕೆ ಪ್ರೆಸಿಡೆಂಟರು ಈಗ ಇನ್ನೊಂದು ಕೇಸು ಮಾಡಿರುತ್ತಾರೆ. ವೀರಾಜಪೇಟೆ ತಾಲೋಕಿಗೆ ಹೋಗುವ ರಸ್ತೆಗೆ ಕಾರು ಹಾಕುವಾಗ್ಗೆ ರಸ್ತೆಯು ಒಂದು ಬದಿಗಾಗಿ ಬತ್ತದ ಲಾರಿ ತೆಗೆದುಕೊಂಡು ಹೋದರೆಂದು ಮುನ್ಸಿಪಲ್ ಮೇಜಿಸ್ಟ್ರೇಟರಲ್ಲಿ ಕೇಸು ಹೂಡಿರುತ್ತಾರೆ. ಎಷ್ಟೋ ಲಾರಿಗಳು ಕಾರುಗಳು ತಿರುಗುತಿದ್ದರೂ ಒಂದು ಬತ್ತದ ಲಾರಿಯ ಮೇಲೆ ಮಾತ್ರ ಕೇಸು ಹೂಡಿದ್ದಾರೆ. ಮುನ್ಸಿಪಾಲ್ಟಿ ಖರ್ಚಿನಿಂದ ಕೇಸು ದಾಖಲು ಮಾಡಿದ್ದಾರೆ. ನಾನು ಎಷ್ಟೋ ರಸ್ತೆ ಕೆಲಸ ಮಾಡುವದನ್ನು ನೋಡಿರುತ್ತೇನೆ. ಕೆಲಸ ಮಾಡಿಸುವಾಗ ಲಾರಿ ಕಾರು ತಿರುಗಲು ಬೇರೆ ದಾರಿ ಮಾಡುತ್ತಾರೆ. ರಸ್ತೆಯಲ್ಲಿ ಬೋರ್ಡ್ ಮಡಗುತ್ತಾರೆ. ಇದು ಯಾವುದೂ ಮಾಡಗವೆ ಲಾರಿ ದಾಟಿತೆಂದು ಕೇಸು ಹೂಡುವದು ನ್ಯಾಯವೇ? ಮೆಂಬರುಗಳು ಈ ವಿಷಯಕ್ಕೆ ಏನೂ ಮಾಡುತ್ತಾರೆಂದು ನೋಡಬೇಕಾಗಿದೆ. ಈ ರೀತಿಯ ಕೆಲಸಗಳು ಮೇಲಿನ ಓಲೆಗಾರರಿಗೆ ತಿಳಿಯದ್ದು ವಿಷಾದಕರ.

ಪಟ್ಟಣಿಗ.

ಬೇಲಿಯೇ ಹೊಲ ಮೇಯ್ದರೆ ಗತಿಯೇನು?

ಕೊಡ್ಲಿಪೇಟೆ ಶಾಲೆಗೆ ನಿವೃತ್ತರೊಬ್ಬರು ಪುನಃ ಅಧ್ಯಾಪಕರಾಗಿ ನೇಮಕ ಹೊಂದಿದ್ದಾರೆ. ಇವರು ಶಾಲಾ ಕೆಲಸ ಬಿಟ್ಟು ೬-೧೦-೫೦ ಬೇರೆ ಕೆಲಸವಾಡಿ ಡ್ಯೂಟಿಯೆಂದು ಅಧ್ಯಾಪಕರ ರಿಜಿಸ್ಟ್ರಿಯಲ್ಲಿ ಬರೆಯಬಹುದೇ? ಪ್ರತಿದಿನ ೧೧ ಗಂಟೆಗೆ ಟಪ್ಪಾಲು ತರಲು ಪಾಠ ಬಿಟ್ಟು ಹೋಗಬಹುದೇ? ೧೮-೧೨-೫೦ರಲ್ಲಿ ಸಾವಿಗೆ ಹೋಗಿಬಂದು ರಿಜಿಸ್ಟರಿಗೆ ಸೈನು ಹಾಕಿದು? ಕಳೆದ ಡಿಸೆಂಬರ್ ತಿಂಗಳಲ್ಲಿ ಚೀಫ್ ಕಮಿಷನರ್ ಸಾಹೇಬರು ಕೊಡ್ಲಿಪೇಟೆಗೆ ದಯಮಾಡಿಸಿದ್ದಾಗ ದಿನಪೂರಿ ಬಂಗ್ಲೆ ಹತ್ತಿರ ಕಾಯುತ್ತ ಬಂದು ಹಾಜರಿ ರಿಜಿಸ್ಟರಿಗೆ ಸೈನ್ ಮಾಡಿದ್ದು, ೨೪-೧-೫೧ರ ಇಡೀ ದಿನ ಜಾತ್ರೆಯಾಳ [illegible] ಹೋಗಿ ಬಂದು ಹಾಜರಿ ಹಾಕಿರುವುದು, ಸರಿಯೇ? ಈ ಶಾಲೆಯ ಉರ್ದು ತರಗತಿ ಸರಿಯಾಗಿ ನಡೆಯುತ್ತಿದೆಯೇ? ಅಲ್ಲದೆ ಸಾಲಿನಲ್ಲಿ ತೋಟಗಾರಿಕೆಗಾಗಿ ಮಂಜೂರಾದ ರೂ. ೫೦ ಸರಿಯಾಗಿ ಉಪಯೋಗವಾಗಿದೆಯೇ? ಪೆನ್‌ಶನ್ನಲ್ಲಿಯೂ, ಅಧ್ಯಾಪಕ ವೃತ್ತಿಯಲ್ಲಿಯೂ ಎರಡು ಕಡೆ ಹುಟ್ಟುಬತ್ಯ ಹೊಂದುತ್ತಿದ್ದಾರಂತೆ ನಿಜವೇ? ನಿಜವಾಗಿದ್ದರೆ ಸರ್ಕಾರಕ್ಕೆ ನಷ್ಟವಲ್ಲವೇ? ಮೇಲಧಿಕಾರಿಗಳು ತನಿಖೆ ಮಾಡುತ್ತಾರೆಯೇ? ಸರ್ಕಾರದವರನ್ನು [illegible] ಸಲಹುತ್ತಿರುವಾಗ ಇವರಿಗೆ ಪೆನ್‌ಶನ್ ಆದ ಮೇಲೆ ೩ ವರ್ಷ ಕೊಟ್ಟಿದ್ದು ಇವರಿಗಾಗಿಯೇ? ಮೇಲಧಿಕಾರಿಗಳ ತಾ. ೬-೧೦-೫೦ರ ಅಧ್ಯಾಪಕರ ರಿಜಿಸ್ಟರಿನಲ್ಲಿ ಅವರು ಡ್ಯೂಟಿಯೆಂದು ಬರೆದುದರ ಸತ್ಯಾಂಶ ಪರೀಕ್ಷಿಸುವರೇ?

ಪಟ್ಟಣಿಗ

ವೀರಾಜಪೇಟೆ ವಿದ್ಯಾರ್ಥಿನಿ ಭವನ.

ಈ ವಿದ್ಯಾರ್ಥಿನಿ ಭವನದಲ್ಲಿ ಅನೇಕ ಸಣ್ಣ ದೊಡ್ಡ ಬಾಲಕಿಯರು ವಾಸಿಸುತ್ತಿರುವರಾದರೂ, ಅವರ ಆರೋಗ್ಯಕ್ಕೆ ಸಂಬಂಧಿಸಿದ ವಿಷಯಗಳನ್ನು ವೀರಾಜಪೇಟೆ ಪುರಸಭೆಯ ಅಧಿಕಾರಿಗಳು ಗಮನಿಸಿಂದತೆ ತೋರುವುದಿಲ್ಲವೆನ್ನಬಹುದು. ಈ ವಿದ್ಯಾರ್ಥಿನಿಯರ ನಿವಾಸ ಗೃಹದ ಮುಂದೆ ಹರಿಯುತ್ತಿರುವ ಚರಂಡಿಯಲ್ಲಿಯ ಕೊಳಕು ನೀರಿನ ದುರ್ವಾಸನೆಯನ್ನು ಯಾರೂ ಈ ವರೆಗೆ ತಡೆಗಟ್ಟಲು ಯತ್ನಿಸಿಲ್ಲವೆಂಬುದು ಶೋಚನೀಯವಾದ ವಿಷಯವೇ ಸರಿ! ಬಿಸಿಲಿನ ತಾಪಕ್ಕೆ ಹೆಪ್ಪುಗಟ್ಟಿ ನಿಂತಿರುವ ಆ ಚರಂಡಿಯ ಕೊಳಕಿನ ಪರಿಣಾಮವಾಗಿ, ಆ ರಸ್ತೆಗಾಗಿ ಹೋಗುವವರೆಲ್ಲರೂ ಮೂಗು ಬಾಯಿಗಳನ್ನು ಮುಚ್ಚಿಕೊಂಡೇ ಹೋಗಬೇಕಾಗಿದೆ. ಇಂತಹ ದುರ್ವಾಸನೆಯನ್ನೇ ಅನುದಿನವೂ ಸೇವಿಸುತ್ತಾ ಜೀವಿಸುತ್ತಿರುವ ಅಲ್ಲಿಯ ವಿದ್ಯಾರ್ಥಿ ವಿದ್ಯಾರ್ಥಿನಿಯರ ಪಾಡೇನಾದೀತು?

ಆದುದರಿಂದ, ಇನ್ನಾದರೂ ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳು, ಅಲ್ಲಿಯ ಬಾಲ ಬಾಲಕಿಯರ ಆರೋಗ್ಯವನ್ನು ಬಯಸಿ, ಆ ರಸ್ತೆಯ ಚರಂಡಿಯಲ್ಲಿ ಕೊಳೆಯು ನಿಲ್ಲದಂತೆ ತಕ್ಕ ಏರ್ಪಾಡುಗಳನ್ನು ಮಾಡಿ, ದೇಶದ ಭಾವೀ ಪೀಳಿಗೆಯ ಹಿತವನ್ನು ಸಾಧಿಸಲೆತ್ನಿಸುವರೇ ?

K. C. B.

ಇದೀಗ ದೇಶ – ಜನ ಸೇವೆ

ವಿರಾಜಪೇಟೆ ಮುನಿಸಿಪಾಲಿಟಿಯ ಉಪಾಧ್ಯಕ್ಷರು ಮುನಿಸಿಪಾಲಿಟಿಯ ಕಟ್ಟಡದಲ್ಲಿ ಈಗ ನಡೆಯುತ್ತಿರುವ Victoria Club ಗೆ ಬಿಡಲು ನೋಟೀಸ್ ಕೊಟ್ಟು ಅವರನ್ನು ಬಿಡಿಸಿ, ನಂತರ ಪುಸ್ತಕ ಪುಸ್ತಕ ಮತ್ತು ವಾಚನಾಲಯಗಳನ್ನು, ಈ ಸಾರ್ವಜನಿಕ ಕಟ್ಟಡದಲ್ಲಿ ಸಾರ್ವಜನಿಕರಿಗಾಗಿ ತೆರೆಸಬೇಕೆಂದು ಪುರ ಸಭಾಧಿವೇಶನವೊಂದರಲ್ಲಿ ಹೇಳಿಕೆಯಿತ್ತಿದ್ದಾರಂತೆ.

ಗತ ವಿದ್ಯಾಧಿಕಾರಿಗಳಾದ ಶ್ರೀ ಪಿ. ಸಿ. ಉತ್ತಯ್ಯನವರ ಈ ಸೂಚನೆಯು ಜನ ಹಿತವಾಗಿದೆ. ಪುರ ಪ್ರಗತಿಗೆ ಈ ಪುಸ್ತಕ ಮತ್ತು ವಾಚನಾಲಯಗಳ ಅವಶ್ಯಕತೆ ವಿದ್ಯಾಧಿಕಾರಿಗಳಿಗಲ್ಲದೆ, ಇತರರಿಗೂ ತಿಳಿದಿದೆ. ಈ ಸಂದರ್ಭದಲ್ಲಿ ಈ ಕ್ಲಬಿನ ಸದಸ್ಯರು (ಕೇವಲ ೧೦೦ಕ್ಕಿಂತ ಕಡಿಮ್ಮೆ) ಈ ಸೂಚನೆಯನ್ನು ತಮ್ಮ ಹಿತ ದೃಷ್ಟಿಯಿಂದ ವಿರೋಧಿಸಿದರೂ, ಜನತೆಯ ಹಿತವನ್ನು ಕೋರಿ ಈ ಕಾರ್ಯ ಕೈಗೂಡಿಸುವುದರಲ್ಲಿ ಶ್ರಮಿಸುತ್ತಿರುವ ಶ್ರೀ ಪಿ. ಸಿ. ಉತ್ತಯ್ಯನವರಿಗೆ ಜಯ ದೊರಗಲೆಂದು ನಮ್ಮ ಹಾರಯಿಕೆ. ಈ ತೆರದ ಕಾರ್ಯಕ್ರಮಗಳೇ ಜನಸೇವೆ, ದೇಶಸೇವೆ. ಇತರರಿಗೆ ಮಾದರಿಯ ಈ ಕಾರ್ಯ, ಮಾದರಿ ಕೊಡಗಿನ ಮಾದರಿ ಜನ ಸೇವಕರಲ್ಲಿ ಹೆಚ್ಚಲೆಂದು ಆಶಿಸುವ.

ವಿರಾಜ

ಖಂಡನಾರ್ಹ–ಎಚ್ಚರಿಕೆ!!

೮ನೇ ತಾರೀಕು ಗುರುವಾರ ಸೈಂಟ್ ಎನ್ಸ್ ಹೈಸ್ಕೂಲ್ ಹೊಸ ಶಾಲೆಯನ್ನು ತೆರೆಯುವ ಸಮಾರಂಭಕ್ಕೆ ಆಮಂತ್ರಿತರು ತಮ್ಮ ಆಮಂತ್ರಣ ತಂದು ತೋರಿಸಿ ಒಳ ಬರಬೇಕೆಂದಿತ್ತು. ಅಂತೇ ಆಮಂತ್ರಣ ತೆಗೆದು ಕೊಂಡು ಹೋಗಿದ್ದೆ.

ಅಲ್ಲಿ ಹೋಗಿ ನೋಡುವಾಗ, ಈ ಆಮಂತ್ರಣ ತೋರಿಸಬೇಕೆಂದಿದ್ದುದು ಎಲ್ಲಾ ಬರೀ "ಷೊ." ಬೇಕಾದವರಿಗೆ ದೊಡ್ಡ ಸೋಫಾ, ಕೈಕುರ್ಚಿ, ಕಾಲು ಹಿಡಿಯದೆ ಕರೆದು ಕೂರಿಸಿದರು. ಬಾಕಿಯವರು, ಸೇರಿದರಿಯ್ಯಾ, ಸೇರಿದರು. ಕೋಣೆಯು ತುಂಬಾ ಜನವೇ ಜನ. ಶಿಸ್ತಿನ ಚಿಹ್ನೆಯೇ ಇಲ್ಲ. ಎಲ್ಲೆಲ್ಲೂ ಗದ್ದಲ; ಗಲಿಬಿಲಿ. ಚಿಲಿಪಿಲಿ. ಕಿರಿಚ.

ನಾವೆಲ್ಲಾ ಹೋಗಿದ್ದು ನಮ್ಮ ಮಕ್ಕಳ ಆಟನಾಟಕಗಳನ್ನು ಕೇಳಿ ನೋಡಲಿಕ್ಕೆ ಸಿ. ಸಿ. ಯವರ ಭಾಷಣವನ್ನು ಕೇಳಲಿಕ್ಕೆ ನಮ್ಮನ್ನು ಕರೆಯಿಸಿದ ಮೇಲೆ ಕೂರಲಿಕ್ಕಾದರೂ ತಕ್ಕ ಏರ್ಪಾಡುಗಳನ್ನೂ ಶಿಸ್ತಿನಿಂದ ಮಾಡಿಸಬೇಕಾಗಿತ್ತು.

ಡಿ. ಇ. ಒ. ತನ್ನ ವಾಕ್ ಶಕ್ತಿಯಿಂದ ಜನರನ್ನು ಒಲಿಸಿ ಎಲ್ಲರೂ ಕೇಳುವರಂತೆ ಭಾಷಣ ಮಾಡಿದರು. ಆದರೆ ಸಿ. ಸಿ ಭಾಷಣ ಹಾಗಲ್ಲ. ಮುಂದೆ ಕುಳಿತ ಎರಡು ಸಾಲು (ಸೋಫಾದ ಎಂಡು ಸಾಲು ಸೇರಿ) ಗಳಿಗೆ ಮಾತ್ರ ಕೇಳಿಸಿತು. ಬಾಕಿಯವರಿಲ್ಲಾ ಸುಮ್ಮನೆ ಕಾಲಕಳೆಯಬೇಕಾಯಿತು.

ಅನಂತರ ಅಲ್ಲಿಯ "ಫಾದರ್" ಬಂದು ಈ ಶಿಸ್ತಿನಕುಳಿವೇ ಇಲ್ಲದಿದ್ದ ಜಾಗದಲ್ಲಿ ಆಹ್ವಾನಿತರಾದ ನಮ್ಮಲ್ಲನೇಕರಿಗೆ ಶಿಸ್ತಿಲ್ಲ ಎಂದು ಸಾರ್ವಜನಿಕರ ಮುಂದೆ ಇಂಗ್ಲಿಷಿನಲ್ಲಿ ಹೇಳಿ ಎಲ್ಲರನ್ನೂ ಅವಮಾನಿಸಿದರು. ಅಲ್ಲೇ ಪ್ರತೀಕಾರ ದೊರೆಯುತಿತ್ತು. ಆದರೆ........

ಹೇಗೂ ಸಿ ಸಿ ಯನ್ನು ಮೆಚ್ಚಿಸಿ ರೂ ೨೫,೦೦೦ ಕೊಡುತ್ತೇನೆಂದು ಭರವಸೆ ಪಡೆದು ಕೊಂಡರು ಇರಲಿ. ಈ ರೂ ೨೫೦೦೦ ಅಲ್ಲದೆ ಮುನಿಸಿಪಾಲಿಟಿ ಬೇರೆ ೩,೦೦೦ ರೂ ಸಹಾಯ ಮಾಡುವಾಗ್ಗೆ ಕೊಡಗಿನ ಜನತೆ ಯಾ ಸರಕಾರಕ್ಕೆ ಈ ಹಣ ವಿನಿಯೋಗದಲ್ಲಿ ಹಕ್ಕು ಬೇರೆ ಬೇಕ. ಇಷ್ಟು ದೊಡ್ಡ ಹಣವನ್ನು ಸರಕಾರ ಒಬ್ಬ ಸರ್ವಾಧಿಕಾರಿಯ ಸ್ವೇಚ್ಛೆಗೆ ಕೊಡುವುದು ಸರಿಯಲ್ಲ. ಇಂಥಾ ಸಂಸ್ಥೆಗಳ ಒಳಾಡಳಿತದಲ್ಲಿ, ಅರ್ಥಿಕ ಮೇಲ್ವಿಚಾರಣೆಯಲ್ಲಿ ಸರಕಾರಕ್ಕೆ ಶೇ ೭೫ ರಷ್ಟು ಹಕ್ಕು ಇಟ್ಟುಕೊಳ್ಳದೆ ಈ ೨೫೦೦೦ ರೂ. ಕೊಡಬಾರದೆಂದು ಸರಕಾರವನ್ನು ಒತ್ತಾಯಪಡಿಸುವ ಚಳವಳವನ್ನು ಜನ–ದೇಶ ಸೇವಕರು ಕೈಕೊಳ್ಳುವರೇ ?

ನೊಂದ ತಂದೆ

೧೯೫೫ ರ ಜಾನೇಸುಮಾರಿಯಲ್ಲಿ ಅಧ್ಯಾಪಕರ ಮೇರೆ ದೂರು.

ಕೊಡಗಿನಲ್ಲಿ ಹಲವು ಉಪಾಧ್ಯಾಯರು ಜಾನೇಸುಮಾರಿ ಗಣನೆಯಲ್ಲಿ, ಸರಿಯಾಗಿ ಸಹಕರಿಸುವುದಿಲ್ಲವೆಂಬ ದೂರು ಸರಕಾರಕ್ಕೆ ಮುಟ್ಟಿದೆಯೆಂದು ನಾನು ತಿಳಿದೆನು. ಒಬ್ಬಿಬ್ಬರು ಹೀಗೆ ವರ್ತಿಸಿರಲಿಕ್ಕೂ ಸಾಕು. ಅದಕ್ಕೆ ಯೋಗ್ಯ ಕಾರಣ ಕೊಡಲು ಬಯಸುತ್ತೇನೆ. ಈ ಕರ್ತವ್ಯವನ್ನು, ಅಧ್ಯಾಪಕನೇ ಆಗಲಿ, ಯಾರೇ ಆಗಲಿ, ಪ್ರತಿಯೊಬ್ಬನೂ ಅತೀ ದಕ್ಷತೆಯಿಂದಲೂ ಸೇವಾ ದೃಷ್ಟಿಯಿಂದಲೂ ಮತ್ತು ದೇಶದ ಹಿತದಿಂದಲೂ, ಫಲಾಪೇಕ್ಷೆಯಿಲ್ಲದೆ ನಿರ್ವಹಿಸಬೇಕು. ಯಾವ ಉಪಾಧ್ಯಾಯನೂ ಇದನ್ನು ಅಲ್ಲಗಳೆಯಲಿಕ್ಕಿಲ್ಲ.

ಆದರೆ, ಉಪಾಧ್ಯಾಯರೆಂದರೆ, ಕೇವಲ ದಿಕ್ಕು ದೆಸೆಯಿಲ್ಲದವರೆಂದೂ, ಹೇಳಿದ ಕೆಲಸ ಮಾಡಲು ತಯಾರಿರುತ್ತಾರೆಂಬ ತಾತ್ಸಾರ ಮತ್ತು ಅಹಂಕಾರಭಾವ ಹಲವರಲ್ಲಿದೆ. ನಮ್ಮ ಕೊಡಗಿನ ಹಲವು ನಾಡುಗಳಲ್ಲಿ, ಅಧ್ಯಾಪಕರ ಸಹಾಯವಿಲ್ಲದಿದ್ದರೆ, ಆ ನಾಡಿನ ಸ್ಥಳೀಯ ಅಧಿಕಾರಿಗಳಿಗೆ ಯಾವ ಸಾರ್ವಜನಿಕ ಕೆಲಸ ಮಾಡಲಿಕ್ಕೂ ಎಳ್ಳಷ್ಟು ಸಾಧ್ಯವಿಲ್ಲ. ಇದು ನಾನು ಕಣ್ಣಾರೆ ನೋಡುತ್ತಿರುವ ದೃಷ್ಟಿ. ಇಂಥ ವೇಳೆಯಲ್ಲಿ, ಸ್ಥಳೀಯ ಶ್ಯಾನುಬೋಗರಾಗಲೀ ಯಾ ಪಾರುಪತ್ತೆಗಾರರಾಗಲೀ 'ನಾಳೆ ಜಾನೆಸ ಮಾರಿ ಮೀಟಿಂಗಿಗೆ ಬನ್ನಿ' ಎಂದು ಬಾಯಿಮಾತಿನಲ್ಲಿ ಅಧ್ಯಾಪಕರಿಗೆ ಹೇಳಿದರೆ ಸಾಲದು. ಮುಖ್ಯ ಉಪಾಧ್ಯಾಯರ ಮುಖಾಂತರ ನೋಟೀಸು ಬಂದರೆ ಮಾತ್ರ ಹೋಗಲಿಕ್ಕೆ ಸಾಧ್ಯ. ಈ ವಿಷಯ ಪ್ರತಿಯೊಬ್ಬ ನಾಡಿನ ಸಣ್ಣ ಕಿರಿನ್ನ ಉದ್ಯೋಗಸ್ಥರು ಗಮನಿಸಲಿ.

ಹಿಂದಿನ ಒಂದು ಅಥವಾ ಎರಡು ಜಾನೇಸುಮಾರಿ ಗಣನೆಯಲ್ಲಿ, ವಿದ್ಯಾವಂತ ಅಧ್ಯಾಪಕನೊಬ್ಬನು ಸುಪರ್‌ವೈಜರಾಗಿದ್ದರೆ ಈ ಸರ್ತಿ ಆತನನ್ನು, ೪ನೇ ಯಾ ೫ ನೇ ದರ್ಜೆ ಪಾಸಾಗದ ಒಬ್ಬ ಶ್ಯಾನುಬೋಗನ ಕೈಕಳಗೆ ಎನ್ಯುಮರೇಟರಾಗಿ ನೇಮಿಸುವುದು ಉಚಿತವೇ? ಒಬ್ಬ ಗ್ರೇಜುವೇಟ್ ಅಧ್ಯಾಪಕನನ್ನು ಒಬ್ಬ ಇಂಗ್ಲಿಷ್ ಗೊತ್ತಿಲ್ಲದವನ ಕೈಕೆಳಗೆ ಎನ್ಯುಮರೇಟರ್ ಮಾಡುವುದೇ? ಜನಗಣನೆ ಸೂತ್ರಗಳನ್ನೊಳಗೊಂಡ ಅನೇಕ ಪುಸ್ತಕಗಳಿರುವುದರಿಂದ, ಯಾವ ಉಪಾಧ್ಯಾಯನಿಗೂ, ಅರಿತುಕೊಳ್ಳುವ ಶಕ್ತಿ ಇದೆ. ಆತ್ಮಗೌರವವೆಂಬುದು ಪ್ರತಿಯೊಬ್ಬ ಅಧ್ಯಾಪಕನಿಗೂ ಇದೆ. ಕೆಲವು ಶ್ಯಾನುಬೋಗರು, 'ನೋಡಿ, ನಮಗೆ ಜಾನೇಸುಮಾರಿ ಸೂತ್ರಗಳು ಸರಿಯಾಗಿ ತಿಳಿಯುವುದಿಲ್ಲ, ನೀವೆ ಸುಪರ್‌ವೈಜರ್ ಆಗಿದ್ದರೆ ಒಳ್ಳೆದಿತ್ತು ಎಂದು' ವಿಧಿಯಿಲ್ಲದೆ ಹೇಳುವವರು ಇದ್ದಾರೆ. ಅವರೂ ಅಧಿಕಾರ ತಮಗೆ ಬೇಕು. ಅರ್ಥವಾದರೂ ಸರಿಯೆ! ಅರ್ಥವಾಗದಿದ್ದರೂ ಸರಿಯೆ!

ಆದ್ದರಿಂದ ಉಪಾಧ್ಯಾಯರು ಈ ಕೆಲಸದಲ್ಲಿ ಸಹಕರಿಸುವುದಿಲ್ಲವೆಂದು, ಸರಕಾರಕ್ಕೆ ದೂರು ಹೇಳಿದ್ದು ಖಂಡಿತಾ ತಪ್ಪು. ಸರಕಾರದ ಕಾನೂನುಗಳನ್ನು ಯಾವ ಉಪಾಧ್ಯಾಯನೂ ಅಲ್ಲಗಳೆಯಲಿಕ್ಕಿಲ್ಲ. ಅವನಿಗೂ ಇತರರ ಹಾಗೆ ಬುದ್ಧಿ ಇದೆ. ಆದರೆ ಈ ರೀತಿಯ ಚಿಲ್ಲರೆ ಅಧಿಕಾರ ಪ್ರಯೋಗವನ್ನು ಅವನು ಪ್ರತಿಭಟಿಸಿರಬಹುದಷ್ಟೆ ವಿನಾಹ ದೂರು ಹೇಳುವಷ್ಟು ಸನ್ನಿವೇಶವನ್ನು ಕಲ್ಪಿಸಲಿಕ್ಕೆ ಆತನೇನೂ ಮೂರ್ಖನಲ್ಲ.

ಕೆ. ಬಿ. ಬಾಬು

ನಿರ್ಬಂಧ ಬೇಡ.

೧೯೫೭ ರಲ್ಲಿ ಬಾಳೆಲೆ, ದೇವನೂರು, ನಿಟ್ಟೂರು ಗ್ರಾಮಗಳ ಹಿತ ದೃಷ್ಟಿಯಿಂದ ಬಾಳೆಲೆಯಲ್ಲಿ ಒಂದು ಶಾಲಾ ಕಟ್ಟಡ ಕಟ್ಟಲು ಈ ಮೂರು ಗ್ರಾಮಗಳ ಪ್ರತಿ ವೃತ್ತರಿಂದ ನೂರು ಬಟ್ಟಿ ಭೂಮಿಗೆ ಒಂದು ಬಟ್ಟಿ ಬತ್ತದಂತೆ ಖಡ್ಡಾಯವಾಗಿ ತೆರಿಗೆ ಎತ್ತಿ ಕೆಲಸ ಪ್ರಾರಂಭಿಸಲಾಯಿತು. ಕಟ್ಟಡ ಖರ್ಚಿನ ಕೇಕಡ ೫೦ ನ್ನು ಸರಕಾರ ಕೊಡುವದಾಗಿ ಹೇಳಿತ್ತು. ಸರಕಾರದಿಂದ ಎಷ್ಟು ಹಣ ದೊರೆತ್ತಿದೆಯೋ ನನಗೆ ತಿಳಿಯದು. ಆದರೆ ಕಟ್ಟಡ ಕೆಲಸ ಪೂರ್ತಿಯಾಗಲು ಇನ್ನೂ ಕನಿಷ್ಟ ಮೂರು ಸಾವಿರ ರೂಪಾಯಿ ಬೇಕಾಗಬಹುದು. ಕಟ್ಟಡದ ಜವಾಬ್ದಾರಿ ಹೊತ್ತಿರುವವರು ತಾ ೧–೨–೫೯ ರಲ್ಲಿ ಸಭೆನಡೆಸಿ ಈ ವರ್ಷವೂ ಮೇಲಿನ ಗ್ರಾಮಗಳಲ್ಲಿ ನೂರು ಬಟ್ಟಿ ಭೂಮಿಗೆ ಅರ್ಧ ಬಟ್ಟಿ ಬತ್ತದಂತೆ ತೆರಿಗೆ ಎತ್ತಲು ನಿರ್ಧರಿಸಿರುವರಂತೆ. ಈ ನಿರ್ಧಾರ ಯೋಗ್ಯವಲ್ಲ. ಬಡ ರೈತನ ಬವಣೆ ಹೇಳಲಾರದಾಗಿದೆ. ಆತನ ಜೀವನ ಬಹು ಕಷ್ಟದಲ್ಲಿದೆ. ಶ್ರೀಮಂತರಿಗೂ ಬಡವರಿಗೂ ಸಮವಾದ ಈ ತೆರಿಗೆಯು ನ್ಯಾಯ ಸಮ್ಮತವಲ್ಲ. ಅನ್ನವಿಲ್ಲದೆ, ಉಡಲು ಬಟ್ಟೆ ಇಲ್ಲದೆ ಕಷ್ಟಪಡುತ್ತಿರುವಾಗ ಈ ಹೊರೆಯು ಹೊರಲಾರದಂಥಾದ್ದು. ಆದ್ದರಿಂದ ಕಟ್ಟಡಕ್ಕೆ ಬೇಕಾದ ಹಣವನ್ನು ಶ್ರೀಮಂತರಿಂದ ವಸೂಲ್ ಮಾಡುವದು ಹಿತ. ಶಾಲೆಗೆ ಬೇಕಾಗುವ ಮೂರು ಸಾವಿರ ರೂಪಾಯಿಗಳನ್ನು ಈ ಗ್ರಾಮಗಳ ನಾಲ್ಕಾರು ಧನವಂತರು ಕೊಡಬಹುದು. ಆದ್ದರಿಂದ ಈ ಭಾರವನ್ನು ಬಡವರ ಮೇಲೆ ಹಾಕಬಾರದೆಂದು ನನ್ನ ಅಭಿಪ್ರಾಯ.

ಬಡರೈತ.

ಮಾರಾಟಕ್ಕಿದೆ.

ಗೋಣಿಮರೂರು ಗ್ರಾಮದ ಬಸವನ ಹಳ್ಳಿಯಲ್ಲಿರುವ ನನ್ನ ಸ್ವಂತ ಸಾವಿರ ಬಟ್ಟಿ ಭೂಮಿ ಮತ್ತು 15 ಎಕ್ರೆ ಹೊಲ ಮಾರಾಟಕ್ಕಿದೆ. ಇವರಲ್ಲಿ 500 ಕಿತ್ತಳೆ ಗಿಡಗಳಿದ್ದು ಕೆಲವು ಫಲ ಕೊಡುತ್ತವೆ. ಎರಡು ಕೆರೆ, ಮೂರು ಹಂಚಿನ ಮನೆ, ಎರಡು ಕಲ್ಲು ಹಾಸಿದ ದನದ ಕೊಟ್ಟಿಗೆ, ಎರಡು ಲೈನುಗಳು ಕೂಡಾ ಇವೆ. ಲಾರಿ ಯಾ ಗಾಡಿ ಕಣಕ್ಕೆ ಹೋಗುವಂತೆ ರಸ್ತೆ ಇದೆ. ಇದರೊಂದಿಗೆ ಸಿ. ಜಿ. ಎ. ನಂ 116 ರ ಲಾರಿ ಕೂಡಾ ಮಾರಾಟಕ್ಕಿದೆ. ಖಾಯಿಸ್‌ದಾರರು ಈ ಕೆಳಗಿನ ಅಡ್ರೆಸಿಗೆ ಬರೆಯ ಬಹುದು ಯಾ ಖುದ್ದು ಬಂದು ನೋಡ ಬಹುದು.

ಬಿ ಸಂಕಪ್ಪ ಪೂಜಾರಿ
ಕಂಟ್ರಾಕ್ಟರು
3–1 ಸೋಡಿ ಅಂಗಡಿ,
ಸೋಮವಾರಪೇಟೆ

ಖಾನೇಸುಮಾರಿಯ ಕೆಲವು ಮುಖ್ಯ ಪ್ರಶ್ನೆಗಳು-ಅವುಗಳ ವಿವರ

1 ನೇ ಪ್ರಶ್ನೆ—ಹೆಸರು ಮತ್ತು ಮನೆಯ ಯಜಮಾನನಿಗೆ ಸಂಬಂಧ. ಈ ಪ್ರಶ್ನೆ ರಚನಾತ್ಮಕವಾದದ್ದು—ಹೆಸರಿನಿಂದ ಜನಸಂಖ್ಯೆ ದೊರೆಯುತ್ತದೆ. ಆದರೆ ಉಪಪ್ರಶ್ನೆ 'ಮನೆಯ ಯಜಮಾನ' ಎಂಬುದು ಸ್ವಲ್ಪ ವಿಚಾರಣೀಯ ವಿಷಯ. ಇಲ್ಲಿ ಕೇವಲ ಆರ್ಥಿಕ ಮತ್ತು ವ್ಯವಹಾರ ದೃಷ್ಟಿ; ಸಂಪ್ರದಾಯ ಅಥವಾ ಹಿರಿಮೆಯ ದೃಷ್ಟಿಯಲ್ಲ.

ಖಾನೇಸುಮಾರಿಯ ಪ್ರಕಾರ ಮನೆಯೆಂದರೆ ಒಂದು ಕುಟುಂಬದ ವಸತಿ—ಆ ವಸತಿಗೆ ಹೊರ ಪ್ರವೇಶಕ್ಕೆ ಮುಖ್ಯದ್ವಾರವಿರಬೇಕು. ಒಂದೇ ಕಟ್ಟಡದಲ್ಲಿ ಅನೇಕ ಮನೆಗಳಿರಬಹುದು ಸ್ಪಷ್ಟವೆಂದ. ಅಂಥ ಮನೆಗಳ ನಂಬರು ಕೊಡಲಾಗುವುದು. ಸರಕಾರದವರು ಈಗಾಗಲೇ ನಂಬರು ಕೊಟ್ಟಿರುತ್ತಾರೆ. ಕಾರಣಾಂತರದಿಂದ ಬಿಟ್ಟು ಹೋಗಿದ್ದರೆ ದಾಖಲಾತಿ ಮಾಡುವಾಗ ಕೊಡಲಾಗುವದು.

ಇಂಥಾ ಒಂದು ಮನೆಯಲ್ಲಿ ವ್ಯವಹಾರ ನಡೆಸುವವನೇ ಮನೆ ಯಜಮಾನ—ಗಟ್ಟಿಂದ ರಂತಾಗಿ ಹಿರೀ ಅಜ್ಜನವರು ಮನೆಯಲ್ಲಿರಬಹುದು. ಆದರೆ ಅವರು ವ್ಯವಹಾರ ನಡೆಸದೆ ಇರುವವರಾದಲ್ಲಿ ಮನೆಯ ಯಜಮಾನರೆಂದು ಗ್ರಹಿಸಲಾಗುವುದಿಲ್ಲ. ಒಂದೇ ಮನೆಗೆ ಸಂಬಂಧಪಟ್ಟವರು ಪ್ರತ್ಯೇಕವಾಗಿ ವಾಸಿಸಿಕೊಂಡಿರಬಹುದು. ಖಾನೇಸುಮಾರಿ ದೃಷ್ಟಿಯಲ್ಲಿ ಅಂಥಾ ಪ್ರತಿಯೊಂದು ವಸತಿಯೂ ಒಂದು ಮನೆ ಮತ್ತು ಆಯಾ ವಸತಿಯ ಯಜಮಾನ ತಂದೆ ತಾಯಿ ಮಗ ನಾಯಕ ಮನೆಯಲ್ಲಿದ್ದು ಅವ ಮಕ್ಕಳು ... ಮನೆಯಲ್ಲಿ ವಾಸವಾ ... ಹೋಗುತ್ತಿರಬಹುದು ... ಆಗ ಎರಡು ಮನೆಯೆಂಬ ಎಣಿಕೆ ... ತಾಯಿ ... ದಾಖಲಾತಿ ... ಈ ಇಬ್ಬರ ... ಹಿರಿತನವನ್ನು ... ಗ್ರಹಿಸಿ ... ದಾಖಲು ಮಾಡಲಾಗುವುದು. ಬೋರ್ಡಿಂಗ್, ಆಸ್ಪತ್ರೆ, ಜೈಲು ಇತ್ಯಾದಿಗಳಲ್ಲಿರುವವರು ... ಗ್ರಹಿಸಿ 'ಬಿಸಿಟರ್' ಎಂಬ ರೀತಿ ದಾಖಲು ಮಾಡಲ್ಪಡುವರು. ಹೀಗಾಗಿ 1 ನೇ ಪ್ರಶ್ನೆ ಎಷ್ಟು ಸಮರ್ಪಕವಾಗಿ ದಾಖಲಾಗುವುದೋ, ಅಷ್ಟೂ ಕೂಡ ಸರಿಯಾಗಿ ಒಬ್ಬ ವ್ಯಕ್ತಿಯೂ ತಪ್ಪಿಹೋಗದಂತೆ ದೊರಕುತ್ತದೆ

9 ನೇಯ ಪ್ರಶ್ನೆ—ಆರ್ಥಿಕ ದೃಷ್ಟಿಯಿಂದ 9-10 ಮತ್ತು 11 ನೇ ಪ್ರಶ್ನೆಗಳು ಮುಖ್ಯವಾಗಿವೆ ಮತ್ತು ಒಂದನ್ನೊಂದು ಅನುಸರಿಸಿಕೊಂಡಿವೆ. ಸಂಯುಕ್ತ ರಾಷ್ಟ್ರಘಟನೆಯ ನಿಯಮವನ್ನನುಸರಿಸಿ ಪ್ರಖ್ಯಾತ ಅರ್ಥಶಾಸ್ತ್ರಜ್ಞರಿಂದ ತಯಾರು ಮಾಡಲ್ಪಟ್ಟ ಪ್ರಶ್ನೆಗಳಾಗಿವೆ.

ಮೊದಲನೆಯದಾಗಿ—ನಿಮ್ಮ ಜೀವನೋಪಾಯವನ್ನು ನೀವು ಸ್ವಂತ ಸಂಪಾದನೆಯಿಂದ ನಡೆಸುತ್ತೀರಾ ಅಥವಾ ಇನ್ನೊಬ್ಬರ ಸಂಪಾದನೆಯನ್ನು ಹೊಂದಿಕೊಂಡು ಜೀವನೋಪಾಯ ನಡೆಯುತ್ತಿದೆಯೋ ಅಥವಾ ನಿಮ್ಮ ಸಂಪಾದನೆ ಸ್ವಲ್ಪವಿದ್ದು ಅದು ಜೀವನೋಪಾಯಕ್ಕೆ ಸಾಲದೆ ಇತರರ ಸಂಪಾದನೆಯನ್ನು ಹೊಂದಿಕೊಂಡಿದ್ದೀರಾ ಎಂದು ಪ್ರಶ್ನೆ ಕೇಳಲಾಗುವುದು. ಪ್ರಪಂಚದಲ್ಲಿ ಇರುವ ಆರ್ಥಿಕ ಸ್ಥಿತಿಗತಿಗಳು ಇಷ್ಟು ಮಾತ್ರ—

ಜೀವಿತನಾಗಿರುವ ಒಬ್ಬ ವ್ಯಕ್ತಿ ಆ ಜೀವನ ಯಾವ ರೀತಿಯಿಂದ ಎಂದು ತಿಳಿದುಕೊಳ್ಳಬೇಕಾದರೆ—

(1) ತಾನೇ ಸಂಪಾದನೆ ಮಾಡಿ ತನ್ನ ಉದರಪೋಷಣೆ ಮಾಡಿಕೊಳ್ಳಬಹುದು.

(2) ತಾನು ಯಾವ ಕೆಲಸ ಮಾಡುತ್ತಿದ್ದರೂ ಅದು ಸಂಪಾದನೆಯ ಕೆಲಸವಲ್ಲದೆ ಉದರಪೋಷಣೆಗೆ ಇತರರ ಅಂದರೆ ಹೆಂಡತಿ, ಗಂಡನ, ಮಗ, ತಂದೆಯ, ಅಜ್ಜ ತನ್ನ ಮಗನ ಇತ್ಯಾದಿ ಸಂಪಾದನೆಯನ್ನು ಹೊಂದಿಕೊಂಡು ಜೀವನ ನಡೆಸಬಹುದು.

(3) ಇನ್ನೊಬ್ಬನು ಅಲ್ಪ ಸ್ವಲ್ಪ ಸಂಪಾದನೆ ಮಾಡಬಹುದು. ಒಂದು ಮನೆಯಲ್ಲಿ ಒಬ್ಬ ಮಗ ಶಾಲೆ ಹೋಗುವವನು ಅಥವಾ ... ವಿಶ್ರಾಂತಿಯಲ್ಲಿಯೋ ಅಥವಾ ಇನ್ನಾವ ರೀತಿಯಲ್ಲಿಯೋ ಚಿಕ್ಕ ಸಂಪಾದನೆ ಗಳಿಸಬಹುದು. ಅದು ತನ್ನ ಉದರ ಪೋಷಣೆಗೆ ಸಾಲದೆ ತನ್ನ ತಂದೆಯ ಸಂಪಾದನೆಯಿಂದಲೇ ಜೀವನೋಪಾಯವನ್ನು ನಡೆಸುತ್ತಿರಬಹುದು. ಈ ಮೇಲಿನ ತರಗತಿಯಲ್ಲಿ ಜೀವನೋಪಾಯ ನಡೆಸಬೇಕಾದರೆ ಎಷ್ಟು ಸಂಪಾದನೆಯಾಗಬೇಕು. ಪ್ರತಿಯೊಬ್ಬ ವ್ಯಕ್ತಿಯ ಜೀವನದ ಸ್ಥಿತಿಯನ್ನು ಈ ವಿಚಾರದಲ್ಲಿ ಎಣ್ಣಿಸಲ್ಪಟ್ಟ ವ್ಯಕ್ತಿಯ ಜೀವನ ಯಾವ ತರಗತಿಗೆ ಸೇರಿದ್ದು ಎಂದು ಮಾತ್ರ ನಿಶ್ಚಯಿಸಿಕೊಳ್ಳಬೇಕು.

9 ನೇ ಪ್ರಶ್ನೆಯಲ್ಲಿ ಉಪಪ್ರಶ್ನೆಯಿದೆ—ಸ್ವತಂತ್ರವಾಗಿ ಜೀವನ ನಡೆಸುತ್ತಿರುವವನೆಂದು ಈ ಮೊದಲೇ ಹೇಳಿದ ವ್ಯಕ್ತಿಯನ್ನು ಕುರಿತು ಆ ಜೀವನೋಪಾಯವು ಯಾವ ರೀತಿಯದು ಎಂದು ತಿಳಿದುಕೊಳ್ಳಬೇಕಾಗುವುದು. ಅದರಂತೆ—

(1) ನೀವು ಮಾಲೀಕರಾಗಿದ್ದು ನೌಕರರನ್ನು ನೇಮಿಸಿ ನಿಮ್ಮ ಜೀವನದ ಉದ್ಯೋಗವನ್ನು ನಡೆಸುತ್ತೀರಾ

(2) ಇಲ್ಲವೇ ನೌಕರಿಯಲ್ಲಿದ್ದೀರಾ.

(3) ಅಥವಾ ಸ್ವತಂತ್ರವಾದ ವೃತ್ತಿಯನ್ನು ಸ್ವೀಕರಿಸಿದ್ದೀರಾ

(4) ಇಲ್ಲವೇ ಏನೂ ಮಾಡಿಯದೆ, ಭಿಕ್ಷಾಟನೆ, ಪಿಂಚಿನ್, ಬಡ್ಡಿ, ಗೇಣಿ ಇತ್ಯಾದಿಗಳಿಂದ ಜೀವನ ನಡೆಸಿ ಕೊಂಡಿದ್ದೀರಾ ಎಂಬ ನಾಲ್ಕು ತರಗತಿಯಲ್ಲಿ ಯಾವುದಾದರೂ ಒಂದನ್ನು ನಿಶ್ಚಯ ಮಾಡಿಕೊಳ್ಳಬೇಕು

ಮಾಲೀಕರೆಂದರೆ:— ತಮ್ಮ ಜೀವನೋಪಾಯದ ಸಲುವಾಗಿ ಜನರನ್ನಿಟ್ಟು ಕೆಲಸ ನಡೆಸುವವರಾಗಿರಬೇಕು. ಒಬ್ಬ ವೈದ್ಯರು ಕಾಂಪೌಂಡರನ್ನಿಟ್ಟು ಕೊಂಡಿದ್ದರೆ. ಲಾಯರು ರೈಟರನ್ನು ನೇಮಕ ಮಾಡಿದ್ದಾರೆ, ಹೋಟೇಲಿನ ಮಾಲಿಕ ಅಡಿಗೆಯವರನ್ನಿಟ್ಟಿದ್ದಾರೆ, ಭೂಮಿ ಮಾಡುವವರು ಆಳಿಟ್ಟು ಬೆಳೆ ಬೆಳೆಸುತ್ತಾರೆ. ಇವರೆಲ್ಲರೂ ಮಾಲೀಕರೇ. ಸರಕಾರಿ ಅಧಿಕಾರಿಗಳೊಬ್ಬರು ಮನೆಯ ಅಡಿಗೆಯವನನ್ನಿಟ್ಟು ಕೊಂಡಿದ್ದರೆ ಅವರು ಮಾಲೀಕರಾಗುವುದಿಲ್ಲ ಏಕೆಂದರೆ ಆ ಅಡಿಗೆಯವನ ಕೆಲಸ ತನ್ನ ಉದ್ಯೋಗಕ್ಕೆ ಸಹಾಯಕವಾಗುವ ಕೆಲಸವಲ್ಲ.

ನೌಕರಿಯೆಂದರೆ:— ಎಲ್ಲಾ ಸರಕಾರಿ ಹುದ್ದೆಗಳು, ತೋಟದ ಮಜೂರಿದಾರರು ಪ್ರತಿಯೊಬ್ಬ ಮಾಲೀಕರಿಂದಲೂ ನೇಮಕವಾದ ವ್ಯಕ್ತಿಗಳು, ಇತ್ಯಾದಿ

ಸ್ವತಂತ್ರವಾಗಿ ಕೆಲಸ ಮಾಡುವವರೆಂದರೆ:—ತನ್ನ ಭೂಮಿಯ ಸಾಗುವಳಿ ತಾನೇ ಮಾಡುವುದು, ತನ್ನ ವ್ಯಾಪಾರಕ್ಕೆ ಕೆಲಸಕ್ಕೆ ಯಾರನ್ನೂ ನೇಮಿಸದೆ ತಾನೇ ಮಾಡುತ್ತಿರುವ, ಅಂದರೆ ಒಬ್ಬ ಅಕ್ಕಸಾಲಿ ದರ್ಜಿ, ಲಾಯರ, ವೈದ್ಯ, ವ್ಯಾಪಾರ ಹೋಟೆಲು ಮಾಲಿಕ ಮೊದಲಾದವರು ಒಬ್ಬಂಟಿಗರಾಗಿಯೇ ತಮ್ಮ ಉದ್ಯೋಗವನ್ನು ಮಾಡುತ್ತಿದ್ದಾರೆ ಇವರೆಲ್ಲರೂ ಸ್ವತಂತ್ರ ಜೀವಿಗಳು

10ನೇ ಪ್ರಶ್ನೆ:—ಈ ಪ್ರಶ್ನೆಗೆ ಮುಖ್ಯ ಜೀವನೋಪಾಯದ ವಿವರವನ್ನು ಕೊಡಬೇಕು. ತಾನು ಬೇಸಾಯದವನಾದರೆ (೧) ಸ್ವಂತ ಭೂಮಿ ಮಾಡುವವನೋ (೨) ವಾರಕ್ಕೆ ಭೂಮಿ ಮಾಡುವವನೋ (೩) ಗದ್ದೆಯ ಕೆಲಸಕ್ಕಾಗಿ ಸಂಬಳಕ್ಕೆ ನೇಮಿಸಲ್ಪಟ್ಟವನೋ (೪) ಗೇಣಿ, ವಾರ ಇತ್ಯಾದಿಗಳನ್ನು ಹೊಂದಿಕೊಳ್ಳುವವನೋ ಎಂಬ ವಿವರವನ್ನು ಮೊದಲು ತಿಳಿದುಕೊಳ್ಳಬೇಕಾಗಿದೆ. ಬೇಸಾಯವೆಂದರೆ, ಭತ್ತ ಇತ್ಯಾದಿ ಆಹಾರ ಧಾನ್ಯ, ಕಿತ್ತಳೆ, ತೆಂಗು, ಅಡಿಕೆ ಇತ್ಯಾದಿಗಳ ವ್ಯವಸಾಯ ಸೇರಿದೆ. ಕಾಫಿ, ರಬ್ಬರು, ಟೀ, ಯಾಲಕ್ಕಿ ಮುಂತಾದ 'ಪ್ಲಾಂಟೇಶನ್' ಗುಂಪಿನ ವ್ಯವಸಾಯ ಇದರಲ್ಲಿ ಸೇರುವುದಿಲ್ಲ.

ನೌಕರಿ, ಕಂಟ್ರಾಕ್ಟು ವ್ಯಾಪಾರ ಇತ್ಯಾದಿ ವಿವಿಧ ಉದ್ಯೋಗಗಳು ಮುಖ್ಯ ಜೀವನೋಪಾಯವಾಗಿದ್ದಲ್ಲಿ ಅವುಗಳ ಸರಿಯಾದ ವಿವರವನ್ನು ಕೊಡಬೇಕು.

ಹನ್ನೊಂದನೇ ಪ್ರಶ್ನೆ:—ಮುಖ್ಯ ಜೀವನೋಪಾಯದ ಜತೆಗೆ ಇತರ ಜೀವನೋಪಾಯಗಳಿದ್ದಲ್ಲಿ ಅದನ್ನು ತಿಳಿದುಕೊಳ್ಳಬೇಕಾಗಿದೆ. ಒಬ್ಬ ವ್ಯಕ್ತಿಯ ಮುಖ್ಯ ಜೀವನೋಪಾಯ ಸರಕಾರದ ಉದ್ಯೋಗವಾಗಿದ್ದು ಇತರ ಉತ್ಪತ್ತಿ ಗದ್ದೆಯಿಂದ ವಾರದ ರೂಪದಲ್ಲಿ ಬತ್ತ ಬರಬಹುದು. ಇದೇ ರೀತಿ ಅನೇಕರಿಗೆ ಹಲವು ವಿಧದ ಉತ್ಪತ್ತಿಗಳಿರಬಹುದು. ಅವುಗಳಲ್ಲಿ ಮುಖ್ಯ ಜೀವನೋಪಾಯವನ್ನು ಬಿಟ್ಟು ಇತರ ಉತ್ಪತ್ತಿಗಳಲ್ಲಿ ಮುಖ್ಯವಾದ ಒಂದನ್ನು ಇಲ್ಲಿ ಸಂಗ್ರಹಿಸಬೇಕು.

ಶ್ರೀರಾಮಕೃಷ್ಣ ಶಾರದಾಶ್ರಮ ಪೊನ್ನಂಪೇಟೆ

ರಜತ ಮಹೋತ್ಸವ

ಭಗವಾನ್ ಶ್ರೀರಾಮಕೃಷ್ಣರ ಮತ್ತು ಶ್ರೀ ಶಾರದಾದೇವಿಯವರ ಕೃಪೆಯಿಂದ ಸ್ವಾಮಿ ನಿರ್ಮಲಾನಂದಜೀಯವರಿಂದ ಪವಿತ್ರ ಕಾವೇರಿಯ ರಮಣೀಯ ದೇಶವಾದ ಇಲ್ಲಿ ಸ್ಥಾಪಿಸಲ್ಪಟ್ಟ ಈ ಆಶ್ರಮವು ತನ್ನ ೨೫ ವರ್ಷಗಳ ಸೇವಾ ಜೀವನವನ್ನು ಕೊಡಗಿನ ಜನರಿಗೆ ಸಲ್ಲಿಸಿದೆ. ಇದರ ರಜತೋತ್ಸವವು ಶೀಘ್ರ ನಡೆಯಲಿರುವದು. ೧೯೩೨ರ ಸುಮಾರಿಗೆ ಕೊಡಗಿನ ಅಂಧಕಾರದ ಕಾಲಕ್ಕೆ ಶಾಂತಿ ಹಾಗೂ ಮನೋಹರ ಸ್ಥಳವಾಗಿರುವ ಆಶ್ರಮದಲ್ಲಿ ಉಳಿದಿದ್ದ ಮಹಾತ್ಮಾಗಾಂಧಿಯವರು ... ಅನಾನುಕೂಲತೆ ಮಾಡಿದರೂ ಸ್ವಾಮೀಜಿಯವರು ನನ್ನ ಆಳಿಗೆ ... ಪರಿವಾರಕ್ಕೆಲ್ಲ ಆಶ್ರಯಸನ್ನಿತ್ತಿದ್ದಕ್ಕೆ ನಾನು ಅವರಿಗೆ ಆಭಾರಿ ಇದ್ದೇನೆ" ಎಂದು ಹೇಳಿದ್ದರು. ಕ್ರಮತಃ ಬೆಳೆದು ಕೊಡಗಿನ ಈ ಆಶ್ರಮವು ತನ್ನ ಆಸ್ಪತ್ರೆಯಲ್ಲಿ ... ರೋಗಿಗಳಿಗೆ ಚಿಕಿತ್ಸೆ ಮಾಡಿದೆ. ಇವರಿಗಾಗಿ ರೂ ೨೫,೩೦೭ ಖರ್ಚು ಮಾಡಿದೆ ... ಡಾ. ಕೆ ... ಈ ಆಸ್ಪತ್ರೆಯಲ್ಲಿ ... ಭಾರತದ ಸೇನಾನಿ ಜನರಲ್ ಕಾರ್ಯಪ್ಪನವರು ಈ ಆಸ್ಪತ್ರೆಯನ್ನು ಸಂದರ್ಶಿಸಿ ಈ ಉತ್ತಮ ಆಸ್ಪತ್ರೆಯನ್ನು ನೋಡಿ ಸಂತೋಷಪಟ್ಟಿರುವನು. ಅವರ ಕೆಲಸದ ದಕ್ಷತೆಯಿಂದ ಕೊಡಿಸಿ ... ಈ ಆಸ್ಪತ್ರೆಯ ಬಡತನದ ಮುಕ್ತತೆ, ಸಲಕರಣೆಗಳಿಗಾಗಿ ಕಟ್ಟಡಕ್ಕೆ ರೂ ೪೦,೦೦೦, ಸಾಮಾನುಗಳಿಗೆ ೧೫,೦೦೦, ಸಾಲಿನ ಖರ್ಚು ರೂ. ೧೦೦೦೦ ತಗಲುವ ಯೋಜನೆ ತಯಾರಿಸಲಾಗಿದೆ. ವೈದ್ಯಕೀಯ, ಮಕ್ಕಳಿರುವಂತೆ ವಿದ್ಯಾರ್ಥಿ ನಿಲಯ ಸಂಗ್ರಹವೊಂದನ್ನು ಸ್ಥಾಪಿಸಲು ಅಭಿಪ್ರಾಯವಿದೆ. ಸುಮಾರು ೨೫ ವಿದ್ಯಾರ್ಥಿಗಳಿಗೆ ಅನುಕೂಲವಾದ ಯೋಗ್ಯ ಕಟ್ಟಡಕ್ಕೆ ರೂ. ೨೫೦೦೦ ತಗಲುವದು. ಈ ಆಶ್ರಮದ ರಜತ ಮಹೋತ್ಸವದ ಸಂದರ್ಭ ದೇಶದ ಉತ್ಸವಗಳಲ್ಲಿ ಹರಿಕಥೆ, ಭಜನೆ, ಭಾಷಣಗಳಿಗಾಗಿ ರೂ. ೨೦೦೦ ಬೇಕಾಗುವದು. ಆಶ್ರಮವು ಯೋಜನೆ ಮಾಡಿರುವಂತೆ ಆಸ್ಪತ್ರೆಗೆ ರೂ ೪೫೦೦೦, ವಿದ್ಯಾರ್ಥಿಭವನಕ್ಕೆ ರೂ ೨೫೦೦೦, ಮಹೋತ್ಸವಕ್ಕೆ ರೂ ೫೦೦೦ ಆಶ್ರಮ ರೂ. ೫೦೦೦ ಎಂಡೋಮೆಂಟ್ ೨೫೦೦೦ ಹೀಗೆ ಒಟ್ಟು ರೂ. ೧,೦೫,೦೦೦ ವೂ, ಪ್ರತಿ ವರ್ಷಕ್ಕೆ ಖರ್ಚು ಆಸ್ಪತ್ರೆಗೆ ರೂ. ೧೦೦೦೦ ಆಶ್ರಮ, ೨೦೦೦ ಇತರ ಉತ್ಸವಗಳು ರೂ. ೨೦೦೦ ಹೀಗೆ ರೂ. ೧೪,೦೦೦ ವೂ ಬೇಕಾಗಿದೆ. ಇದೆಲ್ಲವೂ ಸಾರ್ವಜನಿಕರ ಉದಾರ ಸಹಾಯದಿಂದ ಆಗಬೇಕು. ಇದುವರೆಗೆ ಪ್ರೋತ್ಸಾಹವಿತ್ತ ಸಾರ್ವಜನಿಕರು ಮುಂದೆಯೂ ಬೆಂಬಲವನ್ನೀಯುವರೆಂದು ನಂಬಲಾಗಿದೆ. ಸಾವಿರ ರೂಪಾಯಿಯೂ ಅದಕ್ಕಿಂತ ಹೆಚ್ಚು ಕೊಡುವವರ ಹೆಸರನ್ನು ಕಲ್ಲಿನಲ್ಲಿ ಕೆತ್ತಿಸಲಾಗುವದು. ರೂ. ೨,೦೦೦ ಕೊಡುವವರ ಹೆಸರಿನಲ್ಲಿ ಒಂದು ಕೋಣೆಯನ್ನು ಪ್ರತ್ಯೇಕಿಸಿ ಶಿಲಾಶಾಸನ ವಿಡಲಾಗುವುದು ಅವರ ಭಾವಚಿತ್ರವನ್ನು ಇಡಲಾಗುವದು ಸಾರ್ವಜನಿಕರು ಈ ಪವಿತ್ರ ಜನಸೇವಾ ಕಾರ್ಯದಲ್ಲಿ ಹೃತ್ಪೂರ್ವಕವಾಗಿ ಸಹಕರಿಸಬೇಕಾಗಿದೆ.

ಸ್ವಾಮಿ ವಿಶ್ವಂಭರಾನಂದ
ಪ್ರೆಸಿಡೆಂಟ್,

ಕೆ ಟಿ ಉತ್ತಪ್ಪ, }
ಸಿ. ಪಿ. ಕುಶಾಲಪ್ಪ, } ವೈಸ್ ಪ್ರೆಸಿಡೆಂಟರು.

ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಕೋ.ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ. (1921ರಲ್ಲಿ ಸ್ಥಾಪಿತವಾಗಿದೆ)

ಅಧಿಕೃತ ಶೇರು ಭಂಡವಾಳ	ರೂ.	10,00,000.
ವಸೂಲಾದ ಶೇರು ಮೊಬಲಗು	ರೂ.	1,79,000.
ಕ್ಷೇಮನಿಧಿ	ರೂ.	55,000.
ಇತರ ನಿಧಿಗಳು	ರೂ.	28,000

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನೂ ಕೈಕೊಳ್ಳಲಾಗುವುದು

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ, ಬೆಳ್ಳಿ ನಗಗಳ ಈಡಿನ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ಕು ಡ್ರಾಫ್ಟುಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರಿನಿಟಿ ಮತ್ತು ಬಾರ್ಡರ್ಸ್ ಇನ್ಶೂರೆನ್ಸ್ ಕಂಪನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಗೌ. ಕಾರ್ಯದರ್ಶಿ,
ಕೆ. ಪಿ. ಅಪ್ಪಯ್ಯ, M. L. C. ಪ್ರೆಸಿಡೆಂಟ್ ಮತ್ತು ಏಜಾಪ್ಪ.

ಕೊಡಗು ಪ್ರಾಂತೀಕ ಸಹಕಾರಿ, ಮಾರ್ಕೆಟಿಂಗ್, ಫೆಡರೇಷನ್ ಲಿಮಿಟೆಡ್., ವೀರಾಜಪೇಟೆ.

ಪಿಸ್ತೂಲ್, ಕೋವಿಗಳು, ತೋಟಗಳು ಮತ್ತು ಎಲ್ಲಾ ತರಹದ ವ್ಯವಸಾಯದ ಹತ್ಯಾರುಗಳು ದೊರೆಯುತ್ತವೆ.

1. 32 ಪಿಸ್ತೂಲುಗಳು (Pistols) ಕ್ರಯ ರೂ. 162 ರಿಂದ 245ರ ವರೆಗೆ.
2. 12ನೇ ನಂಬರಿನ ಒಂಟಿ ಹೊಳವಿನ ಕೋವಿ ಕ್ರಯ ರೂ. 320-0-0
3. 12ನೇ ನಂಬರಿನ ಜೋಡು ಹೊಳವಿನ ಕೋವಿ (Webley & Scott)
4. 12ನೇ ನಂಬರಿನ ಜೋಡು ಹೊಳವಿನ ಕೋವಿ (Spanish make)
5. 6 ಗಜದ (Hand loom) ಕೈಮಗ್ಗದ ಸೀರೆಗಳು ಕ್ರಯ ರೂ. 4-10-0.
6. .32 ಪಿಸ್ತೂಲು ಮತ್ತು ರಿವಾಲ್ವರುಗಳ ತೋಟಗಳೂ ಸಹ ದೊರೆಯುತ್ತವೆ.
7. ಕಾಫಿ ಮತ್ತು ಕಿತ್ತಳೆ ಗಿಡಗಳಿಗೆ ಸ್ಪ್ರೇ ಮಾಡುವ ಪಂಪುಗಳು)Spraying Pumps)
8. ¾" ಮತ್ತು ⅝" ಕಬ್ಬಿಣದ ಸಲಾಕೆಗಳು.

ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

(ಅವಶ್ಯವಿರುವ ಕೋವಿಗಳಿಗೂ, ತೋಟಗಳಿಗೂ ಜಿಲ್ಲಾ ಮೇಜಿಸ್ಟ್ರೇಟರಿಂದ ವಿಶೇಷ ಪರ್ಮಿಟು "Special permit" ಪಡೆದವರಿಗೆ ಮಾತ್ರ ದೊರೆಯುವದು)

ಎಂ. ಎಸ್. ಸೋಮಯ್ಯ, ಗೌರವ ಕಾರ್ಯದರ್ಶಿ.

52-21

ರಘುಲಾಲ್ & ಕಂಪೆನಿ,

ಔಷಧ ವ್ಯಾಪಾರಿಗಳು, ಮೈಸೂರು.

ಕರ್ನಾಟಕದಲ್ಲೆಲ್ಲಾ ಚೆನ್ನಾಗಿ ಸಂಗ್ರಹಿತವಾದ ಮತ್ತು ವಿಶ್ವಾಸಪೂರಿತವಾದ ಔಷಧಿ ಅಂಗಡಿ

Also at:

೭೦ ಆರ್ಕಾಟ್ ಶ್ರೀನಿವಾಸಾಚಾರ್ ಬೀದಿ,

26-24 ಬೆಂಗಳೂರು ೨.

RAGHULAL & CO., CHEMISTS. MYSORE.

Edited, Printed and Published by P. I. Bellirppa at 'Kodagu' Press, Mercara, for 'Kodagu' Ltd.

(೩ನೇ ಪುಟದಿಂದ ಸಾಗಿದ್ದು)

ಸಿ ಸಿ ಸಿ. ಅಧ್ಯಕ್ಷರೊಡನೆ ವಿಹಾರಕ್ಕೆ ಬಂದವರು. ಕೊಡಗಿನ ಸ್ವರ್ಗಸೌಂದರ್ಯವನ್ನು ಕಂಡು ಮೈಮರೆತು ವಿನೋದಕನವರಿಸಿಕೊಂಡಿದ್ದಾರೆ ವಿನಾ ಬೇರೇನಿಲ್ಲ.

ಕೊಡಗಿನ ಹೆಣ್ಣು

'ಕೊಡಗಿನ ನವಯೌವನದ ಹೆಣ್ಣು ಮದುವಣಗಿತ್ತಿಯಂತೆ ಶೃಂಗರಿಸಿಕೊಂಡಿರುವಳು. ಆಕೆಯ ಕೆನ್ನೆಯ ಮೇಲೆ ಕಾಂತಿಪ್ರಸ್ತ ದಿನ ಕನ್ನೆಯ ಕೆನ್ನೆಯಲ್ಲಿರುವ ಗುಲಾಬಿ ರಂಗಿದೆ. ಇಂಥಾ ಕೊಡಗಿನ ವಿಪುಲ ಯೌವನವನ್ನು ಅಕ್ಷಿಯುವರು ಅರಗಿಸಿಕೊಳ್ಳಲಾರರು. ಈ ಅತಿ ಯೌವನಕ್ಕೆ ಸರಿಯಾದ ಗತಿಬೇಕು' ಎಂದು ಲೇಖಕರು ಆಸೆಪಟ್ಟಿದ್ದಾರೆ. ಕೊಡಗಿನ ಹೆಣ್ಣನ್ನು ಕಂಡು ಆಶೆಪಟ್ಟವರು ಇವರೊಬ್ಬರೇ ಅಲ್ಲ. ಹಿಂದೆ ಮೈಸೂರಿನ ದಿವಾನ ಮಿರ್ಜಾರವರು ಕೊಡಗನ್ನು ತನ್ನ ಅಂಕಿತಕ್ಕೆ ತಂದುಕೊಳ್ಳುವ ಆಶೆ ತೋರಿದ್ದರು. ಕೊಡಗನ್ನು ನಂದನ ಕಾನನವಾಗಿ ಮಾಡಿ ಮಹಾರಾಜರ ಬೇಸಿಗೆಯ ವಿಹಾರ ಸ್ಥಳವಾಗಿ ಮಾಡುವ ಕನಸು ಕಟ್ಟಿದ್ದರು. ಇತ್ತ ಮಲಯಾಳದ ಕೇಳಪ್ಪನ್‌ರವರೂ ಕೊಡಗಿನ ಹೆಣ್ಣಿನ ಸೌಂದರ್ಯಕ್ಕಾಗಿ ಆಕೆಯನ್ನು ಮಲಬಾರಿಗೆ ಸೇರಿಸಿಕೊಳ್ಳುವ ಪ್ರಯತ್ನ ನಡೆಸಿದ್ದಾರೆ. ಹಾಗೆಯೇ ಕೊಡಗಿನ ಕಲವೆಣ್ಣನ್ನು ಕರ್ನಾಟಕದ ಬೀದಿಯ ಬಸವಿಯಾಗಿ ಮಾಡಲು ರೀತಿನೀತಿ ಇಲ್ಲದ ಕರ್ನಾಟಕದ ರಾಜಕೀಯ ವಿದಪ್ಪುರುಷರು ಯತ್ನಿಸುತ್ತಿದ್ದರೆ ಅದರಲ್ಲಿ ಆಶ್ಚರ್ಯವಿಲ್ಲ. ಆದರೆ ಕೊಡಗು ತನ್ನ ಸರಳತೆ, ಸಾಹಸ, ಧೈರ್ಯ, ಕಾರ್ಯದಕ್ಷತೆಗಳಿಂದ ಯಾರ ಹಂಗಿಗೂ ಒಳಗಾಗದೆ ತನ್ನ ಸೌಂದರ್ಯವನ್ನೂ, ಪಾತಿವ್ರತ್ಯವನ್ನೂ ಉಳಿಸಿಕೊಂಡಿದೆ. ಲೇಖಕರು ಬರೆದಂತೆ ಇಲ್ಲಿ 'ಮುಖವನ್ನು ಮುಚ್ಚಿ ಮೂಡಲು ಇಲ್ಲಿ ಎಲ್ಲರ ಮೋರೆಗಳನ್ನು ಈ ಮರಸತ್ತಿಕಿದ್ದರುವಳು. ಗಣಿವಂತರು, ಗರುಡವಂತರು ಇರುವದೇ ವಿನಾ ಬಗ್ಗದ ತಗ್ಗದ ಮುಗ್ಗಿಹೋದ ಸೊಟ್ಟ ಮೋರೆಗಳು ಇಲ್ಲಿ ಇಲ್ಲವೇ ಇಲ್ಲ' ಅದೇ ಅಲ್ಲ, ಕೊಡಗಿನಲ್ಲಿ ಬಂಗಾಲಪೀಡಿತ ರಾಯಲಸೀಮೆಯ ಕಷ್ಟಧಾಪೀಡಿತರಿಲ್ಲ. ಕಟಿಲಜ್ಞೀತಿಯ ನಿಜ್ಜಾತ ಧಾರವಾಡದ ಕರೆಸಿಗಳಿಲ್ಲ. ಹೊರಗಿನ ಮೆರುಗಿನಿಂದ ಒಳಗಿನ ಹುಳುಕನ್ನು ಮುಚ್ಚಿದ ಮೈಸೂರಿನ ತೋರಿಕೆ ಶೃಂಗಾರವೂ ಇಲ್ಲ. ಇವುಗಳೊಡನೆ ತುಲನೆ ಮಾಡಿ ಹೇಳುವದಾದರೆ ಕೊಡಗಿನಲ್ಲಿ ಎಲ್ಲವೂ 'ಸತ್ಯಂ ಶಿವಂ ಸುಂದರಂ.' ಇಂಥಾ ಸ್ಥಿತಿಯು ಹೊಲಸಿನ ಹೊಲಗೇರಿಯಾಗದಂತೆ ರಕ್ಷಿಸಲು ದುಡಿಯುವದು ಪ್ರತಿಯೊಬ್ಬನ ಆದ್ಯಕರ್ತವ್ಯವಾಗಿದೆ.

ತಿಳಿಸಿರಿ.

ಭೂಮಿ, ತೋಟ, ಜಾಗ ಪೇಟೆಯಲ್ಲಿ ಮನೆ ಇಧನ ಮನೆ ಸೈಟು ಮಾರಲಿರುವವರು ಮತ್ತು ಕೊಂಡುಕೊಳ್ಳಲಿಚ್ಛಿಸುವವರು ಈ ಕೆಳಗಿನ ಪತ್ರ್ಯದಲ್ಲಿ ವಿಚಾರಿಸಿರಿ. ಅಲ್ಲದೆ ಬೇಕಾದವರಿಗೆ ಕರಿಯ ಎಮ್ಮೆ, ಹಸು ಮತ್ತು ಉಳುವ ಎತ್ತು ಮತ್ತು ಕೋಣಗಳನ್ನೂ ಒದಗಿಸಿ ಕೊಡಲಾಗುವುದು. ಬೇಕಿರುವವರು ತಮಗೆ ಬೇಕಾದ ತಾರೀಕಿನ ಎಂಟು ದಿನಗಳ ಮುಂದೆ ತಿಳಿಸಬೇಕಾಗಿದೆ. ವಿವರಗಳಿಗೆ ಈ ಪತ್ರಕ್ಕೆ ಬರೆಯಬಹುದು:

P. A. N. & SONS.
Commission Agent,
Gonicoppal
S. Coorg.

26-2

ತಪ್ಪದೆ ಓದಬೇಕಾದ

ಮೂರು ಪುಸ್ತಕಗಳು.

ಲೇಖಕರು:— ಶ್ರೀ ಬಿ. ಡಿ. ಗಣಪತಿ.

ಕುಸುಮಚಯ	ಪತ್ರಾವಳಿ	ಪ್ರತಿಧ್ವನಿ
ನರ್ತಕಿ	ತೀರ್ಥಯಾತ್ರೆ	ಕಾವೇರಿ
ಆಸ್ಪತ್ರೆ	ಬಾಳಿನ ಗುರಿ	ಪೂಜೆ
ಕಲಾವಿದ	ಜೈಲು ಅನುಭವ	ನಗು
ನ್ಯಾಯ	ಪ್ರೇಮ	ಸುಂದರಿ
ಕವಿಜೀವ	ವಿವಾಹ ಪದ್ಧತಿ	ಬಡತನ
ಮುರಳಿನ ಮನೆ	ಸಮಾಜ	ಕಹಳೆ
'ಅದು ನಾನು'	ಮಹಿಳೆಯರು	ಪಥಿಕ
ಮೊದಲಾದ ಹೃದಯಂಗಮವಾದ ೧೫ ಕಥೆಗಳು.	ಮೊದಲಾದುವನ್ನು ಕುರಿತ ವಿಚಾರ ಪ್ರಚೋದಕ ೬೩ ರಾಗ ಪತ್ರಗಳು	ಮೊದಲಾದ ಭಾವೋತ್ತೇಜಕ ೫೦ ಕವನಗಳು

ಮೂರು ಪುಸ್ತಕಗಳ ಬೆಲೆ ರೂ. ೫—೦—೦

ಪುಸ್ತಕ ದೊರೆಯುವ ಸ್ಥಳ—

ಕೊಡಗು ಪ್ರೆಸ್ ಮಡಿಕೇರಿ.

Reg. No. M. 1580.
'KODAGU' MERCARA, (Coorg).

ಕೊಡಗು

ಸಂಪಾದಕರು—ಬಿ. ಡಿ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. 5-0-0

ಸಂಪುಟ ೨೯ | ತಾರೀಕು ೨-೩-೧೯೫೧ನೇ ಶುಕ್ರವಾರ | ಸಂಚಿಕೆ ೩೭

ಗೊಡನೆಯೂ ಇಲ್ಲ ಹಾಲು ಕರೆದು ಮಾರ ಲ ಅನುಕೂಲವಾಯಿತು.

ಅದೊಂದು ಶುಭ ದಿನ ಜಿಲ್ಲಾ ಪಂಚಾ ಯಿತಿಗೆ ೦-೧೫-೦ಗೆ ಮಾರಬೇಕೆಂದು ಅಪ್ಪ ಣೆ ಕೊಟ್ಟರು. ಆ ಸ್ಥಾನ ಇದ್ದ ಹೆ ಚ್ಚು ಬೆಲೆಯ ಬೆಲ್ಲವನ್ನು ಮಾರುವುದಾದ ಲೂ ವ್ಯಾಪಾರಿಗಳಿಗೆ ಅನುಕೂಲವಾದ ಕಾ ರಣ ಒಬ್ಬೆ ಬ್ಲಾಕ್‌ನಲ್ಲಿ ಕಪ್ಪುಸಂತೆ ಮಾ ರಬೇಕು ಅನುಮಾನಿಸಿ, ಪಾಪ ಬಡರೈತರು ಅದೆ ಕಪ್ಪೆಗುಂಡಿಗೆ ಬೀಳಬೇಕಾಯಿತು. ಕೈ ಬಾರ ದೆ ಮೂಲೆಯಲ್ಲಿ ಬಿದ್ದಿದ್ದ ಕತ್ತಲೆದ್ದಿಯಲ್ಲಿಂ ತ ಬೆಲ್ಲವನ್ನು ಮಾರಲು ಅನುಕೂಲವಾ ಯಿತು. ಬಡ ರೈತ ತಿಂದುದಾಯಿತು.

ನಮ್ಮ ಆಡಳಿತ ಕ್ರಮ-ಒಂದು ಹಿನ್ನೋಟ.

ಲೇ:—ಶ್ರೀ ಐ ಪಿ ಮಾದಪ್ಪ

ಪರದೇಶೀ ಆಡಳಿತ ಕ್ರಮ, ತಾವೇ ದಾರಿ ಜೀವನವು ತನಗೆ ಹೀನಾಯವೆಂ ದು ಅರಿತು ಗಾಂಧಿಜೀಯವರ ಅಪ್ಪಣೆ ಮೀರಿ ಹೋರಾಟ ನಡಿಸಿ ಬ್ರಿಟಿಷರನ್ನು ಓಡಿಸಿ ಕಾಂಗ್ರೆಸು ಸರಕಾರವನ್ನು ಪಡೆಸಿ ಇಂದಿಗೆ ೪ ವರ್ಷಗಳಾಗುತ್ತಾ ಬಂತು. ಈ ಅವಧಿಯಲ್ಲಿ ನಮ್ಮ ಸ್ವತಂತ್ರ ದೇಶದ ಆ ಡಳಿತ ಕ್ರಮದಲ್ಲಿ ಸಂಕಟದ ಬೆನ್ನೆಲುಬಂ ದು ಹೊಗಳಿಸಿಕೊಳ್ಳುವ ಬಡ ರೈತನ ಅವ ಸ್ಥೆ ಹೇಗಿದೆ ಅನಂಗೊಂಡ ತಿರುವ ಕೊಂ ದರೆಗಳೇನೆಂಬುದನ್ನು ಒಕ್ಕ ಪಟ್ಟಿಗೆ ಹಾ ಕಿಗರಬೇಕೆಂಬುದೇ ಈ ಲೇಖನದ ಉ ದ್ದೇಶ.

ಮುಖ್ಯ ಬೆಳೆಯಾದ ಭತ್ತಕ್ಕೆ ನಿಯಂ ತ್ರಣ ತಂದಾಗ ಇಂದಿಗೆ ೩ ವರ್ಷವಾಯಿ ತು. ಆದರೂ ಹಿತಕರವಾದ ಬೆಲೆಯ ಏರ್ಪಾಟು ಇನ್ನೂ ಆಗಿಲ್ಲ. ಇದರಿಂ ದ ರೈತರು ಎಂದೂ ಕೇಳರಿಯದ ದೊಡ್ಡ ಸಾಲದಲ್ಲಿ ಮುಳುಗಿ ಒದ್ದಾಡುತ್ತಿರುವ ರು. ೧೯೪೮ರಲ್ಲಿ ಹತ್ತಿ ಹೆಚ್ಚಿದ ಕರ್ಚಿ ಗಾಗಿ ಸಹಕಾರ ಬ್ಯಾಂಕಿನಿಂದ ಸಂ ಘವೆಂಬ ರು ಗಳಿಗೆ ಕೊಡಲು ... ಸಾ ವಿರ ರೂಪಾಯಿ ಸಾಲ ಪಡೆದರು. ಆದು ಕ್ರ ಮವಾಗಿ ಏರುತ್ತಾ ಬಂದು ೧೯೫೦ನೇ ಇಸವಿಯಲ್ಲಿ ೧ ಲಕ್ಷದ ೪ ಸಾವಿರ ರೂ ಪಾಯಿಯನ್ನು ಸಾಲವಾಗಿ ಪಡೆಯಿತು. ಹೆಚ್ಚು ಕಮ್ಮಿ ೩ ಪಾಲು ಜಾಸ್ತಿ. ಸಂ ಘದಿಂದ ಸಾಲ ಪಡದರೆ ತನ್ನ ಗುಟ್ಟು ಹೊರಬೀಳುವದೆಂಬ ಭೀತಿಯಿಂದ ಗು ಟ್ಟಾಗಿ ಸಾಹುಕಾರಗಳಿಂದ ಸಾಲ ಪಡೆದ ವರ ಸಂಖ್ಯೆ, ಮೊಬಲಗನ್ನು ಕಂಡು ಹಿಡಿ ಯುವ ಹೊಣೆ ನಮ್ಮ ಸರಕಾರಕ್ಕಿರಲಿ.

ಇದಕ್ಕೆ ಕಾರಣವಾದರೂ ಏನು? ರೈತನು ತನ್ನ ಕರ್ಚಿಗೆ ಬೇಕಾದಂತೆ ತನ್ನ ಲ್ಲಿರುವ ಭತ್ತವನ್ನು ಅಲ್ಪ ಸ್ವಲ್ಪವಾಗಿ ಮಾ ರಾಟಮಾಡಲು ಕೊಡದೆ ಹೋದದ್ದು ಕಾರ ಣವೆಂದು ಧಾರಾಳವಾಗಿ ಹೇಳಬಹುದು. ಇದ್ದ ಭತ್ತವೆಲ್ಲಾ ಮುಂದಾಗಿ ಮಾರಬೇಕಾ ಗುವ ಕಾರಣ ದೊರಕಿದ ಹಣವೆಲ್ಲಾ ಅ ನಾವಶ್ಯವಾಗಿ ಕರ್ಚಾಗಿ ಹೋಗುತ್ತದೆ. ಉಳುವರಿಯಲ್ಲಿನ ದೇಶದ ರೈತನೂ ಸರ ಕಾರವೂ ರೈತರ ಕಷ್ಟಗಳನ್ನು ಬಹಳ ದೊ ಡ್ಡದಾಗಿ ಹೇಳಿ ಕೊಳ್ಳುವರು ಅವರೇ ಉ ತ್ತಮರಾಗಿ ಬಾಳು ಹಾಗಲ್ಲ. ಆದು ಈ ವರೆಗಿನ ದೇಶವೆಂದು ಹೇಳು ಪಡೆದ ಉಳುವರಿ ನಿಜ ಗರೀಬ ಸ್ಥಿತಿಯನ್ನು ಮೊದಲೆ ಅವರ ನಿಜ ಗರೀಬ ಸ್ಥಿತಿಯನ್ನು ಕೇಳುವ ಅವಕಾಶವನ್ನು ಅದು ಕಳಕೊಂ ಡಿದೆ. ಉಚ್ಚ ಅಧಿಕಾರಿಗಳು ತಮ್ಮ ಕೇ ಳದ ಬಡ ರೈತನ ಬೆವರಿನ ಹನಿಯಿಂದ ಬ ರುವ ಹಣದಿಂದ ತಮ್ಮ ಜೀವನವನ್ನು ಸು ಖೋಪವಾಗಿ ಕಳೆಯುತ್ತಿರುವದನ್ನು ಮ ರೆತ ರೈತನ ಕಷ್ಟವನ್ನು ಸಸಹಡೆ ದೊರ ಪ್ಪಾಂತ್ಯದವರ ಮೇಲ್ಮೆಗಾಗಿ ದುಡಿಯು ತ್ತಿರುವರೆಂದರೆ ತಪ್ಪಾಗದು.

೧೯೩೯ನೇ ಇಸವಿಯಿಂದ ೧೯೪೫ ನೇ ಇಸವಿಯವರೆಗೆ ಮಹಾ ಯುದ್ಧದ ಕಾಲ ದಿಂದ ೩೩ ರ ವರೆಗಿನ ೧೦ ವರ್ಷಗಳಲ್ಲಿ ದಿ ನಸ ಬಳಕೆಯ ಎಲ್ಲಾ ವಸ್ತುಗಳಲ್ಲಿ ಬತ್ತದ ಬೆಲೆಯು ೮೦-೮೫ಕ್ಕಿಂತ ಎಂದೂ ಕಮ್ಮಿ ಯಾಗಿಲ್ಲ. ಈ ಕಳೆದ ೩ ವರ್ಷದಲ್ಲಿ ದೊರಕಿದ ಅಧಿಕ ಬೆಲೆ ಎಂದರೆ ೧೮೦ ಅಂದ ರೆ ಕೆಲವರು ೨ ಪಾಲು ಜಾಸ್ತಿ. ಆದರೆ ಇದೇ ಕಾಲ ವರ್ಷದಲ್ಲಿ ಇತರ ಎಲ್ಲಾ ಕಾಳು ಕಡ್ಡಿಗಳ, ಬಟ್ಟೆಯ, ಆಳುಗಳ ಸಂ ಬಳ ಸರಾಸರಿ ೪ ಪಾಲು ಜಾಸ್ತಿ.

ಮುಖ್ಯ ಜೀವನಾಂಶವಾದ ಭತ್ತ, ರಾಗಿ ಮುಂತಾದ ಬೆಲೆಗೂ ಇತರ ಕಾಳುಕಡ್ಡಿಗಳ ಬೆಲೆಗೂ ಸಂಕಟಪಟ್ಟುಕೊಡದೆಂದು ಕೇಳುವವ ರೂ ಇದ್ದಾರೆ. ಈ ಕಾಳುಕಡ್ಡಿಗಳಲ್ಲಿನ ಜೀವನವನ್ನು ಸಾಗಿಸಬಹುದೆಂದಾದರೆ ರೈ ತನ ಹೊಟ್ಟೆಪಾಡಿನಿಂದ ಇಷ್ಟಗಳು ದೂರಕ್ಕೆ ಇರದಂತೆ ತಡೆಗಟ್ಟುವದು ನ್ಯಾಯವೇ? ಅವರ ಬರುವಿಕೆಯು ಆವಶ್ಯವೆಂದಾದರೆ ಅವುಗಳನ್ನು ತಕ್ಕ ಬೆಲೆಗೆ ಒದಗಿಸಿಕೊಡು ವದು ನಮ್ಮ ಸರಕಾರದ ಮುಖ್ಯ ಕರ್ತ ವ್ಯವಲ್ಲವೇ? ಈ ವರೆಗೆ ಇದನ್ನೇನು ತೋರಿ ದರೆ ತಿಳಿದುಕೊಂಡಿದ್ದಾರೆ? ಹೊರ ಕಳು ಹಿಸುವ ನಮ್ಮ ಒಳಿತಿಗೆ ಸರಕಾರವು ಏ ಷ್ಟು ತೊಂದರೆ ತೆಗೆದಿದ್ದಾರೆ ಎಷ್ಟು ಹಣ ಕರ್ಚು ಮಾಡಿಲ್ಲ? ಅನ್ನದ ಪೂರೈಕೆ ಇ ಲ್ಲದ ದೇಶದ ಸರಕಾರವು ಅದನ್ನು ಒದಗಿ ಸಲು ಎಷ್ಟು ತೊಂದರೆ ತೆಗೆದುಕೊಳ್ಳುತ್ತಿ ರುವರು! ಸಂಪಾದನೆಯಿಲ್ಲದ ದೂರದ ರವ ಅನೇಕದಿಂದ ತಂದು ರೈತನಿಗೆ ಕೊಡುತ್ತಿದ್ದಾರೆ. ಇಲ್ಲಿಯ ಸರಕಾರವು ರೈತನ ಜೀವನ ರಕ್ಷಕ ವಸ್ತುಗಳನ್ನು ಒ ದಗಿಸಲು ಏನು ಮಾಡಿದೆ, ಮಾಡಲಿದೆ ಎಂಬುದಕ್ಕೆ ಜವಾಬು ಬೇಕಿದೆ.

ರೈತನಿಗೆ ಸರಬರಾಯಿ ಮಾಡಲು ತಂ ದ ಹಲವು ಪುಡಿ ವಿಂಗಲ ಅವುಗಳನ್ನು ನಾಲ್ಕು ಏ, ಇಂತ ಎಕ್ರೆ ವರೆಗಿನ ಏಟ ದಿನ್ನಗಳೆಲ್ಲಾ ಆದರಲ್ಲಿದೆ ಎಂದೂ ಹಳ್ಳಿ ಗಳಿಂದ ಹಲವು ಪಟ್ಟಣಕ್ಕೆ ತಂದರೆಬರ ಹಳ್ಳಿ ಗರ ಮಕ್ಕಳಿಗೆ ಹಾಲಿಲ್ಲದ ಗತಿಯೆಂದೂ ಹೇಳ ಹಾಲು ಪಟ್ಟಣಕ್ಕೆ ತರಕೂಡದಾಗಿ ಕ ಟ್ಟುಪ್ಪಣೆ ವಿಧಿಸಿ ಹಾಲು ಪುಡಿ ಕೆಟ್ಟಿಸಿ ಗೊ ಬ್ಬರ ಗುಂಡಿಯಲ್ಲಿ ಹೂಣುವ ವರೆಗೆ ತಿ ನ್ನಿಸಿದಾಯಿತು. ಈಗ ಏಟವಿನ್ನಿನ ಹಾ ಲ ಪುಡಿಯೂ ಇಲ್ಲ ಹಳ್ಳಿ ಮಕ್ಕಳ

ಸಾರಾಯಿಯನ್ನು ಸಂಪೂರ್ಣವಾಗಿ ನಿಲ್ಲಿಸ ಬಹುಗಲೇ ಇಲ್ಲವಾ. ಆದರ ಗೋ ಜಿಗೆ ಹೋಗದೆ ಬೇರೆ ಇರುವ ಒಬ್ಬ ೧-೧೨-೦ ಬೆಲೆ ಇದ್ದ ಸಾರಾಯವನ್ನು ೪ ರೂ ಗ ಕೂಪನ್ ಮೇರೆ ಕೊಡ ಪಂಚೆ ಮಾಡಿ ಸರಕಾರಕ್ಕೆ ಬರುವ ಆದಾಯವನ್ನು ಕಮ್ಮಿ ಮಾಡಿಕೊಂಡು ಕಪ್ಪುಸಂತೆ ಯಲ್ಲಿ ೮ ರೂ ಯಿಂದ ೧೨ ರೂಗೆ ಮಾ ರಾಟ ಮಾಡುವ ಅನುವು ದೊರೆಯಿತು. ಇದರಿಂದ ನಿಶಕ್ತಿಪೀಡಿತನಾಗಿದ್ದ ದೇಶದ ಜ ನರು ಇಲ್ಲಿ ಬಂದು ಉಳುವರಿಯಾಗಬೇ ಕಾದ ಅಕ್ಕಿಯನ್ನು ತಿನ್ನಲು ಅನುಕೂಲ ವಾಯಿತು. ಕಳ್ಳಸಂತೆಯಲ್ಲಿ ಅಕ್ಕಿ ಮಾ ರಾಟಮಾಡಲು ಇನ್ನೊಂದು ಅನುವು ನ ಮ್ಮ ಸರಕಾರ ಒದಗಿಸಿತು!

ಹೊಗೆಸೊಪ್ಪು, ಸಕ್ಕರೆ, ಸೀಮೆಎಣ್ಣೆ, ಬಟ್ಟೆಗ ಳನ್ನು ಕಟ್ಟಿಸಿದರೆ ರೈತರಿಗೆ ಅವರು ಮಾಡಿ ದ ಕರ್ಚಿನ ಕೆಲವು ಅಂಶವನ್ನು ಸರಕಾರ ಕೊಡುವವಾಗಿ ಸುಳ್ಳು ಭರವಸೆಕೊಟ್ಟರೆ ರೈ ತನಿಗೆ ಇಲ್ಲದ ತೊಂದರೆ ಬಂದಿದೆ.

ವಿನಾ ಗಾರಿಕೆ, ಹುಲ್ಲು ಬೆಳಸುವಿ ಕೆ, ವ್ಯಾಪಾರ, ಗೋರಕ್ಷಣ, ಎಲ್ಲವೂ ಅಲಾದ ಜೀವನದಂತಾಯಿತ. ಇದಕ್ಕಾ ಗಿ ಬಡ ರೈತನ ದುಡಿಮೆಯ ಹಣವೆಷ್ಟು ವ್ಯರ್ಥವಾಗಿ ಕರ್ಚಾಯಿತು? ಈ ದರು ಪಯೋಗಕ್ಕೆ ಎಲ್ಲಿಯೂ ಶಿಕ್ಷೆ ಇಲ್ಲವೇ?

ಕುಗ್ರಾಮದ ಹೊಸ ಸಹಕಾರಿ, ಆ ಬಡ ರೈತನಿಗೆ ಅನೇಕ ಬಗೆಯ ಕಾರಣ ಬಿಸಿಲ ಬಿರುಕೆ, ಚಿಟ್ಟೆ, ಕೋ ಡ, ಕೀಟ್ಟಗಳ ರೋಗಕ್ಕೆ ಬೇಕಾಗುವ ಸಿಮೆಂಟನ್ನು ತಕ್ಕ ಬೆಲೆಗೆ ಒದಗಿಸುವ ದು ಅಹಾ, ಗಂಭೀರವಾದ ಸಹಾಯ, ಇ ದಕ್ಕಾಗಿಯೇ ಅವರು ಬಾಲಿ ಹಿಡಿಯು ತ್ತಿದ್ದರು. ನಿಜವಾದ ರೈತನನ್ನು ಸರಕಾ ರದ ಮುಖ್ಯ ಅಧಿಕಾರಿಗಳಿಗೆ ಗೊತ್ತಿದೆ ಯೇ, ನಿಜ ರೈತನಾರೆಂದ ಅರಿವಿದೆಯೇ? ನಿಜ ರೈತನಿಗೆ ಸಿಮೆಂಟು, ಕಬ್ಬಿಣ, ಕಬ್ಬಿಣ ಗಳನ್ನು ಪ್ರತ್ಯೇಕವಾಗಿ ದೊರಕಿಸಿಕೊಟ್ಟ ರೂ ಕೂಡ ಅದನ್ನು ಕಟ್ಟಿಸಿಕೊಳ್ಳಲಾರದ ಷ್ಟು ಬಡವನಾಗಿದ್ದಾನೆಂಬುದು ತಿಳಿದಿರ ಲಿ. ಸಿಮೆಂಟು ಕರ್ಚಾಗಬಹುದು ಆದ ರೆ ಅದು ನಿಜ ರೈತನಿಂದಲ್ಲ, ಅವನಿಗಾಗಿ ಅಲ್ಲ. ಅದೊಂದು ಕಪ್ಪು ಸಂತೆಗೆ ಅವ ಕಾಶ!

ಗಂಟೆಗೆ ೩೦-೩೫ ಮೈಲು ವೇಗದ ಮೋಟಾರಿನಲ್ಲಿ ಕೂತು ಲಕ್ಷ್ಮಿಯಲ್ಲಿ ಧೂಳಿ ಬ್ಬಿಸಿ ಪಟ್ಟದಿಂದ ಪಟ್ಟಣಕ್ಕೆ ಪ್ರಯಾಣಮಾ ಡಿದರೆ ಅಧಿಕಾರಿಗಳಿಗೆ ನಿಜ ರೈತನ ಕಣ ಬರಹ ತಿಳಿಯಲಾರದು. ತಿಳಿಯಬೇಕೆಂಬ ಅಭಿಲಾಷೆ ಇದ್ದರೆ ಹಳ್ಳಿಗಳಿಗೆ ಬನ್ನಿ, ರೈ ತನ ಮನೆ ಹೊಕ್ಕಿ ನೋಡಿ. ಅದು ಸಾ ಧ್ಯವಿಲ್ಲದಿದ್ದಲ್ಲಿ ಭತ್ತದ ಪ್ರಕ್ಯೂರ್ ಮೆಂ ಟ್‌ನ ಪಟ್ಟಿ ನೋಡಿ. ಎಷ್ಟು ರೈತರಿಗೆ ಭತ್ತ ಮಾರಲು ಇಲ್ಲವೆಂಬುದು ತಿಳಿಯು ಬರುವದು.

ದೇಶವು ಹೊರಗೆ ಕಳುಹಿಸಿದ ಭತ್ತ ಕ್ಕೆ ಸೆಂಟ್ರಲ್ ಸರಕಾರವು ... ಗೆ ರೈತರ ಹಿತಕ್ಕಾಗಿ ಕರ್ಚುಮಾಡುವ ಗಳು ಕೊ ಟ್ಟ ಹಣವು ಆಗಲಿಕ್ಕಿರುವ ... ನ ರೀತಿ ಬಹು ವಿಶೇಷಕರವಾಗಿದೆ. ... ಬೆಳೆ ಯನ್ನು ಬೆಳೆಸುವುದನ್ನು ಅರಿಯುವ ರೀತಿ ಯು ಬಹಳ ಆಶ್ಚರ್ಯದ ರೀತಿಯದು. ಭ ತ್ತವನ್ನು ಒಂದು ನಿರ್ದಿಷ್ಟ ಪಟ್ಟಿಗೆಗೆ ಒ ಪ್ಪಿಸಿಕೊಳ್ಳದಾಗಲೀ ಇಲ್ಲಿನ ಒಬ್ಬ ಹುಡು ಪರದಾಟ. ತನ್ನ ಗದ್ದೆಯನ್ನು ಇಟ್ಟರು ವ ರೀತಿ, ಇದೇ ಬೆಳೆಯನ್ನು ಪರೀಕ್ಷಿಸ ದ ಬೆಳೆ ಒಣಗಿರಲಿ, ಇಲ್ಲದಿರಲಿ ೮೦'X ೨೦'ರ ಒಂದು ಚದರವನ್ನು ಅಳೆದು ಭತ್ತ ವನ್ನು ಕೂಗಿ ಕೊಡದ ... ಈ ೨೦೦ ಚ ದರದಲ್ಲಿ ೬೦೦ದ ಬಂದರೆ ಆ ಎಕ್ರೆಗೆ ಅಂದರೆ ಅಂದಾಜಿನ ಭತ್ತ ಎಂದರೆ ೧೦೦ ಬ ಟ್ಟ (೩ ಏಕರ) ಭೂಮಿಯಲ್ಲಿ೧೨೦ ರಿಂದ ೧೪೦ ಬಟ್ಟಿ ಭತ್ತ ಬೆಳೆಯುತ್ತಾಯಿತು. ಈ ತಪ್ಪು ಗಣನೆಯಿಂದ ಅನೇಕ ಸಾವಿರ ರೂಪಾಯಿ ಸೋರಿಹೋಗಲು ಇಂದು ನಿಂತಿದೆ.

ಗೋಸ್ಟರ್ ಗ್ರೋಯಿಂಗ್ ಪ್ರಚಾರದಂತೆ ಒಂದು ಜಾಗದ ಎಕ್ರೆ ಇರುವ ವರು ಹಸಿ ಎಲೆಯನ್ನು ಬಿರ ತಿ ಎಸ್ಟ್ರಿಕಲ್ಚರಲ್ ಆಫೀಸರ್ ಮುಂತಾದವರು ಹೇ ಳಿದ ರೀತಿಗೆ ಜಮೀನಿನಲ್ಲಿ ಹಾಕಬೇಕಾದರೆ ಸು ಮಾರು ೪೦೦ ಹೊನ ಅದಕ್ಕೆ ಗೋಸ್ಟರ ಬಾಕಿ ಬ್ರಾಂಚದಂತೆ ಅಂದರೆ (೨೦'X೫'X ೪=೪೦೦೦(ft) ೩೦-೪೦ ಎತ್ತುಗಳು ಬೇಕಾಗುವವು. ೧ ಜೋಡಿ ಎತ್ತುಯಿರುವ ರೈತನೆಂತೆ ಈ ಗೋಸ್ಟರ ಸಂಗ್ರಹಿಸಿ ಇ ಲಾಖೆಯವರಿಂದ ಇನಾಮನ್ನು ಪಡೆಯು ಬೇಕಾದರೆ ಗಾಂಟ ಬಾಗಿಲ ಗುಂಡಿಗಳನ್ನು ತೆಗೆದು ಗೋಸ್ಟರ ಶೇಖರಿಸಬೇಕಾಗಿದೆ. ಇ ದು ಸಾಧ್ಯವಿದೆಯೇ? ಅಂದರೆ ಇದ ಕ್ಕಾಗಿ ವ್ಯಯಿಸುವ ಹಣವು ಅಪವ್ಯಯ ವಲ್ಲವೇ?

ಭತ್ತದ ಶೇಖರಣೆಗೆ ಜಿಲ್ಲೆಯಲ್ಲಿ ಸೆಂಟರು ಗಳನ್ನು ಏರ್ಪಡಿಸಿ ಬಾಡಿಗೆದಾರರ ಒಡೆ ತನ್ನಕ್ಕೆ ಒಪ್ಪಿಸಲಾಯಿತು. ಆಗ ಕರಡಿಗೆ ನಿಲ್ಲ ಸ್ಥಳದಂತೆ ಒಪ್ಪಿಸಿದ ಚಿಕ್ಕದಂತೆ ಮುನ್ನಾಯಿ ರುವ ರೈತನು ಈ ಸ ಬೆಳೆದ ಭತ್ತವನ್ನು ಈ ಸೆಂಟರುಗಳಿಗೆ ಸಾಗಿಸಲು ರೈತನಿಗೆ ಯಾವ ವಾಹನ, ಗಾಡಿ ಆಳುಗಳ ಅನು ಕೂಲವಿದೆ? ಇದ್ದರೆ ಎಲ್ಲಾ ಪೂರ್ವಧ್ಯಾನ ದ ಕ್ರಮದ ಪ್ರಕಾರ ಬೇಕಾಗುವಲ್ಲ. ಈಗ ೩-೪ ವರ್ಷಗಳ ಹಿಂದೆ ಹೀಗೆ ಸೆಂಟರುಗ ಳನ್ನು ಮಾಡಿದ್ದರಿಂದ ರೈತನು ಪಟ್ಟ ಕಷ್ಟ ಗಳನ್ನು ತಾನೇ ಚೀಫ್ ಕಮಿಷನರು ತಿ ಳಿದಿದ್ದರೂ ಅವರ ಕಾರ್ಬಾರಿಗೆ ಮುಂದುವರಿಯಿತು? ನಮ್ಮ ರೈತ ಸರಕಾರವಾಗಿ ಸಾಗಿಸದೆ ಮುಳೆಯಿಂದ ಆದ ನಷ್ಟವೆಷ್ಟು, ತೊಂದರೆ ಎಷ್ಟು?

ಸರಕಾರಿ ಉದ್ಯೋಗಸ್ಥರು, ತಾವು ಪ ಡೆಯುತ್ತಿರುವ ಸಂಬಳ ಭತ್ಯಗಳು ಬಡರೈತ ನು ಕೊಟ್ಟ ಬಟ್ಟೆಯನ್ನು ಬಿಟ್ಟುಕೊಟ್ಟ ಕಾ ಣಿಕೆಯೆಂಬುದನ್ನು ಜ್ಞಾಪಕದಲ್ಲಿಟ್ಟುಕೊಂ ಡು ಅಕೃತಜ್ಞತೆಯನ್ನು ಈ ಬಡ ರೈತನಿಗೆ ಸಲ್ಲಿಸಲು ಪ್ರಯತ್ನಿಸದಿದ್ದರೆ ರೈತನ ಉ ದ್ಧಾರವಾಗಲಾರದು.

———

ಸೋವಿಯೆಟ್ ರಶಿಯಾದ ಔದ್ಯೋಗಿಕ ಪ್ರಗತಿ.

ರಶಿಯನ್ನರ ಪ್ರಾಮಾಣಿಕ ದುಡಿತ.

'ಧಿಕ್ಕ

ರಶಿಯಾದಲ್ಲಿ ಸೋವಿಯೆಟ್ ಸರಕಾರವು ಪ್ರಾರಂಭವಾದ ಕಾಲದಲ್ಲಿ ಮಹಾಪುರುಷ ಲೆನಿನ್ನನು, ರಶಿಯಾದ ತರುಣ ಸೋವಿಯೆಟ್ ರಿಪಬ್ಲಿಕದ ಆರ್ಥಿಕ ಪ್ರಗತಿಗಾಗಿ ಒಂದು ಮಹಾ ಯೋಜನೆಯನ್ನು ಸಿದ್ಧಗೊಳಿಸಿದನು. ಈ ಯೋಜನೆಯಲ್ಲಿ ಔದ್ಯೋಗೀಕರಣಕ್ಕೆ ಅಗ್ರಸ್ಥಾನವಿತ್ತು. ಸೋಶಿಯಾಲಿಜಮ್ಮಿಗೆ ಜಯವಾಗಬೇಕಾದಲ್ಲಿ, ಒಕ್ಕಲುತನವನ್ನು ಒಳಗೊಂಡು ರಾಷ್ಟ್ರದ ಆರ್ಥಿಕ ಪರಿಸ್ಥಿತಿಯಲ್ಲಿಯೇ ಒಂದು ಮಹತ್ವದ, ದೊಡ್ಡ ಉತ್ಪತ್ತಿಯ-ತಾಂತ್ರಿಕ ಬದಲಾವಣೆಯು ಅವಶ್ಯವಾದುದೆಂದು ಲೆನಿನ್ನನು ಹೇಳಿದನು. ಆದಕಾರಣ ದೇಶದಲ್ಲಿಯ ವಿದ್ಯುತ್ ಕರಣಕ್ಕೆ ಲೆನಿನ್ನನು ವಿಶಿಷ್ಟ ಮಹತ್ವವನ್ನು ಕೊಟ್ಟಿದ್ದನು.

ಈ ಹೊಸ ತಾಂತ್ರಿಕ ತಳಹದಿ, ಮತ್ತು ಘನವಾದ ಔದ್ಯೋಗೀಕರಣಗಳನ್ನು ಪ್ರಸ್ಥಾಪಿಸುವುದು ಬಹು ಕಠಿಣವಾದ ಕಾರ್ಯವಾಗಿರುತ್ತದೆ. ಮೊದಲೇ ಅಶಕ್ಯ ಕೂಸಿನಂತಿದ್ದ ಉದ್ಯೋಗ ವ್ಯವಸಾಯಗಳನ್ನು ಹಾಳುಗೆಡಹಲು ಜಗತ್ತಿನ ಪ್ರಥಮ ಯುದ್ಧವೂ ರಶಿಯಾದ ಅಂತರ್ಯುದ್ಧವೂ ಕಾರಣವಾದವು. ಝಾರನ ಕಾಲೀನ ರಶಿಯಾದಲ್ಲಿ ಒಕ್ಕಲುತನವೇ ಸವೆದು ಹೋಗಿತ್ತಲ್ಲದೆ ರಶಿಯಾ ಬಹು ಹಿಂದುಳಿದ ದೇಶವಾಗಿತ್ತು. ಬಹಳಷ್ಟು ಗಿರಣಿ ಕಾರಖಾನೆಗಳು ಕೆಲಸವಿಲ್ಲದೆ ತಡೆದಿದ್ದವು. ಈ ಎಲ್ಲ ಪರಿಸ್ಥಿತಿ ಇದ್ದಾಗ್ಯೂ ಲೆನಿನ್ನನ ಬುದ್ಧಿಮತ್ತೆ, ಜನರಿಂದ ಬೇಕಾದುದನ್ನು ಮಾಡಿಸಬಲ್ಲೆನೆಂಬ ದೃಢವಿಶ್ವಾಸ, ಟೀಕೇ ಆಗಿದ್ದವು. ಈ ಬಲದ ಮೇಲೆಯೇ ಅವನು ರಾಷ್ಟ್ರದ ಆರ್ಥಿಕ ಪ್ರಗತಿಗೆ ಅವಶ್ಯವಿರುವ ಯೋಜನೆಯನ್ನು ಸಿದ್ಧಗೊಳಿಸಲು ಸಮರ್ಥನಾದನು.

ಲೆನಿನ್ನನ ಈ ಉಪದೇಶದ ತಳಹದಿಯ ಮೇಲೆಯೇ ರಶಿಯಾದಲ್ಲಿ ಜೋಸೆಫ್ ಸ್ಟ್ಯಾಲಿನ್ನನು ಸಮಾಜವಾದೀ ಔದ್ಯೋಗೀಕರಣದ ಸಿದ್ಧಾಂತವನ್ನು ನೆಲೆಗೊಳಿಸಿದನು. ಸ್ಟ್ಯಾಲಿನ್ನನ ಪಂಚವಾರ್ಷಿಕ ಯೋಜನೆಯು ರಶಿಯಾದ ಜನರನ್ನು, ಜಗತ್ತಿನ ಇತಿಹಾಸದಲ್ಲಿಯೇ ಅಪೂರ್ವವಾದ ರೀತಿಯಲ್ಲಿ ಔದ್ಯೋಗೀಕರಣದಲ್ಲಿ, ಸಿದ್ಧಿಗೊಳಿಸಲು ಸಮರ್ಥವಾಯಿತು. ಇದರ ಪರಿಣಾಮವಾಗಿಯೇ, ೧೯೧೩ರಲ್ಲಿದ್ದ ಉತ್ಪಾದನೆಯು ಹನ್ನೆರಡು ಪಟ್ಟು ಉತ್ಪಾದನೆಯು ೧೯೪೦ರಲ್ಲಿ ಆಯಿತು. ವಿದ್ಯಾದಾಗರಗಳು ಹತ್ತು ಪಟ್ಟು ಹಾಗೂ ವಿದ್ಯುತ್ ಶಕ್ತಿಯು ೨೦ ಪಟ್ಟು ಅಧಿಕವಾಯಿತು. ೧೯೧೩ಕ್ಕಿಂತಲೂ ಯಂತ್ರನಿರ್ಮಾಣ ಉದ್ಯಮದ ಪ್ರಮಾಣವು ೩೦ ಪಟ್ಟು ಅಧಿಕವಾಯಿತು. ಈ ರೀತಿಯ ಮೂರು ಪಂಚವಾರ್ಷಿಕ ಯೋಜನೆಗಳ ಕಾಲದಲ್ಲಿ ಸುಮಾರು ೬೫೦೦ ದೊಡ್ಡ ದೊಡ್ಡ ಕಾರಖಾನೆಗಳು—ಆಗಾಗ ಯುದ್ಧಕಾಲ ಬಂದರೂ ಸಹ—ಕಟ್ಟಲ್ಪಟ್ಟವು. ೧೯೩೭ರ ಹೊತ್ತಿಗೆ ಜರ್ಮನಿಯ, ಬ್ರಿಟನ್, ಫ್ರಾನ್ಸ್‌ಗಳನ್ನು ಹಿಂದೆ ಹಾಕಿ ರಶಿಯಾ ಉತ್ಪಾದನಾ ಸಾಮರ್ಥ್ಯದಲ್ಲಿ ಯುರೋಪದಲ್ಲಿಯೇ ಮೊದಲ ಸ್ಥಾನವನ್ನು ಸಂಪಾದಿಸಿತು. ಈ ಔದ್ಯೋಗೀಕರಣದಿಂದ ಆದ ಇನ್ನೊಂದು ಮಹತ್ವದ ಲಾಭವೆಂದರೆ, ರಶಿಯಾದ ನ್ಯಾಶನಲ್ ರಿಪಬ್ಲಿಕ್‌ಗಳ ಆರ್ಥಿಕ ಸ್ಥಿತಿಯು ಬಹಳ ಉನ್ನತಿಗೆ ಏರಿದುದು. ಉದಾಹರಣೆಗಾಗಿ, ಸೋವಿಯೆಟ್ ಸರಕಾರ ಸ್ಥಾಪಿತವಾದಂದಿನಿಂದ ಅಜರಬೈಜಾನದ ಸ್ಥಿತಿಯನ್ನು ನೋಡಬಹುದು. ಅಲ್ಲಿ ಈಗ ಈ ರಶಿಯಾದ ಉತ್ಪತ್ತಿಯಲ್ಲಿ ನೂರಕ್ಕೆ ತೊಂಬತ್ತೈದರಷ್ಟು ಉತ್ಪಾದನೆಯು ಆಗುತ್ತದೆ.

ಈ ಔದ್ಯೋಗೀಕರಣದ ಸಾಮರ್ಥ್ಯದ ಮೇಲೆಯೇ ರಶಿಯಾ ಅವಲಂಬಿಸಿ, ಅದರ ಪೂರ್ಣ ಲಾಭ ಪಡೆದು ಜರ್ಮನಿಯ ಹಿಟ್ಲರನನ್ನೂ, ಜಪಾನಿನ ಸಾಮ್ರಾಜ್ಯವಾದಿತ್ವವನ್ನೂ, ವಿಜಯೀ ಹೋರಾಟದಿಂದ ಗೆದ್ದು ತನ್ನ ಸ್ವಾತಂತ್ರ್ಯವನ್ನೂ ಕಾಪಾಡಿಕೊಂಡಿತಲ್ಲದೆ, ಹಿಟ್ಲರನ ದಾಸ್ಯದಿಂದ ಯುರೋಪದ ಜನತೆಯನ್ನು ಉಳಿಸಿತು.

ಯುದ್ಧೋತ್ತರ ಕಾಲದಲ್ಲಿಯೂ ಸ್ಟ್ಯಾಲಿನ್ನನು ಒಂದು ಉತ್ತಮವಾದ, ಆರ್ಥಿಕ ಪ್ರಗತಿಯನ್ನು ದೇಶಕ್ಕಾಗಿ ಸಾಧಿಸುವ ಹಾಗೂ ದೇಶವನ್ನು ಮೊದಲಿನ ಮೂರು ಪಟ್ಟು ಹೆಚ್ಚು ಔದ್ಯೋಗೀಕೃತವಾಗುವಂತೆ ಮಾಡುವ, ಕಾರ್ಯಕ್ರಮವನ್ನು ದೇಶಕ್ಕೆ ಹಾಕಿಕೊಟ್ಟನು. ಇದರಿಂದ ಮೊದಲಿನ ಮೂರುಪಟ್ಟು ಉತ್ಪಾದನೆಯು ದೇಶದಲ್ಲಿ ಹೆಚ್ಚಿತು. ೧೯೪೬ರಿಂದ ೫೦ರ ವರೆಗಿನ ಸ್ಟ್ಯಾಲಿನ್ನನ ಯುದ್ಧೋತ್ತರ ಪಂಚವಾರ್ಷಿಕ ಯೋಜನೆಯನ್ನು ಕಾರ್ಯಕಾರಿಯಾಗಿರುವಂತೆ ಸೋವಿಯೆಟ್ ಜನತೆಯು ಮಾಡಿದ್ದು ಅದನ್ನು ಯಶಸ್ವಿಯನ್ನಾಗಿ ಮಾಡಿತು.

ಅಂತೆಯೇ ಇಂದಿನ ಸೋವಿಯೆಟ್ ಉತ್ಪಾದನಾ ಪ್ರಮಾಣವು ಯುದ್ಧಪೂರ್ವಕ್ಕಿಂತ ನೂರಕ್ಕೆ ಎಪ್ಪತ್ತರಷ್ಟು ಹೆಚ್ಚಾಗಿದೆ. ವಿದ್ಯುದುತ್ಪಾದನಾ ಶಕ್ತಿಯು ನೂರಕ್ಕೆ ಎಂಬತ್ತೇಳರಷ್ಟು ಹೆಚ್ಚಾಗಿರುತ್ತದೆ. ಈ ಯುದ್ಧೋತ್ತರ ಕಾಲದಲ್ಲಿ ರಶಿಯಾದಲ್ಲಿ ಪುನರ್ರಚಿತ ಅಥವಾ ನವರಚಿತ ಒಟ್ಟು ಔದ್ಯೋಗಿಕ ಕಾರಖಾನೆಗಳ ಸಂಖ್ಯೆ ಆರು ಸಾವಿರವಿರುತ್ತವೆ.

ಬೋಲಶೆವಿಕ ಪಾರ್ಟಿಯ ನೇತೃತ್ವದಲ್ಲಿ ಸೋವಿಯೆಟ ಜನತೆಯು ರಶಿಯಾದ ಔದ್ಯೋಗಿಕ ಸಾಮರ್ಥ್ಯವ ಹೆಚ್ಚಾಗುವಂತೆ ಮಾಡುವ ಪಟ್ಟಿಯೂ ನಂಬಿಗೆಯಿಂದಲೂ ದುಡಿಯುತ್ತಿರುವದು. ಮುಂಚಿನ ಸ್ಟ್ಯಾಲಿನ್ ಪಂಚವಾರ್ಷಿಕ ಕಾಲದಲ್ಲಿ ಸೋವಿಯೆಟ್ ಜನರು ಕಟ್ಟಿದ ನೀಪರ ಹೈಡ್ರೋ ಇಲೆಕ್ಟ್ರಿಕ್ ಸ್ಟೇಶನ್, ಮ್ಯಾಗ್ನಿಟೋಗೊರ ಅಯರ್ನ್ ಎಂಡ ಸ್ಟೀಲವರ್ಕ್ಸ್, ಸ್ಟ್ಯಾಲಿನ್ ಗ್ರಾಡ-ಟ್ರ್ಯಾಕ್ಟರ್ ಪ್ಲ್ಯಾಂಟ್, ಮಾಸ್ಕೋ ಆಟೋಮೋಬಯಿಲ ವರ್ಕ್ಸ್, ಮುಂತಾದವುಗಳು ಸೋಶಿಯಾಲಿಜಮ್ಮಿಗೆ, ಭೌತಿಕ ಹಾಗೂ ತಾಂತ್ರಿಕ ತಳಹದಿಯನ್ನು ಹಾಕಿಕೊಟ್ಟಿರುತ್ತವೆ. ಈಗ ಸ್ಟ್ಯಾಲಿನ್ ಪ್ಲ್ಯಾಂಟಿನಂತೆ ಕ್ಯೂಬಿಶೇವ್, ಸ್ಟ್ಯಾಲಿನ ಗ್ರಾಡ, ಕಾಖೋವ್ ಹೈಡ್ರೋ ಇಲೆಕ್ಟ್ರಿಕ್ ಸ್ಟೇಶನ್ನುಗಳನ್ನೂ ಮತ್ತು ಮಖ್ಯ ಟರ್ಕಮೇನಿಯ ಕಾಲುವೆಯನ್ನೂ ಕಟ್ಟುತ್ತ ಸೋವಿಯೆಟ ಜನತೆಯು ಕಮ್ಯುನಿಜಮ್ಮಿಗೆ ಭೌತಿಕ ಮತ್ತು ತಾಂತ್ರಿಕ ತಳಹದಿಯನ್ನು ಹಾಕುತ್ತಲಿದೆ.

ಈ ರೀತಿ ಸ್ಟ್ಯಾಲಿನ್‌ನ ಜಾಣ್ಮೆಯಿಂದಲೂ ಮತ್ತು ಸೋವಿಯೆಟ ಜನತೆಯ ಮನೋನಿರ್ಧಾರದಿಂದಲೂ, ಲೆನಿನ್ನನು ಹಾಕಿಕೊಟ್ಟ ದಾರಿ ನಡೆದು ಅವನ ಕನಸುಗಳನ್ನು ನನಸನ್ನಾಗಿ ಮಾಡಲು ದಾರಿ ಮುನ್ನಡೆದಿರುತ್ತದೆ.

"ಜೈಹಿಂದ್"

ರೂಪಾಯಿ ೨೫ ಬಹುಮಾನ

ನನ್ನ ಬಾಪ್ಪು, ಬೂದು ವರ್ಣದ ೧೪ ಅಡಿ ಉದ್ದವಿದ್ದು ಮುಂಭಾಗ ಚೂಪಿನ ಕೋಡಿನ ಅಂದಾಜು ೩ ಅಡಿ ಎತ್ತರದ ಎಮ್ಮೆ, ಹಾಲು ಕುಡಿಯುವ ಅದರ ಒಂದು ವರ್ಷದ ಕೋಣ, ಕಪ್ಪುವರ್ಣದ ಒಂದು ಅಡಿ ಉದ್ದ ಹಿಂಗೋಡಿನ ೩ ಅಡಿ ಎತ್ತರದ ಎಮ್ಮೆ ಮತ್ತು ಎಣ್ಣೆಕಪ್ಪು ವರ್ಣದ ಚಕ್ರ ಕೋಡಿನ ಮೂರು ಅಡಿ ಎತ್ತರದ ಎಮ್ಮೆ ಹೀಗೆ ನಾಲ್ಕು ದನಗಳು ಪರಾರಿಯಾಗಿವೆ. ಇವುಗಳನ್ನು ಪತ್ತೆಹಚ್ಚಿಕೊಟ್ಟವರಿಗೆ ರೂ. ೨೫ ಬಹುಮಾನ ಕೊಡಲಾಗುವದು.

ಶಿವಾಚಾರದ ನಿಂಗಮ್ಮ,
ಜಪದಕಟ್ಟೆ ಮಾರ,
ಮಾಯಮುಡಿ ಗ್ರಾಮ.
3–2 ಪೊನ್ನಂಪೇಟೆ.

ತಿಳಿಸಿರಿ.

ಭೂಮಿ, ತೋಟ, ಜಾಗ ಪೇಟೆಯಲ್ಲಿ ಮನೆ ಅಥವ ಮನೆ ಸೈಟು ಮಾರಲಿರುವವರು ಮತ್ತು ಕೊಂಡುಕೊಳ್ಳಲಿಚ್ಛಿಸುವವರು ಈ ಕೆಳಗಿನ ಪತ್ತೆಯಲ್ಲಿ ವಿಚಾರಿಸಿರಿ. ಅಲ್ಲದೆ ಬೇಕಾದವರಿಗೆ ಕರೆಯುವ ಎಮ್ಮೆ ಹಸು ಮತ್ತು ಉಳುವ ಎತ್ತು ಮತ್ತು ಕೋಣಗಳನ್ನೂ ಒದಗಿಸಿ ಕೊಡಲಾಗುವುದು. ಬೇಕಾದವರು ತಮಗೆ ಬೇಕಾದ ತಾರೀಕಿನ ಎಂಟು ದಿನಗಳಿಗೆ ಮುಂದೆ ತಿಳಿಸಬೇಕಾಗಿದೆ. ವಿವರಗಳಿಗೆ ಈ ಪತ್ತೆಗೆ ಬರೆಯಬಹುದು.

D. A. N. & SONS.
Commission Agent,
Gonicoppal
26-4 S. Coorg.

ಮಾರಾಟಕ್ಕಿದೆ.

ಗೋಣಿಕೊಪ್ಪಲಿನಿಂದ ೨ ಮೈಲಿನ ಬಳಿಯ ಹಳ್ಳಿಯಲ್ಲಿರುವ ನನ್ನ ಸ್ವಂತ ಸಾವಿರ ಬಟ್ಟೆ ಭೂಮಿ ಮತ್ತು 15 ಏಕ್ರೆ ತೋಟ ಮಾರಾಟಕ್ಕಿದೆ. ಇದರಲ್ಲಿ 500 ಕಿತ್ತಳೆ ಗಿಡಗಳಿದ್ದು ಕೆಲವು ಫಲ ಕೊಡುತ್ತವೆ. ಎರಡು ಕೆರೆ, ಮೂರು ಹಂಚಿನ ಮನೆ, ಎರಡು ಕಲ್ಲು ಹಾಸಿದ ದನದ ಕೊಟ್ಟಿಗೆ, ಎರಡು ಲೈನುಗಳು ಕೂಡಾ ಇವೆ. ಲಾರಿಯಾ ಗಾಡಿ ಕಣಕ್ಕೆ ಹೋಗುವಂತೆ ರಸ್ತೆ ಇದೆ. ಇದರೊಂದಿಗೆ ಸಿ. ಜಿ. ಎ. ನಂ 116ರ ಲಾರಿ ಕೂಡಾ ಮಾರಾಟಕ್ಕಿದೆ. ಬಾಯಿಸ್‌ದಾರರು ಈ ಕೆಳಗಿನ ಅಡ್ರೆಸಿಗೆ ಬರೆಯಬಹುದು ಯಾ ಖುದ್ದು ಬಂದು ನೋಡಬಹುದು.

ಬಿ ಶಂಕರಪ್ಪ ಪೂಜಾರಿ
ಕಂಟ್ರಾಕ್ಟರು
3–3 ಸೇಂದಿ ಅಂಗಡಿ,
ಸೋಮವಾರಪೇಟೆ

ಕೊಡಗು ಪ್ರಾಂತೀಕ ಸಹಕಾರಿ, ಮಾರ್ಕೆಟಿಂಗ್, ಫೆಡರೇಷನ್ ಲಿಮಿಟೆಡ್., ವೀರಾಜಪೇಟೆ.

ನಮ್ಮಲ್ಲಿ ಕೋವಿಗಳು, ತೋಟಗಳು ಮತ್ತು ಎಲ್ಲಾ ತರಹದ ವ್ಯವಸಾಯದ ಹತ್ಯಾರುಗಳು ದೊರೆಯುತ್ತವೆ.

1. 32 ಪಿಸ್ತೂಲುಗಳು (Pistols) ಕ್ರಯ ರೂ. 162 ರಿಂದ 245ರ ವರೆಗೆ.
2. 12ನೇ ನಂಬರಿನ ಒಂಟಿ ಹೊಳವಿನ ಕೋವಿ ಕ್ರಯ ರೂ. 320-0-0
3. 12ನೇ ನಂಬರಿನ ಜೋಡು ಹೊಳವಿನ ಕೋವಿ (Webley & Scott)
4. 12ನೇ ನಂಬರಿನ ಜೋಡು ಹೊಳವಿನ ಕೋವಿ (Spanish make)
5. 6 ಗಜದ (Hand loom) ಕೈಮಗ್ಗದ ಸೀರೆಗಳು ಕ್ರಯ ರೂ. 4-10-0.
6. .32 ಪಿಸ್ತೂಲು ಮತ್ತು ರಿವಾಲ್ವರುಗಳ ತೋಟಗಳೂ ಸಹ ದೊರೆಯುತ್ತವೆ.
7. ಕಾಫಿ ಮತ್ತು ಕಿತ್ತಳೆ ಗಿಡಗಳಿಗೆ ಸ್ಪ್ರೇಮಾಡುವ ಪಂಪುಗಳು (Spraying Pumps)
8. ¾" ಮತ್ತು ⅝" ಕಬ್ಬಿಣದ ಸಲಾಕೆಗಳು.

ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

(ಅವಶ್ಯವಿರುವ ಕೋವಿಗಳಿಗೂ, ತೋಟಗಳಿಗೂ ಜಿಲ್ಲಾ ಮೇಜಿಸ್ಟ್ರೇಟರಿಂದ ವಿಶೇಷ ಪರ್ಮಿಟು "Special permit" ಪಡೆದವರಿಗೆ ಮಾತ್ರ ದೊರೆಯುವದು)

ಎಂ. ಎಸ್. ಸೋಮಯ್ಯ,
52–23 ಗೌರವ ಕಾರ್ಯದರ್ಶಿ.

ಭಾರತದ ಏರುತ್ತಿರುವ ಜನಸಂಖ್ಯೆ.

ಲೇ:- ಶ್ರೀ ಶಂಕರ ಘೋಷ್ (ಓರಿಯಂಟ್ ಪತ್ರಿಕೆಯಲ್ಲಿ)

ಜನಸಂಖ್ಯೆ ಹೆಚ್ಚುವ ಸಮಸ್ಯೆಯು ಅನೇಕ ದೇಶಗಳ ಜಟಿಲ ಸಮಸ್ಯೆ. ಭಾರತದಲ್ಲಿ ಜನಸಂಖ್ಯೆ ಮಿತಿಮೀರಿದ್ದು ಅತ್ಯಂತ ದೊಡ್ಡ ಸಮಸ್ಯೆಯಾಗಿ ಸರಕಾರವು ಅದನ್ನು ಬಗೆಹರಿಸುವ ವಿಷಯದಲ್ಲಿ ಆಲೋಚಿಸುತ್ತಲಿದೆ. ಈಗಿನ ರೀತಿಯಲ್ಲೇ ಅಂದರೆ ವರ್ಷಕ್ಕೆ ೫ ಮಿಲಿಯದಂತೆ ಜನಸಂಖ್ಯೆ ಏರುತ್ತ ಹೋದಲ್ಲಿ ಕ್ಷಾಮ, ಸಾಂಕ್ರಾಮಿಕ ರೋಗಗಳು, ತಲೆಯೆತ್ತಿ ಸಾರ್ವತ್ರಿಕ ಹಾವಳಿಯುಂಟಾಗುವ ಪರಿಸ್ಥಿತಿ ಒದಗುವುದರಲ್ಲಿ ಸಂಶಯವೇ ಇಲ್ಲ. ಈಗಾಗಲೇ ಈ ಸಂಕಷ್ಟಗಳನ್ನು ದೇಶವು ಸಣ್ಣ ರೂಪದಲ್ಲಿ ಅನುಭವಿಸುತ್ತಲಿದೆ. ಆದುದರಿಂದ ಅಂತಹ ದುಸ್ಥಿತಿಯು ಗಂಡಾಂತರಗಳು ಬರುವುದಕ್ಕೆ ಮುಂಚಿತವಾಗಿ ಮುಂಜಾಗ್ರತೆ ವಹಿಸಿಕೊಳ್ಳುವುದಗತ್ಯ. ಜನಸಂಖ್ಯೆ ಏರಿಕೆಯನ್ನು ನಿಯಂತ್ರಿಸುವ ಸಲುವಾಗಿ ಜನರು ಸಣ್ಣ ಪ್ರಾಯದಲ್ಲೇ ವಿವಾಹವಾಗಬಾರದು ಎಂದು ನಮ್ಮ ಆರೋಗ್ಯ ಮಂತ್ರಿ ರಾಜಕುಮಾರಿ ಅಮೃತ ಕೌರ್‌ರವರು ಇತ್ತೀಚೆಗೆ ಹೇಳಿರುವರು. ಸಣ್ಣ ಪ್ರಾಯದಲ್ಲೇ ವಿವಾಹವಾಗುವುದನ್ನು ತಡೆಯುವುದೇ ಅವರ ಉದ್ದೇಶ. ಸಾರ್ವಜನಿಕ ಸಮಸ್ಯೆಯಾದ ಶ್ರೀಮತಿ ರೇಣುಕಾರಾಯರವರು ಕೊಟ್ಟ ಸೂಚನೆಯಲ್ಲಿ ಸಂತಾನ ಪ್ರತಿಬಂಧಕ ಪ್ರಚಾರವನ್ನು ಸರಕಾರವು ಕೈಕೊಳ್ಳಬೇಕೆಂದು ಹೇಳಿರುವರು.

ಸ್ತ್ರೀಪುರುಷರು ಪ್ರಾಯದಾಟಿ ವಿವಾಹವಾಗುವುದರಿಂದ ಜನಸಂಖ್ಯೆಯು ವಿಶೇಷ ಹೆಚ್ಚು ಆತಂಕವಾಗಲಿಕ್ಕಿಲ್ಲವಾದರೂ ಸ್ವಲ್ಪ ಕಡಿಮೆ ಉಂಟಾಗುವುದು ಸಹಜ. ಯುವಕ ಯುವತಿಯರು ಸ್ವಲ್ಪ ತಡವಾಗಿ ವಿವಾಹವಾಗುವುದಾದರೂ ಅವರ ಸಂತೈದು ಮಕ್ಕಳ ಜನ್ಮದಾತರಾಗುವ ಸಂಭವ ಇದೆ. ಎಳೆ ಪ್ರಾಯದಲ್ಲೆ ಮದುವೆಯಾಗುವವರಿಗೆ ಹುಟ್ಟುವ ಮಕ್ಕಳು ಕೃಶವಾಗಿದ್ದು ಈಗ ನಮ್ಮಲ್ಲಿ ತಾಂಡವವಾಡುತ್ತಿರುವ ಮಕ್ಕಳ ಮರಣಕ್ಕೆ ಕಾರಣವಾಗುತ್ತದೆ. ಆದುದರಿಂದ ಆರೋಗ್ಯ ಮಂತ್ರಿಗಳ ಹಿತವಾದವನ್ನು ಗಮನಿಸುವುದಗತ್ಯವಿದೆ. ಆದರೆ ಜನಸಂಖ್ಯೆಯ ಏರಿಕೆಯನ್ನು ತಡೆಯುವ ಪ್ರಯತ್ನ ಈ ಸಲಹೆಯನ್ನು ಸ್ವೀಕರಿಸುವುದರಿಂದ ಸಫಲವಾಗದು.

ಶ್ರೀಮತಿ ರಾಯರವರ ಸಂತಾನ ಪ್ರತಿಬಂಧಕ ಸಲಹೆ ನಮ್ಮ ದೇಶದ ಎಷ್ಟು ಜನರಿಗೆ ಸರಿಯೆಂದು ತಿಳಿಯುವುದು ಎಂಬುದನ್ನು ಹೇಳುವುದು ದುಸ್ತರ. ಭಾರತದ ಜನರಲ್ಲಿ ಹೆಚ್ಚಿನವರಿಗೆ ಅರ್ಥವಾಗದ ವಿಷಯವಿದು. ಸರಕಾರವು ಸಂತತಿ ಪ್ರತಿಬಂಧಕದ ಸಲುವಾಗಿ ಔಷಧಿಗಳನ್ನು ಏರ್ಪಡಿಸಿದಲ್ಲಿ ಅನೇಕರು ಅದನ್ನು ವಿರೋಧಿಸುವುದು ನಿಶ್ಚಿತ. ಹಾಗೂ ಕಾಯಿದೆ ತಂದಿತಾದರೆ ಮೂಲಭೂತ ಹಕ್ಕುಗಳಿಗೆ ಗಂಡಾಂತರ ಬಂದಿದೆ ಎಂದೂ ಕೂಗು ಏಳಬಹುದಲ್ಲವೇ.

ಮಹಾತ್ಮರ ಸಲಹೆ

ಭಾರತದಲ್ಲಿ ಜನಸಂಖ್ಯೆ ಏರುತ್ತಿರುವ ಸಮಸ್ಯೆ ಮಹಾತ್ಮಾಜೀಯವರ ಗಮನವನ್ನು ಸೆಳೆಯದೆ ಉಳಿದಿಲ್ಲ. ಅವರು ಈ ಸಮಸ್ಯೆಯ ಪರಿಹಾರಕ್ಕಾಗಿ ಚರ್ಚೆಗಳನ್ನು ನಡಸಿ ತಮ್ಮ ಅಭಿಪ್ರಾಯವನ್ನು ಸ್ಪಷ್ಟಗೊಳಿಸಿರುವರು. 'ಜನರಿಗೆ ಮೂರು ಅಥವಾ ನಾಲ್ಕರಿಂದ ಹೆಚ್ಚು ಮಕ್ಕಳು ಯಾಕೆ? ಅಷ್ಟರಲ್ಲೇ ಅವರು ಸಂತಾನೋತ್ಪತ್ತಿಯನ್ನು ಯಾಕೆ ನಿಲ್ಲಿಸಬಾರದು? ಜನರು ಒಪ್ಪಿದ್ದರೆ ಕಾಯಿದೆಯ ಮೂಲಕವಾದರೂ ಜನರನ್ನು ಯಾಕೆ ಒಲಿಸಿಕೊಳ್ಳಬಾರದು?' ಎಂಬೀ ಪ್ರಶ್ನೆಯನ್ನು ಅವರು ಹಾಕಿದ್ದಾರೆ.

ಹೀಗೆ ಮೂರು ನಾಲ್ಕು ಮಕ್ಕಳ ಮಿತಿಯಿಟ್ಟುಕೊಂಡರೂ ನಮ್ಮ ದೇಶದ ಜನಸಂಖ್ಯೆ ಶೀಘ್ರದಲ್ಲೇ ಏರುವುದಕ್ಕೆ ಸಂಶಯವಿಲ್ಲ. ಯುದ್ಧ, ಕ್ಷಾಮ, ಸಾಂಕ್ರಾಮಿಕ ರೋಗಗಳು ಬಂದಲ್ಲಿ ಜನಸಂಖ್ಯೆ ಕಡಿಮೆಯಾಗುವುದೆಂದು ಅಭಿಪ್ರಾಯ ಕೊಡುವವರಿದ್ದಾರೆ. ಆದರೆ ಈ ಅಭಿಪ್ರಾಯವು ಸರಿಯಲ್ಲವೆಂದೂ ಹೇಳುವುದಕ್ಕೆ ದೃಷ್ಟಾಂತವಿದೆ. ಕಳೆದ ಅರ್ಧ ಶತಮಾನದಿಂದ ಚೀನದಲ್ಲಿ ನಿರಂತರವಾಗಿ ಯುದ್ಧಗಳು ನಡೆಯುತ್ತಲಿವೆ. ಕ್ಷಾಮವೂ ಆಗಾಗ ತಲೆದೋರಿದೆ. ಆದರೂ ಆ ದೇಶದ ಜನಸಂಖ್ಯೆ ಕಡೆಯಿಲ್ಲದೆ ಏರುತ್ತಲಿದೆ.

ಹಾಗಾದರೆ ಜನಸಂಖ್ಯೆಯನ್ನು ನಿಯಂತ್ರಿಸುವ ಉಪಾಯವೇನು? ಭಾರತವು ಈ ಸಮಸ್ಯೆಯನ್ನು ಯಾವ ರೀತಿಯಲ್ಲಿ ನಿವಾರಿಸಬಹುದು ಎಂಬುದನ್ನು ಆಲೋಚನಾಪೂರ್ವಕವಾಗಿ ಕಂಡುಕೊಳ್ಳಬೇಕಾಗಿದೆ. ದೇಶದ ಪ್ರಾಯಸ್ಥರಲ್ಲಿ ಹೆಚ್ಚಿನವರನ್ನು ವಿವಾಹವಾಗದಂತೆ ತಡೆದಲ್ಲಿ, ಅಥವಾ ಸ್ತ್ರೀಯರ ಸಂಖ್ಯೆಯನ್ನು ಕಡಿಮೆ ಮಾಡಿದಲ್ಲಿ ಈ ಸಮಸ್ಯೆ ನಿವಾರಣೆಯಾಗದು. ನಮ್ಮ ದೇಶದಲ್ಲಿ ಈಗ ಸ್ತ್ರೀಯರ ಸಂಖ್ಯೆ ಕಡಿಮೆ ಇದೆ. ಇರುವ ಸ್ತ್ರೀಯರಲ್ಲಿ ಶೇಕಡ ೧೭ರಷ್ಟು ಮಂದಿ ವಿಧವೆಯರಿದ್ದು ಅವರಿಂದ ಸಂತಾನ ವೃದ್ಧಿಯಾಗುವುದಿಲ್ಲ. (೧೯೪೧ರಲ್ಲಿ ತೆಗೆದ ಖಾನೇಷುಮಾರಿಯಲ್ಲಿ ಭಾರತದಲ್ಲಿ ಪ್ರತಿ ಒಂದು ಸಾವಿರ ಪುರುಷರಿಗೆ ೯೩೫ ಮಂದಿ ಸ್ತ್ರೀಯರಿದ್ದಾರೆಂದು ಲೆಕ್ಕ ಹಾಕಲಾಗಿದೆ.)

ಒಂದೇ ದಾರಿ.

ನಮ್ಮ ದೇಶದ ಜನಸಂಖ್ಯೆಯ ಸಮಸ್ಯೆ ನಿವಾರಣೆ ಮಾಡಲು ಕೈಕೊಳ್ಳಬಹುದಾದ ಒಂದೇ ಉಪಾಯವೆಂದರೆ ದೇಶದ ಆರ್ಥಿಕ ಪದ್ಧತಿಯಲ್ಲೇ ಬದಲಾವಣೆ ಮಾಡಿಕೊಳ್ಳುವುದಾಗಿದೆ.

ಒಕ್ಕಲುತನವೇ ಜನರ ಪ್ರಾಮುಖ್ಯ ದಂಧೆಯಾಗಿರುವ ದೇಶಗಳಲ್ಲಿ ಜನಸಂಖ್ಯೆ ಶೀಘ್ರಗತಿಯಿಂದ ಏರುತ್ತಿದೆಯೆಂದೂ ಔದ್ಯೋಗಿಕ ದೇಶಗಳಲ್ಲಿ ಜನಸಂಖ್ಯೆ ಏರಿಕೆ ನಿಧಾನವಾಗಿದೆಯೆಂದೂ ತಜ್ಞರು ಅಭಿಪ್ರಾಯಪಟ್ಟಿರುವರಲ್ಲದೆ ಅನೇಕ ರಾಷ್ಟ್ರಗಳಿಂದ ಸಂಗ್ರಹಿಸಿದ ಅಂಕೆಸಂಖ್ಯೆಗಳಿಂದ ಸ್ಪಷ್ಟವಾಗಿ ತಿಳಿಸಬರುತ್ತದೆ. ಯುರೋಪಿನ ಕೆಲವು ಮುಖ್ಯ ರಾಷ್ಟ್ರಗಳಲ್ಲಿ ಜನಸಂಖ್ಯೆ ಏರುತ್ತಲಿದ್ದರೂ ಇತ್ತೀಚೆಗೆ ಏರಿಕೆಯ ಗತಿ ಮಂದವಾಗಿದೆಯೆಂದು ತಿಳಿಯಿತು. ಪ್ರತೀ ೫೦ ವರ್ಷಗಳಿಗೆ ಜನಸಂಖ್ಯೆ ಇಮ್ಮಡಿಯಾಗುತ್ತದೆಂಬುದು ತಿಳಿದ ಸಂಗತಿ. ಆದರೆ ಪಶ್ಚಿಮದ ರಾಷ್ಟ್ರಗಳಲ್ಲಿ ಹೊರತು ಯುರೋಪು ಖಂಡದಲ್ಲಿ ಹೀಗೆ ನಡೆಯುವುದಿಲ್ಲ. ಬದಲೆಂದ ಕೆಲವು ರಾಷ್ಟ್ರಗಳಲ್ಲಿ ಜನಸಂಖ್ಯೆ ಬಹಳ ನಿಧಾನವಾಗಿ ಏರುತ್ತದೆ. ಜನಸಂಖ್ಯೆ ಹೆಚ್ಚದೆ ತಟಸ್ಥವಾಗಿ ನಿಂತ ದೇಶಗಳೂ ಇವೆ.

ಕೈಗಾರಿಕೆಗಳೇ ಮುಖ್ಯವಾಗಿರುವ ದೇಶಗಳಲ್ಲಿ ಜನಸಂಖ್ಯೆ ಒಂದೇ ಸಮನೆ ಕಡಿಮೆಯಾಗುತ್ತಿದೆ ಎಂದು ಹೇಳುವುದು ಸಾಧ್ಯವಿಲ್ಲ. ಅಮೇರಿಕೆಯ ಉದಾಹರಣೆ ತೆಗೆದುಕೊಂಡರೆ ಅಲ್ಲಿ ಜನಸಂಖ್ಯೆ ಇತರ ದೇಶಗಳಂತೆ ಏರುತ್ತದೆ. ಸರಕಾರವು ಅನೇಕ ಪ್ರಯತ್ನಗಳನ್ನು ಕೈಕೊಂಡರೂ ಅದನ್ನು ತಡೆಹಿಡಿಯಲಾಗಲಿಲ್ಲ. ಆದರೆ ಇದೀಗ ಜನಸಂಖ್ಯೆ ಏರಿಕೆ ಮಿತಿಯಲ್ಲಿದೆ. ಪಶ್ಚಿಮ ಯುರೋಪಿನಲ್ಲೂ ಇದೇ ರೀತಿ ಜನಸಂಖ್ಯೆಯು ಏರಿಕೆ ತಡೆಯುಂಟಾಗಿದೆ. ಆರೋಗ್ಯ ಸುಧಾರಣೆ ಮತ್ತು ಔದ್ಯೋಗೀಕರಣ ಹೆಚ್ಚಿದಂತೆಲ್ಲಾ ಮರಣಸಂಖ್ಯೆ ತಗ್ಗಿತು. ಆದರೆ ಕ್ರಮೇಣ ಜನಸಂಖ್ಯೆ ಸ್ಥಿಮಿತಕ್ಕೆ ಬಂತು. ಒಕ್ಕಲುತನವು ಪ್ರಮುಖ್ಯವಾಗಿರುವ ದೇಶಗಳಲ್ಲಿರುವಂತಹ ದೊಡ್ಡ ದೊಡ್ಡ ಕುಟುಂಬಗಳು ಔದ್ಯೋಗಿಕ ರಾಷ್ಟ್ರಗಳಲ್ಲಿ ಕಡಿಮೆ.

ಇದೇ ರೀತಿಯಲ್ಲಿ ನಮ್ಮ ದೇಶದಲ್ಲೂ ಔದ್ಯೋಗೀಕರಣವು ವಿಶಾಲ ರೀತಿಯಿಂದ ನಡೆಯುವುದಾದರೆ ಮೊಟ್ಟಮೊದಲಾಗಿ ಜನಸಂಖ್ಯೆ ಒಂದೇ ಸಮನೆ ಏರಬಹುದು ಆದರೆ ಕ್ರಮೇಣ ಅದು ತಗ್ಗುವುದು. ಔದ್ಯೋಗೀಕರಣದಿಂದ ದೇಶವು ಸಂಪನ್ನವಾಗುವುದರೊಡನೆ ಇನ್ನಿತರ ಅನೇಕ ಸಮಸ್ಯೆಗಳೂ ನಿವಾರಣೆಯಾಗುವವು.

ಮೊದಲಾಗಿ ನಮ್ಮ ದೇಶದಲ್ಲಿ ಕೈಗಾರಿಕೆಗಳನ್ನು ಹೆಚ್ಚಿಸಬೇಕು. ಜನಸಂಖ್ಯೆ ತಗ್ಗಬೇಕು. ಇಲ್ಲವಾದಲ್ಲಿ ಎಂದಿಗೂ ಹಿತವಾಗಲಾರದು.

'ನವಭಾರತ'

ಬಹುಮಾನ

ಅಂದಾಜು ಎರಡು ಅಡಿ ಉದ್ದ ಕೋಡಿನ, ನಾಲ್ಕು ಅಡಿ ಎತ್ತರದ ಸಾಧಾರಣ ಕಪ್ಪು ವರ್ಣದ ಎಮ್ಮೆಯೊಂದು ಕಾಣೆಯಾಗಿದೆ. ಇದು ಕಟ್ಟದಲ್ಲಿರುವ ಮಾಪಿಳ್ಳೆ ಮಮ್ಮುವಿನಿಂದ ತಂದ ಹೊಸ ಎಮ್ಮೆಯಾಗಿದೆ. ಇದರ ಪತ್ತೆ ಹಚ್ಚಿಕೊಟ್ಟವರಿಗೆ ಐದು ರೂಪಾಯಿಗಳ ಬಹುಮಾನ ಕೊಡಲಾಗುವುದು.

ಹುಸೇನ್ ಸಾಬಿಯಾನೆ
ಬಾಪುಸಾಬಿ.
ವೀರಾಜಪೇಟೆ

ವಾರ್ತೆಗಳು.

ಮಂತ್ರಿಪದವಿಯು ಜೀವನದ ಧ್ಯೇಯವಾಗಲಾರದೆಂಬ ತಮ್ಮ ಅಭಿಪ್ರಾಯವನ್ನು ಬಿಂಬಿಸುವದಕ್ಕಾಗಿ ಪ್ರಧಾನ ಮಂತ್ರಿ ಶ್ರೀ. ಜವಾಹರಲಾಲರು ಲಖನೌ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗೆ ಒಂದು ಚೀನೀ ಹಳೆಯ ಕಥೆಯನ್ನು ಹೇಳಿದರು. ಒಬ್ಬ ಚೀನೀ ಕವಿಯು ಅನೇಕ ಮಕ್ಕಳಲ್ಲಿ ಅತ್ಯಂತ ಅಸಮರ್ಥನೂ ಯಾವ ಕೆಲಸಕ್ಕೂ ಬಾರದವನೂ ಆದವನನ್ನು ಮಂತ್ರಿಯನ್ನಾಗಿ ಮಾಡಿದನಂತೆ!

ಭಾರತದಲ್ಲಿ ವಿವಿಧ ಬಸ್ಸೆಗಳನ್ನು ಅಭಿವೃದ್ಧಿಪಡಿಸಿ ಯೋಗ್ಯ ರೀತಿಯಿಂದ ಅವುಗಳನ್ನು ಬೆಳಸಿಕೊಂಡು ಬರುವದಕ್ಕಾಗಿ ಕಲಕತ್ತೆಯಲ್ಲಿ ಲಖನೌದ ಎ. ವಿ. ಮಲಿಕರ ಅಧ್ಯಕ್ಷತೆಯಲ್ಲಿ ಪರಿಷತ್ತೊಂದು ಕೂಡಿದೆ. ದೇಶದ ಬೇರೆ ಬೇರೆ ಭಾಗಗಳಿಂದ ಸುಮಾರು ೩೦೦ ಜನ ಇಂಜಿನಿಯರರು ಅಲ್ಲಿ ಭಾಗವಹಿಸಲು ಬಂದಿರುವರು. ಬಂಗಾಳದ ಮುಖ್ಯ ಮಂತ್ರಿಗಳಾದ ಡಾ. ಬಿಧನಚಂದ್ರರಾಯರು ಇದರ ಉದ್ಘಾಟನ ಮಾಡಿದರು.

ತೆಲಂಗಣದಲ್ಲಿ ಹಿಂಸಾತ್ಮಕ ಚಟುವಟಿಕೆಗಳಲ್ಲಿ ತೊಡಗಿದ ಕಮ್ಯುನಿಸ್ಟರಿಂದು ತೆಲಂಗಣಾ ವಿಶೇಷಾ ಮಂಡಳಿಯು ೧೧ ಜನರಿಗೆ ಮರಣದಂಡನ ವಿಧಿಸಿದ್ದಿತಷ್ಟೇ. ಆ ಹನ್ನೊಂದು ಜನ ತಾಗಿದ ಶಿಕ್ಷೆಯ ವಿರುದ್ಧ ಮರ್ಸಿ ನ್ಯಾಯಾಲಯಕ್ಕೆ ಅಪೀಲು ಮಾಡಿಕೊಂಡಿರುವರು.

ಸಮಾಜವಾದಿ ಪಕ್ಷದ ಧುರೀಣರಾದ ಶ್ರೀ ಜಯಪ್ರಕಾಶ ನಾರಾಯಣರು ಪಟ್ನಾದ ಸಾರ್ವಜನಿಕ ಸಭೆಯಲ್ಲಿ ಭಾಷಣ ಮಾಡುತ್ತ ಸಮಾಜವಾದಿಗಳು ಸದ್ಯದ ಕಾಂಗ್ರೆಸಿನಲ್ಲಿ ಪುನಃ ಸೇರುವದು ಅಸಾಧ್ಯವೆಂದು ಹೇಳಿದರು.

ಕೊಡಗಿಗೆ ವಿದ್ಯುಚ್ಛಕ್ತಿಯನ್ನೊದಗಿಸಲು ಮೈಸೂರು ಸರಕಾರದವರು ಒಪ್ಪಿಕೊಂಡಿದ್ದಾರೆ. ಈ ಕಾರ್ಯಕ್ಕೆ ೧೭ ಲಕ್ಷ ರೂ. ವೆಚ್ಚವಾಗುವದು. ಈ ವೆಚ್ಚವನ್ನು ಕೇಂದ್ರ ಸರಕಾರದವರು ವಹಿಸಬೇಕೆಂದು ಕೇಳಲಾಗಿದೆಯಂತೆ.

ಮಾರಾಟಕ್ಕಿದೆ.

ಗೋಣಿಕೊಪ್ಪಲಿನಿಂದ 1½ ಮೈಲು ದೂರ ಮೈಸೂರಿಗೆ ಹೋಗುವ ರಸ್ತೆಮೇಲೆ ಕೋಣನಕಟ್ಟೆ ತಿಟ್ಟಿನ ಚೆನ್ನಂಗೊಲ್ಲಿ ಎಂಬಲ್ಲಿ ನಾಲ್ಕು ರೂಮಿನ ಒಂದೊಂದು ರೂಮಿನ ಎರಡೆರಡು ಅಂಕಣದ ಅಂಗಡಿ ಮನೆ, (ಹಂಚು ಹಾಕಿದ್ದು ತಿಂಗಳಿಗೆ ಮೂವತ್ತು ರೂಪಾಯಿ ಬಾಡಿಗೆ ಬರುತ್ತಿದೆ) ಮತ್ತು ಇದರ ಸುತ್ತಲೂ 5 ಎಕರೆ ಫಸಲಿಗೆ ಬಂದ ಕಿತ್ತಳೆ, ಅರ್ಧ ಎಕರೆ ಕಾಫಿ, ಅರ್ಧ ಎಕರೆ ಬಾಳೆ ಇದರೊಳಗೆ ಒಳ್ಳೆ ಮೆಣಸು ಇರುವ ತೋಟ ಮಾರಾಟಕ್ಕಿದೆ. ಖರೀದಿದಾರರು ಈ ಕೆಳಗಿನ ಅಡ್ರೆಸಿಗೆ ಬರೆದು ತಿಳಕೊಳ್ಳಬಹುದು. ಕ್ರಯ ಹತ್ತುಸಾವಿರ ಅಥವಾ ಅದರ ಸಮೀಪ.

ಬಲ್ಲಿಯಂಡ್ರ ಎ. ನಾಣಯ್ಯ,
ಹೆಬ್ಬಾಲೆಗ್ರಾಮ,
1-1 ಗೋಣಿಕೊಪ್ಪ ಪೋಸ್ಟು.

ಕೊಡಗು

ತಾ. ೨-೩-೧೯೫೧ನೇ ಶುಕ್ರವಾರ

ಎಲ್ಲಾ ಕಪ್ಪು ಸಂತೆ!

ಕಪ್ಪು ಸಂತೆ ಎಂದಾಗ ಒಂದು ವಸ್ತುವಿನ ಸಹಜವಾದ ಬೆಲೆಗಿಂತಾ ಹೆಚ್ಚು ತೆಗೆದುಕೊಳ್ಳುವದೆಂದು ಅರ್ಥವಾಗುತ್ತದೆ. ಆಧುನಿಕ ಅರ್ಥಶಾಸ್ತ್ರದ ಪ್ರಕಾರ ಶಾರೀರಿಕ ಶ್ರಮವೂ ಸಂತೆಯ ವಸ್ತುಗಳಲ್ಲಿ ಒಂದು ಎಂದು ಪರಿಗಣಿಸಲ್ಪಟ್ಟಿದೆ. ಆದ್ದರಿಂದ ಆರ್ಥಿಕ ಪ್ರಪಂಚದಲ್ಲಿ ಆಹಾರ ವಸ್ತುಗಳೂ, ಉಪಯುಕ್ತ ಪ್ರಾಣಿ ಪಕ್ಷಿಗಳೂ, ದೈಹಿಕ ಶ್ರಮವೂ ಹಣವೆಂದು ಪರಿಗಣಿಸಲ್ಪಡುತ್ತದೆ. ಒಂದು ಕೋಳಿಮೊಟ್ಟೆಯನ್ನು ಕೊಟ್ಟು ಎರಡಾಣೆ ತೆಗೆದುಕೊಳ್ಳುವದೂ, ಒಂದು ಗಂಟೆಯ ಕೆಲಸ ಮಾಡಿಕೊಟ್ಟು ನಾಲ್ಕಾಣೆ ತೆಗೆದುಕೊಳ್ಳುವದೂ, ಆರ್ಥಿಕ ದೃಷ್ಟಿಯಲ್ಲಿ ಒಂದೇ ಅಂತಸ್ತಿನವು. ಇಲ್ಲಿ ಒಬ್ಬನು ಒಂದು ಕೋಳಿಮೊಟ್ಟೆಯನ್ನು ಮಾರಿದರೆ ಮತ್ತೊಬ್ಬನು ಒಂದು ಗಂಟೆಯ ತನ್ನ ಶ್ರಮವನ್ನು ಮಾರುವನು.

ಸದ್ಯ ಹಿಂದೂದೇಶದಲ್ಲಿ ಪ್ರಾಮುಖ್ಯವಾಗಿ ಎರಡು ರೀತಿಯ ಕಪ್ಪು ಸಂತೆಗಳಾಗುತ್ತಿವೆ. ಅವರಲ್ಲಿ ಒಂದನ್ನು ನ್ಯಾಯವೆಂದು ಪರಿಗಣಿಸಿ ಮತ್ತೊಂದನ್ನು ಅನ್ಯಾಯವೆನ್ನಲಾಗುತ್ತಿದೆ. ಒಬ್ಬ ವ್ಯಾಪಾರಿಯು ತನ್ನ ಸಾಮಾನುಗಳ ಬೆಲೆಯನ್ನು ಶೇಕಡ ೨೫ ಯಾ ೫೦ ರಂತೆ ಏರಿಸಿ ಮಾರಿದರೆ ಆತನನ್ನು ಮಹಾ ತಪಿತಸ್ಥನೆಂದೂ, ಲಾಭ ಬಡಕನೆಂದೂ, ಕಪ್ಪು ಸಂತೆಯವನೆಂದೂ ಟೀಕಿಸುತ್ತೇವೆ. ಇಂಥಾವರು ದೊರೆತರೆ ಸರಕಾರವು ಶಿಕ್ಷಿಸುತ್ತದೆ. ಸಾರ್ವಜನಿಕರು ನಿಷೇಧಿಸುತ್ತಾರೆ. ಕೆಲವೆಡೆ ಇಂಥಾವರನ್ನು ಕತ್ತೆಗಳ ಮೇಲೆ ಕೂರಿಸಿ ಬೀದಿ ಮೆರವಣಿಗೆ ಮಾಡಿದ್ದಾರೆ. ಕೆಲವೆಡೆ ಛಡೀ ಏಟು ಹಾಕಿಸಿದ್ದಾರೆ.

ಆದರೆ ಈ ಅಳತೆ ಕೋಲಿನಿಂದಲೇ ನಾವು ಇತರ ಸಾರ್ವಜನಿಕ ಹಿತದ ಜವಾಬ್ದಾರಿ ಹೊತ್ತವರನ್ನು ಅಳೆಯುವದಿಲ್ಲ. ಮನುಷ್ಯನ ಕರ್ತವ್ಯ ದಕ್ಷತೆ, ಜಾಣ್ಮೆ, ಯೋಗ್ಯತೆಗಳನ್ನು ದುಡ್ಡಿನ ರೂಪದಲ್ಲಿ ಅಳೆಯಬಹುದು. ಒಂದುಗಂಟೆ ಸೌದೆ ಒಡೆಯುವವನ ಶ್ರಮವನ್ನು ಆರ್ಥಿಕ ದೃಷ್ಟಿಯಿಂದ ನಾಲ್ಕಾಣೆಯೆಂದು ಅಳೆಯುತ್ತೇವೆ. ಒಬ್ಬ ಜಡ್ಜನ ಒಂದು ಗಂಟೆಯ ಶ್ರಮವು ಹತ್ತಾರು ರೂಪಾಯಿಗಳಾಗಬಹುದು. ಆದ್ದರಿಂದ ಪ್ರತಿಯೊಬ್ಬ ಮನುಷ್ಯನಿಗೂ ಒಂದು ಮಾರ್ಕೆಟ್ ಬೆಲೆ ಇದೆ. ಈ ಮಾರ್ಕೆಟ್ ಬೆಲೆಯು ಪ್ರತಿಯೊಬ್ಬನು ಸಮಾಜಕ್ಕೆ ಸಲ್ಲಿಸುವ ಪರಿಶ್ರಮದ ತಳಹದಿಯ ಮೇಲೆ ನಿಲ್ಲಬೇಕಾಗಿದೆ. ಒಬ್ಬನು ಒಂದು ಗಂಟೆಯಲ್ಲಿ ನಾಲ್ಕಾಣೆಯ ಕೆಲಸ ಮಾಡಿ ಅದಕ್ಕೆ ಪ್ರತಿಫಲವಾಗಿ ಒಂದು ರೂಪಾಯಿಗೆ ತೆಗೆದುಕೊಂಡರೆ ಆತನು ಕಪ್ಪು ಸಂತೆ ನಡೆಸಿದಂತಾಯಿತು! ಆತನಿಗೂ ಅಂಗಡಿಯಲ್ಲಿ ಲಾಭಬಡಕನೆನಿಸಿಕೊಂಡ ವ್ಯಾಪಾರಿಗೂ ವ್ಯತ್ಯಾಸವಿರಬಾರದು.

ಈ ಅಳತೆಕೋಲಿನಿಂದ ಅಳೆಯುವದಾದರೆ ಇಂದು ನಮ್ಮ ಮಂತ್ರಿಗಳೆಂದು ಕರೆಸಿಕೊಳ್ಳುವ ಕೆಲವರೂ, ಸರಕಾರದ ಜವಾಬ್ದಾರಿ ಹೊತ್ತಿರುವ ಉದ್ಯೋಗಸ್ಥರಲ್ಲಿ ಹಲವರು ಲಾಭ ಬಡಕರು, ಕಪ್ಪುಸಂತೆಯವರೆಂದು ಕರೆಯಲ್ಪಡಲು ಅರ್ಹರು. ಕೆಲವು ಮಂತ್ರಿಗಳನ್ನು ಬಿಟ್ಟರೆ, ಉಳಿದ ಹಲವರ ಮಾರ್ಕೆಟ್ ಬೆಲೆಯು ತಿಂಗಳಿಗೆ ೫೦ರ ಮೇಲಿರಲಾರದು. ಆದರೆ ಅವರೆಲ್ಲರೂ ತಿಂಗಳಿಗೆ ರೂ. ೧೫೦೦ ರಿಂದ ೩೦೦೦ ದ ವರೆಗೆ ಪಡೆಯುತ್ತಿದ್ದಾರೆ. ಈ ಹೆಚ್ಚಿನ ಪರಿಮಾಣದಷ್ಟು ಈ ಸಭ್ಯರು ಲಾಭಬಡಕರೆನ್ನಲು ಅಡ್ಡಿಯಿಲ್ಲ. ಸರಕಾರಿ ಉದ್ಯೋಗಸ್ಥರಲ್ಲೂ ಹಲವರು ತಾವು ಹೊಂದಿಕೊಳ್ಳುವ ವೇತನಕ್ಕೆ ಸರಿಯಾದ ಕೆಲಸವನ್ನು ಮಾಡುವದಿಲ್ಲ. ಅವರ ಕೆಲಸಕ್ಕೆ ಮೀರಿ ಪ್ರತಿಫಲ ಹೊಂದುವ ಇವರೆಲ್ಲರೂ ಕಪ್ಪು ಸಂತೆಯವರೇ! ಗಾಂಧೀ ತತ್ವದ ಅಳತೆಗೋಲಿನಿಂದ ಅಳೆದು ಹೇಳುವದಾದರೆ ತಮ್ಮ ಮಾರ್ಕೆಟ್ ಬೆಲೆಗಿಂಥಾ ಮೀರಿ ರಾಷ್ಟ್ರದ ಸಂಪತ್ತನ್ನು ಸೂರೆಗೊಳ್ಳುವವರು ಇವರಾದುದರಿಂದ ಇವರೆಲ್ಲರೂ ದ್ರೋಹಾತ್ಮ ಜೀವನ ನಡೆಸುವವರು, ಇವರೆಲ್ಲರೂ ದೇಶವನ್ನು ವಂಚಿಸುತ್ತಿರುವವರು. ಆ ಮಟ್ಟಿಗೆ ಅವರು ರಾಷ್ಟ್ರದೇಹದ ರಕ್ತದ ಸೂರೆಮಾಡುವ ಜಿಗಣಗಳು. ರಾಷ್ಟ್ರ ಸಂಪತ್ತನ್ನು, ಜೀವನವನ್ನು ಆ ಮಟ್ಟಿಗೆ ಅವರು ಕುಗ್ಗಿಸುತ್ತಿರುವವರು.

ಈ ರೀತಿಯ ಅಪ್ರತ್ಯಕ್ಷ ಕಪ್ಪು ಸಂತೆಯು ಆಡಳಿತ ರಂಗದಲ್ಲಿ ನಡೆಯುತ್ತಿರುವ ಕಾರಣವೇ ಅದರ ದುಷ್ಟ ಛಾಯೆಯು ಇತರ ರಂಗಗಳಲ್ಲೂ ಹಬ್ಬಲು ಕಾರಣ. "ದೇಶದ ಸೇವೆ, ಆಡಳಿತ ಭದ್ರತೆಯ ಉದಾತ್ತ ಹೆಸರಿನಿಂದ ಈ ಆಡಳಿತಗಾರರೂ, ಸಾರ್ವಜನಿಕ ಮುಂದಾಳುಗಳೂ ತಮ್ಮ ಮಾರ್ಕೆಟ್ ಬೆಲೆಗಿಂಥಾ ಶೇಕಡ ೧೦೦೦ ಪಾಲು ಹೆಚ್ಚಿನ ಲಾಭ ಪಡೆಯುವಾಗ, ನಾವು ಸರಬರಾಯಿ ಮಾಡುವ ಸಾಮಾನುಗಳಿಗೆ ಶೇಕಡ ೫೦ ಯಾ ೧೦೦/- ಪಾಲು ಹೆಚ್ಚಿಗೆ ಪಡೆಯುವದರಲ್ಲಿ ಅಪರಾಧವೇನು?" ಎಂದು ವ್ಯಾಪಾರಿಗಳು ಕೇಳುತ್ತಾರೆ. ಒಬ್ಬ ಮಂತ್ರಿ ಅಧಿಕಾರಕ್ಕೆ ಬಂದ ಮರಕ್ಷಣ ಯಾವುದೋ ಲಾಟ್ರಿಯಲ್ಲಿ ದುಡ್ಡು ದೊರೆತಂತೆ ದೊಡ್ಡ ದೊಡ್ಡ ಬಂಗ್ಲೆಗಳನ್ನು ಕಟ್ಟಿಕೊಳ್ಳತೊಡಗಿದರೆ ಆ ನೀತಿ ಕಪ್ಪು ಸಂತೆಯವರಿಗೂ ಪ್ರೋತ್ಸಾಹ ಕೊಡುತ್ತದೆ. ಆದ್ದರಿಂದ ವಿವಿಧ ಜನರು ವಿವಿಧ ರೀತಿಯಲ್ಲಿ ಹಣಗಳಿಸಲು ಯತ್ನಿಸುತ್ತಾರೆ. ಅಧಿಕಾರಿಗಳು ಅಧಿಕಾರದ ದುರುಪಯೋಗದಿಂದ ಸಿರಿತನಕ್ಕೆ ಒಳದಾರಿ ಕಂಡುಕೊಳ್ಳುತ್ತಾರೆ. ವೇತನ ರೂಪದಲ್ಲಿ ದೊರೆಯುವದು ತಮ್ಮ ದುಡಿಮೆಗೆ ಮೀರಿದುದೆಂದರೂ ಯಾವ ಸರಕಾರವೂ ಅದಕ್ಕಾಗಿ ಯಾರನ್ನೂ ಶಿಕ್ಷಿಸುವದಿಲ್ಲ. ಆದ್ದರಿಂದ ಕೆಲಸ ಮಾಡದಿದ್ದರೂ ಸಂಬಳ ಹೊಂದಿಕೊಳ್ಳುವದು ಅಪರಾಧವಲ್ಲ. ಈ ವಂಚನೆಯ ಮಾರ್ಗವೇ ಲಂಚ ರುಷುವತುಗಳಿಗೂ ದಾರಿ ತೋರಿಸುವಂಥಾದ್ದಾಗಿದೆ. ಆದರೆ ಲಂಚ ರುಷುವತುಗಳನ್ನು ತೆಗೆದುಕೊಂಡದ್ದು ತಿಳಿದರೆ ಶಿಕ್ಷೆಯಾಗುವದು. ಅದಕ್ಕಾಗಿ ವಿವಿಧ ಮಾರ್ಗಗಳು ಕಂಡು ಹಿಡಿಯಲ್ಪಟ್ಟು ಅದೊಂದು ಕಲೆ ಎನಿಸಿದೆ!

ಈ ರೀತಿಯಲ್ಲಿ ಹಿಂದೂದೇಶದ ಪ್ರತಿ ಕ್ಷೇತ್ರದಲ್ಲಿ ಅಪ್ರಾಮಾಣಿಕತೆ ತುಂಬಿದೆ. ಮಂತ್ರಿಯಾಗಿ ಯೋಗ್ಯತೆಗೆ ಮೀರಿದ ವೇತನ ಪಡೆಯುವದು, ಅಧಿಕಾರಿಯಾಗಿ ದುಡಿಮೆಗೆ ಹೆಚ್ಚಿನ ಬೆಲೆ ಪಡೆಯುವದು, ವ್ಯಾಪಾರಿಯಾಗಿ ಹೆಚ್ಚು ಲಾಭಗಳಿಸುವದು, ದೊರೆಯುವ ವೇತನಕ್ಕೆ ಸರಿಯಾಗಿ ದುಡಿಯದೆ ನೌಕರರಾಗಿರುವದು ಇವೆಲ್ಲ ರಾಷ್ಟ್ರ ರಚನೆಯ ಮಾರ್ಗಗಳಲ್ಲ. ನಮ್ಮ ಇಂದಿನ ಸಮಾಜ ಯಾ ರಾಷ್ಟ್ರವು ಈ ಸುಳ್ಳು, ಮೋಸ, ಸ್ವಾರ್ಥಗಳ ಮೇಲೆಯೇ ನಿಂತಿದೆಯೇ ಎನಿಸುವಂತಿದೆ. ರೈತನಿರಲಿ ಮಜೂರನಿರಲಿ, ಅಧಿಕಾರಿ ಇರಲಿ, ಜನ ಸೇವಕನೆನಲಿ, ಎಲ್ಲರೂ ಸುಖಾಪೇಕ್ಷೆ, ಸ್ವಾರ್ಥಲಾಭಗಳಿಂದ ಆದಷ್ಟು ಶೀಘ್ರ ಸಿರಿವಂತರಾಗಬೇಕೆಂದು ಅಪೇಕ್ಷಿಸುತ್ತಾನೆ. ರೈತನು ತಾನು ಬೆಳೆಯುವ ಬತ್ತಕ್ಕೆ ಅಗತ್ಯ ಜೊಳ್ಳು ಸೇರಿಸಿ ಲಾಭ ಹೊಂದಲು ಅಪೇಕ್ಷಿಸುತ್ತಾನೆ. ವ್ಯಾಪಾರಿಯು ಅಳತೆಯಲ್ಲಿ ಮೋಸಮಾಡಿ ಲಾಭ ಮಾಡಲು ಹವಣಿಸುತ್ತಾನೆ. ಮಿಲ್ ಮಾಲೀಕನು ಅಕ್ಕಿಗೆ ಕಲ್ಲು ಬೆರಸಿ ದುಡ್ಡುಗಳಿಸಲೆತ್ನಿಸುತ್ತಾನೆ. ಈ ರೀತಿ ವಿವಿಧ ಕ್ಷೇತ್ರಗಳಲ್ಲಿ ವಿವಿಧ ರೀತಿಯ ಅಕೃತ್ಯಗಳು ನಡೆಯುತ್ತಿವೆ.

ನಮ್ಮ ಭರತಖಂಡವು ಅಖಂಡವಾದುದು, ಆರ್ಷೇಯವಾದುದೆಂಬ ಆ ಹೊರಗಿನ ಚಿಪ್ಪು ಇನ್ನೂ ಇದ್ದರೂ ಒಳಗೆ ಅದಕ್ಕೆ ತುಕ್ಕು ಹಿಡಿದಿದೆ. ಅದರ ಜೀವನಾಡಿಗಳಲ್ಲಿ ಶುದ್ಧ ರಕ್ತ ಓಡಾಡುತ್ತಿಲ್ಲ. ಸ್ವಾತಂತ್ರ್ಯ ಬಂದಿದ್ದರೂ ಅದರಲ್ಲಿ ಚೇತನವಿಲ್ಲ. ಅದು ಅಧೋಗತಿಯ ಮರಣಶಯ್ಯೆಯತ್ತ ಧಾವಿಸುತ್ತಿದೆಯೆಂಬುದನ್ನು ಈ ಮೇಲಿನ ಕೃತ್ಯಗಳೇ ಹೇಳುತ್ತವೆ. ರಾಷ್ಟ್ರವು ಚೇತನಮಯವಾಗಿ, ಹೊಸ ಹುರುಪು, ಹೊಸ ಕಾಂತಿಯಿಂದ ಬೆಳಗಬೇಕಾದರೆ ಅದು ಸತ್ಯದ ತಳಹದಿಯಲ್ಲಿ ನಿಲ್ಲಬೇಕು. ರಾಜಕಾರಣಿ ಇರಲಿ, ಅಧಿಕಾರಿ ಇರಲಿ, ರೈತನಿರಲಿ ಯಾ ವ್ಯಾಪಾರಿ ಇರಲಿ ತಮ್ಮ ದುಡಿಮೆ ಯೋಗ್ಯತೆಗಳಿಗನುಗುಣವಾದ ಪ್ರತಿಫಲ ಪಡೆಯಬೇಕು. ಈ ರೀತಿಯ ಸತ್ಯಪಥದಿಂದ ರಾಷ್ಟ್ರವು ಸುದೃಢವಾಗುತ್ತದೆ. ಆದರೆ ಅದು ಎಂದಿಗೆ?

ವರ್ತಮಾನ.

ಮಡಿಕೇರಿ ಸೆಂಟ್ರಲ್ ಹೈಸ್ಕೂಲಿನ ಶಾಲಾದಿನ ಸಂಬಂಧದ ಆಟೋಟಗಳ ಸ್ಪರ್ಧೆಯು ತಾ ೧-೩-೫೧ ರಲ್ಲಿ ನಡೆದು ಬಹುಮಾನ ವಿತರಣೆಯು ತಾರೀಕು ೩-೩-೫೧ ರಲ್ಲಿ ಕೊಡಗಿನ ವಿದ್ಯಾಧಿಕಾರಿ ಶ್ರೀ ಬಿ. ಎಸ್ ಕುಶಾಲಪ್ಪನವರಿಂದ ನಡೆಯುವದು.

ಕೊಡವ ವಿದ್ಯಾನಿಧಿಗೆ ಶ್ರೀ. ಬಿಳ್ಳಿರ ಚಂಗಪ್ಪನವರು ರೂ. ೫೦ ನ್ನು ಕೊಟ್ಟು ಆ ಸಂಘದ ಜೀವಾವಧಿ ಸದಸ್ಯರಾಗಿರುವರು.

ಬಲಮುರಿ ಗ್ರಾಮದ ಶ್ರೀ ತೊತ್ತಿಯಂಡ ಸೋಮಪ್ಪನವರ ದನಗಳ ಜೊತೆಯಲ್ಲಿ ಕಳೆದ ನಾಲ್ಕು ವಾರಗಳಿಂದ ಕಪ್ಪು ವರ್ಣದ ಒಂದು ಎತ್ತು ಬಂದು ಸೇರಿಕೊಂಡಿರುವದೆಂದೂ ಮಾಲೀಕರು ತಕ್ಕ ರುಜುವಾತಿನಿಂದ ಹೊಡೆಕೊಂಡು ಹೋಗಬಹುದಾಗಿಯೂ ತಿಳಿಸುತ್ತಾರೆ.

ಚೀಫ್ ಕಮಿಷನರು ತಾರೀಕು ೧-೩-೫೧ ರಲ್ಲಿ ಡೆಲ್ಲಿಗೆ ಹೋಗಿರುವರು.

ಶ್ರೀ ಕೆ ಮಲ್ಲಪ್ಪನವರು ತಮ್ಮ ಸದಸ್ಯತನಕ್ಕೆ ರಾಜಿನಾಮೆಕೊಟ್ಟ ಕಾರಣ ತೆರವಾದ ಮಡಿಕೇರಿ ಮುನ್ಸಿಪಾಲಿಟಿ ಒಂದನೇ ವಾರ್ಡಿನ ಒಂದು ಸೀಟಿನ ಉಪಚುನಾವಣೆಯು ತಾ ೨೬-೩-೫೧ ರಲ್ಲಿ ನಡೆಯುವದು. ಉಮೇದುವಾರರು ತಾ ೭-೩-೫೧ ರಲ್ಲಿ ನಾಮಪತ್ರ ದಾಖಲು ಮಾಡಬೇಕೆಂದೂ ಚುನಾವಣೆಯ ಫಲಿತಾಂಶವು ತಾ. ೨೭-೩-೫೧ ರಲ್ಲಿ ಪ್ರಕಟವಾಗವದೆಂದೂ ತಿಳಿಯಬರುತ್ತದೆ.

ಟಿಂಬರ್ ಸುಭೇದಾರರಾಗಿದ್ದ ಶ್ರೀ ಬಲ್ಲಚಂಡ ಬಿ ಅಪ್ಪಯ್ಯನವರನ್ನು ವೀರಾಜಪೇಟೆಯಲ್ಲಿ ಸಬ್ ಟ್ರಿಜರಿ ಆಫೀಸರಾಗಿಯೂ, ಶ್ರೀ ಚೆರಿಯಪಂಡ ಕೆ ತಿಮ್ಮಯ್ಯನವರನ್ನು ಟಿಂಬರ್ ಸುಭೇದಾರರಾಗಿಯೂ ನೇಮಕ ಮಾಡಿರುವರು.

ನಾಪೋಕ್ಲು "ವೆಸ್ಟ್ ಎಂಡ್" ಬೇಡ್‌ಮಿಂಟನ್ ಕ್ಲಬ್ಬಿಗೆ ಕ್ಯಾಪ್ಟನ್ ಕೆಯಿಂ ಮುತ್ತಪ್ಪನವರು ತಮ್ಮ ತಂದೆಯವರ ಜ್ಞಾಪಕಾರ್ಥವಾಗಿ ದಯಪಾಲಿಸಿರುವ ಬೆಳ್ಳಿಯ ಬಟ್ಟಲಿನ ಪಂದ್ಯಾಟವು ಮಾರ್ಚಿ ೧೦ನೇ ತಾರೀಕಿನಿಂದ ಪ್ರಾರಂಭವಾಗುವುದು.

ಕೊಡಗು ಪ್ರಾಂತೀಕ ಸಹಕಾರ ಬ್ಯಾಂಕಿನ ವಾರ್ಷಿಕ ಮಹಾ ಸಭೆಯು ಇದೇ ಮಾರ್ಚಿ ತಾರೀಕು ೧೦ನೇ ಶನಿವಾರ ಪೂರ್ವಾಹ್ನ ೧೦-೩೦ಗಂಟೆಗೆ ವೀರಾಜಪೇಟೆ ಹೈಸ್ಕೂಲ್ ಆವರಣದಲ್ಲಿ ನಡೆಯುವುದು.

ಮಾರಾಟಕ್ಕಿದೆ.

ಮಡಿಕೇರಿಯಲ್ಲಿ ಹೊಸ ಕಾಲೇಜು ಕಟ್ಟಡ ಮತ್ತು ಕಾನ್ವೆಂಟ್ ಹೈಸ್ಕೂಲಿಗೆ ಮಧ್ಯದಲ್ಲಿ 5 ಎಕ್ರೆ ನೀರಾವರಿ ಭೂಮಿ, 9 ಎಕ್ರೆ ಸಾಧಾರಣ ಕಾಡುಮರಗಳಿರುವ ತೋಟನಾಡಲು ಅನುಕೂಲವಾದ ಬಾಣೆ ಜಾಗ, 5 ಅಂಕಣದ ವಾಸಕ್ಕೆ ಯೋಗ್ಯವಾದ ಹಂಚುಹಾಕಿದ ಮನೆ, ಎರಡು ಅಂಕಣದ ಹುಲ್ಲಿನ ಮನೆ, ಎರಡು ದನದ ಕೊಟ್ಟಿಗೆಗಳು ಮಾರಾಟಕ್ಕಿವೆ. ಖಾಯಿಸ್ದಾರರು ಈ ಕೆಳಗಿನ ಅಡ್ರೆಸಿಗೆ ಬರೆದು ತಿಳಿಯಬಹುದು.

'X'
C/o 'Kodagu'
Mercara. Coorg

3–1

ನಾವು ಬಡವರು!

'ನವಯುಗ' ಪತ್ರಿಕೆಯಿಂದ

'ನಾವು ಬಡವರು!' ಎಂದಾಗ ಬಹುಮಂದಿ ತಮ್ಮ ಸ್ಥಿತಿಗತಿಯನ್ನು ಹೊಂದಿಕೊಂಡು 'ನಿಜ'ವೆನ್ನುತ್ತಾರೆ. ಒಡೆತನ ದಾರಿದ್ರ್ಯಗಳಿಗೆ ತವರಾದ ಭಾರತ ದೇಶದಲ್ಲಿ ಈ ನೆಲೆಗೆ ಸೇರುವ ಜನ ಸಂಖ್ಯೆ ಅಪರಿಮಿತವಾಗಿದೆ. ಒಂದಲ್ಲ ಒಂದು ರೀತಿಯಿಂದ ಜನ ಅಸುಖಿಗಳಾಗಿದ್ದಾರೆ. ಜೀವನ ನಿರ್ವಹಣ ಕಷ್ಟಸಾಧ್ಯವೆಂದು ನಾವು ಲೆಕ್ಕ ಹಾಕಹೊರಟರೆ ಅದು ಬಡತನದಿಂದಲೇ. ಮನೆಯ ಶಾಂತಿಯನ್ನು ಕಾಯ್ದುಕೊಳ್ಳಲಾಗದ ಜನ ಲೋಕದ ಶಾಂತಿಯನ್ನು ಕಾಯ್ದುಕೊಳ್ಳುವುದು ಹೇಗೆ? ಇತರ ದೇಶಗಳನ್ನು ನೋಡಿ ಹೋಲಿಸಿದರೆ ನಮ್ಮ ಜೀವನ ಎಷ್ಟು ನಿಕೃಷ್ಟ ಎಂಬ ಅರಿವಾಗದೆ ಇರದು. ಕೃಷಿಯೇ ನಮ್ಮ ಉದ್ಯಮವಾಗಿರಬೇಕಾದ ಹಿಂದುಸ್ಥಾನದಲ್ಲಿ ಅದನ್ನು ಕಲಿತವರು ಗಿರಿ ತಪ್ಪಿ ತಮ್ಮ ಕಲೆ ಕಸುಬನ್ನು ಬಿಟ್ಟು ಪಟ್ಟಣ ವಿಲಾಸ ಜೀವನದ ಚಪಲವನ್ನು ಹಚ್ಚಿಕೊಂಡರೆ ಬಹಳ ಮಂದಿ ಶಿಕ್ಷಿತರು ವಿದ್ಯೆಯನ್ನು [illegible] ದೊರೆ ಸರಕಾರದ ಉದ್ಯೋಗಾಧಿಕಾರಕ್ಕೆ ಹಂಬಲಿಸಿದ್ದಾರೆ. ಎಲ್ಲರೂ ಒಂದೇ ಕಸುಬಿಗೆ ಮುಗಿಬೀಳುವ ಅಭಿಯೋಗದ ಫಲವಾಗಿ ನಿರುದ್ಯೋಗದ ಭೂತ ಪರ್ವತಾಕಾರವಾಗಿ ಬೆಳೆದು ನಮ್ಮ ಮೇಲೆ ನಿಂತಿದೆ. ಔದ್ಯೋಗಿಕರಂಗದಲ್ಲಿ ಸಮಷ್ಟಿ ಪ್ರಗತಿಯಿಲ್ಲದೆ ಈ ತರದ ದಾರಿದ್ರ್ಯ ನಿವಾರಣೆಯಾಗುವುದಾದರೂ ಹೇಗೆ? ವಿಪುಲವಾಗಿ ಬೆಳೆಯುತ್ತಿರುವ ಜನ ಸಂಖ್ಯೆಯೊಡನೆ ಬಡತನವೂ ಜೊತೆಗೆ ಬೆಳೆಯುತ್ತಲಿದೆ. ಅನೇಕ ರೀತಿಯ ಉದ್ಯಮಗಳ ಉತ್ಕರ್ಷತೆಯ ವಿನಹ ಈ ಸಮಸ್ಯೆ ಬಗೆಹರಿಯುವಂತಿಲ್ಲ.

ಜೀವನ ನಿರ್ವಹಣಕ್ಕೆ ಅನ್ನ ಬಟ್ಟೆಗಳೇ ಪ್ರಾಮುಖ್ಯವಾಗಲಾರವು. ಅನುಕೂಲ ಪರಿಸ್ಥಿತಿಗಳೇ ಸಹಕಾರಿಗಳಾಗಲಾರವು. ಸಂತೃಪ್ತಿಯಿದ್ದರೆ ಮೋಜಿನ ಜೀವನ ನಡೆಸುವುದು ಕಷ್ಟವೇನಲ್ಲ. ಇದ್ದ ಮೂಲವನ್ನು ಕರಗಿಸುವುದರಲ್ಲಿ ವಿಶೇಷ ಬುದ್ಧಿಕೌಶಲ್ಯ ಅವಶ್ಯವಿಲ್ಲ. ಜೀವನವೆಂದರೇನು? ಸುಖವಾಗಿ ತನ್ನ ಸಂಸಾರವನ್ನು ಸಾಗಿಸಿಕೊಂಡು ಹೋಗುವುದೇ? ಕೈತುಂಬ ಹಣವಿಲ್ಲದಂತಿದ್ದರೆ ದೂರಿಗೆ ಬದುಕ ನೋಡಲು ಸಾಧ್ಯವಿಲ್ಲವೇ?

ದೇಶದ ಒಳ [illegible] ಜನ ಕೂಲಿ ಪರಿಸ್ಥಿತಿಯಿಂದ [illegible] ತನವನ್ನು ಸ್ವೀಕರಿಸಿ ಸರ್ವಸಾಧಾರಣವಾಗಿ ದಿನವೂ ರಾಷ್ಟ್ರದ ಜನಾಂಗ [illegible] ಬಡವರಾಗಿದ್ದಾರೆ. ಆಗರ್ಭ ಶ್ರೀಮಂತರೂ, ಪಟ್ಟಾಧಿಕಾರಿಗಳೂ, ರಾಜರುಗಳೂ, ಇನ್ನೂ ದೊಡ್ಡವರು—ಎನಿಸಿಕೊಂಡವರು [illegible] ಆದರೆ ಅವರನ್ನು [illegible] 'ನಾವು ಬಡವರು' ಎನ್ನುವರು [illegible] ನಾವು ಅರಿಯುತ್ತಿರುವ ಬಡತನ ಬೇರೆ [illegible] ವಿನ ಹಾಗಾದ ಅರ್ಥ [illegible] ಮಾಡಬಹುದು.

ನಮ್ಮ ತಿಳುವಳಿಕೆ ಬಹಳ ಸಂಕುಚಿತವಾದದ್ದು. ಗಳಿಗೆಗೊಂದು ಸಾರಿ ಬದಲಾಗುವ ಸ್ಥಿರವಲ್ಲದ ಯಾವುದೇ ಧ್ಯೇಯಗಳ ಈ ಚಂಚಲ ಮನೋವೃತ್ತಿಯಿಂದ [illegible] ಬಟ್ಟೆ [illegible] ಇಷ್ಟನ್ನು ಪಡೆಯುವ ಹಂಬಲಿಗರು ನಾವಾಗಿದ್ದೇವೆ. ಕಷ್ಟವನ್ನು ಎದುರಿಸುವ ಕೆಚ್ಚು ನಮ್ಮಲ್ಲಿಲ್ಲ. ಬಾಯಿ ಮಾತ್ರದ ಅನುಕಂಪವನ್ನು ಕೇಳಬಲ್ಲೆವು, ಕೆಲವು ವೇಳೆ ತೋರಿಸಬಲ್ಲೆವು. ಆದರೆ ಕಾರ್ಯದಲ್ಲಿ ಮಾಡಿತೋರಿಸಲಾರೆವು. ಮಾತಿಗೂ ಕೃತಿಗೂ ಸರಿದೂಗದ ನಡತೆಗಳೇ ಬಹಳವಾಗಿವೆ. ಮಾತೃ ಹೃದಯವನ್ನು [illegible] ತೆಗೆದಿದೆ. [illegible] ಆತ್ಮಿಕ ಶಕ್ತಿಯ ಒಡೆತನ ಕಳೆದಿದೆ.

ಗಾಂಧೀಜಿ ತೋರಿಸಿದ ದಾರಿ ಜಗತ್ತಿಗೆ ಆದರ್ಶವಾದರೂ ನಮ್ಮನ್ನು ಪಾರತಂತ್ರ್ಯದಿಂದ ಪಾರುಮಾಡಿದ್ದಾದರೂ ಅವರ ತತ್ತ್ವವನ್ನು ನಿಜವಾಗಿ ಪಾಲಿಸುವವರು ಇಲ್ಲ. ಮಹಾತ್ಮರು ಇಂದು ನಮಗಿಲ್ಲ. ಭಾರತವು ವಿಭೂತಿ ಪುರುಷ, ಶಾಂತಿ ಪ್ರಿಯರಾದವರ [illegible] ಕಿನಾರೆಯನ್ನು ಸಾರುವ ಮಹತ್ ತತ್ತ್ವ ಬೋಧನೆಗಳು ನಮ್ಮಲ್ಲಿವೆ. ನಮ್ಮ ಹಿಂದಿನವರ ಬುದ್ಧಿ ಸತ್ತ್ವಯನ್ನು ಸೂಚಿಸುವ ಮೈಲುಗಲ್ಲುಗಳಿವೆ. ಆದರೆ ನಾವು ಅವನ್ನೆಲ್ಲಾ ಪರಿಶೀಲಿಸಿ ಬಾಳಿನ ಚಪಲವನ್ನು ತೀರಿಸಿಕೊಳ್ಳುವುದರಲ್ಲಿ ಕಾಲಹರಣ ಮಾಡುತ್ತಲಿದ್ದೇವೆ. ಪಾಶ್ಚಾತ್ಯರ ರಾಜನೀತಿಯನ್ನು ಖಂಡಿಸುವಲ್ಲಿ ಹಿಂದು ಮುಂದೆ ನೋಡುವುದಿಲ್ಲ. ಆದರೆ ಅವರ ಶಿಸ್ತು, ಸಂಘಟನೆಗಳನ್ನು ನಾವು ವಿವೇಚಿಸುವುದಿಲ್ಲ. ಇನ್ನೊಬ್ಬರ ಮೇಲೆ ತಪ್ಪು ಹೊರಿಸುವುದರಲ್ಲೂ, ಆ ಪಕ್ಷ ಈ ಪಕ್ಷ [illegible] ದರಲ್ಲೂ, [illegible] ರಲ್ಲೂ, ನಾವು ಒಮ್ಮೆ ಬಿಟ್ಟವರಂತೆ ಹಾಗೆಯೇ ಉತ್ತಮ ಗುಣಗಳನ್ನು ಹೇಳುವುದಕ್ಕೂ, ಯಾದ ಧರ್ಮವಾದವನ್ನು ಬೇಳುವುದಕ್ಕೂ ಬುದ್ಧಿಶೂನ್ಯರು, ಅತ್ಯಂತ ಬಡವರು. ಸುಗುಣ ಗ್ರಾಹಿ ಮನೋಭಾವ ಹೃದಯ ಶುದ್ಧಿ ನಮಗಿಲ್ಲ. ಸಣ್ಣದೆ ಆ ಮಹೋಳನ್ನೆ ನೋಡುವಷ್ಟರಲ್ಲಿ ಪಂಡಿತ್ಯ ಪ್ರದರ್ಶನವಾಗುತ್ತದೆ! ಕಟ್ಟಿಗಣವನ್ನು ಸ್ವೀಕರಿಸುತ್ತಿರುವ ಪಕ್ಷಗಳಾಗಲೀ ಯಾರೂ ಪರಿಪೂರ್ಣರಾಗಿ ತೋರಲಾರರು! ಜನಮನದ ಕೆಲವು ಗುಣಗಳನ್ನಾದರೂ ಎತ್ತಿ ಹಿಡಿಯ [illegible] ನಮ್ಮದಾಗಿರಬೇಕು. ಅಂತೆಯೇ ನಾವು ಬರಿದೂ [illegible] ಮಾಡಿದಂತೆ ಗುಣ [illegible] ಇದರಿಂದ ನಾವು ಗುಣ [illegible] ಸೌಬಲ್ಯ [illegible] ಬಡತನವನ್ನೇ.

'ಬಡತನವೆ ದನವೆ' [illegible] ನೀನು [illegible] ವಿನ ಅನ್ನದಾತೆ ಎಂದು [illegible] ಶ್ರೀಮಂತಿಕೆ ಸಾವು [illegible] ಗಳಿಸು [illegible] ಗಳಟಕ ದಾಟದ ರಾಷ್ಟ್ರಗಳು ಬುದ್ಧಿ ಸಂಪನ್ನರೂ ಆಗಿದ್ದರೆ ಜಗತ್ತು ಯುದ್ಧ ಕಾರ್ಮೋಡಗಳಿಂದ ಕವಿಯಬೇಕಾದ ಪ್ರಸಂಗ ಬರುತ್ತಿರಲಿಲ್ಲ. ಅಂದರೆ ಇಲ್ಲಿಯೂ 'ಬುದ್ಧಿಯ ಬಡತನ'ವಿದೆ.

ಬುದ್ಧಿಶಾಲಿಗಳಿಂದ ತುಂಬಿದ ದೇಶ ಜಗತ್ತಿನ ಸ್ವಾವಲಂಬನೆಗೆ ಬಲ್ಲದು. ತನ್ನ ದೇಶದಲ್ಲಿ ಶಾಂತಿಯನ್ನು ಕಾಯ್ದುಕೊಳ್ಳಬಲ್ಲದು.

ಸತ್ಯ ಅಹಿಂಸೆಗಳಿಂದ ರಾಷ್ಟ್ರವನ್ನು ಆಳುವ ಪ್ರಿಯವಾದಿಗಳು ನಾವ—ನಾವು ಸ್ವತಂತ್ರರಾಗಿಸಿದ್ದು 'ಅಹಿಂಸೆ'ಯಿಂದಲೇ. ಆದರೆ ಇಂದು ಸರಕಾರ ನೂರರಲ್ಲಿ ಆರು ಪಾಲು ಸೈನ್ಯಕ್ಕಾಗಿ ಬಳಸುತ್ತಲಿದೆ. ಪ್ರೇಮ ಸಾಂಕೇತಿಕವಾಗಿ ಉಳಿದಿದೆ. ಪರಸ್ಪರರೊಳಗೆ ಅನ್ಯೋನ್ಯಭಾವ ಇರುತ್ತಿದ್ದರೆ ಈ ಪರಿಸ್ಥಿತಿಯೊದಗುತ್ತಿರಲಿಲ್ಲ. ತಪ್ಪು ಗ್ರಹಿಕೆ, ಜಾತೀಯ ಭಾವನೆಗಳೆಲ್ಲ ತತ್ತ್ವಹೀನತೆಯ ಪ್ರತೀಕವಾಗಿವೆ. ಉತ್ತಮ ಆದರ್ಶಗಳ ಪಥದ ತಪೋಶಕ್ತಿ ಕೀರ್ತಿಯನ್ನು ಜಗತ್ತಿಗೆ ಸಾರಿದ ಅಶೋಕ, ಬುದ್ಧ, ರಾಮಕೃಷ್ಣ, ಗಾಂಧೀ ಮೊದಲಾದವರ ತತ್ತ್ವಗಳು ಕೇವಲ 'ಬಾಯಿಬಲ'ಗಳಾಗಿವೆ. ಹೃದಯಕವಾಗಿಯೂಗಲೀ—ಕಾರ್ಯರೂಪದಲ್ಲಾಗಲೀ ಅದರ ಆಚರಣೆ ನಡೆಯುತ್ತಿಲ್ಲ. ಅಂದರೆ ಅದನ್ನು ಅಭ್ಯಸಿಸುವ ಕಲ್ಪನೆ ಕಾರ್ಯಗಳಾಗಿ ಮಾಡುವ ಸಾಹಸಬುದ್ಧಿ ನಮ್ಮಲ್ಲಿಲ್ಲ. ಪರಾಧೀನತೆಯಲ್ಲಿದ್ದಾಗ ಅವರು ದೇಶಕ್ಕಾಗಿ ಮಾಡಿದ ಸಾಹಸವನ್ನು ದೇಶ ಸ್ವಾತಂತ್ರ್ಯವಾಗಿ ನಮ್ಮ ಕೈಗೆ ಬಂದ ಮೇಲೂ ನಾವು ಆ ಕೆಲಸ ಮಾಡುತ್ತಿಲ್ಲ. ಅದಕ್ಕೆ ವಿರುದ್ಧವಾದ ಕಾರ್ಯವನ್ನೇ ಆಚರಿಸಿ ಧನಿಕ ಕೀರ್ತಿಗೆ ಕಳಂಕ ತರುವ ರೀತಿ ಮಾಡುತ್ತಿದ್ದೇವೆ. ಇದು ಯಾಕೆ ಹೀಗೆ? ನಾವು ಎಲ್ಲಿ ತಪ್ಪಿದ್ದೇವೆ? ನಮ್ಮಲ್ಲೇನು ಕೊರತೆ? ಎಂಬುದಕ್ಕೆ ಉತ್ತರ ಸ್ಪಷ್ಟವಾಗಿ ದೊರೆಯುವುದು "ಬುದ್ಧಿಯ ಬಡತನ"ವೊಂದೇ. ಆ ವಿಷಯದಲ್ಲಿ "ನಾವು ಬಡವರು".

"[illegible] ಧಿಂದರ [illegible]" ದುಃಖದ ಆಭವದಿಂದ ಯಾರಾದರೂ ಒದಗಬಹುದೇನೋ! ಆದರೆ ಬುದ್ಧಿ [illegible] ಎಂದರೆ ಬದುಕಬಹುದು.

ಓದುಗರ ಓಲೆಗಳು

ಐ. ಟಿ. ಎಸ್. ಹಾಸ್ಟೆಲ್

ಪೊನ್ನಂಪೇಟೆಯ ಇಂಡಸ್ಟ್ರಿಯಲ್ ಟ್ರೈನಿಂಗ್ ಇನ್ಸ್ಟಿಟ್ಯೂಟಿನ ವಿದ್ಯಾರ್ಥಿಗಳ ಬೋರ್ಡಿಂಗ್ ಹೌಸ್ ಅಲ್ಲಿಯ ಗವರ್ನಮೆಂಟ್ [illegible] ಅಲ್ಲಿ ಸುಮಾರು ಇಪ್ಪತ್ತೈದು ವಿದ್ಯಾರ್ಥಿಗಳು ವಾಸಿಸುತ್ತಿದ್ದಾರೆ.

ಈ ಬೋರ್ಡಿಂಗಿನ ಎಚ್ಚರಿಕೆಯನ್ನು ತೆಗೆದುಕೊಳ್ಳಲು ಒಬ್ಬ "ಹಾಸ್ಟೆಲ್ ಸೂಪರಿಂಟೆಂಡೆಂಟ್"ರು ಇದ್ದಾರೆ. ಅವರು ಇನ್ಸ್ಟಿಟ್ಯೂಟಿನಲ್ಲೂ ಅಧ್ಯಾಪಕರಾಗಿದ್ದು, ಇದಕ್ಕಾಗಿಯೂ ಬೇರೆ ಸಂಬಳವನ್ನು ಸರ್ಕಾರದಿಂದ ಪಡೆಯುತ್ತಿರುವರಂತೆ. ಆದರೆ ಅವರು ಪಡೆಯುತ್ತಿರುವ ವೇತನಕ್ಕೆ ತಕ್ಕಂತೆ ತಮ್ಮ ಕರ್ತವ್ಯವನ್ನು ಮಾಡುತ್ತಿಲ್ಲವೆಂದು ಅನೇಕರು ಹೇಳುತ್ತಾರೆ. [illegible] ವಿದ್ಯಾರ್ಥಿಗಳ [illegible] ಅವರ ಆರೋಗ್ಯಕ್ಕೆ ಸಂಬಂಧಿಸಿದ ವಿಷಯಗಳನ್ನು ವಿಚಾರಿಸಿ ತಿಳಿದುಕೊಳ್ಳಬೇಕಾಗಿದೆಯಂತೆ.

ಆಗಿಂದಾಗ್ಯೆ ಹಾಸ್ಟೆಲ್ ಸೂಪರಿಂಟೆಂಡೆಂಟರು ತಮ್ಮ ಗೆಳೆಯರೊಡನೆ "ಹಾಸ್ಟೆಲ್"ಗೆ ಬಂದು [illegible] ಎಂದು ಅಲ್ಲಿಯ ವಿದ್ಯಾರ್ಥಿಗಳೇ ಹೇಳುತ್ತಿದ್ದಾರೆ. ಮನೆಯಲ್ಲೇ [illegible] ಬೋರ್ಡಿಂಗಿನಲ್ಲಿ ಆ ಜಿಲ್ಲೆಯ [illegible] ಸಹ, ತಮ್ಮ ಆ [illegible] ದೊಡ್ಡ ದೊಡ್ಡ ಔತಣಗಳನ್ನೇರ್ಪಡಿಸಿ, ಅವರನ್ನು ಸಂತೃಪ್ತಿಪಡಿಸಿ—ಅವರಿಂದ ಹೊಗಳಿಸಿಕೊಳ್ಳುತ್ತಾರಂತೆ! ಇದು ನಿಜವೇ ಎಂಬುದನ್ನು ಪರಿಶೀಲಿಸಬೇಕು. ನಿಜವಾದರೆ ಇದು ಎಂತಹ ಅನ್ಯಾಯ?

ಇನ್ನಾದರೂ ತಮ್ಮ ಕಾಲಿನ ಕರ್ತವ್ಯವನ್ನು ಸಲ್ಲಿಸುವ [illegible] ದಿಂದ ಮಹಿಳ, [illegible] ಹಿತವನ್ನು ಸಾಧಿಸುವರೇ?

ಓರ್ವ [illegible]

ವೀರಾಜಪೇಟೆ ಸಿವಿಲ್ ಆಸ್ಪತ್ರೆ

ಸಾಧಾರಣವಾಗಿ ದಕ್ಷಿಣ ಕೊಡಗಿಗೆಲ್ಲ ಮುಖ್ಯವಾದ ಆಸ್ಪತ್ರೆಯೆಂದರೆ—ವೀರಾಜಪೇಟೆ ಸಿವಿಲ್ ಆಸ್ಪತ್ರೆ. ಬೇರೆ ಕಡೆಗಳಲ್ಲಿ ಆಸ್ಪತ್ರೆಗಳಿದ್ದರೂ [illegible] ಆಸ್ಪತ್ರೆಯೆಂದು ಭಾವಿಸಿ ಇಲ್ಲಿಗೇ [illegible] ಬರುವ ರೋಗಿಗಳ [illegible] ಸಂಖ್ಯೆಯು ಅತಿ ಹೆಚ್ಚಾಗಿದೆ.

ಆದರೆ ಇತ್ತೀಚೆಗೆ ಡಾಕ್ಟರರು ಮುಖ್ಯ ರೋಗಿಗಳ ಎಚ್ಚರಿಕೆಯನ್ನು ತೆಗೆದುಕೊಳ್ಳಲು, ಆಸ್ಪತ್ರೆಗೆ ಸಾಕಷ್ಟು [illegible] ಔಷಧಕ್ಕಾಗಿ ಮತ್ತು ಇತರ ಚಿಕಿತ್ಸೆಗಳಿಗಾಗಿ ಬಂದ ಜನರ [illegible] ಹಾಗೆಯೇ ಹಿಂದಕ್ಕೆ ಹೋಗುವುದು [illegible] ಸರಿಯೇ?

ಇಷ್ಟರ ಮೇಲೂ ಬಂದ ಡಾಕ್ಟರುಗಳು ಒಬ್ಬೊಬ್ಬರು [illegible], ನೋಡುವ ನಡೆಯನ್ನು [illegible] ಲಕ್ಷಿಸದೆ,

ರ್ದಯರಾಗಿ ವರ್ತಿಸುವುದೂ ಇದೆ. ಉದಾಹರಣೆಗೆ, ಕಳೆದ ವಾರ ಒಬ್ಬರು ಹಲ್ಲು ನೋವನ್ನು ತಡೆಯಲಾರದೆ ಆಸ್ಪತ್ರೆಗೆ ಬಂದಿದ್ದು, ಡಾಕ್ಟರಿಗಾಗಿ ಬೆಳಿಗ್ಗೆ ಹತ್ತು ಗಂಟೆಯಿಂದ ಹನ್ನೆರಡೂವರೆ ಗಂಟೆಯವರೆಗೆ ಕಾದು ಕುಳಿತಿದ್ದರು. ಕಡೆಯಲ್ಲಿ ಒಬ್ಬ ಡಾಕ್ಟರು ಬರಲು ಅವರಿಗೆ ತಮ್ಮ ನೋವಿನ ಸಂಕಟವನ್ನು ನಿವೇದಿಸಿಕೊಳ್ಳಲು, ಅವರು ಆ ನೋವಿಗೆ ತಕ್ಕ ಪರಿಹಾರವನ್ನು ಕೊಡುವುದು ಬಿಟ್ಟು "ಹೋಗಯ್ಯಾ ನಾಳೆ ಬಾ" ಎಂದರು! ಪಾಪ, ಆ ನೋವನ್ನು ತಡೆಯಲಾರದೆ ಸಂಕಟಪಡುತ್ತಿದ್ದ ಅವರ ಮನಸ್ಸು ಯಾವ ರೀತಿಯ ಭಾವನೆಯನ್ನು ತಳೆದಿರಬಹುದು!

ಹಾಗೆಂದು, ಡಾಕ್ಟರುಗಳಿಗೆ ಕಷ್ಟವಿಲ್ಲವೆಂದಲ್ಲ; ಆದರೆ ಸ್ವಲ್ಪ ದಯಾಮಯಿಗಳಾಗಿ ವರ್ತಿಸಿದರೆ, ಬಂದ ಜನರಿಗೆ ಸ್ವಲ್ಪವಾದರೂ ಮನಸ್ಸಿಗೆ ಸಮಾಧಾನವಾದೀತು! ತಕ್ಕ ಔಷಧಿಯನ್ನು ಕೊಡುವುದರ ಜೊತೆಗೆ, ರೋಗಿಗಳ ಹೃದಯ ಚಿತ್ತಗಳನ್ನು ಹಗುರವಾಗಿಡುವುದರಿಂದ ಕಾಯಿಲೆಗಳು ಬೇಗನೆ ವಾಸಿಯಾಗುವುವೆಂದು ಮನಶ್ಶಾಸ್ತ್ರಜ್ಞರು ಹೇಳುತ್ತಾರೆ.

ಆದುದರಿಂದ, ದೇಶದ ಜನರ ಹಿತವನ್ನು ಬಯಸಿ, ಈ ರೀತಿಯ ಒಂದೊಂದು ಅಧಿಕಾರದಲ್ಲಿರುವವರು, ತಮ್ಮೆಡೆಗೆ ಸಹಾಯಕ್ಕಾಗಿ ಬರುವ ಬಡ ಜನರಿಗೆ ಸ್ವಲ್ಪ ದಯೆಯನ್ನು ತೋರಿಸಿ, ತಮ್ಮಿಂದ ಸಾಧ್ಯವಾದಷ್ಟು ನೆರವನ್ನು ಶುದ್ಧ ಮನಸ್ಸಿನಿಂದಿತ್ತು—ನಮ್ಮ ಸ್ವತಂತ್ರ ದೇಶದ ಪ್ರಜೆಗಳ ಮೇಲ್ಮೆಯನ್ನು ಸಾಧಿಸಲೆಂದು ದೀನಜನರಾದ ನಮ್ಮ ಹಾರೈಕೆಯಾಗಿದೆ.

K. C. B.

ಬೇಲಿಯೇ ಹೊಲ ಮೇದರೆ ಗತಿ ಏನು?

ಈ ಶಿರೋನಾಮೆಯಲ್ಲಿ ಕೊಡ್ಲಿಪೇಟೆ ಶಾಲೆಯ ಅಧ್ಯಾಪಕನಾದ ನನ್ನ ಕೆಲಸದ ವಿಚಾರ 'ಪಟ್ಟಣಿಗ'ರು ತಮ್ಮ ಲೇಖನದಲ್ಲಿ ಮಾಡಿರುವ ಆರೋಪಗಳು ಏನೊಂದೂ ತಿರುಳಿಲ್ಲದವುಗಳಾಗಿವೆ. ನಾನು ಸದಾ ದೇವರಿಗಂಜಿ ಕೆಲಸ ಮಾಡಿಕೊಂಡು ಬಂದಿದ್ದೇನೆ. ಇನ್ನು ಮುಂದೆಯೂ ಮಾಡುವವನಿದ್ದೇನೆ. ನಾನು ಯಾವ ರೀತಿ ಶಾಲೆ ಕೆಲಸ ಮಾಡಿಕೊಂಡು ಹೋಗುತ್ತಿದ್ದೇನೆಂಬುದು ಇಲಾಖೆಯವರಿಗೂ, ದೇಶದ ಜನತೆಗೂ ಚೆನ್ನಾಗಿ ಗೊತ್ತಿರುವ ಸಂಗತಿಯಾಗಿದೆ. 'ಪಟ್ಟಣಿಗ'ರು ಬರೆದಿರುವ ಆರೋಪಣೆಗಳನ್ನು ನೋಡಿದರೆ ಇದರಲ್ಲಿ ಯಾರೋ ಹೊರಗಿನವರ ಇಲ್ಲವೇ ನನಗೆ ಆಗದ ಕೆಳದವರ ದುರುದ್ದೇಶವು ಅಡಗಿದೆಯಾಗಿ ನಾನು ತಿಳಿಯುತ್ತೇನೆ. ಯಾರೇ ಆಗಲಿ ಒಬ್ಬ ವ್ಯಕ್ತಿಯ ಮೇಲಾಗಲೀ, ಯಾ ಅವನ ಕೆಲಸದ ಮೇಲಾಗಲೀ, ಟೀಕೆಟಿಪ್ಪಣಿಗಳನ್ನು ಮಾಡುವುದಾದರೆ ಅಂಥವುಗಳು ರಚನಾತ್ಮಕವಾದವುಗಳಾಗಿಯೂ ನ್ಯಾಯಭರಿತವುಗಳಾಗಿಯೂ ಇರಬೇಕೇ ಹೊರತು ವೈಶಮ್ಯ ಅಸೂಯೆಗಳಿಂದ ಕೂಡಿದವುಗಳಾಗಿರಬಾರದು. 'ಶಾಲೆಯೇ ನಾನು, ನಾನೇ ಶಾಲೆ' ಎಂದು ತಿಳಿದು ನಾನು ಓದದ ಈ ಶಾಲೆಗಾಗಿ ಹಗಲಿರುಳೆನ್ನದೆ ಸ್ವಂತ ದುಡಿಮೆಗಳನ್ನು ಬಿಟ್ಟು ಏನೊಂದೂ ಹೆಚ್ಚಿನ ರಜೆಯನ್ನು ತೆಗೆಯದೆ ರಜಾ ದಿನಗಳಲ್ಲಿಯೂ ತರಗತಿಗಳನ್ನಿಟ್ಟುಕೊಂಡು ಶಾಲಾಭಿವೃದ್ಧಿಗಾಗಿ ದುಡಿಯುತ್ತಿದ್ದೇನೆ. ಇದಕ್ಕೆ ನನ್ನ ತಂದೆ ಮತ್ತು ನನ್ನ ಮಗ ನಿಧನರಾದ ದಿನಗಳಲ್ಲಿಯೂ ರಜೆಯನ್ನು ತೆಗೆಯದೆ ಕೆಲಸ ಮಾಡಿರುತ್ತೇನೆ ಎಂಬುದೇ ತಕ್ಕ ನಿದರ್ಶನವಾಗಿದೆ. "ತಾ. ೬-೧೦-೫೦ ರಲ್ಲಿ ಬೇರೆ ಕೆಲಸ ಮಾಡಿ ಹಾಜರಿ ರಿಜಿಸ್ತರಿನಲ್ಲಿ ಡ್ಯೂಟಿ ಎಂದು ಬರೆದಿರುತ್ತಾರೆ, ಪ್ರತಿದಿನ ೧೧½ ಗಂಟೆಗೆ ಪಾಠ ಬಿಟ್ಟು ಟಪ್ಪಾಲು ತರಲು ಹೋಗುತ್ತಾರೆ, ತಾರೀಕು ೧೪-೧೨-೫೦ ರಲ್ಲಿ ಸಾವಿಗೆ ಹೋಗಿ ರಿಜಿಸ್ಟರಿನಲ್ಲಿ ಸಹಿ ಮಾಡಿರುತ್ತಾರೆ, ತಾರೀಕು ೨೪-೧-೫೧ ರಲ್ಲಿ ಜಾತ್ರೆಮಾಳ ಕಳೆಯಲು ಹೋಗಿರುತ್ತಾರೆ, ಚೀಫ್ ಕಮಿಷನರ್ ಸಾಹೇಬರು ಬಂದಿದ್ದಾಗ ಬಂಗ್ಲೆ ಪಕ್ಕದಲ್ಲಿ ದಿನವಿಡೀ ಕಾದಿದ್ದರು. ಉರ್ದು ತರಗತಿಯು ಸರಿಯಾಗಿ ನಡೆಯುತ್ತಿಲ್ಲ, ತೋಟಗಾರಿಕೆಗೆ ಮಂಜೂರಾದ ಹಣ ಸರಿಯಾಗಿ ವಿನಿಯೋಗವಾಗಿಲ್ಲ, ಪೆನ್ಷನ್ ಆದ ಇವರನ್ನು ಏಕೆ ಇಟ್ಟುಕೊಂಡಿದ್ದೀರಿ, ಮನೆಗೆ ಕಳುಹಿ" ಎಂಬಿವೇ ಮೊದಲಾದ ವಿಚಾರಗಳಲ್ಲಿ ನಿಜಾಂಶವೆಂಬುದೇ ಇಲ್ಲ. ಈ ಅಪಾದನೆಗಳನ್ನು ಸಂಬಂಧಪಟ್ಟವರು ಕ್ರಮವಾದ ತನಿಖೆ ನಡೆಸಲಿ. ಆಗ ನಿಜಾಂಶವು ತಾನಾಗಿಯೇ ಹೊರಬೀಳುವುದು ಮತ್ತು ಲೇಖಕನ ಅಪಾದನೆಗಳು ಸುಳ್ಳಿನ ಮುದ್ದೆ ಎಂದು ಗೊತ್ತಾಗುವುದು. ನಾನು ಕೆಲಸದಲ್ಲಿರುವುದರಿಂದ 'ಪಟ್ಟಣಿಗ' ಲೇಖಕನಿಗೆ ಆಗುವ ನಷ್ಟವೇನು? ನಾನು ಹೋದರೆ ಆಗುವ ಲಾಭವೇನು? ನಿಜವಾದ ಹೆಸರನ್ನು ಪ್ರಕಟಿಸದೆ 'ಪಟ್ಟಣಿಗ'ನೆಂಬ ಹೆಸರು ಕೊಡಲು ನನ್ನ ಹೆದರಿಕೆ ಏನಿತ್ತು? ನಿಜ ಹೆಸರನ್ನು ತೋರಿಸದೆ 'ಪಟ್ಟಣಿಗ'ನೆಂಬ ಬೇರೆ ಹೆಸರಿನಲ್ಲಿ ಲೇಖನವನ್ನು ಪ್ರಕಟಿಸಿದ್ದು ನೋಡುವಾಗ ಮಾಡಿರುವ ಅಪಾದನೆಗಳು ತಿರುಳಿಲ್ಲದ್ದೆಂದು ದೃಢಪಡುತ್ತದೆ.

ಕೆ. ಎಸ್. ಕುಂಬಳಪ್ಪ,
ಹೆಡ್ ಮಾಸ್ಟರು.

ತಾರೀಕು ೨೫-೨-೫೧

ಡೆಲ್ಲಿಯಲ್ಲಿ ತಾರೀಕು ೧೦ ಮತ್ತು ೧೧ರಲ್ಲಿ ನೆರೆದಿದ್ದ 'ಸಿ' ಭಾಗದ ಅಂದರೆ ಚೀಫ್ ಕಮಿಷನರ್ ಪ್ರಾಂತಗಳ ಪ್ರತಿನಿಧಿಗಳ ಸಮ್ಮೇಳನದಲ್ಲಿ ಈ ಪ್ರಾಂತಗಳಿಗೆ ಸುಧಾರಣೆ ಶೀಘ್ರ ಕೊಡಬೇಕೆಂಬ ಒಮ್ಮತದ ಠರಾವು ಮಾಡಿ ಪಾರ್ಲಿಮೆಂಟಿಗೆ ಕಳುಹಿಸುವರೆಂದೂ ಅವರ ನಿರ್ಣಯಕ್ಕೆ ಬೆಂಬಲವಾಗಿಯೂ, 'ಸಿ' ಪ್ರಾಂತಗಳಿಗೆ ಬರುವುದೊಂದು ಸುಧಾರಣೆಯನ್ನು ಕೊಡದ್ದಕ್ಕೆ ನಿಶೇಧ ರೂಪವಾಗಿಯೂ ತಾ ೨೫ ನ್ನು ನಿಶೇಧ ದಿನವೆಂದು ಆಚರಿಸಬೇಕೆಂದು ಡೆಲ್ಲಿಯಲ್ಲಿ ಕೂಡಿದ ಪ್ರತಿನಿಧಿಗಳು ನಿರ್ಣಯಿಸಿದ್ದರೆಂದೂ ತಿಳಿದೆನು. ಡೆಲ್ಲಿ ಸಮ್ಮೇಳನಕ್ಕೆ ಕೊಡಗಿನ ಎರಡು ಪಕ್ಷದ ಪ್ರತಿನಿಧಿಗಳೂ ಹೋಗಿದ್ದರು. ಆದರೆ ತಾ ೨೫ ನ್ನು ಕೊಡಗಿನಲ್ಲಿ ನಿಶೇಧ ದಿನವನ್ನು ಆಚರಿಸಿದಂತೆ ನನಗೆ ತೋರುವದಿಲ್ಲ. ಕೊಡಗಿಗೆ ಸುಧಾರಣೆ ಬೇಕೆಂಬ ಬಗ್ಗೆ ಕೊಡಗಿನ ಎರಡು ಪಕ್ಷಗಳೂ ಒಮ್ಮತದಿಂದಿದ್ದಾರೆ. ಅದೇ ರೀತಿ ಒಮ್ಮತ ಅಭಿಪ್ರಾಯವನ್ನೇ ಈ ಪಕ್ಷಗಳ ಪ್ರತಿನಿಧಿಗಳು ಡೆಲ್ಲಿಯ ಸಮ್ಮೇಳನದಲ್ಲಿ ಕೊಟ್ಟಿದ್ದಾರೆ. ಹಾಗಾದರೆ ಕೊಡಗಿನಲ್ಲಿ ನಿಶೇಧ ದಿನಾಚರಣೆಯನ್ನು ಆಚರಿಸಲಿಲ್ಲವೇ? ಸಂಯೋಜನೆ, ವಿಭಜನೆ, ಪಾರ್ಟಿ, ಪಂಗಡ, ಮೊದಲಾದವು ಕೇವಲ ಕೆಲವೊಂದು ರಾಜಕೀಯ ರಂಗದ ನಾಯಕರುಗಳೆನ್ನುವವರು ಹಬ್ಬಿಸಿರುವ ರೋಗವಲ್ಲದೆ ಜನತೆಯು ನಿಜವಾಗಿಯೂ ಈ ವಿಚಾರಗಳಲ್ಲಿ ನಿರ್ಲಿಪ್ತವಾಗಿದೆಯೆಂದು ಇದರಿಂದ ಹೇಳಬಹುದೇ?

ನಿರೀಕ್ಷಕ.

ರಾಷ್ಟ್ರಾಧ್ಯಕ್ಷ ಡಾ. ರಾಜೇಂದ್ರಪ್ರಸಾದರು ಏಪ್ರಿಲ್ ಮೊದಲನೇ ವಾರದಲ್ಲಿ ಮೈಸೂರು ಸಂಸ್ಥಾನಕ್ಕೆ ಭೆಟ್ಟಿ ಕೊಡಲಿದ್ದಾರೆಂದು ಮುಖ್ಯ ಮಂತ್ರಿ ರೆಡ್ಡಿಯವರು ಪತ್ರಿಕಾ ಪರಿಷತ್ತಿನಲ್ಲಿ ಹೇಳಿದರು. ಬೆಂಗಳೂರಿನಲ್ಲಿ ಎರಡು ದಿನ ಮೈಸೂರಿನಲ್ಲಿ ಒಂದು ದಿನ ಅವರ ಉಳಿಯುವರು.

ನೋಟೀಸು.

ದಿ. ವಿಜಯಾ ಬ್ಯಾಂಕ್ ಲಿಮಿಟೆಡ್, ಮಡಿಕೇರಿ (ಕೊಡಗು)

ಈ ಕೆಳಗೆ ಹೆಸರು ಕಾಣಿಸಿದವರು ಮೇಲ್ಕಂಡ ನಮ್ಮ ಬ್ಯಾಂಕಿನಿಂದ ಚಿನ್ನಾಭರಣಗಳ ಆಡಿನ ಮೇಲೆ ಪಡೆದ ಸಾಲದ ಮೊಬಲಗುಗಳನ್ನಾಗಲೀ ಅವುಗಳ ಬಡ್ಡಿಯನ್ನಾಗಲೀ ವಾಯಿದೆಗೆ ಸರಿಯಾಗಿ ಕೊಡದಿರುವುದರಿಂದ ಸದರಿಯವರಿಗೆ ಕ್ರಮಪ್ರಕಾರವಾದ ರಿಜಿಸ್ಟ್ರೀ ನೋಟೀಸುಗಳನ್ನು ಕಳುಹಿಸಿದಲ್ಲಿ ಈ ವ್ಯಕ್ತಿ ಕೆಲವರು ನೋಟೀಸು ಪಡೆದು ವ ಬಾಕಿಯವರು ನೋಟೀಸು ಡೆಲಿವರಿ ಸಿಕ್ಕದೆ ಸದರಿ ಸಾಲಗಳ ಅಸಲು ಬಡ್ಡಿ ವಗೈರೆಗಳನ್ನು ಇನ್ನೂ ಬಾಕಿ ಇಟ್ಟುಕೊಂಡಿರುವುದರಿಂದ ಸದರಿಯವರೆಲ್ಲರಿಗೂ ಈ ಮೂಲಕ ತಿಳಿಸುವುದೇನೆಂದರೆ:—

ಸದರಿ ಸಾಲಗಾರರು ಅವರಿಂದ ಮೇಲ್ಕಾಣಿಸಿದ ಬ್ಯಾಂಕಿಗೆ ಸಲ್ಲಲಿಕ್ಕಿರುವ ಅಸಲು ಬಡ್ಡಿ ವಗೈರೆಯೂ ನೋಟೀಸಿನ ಖರ್ಚು ಸಮೇತ ಹಣವನ್ನು ೧೯೫೧ ನೇ ಇಸವಿ ಮಾರ್ಚಿ ತಾರೀಕು ೧೭ ನೇ ಶನಿವಾರ ಹಗಲು ೧ ಗಂಟೆ ಸಮಯದೊಳಗೆ ಪಾವತಿ ಮಾಡಲು ತಪ್ಪಿದಲ್ಲಿ, ತಾ ೧೯-೩-೧೯೫೧ರ ಹಗಲು ೩-೩೦ ಗಂಟೆಗೆ ಸರಿಯಾಗಿ ವ, ಬ್ಯಾಂಕಿಗೆ ಯುಕ್ತ ಕಂಡು ಬರುವ ಇನ್ನಿತರ ದಿವಸ ವ, ಸಮಯಕ್ಕೆ ನಮ್ಮ ಬ್ಯಾಂಕಿನಲ್ಲಿ ಬಹಿರಂಗವಾಗಿ ಏಲಂ ಮಾಡಿ, ಬ್ಯಾಂಕಿಗೆ ಸಲ್ಲತಕ್ಕ ಮೊಬಲಗನ್ನು ಬರಮಾಡಿಕೊಳ್ಳಲಾಗುತ್ತೆ.

ಪ್ಯಾವೆಲ್ ಲೋನ್ ನಂಬರು	ತಾರೀಕು.	ಹೆಸರು ಮತ್ತು ವಿಳಾಸ.	ಸಾಲದ ಅಸಲು ಬಾಕಿ ರೂ. ಆ. ಪೈ.
೮೯/೪೮-೯	29 11 1948	ಬಿ. ಡಿ. ಮುಂಡಪ್ಪಶೆಟ್ಟಿ, ಪ್ರೋಸೆಸ್ ಸರ್ವರ್, ರಿಜಿಸ್ಟ್ರಾರವರ ಆಫೀಸು, ಮಡಿಕೇರಿ	163 ೦ ೦
೬೬೯/೪೮-೯	26 9 1919	ಎಸ್. ಎಂ. ಸುಬ್ಬಯ್ಯ, ಮುತ್ತಣ್ಣನವರ ಮಗ, ಅಂದಗೋವೆ ಗ್ರಾಮ, ಸುಂಟಿಕೊಪ್ಪ	125 ೦ ೦
೫/೪೯-೫೦	3 10 1949	ಬಿ. ಅಣ್ಣುಪೂಜಾರಿ, ದೇವಪ್ಪ ಪೂಜಾರಿ ಮಗ, ಕಾಟಕೇರಿ ಗ್ರಾಮ, ಮಡಿಕೇರಿ	45 ೦ ೦
೨೦೪/೫೦	25 3 1950	ಬಿ. ವಿ. ಬಾಲರಾವ್, ಬಾಬುರಾವ್‌ರವರ ಮಗ, ಪೆಯಿಂಟರ್, ಮಡಿಕೇರಿ	80 ೦ ೦
೨೪೬/೫೦	14 4 1950	ಖಾದರ್, ಮಮ್ಮದ್‌ರವರ ಮಗ, ಮೇಸನ್, ಗಣಪತಿಬೀದಿ, ಮಡಿಕೇರಿ	110 ೦ ೦
೩೪೬/೫೦	19 5 1950	ಕೆ. ಕೆ. ಗಣಪತಿರಾವ್, ಜುವೆಲ್ಲರ್, ಮಹದೇವಪೇಟೆ ಮಡಿಕೇರಿ	50 ೦ ೦
೩೫೮/೫೦	23 5 1950	ಎಂ. ಅಬ್ದುಲ್ ಬ್ಯಾರಿ, ಮಹಮ್ಮದ್ ಮೇಸ್ತ್ರಿಯವರ ಮಗ, ಕಂಟ್ರಾಕ್ಟರ್, ಮೂದಾಪುರ	35 ೦ ೦
೩೬೭/೫೦	24 5 1950	ಸಿ. ಮುಸ್ಕರಿನಸ್, ರುಜಾರಿಯೋರವರ ಮಗ, ಆಸರ್ ಸ್ಮಿತ್, ಮಹದೇವಪೇಟೆ, ಮಡಿಕೇರಿ	40 ೦ ೦
೪೧೯/೫೦	6 6 1950	ಡಿ. ಸಣ್ಣಪ್ಪ, ಪುಕಸ್ರು ಶೆಟ್ಟಿಯವರ ಮಗ, ಚೀಫ್ ಫಾರೆಸ್ಟ್ ಆಫೀಸ್, ಮಡಿಕೇರಿ	40 ೦ ೦
೪೨೨/೫೦	7 6 1950	ಬಿ. ವಿ. ಬಾಲರಾವ್, ಬಾಬುರಾವ್‌ರವರ ಮಗ, ಪೆಯಿಂಟರ್, ಮಡಿಕೇರಿ	40 ೦ ೦
೪೨೩/೫೦	7 6 1950	ಬಿ. ಡಿ. ಮುಂಡಪ್ಪಶೆಟ್ಟಿ, ಅಮೀನರು, ಕೋ ಆಪರೇಟಿವ್ ರಿಜಿಸ್ಟ್ರಾರವರ ಆಫೀಸು, ಮಡಿಕೇರಿ	90 ೦ ೦
೪೬೯/೫೦	10 6 1950	ಕೆ. ಕೆ. ಗಣಪತಿರಾವ್, ಜುವೆಲ್ಲರ್, ಮಡಿಕೇರಿ	35 ೦ ೦
೪೯೭/೫೦	26 6 1950	ಬಿ. ... ಬಾಬು, ಗಂಗಾರವರ ಮಗ, ಹತ್ತನೇ ಮೈಲು, ಚೆಟ್ಟಳ್ಳಿ, ಕೊಡಗು	500 ೦ ೦

ದಿ. ವಿಜಯ ಬ್ಯಾಂಕ್ ಲಿಮಿಟೆಡ್,
ಮಡಿಕೇರಿ.
ತಾ. 1-3-51.

M. SHIVAPPA ALVA,
Agent.

ನಗೆ ಬರಹ

ಬೋಳು ತಲೆ!

(ನವಭಾರತದಿಂದ)

ಕೂದಲು ಉದುರಿಹೋಗಿ ತಲೆ ಬೋಳಾಗ ತೊಡಗಿತೆಂದರೆ ಮನುಷ್ಯನಿಗೆ ನಾಚಿಕೆಯು ಸಂಗತಿ. ಪ್ರಾಯ ಸಂದಂತೆ ಕೂದಲು ಸ್ವಾಭಾವಿಕವಾಗಿ ಉದುರಿಹೋಗುವುದು. ಕೂದಲಿಲ್ಲದ ತಲೆ ಮುದುಕತನದ ಲಕ್ಷಣವೆಂದು ಹೇಳುವ ವಾಡಿಕೆ. ಇತ್ತೀಚೆಗೆ ಎಳೆಪ್ರಾಯದವರ ಕೂದಲು ಕೂಡಾ ಉದುರಿಹೋಗಿ ತಲೆ ಬೋಳಾಗುವುದು ಬಹಳ ವಿಷಾದ. ಹಾಗೆ ಎಳೆಹರೆಯದವರು ಕೂದಲು ಉದುರದಂತೆ ಅನೇಕ ತೈಲಗಳನ್ನೂ ಕೂದಲೆಣ್ಣೆಗಳನ್ನೂ ಇತರ ಔಷಧಗಳನ್ನೂ ಉಪಯೋಗಿಸಿ ತಮ್ಮ ಯೌವನದ ಲಕ್ಷಣವನ್ನು ಉಳಿಸುವ ಪ್ರಯತ್ನ ಮಾಡುತ್ತಾರೆ. ಆದರೆ ಉದುರುವ ಕೂದಲನ್ನು ಉದುರದಂತೆ ತಡೆಯುವುದು ಸುಲಭವಲ್ಲ. ಅದಕ್ಕಾಗಿ ಟೋಪಿಯನ್ನು ಉಪಯೋಗಿಸಿ ಬೋಳುತಲೆಯನ್ನು ಅಡಗಿಸಬಹುದು.

ಬೋಳುತಲೆಯವರು ಯಾವಾಗಲೂ ನಗೆಗೀಡಾಗುತ್ತಾರೆ. ಬೈಬಲ್‌ನಲ್ಲಿಯೂ ಎಲಿಷನೆಂಬ ಪ್ರವಾದಿಯನ್ನು ಕೆಲವು ಸಣ್ಣ ಮಕ್ಕಳು ಬೋಳುತಲೆಯವನೆಂದು ಹಂಗಿಸಿದ ಕಥೆಯಿದೆ. ಅವನು ರೇಗಿ ಶಾಪಕೊಟ್ಟುಬಿಟ್ಟನಂತೆ. ಇಂದಿಗೂ ಬೋಳುತಲೆಯನ್ನು ಕಂಡ ಕೂಡಲೇ ಮಕ್ಕಳು ಒಂದು ಬಾರಿಯಲ್ಲ ಎರಡು ಬಾರಿ ನೋಡಿಬಿಡುತ್ತಾರೆ. ಸ್ವಲ್ಪ ತಮಾಷೆ ಕೂಡಾ ಮಾಡುತ್ತಾರೆ. ಆದರೆ ತಲೆಬೋಳಾದ ಮಾತ್ರಕ್ಕೆ ನಾಚಿಕೆಬೇಡ. ಇತ್ತೀಚೆಗೆ ಬೋಳುತಲೆಯವರಿಗೆ ಹೆಚ್ಚು ಮನ್ನಣೆ ಸಿಗಲಾರಂಭಿಸಿದೆ. ತಲೆಬೋಳಾಗುವುದಕ್ಕೆ ಮಿದುಳು ಹೆಚ್ಚು ಕೆಲಸ ಮಾಡುವುದೇ ಕಾರಣವೆಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ಒಂದೆಡೆ ಇತ್ತೀಚೆಗೆ ಪೋಲೀಸ್ ಸ್ಪರ್ಧೆಯೊಂದರಲ್ಲಿ ಒಂದೇ ಒಂದು ಕೂದಲಿಲ್ಲದ ಖಾಲಿ ತಲೆಯ ಪೋಲೀಸನಿಗೆ ಪ್ರಥಮ ಬಹುಮಾನ ಕೊಡಲಾಯಿತಂತೆ.

ಜಗತ್ತಿನ ಗಣ್ಯ ವ್ಯಕ್ತಿಗಳು ಹೆಚ್ಚಾಗಿ ಬೋಳುತಲೆಯವರೇ. ಬ್ರಿಟನಿನ ಮುಖ್ಯಮಂತ್ರಿ ಮಿ|| ಕ್ಲಿಮೆಂಟ್ ಅಟ್ಲಿಯವರು ಬೋಳುತಲೆಯವರು. ನಮ್ಮ ಮುಖ್ಯಮಂತ್ರಿ ಶ್ರೀ|| ಜವಾಹರಲಾಲ ನೆಹರೂರವರ ತಲೆಯ ಮೇಲೆ ಕೂದಲುಗಳು ಬಹು ವಿರಳ. ಇನ್ನೂ ಅನೇಕ ನೇತಾರರು, ಮುತ್ಸದ್ದಿಗಳು ಬೋಕ್ಕ ತಲೆಯವರಾಗಿರುವರು. ತಲೆ ಕೂದಲು ಸಹ್ಯವಲ್ಲದ, ಬೋಳುತಲೆಯವರು ಜ್ಞಾನಿಗಳೆಂದು ಮನ್ನಣೆ ಸಂಪಾದಿಸಲಿರುವರು.

ಇಷ್ಟು ಮಾತ್ರವಲ್ಲ ತಲೆ ಬೋಳಾಗುವುದರಿಂದ ಇನ್ನಿತರ ಪ್ರಯೋಜನಗಳೂ ಇವೆ. ತಲೆಯ ಮೇಲೆ ದಟ್ಟವಾಗಿ ಕೂದಲು ಇರುವವರು ತಲೆ ಬಾಚುವರೆ ದಿನಂಪ್ರತಿ ಅಷ್ಟು ಸಮಯ ವ್ಯಯ ಮಾಡಬೇಕಾಗುತ್ತದೆ. ಕೂದಲು ಉದುರಿಹೋದ ನಂತರ ಬಾಚಣಿಗೆ, ಬ್ರಶ್ಶು, ಸುಗಂಧದೆಣ್ಣೆ, ಮೊದಲಾದವುಗಳ ಬೇಕಾಗುವುದಿಲ್ಲ. ಸಮಯವೂ ಉಳಿಯುವುದೂ ಹಣವೂ ಉಳಿಯುತ್ತದೆ.

ತಲೆ ತುಂಬಾ ಕೂದಲಿರುವವರು ತಿಂಗಳಿಗೆ ಒಂದೆರಡು ಬಾರಿ ಕ್ಷೌರದಂಗಡಿಗೆ ಹೋಗಿ ಕೂದಲು ಕತ್ತರಿಸಬೇಕಾಗುತ್ತದೆ. ಕ್ಷೌರದಂಗಡಿಯಲ್ಲಿ ನಮ್ಮ ಅಮೂಲ್ಯ ಸಮಯ ಮತ್ತು ಹಣ ಇವು ವ್ಯರ್ಥ ವ್ಯಯವಾಗುವುದಲ್ಲದೆ ಕ್ಷೌರಿಕನು ಹೇಳುವಂತೆ ತಲೆ ಬಗ್ಗಿಸಿಕೊಂಡು ಕುಳಿತು ಬೇಸರ ಕೂಡಾ ಬರುತ್ತದೆ. ತಲೆಯಲ್ಲಿ ಕೂದಲೇ ಇಲ್ಲದಿದ್ದರೆ ಈ ಸಮಸ್ಯೆಗಳೆಲ್ಲಾ ನಿವಾರಣೆಯಾಗುವವು.

ಮನೆಯಿಂದ ಹೊರಗೆ ಹೋಗುವಾಗಲೆಲ್ಲಾ ನೀಟಾಗಿ ಕೂದಲು ಬಾಚಿಕೊಂಡು ಹೋಗಬೇಕಾಗುತ್ತದೆ. ಯಾವುದಾದರೊಂದು ಸಮಾರಂಭಕ್ಕಾಗಲೀ ಅದವಾ ಸಂದರ್ಶನ ಭೇಟಿಗಾಗಲೀ ಹೋಗುವಾಗ ಕೂದಲನ್ನು ಅಂದವಾಗಿ ಬಾಚುವುದು ಅಗತ್ಯವಷ್ಟೆ? ಒಪ್ಪಅಂದವಾಗಿ ಬಾಚಿದ ಕೂದಲು ಹಾಳಾಗದಂತೆ ನೋಡಲು ಬಹಳ ಜಾಗರೂಕತೆವಹಿಸಬೇಕು. ಯಾರಾದರೂ ತಲೆಯ ಮೇಲೆ ಕೈಹಾಕಿದಲ್ಲಿ ಕೋಪ ಬಂದುಬಿಡುತ್ತದೆ. ಭಾರವಾದ ಕೆಲಸ ಮಾಡಲು ಅಥವಾ ಓಡಿ ಹೋಗುವುದಕ್ಕೆ ಅಂಜಿಕೆಯಾಗುತ್ತದೆ. ಬೋಳುತಲೆಯವರಿಗೆ ಈ ತರದ ಯಾವ ಅಂಜಿಕೆಯೂ ಇಲ್ಲ.

ಜಪಾನ್ ದೇಶದಲ್ಲಿ ಬೋಳುತಲೆಯವರಿಗೆ ಸಮಾಜದಲ್ಲಿ ಗಣ್ಯಸ್ಥಾನ ಸಿಗುತ್ತದೆಯಂತೆ. ಅಮೇರಿಕೆಯಲ್ಲಿ ಬೋಳುತಲೆಯ ಮೇಲೆ ಜಾಹಿರಾತುಗಳನ್ನು ಬರೆದು ಕೆಲವರು ಹಣಗಳಿಸುತಿದ್ದಾರಂತೆ. ನಮ್ಮಲ್ಲೂ ಇಂತಹ ಪ್ರಯೋಗವು ನಡೆದಲ್ಲಿ ಬೋಳುತಲೆಯವರೆಲ್ಲಾ ಲಾಭಗಳಿಸಬಹುದು. ಆದುದರಿಂದ ತಲೆಕೂದಲು ಉದುರುವುದು ನಷ್ಟ ಎಂದು ಯಾರೂ ತಿಳಿದುಕೊಳ್ಳಬಾರದು.

—ಕುಡಲ—

ನೇಪಾಳದ ತಾತ್ಕಾಲಿಕ ಸರಕಾರ.

ನೇಪಾಳದ ಇತಿಹಾಸದಲ್ಲಿ ಹೊಸ ಅಧ್ಯಾಯವೊಂದು ಕಳೆದ ತಾ|| ೧೮ ನೇ ರವಿವಾರ ಸಂಸ್ಥಾನದ ರಾಜಧಾನಿ ಖಟ್ಮಾಂಡುದಲ್ಲಿ ತೆರೆಯಲ್ಪಟ್ಟಿತು. ಅರಸ ತ್ರಿಭುವನರು ಅಂದು ಹೊರಡಿಸಿದ ಪ್ರಕಟಣೆಯಲ್ಲಿ, ಸಂಸ್ಥಾನದ ಭಾವೀ ಘಟನಾತ್ಮಕ ಸುಧಾರಣೆಗಳನ್ನು ವಿಶದೀಕರಿಸಿದರು. ಸಂಸ್ಥಾನದ ತಾತ್ಕಾಲಿಕ ಸರಕಾರವೂ ಸೂಚಿಸಲ್ಪಟ್ಟಿತು. ಮಂತ್ರಿಗಳ ಸಮಿತಿಯಲ್ಲಿ ಶ್ರೀ ಮೋಹನ್ ಶಂಷೇರ್ (ಪ್ರಧಾನ ಮಂತ್ರಿ) ಬಿ. ಸಿ. ಕೊಯಿರಾಲಾ, ಬಾಬರ್ ಶಂಷೇರ್, ಗಣೇಶನ್ ಸಿಂಘ್, ಭದ್ರಕಾಳಿ ಮಿಶ್ರ, ಭಾರತನ್ ಶಮ್ಶೆರ್, ಕರ್ನಲ್ ಚೂಡಾರಾಜ್ ಶಂಷೇರ್, ಯಜ್ಞ ಬಹದೂರ್ ಬಸ್ನ್ಯಾಟ್, ಸುವರ್ಣ ಶಂಷೇರ್ ಮತ್ತು ನೃಪ ಜಂಗ್ ರಾಣಾ ಇವರಿಷ್ಟು ಮಂದಿ ಇರುವರು.

ಪಾಕಿಸ್ತಾನದಲ್ಲಿ ಗೂಂಡಾ ಮಸೂದೆ.

ಪ್ರಾಂತ್ಯದಲ್ಲಿಯ ಎಲ್ಲ ಸಮಾಜ ವಿಘಾತುಕ ಶಕ್ತಿಗಳನ್ನು ಹತೋಟಿಯಲ್ಲಿಟ್ಟುಕೊಳ್ಳುವ ಬಗ್ಗೆ ಪಶ್ಚಿಮ ಪಂಜಾಬ ಗವರ್ನರ್ ಸರ್ ಅಬ್ದುರ್ ನಿಷ್ತಾರ್‌ರವರು 'ಗೂಂಡಾ ಬಿಲ್' ಎಂಬ ಹೆಸರಿನ ಒಂದು ಮಸೂದೆ ತಯಾರಿಸಿ ಪಾಕಿಸ್ತಾನ ಗವರ್ನರ್ ಜನರಲರ ಪರಾಮರ್ಶೆಗೆ ಅದನ್ನು ಒಪ್ಪಿಸಲು ನಿಶ್ಚೈಸಿದರು. ಒಬ್ಬನು ಗೂಂಡನೋ ಹೌದೋ ಅಲ್ಲವೋ ಎಂದು ನಿರ್ಣಯಿಸುವ ಬಗ್ಗೆ ಉಚ್ಚಾಧಿಕಾರಿಗಳ ಒಂದು ಸಮಿತಿ ರಚಿಸಬೇಕೆನ್ನುವ ಸಲಹೆಯೂ ಗೂಂಡಾ ಮಸೂದೆಯಲ್ಲಿ ಅಡಕವಾಗಿದೆ. ಕೆಲವು ಸಂದರ್ಭಗಳಲ್ಲಿ ಕಮಿಟಿಯ ನಿರ್ಣಯದ ವಿರುದ್ಧ ಅಪೀಲು ಮಾಡುವ ಬಗ್ಗೆಯೂ ಆಪಾದಿತನಿಗೆ ಅವಕಾಶ ಮಾಡಿ ಕೊಡಲಾಗುವುದು. ಪಂಜಾಬ ಎಸೆಂಬ್ಲಿಗೆ ಚುನಾವಣೆಗಳು ನಡೆಯುವ ಮೊದಲೇ ಮಸೂದೆಯನ್ನು ಜಾರಿಗೆ ತರಬೇಕೆನ್ನುವ ಪ್ರಯತ್ನ ನಡೆಯುತ್ತಿದೆ.

ಹಿಂದೀಯ ಯತಿಗಳ ಸಮ್ಮೇಳನ

ಸಮಾಜಾಭ್ಯುದಯ ಕಾರ್ಯವನ್ನು ದೃಷ್ಟಿಯಲ್ಲಿಟ್ಟುಕೊಂಡು, ಭಾರತ ದೇಶದ ಅತ್ಯಂತ ಹರಡಿಕೊಂಡಿರುವ ಸುಮಾರು ಒಂದು ಸಾವಿರ ಮಂದಿ ಯತಿಗಳು ಬರುವ ಏಪ್ರಿಲ್ ತಿಂಗಳಲ್ಲಿ ಡಿಲ್ಲಿಯಲ್ಲಿ ಒಂದು ದೊಡ್ಡ ಸಮ್ಮೇಳನ ಕರೆವ ನಿರ್ಧಾರವಾಗಿರುವರು. ಜಾಗತಿಕ ಸಮಸ್ಯೆಗಳ ಮತ್ತು ಅವುಗಳ ಪರಿಹಾರದ ಕುರಿತು ವಿಚಾರ ವಿನಿಮಯ ಆ ಸಮ್ಮೇಳನದಲ್ಲಿ ನಡೆಯಲಿದೆ. ಎಲ್ಲಾ ಪಂಗಡಗಳ ಯತಿಗಳು ಇಲ್ಲಿ ಸಭೆ ಸೇರುವರು.

Coorg Forest Department.

TIMBER SALE NOTICE.

Mercara the 21st February 51

About 75,000 cft of Teak and other hard wood timbers will be sold by auction at the Coorg Timber Depot Hunsur, on 8th March 1951 at 10.30 A.M.

C. M. KUSHALAPPA,
Chief Forest Officer, Coorg

ರಘುಲಾಲ್ & ಕಂಪೆನಿ,

ಔಷಧ ವ್ಯಾಪಾರಿಗಳು, ಮೈಸೂರು.

ಕರ್ನಾಟಕದಲ್ಲೆಲ್ಲಾ ಚೆನ್ನಾಗಿ ಸಂಗ್ರಹಿತವಾದ ಮತ್ತು ವಿಶ್ವಾಸಪೂರಿತವಾದ ಔಷಧಿ ಅಂಗಡಿ

Also at :

೨೦ ಆರ್ಕಾಟ್ ಶ್ರೀನಿವಾಸಾಚಾರ್ ಬೀದಿ,

26-26 ಬೆಂಗಳೂರು ೨.

RAGHULAL & CO., CHEMISTS.

MYSORE.

ದಿ ರಿಪಬ್ಲಿಕ್

ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

ಮ್ಯಾನೇಜಿಂಗ್ ಡೈರೆಕ್ಟರ್:— ಲಾಲಾ ಶಂಕರ್ ಲಾಲ.

ಮುಖ್ಯ ಕಚೇರಿ:— ಹೊಸ ಡೆಲ್ಲಿ.

ಸ್ಥಾಪಿಸಿದ ಡೈರೆಕ್ಟರರು:

ಪಂಡಿತ ಗೋವಿಂದಲಾಲ್ ಶಿವರು.	ಎಸ. ಶ್ರೀನಿವಾಸ ಅಯ್ಯಂಗಾರ್
ಬ್ಯಾರಿಸ್ಟರ್ ಜಮಾಲಖಾನ್.	ಡಾ|| ಎಮ್. ಎ. ಅನ್ಸಾರಿ

Transacts—Life, Fire, Motor and Marine.

ಎಂ. ರಾಮ ಅಪ್ಪಯ್ಯ,	ಎಂ. ಎ. ಬೆಳ್ಯಪ್ಪ,
ಡಿಸ್ಟ್ರಿಕ್ಟ್ ಸೂಪರಿಂಟೆಂಡೆಂಟ್,	[illegible]
ಮಡಿಕೇರಿ, ಕೊಡಗು.	ಹಂಪನಕಟ್ಟೆ, ಮಂಗಳೂರು.

ಶ್ರೀ ಬಿ. ಡಿ. ಗಣಪತಿಯವರ

'ಪತ್ರಾವಳಿ'-ಒಂದು ವಿಮರ್ಶೆ.

(ವಿಮರ್ಶಕರು ಕೊಡಗಿನ ನಿವೃತ್ತ ವಿದ್ಯಾಧಿಕಾರಿಗಳಾದ ಶ್ರೀ ಸಿ. ಎಂ. ದಾಮೋದರರು)

(''ಪತ್ರಾವಳಿ'') ಲೇಖಕರು:- ಶ್ರೀ ಬಿ. ಡಿ. ಗಣಪತಿ. ೧೩೬ ಪುಟಗಳು. ದೊರೆಯುವ ಸ್ಥಳ:—'ಕೊಡಗು' ಪ್ರೆಸ್, ಮಡಿಕೇರಿ)

''ಪತ್ರಾವಳಿ''ಯು ಕನ್ನಡ ಸಾಹಿತ್ಯದಲ್ಲಿ ಒಂದು ಹೊಸ ತರಹದ ಬರಹ. ಹೆಸರಿಗೆ ತಕ್ಕಂತೆ ಪತ್ರಗಳ ಗುಂಪು. ಇದರಲ್ಲಿ ೩೨ ಪತ್ರಗಳಿವೆ. ಈ ಪತ್ರಗಳು ಪ್ರೇಯ ಪ್ರೇಯಸಿಯರು ತಮ್ಮೊಳಗೆ ಬರೆದುಕೊಂಡವು. ಈ ಪತ್ರಗಳಲ್ಲಿ ಪ್ರಣಯಿಗಳಿಬ್ಬರು ಮಾನಸಿ ಮತ್ತು ಗಣೇಶರು ತಮ್ಮ ಪರಸ್ಪರ ಪ್ರೇಮವನ್ನು ಪ್ರಕಟಿಸುವುದರ ಜತೆಗೆ ಲೋಕದ ಅನೇಕ ಪ್ರಚಲಿತ ವಿಷಯಗಳನ್ನು ಚರ್ಚಿಸಿ ಅವುಗಳ ಗುಣದೋಷಗಳನ್ನು ವಿಮರ್ಶಿಸುವ ಹಾಗೆ ಅನೇಕ ಗಹನ ವಿಚಾರವನ್ನು ಒಳಗೊಂಡಿವೆ. ಅವುಗಳಲ್ಲಿ ನಾವು ತೆಗೆದುಕೊಳ್ಳುವ ಆಹಾರದ ಗುಣನಿರ್ಣಯ, ತೀರ್ಥಯಾತ್ರೆಗಳ ಫಲ, ಈಗಿನ ವಿದ್ಯಾರ್ಥಿಗಳ ಬೇಜವಾಬ್ದಾರಿ ಜೀವನ, ಶಿಶುಗಳ ಅಭಿವೃದ್ಧಿ. ಈಗಿನ ಯುವಕ ಯುವತಿಯರ ಆಡಂಬರದ ಜೀವನ ಮುಂತಾದ ವಿಷಯಗಳು ಬಹಳ ಸಮಂಜಸವಾಗಿ ವಿಮರ್ಶಿಸಲ್ಪಟ್ಟಿವೆ. ಮಾನಸಿಯು ಗಣೇಶನಿಗೆ ಬರೆಯುವ ಪತ್ರಗಳಲ್ಲಿಯೂ ಗಣೇಶನು ಮಾನಸಿಗೆ ಬರೆಯುವ ಪತ್ರಗಳಲ್ಲಿ ಒಬ್ಬರು ಒಂದು ವಿಷಯವನ್ನು ಎತ್ತಿ ಒಂದು ದೃಷ್ಟಿಯಿಂದ ಅದನ್ನು ವಿಮರ್ಶಿಸುವುದು ಇನ್ನೊಬ್ಬರು ಆ ವಿಷಯವನ್ನು ಇನ್ನೊಂದು ದೃಷ್ಟಿಯಿಂದ ವಿವರಿಸುವುದು ಹೀಗೆ ಈ ಪತ್ರಗಳಲ್ಲಿ ಅನೇಕ ಗಹನ ವಿಚಾರಗಳ ವಿಮರ್ಶೆಗಳು ನಡೆದಿವೆ. ಈ ಪತ್ರಗಳಲ್ಲಿ ಗಣೇಶನು ಇರುವ ತನ್ನ ಜೈಲಿನ ಅನುಭವಗಳು ಮನೋರಂಜಕವಾಗಿಯೂ, ವಿಚಾರ ಪರಿಪೂರ್ಣವಾಗಿಯೂ ಇವೆ. ಭಾರತದ ಸ್ವಾತಂತ್ರ್ಯಕ್ಕಾಗಿ ಹೋರಾಡುವಾಗ ಜನ ಸ್ವತಂತ್ರ ಪಡೆದ ದೇಶಭಕ್ತರ ಬಲ ಹೇಗೆ ಬದಲಾವಣೆಯನ್ನು ಹೊಂದುತ್ತಿದೆ; ಸ್ವಾರ್ಥಸಾಧಕರೂ ಸಂಕುಚಿತ ಮನೋಭಾವನೆಯುಳ್ಳವರೂ ದೇಶಸೇವಕರ ಸೋಗಿನಲ್ಲಿ ಹ್ಯಾಗೆ ಕೆಟ್ಟ ದುರುದ್ದೇಶಗಳನ್ನು ಸಾಧಿಸಲು ಪ್ರಯತ್ನಿಸುವರು ಎಂಬುದರ ಸೂಚನೆಗಳು, ನಿರಪರಾಧಿಗಳು ಕೆಲವು ವೇಳೆ ತಪ್ಪಿಗೆ ಗುರಿಯಾಗಿ ಜೈಲುವಾಸವನ್ನನುಭವಿಸುವುದು ಇವೇ ಮೊದಲಾದವು ಹೃದ್ಯವಾಗುವಂತೆ ಚಿತ್ರಿತವಾಗಿವೆ. ಒಟ್ಟಿನಲ್ಲಿ ಪ್ರೇಯ ಪ್ರೇಯಸಿಯರು ತಮ್ಮ ಪರಸ್ಪರ ಪ್ರೇಮವನ್ನು ಪತ್ರ ಮುಖೇನ ತಿಳಿಯಪಡಿಸುವುದರ ಜತೆಗೆ ಸಾಧಾರಣ ಮನಸ್ಸಿಗೆ ಹೊಳೆಯದ ತತ್ವವಿಚಾರದಿಂದ ಸಾಮಾನ್ಯವಾದ ಅರಿಗೆ ವಿಚಾರದ ಪರಿಣತಿ, ಈಗಿನ ಜನರಿಗೆ ತಪ್ಪಿದ ಸ್ವೇಚ್ಛಾ ವರ್ತನೆಯು ವಿದ್ಯಾರ್ಥಿ ಜೀವನದಿಂದ ಅಧಿಕಾರ ವರ್ಗದವರವರೆಗೆ ಸೇರಿರುವ ಬಗ್ಗೆ ಎಲ್ಲಾ ವಿಚಾರಗಳು ಚರ್ಚಿಸಲ್ಪಟ್ಟಿವೆ.

ಈ ಪತ್ರಗಳು ಕೆಲವು ಮಟ್ಟಿಗೆ ಲೇಖಕರ ಆತ್ಮವೃತ್ತಾಂತವನ್ನು ಹಿಡಿದಿರುವಂತೆ ಇರುತ್ತವೆಂದು ಹೇಳಬಹುದು. ಆದುದರಿಂದ ಈ ಪತ್ರಗಳ ವಾಚನದಿಂದ ಓದುಗರು ಅನೇಕ ಉತ್ತಮ ವಿಷಯಗಳನ್ನು ತಿಳಿಯಬಹುದಾಗಿದೆ.

ಆದರೆ ಈ ಕೃತಿಯಲ್ಲಿ ಸ್ವಲ್ಪ ದೋಷವಿಲ್ಲದೇ ಇಲ್ಲ. ಈ ಪತ್ರಗಳ ಇಬ್ಬರು ಪ್ರಣಯಿಗಳು,—ಒಬ್ಬಳು ಕಾಲೇಜಿನ ವಿದ್ಯಾರ್ಥಿನಿ, ಇನ್ನೊಬ್ಬನು ಸ್ವತಂತ್ರವಾದ ಜೀವನವನ್ನು ಮಾಡುವ ಸಜ್ಜನನಾದ ಯುವಕ,—ಇವರೊಳಗೆ ನಡೆಯುವಂತಹ ಪತ್ರಗಳು. ಈ ಪತ್ರಗಳಲ್ಲಿ ತೋರಿಬರುವಂತೆ ಈ ಪತ್ರಗಳು ವಿದ್ಯಾರ್ಥಿನಿಯ ತಂದೆ ತಾಯಿಗಳಿಗೆ ತಿಳಿಯದೆ ರಹಸ್ಯವಾಗಿ ಬರೆಯಲ್ಪಡುವವು. ಹೀಗೆ ಒಬ್ಬ ಯುವತಿಯು ತನ್ನ ತಂದೆ ತಾಯಿಗಳಿಗೆ ತಿಳಿಯದಂತೆ ಒಬ್ಬ ಯುವಕನಲ್ಲಿ ತನ್ನ ಪ್ರೇಮವನ್ನು ಬೆಳೆಸುವುದು; ಆ ಯುವಕನು ಎಷ್ಟೇ ಸಜ್ಜನನಿರಲಿ ಅದು ಯುವತಿಗೆ ತಕ್ಕದ್ದೇ? ಆ ಯುವಕನು ಅಂಥಾ ರಹಸ್ಯ ಪ್ರೇಮವನ್ನು ಉದ್ರೇಕಿಸುವುದು ಯುಕ್ತವೇ ಎಂಬ ಪ್ರಶ್ನೆಯು ನಮ್ಮ ಮುಂದೆ ತಲೆದೋರುತ್ತದೆ. ಎಂಥಾ ಸುಶಿಕ್ಷಿತ ಸುಧಾರಿಸಿದ ಸಮಾಜದಲ್ಲಿಯೂ ಇಂಥಾ ಪ್ರೇಮವು ವ್ಯಕ್ತಿ ಸಂಬಂಧವಾಗಿ ಎಷ್ಟೇ ಶುದ್ಧವಿದ್ದರೂ ಸಮಾಜದ ದೃಷ್ಟಿಯಲ್ಲಿ, ನೈತಿಕ ದೃಷ್ಟಿಯಲ್ಲಿ ನಿಂದಾಸ್ಪದವೇ ಸರಿ. ಇಂಥಾ ಪ್ರೇಮವು ಈ ಪತ್ರಗಳಿಂದ ತಿಳಿದುಬರುವಂತೆ ಸಾವಿರಾರು ಒಂದೂವರೆ ವರ್ಷಗಳಿಗೆ ಮೀರಿ ಬೆಳೆದಿರುತ್ತದೆ. ಒಂದು ವೇಳೆ ಯುವತಿಯ ಮಾತಾಪಿತೃಗಳು ಈ ಪ್ರೇಮಕ್ಕೆ ವಿರೋಧ ಒಡ್ಡಿದ್ದರೆ ಯುವತಿಯ ಮುಂದಿನ ಜೀವನವು ಹ್ಯಾಗಾಗಬೇಕಿದ್ದಿತು; ಪತ್ರಗಳಲ್ಲಿ ನಮೂದಿಸಿದಂತೆ ಈ ಪ್ರಣಯಿಗಳು ಪತ್ರಗಳನ್ನು ಪರಸ್ಪರ ಬರೆದಿರುವುದು ಗುರುಹಿರಿಯರಿಗೆ ತಿಳಿದಿದೆ. ಅವರು ಆ ವಿಷಯ ಸಿಸಿಸಿಸಿ ಮಾತನಾಡುತ್ತಿದ್ದರೆ. ಹೀಗಿರುವಲ್ಲಿ ಯುವತಿಯ ತಂದೆ ತಾಯಿಗಳಿಗೆ ತಿಳಿಯದೆ ಈ ರೀತಿ ಪ್ರೇಮವನ್ನು ಸೂಚಿಸಿ ಪತ್ರ ಬರೆಯುವ ಕ್ರಮ ಸರಿಯಾಗಿಲ್ಲವೆಂದು ನಮ್ಮ ಭಾವನೆ. ಯುವತಿಯು ತಂದೆತಾಯಿಗಳ ಒಪ್ಪಿಗೆ ಪಡೆದು ಯುವತಿಯ ಮನಸ್ಸು ತನ್ನ ಕಡೆಗೊಲಿದಿದೆ ಎಂಬ ಅರಿವು ಮನೋಗತವನ್ನು ತಿಳಿದು ಅನಂತರ ಆ ಸರಣಿಯಲ್ಲಿ ಈ ಪತ್ರಗಳು ಒಂದಿದ್ದರೆ ಅವು ನಿರ್ದೋಷವಾಗಿರುತ್ತಿದ್ದುವು ಎಂದು ನಮ್ಮ ಭಾವನೆ. ಆಗ ಈ ಪತ್ರಗಳು ಪ್ರೇಯ ಪ್ರೇಯಸಿಯರು ತಮ್ಮ ಮುಂದಿನ ದಾಂಪತ್ಯ ಜೀವನಕ್ಕಾಗಿ ತಾವು ಒಬ್ಬರು ಇನ್ನೊಬ್ಬರ ಸ್ವಭಾವವನ್ನು ತಿಳಿದುಕೊಳ್ಳುವುದಕ್ಕೂ ತಮ್ಮ ಜ್ಞಾನಾಭಿವೃದ್ಧಿಗೂ ಸಹಾಯವಾಗುವಂತಿದ್ದವು.

ಎರಡನೇ ಸಾಮಾನ್ಯವಾಗಿ ಪ್ರತಿಯೊಂದು ಪತ್ರದಲ್ಲೂ ಪದ್ಯದ ತುಂಡುಗಳು ತುಂಬಿ ಕೊಂಡಿವೆ. ಇವು ಓದುಗರ ಮನಸ್ಸಿಗೆ ಸ್ವಲ್ಪ ಅಸಹ್ಯವನ್ನುಂಟು ಮಾಡುತ್ತಿವೆ. ಉದಾಹರಣೆಗೆ ನಿನ್ನ ಜ್ಞಾನವು ಅಗಾಧವಾದುದು. ನಿನ್ನ ಪತ್ರಗಳು ಒಮ್ಮೊಮ್ಮೆ ನನ್ನನ್ನು ನಮ್ರತೆಯಿಂದ ತಲೆತಗ್ಗಿಸುವಂತೆ ಮಾಡುತ್ತವೆ. ನಿನ್ನ ಪತ್ರದ ಪ್ರಥಮ ವಾಕ್ಯಗುಚ್ಛವನ್ನು ಓದಿದಾಗ ನಾಚಿಕೆಯಿಂದ ಹೊಳಕಾಂತಿ ಪಡೆದ ನಿನ್ನ ಗುಲಾಬಿ ಮುಖದ ದರ್ಶನವಾದಂತಾಯಿತು.''

ಈ 'ಪತ್ರಾವಳಿ'ಯ ಭಾಷೆಯು ಶುದ್ಧವಾಗಿದೆ, ಶೈಲಿಯು ಸುಂದರವಾಗಿದೆ, ಪದಗಳು ಸುಲಲಿತವಾಗಿವೆ. ಆದರೂ ಕೆಲವೆಡೆ 'ಶಬ್ದಕೋಶಗಳ ಮರುಭೂಮಿ' 'ಪುಸ್ತಕಗಳ ಗೊಂಡಾರಣ್ಯ' ಗಳೆಂಬ ಹೋಲಿಕೆಗಳು ಸಮಂಜಸವಲ್ಲ. ಶಬ್ದಕೋಶಗಳ ಖನಿ, ಪುಸ್ತಕಗಳ ಉದ್ಯಾನವನ ಎಂದು ಬರೆದಿದ್ದರೆ ಅವರು ಬರೆದ ವಿಷಯಗಳಿಗೆ ಇನ್ನೂ ಕಳೆಕಟ್ಟುತ್ತಿತ್ತು.

ಲೇಖಕರು 'ಏಕಂ ಸದ್ವಿಪ್ರಾ ಬಹುಧಾವದಂತಿ' ಎಂಬ ಸಂಸ್ಕೃತ ನುಡಿಯ ಅರ್ಥವನ್ನು ಮಾಡಿಕೊಂಡಿರುವಂತೆ ತೋರುವುದಿಲ್ಲ. ಅವರ ಅಭಿಪ್ರಾಯದಲ್ಲಿ ಲೋಕದ ಜನರಲ್ಲಿ ಜಾತಿ ಮತಗಳು, ಮೇಲು ಕೀಳು ಎನ್ನುವ ಭಾವನೆ ಇರಬಾರದು ಎಂದು ಅರ್ಥ ಮಾಡಿದಂತೆ ತೋರುತ್ತದೆ. ಆದರೆ ವಾಸ್ತವವಾಗಿ ಈ ಮೂಲ 'ಏಕಂ ಸತ್ ವಿಪ್ರಾ ಬಹುಧಾ ವದಂತಿ' ಎಂದಿರಬೇಕು. ಅದರ ಅರ್ಥವು ದೇವರು ಒಬ್ಬನೇ ಆದರೆ ಶಾಸ್ತ್ರ ಕಲಿತವರು ಅನೇಕ ಹೆಸರುಗಳಿಂದ ಕರೆಯುತ್ತಾರೆ ಎಂದು.

ಕೊನೆಯಲ್ಲಿ ಹೇಳುವುದಾದರೆ ಈ ಪುಸ್ತಕದಲ್ಲಿರುವ ಪತ್ರಗಳು ಅನೇಕ ಯೋಗ್ಯ ವಿಷಯಗಳನ್ನೊಳಗೊಂಡಿವೆ. ಆ ವಿಷಯಗಳನ್ನು ಬೋಧಪ್ರದವಾಗಿ ಚರ್ಚಿಸಿದೆ. ಈ 'ಪತ್ರಾವಳಿ'ಯ ವಾಚನದಿಂದ ಓದುಗರ ಜ್ಞಾನ ಭಂಡಾರವು ವೃದ್ಧಿಯಾಗುವುದರಲ್ಲಿ ಸಂಶಯವಿಲ್ಲ.

ಕೊಡಗು ಪ್ರಾಂತೀಯ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಕೋ-ಆಪರೇಟಿವ್ ಸೊಸೈಟಿಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ. (1921ರಲ್ಲಿ ಸ್ಥಾಪಿತವಾಯಿತು.)

ಅಧಿಕೃತ ಶೇರು ಭಂಡವಾಳ	ರೂ.	10,00,000
ವಸೂಲಾದ ಶೇರು ಮೊಬಲಗು	ರೂ.	1,70.000.
ರಿಸರ್ವ್ ಫಂಡ್	ರೂ.	63,000.
ಇತರ ನಿಧಿಗಳು	ರೂ.	28.000

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನೂ ಕೈಕೊಳ್ಳಲಾಗುವುದು

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರಿ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ, ಬೆಳ್ಳಿ ನಗಗಳ ಆಧಾರದ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ ಯಾ ಡ್ರಾಫ್ಟ್‌ಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರೆಸರಿ ಮತ್ತು ನಾರ್ಮಲ್ ಇನ್ಶೂರೆನ್ಸ್ ಕಂಪನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಗೌ. ಕಾರ್ಯದರ್ಶಿ. ಕೆ. ಸಿ. ಅಪ್ಪಯ್ಯ, M. L. C. ಪ್ರೆಸಿಡೆಂಟ್ ಬೋರ್ಡ್ ಮೆಂಬರ್.

CRESCENT

FOR PROTECTION AND SERVICE.

It is best to represent and insure with

The CRESCENT Insurance Co., Ltd.,

H. O: BOMBAY.] [Established 1919.

For particulars write to:-

Sri B. A. Pooviah or **The Branch Manager,**
Organiser *133 B. Brigade Road,*
Pollibetta, Coorg. *Bangalore 1.*

ಸುರಕ್ಷಿತವಾದ ಜೀವವಿಮೆ ಪಡೆಯಲು

ಕ್ರೆಸೆಂಟ್

ಇನ್ಶೂರೆನ್ಸ್ ಕಂಪೆನಿಗೆ ಬರೆಯಿರಿ.

Edited, Printed and Published by P. I. Belliappa at 'Kodagu' Press, Mercara, for 'Kodagu' Ltd.

Reg. No. M. 1880.
'KODAGU' MERCARA, (Coorg).

ಕೊಡಗು

ಸಂಪಾದಕರು—ಬಿ. ಡಿ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. 5-0-0.

ಸಂಪುಟ ೨೯ | ತಾರೀಖು ೧೬-೩-೧೯೫೧ನೇ ಶುಕ್ರವಾರ | ಸಂಚಿಕೆ ೩೯

ಗಾಂಧಿ ಟೊಪ್ಪಿಯ ಕೆಳಗೆ!

ಲೇ:—ಶ್ರೀ ಬಿ. ಡಿ. ಗಣಪತಿ, ಮಡಿಕೇರಿ.

ಗಾಂಧಿ ಟೊಪ್ಪಿಯ ಕೆಳಗೆ ಏನಿದೆಯೆಂದು ಸ್ಪಷ್ಟ ಹೇಳಲು ಬರುವದಿಲ್ಲ. ಅಲ್ಲಿ ಮಹಾ ಚಮತ್ಕಾರಿಕ ವಿಚಾರಗಳೂ ಇವೆ. ಹೃದಯವಿದ್ರಾವಕ ವರ್ತನೆಗಳೂ ಇವೆ. ಬೀಭತ್ಸ ರಹಸ್ಯ ದಮನೀಯತೆಯೂ ಇದೆ. ಪರಸ್ಪರ ವಿರೋಧದ ತತ್ವಾವಳಿಗಳೂ, ಅಭಿಲಾಷೆಗಳೂ ಇವೆ. ಗಾಂಧಿಟೊಪ್ಪಿಯ ಕೆಳಗೆ ಮೊದಲಿದೆಯೆಂದಾದರೆ ಭಾವನೆ ಇರಲಿಕ್ಕಿಲ್ಲ. ಸಾಮೂಹಿಕ ಹಿತ ಭಾವನೆ ಇದ್ದರೆ ತೀಕ್ಷ್ಣಮತಿ ಇರಲಾರದು. ಇವೆರಡೂ ಇದ್ದಲ್ಲಿ ಕಾರ್ಯ ತತ್ಪರತೆ ಇರದು. ಭಾವನೆ, ತೀಕ್ಷ್ಣಮತಿ, ವ್ಯಕ್ತಿತ್ವಗಳಿದ್ದರೂ, ಕಾರ್ಯ ಸಾಧಿಸುವ ನಿಷ್ಠೆ ಇರಲಾರದು. ಈ ರೀತಿ ಗಾಂಧಿ ಟೊಪ್ಪಿಯೊಳಗಲ್ಲಿ ಪರಸ್ಪರ ವಿರುದ್ಧದ ಅಭಿಪ್ರಾಯಗಳ ಹೋರಾಟವೂ, ಪರಸ್ಪರ ವಿರೋಧಕ ಶಕ್ತಿಗಳ ತಿಕ್ಕಾಟವೂ ನಡೆದಿದೆ. ಗಾಂಧಿ ಟೊಪ್ಪಿ ಇಂದು ಕಿರೀಟಪ್ರಾಯವಾಗಿ ತೋರಿದರೂ ಅವರಣದಲ್ಲಿ ಅಂತ್ಯವಿಲ್ಲದ ಮಹಾ ಶರಧಿಯೇ ಇದೆ. ಈ ಶರಧಿಯಲ್ಲಿ ಮುತ್ತುರತ್ನಗಳು ಕೆಲವಾದರೆ, ಮೊಸಳೆ, ತಿಮಿಂಗಿಲ ಮೊದಲಾದ ಹಿಂಸ ಜಾತಿಗಳೇ ಹೇರಳ! ಹೌದು, ಈ ಖಾದಿ ಟೊಪ್ಪಿಯು ಭಾರತದ ರತ್ನ ಸಿಂಹಾಸನದಲ್ಲಿ ಕುಳಿತಿದೆ. ಪವಿತ್ರವೆಂದು ಭಾವಿಸಲಾಗಿದ್ದ ಈ ಟೊಪ್ಪಿಯ ಅಡಿಯಲ್ಲಿ ಮರೆಯಾಗಿದ್ದ ಭಯಂಕರ ಪ್ರವೃತ್ತಿಯ ಪರಿಚಯ ಭಾರತೀಯರಿಗಾಗುತ್ತಿದೆ. ಆದ್ದರಿಂದಲೇ 'ಗಾಂಧಿ ಟೊಪ್ಪಿಯ ಆಶ್ರಯದಲ್ಲಿ ಭಾರತವು ಎತ್ತ?' ಎಂಬ ಪ್ರಶ್ನೆಯಾಗಿದೆ.

ಹೃದಯವು ಪೂರ್ಣ ರಕ್ತ ನಿಸ್ತಬ್ಧವಾಗಿದ್ದರೆ ಹೃದಯ ಪರೀಕ್ಷೆ ಅಸಾಧ್ಯ. ಆದ್ದರಿಂದ ಹೃದಯ ಪರೀಕ್ಷೆಯೂ ಅಂತರ್ನಿರೀಕ್ಷೆ ಮಾಡಿಕೊಳ್ಳಲು ಹೃದಯವು ಕೆಲಸ ಮಾಡುತ್ತಿರಬೇಕು. ಅದರಂತೆಯೇ ಬಿಳಿಟೊಪ್ಪಿಯು ಜಡಿಯಲ್ಲದಿರುವ ಮಹಾಶರಧಿ ಕಾಂಗ್ರೆಸಿನ ಅಂತರ್ಯ ನಿರೀಕ್ಷೆ ಮಾಡಿಕೊಳ್ಳಲು ಇದೀಗ ಸುಸಮಯ! ಸಂಸ್ಥೆಯು ಸತ್ತು ಸಮಾಧಿ ಸೇರಿದ ನಂತರದ ಪ್ರಯತ್ನ ನಿಷ್ಫಲವಾದುದು. ಆದ್ದರಿಂದಲೇ ಇಂದು ಬಿಳಿಟೊಪ್ಪಿ ಧರಿಸಿದವರು ಸೇರಿದ ಸಭೆ, ಸಮ್ಮೇಳನಗಳಲ್ಲಿ ಸಂಸ್ಥೆಯ ಪತನದ ವಿಚಾರ ಮಾತಾಡುತ್ತಾರೆ. ಈ ವಿಚಾರವನ್ನು ಆಲೋಚಿಸಿ ತಲೆ ಕೆರೆದುಕೊಳ್ಳುತ್ತಾರೆ. ಆದರೂ ಪ್ರಶ್ನೆ ಬಗೆಹರಿದಿಲ್ಲ. 'ಖಾದಿ ಟೊಪ್ಪಿ ಎತ್ತ? ಭಾರತವು ಎತ್ತ?' ಎಂಬ ಪ್ರಶ್ನೆಗಳು ನಾಲ್ದೆಸೆಗಳಿಂದಲೂ ಕೇಳಬರುತ್ತಿವೆ.

'ಭಾರತವು ಎತ್ತ?' ಎಂಬ ಪ್ರಶ್ನೆಗೆ ಪ್ರಚಂಡವೇಗದಿಂದ ಸಾಗುತ್ತಿರುವ ಕಾಲ ವಾಹಿನಿಯೇ ಉತ್ತರ ಕೊಡಬಲ್ಲುದು. 'ಕಾಂಗ್ರೆಸು ಎತ್ತ?' ಎಂಬುದನ್ನು ಖಾದಿ ಟೊಪ್ಪಿ ಧರಿಸುವವರೇ ತಮ್ಮೊಳಗೆ ನಿರ್ಣಯಿಸಿಕೊಳ್ಳಬೇಕು. ಸಕಾಲದಲ್ಲಿ ಗಾಂಧಿ ಟೊಪ್ಪಿಯು ಎಚ್ಚರಗೊಳ್ಳದೆ ಚೈನಾದ ಚಿಯಾಂಗ್ ಕೈಶೇಕರ ಕಮ್ಯುಮಿಂಟಾಂಗ್ ಪಕ್ಷದ ದಾರಿ ಹಿಡಿಯುವದಾದರೆ ಅದು ಆಧುನಿಕ ಯುಗದ ಮಹಾ ದುರಂತಗಳಲ್ಲೊಂದಾಗುವದು. ಶ್ರೀ ಕೃಷ್ಣ ಮೊದಲಾದ ವಿಭೂತಿ ಪುರುಷರ ಚಿತ್ರಗಳಲ್ಲಿ ನೋಡುವ ಸಬಾದ ತಲೆಯ ಸುತ್ತಲಿನ ತೇಜ ಚಕ್ರದಂತೆ ಬಿಳಿ ಟೊಪ್ಪಿಯ ಸುತ್ತು ವಿಮಲ ತೇಜಸ್ಸೊಂದು ಒಮ್ಮೆ ಬೆಳಗುತ್ತಿತ್ತು. ಶತಮಾನಗಳ ತ್ಯಾಗ, ಪರಿಶ್ರಮ, ಬಲಿದಾನಗಳಿಂದ ಅರಳಿ ಬೆಳಗಿದ ಆ ತೇಜಸ್ಸಿನ ಪವಿತ್ರ ಬೆಳಕಿನಲ್ಲಿ ನಮ್ಮ ಸ್ವಾತಂತ್ರ್ಯವನ್ನು ನಾವು ಕಂಡೆವು. ಚರಿತ್ರೆಯ ಮುನ್ನಡೆಯಲ್ಲಿ ಆ ತೇಜವು ಮಲಿನವಾಗಿ ದುರಿಗೆ ಕಗ್ಗತ್ತಲು ಕವಿದರೆ ಯಾರಿಗೆ ದುಃಖವಾಗದು?

ಪಕ್ಷಗಳು ಏಳುತ್ತವೆ, ಬೀಳುತ್ತವೆ. ಅದು ಪ್ರಜಾಪ್ರಭುತ್ವದ ಧರ್ಮ. ಗಾಂಧೀ ಟೊಪ್ಪಿಯೇ ಶಾಶ್ವತವಲ್ಲ. ನಾಳೆ ಕರಿ ಟೊಪ್ಪಿ, ಕೆಂಪು ಟೊಪ್ಪಿಗಳು ಒದಗಲೂಬಹುದು. ಆದರೆ ಪಕ್ಷಸಾಮ್ಯವಾದ ವಿಚಾರ ಬಿಳಿಟೊಪ್ಪಿ ಬಿತ್ತಿಂಬುವಲ್ಲ; ಬದಲು ಅದು ಹೇಗೆ ಬಿದ್ದಿತೆಂಬುದು! ಚಿಗುರಿದ ಕೋಟಿ ಹಳಕತ್ತರಿಸಿ ಬೀಳುವದ ಕಷ್ಟ, ನಮಸ್ಸಾಗಿ ಒಣಗಿ ಸಾಯುವದ ಕಷ್ಟ ವ್ಯತ್ಯಾಸವಿಲ್ಲವೇ? ಅದರಂತೆ ಆ ಖಂಡ ತೇಜದಿಂದ ಬೆಳಗಿದ, ಮಹಾತ್ಮ ರಂಥಾ ಹುತಾತ್ಮರ ಆತ್ಮತ್ಯಾಗದಿಂದ ಪಾವನಗೊಂಡ ಗಾಂಧಿ ಟೊಪ್ಪಿಯು, ಆತ್ಮ ವಂಚನೆಯಿಂದ, ಬಾಯಲ್ಲಿ ಗಾಂಧಿಯ ಹೆಸರಿದ್ದರೂ ದ್ರೋಹಾತ್ಮಕ ವರ್ತನೆಯಿಂದ, ಭರತಖಂಡದ ಅಹಿತ ಮಾಡಿದ ಜಡವಾದದಿಂದ ಕಲಂಕಿತವಾಗಿ ಕೆಳಗುರುಳಿದರೆ ದುಃಖಪಡಬೇಕಾಗುವದು.

ಆದ್ದರಿಂದಲೇ ಖಾದಿ ಟೊಪ್ಪಿಯ ಪವಿತ್ರತೆಯನ್ನು ಹಿಂದೆ ಮೆಚ್ಚಿದವರು ಇಂದಿನ ಅದರ ವಾಮಮಾರ್ಗ ಗ್ರಹಣವನ್ನು ಕಂಡು ವಿಷಾದಿಸಬೇಕಾಗಿದೆ. ಅಹಮ್ಮದಾಬಾದಿನಲ್ಲಿ ಜನರೆಲ್ಲಾಗಿಯೇ, ಈ ರೋಗದ ಚಿಕಿತ್ಸೆಗಾಗಿಯೇ ಸಮ್ಮೇಳನ ನಡೆದು ಆತ್ಮನಿರೀಕ್ಷೆಯಾಯಿತು. ಪ್ರತಿಯೊಬ್ಬರೂ ಖಾದಿ ಟೊಪ್ಪಿಗೆ ಹಿಡಿದ ರೋಗಕ್ಕೆ ವಿವಿಧ ಔಷಧಿಗಳನ್ನು ಸೂಚಿಸಿದರು. ನೆಹರೂರವರು ಟೊಪ್ಪಿಯೊಳಗೆ ಐಕ್ಯ ಬೇಕೆಂದರು. ಶಂಕರರಾವ್ ಶಿಸ್ತು ಬೇಕೆಂದರು. ಸಂಪೂರ್ಣಾನಂದರು ಧ್ಯೇಯ ಬೇಕೆಂದರು. ಆಚಾರಿಯವರು ಸಾಮಾಜಿಕ ಹಿತಭಾವನೆ ಬೇಕೆಂದರು. ಅಧ್ಯಕ್ಷರು ಐಕ್ಯತೆ ಬೇಕೆಂದರು. ಕೃಪಲಾನಿಯವರು ಬಿಳಿಟೊಪ್ಪಿ ಇರುವವರು ಟೊಪ್ಪಿ ಇಲ್ಲದ ಬರಿ ತಲೆಗಳನ್ನು ಸಮಾನತೆಯಿಂದ ನೋಡಬೇಕೆಂದರು. ಕಡೆಗೆ ಕಾಂಗ್ರೆಸ್ ವರ್ಕಿಂಗು ಕಮಿಟಿಯು ಎಲ್ಲರನ್ನೂ ಸಮಾಧಾನ ಗೊಳಿಸಿತು!

ಭಾರತ ರಾಜಕಾರಣದಲ್ಲಿ ದೊಡ್ಡವರೆನಿಸಿದ ಬಿಳಿ ಟೊಪ್ಪಿ ಧಾರಿಗಳು ಸುಂದರ ಶೈಲಿಯಲ್ಲಿ, ವಿವಿಧ ಭಾವನೆಗಳನ್ನು ದೇಶೀಯರ ಮುಂದಿಡಲು ಎಂದೂ ಮರೆತಿಲ್ಲ. ಸಂದರ್ಭ ದೊರೆತಾಗಲೆಲ್ಲ ಪಾಠದ ಮಳೆಯನ್ನು ನಿರಂತರವಾಗಿ ಸುರಿಸಿದ್ದಾರೆ. ಉತ್ತುಂಗ ಭಾವನೆಯಲ್ಲಿ ಆಕಾಶದಲ್ಲಿ ವಿಹರಿಸುವ ಈ ಜನರ ಮಾತು ಕೃತಿಯಾಗಿ ಭೂಮಿಗಿಳಿಯದು. ನಮ್ಮ ದುರ್ದೈವ, ಭಾರತೀಯರಾದ ನಾವು ಭಾವುಕ ಜನರು ಹೇಗೋ ಹಾಗೆಯೇ ಧಾರ್ಮಿಕರು. ಬಡತನ, ಕಷ್ಟ ನಿಷ್ಠುರಗಳಲ್ಲಿ ತ್ಯಾಗ, ಘನತೆಗಳನ್ನು ಕಾಣಬೇಕೆಂದೇ ನಮ್ಮ ನಡೆ. ಆದ್ದರಿಂದಲೇ ಇಂದೂ ಕಂಡ ಪುರುಷೋತ್ತಮದಾಸರ ಸದಿಮನೆ ೪೦''×೩೫' ಅಡ್ಡಗಲದ ಕೋಣೆಯಲ್ಲಿ ಇಂದೂ ೮೦ ನಿರಾಶ್ರಿತ ಜನರು ಜೀವಿಸುತ್ತಿದ್ದಾರೆ. ದಿನದಿನಕ್ಕೆ ರೇಶನ್ ಮೋಸೆಯಾಗಿ ಬರುತ್ತಿರುವದೇ ಸಮಸ್ಯೆಯಾಗಿದೆ. ಜೀವನಾವಶ್ಯಕ ವಸ್ತುಗಳ ಬೆಲೆ ಏರಿ ಜೀವನವು ಮುಳ್ಳಿನ ಹಾಸಿಗೆಯಾಗಿದೆ. ಬಿಳಿ ಟೊಪ್ಪಿ ಧಾರಿಗಳಲ್ಲಿ ಅಧಿಕಾರ ಹಿಡಿದವರು ತಪ್ಪು ಸಂತೆ ಮಾಡುವವರನ್ನು ಗಲ್ಲಿಗೆ ಏರಿಸಿ ತೂಗಲಾಗುವದೆಂದಿದ್ದರು. ಲಂಚ ರುಸುವತ್ತುಗಳಿಗೆ ಕೈನೀಡುವವರನ್ನು ದೀಪಸ್ತಂಭಕ್ಕೆ ತೂಗು ಹಾಕಲಾಗುವದೆಂದಿದ್ದರು. ಆದರೆ ಬಿಳಿ ಟೊಪ್ಪಿಯ ನಾಲ್ಕು ವರ್ಷಗಳ ಆಡಳಿತೆಯಲ್ಲಿ ಯಾರೂ ತೂಗಲ್ಪಟ್ಟಿಲ್ಲ. ಯಾರೂ ಕಳೆ ಯಲ್ಪಟ್ಟಿಲ್ಲ!

ಬಿಳಿ ಟೊಪ್ಪಿಯು ಲಾಭದಾಯಕವಲ್ಲದ ಆಭರಣದ ಕಾಲವಿತ್ತು. ಆಗ ಬಿಳಿ ಟೊಪ್ಪಿಯೊಂದಿಗೆ ಪೋಲೀಸರ ಲಾಠಿ ಇರುತ್ತಿತ್ತು. ಅಂದು ಅದರಲ್ಲಿ ತ್ಯಾಗ, ಪರಿಶ್ರಮಗಳಿದ್ದುವು. ಈ ತ್ಯಾಗ ಪರಿಶ್ರಮಗಳ ಬಲದಿಂದಲೇ ಭಾರತದ ನಿರ್ಬಲ ಜನರು, ನಿರ್ಬಲ ಶರೀರಿ ಮಹಾತ್ಮರ ಮುಂದಾಳ್ತನದಲ್ಲಿ ಮುನ್ನಡೆದರು. ಆಗಿನ ಕಾಲದ ಕಾರ್ಯಕ್ರಮ ಬರೀ ಬಾಯಿಯ ಭಾಷಣವಾಗಿರಲಿಲ್ಲ. ಅದು ಕೃತಿಯ ಘೋಷಣೆಯಾಗಿತ್ತು. ಗಾಂಧಿಯು ಸರ್ವಶಕ್ತ ದೇವನಲ್ಲ. ಸಮ್ಮಂತೆ ನಿರ್ಬಲ ಶರೀರೀ ಮಾನವನು. ಆತನೂ ಹಿಮಾಲಯದಂಥಾ ತಪ್ಪುಗಳನ್ನು ಮಾಡಿದವನು! ಆದರೆ ಆತನು ಸರಳನಾಗಿದ್ದನು. ಸತ್ಯ ಪ್ರವಾದಿಯಾಗಿದ್ದನು. ಆಡಿದಂತೆ ಮಾಡುವವನಾಗಿದ್ದನು. ಜನತೆಯಲ್ಲಿ ಒಂದಾಗಿ ಬೆರೆತು ದುಡಿವವನಾಗಿದ್ದನು. ಈ ಸಮರ ಸತ್ಯಾಗ ಜೀವನವು ಬಿಳಿ ಟೊಪ್ಪಿಗೆ ಘನತೆಯನ್ನು ಕೊಟ್ಟಿತು. ಜಯವನ್ನು ತಂದಿತು. ಜಯದ ಕಾಲದಲ್ಲಿ ಉನ್ಮತ್ತವಾದ ಖಾದಿ ಟೊಪ್ಪಿಯು ದಾರಿ ತಪ್ಪಿ ವರ್ತಿಸೀತೆಂಬ ಭಯ ಸರಳ ವ್ಯಕ್ತಿ ಗಾಂಧೀಯವರಿಗಿತ್ತು. ಆದ್ದರಿಂದಲೇ ವಿಧಾಯಕ ಕಾರ್ಯಕ್ರಮಗಳ ಮೇಲೆ ಪುನಹ ಬಿಳಿ ಟೊಪ್ಪಿಯನ್ನು ನಿಲ್ಲಿಸಲು ಯತ್ನಿಸಿದರು. ಆದರೆ ಅದು ಕೈಗೂಡುವ ಮೊದಲು ಅವರ ಬಲಿ ತೆಗೆದುಕೊಂಡಿತು. ಮಹಾತ್ಮರು ನೈತಿಕ ತತ್ವಗಳ ತಳಹದಿಯಲ್ಲಿ, ಧಾರ್ಮಿಕ ಮನೋವೃತ್ತಿಯ ಪಥದಲ್ಲಿ ಭೌತಿಕ ಹಾಗೂ ಧಾರ್ಮಿಕ ಸಮ್ಮಿಲನದ ವನ್ನು ಕಂಡು ಭಾರತದ ಸ್ವಾತಂತ್ರ್ಯ ಸಂಗ್ರಾಮದ ಮೂಲಕ ಜಗತ್ತಿಗೆ ನವಮಾರ್ಗವನ್ನು ತೋರಿದರು. ಜಗತ್ತಿನ ಮಹಾಯುದ್ಧದ ಕಾರ್ಮೋಡಗಳ ಮಧ್ಯ ಬೆಳಕು ಚೆಲ್ಲುವ ಶಕ್ತಿಗೂಡಲಿದ್ದ ಭಾರತವು ಪಥ ಪ್ರಚೋದಕವಾಗಲಿಲ್ಲ(?) . ಭಾರತವು ಏಕೆ? ಇಡೀ ಜಗತ್ತಿಗೆ ಬೆಳಕನ್ನು ನೀಡಬೇಕಾಗಿದ್ದ ಬಿಳಿ ಟೊಪ್ಪಿಯು ತನ್ನ ಮನೆಯನ್ನೇ ಕತ್ತಲಿರಿಸಿ ದಾರಿತಪ್ಪುವಂತೆ ತೋರುತಿದೆ. ಈ ಕತ್ತಲನ್ನು ತನ್ನ ಸಂದರ್ಭವಾಗಿ ಉಪಯೋಗಿಸಿಕೊಳ್ಳಲು ಇತರ ಹಲವು ಟೊಪ್ಪಿಗಳು ಯತ್ನಿಸುತ್ತಿವೆ. ಕೆಂಪುಟೊಪ್ಪಿಯೊಂದು ಅಂತರ್ಗತವಾಗಿ ನಿಷ್ಠೆಯ ಪ್ರಯತ್ನ ನಡೆಸಿದೆ.

ವಿಲಿಯೋತರ ಆರಿ ಪಟ್ಟಗಳಿಂದ ಪುನೀತವಾದ ಬಿಳಿ ಟೊಪ್ಪಿಯು ಯಶಸ್ವಿಯಾಗಿ ಗುರಿಯನ್ನು ಮುಟ್ಟಿತು. ಆದರೆ ತೀರ್ಥಯಾತ್ರೆಗೆ ಹೊರಟವರು ದಾರಿಯ ಸುರಿಯಂಗಡಿಯಲ್ಲಿ ಕುಡಿಯಲು ಕುಳಿತು ಯಾತ್ರೆಯನ್ನು ಮರೆತಂತೆ ಭಾರತದ ಬಡಜನರ ಆರ್ಥಿಕ ಪರಿಸ್ಥಿತಿ ಉದ್ಧಾರದ ಪವಿತ್ರ ಕಾರ್ಯಕ್ಕೆ ಕಂಕಣಬದ್ಧರಾದವರು ಆ ಹಾದಿಯಲ್ಲಿ ದೊರೆತ ಅಧಿಕಾರವೆಂಬ ಸುರಾದೇವಿಯಿಂದ ಮೋಹಿತರಾಗಿ ತಮ್ಮ ಸುಖವೇ ಸರ್ವಸ್ವವೆಂದು ವರ್ತಿಸತೊಡಗಿದ್ದಾರೆ. ನಿಜ. ಸ್ವಾತಂತ್ರ್ಯವು ಆಕಸ್ಮಿಕವಾಗಿ, ಅನಪೇಕ್ಷಿತವಾಗಿ, ಕಷ್ಟನಿಷ್ಠುರಗಳೊಡಗೂಡಿ ನಮಗೆ ಬಂದಿತು. ಶತಮಾನಗಳ ಪಾರತಂತ್ರ್ಯದ ಪ್ರಭಾವವೋ ಅಥವಾ ಅಪಾರ ದುಡಿತದ ನಿರ್ಬಲತೆಯೋ ಹೇಗೂ ಅಧಿಕಾರ ಹೊತ್ತವರು ಈ ಸ್ವಾತಂತ್ರ್ಯದ ಜವಾಬ್ದಾರಿಯನ್ನು ಯೋಗ್ಯ ರೀತಿ ನಿರ್ವಹಿಸಲು ಶಕ್ತರಾಗಿಲ್ಲ. ಗಾಂಧಿ ಟೊಪ್ಪಿಯಡಿಯಲ್ಲಿ ಯೋಜನೆ ತಯಾರಿಸುವ ಮೇಜುಗಳಿವೆ, ಜನತೆಯನ್ನು ಪಾಠದ ಮಳೆಯಿಂದ ಮುಳುಗಿಸುವ ನಾಲಗೆ ಇದೆ. ಜನತೆಯ ಕಷ್ಟವನ್ನು ನೋಡಿ ಕಣ್ಣೀರು ಚೆಲ್ಲುವ ಕಣ್ಣಿದೆ. ಆದರೆ ಇವು ಸಾಲವು. ಇವುಗಳಲ್ಲಿ ಕ್ರಿಯಾಶಕ್ತಿಯಿಲ್ಲದಾಗ ಮಹತ್ವಪೂರ್ಣವಾಗಿ ತನ್ನ ಪ್ರಭಾವವನ್ನು ಬೀರಿ ಚೇತನವನ್ನು ಚಿಗುರಿಸಬಲ್ಲ ಸರಳ, ನಂಬಿಕೆಯ ಕ್ರಿಯಾಶಕ್ತಿ ಜನತೆಗೆ ಬೇಕು. ಆತ್ಮ ವಿಶ್ವಾಸದಿಂದ ದೃಢಭಾವದಿಂದ ಮುಂದೊತ್ತುವ ಕರ್ಮಯೋಗಿಗಳು ಬೇಕು. ಆಧ್ಯಾತ್ಮಿಕ ಕಷ್ಟ ಪರಂಪರೆಯಲ್ಲಿ ದಣಿದು, ಕರ್ತವ್ಯ ನಿಷ್ಠೆಯಿಂದ ಮುನ್ನಡೆಯುವ ಶುದ್ಧ ಹೃದಯದ ಕೆಲಸಗಾರರು ಬೇಕು.

ಗಾಂಧಿಟೊಪ್ಪಿ ತ್ಯಾಗ, ಸರಳತೆ, ದುಡಿಮೆ, ಸತ್ಯಗಳ ದ್ಯೋತಕವಾಗಬೇಕಲ್ಲದೆ ಅಧಿಕಾರದ ಗದ್ದುಗೆ ಏರುವ ಸುಲಭ ಮಾರ್ಗವಾಗಲೀ, ಠಕ್ಕು ನಡತೆ, ವ್ಯಾಪಾರಗಳನ್ನು ಮುಚ್ಚುವ ಹೊರ ಚಿಪ್ಪಾಗಲೀ ಆಗಬಾರದು. ಆದರೆ ಇಂದಿನ ಪರಿಸ್ಥಿತಿ ಹೇಗಿದೆ? ಕಾಂಗ್ರೆಸ್ ಪ್ರೆಸಿಡೆಂಟರೇ ದೂರು ಹೇಳುತ್ತಿರುವಂತೆ ಪವಿತ್ರವೆನಿಸಿದ ಬಿಳಿ ಟೊಪ್ಪಿಯೊಳಗೆ ಹೊಲಸು ಹೊಲಗೇರಿ ಹೆಚ್ಚಿದೆ!

ಪ್ರತಿಯೊಬ್ಬರೂ ಇಂದು ಬಿಳಿ ಟೊಪ್ಪಿಯನ್ನು ಟೀಕಿಸ ತೊಡಗಿದ್ದಾರೆ. ಬಿಳಿ ಟೊಪ್ಪಿ ಧರಿಸಿದವರೇ ನ್ಯೂನತೆಗಳನ್ನು ಎತ್ತಿ ಹೇಳತೊಡಗಿದ್ದಾರೆ. ಈ ರೀತಿ ಆತ್ಮ ನಿರೀಕ್ಷಣೆ ಮಾಡಿ ನ್ಯೂನತೆಗಳನ್ನು ಕಂಡುಕೊಂಡು ಅದನ್ನು ಎತ್ತಿ ನುಡಿಯುವದು ಶುಭ ಚಿಹ್ನೆಯೆಂದರೂ ಬಾಯಿಮಾತು ಕೃತಿಯಲ್ಲಿ ಬಾರದಿದ್ದರೆ ಪ್ರಯೋಜನವಿರದು. ಕಾಂಗ್ರೆಸು ಕುಸಿಯುತ್ತಿರುವ ಈ ಸಮಯದಲ್ಲಿ ಅದನ್ನು ಉದ್ಧಾರ ಮಾಡಬಹುದು. ಅದಕ್ಕೆ ಕೇವಲ ಶಿಸ್ತು, ಧೈರ್ಯ, ಸಮ್ಮೇಳನ, ಐಕ್ಯತೆ ಇವೇ ಸಾಲವು. ಹೊಲಸನ್ನು ಹೊರದೂಡಿ, ಕಾಂಗ್ರೆಸನ್ನು ಪರಿಶುದ್ಧ ಮಾಡಬೇಕೆಂಬ ಆತ್ಮ ವಿಶ್ವಾಸ ಎಲ್ಲರಲ್ಲಿ ಬೇಕು. ತಮ್ಮ ದುರ್ನಡತೆಗಳನ್ನು ಮುಚ್ಚಲು ಆಶ್ರಯದ ಗೂಡೆಯಾಗಿ ಬಿಳಿ ಟೊಪ್ಪಿಯನ್ನು ಉಪಯೋಗಿಸದೆ, ಅದನ್ನು ಸ್ವಾರ್ಥಸಾಧನೆಯ ಕಟ್ಟೆಯಲ್ಲಿ ಮಾರಲು ನಿಲ್ಲದೆ ಪ್ರತಿಷ್ಠೆವರ ಸರ್ವಾಂಗೀಣ ಉನ್ನತಿಗಾಗಿ ಪ್ರಯತ್ನಿಸಬೇಕು. ಬಿಳಿ ಟೊಪ್ಪಿಯನ್ನು ಧರಿಸಿದ ಶರೀರದಲ್ಲಿ ಕಾಯಿಲೆ, ವ್ರಣಗಳು ಕಂಡುಬಂದರೂ ಹೃದಯದ ಸ್ಪಂದನ ನಡೆಯುತ್ತಿದೆ. ಗಡಿಯಾರ ಒಡೆದು ಹುಡಿಯಾಗಿದ್ದರೂ ಒಳಗಿನ ಯಂತ್ರ ಚೆನ್ನಾಗಿದೆ. ಅದಕ್ಕೆ ಚೇತನ ಕೊಟ್ಟು ಹೊಸ ರೂಪಕೊಟ್ಟು ನವೀನಗೊಳಿಸಬೇಕು.

ಮೌಲಾನಾ ಆಜಾದರು ಇದನ್ನೊಪ್ಪುವದಿಲ್ಲ. ಒಳಗಿನ ಆತ್ಮನೇ ಕೊಳೆಯುತ್ತಿದೆಯೆಂದು ಅವರು ಹೇಳುತ್ತಿದ್ದಾರೆ. ಅದರೊಳಗಡ ಎಡ ಪಕ್ಷಗಳಾದ ಸಾಮ್ಯವಾದಿ, ಉಗ್ರಸಾಮ್ಯವಾದಿಗಳ ತಿಕ್ಕಾಟ ನಡೆದಿದ್ದರೂ ಕಾಂಗ್ರೆಸಿನಲ್ಲಿ ಪ್ರಗತಿಶೀಲ ಮನೋಭಾವದ ತರುಣ ರಕ್ತ ಇನ್ನೂ ಉಳಿದಿದೆ. ಸರಿಯಾಗಿ ವ್ಯವಸ್ಥೆಗೊಳಿಸಿದರೆ ಕಾಂಗ್ರೆಸ್ಸೆ ಬಡವನ ಹೆಗಲಿನ ಭಾರವಿಳಿಸಬಲ್ಲುದಾದ ಸಂಸ್ಥೆಯೆಂದು ನಂಬಿದವರಿದ್ದಾರೆ. ಈ ತರುಣರ ಕಣ್ಣಿನಲ್ಲಿ ಹಿಂದಿನ ಹೋರಾಟದ ಕಾಲದ ಆ ದಿವ್ಯ ತೇಜಸ್ಸಿಲ್ಲದಿದ್ದರೂ ಅವರ ಚೇತನ ಉಡುಗಿಲ್ಲ. ಜನಸೇವೆಗೆಂದು ಕಚ್ಚೆ ಹೆತ್ತಿ ಅಧಿಕಾರ ಮಾತ್ರ ಹಿಡಿದವರು ಕುರ್ಚಿಯ ಸುಪ್ಪತ್ತಿಗೆಯ ಆಸನ ಕೂಲದ ಅಧಃಪಾತದಲ್ಲಿ ಗುರಿಯನ್ನು ಮರೆತು ವರ್ತಿಸುತ್ತಿರುವದು ದುಃಖದಾಯಕವಾಗಿದೆ ನಿಜ. ಆದರೆ ಸಕಾಲದಲ್ಲಿ ಎಚ್ಚರಿಕೆ ವಹಿಸಿದರೆ ಕಾಂಗ್ರೆಸು ಇನ್ನಾದರೂ ನಾಡಿನ ನಚ್ಚಿನ ಸಂಸ್ಥೆಯಾಗುವದು.

ಜಗತ್ತಿನ ಇತರ ರಾಷ್ಟ್ರಗಳೆಲ್ಲವುಗಳಿಂತ ಭಿನ್ನವಾಗಿ ತನ್ನದೇ ಆದ ತತ್ತ್ವ ದರ್ಶನಗಳನ್ನು ಮುಂದಿಟ್ಟು ಸಾಗಿ ಬಂದ ಗಾಂಧಿಯ ದೇಶವಾದ ಭಾರತವು ಪಥಗೆಟ್ಟು ವರ್ತಿಸುವದು ಜಗತ್ತಿನ ದೃಷ್ಟಿಯಲ್ಲೀ ಹಾನಿಕಾರಕ. ಜಗತ್ತಿನ ಉದ್ಧಾರವು ಬಂಡವಳವಾದದ ಮಾರ್ಗದಿಂದಾಗಲೀ ಯಾ ಉಗ್ರ ಸಾಮ್ಯವಾದಿಗಳ ಮಾರ್ಗದಿಂದಾಗಲೀ ಆಗಲಾರದು. ಬದಲು ಗಾಂಧೀವಾದದ ನವೀನ ಮಾರ್ಗದಿಂದಲೇ ಜಗತ್ತಿನ ಶಾಂತಿ ಎಂದ ಕಾಂಗ್ರೆಸ್ಸು ಇಂದು ಮಾಡುತ್ತಿರುವ ಕೆಲಸವು ಕ್ಷಮ್ಯಾರ್ಹವಾದುದಲ್ಲ. ಇಂದೂ ಕೂಡ ಕಾಂಗ್ರೆಸಿನ ತತ್ತ್ವ ಸಿದ್ಧಾಂತಗಳು ಪ್ರಗತಿಶೀಲವಾದವು. ಅವುಗಳ ಬಗ್ಗೆ ಯಾರ ವಿರೋಧವೂ ಇಲ್ಲ. ಆದರೆ ಅವೆಲ್ಲ ಕೇವಲ ಕಾಗದದಲ್ಲಿಯೇ ಉಳಿದಿವೆ. ಕೃತಿಯಲ್ಲಿ ಬಾರದ ತತ್ತ್ವ ಎಷ್ಟು ಉದಾತ್ತವಾಗಿದ್ದರೂ ಪ್ರಯೋಜನವೇನು? ಆದ್ದರಿಂದಲೇ ಜನರು ಜಿಗುಪ್ಸೆಗೊಂಡು ಗಾಂಧಿ ಟೊಪ್ಪಿಯನ್ನು ಟೀಕಿಸತೊಡಗಿದ್ದಾರೆ. ಗಾಂಧಿ ಟೊಪ್ಪಿಯಿಂದ ಪ್ರಯೋಜನವಿಲ್ಲ. ಕೆಂಪು ಟೊಪ್ಪಿ ಹಾಕಿ ನೋಡೋಣವೆನ್ನುತ್ತಿದ್ದಾರೆ! ಇದೇ ಅಲ್ಲ; ರಷ್ಯಾದ ಟೊಪ್ಪಿ ಹಾಕಿ ನೋಡೋಣವೆಂದು ಜನರು ಬಯಸಿದರೆ ಆಶ್ಚರ್ಯಪಡಬೇಕಿಲ್ಲ. ರಷ್ಯಾದ ಟೊಪ್ಪಿಯು ಅಪರಿಚಿತವಾದುದೇನೂ ಅಲ್ಲ. ಅದಕ್ಕೂ ಜಿನ್ನಾ ಟೊಪ್ಪಿಗೂ ನಿಕಟ ಸಾಮ್ಯವಿದೆ! ಆದ್ದರಿಂದ ಖಾದಿ ಟೊಪ್ಪಿ ಎಚ್ಚರಿಕೆ ವಹಿಸದಿದ್ದರೆ ಶತಮಾನಗಳ ಹುತಾತ್ಮರ ತ್ಯಾಗ ಬಲಿದಾನಗಳೂ, ಖ್ಯಾತಿವೆತ್ತ ಭವ್ಯ ಸರ್ವಗ ತತ್ತ್ವಸಿದ್ಧಾಂತಗಳೂ ನಿರ್ನಾಮಗೊಳ್ಳಬೇಕಾದೀತು.

ಸುಳ್ಳು ಹೇಳುವವರಾರು?

ಸುಳ್ಳು ಹೇಳುವ ವಿಧಾನವನ್ನು ನಾವು ಚೆನ್ನಾಗಿ ಬಲ್ಲವರಾಗಿದ್ದೇವೆ. ನಮ್ಮ ಅನುದಿನದ ಜೀವನ ಸಂಗ್ರಾಮದಲ್ಲಿ ಸುಳ್ಳು ಹೇಳುವದನ್ನು ಅಭ್ಯಾಸವಾಗಿಟ್ಟುಕೊಂಡಂತಿದೆ. ಬಡವರು ಹೊಟ್ಟೆಯಿಲ್ಲದ ಪಾಡಿಗೆ ನಾನಾ ರೀತಿಯಲ್ಲಿ ಸುಳ್ಳು ಹೇಳಿ ಜೀವಿಸುತ್ತಾರೆ. ಸಂಸಾರ ನಡೆಸಲಾಗದೆ ಕದಿಯಲು ಪ್ರಾರಂಭಿಸುತ್ತಾರೆ. ಸುಳ್ಳು ಹೇಳುವದನ್ನು ಮಹಾಪಾಪವೆನ್ನುತ್ತಾರೆ ತಿಳಿದವರು. ಸುಳ್ಳು ಹೇಳುವದರಿಂದಲೇ ಕಾಯಿದೆ ಕಾನೂನುಗಳು ಹೆಚ್ಚುತ್ತಲಿವೆ. ಉಪದೇಶ ಮಾಡುವವರು, ತಪ್ಪಿತಸ್ಥನೆಂದು ಸಿದ್ಧಾಂತ ಕೊಡುವ ನ್ಯಾಯಾಧಿಪತಿಗಳೂ ಸುಳ್ಳಿನ ಮೂಲಿಕೆಯ ಆಧಾರದಿಂದಲೇ ತೀರ್ಪು ಕೊಡುವುದಿಲ್ಲವೇ?

ಅಸತ್ಯವನ್ನು ನುಡಿಯುವವರು ಸಾಮಾನ್ಯ ಜನರೆಂದು ನಮ್ಮಲ್ಲಿ ವಾಡಿಕೆಯಿದೆ. ಯಥಾರ್ಥವಾಗಿ ಹೇಳುವುದಾದರೆ ಅದನ್ನು ಹೆಚ್ಚಾಗಿ ಬಳಕೆಯಲ್ಲಿ ತರುವವರು ಬುದ್ಧಿಯುಳ್ಳವರೇ ಆಗಿರುತ್ತಾರೆನ್ನಬೇಕು. ಬಡವರ ಇಲ್ಲವೆ ಸಾಮಾನ್ಯರ ಮೇಲೆ ಬೆಳಗುತ್ತೋರಿಸುವ ಎಲ್ಲರೂ ಕೂಡ ಸುಳ್ಳಿನಿಂದಲೇ ಸ್ಥಾನಮಾನವನ್ನು ಗಳಿಸಲೆತ್ನಿಸುತ್ತಾರೆ. ನಮ್ಮ ಮಂತ್ರಿವರ್ಯರು ಬಂದಾಗ ನಾವು ನಂಕಬೇಕು, ಆಸ್ಪತ್ರೆ ಬೇಕು, ಬಾವಿ ಬೇಕು, ಇನ್ನೇನೋ ಬೇಕು ಎಂತ ಹೇಳುತ್ತೇವೆ. ಮಂತ್ರಿಗಳು ನಮ್ಮ ಮನಸ್ಸು ನೋಯಿಸದೆ ತನ್ನಿಂದ ಆಗದೆ ಇರುವ ಕಾರ್ಯವೆಂದು ತನಗೆ ತಿಳಿದಿದ್ದರೂ 'ಇದನ್ನು ನಾನು ಜ್ಞಾಪಕದಲ್ಲಿಟ್ಟುಕೊಂಡು ತಮ್ಮ ಕೋರಿಕೆಯನ್ನು ನಡೆಸುವದರಲ್ಲಿ ನಾನು ಯತ್ನ ಮಾಡದಿರಲಾರೆ' ಎಂದು ಹೇಳುತ್ತಾರೆ. ಈ ರೀತಿಯ ಹಲವಾರು ಮಾನ ಪತ್ರಗಳಿಗೆ ಇದೇ ರೀತಿಯ ಭರವಸೆಕೊಟ್ಟು ಏನನ್ನೂ ಮಾಡದೆ ಇರುವದನ್ನು ನಾವು ಈಗಲೂ ಕಾಣುತ್ತಿಲ್ಲವೇ? ಅಂದರೆ ಇದು ರಾಜಕೀಯ ಸುಳ್ಳಾಗುತ್ತದೆ.

ತನ್ನ ಅಚಾತುರ್ಯದಿಂದ ಪ್ರಮಾದ ನಡೆದು ಹೋದರೆ ತಾನು ತಪ್ಪಿತಸ್ಥನೆಂದು ಒಪ್ಪಿಕೊಳ್ಳದ ಶ್ರೀಮದ್ಗಾಂಭೀರ್ಯವನ್ನಿಟ್ಟುಕೊಂಡವರು ಸುಳ್ಳು ಹೇಳಿ ತನ್ನ ಸ್ಥಿತಿಯನ್ನುಳಿಸಿಕೊಳ್ಳ ಯತ್ನಿಸುವದುಂಟು! ಅವರು ತಮ್ಮ ಮಾತಿನ ಪಾಂಡಿತ್ಯದಿಂದ ಇನ್ನೊಬ್ಬರ ಮೇಲೆ ಇಲ್ಲವೆ ತನಗಾಗದವರ ಮೇಲೆ ಸಾಹಿತಿಕವಾಗಿಯೂ, ನಾಜೂಕಾಗಿಯೂ ಸುಳ್ಳಿನ ಕಂತೆಗಳನ್ನು ಹೇರಿತ ನ 'ಸಂಭಾವಿತ' ಎನ್ನುವ ಚಿತ್ರವೊಂದನ್ನು ಕಲಿಸುತ್ತಾರೆ. ಕಲ್ಪಿತ ಕಟ್ಟುಕತೆಗಳೇ ಅವರ ಸುಳ್ಳಿನ ತಳಹದಿ. ಇಂತಹರ ಬಳಿಗೆ ಬಹಳ ಮಂದಿ ಸುಲಭವಾಗಿ ಬಲಿಬೀಳುವದುಂಟು. ಇದು ಮನಸ್ತಾರಗಾಗಿ ಹೇಳುವ ಸಾಹಿತಿಕ ಸುಳ್ಳು.

ನಮ್ಮಲ್ಲಿ ಕಾರ್ಯಾಲಯಗಳಾದರೆ ಕೋರ್ಟು ಕಚೇರಿಗಳಿಗೆ, ಶಾಲಾ ಕಾಲೇಜುಗಳಿಗೆ ಹೋಗುವವರಿಗೆ ತೊಂದರೆಬರುವದುಂಟು. ಆಗ ಸರ್ಟಿಫಿಕೇಟು ಕೊಡಬೇಕಾಗುತ್ತದೆ. ಆದರೆ ಯಥಾರ್ಥವಾಗಿ ಹೀಗೆ ನಡೆಯುವುದು ಶೇಕಡ ೨೫ ಸಂದರ್ಭಗಳಾದರೆ ಉಳಿದ ೭೫ ಅಂಶ ಸುಳ್ಳಿನ ಉದಾಹರಣೆಗಳೇ ಆಗಿರುತ್ತವೆ. ಕೋರ್ಟಿಗೆ ಒಪ್ಪಿಸಲು, ಕಾಲೇಜಿಗೆ ಪರಿಹಾರ ಹೇಳಲೂ ಡಾಕ್ಟರರ ಸರ್ಟಿಫಿಕೇಟುಗಳು ರಾಮಬಾಣ. ಆ ಸರ್ಟಿಫಿಕೇಟನ್ನು ಹೊರತು ಎಷ್ಟೇ ಸತ್ಯನಿವೇದನೆ ಮಾಡಿಕೊಂಡರೂ ಅದು ಸಿಂಧುವಾಗಲಾರದು. ಅದಕ್ಕೆ ಸರ್ಟಿಫಿಕೇಟಿನ ಸುಳ್ಳು ಸಾಕ್ಷಿ ಬೇಕೇ ಬೇಕು. ಶಾಲಾದಿನಗಳು ಕಡಿಮೆಯಾದರೆ ಶಾಲಾಧಿಕಾರಿಗಳು ಮೊದಲಾಗಿ ಡಾಕ್ಟರರ ಸರ್ಟಿಫಿಕೇಟನ್ನು ತರಲು ಹೇಳುತ್ತಾರೆ. ಅಂತೆಯೇ ಕೋರ್ಟು ಕಚೇರಿಗಳ ಹಣೆಬರಹವೂ. ಇದೂ ಅನಾರೋಗ್ಯದ ನಿಮಿತ್ತ ಹೇಳುವ ಆರೋಗ್ಯ ಪ್ರಕೃತಿಯ ಸುಳ್ಳು!

ಹೀಗೆಯೇ ಪ್ರಪಂಚದಲ್ಲಿ ಹುಟ್ಟಿದ ಪ್ರತಿಯೊಬ್ಬನೂ ಸಾಯುವ ವರೆಗೆ ಸುಖವಾಗಿರುವದರ ಸಲುವಾಗಿ ಸುಳ್ಳು ಹೇಳದೆಯಿಲ್ಲ. ವ್ಯವಹಾರರಂಗದಲ್ಲಿ ಸುಳ್ಳು ಇಲ್ಲದೆ ಹೋದರೆ ವ್ಯವಹಾರ ನಡೆಯುವಂತೆಯೂ ಇಲ್ಲ.

'ನವಯುಗ.'

ಕೊಡಗು ಪ್ರಾಂತೀಯ ಸಹಕಾರಿ ಬ್ಯಾಂಕಿನ ಆಫೀಸಿನಿಂದ

ಮಡಿಕೇರಿ ತಾ. 13-3-51

ಎಲ್ಲಾ ಸಂಘಗಳ ಪ್ರಸಿಡೆಂಟರವರಿಗೂ ಮತ್ತು ಪಂಚಾಯಿತರಿಗೂ:—

ಕೊಡಗಿನ ಎಲ್ಲಾ ಸಹಕಾರಿ ಸಂಘಗಳ ಗುಮಾಸ್ತರಿಗೂ ಮತ್ತು ಇಚ್ಛಿಸುವ ಇತರರಿಗೂ ಸಹಕಾರದ ವಿಷಯ ತರಬೇತನ್ನು ಕೊಡಲು ಕೊಡಗು ಸಹಕಾರ ಸಂಘಗಳ ರಿಜಿಸ್ಟ್ರಾರವರು ಏರ್ಪಡಿಸಿದ್ದಾರೆ. ಇದು ಮಾರ್ಚ ತಿಂಗಳು ತಾರೀಕು ೧೯ ರಿಂದ ೩೧ರ ವರೆಗೆ ಈ ಕೆಳಗಿನ ಸೆಂಟರುಗಳಲ್ಲಿ ನಡೆಯುವುದು ಸೋಮವಾರಪೇಟೆ, ಶನಿವಾರಸಂತೆ, ಫ್ರೇಜರ್‌ಪೇಟೆ, ಮಡಿಕೇರಿ, ಕಾಗುಂದ, ಭಾಗಮಂಡ್ಲ, ಮೂರ್ನಾಡು, ಪಾರಾಣೆ, ನಾಪೋಕ್ಲು, ವೀರಾಜಪೇಟೆ, ಅಮ್ಮತ್ತಿ, ಗೋಣಿಕೊಪ್ಪಲು, ಪೊನ್ನಂಪೇಟೆ, ಹುದಿಕೇರಿ ಮತ್ತು ಶ್ರೀಮಂಗಲ

ಸಹಕಾರ ಆಕ್ಟು, ರೂಲ್ಸು, ಬೈಲಾ ಇವೇ ಮುಂತಾದ ದಫ್ತರಗಳ ವಿಷಯವಾಗಿ ಪುನರ್ ವಿಮರ್ಶೆ ಮಾಡಲಾಗುವುದು. ಅಲ್ಲದೆ ಸಹಕಾರ ತತ್ವವನ್ನು ವಿವರಿಸಲಾಗುವುದು. ಕೊಡಗಿನಲ್ಲಿ ಮುಖ್ಯ ಸಹಕಾರ ಸಂಘಗಳ ಮುಖೇನ ಗ್ರಾಮೋದ್ಧಾರದ ಕಾರ್ಯಗಳನ್ನು ಕೈಕೊಳ್ಳುವ ಬಗೆಯನ್ನು ತಿಳಿಸಲಾಗುವುದು. ಸಂಘಗಳ ಲೆಕ್ಕಗಳನ್ನು ಕ್ರಮವಾಗಿ ಇಡುವಂತ ಮತ್ತು ಲೆಕ್ಕ ಪಟ್ಟಿಗಳನ್ನು ತಯಾರಿಸುವಂತ ವಿಧಾನವನ್ನು ಕಲಿಸಲಾಗುವುದು.

ಆದುದರಿಂದ ಸಹಕಾರ ಸಂಸ್ಥೆಗಳಲ್ಲಿ ಕೆಲಸ ಮಾಡುವ ಪ್ರತಿಯೊಬ್ಬರು ಈ ಸಂದರ್ಭವನ್ನು ಸರಿಯಾಗಿ ಉಪಯೋಗಿಸಿಕೊಂಡು ಸಹಕಾರದ ಅಭಿವೃದ್ಧಿಗೆ ನೆರವಾಗಬೇಕಾಗಿ ಕೋರಲಾಗಿದೆ.

ಕೆ. ಪಿ. ಅಪ್ಪಯ್ಯ,
ಪ್ರೆಸಿಡೆಂಟ್,

ಭವಿಷ್ಯ ಹೇಳುವ ನೂತನ ಗಡಿಯಾರ

ಮುಂಬರುವ ಸಾವಿರಾರು ವರ್ಷಗಳ ತನಕ ಒಂದು ನಿಮಿಷ ಕಾಲವನ್ನಾದರೂ ತಪ್ಪಾಗಿ ತೋರಿಸದಂತೆ ಚಾಣಾಕ್ಷ ಗಡಿಯಾರವನ್ನು ತಯಾರಿಸಬಹುದಂತೆ. ಇಷ್ಟು ಮಾತ್ರವಲ್ಲ ಈ ಗಡಿಯಾರವು ದಿನ, ಸೂರ್ಯ ಚಂದ್ರರ ಚಲನೆ, ಗ್ರಹಣ ಮೊದಲಾದುವುಗಳನ್ನೂ ತಿಳಿಯುವಷ್ಟು ಸಮರ್ಥವಾಗುವುದಂತೆ.

ಮೈಸೂರು ಮಹಾರಾಜರ ಮೋಟಾರು

ಜಗತ್ತಿನ ಅತೀ ದೊಡ್ಡದೆಂದು ಹೇಳಲ್ಪಡುವ ಮೋಟರು ಕಾರೊಂದನ್ನು ಒಂದು ಬ್ರಿಟಿಷ್ ಮೋಟರು ಸಂಸ್ಥೆಯವರು ಮೈಸೂರು ಮಹಾರಾಜರಿಗಾಗಿ ತಯಾರಿಸಿದ್ದು ಆ ವಿಶೇಷ ಮೋಟಾರಿನ ವಿಶೇಷ ಗುಣಗಳನ್ನು ಚಲಚ್ಚಿತ್ರಗಳ ಮೂಲಕ ಲಂಡನ್ನಿನಲ್ಲಿ ಪ್ರದರ್ಶಿಸಲಾಗಿದೆಯಂತೆ.

ಈ ವಾರದ ಕಥೆ

ಕಲಂಕಿತ ಮಧು.

ಗಣೇಶನು ಬಸ್ಸಿನ ನಿಲ್ದಾಣದಲ್ಲಿ ನಿಂತುಕೊಂಡಿದ್ದನು. ಬಸ್ಸಿನ ಹಿಂಗಡೆ ಹೊಸ ಗುಲಾಬಿ ಬಣ್ಣದಿಂದ ಶೋಭಿಸುತ್ತ ಸಂಜೆವೆಣ್ಣು ಕಪ್ಪು ಸೀರೆಯನ್ನುಟ್ಟು ಕೊಳ್ಳುತ್ತಿದ್ದಳು. ಗಣೇಶನ ಕಣ್ಣುಗಳು ಕಲಕೊಂಡಿದ್ದವು. ನಿಸರ್ಗದ ಮೇಲೆ ಈ ದೃಶ್ಯಗಳು ಯಾವ ಬಗೆಯ ಪರಿಣಾಮವನ್ನೂ ಮಾಡಿರಲಿಲ್ಲ. ಆತನ ಮನಸ್ಸು ಉದ್ವೇಗದಿಂದ ತುಂಬಿ ತುಳುಕುತ್ತಿತ್ತು. ಬಸ್ಸು ಬಂದೊಡನೆ ಮನೆಯ ಕಡೆಗೆ ಹೋಗುವ ದಾರಿಯಲ್ಲಿ ಬಹಳ ದಿನಗಳಿಂದ ಮನೆಗೆ ಬಾರದಿದ್ದ ವೀಣೆಯನ್ನು ತೆಗೆದುಕೊಂಡು ಬಾರಿಸತೊಡಗಿದನು. ವೀಣೆಯ ಮಧುರ ನಾದದಿಂದ ಗಣೇಶನ ಹೃದಯದ ಉದ್ವೇಗವು ಕ್ಷಣಕಾಲ ಶಾಂತವಾಯಿತು. ಆದರೆ ಪುನಃ "ಟೆನ್ಸ್" ಎಂಬ ನೆನಪಾಯಿತು. ವೀಣೆಯ ತಂತಿಯಿಂದ ಸ್ವರಗಳು ತುಂಡಾಗಿ ಹೊರಬಿದ್ದುವು. ಗಣೇಶನ ಹೃದಯದ ತಂತಿಗಳು ಝೇಂಕರಿಸಿದವು. ಗಣೇಶನು ಹತ್ತಿರದ ಕಿಟಕಿಯಲ್ಲಿ ಕಣ್ಣಿಟ್ಟು ಹಳೆಯದನ್ನು ಬಗ್ಗಿಸಿ ಆಲೋಚನಾ ಪರನಾದನು.

"ಹೌದು, ಅಂದು ಶನಿವಾರ. ಸಾಯಂಕಾಲ ಜನರು ದಿನ ನಿತ್ಯದಂತೆ ಸೇರಿದ್ದರು. ಬೆಳಗ್ಗಿನ ಜಾವದಲ್ಲಿ ಹುಣ್ಣಿಮೆಯ ರಾತ್ರಿ ಭಾರ್ಗವ ಮಂಡಲದಲ್ಲಿ ಜರುಗುವ ಭಜನೆ ಮಾಡುತ್ತಿದ್ದರು. ಗಣೇಶನ ತನ್ನ ಸವಿಯಾದ ಕಂಠದಿಂದ ಹಾಡುತ್ತಿದ್ದನು. ಆ ಸಮಯದಲ್ಲಿ ಗಣೇಶನ ಹತ್ತಿರ ಕುಳಿತಿದ್ದ ಗಣೇಶನ ಗೆಳೆಯನೊಬ್ಬನು ಗಣೇಶನನ್ನು ಕರೆದು "ಈ ದಿನ ಸಂಕೀರ್ತನೆಯಲ್ಲಿ ಹಾಡಿದ ಹಾಡುಗಳನ್ನು ಚೆನ್ನಾಗಿ ಕೇಳುವವರಿಗೂ ಆನಂದವಾಗುತ್ತಿತ್ತು" ಎಂದನು. ಗಣೇಶನು ಆ ಹಾಡು ನಿಲ್ಲಿಸುವಷ್ಟರಲ್ಲಿ ಅಷ್ಟರಲ್ಲಿ ಹತ್ತಿರದಲ್ಲಿ ಕುಳಿತು ಹಾಡನ್ನು ಕೇಳುತ್ತಿದ್ದ ಹುಡುಗಿಯೊಬ್ಬಳು "ಬೇಡ, ಆ ಹಾಡನ್ನೇ ಮುಂದರಿಸಿರಿ" ಎಂದಳು. ಎಲ್ಲರ ಕಣ್ಣು ಗಳು ಆ ಕಡೆ ತಿರುಗಿದವು. ಗಣೇಶನು ಆಕೆಯ ಕಡೆ ನೋಡಿದನು. ಸುಂದರ ಹುಡುಗಿ ಗುಲಾಬಿ ಬಣ್ಣದ ಸೀರೆ ಉಟ್ಟಿದ್ದಳು. ಆಕೆಯ ಕಣ್ಣುಗಳು ಹಣೆಯ ಮೇಲೆ ಬಿದ್ದ ಕುರುಳುಗಳು ಗಣೇಶನಿಗೇ ಆಶ್ಚರ್ಯವಾಯಿತು. ಸಂಧ್ಯಾ ರಾಗವಾದ ತೋಡಿ ರಾಗದಲ್ಲಿ ಆ ಆಸಕ್ತಿಯೇ, ಎನಿಸಿತು.

ಗಣೇಶನ ಗೆಳೆಯನು ಆಕೆಯ ಪರಿಚಯ ಮಾಡಿದನು. "ಆಕೆಯು ಹೆಸರು ಮಧು. ಆಕೆ ನನ್ನ ದೂರದ ಸಂಬಂಧಿ ಕಳು. ಬಹು ಚೆನ್ನಾಗಿ ಹಾಡುತ್ತಾಳೆ. ಆವಳು ಆಕೆಯು ತುಂಗ ಲಲಿತಳು" ಎಂದನು. ಮಧುವಿನ ಮುಖವು ಲಜ್ಜೆಯಿಂದ ನೆಲವನ್ನು ನೋಡುತಿತ್ತು. ಗಣೇಶನ ಹಾಡು ಮುಗಿದ ಮೇಲೆ ಮಧುವು ಹಾಡಬೇಕೆಂದು ಎಲ್ಲರೂ ಒತ್ತಾಯ ಮಾಡಿದರು. ಮಧುವಿನ ತನ್ನ ಮಧುರವಾದ ಕಂಠದಲ್ಲಿ ಹಾಡಿದಳು.

'ಎನಸೂಡಿ ಮುತ್ಯಾಲ ನಿಲುಕಿಲೇದು' ಹಾಡನ್ನು ಹಾಡಿದಳು. ಆ ಭಾವಪರವಶಳಾದಳು. ಆಕೆಯ ಕಂಠದಲ್ಲಿ ಕಂಪನ ತುಂಬಿತ್ತು. ಕೇಳುತ್ತಿದ್ದವರೆಲ್ಲರು ಮುಗ್ಧರಾಗಿದ್ದರು. ಆಕೆಯ ಮಧುರ ಧ್ವನಿಯಲ್ಲಿ ನೋವಿನ ತೆರೆ ಹಿತ್ತು. ಆಕೆಯ ಕಣ್ಣಿನಲ್ಲಿ ಹೃದಯಾಗ್ರ ಯಾವುದೋ ಅಸ್ಪಷ್ಟ ನೋವಿತ್ತು.

ಘಟನೆಯ ನಂತರ ಎಷ್ಟೋ ದಿನ ಉರುಳಿ ಕಳೆದು ಹೋಗಿವೆ. ಆದರೂ ಗಣೇಶನ ಮನಸಿನ ಕನ್ನಡಿಯ ಮೇಲೆ ಮಧುವಿನ ಆ ಮುಖ ಮುದ್ರೆ ಸ್ಪಷ್ಟವಾಗಿದೆ. ಆಕೆಯ ಕಿವಿಯಲ್ಲಿ ಕೇಳಿದ ಆ ಧ್ವನಿ ಸ್ಮರಣೆಯಲ್ಲಿದೆ. ಆಕೆಯನ್ನು ಕಂಡು ಆಕೆಯೊಡನೆ ಮಾತಾಡ ಬೇಕೆಂಬ ಹೃದಯದ ವೇದನೆಯೇನೆಂದು ಕೇಳಬೇಕೆಂದು ಗಣೇಶನಿಗೆ ಅನಿಸುತ್ತಿದೆ. ಆದರೆ ಮಧುವನ್ನು ನೋಡುವ ಅವಕಾಶ ದೊರೆತಿರಲಿಲ್ಲ. ಅಂದು ಒಬ್ಬನೇ ರಸ್ತೆಯಲ್ಲಿ ಗಣೇಶನು ತಿರುಗಾಡುತ್ತ ಹೊರಟಿದ್ದನು. ಯಾರೋ ಹಿಂದಿನಿಂದ ಕರೆದಂತಾಯಿತು. ಮಧು ಬಾಗಿಲಲ್ಲಿ ನಿಂತಿದ್ದಳು. ಆ ಮನೆಯೊಡನೆ ತನಗೆ ದಾರಿ ಹೊರಟಿದ್ದಳು. ಗಣೇಶನನ್ನು ಕರೆದು ಮನೆಗೆ ಬರಬೇಕೆಂದು ಆಗ್ರಹ ಪಡಿಸಿದಳು. ಲಲಿತ ತಾಯಿಯೂ ಕರೆದಳು. ಮಾರನೆ ದಿನ ಗಣೇಶನು ಅವರಲ್ಲಿಗೆ ಹೋದನು. ಕ್ರಮಶಃ ಆ ಕುಟುಂಬದೊಡನೆ ಗಣೇಶನ ಸಂಬಂಧವು ಗಾಢವಾಯಿತು. ಮಧುವು ಸಂಗೀತದಲ್ಲಿ ಗಣೇಶನೊಡನೆ ಮಾತಾಡುತ್ತಿದ್ದಳು. ಅಂದು ಗಣೇಶನ ಆವರೊಡನೆ ಗವಿಹಾರಕ್ಕೆಂದು ರಾಜಾಜಿ ಬೆಟ್ಟ ಹೋಗಿದ್ದನು. ಅಲ್ಲಿ ಲಲಿತಾ ಬೇರೆ ಮಕ್ಕಳೊಡನೆ ಆಡಲು ಹೋಗಿದ್ದಳು. ಗಣೇಶನ ಸಂಧ್ಯಾ ಇಬ್ಬರೇ ಕರೆದು ಅಲ್ಲಿ ಕುಳಿತು ಮಾತಾಡುತ್ತಿದ್ದರು.

"ಇಂಗ್ಲಿಷ್ ಸಾಹಿತ್ಯದಲ್ಲಿ ನಿನ್ನ ಮೆಚ್ಚಿನ ಲೇಖಕನಾರು?" ಗಣೇಶನು ಕೇಳಿದನು.

"ಡಿಕನ್ಸ್".

"ಹಾರ್ಡಿಯ ಕಾದಂಬರಿಗಳನ್ನು ಓದಿದಿಯೇನು?"

"ಇಲ್ಲ"

"ಹಾಗಾದರೆ "ಟೆಸ್" ನನ್ನಲ್ಲಿದೆ. ಅದನ್ನು ಓದು."

"ಅದರ ಕಥೆ ಏನು?"

ಗಣೇಶನ ಹೇಳತೊಡಗಿದನು "ಬಹಳ ದುಖದಾಯಕವಾದ ಕಥೆ. ಟೆಸ್ ಗ್ರಾಮದ ಹುಡುಗಿ. ಸರಳಳು; ಕಪಟವರಿಯದವಳು. ಆಕೆಗೆ ಪುರುಷ ಜಾತಿಯ ರಚನೆಯ ಪರಿಚಯ ಇರಲಿಲ್ಲ. ಆಕೆ ತನ್ನ ದೂರದ ಸಂಬಂಧಿಕರೊಬ್ಬರ ಮನೆಗೆ ಹೋಗಿರುತ್ತಾಳೆ. ಅಲ್ಲಿಯ ಸಂಬಂಧಿಕನು ಆಕೆಯ ಸರಳ ಸ್ವಭಾವದ ಲಾಭ ಹೊಂದಿ ಆಕೆಯನ್ನು ಕೆಡಿಸುತ್ತಾನೆ. ಆಕೆಯು ನಂತರ ಗ್ರಾಮಕ್ಕೆ ಹಿಂತಿರುಗಿ ಹೋಗಿ ಬರುತ್ತಾಳೆ. ಅಲ್ಲಿ ಆಕೆಯು ಕೆಲಸ ದಲ್ಲಿ ನಂತರ ಬೇರೆ ಯುವಕನೊಬ್ಬನು ಆಕೆಯನ್ನು ಪ್ರೀತಿಸುತ್ತಾನೆ. ಆತನು ಆಕೆಯನ್ನು ಮದುವೆಯಾಗಲೊಪ್ಪುತ್ತಾನೆ.

ಆತನನ್ನು ಆಕೆ ಹೃತ್ಪೂರ್ವಕವಾಗಿ ಪ್ರೀತಿಸುವ ಕಾರಣ ತನ್ನ ಹಿಂದಿನ ವೃತ್ತಾಂತವನ್ನು ಆತನಿಗೆ ತಿಳಿಸುತ್ತಾಳೆ. ಆದರೆ ಆತನು ನಂಬುವದಿಲ್ಲ. ಮದುವೆಯ ಪ್ರಥಮ ರಾತ್ರಿ ಆಕೆ ಪುನಹ ಅದನ್ನು ಹೇಳುತ್ತಾಳೆ. ಆತನು ಆಕೆಯನ್ನು ತಿರಸ್ಕರಿಸಿ ಹೊರಟು ಹೋಗುತ್ತಾನೆ. ಆಕೆ ನಂತರ ದುಃಖದಿಂದ ಹಳ್ಳಿ ಹಳ್ಳಿ ತಿರುಗುತ್ತಾಳೆ. ಒಂದು ದಿನ ತನ್ನನ್ನು ಹಾಳುಮಾಡಿದ ಆ ಹಿಂದಿನ ಯುವಕನನ್ನು ಸಂಧಿಸುತ್ತಾಳೆ. ಆತನು ಪುನಃ ಆಕೆಯನ್ನು ಬೋಗಿಸಲು ಯತ್ನಿಸುತ್ತಾನೆ. ಆಕೆಯು ತನ್ನ ಸೂರಕ್ಷಣೆಯಲ್ಲಿ ಆತನ ಕೊಲೆ ಮಾಡುತ್ತಾಳೆ. ಆಕೆಯು ದಸ್ತಗಿರಿಯಾಗಿ ಆಕೆಗೆ ಫಾಸಿ ಶಿಕ್ಷೆ ವಿಧಿಸಲ್ಪಡುತ್ತದೆ' ಗಣೇಶನು ಕಥೆ ಹೇಳುತ್ತಿದ್ದಂತೆಯೇ ಮಧುವಿನ ಕಣ್ಣಿನಲ್ಲಿ ನೀರು ತುಂಬುತ್ತಿತ್ತು.

"ಟೆಸ್ಸಳ ಆ ಕೃತ್ಯವು ಇಷ್ಟು ದುಃಖದಾಯಕವಾಗಬೇಕಿತ್ತೆ? ಜೀವನದ ತಪ್ಪು ವೃತ್ತವಿಸಲ್ಲೇ ಈ ರೀತಿ ಅನಿಸಬೇಕೆ?" ಮಧು ಕೇಳಿದಳು.

"ಇದಕ್ಕೆ ಉತ್ತರವೀಯಲು ಈ ದಿನ ಬಹಳ ತಡವಾಯಿತು. ಇನ್ನೂ ಹಲವು ಬಾರಿ ಇದರ ಕುರಿತು ಮಾತಾಡಬೇಕು" ಗಣೇಶನೆಂದನು.

ಆ ಘಟನೆ ನಡೆದ ಬಹಳ ದಿನಗಳ ನಂತರ ಮಧು ಗಣೇಶನು ಮಧುವಿನ ಮನೆಗೆ ಹೋದಾಗ ನೆ ಮನೆಯವರೆಲ್ಲ ಹೊರಗಡೆ ಹೋಗಿದ್ದರು. ಹಾಗಾಗಿ ಗಣೇಶ ಬೇರೆ ಕೋಣೆಯಲ್ಲಿ ಕುಳಿತು ಮಧು ಇಷ್ಟೋ ಬೆಟ್ಟಿನ ಕಥೆಯನ್ನು ಓದುತ್ತಿದ್ದಳು. ಮಧುವಿನ ಮುಖವು ಮ್ಲಾನವಾಗಿತ್ತು. ಗಣೇಶನ ಜೀವನದ ಮಧುವಿನ ಮುಖವನ್ನು ನೋಡುತ್ತಿದ್ದನು. ಗಣೇಶನು ಕೇಳಿದನು "ಇದೇಕೆ ಮಧು, ಮುಖವೇಕೆ ಹೀಗೆ ಬಾಡಿದೆ?" "ಏನಿಲ್ಲ" ಎಂದಳು. "ಹಾಗಾದರೆ ನನ್ನನ್ನು ನೋಡಿ ಸ್ವಲ್ಪ ನಗು" ಎಂದನು. ಮಧು ಅರೆ ಮನಸ್ಸಿನಿಂದ ದೃಷ್ಟಿಯನ್ನು ಬದಲಿಸಿ ಗಣೇಶನೆಡೆಗೆ ನೋಡಿ ನಾಚಿಕೆಯಿಂದ ನಕ್ಕಳು.

"ನಾಚಿಕೆ ಏಕೆ? ನೀನು ಎಷ್ಟು ಸುಂದರಳಾಗಿರುವೆ. ಪೂರ್ಣಿಮೆಯ ಚಂದ್ರನಿಗಿಂತ ಸುಂದರವಾಗಿರುವೆ. ನಿನ್ನನ್ನು ನೋಡುವುದರಿಂದಲೇ ನನ್ನ ಮನಸ್ಸಿಗೆ ಶಾಂತಿ. ನೀನು ನನ್ನೊಡನೆ ಈ ರೀತಿ ಸ್ನೇಹದಿಂದಿರುವದರಿಂದಲೇ ಧನ್ಯನಾಗಿದ್ದೇನೆ. ನನ್ನಲ್ಲಿ ಏನಿದೆ? ಯಾವ ವೈಭವವೂ ಇಲ್ಲ. ಹೃದಯವೊಂದಿದೆ. ಆದನ್ನು ನಿನಗೆ ಕೊಡುವ ನಿಶ್ಚಯ ಮಾಡಿರುವೆನು. ಸ್ವೀಕರಿಸುವಿಯಾ?" ಗಣೇಶನೆಂದನು.

ಮಧುವಿನ ಕಣ್ಣಲ್ಲಿ ಕಂಬನಿ ತುಂಬಿತ್ತು. ಆಕೆ ದುಃಖಿತ ಸ್ವರದಿಂದ ಹೇಳ ತೊಡಗಿದಳು. "ನೀನು ನನ್ನ ವಿಷಯ ಹೃದಯದಲ್ಲಿ ಮತ್ತೊಮ್ಮೆ ಆಶ ಕಿರಣವನ್ನು ಚೆಲ್ಲುತ್ತಿರುವೆ. ಆದರೆ ನಾನು ನಿನಗೆ ಹೇಗೆ ಹೇಳಲಿ, ನೀನು ಭಾವಿಸಿದಂತೆ ನಾನಿಲ್ಲವೆಂದು?"

"ಇದನ್ನು ಕೇಳಲು ನನಗಿಷ್ಟವಿಲ್ಲ" ಗಣೇಶನೆಂದನು.

"ನಿನಗೆ ಕೇಳಲು ಇಷ್ಟ ಇಲ್ಲದಿದ್ದರೆ ನನಗೆ ಹೇಳಲೇ ಬೇಕಿದೆ. ಅಂದು ಟೆಸ್ಸಳ ನೋಟು ನಡೆಯಿತಲ್ಲವೇ? ನಾನೂ ಕೂಡ ಟೆಸ್ಸಳಂತೆಯೇ ಎಂದು ಹೇಗೆ ಹೇಳಲಿ. ಯೌವನದ ಪ್ರಾರಂಭದ ಆ ವೈಭವ ಮರೆವಿನಲ್ಲಿ ನಾನು ತಪ್ಪಿದವಳು. ಇಂದಿಗೆ ನಾಲ್ಕು ವರ್ಷಗಳಾದವು. ನನ್ನ ಸ್ನೇಹಿತೆಯೊಬ್ಬಳಿದ್ದಳು. ಅಳೆದು ಸ ಹೋದರನಿಗೂ ನನಗೂ ಪರಿಚಯವಾಯಿತು. ಆತನೊಡನೆ ಮಾತಾಡುವದು ನನಗೆ ಸಂತೋಷ ಪ್ರದವಾಗಿತ್ತು. ಆ ದೊಂದು ದಿನ ನಾನು ಆತನ ಮನೆಗೆ ಹೋಗಿದ್ದೆನು. ನನ್ನ ಸ್ನೇಹಿತೆಯು ಹೊರಗೆ ಹೋಗಿದ್ದಳು. ನೀವು ಕುಳ್ಳಿರೇ ಇದ್ದೆವು. ಆತನು ನನ್ನ ಹತ್ತಿರ ಸರಿದು ಕುಳಿತನು. ನಾನು ದೂರ ಸರಿದು ನನ್ನ ಉಳ್ಳ ನನ್ನನ್ನು ಆಲಿಂಗಿಸಿ ಚುಂಬಿಸಿದ ನನ್ನ ಸರ್ವಸ್ವವನ್ನು ಕಸಿದುಕೊಂಡ. ನನ್ನಲ್ಲಿ ಒಂದೆ ನನ್ನ ನು ಪರವಶಳಾದೆನು. ಅಲ್ಲಿಂದ ನನಗೇ ನನ್ನ ಮೇಲೆ ತಿರಸ್ಕಾರದ ಭಾವ. ನೀನು ನನ್ನ ಹೃದಯದಲ್ಲಿ ಆ ಪಳೆಯ ಆಸೆಗಳನ್ನು ಉದ್ರೇಕಿಸುತ್ತಿರುವೆ. ನನ್ನ ಜೀವನ ಸವಿಷ್ಟವಲ್ಲ'

ಗಣೇಶನ ಹೃದಯದ ಮುಂದೆ ನೂರಾರು ಪ್ರಶ್ನೆಗಳು ಚಾಚಿದ್ದವು. ಹೀಗೆ ಪ್ರಶ್ನೆಗಳ ಕಲಂಕಪ್ಪ ಅವನಿಗೆ ಕಾಡಿತು. ಆತನು ಏನೂ ಮಾತಾಡದ ಎದ್ದು ಹೊರಟು ಹೋದನು. ಮನೆಗೆ ಬಂದು ಹಾಸಿಗೆಯ ಮೇಲೆ ಬಿದ್ದನು. ಮನಸ್ಸನ್ನು ಶಾಂತಗೊಳಿಸಲು ವೀಣೆಯನ್ನು ತೆಗೆದುಕೊಂಡನು. ವೀಣೆಯ ತಂತಿಯ ಸ್ವರದಲ್ಲಿ ತತ್ತ್ವ ಹುಡುಕಿದನು.

ಗಣೇಶನು ಯೋಚಿಸಿದನು, ಪ್ರತಿಭಟನೆ ಎಲ್ಲಿದೆ? ಪ್ರಥಮದ ಸತ್ಯ ಸಂಧ್ಯಾ ಕಾರ್ಯದ ಸುಂದರ ನೆನಪುಗಳೂ ಮಧುವಿನ ಚಿತ್ರ. ಆದರೆ ನೀಲಮಾಮಿಯಂತೆ ಚಂದ್ರನಲ್ಲಿ ಕಲಂಕವಿದ್ದರೂ ಆತನ ಛಾಯೆಯು ಶಿತಲವೂ ಆನಂದದಾಯಕವೂ ಆಗಿದೆ. ಅಕ್ಷರದ ಜನಯಿತ್ರಿಯೇ ಪೂರ್ಣತೆ ಇಲ್ಲದಿದ್ದಾಗ ಮಾನವನಲ್ಲಿ ಪರಿಪೂರ್ಣತೆಯನ್ನು ಹುಡುಕುವುದು ಏಕೆ? ಟೆಸ್ಸಳ ವಿಚಾರದಂತೆ ಉಂಟಾದ ಆ ಮಧುವಿನ ವಿಚಾರದಲ್ಲಿ ಹೀಗಾಗದಿದ್ದರೆ ನನ್ನ ಓದಿನ ಪ್ರಯೋಜನವೇನು? ಕಳೆದ ಮಧುವಿನ ತಪ್ಪಾದರೂ ಏನು? ಆಕೆಯು ತನ್ನ ನಿಜವಾದ ಕಥೆಯನ್ನು ಹೇಳಿದಳಲ್ಲ ನನ್ನ ಪ್ರೇಮವು ಕಡಿಮೆಯಾಯಿತೇ? ಅವಳ ದುಃಖವನ್ನು ಕಡಿಮೆ ಮಾಡುವೆ. ನ್ಯಾಯವಲ್ಲ. ಮಧುವನ್ನು ಸ್ವೀಕರಿಸುವ ಆ ಧೈರ್ಯವಿದೆ. ಅದನ್ನು ಮಧುವಿಗೆ ಹೇಳಬೇಕು. ಆಗ ನಾ ಧ್ವನಿ ತ್ತು. ಆಕೆ ನನ್ನ ಮೇಲೆ ಭಾವಿಸಿ ಇಟ್ಟ ಆದನ್ನು ಹೇಳಬೇಕು'

ಗಣೇಶನು ವೀಣೆಯನ್ನು ಎತ್ತಿ ತೆಗೆದು "ಹೌದು, ಈ ವೀಣೆಯ ತಂತಿಗಳ ನಾದ ಯೋಗ್ಯವಾಗಿಲ್ಲ ಆದರೆ ಅದರ ಶಾಂತಿ ತುಂಡಾಗಿಯೂ ವೀಣೆ ಒಡೆದಿಲ್ಲ. ತಂತಿಯನ್ನು ಕಟ್ಟಿದರೆ ಹಿಂದಿನಂತೆ ವೀಣೆಯು ನುಡಿಯುವದು" ಎಂದುಕೊಂಡನು.

ಗಣೇಶನು ತಂತಿಯನ್ನು ಕಟ್ಟಿದನು. ಪುನಹ ಸಂಗೀತ ಪ್ರಾರಂಭವಾಯಿತು.

ಕೊಡಗು

ತಾ. ೧೬-೩-೧೯೫೧ನೇ ಶುಕ್ರವಾರ

ಕೊಡಗಿನ ಹೈಕೋರ್ಟು.

ಈ ತಾರೀಕು ೭ರಲ್ಲಿ ಡೆಲ್ಲಿಯಲ್ಲಿ ಇಂಡಿಯಾದ ಪಾರ್ಲಿಮೆಂಟ್ ಸಭೆಯಲ್ಲಿ ಗೃಹ ಮಂತ್ರಿಯಾದ ಶ್ರೀ ಸಿ. ರಾಜಗೋಪಾಲಾಚಾರಿಯವರು ಹೀಗೆಂದರೆಂದು ಪತ್ರಿಕೆಗಳಲ್ಲಿ ಪ್ರಕಟವಾಗಿದೆ. 'ಮೈಸೂರು ಹೈಕೋರ್ಟಿನ ವ್ಯವಹಾರ ಕ್ಷೇತ್ರವನ್ನು ಕೊಡಗಿಗೂ ವಿಸ್ತರಿಸುವ ಆಲೋಚನೆಯನ್ನು ಇಂಡಿಯಾ ಸರಕಾರದವರು ಮಾಡುತ್ತಿರುವರು. ಈ ರೀತಿಯ ಕ್ಷೇತ್ರ ಬದಲಾವಣೆಗೆ ಚೀಫ್ ಕಮಿಷನರು ಮಾಡಿರುವ ಸೂಚನೆಗೆ ಕೊಡಗು ನ್ಯಾಯವಿಧಾಯಕ ಸಭೆಯ ಸರ್ವಸಮ್ಮತವಾದ ಒಪ್ಪಿಗೆ ಇದೆ' ಗೃಹ ಮಂತ್ರಿಯವರ ಈ ಹೇಳಿಕೆಯು ಕೊಡಗಿನ ಜನರನ್ನು ವಿಸ್ಮಯಗೊಳಿಸಿದೆ. ಯಾಕೆಂದರೆ ಹೈಕೋರ್ಟಿನ ಬದಲಾವಣೆಯ ವಿಷಯ ಪ್ರಥಮವಾಗಿ ಚೀಫ್ ಕಮಿಷನರು ಸೂಚನೆ ಮಾಡಲಿಲ್ಲ. ಕಳೆದ ಡಿಸೆಂಬರಿನಲ್ಲಿ ನಡೆದ ಕೌನ್ಸಿಲ ಸಭೆಯಲ್ಲಿ ಕಾಂಗ್ರೆಸ್ ಪಕ್ಷದ ಒಬ್ಬ ಮೆಂಬರು ಕೊಡಗಿಗೆ ಮದ್ರಾಸು ಹೈಕೋರ್ಟಿನ ಬದಲು ಮೈಸೂರು ಹೈಕೋರ್ಟನ್ನು ಅಪೀಲು ಕೋರ್ಟಾಗಿ ಮಾಡಬೇಕೆಂದು ಠರಾವು ತಂದದ್ದಾಗಿದೆ. ಆ ಠರಾವಿನ ವಿಷಯ ದೀರ್ಘ ಚರ್ಚೆ ನಡೆದು ಸರಕಾರಿ ಮೆಂಬರರು ಮೂವರು ಅಭಿಪ್ರಾಯವನ್ನು ಸೂಚಿಸದೆಯೂ ಓಟು ಮಾಡದೆಯೂ ಇದ್ದರು. ಆದರೆ ಕಾಂಗ್ರೆಸ್ ಪಕ್ಷದ ಆರು ಮೆಂಬರರುಗಳು ಪರವಾಗಿಯೂ ಸ್ವತಂತ್ರ ಪಕ್ಷದ ಐದು ಮೆಂಬರರುಗಳು ವಿರೋಧವಾಗಿಯೂ ಓಟು ಮಾಡಿದ್ದರಿಂದ ಠರಾವು ಬರೀ ಒಂದು ಓಟಿನ ಬಹುಮತದಿಂದ ಪಾಸಾದದ್ದಾಗಿದೆ. ಇದರಿಂದ ಈ ಅಭಿಪ್ರಾಯಕ್ಕೆ ಸರ್ವಸಮ್ಮತ ಒಪ್ಪಿಗೆ ದೊರೆತಿರುವುದಿಲ್ಲ; ಇದು ಬರೀ ಕಾಂಗ್ರೆಸ್ ಪಕ್ಷದ ಠರಾವೆಂಬುದು ಸ್ಪಷ್ಟವಾಗುತ್ತದೆ.

ಕೊಡಗು ಕೌನ್ಸಿಲಿನಲ್ಲಿ ಹದಿನೆಂಟು ಚುನಾಯಿತ ಮೆಂಬರುಗಳಿರುವರು. ಇವರ ಪೈಕಿ ಬರೀ ಆರು ಜನರು ಮಾತ್ರ ಈ ಠರಾವಿಗೆ ಒಪ್ಪಿಗೆಯನ್ನಿತ್ತಿರುವರು. ಅಂದ ಮೇಲೆ ಇದಕ್ಕೆ ಕೌನ್ಸಿಲು ಮೆಂಬರುಗಳ ಹಾಗೂ ದೇಶದವರ ಬಹುಮತದ ಒಪ್ಪಿಗೆ ಇದೆಯೆಂದು ಹೇಳಲಾಗುವುದಿಲ್ಲ. ಅದೂ ಅಲ್ಲದೆ ಈಗಿನ ಕೌನ್ಸಿಲು ಮೆಂಬರುಗಳು ೧೯೪೫ರಲ್ಲಿ ಆರಿಸಲ್ಪಟ್ಟವರಾಗಿರುವರು. ಅವರ ಅವಧಿ ಮುಗಿದು ಮೂರು ವರ್ಷಗಳು ದಾಟಿವೆ. ಈ ಆರು ವರ್ಷಗಳಲ್ಲಿ ದೇಶದಲ್ಲಿ, ಮುಖ್ಯವಾಗಿ ರಾಜಕೀಯ ವಿಚಾರದಲ್ಲಿ ವಿಶೇಷ ಬದಲಾವಣೆಗಳು ಉಂಟಾಗಿವೆ. ಆದುದರಿಂದ ಈಗಿನ ಕೌನ್ಸಿಲು ಮೆಂಬರುಗಳು ದೇಶದ ಜನರ ಅಭಿಪ್ರಾಯವನ್ನು ಪ್ರತಿಬಿಂಬಿಸುವವರಲ್ಲವೆಂದು ಹೇಳಬೇಕಾಗಿದೆ. ಈ ವಿಚಾರವನ್ನು ಸಾರ್ವಜನಿಕರು ಹಲವು ಬಾರಿ ವಿಶದಪಡಿಸಿರುವರು.

ಕೆಲವು ವರ್ಷಗಳ ಹಿಂದೆ ಮದ್ರಾಸಿನ ಜಿಲ್ಲೆಯಾದ ಚಿತ್ತೂರಿನ ಜಿಲ್ಲಾ ಜಡ್ಜರು ಬೆಂಗಳೂರಿನ ಕಂಟೋನ್ಮೆಂಟಿನಲ್ಲಿ ಕೋರ್ಟು ನಡೆಸುತ್ತಾ ಕೊಡಗಿನ ಅಪೀಲು ಕೇಸುಗಳನ್ನು ವಿಚಾರಿಸುತ್ತಿದ್ದರು. ಬೆಂಗಳೂರು ಕಂಟೋನ್ಮೆಂಟು ಮೈಸೂರು ಸರಕಾರಕ್ಕೆ ಸೇರಿಸಲ್ಪಟ್ಟನಂತರ ಮದ್ರಾಸಿನ ಹೈಕೋರ್ಟೇ ಕೊಡಗಿನ ಅಪೀಲು ಕೋರ್ಟಾಗಿ ಸುಮಾರು ಎರಡು ವರ್ಷಗಳ ಹಿಂದೆ ನಿರ್ಧರಿಸಲ್ಪಟ್ಟಿತು. ಇದಕ್ಕೆ ಕೊಡಗಿನ ಸರಕಾರದವರು ವರ್ಷಕ್ಕೆ ಬರೀ ೪,೦೦೦ ರೂಪಾಯಿಗಳನ್ನು ಮಾತ್ರ ವಂತಿಗೆಯಾಗಿ ಮದ್ರಾಸು ಸರಕಾರಕ್ಕೆ ಕೊಡುತ್ತಿರುವರು. ಇಷ್ಟರವರೆಗೆ ಮದ್ರಾಸು ಹೈಕೋರ್ಟಿನ ವಿಚಾರಣೆ ಮತ್ತು ತೀರ್ಪು ಕೊಡಗಿನವರಿಗೆ ತೃಪ್ತಿಕರವಾಗಿರುತ್ತದೆ. ಇಂಥಾ ತೃಪ್ತಿಕರವಾದ ಏರ್ಪಾಡನ್ನು ಬದಲಾಯಿಸಬೇಕಾದರೆ ಇದಕ್ಕಿಂತಲೂ ಉತ್ತಮವಾದ ಅನುಕೂಲತೆಗಳು ದೊರೆಯುವಂತಾಗಬೇಕು. ಬದಲು ಈಗ ಆಲೋಚಿಸಿರುವ ಬದಲಾವಣೆಯಿಂದ ದೇಶದ ಹಿತಕ್ಕೆ ದೊಡ್ಡ ಹಾನಿ ಉಂಟಾಗಬಹುದೆಂದೇ ಕಂಡುಬರುತ್ತದೆ. ಮೈಸೂರು ಹೈಕೋರ್ಟೆಂದರೆ ಬೆಂಗಳೂರಿನಲ್ಲಿರುವ ಕೋರ್ಟು. ಮದ್ರಾಸಿಗಿಂತ ಸಮೀಪವೆಂತಲೂ, ಕನ್ನಡ ಭಾಷೆಯ ಪ್ರದೇಶವೆಂತಲೂ, ಕೊಡಗಿನ ಲಾಯರುಗಳಿಗೆ ಅನುಕೂಲವಾಗುವುದಲ್ಲದೆ ಖರ್ಚು ಕಡಿಮೆಯಾಗುವುದೆಂದೂ ಈ ಸೂಚನೆಗೆ ಒತ್ತಾಸೆ ನೀಡುವವರ ವಾದವಾಗಿದೆ. ಬೆಂಗಳೂರಿನಿಂದ ಮದ್ರಾಸಿಗೆ ಬರೀ ಒಂದು ರಾತ್ರಿಯ ಪ್ರಯಾಣವಾಗಿದೆ. ನಿದ್ರಿಸುತ್ತಾ ಕಳೆಯುವ ರಾತ್ರಿಯನ್ನು ಪ್ರಯಾಣಕ್ಕೆ ಉಪಯೋಗಿಸುವುದರಿಂದ ಸಮಯವನ್ನು ವ್ಯರ್ಥಗೊಳಿಸಿದಂತಾಗುವುದಿಲ್ಲ. ಈ ಪ್ರಯಾಣದ ಖರ್ಚಾದರೂ ಬಹಳ ಕಡಿಮೆ. ಹೈಕೋರ್ಟಿನಲ್ಲಿ ಕಕ್ಷಿಗಾರರ ಹಾಜರಿ ಬೇಕಿಲ್ಲ. ಬರೀ ರಿಕಾರ್ಡುಗಳ ಮೇಲೆ ವಾದಿಸಿ ತೀರ್ಪು ಕೊಡುವದಾಗಿದೆ. ಈ ವಿಚಾರಣೆಗಳೆಲ್ಲವೂ ಈಗ ಇಂಗ್ಲಿಷ್ ಭಾಷೆಯಲ್ಲಿ ನಡೆಯುವದರಿಂದ ಕನ್ನಡ ಭಾಷೆಯ ಪ್ರದೇಶವೆಂಬುದರಿಂದ ಹೆಚ್ಚಿನ ಪ್ರಯೋಜನವಿಲ್ಲ. ಮದ್ರಾಸಿನಲ್ಲೂ ಕನ್ನಡ, ಮಲಯಾಳ, ತಮಿಳು, ತೆಲುಗು ಭಾಷೆ ಬಲ್ಲಿರುವ ಲಾಯರುಗಳಿರುವರು. ಮದ್ರಾಸಿನಲ್ಲಿ ಲಾಯರುಗಳ ಸಂಖ್ಯೆಯು ಬೆಂಗಳೂರಿಗಿಂಥಾ ಬಹಳ ದೊಡ್ಡದಾಗಿದೆ. ಮತ್ತು ಹೆಚ್ಚು ಸಂಖ್ಯೆಯಲ್ಲಿ ದಕ್ಷ ಹಾಗೂ ಪ್ರತಿಭಾಶಾಲಿ ಲಾಯರುಗಳು ಸಹ ದೊರಕುವರು. ಮೈಸೂರಿನವರು ಕೂಡ ತಮ್ಮ ಕೇಸುಗಳಿಗಾಗಿ ಮದ್ರಾಸಿನಿಂದ ಪ್ರಸಿದ್ಧ ಲಾಯರುಗಳನ್ನು ಕರೆಸುವದಿದೆ. ಒಬ್ಬ ಪ್ರಸಿದ್ಧ ಲಾಯರನ್ನು ಮದ್ರಾಸಿನಲ್ಲಿ ನಿಶ್ಚಯಿಸಿ ಅಲ್ಲಿ ಅವರ ಸಹಾಯ ಪಡೆಯುವದು ಅವರನ್ನು ಬೆಂಗಳೂರಿಗೆ ಕರೆಸುವದಕ್ಕಿಂಥಾ ಸುಲಭವೂ, ಕಡಿಮೆ ಖರ್ಚಿನದೂ ಆಗಿದೆ. ಈ [illegible] ಮದ್ರಾಸಿನ ಕೋರ್ಟಿನ [illegible] ಕೇಸುಗಳ ತೀರ್ಮಾನ ಪ್ರತಿಯು [illegible] ಬೆಂಗಳೂರಿನಿಂದ ಪಡೆಯುವದಕ್ಕಿಂಥಾ ಕಡಿಮೆ ಖರ್ಚಿನಲ್ಲಾಗುವದು. ಮೇಲಾಗಿ ಕೋರ್ಟುಗಳ ತೀರ್ಮಾನವು ದಕ್ಷರಾದ ಲಾಯರುಗಳ ವಾದ ಕೌಶಲವನ್ನು [illegible] ಅವಲಂಬಿಸಿರುವದೆಂಬುದು ಕಕ್ಷಿದಾರರಿಗೆ [illegible] ಅಂಥ ವಿಷಯವಾಗಿದೆ.

ಮದ್ರಾಸು ಹೈಕೋರ್ಟು ಹಿಂದೂದೇಶದಲ್ಲಿ ಕೀರ್ತಿ ಹೊಂದಿದ ಹೈಕೋರ್ಟಾಗಿದೆ. ಇದರ ತೀರ್ಪುಗಳು ಮೇಲ್ದರ್ಜೆಯವೆಂದು ಪ್ರಸಿದ್ಧವಾಗಿವೆ. ಈ ಹೈಕೋರ್ಟಿನಲ್ಲಿ ಸುಮಾರು ೧೬ ಜಡ್ಜರುಗಳಿರುವರು. ಪ್ರಾಮುಖ್ಯ ಕೇಸುಗಳಲ್ಲಿ ಏಳು ಜಡ್ಜರುಗಳು ಕೂತು ತೀರ್ಪು ಕೊಟ್ಟ ನಿದರ್ಶನಗಳಿವೆ. ಮೈಸೂರು ಹೈಕೋರ್ಟಿನಲ್ಲಿ ಜಡ್ಜರ ಸಂಖ್ಯೆ ಕಡಿಮೆಯಾಗಿದೆ. ಇಂಥಾ ಮದ್ರಾಸು ಹೈಕೋರ್ಟಿನಿಂದ ಕೊಡಗಿನ ಜನರಿಗೆ ತೃಪ್ತಿಕರವಾದ ತೀರ್ಪುಗಳು ದೊರೆಯುತ್ತಿರುವ ಈ ಸಮಯದಲ್ಲಿ ಈ ಹೈಕೋರ್ಟನ್ನು ಬದಲಾಯಿಸುವದರಲ್ಲಿ ಅರ್ಥವಿಲ್ಲ. ಕೊಡಗಿನ ಲಾಯರುಗಳಿಗೆ ಮೈಸೂರು ಹೈಕೋರ್ಟಿನಿಂದ ಹೇಗೆ ಅನುಕೂಲವಾಗುವದೆಂದು ತಿಳಿಯದು. ಹಾಗೆ ಒಂದು ವೇಳೆ ಅದು ಅನುಕೂಲವಾದರೂ ಕೂಡ ಬರೀ ಲಾಯರುಗಳ ಅನುಕೂಲತೆಗಾಗಿ ದೇಶದ ಜನತೆಯ ಹಾಗೂ ಕಕ್ಷಿದಾರರ ಹಿತವನ್ನು ಲೆಕ್ಕಿಸದೆ ಹೈಕೋರ್ಟನ್ನು ಮದ್ರಾಸಿನಿಂದ ಮೈಸೂರಿಗೆ ಬದಲಾಯಿಸುವದು ಎಂದೂ ನ್ಯಾಯವಲ್ಲ.

ಕೊಡಗು ಕೌನ್ಸಿಲಿನಲ್ಲಿ ಈ ಮೊದಲು ಚುನಾಯಿತ ಮೆಂಬರುಗಳ ಬಹುಮತ ಮಾತ್ರವಲ್ಲ; ಒಮ್ಮತದಿಂದ ಪಾಸಾದ ಠರಾವುಗಳು ಇದ್ದರೂ ಅವುಗಳನ್ನು ಜಾರಿಗೆ ತಾರದೆ ನೆಗ್ಗೆ ಹಾಕಿ ಒಂದು ಪಕ್ಷದವರ ಮಾತ್ರ, ಬರೀ ಒಂದು ಓಟಿನ ಬಹುಮತದಿಂದ ಪಾಸಾದ ಠರಾವನ್ನು [illegible] ಶಿಫಾರಸ್ಸುಮಾಡಿ ಇಂಡಿಯಾ ಸರಕಾರಕ್ಕೆ ಕಳುಹಿಸಿದ್ದು ಆಶ್ಚರ್ಯವೇ ಸರಿ. ಈ ಬದಲಾವಣೆಯು ರಾಜಕೀಯಕ್ಕೆ ಅಂದರೆ ಕೊಡಗನ್ನು ಮೈಸೂರಿಗೆ ಸೇರಿಸುವದಕ್ಕೆ ಯಾವ ಸಂಬಂಧವಿಲ್ಲವೆಂದು ಪಾರ್ಲಿಮೆಂಟ್ ಸಭೆಯಲ್ಲಿ ಹೇಳಲ್ಪಟ್ಟರೂ ನಮ್ಮ ಕೌನ್ಸಿಲಿನಲ್ಲಿ ಇದಕ್ಕೆ ಒತ್ತಾಸೆ ಕೊಟ್ಟ ಪಕ್ಷದ ಗುರಿಯಿಂದಲೂ, ಈ ವಾರ್ತೆಯನ್ನು ಕೇಳಿದ ಕೂಡಲೇ ದೇಶದ ಜನರು ಹಲವು ಭಾಗಗಳಲ್ಲಿ ಸೇರಿ ಮಾಡುತ್ತಿರುವ ವಿರುದ್ಧ ಠರಾವುಗಳಿಂದಲೂ ಇದಕ್ಕೂ ಕೊಡಗಿನ ಭವಿಷ್ಯತ್ತಿಗೂ ಸಂಬಂಧವಿಲ್ಲವೆಂದು ಹೇಳಲಾಗುವದಿಲ್ಲ. ಈ ವಿಚಾರವನ್ನು ಇಂಡಿಯಾ ಸರಕಾರವು ಆಲೋಚಿಸುತ್ತಿರುವ ಕಾರಣ ದೇಶೀಯರು ತಟಸ್ಥರಾಗಿರದೆ ಸಕಾಲದಲ್ಲಿ ಎಚ್ಚೆತ್ತು ಈ ಬದಲಾವಣೆಯಿಂದ ದೇಶದ ಹಿತಕ್ಕೂ ಮತ್ತು ಅದರ ಭವಿಷ್ಯತ್ತಿಗೂ ಹಾನಿ ಉಂಟಾಗುವದೆಂಬುದನ್ನು ಇಂಡಿಯಾ ಸರಕಾರಕ್ಕೆ ಮನದಟ್ಟು ಪಡಿಸುವರಾಗಿ ಆಶಿಸುತ್ತೇವೆ.

ವರ್ತಮಾನ.

ದಕ್ಷಿಣ ಕೊಡಗು ಸಹಕಾರ ಸ್ಟೋರಿನ ೧೯ನೇ ವಾರ್ಷಿಕ ಮಹಾಸಭೆಯು ತಾ. ೨೫-೩-೧೯೫೧ನೇ ಆದಿತ್ಯವಾರ ಅಪರಾಹ್ನ ೧.೩೦ ಗಂಟೆಗೆ ವೀರಾಜಪೇಟೆ ಮುನಿಸಿಪಲ್ ಹಾಲಿನಲ್ಲಿ ನಡೆಯುವುದು.

ಕೊಡಗಿನ ಈ ಮೊದಲಿನ ಚೀಫ್ ಕಮಿಷನರಾಗಿದ್ದ ಶ್ರೀ ಸಿ. ಟಿ. ಮೊದಲಿಯಾರರನ್ನು ಇಂಡಿಯಾ ಕಾಫಿ ಮಾರ್ಕೆಟಿಂಗ್ ಬೋರ್ಡಿನ ಚೀಫ್ ಆಫೀಸರಾಗಿ ನೇಮಿಸಿರುವರೆಂದು ತಿಳಿದು ಬಂದಿದೆ.

ತಾರೀಕು ೬ರಲ್ಲಿ ಡೆಲ್ಲಿಯಿಂದ ಚೀಫ್ ಕಮಿಷನರು ಬರುವರೆಂಬ ನಿರೀಕ್ಷೆ ಇದ್ದರೂ ಇನ್ನೂ ಬಂದಿರುವದಿಲ್ಲ. ತಾರೀಕು ೨೦ರ ನಂತರ ಬರುವರೆಂಬ ಸುದ್ದಿ ಇದೆ.

ತಾರೀಕು ೧೧-೩-೫೧ರಲ್ಲಿ ಕೊಡಗು ಪ್ರಾಂತೀಯ ಮಹಾಸಭೆಯು ವೀರಾಜಪೇಟೆಯಲ್ಲಿ ನಡೆದು ಶ್ರೀಗಳಾದ ಕೆ. ಪಿ. ಅಪ್ಪಯ್ಯ, ಪಿ. ಐ. ಬೆಳ್ಯಪ್ಪ, ಕೆ. ಟಿ. ಉತ್ತಪ್ಪ, ಪಿ. ಸಿ. ಉತ್ತಯ್ಯ ಮತ್ತು ಕೆ. ಎ. ಚೆಂಗಪ್ಪ ಇವರುಗಳು ಬಿಡಿ ಮೆಂಬರರ ಪರವಾಗಿಯೂ, ಶ್ರೀಗಳಾದ ಎಂ. ಎಸ್. ಸೋಮಯ್ಯ, ಎ. ಎಸ್. ಪೊನ್ನಪ್ಪ, ಪಿ. ಎ. ಐಯ್ಯಣ್ಣ, ಕೆ. ಎಂ. ಮೊಣ್ಣಪ್ಪ, ಎಸ್. ಎನ್. ರಾಮಶೆಟ್ಟಿ, ಎಚ್. ಟಿ. ಮುತ್ತಣ್ಣ, ಕೆ. ಕೆ. ಗಣಪತಿ, ಹಾಜಿ ಬಿ. ಕೆ. ಹಬೀಬ ಅಬ್ದುಲ್ ಖಾನ್, ಕೆ. ಎಂ. ತಿಮ್ಮಯ್ಯ ಮತ್ತು ಎಂ. ಸಿ. ದೇವಯ್ಯ ಇವರುಗಳು ಸಂಘಗಳ ಪರವಾಗಿಯೂ ಡೈರೆಕ್ಟರುಗಳಾಗಿ ಆರಿಸಲ್ಪಟ್ಟಿರುವರು. ಡೈರೆಕ್ಟರುಗಳಲ್ಲಿ ಎಂಟು ಜನ ಹಳಬರೂ ಏಳು ಜನ ಹೊಸಬರೂ ಆಗಿರುವರು.

ಕೊಡಗು ಜೇನುಮೇಣ ಸಹಕಾರಿ ಸಂಘದ ವಾರ್ಷಿಕ ಮಹಾಸಭೆಯು ಈ ತಾ. ೧೧ರಲ್ಲಿ ನಿವೃತ್ತ ಚೀಫ್ ಕಮಿಷನರರಾದ ಶ್ರೀ ಕೆ. ಚೆಂಗಪ್ಪನವರ ಅಧ್ಯಕ್ಷತೆಯಲ್ಲಿ ವೀರಾಜಪೇಟೆಯಲ್ಲಿ ನಡೆಯಿತು.

ತಾ. ೧೧ರ ಬೆಳಗ್ಗೆ ವೀರಾಜಪೇಟೆಯಲ್ಲಿ ಬಿಟ್ಟಿಯಂಡ ಲೇಟ್ ಗಣಪತಿಯವರ ಮಗ ತಿಮ್ಮಯ್ಯನು ಕಾರಣಾಂತರದಿಂದ ಗುಂಡು ಹೊಡೆದುಕೊಂಡು ಆತ್ಮಹತ್ಯ ಮಾಡಿಕೊಂಡನೆಂದು ವರ್ತಮಾನ.

ಸೈನ್ಯದಲ್ಲಿ ಕ್ಯಾಪ್ಟನರಾಗಿದ್ದ ಶ್ರೀ ಪಟ್ಟಮಾಡ ಮಾದಪ್ಪನವರು ಪೇರಶೂಟ್ ತರಬೇತಿನ ಸಮಯದಲ್ಲಿ ಅಪಘಾತಕ್ಕೀಡಾಗಿ ಮರಣಹೊಂದಿದರೆಂದು ತಿಳಿಯ ಬರುತ್ತದೆ.

ಚೀಫ್ ಕಮಿಷನರು ಕೊಡಗಿನಲ್ಲಿ ಇಲ್ಲದ ಕಾರಣ ತಾ. ೧೬-೩-೫೧ರಲ್ಲಿ ನಡೆಯಲಿದ್ದ ಶಿಶು ಪ್ರದರ್ಶನವನ್ನು ಮುಂದೆ ಹಾಕಲಾಗಿದೆ.

ಕೊಡಗು ಪ್ರಾಂತೀಯ ಕೇಂದ್ರ ಜಾನುವಾರು ಪ್ರದರ್ಶನವು ತಾ. ೨೪-೩-೫೧ರಲ್ಲಿ ಅನ್ನಿಕ್ಕತ್ತಿಯಲ್ಲಿ ಇಂಡಿಯಾದ ಡೈರಿ ರೀಸರ್ಚ್ ಸಂಸ್ಥೆಯ ಡೈರೆಕ್ಟರಾದ ಡಾ. ಕೊಠವಾಲರ ಅಧ್ಯಕ್ಷತೆಯಲ್ಲಿ ನಡೆಯುವದು.

ಶನಿವಾರಸಂತೆಯಿಂದ ಹೆಬ್ಬಾಲೆ ಟೋಲ್‌ಗೇಟಿಗೆ ಹೋಗುವಾಗ ಗಾಡಿ ರಸ್ತೆಯಲ್ಲಿ ತಾ. ೧೧-೩-೫೧ನೇ ಭಾನುವಾರದ ಮಧ್ಯಾಹ್ನ ಮಾರ್ಗದಲ್ಲಿ ನಡೆದುಕೊಂಡು ಹೋಗುತ್ತಿದ್ದ ಸಕಲೇಶಪುರ ತಾಲೋಕು ಅರೆಹಳ್ಳಿ ಶಾಂತಪ್ಪನವರಿಂದ ಯಾರೋ ರೂ. ೩,೦೦೦ನ್ನು ಅಪಹರಿಸಿ ಓಡಿ ಹೋಗಿದ್ದಾರೆಂದು ಈ ವಿಷಯ ಪೋಲಿಸಿಗೆ ಪುಕಾರು ಹೋಗಿದೆಯೆಂದೂ ತಿಳಿದುಬಂದಿದೆ.

ನಾಪೋಕ್ಲು ಮಹಿಳಾ ಸಮಾಜದವರು ತಾ. ೬-೩-೫೧ನೇ ರಾತ್ರಿ ಸ್ಥಳೀಯ ಶಾಲೆಯಲ್ಲಿ 'ಬಹದ್ದೂರ್ ಗಂಡ' ಮತ್ತು 'ಶಾಮಣ್ಣನ ಸಾಹಸ' ಎಂಬ ಎರಡು ಸಾಮಾಜಿಕ ನಾಟಕಗಳನ್ನು ಅಭಿನಯಿಸಿದರು.

ತಾರೀಕು ೨೨ರಲ್ಲಿ ಫೈನಾನ್ಸು ಕಮಿಟಿ ಮೀಟಿಂಗು ನಡೆಯುವದು.

ಓದುಗರ ಓಲೆಗಳು

ಪಾರಾಣೆಯಲ್ಲಿ ಶಿವರಾತ್ರಿ

ಶಿವರಾತ್ರಿಯಲ್ಲಿ ಪಾರಾಣೆಯ ಶಾಲೆಯಲ್ಲಿ ನಾಪೋಕ್ಲು ಮಹಿಳಾ ಸಮಾಜದವರು ನಾಟಕವಾಡಲಿರುವರೆಂಬ ವರ್ತಮಾನವು ಸುಮಾರು ಒಂದು ತಿಂಗಳ ಮುಂಚೆಯೇ ನನ್ನ ಮಸ್ತಕದಲ್ಲೆಲ್ಲ ತುಂಬಿಹೋಗಿತ್ತು. ಸಾಧ್ಯವಾದರೆ ಹೋಗಿ ಆ ನಾಟಕ ನೋಡಿಯೇ ಬಿಡಬೇಕೆಂಬ ಕುತೂಹಲ ನನಗೂ ಬಲವಾಗಿತ್ತು. ಹಾಗೆಯೇ ಆ ರಾತ್ರಿ ಒಂಭತ್ತು ಗಂಟೆಗೆ ಸರಿಯಾಗಿ ಹೋದೆ. ನಾಟಕವು ಒಂದಲ್ಲ, ನಾಟಕಗಳು ಎರಡಿದ್ದವು. ಅವುಗಳನ್ನು ತಕ್ಕಷ್ಟು ಚೆನ್ನಾಗಿಯೂ ಅಭಿನಯಿಸಿದರು. ಆದರೂ ಒಟ್ಟಿನ ಮೇಲೆ ಆ ರಾತ್ರಿಯ ಆ ಉತ್ಸವವು ನನ್ನ ನಿರೀಕ್ಷಣೆಯ ಮಟ್ಟಕ್ಕಿಂತ ಕೆಳಗಿತ್ತೆಂದೇ ತೋರಿ ಹೋಯಿತು ನನ್ನ ಹಾಳು ಮನಸ್ಸಿಗೆ. ಎಂಟೂವರೆ ಗಂಟೆಗೆ ಪ್ರಾರಂಭವಾಗಬೇಕಿದ್ದ ನಾಟಕವು ಒಂಭತ್ತು ಗಂಟೆಗೆ ಪ್ರಾರಂಭವಾಯಿತು. ಈ ಅರ್ಧ ಗಂಟೆಯ ವಿಳಂಬಕ್ಕೆ ಸೂತ್ರಧಾರಿಗಳು ತಕ್ಕ ಮನ್ನಣೆಯನ್ನಿತ್ತು ಏನೋ ಒಂದು ಬಗೆಯ ವಿವರಣೆಯನ್ನು ಗಮನಾರ್ಹಿಸಿದರು! ಪ್ರಾರಂಭವಾದ ನಂತರ ಕಾರ್ಯಕ್ರಮವು ಸರಿಯಾಗಿ ಮುಂದೆ ನಡೆಯಿತಾದರೂ ನಟವರ್ಗದಲ್ಲಿ ಬೇಕಿನ ಹುರುಪು ತೋರಲಿಲ್ಲ. ತಮ್ಮ ಮಾತುಗಳನ್ನು ಮರೆತುಕೊಂಡು ಅಸಹಾಯಕ ನೇತ್ರಗಳಿಂದೊಡಗೂಡಿದ ತಮ್ಮ ದೀನ ವದನಗಳನ್ನು ಒಮ್ಮೊಮ್ಮೆ ಪರದೆಯ ಮರೆಯಲ್ಲಿ ನಿಂತಿದ್ದ ಪಿಸುಮಾತಿನ ಸಹಾಯಕನ ಕಡೆಗೆ ತಿರುಗಿಸುವವರೂ ಇದ್ದರು.

ನಟವರ್ಗದಲ್ಲಿನ ನಿರುತ್ಸಾಹಕ್ಕೆ ಸಭಿಕರೂ ಸ್ವಲ್ಪ ಮಟ್ಟಿಗೆ ಕಾರಣರೇ ಎಂದು ನನಗೆ ಹಲವುಬಾರಿ ತೋರಿಹೋಯಿತು. ಸಭೆಯಲ್ಲಿ ಅದರಲ್ಲೂ ಹಿಂದಿನ ಅರ್ಧದಲ್ಲಿ ವಿಪರೀತ ಗಲಭೆ. ಸಭಿಕರಲ್ಲಿ ಚೆನ್ನಾಗಿ ಕುಡಿದು ಬಾಹ್ಯ ಪ್ರಪಂಚವು ಒದಗಿಸಬಲ್ಲ ಸುಖದುಃಖಗಳ ಪರಿಣಾಮಗಳಿಗೆ ಒಳಪಡದೆ ತಮ್ಮದೇ ಆದ ಮಾರ್ಗ ಅಚಲವಾದ ಒಂದು ಆನಂದವನ್ನು ಅನುಭವಿಸುವುದು ಮಾತ್ರವಲ್ಲ ಇತರರಿಗೂ ಹಂಚಿ ಕೊಡಲು ಸಮರ್ಥರಾದ ವ್ಯಕ್ತಿಗಳು ತುಂಬಾ ಇದ್ದರು. ತಮ್ಮ ಸುತ್ತಮುತ್ತಲಿನ ಬಂಧುಗಳ ಕಣ್ಣು, ಕಿವಿ, ಮೂಗುಗಳಿಗೆ ಅವರು ತಕ್ಕಷ್ಟು ಕೆಲಸ ಕೊಡುತ್ತಿದ್ದರು. ರಂಗದಿಂದ ಏನಾದರೂ ಸಭಿಕರಿಗೆ ಕೇಳಲು ಪಾತ್ರ ವಹಿಸುವವರು ಪ್ರಾರಂಭಿಸಿದರೆ ಸಭಿಕರಲ್ಲಿದ್ದವರು ಎದ್ದು ನಿಂತು ಅವರ ಮಾತುಗಳಿಗೆ ಪ್ರತ್ಯುತ್ತರಗಳನ್ನು ಒಡನೆಯೇ ಕೊಡುವುದೂ ಇತ್ತು.

ನಾಟಕದಲ್ಲಿನ ಉತ್ತಮ ವರ್ಗದ ಹಾಸ್ಯ, ಚತುರತೆಯ ಮಾತುಗಳು, ಇವುಗಳಿಗೆ ಸಭಿಕರ ಕಡೆಯಿಂದ ಯಾವುದೊಂದು ಬಗೆಯ ಪ್ರತಿಕ್ರಿಯೆಯನ್ನು ತೋರದೆ ಅವರು ಕಥಾ ಸರಣಿಯನ್ನು ಅನುಸರಿಸುತ್ತಿದ್ದರೋ ಯಾ ನಿದ್ರೆಯಲ್ಲಿ ಮುಳುಗಿದ್ದರೋ ಎಂಬ ಸಂಶಯ ಹುಟ್ಟಿಸುತ್ತಿದ್ದರು. ಆದರೆ ನೀಚ ಪಾತ್ರಗಳು, ಕೀಳುತರದ ಹಳೆಯ ಹಾಸ್ಯಗಳು, ಹಾವಭಾವಗಳ ಕಡೆಗೆ ಕರತಾಡನಗಳ ಜೊತೆಗೆ ನಗುವಿನ ಘೋಷವು ಮಾರ್ಮೊರೆಯುತ್ತಿತ್ತು.

ಕೊನೆಯದೊಂದು ಸೋಜಿಗ. ನಾಟಕ ನಡೆದ ಮಂದಿರವು ಕಿಕ್ಕಿರಿದು ತುಂಬಿತ್ತು. ಎಲ್ಲದರೂ ಸಮಾಜದವರಿಗಾದ ಒಟ್ಟು ಹಣವು ಅದಕ್ಕೆ 'ರಿಯಲ್ಟಿ' ಎಂದರೆನ್ನುವರು. ಆ ಸೋಜಿಗಕ್ಕೆ ಸರಿಯಾದ ಆಧಾರವಿಲ್ಲವೆಂದು ತಿಳಿಯುತ್ತೇನೆ. ಅದು ನಿಜವಾದ ಪಕ್ಷದಲ್ಲಿ ಕೆಲವು ಜನರು ದ್ವಾರಪಾಲಕರನ್ನು ವಂಚಿಸಿ (ಅಥವಾ ಜಯಿಸಿ) ಪ್ರವೇಶ ಪಡೆದಿರಬೇಕು; ಅಥವಾ ಮಹಿಮೆಯ ಪಿಗಳ ಮಾಯಾ ಸ್ವಪ್ನವಂತೆ ಸಭಿಕರು ಮಂದಿರದೊಳಗೇ ಹುಟ್ಟಿಸಿರಬೇಕು!

ಒಂದೇ ಮಾತಿನಲ್ಲಿ ಹೇಳುವುದಾದರೆ ಇಂತಹ ಸಮಾರಂಭಗಳಲ್ಲಿ ಸಭಿಕರೂ, ಕಾರ್ಯಕ್ರಮದ ಸೂತ್ರಧಾರಿಗಳೂ ಇನ್ನೂ ಮೇಲ್ಮಟ್ಟದ ಶಿಸ್ತಿನಿಂದಲೂ ಹುರುಪಿನಿಂದಲೂ ಕೆಲಸಮಾಡಿದರೆ ಅದು ನಮ್ಮ ಸಾಮಾಜಿಕ ಪ್ರಗತಿಯ ನಿಜವಾದ ಪುರಾವೆ.

ಹಾಜರ್ದವ.

ಕೊಡಗು ಚೀಫ್ ಕಮಿಷನರಲ್ಲಿ ಮತ್ತು ರೇಶನ್ ಆಫೀಸರಲ್ಲಿ ವಿನಂತಿ.

ನಾಪೋಕ್ಲು ನಾಡಿಗೆ ಸೇರಿದ ಭಾಗಮಂಡಲ ನಾಡಿನ (ಬೇಂಗನಾಡ ಸಹ ಸೇರಿ) ಗ್ರಾಮಗಳಲ್ಲಿ ಈಗಾಗಲೇ ಊಟಕ್ಕೆ ಬತ್ತವಿಲ್ಲ. ಬೆಳೆ ಸ್ವಲ್ಪ ಕಡಿಮೆಯಾಗಿದ್ದೇ ಇದಕ್ಕೆ ಕಾರಣ. ಭಾಗಮಂಡಲದಲ್ಲಿ ಒಂದು ರೇಶನ್ ಅಂಗಡಿ ಇದೆ. ಆದರೆ ಬೇಂಗನಾಡಿನಲ್ಲಿ ರೇಶನ್ ಶಾಪಿಲ್ಲ. ಸರಕಾರದವರು ಪ್ರೊವಿನ್ಶಿಯಲ್ ರಿಸರ್ವ್ ಆಗಿ ಬತ್ತ ಇಟ್ಟು ರೇಶನ್ ಶಾಪ್ ಇಡದಿದ್ದರೆ ಬಂಗಾಳದ ಗತಿ ಕೊಡಗಿನಲ್ಲೂ, ಅದರಲ್ಲೂ, ಭಾಗಮಂಡಲ ಮತ್ತು ಬೇಂಗನಾಡಿನಲ್ಲಿ ಆಗುವದು ಖಂಡಿತ. ಈಗಾಗಲೇ ಬತ್ತ ಸಾಗಿಸಲಾಗುತ್ತಾ ಬರುತ್ತಿದೆ. ಇದರ ಜೊತೆಗೆ ಕೋಟೆಪಿಸರಿಗೆ ಇಷ್ಟೆಂಬ ಪರ್ಮಿಟ್ಟು ಕೊಟ್ಟು ಬತ್ತ ದೂರ ಹೋಗುತ್ತಿದೆ. ಸರಕಾರದವರು ಒಡನೆ ನಿಗಾಮಾಡುವರಾಗಿ ನಂಬಿದ್ದೇನೆ.

ಭಾಗಮಂಡಲದಲ್ಲಿ ಸಹ ಸದ್ಯ ಒಂದು ಸಾವಿರ ಬಟ್ಟಿ ಬತ್ತ ಇಡದಿದ್ದರೆ ಅಧೋಗತಿಯೇ ಸರಿ.

ಪೊನ್ನಪ್ಪ.

ಜೇಲಿ ಪೊಲೀಸರ ಗತಿ ಏನು?

ಮೇಲ್ಕಂಡ ಶಿರೋನಾಮೆಯಲ್ಲಿ ತಾ. ೨-೩-೫೧ರ ಪತ್ರಿಕೆಯಲ್ಲಿ ಶ್ರೀ ಕರಿಬಸಪ್ಪನವರು ಬರೆದ ಪ್ರತ್ಯೋಕ್ತಿಯು 'ಶಾಲೆಯೇ ಮನೆ, ಮನೆಯೇ ಶಾಲೆ' ಎಂಬ ಅಭಿಪ್ರಾಯದ ಉತ್ತರ ಸ್ವಾರಸ್ಯವಾಗಿದೆ. ಆದರೆ ಈ ಕೆಳಗಿನ ಕೆಲವು ವಿಚಾರಗಳ ಬಗ್ಗೆ ಅವರ ಅಕ್ಕಕ್ಕೆ ಪ್ರಶ್ನೆ ಹಾಕಿಕೊಂಡು, ಅದಕ್ಕೆ ಎಂಥಾ ಉತ್ತರ ಬರುವದೆಂಬುದನ್ನು ಅವರೇ ಮನನ ಮಾಡಲಿ!

...ಗಳು ರಲ್ಲಿ ಕೆಲಸಕ್ಕಾಗಿ ಸೇರಿದ ಬಂದ್ರಿಯದೇ? ಹಾಸ್ಟಲಿನ ಕೋಣೆ ಅವರ ಮನೆಯಲ್ಲಿ ಎಷ್ಟು ವರ್ಷವಿತ್ತು? ಹಾಸ್ಟೆಲಿನ ಗಡಿಯಾರ ಹಾಸ್ಟೆಲಿಗೋ ಅವರ ಮನೆಗೋ? ಅವರ ಕರ್ಮಕಿನ ಜೀವದಾನ ಸಂಬಂಧ ಡೆಪ್ಯುಟೇಶನ್ ಹೋದವರು ಟ್ಯಾಕ್ಸಿಬಾಡಿಗೆ ಕೊಟ್ಟಿರುವರೆ? ಅಂತೂ ಅವರು ಆದರ್ಶ ಅಧ್ಯಾಪಕರು!

ಪಟ್ಟಣಿಗ.

ಕ್ರಾಪ್ ಕಾಂಪಿಟಿಶನ್ ಆಫೀಸರು.

ಕ್ರಾಪ್ ಕಾಂಪಿಟಿಶನ್ ಆಫೀಸರಾಗಿ ಮೊನ್ನೆಯಾಗಿ ಎಗ್ರಿಕಲ್ಚರಲ್ ಡೆಮಾನ್ಸ್ಟ್ರೇಟರೊಬ್ಬರನ್ನು ನೇಮಿಸಿರುವದಾಗಿ ವರ್ತಮಾನವಿದೆ. ಈ ನೇಮಕದಲ್ಲಿ ಸರಕಾರವು ನ್ಯಾಯರೀತಿಯಿಂದ ವರ್ತಿಸಿಲ್ಲವೆಂದೂ ತೋರಿದೆ. ಹುದ್ದೆಗಳಿಗೆ ನೇಮಕ ಮಾಡುವಾಗ ಸರ್ವಿಸು, ಯೋಗ್ಯತೆ, ಶಾಸ್ತ್ರೀಯ ಅರ್ಹತೆಗಳನ್ನು ಗಮನಿಸಿ ಮಾಡಬೇಕು. ಮೇಲ್ಕಂಡ ನೇಮಕದಲ್ಲಿ ಇವರಿಗಿಂತ ಸರ್ವಿಸಿನವರು ಹಲವರಿದ್ದರೂ ಇವರಿಗಿಂತಾ ಅಲ್ಲದಿದ್ದರೂ ಇವರಷ್ಟೇ ವಿದ್ಯಾಯೋಗ್ಯತೆ ಇವರಿಗಿದ್ದರೂ ಕಾರ್ಯದಕ್ಷತೆಯನ್ನು ಅಳೆಯುವುದಾದರೆ ಇವರಿಗಿಂತ ದಕ್ಷರು ಬೇರಿದ್ದರೂ ೨ ಜೂನಿಯರೊಬ್ಬರಿಗಿದ್ದ ಇವರನ್ನು ಈ ರೀತಿ ನೇಮಿಸಲು ಕಾರಣವೇನು? ಸರಕಾರವು ಇತ್ತೀಚೆಗೆ ಮಾಡಿದ ಪ್ರತಿ ನೇಮಕದಲ್ಲೂ ದೇಶದಲ್ಲಿ ಅತೃಪ್ತಿ ಕಂಡುಬರುತ್ತಿದೆ. ಸರಕಾರ ಇಂಥಾ ನೇಮಕದಲ್ಲಿ ನಿಶ್ಚಿತ ನಿಯಮಗಳನ್ನು ಅನುಸರಿಸದೆ ಮನಸ್ವೇಚ್ಛೆಯಿಂದ ವರ್ತಿಸುತ್ತಿದೆಯೆಂಬ ಭಾವನೆ ಜನರಲ್ಲಿ ಹುಟ್ಟುವಂತಾಗಿದೆ.

'ನಿರೀಕ್ಷಕ.'

ಯಾವ ಯೋಗ್ಯತೆಗಾಗಿ?

ವ್ಯವಸಾಯ ಆದಾಯ ತೆರಿಗೆಯ ಇಲಾಖೆಯಲ್ಲಿ ಇನ್ಸ್‌ಪೆಕ್ಟರಾಗಿ ಒಬ್ಬರ ನೇಮಕವಾಗಿ ಅವರನ್ನು ತರಬೇತಿಗಾಗಿ ಬೆಂಗಳೂರಿಗೆ ಕಳುಹಿಸಲಾಯಿತು. ಬೆಂಗಳೂರಿನಲ್ಲಿ ವ್ಯವಸಾಯ ಆದಾಯ ತೆರಿಗೆಯ ವಿಚಾರದಲ್ಲಿ ತಕ್ಕ ತರಬೇತಿ ಕೊಡಲು ವ್ಯವಸ್ಥೆ ಇಲ್ಲದ ಕಾರಣ ಇಲ್ಲಿಂದ ಕಳುಹಿಸಲ್ಪಟ್ಟವರು ಸ್ವಸ್ಥಾನಕ್ಕೆ ಮರಳಿದರೆಂದೂ ವರ್ತಮಾನವಿದೆ. ಆ ನಿಜ ನಿಜವಲ್ಲದಿರಬಹುದು. ಏಕೆಂದರೆ ಕೊಡಗು ಸರಕಾರವು ಪುನಃ ತರಬೇತಿಗೆ ಕಳುಹಿಸಿರುವರು. ಆದರೆ ತರಬೇತಿಗಾಗಿ ಆ ವ್ಯಕ್ತಿಯನ್ನು ಆರಿಸಿದ್ದರಲ್ಲಿ ಸರಕಾರವು ತಪ್ಪು ಮಾಡಿದೆ. ಹಾಗೂ ಅನೇಕರಿಗೆ ಅನ್ಯಾಯ ಮಾಡಿದೆ. ಆದಾಯ ತೆರಿಗೆಯ ಇಲಾಖೆಗೆ ಲೆಕ್ಕದ ಪದವೀಧರರು ಬೇಕು. ಅರ್ಥಶಾಸ್ತ್ರ, ವ್ಯಾಪಾರಾದಿಗಳನ್ನು ತಿಳಿದವರು ಬೇಕು. ಆದರೆ ಕೊಡಗಿನ ಸರಕಾರಕ್ಕೆ ಅಂಥವರ ಅವಶ್ಯವಿಲ್ಲವೆಂದು ತೋರುತ್ತಿದೆ. ಈಗ ಆರಿಸಲ್ಪಟ್ಟವರು ಸ್ಕೂಲ್ ಫೈನಲ್ ತೇರ್ಗಡೆಯಾಗದವರೆಂದೂ, ಒಮ್ಮೆ ಸರಕಾರಿ ಹುದ್ದೆಗೆ ರಾಜೀನಾಮೆ ಇತ್ತವರೆಂದೂ ವರ್ತಮಾನವಿದೆ. ಇವರನ್ನು ಹಿಂದೆ ಕ್ರಾಪ್ ಕಾಂಪಿಟಿಶನ್ ಆಫೀಸರಾಗಿ ನೇಮಿಸಿದಾಗ ತುಂಬಾ ಅಸಮಾಧಾನವಿತ್ತೆಂಬುದೂ ಕಳೆದ ವಾರದಲ್ಲಿ ಪ್ರಕಟವಾದ ಒಬ್ಬರ 'ಓಲೆ'ಯಿಂದ ತಿಳಿಯಬಹುದು. ಹಾಗಿರುವಾಗ ಸರಕಾರದ ಇಲಾಖೆಯಲ್ಲಿ ದುಡಿಯುತ್ತಿರುವ ಇತರ ಯೋಗ್ಯರನ್ನು ಬಿಟ್ಟು ಇವರನ್ನು ಆರಿಸಿದ್ದು ಕಾರಣವೇನು? ಇದು ಯೋಗ್ಯತೆಯನ್ನು ಅಳೆದು ಗೌರವಿಸುವ ಕಾಲವಲ್ಲ; ಶಿಫಾರಸ್ಸನ್ನು ಮೆಚ್ಚಿ ಒಲಿಯುವ ಕಾಲವೆಂಬ ಸಂಶಯ ಜನತೆಯಲ್ಲಿ ಬಂದರೆ ಆಶ್ಚರ್ಯವೇನಿದೆ?

"B"

ಏನು ಕಿವುಡರೇ?

ಕೊಡಗಿನ ಪ್ರತಿ ಬಸ್ ನಿಲ್ದಾಣಗಳಲ್ಲಿ ಬಸ್ ಬಂದು ತಲಪುವ ಮತ್ತು ಹೊರಡುವ ಸಮಯಗಳನ್ನು ಸೂಚಿಸುವ ದೊಡ್ಡ ಬೋರ್ಡುಗಳನ್ನಿಡಬೇಕೆಂದು ಒಂದೆರಡು ಲೇಖನಗಳು 'ಓದುಗರ ಓಲೆ'ಯಲ್ಲಿ ಪ್ರಕಟವಾಗಿದ್ದರೂ ಪ್ರಯೋಜನವಾದಂತೆ ತೋರುವದಿಲ್ಲ. ಸಾರ್ವಜನಿಕರ ಹಿತಗಳನ್ನು, ಬೇಡಿಕೆಗಳನ್ನು ಗಮನಿಸುವ ಪ್ರತಿ ಅಧಿಕಾರಿಯು ಪತ್ರಿಕೆಗಳಲ್ಲಿ ಏನು ಪ್ರಕಟವಾಗುತ್ತಿದೆಯೆಂಬುದನ್ನು ಗಮನಿಸಬೇಕು. ಸಾರ್ವಜನಿಕರು ಬಸ್ ನಿಲ್ದಾಣದಲ್ಲಿ ಬೋರ್ಡುಗಳ ಆವಶ್ಯಕತೆಯನ್ನು ಕುರಿತು ಇಷ್ಟು ಕೂಗಿ ಕೊಂಡರೂ ಕೊಡಗಿನ ಟ್ರಾನ್ಸ್‌ಪೋರ್ಟ್ ಅತಾರಿಟಿಯವರಿಗೆ ಕಿವಿ ಕೇಳಿಸುತ್ತಿಲ್ಲ. ಈ ರೀತಿ ಸಾರ್ವಜನೋಪಯೋಗಿ ವಿಚಾರಗಳನ್ನು ಕಡೆಗಣಿಸಲೇಕೆ? ಈಗ ಕೊಡಗಿನಲ್ಲಿ ಬಸ್ ಸಂಚಾರವು ಹೆಚ್ಚಿದೆ. ಯಾವ ಬಸ್ಸು ಎಲ್ಲಿಗೆ ಎಷ್ಟು ಗಂಟೆಗೆ ಹೋಗುವದೆಂಬುದೇ ತಿಳಿಯದಿರುವಾಗ ಇನ್ನಾದರೂ ಸಂಬಂಧಿಸಿದ ಅಧಿಕಾರಿಗಳು ಎಚ್ಚರಗೊಳ್ಳರೇ?

'ಪ್ರಯಾಣಿಕ'

ಒಂದು ಎಚ್ಚರಿಕೆ

ಈ ವರ್ಷ ಕೊಡಗಿನಲ್ಲಿ ಬತ್ತದ ಬೆಳೆ ಬಹು ಕಡಿಮೆ ಎಂಬುದು ಎಲ್ಲರಿಗೂ ತಿಳಿದ ವಿಷಯ. ಹೀಗಿರುವಾಗ ಸರಕಾರದವರು ತಮಗೆ ತೋರಿದ ಲೆವಿ ಹಾಕಿ ರೈತನಲ್ಲಿ ಉಳಿದಿರುವ ಬತ್ತವನ್ನೆಲ್ಲಾ ಖಡ್ಡಾಯವಾಗಿ ಮಾರಬೇಕೆನ್ನುವ ಕಠಿಣ ಧೋರಣೆಯನ್ನು ವಹಿಸಿರುವುದರಿಂದ ಉಳಿದಿರುವ ಬತ್ತವೆಲ್ಲ ಮಾರಾಟವಾಗಿ ಹೋಗುತ್ತಿದೆ. ಇನ್ನೆರಡು ತಿಂಗಳು ಕಳೆದರೆ ಕೊಡಗಿನಲ್ಲಿ ಬತ್ತವೇ ದೊರೆಯದಾಗಬಹುದು. ಆದ್ದರಿಂದ ಕೊಡಗಿನಲ್ಲಿ ತಿಂದು ಉಳಿಯೋಗಿಸುವವರಿಗಾಗಿ ನಿಕ್ಷೇಪವನ್ನು ಸರಕಾರವು ಖಡ್ಡಾಯವಾಗಿ ಇಡಬೇಕು. ಕಳೆದ ವರ್ಷ ಇಂಥಾ ನಿಕ್ಷೇಪವನ್ನು ಸರಿಯಾಗಿ ಇಡದೆ ಅನಂತರ ಉಳಿವ ಸಮಯದಲ್ಲಿ ಒಂದು ಹಸಿವು ಪಡುವ ಸಾರ್ವಜನಿಕ ಪ್ರದರ್ಶನ ಮಾಡಬೇಕಾಗಿ ಬಂತೆ. ಅಂಥ ಸ್ಥಿತಿ ಎದೆ ಬಾರದಂತೆ ಸರಕಾರವು ಈಗಲೇ ಯೋಗ್ಯ ನಿಕ್ಷೇಪವನ್ನು ಆಯಾಯ ಭಾಗಗಳಲ್ಲಿ ಇಡಬೇಕಾಗಿದೆ.

'[illegible]'

ಸ್ವಾತಂತ್ರ್ಯ ಗಿಡ

೧೯೪೭ನೇ ಆಗಸ್ಟ್ ೧೫ರಂದು ದೇಶದ ಉದ್ದಗಲಕ್ಕೂ ನಡೆದ ಸ್ವಾತಂತ್ರ್ಯ ಸಮಾರಂಭದ ಕಾಲಕ್ಕೆ ಉದಿಸಿ ಬಂದ ಸ್ವಾತಂತ್ರ್ಯದ ದ್ಯೋತಕವಾಗಿ ಮಡಿಕೇರಿ ಕೋಟೆಯ ಎದುರು ಆಗಿನ ಚೀಫ್ ಕಮಿಷನರಾಗಿದ್ದ ದಿ. ಬ. ಕೆ. ಚಂಗಪ್ಪನವರಿಂದ ಸಂಪಿಗೆ ಗಿಡವೊಂದು ನೆಡಲ್ಪಟ್ಟಿತು. ಅದು ಚಿಗುರಿ, ಬೆಳೆದು ನೋಡಲು ಸಂತೋಷಕರವಾಗಿತ್ತು. ಆದರೆ ಮೊನ್ನೆ ಒಮ್ಮೆ ಮಡಿಕೇರಿಗೆ ಹೋದ ನಾನು ನೋಡುವಾಗ ಆ ನಗುನಗುತ್ತಿದ್ದ ಗಿಡವು ಒಣಗಿ ಹೋಗಿರುವದನ್ನು ಕಂಡು ತುಂಬಾ ವ್ಯಸನವಾಯಿತು. ಸರಕಾರದವರು ವನಮಹೋತ್ಸವವೆಂದು ಹಳ್ಳಿಯ ರೈತರಿಗೆ ಉಪದೇಶ ಹೇಳಿ ಗಿಡನೆಡಲು ಹೇಳುತ್ತಾರೆ. ಆದರೆ ಸರಕಾರದ ಕಣ್ಣೆದುರಿನಲ್ಲಿ ನಗುನಗುತ್ತಾ ಬೆಳೆಯುತ್ತಿದ್ದ ಗಿಡವನ್ನು ರಕ್ಷಿಸಿಕೊಳ್ಳಲಾರದ ಇವರು ವನಮಹೋತ್ಸವದ ಸುದ್ದಿ ಎತ್ತಲೇಕೆ? ಕೊಡಗಿನಲ್ಲಿ ಸ್ವಾತಂತ್ರ್ಯದ ಯಾವ ಲಾಭವನ್ನು ಕಾಣದಿರುವ ರೈತನ ದೃಷ್ಟಿಯಲ್ಲಿ ಇದು ಸಾಂಕೇತಿಕವಾಗಿದೆ.

ರೈತ.

ಕೊಡಗಿನ ಜನ ಸಂಖ್ಯೆ

ಕಳೆದ ಜನ ಗಣತಿಯ ಫಲಿತಾಂಶ.

ಕಳೆದ ಫೆಬ್ರವರಿ ೯ ರಿಂದ ಮಾರ್ಚ್ ತಿಂಗಳು ಒಂದರ ವರೆಗೆ ನಡೆದ ಜನ ಗಣತಿಯ ಫಲಿತಾಂಶವಾಗಿ ದೊರೆತ ಕೊಡಗಿನ ಜನ ಸಂಖ್ಯೆಯ ವಿವರಗಳು ಸಾರ್ವಜನಿಕರ ಅವಗಾಹನೆಗಾಗಿ ಇಲ್ಲಿ ಪ್ರಕಟಿಸಲ್ಪಟ್ಟಿವೆ.

ಕ್ಷೇತ್ರ	೧೯೫೧ರ ಲೆಕ್ಕ	೧೯೪೧ರ ಲೆಕ್ಕ	ಹೆಚ್ಚು	ಹೆಂಗಸರು	ಗಂಡಸರು	ಹೆಂಗಸರಲ್ಲಿ ವಿದ್ಯಾವಂತೆಯರು	ಗಂಡಸರಲ್ಲಿ ವಿದ್ಯಾವಂತರು	ಒಟ್ಟು ವಿದ್ಯಾವಂತರು
ಉತ್ತರ ಕೊಡಗು ತಾಲೋಕು	೮೬,೪೭೭	೬೩,೨೪೯	೨೩,೨೨೮	೪೦,೨೮೪	೪೬,೧೯೩	೫,೨೫೮	೧೪,೮೦೬	೨೦,೦೬೪
ದಕ್ಷಿಣ ಕೊಡಗು ,,	೧,೨೫,೫೩೧	೯೪,೨೫೯	೩೧,೨೭೨	೫೬,೬೮೬	೬೮,೮೪೫	೧೩,೦೯೬	೨೫,೩೩೬	೩೮,೪೩೨
ಮಡಿಕೇರಿ ಪಟ್ಟಣ ,,	೧೦,೭೧೬	೭,೧೧೨	೩,೬೦೪	೪,೪೩೦	೬,೨೮೬	೨,೦೬೨	೩,೫೧೩	೫,೫೭೫
ವೀರಾಜಪೇಟೆ ,,	೬,೫೩೧	೪,೧೦೬	೨,೪೨೫	೨,೯೨೨	೩,೬೦೯	೧,೦೮೯	೨,೧೮೫	೩,೨೭೪
ಜುಮ್ಲಾ	೨,೨೯,೨೫೫	೧,೬೮,೭೨೬	೬೦,೫೨೯	೧,೦೪,೩೨೨	೧,೨೪,೯೩೩	೨೧,೫೦೫	೪೫,೮೪೦	೬೭,೩೪೫

ಕೊಡಗಿನ ಪ್ರತಿ ಸಾವಿರ ಗಂಡಸರಿಗೆ ೮೩೫ ಹೆಂಗಸರಿರುವರೆಂದೂ, ಶೇಕಡ ೨೯.೪ ಜನರು ವಿದ್ಯಾವಂತರೆಂದೂ ತಿಳಿಯುಬರುತ್ತದೆ. ಕಳೆದ ೧೦ ವರ್ಷಗಳಲ್ಲಿ ಜನ ಸಂಖ್ಯೆ ಶೇಕಡ ೩೬ರಷ್ಟು ಹೆಚ್ಚಿದೆ.

ಹೊಸ ವರ್ಷದ ಹೊಸ ಕೊಡುಗೆ

ನಿಮ್ಮ ಮನ ಒಪ್ಪುವ ಆಭರಣಯುತ ಸ್ವಿಸ್ ವಾಚುಗಳು

೧೯೫೧ನೇ ಇಸವಿಯ ಮಾದರಿಯ ವಿಶೇಷ ರಿಸ್ಟ್‌ವಾಚುಗಳು. ಐದು ವರ್ಷಗಳ ಗ್ಯಾರಂಟಿಯುಳ್ಳವು. ಎಚ್ಚರಿಕೆಯಿಂದ ಉಪಯೋಗಿಸಿದರೆ ಜೀವನ ಪರ್ಯಂತರ ಬಾಳಿಕೆ ಬರುವವು. ೩೬ ಗಂಟೆಗಳಿಗೊಮ್ಮೆ ಕೀ ಕೊಡ ಬೇಕಾದ್ದು. ಸುಂದರವಾಗಿರುವದಲ್ಲದೆ ಸುಲಭದರದ್ದೂ ಆಗಿದೆ. ಕೆಲವೇ ವಾಚುಗಳಿವೆ. ಇವು ನಿಮ್ಮನ್ನು ಆಕರ್ಷಿಸುವವಲ್ಲದೆ ಅವುಗಳನ್ನು ಕಟ್ಟಿಕೊಳ್ಳಲು ನೀವು ಹೆಮ್ಮೆ ಪಡುವಿರಿ. ಹಳೇ ಮೋಡಲಿನ ನಿಮ್ಮ ಹಳೇ ವಾಚುಗಳನ್ನು ಬಿಟ್ಟು ಇವುಗಳನ್ನು ಕೊಳ್ಳಿರಿ. ಈ ವಾಚುಗಳು ಕೇವಲ ನಮ್ಮಲ್ಲಿ ಮಾತ್ರ ದೊರೆಯುತ್ತವೆ. ಈ ದಿನವೇ ಆರ್ಡರು ಮಾಡಿ. ಒಪ್ಪದಿದ್ದರೆ ತಕ್ಷಣ ವಾಪಾಸು ಮಾಡುವ ಭರವಸೆ ಇದೆ.

10½	ಉರುಟು ಕ್ರೋಮಿಯಮ್ ಸ್ಟೀಲ್ ಬ್ಲೋಕ್	ನಂ. 233	ರೂ	21
,,	,, ,,	,, 366	,,	25
8¾	ಚಚ್ಚೌಕ ,,	,, 455	,,	26
,,	,, ,,	,, 477	,,	39
7¾	ಚತುರ್ಭುಜಾಕಾರ	,, 599	,,	35
,,	,,	,, 688	,,	42
5¼	ಹೆಂಗಸರು ಧರಿಸುವ ಆಕಾರ ,,	,, 822	,,	44
	,,	,, 944	,,	51

ಅತ್ಯುತ್ತಮ ಪಾಕೆಟ್ ವಾಚು ರೂ. 13

ರೋಲ್ಡ್ ಗೋಲ್ಡ್ ಪ್ರತಿಯೊಂದಕ್ಕೆ ,, 6/- ಹೆಚ್ಚು

The Hilson Watch Company (K. M.)
Bahadur Garh Road, Delhi 6.

4-1

ರೂ. ೫೦,೦೦೦ ಬೆಲೆಯ ಆಭರಣಗಳು ಕೊಡಲ್ಪಡುತ್ತವೆ

ಡೆಲ್ಲಿಯಲ್ಲಿ ಚಿನ್ನವು ತೊಲೆಗೆ ರೂ. ೩

ಭಾರತದ ಪ್ರಮುಖ ಪತ್ರಿಕೆ ಮತ್ತು ಮಾಸಿಕಗಳಲ್ಲಿ ನಮ್ಮ ನೂರಾರು ಗ್ರಾಹಕರು ಇವನ್ನು ಸಂತೃಪ್ತಿಯಿಂದ ಹೊಗಳಿದ್ದಾರೆ. ಸಂಯುಕ್ತ ಪ್ರಾಂತದ ಮಹೋಲಿಯ ಸೇಠ್ ನಂದ ಕಿಶೋರ ಬಿ. ಎ. ಎಲ್. ಎಲ್. ಬಿ ಯವರು ಹೀಗೆ ಬರೆಯುತ್ತಾರೆ, "ನಿಮ್ಮ ನವೀನ ಚಿನ್ನವನ್ನು ಅಪರಂಜಿ ಚಿನ್ನದಿಂದ ಬೇರ್ಪಡಿಸುವದು ಕಷ್ಟ. ಈ ಚಿನ್ನವು ಒರೆ ಹಚ್ಚಿದಾಗ ಅಪ್ಪಟ ಚಿನ್ನದಂತೆಯೇ ತೋರುವದಲ್ಲದೆ ಇದನ್ನು ತಿಳಿಯಲಾಗದು. ಈಗದಂತೆ ಉಪಯೋಗಿಸಿ ಹೇಳುತ್ತೇನೆ. ಇದರ ಮಿರುಗು ಚಿನ್ನದಂತೆಯೇ ಉಳಿಯುವದು. ಇದರಿಂದ ಯಾವ ಮಾದರಿಯ ನಗಗಳನ್ನು ಮಾಡಿಸಬಹುದು. ಇದು ಜಗತ್ತಿನ ಹೊಸ ಶೋಧ. ಬೆಲೆ ಒಂದು ತೊಲೆಕ್ಕೆ ರೂ. ೩-೦-೦ ಮಾತ್ರ, ತೊಲಗಳಿಗೆ ರೂ. ೮/- ಆರು ತೊಲಗಳಿಗೆ ರೂ. ೧೫/- ಮತ್ತು ಹನ್ನೆರಡು ತೊಲಗಳಿಗೆ ರೂ. ೨೮/-

ಈ ಚಿನ್ನವನ್ನು ಹಿಂದುಸ್ಥಾನದ ಮೂಲೆ ಮೂಲೆಗಳಲ್ಲಿ ಪ್ರಚಾರಪಡಿಸ ಬೇಕೆಂಬ ಉದ್ದೇಶದಿಂದ ಈ ಕೆಳಗಿನ ಆಭರಣಗಳ ಬಹುಮಾನವನ್ನು ಗ್ರಾಹಕರಿಗೆ ಕೊಡಲು ನಿರ್ಧರಿಸಿದೆ. ಮೂರು ತೊಲಗಳನ್ನು ಕೊಳ್ಳುವವರಿಗೆ ನಾಲ್ಕು ಫ್ಯಾನ್ಸಿ ಬಳೆಗಳು, ಎರಡು ಉಂಗುರಗಳು. ಆರು ತೊಲೆ ತೆಗೆದುಕೊಳ್ಳುವವರಿಗೆ ಒಂದು ನೆಕ್ಲೇಸ್, ಎರಡು ಉಂಗುರಗಳು, ಒಂದು ಜೊತೆ ವಾಲೆ, ನಾಲ್ಕು ಬಳೆಗಳು ಮತ್ತು ಹಣೆಗೆ ಒಂದು ಟಿಕ್ಕೆಯು ದೊರೆಯುವುದು. ಹಾಗೆಯೇ ೧೨ ತೊಲ ಕೊಳ್ಳುವವರಿಗೆ ಒಂದು ರಾಣಿ ಹಾರ್ ನೆಕ್ಲೇಸ್, ಎಂಟು ಬಳೆ, ಎರಡು ಉಂಗುರಗಳು, ಎರಡು ಜತೆ ವಾಲೆ, ಒಂದು ಟಿಕ್ಕೆ. ಈ ಆಭರಣಗಳೆಲ್ಲ ಇತ್ತೀಚಿನ ಮಾದರಿಯವು. ತೃಪ್ತಿಯಾಗದಿದ್ದರೆ ಬೆಲೆಯನ್ನು ವಾಪಾಸು ಕೊಡುವ ಭರವಸೆ ಕೊಡಲಾಗಿದೆ. ಏಜಂಟರುಗಳಿಗೆ ಆಗಿಗೆ ರೂ. ೩೦೦ ರಿಂದ ೫೦೦ ಸಂಪಾದಿಸಲು ಒಳ್ಳೆಯದು. ಈ ಸದವಕಾಶವನ್ನು ಉಪಯೋಗಿಸುವ ದಯವಿಟ್ಟು ಬರೆಯಿರಿ. ಅಂಚೆ ಹಾಗೂ ಪೆಟ್ಟಿಗೆ ಮತ್ತು ಶಾಖೆಗೆ ವಿಳಾಸ.

Minerva New Gold ornaments House.
Bara Hindu (K. M.) Delhi 6

4-1

ಬೇಕಾಗಿದ್ದಾರೆ

ನಮ್ಮ ಅಮೇರಿಕನ್ ಫೌಂಟನ್ ಪೆನ್ನುಗಳನ್ನು, ಸ್ವಿಸ್ ವಾಚುಗಳನ್ನು ಮಾರಾಟ ಮಾಡಲು ತಿಂಗಳಿಗೆ ರೂ ೩೦೦ ರಿಂದ ೭೦೦ ರ ವರೆಗೆ ವೇತನ ಮತ್ತು ಬತ್ಯೆ ಯೂ ಕಮಿಶನಿನಲ್ಲಿ ಏಜಂಟರು ಬೇಕಾಗಿದ್ದಾರೆ. ವಿವರಗಳಿಗೂ ಶರತ್ತುಗಳಿಗೂ ಇಂಗ್ಲೀಷಿನಲ್ಲಿ ಈ ಪತ್ತೆಗೆ ಬರೆಯಿರಿ.

LAWRENCE BROTHERS (K. M)
71, Nagdevi Cross Lane
4-1 Bombay 3

ಬೇಕಾಗಿದೆ.

ದೊಡ್ಡದಾಗಿ ಬೆಳೆದ ಕಾಡು ಕಂಬಗಳ ಶಕ್ತಿಗೆಯುಳ್ಳರುವ ಮರಗಳ ಗರಗಳಿಂದ ಕೂಡಿದ ಭಾಗವನ್ನು ಚರ್ಮ ಸಹಿತ ತೆಗೆದು ಒಣಗಿಸಿ ಕಳುಹಿಸಿದರೆ ಪ್ರತಿ ಮೌಂಡಕ್ಕೆ ರೂ ೧-೪-೦ ದರದಲ್ಲಿ ಕೊಂಡು ಕೊಳ್ಳಲಾಗುವದು. ಹೆಚ್ಚಿನ ವಿವರಗಳಿಗೆ ಈ ಪತ್ತೆಗೆ ಬರೆಯಿರಿ.

D. H. THANGAM & CO.
Kundah Bridge P.O.
Nilgiris

ಬೇಕಾಗಿದ್ದಾರೆ.

ಕನ್ನಡ, ಇಂಗ್ಲೀಷ್ ಶಾರ್ಟ್‌ಹ್ಯಾಂಡ್ ಗೊತ್ತಿರುವ ಸ್ಟೆನೋ ಟೈಪಿಸ್ಟ್ ಬೇಕಾಗಿದ್ದಾರೆ. ಯೋಗ್ಯತೆ ಪ್ರಕಾರ ವೇತನ ಕೊಡಲಾಗುವದು. ತಾ. ೩೦-೩-೫೧ ರೊಳಗೆ ಈ ವಿಳಾಸಕ್ಕೆ ಬರೆದುಕೊಳ್ಳುವದು.

ಮೇನೇಜರು,
ಕೊಡಗು ಮಡಿಕೇರಿ.

ಸಾರ್ವಜನಿಕ ಸಭೆಗಳು.

ವೀರಾಜಪೇಟೆ:—ತಾರೀಕು ೭ರಲ್ಲಿ ಇಲ್ಲಿ ಶ್ರೀ ಸಿ. ಸಿ ಬಸಪ್ಪಯ್ಯನವರ ಅಧ್ಯಕ್ಷತೆಯಲ್ಲಿ ಒಂದು ಸಾರ್ವಜನಿಕ ಸಭೆ ನಡೆಯಿತು. ಕಳೆದ ತಿಂಗಳು ದೆಲ್ಲಿಯಲ್ಲಿ ನಡೆದ ಚೀಫ್ ಕಮಿಷನರ್ ಪ್ರಾಂತಗಳ ಪ್ರತಿನಿಧಿಗಳ ಸಮ್ಮೇಳನದಲ್ಲಿ ಅವ ಕೀರ್ವಾದ ನಿರ್ಣಯಗಳ ಕುರಿತು ಶ್ರೀ. ಪಿ ಐ ಬೆಳ್ಯಪ್ಪನವರ ಭಾಷಣ ಮಾಡಿದರು. ನಂತರ ಶ್ರೀ. ಎನ್. ಸಿ ಚಂಗಪ್ಪನವರಿಂದ ಸೂಚಿಸಲ್ಪಟ್ಟ ಈ ಕೆಳಗಿನ ಠರಾವುಗಳು ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟವು. (೧) ಚೀಫ್ ಕಮಿಷನರ ಪ್ರಾಂತಗಳ ಪ್ರತಿನಿಧಿಗಳ ಡೆಲ್ಲಿ ಸಮ್ಮೇಳನದಲ್ಲಿ ಅಂಗೀಕರಿಸಿದ ಠರಾವುಗಳಿಗೆ ಈ ಸಭೆಯು ಸಂಪೂರ್ಣ ಬೆಂಬಲ ನೀಡುತ್ತದೆ. (೨) ಎಲ್ಲಾ ಚೀಫ್ ಕಮಿಷನರ್ ಪ್ರಾಂತಗಳ ವ್ಯಕ್ತಿತ್ವ ಕೊಡಗಿನಲ್ಲಿ ಸಹ ಧಾರಣೆಗಳನ್ನು ಜನಿಸಬೇಕು ಇಲ್ಲವೆ ಬಹು ಸುಲಭ ಸಾಧ್ಯವೆಂಬ ದನ್ನು ಈ ಸಭೆಯು ಇಂಡಿಯಾ ಸರಕಾರಕ್ಕೆ ಒತ್ತಿ ಹೇಳುತ್ತದೆ. (೩) ಕೊಡಗಿನ ವಿಲೀನಗೊಳಿಸುವ ಸಲಹೆಗಳನ್ನು ಸರ್ಕಾರದ ಅಭಿಪ್ರಾಯವನ್ನು ಈ ಸಭೆಯು ಸಂಪೂರ್ಣ ವಿರೋಧಿಸುತ್ತದೆ, ಮತ್ತು ಅದಾವ ಸಂಸ್ಥೆಯೇ ನಾದ್ರೂ ಕೈಗೊಂಡಲ್ಲಿ ಇದನ್ನು ಪ್ರತಿಭಟಿಸಬೇಕೆಂದು ಕೇಳಿಕೊಳ್ಳುತ್ತದೆ.

ಮೂರ್ನಾಡು:—ತಾರೀಕು ೮ರಲ್ಲಿ ಮೂರ್ನಾಡಿನಲ್ಲಿ ಶ್ರೀ ಪಾಂಡಂಡ ಮಾದಪ್ಪನವರ ಅಧ್ಯಕ್ಷತೆಯಲ್ಲಿ ನಡೆದ ಸಾರ್ವಜನಿಕ ಮೀಟಿಂಗಿನಲ್ಲಿ ಶ್ರೀ ಕೆ ಎಂ ಪೂಣಚ್ಚನವರಿಂದ ಸೂಚಿಸಲ್ಪಟ್ಟ ಮೇಲಿನ ಎರಡು ಠರಾವುಗಳು ಸರ್ವಾನುಮತದಿಂದಲೂ (೩) ನೇ ಠರಾವು ಶ್ರೀ. ಕೆ. ಎಂ ಕೇಪಯ್ಯನವರೊಬ್ಬರಲ್ಲದೆ ಉಳಿದವರ ಒಪ್ಪಿಗೆಯಿಂದಲೂ ಪಾಸಾದವು.

ಹುದಿಕೇರಿ:—ತಾರೀಕು ೧೩ರಲ್ಲಿ ನಡೆದ ಸಾರ್ವಜನಿಕ ಮೀಟಿಂಗಿಗೆ ಶ್ರೀ. ಚೆಂಬಮಾಡ ನಂಜಪ್ಪನವರು ಅಧ್ಯಕ್ಷರಾಗಿದ್ದರು. ಶ್ರೀ. ಎಚ್. ಸಿ. ನಂಜಪ್ಪನವರ ಸೂಚನೆ ಮೇರೆ ಮೇಲಿನ ಮೂರು ಠರಾವುಗಳೂ ಒಪ್ಪಿಗೆಯಿಂದಲೂ ಈ ಕೆಳಗಿನ ಠರಾವು ಸರ್ವಾನುಮತದಿಂದ ಪಾಸಾದವು. (೪) ಕೊಡಗಿಗೂ ವೈಸ್‌ರಾಯ್ ಪ್ರಜಾ ಉದ್ಯೋಗಸ್ಥರ ವಿಂಗಡನೆಯ ಸರ್ಕಾರದ ಅಭಿಪ್ರಾಯಕ್ಕೆ ಈ ಸಭೆಯು ಸಂಪೂರ್ಣ ವಿರೋಧಿಸುತ್ತದೆ.

ಅಮ್ಮತ್ತಿ:—ತಾರೀಕು ೧೩ರಲ್ಲಿ ಒಂದು ಸಭೆಯು ಶ್ರೀ ನೆಲ್ಲಮಕ್ಕಳ ಸೋಮಪ್ಪನವರ ಅಧ್ಯಕ್ಷತೆಯಲ್ಲಿ ಸೇರಿತ್ತು. ಶ್ರೀ. ನೆಲ್ಲಮಕ್ಕಳ ಅಚ್ಚಪ್ಪನವರು ಸೂಚಿಸಿದ ಮೇಲಿನ ಠರಾವುಗಳು ಒಮ್ಮತದಿಂದ ಪಾಸಾದವು.

ಮಹಿಳೆಯರ ಕರ್ತವ್ಯ

ಲೇಖಕರು:- ಶ್ರೀಮತಿ ಜಯ ದೇವಿತಾಯಿ ಲಿಗಾಡೆಯವರು.

ಇಂದು ಹೊಸ ಯುಗದ ಹೊಸ ಹೆಣ್ಣಾಳ್ತಿ ತಾನು ಪುರುಷನ ಪ್ರತಿಸ್ಪರ್ಧಿಯೆಂಬ ಹೊಸ ಸೃಷ್ಟಿಯೊಂದು ವಿಶಿಷ್ಟ ರೂಪದಲ್ಲಿ ರೂಪಗೊಳ್ಳುತ್ತಲಿದೆ. ಅದರಂತೆ ಸನಾತನ ಮನೋವೃತ್ತಿಯು ಇನ್ನೂ ಕೆಲವೊಂದು ಪುರುಷ ವರ್ಗದಲ್ಲಿ ಪ್ರಬಲವಾಗಿಯೇ ಇದೆ. ಸ್ತ್ರೀಯರ ಹಕ್ಕು ಬಾಧ್ಯತೆಗಳನ್ನೂ, ಕಾರ್ಯಕ್ಷೇತ್ರವನ್ನೂ ಮರ್ಯಾದಿತಗೊಳಿಸಲು ಅದು ಅವ್ಯಾಹತವಾಗಿ ಶ್ರಮಿಸುತ್ತಲಿದೆ ತನ್ನ ಹೆಚ್ಚಿನ ಅಧಿಕಾರವನ್ನು ಭದ್ರಪಡಿಸಲು ಹೋರಾಡುತ್ತಲಿದೆ. ಇದು ಕೇವಲ ಸ್ತ್ರೀ ಪುರುಷರಿಬ್ಬರೂ ಒಬ್ಬರೊಬ್ಬರ ಮೇಲೆ ತಮ್ಮ ಅಧಿಕಾರಸತ್ತವನ್ನು ಹೇರಲು ನಡೆಸಿರುವ ಒಂದು ರೀತಿಯ ಶೀತಯುದ್ಧವೆಂದು ಹೇಳಬಹುದು. ಈ ಮನೋವೃತ್ತಿಯನ್ನು ಹೀಗೆಯೇ ಬೆಳೆಯಗೊಟ್ಟರೆ ಕಾಲಾಂತರದಲ್ಲಿ ಜಗತ್ತಿನ ಸ್ತ್ರೀ ಪುರುಷರ ಮಹಾಯುದ್ಧದ ಘೋಷಣೆಯು ಆದರೂ ಆಗಬಹುದೆಂದು ಕಲ್ಪಿಸಿದರೆ ಅದು ಕೇವಲ ಕವಿಯ ಕಾಲ್ಪನಿಕ ಕನಸಾಗಲಾರದು. ಸ್ತ್ರೀ ಪುರುಷರಿಬ್ಬರೂ ಒಬ್ಬರೊಬ್ಬರನ್ನು ಎಷ್ಟೇ ಸ್ಪರ್ಧಿಸಿದರೂ ಇಲ್ಲವೇ ಒಬ್ಬರಿಂದೊಬ್ಬರು ದೂರ ಸರಿಯಲು ಎಷ್ಟೇ ಯತ್ನಿಸಿದರೂ ಕಾಲನ ಕೈವಾಡವು ಅವರ ಹೃದಯಗಳನ್ನು ಮತ್ತೆ ಒಂದೆಡೆಗೆ ಸೆಳೆದು ಬಿಗಿಯಬಲ್ಲದೆಂಬುದನ್ನು ನಾವೆಲ್ಲರೂ ಲಕ್ಷ್ಯದಲ್ಲಿ ಇಡಬೇಕು. ಅವ್ಯಾಹತವಾಗಿ ಸಾಗಿ ಬರುತ್ತಿರುವ ಈ ವಿಶ್ವದ ಓಟದೊಡನೆ ಪರಸ್ಪರ ಹಿತಾನುವರ್ತಿಗಳಾಗಿ ಸಮರೂಪವಾಗಿ ಚಲಿಸಿಕೊಂಡು ಹೋಗಿ, ಶಾಂತಿ ಸಮೃದ್ಧಿಗಳ ಸೀಮೆಯನ್ನು ಸೇರಲು ಸಾಹಸಪಡುವದರಲ್ಲಿಯೇ ಮಾನವನ ಆನಂದವಿದೆ. ಸ್ವರ್ಗ ಭೂಲೋಕ ನಿರ್ಮಾಣದ ಆಶಾಕಿರಣವಿದೆ.

ಭಾರತವು ಇಂದು ಸರ್ವತಂತ್ರ ಸ್ವತಂತ್ರವಾಗಿದೆ. ಸ್ವಾತಂತ್ರ್ಯವು ಪ್ರಾಪ್ತವಾದಂದಿನಿಂದ ಪ್ರತಿಯೊಂದು ಪ್ರಾಂತದವರೂ ತಮ್ಮ ರೂಪರೇಖೆಗಳನ್ನು ನಿರ್ಧರಿಸಿಕೊಳ್ಳುವುದರಲ್ಲಿ, ತಮ್ಮ ಸಾಹಿತ್ಯಾಭಿವೃದ್ಧಿಯಲ್ಲಿ, ತಮ್ಮ ಸಂಸ್ಕೃತಿಯ ರಕ್ಷಣೆಯಲ್ಲಿ ಹಾಗೂ ತಮ್ಮ ಭವಿಷ್ಯತ್ತನ್ನು ರೂಪಿಸುವದರಲ್ಲಿಯೇ ಯೋಚಿಸುತ್ತಲಿದ್ದಾರೆ. ಕನ್ನಡಿಗರಾದ ನಾವು ಇವುಗಳಿಗಾಗಿ ಎಷ್ಟು ಯೋಚನೆಯನ್ನು ಮಾಡಿದ್ದೇವೆ? ಎಂಬ ಪ್ರಶ್ನೆಯನ್ನು ಹಾಕಿಕೊಂಡರೆ ಅದಕ್ಕಾಗಿ ನಾವು ಆಲೋಚನೆ ಮಾಡಬೇಕಾಗುತ್ತದೆ. ಕನ್ನಡದ ಸಾಹಿತಿಗಳೇ ಮೊಟ್ಟ ಮೊದಲು ಕರ್ನಾಟಕ ಏಕೀಕರಣದ ಘೋಷಣೆಯನ್ನು ಮಾಡಿದರು; ಅದರ ಕೂಗನ್ನು ಪ್ರತಿಯೊಬ್ಬ ಕನ್ನಡಿಗನ ಕಿವಿಯಲ್ಲಿ ಊದಿದರು; ಸ್ವಾತಂತ್ರ್ಯವು ಪ್ರಾಪ್ತವಾದಂದಿನಿಂದ ಕರ್ನಾಟಕ ಏಕೀಕರಣದಂತಹ ಜೀವಾಳದ ಪ್ರಶ್ನೆಯನ್ನು ನಮ್ಮ ನಾಡಿನ ಲೋಕಕಾರಿಣಿಗಳು (ರಾಜಕಾರಣಿಗಳು) ಎತ್ತಿ ಹಿಡಿದಿದ್ದಾರೆ. ಕೆಳಗೆ ಬೀಳಗೊಟ್ಟಿಲ್ಲ! ಇಂತ ಮಹತ್ವದ ಪ್ರಶ್ನೆಯನ್ನು ಬಿಡಿಸಲು ನಮ್ಮ ನಾಡಿನ ಹಿರಿಯರಿಲ್ಲದಲ್ಲಿ ಉನ್ನತವಾದ ಪ್ರಯತ್ನವು ಕಂಡುಬಾರದ್ದು ನಮ್ಮ ನಾಡಿನ ದುರ್ದೈವವೇ ಸರಿ. ಮಹಿಳೆಯರೂ ಹೆಚ್ಚಿನ ಹೊಣೆಯನ್ನು ಹೊರಲಿಕ್ಕಾಗಿ ಈಗ ಮುಂದೆಬರಬೇಕಾಗಿದೆ. ಎಚ್ಚರ ತಪ್ಪಿದರೆ ಸ್ವಾತಂತ್ರ್ಯದ ಅರ್ಥವಾದರೂ ಏನು?

ಕರ್ನಾಟಕ ಸ್ತ್ರೀಯರ ಇತಿಹಾಸವು ಉಜ್ವಲವಾಗಿದೆ. ಕನ್ನಡ ಕುಲವು ಸ್ತ್ರೀಯರಿಗೆ ಸರಿಸಮಾನ ಹಕ್ಕುಬಾಧ್ಯತೆಗಳನ್ನು ಕೊಡುತ್ತಲೇ ಬಂದಿದೆ. ಸ್ತ್ರೀಯರು ಅವುಗಳನ್ನು ಅನುಭವಿಸಿಕೊಂಡೇ ಬಂದಿದ್ದಾರೆ. ಕನ್ನಡ ಸಂಸ್ಕೃತಿಯು ಹೆಣ್ಣೇ ದೇವರೆಂದು ತಿಳಿದಿದೆ. ಕನ್ನಡತಿಯರು ತಮ್ಮ ಆಚಾರ ಗುಣಶೀಲಗಳಲ್ಲಿ ಹಾಗೂ ಶೌರ್ಯದಲ್ಲಿ ತಮ್ಮ ಹಿರಿಮೆಯನ್ನು ವ್ಯಕ್ತಪಡಿಸುತ್ತಲೇ ಬಂದಿದ್ದಾರೆ. ಲೋಕಪಿತಾಮಹರಾದ ಅಣ್ಣ ಬಸವಣ್ಣನವರ ಕಾಲದಲ್ಲಿ ಆಯ್ದಕ್ಕಿ ಮಾರಯ್ಯನ ಹೆಂಡತಿಯಾದ ಲಕ್ಕಮ್ಮನು, ಗಂಡನು ಹೆಚ್ಚಾಗಿ ತಂದ ಅಕ್ಕಿಯನ್ನು ಮನೆಯಲ್ಲಿ ಸಂಗ್ರಹ ಮಾಡಗೊಡಲಿಲ್ಲ. ಅಪರಿಗ್ರಹ ಅಸ್ತೇಯ ವ್ರತಗಳನ್ನು ಆಚರಿಸಿ ತೋರಿಸಿದವರು ಕನ್ನಡ ಸಂಸ್ಕಾರ ಅಥವ ಈ ಮೂಲ ತತ್ವಗಳನ್ನು ಕಡೆಗಣಿಸಿದರೆ ಜಗತ್ತಿನ ನಾಗರೀಕತೆಗೆ ಪ್ರಗತಿಯಿದೆಯೇ?

ಸಾಮ್ರಾಜ್ಯವನ್ನು ಕಟ್ಟಿದಂತಹ ಕುಶಲಮತಿಗಳು

ಕನ್ನಡತಿಯರು ಅನುಭವಿಗಳೂ ಇದ್ದಂತೆ ವೀರಾಗ್ರಣಿಗಳೂ ಆಗಿದ್ದಾರೆ. ಸಾಮ್ರಾಜ್ಯ ಕಟ್ಟಿದ್ದಾರೆ ದೇಶವನ್ನು ಆಳಿದ್ದಾರೆ. ಇಂದು ನಾವು ಕನ್ನಡ ನಾಡನ್ನು ಪುನಃ ಕಟ್ಟಬೇಕಾಗಿದೆ. ಸಂಸ್ಕೃತಿಯನ್ನು ಹದಗೆಡಿಸಿ, ಹೃದಯದ ಪಾವಿತ್ರ್ಯತೆಯನ್ನು ಮಲಿನಗೊಳಿಸಿ, ಮನಸ್ಸಿನ ವೈಶಾಲ್ಯತೆಯನ್ನು [illegible] ಮಾಡಿ ಅದರ ಸ್ಥಾನದಲ್ಲಿ ಏಕೀಕರಣ—ಅದೇಕೆ ಸ್ವರಾಜ್ಯ, ಬಂದರೂ ಅದು ಆತ್ಮಘಾತುಕವೆಂದು ನನ್ನ ಸ್ಪಷ್ಟ ಅಭಿಪ್ರಾಯ."

ನಮ್ಮ ನಾಡಿನ ಸ್ತ್ರೀಯರ, ಸಾಹಿತಿಗಳ, ಲೋಕಕಾರಿಣಿಗಳ, ವರ್ತಕರ, ಶಿಕ್ಷಕರ, ಕೂಲಿಕಾರರ, ವಿದ್ಯಾರ್ಥಿಗಳ, ಮತ್ತಿತರರ ಅನೇಕ ಪ್ರಶ್ನೆಗಳಿಗೆ ಕೂಡಿಯೇ ಪರಿಹಾರವನ್ನು ಶೋಧಿಸಬೇಕಾಗಿದೆ. ಎಲ್ಲರ ಎಲ್ಲ ಸಮಸ್ಯೆಗಳಿಗೂ ಸರಿಯಾದ ಪರಿಹಾರವು ದೊರಕಬೇಕಾಗಿದೆ. ಅಂತು ಒಂದು ನಿರ್ಧಾರಕ್ಕೆ ಬರಬೇಕಾಗಿದೆ. ನಿರ್ಧಾರವಿಲ್ಲದ ಕಾರ್ಯ ಯಶಸ್ವಿಯಾಗಲಾರದು. ಒಂದು ವೇಳೆ ತಪ್ಪು ಆದರೂ ಒಮ್ಮತದಿಂದಾದರೇನೇ ನಾವು ಬಾಳಬಲ್ಲೆವು.

ಕಾಲಹರಣ ಬೇಡ

ಕಾಂತೆಯರ ಮಾತಿನಂತಿರುವದೇ ಸಾಹಿತ್ಯವೆಂದು ಹೇಳುತ್ತಾರೆ. ಕಾಂತೆಯರ ಮಾತುಗಳ. ನಮ್ಮ ಸಾಹಿತ್ಯದಲ್ಲಿ ಎಷ್ಟಿವೆ ಎಂಬುದನ್ನು ನೋಡಿದರೆ ಮನ ತುಂಬಲಾರದು. ನಮ್ಮಲ್ಲಿ ಅಕ್ಷರ ಪ್ರಚಾರವಿಲ್ಲ. ಕನ್ನಡ ಸಾಹಿತ್ಯದ ಜ್ಞಾನವಾಗಲಿ, ಸಂಪರ್ಕವಾಗಲಿ, ಸಾಕಷ್ಟು ನಮ್ಮಲ್ಲಿ ಬೆಳೆದಿಲ್ಲ. ಎಷ್ಟು ಜನ ಹೆಣ್ಣುಮಕ್ಕಳು ತಮ್ಮ ದಿನದ ಎಷ್ಟು ವೇಳೆಯನ್ನು ನಿರರ್ಥಕವಾದ ಹರಟೆ, ಅಡೀಕೆ, ಪರನಿಂದೆಯಲ್ಲಿ ಕಳೆಯುತ್ತಾರೆಂಬುದನ್ನು ಅರಿತರೆ ಬೇಸರವೆನಿಸದಿರಲಾರದು. ಹಾಳು ಹರಟೆ ಹಾಗೂ ಪರನಿಂದೆ ದುಷ್ಪರಿಣಾಮವು ನಿರಪರಾಧ ಜೀವಿಗಳ ಮೇಲೆ ಉಗ್ರತಾರಕವಾಗಿ ಹೇಗಾಗುತ್ತದೆಂಬುದನ್ನು ಇತ್ತೀಚೆಗಾಗಿ ಮಾನಸ ಶಾಸ್ತ್ರಜ್ಞರು ಶೋಧನೆ ಮಾಡಿ ಅಂಕೆ ಸಂಖ್ಯೆಗಳಿಂದ ಜನರ ಮುಂದಿಟ್ಟಿದ್ದಾರೆ.

ತಮ್ಮ ಮಹತ್ವದ ವೇಳೆಯನ್ನು ಹಾಳು ಹರಟೆಯಲ್ಲಿ ಕಳೆಯದೆ ನಮ್ಮ ಸಾಹಿತ್ಯದ ಅಭ್ಯಾಸದಲ್ಲಿಯೂ, ನಮ್ಮ ಸಾಹಿತ್ಯ ನಿರ್ಮಾಣ ಮಾಡುವುದರಲ್ಲಿಯೂ ಉಪಯೋಗಿಸಿದರೆ ಮಹತ್ಕಾರ್ಯವು ಲಭಿಸಬಲ್ಲದು. ಎರಡು ವಾರಗಳ ಹಿಂದೆಯೇ ಹೈದ್ರಾಬಾದ್ ಗಡಿಗಳಲ್ಲಿ ಕನ್ನಡ ಪ್ರಚಾರಕ್ಕೆಂದು, ಜನಪದ ಸಾಹಿತ್ಯ ಸಂಗ್ರಹಕ್ಕೆಂದು ನಾನು ಹೋದಾಗ ಕೆಲವರು ನನಗೊಂದು ಪ್ರಶ್ನೆ ಕೇಳಿದರು. 'ಕನ್ನಡ ಕಲಿತವರು ಸರಕಾರದ ವಿರೋಧಿಗಳಂತೆ. ಕನ್ನಡ ಕಲಿತರೆ ಯಾವ ನೌಕರಿ ಉದ್ಯೋಗಗಳು ದೊರೆಯುವುದಿಲ್ಲವಂತೆ, ಇದು ನಿಜವೆ?' ಎಂದು. ಇದು ನಮ್ಮ ಜನರ ಅಜ್ಞಾನವೆನ್ನಬೇಕೋ ಪರಭಾಷೆಯವರ ಪ್ರಚಾರ ಅಸ್ತ್ರವೆನ್ನಬೇಕೋ? ಕನ್ನಡಿಗರು ನಾವು ಕೈಕಟ್ಟಿಕೊಂಡು ಕುಳಿತರೆ ನಮ್ಮ ಮೇಲೆ ಎಲ್ಲ ತರದ ಆಕ್ರಮಣಗಳೂ, ಅತ್ಯಾಚಾರಗಳೂ ನಡೆಯುವವು. ಕನ್ನಡಕ್ಕಾಗಿ ನಾವು ಮಡಿಯದಿದ್ದರೆ ನಮಗೆ ಮೋಕ್ಷವೇ ಸಿಗಲಾರದು. ಕನ್ನಡಿಗರು ಉದ್ಧಾರವಾಗಲಾರರು.

ಹೃದಯವೇ ಸ್ತ್ರೀಯರ ಕಾರ್ಯಸ್ಫೂರ್ತಿಯ ಕ್ಷೇತ್ರವಾಗಿದೆ. ಉತ್ಕೃಷ್ಟವಾದ ಭಾವನೆ ವಿಚಾರಗಳ ವಿಕಾಸದಿಂದಲೇ ಉದ್ಧಾರ ಕಾರ್ಯವು ನೆರವೇರಬಲ್ಲುದು. ಸ್ತ್ರೀಯರ ಹೃದಯದಿಂದ ಹೊರ ಹೊಮ್ಮಿದ ಮಧುರ ಪ್ರೇಮಮಯ ಭಾವನೆಗಳ ನೆರಳಿನಲ್ಲಿ, ಸಂಪರ್ಕದಲ್ಲಿ ಹಾಗೂ ಅವುಗಳ ಬಾಂಧವ್ಯದಲ್ಲಿ ಪುರುಷರು ಮನಶ್ಶಾಂತಿಯನ್ನು ಹೊಂದಬಲ್ಲರು. ಆತ್ಮದ ಆರೋಗ್ಯವನ್ನು ಕಾಯ್ದುಕೊಳ್ಳಬಲ್ಲರು. ಚೆಲುವೆಯರ ಮುಖಕಮಲಗಳನ್ನು ಕಂಡು ಅವರ ಬಾಹ್ಯ ಸೌಂದರ್ಯಕ್ಕಾಗಿಯೇ ಇಷ್ಟೊಂದು ಸಾಹಿತ್ಯ ನಿರ್ಮಾಣವಾಗುತ್ತಿರುವಾಗ ಅವರ ಆಂತರಿಕ ಸೌಂದರ್ಯ ದರ್ಶನವು ಆದರೆ, ಅವರ ಜೀವನದಲ್ಲಿ ಸತ್ಯವು ಹೆಚ್ಚೆಚ್ಚಾಗಿ ಮೂಡಿಬಂದರೆ, ಎಂಥ ಶ್ರೇಷ್ಠ ಸಾಹಿತ್ಯವು ನಿರ್ಮಾಣವಾಗಬಲ್ಲುದು ಎಂಬುದನ್ನು ಅರಿಯಬೇಕು.

ಜನಪದ ಸಾಹಿತ್ಯ ಮರೆಯಬಾರದು

'ಕುರಿತೋದದೆಯುಂ, ಕಾವ್ಯ ಪ್ರಯೋಗ, ಪರಿಣತ ಮತಿಗಳ್' ಎಂದು ನೃಪತುಂಗನು ಹೇಳಿದ್ದು ಸ್ತ್ರೀಯರಿಗೂ ಸಂಬಂಧಿಸಿದೆ. ಹೇರಳವಾದ ಜನಪದ ಸಾಹಿತ್ಯವು ನಮ್ಮಲ್ಲಿ ಇದ್ದರೂ ನಮ್ಮ ಹೆಣ್ಣುಮಕ್ಕಳು ಅವುಗಳನ್ನು ಮರೆಯತೊಡಗಿದ್ದಾರೆ. ಅವುಗಳನ್ನು ನಾವು ಮರೆತರೆ ನಮ್ಮ ನಾಡಿನ ಧ್ವನಿಯನ್ನೇ ಕಳೆದುಕೊಂಡಂತೆ. ಅವುಗಳನ್ನು ಸಂಗ್ರಹಿಸಿ, ಅವುಗಳ ಪ್ರಚಾರ ಕಾರ್ಯವನ್ನು ಕೈಕೊಳ್ಳಬೇಕು. ನಮ್ಮ ಸ್ತ್ರೀಯರಿಗೆ ಧಾರ್ಮಿಕ ವಿಧಿಗಳನ್ನಷ್ಟು ಬಿಟ್ಟರೆ ಸಾಮಾಜಿಕ ಜೀವನವೇ ಬೆಳೆದಿಲ್ಲ. ಸಾಂಘಿಕ ಶಕ್ತಿಯು ಮೈಗೊಂಡಿಲ್ಲ. ಪವಾಡಭರಿತ ಕಥೆಗಳನ್ನೂ ಕೀರ್ತನೆಗಳನ್ನೂ ಕೇಳಿ ಕೇಳಿ ವಾಸ್ತವಿಕ ಜೀವನಕ್ಕೂ ತರ್ಕಬದ್ಧ ವಿಚಾರಕ್ರಮಕ್ಕೂ ನಮಗೂ ಮಹದಂತರವಾಗಿದೆ. ಸ್ತ್ರೀಯರು ತಮ್ಮ ಜೀವನ ಮಟ್ಟವನ್ನು ಏರಿಸಲು ಹೆಣಗಬೇಕು. ತಮಗೆ ಬೇಕಾದ ಸಾಹಿತ್ಯವನ್ನು ನಿರ್ಮಿಸಿಕೊಳ್ಳಲು ಮುಂದೆ ಬರಬೇಕು.

'ತಾಯಿನಾಡು.'

ತಿಳಿಸಿರಿ.

ಭೂಮಿ, ತೋಟ, ಜಾಗ ಪೇಟೆಯಲ್ಲಿ ಮನೆ ಅಥವ ಮನೆ ಸೈಟು ಮಾರಲಿರುವವರು ಮತ್ತು ಕೊಂಡುಕೊಳ್ಳಲಿಚ್ಛಿಸುವವರು ಈ ಕೆಳಗಿನ ಪತ್ರದಲ್ಲಿ ವಿಚಾರಿಸಿರಿ. ಅಲ್ಲದೆ ಬೇಕಾದವರಿಗೆ ಕರೆಯುವ ಎಮ್ಮೆ, ಹಸು ಮತ್ತು ಉಳುವ ಎತ್ತು, ಮತ್ತು ಕೋಣಗಳನ್ನೂ ಒದಗಿಸಿ ಕೊಡಲಾಗುವುದು. ಬೇಕಾದವರು ತಮಗೆ ಬೇಕಾದ ತಾರೀಕಿನ ಎಂಟು ದಿನಗಳಿಗೆ ಮುಂಚೆ ತಿಳಿಸಬೇಕಾಗಿದೆ. ವಿವರಗಳಿಗೆ ಈ ಪತ್ರಕ್ಕೆ ಬರೆಯಬಹುದು.

P. A. N. & SONS,
Commission Agent,
Gonicoppal
S. Coorg.

26-6

ಮಾರಾಟಕ್ಕಿದೆ.

ಮಡಿಕೇರಿಯಲ್ಲಿ ಹೊಸ ಕಾಲೇಜು ಕಟ್ಟಡ ಮತ್ತು ಕಾನ್ವೆಂಟ್ ಹೈಸ್ಕೂಲಿಗೆ ಮಧ್ಯದಲ್ಲಿ 5 ಎಕ್ರೆ ನೀರಾವರಿ ಭೂಮಿ, 9 ಎಕ್ರೆ ಸಾಧಾರಣ ಕಾಡುಮರಗಳಿರುವ ತೋಟಮಾಡಲು ಅನುಕೂಲವಾದ ಬಾಣೆ ಜಾಗ, 5 ಅಂಕಣದ ವಾಸಕ್ಕೆ ಯೋಗ್ಯವಾದ ಹಂಚು ಹಾಕಿದ ಮನೆ, ಎರಡು ಅಂಕಣದ ಹುಲ್ಲಿನ ಮನೆ, ಎರಡು ದನದ ಕೊಟ್ಟಿಗೆಗಳು ಮಾರಾಟಕ್ಕಿವೆ. ಖಾಯಿಸ್‌ದಾರರು ಈ ಕೆಳಗಿನ ಅದ್ರೆಸಿಗೆ ಬರೆದು ತಿಳಿಯಬಹುದು.

'X'
C/o 'Kodagu'
Mercara. Coorg.

3—3

ಶ್ರೀ ಕೆ. ಯಂ. ಮೊಗಪ್ಪನವರು,
"ಕೊಡಗು" ಏಜೆಂಟರು,
ಸೋಮವಾರಪೇಟೆ

ಕೊಡಗು ಪ್ರಾಂತೀಯ ಸಹಕಾರಿ, ಮಾರ್ಕೆಟಿಂಗ್, ಫೆಡರೇಷನ್ ಲಿಮಿಟೆಡ್., ವೀರಾಜಪೇಟೆ.

ಸನ್ನುಲ್ಲಿ/ಕೋವಿಗಳು, ತೋಟೆಗಳು ಮತ್ತು ಎಲ್ಲಾ ತರಹದ ವ್ಯವಸಾಯದ ಹತ್ಯಾರುಗಳು ದೊರೆಯುತ್ತವೆ.

1. 32 ಪಿಸ್ತೂಲುಗಳು (Pistols) ಕ್ರಯ ರೂ. 162 ರಿಂದ 245ರ ವರೆಗೆ.
2. 12ನೇ ನಂಬರಿನ ಒಂಟಿ ಹೊಳವಿನ ಕೋವಿ ಕ್ರಯ ರೂ. 320-0-0
3. 12ನೇ ನಂಬರಿನ ಜೋಡು ಹೊಳವಿನ ಕೋವಿ (Webley & Scott)
4. 12ನೇ ನಂಬರಿನ ಜೋಡು ಹೊಳವಿನ ಕೋವಿ (Spanish make)
5. 6 ಗಜದ (Hand loom) ಕೈಮಗ್ಗದ ಸೀರೆಗಳು ಕ್ರಯ ರೂ. 4-10-0.
6. .32 ಪಿಸ್ತೂಲು ಮತ್ತು ರಿವಾಲ್ವರುಗಳ ತೋಟೆಗಳೂ ಸಹ ದೊರೆಯುತ್ತವೆ.
7. ಕಾಫಿ ಮತ್ತು ಕಿತ್ತಳೆ ಗಿಡಗಳಿಗೆ ಸ್ಪ್ರೇಮಾಡುವ ಪಂಪುಗಳು (Spraying Pumps)
8. ⅜" ಮತ್ತು ⅝" ಕಬ್ಬಿಣದ ಸಲಾಕೆಗಳು.

ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.
(ಆವಶ್ಯವಿರುವ ಕೋವಿಗಳಿಗೂ, ತೋಟೆಗಳಿಗೂ ಜಿಲ್ಲಾ ಮೇಜಿಸ್ಟ್ರೇಟರಿಂದ ವಿಶೇಷ ಪರ್ಮಿಟು "Special permit" ಪಡೆದವರಿಗೆ ಮಾತ್ರ ದೊರೆಯುವದು)

ಎಂ. ಎಸ್. ಸೋಮಯ್ಯ,
ಗೌರವ ಕಾರ್ಯದರ್ಶಿ.

62—25

CRESCENT

FOR PROTECTION AND SERVICE.

It is best to represent and insure with

The CRESCENT Insurance Co., Ltd.,

H: O: BOMBAY.] *[Established 1919.*

For particulars write to:-

Sri B. A. Pooviah
Organiser
Pollibetta, Coorg.

or

The Branch Manager,
133 B. Brigade Road,
Bangalore 1.

ಸುರಕ್ಷಿತವಾದ ಜೀವವಿಮೆ ಪಡೆಯಲು

ಕ್ರೆಸೆಂಟ್

ಇನ್ಶೂರೆನ್ಸ್ ಕಂಪೆನಿಗೆ ಬರೆಯಿರಿ.

ಕೊಡಗು ಪ್ರಾಂತೀಯ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾದದ್ದು. (1921ರಲ್ಲಿ ಸ್ಥಾಪಿತವಾದದ್ದು.

ಅಧಿಕೃತ ಶೇರು ಭಂಡವಾಳ	ರೂ.	10,00,000.
ವಸೂಲಾದ ಶೇರು ಭಂಡವಾಳ	ರೂ.	1,70,000.
ಕ್ಷೇಮನಿಧಿ	ರೂ.	53,000.
ಇತರ ನಿಧಿಗಳು	ರೂ.	28,000.

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನೂ ಕೈಕೊಳ್ಳಲಾಗುವುದು. ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದು. ಚಿನ್ನ, ಬೆಳ್ಳಿ ನಗಗಳ ಆಧಾರ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ ಮತ್ತು ಡ್ರಾಫ್ಟ್‌ಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರೆಸಿಟಿ ಮತ್ತು ವಾರ್ಡನ್ ಇನ್ಶೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಕೊಂಡುಕೊಳ್ಳಲಾಗುವುದು.

ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ,
ಗೌ. ಕಾರ್ಯದರ್ಶಿ.

ಕೆ. ಪಿ. ಅಪ್ಪಯ್ಯ, M. L. C.
ಪ್ರೆಸಿಡೆಂಟ್ ಬೋರ್ಡ್ ಡೈರೆಕ್ಟರ್ಸ್.

ಶ್ರೀ ಬಿ. ಡಿ. ಗಣಪತಿಯವರ

ಕಥಾಸಂಗ್ರಹ 'ಕುಸುಮಚಯ'

ವಿಮರ್ಶಕರು:—"ವಸಿಷ್ಠ"

:::0:::.........:::0:::

ಕುಸುಮಚಯವು ಹದಿನೈದು ಕಿರುಗತೆಗಳ ಸಂಗ್ರಹ. ಈ ಕಥೆಗಳ ಒಂದರಲ್ಲಿ, ಇನ್ನೊಂದು ವಿಧದ ಮನುಷ್ಯನ ಮಾನಸಿಕ ಅಶಾಂತಿ, ದುಃಖಜೀವನದ ಕಷ್ಟಗಳು ಇವನ್ನು ಚಿತ್ರಿಸುತ್ತಾನೆ. ಬಡತನದ ಬೇಗೆ, ಸಿರಿವಂತರ ಸ್ವಾರ್ಥತೆ ಮತ್ತು ಅದನ್ನು ಸಾಧಿಸುವುದಕ್ಕೆ ಅವರ ಹೀನಪ್ರವೃತ್ತಿ ಇವು ವರ್ಣಿತವಾಗಿವೆ. ಕೂಲಿಗಾರರು ತಮ್ಮ ಬೆವರು ಸುರಿಸಿ ಮಿಲ್‌ಮಾಲಿಕರ, ಕಂಟ್ರಾಕ್ಟುದಾರರ, ಜಮೀನ್ದಾರರ ಬೊಕ್ಕಸವನ್ನು ತುಂಬಿಸುವುದು, ಧಣಿಗಳು ಕೂಲಿಗಾರರಿಗೆ ಅವರ ದುಡಿತಕ್ಕೆ ತಕ್ಕ ಪ್ರತಿಫಲ ಕೊಡದೆ ಅವರ ಜೀವನವನ್ನೂ ಅವರ ಕುಟುಂಬದ ಜೀವನವನ್ನೂ ಕಷ್ಟಮಯವಾಗಿ ಮಾಡಿ ತಾವು ಅವರ ದುಡಿಮೆಯ ಫಲವಾಗಿ ಸುಖಪಡುವುದು. ಇವು ಕೆಲವು ಕಥೆಗಳ ಕಥಾವಸ್ತುವಾಗಿದ್ದರೆ, ಜಮೀನ್ದಾರರು ತಮ್ಮ ನೆರೆಯ ಬಡ ರೈತರ ಜಮೀನುಗಳನ್ನು ಕಿತ್ತುಕೊಳ್ಳಲು ಉಪಾಯಗಳು, ಒಬ್ಬ ಸ್ತ್ರೀಯು ತನ್ನ ಬಾಲ್ಯದ ಪ್ರಣಯಿಯನ್ನು ಮದುವೆಯಾಗಲು ವಿವಾಹಿತ ಪತಿಯನ್ನು ಕೊಲ್ಲುವದು ಮೊದಲಾದುವು ಇತರ ಕೆಲವು ಕಥೆಗಳ ಕಥಾವಸ್ತುಗಳಾಗಿವೆ.

ಈ ಕಥಾಸಂಕಲನದ ಕೆಲವು ಕಥೆಗಳಲ್ಲಿ ಸಾಧಾರಣ ಒಂದೇ ರೀತಿಯ ವಿಚಾರವಾಹಿನಿಯು ಹರಿಯುತ್ತಿದೆ— ಅಂದರೆ ಬಡತನದ ಕಷ್ಟವು ಸಿರಿವಂತರ, ಸಮಾಜದ ನಿಷ್ಠುರತೆಯಿಂದ ಹೆಚ್ಚಾಗಿದೆಯೆಂದು. ಈ ವಿಚಾರವಾಹಿನಿಯು ಸರಿಯೆಂದು ನಮಗೆ ತೋರುವುದಿಲ್ಲ. ಮಾಲಿಕರಿಗೂ ಮಜೂರರಿಗೂ ಇರುವ ಸಂಬಂಧ ಘರ್ಷಣೆಯ ಆ ಬದಿಯನ್ನು ಮಾತ್ರ ಚಿತ್ರಿಸಿರುವುದು, ವಾಸ್ತವಿಕವಾಗಿರುವ ಜನಜೀವನವನ್ನು ಪ್ರತಿಬಿಂಬಿಸುವದಿಲ್ಲ. ಪ್ರತಿಯೊಂದು ವರ್ಗದ ಜನರಲ್ಲಿ ಒಳ್ಳೆಯವರೂ ಇರುವರು ಕೆಟ್ಟವರೂ ಇರುವರು. ಹೀಗಿರುವಲ್ಲಿ ಸಿರಿವಂತರ ಮತ್ತು ಬಡವರ ವ್ಯವಹಾರದಲ್ಲಿ ಒಳ್ಳೆಯ ಮತ್ತು ಕೆಟ್ಟ ಬದಿಗಳೆರಡನ್ನೂ ತೋರದೆ ಕೆಟ್ಟ ಬದಿಯೊಂದನ್ನೇ ತೋರಿಸಿರುವುದು ಸರಿಯೆನಿಸುವದಿಲ್ಲ. ವರ್ಗವರ್ಗಗಳೊಳಗಿನ ಸಂಬಂಧದ ಎರಡು ಬದಿಗಳಿದ್ದಿದ್ದರೆ ಅವುಗಳ ತಾರತಮ್ಯದಿಂದ ಕಥೆಗಳು ಓದುಗರ ಮನಸ್ಸಿನ ಮೇಲೆ ಇನ್ನೂ ಹೆಚ್ಚಿನ ಪರಿಣಾಮಕಾರಿಯಾಗಿರುತ್ತಿದ್ದವು.

ಈ ಸಂಗ್ರಹದ ಒಂದೆರಡು ಕಥೆಗಳಲ್ಲಿ ಉದ್ದೇಶವು ಯೋಗ್ಯವಾಗಿದ್ದರೆ ಆ ಉದ್ದೇಶಸಾಧನೆಯ ಮಾರ್ಗವು ಕೆಟ್ಟದ್ದಾದರೂ ತಪ್ಪಲ್ಲ ಎಂಬ ವಿಚಾರ ಕಾಣಿಸುತ್ತದೆ. ಉದಾಹರಣೆಗೆ 'ನ್ಯಾಯ' ಎಂಬ ಕಥೆಯಲ್ಲಿ ಒಬ್ಬ ವಿದ್ಯಾರ್ಥಿಯು ತನ್ನ ವ್ಯಾಸಂಗದ ಖರ್ಚಿಗೆ ಹಣವಿಲ್ಲವೆಂದು ಊರಿನ ದೇವಸ್ಥಾನದ ವಿಗ್ರಹದ ಕೊರಳಿನಿಂದ ಚಿನ್ನದ ಸರವನ್ನು ಅಪಹರಿಸುವನು. ನ್ಯಾಯಾಧೀಶರು ಆ ತಸ್ಕರನನ್ನು ವಿಚಾರಿಸಿ "ಆ ವಿದ್ಯಾರ್ಥಿಯು ಆ ಚಿನ್ನದ ಸರವನ್ನು ಕದ್ದದ್ದರ ತಪ್ಪು ಅವನ ವ್ಯಾಸಂಗಕ್ಕೆ ಸಹಾಯವನ್ನು ಒದಗಿಸದ ಸಮಾಜಕ್ಕೆ ಸಲ್ಲಬೇಕು; ತಪ್ಪು ವಿದ್ಯಾರ್ಥಿಯದಲ್ಲ" ಎಂದು ತೀರ್ಮಾನಿಸುವರು. ಹಾಗೆಯೇ "ದುಷ್ಟ ಸಮಾಜ" ಎಂಬ ಕಥೆಯಲ್ಲಿ ಒಬ್ಬ ಕೂಲಿಗಾರನು ಗರ್ಭಿಣಿಯಾಗಿ ನರಳುತ್ತಿರುವ ತನ್ನ ಹೆಂಡತಿಯ ಔಷಧೋಪಚಾರಕ್ಕೆ ಹಣವಿಲ್ಲದೆ ನೆರೆಮನೆಯವರ ಒಂದು ಚೆಂಬನ್ನು ಕದಿಯುತ್ತಾನೆ. ಆತನ ಮನೆಯ ಕಷ್ಟವನ್ನು ಗಮನಿಸದೆ ಆತನಿಗೆ ಶಿಕ್ಷೆಯಾಗುತ್ತದೆ. ಸಮಾಜವು ಆ ನಷ್ಟವನ್ನು ತಪ್ಪಿಸಬಹುದಿತ್ತು. ಬಡವನ ನಿಸ್ಸಹಾಯಕ ಸ್ಥಿತಿಯನ್ನು ಆತನ ಕಷ್ಟವನ್ನು ಸಮರ್ಥಿಸುವ ಮನೋಭಿಪ್ರಾಯವು ಸರಿಯಲ್ಲ. "ಯಾರ ತಪ್ಪು" ಎಂಬ ಕಥೆಯಲ್ಲಿ ಪೊನ್ನಮ್ಮ ಎಂಬ ವಿವಾಹಿತ ಹೆಂಗಸು ತನ್ನ ವಿವಾಹಕ್ಕೆ ಮೊದಲಿನ ಪ್ರೇಮಿಯನ್ನು ಕೂಡುವ ಕಾಂಕ್ಷೆಯಿಂದ ತನ್ನ ವಿವಾಹಿತ ಪತಿಗೆ ವಿಷ ಸೇವನೆ ಮಾಡಿಸಿ ಕೊಲ್ಲುವಳು. ಜೀವನದಲ್ಲಿ ಇಂಥ ಸನ್ನಿವೇಶಗಳು ಬರಬಹುದು. ಆದರೆ ಇಂಥ ಕ್ರೂರ ಕೃತ್ಯವು ಕಠಿಣ ಸ್ವಭಾವದ ಹೆಂಗಸರಿಂದಲೇ ಸಾಧ್ಯ. ಲೇಖಕರು ಚಿತ್ರಿಸಿರುವ ಪೊನ್ನಮ್ಮನಿಂದ ಅಂಥಾ ಕೆಲಸವು ಜರುಗಿದೆಯೆಂಬುದು ಅಸ್ವಾಭಾವಿಕವಾಗಿ ತೋರುವುದು.

ಇನ್ನುಳಿದ ಕಥೆಗಳಲ್ಲಿ ಸರ್ಕಸ್ ಬಹು ಭಾವನಾಮಯವಾದುದು. ಪ್ರಕೃತಿಯು ನಾಟ್ಯ [illegible]ದೆಯೆಂದೂ ಆ ನಾಟ್ಯದ ಲೀಲೆಯಲ್ಲಿಯ ಮಾನವನು ಪ್ರಕೃತಿಯ [illegible] ಪರಿಗಣಿಸಿ ತನ್ನ ಜೀವನವನ್ನು ನಿರ್ವಹಿಸುವದರಲ್ಲಿಯೇ ಜೀವನದ ಯಶೋಗಾನವಿದೆಯೆಂದೂ ಚಿತ್ರಿತವಾಗಿದೆ. ಕಥೆಯು ಅಸ್ವಾಭಾವಿಕವೆಂದು ತೋರಿದರೂ ಅರ್ಥ[illegible]ವಾದುದಾಗಿದೆ. ಹಾಗೆಯೇ 'ದಾರಿ ತಪ್ಪಿದ ಮಗ' "ಮರೆತ ಮನೆ" 'ಅದು ನಾನು" ಇವು ತತ್ವಮಯವಾಗಿವೆ.

ಒಟ್ಟಾರೆ ಇವೆಲ್ಲ ಕಥೆಗಳು ಬಡವರ ಸಂಕಷ್ಟಗಳನ್ನೂ, ಭಗ್ನ ಹೃದಯಗಳ ದುಃಖಗಳನ್ನೂ ಓದುಗರ ಮುಂದಿಡುತ್ತವೆ. ಕಥೆಗಳು ಚಿಕ್ಕವಾಗಿ ಪಾತ್ರಗಳನ್ನು ಚೆನ್ನಾಗಿ ರೂಪಿಸಲಿಕ್ಕೆ ಎಡೆ ಸಾಲದಾಗಿದೆ. ಹಾಗೂ ಕಥೆಗಳು ಮನಸ್ಸನ್ನು ಸೆಳೆಯುವಂತಾಗಿವೆ. ಭಾಷೆಯು ಸುಲಭ, ಸರಳವಾಗಿದೆ. ಎಲ್ಲರೂ ಈ ಪುಸ್ತಕವನ್ನು ಕೊಂಡು ಓದಿ ತಮ್ಮ ಪುಸ್ತಕ ಭಂಡಾರವನ್ನಲಂಕರಿಸಲು ಯೋಗ್ಯವಾಗಿದೆ.

———

Edited, Printed and Published by P. I. Pellappa at 'Kodagu' Press, Mercara, for 'Kodagu' Ltd.

Reg. No. M. 1550.
'KODAGU', MERCARA, (Coorg).

ಕೊಡಗು

ಸಂಪಾದಕರು—ಪಿ. ಐ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. 5-0-0.

ಸಂಪುಟ ೨೯ | ತಾರೀಕು ೨೩-೬-೧೯೫೦ನೇ ಶುಕ್ರವಾರ | ಸಂಚಿಕೆ ೪೦

ಅತ್ತೆಗೊಂದು ಕಾಲ ಸೊಸೆಗೊಂದು ಕಾಲ

ಸ್ವರ್ಗಲೋಕದಲ್ಲಿರುವ ಅತ್ತೆಗೆ ಸೊಸೆ ಬರೆದ ಪತ್ರ.

ಸ್ವರ್ಗಲೋಕದೊಳಗಿರುವ ಅತ್ತೆಯವರಿಗೆ ನಮಸ್ಕಾರಗಳು. ಅದಾಗಿ ಉಭಯ ಕುಶಲೋಪರಿ ಸಾಂಪ್ರತ—

೪೦ ವರ್ಷದ ಹಿಂದೆ

ನೀವು ಸ್ವರ್ಗಸ್ಥರಾಗಿ ಸುಮಾರು ನಲವತ್ತು ವರ್ಷವಾಗಿರಬಹುದು. ಈ ನಲವತ್ತು ವರ್ಷಗಳಲ್ಲಿ ಸ್ವರ್ಗ ಲೋಕದಲ್ಲಿ ಏನು ಬದಲಾವಣೆಯಾಗಿದೆಯೋ ತಿಳಿಯದು. ನೀವಾದರೂ ವರ್ಷಕ್ಕೊಂದು ಸಲವಾದರೂ ಕಾಗದ ಬರೆದರೆ ಅಲ್ಲಿನ ಯೋಗಕ್ಷೇಮಗಳು ತಿಳಿಯುತ್ತಿತ್ತು. ನಿಮ್ಮ ಹೆಸರಾಗಿ ವರ್ಷಕ್ಕೊಂದು ಸಲ ಬರುವ ಬ್ರಾಹ್ಮಣರು ಮಂತ್ರಗಳನ್ನು ಹೇಳಿಹೋಗುತ್ತಾರೆಯೇ ಹೊರತು ನಿಮ್ಮ ಕ್ಷೇಮಗಳನ್ನು ತಿಳಿಸುವುದಿಲ್ಲ. ನಮಗಂತೂ ನಿಮ್ಮ ವಿಚಾರವು ತಿಳಿಯದೆಯೇ ಮನಸ್ಸಿಗೆ ವ್ಯಾಕುಲವಾಗಿರುತ್ತದೆ. ಅಲ್ಲಿ ಮಳೆ ಬೆಳೆ ಹೇಗಿದೆ, ರೋಗರುಜಿನಗಳು ಹೇಗಿವೆ, ಹೊಸ ಔಷಧಿಗಳನ್ನು ಕಂಡು ಹಿಡಿದಿದ್ದಾರೆಯೋ? ನಿಮ್ಮ ಡಾಕ್ಟರುಗಳು ಸೂಜಿ ಚುಚ್ಚುತ್ತಾರೆಯೇ? ವಿಟಮಿನುಗಳನ್ನು ಕಂಡುಹಿಡಿದಿದ್ದಾರೆಯೇ? ನಮ್ಮಲ್ಲಿ ಅಲೋಪತಿ, ಹೋಮಿಯೋಪತಿ, ಆಯುರ್ವೇದಿಕ್, ಯುನಾನಿ ಇವೇ ಮುಂತಾದ ವೈದ್ಯಕ್ರಮಗಳಿರುವಂತೆ ನಿಮ್ಮಲ್ಲೂ ಇವೆಯೇ?

ನಿಮ್ಮ ಕಾಲದಲ್ಲಿ ರೂಪಾಯಿಗೆ ೧೦ ಸೇರು ಅಕ್ಕಿ, ೮ ಸೇರು ಬೇಳೆ, ೩ ಆಣೆಗೆ ವೀಸೆ ಬೆಲ್ಲ, ೨ ಆಣೆಗೆ ಒಂದು ವೀಸೆ ಹುಣಸೇಹಣ್ಣು, ೪ ಆಣೆಗೆ ವೀಸೆ ಸಕ್ಕರೆ, ೫ ಆಣೆಗೆ ವೀಸೆ ಎಣ್ಣೆ, ಬೆಣ್ಣೆ ೧ರೂ.ಗೆ ೪ ವೀಸೆ ಮೆಣಸಿನಕಾಯಿಗೆ ವೀಸೆ ೧ ರೂ. ಕೊತ್ತಂಬರೀಬೀಜ ರೂ ಗೆ ೨೦ ಸೇರು, ೬ ಕಾಸಿಗೊಂದು ತೆಂಗಿನ ಕಾಯಿ, ಹಾಲು ರೂ. ಗೆ ೮ ಸೇರು, ಸೌದೆ ರೂ. ಗೆ ೧೬ ಮಣ, ಸೀಮೆಎಣ್ಣೆ ಒಂದು ಶೀಸೆಗೆ ಒಂದಾಣೆ ಬಾಕೀ ಸಾಮಾನುಗಳೆಲ್ಲಾ ರೂ. ಗೆ ೬ ಸೇರು, ೮ ಸೇರು ಈ ರೀತಿ ಸಿಕ್ಕುತ್ತಿತ್ತು. ಮನೆ ಬಾಡಿಗೆಯಂತೂ ಒಂದು ದೊಡ್ಡ ಮನೆಗೆ ನಾಲ್ಕು ರೂಪಾಯಿಗೆ ಹೆಚ್ಚು. ಗೋದಿಯನ್ನಂತೂ ಕೇಳುವವರೇ ಇರಲಿಲ್ಲ. ರವೆ ಉಪ್ಪಿಟ್ಟು ಮಾಡಿದ ದಿನ ಚಿರೋಟಿ ಮಾಡಿದಂತೆ, ಒಂದು ತಿಂಗಳ ತುಪ್ಪಕ್ಕೆ ೮ ರೂಪಾಯಿ, ಈ ರೀತಿ ಇದ್ದಾಗ ನೀವು ೧೦ ರೂಪಾಯಿನಲ್ಲಿ ಸಂಸಾರ ನಡೆಸುತ್ತಿದ್ದೀರಿ. ಎಲ್ಲೋ ಹತ್ತು ಪವನಿಗೆ ೫-೧೫ ರೂ ಗಳ ಇದ್ದವು. ಆ ಕಾಲವನ್ನು ಸುಖವಾಗಿ ನೀವು ಕಳೆಯುತ್ತಿದ್ದಿರಿ.

ಈಗಿನ ಕಾಲ

ಆದರೆ ಈಗ ಅಕ್ಕಿ ರೂ ಗೆ ೨ ಸೇರು ಬೇಳೆ ೧ ಸೇರು, ಬೆಲ್ಲ ಸಿಕ್ಕಿದರೆ ೧೩ ಆಣೆ ಸಿಕ್ಕದಿದ್ದರೆ ೨ ರೂಪಾಯಿ, ಹುಣಸೇ ಹಣ್ಣು ಕಾಲದಲ್ಲಿ ೧೨ ಆಣೆ ವೀಸೆಗೆ, ಕಾಪಿ ತಪ್ಪಿದರೆ ರೂ. ೧-೮-೦ ಸಿಕ್ಕದಿದ್ದರೆ ರೂ. ೩, ಬೆಣ್ಣೆ ಸೇರಿಗೆ ೨ ರೂಪಾಯಿ, ಮೆಣಸಿನಕಾಯಿ ಸೇರಿಗೆ ೧ ರೂ. ಕೊತ್ತಂಬರೀ ಬೀಜ ರೂಪಾಯಿಗೆ ಮೂರು ಪಾವು, ತೆಂಗಿನಕಾಯಿ ರೂ ಗೆ ೩, ಹಾಲು ರೂಪಾಯಿ ಗೆ ೧ ಸೇರು, ಸೌದೆ ರೂ. ೨॥ ಮಣ, ಸೀಮೆ ಎಣ್ಣೆ ಕಂಟ್ರೋಲ್ ಇದ್ದರೆ ೪ ಆಣೆ ಇಲ್ಲದಿದ್ದರೆ ೦-೩-೬ ಆಣೆ ಬಾಕಿ ಸಾಮಾನೆಲ್ಲಾ ರೂ. ಗೆ ೧ ಸೇರು ಸಿಕ್ಕುವುದೂ ದುರ್ಲಭ.

ಇವೆಲ್ಲಕ್ಕಿಂತ ಹೆಚ್ಚಾಗಿ ನಿಮ್ಮ ಕಾಲದಲ್ಲಿ ಒಬ್ಬೊಬ್ಬರೂ, ೧೨-೧೪ ಬಾಣಂತಿತನ ಬಹಳ ಕಟ್ಟು ನಿಟ್ಟಾಗಿ ಅಂದರೆ ಮನೆ ಔಷಧಿ ಮೆಣಸಿನ ಕಾರದಿಂದ ಮಾಡುತ್ತಿದ್ದಿರಿ. ಈಗ ಮೆಣಸು ಅನ್ನುವ ಪದಾರ್ಥ ಚಿನ್ನಕ್ಕಿಂತ ಬೆಲೆ ಹೆಚ್ಚಾಗಿದೆ. ಚಿನ್ನ ಪವನಿಗೆ ೭೭ ರೂ. ತೊಟ್ಟಲ್ಲಿ ಒಂದು ಪವನು, ಬೆಳ್ಳಿ ತೊಲಕ್ಕೆ ೨ ರೂಪಾಯಿ. ಚಿನ್ನ-ಬೆಳ್ಳಿ ಕೊಳ್ಳುವ ಆಸೆಯಂತೂ ಇಲ್ಲ. ಆದರೆ ಮೆಣಸಿನ ಸಾರು ಮಾಡುವುದು ಕೂಡಾ ಕಷ್ಟವಾಗಿದೆ

ನಿಮ್ಮ ಕಾಲದಲ್ಲಿ ಮದುವೆಯಾಗಿ ೩ ವರ್ಷಕ್ಕೆ ಮಕ್ಕಳಾಗದಿದ್ದರೆ ಅಶ್ವತ್ಥ ಪ್ರದಕ್ಷಿಣೆ, ನಾಗರ ಪ್ರತಿಷ್ಠೆ ಉಪವಾಸ ವ್ರತ ಎಲ್ಲಾ ಮಾಡುತ್ತಿದ್ದಿರಿ. ಈಗ ಅದಕ್ಕೆ ಬದಲಾಗಿ ಮಕ್ಕಳಾಗದಿರಲಿ ಅಂತ 'ಬರ್ತ್ ಕಂಟ್ರೋಲ್' ಅಂದರೆ ಸಂತಾನ ನಿರೋಧ ಮಾಡಬೇಕೆಂತ ಹೆಂಗಸರುಗಳೇ ಭಾಷಣ ಮಾಡುತ್ತಿದ್ದಾರೆ

ಅಂತೂ ನೀವು ಸಂಸಾರ ಮಾಡುವ ಕಾಲದಲ್ಲಿ ಮಾವನವರು ನಿಮ್ಮನ್ನು ಹೊಗಳುತ್ತಾ ಇದ್ದರು. ಆದರೆ ಈಗ ನಮ್ಮ ಹಣೆಯ ಬರಹ ಈಗಿನ ಕಾಲದವರಿಗೆ ಸಂಸಾರ ಮಾಡಲು ಬರುವುದಿಲ್ಲ ಅಂತ ದಿನಾ ಜಗಳ ಆಡುತ್ತಾ ಇರುತ್ತಾರೆ. ನೀವುಗಳು ೧೦ ರೂಪಾಯಿಯಲ್ಲಿ ಮಾಡುತ್ತಿದ್ದ ಸಂಸಾರ ಈಗ ರೂ. ೧೫೦ ಆದರೂ ಸಾಲದಾಗಿದೆ ನಾವೇನು ಮಾಡುವುದು.

ರೇಷನ್ ಎಂಬ ಹೆಸರು ನಿಮಗೆ ಗೊತ್ತಿರಲಿಲ್ಲ

ರೇಷನ್ ಎಂಬುವ ಹೆಸರು ಕೂಡಾ ನಿಮಗೆ ಗೊತ್ತಿಲ್ಲದಿರಬಹುದು. ಈಗ ಇದು ಒಂದು ಮಂತ್ರ. ಇದನ್ನು ಕೊನೆಯ ಪಕ್ಷ ದಿನಕ್ಕೆ ೨೫ ಸಾರಿಯಾದರೂ ಜಪಿಸಬೇಕು. ಆ ಕಾಲದಲ್ಲಿ ಸಾಮಾನುಗಳನ್ನು ತುಂಬಿಡಲು ಉಗ್ರಾಣದಲ್ಲಿ ಸ್ಥಳವಿಡುವುದು ಕಷ್ಟವಾಗಿತ್ತು. ಈಗ ಅಲ್ಲಿ ಗಂಡ, ಹೆಂಡತಿ, ಎರಡು ಮಕ್ಕಳು ಸಂಸಾರ ಮಾಡಬಹುದು. ಸಾಮಾನುಗಳನ್ನು ತುಂಬಿಡುವ ಅಗತ್ಯವೇ ಇಲ್ಲ ಆ ಕಷ್ಟವನ್ನು ನೋಡಲಾರದೆ ಇಲಿ ಹೆಗ್ಗಣಗಳು ಊರುಗಳನ್ನೇ ಬಿಟ್ಟು ಹೋಗಿವೆ ಎಂಬ ವರ್ತಮಾನವು ಸುಳ್ಳಲ್ಲ.

ರೇಷನ್ನಿನಲ್ಲಿ ಯಾವ ಸಾಮಾನು ಬೇಕಾದರೂ ಕೊಡುತ್ತಾರೆ ಒಬ್ಬರಿಗೆ ತಿಂಗಳಿಗೆ ೪ ಸೇರು ಅಕ್ಕಿ, ೩ ಸೇರು ಗೋಧಿ ಅರ್ಧ ವೀಸೆ ಸಕ್ಕರೆ ಸಿಗುತ್ತೆ. ಗೋಧಿ ಇಲ್ಲದಿದ್ದರೆ ಜೋಳ, ರಾಗಿ, ಮುಸುಕಿನ ಜೋಳ ಇವೆಲ್ಲಾ ಕೊಡುತ್ತಾರೆ ನಾವು ಹೊಟ್ಟೆ ತುಂಬಾ ಊಟಮಾಡಿ ಎಷ್ಟೋ ದಿವಸ ಆಯಿತು. ಧರ್ಮವೆಂದು ಇನ್ನೊಬ್ಬರಿಗೆ ಒಂದು ಹಿಡಿ ಅನ್ನ ಹಾಕುವ ಹಾಗಿಲ್ಲ. ನಿಮ್ಮ ಕಾಲದಲ್ಲಿ ನೀವು ತಿಂದು, ಬೇಕಾದಷ್ಟು ಜನರಿಗೆ ಅನ್ನ ಹಾಕಿ ಅನ್ನದಾತರೆಂದು ಹೆಸರು ಪಡೆದಿದ್ದಿರಿ. ನಿಮ್ಮ ವಂಶದವರೆನಿಸಿಕೊಂಡ ನಮಗೆ ಅದರ ಗಂಧವೂ ಇಲ್ಲ. ಒಂದು ವೇಳೆ ನಾವು ತಿನ್ನುವುದರಲ್ಲಿ ಮಿಗಿಸಿ ಯಾರಿಗಾದರೂ ಹಾಕಿದರೆ ಸರ್ಕಾರದ ಶಿಕ್ಷೆಗೆ ಉತ್ತರವಾದಿಗಳಾಗಬೇಕಾಗುತ್ತೆ. ಅದಕ್ಕೆ ನಾವು ಎಂಜಲು ಕೈಯಲ್ಲೂ ಕಾಗೆ ಓಡಿಸುವುದಿಲ್ಲ. ಎಂದು ಶಪಥ ಮಾಡಿದ್ದೇವೆ.

ಕೆಲಸ ಮತ್ತು ಆರೋಗ್ಯ

ನಿಮ್ಮ ಕಾಲದಲ್ಲಿ ತಮಾಷೆಯಾಗಿ ಕಾಲ ಕಳೆಯಲು ಕಷ್ಟವಾಗುತ್ತಿತ್ತೇನೋ, ಆಗಾಗ ಬಯಲು ನಾಟಕಗಳನ್ನು ಆಡುತ್ತಿದ್ದರೆಂದು ಕೇಳಿದ್ದೇವೆ ಸಾಯಂಕಾಲವಾದರೆ ದೇವಸ್ಥಾನಕ್ಕೆ ಹೋಗುವುದು, ಪುರಾಣ ಕೇಳುವುದು, ಇವುಗಳಿದ್ದುವು. ಈಗ ವಿವಿಧ ನಾಟಕಗಳು, ಸಿನಿಮಾ, ಸರ್ಕಸ್, ಸಾಮಾಜಿಕ ಚಿತ್ರಗಳು ಇವುಗಳೆಲ್ಲಾ ಬೇಕಾದಷ್ಟಿವೆ. ಹೊಟ್ಟೆಗೆ ತಿನ್ನಲು ಕೂಳಿಲ್ಲದಿದ್ದರೂ ಇವುಗಳಿಗೆಲ್ಲಾ ಯಾರೂ 'ಚಕ್ಕರ್' ಕೊಡುವುದಿಲ್ಲ.

ಆಗಿನ ಕಾಲದಲ್ಲಿ ಊರಿಂದೂರಿಗೆ ಎತ್ತಿನ ಬಂಡಿ, ಕಾಲುನಡಿಗೆ ಇದರಲ್ಲಿ ಹೋಗುತ್ತಿದ್ದರು. ಈಗ ಎಷ್ಟೇ ದೂರವಾದರೂ ಏರೋಪ್ಲೇನಿನಲ್ಲಿ ಹಕ್ಕಿಯಂತೆ ಹಾರಿಹೋಗಬಹುದು. ಮೋಟಾರಿನಲ್ಲಿ ಓಡಾಡದವರೇ ಅಪರೂಪ. ಬಲು ಬೇಗ ಕಾಶಿಗೆ ವಿಮಾನದಲ್ಲಿ ಹಾರಿ ತಲಪಬಹುದು.

ಆ ಕಾಲದಲ್ಲಿ ಓದಿದವರು ಅಪರೂಪ. ದಿನ ದಿನವೂ ಸ್ಕೂಲ್, ಕಾಲೇಜುಗಳು ಹೆಚ್ಚುತ್ತಲೇ ಇವೆ. ಇಷ್ಟೆಲ್ಲಾ ಆಯಿತೆಂದರೆ ನಮಗೆ ಶಕ್ತಿ ಎನ್ನುವ ಹೆಸರೇ ಇಲ್ಲದಾಗಿದೆ.

ನೀವುಗಳು ಬತ್ತ ಕುಟ್ಟಿ ಅಕ್ಕಿ ಮಾಡಿಕೊಂಡು ಹೊಳೆಯಿಂದ ನೀರು ತಂದುಕೊಂಡು ದನಕರುಗಳನ್ನೆಲ್ಲಾ ನೋಡಿಕೊಂಡು ಅಚ್ಚುಕಟ್ಟಾಗಿ ಸಂಸಾರ ಮಾಡುತ್ತಿದ್ದಿರಿ. ಈಗಿನ ನಮ್ಮ ಕಷ್ಟವನ್ನು ಏನೆಂದು ಹೇಳೋಣ, ಅಡಿಗೆ ಮಾಡಲು ಅಡಿಗೆಯವನಿಲ್ಲದಿದ್ದರೆ ಊಟಕ್ಕೇ ಕಷ್ಟ. ನಿತ್ಯಕಾಯಿಲೆ. ಬಂದ ಡಾಕ್ಟರುಗಳು ಕಾಯಿಲೆಯವರು ರೆಸ್ಟಿನಲ್ಲಿರಬೇಕೆಂದೂ ಹಣ್ಣು ಹಂಪಲುಗಳನ್ನು ತಿನ್ನಬೇಕೆಂದೂ ಕೆಲಸ ಮಾಡ ಕೂಡದೆಂದೂ 'ಅಡ್ವೈಸ್' ಕೊಡುತ್ತಾರೆ. ಕೈಗೆ ಆಳು ಕಾಲಿಗೆ ಆಳು ಎಂಬಂತೆ ನಮ್ಮ ಪರಿಸ್ಥಿತಿ. ಪ್ರತಿಯೊಂದಕ್ಕೂ ಯಂತ್ರಗಳು ಬೇರೆ ಬಂದಿವೆ. ಇನ್ನು ಮೇಲೆ ಅಡಿಗೆಮಾಡಿ ಬಡಿಸುವ ಯಂತ್ರಕ್ಕೆ ಆರ್ಡರ್ ಮಾಡಬೇಕೆಂದೂ ಸರಕಾರವನ್ನು ಕೇಳಿಕೊಂಡಿದ್ದೇವೆ. ಹೀಗಿರುವಾಗ ನಮಗೆ ಕಾಯಿಲೆಗಳು ಬರದೆ ಏನು ಮಾಡೀತು. ನಮ್ಮ ಕಾಯಿಲೆ ವಾಸಿಯಾಗುವ ಹಾಗೂ ಇಲ್ಲ, ಡಾಕ್ಟರುಗಳಿಗೆ ದುಡ್ಡು ಕೊಡುವುದು ತಪ್ಪುವ ಹಾಗೂ ಇಲ್ಲ. ಅದಲ್ಲದೆ ಎಷ್ಟು ಹೆಚ್ಚು ಡಾಕ್ಟರುಗಳಿಂದ ಔಷಧಿ ತೆಗೆದುಕೊಂಡರೆ ಅಷ್ಟು ದೊಡ್ಡ ಮನುಷ್ಯರೆಂದು ಜನರು ತಿಳಿದುಕೊಳ್ಳುತ್ತಾರೆ. ಹೀಗಿದೆ ನಮ್ಮ ಈಗಿನ ಕ್ರಮ.

'ಶ್ರೀ ನಾ.' —ಇಂತಿ ನಿಮ್ಮ ಸೊಸೆ.

ತಿಳಿಸಿರಿ.

ಭೂಮಿ, ತೋಟ, ಜಾಗ ಪೇಟೆಯಲ್ಲಿ ಮನೆ ಅಥವಾ ಮನೆ ಸ್ಥಳ ಮಾರಲಿರುವವರು ಮತ್ತು ಕೊಂಡುಕೊಳ್ಳಲಿಚ್ಛಿಸುವವರು ಈ ಕೆಳಗಿನ ವಿಳಾಸದಲ್ಲಿ ವಿಚಾರಿಸಿರಿ. ಅಲ್ಲದೆ ಬೇಕಾದವರಿಗೆ ಕರೆಯುವ ಎಮ್ಮೆ, ಹಸು ಮತ್ತು ಉಳುವ ಎತ್ತು ಮತ್ತು ಕೋಣಗಳನ್ನು ಒದಗಿಸಿ ಕೊಡಲಾಗುವುದು. ಬೇಕಾಗುವವರು ತಮಗೆ ಬೇಕಾದ ತಾರೀಕಿನ ಎಂಟು ದಿನಗಳಿಗೆ ಮುಂದೆ ತಿಳಿಸಬೇಕಾಗಿದೆ. ವಿವರಗಳಿಗೆ ಈ ಪತ್ತೆಗೆ ಬರೆಯಬಹುದು.

P. A. N. & SONS,
Commission Agent,
Gonicoppal
26-7 S. Coorg.

ಬೇಕಾಗಿದೆ.

ದೊಡ್ಡದಾಗಿ ಬೆಳೆದ ಕಾಡು ಹುಲ್ಲುಗಳ ಕುತ್ತಿಗೆಯಲ್ಲಿರುವ ಮಿನುಗುವ ಗಂಟುಗಳಿಂದ ಕೂಡಿದ ಭಾಗವನ್ನು ಚರ್ಮ ಸಹಿತ ತೆಗೆದು ಒಣಗಿಸಿ ಕಳುಹಿಸಿದರೆ ಪ್ರತಿಯೊಂದಕ್ಕೆ ರೂ ೧-೮-೦ ದರದಲ್ಲಿ ಕೊಂಡು ಕೊಳ್ಳಲಾಗುವುದು. ಹೆಚ್ಚಿನ ವಿವರಗಳಿಗೆ ಈ ಪತ್ತೆಗೆ ಬರೆಯಿರಿ.

D. H. THANGAM & CO.
indah Bridge P.O.
Nilgiris

ಅಮೇರಿಕದ ಮಹಿಳೆಯರು.

(ನವಭಾರತದಿಂದ.)

ಅಮೇರಿಕದ ಮಹಿಳೆಯರ ವಿಷಯ ನಾವು ಪತ್ರಿಕೆಗಳಲ್ಲಿ ಹೆಚ್ಚು ಓದಿದ್ದೇವೆ. ಅವರ ಜೀವನ ವಿಧಾನಗಳನ್ನು ಚಿತ್ರಿಸುವ ಹಲವಾರು ಚಿತ್ರಗಳನ್ನೂ ನಾವು ಕಂಡಿದ್ದೇವೆ. ಅಮೇರಿಕದ ಹೆಣ್ಣುಮಕ್ಕಳು ಕೇವಲ ಶೋಕಿ ಜೋಕುಗಳ ಆಧುನಿಕ ವ್ಯಕ್ತಿಗಳು, ಗಂಡುಬೀರಿಗಳು ಎಂದು ಹಲವರು ಭಾವಿಸಿಕೊಂಡಿರಬಹುದು. ಅಮೇರಿಕದ ಮಹಿಳೆಯರು ಬಹಳ ಸ್ವಾತಂತ್ರ್ಯವುಳ್ಳವರು. ಹೌದು, ಅವರು ಸ್ವತಂತ್ರರು ಕೂಡಾ. ಆದರೆ ಅವರ ಮುಂದೆ ಹಲವಾರು ಸಮಸ್ಯೆಗಳಿವೆ. ಇತರ ದೇಶಗಳ ಮಹಿಳೆಯರಂತೆ ಅವರೂ ಸಂಸಾರ ಬಂಧನ, ಮನೆ, ದಾಂಪತ್ಯ ಜೀವನ ಇವುಗಳಿಗೆ ಸಿಲುಕಿದವರು. ಅಮೇರಿಕದ ಮಹಿಳೆಯರ ವಿಷಯವಾಗಿ ಅಮೇರಿಕಾ ಸರಕಾರದ ಮಜೂರಿ ಖಾತೆಯ ಫ್ರೀಡಾ ಎಸ್. ಮಿಲ್ಲರ್ ಅವರು ಬರೆದ ಲೇಖನದ ಕೆಲವು ಭಾಗಗಳನ್ನು ಇಲ್ಲಿ ಕೊಡಲಾಗಿದೆ. ಅಮೇರಿಕದ ಸ್ತ್ರೀಯ ನಿಜ ಚಿತ್ರವಿದು.

ಸ್ವತಂತ್ರ ಮಹಿಳೆಯರು

ಅಮೇರಿಕೆಯು ಕಳೆದ ೧೫೫ ವರ್ಷಗಳಿಂದ ಒಂದು ದೊಡ್ಡ ರಾಷ್ಟ್ರವಾಗಿ ಮೆರೆಯುತ್ತಿದೆ. ಅಮೇರಿಕದ ಸ್ತ್ರೀಯರು ರಾಷ್ಟ್ರದೊಡನೆ ಮುನ್ನಡೆದಿರುವರು. ಸಾರ್ವಜನಿಕ ಜೀವನದಲ್ಲಿ ಅವರು ಪ್ರಾಮುಖ್ಯತೆ ಹೊಂದಿರುತ್ತಾರೆ; ಗಂಡಸರಷ್ಟೆ ಅವರೂ ಜವಾಬ್ದಾರಿ ಹೊತ್ತಿರುವರು.

ಇದೀಗ ಅಮೇರಿಕದ ಸ್ತ್ರೀಯರಲ್ಲಿ ಹೆಚ್ಚಿನವರು ಮತದಾನದ ಅಧಿಕಾರ ಪಡೆದಿರುವರು. ಸರಕಾರದ ಅನೇಕ ಖಾತೆಗಳಲ್ಲಿ, ಸಂಘ ಸಂಸ್ಥೆಗಳಲ್ಲಿ ಅವರು ಗಂಡಸರಷ್ಟೇ ದಕ್ಷತೆಯಿಂದ ದುಡಿಯುತ್ತಿದ್ದಾರೆ.

ವಿದ್ಯಾಭ್ಯಾಸ

ಬಾಲ್ಯದಿಂದಲೂ ಅಮೇರಿಕದ ಬಾಲಕಿಯರು ತಮ್ಮ ಅಣ್ಣ ತಮ್ಮಂದಿರಂತೆ ಸ್ವತಂತ್ರರಾಗಿ ಬೆಳೆಯುತ್ತಾರೆ. ಸಾರ್ವಜನಿಕ ಶಾಲೆಗಳಲ್ಲಿ ಅಡಿಗೆ ಮಾಡುವ ಶಿಕ್ಷಣವೂ ಅವರಿಗೆ ಸಿಗುತ್ತದೆ. ಆದರೆ ಹುಡುಗಿಯರೂ ಆಡುತ್ತಾರೆ. ಇದಲ್ಲದೆ ಸಾಮಾಜಿಕ ಅಧ್ಯಯನವೂ ಬಾಲಕಿಯರಿಗೆ ಮುಖ್ಯವಾಗಿದೆ.

ಹೈಸ್ಕೂಲ್ ವಿದ್ಯಾಭ್ಯಾಸ ಮುಗಿದ ತರುವಾಯ ಬಾಲಕಿಯರು ಕಾಲೇಜು ವಿದ್ಯಾಭ್ಯಾಸಕ್ಕೆ ಸೇರುವಾಗ ಗಂಡು ಹೆಣ್ಣು ಎಂಬ ಭೇದವಿಲ್ಲ. ಆದರೂ ಹೆಣ್ಣು ಮಕ್ಕಳಿಗಾಗಿ ಪ್ರತ್ಯೇಕ ಕಾಲೇಜುಗಳಿವೆ. ಇಂಜನಿಯರಿಂಗ್, ವಿಜ್ಞಾನ, ವೈದ್ಯಕೀಯ ಶಿಕ್ಷಣ ಅಥವಾ ಯಾವ ತರದ ಶಿಕ್ಷಣವನ್ನಾದರೂ ಅವರು ಆರಿಸಬಹುದು.

ವರ್ಷ ಹೋದಂತೆ ಅಮೇರಿಕದಲ್ಲಿ ಸ್ತ್ರೀಯರು ಹೆಚ್ಚು ಸಂಖ್ಯೆಯಲ್ಲಿ ವಿದ್ಯಾಭ್ಯಾಸ ಹೊಂದಿರುವರು. ಮತ್ತು ಉಚ್ಚ ವಿದ್ಯಾಭ್ಯಾಸಕ್ಕೂ ಕೂಡಾ ಹೋಗುತ್ತಿರುವರು.

ಆಟ ಪಾಠಗಳು

ವಿದ್ಯಾಭ್ಯಾಸದ ಎಲ್ಲಾ ಅಂಗಗಳಲ್ಲಿ ಸ್ತ್ರೀಯರು ಪುರುಷರೊಡನೆ ಸ್ಪರ್ಧಿಸುತ್ತಿರುವಂತೆ ಆಟಗಳಲ್ಲೂ ಸ್ತ್ರೀಯರು ಪುರುಷರ ಸಮಾನರಾಗಿರುವರು; ಗುಂಡು ಹಾರುವ ಸ್ಪರ್ಧೆಗಳಲ್ಲಿ ಅನೇಕ ಬಾರಿ ಸ್ತ್ರೀಯರು ಪುರುಷರೊಡನೆ ಸ್ಪರ್ಧಿಸಿ ಜಯಸಿದ್ದಾರೆ. ಇಂಗ್ಲೀಷ್ ಕಾಲುವೆಯನ್ನು ಈಜಿ ದಾಟಿದವರಲ್ಲಿ ಅಮೇರಿಕದ ಮಹಿಳೆಯೇ ಪ್ರಥಮ. ಹೆಂಗಸರ ಮತ್ತು ಪುರುಷರ ನಡುವೆ ಪಂದ್ಯಾಟಗಳು ಕೂಡಾ ನಡೆಯುವುದುಂಟು. ಕುದುರೆ ಸವಾರಿಯಲ್ಲೂ ಸ್ತ್ರೀಯರು ಗಂಡಸರನ್ನು ಸೋಲಿಸುವಷ್ಟು ಪ್ರವೀಣರಾಗಿದ್ದಾರೆ.

ಅಮೇರಿಕದ ಮಹಿಳೆಯರಲ್ಲಿ ಹೆಚ್ಚಿನವರು ಮೋಟಾರುಗಳನ್ನು ಓಡಿಸುವ ಲೈಸೆನ್ಸ್ ಪಡೆದಿರುವರು. ೧೬ ವರ್ಷ ಪ್ರಾಯದ ಬಾಲಕಿಯರನೇಕರು ಜನನಿಬಿಡ ನಗರಗಳಲ್ಲಿ ಮೋಟಾರು ಓಡಿಸುವ ಚಾತುರ್ಯವನ್ನು ನೋಡಬೇಕು. ಹೈಸ್ಕೂಲುಗಳಲ್ಲಿ ಕೂಡಾ ಬಾಲಕಿಯರಿಗೆ ಮೋಟಾರು ಓಡಿಸುವ ತರಬೇತಿ ಕೊಡಲಾಗುತ್ತಿದೆ. ಪುರುಷರಿಂದ ಸ್ತ್ರೀಯರೇ ಜಾಗರೂಕತೆಯಿಂದ ಮೋಟಾರು ಓಡಿಸಬಲ್ಲರು ಎಂದು ಮೋಟಾರು ವಾಹನಗಳ ಸಂಘದವರ ಅಭಿಪ್ರಾಯವಿದೆ. ಕಳೆದ ಮಹಾಯುದ್ಧ ಕಾಲದಲ್ಲಿ ಯುದ್ಧ ರಂಗಗಳಲ್ಲಿ ಅನೇಕಾನೇಕ ಮಹಿಳೆಯರು ಮೋಟಾರು ಡ್ರೈವರುಗಳಾಗಿ ಹುದ್ದೆ ನೀಡಿದ್ದರು.

ವಿವಾಹ ಮತ್ತು ಗೃಹಕೃತ್ಯ

ವಿದ್ಯಾಭ್ಯಾಸ ಮುಗಿಸಿದ ನಂತರ ಐಶ್ವರ್ಯವಂತ ಸ್ತ್ರೀಯರೂ ಅಮೇರಿಕೆಯಲ್ಲಿ ದುಡಿದು ಸಂಪಾದನೆ ಮಾಡುತ್ತಾರೆ. ವಿದ್ಯಾಭ್ಯಾಸ ಮುಗಿದ ಕೂಡಲೇ ವಿವಾಹವಾಗುವುದು ವಿರಳ.

ಸರ್ವಸಾಮಾನ್ಯವಾಗಿ ಅಮೇರಿಕದ ಬಾಲಕಿಯರು ೨೧ ಅಥವಾ ೨೨ ವರ್ಷ ದಾಟದೆ ವಿವಾಹವಾಗುವುದಿಲ್ಲ. ಸಾಧಾರಣವಾಗಿ ಒಂದು ವರ್ಷದನಂತರ ಸಂತಾನವಾಗುತ್ತದೆ. ಮಗಳಿಗೆ ವಿವಾಹವಾಗುವಾಗ ಮಾತೆ ಸುಮಾರು ೫೦ ವರ್ಷ ಪ್ರಾಯ ಸಂದವಳಾಗುವುದು ಅಮೇರಿಕದಲ್ಲಿ ಸರ್ವಸಾಮಾನ್ಯ. ಅಮೇರಿಕದ ಸ್ತ್ರೀಯರಲ್ಲಿ ಶೇಕಡ ೭೦ರಷ್ಟು ಮಂದಿ ವಿವಾಹಿತರು, ಶೇಕಡಾ ೧೭ರಷ್ಟು ಮಂದಿ ವಿಧವೆಯರು, ಮತ್ತು ಶೇಕಡಾ ೧೪ರಷ್ಟು ಮಂದಿ ಅವಿವಾಹಿತರಿರುವರು.

ಕೆಲವು ಯುವತಿಯರು ವಿವಾಹವಾಗುವ ತನಕ ಕೆಲಸ ಮಾಡುತ್ತಾರೆ. ಅನಂತರ ಮನೆಯಲ್ಲೇ ಗೃಹಕೃತ್ಯ ನೋಡುತ್ತಾರೆ. ಆದರೆ ಉಚ್ಚ ವಿದ್ಯಾಭ್ಯಾಸ ಹೊಂದಿದವರು ಮದುವೆಯಾದರೂ ಕೆಲಸ ಮಾಡಿಕೊಂಡು ಸಾಂಸಾರಿಕ ಜೀವನಕ್ಕೆ ಸಹಾಯಕವಾಗುವುದೂ ಉಂಟು.

ಅಮೇರಿಕದಲ್ಲಿ ಶೇಕಡಾ ೬೦ರಷ್ಟು ಸ್ತ್ರೀಯರು ನಗರಗಳಲ್ಲಿ ವಾಸಿಸುತ್ತಿರುವರು. ಗಂಡಸರಲ್ಲಿ ಶೇಕಡಾ ೫೭ರಷ್ಟು ಮಂದಿ ನಗರದಲ್ಲಿರುವರು.

ಮಧ್ಯಮ ವರ್ಗದ ಮನೆಗಳೆಲ್ಲಾ ವಿದ್ಯುಚ್ಛಕ್ತಿಯಿಂದ ಅಡಿಗೆ ಮಾಡುವ ಉಪಕರಣ, ಟೆಲಿಫೋನ್, ರೇಡಿಯೋ ಮೊದಲಾದ ಆಧುನಿಕ ಸೌಕರ್ಯಗಳಿವೆ. ಹಳ್ಳಿಗಳಲ್ಲೂ ಇದೇ ತರದ ಸೌಕರ್ಯಗಳಿವೆ. ಹೆಚ್ಚಿನ ಗೃಹಿಣಿಯರಿಗೆ ಮನೆಕೆಲಸಕ್ಕೆ ಆಳುಗಳಿಲ್ಲ. ಮನೆಕೆಲಸ ಮಾಡುವುದಕ್ಕೆ ಜನರು ಸಿಗುವುದೂ ಕಷ್ಟ. ಏಕೆಂದರೆ ಇತರರ ಮನೆಗಳಲ್ಲಿ ದುಡಿಯುವುದರಿಂದ ಆದಾಯ ಹೆಚ್ಚು ಬರುವುದಿಲ್ಲ.

ಸಾಧಾರಣವಾಗಿ ಅಮೇರಿಕೆಯ ಮನೆಗಳಲ್ಲಿ ಗೃಹಕೃತ್ಯವನ್ನು ಸುಲಭಮಾಡುವ ಆಧುನಿಕ ಯಂತ್ರೋಪಕರಣಗಳಿವೆ.

ಕಾರ್ಖಾನೆಗಳಲ್ಲಿ ಕೆಲಸ

ಅಮೇರಿಕದ ಔದ್ಯೋಗಿಕ ಕಾರ್ಖಾನೆಗಳಲ್ಲಿ ಸುಮಾರು ೫೪,೦೦೦ ಸ್ತ್ರೀಯರು ದುಡಿಯುತ್ತಿದ್ದರೆಂದೂ ಲೆಕ್ಕ ಹಾಕಲಾಗಿದೆ. ಗಂಡಸರು ಮಾಡುವ ಎಲ್ಲಾ ಕೆಲಸಗಳನ್ನೂ ಹೆಂಗಸರು ಮಾಡಬಲ್ಲರೆಂದು ಸಮರ್ಥಿಸಿದ್ದಾರೆ.

ಅಮೇರಿಕದಲ್ಲಿ ಪತ್ರಿಕೋದ್ಯಮದಲ್ಲಿ ದುಡಿಯುವಷ್ಟು ಸ್ತ್ರೀಯರು ಇನ್ನಾವ ದೇಶದಲ್ಲೂ ಇರುವುದಿಲ್ಲ. ಬಾನುಲಿಗಳಲ್ಲಿ ೧,೫೦೦ ಸ್ತ್ರೀಯರು ದುಡಿಯುತ್ತಿದ್ದಾರೆ.

ವಿಮಾನ ಕಾರ್ಖಾನೆಗಳಲ್ಲೂ, ವೈಮಾನಿಕ ತರಬೇತಿಯಲ್ಲೂ ಅನೇಕ ಸ್ತ್ರೀಯರು ನಿರತರಾಗಿರುತ್ತಾರೆ. ತಮ್ಮ ಖಾಸಗಿ ವಿಮಾನಗಳನ್ನು ಸ್ವತಃ ನಡೆಸುವವರೂ ಅನೇಕರಿದ್ದಾರೆ. ೧೯೪೭ರಲ್ಲಿ ೫,೧೦೪ ಸ್ತ್ರೀಯರು ವೈಮಾನಿಕ ಲೈಸೆನ್ಸ್‌ದಾರರಾಗಿದ್ದರು.

ಯುದ್ಧ ಮತ್ತು ಸ್ತ್ರೀಯರು

ಕಳೆದ ಮಹಾಯುದ್ಧದಲ್ಲಿ ಅಮೇರಿಕದ ಸ್ತ್ರೀಯರು ಮುಖ್ಯ ಪಾತ್ರವಹಿಸಿದರು. ಸುಮಾರು ೩೦೦,೦೦೦ ಸ್ತ್ರೀಯರು ನೆಲ ಜಲ ವಾಯು ಪಡೆಗಳಲ್ಲಿ ಸೇರಿದ್ದರು. ಹಾಗೂ ಕರಾವಳಿ ಸಂರಕ್ಷಣಾ ಪಡೆಗಳಲ್ಲೆಲ್ಲಾ ಸಾವಿರಾರು ಮಹಿಳೆಯರು ಸೇರಿಕೊಂಡಿದ್ದರು. ಯುದ್ಧ ಕಾಲದಲ್ಲಿ ಕಾರ್ಖಾನೆಗಳಲ್ಲಿ ಸ್ತ್ರೀಯರ ಸಂಖ್ಯೆ ೪,೭೬೩,೦೦೦ಕ್ಕೆ ಏರಿತ್ತು. ನರೆತ ಮುದುಕಿಯರೂ, ಶಾಲಾ ಬಾಲಕಿಯರೂ ಯುದ್ಧ ಸೇವೆಗೆ ಸೇರಿದ್ದರು. ಗಂಡಸರು ಹೊಲವನ್ನು ಬಿಟ್ಟು ಯುದ್ಧಕ್ಕೆ ತೆರಳಿದಾಗ ಅವರ ಪತ್ನಿಯರೂ ಮಕ್ಕಳೂ ಟ್ರಾಕ್ಟರ್ ಯಂತ್ರದಿಂದ ಗದ್ದೆ ಉಳುತ್ತಿದ್ದರು. ಮೋಟರು ಡ್ರೈವರುಗಳ ಅಭಾವ ಉಂಟಾದಾಗ ಸ್ತ್ರೀಯರು ಮುಂದೆ ಬಂದಿದ್ದರು.

ಸಾಮಾಜಿಕ ಜೀವನ

ಸಾಮಾಜಿಕ ಕಾರ್ಯಗಳಲ್ಲಿ ನಿರತರಾಗದೆ ಮನೆಯಲ್ಲೇ ಉಳಿಯುವ ಸ್ತ್ರೀಯರು ಅಮೇರಿಕದಲ್ಲಿ ಅತೀ ಕಡಿಮೆಯೆಂದು ಹೇಳಬಹುದು. ನಾಗರಿಕ ಜೀವನದ ರಹಸ್ಯ ಮಹಿಳೆಯರಿಗೆ ಚೆನ್ನಾಗಿ ತಿಳಿದಿದೆ. ರಾಜಕೀಯ ಜೀವನದಲ್ಲಿ ಅವರಿಗೆ ಬಹಳ ಉತ್ಸಾಹ. ಜಾಗತಿಕ ಸಂಸ್ಥೆಗಳಲ್ಲಿ ಅವರಿಗೆ ಆಸಕ್ತಿ ಹೆಚ್ಚಿದೆ.

ಜಗತ್ತಿನ ಮುನ್ನಡೆಯಲ್ಲಿ ಗಂಡಸರೊಡನೆ ಹೆಜ್ಜೆ ಹಾಕಿಕೊಳ್ಳುತ್ತಿರುವವರಲ್ಲಿ ಅಮೇರಿಕದ ಮಹಿಳೆಯರು ಅಗ್ರಗಣ್ಯರೆಂದು ಹೇಳಬಹುದು.

—ರಾ.

ಶ್ರೀ ಕೆ. ಯಂ. ಮೊಗಪ್ಪನವರು,
"ಕೊಡಗು" ಏಜೆಂಟರು,
ಸೋಮವಾರಪೇಟೆ.

ಹೊಸ ವರ್ಷದ ಹೊಸ ಕೊಡುಗೆ

ನಿಮ್ಮ ಮನ ಒಪ್ಪುವ ಆಭರಣಯುತ ಸ್ವಿಸ್ ವಾಚುಗಳು

೧೯೫೧ನೇ ಇಸವಿಯ ಮೊದಲಿನ ವಿಶೇಷ ರಿಸ್ಟ್‌ವಾಚುಗಳು. ಐದು ವರ್ಷಗಳ ಗ್ಯಾರಂಟಿಯುಳ್ಳ ಎಚ್ಚರಿಕೆಯಿಂದ ಉಪಯೋಗಿಸಿದರೆ ಜೀವನ ಪರ್ಯಂತ ಬಾಳಿಕೆ ಬರುವವು. ೩೬ ಗಂಟೆಗಳಿಗೊಮ್ಮೆ ಕೀ ಕೊಡತಕ್ಕದ್ದು. ಕೆಲವೇ ವಾಚುಗಳಿವೆ. ಇವು ಸುಂದರವಾಗಿರುವುದಲ್ಲದೆ ಸುಲಭದರದ್ದೂ ಆಗಿದೆ. ನಿಮ್ಮನ್ನು ಆಕರ್ಷಿಸುವುದಲ್ಲದೆ ಇವುಗಳನ್ನು ಕಟ್ಟಿಕೊಳ್ಳಲು ನೀವು ಹೆಮ್ಮೆ ಪಡುವಿರಿ. ಹಳೇ ಮೋಡಲಿನ ನಿಮ್ಮ ಹಳೇ ವಾಚುಗಳನ್ನು ಬಿಟ್ಟು ಇವುಗಳನ್ನು ಕೊಳ್ಳಿರಿ. ಈ ವಾಚುಗಳು ಕೇವಲ ನಮ್ಮಲ್ಲಿ ಮಾತ್ರ ದೊರೆಯುತ್ತವೆ. ಈ ದಿನವೇ ಆರ್ಡರು ಮಾಡಿ. ಒಪ್ಪದಿದ್ದರೆ ತಕ್ಷಣ ವಾಪಾಸುಮಾಡುವ ಭರವಸೆ ಇದೆ.

10½	ಉರುಟು ಕ್ರೋಮಿಯಮ್ ಸ್ಟೀಲ್ ಬ್ಲೇಕ್	ನಂ. 233	ರೂ 21
	„ „	„ 366	„ 25
	„ „	„ 455	„ 26
8¾	ಚಚ್ಚೌಕ „	„ 477	„ 39
	„ „	„ 599	„ 36
7¾	ಚತುರ್ಭುಜಾಕಾರ „	„ 688	„ 42
	„ „	„ 822	„ 44
5½	ಹೆಂಗಸರು ದುಂಡಗಿನ ಆಕಾರ „	„ 944	„ 51

ಅತ್ಯುತ್ತಮ ಪಾಕೆಟ್ ವಾಚು ರೂ. 13

ರೋಲ್ಡ್ ಗೋಲ್ಡ್ ಪ್ರತಿಯೊಂದಕ್ಕೆ „ 5/- ಹೆಚ್ಚು

The Hilson Watch Company (K. M.)
Bahadur Garh Road, Delhi 6.

4-2

ಪ್ರಕೃತಿಯ ವೈಚಿತ್ರ್ಯಗಳು.

ಲೇ:— ಹಾರ್ವೇ ಡೇ.

ಪ್ರಕೃತಿಯು ಪರಮ ಶ್ರೇಷ್ಠ ಧಾತೆಯಂತೆ. ಪ್ರಕೃತಿಯು ತೋರುವ ಸೌಂದರ್ಯದ ಮುಂದೆ ಅತೀ ಧನವಂತನ ಮನೆಯ ಹಣ್ಣು ದಾನವೂ ಕೂಡ ಜಿಪುಣತನದ್ದೆನಿಸಬಹುದು. ಟ್ರಿನಿದಾದ್ ಎಂಬಲ್ಲಿರುವ ಕೆರೆಯೊಂದರ ವಿಚಾರ ಎಲ್ಲರೂ ಕೇಳಿರಬಹುದು. ಪ್ರತಿ ವರ್ಷ ಆ ಕೆರೆಯಿಂದ ಮಿಲಿಯಾಂತರ ಟನ್ನುಗಳಷ್ಟು ಕಲ್ಲರಗನ್ನು ಈ ಕಳೆದ ಎಂಭತ್ತು ವರ್ಷಗಳಿಂದಲೂ ತೆಗೆಯಲಾಗುತ್ತಿದೆ. ಆದರೂ ಅಲ್ಲಿ ಇನ್ನೂ ಅಮಿತ ರಾಶಿಯಲ್ಲಿ ಕಲ್ಲರಗು ತಯಾರಾಗುತ್ತಲೇ ಇದೆ. ಕೆರೆಯ ನೀರಿನ ಅಂತಸ್ತಾಗಲೀ, ಕೆರೆಯ ಆಳದ ವ್ಯತ್ಯಾಸವಾಗಲೀ, ಕೊರತೆಯಾಗಲೀ ಅಲ್ಲಿ ಕಂಡು ಬರುವದಿಲ್ಲ. ಯಾವ ವಿಜ್ಞಾನಿಯೂ ಇದರ ಗುಟ್ಟನ್ನು ಈ ವರೆಗೆ ಕಂಡು ಹಿಡಿದಿರುವದಿಲ್ಲ. ಬ್ರಝೀಲ್ ದೇಶದ ಹತ್ತಿರದ ಎಲ್ಲಿಸ್ಸಿ ಎಂಬ ಗ್ರಾಮದಲ್ಲಿಯ "ಕುಂಬಾರನ ಗದ್ದೆ" ಎಂಬ ಪ್ರದೇಶದಲ್ಲಿ ಅತ್ಯುತ್ತಮ ಮಣ್ಣಿದೆ. ಇದನ್ನು ಮಡಿಕೆಗಳನ್ನು ಮಾಡಲು ಬಹು ದೊಡ್ಡ ಪ್ರಮಾಣದಲ್ಲಿ ಪ್ರತಿದಿನ ಖರ್ಚು ಮಾಡಿದರೂ ಆ ಗದ್ದೆಯಲ್ಲಿ ಯಾವದೇ ರೀತಿಯ ತಗ್ಗಾಗದೆ ತೆಗೆದ ಮಣ್ಣಿನ ಸ್ಥಳವು ಅದೇ ರೀತಿಯ ಮಣ್ಣಿನಿಂದ ತುಂಬಿ ಬರುವ ದೃಶ್ಯ ಆಶ್ಚರ್ಯಕರವಾಗಿದೆ. ಒಬ್ಬ ವಿಜ್ಞಾನಿಯು ಇದರ ಗುಟ್ಟನ್ನರಿಯಲು ಒಂದು ಹಿಡಿಯಲು ಒಂದು ಕಡೆ ಎರಡು ಅಡಿ ಆಳದ ಮೂರಡಿ ವಿಸ್ತೀರ್ಣದ ಒಂದು ಹೊಂಡವನ್ನು ತೋಡಿ ಆ ಹಳ್ಳದಡಿಯಲ್ಲಿ ಒಂದು ನಾಣ್ಯವನ್ನಿರಿಸಿದನು. ಮೂರು ಗಂಟೆಗಳ ಬಳಿಕ ಹೊಂಡವು ಮೇಲಿನ ವರೆಗೆ ತುಂಬಿ ಆ ನಾಣ್ಯವು ಹೊರ ಬಂದಿತ್ತು!

ಪ್ರಕೃತಿಯು ಈ ರೀತಿಯ ಉದಾರತೆಗೆ ಅನೇಕ ನಿದರ್ಶನಗಳನ್ನು ಕೊಡಬಹುದು. ಆಹಾರ, ಪಾನೀಯ, ಬಟ್ಟೆ ಕಡಿಗೆ ಹಣವನ್ನೂ ಕೂಡ ಮರಗಳೇ ಕೊಡುವ ಉಪಯೋಗಿಸುವ ನಿದರ್ಶನಗಳಿವೆ. ದಕ್ಷಿಣ ಆಫ್ರಿಕಾದಲ್ಲಿ ಒಂದು ಗಿಡವಿದೆ. ಅದನ್ನು "ಬೆಣ್ಣೆ ಮರ" ವೆಂದು ಕರೆಯುತ್ತಾರೆ. ಅದರಿಂದ ದೊರೆಯುವ ಬೆಣ್ಣೆಯು ಅತ್ಯುತ್ತಮ ಹಸುವಿನ ಬೆಣ್ಣೆಯಂಥ ಉತ್ತಮವೆನಿಸಿದೆ. ಬ್ರೇಝಿಲ್‌ನಲ್ಲಿ ಆಕಳು ಮರಗಳಂಥಾ ಮರವೊಂದಿದೆ. ಅದರ ಬೀಜವನ್ನು ಹುಡಿಮಾಡಿದರೆ ಅತ್ಯುತ್ತಮ ಕಾಫಿ ಪುಡಿಯಾಗುವದು. ಆ ಮರದ ಹಾಲು ಅತ್ಯುತ್ತಮ ಕೆನೆ ಮೊಸರಿನಂತಿರುವದು. ಅಲ್ಲಿಯ ಜನರು ಇದರ ಸಹಾಯದಿಂದ ಮಕ್ಕಳನ್ನು ಸಾಕುತ್ತಾರೆ. ಪೆರೇಬ್ಲಿನ ಗೆರಗ್ರಿದಾ ಎಂಬಲ್ಲಿ ಐದು ಅಡಿ ಎತ್ತರ ಬೆಳೆಯುವ "ಶರ್ಟ" ಮರಗಳಿವೆ. ಅಲ್ಲಿಯ ಜನರಿಗೆ ಆ ಮರಗಳ ತೊಗಟೆಯು ಅತ್ಯುತ್ತಮ ಬಟ್ಟೆಯಾಗಿದೆ.

ಪ್ರಕೃತಿಯು ಮನುಷ್ಯನಿಗೆ ಸಿದ್ಧವಾದ ಮೇಣದ ಬತ್ತಿಯನ್ನೂ ತಯಾರಿಸಿಟ್ಟಿದ್ದಾಳೆ. "ಕೇಂಡಲ್ ಫಿಶ್" ಎಂಬ ಮೀನೊಂದಿದೆ. ಇವು ಅಮೇರಿಕಾದ ಪಶ್ಚಿಮ ಕರಾವಳಿಯಲ್ಲಿ ದೊರೆಯುತ್ತವೆ. ಅವನ್ನು ಹಿಡಿದು ಅದರ ಮಧ್ಯಕ್ಕಾಗಿ ಒಂದು ಬೆಂಕಿ ಹಿಡಿಯುವ ಕಡ್ಡಿಯನ್ನು ತೂರಿ ಆ ದಕ್ಕೆ ಬೆಂಕಿ ಕೊಟ್ಟರೆ ಆ ಮೀನಿನಲ್ಲಿರುವ ಎಣ್ಣೆಯ ಕಾರಣ ಪ್ರಕಾಶಮಾನವಾಗಿ ಆ ಮೀನು ಉರಿಯುವದು. ದೀಪದ ಬದಲು ಇವನ್ನು ಉಪಯೋಗಿಸುತ್ತಾರೆ. ಮರಗಳಲ್ಲಿ ಹಣ ಬೆಳೆಯುತ್ತದೆಂದರೆ ಯಾರೂ ಆಶ್ಚರ್ಯ ಪಡಬೇಕಿಲ್ಲ. ಅನೇಕ ವೇಳೆ ಇವು ಕವಡಿಗಳ ರೂಪದಲ್ಲಿ ಸಮುದ್ರ ಕರಾವಳಿಯಲ್ಲಿ ದೊರೆಯುತ್ತವೆ. ಪಶ್ಚಿಮ ಆಫ್ರಿಕಾದಲ್ಲಿ ಇವುಗಳನ್ನು ನಾಣ್ಯಗಳಾಗಿ ಉಪಯೋಗಿಸುತ್ತಾರೆ. ಪ್ರಕೃತಿಯು ಪ್ರಯಾಣಿಕರಿಗೂ ಅತೀವ ಸಹಾಯ ಮಾಡುತ್ತಾಳೆ. ಅಮೇರಿಕಾದಲ್ಲಿ ಕಂಪಾಸ್ ಗಿಡವೆಂಬುದೊಂದಿದೆ. ಅದರ ಎಲೆಗಳು ಯಾವಾಗಲೂ ಉತ್ತರ ಮತ್ತು ದಕ್ಷಿಣ ದಿಕ್ಕನ್ನೇ ತೋರಿಸುತ್ತವೆ. ಇವು ಅನೇಕ ದಿಕ್ಕು ತಪ್ಪಿದ ಪ್ರಯಾಣಿಕರನ್ನು ರಕ್ಷಿಸುತ್ತವೆ. ಮೆಕ್ಸಿಕೋ ಮತ್ತು ದಕ್ಷಿಣ ಅಮೇರಿಕಾದ ಮರುಭೂಮಿಯಲ್ಲಿ ಒಂದು ವಿಧದ ಗಿಡವಿದೆ. ಅದನ್ನು ಕತ್ತರಿಸಿದರೆ ಅದು ಟೊಳ್ಳಾಗಿದ್ದು ಒಳಗೆ ಬಿಳಿ ಬಣ್ಣದ ಸ್ಪಂಜಿನಂಥ ವಸ್ತುವಿರುವದು. ಅದನ್ನು ಹಿಂಡಿದರೆ ನೀರು ಗಟ್ಟಿ ಸಿಹಿಯಾದ ನೀರು ದೊರೆಯುವದು.

ಜರ್ಮನಿಯಲ್ಲಿ ಎರಡು ಹೊಳೆಗಳು ಸೇರಿ ಆಶ್ಚರ್ಯಕರ ಬಣ್ಣವನ್ನು ತಾಳುತ್ತವೆ. ಒಂದು ಹೊಳೆಯು ಕಬ್ಬಿಣದ ಸತ್ವವಿರುವ ಪ್ರದೇಶಕ್ಕಾಗಿಯೂ ಮತ್ತೊಂದು ಟೆನಿನ್ ಸತ್ವವಿರುವ ಪ್ರದೇಶಕ್ಕಾಗಿಯೂ ಹರಿದು ಕೂಡುವವು. ಕಬ್ಬಿಣದ ಸತ್ವಕ್ಕೂ ಟೇನಿನ್ ಸತ್ವಕ್ಕೂ ಸೇರಿ ಕಪ್ಪು ವರ್ಣದ ಶಾಯಿಯು ಹೊಳೆಯಾಗುವದು. ಈ ಹೊಳೆಗಿಂಥಾ ಪ್ರಾಮುಖ್ಯವಾಗಿ ಕೊಲಂಬಿಯಾದಲ್ಲಿ ಒಂದು ಹೊಳೆ ಇದೆ. ಇದು ಜ್ವಾಲಾಮುಖಿ ಪರ್ವತ ಒಂದರ ತಪ್ಪಲಿಗಾಗಿ ಹರಿಯುವ ಕಾರಣ ಇದರ ನೀರು ಹುಳಿಯಾಗಿದ್ದು ಇದರಲ್ಲಿ ಮೀನುಗಳು ವಾಸಿಸಲಾರವು. ಈ ಹೊಳೆಯ ನೀರು ಇತರ ಹೊಳೆಗಳ ನೀರಿನೊಡನೆ ಸೇರಿ ಅವನ್ನು ಪರಿಶುದ್ಧಗೊಳಿಸುತ್ತದೆ. ಈ ಹೊಳೆಯ ನೀರಿನಲ್ಲಿ ಹುಳಿ ಪದಾರ್ಥ ಹೆಚ್ಚಿದ್ದು ಅದಕ್ಕೆ ನಮ್ಮ ಬಟ್ಟೆ ಹಾಕಿದರೆ ಕತ್ತರಿಸಲ್ಪಡುವವು. ಮನುಷ್ಯನು ಹೆಚ್ಚು ಹೊತ್ತು ಅದರೊಳಗಿದ್ದರೆ ವ್ಯಸನಾಗುವನು.

ಮನುಷ್ಯನಿಗೆ ಬೇಕಾದ ಹಲವು ವಸ್ತುಗಳನ್ನು ಪ್ರಕೃತಿಯು ತಯಾರಿಸಿ ಸಿದ್ಧವಾಗಿಟ್ಟ ನಿದರ್ಶನಗಳಿವೆ. ಸ್ವೀಡನಿನ ಕಿರುನವಾರ ಎಂಬಲ್ಲಿ ೫೦೦ ಅಡಿ ಎತ್ತರದ ಬೆಟ್ಟವೊಂದಿದೆ. ಶೇಕಡ ೭೦ ರಷ್ಟು ಅದು ಶುದ್ಧ ಕಬ್ಬಿಣದಿಂದ ಕೂಡಿದೆ. ಸಿರಿಯಾದಲ್ಲಿ ಡೆರ್ ಇಸ್‌ಬರ್ಗ್ಸ ಎಂಬ ೫೦೦೦ ಎತ್ತರದ ಬೆಟ್ಟವಿದೆ. ಅದರಲ್ಲಿ ೩,೧೦,೦೦೦,೦೦೦ ಟನ್ ಕಬ್ಬಿಣವಿದೆಯೆಂದು ಅಂದಾಜು ಮಾಡಲಾಗಿದೆ. ಬೊಲೀವಿಯಾದ ಸಿರೋ ಡಿ ಪೊಟೋಸಿ ಎಂಬಲ್ಲಿ ಬೆಳ್ಳಿಯ ಪರ್ವತವೊಂದಿದೆ. ಇದನ್ನು ೧೫೪೫ರಲ್ಲಿ ಭಾರತೀಯನೊಬ್ಬನು ಕಂಡು ಹಿಡಿದ. ಇದರಿಂದ ಸ್ಪೇನಿನ ರಾಜನಿಗೆ ೩,೧೫೪,೦೦೦ ೦೦೦ ಪವನು ಬೆಲೆಯ ಬೆಳ್ಳಿ ದೊರಕಿದೆ. ಇದು ೫೦೦೦ ಅಡಿ ಎತ್ತರವಿದ್ದು ಇನ್ನೂ ಅಲ್ಲಿ ಬೆಳ್ಳಿ ದೊರೆಯುತ್ತಿದೆ.

ಪ್ರಕೃತಿಯಲ್ಲಿ ಕೆಲವು ಭಾಗಗಳು ಬಂಜರಾಗಿ ಕೆಲವು ಸಂಪತ್ತಿನಿಂದ ಏಕೆ ತುಂಬಿರುವವೆಂದು ಹೇಳುವದು ಕಠಿಣವಾಗಿದೆ. ಸಂಯುಕ್ತ ಅಮೇರಿಕದಲ್ಲಿ ಸಬೂನಿನ ಕೆರೆಯೊಂದಿದೆ. ಆ ಕೆರೆಯ ನೀರು ಕದಡಲ್ಪಟ್ಟರೆ ಅದರಲ್ಲಿ ನೊರೆಯುಂಟಿ ಅಲ್ಲಿ ಸ್ನಾನಮಾಡುವವರು ಕಪ್ಪಗಿದ್ದರೆ ಕ್ರಮಶಃ ಬೆಳ್ಳಗಾಗುವರು! ಡೆಡ್ ಸಮುದ್ರದಲ್ಲಿ ಪೊಟೇಶ್ ದೊರೆಯುತ್ತದೆ. ಕಿಲಿಮಂಜರೋದ ಹತ್ತಿರವಿರುವ ಮಗಾಡಿ ಸರೋವರದಲ್ಲಿ ಸೋಡಾವು ಅತೀ ವಿಪುಲವಾಗಿ ದೊರೆಯುತ್ತದೆ. ಇಟಲಿಯ ಪಿಸಾ ಪ್ರಾಂತದ ಲಾರ್ಡೆರೆಲೊ ಎಂಬಲ್ಲಿ ನೈಸರ್ಗಿಕ ಬೆಳಕು ಮತ್ತು ಶಾಖ ಕೊಡುವ ಶಕ್ತಿ ಇದೆ. ಅಲ್ಲಿಯ ನಗರಕ್ಕೆ ಶಾಖ ಮತ್ತು ವಿದ್ಯುಚ್ಛಕ್ತಿ ಬೆಳಕು ಬೆಟ್ಟದ ಬದಿಯಲ್ಲಿ ಒಲೆಗಳಂತಿರುವ ಈ ಭಾಗಗಳಿಂದ ದೊರೆಯುತ್ತದೆ. ಯಾವ ಡೈನಮೋವಾಗಲೀ, ವಿದ್ಯುಚ್ಛಕ್ತಿ ಯಂತ್ರವಾಗಲೀ ಅಲ್ಲಿಲ್ಲ. ಅಲ್ಲಿಯ ಕಾರ್ಖಾನೆಗಳು ಇದರ ಶಕ್ತಿಯಿಂದ ಕೆಲಸ ಮಾಡುತ್ತವೆ. ಲಾರ್ಡೆರೆಲೋದ ನಾಗರೀಕರು ಯಾವ ಕಂಪನಿಯ ಹಣಕ್ಕೂ ಕ್ರಯಮಾಡದೆ ಬೆಳಕು ಮತ್ತು ಶಕ್ತಿಯನ್ನು ಉಪಯೋಗಿಸುತ್ತಾರೆ. ಉತ್ತರ ಅಮೇರಿಕಾ ಹಿಮದ ನಗರಗಳು ಬೆಟ್ಟಗಳ ಒಳಗಿನ ಶಾಖದಿಂದ ವಿದ್ಯುಚ್ಛಕ್ತಿಯನ್ನು ಪಡೆಯುತ್ತವೆ. ಮೆಡಿಸಿನ್ ಹಾಟ್ ಎಂಬಲ್ಲಿ ಹದಿನೆಂಟು ಮೈಲು ದೂರ ಬಾವಿಗಳಿಂದ ವಿದ್ಯುತ್ ಶಕ್ತಿಯನ್ನು ಪಡೆಯುತ್ತಾರೆ.

ಜಗತ್ತಿನ ಕೆಲವು ಭಾಗಗಳಲ್ಲಿ ಪ್ರಕೃತಿಯು ಮನುಷ್ಯನಿಗೆ ಉಳಿಯಲು ಕೊಠಡಿಗಳನ್ನು ರಚಿಸಿದ್ದಾಳೆ. ಬೊಲಿವಿಯಾದಲ್ಲಿ ಒಂದು ಜಾತಿಯ ಜನರು "ಬಟ್ಟೆ ಟ್ರೀ" ಎಂಬ ಮರದ ಕಾಂಡಗಳನ್ನು ಕೊರೆದು ಮನೆಮಾಡಿಕೊಳ್ಳುತ್ತಾರೆ. ಈ ಮನೆಗಳನ್ನು ಎಂದೂ ರಿಪೇರಿ ಮಾಡುವ ಅಗತ್ಯವಿಲ್ಲ. ಮರಗಳು ಬೆಳೆದು ಯಾವ ಹಾನಿಯನ್ನೂ ಮಾಡುವದಿಲ್ಲ. ಮಾನವನಿಗೆ ಈ ರೀತಿ ಪ್ರಕೃತಿಯು ಆಹಾರ, ನೀರು, ಬಟ್ಟೆ, ಔಷಧಿ, ಮತ್ತು ಇತರ ಆವಶ್ಯಕ ವಸ್ತುಗಳನ್ನು ಒದಗಿಸಿ ಅವರ ಮೇಲೆ ತನ್ನ ಸಂತೋಷಪಡಲಿಕ್ಕೋ ಎಂಬಂತೆ ಮನೋರಂಜನೆಯ ಅನೇಕ ಏರ್ಪಾಡುಗಳನ್ನು ಮಾಡಿದ್ದಾಳೆ. ಪೆನ್‌ಸಿಲ್ವೇನಿಯಾದಲ್ಲಿ ಒಂದು ವಿಧದ ಕಲ್ಲುಗಳಿವೆ. ಅವು ಗಂಟೆಗಳಂತೆ ಶಬ್ದ ಮಾಡುವವು. ಹವಾಯಿ ದ್ವೀಪದ ಮರಳಿನಲ್ಲಿ ನಡೆದಾಗ ನಾಯಿ ಬೊಗಳಿದಂತೆ ಶಬ್ದವಾಗುವದು. ಅಮೇರಿಕಾದಲ್ಲಿ ಹಾಡುವ ಮರಳಿದೆ. ಡೋರ್‌ಸೆಟ್ ಕರಾವಳಿಯ ಮರಳನ್ನು ಕೆಗೆದು ಉಜ್ಜಿದರೆ ಸಂಗೀತದ ಸ್ವರ ಕೇಳಬರುವದು. ಎಲ್ಲದಕ್ಕಿಂತಲೂ ಆಶ್ಚರ್ಯವೆಂದರೆ ಸಿಲೋನಿನ ಹಾಡುವ ಸರೋವರ. ಪ್ರತಿ ಸಾಯಂಕಾಲ ಈ ಕೆರೆಯಿಂದ ಭಜನ ಮಂಡಳಿಯವರು ಸುಶ್ರಾವ್ಯವಾಗಿ ಹಾಡಿದಂತೆ ಶಬ್ದ ಕೇಳಿ ಬರುವದು. ಬೆಳದಿಂಗಳ ರಾತ್ರಿಯಲ್ಲಿ ಇವು ಬಹು ಜೋರಾಗಿ ಕೇಳಿಬರುವವು. ಇಂದಿನ ವರೆಗೆ ಯಾವ ವಿಜ್ಞಾನಿಯೂ ಇದರ ಕಾರಣವನ್ನು ಕಂಡು ಹಿಡಿದಿರುವದಿಲ್ಲ.

ರೂ. ೫೦,೦೦೦ ಬೆಲೆಯ ಆಭರಣಗಳು ಕೊಡಲ್ಪಡುತ್ತಿವೆ

ಡೆಲ್ಲಿಯಲ್ಲಿ ಚಿನ್ನವು ತೊಲೆಗೆ ರೂ. ೩

ಭಾರತದ ಪ್ರಾಮುಖ್ಯ ಪತ್ರಿಕೆ ಮತ್ತು ಮಾಸಿಕಗಳಲ್ಲದೆ ನಮ್ಮ ನೂರಾರು ಗ್ರಾಹಕರು ಇವನ್ನು ಮುಕ್ತ ಕಂಠದಿಂದ ಹೊಗಳಿದ್ದಾರೆ. ಸಂಯುಕ್ತ ಪ್ರಾಂತದ ಮಹಾಲಿಯ ಸೇಠ್ ನಂದ ಕಿಶೋರ ಬಿ. ಎ. ಎಲ್. ಎಲ್. ಬಿ. ಯವರು ಹೀಗೆ ಬರೆಯುತ್ತಾರೆ. "ಮಿನರ್ವ ಹೊಸ ಚಿನ್ನವನ್ನು ಆಭರಣಗಳೊಂದಿಗೆ ಕಳುಹಿಸಿ. ಈ ಚಿನ್ನವು ಒರೆ ಹಚ್ಚಿದಾಗ ಅಪ್ಪಟ ಚಿನ್ನದಂತೆಯೇ ತೋರುವದಲ್ಲದೆ ಇದನ್ನು ತಂತಿಯಾಗಿ ಎಳೆಯಬಹುದು. ಕಾಗದಂತೆ ಅಗಲವಾಗಿ ಹರಡಬಹುದು. ಇದರ ಬಣ್ಣವು ಚಿನ್ನದಂತೆಯೇ ಉಳಿಯುವದು. ಇದರಿಂದ ಯಾವ ಮಾದರಿಯ ನಗಗಳನ್ನೂ ಮಾಡಬಹುದು. ಇದು ಜಗತ್ತಿನ ಹೊಸ ಶೋಧ. ಬೆಲೆ ಒಂದು ತೊಲಕ್ಕೆ ರೂ. ೩-೦-೦ ಮೂರು, ತೊಲಗಳಿಗೆ ರೂ. ೮/- ಆರು ತೊಲಗಳಿಗೆ ರೂ. ೧೫/- ಮತ್ತು ಹನ್ನೆರಡು ತೊಲಗಳಿಗೆ ರೂ. ೨೮/-

ಈ ಚಿನ್ನವನ್ನು ಹಿಂದೂದೇಶದ ಮೂಲೆ ಮೂಲೆಗಳಲ್ಲಿ ಪ್ರಚಾರಿಸುವ ದೃಷ್ಟಿಯಿಂದ ಕಂಪನಿಯು ಈ ಕೆಳಗಿನ ಆಭರಣಗಳ ಬಹುಮಾನವನ್ನು ಗ್ರಾಹಕರಿಗೆ ಕೊಡಲು ನಿರ್ಧರಿಸಿದೆ. ಮೂರು ತೊಲಗಳನ್ನು ಕೊಳ್ಳುವವರಿಗೆ ನಾಲ್ಕು ಡೈಮಂಡ್ ಕಟ್ ಬಳೆಗಳೂ, ಎರಡು ಉಂಗುರಗಳು. ಆರು ತೊಲೆ ತೆಗೆದುಕೊಳ್ಳುವವರಿಗೆ ಒಂದು ನೆಕ್ಲೇಸ್, ಎರಡು ಉಂಗುರಗಳು, ಒಂದು ಜೊತೆ ವಾಲೆ, ನಾಲ್ಕು ಬಳೆಗಳು ಮತ್ತು ಹಣೆಗೆ ಒಂದು ಟಿಕ್ಕವು ದೊರೆಯುವವು. ಹಾಗೆಯೇ ೧೨ ತೊಲ ಪಡೆಯುವವರಿಗೆ ಒಂದು ರಾಣಿ ಹಾರ್ ನೆಕ್ಲೇಸ್, ಎಂಟು ಬಳೆ, ಎರಡು ಉಂಗುರಗಳು, ಎರಡು ಜೊತೆವಾಲೆ, ಒಂದು ಟಿಕ್ಕ. ಈ ಆಭರಣಗಳೆಲ್ಲ ಇಮಿಟೇಶನ್ ರತ್ನಗಳಿಂದ ಕೂಡಿದವು. ತೃಪ್ತಿಯಾಗದಿದ್ದರೆ ಬೆಲೆಯನ್ನು ವಾಪಾಸು ಮಾಡುವ ಭರವಸೆ ಕೊಡಲಾಗಿದೆ. ಏಜಂಟರುಗಳಾಗಿ ತಿಂಗಳಿಗೆ ರೂ. ೩೦೦ ಯಾ ೫೦೦ ಸಂಪಾದಿಸಲು ಒಳ್ಳೆ ದಾರಿ. ಈ ಸುಅವಕಾಶವನ್ನು ಕಳಕೊಳ್ಳದಿರಲು ದಯವಿಟ್ಟು ಇಂದೇ ಬರೆಯಿರಿ. ಅಂಚೆ ಹಾಸಲು ಮತ್ತು ಪ್ಯಾಕಿಂಗು ಮುಫತ್ತು.

Minerva New Gold ornaments House,
Bara Hindu (K. M.) Delhi 6.

4-2

ಕೊಡಗು

ತಾ. ೨೩-೩-೧೯೫೧ನೇ ಶುಕ್ರವಾರ

ಕೊಡಗಿನ ಭವಿಷ್ಯ.

ಚೀಫ್ ಕಮಿಷನರ ಪ್ರಾಂತಗಳಿಗೆ ಪ್ರಜಾಜವಾಬ್ದಾರಿ ಸರಕಾರ ಕೊಡಬೇಕೆಂಬ ಠರಾವು ಈ ತಾರೀಕು ೧೬ ರಲ್ಲಿ ಕೇಂದ್ರ ಪಾರ್ಲಿಮೆಂಟಿನಲ್ಲಿ ಚರ್ಚೆಯಾದಾಗ ಗೃಹಮಂತ್ರಿಯು ಸರವಾಗಿ ಮಂತ್ರಿ ಗಾಡ್ಗಿಲ್ಲರು ಒಂದಲ್ಲ ಒಂದು ದಿನ ಕೊಡಗು ಬೇರೆ ಪ್ರಾಂತದೊಂದಿಗೆ ಸಂಯೋಜಿಸಲ್ಪಡುವದು ಎಂದು ಕೊಟ್ಟ ಹೇಳಿಕೆಯು ಕೊಡಗಿನ ಜನತೆಯನ್ನು ಗಂಗುಬಡಿಸಿದೆ. ಇವಕ್ಕೆ ಕಾರಣವಾಗಿ ಪಾರ್ಲಿಮೆಂಟಿನಲ್ಲಿರುವ ಕೊಡಗಿನ ಮೆಂಬರು ಈ ಪ್ರಾಂತವನ್ನು ಕೂಡಲೆ ಮೈಸೂರು ಯಾ ಮದ್ರಾಸಿಗೆ ಸೇರಿಸಬೇಕೆಂದು ಮಾಡಿದ ಭಾಷಣವನ್ನು ಎತ್ತಿ ತೋರಿಸಿರುವರು. ಕೊಡಗಿನ ಮೆಂಬರು ಈ ಭಾಷಣದಿಂದ ತಾನು ದೇಶದ ಪ್ರತಿನಿಧಿ ಅಲ್ಲವೆಂಬುದನ್ನು ಸ್ಪಷ್ಟಪಡಿಸಿರುವರೆಂಗರೆ ತಪ್ಪಾಗಲಾರದು. ಇವರು ರಾಜ್ಯಘಟನಾ ಸಭೆಗೆ ಆರಿಸಲ್ಪಟ್ಟಾಗ್ಗೂ ಮತ್ತು ಇತ್ತೀಚೆಗೂ ಜನತೆಯ ಅಭಿಪ್ರಾಯ ತಿಳಿಯದೆ ಕೊಡಗಿನ ಭವಿಷ್ಯದ ವಿಚಾರದಲ್ಲಿ ತಾನು ಯಾವ ಸೂಚನೆಯನ್ನೂ ಮಾಡುವಂತಿಲ್ಲವೆಂದೂ ಹೇಳಿದ್ದಾರೆ. ಈಗ ಸಂಯೋಜನೆಯ ಸೂಚನೆಯನ್ನು ಹೇಗೆ ಮಾಡಿದರೆಂಬುದು ಗೊತ್ತಾಗುವದಿಲ್ಲ. ಇವರು ಮೊದಲಿಂದಲೇ ಸಂಯೋಜನಾ ಪಕ್ಷಕ್ಕೆ ಸೇರಿದವರಾದ್ದರಿಂದ ಜನತೆಯ ನಿಜವಾದ ಅಭಿಪ್ರಾಯವನ್ನು ಪ್ರತಿಬಿಂಬಿಸಲಾರರೆಂದು ಅವರ ಚುನಾವಣೆಯ ಕಾಲದಲ್ಲೂ ಮತ್ತು ಇತ್ತೀಚೆಗೂ ದೇಶದ ಹಲವಾರು ಸಭೆಗಳಲ್ಲಿ ದೇಶೀಯರು ಖಚಿತ ಅಭಿಪ್ರಾಯವನ್ನು ಪ್ರಕಟಿಸಿದ್ದು ಅದು ಇಂದು ನಿಜವಾಗಿ ಪರಿಣಮಿಸಿದೆ. ಇಂಥಾ ಒಂದು ಪಕ್ಷದ ಪ್ರತಿನಿಧಿಯ ಅಭಿಪ್ರಾಯದ ಮೇಲೆ ಪ್ರಾಂತ್ಯದ ಭವಿಷ್ಯತ್ತನ್ನು ಇಂಡಿಯಾ ಸರಕಾರದವರು ನಿಶ್ಚಯಿಸುವದು ಇಲ್ಲಿಯ ಜನರಿಗೆ ತುಂಬಾ ಅನ್ಯಾಯ ಮಾಡಿದಂತಾಗುವದು. ಇದೂ ಅಲ್ಲದೆ ಹೊಸ ರಾಜ್ಯಘಟನೆಯಲ್ಲಿ ಯಾವುದೇ ಪ್ರದೇಶದ ಸದ್ಯ ಸ್ಥಿತಿಯನ್ನು ಅಲ್ಲಿಯ ಜನರ ಅಭಿಪ್ರಾಯ ತಿಳಿಯದೆ ಬದಲಾಯಿಸಲಾಗುವದಿಲ್ಲವೆಂದಿದೆ. ಅಂದಮೇಲೆ ಕೇಂದ್ರ ಸರಕಾರದ ಮಂತ್ರಿಯವರು ಕೊಡಗಿನ ಸಂಯೋಜನೆಯ ವಿಚಾರ ಇಲ್ಲಿಯ ಜನರ ಅಭಿಪ್ರಾಯವನ್ನು ಕ್ರಮವಾದ ರೀತಿಯಲ್ಲಿ ತಿಳಿಯದೆ ಒಂದು ತೀರ್ಮಾನ ಕೊಡುವದೆಂದರೆ ತಾವು ರಚಿಸಿದ ಹೊಸ ರಾಜ್ಯಘಟನೆಯನ್ನು ತಾವೇ ಮುರಿದಂತಾಗುವದು.

ಕೊಡಗಿನ ಭವಿಷ್ಯದ ವಿಚಾರ ಈಗ ಹಲವು ವರ್ಷಗಳಿಂದ ಇಲ್ಲಿಯ ಜನರಲ್ಲಿ ಭಿನ್ನಾಭಿಪ್ರಾಯಗಳಿದ್ದು ಜನತೆಯು ಸಾರ್ವಜನಿಕ ಸಭೆಗಳಲ್ಲೂ ಪತ್ರಿಕೆಗಳ ಮೂಲಕವೂ ತಮ್ಮ ಅಭಿಪ್ರಾಯಗಳನ್ನು ಆಗಿಂದಾಗ್ಗೆ ಸೂಚಿಸುತ್ತಾ ಬಂದಿರುವರು. ಪ್ರತ್ಯೇಕ ಪಕ್ಷದವರು ಪ್ರಧಾನಮಂತ್ರಿಯವರಲ್ಲಿಗೆ ಕೆಲವು ದಿನಗಳ ಹಿಂದೆ ನಿಯೋಗ ಹೋಗಿದ್ದಾಗ ಯಾವ ತೀರ್ಮಾನವನ್ನಾದರೂ ಜನತೆಯ ಅಭಿಪ್ರಾಯವನ್ನು ತೆಗೆದೇ ಮಾಡುವದೆಂದು ಹೇಳಿದ್ದರು. ೧೯೫೨ರ ಅಂತ್ಯದಲ್ಲಿ ಈ ಸಂಬಂಧ ಡೆಲ್ಲಿಯಲ್ಲಿ ನಡೆದ ಪ್ರತಿನಿಧಿಗಳ ಪರಿಷತ್ತಿನ ಫಲಿತಾಂಶದ ನಂತರ ಕೊಡಗಿನ ನಿವಾಸಿಗಳು ಹೆಚ್ಚಿಚ್ಚಾಗಿ ಪ್ರತ್ಯೇಕವಾದಕ್ಕೆ ಬೆಂಬಲಕೊಡುತ್ತಾ ಬಂದಿರುವರು. ಕೊಡಗಿನ ಸರಕಾರದ ಆರ್ಥಿಕ ಸ್ಥಿತಿಯು ಇತ್ತೀಚೆಗೆ ಉತ್ತಮಗೊಳ್ಳುತ್ತಾ ಬಂದಂತೆಯೇ ಸಂಯೋಜನಾವಾದಕ್ಕೆ ಪ್ರತಿಷ್ಠೆ ಕಡಿಮೆಯಾಗುತ್ತಾ ಬಂದಿದೆ. ಈ ದೆಸೆಯಿಂದಲೇ ಇತ್ತಲಾಗಿ ಕೆಲವು ಸಂಯೋಜನಾವಾದಿ ಮುಂದಾಳುಗಳು ಇನ್ನು ಕೊಡಗಿನಲ್ಲಿ ಈ ವಿಚಾರದಲ್ಲಿ ಭಿನ್ನಾಭಿಪ್ರಾಯಗಳಿಲ್ಲವೆಂದೂ ಎಲ್ಲರೂ ಪ್ರತ್ಯೇಕತ್ವಕ್ಕೆ ಒಪ್ಪಬೇಕೆಂದೂ ಎನ್ನಲು ತೊಡಗಿರುವದಾಗಿದೆ.

ಕೆಲವು ವರ್ಷಗಳ ಹಿಂದೆ ಈ ವಿಚಾರದಲ್ಲಿ ದೇಶದಲ್ಲಿ ದೊಡ್ಡ ಗೊಂದಲವೆದ್ದಿದ್ದರೂ ಡೆಲ್ಲಿಯ ಪರಿಷತ್ತಿನ ನಂತರ ಉಭಯ ಪಕ್ಷದವರೂ ಸೇರಿ ಒಗ್ಗಟ್ಟಾಗಿ ಇಲ್ಲಿಯ ನ್ಯಾಯವಿಧಾಯಕ ಸಭೆಯಲ್ಲಿ ಕೊಡಗಿಗೆ ಜವಾಬ್ದಾರಿ ಸರಕಾರ ಕೊಡಬೇಕೆಂಬ ಠರಾವನ್ನು ಪಾಸುಮಾಡಿದರು. ಇದಕ್ಕೆ ಅನುಗುಣವಾಗಿ ದೇಶದಲ್ಲೂ ಜನತೆಯು ಜವಾಬ್ದಾರಿ ಸರಕಾರವನ್ನು ಹೊಂದಿಕೊಂಡು ತನಗೆ ಹಿತಕರವಾದ ಸರಕಾರವನ್ನು ನಡೆಸಲು ಸಿದ್ಧರಾಗುತ್ತಿದ್ದರು. ಸಂಯೋಜನೆಯ ಮಾತೂ ಇತ್ತಲಾಗಿ ಎತ್ತಲ್ಪಡುತ್ತಿರಲಿಲ್ಲ. ಈ ರೀತಿ ವಾತಾವರಣವು ಶಾಂತಮಯವಾಗಿ ಜನರು ಒಗ್ಗಟ್ಟಾಗಿ ವರ್ತಿಸಲು ತಯಾರಾಗುತ್ತಿದ್ದ ಸಮಯದಲ್ಲಿ ಇಂಡಿಯಾ ಸರಕಾರದ ಸಂಯೋಜನಾ ಸೂಚನೆಯು ಯಾರಿಗೆ ತಾನೇ ವಿಸ್ಮಯವನ್ನುಂಟುಮಾಡದಿರದು? ಈ ವಾರ್ತೆಯು ತಲಪಿದ ಕೂಡಲೇ ಹಲವು ಕೌನ್ಸಿಲು ಮೆಂಬರುಗಳೂ, ಜಿಲ್ಲಾ ಬೋರ್ಡು ಮೆಂಬರುಗಳೂ ಇಂಡಿಯಾ ಸರಕಾರಕ್ಕೆ ಸಂಯೋಜನಾ ಅಭಿಪ್ರಾಯವನ್ನು ವಿರೋಧಿಸಿ ತಂತಿ ಕಳುಹಿಸಿರುವದಲ್ಲದೆ ಬೇರೆ ಬೇರೆ ಕಡೆಗಳಲ್ಲಿ ಸಾರ್ವಜನಿಕ ಸಭೆಗಳು ಸೇರಿ ಜನತೆಯು ತಮ್ಮ ನಿಶೇಧವನ್ನು ಸೂಚಿಸಲಾರಂಭಿಸಿರುವರು. ಈ ರೀತಿ ನಿಶೇಧವನ್ನು ಗ್ರಾಮ ಗ್ರಾಮಗಳಲ್ಲೂ ಮನೆಗಳಲ್ಲೂ ಸೂಚಿಸಿ ಇಂಡಿಯಾ ಸರಕಾರಕ್ಕೆ ತಿಳಿಸಬೇಕಾದುದು ಅತ್ಯವಶ್ಯವಾಗಿದೆ. ಹಿಂದೂದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ದೇಶೀಯರು ತಮ್ಮ ದೇಶದ ವ್ಯಕ್ತಿತ್ವಕ್ಕೆ ಮನ್ನಣೆ ಕೊಡುವರೆಂಬುದರಲ್ಲಿ ಸಂಶಯವಿಲ್ಲ. ಯಾವ ರೀತಿ ಹಿಂದೂದೇಶದ ಸ್ವಾತಂತ್ರ್ಯವನ್ನು ಗಳಿಸಲು ಜನತೆಯು ಕಷ್ಟನಷ್ಟಗಳನ್ನು ಸಹಿಸಿತೋ ಅದೇ ರೀತಿ ತಮ್ಮ ಪ್ರಾಂತದ ಸರಕಾರವನ್ನು ತಮ್ಮ ಇಚ್ಛೆಯಂತೆ ನಡೆಸುವಂಥಾ ತಮ್ಮ ಜನ್ಮಸಿದ್ಧ ಹಕ್ಕನ್ನು ಕಾಪಾಡಲು ಕಂಕಣಬದ್ಧರಾಗುವರಾಗಿ ನಂಬುತ್ತೇವೆ.

ಭಾರತ ಭೂಮಿಗೆ ಸ್ವಾತಂತ್ರ್ಯವನ್ನು ಪಡೆದು ಪ್ರಜಾ ಜವಾಬ್ದಾರಿ ಸರಕಾರವನ್ನು ಸ್ಥಾಪಿಸಲು ಪಣತೊಟ್ಟಿರುವ ಕೇಂದ್ರದ ಕಾಂಗ್ರೆಸ್ ಸರಕಾರದವರು ಜನತೆಯ ಅಭಿಪ್ರಾಯವನ್ನು ಸೂಚಿಸಲು ತಕ್ಕ ಏರ್ಪಾಟುಮಾಡಿ ಬಹುಮತದ ಅಭಿಪ್ರಾಯದಂತೆ ಕೊಡಗಿನ ಭವಿಷ್ಯವನ್ನು ನಿಶ್ಚಯಿಸಬೇಕಲ್ಲದೆ ಅನ್ಯಥಾ ವರ್ತಿಸಿದರೆ ದೇಶದಲ್ಲಿ ದೊಡ್ಡ ಗೊಂದಲಕ್ಕೆ ಅವಕಾಶವನ್ನು ಕಲ್ಪಿಸಿದಂತಾಗುವದರಲ್ಲಿ ಸಂಶಯವಿಲ್ಲ.

ಮುಖ್ಯೋಪಧ್ಯಾಯರ ಆಯ್ಕೆ.

ಕೊಡಗಿನಲ್ಲಿ ಐದು ಸರಕಾರಿ ಹೈಸ್ಕೂಲುಗಳಿವೆ. ಈ ಹೈಸ್ಕೂಲುಗಳ ಪೈಕಿ ಪೊನ್ನಂಪೇಟೆ ಹೈಸ್ಕೂಲಿನ ಮುಖ್ಯೋಪಧ್ಯಾಯರು ಎರಡು ತಿಂಗಳ ಹಿಂದೆಯೇ ನಿವೃತ್ತರಾಗಿದ್ದರೂ ಈ ವರೆಗೂ ಆ ಪದ ಸ್ಥಳಕ್ಕೆ ಬೇರೊಬ್ಬರ ನೇಮಕವಾಗಿರುವದಿಲ್ಲ. ಸರಕಾರದವರು ಈ ನೇಮಕದ ವಿಚಾರದಲ್ಲಿ ಈ ರೀತಿ ಅನಾವಶ್ಯಕ ವಿಳಂಬ ಮಾಡುವದೇಕೆಂದು ನಮಗೆ ತಿಳಿಯುವದಿಲ್ಲ. ಹೇಗೂ ಹೈಸ್ಕೂಲು ಮುಖ್ಯೋಪಧ್ಯಾಯರ ಆಯ್ಕೆಯ ವಿಚಾರದಲ್ಲಿ ಒಂದೆರಡು ವಿಚಾರಗಳನ್ನು ಈ ಸಂದರ್ಭದಲ್ಲಿ ಬರೆಯುವದು ಅವಶ್ಯವೆನಿಸಿದೆ.

ಕೊಡಗಿನಲ್ಲಿ ಈ ಮೊದಲು ಎರಡೇ ಸರಕಾರಿ ಹೈಸ್ಕೂಲುಗಳಿದ್ದುವು. ಕೆಲವು ವರ್ಷಗಳ ಹಿಂದೆ ಖಾಸಗಿಯಾಗಿ ಮೂರು ಹೈಸ್ಕೂಲುಗಳಾದಾಗ ಆ ಹೈಸ್ಕೂಲುಗಳಿಗೆ ಅಧ್ಯಾಪಕರು ದೊರೆಯದೆ ಸಾರ್ವಜನಿಕರು ಹೊರಗಿನಿಂದ ಅತೀ ಕಷ್ಟದಿಂದ ಅಧ್ಯಾಪಕರನ್ನು ಒದಗಿಸಿಕೊಂಡರು. ಈ ಖಾಸಗಿ ಶಾಲೆಗಳನ್ನು ಪ್ರಾರಂಭಿಸುವ ಕಾಲಕ್ಕೆ ಸ್ಥಳೀಯ ಸರಕಾರಿ ಹೈಸ್ಕೂಲಿನಲ್ಲಿದ್ದ ಕೆಲವು ಅಧ್ಯಾಪಕರು ಈ ಹೊಸ ಹೈಸ್ಕೂಲುಗಳ ಮುಖ್ಯ ಅಧ್ಯಾಪಕರಾಗಿ ಹೋಗಲು ಇಚ್ಛಿಸಿದ್ದರೂ ಆಗ ಸರಕಾರದವರು ಅವರನ್ನು ಬಿಡಲಿಲ್ಲ. ಆ ಕಾರಣ ಅಂಥಾವರ ತಮ್ಮ ಹಿಂದಿನ ಉದ್ಯೋಗದಲ್ಲಿಯೇ ಇರಬೇಕಾಯಿತು.

ನಂತರ ೧೯೪೮ ರಲ್ಲಿ ಈ ಖಾಸಗಿ ಹೈಸ್ಕೂಲುಗಳನ್ನು ಸರಕಾರದವರು ವಹಿಸಿಕೊಳ್ಳುವಾಗ ಆ ಶಾಲೆಗಳಲ್ಲಿ ಆ ವರೆಗೆ ಮುಖ್ಯೋಪಧ್ಯಾಯರಾಗಿ ಇದ್ದವರು ಮತ್ತು ಅಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದವರು ಇಲಾಖೆಯಲ್ಲಿ ಯಾವ ಅಂತಸ್ತನ್ನು ಪಡೆಯಬೇಕೆಂಬ ಬಗ್ಗೆ ಪರ್ಯಾಲೋಚನೆ ನಡೆಯಿತು. ಈ ವಿಚಾರವು ೧೯೪೮ನೇ ಮಾರ್ಚ್ ತಿಂಗಳಲ್ಲಿ ನಡೆದ ಕೌನ್ಸಿಲು ಸಭೆಯಲ್ಲಿ ಸೂಲಂಕುಶವಾಗಿ ಚರ್ಚಿಸಲ್ಪಟ್ಟ ಕಾಲಕ್ಕೆ ಆಗಿನ ವಿದ್ಯಾಮಂತ್ರಿಗಳು ಸ್ಪಷ್ಟವಾಗಿ ಈ ರೀತಿ ಹೇಳಿದರು. 'ಖಾಸಗೀ ಹೈಸ್ಕೂಲುಗಳಾದಾಗ ಸರಕಾರಿ ಹೈಸ್ಕೂಲುಗಳಲ್ಲಿದ್ದ ಕೆಲವು ಅಧ್ಯಾಪಕರು ಆ ಹೈಸ್ಕೂಲುಗಳಿಗೆ ಹೋಗಲು ಇಷ್ಟಪಟ್ಟರೂ ಅವರು ಅವಶ್ಯಕ ಸರ್ವಿಸಿಗೆ (essential service) ಸೇರಿದವರೆಂಬ ಕಾರಣದಿಂದ ಸರಕಾರವು ಅವರನ್ನು ಹೋಗಗೊಡಲಿಲ್ಲ. ಆದ್ದರಿಂದ ಆ ಖಾಸಗಿ ಶಾಲೆಗಳನ್ನು ಇಂದು ಸರಕಾರವು ವಹಿಸಿಕೊಂಡಾಗ ಸರಕಾರಿ ಶಾಲೆಗಳಲ್ಲಿದ್ದ ಅಧ್ಯಾಪಕರ ಹಕ್ಕು ಬಾಧ್ಯತೆಗಳನ್ನು ಮೀರಿ ಖಾಸಗಿ ಶಾಲೆಯ ಅಧ್ಯಾಪಕರನ್ನು ಲೆಕ್ಕಿಸಲಾಗುವದಿಲ್ಲ. ಮೇಲಾಗಿ ಖಾಸಗಿ ಹೈಸ್ಕೂಲಿಗೆ ಅಧ್ಯಾಪಕರನ್ನು ನೇಮಿಸಿದಾಗ ಖಾಸಗಿ ಶಾಲೆಗಳಲ್ಲಿ ದೊರೆತ ವೇತನ ಮತ್ತು ಹಕ್ಕು ಬಾಧ್ಯತೆಗಳು ಅವರಿಗೆ ಸರಕಾರಿ ಇಲಾಖೆಯಲ್ಲಿ ದೊರೆಯಲಾರವೆಂದೂ, ಸರಕಾರಿ ಇಲಾಖೆಯಲ್ಲಿರುವವರ ಹಕ್ಕನ್ನು ಮೀರಿ ವರ್ತಿಸಲಾಗುವದಿಲ್ಲವೆಂದೂ ಮೊದಲೇ ವಿಶದಪಡಿಸಲಾಗಿತ್ತು.'

ಈ ಹೇಳಿಕೆಯ ಪ್ರಕಾರವೇ ಖಾಸಗಿ ಶಾಲೆಗಳನ್ನು ಸರಕಾರಕ್ಕೆ ತೆಗೆದುಕೊಂಡಾಗ ವರ್ತಿಸಲಾಗಿದೆ. ಈ ಖಾಸಗಿ ಶಾಲೆಗಳಲ್ಲಿ ಮುಖ್ಯೋಪಧ್ಯಾಯರಾಗಿದ್ದವರು ಬೇರೆಯವರಿಗೆ ಸ್ಥಳ ತೆರವು ಮಾಡಬೇಕಾಯಿತು. ಆದರೆ ಇತ್ತಲಾಗಿ ಖಾಲಿ ಇರುವ ಮುಖ್ಯೋಪಧ್ಯಾಯರ ಸ್ಥಳಕ್ಕೆ ಸ್ಪರ್ಧೆ ಇದೆಯೆಂದು ಕೇಳಿಬರುತ್ತಿದೆ. ಸರಕಾರವು ತನ್ನ ನೀತಿಯನ್ನು ಬದಲಿಸದೆ ವರ್ತಿಸಬೇಕಾದುದು ಅತ್ಯವಶ್ಯ.

ಹಾಗೆಂದಾಗ ಕೇವಲ ಸೀನಿಯಾರಿಟಿ ಪ್ರಕಾರ ಈ ಹುದ್ದೆಯನ್ನು ಭರ್ತಿಮಾಡಬೇಕೆಂದು ನಾವು ಹೇಳುವದಿಲ್ಲ. ಒಂದು ಹೈಸ್ಕೂಲಿನ ಪ್ರಗತಿಯು ಹೆಚ್ಚಾಗಿ ಅದರ ಮುಖ್ಯೋಪಧ್ಯಾಯರನ್ನೇ ಅವಲಂಬಿಸಿರುವ ಕಾರಣ ಸರ್ವೀಸಿನೊಂದನ್ನೇ ಲೆಕ್ಕಿಸದೆ ಯೋಗ್ಯತೆಯನ್ನು ಪರಿಶೀಲಿಸಬೇಕು. ಇದಕ್ಕಾಗಿ ಅಧ್ಯಾಪಕರಾಗಿ ಮುಖ್ಯೋಪಧ್ಯಾಯರಾಗಲು ಅರ್ಹತೆ ಇರುವವರೆಲ್ಲರನ್ನು ಪರಿಶೋಧಿಸುವ ಏರ್ಪಾಡು ಮಾಡಬೇಕು. ಪ್ರತಿಯೊಬ್ಬನೂ ತನ್ನ ಯೋಗ್ಯತೆಯನ್ನು ಆಯ್ಕೆ ಮಾಡುವವರ ಮುಂದೆ ವ್ಯಕ್ತಮಾಡುವ ಅನುವು ಮಾಡಬೇಕು. ಹೀಗೆ ಮಾಡುವದಾದರೆ ಯಾವ ಅಧ್ಯಾಪಕನಿಗೂ ವ್ಯಸನವಾಗಲು ಕಾರಣವಿಲ್ಲ. ಇದರಿಂದ ಶಾಲೆಗಳ ಪ್ರಗತಿಯು ಸಾಧಿಸಲ್ಪಟ್ಟಂತಾಗುವದು. ಇದು ಬಿಟ್ಟು ಸರ್ವೀಸಾಗಿದೆಯೆಂಬ ಒಂದು ಕಾರಣದಿಂದಾಗಲೀ, ಜನಾಂಗಿಕ ಇರುವವನೆಂದಾಗಲೀ, ಯಾರನ್ನೂ ನೇಮಿಸಬಾರದು. ದಕ್ಷತೆ ಹಾಗೂ ಸಂಘಟನಾಶಕ್ತಿಯಿಂದ್ದು ಶಿಸ್ತಿನಿಂದ ಸಂಸ್ಥೆಯನ್ನು ನಡೆಸಬಲ್ಲವರೇ ಮುಖ್ಯ ಉಪಾಧ್ಯಾಯರಾಗಬೇಕು. ಮುಖ್ಯೋಪಧ್ಯಾಯರನ್ನು ನೇಮಿಸುವಾಗ ಸರಕಾರವು ಈ ವಿಚಾರಗಳನ್ನು ಮನಸ್ಸಿಗೆ ತಂದುಕೊಂಡು ವರ್ತಿಸುವದಾಗಿ ಆಶಿಸುತ್ತೇವೆ.

ವರ್ತಮಾನ.

ಶ್ರೀ ಪಿ ಜಿ ಮುದ್ದಯ್ಯನವರನ್ನು ಕ್ಯಾಪ್ ಕಾಂಪಿಟೇಶನ್ ಆಫೀಸರಾಗಿಯೂ ಶ್ರೀ ಬಿ ಎಂ ನಾಣಯ್ಯನವರನ್ನು ಗ್ರಾಜ್ಯುವೇಟ್ ಅಸಿಸ್ಟೆಂಟಾಗಿಯೂ ಶ್ರೀ ಎ. ಎಸ್. ಗಣಪತಿಯವರನ್ನು ನಾಣಯ್ಯನವರ ಬದಲು ಎಗ್ರಿಕಲ್ಚರಲ್ ಡೆಮಾನ್ಸ್ಟ್ರೇಟರಾಗಿಯೂ ನೇಮಿಸಿರುವರು

"ರೀಫಾರ್ಮರ್ಸ್ ಬ್ಯಾಡ್ ಮಿಂಟನ್ ಕ್ಲಬ್, ಗೋಣಿಕೊಪ್ಪಲಿನಲ್ಲಿ ಬ್ಯಾಡ್ ಮಿಂಟನ್ ಏವರ ಆಟದ ಪಂದ್ಯಾಟದಲ್ಲಿ ಗೋಣಿಕೊಪ್ಪಲು ರೀಫಾರ್ಮರ್ಸ್ ಕ್ಲಬಿನವರು ಕೂತುಪರಂಬ ಟೀಮನ್ನು ಸೋಲಿಸಿ ಶ್ರೀ ರಾಮಯ್ಯಾಚಾರಿ ಬೆಳ್ಳಿ ಕಪ್ಪನ್ನು ಗೆದ್ದಿರುವರು. ಇನ್ನೊಂದು ಆಟದಲ್ಲಿ ರೀಫಾರ್ಮರ್ಸ್ ಕ್ಲಬಿನವರು ವೀರಾಜಪೇಟೆಯ ರೈಸಿಂಗ್ ಸ್ಟಾರ್ ಟೀಮನ್ನು ಸೋಲಿಸಿ ಮನೆಯಪಂಡ ಕುಟುಂಬ ಶೀಲ್ಡನ್ನು ಪಡೆದಿರುವರು.

ತಾ. ೧೩-೯-೧೯೫೦ರಲ್ಲಿ ಶ್ರೀ. ಕಂಬೀರಂಡ ತಿಮ್ಮಯ್ಯನವರ ನೇತೃತ್ವದಲ್ಲಿ ಬ್ಯಾಡ್ ಮಿಂಟನ್ ಪ್ಲೇಯರ್ಸ್ ತಂಡವು ವೀರಾಜಪೇಟೆ ಸ್ಪೋರ್ಟಿಂಗ್ ಸ್ಟಾರ್ ಟೀಮಿನವರಿಗೂ ಸಿದ್ದಾಪುರದ ಬ್ಲೂಸ್ಟಾರ್‌ನವರಿಗೂ ನಡೆದು, ಸಿದ್ದಾಪುರದ ಬ್ಲೂಸ್ ಜಯಶೀಲರಾದರು. ತಂಡದಲ್ಲಿ ಸಿದ್ದಾಪುರದ ಪಿ ಆರ್. ಜವರಯ್ಯ ಮತ್ತವರ ಜೊತೆಯವರು ಭಾಗವಹಿಸಿ ಬ್ಲೂಸ್‌ನ್ನು ಸೋಲಿಸಿದರು. ಗೆದ್ದವರಿಗೆ ಮಿಸೆಸ್ ಬ್ರಮೋಲ್ಡರವರು ಬಹುಮಾನ ವಿತರಣೆ ಮಾಡಿದರು.

ಕೊಡಗಿನಿಂದ ತಲೆ ಹೊರೆಯಿಂದ ಅಕ್ಕಿಯನ್ನು ಹೊತ್ತುಕೊಂಡು ಹೋಗವ ಆ ಪ್ರತ್ಯಾರು ಜನರನ್ನು ೧೩-೯-೫೦ರಲ್ಲಿ ಮಂಡೆಪೋಸ್ಟ್ ಫ ರ್ಮ್ಸ್‌ರವರಾದ ಶ್ರೀ. ತೇಲಪಂಡ ಪಳಂಗಪ್ಪನವ… ವರು ಒಬಗಿಗೆ ಪ್ರಾಟಿನ ಗಡಿಯಲ್ಲಿ ಹಿಡಿದ ಭಾಗವ… ಡ್ಲ ರೀಟೆ ಹೋಕರ್‌ನರ ವಶಮಾಡಿ ಬಾಗನ ದಿಲ ಪೊಲೀಸಿಗೆ ಕೊಟ್ಟಿರುವರಂತೆ.

ನಾಲ್ಕು ಫೆಲೋಷಿಪ್ ಸ್ಕಾಲರ್ ಶಿಪ್‌ನ್ನು ಇಂಡಿಯಾದ ವಿದ್ಯಾರ್ಥಿಗಳಿಗೆ ಆರು ತಿಂಗಳವರೆಗೆ ಕೊಡಲು ಫ್ರೆಂಚ್ ಸರಕಾರವು ಇಚ್ಛಿಸಿ ಕಟ್ಟಿರುವರು. ಆರು ವಿಷಯಗಳ ಪೈಕಿ ಯಾವದಾದರೂ ನಾಲ್ಕರಲ್ಲಿ ಪರಿಬೀತರು ಹೊಂದಬಹುದು. ಫ್ರೆಂಚ್ ಭಾಷೆಯು ಮಾಹಿತಿ ಇರಬೇಕು. ತರಬೇತಿ ಫ್ರಾನ್ಸ್‌ನಲ್ಲಿ ನಡೆಯುವದು. ಅರ್ಜಿ ಫಾರಂಮನ್ನು ಇಂಡಿಯಾ ಸರಕಾರದ ವಿದ್ಯಾ ಇಲಾಖೆಗೆ ಬರೆದು ತರಿಸಿಕೊಂಡು ೪-೧೦-೫೦ರ ಒಳಗೆ ಕೇಂದ್ರದ ವಿದ್ಯಾ ಇಲಾಖೆಗೆ ತಲುಪಿಸಬೇಕು. ಹೆಚ್ಚಿನ ವಿಷಯಗಳನ್ನು ಚೀಫ್ ಕಮಿಷನರ್ ಆಫೀಸಿನಿಂದ ತಿಳಿದುಕೊಳ್ಳಬಹುದು.

ಕೊಡಗಿನ ಭವಿಷ್ಯ

(ತಾ. ೧೬-೯-೫೦ರ ಮದ್ರಾಸಿನ 'ಮೆಯಿಲ್' ಪತ್ರಿಕೆಯು ಬರೆದ ಅಗ್ರಲೇಖನವನ್ನು ವಾಚಕರಿಗಾಗಿ ಕೊಡಲಾಗಿದೆ.)

ಕೊಡಗನ್ನು ಮದ್ರಾಸ್ ಪ್ರಾಂತ್ಯದೊಡನೆ ಸೇರಿಸುವ ಪ್ರಸ್ತಾಪದಲ್ಲಿ ಕೇಂದ್ರ ಮಂತ್ರಿಮಂಡಳವು ಕೊಡಗಿನ ಚಾರಿತ್ರಿಕ ಮತ್ತು ಜಾತೀಯ ಪರಂಪರೆಯನ್ನು ಮರೆತಂತೆ ತೋರುತ್ತದೆ. ಕೊಡಗು ಚೀಫ್ ಕಮಿಷನರೊಬ್ಬರಿಂದ ಆಳಲ್ಪಡುವ ಸಂಸ್ಥಾನ ಅದಕ್ಕೆ ಆದರದೇ ಶಾಸನ ಸಭೆಯಿದೆ. ೧೯೫೦ರ ಗವರ್ನರ್ ಜನರಲರ ನಿರ್ದೇಶನದಂತೆ ಮದ್ರಾಸು ಹೈಕೋರ್ಟು ಅಲ್ಲಿಯ ಹೈಕೋರ್ಟಾಗಿದೆ. ಕಳೆದ ಶುಕ್ರವಾರ ಪಾರ್ಲಿಮೆಂಟಿನಲ್ಲಿ ಮಾತಾಡುತ್ತಾ ಕೇಂದ್ರದ ಸ್ಟೇಟ್‌ಮಂತ್ರಿಯವರು ಕೊಡಗು ಇಂದಲ್ಲ ನಾಳೆ ನೆರೆಯ ಪ್ರಾಂತದೊಡನೆ ವಿಲೀನವಾಗಬೇಕೆಂದರು. ಆದರೆ ಏಕೆ ವಿಲೀನವಾಗಬೇಕೆಂಬುದಕ್ಕೆ ಅವರು ಕಾರಣ ಕೊಡಲಿಲ್ಲ. ಗೃಹಮಂತ್ರಿಯವರ ಪರ ಮಾತಾಡಿದ ಗಾಡ್ಗಿಲರು ವಿಲೀನೀಕರಣದ ವಿಚಾರ ಮಾತಾಡಿದರೂ ವಿವರವೇನನ್ನೂ ತಿಳಿಸಲಿಲ್ಲ. ಕೊಡಗಿನ ಮೆಂಬರೊಬ್ಬರ ಭಾಷಣವನ್ನು ಉಲ್ಲೇಖಿಸಿ ಆ ಭಾಷಣದಿಂದ ಕೊಡಗು ನೆರೆಯ ಮೈಸೂರು ಯಾ ಮದ್ರಾಸಿನೊಡನೆ ಶೀಘ್ರ ಸೇರಬೇಕೆಂದು ಎಲ್ಲರಿಗೂ ಮನದಟ್ಟಾಗಿದೆಯೆಂದರು. ಈ ತೀರ್ಮಾನವು ಖಂಡಿತ ನ್ಯಾಯವಲ್ಲ.

ಕೊಡಗಿನ ಮೆಂಬರು ಕೊಡಗ ಶಾಸನ ಸಭೆಯ ಕಲಹಗಳನ್ನು, ಕೊಡಗಿನ ಆಡಳಿತವು ನಿರರ್ಥಕವೆಂಬ ಮಾತು ಹೇಳಿರುವರೇ ವಿನಾ ಇಲ್ಲಿ ಆ ವಿಲೀನೀಕರಣದ ಮಾತಿಲ್ಲ. ಈಗಿನ ಅಲ್ಲಿಯ ಆಡಳಿತ … ಬದಲಾಯಿಸುವ ರೀತಿ … ಕೊಡಗಿನ ಭವಿಷ್ಯವನ್ನು ನಿರ್ಣಯಿಸುವ ಕಾರಣವಾಗಲಾರದು. ಕೊಡಗು ಮತ್ತೊಂದು ಸಂಸ್ಥಾನದೊಡನೆ ವಿಲೀನವಾದರೆ ಅಲ್ಲಿಯ ಜನರ ಆಶೆ ಅವಶ್ಯಕತೆಗಳ ಬಗ್ಗೆ ಸಂಯುಕ್ತ ಸಂಸ್ಥಾನವು ಸಾಕಷ್ಟು ಗಮನ ಕೊಡದಿರುವ ಸಾಧ್ಯತೆ ಇದೆ. ಸಂಸ್ಥಾನಗಳ ವಿಲೀನೀಕರಣದಲ್ಲಿ ಚಿಕ್ಕ ಸಂಸ್ಥಾನಗಳಿಗೆ ವಿಲೀನಗೊಂಡನಂತರ ಆಡಳಿತದಲ್ಲಿ ದೊರೆಯಬೇಕಾದ ಹಕ್ಕು ಬಾಧ್ಯತೆಗಳು ದೊರೆಯಲಾರವು. ಬೇರೆ ಹಲವು ಪ್ರಾಂತಗಳ ಮಾತಿರಲಿ, ಪುದುಕೋಟೆ, ಕೊಚ್ಚಿನ್ ಪ್ರಾಂತಗಳ ಪಾಡೂ ಹೀಗಾಗಿದೆ.

ಕೊಡಗಿನ ಜನತೆ ವಿಶೇಷ ಗುಣದ ಶೌರ್ಯ ಪ್ರತಾಪಗಳಿಂದ ಕೂಡಿದ ಯುದ್ಧಕುಶಲ ಜನಾಂಗವಾಗಿದೆ. ಅವರಿಗೆ ಪ್ರತ್ಯೇಕ ಭಾಷೆ ಸಂಸ್ಕೃತಿ ಮಾತವಿದೆ. ಅವರ ರಾಷ್ಟ್ರೀಯ ಸಂಪ್ರದಾಯ, ಖ್ಯಾತಿವೆತ್ತ ಚರಿತ್ರೆ ಹಾಗೂ ಸ್ವಾತಂತ್ರ್ಯಪ್ರಿಯತೆ ಹೇರಳವಾದುದು. ಕೊಡಗು ಶತಮಾನಗಳವರೆಗೆ ತನ್ನ ಸ್ವಂತ ರಾಜರಿಂದಲೇ ಆಳಲ್ಪಡುತಿತ್ತು. ಮೈಸೂರಿನ ಹೈದರ ಆಲಿ, ಮತ್ತು ಟಿಪ್ಪು ಸುಲ್ತಾನರನ್ನು ಕೊಡಗಿನ ಜನರು ರಣರಂಗದಲ್ಲಿ ಎದುರಿಸಿದ ಆ ಕಾರ್ಯವು ಭಾರತ ಚರಿತ್ರೆಯಲ್ಲಿ ಶೌರ್ಯ ಸಾಹಸಗಳ ಉತ್ಕೃಷ್ಟ ಉದಾಹರಣೆಯಾಗಿದೆ. ದಕ್ಷಿಣ ಹಿಂದೂಸ್ಥಾನದ ಬಹು ಭಾಗವನ್ನು ಆಕ್ರಮಿಸಿದ ಆ ಶೂರ, ಮತ್ತು ಶಕ್ತ ಧಾಳಿಗಾರರು ಕೊಡಗಿನ ಬಾಗಿಲಿಗೆ ಬಂದಾಗ ವೀರರಾಜೇಂದ್ರನು ಗ್ರೀಸ್ ಚರಿತ್ರೆಯಲ್ಲಿ ಪರ್ಷಿಯನರ ಧಾಳಿಯಾಗುವಾಗ ಥರ್ಮಾಪೈಲಿಯನ್ನು ರಕ್ಷಿಸಲು ಅತುಳಸಾಹಸದಿಂದ ಹೋರಾಡಿದ ಲಿಯೊನಿದಸನಂತೆ ಹೋರಾಡಿ ಕೊಡಗನ್ನು ರಕ್ಷಿಸಿದನು. ನಂತರ ದಕ್ಷಿಣ ಹಿಂದೂಸ್ಥಾನದಲ್ಲಿ ಟಿಪ್ಪುಸುಲ್ತಾನನ ವಿರುದ್ಧ ದಂಡನಾಯಕನಾಗಿ ಬಂದಿದ್ದ ಆಗಿನ ಗವರ್ನರ್ ಜನರಲ್ ಲಾರ್ಡ್ ಕಾರ್ನ್‌ವಾಲಿಸನ ಸಹಾಯದಿಂದ ಕೊಡಗು ತನ್ನ ಪ್ರತ್ಯೇಕತೆಯನ್ನು ಉಳಿಸಿಕೊಂಡಿತು. ನಂತರ ಕೊಡಗಿನಲ್ಲಿ ಅಂತರಿಕ ತೊಂದರೆಗಳು ಹೆಚ್ಚಿದ ಕಾರಣ ಅಲ್ಲಿಯ ಜನರ ಅನುಮತಿಯಿಂದ ೧೮೩೪ರಲ್ಲಿ ಕೊಡಗು ಈಸ್ಟ್ ಇಂಡಿಯಾ ಕಂಪೆನಿಯ ಆಡಳಿತಕ್ಕೆ ಬಂತು. ಆ ಕಾಲಕ್ಕೆ ಕೊಡಗಿನ ಜನರ ಹಕ್ಕು ಬಾಧ್ಯತೆ, ನೀತಿ ಸಂಪ್ರದಾಯಗಳನ್ನು ಕಾದುಕೊಡಲಾಗುವದೆಂದು ಭರವಸೆಯನ್ನು ಕಂಪೆನಿಯು ಕೊಟ್ಟಿತ್ತು. ಆ ಭರವಸೆಗಳು ಮುರಿಯಲ್ಪಟ್ಟಿಲ್ಲ. ಆ ಭರವಸೆಗಳಂತೆ ಕೇಂದ್ರ ಸರಕಾರವು ಕೊಡಗಿನ ವ್ಯಕ್ತಿತ್ವವನ್ನು ಉಳಿಸುವದು ಕರ್ತವ್ಯವಾಗಿದೆ.

ಸಾರ್ವಜನಿಕ ಸಭೆಗಳು.

ಹುದಿಕೇರಿ:— ತಾರೀಕು ೧೯-೯-೫೦ರಲ್ಲಿ ಹುದಿಕೇರಿಯಲ್ಲಿ ಶ್ರೀ ಅಜ್ಜಿಕುಟ್ಟೀರ ಮಾಚಪ್ಪನವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಯೊಂದು ನಡೆಯಿತು. ಕೊಡಗಿನ ಭವಿಷ್ಯದ ಬಗ್ಗೆ ಕೇಂದ್ರ ಶಾಸನ ಸಭೆಯಲ್ಲಿ ಸೂಚಿಸಲ್ಪಟ್ಟ ವಿಷಯಗಳನ್ನು ಚರ್ಚಿಸಿ ಈ ಠರಾವುಗಳನ್ನು ಮಾಡಲಾಯಿತು. (೧) ಕೊಡಗಿನ ಜನರ ಅಭಿಪ್ರಾಯ ತಿಳಿಯದೆ ಕೊಡಗನ್ನು ಮದ್ರಾಸು ಯಾ ಮೈಸೂರಿನೊಂದಿಗೆ ಸಂಯೋಜನೆ ಮಾಡುವ ಕೇಂದ್ರ ಸರಕಾರವು ಬಂದ ತೀರ್ಮಾನ ಈ ಸಭೆಯು ಪೂರಾ ವಿರೋಧಿಸುತ್ತದೆ. (೨) ಕೊಡಗನ್ನು ಪ್ರತ್ಯೇಕವಾಗಿಟ್ಟುಕೊಂಡು ಹಿಮಾಚಲ ಮತ್ತು ವಿಂಧ್ಯ ಪ್ರದೇಶಗಳಿಗೆ ಕೊಡಲಿಕ್ಕೆ ನಿರ್ಧಾರ ಮಾಡಿದ ಜವಾಬ್ದಾರಿ ಸರಕಾರ ಕೊಡಬೇಕೆಂದು ಈ ಸಭೆಯು ಇಂಡಿಯಾ ಸರಕಾರವನ್ನು ಒತ್ತಾಯಿಸುತ್ತದೆ. (೩) ಕೊಡಗಿನ ಪ್ರತಿನಿಧಿ ಶ್ರೀ ಸಿ. ಎಂ. ಪೂಣಚ್ಚನವರು ಪಾರ್ಲಿಮೆಂಟಿನಲ್ಲಿ ಕೊಡಗಿನ ಭವಿಷ್ಯದ ವಿಷಯ ಕುರಿತು ಕೊಟ್ಟ ಅಭಿಪ್ರಾಯವು ಜನರ ಅಭಿಪ್ರಾಯವಲ್ಲವೆಂದು ಈ ಸಭೆಯು ಅಭಿಪ್ರಾಯ ಪಡುತ್ತದೆ.

ಈ ಠರಾವುಗಳ ನಕಲನ್ನು ಕೇಂದ್ರ ಸರಕಾರದ ಮುಖ್ಯ ಮಂತ್ರಿಗಳು ಗೃಹ ಮಂತ್ರಿಗೂ ತಿಳಿಸಲು ತೀರ್ಮಾನವಾಯಿತು.

ನಾಪೋಕ್ಲು:— ತಾರೀಕು ೧೯ರಲ್ಲಿ ಶ್ರೀ ಶಿವಚಾಳಿಯಂಡ ಸೋಮಯ್ಯನವರ ಅಧ್ಯಕ್ಷತೆಯಲ್ಲಿ ನಾಪೋಕ್ಲು ನಾಡಿನವರ ಸಾರ್ವಜನಿಕ ಸಭೆಯೊಂದು ನಡೆಯಿತು. ಮೇಲಿನ ಠರಾವುಗಳ ಅರ್ಥದ ಠರಾವುಗಳನ್ನು ಇಲ್ಲಿ ಒಮ್ಮತದಿಂದ ಅಂಗೀಕರಿಸಲಾಯಿತು.

ನಾಪೋಕ್ಲು ಗ್ರಾಮದ ಸಭೆಯೊಂದು ಶ್ರೀ ಬೊಪ್ಪಂಡ ದೇವಯ್ಯನವರ ಅಧ್ಯಕ್ಷತೆಯಲ್ಲಿ ನಡೆದು ಮೇಲ್ಕಂಡಂತೆ ಠರಾವು ಮಾಡಿದರು.

ಕಾಕೋಟುಪರಂಬು:— ತಾರೀಕು ೨೦-೯-೫೦ರಲ್ಲಿ ಶ್ರೀ ಮಾಕಂಡ ಚಂಗಪ್ಪನವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಯೊಂದು ನಡೆದು ಮೇಲಿನ ಠರಾವುಗಳೇ ಇಲ್ಲಿಯೂ ಅಂಗೀಕೃತವಾದವು.

ವೀರಾಜಪೇಟೆ:— ತಾ ೨೧-೯-೫೦ರಲ್ಲಿ ವೀರಾಜಪೇಟೆಯಲ್ಲಿ ಪುರಸಭೆಯ ನಂತರ ತಾಲೂಕು ಮೈದಾನದಲ್ಲಿ ಸಾರ್ವಜನಿಕ ಸಭೆಯು ಶ್ರೀ ಕೆ. ಟಿ. ಉತ್ತಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು. ಶ್ರೀಗಳಾದ ಪಿ ಐ ಬೆಳ್ಯಪ್ಪ, ಕೆ. ಪಿ. ಕರುಂಬಯ್ಯ, ಪಿ. ಕೆ. ಉತ್ತಯ್ಯ, ಸಿ ಎಂ. ಮಾದಪ್ಪ, ಬಿ ಎಂ ಸುಬ್ಬಯ್ಯ, ಪಿ. ಎ. ನಂಜಪ್ಪ, ಪುಲಿಯಂಡ ಬೋಪಯ್ಯ ಮೊದಲಾದವರು ಮಾತಾಡಿದರು. ಮೇಲಿನ ಅರ್ಥದ ಠರಾವುಗಳು ಒಮ್ಮತದಿಂದ ಪಾಸಾದವು. ಅಲ್ಲದೆ ಈ ವಿಚಾರದಲ್ಲಿ ಕೇಂದ್ರ ಸರಕಾರಕ್ಕೆ ನಿಯೋಗ ಹೋಗಲು ಒಂದು ಸಮಿತಿಯನ್ನು ಆರಿಸಲಾಯಿತು.

ನೋಟೀಸ್.

೯-೯-೧೯೫೦ರ "ಕೊಡಗು" ಪತ್ರಿಕೆಯಲ್ಲಿ ನನ ತಮ್ಮ ಹೀರಾ ಸಿಂಗನು ಪ್ರಕಟಿಸಿದ ನೋಟೀಸಿನಲ್ಲಿ, ಮಡಿಕೇರಿ ಸೆಂಟ್ರಲ್ ಹೈಸ್ಕೂಲಿನ ಬಳಿ ಇರುವ ನನ್ನ ಆಸ್ತಿಗಳು ಜಂಟಿ ಕುಟುಂಬದ ಆಸ್ತಿಗಳು ಮತ್ತು ಸದರಿ ಆಸ್ತಿಗಳಿಗೆ ತನಗೂ ತನ್ನ ಅಣ್ಣನವರಾದ ಸಿಂಗರಿಗೂ ಹಕ್ಕು ಇದೆ ಎಂದು ಇತ್ಯಾದಿ ಬರೆದಿರುತ್ತಾನೆ. ಇದು ಸತ್ಯವಲ್ಲ. ಸದ್ರಿ ಆಸ್ತಿಗಳನ್ನು ತನ್ನ ಸ್ವಂತ ಸಂಪಾದನೆಯ ಹಣದಿಂದ ೧೯೧೧-೧೨ರಲ್ಲಿ ಕೊಂಡು ಕೊಂಡು ಆ ಲಾಗಾಯ್ತಿನಿಂದ ನನ್ನ ಸ್ವಂತ ಹಕ್ಕಿನಿಂದ ಅನುಭವಿಸಿಕೊಂಡು ಬರುತ್ತಿದ್ದೇನೆ. ಸದ್ರಿ ಆಸ್ತಿಗಳಿಗೆ ಸದ್ರಿ ಹೀರಾ ಸಿಂಗನಿಗಾಗಲೀ ಕೃಷ್ಣಾ ಸಿಂಗರಿಗಾಗಲೀ ಯಾವ ಹಕ್ಕು ಇರುವುದಿಲ್ಲ. ಸದರಿ ಆಸ್ತಿಗಳನ್ನು ಮಾರಾಟ ಮಾಡುವ ಮತ್ತು ಇತರ ರೀತಿ ವಿಲೆ ಮಾಡುವ ಸಂಪೂರ್ಣ ಹಕ್ಕು ನನಗಿದೆ ಎಂದು ಈ ಮೂಲಕ ಸಮಸ್ತ ಜನರಿಗೂ ತಿಳಿಪಡಿಸುತ್ತೇನೆ. ಪಿ. ಜೋಟಿಬ ಸಿಂಗ್

ಮಡಿಕೇರಿ, ತಾ ೨೦-೯-೫೦

ವಿನಂತಿ.

ವೀರಾಜಪೇಟೆಯಲ್ಲಿ ಶ್ರೀ. ಜೈದನ್ನ ಮುತ್ತಪ್ಪದೇವರ ಮಠದ ಆಲೆಕಂಡಿ ಚಾತುವಿನ ವಿನಂತಿ:—

ತಾರೀಕು 1-9-50ರ 'ಕೊಡಗು' ಪತ್ರಿಕೆಯಲ್ಲಿ ಪರಸನಿಕಡವಿನ ಡಪ್ಪಾ ನೋನ್ಸ್‌ಜರ್ ಕುಂಞರಾಮನ್‌ನವರ ವಿನಂತಿ ನೋಡಿದಲ್ಲಿ ಕೊಡಗು ದೇಶದ ಹಲವು ಕಡೆಯಲ್ಲಿ ದೇವಸ್ಥಾನಗಳನ್ನು ಏರ್ಪಡಿಸಿ ನಡೆಯುವ ಉತ್ಸವಗಳಿಗೆ ಹೋಗಕೂಡದಾಗಿ ಹರಿಕೆ ಪ್ರಾರ್ಥನೆಗಳನ್ನು ಕಳುಹಿಸಬಾರದಾಗಿ ಕೇಳಿ, ಕೊಡಕೂಡದ್ದಾಗಿಯೂ ಪರಸನಿಕಡು ಮುತ್ತಪ್ಪದೇವರ ಆದಿ ಸ್ಥಳ ಅಲ್ಲಿಂದ ಬೇರೆ ನಡೆದಿಲ್ಲವೆಂತಲೂ ಪ್ರಕಟಿಸಿದ್ದು ನೋಡಿದರೆ ಅವರ ಸಂಕೋಚದ ಮತ್ತು ತಪ್ಪು ಅಭಿಪ್ರಾಯವನ್ನು ಜನರಲ್ಲಿ ಬೀರಿ ಅಲ್ಲಿಗೆ ಎಲ್ಲರ ಮನಸ್ಸನ್ನು ಸೆಳೆಯಿಸಿ ಕೊಡಗಿನವರು ಮಾತ್ರ ದೇವರ ಹೆಸರಿನಿಂದ ಜೀವನ ಕಳೆಯುತ್ತಾರೆ ಅವರು ಮಾತ್ರ ಎಲ್ಲವೆಂತ ಸ್ವಾರ್ಥಕ್ಕೋಸ್ಕರ ಅಲ್ಲಿಯ ವೃದ್ಧಿಯು ಆಶಿಸುವಂತೆ ಪ್ರಕಟಿಸಿದ ಮಾತಲ್ಲದೆ ಅನ್ಯಥಾ ಅಲ್ಲವೆಂದು ಹೇಳುತ್ತೇನೆ. ದೇವರು ಲೋಕದಲ್ಲಿ ಒಬ್ಬನೆ. ಸರ್ವವ್ಯಾಪಕನು ಸರ್ವಸ್ವಾಮಿ. ದೇವರಿಲ್ಲದ ಸ್ಥಳ ಇಲ್ಲ ಎಂಬ ಒಳಕದೇವರ ಚಿತ್ತವು ಲೋಕದ ಎಲ್ಲಾ ಸ್ಥಳಗಳಲ್ಲಿರುತ್ತಾರೆ. ಆ ಭಕ್ತರು ಅವರ ಅವರ ಪ್ರಾರ್ಥನೆ ಸಲ್ಲಿಸಲಿಕ್ಕಾಗಿ ಒಂದೊಂದು ಸ್ಥಳ ಸ್ಥಳದಲ್ಲಿ ಮಠಗಳನ್ನು ಕಟ್ಟಿರುತ್ತಾರೆ. ಸದರಿ ಮಠಗಳಲ್ಲಿ ಒಪ್ಪಿಸುವ ಹರಿಕೆಗಳು ಜನರ ಸಂದರ್ಶನಗಳು. ಸದರಿ ದೇವರ ಮಹಿಮೆಗೆ ಅನುಮತಿಸಿದ್ದೇ ವಿನಹ ಸ್ಥಳಕ್ಕೆ ಅನುಮತಿಸಲಿಲ್ಲ ಎಂದು ಭಾವಿಸಬೇಕು. ಈ ದೇವರಿಗೆ ಮಲಬಾರಿನ ಭಕ್ತರು ಕೊಡಗಿನ ಭಕ್ತರು ಮಾತ್ರವಲ್ಲ ಇಡೀ ಇಂಡಿಯಾದ ಯಾ ಲೋಕದ ಭಕ್ತರಿಂದ ಮತಜಾತಿ ಭೇದವಿಲ್ಲದೆ ಪೂಜಿಸಲ್ಪಡುತ್ತದೆ. ಕುಂಞರಾಮರು ಹಾಡಿಸಿದಲ್ಲಿಯೇ ಮುತ್ತಪ್ಪನೆಂದು ಕರೆದರಾಗಲಿ ಪರಸನಿಕಡು ಮುತ್ತಪ್ಪ ಎಂದು ಕರೆಯುವದಿಲ್ಲ ಎಂದೂ ಆರಾಧನೆಯ ಅಲ್ಲಿಯ ಹುಕುಂ ಅಗತ್ಯವಿಲ್ಲವೆಂದೂ ಇದನ್ನೆಲ್ಲಾ ತಮಗಳ ವಿವೃಚಿತ್ತಕ್ಕೆ ಬಿಡುತ್ತ ಸದರಿ ಪ್ರಕಟಣೆಗೆ ಗಮನಕೊಡದೆ ಸರ್ವರೂ ತಮ್ಮ ಇಷ್ಟ ಇದ್ದ ಯಾವ ಮಠಕ್ಕಾಗಲಿ ಹರಿಕೆ ಪ್ರಾರ್ಥನೆಗಳನ್ನು ಸಂದರ್ಶನ ಸಹ ಕೊಡಬೇಕಾಗಿ ತಿಳಿಯಿಸುತ್ತೇನೆ.

ಆಲೆಕಂಡಿ ಚಾತುವಿನ ರುಜು.

ಕೊಡಗಿನ ಭವಿಷ್ಯ.

ಇಬ್ಬರು ನೇಮಿತ ಜನ ಮುಂದಾಳುಗಳು ಚೀಫ್ ಕಮಿಷನರೊಡನೆ ಅಧಿಕಾರ ವಹಿಸುವ ತಾತ್ಕಾಲಿಕ ಏರ್ಪಾಡು.

"ಸಿ" ಭಾಗದ ಸಂಸ್ಥಾನಗಳ ಅಂದರೆ ಚೀಫ್ ಕಮಿಷನರ್ ಪ್ರಾಂತಗಳ ಆಡಳಿತ ರಚನೆಯ ಬಗ್ಗೆ ಕೇಂದ್ರ ಶಾಸನ ಸಭೆಯಲ್ಲಿ ಚರ್ಚೆ ನಡೆದಾಗ ಕೇಂದ್ರದ ಮಂತ್ರಿಗಳಾದ ಶ್ರೀ ಎನ್. ಗೋಪಾಲಸ್ವಾಮಿ ಐಯ್ಯಂಗಾರ್ ಮತ್ತು ಎನ್. ಗಾಡ್ಗಿಲ್‌ರವರು, ಗೃಹ ಮಂತ್ರಿಯವರ ಪರವಾಗಿ ಈ ಹೇಳಿಕೆಯನ್ನಿತ್ತಿದ್ದಾರೆ.

ಕೇಂದ್ರದಿಂದ ಆಳಲ್ಪಡುವ ಈ ಭಾಗಗಳ ತಾತ್ಕಾಲಿಕ ಆಡಳಿತ ರಚನೆಯಲ್ಲಿ ಜನಾನುರಾಗದ ಮುಂದಾಳುಗಳನ್ನು ಸೇರಿಸುವ ತೀರ್ಮಾನವನ್ನು ಸರಕಾರವು ಮಾಡಿದೆ. ದೀರ್ಘಕಾಲದ ಏರ್ಪಾಡಿನ ಬಗ್ಗೆ ಬೇಕಾದ ಮಸೂದೆಯನ್ನು ಶಾಸನ ಸಭೆಯ ಈ ಮೀಟಿಂಗಿನಲ್ಲೇ ಜಾರಿಗೆ ತರಲಾಗುವದು. ಅದು ಜಾರಿಗೆ ಬರುವಲ್ಲಿವರೆಗಿನ ತಾತ್ಕಾಲಿಕ ಸಮಯದಲ್ಲಿ ಈ ಭಾಗದ ಆಡಳಿತ ಜವಾಬ್ದಾರಿಯನ್ನು ವಹಿಸಲು 'ಚೀಫ್ ಕಮಿಷನರ್-ಇನ್-ಕೌನ್ಸಿಲ್' ಇವರೊಂದಿಗೆ ಇಬ್ಬರು ಮುಂದಾಳುಗಳನ್ನು ನೇಮಿಸಲಾಗುವದು. ಚೀಫ್ ಕಮಿಷನರು ಕೆಲವು ವಿಚಾರಗಳಲ್ಲಿ ತಾನೇ ಸ್ವಯಂ ಆಡಳಿತ ನಡೆಸಿದರೂ ಮತ್ತುಳಿದ ಪ್ರಾಮುಖ್ಯ ವಿಚಾರಗಳಲ್ಲಿ ಈ ಮುಂದಾಳುಗಳ ಅಭಿಪ್ರಾಯ ತೆಗೆದು ವರ್ತಿಸುವರು.

ಕೇಂದ್ರದಿಂದ ಆಳಲ್ಪಡುವ ಈ ಭಾಗಗಳ ದೀರ್ಘ ಯೋಜನೆಯ ವಿಚಾರವೂ ಮಾತಾಡುತ್ತಾ ಶ್ರೀ ಐಯ್ಯಂಗಾರರವರು ಹೀಗೆ ಹೇಳಿದರು. "ಕ್ಷಿಪ್ರದಲ್ಲಿ, ಅಲ್ಲವೇ ಸಾವಧಾನವಾಗಿ ಕೊಡಗು ಮತ್ತು ಅಜಮೀರ್ ಮೀರ್‌ವಾರಗಳು ಹತ್ತಿರದ ಯಾವುದೋ ಸಂಸ್ಥಾನದೊಂದಿಗೆ ವಿಲೀನವಾಗಬೇಕು. ಆದ್ದರಿಂದ ಈ ವಿಲೀನವಾಗುವವರೆಗಿನ ತಾತ್ಕಾಲಿಕ ಸಮಯದಲ್ಲಿ ಈ ಪ್ರಾಂತಗಳಿಗೆ ಯಾವ ರೀತಿಯ ಸುಧಾರಣೆ ಕೊಡಬಹುದೆಂಬುದೇ ಪ್ರಶ್ನೆಯಾಗಿದೆ. ಸರಕಾರವು ಇದನ್ನು ಆಲೋಚಿಸಿ ತತ್ಕಾಲಕ್ಕೆ ಎರಡು ಜನ ಮುಂದಾಳುಗಳು ಆಡಳಿತದಲ್ಲಿ ಭಾಗವಹಿಸುವ ಅನುಮತಿ ನೀಡಲಿದೆ."

ಈ ಸಂದರ್ಭದಲ್ಲಿ ಕೊಡಗಿನ ಪ್ರತಿನಿಧಿ ಶ್ರೀ ಸಿ. ಎಂ. ಪೂಣಚ್ಚನವರು ಮಾಡಿದ ಭಾಷಣವು ಪೂರ್ಣ ಪ್ರಕಟವಾಗಿಲ್ಲ. ಅವರ ಭಾಷಣವನ್ನು ಉದ್ದೇಶಿಸಿ ಶ್ರೀ ಎನ್. ಗಾಡ್ಗಿಲ್ಲರು ಹೀಗೆ ಹೇಳಿರುವರು. 'ಕೊಡಗಿನ ಮಟ್ಟಿಗೆ ಶ್ರೀ ಪೂಣಚ್ಚನವರ ಭಾಷಣವು, ಅದನ್ನು ಶೀಘ್ರವಾಗಿ ಮದ್ರಾಸಿಗೆ ಯಾ ಮೈಸೂರಿಗೆ ಸಂಯೋಜಿಸಿಬಿಡಬೇಕೆಂಬುದನ್ನು ಎಲ್ಲರಿಗೂ ಖಚಿತಪಡಿಸುತ್ತದೆ. ಕೊಡಗಿನಲ್ಲಿ ಈಗಾಗಲೇ ಒಂದು ಶಾಸನ ಸಭೆ ಇದೆ. ವಿಲೀನೀಕರಣವಾಗುವವರೆಗೆ ಕೊಡಗಿನ ಚೀಫ್ ಕಮಿಷನರು "ಚೀಫ್ ಕಮಿಷನರ್-ಇನ್-ಕೌನ್ಸಿಲ್" ಆಗಿರುವರು.

ತಾಯೇ ಕಾವೇರಿ! ತಾ ಎನಗೆ ಸನ್ಮತಿ! ನಮಸ್ಕಾರ ತಾಯೇ!
ಅನ್ನ ಕೊಡು ಊಟ ಮಾಡೋಣ ಹಸಿವಾಗುತ್ತೆ!
ಕಾಗದ ಕೊಡು, ಅಕ್ಷರವಂತರಾಗೋಣ! ಆಸೆಯಾಗುತ್ತೆ!

ಹೀಗೆಂದು ಆ ತಾಯಿ ಆ ಮಗುವಿಗೆ ಹೇಳಿ ಪ್ರಾರ್ಥನೆ ಮಾಡಿಸುತ್ತಾಳೆ. ಆದ್ದರಿಂದ 'ಕಾವೇರಿ ತಾಯಿ' ಕಾಗದ ಕೊಡಿಸಬೇಕು ತನ್ನ ಕುವರ ಕುವರಿಯರಿಗೆ, ಅವರು ಅಕ್ಷರವಂತರಾಗುವುದಕ್ಕೆ.

ಕಾರ್ಖಾನೆಯಿಂದಲ್ಲವೆ ಕಾಗದ ತಯಾರಾಗಿ ಬರಬೇಕು! ಇಂತಹದೊಂದು ಕಾರ್ಖಾನೆಯ ಅಭಿವೃದ್ಧಿಗಾಗಿ ಶ್ರಮಿಸುತ್ತಿರುವ ಈ ಸಂಸ್ಥೆಗೆ ನೆರವಾಗಿರಿ.

ಹತ್ತು ರೂಪಾಯಿನ ಆರ್ಡಿನರಿ ಶೇರುಗಳೂ ನೂರು ರೂಪಾಯಿನ ಪ್ರಿಫರೆನ್ಸ್ ಶೇರುಗಳೂ ಮಾರಾಟಕ್ಕಿವೆ. ಹೆಚ್ಚಿನ ವಿವರಗಳಿಗೆ ಭಾರತ ದೇಶದಾದ್ಯಂತವಿರುವ ನಮ್ಮ ಪ್ರತಿನಿಧಿಗಳಲ್ಲಿ ವಿಚಾರಿಸಿ

ಮ್ಯಾನೇಜಿಂಗ್ ಏಜೆಂಟ್ಸ್	ಕಾವೇರಿ ಪೇಪರ್ ಮಿಲ್ಸ್ ಮತ್ತು
ವಿಜಯಮೇಲ್ ಮತ್ತು ಕಂಪೆನಿ	ಫಾರೆಸ್ಟ್ ಇಂಡಸ್ಟ್ರೀಸ್ ಲಿಮಿಟೆಡ್.
ಪೋಸ್ಟ್ ಬಾಕ್ಸ್ ನಂ. 48.	ಕೊಡಗು ಪ್ರಾಂತದಲ್ಲಿ ಸ್ಥಾಪಿತವಾದದ್ದು
7. ಸಂಪಂಗಿ ಕೆರೆಬೀದಿ ಬೆಂಗಳೂರು.	ಬೆಂಗಳೂರು ಫೋನ್ ನಂ. 2966

ಮತ್ತೊಂದು ಉಜ್ವಲ ವರ್ಷ.

1948ನೇ ವರ್ಷದ ವಾರ್ಷಿಕ ವರದಿಯ ಪ್ರಾಮುಖ್ಯಾಂಶಗಳು.

ಹೊಸ ಉದ್ಯಮ ರೂ.	6,13,00,000	ಮೀರಿದೆ.
ಚಾಲ್ತಿಯಲ್ಲಿರುವ ಒಟ್ಟು ಉದ್ಯಮ ರೂ.	27,73,00,000	,,
ಒಟ್ಟು ನಿಧಿ. ರೂ.	8,30,00,000	,,
ಸ್ಥಾಪಿತವಾದಂದಿನಿಂದ ಪಾವತಿಯಾದ ಕ್ಲೈಮುಗಳು	10,96,00,000	,,

1,28,000 ಕ್ಕೆ ಮೀರಿದ ತೃಪ್ತಿ ಪಡೆದ ಪಾಲಿಸಿದಾರರು.

ಶಕ್ತಿ. ಸೇವೆ ಭದ್ರತೆ.

ಎಂಪೈರ್ ಆಫ್ ಇಂಡಿಯಾ

ಲೈಫ್ ಎಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಸ್ಥಾಪನೆ,—1897

ರೋಶನ್‌ಲಾಲ್, ಜನರಲ್ ಮೇನೇಜರ್.

ಪಿ. ಡಿ. ಗೋರವಾರ-ಬ್ರಾಂಚ್ ಮೇನೇಜರ್.

ಪ್ರಧಾನ ಕಛೇರಿ:	ಅಂಗ ಕಛೇರಿ.
ಎಂಪೈರ್ ಹೌಸ್, ಹಾರ್ನ್‌ಬಿ.	ಡಿಸ್ಟ್ರಿಕ್ಟ್ ಬೋರ್ಡ್ ಬಿಲ್ಡಿಂಗ್,
ರೋಡ್, ಫೋರ್ಟ್, ಬೊಂಬಾಯಿ.	ಕೆಂಪೇಗೌಡರಸ್ತೆ, ಬೆಂಗಳೂರು.

ದಿ ಟ್ರಾಪಿಕಲ್

ಇನ್ಶ್ಯೂರೆನ್ಸ್ ಕಂಪೆನಿ ಲಿಮಿಟೆಡ್.

ಮೇನೇಜಿಂಗ್ ಡೈರೆಕ್ಟರ್:— ಲಾಲ ಶಂಕರ್ ಲಾಲ್.

ಮುಖ್ಯ ಕಚೇರಿ:— ಹೊಸ ಡೆಲ್ಲಿ.

ಸ್ಥಾಪಿಸಿದ ಡೈರೆಕ್ಟರರು:

ಪಂಡಿತ ಮೋತಿಲಾಲ್ ನೆಹರು	ಎಸ್. ಶ್ರೀನಿವಾಸ ಅಯ್ಯಂಗಾರ್
ಹಕೀಮ್ ಅಜಮಲಖಾನ್.	ಡಾ|| ಎಂ. ಎ. ಅನ್ಸಾರಿ.

Transacts:—Life, Fire, Motor and Marine.

ಎಂ. ಯು. ಅಚ್ಚಣ್ಣ,	ಎಂ. ಎ. ಬೆಳ್ಯಪ್ಪ,
ಇನ್ಸ್‌ಪೆಕ್ಟರು,	ಬ್ರಾಂಚ್ ಸೆಕ್ರೆಟರಿ,
ಮಡಿಕೇರಿ, ಕೊಡಗು.	ಹಂಪನಕಟ್ಟೆ, ಮಂಗಳೂರು.

ಯುನೈಟೆಡ್ ಕಿಂಗ್ಡಮ್‌ದಲ್ಲಿ ಸಿಗರೇಟಿನ ಬೆಲೆ.

ಯುನೈಟೆಡ್ ಕಿಂಗ್ಡಮ್ ಸಂದರ್ಶಿಸುವವರಿಗೆ ಆಗುವ ಮೊದಲನೆ ವಿಸ್ಮಯ ಕಾರಕ ಸನ್ನಿವೇಶಗಳಲ್ಲಿ ಸಿಗರೇಟಿನ ಬೆಲೆಯು ಕಂಡಿತಾದ ಸನ್ನಿವೇಶ ಒಂದಾಗಿರುತ್ತದೆ. ಬ್ರಿಟನಿನಲ್ಲಿ ೨೦ ಸಿಗರೇಟುಗಳ ಪೆಕೆಟಿಗೆ ಬೆಲೆ ರೂ. ೨-೮-೦ ಈ ಕಾರಣದಿಂದಾಗಿಯೇ ಸಾವಿರಾರು ಮಂದಿ ಆಂಗ್ಲೇಯರು ತಮ್ಮ ಮನೆಯ ಹಿಂಬದಿಯ ತೋಟಗಳಲ್ಲೇ ಹೊಗೆಸೊಪ್ಪು ಬೆಳೆಸತೊಡಗಿದ್ದಾಗಿದೆ. ಏಳು ಔನ್ಸು ವರೆಗೆ ಹೊಗೆಸೊಪ್ಪು ಬೆಳೆಸಬಹುದೆಂದು ಕಸ್ಟಮ್ ಮತ್ತು ಎಕ್ಸೈಜ್ ನಿಯಮಿತಿಯಿದೆ.

ಅಯೋಗ್ಯತನ ಮತ್ತು ಲಂಚಗುಳಿತನಕ್ಕಾಗಿ

ಹುದ್ದೆಯಲ್ಲಿ ಅಯೋಗ್ಯರೆಂದು ಕಂಡು ಬಂದುದಕ್ಕೆ ಮತ್ತು ಲಂಚಗುಳಿತನದ ಅಪರಾಧಕ್ಕಾಗಿ ಉತ್ತರ ಪ್ರದೇಶದಲ್ಲಿ ಈ ವರೆಗೆ ಸುಮಾರು ೭,೦೦೦ ಮಂದಿ ಪೋಲೀಸ್ ಅಧಿಕಾರಿಗಳನ್ನು ಮತ್ತು ಜವಾನರನ್ನು ಉದ್ಯೋಗದಿಂದ ತೆಗೆದು ಹಾಕಲಾಯಿತೆಂದು ಅಖಿಲ ಭಾರತ ಕಾಂಗ್ರೆಸ್ ಕಾರ್ಯದರ್ಶಿ ಶ್ರೀ ಮೋಹನಲಾಲ್ ಗೌತಮರು ಒಂದು ಪ್ರಕಟಣೆಯಲ್ಲಿ ತಿಳಿಸಿರುವರು. ಉತ್ತರ ಪ್ರದೇಶದಲ್ಲಿ ಪೋಲೀಸ್ ದಳದ ಒಟ್ಟು ಸಂಖ್ಯೆ ೬೫,೦೦೦.

ಸರ್ವಧರ್ಮ ಸಮನ್ವಯಚಾರ್ಯ ಶ್ರೀರಾಮಕೃಷ್ಣ ಪರಮಹಂಸ

ಲೇ:—ಶ್ರೀ ವಿ. ಎಸ್. ರಾಮಕೃಷ್ಣ ಬಿ ಎಸ್‌ಸಿ (ಆನರ್ಸ್) ಬಿ. ಟಿ

ಭರತಖಂಡದ ರಾಜಕೀಯ, ಸಾಂಸ್ಕೃತಿಕ, ಧಾರ್ಮಿಕ ಕ್ಷೇತ್ರಗಳಲ್ಲಿ ಶೈಥಿಲ್ಯವುಂಟಾಗಿ ಅಖಂಡ ಭಾರತದ ಜನಸಾಮಾನ್ಯರಲ್ಲಿ ಮನಃಕ್ಷೋಭೆ ಉಂಟಾಗಿದ್ದಿತು. ಆಂಗ್ಲರು ಭರತಖಂಡವನ್ನು ಆಕ್ರಮಿಸಲು ತೊಡಗಿದ್ದರಿಂದ ಭಾರತದ ರಾಜಕೀಯ ಮಹಾಸೌಧದ ತಳಹದಿಯು ಅಲ್ಲಾಡಿಸಲ್ಪಟ್ಟು ರಾಜಕೀಯ ಕ್ಷೇತ್ರದಲ್ಲಿ ಪ್ರಚಂಡ ಅಶಾಂತಿ ಆವಿರ್ಭವಿಸಿದ್ದಿತು. ಪಾಶ್ಚಾತ್ಯ ಸಂಸ್ಕೃತಿ ಭಾರತಕ್ಕೆ ಕಾಲಿಟ್ಟುದರಿಂದ ಪ್ರಾಚೀನ ಭಾರತೀಯ ಸಂಸ್ಕೃತಿಗೂ ಅರ್ವಾಚೀನ ಪಾಶ್ಚಾತ್ಯ ಸಂಸ್ಕೃತಿಗೂ ಅನೇಕ ವೇಳೆ ತೀವ್ರ ಘರ್ಷಣೆಗಳಾಗುತ್ತಲಿದ್ದುವು. ಈ ಘರ್ಷಣೆಗಳ ಫಲಿತಾಂಶವಾಗಿ ಪಾಶ್ಚಾತ್ಯರನ್ನು ಅನುಕರಿಸಲು ಕಲಿತ ಭಾರತೀಯ ತರುಣರಲ್ಲನೇಕರು ಆರ್ಯಧರ್ಮವನ್ನು ಹಳಿದು ಟೀಕಿಸಿ ನಿಂದಿಸಲಾರಂಭಿಸಿದ್ದರು. ಇದರ ಪರಿಣಾಮವಾಗಿ ಧಾರ್ಮಿಕ ಕ್ಷೇತ್ರದಲ್ಲಿ ಧಾಂಧಲೆಯುಂಟಾಗಿ ಪ್ರಾಚೀನ ಸನಾತನ ಧರ್ಮಕ್ಕೆ ಧಕ್ಕೆಯುಂಟಾದಂತಾಯಿತು. ರಾಜಾರಾಮಮೋಹನರಾಯ್, ಕೇಶವ ಚಂದ್ರಸೇನ, ದಯಾನಂದ ಸರಸ್ವತಿ ಮುಂತಾದ ಮಹನೀಯರು ಧಾರ್ಮಿಕ ಮತೀಯ ಕ್ಷೇತ್ರದಲ್ಲಿ ತಲೆದೋರಿದ ಗ್ಲಾನಿಯನ್ನು ಪರಿಹರಿಸಿ ಪ್ರಾಚೀನ ಧರ್ಮದ ಪುನರುತ್ಥಾನವೆಸಗಲು ಪ್ರಯತ್ನಿಸಿದಾದರೂ ಅಷ್ಟು ಫಲಿಸದೆ ಹೋದರು. ಇಂತಹ ರಾಜಕೀಯ, ಸಾಂಸ್ಕೃತಿಕ ಆಧ್ಯಾತ್ಮಿಕ ದೌರ್ಬಲ್ಯದ ಕಾಲದಲ್ಲಿ ಭರತಖಂಡದ ಸನಾತನ ಧರ್ಮವನ್ನು ಮತ್ತೊಮ್ಮೆ ಜಗತ್ತಿಗೆ ಸಾರಿ ಗಹನತತ್ವ ಸರ್ವಧರ್ಮಗಳಲ್ಲಿ ಸಮನ್ವಯವನ್ನು ಸ್ವಂತ ಶೋಧನೆಯಿಂದ ತಂದು ಧರ್ಮತತ್ವಗಳ ಐಕ್ಯತೆ ಅಖಂಡತೆಯನ್ನು ಸಾರಿದ ಭಗವಾನ್ ಶ್ರೀರಾಮಕೃಷ್ಣ ಪರಮಹಂಸರ ಜನನವಾಯಿತು.

ಯಾವ ಮಹೋನ್ನತ ದೈವಿಕ ಪುರುಷನ ಜನ್ಮದಿನವನ್ನು ಅತ್ಯಂತ ಭರತಖಂಡವು ಮಾರ್ಚ್ ೯ನೇ ತಾರೀಕಿನಿಂದ ಹಲವು ದಿನಗಳ ಪರ್ಯಂತ ಆಚರಿಸಿತೋ ಆ ಯುಗಾವತಾರ ಶ್ರೀರಾಮಕೃಷ್ಣ ಪರಮಹಂಸರು ಬಂಗಾಳ ಪ್ರಾಂತದ ಹೂಗ್ಲಿ ಜಿಲ್ಲೆಯಲ್ಲಿ ಕಾಮಾರಪುಕುರ ಎಂಬ ಗ್ರಾಮದಲ್ಲಿ ಸಾಧಾರಣ ೧೧೫ ವರ್ಷಗಳ ಹಿಂದೆ ಅವತರಿಸಿದರು. ಅವರ ಬಾಲ್ಯದ ಹೆಸರು ಗದಾಧರ ಎಂದಾಗಿತ್ತು. ಲೋಕೋದ್ಧಾರಕರಾದ ಈ ಮಹನೀಯರ ಜನನಕಾಲದಲ್ಲಿ ಅವರ ತಂದೆಯಾದ ಖುದೀರಾಮ ಚಟ್ಟೋಪಾಧ್ಯಾಯರಿಗೂ ತಾಯಿಯಾದ ಚಂದ್ರಮಣಿದೇವಿಯವರಿಗೂ ಅಪೂರ್ವವಾದ ಅನುಭವಗಳಾದುವು. ದೈವೀಕಪುರುಷರ ಜನನಕಾಲದಲ್ಲಿ ಮಾತಾಪಿತರಿಗೆ ಇಂಥಹ ಅನುಭವಗಳಾಗುವುದು ಸ್ವಾಭಾವಿಕವು. ಗದಾಧರನು ಶೈಶವವನ್ನು ದಾಟಿ ಬಾಲ್ಯದಲ್ಲಿ ಕಾಲಿಟ್ಟೊಡನೆ ಆವನನ್ನು ಪಾಠಶಾಲೆಗೆ ಕಳುಹಿಸಿದರು. ಆದರೆ ಪಾಠಶಾಲೆಯಲ್ಲಿ ಗದಾಧರನು ಹೆಚ್ಚು ಪ್ರಗತಿಯನ್ನು ಪಡೆಯಲಿಲ್ಲ. ಆತನಿಗೆ ಬೇಕಾದ್ದು ಹೊಟ್ಟೆಹೊರೆಯಲಿಕ್ಕಾಗಿ ಗಳಿಸುವ ಅಕ್ಷರವಿದ್ಯೆಯಾಗಿರಲಿಲ್ಲ. ಆತ್ಮನ ಅನಂತ ಆನಂದವನ್ನು ಕೊಡಬಲ್ಲ ಬ್ರಹ್ಮವಿದ್ಯೆಯೇ ಆ ತೇಜಃಪುಂಜ ಬಾಲಕನಿಗೆ ಬೇಕಾದ ವಿದ್ಯೆಯಾಗಿದ್ದಿತು.

ಗದಾಧರನು ಏಳು ವರ್ಷದವನಿದ್ದಾಗ ಒಂದು ವಿಚಿತ್ರ ಘಟನೆಯು ನಡೆಯಿತು. ಒಮ್ಮೆ ಆತನು ಗದ್ದೆಯ ತೆವರಿಯ ಮೇಲೆ ನಡೆಯುತ್ತಾ ಜೋಳಬನದಲ್ಲಿದ್ದ ಕಾಳುಗಳನ್ನು ಮೆಲ್ಲುತ್ತಾ ಮುಂದೆ ಮುಂದೆ ಹೋಗುತ್ತಲಿದ್ದನು. ಆತನ ಕಣ್ಣಿಗೆ ಎತ್ತೆತ್ತಲೂ ಪ್ರಕೃತಿಯ ಮನೋಹರ ಸೌಂದರ್ಯವು ಗೋಚರಿಸುತ್ತಲಿತ್ತು. ಅದನ್ನು ನೋಡಿ ಆನಂದಿಸುತ್ತಿರುವಷ್ಟರಲ್ಲಿ ಕರಿಯ ಮೋಡವೊಂದು ಆಗಸದಲ್ಲಿ ಕವಿದುಕೊಂಡಿತು. ಆ ಕರಿಯ ಮೋಡದ ಅಡಿಭಾಗದಲ್ಲಿ ಬಿಳೀ ವರ್ಣದ ಹಕ್ಕಿಗಳು ಹಾರಾಡಿದುವು. ಆ ಕಪ್ಪು ಬಿಳೀ ಬಣ್ಣಗಳ ಸೌಂದರ್ಯ ವ್ಯತ್ಯಾಸವನ್ನು ಸುಖದುಃಖಾದಿ ದ್ವಂದ್ವಗಳನ್ನೂ ಕಣ್ಣಿಟ್ಟು ಚಿಂತಿಸುತ್ತಿದ್ದ ಗದಾಧರನಿಗೆ ಪ್ರಜ್ಞೆತಪ್ಪಿ ತೆವರಿಯ ಮೇಲೆ ಬಿದ್ದು ಬಿಟ್ಟನು. ಅವನ ಈ ಸ್ಥಿತಿಯಲ್ಲಿ ಯಾರೋ ನೋಡಿ ಗದಾಧರನನ್ನು ಅವನ ಮನೆಗೆ ಎತ್ತಿಕೊಂಡೊಯ್ದರು. ಅದೇ ಭಗವಾನ್ ಶ್ರೀರಾಮಕೃಷ್ಣರಿಗಾದ ಪ್ರಥಮ ಭಾವಸಮಾಧಿ.

ರಾಮಕೃಷ್ಣರು ವಿಧಿಯ ನಿಯಂತ್ರಣದಂತೆ ಆಗ ತಾನೇ ದಕ್ಷಿಣೇಶ್ವರದಲ್ಲಿ ಕಲಕಲನಿನಾದಿಸುವ ಭಾಗೀರಥಿಯ ದಡದಲ್ಲಿ ಕಟ್ಟಲ್ಪಟ್ಟ ಕಾಳಿಕಾದೇವಾಲಯದಲ್ಲಿ ಅರ್ಚಕರಾದರು. ಅವರ ಪೂಜಾವಿಧಾನ ಅದ್ಭುತವೂ ಸೋಜಿಗವೂ ಆಗಿದ್ದಿತು. ಅವರಿಗೆ ದೇವಿಯು ಶಿಲಾಮೂರ್ತಿ ಅಚೇತನವಾದ ಶಿಲೆಯಾಗಿರಲಿಲ್ಲ. ಚೇತನಾತ್ಮಕವಾದ ವಿಶ್ವದ ಅನಂತಶಕ್ತಿಯ ಸಾಂದ್ರೀಕರಣವೇ ಆ ಶಿಲೆಯಾಗಿದ್ದಿತ್ತು. ಆ ಭವ್ಯ ಶಿಲಾಮೂರ್ತಿಯಲ್ಲಿ ಆ ಜಗಜ್ಜನನಿಯನ್ನು ನೋಡುವ ಮಹದಾಕಾಂಕ್ಷೆ ರಾಮಕೃಷ್ಣರಲ್ಲಿ ಆವಿರ್ಭವಿಸಿತು. ಸತ್ಯ ಸಾಕ್ಷಾತ್ಕಾರದ ತೀವ್ರ ಪಿಪಾಸೆಯಿಂದ ನೊಂದ ಆ ಮಹನೀಯರ ಮನಸ್ಸಿನ ಭಾವಕ್ಕೆ ಗೋಚರ ಸಾಧ್ಯವಾದ ಸಾಕಾರನಾದ ಈಶ್ವರನನ್ನು ಸಾಕ್ಷಾತ್ಕರಿಸಿಕೊಳ್ಳಲು ಬದ್ಧಕಂಕಣರಾದರು. ಆ ಸಗುಣ ಸಾಕಾರನಾದ ಈಶ್ವರನೇ ಜಗತ್ತಿನ ಸಿರಿ ಸರ್ವ ಸೌಂದರ್ಯ, ಆತನೇ ತತ್ವವೇತ್ತ ಮಾಯೆ, ಆತನೇ ಜಗತ್ತಿನ ಜನಕ ಹಾಗೂ ಜನನಿ. ಆತನನ್ನೇ ಜನನಿಯೆಂದು ಸಂಬೋಧಿಸಿ ನಾವು ಪೂಜಿಸುವೆವು. ಈ ಭಾವವು ಶ್ರೀರಾಮಕೃಷ್ಣರಲ್ಲಿ ಪ್ರಚೋದನೆಗೊಂಡೊಡನೆ ಸಗುಣ ಸಾಕಾರಳಾದ ಜನನಿಯ ದರ್ಶನಾಕಾಂಕ್ಷೆಯಿಂದ ಅವರು ಹುಚ್ಚರಂತಾದರು. ಸತತವೂ ದರ್ಶನವಿಯೋಗದಿಂದ ಜನನಿಯನ್ನು ಪೂಜಾ ವೇಳೆಗಳಲ್ಲದೆ ಇತರ ಸಮಯಗಳಲ್ಲೂ ಪ್ರಾರ್ಥಿಸುತ್ತಿದ್ದರು. ಅನ್ನಾಹಾರಗಳನ್ನು ತ್ಯಜಿಸಿ ದೇವಿಯ ದರ್ಶನಾತುರರಾದರು. ಆದರೂ ಜಗಜ್ಜನನಿ ಗೋಚರಿಸಲಿಲ್ಲ. ಕಡೆಗೊಂದು ದಿನ ಸತ್ಯಸಾಕ್ಷಾತ್ಕಾರದ ತೀವ್ರಾಸಕ್ತಿ ತೋರಿ ದೇವಿಯ ವಿಗ್ರಹದ ಮುಂದೆ ನಿಂತು ತಮ್ಮ ಶಿರಸ್ಸನ್ನು ದೇವಿಯ ಖಡ್ಗದಿಂದ ತುಂಡರಿಸಿಕೊಳ್ಳಲು ಸಿದ್ಧರಾದರು. ಆದರೆ ನೋಡುತ್ತಾರೆ! ಎಲ್ಲೆಲ್ಲೂ ಅನಂತ ಶೂನ್ಯವು ಆವರಿಸಿದೆ. ಅದರ ಕಾಂತಿಯೊಂದಲ್ಲದೆ ಬೇರೇನೂ ಅವರಿಗೆ ಗೋಚರಿಸಲಿಲ್ಲ. ಆ ಮಹಾಕಾಂತಿಯು ನಾನಾ ನಾಲಿಗೆಗಳಿಂದ ತಾನು ಸುತ್ತಲ್ಪಟ್ಟಂತೆ ಭಾಸವಾಗಿ ರಾಮಕೃಷ್ಣರು ನೆಲದ ಮೇಲೆ ಬಿದ್ದುಬಿಟ್ಟನು. ಅವರಿಗೆ ಬಾಹ್ಯಪ್ರಜ್ಞೆ ಇರಲಿಲ್ಲ. ಅನೇಕ ಸಮಯದ ನಂತರ ಪ್ರಜ್ಞೆ ಬಳಿದಾಗ ತನ್ನ ಜಾಗೃತಿಯ ಸಮಾಚಾರಗಳು ಅವರ ಗಮನಕ್ಕೆ ಬಾರದೆ ಬಂದು ಆಶ್ಚರ್ಯಚಕಿತರಾದರು. ಆದರೆ ಹೃದಯದಲ್ಲಿ ಅವ್ಯಕ್ತವೂ ಸೀಮಾತೀತವೂ ಅವರ್ಣನೀಯವೂ ಆದ ಆನಂದವೊಂದು ಅನಂತ ಸಾಗರದ ತೆರೆಗಳಂತೆ ಆಂದೋಲನವನ್ನೆಬ್ಬಿಸಿದ್ದಿತು. ಸತ್ಯಸಾಕ್ಷಾತ್ಕಾರದ ಪ್ರಥಮ ಸೋಪಾನವನ್ನು ಆ ಮಹನೀಯರು ಅದರಿಂದಾಗಿ ಸತ್ಯದ ನಾನಾ ಮುಖದ ವಿನ್ಯಾಸಗಳನ್ನು ದರ್ಶನ ಮಾಡುವ ಬಯಕೆ ಅವರಲ್ಲಿ ಪ್ರಬಲವಾಯಿತು.

ಈ ಅಪೂರ್ವ ಅನುಭವವಾದ ಕೆಲ ಕಾಲದಲ್ಲೇ ರಾಮಕೃಷ್ಣ ಪರಮಹಂಸರಿಗೆ ಸಾಕಾರಳಾದ ಭುವನಮಾತೆಯು ತನ್ನ ದಿವ್ಯ ಸುಂದರ ರೂಪದೊಡನೆ ಪ್ರತ್ಯಕ್ಷಳಾದಳು. ಈ ರೀತಿ ಸಾಕಾರ ಈಶ್ವರನ ದರ್ಶನದಿಂದ ಪುಳಕಿತರಾದ ಪರಮಹಂಸರು ಬುದ್ಧಿ ಮತ್ತು ಕ್ರಿಯಾಶಕ್ತಿಗಳಿಗೆ ಮಾತ್ರ ಗೋಚರಿಸುವ ಸಚ್ಚಿದಾನಂದ ಸ್ವರೂಪನ ವಿವಿಧ ವಿನ್ಯಾಸಗಳನ್ನು ನೋಡಲು ಕಾತರರಾದರು. ಸರ್ವವ್ಯಾಪಿಯಾದ ಈಶ್ವರನನ್ನು ಅನೇಕ ವಿಧಗಳಿಂದ ಪೂಜಿಸಿ ಸಾಕ್ಷಾತ್ಕರಿಸಿಕೊಂಡರು. ಪ್ರಾಚೀನ ಕಾಲದ ಆರ್ಯದಾರ್ಶನಿಕರಂತೆ ಬ್ರಹ್ಮಮಯವೂ ಶುದ್ಧವೂ ಆದ ಜೀವನವನ್ನು ನಡಿಸಿ ಸರ್ವಶಕ್ತನಾದ ಭಗವಂತನನ್ನು ಒಲಿಸಿಕೊಂಡರು. ಶಾಂತಭಾವದಿಂದ ಸಗುಣಬ್ರಹ್ಮದ ಉಪಾಸನೆ ಮಾಡಿದ ಮೇಲೆ ದಾಸ್ಯಭಾವದಿಂದ ಈಶ್ವರನನ್ನು ಒಲಿಸಿಕೊಂಡು ಕೃತಕಾರ್ಯರಾದರು. ಪ್ರಾಂಜಲಿಕ ಭಕ್ತ ಶಿರೋಮಣಿಯಾದ ಆಂಜನೇಯನಂತೆ ಭಗವಂತನನ್ನು ತನ್ನ ಯಜಮಾನ ಅಥವಾ ಸ್ವಾಮಿ ಎಂದು ಭಾವಿಸಿ ತಾನು ಯಜಮಾನನ ಕೇವಲ ಕಿಂಕರನಾಗಿ ಸೇವೆ ನಡಿಸಿ ಶ್ರೀರಾಮನನ್ನು ಪ್ರತ್ಯಕ್ಷ ದರ್ಶನಮಾಡಿದರು. ಆ ಕಾಲದಲ್ಲಿ ಪರಮಹಂಸರು ವಾನರರಂತೆ ಮರಗಳಲ್ಲೇ ವಾಸಮಾಡುತ್ತಾ ಹಣ್ಣು ಹಂಪಲುಗಳನ್ನು ತಿಂದು ಜೀವಿಸುತ್ತಿದ್ದರು. ದಾಸ್ಯಭಾವದಿಂದ ಶ್ರೀರಾಮಚಂದ್ರನನ್ನು ಆರಾಧಿಸಿ ಸಫಲರಾದ ಮೇಲೆ ಮಧುರಭಾವಾವಲಂಬಿಗಳಾದರು. ಆ ಸಮಯದಲ್ಲಿ ಭಗವಾನ್ ಶ್ರೀಕೃಷ್ಣನನ್ನು ರಾಧೆಯು ಪೂಜಿಸಿ ತನ್ನ ಮಾನಸ ಸಾಮ್ರಾಜ್ಯದ ಅಧಿನಾಯಕನನ್ನಾಗಿ ಸ್ಥಾಪಿಸಿಕೊಂಡಂತೆ ತಾನು ಭಗವಂತನ ಪತ್ನಿ ಎಂಬ ಆದರ್ಶ ಮಾಧುರ್ಯಭಾವವನ್ನಿಟ್ಟುಕೊಂಡು ಶ್ರೀಕೃಷ್ಣ ದರ್ಶನಾಕಾಂಕ್ಷಿಗಳಾದರು. ತನ್ನ ಸ್ವಾಮಿಗಳಿಗೆ ಅಗಲಿರಲು ಪರಿತಪಿಸುತ್ತಿದ್ದ ರಾಧೆಯು ವೃಂದಾವನದಲ್ಲಿ ನಿತ್ಯ ಶುದ್ಧನಾಗಿ ವಿಭ್ರಾಜಿಸುತ್ತಲಿದ್ದ ಅರವಿಂದಾಕ್ಷನಾದ ಶ್ರೀಕೃಷ್ಣನು ಪರಮಹಂಸರಿಗೆ ಗೋಚರಿಸಿ ಅವರ ಶರೀರದಲ್ಲಿ ಹೊಕ್ಕು ಅಂತರ್ಧಾನ ಹೊಂದಿದನು. ತರುವಾಯ ಪರಮಹಂಸರು ಸಖ್ಯಭಾವದಿಂದ ಭಗವಂತನನ್ನು ತನ್ನ ಮಿತ್ರ ಎಂಬುದಾಗಿ ಭಾವಿಸಿ ಆರಾಧಿಸತೊಡಗಿದರು. ಹೇಗೆ ಕ್ಷತ್ರಿಯೋತ್ತಮನಾದ ಅರ್ಜುನನು ಕೇವಲ ಸ್ನೇಹಭಾವದಿಂದ ಭಗವಂತನನ್ನು ಉಪಾಸನೆ ಮಾಡಿ ವಿರಾಟ್ಸ್ವರೂಪಿಯಾದ ಈಶ್ವರನನ್ನು ಸಾಕ್ಷಾತ್ಕರಿಸಿಕೊಂಡನೋ ಅಂತೆಯೇ ಪರಮಹಂಸರು ತಾನೇ ಅರ್ಜುನನೆಂಬ ಭಾವದಿಂದ ಮೆರೆಸಿ ವಿಶ್ವಸ್ವಾಮಿಯ ಪುರುಷನೂ ಗೋಪಿಜನ ಸ್ವರ್ಗ ಸಾಮ್ರಾಜ್ಯದ ಅಧಿನಾಯಕನೂ ಆದ ಭಗವಾನ್ ಶ್ರೀಕೃಷ್ಣನನ್ನು ದರ್ಶನಮಾಡಿದರು. ತರುವಾಯ ಹೇಗೆ ಕೌಸಲ್ಯೆಯು ರಾಮಚಂದ್ರನನ್ನು ಮಗನೆಂಬ ಭಾವದಿಂದ ಆರಾಧಿಸಿ ವಾತ್ಸಲ್ಯಭಾವನೆಯಿಂದ ಕರ್ಮದಲ್ಲಿ ಲೀನಳಾದಳೋ ಅಂತೆಯೇ ರಾಮಲಾಲ ಎಂಬ ಶ್ರೀರಾಮಚಂದ್ರನ ಶಿಶುರೂಪವನ್ನು ತಾಯಿಯಂತೆ ವಾತ್ಸಲ್ಯಭಾವದಿಂದ ಉಪಾಸನೆಮಾಡಿ ಬಾಲಕನಂತೆ ರಂಜಿಸುವ ಶ್ರೀರಾಮಚಂದ್ರನನ್ನು ಪ್ರತ್ಯಕ್ಷ ಕಂಡು ರಾಜಮಹಾಭಾವಗಳ ಸಾಧನೆಯಿಂದ ಕೃತಕೃತ್ಯರಾಗಿ ಸಗುಣಸಾಕಾರನಾದ ಸಚ್ಚಿದಾನಂದ ಪರಬ್ರಹ್ಮದ ನಿರಂತರದರ್ಶನದಿಂದ ಜೀವನ್ಮುಕ್ತರಾದರು.

ಈ ಸಾಧನೆಗಳಿಂದ ಭಗವಂತನನ್ನು ಅರ್ಚಿಸಿ ಧನ್ಯರಾದ ಮೇಲೆ ಪರಮಹಂಸರಿಗೆ ತಾಂತ್ರಿಕವಿಧಾನಗಳಿಂದ ಇಂದ್ರಿಯಗಳನ್ನು ನಿಗ್ರಹಿಸಿ ಮಾಯೆಯನ್ನು ಬಹಿರ್ಮುಖವಾಗಿ ತೊಲಗಿಸಿ ಕೇವಲ ಹಠಸಾಧನೆಯಿಂದ ಭಗವಂತನನ್ನು ವರಿಸಿಕೊಳ್ಳುವ ಸಂದರ್ಭವೂ ದೊರೆಯಿತು. ಭೈರವೀ ಬ್ರಾಹ್ಮಣಿ ಎಂಬ ಸಾಧಕಿಯೋರ್ವಳಿಂದ ತಾಂತ್ರಿಕ ಸಾಧನೆಯ ಬೀಜಮಂತ್ರವನ್ನು ಸಾಧಿಸಿದ ಮೇಲೆ ಇಂದ್ರಿಯಗಳನ್ನು ಬಿಗಿ ಹಿಡಿದು ಅಮಿತ ವೈರಾಗ್ಯ ಸಾಧನೆಯಿಂದ ಈಶ್ವರ ಪ್ರಸಾದವನ್ನು ಪಡೆದರು. ಆ ತರುವಾಯ ಉಪನಿಷತ್ಪ್ರತಿಪಾದ್ಯವಾದ ನಿರ್ಗುಣ ನಿರಾಕಾರ ಪರಬ್ರಹ್ಮದ ಅನುಭವವೂ ಅವರಿಗೆ ಉಂಟಾಯಿತು

ಕೊಡಗು ಪ್ರಾಂತೀಕ ಸಹಕಾರಿ, ಮಾರ್ಕೆಟಿಂಗ್, ಫೆಡರೇಷನ್ ಲಿಮಿಟೆಡ್., ವೀರಾಜಪೇಟೆ.

ನಮ್ಮಲ್ಲಿ ಕೋವಿಗಳು, ತೋಟಗಳು ಮತ್ತು ಎಲ್ಲಾ ತರಹದ ವ್ಯವಸಾಯದ ಹತ್ಯಾರುಗಳು ದೊರೆಯುತ್ತವೆ.

1. 32 ಪಿಸ್ತೂಲುಗಳು (Pistols) ಕ್ರಯ ರೂ. 162 ರಿಂದ 245ರ ವರೆಗೆ.
2. 12ನೇ ನಂಬರಿನ ಒಂಟಿ ಕೊಳವಿನ ಕೋವಿ ಕ್ರಯ ರೂ. 320-0-0
3. 12ನೇ ನಂಬರಿನ ಜೋಡು ಕೊಳವಿನ ಕೋವಿ (Webley & Scott)
4. 12ನೇ ನಂಬರಿನ ಜೋಡು ಕೊಳವಿನ ಕೋವಿ (Spanish make)
5. .32 ಪಿಸ್ತೂಲು ಮತ್ತು ರಿವಾಲ್ವರುಗಳ ತೋಟಗಳೂ ಸಹ ದೊರೆಯುತ್ತವೆ.
6. ಕಾಫಿ ಮತ್ತು ಕಿತ್ತಳೆ ಗಿಡಗಳಿಗೆ ಸ್ಪ್ರೇಮಾಡುವ ಪಂಪುಗಳು (Spraying Pumps)
7. ½" ⅝" ¾" ⅜" ¼" ಕಬ್ಬಿಣದ ಸಲಾಕೆಗಳು.

ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.
(ಅವಶ್ಯವಿರುವ ಕೋವಿಗಳಿಗೂ, ತೋಟಗಳಿಗೂ ಜಿಲ್ಲಾ ಮೇಜಿಸ್ಟ್ರೇಟರಿಂದ ವಿಶೇಷ ಪರ್ಮಿಟು "Special permit" ಪಡೆದವರಿಗೆ ಮಾತ್ರ ದೊರೆಯುವದು)

ಎಂ. ಎಸ್. ಸೋಮಯ್ಯ,
ಗೌರವ ಕಾರ್ಯದರ್ಶಿ.

52–26

CRESCENT
FOR PROTECTION AND SERVICE.

It is best to represent and insure with

The CRESCENT Insurance Co., Ltd.,
H: O: BOMBAY.] [Established 1919.

For particulars write to:-

Sri B. A. Pooviah or The Branch Manager,
Organiser *133 B. Brigade Road,*
Pollibetta, Coorg. *Bangalore 1.*

ಸುರಕ್ಷಿತವಾದ ಜೀವವಿಮೆ ಪಡೆಯಲು
ಕ್ರೆಸೆಂಟ್
ಇನ್ಶೂರೆನ್ಸ್ ಕಂಪೆನಿಗೆ ಬರೆಯಿರಿ.

ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಕೋ. ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ. (1921ರಲ್ಲಿ ಸ್ಥಾಪಿಸಲಾಗಿದೆ

ಅಧಿಕೃತ ಶೇರು ಭಂಡವಾಳ	ರೂ.	10,00,000.
ವಸೂಲಾದ ಶೇರು ಮೊಬಲಗು	ರೂ.	1,79,000
ಕ್ಷೇಮನಿಧಿ	ರೂ	53,000.
ಇತರ ನಿಧಿಗಳು	ರೂ	28,000

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನು ನೆರವೇರಿಸಲಾಗುವುದು. ಈ ಬ್ಯಾಂಕಿನಿಂದ ಕೆಲ್ಸಾಗಿ ಸರಕಾರ ಸಂಘಗಳಿಗೆ ಸಾಲ ಕೊಡುವುದಲ್ಲದೆ ಚಿನ್ನ, ಬೆಳ್ಳಿ ನಗಗಳ ಆಧಾರ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್‌ಯೂ ಡ್ರಾಫ್ಟುಗಳ ಡಿಸ್ಕೌಂಟು ಮಾಡಲ್ಪಡುವುದು. ಫೈರ್ ಮತ್ತು ಮೋಟಾರ್ ಇನ್ಶೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ತೆಗೆದುಕೊಳ್ಳಲಾಗುವುದು. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಗೌ. ಕಾರ್ಯದರ್ಶಿ,
ಕೆ. ಪಿ. ಅಪ್ಪಯ್ಯ, M. L. C. ಪ್ರೆಸಿಡೆಂಟ್ ಡಾರಕ್ಟರ್ ಮಂಡಳಿ.

ತೋತಾಪುರಿಯೆಂಬ ಸಾಧಕನಾದ ಅಖಂಡ ಅದ್ವೈತಿಯೊಬ್ಬನಿಂದ ನಿರ್ಗುಣನಿರಾಕಾರ ಈಶ್ವರಾರಾಧನೆಯ ಬೋಧನೆಯಾದ ಮೇಲೆ ಮನಸ್ಸನ್ನು ನಿಗ್ರಹಿಸಿ ಕೇಂದ್ರೀಕರಿಸಿ ಸಾಕಾರಳಾದ ಮಾತೆಯ ರೂಪವನ್ನು ಖಂಡಿಸಿ ಅವರು ನಿರ್ವಿಕಲ್ಪ ಸಮಾಧಿಗೆ ಆಡರಿದರು. ಮೂರು ದಿನಗಳ ವರೆಗೆ ಅವರ ದೇಹದಲ್ಲಿ ಪ್ರಜ್ಞೆ ಇರಲಿಲ್ಲ. ಅವರ ಮುಖಮಂಡಲದಲ್ಲಿ ದೇದೀಪ್ಯಕಾಂತಿಯು ಹೊಳೆಯುತ್ತಿದ್ದಿತು. ದೇಹವು ಸ್ತಂಭೀಭೂತವಾಗಿದ್ದಿತು. ತಾನು ೪೦ ವರ್ಷಗಳ ಸಾಧನೆಯಿಂದ ಗಳಿಸಿದ ಈ ನಿರ್ವಿಕಲ್ಪಾವಸ್ಥೆಯನ್ನು ಪರಮಹಂಸರು ಕೇವಲ ಮೂರು ದಿನಗಳಲ್ಲಿ ಸಾಧಿಸಿದ್ದನ್ನು ಕಂಡ ತೋತಾಪುರಿ ಆಶ್ಚರ್ಯಚಕಿತನಾದನು. ಹೀಗೆ ಪರಮಹಂಸರು ಸಾಕಾರದಿಂದ ನಿರಾಕಾರಕ್ಕೆ, ಭಕ್ತಿಯಿಂದ ಜ್ಞಾನಕ್ಕೆ, ಸಗುಣದಿಂದ ನಿರ್ಗುಣಕ್ಕೆ, ಸ್ಥೂಲದಿಂದ ಸೂಕ್ಷ್ಮಕ್ಕೆ ಏರಿ ಸಾಮಾನ್ಯರಿಂದ ಗ್ರಹಿಸಲೂ ಅಸದಳವಾದ ಅಖಂಡ ಪರಬ್ರಹ್ಮ ತತ್ವದಲ್ಲಿ ಲೀನರಾಗಿ ಸಚ್ಚಿದಾನಂದದ ವಾಸ್ತವ ಅನುಭವವನ್ನು ಪಡೆದು ಲೋಕಪೂಜ್ಯರಾದರು.

ಹಿಂದೂ ತತ್ವರೀತ್ಯಾ ಈಶಸಾಕ್ಷಾತ್ಕಾರ ಗಳಿಸಿಕೊಂಡ ಪರಮಹಂಸರು ಭಾರತಕ್ಕೆ ಪದಾರ್ಪಣವಾದ ಆಗ ತಾನೇ ಪ್ರಭಾವ ಬೀರಲು ಉಪಕ್ರಮಿಸಿದ್ದ ಇಸ್ಲಾಂ ಮತ್ತು ಕ್ರೈಸ್ತ ಧರ್ಮಗಳ ಮೂಲಕವೂ ಭಗವಂತನ ಸಾಕ್ಷಾತ್ಕಾರವನ್ನು ಮಾಡಿಕೊಂಡರು. ಫಕೀರನೊಬ್ಬನಿಂದ ಇಸ್ಲಾಂ ಧರ್ಮದೀಕ್ಷೆ ಪಡೆದು ಕೇವಲ ಇಸ್ಲಾಂ ಧರ್ಮ ಅನುಷ್ಠಿಸಿ ಅಂತಿಮ ಧ್ಯೇಯವನ್ನು ಸಾಧಿಸುವ ಮುಹಮ್ಮದೀಯರಂತೆ ಸಾಧನೆ ನಡೆಸಿ ಸಫಲರಾದರು. ಅವರಿಗೆ ಪೂಜ್ಯನೂ ಭ್ರಾತೃಭಾವದ ವಿಶಾಲ ತತ್ವಬೋಧಕನೂ ಆದ ಪೈಗಂಬರ ಮಹಮ್ಮದನು ಪ್ರತ್ಯಕ್ಷನಾಗಿ ಅವರ ಅನಂತ ಧರ್ಮಸಾಗರದಲ್ಲಿ ಲೀನನಾದನು. ಈ ಅನ್ಯಮತಾನುಷ್ಠಾನದಿಂದಲೂ ಏಕಮೇವಾದ್ವಿತೀಯ ಬ್ರಹ್ಮಸಾಧನೆಗೈದ ಮೇಲೆ ಪರಮಹಂಸರು ಕ್ರೈಸ್ತಮತಾವಲಂಬಿಗಳಾಗಿ ಸರಳ ಶಭ್ರವಾದ ಕೇಜೋಪೂರ್ಣ ಜೀವನವನ್ನು ನಡೆಯಿಸಾಗಿಸಿದರು. ಕೆಲ ಕಾಲದಲ್ಲೇ ದೇವಮಾನವನೂ ಪರರ ದುಃಖಕ್ಕಾಗಿ ತನ್ನೆದೆಯ ಬಿಸಿರಕ್ತವನ್ನು ಶಿಲುಬೆಯ ಮೇಲೆ ಚೆಲ್ಲಿದ ಹುತಾತ್ಮನೂ ಆದ ಭಗವಾನ್ ಏಸುಕ್ರಿಸ್ತನು ಅವರಿಗೆ ಗೋಚರಿಸಿ ಅವರ ಕಾಂತಿವೆತ್ತ ದೇಹದಲ್ಲಿ ಐಕ್ಯನಾದನು. ಹೀಗೆ ಅನ್ಯಧರ್ಮದ ವಿವಿಧ ವಾಹಿನಿಗಳು ಸಂಗಮಿಸಿ ಉಂಟಾದ ಆ ಮಹಾಸಾಗರಕ್ಕೆ ಇಸ್ಲಾಂ, ಕ್ರೈಸ್ತ ಮುಂತಾದ ಮತ ತತ್ವಗಳ ಮಹಾ ವಾಹಿನಿಗಳೂ ಸೇರಿ ನಿಜವಾಗಿ ಸಮನ್ವಯ ಧರ್ಮ ಪ್ರಧಾನವಾದ ಮಹಾ ಸಾಗರವು ರಚನೆಯಾಯಿತು. ಪೂಜ್ಯರು ಲೋಕವಂದ್ಯರೂ ಆದ ಶ್ರೀರಾಮಕೃಷ್ಣ ಪರಮಹಂಸರು ಸರ್ವ ಧರ್ಮಸಮನ್ವಯಾಚಾರ್ಯರೆಂಬ ಅಭಿಧಾನದಿಂದ ಕೀರ್ತಿಶಾಲಿಗಳಾಗಿ ಸರ್ವಲೋಕವಂದ್ಯರಾದರು.

ಪರಮಹಂಸರು ಸರ್ವ ಧರ್ಮಗಳ ಏಕ್ಯತೆ ಐಕ್ಯತೆಯನ್ನು ಜಗತ್ತಿಗೆ ಸಾರಿದ ಮೇಲೆ ಸಕಲ ಸ್ತ್ರೀ ಸಮೂಹವನ್ನೂ ಜಗಜ್ಜನನಿಯ ರೂಪದಿಂದ ಮಾತ್ರ ನೋಡುವ ತಮ್ಮ ದೈವೀ ತತ್ವವನ್ನು ಪ್ರತ್ಯಕ್ಷ ಪ್ರಯೋಗದ ಮೂಲಕ ಪ್ರಕಾಶಪಡಿಸಿದರು. ಅವರ ಧರ್ಮಪತ್ನಿಯಾದ ಶಾರದಾಮಣಿಯನ್ನು ಇಂದ್ರಿಯಾತೀತವಾದ ಭಕ್ತಿರಸದಿಂದ ನೋಡಿ ಆಕೆ ಸಾಕ್ಷಾತ್ ಜಗಜ್ಜನನಿಯೆಂಬ ರಸೋನ್ಮಾದ ಭಾವನೆಯಿಂದ ಹಿಂಹಿಗ್ಗಿ ಆಕೆಯನ್ನು ಪೀಠದಲ್ಲಿಟ್ಟು ಪೂಜಿಸಿ ನಮಸ್ಕರಿಸಿದರು. ಸಾಕ್ಷಾತ್ ಶಕ್ತಿಸ್ವರೂಪಿಣಿಯಾದ ಆ ಮಾತೆ ಶ್ರೀರಾಮಕೃಷ್ಣ ಪರಮಹಂಸರಿಂದಲೇ ಪೂಜಿತಳಾಗಿ ನಿಜವಾಗಿಯೂ ಜಗನ್ಮಾತೆಯಾಗಿ ವಿಭ್ರಾಜಿಸಿದಳು.

ಸರ್ವಧರ್ಮ ಸಮನ್ವಯಾಚಾರ್ಯರಾದ ಪರಮಹಂಸರೆಡೆಗೆ ಆಂಗ್ಲವಿದ್ಯಾವಿಶಾರದರಾದ ಅನೇಕ ಮಹನೀಯರು ಆಗಮಿಸಿ ಅವರ ಚರಣತಲದಲ್ಲಿ ಶಿರಬಾಗಿ ವಂದಿಸಿ ಪರಮಹಂಸರಿಂದ ಸತ್ಯಸಾಕ್ಷಾತ್ಕಾರವನ್ನು ಪಡೆದರು. ಪ್ರಚಂಡ ಪ್ರತಿಭಾನ್ವಿತರೂ ಆಧುನಿಕ ಹಿಂದೂಧರ್ಮದ ಪುನರುದ್ಧಾರಕರೂ ಪರಮಹಂಸರ ಪಟ್ಟಶಿಷ್ಯರೂ ಆದ ಸ್ವಾಮಿ ವಿವೇಕಾನಂದರು ಪರಮಹಂಸರ ಸನ್ನಿಧಿಯಲ್ಲಿ ಅಖಂಡ ಬ್ರಹ್ಮದ ದಿವ್ಯಸಾಕ್ಷಾತ್ಕಾರ ಹೊಂದಿ ಅಮರವಾದ ಆರ್ಯ ತತ್ವವನ್ನು ಪಾಶ್ಚಾತ್ಯ ದೇಶಗಳಿಗೂ ಸಾರಿದರು. ಪರಮಹಂಸರು ಸಾಮಾನ್ಯ ದೇಹಯಾತನೆಯಿಂದ ಭೌತಿಕ ದೇಹವನ್ನು ತ್ಯಜಿಸಿದರೂ ಅವರಿಂದ ಹೊತ್ತಿಸಲ್ಪಟ್ಟ ಜ್ಞಾನಜ್ಯೋತಿ, ಭಾರತದ ಮೂಲಕ ವಿಶ್ವವಿಶ್ವಕ್ಕೆ ಸರ್ವದಾ ಮಾರ್ಗದರ್ಶಕವಾಗಿರುವುದು!

ಬೇಕಾಗಿದ್ದಾರೆ

ನಮ್ಮ ಅಮೇರಿಕನ್ ಫೌಂಟನ್ ಪೆನ್ನುಗಳನ್ನೂ, ಸ್ವಿಸ್ ವಾಚುಗಳನ್ನೂ ಮಾರಾಟ ಮಾಡಲು ತಿಂಗಳಿಗೆ ರೂ ೩೦೦ ರಿಂದ ೭೦೦ ರ ವರೆಗೆ ವೇತನ ಮತ್ತು ಬತ್ತ್ಯೆಯ ಕಮಿಷನಿನಲ್ಲಿ ಏಜಂಟರು ಬೇಕಾಗಿದ್ದಾರೆ. ಷರತ್ತುಗಳಿಗೂ ಇಂಗ್ಲಿಷಿನಲ್ಲಿ ಈ ಪತೆಗೆ ಬರೆಯಿರಿ.

LAWRENCE BROTHERS (K. M)
71. Nagdevi Cross Lane
4–2 Bomday 3

ಬೇಕಾಗಿದ್ದಾರೆ

ಕನ್ನಡ, ಇಂಗ್ಲಿಷ್ ಕಂಪೋಸಿಂಗ್ ಗೊತ್ತಿರುವ ಕಂಪೋಜಿಟರು ಬೇಕಾಗಿದ್ದಾರೆ. ಯೋಗ್ಯತಾನುಸಾರ ವೇತನ ಕೊಡಲಾಗುವದು. ತಾ ೩೦-೩-೫೧ ರೊಳಗೆ ಈ ವಿಳಾಸಕ್ಕೆ ಬರೆಯಲ್ಪಡುವದು.

ಮೇನೇಜರು,
'ಕೊಡಗು' ಮಡಿಕೇರಿ.

Edited Printed and Published by P. I. Bellappa
'Kodagu' Press, Mercara, for 'Kodagu' Ltd.,

Reg. No. M. 1560.
'KODAGU' MERCARA, (Coorg).

ಕೊಡಗು

ಸಂಪಾದಕರು—ಪಿ. ಐ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. ೬-0-0.

ಸಂಪುಟ ೨೯ | ತಾರೀಕು ೩೦-೩-೧೯೫೧ನೇ ಶುಕ್ರವಾರ | ಸಂಚಿಕೆ ೪೧

ಭಗವಂತನ ಹೆಸರಿನಲ್ಲಿ!

ಲೇ:— "ಗುಪ್ತ" ಮಡಿಕೇರಿ.

ದೇವಸ್ಥಾನದಲ್ಲಿ ಮಧ್ಯಾಹ್ನ ಪ್ರಸಾದ ರೂಪದಲ್ಲಿ ಬಂದವರಿಗೆ ಅನ್ನಹಾಕುವ ಸಂಪ್ರದಾಯ ಅನಾದಿ ಕಾಲದಿಂದಲೇ ನಡೆದು ಬರುತಿತ್ತು. ಆತನ ರೇಶನ್ ಯುಗದ ಉದಯವಾದ ಕಾರಣ ಈ ಪ್ರಸಾದಕ್ಕೂ ಸೊನ್ನೆ ಬಿದ್ದಿತ್ತು. ಆದರೆ ಹಳೇ ಸಂಪ್ರದಾಯವನ್ನು ನಡೆಸಿಕೊಂಡು ಬರುವ ಕಾರಣಕ್ಕಾಗಿ ಮಧ್ಯಾಹ್ನ ಮೂರು ಜನರಿಗೆ ಅನ್ನ ಹಾಕುವ ವ್ಯವಸ್ಥೆ ನಡೆದಿತ್ತು. ಪೇಟೆಯಲ್ಲಿ ಅಕ್ಕಿ ದೊರೆಯದೆ, ಜೀವನವು ಕಷ್ಟವಾದ ಕಾರಣ ಈ ದೇವಸ್ಥಾನದ ಪ್ರಸಾದ ಊಟಕ್ಕೆ ಮಹಾಪೈಪೋಟಿ ನಡೆಯುತ್ತಿತ್ತು.

ಅಂದು ನಾನು ಮಧ್ಯಾಹ್ನ ದೇವಸ್ಥಾನಕ್ಕೆ ಹೋಗಿದ್ದೆನು. ಪೇಟೆಯಲ್ಲಿ ಯಾವುದೇ ಆಹಾರ ವಸ್ತು ದೊರೆಯುತ್ತಿರಲಿಲ್ಲ. ಹಸಿದ ಜನರ ಸಾಲು ದೇವಸ್ಥಾನದ ಮುಂದೆ ನಿಂತಿತ್ತು. ಆದರೆ ಹಸಿದವರಿಗೆಲ್ಲ ಅನ್ನ ಎಲ್ಲಿದೆ? ಮುದುಕಿಯೊಬ್ಬಳು ನಿಲ್ಲಲಾರದೆ ಕೂತಿದ್ದಳು. ಕಣ್ಣುಗಳು ಒಳಗಿಳಿದಿದ್ದುವು. ಬಹುಶಃ ಊಟಮಾಡದೆ ನಾಲ್ಕಾರು ದಿನಗಳಾಗಿರಬೇಕು. ಆಕೆ ಅನ್ನಕ್ಕಾಗಿ ಹಾತೊರೆಯುತ್ತಿದ್ದಳು. ಎಂದಿನಂತೆ ಅರ್ಚಕರು ಅನ್ನ ತಂದರು. ಮುಂದೆ ನಿಂತಿದ್ದ ಮೂರು ಜನರಿಗೆ ಕೊಡಲು ತಯಾರಾದರು. ನಿರಾಶಳಾದ ಮುದುಕಿಯು ಭಯಂಕರವಾಗಿ ಚೀರಿದಳು. ತನ್ನ ಮಲಿನ ವಸ್ತ್ರದಲ್ಲಿ ಕಟ್ಟಿದ್ದ ರೂಪಾಯಿಯೊಂದನ್ನು ಅರ್ಚಕರ ಮುಂದಿಟ್ಟು ಅನ್ನಕ್ಕಾಗಿ ಮಡಿಲೊಡ್ಡಿದಳು! ಅರ್ಚಕರು ಆಶ್ಚರ್ಯಚಕಿತರಾದರು!

* * *

ಮಿತ್ರರ ಮನೆಯಲ್ಲಿ ಕೀರ್ತನೆ ಇತ್ತು. ಅವರು ಪಕ್ಕಾ ಗಾಂಧೀವಾದಿಯಾಗಿದ್ದರು. ನಾಲ್ಕಾರು ಬಾರಿ ಜೈಲುವಾಸ ಅನುಭವಿಸಿದವರು! ಕಾಂಗ್ರೆಸ್ ಸಂಸ್ಥೆಯಲ್ಲಿ ಅಧಿಕಾರವಿರುವವರು. ಒಳ್ಳೆ ಜೋರಿನಿಂದ 'ರಘುಪತಿ ರಾಘವ ರಾಜಾರಾಂ, ಈಶ್ವರ ಅಲ್ಲಾ ತೇರೇನಾಮ್" ಭಜನೆ ನಡೆಯುತಿತ್ತು. ಕೋಣೆಯಲ್ಲಿ ದೇವರ ಚಿತ್ರಗಳು ತುಂಬಿದ್ದುವು. ಗಾಂಧೀಜಿಯವರ ಪ್ರತಿಮೆಯೊಂದಿತ್ತು. ಭಜನೆಯ ಉನ್ಮಾದದಲ್ಲಿ ಸಕಲರ ಮನವು ತಲ್ಲೀನವಾಗಿತ್ತು. ಪ್ರಸಾದ ವಿತರಣೆಯಾಯಿತು. ಜನರೆಲ್ಲರೂ ತೆರಳಿದರು. ಆ ರಾತ್ರಿ ಮಿತ್ರನಲ್ಲಿಯೇ ಉಳಿದಿದ್ದ ನಾನು ಈ ವಿಶೇಷ ಕೀರ್ತನೆಯನ್ನು ಯಾವ ಸವಿನೆನಪಿಗಾಗಿ ಏರ್ಪಡಿಸಿದುದೆಂದು ಕೇಳಿದೆನು. ಮಿತ್ರನೆಂದನು, "ನಿನ್ನೊಡನೆ ಮುಚ್ಚೀಕೆ ಹೇಳಲಿ. ಮಲಬಾರಿಗೆ-ಕಳ್ಳಸಂತೆಯಲ್ಲಿ ಅಕ್ಕಿ ಸಾಗಿಸುವಾಗ ಪೋಲೀಸರ ಕೈಗೆ ಬೀಳಬಾರದೆಂದು ಹರಕೆ ಮಾಡಿಕೊಂಡಿದ್ದೆ. ಭಗವಂತನು ಈಡೇರಿಸಿದನು. ಆ ಸಂತೋಷಕ್ಕಾಗಿ ಈ ಆರಾಧನೆ!"

* * *

ಬೆಳಗ್ಗೆ ಸ್ನಾನಮಾಡಿ ಮಡಿಯುಟ್ಟು ಅತ್ತೆಯವರು ವಿಭೂತಿ ಧರಿಸಲು ಕುಳಿತರು. ಕೈಯಲ್ಲಿ ರುದ್ರಾಕ್ಷಿಮಾಲೆ ಇತ್ತು. ಪ್ರತಿ ಬೆಳಗ್ಗೆ ಒಂದು ಗಂಟೆ ರುದ್ರಾಕ್ಷಿ ತಿರುಗಿಸಿ ಜಪಮಾಡುವದು ಅವರ ಸಂಪ್ರದಾಯ. ಜಪಕ್ಕೆ ಕುಳಿತರು. ಒಂದು ನಿಮಿಷ ಕಣ್ಮುಚ್ಚಿದರು. "ಏ ಗಂಗೂ, ಒಲೆಯಲ್ಲಿರುವ ಅನ್ನ ಬೆಂದಿತೇ ನೋಡು, ಓ ರಾಮು, ಕರು ಇನ್ನೂ ಬಿಟ್ಟಿಲ್ಲವೇ? ಸೀತೂ, ಮಕ್ಕಳ ತಲೆ ಬಾಚಿಕೊಡು." ಎಂದು ಕ್ಷಣ ಕ್ಷಣ ಕೂಗಿ ಹೇಳತೊಡಗಿದರು. ಆದರೆ ಕೈ ಗೊತ್ತು ಜಪಮಾಲೆಯ ಮಣಿಗಳನ್ನು ಎಣಿಸುತ್ತಿತ್ತು! ಗಂಟೆ ಒಂಭತ್ತು ಹೊಡೆಯಿತು. ಅತ್ತೆಯವರು ಮಣಿಮಾಲೆಯನ್ನು ಗೋಡೆಯ ಮೊಳೆಯಲ್ಲಿ ತೂಗಿ ಪೂಜಾ ಕೋಣೆಯಿಂದ ಹೊರಬಂದರು. ಜೈಲಿನ ಒಳಗಿಂದ ಬಂದ ಕೈದಿಯಂತೆ!

* * *

ಜನ್ಮಾಷ್ಟಮಿಯ ದಿವಸವಾಗಿತ್ತು. ಎಲ್ಲರ ಮನೆಯಲ್ಲಿ ಒಂದು ಉತ್ಸಾಹವಿತ್ತು. ಸಾವಿರ ಸಂಖ್ಯೆಯಲ್ಲಿ ಹೆಣ್ಣುಗಂಡು ದೇವಸ್ಥಾನಗಳತ್ತ ಹೊರಟಿದ್ದರು. ಅಲ್ಲಿ ಇಲ್ಲಿ ತಿರುಗಾಡಿ ನಾನೂ ರಾಧಾಕೃಷ್ಣ ದೇವಸ್ಥಾನಕ್ಕೆ ಬಂದೆನು. ಜನಸಂದಣಿ ತುಂಬಿತ್ತು. ದೇವರ ಸಂದರ್ಶನಕ್ಕಾಗಿ ಗಂಡು ಹೆಣ್ಣಿನ ನೂಕು ನುಗ್ಗಾಟ ನಡೆದಿತ್ತು. ಅಕ್ಕಿ ಹಂಚುವ ರೇಶನ್ ಅಂಗಡಿಯ ಮುಂದೆ ನಡೆಯುವ ತಿಕ್ಕಾಟದಂತೆ ಜನರು ಒಳನುಗ್ಗಲೆತ್ನಿಸುತ್ತಿದ್ದರು ನಾನೂ ಜನರ ಮಧ್ಯೆ ಸೇರಿ ಹೋಗಿದ್ದೆ. ಜನರ ತಿಕ್ಕಾಟದಲ್ಲಿ ನಾನೂ ಅತ್ತಿತ್ತ ಸರಿದಾಡಬೇಕಾಗಿ ಬಂದಿತ್ತು. ಮುಂದೆ ಬಂದವನಿಗೆ ಸಾವಿರಾರು ರೂಪಾಯಿಯ ಬಹುಮಾನವಿದ್ದರೆ ನಡೆಯಬಹುದಾದ ಸ್ಪರ್ಧೆಯಂತೆ ಜನಸಂದಣಿಯ ನೂಕುನುಗ್ಗಾಟವಿತ್ತು. ಹಿಂದುಗಡೆಯಲ್ಲಿ ನೂರೋ 'ಛೀ' ಎಂದ ಶಬ್ದ ಕೇಳಿತು. ತಿರುಗಿ ನೋಡಿದೆ. ಯುವಕನೊಬ್ಬನು ಹತ್ತಿರದ ಯುವತಿಯ ಬಗಲಲ್ಲಿ ಕೈಯಿಕ್ಕಿ ನುಗ್ಗಾಟದ ನೋಗಿನಲ್ಲಿ ಒತ್ತಿ ಹಿಡಿದಿದ್ದನು. ನನಗೆ ಸಿಟ್ಟು ಬಂದಿತ್ತು. ಆ ಯುವಕನ ಪವಡೆಗೆ ಏರಿಸಬೇಕೆಂದು ಹಿಂದೆ ಸರಿದೆ. ನನ್ನ ಸ್ನೇಹಿತನೊಬ್ಬನು ಹೇಳತೊಡಗಿದನು: 'ಇನ್ನೊಬ್ಬರ ಜವಾಬ್ದಾರಿ ನೀನು ಹೊರಲೇಕೆ? ಇದು ದೇವಸ್ಥಾನ. ದೇವರೇ ದುಷ್ಟರಿಗೆ ಶಿಕ್ಷೆ ಕೊಡುತ್ತಾನೆ.'

ನಾವು ದೇವಸ್ಥಾನದಿಂದ ಹೊರಗೆ ಬಂದೆವು. ದೇವಸ್ಥಾನದ ಮೆಟ್ಟಲಲ್ಲಿ ಭಿಕ್ಷುಕರ ತಂಡ ಸಾಲಾಗಿ ಕೂತಿತ್ತು. ನಮ್ಮನ್ನು ಕಂಡು ಕೈ ಮುಂದೆ ಮಾಡಿ 'ದೇವರ ಹೆಸರಿನಲ್ಲಿ ದಾನ ಮಾಡಿರಪ್ಪಾ' ಎಂದು ಕೂಗತೊಡಗಿದರು!

* * *

ನೆರೆಮನೆಯಲ್ಲಿ ಸತ್ಯನಾರಾಯಣ ಪೂಜೆ ಸಾಯಂಕಾಲ ನಾಲ್ಕು ಗಂಟೆಯಿಂದ ಗ್ರಾಮಫೋನ್ ಹಾಡು ಕೇಳಿ ಬರುತಿತ್ತು. ನಾನೂ ಹೋದೆ. ಗ್ರಾಮಫೋನಿನಲ್ಲಿ—

ತೇರೀ ಹಾತ್ ಪಕಡ್ ಕೇ ತುಜ್ ಕೋ
ಗೋರ್ ಕಯಿಸ ಲೇ ಜಾವೂ||

ಕೇಳಿ ಬರುತ್ತಿತ್ತು. ಸಿನೆಮಾ ಶೋ ಪ್ರಾರಂಭವಾಗುವದಿದೆಯೋ ಎಂಬಂತೆ ಮನಸಿಗನಿಸುತಿತ್ತು. ಪೂಜಾರಿಯವರು ಬಹಳ ಪ್ರಯತ್ನದಿಂದ ಪೂಜಾರ್ಘ್ಯ ಬರೆಯುತ್ತಿದ್ದರು. ಹಾಡು ಕೇಳಿ ಅವರು ಹೇಳಿದರು. 'ಸಿನೆಮಾ ಹಾಡು ಚೆನ್ನಾಗಿದೆ. ಕೇಳುತ್ತಾ ಕೂತ ಕೊಳ್ಳೋಣ ಎನಿಸುತ್ತದೆ."

ಪೂಜೆ ಪ್ರಾರಂಭವಾಯಿತು. ಸತ್ಯನಾರಾಯಣ ಪೂಜೆಯನ್ನು ಸುಮ್ಮನೆ ಯಾರೂ ಮಾಡುವದಿಲ್ಲ ಏನಾದರೂ ಹರಕೆ ಇದ್ದರೆ ಮಾತ್ರ ಮಾಡುತ್ತಾರೆ ಏನು ಸಂಬಂಧವೆಂದು ಕೇಳಿದಾಗ ಅವರ ಚಿಕ್ಕಪ್ಪನವರಿಗೆ ಕಾಯಿಲೆಯಾಗಿದ್ದಾಗ ಅವರೇ ಹರಕೆ ಕಟ್ಟಿದೆಂದೂ, ಹರಕೆ ಕಟ್ಟಿದರೂ ಚಿಕ್ಕಪ್ಪನವರು ಮೃತರಾದರೆಂದೂ ಹೇಗೂ ಮೃತರಾದವರ ಆಶೆಯನ್ನು ಸಲ್ಲಿಸಲು ಅವರು ಕಟ್ಟಿದ ಹರಕೆಯು ಈ ಪೂಜೆಯೆಂದೂ ತಿಳಿಯಿತು. ಚಿಕ್ಕಪ್ಪನವರಿಗೆ ಸಂತಾನವಿಲ್ಲದ ಕಾರಣ ಅವರ ೨೦,೦೦೦ ರೂಪಾಯಿ ಬೆಲೆಯ ಆಸ್ತಿ ಇವರಿಗೆ ಬಂದಿದೆಯಂತೆ!

* * *

'ಕೇಳುವದೇ? ಈ ದಿನ ಸಾಯಂಕಾಲ ಆರುಗಂಟೆಗೆ ಒಂದು ಕಡೆ ಹರಿಕಥೆಗೆ ಹೋಗಬೇಕು. ಅನ್ನ ಬೇಗ ಮಾಡಿಕೊಡು' ಬ್ಯಾಂಕಿನಿಂದ ಬಂದ ಪತಿದೇವನು ಹೆಂಡತಿಗೆ ಹೇಳಿದನು.

ರಾತ್ರಿ ಎಂಟುಗಂಟೆಗೆ ಪತಿದೇವನು ಕಾವೇರಿ ಮಹಲಿನಲ್ಲಿ 'ಮಹಲ್' ಚಿತ್ರ ನೋಡುತ್ತಿದ್ದಾನೆ. ಹತ್ತಿರದ ಸ್ನೇಹಿತರನ್ನು ಕುರಿತು ಹೇಳುತ್ತಾನೆ. 'ಮಧುಬಾಲಳ ನಟನೆ, ಆಕೆಯ ಸೌಂದರ್ಯ, ಆಕೆಯ ಅಂಗಭಂಗಿಗಳು, ಮೋಹಕವಾಗಿವೆ. ಮನಸ್ಸು ಆಕೆಯನ್ನು..........'

ಅತ್ತ ಮನೆಯಲ್ಲಿ ಹೆಂಡತಿ ಒಬ್ಬಳೇ ಕುಳಿತು ಆಲೋಚಿಸುತ್ತಾಳೆ. 'ಹರಿಕಥೆ ಮುಗಿದು ಹನ್ನೆರಡು ಗಂಟೆಗೆ ಅವರು ಬರಬಹುದು. ಬಹುಶಃ ಬಾರದಿರಲೂ ಬಹುದು. ಭಗವಂತನ ಎಂಥಾ ಭಕ್ತರು? ಎಲ್ಲಿ ಹರಿಕಥೆ, ಕೀರ್ತನೆಗಳವೆಯೋ ಅಲ್ಲಿಗೆ ಹೋಗದಿರಲಾರರು!'

* * *

ಮೇಲೆ ಕೊಟ್ಟ ಕೆಲವು ಉದಾಹರಣೆಗಳನ್ನು ವಾಚಕರ ಮುಂದಿಟ್ಟು ಇದನ್ನೆಲ್ಲಾ ಆಲೋಚಿಸಿರೆಂದು ಬಿನ್ನೈಸುತ್ತೇನೆ. ಯಾವಾಗ ಮನುಷ್ಯನು ಕೆಟ್ಟ ಕೆಲಸ ಮಾಡಬೇಕೋ ಆತನು ಭಗವಂತನ ಹೆಸರನ್ನು ಸಾಧನವಾಗಿ ಉಪಯೋಗಿಸುತ್ತಾನೆ. ಅಶಿಕ್ಷಿತ ಮೂಢ ಮನುಷ್ಯನು ಕೆಟ್ಟದೇನನ್ನಾದರೂ ಮಾಡುವಾಗ 'ಅಯ್ಯೋ ದೇವರ ಕಣ್ಣು ಕಟ್ಟಲಾಗುವಲ್ಲ'ವೆಂದು ಹೆದರುತ್ತಾನೆ ಆದರೆ ಸುಶಿಕ್ಷಿತ ನಾಗರೀಕನಿಗೆ ದೇವರ ಹೆಸರೇ ಪಾಪದ ಮಾರ್ಗ!

ಇಂದು ಸಮಾಜದಲ್ಲಿ ಏನು ನಡೆಯುತ್ತಿದೆ? ಇಂದಿನ ಸಭ್ಯ ಶಿಕ್ಷಿತ ಹಾಗೂ ನಗರದ ನಾಗರೀಕರು ಭಗವಂತನಿಗಾಗಿ ಹೆದರುವಂತಿಲ್ಲ. ಮಹಾಮಹಾ ಪಾಪಗಳನ್ನು ಮಾಡಿರಿ; ಕಾವೇರಿ ಸ್ನಾನಮಾಡಿರಿ; ಪಾಪಮುಕ್ತರಾಗುವಿರಿ! ಸರಕಾರಕ್ಕೆ ಆದಾಯ ತೆರಿಗೆಕೊಡದೆ ಮೋಸಮಾಡಿರಿ. ಒಂದು ಗಣಪತಿಹೋಮದಿಂದ ಮೋಸದ ಪಾಪ ನಿವಾರಣವಾಗುವದು. ಹಿಂದೂ ಮುಸ್ಲಿಂ ದಂಗೆ ಆಗಬೇಕೇ? ಡೋಲು ಬಡಿದು 'ಹರ ಹರ ಮಹಾದೇವ್" ಕೂಗಿರಿ. ಹೆಂಗಸರಿಗೆ ಅಪಮಾನ ಮಾಡಬೇಕೆ? ಜನ್ಮಾಷ್ಟಮಿಗಳಲ್ಲಿ ದೇವಸ್ಥಾನಗಳಿಗೆ ಹೋಗಿರಿ!

ಒಂದು ಕಡೆಯಲ್ಲಿ ಜೀವರಹಿತ ದೇವಸ್ಥಾನದ ವಿಗ್ರಹಕ್ಕೆ ಇಂದು ಬೇಕಾದುದಿದೆ. ಯಾವುದೇ ಕೆಲಸ ಮಾಡದೆ ದೇವಸ್ಥಾನಕ್ಕೆ ಅಥವ ಕೀರ್ತನೆಗೆ ಬಂದ ಹೆಂಗಸರನ್ನು ವಕ್ರದೃಷ್ಟಿಯಿಂದ ನೋಡುವ ಪೂಜಾರಿಗಳಿಗೆ ವಿಧವಿಧದ ಭಕ್ಷ್ಯಭೋಜನಗಳಿವೆ. ಸಿನೆಮಾ ನೋಡಲು ಹಣವಿದೆ. ಮತ್ತೊಂದು ಕಡೆಯಲ್ಲಿ ದೇಶದ ಭವಿಷ್ಯದ ಕುರುಹುಗಳಾದ ಮಕ್ಕಳಿಗೆ, ದೇಶದ ಮಾತೆಯರಿಗೆ ಹೊಟ್ಟೆಗೆ ಸರಿಯಾಗಿ ದೊರೆಯುವದಿಲ್ಲ. ಜೀವಿತದ ಬಾಳಿನ ಆಸ್ಪದವಿಲ್ಲ. ಲಕ್ಷ್ಮೀನಾರಾಯಣನ ದೇವಸ್ಥಾನಕ್ಕಾಗಿ ಲಕ್ಷಾಂತರ ರೂಪಾಯಿ ವ್ಯಯಮಾಡಲು ಹಿಂಜರಿಯಲಾರರು. ಆದರೆ ತಮ್ಮ ಕೈಕೆಳಗೆ ಬೆವರಿಳಿಸಿ ದುಡಿಯುವವರಿಗೆ ಸರಿಯಾದ ಪ್ರತಿಫಲವಿಲ್ಲ.

ಇದನ್ನೆಲ್ಲಾ ಆಲೋಚಿಸಿ ವಾಚಕರನ್ನು ಪ್ರಶ್ನಿಸುತ್ತೇನೆ. ಅನ್ಯಾಯಗಳಿಂದ ಪಾಮರ ಜನರನ್ನು ರಕ್ಷಿಸಲು ಇಂದು ಭಗವಂತನಿಗೆ ಶಕ್ತಿ ಇಲ್ಲದಿದ್ದರೆ ಆ ಪೂಜನೀಯ ಸ್ಥಳದಲ್ಲಿ ಕೂತು ಜನ ಸಾಮಾನ್ಯರ ಆರಾಧನೆಗೆ ಆತನಿಗೆ ಹಕ್ಕೆಲ್ಲಿದೆ? ಆತನ ಪೀಠಗಳು, ನಿವಾಸ ಸ್ಥಾನಗಳೆನ್ನುವ ಮಂದಿರ ಮಠಗಳಿಗೆ ವ್ಯಯವಾಗುವ ಹಣವನ್ನು ದೇಶದ ಸಮೃದ್ಧಿಗಾಗಿ, ಬಡಜನರ ಉದ್ಧಾರಕ್ಕಾಗಿ, ಕೈಗಾರಿಕೆಯ ಉತ್ಕರ್ಷಕ್ಕಾಗಿ, ಹಸಿದವರ ಉದರಂಭರಣಕ್ಕಾಗಿ ವ್ಯಯಮಾಡ ಬಾರದೇಕೆ?

—

ಶಿಕ್ಷಣರಂಗದಲ್ಲಿ

ಮಹಿಳಾ ಶಿಕ್ಷಕಿಯರ ಸ್ಥಾನ.

ಫೆಬ್ರವರಿ ತಿಂಗಳ 'ವುಮನ್ಸ್ ವೆಲ್ಫೇರ್ ಜರ್ನಲ್' ದಲ್ಲಿ ಶ್ರೀಮತಿ ಎಸ್. ಮಾಲತಿದೇವಿಯವರು ಬರೆದ ಒಂದು ಲೇಖದ ಆಧಾರದಿಂದ ಬರೆದುದು.

ಲೇಖಕರು:—ಶ್ರೀ ಕೆ. ಪ್ರಭಾಕರರಾವ್, ಉಡುಪಿ.

'ಸ್ವತಂತ್ರ ಹಿಂದುಸ್ಥಾನದ ಭಾವೀ ಪ್ರಜೆಗಳಾದ ಇಂದಿನ ಮಕ್ಕಳ ವಿದ್ಯಾಭ್ಯಾಸವು ತುಂಬ ಜವಾಬ್ದಾರಿಯುಳ್ಳ ಸಮಸ್ಯೆಯಾಗಿದೆಯೆಂಬುದು ನನ್ನ ಮತ. ಏಕೆಂದರೆ ಕೆಲವು ಕಾಲೇಜು ಹೈಸ್ಕೂಲುಗಳ ವಿದ್ಯಾರ್ಥಿಗಳ ನೈತಿಕತೆಯು ಈಗೀಗ ಕೆಡುತ್ತ ಬಂದಿರುವುದು ನನ್ನ ಗಮನಕ್ಕೆ ಬಂದಿದೆ. ಅದ ಕಾರಣ ವಿದ್ಯಾರ್ಥಿಗಳ ಪ್ರಾಥಮಿಕ ಶಿಕ್ಷಣದ ಕಡೆಗೇನೇ ಉಪಾಧ್ಯಾಯರು ಹೆಚ್ಚಿನ ಗಮನವನ್ನು ಕೊಡಬೇಕು'—ಈ ಮಾತುಗಳನ್ನು ಮೊನ್ನೆ ಮೊನ್ನೆ ಶ್ರೀ ಜವಾಹರಲಾಲ ನೆಹರೂರವರು ಒಂದು ಬಹಿರಂಗ ಅಧಿವೇಶನದಲ್ಲಿ ವಿದ್ಯಾರ್ಥಿಗಳನ್ನು ಕುರಿತು ಹೇಳಿದುದಾಗಿದೆ. ಮುಖ್ಯಮಂತ್ರಿಗಳು ವಿದ್ಯಾರ್ಥಿಗಳ ನೈತಿಕತೆಯು ಕೆಡುತ್ತ ಬಂದಿದೆ ಎನ್ನುವಾಗ ಪ್ರಾಥಮಿಕ ಶಿಕ್ಷಣದ ತಳಹದಿ ಭದ್ರವಾಗಬೇಕೆಂದು ಹೇಳಿದಂತಹ ಮಾತಿಗೆ ತುಂಬ ಅರ್ಥವಿದೆ.

ಚಿಕ್ಕ ಮಕ್ಕಳ ಮನಸ್ಸು ತುಂಬ ಪರಿಣಾಮಕಾರಿಯಾಗಿರುತ್ತದೆ. ಆ ಎಳೆ ಮನಸ್ಸಿನ ಮೇಲೆ ಯಾವುದೇ ಒಂದು ವಿಷಯವನ್ನು ಹೆಚ್ಚು ಕಷ್ಟವಿಲ್ಲದೇನೇ ಮೂಡಿಸಬಹುದು—ಅತೀ ಸರಳವಾಗಿ. ಚಿಕ್ಕ ಮಕ್ಕಳ ಮನಸ್ಸೆಂದರೆ ಮುದ್ದಣದಂತೆ. ಈ ವಿಚಾರವನ್ನು ನಾವು ಪದೇ ಪದೇ ವಿಜ್ಞಾನಿಗಳಿಂದ ಕೇಳುತ್ತಿದ್ದೇವೆ; ಅಷ್ಟೇ ಅಲ್ಲ. ಅದು ನಿಜವೂ ಆಗಿರುತ್ತದೆ. ಮಾನವನ ಜೀವನವು ತುಂಬ ರಸವತ್ತಾಗಿದ್ದು, ಪರಿಣಾಮಕಾರಿಯಾದ ಮತ್ತು ಹೃದಯಂಗಮವಾದ ಜೀವನಭಾಗವು ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳಲ್ಲೇ ದಾಟುವುದು. ಎಂತಲೇ ಆ ಸಮಯದಲ್ಲಿ ಮಾನವನಿಗೆ ಸಾಧ್ಯವಾದಷ್ಟು ಉತ್ತಮ ರೀತಿಯ ವಿದ್ಯೆಯನ್ನು ಸಂಪಾದಿಸಿಕೊಳ್ಳಲು ಸಾಧ್ಯವಿದೆ.

ಪಾಶ್ಚಾತ್ಯ ದೇಶಗಳಲ್ಲಿ ಪ್ರಾಥಮಿಕ ಶಿಕ್ಷಣಕ್ಕೆ ಹೆಚ್ಚಿನ ಗಮನವನ್ನು ಕೊಡಲಾಗುತ್ತಿದೆಯಲ್ಲದೆ ಚಿಕ್ಕ ಮಕ್ಕಳ ವಿದ್ಯಾಭ್ಯಾಸಕ್ಕೆ ಅಧಿಕ ಸಂಖ್ಯೆಯಲ್ಲಿ ಮಹಿಳಾ ಶಿಕ್ಷಕಿಯರೇ ಇರುತ್ತಿರುವುದನ್ನು ನಾವು ಕೇಳುತ್ತಿದ್ದೇವೆ. ಅಲ್ಲಿನವರು 'ಗುರು' ಎಂಬರ್ಥಕ್ಕೆ ಸಾಮಾನ್ಯವಾಗಿ 'ಉಪಾಧ್ಯಾಯಿನಿ' ಎಂಬರ್ಥವನ್ನೇ ಕಟ್ಟಿಕೊಳ್ಳುತ್ತಾರಲ್ಲದೆ ಉಪಾಧ್ಯಾಯಿನಿಯರಿಗೆ ಹೆಚ್ಚಿನ ಗೌರವ ಮತ್ತು ಸ್ಥಾನಮಾನವನ್ನು ಕೊಡುತ್ತಾರೆ.

ಸಾಮಾನ್ಯವಾಗಿ ಮನೆಯಲ್ಲಿ ಮಕ್ಕಳು ತಾಯಿಯ ಜತೆಯಲ್ಲೇ ಇರುತ್ತವೆ. ಮುಂಜಾನೆಯಿಂದ ಸಂಜೆಯ ವರೆಗೆ ತಾಯಿಯೊಬ್ಬಳೇ ಮಕ್ಕಳ ಬೇಡಿಕೆಗಳನ್ನು ಪೂರೈಸುವವಳಾಗಿರುತ್ತಾಳೆ ಅತೆಯೇ ಒಂದು ಮಗುವಿನ ಮನಸ್ಸನ್ನು ಅರಿತುಕೊಳ್ಳಲು ಒಬ್ಬ ಹೆಂಗಸಿಗೆ ಮಾತ್ರ ಸಾಧ್ಯವಿದೆ. ಯಾವೊಂದು ವಿಶ್ವವಿದ್ಯಾಲಯದಲ್ಲೂ ಮಾನಸಿಕ ಶಾಸ್ತ್ರವನ್ನು ಅಭ್ಯಾಸಿಸದೇನೇ ಹೆಂಗಸೊಬ್ಬಳು ಮಕ್ಕಳ ಪಟ್ಟಿಗೆ ಮನಶಾಸ್ತ್ರಜ್ಞಳಾಗಿರುವಳು.

ಪ್ರಥಮವಾಗಿ ಶಾಲೆಗೆ ಹೋಗುವಲ್ಲಿ ಒಂದು ಮಗುವು ಹಿಂಜರಿವುದು ಸ್ವಾಭಾವಿಕವೇ ಇದೆ. ಕೆಲವು ಬಾರಿ ಹೊರಗಿನ ವಾತಾವರಣದ ವಿಶೇಷಗಳನ್ನು ಕಂಡು ಬೆದರುವುದು ಕೂಡಾ! ಆಗ ಮಗುವಿಗೆ ಯಾವುದೂ ಬೇಡವಾಗುತ್ತದೆ. ಮನೆ ಮತ್ತು ಮನೆಯ ವಾತಾವರಣದಲ್ಲೇ ಅದು ಸುಖವನ್ನು ಕಾಣಬಯಸುವುದು, ಅಲ್ಲದೆ ಆ ಒಂದು ಕ್ಷೇತ್ರದಲ್ಲೇ ಅದು ಪ್ರಪಂಚವನ್ನು ಕಾಣುವುದು. ಅಂತಹ ಸ್ಥಿತಿಯಲ್ಲಿರುವ ಒಂದು ಮಗುವಿನ ಮನಸ್ಸನ್ನು ಅತಿ ಸುಲಭವಾಗಿ ಉಪಾಧ್ಯಾಯಿನಿಯೊಬ್ಬಳು ಅರಿತುಕೊಳ್ಳಬಲ್ಲಳು—ಅಂತೆಯೇ ಶಾಲೆಯ ವಾತಾವರಣಕ್ಕೆ ಹೊಂದಿಸಿಕೊಂಡು ತಿರುಗಿಸಲೂ ಬಲ್ಲಳು. ಆ ಸಂದರ್ಭದಲ್ಲಿ ಮಗುವು ತನ್ನ ಶಿಕ್ಷಕಿಯನ್ನು ಮಾತೃಭಾವದಲ್ಲೇ ಕಾಣುವುದು; ಅದಕ್ಕೆ ತಾಯಿಯೊಡನಾಟದಲ್ಲಿದ್ದಂತೆಯೇ ಅನುಭವವಾಗುವುದು. ಒಬ್ಬ ಶಿಕ್ಷಕಿಯ ನಗುಮುಖ, ಮೃದುನುಡಿಯು ಜತೆಯಲ್ಲೇ ಇರುವ ಮೃದು ಮನಸ್ಸು—ಯಾವೊಂದು ಮಗುವಿನ ಭಾವನೆಯನ್ನು ಕೂಡಾ ಸಂಪೂರ್ಣವಾಗಿ ಶಾಲೆಯ ವಾತಾವರಣಕ್ಕೆ ಹೊಂದಿಸಿಕೊಳ್ಳಬಲ್ಲವು.

ಭಗವಂತನು ಸ್ತ್ರೀಯರಿಗೆ ಹೆಚ್ಚಿನ ತಾಳ್ಮೆ ಮತ್ತು ಮಾಯಾ ಮಮತೆಯನ್ನು ಕರುಣಿಸಿದ್ದಾನೆ. ಸ್ತ್ರೀಯು ತನ್ನ ಈ ಹೆಗ್ಗುಣಗಳ ಸಂಪತ್ತಿನಿಂದಲೇ ಎಳೆ ವಯಸ್ಸಿನ ಮಕ್ಕಳನ್ನು ಪೂರ್ಣ ತನ್ನೆಡೆಗೆ ಸೆಳಕೊಳ್ಳಬಲ್ಲಳು. 'ಅ' 'ಆ' ವನ್ನು ತಿದ್ದಲು ಕಲಿಯುತ್ತಿರುವಾಗಲೇ ಒಂದು ಮಗುವು ನೂರು ಬಾರಿ ತಪ್ಪಿಬೀಳಬಹುದು—ಅದು ಸ್ವಾಭಾವಿಕವೇ. ಆಗ ಕಲಿಸುವವರಲ್ಲಿ ತಾಳ್ಮೆಯ ಅಗತ್ಯ ಬಹಳವಿದೆ 'ಅ' ಅಕ್ಷರವನ್ನು ಬರೆಯಲು ತಪ್ಪಿಬಿದ್ದಾಗಲೇ ಗದರಿಸಿ ಬೆದರಿಸದೆ ಮೃದುವಿನಿಂದ ಕಲಿಸಿ ಆ ಎಳೆ ಮನಸ್ಸಿನ ಮೇಲೆ ಯೋಗ್ಯ ಸತ್ಪರಿಣಾಮವನ್ನು ಉಂಟುಮಾಡಿ ಮುಂದೆ ಅದೇ ಮಗುವನ್ನು ಒಬ್ಬ ಶ್ರೇಷ್ಠನಾಯಕನನ್ನಾಗಿ ಮಾಡುವ ಶಕ್ತಿ ಸ್ವರೂಪಿಣಿಯು ಸ್ತ್ರೀಯೇ ಆಗಿರುತ್ತಾಳೆ. ಸಿಟ್ಟಿನ ಮುಖವಾಗಲೀ, ಗಂಭೀರ ಭಾವವಾಗಲೀ, ಬೆದರಿಕೆಯ ಮಾತುಗಳಾಗಲೀ ಮಕ್ಕಳನ್ನು ಹಾಳು ಮಾಡುತ್ತವೆ. ಮಕ್ಕಳಿಗೆ ವಿದ್ಯೆಯನ್ನು ಕಲಿಸುವ ಶಿಕ್ಷಕರ ಅಂಥಹ ಘೋರಣೆಗಳು ಕೆಲವು ವೇಳೆ ಮಗುವಿನ ಇಡೀ ಜೀವಮಾನವನ್ನೇ ಹಾಳುಗೆಡಹಬಲ್ಲವು. ಒಂದು ಮಗುವನ್ನು ಹೊಡೆಯದೆ ಬಯ್ಯದೆ ಆ ಮಗುವಿನ ಮನಸ್ಸಿನಮೇಲೆ ಯೋಗ್ಯ ಸತ್ಪರಿಣಾಮವನ್ನುಂಟು ಮಾಡುವ ಶಕ್ತಿಯು ತಾಳ್ಮೆಯ ಸಂಪತ್ತಿಗೆ ಮಾತ್ರ ಇದೆಬಲ್ಲುದು. ಆದರೆ ಈ ಸಂಪತ್ತು ಮಗುವಿನ ಮನಸ್ಸಿನ ಒಳಹೊರಗನ್ನರಿವ ಶಕ್ತಿಯುಳ್ಳ ಸ್ತ್ರೀಯಲ್ಲದೆ ಬೇರಾರಿಗೂ ಲಭ್ಯವಾಗದು.

ಕೆಲವು ಕುಟುಂಬಗಳಲ್ಲಿ ಚಿಕ್ಕಮಕ್ಕಳಿಗೆ ತಾಯಲ್ಲಿರುವ ಪ್ರೇಮಕ್ಕಿಂತ ಹೆಚ್ಚಿನ ಪ್ರೇಮವು ತಂದೆಯಲ್ಲಿರುತ್ತದೆ. ಕೆಲವು ಮಕ್ಕಳು ತಾಯಿಯ ಜತೆಯಲ್ಲಿರುವದಕ್ಕಿಂತ ಹೆಚ್ಚು ತಂದೆಯ ಜತೆಯಲ್ಲೇ ಇರುತ್ತಿರುವುದನ್ನು ನಾವು ನಿತ್ಯ ನೋಡಬಹುದಾಗಿದೆ. ಸಾಮಾನ್ಯವಾಗಿ ಗಂಡು ಮಕ್ಕಳೇ ಈ ರೀತಿಯಲ್ಲಿರುವುದು ಹೆಚ್ಚು. ಆದಾಗ್ಯೂ ಅಂತಹ ಮಕ್ಕಳಿಗೆ ಉಪಾಧ್ಯಾಯರಲ್ಲಿರತಕ್ಕ ಗೌರವಕ್ಕಿಂತ ಹೆಚ್ಚು ಉಪಾಧ್ಯಾಯಿನಿಯರಲ್ಲಿರುತ್ತದೆ. ಸಾಮಾನ್ಯವಾಗಿ ಹುಡುಗಿಯರು ನಾಚಿಕೆ ಸ್ವಭಾವದವರಿರುತ್ತಾರೆ. ಪ್ರಾಯ ಬಂದ ಹುಡುಗಿಯರು ಕೂಡಾ ತಮ್ಮ ಮನಸ್ಸಿನಲ್ಲಿರುವುದನ್ನು ಸರಾಗವಾಗಿ ತಮ್ಮ ತಾಯಿಯೊಡನೆ ಮಾತ್ರ ತಿಳಿಸಬಲ್ಲರು. ಹಾಗೆಯೇ ಶಾಲೆಯಲ್ಲೂ ಉಪಾಧ್ಯಾಯಿನಿಯರೊಡನೆ ಮಾತ್ರ ಹುಡುಗಿಯರು ಸರಳವಾಗಿರಬಲ್ಲರು.

ಇಂದಿನ ವಾತಾವರಣದಲ್ಲಿ ಅತೀ ಅಗತ್ಯವಿರುವ ದಯೆ, ಮಾಯೆ, ಕ್ಷಮೆ, ನಿಸ್ವಾರ್ಥ, ತ್ಯಾಗ, ಬುದ್ಧಿ ಮುಂತಾದ ಗುಣಗಳೂ ಹಿರಿಯರಿಗೆ ಮರ್ಯಾದೆ ಕೊಡುವ ಪದ್ಧತಿಯೂ ಚಿಕ್ಕಂದಿನಲ್ಲೇ ಮಕ್ಕಳಲ್ಲಿ ಬೆಳೆದು ಬರಬೇಕು. ಇಂತಹ ಹಿರಿಯರ ಗುಣಗಳನ್ನು ಮಹಿಳಾ ಶಿಕ್ಷಕಿಯೊಬ್ಬಳು ಮಾತ್ರ ಮಕ್ಕಳಲ್ಲಿ ಮೂಡಿಸಬಲ್ಲಳು.

ಚಿಕ್ಕ ಮಕ್ಕಳಿಗೆ ವಿದ್ಯೆ ಕಲಿಸಲು ಮಹಿಳಾ ಶಿಕ್ಷಕಿಯರನ್ನು ನೇಮಿಸುವದರಲ್ಲಿ ಕಾರ್ಯ ಪೂರೈಸಿದಂತಾಗಲಾರದು ಅಂತಹ ಜವಾಬ್ದಾರಿಯುತ ಕೆಲಸಕ್ಕೆ ಮಹಿಳೆಯೊಬ್ಬಳನ್ನು ನೇಮಿಸುವ ಮೊದಲಾಗಿ ಆವಳಿಗೆ ಉತ್ತಮ ಶಿಕ್ಷಣ ತರಬೇತಿಯನ್ನು ಸರಕಾರವು ಕೊಡಿಸಬೇಕಾಗಿದೆ. ಹಾಗೆ ಮಾಡಿದರೇನೇ ಪರಿಣಾಮಕಾರಿಯಾದ ವಿದ್ಯೆಯನ್ನು ಎಳೇ ಮನಸ್ಸಿನ ಮಗುವು ಪಡೆಯಲು ಸಾಧ್ಯವಿದೆ.

"ಜೈಹಿಂದ್"

ದಿ ಟ್ರಾಪಿಕಲ್

ಇನ್ಶ್ಯೂರೆನ್ಸ್ ಕಂಪೆನಿ ಲಿಮಿಟೆಡ್.

ಮ್ಯಾನೇಜಿಂಗ್ ಡೈರೆಕ್ಟರ್:— ಲಾಲ ಶಂಕರ್ ಲಾಲ್.
ಮುಖ್ಯ ಆಫೀಸು:— ಹೊಸ ಡೆಲ್ಲಿ.
ಸ್ಥಾಪಿಸಿದ ಡೈರೆಕ್ಟರರು:

ಪಂಡಿತ ಮೋತಿಲಾಲ್ ನೆಹರು. ಎಸ್. ಶ್ರೀನಿವಾಸ ಅಯ್ಯಂಗಾರ್
ಹಕೀಮ್ ಅಜಮಲಖಾನ್. ಡಾ|| ಎಂ. ಎ. ಅನ್ಸಾರಿ.

Transacts:—Life, Fire, Motor and Marine.

ಬಿ.ಎಂ. ಯು. ಅಚ್ಚಣ್ಣ, ಇನ್ಸ್‌ಪೆಕ್ಟರು, ಮಡಿಕೇರಿ, ಕೊಡಗು.
ಎಂ. ಎ. ಬೆಳ್ಯಪ್ಪ, ಬ್ರಾಂಚ್ ಸೆಕ್ರೆಟರಿ, ಹಂಪನಕಟ್ಟಾ, ಮಂಗಳೂರು.

ಹೊಸ ವರ್ಷದ ಹೊಸ ಕೊಡುಗೆ

ನಿಮ್ಮ ಮನ ಒಪ್ಪುವ ಆಭರಣಯುತ ಸ್ವಿಸ್ ವಾಚುಗಳು

೧೯೫೧ನೇ ಇಸವಿಯ ಮಾದರಿಯ ವಿಶೇಷ ರಿಸ್ಟ್ ವಾಚುಗಳು. ಐದು ವರ್ಷಗಳ ಗ್ಯಾರಂಟಿಯವು. ಎಚ್ಚರಿಕೆಯಿಂದ ಉಪಯೋಗಿಸಿದರೆ ಜೀವನ ಪರಿಯಂತರ ಬಾಳಿಕೆ ಬರುವವು. ೩೬ ಗಂಟೆಗಳಿಗೊಮ್ಮೆ ಕೀ ಕೊಡುವಂಥಾದ್ದು. ಕೆಲವೇ ವಾಚುಗಳಿವೆ. ಇವು ಸುಂದರವಾಗಿರುವದಲ್ಲದೆ ಸುಲಭದರದ್ದೂ ಆಗಿದೆ. ನಿಮ್ಮನ್ನು ಆಕರ್ಷಿಸುವವಲ್ಲದೆ ಅವುಗಳನ್ನು ಕಟ್ಟಿಕೊಳ್ಳಲು ನೀವು ಹೆಮ್ಮೆ ಪಡುವಿರಿ. ಹಳೇ ಮೋಡಲಿನ ನಿಮ್ಮ ಹಳೇ ವಾಚುಗಳನ್ನು ಬಿಟ್ಟು ಇವುಗಳನ್ನು ಕೊಳ್ಳಿರಿ. ಈ ವಾಚುಗಳು ಕೇವಲ ನಮ್ಮಲ್ಲಿ ಮಾತ್ರ ದೊರೆಯುತ್ತವೆ. ಈ ದಿನವೇ ಆರ್ಡರು ಮಾಡಿ. ಒಪ್ಪದಿದ್ದರೆ ತಕ್ಷಣ ವಾಪಾಸುಮಾಡುವ ಭರವಸೆ ಇದೆ.

10½	ಉರುಟು ಕ್ರೋಮಿಯಮ್ ಸ್ಟೀಲ್ ಬ್ಲೇಕ್	ನಂ.	233	ರೂ. 21
	,, ,,	,,	366	,, 25
	,, ,,	,,	455	,, 26
8¾	ಚಚ್ಚೌಕ ,,	,,	477	,, 39
	,, ,,	,,	599	,, 35
7¾	ಚತುರ್ಭುಜಾಕಾರ ,,	,,	688	,, 42
	,, ,,	,,	822	,, 44
5¾	ಹೆಂಗಸರದು ರುಂಡಗಿನ ಆಕಾರ ,,	,,	944	,, 51

ಅತ್ಯುತ್ತಮ ಪಾಕೆಟ್ ವಾಚು ರೂ. 13
ರೋಲ್ಡ್ ಗೋಲ್ಡ್ ಪ್ರತಿಯೊಂದಕ್ಕೆ ,, 5/- ಹೆಚ್ಚು

The Hilson Watch Company (K. M.)
Bahadur Garh Road, Delhi 6.

4-3

ಶ್ರೀ ಪಿ. ಪೀತಾಂಬರರವರು "ಕೊಡಗು" ಏಜೆಂಟರು ಕೊಡ್ಲಿಪೇಟೆ.

ಕೇಂದ್ರ ಶಾಸನ ಸಭೆಯಲ್ಲಿ ಕೊಡಗಿನ ಭವಿಷ್ಯದ ಬಗ್ಗೆ

ಶ್ರೀ ಸಿ. ಎಂ. ಪೂಣಚ್ಚನವರು ಮಾಡಿದ ಭಾಷಣ.

"ಇದರಡಿ ಕೊಟ್ಟಿರುವ ತಮ್ಮ ಭಾಷಣದ ನಕಲನ್ನು ಶ್ರೀ ಸಿ. ಎಂ. ಪೂಣಚ್ಚನವರು ಕಳುಹಿಸಿಕೊಟ್ಟಿದ್ದಾರೆ. ಅದರೊಡನೆ ಅವರು ಬರೆದ ಪತ್ರದಲ್ಲಿ ತಮ್ಮ ಭಾಷಣವನ್ನು ಉದ್ದೇಶಿಸಿ ಶ್ರೀ ಗಡ್ಗಿಲ್ಲರು ಹೇಳಿದ ಮಾತುಗಳ ಬಗ್ಗೆ ಜನರು ತಪ್ಪಭಿಪ್ರಾಯ ತಿಳಿದುಕೊಳ್ಳುವರೆಂದು ಈ ವಿವರಣೆ ಕೊಟ್ಟಿದ್ದಾರೆ. ತಾ. ೧೬ರ ಚರ್ಚೆ ಯಲ್ಲಿ ನನಗೆ ಮಾತಾಡಲು ಕಡೇಯದಾಗಿ ಅನುಕೊಟ್ಟರು. ಚರ್ಚೆಗೆ ಉತ್ತರವನ್ನು ೬-೩೦ ಗಂಟೆಗೆ ಮಂತ್ರಿಯವರು ಕೊಡುವರೆಂದು ನಿಶ್ಚಯಿಸಲಾಗಿತ್ತು. ಆದ್ದರಿಂದ ನನಗೆ ಮಾತಾಡಲು ೧೦ ನಿಮಿಷಗಳಿದ್ದವು. ಇತರ ಪ್ರಾಮುಖ್ಯ ವಿಚಾರಗಳ ವಿಷಯ ಮಾತಾಡುವ ಮೊದಲು ಗಂಟೆ ಬಾರಿಸಲ್ಪಟ್ಟ ಕಾರಣ ಭಾಷಣವನ್ನು ಅಲ್ಲೇ ನಿಲ್ಲಿಸಬೇಕಾಯಿತು. ಈ ಹತ್ತು ನಿಮಿಷಗಳಲ್ಲಿ ನಾನಾಡಿದ ಮಾತಿನಲ್ಲಿ ಕೊಡಗಿನ ಆಡಳಿತ ರಚನೆಯನ್ನು ಪ್ರಜಾ ಜವಾಬ್ದಾರವನ್ನಾಗಿ ಮಾಡುವ ವಿಚಾರ ಮಾತಾಡಿದೆನು."

ಅಧ್ಯಕ್ಷರೇ, 'ಸಿ' ವರ್ಗದ ಸಂಸ್ಥಾನಗಳ (ಚೀಫ್ ಕಮಿಷನರ ಪ್ರಾಂತಗಳ) ಸಮಸ್ಯೆಯು ನನ್ನ ಅಭಿಪ್ರಾಯದಲ್ಲಿ ಕೊನೆಯದ ಅಸಭ್ಯಾಭಾಸದ ಬೆಲೆಯನ್ನು ಪಡೆದಿರುವಂತಿದೆ. ಸರಕಾರವು ಯಾವುದಾದರೊಂದನ್ನು ಮಾಡಲು ಸೂಚಿಸಿದಾಗ ಈ ಭಾಗಗಳು ನಿಶ್ಚಿತ ರೀತಿಯ ಸವಲತ್ತುಗಳಿಗೆ ಯೋಗ್ಯವಲ್ಲವೆಂದು ಸಮಸ್ಯೆಯ ಬೆಲೆಯನ್ನು ತಗ್ಗಿಸಲಾಗುತ್ತದೆ. ಸಮಸ್ಯೆಯನ್ನು ಮುಂದೂಡಬೇಕು ಯಾ ರದ್ದು ಮಾಡಬೇಕಾದಾಗ ವಿವಿಧ ರೀತಿಯಲ್ಲಿ ಈ ಭಾಗಗಳ ಆಡಳಿತ ತೊಂದರೆ, ಆಯವ್ಯಯದ ಬೆಲೆಗಳ ವಾದವನ್ನು ಮುಂದೆ ಮಾಡಲಾಗುತ್ತದೆ. 'ಸಿ' ವರ್ಗದ ಪ್ರಾಂತಗಳ ಬಗ್ಗೆ ನಮ್ಮ ಕೇಳಿಕೆಗಳಿದ್ದರೂ ಸರಕಾರವು ಗಮನಿಸದೆ ಅವುಗಳನ್ನು ಬದಿಗೊತ್ತಿ ವರ್ತಿಸುತ್ತಿರುವುದು ನನ್ನ ಅನುಭವ. ಅದನ್ನು ಹೇಳಲು ನನಗೆ ವ್ಯಸನವಾಗುತ್ತದೆ. ಆದರೆ ಪರಿಸ್ಥಿತಿಯು ಆ ರೀತಿಯದಾಗಿದೆ.

ಕೊಡಗೆಂದು ಹೆಸರಿರುವ ಚಿಕ್ಕದೊಂದು ಪ್ರಾಂತದಿಂದ ಬಂದಿರುವ ನಾನು ಅಲ್ಲಿಯ ಕೆಲವು ಚಿಕ್ಕ ಸಮಸ್ಯೆಗಳನ್ನು-ಆದರೆ ನಮಗೆ ದೊಡ್ಡವೆನಿಸುವಂಥವು-ನಿಮ್ಮ ಮುಂದಿಟ್ಟು ವಿಮರ್ಶಿಸುವ ವಿಚಾರಕ್ಕಾಗಿ ಈ ಸಭೆಯ ಹಾಗೂ ಮಾನ್ಯ ಮಂತ್ರಿಗಳ ಕ್ಷಮೆ ಕೇಳುತ್ತೇನೆ.

ಕೇಂದ್ರದಿಂದ ಆಳಲ್ಪಡುವ ಪ್ರಾಂತಗಳಲ್ಲಿ ಕೊಡಗಿಗೆ ಮಾತ್ರ ೧೯೨೪ರಲ್ಲಿ ಕೊಡಲ್ಪಟ್ಟ ಶಾಸನ ಸಭೆ ಇದ್ದು, ಕೇವಲ ವಿಷಯಗಳ ಅಧಿಕಾರವುಳ್ಳ ಇದರಲ್ಲಿ ಕೆಲಸ ಮಾಡಿದ ೨೫ ವರ್ಷಗಳ ಅನುಭವ ನಮಗಿದೆ. ನನ್ನ ವ್ಯಕ್ತಿಗತ ಅನುಭವದಿಂದ ಹೇಳುವದಾದರೆ ಈ ಸಭೆಯಿಂದ ಕೊಡಲ್ಪಟ್ಟ ಸಲಹೆಗಳು ಹೆಚ್ಚಿನ ಸಂದರ್ಭಗಳಲ್ಲಿ ಒಪ್ಪಲ್ಪಡದೆ ಕಲವು ನಿರ್ಧಾರಗಳು ಮಾತ್ರ ಅಂಗೀಕರಿಸಲ್ಪಡುತ್ತವೆ. ಈ ಸಭೆಯು ಘಟನೆಯ ವಿಚಿತ್ರರೀ[illegible]ದ್ದು ನಿಜವಾದ ಅಧಿಕಾರ ಯಾರಲ್ಲಿ[illegible]ಂದು ಹೇಳುವದೇ ಪ್ರಯಾಸವಾಗಿದೆ. ಈ ಸಭೆಯು ಸಲಹೆ ಕೊಡಬೇಕೆಂದಿರುವ ಚೀಫ್ ಕಮಿಷನರಿಗೇ ಪೂರ್ಣ ಅಧಿಕಾರ ಇರುವುದಿಲ್ಲ. ಏಕೆಂದರೆ ಅನೇಕ ಬಾರಿ ಅವರು ಕೇಂದ್ರ ಸರಕಾರದ ಮೇಲೆ ದೂರು ಹೊರಿಸುತ್ತಾರೆ. ಆದರೆ ನಾವು ಕೇಂದ್ರ ಸರಕಾರವನ್ನು ಕಾಣಲು ಬರುವಾಗ ಇನ್ನೊಂದು ವಿಧದ ವಾದವು ಇಲ್ಲಿ ಕಂಡುಬರುತ್ತದೆ. ಅವರು ಬಿರಳಿಸ್ತಿ ಹೀಗೆ ಹೇಳುತ್ತಾರೆ. "ನಿಮಗೆ ಶಾಸನ ಸಭೆ ಇದೆ. ನಿಮಗೆ ಪ್ರತ್ಯೇಕ ಬಜೆಟ್ಟಿದೆ. ನೀವು ಹೆಚ್ಚು ಕಡಿಮೆ ಒಂದು ಪ್ರಾಂತ್ಯದಂತೆ ಇದ್ದೀರಿ. ಇದು ನಿಮಗೆ ಸಂಬಂಧಿಸಿದ ವಿಚಾರ. ಇಲ್ಲಿಂದ ಏನೂ ಮಾಡಲಾಗುವದಿಲ್ಲ." ಈ ರೀತಿಯಲ್ಲಿ ಕೊಡಗಿನ ಸ್ಥೈನಂದಿನ ಪ್ರಶ್ನೆಗಳು ಒಂದೆಡೆಯಿಂದ ಮತ್ತೊಂದೆಡೆಗೆ ತಳ್ಳಲ್ಪಟ್ಟು ನಾವು ಇದಕ್ಕೆ ಪರಿಹಾರ ಪಡೆಯಲು ಅಶಕ್ತರಾಗಿದ್ದೇವೆ.

ಘಟನಾತ್ಮಕವಾದ ಈ ವಿಚಾರವನ್ನು ಬಿಟ್ಟು ಈ ಸಭೆಯ ವಿಚಿತ್ರ ಸ್ಥಾನವನ್ನು ವಿಮರ್ಶಿಸಬೇಕಿದೆ. ಠರಾವುಗಳನ್ನು ಪಾಸು ಮಾಡುವಷ್ಟರ ಮಟ್ಟಿಗೆ ಈ ಸಭೆಯು ಪೂರ್ಣ ಸಲಹಾತ್ಮಕವಾದುದು. ಬಜೆಟ್ಟಿನ ತಯಾರಿಯ ಮಟ್ಟಿಗೆ ಅದು ಆಡಳಿತಕ್ಕೆ ಸಂಬಂಧಿಸಿದ ವಿಚಾರವಾಗಿದ್ದು ತಯಾರಿಸಿದ್ದನ್ನು ಒಪ್ಪಬೇಕು. ಮಸೂದೆಗಳ ಮಟ್ಟಿಗೆ ಈ ಕೌನ್ಸಿಲಿಗೆ ನಮ್ಮ ಪ್ರಾಂತೀಕ ವಿಚಾರಗಳ ಬಗ್ಗೆ ಸ್ವಲ್ಪ ಅಧಿಕಾರವಿದೆ. ಮಸೂದೆಗಳು ಕೌನ್ಸಿಲಿನ ಮುಂದೆ ಬರುತ್ತವೆ. ಆದರೆ ಈ ಬಿಲ್ಲುಗಳನ್ನು ತಿದ್ದುಪಡಿ ಮಾಡಲು ಸಾಧ್ಯವಿಲ್ಲದ ಆ ಪರಿಸ್ಥಿತಿಯನ್ನು ನೋಡಿರಿ. ತಮಾಷೆಯ ವಿಚಾರವದು. ಒಬ್ಬ ಮೆಂಬರು ಮಸೂದೆಗೆ ತಿದ್ದುಪಡಿ ಸೂಚಿಸಬೇಕಾದರೆ ಆ ತಿದ್ದುಪಡಿಯನ್ನು ಕೇಂದ್ರ ಸರಕಾರಕ್ಕೆ ಕಳುಹಿಸಿ ಅದಕ್ಕೆ ಒಪ್ಪಿಗೆ ಪಡೆಯಬೇಕು. ಈ ಕೌನ್ಸಿಲಿನಿಂದ ಆಗಿಂದಾಗ್ಗೆ, ಮಸೂದಲ್ಪಟ್ಟ ಶಾಸನ ಕಾರ್ಯದಲ್ಲಿ ಒಂದೇ ಒಂದು ತಿದ್ದುಪಡಿಯು ಅಂಗೀಕರಿಸಲ್ಪಟ್ಟಿಲ್ಲ. ಸಿಲೆಕ್ಟ್ ಕಮಿಟಿಗೆ ಒಪ್ಪಿಸುವ ಅನುವಿರುವದೇನೋ ನಿಜ. ಆದರೆ ಸಿಲೆಕ್ಟ್ ಕಮಿಟಿಯಿಂದ ಹೊರ ಬರುವ ವರೆಗೆ ಯಾ ಬೇರಾವ ಸಂದರ್ಭದಲ್ಲಿ ಯಾವುದೇ ಮೆಂಬರು ಅಟಕ್ಕೆ ತಿದ್ದುಪಡಿ ಸೂಚಿಸಲು ಅಧಿಕಾರ ಹೊಂದಿಲ್ಲ. ನಿಶ್ಚಿತ ಮಸೂದೆಗೆ ಮೆಂಬರು ತನ್ನ ತಿದ್ದುಪಡಿಯ ನೋಟೀಸು ಕೊಟ್ಟಾಗ ಈ ತಿದ್ದುಪಡಿಗಳು ಅವುಗಳು ಒಪ್ಪಲ್ಪಡಬೇಕೋ ಯಾ ಬೇಡವೋ ಎಂಬ ಚೀಫ್ ಕಮಿಷನರ ಟಿಪ್ಪಣಿಗಳೊಡನೆ ಕೇಂದ್ರಕ್ಕೆ ಕಳುಹಿಸಲ್ಪಡುವವು. ಕೇಂದ್ರದಲ್ಲಿ ಸಂಬಂಧಿಸಿದ ವಿವಿಧ ಇಲಾಖೆಯವರು ಇದನ್ನು ಪರಿಶೀಲಿಸುತ್ತಾರೆ. ಒಂದು ಇಲಾಖೆಯು 'ಈ ತಿದ್ದುಪಡಿಯನ್ನು ಒಪ್ಪಬಹುದು' ಎಂದು ಹೇಳಬಹುದು. ಆದರೆ ಬೇರೆ ಇಲಾಖೆಯವರು 'ಇದನ್ನು ಒಪ್ಪಕೂಡದು. ಚೀಫ್ ಕಮಿಷನರು ಅದನ್ನು ಒಪ್ಪಕೂಡದೆಂದು ಹೇಳಿದ್ದಾರೆ' ಎಂದು ಹೇಳುವರು. ಇಂಥಾ ಪರಿಸ್ಥಿತಿಯಲ್ಲಿ ಅಂಥಾ ಕೋರಿಕೆಯು ಹಾಗೂ ಪ್ರಯೋಜನವಿಲ್ಲದ ಶಾಸನಸಭೆಗಳಿಂದ ಯಾವ ರೀತಿಯ ಪ್ರಜಾಪ್ರಭುತ್ವವನ್ನು ಅನುಭವಿಸಲಾಗುತ್ತಿವೆಯೆಂಬುದನ್ನು ನನಗೆ ತಿಳಿಯಬೇಕಾಗಿದೆ. ಈ ರೀತಿಯ ಸಭೆಗಳನ್ನು ಬೇರೆ ಇತರ ಕೆಲವು 'ಸಿ' ಸಂಸ್ಥಾನಗಳಿಗೆ ಕೊಡುವ ಸೂಚನೆ ಇದೆಯೆಂದು ತಿಳಿದೆನು. ಆ ರೀತಿಯ ಶಾಸನ ಸಭೆಗಳು ದೊರೆಯುವದಾದರೆ ಆ ಭಾಗದ ಜನರ ಬಗ್ಗೆ ನಾನು ಸಂತಾಪ ಸೂಚಿಸಬೇಕಾಗುತ್ತದೆ. ಏಕೆಂದರೆ ಈ ರೀತಿಯ ಶಾಸನ ಸಭೆಗಳ ವ್ಯಕ್ತಿಗತ ಅನುಭವ ನನಗಿದೆ. ನಾವು ಅನುಭವಿಸುತ್ತಿರುವಂಥಾ ಅಪೂರ್ವ ಸವಲತ್ತುಗಳು ಅವರಿಗೆ ಕೊಡಲ್ಪಡಲಾರವೆಂದು ಆಶಿಸುತ್ತೇನೆ!

ಆಡಳಿತ ಯೋಜನೆಯ ಇನ್ನೊಂದು ಮುಖವನ್ನು ನೋಡಿರಿ. ಕೊಡಗು ಒಂದೇ ಜಿಲ್ಲೆಯ ಒಂದು ಪ್ರಾಂತ. ಜೀವನಾಂತ್ಯದ ವರೆಗೆ ಖಾಯಂ ಆಗಿರತಕ್ಕ ನಮ್ಮ ಗಜೆಟೆಡ್ ಉದ್ಯೋಗಸ್ಥರಿದ್ದಾರೆ. ಈ ರೀತಿ ಗಜೆಟೆಡ್ ಉದ್ಯೋಗಸ್ಥರು ಖಾಯಂ ಆದಾಗ ಏನಾಗುವದೆಂಬುದು ನನಗೆ ತಿಳಿದಿದೆ. ಇಲ್ಲಿ ನಾನು ವಿವರಗಳನ್ನು ಹೇಳಲಾರೆ. ನಾನು ಹೇಳಲು ಪ್ರಾರಂಭಿಸಿದರೆ ಆ ಅಧಿಕಾರಿಗಳ ಹೆಸ್ಸರಿಯಲ್ಲಿ ಹಾಗೆ ಹೇಳುವುದು ಸೂಕ್ತವೇ ಎಂದು ಕೇಳಬಹುದು. ಆದ್ದರಿಂದ ಆ ವಿವರಗಳ ಬಗ್ಗೆ ನಾನು ವಾದಿಸುವದಿಲ್ಲ. ಇದನ್ನು ಆದರೆ ಮಾತ್ರ ಕೇಳುತ್ತೇನೆ. ಈ ಮೊದಲಿನ ನನ್ನ ಒಂದು ಪ್ರಶ್ನೆಗೆ ಗೃಹಮಂತ್ರಿಗಳು ಉತ್ತರ ಕೊಟ್ಟಂತೆ ಈ ಅಧಿಕಾರಿಗಳ ನಗರವರಿಗೆ ಬೇರೆ ಏರ್ಪಾಡು ಮಾಡಲು ವ್ಯವಸ್ಥೆ ಮಾಡಲು ಅಶಕ್ತರಾಗಿ ಆಡಳಿತದಲ್ಲಿ ಜನಾನುರಾಗವಿರುವ ಮುಂದಾಳುಗಳನ್ನು ಸೇರಿಸುವ ಏರ್ಪಾಡು ಮಾಡದಿದ್ದರೆ ಆಡಳಿತವಲ್ಲ ಯಾವುದೇ ರೀತಿಯ ನ್ಯಾಯ ನಿಯಮಗಳಿರುವದು ಹೇಗೆ ಸಾಧ್ಯ? ದೈನಂದಿನ ಆಡಳಿತದಲ್ಲಿ ಅಧಿಕಾರಿಗಳಲ್ಲದವರ ಅಭಿಪ್ರಾಯ ದೊರೆಯುವಂತೆ ಅವರನ್ನು ಸೇರಿಸಿಕೊಳ್ಳಬೇಕೆನ್ನಲು ಇದು ಪ್ರಾಮುಖ್ಯ ಕಾರಣವಾಗಿದೆ. ಸರಕಾರವು ಈ ಸಮಸ್ಯೆಯನ್ನು ಮುರಿಯಲು ಯಾ ಬದಿಗೊತ್ತಲು ಅನಾವಶ್ಯದ ವಾದವನ್ನು ಹೂಡಲಾರದೆಂದು ನಾನು ಆಶಿಸುತ್ತೇನೆ.

ಅಲ್ಲಿ ಈ ಮತ್ತೊಂದು ಸಮಸ್ಯೆ ಇದೆ. ಕೊಡಗಿನ ಭವಿಷ್ಯದ ಬಗ್ಗೆ ರಾಜಕೀಯ ಕ್ಷೇತ್ರದಲ್ಲಿ ಭಿನ್ನಾಭಿಪ್ರಾಯವಿದೆಯೆಂದು ಅನೇಕ ಬಾರಿ ಹೇಳಲಾಗಿದೆ. ಸರಕಾರವು ಕಡೇ ತೀರ್ಮಾನವನ್ನು ಮಾಡುವ ವರೆಗೆ ಅದು ಇದೆ, ಇರಬೇಕಾಗಿದೆ, ಇದ್ದೇ ಇರುವದು. ಈ ರೀತಿಯ ಒಂದು ಭಿನ್ನಾಭಿಪ್ರಾಯವು ಬಲವಾಗಿ ಸಾಗುತ್ತಿದ್ದರೆ ಅದರ ಬಗ್ಗೆ ನಿಶ್ಚಿತವಾದ ಒಂದು ತೀರ್ಮಾನವನ್ನು ಕೊಡಲಾರದ ನಿಮ್ಮ ಹಿಂಜರಿಯ ವಿಕೆಯೇ ಕಾರಣ. ಇದರ ಬಗ್ಗೆ ತೀರ್ಮಾನಮಾಡದೆ ನೀವು ಜಾರುತ್ತಿರುವದೇ ಕಾರಣ. 'ನೀವು ಈ ವಿಚಾರದಲ್ಲಿ ಒಂದಾಗಿಲ್ಲ; ಆದ್ದರಿಂದ ಒಂದು ತೀರ್ಮಾನಕ್ಕೆ ಬರಲು ನಮಗೆ ಅಸಾಧ್ಯವಾಯಿತು' ಎಂಬ ವಾದವನ್ನು ನೀವು ಮುಂದುಮಾಡಬಾರದು........ (ಅಷ್ಟರಲ್ಲಿ ಸಮಯವಾಯಿತೆಂದು ಗಂಟೆ ಬಾರಿಸಿದ ಕಾರಣ) ನಾನು ಎತ್ತಿದ ಈ ಕೆಲವು ವಿಚಾರಗಳ ಬೆಳಕಿನಲ್ಲಿ ಮಂತ್ರಿಗಳು ಠರಾವನ್ನು ಜಾರಿಗೆ ತರಬೇಕೆಂದು ಕೇಳುತ್ತೇನೆ. ಹೇಗೂ ಒಂದು ಅನುಕೂಲ ತೀರ್ಮಾನವಾಗುವದೆಂದು ಆಶಿಸುತ್ತೇನೆ.

ರೂ. ೫೦,೦೦೦ ಬೆಲೆಯ ಆಭರಣಗಳು ಕೊಡಲ್ಪಡುತ್ತಿವೆ

ಡೆಲ್ಲಿಯಲ್ಲಿ ಚಿನ್ನವು ತೊಲೆಗೆ ರೂ. ೩

ಭಾರತದ ಪ್ರಾಮುಖ್ಯ ಪತ್ರಿಕೆ ಮತ್ತು ಮಾಸಿಕಗಳಲ್ಲದೆ ನಮ್ಮ ನೂರಾರು ಗ್ರಾಹಕರು ಇವನ್ನು ಮುಕ್ತ ಕಂಠದಿಂದ ಹೊಗಳಿದ್ದಾರೆ. ಸಂಯುಕ್ತ ಪ್ರಾಂತದ ಮಹಾಲಿಯ ಸೇಠ್ ನಂದ ಕಿಶೋರ ಬಿ. ಎ. ಎಲ್. ಎಲ್. ಬಿ. ಯವರು ಹೀಗೆ ಬರೆಯುತ್ತಾರೆ. "ಮಿನರ್ವ ಹೊಸ ಚಿನ್ನವನ್ನು ಆಭರಣಗಳೊಡನೆ ಕಳುಹಿಸಿರಿ. ಈ ಚಿನ್ನವು ಬರಿ ಹಚ್ಚಿದಾಗ ಅಪ್ಪಟ ಚಿನ್ನದಂತೆಯೇ ತೋರುವದಲ್ಲದೆ ಇವನ್ನು ಶಾಂತಿಯಾಗಿ ಎಳೆಯಬಹುದು. ಕಾಗದಂತೆ ಅಗಲವಾಗಿ ಹರಡಬಹುದು. ಇದರ ಮೆರುಗು ಚಿನ್ನದಂತೆಯೇ ಉಳಿಯುವದು. ಇದರಿಂದ ಯಾವ ಮಾದರಿಯ ನಗಗಳನ್ನೂ ಮಾಡಿಸಬಹುದು. ಇಂಥ ಜಗತ್ತಿನ ಹೊಸ ಶೋಧ ಬೆಲೆ ಒಂದು ತೊಲಕ್ಕೆ ರೂ. ೩-೦-೦ ಮೂರು, ತೊಲಗಳಿಗೆ ರೂ. ೮/- ಆರುತೊಲಗಳಿಗೆ ರೂ. ೧೫/- ಮತ್ತು ಹನ್ನೆರಡು ತೊಲಗಳಿಗೆ ರೂ. ೨೮/-

ಈ ಚಿನ್ನವನ್ನು ಹಿಂದೂದೇಶದ ಮೂಲೆ ಮೂಲೆಗಳಲ್ಲಿ ಪ್ರಚಾರಿಸುವ ದೃಷ್ಟಿಯಿಂದ ಕಂಪೆನಿಯು ಈ ಕೆಳಗಿನ ಆಭರಣಗಳ ಬಹುಮಾನವನ್ನು ಗ್ರಾಹಕರಿಗೆ ಕೊಡಲು ನಿರ್ಧರಿಸಿದೆ. ಮೂರು ತೊಲಗಳನ್ನು ಕೊಳ್ಳುವವರಿಗೆ ನಾಲ್ಕು ಡೈಮಂಡ್ ಕಟ್ ಬಳೆಗಳೂ, ಎರಡು ಉಂಗುರಗಳು. ಆರು ತೊಲೆ ತೆಗೆದುಕೊಳ್ಳುವವರಿಗೆ ಒಂದು ನೆಕ್ಲೇಸು, ಎರಡು ಉಂಗುರಗಳು, ಒಂದು ಜೊತೆ ವಾಲೆ, ನಾಲ್ಕು ಬಳೆಗಳು ಮತ್ತು ಹಣೆಗೆ ಒಂದು ಟಿಕ್ಕಾವು ದೊರೆಯುವುದು. ಹಾಗೆಯೇ ೧೨ ತೊಲ ಪಡೆಕೊಳ್ಳುವವರಿಗೆ ಒಂದು ರಾಣಿ ಹಾರ್ ನೆಕ್ಲೇಸ್, ಎಂಟು ಬಳೆ, ಎರಡು ಉಂಗುರಗಳು, ಎರಡು ಜೊತೆವಾಲೆ, ಒಂದು ಟಿಕ್ಕಾ. ಈ ಆಭರಣಗಳೆಲ್ಲ ಇಮಿಟೇಶನ್ ರತ್ನಗಳಿಂದ ಕೂಡಿದವು. ತೃಪ್ತಿಯಾಗದಿದ್ದರೆ ಬೆಲೆಯನ್ನು ವಾಪಾಸು ಮಾಡುವ ಭರವಸೆ ಕೊಡಲಾಗಿದೆ. ಏಜಂಟರುಗಳಾಗಿ ತಿಂಗಳಿಗೆ ರೂ. ೩೦೦ ಯಾ ೫೦೦ ಸಂಪಾದಿಸಲು ಒಳ್ಳೆದಾರಿ. ಈ ಸುಸಂದರ್ಭವನ್ನು ಕಳೆಕೊಳ್ಳದಿರಲು ದಯವಿಟ್ಟು ಇಂದೇ ಬರೆಯಿರಿ. ಅಂಚೆ ಹಾಸಲು ಮತ್ತು ಪ್ಯಾಕಿಂಗು ಮುಫತ್ತು.

Minerva New Gold ornaments House.
Bara Hindu (K. M.) Delhi 6.

4-2

ಕೊಡಗು

ತಾ. ೩೦-೩-೧೯೫೧ನೇ ಶುಕ್ರವಾರ

ಅಧ್ಯಾಪಕರ ಸ್ಥಾನ ಮಾನಗಳು.

"ಶಿಕ್ಷಣದ ಮಹತ್ವವನ್ನು ನಾವಿನ್ನೂ ಅರಿತಿಲ್ಲ. ಶಾಲಾ ಕಾಲೇಜುಗಳ ಸಂಖ್ಯೆ ಹೆಚ್ಚಾಗುವದರಿಂದಲೇ ಶಿಕ್ಷಣದ ಪ್ರಗತಿಯೆಂದು ಭಾವಿಸುತ್ತೇವೆ. ಇಂದಿನ ಶಿಕ್ಷಣ ಕ್ರಮದಲ್ಲಿ ಸತ್ವವಿರುವದಿಲ್ಲ. ವಿಶ್ವಾವಲೋಕನ ಮಾಡುವ ದೃಷ್ಟಿಕೋನ ನಮ್ಮಲ್ಲಿರಬೇಕು. ಕಲಿಯುಕ್ಕ ಅಂಕ ಶ ಲಿಯುಲ್ಲಿ ಮಾತ್ರವಲ್ಲ; ಹೊರಗೂ ಇದೆಯೆಂಬುದನ್ನು ನಾವು ಮರೆತಿದ್ದೇವೆ. ಅಧ್ಯಾಪಕರ ವೇತನ ಬಹಳ ನಿಕೃಷ್ಟದ್ದಾಗಿದೆ" ಈ ಮಾತುಗಳನ್ನು ಡೆಲ್ಲಿಯಲ್ಲಿ ಮೊನ್ನೆಯಾಗಿ ನಡೆದ ಪ್ರಾಂತೀಕ ಶೈಕ್ಷಣಿಕ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದ ಕೇಂದ್ರ ಸಂಸತ್ತಿನ ಅಧ್ಯಕ್ಷರಾದ ಶ್ರೀ ಜಿ. ವಿ. ಮಾವ್‌ಲಂಕರ್ ಇವರು ಹೇಳಿದರು. ಈ ಮಾತುಗಳು ಸಮಗ್ರ ಭಾರತಕ್ಕೆ ಹೇಗೋ ಹಾಗೆಯೇ ಕೊಡಗಿಗೂ ಅನ್ವಯಿಸುತ್ತವೆ.

ದೇಶವು ಪ್ರಗತಿಶೀಲ ಮಾರ್ಗದಲ್ಲಿ ಮುನ್ನಡೆದು ಸಕಲ ಕ್ಷೇತ್ರಗಳಲ್ಲಿ ಅಭಿವೃದ್ಧಿಗೊಳ್ಳಬೇಕಾದರೆ ದೇಶದಲ್ಲಿ ವಿದ್ಯಾವಂತ ಜನರು ಹೆಚ್ಚಾಗಬೇಕು. ಎಲ್ಲರೂ ದೇಶದಲ್ಲಿ ವಿದ್ಯಾವಂತರಾದರೇನೇ ದೇಶದ ಚೇತನವು ಚಿಮ್ಮಿ ತೊಡಗುವದೆಂಬುದಕ್ಕೆ ವಿದ್ಯೆಯಲ್ಲಿ ಮುಂದರಿದಿರುವ ರಾಷ್ಟ್ರಗಳ ನಿದರ್ಶನಗಳೇ ಸಾಕ್ಷಿ. ವಿದ್ಯಾವಂತರ ನಾಡು ನಾಗರೀಕತೆಯ ಬೀಡೆನಿಸುವದು. ಎಲ್ಲರೂ ರಾಜಕೀಯ ಮತ್ತಿತರ ವಿಚಾರಗಳನ್ನು ಅರಿತುಕೊಳ್ಳುವರಾದ್ದರಿಂದ ದೇಶದ ನೈತಿಕ ಮಟ್ಟವೂ ಏರುವದು. ಆದ್ದರಿಂದ ಅನ್ನದ ಪ್ರಶ್ನೆಯನಂತರ ದೇಶದ ಶಿಕ್ಷಣದ ಪ್ರಶ್ನೆಯೇ ಪ್ರಾಮುಖ್ಯವಾದುದೆಂದು ಹೇಳಬಹುದು.

ಈ ರೀತಿ ಜನತೆಯನ್ನು ವಿದ್ಯಾವಂತರನ್ನಾಗಿ ಮಾಡುವ ಜವಾಬ್ದಾರಿ ಶಿಕ್ಷಕರ ಮೇಲಿದೆ. ಅವರೇ ಜನತೆಯ ಜೀವನದಲ್ಲಿ ಬೆಳಕನ್ನು ಚೆಲ್ಲಿ ಅವರಿಗೆ ಪಥದರ್ಶನ ಮಾಡಬಲ್ಲವರು. ದೇಶವೆಂಬ ನೌಕೆಯ ಚುಕ್ಕಾಣಿ ಅವರಲ್ಲಿದೆಯೆಂದರೆ ಉತ್ಪ್ರೇಕ್ಷೆಯಾಗಲಾರದು. ಮಕ್ಕಳ ಮನಸ್ಸಿನಲ್ಲಿ ದೇಶಪ್ರೇಮ, ವಿಶಾಲ ಭಾವನೆ ಮೊದಲಾದುವನ್ನು ಮೂಡಿಸಿ ದೊಡ್ಡವರಾದ ಮೇಲೆ ಹಿರಿಯ ಕೆಲಸಕ್ಕೆ ಅಣಿಮಾಡುವ ಅಧ್ಯಾಪಕರ ಕಾರ್ಯವು ರಾಜಕೀಯ ಧುರೀಣರ ಕೆಲಸಕ್ಕಿಂಥಲೂ ಮಹತ್ವಪೂರ್ಣವಾದುದು. ಆದರೆ ಅಧ್ಯಾಪಕರ ಈ ಸ್ಥಾನಮಾನಗಳನ್ನು ಅರಿತವರೆಷ್ಟು ಜನರಿದ್ದಾರೆ?

ಅಧ್ಯಾಪಕರು ತಮ್ಮ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿರ್ವಹಿಸಬೇಕಾದರೆ ಅವರ ದೃಷ್ಟಿ ಆ ಒಂದು ಕಡೆಗಿರುವಂತೆ ಅನುಕೂಲತೆ ಇರಬೇಕು. ಹೊಟ್ಟೆ ತುಂಬಿಸಲಿಕ್ಕಾಗಿ ಬೇರೆಡೆ ಹುಡುಕುವಂತಿರಬಾರದು. ಅಂದರೆ ಅವರಿಗೆ ಯೋಗ್ಯ ವೇತನ ಕೊಡಲ್ಪಡಬೇಕು. ಆದರೆ ಸಂಸ್ಥಿತಿ ಹೇಗಿದೆ? ಇಂದಿನ ಸಮಾಜದಲ್ಲಿ, ಈ ಆಡಳಿತ ರಚನೆಯಲ್ಲಿ ಅತೀ ಕಡಿಮೆ ದರದ ಉದ್ಯೋಗಿಗಳೆಂದರೆ ಅಧ್ಯಾಪಕರೇ ಎನ್ನಬೇಕಾಗಿದೆ. ಸಮಾಜವು ಇಂದು ಬ್ಯಾಂಕಿನ ದುಡ್ಡು, ಹಾಕಿದ ಕೂಟನ್ನು ನೋಡಿ ಮನುಷ್ಯನ ಬೆಲೆ ಕಟ್ಟುವದಾದ ಕಾರಣ ಪಾಪದ ಅಧ್ಯಾಪಕನಿಗೆ ಸಮಾಜದಲ್ಲೂ ಒಂದು ಸ್ಥಾನವಿಲ್ಲ. ಕಪ್ಪು ಸಂತೆಯಲ್ಲಿ ಜನರನ್ನು ಸುಲಿಗೆ ಮಾಡುವ ವ್ಯಾಪಾರಿಗೆ, ಅಧಿಕಾರದ ದುರುಪಯೋಗ ಮಾಡಿ ಹಣಗಳಿಸುವ ಅಧಿಕಾರಿಗೆ ಬೆಲೆ ಇದೆ. ಆದರೆ ಭಾವೀ ಜನಾಂಗವನ್ನು ತಯಾರುಗೊಳಿಸಿ ರಾಷ್ಟ್ರರಚನೆ ಮಾಡುತ್ತಿರುವ ಕರ್ಮಯೋಗಿ, ಅಧ್ಯಾಪಕನಿಗೆ ಬೆಲೆ ಇಲ್ಲ.

ಸಾರ್ವಜನಿಕರು ಮತ್ತು ಸರಕಾರವು ಅಧ್ಯಾಪಕನ ಸ್ಥಿತಿಯನ್ನು ಉತ್ತಮಗೊಳಿಸಲು ಯತ್ನಿಸದಿದ್ದರೂ ಬಡ ಅಧ್ಯಾಪಕನು ಹಲವು ಬಾರಿ ಹಲವು ರೀತಿಯಿಂದ ಕೂಗಿಕೊಂಡಿದ್ದಾನೆ. ಸೌಮ್ಯರೀತಿಯಲ್ಲಿ ತನ್ನ ಪಾಡನ್ನು ನಿವೇದಿಸಿದಾಗ ಸರಕಾರ ಲಕ್ಷಿಸುವದಿಲ್ಲ. ಮುಷ್ಕರ, ಸತ್ಯಾಗ್ರಹ ಮಾಡಿದಾಗ ಜನತೆಯ ಹಾಗೂ ಸರಕಾರದ ಕಣ್ಣು ಕೆಂಪಾಗುತ್ತದೆ. ಈ ರೀತಿ ಅಧ್ಯಾಪಕನ ಬೇಡಿಕೆಗಳಿಗೆ ಸರಕಾರವು ಸಹಾನುಭೂತಿ ತೋರಿದ ದಾಖಲೆಗಳು ಕಡಿಮೆಯಾದ ಕಾರಣ ಅಧ್ಯಾಪಕನು ತನ್ನ ಕಾರ್ಯದಲ್ಲಿ ಇಂದು ಆಲಸಿಗನಾಗಿದ್ದಾನೆ.

ಪರಿಣಾಮವಾಗಿ ಶಿಕ್ಷಣದಲ್ಲಿ ಯಾವದೇ ಪ್ರಗತಿ ತೋರುವದಿಲ್ಲ. ಕಲಿಸುವವರಲ್ಲಿಯೂ, ಕಲಿಯುವವರಲ್ಲಿಯೂ ವಿದ್ಯೆಯ ಬಗ್ಗೆ ವಿಲಕ್ಷಣವಾದ ಅನಾದರ ತೋರಿಬರುತ್ತಿದೆ. ಕೊಡಗಿನ ಅಧ್ಯಾಪಕರು 'ಯಥಾ ದಕ್ಷಿಣಾ ತಥಾ ಪ್ರದಕ್ಷಿಣಾ' ಎಂಬ ಸೂತ್ರವನ್ನು ಅನುಸರಿಸಿದಂತೆ ತೋರುತ್ತದೆ. ತನಗೆ ದೊರೆಯುವ ವೇತನಕ್ಕೆ ಸರಿಯಾದ ಕೆಲಸ ಮಾಡುವದೆಂಬ ಭಾವನೆ ಅವರಲ್ಲಿ ಬೆಳೆಯುತ್ತಿದೆ. ಶಾಲೆಯ ಅಧ್ಯಾಪಕ ವೃತ್ತಿಯು ಇಂದು ಉಪಕಸುಬಾಗಿದೆ. ಮನೆಯ ಕಾರುಬಾರುಗಳನ್ನು ಇತರ ವ್ಯವಹಾರಗಳನ್ನು ನೋಡಿಕೊಂಡು ಪೋಲ್ಕರ್ನನ್ನು ನಿರ್ವಹಿಸಲು ಸಹಾಯಕವಾಗುವದೆಂದು ಅಧ್ಯಾಪಕರಾಗಿರುವವರೇ ಬಹಳ ಮಂದಿ. ಹೀಗೆನ್ನುವದರಿಂದ ಬಡ ಉಪಾಧ್ಯಾಯರ ಮೇಲೆ ಸವಾರಿಮಾಡಿದಂತಾದೀತು. ಇಂದು ಅಧ್ಯಾಪಕರಾಗಿರುವವರೆಲ್ಲರೂ ಆ ವೃತ್ತಿಗೆ ಯೋಗ್ಯರಾಗಿರುವವರೆಂಬುದನ್ನು ನಾವು ಒಪ್ಪುವದಿಲ್ಲವಾದರೂ ಕೆಲವರಾದರೂ ಯೋಗ್ಯರಿದ್ದಾರೆ. ಇಂದು ಅವರಿಗೆ ಲಭಿಸುವ ವೇತನದಿಂದಲೇ ಜೀವನ ನಡೆಸಲು ಬರುವಂತಿಲ್ಲ. ಬೇರೆ ಕಸುಬನ್ನು ಕೈಕೊಳ್ಳಲೇ ಬೇಕಿದೆ. ಈ ಅಲ್ಪ ವೇತನವನ್ನು ಮಾತ್ರ ನಂಬಿ ಆದರ್ಶನಾಗಿರು ಎನ್ನುವದಕ್ಕಿಂಥಾ ಆತ್ಮಹತ್ಯೆ ಮಾಡಿಕೋ ಎಂದು ಹೇಳುವದು ಅಭಾಸವಾಗದು.

ಭಾರತದ ಶಿಕ್ಷಣ ಇಲಾಖೆಯ ಡಾ. ತಾರಾಚಂದರು ಹೇಳಿದಂತೆ ಅಧ್ಯಾಪಕನ ವೇತನ ಸಾಧಾರಣ ಸಿಪಾಯಿಯ ವೇತನಕ್ಕಿಂಥಾ ಇಂದು ಕಡಿಮೆ ಇದೆ. ಹಾಗಿರುವಾಗ ದೇಶದ ಹಿತದೃಷ್ಟಿಯಿಂದ ಅಧ್ಯಾಪಕರ ಸ್ಥಿತಿಗತಿಗಳು ಸುಧಾರಣೆ ಹೊಂದಬೇಕು. ಅವರ ವೇತನದಲ್ಲಿ ಸುಧಾರಣೆ ಮಾಡದೆ ಅವರ ಕುಂದುಕೊರತೆಗಳನ್ನು ಎತ್ತಿ ಹೇಳುವದರಲ್ಲಿ ಅರ್ಥವಿಲ್ಲ. ಇನ್ನಾದರೂ ಸರಕಾರವೂ, ಜನತೆಯೂ ಅಧ್ಯಾಪಕನ ಹಿತವೇ ಭಾವೀಜನಾಂಗದ ಅರ್ಥಾತ್ ದೇಶದ ಹಿತವೆಂದು ಅರಿತು ವರ್ತಿಸಬೇಕಾಗಿದೆ.

ವರ್ತಮಾನ.

ಕೋರಂ ಇಲ್ಲದೆ ಮುಂದರಿಸಲ್ಪಟ್ಟ ದಕ್ಷಿಣ ಕೊಡಗು ಸಹಕಾರ ಸಂಘದ ವಾರ್ಷಿಕ ಸಭೆಯು ತಾ. ೮-೪-೫೧ರಲ್ಲಿ ನಡೆಯುವದು.

ಶ್ರೀ. ಕುಪ್ಪಂಡ ಎಂ. ಅಚ್ಚಯ್ಯನವರು ಕೊಡವ ವಿದ್ಯಾನಿಧಿಗೆ ರೂ ೫೦೦/- ಕೊಟ್ಟು ಆ ಫಂಡಿನ ಜೀವಾವಧಿ ಸದಸ್ಯರಾಗಿರುವರು.

ಜಿಲ್ಲಾ ವಿದ್ಯಾಧಿಕಾರಿಯಾಗಿದ್ದು ನಿವೃತ್ತರಾಗಿರುವ ಶ್ರೀ. ಬಿ. ಎಸ್. ಕುಶಾಲಪ್ಪನವರನ್ನು ಸತ್ಕರಿಸಲು ಅಖಿಲ ಕೊಡಗು ಉಪಾಧ್ಯಾಯರ ಸಂಘದವರು ತಾ. ೩೧-೩-೫೧ರಲ್ಲಿ ಮಡಿಕೇರಿ ಹೈಸ್ಕೂಲು ಆವರಣದಲ್ಲಿ ಸಭೆ ನಡೆಸಿ ಅವರಿಗೆ ಒಂದು ಬಿನ್ನವತ್ತಳೆಯನ್ನರ್ಪಿಸುವರು.

ಮಾಜಿ ಸಿಪಾಯಿಯವರ ಸಹಕಾರ ಸಂಘದವರಿಂದ ಹೊಸದಾಗಿ ಪ್ರಾರಂಭಿಸಲ್ಪಡಲಿರುವ ಬಸ್ ಸರ್ವಿಸಿಗೆ ಒಬ್ಬ ಡ್ರೈವರನೂ, ಒಬ್ಬ ಕಂಡಕ್ಟರನೂ, ಒಬ್ಬ ಕ್ಲೀನರನೂ ಬೇಕಾಗಿದ್ದಾರೆ. ಕುತೂಹಲವಿರುವ ಮಾಜಿ ಸಿಪಾಯಿಗಳು ತಾ ೧೦ರೊಳಗೆ ಎಂಪ್ಲಾಯ್‌ಮೆಂಟ್ ಆಫೀಸಿನಲ್ಲಿ ಹೆಸರು ರಿಜಿಸ್ಟರು ಮಾಡಿ ತಾ ೧೦-೪-೫೧ರಲ್ಲಿ ಹಾಜರಾಗತಕ್ಕದೆಂದು ತಿಳಿಸುತ್ತಾರೆ.

ಮಡಿಕೇರಿ ಪುರಸಭೆಯ ಕಳೆದ ಚುನಾವಣೆಯ ಸಂಬಂಧ ನಡೆದ ತಕರಾರುಗಳ ಕಾರಣ ಶ್ರೀ ಕೆ. ಮಲ್ಲಪ್ಪನವರು ರಾಜಿನಾಮೆ ಇತ್ತು ತೆರವಾದ ಸ್ಥಳಕ್ಕೆ ತಾ ೨೪ರಲ್ಲಿ ಚುನಾವಣೆ ನಡೆದು ಶ್ರೀ ಮಲ್ಲಪ್ಪನವರಿಗೆ ೧೫೭ ಮತಗಳೂ, ವಿರೋಧಿಸಿದ್ದ ಶ್ರೀ ವೀರಪ್ಪನವರಿಗೆ ೨೯ ಮತಗಳೂ ದೊರಕಿ ಶ್ರೀ ಮಲ್ಲಪ್ಪನವರು ಆರಿಸಲ್ಪಟ್ಟಿರುವರು.

ಮಡಿಕೇರಿಗೆ ತಾ ೨೪-೩-೫೧ ರಲ್ಲಿ ೫೩ ಸೆಂಟೂ, ತಾ ೨೭ ರಲ್ಲಿ ೧ ಇಂಚು ೨ ಸೆಂಟೂ, ತಾ ೨೮ ರಲ್ಲಿ ೭೨ ಸೆಂಟೂ ಮಳೆ ಬಿದ್ದಿದೆ.

ಸಾರ್ವಜನಿಕ ಸಭೆಗಳು

ಮೂರ್ನಾಡು

ತಾರೀಕು ೨೨-೩-೫೧ ರಲ್ಲಿ ಮೂರ್ನಾಡಿನ ಪಾಂಡಾಣೆ ಮಂದಿನಲ್ಲಿ ಸಾರ್ವಜನಿಕ ಸಭೆಯೊಂದು ಶ್ರೀ ಮಂಡೆಯಂಡ ದೇವಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು. ಶ್ರೀ ಕೆ. ಟಿ. ಉತ್ತಪ್ಪನವರು ಕೊಡಗಿನ ರಾಜಕೀಯ ಸ್ಥಿತಿಯನ್ನು ವಿವರಿಸಿದರು. ನಂತರ ಈ ಕೆಳಗಿನ ಠರಾವುಗಳು ಸಭೆಯ ಮುಂದಿಡಲ್ಪಟ್ಟವು

(೧) ಕೊಡಗಿನ ಜನರ ಅಭಿಪ್ರಾಯವನ್ನು ತೆಗೆಯದೆ ಕೇಂದ್ರ ಸರಕಾರವು ಕೊಡಗಿನ ಭವಿಷ್ಯದ ಬಗ್ಗೆ ಇಂದಲ್ಲ ನಾಳೆ ಸಂಯೋಜನೆಯೇ ಉಚಿತವೆಂದು ಹೇಳಿದ್ದನ್ನು ಈ ಸಭೆಯು ಖಂಡಿಸುತ್ತದೆ. ಕೊಡಗಿನ ಜನರ ಅಭಿಪ್ರಾಯವನ್ನು ತೆಗೆದೇ ಭವಿಷ್ಯವನ್ನು ನಿರ್ಣಯಿಸಬೇಕೆಂದು ಈ ಸಭೆಯು ಕೇಂದ್ರ ಸರಕಾರವನ್ನು ಕೇಳುತ್ತದೆ.

(೨) ಕೊಡಗನ್ನು ಪ್ರತ್ಯೇಕ ಪ್ರಾಂತವಾಗಿಟ್ಟು ಜವಾಬ್ದಾರಿ ಸರಕಾರ ಒಡನೆ ಸ್ಥಾಪಿಸಬೇಕೆಂದು ಈ ಸಭೆಯು ಕೇಂದ್ರ ಸರಕಾರವನ್ನು ಕೇಳುತ್ತದೆ

(೩) ಕೇಂದ್ರ ಸಭೆಯಲ್ಲಿ ಕೊಡಗಿನ ಸದಸ್ಯರಾದ ಶ್ರೀ ಸಿ ಎಂ ಪೂಣಚ್ಚನವರು ಕೊಡಗನ್ನು ಬೇರೆ ಪ್ರಾಂತದೊಂದಿಗೆ ಸೇರಿಸುವಂತೆ ಕೇಂದ್ರದ ಮಂತ್ರಿಗಳಿಗೆ ಮನವರಿಕೆಯಾಗುವ ಅಭಿಪ್ರಾಯ ಕೊಟ್ಟದ್ದು ಕೊಡಗಿನ ಜನರ ಅಭಿಪ್ರಾಯವಲ್ಲವೆಂದು ಈ ಸಭೆಯು ಸೂಚಿಸುತ್ತದೆ

ಈ ಠರಾವುಗಳನ್ನು ಶ್ರೀ ಕೆ. ಎಂ. ಮೊಣ್ಣಪ್ಪನವರು ಸಭೆಯ ಮುಂದಿಟ್ಟರು. ಶ್ರೀ ಪಾಂಡಂಡ ಮುದ್ದಪ್ಪ, ಬಿದ್ದಂಡ ಸುಬ್ಬಯ್ಯ, ಚಂಗಂಡ ಕುಂಞಪ್ಪ, ಇವರುಗಳು ಸಮರ್ಥಿಸಿ ಮಾತಾಡಿದರು. ಶ್ರೀಗಳಾದ ಬಿ ಎನ್ ಕುಟ್ಟಪ್ಪ, ಕೋರನ ದೇವಯ್ಯ, ಬಡ್ಡನ ಪೊನ್ನಪ್ಪನವರು ವಿರೋಧಿಸಿದರು. ಒಂದನೇ ಮತ್ತು ಎರಡನೇ ಠರಾವುಗಳು ಸರ್ವಾನುಮತದಿಂದಲೂ ಮೂರನೇ ಠರಾವು ಬಹುಮತದಿಂದಲೂ ಪಾಸಾದವು.

ನಡಿಕೇರಿ

ತಾ ೨೩ ರಲ್ಲಿ ನಡಿಕೇರಿ ಗ್ರಾಮಸ್ಥರು ಶ್ರೀ ಮಾಣಿಸಂಡ ಉತ್ತಯ್ಯನವರ ಅಧ್ಯಕ್ಷತೆಯಲ್ಲಿ ಸೇರಿದ್ದರು. ಶ್ರೀ ಕೆ. ಎ ಸುಬ್ಬಯ್ಯನವರು ಮೀಟಿಂಗಿನ ಉದ್ದೇಶವನ್ನು ವಿವರಿಸಿದರು. ನಂತರ ಸರ್ವಾನುಮತದಿಂದ ಮೇಲಿನ ಅರ್ಥದ ಠರಾವುಗಳು ಪಾಸಾದವು

ಕೋಳೆರ ಕುಟುಂಬಸ್ಥರು

ತಾರೀಕು ೨೩ ರಲ್ಲಿ ಕೋಳೆರ ಕುಟುಂಬಸ್ಥರು ಶ್ರೀ ಕೋಳೆರ ನಂಜಪ್ಪನವರ ಅಧ್ಯಕ್ಷತೆಯಲ್ಲಿ ಸಭೆಸೇರಿದ್ದರು. ಶ್ರೀ ಕೆ. ಪಿ. ಕರುಂಬಯ್ಯನವರು ಸದ್ಯದ ಕೊಡಗಿನ ಸ್ಥಿತಿಯನ್ನು ವಿವರಿಸಿದರು. ನಂತರ ಮೇಲೆ ಕೊಟ್ಟಿರುವ ಠರಾವುಗಳ ಅರ್ಥದ ಗೊತ್ತುವಳಿಗಳು ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟವು.

ಕುಲ್ಲೆಟ್ಟಿರ ಕುಟುಂಬಸ್ಥರು

ತಾರೀಕು ೨೪ ರಲ್ಲಿ ಕುಲ್ಲೆಟ್ಟಿರ ಕುಟುಂಬಸ್ಥರು ಶ್ರೀ ಕುಲ್ಲೆಟ್ಟಿರ ಮುತ್ತಣ್ಣನವರ ಅಧ್ಯಕ್ಷತೆಯಲ್ಲಿ ಸಭೆಸೇರಿ ಕೊಡಗಿನ ಭವಿಷ್ಯದ ಬಗ್ಗೆ ಕೇಂದ್ರ ಶಾಸನ ಸಭೆಯಲ್ಲಿ ಸೂಚಿಸಲ್ಪಟ್ಟ ವಿವರಗಳನ್ನು ವಿಮರ್ಶಿಸಿ ಮೇಲೆ ಕೊಟ್ಟ ಅರ್ಥದ ಠರಾವುಗಳನ್ನು ಒಮ್ಮತದಿಂದ ಪಾಸುಮಾಡಿದರು.

ಚೆಂಬೆಬೆಳ್ಳೂರು

ತಾರೀಕು ೨೫ ರಲ್ಲಿ ಚೆಂಬೆಬೆಳ್ಳೂರು ಗ್ರಾಮಸ್ಥರು ಶ್ರೀ ಸೋಮೆಯಂಡ ಮಾಚಯ್ಯನವರ ಅಧ್ಯಕ್ಷತೆಯಲ್ಲಿ ಸೇರಿದ್ದರು. ಶ್ರೀಗಳಾದ ಚೆಂಬಂಡ ಮಾದಪ್ಪ ಮತ್ತು ಕೊಳುವಂಡ ನಂಜಪ್ಪ ಇವರುಗಳು ಸದ್ಯದ ಕೊಡಗಿನ ರಾಜಕೀಯ ದುರಂತವನ್ನು ಕುರಿತು ಮಾತಾಡಿದರು. ನಂತರ ಸರ್ವಾನುಮತದಿಂದ ಮೇಲಿನ ಠರಾವುಗಳಂಥಾ ಠರಾವುಗಳು ಪಾಸಾದವು.

ಸುಂಟಿಕೊಪ್ಪ

ತಾ ೨೫ ರಲ್ಲಿ ಶ್ರೀ ಬಿ ಟಿ. ವೆಂಕಟಸುಬ್ಬಯ್ಯನವರ ಅಧ್ಯಕ್ಷತೆಯಲ್ಲಿ ಸಭೆ ನೆರೆದಿತ್ತು. ಶ್ರೀಗಳಾದ ಕೆ. ಎಂ. ಮೊಣ್ಣಪ್ಪ, ಸಿ. ಡಿ. ಅಪ್ಪಯ್ಯ ಪಿ. ಎಂ. ಕಾಳಪ್ಪ ಇವರು ಮಾತಾಡಿದನಂತರ ಮೇಲಿನ ಅರ್ಥದ ಠರಾವುಗಳು ಪಾಸಾದವು.

ಓದುಗರ ಓಲೆಗಳು

ಸಂಬಂಧ ಪಟ್ಟವರಲ್ಲಿ ವಿನಂತಿ

ಸೋಮವಾರಪೇಟೆ ಟೌನ್‌ನಲ್ಲಿ ಒಂದೇ ಒಂದು ಲ್ಯಾಟ್ರಿನ್ ಸಾರ್ವಜನಿಕರ ಉಪಯೋಗಾರ್ಥವಾಗಿ ಕಟ್ಟಿಸಿರುವುದಿಲ್ಲ. ಮಾರ್ಕೆಟ್ ಕೆಳಭಾಗದಲ್ಲಿಯೂ ಮತ್ತು ಸಂತೆ ಗೊಂದಿಗಳಲ್ಲಿಯೂ, ಕೆಲವು ಹೋಟೇಲ್‌ಗಳ ಹಿಂಭಾಗದಲ್ಲಿಯೂ ಮಲ, ಮೂತ್ರ ವಿಸರ್ಜನೆ ಮಾಡುತ್ತಾರೆ. ಹಾಗೆ ಸಿಕ್ಕಿ ಸಿಕ್ಕಿದ ಜಾಗದಲ್ಲಿ ಮಲ, ಮೂತ್ರ ಮಾಡಿದರೆ ಸಾರ್ವಜನಿಕರ ಆರೋಗ್ಯಕ್ಕೆ ಹಾನಿಕರವಲ್ಲವೇ? ಬಸ್ಸುಗಳಲ್ಲಿ ಪ್ರಯಾಣ ಮಾಡುವವರಾಗಲಿ ಮಲ, ಮೂತ್ರ ವಿಸರ್ಜನೆ ಮಾಡಲು ಅವರಲ್ಲೂ ಹೆಂಗಸರು, ಮಕ್ಕಳಾದರೆ ತುಂಬಾ ತೊಂದರೆ ಇದೆ. ಇಲ್ಲಿ ಎಲ್ಲಿಯೂ ಮಲ ಮೂತ್ರ ವಿಸರ್ಜನೆಗೆ ಏರ್ಪಾಡಿಲ್ಲ. ಆದ್ದರಿಂದ ಸಂಬಂಧಪಟ್ಟವರು ಸಾರ್ವಜನಿಕರ ಹಿತದೃಷ್ಟಿಯಿಂದ ಕೂಡಲೇ ಟೌನ್‌ನಲ್ಲಿ ಆವಶ್ಯವಿರುವ ಸ್ಥಳಗಳಲ್ಲಿ ಲ್ಯಾಟ್ರಿನ್‌ಗಳನ್ನು ಕಟ್ಟಿಸಿ ಉಪಕಾರ ಮಾಡಬೇಕಾಗಿಯೂ, ಮತ್ತು ಹೋಟೇಲ್‌ಗಳಲ್ಲಿ ಹೋಟೇಲಿನವರು ಸಂಸಾರ ಸಹಿತ ವಾಸ ಮಾಡುವುದನ್ನು ಬಿಡಬೇಕೆಂದೂ, ಎಲ್ಲಾ ಹೋಟೇಲುಗಳ ಹಿಂಭಾಗದಲ್ಲಿಯೂ ಲ್ಯಾಟ್ರಿನುಗಳನ್ನು ನಿರ್ಮಿಸಿ ಮತ್ತು ಶುಚಿಯಾಗಿ ಇಟ್ಟುಕೊಳ್ಳುವಂತೆ ಹುಕುಂ ಕೊಡಬೇಕಾಗಿಯೂ ಸಾರ್ವಜನಿಕರ ಪರವಾಗಿ ನನ್ನ ವಿನಂತಿ.

ಎಚ್. ಎಂ ಚಂಗಪ್ಪ.

—ವನ ಮಹೋತ್ಸವ—

ಜುಲೈ ತಿಂಗಳಲ್ಲು ವನಮಹೋತ್ಸವನ್ನು ವಿಜೃಂಭಣೆಯಿಂದ ಜರಗಿಸಬೇಕಾಗಿ ಹುಕುಂ ಕೊಡಲಾಗುತ್ತೆ. ಕಳೆದ ವರ್ಷ ಹುಕ್ಕುಂ ಬಂದ ಕೂಡ್ಲೆ ರೈತರು ಕಾಡಿಗೆ ಹೋಗಿ ಅಲ್ಲಿ ಬೆಳೆಯುತಕ್ಕ ಗಿಡಗಳನ್ನು ಕಿತ್ತು ತಂದು ಪಾರುಪತ್ಯಗಾರರೂ, ಶ್ಯಾನುಭೋಗರುಗಳೂ ತೋರಿಸಿದ ಸ್ಥಳದಲ್ಲಿ ನೆಟ್ಟದಾಯಿತು. ಇದರ ಪ್ರತಿಫಲವೇನಾಯಿತೆಂದು ಕೇಳಿದರೆ ಕಾಡಿನಲ್ಲೂ ಗಿಡವಿಲ್ಲ ನೆಟ್ಟಲ್ಲೂ ಇಲ್ಲ. ಇಷ್ಟೊಂದು ಉಪಕಾರವಾಯಿತೇ ಶಿವಾಯಿ ಮತ್ತೇನೂ ಆಗಲಿಲ್ಲ.

ಈ ವರ್ಷ ಬೆಂಗಳೂರಿನಿಂದ ಗಿಡತರಿಸಿಕೊಡುವಂತೆ ವ್ಯವಸಾಯ ಇಲಾಖೆಯವರಿಗೆ ಅರ್ಜಿ ದಾಖಲು ಮಾಡಿದರೆ ಅವರು ನೀವೇ ತರಿಸಿಕೊಳ್ಳಿಯೆಂದು ಜವಾಬು ಕೊಟ್ಟು ಆಯಿತು. ವ್ಯವಸಾಯ ಇಲಾಖೆಯವರು ಯಾರ್ಯಾರಿಗೆ ಎಷ್ಟೆಷ್ಟು ಗಿಡ ಬೇಕು ಎಂದು ಕೇಳಿದರೆ ರೈಲಿನಲ್ಲೋ ಲಾರಿಯಲ್ಲೋ ತರಿಸಿ ಹಂಚಲು ಅನುಕೂಲವಾಗುತ್ತೆ. ನೀವೇ ತರಿಸಿಕೊಳ್ಳಿ ಎಂದು ಹುಕುಂ ಕೊಟ್ಟರೆ ಒಂದೇ ಗ್ರಾಮಕ್ಕೆ ಬೇಕಾಗುವ ೫೦ ಯಾ ೧೦೦ ಗಿಡಗಳನ್ನು ಲಾರಿಯಲ್ಲಿ ತರಿಸಿದರೆ ಅದಕ್ಕೆ ಕ್ರಯವೆಷ್ಟಾಗಬಹುದು? ರೈತರಿಗೆ ಇಷ್ಟೆಲ್ಲಾ ತಿಳುವಳಿಕೆ ಇದೆಯೋ—ವ್ಯವಸಾಯ ಇಲಾಖೆಯವರು ಮಾಮೂಲ್ ತರಿಸುತ್ತಿದ್ದವರಾಗ ಈ ವರ್ಷ ಇಂಥಾ ಹುಕುಂಗೆ ಕಾರಣವೇನೋ ತಿಳಿಯದು. ಆದ್ದರಿಂದ ಇಂಡೆಂಟ್ ಕೊಟ್ಟು ಗ್ರಾಮಗಳಿಗೆ ಹಂಚಿ ಹಂಚಲು ಗಿಡಗಳನ್ನು ತರಿಸಿಕೊಟ್ಟರೆ ವನಮಹೋತ್ಸವವನ್ನು ಸಾಂಗವಾಗಿ ನೆರವೇರಿಸಲು ಸಾಧ್ಯವಾಗುವದಲ್ಲದೆ ತೋರ್ಪಡಿಕೆಗೆ ವನಮಹೋತ್ಸವ ಮಾಡಿದಂತಾಗುವದಿಲ್ಲ ಆದ್ದರಿಂದ ಪ್ರತಿ ಗ್ರಾಮದಿಂದಲೂ ಇಂಡೆಂಟ್ ತರಿಸಿ ಗಿಡಗಳನ್ನು ಹಂಚುವಂತೆ ವ್ಯವಸಾಯ ಇಲಾಖೆಗೆ ಹುಕುಂ ಕೊಡಬೇಕೆಂಬವೇ ಈ ಬಾತ್ಮಿಯ ಉದ್ದೇಶ—ಹಣ ಬೇಕಾದರೆ ಅಡ್ವಾನ್ಸಾಗಿ ಕೊಡಲೂ ಸಹ ತೊಂದರೆ ಇಲ್ಲ

ವನ ಮಹೋತ್ಸವ ಪ್ರೇಮಿ

ನೀರಿನ ಅಭಾವ.

ನಲ್ವತ್ತೈದು ವರ್ಷಗಳ ಹಿಂದೆ ವೀರಾಜಪೇಟೆಗೆ ನೀರು ಒದಗಿಸಲು ಒಂದು ಕೆರೆಯ ಕೆಲಸವು ಪ್ರಾರಂಭವಾಯಿತು. ಆದರೆ ಅದು ಕೊನೆಗೊಳ್ಳದೆ ಕಲಸವು ಅರ್ಧದಲ್ಲಿಯೇ ನಿಲ್ಲಿಸಲ್ಪಟ್ಟಿತು. ಆ ನಿಲ್ಲಿಸಲ್ಪಟ್ಟ ಕೆಲಸವು ಪುನಹ ಪ್ರಾರಂಭವಾಗುವ ಚಿಹ್ನೆಗಳು ಕಂಡು ಬರುವದಿಲ್ಲ. ನಾಲ್ವತ್ತಾರು ವರ್ಷಗಳು ಕಳೆದರೂ ಯಾರ ಗೋಷ್ಟಿಯೂ ಈ ಕಡೆ ಇಲ್ಲ.

ವೀರಾಜಪೇಟೆಯಲ್ಲಿ ಕುಡಿಯಲು ನೀರು ದೊರಕುವ ಹಾಗಿಲ್ಲ. ಒಂದು ವೇಳೆ ನೀರಿಗೆ 0–6–0 ಪ್ರಕಾರ ಚಾರ್ಜು ಮಾಡಿ, ಸ್ನಾನ ಮಾಡಲು ತೆಗೆದುಕೊಳ್ಳುತ್ತಾರೆ! ಮುಂದೆ ಅವಸ್ಥೆ ಏನಾಗಬಹುದು ಎಂದು ತಿಳಿಯುವುದಿಲ್ಲ.

ಆಹಾರದ ಅಭಾವದೊಟ್ಟಿಗೆ ನೀರಿನ ಅಭಾವವೂ ಬಂದಂತಿದೆ. ಆದ್ದರಿಂದ ಸರಕಾರವು ಇನ್ನಾದರೂ ಸಂಪು ಕೆರೆಯ ಯೋಜನೆಯನ್ನು ಕೈಕೊಂಡು ಕೆಲಸ ಪ್ರಾರಂಭಿಸುವರೇ?

ಬಿ ಸಿ ರಾಬಿ.

ಸರಕಾರದ ಪಕ್ಷಪಾತ

ಸರಕಾರವು ಕೆಲವು ಸಾರೆ ಪಕ್ಷಪಾತ ಮಾಡಿದಂತೆ ಕಾಣುತ್ತದೆ. ಕಳೆದ ೧೯೪೯ನೇ ಇಸವಿಯಲ್ಲಿ ಸರಕಾರದವರು ಕೆಲವರನ್ನು ಸರ್ವೆ ತರಬೇತು ಮಾಡಿಸಿ ಅದರ ಫಲಿತಾಂಶವನ್ನು ಒಂದನೇ ಮತ್ತು ಎರಡನೇ ತರಗತಿ ಎಂದು ವಿಭಾಗ ಮಾಡಿದ್ದಾರೆ. ವಿದ್ಯಾರ್ಥಿಗಳಿಗೆ ಪ್ರಶಸ್ತಿ ಕೊಟ್ಟರು. ಒಂದನೇ ತರಗತಿಯಲ್ಲಿ ಪಾಸಾದವರು ಸರಕಾರದಲ್ಲಿ ಕೆಲಸ ಮಾಡಲು ನಿಜವಾಗಿಯೂ, ಯೋಗ್ಯರೆಂದು ಇದರಿಂದ ತಿಳಿಯುತ್ತದೆ. ಈಗಿನ ಸರ್ವೆ ಸೆಟ್ಲ್‌ಮೆಂಟಿನ ಕೆಲಸಕ್ಕಾಗಿ ನೇಮಕಮಾಡುವರಲ್ಲಿ ಒಂದನೇ ತರಗತಿಯಲ್ಲಿ ಪಾಸಾದ ಕೆಲವರಿಗೆ ಉದ್ಯೋಗಕೊಟ್ಟು, ಕೆಲವರನ್ನು ಹಾಗೆಯೇ ಬಿಟ್ಟು ಎರಡನೇ ತರಗತಿಯಲ್ಲಿ ಪಾಸಾಗಿ ವಿದ್ಯೆ ಕಡಿಮೆ ಇರುವವರಿಗೆ ಉದ್ಯೋಗ ಕೊಡಲು ಕಾರಣವೇನು? ಈ ಪಕ್ಷಪಾತದ ಅರ್ಥವೇನ? ಇನ್ನಾದರೂ ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಇದರ ಕಡೆಗೆ ಗಮನವಿಡುವರೆಂದು ನಂಬುವೆನು

ಪಿ ಯಂ. ಮುತ್ತಪ್ಪ.

ಸಕ್ರೆಟರಿ ಟ್ರೈನಿಂಗ್ ಕ್ಲಾಸ್

ಅಯ್ಯಾ ರಿಜಸ್ಟ್ರಾರವರೇ ಮತ್ತು ಬ್ಯಾಂಕ್ ಪ್ರೆಸಿಡೆಂಟರೇ—

ಸದ್ರಿ ಟ್ರೈನಿಂಗ್ ಕ್ಲಾಸನ್ನು ಅಕ್ಟೋಬರ್ ನವಂಬರು ತಿಂಗಳಲ್ಲಿ ಇಡುವದರ ಬದಲು ಈಗ ಇಟ್ಟರೆ ನಷ್ಟವೇನು? ಮಳೆಗಾಲದ ಸಮಯದಲ್ಲಿ ಕ್ಲಾಸು ಇಟ್ಟುಕೊಂಡರೆ ಸಾಲಮರುಪಾವತಿಗೆ ಜನರು ಬಂದರೆ ಹಣ ಹೊಂದಿಕೊಳ್ಳುವವರ್ಯಾರು? ಇದರ ಮಧ್ಯೆ ಏಪ್ರಿಲ್ ತಿಂಗಳಲ್ಲಿ ಪ್ರತಿ ಗ್ರಾಮದಲ್ಲಿ ಹಬ್ಬ ಇನ್ನಾದರೂ ಇಂಥಾ ಸಮಯದಲ್ಲಿ ತರಬೇತು ಕ್ಲಾಸನ್ನು ಬಾಕಿ ಮಾಡಬೇಕಾಗಿ ವಿನಂತಿ

ಮುದ್ದಯ್ಯ

ಮರೆನಾಡು ಬಸ್ಸ್ ಲೈನು.

ಈ ನಡಿನವರ ಕೇಳಿಕೆಯ ಮೇರೆ ೩-೪ ಜನ ಬಸ್ಸ್ ಲೈನು ಈ ನಾಡಿಗೆ ಕೇಳಿದ್ದುದಕ್ಕೆ ಶ್ರೀ ಜಗದೀಶ್ವರ ಮೋಟಾರ್ ಸರ್ವಿಸ್‌ನವರಿಗೆ ಈ ನಾಡಿನ ಲೈನನ್ನು ಸರಕಾರದವರು ಕೊಟ್ಟರು. ಇದೀಗ ಜನಗಳು ೩ ತಿಂಗಳಿಂದ ಕಾಯುತ್ತಿದ್ದರೂ ಬಸ್ಸ್ ಲೈನು ಬರುವ ದಾರಿಯೇ ಕಾಣುವುದಿಲ್ಲ. ಬಸ್ಸಿನಲ್ಲಿ ಸಿಗುವದಂತೂ ಇರಲಿ, ಬಸ್ಸನ್ನು ಕಣ್ಣಾರೆ ನೋಡುವಯೋಗವು ಈ ನಾಡವರಿಗೆ ಇಲ್ಲ. ಹೇಗೂ ಶಿವರಾತ್ರಿಯಲ್ಲಿ ಇರ್ಪು ಜಾತ್ರೆಗೆ ಹೋಗಲು ಸ್ಪೆಶಲ್ ಲೈನು ಜನರಿಂದ ಅಡ್ವಾನ್ಸು ಚಾರ್ಜು ತೆಗೆದುಕೊಂಡು ಬಂದು ಜನರನ್ನು ಕರಕೊಂಡು ಹೋಗಿ ಬಂದವರು ಮರಳಿ ಬರಲಿಲ್ಲ ನೂರಾರು ಲಾರಿಗಳು ತಿರುಗುವ ರಸ್ತೆಯಲ್ಲಿ ಇವರ ಬಸ್ಸಿಗೆ ನಾಡಿನವರು ರಸ್ತೆಯಲ್ಲಿರುವ ಕಲ್ಲುಗಳನ್ನು ಹೆಕ್ಕಿ ತೆಗೆದು ಕೊಡಬೇಕಂತೆ. ಇನ್ನಾದರೂ ಸಮ್ಮಂದಿಸಿದ ಇಲಾಖೆಯವರು ಇವರನ್ನು ವಿಚಾರಿಸಿ ಬೇರೆ ಬಸ್ಸ್‌ನವರಿಗೆ ಈ ಲೈನು ಕೊಟ್ಟು ಈ ನಾಡಿನವರ ತೊಂದರೆಗಳನ್ನು ನಿವಾರಿಸಲು ಸಹಾಯ ಮಾಡುವರೇ?

ಮುತ್ತಣ್ಣ.

ಕೊಡಗು ಸಹಕಾರಿ ಸಂಘಗಳ ರಿಜಿಸ್ಟ್ರಾರ್ ಸಾಹೇಬರವರಲ್ಲಿ ವಿನಂತಿ

ಸಹಕಾರಿ ಸಂಘಗಳನ್ನು ಸಾಧಿಸುವಾಗ್ಯೆ ಇದು ಕಾಮಧೇನು, ಕಲ್ಪವೃಕ್ಷ, ಮಂಪ್ರಸಾದ ಎಂಬಿವೇ ಶಬ್ದಗಳಿಂದ ವರ್ಣಿಸಿದ್ದಾಯಿತು. ಇತ್ತೀಚಿಗೆ ಗ್ರಾಮಗಳಲ್ಲಿ ಕಟ್ಟಲ್ಪಡುತ್ತಿರುವ ಶಾಲೆಗಳಿಗೆ ಆಯಾಯ ಸಂಘಗಳ ಕಟ್ಟಡ ನಿಧಿ ವಿದ್ಯಾನಿಧಿಯಿಂದ ಖರ್ಚು ಮಾಡುವದೆ ಹುಕುಂ ಕೇಳಿದರೆ, ರೂಲ್ಸಿಗೋ, ಬೈಲಾಕ್ಕೋ ಆಕ್ಟಿಗೋ ವಿರೋಧವೆಂದು ಹುಕುಂ ಬರುತ್ತಲೇ ಇದೆ.

ಮಾರ್ಚ್ ತಾ. ೧೯ರ ಎಕ್ಸ್‌ಪ್ರೆಸ್ ಪೇಪರಿನಲ್ಲು ವೆಲ್ಲೂರಿನಲ್ಲಿ ಒಂದು ಕಾಲೇಜಿಗೆ ಡಿಸ್ಟ್ರಿಕ್ಟ್ ಸೆಂಟ್ರಲ್ ಸ್ಟೋರಿನ ಕ್ಷೇಮನಿಧಿಯಿಂದ ೩ ಲಕ್ಷ ರೂಪಾಯಿ ಮಂಜೂರಾಗಿದ್ದೂ, ಡಿಸ್ಟ್ರಿಕ್ಟ್ ಸೆಂಟ್ರಲ್ ಬ್ಯಾಂಕಿನವರು, ೧ ಲಕ್ಷ ರೂಪಾಯಿ ಮಂಜೂರು ಮಾಡಿದ್ದು ಕಂಡುಬರುತ್ತೆ. ಹೀಗಿರುವಾಗ ಕೊಡಗಿಗೆ ಒಂದು ಖಾನೂನು ಬೇರೆ ಇದೆಯೋ? ತಿಳಿಯದು.

ಹೀಗಿದ್ದರೆ ಅಂಥಾ ಖಾನೂನನ್ನು ಬದಲಾಯಿಸಿ ಗ್ರಾಮಗಳಿಗೆ ಅನುಕೂಲಪಡಿಸುವ ಒಂದು ಖಾನೂನು ಮಾಡಲು ರಿಜಿಸ್ಟ್ರಾರವರೂ ಮತ್ತು ಕೌನ್ಸಿಲು ಮೆಂಬರುಗಳೂ ಪ್ರಯತ್ನಪಡಬೇಕಾಗಿ ನನ್ನ ಕೋರಿಕೆ.

೧೯೪೭ನೇ ಇಸವಿ ೧೫ ನೇ ಆಗಸ್ಟ್ ನಂತರ ಹೊಸ ಖಾನೂನೇ ಆಗಲ್ಲ! ರಿಜಿಸ್ಟ್ರಾರವರ ಹುಕುಂ ಇಲ್ಲದೇನೇ ಕಟ್ಟಡಫಂಡನ್ನು, ವಿದ್ಯಾನಿಧಿಯನ್ನು ಖರ್ಚು ಮಾಡುವಂತೆಯೂ, ರಿಜಿಸ್ಟ್ರಾರವರ ಅನುಮತಿ ಒಳಪಟ್ಟು ಬಂಡವಾಳ ಮತ್ತು ಕ್ಷೇಮನಿಧಿಯಿಂದ ಖರ್ಚು ಮಾಡುವಂತೆಯೂ ಖಾನೂನು ಬದಲಾಯಿಸಬೇಕಾಗಿ ನನ್ನ ಸೂಚನೆಯಾಗಿರುತ್ತೆ

ಗಣಪತಿ.

ಹುಲ್ಲುಗಾವಲಿಗೆ ಪೈಸಾರಿ ಜಾಗ ಮಂಜೂರಾತಿ

ನಾನೊಬ್ಬ ಹಳ್ಳಿಯ ಬಡರೈತ. ನಾನು ಒಂದೆರಡು ಸಿಂಧಿ ಗೂಳಿ ಮತ್ತು ದನ ಸಹ ಸಾಕಿಕೊಂಡಿದ್ದೇನೆ. ವೆಟರ್ನರಿ ಡಾಕ್ಟರ್ ನೋಡಿ ಸಲಹೆ ಇತ್ತ ಮೇರೆ ಈ ವರ್ಷದ ಜಾತ್ರೆಗೆ ಅವುಗಳನ್ನು ಕಳುಹಿಸಿದ್ದೆ. ಅವಗಳಿಗೆ ಬಹುಮಾನ ದೊರಕಿದೆ.

ಆದರೆ ನನ್ನ ಸಿಂಧಿ ದನಗಳನ್ನು ವೃದ್ಧಿಪಡಿಸಲು ನನಗೆ ನನ್ನ ಮನೆ ಬಳಿಯ ಬ್ಬಾಣೆಗಲಿ ಅಥವಾ ಬೇರೆ ಕಡೆಯಾಗಲಿ ಜಾಗವಿರುವುದಿಲ್ಲ. ಅದು ಕಾರಣ ತಾ. ೨೦-೯-೪೯ ರಲ್ಲಿ ನನ್ನ ಮನೆ ಸುತ್ತುಮುತ್ತಿನ ಜಾಗವನ್ನು ನನಗೆ ಹುಲ್ಲುಗಾವಲಿಗಾಗಿ ಮಂಜೂರು ಮಾಡಿಕೊಡಬೇಕೆಂದು ಆ ಕಮಿಷನರವರಿಗೆ ಅರ್ಜಿಯನ್ನು ವೆಟರ್ನರಿ ಡಾಕ್ಟರ್ ಮುಖಾಂತರ ಬರೆದುಕೊಂಡೆನು. ಅವಕ್ಕೆ ಏನೂ ಜವಾಬು ಬರಲಿಲ್ಲ. ಆದಕಾರಣ ತಾ. ೧೩-೨-೫೦ರಲ್ಲಿ ಎರಡನೆ ರಿಮೈಂಡರ್ ಅರ್ಜಿ ಬರೆದೆನು. ತಾ ೩-೧೩-೫೦ರಲ್ಲಿ ಪಾರುಪತ್ಯಗಾರರು ಬಂದು ನನಗೆ ಬೇಕಾದ ಜಾಗವನ್ನು ನೋಡಿದರು ಮತ್ತು ಅದನ್ನು ಮಂಜೂರು ಮಾಡವ ಭರವಸೆ ಇತ್ತು ಹೋದರು. ಆದರೆ ಮೊನ್ನೆ ಈಚೆಗೆ ನೋಡುವಾಗ್ಗೆ ನನ್ನ ಮನೆ ಹತ್ತಿರದ ಜಾಗವನ್ನು ಬೇರೆ ಗ್ರಾಮದ ಶ್ರೀಮಂತರೊಬ್ಬರಿಗೆ ಸರ್ವೆಮಾಡಿ ಕೊಡುತ್ತಿದ್ದಾರೆ—ಇದನ್ನು ನೋಡಿ ನನಗೆ ಬಹಳ ಆಶ್ಚರ್ಯವೂ ವ್ಯಸನವೂ ಆಗಿದೆ. ನನ್ನಂತಹ ಬಡವನ ಅರ್ಜಿಯನ್ನು ಮೂಲೆಗಿರಿಸಿ ಶ್ರೀಮಂತನೊಬ್ಬ—ಅದೂ ಬೇರೆ ಗ್ರಾಮದವ—ಅದರಲ್ಲೂ ಅದೇ ಗ್ರಾಮದಲ್ಲಿ ಇನ್ನು ಪೈಸಾರಿ ಜಾಗಗಳು ಇವೆ ಇಂತಹವರಿಗೆ ನನ್ನ ಮನೆ ಬಾಗಿಲು ವರೆಗೆ ಜಾಗ ಕೊಡುವುದೆಂದರೆ ಏನು ಹೇಳಬೇಕು. ಯಾವಾಗಲೂ ಸರಕಾರವು ಪೈಸಾರಿಯನ್ನು ಬೇರೆಯವರಿಗೆ ಮಂಜೂರು ಮಾಡುವುದಿದ್ದರೆ ಸದ್ರಿ ಊರಿನವರನ್ನು ಕೇಳಿ ಅವರ ಸ್ಟೇಟ್‌ಮೆಂಟ್ ತೆಗೆದುಕೊಂಡು ಆಚರಿಸುವುದು ವಾಡಿಕೆಯಿತ್ತು. ಈ ಸಂದರ್ಭದಲ್ಲಿ ಈ ಯಾವ ನೀತಿಯೂ ಸಹ ಆಚರಣೆಗೆ ಬಂದಿರುವುದಿಲ್ಲ ಬಡಹಳ್ಳಿಯವನಾದ ನನಗೆ ಮಾಡಿದಂತೆಯೇ ಇತರ ಹಲವರಿಗೆ ಆಗಬಹುದು. ಆದ್ದರಿಂದ ಸರಕಾರದವರು ತಪ್ಪು ಈ ನೀತಿಯನ್ನು ಮಾರ್ಪಡಿಸಿ ಬಡಜನರ ಹಿತವನ್ನು ಬಯಸಿ ವರ್ತಿಸುವರೇ?

"ಹಳ್ಳಿ ಒಡರೈತ"

ಸೋವಿಯಟ್ ರಷ್ಯದ

ಪ್ರಚಂಡ ಸಿದ್ಧತೆ.

ತೃತೀಯ ಜಾಗತಿಕ ಸಂಗ್ರಾಮದ ಆರಂಭವಾಗಿ ಕೇವಲ ಎರಡು ವಾರಗಳೊಳಗೆ ಪಶ್ಚಿಮ ಯುರೋಪ್ ಆಕ್ರಮಿಸುವ ಮಹತ್ವಪೂರ್ಣ ಯೋಜನೆಯೊಂದನ್ನು ಸ್ಟೇಲಿನರ ಸೇನಾ ಸಿಬ್ಬಂಧಿ ಹೂಡಿರುವುದೆಂದು ಸೋವಿಯಟ್ ಯುದ್ಧ ನಿರ್ಮಾಣ ಮಂಡಲದ ಮಾಜಿ ಸದಸ್ಯ ವೆಸ್ಲಿ ಶಿಪೊಶ್ನಿಕೊವ್ ವ್ಯಕ್ತಪಡಿಸಿರುವರು.

ರಷ್ಯದಿಂದ ತಲೆತಪ್ಪಿಸಿಕೊಂಡು ಹೋಗಿರುವ ಶಿಪೊಶ್ನಿಕೊವ್‌ರವರು ತಮ್ಮ ರಾಷ್ಟ್ರದ ರಹಸ್ಯಗಳನ್ನು ಪಶ್ಚಿಮ ಮಿತ್ರ ರಾಷ್ಟ್ರ ಅಧಿಕಾರಿಗಳಿಗೆ ಬಯಲು ಪಡಿಸಿರುವರೆಂದು ಪಶ್ಚಿಮ ಬರ್ಲಿನ್ ವೃತ್ತ ಪತ್ರಿಕೆ 'ಡಿಪೆಶೆ' ಸೂಚಿಸಿದೆ.

ಕ್ರೆಮ್ಲಿನ್ ತಾನಾಗಿ ಯುದ್ಧ ಹೂಡಿ ಆರಂಭದಲ್ಲೇ ಮೇಲ್ಗೈ ಪಡೆಯಲು ಹವಣಿಸುತ್ತಿದೆಯೆಂದು ಶಿಪೊಶ್ನಿಕೊವ್ ತಿಳಿಸಿರುತ್ತಾನೆ. ಎರಡು ವಾರಗಳೊಳಗೆ ಪಶ್ಚಿಮ ಯುರೋಪನ್ನು ಆಕ್ರಮಿಸುವುದು ಮಾತ್ರವಲ್ಲ, ಅಲ್ಲಿಂದ ಕೂಡಲೇ ಸ್ಪೈನಿನ ಮೇಲೆ ಪ್ರಚಂಡ ಧಾಳಿ ಹೂಡುವ ಯೋಜನೆಯನ್ನೂ ರಷ್ಯವು ಇಟ್ಟು ಕೊಂಡಿದೆ.

ಪೆರೆಚ್ಯೂಟ್ ದಳಗಳ ಉಪಯೋಗ

ಪಶ್ಚಿಮ ಯುರೋಪದ ಪ್ರಸಿದ್ಧ ಬಂದರಗಳನ್ನು ಆಕ್ರಮಿಸುವ ಬಗ್ಗೆ ರಷ್ಯವು ಪೆರೆಚ್ಯೂಟ್ ದಳಗಳನ್ನು ಉಪಯೋಗಿಸುವುದು. ಅಲ್ಲಿಂದ ಮುಂದೆ ಸ್ಪೈನ್ ಆಕ್ರಮಣದಲ್ಲೂ ಪೆರೆಚ್ಯೂಟ್ ಸೇನೆ ನೆರವಾಗುವುದು. ಅಲ್ಲಿಂದ ಮುಂದೆ ರಷ್ಯನ್ ಸೇನೆ ಉತ್ತರ ಆಫ್ರಿಕದಲ್ಲಿ ಪದಾರ್ಪಣೆ ಮಾಡುವ ಕಾಲದಲ್ಲೂ ಪೆರೆಚ್ಯೂಟ್ ದಳದ ಬೆಂಬಲ ಯಥೇಷ್ಟವಾಗಿ ದೊರೆಯುವುದು. ಭೂಮಧ್ಯ ಸಮುದ್ರ ಪ್ರದೇಶವನ್ನು ನಾಲ್ಕು ಮೂಲೆಗಳಿಂದ ಆಕ್ರಮಿಸಿ ಹತೋಟಿಗೆ ತಂದುಕೊಳ್ಳುವದೇ ಈ ತ್ರಿಮುಖ ಅಭಿಯೋಗದ ಉದ್ದೇಶವೆಂದು ಶಿಪೊಶ್ನಿಕೊವ್ ಹೇಳುತ್ತಾನೆ.

ಈ ಮಹತ್ವಪೂರ್ಣ ಸಮರ ಸಿದ್ಧತೆಯ ಯೋಜನೆಯು ಚರ್ಚಿಸಲ್ಪಡುತ್ತಿರುವ ಕಾಲದಲ್ಲಿ ಶಿಪೊಶ್ನಿಕೊವ್ ಕ್ರೆಮ್ಲಿನ್‌ದಲ್ಲಿ ಹಾಜರಿದ್ದನು. ಸೋವಿಯಟ್ ಜನರಲ್ ಸ್ಟಾಫಿನ ಓರ್ವ ದಿವಂಗತ ಜನರಲರ ಕುಮಾರನು ಶಿಪೊಶ್ನಿಕೊವ್ ಹೀಗಾಗಿ ಅವನಿಗೆ ಇಂತಹ ಯುದ್ಧ ಯೋಜನೆಯ ಚರ್ಚೆಗೆಂದು ನಿಶ್ಚೈಸಿದ ಸಮ್ಮೇಳನದಲ್ಲಿ ಭಾಗವಹಿಸಲು ಅಸ್ಪದ ದೊರೆಯಿತು.

ಒಮ್ಮೆ ಪಶ್ಚಿಮ ಯುರೋಪಿನ ವಿದ್ಯಮಾನಗಳೆಲ್ಲಾ ಸ್ತಬ್ಧವಾದುವೆಂದರೆ ಆ ಮೇಲೆ ಯುದ್ಧವು ದೂರ ಪೂರ್ವದಲ್ಲಿ ಕಿಡಿಹಚ್ಚುವುದು. ಅಲ್ಲಿ ೩೦೦ ಚೀನಿ ದಳಗಳು ಸೋವಿಯಟ್ ಸೇನೆಯೊಡನೆ ಕೂಡಿ ರಣಕಳದಲ್ಲಿ ಮುಂದುವರಿಯುವವು.

ಮಧ್ಯ ಪೂರ್ವದಲ್ಲಿ ಸ್ವರಾಷ್ಟ್ರ ಕಲಹಗಳು

ಮೊಸ್ಕೊ ನಗರದಲ್ಲಿ, ಇತ್ತೀಚಿಗೆ ಪೊಲಿಟ್‌ಬಿರೋದ ಒಂದು ಮಹತ್ವಪೂರ್ಣ ಸಭೆ ಸೇರಿತ್ತು. ಯುರೋಪ್ ಮತ್ತು ಮಧ್ಯ ಪೂರ್ವದಲ್ಲಿ ಈ ವರ್ಷ ಸ್ವರಾಷ್ಟ್ರ ಕಲಹಗಳನ್ನು ಪ್ರೇರೇಪಿಸಬೇಕೆಂಬ ನಿರ್ಣಯವು ಆ ಸಭೆಯಲ್ಲಿ ಕೈಕೊಳ್ಳಲ್ಪಟ್ಟಿದೆ. ಈ ವಿಷಯವನ್ನು ಚೀನದ ಮುಖಂಡ ಮಾವೋರಿಗೆ ಅವರು ಚೀನಿ ದಳಗಳನ್ನು ಕೊರಿಯಕ್ಕೆ ಕಳಿಸುವ ಮನ್ನವೇ ತಿಳಿಸಲಾಗಿತ್ತು. ಬರ್ಮಾ ಕ್ರಾಂತಿ ಪ್ರೇರಕ ಗೋರಿಲ್ಲಾಗಳನ್ನು ಚೀನಾದಲ್ಲಿ ತರಬೇತಿಗೊಳಿಸುವ ಕಾರ್ಯಕ್ರಮವೂ ಒಂದೆಡೆಯಿಂದ ಸಾಗುತ್ತಿದೆ.

ತೈಲದ ಅಭಾವವೇ?

ಒಂದೇ ಅಭಿಯೋಗದಿಂದ ಟೀಟೋವನ್ನು ಹಿಮ್ಮೆಟ್ಟಿಸಲು ತಾನು ಶಕ್ತನಾದೆನೆಂದು ಮನಗಂಡೊಡನೆ ಕ್ರೆಮ್ಲಿನ್ ತನ್ನ ಬಾಲ್ಕಾನ್ ಮಿತ್ರ ರಾಷ್ಟ್ರಗಳಿಗೆ ಯುಗೋಸ್ಲೇವಿಯದ ಮೇಲೆ ಏರಿಹೋಗಲು ಪ್ರೇರೇಪಿಸುವುದು ಈ ಅಭಿಯೋಗವು ಗ್ರೀಸ್ ಮತ್ತು ಮಧ್ಯ ಪೂರ್ವಕ್ಕೆ ಹೋಗುವ ಹಾದಿಗಳನ್ನು ಸುಗಮಗೊಳಿಸುವುದೆಂದು ಸೋವಿಯಟ್ ಅಭಿಪ್ರಾಯವಿದೆ ಈ ವರ್ಷ ವಸಂತ ಋತುವಿನ ಸುಮಾರಿಗೆ ರಷ್ಯದ ಮಿತ್ರ ರಾಷ್ಟ್ರಗಳು ಯುಗೋಸ್ಲೇವಿಯದ ಮೇಲೆ ದಾಳಿ ಹೂಡಬಹುದೆಂಬ ಅಭಿಪ್ರಾಯ ಬಲಗೊಳ್ಳುತ್ತಲಿದೆ. ಅಲ್ಲದೆ ತನ್ನ ಮಿತ್ರರಾಷ್ಟ್ರಗಳನ್ನು ಮುಂದಾಗಿ ರಣಕಳಕ್ಕೆ ದೂಡುವ ರಷ್ಯದ ನಿರ್ಣಯವು ತನ್ನ ಸ್ವಂತ ಹಿತ ದೃಷ್ಟಿಯಾಗಿದೆ. ಒಮ್ಮೆಲೇ ಸಾರ್ವತ್ರಿಕವಾಗಿ ಯುದ್ಧ ನಿರತವಾಗುವ ಧೈರ್ಯ ರಷ್ಯಕ್ಕಿರುವುದಿಲ್ಲ. ಅಲ್ಲದೆ ಸಾರ್ವತ್ರಿಕವಾಗಿ ಯುದ್ಧದಲ್ಲಿ ಧುಮುಕುವರೆ ರಷ್ಯವು ಈಗ ಸಮರ್ಥವಾಗಿಲ್ಲ. ರಷ್ಯದಲ್ಲಿ ಎಣ್ಣೆಯ ಅಭಾವ ಮಿತಿಮೀರಿದೆ. ಉಕ್ರೇನ್ ಎವಿಯೇಶನ್ ಗೇಸಿನ ಅಭಾವವೂ ರಷ್ಯದಲ್ಲಿ ವಿಪರೀತವಾಗಿದೆ.

ಪ್ರಭಾತ

ತಿಳಿಸಿರಿ.

ಭೂಮಿ, ತೋಟ, ಜಾಗ ಪೇಟೆಯಲ್ಲಿ ಮನೆ ಅಥವ ಮನೆ ಸೈಟು ಮಾರಲಿರುವವರು ಮತ್ತು ಕೊಂಡುಕೊಳ್ಳಲಿಚ್ಛಿಸುವವರು ಈ ಕೆಳಗಿನ ಪತ್ತೆಯಲ್ಲಿ ವಿಚಾರಿಸಿರಿ. ಅಲ್ಲದೆ ಬೇಕಾದವರಿಗೆ ಕರೆಯುವ ಎಮ್ಮೆ, ಹಸ ಮತ್ತು ಉಳುವ ಎತ್ತು ಮತ್ತು ಕೋಣಗಳನ್ನೂ ಒದಗಿಸಿ ಕೊಡಲಾಗುವುದು. ಬೇಕಾದವರು ತಮಗೆ ಬೇಕಾಗ ತಾರೀಕಿನ ಎಂಟು ದಿನಗಳಿಗೆ ಮುಂಚೆ ತಿಳಿಸಬೇಕಾಗಿದೆ. ವಿವರಗಳಿಗೆ ಈ ಪತ್ತೆಗೆ ಬರೆಯಬಹುದು.

D. A. N. & SONS,
Commission Agent,
Gonicoppal
S. Coorg.

26-8

ಕೊಡಗಿನ ಭವಿಷತ್ತು.

ಶಾಂತಮಯವಾಗಿದ್ದ ಈ ಪ್ರಶ್ನೆಯು ಪುನಃ ತಲೆಎತ್ತಿದೆ, ನಮ್ಮ ಕೇಂದ್ರ ಶಾಸನಸಭೆಯಲ್ಲಿ 'ಸಿ' ಪ್ರಾಂತ್ಯಗಳಿಗೆ ಪೂರ್ಣ ಜವಾಬ್ದಾರಿ ಸರಕಾರ ಕೊಡಬೇಕೆಂಬ ಚರ್ಚೆಯ ಮೇಲೆ ನಮ್ಮ ಈ ಪ್ರಾಂತ್ಯದ ಸದಸ್ಯರಾದ ಶ್ರೀ. ಚೆಪ್ಪುಡಿರ ಪೂಣಚ್ಚನವರು ಇದನ್ನು ಸಮರ್ಥಿಸಿ ಮಾತಾಡುವುದರ ಬದಲು, ಈ ಪ್ರಾಂತ್ಯವನ್ನು ಕೂಡಲೇ ಮದ್ರಾಸಿಗೆ ಯಾ ಮೈಸೂರಿಗೆ ವಿಲೀನ ಮಾಡಬೇಕೆಂದು ಮಾತಾಡಿದಂತೆ ವರದಿಯಾದುದನ್ನು ನೋಡಿದರೆ, ಅವರು ದೇಶದವರ ಅಭಿಪ್ರಾಯವನ್ನು ಕೇಳದೆ, ಯಾ ದೇಶದವರ ಅಭಿಪ್ರಾಯ ಪ್ರತ್ಯೇಕವಾಗಿರಬೇಕೆಂಬದನ್ನು ಅರಿತೂ ಕೂಡ ತಾನು ಹಿಡಿದ ಮೊಲಕ್ಕೆ ಮೂರು ಕಾಲೆಂದು ವಾದಿಸಿ ಎಷ್ಟರ ಮಟ್ಟಿಗೆ ಜನತೆಗೆ ಅಹಿತವನ್ನೂ ತಮ್ಮ ಆತ್ಮವಂಚನೆಯನ್ನೂ ಮಾಡಿರುವರೆಂದು ಮನವರಿಕೆಯಾಗುತ್ತಿದೆ. ಈ ರೀತಿಯ ಅಭಿಪ್ರಾಯವನ್ನು ಕೊಟ್ಟಿರುವುದು ನಿಜವಾದರೆ ಇವರು ನಿಜವಾಗಿ ಜನರ ಅಭಿಪ್ರಾಯವನ್ನು ಪ್ರತಿಬಿಂಬಿಸಲಾರರೆಂದು ಇವರ ಚುನಾವಣೆಯ ಕಾಲದಲ್ಲಿ ಮತ್ತು ದೇಶದ ಹಲವಾರು ಸಭೆಗಳಲ್ಲಿ, ದೇಶೀಯರು ಖಚಿತ ಅಭಿಪ್ರಾಯವನ್ನು ಪ್ರಕಟಿಸಿ ಕೇಂದ್ರ ಸರಕಾರಕ್ಕೆ ಆಗ ಕಳುಹಿಸಿದ್ದು ಸರಿಯೆಂಬದು ಇಂದು ಕಂಡುಬರುತ್ತದೆ. ಇವರು ಬಂದ ಕೆಲವು ಸಾರ್ವಜನಿಕ ಕೂಟಗಳಲ್ಲಿ ತಾನು ಜನತೆಯ ಅಭಿಪ್ರಾಯಕ್ಕೆ ವಿರೋಧಬರುವುದಿಲ್ಲ ಎಂದು ಹೇಳಿದ ಮಾತು ಇಂದು ಪೂರ್ತಿ ಸುಳ್ಳಾಗಿ ಪರಿಣಮಿಸಿದಲ್ಲದೆ, ಇದರಲ್ಲಿ ಯಾವದೋ ಒಂದು ರಹಸ್ಯವಿರಬೇಕೆಂಬದನ್ನು ವಾಚಕರು ಅರಿತುಕೊಳ್ಳಬೇಕಾಗಿದೆ. ಈ ಸುಧಾರಣೆಗಳ ವಿಷಯವನ್ನು ರಾಷ್ಟ್ರೀಯ ಸಭೆಯಲ್ಲಿ ಚರ್ಚಿಸುವಾಗ ಹಿಮಾಚಲ ಪ್ರದೇಶ ಮತ್ತು ವಿಂಧ್ಯಪ್ರದೇಶಗಳ ಆಡಳಿತವು ಬಹು ಕೀಳಾಗಿರುವ ವಿಷಯವನ್ನು ಆ ಪ್ರಾಂತ್ಯಗಳ ಸದಸ್ಯರುಗಳ ಭಾಷಣದಿಂದ ನಾನು ನೋಡಿದ್ದೇನೆ. ಆದರೂ ಕೂಡ ಆ ಸದಸ್ಯರುಗಳು ಅವುಗಳಿಗೆ ಪೂರ್ಣ ಜವಾಬ್ದಾರಿ ಸರಕಾರ ಕೊಡಬೇಕೆಂದು ಹೇಳಿದಲ್ಲದೆ ಈಚೆಗೆ ಅವುಗಳಲ್ಲಿ ಒಂದನ್ನು 'ಬಿ' ತರಗತಿಗೆ ಏರಿಸಬೇಕೆಂದು ಅಲ್ಲಿನ ಪ್ರತಿನಿಧಿಗಳು ವಾದಿಸಿರುವಾಗ ನಮ್ಮ ಪ್ರತಿನಿಧಿ ಶ್ರೀ ಪೂಣಚ್ಚನವರು ವಿಲೀನಮಾಡಬೇಕೆಂದು ವಾದಿಸಿದನ್ನು ನೋಡಿದರೆ ಇವರ ಈ ನೀತಿಯ ಹಿನ್ನಲೆಯ ರಹಸ್ಯವನ್ನು ಖಂಡಿತವಾಗಿ ವಾಚಕರು ವಿಚಾರಿಸಿ ತಿಳಿಯಬೇಕಾಗಿದೆ. ಬಹುಶ್ಯ ಅವರಿಗೆ ವಿಲೀನವಾದ ಪ್ರಾಂತ್ಯದಲ್ಲಿ ತಕ್ಕ ಮಾನ್ಯತೆ ದೊರಕುತ್ತದೆಂಬ ಭರವಸೆ ಕೊಟ್ಟಿರಬೇಕು. ಆದರೆ ಜನಪ್ರತಿನಿಧಿ ಎನಿಸಿದವರು ಜನರ ಹಿತವನ್ನು ಲಕ್ಷಿಸಬೇಕಿತ್ತು. ಚರಿತ್ರೆಯಲ್ಲಿ ಇಂಥಾ ವಿಷಯಗಳನ್ನು ನಾವು ಓದಿದ್ದೇವೆ. ಈಗ ಕಾರ್ಯತಃ ನಡೆಯುತ್ತಿರುವುದನ್ನು ಕಾಣುತ್ತೇವೆ. ಆದುದರಿಂದ ದೇಶೀಯರು ಕೋಪಯುವಾರು ಅಭಿಪ್ರಾಯ ಮತ್ತಿತರ ಸಣ್ಣ ವಿಷಯಗಳನ್ನು ಮರೆತು ಅಲ್ಲಲ್ಲಿ ಸಭೆ ಸೇರಿಸಿ ಶ್ರೀ. ಪೂಣಚ್ಚನವರ ಮೇಲೆ ಅವಿಶ್ವಾಸದ ಠರಾವುಗಳನ್ನು ಮಾಡಿ ಅವರ ಅಭಿಪ್ರಾಯವು ದೇಶದ ಅಭಿಪ್ರಾಯವಲ್ಲವೆಂಬದನ್ನು, ಗೃಹಮಂತ್ರಿಗಳಿಗೂ ಸಂಸ್ಥಾನದ ಮಂತ್ರಿಗಳಿಗೂ ಪ್ರಧಾನ ಮಂತ್ರಿಗಳಿಗೂ ಕೂಡಲೇ ಕಳುಹಿಸಬೇಕು.

ತಾರೀಕು ೨೧ರ 'ಜನ್ಮಭೂಮಿ' ಪತ್ರಿಕೆಯ ಅಗ್ರಲೇಖನದಲ್ಲಿ ಮತ್ತು 'ವಿಚಾರಕರ' ಪತ್ರದಲ್ಲಿ ಪೂಣಚ್ಚನವರ ಹೆಸರನ್ನು ಪೂರ್ತಿ ಬಚ್ಚಿಟ್ಟು ಗೃಹಮಂತ್ರಿಗಳ ಮತ್ತು ಸಂಸ್ಥಾನಗಳ ಮಂತ್ರಿಗಳ ಅಭಿಪ್ರಾಯದಂತೆ ವಿಲೀನವಾಗುವ ವರೆಗೆ ತಾತ್ಕಾಲಿಕ ಏರ್ಪಾಡನ್ನು ಮಾಡುವರೆಂದು ಬರೆದುದನ್ನು ನೋಡಿದರೆ ಈ ಪಂಗಡದವರು ಎಷ್ಟರ ಮಟ್ಟಿಗೆ ಕುಯುಕ್ತಿಯಿಂದ ದೇಶದ ಜನರನ್ನು ಮರುಳುಮಾಡಲಿಕ್ಕೆ ಹೊರಟಿದ್ದಾರೆಂಬುದು ವೇದ್ಯವಾಗುತ್ತಿದೆ. ಇದಲ್ಲದೆ ಮಂತ್ರಿಗಳಾದ ಶ್ರೀ. ಗ್ಯಾಡ್‌ಗಿಲ್‌ರವರು ಭಾಷಣ ಮಾಡುತ್ತಾ ಶ್ರೀ ಪೂಣಚ್ಚನವರ ಭಾಷಣವು ನಮ್ಮ ಕೆಲಸವನ್ನು ಸುಲಭ ಮಾಡಿದೆ ಎಂದು ಹೇಳಿದ್ದನ್ನು ನೋಡಿದರೆ, ಶ್ರೀ. ಪೂಣಚ್ಚನವರು ನಿದ್ರಾವಸ್ಥೆಯಲ್ಲಿದ್ದ ಈ ಪ್ರಶ್ನೆಯನ್ನು ಪುನಃ ಅವರೇ ಎಬ್ಬಿಸಿ ದೇಶವನ್ನು ಧಾರೆಎರೆಯಲಿಕ್ಕೆ ಹೊರಟಿರುವರೆಂದು ಜನರು ಭಾವಿಸಿದರೆ ತಪ್ಪಾಗಲಾರದು.

ಕೊನೆಯ ಮಾತಾಗಿ ಶ್ರೀ. ಪೂಣಚ್ಚನವರಾಗಲೀ ಅವರ ಪಂಗಡದವರಾಗಲೀ ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ತಮ್ಮ ಖಚಿತ ಅಭಿಪ್ರಾಯವನ್ನು ಕೊಡಬೇಕೆಂದು ಬರೆದು ಈ ಬಾತ್ಮಿಯನ್ನು ಮುಗಿಸುತ್ತೇನೆ.

೧ ಕೊಡಗಿನ ಸಂಯೋಜನೆಯಿಂದ ಇದರ ಪ್ರಾಂತೀಕ ಸ್ಥಾನ ವ್ಯಕ್ತಿತ್ವ ಮತ್ತು ಅಸ್ತಿತ್ವಗಳು ಉಳಿಯುತ್ತದೆಯೇ?

೨. ಈ ಪ್ರಾಂತ್ಯದ ಪೂರ್ಣ ಆದಾಯವನ್ನು ಇಲ್ಲಿಯ ಹಿತಕ್ಕಾಗಿ ವ್ಯಯ ಮಾಡುವ ಹಕ್ಕುದಾರಿಕೆ ಪೂರ್ತಿಯಾಗಿ ಇರುವುದೋ?

೩. ವಿಲೀನವಾದ ಮೇಲೆ ಈಗಿನಂತೆ ತಲಾ ಒಂದರ ಪ್ರತಿಯೊಬ್ಬನಿಗೆ ತಗಲುವ ಸರಾಸರಿ ಖರ್ಚು ಎಲ್ಲಾ ಇಲಾಖೆಗಳಲ್ಲಿ ಇದ್ದು ದೇಶದ ಅಭಿವೃದ್ಧಿಗೆ ಸಹಾಯಕವಾಗುವುದೋ?

'ದೇಶಿಯ'

ಶ್ರೀ ಕೆ. ಯಂ. ಮೊಗಪ್ಪನವರು,
"ಕೊಡಗು" ಏಜೆಂಟರು,
ಸೋಮವಾರಪೇಟೆ.

ಕೊಡಗಿನ ಹರಿಜನರಬಗ್ಗೆ

ಸರಕಾರದ ನಿಸ್ಸಹಾಯ ಧೋರಣೆ.

ಹರಿಜನಬಾಂಧವರೇ, ಇನ್ನಾದರೂ ನೀವು ಎಚ್ಚೆತ್ತುಕೊಳ್ಳದಿದ್ದರೆ ಉಣ್ಣಲು ಅನ್ನವಿಲ್ಲದೆ, ಉಡಲು ಬಟ್ಟೆ ಇಲ್ಲದೆ, ಮಣ್ಣು ಪಾಲಾಗುವುದು ಖಂಡಿತ. ಈ ನಮ್ಮ ಭರತಖಂಡಕ್ಕೆ ಸ್ವರಾಜ್ಯ ಸಿಕ್ಕಿ ನಾಲ್ಕು ವರ್ಷಗಳಾಗುತ್ತಾ ಬಂತು. ಆದರೇನ; ವ್ಯಕ್ತಿಸ್ವಾತಂತ್ರ್ಯ, ಸುಖಸಂಪತ್ತುಗಳು ಯಾರಿಗೆ? ಬುದ್ಧಿಶಕ್ತಿಯುಳ್ಳ ಅಧಿಕಾರಿಗಳು, ದೇಹದಾರ್ಢ್ಯತೆ ಇರುವ ಮತ್ತು ಸಕಲ ಸಂಪತ್ತುಳ್ಳವರಿಗಲ್ಲದೆ, ಉಣ್ಣಲಿಕ್ಕೆ ಕೂಳಿಲ್ಲದ, ಉಡಲಿಕ್ಕೆ ಬಟ್ಟೆ ಇಲ್ಲದ ಹಾಗೂ ಏನೊಂದೂ ತಿಳಿಯದ ಹರಿಜನರಿಗಲ್ಲ.

ಸ್ವರಾಜ್ಯದೊರಕುವ ಮುನ್ನವೇ ಕೊಡಗಿನ ಮೂಲೆ ಮೂಲೆಗಳಲ್ಲಿ ಹರಿಜನರ ಕೂಟಗಳೂ, ಸಭೆ ಸಮ್ಮೇಳನಗಳೂ ನಡೆದವು. ಆ ಸಭೆಗಳಲ್ಲಿ ದೇಶದ ಮುಂದಾಳುಗಳೂ, ಪದವೀಧರರೂ, ಮತ್ತು ಸರಕಾರಿ ಉದ್ಯೋಗಸ್ಥರೂ ಸಹ ಹರಿಜನರಿಗೆ ತಮ್ಮ ಸವಿಮಾತುಗಳಿಂದ ಭಾಷಣಗಳನ್ನು ಕೊಟ್ಟರು. ಈ ಭಾಷಣಗಳನ್ನು ಕೇಳಿ ಹರಿಜನರು ಉಬ್ಬಿದರು. ಅಲ್ಲದೆ ಇವರ ಸಂತೋಷಕ್ಕೆ ಪಾರವೇ ಇಲ್ಲದಂತಾಯಿತು. ಇವರ ಜೊತೆಗೆ ಸರಕಾರವು ಮತ್ತಷ್ಟು ಪ್ರೋತ್ಸಾಹಕೊಟ್ಟಿತು. ಆದರೆ ಇವೆಲ್ಲ 'ಬರಿಗಲ್ಲು ನಿದ್ರೆಗೇಡು' ಎಂಬಂತಾಯಿತು.

ಹರಿಜನರ ಸಮ್ಮೇಳನಗಳಲ್ಲಿ ಬಹುಮತದಿಂದ ಪಾಸಾದ ಅದೆಷ್ಟೋ ಠರಾವುಗಳನ್ನು ಸರಕಾರದ ಮಂಜೂರಾತಿ ಬಗ್ಗೆ ಕಳುಹಿಸಲಾಯಿತು. ಕೆಲವು ಠರಾವುಗಳಿಗೆ ಭರವಸೆಯ ಉತ್ತರಗಳು ದೊರೆತವು. ಆದರೂ ಕೂಡ ಈ ಹೊತ್ತಿನ ವರೆಗೂ ಅವು ಸಮರ್ಪಕವಾದ ರೀತಿಯಲ್ಲಿ ಜಾರಿಗೆ ಬರಲಿಲ್ಲ. ಸರಕಾರವು ಹರಿಜನರಿಗೆ ಭೂಸಂಪತ್ತುಗಳನ್ನು ಒದಗಿಸಿಕೊಡಲಿಲ್ಲ. ಹರಿಜನರ ಆರ್ಥಿಕ ಸ್ಥಿತಿ ಉತ್ತಮಗೊಳ್ಳಲಿಲ್ಲ. ರಾಜಕೀಯ ಮತ್ತು ಧಾರ್ಮಿಕ ಸಂಸ್ಥೆಗಳಲ್ಲಿ ಹರಿಜನರಿಗೆ ಸ್ಥಾನಮಾನಗಳಿಲ್ಲ. ಕೊಡಗಿನ ಕೆಲವೆಡೆಗಳಲ್ಲಿ ಹೋಟೆಲುಗಳಿಗೂ, ಜವಳಿ ಮತ್ತು ಜಿನಸು ಅಂಗಡಿಗಳಿಗೂ ಹರಿಜನರಿಗೆ ಪ್ರವೇಶವಿಲ್ಲ.

ಹರಿಜನರ ಹೆಚ್ಚಿನ ವಿದ್ಯಾಭ್ಯಾಸಕ್ಕೆ ಸರಕಾರವು ಸಾಕಷ್ಟು ಸಹಾಯ ಕೊಡುತ್ತಾ ಇಲ್ಲ. ಹರಿಜನ ಮಕ್ಕಳಿಗೆ ಸರಕಾರಿ ಹಾಸ್ಟೆಲುಗಳಲ್ಲಿ ಪ್ರವೇಶವಿಲ್ಲ. ಅಲ್ಲದೆ ಹರಿಜನ ಮಕ್ಕಳಿಗೆ ಒಂದು ಪ್ರತ್ಯೇಕ ಹಾಸ್ಟೆಲನ್ನಾದರೂ ಸರಕಾರವು ತೆರೆಯುವುದಿಲ್ಲ. ಜಗತ್ಪೂಜ್ಯ ಮಹಾತ್ಮಗಾಂಧೀಜಿಯವರು ಗಳಿಸಿಕೊಟ್ಟ ಮಾನವತೆಯು ಕೊಡಗಿನ ಹರಿಜನರಿಗೆ ಉಳಿದಂತಿಲ್ಲ. ಬರೀ ಬಾಯಿ ಮಾತಿನ ಭರವಸೆ, ಕಾಗದದ ಮೇಲಿನ ಬರವಣಿಗೆ ಇವುಗಳಿಂದಲೇ ಕೊಡಗಿನ ಹರಿಜನೋದ್ಧಾರವು ನಡೆಯುತ್ತಾ ಇದೆ!

ಈಗ ಸುಮಾರು ಮೂರು ವರ್ಷಗಳ ಹಿಂದೆಯೇ ಚೀಫ್ ಕಮಿಶನರ್ ಸಾಹೇಬರವರು ಹರಿಜನರ ಏಳಿಗೆಗಾಗಿ ಒಂದು ಯೋಜನೆ ತಯಾರು ಮಾಡುವ ಬಗ್ಗೆ ಒಂದು ಕಮಿಟಿಯನ್ನು ಏರ್ಪಡಿಸಿದ್ದರು. ಆ ಕಮಿಟಿಯಲ್ಲಿ ಪಂಚವಾರ್ಷಿಕ ಯೋಜನೆಯು ಎರಡು ವರುಷಗಳವರೆಗೆ ತಯಾರಿಸಲ್ಪಟ್ಟು ಚೀಫ್ ಕಮಿಶನರ್ ಸಾಹೇಬರವರ ಮಂಜೂರಾತಿಗೆ ಹೋಯಿತು.

ಈ ಹೊತ್ತಿನ ವರೆಗೂ ಅದರ ಸುದ್ದಿ ಗದ್ದಲವೇ ಕಾಣುವುದಿಲ್ಲ. ಆ ಪಂಚವಾರ್ಷಿಕ ಯೋಜನೆಯು ಮಂಜೂರು ಆಗಿ ಬರುವಷ್ಟರಲ್ಲಿ ಹರಿಜನರಿಗೆ ಪಂಚಪಾಂಡವರ ವನವಾಸವೋ, ಏನೊ!

ಡಿಸೆಬಿಲಿಟೀಸ್ ಮತ್ತು ಪ್ರಡ್ ಆಕ್ಟ್ ಇವು ಜಾರಿಗೆ ಬಂದು ಎಷ್ಟು ದಿವಸಗಳಾದವು? ಇವುಗಳ ಜವಾಬುದಾರಿಕೆಯು ಯಾವ ಇಲಾಖೆಗಳಿಗಿದೆ ಎಂಬುದೇ ಗೊತ್ತಿಲ್ಲ. ಇವುಗಳ ವಿಷಯವಾಗಿ ಯಾವ ಇಲಾಖೆಯೂ ಕ್ರಮ ತೆಗೆದುಕೊಳ್ಳುತ್ತಾ ಇಲ್ಲ. ಆಯಾಯ ಸ್ಥಳೀಕ ಕೋರ್ಟಿನ ಕಚೇರಿಯ ಅಧಿಕಾರಿಗಳು ಇವುಗಳನ್ನು ಕಣ್ಣಾರೆ ನೋಡಿಕೊಂಡೇ ಇದ್ದಾರೆ. ಅಲ್ಲದೆ ಗೋಹಣ ಮಾಂಸವನ್ನು ತಿನ್ನುವಂತೆ ಅವರೇ ಪ್ರೇರೇಪಿಸುತ್ತಿದ್ದಾರೆ! ಇದನ್ನು ಕೇಳಿಕೊಂಡು ಉತ್ತರ ಕೊಡಗಿನ ಪ್ರತಿಯೊಂದು ಗ್ರಾಮದ ಹರಿಜನರೂ ಸತ್ತ ಗೋಮಾಂಸ ಭಕ್ಷಣೆಯನ್ನು ಮಾಡುತ್ತಲೇ ಇದ್ದಾರೆ. ಉದಾಹರಣೆಗೆ–ಹೆಬ್ಬಾಲೆ, ಹುಲುಸೆ, ದೊಡ್ಡಕೊಡ್ಲಿ ಗ್ರಾಮ ಬೆಂಬಳೂರು ಶಿರಹ, ನಿಲ್ಯಾರು, ಬೆಟ್ಟದಳ್ಳಿ, ಹೆಮ್ಮನೆ ಚಿಕ್ಕಭಂಡಾರ ಮತ್ತು ಕಟ್ಟೆಪುರ ಇವೇ ನಿದರ್ಶಕ ಗ್ರಾಮಗಳಾಗಿವೆ ಈ ವಿಚಾರದಲ್ಲಿ ಘನ ಸರಕಾರವು ಇನ್ನು ಮುಂದಕ್ಕಾದರೂ ಕಠಿಣವಾದ ಕ್ರಮ ಜರುಗಿಸುವುದೆಂದು ನಂಬಲಾಗಿದೆ.

ಹೊರ ಪ್ರಾಂತಗಳಾದ ಮೈಸೂರು ಮದ್ರಾಸು, ತಿರುವಾಂಕೋಡು, ಮತ್ತು ಇಂದೂರುಗಳಲ್ಲಿ ಹರಿಜನರಿಗೆ ಸರಕಾರದಿಂದ ಎಷ್ಟು ಸಹಾಯ ದೊರಕಿದೆ, ಅಲ್ಲಿಯ ಹರಿಜನರ ಅಭಿವೃದ್ಧಿ ಎಷ್ಟರ ಮಟ್ಟಿಗಿದೆ ಎಂಬುದು ನಮ್ಮ ಕೊಡಗು ಸರಕಾರದ ಅವಗಾಹನೆಗೆ ಬಂದಿಲ್ಲವೆ? ಮದ್ರಾಸು ಸರಕಾರವು ಈ ಜೊತ್ತಿಗೆ ವರ್ಷ ಒಂದರ ಒಂದು ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಾ ಇದೆ. ಮೈಸೂರು ಸರಕಾರವು ವರ್ಷ ಒಂದರ ೩೦ ಲಕ್ಷ ರೂಪಾಯಿಗಳನ್ನು ಹರಿಜನರಿಗಾಗಿ ಖರ್ಚು ಮಾಡುತ್ತಾ ಇದೆ. ಮೈಸೂರಿನಲ್ಲಿ ಬಿ ಎ ಪಾಸಾದ ೧೫೦ ಹರಿಜನರಿದ್ದಾರೆ. ಅಲ್ಲದೆ ಒಬ್ಬ ಹರಿಜನ ಯುವತಿ ಶ್ರೀಮತಿ ಪಾರ್ವತಮ್ಮ ಎಂಬವರು ಬಿ. ಎ. (ಆನರ್ಸ್) ಆಗಿ ಮಹಾರಾಣಿ ಕಾಲೇಜಿನಲ್ಲಿ ಲೆಕ್ಚರರ್ ಆಗಿದ್ದಾರೆ.

ಕೊಡಗು ಸರಕಾರವು ಹರಿಜನೋದ್ಧಾರಕ್ಕಾಗಿ ಎಷ್ಟು ಹಣವನ್ನು ಮುಂದಿನ ಬಜೆಟ್ಟಿನಲ್ಲಿ ಇಡುತ್ತದೆಂಬುದನ್ನು ತಿಳಿಯಬೇಕಾಗಿದೆ.

ಕೊಡಗಿನ ಹರಿಜನರು ತಮ್ಮ ಹಕ್ಕುಬಾಧ್ಯತೆಗಳನ್ನು ಪಡೆಯಬೇಕಾದರೆ, ಎಲ್ಲಾ ಹರಿಜನರ ಸಂಘಟನೆಯಾಗಿ ಯಾವುದಾದರೂ ಒಂದು ಯುಕ್ತ ಕಾರ್ಯ ಕೈಗೊಳ್ಳಬೇಕು. ಇದಕ್ಕೆ ದೇಶದ ಸಾರ್ವಜನಿಕರ ಮತ್ತು ಮುಂದಾಳುಗಳ ಸಹಾಯ ಸಹಕಾರ ಮತ್ತು ಬೆಂಬಲ ಕೋರಲಾಗಿದೆ.

ಒಬ್ಬ ಸಮಾಜವಾದಿ,

ಕಾಶ್ಮೀರ ವಿವಾದ.

ಕಾಶ್ಮೀರದ ವಿವಾದವನ್ನು ತೀರ್ಮಾನಿಸುವ ಸಲುವಾಗಿ ಭದ್ರತಾಮಂಡಳಿಯಲ್ಲಿ ಆಂಗ್ಲೋ–ಅಮೇರಿಕನರು ಮಂಡಿಸಿದ ಸೂಚನೆಗಳನ್ನು ಭಾರತ ಪಾಕಿಸ್ತಾನಗಳೆರಡೂ ತಿರಸ್ಕರಿಸಿದ್ದು ಆ ಸೂಚನೆಯಲ್ಲಿ ಕೆಲವು ಬದಲಾವಣೆಗಳನ್ನು ಈಗ ಮಾಡಲಾಗಿದೆ.

ಆಂಗ್ಲೋ–ಅಮೇರಿಕನರು ಸಂಯುಕ್ತವಾಗಿ ಭದ್ರತಾ ಮಂಡಳಿಯಲ್ಲಿ ಮಂಡಿಸಿರುವ ಸೂಚನೆಗೆ ಭಾರತ–ಪಾಕಿಸ್ತಾನಗಳಿಂದ ಬಂದ ಟೀಕೆಗಳನ್ನು ಗಮನಿಸಿ ಸೂಚನೆಯು ಎರಡೂ ರಾಷ್ಟ್ರಗಳಿಗೆ ಸಮ್ಮತವಾಗುವಂತೆ ತಿದ್ದುಪಡಿ ಮಾಡಲಾಗಿದೆ.

ಈ ಮಧ್ಯೆ ಬ್ರಿಟಿಷ್ ದೇಶದ ಪ್ರತಿನಿಧಿಯಾದ ಡಾ ಜೋಪ್ರಾ ಕಾಲೀಗಸ್ ಮುನೂರ್ಘರವರು ಭಾರತದ ಪ್ರತಿನಿಧಿ ಶ್ರೀ. ಬಿ ಎನ್. ರಾಯರನ್ನು ಭೇಟಿಯಾಗಿ ಕಾಶ್ಮೀರದ ವಿಷಯವಾಗಿ ಒಂದು ಘಂಟೆಯ ತನಕ ಮಾತುಕತೆ ನಡೆಸಿದರೆಂದೂ ಅದು ನಿಷ್ಫಲವಾಯಿತೆಂದೂ ತಿಳಿಯುತ್ತದೆ.

ಕಾಶ್ಮೀರ ವಿವಾದವನ್ನು ಸಂಧಾನ ಮೂಲಕ ತೀರ್ಮಾನಿಸಬೇಕೆಂದು ಯುಕ್ತರಾಷ್ಟ್ರ ಸಂಘವು ಪ್ರಯತ್ನಿಸುತ್ತಿರುವಾಗ ಹಾಗೂ ಭಾರತವು ಶಾಂತಿಯುತವಾದ ತೀರ್ಮಾನಕ್ಕೆ ಉತ್ಸಾಹದಿಂದಿರುವಾಗ ಪಾಕಿಸ್ತಾನವು ಆಕ್ರಮಿತ ಕಾಶ್ಮೀರದಲ್ಲಿ ತನ್ನ ಸೈನ್ಯಗಳ ಹೊಸ ಚಲನವಲನ ನಡೆಸುತ್ತಿದೆ ಎಂದು ದಿಲ್ಲಿಗೆ ವರದಿ ಬಂದಿದೆ.

ಪಾಕಿಸ್ತಾನವು ಕಾಶ್ಮೀರದಲ್ಲಿ ಯುದ್ಧದ ಗಡಿರೇಖೆಯ ಬಳಿಯಲ್ಲಿ ಈ ರೀತಿ ಸೈನ್ಯಗಳನ್ನು ಸಂಗ್ರಹ ಮಾಡುತ್ತಿರುವುದನ್ನು ಕಾಣುವಾಗ ಕಾಶ್ಮೀರದಲ್ಲಿ ಹೊಸ ಗೊಂದಲ ಪ್ರಾರಂಭಿಸುವುದೇ ಪಾಕಿಸ್ತಾನದ ಉದ್ದೇಶವಿದೆಯೆಂದು ಸಂಶಯತಾಳಬಹುದಾಗಿದೆ.

ಇತ್ತೀಚೆಗೆ ಪಾಕಿಸ್ತಾನ ಸರಕಾರದ ವಿರುದ್ಧ ನಡೆದ ಒಳಸಂಚಿನ ಪ್ರಕರಣಕ್ಕೆ ಸಂಬಂಧಿಸಿ ಬಂಧಿಸಲ್ಪಟ್ಟ ಸೇನಾಧಿಪತಿಗಳು ಪಠಾಣರಾಗಿದ್ದು ಆದರಿಂದ ಕಾಶ್ಮೀರದಲ್ಲಿರುವ ಪಠಾಣ ದಾಳಿಗಾರರು ಕೊಚ್ಚಿಗೇಳದಂತೆ ಪಾಕಿಸ್ತಾನವು ತನ್ನ ಸೈನ್ಯಗಳನ್ನು ಅಲ್ಲಿಗೆ ಹೆಚ್ಚೆಚ್ಚು ಸಂಖ್ಯೆಯಲ್ಲಿ ಕಳುಹಿಸುತ್ತಲಿದೆಯೆಂದು ವರದಿಯಾಗಿದೆ.

ಇತ್ತೀಚೆಗೆ ಅನೇಕಾನೇಕ ಕಾಶ್ಮೀರಿ ಮುಸಲ್ಮಾನರು ಗಡಿದಾಟಿ ಭಾರತಕ್ಕೂ ಭಾರತದ ಅಧೀನವಿರುವ ಕಾಶ್ಮೀರಕ್ಕೂ ಪ್ರವೇಶಿಸುತ್ತಲಿರುವರೆಂದು ವರದಿಯಿದೆ. ಪಾಕಿಸ್ತಾನವು ಅವರನ್ನು ಬೇಹುಗಾರರನ್ನಾಗಿ ಕಳುಹಿಸಿದೆಯೆಂದೂ ತಿಳಿದಿದೆ. ಇದೇ ರೀತಿಯಲ್ಲಿ ಕೆಲವು ವಾರಗಳ ಹಿಂದೆ ೨೦,೦೦೦ ಮುಸಲ್ಮಾನರು ಅಜಾದ ಕಾಶ್ಮೀರ ಪ್ರದೇಶದಿಂದ ಭಾರತದ ಅಧೀನವಿರುವ ಕಾಶ್ಮೀರ ಸಂಸ್ಥಾನದೊಳಗೆ ಪ್ರವೇಶಿಸಲು ಪ್ರಯತ್ನಿಸಿದರಂತೆ! ಆದರೆ ಅವರ ಪ್ರಯತ್ನಗಳು ಯಶಸ್ವಿಯಾಗಲಿಲ್ಲ.

ದಾಳಿಗಾರರು ಹೆಚ್ಚೆಚ್ಚು ಸಂಖ್ಯೆಯಲ್ಲಿ ಕಾಶ್ಮೀರದೊಳಗೆ ಪ್ರವೇಶಿಸಬೇಕೆಂದು ಪಾಕಿಸ್ತಾನವೇ ಪ್ರೇರೇಪಿಸುತ್ತಿದೆ ಎಂಬ ಸಂಗತಿ ತಿಳಿದು ಬಂದಿದ್ದು ಪಾಕಿಸ್ತಾನವು ಹೆಚ್ಚೆಚ್ಚು ಸಂಖ್ಯೆಯಲ್ಲಿ ದಾಳಿಗಾರರನ್ನು ಕಾಶ್ಮೀರದೊಳಗೆ ಕಳುಹಿಸುವುದಕ್ಕೆ ಈ ಕೆಳಗೆ ಕಾಣಿಸಲಾದ ಉದ್ದೇಶಗಳಿವೆಯಂತೆ: (೧) ದಾಳಿಗಾರರನ್ನು ಕಾಶ್ಮೀರದೊಳಗೆ ಕಳುಹಿಸಿ ಅಲ್ಲಿ ಜಾತೀಯ ಗಲಭೆಗಳನ್ನು ಪ್ರೇರೇಪಿಸಿ ಅದರಿಂದ ಉಂಟಾಗುವ ಪರಿಸ್ಥಿತಿಯನ್ನು ಜಗತ್ತಿಗೆ ಸಾರಿ ಭಾರತದ ವಿರುದ್ಧ ಅಪಪ್ರಚಾರ ನಡೆಸುವುದು ಹಾಗೂ ಕಾಶ್ಮೀರದಲ್ಲಿ ಸಂಸ್ಥಾನ ಸರಕಾರವು ಶೀಘ್ರದಲ್ಲಿ ನಡೆಸಲಿರುವ ಘಟನಾ ಸಮಿತಿಯ ಚುನಾವಣೆಗಳಲ್ಲಿ ಅವ್ಯವಸ್ಥೆ ಹುಟ್ಟಿಸುವುದು. (೨) ಕಾಶ್ಮೀರದಲ್ಲಿ ಪಾಕಿಸ್ತಾನಿ ಗುಪ್ತಚಾರರ ಸಂಖ್ಯೆಯನ್ನು ಬೆಳೆಸುವುದು (೩) ಕಾಶ್ಮೀರವು ಭಾರತಕ್ಕೆ ಈಗ ಆಹಾರ ಧಾನ್ಯಗಳನ್ನು ಕಳುಹಿಸುತ್ತಿರುವುದನ್ನು ಸಹಿಸಲಾರದೆ ಕಾಶ್ಮೀರಕ್ಕೆ ಅದಷ್ಟು ಮುಸಲ್ಮಾನರನ್ನು ಕಳುಹಿಸಿ ಅಲ್ಲಿ ಜನಸಂಖ್ಯೆಯನ್ನು ಹೆಚ್ಚಿಸಿ ಆಹಾರ ಅಭಾವ ತಲೆದೋರುವಂತೆ ಮಾಡುವುದು.

ಕಾಶ್ಮೀರದ ಗಡಿಯಲ್ಲಿ ಪಾಕಿಸ್ತಾನವು ಸೈನ್ಯಶಕ್ತಿಯನ್ನು ಬಲಪಡಿಸುತ್ತಿರುವುದು, ಅಥವಾ ಕಾಶ್ಮೀರದ ಮೇಲೆ ಪವಿತ್ರ ಯುದ್ಧವನ್ನು ಹೂಡಲಾಗುವುದು ಎಂದು ಪಾಕಿಸ್ತಾನವು ಸಾರುತ್ತಿರುವುದು ಕಾಶ್ಮೀರದ ಜನರಲ್ಲಿ ಆಶ್ಚರ್ಯವನ್ನುಂಟುಮಾಡಿಲ್ಲ. ಈ ವದಿಗಳಿಂದ ಅವರು ಭೀತಿಗೊಂಡಿಲ್ಲ ಯಾಕೆಂದರೆ ಕಾಶ್ಮೀರದ ಮೇಲಾಗುವ ಧಾಳಿ ಭಾರತದ ಮೇಲೆ ನಡೆಯುವ ಧಾಳಿಯೆಂದು ಭಾರತ ಸರಕಾರವು ಪರಿಗಣಿಸುವುದೆಂದು ಮುಖ್ಯ ಮಂತ್ರಿ ನೆಹರುಗಳು ಸಾರಿರುವರು.

ಬೇಕಾಗಿದೆ.

ದೊಡ್ಡದಾಗಿ ಬೆಳೆದ ಕಾಡು ಹುಂಜಗಳ ಕುತ್ತಿಗೆಯಲ್ಲಿರುವ ಮಿನುಗುವ ಗರಿಗಳಿಂದ ಕೂಡಿದ ಭಾಗವನ್ನು ಚರ್ಮ ಸಹಿತ ತೆಗೆದು ಒಣಗಿಸಿ ಕಳುಹಿಸಿದರೆ ಪ್ರತಿಯೊಂದಕ್ಕೆ ರೂ ೧–೮–೦ ದರದಲ್ಲಿ ಕೊಂಡು ಕೊಳ್ಳಲಾಗುವದು. ಹೆಚ್ಚಿನ ವಿವರಗಳಿಗೆ ಈ ಪತ್ತೆಗೆ ಬರೆಯಿರಿ.

D. H. THANGAM & CO.
Kundah Bridge P.O.
Nilgiris

ಕೊಡಗು ಪ್ರಾಂತೀಕ ಸಹಕಾರಿ, ಮಾರ್ಕೆಟಿಂಗ್, ಫೆಡರೇಷನ್ ಲಿಮಿಟೆಡ್., ವೀರಾಜಪೇಟೆ.

ನಮ್ಮಲ್ಲಿ ಕೋವಿಗಳು, ತೋಟಗಳು ಮತ್ತು ಎಲ್ಲಾ ತರಹದ ವ್ಯವಸಾಯದ ಹತ್ಯಾರುಗಳು ದೊರೆಯುತ್ತವೆ.

1. 32 ಪಿಸ್ತೂಲುಗಳು (Pistols) ಕ್ರಯ ರೂ. 162 ರಿಂದ 245ರ ವರೆಗೆ.
2. 12ನೇ ನಂಬರಿನ ಒಂಟಿ ಕೊಳವಿನ ಕೋವಿ ಕ್ರಯ ರೂ. 320-0-0
3. 12ನೇ ನಂಬರಿನ ಜೋಡು ಕೊಳವಿನ ಕೋವಿ (Webley & Scott)
4. 12ನೇ ನಂಬರಿನ ಜೋಡು ಕೊಳವಿನ ಕೋವಿ (Spanish make)
5. .32 ಪಿಸ್ತೂಲು ಮತ್ತು ರಿವಾಲ್ವರುಗಳ ತೋಟಗಳೂ ಸಹ ದೊರೆಯುತ್ತವೆ.
6. ಕಾಫಿ ಮತ್ತು ಕಿತ್ತಳೆ ಗಿಡಗಳಿಗೆ ಸ್ಪ್ರೆಮಾಡುವ ಪಂಪುಗಳು (Spraying Pumps)
7. $\frac{1}{4}$" $\frac{5}{8}$" $\frac{1}{2}$" $\frac{3}{8}$" $\frac{1}{4}$" ಕಬ್ಬಿಣದ ಸಲಾಕೆಗಳು.

ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

(ಅವಶ್ಯವಿರುವ ಕೋವಿಗಳಿಗೂ, ತೋಟಗಳಿಗೂ ಜಿಲ್ಲಾ ಮೇಜಿಸ್ಟ್ರೇಟರಿಂದ ವಿಶೇಷ ಪರ್ಮಿಟು "Special permit" ಪಡೆದವರಿಗೆ ಮಾತ್ರ ದೊರೆಯುವದು)

ಎಂ. ಎಸ್. ಸೋಮಯ್ಯ,
ಗೌರವ ಕಾರ್ಯದರ್ಶಿ.

52-27

CRESCENT

FOR PROTECTION AND SERVICE.

It is best to represent and insure with

The CRESCENT Insurance Co., Ltd.,

H: O: BOMBAY. [*Established 1919.*

For particulars write to:-

Sri B. A. Pooviah — *Organiser, Pollibetta, Coorg.*
or The Branch Manager, *133 B. Birgade Road, Bangalore 1.*

ಸುರಕ್ಷಿತವಾದ ಜೀವವಿಮೆ ಪಡೆಯಲು

ಕ್ರೆಸೆಂಟ್

ಇನ್ಷ್ಯೂರೆನ್ಸ್ ಕಂಪೆನಿಗೆ ಬರೆಯಿರಿ.

ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ. (1921)ರಲ್ಲಿ ಸ್ಥಾಪಿತವಾಗಿದೆ.

ಅಧಿಕೃತ ಶೇರು ಭಂಡವಾಳ	ರೂ.	10,00,000.
ವಸೂಲಾದ ಶೇರು ಮೊಬಲಗು	ರೂ.	1,79,000.
ಕ್ಷೇಮನಿಧಿ	ರೂ.	55,000.
ಇತರ ನಿಧಿಗಳು	ರೂ.	26,000.

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನೂ ಕೈಕೊಳ್ಳಲಾಗುವುದು

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ, ಬೆಳ್ಳಿ ನಗಗಳ ಆಡಿನ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ಕ್‌ಯೂ ಡ್ರಾಫ್ಟ್‌ಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರಿನಿಟಿ ಮತ್ತು ವಾರ್ಡನ್ ಇನ್ಷ್ಯೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಗೌ. ಕಾರ್ಯದರ್ಶಿ,

ಕೆ. ಪಿ. ಅಪ್ಪಯ್ಯ, M. L. C. ಪ್ರೆಸಿಡೆಂಟ್ ಮತ್ತು ಖಜಾಂಚಿ.

"ಪ್ರತಿಧ್ವನಿ"-ಒಂದು ವಿಮರ್ಶೆ.

ವಿಮರ್ಶಕರು:-ಶ್ರೀ ಸಿ. ಎಂ. ರಾಮರಾಯರು.

ಇದು ಒಂದು ಕಾವ್ಯಮಾಲೆ. ಐವತ್ತು ಕವನಗಳನ್ನು ಒಳಗೊಂಡಿದೆ. ಬರೆದವರು ಶ್ರೀಯುತ ಬಿ. ಡಿ. ಗಣಪತಿಯವರು. ಪ್ರತಿ ಒಂದು ಕವನವು ತುಂಬಾ ರಸವತ್ತಾಗಿದೆ. ಕೆಲವು ಕವನಗಳು ವೈರಾಗ್ಯ ಪರವಾಗಿಯೂ, ಕೆಲಕೆಲವು ನೀತಿ ಪರವಾಗಿಯೂ, ಇನ್ನೂ ಕೆಲವು ಭಕ್ತಿ ಪರವಾಗಿಯೂ ಇವೆ. ಎಲ್ಲಾ ಪದ್ಯಗಳಲ್ಲಿಯೂ ಸಮಾಜದಲ್ಲಿ ಉಂಟಾಗಿರುವ ಮತ್ತು ಆಗಬೇಕಾದ ಪ್ರಗತಿಯು ಎದ್ದು ತೋರಿಬರುತ್ತಿದೆ. 'ಜಾತಿ ಮತಗಳ ಭೇದದ ಒಡಕಿಗೆ ಮೀರಿದ ಮನವಿರಬೇಕು' ಎಂದು ಕವಿಯು ಒಂದೆಡೆಯಲ್ಲಿ ಹೇಳುತ್ತಿದ್ದಾನೆ. ಇನ್ನೊಂದೆಡೆಯಲ್ಲಿ ಭಿಕ್ಷುಕನನ್ನು ಕುರಿತು "—

ಧನಿಕನ ತೆರದಲಿ ನಿನಗೂ ಇಲ್ಲವೆ
ಶಿರಹಣೆ ಕೈಭುಜ ಕಾಲುಗಳು?
ಅವನದರಂದದಿ ಸುಂದರವಲ್ಲವೆ
ಕಂಬನಿ ಕರೆದಿಹ ಕಣ್ಣುಗಳು?
ಭಿಕ್ಷಾಪಾತ್ರೆಯು ಕೈಗಳಲೇತಕೆ-
ಎಸೆಯದದುರಕೆ ಕಟ್ಟಾಳು
ರಕ್ಷಿಪ ಶಕ್ತಿಯು ಕೈಯಲ್ಲಿರೆ ನೀ
ಭಿಕ್ಷೆಯ ನಚ್ಚುವದು ಹಾಳು,"

ಎಂದು ಬೋಧಿಸುತ್ತಿದ್ದಾನೆ. ಪ್ರಪಂಚದ ಸಾಮಾನ್ಯ ಜನರ ಸ್ವಭಾವವನ್ನು ಒಂದು ಪದ್ಯದಲ್ಲಿ ಚೆನ್ನಾಗಿ ಚಿತ್ರಿಸಿದ್ದಾನೆ. ಜನಾರ್ದನನನ್ನು ಮೆಚ್ಚಿಸಿದರೂ ಜನರನ್ನು ಮೆಚ್ಚಿಸಲಾಗದು ಎಂಬ ಮಾತು ಸ್ಪಷ್ಟವಾಗಿ ತೋರುತ್ತಿದೆ.

"ಮೌನದಲ್ಲಿ ಕುಳಿತಿರಲು
ಮೂಕನೆಂಬುವರು
ಮನತೆರದ ಮಾತಿರಲು
ವಾಚಾಳಿಯೆಂದು
ಜಯಮಾಲೆ ಬಂದೊಡನೆ
ದ್ವೇಷ ಮಾಡುವರು
ಅಪಜಯವು ಕೈಗೂಡೆ
ನಕ್ಕು ನಲಿಯುವರು
....
ಬಡಜನರಿಗೆನ್ನು ಕಲಿ
ದಾನವನು ಮಾಡೆ
ಹೆಸರಿಗೆಂದೆನ್ನುವರು
ಜನಪದವು ನೋಡೆ"

ಒಂದೆಡೆಯಲ್ಲಿ ದೇವನು ಎಲ್ಲಿರುವನು ಎಂಬ ಪ್ರಶ್ನೆಗೆ ಉತ್ತರಿಸಿರುತ್ತಾನೆ—

ಮಂದಿರದ ಪೂಜೆಯಲಿ
ಭೋರ್ಗರೆವ ಗಂಟೆಯಲಿ
ಸೋದರನೆ ಕೇಳುವದೆ
ದೇವವಾಣಿ ?
ಕಣ್ಣೀರ ಸ್ನಾನದಲಿ
ನಿಷ್ಠೆ ಜಪತಪಸಿನಲಿ
ಹೊಳೆಯುವದೆ ದೇವನಾ
ರೂಪವಾಣಿ ?

ಎಂದು ಕೇಳಿ ಅದಕ್ಕೆ ಉತ್ತರವಾಗಿ—

"ಸತ್ಯವಚನಗಳಲ್ಲಿ
ಪರಿಶುದ್ಧ ಹೃದಯದಲಿ
ಮೌನದಲಿ ತೋರುವದು
ಅವನ ರೂಪಕ"

ಎಂದು ದೇವನಿರುವನ್ನು ತೋರಿಸಿದ್ದಾನೆ.

ತಂದೆ ತಾಯಿ ಪತ್ನಿಯೆಂದು
ಮಮತೆ ತೋರುವೆ
ಸ್ನೇಹ ಬಂಧುಬಳಗವೆಂದು
ಮೋಹ ಮಾಡುವೆ
ಕಂಡೆಗೊಂಬು ಕೀರ್ತಿಸಾಕು
ಪತ್ನಿಗವನ್ನು ಬಿಡಬೇಕು
ಬಂಧುಬಳಗ ಎಲ್ಲಿಗೆ?
ರುದ್ರಭೂಮಿ ತನಕವೆ!

ಇಂಥಾ ಪದ್ಯಗಳನ್ನು ಓದುವಾಗ ದಾಸರ ಕೀರ್ತನೆಗಳು ಜ್ಞಾಪಕಕ್ಕೆ ಬರುತ್ತವೆ ಮಹಾತ್ಮಗಾಂಧಿಯವರ ಮರಣವನ್ನು ಕುರಿತು ಬರೆದ —

ನಾಡಿನ ಕಳೆ ಕೈಜಾರಿತು ನಂದಿತು
ಬಿರ್ಲಾ ಭವನದ ಹಾಸಿನಲಿ
ಬಾಡಿದ ವದನದಿ ದಿನಪ ಬಿಕ್ಕಿದ
ನೀಲಿಮ ಪಶ್ಚಿಮ ಜಲಧಿಯಲಿ

ಎಂಬ ವಾಣಿಯು ಯಾರ ಕಣ್ಣಲ್ಲಿ ತಾನೆ ಕಂಬನಿ ಸುರಿಸಲಿಕ್ಕಿಲ್ಲ? ಬಾಪೂಜಿಯ ನಂತರ ಅವರ ತತ್ವವನ್ನು ಬಾಯಲ್ಲಿ ಹೇಳುತ್ತಾ ಸ್ವಾರ್ಥಕ್ಕೋಸ್ಕರ ವೇಷವನ್ನು ಹಾಕಿರುವವರ ಪರಿಚಯವನ್ನು ಕವಿಯು ಚೆನ್ನಾಗಿ ಮಾಡಿರುತ್ತಾನೆ. ಒಟ್ಟಾರೆ ಹೇಳುವುದಾದರೆ ಕವಿಯು ತನ್ನ ವೈಭವವನ್ನು ಅಲ್ಲಲ್ಲಿ ಬೀರಿರುತ್ತಾನೆ. ಸುಲಭವಾದ ಮಾತುಗಳಿಂದ ಪದ್ಯಗಳನ್ನು ರಚಿಸಿರುತ್ತಾನೆ ಈ ಕವನಗಳಲ್ಲಿ ಕೆಲವು ಲೋಪದೋಷಗಳಿದ್ದರೂ ಮತ್ತು ಈ ಕವನಗಳು ಸ್ವಲ್ಪಮಟ್ಟಿಗೆ ಶಾಸ್ತ್ರನಿಯಮಗಳಿಗೆ ಒಳಪಡದಿದ್ದರೂ "ಇವುಗಳಿಂದ ನನಗೆ ಆನಂದವಾಗಿದೆ" ಎಂದು ಕವಿಯು ಮುನ್ನುಡಿಯಲ್ಲಿ ಹೇಳಿಕೊಂಡಿದ್ದಾನೆ. ಹಾಗೆಯೇ ಓದುಗರಿಗೂ ಸಹ ಆನಂದವಾಗದಿರಲಾರದು.

ಬೇಕಾಗಿದ್ದಾರೆ

ನಮ್ಮ ಅಮೇರಿಕನ್ ಫೌಂಟನ್ ಪೆನ್ನುಗಳನ್ನೂ, ಸ್ವಿಸ್ ವಾಚುಗಳನ್ನೂ ಮಾರಾಟ ಮಾಡಲು ತಿಂಗಳಿಗೆ ರೂ ೩೦೦ ರಿಂದ ೭೦೦ ರ ವರೆಗೆ ವೇತನ ಮತ್ತು ಬತ್ತೆಯೂ ಕಮಿಷನಿನಲ್ಲಿ ಏಜಂಟರು ಬೇಕಾಗಿದ್ದಾರೆ. ಮಾಹಿತಿಗಳಿಗೂ ಶರತುಗಳಿಗೂ ಇಂಗ್ಲಿಷಿನಲ್ಲಿ ಈ ಪತ್ತೆಗೆ ಬರೆಯಿರಿ

LAWRENCE BROTHERS (K. M)
71. Nagdevi Cross Lane
Bomday 3

4-3

Edited, Printed and Published by P. I. Belliappa at 'Kodagu' Press, Mercara, for 'Kodagu' Ltd.

Reg. No. M. 1350.
'KODAGU' MERCARA, (Coorg).

ಕೊಡಗು

ಸಂಪಾದಕರು—ಕೆ. ಐ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. 5-0-0

ಸಂಪುಟ ೨೯ | ತಾರೀಕು ೬-೪-೧೯೫೧ನೇ ಶುಕ್ರವಾರ | ಸಂಚಿಕೆ ೪೩

ವಾರ್ಡು ತೀರಾ ಅತೃಪ್ತಿಕರವಾಗಿದೆಯೆಂದು ಬೇರೆ ಹೇಳಬೇಕಿಲ್ಲ. ತಾತ್ಕಾಲಿಕವಾದ ಏರ್ಪಾಡು ಇದಾದರೂ ದೇಶಕ್ಕೆ ಈ ಏರ್ಪಾಡಿನಿಂದ ಯಾವ ಹಿತವೂ ಆಗಲಾರದು

ಹಿನ್ನಡೆ

ಈ ಏರ್ಪಾಡನ್ನು ನೋಡುವಾಗ, ಒಪ್ಪಿದ ಗಿ ಎ ವ ಹೆಜ್ಜೆ ಹಿನ್ನಡೆ ಯಾಗಿದೆ. ಕೊಡಗಿಗೆ ೧೯೨೪ರಿಂದಲೇ ಶಾಸನೀಯ ಒಂದು ಕೌನ್ಸಿಲಿದ್ದು ಸುಮಾರು ೧೦ ಬಜೆಟ್ ಮಾತ್ರ ಆಡಳಿತದ ಬಗ್ಗೆ ಪ್ರತಿನಿಧಿ ಯೂ ಹಿನ್ನ ರಸ್ತು ಮಾಡ ಹಕ್ಕಿದೆ. ಈ ಪ್ರಥಮ ಹೆಜ್ಜೆಯಿಂದ ಮುಂದಿನ ಹೆಜ್ಜೆ

ಈ ಏರ್ಪಾಡು ಒಪ್ಪಲರ್ಹವಾದ್ದೆ?

ಲೇ:—ಶ್ರೀ ಬಿ. ಡಿ ಗಣಪತಿ, ಮಡಿಕೇರಿ

ಹಳೇ ಸಮಸ್ಯೆ

ಕೊಡಗಿನ ರಾಜಕೀಯ ಭವಿಷ್ಯದ ವಿಚಾರವಾಗಿ ವಿವಿಧ ರೀತಿಯ ಚಳವಳಿಗಳು ಕಳೆದ ಕಾಲು ಶತಮಾನದಿಂದಲೂ ನಡೆದಿದೆ. ಈ ಅವಧಿಯಲ್ಲಿ ಅನೇಕ ತರದ ವಾದಗಳು ಜನತೆಯ ಮುಂದೆ ಬಂದಿವೆ. ಈ ಎಲ್ಲಾ ವಾದಗಳನ್ನು ಸ್ಥೂಲವಾಗಿ ಮೂರು ಭಾಗಗಳಾಗಿ ವಿಭಾಗಿಸಬಹುದಾಗಿದೆ. ಕೊಡಗು ಮೈಸೂರಿಗೆ ಸೇರಬೇಕೆನ್ನುವವರು ಒಂದು ಗುಂಪಾದರೆ ಮದ್ರಾಸಿಗೆ ವಿಲೀನವಾಗಲಿ ಎನ್ನುವವರದು ಮತ್ತೊಂದು. ಮತ್ತೆ ಕೊಡಗು ಈಗಿರುವಂತೆಯೇ ಪ್ರತ್ಯೇಕವಿರಬೇಕೆನ್ನುವವರ ಮೂರನೆ ಗುಂಪೊಂದಿದೆ. ಇವುಗಳಲ್ಲಿ ಯಾವುದಕ್ಕೆ ಬಹುಮತವಿದೆಯೆಂಬುದನ್ನು ಸರಿಯಾಗಿ ಹೇಳಲಾಗುವದಿಲ್ಲ. ಹೇಗೂ ಕೊಡಗಿನ ಈ ರಾಜಕೀಯ ಭವಿಷ್ಯದ ಸಮಸ್ಯೆಯು ಇಂದಿನದು ಒಂದು ಸಂದಿಗ್ಧ ಕಾಲವಾಗಿದೆ. ಮೊನ್ನೆಯಾಗಿ ಕೇಂದ್ರ ಶಾಸನ ಸಭೆಯಲ್ಲಿ ಮಂತ್ರಿಗಳೊಬ್ಬರು ಗಡಿಬಿಡಿಯಲ್ಲಿ "ಒಂದಿಲ್ಲೊಂದು ದಿನ ಕೊಡಗು ನೆರೆ ಪ್ರಾಂತದೊಡನೆ ವಿಲೀನವಾಗಬೇಕು." ಎಂದು ಹೇಳಿದ ಮಾತಿನಿಂದ ಕೊಡಗಿನ ರಾಜಕೀಯ ರಂಗದಲ್ಲಿ ಒಂದು ಕಲ್ಲೋಲವು ಪ್ರಾರಂಭವಾಗಿದೆ. ಆದರೂ ಈ ಭವಿಷ್ಯ ನಿರ್ಣಯವು ಕ್ಷಿಪ್ರದಲ್ಲಿ ಆಗಲಾರದೆಂದೂ ತೋರುತ್ತದೆ. ದೇಶದ ಆಡಳಿತದ ಬಗ್ಗೆ ತಾತ್ಕಾಲಿಕ ಏರ್ಪಾಡಾಗಿ ಎರಡಕ್ಕಿಂತ ಹೆಚ್ಚು ಜನಾನುರಾಗಿ ಮುಂದಾಳುಗಳನ್ನು ಸೇರಿಸುವ ಸೂಚನೆ ಮಾಡಿರುವದೇ ಇದಕ್ಕೆ ನಿದರ್ಶನ. ಕೊಡಗಿನ ಭವಿಷ್ಯ ನಿರ್ಣಯವು ಇಂದಿನ ಮಟ್ಟಿಗೆ ಸ್ವಲ್ಪ ದೂರದ ಮಾತೆಂದು ತೋರುವದರಿಂದ ಆ ವಿಚಾರವನ್ನು ಬಿಟ್ಟು ಈಗ ಶೀಘ್ರ ಆಗಲಿರುವ ತಾತ್ಕಾಲಿಕ ಸುಧಾರಣಾ ವಿಚಾರವನ್ನು ವಿವೇಚಿಸುವದು ಆವಶ್ಯಕವಾಗಿದೆ

ಸುಧಾರಣೆಯ ಕೂಗು

ಕೊಡಗಿನ ಆಡಳಿತಕ್ರಮವು ಪ್ರಗತಿಶೀಲವಾಗಿಲ್ಲ. ಓಬೀರಾಯನ ಕಾಲದ ಶಿಫಾರಸ್ಸಿನ ಕೌನ್ಸಿಲಿಟ್ಟುಕೊಂಡು, ನಿರಂಕುಶ ಚೀಫ್ ಕಮಿಷನರ ಇಚ್ಛೆ ಅನಿಚ್ಛೆಗಳಂತೆ ನಡೆಯುವ ಈ ಆಡಳಿತದಲ್ಲಿ ಪ್ರಜಾಜನರ ಕೂಗು ಕೇಳಿ ಬರುವಂತಾಗಬೇಕು ಎಂಬ ಬಯಕೆ ಹಲವು ವರ್ಷಗಳಿಂದಲೂ ದೇಶೀಯರಲ್ಲಿದೆ. ಈ ಬಯಕೆಯ ಪ್ರತಿಫಲವಾಗಿಯೇ ತಾರೀಕು ೧೮-೪-೫೦ರಲ್ಲಿ ನಡೆದ ಕೊಡಗು ಶಾಸನ ಸಭೆಯಲ್ಲಿ ಕೊಡಗಿಗೆ ಪ್ರಜಾಜನ ಜವಾಬ್ದಾರಿ ಸರಕಾರ ಕೊಡಲ್ಪಡಬೇಕೆಂಬ ರರಾವು ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟಿತು. ಆದರೂ ಕೊಡಗಿನ ಆಡಳಿತ ಕ್ರಮದಲ್ಲಿ ಇಂದಿನ ವರೆಗೆ ಬದಲಾವಣೆಯಾಗಿಲ್ಲ. ಅಪ್ರಗತಿಪರವಾಗಿ ಜನರಲ್ಲಿ ಜಿಗುಪ್ಸೆ ಹೆಚ್ಚಾಗಿದೆ. ಸ್ವಾತಂತ್ರ್ಯ ಬಂದು ನಾಲ್ಕು ವರ್ಷಗಳಾಗುತ್ತಾ ಬಂದರೂ ಕೊಡಗಿನ ಆಡಳಿತದ ಮೇಲೂ, ಜನಜೀವನದಲ್ಲೂ ಯಾವುದೇ ಹೇಳಿಕೊಳ್ಳುವ ಬದಲಾವಣೆ ಇಲ್ಲ. ಅಂದಿನ ಪರಕೀಯ ಆಡಳಿತಕ್ಕೂ ಇಂದಿನದಕ್ಕೂ ಯಾವುದೇ ವ್ಯತ್ಯಾಸವಿಲ್ಲದ ಸಂಗತಿಯೇ ಅದ್ದರಿಂದಲೇ ಈ ಪರಿಸ್ಥಿತಿಯನ್ನು ಸಹಿಸಲಾರದೆ ತಮ್ಮ ರಾಜಕೀಯ ಭಿನ್ನಾಭಿಪ್ರಾಯಗಳನ್ನು ಮರೆತು ಎಲ್ಲರೂ ಒಂದಾಗಿ ಕೊಡಗಿಗೆ ಸುಧಾರಣೆ ಬೇಕೆಂದು ಕೇಳಿದುದಾಗಿದೆ

ತಾತ್ಕಾಲಿಕ ಸುಧಾರಣೆ.

ಮೊನ್ನೆಯಾಗಿ ಕೇಂದ್ರ ಶಾಸನ ಸಭೆಯಲ್ಲಿ ಸಿ ವರ್ಗದ ಸಂಸ್ಥಾನಗಳ ವಿಚಾರ ಚರ್ಚಿಸಲ್ಪಡುವಾಗ ಕೊಡಗಿಗೆ ತಾತ್ಕಾಲಿಕ ಸುಧಾರಣೆಯು ಒಂದು ಏರ್ಪಾಡು ಸೂಚಿಸಲ್ಪಟ್ಟಿದೆ. ಇದರ ಪ್ರಕಾರ ಆಡಳಿತ ಜವಾಬ್ದಾರಿಯನ್ನು ವಹಿಸಲು "ಚೀಫ್ ಕಮಿಷನರ್-ಇನ್ ಕೌನ್ಸಿಲ್" ಇವರೊಂದಿಗೆ ಇಬ್ಬರು ಯಾ ಹೆಚ್ಚಿನ ಮುಂದಾಳುಗಳನ್ನು ನೇಮಿಸಲಾಗುವದು. ಚೀಫ್ ಕಮಿಷನರು ಕೆಲವು ವಿಚಾರಗಳಲ್ಲಿ ತಾನೇ ಸ್ವಯಂ ನಿರ್ಣಯ ಮಾಡಿ ವರ್ತಿಸಿದರೂ ಮತ್ತೆ ಕೆಲವುಗಳಲ್ಲಿ ಈ ಮುಂದಾಳುಗಳ ಸಲಹೆ ಕೇಳುವರು ಕೊಳ್ಳುವರು." ಎಂದು ತಿಳಿದು ಬಂದಿದೆ. ಈ ವಿಷಯ ಪ್ರಜಾಜನ ಜವಾಬ್ದಾರಿ ರಹಿತವಾಗಿದ್ದಿತು. ಆದರೆ ಈಗಿನ ತಾತ್ಕಾಲಿಕ ಏರ್ಪಾಡು ಯಾವ ಸಮಸ್ಯೆಯನ್ನೂ ಬಗೆಹರಿಸುತ್ತಿಲ್ಲ. ಈ ವರೆಗೆ ನಡೆಯುತ್ತಿದ್ದ ಚೀಫ್ ಕಮಿಷನರ ನಿರಂಕುಶ ಪ್ರವೃತ್ತಿ ಮತ್ತು ಆಡಳಿತಕ್ಕೆ ಈ ಏರ್ಪಾಡಿನಿಂದ ಧಕ್ಕೆ ಬರುವಂತಿಲ್ಲ. ೧೯೧೯ರಲ್ಲಿ ಮಾಂಟೆಗೋ ಚೆಲ್ಮ್ಸ್‌ಫರ್ಡ್ ಸುಧಾರಣೆಯು ಕಾಲಕ್ಕೆ ಒದಗಿಸಿ ತಿರಸ್ಕರಿಸಿದ ಆ ಆಡಳಿತ ಕ್ರಮವು ಇಂದಿನ ಸ್ವಾತಂತ್ರ್ಯಯುಗದಲ್ಲಿ ನಮ್ಮ ಮೇಲೆ ಹೇರಲ್ಪಡುವದಾದರೆ ಅದನ್ನು ವಿರೋಧಿಸುವದು ಪ್ರತಿಯೊಬ್ಬನ ಕರ್ತವ್ಯವಾಗಿದೆ. ಯಾವುದೇ ದೃಷ್ಟಿಯಿಂದ ನೋಡಿದರೂ ಸೂಚಿಸಲ್ಪಟ್ಟ ಈ 'ಚೀಫ್ ಕಮಿಷನರ್-ಇನ್-ಕೌನ್ಸಿಲ್' ಏರ್ಪಾಡು ಪ್ರಜಾಪ್ರಭುತ್ವ ತತ್ವಕ್ಕನುಗುಣವಾಗಿ ಇಲ್ಲ. ಕೌನ್ಸಿಲರುಗಳಾಗಿ ಆರಿಸಲ್ಪಟ್ಟ ಜನಪ್ರತಿನಿಧಿಗಳ ಸಲಹೆಯನ್ನು ಚೀಫ್ ಕಮಿಷನರು ತಿರಸ್ಕರಿಸಲೂ ಬಹುದಾಗಿದೆ. ಹಾಗಿರುವಾಗ ಈಗಿನ ಶಿಫಾರಸ್ಸಿನ ಕೌನ್ಸಿಲಿನ ನಾಂಕೇತಿಕವಾಗಿ ವೇತನ, ಬತ್ತೆ ಹೊಂದುವ ಎರಡು ಮೂರು ಸಲಹೆಗಾರರಿಂದ ಯಾವ ಪ್ರಗತಿಯೂ ಸಂಭವವಿಲ್ಲ. ಜನರ ಹದಿಮೂರು ಪ್ರತಿನಿಧಿಗಳು ಕೌನ್ಸಿಲಿನಲ್ಲಿದ್ದು ಅವರು ಕೊಟ್ಟ ಸಲಹೆ ಸೂಚನೆಗಳನ್ನು ಉಲ್ಲಂಘಿಸಿ ವರ್ತಿಸುವ ಚೀಫ್ ಕಮಿಷನರಿಗೆ ವೇತನ ಪಡೆಯುವ ನಾಲ್ಕು ಜನ ಸಲಹೆಗಾರರನ್ನು ನೇಮಿಸುವದರಿಂದ ಆಗುವ ಜನಹಿತವೇನು?

ಚುನಾವಣೆಯಲ್ಲ, ನೇಮಕ!

ಈ ಜನಾನುರಾಗಿ ಮುಂದಾಳುಗಳನ್ನು ಆರಿಸುವ ವಿಧಾನವಾದರೂ ಆ ಹಳೆಯ ಸಂಪ್ರದಾಯಕ್ಕೆ ಅನುಗುಣವಾಗಿದೆ. ಜನತೆಯ ಅಭಿಪ್ರಾಯದಂತೆ ಇವರ ಆಯ್ಕೆಯಲ್ಲ; ಬದಲು ಚೀಫ್ ಕಮಿಷನರ ದೃಷ್ಟಿಗೆ ಜನಾನುರಾಗಿಗಳೆಂದು ತೋರುವ ಎರಡೋ ಮೂರೋ ಜನರ ಹೆಸರುಗಳನ್ನು ಅವರು ಸೂಚಿಸಿ, ಅವರ ನೇಮಕದ ಹೇಳಿಕೆಯನ್ನು ಕೇಂದ್ರ ಸರಕಾರವು ಮಾಡುವದು! ಈ ಹಳೆಕಾಲದ ಪರಂಪರೆಯ ಭಾರ, ಕೊಡಗಿನವರಿಗೆ ಬರಬೇಕೆ? ಈ ನೇಮಿಸಲ್ಪಡುವ ಜನ ಪ್ರತಿನಿಧಿಗಳೆಂದು ಹೇಳುವದೆಂತು? ಇವರ ಜನಾನುರಾಗವನ್ನು ಅಳೆಯುವ ಅಳತೆಗೋಲು ಚೀಫ್ ಕಮಿಷನರ ಇಚ್ಛೆ ಅನಿಚ್ಛೆಗಳೇ? ಯಾ ರಾಜಕೀಯ ಪಕ್ಷಗಳೆಂದು ಯಾವುದೋ ಗುರಿಯಿಂದ ಬೊಬ್ಬೆ ಹಾಕುವ ಕೆಲವೊಂದು ಜನರ ಅಭಿಪ್ರಾಯವೇ? ಕೊಡಗಿನ ಜನರು ತಮಗೆ ಜವಾಬ್ದಾರಿ ಸರಕಾರ ಬೇಕೆಂದು ಕೇಳಿದುದಕ್ಕೆ ಇದೇ ಕೊಡುಗೆಯೇ? ಇದು ಮಹಾತ್ಮರ ಮಾತಿನಷ್ಟು ಹೇಳುವದಾದರೆ 'ರೊಟ್ಟಿ ಕೇಳಿದಾಗ ಕಲ್ಲು ಕೊಟ್ಟಂತೆ!'

ಆಗಬಹುದಾದ ಅನಾಹುತ

ಈ ತಾತ್ಕಾಲಿಕ ಏರ್ಪಾಡನ್ನು ಒಪ್ಪುವದರಿಂದ ದೇಶಕ್ಕೆ ಅಹಿತವಲ್ಲದೆ ಬೇರೆ ಫಲ ದೊರೆಯದು. ದೇಶದಲ್ಲಿ ಎರಡು ರಾಜಕೀಯ ಪಕ್ಷಗಳಿವೆಯೆಂಬ ಕಾರಣವನ್ನು ಮುಂದೆ ಹಾಕಿ ಹಲವು ವರ್ಷಗಳಿಂದಲೂ ಕೊಡಗು ಸರಕಾರದ ಆಡಳಿತಗಾರರು ಯಾವುದೇ ಒಂದು ಪ್ರಗತಿಶೀಲವಾದ ಕಾರ್ಯಕ್ರಮವನ್ನು ಕೈಕೊಂಡಿಲ್ಲ. ಪ್ರತಿಯೊಂದು ಕಾರ್ಯಕ್ಕೂ ರಾಜಕೀಯ ರಂಗು ಬಣ್ಣ ಯಾವುದೇ ಸಮ್ಮತ ಮಾಡದೆ ತಮ್ಮ ತಪ್ಪನ್ನು ಈ ಪಕ್ಷ ರಾಜಕೀಯದ ಮೇಲೆ ಹಾಕಿ ತಾವು ಸ್ವಚ್ಛಂದವಾಗಿರುವ ಸಂಪ್ರದಾಯವು ಕೊಡಗಿನವರಿಗೆ ತಿಳಿಯದ್ದಲ್ಲ. ಈಗ ಸೂಚಿತವಾಗಿರುವ ಏರ್ಪಾಡು ಜಾರಿಯಲ್ಲಿ ಬರುವದಾದರೆ ಚೀಫ್ ಕಮಿಷನರು ಕೊಡಗಿನ ರಾಜಕೀಯ ಪಕ್ಷಗಳಿಂದ ಒಬ್ಬಬ್ಬರನ್ನು ಆರಿಸಬಹುದು. ಹಾಗೆ ಎರಡು ಪಕ್ಷಗಳಿಂದ ಆರಿಸಿದ್ದೇ ಆದರೆ ಹೊರಗಿದ್ದ ರಾಜಕೀಯ ಕಲ್ಪಿತವನ್ನು ಆಡಳಿತದೊಳಗೆ ತಂದಂತಾಗುವದು. ಇದರಿಂದ ಅನಾಹುತವೇ ಹೆಚ್ಚಲ್ಲದೆ ಬೇರಿಲ್ಲ. ಈ ಇಬ್ಬರನ್ನು ಪರಸ್ಪರ ಕಚ್ಚಾಡಿಕೊಳ್ಳಲು ಪ್ರೋತ್ಸಾಹಿಸಿ ಹಿಂದಿನ ಬ್ರಿಟಿಷ್ ಕಾಲದ ದ್ವಿದಳ ರಾಜ್ಯಪದ್ಧತಿಯನ್ನು ಚೀಫ್ ಕಮಿಷನರು ನಡೆಸಲು ಅನುಕೂಲವಾಗುವದು! ಆದ್ದರಿಂದ ಈ ಸಲಹೆಗಾರರ ನೇಮಕದ ಏರ್ಪಾಡಿನಿಂದ ಹೆಚ್ಚಿನದೇನೂ ಸಾಧಿಸಲ್ಪಡಲಾರದು. ಬದಲು ಇವರ ವೇತನ, ಮತ್ತು ಬತ್ತೆರೂಪವಾಗಿ ಒಡ್ಡ ತನ ಕೆಲವು ಸಹಸ್ರರೂಪಾಯಿಗಳ ಹಾನಿ ನಷ್ಟವಾಗುವದು.

ಒಂದೇ ಮಾರ್ಗ.

ಆದ್ದರಿಂದ ಕೊಡಗಿನ ಸರ್ವಸಮಸ್ಯೆಗಳಿಗೂ ಒಂದೇ ಮಾರ್ಗವೆಂದರೆ ಚುನಾವಣೆ. ಚುನಾವಣೆಯ ವಿನಾ ಯಾವ ಸಮಸ್ಯೆಯೂ ಬಗೆಹರಿಯುವಂತಿಲ್ಲ. ಕೊಡಗಿನ ಭವಿಷ್ಯದ ಒಂದು ವಿಚಾರದ ಮೇಲೆಯೋ ಕೊಡಗಿನ ರಾಜಕೀಯ ಬೇಧಗಳು, ಆಂತರಿಕ ಗೊಂದಲಗಳೂ ನಿಂತಿರುವದರಿಂದ ಇವಕ್ಕೆಲ್ಲ ಪರಿಹಾರರೂಪವಾಗಿ ಶೀಘ್ರವಾಗಿ ಚುನಾವಣೆ ನಡೆಸುವದೇ ಉ

KERALA PICTURES LTD.,
MAIN ROAD, TELLICHERRY.

Producers, distributors, touring talkie owners and dealers in sorts of film industry, etc.

Now conducted by industrialists of Malabar and South Kanara.

We seek you (Gentlemen of Coorg) to join us for the purpose.

For particulars apply to-

K. K. NAMBIAR, L. T. C., *Governing Director, Nileswer (S. K.)*

O. K. NAIR, *Managing Director.*

ತ್ಯವು ದಾರಿ. ಚುನಾವಣೆಯಲ್ಲಿ ತಮ್ಮ ತತ್ವಗಳನ್ನೂ, ಧ್ಯೇಯ ಗುರಿಗಳನ್ನೂ ವಿವಿಧ ಪಕ್ಷಗಳು ಮತದಾರರ ಮುಂದಿಟ್ಟು ಮತ ಪಡೆಯಲಿ. ಅನು ಸಂಯೋಜನಾ ಪಕ್ಷವಿರಲಿ, ಯಾ ಪ್ರತ್ಯೇಕವಾದಿಗಳ ಪಕ್ಷವಿರಲಿ ಯಾವ ಪಕ್ಷವು ಹೆಚ್ಚಿನ ಜನ ಮತವನ್ನು ಪಡೆದು ಜಯಶೀಲವಾಗುವದೋ ಅವರ ಆಶಯದಂತೆ ದೇಶದ ಭವಿಷ್ಯ ನಿರ್ಣಯವಾಗಲಿ. ಅರ್ಥಾತ್ ದೇಶದ ಭವಿಷ್ಯವು ಕೊಡಗಿನ ಜನಮತದಂತೆ ಆಗಬೇಕು. ಹಾಗಾದರೆ ಮಾತ್ರ ದೇಶದಲ್ಲಿ ಶಾಂತಿ ಉಳಿಯುವದು. ಆ ಕಾರಣ ಆದಷ್ಟು ಬೇಗ ಕೊಡಗಿನಲ್ಲಿ ಚುನಾವಣೆ ನಡೆಸುವಂತೆ ಸಂಬಂಧಿಸಿದವರನ್ನು ಒತ್ತಾಯಮಾಡುವದು ಸರ್ವರ ಕರ್ತವ್ಯ.

ತಿರಸ್ಕರಿಸಿರಿ.

ಆದ್ದರಿಂದ ಮುಂದಿನ ಚುನಾವಣೆಯವರೆಗೆ ಈಗ ಸೂಚಿತವಾಗಿರುವ ತಾತ್ಕಾಲಿಕ ಯೋಜನೆ, ಸುಧಾರಣೆಗಳಿಂದ ಜನಹಿತವಾಗಲಾರದು. ಇಂಥಾ ಸುಧಾರಣೆಯಿಂದ ನಾಲ್ಕಾರು ಅಧಿಕಾರಕ್ಕಾಗಿ ಹಸಿದವರಿಗೆ ತೃಪ್ತಿಯಾಗುವದೇ ವಿನಾ ಬೇರೇನೂ ಆಗಲಾರದು. ಕೊಡಗು ಈ ವರೆಗೆ ಅಹಿತ ಆಡಳಿತದ ಅನಿಷ್ಟವನ್ನು ಸಹಿಸಿದೆ. ಮುಂದಿನ ಚುನಾವಣೆಯ ವರೆಗೆ ಅದನ್ನು ಸಹಿಸಲು ಅದು ಶಕ್ತವಿದೆ. ಆದರೆ ತೋರಿಕೆಯ ಸುಧಾರಣೆಯ ಹೆಸರಿನಿಂದ ಬಡ ರೈತನ ಬೆವರಿನ ರೂಪದ ಹಣವು ವ್ಯರ್ಥವಾಗದಂತೆ ಪ್ರತಿಯೊಬ್ಬನೂ ನೋಡಬೇಕು. ತಾತ್ಕಾಲಿಕ ಸುಧಾರಣೆಯನ್ನು ಪ್ರತಿಯೊಬ್ಬನೂ ತಿರಸ್ಕರಿಸಬೇಕು. ಜನಹಿತದ ದೃಷ್ಟಿಯಿಂದ ಅದು ಪ್ರಯೋಜನವಾಗಿಲ್ಲ. ಪ್ರಜಾಪ್ರಭುತ್ವದ ದೃಷ್ಟಿಯಿಂದ ಸಮರ್ಪಕವಾಗಿಲ್ಲ. ಆರ್ಥಿಕ ದೃಷ್ಟಿಯಿಂದ ಯೋಗ್ಯವಲ್ಲ. ಯಾವುದೇ ದೃಷ್ಟಿಯಿಂದ ನೋಡಿದರೂ ಅದು ಸ್ವೀಕರಿಸಲು ಅರ್ಹವಲ್ಲ. ಆದ್ದರಿಂದ ಅದಕ್ಕೆ ಸರ್ವರ ಉತ್ತರ 'ತಿರಸ್ಕಾರ'ವೆಂದಿರಲಿ.

ಕಾಲ್ಪನಿಕ

ಸರದಾರರ ಪುನರಾಗಮನ!

ಲೇಖಕ:—"ಪ್ರಸಾದ"

ಸ್ವರ್ಗವಾಸಿಗಳಾಗಿ ಮೂರು ತಿಂಗಳುಗಳಾದರೂ ಸರದಾರ ಪಟೇಲರಿಗೆ ಅಲ್ಲಿಯ ಜೀವನ ಅಷ್ಟೇನು ರುಚಿಸಿರಲಿಲ್ಲ. ಗಾಂಧೀಜಿಯವರ ಶಿಷ್ಯಪಾಲಕರಾಗಿ, ಪಾಪ ನಿರೋಧಕ್ಕಾಗಿ ಹೋರಾಡಿದ ವಲ್ಲಭಭಾಯಿಯವರಿಗೆ ಸ್ವರ್ಗನಿವಾಸಕ್ಕರಾಗಿ ವ್ಯರ್ಥ ಕಾಲಹರಣ ಮಾಡುವ ದೇವತೆಗಳ ಸಹವಾಸವು ಹೇಗೆ ತಾನೇ ರುಚಿಸೀತು. ಆಗಾಗ ಭಾರತವನ್ನು ನೆನೆಸುತ್ತಿದ್ದರು! ಹೀಗೆ ಮೂರು ತಿಂಗಳುಗಳು ಕಳೆದ ಮೇಲೆ ಒಮ್ಮೆ ತಮ್ಮ ಜನ್ಮಭೂಮಿಗೆ ಹೋಗಿ ಬರುವ ಇಚ್ಛೆಯಾಯಿತವರಿಗೆ. ಆವರು ಇಚ್ಛಿಸಿದನ್ನು ಕೈಗೂಡಿಸದೆ ಬಿಟ್ಟಾರೇ? ಹೊರಟೇ ಬಿಟ್ಟರು.

ಮೊದಲು ರಾಜಧಾನಿಯಾದ ಡೆಲ್ಲಿಗೆ ತಾನೇ ಬರಬೇಕು? ನೆಹರೂರವರು ರಾಜಧಾನಿಯಲ್ಲಿಲ್ಲದ ಕಾರಣ ಮೊಟ್ಟ ಮೊದಲ ಭೇಟಿ ಇನ್ನಾರಿಗೆ? ತಮ್ಮ ಸಹಾಯದಿಂದ ಕಾಂಗ್ರೆಸು ಅಧ್ಯಕ್ಷ ಪದಕ್ಕೇರಿದ ಟಂಡನ್ನರವರಿಗೆ ತಾನೆ! ಮೆಲ್ಲ ಮೆಲ್ಲನೆ ತೋಲುವರಿಕೊಳ್ಳುತ್ತ ಕಾಂಗ್ರೆಸ್ ಆಫೀಸಿಗೆ ಬಂದರು. ಕಚೇರಿಯ ಮೆಟ್ಟಲೇರಿದವರು ಏರಿದವರು ಬೆಪ್ಪಾಗಿ ನಿಂತರು. ಇದೇನು ಆಶ್ಚರ್ಯ. ಸರದಾರರ ಕಣ್ಣಿಗೆ ಟಂಡನ್ನರು ಪೂರಾ ಇಳಿದು ಹೋದಂತೆ ತೋರಿದರು. ಎಣ್ಣೆ ಕಾಣದ ತಲೆಕೂದಲು ಗಾಳಿಯಲ್ಲಿ ಹಾರಾಡುತ್ತಿತ್ತು. ಹಣೆಯಿಂದ ಬೆವರ ಹನಿಗಳು ಉರುಳಿಕೊಂಡು ಬಂದು ಗಡ್ಡಕ್ಕೆ ಸ್ನಾನ ಕೊಡುತಿತ್ತು. ಕಣ್ಣುಗಳು ಗುಳಿಬಿದ್ದು ಹೋಗಿದ್ದವು. ಮೂರು ತಿಂಗಳುಗಳ ಹಿಂದೆ ಅರೆಬಿಳುಪಾಗಿದ್ದ ಕೂದಲು ಇಂದು ಪೂರಾ ಬಿಳುಪಾಗಿ ಹೋಗಿತ್ತು. ಕಾಂಗ್ರೆಸ್ ಸಂಸ್ಥೆಯ ನಿರ್ಬಲತೆಯನ್ನು ಟಂಡನ್ನರವರನ್ನು ನೋಡಿದ ಮಾತ್ರಕ್ಕೆ ಸುಲಭವಾಗಿ ತಿಳಿದು ಕೊಳ್ಳಬಹುದಿತ್ತು. ರಾಗಿದ ಪತ್ರಗಳ ಅನೇಕ ಗಂಟುಗಳು ಅವರ ಮೇಜಿನ ಮೇಲಿದ್ದವು. ಅಧ್ಯಕ್ಷರ ಅನುಮತಿ ಮೀರಿ ಒಂದೊಂದನ್ನೇ ಸರದಾರರು ಎತ್ತಿ ನೋಡಿದರು. ಅಹಮದಾಬಾದ ಅಧಿವೇಶನದ ಐಕ್ಯ ತಂತ್ರ, ಪ್ರಕಾಶಂ ಪ್ರಕರಣ, ಪ್ರತೀ ಪ್ರಾಂತಿಕ ಕಾಂಗ್ರೆಸುಗಳಲ್ಲಿಯ ಎರಡು ಅಥವ ಮೂರು ಪಂಗಡಗಳಿಂದ ಪುಕಾರುಗಳು, ಆಚಾರ್ಯ ಕೃಪಲಾನಿಯವರೊಡನೆ ಸಂಧಾನಕ್ಕಾಗಿ ನಡೆಸಿದ ವಿಫಲ ಪತ್ರಗಳ ಜೊತೆಗೆ ಅಲ್ಲಲ್ಲಿ ಸಂಸ್ಥೆಯ ವರ್ತನೆಯನ್ನು ಖಂಡಿಸಿ ಉಪವಾಸ ಕೈಗೊಳ್ಳುತ್ತೇವೆಂದು ಕೊಟ್ಟ ನೋಟೀಸುಗಳು, ಹೀಗೆ ಕಾಂಗ್ರೆಸಿನ ದುಃಳಕನ್ನು ತೋರಿಸುವ ಅನೇಕ ಬಗೆಯ ಪತ್ರಗಳು ಕೋಣೆಯಲ್ಲೆಲ್ಲಾ ಗಾಳಿಗೆ ಹಾರಾಡುತ್ತಿದ್ದವು. ಇಂತಹ ಕರಣಾಜನಕ ಪರಿಸ್ಥಿತಿಯನ್ನ ನೋಡಿ ಸರದಾರರು ಬಹಳವಾಗಿ ಮರುಗಿದರು. ಟಂಡನ್ನರಿಗೆ ಕೂಡಲೆ 'ಟಾನಿಕ್ಕು' ತೆಗೆದುಕೊಳ್ಳುವಂತೆ ಹೇಳಿ ಇನ್ನು ಸ್ವಲ್ಪ ಉಪಚಾರದ ಮಾತುಗಳೊಡನೆ ಕಚೇರಿಯಿಂದ ಹೊರಬಂದರು.

ಮೊದಲ ಬಾರಿಗೆ ಕಂಡ ಈ ದೃಶ್ಯದಿಂದ ಅವರಿಗೆ ಕೂಡಲೇ ಡೆಲ್ಲಿ ಬಿಡಬೇಕೆಂದಾಯಿತು. ಸ್ವಲ್ಪ ದಕ್ಷಿಣಕ್ಕೆ ಹೋಗಿ ನೋಡೋಣವೆಂದು ಹೈದರಾಬಾದಿಗೆ ಬಂದು ತಲಪಿದರು. ಎರಡು ವರ್ಷಗಳಿಗೆ ಹಿಂದೆ ಶುರುವಾಗಿದ್ದ ಪೋಲೀಸು ಕಾರ್ಯಾಚರಣೆಯು ಇನ್ನೂ ಮುಗಿದಿರಲಿಲ್ಲ. ಕಮ್ಯೂನಿಸ್ಟರೆಂಬ ಹೆಸರಿನ ಮೇಲೆ ಸಾವಿರಾರು ಜನತೆಯ ಮೇಲೆ ಧಾಳಿ ನಡೆಯುತ್ತಿತ್ತು. ಇದು ತನ್ನದೇ ತಪ್ಪೆಂದು ಮನದಲ್ಲಿ ಒಪ್ಪಿಕೊಂಡು ವಲ್ಲಭಭಾಯಿಯವರು ಮದ್ರಾಸಿಗೆ ಪ್ರಯಾಣ ಬೆಳೆಸಿದರು.

ಮದ್ರಾಸಿಗೆ ತಲಪುವಾಗ ಮಧ್ಯಾಹ್ನ ಹನ್ನೆರಡು ಗಂಟೆ ಸಮಯ. ಮದ್ರಾಸಿನಲ್ಲಿ ಮಾರ್ಚ ತಿಂಗಳ ಶೆಖೆ ಹೇಳಬೇಕೆ? ಬೆಂಗಡಿಕೆಯಾದುದರಿಂದ ತಂಪು ಪಾನೀಯ ಕುಡಿಯಲೆಂದು 'ವುಡ್ ಲ್ಯಾಂಡ್ಸ್' ಹೋಟಲಿಗೆ ಹೋದರು. ಎಲ್ಲಾ ಎಸೆಂಬ್ಲಿ ಮೆಂಬರುಗಳು ಅಲ್ಲಿರುವುದನ್ನು ನೋಡಿ ಎಸೆಂಬ್ಲಿ ಅಧಿವೇಶನ ಹೋಟಲಿನಲ್ಲೇ ನಡೆಯುತ್ತಿದೆಯೋ ಎಂದು ಆಶ್ಚರ್ಯ ಚಕಿತರಾಗಿ ಒಬ್ಬ ಪರಿಚಯಸ್ಥ ಎಂ. ಎಲ್. ಎ. ಯವರನ್ನು ವಿಚಾರಿಸಿದರು. "ಅಷ್ಟೇನೂ ವಿಶೇಷವಾದ ವಿಷಯ ಎಸೆಂಬ್ಲಿಯಲ್ಲಿ ಚರ್ಚೆಯಾಗುತ್ತಿಲ್ಲ. ಸುಮ್ಮನೆ ಪುಟ್ಟ ವಿಷಯಗಳಿಗಾಗಿ ಅಲ್ಲಿ ಬೇಗನೆ ಕಾಲಹರಣ ಮಾಡುವುದು ವ್ಯರ್ಥ" ಎಂದು ಅವರು ಹೇಳಿದರು. "ಯಾವ ವಿಷಯ ಚರ್ಚೆಯಾಗುತ್ತಿದೆ" ಎಂದು ಸರದಾರರು ಕೇಳಿದ್ದಕ್ಕೆ "ಆಹಾರ ಸಮಸ್ಯೆ" ಎಂದು ದೊರೆತ ಉತ್ತರದಿಂದ ಸರದಾರರಿಗೆ ತಲೆ ತಿರುಗಿದಂತಾಯಿತು. ಒಂದು ದಿವಸ ಸಹ ಮದ್ರಾಸಿನಲ್ಲಿ ಬಾರದೇ ಮೈಸೂರಿಗೆ ರೈಲು ಗಾಡಿ ಹತ್ತಿದರು.

ಮೈಸೂರಿಗೆ ಬಂದು ತಲಪುವಾಗ ಬಾಯಿಗೆ ಸಮಯ. ಏನು ಮಾಡಬೇಕೆಂದು ಅರಿಯದೆ ಹಾಗೇ ಯೋಚಿಸುತ್ತಿರುವಾಗ ಸೈಕಲ್ ಸವಾರಿ ಮಾಡಬೇಕೆಂಬ ಇಚ್ಛೆ ಮೂಡಿತವರಿಗೆ! ಬಾಡಿಗೆ ಸೈಕಲ್ಲೊಂದನ್ನು ಪಡೆದುಕೊಂಡು ಜನನಿಬಿಡ ವಿಲ್ಲಿಸ ಬಸ್ಸು ಮಂಟಪದ ಕಡೆಗೆ ಮೆಲ್ಲ ಮೆಲ್ಲನೆ ನಡೆಸುತ್ತಾ ಬಂದರು. ಅಷ್ಟರಲ್ಲಿ ಪೋಲೀಸನವನೊಬ್ಬನ ಹಿಡಿದು ನಿಲ್ಲಿಸಿ, "ಯಾಕಯ್ಯಾ ನೀನೆಷ್ಟನೇ ಆದರೂ ಇಷ್ಟು ಸಾವಧಾನವಾಗಿ ನಡೆಸುತ್ತೀಯಾ? ಬೀಡಿಗೆ ಆರು ಕಾಸು ಕೊಡುತ್ತೀಯೋ ಅಥವಾ ಪೋಲೀಸು ಸ್ಟೇಷನ್ನಿಗೆ ಹಿಡಿದು ಕೊಂಡು ಹೋಗಲೋ?" ಎಂದು ಬೆದರಿಸಿದನ್ನು ಕೇಳಿ ಸರದಾರರು ಅವಕ್ಕಾದರು. ತಾನು ಗೃಹ ಮಂತ್ರಿಯಾಗಿದ್ದಾಗ ಪಾರ್ಲಿಮೆಂಟಿನಲ್ಲಿ ಪೋಲೀಸು ಪಡೆಯ ವಿಷಯ ಆದೆಷ್ಟು ಸಾರೆ ಮೆಚ್ಚುಗೆಯ ಮಾತುಗಳನ್ನಾಡಿದುದನ್ನು ನೆನಸಿಕೊಂಡು ಮರುಗಿದರು. ಪೋಲೀಸರ ನಿಜಸ್ಥಿತಿಯನ್ನು ನೋಡಿ ಜೌಯುಗಬ್ಬಿದರು.

ಇನ್ನು ಅಲ್ಲಿರುವದು ಉಚಿತವಲ್ಲವೆಂದು ಭಾವಿಸಿ ಹಿಂದಿರುಗಬೇಕೆನ್ನುವಷ್ಟರಲ್ಲಿ ಕೊಡಗಿನ ನೆನಪಾಯಿತವರಿಗೆ! ಮಂತ್ರಿಯಾಗಿದ್ದಾಗ ಅವರಿಗೆ ಕೊಡಗಿನ ಜನತೆಯ ಪುಕಾರುಗಳನ್ನು ಕೇಳಿ ಕೇಳಿ ಸಾಕಾಗಿತ್ತು. ದಿವಸಕ್ಕೆ ಹತ್ತೆಂಟರಂತೆ ಬರುತ್ತಿದ್ದ ತಂತಿ ವರ್ತಮಾನಗಳನು ಓದಿ ಓದಿ ಅವರಿಗೆ ಕೊಡಗಿನ ಬಗ್ಗೆ ಕುತೂಹಲವುಂಟಾಗಿತ್ತು. ಮಂತ್ರಿಯಾಗಿದ್ದಾಗಲಂತೂ ಕೊಡಗನ್ನು ಸಂದರ್ಶಿಸುವ ಸಂದರ್ಭವೊದಗಲಿಲ್ಲ. ಈಗಲಾದರೂ ನೋಡಿ ಬಿಡುತ್ತೇನೆಂದು ಬಸ್ಸು ಹತ್ತಿಯೇ ಬಿಟ್ಟರು. ಬಸ್ಸಿನಲ್ಲಿ ಸ್ಥಳವಿಲ್ಲದೆ 'ದೊಡ್ಡಿ'ಯಲ್ಲಿ ನಿಂತುಕೊಳ್ಳಬೇಕಾಗಿ ಬಂದುದರಿಂದ ಕೊಡಗಿನ ಪ್ರಕೃತಿ ಸೌಂದರ್ಯವನ್ನು ಸವಿಯುವ ಅನುಕೂಲವಿಲ್ಲ. ತಂಪಾದ ಗಾಳಿ ಬೀಸುವಾಗ ಮಾತ್ರ ಕೊಡಗಿಗೆ ತಲಪಿದ ಜ್ಞಾಪಕವಾಯಿತವರಿಗೆ.

ಬಾಯಾರಿಕೆಯಿಂದ ಬಳಲಿದ್ದ ಸರದಾರರು ದಾರಿಯಲ್ಲೊಮ್ಮೆ ಇಳಿದರು. ಕೊಡಗಿನ ಕಾಫಿಯ ಕೀರ್ತಿಯನ್ನು ಕೇಳಿದ್ದರು. 'ಸರದಾರ ಕೆಫೆ' ಎಂಬ ಹೋಟೇಲ್ ಬೋರ್ಡ ನೋಡಿ ಅತಿ ಆನಂದದಿಂದ ಒಳನುಗ್ಗಿದವರಲ್ಲಿ 'ಕಾಫಿಗೆ ಸಕ್ಕರೆ ಇಲ್ಲ' ಎಂದು ಬರೆಯಲ್ಪಟ್ಟ ಚಿಕ್ಕ ಬೋರ್ಡೊಂದನ್ನು ನೋಡಿ ಮುಖ ಸಪ್ಪಗೆ ಮಾಡಿಕೊಂಡು ಪುನಃ ಬಸ್ಸಿನಲ್ಲಿ ಬಂದು ಕುಳಿತರು. ರಾಜಧಾನಿ ಮಡಿಕೇರಿಗೇನೇ ನೆಟ್ಟಗೆ ಹೊರಟರು. ದಾರಿಯಲ್ಲಿ 'ಗಾಂಧೀ ಬಜಾರ,' 'ನೆಹರೂ ಹೊಟೇಲ್,' 'ಜೈಹಿಂದ್ ಫಾರ್ಮಸಿ' 'ಸುಭಾಸ್ ಲಾಂಡ್ರಿ' ಮುಂತಾದ ಅನೇಕ ಬೋರ್ಡುಗಳನ್ನು ಕಂಡು, ಕೊಡಗು ಕಾಂಗ್ರೆಸಿನ ತವರೂರು, ಕಾಂಗ್ರೆಸು ಸಂಸ್ಥೆ ಇಲ್ಲಿ ಬಲವಾಗಿ ಬೇರು ಬಿಟ್ಟಿರಬೇಕು, ಕಾಂಗ್ರೆಸಿನ ಆಳಿಗಾಲ ಕೊಡಗಿನ ಜನತೆಯಿಂದಲೇ ಆಗಬೇಕು ಎಂಬ ವಿಚಾರವನ್ನು ಮೆಲುಕು ಹಾಕುತ್ತಿರುವ ಗ್ರತೆಯೇ ಬಸ್ಸು ನಿಲ್ದಾಣ ಸೇರಿತು. ಮೊದಲು ಕಾಂಗ್ರೆಸು ಆಫೀಸಿಗೆ ಹೋಗಬೇಕೆಂದು ಬಯಸಿ ಭೇಟಿಯಾದವನೊಬ್ಬನನ್ನು ಕಾಂಗ್ರೆಸು ಕಚೇರಿ ಯಾವುದೆಂದು ವಿಚಾರಿಸಿದರು. 'ಪ್ರತ್ಯೇಕವಾದಿಗಳದೋ ಅಥವಾ ಸಂಯೋಜನ ವಾದಿಗಳದೋ' ಎಂದು ಆತ ವಿಚಾರಿಸಿದ. 'ನನಗೆ ಬೇಕಾದದ್ದು ಕೊಡಗು ಕಾಂಗ್ರೆಸು ಕಚೇರಿ' ಎಂದು ಸರದಾರರು ಸ್ಪಷ್ಟಪಡಿಸಿದರು. 'ಅಯ್ಯಾ, ನೀವಿನ್ನು ಹತ್ತೊಂಬತ್ತನೇ ಶತಮಾನದಲ್ಲಿದ್ದೀರಿ. ಕೊಡಗು ಕಾಂಗ್ರೆಸು ಅಳಿದು ಮೂರು ನಾಲ್ಕು ವರ್ಷಗಳಾದವು. ಕಾಂಗ್ರೆಸಿನ ಹೆಸರಿನಲ್ಲಿ ಮೇಲೆ ಹೇಳಿದ ಎರಡು ಪಂಗಡಗಳು ಕೆಲಸ ಮಾಡುತ್ತಿವೆ. ಅಲ್ಲಿ ಕಾಣುವ ಮನೆಯ ಉಪ್ಪರಿಗೆಯಲ್ಲಿ……. ….ವಾದಿಗಳ ಸಭೆಯೊಂದು ನಡೆಯುತ್ತಿದೆ' ಎಂದು ಆತ ಹೇಳಿ ತನ್ನ ದಾರಿ ಹಿಡಿದನು. ಸರದಾರರು ಬೆರಗಾದರು. ಆತನು ತೋರಿಸಿದ ಮನೆಯ ಕಡೆ ನಡೆದರು………. ವಾದಿಗಳಿಗೆ ಮಾತ್ರ ಪ್ರವೇಶ' ಎಂದು ಬರೆಯಲ್ಪಟ್ಟ ಬೋರ್ಡೊಂದನ್ನು ನೋಡಿ ಒಳನುಗ್ಗಲು ಹೆದರಿ ಹೊರಗಿನಿಂದಲೇ ಒಮ್ಮೆ ಇಣಿಕಿ ನೋಡಿದರು. ನೋಡಿದವರಿಗೆ ದಂಗುಬಡಿದಂತಾಯಿತು. ತಾನು ಗೃಹಮಂತ್ರಿಯಾಗಿದ್ದಾಗ ಕೊಡಗು ಕಾಂಗ್ರೆಸಿನ ಮತ್ತು ಜನತೆಯ ಪ್ರತಿನಿಧಿಗಳೆಂದು ತಮ್ಮಲ್ಲಿಗೆ 'ಡೆಪ್ಯೂಟೇಶನ್' ಬಂದಿದ್ದವರು ಬರೇ ಒಂದು ಪಕ್ಷ ಸಾಧಕರೆಂಬುದನ್ನು ಕಂಡು ಅವರಿಗೆ ಮೈನಡುಗಿದಂತಾಯಿತು. ಕಾಂಗ್ರೆಸಿನ ಅಳಿಗಾಲವು ಕೊಡಗಿನಲ್ಲೂ ಆಗಿದೆ ಎಂದು ಮನದಟ್ಟು ಮಾಡಿಕೊಂಡು ಹೊರಬಂದರು.

ಇಷ್ಟು ದಿನಗಳ ಸಂಚಾರದಿಂದ ಅವರಿಗೆ ಸಾಕಾಗಿತ್ತು. ಕೊಚ್ಚಿನ್ ತಿರುವಾಂಕೂರುಗಳ ಹೊಸ ಮಂತ್ರಿಮಂಡಳವನ್ನು ವಿಚಾರಿಸಿಕೊಂಡು ಕನ್ಯಾಕುಮಾರಿಯಿಂದ ಸ್ವರ್ಗಲೋಕಕ್ಕೆ ಹಿಂದಿರುಗಿದರು. ಇನ್ನು ಮುಂದಕ್ಕೆ ಇಂತಹ ಸಂಚಾರಗಳನ್ನು ಮಾಡುವದಿಲ್ಲವೆಂಬ ಪ್ರತಿಜ್ಞೆ ಮಾಡಲು ಮಾತ್ರ ಅವರು ಮರೆಯಲಿಲ್ಲ.

ಸೌಂದರ್ಯದ ರಹಸ್ಯ

ಇಲ್ಲಿ ಕೊಡಲಾದ ೧೨ ನಿಯಮಗಳನ್ನು ಪಾಲಿಸಿರಿ.

ಸೌಂದರ್ಯವು ಯಾರಿಗೆ ಬೇಕಾಗಿಲ್ಲ? ಎಲ್ಲರಿಗೂ ಬೇಕು. ಆದರೆ ಕುರೂಪಿಗಳು ಒಂದೇ ಸಲ ಸೌಂದರ್ಯವನ್ನು ಅಪೇಕ್ಷಿಸುವುದು ಸಾಧ್ಯವಿಲ್ಲ. ಸಾಧಿಸಿದರೆ ಎಲ್ಲವೂ ಸಾಧ್ಯವಾಗುವುದು. ಸೌಂದರ್ಯವನ್ನು ಹೆಚ್ಚಿಸಬೇಕಾದರೆ ಅದಕ್ಕೆ ನಿರಂತರ ಶ್ರಮ ಅಗತ್ಯ. ರೂಪವಂತರು ಇನ್ನೂ ಹೆಚ್ಚು ಸುರೂಪಿಗಳಾಗಬಹುದು. ಸೌಂದರ್ಯದ ಪೋಷಣೆಯ ಬಗ್ಗೆ ಹಾಗೂ ಸೌಂದರ್ಯ ಹೆಚ್ಚಿಸಲು ಈ ಕೆಳಗೆ ಕೊಡಲಾದ ಒಂದು ಡಜನ್ ನಿಯಮಗಳನ್ನು ಪಾಲಿಸಿರಿ. ಹಾಗೆ ಮಾಡಿದಲ್ಲಿ ಸತ್ಪರಿಣಾಮಗಳು ಕಂಡುಬರುವುದು ಖಂಡಿತ. ಆದರೆ ತಾಳ್ಮೆ ಮಾತ್ರ ಧಾರಾಳಬೇಕು.

೧. ಧಾರಾಳ ನಿದ್ದೆ ಮಾಡಿರಿ.

ಪ್ರತಿ ದಿನ ರಾತ್ರಿ ಎಂಟು ಗಂಟೆ ನಿದ್ದೆ ಮಾಡಿರಿ. ಒಂದೆರಡು ದಿನ ನಿದ್ದೆ ಬಿಟ್ಟರೆ ಕೆಡುಕಿಲ್ಲವೆಂದು ಭಾವಿಸದಿರಿ. ನಿದ್ದೆ ಸರಿಯಾಗಿದ್ದರೆ ಆರೋಗ್ಯವು ಉತ್ತಮವಿರುವುದು.

೨. ಸರಿಯಾದ ಆಹಾರ ಸೇವಿಸಿರಿ.

ಪೌಷ್ಟಿಕ ಆಹಾರವನ್ನೇ ಸೇವಿಸಿರಿ. ಆದರೆ ಮಿತಿಮೀರಿ ತಿನ್ನಬಾರದು. ರುಚಿಯಾದ ಆಹಾರವೆಂದು ಹೊಟ್ಟೆತುಂಬಿಸಿಕೊಂಡರೆ ಪ್ರಯೋಜನವಾಗದು. ದೇಹಕ್ಕೆ ಬೇಕಾದುದನ್ನೇ ತಿನ್ನಬೇಕು. ಊಟಗಳ ನಡುವೆ ಆಗಾಗ ತಿಂಡಿ ತಿನ್ನುತ್ತಿರುವುದು ಆರೋಗ್ಯಕ್ಕೆ ಹಿತವಲ್ಲ. ಧಾರಾಳ ನೀರು ಕುಡಿಯಬೇಕು.

೩. ವ್ಯಾಯಾಮ ಮಾಡಿರಿ.

ದಿನಂಪ್ರತಿ ಹಾಸಿಗೆಯಿಂದೆದ್ದ ಕೂಡಲೆ ವ್ಯಾಯಾಮ ಮಾಡಿದಲ್ಲಿ ಆರೋಗ್ಯ ಸೌಂದರ್ಯಗಳಿಗೆ ಹಿತವಿದೆ. ಮಾತ್ರವಲ್ಲ, ಶರೀರದ ನ್ಯೂನತೆಗಳೂ ನಿವಾರಣೆಯಾಗುವವು. ಶುದ್ಧಗಾಳಿಯನ್ನು ಧಾರಾಳವಾಗಿ ಸೇವಿಸಿರಿ.

೪. ಕೂದಲನ್ನು ಬ್ರಶ್ ಮಾಡಿರಿ.

ಸೌಂದರ್ಯಕ್ಕೆ ತಲೆಕೂದಲು ಮುಖ್ಯ. ಮುಂಜಾನೆ ಮತ್ತು ರಾತ್ರಿ ಮಲಗುವಾಗ ದೊರಗು ಬ್ರಶ್‌ನಿಂದ ಕೂದಲನ್ನು ಸವರಿ ನುಣುಪಾಗಿಡಿ.

೫. ಶರೀರ ಸ್ಥಿತಿಯ ವಿಷಯ ಜಾಗರೂಕತೆಯಿಂದಿರಿ.

ನಡೆಯುವಾಗ, ಕೂತುಕೊಳ್ಳುವಾಗ ಜಾಗರೂಕತೆಯಿಂದಿರಬೇಕು. ಬೆನ್ನು ಬಗ್ಗಿಸಿಕೊಂಡು ಅಥವಾ ತಲೆ ತಗ್ಗಿಸಿಕೊಂಡಿರಬಾರದು. ನೆಟ್ಟಗೆ ನಡೆಯಬೇಕು. ಬೆನ್ನುಮೂಳೆ ಡೊಂಕಾಗದಂತೆ ಕುಳಿತುಕೊಳ್ಳಬೇಕು.

೬. ಬಯಲಲ್ಲಿ ಆಟ ಆಡಬೇಕು.

ಬಯಲು ಪ್ರದೇಶಗಳಲ್ಲಿ ಆಟಗಳನ್ನು ಆಡಲೇಬೇಕು. ಆದರೆ ನಿಮ್ಮ ವಯಸ್ಸಿಗೆ ಸರಿಯಾದ ಆಟಗಳನ್ನೇ ಆರಿಸಿರಿ. ಈಜಾಡುವುದು ಆರೋಗ್ಯಕ್ಕೆ 'ಟಾನಿಕ್' ಇದ್ದಂತೆ. ಕಾಲ್ನಡಿಗೆಯಿಂದ ಬಯಲು ಪ್ರದೇಶಕ್ಕೆ ಹೋಗುವುದು ಅತೀ ಉತ್ತಮ.

೭. ಚಿಂತೆ ಮಾಡುವುದನ್ನು ನಿಲ್ಲಿಸಿರಿ.

ಚಿಂತೆಯಿಂದ ತಲೆ ಕೂದಲು ಬೆಳ್ಳಗಾಗುವುದು. ಅದು ಮುಪ್ಪಿನ ಲಕ್ಷಣ. ಚಿಂತೆ ಮಾಡುವಾಗ ಮಿದುಳಿಗೆ ಮಾತ್ರ ಭಾರ ಬೀಳುವುದಲ್ಲ. ಇಡೀ ದೇಹವನ್ನು ಅದು ಕುಂದಿಸುತ್ತದೆ. ಚಿಂತಿಸುವುದರಿಂದ ನಿದ್ದೆ ಹಾಳಾಗುತ್ತದೆ. ನಿದ್ದೆಯಿಲ್ಲದವರ ಸೌಂದರ್ಯಕ್ಕೆ ಹಾನಿಯಿದೆ.

೮. ಚರ್ಮದ ಆರೋಗ್ಯ ಕಾಪಾಡಿರಿ

ಸಿಂಪ್ಲ್ ಸ್ನೋ, ಕ್ರೀಮ್ ಅಥವಾ ಇನ್ನಿತರ ಹಲವಾರು ಸೌಂದರ್ಯಸಾಧನೆಗಳನ್ನು ಉಪಯೋಗಿಸುವವರಾಗಿರಬಹುದು. ಆದರೆ ನಿಮ್ಮ ಚರ್ಮವು ವಿಶೇಷ ಆಪೇಕ್ಷಿಸುವುದೆಂದರೆ ಶುದ್ಧವಾದ ನೀರನ್ನು ಮಾತ್ರ. ಮುಖ ತೊಳೆಯುವಾಗ ವಿಪರೀತವಾಗಿ ಸಾಬೂನನ್ನು ಉಪಯೋಗಿಸಬೇಡಿ. ನಿದ್ದೆಗೆ ಹೋಗುವ ಮೊದಲು ಸ್ವಚ್ಛ ತೊಳೆದುಕೊಳ್ಳಿ. ಚರ್ಮದಂಧ್ರಗಳನ್ನು ಕಟ್ಟಿಕೊಳ್ಳದಿದ್ದಲ್ಲಿ ನೀವು ನಿಮ್ಮ ಸೌಂದರ್ಯದ ಕಡೆಗೆ ಹಾಗೂ ಆರೋಗ್ಯದ ಕಡೆಗೆ ಗಮನ ಕೊಡುವುದಿಲ್ಲವೆಂದಾಯಿತು.

೯ ಆಗಾಗ ವಿಶ್ರಮಿಸಿಕೊಳ್ಳುವುದು ಅಗತ್ಯ.

ಕೆಲಸ ಮಾಡುವ ಸಮಯದಲ್ಲಿ ಕೆಲಸ ಮಾಡಬೇಕು. ವಿಶ್ರಮಿಸುವ ಕಾಲದಲ್ಲಿ ಆರಾಮವಾಗಿರಬೇಕು. ದೇಹದ ಅವಯವಗಳು ಆರಾಮವಾಗಿ ಕೂತುಕೊಳ್ಳುವ ನಿಯಮವಿಟ್ಟುಕೊಂಡಿರಬೇಕು. ಮಧ್ಯಾಹ್ನ ಕೆಲಸವಾದನಂತರ ೧೫ ನಿಮಿಷಗಳ ಕಾಲ ಆರಾಮವಾಗಿ ಮಲಗಿಕೊಳ್ಳಬೇಕು. ರಾತ್ರಿ ಕೂಡ ಇದೇ ನಿಯಮವನ್ನು ಪಾಲಿಸಬೇಕು.

೧೦ ಯಾವಾಗಲೂ ಹಸನ್ಮುಖಿಗಳಾಗಿರಿ

ನಗುವುದು ಅರೋಗ್ಯಕ್ಕೆ ಒಂದು ಉತ್ತಮ ಔಷಧಿ-ಯಾವಾಗಲೂ ಹಸನ್ಮುಖಿಗಳಾಗಿದ್ದವರು ಆರೋಗ್ಯವಂತರು; ಸೌಂದರ್ಯವೂ ವೃದ್ಧಿಯಾಗುವುದು.

೧೧ ತಾಳ್ಮೆಯಿಂದ ಜೀವಿಸಿರಿ.

ಜೀವನದಲ್ಲಿ ತಾಳ್ಮೆಯಿರುವುದು ಮುಖ್ಯ. ಅವಸರದಲ್ಲಿ, ಉದ್ವೇಗದಲ್ಲಿ ಮಾಡುವ ಕೆಲಸಗಳೆಲ್ಲ ವ್ಯರ್ಥವಾಗುವವು. ರಸ್ತೆಯಲ್ಲಿ ಅವಸರದಿಂದ ನಡೆಯುವುದರಿಂದ ಅನಿರೀಕ್ಷಿತವಾಗಿ ಅಪಾಯಗಳು ಒದಗುತ್ತವೆ. ಅಪಘಾತಗಳು ಸಂಭವಿಸಿದಲ್ಲಿ ಕೈಕಾಲುಗಳಿಗೆ ಅಥವಾ ಜೀವಕ್ಕೆ ಹಾನಿಯಿದೆ. ಯಾವುದಕ್ಕೂ ತಾಳ್ಮೆ ಬೇಕು; ಮಿತಿ ಬೇಕು. ಸಮಯಕ್ಕೆ ಸರಿಯಾಗಿ ಕರ್ತವ್ಯ ನಡೆಸಿದರೆ ಎಲ್ಲವೂ ಸರಿಹೋಗುವುದು.

೧೨ ಸೌಂದರ್ಯ ಸಾಧನೆಗಳು

ಸೌಂದರ್ಯವು ಔಷಧಗಳಿಂದ ಇಲ್ಲವೇ ಸುಗಂಧ ದ್ರವ್ಯಗಳಿಂದ ಬರುವುದಿಲ್ಲ. ನಿಜವಾದ ಸೌಂದರ್ಯಕ್ಕೆ ಕೃತಕ ವಸ್ತುಗಳ ಶೋಭೆ ಅಗತ್ಯವಿಲ್ಲ. ಪೌಡರು, ಸ್ನೊ ಉಪಯೋಗಿಸುವಾಗ ಉತ್ತಮವಾದವುಗಳನ್ನೇ ಉಪಯೋಗಿಸಿರಿ. ಅದನ್ನೂ ಸಹ ಮಿತಿಯಲ್ಲೇ ಉಪಯೋಗಿಸಿರಿ.

('ಸಂಡೇ ಸ್ಟ್ಯಾಂಡರ್ಡ್ ಆಫ್ ಇಂಡಿಯಾ' ದಿಂದ)

ಸಾರ್ವಜನಿಕ ಸಭೆಗಳು.

ತಾರೀಕು ೨೨ರಲ್ಲಿ ಕಂಡಂಗಾಲ, ರುದ್ರಗುಪ್ಪೆ, ಬಾಳುಗೋಡು ಗ್ರಾಮದ ಜನರು ರುದ್ರಗುಪ್ಪೆ ದೇವಸ್ಥಾನದಲ್ಲಿ ಶ್ರೀ ಕಂಗಂಡ ಉತ್ತಪ್ಪನವರ ಅಧ್ಯಕ್ಷತೆಯಲ್ಲಿ ಸಭೆಸೇರಿದ್ದರು. ಶ್ರೀ ಬಲ್ಲಡಿಚಂಡ ಕಾರ್ಯಪ್ಪನವರು ಕೊಡಗಿಗೆ ಒದಗಿರುವ ಗಂಡಾಂತರ ಪರಿಸ್ಥಿತಿಯನ್ನು ವಿವರಿಸಿದ ನಂತರ ಈ ಠರಾವುಗಳು ಸರ್ವಸಮ್ಮತದಿಂದ ಪಾಸಾದವು.

'ಕೊಡಗನ್ನು ಬೇರೆ ಪ್ರಾಂತ್ಯದೊಂದಿಗೆ ಸಂಯೋಜನೆ ಮಾಡಲಾಗುವುದೆಂಬ ಕೇಂದ್ರ ಸರಕಾರದ ಮಂತ್ರಿಗಳು ಪಾರ್ಲಿಮೆಂಟ್ ಸಭೆಯಲ್ಲಿ ಹೇಳಿದ ಅಭಿಪ್ರಾಯವನ್ನು ಈ ಸಭೆಯು ಸಂಪೂರ್ಣ ವಿರೋಧಿಸುತ್ತದೆ.'

'ಕೊಡಗನ್ನು ಪ್ರತ್ಯೇಕ ಪ್ರಾಂತ್ಯವಾಗಿಯೇ ಇಟ್ಟು ಜವಾಬ್ದಾರಿ ಸರಕಾರ ಸ್ಥಾಪಿಸಬೇಕೆಂದು ಈ ಸಭೆಯು ಇಂಡಿಯಾ ಸರಕಾರವನ್ನು ಕೇಳಿಕೊಳ್ಳುತ್ತದೆ.'

ಪಾರ್ಲಿಮೆಂಟಿನಲ್ಲಿ ಕೊಡಗಿನ ಮೆಂಬರಾದ ಶ್ರೀ ಸಿ. ಎಂ. ಪೂಣಚ್ಚನವರು ಕೊಡಗನ್ನು ಬೇಗನೆ ಬೇರೆ ಪ್ರಾಂತ್ಯದೊಂದಿಗೆ ಸೇರಿಸಬೇಕೆಂದು ಕೊಟ್ಟ ಅಭಿಪ್ರಾಯಕ್ಕೆ ಈ ಸಭೆಯು ತುಂಬಾ ವಿಷಾದಿಸುತ್ತದೆ. ಅಲ್ಲದೆ ಇವರು ಕೊಡಗಿನ ಜನರ ನಿಜವಾದ ಪ್ರತಿನಿಧಿಯಲ್ಲವೆಂದು ಒತ್ತಿ ಹೇಳುತ್ತದೆ.

ಬೊಪ್ಪಂಡ ಕುಟುಂಬ

ತಾ. ೨೪ರಲ್ಲಿ ನಾಪೋಕ್ಲು ಗ್ರಾಮದ ಬೊಪ್ಪಂಡ ಕುಟುಂಬದ ಶ್ರೀ ಬೊಪ್ಪಂಡ ಅಯ್ಯಣ್ಣನವರ ಅಧ್ಯಕ್ಷತೆಯಲ್ಲಿ ಸಭೆಸೇರಿ ಮೇಲಿನ ಅರ್ಥದ ಠರಾವುಗಳನ್ನು ಪಾಸುಮಾಡಿದರು.

ಗೋಣಿಕೊಪ್ಪ

ತಾ. ೨೫ರಲ್ಲಿ ಇಲ್ಲಿಯ ಕಂಡೆಂಗೋಲದಲ್ಲಿ ಮೆರವಣಿಗೆಯ ನಂತರ ಸಭೆಯೊಂದು ನೆರೆದಿತ್ತು. ಶ್ರೀ ಕುಪ್ಪಂಗಡ ಚಿಣ್ಣಪ್ಪನವರು ಅಧ್ಯಕ್ಷರಾಗಿದ್ದರು. ಶ್ರೀ ಕೆ. ಪಿ. ಕರುಂಬಯ್ಯನವರು ಕೊಡಗಿನ ಭವಿಷ್ಯದ ವಿಚಾರವನ್ನು ಕೇಳಿದ್ದಲ್ಲಿ ಶ್ರೀ ಸಿ. ಎಂ. ಪೂಣಚ್ಚನವರು ಮಾಡಿದ ಭಾಷಣದ ವಿಚಾರವನ್ನು ಖಂಡಿಸಿ ಮಾತಾಡಿದರು. ಶ್ರೀಗಳಾದ ಬಿ. ಪಿ. ಬೋಪಯ್ಯ, ಕೆ. ಕೆ. ಅಪ್ಪಯ್ಯ, ಕರ್ತಮಾಡ ಬೋಪಯ್ಯ ಮತ್ತು ಪಿ. ಪಿ. ಉತ್ತಯ್ಯ ಇವರುಗಳು ಒಕ್ಕೊರಲಾಗಿ ಮಾತಾಡಿದ ನಂತರ ಮೇಲಿನ ಅರ್ಥದ ಠರಾವುಗಳು ಪಾಸಾದವು.

ಕಡಿಯತ್ತನಾಡು.

ತಾರೀಕು ೨೬ರಲ್ಲಿ ಕಡಿಯತ್ತನಾಡಿನ ಹೆಸ್ಸೆರಡ ಗ್ರಾಮದ ಮಂದದಲ್ಲಿ ಶ್ರೀ ಬಿದ್ದಂಡ ಕಾರ್ಯಪ್ಪನವರ ಅಧ್ಯಕ್ಷತೆಯಲ್ಲಿ ಸಭೆ ಕೂಡಿದ್ದರು. ಶ್ರೀಗಳಾದ ಪಳಂಗಂಡ ಅಯ್ಯಮ್ಮ, ಬಿದ್ದಂಡ ಸುಬ್ಬಯ್ಯ, ಬೊಳ್ಳಚೆಟ್ಟಿರ ಅಚ್ಚಯ್ಯ ಮೊದಲಾದವರು ಕೊಡಗಿನ ಭವಿಷ್ಯದ ವಿಚಾರ ಮಾತಾಡಿದರು. ನಂತರ ಮೇಲಿನ ಅರ್ಥದ ಠರಾವುಗಳು ಬಹುಮತದಿಂದ ಪಾಸಾದವು.

ಪ್ಯಾರಿಸ್ ನಗರದಲ್ಲಿರುವ ಒಂದು ಕನ್ನಡಿ ಅಂಗಡಿ ಅಥವಾ ತರುಣಿಯರನ್ನು ಬಹಳವಾಗಿ ಆಕರ್ಷಿಸುತ್ತಿದೆಯಂತೆ. ಈ ಅಂಗಡಿಯಲ್ಲಿ ಶಿಲ್ಪದ ಉಡುಪುಗಳೂ, ಸ್ತ್ರೀಯರಿಗೆ ಬೇಕಾದ ಸೌಂದರ್ಯಸಾಧನಗಳೂ ಮಾರಾಟಕ್ಕಿವೆಯಂತೆ. ಅದರ ಸ್ವಾಗತಕಾರರು ಭಂಗಿತ ಓರ್ವ ರಾಜಕುಮಾರಿ!

ಬ್ರಿಟಿಷ್ ಗಿಯಾನದ ಜಾರ್ಜ್ ಟೌನ್ ಎಂಬಲ್ಲಿರುವ ಪ್ರಾಣಿಗಳಲ್ಲಿರುವ ಎಲೆಕ್ಟ್ರಿಕ್ ಎಲ್ ಎಂಬ ಮೀನುಗಳಿವೆ. ಈ ಮೀನುಗಳು ದೇಹದಿಂದ ವಿದ್ಯುಚ್ಛಕ್ತಿ ಉತ್ಪಾದನೆಯಾಗುತ್ತಿದ್ದು ವಿದ್ಯುದ್ದೀಪದ ತಂತಿಗಳನ್ನು ತೊಟ್ಟಿಗೆ ತಾಗಿಸಿದ ಕೂಡಲೆ ದೀಪಗಳು ಉರಿಯುತ್ತವೆ.

ಹೊಸ ವರ್ಷದ ಹೊಸ ಕೊಡುಗೆ

ನಿಮ್ಮ ಮನ ಒಪ್ಪುವ ಆಭರಣಯುತ ಸ್ವಿಸ್ ವಾಚುಗಳು

೧೯೫೫ನೇ ಇಸವಿಯ ಮಾದರಿಯ ವಿಶೇಷ ಸ್ವಿಸ್ ವಾಚುಗಳು. ೫ ವರ್ಷಗಳ ಗ್ಯಾರಂಟಿಯವು. ಎಚ್ಚರಿಕೆಯಿಂದ ಉಪಯೋಗಿಸಿದರೆ ಜೀವನ ಪರಿಯಂತ ಬಾಳಿಕೆ ಬರುವವು. ೩೬ ಗಂಟೆಗಳಿಗೊಮ್ಮೆ ಕೀ ಕೊಡುವ ಇವು ಸುಂದರವಾಗಿರುವುದಲ್ಲದೆ ಸುಲಭದರದ್ದೂ ಆಗಿದೆ. ಕೆಲವೇ ವಾಚುಗಳಿವೆ. ಇವು ನಿಮ್ಮನ್ನು ಆಕರ್ಷಿಸುವಾಗಲೇ ಅವುಗಳನ್ನು ಕಟ್ಟಿಕೊಳ್ಳಲು ನೀವು ಹೆಮ್ಮೆ ಪಡುವಿರಿ. ಹಳೇ ಮಾದರಿಯ ನಿಮ್ಮ ಹಳೇ ವಾಚುಗಳನ್ನು ಬಿಟ್ಟು ಇವುಗಳನ್ನು ಕೊಳ್ಳಿರಿ. ಈ ವಾಚುಗಳು ಕೇವಲ ನಮ್ಮಲ್ಲಿ ಮಾತ್ರ ದೊರೆಯುತ್ತವೆ. ಇವತ್ತೇ ಆರ್ಡರು ಮಾಡಿ. ಒಪ್ಪದಿದ್ದರೆ ತಕ್ಷಣ ವಾಪಾಸು ಮಾಡುವ ಭರವಸೆ ಇದೆ.

10½	ಉರುಟು ಕ್ರೋಮಿಯಂ ಸ್ಟೀಲ್ ಕೇಸ್			ನಂ. 233	ರೂ	21
	,,	,,	,,	,, 366	,,	25
8¾	ಚಚ್ಚೌಕ	,,	,,	,, 455	,,	25
	,,	,,	,,	,, 477	,,	26
7¼	ಟ್ರೆಂಚ್ ಫ್ಯಾಶನ್		,,	,, 599	,,	39
	,,		,,	,, 688	,,	35
5¼	ಹೆಂಗಸರಿಗೆ ಉಂಗುರದ ಆಕಾರ		,,	,, 822	,,	42
	,,		,,	,, 944	,,	44

ಅತ್ಯುತ್ತಮ ಪಾಕೆಟ್ ವಾಚು ರೂ. 13

ರೋಲ್ಡ್ ಗೋಲ್ಡ್ ಫ್ಲೆಕ್ಸಿಬಂಡ್ ,, 5/- ಹೆಚ್ಚು

The Hilson Watch Company (K. M.)
Bahadur Garh Road, Delhi 6.

4-4

ಕೊ ಡ ಗು

ಶು. ೬-೯-೧೯೫೧ನೇ ಶುಕ್ರವಾರ

ಮುಂಬರುವ ಚುನಾವಣೆ.

ಹಿಂದೂದೇಶದ ಇತಿಹಾಸದಲ್ಲೇ ಈ ವರ್ಷ ಮುಗಿಯುವದರೊಳಗೆ ಸಾರ್ವತ್ರಿಕ ಚುನಾವಣೆ ನಡೆಯಲಿದೆ. ಪಾರ್ಲಿಮೆಂಟಿನಿಂದ ನೇಮಕವಾಗಿರುವ ಪರಿಶೀಲನಾ ಸಮಿತಿಯು ಚುನಾವಣಾ ಮಸೂದೆಯನ್ನು ಪರಿಶೀಲಿಸಿದ್ದು ಆ ಮಸೂದೆಯು ಇದೇ ಅಧಿವೇಶನದಲ್ಲಿ ಪಾರ್ಲಿಮೆಂಟಿನ ಮುಂದೆ ಬರಲಿರುವದು. ಭಾರತದಾದ್ಯಂತಕ್ಕೂ ಮತದಪಟ್ಟಿಗಳು ಸಿದ್ಧವಾಗಿವೆ. ಬರುವ ಡಿಸೆಂಬರ್ ತಿಂಗಳ ಮಧ್ಯದೊಳಗೆ ಎಲ್ಲೆಲ್ಲೂ ಚುನಾವಣೆ ನಡೆಯುವದು. ಈಗಾಗಲೇ ಮದ್ರಾಸಿನಲ್ಲಿ ಡಿಸೆಂಬರ್ ೧ರಿಂದ ೩೧ರೊಳಗೆ, ಮೈಸೂರಿನಲ್ಲಿ ಡಿಸೆಂಬರ್ ೬ ರಿಂದ ೧೩ರೊಳಗೆಂದು ದಿನ ನಿಶ್ಚಯಿಸಲಾಗಿದೆ.

ಮುಂಬರುವ ಚುನಾವಣೆಯು ಭಾರೀ ಮಹತ್ವದ ಚುನಾವಣೆ ಎಂಬುದರಲ್ಲಿ ಸಂಶಯವಿಲ್ಲ. ಭಾರತೀಯನಿಗೆ ಪ್ರೌಢ ಮತದಾನ ಹಕ್ಕು ದೊರಕಿತು. ಅದನ್ನು ಚಲಾಯಿಸುವ ಪ್ರಥಮ ಅವಕಾಶವಿದಾಗಿದೆ. ಜೊತೆಗೆ ಕೆಲವೊಂದು ಹಿಂದುಳಿದ ವರ್ಗದವರಿಗಾಗಿ ಕಾದಿಟ್ಟ ಸ್ಥಳಗಳಲ್ಲದೆ ಉಳಿದ ಸ್ಥಳಗಳಿಗೆಲ್ಲ ಸಂಯುಕ್ತ ಮತದಾನ ಪದ್ಧತಿಯಂತೆ ಚುನಾವಣೆಯಾಗಲಿದೆ. ಜಾತಿ, ಮತ, ಧರ್ಮದ ಹೆಸರಿನಿಂದ ಈ ಹಿಂದೆ ನಡೆಯುತ್ತಿದ್ದ ಚುನಾವಣೆಯ ಪ್ರತಿನಿಧಿ ಪದ್ಧತಿಯನ್ನು ತೆಗೆದು ಹಾಕಿ ಸಂಯುಕ್ತ ಮತದಾರ ಸಂಘಗಳ ಪ್ರಕಾರ ಚುನಾವಣೆ ನಡೆಯಲಿರುವುದು ತುಂಬಾ ಯೋಗ್ಯವಾಗಿದೆ.

ಈ ರೀತಿ ಸರಕಾರದ ಕಡೆಯಿಂದ ಚುನಾವಣೆಯ ಸಿದ್ಧತೆ ನಡೆಯುತ್ತಿರುವಾಗ ದೇಶದ ರಾಜಕೀಯ ಪಕ್ಷಗಳೂ ಅದಕ್ಕೆ ಅಣಿಯಾಗುತ್ತಿವೆ. ಭಾರತದ ಸ್ವಾತಂತ್ರ್ಯ ಸಂಪಾದನೆಗೆ ಮುಖ್ಯ ಕಾರಣವಾದ ಕಾಂಗ್ರೆಸು ಈ ಚುನಾವಣೆಯಲ್ಲಿ ಸ್ಪರ್ಧಿಸಿ ಅಧಿಕಾರವನ್ನು ಉಳಿಸಿಕೊಳ್ಳಲು ಯತ್ನಿಸುವದು ಸ್ವಾಭಾವಿಕವಾದುದು. ಆ ಕಾರಣವಾಗಿಯೇ ಕಾಂಗ್ರೆಸಿನ ಕೇಂದ್ರ ಪಾರ್ಲಿಮೆಂಟರಿ ಬೋರ್ಡಿನ ರಚನೆಯೂ, ಪ್ರಾಂತೀಯ ಪಾರ್ಲಿಮೆಂಟರಿ ಬೋರ್ಡುಗಳ ರಚನೆಯೂ ಆಗುತ್ತಿದೆ. ಬೊಂಬಾಯಿಯಲ್ಲಿ ಈ ಬಗ್ಗೆ ಕಾಂಗ್ರೆಸ್ ಮಂತ್ರಿಗಳ, ಕಾರ್ಯಕರ್ತರ ಸಭೆ ನಡೆದು ಚುನಾವಣಾ ಘೋಷಣೆಯ ರೂಪರೇಷೆಯನ್ನು ಚರ್ಚಿಸಿರುವರು. ಮುಂಬರುವ ಚುನಾವಣೆಯ ಬಗ್ಗೆ ಪ್ರಚಾರದ ಏರ್ಪಾಡೂ ಆಗುತ್ತಿದೆ. ಪ್ರಚಾರ ಸಮಿತಿಗಳ ಆಯ್ಕೆಯಾಗುತ್ತಿದೆ. ಅಲ್ಲಲ್ಲಿ ಪ್ರಚಾರ ಕಾರ್ಯವೂ ಪ್ರಾರಂಭವಾಗಿದೆ.

ಈ ರೀತಿ ಕಾಂಗ್ರೆಸು ಚುನಾವಣೆಗೆ ಸಿದ್ಧವಾಗುತ್ತಿರುವಾಗ ಹಿಂದೂದೇಶದ ಸಾಮ್ಯವಾದಿ, ಉಗ್ರಸಾಮ್ಯವಾದಿ, ಹಿಂದೂಮಹಾಸಭೆ ಮೊದಲಾದ ಪಕ್ಷದವರೂ ಚುನಾವಣೆಯ ಸಿದ್ಧತೆಗೆ ತೊಡಗಿರುವರು. ಸಾಮ್ಯವಾದಿ ಪಕ್ಷವು ಹಿಂದೂದೇಶದ ಆದ್ಯಂತಕ್ಕೂ ತನ್ನ ಸುಮಾರು ೨೦೦೦ ಉಮೇದುವಾರರನ್ನು ನಿಲ್ಲಿಸಿ ಸ್ಪರ್ಧಿಸಲಿದೆ. ಹಿಂದೂಮಹಾಸಭೆಯವರೂ ಚಟುವಟಿಕೆಯಿಂದ ಕೆಲಸ ಮಾಡುತ್ತಿದ್ದಾರೆ. ಉಗ್ರಸಾಮ್ಯವಾದಿಗಳು ಚುನಾವಣಾ ರಂಗಕ್ಕಿಳಿಯುವವರಿದ್ದಾರೆ. ಈ ವಿವಿಧ ಪಕ್ಷಗಳನ್ನು ಏಕೀಕರಿಸಿ ಎಲ್ಲರೂ ಸೇರಿ ಒಗ್ಗಟ್ಟಾಗಿ ಕಾಂಗ್ರೆಸ್ಸನ್ನು ಎದುರಿಸುವ ಪ್ರಯತ್ನಗಳಾಗುತ್ತಿವೆ. ಈ ಒಗ್ಗಟ್ಟಿನ ಪ್ರಯತ್ನ ಸಾಧ್ಯವಾಗುವದು ದೂರದ ಮಾತೇಸರಿ.

ಹೇಗೂ ವಿವಿಧ ರಾಜಕೀಯ ಪಕ್ಷಗಳು ತಮ್ಮ ತತ್ವಸಿದ್ಧಾಂತಗಳನ್ನೂ, ಧ್ಯೇಯವನ್ನೂ ಜನತೆಯ ಮುಂದಿಟ್ಟು ಜಯ ಸಂಪಾದಿಸಲೆತ್ನಿಸುವದು ಯೋಗ್ಯವಾದುದು. ಪ್ರತಿಯೊಬ್ಬನಿಗೂ ತನ್ನ ತತ್ವ, ನಂಬಿಕೆಗಳನ್ನು ಪ್ರಚಾರಮಾಡುವ ಹಕ್ಕಿದೆ. ಆದರೆ ಅದು ಹದ್ದುಮೀರಿ ನಡೆಯಬಾರದು. ಅದು ಘಟನಾತ್ಮಕವಾಗಿರಬೇಕು. ದುಡ್ಡಿನ ಬಲದಿಂದ, ಅಧಿಕಾರದ ಪ್ರಭಾವದಿಂದ, ಹಿಂಸೆಯ ಮಾರ್ಗದಿಂದ, ಇಲ್ಲದ ಮೋಸದ ಬಲದಿಂದ ತಮ್ಮ ತತ್ವಗಳಿಗೆ ಬೆಂಬಲ ಪಡೆದು ಜಯಶೀಲರಾಗಲೆತ್ನಿಸುವದು ಅನೀತಿಯ ತವರಾದುದರಿಂದ ಪ್ರಜಾಪ್ರಭುತ್ವದ ಹಕ್ಕಿನ ಮೌಲ್ಯಗಳಿಗೆ ವಿರುದ್ಧವಾದುದು. ಆದ್ದರಿಂದ ಪ್ರತಿ ಪಕ್ಷ ಸಂಘದವರೂ ಹಿಂಸೆ, ಮೋಸ, ಅತ್ಯಾಗಳ ಪಥವನ್ನು ತುಳಿಯದೆ ಮುಂಬರುವ ಚುನಾವಣೆಯು ಯೋಗ್ಯ ರೀತಿ ನಡೆಯುವಂತೆ ಯತ್ನಿಸಬೇಕಾದುದು ಸರ್ವರ ಕರ್ತವ್ಯ.

ಕೊಡಗಿನ ಮಟ್ಟಿಗೆ ಹೇಳುವದಾದರೆ ಕೊಡಗಿನ ಚುನಾವಣೆಯು ಯಾವಾಗ ನಡೆಯಲಿದೆಯೋ ತಿಳಿಯದು. ಭಾರತದ ಸಾರ್ವತ್ರಿಕ ಚುನಾವಣೆಯೊಂದಿಗೆ ಇಲ್ಲಿಯ ಚುನಾವಣೆಯು ನಡೆಯುವದೋ ಎಂಬುದು ಸ್ಪಷ್ಟವಾಗಿಲ್ಲ. ಈಗ ನಡೆಯುತ್ತಿರುವ ಕೇಂದ್ರ ಶಾಸನ ಸಭೆ ಮುಗಿಯುವದರೊಳಗೆ ಅದು ಸ್ಪಷ್ಟವಾಗಬಹುದು. ಅದು ಹೇಗಿದ್ದರೂ ಕೊಡಗಿನಲ್ಲಿ ಚುನಾವಣೆಯು ಶೀಘ್ರ ಆಗಬೇಕಾದುದು ಅತೀ ಅವಶ್ಯ. ಇಂದಿನ ಕೌನ್ಸಿಲಿನ ಚುನಾವಣೆಯಾದಂದು ೧೯೪೫ ರಲ್ಲಿ. ಈಗ ಆರು ವರ್ಷಗಳು ಕಳೆದು ಹೋಗಿವೆ. ಈ ಅವಧಿಯಲ್ಲಿ ದೇಶದಲ್ಲಿ ಅಳೆಯಲಾಗದ ಬದಲಾವಣೆಯಾಗಿದೆ. ಜನತೆಯಲ್ಲಿ ಮಹಾ ಜಾಗೃತಿಯಾಗಿದೆ. ಆದ್ದರಿಂದ ಇಂದು ಕೌನ್ಸಿಲಿನಲ್ಲಿ ಪ್ರತಿನಿಧಿಗಳೆನ್ನುವವರು ಜನಾಭಿಪ್ರಾಯವನ್ನು ಪ್ರತಿಬಿಂಬಿಸುತ್ತಿಲ್ಲವೆಂದು ಹೇಳಬಹುದು. ಅದೇ ಅಲ್ಲ; ಎಂದಿನವರೆಗೆ ಚುನಾವಣೆ ನಡೆಯುವದಿಲ್ಲವೋ ಅಂದಿನವರೆಗೆ ಕೊಡಗಿನ ಭವಿಷ್ಯದ ನಿರ್ಣಯವಾಗಲಾರದು. ಕೊಡಗಿನ ರಾಜಕೀಯರಂಗದಲ್ಲಿ ಭಿನ್ನಾಭಿಪ್ರಾಯವಿರುವದರಿಂದ ಕೇಂದ್ರ ಸರಕಾರದವರು, ಒಂದಲ್ಲ ಒಂದು ರೀತಿಯಲ್ಲಿ ಜನತೆಯ ಅಭಿಮತವನ್ನು ಅರಿಯದೆ ನಿರಂಕುಶ ರೀತಿಯಲ್ಲಿ ಭವಿಷ್ಯ ನಿರ್ಣಯ ಮಾಡಲಾರರು. ಆ ಒಂದು ಕಾರಣದಿಂದಲೇ ಕೊಡಗಿನ ಸಮಸ್ಯೆಯು ಬಗೆಹರಿಯದೆ ಇಂದಿನ ವರೆಗೆ ಮುಂದರಿಯುತ್ತಾ ಬಂದಿದೆ. ಈ ವಿಚಾರವನ್ನೇ ಕೇಂದ್ರದ ಹಲವು ಜವಾಬ್ದಾರ ಮುಂದಾಳುಗಳು ಹೇಳಿದ್ದಾರೆ. ಕೊಡಗಿಗೆ ಸುಧಾರಣೆಯನ್ನು ಕೊಡುವ ವಿಚಾರದಲ್ಲೂ ಕೂಡ ಇಲ್ಲಿಯ ಇಬ್ಬಣ ರಾಜಕೀಯದ ಆಕ್ಷೇಪವನ್ನೇ ಎತ್ತಿ ಹೇಳಲಾಗುತ್ತಿದೆ. ಕೊಡಗಿನ ಸಮಸ್ಯೆ ಬಗೆಹರಿಯದೆ ದೇಶೀಯರಲ್ಲಿಯೂ, ದೇಶದ ಸರಕಾರದಲ್ಲಿಯೂ ಒಂದು ವಿಧದ ನಿರಾಶೆಯೇ ತುಂಬಿದ್ದು ಈ ಪರಿಸ್ಥಿತಿಯನ್ನು ಇನ್ನು ಮುಂದರಿಸುವದು ಯಾರಿಗೂ ಯೋಗ್ಯವಲ್ಲ. ಈಗ ಸೂಚಿತವಾಗಿರುವ ತಾತ್ಕಾಲಿಕ ಏರ್ಪಾಡಿನಿಂದ ಯಾವ ಸಮಸ್ಯೆಯೂ ಪರಿಹಾರವಾಗುವಂತಿಲ್ಲ. ಆದ್ದರಿಂದ ಆದಷ್ಟು ಶೀಘ್ರವಾಗಿ ಕೊಡಗಿನಲ್ಲಿ ಚುನಾವಣೆ ನಡೆಸುವಂತೆ ಸರಕಾರವನ್ನು ಒತ್ತಾಯಮಾಡುವದು ಪ್ರತಿಯೊಬ್ಬ ದೇಶಭಕ್ತನ ಕರ್ತವ್ಯವಾಗಿದೆ. ಏಕೆಂದರೆ ಚುನಾವಣೆ ನಡೆಯುವಲ್ಲಿಯ ವರೆಗೆ ಕೊಡಗಿನ ಜನತೆಗೆ ಹಿಂದಿನ ಬ್ರಿಟಿಷ್ ಸರಕಾರ ನಡತ್ತು ಇಂದಿನ ಈ ಸರಕಾರವಿತ್ತಿರುವ ವ್ಯತ್ಯಾಸಗಳೇನು? ತೋರದು. ಚುನಾವಣೆಯ ನಂತರವೇ ಕೊಡಗಿನಲ್ಲಿ ಹೊಸ ಯುಗ ಪ್ರಾರಂಭವಾಗುವದು.

ಚುನಾವಣೆ ಎಂದಾಗ ಯಾವುದಕ್ಕೆ ಚುನಾವಣೆ ಎಂಬ ಪ್ರಶ್ನೆ ಏಳುವ ದಿಲ್ಲ. ಇಂದಿರುವ ಶಿಫಾರಸ್ಸು ಕೌನ್ಸಿಲಿಗೆ ಚುನಾವಣೆ ನಡೆದರೆ ದೇಶದ ಭವಿಷ್ಯದ ಬಗ್ಗೆ ಯಾವ ನಿರ್ಣಯಕ್ಕೆ ಬೆಂಬಲ ಇದೆಯೆಂಬುದೊಂದು ಗೊತ್ತಾಗಬಹುದಲ್ಲದೆ ಬೇರೇನೂ ಸಾಧಿಸುವಂತಿಲ್ಲ. ಅಧಿಕಾರವಿರುವ ಕೌನ್ಸಿಲನ್ನು ಕೊಟ್ಟು ಚುನಾವಣೆ ನಡೆಸಬೇಕೆಂದರೆ ಕೊಡಗಿಗೆ ಈಗ ಸೂಚಿತವಾಗಿರುವದಕ್ಕೆ ಭಿನ್ನವಾಗಿ ಹೊಸ ಸುಧಾರಣೆಯನ್ನು ಕೊಡಬೇಕಾಗುವದು. ಆದರೆ ಕೊಡಗಿನ ಭವಿಷ್ಯದ ವಿಚಾರದಲ್ಲೇ ಕೇಂದ್ರ ಸರಕಾರಕ್ಕೆ ನಿಶ್ಚಿತ ಅಭಿಪ್ರಾಯವಿಲ್ಲದಿರುವ ಕಾರಣ ಕೊಡಗಿನ ಸ್ಥಿತಿ ಗಾಳಿಗೊಡ್ಡಿದ ದೀಪದಂತಾಗಿದೆ. ಅದು ಉಳಿಯಲೂ ಬಹುದು ಆರಲೂ ಬಹುದು. ಆದರೆ ಜನತೆ ತನ್ನ ಒಂದು ಹಕ್ಕನ್ನು ಒತ್ತಾಯಪೂರ್ವಕ ಕೇಳಬಹುದಾಗಿದೆ. ಕೊಡಗಿಗೆ ಜವಾಬ್ದಾರಿ ಸರಕಾರಬೇಕು. ಅದು ಸದ್ಯಕ್ಕೆ ಸಾಧ್ಯವಿಲ್ಲದಿದ್ದರೆ ಕೊಡಗಿನ ಭವಿಷ್ಯದ ನಿರ್ಣಯಕ್ಕಾದರೂ ಜನಮತವನ್ನು ಸರಕಾರವು ಖಂಡಿತ ತೆಗೆಯಬೇಕೆಂದು ಕೊಡಗಿನ ಜನರು ಎಚ್ಚೆತ್ತು ತಮ್ಮ ಪ್ರಭಾವವನ್ನು ಕೇಂದ್ರ ಸರಕಾರದ ಮೇಲೆ ಬೀರಿ ಕೊಡಗಿನ ಭವಿಷ್ಯದ ಬಗ್ಗೆ ಇಲ್ಲಿಯ ಜನಾಭಿಪ್ರಾಯವನ್ನು ತೆಗೆಯುವ ಏರ್ಪಾಡು ಕೈಗೂಡುವಂತೆ ಮಾಡಬೇಕಾಗಿದೆ.

ವರ್ತಮಾನ.

ಕುಟ್ಟದಲ್ಲಿ ಕಟ್ಟಲ್ಪಡುತ್ತಿರುವ ಹೊಸ ಪ್ರಾಥಮಿಕ ಶಾಲಾ ಕಟ್ಟಡದ ಅಸ್ತಿಭಾರವು ತಾರೀಕು ೩೦-೬-೫೧ ರಲ್ಲಿ ಲೆ. ಕರ್ನಲ್ ಮಾರಿಸ್ ಇವರಿಂದ ಹಾಕಲ್ಪಟ್ಟಿತು.

ಕೌನ್ಸಿಲ್ ಮೀಟಿಂಗು ತಾರೀಕು ೮-೧೦ರಲ್ಲಿ ನಡೆಯುವುದು.

ತಾರೀಕು ೨೫ ರಲ್ಲಿ ಒಬ್ಬ ಹುಡುಗನು ಗಂಟೆ ಕಳುಹಿಸಿ ಕೊಡಬೇಕೆಂದು ವೀರಾಜಪೇಟೆ ಪೋಸ್ಟಾಫೀಸಿಗೆ ಒಂದು ರಿಸ್ಟ್‌ವಾಚನ್ನು ಕೊಟ್ಟು ಅದನ್ನು ವಾಪಸ ಪಡೆದುಕೊಳ್ಳದೆ ಹೋಗಿರುವದಾಗಿಯೂ ವಾರೀಸುದಾರರು ತಕ್ಕ ರುಜುವಾತಿನಿಂದ ಅದನ್ನು ಹೊಂದಿಕೊಳ್ಳಬಹುದಾಗಿಯೂ ಸಕಾಲದಲ್ಲಿ ಯಾರೂ ಬಾರದಿದ್ದರೆ ಅದನ್ನು ಪೋಲೀಸರ ವಶಕ್ಕೆ ಕೊಡಲಾಗುವದೆಂದೂ ಪೋಸ್ಟ್ ಮಾಸ್ಟರು ತಿಳಿಸುತ್ತಾರೆ.

ಕೊಡಲೀಪೇಟೆ ಶಾಲೆಯಲ್ಲಿ ಅನೇಕ ವರ್ಷಗಳಿಂದ ಅಧ್ಯಾಪಕರಾಗಿ ಸೇವೆ ಸಲ್ಲಿಸಿದ ಶ್ರೀ ಕೆ. ಎಸ್. ಕಾಟಪ್ಪನವರು ನಿವೃತ್ತರಾಗುವ ಸಂದರ್ಭದಲ್ಲಿ ತಾ ೨೫-೩-೫೧ ರಲ್ಲಿ ಕೊಡ್ಲಿಪೇಟೆಯ ಪುರನಿವಾಸಿಗಳು ಶ್ರೀ ಎಂ ಎ ಚಂಗಪ್ಪನವರ ಅಧ್ಯಕ್ಷತೆಯಲ್ಲಿ ಸಭೆಸೇರಿ ಅವರಿಗೆ ಸತ್ಕಾರ ಕೂಟ ಏರ್ಪಡಿಸಿ ಬೀಳ್ಕೊಟ್ಟರು.

ಟಿಂಬರ್ ಸ ಬೆದಾರರಾಗಿದ್ದ ಶ್ರೀ ಚೆರಿಯಪಂಡ ತಿಮ್ಮಯ್ಯನವರನ್ನು ಉತ್ತರ ಕೊಡಗು ಸಬೆದಾರರಾಗಿಯೂ, ಫಾರೆಸ್ಟ್ ಆಫೀಸು ಮೇನೇಜರಾಗಿದ್ದ ಶ್ರೀ ಕಾಂದರ್‌ರವರನ್ನು ಅವರ ಬದಲು ಟಿಂಬರ್ ಸಬೆದಾರರಾಗಿಯೂ ನೇಮಿಸಲಾಗಿದೆ.

ತಿಳಿಸಿರಿ.

ಭೂಮಿ, ತೋಟ, ಜಾಗ ಪೇಟೆಯಲ್ಲಿ ಮನೆ ಅಥವ ಮನೆ ಸೈಟು ಮಾರಲಿರುವವರು ಮತ್ತು ಕೊಂಡುಕೊಳ್ಳಲಿಚ್ಚಿಸುವವರು ಈ ಕೆಳಗಿನ ಶರ್ತಿಯಲ್ಲಿ ವಿಚಾರಿಸಿರಿ. ಅಲ್ಲದೆ ಬೇಕಾದವರಿಗೆ ಕರೆಯುವ ಎಮ್ಮೆ, ಹಸು ಮತ್ತು ಉಳುವ ಎತ್ತು ಮತ್ತು ಕೋಣಗಳನ್ನೂ ಒದಗಿಸಿ ಕೊಡಲಾಗುವುದು. ಬೇಕಾದವರು ತಮಗೆ ಬೇಕಾದ ತಾರೀಕಿನ ಎಂಟು ದಿನಗಳ ಮುಂದೆ ತಿಳಿಸಬೇಕಾಗಿದೆ. ವಿವರಗಳಿಗೆ ಈ ಪತ್ರಿಗೆ ಬರೆಯಬಹುದು.

P. A. N. & SONS.
Commission Agent,
Gonicoppal
26-9 S. Coorg.

ಮಾರಾಟಕ್ಕಿದೆ.

ಫ್ರೇಜರ್‌ಪೇಟೆ ಹೋಬಳಿ ರಂಗಸಮುದ್ರ ಗ್ರಾಮದ ಗದ್ದೆ ಹೊಸೂರು ಸಿದ್ದಾಪುರ ರೋಡು ೫ನೇ ಮೈಲು ಕಲ್ಲುಬಳಿ ರೋಡಿಗೆ ಒತ್ತಾಗಿರುವ ೭ ಎಕ್ರೆ ನಡುಸಾಲು ನಾಟಿಗೆ ೭೦ ರಷ್ಟು ಬತ್ತ ಬೆಳೆಯುವ ನಾಲೆ ಬೈಲು ಗದ್ದೆ, ಗದ್ದೆಯ ಒತ್ತು ಫಸಲಿಗೆ ಬಂದಿರುವ ೩ ಎಕ್ರೆ ಕಿತ್ತಳೆ ತೋಟ. ಫಸಲಿಗೆ ಬಂದಿರುವ ೪ ಎಕ್ರೆ ಕಿತ್ತಳೆ ತೋಟ, ೫೦ ನಡೆ ದನಗಳನ್ನು ಕೂಡುವಷ್ಟು ವಿಸ್ತಾರವುಳ್ಳ ಗೋಡೆ ಮಾಡಿಗದ ಕೊಟ್ಟಿಗೆ, ಕಣ ಮಗ್ಗಿರೆ ಮಾರಾಟಕ್ಕಿದೆ. ತೋಟದ ಸುತ್ತಲೂ ತಂತಿಬೇಲಿ ಇದ್ದು, ತೋಟಕ್ಕಾಗಲೀ, ಗದ್ದೆಗಾಗಲೀ, ಏನೊಂದು ತಕರಾರು ಇರುವುದಿಲ್ಲ. ಬೆಲೆ ರೂ 25000 ಖಾಯಿಸ್‌ದಾರರು ಈ ಕೆಳಗಿನ ವಿಳಾಸದವರೊಡನೆ ವಿಚಾರಿಸಿ ತಿಳಿಯಿರಿ.

ಬೊಪ್ಪಂಡ ಸುಬ್ಬಯ್ಯ
1-1 ಹೊಸಪಟ್ಟಣ ಗ್ರಾಮ.
ಫ್ರೇಜರ್‌ಪೇಟೆ

ಓದುಗರ ಓಲೆಗಳು

ಸೇಂದಿ ಅಂಗಡಿಗಳನ್ನು ಪೂರ್ತಿ ಮುಚ್ಚಿರಿ

ದಿವಂಗತ ಸರ್ದಾರ ಪಟೇಲರು ಕೊಡಗನ್ನು ರಾಮರಾಜ್ಯವೆಂದಿದ್ದರು. ಆದರೆ ಕೊಡಗಿನಲ್ಲಿ ಸೇಂದಿ, ಸಾರಾಯಿ ಹಾವಳಿ ವಿಪರೀತವಾಗ ತೊಡಗಿದೆ. ಸಾರಾಯಿಗೆ ನಿಯಂತ್ರಣವಿರುವದರಿಂದ ಅದರ ಉಪದ್ರ ಕಡಿಮೆಯೆಂದರೂ ಸೇಂದಿಯು ಕಟ್ಟೆಯಲ್ಲಿ ಬಡಜನರ ಕಷ್ಟಾರ್ಜಿತ ದುಡಿತದ ಪಾಲಿಗೆ ಬರುತ್ತಿದೆ. ಖಾನೂನು ಮೀರಿ ಸೇಂದಿಗೆ ನಾಲ್ಕಾಣೆಯಂತೆ ಮಾರಬೇಕೆಂದಿದ್ದರೂ ಇದರ ಬೆಲೆ ಎಂಟಾಣೆಗೆ ತಲಪುವ ನಿದರ್ಶನಗಳಿವೆ. ಸುಂದರ ಕೊಡಗು ಈ ದುಶ್ಚಟದಿಂದಾಗಿ ತನ್ನ ಶೋಭೆಯನ್ನು ಕಳಕೊಂಡಿದೆ. ಪರಿಣಾಮವಾಗಿ ಶಾಲಾ ವಿದ್ಯಾರ್ಥಿ ಜೀವನದಿಂದಲೇ ಸುರಾದೇವಿಯ ಆರಾಧನೆ ಪ್ರಾರಂಭವಾಗ ತೊಡಗಿದೆ. ಆದ್ದರಿಂದ ಸರಕಾರವು ಬುದ್ಧಿಯಾವಾಗಿ ಕೊಡಗಿನ ಸೇಂದಿ ಅಂಗಡಿಗಳನ್ನೆಲ್ಲ ಮುಚ್ಚಿಸುವದು ಜನಹಿತ ದೃಷ್ಟಿಯಿಂದ ಅತ್ಯವಶ್ಯವಾಗಿದೆ.

ಬಿ. ಎ. ಕುಶಾಲಪ್ಪ

ಸರಕಾರಿ ಕಾರುಬಾರು

ಸರಕಾರದ ಆಡಳಿತ ಚಕ್ರ ಉರುಳುವದು ಅತಿ ನಿಧಾನದಿಂದ ಎಂಬ ಒಂದು ಮಾತು ಹಳೆಯ ಕಾಲದಿಂದಲೇ ಇದೆ. ಆದರೆ ಈಗ ಇದರ ಸತ್ಯತೆ ದಿನ ದಿನ ಕಳೆದಂತೆ ಬಡ ರೈತನಿಗೆ ಹೆಚ್ಚು ಹೆಚ್ಚಾಗಿ ಆಗ ತೊಡಗಿದೆ. ಕೆಲವು ಮುಖ್ಯ ಸರಕಾರಿ ಆಫೀಸುಗಳಿಗೆ ತಲುಪಿದ ಕಾಗದ ಪತ್ರಗಳಿಗೆ ಉತ್ತರ ಬರಲು ತಿಂಗಳುಗಟ್ಟಲೆ ಹಿಡಿಯುವದಿದೆ. ಕೆಲವೆಡೆ ಕಾಗದ ಪತ್ರಗಳೇ ಕಾಣೆಯಾಗುವದಿದೆ. ಅಧಿಕಾರಿಗಳು ಸಹಿ ಹಾಕಿ ೧೦, ೧೫ ದಿನಗಳನಂತರ ಪತ್ರ ಆಫೀಸಿನಿಂದ ರವಾನಿಸಲ್ಪಟ್ಟ ಉದಾಹರಣೆ ಇದೆಯೆಂದರೆ ಸರಕಾರ ಎಷ್ಟು ಮಂದಗಮನದಿಂದ ಕೂಡಿದೆಯೆಂಬುದನ್ನು ಹೇಳಬೇಕಿಲ್ಲ. ಸ್ವತಂತ್ರ ದೇಶವೆಂದ ಮೇಲಾದರೂ ಸ್ವಲ್ಪ ಚಟುವಟಿಕೆ ಬೇಡವೇ?

"Antu"

ತಪ್ಪು ಪರಂಪರೆ.

ಕೊಡಗು ಸರಕಾರದ ಬಜೆಟ್ ಮೀಟಿಂಗು ಕಳೆದ ವರ್ಷ ಏಪ್ರಿಲ್ ತಿಂಗಳ ೧೮ ರಲ್ಲಿ ನಡೆಯಿತು. ಏಪ್ರಿಲ್ ಒಂದರಿಂದ ಸರಕಾರದ ಹೊಸ ವರ್ಷ ಪ್ರಾರಂಭವಾಗುವದರಿಂದ ಸರಕಾರದ ಬಜೆಟ್ ಮೀಟಿಂಗು ಮಾರ್ಚ ೩೧ ರೊಳಗೆ ಆಗಬೇಕೆಂದು ನಿಯಮವಿದೆ. ಅದರಂತೆಯೇ ಪ್ರಾಂತೀಕ ಸರಕಾರಗಳೂ, ಕೇಂದ್ರ ಸರಕಾರವೂ ಕೂಡ ತಪ್ಪದೆ ತಮ್ಮ ಬಜೆಟ್ಟನ್ನು ಮಾರ್ಚ ಅಂತ್ಯದೊಳಗೆ ಪಾಸು ಮಾಡಿಸಿಕೊಳ್ಳುವವು. ಆದರೆ ಕೊಡಗಿನ ಕಥೆ ಬೇರೆ. ಈ ಚೀಫ್ ಕಮಿಷನರಿಗೆ ಕೌನ್ಸಿಲು ಮೀಟಿಂಗೇ ಬೇಡವೆನ್ನುವ ಹಾಗೆ ಅನಾಸಕ್ತಿಯುಳ್ಳಿದ್ದಾರೆ. ಅಕ್ಟೋಬರಿನಲ್ಲಾಗಬೇಕಾದ ಮೀಟಿಂಗನ್ನು ಡಿಸೆಂಬರಿನಲ್ಲೂ ಫೆಬ್ರವರಿಯಲ್ಲಾಗಬೇಕಾದುದನ್ನು ಏಪ್ರಿಲಿನಲ್ಲೂ ಮಾಡುತ್ತಾರೆ. ಇದು ನಿಯಮಕ್ಕೆ ವಿರುದ್ಧವಾದುದು. ಬಜೆಟ್ಟು ಪಾಸು ಮಾಡದೆ ಏಪ್ರಿಲ್ ಒಂದರನಂತರ ಹಣ ಹೇಗೆ ಖರ್ಚು ಮಾಡುವರೋ ತಿಳಿಯದು. ಇನ್ನಾದರೂ ಸರಕಾರ ಸ್ವಲ್ಪ ಶಿಸ್ತಿನಿಂದ ವರ್ತಿಸಬೇಕಿದೆ.

'ನಾಗರಿಕ'

ಡೊಂಕು ರಾಜಕೀಯ

ಕಳೆದವಾರದ 'ಕೊಡಗು' ಪತ್ರಿಕೆಯಲ್ಲಿ ಪ್ರಕಟವಾದ ಶ್ರೀ ಸಿ. ಎಂ. ಪೂಣಚ್ಚನವರ ಭಾಷಣವನ್ನು ಓದಿದೆನು. ಕೇವಲ ಒಂದು ಅಧಿಕಾರಕ್ಕಾಗಿ ಅವರು ಯಾವ ರೀತಿಯ ಆತ್ಮವಂಚನೆ ಮಾಡಿಕೊಳ್ಳುತ್ತಿರುವರೆಂಬುದನ್ನು ನೆನೆದು ಕನಿಕರವಾಯಿತು. ತಾನು ಕೊಡಗಿಗೆ ಜವಾಬ್ದಾರಿ ಸರಕಾರವನ್ನು ಕೊಡಬೇಕೆಂದು ವಾದಿಸುವದಾಗಿಯೂ, ತನ್ನ ಭಾಷಣವಾಗುವ ಮೊದಲೇ ಗಂಟೆ ಆಯಿತೆಂದೂ ಮಕ್ಕಳ ರೀತಿಯಲ್ಲಿ ಒಂದು ಕಾರಣ ಕೊಟ್ಟಿರುವರು. ತನಗೆ ಮಾತಾಡಲು ಕೇವಲ ಹತ್ತೇ ನಿಮಿಷಗಳಿರುವದೆಂದು ತಿಳಿದಿದ್ದೂ ಕೂಡ ಕೊಡಗಿಗೆ ಏನು ಬೇಕೆಂಬುದನ್ನು ಸ್ಪಷ್ಟವಾಗಿ ಅವರು ಹೇಳದೆ ಅವಶ್ಯವಿಲ್ಲದ ಡೊಂಕುವಾದವನ್ನೂ ಬಳಸಿದ ದಾರಿಯನ್ನು ಹಿಡಿದು ಕಡೆಗೆ ಗಂಟೆಯೂ ಆಯಿತೆಂದೂ, ತಾನು ಜವಾಬ್ದಾರಿ ಸರಕಾರದ ಕರೆಯನ್ನೇ ಮಾತಾಡುತ್ತಿದ್ದೆನೆಂದೂ ಹೇಳುವ ಅವರ ಸ್ಥಿತಿಗೆ ಕನಿಕರ ಪಡಬೇಕಾಗಿದೆ. ಆದರೆ ಅದು ವ್ಯಕ್ತಿಗತ ವಿಚಾರವಲ್ಲ; ದೇಶಕ್ಕೆ ಸಂಬಂಧಿಸಿದುದಾದ್ದರಿಂದ ಶ್ರೀಯುತರು ಕೊಡಗಿನ ಮಟ್ಟಿಗೆ ತಾವು ಹೊತ್ತಿದ್ದ ಜವಾಬ್ದಾರಿಯನ್ನು ಸರಿಯಾಗಿ ನಿರ್ವಹಿಸಲಿಲ್ಲವೆಂದು ಹೇಳಬೇಕಾಗಿದೆ. ಕೊಡಗಿನ ಜನಮತವು ಪ್ರಜಾಜವಾಬ್ದಾರಿ ಸರಕಾರ ಬೇಕೆಂಬುದನ್ನು ಭವಿಷ್ಯ ನಿರ್ಣಯ ಮಾಡಲು ಜನಾಭಿಪ್ರಾಯ ತೆಗೆಯಬೇಕೆಂಬುದನ್ನೂ ಹೇಳಲು ಹತ್ತು ನಿಮಿಷಗಳು ಸಾಕಾಗಿರಲಿಲ್ಲವೇನು? ಪೂಣಚ್ಚನವರು ಹಿಡಿದ ಈ ಡೊಂಕು ರಾಜಕೀಯದಿಂದ ಅವರಿಗೂ ಹಿತವಾಗಲಾರದು. ಕೊಡಗಿಗೂ ಹಿತವಾಗದು.

ಭೀಮಯ್ಯ

ಕೊಡಗು ಚೀಫ್ ಕಮಿಷನರಲ್ಲಿ ವಿನಂತಿ.

ಕೊಡಗಿನಲ್ಲಿ ಬಸ್ಸಿನ ಸಂಖ್ಯೆಯು ಬಹಳವಾಗಿ ಹೆಚ್ಚಿದೆ. ಪ್ರಯಾಣಿಕರ ಸಂಖ್ಯೆಯೂ ಸಹ ಅದಕ್ಕೆ ಸರಿಯಾಗಿ ಹೆಚ್ಚಿದೆ. ಸಿದ್ದಾಪುರವು ದ. ಕೊಡಗಿನ ಪಟ್ಟಿಗೆ ಮಧ್ಯ ಪಟ್ಟಣವಾಗಿದೆ. ಎಲ್ಲಾ ಬಸ್ಸುಗಳು ಈ ಮಾರ್ಗವಾಗಿಯೇ ದಾಟಬೇಕಾಗಿದೆ. ಆ ಬಸ್ಸುಗಳಲ್ಲಿ ಈ ಊರಿನಿಂದ ಹೊರಟು ಪ್ರಯಾಣ ಮಾಡತಕ್ಕ ಪ್ರಯಾಣಿಕರಿಗೆ, ಕಾದಿರಲು ಒಂದು ಸ್ಥಳವಿಲ್ಲದೆ, ಬಹಳ ತೊಂದರೆಯಾಗಿದೆ. ಹೆಂಗಸರು ಮಕ್ಕಳಂತೂ ತೊಂದರೆಗೆ ಒಳಗಾಗುವುದು ನೋಡಿದರೆ ಬಹಳ ಸಂತಾಪಕರವಾಗಿದೆ. ಬಸ್ಸುಗಳನ್ನು ಕಾಯಲು ಜನರು ಸಿದ್ದಾಪುರ ಚಾವಡಿಯ ಬಳಿಯಲ್ಲಿರುವ ಮೋರಿಯ ಕಟ್ಟೆಯ ಮೇಲೆ ಕುಳಿತಿರುವುದು ಕಾಣಬಹುದು. ಹೀಗೆ ಜನರು ಅಲ್ಲಿ ಕಾಯುತ್ತಿದ್ದು ಈ ಸ್ಥಳವು ಬಹಳ ಹೇಸಿಗೆಯಾಗಿರುತ್ತದೆ. ಪಟ್ಟಣ ನಿವಾಸಿಗಳ ಆರೋಗ್ಯಕ್ಕೆ ಇದು ಹಾನಿಕರವಾಗಿರುವುದು. ಆದುದರಿಂದ ಈ ಪಟ್ಟಣಕ್ಕೆ ಒಂದು ಬಸ್ಸ್ ಸ್ಟೇಂಡ್ ಕೂಡಲೇ ಮಾಡಿಸಿ ಕೊಡಬೇಕಾಗಿ ಕೋರಿಕೆ

"ಸಿದ್ದಾಪುರ ನಿವಾಸಿ."

ಗೋಧಿ ಸರಬರಾಯಿ.

ತಾ. ೨೫-೩-೫೧ ರಲ್ಲಿ ಮೂರ್ನಾಡಿನ ಒಂದು ಅಂಗಡಿಗೆ ಗೋಧಿ ಸರಬರಾಯಿ ಆಗಿದೆ. ಮಡಿಕೇರಿಯಲ್ಲಿ ಹತ್ತು ಸೇರಿನ ವರೆಗೆ ಗೋಧಿಗೆ ಪರ್ಮಿಟು ಕೊಡುವದಿದೆ. ಆದರೆ ಮೂರ್ನಾಡಿನಲ್ಲಿ ಎರಡೇ ಸೇರೆ! ಈ ಎರಡೇ ಸೇರಿನ ಪರ್ಮಿಟ್ಟನ್ನು ಮಡಿಕೇರಿಯಿಂದ ತರಬೇಕಂತೆ. ಮಡಿಕೇರಿಗೆ ಇದಕ್ಕಾಗಿ ಹೋದರೆ ಕಡಿಮೆ ರೂ ೨ ಖರ್ಚು. ಒಂದು ರೂಪಾಯಿ ಗೋಧಿಗೆ ೨ ರೂ ಖರ್ಚುಮಾಡಬೇಕಾದ ಈ ವ್ಯವಸ್ಥೆಯಿಂದ ಬಡ ರೈತನಿಗೆ ಎಷ್ಟು ತೊಂದರೆ ಇದೆಯೆಂಬುವವನ್ನು ಅಧಿಕಾರಿಗಳು ಗಮನಿಸಬೇಕು. ಬಡ ರೈತನ ಪಾಲಿಗೆ ನಿಯಂತ್ರಿತ ಸಾಮಾನುಗಳು ಕನಸಿನ ಮಂಡಿಗೆಗಳಂತಾಗಿವೆ. ಪಾಪದ ಬಡ ರೈತನು ಪಟ್ಟಣ ಹಣ್ಣುಮಗಳಲ್ಲದಿದ್ದರೂ ಇವನ್ನು ಪಡೆದು ಸ್ವಲ್ಪ ಆನಂದಿಸುವ ಅನುವನ್ನು ಸರಕಾರ ಮಾಡಬಾರದೇ? ಮೂರ್ನಾಡಿನವರಿಗೆ ಮೂರ್ನಾಡಿನಲ್ಲೇ ಪರ್ಮಿಟು ಕೊಟ್ಟರೆ ಉತ್ತಮವಾಗುವದು.

ಬಡ ರೈತ.

ಕೊಡಗಿನಲ್ಲಿ ನೂಲಿನ ವಿತರಣೆ!

ಕೊಡಗಿಗೆ ಕೋಟಾ ಬಟ್ಟೆ ಬರುತ್ತಿರುವ ಹಾಗೆ ತಿಂಗಳಿಗೆ ೩ ಬೇಲ ನೂಲು ಸಹ ಬರುತ್ತಿದೆ. ಇವನ್ನು ಕೊಡಗಿನಲ್ಲಿ ಮಗ್ಗ ಇಟ್ಟವರಿಗೆ ಹಂಚುತ್ತಿರುವರು. ಇದನ್ನೆಲ್ಲಾ ಮಗ್ಗದವರು ಬಟ್ಟೆಮಾಡಿ ಜನರಿಗೆ ಮಾರಾಟಮಾಡುವಂತೆ ಸರಕಾರವು ಸರಿಯಾದ ವ್ಯವಸ್ಥೆ ಮಾಡಿದೆಯೋ ಎಂಬುದು ಗೊತ್ತಾಗುವುದಿಲ್ಲ. ನನಗೆ ತಿಳಿದ ಮಟ್ಟಿಗೆ ಹೆಚ್ಚಿನ ಅಂಶ ಹೊರಪ್ರಾಂತ್ಯದ ಕಪ್ಪುಸಂತೆಯಲ್ಲಿ ಮಾರಾಟವಾಗುತ್ತಿದೆ ಎಂದು ತಿಳಿಯುತ್ತೇನೆ. ಅಲ್ಲದೆ ಕೊಡಗಿನ ಮಗ್ಗಗಳಲ್ಲಿ ತಯಾರಾದ ಬಟ್ಟೆಯ ಬೆಲೆ ಹೆಚ್ಚಿರುವದು. ಮಲಬಾರಿನಲ್ಲಿ ಕಪ್ಪುಸಂತೆಯ ಕ್ಕೆ ನೂಲು ತೆಗೆದು ಅವರು ಕಡಿಮೆ ದರದಲ್ಲಿ ಇಲ್ಲಿಯ ವ್ಯಾಪಾರಿಗಳಿಗೆ ಮಾರುತ್ತಿರುವ ವರ್ತಮಾನವಿದೆ. ಹಾಗಾದರೆ ಇಲ್ಲಿಯವರಿಗೆ ಕಂಟ್ರೋಲು ಬೆಲೆಗೆ ನೂಲು ಕೊಟ್ಟು ಇವರು ಹೆಚ್ಚು ಬೆಲೆಗೆ ಬಟ್ಟೆ ಮಾರುವದೇ? ಸಮ್ಮಂಧಪಟ್ಟ ಅಧಿಕಾರಿಗಳು ಕೊಡಗಿಗೆ ಬರುವಂತಹ ನೂಲುಗಳು ಕಪ್ಪುಸಂತೆಗೆ ಹೋಗದಂತೆಯೂ, ಇಲ್ಲಿಯ ಮಗ್ಗದವರು ಮಾಡಿದ ಬಟ್ಟೆಗಳನ್ನು ಅವರವರ ಮನಸ್ಸಿಗೆ ತೋಚಿದ ರೀತಿಯ ಬೆಲೆಗಳಿಗೆ ಮಾರದಂತೆಯೂ ಕಡೆಗಟ್ಟಿ ಯೋಗ್ಯ ರೀತಿಯ ಬೆಲೆಗೆ ಮಾರಾಟವಾಗುವ ವಿಷಯಕ್ಕೆ ಗಮನಕೊಡಬೇಕಿದೆ.

ಗಣಪತಿ.

ಮರೆನಾಡಿನ ರೇಶನ್ ಪದ್ಧತಿ.

ಈ ನಾಡಿಗೊಂದು ಹೊಸ ನಮೂನೆಯ ಸೀದಾ ಪದ್ಧತಿ ತೋರಿಬರುತ್ತಿದೆ. ಯಾಕೆಂದರೆ ಕೊಡಗಿನ ಇತರ ಭಾಗಗಳಲ್ಲಿರುವಂತೆ ಸೀದಾ ಪದ್ಧತಿಯಂತೆ ಈ ನಾಡಿನಲ್ಲಿ ಕಾಣುವುದಿಲ್ಲ. ಈ ನಾಡಿಗೆ ನೇಮಕ ಮಾಡಿದಂತ ಅಧಿಕಾರಿಗಳು ಅವರ ಅಧಿಕಾರವನ್ನು ತೋರ್ಪಡಿಸಲೋಸುಗವೋ ಯಾ ಬೇರೆ ಕಾರಣದಿಂದಲೋ ಕೆಲ ಜನರ ಸಹಾಯ ತೆಗೆದು ಸಿದ್ಧಾಲಿ ತೆಗೆದುಕೊಂಡು ಮನೆಯ ಯಜಮಾನ ಇರಲಿ ಇಲ್ಲದಿರಲಿ ಹೆಂಗಸು ಮಕ್ಕಳೆನ್ನದೆ ಮನೆಯನ್ನು ಜಪ್ತಿ ಮಾಡುತ್ತಿರುವರಂತೆ. ಇದು ಈ ನಾಡಿಗೆ ಮಾತ್ರವೋ ಅಲ್ಲ ಕೊಡಗಿಗೆ ಇರುವ ಕಾನೂನೋ ತಿಳಿಯದು. ಈ ನಾಡಿನಲ್ಲಿ ಮಾತ್ರ ಕಪ್ಪುಸಂತೆಯ ವ್ಯಾಪಾರವಂತೆ! ಈ ನಾಡಿನ ಬತ್ತದ ಲೆಕ್ಕ ತೆಗೆಯಲಿಕ್ಕೆ ಒಬ್ಬ ಕ್ರಾಪ್ ಇನ್ಸ್‌ಪೆಕ್ಟರೊಬ್ಬರನ್ನು ಕಳುಹಿಸಿದರು. ನೂರು ಬಟ್ಟಿ ಭೂಮಿಯುಳ್ಳವರಿಗೆ ೧ ಗಾಡಿ ಮಾರುವ ಲೆಕ್ಕ ೧ ಎಕ್ರೆ ಇರುವವನಿಗೂ ೧ ಗಾಡಿ, ೨೦೦ ಬಟ್ಟಿ ಭೂಮಿಯುಳ್ಳವರಿಗೆ ೩ ಗಾಡಿ ಈ ತರದ ಲೆಕ್ಕ ಕೊಟ್ಟಿರುವರು. ೬ ಗಾಡಿ ಸಂಪಾದಿಸಿ ಮಾರುತ್ತಿರುವವರಿಗೆ ೩–೩½ ಗಾಡಿ ಮಾರುವ ಏರ್ಪಾಡು! ಇದೆಂಥ ಕ್ರಾಪ್ ಇನ್ಸ್‌ಪೆಕ್ಟರ್? ಇವರ ಲೆಕ್ಕದಂತೆ ಈ ಬಲ ಪ್ರಯೋಗ ನರು ವರ್ತಿಸಿದರೆ ಈ ನಾಡಿನ ಬಡ ಜನರಲ್ಲಿ ಹಲವರಿಗೆ ಸಪ್ಟೆಂಬರ, ಅಕ್ಟೋಬರ್ ನವಂಬರ್ ತಿಂಗಳಲ್ಲಿ ಬತ್ತವಿಲ್ಲದೆ ಉಪವಾಸವಿರಬೇಕಾಗುವುದು. ಇದರಂತೆ ಕಳೆದ ವರ್ಷ ಸೀದಾ ಕಾರ್ಡ ರೇಶನವಾಗ ಕಾರ್ಡ ಸರಕಾರ ಈ ನಾಡವರಿಗೆ ಕೊಡಲಿಲ್ಲ ನೀವು ಕಪ್ಪುಸಂತೆ ವ್ಯಾಪಾರ ಮಾಡಿ ಈ ೧ ಡಿಪೋದಿಂದ ಅಕ್ಕಿ ತರಲು ಬರುತ್ತೀರಿ ಎಂದಿದೆ. ಈ ರೀತಿಯಾದರೆ ಕೊಡಲೇ ಉಣ್ಣಲಿಕ್ಕೆ ಗತಿಯಿಲ್ಲದ ಬಡ ಜನರು ಉಪವಾಸದಿಂದ ಸಾಯಬೇಕಾಗುತ್ತೆ. ಇನ್ನಾದರೂ ಈ ರೀತಿಯ ಜುಲುಮೆಯು ಪರಿಹಾರ ನಮ್ಮ ಮಾಡ ಪಡಿಗೆ ನಂಬುತ್ತೇನೆ.

ನೆಲ್ಲಂದ ಗಪ್ಪಯ್ಯ.

ಅಕ್ಷಮ್ಯ ಅಪರಾಧ.

ಕೇಂದ್ರ ಶಾಸನ ಸಭೆಯಲ್ಲಿ ಶ್ರೀ. ಪೂಣಚ್ಚನವರು ಮಾಡಿದ ಭಾಷಣವು ಕೊಡಗಿಗೆ ಅವರು ಮಾಡಿದ ಅಕ್ಷಮ್ಯ ಅಪರಾಧವೆನಬೇಕಾಗಿದೆ. ಕೊಡಗಿನ ಭವಿಷ್ಯ ನಿರ್ಣಯವು ಜನತೆಯಿಂದಾಗಬೇಕೆಂಬ ತತ್ವವನ್ನು ಒಪ್ಪಿ ಅಂಥ ಸಂದರ್ಭ ಬಂದಾಗ ಕೊಡಗಿನ ಜನರ ಅಭಿಪ್ರಾಯವನ್ನು ತೆಗೆಯಬೇಕೆಂದು ಕೇಂದ್ರ ಸರಕಾರವನ್ನು ಕೇಳುವ ಧೈರ್ಯವಿಲ್ಲದ ಚಾ

ನಾಯಕರಾದ ಪೂಣಚ್ಚನವರೇ, ನಂತರ ಕೊಡಗಿಗೆ ಜವಾಬ್ದಾರಿ ಸರಕಾರ ಬೇಕೆಂದು ಕೌನ್ಸಿಲಿನಲ್ಲಿ ಒಮ್ಮತದಿಂದ (ಇವರೂ ಸೇರಿ) ಪಾಸುಮಾಡಿದ ಠರಾವಿನ ವಿಚಾರದಲ್ಲಿ ಬಂಬಲವಿತ್ತು ಮಾತಾಡಬೇಕಿದ್ದ ಪೂಣಚ್ಚನವರು ಅದು ಬಿಟ್ಟು ತಮಗಿದ್ದ ಹತ್ತು ನಿಮಿಷಗಳ ಅವಧಿಯಲ್ಲಿ ಕೊಡಗಿನ ಕೌನ್ಸಿಲಿನ ರಚನೆ, ಇಲ್ಲಿಯ ಗಜೆಟೆಡ್ ಉದ್ಯೋಗಿಗಳ ವರ್ಗಾವರ್ಗಿ ಇದರಲ್ಲೇ ಕಾಲಕಳೆದು ಪ್ರಾಮುಖ್ಯ ವಿಚಾರಗಳ ಬಗ್ಗೆ ಮಾತಾಡದೆ ಕೊಡಗಿಗೆ ಅಹಿತ ಹಾನಿಯನ್ನು ಮಾಡಿದ್ದಾರೆ. ಕೊಡಗಿನ ಕೌನ್ಸಿಲು ಮಿಂಟೊಮಾರ್ಲೆ ಸುಧಾರಣೆಯ ಕಾಲದ್ದು ಎಂದು ಒಂದು ಮಾತು ಹೇಳಿದ್ದರೆ ಶಾಸನ ಸಭೆಯಲ್ಲಿರುವವರಿಗೆ ಅದರ ಅಧಿಕಾರ, ಅದರ ರೂಪರೇಖೆ ತಿಳಿಯುತ್ತಿರಲಿಲ್ಲವೇ? ಕೊಡಗಿಗೆ ಸುಧಾರಣೆ ಬೇಕೆಂದು ಸ್ಪಷ್ಟ ಹೇಳುವದಕ್ಕಿಂಥಲೂ ಗಜೆಟೆಡ್ ಉದ್ಯೋಗಿಗಳ ವರ್ಗಾವರ್ಗಿಯ ವಿಚಾರ ಮಾರುದ್ದ ಮಾತಾಡುವದು ಪ್ರಾಮುಖ್ಯವೆಂದು ಇವರಿಗೆ ತೋರಿತೇ? ಕೊಡಗಿನ ಜನತೆಯ ಅಭಿಪ್ರಾಯದಂತೆ ಕೊಡಗಿನ ಭವಿಷ್ಯ ತೀರ್ಮಾನವಾಗಬೇಕೆಂದು ಭರವಸೆ ಕೊಟ್ಟ ಇವರು ಕೊಡಗಿನ ಭಾಗ್ಯದ ಪ್ರಶ್ನೆಯ ಬಗ್ಗೆ ಭಿನ್ನಾಭಿಪ್ರಾಯವಿರುವದಾದರೆ ಕೇಂದ್ರ ಸರಕಾರವು ಒಂದು ನಿರ್ಧಿಷ್ಟ ತೀರ್ಮಾನ ಕೊಡಬೇಕೆಂದು ತಮ್ಮ ಭಾಷಣದಲ್ಲಿ ಹೇಳಿದುದರ ಅರ್ಥವೇನು? ಕೊಡಗಿನವರನ್ನ ಕೇಳದೆ ಕೊಡಗಿನ ಭವಿಷ್ಯವನ್ನು ಕೇಂದ್ರ ಸರಕಾರವು ನಿರ್ಣಯಿಸಬೇಕೆಂದಲ್ಲವೇ? ಇವರ ಚುನಾವಣೆಯ ಕಾಲಕ್ಕೆ ಶಾಸನ ಸಭೆಯಲ್ಲಿ ಕೊ. ನ. ಜನತೆಯ ಅಭಿಮತದಂತೆ ನಡೆಯುವೆನೆಂದವರು, ಆ ಬಗ್ಗೆ ಕರಪತ್ರಿಕೆಗಳನ್ನು ಮಾಡಿ ಹಂಚಿದವರು ಇಂದು ಕೊಡಗಿನ ಜನತೆಯನ್ನು [illegible] ಮಾಡಿದ್ದಾರೆ. ಇಂಥ ಪರ [illegible] ಬಂದದೆ. [illegible] ಮಾಡಿಲ್ಲವೆಂದು ಇವರು ಹೇಳುತ್ತಾರೆ. ಆದರೆ ಇವರ [illegible] ಸಭೆಯಲ್ಲಿ ಕೊಡಗಿನ ಸಂಯೋಜನೆಗೆ ಮಾಡಿದ ಕೆಲಸವನ್ನು ಮೆಚ್ಚಿ ಅಭಿನಂದನಾ ಟೆಗಳನ್ನು ಮಾಡುತ್ತಿದ್ದಾರೆ. ಇವರ ಅರ್ಥವೇನು? [illegible] ವ ಬೆಕ್ಕು ಜಗತ್ತಿನ ಬೇರೆ ಯಾರೂ ತನ್ನನ್ನು ಕಾಣರೆಂದು ಭಾವಿಸುವಂತೆ ಪೂಣಚ್ಚನವರ ಕಥೆಯಾಗಿದೆ. ಅವರೆ ಪಟ್ಟ [illegible] ಅನುಭವಿಸುವ ಬಡ ಜನರ [illegible]?

ಎಂ. ದೇವಯ್ಯ.

ಮಾಜಿ ಸಿಪಾಯಿಗಳ ಬಸ್‌ಲೈನು.

ಸರಕಾರವು ಮಾಜಿ ಸಿಪಾಯಿಗಳ [illegible] ಕ್ಕೆ ಒಂದು ಬಸ್‌ಲೈನು ಕೊಟ್ಟು ಉಪಕಾರವಾಗಿದೆ. ಈ ಬಸ್‌ಲೈನು ಶೀಘ್ರ ಓಡಾಡಲು ಪ್ರಾರಂಭವಾಗಿದೆ. ಆದರೆ ಮಾಜಿ ಸಿಪಾಯಿಯರ ಸಂಘವು ಸಕಸ್ತು ಸಂಘಟಿತವಾಗಿ ಕೆಲಸ ಮಾಡುತ್ತಿಲ್ಲವೆನ್ನಬೇಕು. ಪಾಲು ಬಂಡವಾಳವು ಸಂಗ್ರಹವಾಗಬೇಕಿದ್ದಷ್ಟು ಆಗಿಲ್ಲ. ಮೇಲಾಗಿ ಉತ್ತರ ಕೊಡಗು ದಕ್ಷಿಣಕೊಡಗು ಎಂಬ ಬೇಧವೊಂದು ತಲೆ ಇಕ್ಕಿದೆ. ಆದ್ದರಿಂದ ಎಲ್ಲಾ ಮಾಜಿಸಿಪಾಯಿಗಳು ಈ ಬೇಧವನ್ನು ಮರೆತು ಒಗ್ಗಟ್ಟಾಗಿ ಸಂಘದ ಹಿತಕ್ಕಾಗಿ ದುಡಿಯುವದಲ್ಲದೆ ದೊರೆತ ಬಸ್ ಲೈನನ್ನು ದಕ್ಷತೆಯಿಂದ ನಡೆಸುವ ಏರ್ಪಾಡು ಮಾಡಬೇಕಾಗಿದೆ.

'ಮಾಜಿಸಿಪಾಯಿ'

ಜಾನುವಾರು ಜಾತ್ರೆ.

ನಾಲ್ಕಾರು ಪ್ರಾದೇಶಿಕ ಜಾತ್ರೆಗಳಾಗಿ ತಾ. ೩೪ರಲ್ಲಿ ಅಮ್ಮತ್ತಿಯಲ್ಲಿ ಕೇಂದ್ರ ಜಾನುವಾರು ಜಾತ್ರೆ ನಡೆಯಿತು. ಈ ಜಾತ್ರೆಯ ವ್ಯವಸ್ಥೆ ಚೆನ್ನಾಗಿದ್ದಿತಾದರೂ ಸಮಗ್ರ ಕೊಡಗಿನ ದೃಷ್ಟಿಯಿಂದ ಬಂದ ಜಾನುವಾರುಗಳ ಸಂಖ್ಯೆ ಕಡಿಮೆಯೆಂದು ಹೇಳಬೇಕು. ಈ ಬಂದವುಗಳೂ ಕೂಡ ನಾಲ್ಕು ಜನ ಪ್ಲಾಂಟರುಗಳವು ಎನ್ನಬಹುದು. ಸಾಧಾರಣವಾಗಿ ಕೊಡಗಿನ ಜಾನುವಾರು ಜಾತ್ರೆಗಳಲ್ಲಿ ಅನುಕೂಲಸ್ಥರಾದ ಕೆಲವರಿಗೆ ಮಾತ್ರ ಬಹುಮಾನ ದೊರೆಯುತ್ತದೆ. ಧನಿಕರು ತಮ್ಮ ದನಕರುಗಳನ್ನು ಎಷ್ಟು ದೂರವಾದರೂ ಸಾಗಿಸಬಲ್ಲರು. ಅಮ್ಮತ್ತಿಯಲ್ಲಿ ಜಾತ್ರೆಯಾದರೂ ಸೋಮವಾರಪೇಟೆಯಿಂದ ತಮ್ಮ ಸ್ವಂತ [illegible] ತರುವರು [illegible] ಅನುಕೂಲವಿರುವ [illegible] ಪ್ಲಾಂಟರುಗಳಿಗೆ ಮಾತ್ರ ಬಹುಮಾನ ದೊರೆಯುತ್ತದೆ. ಮೇಲಾಗಿ, ಹಳ್ಳಿಕಾರ್, ಸಿಂಧೀ, ಗೀರ್ ಮೊದಲಾದ ರಾಸುಗಳನ್ನು ಬಡರೈತನು ಸಾಕುವದೂ ದೂರದ ಮಾತಾಗಿದೆ. ಹಾಗಾಗಿ ಕೊಡಗಿನಲ್ಲಿಯ ನಿಜ ರೈತನಿಗೆ ಈ ಪ್ರದರ್ಶನಗಳಿಂದ ಪ್ರಯೋಜನವು ಹೆಚ್ಚಾಗಿ ಆಗುತ್ತಿಲ್ಲ. ನಾಡು ಎತ್ತುಗಳಿಗೆ [illegible]. ಬೆಳೆಸಿದ ತರಕಾರಿ [illegible] ಬೆಳೆಯದೆ ಪೇಟೆಯಿಂದ ಕ್ರಯಕ್ಕೆ ತಂದು ಬಹುಮಾನ ಪಡೆಯುವ ನಿದರ್ಶನಗಳೂ ಇವೆಯೆಂದಾಗ ಈ ಪ್ರದರ್ಶನಗಳು ಕೇವಲ ಆಡಂಬರಕ್ಕಾಗಿ ಎನ್ನಬೇಕು. ಪ್ರದರ್ಶನಕ್ಕೆ ಬಂದ ವಸ್ತುಗಳಲ್ಲಿ ಉತ್ತಮವಾದದ್ದಕ್ಕೆ ಬಹುಮಾನ ಕೊಡುವುದು ವಾಸ್ತವ. ಆದರೆ ಕೆಲವು ಸಂಗಭಗಳಲ್ಲಿ ಪ್ರಥಮ ಬಹುಮಾನ ಕೊಡಲು ಅರ್ಹವಾದುದಿಲ್ಲವೆಂದೂ, ಇಲ್ಲವೇ ದ್ವಿತೀಯ ಬಹುಮಾನಕ್ಕೆ ಯೋಗ್ಯವಾದುದಿಲ್ಲವೆಂದು ಬಹುಮಾನ ಕೊಡದೆ [illegible]. ಈ ರೀತಿ ಮಾಡಿದರೆ ಜನರಿಗೆ ಪ್ರೋತ್ಸಾಹವೆಲ್ಲಿಂದ ಸಿಗಬೇಕು? ಆದ್ದರಿಂದ ಇಂಥಾ ಪ್ರದರ್ಶನಗಳು ಕೇವಲ ಸಿರಿವಂತರ ಆಡಂಬರದ ಪ್ರದರ್ಶನಗಳಾಗದೆ ಬಡರೈತನ ಉದ್ಯಮಕ್ಕೆ ಪ್ರೋತ್ಸಾಹಕವಾಗುವಂತೆ ಸರಕಾರವು [illegible].

'ಪಶುಪ್ರೇಮಿ'

ಒಣಹುಲ್ಲು ರವಾನೆ.

ಕೊಡಗಿನಿಂದ ಮಂಗಳೂರಿಗೆ ಲಾರಿಗಳ ಮೂಲಕ ಒಣ ಹುಲ್ಲು ರವಾನಿಸಲ್ಪಡುತ್ತಿದೆಯೆಂಬ ವರ್ತಮಾನವಿದೆ. ಕೊಡಗಿನಲ್ಲಿ ದನಕರುಗಳಿಗೆ ಹುಲ್ಲು ಸಾಲದೆ ಅವು ಪಡುವ ಕಷ್ಟವು ಅಷ್ಟಿಷ್ಟಲ್ಲ. ಹಾಗಿರುವಾಗ ಹುಲ್ಲಿಗೆ ಬೆಲೆ ಇದೆಯೆಂದು ಅದನ್ನು ಸಿಕ್ಕಾಬಟ್ಟೆ ಮಾರಾಟಮಾಡಲು ಸರಕಾರ ಬಿಡಬಾರದು. ಕೊಡಗಿನ ಹೊರಗೆ ಯಾವದೇ ರೀತಿಯಿಂದ ಹುಲ್ಲು ಮಾರಾಟವಾಗದಂತೆ ಸರಕಾರವು ಎಚ್ಚರಿಕೆ ವಹಿಸಬೇಕೆಂದು ಪ್ರಾರ್ಥಿಸ ವದಾಗಿದೆ.

ಗಾಯರ್ಪ್ಪ ಬಿ.

ಆತುರವೇಕೆ?

ತಾ. ೨೪-೩-೫೮ರ 'ಜನ್ಮಭೂಮಿ' ವಾರಪತ್ರಿಕೆಯಲ್ಲಿ 'ತಡವೇಕೆ' ಎಂಬ ಶಿರೋನಾಮೆಯಲ್ಲಿ ಶನಿವಾರಸಂತೆ, ಸಂತೆ ಮೈದಾನದಲ್ಲಿ ಖಾಲಿ ಇದ್ದ ಪೈಸಾರಿ ಜಾಗದಲ್ಲಿ ಪೇಟೆಯ ಒಬ್ಬ ಬಡ ವ್ಯಕ್ತಿಯು ತನ್ನ ಪ್ರಯೋಜನಾರ್ಥವಾಗಿ ಒಂದು ಸಣ್ಣ ಅಂಗಡಿ ಮನೆಯನ್ನು ಕಟ್ಟಿಕೊಂಡು ಜವಳಿವ್ಯಾಪಾರವನ್ನು ಮಾಡುತ್ತಿರುವುದನ್ನು ತಪ್ಪಿಸಬೇಕೆಂದು ಬಾತ್ಮಿಯನ್ನು ಬರೆಯಲಾಗಿದೆ. ಇದು ಸಾರ್ವಜನಿಕರಿಗೆ ಆಶ್ಚರ್ಯದ ಸಂಗತಿಯಾಗಿದೆ. ಈ ನಿವೇಶನವು ಈಗ್ಗೆ, ಹುಡುಗಿ ಮತ್ತು ಮಕ್ಕಳ ಮಲಮೂತ್ರ, ಕಸ, ಕಡ್ಡಿಗಳಿಂದ ಹೊಲಸಾಗಿದ್ದು ಈ ಹೋಬಳಿಯ. ಜನರಿಗೆ ಇದರಿಂದ ಯಾವ ಪ್ರಯೋಜನವಿಲ್ಲ. ಇಂಥಾ ಜಾಗದಲ್ಲಿ, ಒರ್ವ ಗರೀಬನು 'ತನ್ನ ಜೀವನೋಪಾಯವನ್ನು ಮಾಡುತ್ತಿರುವುದನ್ನು [illegible]' ಈ ತಗಡಿನ ಮನೆಯನ್ನು ನೋಡಲಾರದ ಕಣ್ಣುರಿಯವರೂ, 'ಎಸ್. ಎಂ. ಸಿ.'ಯವರು ಸರಕಾರದವರನ್ನು ಚುಚ್ಚಿ, ಚುಚ್ಚಿ ಎಚ್ಚರಿಸುತ್ತಿರುವುದು ಸೋಜಿಗವಾಗಿದೆ. ಇದೇ 'ಎಸ್. ಎಂ. ಸಿ.' ಮಹನೀಯರು ತಮ್ಮ ಮನೆಯನ್ನು ಕಟ್ಟಿ ಹೋಗಿನ ಮೆ[illegible] ರಸ್ತೆಗೆ ಮತ್ತರಿಸಿ ಕಟ್ಟಿದ್ದನ್ನು ಸರಕಾರವು ಕೇಳಬೇಕೆಂದು ಹ[illegible] ಇದರಿಂದ ರಸ್ತೆಗಾಗಲೀ, ಸಾರ್ವಜನಿಕರಿಗಾಗಲೀ ತೊಂದರೆ ಇಲ್ಲವೇ? ಬುದ್ಧಿ ಸಾರ್ವಜನಿಕರು ಸರಕಾರದವರಲ್ಲಿ ಮನವಿಮಾಡಿಕೊಂಡಾಗ ಇವರ ಮನೆಕಟ್ಟಡವು ಉಳಿಯಲಿಲ್ಲವೇ?

ಅವರ ಸಂತೆಮೈದಾನದಲ್ಲಿ ಕಟ್ಟಿರುವ ಸ್ಟಾಲಿನಿಂದ, ಸಾರ್ವಜನಿಕರಿಗಾಗಲೀ, ಯಾ ಸರಕಾರಕ್ಕಾಗಲೀ, ಯಾ 'ಎಸ್. ಎಂ. ಸಿ.' ಯವರಿಗಾಗಲೀ, ಇದರ ಹಿಂಬಾಲಕರಿಗಾಗಲಿ ಯಾವ ತೊಂದರೆಯೂ ಇರುವುದಿಲ್ಲ. ಈ ವಿಷಯದಲ್ಲಿ ಸರಕಾರವು ಸಾರ್ವಜನಿಕರನ್ನು ಕೇಳಿ ಬಳಿಕ ಆದೇಶ [illegible] ವಿನಹ ಒಬ್ಬನೊಬ್ಬ ವ್ಯಕ್ತಿಯು, ಹೇಳಿದ [illegible] ಜನವೇ [illegible]. ಅರೋಪಣೆಯನ್ನೇ ನಂಬಿ, ಒಬ್ಬ ಬಡ ವ್ಯಕ್ತಿಯ [illegible] ಹಾಳುಮಾಡಿ, ಹೊಟ್ಟೆಗೆ [illegible].

'ಕೋಣನಿಗೆ [illegible] ಎಂದ ದಕ್ಕೆ ಕೊಟ್ಟಿಗೆಯಲ್ಲಿ ಕಟ್ಟು' ಎಂಬ ನಾಣ್ಣುಡಿಯಂತೆ, ಸರಕಾರವು ಇದನ್ನು ವಿಮರ್ಶಿಸದೆ ಆತುರಪಡುವುದೇಕೆ?

'ಸಾರ್ವಜನಿಕ'

ರೀಡಿಂಗ್ ರೂಮ್ ಬೇಕು.

ಸೋಮವಾರಪೇಟೆಯು ದಿನೇ ದಿನೇ ಇತರ ಪಟ್ಟಣಗಳಂತೆ ವಿದ್ಯೆಯಲ್ಲೂ ವ್ಯಾಪಾರ ವಹಿವಾಟಿನಲ್ಲೂ, ಜನ ಸಂಖ್ಯೆಯಲ್ಲೂ ಅಭಿವೃದ್ಧಿ ಹೊಂದುತ್ತಿರುವುದು ಶುಭ ಚಿಹ್ನೆ, ಮತ್ತು ಸಂತೋಷದ ಸಂಗತಿಯಾಗಿದೆ. ಜನತೆಯು ನಾಗರೀಕತೆ ಹೊಂದಿದಂತೆಲ್ಲಾ ಜನತೆಯ ಬೇಕು ಬೇಡಿಕೆಗಳೂ ಹೆಚ್ಚುತ್ತವೆ. ಆವಶ್ಯಕ ಬೇಡಿಕೆಗಳನ್ನು ಜನತೆಗೆ ಒದಗಿಸಿ ಕೊಡುವುದು ಸರಕಾರದ ಮೊದಲನೆಯ ಕರ್ತವ್ಯ.

ದುರ್ದೈವ ವಶಾತ್ ಸೋಮವಾರಪೇಟೆಗೊಂದು ರೀಡಿಂಗ್ ರೂಮ್ ಇಲ್ಲ. ಹಿಂದುಸ್ಥಾನದ ಇತರ ಪಟ್ಟಣಗಳ ಕೆಲವು ಹಳ್ಳಿಗಳಲ್ಲೂ ಕೂಡ ಸಾರ್ವಜನಿಕರ ಉಪಯೋಗಕ್ಕೆ ರೀಡಿಂಗ್ ರೂಮ್ ತೆರೆದಿರುವಾಗ ವಿದ್ಯೆಯಲ್ಲಿ ಭಾರತದಲ್ಲೇ ದ್ವಿತೀಯ ಶ್ರೇಣಿಯಲ್ಲಿರುವ ನಮ್ಮ ಕೊಡಗು ದೇಶದಲ್ಲಿ ರೀಡಿಂಗ್ ರೂಮ್ಸ್ ಹೆಚ್ಚಿನ ಸಂಖ್ಯೆಯಲ್ಲಿ ಪಟ್ಟಣಗಳಲ್ಲೇ ಇಲ್ಲವೆಂದರೆ ತುಂಬಾ ವಿಷಾದದ ಸಂಗತಿ. ರೀಡಿಂಗ್ ರೂಮ್ ಒಂದನ್ನು ಸೋಮವಾರಪೇಟೆಯಲ್ಲಿ ತೆರೆಯುವುದರಿಂದ ಸಾರ್ವಜನಿಕರಿಗೆ ಎಷ್ಟು ಪ್ರಯೋಜನವಿದೆಯೆಂದು ವಿವರಿಸುವ ಆವಶ್ಯಕತೆ ಇಲ್ಲವೆನ್ನ [illegible] ಭಾವನೆ. ಯಾಕೆಂದರೆ ಇದರ ಪ್ರಯೋಜನ ವಿದ್ಯಾವಂತರಿಗೆಲ್ಲಾ ಅರಿದಿರುವ ವಿಶಯವಾಗಿದೆ. ಆದ್ದರಿಂದ ನಮ್ಮ ಘನ ಸರಕಾರವು ಜನಹಿತ ದೃಷ್ಟಿಯಿಂದ ಸೋಮವಾರಪೇಟೆಯಲ್ಲಿ ಆದಷ್ಟು ಕೂಡಲೇ ಒಂದು ರೀಡಿಂಗ್ ರೂಮ್ ತೆರೆದು ಜನತೆಯ ಕಾಂಕ್ಷೆಯನ್ನು ನೆರವೇರಿಸಿ ಕೊಡುವರಾಗಿ ನಂಬಿರುವ.

ಎಚ್. ಎಮ್. ಚಂಗಪ್ಪ

ಮಾರಾಟಕ್ಕಿದೆ.

ಮಡಿಕೇರಿ ಕಾನ್ವೆಂಟ್ ಹೈಸ್ಕೂಲು ಮತ್ತು ಹೊಸ ಕಾಲೇಜು ಕಟ್ಟಡದ ಸಮೀಪದಲ್ಲಿ ಎತ್ತರ ಸ್ಥಳದಲ್ಲಿ ಭೂಮಿ ಇದ್ದು ಅದರಲ್ಲಿ ಕಾಫಿ, [illegible] ಬಳೆ, ಏಲಕ್ಕಿ [illegible] ತೋಟ ಇವು ಮಾರಾಟಕ್ಕಿವೆ. ಇದರ ಜೊತೆಗೆ ಕಾಂಕ್ರೀಟ್ ಮನೆ, ಬಾವಿ, ಕೆರೆ ಎಲ್ಲಾ ಇವೆ. ಖಾಯಿಸ್‌ದಾರರು ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

X

C/o ಕೊಡಗು

2-1 ಮಡಿಕೇರಿ

ಬೇಕಾಗಿದ್ದಾರೆ

ನಮ್ಮ ಅಮೇರಿಕನ್ ಫೌಂಟನ್ ಪೆನ್ನುಗಳನ್ನೂ, ಸ್ವಿಸ್ ವಾಚುಗಳನ್ನೂ ಮಾರಾಟ ಮಾಡಲು ತಿಂಗಳಿಗೆ ರೂ. ೬೦೦ ರಿಂದ ೬೦೦ ರ ವರೆಗೆ ಸಂಬಳ ಮತ್ತು ಬತ್ತೆಯೂ ಕಮೀಷನಿನಲ್ಲಿ ಏಜಂಟರು ಬೇಕಾಗಿದ್ದಾರೆ. ಸ್ತ್ರೀಯರಿಗೂ ಶರತ್ತುಗಳಿಗೂ ಇಂಗ್ಲೀಷಿನಲ್ಲಿ ಬರೆಯಿರಿ.

LAWRENCE BROTHERS (K. M)
71, Nagdevi Cross Lane
4-4 Bomday 3

ಶ್ರೀಯುತ ಬಿ. ಡಿ. ಗಣಪತಿಯವರ

'ಪ್ರತಿಧ್ವನಿ'ಯ ಒಂದು ಪ್ರಶಂಸೆ

ಲೇ:— ಶ್ರೀ ವಿ. ಎಸ್. ರಾಮಕೃಷ್ಣ, ಬಿ. ಎಸ್‌ಸಿ (ಆನರ್ಸ್) ಬಿ ಟಿ.

ಶ್ರೀಯುತ ಬಿ. ಡಿ ಗಣಪತಿಯವರ 'ಪ್ರತಿಧ್ವನಿ' ಎಂಬ ಕವನಗಳ ಸಂಗ್ರಹವನ್ನು ಸಾದ್ಯಂತವಾಗಿ ಓದಿದೆನು. 'ವಿದ್ವಾಂಸರು ಇವುಗಳನ್ನು ಟೀಕಾದೃಷ್ಟಿಯಿಂದ ನೋಡಬಾರದು' ಎಂದು ಶ್ರೀಯುತರು ತಮ್ಮ ಮುನ್ನುಡಿಯಲ್ಲೇ ಬಿನ್ನೈಸಿಕೊಂಡಿರುವರು. ನಾನು ವಿದ್ವಾಂಸನಲ್ಲವದರಿಂದ ಟೀಕಾದೃಷ್ಟಿಯಿಂದ ಈ ಸುಂದರ ಕವನ ಸಂಗ್ರಹಗಳನ್ನು ವಿಮರ್ಶಿಸುವುದಿಲ್ಲ. ಆದರೆ ಇದ್ದುದನ್ನು ಇದ್ದಂತೆ ಬಣ್ಣಿಸಿ 'ಪ್ರತಿಧ್ವನಿ'ಯ ಮಾರ್ದನಿ ನಾಡಿನ ಮೂಲೆ ಮೂಲೆಗಳಿಗೂ ಹರಡಿ ಉತ್ಸಾಹಪೂರ್ಣರೂ ಸರಳ ಹೃದಯರೂ, ಭಾವನಾತ್ಮಕ ಜೀವಿಗಳೂ ಆದ ಕವಿಗಳ ಯಶಸ್ಸು ಕೊಡಗು ದೇಶದಷ್ಟೇ ಮಾತ್ರವಲ್ಲದೆ ಕನ್ನಡ ನಾಡಿನ ನಾನಾ ದೆಸೆಗಳಲ್ಲಿ ಹರಡಿ ಪ್ರತಿಧ್ವನಿಸಲೆಂದು ಹೃತ್ಪೂರ್ವಕವಾಗಿ ಹಾರೈಸಲೋಸುಗ ಈ ಪ್ರಶಂಸಾತ್ಮಕ ಲೇಖನೋದ್ಯಮದಲ್ಲಿ ತೊಡಗಿಕೊಂಡಿದ್ದೇನೆ.

ಕವಿತ ಶಕ್ತಿ ಮಾನವನಲ್ಲಿ ಅಪೂರ್ವವಾಗಿ ನೆಲೆಗೊಂಡಿರುವ ಅಸಾಧಾರಣ ಶಕ್ತಿ. ಸಹಸ್ರ ಮಾನವರ ಗುಂಪಿನಲ್ಲಿ ಒಬ್ಬ ಕವಿ ದೊರಕಲರಿಯನು. ಕವಿತಾಶಕ್ತಿ ಜನ್ಮಸಿದ್ಧವಾದ ಅಪೂರ್ವಪೂರ್ಣ ಸಾಮರ್ಥ್ಯವು. ಇಂತಹ ಸಾಮರ್ಥ್ಯವು ಪ್ರಜೋದನೆಗೊಂಡಾಗ ಕಲ್ಪನಾಶಕ್ತಿಯು ನಾನಾರೂಪ ರೀತಿಗಳಿಂದ ಹೊರಹೊಮ್ಮಿ ರಸಿಕ ಜನದ ಹೃನ್ಮನಗಳನ್ನು ತಣಿಸುವುದು. ಕವಿತಾ ನಿರ್ಮಾಣಕ್ಕೆ ಸೌಂದರ್ಯ ಪೂರ್ಣ ಹೃದಯ ಬೇಕು. ಪ್ರಕೃತಿಯ ಸೀಮಾತೀತ ಸೌಂದರ್ಯವನ್ನು ಅನುಭವಿಸಿ ಕ್ರಿಯಾತ್ಮಕವಾದ ಕವನಕಟ್ಟುವ ಶಕ್ತಿ ಬೇಕು. ಕವಿಯ ಹೃದಯವು ಲಾವಣ್ಯಪೂರ್ಣವಾಗಿದ್ದಂತೆ ವೈಶಾಲ್ಯತೆಯನ್ನೂ ಹೊಂದಿ. ಆ ಹೃದಯದಲ್ಲಿ ವಿಶ್ವದ ನಾನಾ ಭಾವನೆಗಳ, ವಿಶ್ವದ ನಾನಾ ರಹಸ್ಯಗಳು, ಮಾನವಕೋಟಿಯ ಮಾನಸಿಕ ಭಾವವೈಶಿಷ್ಟ್ಯಗಳು ಅಡಕವಾಗಿದ್ದು ಕವಿಹೃದಯವು ಸಾಗರೋಪಮವಾಗಿರುವುದು, ವಿಶ್ವ ಸಾಹಿತ್ಯದಲ್ಲಿ ನೂತನ ಕ್ರಾಂತಿಗಳನ್ನು ಉಂಟುಮಾಡಿದ ಭಾವನಾತ್ಮಕ ಸಾಹಿತ್ಯಗಳ ನಿರ್ಮಾಪಕರೇ ವಿಶ್ವಸಾಹಿತಿಗಳಾಗುವರು. ಆದ್ದರಿಂದ ಕವಿತೆಯು ಮಾನವ ಸಂಸ್ಕೃತಿಯ ಹಿರಿಯ ಸೋಪಾನವೆಂದು ಧಾರಾಳವಾಗಿ ಹೇಳಬಹುದು.

'ಪ್ರತಿಧ್ವನಿ'ಯ ಲೇಖಕರಾದ ಶ್ರೀಯುತ ಬಿ ಡಿ ಗಣಪತಿಯವರು ವಿಶಾಲಭಾವನೆಯುಳ್ಳವರು. ರಸಪೂರ್ಣವೂ, ಅರ್ಥಗರ್ಭಿತವೂ, ಉದ್ದೇಶಯುತವೂ ಆದ ಜೀವನವನ್ನು ನಡೆಸಲು ಮನೋನಿರ್ಧಾರವನ್ನು ಮಾಡಿಕೊಂಡಿರುವವರು. ಇಂಥವರ ಹೃದಯ ಸಾಗರದಲ್ಲಿ ಅಡಗಿದ್ದ ಅನರ್ಘ್ಯ ರತ್ನಗಳು ಸುಂದರ ಪುಸ್ತಕ ರೂಪದಲ್ಲಿ ಪ್ರಕಟವಾದದ್ದು ಕೊಡಗಿನವರ ಹೆಮ್ಮೆ; ಕನ್ನಡಿಗರ ಹಿರಿಮೆ. ನಮ್ಮ ನುಡಿಯಲ್ಲಿ ಅವರೇ ಹೇಳಿರುವಂತೆ 'ಛಂದಸ್ಸಿಗೆ ಬದ್ಧವಾದ ಛಂದೋಲಕ್ಷಣಗಳಿಲ್ಲದಿದ್ದರೂ' ಹೃದಯದ ಸತ್ಯ ಪ್ರತಿಬಿಂಬವಾದ್ದರಿಂದ 'ಪ್ರತಿಧ್ವನಿ'ಯು ಸರ್ವಾಂಗ ಸುಂದರವಾಗಿದೆ ಎನ್ನಲಡ್ಡಿಯಿಲ್ಲ. ಭಾವನಾಪೂರ್ಣವಾಗಿ ಮನಸ್ಸಿನ ಅಂತರಾಳದಿಂದ ಹೊರಬಂದ ಶಬ್ದ ಸಮುದಾಯಗಳೇ ಕವಿತೆ. ಈ ದೃಷ್ಟಿಯಿಂದ ಈ ಕವನ ಸಂಗ್ರಹಗಳನ್ನು ಅವಲೋಕಿಸುವಾಗ ಸ್ವೈಜ ಸುಂದರ ಶೈಲಿಯಿಂದೊಡಗೂಡಿ ಶಬ್ದಗಳ ಮುತ್ತಿನ ಮಣಿಮಾಲೆಯಾದ 'ಪ್ರತಿಧ್ವನಿ' ಕನ್ನಡಿಗರ ಹೃದಯ ತಂತಿಯನ್ನು ಮಿಡಿದು ರಸೋನ್ಮಾದವನ್ನು ಎಬ್ಬಿಸಬಲ್ಲುದು ಎನ್ನುವುದರಲ್ಲಿ ಅತಿಶಯೋಕ್ತಿ ಇಲ್ಲ. ಆದರೆ ನಮ್ಮ ನಾಡಿನ ಜನತೆಗೆ ವಿಶೇಷವಾದ ಒಂದು ಅಭ್ಯಾಸವಿರುವುದು, ಇದು ನಾಡಿನ ಪ್ರಗತಿಗೆ ಸದಾ ನಿರ್ಧಂಧಲು ಭಾರಕವಾಗಿರುವುದು. ಆ ಅಭ್ಯಾಸವೇನೆಂದರೆ ನಮ್ಮ ಕಲಾವಿದರನ್ನು, ಕವಿಗಳ ಇತರರನ್ನು ಹೊಗಳುವುದು. ನಮ್ಮಲ್ಲೇ ಕವಿಗಳೊಬ್ಬರು ಹುಟ್ಟಿ ರಮ್ಯ ಕೃತಿಗಳನ್ನು ಕಟ್ಟಿದರೂ ನಮ್ಮವರಿಗೆ ಅದರ ಸೊಬಗು ತಿಳಿಯದು. ಕಲಾವಿದರನ್ನು ಪ್ರೋತ್ಸಾಹಿಸಿ ಕಲೆಯ ಸರ್ವತೋಮುಖ ಪ್ರಗತಿಗೆ ಸಹಾಯ ಮಾಡುವುದನ್ನು ಬಿಟ್ಟು ಕಲಾವಿದನನ್ನು ಟೀಕಿಸಿ, ಖಂಡಿಸಿ ಈ ಕವನಗಳಲ್ಲಿ ಹುರುಳೇನೂ ಇಲ್ಲವೆಂದು ಸಾಧಿಸುವ ಜನರು ನಮ್ಮಲ್ಲಿ ಹಲವರಿರುವರು. ನಮ್ಮ ದೇಶದ ಕಲಾ ಕೌಶಲ್ಯಗಳಿಗೆ ಯೋಗ್ಯ ಮನ್ನಣೆಯಿಲ್ಲವುದರಿಂದಲೇ ಕವಿಗಳ ಮನೋಸಾಮ್ರಾಜ್ಯದ ಅಲೋತ್ತರಗಳು 'ಪ್ರತಿಧ್ವನಿ'ಗೊಳ್ಳಲು ಅನುವು ಕಡಮೆಯಾಗಿದೆಯೆಂದು ನಿಸ್ಸಂದೇಹವಾಗಿ ಹೇಳಬಹುದು.

ನಿಷ್ಪಕ್ಷಪಾತ ದೃಷ್ಟಿಯಿಂದ ಅವಲೋಕಿಸುವುದಾದರೆ 'ಪ್ರತಿಧ್ವನಿ'ಯು ಹೃದಯಂಗಮ ಗೀತಗಳ ಒಂದು ಮಹಾ ಸಮ್ಮೇಳನ. ಕೆಲವೇ ನಿದರ್ಶನಗಳನ್ನು ಪರಿಶೀಲಿಸಿದರೆ ಈ ಮಾತಿನ ಸತ್ಯತೆಯು ಸ್ಪಷ್ಟವಾಗದಿರದು. ಪ್ರಥಮ ಕವನವಾದ 'ಆಸೆ'ಯ ಕೊನೆಯ ಪದ್ಯದಲ್ಲಿ ಕವಿಗಳು—

> 'ಒಸ್ವದ ನಾಟಕ ಶಾಲೆಯ ಪಾತ್ರದ
> ಪೂರ್ಣದ ಅರಿವಿರಬೇಕು
> ಒಳಗೂ ಹೊರಗೂ ವಿಶ್ವವನೋಡುವ
> ಚೇತನ ಒಳಗಿರಬೇಕು'

ಎಂದು ಹಾಡುವಾಗ ಈ ಶಬ್ದ ಗುಚ್ಛಗಳ ಅರ್ಥವನ್ನು ಆಸ್ವಾದಿಸಿದ ಎಂಥ ಹೃದಯವಾದರೂ ಅರಳಿ ವಿಶಾಲವಾಗದಿರದು. ವಿಶ್ವದ ಅನಂತ ರಂಗಸ್ಥಳದಲ್ಲಿ ತನ್ನನ್ನು ತಾನು ಅರಿತುಕೊಂಡು ಸೀಮಾತೀತ ವಿಶ್ವವನ್ನು ಅಂತರ್ಬಾಹ್ಯಗಳಲ್ಲಿ ನೋಡುವ ಚೈತನ್ಯವು ಮಾನವನಲ್ಲಿ ಒಂದರೆ ಮಾನವನು ದೇವನಾಗುವುದರಲ್ಲಿ ಸಂಶಯವಿಲ್ಲ. ಅಂತೆಯೇ—

> 'ಅಳುತೀರ? ಸತ್ಯನಲಿ?
> ಆ ತಮಕ ತೆರೆದಿರಲಿ
> ನಗ್ನತೆಯ ತೋರುತಿಹ ಭೂವಲಯದಂತೆ'

ಎಂಬ ಪದ್ಯದಲ್ಲಿ ಸತ್ಯವಂತನಿಗೆ ಚ್ಯುತಿಯಿಲ್ಲ ಎಂಬ ಸತ್ಯೋಪಾಸನೆಯ ಮಂತ್ರವು ಹೊರಹೊಮ್ಮುವುದಲ್ಲದೆ ಓದುಗನ ಹೃದಯ ಮಂದಿರವನ್ನು ಪರಿಶುದ್ಧಗೊಳಿಸುವ ಶಕ್ತಿಯಿರುವುದು.

> 'ಹೃದಯದಲಿ ಪ್ರೇಮವಿರೆ
> ಜಗೆಯಲ್ಲಿ ಸ್ನೇಹವಿರೆ
> ತೋರುವುದು ಜಗವೆಲ್ಲ ದೇವನಾಗಿ!'

ಎಂಬ ಪಸ್ಕದ ಸ್ವೈಜ ಧರ್ಮವನ್ನು ಪಾಡಿಕೊಂಡು ಸಮಸ್ತ ಜೀವರಾಶಿಗಳಲ್ಲೂ ಪ್ರೇಮವನ್ನು ವ್ಯಕ್ತಪಡಿಸಿ ತಾನು ಮಾಡುವ ಕೆಲಸವನ್ನು ನಿಷ್ಕಾಮ ದೃಷ್ಟಿಯಿಂದ ಮಾಡಿದರೆ ಈ ಚರಾಚರಾತ್ಮಕ ಜಗತ್ತೇ ಭಗವಂತನ ಆವಿರ್ಭಾವವಾಗಿ ತೋರುವುದರಲ್ಲಿ ಆತಿಶಯವೇನಿದೆ?

ಮಾನವರಲ್ಲಿ ಸಮಾನತೆಯಿರಬೇಕೆಂದು ಸಾಧಿಸುವಾಗ ಶ್ರೀಯುತರು—

> 'ಕಲ್ಲಿಗು ಕನಕಕು ಒಂದೇ ಬೆಲೆಯು
> ದೇವನ ಜಗದೊಳಗೆ!
> ಭೇದದ ಬೆಲೆಯದು ತೋರುವುದಾದರೆ
> ಮಾನವ ತಿಂದೊಳಗೆ!'

ಎಂದು ಹಾಡಿರುವಾಗ ಬಹುಮಟ್ಟಿನ ಉಚ್ಚನೀಚ ಎಂಬ ಕಲ್ಪನಾ ವಿಶೇಷಗಳು ಕೇವಲ ಮಾನವ ನಿರ್ಮಿತ ಎಂಬ ಪನ್ನ ಭಾವನೆ ಓದುಗರಲ್ಲಿ ಮೂಡುವುದರಲ್ಲಿ ಸಂದೇಹವಿಲ್ಲ.

'ಅವನನರಿಯಲಿಲ್ಲ' ಎಂಬ ಪದ್ಯದಲ್ಲಿ—

> ವಿದ್ಯೆಯ ಕಲಿತರು
> ಗೌರವ ಪಡೆದರು
> ಶಾಂತಿಯು ಸಿಗಲಿಲ್ಲ–
> ಕಾರಣ ಅವನನರಿಯಲಿಲ್ಲ.

ಎಂದು ಕವಿಗಳು ಹೇಳಿರುವರು. ಶಾಶ್ವತವಾದ ಶಾಂತಿಯು ಕೇವಲ ಆತ್ಮಾನ್ವೇಷಣೆಯಿಂದ, ಸಚ್ಚಿದಾನಂದ ಸ್ವರೂಪನಾದ ಭಗವಂತನನ್ನು ತಿಳಿಯುವುದರಿಂದಲೇ ಸಾಧ್ಯ, ಎಂದು ವ್ಯಕ್ತಪಡಿಸಿರುವಾಗ ಕವಿಗಳು ಭಾವನಾಲೋಕದಿಂದ ಧಾವಿಸಿ ಆಧ್ಯಾತ್ಮಿಕ ಲೋಕಕ್ಕೆ ಕಾಲಿಟ್ಟಿರುವರೆನ್ನುವುದರಲ್ಲಿ ಸಂದೇಹವಿಲ್ಲ. ಕವಿಯ ಸೌಂದರ್ಯಾರಾಧನೆಯು ಮುಂದಿನ ಮೆಟ್ಟಿಲೇ ಸವಿಕಲ್ಪ ಸಮಾಧಿ!

ಇಂತಹ ರಸಪೂರ್ಣ ಭಾವನೆಗಳಿಂದ ಹೃದಯದಲ್ಲಿ ಆನಂದದ ಅನಂತ ತೆರೆಗಳನ್ನು ಉತ್ಪಾದಿಸಬಲ್ಲ ಪುಸ್ತಕವೇ "ಪ್ರತಿಧ್ವನಿ". ಪ್ರತಿಧ್ವನಿಯಲ್ಲಿ ಅಡಕವಾಗಿರುವ ೫೦ ಕವನಗಳಲ್ಲಿ ವೈಶಿಷ್ಟ್ಯಪೂರ್ಣವೆಂದು ತೋರಿದ ಕೆಲವನ್ನು ಮಾತ್ರ ಇಲ್ಲಿ ಉಲ್ಲೇಖಿಸಿರುವೆನು. "ಪ್ರತಿಧ್ವನಿ"ಯು ಕನ್ನಡಿಗರ ಕೈ ಸೇರಿದಾಗ ಹೆಚ್ಚಿನ ಪ್ರಶಂಸೆ ರಸಾಸ್ವಾದನ ನಿಪುಣರಾದ ನಾಡಿನ ಸಾಂಸ್ಕೃತಿಕ ರಸಿಕವೃಂದಕ್ಕೆ ಸೇರಿದ್ದು. ಹಾಗೆಯೇ ಪ್ರತಿಧ್ವನಿಯು ಸರ್ವಾಂಗ ಸುಂದರವಾದ ಮನೋಹರ ಪುಸ್ತಕವಾಗಿ ಭಾವನಾಜೀವಿಯ ವಿಶಾಲ ವಕ್ಷಸ್ಥಳದಲ್ಲಿ ಸ್ವಯಂಪ್ರಕಾಶದಿಂದ ರಂಜಿಸುವ ರತ್ನವಾಗಿದೆ ಎನ್ನಲು ಅಡ್ಡಿಯಿಲ್ಲ. ಈ ಪುಸ್ತಕವನ್ನು ಕೊಂಡು ಸೌಂದರ್ಯೋಪಭವನ್ನು ಮಾಡಿ ಆನಂದದ ಮಧುರ ರಸಪಾನಗೈದು ನಾಡಿನ ಕವಿಗಳನ್ನು ಪ್ರೋತ್ಸಾಹಿಸುವುದು ನಾಡಿನ ರಸಿಕ ಜನರ ಮಹತ್ತರ ಕರ್ತವ್ಯ.

ರೂ. ೫೦,೦೦೦ ಬೆಲೆಯ ಆಭರಣಗಳು ಕೊಡಲ್ಪಡುತ್ತಿವೆ

ಡೆಲ್ಲಿಯಲ್ಲಿ ಚಿನ್ನವು ತೊಲೆಗೆ ರೂ. ೩

ಭಾರತದ ಪ್ರಾಮುಖ್ಯ ಪತ್ರಿಕೆ ಮತ್ತು ಮಾಸಿಕಗಳಲ್ಲದೆ ನಮ್ಮ ನೂರಾರು ಗ್ರಾಹಕರು ಇವನ್ನು ಮುಕ್ತ ಕಂಠದಿಂದ ಹೊಗಳಿದ್ದಾರೆ. ಸಂಯುಕ್ತ ಪ್ರಾಂತದ ಮಹಾಲಿಯ ಸೇಠ್ ನಂದ ಕಿಶೋರ್ ಬಿ. ಎ ಎಲ್. ಎಲ್. ಬಿ. ಯವರು ಹೀಗೆ ಬರೆಯುತ್ತಾರೆ "ಮಿನರ್ವ ಹೊಸ ಚಿನ್ನವನ್ನು ಆಭರಣಗಳೊಂದಿಗೆ ಕಳುಹಿಸಿರಿ. ಈ ಚಿನ್ನವು ಒರೆ ಹಚ್ಚಿದಾಗ ಅಸ್ಸಲ ಚಿನ್ನದಂತೆಯೇ ತೋರುವುದಲ್ಲದೆ ಇವನ್ನು ತಂತಿಯಾಗಿ ಎಳೆಯಬಹುದು. ಕಾಗದಂತೆ ತೆಳುವಾಗಿ ಹೊಡೆಯಬಹುದು. ಇದರ ವರ್ಣವು ಚಿನ್ನದಂತೆಯೇ ಉಳಿಯುವುದು. ಆದರಿಂದ ಯಾವ ಮಾದರಿಯ ನಗಗಳನ್ನೂ ಮಾಡಿಸಬಹುದು. ಈಗ ಜಗತ್ತಿನ ಹೊಸ ಶೋಧೆ ಬೆಲೆ ಒಂದು ತೊಲಕ್ಕೆ ರೂ. ೩–೦–೦ ಮಾತ್ರ, ತೊಲಗಳಿಗೆ ರೂ ೮/– ಆರು ತೊಲಗಳಿಗೆ ರೂ. ೧೫/– ಮತ್ತು ಹನ್ನೆರಡು ತೊಲಗಳಿಗೆ ರೂ. ೨೮/–

ಈ ಚಿನ್ನವನ್ನು ಹಿಂದೂದೇಶದ ಮೂಲೆ ಮೂಲೆಗಳಲ್ಲಿ ಪ್ರಚಾರಿಸುವ ದೃಷ್ಟಿಯಿಂದ ಕಂಪೆನಿಯು ಈ ಕೆಳಗಿನ ಆಭರಣಗಳ ಬಹುಮಾನವನ್ನು ಗ್ರಾಹಕರಿಗೆ ಕೊಡಲು ನಿರ್ಧರಿಸಿದೆ. ಮೂರು ತೊಲಗಳನ್ನು ಕೊಳ್ಳುವವರಿಗೆ ನಾಲ್ಕು ಡೈಮಂಡ್ ಕಟ್ ಬಳೆಗಳೂ, ಎರಡು ಉಂಗುರಗಳು. ಆರು ತೊಲೆ ತೆಗೆದುಕೊಳ್ಳುವವರಿಗೆ ಒಂದು ನೆಕ್ಲೇಸ್, ಎರಡು ಉಂಗುರಗಳು, ಒಂದು ಜೊತೆ ವಾಲೆ, ನಾಲ್ಕು ಬಳೆಗಳು ಮತ್ತು ಹಣೆಗೆ ಒಂದು ಟಿಕ್ಕಾವು ದೊರೆಯುವುವು. ಹಾಗೆಯೇ ೧೨ ತೊಲ ಪಡೆದುಕೊಳ್ಳುವವರಿಗೆ ಒಂದು ರಾಣಿ ಹಾರ್ ನೆಕ್ಲೇಸ್, ಎಂಟು ಬಳೆ, ಎರಡು ಉಂಗುರಗಳು, ಎರಡು ಜೊತೆವಾಲೆ, ಒಂದು ಟಿಕ್ಕಾ. ಈ ಆಭರಣಗಳೆಲ್ಲ ಇಮಿಟೇಶನ್ ರತ್ನಗಳಿಂದ ಕೂಡಿವೆ. ತೃಪ್ತಿಯಾಗದಿದ್ದರೆ ಬೆಲೆಯನ್ನು ವಾಪಾಸು ಮಾಡುವ ಭರವಸೆ ಕೊಡಲಾಗಿದೆ. ಏಜಂಟರುಗಳಾಗಿ ತಿಂಗಳಿಗೆ ರೂ ೩೦೦ ಯೂ ೫೦೦ ಸಂಪಾದಿಸಲು ಒಳ್ಳೆದಾರಿ. ಈ ಸಂದರ್ಭವನ್ನು ಕಳೆಕೊಳ್ಳದಿರಿ. ದಯವಿಟ್ಟು ಇಂದೇ ಬರೆಯಿರಿ. ಅಂಚೆ ಹಾಸಲು ಮತ್ತು ಪೇಕಿಂಗು ಮಾಫತ್ತು.

Minerva New Gold ornaments House.
Bara Hindu (K. M) Delhi 6.

4-3

ಕೊಡಗು ಪ್ರಾಂತೀಕ ಸಹಕಾರಿ, ಮಾರ್ಕೆಟಿಂಗ್, ಫೆಡರೇಷನ್ ಲಿಮಿಟೆಡ್., ವೀರಾಜಪೇಟೆ.

ನಮ್ಮಲ್ಲಿ ಕೋವಿಗಳು, ತೋಟೆಗಳು ಮತ್ತು ಎಲ್ಲಾ ತರಹದ ವ್ಯವಸಾಯದ ಹತ್ಯಾರುಗಳು ದೊರೆಯುತ್ತವೆ.

1. 32 ಪಿಸ್ತೂಲುಗಳು (Pistols) ಕ್ರಯ ರೂ. 162 ರಿಂದ 245ರ ವರೆಗೆ.
2. 12ನೇ ನಂಬರಿನ ಒಂಟಿ ಹೊಳವಿನ ಕೋವಿ ಕ್ರಯ ರೂ. 320-0-0
3. 12ನೇ ನಂಬರಿನ ಜೋಡು ಹೊಳವಿನ ಕೋವಿ (Webley & Scott)
4. 12ನೇ ನಂಬರಿನ ಜೋಡು ಹೊಳವಿನ ಕೋವಿ (Spanish make)
5. .32 ಪಿಸ್ತೂಲು ಮತ್ತು ರಿವಾಲ್ವರುಗಳ ತೋಟೆಗಳೂ ಸಹ ದೊರೆಯುತ್ತವೆ.
6. ಕಾಫಿ ಮತ್ತು ಕಿತ್ತಳೆ ಗಿಡಗಳಿಗೆ ಸ್ಪ್ರೇ ಮಾಡುವ ಪಂಪುಗಳು (Spraying Pumps)
7. ¾" ⅝" ½" ⅜" ¼" ಕಬ್ಬಿಣದ ಸಲಾಕೆಗಳು.

ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

(ಅವಶ್ಯವಿರುವ ಕೋವಿಗಳಿಗೂ, ತೋಟೆಗಳಿಗೂ ಜಿಲ್ಲಾ ಮೇಜಿಸ್ಟ್ರೇಟರಿಂದ ವಿಶೇಷ ಪರ್ಮಿಟು "Special permit" ಪಡೆದವರಿಗೆ ಮಾತ್ರ ದೊರೆಯುವದು)

ಎಂ. ಎಸ್. ಸೋಮಯ್ಯ,
52-28 ಗೌರವ ಕಾರ್ಯದರ್ಶಿ.

ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರೆಜಿಸ್ಟರಾಗಿದೆ 1921ರಲ್ಲಿ ಸ್ಥಾಪಿತವಾಗಿದೆ.

ಅಧಿಕೃತ ಷೇರು ಭಂಡವಾಳ	ರೂ.	10,00,000.
ವಸೂಲಾದ ಷೇರು ಮೊಬಲಗು	ರೂ.	1,79,000.
ಕ್ಷೇಮನಿಧಿ	ರೂ.	55,000.
ಇತರ ನಿಧಿಗಳು	ರೂ.	28,000.

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನೂ ನಡೆಸಿಕೊಳ್ಳಲಾಗುವುದು. ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ, ಬೆಳ್ಳಿ ನಗಗಳ ಒಡವೆ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ಕು ಡ್ರಾಫ್ಟುಗಳ ವಸೂಲಿಯು ಮಾಡಲ್ಪಡುತ್ತದೆ. ಟ್ರಸ್ಟ್ ಮತ್ತು ಮಾರ್ಕೆಟ್ ಇನ್ಸೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ತೆಗೆದುಕೊಳ್ಳಲಾಗುವುದು. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಗೌ. ಕಾರ್ಯದರ್ಶಿ.
ಕೆ. ಸಿ. ಅಪ್ಪಯ್ಯ, M. L. C. ಪ್ರೆಸಿಡೆಂಟ್ ಮತ್ತು ಖಜಾಂಚಿ.

ಮತ್ತೊಂದು ಉಜ್ವಲ ವರ್ಷ.

1948ನೇ ವರ್ಷದ ವಾರ್ಷಿಕ ವರದಿಯ ಪ್ರಮುಖಾಂಕಗಳು.

ಹೊಸ ಉದ್ಯಮ ರೂ.	6,13,60,000	ಮೀರಿದೆ.
ಚಾಲ್ತಿಯಲ್ಲಿರುವ ಒಟ್ಟು ಉದ್ಯಮ ರೂ.	27,73,00,000	"
ಒಟ್ಟು ನಿಧಿ. ರೂ.	8,30,00,000	"
ಪಾಲಿಸಿದಾರರಿಗೆ ಪಾವತಿಯಾದ ಕ್ಲೈಮುಗಳು	10,96,00,000	"

1,28,000 ಕ್ಕೆ ಮೀರಿದ ತೃಪ್ತಿ ಪಡೆದ ಪಾಲಿಸಿದಾರರು.

ಶಕ್ತಿ. ಸೇವೆ ಭದ್ರತೆ.

ಎಂಪೈರ್ ಆಫ್ ಇಂಡಿಯಾ

ಲೈಫ್ ಎಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಸ್ಥಾಪನೆ,—1897

ರೋಷನ್‌ಲಾಲ್, ಜನರಲ್ ಮೇನೇಜರ್.

ಪಿ. ಡಿ. ಗೋರವಾರ-ಬ್ರಾಂಚ್ ಮೇನೇಜರ್.

ಪ್ರಧಾನ ಕಛೇರಿ: ಎಂಪೈರ್ ಹೌಸ್, ಹಾರ್ನ್‌ಬಿ. ರೋಡ್, ಫೋರ್ಟ್, ಬೊಂಬಾಯಿ.

ಬ್ರಾಂಚ್ ಕಛೇರಿ. ಡಿಸ್ಟ್ರಿಕ್ಟ್ ಬೋರ್ಡ್ ಬಿಲ್ಡಿಂಗ್, ಕೆಂಪೇಗೌಡರಸ್ತೆ, ಬೆಂಗಳೂರು.

Edited, Printed and Published by P. I. Bellimppa at 'Kodagu' Press, Mercara, for 'Kodagu' Ltd.

ಖಾನೇಸುಮಾರಿ-೧೯೫೧.

ಜನಾಂಗದ ರಾಷ್ಟ್ರೀಯ ರಿಜಿಸ್ಟರು.

ಹೊಸ ಭಾರತ ಸರಕಾರವು ದೇಶೀಯ ಸರಕಾರಗಳ ಒಪ್ಪಿಗೆಯ ಮೇರೆಗೆ, ೧೯೫೧ನೇ ಖಾನೇಸುಮಾರಿಯ ಅಂಗವಾಗಿ 'ಜನಾಂಗದ ರಾಷ್ಟ್ರೀಯ ರಿಜಿಸ್ಟರು' ಎಂಬ ಒಂದು ದಾಖಲೆಯನ್ನು ಬರೆಯುವಂತೆ ನಿರ್ಣಯಿಸಿರುತ್ತದೆ. ರಿಜಿಸ್ಟರಿನಲ್ಲಿ ಬರೆಯುವ ವಿಷಯಗಳು ಈಗಾಗಲೇ ದಾಖಲಾಗಿರುವ ಖಾನೇಸುಮಾರಿಯ ನಕಲು. ಬರೆಯತಕ್ಕವರು ಜನಗಣತಿಯ ಕಾರ್ಯದಲ್ಲಿ ನೇಮಕವಾಗಿರುವ ಎನ್ಯುಮರೇಟರುಗಳು, ಮೇಲ್ವಿಚಾರಣೆಗಾಗಿ ಅದೇ ಸೂಪರವೈಸರುಗಳು. ಜನಗಣತಿ ದಾಖಲು ಮಾಡಲ್ಪಟ್ಟ ಚಿಕ್ಕ ಪುಸ್ತಕಗಳು ರಿಜಿಸ್ಟರು ಬರೆದು ಪೂರೈಸುವ ತನಕ ಎನ್ಯುಮರೇಟರರ ಸ್ವಾಧೀನದಲ್ಲಿರತಕ್ಕದ್ದು. ಸೂಪರವೈಸರುಗಳು ತಮ್ಮ ಎನ್ಯುಮರೇಟರರ ಗೋಷ್ಠಿಯನ್ನು ಪುನಃ ಜತೆಗೂಡಿಸಿ ಈ ಕಾರ್ಯವನ್ನು ನೆರವೇರಿಸಬೇಕಾಗಿದೆ. ಬರೆಯಲು ಕಾಗದ ರಟ್ಟು ವಗೈರೆ ಇಂಡಿಯಾ ಸರಕಾರದವರಿಂದ ಸರಬರಾಯಿ ಮಾಡಲ್ಪಟ್ಟು, ಆಯಾ ಚಾರ್ಜು ಸುಪರಿಂಟೆಂಡೆಂಟರ ಮೂಲಕ ಸೂಪರವೈಸರರಿಗೆ ಹಂಚಲ್ಪಡುವುದು. ಆಯಾ ಸೂಪರವೈಸರರು ತಮ್ಮ ಎನ್ಯುಮರೇಟರರಿಗೆ ಅದನ್ನು ಅದಷ್ಟು ತ್ವರಿತವಾಗಿ ತಲಪಿಸಬೇಕಾಗಿದೆ. ಕಾಗದ ಸಿಕ್ಕಿದ ಏಳು ದಿವಸಗಳ ಒಳಗಾಗಿ ರಿಜಿಸ್ಟರು ಬರೆಯುವ ಕೆಲಸ ಪೂರೈಸತಕ್ಕದ್ದು. ಈ ಎಲ್ಲಾ ನಿರ್ಣಯಗಳು ಚೀಫ್ ಕಮಿಷನರ್ ಸಾಹೇಬರವರ ಪ್ರಕಟಣೆಯಲ್ಲಿಯೂ ಮತ್ತು ಕೊಡಗು ಮತ್ತು ಮದ್ರಾಸು ಸರಕಾರಗಳ ಖಾನೇಸುಮಾರಿ ಸುಪರಿಂಟೆಂಡೆಂಟರ ಆಜ್ಞೆಗಳಲ್ಲಿಯೂ ವಿವರವಾಗಿ ತಿಳಿಸಲಾಗಿದೆ.

ಸ್ವತಂತ್ರಭಾರತದ ಈ ಮೊದಲನೆಯ ಖಾನೇಸುಮಾರಿಯ ಕಾರ್ಯದಲ್ಲಿ ಇದು ಒಂದು ಹೊಸ ಕ್ರಮ. ಇದು ತುಂಬಾ ವಿಚಕ್ಷಣೆಯ ಯೋಜನೆ. ದೇಶದ ಪ್ರತಿಯೊಬ್ಬ ಪ್ರಜೆಯ ಹೆಸರೂ, ಶಿಶುವಾಗಲೀ ಮುದುಕನಾಗಲೀ ಯಾ ಭಿಕ್ಷುಕನಾಗಲೀ, ಈ ರಿಜಿಸ್ಟರಿನಲ್ಲಿ ಚಿರದಾಖಲೆಯಾಗಿ ಉಳಿಯುವುದು. ಆಗಿಂದಾಗ್ಗೆ ಜನನ ಮರಣ ಪಟ್ಟಿಯಿಂದಲೂ, ಪ್ರಾಯ ಪ್ರಬುದ್ಧತೆಗೆ ಬಂದ ಬಳುವಣಿಯಿಂದಲೂ ಈ ರಿಜಿಸ್ಟರಿನ ದಾಖಲೆಯು ತಿದ್ದುಪಡಿ ಮಾಡಲ್ಪಟ್ಟು ನಿರಂತರವಾಗಿ ಸಂರಕ್ಷಿಸಲ್ಪಡತಕ್ಕ ರಿಜಿಸ್ಟರಾಗಿದೆ. ಎನ್ಯುಮರೇಟರಗಳು ಮತ್ತು ಸೂಪರವೈಸರುಗಳು ಒಟ್ಟು ಸೇರಿ ಹಿಂದೆಯೂ ಮಾಡಿದ ದೇಶಸೇವೆಯ ದೊಡ್ಡ ಕೆಲಸವನ್ನು ನೆರವೇರಿಸುವ ಹೊಣೆಗಾರಿಕೆ ಈ ಕೆಲಸದಲ್ಲಿದೆ. ತಾವು ಬರೆಯುವ ರಿಜಿಸ್ಟರು ದೇಶದ ಉಪಯೋಗಕ್ಕಾಗಿ ನಿಲ್ಲುವುದು. ಈಗ ತಾನೆ ದಾಖಲು ಮಾಡಿರುವ ಪುಸ್ತಕಗಳು ಪ್ರಸ್ತಾರದ ಬಗ್ಗೆ ಹೊರಟುಹೋಗುವುದು. ಖಾನೇಸುಮಾರಿಯ ಕೆಲಸವು ಅತ್ಯಂತವೂ ಗೌರವಾರ್ಥವಾಗಿ ಸಲ್ಲಿಸುವ ದೇಶಸೇವೆಯಾಗಿರುವುದರಿಂದ ಸರಕಾರದವರು ಮಾನ್ಯರಾದ ಎನ್ಯುಮರೇಟರ್ ಮತ್ತು ಸೂಪರ್ವೈಸರರುಗಳಿಗೆ ಅವರು ಸಲ್ಲಿಸಿದ ಸೇವೆಗೆ ಸರಿಯಾದ ವೇತನವನ್ನು ಕೊಡಲು ಶಕ್ತರಲ್ಲ. ಆದರೂ ಕೊನೆಯದಾದ ಈ ಕೆಲಸಕ್ಕೆ ಅಲ್ಪ ಸ್ವಲ್ಪ ವೇತನವನ್ನು ಕೊಡುವ ಏರ್ಪಾಡು ಮಾಡಿದೆ. ಇದನ್ನು ಉಚಿತಾರ್ಥವಾಗಿ ಸರಕಾರದವರು ಕೊಡುವ ಉಡುಗರೆಯೆಂದು ಗ್ರಹಿಸಬೇಕು. ಸರಕಾರಿ ನೌಕರರೂ ಕೂಡ ಈ ವೇತನವನ್ನು ಸ್ವೀಕರಿಸುವಂತೆ ಚೀಫ್ ಕಮಿಷನರ್ ಸಾಹೇಬರವರ ಅನುಮತಿ ಕೊಡಲಾಗಿದೆ. ರಿಜಿಸ್ಟರು ಬರೆಯುವ ಬಗ್ಗೆ ಪ್ರತಿಯೊಬ್ಬ ಎನ್ಯುಮರೇಟರರಿಗೂ ಮೂರು ರೂಪಾಯಿ ಕನಿಷ್ಠವಾಗದಂತೆ ಫೀಜು ನಿರ್ಣಯಿಸಿದೆ. ೩೦೦ ಹೆಸರುಗಳಿಗಿಂತ ಹೆಚ್ಚು ಬರೆಯುವ ಸಂದರ್ಭದಲ್ಲಿ ಹೆಚ್ಚು ಆದಮೇಲೆಯಾಗದ ಪ್ರತಿ ನೂರು ಹೆಸರುಗಳಿಗೂ ಒಂದು ರೂಪಾಯಿಯು ಹೆಚ್ಚಿನ ಫೀಜು ಕೊಡಲಾಗುವುದು. ಉತ್ತಮವಾದ ಕೆಲಸಕ್ಕೆ ಕೊಡಲಾಗುವ ಪಾರಿತೋಷಕಗಳ ಪರಿಶೀಲನೆಯು ಕೂಡ ರಿಜಿಸ್ಟರ ಬರವಣಿಗೆಯವರೆಗೂ ಹೊಂದಿಕೊಂಡಿದೆ. ಖಚಿತವಾಗಿ ಅಚ್ಚುಕಟ್ಟಾಗಿ ಬರೆಯಲ್ಪಟ್ಟ ರಿಜಿಸ್ಟರು ತಮ್ಮ ಕಾರ್ಯಕ್ಕೆ ಸೊಬಗನ್ನು ಕೊಡುವುದಲ್ಲದೆ ಮೇಲಧಿಕಾರಿಗಳ ಪರಿಶೀಲನೆಗೆ ತುಂಬಾ ಸಹಾಯವಾಗುವುದು. ಸೂಪರ್ವೈಸರರುಗಳಿಗೆ ಯಾವ ವೇತನವೂ ಇಲ್ಲ. ಅವರ ಪ್ರತಿಯೊಂದು ಕೆಲಸವೂ ಕೂಡ ಪಾರಿತೋಷಕವನ್ನು ಪಡೆಯುವ ಬಗ್ಗೆ ಪರಿಶೋಧಿಸಲಾಗುವುದು. ಈ ವರೆಗೆ ತೋರಿಸಿರುವ ಉತ್ಸಾಹ ಮತ್ತು ಕಾರ್ಯತತ್ಪರತೆಯನ್ನು ಸಂಪೂರ್ಣ ಕೆಲಸ ಮುಗಿಯುವ ವರೆಗೂ ಹಾರೈಸಿದೆ.

ಈ ರಿಜಿಸ್ಟರುಗಳ ವಿಚಾರ ಇನ್ನೊಂದು ಮುಖ್ಯ ಸಂಗತಿಯೇನೆಂದರೆ ಖಾನೇಸುಮಾರಿ ದಾಖಲು ಯಾವ ಕಾಲಕ್ಕೂ ಗೋಪ್ಯ ಸಂಗತಿ. ಎನ್ಯುಮರೇಟರುಗಳು ವಿಷಯಗಳನ್ನು ತಾವೇ ಸಂಗ್ರಹಿಸಿರುವುದಾದರೂ ಪ್ರತಿಯೊಂದು ದಾಖಲೆಯನ್ನು ಗೋಪ್ಯವಾಗಿಡಬೇಕು. ಜನಾಂಗ ರಾಷ್ಟ್ರೀಯ ರಿಜಿಸ್ಟರನ್ನು ಯಾವ ಸ್ಥಳದಲ್ಲಾದರೂ ಕುಳಿತು ಬರೆಯಬಹುದು. ಆದರೆ ಅದರ ನಕಲನ್ನು ಎಂದೂ ಇಟ್ಟುಕೊಳ್ಳಕೂಡದು.

ಖಾನೇಸುಮಾರಿಯ ಈ ವರೆಗಿನ ಕೆಲಸವನ್ನು ಸುಸೂತ್ರವಾಗಿಯೂ ಜಯಪ್ರದವಾಗಿಯೂ ನೆರವೇರಿಸಿದುದರ ಸಲುವಾಗಿ ನಾನು ಪ್ರತಿಯೊಬ್ಬ ಚಾರ್ಜು ಸುಪರಿಂಟೆಂಡೆಂಟ್, ಸೂಪರ್ವೈಸರು ಮತ್ತು ಎನ್ಯುಮರೇಟರುಗಳಿಗೆ ಋಣಿಯಾಗಿದ್ದೇನೆ. ಆದರೆ ಇನ್ನುಳಿದಿರುವ ಕೊನೆಯದಾದ ಈ ಕೆಲಸವನ್ನು ಚೆನ್ನಾಗಿ ಪೂರೈಸಿ ತಾವು ಸಲ್ಲಿಸಿದ ದೇಶಸೇವೆಯ ಈ ಕಾರ್ಯಕ್ಕೆ ಕೀರ್ತಿಯನ್ನು ತರುವರೆಂದು ಹಾರೈಸುತ್ತೇನೆ.

ಎಸ್. ಸಿ. ಸುಬ್ಬಯ್ಯ,
ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್.

Reg. No. M. 1550.
'KODAGU' MERCARA, (Coorg).

ಕೊಡಗು

ಸಂಪಾದಕರು—ಪಿ. ಐ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. 5-0-0

ಸಂಪುಟ ೨೯ | ತಾರೀಕು ೧೩—೪—೧೯೫೧ನೇ ಶುಕ್ರವಾರ | ಸಂಚಿಕೆ ೪೩

ಪ್ರಪಂಚದ
॥ ಆರೋಗ್ಯ ದಿನಾಚರಣೆ ॥
೭ನೇ ಏಪ್ರಿಲ್.

ಪ್ರತಿ ವರ್ಷ ಏಳನೇ ಏಪ್ರಿಲ್ ಎಂದರೆ ಪ್ರಪಂಚದ ಆರೋಗ್ಯ ದಿನಾಚರಣೆಯ ದಿನವೆಂದು ತಿಳಿಯಲಾಗಿದೆ. ವಿಶ್ವ ಆರೋಗ್ಯಸಂಸ್ಥೆಯ ಕಾರ್ಯಕ್ರಮದಲ್ಲಿ ಇದು ಒಂದು ಮುಖ್ಯವಾದ ಆಚರಣೆ. ಈ ದಿನ ಪ್ರಪಂಚದ ಉದ್ದಗಲಕ್ಕೂ ಪ್ರತಿಯೊಬ್ಬನೂ ಆರೋಗ್ಯ ಸಂರಕ್ಷಣೆಯ ವಿಚಾರ ಪ್ರತಿಜ್ಞೆ ಮಾಡುವ ದಿನ. ಈ ವರ್ಷದ ಆಚರಣೆಯಲ್ಲಿ 'ಶಿಶು-ಸಂರಕ್ಷಣೆ'ಯ ಕಾರ್ಯದಲ್ಲಿ ಹೆಚ್ಚಿನ ಕಳವಳಿಕೆಯನ್ನು ಹೊಂದಿಕೊಂಡು, ಮುಂದಿನ ಜನಾಂಗವಾದ ನಮ್ಮ ಮಕ್ಕಳ ಆರೋಗ್ಯಸಂರಕ್ಷಣೆಯನ್ನು ಮಾಡುತ್ತೇವೆಂದು ನಾವು ನಿರ್ಧಾರಮಾಡಬೇಕಾಗಿದೆ. ಶಿಶು ಪೋಷಣೆಯ ವಿಚಾರದಲ್ಲಿ ಕ್ರಮವಾಗಿ ಈ ಕೆಳಗಿನ ವಿಷಯಗಳ ಮೇಲೆ ಪ್ರಪಂಚದ ಆರೋಗ್ಯಸಂಸ್ಥೆಯವರು ಕಳುಹಿಸುವ ಸಂದೇಶವನ್ನು ಸಾರ್ವಜನಿಕರ ತಿಳುವಳಿಕೆಗಾಗಿ ಇಲ್ಲಿ ಕೊಡಲಾಗಿದೆ.

೧ ಮಕ್ಕಳ ಆರೋಗ್ಯ ಸಂರಕ್ಷಣೆಯ ಕಾರ್ಯದಲ್ಲಿ ನಿಗವಿಡಬೇಕಾದ ಅವಶ್ಯಕತೆ

೨ ಶಿಶು ಮರಣಗಳು ಮತ್ತು ಅದರಿಂದಾಗುವ ಹಾನಿ

೩. ಹೊಸ ಜೀವ—ತಾಯಿಯ ಸಂರಕ್ಷಣೆ.

೪. ಅಪಾಯವನ್ನು ತಡೆಗಟ್ಟುವ ಕಾರ್ಯದಲ್ಲಿ ಚಿಕಿತ್ಸೆ, ಎಚ್ಚರ.

೫ ಆರೋಗ್ಯ ಸಂರಕ್ಷಣೆಯ ವಿಚಾರದಲ್ಲಿ ಆಹಾರ ಕ್ರಮ.

೬. ಮಕ್ಕಳು ಏಕೆ ಆಟವಾಡಬೇಕು.

೭. ಆರೋಗ್ಯದಾಯಕವಾದ ವಾತಾವರಣ ಇವರಿಂದ ಮಗುವಿನ ಪೋಷಣೆಯ ಅವಶ್ಯಕತೆ

೮ ಮಗುವಿಗೆ ಶಾಲೆಯಲ್ಲಿ ಆರೋಗ್ಯಶಿಕ್ಷಣ.

೯. ಆರೋಗ್ಯ ಜ್ಞಾನ—ಆರೋಗ್ಯ ಜೀವನ.

೧೦. ಮಕ್ಕಳು ಬೆಳೆದು ಜೀವನಕ್ಕೆ ಕಾಲಿಕ್ಕುವಾಗ ಚುನಾಯಿಸಬೇಕಾದ ವೃತ್ತಿ. ಆರೋಗ್ಯ ಸಂರಕ್ಷಣೆಗಾಗಿ ತನಗೆ ಸರಿಯಾದ ಉದ್ಯೋಗದ ಪರಿಶೀಲನೆ.

೧೧. ಕೃಶರಾದ ಮಕ್ಕಳನ್ನು ಆರೋಗ್ಯಕ್ಕೆ ತರುವ ವಿಧಾನ.

೧೨ ಮಕ್ಕಳ ಬೆಳವಣಿಗೆಗೆ ಬೇಕಾದ ಅತ್ಯವಶ್ಯಕ ವಸ್ತುಗಳು. ವಿಶ್ವ ಆರೋಗ್ಯ ಸಂಸ್ಥೆಯೆಂದರೇನು? ಅದರ ಕಾರ್ಯಕ್ರಮಗಳಾವುವು ಎಂಬ ವಿಷಯದ ಸೂಕ್ಷ್ಮವಾದ ಪರಿಚಯವನ್ನು ಮೊದಲು ಕೊಡಬೇಕಾಗಿದೆ. ಇದಕ್ಕೆ ಇಂಗ್ಲಿಷಿನಲ್ಲಿ ಸಂಕ್ಷಿಪ್ತ ಹೆಸರು ಎಂದು ಹೇಳುವುದಾದರೆ ಪ್ರಪಂಚದ ಆರೋಗ್ಯ ಸಂಸ್ಥೆಯೆಂದು ಹೇಳಬಹುದು. ಈ ಸಂಸ್ಥೆಗೆ ರಾಷ್ಟ್ರಭೇದಗಳಿಲ್ಲ. ಪ್ರಪಂಚದ ಆರೋಗ್ಯವೇ ಮುಖ್ಯ. ೧೯೪೮ನೇ ಸೆಪ್ಟೆಂಬರ್ ತಿಂಗಳಲ್ಲಿ ವಿಶ್ವರಾಷ್ಟ್ರ ಸಂಸ್ಥೆಯ ಒಂದು ಭಾಗವಾಗಿ ಇದು ಹುಟ್ಟಿತು. ಪ್ರಪಂಚದ ೭೪ ರಾಜ್ಯಗಳು ಈ ಸಂಸ್ಥೆಗೆ ಸೇರಿವೆ. ಇದರ ಕೇಂದ್ರ ಸ್ಥಾನ ಸ್ವಿಜರ್‌ಲೆಂಡಿನ ಜಿನಿವಾ ಪಟ್ಟಣವಾಗಿದೆ. ಈ ವರ್ಷ ಭಾರತದ ಮಾನ್ಯ ಆರೋಗ್ಯಮಂತ್ರಿಗಳಾದ ಶ್ರೀಮತಿ ಅಮೃತಕೌರರವರು ಈ ಸಂಸ್ಥೆಯ ಅಧ್ಯಕ್ಷಸ್ಥಾನದಲ್ಲಿದ್ದಾರೆ. ಪ್ರತಿಯೊಂದು ರಾಜ್ಯಗಳಿಗೂ ಆಗಿಂದಾಗ್ಗೆ ಆರೋಗ್ಯ ಸಂರಕ್ಷಣೆಯ ವಿಚಾರದಲ್ಲಿ ಸಲಹೆಗಳನ್ನು ಕೊಟ್ಟು ಹೊಸ ಹೊಸ ಪರಿಶೋಧನೆಗಳ ಜ್ಞಾನವನ್ನು ತಿಳಿಸಿ ಲೋಕವನ್ನೇ ಆವರಿಸಿ ಆರೋಗ್ಯವನ್ನು ಹಾಳುಮಾಡುವ ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟುವ ಕೆಲಸವೇ ಈ ಸಂಸ್ಥೆಯ ಕಾರ್ಯಕ್ರಮ. ಈ ವಿಚಾರದಲ್ಲಿ ಅಂತರಾಷ್ಟ್ರೀಯ ಆರೋಗ್ಯ ಶಾಸನ, ಆರೋಗ್ಯ ವಿದ್ಯಾಪ್ರಚಾರ ಪರಿಶೋಧನಾಲಯ ಮುಂತಾದುವುಗಳು ಏರ್ಪಡಿಸಲ್ಪಟ್ಟಿವೆ.

ಈಗ ಮೂರು ನಾಲ್ಕು ವರ್ಷಗಳಿಂದ ಲಕ್ಷಾಂತರ ಜನರನ್ನು ನಾಶಮಾಡುವ ಮಲೇರಿಯಾ, ಕ್ಷಯ, ಮೇಹರೋಗಗಳ ನಿವಾರಣೆಗಾಗಿ ಈ ವಿಶ್ವಸಂಸ್ಥೆಯ ಕೆಲಸವನ್ನು ಮುತವರ್ಜಿಯಿಂದ ಸಾಧಿಸಿ ತಕ್ಕ ಫಲಿತಾಂಶವನ್ನು ಪಡೆಯುತ್ತಿದೆ. ಮಲೇರಿಯಾ ನಿವಾರಣೆಗಾಗಿ ಕೊಡಗಿನ ಸರಕಾರವು ಮಾಡುತ್ತಿರುವ ಸೇವೆಯು ಎಲ್ಲರಿಗೂ ತಿಳಿದಿದೆ. ಹಾಗೆಯೇ ಕ್ಷಯರೋಗದ ಸ್ಥಾನಪುಗಳನ್ನು ಹುಡುಕುವುದು. ಮಕ್ಕಳ ಆರೋಗ್ಯ ದಿನಾಚರಣೆ ಮೊದಲಾದ ಕೆಲಸಗಳನ್ನು ಸ್ಥಳೀಯ ಸರಕಾರವು ಕೈಕೊಂಡು ನಡೆಸುತ್ತಿದೆ. ಇನ್ನೂ ಶೈಶವಾವಸ್ಥೆಯಲ್ಲಿರುವ ಈ ಸಂಸ್ಥೆಯು ಜಾತಿ ಮತಭೇದಗಳಿಲ್ಲದೆ ಇಡೀ ಪ್ರಪಂಚವನ್ನೇ ಪೀಠವಾಗಿಟ್ಟುಕೊಂಡು ಆರೋಗ್ಯ ಸಂರಕ್ಷಣೆಯ ಕಾರ್ಯವನ್ನು ನಿರ್ವಹಿಸುತ್ತಿರುವುದು ಒಂದು ಮಹಾ ಸೇವೆಯಾಗಿದೆ. ಇದು ಚಿರಕಾಲ ಬಾಳಲಿ. ನಾವು ಈ ಸಂಸ್ಥೆಗೆ ಬೆಂಬಲವನ್ನು ಕೊಡುತ್ತೇವೆಂದು ಪ್ರತಿಜ್ಞೆ ಮಾಡೋಣ.

ಈ ವರ್ಷದ ದಿನಾಚರಣೆ ಶಿಶುರಕ್ಷಣೆಗಾಗಿ ಮಾಡುವ ಪ್ರತಿಜ್ಞೆಯೆಂದು ಆ ಮೊದಲೇ ಹೇಳಿದೆ. ಹಾಗಾದರೆ ನಾವು ತಿಳಿದುಕೊಂಡು ಮಾಡಬೇಕಾದ ಕರ್ತವ್ಯವೇನು..

೧. ಮೊದಲಾಗಿ ಮಕ್ಕಳ ಆರೋಗ್ಯದ ಸಂರಕ್ಷಣೆ-ಕಾರ್ಯದಲ್ಲಿ ನಿಗವಿಡಬೇಕಾದ ಗಡಿ.

ತಾಯಿಯ ಆರೋಗ್ಯವೇ ಶಿಶುವಿನ ಆರೋಗ್ಯ. ಪ್ರಪಂಚದಲ್ಲಿ ಮುಂದುವರಿದಿರುವ ಅನೇಕ ರಾಜ್ಯಗಳು ಕಳೆದ ಅರ್ಧಶತಮಾನದಿಂದ ತಾಯಿ ಮತ್ತು ಶಿಶು ಮರಣವನ್ನು ಗರ್ಭಿಣಿ ಮತ್ತು ಬಾಣಂತಿ ಚಿಕಿತ್ಸೆಯ ಮೂಲಕ ತಡೆಗಟ್ಟಿರುವುದು ತುಂಬಾ ಆನಂದದ ವಿಷಯ. ಆದರೆ ಪ್ರಪಂಚದ ಆರೋಗ್ಯದ ಮಟ್ಟವನ್ನು ಏರಿಸಲು ಇದು ಸಾಲದು. ಪ್ರತಿ ಕುಟುಂಬದ ಆರೋಗ್ಯರಕ್ಷಣೆಯನ್ನೇ ಗುರಿಯಾಗಿಟ್ಟುಕೊಂಡು ಕಾರ್ಯ ನಡೆಸತಕ್ಕದ್ದು. ಸರಿಯಾದ 'ಆಸ್ಪತ್ರೆಗೆ ಚಿಕಿತ್ಸೆಗೆ ಬಂದ ಒಬ್ಬ ವ್ಯಕ್ತಿಯನ್ನು ಮಾತ್ರ ನಾವು ಪರೀಕ್ಷಿಸಿದರೆ ಸಾಲದು. ಇಡೀ ಕುಟುಂಬವನ್ನೇ ರಕ್ಷಿಸುವ ವ್ಯವಸ್ಥೆ ಮಾಡಬೇಕು. ಎಂದು ಅನುಭವ ಪ್ರಸಿದ್ಧರಾದ ವೈದ್ಯರೊಬ್ಬರು ಹೇಳಿರುತ್ತಾರೆ. ಮನುಷ್ಯನ ಮಾನಸಿಕ ಮತ್ತು ದೇಹದ ಬೆಳವಣಿಗೆಗಳು ಒಂದು ನಾಣ್ಯದ ಎರಡು ಬದಿಗಳಂತೆ ಒಂದಕ್ಕೊಂದು ಹೊಂದಿಕೊಂಡಿವೆ. ಮಗುವಿನ ಸಂರಕ್ಷಣೆಯು ತಾಯಿಯ ಗರ್ಭದಿಂದ ಮೊದಲ್ಗೊಂಡು ಪ್ರಾಯಪ್ರಬುದ್ಧನಾಗುವವರೆಗೆ. ಈ ವಿಷಯವನ್ನು ಗ್ರಹಿಸುವಾಗ ಮದುವೆಯಾಗತಕ್ಕ ಕಾಲ, ದಾಂಪತ್ಯಜೀವನಕ್ಕೆ ಸರಿಜೋಡಿಯಾಗುವಂತೆ ವರನನ್ನಾಗಲೀ ಕನ್ಯೆಯನ್ನಾಗಲೀ ಚುನಾಯಿಸಬೇಕಾದರೆ ಕರ್ತವ್ಯ ಮೊದಲಾಗಿ ಇಬ್ಬರ ಆರೋಗ್ಯ ಪರೀಕ್ಷೆ ಮುಂತಾದುವುಗಳು ಶಾಸನಬದ್ಧವಾಗಿ ಪ್ರಚಾರಕ್ಕೆ ಬರಬೇಕಾದ ಅವಶ್ಯಕತೆ ಇದೆ

ಮುಖ್ಯವಾಗಿ ಹೇಳುವುದಾದರೆ ಮಗುವಿನ ಆರೋಗ್ಯಸಂರಕ್ಷಣೆಯ ಗಡಿ, ತಂದೆ ತಾಯಿಗಳ ಆರೋಗ್ಯದಿಂದ ಮೊದಲ್ಗೊಂಡು ತಾಯಿಯ ಗರ್ಭವಾಸದಿಂದ ಜನನವಾಗಿ ಶೈಶವಾವಸ್ಥೆಯನ್ನು ದಾಟಿ, ಬಾಲ್ಯಾವಸ್ಥೆಯನ್ನು ಕಳೆದು ಶಾಲೆಯಲ್ಲಿ ಆರೋಗ್ಯ ಶಿಕ್ಷಣವನ್ನು ಪಡೆದು ತಾನು ಗೃಹಸ್ಥನಾಗುವ ವರೆಗೆ ಹರಡಿದೆಯೆಂದು ತಿಳಿಯಬೇಕಾಗಿದೆ. 'ಆರೋಗ್ಯದ ಆನಂದ ಕಾಲದಲ್ಲಾಗಲೀ, ಅನಾರೋಗ್ಯದ ತೊಂದರೆಯ ಕಾಲದಲ್ಲಾಗಲೀ ವಿವರಿಸಲು ಸಾಧ್ಯವಿಲ್ಲದ ಸುಖವನ್ನೂ ಶಾಂತಿಯನ್ನೂ ಕೊಡುವ ಮನೆ ಆ ಮನೆಯೇ ಆರೋಗ್ಯದ ಮೂಲ

೨. ಶಿಶು ಮರಣ ಮತ್ತು ಅದರ ಪರಿಣಾಮ

ಮಗುವು ಜನನವಾಗುವ ಕಾಲದಿಂದ ಒಂದು ವರ್ಷದ ವರೆಗೆ ತುಂಬಾ ಎಚ್ಚರಿಕೆ ಅವಶ್ಯ. ಶಿಶುಮರಣದ ಅಪಾರವಾದ ಅಪಾಯವು ಈ ಕಾಲದಲ್ಲಿ ಎಂದು ತಿಳಿಯಬಂದಿದೆ. ಸಾವಿರ ಮಕ್ಕಳಲ್ಲಿ ಇಂಗ್ಲೆಂಡಿನಲ್ಲಿ ೩೨, ಅಮೇರಿಕ ೩೧, ಸ್ವಿಜರ್‌ಲೆಂಡ್ ೩೪ ಈಜಿಪ್ಟ್ ೧೬೫ ಬೊಂಬಾಯಿ ೨೦೦ ಮರಣ ಈ ಅವಧಿಯಲ್ಲಿ ಸಂಭವಿಸುತ್ತಿತ್ತೆಂದು ವರದಿ ಇದೆ. ಈಗ ಕೆಲವು ವರ್ಷಗಳಿಂದ ಈ ಅಪಾಯವನ್ನು ತಡೆಗಟ್ಟುವ ವಿಧಾನಗಳು ಕಂಡುಹಿಡಿಯಲ್ಪಟ್ಟು ಸಾಧನೆಗಳು ಏರ್ಪಡಿಸಲ್ಪಟ್ಟಿವೆ. ಒಂದು ದೇಶವು ಆರೋಗ್ಯ ಕೇಂದ್ರವೆಂಬ ವಿಷಯ ಈ ವಿಚಾರಕ್ಕೆ ಅನ್ವಯಿಸುವುದಿಲ್ಲ. ಯಾವ ದೇಶವೇ ಆಗಲಿ ತಾಯಿ ಶಿಶು ಬಾಣಂತಿಯ ಸಂರಕ್ಷಣೆಯ ಸಿದ್ಧತೆಯನ್ನು ಕ್ರಮಪಡಿಸಿಕೊಂಡಲ್ಲಿ ಶಿಶುಮರಣವನ್ನು ಸುಲಭವಾಗಿ ತಪ್ಪಿಸಬಹುದು. ವಿಶ್ವಸಂಸ್ಥೆಯು ಸಲಹೆಗನುಸಾರವಾಗಿ ಆರೋಗ್ಯ ಕೇಂದ್ರಗಳನ್ನು ಹೆಚ್ಚಿನ ಆರೋಗ್ಯ ಶಿಕ್ಷಣವನ್ನು ಕೊಟ್ಟು ಸರಿಯಾದ ಸೂಲಗಿತ್ತಿಯರನ್ನು ನೇಮಿಸಿ ಶಿಶು ಬಾಣಂತಿಯರನ್ನು ಪೋಷಿಸುವ ಕ್ರಮವನ್ನು ಹೊಸವೈದ್ಯ ವಿಜ್ಞಾನದ ಪರಿಶೋಧನೆಗಳ ಮೂಲಕ ಏರ್ಪಡಿಸಿಕೊಳ್ಳುವುದೇ ಮುಖ್ಯ ವಿಷಯ.

ಶಿಶು ಹೊಸಜೀವ ಮತ್ತು ತಾಯಿಯ ಸಂರಕ್ಷಣೆ.

ಪ್ರಪಂಚದಲ್ಲಿ ಪ್ರತಿ ನಿಮಿಷಕ್ಕೆ ೧೫೦ ಮಕ್ಕಳು ಜನಿಸುತ್ತಾರೆಂದೂ ದಿನವಹಿ ಅರ್ಧ ಮಿಲಿಯ ಸಂಖ್ಯೆಯಾಗುತ್ತದೆಂದೂ ಕಂಡುಬಂದಿದೆ. ಇದೇ ಲೆಕ್ಕದಲ್ಲಿ ಪ್ರತಿ ವರ್ಷ ೮೦ ಮಿಲಿಯ ಸ್ತ್ರೀಯರು ಮಕ್ಕಳನ್ನು ಹೆರುತ್ತಾರೆ ದಾಯಿತು. ಆದರೆ ಅತಿ ವ್ಯಸನಕರವಾದ ಸಂಗತಿಯೇನೆಂದರೆ ಎಷ್ಟೋ ತಾಯಂದಿರು ಮಗುವನ್ನು ಹೆತ್ತು ಮೃತ್ಯುವಿಗೆ ಈಡಾಗುತ್ತಾರೆ. ತಾಯಿಯನ್ನು ರಕ್ಷಿಸುವ ಕೆಲಸ ಅತಿ ಮುಖ್ಯ—ಆಸ್ಪತ್ರೆಗಳೂ ವೈದ್ಯರೂ ಈ ವಿಚಾರದಲ್ಲಿ ಕೊಡುವ ಸಹಾಯ ಎಷ್ಟೇ ವಿಶೇಷವಾದರೂ ಇದು ಎಲ್ಲರಿಗೂ ತಲುಪುವುದಿಲ್ಲ. ವೈದ್ಯರ ಅಭಾವ ಹೆಚ್ಚು. ಒಬ್ಬ ವೈದ್ಯನಾಗಬೇಕಾದರೆ ಹಲವು ವರ್ಷಗಳ ಶಿಕ್ಷಣಬೇಕು. ಆದರೆ ಈ ಕಾರ್ಯಕ್ಕೆ ಸಾಕಷ್ಟು ನರ್ಸ್ ಮತ್ತು ಸೂಲಗಿತ್ತಿ ಇವರೇ ಒಂದು ಆಧಾರಸ್ತಂಭ. ವೈದ್ಯರ ಶಿಕ್ಷಣದ ಅರ್ಧಾಂಶ ಕಾಲದೊಳಗೆ ಇವರ ತರಬೇತು ಮುಗಿಯುತ್ತದೆ. ಸೂಲಗಿತ್ತಿ ಮತ್ತು ನರ್ಸುಗಳ ಸಂಖ್ಯೆ ಹೆಚ್ಚಾಗಬೇಕು. ಪ್ರತಿಯೊಬ್ಬ ಗರ್ಭಿಣಿ ಸ್ತ್ರೀಯನ್ನೂ ಅವಳು ಸಂದರ್ಶಿಸಿ, ಸಮಯೋಚಿತವಾದ ಸಲಹೆಗಳನ್ನು ಕೊಟ್ಟು ಆಸ್ಪತ್ರೆಯ ಸಹಾಯವನ್ನು ದೊರಕಿಸುವ ಏರ್ಪಾಡು ಮಾಡಿ ಅವಳ ಜೀವವನ್ನು ಉಳಿಸುವ ಕರ್ತವ್ಯವು ನರ್ಸನ್ನು ಹೊಂದಿಕೊಂಡಿದೆ. ಮೊದಲನೆಯ ಬಾರಿ ಹೆರಿಗೆಗೆ ಸಿದ್ಧಳಾದ ಸ್ತ್ರೀಗೆ ತುಂಬಾ ಭಯವಿದ್ದು ವಿಷಯ ಸಂಗ್ರಹವೂ ಬೇಕಾಗಿದೆ. ಈ ಕೆಲಸವನ್ನು ಮಾಡಲು ಸೂಲಗಿತ್ತಿಯೇ ಸಮರ್ಥಳು. ಸೂಲಗಿತ್ತಿ ಮತ್ತು ನರ್ಸುಗಳೂ ಜತೆಗೂಡಿ ಸ್ತ್ರೀ ಶಿಕ್ಷಣದ ಕಾರ್ಯವನ್ನು ಕೈಗೊಂಡು ಗರ್ಭಿಣಿಯಾಗಿರುವ ಕಾಲದಿಂದ ಬಾಣಂತನ ಪೂರೈಸುವ ವರೆಗೆ ತಾಯಿಯ ಆರೋಗ್ಯವನ್ನು ಕಾಪಾಡುವ ಏರ್ಪಾಡುಗಳಿದ್ದರೆ ಆ ದೇಶದಲ್ಲಿ

ತಾಯಿಯ ಮರಣ ಸಂಭವಿಸುವುದು ಅಪರೂಪ. ತಾಯಿಯನ್ನು ಕಳೆದುಕೊಂಡು ಬಾಳುವ ಮಗುವಿನ ಜೀವನವೇ ಹಾಳು.

೪. ಸಾಂಕ್ರಾಮಿಕ ರೋಗವನ್ನು ತಡೆಗಟ್ಟಲು ಕಿಂಚಿತು ಪ್ರಯತ್ನ

ಸಿಡುಬು, ಅಂಗರೆಕಜ್ಜಿ, ನಾಯಿಕೆಮ್ಮು ಇತ್ಯಾದಿ ರೋಗಗಳು ಎಂದಾದರೂ ಒಂದು ದಿನ ಮಗುವಿಗೆ ತಗಲುವುದೆಂದು ಪ್ರತಿಯೊಬ್ಬ ತಂದೆ ತಾಯಿಯ ನಂಬಿಕೆ. ಇದು ತಪ್ಪು ಅಭಿಪ್ರಾಯ. ಕಾಲಕ್ಕೆ ಸರಿಯಾಗಿ ನಿವಾರಣಾ ಕ್ರಮವನ್ನು ಅನುಸರಿಸುವುದರಿಂದ ಮಗುವಿಗೆ ಯಾವ ಸಾಂಕ್ರಾಮಿಕ ರೋಗವು ತಟ್ಟಲಾರದು. ಈ ವಿಷಯದಲ್ಲಿ ಎರಡು ದಾರಿಗಳಿವೆ.

(೧) ಸಾಂಕ್ರಾಮಿಕ ರೋಗಗಳು ತಟ್ಟದಂತೆ ಮಗುವನ್ನು ಪ್ರತ್ಯೇಕವಾಗಿಟ್ಟು ಸಾಕುವುದು.

(೨) ವೇಕ್ಸಿನೇಶನ್, ಇನಾಕ್ಯುಲೇಶನ್ ಇತ್ಯಾದಿ ಸೂಜಿ ಪ್ರಯೋಗದ ಏರ್ಪಾಡು.

ಮೊದಲನೆಯ ಕ್ರಮ ಸಾಧ್ಯವಿಲ್ಲ. ಮತ್ತು ಉತ್ತಮವೂ ಅಲ್ಲ. ವೇಕ್ಸಿನೇಶನ್ ಮತ್ತು ಇನಾಕ್ಯುಲೇಶನ ಗಳನ್ನು ಶಿಶುವಾಗಿರುವಾಗ ವಿದ್ಯಾರ್ಥಿಯಾಗಿ ಶಾಲೆಗೆ ಸೇರುವಾಗ ಮೊದಲಾಗಿ ಕಾಲಕ್ಕೆ ಸರಿಯಾಗಿ ತೆಗೆದುಕೊಂಡಲ್ಲಿ ಸಾಂಕ್ರಾಮಿಕ ರೋಗದ ಸುಳಿವೇ ಇರುವುದಿಲ್ಲ. ಇತ್ತೀಚೆಗೆ ಕ್ಷಯ ರೋಗಕ್ಕೆ ಬಿ. ಸಿ. ಜಿ. ವೇಕ್ಸಿನೇಶನ್ನನ್ನು ಕೊಡುವ ರೀತಿಯನ್ನು ಕಂಡು ಹಿಡಿದಿರುವರು. ದೇಶಿಯ ಶಿಶುಸಂರಕ್ಷಣೆಯ ಸಂಸ್ಥೆಗಳಿರುವಲ್ಲಿ ಈ ಕೆಲಸವು ಸುಲಭವಾಗಿ ನೆರವೇರುತ್ತದೆ. ಈ ಅನುಕೂಲವಿಲ್ಲದಿರುವಲ್ಲಿ ತಂದೆ ತಾಯಿಗಳು ತಮ್ಮ ಮಕ್ಕಳ ಆರೋಗ್ಯದ ವಿಷಯ ಎಚ್ಚರಿಕೆ ತೆಗೆದುಕೊಂಡು ಕಾಲಕ್ಕೆ ಸರಿಯಾದ ರೋಗವನ್ನು ತಡೆಗಟ್ಟುವ ಕ್ರಮವನ್ನು ಅನುಸರಿಸಬೇಕು.

೫ ಆರೋಗ್ಯ ಮತ್ತು ಆಹಾರ

ಮಕ್ಕಳು ತಿನ್ನುವ ಆಹಾರವು ಪುಷ್ಟಿಕರವಾಗಿರಬೇಕು. ಮಾನಸಿಕ ಮತ್ತು ದೇಹದ ಬೆಳವಣಿಗೆಗೆ ಆರೋಗ್ಯವು ಎಷ್ಟು ಮುಖ್ಯವೆಂಬುದು ಸರ್ವರೂ ತಿಳಿದಿರುವ ವಿಷಯವಾಗಿದೆ. ಹಾಗೆಯೇ ಸಂಶೋಧನೆಯಿಂದ ಯಾವ ಯಾವ ಆಹಾರದಲ್ಲಿ ಯಾವ ಯಾವ ಸತ್ವವಿದೆ ಎಂಬುದನ್ನು ಕೂಡ ಕಂಡು ಹಿಡಿಯಲಾಗಿದೆ. ಮಗುವಿಗೆ ತಾಯಿಯ ಹಾಲು ಶ್ರೇಷ್ಠ. ಆದುದರಿಂದ ತಾಯಿಯ ಆಹಾರವನ್ನು ಹೊಂದಿಕೊಂಡು ಹಾಲಿನ ಸತ್ವವಿದೆ. ಗರ್ಭಿಣಿಯರು ಸೇವಿಸುವ ಆಹಾರವು ತುಂಬಾ ಸತ್ವ ಪ್ರಧಾನವಾಗಿರಬೇಕು. ಮೊಲೆಯ ಹಾಲನ್ನು ಬಿಟ್ಟರೆ ಹಸುವಿನ ಹಾಲು ಶ್ರೇಷ್ಠ. ಇದರ ಗುಣವನ್ನರಿತು ಯುರೋಪು, ಆಸ್ಟ್ರೇಲಿಯಾ, ಅಮೇರಿಕಾ ಮತ್ತು ನ್ಯೂಜಿಲಾಂಡ್ ದೇಶಗಳಲ್ಲಿ ಮಕ್ಕಳಿಗೆ ಹಸುವಿನ ಹಾಲನ್ನೇ ಕೊಡುತ್ತಾರೆ. ಹಸುವಿನ ಹಾಲು ಕೂಡ ಈ ದೇಶಗಳಲ್ಲಿ ಧಾರಾಳವಾಗಿ ದೊರಕುತ್ತದೆ. ಹಾಲು ದೊರಕುವುದು ಕಷ್ಟವಾದ ಎಷ್ಟೋ ದೇಶಗಳಲ್ಲಿ ನವೀನ ವಿಜ್ಞಾನ ಸಂಶೋಧನೆಯಿಂದ ಹಾಲಿನಷ್ಟೇ ಸತ್ವ ಪ್ರಧಾನವಾಗಿರುವ ಆಹಾರಗಳನ್ನು ಕಂಡು ಹಿಡಿಯಲಾಗಿದೆ. ಧನಿಕರ ಮಕ್ಕಳು ಹೆಚ್ಚಾಗಿ ಸಿಹಿಯನ್ನು ಸೇವಿಸುವುದರಿಂದ ಅವರ ಆಹಾರವು ಪುಷ್ಟಿಕರವಾಗಿಲ್ಲ. ಸತ್ವವಿಲ್ಲದ ಆಹಾರ ಸೇವನೆಯಿಂದ ನಾನಾ ರೋಗಗಳು ತಲೆ ದೋರುತ್ತವೆ. ಹೊಟ್ಟೆಯಲ್ಲಿ ಹುಳ ತುಂಬಿ ಸೇವಿಸುವ ಆಹಾರದ ಸತ್ವದಲ್ಲಿ ಅರ್ಧಪಾಲು ಆ ಹುಳುಗಳ ಪೋಷಣೆಗೆ ಬೇಕಾಗುತ್ತದೆ. ತರಕಾರಿ ಹಣ್ಣು ಹಂಪಲು ಕಾಯಿಪಲ್ಯ ಕಾಳು ಧಾನ್ಯ ಕೊಬ್ಬು ಇತ್ಯಾದಿ ಹಾಲಿನಷ್ಟೇ ಸತ್ವ ಪ್ರಧಾನವಾದ ಆಹಾರಗಳನ್ನು ಮಕ್ಕಳು ಸೇವಿಸಬೇಕು. ಈ ವಿಷಯವನ್ನು ತಂದೆ ತಾಯಿಗಳು ಚೆನ್ನಾಗಿ ತಿಳಿದು ತಮ್ಮ ಮಕ್ಕಳನ್ನು ಉತ್ತಮವಾದ ಆಹಾರದಿಂದ ಪೋಷಿಸಬೇಕು.

೬ ಮಕ್ಕಳು ಆಟವಾಡಬೇಕು

ಪ್ರತಿಯೊಂದು ಮಗುವಿಗೂ ಉತ್ತಮವಾದ ಆಹಾರ, ನಿದ್ರೆ ಆಟ ಮತ್ತು ವ್ಯಾಯಾಮಗಳು ದೇಹದ ಮತ್ತು ಮನಸಿನ ಬೆಳವಣಿಗೆಗೆ ಆವಶ್ಯಕವಾಗಿದೆ. ಆಟವೆಂದರೆ ಚಿಕ್ಕ ಮಗುವಿಗೆ ತನ್ನ ಕೆಲಸವೇ ಆಟ ಅಥವಾ ಆಟವೇ ಕೆಲಸ. ಮಗುವನ್ನು ತುಂಬ ಓದಲೆಂದು ಬಾಯಿಪಾಠ ಮಾಡುವ ಕಠಿಣ ಶಿಕ್ಷಣದಲ್ಲೇ ಮುಳುಗಿಸಿ ಆಟದ ಕಡೆಗೆ ಗಮನ ಕೊಡದಿದ್ದರೆ ಮಗುವು ಪ್ರಯೋಜನವಿಲ್ಲದಾಗುತ್ತದೆ. ಆಟವೆಂದರೆ ಕಾರ್ಖಾನೆಯಲ್ಲಿ ತಯಾರಾದ ಬೊಂಬೆಗಳೇ ಆಗಬೇಕೆಂದಿಲ್ಲ. ಆಯಾಯ ಮಗುವಿನ ಮನೋವೃತ್ತಿಗೆ ಸರಿಯಾಗಿ ಆಟಗಳನ್ನು ಒದಗಿಸಬೇಕು. ಹೆಚ್ಚಾಗಿ ಓಡಾಡಿ, ಮರಳು ಗುಡ್ಡೆಯಲ್ಲಿ ಹೊರಳಾಡಿ, ತುಂಬಾ ಗಾಳಿ, ಬೆಳಕು ಮತ್ತು ಸೃಷ್ಟಿಯ ನೋಟಗಳನ್ನು ಅನುಭವಿಸಿ ಮಗು ಬೆಳೆಯುವುದು ಒಳ್ಳೆಯದು. ಆಟದಿಂದ ವ್ಯಾಯಾಮವು ಮಾತ್ರವೇ ಅಲ್ಲ- ಸ್ನೇಹಿತರೊಡನೆ ಪರಸ್ಪರ ವಿಶ್ವಾಸವಾಗುವ ಕ್ರಮವೂ ತಿಳಿಯುತ್ತದೆ. ಮಗುವಿಗೆ ಚಿಕ್ಕ ಪ್ರಾಯದಿಂದ ಹಿಡಿದು, ಶಾಲೆಯ ವಿದ್ಯಾರ್ಥಿಯಾದರೂ ವಿದ್ಯೆ ಪೂರೈಸಿ ಜೀವನವನ್ನು ಹೊಗುವವರೆಗೆ ಆಟದ ಪ್ರಾಮುಖ್ಯತೆಯು ಪಾಠದಷ್ಟೇ ಬೇಕಾಗಿದೆ.

೭ ಆರೋಗ್ಯ ವಾತಾವರಣ

ಶಿಶುವಿನ ಬೆಳವಣಿಗೆಗೆ ವಾತಾವರಣವು ಆರೋಗ್ಯವಾಗಿರಬೇಕು. ತಾಯಿಯು ಸದಾ ಕಾಲ ಚೊಕ್ಕಟವಾಗಿರಬೇಕು, ಮನೆಯು ಶುದ್ಧವಾಗಿರಬೇಕು. ಉಡುವ ತೊಡುವ ಬಟ್ಟೆಗಳು ಮಡಿಯಾಗಿರಬೇಕು ಅಂಟುರೋಗಗಳು ಇರುವಲ್ಲಿ ಮಕ್ಕಳನ್ನು ಕೊಂಡೊಯ್ಯಬಾರದು. ಕೆಟ್ಟ ವಾತಾವರಣದಿಂದ, ಸಿಡುಬು, ಕಾಲರ, ಅಮಶಂಕೆ, ಬೇಧಿ, ಕಜ್ಜಿ, ಕಣ್ಣುನೋವು ಇತ್ಯಾದಿಗಳು ತಲೆದೋರುವುದು ವಾಡಿಕೆ. ಬೇಧಿ ರಕ್ತ ಬೇಧಿ, ಕಾಲರಾ ಇತ್ಯಾದಿಗಳು ಅಶುದ್ಧವಾದ ಹಾಲು ಮತ್ತು ನೀರನ್ನು ಕುಡಿಯುವುದರಿಂದ ಬರುತ್ತದೆ. ಮಲೇರಿಯಾ ರೋಗವು ಸೊಳ್ಳೆಗಳಿಂದ ಉಂಟಾಗುತ್ತದೆ. ಕಣ್ಣುನೋವು ನೊಣಗಳಿಂದ ಹರಡುತ್ತದೆ. ಇವೆಲ್ಲಕ್ಕೂ ಕಾರಣ ಅಶುದ್ಧವಾದ ವಾತಾವರಣ. ಒಂದು ದೇಶದ ೧ ವರ್ಷದಿಂದ ೪ ವರ್ಷ ಪ್ರಾಯದ ಮಕ್ಕಳಲ್ಲಿ ೧೯೦೦ ನೇ ಇಸವಿಯಲ್ಲಿ ಲಕ್ಷಕ್ಕೆ ೩೩೦ ಜನ ಮಕ್ಕಳು ಅನಾರೋಗ್ಯ ವಾತಾವರಣದ ಕಾಯಿಲೆಗೆ ತುತ್ತಾಗಿದ್ದಾರೆ. ಅದೇ ದೇಶದಲ್ಲಿ ೧೯೪೬ನೇ ಇಸವಿಯಲ್ಲಿ ಲಕ್ಷದಲ್ಲಿ ಬರೇ ೭ ಜನ ಮಕ್ಕಳು ಮಾತ್ರ ಮರಣ ಹೊಂದಿದರೆಂದು ತಿಳಿದ ಮೇಲೆ ಅನಾರೋಗ್ಯ ವಾತಾವರಣದ ಪರಿಣಾಮವೆಷ್ಟೆಂದು ತಿಳಿಯಬಹುದು.

ಚೊಕ್ಕಟವಾಗಿರಲು ದುಡ್ಡು ಖರ್ಚಾಗಬೇಕೆಂದಿಲ್ಲ. ಬಡವನಿಗೂ ಚೊಕ್ಕಟವಾಗಿರಲು ಅವಕಾಶವಿದೆ. ಸಾವಿರಾರು ರೂಪಾಯಿ ಖರ್ಚುಮಾಡಿ ಕಟ್ಟಿಸಿದ ಪಾಯಿಖಾನೆ ಮನೆಯಷ್ಟೇ ಪ್ರಯೋಜನ ಭೂಮಿಯಲ್ಲಿ ತೂತುಮಾಡಿ "Bore Hole" ಪಾಯಿಖಾನೆ ಕಟ್ಟಿಸುವುದರಲ್ಲದೆ. ಮಗುವಿಗೆ ಕೊಡುವ ಹಾಲನ್ನು ಕಾಯಿಸಿ ಕೊಡಲು ಖರ್ಚೇನೂ ಇಲ್ಲ. ಆದ್ದರಿಂದ ಶುಚಿತ್ವವೇ ಆರೋಗ್ಯದ ಮೂಲವೆಂಬುದನ್ನು ಪ್ರತಿಯೊಬ್ಬನು ತಿಳಿಯಬೇಕಾದ ಸಂಗತಿ.

೮ ಶಾಲೆಯ ಮಕ್ಕಳಿಗೆ ಕೊಡಬೇಕಾದ ಆರೋಗ್ಯ ಶಿಕ್ಷಣ ಮತ್ತು ಸಹಾಯ.

ನಮ್ಮ ಬಾಲ್ಯವನ್ನು ಯೋಚನೆ ಮಾಡಿದರೆ ನಮಗೆ ಆನಂದವಾಗುತ್ತದೆ. ನಿಶ್ಚಿಂತೆಯಾಗಿದ್ದ ಕಾಲವೆಂದರೆ ಬಾಲ್ಯ. ಈ ಕಾಲದಲ್ಲಿ ಮಕ್ಕಳ ಬೆಳವಣಿಗೆಯು ತುಂಬಾ ಉತ್ತಮವಾಗುತ್ತದೆ. ಶಾಲೆಯಲ್ಲಿ ಮಕ್ಕಳ ಆರೋಗ್ಯ ಕ್ರಮವನ್ನು, ಪೌಷ್ಟಿಕ ಕ್ರಮವಾದ ಆಹಾರಗಳ ಬೇಕು, ಶುದ್ಧವಾದ ನೀರು ಇತ್ಯಾದಿಗಳಿಂದ ಮಕ್ಕಳ ಆರೋಗ್ಯವನ್ನು ಹೆಚ್ಚಿಸಲು ಶಾಲೆಯ ವಾತಾವರಣವು ಮುಖ್ಯವಾಗಿದೆ. ಯಾವ ತರ ಅಂಟುರೋಗಗಳಾಗಲೀ ಅಥವಾ ಅನಾರೋಗ್ಯದ ಆಹಾರವಾಗಲೀ ದೊರಕುಂತೆ ಒಂದು ಕಾರ್ಯ ಕ್ರಮವನ್ನು ನಡೆಸಲು ಶಾಲೆಯ ವಾತಾವರಣ ಸರಿಯಾಗಿದೆ. ಮಗುವು ಅನಾದರ್ಶಕವಾದ ಗೊಂದಲ ಗಲಬೆಗಳಿಂದ ಕ್ರೋಧ ಮತ್ತು ಆವೇಶಗಳಿಗೆ ಗುರಿಯಾಗದಂತೆ ನೋಡಿಕೊಳ್ಳುವುದು ಕೂಡ ಶಾಲಾ ಆರೋಗ್ಯ ಶಿಕ್ಷಣದಲ್ಲಿ ಒಂದು ಅವಶ್ಯಕ ಕ್ರಮವಾಗಿದೆ.

೯ ಆರೋಗ್ಯಶಿಕ್ಷಣ— ಆರೋಗ್ಯ ಜೀವನ

ಪ್ರತಿಯೊಂದು ದೇಶವೂ ಕೂಡ ವಿಶ್ವ ಆರೋಗ್ಯ ಸಂಸ್ಥೆಯ ಸಲಹೆಗನುಸಾರವಾಗಿ ಜನ ಸಮುದಾಯದಲ್ಲಿ ಆರೋಗ್ಯ ಶಿಕ್ಷಣವನ್ನು ಅನೇಕ ಮುಖವಾಗಿ ಕೊಡುವ ಕ್ರಮವನ್ನು ಏರ್ಪಡಿಸಬೇಕು.

೧೦ ಮಕ್ಕಳು ಪ್ರಾಯ ಪ್ರಬುದ್ಧರಾಗಿ ಜೀವನಕ್ಕೆ ಕಾಲಿಡುವ ಸಮಯದಲ್ಲಿ ಅವರ ಮಾನಸಿಕ ಮತ್ತು ದೇಹಿಕ ಬೆಳವಣಿಗೆಗಳನುಸಾರವಾಗಿ ಅವರ ಸ್ವಾಭಾವಿಕ ಮನೋವೃತ್ತಿಗೆ ಸರಿಯಾದ ಉದ್ಯೋಗವನ್ನು ಒದಗಿಸುವದು ಕೂಡ ಆರೋಗ್ಯಸಂಸ್ಥೆಯ ಒಂದು ಕಾರ್ಯ ಕ್ರಮ. ಯೋಗ್ಯತಾನುಸಾರವಾಗಿ ದೊರಕಿದ ಉದ್ಯೋಗದಿಂದ ವ್ಯಕ್ತಿ ಕ್ಷೇಮವೂ ದೇಶ ಸೇವೆಯೂ ಸಾಂಗವಾಗುತ್ತದೆ.

೧೧ ಅಂಗಹೀನರೂ ಕ್ಷಯು ಆದ ಮಕ್ಕಳ ಪುನರುದ್ಧಾರ ಕಾರ್ಯ

ಅಂಗಹೀನರಾದ ಮಕ್ಕಳು ಅನೇಕರಿರುವರು. ಅವರನ್ನು ನೋಡಿ ಕನಿಕರಪಟ್ಟು ಅದು ವಿಧಿ ವಿಲಾಸವೆಂದು ಹೇಳುವ ಕಾಲ ಹೋಯಿತು. ಅಂಗ ಹೀನರನ್ನು ಸಮಾಜವು ಸಂರಕ್ಷಿಸಬೇಕು. ಅವರನ್ನು ಪರೀಕ್ಷಿಸಿ ವೈದ್ಯ ಚಿಕಿತ್ಸೆಯಿಂದ ನ್ಯೂನತೆಗಳನ್ನು ಆದಷ್ಟು ಸರಿಪಡಿಸಿ ಅವರ ದೇಹಶಕ್ತಿಗನುಸಾರವಾದ ತರಬೇತಿಯನ್ನು ಕೊಟ್ಟು ಯಾವುದಾದರೂ ಉದ್ಯಮದಲ್ಲಿ ಅವರನ್ನು ಸೇರಿಸುವ ಏರ್ಪಾಡು ಮಾಡಬೇಕು. ಅಂಗಹೀನರಾದ ಮಕ್ಕಳನ್ನು ನಿರಾಕರಿಸಿ ಅವರ ಜೀವನವನ್ನು ಹಾಳು ಮಾಡಬಾರದು. ಇತರ ಮಕ್ಕಳಂತೆಯೇ ಅವರಿಗೂ ಆಶೆ ನಿರಾಶೆಗಳು ಇದ್ದೇ ಇವೆ. ಅಂಗಹೀನರಾದ ಮಕ್ಕಳು ಸರಿಯಾದ ತರಬೇತು ಹೊಂದಿ ಇತರ ಅಂಗ ಸ್ವಸ್ಥರಾದವರಂತೆ ಕೆಲಸ ಕಾರ್ಯಗಳನ್ನು ನಿರ್ವಹಿಸುತ್ತಿರುವ ಉದಾಹರಣೆಗಳು ಎಷ್ಟೋ ಇವೆ. ಆದ್ದರಿಂದ ಆರೋಗ್ಯ ಸಂಸ್ಥೆಗಳು ಇಂಥಾ ಅಂಗಹೀನರಾದ ಮಕ್ಕಳನ್ನು ಸಂರಕ್ಷಿಸಿ ಸಿದ್ಧತೆಗಳನ್ನು ಮಾಡಿಕೊಳ್ಳಬೇಕು. ಈ ವಿಚಾರ ಇವತ್ತು ಹೊಸದು. ಕ್ರಮೇಣ ಇದು ರೂಢಿಯಾಗಿ ಬಂದು ಮುಖ್ಯ ಕಾರ್ಯ ಕ್ರಮವಾಗಿ ಬೆಳೆಯಬೇಕಾಗಿದೆ.

೧೨ ಮಕ್ಕಳ ಬೆಳವಣಿಗೆಗೆ ಅತ್ಯಾವಶ್ಯಕ ವಸ್ತುಗಳು.

ವಿಶ್ವ ಆರೋಗ್ಯ ಸಂಸ್ಥೆಯ ದೃಷ್ಟಿಯಿಂದ ಒಂದು ಮಗುವಿನ ಬೆಳವಣಿಗೆಯೆಂದರೆ, ಮನಸ್ಸು, ದೇಹ ಮತ್ತು ಭಾವನೆ ಇವು ಮೂರು ಒಟ್ಟಾಗಿ ಬೆಳೆಯಬೇಕೆಂಬುದೇ ಉದ್ದೇಶವಾಗಿದೆ. ಆರೋಗ್ಯ ಸಂಸ್ಥೆಗಳ ದೃಷ್ಟಿ ಈ ಮೂರು ವಿಷಯಗಳನ್ನು ಒಳಗೊಂಡಿರಬೇಕು. ಈ ಮೊದಲು ಹೇಳಿದಂತೆ [illegible] ಅಶುದ್ಧವಾದ ಹಾಲು, ವಾತಾವರಣ ಇತ್ಯಾದಿಗಳು ಮುಖ್ಯ ಕಾರಣಗಳೆಂದು ತಿಳಿಯಲಾಯಿತು. ಒಂದಾನೊಂದು ಕಾಲದಲ್ಲಿ ತಾಯಂದಿರು ಮಕ್ಕಳಿಗೆ ಮೊಲೆ ಹಾಲನ್ನು ಕುಡಿಸುವುದನ್ನು ಬಿಟ್ಟು ಅನಾರೋಗ್ಯವಾದ ಆಕಳ ಹಾಲನ್ನು ಕುಡಿಸಲು ತೊಡಗಿ, ಕರುಳ ಸಂಬಂಧವಾದ ಅನೇಕ ರೋಗಗಳಿಂದ ಸಾವಿರಕ್ಕೆ ನೂರು ಮಕ್ಕಳು ನಾಶವಾಗುತ್ತಿದ್ದರು. ಈ ಪರಿಸ್ಥಿತಿಯು ವೈದ್ಯ ಜ್ಞಾನವು ವಿಶಾಲವಾಗುತ್ತಿದ್ದಂತೆ ನಿವಾರಣೆಯಾಯಿತು. ಆದರೆ ಮಗುವಿನ ಎಚ್ಚರಿಕೆಯ ವಿಚಾರದಲ್ಲಿ ತಿಳಿಯಬೇಕಾದ ವಿಷಯಗಳು ಅನೇಕ ಇವೆ. ತಾಯಿಯು ಬುದ್ಧಿವಂತೆಯಾಗಿದ್ದು ಆರೋಗ್ಯ ಶಿಕ್ಷಣವನ್ನು ಹೊಂದಿಕೊಂಡರೆ ಆ ಜ್ಞಾನವು ಮಕ್ಕಳ ಬೆಳವಣಿಗೆಯಲ್ಲಿ ತುಂಬಾ ಪ್ರಯೋಜನಕಾರಿಯಾಗುತ್ತದೆ. ಇದರ ಜೊತೆಗೆ ದೇಶದ ಸಾಮಾಜಿಕ ಮತ್ತು ಆರ್ಥಿಕ ಪರಿಸ್ಥಿತಿಗಳು ಉತ್ತಮಗೊಳ್ಳಬೇಕು. ಮಗುವಿನ ಮನಶ್ಶಾಸ್ತ್ರದ ಜ್ಞಾನವು ಇತ್ತೀಚೆಗೆ ತುಂಬಾ ಪ್ರಚಾರದಲ್ಲಿ ಬರುತ್ತಿದೆ.

ಉಪಸಂಹಾರವಾಗಿ ಹೇಳುವುದಾದರೆ ಮಕ್ಕಳ ಪೋಷಣೆಯು ದೇಶದ ಅತೀ ಜವಾಬ್ದಾರಿಯ ಕರ್ತವ್ಯ. ಇಂದಿನ ಮಗುವೇ ನಾಳೆಗೆ ದೇಶವನ್ನು ಆಳುವ ಪ್ರಜೆಯಾಗಬೇಕು. ಆ ಮಗುವು ಗರ್ಭದಿಂದ ಜೀವನದ ದಾರಿಯನ್ನು ಹಿಡಿಯುವ ವರೆಗೆ ಉತ್ತಮವಾದ ಆಹಾರ, ವಾತಾವರಣ, ವ್ಯಾಯಾಮ ಶಿಕ್ಷಣ ಇತ್ಯಾದಿಗಳಿಂದ ಪೋಷಿಸಲ್ಪಡಬೇಕು. ಗರ್ಭಿಣಿಯಾದ ಸ್ತ್ರೀಯ ಮನಸ್ಸಿನಲ್ಲಿ ಭಯ, [illegible] ನಿರಾಶೆ ಮುಂತಾದವು ತಲೆದೋರಿದಲ್ಲಿ ಅದರ ಪರಿಣಾಮವು ಮಗುವಿನ ಮೇಲೆ ಉಂಟಾಗುವುದು. ಅದೇ ರೀತಿಯಲ್ಲಿ ಚಿಕ್ಕಮಕ್ಕಳ ಶಿಕ್ಷಣವು ಕೂಡ ನಡೆಯಬೇಕು. ಮಹನೀಯರ ಅನುಭವಸಿದ್ಧವಾದ ಕೆಲವು ಮಾತುಗಳನ್ನು ಈ ಕೆಳ ಕೊಡಲಾಗಿದೆ.

"ಮಗುವಿನ ಸುಖಕ್ಕೆ ಮನೆಯೇ ಮೂಲ.
ಮಾನವನ ಆಕಾಂಕ್ಷೆಗೆ ಮಾತೆಯ ಉದಾಸೀನವೇ ಕಾರಣ."
ಮಗುವೇ ಕುಲಧನ. ಮನೆಗೆ ಮಣಿದೀಪ.
ಮಗುವಿಗೆ ಮಾಡಿದ ಸಹಾಯ ಮಾನವ ಕುಟುಂಬಕ್ಕೆ ಮಾಡಿದಂತೆ.

ಕೊರಿಯಾ ಯುದ್ಧ.

ಸೇನಾಧಿಪತಿ ಮೆಕಾರ್ಥರ ಚಾಣಕ್ಯತಂತ್ರ ಬಯಲುಗೊಳಿಸಿದೆ. ಕಳೆದವಾರ ಚೀನಾಜೊತೆ ಅವರ ಸಂಧಾನವನ್ನು ಬಯಸಿ ಹೇಳಿಕೆ ಕೊಟ್ಟದ್ದನ್ನು ನೋಡಿದಾಗ ನಿಜವಾಗಿಯೂ ಈತ ನಮ್ಮ ಶಾಂತಿಯನ್ನು ಬಯಸುತ್ತಾನೇನೋ ಎಂದು ಭಾವಿಸಿದ್ದೆವು. ಆದರೆ ಇಂದು ಮೆಕಾರ್ಥರ ಸಂಧಾನದ ಒಳಗುಟ್ಟು ಬಯಲಾಗಿದೆ. ಕಮ್ಯೂನಿಸ್ಟ್ ಚೀನವನ್ನು ನಾಶಮಾಡುವ ಹಂಚಿಕೆಯನ್ನು ಹಿಂದಿನಿಂದ ಮಾಡಿ ಸಂಧಾನದ ಮಾತನ್ನು ಮುಂದೆ ತಂದದ್ದು ನೋಡಿದಾಗ ಬೆಕ್ಕು ಸನ್ಯಾಸಿಯಾದ ಕತೆಯು ಜ್ಞಾಪಕ ಬರುತ್ತದೆ. ಕಂಕುಳಲ್ಲಿ ದೊಣ್ಣೆ ಕೈಯಲ್ಲಿ ಶರಣಾರ್ಥಿ! ಚೀನದ ಮೇಲೆ ಪ್ರಬಲ ಧಾಳಿಯನ್ನು ಮಾಡಬೇಕೆಂಬ ಇಚ್ಛೆ ಮೆಕಾರ್ಥರರಿಗೆ ಬಲವಾಗಿದೆಯೆಂಬುದಕ್ಕೆ ಅಮೇರಿಕದ ಆಲ್ಸೋಪ್‌ರವರು ಜಪಾನ್ ಪತ್ರಿಕೆಯಲ್ಲಿ ಪ್ರಕಟಗೊಳಿಸಿದ ಅಂಶಗಳು ಸಾಕಷ್ಟು ಪುಷ್ಟಿಕೊಡುತ್ತವೆ.

ಚೀನದ ಮೇಲೆ ಭಯಂಕರ ದಾಳಿಯನ್ನು ಮಾಡುವ ಪೂರ್ವ ಸಿದ್ಧತೆ ನಡೆದಿರುತ್ತದೆ. ಫಾರ್ಮೋಸಾ ದ್ವೀಪದ ಚೀನಿ ರಾಷ್ಟ್ರೀಯ ಸೈನಿಕರನ್ನು ಚೀನದಲ್ಲಿ ಎರಡನೇ ರಂಗವನ್ನು ನಿರ್ಮಾಣ ಕಾರ್ಯಕ್ಕೆ ಉಪಯೋಗಿಸಿಕೊಳ್ಳುವುದು, ಅಮೇರಿಕೆಯ ವಿಮಾನ, ಹಾಗೂ ನೌಕೆಗಳ ಶಕ್ತಿಯನ್ನು ಹೆಚ್ಚಿಸಿ ನೂರು ಲಕ್ಷ ಸೈನಿಕರನ್ನು ಚೀನದ ಮೇಲೆ ಎರಗುವಂತೆ ಸಂಘಟಿಸುವುದು, ಇವೇ ಮೊದಲಾದ ವಿಚಾರಗಳು ಇವರ ಬೆನ್ನಲೆಯಲ್ಲಿ ನಡೆದದ್ದು ಕಂಡುಬರುತ್ತದೆ. ಅಲ್ಲದೆ ಜಪಾನನ್ನು ಪುನಃ ಶಸ್ತ್ರೀಕರಿಸುವ ಪ್ರಬಲ ಕಾರಣವಾದರೂ ಚೀನದ ವಿರುದ್ಧ ಕತ್ತಿ ಹಿಡಿಯುವುದಕ್ಕಾಗಿಯೇ ಎಂಬುದಕ್ಕೆ ಬೇರೆ ಕಾರಣಬೇಕಾಗಿಲ್ಲ. ಈಗಾಗಲೇ ಜಪಾನದ ೭೫,೦೦೦ ಪೋಲೀಸ್ ಸೈನಿಕರಿಗೆ ಶಸ್ತ್ರಾಸ್ತ್ರಗಳ ಪೂರೈಕೆಯನ್ನು ಮಾಡಲಾಗಿದ್ದು ಯುದ್ಧ ಸನ್ನದ್ಧರಾಗಿರುವಂತೆ ಪ್ರೇರೇಪಿಸಲಾಗಿದೆ. ಬ್ರಿಟನ್, ಫ್ರಾನ್ಸ್‌ಗಳೊಳಗೆ ಕಮ್ಯೂನಿಸ್ಟ್ ಚೀನವನ್ನು ಹತ್ತಿಕ್ಕುವ ಪ್ರಥಮ ಚಟುವಟಿಕೆಯ ಕುರಿತು ಈ ಮೊದಲೇ ವಿವರಿಸಲಾಗಿದೆಯಂತೆ.

ಬಂಡವಳಶಾಹೀ, ಅಮೇರಿಕನರು ಹಾಗೂ ಮೆಕಾರ್ಥರು ಈ ಕಾರ್ಯಸ್ಥಾನ ಕಮ್ಯೂನಿಸ್ಟ್ ಚೀನಾಕ್ಕೆ ಸಂಪೂರ್ಣ ತಿಳಿದೇ ಇದೆ. ಮೆಕಾರ್ಥರು ಹೊರಡಿಸಿದ ಸಂಧಾನವನ್ನು ತೀಕ್ಷ್ಣ ಪ್ರತಿಭಟನೆಯಿಂದ ತಿರಸ್ಕರಿಸಲಾಗಿದೆ. ಮೆಕಾರ್ಥರ ಆಮಂತ್ರಣದ ಕುರಿತು ಪೆಕಿಂಗ್ ಆಕಾಶವಾಣಿಯು ಹೀಗೆ ಸಾರಿದೆ.

'ಬ್ರಿಟಿಷ್, ಅಮೇರಿಕನ ಸೈನ್ಯಗಳನ್ನು ಚೀನದ ಮೇಲೆ ಧಾಳಿಮಾಡುವುದಕ್ಕಾಗಿ ಬಳಸಿಕೊಳ್ಳಲಾಗಿದೆ. ಚೀನದ ಮೇಲೆ ಯುದ್ಧ ಸಾರುವ ಯುದ್ಧ ಸಂಘಟನೆ ಮಾಡಿಕೊಂಡೇ ಮೆಕಾರ್ಥರು ಸಂಧಾನದ ಮಾತುಕತೆಗೆ ಆಮಂತ್ರಣವಿತ್ತಿದ್ದಾರೆ. ಮೆಕಾರ್ಥರ ಈ ಆಮಂತ್ರಣ ಕೇವಲ ಚೀನದವರನ್ನು ಮೋಸಗೊಳಿಸಲಿಕ್ಕೆ ಮಾತ್ರವಲ್ಲದೆ ಬ್ರಿಟಿಷರು ಮತ್ತು ಅಮೇರಿಕದವರನ್ನು ಸಮಾಧಾನಪಡಿಸಲು ಕೂಡ ಆಗಿಲ್ಲ. ಈ ಮೊದಲು ಅವರು ಮಾಡಿದ ಅರ್ಥಶೂನ್ಯ ಹೇಳಿಕೆಗಳಂತೆಯೇ ಇದು ನಿಷ್ಫಲವಾಗಿದೆ. ಅಂತಲೇ ಅವನ್ನು ಕಸದ ಬುಟ್ಟಿಗೆಸೆಯಲಾಗಿದೆ. ಈ ಸಾಮ್ರಾಜ್ಯಶಾಹೀ ಆಕ್ರಮಣಕಾರರ ಹೆಜ್ಜೆ ಇರಿಸಿದ ಹೆಚ್ಚು ಭಾಗವನ್ನು ಮೊದಲೇ ನಾವು ಉಳಿಸಿದ್ದೇವೆ. ಈಗ ಅವರ ಪೂರ್ತಿ ನಾಶ ನಮಗಾಗಬೇಕಾಗಿದೆ. ಬ್ರಿಟನ್, ಅಮೇರಿಕದ ಸೈನ್ಯಗಳು ಚೀನಾದ ಮೇಲೆ ಧಾಳಿಮಾಡುವ ಅಂಶವು ಗಂಭೀರ ಸ್ವರೂಪದ್ದು. ಆದ್ದರಿಂದಾಗಿ ನಾವು ನಮ್ಮ ಸೈನ್ಯವನ್ನು ಭದ್ರಗೊಳಿಸಿ ಶತ್ರುಗಳ ಪ್ರತಿಭಟನೆಗೆ ಸಿದ್ಧರಾಗಬೇಕು. ಚೀನಾದ ಮೇಲಾಗುವ ಘೋರ ಧಾಳಿಯ ಬಗ್ಗೆ ನಾವು ಎಷ್ಟು ಜಾಗ್ರತರಾಗಿದ್ದರೂ ಸಾಲದು. ಅಮೇರಿಕನ ವಿರೋಧ ಚಟುವಟಿಕೆಯನ್ನು ಬಲಪಡಿಸಿ ನಾವು ಸಂಘಟಿತರಾಗಲೇಬೇಕು.'

ಕಮ್ಯೂನಿಸ್ಟ್ ಚೀನದ ಈ ಖಂಡತುಂಡವಾದ ಉತ್ತರವನ್ನು ನೋಡುವಾಗ ಇನ್ನು ಯುದ್ಧದ ಹೊರತು ಸಂಧಾನದ ಮಾತೇ ಇಲ್ಲವೆಂಬಂತಾಗಿದೆ. ಅಮೇರಿಕೆಯ ಚಾಣಕ್ಯನೀತಿಯಿಂದ ಕಮ್ಯೂನಿಸ್ಟ್ ಚೀನಾ ಪರಿಸ್ಥಿತಿಯನ್ನು ಎದುರಿಸುವುದೇ ಮುಖ್ಯವೆಂದು ತಿಳಿದಿದೆ.

ಮೆಕಾರ್ಥರನ್ನು ಕೆಲಸದಿಂದ ನಿವೃತ್ತಿಗೊಳಿಸಿದ ವರ್ತಮಾನ ಇತ್ತಲಾಗಿ ಬಂದಿದೆ.

ಯುದ್ಧದ ಪ್ರಾಮುಖ್ಯ ನಾಯಕರೂ, ಅಮೇರಿಕನರ ಪ್ರೀತಿಪಾತ್ರರೂ ಆದ ಮೆಕಾರ್ಥರು ಇಂದು ಅಮೇರಿಕದ ರಾಜಕೀಯ ವರ್ಗಗಳ ಅತೃಪ್ತಿಗಳಿಗೆ ಕಾರಣವಾಗುತ್ತಲಿದ್ದಾರೆ. ಯುದ್ಧರಂಗದಲ್ಲಿಯ ಅವರ ಆದೇಶಗಳು ನಿರಂಕುಶ ಪ್ರಭುತ್ವದ್ದಾಗಿರುತ್ತವೆ. ಅವರು ಕೊಟ್ಟ ಹೇಳಿಕೆಯ ಕುರಿತು ಗಂಭೀರಸ್ವರೂಪದ ಪ್ರತಿಕೂಲ ವಾತಾವರಣ ಹಬ್ಬಿದೆ. 'ಅವರನ್ನು ಹಿಂದಕ್ಕೆ ಕರೆಸಿಕೊಳ್ಳಿ' ಎಂದು ಕೂಗಿವೆ. "ಈ ಹೇಳಿಕೆಯಿಂದ ಶತ್ರುದಳವು ತನ್ನ ಸೈನ್ಯಬಲವನ್ನು ಹೆಚ್ಚಿಸಿ ಸಂಘಟಿತರಾಗಬಲ್ಲರು. ಮೆಕಾರ್ಥರರ ಈ ಕೃತ್ಯ ಜಾಣತನವಲ್ಲ" "ನಮ್ಮ ಗುಟ್ಟನ್ನು ಬೇರೆಯವರಿಗೆ ಕೊಟ್ಟಂತಾಗಿದೆ ಈ ಹೇಳಿಕೆಯಿಂದ: ಮೆಕಾರ್ಥರ ಅನುಚಿತ ಸ್ವೇಚ್ಛಾನುವರ್ತನೆ ಖಂಡನೀಯ." "ಅವರ ಅಧಿಕಾರ ಕ್ಷೇತ್ರವನ್ನು ಸಡಿಲು ಬಿಟ್ಟದ್ದರಿಂದಲೇ ಇಂತಹ ಪ್ರಮಾದವಾಯಿತು," ಎಂದು ನಾನಾ ಬಗೆಯ ಟೀಕೆ ಟಿಪ್ಪಣಿಗಳು ಮೆಕಾರ್ಥರ ಮೇಲೆ ಅಮೇರಿಕದ ರಾಜಕೀಯ ವರ್ಗಗಳಿಂದಲೇ ಆರಂಭವಾಗಿದೆ. ವಿಶೇಷವಾಗಿ ಬ್ರಿಟಿಷರು ಈ ವಿಚಾರದಲ್ಲಿ ಅಸಮಾಧಾನವನ್ನು ವ್ಯಕ್ತಪಡಿಸಿದ್ದಾರೆ. ಮೆಕಾರ್ಥರ ಸ್ವೇಚ್ಛಾನುವೃತ್ತಿಯನ್ನು 'ನ್ಯೂಸ್ ಕ್ರೋನಿಕಲ್' ಖಂಡಿಸಿ ಅವರನ್ನು ಹಿಂದೆ ಕರೆದುಕೊಳ್ಳಬೇಕೆಂದು ಬರೆದಿದೆ.

೩೮ ನೇ ಅಕ್ಷಾಂಶವನ್ನು ದಾಟುವ ವಿಚಾರದಲ್ಲಿ ತೀರ ಭಿನ್ನಾಭಿಪ್ರಾಯಗಳು ಕಂಡು ಬರುತ್ತಿವೆ. ಶ್ರೀ ಸರ್ ಗಿರಿಜಾಶಂಕರ ಬಾಜಪೇಯಿ (ಕ್ಷಣಾ ಮಾತ್ರದ) ಆಂಗ್ಲ ಪಾರ್ಲಿಮೆಂಟಿನ ಸದಸ್ಯರು, ಇತ್ಯಾದಿ ರಾಜಕೀಯ ಧುರೀಣರು ೩೮ ನೇ ಅಕ್ಷಾಂಶವನ್ನು ದಾಟಿದ ಸಾಹಸ ಮಾಡುವ ಪಕ್ಷದಲ್ಲಿ ತೃತೀಯ ಯುದ್ಧದ ಮಹಾದ್ವಾರವನ್ನು ತೆರೆದಂತೆಯೇ ಆಗುತ್ತದೆಂದು ಅಭಿಪ್ರಾಯಪಟ್ಟಿರುತ್ತಾರೆ. ಮೆಕಾರ್ಥರ ವಾದ ಪರಿಣಾಮವನ್ನು — ಎಲ್ಲರೂ ಅಲಕ್ಷ್ಯ ಮಾಡಿ ನೋಡುವ ಪರಿಸ್ಥಿತಿಯೊದಗಿದೆ. ಮೆಕಾರ್ಥರ ಸಂಧಾನದ ಮಾತುಕತೆಗೆ ಆಮಂತ್ರಣವಿತ್ತದ್ದರೂ ಅವರು ಶಾಂತಿ ಮಾರ್ಗವನ್ನನುಸರಿಸಬೇಕೆಂದು ಸದುದ್ದೇಶದಿಂದ ಪ್ರೇರಿತರಾದವರಲ್ಲವೆಂಬುದು ಈಗ ಸ್ಪಷ್ಟವಾಯಿತು.

ಅಧ್ಯಕ್ಷ ಟ್ರೂಮನರು ಸಂಯುಕ್ತ ರಾಷ್ಟ್ರಗಳಿಗೆ ಕೊರಿಯಾ ಯುದ್ಧವನ್ನು ಶಾಂತ ಸಾಧನಗಳ ಮೂಲಕ ಪರಿಹರಿಸಿಕೊಳ್ಳುವ ವಿಚಾರದಲ್ಲಿ ಪುನಃ ಆಲೋಚನೆ ನಡೆಸುವುದಕ್ಕೆ ಅವಕಾಶ ಕೊಟ್ಟಿರುತ್ತಾರೆ. ಕೊರಿಯಾ ರಣಾಂಗಣದಲ್ಲಿ ಭಾಗವಹಿಸಿದ ರಾಷ್ಟ್ರಗಳ ಸೈನ್ಯಗಳು ಭಾಗವಹಿಸಿರುವ ಆ ಪಕ್ಷಗಳ ಯುದ್ಧ ಪರಿಹಾರದ ಮಾರ್ಗದರ್ಶನಕ್ಕಾಗಿ ಕೇಳಿಕೊಳ್ಳಲಾಗಿದೆ. ಈ ಪ್ರಕಟಣೆಯ ಬಗ್ಗೆ ಈಗಾಗಲೇ ಹಲವು ಪ್ರತ್ಯುತ್ತರಗಳೂ ಇನ್ನು ಕೆಲವು ಉಪಸೂಚನೆಗಳೂ ಬಂದಿವೆ. ಈ ವರ್ತುಲದೊಳಗೆ ಈ ರಾಷ್ಟ್ರಗಳ ಕೊರಿಯದ ಭವಿತವ್ಯದ ಕತೆ ಒಂದು ತೀರ್ಮಾನಕ್ಕೆ ಬರಲಿದೆ.

"ಪನ್ನಗ"

ಮಾರಾಟಕ್ಕಿದೆ.

ಗೋಣಿಕೊಪ್ಪಲಿಂದ ೧½ ಮೈಲು ದೂರದಲ್ಲಿ. ಮೈಸೂರಿಗೆ ಹೋಗುವ ದಾರಿ ಮತ್ತು ಬಾಳೆಲೆಗೆ ಹೋಗುವ ದಾರಿಯ ಪಕ್ಕದಲ್ಲಿ ಚೆನ್ನಂಗೊಲ್ಲಿಯಲ್ಲಿ 8 ಎಕರೆ 69 ಸೆಂಟು ಜಾಗದಲ್ಲಿ 1450 ಕಿತ್ತಳೆ ಗಿಡಗಳು ಮತ್ತು ೩೫೦ ಕಾಫಿ ಗಿಡಗಳು ಮತ್ತು ವರ್ಷಕ್ಕೆ ರೂ 200ರ ಫಸಲು ದೊರೆಯುವ ಒಳ್ಳೆ ಮಾವು, ಹಲಸು ಗಿಡಗಳು ಜಾಗಕ್ಕೆ ತಗಲಿದ ಅಂದಾಜು 3000 ರೂ ಕ್ರಯ ಬಾಳುವ ರೂ 25 ಬಾಡಿಗೆ ಬರುವ ಹಂಚಿನ ಅಂಗಡಿ ಮನೆ. ಮತ್ತು ರೂ 3000 ಬೆಲೆಯ ಬೀಟಿ ಮತ್ತಿ ಮರಗಳು ಮತ್ತು ತೈವಿಕೆಯಲ್ಲಿ ಬಾಳೆ ಗಿಡ ಇರುತ್ತವೆ. ಈ ಜಾಗವು ರೋಡಿಗೆ ಎರಡು ರಸ್ತೆಗಳ ಒತ್ತಿಗೆ ನಿಂತಿರುತ್ತದೆ. ಬೇಕಾದವರು ಬಂದು ವಿಲೇವಾರಿ ಮಾಡಿಕೊಳ್ಳಬಹುದು. 2 ವರ್ಷದ ಕಿತ್ತಳೆ ಫಲಿಗೆ 900 ರೂ ಗಳು ದೊರೆತ್ತವೆ. ಮುಂದಿನ ವರ್ಷ 1000 ರೂ ಮೇಲೆ ಪಡೆಯಬಹುದು. ಇವುಗಳಲ್ಲಿ ಮುಕ್ಕಾಲು ಕಿತ್ತಳೆ ಗಿಡಗಳಿಗೆ 11 ವರ್ಷವೂ, ಕೆಲವು 9 ವರ್ಷದವೂ ಆಗಿರುತ್ತವೆ.

ಬಿ. ಎ. ನಂಜುವಮ್ಮಯ್ಯ
ಮಾಯಮುಡಿ ಗ್ರಾಮ
ಗೋಣಿಕೊಪ್ಪ

ವಾರ್ತೆ.

ಶೇಕ್ಸ್‌ಪಿಯರ್ ಮಹಾಕವಿಯು ಬರೆದ ನಾಟಕಗಳ ಮೂಲ ಪ್ರತಿಯೊಂದು ಇಂಗ್ಲೆಂಡಿನ ಮಿ ಅಲೆಸ್ ಕೀನ್ ಎಂಬವರ ದಾರಿಯಲ್ಲಿ ದೊರೆತಿದೆಯೆಂದೂ, ಇದರ ಮೌಲ್ಯ ಐದು ಲಕ್ಷ ಡಾಲರುಗಳಾಗಬಹುದೆಂದೂ ಹೇಳಲಾಗಿದೆ.

ಕಾಂಗ್ರೆಸ್ ಅಧ್ಯಕ್ಷ ಶ್ರೀ. ಪುರುಷೋತ್ತಮದಾಸ ಟಂಡನರು ಇದೇ ತಾ. ೧೫ ರಿಂದ ಒಂಭತ್ತು ದಿನಗಳ ತನಕ ಕೇರಳ ಸಂಚಾರ ಕೈಕೊಳ್ಳುವರು.

ಮುಂಬಯಿ. ವಿಕ್ಟೋರಿಯಾ ಟರ್ಮಿನಸ್ ಸ್ಟೇಶನ್‌ನಲ್ಲಿ ವಿದ್ಯುಚ್ಛಕ್ತಿಯಿಂದ ಟಿಕೇಟು ಮುದ್ರಿಸಿಕೊಡುವ ಯಂತ್ರಗಳನ್ನು ಇಡಲಾಗಿದೆ. ಪ್ರತಿಯೊಂದು ಯಂತ್ರವು ಬೇರೆ ಬೇರೆ ದರದ ಟಿಕೇಟುಗಳಲ್ಲಿ ಆರೀತಿ ಹಾಕಿ ಕೊಡಬಲ್ಲದು. ವಿಕ್ಟೋರಿಯಾ ಟರ್ಮಿನಸ್‌ನಲ್ಲಿ ಪ್ರತಿ ವರ್ಷ ೬೦ ಲಕ್ಷಕ್ಕಿಂತ ಹೆಚ್ಚು ಟಿಕೇಟುಗಳನ್ನು ಕೊಡಬೇಕಾಗುತ್ತದೆ. ಇಷ್ಟು ಟಿಕೇಟು ಸಂಗ್ರಹಿಸಿ ಸಾಗಿಸಿಕರಣ ಮಾಡಿ ಇಟ್ಟು ಕೊಡುವುದು ತೊಂದರೆಯೆಂದು ಕಂಡಿದ್ದರಿಂದ ಈ ಯಂತ್ರದ ಯೋಜನೆ ಮಾಡಿದೆ. ಈ ಯಂತ್ರದಲ್ಲಿ ಕಾಗದದ ಸುರುಳಿಯನ್ನಿಟ್ಟರಾಯಿತು. ಕೂಡಲೆ ಬೇಕಾದ ದರದ ಟಿಕೇಟು ಮುದ್ರಿಸಿ ಕೊಡುವದು.

ಸಮಾಜವಾದಿ ಪಕ್ಷದ ಧುರೀಣರಾದ ಜಯಪ್ರಕಾಶ ನಾರಾಯಣರು ೧ ನೇ ದಿನಾಂಕ ಸಾಯಂಕಾಲ ವಿಮಾನಮಾರ್ಗವಾಗಿ ರೋಮಿಗೆ ಪ್ರಯಾಣ ಬೆಳಸಿದರು. ರೋಮಿನಲ್ಲಿ ನಡೆಯುವ ಜಾಗತಿಕ ಸಹಕಾರ ಚಳವಳಿಯ ಪಕ್ಷದ ಭಾರತ ಪ್ರತಿನಿಧಿ ಮಂಡಳದ ಧುರೀಣರಾಗಿರುವರು. ಅವರು ಪರಿಷತ್ತಿನ ಕಾರ್ಯ ಮುಗಿಸಿ ಬಳಿಕ ಮಧ್ಯಪೂರ್ವ ಹಾಗೂ ಪೂರ್ವ ಆಫ್ರಿಕಗಳಲ್ಲಿ ಸಂಚಾರ ಕೈಗೊಳ್ಳುವರು.

ಜಗತ್ತಿನಲ್ಲಿ ಈಗ ದುಷ್ಟ ವಿಚಾರಗಳು ಪ್ರಸರಿಸುತ್ತಿದ್ದು ದೇವರ ಅನುಗ್ರಹವನ್ನು ಸಂಪಾದಿಸಲು ಇಂಥ ಯಜ್ಞ ಯಾಗಗಳು ಅವಶ್ಯವಾಗಿವೆ—ದೇವರನ್ನು ಜನರು ಮರೆತದ್ದರಿಂದಲೆ ಘೋರ ಕಷ್ಟ ಅನುಭವಿಸಬೇಕಾಗಿದೆ. ದುರ್ಭಿಕ್ಷ ಹಾಗೂ ಆಹಾರ ಕೊರತೆ ಮೊದಲಾದವುಗಳು ಬಂದಿವೆ ಎಂದು ಮಾನ್ಯ ಕಾಂಗ್ರೆಸಿನ ಅಧ್ಯಕ್ಷ ಟಂಡನ್‌ರು ಅಂಬಾಲಾ ಲಕ್ಷ್ಮೀನಾರಾಯಣ ಮಂದಿರದಲ್ಲಿ ಶಾಸ್ತ್ರೋಕ್ತ ನಡೆದ ಯಜ್ಞವನ್ನು ಪ್ರಾರಂಭಿಸುತ್ತ ಹೇಳಿದರು.

ನಾಲ್ಕನೆ ಅಸ್ಸಾಮ ರೈಫಲ ದಳ ಮತ್ತು ಕೆಲ ಕಮ್ಯೂನಿಸ್ಟ್ ಭೂಗತ ಕಾರ್ಯಕರ್ತರಲ್ಲಿ ೩೦ನೇ ದಿನಾಂಕ ಮೋಯಿರಾಂಗ ಕೆಂಪು ಎಂಬ ಸ್ಥಳದಲ್ಲಿ ಗುಂಡಿನ ದ್ವಂದ್ವ ನಡೆದು ಮೂವರು ಕಮ್ಯೂನಿಸ್ಟರು ಸತ್ತರು. ಗಸ್ತಿಗೆ ಹೋದ ಸಿಪಾಯಿಯ ಮೇಲೆ ಕಮ್ಯೂನಿಸ್ಟರು ಎರಗಿ ಬಂದು ಗುಂಡು ಹಾರಿಸಿದ್ದರಿಂದ ಅವನು ಸತ್ತನು. ಅನಂತರ ರೈಫಲ ದಳದವರು ಗುಂಡು ಹಾರಿಸಬೇಕಾಯಿತು.

ಕೊಡಗು

ತಾ. ೧೫-೪-೧೯೪೯ನೇ ಶುಕ್ರವಾರ

ಕೊಡಗಿನ ಭವಿಷ್ಯತ್ತು.

ಮೂರು ವಾರಗಳ ಹಿಂದೆ ಕೊಡಗಿನ ಭವಿಷ್ಯತ್ತನ್ನು ಕುರಿತು ಟೀಕಿಸಿದ್ದಾಗ್ಯೂ ಮಾರ್ಚ್ ತಾರೀಕು ೧೬ರ ಪಾರ್ಲಿಮೆಂಟ್ ಸಭೆಯಲ್ಲಿ ಗೃಹಮಂತ್ರಿಗಳ ಪರವಾಗಿ ಕೊಟ್ಟ ಉತ್ತರದಲ್ಲಿ ಕೊಡಗು ಇಂದಲ್ಲ ನಾಳೆ ಬೇರೆ ಪ್ರಾಂತದೊಡನೆ ಸಂಯೋಜಿಸಲ್ಪಡುವದೆಂಬ ಅಭಿಪ್ರಾಯವನ್ನು ಖಂಡಿಸಿ ಬರೆದಿದ್ದೆವು. ಜನರ ಅಭಿಪ್ರಾಯವನ್ನು ಕೇಳದೆ ಪ್ರಾಂತದ ಭವಿಷ್ಯತ್ತನ್ನು ತೀರ್ಮಾನಿಸುವ ಹಕ್ಕು ಯಾರಿಗೂ ಇಲ್ಲವೆಂಬುದೇ ನಮ್ಮ ಟೀಕೆಯ ತಿರುಳಾಗಿತ್ತು. ಪಾರ್ಲಿಮೆಂಟಿನಲ್ಲಿ ಈ ತರದ ಅಭಿಪ್ರಾಯವನ್ನು ಕೊಡಲು ಕಾರಣವೇನೆಂಬುದನ್ನು ಕಂಡುಹಿಡಿಯಲು ಡೆಲ್ಲಿಯಲ್ಲಿ ಸಂಬಂಧಪಟ್ಟ ಅಧಿಕಾರಿಗಳನ್ನು ಕೇಳಿ ವಿಚಾರಿಸಿದ ಫಲಿತಾಂಶವಾದರೂ ಈ ಕೆಳಗಿನಂತಿದೆ.

ಕೊಡಗಿನ ಭವಿಷ್ಯದ ತೀರ್ಮಾನವೇನೂ ಆಗಿರುವದಿಲ್ಲ. ಇಂಥಾ ತೀರ್ಮಾನವಾದರೂ ಬರುವ ಸಾರ್ವತ್ರಿಕ ಚುನಾವಣೆಯೊಳಗೆ ಆಗುವಂತಿಲ್ಲ. ಏಕೆಂದರೆ ಹೊಸರಾಜ್ಯಘಟನೆಯ ಮೂರನೇ ಮತ್ತು ೨೪೦ನೇ ಸೆಕ್ಷನುಗಳ ಪ್ರಕಾರ ಸಂಯೋಜನೆಯಾಗುವ ಮತ್ತು ಸಂಯೋಜನೆಯನ್ನು ಮಾಡಿಕೊಳ್ಳುವ ಪ್ರಾಂತಗಳ ಜನರ ಅಭಿಪ್ರಾಯಗಳನ್ನು ತೆಗೆಯದೆ ಸಂಯೋಜನೆಯ ಯಾವ ತೀರ್ಮಾನವನ್ನೂ ಮಾಡಲಾಗುವದಿಲ್ಲವೆಂದಿದೆ. ಆದಕಾರಣ ಬರುವ ಸಾರ್ವತ್ರಿಕ ಚುನಾವಣೆಯು ಮುಗಿದನಂತರವೇ ಯಾವುದೊಂದು ಖಾಯಂ ತೀರ್ಮಾನವನ್ನು ಮಾಡುವದು ಸಾಧ್ಯವಾಗುವದು. ತನ್ನ ಪ್ರಾಂತದ ಭವಿಷ್ಯತ್ತನ್ನು ತೀರ್ಮಾನಿಸುವ ಹಕ್ಕು ಅಲ್ಲಿಯ ಜನತೆಗಿರಬೇಕೆಂದೇ ಈ ವರೆಗೆ ನಾವು ಮಾಡುತ್ತಿದ್ದ ವಾದವಾಗಿದೆ. ಈ ಹಕ್ಕು ಜನರಿಗೆ ಕಾದಿಡಲ್ಪಟ್ಟಿದೆ ಎಂದು ತಿಳಿಯ ಬಂದುದು ಸಂತೋಷದ ವಿಚಾರ. ಆದುದರಿಂದ ದೇಶದ ಜನರು ತಮ್ಮ ಪ್ರಾಂತ್ಯದ ಭವಿಷ್ಯತ್ತನ್ನು ಯಾವ ರೀತಿಯಲ್ಲಿ ತೀರ್ಮಾನಿಸಬೇಕೆಂದು ತಮ್ಮ ಅಭಿಪ್ರಾಯವನ್ನು ಸೂಚಿಸಲು ಬರುವ ಚುನಾವಣೆಯನ್ನು ಉಪಯೋಗಿಸಿಕೊಳ್ಳಬೇಕಾಗಿದೆ. ಇಂಥಾ ಅಮೂಲ್ಯವಾದ ಹಕ್ಕು ಕಳೆದು ಹೋಗುವದೆಂಬ ಸುದ್ದಿಯು ಸಿಕ್ಕಿದಕೂಡಲೇ ಜನತೆಯು ಎಚ್ಚರಗೊಂಡು ಅಲ್ಲಲ್ಲಿ ಸಭೆಗಳನ್ನು ನಡೆಸಿ ತಮ್ಮ ಅಭಿಪ್ರಾಯವನ್ನು ಠರಾವುಗಳ ಮೂಲಕ ಸೂಚಿಸಿಯೂ ನೂರಾರು ತಂತಿಗಳನ್ನು ಇಂಡಿಯಾ ಸರಕಾರಕ್ಕೆ ಕಳುಹಿಸಿಯೂ ದೇಶದ ಭವಿಷ್ಯತ್ತಿನ ವಿಚಾರದಲ್ಲಿ ಇಲ್ಲಿಯ ಜನರು ಎಷ್ಟರ ಮಟ್ಟಿಗೆ ಆಸಕ್ತರಾಗಿದ್ದಾರೆಂಬುದನ್ನು ಸ್ಪಷ್ಟಪಡಿಸಿದ್ದು ಯುಕ್ತವಾಗಿದೆ. ಈ ರೀತಿಯ ಚಳವಳಿವು ಪರಿಣಾಮಕಾರಿಯೋ ಬುದಗಲ್ಲಿ ಸಂಶಯವಿಲ್ಲ.

ಬರುವ ಚುನಾವಣೆ ವರೆಗೆ ಜನತೆಯ ಅಭಿಪ್ರಾಯವನ್ನು ತಿಳಿಯುವದು ಸಾಧ್ಯವಿಲ್ಲದಿದ್ದರೂ ಅಲ್ಲಿಯ ವರೆಗೆ ಇಷ್ಟರ ವರೆಗಿದ್ದಂತೆಯೇ ಚೀಫ್ ಕಮಿಷನರ ಆಡಳಿತವನ್ನೇ ನಡೆಸುತ್ತಿರುವದು ಸರಿಯಲ್ಲವೆಂಬುದು ಇಂಡಿಯಾ ಸರಕಾರಕ್ಕೆ ಖಚಿತವಾಗಿದೆ. ಆದ್ದರಿಂದಲೇ ಈ ತಾತ್ಕಾಲಿಕ ಸಮಯದಲ್ಲಿ ಜನಪ್ರಿಯ ಮುಂದಾಳುಗಳಲ್ಲಿ ಕನಿಷ್ಠ ಪಕ್ಷ ಇಬ್ಬರಾದರೂ ಆಡಳಿತೆಯ ಜವಾಬ್ದಾರಿಯನ್ನು ಚೀಫ್ ಕಮಿಷನರೊಡನೆ ವಹಿಸುವ ಏರ್ಪಾಡು ಮಾಡಲಾಗುವದೆಂದು ಸೂಚಿಸಲಾಗಿದೆ. ಜನತೆಗೆ ಆಡಳಿತದಲ್ಲಿ ಏನೊಂದೂ ಕೈ ಇಲ್ಲದೆ ಒಬ್ಬರ ಅಧಿಕಾರದಲ್ಲೇ ನಡೆಸಲ್ಪಡುವದು ಸರಿಯಲ್ಲ. ಆ ಕೊರತೆಯನ್ನು ಹೋಗಲಾಡಿಸಲು ಸರಕಾರದವರು ಮಾಡುವಂಥಾ ಏರ್ಪಾಡಾದರೂ ತೋರಿಕೆಯದಾಗಿರದೆ ನಿಜಕ್ಕೂ ಪರಿಣಾಮಕಾರಿಯಾಗಿರಬೇಕಾಗಿದೆ. ಈ ಏರ್ಪಾಡಿನಿಂದ ಸಾಧ್ಯವಾದಷ್ಟು ಮಟ್ಟಿಗೆ ಜನತೆಯ ಅಭಿಪ್ರಾಯವು ಸರಕಾರದ ಆಡಳಿತದಲ್ಲಿ ಪ್ರತಿಬಿಂಬಿಸುವಂತೆ ಮಾಡಲು ಇಂಡಿಯಾ ಸರಕಾರವು ಬೇಗನೆ ತಯಾರಿಸಿ ಪಾರ್ಲಿಮೆಂಟಿನ ಮುಂದಿಡುವ ಮಸೂದೆಯಲ್ಲಿ ತಕ್ಕ ಅನುವನ್ನು ಮಾಡುವರಾಗಿ ಆಶಿಸುತ್ತೇವೆ.

ಬತ್ತದ ಬೆಲೆ.

ಕೊಡಗಿನಲ್ಲಿ ಈ ವರ್ಷದ ಬತ್ತದ ಬೆಲೆಯನ್ನು ಏರಿಸಬೇಕೆಂದು ದೇಶದ ಉದ್ದಗಲಕ್ಕೂ ಶಾಸನ ಸಭೆಯಲ್ಲೂ ಚಳವಳಿವು ನಡೆಯಿತು. ಆದರೆ ಇಡೀ ಹಿಂದೂ ದೇಶದಲ್ಲಿ ಈ ವರ್ಷ ಬತ್ತದ ಬೆಲೆಯನ್ನು ಏರಿಸಲಾಗುವದಿಲ್ಲವೆಂದು ಇಂಡಿಯಾ ಸರಕಾರವು ತೀರ್ಮಾನ ಮಾಡಿದ್ದರಿಂದ ಉಳುವರು ಬತ್ತವನ್ನು ಕೊಂಡುಕೊಳ್ಳುತ್ತಿರುವ ವ್ಯಾಪಾರಿಗಳು ಪ್ರಾಂತದಲ್ಲಿ ರೈತನಿಗೆ ದೊರೆಯುತ್ತಿರುವ ಬೆಲೆಯನ್ನಾದರೂ ಅಂದರೆ ಗಾಡಿಗೆ ೧೦ ರೂ. ಹೆಚ್ಚು ದೊರೆಯುವಂತೆ ಮಾಡಬೇಕೆಂದು ಇಂಡಿಯಾ ಸರಕಾರವನ್ನು ಸ್ಥಳೀಯ ಸರಕಾರದ ಮೂಲಕ ಕೇಳಿಕೊಳ್ಳಲಾಯಿತು. ಆದರೆ ಇಂಡಿಯಾ ಸರಕಾರವು ಈ ಕೋರಿಕೆಯನ್ನು ಸಲ್ಲಿಸಲಾಗುವದಿಲ್ಲವೆಂದು ಜವಾಬಿತ್ತಿತು. ಆದರೂ ಕೊಡ ಬತ್ತ ಬೆಳೆಸುವವರು ಈ ಉತ್ತರದಿಂದ ಸುಮ್ಮನಾಗದೆ ಸಹಕಾರಿ ಫೆಡರೇಶನಿನ ಅಧ್ಯಕ್ಷರ ಮೂಲಕ ತಮ್ಮ ಮನವಿಯೊಂದನ್ನು ಆಹಾರ ಇಲಾಖೆಯ ಮಂತ್ರಿಯವರಿಗೆ ಖುದ್ದಾಗಿ ತಾ. ೧೪-೩-೪೯ರಲ್ಲಿ ಕೊಡಿಸಿದರು. ಇದರ ಫಲಿತಾಂಶವಾಗಿ ಈ ತಾರೀಕು ೫ರಲ್ಲಿ ಇಂಡಿಯಾ ಸರಕಾರದ ಆಹಾರ ಇಲಾಖೆಯ ಅಧಿಕಾರಿಗಳಿಂದ ಬಂದ ಜವಾಬಿನಿಂದ ಇಲ್ಲಿಯ ಬತ್ತದ ಬೆಲೆಯನ್ನು ಏರಿಸುವ ವಿಚಾರದಲ್ಲಿ ತುಂಬಾ ಯೋಚಿಸಿ ಮೇ ೧೫ರ ವರೆಗೆ ಎರಡು ತಿಂಗಳ ಮಟ್ಟಿಗೆ ಗಾಡಿಗೆ ಆರು ರೂಪಾಯಿಯಂತೆ ಏರಿಸಿರುವರೆಂದು ತಿಳಿಯಬರುತ್ತದೆ. ಇದರಿಂದ ಜನರ ಪೂರ್ತಿ ಕೋರಿಕೆಯು ಸಲ್ಲಿಸಲ್ಪಡದಿದ್ದರೂ ಹತ್ತು ರೂಪಾಯಿಯಲ್ಲಿ ಆರು ರೂಪಾಯಿಗಳಷ್ಟಾದರೂ ಏರಿಸಿ ಕೊಟ್ಟದ್ದು ಜನತೆಯಲ್ಲಿ ಒಂದು ರೀತಿಯ ತೃಪ್ತಿಯನ್ನು ಉಂಟುಮಾಡದಿರದು. ಇಲ್ಲಿಯ ಬತ್ತ ಬೆಳೆವವರ ಕೋರಿಕೆಯಾದರೂ ನ್ಯಾಯಸಮ್ಮತವಾದುದೆಂದು ಇಂಡಿಯಾ ಸರಕಾರದವರು ಒಪ್ಪಿದ್ದು ರೈತನ ಹಿತವನ್ನು ಸಾಧಿಸಲು ಅವರು ಎಷ್ಟರ ಮಟ್ಟಿಗೆ ಸಿದ್ಧರಾಗಿರುವರೆಂಬುದನ್ನು ಸ್ಪಷ್ಟಪಡಿಸುತ್ತದೆ. ಆದರೆ ಈ ಬೆಲೆಯು ಬರೇ ಎರಡು ತಿಂಗಳ ಮಟ್ಟಿಗೆ ಮಾತ್ರ ಜಾರಿಯಲ್ಲಿರುವದೆಂದು ಹೇಳಿರುವದು ಅಷ್ಟೊಂದು ಸೂಕ್ತವಲ್ಲ. ಏಕೆಂದರೆ ಸ್ಥಳೀಯ ಸರಕಾರದವರು ಇಂಡಿಯಾ ಸರಕಾರಕ್ಕೆ ಬತ್ತದ ಬೆಲೆಯನ್ನು ಏರಿಸಲು ಪತ್ರ ಬರೆದದ್ದಕ್ಕೆ ಬೆಲೆಯನ್ನು ನಂತರ ಏರಿಸಿದರೂ ಕೂಡ ಮೊದಲಿನಿಂದಲೇ ಬತ್ತ ಮಾರಿದವರಿಗೆ ಈ ಹೆಚ್ಚಿನ ಬೆಲೆಯು ಕೊಡಿಸಲ್ಪಡುವದೆಂದು ಪ್ರಕಟಿಸಿದ್ದರು. ಅದರಂತೆ ಈ ವರ್ಷ ಬತ್ತ ಮಾರಿದವರಿಗೆಲ್ಲ ಈ ಹೆಚ್ಚಿನ ಬೆಲೆಯು ದೊರಕುವಂತೆ ಮಾಡಬೇಕಾದ್ದು ನ್ಯಾಯವಾಗಿದೆ. ಈ ಏರ್ಪಾಡನ್ನು ಸ್ಥಳೀಯ ಸರಕಾರದವರು ಕೂಡಲೇ ಮಾಡುವರಾಗಿ ಆಶಿಸುತ್ತೇವೆ.

ವರ್ತಮಾನ.

ಏಪ್ರಿಲ್ ೧೭ನೇ ಆದಿತ್ಯವಾರ ವೀರಾಜಪೇಟೆ ಶ್ರೀಕಾವೇರಿ ಆಶ್ರಮದಲ್ಲಿ ಶ್ರೀರಾಮನವಮಿಯ ಉತ್ಸವ ನಡೆಯುತ್ತದೆ. ಈ ಸಂದರ್ಭ ಶ್ರೀ ವಿ. ಎಸ್. ರಾಮಕೃಷ್ಣ ಇವರು "ಶ್ರೀರಾಮನ" ಈ ವಿಷಯ ಭಾಷಣ ಮಾಡುವರು.

ಏಪ್ರಿಲ್ ೧೭ ರಿಂದ ಏಪ್ರಿಲ್ ೨೭ ರ ವರೆಗೆ ವೀರಾಜಪೇಟೆ ಬಾಲಕರ ಶ್ರೀರಾಮ ಮಂದಿರದಲ್ಲಿ ರಾಮೋತ್ಸವವು ಜರಗುವದು. ತಾ. ೨೪ರ ಸಂಜೆ ೭ ಗಂಟೆಗೆ ಮೆರವಣಿಗೆಯ ಏರ್ಪಾಡಿದೆ.

ತಾರೀಕು ೨೪-೩-೪೯ ರ ಟೆಂಪಲ್ ಫಂಡ್ ಕಮಿಟಿ ಮೀಟಿಂಗಿನಲ್ಲಿ ಟೆಂಪಲ್ ಫಂಡ್ ಪ್ರೆಸಿಡೆಂಟ್‌ತನಕ್ಕೆ ಚುನಾವಣೆಯಾಯಿತು. ಶ್ರೀಗಳಾದ ಕೆ. ಜಿ. ಬೆಳ್ಯಪ್ಪನವರೂ, ಪಾಂಡಂಡ ಚಂಗಪ್ಪನವರೂ ಉಮೇದುವಾರರಾಗಿದ್ದರು. ಶ್ರೀ ಪಾಂಡಂಡ ಚಂಗಪ್ಪನವರು ಬಹುಮತದಿಂದ ಆರಿಸಲ್ಪಟ್ಟಿರುವರು.

ತಾರೀಕು ೧೧ ರಲ್ಲಿ ವೀರಾಜಪೇಟೆಯಲ್ಲಿ ಶ್ರೀ ಬಿದ್ದಂಡ ಸುಬ್ಬಯ್ಯನವರ ಅಧ್ಯಕ್ಷತೆಯಲ್ಲಿ ಒಂದು ಸಾರ್ವಜನಿಕ ಸಭೆ ನಡೆದು ಶ್ರೀ ಪಿ. ಐ. ಬೆಳ್ಯಪ್ಪನವರು ಡೆಲ್ಲಿಯಲ್ಲಿ ಕೊಡಗಿನ ಭವಿಷ್ಯದ ವಿಚಾರದಲ್ಲಿ ತೋರಿಬಂದ ವಿವರಗಳನ್ನು ಮತ್ತು ಬತ್ತದ ಬೆಲೆಯನ್ನು ಏರಿಸಿದ ವಿಚಾರವನ್ನು ಕುರಿತು ಮಾತಾಡಿದರು.

ಕೊಡಗು ಶಾಸನ ಸಭೆಯ ಬಜೆಟ್ ಮೀಟಿಂಗನ್ನು ತಾ ೧೬-೪-೪೯ ರಿಂದ ತಾರೀಕು ೧೮-೪-೪೯ಕ್ಕೆ ಮುಂದರಿಸಲಾಗಿದೆ.

ಇಂಡಿಯಾ ಸರಕಾರದವರು ಕೊಡಗಿನಲ್ಲಿ ಬತ್ತದ ಬೆಲೆಯನ್ನು ಮೇ ತಿಂಗಳು ೧೫ ರ ವರೆಗೆ ಎರಡು ತಿಂಗಳ ಮಟ್ಟಿಗೆ ಗಾಡಿಗೆ ರೂ ೬|- ರಂತೆ ಏರಿಸಿರುವರಾಗಿ ತಿಳಿಯಬರುತ್ತದೆ.

ಜಿಲ್ಲಾ ವಿದ್ಯಾಧಿಕಾರಿಗಳಾಗಿ ನಿವೃತ್ತರಾದ ಕಾಳ ರಾಜಿನಾಮೆ ಇತ್ತ ಶ್ರೀ ಬಿ. ಎಸ್. ಕುಶಾಲಪ್ಪನವರ ಬದಲು ಕೊಡಗು ಶಾಸನ ಸಭೆಗೆ ಶ್ರೀ ಕೋಳೆರ ಕುಟ್ಟಪ್ಪನವರನ್ನು ಸದಸ್ಯರಾಗಿ ನೇಮಿಸಲಾಗಿದೆ.

ಹೊಸದಾಗಿ ತೆರೆಯಲ್ಪಟ್ಟ ನೂಜಿಬಾಯಿಗಳ ಬಸ್ ಲೈನಿಗೆ ಮಡಿಕೇರಿ ಸಿದ್ದಾಪುರ ವೀರಾಜಪೇಟೆಗಳಲ್ಲಿ ಗೂಜಿಸಿಪಾಯಿಗಳ ಏಜಂಟರುಗಳು ಬೇಕಾಗಿದ್ದಾರೆ. ಕುತೂಹಲವುಳ್ಳವರು ಇದೇ ತಾರೀಕು ೨೦ಕ್ಕೆ ಬೆಳಿಗ್ಗೆ ೧೦ ಘ. ಮಡಿಕೇರಿ ಡಿಸ್ಟ್ರಿಕ್ಟ್ ಎಂಪ್ಲಾಯಿಮೆಂಟ್ ಆಫೀಸಿಗೆ ಹಾಜರಾಗಬೇಕಾಗಿದೆ.

ಎಸ್. ಎಸ್. ಎಲ್. ಸಿ. ಪಾಸಾಗಿ ಪ್ರಾಯ ೧೭ರಿಂದ ಮೇಲೆ ಇರುವವರು ರೈಲ್ವೆಗೆ ಬೇಕಾಗಿರುವರು. ಕುತೂಹಲವುಳ್ಳವರು ಏಪ್ರಿಲ್ ತಾರೀಕು ೧೫ರ ಒಳಗೆ ಮಡಿಕೇರಿ ಎಂಪ್ಲಾಯ್‌ಮೆಂಟ್ ಆಫೀಸಿನಿಂದ ಹೆಚ್ಚಿನ ವಿಷಯವನ್ನು ತಿಳಿದುಕೊಳ್ಳಬಹುದು.

ಪ್ರಕಟಣೆ.

ಶ್ರೀ ಮೂಲ ಕಾವೇರಮ್ಮನವರ ಹೆಸರಿನಲ್ಲಿ ಧರ್ಮಾದಾಯ ವಸೂಲಾತಿ ಬಗ್ಗೆ ಎಲ್ಲಾ ಕಡೆ ಏಜಂಟರು ದೊರೆಯದ ಕಾರಣ ಧರ್ಮಾದಾಯ ಮಾಗಿ ಭಕ್ತರು ಕೊಡುವ ಮೊಬಲಗನ್ನು ದೇವಸ್ಥಾನದ ಪ್ರೆಸಿಡೆಂಟರವರ ಹೆಸರಿಗೆ ಮನಿಯಾರ್ಡರು ಮೂಲಕ ಕಳುಹಿಸಬೇಕೆಂದು ಕೇಳಿಕೊಳ್ಳಲಾಗಿದೆ.

ಡಾ. ಬಿ. ಪಿ. ಎ. ಚಂಗಪ್ಪ
ಪ್ರೆಸಿಡೆಂಟ್
ಟೆಂಪಲ್ ಫಂಡ್ಸ್ ಕಮಿಟಿ

IN MEMORIAM.

In ever loving and cherished Memory of our beloved son "SONNY" who suddenly left to his Heavenly Home, on the sad day of 14th April 1949.

May his Soul Rest in Peace. Inserted by his grief stricken Parents Dr. & Mrs. C. B. Achiah, Mercara.

AYURVEDA.

for EFFICACIOUS and GENUINE medicines

THE COCHIN AYURVEDIC LABORATORIES, LTD.
TRICHUR S. INDIA
Sole Agent for Coorg.
M/S WARUNNY DISPENSARY
MERCARA.

2-1

ಕಾಂಗ್ರೆಸ್ ಸಂಘಟನೆಯ ಭವಿತವ್ಯ.

ಲೇ:—ಶ್ರೀ ಗೋ. ಬಾ ಮಹಾಶಬ್ದೆ, ಮುಂಬಯಿ.

ಅಖಿಲ ಹಿಂದೂಸ್ಥಾನದಲ್ಲಿ ಎಲ್ಲಕ್ಕಿಂತಲೂ ದೊಡ್ಡದಾದ ರಾಜಕೀಯ ಸಂಸ್ಥೆಯೆಂದರೆ ಕಾಂಗ್ರೆಸ್ಸೇ ಸರಿ; ಇಷ್ಟೇ ಅಲ್ಲದೆ ಜಗತ್ತಿನಲ್ಲಿಯ ದೊಡ್ಡ ದೊಡ್ಡ ರಾಜಕೀಯ ಸಂಘಟನೆಗಳಿಗಿಂತಲೂ ಕಾಂಗ್ರೆಸ್ಸಿಗೆ ಹೆಚ್ಚಿನ ಮಾನ್ಯತೆಯು ದೊರಕಿರುತ್ತದೆ. ಈ ದೇಶದಲ್ಲಿಯ ಬ್ರಿಟಿಷ್ ಸಾಮ್ರಾಜ್ಯಶಾಹಿಯನ್ನು ನಷ್ಟಗೊಳಿಸಿ, ಶಾಂತ ಮಾರ್ಗದಿಂದ ಸ್ವರಾಜ್ಯವನ್ನು ಪ್ರಸ್ಥಾಪಿಸುವ ಧ್ಯೇಯವನ್ನು ಸಾಧಿಸಿ ಜಗತ್ತಿನ ಇತಿಹಾಸದಲ್ಲಿಯೇ ಅಪೂರ್ವ ಯಶಸ್ಸನ್ನು ಕಾಂಗ್ರೆಸ್ಸು ಸಂಪಾದಿಸಿರುತ್ತದೆ. ಹೀಗಿದ್ದೂ ಕಳೆದ ನಾಲ್ಕಾರು ವರ್ಷಗಳಲ್ಲಿ ನಡೆದು ಹೋದ ಅಘಟಿತ ಘಟನೆಗಳ ಪರಿಣಾಮವಾಗಿ ಈ ಸಂಸ್ಥೆಗೆ (ಕಾಂಗ್ರೆಸ್ಸಿಗೆ) ಆಯುಷ್ಯವಿದೆಯೋ ಇಲ್ಲವೋ ಎಂಬ ಬಗ್ಗೆ ಸಂಶಯವೇ ಆಗುವಂತೆ-ಆಧಾರ ಸ್ತಂಭ ಬಾಗುವಂತೆ-ಬಲವಾದ ಹೊಡೆತವು ಬಿದ್ದಿರುವುದು. ದೇಶದ ವಿಚ್ಛೇದ, ಸ್ವತಂತ್ರ ಭಾರತ ರಾಜಸತ್ತೆಯ ಸ್ಥಾಪನೆ, ಮಹಾತ್ಮಾಜಿಯವರ ಕೊಲೆ, ಸರದಾರ ಪಟೇಲರ ನಿಧನ, ಇಂತಹ ಒಂದರ ಹಿಂದೊಂದರಂತೆ ಬಂದ ಹೊಡೆತಗಳಿಂದ ಕಾಂಗ್ರೆಸ್ಸು ಸಂಸ್ಥೆಯ ಆಧಾರ ಗಟ್ಟಿ ತಳಹದಿಯ ಸಂಘಟನಾ ಸಂಧಿಸವೂ ಕುಸಿದು ಬೀಳದಿದ್ದರೂ ಅದು ಅಲ್ಲಲ್ಲಿ ಮುರಿದು ಹೋಗಿ ಎಲ್ಲಿ ನೆಲಸಮವಾಗುವದೋ ಎಂದು ಅನಿಸಹತ್ತಿದೆ. ಜಾತೀಯ ಐಕ್ಯ ಮತ್ತು ಏಕರಾಷ್ಟ್ರೀಯತ್ವ ಈ ತತ್ವಗಳ ಜೋಪಾಸನೆಯನ್ನು ಕಾಂಗ್ರೆಸ್ಸು ಮಾಡಿದಷ್ಟು ಇತರ ಯಾವ ರಾಜಕೀಯ ಸಂಘಟನೆಗಳು ಮಾಡಿಲ್ಲ. ಈ ದೇಶ ವಿಭಜನೆಯಾದುದರಿಂದ ಈ ಎರಡೂ ತತ್ವಗಳಿಗೆ ಒಂದು ದೊಡ್ಡ ಏಟು ಬಿತ್ತು. ಜಾತೀಯ ಐಕ್ಯವಂತೂ ಸಾಧಿಸಲಿಲ್ಲ. ಆದರೆ ದೇಶವು ತುಂಡಾಗಿ ಎರಡು ಭಾಗಗಳಾದುದರಿಂದ ಅದರ ಜತೆಗೆ ಕಾಂಗ್ರೆಸ್ಸು ಸಂಘಟನೆಯಲ್ಲಿಯೂ ಒಡಕು ಉಂಟಾಯಿತು. ದೇಶದ ಸ್ವಾತಂತ್ರ್ಯಕ್ಕಾಗಿ ಹಗಲಿರುಳು ಹೆಗಲು ಹಚ್ಚಿ ಹೋರಾಡಿದ ಸಹಸ್ರಾರು ದೇಶಬಾಂಧವರು ಈ ವಿಭಜನೆಯ ಮೂಲಕ ಒಬ್ಬರಿಗೊಬ್ಬರು ಬೇರಾದರು. ಇಷ್ಟೇ ಅಲ್ಲದೆ ತನ್ನ ಸ್ವದೇಶದಲ್ಲಿ ಕೂಡಾ ಪರಕೀಯರೆಂದು ಗಣಿಸಲ್ಪಡುವ ಪರಿಸ್ಥಿತಿ ನಿರ್ಮಾಣವಾಯಿತು. ಇಂಥ ಪರಿಸ್ಥಿತಿಯಲ್ಲಿ ಹೀಗಾಗುವದು ಅಪರಿಹಾರ್ಯವೆಂದು ಸ್ಪಷ್ಟವಾಗಿ ಕಾಣುತ್ತಿದ್ದರೂ ಅದರ ಪರಿಣಾಮವನ್ನು ಸಂಘಟನೆಯು ದೊಡ್ಡ ಪ್ರಮಾಣದಲ್ಲಿ ಭೋಗಿಸಬೇಕಾಗಿ ಬಂದಿದೆ ಎಂಬುದು ಈ ಸಂಘಟನೆಯ ಭವಿತವ್ಯದ ವಿಚಾರ ಮಾಡುವಾಗ ಮರೆಯತಕ್ಕದ್ದಲ್ಲ.

ಸ್ವರಾಜ್ಯ ಪ್ರಾಪ್ತಿಯ ನಂತರ ಕಾಂಗ್ರೆಸ್ಸಿನ ಕೈಯಲ್ಲಿ ರಾಜಕೀಯ ಸತ್ತೆ ಬಂತು. ಇದರಿಂದಲೂ ಸಂಘಟನೆಯ ಮೇಲೆ ದೊಡ್ಡ ಪರಿಣಾಮವಾಗಿದೆ. ಕಾಂಗ್ರೆಸ್ಸು ಸಂಸ್ಥೆಯು ಆಗ ಪ್ರಸ್ಥಾಪಿಸಲ್ಪಟ್ಟಿದ್ದ ಸರಕಾರದೊಡನೆ ಹೋರಾಡುವಂಥ ಒಂದು ಸಂಸ್ಥೆಯಾಗಿರುವವರೆಗೆ ಅದರ ಕಾರ್ಯಕರ್ತರಲ್ಲಿ ಏರಾಪೇರಿ, ವೈಮನಸ್ಸು ಅಥವಾ ಅಧಿಕಾರದ ಅಭಿಲಾಷೆ ಇವುಗಳಿಗೆ ಸ್ಥಾನವಿದ್ದಿಲ್ಲ. ಕಾಂಗ್ರೆಸದಲ್ಲಿಯ ಅಧಿಕಾರದ ಸ್ಥಾನಗಳಿಗಾಗಿ ಯಾರೂ ಹೆಚ್ಚಾಗಿ ಏರಾಟ ನಡೆಸುತ್ತಿರಲಿಲ್ಲ. ಸತ್ತಾಧೀಶರ ದಬ್ಬಾಳಿಕೆಯಲ್ಲಿ ಸಿಕ್ಕಿದವರಲ್ಲಿ ಪರಸ್ಪರ ಬಂಧು ಭಾವವು ಹೆಚ್ಚಾಗಿ ಕಾಣುತ್ತಿತ್ತು. ಆಗ ಸತ್ತಾಧೀಶರೊಡನೆ ಹೋರಾಟ ಮುಗಿದು ಕಾಂಗ್ರೆಸ್ಸು ಸತ್ತಾಧಿಕಾರಿಯೊಡನೆ ಈ ಪರಿಸ್ಥಿತಿ ಉಳಿಯಲಿಲ್ಲ. ಕಾಂಗ್ರೆಸ್ಸಿನಲ್ಲಿಯ ಶ್ರೇಷ್ಠತಮ ಮುಖಂಡರೆಲ್ಲರೂ ರಾಜ್ಯಕಾರಭಾರದ ದೈನಂದಿನ ಕಾರ್ಯದಲ್ಲಿ ಜೀವಂತಿಕೆಯನ್ನು ಉಳಿಸಿದ್ದರು. ಇದೀಗ ರಾಜ್ಯಕಾರಭಾರದಲ್ಲಿ ಅವರು ತೊಡಗಿದುದರಿಂದ ಇತರರಿಗೆ [illegible] ಅಶಕ್ಯವಾಯಿತು. ಇದಕ್ಕೆ ಕಾರಣವೆಂದರೆ ಈ ನಾಯಕರ ವೈಯಕ್ತಿಕ ಕರ್ತೃತ್ವ ಶಕ್ತಿಯು ಇತರ ಯಾವದೇ ಮುಖಂಡರಲ್ಲಿ ಕಂಡು ಬರುವುದು ಶಕ್ಯವಿದ್ದಿಲ್ಲ. ಈ ಘಟನೆಯಿಂದ ಎರಡು ಭಿನ್ನಭಿನ್ನ ಪರಿಣಾಮಗಳು ಕಂಡು ಬಂದವು. ಕೆಲವೊಂದು ಕಾರ್ಯಕರ್ತರಿಗೆ, ಈ ನಾಯಕರು ತಮ್ಮಿಂದ ಬಹು ದೂರ ಹೋದರು, ದೈನಂದಿನ ಜೀವನದಲ್ಲಿ ಅವರ ಸಂಗದ ಸ್ನೇಹದಿಂದ ಪರಿಶಮನಸ್ಪರ್ಧೆಯಿಂದ ವರ್ತಿಸಲು ದೊರಕುತ್ತಿದ್ದ ಸಂಧಿಯು ಕಳೆದುಹೋದುದರಿಂದ ಅವರು ವಿಷಣ್ಣರಾದರು. ಮತ್ತೆ ಕೆಲವು ಕಾರ್ಯಕರ್ತರಿಗೆ ಈ ನಾಯಕರ ದೈನಂದಿನ ವರ್ಚಸ್ಸು ಕಡಿಮೆಯಾದುದರಿಂದ ಮನೆಯಲ್ಲಿಯ ಉಚ್ಛೃಂಖಲ ವೃತ್ತಿಯ ಹುಡುಗರಂತೆ ಹೆಚ್ಚು ಮನಬಂದಂತೆ ವರ್ತಿಸಲು ಸಂಧಿದೊರೆಯಿತು.

ರಾಜ್ಯಕಾರಭಾರದ ಹೊಣೆಗಾರಿಕೆಯು ಕಾಂಗ್ರೆಸಿನ ತಲೆಯ ಮೇಲೆ ಬಿದ್ದನಂತರ ಅದೊಂದು ಧ್ಯೇಯಪೂರ್ತಿಯ ಮಹತ್ವದ ಕಾರ್ಯವೆಂದು ತಿಳಿದು, ಆ ಕಾರ್ಯಕ್ಕಾಗಿ ಸಂಘಟನೆಯಲ್ಲಿಯ ಸರ್ವಶ್ರೇಷ್ಠರಾದ ಮತ್ತು ಯೋಗ್ಯರಾದ ನಾಯಕರನ್ನು ಕಾಂಗ್ರೆಸ್ಸು ಯೋಜಿಸಲೇಬೇಕಾಗಿತ್ತು. ಸ್ವತಃ ಮಹಾತ್ಮ ಗಾಂಧಿಯವರು ಜೀವಂತರಿರುವಾಗ ಅವರ ಅನುಮತಿಯಿಂದಲೇ ಈ ಎಲ್ಲ ಸಂಗತಿಗಳು ನಡೆದವು. ಅವರ ಸ್ವತಃದ ನೇತೃತ್ವವು ಪ್ರಭಾವಿ ಮತ್ತು ಸರ್ವವ್ಯಾಪಿ ಇದ್ದುದರಿಂದ ಸಂಘಟನೆಯ ಹೋರಾಟ ಕಾರ್ಯಗಳೆಲ್ಲ ಸೂತ್ರಬದ್ಧವಾಗಿ ನಡೆಯುತ್ತಿದ್ದವು. ಆದರೆ ಆ ಪ್ರಭಾವೀ ನೇತೃತ್ವವು ಲೋಪವಾದನಂತರ ಅವರ ಸ್ಥಳ ತುಂಬುವಷ್ಟು ಶಕ್ತಿಯು ಯಾವ ವ್ಯಕ್ತಿಯಲ್ಲಿಯೂ ಉಳಿಯಲಿಲ್ಲ. ವ್ಯಕ್ತಿಯ ಅಭಾವದಲ್ಲಿಯೂ ಸಂಘಟಿತ ರೀತಿಯಿಂದ ಆ ನೇತೃತ್ವವನ್ನು ಚಿರವಾಗಿ ಇಡುವಂತೆ ಯಾವದಾದರೊಂದು ವ್ಯವಸ್ಥೆಯನ್ನು ಮಾಡಿರುತ್ತಿದ್ದರೆ ಶೈಥಿಲ್ಯವನ್ನು ಬಹುಮಟ್ಟಿಗೆ ತಪ್ಪಿಸಲು ಬರಬಹುದಾಗಿತ್ತು. ಉದಾಹರಣೆಗೆ ಹೇಳಬೇಕಾದರೆ, ಮಹಾತ್ಮ ಗಾಂಧಿಯವರ ಅಭಾವದಲ್ಲಿ ಅವರ ಬಲವಾಗಿ ಇದ್ದ ನಿಷ್ಠೆ ಕಾಂಗ್ರೆಸು ವರ್ಕಿಂಗ್ ಕಮಿಟಿಯಲ್ಲಿ ತೋರುತ್ತಿದ್ದರೆ ಮತ್ತು ಅದರಂತೆ ವ್ಯವಸ್ಥೆ ಏರ್ಪಡಿಸಿದ್ದರೆ ಕದಾಚಿತ್ ಮುಂದಿನ ಶೈಥಿಲ್ಯವನ್ನು ತಪ್ಪಿಸಬಹುದಾಗಿತ್ತು. ಆದರೆ ರಾಜ್ಯಕಾರಭಾರದ ಅತಿ ದೊಡ್ಡ ಭಾರ ಮತ್ತು ಕಾಂಗ್ರೆಸ್ ಸಂಘಟನೆಯನ್ನು ಗಟ್ಟಿಮುಟ್ಟಾಗಿ ಉಳಿಸಿಕೊಳ್ಳುವ ಹೊಣೆಗಾರಿಕೆ ಈ ಎರಡೂ ಸಂಗತಿಗಳನ್ನು ಏಕ ಕಾಲಕ್ಕೆ ಸಂಪೂರ್ಣವಾಗಿ ನೋಡಿಕೊಳ್ಳುವಂಥ ಅವಶ್ಯಕತೆ ಇದ್ದಾಗ ಅದನ್ನು ಯೋಗ್ಯ ರೀತಿಯಿಂದ ನೋಡಿಕೊಳ್ಳಲಾಗಲಿಲ್ಲ. ರಾಜ್ಯಕಾರಭಾರದ ಕಡೆಗೆ ಹೆಚ್ಚು ಒಲವು ಉಂಟಾದುದರಿಂದ ಸಂಘಟನೆಯತ್ತ ದುರ್ಲಕ್ಷ್ಯವಾದುದು ಸಹಜ.

ಬಹುತರವಾಗಿ ಕಾಂಗ್ರೆಸಿನ ಎಲ್ಲ ಶ್ರೇಷ್ಠ ಮುಖಂಡರೂ ರಾಜ್ಯಕಾರಭಾರದ ಹೊಣೆಗಾರಿಕೆಯಲ್ಲಿ ತೊಡಗಿದರು. ಮಂತ್ರಿ ಮುಖಂಡರು, ಕಾಯದೆ ಮಂಡಳಗಳು, ಸರಕಾರದ ಬೇರೆ ಬೇರೆ ಸಮಿತಿಗಳು ಮೊದಲಾದ ರೂಪದಲ್ಲಿ ರಾಜ್ಯಕಾರಭಾರದ ವಿಸ್ತಾರವು ಹೆಚ್ಚುತ್ತ ನಡೆಯಿತು. ಅವೆಲ್ಲವೂ ಅಧಿಕಾರದ ಸ್ಥಾನಗಳೆಂದು ಗಣಿಸಲ್ಪಡುವದರಿಂದ ಅವುಗಳ ಸಂಬಂಧದಲ್ಲಿ ಕಾರ್ಯಕರ್ತರಲ್ಲಿಯೂ ಅನೇಕರು ಹೆಚ್ಚಾಗಿ ಆಕರ್ಷಿಸಲ್ಪಡಹತ್ತಿದರು. ಮತ್ತು ಅದರಿಂದಾಗಿ ಈ ಮೊದಲು ಕಾಂಗ್ರೆಸಿನಲ್ಲಿ ಇಂದಿನ ವರೆಗೆ ಕಂಡುಬಾರದ ಏರಾಟೆಯ ವೃತ್ತಿ ಅನುಭವಕ್ಕೆ ಬರಲಾರಂಭಿಸಿತು. ಈ ವೃತ್ತಿಗೆ ತಡೆಹಾಕುವದು ಮಹಾತ್ಮಾ ಗಾಂಧಿಯವರಿಗೆ ಮಾತ್ರ ಶಕ್ಯವಿತ್ತು. ಅವರ ನಿಧನದ ನಂತರ ಈ ವೃತ್ತಿಯು ಎಲ್ಲೆಡೆಯಲ್ಲಿಯೂ ಹಬ್ಬಿದ್ದು ಕಂಡು ಬಂತು. ಸಿನೆಮಾ ಥಿಯೇಟರ ಬಾಗಿಲವನ್ನು ತೆರೆದ ಕೂಡಲೇ ಹೊರಗಿದ್ದ ಪ್ರೇಕ್ಷಕ ಗಣವು ಒಳನುಗ್ಗಿ ಉತ್ತಮ ಸ್ಥಳವನ್ನು ಆಕ್ರಮಿಸಲು ಧಡಪಡಿಸುತ್ತಿರುವದನ್ನು ನಾವು ನೋಡುತ್ತೇವೆ. ಅದರಲ್ಲಿ ಕೆಲವೇ ಜನರಿಗೆ ಉತ್ಕೃಷ್ಟ ಸ್ಥಳಗಳು ದೊರೆಯುವವು. ಇಂಥ ಉತ್ತಮ ಸ್ಥಾನಗಳು ದೊರೆಯದ್ದರಿಂದ ನಿರಾಶರಾಗುವವರಿಗೆ ತಾವು ಕುಳಿತ ಸ್ಥಾನದಿಂದಲೇ ಚೀರಾಡುವದು, ಸಿಳ್ಳು ಹಾಕುವದು ಮೊದಲಾದವುಗಳನ್ನು ಮಾಡುತ್ತಾರೆ. ಅಧಿಕಾರದ ಸ್ಥಾನಗಳ ಬಗ್ಗೆಯೂ ಇದೇ ತರಹ ವರ್ತನೆಯು ಕಂಡು ಬರುವದೆಂದು ಹೇಳಿದರೆ ಅತಿಶಯೋಕ್ತಿಯಾಗಲಿಕ್ಕಿಲ್ಲ. ಮೊದಲು ಹೊಣೆ ಬರುವ ಅಧಿಕಾರದ ಸ್ಥಾನದ ಬಗ್ಗೆ ಒಂದು ಸ್ವಾಭಾವಿಕ ಆಕರ್ಷಣವಿದೆ ಮತ್ತು ಅದರ ಜೊತೆಗೆ ಆ ಸ್ಥಾನ ಪಡೆಯಲು ಕಾಂಗ್ರೆಸಿನೊಳಗೆ ಒಂದು ಸುಲಭವಾದ ಮಾರ್ಗವಿದೆ ಎಂಬ ಭಾವನೆ ಹುಟ್ಟಿದೆ. ಈ ಹೊಸ ಪರಿಸ್ಥಿತಿಯಲ್ಲಿ ಮೇಲಿನಂತಹ ಭಾವನೆಯ ಮೂಲಕವೇ ಕಾಂಗ್ರೆಸಿನಲ್ಲಿಯ ಪದಾಧಿಕಾರದ ಬಗ್ಗೆಯೂ ಒಂದು ವಿಲಕ್ಷಣವಾದ ಮಹತ್ವ ಪ್ರಾಪ್ತವಾಗಿದೆ. ಇಂದು ಅನೇಕ ಪ್ರಾಂತಗಳಲ್ಲಿಯೂ ಕಾಂಗ್ರೆಸು ಸಂಸ್ಥೆಯ ಚುನಾವಣೆಗಳಲ್ಲಿ ಆಯ್ಕೆಯ ಮ ರಾಜಕೀಯ ರೂಪದಲ್ಲಿ ಅದರ ದುಷ್ಪರಿಣಾಮವು ಕಂಡುಬರುವಂತೆ ಕಾಂಗ್ರೆಸು ಸಂಘಟನೆಯಲ್ಲಿಯ ಯಾವದೇ ಶಾಖೆಯನ್ನು ಕೈವಶ ಮಾಡಿಕೊಳ್ಳುವ ಪ್ರವೃತ್ತಿ ಉಂಟಾಗಿದೆ. ಆಂಧ್ರ ಪ್ರಾಂತದಲ್ಲಿಯ ಕಾಂಗ್ರೆಸು ಆಯ್ಕೆಗಳಲ್ಲಿಯ ಏರಾಟೆಯು ಉಚ್ಚಾಂಕವನ್ನೆ ಮುಟ್ಟಿದೆ. ಅಲ್ಲಿ ಆಯ್ಕೆಗಳನ್ನು ಮಾಡಬೇಕೆಂದು ಸುಮಾರು ಒಂದು ವರ್ಷದಿಂದ ಸತತ ಪ್ರಯತ್ನ ನಡೆದಿದೆ. ಆದರೆ ಅದು ಇಂದಿಗೂ ಸಾಧ್ಯವಾಗಿಲ್ಲ. ಈ ಆಯ್ಕೆಗಳಲ್ಲಿ ಭಾಗ ವಹಿಸಿದವರು ಲಕ್ಷಾವಧಿ ರೂಪಾಯಿಗಳನ್ನು ಹಾಳ ಮಾಡಿರುವರೆಂದು ವದಂತಿ ಇದೆ. ಕಾಂಗ್ರೆಸು ಸಂಘಟನೆಯು ತಮ್ಮ ಕೈಯಲ್ಲಿ ಬಂದಿತೆಂದರೆ ಕಾಯದೆ ಮಂಡಳಗಳ ಆಯ್ಕೆಯು ತಮ್ಮ ಹಿಡಿತದಲ್ಲಿ ಬರುತ್ತದೆ. ಮಂತ್ರಿ ಮಂಡಳದ ಮೇಲೆ ತಮ್ಮ ನಿಯಂತ್ರಣ ಉಳಿಯುತ್ತದೆ, ಮುಂತಾದ ವಿಚಾರಗಳು ಈ ಏರಾಟೆಯ ಬುಡದಲ್ಲಿ ಇವೆ. ಆಂಧ್ರ ಪ್ರಾಂತವನ್ನು ಬಿಟ್ಟು ಇತರ ಪ್ರಾಂತಗಳಲ್ಲಿಯೂ ಕಾಂಗ್ರೆಸಿನ ಆಯ್ಕೆಗಳಲ್ಲಿ ಕಂಡು ಬರುತ್ತಿರುವ ಹದಗೆಟ್ಟ ವಾತಾವರಣವು ಕೆಲವೊಂದು ಸ್ಥಳಗಳಲ್ಲಿ ಗುಂಪುಗಾರಿಕೆಯವರ ಕೃತಿಯೆಂದು ಸ್ಪಷ್ಟ ನಿದರ್ಶನಕ್ಕೆ ಬರುವದು. ಅದರ ಬುಡದಲ್ಲಿ ಮುಖ್ಯವಾಗಿ ಇದೇ ವಿಚಾರವಿದೆ.

ಇದಕ್ಕೂ ಹೆಚ್ಚಿನ ಖೇದದ ಮಾತೆಂದರೆ ಈ ತರಹದ ದುಷ್ಪ್ರವೃತ್ತಿಗಳಿಗೆ ತಡೆಯನ್ನುಂಟುಮಾಡುವ ಶಕ್ತಿ ಯಾವ ನಾಯಕರಲ್ಲಿಯೂ ಇದ್ದದ್ದು ಕಂಡುಬರುವದಿಲ್ಲ. ಕಾಂಗ್ರೆಸಿನಿಂದ ಸಿಡಿದು ಹೋಗಿ ಬಿದ್ದು ತಮ್ಮದೇ ಆದ ಗುಂಪನ್ನು ಕಟ್ಟಿಕೊಳ್ಳಬೇಕೆಂದು ಪ್ರಯತ್ನ ನಡೆಸಿರುವ ಕೆಲವು ಜನ [illegible], ಮುಖಂಡರು ತಾವು ಈ ಪರಿಸ್ಥಿತಿಯನ್ನು ಸುಧಾರಿಸುವದಕ್ಕಾಗಿ ಪ್ರಯತ್ನಿಸುತ್ತೇವೆಂದು ಹೇಳುತ್ತಾರೆ. ಆದರೆ ಕಾಂಗ್ರೆಸಿನಿಂದ ಹೊರಗೆ ಬೀಳುವದು ಯೋಗ್ಯ ಉಪಾಯವಾಗಲಾರದು. ರಾಜಕೀಯ ಮತಭೇದದ ನೆವದಿಂದ ಇಂದಿನ ವರೆಗೆ ಅನೇಕ ನಾಯಕರೂ ಅನೇಕ ಗುಂಪುಗಳೂ ಕಾಂಗ್ರೆಸಿನಿಂದ ಹೊರಬಿದ್ದವು ಮತ್ತು ಅವರು ತಮ್ಮ ತಮ್ಮ ಪಕ್ಷದ ಸ್ವತಂತ್ರ ಧ್ವಜಗಳನ್ನೂ ಹಾರಿಸಿದರು. ಆದರೆ ಅವರಿಗೆ ಕಾಂಗ್ರೆಸಿನ ಪರಂಪರೆ ಶ್ರೇಷ್ಠತನವನ್ನು ಎಂದಿಗೂ ತಮ್ಮ ಕಡೆಗೆ ಸೆಳೆದು ಕೊಂಡೊಯ್ಯುವದಾಗಲಿಲ್ಲ. ಲೋಕಶಾಹಿ ಶಾಸನ ಪದ್ಧತಿಯನ್ನು ದೇಶವು ಸ್ವೀಕರಿಸಿದ್ದರಿಂದ ಇದರಲ್ಲಿ ಯಾವದೊಂದು ಪಕ್ಷವು ಅಧಿಕಾರಾರೂಢವಾಗಬಹುದು. ಆದರೆ ಜನತೆಯೊಳಗೆ ಆ ಪಕ್ಷವು ಕಾಂಗ್ರೆಸಿನ ಸ್ಥಾನಮಾನಗಳನ್ನು ಎಂದಿಗೂ ಪಡೆಯಲು ಶಕ್ಯವಾಗಲಾರದು. ತ ಜನ್ಮ ಕಾಲದ ಛಾಯಾ ಚಿತ್ರಗಳನ್ನು ಅನೇಕರು ತೆಗೆಯುವರು, ಆದರೆ [illegible] ಪರಿಶಮಾನವಾದ ಇನ್ನೊಂದು ಕಟ್ಟಡವ

ನ್ನು ಇಂದಿಗೂ ಕಟ್ಟಲು ಯಾರಿಗೂ ಶಕ್ಯವಾಗಲಿಲ್ಲ.

ಅಧಿಕಾರ ಸ್ಥಾನದ ಆಕರ್ಷಣವು ಒಂದು ಮೋಹ, ಕಾಂಗ್ರೆಸ ಕಾರ್ಯಕರ್ತರ ನೀತಿಯೂ ಕೆಳವುಟ್ಟಕ್ಕಿಳಿಯುತ್ತದೆ ಎಂದು ದೋಷಾರೋಪಮಾಡುವುದರಿಂದಲೂ ಸಮಸ್ಯೆಯು ಬಿಡಲಾರದು. ಪರಿಸ್ಥಿತಿಯು ಗಂಭೀರವಾಗಿದ್ದರೂ ಖಂಡಿತವಾಗಿಯೂ ನಿರಾಶಾಜನಕವಾಗಿಲ್ಲ. ಇತರ ಲೋಕಶಾಹಾತ್ಮಕ ರಾಷ್ಟ್ರಗಳಲ್ಲಿ ರಾಜಕೀಯ ಪಕ್ಷಗಳ ಸಂಘಟನೆಯು ಯಾವ, ಪದ್ಧತಿಯಲ್ಲಿ ನಡೆದಿದೆ ಎಂಬುದರ ಅನುಭವವನ್ನು ನಾವು ತೆಗೆದುಕೊಂಡು ಹೊಸ ಪರಿಸ್ಥಿತಿಯಲ್ಲಿ ಕಾಂಗ್ರೆಸ ಸಂಘಟನೆಗೆ ಹೊಸ ಸ್ವರೂಪವನ್ನು ಹೇಗೆ ಕೊಡಬೇಕು ಎಂಬುದರ ನಿಶ್ಚಿತ ವಿಚಾರವನ್ನು ಧುರೀಣರುಮಾಡಿ ಸಂಘಟನೆಗೆ ಯೋಗ್ಯರೂಪರೇಷೆಯನ್ನು ನಿರ್ಧರಿಸಬೇಕು. ದೇಶದ ಕಾರಭಾರವು ಯಾವದೇ ಪಕ್ಷದ ಕಡೆಯಲ್ಲಿ ಬಂದರೂ ಅದನ್ನು ನಡಿಸುವ 'ಕೆಲಸವು' ಪಕ್ಷಾತೀತವಾಗಬೇಕೆಂಬುದು ನಿರ್ವಿವಾದವಾದದ್ದು. ಆದರೆ ರಾಜ್ಯಕಾರಭಾರವನ್ನು ನಡಿಸುವ ಸೂತ್ರ ಚಾಲಕತ್ವವು ಪಕ್ಷದಕಡೆಗೆ ಇರಬೇಕೆಂಬುದು ಅಷ್ಟೇ ಸತ್ಯ. ಇಂದಿನ ಕಾಂಗ್ರೆಸ ವರ್ಕಿಂಗ ಕಮಿಟಿಯು ಶ್ರೇಷ್ಠತಮ ಸಂಘಟನೆಯಾಗಿದೆ ಸದ್ಯ ಕಾಂಗ್ರೆಸಿನ ಅಧ್ಯಕ್ಷರು ಶ್ರೇಷ್ಠ ವ್ಯಕ್ತಿಗಳಿದ್ದಾರೆ. ಆದರೆ ಇತರ ಸ್ಥಳಗಳಲ್ಲಿ ದೇಶದ ಒಳಗಿನ ಜನವು ಇದೇ ಕಾದ ಪ್ರಮಾಣದಲ್ಲಿ ಖಂಡಿತವಾಗಿಯೂ ಇಲ್ಲ. ಈ ಪರಿಸ್ಥಿತಿ ಸುಧಾರಿಸಬೇಕು.

ದೇಶದ ರಾಜ್ಯಕಾರಭಾರವು ಸ್ಥಿರ ಪ್ರಿಯ ಎವರೆಗೆ ಅದನ್ನು ಪಕ್ಷನಿಷ್ಠ ಪದ್ಧತಿಯ. ಮೇರೆಗ ನಡೆಸಿಕೊಂಡು ಹೋಗಬೇಕು. ಅದರ ಜೊತೆಗೇ ಅದೊಂದು ಸಂಘಟನೆಯೆಂಬ ಕಾಂಗ್ರೆಸಿನ ಪರಂಪರೆಯನ್ನು ದೇಶಸೇವೆಗೆ ಸ್ಥಿರ ಪಡಿಸಬೇಕು. ಕಾಂಗ್ರೆಸಿಗೆ ಈ ತರಹದ ದ್ವಿವಿಧ ಘಟನೆಯ ಸ್ವರೂಪ ಬರುವದು ಕಠಿಣವಿದ್ದರೂ ಅಶಕ್ಯವಿಲ್ಲ. ಇಷ್ಟೇ ಅಲ್ಲದೆ ಇಂದು ಉದ್ಭವಿಸಿರುವ ಪರಿಸ್ಥಿತಿಯಲ್ಲಿ ಅದೊಂದು ಮಹತ್ವದ ಅಕ್ಷ್ಯವಾದ ಕೆಲಸವಾಗಿದೆ. ಜಗತ್ತಿಗೆ ಆದರ್ಶಪ್ರಾಯವಾಗಿರುವ ಅನೇಕ ಉಜ್ವಲ ತತ್ವಗಳು ಮತ್ತು ಕಾರ್ಯಪದ್ಧತಿಯು ಪರಂಪರೆಯು ಕಾಂಗ್ರೆಸಿನಲ್ಲಿವೆ. ತಾತ್ಕಾಲಿಕ ರಾಜಕೀಯ ಆಕರ್ಷಣವು ಬೆಳೆಯುದರ ಮೂಲಕ ಈ ಪರಂಪರೆಗಳನ್ನು ದುರ್ಲಕ್ಷಿಸಲಾಗದು. ಈ ವಿಚಾರಸರಣಿಯನ್ನು ಒಮ್ಮೆ ಮಾನ್ಯಮಾಡಿದ ನಂತರ, ಅದರ ರೂಪರೇಷೆಯನ್ನು ಯೋಚಿಸುವದು ಅಷ್ಟೊಂದು ಕಠಿಣ ಕೆಲಸವಲ್ಲ. ಕಾಂಗ್ರೆಸು ಪರಂಪರೆಯನ್ನು ಸಾಗಿಸುತ್ತ ಬಂದಿರುವ ಒಂದು ಸಂಸ್ಥೆಯಾಗಿದೆ. ಅದೇ ವೇಳೆಗೆ ಅದು ಪರಿವರ್ತನಕ್ಷಮವೂ ಪ್ರಗತಿಪರವೂ ಇದೆ. ಅದರ ಈ ವ್ಯಕ್ತಿತ್ವವನ್ನು ಸ್ಥಿರಪಡಿಸಿ ಅದರಲ್ಲಿ ನವಚೈತನ್ಯವನ್ನು ನಿರ್ಮಿಸುವದು ಇಂದಿನ ಧುರೀಣರ ಕರ್ತವ್ಯ. ಈ ಕಾರ್ಯವು ಧುರೀಣರಿಂದ ಶೀಘ್ರದಲ್ಲಾದಷ್ಟು ಹೆಚ್ಚು ಪ್ರಮಾಣದಲ್ಲಿ ಕಾಂಗ್ರೆಸಿನ ಭವಿತವ್ಯದ ಬಗ್ಗೆ ಕಾರ್ಯಕರ್ತರಲ್ಲಿಯೂ ಜನತೆಯಲ್ಲಿಯೂ ನಂಬಿಕೆ ಹುಟ್ಟಬಹುದು.

'ಜೈ ಹಿಂದ್'

ಅಮೇರಿಕಕ್ಕೆ ಪಾಕಿಸ್ಥಾನದ

ವಿಮಾನನಿಲ್ದಾಣಗಳು?

ಪಾಕಿಸ್ಥಾನದಲ್ಲಿ ಇತ್ತೀಚೆಗೆ ನಡೆದ ದಸ್ತಗಿರಿಗಳ ಒಳಗುಟ್ಟು ಏನು?

ಪಾಕೀಸ್ಥಾನ ಸರಕಾರವನ್ನು ಉರುಳಿಸುವ ಬಗ್ಗೆ ಸೇನಾಧಿಕಾರಿಗಳ ಪಿತೂರಿ ಮತ್ತು ಇನ್ನಿತರ ಕ್ರಾಂತಿಕಾರಕ ಲಕ್ಷಣಗಳು ಇತ್ತೀಚೆಗೆ ಪಾಕಿಸ್ಥಾನದಲ್ಲಿ ಬಯಲಿಗೆ ಬಂದು, ಆ ಸಂಬಂಧ ಹಲವರ ದಸ್ತಗಿರಿಗಳಾಗಿದ್ದುವಷ್ಟೆ. ಈ ದಸ್ತಗಿರಿಗಳ ಕುರಿತು ವಿಚಿತ್ರ ಕಥೆಗಳು ಬ್ರಿಟಿಷ್ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಅಲ್ಲದೆ ಪಿತೂರಿಯ ಕುರಿತು ಕಥೆಗಳನ್ನು ಪ್ರಕಟಿಸುವುದರಲ್ಲಿ ಮೊದಲಿಗರು ಬ್ರಿಟಿಷ್ ಪತ್ರಿಕಾ ಪ್ರತಿನಿಧಿಗಳೇ.

ಪಿತೂರಿ ಸಂಬಂಧವಾದ ಸುದ್ದಿಗಳನ್ನು ವಿರೂಪಗೊಳಿಸಿ ಪ್ರಕಟಿಸಿದ ಆರೋಪವನ್ನು ಪಾಕೀಸ್ಥಾನ ಸರಕಾರವು ಎ. ಪಿ. ಐ. ಮತ್ತು ಹಿಂದೀಯ ಪತ್ರಿಕೆಗಳ ಮೇಲೆ ಹೊರಿಸಿದೆ. ಆದರೆ ನಿಜವಾದ ಹೊಣೆಗಾರರು ಬ್ರಿಟಿಷ್ ಪತ್ರಿಕಾ ಪ್ರತಿನಿಧಿಗಳೇ. ಪಾಕೀಸ್ಥಾನದಲ್ಲೇ ಅವರು ವೃದ್ಧಿ ಹೊಂದುತ್ತಿದ್ದಾರೆ. ಆದರೆ ಪಾಕೀಸ್ಥಾನ ಸರಕಾರ ಅವರನ್ನು ಆರೋಪಿಗಳೆನ್ನುವುದಿಲ್ಲ. ಬದಲು ಹಿಂದೀಯ ನಿರೀಕ್ಷಕರ ಮೇಲೆಯೇ ವಿಶೇಷವಾಗಿ, ಅವಲಂಬಿಸಿಕೊಂಡಿದೆ. ಆದರೆ ಈ ಸಂದರ್ಭದಲ್ಲಿ ಮಾತ್ರ ಬ್ರಿಟಿಷ್ ಪ್ರತಿನಿಧಿಗಳು ತಮ್ಮ ಮಿತ್ರರಾದ ಪಾಕೀಸ್ಥಾನಿಗಳನ್ನೂ ಬಿಟ್ಟಿಲ್ಲ. ಪಿತೂರಿಯ ಕುರಿತು ದಿಗಿಲು ಹುಟ್ಟಿಸುವ ಕಥೆಗಳನ್ನು ನಿರ್ದಾಕ್ಷಿಣ್ಯವಾಗಿ ಪ್ರಕಟಿಸಿದ್ದಾರೆ. ಪಿತೂರಿಗೆ ಸಂಬಂಧಪಟ್ಟ ಕಾರಣಗಳು ಹಲವು ಇವೆ. ಪಂಜಾಬ ಚುನಾವಣೆಗಳಿಂದ ಹಿಡಿದ ಬೇಗಮ್ ಲಿಯಾಖತ್ ಅಲಿಖಾನರ ಸಾಮಾಜಿಕ ನಾಯಕತ್ವದ ವರೆಗಿನ ಕಾರಣಗಳ ಬ್ರಿಟಿಷ್ ಪತ್ರಿಕಾ ಕಥೆಗಳಲ್ಲಿ ಸೇರಿಕೊಂಡಿವೆ.

ಪಂಜಾಬಗಳ ಚುನಾವಣೆಯ ಪೋಲಿಂಗ್ ಆರಂಭವಾಗುವುದಕ್ಕೆ ಪೂರ್ವದಲ್ಲಿ ಪಿತೂರಿಯ ಕುರಿತಾದ ವಿಷಯವು ಬಯಲಿಗೆ ಬಂದುದರಲ್ಲಿ ಪ್ರಬಲ ಕಾರಣ ವಿಗಿಲಿಯೆ, ಸಿವಿಲ ನ್ ಪ್ರಾಂತಿಯಲ್ಲಿ ಮಿಲಿಟರಿ ನಿರಂಕುಶಶಾಹಿ, ಕಾಶ್ಮೀರ, ಪಂಜಾಬು ಮತ್ತು ಪರಿಣಾಮ ಅತೃಪ್ತಿ, ಈಗಿನ ಕೇಂದ್ರ ಸಚಿವರ ಕೈಯಲ್ಲೇ ಕಟ್ಟಿನ ಅಧಿಕಾರಗಳ ಕೇಂದ್ರೀಕರಣ, ಶ್ರೀಮತಿ ಅಕ್ಬರ್‌ಖಾನರ ಸಾಮಾಜಿಕ ಆಕಾಂಕ್ಷೆಗಳು, ಮಿ. ಜಿನ್ನಾರವರ ನಿಧನಗಿ ಮೊದಲ್ಗೊಂಡು ಪಾಕೀಸ್ಥಾನದಲ್ಲಿ ನಡೆಯುತ್ತಿರುವ ವಿದ್ಯಮಾನಗಳ ಬಗ್ಗೆ ಮಿಸ್ ಫಾತೀಮಾ ಜಿನ್ನರ ಅತೃಪ್ತಿ ಇವೆಲ್ಲವೂ ಪಿತೂರಿಯ ಹಿನ್ನೆಲೆಯಾಗಿವೆ.

ಪಂಜಾಬ ಚುನಾವಣೆಗಳಿಗೆ ಮೊದಲು ಆಶೀರ್ವಾದ ಪೂರ್ವಕವಾದ ಸಂದೇಶಕ್ಕಾಗಿ ಮಿಸ್ ಫಾತೀಮಾ ಜಿನ್ನರೊಡನೆ ಹೋದಾಗ, 'ಪಾಕೀಸ್ಥಾನವು ಪ್ರಜಾಪ್ರಭುತ್ವವಾಗಲು ಸೃಷ್ಟಿಯಾಗಿದೆ. ಜನರಿಗೆ ಸ್ವತಂತ್ರವಾಗಿ ಸ್ವ ಇಚ್ಛೆಯಂತೆ ಮತಕೊಡಲು ಅವಕಾಶ ಮಾಡಿಕೊಡುವುದು ಪ್ರಜಾಪ್ರಭುತ್ವ ನೀತಿಯ ತಿರುಳು (ಮುಖ್ಯವೆಂದು) ಕಂಡ ಉಮೇದ್ವಾರರಿಗೆ ನಿರ್ಭೀತವಾಗಿ ಮತವನ್ನು ಕೊಡಿರಿ. ಬೆದರಿಕೆಗಳಿಂದ ಬೆಚ್ಚಿಬೀಳದೆ, ಭರವಸೆಗಳ ಮೋಹಕ್ಕೊಳಗಾಗದೆ ನಿಮ್ಮ ಆತ್ಮಸಾಕ್ಷಿಗೆ ಯುಕ್ತಕಂಡಂತೆ ಓಟು ಕೊಡಿರಿ. ಆತ್ಮಸಾಕ್ಷಿಗೆ ವಿರುದ್ಧವಾಗಿ ಕೊಟ್ಟ ಮತವು ಜನಾಂಗಕ್ಕೆ ದ್ರೋಹ ಬಗೆದ ಅಕ್ಷಮ್ಯ ಅಪರಾಧವೆನಿಸುವುದು' ಎಂದು ಹೇಳಿದರು.

ಪಂಜಾಬ ಚುನಾವಣಾ ಸಂಚಾರ ಮುಗಿಸಿ ಕರಾಚಿಗೆ ಮುಟ್ಟಿದ ಮಿ॥ ಲಿಯಾಖತ್ ಅಲಿಖಾನರೊಡನೆ, ಫಾತಿಮಾ ಜಿನ್ನಾರ ಉಪದೇಶದ ಕುರಿತು ನೀವು ಹೇಳುವುದೇನು? ಎಂದು ಕೇಳಿದಾಗ 'ಅದು ಅತ್ಯುತ್ತಮ ಹಿತವಾದ,' ಎಂದಷ್ಟೇ ಹೇಳಿದರು.

ಸಂಪಾದಕರ ದಸ್ತಗಿರಿ

'ಪಾಕೀಸ್ಥಾನ ಟೈಮ್ಸ್' ಪತ್ರಿಕೆಯ ಸಂಪಾದಕ ಮಿ॥ ಫೈಜ್ ಅಹ್ಮದ್ ಫಯಾಜ್‌ರವರ ದಸ್ತಗಿರಿಯು ಪ್ರಬಲವಾದ ಕಾರಣ ಈ ರೀತಿಯಾಗಿದೆ ಎಂದು ಬ್ರಿಟಿಷ್ ಪತ್ರಿಕಾ ಪ್ರತಿನಿಧಿಗಳ ಊಹೆಯಾಗಿದೆ 'ಸಂಯುಕ್ತ ಅಮೇರಿಕಾ ಮತ್ತು ಪಾಕೀಸ್ಥಾನಗಳೊಳಗೆ ಕೈಬೆಟ್ಟದಲ್ಲಿ ಇತ್ತೀಚೆಗೆ ಒಂದು ಕರಾರು ನಡೆದಿತ್ತೆಂದೂ ಪಾಕೀಸ್ಥಾನದಲ್ಲಿ ಅಮೇರಿಕಕ್ಕೆ ನಿಲ್ದಾಣಗಳನ್ನು ಕೊಡಲು ಪಾಕೀಸ್ಥಾನವು ಆ ಕರಾರಿನನ್ವಯ ಒಪ್ಪಿಕೊಂಡಿತ್ತೆಂದೂ, ಎಚ್ಚರಿಕೆಯೊಡನೆಯೂ ಆ ಒಡಂಬಡಿಕೆಯಲ್ಲಿ ಪ್ರತಿಜ್ಞೆ ಕೊಡಲಾಗಿತ್ತೆಂದೂ ಈ ಕರಾರಿಗೆ ಸಂಬಂಧಪಟ್ಟ ವಿವರಗಳನ್ನು ಬಹಿರಂಗಪಡಿಸುವ ಬೆದರಿಕೆ ಹಾಕಿದ್ದಕ್ಕಾಗಿ ಸಂಪಾದಕರ ದಸ್ತಗಿರಿಯಾಗಿತ್ತೆಂದೂ ಬ್ರಿಟಿಷ್ ಪತ್ರಿಕೆಗಳು ಹೇಳುವ ಇರಲೂ ಬಹುದು!

ಪ್ರಭಾತ—

ಮಾರಾಟಕ್ಕಿದೆ.

ಮಡಿಕೇರಿ ಕಾನ್ವೆಂಟು ಹೈಸ್ಕೂಲು ಮತ್ತು ಹೊಸ ಕಾಲೇಜು ಕಟ್ಟಡದ ಸಮೀಪವಿರುವ ೯ ಏಕ್ರೆ ನೀರಾವರಿ ಭೂಮಿಗಳಿಕ್ಕೆ ಏಕ್ರೆ ಕಾಡು, ೩ ಏಕ್ರೆ ಕಾಫಿ, ಬಾಳೆ, ಏಲಕ್ಕಿ ಇರುವ ತೋಟ ಇವು ಮಾರಾಟಕ್ಕಿವೆ. ಇದರ ಜೊತೆಗೆ ಹುಚ್ಚಿನ ಮನೆ, ಬಾವಿ, ಕೆರೆ ಎಲ್ಲಾ ಇವೆ. ಖಾಯಿಸುದಾರರು ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

X
C/o ಕೊಡಗು
ಮಡಿಕೇರಿ

2—2

ಕೋತಿಗಳಿಗೆ ಸೈನ್ಯದ ಗೌರವ

ಜಗತ್ತಿನ ಚರಿತ್ರೆಯಲ್ಲಿ ಪ್ರಥಮ ಕಾಲಕ್ಕೆ ಯುದ್ಧದಲ್ಲಿ ಸಹಾಯ ಮಾಡಿದುದಕ್ಕಾಗಿ ಕೋತಿಗಳನ್ನು ಗೌರವಿಸಲಾಗಿದೆ. ಆದರೆ ಆ ಪದಕ ಮಾತ್ರ ಭಂಗಾರದಲ್ಲ— ಸಿಗರೇಟು ಕರಡಿಗೆಯಿಂದ ತೆಗೆದ ತಗಡಿನ ತುಂಡು.

ಇಂಡೋ—ಚೀನದ ಗಡಿ ಪ್ರದೇಶದಲ್ಲಿ ವಿಯಟ್‌ಮಿನ್ನರನ್ನು ಎದುರಿಸುತ್ತಿರುವ ಫ್ರೆಂಚ್ ಸೈನ್ಯ ತಾಣೆಯೊಂದರೊಳಗೆ ದಾಳಿಗಾರರು ನುಗ್ಗುತ್ತಿದ್ದರು. ಇದು ಫ್ರೆಂಚ್ ಸೈನಿಕರಿಗೆ ತಿಳಿಯಲಿಲ್ಲ. ಅಷ್ಟರೊಳಗೆ ಅಲ್ಲೇ ಇದ್ದ ಕೆಲವು ಕೋತಿಗಳು ಒಳನುಗ್ಗುತ್ತಿದ್ದ ಧಾಳಿಗಾರರನ್ನು ಕಂಡು ಅವರ ಮೇಲೆ ಕಲ್ಲುಗಳನ್ನು ಎಸೆದವು. ಈ ಶಬ್ದಗಳಿಂದ ಆಕರ್ಷಿಸಲ್ಪಟ್ಟ ಫ್ರೆಂಚ್ ಸೈನಿಕರು ದಾಳಿಗಾರರನ್ನು ಓಡಿಸಿದರು. ಮಾರನೆದಿನ ಆ ಠಾಣೆಯ ಸೈನ್ಯಾಧಿಕಾರಿ ಆ ಕೋತಿಗಳಿಗೆಲ್ಲ ಪದಕಗಳನ್ನು ಕಟ್ಟಿ ಸತ್ಕರಿಸಿದನು.

ಚಿಟಿಕೆ ಉಪ್ಪು ಭೂತಾಕಾರದ ಮನುಷ್ಯನನ್ನು ಬೆಳೆಸಿತು

ಇತ್ತೀಚೆಗೆ ಬ್ರಿಟನ್ನಿನಲ್ಲಿ ೧೮ ವರ್ಷ ವಯಸ್ಸಿನ ಬ್ರಾಯನ್ ಹೇಯಸ್ ಎಂಬುವ ಸೈನ್ಯಕ್ಕೆ ಸೇರಿದ. ೬ ಅಡಿ ೪ ಇಂಚು ಎತ್ತರವಿದ್ದ ಅವನಿಗೆ ಬೇಕಾದ ಸಮವಸ್ತ್ರ ನ್ಯಾಯ ಕೊಡುವುದು ದೊಡ್ಡ ಕಷ್ಟದ ಸಮಸ್ಯೆಯಾಗಿಬಿಟ್ಟಿತು. ಅಂತೂ ಹೊಸದಾಗಿ ಒಂದು ಜೋಡಿ ಸಮವಸ್ತ್ರವನ್ನು ತಯಾರಿಸಿ ಅವನಿಗೆ ಕೊಡಲಾಯಿತು. ಬ್ರಾಯನ್ ಹೇಯಸ್‌ನ ತಾಯಿಗೆ ಮಗನೆಂದರೆ ಬಹಳ ಪ್ರೀತಿ. ಅವನು ಬಾಲಕನಿದ್ದಾಗ ಹಾಲು ಕುಡಿಯುವಾಗ ತಾನು ಒಂದೊಂದು ಚಿಟಿಕೆ ಉಪ್ಪು ಬೆರಸಿ ಕೊಟ್ಟ ಪರಿಣಾಮವಾಗಿ ಅವನು ಈ ರೀತಿ ಬೆಳೆದಿದ್ದಾನೆ ಎಂದು ತಾಯಿ ಹೇಳುತ್ತಿದ್ದಾಳೆ.

ಸಂತತಿಯಿಲ್ಲದವರ ಮೇಲೆ ತೆರಿಗೆ.

ಆಲ್ಬೇನಿಯಾದಲ್ಲಿ ೨೦ರಿಂದ ೫೦ ವರ್ಷ ವಯಸ್ಸಿನವರು ಬ್ರಹ್ಮಚಾರಿ ಪುರುಷರ ಮೇಲೆ ತೆರಿಗೆ ಹೇರುವ ಕಾಯಿದೆ ಬಂದಿದೆಯೆಂದೂ ೨೦ರಿಂದ ೪೦ ವರ್ಷ ವಯಸ್ಸಿನ ಮಕ್ಕಳಿಲ್ಲದ ಸ್ತ್ರೀಯರ ಮೇಲೂ ತೆರಿಗೆ ಹೊರಿಸಲಾಗುತ್ತದೆ ಎಂದೂ ತಿಳಿದಿದೆ.

ಗಂಡಸರೂ ಸೀರೆ ಉಟ್ಟು ಕೊಂಡರು

ಚಿತ್ರದುರ್ಗದಲ್ಲಿ ಧೋತರದ ಅಭಾವ ತೀವ್ರವಾಗಿದ್ದ ಪೇಟೆಯಲ್ಲಿ ಧೋತರಗಳೇ ಸಿಗದ ಕಾರಣ ಗಂಡಸರು ಬಿಳೆ ಸೀರೆಗಳನ್ನು ಉಡುತ್ತಿರುವರಂತೆ. ಕೆಲವರು ಬಣ್ಣ ಬಣ್ಣದ ಚುಕ್ಕೆಗಳಿರುವ ಸೀರೆಗಳನ್ನು ಉಟ್ಟುಕೊಂಡಿರುವುದೂ ಕಂಡು ಬಂದಿದೆಯಂತೆ.

ಕಾಶ್ಮೀರ

ಯುಕ್ತ ರಾಷ್ಟ್ರದಿಂದ ಭಾರತಕ್ಕೆ ಲಾಭನಾಗದು.

ಕಾಶ್ಮೀರ ವಿವಾದವನ್ನು ತೀರ್ಮಾನಿಸುವ ಸಲುವಾಗಿ ಭದ್ರತಾ ಮಂಡಳವು ಆಂಗ್ಲೋ ಅಮೇರಿಕನರು ಮಂಡಿಸಿದ ಗೊತ್ತುವಳಿಯನ್ನು ಸ್ವೀಕರಿಸಿ, ಭಾರತ ಪಾಕಿಸ್ಥಾನದ ನಡುವೆ ಮಧ್ಯಸ್ಥಿಕೆ ಮಾಡುವ ನಿರ್ಣಯ ಕೈಕೊಂಡಿದೆ. ಈ ಗೊತ್ತುವಳಿಗೆ ಭಾರತವು ಮನ್ನಣೆ ಕೊಡುವುದಿಲ್ಲವೆಂದು ಮುಖ್ಯಮಂತ್ರಿ ನೆಹರೂರವರು ಸ್ಪಷ್ಟ ಪಡಿಸಿರುವರಲ್ಲದೆ ಇದು ಪಾಕಿಸ್ಥಾನವನ್ನೊಲಿಸಿಕೊಳ್ಳುವರೆ ಆಂಗ್ಲೋ–ಅಮೇರಿಕನರು ಹೂಡಿರುವ ಹಂಚಿಕೆಯೆಂದು ಕಾಶ್ಮೀರದ ಮುಖ್ಯ ಮಂತ್ರಿ ಶೇಕ್ ಅಬ್ದುಲ್ಲಾರವರೂ ಸಾರಿರುವರು. ತಮಗೆ ಮಧ್ಯಸ್ಥಿಕೆ ಬೇಡವೆಂದು ಕಾಶ್ಮೀರದ ಜನರ ಸ್ಪಷ್ಟಪಡಿಸಿರುವರು. ಆದರೆ ಪಾಕಿಸ್ಥಾನವು ಈ ಗೊತ್ತುವಳಿಯನ್ನು ಹೃತ್ಪೂರ್ವಕವಾಗಿ ಸ್ವಾಗತಿಸಿದೆ.

ಇತ್ತೀಚೆಗೆ ಭಾರತ ಪಾರ್ಲಿಮೆಂಟಿನಲ್ಲಿ ಮುಖ್ಯಮಂತ್ರಿ ನೆಹರೂರವರು ಭಾರತದ ಪರರಾಷ್ಟ್ರ ಧೋರಣೆಯನ್ನು ವಿವರಿಸುವಾಗ ಆಂಗ್ಲೋ–ಅಮೇರಿಕನ್ ಗೊತ್ತುವಳಿಯನ್ನು ತರ್ಕದಿಂದ [illegible] ಖಂಡಿಸಿದ್ದಲ್ಲದೆ ಆ ಗೊತ್ತುವಳಿಯನ್ನು ಮಂಡಿಸಿದಾಗ ಭದ್ರತಾ ಮಂಡಳದಲ್ಲಿ ಬ್ರಿಟಿಷ್ ಮತ್ತು ಅಮೇರಿಕೆಯ ಪ್ರತಿನಿಧಿಗಳು ಮಾಡಿದ ಭಾಷಣವನ್ನೂ ಟೀಕಿಸಿದರು. ಪಾಕಿಸ್ಥಾನ ಮತ್ತು ಅದಕ್ಕೆ ಸಹಾನುಭೂತಿ ತೋರಿಸುವವರನ್ನು ಸಂತೈಸಲಿಕ್ಕೆ ಕಾಶ್ಮೀರವನ್ನು ಗಂಡಾಂತರಕ್ಕೆ ಒಪ್ಪಿಸಲು ಭಾರತವು ಸಿದ್ಧವಿಲ್ಲ ಎಂದರು. ಮುಖ್ಯಮಂತ್ರಿಗಳ ಈ ಹೇಳಿಕೆಗೆ ಪಾರ್ಲಿಮೆಂಟಿನಲ್ಲಿ ಬೆಂಬಲ ಸಿಕ್ಕಿತು. ಆದರೆ ಪಾರ್ಲಿಮೆಂಟಿನ ಕೆಲವು ಸದಸ್ಯರು ಕಾಶ್ಮೀರದ ವಿವಾದದಲ್ಲಿ ಭಾರತವು ತಳೆದ ಧೋರಣೆಯನ್ನು ಮುಖ್ಯಮಂತ್ರಿಗಳೆದುರೇ ಖಂಡಿಸಿದರು.

ಕಾಶ್ಮೀರದ ವಿವಾದವನ್ನು ಭದ್ರತಾ ಮಂಡಳದಿಂದ ಹಿಂತೆಗೆಯಬೇಕೆಂದು ಡಾ|| ಶ್ಯಾಮಪ್ರಸಾದ್ ಮುಖರ್ಜಿಯವರು ಖಂಡತುಂಡವಾಗಿ ಹೇಳಿದರು.

ಡಾ|| ಮುಖರ್ಜಿಯವರ ಈ ವಾದವು ಸರಿಯೆಂದು ಹೇಳಬೇಕಾಗಿದೆ. ಯುಕ್ತ ರಾಷ್ಟ್ರ ಸಂಘದ ಮೇಲೆ ಅಂಧವಿಶ್ವಾಸ ತಾಳಿ ಯಾವುದನ್ನೂ ಆಲೋಚಿಸದೆ ಮುಖ್ಯ ಮಂತ್ರಿ ನೆಹರೂರವರು ಕಾಶ್ಮೀರ ವಿವಾದವನ್ನು ಅವಸರದಿಂದ ಲೇಕ್ ಸಕ್ಸೆಸ್‌ಗೆ ತೆಗೆದುಕೊಂಡು ಹೋದರು. ಇದರಿಂದ ಯಾವ ಹಿತವೂ ಆಗಿರುವುದಿಲ್ಲ, ಬದಲಾಗಿ ಭಾರತವು ಯುಕ್ತ ರಾಷ್ಟ್ರದ ಮೇಲೆ ವಿಶ್ವಾಸ ತಾಳಿದ್ದು ಅಹಿತವಾಗಿ ಪರಿಣಮಿಸಿದೆ. ಕಾಶ್ಮೀರದಲ್ಲಿ ಯುದ್ಧ ನಿಲ್ಲಿಸಿದುದೊಂದೇ ಯುಕ್ತ ರಾಷ್ಟ್ರವು ಮಾಡಿದ ಕಾರ್ಯ. ಪಾಕಿಸ್ಥಾನವು ಕಾಶ್ಮೀರದಲ್ಲಿ ಆಕ್ರಮಣ ನಡೆಸಿದೆಯೆಂದು ಯುಕ್ತ ರಾಷ್ಟ್ರವು ಸಾರಿದ್ದಿಲ್ಲ. ಭಾರತದ ನಿಲುಮೆಯನ್ನು ಸರಿಯಾಗಿ ತಿಳಿದುಕೊಂಡದ್ದೂ ಇಲ್ಲ. ಈಗ ಕೊನೆದಾಗಿ ಪಾಕಿಸ್ಥಾನವನ್ನು ಮೆಚ್ಚಿಸುವಂತಹ ಮಧ್ಯಸ್ಥಿಕೆಗಿಳಿದಿದೆ. ಇದರಿಂದ ಭಾರತಕ್ಕೆಂದೂ ಹಿತವಾಗಲಿಕ್ಕಿಲ್ಲ.

ಕಾಶ್ಮೀರದ ವಿವಾದವು ಇದೇ ರೀತಿ ಯಾವುದೊಂದು ಇತ್ಯರ್ಥವಾಗದೆ ಉಳಿದು ಒಂದು ದೊಡ್ಡ ಗಂಡಾಂತರವಾಗಿ ಉಳಿದಿರುವಾಗ ಭಾರತವು ಕೆಲವೊಂದು ತತ್ವಗಳನ್ನು ಸಾರುತ್ತಿದೆ. ಆದರೆ ಪಾಕಿಸ್ಥಾನದವು ಕಾಶ್ಮೀರವನ್ನು ನುಂಗುವ ಪ್ರಯತ್ನವು ಸತತವಾಗಿ ನಡೆಯುತ್ತಿದೆ. ಮಾತ್ರವಲ್ಲ ಕಾಶ್ಮೀರದಲ್ಲಿ ಪವಿತ್ರ ಯುದ್ಧ ಹೂಡಬೇಕೆಂದು ಪಾಕಿಸ್ಥಾನಿ ಮುಖಂಡರುಗಳು ಜಾತೀಯ ಶಕ್ತಿಗಳನ್ನು ಪ್ರಚೋದಿಸುತ್ತಿರುವರು. ಕಾಶ್ಮೀರದಲ್ಲಿ ಯುದ್ಧ ನಡೆಯುತ್ತಿದ್ದ ಕಾಲದಲ್ಲಿ ಪಾಕಿಸ್ಥಾನಿ ದಾಳಿಗಾರರನ್ನು ಸಂಪೂರ್ಣವಾಗಿ ಕಾಶ್ಮೀರದಿಂದ ಹೊಡೆದೋಡಿಸುವುದು ಸಾಧ್ಯವಿತ್ತು. ಆದರೆ ಭಾರತವು ಸಂದರ್ಭವನ್ನು ಕಳಕೊಂಡ ಸತ್ಯ ನ್ಯಾಯ ಇವುಗಳ ಹೆಸರಲ್ಲಿ ಯುಕ್ತ ರಾಷ್ಟ್ರಕ್ಕೆ ಧಾವಿಸಿತು.

ಕಾಶ್ಮೀರದ ಭವಿತವ್ಯವನ್ನು ಕಾಶ್ಮೀರಿಗಳು ಜನಮತಗಣನೆಯಲ್ಲಿ ನಿರ್ಧರಿಸಲಿ ಎಂದು ಭಾರತವು ಸಾರಿದೆ. ಈ ಸೂಚನೆಗೆ ಪಾಕಿಸ್ಥಾನವೂ ಒಪ್ಪಿಯೆಂದಿದೆ. ಆದರೆ ಈ ಜನಮತಗಣನೆಯ ಸೂಚನೆಯನ್ನು ಪಾಕಿಸ್ಥಾನವು ಸ್ವೀಕರಿಸಿದಾಗ ಯಾವುದಾದರೊಂದು ವಿಧಾನವಲ್ಲಾದರೂ ಅದರಲ್ಲಿ ತನಗೆ ಯಶಸ್ಸು ಸಿಗಬಹುದೆಂದು ಪಾಕಿಸ್ಥಾನವು ಧೈರ್ಯದಿಂದಿರಬಹುದು. ಭಾರತವಾದರೂ ಕೇವಲ ಆದರ್ಶ ಪಾಲನೆಯ ದೃಷ್ಟಿಯಿಂದ ಈ ಜನಮತಗಣನೆಯ ಸೂಚನೆಗೆ ಒಪ್ಪಿದ್ದಿದೆ. ಜನಮತಗಣನೆಯಲ್ಲಿ ಯಾರಿಗೆ ವಿಜಯ ಲಭಿಸುವುದೆಂದು ಈಗಾಗಲೇ ಭವಿಷ್ಯ ನುಡಿಯುವುದು ತೀರಾ ಅಸಾಧ್ಯ.

ಇಂದಿನ ಪರಿಸ್ಥಿತಿಯನ್ನು ಕಾಣುವಾಗ ಕಾಶ್ಮೀರದ ವಿವಾದವು ತೀರ್ಮಾನವಾಗುವುದು ಅಸಾಧ್ಯವೆಂಬುದನ್ನು ಧಾರಾಳವಾಗಿ ಹೇಳಬಹುದು. ಭಾರತ ಪಾಕಿಸ್ಥಾನಗಳು ಕಾಶ್ಮೀರದಲ್ಲಿ ಯುದ್ಧಕ್ಕಿಳಿದರೆ ಈಗಾಗಲೇ ಹೊಂಚು ಹಾಕುತ್ತಿರುವ ರಷ್ಯಕ್ಕೆ ತನ್ನ ವರ್ಚಸ್ಸು ಬೀರಲು ಸುಲಭವಾಗುವುದೆಂಬ ಭೀತಿಯಿಂದ ಅಮೇರಿಕೆಯು ಈ ವಿವಾದವನ್ನು ತೀರ್ಮಾನಿಸುವರೆ ಬಹಳ ಅವಸರ ಪಡುತ್ತಿದೆ. ಕಾಶ್ಮೀರಕ್ಕೆ ಏನೂ ಆಗಲಿ ವಿವಾದವೊಂದು ತೀರ್ಮಾನವಾದರೆ ಸಾಕು ಎಂದೇ ಅಮೇರಿಕದ ಅಭಿಪ್ರಾಯವಿದ್ದಂತೆ ಕಾಣುತ್ತದೆ. ಈ ರಾಜಕೀಯ ಆಟದ ನಡುವೆ ಭಾರತವು ಸಿಕ್ಕಿ ಬಿದ್ದು ಪಂಚಾಡುತ್ತಿದೆ. ಮುಖ್ಯಮಂತ್ರಿ ನೆಹರೂರವರು ಇನ್ನಾದರೂ ರಾಜಕೀಯದ ಆದರ್ಶಗಳಲ್ಲಿ ಸಿಲುಕಿಬಿದ್ದು ಇದ್ದುದನ್ನು ಕಳಕೊಳ್ಳದಿರಲಿ.

ಇದು ಬರಿ ಅಪವ್ಯಯವಲ್ಲವೇ?

ಲೇ — ಶ್ರೀ ಕೆ. ಜಿ. ಮಶ್ರುವಾಲಾ

ಈ ವರ್ಷವೂ ಗಿಡ ಹಚ್ಚುವ ಕಾರ್ಯಕ್ರಮವನ್ನು ಪ್ರದರ್ಶಿಸಲಾಗುವುದೆಂದು ಪತ್ರಿಕೆಗಳು ಪ್ರಕಟಿಸಿವೆ. ಇದೇನು ಪ್ರತಿ ವರ್ಷ ನಡೆಯತಕ್ಕ ಸಮಾರಂಭವಾಗುವುದೇ? ಎಂದು ಯಾರಾದರೂ ಕೇಳಬಹುದು. ಇದು ಅವಶ್ಯಕವೇ? ಸರಕಾರ ಇದನ್ನು ಕೈಕೊಳ್ಳಬೇಕೇ? ಈ 'ಹೆಚ್ಚು ಆಹಾರ ಬೆಳೆಯಿರಿ' ಮತ್ತು 'ಗಿಡ ಹಚ್ಚಿರಿ' ಎಂಬ ಪ್ರಚಾರಕ್ಕಾಗಿ ಇಷ್ಟೆಲ್ಲ ಹಣ ಖರ್ಚು ಮಾಡುವುದು ಸರಿಯಾದುದೇ?

ಈ ಸುದ್ದಿಯೊಡನೆ ಕಳೆದ ವರ್ಷ ಆಹಾರ ಮಂತ್ರಿಗಳ ವಿಜ್ಞಾಪನೆಗೆ ಅನುಸಾರವಾಗಿ ಮೂರು ಕೋಟಿಗೂ ಹೆಚ್ಚು ಗಿಡಗಳನ್ನು ಹಚ್ಚಲಾಯಿತೆಂದು ಹೇಳಲಾಗಿದೆ. ಪ್ರಾಂತಗಳಿಂದ ಬಂದ ವರದಿಗಳ ಪ್ರಕಾರ ಸುಮಾರು ೬೦ ಲಕ್ಷ, ಅಂದರೆ ನೂರಕ್ಕೆ ೨೦ ರಷ್ಟು ಗಿಡಗಳು ಮಾತ್ರ ಬದುಕಿ ಉಳಿದಿವೆ. ಈ ಮೊಳಕೆಗಳ ಸಾವಿನ ಪ್ರಮಾಣ ನೂರಕ್ಕೆ ಎಂಬತ್ತರಷ್ಟೆಂದರೆ ಬಹಳ ಹೆಚ್ಚೇ ಸರಿ.

ಈ ಗಿಡಗಳನ್ನು ಹಚ್ಚಲು ಎಷ್ಟು ಹಣವು ಸೂರೆಮಾಡಿದರು! ಈ ಕಾರ್ಯಕ್ರಮ ಮತ್ತು ಪ್ರಚಾರಗಳಿಗಾಗಿ ಸರಕಾರವೆಷ್ಟರ ದುಡ್ಡು ಹುಡಿಮಾಡಿದ್ದು! ಇಂಥ ಖರ್ಚನ್ನು ಸರಕಾರಗಳು ಉಳಿಸಿಕೊಳ್ಳಬಾರದೇಕೆ? ಸಾಮಾನ್ಯ ಜನರು ಇಂಥ ಕಾರ್ಯಕ್ರಮಗಳನ್ನು ಬರಿಯ ಹುಡುಗಾಟಿಕೆಯ ಆಡಂಬರಗಳೆಂದೂ ಜಾಹೀರಾತೆಂದೂ ಗ್ರಹಿಸುವರು ಎಂಬ ಅಂಶವನ್ನು ಮಂತ್ರಿಗಳು ಗಮನಿಸುವುದು ಉತ್ತಮ.

ದೇಶಕ್ಕಾಗಿ ಕುಡಿ?

ರಾಷ್ಟ್ರೀಯ ಆಪತ್ತು ಒದಗಿದಾಗಲೆಲ್ಲ ರಾಷ್ಟ್ರನಾಯಕರು 'ದೇಶಕ್ಕಾಗಿ ಮಾಡಿರಿ' 'ದೇಶಕ್ಕಾಗಿ ಮಡಿಯಿರಿ' ಎಂದು ಸ್ಫೂರ್ತಿಸುವ ರೂಢಿ ಈ ವರೆಗೆ ಇತ್ತು. 'ಮಾಡು ಇಲ್ಲವೆ ಮಡಿ' ಎಂಬುದು ಗಾಂಧಿಯವರ ಅಂತ್ಯೋಪದೇಶವಾಗಿತ್ತು. ಮತ್ತು ರಾಷ್ಟ್ರವಿಪತ್ತು, ಅತ್ಯುಗ್ರವಾಗಿದ್ದಾಗಲೇ ಅವರು ಮಾಡಿ ಮಡಿದು ತಮ್ಮ ಉಪದೇಶವನ್ನು ಉದಾಹರಿಸಿದರು.

ನಾವೀಗ ಅತಿ ಕೆಟ್ಟ ಪರಿಸ್ಥಿತಿಯಲ್ಲಿದ್ದೇವೆ ಎಂಬುದರಲ್ಲಿ ಸಂದೇಹವೇ ಇಲ್ಲ. ರಾಜ್ಯಾದಾಯ ಪಡೆಯುವ ವಿಫಲ ಪ್ರಯತ್ನದ ಭರದಲ್ಲಿಂದು ಆ ಹಳೆಯ ಬಿನ್ನಹ 'ದೇಶಕ್ಕಾಗಿ ಕುಡಿ!' ಎಂಬ ಹೊಸ ರೂಪ ತಾಳಿದಂತೆ ತೋರುತ್ತದೆ. ಪಾನಪ್ರತಿಬಂಧ ವಿಚಾರಣಾಸಮಿತಿಯನ್ನು ನಿಯಮಿಸುವುದರಲ್ಲಿ ಉತ್ತರ ಪ್ರದೇಶವು ಮದ್ರಾಸನ್ನು ಅನುಸರಿಸಿದೆ. ಪಾನಪ್ರತಿಬಂಧವನ್ನು ಜಾರಿ ಮಾಡದುದಕ್ಕಾಗಿ ಒರಿಸ್ಸದ ಮುಖ್ಯಮಂತ್ರಿಗಳು ಕುಂಟುನೆವ ಮುಂದೊಡ್ಡಿದರು. ಬಿಹಾರ ಆ ಉದಾಹರಣೆಯನ್ನು ಅನುಸರಿಸಿದೆ. ಅಲ್ಲಿಯ ಪ್ರಾಂತಿಕ ಕಾಂಗ್ರೆಸ್ ಕಮಿಟಿಯು ಅಪ್ಪಣೆಯಿಲ್ಲದೆ ಯಾವ ಕಾಂಗ್ರೆಸ್ಸಿಗನೂ ಪಾನಪ್ರತಿಬಂಧದ ಪ್ರಚಾರದಲ್ಲಿ ಭಾಗವಹಿಸಬಾರದೆಂಬ ಆಜ್ಞೆ ಹೊರಡಿಸಿ ಸರಕಾರವನ್ನು ಬೆಂಬಲಿಸಿದೆ! ಕಾಂಗ್ರೆಸ್ ಘ

ರೂ. ೫೦,೦೦೦ ಬೆಲೆಯ ಆಭರಣಗಳು ಕೊಡಲ್ಪಡುತ್ತಿವೆ

ಡೆಲ್ಲಿಯಲ್ಲಿ ಚಿನ್ನವು ತೊಲೆಗೆ ರೂ. ೩

ಭಾರತದ ಪ್ರಮುಖ ಪತ್ರಿಕೆ ಮತ್ತು ಮಾಸಿಕಗಳಲ್ಲದೆ ನಮ್ಮ ಸಾವಿರಾರು ಗ್ರಾಹಕರು ಇದನ್ನು ಮುಕ್ತಕಂಠದಿಂದ ಹೊಗಳಿದ್ದಾರೆ. ಸಂಯುಕ್ತ ಪ್ರಾಂತದ ಮಹಾಲಿಯ ಸಾಹ್ ನಂದ ಕಿಶೋರ್ ಬಿ ಎ ಎಲ್. ಎಲ್ ಬಿ ಯವರು ಹೀಗೆ ಬರೆಯುತ್ತಾರೆ. 'ಮಿನರ್ವ ಹೊಸ ಚಿನ್ನವನ್ನು ಆಭರಣಗಳೊಂದಿಗೆ ಕಳುಹಿಸಿರಿ. ಈ ಚಿನ್ನವು ಬರೆ ಹಚ್ಚಿದಾಗ ಅಪ್ಪಟ ಚಿನ್ನದಂತೆಯೇ ತೋರುವದಲ್ಲದೆ ಇದನ್ನು ತಂತಿಯಾಗಿ ಎಳೆಯಬಹುದು. ಕಾಗದದಂತೆ ತಗಡಾಗಿ ಹರಡಬಹುದು. ಇದರ ಮಿಂಚು ಚಿನ್ನದಂತೆಯೇ ಉಳಿಯುವದು. ಇದರಿಂದ ಯಾವ ಮಾದರಿಯ ನಗಗಳನ್ನೂ ಮಾಡಿಸಬಹುದು. ಇದು ಜಗತ್ತಿನ ಹೊಸ ಶೋಧ. ಬೆಲೆ ಒಂದು ತೊಲಕ್ಕೆ ರೂ ೩-೦-೦ ಮೂರು ತೊಲಗಳಿಗೆ ರೂ ೮/- ಆರು ತೊಲಗಳಿಗೆ ರೂ ೧೫/- ಮತ್ತು ಹನ್ನೆರಡು ತೊಲಗಳಿಗೆ ರೂ. ೨೮/-

ಈ ಚಿನ್ನವನ್ನು ಹಿಂದೂಸ್ಥಾನದ ಮೂಲೆಮೂಲೆಗಳಲ್ಲಿ ಪ್ರಚಾರಿಸುವ ದೃಷ್ಟಿಯಿಂದ ಕಂಪೆನಿಯು ಈ ಕೆಳಗಿನ ಆಭರಣಗಳ ಬಹುಮಾನವನ್ನು ಗ್ರಾಹಕರಿಗೆ ಕೊಡಲು ನಿರ್ಧರಿಸಿದೆ. ಮೂರು ತೊಲಗಳನ್ನು ಕೊಳ್ಳುವವರಿಗೆ ನಾಲ್ಕು ಸ್ಟೈನ್ ಕಟ್ ಬಳೆಗಳೂ, ಎರಡು ಉಂಗುರಗಳೂ. ಆರು ತೊಲೆ ಕೊಳ್ಳುವವರಿಗೆ ಒಂದು ನೆಕ್ಲೇಸ, ಎರಡು ಉಂಗುರಗಳು, ಒಂದು ಜೊತೆ ವಾಲೆ, ನಾಲ್ಕು ಬಳೆಗಳು ಮತ್ತು ಹಣೆಗೆ ಒಂದು ಟಿಕ್ಕವು ದೊರೆಯುವುದು. ಹಾಗೆಯೇ ೧೨ ತೊಲ ಪಡೆಕೊಳ್ಳುವವರಿಗೆ ಒಂದು ರಾಣಿ ಹಾರ್ ನೆಕ್ಲೇಸ್, ಎಂಟು ಬಳೆ, ಎರಡು ಉಂಗುರಗಳು, ಎರಡು ಜೊತೆವಾಲೆ, ಒಂದು ಟಿಕ್ಕ. ಈ ಆಭರಣಗಳೆಲ್ಲ ಇಮಿಟೇಶನ್ ರತ್ನಗಳಿಂದ ಕೂಡಿರುವುವು. ತೃಪ್ತಿಯಾಗದಿದ್ದರೆ ಬೆಲೆಯನ್ನು ವಾಪಾಸು ಮಾಡುವ ಭರವಸೆ ಕೊಡಲಾಗಿದೆ. ಏಜಂಟರುಗಳಾಗಿ ತಿಂಗಳಿಗೆ ೧೫೦ ರಿಂದ ೩೦೦ ರೂ. ಸಂಪಾದಿಸಲು ಬಯಸಿರಿ. ಈ ಸಂದರ್ಭವನ್ನು ಕಳಕೊಳ್ಳದೆ [illegible] ಇಂದೇ ಬರೆಯಿರಿ. ಅಂಚೆ ಹಾಸಲು ಮತ್ತು ಪ್ಯಾಕಿಂಗ ಮುಫತ್ತು.

Minerva New Gold ornaments House,
Bara Hindu (K M) Delhi 6

4-3

ಟನೆಯ ಮೇರೆಗೆ ಕಾಂಗ್ರೆಸ್ಸಿಗನು ಮಾದಕ ಪದಾರ್ಥವನ್ನು ಮುಟ್ಟಬಾರದು; ಆದರೆ ಇತರರನ್ನು ಮೇಲಿನವರ ಅನುಮತಿಯಿಲ್ಲವೆ ತನ್ನಂತೆಯೇ ಮಾದಕ ಪದಾರ್ಥವಿಮುಖರನ್ನಾಗಿ ಮಾಡಲು ಯತ್ನಿಸಿದರೆ ಅವನ ಮೇಲೆ ಶಿಸ್ತಿನ ಕ್ರಮವನ್ನು ಕೈಕೊಳ್ಳಲಾಗುವುದಂತೆ! ಕಾಂಗ್ರೆಸ್ ಮತ್ತು ಕಾಂಗ್ರೆಸ್ ಸರಕಾರಗಳ ಅಧ್ಯಾತ್ಮನತೆಗೆ ಇವಕ್ಕಿಂತ ಹೆಚ್ಚಿನದಿನ್ನೇನು ಬೇಕು? ಬಿಹಾರದ ಪ್ರತಿಬಂಧಕರಿಗೆ ಕಾಂಗ್ರೆಸ್ಸನ್ನು ಬಿಟ್ಟು ಹೊರಹೋಗಲು ಇದಕ್ಕಿಂತ ಹೆಚ್ಚಿನ ಸ್ಪಷ್ಟ ಸೂಚನೆ ಬೇಕೆ? ಭಾರತದಲ್ಲಿನ್ನು ಒಬ್ಬ ದೊಡ್ಡ ಉದ್ಯಮಿ ಮುಂದೆ ಬಂದು 'ಅತ್ಯುತ್ತಮ ಮದ್ಯದ ಕಂಪೆನಿ'ಯೊಂದನ್ನು ಸ್ಥಾಪಿಸಿ ಯಂತ್ರಗಳೊಬ್ಬರನ್ನು ಕರೆಸಿ ಅವರ ಕೈಯಿಂದ ಅದರ ಉದ್ಘಾಟನ ಮಾಡಿಸಿಬಿಡುವುದೊಂದು ಬಾಕಿಯುಂಡು! ಈ ನಮೂನೆಯ ಪ್ರಹಸನವೆಂದು ದರಂಬು ನಡೆಯುತ್ತಿದೆ.

೩ನೇ ಮಹಾ ಯುದ್ಧದ ಭೀತಿ ಹೆಚ್ಚಾಗಿದೆ.

'ಮೂರನೆ ಮಹಾಯುದ್ಧ ಪ್ರಾರಂಭವಾಗುವ ಅಂಜಿಕೆ, ಕಳೆದ ಯುದ್ಧಾನಂತರ ತೊಂದರೆಯನ್ನು ನೋಡಿದರೆ ಎಂದಿಗಿಂತ ಈಗ ಹೆಚ್ಚಾಗಿದೆ'ಯೆಂದು ಅಧ್ಯಕ್ಷ ಟ್ರೂಮನರು ತಮ್ಮ ಪತ್ರಿಕಾ ಗೋಷ್ಠಿಯಲ್ಲಿ ಹೇಳಿದರು. ರಶಿಯದಿಂದ ಬರ್ಲಿನದ ಮೇಲೆ ದಿಗ್ಬಂಧನ ಗಳಲ್ಲಿ, ಬರ್ಲಿನದೊಳಗೆ ಪಶ್ಚಿಮದ ವಾಯುಮಾನದ ದಿಗ್ಬಂಧನ ಗಳಲ್ಲಿ, ಗ್ರೀಸ್ ಮತ್ತು ತುರ್ಕಸ್ತಾನದ ಮೇಲೆ ಗಂಡಾಂತರ, ಗಳಲ್ಲಿ, ಪರ್ಶಿಯಾದ ಮೇಲೆ ಗಂಡಾಂತರ ಮತ್ತು ಕೊರಿಯಾದ ಯುದ್ಧ ಈ ರೀತಿಯ ಒಂದರ ಮೇಲೊಂದು ತೊಂದರೆಗಳು ಉದ್ಭೂತವಾಗುತ್ತ ನಡೆದವೆಂದು ಟ್ರೂಮನ್ನರು ವಿವರಿಸಿದರು.

ಸದ್ಯದ ಶಿಕ್ಷಣ ಕ್ರಮವು 'ಉತ್ತಮ ಗುಲಾಮ'ರನ್ನು ತಯಾರು ಮಾಡುವಂಥದಾಗಿದೆ

ಸದ್ಯದ ಶಿಕ್ಷಣ ಪದ್ಧತಿಯಲ್ಲಿ ಸಂಪೂರ್ಣ ಬದಲಾವಣೆಯಾದರೆ ಮಾತ್ರ ಇಂದಿನ ಸಮಸ್ಯೆಗಳನ್ನು ಎದುರಿಸಲು ಭಾರತವು ಶಕ್ತವಾಗುವದೆಂದು ಆಚಾರ್ಯ ವಿನೋಬಾ ಭಾವೆಯವರು ತಾ. ೫ ರಲ್ಲಿ ಸಿಕಂದರಾಬಾದದಲ್ಲಿ ಹೇಳಿದರು.

ಬ್ರಿಟಿಶ-ಶಿಕ್ಷಣ ಪದ್ಧತಿಯಿಂದ ಭಿನ್ನವಾಗದಿರುವ ಈಗಿನ ಶಿಕ್ಷಣ ಪದ್ಧತಿಯು ತಂಬೇರಿ ಹೊಂದದ ವಿದ್ಯಾರ್ಥಿಗಳನ್ನು "ಉತ್ತಮ ಗುಲಾಮ" ರಾಗುವಂತೆ ಯುಕ್ತಿಸುತ್ತಿದೆಯೆಂದು ಅವರು ಪ್ರಾರ್ಥನೋತ್ತರ ಸಭೆಯನ್ನುದ್ದೇಶಿಸಿ ಮಾತನಾಡುವಾಗ ಹೇಳಿದರು. ಆದರೆ ಈ ವಿದ್ಯಾರ್ಥಿಗಳು ಸ್ವತಂತ್ರ ಭಾರತದ ಎದುರಿಗಿರುವ ಕಾರ್ಯಗಳನ್ನು ನಿರ್ವಹಿಸುವಂತೆ ಮಾಡುತ್ತಿಲ್ಲವೆಂದೂ ಅವರು ಹೇಳಿದರು.

ಅವರು ಇನ್ನೂ ಮುಂದೆ ಸಾಗಿ, "ಭಾರತದ ನಾಯಕರು ಹಳ್ಳಿಗರಲ್ಲಿ ವಿಶ್ವಾಸವನ್ನುಂಟುಮಾಡುವ ಕಾರ್ಯದಲ್ಲಿ ಅಯಶಸ್ವಿಯಾಗಿದ್ದಾರೆ ಆಹಾರಧಾನ್ಯ ಹೆಚ್ಚಳದಲ್ಲಿಯೂ ಯಶಸ್ವಿಯಾಗಿಲ್ಲ" ಎಂದು ಹೇಳುತ್ತ ಗಡಿಬಿಡಿ ಹಾಗೂ ಅನಿಷ್ಟಪೂರಿತ ನಗರ ಜೀವನವನ್ನು ತ್ಯಜಿಸಿ ಶಾಂತ ಗ್ರಾಮ ವಾತಾವರಣದಲ್ಲಿ ನೆಲೆಸಿ ರಾಷ್ಟ್ರದಲ್ಲಿಯ ದೀನ ಜನರ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸುವ ಕಾರ್ಯದಲ್ಲಿ ತೊಡಗಬೇಕೆಂದು ಉಪದೇಶಿಸಿದ್ದಾರೆ.

ಕುಲ ಕ್ಷೇತ್ರಶಾಸನ ವಿರುದ್ಧ ಸತ್ಯಾಗ್ರಹ

ದಕ್ಷಿಣ ಆಫ್ರಿಕ ಸರ್ಕಾರ ಜಾರಿಗೆ ತಂದಿರುವ ಕುಲಕ್ಷೇತ್ರ ಶಾಸನವನ್ನು ಪ್ರತಿಭಟಿಸುವ ಸಲುವಾಗಿ ಎರಡು ವಾರಗಳ ಕಾಲ ಉಪವಾಸ ಮುಷ್ಕರ ಮಾಡುವುದಾಗಿ, ಮಹಾತ್ಮ ಗಾಂಧಿಯವರ ಪುತ್ರರಾದ ಶ್ರೀ ಮಣಿಲಾಲ್ ಗಾಂಧಿ ತಿಳಿಸಿದ್ದಾರೆ.

ಮೊದಲು ದೇಹಾತ್ಮಗಳ ಶುದ್ಧಿಗಾಗಿ ಉಪವಾಸ ಮಾಡಿ, ಅನಂತರ ಡರ್ಬನ ಪಟ್ಟಣದಲ್ಲಿ ಸರ್ಕಾರದ ಶಾಸನವನ್ನು ಉಲ್ಲಂಘಿಸುವುದಾಗಿಯೂ, ಶ್ರೀ ಮಣಿಲಾಲ್ ಗಾಂಧಿ ತಿಳಿಸಿದ್ದಾರೆ.

ಈ ಶಾಸನದ ಉಲ್ಲಂಘನೆಗಾಗಿ ತಮಗೆ ಒದಗಬಹುದಾದ ಶಿಕ್ಷೆಯನ್ನು ಯಾವ ಪ್ರತಿಭಟನೆಯನ್ನೂ ತೋರದೆ ಅನುಭವಿಸುವದಾಗಿ ಶ್ರೀ ಮಣಿಲಾಲ್ ಗಾಂಧಿ ತಿಳಿಸಿದ್ದಾರೆ.

ಶ್ರೀ ಗಾಂಧಿಯವರ ಏಪ್ರಿಲ್ ೬ನೇ ತಾ|| ಪ್ರಾತಃಕಾಲ ಉಪವಾಸವನ್ನು ಆರಂಭಿಸಿ, ಏಪ್ರಿಲ್ ೨೦ ನೇ ತಾರೀಕು ಪ್ರಾತಃಕಾಲ ಮುಕ್ತಾಯ ಗೊಳಿಸುವರು.

ಶ್ರೀ ಮಣಿಲಾಲ್ ಗಾಂಧಿಯವರು ಮಹಾತ್ಮ ಗಾಂಧಿಯವರ ದ್ವಿತೀಯ ಪುತ್ರರು. ಅವರಲ್ಲಿ 'ಇಂಡಿಯನ್ ಓಪಿನಿಯನ್' ಎಂಬ ಪತ್ರಿಕೆಯ ಸಂಪಾದಕರಾಗಿದ್ದಾರೆ. ಡರ್ಬಾನಿಗೆ ಕೆಲವು ಮೈಲಿ ದೂರದಲ್ಲಿರುವ, ಮಹಾತ್ಮ ಗಾಂಧಿಯವರು ಸ್ಥಾಪಿಸಿದ ಫೀನಿಕ್ಸ್ ಸೆಟಲ್ಮೆಂಟ್‌ನಲ್ಲೇ ಶ್ರೀ ಮಣಿಲಾಲ್ ಗಾಂಧಿಯವರಿರುವುದು.

ಸರ್ಕಾರದ ವರ್ತನೆಯಿಂದ ಆತ್ಮಗೌರವವುಳ್ಳವರು ಬದುಕುವುದೇ ಕಷ್ಟವಾಗಿದೆ. ತಲೆಯೆತ್ತಿಕೊಂಡು ಓಡಾಡುವುದಕ್ಕೇ ಒಂದು ಜಾಗವಿಲ್ಲದಂತಾಗಿದೆ ಎಂಬದಾಗಿ ಶ್ರೀ ಮಣಿಲಾಲ್ ಗಾಂಧಿ ತಿಳಿಸಿದರು.

'ಸರ್ಕಾರದ ಆಜ್ಞೆಯ ಫಲವಾಗಿ, ನನ್ನ ಚರ್ಮದ ಬಣ್ಣ, ನಾನು ಸೇರಿದ ಜನಾಂಗ ಇವೇ ನನಗೆ ಹಾನಿಕರವಾದಂತಾಗಿದೆ. ಆತ್ಮಗೌರವದಿಂದಿರಬೇಕಾದರೆ ಸರ್ಕಾರದ ಆಜ್ಞೆಯನ್ನು ಎದುರಿಸಬೇಕು, ಇಲ್ಲವಿದ್ದರೆ ಓಡಿ ಹೋಗಬೇಕು. ಓಡಿ ಹೋಗುವುದು 'ಹೇಡಿತನ' ಎಂದೂ ಅವರು ತಿಳಿಸಿದ್ದಾರೆ.

'ಎಲ್ಲರ ಹಿತದಲ್ಲಿ ಈ ಉಪವಾಸ'

ಭಾರತೀಯರ ಹಿತದೃಷ್ಟಿಯಿಂದ ಮಾತ್ರ ತಾವು ಈ ಉಪವಾಸವನ್ನು ಕೈಗೊಳ್ಳುತ್ತಿಲ್ಲವೆಂದೂ, ಅವರವರ ಹಿತಗಳನ್ನು ಮಾತ್ರ ನೋಡಿಕೊಳ್ಳುವ ಕಾಲ ಕಳೆದು ಹೋಯಿತೆಂದೂ ಈಗ ಎಲ್ಲರೂ ಒಂದಾಗಿ, ಸಹಕರಿಸಿ, ಕಾರ್ಯೋನ್ಮುಖರಾಗಬೇಕಾಗಿದೆಯೆಂದೂ ಶ್ರೀ ಮಣಿಲಾಲ್ ಗಾಂಧಿ ತಿಳಿಸಿದರು.

ವಿವಿಧ ಜನಾಂಗಗಳವರ ಪ್ರತ್ಯೇಕ ಪ್ರತ್ಯೇಕ ಪ್ರದೇಶಗಳಲ್ಲಿ ವಾಸಮಾಡಬೇಕೆಂಬ ಕುಲಕ್ಷೇತ್ರ ಶಾಸನವನ್ನು ನಾಲ್ಕು ದಿನಗಳ ಹಿಂದೆ ದಕ್ಷಿಣ ಆಫ್ರಿಕಾ ಸರ್ಕಾರ ಜಾರಿಗೆ ತಂದಿತು. ಎಲ್ಲ ಐರೋಪ್ಯೇತರ ಜನಾಂಗಗಳ ವಿರುದ್ಧವಾಗಿ ದ. ಆಫ್ರಿಕ ಸರ್ಕಾರ ಈ ಕಾರ್ಯಕ್ರಮವನ್ನು ಕೈಗೊಂಡಿದೆಯೆಂದು ಶ್ರೀ ಮಣಿಲಾಲ್ ಗಾಂಧಿ ಖಂಡಿಸಿ, ಪ್ರತಿಭಟನೆ ಸೂಚಿಸಲು ನಿರ್ಧರಿಸಿದ್ದಾರೆ.

ತಿಳಿಸಿರಿ.

ಭೂಮಿ, ತೋಟ, ಜಾಗ ಪೇಟೆಯಲ್ಲಿ ಮನೆ ಅಥವ ಮನೆ ಸ್ಥಳ ಮಾರಲಿರುವವರು ಮತ್ತು ಕೊಂಡುಕೊಳ್ಳಲಿಚ್ಛಿಸುವವರು ಈ ಕೆಳಗಿನ ಪತ್ತೆಯಲ್ಲಿ ವಿಚಾರಿಸಿರಿ. ಅಲ್ಲದೆ ಬೇಕಾದವರಿಗೆ ಕರೆಯುವ ಎಮ್ಮೆ, ಹಸು ಮತ್ತು ಉಳುವ ಎತ್ತು ಮತ್ತು ಕೋಣಗಳನ್ನು ಒದಗಿಸಿ ಕೊಡಲಾಗುವುದು. ಬೇಕಾದವರು ತಮಗೆ ಬೇಕಾದ ತಾರೀಕಿನ ಎಂಟು ದಿನಗಳಿಗೆ ಮುಂದೆ ತಿಳಿಸಬೇಕಾಗಿದೆ. ವಿವರಗಳಿಗೆ ಈ ಪತ್ತೆಗೆ ಬರೆಯಬಹುದು

D. A. N. & SONS.
Commission Agent,
Gonicoppal
S. Coorg.

26-10

ಶ್ರೀ ಟಿ. ಎನ್. ಗೋವಿಂದರಾಜು,
'ಕೊಡಗು' ಏಜೆಂಟರು,
ವೀರಾಜಪೇಟೆ

ಕೊಡಗು ಪ್ರಾಂತೀಕ ಸಹಕಾರಿ, ಮಾರ್ಕೆಟಿಂಗ್, ಫೆಡರೇಷನ್ ಲಿಮಿಟೆಡ್., ವೀರಾಜಪೇಟೆ.

ನಮ್ಮಲ್ಲಿ ಕೋವಿಗಳು, ತೋಟಗಳು ಮತ್ತು ಎಲ್ಲಾ ತರಹದ ವ್ಯವಸಾಯದ ಉಪಕರಣಗಳು ದೊರೆಯುತ್ತವೆ.

1. 32 ಪಿಸ್ತೂಲುಗಳು (Pistols) ಕ್ರಯ ರೂ. 162 ರಿಂದ 245ರ ವರೆಗೆ.
2. 12ನೇ ನಂಬರಿನ ಒಂಟಿ ಹೊಳವಿನ ಕೋವಿ ಕ್ರಯ ರೂ. 320-0-0
3. 12ನೇ ನಂಬರಿನ ಜೋಡು ಹೊಳವಿನ ಕೋವಿ (Webley & Scott)
4. 12ನೇ ನಂಬರಿನ ಜೋಡು ಹೊಳವಿನ ಕೋವಿ (Spanish make)
5. .32 ಪಿಸ್ತೂಲು ಮತ್ತು ರಿವಾಲ್ವರುಗಳ ತೋಟಗಳೂ ಸಹ ದೊರೆಯುತ್ತವೆ.
6. ಕಾಫಿ ಮತ್ತು ಕಿತ್ತಳೆ ಗಿಡಗಳಿಗೆ ಸ್ಪ್ರೇ ಮಾಡುವ ಪಂಪುಗಳು (Spraying Pumps)
7. 3/4" 5/8" 1/2" 3/8" 1/4" ಕಬ್ಬಿಣದ ಸಲಾಕೆಗಳು.

ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

(ಅವಶ್ಯವಿರುವ ಕೋವಿಗಳಿಗೂ, ತೋಟಗಳಿಗೂ ಜಿಲ್ಲಾ ಮ್ಯಾಜಿಸ್ಟ್ರೇಟರಿಂದ ವಿಶೇಷ ಪರ್ಮಿಟು "Special permit" ಪಡೆದವರಿಗೆ ಮಾತ್ರ ದೊರೆಯುವದು)

ಎಂ. ಎಸ್. ಸೋಮಯ್ಯ,
ಗೌರವ ಕಾರ್ಯದರ್ಶಿ.

52-28

ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ. (1921ರಲ್ಲಿ ಸ್ಥಾಪಿತವಾಗಿದೆ.

ಅಧಿಕೃತ ಶೇರು ಭಂಡವಾಳ	ರೂ.	10,00,000
ವಸೂಲಾದ ಶೇರು ಬಂಡವಾಳ	ರೂ.	1,79,000.
ಕ್ಷೇಮನಿಧಿ	ರೂ.	55,000
ಇತರ ನಿಧಿಗಳು	ರೂ.	28,000.

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನು ಕೈಕೊಳ್ಳಲಾಗುವುದು

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ, ಬೆಳ್ಳಿ ನಗಗಳ ಈಡಿನ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್‌ಗಳೂ ಡ್ರಾಫ್ಟ್‌ಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರಿನಿಟಿ ಮತ್ತು ಮಾರ್ಗನ್ ಇನ್ಸೂರೆನ್ಸ್ ಕಂಪನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು.

ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಗೌ. ಕಾರ್ಯದರ್ಶಿ,

ಕೆ. ಪಿ. ಅಪ್ಪಯ್ಯ, M. L. C. ಪ್ರೆಸಿಡೆಂಟ್ ಮತ್ತು ಖಜಾಂಚಿ.

Edited, Printed and Published by P. I. Belliappa at 'Kodagu' Press, Mercara, for 'Kodagu' Ltd.

Reg. No. M. 1550.
'KODAGU' MERCARA, (Coorg).

ಕೊಡಗು

ಸಂಪಾದಕರು—ಪಿ. ಐ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. ೯-0-0.

ಸಂಪುಟ ೨೯ | ತಾರೀಕು ೨೦-೪-೧೯೫೧ನೇ ಶುಕ್ರವಾರ | ಸಂಚಿಕೆ ೪೪

ವನಮಹೋತ್ಸವದ ಬದಲು ಭೋಜನ ಮಹೋತ್ಸವ.

ಕೇಂದ್ರ ಸರಕಾರದಲ್ಲಿ 'ಹೆಚ್ಚು ಆಹಾರ ಬೆಳೆಸಿರಿ' ಯೋಜನೆಯ ಕುರಿತು ತೀವ್ರವಾಗಿ ಚರ್ಚೆ ನಡೆಯಿತು.—'ವನಮಹೋತ್ಸವ' 'ಹೆಚ್ಚು ಆಹಾರ ಬೆಳೆಸಿರಿ' ಮುಂತಾದ ಪ್ರಚಾರಗಳಿಗಾಗಿ ಸರಕಾರ ಹೇರಳವಾಗಿ ವ್ಯಯಿಸಿದ ಹಣ ವ್ಯರ್ಥವಾಗಿದೆ ಎಂದು ಸದಸ್ಯರು ಟೀಕೆಮಾಡಿದರು. ಮುನ್ಸಿಯವರು ಆಹಾರೋತ್ಪಾದನೆ ಹಾಗೂ ಆಹಾರದ ಕುರಿತಾಗಿ ಕೊಡುವ ಪ್ರತಿಯೊಂದು ಭರವಸೆಯೂ ಕಾಗದದಲ್ಲಿಯೇ ಉಳಿಯುತ್ತದೆ ವಿನಹ ಹಸಿದವರಿಗೆ ಯಾವ ಪ್ರಯೋಜನವೂ ಅದರಿಂದ ಉಪಯೋಗವೂ ಲಭಿಸುತ್ತಿಲ್ಲ. ಸರಕಾರದ 'ವನಮಹೋತ್ಸವ'ದ ಪ್ರಚಾರ 'ಬಣಮಹೋತ್ಸವ'ದಂತೆಯೆ ಆಗಿರುತ್ತದೆ. ಅಧಿಕಾಹಾರೋತ್ಪಾದನೆಯ ಸಲುವಾಗಿ ಕಳೆದ ಮೂರು ವರ್ಷಗಳಿಂದ ಸುಮಾರು ಅರುವತ್ತು ಕೋಟಿ ರೂಪಾಯಿ ವ್ಯಯಮಾಡಿರುತ್ತದೆ. ಇವಿಷ್ಟಕ್ಕೆ ಸರಿಯಾಗಿ ನಾವು ಪಡೆದ ಆಹಾರವೆಂದರೆ ಕೇವಲ ಮೂವತ್ತು ಲಕ್ಷ ಟನ್! ಸಾಲದುದಕ್ಕೆ ಪ್ರತೀ ಎಕರೆಯ ಉತ್ಪತ್ತಿಯು ಕಳೆದ ಹತ್ತು ವರ್ಷಗಳಿಂದ ಕಡಿಮೆಯಾಗುತ್ತ ಬಂದಿದೆ. ಸರಕಾರದವರ ಸಮೀಕರಣೆಯ ಧೋರಣೆಯಿಂದ ಆರು ಲಕ್ಷ ಟನ್ ಹೆಚ್ಚು ಬರಬೇಕಾಗಿತ್ತು. ಆದರೆ ಕೇವಲ ಮೂರು ಲಕ್ಷ ಬಂದಿರುತ್ತದೆ. ಹನ್ನೆರಡು ಲಕ್ಷ ಸಹಾಯ ಪಡೆಯಬಹುದೆಂದು ಆಶಿಸಿದ್ದರಲ್ಲಿ ಎರಡೇ ಲಕ್ಷ ಟನ್ ಸಹಾಯದಿಂದ ಆ ಆಶೆ ನೀಗಿಕೊಳ್ಳಬೇಕಾಗಿದೆ. ಸರಕಾರದ ಸ್ವಾವಲಂಬನೆಯ ಉದ್ದೇಶವು ಇನ್ನೂ ಸಾಧಿಸದೇ ಕುಂಠಿತವಾಗಿರುವುದು. ಅಧಿಕಾಹಾರೋತ್ಪಾದನೆಯ ಕ್ರಮವು ಹೀಗೆ ನಿರಾಶಾಜನಕವಾದ ರೀತಿಯಲ್ಲಿ ಕ್ಷಯಿಸುತ್ತಿರಲು ಮುಖ್ಯವಾಗಿ ಸರಕಾರವೀಗ ಅನುಸರಿಸುತ್ತಿರುವ ಅಶಾಸ್ತ್ರೀಯ ಪದ್ಧತಿಯೇ ಕಾರಣವಾಗಿದೆ. ಸರಕಾರ ಒದಗಿಸಿಕೊಡುವ ಸೌಕರ್ಯ ಸ್ವಾಭಾವಿಕವಾಗಿ ಅಧಿಕಾಹಾರೋತ್ಪಾದನೆ ಯಾರು ಮಾಡುತ್ತಾರೊ ಅವರಿಗೆ ಸಲ್ಲುತ್ತಿಲ್ಲ. ಬಂಜರು ಪ್ರದೇಶಗಳನ್ನು ಅಭಿವೃದ್ಧಿಗೆ ತರುವಂತಹ ಮಾತಂತಿರಲಿ ಉಳುವ ಗದ್ದೆಗಳೇ ಬಂಜರು ಬೀಳುತ್ತಿರುವುದನ್ನು ಲಕ್ಷಿಸುವವರಿಲ್ಲವಾಗಿದೆ. ಬಾವಿ ತೋಡುವ—ಗೊಬ್ಬರ ಹಂಚುವ—ಬೀಜ ವಿತರಣೆ ಮಾಡುವ ವಿಭಾಗದಲ್ಲಿ ಕೃಷಿಕನಿಗೆ ಸರಿಯಾದ ಪ್ರಯೋಜನ ಲಾಭಗಳು ಸಿಗುತ್ತಿಲ್ಲ. ಅಲ್ಲದೆ ಆಹಾರೋತ್ಪಾದನೆಗಾಗಿ ಸರಕಾರ ನೀಡುತ್ತಿರುವ ಸಹಕಾರವು ಹಲವು ಮಾಲೀಕರ ಇಲ್ಲವೆ ಹೊಲದೊಡೆಯರ ಪಾಲಿಗೆ ಸೇರಿ ಅದರ ದುರುಪಯೋಗ ನಡೆಯುವ ನಿದರ್ಶನಗಳೆಷ್ಟೋ ಇವೆ.

ಇನ್ನೊಂದು ಸರಕಾರದ ಅಚಾತುರ್ಯ ಕಾರ್ಯವೆಂದರೆ ಆಹಾರ ಧಾನ್ಯಗಳ ಕ್ರಯವನ್ನು ಏರಿಸದೆ, ನಿಯಂತ್ರಿಸಲ್ಪಟ್ಟು ಉಳಿದ ಬೆಳೆಗಳ ಬೆಲೆಯು ನಿಯಂತ್ರಿಸಲ್ಪಡದೇ ಇರುವಂಥಾದ್ದು. ಉದ್ದು, ಹೆಸರು, ಎಣ್ಣೇಕಾಳು, ಕಬ್ಬು ಮುಂತಾದ ಯಾವುದೇ ಧಾನ್ಯ ಬೆಳೆಸಿದರೂ ಅದರಿಂದ ಆಹಾರ ಧಾನ್ಯಕ್ಕಿಂತ ಮಿಗಿಲಾದ ಲಾಭಸಿಗುವಾಗ ಆಹಾರ ಧಾನ್ಯಗಳನ್ನಾರು ಬೆಳೆಸುತ್ತಾರೆ? ಸರಕಾರದ ಈ ಧೋರಣೆಯಿಂದಾಗಿ ಆಹಾರೋತ್ಪಾದನೆಯ ಮೂಲೋದ್ದೇಶಕ್ಕೆ ಕೊಡಲಿಯೇಟು ಕೊಟ್ಟಂತಾಗಿದೆ.

ನಗರಗಳಲ್ಲಿ ಕೂತುಮಾಡುವ ಪ್ರಚಾರ ಇಲ್ಲವೆ ವನಮಹೋತ್ಸವಗಳಿಂದ ಯಾವ ಕಾರ್ಯವೂ ಸಿದ್ಧಿಸುವಂತಿಲ್ಲ. ಹಳ್ಳಿಯಲ್ಲಿ ಉಳದೆ ಬಂಜರು ಬಿದ್ದಿರುವ ಹೊಲಗಳನ್ನು ಊರ್ಜಿತಗೊಳಿಸಿ ತನ್ಮೂಲಕ ಆಹಾರೋತ್ಪಾದನೆಯನ್ನುಂಟು ಮಾಡಬಹುದೇ ಹೊರತು ನಗರದಲ್ಲಿ ಸಸಿನೆಡುವದರಿಂದಾಗಲೀ ಆದೇಶಕೊಡುವದರಿಂದಾಗಲೀ ಯಾವ ಉದ್ದೇಶವೂ ಫಲಿಸುವಂತಿಲ್ಲ. ಇದೇ ಧೋರಣೆಯನ್ನು ಮುಂದುವರಿಸಿದರೆ—ಸಂಪ್ರದಾಯಕ್ಕೆ ಶರಣುಹೋಗುವದಾದರೆ ಇನ್ನು ಹತ್ತು ವರ್ಷ ಕಳೆದರೂ ಆಹಾರ ಹೆಚ್ಚಾಗುವಂತೆಯೂ ಇಲ್ಲ; ಸ್ವಾವಲಂಬಿಗಳಾಗುವಂತೆಯೂ ಇಲ್ಲ.

ಸದ್ಯ ಆಹಾರದ ಪರಿಸ್ಥಿತಿ.

ರಷ್ಯವು ಭಾರತ ಸರಕಾರಕ್ಕೆ ೫೦,೦೦೦ ಟನ್ ಗೋಧಿಯನ್ನು ಕೊಡಲೊಪ್ಪಿರುತ್ತದೆ. ಅಂತೆಯೇ ಕಮ್ಯೂನಿಸ್ಟ್ ಚೈನಾ ಒಂದು ಮಿಲಿಯ ಟನ್ ಆಹಾರವನ್ನು ಕೊಡಲೊಪ್ಪಿದೆ. ಚೈನಾದ ರಾಯಭಾರಿಯು 'ಕಮ್ಯೂನಿಸ್ಟ್ ಚೈನಾದ ಜನತೆಯು ಭಾರತ ಜನಾಂಗದ ಹಸಿವೆಯ ಕುರಿತು ತುಂಬ ಸಹಾನುಭೂತಿಯುಳ್ಳವರಾಗಿರುತ್ತಾರೆ. ಚೀನಾ ಮತ್ತು ಭಾರತದೊಳಗೆ ಅನ್ಯೋನ್ಯ ಸಹಕಾರ ಪ್ರವೃತ್ತಿಯನ್ನು ನಾವು ಈ ಕೊಡುಗೆಯ ಮೂಲಕ ಸ್ಥಿರಗೊಳಿಸುತ್ತೇವೆ' ಎಂದಿದ್ದಾನೆ. ಬರ್ಮಾವು ಭಾರತಕ್ಕೆ ಆಹಾರಧಾನ್ಯ ಕೊಡುವ ನಿರೀಕ್ಷೆಯಿದೆ. ದೀರ್ಘಾವಧಿಯ ವ್ಯಾಪಾರೀ ಒಪ್ಪಂದಕ್ಕಾಗಿ ಭಾರತದ ವಾಣಿಜ್ಯ ಪ್ರತಿನಿಧಿಗಳು ಅಲ್ಲಿಗೆ ಹೋಗುವವರಿದ್ದಾರೆ. ಬರ್ಮಾದ ಪಾತಕತೆಯ ಫಲಿತಾಂಶದಿಂದ ಭಾರತವು ಬರ್ಮಾದಿಂದ ಆಹಾರ ಧಾನ್ಯವನ್ನು ಪಡೆಯಬಹುದಾಗಿದೆ.

ಅಮೇರಿಕೆಯ ಆಹಾರದ ಕುರಿತು ವಿಶೇಷ ಪಾತ್ರಕತೆ ನಡೆದಿದೆ. ಭಾರತದ ಬೇಡಿಕೆಯನ್ನು ಮನ್ನಿಸಬೇಕೆಂದು ನಾನಾರೀತಿಯ ಪ್ರತಿಕ್ರಿಯೆಗಳು ಅಮೇರಿಕೆಯಲ್ಲಿಂದು ಮೂಡಿವೆ. ಟ್ರೂಮನರು ಎರಡುಬಾರಿ ಪ್ರತಿನಿಧಿ ಸಭೆಯಲ್ಲಿ ಈ ವಿಚಾರ ತಂದರೂ ನಿರ್ದಿಷ್ಟವಾದ ಒಂದು ಧೋರಣೆಯನ್ನು ತಳೆದಿಲ್ಲ. ಕಾಂಗ್ರೆಸಿನಲ್ಲಿ ಕೊಡುಗೆಗೆ ಸ್ವಾಗತಸಿಕ್ಕಿದರೂ ಪ್ರಜಾಪ್ರತಿನಿಧಿ ಸಭೆಯಲ್ಲಿ ಹಲವು ವಿರೋಧಗಳು ಇನ್ನೂ ಕಂಡುಬರುತ್ತಿವೆ. ರಷ್ಯಾ ಮತ್ತು ಕಮ್ಯೂನಿಸ್ಟ್ ಚೀನಾ ಅತಿ ಶೀಘ್ರ ಆಹಾರಧಾನ್ಯದ ಕೊಡುಗೆಯನ್ನು ಮುಂದೆ ಮಾಡಿದುದರಿಂದ ಅಮೇರಿಕೆಯು ಇನ್ನೂ ಮೀನ ಮೇಷ ಎಣಿಸುವದರಲ್ಲಿ ತನ್ನ ಆತ್ಮಗೌರವಕ್ಕೆ ಕುಂದೆಂಬುದು ಮನವರಿಕೆಯಾಗಿದೆ. ಅಂತಲೇ ತೀವ್ರವಾದ ಪ್ರತಿಕ್ರಿಯೆಗಳು ಕಂಡುಬರುತ್ತಿವೆ. ಅಮೇರಿಕೆಯ ರಾಜಧಾನಿಯ ಸಾವಧಾನ ಧೋರಣೆಯು ರಾಜಕೀಯ ಹಾಗೂ ಸಾರ್ವಜನಿಕ ವರ್ಗಗಳಲ್ಲಿ ಅಸಂತೃಪ್ತಿಯನ್ನುಂಟುಮಾಡಿದೆ. ಅಮೇರಿಕೆಯ ಹೊಣೆಗಾರ ಪತ್ರಿಕೆಗಳಾದ 'ದಿ ನ್ಯೂಯಾರ್ಕ್ ಟೈಮ್ಸ್' 'ದಿ ನ್ಯೂಯಾರ್ಕ್ ಹೆರಾಲ್ಡ್' 'ವಾಶಿಂಗ್‌ಟನ್ ಪೋಸ್ಟ್' ಮೊದಲಾದವುಗಳು ಸಂಪಾದಕೀಯದ ಮೂಲಕವೂ, ಜಾಹೀರಾತಿನ ಮೂಲಕವೂ ಅಮೇರಿಕೆಯು ಕೂಡಲೇ ಆಹಾರ ಧಾನ್ಯವನ್ನು ಕಳಿಸಿಕೊಡುವಂತೆ ಸರಕಾರವನ್ನು ಒತ್ತಾಯಿಸಿವೆ. 'ಕಾಶ್ಮೀರದ ನಿಲುಮೆಯಲ್ಲಿ ಭಾರತದ ಧೋರಣೆಯೇನಿದ್ದರೂ ಖಲನೆಯ ಆಕ್ರಮಣದ ಕುರಿತು ನೆಹ್ರೂರವರ ಭಿನ್ನಾಭಿಪ್ರಾಯವಿದ್ದರೂ ಹಸಿದ ಜನರಿಗೆ ಅನ್ನವನ್ನು ನೀಡುವಲ್ಲಿ ಇದು ತಡೆಯಾಗಿ ನಿಲ್ಲಲಾರದು. ಈ ಸಂದಿಗ್ಧ ಪರಿಸ್ಥಿತಿಯಲ್ಲಿ ನಾವು ಭಾರತಕ್ಕೆ ಆಹಾರವನ್ನು ಕೊಡುವುದರಿಂದಲೇ ನಮ್ಮ ನಿಜವಾದ ವ್ಯಕ್ತಿತ್ವವನ್ನು ಪ್ರದರ್ಶಿಸಿದಂತಾಗುವುದು' ಎಂದು 'ದಿ. ನ್ಯೂಯಾರ್ಕ್ ಟೈಮ್ಸ್' ಬರೆದಿದೆ. ಅಂತೂ ಅಮೇರಿಕೆಯು ಆಹಾರವನ್ನು ಭಾರತಕ್ಕೆ ತಡವಾಗಿಯಾದರೂ ಕೊಡದಿರುವುದಿಲ್ಲ. ಭಾರತ ಸರಕಾರದ ಸ್ವಾವಲಂಬನ ಧೋರಣದಿಂದ ಆಹಾರದ ಕೊರತೆಯನ್ನು ಎದುರಿಸಬೇಕಾದ ಪ್ರಸಂಗ ಬಂದರೂ ಇತರ ನೆರೆಯ ರಾಷ್ಟ್ರಗಳ ಸಕಾಲಿಕವಾದ ಕೊಡುಗೆಯ ಫಲವಾಗಿ ಗಂಭೀರ, ಪರಿಸ್ಥಿತಿಯೇನೂ ಉಂಟಾಗದು!

ಮದ್ರಾಸು ಪ್ರಾಂತಕ್ಕೆ ಹೆಚ್ಚಿನ ಆಹಾರ ಧಾನ್ಯವನ್ನು ಕೇಂದ್ರ ಸರಕಾರವು ಕೊಡಲು ಒಪ್ಪಿದೆಯೆಂದು ಮದ್ರಾಸಿನ ಆಹಾರ ಮಂತ್ರಿ ಶ್ರೀರೋಚಿ ವಿಕ್ಟೋರಿಯಾರವರು ಪಾರ್ಲಿಮೆಂಟಿನ ಮುಂದೆ ಹೇಳಿದರು. ಎಪ್ರಿಲ್ ತಿಂಗಳಲ್ಲಿ ಕೊಡಬೇಕಾದ ೩೩,೦೦೦ ಟನ್ ಆಹಾರ ಧಾನ್ಯಗಳನ್ನು ೪೧,೦೦೦ ಸಾವಿರ ಟನ್ನಿನ ವರೆಗೆ ಹೆಚ್ಚಿಸಲಾಗಿದೆ. ಮುಂದೆ ಅಮೇರಿಕಾ ರಷ್ಯಾ, ಥೈಲೇಂಡ್, ಚೀನಾ, ಬರ್ಮಾ, ಮುಂತಾದ ಕಡೆಗಳಿಂದ ಆಹಾರ ಧಾನ್ಯ ಬಂದಮೇಲೆ ಇನ್ನೂ ಹೆಚ್ಚಿನ ಆಹಾರ ಧಾನ್ಯ ಮದ್ರಾಸಿಕ್ಕೆ ಬರಲಿವೆ. ಎಪ್ರಿಲ್ ತಿಂಗಳಲ್ಲಿ ಮದ್ರಾಸಿಗೆ ಬಂದ ೩೩,೦೦೦ ಆಹಾರ ಧಾನ್ಯದಲ್ಲಿ ೧೦,೦೦೦ ಟನ್ ಅಕ್ಕಿ, ೧೨,೦೦೦ ಟನ್ ಗೋಧಿ ೧೧,೦೦೦ ಜೋಳವಾಗಿರುತ್ತದೆ. ಆಹಾರಖಾತೆಯ ಕಾರ್ಯದರ್ಶಿಯವರು ೧೯೫೧ನೇ ಇಸವಿಯಲ್ಲಿ ೫,೦೦೦೦೦ ಟನ್ ಆಹಾರವನ್ನು ಮದ್ರಾಸಿಗೆ ಕೊಡುವ ವಿಶೇಷ ಸವಲತ್ತನ್ನು ಕಲ್ಪಿಸಿ ಕೊಟ್ಟಿದ್ದಾರೆ. ೮,೦೦೦೦೦ ಟನ್ ಆಹಾರ ಧಾನ್ಯಗಳ ಉಳಿತಾಯ ಬರ್ಮಾ ಸರಕಾರಕ್ಕಿದೆಯೆಂದು ತಿಳಿಸಿದ್ದರಿಂದ ಅಲ್ಲಿಂದ ಅಕ್ಕಿಯೇ ಭಾರತ ಸರಕಾರಕ್ಕೆ ಬರುತ್ತದೆ. ಆದರಿಂದ ಮದ್ರಾಸಕ್ಕೆ ಅಕ್ಕಿಯು ಪಾಲುಸಿಗಬಹುದಾಗಿದೆ. ಕೇಂದ್ರ ಸರಕಾರವು ಒಂದು ಲಕ್ಷ ಟನ್ ಆಹಾರ ಧಾನ್ಯವನ್ನು ಮದ್ರಾಸಿಗೆ ಹೆಚ್ಚಾಗಿ ಸದ್ಯ ಕೊಡುವ ವಾಗ್ದಾನ ಮಾಡಿರುತ್ತದೆ. ಎಪ್ರಿಲ್ ತಿಂಗಳ ಲಾಗಾಯ್ತು ೭ ಔನ್ಸಿನಿಂದ ೮ ಔನ್ಸಿನ ವರೆಗೆ ಹೆಚ್ಚಿಸಲಾದ ಅಂಶವು ಕೇಂದ್ರ ಸರಕಾರದ ಅನುಗ್ರಹದಿಂದಲೇ. ಒಂಭತ್ತು ಔನ್ಸಿನ ತನಕ ಏರಿಸುವ ಮನಸ್ಸು ಮದ್ರಾಸು ಸರಕಾರಕ್ಕಿರುವದಾದರೂ ಅದನ್ನು ನಿರ್ಧಾರವಾಗಿ ಹೇಳುವ ಧೈರ್ಯ ಕೇಂದ್ರ ಸರಕಾರದ ಕೊಡುಗೆಯನ್ನು ಹೊಂದಿಕೊಂಡಿದೆಂದು ಆಹಾರ ಮಂತ್ರಿಗಳು ಹೇಳಿರುತ್ತಾರೆ. ಅಂತೂ ಆಹಾರದ ಅಭಾವವು ಮದ್ರಾಸಕ್ಕೆ ಇದಕ್ಕಿಂತ ಹೆಚ್ಚಾಗಿ ಮುಂದಕ್ಕೆ ಆಗಲಾರದೆಂಬುದು ಸದ್ಯ ಆಹಾರ ಸರಬರಾಯಿ ಕ್ರಮಗಳಿಂದ ಊಹಿಸಬಹುದು.

'ನವಯುಗ'

ಮಾರಾಟಕ್ಕಿದೆ.

ಮಡಿಕೇರಿ ಹೈಸ್ಕೂಲ್ ಕಡೆ ಆಟದ ಮೈದಾನದ ಹತ್ತಿರ ಅಂದರೆ ಸ್ಕೂಲ್—ಡಿಪೋ ರೋಡಿನ ಬಳಿ ಮಚ್ಚು ಹಾಕಿದ, ನೆಲಕ್ಕೆ ಸೀಮೆಂಟ್ ಹಾಕಿದ ಮತ್ತು ವಿದ್ಯುಚ್ಛಕ್ತಿಯ ದೀಪಗಳುಳ್ಳ ಹಂಚಿನ ಮನೆ ಮತ್ತು ಎರಡು ಹೊರ ಮನೆಗಳು ಮಾರಾಟಕ್ಕಿವೆ. ಹಿತ್ತಲು 88 ಸೆಂಟು. ಫಸಲಿಗೆ ಬಂದ ಕಾಫಿ, ಬಾಳೆ, ಕಿತ್ತಳೆ, ಇತರ ಹಣ್ಣಿನ ಗಿಡಗಳು, ಸೀಮೆ ಹುಲ್ಲು ಮತ್ತು ಹೂವಿನ ತೋಟವಿರುವವು. ಮೈನ್ ಮನೆಗೆ 11 ಅಂಕಣಗಳು. ಪ್ರತಿ ಹೊರ ಮನೆಗೆ 4 ಅಂಕಣಗಳಿವೆ. ಸದಾ ನೀರಿರುವ ಬಾವಿಯಿದೆ. ಕ್ರಯ ಮೂವತ್ತು ಸಾವಿರ ರೂಪಾಯಿಗಳು. ಖಾಯಿಸ್‌ದಾರರು ಈ ಕೆಳಗಿನ ವಿಳಾಸಕ್ಕೆ ಬರೆಯಬಹುದು.

'K'
C/o 'Kodagu'
Mercara, Coorg.

1-1

ಬರೋಡದ ಅರಸು ಪ್ರತಾಪಸಿಂಗರಿಗೆ ಪದ ಭ್ರಷ್ಟತೆ.

ಮಹಾರಾಜ ಪ್ರತಾಪ ಸಿಂಗ ಗಾಯಕವಾಡ ಬರೋಡ, ಇವರನ್ನು ಬರೋಡದ ರಾಜರಾಗಿ ಪರಿಗಣಿಸಿರುವ ಮನ್ನಣೆಯನ್ನು ಕೇಂದ್ರ ಸರ್ಕಾರವು ಹಿಂತೆಗೆದು ಕೊಂಡಿದೆ.

ಪ್ರತಾಪಸಿಂಗರ ಮೊದಲನೆಯ ಮಗನಾದ ೨೧ ವರ್ಷದ ರಾಜಕುಮಾರ ಫತೇಸಿಂಗರನ್ನು ಗಾಯಕವಾಡದ ರಾಜರನ್ನಾಗಿ ಭಾರತ ಸರ್ಕಾರವು ಮಾಡಲಿದೆ.

ಪ್ರತಾಪಸಿಂಗರು ಬರೋಡದ ವಿಲಯನದ ವಿಷಯದಲ್ಲಿ ವಾದವಿವಾದವನ್ನೆಬ್ಬಿಸಿದ್ದರಷ್ಟೆ! ಕೇಂದ್ರ ಸರಕಾರವು ಇವರ ಮೇಲೆ ಘಟನೆಯ ಮೂಲಭೂತ ತತ್ವಗಳನ್ನು ಉಲ್ಲಂಘಿಸಿದ ಆಪಾದನೆಯನ್ನು ಹೊರಿಸಿದ್ದರಲ್ಲದೆ ಇವರು ಗಾಯಕವಾಡಕ್ಕೆ ಕ್ರಮಬದ್ಧವಾದ ಅರಸರಾಗಿರುವ ಹಕ್ಕನ್ನೇ ಕಳೆದುಕೊಂಡಿರುವರೆಂದು ವಾದಿಸಿದ್ದರು.

ಭಾರತ ಸರಕಾರದ ಈ ನಿರ್ಣಯದ ಮೇಲೆ ಗಾಯಕವಾಡರು ತನಗೆ ಇಷ್ಟ ಬಂದರೆ ಒಂದು ತಿಂಗಳೊಳಗಾಗಿ ರಾಷ್ಟ್ರಾಧ್ಯಕ್ಷರಲ್ಲಿ ಅಪೀಲುಮಾಡಿಕೊಳ್ಳಲು ಅವಕಾಶ ಕೊಡಲಾಗಿದೆ.

ಭಾರತ ಸರಕಾರದ ನಿರ್ಣಯವು ಜಾರಿಯಲ್ಲಿ ಬಂದಿದೆ. ಗಾಯಕವಾಡರಿಗೆ ಇದುವರೆಗೆ ಬರೋಡದ ಅರಸರಾಗಿ ಇದ್ದ ಬಿರುದುಬಾವಲಿಗಳು, ಹಕ್ಕುಬಾಧ್ಯತೆಗಳು ಇಲ್ಲವಾಗಿವೆ. ಮತ್ತು ಅವರಿಗೆ ಬರುತ್ತಿದ್ದ ೨೬ ಲಕ್ಷ ಐವತ್ತು ಸಾವಿರ ರೂಪಾಯಿಗಳ ವಾರ್ಷಿಕ ರಾಜವೇತನವೂ ಇಲ್ಲದಾಗಿದೆ.

ಪ್ರತಾಪಸಿಂಗ ಗಾಯಕವಾಡರು ಈಗ ಹೊಸ ಡಿಲ್ಲಿಯಲ್ಲೇ ಇರುವರು. ಅವರು ಈ ನಿರ್ಣಯದ ವಿರುದ್ಧ ಅಪೀಲು ಮಾಡುವರೋ ಇಲ್ಲವೋ ತಿಳಿಯದಾಗಿದೆ.

ಭಾರತದ ಘಟನೆಯನ್ವಯ, ಯಾವುದೇ ರಾಜ್ಯದ ರಾಜನಾಗಲಿ, ಆತನನ್ನು ಆ ರಾಜ್ಯದ ರಾಜನೆಂದು ರಾಷ್ಟ್ರಾಧ್ಯಕ್ಷರು ಮನ್ನಿಸುವ ಕಾಲದವರೆಗೆ ಮಾತ್ರ ಅವರು ರಾಜನೆಂದು ಪರಿಗಣಿಸಲ್ಪಡುವನು.

ಭಾರತ ಸರಕಾರದೊಂದಿಗೆ ವಿಲೀನ ಸಂಸ್ಥಾನಗಳು ಮಾಡಿಕೊಂಡಿರುವ ಒಡಂಬಡಿಕೆಯಂತೆ, ಗಾಯಕವಾಡದ ಹೊಸ ಅರಸರಿಗೆ, ವರ್ಷಕ್ಕೆ ಹತ್ತು ಲಕ್ಷ ರೂ. ಗಳು ಮಾತ್ರ ರಾಜವೇತನವಾಗಿ ಸಿಕ್ಕುವುದು.

ಭಾರತ ಸರಕಾರವು ಈ ರೀತಿ, ಸಂಸ್ಥಾನದ ರಾಜರುಗಳನ್ನು ಪದಭ್ರಷ್ಟರನ್ನಾಗಿ ಮಾಡಿದುದು ಮತ್ತು ಹೊಸ ರಾಜರನ್ನು ನೇಮಿಸಿದುದೂ ಇದೇ ಮೊದಲು. ಸಿರೋಹಿ ಸಂಸ್ಥಾನದ ವಿಚಾರ ಬೇರೆ ರೀತಿಯದು. ಗಾದಿಯ ಹಕ್ಕಿನ ಬಗ್ಗೆ ಉಂಟಾಗಿದ್ದ ತಂಟೆಯನ್ನು ಮಾತ್ರ ಕೇಂದ್ರ ಸರಕಾರವು ಬಗೆಹರಿಸಿದ್ದಿತ.

ಪಾರ್ಲಿಮೆಂಟಿನಲ್ಲಿ

ನೆಹರೂರವರ ಹೇಳಿಕೆ.

"ಅರಸರುಗಳು ಅನುಭವಿಸಲೆಂದು ನಾವು ಕೊಟ್ಟಿರುವ ಹಕ್ಕುಬಾಧ್ಯತೆಗಳು ಮತ್ತು ಸೌಲಭ್ಯಗಳನ್ನೇ ಅವರು ದೇಶದ ರಾಜ್ಯಾಂಗವನ್ನೂ ಶಾಂತಿಯನ್ನೂ ಬುಡಮೇಲು ಮಾಡುವುದಕ್ಕಾಗಿ ಉಪಯೋಗಿಸಲು ಪ್ರಯತ್ನಿಸುತ್ತಿದ್ದರೆ ಅದನ್ನು ಸಹಿಸುವುದಕ್ಕಾಗುವುದಿಲ್ಲ."

—ಎಂದು ಪ್ರಧಾನ ಮಂತ್ರಿ ಪಂಡಿತ ಜವಹರಲಾಲ್ ನೆಹ್ರೂರವರು ಬರೋಡಾ ಮಹಾರಾಜರ ಪದಚ್ಯುತಿ ಬಗ್ಗೆ ಪಾರ್ಲಿಮೆಂಟಿನಲ್ಲಿ ಹೇಳಿಕೆ ಕೊಡುತ್ತಾ ಘೋಷಿಸಿದಾಗ ಸಭೆಯು ಹರ್ಷಧ್ವನಿಗಳಿಂದ ಹೇಳಿಕೆಯನ್ನು ಪುಷ್ಟೀಕರಿಸಿತು.

ಬರೋಡಾ ಅರಸರಾದ ಸರ್ ಪ್ರತಾಪಸಿಂಗ್ ಗಾಯಕವಾಡರನ್ನು ಪದಚ್ಯುತಿಗೊಳಿಸಿ ಅವರ ಜೇಷ್ಠ ಪುತ್ರ ಯುವರಾಜ ಫತೇಸಿಂಗ್‌ರನ್ನು ಮಾನ್ಯಮಾಡಿ ರಾಷ್ಟ್ರಪತಿ ಹೊರಡಿಸಿರುವ ಆಜ್ಞೆಯನ್ನೂ ಅಲ್ಲದೆ ತಮ್ಮ ಲಿಖಿತ ಹೇಳಿಕೆಯನ್ನೂ ಪಂ|| ನೆಹ್ರೂ ಓದಿದರು. ಆ ಸಂದರ್ಭದಲ್ಲಿ ಸಭೆಯಲ್ಲಿ ಮೇಲಿಂದ ಮೇಲೆ ಕರತಾಡನಗಳಾದವು.

"ಬರೋಡಾ ರಾಜರು ಭಾರತ ಸರ್ಕಾರಕ್ಕೂ ಸಂಸ್ಥಾನಾಧೀಶರುಗಳಿಗೂ ಆಗಿರುವ ಒಪ್ಪಂದ ಪ್ರಣಾಳಿಕೆಯನ್ನೇ ಮಾರ್ಪಾಡು ಮಾಡುವ ನಾನಾ ಚಟುವಟಿಕೆಗಳನ್ನು ವ್ಯವಸ್ಥಿಸುತ್ತಲೂ ಧನಸಹಾಯ ನೀಡುತ್ತಲೂ ಇದ್ದಾರೆಂದು ಭಾರತ ಸರ್ಕಾರಕ್ಕೆ ಖಚಿತ ಪಟ್ಟಿದೆ. ಅಲ್ಲದೆ ಅವರು ದೇಶದ ನಾನಾ ಪ್ರತಿಗಾಮಿ ಹಾಗೂ ರಾಷ್ಟ್ರವಿರುದ್ಧ ಶಕ್ತಿಗಳಿಗೆ ಬೆಂಬಲಕೊಟ್ಟಿದ್ದಾರೆಂದೂ ವಿದಿತಪಟ್ಟಿದೆ. ಆದ್ದರಿಂದ ಅವರನ್ನು ಪದಚ್ಯುತರಾಗಿ ಮಾಡಿದೆ" ಎಂದು ರಾಷ್ಟ್ರಪತಿ ತಮ್ಮ ಆಜ್ಞೆಯಲ್ಲಿ ಹೇಳಿದ್ದಾರೆ.

'ಅರಸರುಗಳಲ್ಲಿ ಸಾಮಾನ್ಯವಾಗಿ ಎಲ್ಲರೂ ಯಾವ ದೂರಿಗೂ ಅವಕಾಶವಿಲ್ಲದಂತೆ ವರ್ತಿಸುತ್ತಿದ್ದಾರೆ. ಆದರೆ ಕೆಲವರು ಮಾತ್ರ ತಮ್ಮ ಮೇಲಿರುವ ಕರ್ತವ್ಯಗಳನ್ನೂ, ಜವಾಬ್ದಾರಿಗಳನ್ನೂ ಅರಿತಿಲ್ಲ. ಅವರ ವರ್ತನೆಯು ತೃಪ್ತಿಕರವಾಗಿಲ್ಲ. ಅವರಲ್ಲಿ ಬರೋಡಾ ಮಹಾರಾಜರೂ ಒಬ್ಬರು.' ಎಂಬುದಾಗಿ ಪ್ರಧಾನ ಮಂತ್ರಿ ಹೇಳಿದರು.

ಭಾರತ ರಾಜ್ಯಾಂಗಕ್ಕೆ ಸವಾಲು ಹಾಕುವುದನ್ನೇ ಆಗಲಿ ಇತರ ಯಾವುದೇ ರಾಜ್ಯಾಂಗ ವಿರುದ್ಧ ಚಟುವಟಿಕೆಗಳನ್ನೇ ಆಗಲಿ ಸಂಸ್ಥಾನಾಧೀಶರುಗಳು ನಡೆಸುವುದನ್ನು ಭಾರತ ಸರ್ಕಾರ ಸಹಿಸುವುದಿಲ್ಲವೆಂದು ಪಂ|| ನೆಹ್ರೂ ಒತ್ತಿ ಹೇಳಿದರು.

ನಾವೀಗ ದೇಶದಲ್ಲಿ ಬೇಕಾದಷ್ಟು ಗಂಡಾಂತರಗಳನ್ನೆ ದುರಿಸಬೇಕಾಗಿರುವಾಗ ಸಂಸ್ಥಾನಾಧೀಶರುಗಳು ಈರೀತಿ ತೊಂದರೆ ಪ್ರಾರಂಭಿಸುವುದು ಎಷ್ಟೊಂದು ಅನ್ಯಾಯ ಎಂದು ನೆಹ್ರೂ ಕೇಳಿದರು. ಸಂಸ್ಥಾನ ಇಲಾಖೆ ಏಪ್ರಿಲ್ ೧೨ನೇ ತಾರೀಖು ಹೊರಡಿಸಿದ ಆಜ್ಞೆಯು ಈ ರೀತಿ ಇದೆ—

"ಬರೋಡಾ ಮಹಾರಾಜರ ಚಟುವಟಿಕೆಗಳನ್ನು ಭಾರತ ಸರ್ಕಾರವು ಬಹಳ ದಿನಗಳಿಂದ ಕಳವಳದಿಂದ ವೀಕ್ಷಿಸುತ್ತಿದೆ. ೧೯೩೯ರಲ್ಲಿ ಅವರು ಪಟ್ಟಕ್ಕೆ ಬಂದಾಗಿನಿಂದ ನಡೆಸುತ್ತಿರುವ ಚಟುವಟಿಕೆಗಳೆಲ್ಲಾ ಸರ್ವವಿದಿತವಾಗಿವೆ. ಅದರಲ್ಲೂ ಬರೋಡಾದ ಜನತೆಗಂತೂ ಈ ದುಷ್ಟ ಚಟುವಟಿಕೆಗಳು ಚೆನ್ನಾಗಿಗೊತ್ತಿವೆ. ಅವರು ಸಾರ್ವಜನಿಕ ನಿಧಿಗೆ ಸೇರಿದ ಕೋಟ್ಯಂತರ ರೂಪಾಯಿಗಳ ದುರ್ವಿನಿಯೋಗ ನಡೆಸಿದುದು ಬರೋಡಾದ ಧಾರಾ (ಶಾಸನ) ಸಭೆಯಲ್ಲಿ ಚರ್ಚೆಗೆ ಕೂಡಾ ಬಂದಿತ್ತು. ಆ ಸಭೆಯವರು ಮಹಾರಾಜರು ತಮ್ಮ ಮಗನಿಗೆ ಗಾದಿ ಬಿಟ್ಟು ಕೊಟ್ಟು ರಾಜ್ಯ ಪರಿತ್ಯಾಗ ಮಾಡಬೇಕೆಂದೂ ಭಾರತ ಸರ್ಕಾರ ವಿಚಾರಣೆ ನಡೆಸಬೇಕೆಂದೂ ಕಡಾ ನಿರ್ಣಯ ಮಾಡಿದ್ದರು.

"ಭಾರತ ರಾಜ್ಯಾಂಗ ಜಾರಿಗೆ ಬಂದ ಮೇಲಂತೂ ಅವರ ಚಟುವಟಿಕೆಗಳು ವಿಪರೀತ ಆಕ್ಷೇಪಣೀಯವಾಗಿವೆ. ಬರೋಡಾವನ್ನು ಬೊಂಬಾಯಿ ಪ್ರಾಂತ್ಯದ ತನ್ನನ್ನು ಕೇಳದೆಯೇ ವಿಲೀನಗೊಳಿಸಲಾಯಿತೆಂದೂ ಸಹಾ ಅವರು ಹೇಳಿ ರಾಜ್ಯಾಂಗಕ್ಕೇ ಸವಾಲು ಹಾಕಿದ್ದಾರೆ. ಇದರಿಂದ ಅವರು ರಾಷ್ಟ್ರವಿಷ್ಠೆಗೇ ಕುಂದಕ ಬರುವಂತೆ ವರ್ತಿಸಿದ್ದಾರೆಂದೂ ಭಾರತ ಸರ್ಕಾರ ಎಚ್ಚರಿಸಿತು. ಆದರೂ ಮೇಲಿಂದ ಮೇಲೆ ಇದೇ ಚಟುವಟಿಕೆಗಳಲ್ಲಿ ನಿರತರಾಗಿದ್ದರು. ಜತೆಗೆ ಸಂಸ್ಥಾನ ಇಲಾಖೆಯನ್ನೇ ಖಂಡಿಸುವ ಹೇಳಿಕೆಗಳನ್ನೂ ಕೊಡುತ್ತಾ ಬಂದರು. ಅವರ ಚಟುವಟಿಕೆಗಳನ್ನೆಲ್ಲಾ ಕೂಲಂಕುಶವಾಗಿ ಪರಿಶೀಲಿಸಿ ಅವರ ಮೇಲೆ ಕ್ರಮ ಕೈಗೊಳ್ಳಲು ಭಾರತ ಸರಕಾರ ನಿರ್ಧರಿಸಿತು."

ಕಾಶ್ಮೀರದ ವಿರುದ್ಧ ಒಳಸಂಚು ?

ಜಮ್ಮು ಮತ್ತು ಕಾಶ್ಮೀರದ ಹಿಂದಿನ ಮುಖ್ಯ ಮಂತ್ರಿ ಪಂಡಿತ ರಾಮಚಂದ್ರ ಕಾಕರು ನಮ್ಮ ವಿರುದ್ಧ ಒಳಸಂಚು ನಡೆಸಲು ಪಾಕಿಸ್ಥಾನದ ಅಧಿಕಾರಿಗಳೊಡನೆ ಪತ್ರವ್ಯವಹಾರ ನಡೆಸುತ್ತಿದ್ದಾರೆ ಎಂದು ಕಾಶ್ಮೀರದ ಮುಖ್ಯ ಮಂತ್ರಿ ಶೇಖ ಮಹಮ್ಮದ ಅಬ್ದುಲ್ಲಾರು ಈ ೧೨ರಲ್ಲಿ ನುಡಿದರು.

ಈ ಒಳಸಂಚನ್ನು ಮುಂದುವರಿಸುವುದಕ್ಕಾಗಿ ಮುಂಬೈ—ಡಿಲ್ಲಿ—ಜಲಂದರ—ಪಠಾಣಕೋಟೆ—ಜಮ್ಮುಗಳಲ್ಲಿಯ ವೈರಿ ವರ್ಗವು ಗುಪ್ತವಾಗಿ ಕಾರ್ಯನಿರತವಾಗಿವೆಯೆಂಬ ಸುದ್ದಿಯೂ ತಮಗೆ ಬಂದಿರುವದಾಗಿ ಅವರು ತಿಳಿಸಿದರು.

ಶೇಖಮಹಮ್ಮದ ಅಬ್ದುಲ್ಲಾರು ಸಾರ್ವಜನಿಕ ಸಭೆಯೊಂದರಲ್ಲಿ ಮಾತನಾಡುತ್ತಿದ್ದರು. ಅವರು ಒಳಸಂಚಿನ ಪೂರ್ಣ ವಿವರಗಳನ್ನು ಕೊಡಲಿಲ್ಲ. ಆದರೆ ಮುಂದುವರಿಯುತ್ತಾ ಅವರು ಹೀಗೆ ನುಡಿದರು.

'ಪಂಡಿತ ರಾಮಚಂದ್ರಕಾಕರ ಹಿಂದಿನ ಇತಿಹಾಸವನ್ನು ನಾವು ಬಲ್ಲೆವು. ಕಾಶ್ಮೀರವನ್ನು ಪಾಕಿಸ್ಥಾನಕ್ಕೆ ಜೋಡಿಸುವುದಕ್ಕಾಗಿ ಮಿ. ಜಿನ್ನಾ ಮತ್ತು ಕಾಶ್ಮೀರದಲ್ಲಿಯ ಬ್ರಿಟಿಷ್ ರೆಸಿಡೆಂಟರೊಡನೆ ಅವರು ೧೯೪೭ರಲ್ಲಿ ಮಾಡಿದ ಒಳಸಂಚು ಇಡೀ ಜಗತ್ತಿಗೇ ಪರಿಚಿತವಾಗಿರುವದು. ಇಂದು ಜಲಂಧರವನ್ನು ಕೇಂದ್ರವನ್ನಾಗಿ ಮಾಡಿಕೊಂಡು ಅವರು ಇನ್ನೊಂದು ಒಳಸಂಚನ್ನು ಹೂಡುತ್ತಿದ್ದಾರೆ.

ಕಾಶ್ಮೀರದ ಜನತೆಯು ಎಂದಿಗಿಂತಲೂ ಇಂದು ಎಚ್ಚರಿಕೆಯಿಂದಿರಬೇಕಾದದು ಅತಿ ಅವಶ್ಯವಿದೆ. ನಮ್ಮ ಅಸ್ತಿತ್ವದ ವಿರುದ್ಧ ಮಾಡಿದ ಎಲ್ಲ ಒಳ ಸಂಚುಗಳನ್ನು ನಿರರ್ಥಕಗೊಳಿಸುವೆವೆಂಬ ನಮ್ಮ ದೃಢ ನಿರ್ಧಾರವನ್ನು ದುರ್ಬಲ ಮನಸ್ಸಿನಿಂದ ನಾವು ಅಲಕ್ಷಿಸಿದರೆ ನಾವು ಉಳಿಯಲು ಸಾಧ್ಯವಿಲ್ಲ. ನಮ್ಮ ವೈರಿಗಳು ಅಯಶಸ್ವಿ ಹೋರಾಟವನ್ನು ನಡೆಸುತ್ತಿದ್ದಾರೆ. ಕಾಶ್ಮೀರದ ಅಭೂತಪೂರ್ವ ಜಾತ್ಯಾತೀತ ಪರಂಪರೆಯನ್ನು ನಾಶಮಾಡಲು ಅವರು ಬಗೆದಿದ್ದರೆ ಅದು ಅವರ ತಪ್ಪು ತಿಳುವಳಿಕೆಯಾಗಿದೆ.'

ಮಾರಾಟಕ್ಕಿದೆ.

ಗೋಣಿಕೊಪ್ಪಲಿಂದ ೧ ಮೈಲು ದೂರದಲ್ಲಿ ಮೈಸೂರಿಗೆ ಹೋಗುವ ದಾರಿ ಮತ್ತು ಬಾಳೆಲೆಗೆ ಹೋಗುವ ದಾರಿಯ ಪಕ್ಕದಲ್ಲಿ ಚೆನ್ನಂಗೊಲ್ಲಿಯಲ್ಲಿ 8 ಏಕರೆ 69 ಸೆಂಟು ಜಾಗದಲ್ಲಿ 1450 ಕಿತ್ತಳೆ ಗಿಡಗಳು ಮತ್ತು ೩೫೦ ಕಾಫಿ ಗಿಡಗಳು ಮತ್ತು ವರ್ಷಕ್ಕೆ ರೂ 200 ರವರೆಗೆ ದೊರೆಯುವ ಒಳ್ಳೆ ಮೆಣಸು, ನಿಂಬೆ ಗಿಡಗಳು ಜಾಗಕ್ಕೆ ಅಡಗಿದ ಅಂದಾಜು 3000 ರೂ ಕ್ರಯ ಬಾಳುವ ರೂ 25 ಬಾಡಿಗೆ ಬರುವ ಹಂಚಿನ ಅಂಗಡಿ ಮನೆ. ಮತ್ತು ರೂ 3000 ಬೆಲೆಯ ಬೀಟಿ ಮತ್ತಿತರೆ ಮರಗಳು ಮತ್ತು ½ ಏಕರಿನಲ್ಲಿ ಬಾಳೆ ಸಹ ಇರುತ್ತವೆ. ಈ ಜಾಗವೂ ರೋಡಿಗೆ ಎರಡು ರಸ್ತೆಗಳ ಒತ್ತಿಗೆ ನಿಂತಿರುತ್ತದೆ. ಬೇಕಾದವರು ಬಂದು ವಿಲವರಿಮಾಡಿಕೊಳ್ಳಬಹುದು. 2 ವರ್ಷದ ಕಿತ್ತಳೆ ಫಸಲಿಗೆ 900 ರೂ ಗಳು ದೊರೆತ್ತಿವೆ. ಮುಂದಿನ ವರ್ಷ 1000 ರೂ ಮೇಲೆ ದೊರೆಯಬಹುದು. ಇತ್ತಗಳಲ್ಲಿ ಮುಕ್ಕಾಲು ಕಿತ್ತಳೆ ಗಿಡಗಳಿಗೆ 11 ವರ್ಷವೂ, ಕೆಲವು 9 ವರ್ಷದವೂ ಆಗಿರುತ್ತವೆ.

ಬಿ. ಎ. ನಂಜುಮಮ್ಮಯ್ಯ
ಮಾಯಮುಡಿ ಗ್ರಾಮ
ಗೋಣಿಕೊಪ್ಪ

ಮಾರಾಟಕ್ಕಿದೆ.

ಮಡಿಕೇರಿ ಮುನ್ಸಿಪಾಲಿಟಿಯೊಳಗೆ ಕಾಲೇಜು ಕಟ್ಟಡ ಸ್ಥಳದ ದಾರಿಯಲ್ಲಿರುವ ೬ ಏಕ್ರೆ ನೀರಾವರಿ, ಭೂಮಿ ೬ ಏಕ್ರೆ ಭೂಮಿ ಮಾಡಲು ಯೋಗ್ಯವಾದ ಹಡ್ಲು, ಹೆಚ್ಚು ಏಕ್ರೆ ಬಣೆ ಜಾಗ, ಕೆರೆ, ಎರಡು ಮನೆಗಳು ಇವು ಮಾರಾಟಕ್ಕಿವೆ. ಬೆಲೆ ೩೩,೦೦೦ ರೂ ಆದರ ಸಮೀಪ ಖಾಯಿಷ್‌ದಾರರು ಈ ಕೆಳಗಿನ ಅಡ್ರೆಸಿಗೆ ಬರೆದು ಯಾ ಖುದ್ದು ಬಂದು ವಿಚಾರಿಸಬಹುದು.

ಜಿ. ಪಿ. ಪಟೇಲ್ ತಮ್ಮಯ್ಯ
2–1 ಗೌಳಿಗರ ಬೀದಿ
ಮಡಿಕೇರಿ

ಮುಂದಿನ ಚುನಾವಣೆಯಲ್ಲಿ

ಕಾಂಗ್ರೆಸ್ ಗೆಲ್ಲುವುದೇ?

ಭಾರತದ ಮುಂಬರುವ ಚುನಾವಣೆಗಳು ಮತ್ತು ಅದರಲ್ಲಿ ತಲೆದೋರಬಹುದಾದ ಕೆಲವು ವಿಸ್ಮಯಕಾರಕ ಘಟನೆಗಳ ಕುರಿತು ಉಲ್ಲೇಖಿಸುತ್ತ 'United Nations World' ಪತ್ರಿಕೆಯು ತನ್ನ ಇತ್ತೀಚಿನ ಒಂದು ಸಂಚಿಕೆಯಲ್ಲಿ ಈ ರೀತಿ ಬರೆದಿರುವುದು.

'ಪಾಶ್ಚಿಮಾತ್ಯ ಜಗತ್ತಿಗೆ ತಿಳಿಯದೇನೇ ಇಂದು 200,000 ಭಾರತದ ಗ್ರಾಮಗಳಲ್ಲಿ ಇದೀಗ ರಾಜಕೀಯ ಭಾಷಣಗಳ ಬಾಂಬ್ ಧಾಳಿ ನಡೆಯುತ್ತಿದೆ. ಈ ವರ್ಷದ ಅಂತ್ಯದೊಳಗೆ ಭಾರತದಲ್ಲಿ ಸಾರ್ವತ್ರಿಕ ಚುನಾವಣೆ ನಡೆಯಲಿದೆಯಷ್ಟೆ. ಸ್ವತಂತ್ರ ಭಾರತದ ಮೊದಲನೇ ಸಾರ್ವತ್ರಿಕ ಚುನಾವಣೆಯಿದು. ಪ್ರಾಯ ಸಮರ್ಥನಾದ ಪ್ರತಿಯೊಬ್ಬನಿಗೆ ಈ ಚುನಾವಣೆಯಲ್ಲಿ ಮತಕೊಡುವ ಹಕ್ಕು ಭಾರತದ ರಾಜ್ಯಾಂಗ ಘಟನೆಯನ್ವಯ ಕೊಡಲ್ಪಟ್ಟಿದೆ. ಕಾಂಗ್ರೆಸ್ ಪಕ್ಷ, ಹಿಂದೂ ಮಹಾಸಭಾ, ಆರ್. ಎಸ್. ಎಸ್. ಮತ್ತು ಸೋಶಲಿಸ್ಟ್, ರಿಪಬ್ಲಿಕನ್ ಪ್ರಧಾನ ಕಚೇರಿಗಳು ೧೭೬,೦೦೦,೦೦೦ ಮಂದಿಯನ್ನು ಈ ಚುನಾವಣೆಗಾಗಿ ಸಿದ್ಧಗೊಳಿಸುವುದರಲ್ಲಿ ಮಗ್ನರಾಗಿದ್ದಾರೆ. ನೊಣಗಳ ಕಾಟದಿಂದ ಪರಿವೇಷ್ಟಿತವಾದ ಬಾಸ್ಲಿಂದು ಮಣ್ಣು ಹಾರುವ ರಸ್ತೆಗಳಿಂದ ಕೂಡಿದ ಹಳ್ಳಿಗಳಲ್ಲಿ ಇಂದು ಚುನಾವಣಾ ಘೋಷಣೆಯ ಲೌಡ್ ಸ್ಪೀಕರ್ ಧ್ವನಿಯು ಕೇಳಲಾರಂಭವಾಗಿದೆ; ಪ್ರಜಾಪ್ರಭುತ್ವ ಜನಾಂಗಗಳೊಡನೆ ಕೂಡಿಸುವ ಪೀರಿಯಿದು.

'೧೭೬,೦೦೦,೦೦೦ ಮಂದಿ ಹೊಸ ಓಟರರು ಯಾರನ್ನು ಆರಿಸುವರೆಂಬುದನ್ನು ಈಗ ಮುಂದಾಗಿ ಊಹಿಸುವುದು ಕೇವಲ ಅಸಾಧ್ಯ. ಅವರು ಈ ವರೆಗೆ ಕಿಂಡಾ ಕೇಳ 'ಮಂದಿರ'ವನ್ನು ಅನೇಕ ಪ್ರತ್ಯರ್ಥನ್ನಾಗಿ ಆರಿಸಬಹುದು. ಏಕೆ? ರಾಜಕಾರಣ ಪ್ರಂಗದ ನಿಂತಿತ ನೆಹರೂಗಳೇ ಬಾರದೆ ಉಳಿಯಬಹುದು. ಇಂತಹ ಘಟನೆ ನಡೆಯಲಿದೆ; ಒಂದು ವೇಳೆ ಪ್ರಮಾದಕಾರಕ ನಡೆದರೂ ನೆಹರುಗಳಿಗೆ ಅದರಿಂದ ನಿರಾಶೆಯಾಗದು; ಬದಲು ಇದು ಹಿಂದೀಯ ಜನತೆಯ ಈ ನೂತನವೆಂದು ಅವರು ಅಭಿಮಾನಪಡುವರು. ರಾಜಕೀಯ ಅಧಿಕಾರವನ್ನು ಕಳಕೊಂಡ ಮಾತ್ರಕ್ಕೆ ದೈವಿಕ ಸಾಮರ್ಥ್ಯವೂ ಹೋದಂತಾಗುವುದಿಲ್ಲ. ಭಾರತದಲ್ಲಿ ಅಂಥಾ ದೈವಿಕ ಸಾಮರ್ಥ್ಯ ಮತ್ತು ಸಾಕ್ಷಾತ್ಕಾರಗಳಿಗೇ ಅಧಿಕ ಪ್ರಾಶಸ್ತ್ಯ.

"ಆದರೂ ಪ್ರಜಾಸತ್ತೆಯು ಭಾರತದಲ್ಲಿ ಅತ್ಯಂತ ಪ್ರಾಚೀನವಾದದು. ಭಗವಾನ್ ಬುದ್ಧನೇ ಪೂರ್ವ ಭಾರತದ ಕಪಿಲವಸ್ತು ಪ್ರಜಾಪ್ರಭುತ್ವದ ಪ್ರಜೆಯಾಗಿದ್ದನು. ಬೌದ್ಧ ಶಾಸ್ತ್ರಗಳಲ್ಲಿ ಹೀಗೆ ಹೇಳಿದೆ:

"ಆನಂದಾ! ವಿಜಯನು ಆಗಾಗ ಕೂಡಿ ತಮ್ಮ ಕೂಟದ ಸಾರ್ವಜನಿಕ ಸಭೆಗಳಿಗೆ ಹಾಜರಾಗುತ್ತಿರುವರೇ?' ಎಂದು ಸ್ವಾಮಿ ಕೇಳಿದಾಗ:

'ಪ್ರಭೋ, ಅಂತೆಂದು ನಾನು ಕೇಳಿರುವೆ' ಎಂದು ಆನಂದನ ಉತ್ತರ ಕೊಟ್ಟನಂತೆ.

'ಎಲ್ಲಿಯ ತನಕ ವಿಜಯನರು ಹಾಗೆ ಪರಸ್ಪರ ಕೂಡಿ ತಮ್ಮ ಕೂಟದ ಸಾರ್ವಜನಿಕ ಸಭೆಗಳಲ್ಲ ಭಾಗವಹಿಸುವರೋ ಅಲ್ಲಿ ತನಕ ಅವರ ಅವನತಿಯಾಗದು, ಬದಲು ಅಭ್ಯುದಯವಾಗುವುದು' ಎಂದು ಬುದ್ಧನು ಹೇಳಿದನು.

ಪ್ರಭಾತ.

ಬೆವಿನರ ನಿಧನ.

ಬ್ರಿಟನಿನ ವಿದೇಶಾಂಗ ಸಚಿವರಾಗಿದ್ದ ಶ್ರೀ ಬೆವಿನರು ಈ ೧೪ರಲ್ಲಿ ನಿಧನರಾದರು.

ಬ್ರಿಟನ್ನಿನ ಬಹು ಕಷ್ಟಕಾಲದಲ್ಲಿ ಅದರ ಇತಿಹಾಸದ ಸಂದಿಗ್ಧತೆಯಲ್ಲಿ ವಿದೇಶ ಸಚಿವರಾಗಿ ಬಂದು ನಿಂತು ಅದರ ಕೀರ್ತಿಯನ್ನು ಉಳಿಸಿದ ಬೆವಿನ್ನರು ಒಬ್ಬ ರೈತರ ಹುಡುಗನೆಂದರೆ ಆಶ್ಚರ್ಯವಾಗದೆ?

ಹುಟ್ಟುವ ಮೊದಲೇ ತಂದೆ ತೀರಿಕೊಂಡಿದ್ದರು. ಹುಟ್ಟಿದ ನಾಲ್ಕು ವರ್ಷಗಳ ನಂತರ ತಾಯಿಯು ಸತ್ತು ಹೋದಳು. ಹೀಗೆ ತಬ್ಬಲಿಯಾಗಿ ಬೆವಿನ್ ವಿಸ್ಸರ್ಗದಲ್ಲಿ ಬೆಳೆದನು.

ಚಿಕ್ಕಮ್ಮನ ಕೃಪಾಶ್ರಯಕ್ಕೆ ಬಾಲಕ ಬೆವಿನ ಹೋದನು. ಅಲ್ಲಿ ಒಬ್ಬ ರೈತನ ಕೈಕೆಳಗೆ ಆ ಸಣ್ಣ ವಯಸ್ಸಿನಲ್ಲಿ ವಾರಕ್ಕೆ ಕೆಲವು ಪೆನ್ನಿಗಳ ಕೂಲಿಯ ಮೇಲೆ ಆ ಸಣ್ಣ ಬಾಲಕ ದುಡಿಯಬೇಕಾಯಿತು. ಆ ನಂತರ, ಈತ ಹೋಟೆಲಿನಲ್ಲಿ ಮಾಣಿಯಾದನು. ಈ ಕೆಲಸದಲ್ಲಿ ಇವನಿಗೆ ದಿನಕ್ಕೆ ಒಂದು ಷಿಲ್ಲಿಂಗು ಕೂಲಿ ಸಿಕ್ಕುವುದರ ಜೊತೆಗೆ ಊಟವೂ ಸಿಕ್ಕುತ್ತಿತ್ತು. ಸ್ವಲ್ಪ ದಿನಗಳ ಮೇಲೆ ವ್ಯಾನ್ ಡ್ರೈವರಾಗಿ ವಾರಕ್ಕೆ ಹತ್ತು ಷಿಲ್ಲಿಂಗುಗಳನ್ನು ಆರ್ಜಿಸಲಾರಂಭಿಸಿದನು. ಹಾಗೆಯೇ ಮೆಲ್ಲನೆ ಲೇಬರ ಯೂನಿಯನ್ನಿನ ಕಡೆಗೆ ಇವನ ಮನಸ್ಸು ಓಡಿತು.

೨೦ ವರ್ಷ ತುಂಬುವುದರೊಳಗಾಗಿ ಬೆವಿನನು ಬ್ರಿಸ್ಟೋಲಿನ ನಿರುದ್ಯೋಗ ಜನರ ಒಂದು ಸಂಘದ ಕಾರ್ಯದರ್ಶಿಯಾದನು. ಅಂದಿನಿಂದ ಈತ ಟ್ರೇಡ್ ಯೂನಿಯನ್ ಕಾರ್ಯಕ್ರಮಗಳಿಗೆ ಹೆಚ್ಚು ಆಸಕ್ತಿ ಕೊಡಲಾರಂಭಿಸಿದನು. ಮೂವತ್ತು ವರ್ಷದ ಹೊತ್ತಿಗೆ, ಬಂದರು ಕೆಲಸಗಾರರ ಒಂದು ಶಾಖಾಸಮಿತಿಗೆ ಬೆವಿನ್ ಅಧ್ಯಕ್ಷರಾದರು.

ಸ್ವಲ್ಪ ಮಟ್ಟಿಗೆ ಓದುಬರೆಹ ಓದುತ್ತಿದ್ದ ಬೆವಿನ್ ಹತ್ತು ವರ್ಷದೊಳಗಾಗಿ ಬ್ರಿಟನ್ನಿನ ತುಂಬ ತನ್ನ ಹೆಸರನ್ನು ಹರಡಿಸಿಕೊಂಡನು. ಈತನನ್ನು 'ಬಂದರು ಕೆಲಸಗಾರರ ರಾಜ' ಎಂಬ ಮೆಚ್ಚಿಕೆಯ ಹೆಸರಿನಿಂದ ಕರೆಯುತ್ತಿದ್ದರು. ಬಂದರು ಕೆಲಸಗಾರರ ಕೂಲಿ ನಿರ್ಣಯದ ಒಂದು ಕಟ್ಟಳೆಯಲ್ಲಿ ಈತನ ಬ್ಯಾರಿಸ್ಟರನ್ನು ಮೀರಿಸುವ ವಾದಮಾಡಿ ತನ್ನ ಹೆಸರಿನ ಮೆರಗನ್ನು ಹೆಚ್ಚಿಸಿಕೊಂಡನು. ಎರಡು ವರ್ಷಗಳಲ್ಲಿ ೧೮ ಪ್ರತ್ಯೇಕ ಕಾರ್ಮಿಕ ಸಂಸ್ಥೆಗಳನ್ನೆಲ್ಲಾ ಒಟ್ಟುಗೂಡಿಸಿ ಒಂದು ದೊಡ್ಡ ಟಿ. ಜಿ. ಜ ಯೂನಿಯನ್ನನ್ನು ಸ್ಥಾಪಿಸಿದನು. ಆ ಯೂನಿಯನ್ನಿಗೆ ಈತ ೧೮ ವರ್ಷಗಳ ಕಾಲ ಕಾರ್ಯದರ್ಶಿಯಾಗಿದ್ದರು.

ಕೂಲಿಕಾರರ ಜಗತ್ತಿನಲ್ಲಿ ಬೆವಿನ್ನರ ಹೆಸರು ಬೆಳಗಲಾರಂಭಿಸಿತು. ಟ್ರೇಡ್ ಯೂನಿಯನ್ ಕಾಂಗ್ರೆಸ್ಸಿನ ಅಧ್ಯಕ್ಷನಾದನು. ಮತ್ತು ರಾಷ್ಟ್ರದ ರಾಜಕಾರಣ ಇವನ ಬೆನ್ನು ಬೀಳಲಾರಂಭಿಸಿತು.

೧೯೪೦ ರಲ್ಲಿ ಚರ್ಚಿಲ್ಲರು ಯುದ್ಧಕಾಲದ ರಾಷ್ಟ್ರೀಯ ಸರಕಾರವನ್ನು ಸ್ಥಾಪಿಸಿದಾಗ ಬೆವಿನ್ನರು ಕೂಲಿಕಾರ ಮಂತ್ರಿಗಳಾದರು.

ಬ್ರಿಟನ್ನಿನ ೪೭೦ ಲಕ್ಷ ಜನರಲ್ಲಿ ೨೫೦ ಲಕ್ಷ ಜನರನ್ನು ರಾಷ್ಟ್ರೀಯ ಸೇವೆಗೆ ಒಂದಲ್ಲ ಒಂದು ವಿಧದಲ್ಲಿ ತೊಡಗಿಸಿದ ಕೀರ್ತಿಯು ಬೆವಿನ್ನರ ಪಾಲಿಗೆ ಸಂದುದು.

ನೇತಾಜಿಯವರು ಬದುಕಿರುವರೆಂದು

ಅವರ ಪತ್ನಿ ಎಮಿಲಿಯವರ ನಂಬಿಕೆ

ನೇತಾಜಿ ಸುಭಾಸರು ಆಸ್ಟ್ರಿಯದ ಹೆಣ್ಣು ಮಗಳನ್ನು ಮದುವೆಯಾದ ಸಂಗತಿಯನ್ನು ದಿ. ಶರತ ಚಂದ್ರ ಬೋಸರ ಪತ್ನಿ ವಿಭಾವತಿ ಬೋಸರು ದೃಢಪಡಿಸಿದ್ದಾರೆ. ತಾವು ಮತ್ತು ಗತ ಶರತ್ ಚಂದ್ರರು ನೇತಾಜಿಯ ಪತ್ನಿ ಎಮಿಲಿ ಶೇಂಕಲ್‌ರವರನ್ನು ವಿಯೆನ್ನಾದಲ್ಲಿ ಕಂಡು ಮಾತಾಡಿದುದಾಗಿಯೂ "ಹಿಂದೂಸ್ತಾನ ಸ್ಟಾಂಡರ್ಡ್" ಪತ್ರಿಕೆಯ ಸಂದರ್ಶನವೊಂದರಲ್ಲಿ ಶ್ರೀಮತಿ ವಿಭಾವತಿ ಬೋಸರು ತಿಳಿಸಿದರು. ತನ್ನ ಪತಿ ನೇತಾಜಿಯವರು ಬದುಕಿರುವರೆಂದೂ ಆದರೆ ಅವರು ಎಲ್ಲಿರುವರೆಂದು ಯಾರಿಗೂ ಗೊತ್ತಿಲ್ಲವೆಂದೂ ಶ್ರೀಮತಿ ಎಮಿಲಿಯವರ ದೃಢ ನಂಬಿಕೆಯಾಗಿದೆ. ನಾನು ಭಾರತಕ್ಕೆ ಬರುವುದಾದರೆ ನನ್ನ ಗಂಡನ ಜೊತೆಯಲ್ಲೇ ಬರುವುದಾಗಿ ಅವರು ವಿಭಾವತಿಯವರೊಂದಿಗೆ, ತನ್ನನ್ನು ಭಾರತಕ್ಕೆ ಕರೆದಾಗ ಹೇಳಿದರಂತೆ. ತನ್ನ ಪತಿ ನೇರವಾಗಿ, ಎಂದಾದರೊಂದು ದಿನ ಭಾರತದಲ್ಲಿ ಪ್ರಕಟವಾಗುವರು. ಆಗ ತಾನು ವಿಯೆನ್ನಾದಿಂದ ಅಲ್ಲಿಗೆ ಹಾರಿ ಬರುವೆನೆಂದು ಅವರ ನಿರೀಕ್ಷೆಯಾಗಿದೆ.

ನೇತಾಜಿ ತಾನು ವಿವಾಹವಾದ ಸುದ್ದಿಯನ್ನು ಏಕೆ ಬಹಿರಂಗ ಪಡಿಸಲಿಲ್ಲ ಎಂಬ ಪ್ರಶ್ನೆಗೆ ವಿಭಾವತಿಯವರ ಉತ್ತರ ಕೊಡುತ್ತಾ ಆಗ ಜೀವನ ಸುರಕ್ಷಿತತೆಯ ದೃಷ್ಟಿಯಿಂದ ಆ ವಿಷಯವನ್ನು ಗುಟ್ಟಾಗಿ ಇಡಲಾಗಿದ್ದಿತು. ಅವರೂ ಜರ್ಮನ ಸಯಾಕ್ಲರು ಹಿಂದೀಯರಿಗೆ (ಬೋಸರ ನಿಕಟವರ್ತಿಗಳಿಗೆ) ಈ ವಿಷಯ ಗೊತ್ತಿದ್ದಿತಂತೆ.

ರೂ. ೫೦,೦೦೦ ಬೆಲೆಯ ಆಭರಣಗಳು ಕೊಡಲ್ಪಡುತ್ತವೆ

ಡೆಲ್ಲಿಯಲ್ಲಿ ಚಿನ್ನವು ತೊಲೆಗೆ ರೂ. ೩.

ಭಾರತದ ಪ್ರಾಮುಖ್ಯ ಪತ್ರಿಕೆ ಮತ್ತು ಮಾಸಿಕಗಳಲ್ಲಿದೆ ನಮ್ಮ ನೂರಾರು ಗ್ರಾಹಕರು ಇವನ್ನು ಮುಕ್ತ ಕಂಠದಿಂದ ಹೊಗಳಿದ್ದಾರೆ. ಸಂಯುಕ್ತ ಪ್ರಾಂತದ ಸುಹಾಲಿದ ಸೇಠ್ ನಂದ ಕಿಶೋರ ಬಿ. ಎ. ಎಲ್. ಎಲ್. ಬಿ. [illegible] ಹೀಗೆ ಬರೆಯುತ್ತಾರೆ 'ಮಿನರ್ವ ಹೊಸ ಚಿನ್ನವನ್ನು ಆಭರಣಗಳಿಗೆ [illegible] ಈ ಚಿನ್ನವು ಒರೆ ಹಚ್ಚಿದಾಗ ಅಪ್ಪಟ ಚಿನ್ನದಂತೆಯೇ ತೋರುವುದಲ್ಲದೆ [illegible] ಇವನ್ನು ತಂತಿಯಾಗಿ ಎಳೆಯಬಹುದು. ಕಾಗದಂತೆ ತಗಡಾಗಿ ಹರಡಬಹುದು. ಇದರ ಬಣ್ಣ ಚಿನ್ನದಂತೆಯೇ ಉಳಿಯುವುದು. ಇದರಿಂದ ಯಾವ ಮಾದರಿಯ ನಗಗಳನ್ನೂ ಮಾಡಿಸಬಹುದು. ಇದು ಜಗತ್ತಿನ ಹೊಸ ಶೋಧ. ಬೆಲೆ ಒಂದು ತೊಲಕ್ಕೆ ರೂ. ೩-೦-೦, ಮೂರು ತೊಲಗಳಿಗೆ ರೂ. ೮-೦-೦, ಆರು ತೊಲಗಳಿಗೆ ರೂ. ೧೫-೦-೦. ಮತ್ತು ಹನ್ನೆರಡು ತೊಲಗಳಿಗೆ ರೂ. ೨೭-೦-೦.

ಈ ಚಿನ್ನವನ್ನು ಹಿಂದೂದೇಶದ ಮೂಲೆ ಮೂಲೆಗಳಲ್ಲಿ ಪ್ರಚಾರಿಸುವ ದೃಷ್ಟಿಯಿಂದ ಕಂಪೆನಿಯು ಈ ಕೆಳಗಿನ ಆಭರಣಗಳ ಬಹುಮಾನವನ್ನು ಗ್ರಾಹಕರಿಗೆ ಕೊಡಲು ನಿರ್ಧರಿಸಿದೆ. ಮೂರು ತೊಲೆಗಳನ್ನು ಕೊಳ್ಳುವವರಿಗೆ ನಾಲ್ಕು ಡೈಮಂಡ್ ಕಟ್ ಬಳೆಗಳೂ, ಎರಡು ಉಂಗುರಗಳು. ಆರು ತೊಲೆ ತೆಗೆದುಕೊಳ್ಳುವವರಿಗೆ ಒಂದು ನೆಕ್ಲೆಸ್, ಎರಡು ಉಂಗುರಗಳು, ಒಂದು ಜೊತೆ ವಾಲೆ, ನಾಲ್ಕು ಬಳೆಗಳು ಮತ್ತು ಹಣೆಗೆ ಒಂದು ಟಿಕ್ಕಾವು ದೊರೆಯುವುದು. ಹಾಗೆಯೇ ೧೨ ತೊಲೆ ಪಡೆ ಕೊಳ್ಳುವವರಿಗೆ ಒಂದು ರಾಣೀಹಾರ್ ನೆಕ್ಲೆಸ್, ಎಂಟು ಬಳೆ, ಎರಡು ಉಂಗುರಗಳು, ಎರಡು ಜೊತೆ ವಾಲೆ, ಒಂದು ಟಿಕ್ಕಾ. ಈ ಆಭರಣಗಳೆಲ್ಲ ಇಮಿಟೇಶನ್ ರತ್ನಗಳಿಂದ ಕೂಡಿದವು. ತೃಪ್ತಿಯಾಗದಿದ್ದರೆ ಬೆಲೆಯನ್ನು ವಾಪಾಸು ಮಾಡುವ ಭರವಸೆ ಕೊಡಲಾಗಿದೆ. ಏಜೆಂಟರುಗಳಾಗಿ ತಿಂಗಳಿಗೆ ರೂ. ೩೦೦ ಯಾ ೫೦೦ ಸಂಪಾದಿಸಲು ಒಳ್ಳೆಯ ದಾರಿ. ಈ ಸುಸಂದರ್ಭವನ್ನು ಕಳಕೊಳ್ಳದಿರಲು ದಯವಿಟ್ಟು ಇಂದೇ ಬರೆಯಿರಿ. ಅಂಚೆ ಹಾಸಲು ಮತ್ತು ಪ್ಯಾಕಿಂಗು ಮಾಫತ್ತು.

Minerva New Gold ornaments house.
Bara Hindu (K. M.) Delhi 6.

4-1

ಕೊಡಗು

ತಾ. ೨೦-೪-೧೯೫೧ನೇ ಶುಕ್ರವಾರ

ಶಾಸನ ಸಭೆಯ ಬಡ್ಜೆಟ್ ಮೀಟಿಂಗು.

ಕೊಡಗು ಶಾಸನ ಸಭೆಯ ಬಡ್ಜೆಟ್ ಮೀಟಿಂಗು ತಾ. ೧೮ ರಿಂದ ಪ್ರಾರಂಭವಾಗಿದೆ. ಈ ವರ್ಷದ ಬಡ್ಜೆಟ್ಟಿನ ಮೇರೆಗೆ ಸರಕಾರದ ಆದಾಯವು ರೂ. ೬೭,೧೪,೦೦೦ ಎಂದೂ ಖರ್ಚು ರೂ. ೭೧,೭೮,೦೦೦ ಎಂದೂ ಅಂದಾಜು ಮಾಡಿ ರೂ. ೪೬ ಲಕ್ಷದಷ್ಟು ಖರ್ಚು ಆದಾಯವನ್ನು ಮೀರುವದೆಂದೂ ತೋರಿಸಲಾಗಿದೆ. ನಿಜವಾಗಿಯೂ ಪರಿಶೀಲಿಸಿದರೆ ಈ ವರ್ಷದ ಬಡ್ಜೆಟ್ಟನ್ನು ಖೋತಾ ಬಡ್ಜೆಟ್ಟೆಂದು ಹೇಳಲು ಬರುವದಿಲ್ಲ. ಏಕೆಂದರೆ ಬಡ್ಜೆಟ್ಟಿನಲ್ಲಿ ಯಾವಾಗಲೂ ಆದಾಯವನ್ನು ಕಡಿಮೆ ತೋರಿಸುವದು ವಾಸ್ತವವಾಗಿದೆ. ಕಳೆದ ವರ್ಷದ ಬಡ್ಜೆಟ್ಟಿನಲ್ಲಿ ೨೨ ಲಕ್ಷದ ಖೋತೆಯನ್ನು ತೋರಿಸಲಾಗಿತ್ತು. ಆದರೆ ವರ್ಷಾಂತ್ಯದಲ್ಲಿ ಈ ಖೋತೆಯು ಕೇವಲ ೬೩ ಲಕ್ಷಕ್ಕಿಳಿದದ್ದು ಇದಕ್ಕೆ ನಿದರ್ಶನವಾಗಿದೆ. ಈ ವರ್ಷ ಖೋತೆಯು ನಾಲ್ಕುವರೆ ಲಕ್ಷವೆಂದು ಬಡ್ಜೆಟ್ಟು ಮಾಡಿದ್ದರೂ ಕೂಡ ವರ್ಷಾಂತ್ಯದಲ್ಲಿ ಬಡ್ಜೆಟ್ಟು ಉಳುವರಿ ಬಡ್ಜೆಟ್ಟಾಗಿ ತೋರಬಹುದು. ಏಕೆಂದರೆ ಖರ್ಚು ಮಾಡಲೆಂದು ಇಡುವ ಹಣವು ವರ್ಷದಲ್ಲಿ ಖರ್ಚಾಗದೆ ಉಳಿಯುವ ಸಂಪ್ರದಾಯ ಹಲವು ವರ್ಷಗಳಿಂದ ನಡೆದು ಬಂದಿದೆ. ಈ ವರ್ಷದ ಬಡ್ಜೆಟ್ಟಿನಲ್ಲಿ ಪ್ರತಿ ವರ್ಷ ಬರದ (ನಾನ್‌ರಿಕರಿಂಗ್) ಖರ್ಚುಗಳಾದ ಕೆಲವು ಅಂಶಗಳಿವೆ. ಉದಾಹರಣೆಗೆ ಕಾಲೇಜು ಕಟ್ಟಡಕ್ಕೆ ೪ ಲಕ್ಷ, ಹೈಸ್ಕೂಲು ಕಟ್ಟಡಗಳಿಗೆ ೨ ಲಕ್ಷ, ಜಿಲ್ಲಾ ಬೋರ್ಡು ಅಧ್ಯಾಪಕರ ವೇತನಕ್ಕಾಗಿ ೨ ಲಕ್ಷ ಹೀಗೆ ಹಲವಾರು ಲಕ್ಷ ರೂಪಾಯಿಗಳನ್ನಿಟ್ಟಿರುವದರಿಂದ ಈ ವರ್ಷದ್ದು ಖೋತಾ ಬಡ್ಜೆಟ್ಟಾಗಲು ಕಾರಣವಾಗಿದೆ. ಆದರೆ ನಿಜವಾಗಿಯೂ ಇದು ಖೋತಾ ಬಡ್ಜೆಟ್ಟೆನ್ನಲಾಗುವದಿಲ್ಲ. ಈ ವಿಶೇಷ ಖರ್ಚುಗಳು ಉಳುವರಿ ಇರುವ ಶಿಲ್ಕಿನಿಂದ ನಿರ್ವಹಿಸಲ್ಪಡಬೇಕಾದವುಗಳು.

ಬಡ್ಜೆಟ್ಟನ್ನು ಪರಿಶೀಲಿಸಿದರೆ ಕೊಡಗಿನ ಆರ್ಥಿಕ ಸ್ಥಿತಿಯು ಉತ್ತಮವಾಗಿದೆಯೆಂಬುದು ಗೊತ್ತಾಗುವದು. ಮೇಲಾಗಿ ಮುಂದಿನ ವರ್ಷಗಳಲ್ಲಿ ಈ ಸ್ಥಿತಿಯು ಉತ್ತಮಗೊಳ್ಳುವ ಸಾಧ್ಯತೆ ಇದೆ. ಕೊಡಗಿನಲ್ಲಿ ಭೂಕಂದಾಯದಿಂದ ಬರುವ ಉತ್ಪತ್ತಿ ಕೇವಲ ನಾಲ್ಕು ಲಕ್ಷ ರೂಪಾಯಿಗಳಾಗಿವೆ. ಈಗ ಸೆಟ್ಲ್‌ಮೆಂಟ್ ಕೆಲಸ ನಡೆಯುತ್ತಿದ್ದು ಈ ಉತ್ಪತ್ತಿಯು ಹತ್ತು ಲಕ್ಷದ ವರೆಗೆ ಏರುವ ಸಾಧ್ಯತೆ ಇದೆ. ಈಗ ಜಾರಿಯಲ್ಲಿ ಬರಲಿರುವ ವ್ಯವಸಾಯ ಆದಾಯ ತೆರಿಗೆಯಿಂದ ಎಂಟು ಲಕ್ಷ ಉತ್ಪತ್ತಿ ಬರಬಹುದೆಂದು ಸರಕಾರವು ಅಂದಾಜು ಮಾಡಿದ್ದರೂ ಈ ಬಾಬಿನಲ್ಲಿ ನಿರಾಯಾಸವಾಗಿ ಸರಕಾರಕ್ಕೆ ೧೫ ಲಕ್ಷ ಆದಾಯ ಬರಲಿದೆ. ಕೊಡಗಿನ ಆರ್ಥಿಕ ಸ್ಥಿತಿಯು ದಿನ ಕಳೆದಂತೆಯೇ ಬಲಗೊಳ್ಳುತ್ತಿದೆ. ೧೯೨೪ರಲ್ಲಿ ಕೇಂದ್ರ ಸರಕಾರವು ಕೊಡಗಿಗೆ ಶಾಸನ ಸಭೆಯನ್ನು ಕೊಟ್ಟಾಗ ಕೊಡಗಿನ ಉಳಿತಾಯವಾಗಿದ್ದ ಸುಮಾರು ಒಂದು ಕೋಟಿ ರೂಪಾಯಿಗಳನ್ನು ತೆಗೆದುಕೊಂಡು ಕೊಡಗು ಸರಕಾರಕ್ಕೆ ಯಾವುದೇ ಶಿಲ್ಕನ್ನು ಕೊಡದಿದ್ದರೂ ಕ್ರಮಶಃ ಕೊಡಗು ಸುಧಾರಿಸಿಕೊಂಡು ಮುಂದೆ ಸಾಗಿದೆ. ೧೯೨೪ರಲ್ಲಿ ಇದ್ದ ಸುಮಾರು ೧೨ ಲಕ್ಷದ ಕೊಡಗಿನ ವಾರ್ಷಿಕ ಉತ್ಪತ್ತಿಯು ಇಂದು ಅರ್ಧ ಕೋಟಿಯನ್ನು ಮೀರಿದೆ.

ಈ ವರ್ಷ ಫೈನಾನ್ಸು ಕಮಿಟಿಯವರಿಗೆ ಅವರ ಅಭಿಮತದಂತೆ ಮಂಜೂರು ಮಾಡಲು ಸುಮಾರು ೧,೧೨,೦೦೦ ರೂಪಾಯಿಗಳನ್ನಿಟ್ಟದ್ದು ಯೋಗ್ಯವಾಗಿದೆ. ಪ್ರಾಮುಖ್ಯವಾಗಿ ಶಾಲೆಗಳಿಗೂ, ಆಸ್ಪತ್ರೆಗಳಿಗೂ ವಿನಿಯೋಗವಾಗುವ ಈ ಹಣದಿಂದ ಜನಹಿತ ಸಾಧಿಸಿದಂತಾಯಿತು. ಬಡ್ಜೆಟ್ಟಿನಲ್ಲಿ ವಿಷಾದಿಸಬೇಕಾದ ಒಂದು ವಿಚಾರವೂ ಇದೆ. ಕೇಂದ್ರ ಇರಿಗೇಶನ್ ಮತ್ತು ವಾಟರ್ ವರ್ಕ್ಸ್ (CWINC) ಇವರು ಹಾರಂಗಿ, ಒರಪೊಳೆ ಮತ್ತು ಲಕ್ಷ್ಮಣತೀರ್ಥ ಯೋಜನೆಗಳ ಪರಿಶೀಲನೆ ಮತ್ತು ಪ್ಲಾನು ತಯಾರಿಗಾಗಿ ಕಳೆದ ವರ್ಷ ಒಂದೂವರೆ ಲಕ್ಷಕ್ಕೂ ಮೀರಿ ಖರ್ಚು ಮಾಡಿದ್ದಾರೆ. ಈ ವರ್ಷ ಪುನಹ ಪರಿಶೀಲನೆಗಾಗಿ ೯೨೦೦೦/- ಹಣವಿಡಲಾಗಿದೆ. ಇದು ಅನ್ಯಾಯದ ಖರ್ಚು. ಅವರ ಪರಿಶೀಲನೆಯ ಫಲಿತಾಂಶವು ಜನತೆಯ ಮುಂದಿದೆ. ಇನ್ನೂ ಈ ಅಣೆಕಟ್ಟುಗಳು ಆಗುವ ಸಾಧ್ಯತೆ ತೋರುತ್ತಿಲ್ಲ. ಈ ರೀತಿ ಬಡ ಪ್ರಾಂತದ ಲಕ್ಷಾಂತರ ರೂಪಾಯಿಗಳ ವ್ಯಯವು ಖಂಡನಾರ್ಹವಾಗಿದೆ.

ಒಟ್ಟಾರೆ ಬಡ್ಜೆಟ್ಟಿನಲ್ಲಿ ವಿವಿಧ ಕೆಲಸಗಳಿಗೆಂದು ಹಣವಿಟ್ಟರೆ ಸಾಲದು. ಆಯಾಯ ವರ್ಷ ಆ ಹಣವು ಆಯಾಯ ಕೆಲಸಗಳಿಗಾಗಿ ವಿನಿಯೋಗವಾಗುವಂತೆ ನೋಡುವದು ಸರಕಾರದ ಆದ್ಯ ಕರ್ತವ್ಯ. ಹಣವನ್ನು ವಿನಿಯೋಗಿಸಲು ಕೇಂದ್ರ ಸರಕಾರದ ಅನುಮತಿ ದೊರೆಯುವದು ಸಾವಕಾಶವಾಗುತ್ತದೆಂಬ ದೂರು ಹೇಳಿದರೆ ಸಾಲದು. ಇನ್ನೊಂದು ವರ್ಷಗಳ ಅನುಭವದಿಂದ ಸರಕಾರ ಪಾಠ ಕಲಿಯಬೇಕು. ಸಕಾಲದಲ್ಲಿ ಕೇಂದ್ರದಿಂದ ಮಂಜೂರಾತಿ ದೊರಕಿಸಿಕೊಳ್ಳುವ ಏರ್ಪಾಡು ಮಾಡಬೇಕು. ಹಾಗೆ ಮಾಡಿ ಬಡ್ಜೆಟ್ಟಿನಲ್ಲಿ ನಿಶ್ಚಯಿಸಲ್ಪಟ್ಟ ಕೆಲಸಗಳನ್ನು ಆಯಾಯ ವರ್ಷ ಮುಗಿಸಲು ಸರಕಾರವು ಸರ್ವ ಪ್ರಯತ್ನ ಮಾಡುವದಾಗಿ ಆಶಿಸುವೆವು.

ವರ್ತಮಾನ.

ಮೈಸೂರಿನಿಂದ ಕೊಡಗಿಗೆ ವಿದ್ಯುಚ್ಛಕ್ತಿ ತರುವ ವಿಚಾರದಲ್ಲಿ ಎಗ್ರಿಮೆಂಟ್ ಆಗಿಲ್ಲವೆಂದು ಸರಕಾರದವರು ಕೌನ್ಸಿಲಿನ ಒಂದು ಪ್ರಶ್ನೆಗೆ ಉತ್ತರವಿತ್ತಿರುವರು.

ಕೇಂದ್ರ ಶಾಸನ ಸಭೆಗೆ ಕೊಡಗಿನಿಂದ ಒಬ್ಬ ಪ್ರತಿನಿಧಿಯನ್ನು ಆರಿಸುವ ಚುನಾವಣೆಯು ಬರುವ ನವಂಬರ್ ತಿಂಗಳ ಅಂತ್ಯದಲ್ಲಿ ನಡೆಯುವದೆಂದು ಒಂದು ಪ್ರಶ್ನೆಗೆ ಸರಕಾರದವರು ಜವಾಬನಿತ್ತರು.

ಮಡಿಕೇರಿನಾಡು ಬೆಟ್ಟತ್ತೂರು ಗ್ರಾಮದ ಚೆರಿಯಮನೆ ಮುಗ್ಗಯ್ಯನವರನ್ನು ಗುಂಡು ಹೊಡೆದು ಕೊಂದರೆಂಬ ಮೊಕದ್ದಮೆಯು ಸೆಶನ್ಸ್ ಕೋರ್ಟಿನಲ್ಲಿ ವಿಚಾರವಾಗಿ ಆ ಸಂಬಂಧ ತಪ್ಪಿತಸ್ಥರೆಂದು ಹೇಳಲ್ಪಟ್ಟಿದ್ದ ಚೆರಿಯಮನೆ ಮಾಚಯ್ಯನವರನ್ನು ಕುಲಾಸು ಮಾಡಲಾಗಿದೆ.

ವಯನಾಡು ತಾಲೋಕಿನ ಸುಲ್ತಾನ ಬತ್ತೇರಿಯಲ್ಲಿ ಮಾಂಶಿಬೇಧಿ ಕಾಯಿಲೆ ಇದೆಯೆಂದು ಮಲಬಾರು ಕಲೆಕ್ಟರು ಸಾರಿರುವುದರಿಂದ ಆ ಕಡೆ ಹೋಗುವವರು ಹತ್ತಿರದ ಆಸ್ಪತ್ರೆಗಳಿಂದ ಇನಾಕ್ಯುಲೇಶನ್ ಮಾಡಿಸಿಕೊಳ್ಳಬೇಕೆಂದು ತಿಳಿಸಿದೆ.

ತಾರೀಕು ೯-೪-೫೧ ರಲ್ಲಿ ನಾಪೋಕ್ಲಿನ ಮಹಿಳಾ ಸಮಾಜದಲ್ಲೂ ೧೨-೪-೫೧ರಲ್ಲಿ ನಾಪೋಕ್ಲಿನ ಪುರ ಜನರ ಕ್ಲಬ್ಬಿನಲ್ಲೂ ಮಡಿಕೇರಿ ಸೆಂಟ್ರಲ್ ಹೈಸ್ಕೂಲಿನ ಅಧ್ಯಾಪಕರಾದ ಶ್ರೀ ವಿ. ಎಸ್. ರಾಮಕೃಷ್ಣನವರು ಬೋಧಪ್ರದವಾದ ಭಾಷಣಗಳನ್ನು ಮಾಡಿದರು.

೧೯೩೯-೪೫ ರಲ್ಲಿ ನಡೆದ ಯುದ್ಧದ ಸಮಯದಲ್ಲಿ [illegible] ಮಿಲಿಟರಿಯಲ್ಲಿ ಕೆಲಸ ಮಾಡಿ ಮರಣ ಹೊಂದಿದವರ ಅಥವಾ ಬಿಡುಗಡೆ ಹೊಂದಿದ (ಯಾವ ದರ್ಜೆಯವರಾಗಲಿ) ವರ ಓದುವ ಹುಡುಗಿಯರಿಗೆ ಸ್ಕಾಲರ್‌ಶಿಪ್ ದೊರಕುವುದು. ಇದರ ವಿವರವಾಗಿ ಹೆಚ್ಚಿನ ವಿಷಯವನ್ನು ಮಡಿಕೇರಿಯ ಡಿಸ್ಟ್ರಿಕ್ಟ್ ಸೋಲ್ಜರ್ಸ್ ಸೈಲರ್ಸ್ ಬೋರ್ಡಿನ (ಡಿಸ್ಟ್ರಿಕ್ಟ್ ಎಂಪ್ಲಾಯ್‌ಮೆಂಟ್ ಆಫೀಸು) ಆಫೀಸಿನಿಂದ ತಿಳಿದುಕೊಳ್ಳಬಹುದು.

ಶಾಸನ ಸಭೆಯ ಸಿಲೆಕ್ಟ್ ಕಮಿಟಿಯವರ ಕೇಳಿಕೆಗಳನ್ನು ತಮ್ಮ ಶಿಫಾರಸ್ಸಿನೊಡನೆ ಚೀಫ್ ಕಮಿಷನರವರು ಇಂಡಿಯಾ ಸರಕಾರಕ್ಕೆ ಬರೆದು ತಿಳಿಸಿದ್ದರ ಮೇರೆ ಸಮ್ಮರಿ ಟ್ರಯಲ್ ಮಸೂದೆಯನ್ನು ವಾಪಾಸು ತೆಗೆದುಕೊಳ್ಳಲು ಇಂಡಿಯಾ ಸರಕಾರದವರು ಒಪ್ಪಿರುವರೆಂದು ತಿಳಿಯಬರುತ್ತದೆ.

ಗಾಡಿಗೆ ಆರು ರೂಪಾಯಿ ಮಟ್ಟಿಗೆ ಏರಿಸಿದ ಬತ್ತದ ಬೆಲೆಯನ್ನು ಬರೀ ಎರಡು ತಿಂಗಳುಗಳ ಮಟ್ಟಿಗೆ ಕೊಡುವುದರ ಬದಲು ಇಡೀ ವರ್ಷ ಕೊಡಬೇಕೆಂದು ಚೀಫ್ ಕಮಿಷನರು ಇಂಡಿಯಾ ಸರಕಾರವನ್ನು ಕೇಳಿಕೊಂಡದ್ದಕ್ಕೆ ಹಾಗೆ ಮಾಡಲಾಗುವದಿಲ್ಲವೆಂದು ಜವಾಬು ಬಂದಿರುವದಾಗಿ ವರ್ತಮಾನ.

ತಾರೀಕು ೧೫ರಲ್ಲಿ ಅಖಿಲ ಭಾರತ ಆಕಾಶವಾಣಿಯವರು ಕೊಡಗಿನ ಜನಜೀವನ, ಸಂಸ್ಕೃತಿ, ಕಲೆ ಮತ್ತಿತರ ವೈಶಿಷ್ಟ್ಯಗಳನ್ನು ಒಳಗೊಂಡ ಕಾರ್ಯಕ್ರಮವನ್ನು ಮಡಿಕೇರಿಯಲ್ಲಿ ಏರ್ಪಡಿಸಿ ಆಕಾಶವಾಣಿಯಲ್ಲಿ ಪ್ರಸಾರ ಮಾಡಲು ರೆಕಾರ್ಡ್ ಮಾಡಿದರು. ಅಪ್ಪಚ್ಚ ಕವಿಗಳ ಪದ, ಮಕ್ಕಳ ಹಾಡು, ಕುಣಿತ, ಚೀಫ್‌ಕಮಿಷನರ, ಪಿ. ಐ. ಬೆಳ್ಯಪ್ಪ, ಸಿ. ಎಂ. ರಾಮರಾವ್, ಡಿ. ಬಿ. ಕೆ. ಚಂಗಪ್ಪ, ಇವರುಗಳ ಭಾಷಣ, ಶ್ರೀಗಳಾದ ಚೆಕ್ಕೆರ ಅಪ್ಪಯ್ಯ, ಕೋಟೆರ ಮೇದಪ್ಪ, ಅನಂತಶಯನ ಭಾರ್ಗವ್, ಮಿಸ್ ಚಂದ್ರಶೇಖರ, ನಾಟಕ, ಬೊಳಕಾಟ್, ಮೊದಲಾದ ಕಾರ್ಯಕ್ರಮಗಳಿದ್ದವು.

ನೋಟೀಸ್.

ವೀರಾಜಪೇಟೆನಾಡು ಅರಮೇರಿ ಗ್ರಾಮದ ಬಾಳೆಕುಟ್ಟೀರ ಮಂದಣ್ಣನವರ ಮಗ ಮುತ್ತಣ್ಣನು ತಿಳಿಯಪಡಿಸುವುದೇನಂದರೆ:—

ನನ್ನ ತಮ್ಮನಾದ ಸೋಮಯ್ಯನು ನಮ್ಮೆಲ್ಲರಿಗೂ ಹಕ್ಕಾಗಿ ನಮ್ಮಗಳ ಸ್ವಾಧೀನದಲ್ಲಿರುವ ಕುಟುಂಬದ ಅವಿಭಕ್ತ ಸೊತ್ತುಗಳನ್ನು ಗಿರ್ವಿ ವಗೈರೆ ಪರಾಧೀನ ಮಾಡುವ ಅಭಿಪ್ರಾಯ ಮತ್ತು [illegible] ನಡೆಸಲಿರುವುದಾಗಿ ತಿಳಿಯಬರುತ್ತದೆ.

ಸದರಿ ಸೋಮಯ್ಯನವರಿಗೆ ಕುಟುಂಬದ ಯಾವ ಸೊತ್ತನ್ನೂ ಯಾವ ವಿಧದಲ್ಲೂ ಪರಾಧೀನ ಮಾಡುವ ಅಧಿಕಾರ ಇರುವುದಿಲ್ಲ. ಅಲ್ಲದೆ ಅವರು ಈ ಪ್ರಕಾರ ನನಗೆ ತಿಳಿಯಪಡಿಸ[illegible] ಆವಶ್ಯಕತೆ ಏನೂ ಇಲ್ಲ. [illegible] ಸ್ವತ್ತು ಈಗ ಜಂಟಿ ಕುಟುಂಬ ಸೊತ್ತು [illegible] ಉತ್ಪತ್ತಿಯಿಂದ [illegible] ಅವರ ಹೆಸರಿನಲ್ಲೇ ಪಡೆದುದನ್ನು ಸಹ [illegible] ಯಾವ ವಿಧದಲ್ಲೂ ಪರಾಧೀನ ಮಾಡುವ ಹಕ್ಕು ಮತ್ತು ಆವಶ್ಯಕತೆ ಇರುವುದಿಲ್ಲ.

ಆದರಿಂದ ಯಾರು ದರೂ ಗಿರ್ವಿ, ಭೋಗ್ಯ, ಕ್ರಯಕ್ಕೆ ಚರ ಮತ್ತು ಸ್ಥಿರ ಸ್ವತ್ತುಗಳನ್ನು ಪಡೆದುಕೊಂಡಲ್ಲಿ ಅವರಿಗೆ ಯಾವ ಹಕ್ಕೂ ಸಿಗಲಾರದು ಎಂದು ಈ ಮೂಲಕ ತಿಳಿಸಲಾಗಿದೆ.

ಬಿ. ಮುತ್ತಣ್ಣ

4-1

ಬೇಕಾಗಿದ್ದಾರೆ

1951-52 ರ ಸಾಲಿಗೆ ಮರಗೋಡು ಹೈಯರ್ ಎಲಿಮೆಂಟ್ರಿ ಶಾಲೆಗೆ S. S. L. C. ಪಾಸಾದ ಮತ್ತು ಹಿಂದಿಯಲ್ಲಿ ರಾಷ್ಟ್ರಭಾಷೆ ಆಗಿರುವ ಇಬ್ಬರು ಅಧ್ಯಾಪಕರು ಬೇಕಾಗಿದ್ದಾರೆ. ಉಮೇದುವಾರರು ತಾ. 5-5-51 ರ ಒಳಗೆ ಈ ಕೆಳಗಿನ ವಿಳಾಸಕ್ಕೆ ಬರೆಕೊಳ್ಳುವುದು.

ಉಳುವಾರನ ಗಣಪತಿ
ಪ್ರೆಸಿಡೆಂಟ್,
2-1 ಶಾಲಾ ಆಡಳಿತ ಸಂಘ
ಮರಗೋಡು
ಮೂರ್ನಾಡು ಪೋಸ್ಟ್

ಅಧ್ಯಾಪಕರ ಹಿತಕ್ಕಾಗಿ.

ಪೇಶಾವರ ನ್ಯಾಯವಿಧಾಯಕ ಸಭೆಯ ಮುಂದಿನ ಅಧಿವೇಶನದ ಮುಂದೆ ತರಲು ರಾಜಾ ಸರ್ದಾರ್ ಖಾನ್ ಎಂ. ಎಲ್. ಎ. ರವರು ತಯಾರಿಸಿರುವ ಒಂದು ನಿರ್ಣಯವು ಬಡ ಅಧ್ಯಾಪಕರ ಬೆಂಬಲಕ್ಕಾಗಿದೆ. ಅಧ್ಯಾಪಕ ವೃತ್ತಿಯಲ್ಲಿರುವವರೆಲ್ಲರ ಮಕ್ಕಳಿಗೆ ಸರಕಾರದ ಖರ್ಚಿನಲ್ಲಿ ಧರ್ಮಾರ್ಥ ಶಿಕ್ಷಣ ಒದಗಿಸಿ ಕೊಡತಕ್ಕದ್ದೆಂದು ರಾಜಾ ಸರ್ದಾರ್ ಖಾನರು ಆ ನಿರ್ಣಯದಲ್ಲಿ ಕೇಳಿರುವರು.

ಕೊಡಗು ನ್ಯಾಯವಿಧಾಯಕ ಸಭೆಯ ಬಡ್ಜೆಟ್ ಮೀಟಿಂಗು.

ಕೊಡಗು ನ್ಯಾಯವಿಧಾಯಕ ಸಭೆಯ ಬಡ್ಜೆಟ್ ಮೀಟಿಂಗು ಈ ತಾರೀಕು ೧೮ ರಿಂದ ಪ್ರಾರಂಭವಾಗಿದೆ. ಶ್ರೀ ಸಿ. ಎಂ. ಪೂಣಚ್ಚನವರಲ್ಲದೆ ಎಲ್ಲಾ ಸದಸ್ಯರು ಹಾಜರಾಗಿದ್ದರು. ಹೊಸ ಮೆಂಬರರಾದ ಶ್ರೀ. ಕೆ. ಸಿ. ಕಟ್ಟೆಪ್ಪನವರು ಪ್ರತಿಜ್ಞಾವಿಧಿಯನ್ನು ವಹಿಸಿದ ನಂತರ ಕೌನ್ಸಿಲು ಕಾರ್ಯಕಲಾಪವು ಪ್ರಾರಂಭವಾಯಿತು. ಪ್ರಥಮವಾಗಿ ಪ್ರಶ್ನೋತ್ತರಗಳು ನಡೆದವು. ನಂತರ ಕೌನ್ಸಿಲ ಸೆಕ್ರೆಟರಿಯವರು ಕಳೆದ ಕೌನ್ಸಿಲು ಸಭೆಗಳಲ್ಲಿ ಪಾಸಾದ ಠರಾವುಗಳ ಮೇಲೆ ಚೀಫ್ ಕಮಿಷನರ ಹುಕುಮನ್ನು ಸಭೆಯ ಮುಂದಿಟ್ಟರು. ಕೊಡಗಿನ ವಿದ್ಯಾಧಿಕಾರಿಗಳಾಗಿ ಶ್ರೀ. ಬಿ. ಎಸ್. ಕಶಾಲಪ್ಪನವರು ವಿದ್ಯಾ ಇಲಾಖೆಗೆ ಸಲ್ಲಿಸಿದ ಸೇವೆಯನ್ನು ಈ ಸಭೆಯು ಮೆಚ್ಚುತ್ತದೆ ಎಂಬ ಠರಾವನ್ನು ಶ್ರೀ. ಕೆ. ಎಂ. ಬೆಳ್ಯಪ್ಪನವರು ಕಳುಹಿಸಿದ್ದರು. ಆದರೆ ಅಂಥ ಠರಾವುಗಳನ್ನು ಕೌನ್ಸಿಲಿನ ಸ್ಟ್ಯಾಂಡಿಂಗ್ ಆರ್ಡರ್ ಪ್ರಕಾರ ಸೂಚಿಸಲು ಬರುವದಿಲ್ಲವೆಂದು ತಿಳಿದು ತೆಗೆದುಕೊಂಡರು. ಫೈನಾನ್ಸ ಮೆಂಬರರು ೧೯೫೮-೫೯ ರ ಸಾಲಿನ ಬಡ್ಜೆಟ್ಟನ್ನು ಸಭೆಯ ಮುಂದಿಡುತ್ತಾ ಈ ರೀತಿ ಹೇಳಿದರು.

ಫೈನಾನ್ಸ ಮೆಂಬರರ ಭಾಷಣ.

೧೯೫೭-೫೮ ರಿಂದ ಕೇಂದ್ರ ಸರಕಾರವು ಈ ಸರಕಾರಕ್ಕೆ ಹಣ ಸಹಾಯ ಮಾಡುವದನ್ನು ನಿಲ್ಲಿಸಿರುವದು. ಆದ್ದರಿಂದ ಈ ವರ್ಷ ಅತಿ ತುರ್ತ ಮತ್ತು ಅವಶ್ಯವಾದ ಕೆಲಸಕ್ಕೆ ಮಾತ್ರ ಹಣ ಇಡಲಾಗಿದೆ. ಕೇಂದ್ರ ಸರಕಾರವು ಹೆಚ್ಚು ಬೆಳೆಯಿರಿ, ಕಿತ್ತಳೆ ಸಂಶೋಧನಾ ಮೊದಲಾದ ಯೋಜನೆಗಳಿಗೆ ಕೊಡುತ್ತಿರುವ ಸಹಾಯವನ್ನು ಈ ವರ್ಷವೂ ಮುಂದರಿಸುವದು. ಮಲೇರಿಯಾ ನಿವಾರಣಾ ಇಲಾಖೆಯು ಪೂರ್ಣವಾಗಿ ಕೇಂದ್ರದಿಂದ ವಂತಿಗೆ ಪಡೆಯುವದು.

ಜಮಕಂದಾಯ ವಸೂಲಾತಿ ತೃಪ್ತಿಕರವಾಗಿದೆ. ಈ ವರ್ಷ ೮೯,೬೪೦ ಎಕ್ರೆಗಳಲ್ಲಿ ವ್ಯವಸಾಯ ನಡೆದು ೬೪,೪೪೮ ಟನ್ನು ಬತ್ತ ಬೆಳೆಯಲಾಗಿದೆ. ಸುಗ್ಗಿಯಲ್ಲಿ ಆರೇಬಿಕಾ ಚೆನ್ನಾಗಿತ್ತು. ಏಲಕ್ಕಿಗೆ ಸ್ವಲ್ಪ ತೊಂದರೆಯಾಯಿತು. ಪಂಜಾಬ್ನಿಂದ ಬಂದ ನಿರಾಶ್ರಿತರಲ್ಲಿ ಈ ವರ್ಷ ೬೪ ಜನರಿಗೆ ಭೂಮಿ ಕೊಡಲಾಗಿ ಒಟ್ಟು ಕೊಡಗಿನಲ್ಲಿ ೪೯೦ ಜನರಿಗೆ ಈ ರೀತಿ ಭೂಮಿ ಕೊಡಲ್ಪಟ್ಟಿದೆ. ಬಾರ್ಡರ ಮಾನ ನಿರೋಧವು ಜಾರಿಯಲ್ಲಿದ್ದು ಈ ಇಲಾಖೆಯಿಂದ ಸರಕಾರಕ್ಕೆ ೧೦ ಲಕ್ಷ ಉತ್ಪತ್ತಿ ಬಂದಿದೆ. ಕೇಂದ್ರದಿಂದ ಗೊತ್ತ ಆಹಾರ ಬೋನಸ್ಸಿನ ಕೆಲವಂಶವನ್ನು ಕರೆ ರಿಪೇರಿ, ಮತ್ತು ಇತರ ವ್ಯೆನರು ನೀರಾವರಿ ಯೋಜನೆಗಳಿಗೆ ಉಪಯೋಗಿಸಲಾಗುವದು. ಇದಕ್ಕಾಗಿ ತಾತ್ಕಾಲಿಕವಾಗಿ ಒಬ್ಬ ಇರಿಗೇಶನ್ ಅಫೀಸರು ಮತ್ತು ಏಳು ಸೆಕ್ಷನ್ ಅಫೀಸರುಗಳನ್ನು ನೇಮಿಸಿ ಪ್ರತ್ಯೇಕ ಇಲಾಖೆಯು ಏರ್ಪಾಡು ಮಾಡಲಾಗಿದೆ.

ತಾರೀಕ ೧-೪-೫೭ ರಲ್ಲಿ ಕೊಡಗು ಸರಕಾರದ ಉಳುವರಿಯು ರೂ. ೭೩,೯೨,೬೫೩ ಆಗಿತ್ತು. ೧೯೫೭-೫೮ ಆದಾಯ ೫೪,೪೭,೦೦೦ ಖರ್ಚು ರೂ ೬೧,೧೨,೦೦೦ ಕಳೆದರೆ ವರ್ಷಾಂತ್ಯದಲ್ಲಿ ಅಂದರೆ ತಾ ೧-೪-೫೮ ರಲ್ಲಿ ರೂ ೬೭,೨೧,೦೦೦ ಶಿಲ್ಕು ನಿಲ್ಲುವದು ಇದರಲ್ಲಿ ಕೇಂದ್ರ ಸರಕಾರದಲ್ಲಿ ಕೊಡಲ್ಪಟ್ಟ ದರದ ಬಡ್ಡಿಯಲ್ಲಿ ರೂ ೧೫ ಲಕ್ಷವಿರುವದು.

ರೆವಿನ್ಯು ಇಲಾಖೆ

ಈ ಇಲಾಖೆಯ ಸಿಬ್ಬಂಧಿಯಲ್ಲಿ ಈ ವರ್ಷ ಹೆಚ್ಚಿನ ವ್ಯತ್ಯಾಸವಿಲ್ಲ ಖರ್ಚು ಕಡಿಮೆ ಮಾಡುವ ದೃಷ್ಟಿಯಿಂದ ಸರ್ವೆಯರ ಗಳಿಗೆ ಕೊಟ್ಟ ಪ್ಯೂನ್ ಗಳನ್ನು ರದ್ದು ಮಾಡಲಾಯಿತು. ಕೊಡಗಿನಲ್ಲಿ ಸೆಟ್ಲ್ಮೆಂಟ್ ಕೆಲಸಕ್ಕಾಗಿ ಪ್ರತ್ಯೇಕ ಸಿಬ್ಬಂದಿಯನ್ನು ನೇಮಿಸಲಾಗಿದೆ. ಕ್ರಿ.ಪ.ಂಗಲ ನಾಡಿನ ಸರ್ವೆಯು ಮುಗಿದಿದೆ. ಪೊನ್ನಂಪೇಟೆ ನಾಡಿನಲ್ಲಿ ಈಗ ಕೆಲಸ ಪ್ರಾರಂಭವಾಗಿದೆ. ೧೯೫೯ ರಲ್ಲಿ ದಕ್ಷಿಣ ಕೊಡಗಿನಲ್ಲಿಯೂ ೧೯೬೦ ರಲ್ಲಿ ಉತ್ತರ ಕೊಡಗಿನಲ್ಲಿಯೂ ಪರಿಷ್ಕರಿಸಿದ ಭೂಕಂದಾಯ ದರವನ್ನು ಜಾರಿಯಲ್ಲಿ ತರಲಾಗುವದು.

ಫಾರೆಸ್ಟ್ ಇಲಾಖೆ

೧೯೫೭-೫೮ ರಲ್ಲಿ ೨,೬೩,೬೭೧ ಘನ ಅಡಿ ಮರವನ್ನು ೯೨೨೬ ತೇಗದ ಕಂಬಗಳನ್ನೂ ರೂ ೧೫,೧೬,೪೮೫ ಕ್ಕೆ ಮಾರಲಾಯಿತು. ಕಳೆದ ಜನವರಿಯಲ್ಲಿ ೯೦ ಟನ್ ಗಂಧದ ಮರವನ್ನು ರೂ೩,೯೦,೦೦೦ ಕ್ಕೆ ಮಾರಲಾಯಿತು. ಸರಾಸರಿ ಟನ್ನಿಗೆ ರೂ ೪,೩೦೦/- ಬೆಲೆ ದೊರೆತಿದೆ. ವರ್ಷದ ಪ್ರಾರಂಭದಲ್ಲಿ ೩೮ ಆನೆಗಳೂ ಒಂದು ಮರಿಯೂ ಇದ್ದವು. ಈ ವರ್ಷ ೩೪ ಆನೆಗಳನ್ನು ಹಿಡಿಯಲಾಯಿತು. ಹದಿನ್ನಾಲ್ಕು ಆನೆಗಳನ್ನು ರೂ ೪೬,೫೦೦ ಕ್ಕೆ ಮಾರಲಾಯಿತು. ಮಾರ್ಚ್ ಕೊನೆಗೆ ಈ ವರ್ಷ ೩೦ ಆನೆಗಳಿವೆ. ಫಾರೆಸ್ಟ್ ಇಲಾಖೆಯ ಉತ್ಪತ್ತಿಯು ೨೧ ಲಕ್ಷವೆಂದು ಕಳೆದ ಬಡ್ಜೆಟ್ಟಿನಲ್ಲಿ ಅಂದಾಜು ಮಾಡಿದ್ದರೂ ೨೮ ಲಕ್ಷಕ್ಕೂ ಮೀರಿ ಆದಾಯ ಬಂದಿದೆ.

ಆಡಳಿತ

ಭಾರತದ ಗೃಹಮಂತ್ರಿಗಳು ಕಳೆದ ಮಾರ್ಚ ೧೫ರಲ್ಲಿ ಕೇಂದ್ರ ಪಾರ್ಲಿಮೆಂಟಿನಲ್ಲಿ ಹೇಳಿದ ವಿಚಾರ ಮಾನ್ಯ ಸದಸ್ಯರಿಗೆ ತಿಳಿದಿರಬಹುದು. ಕೊಡಗಿನ ಆಡಳಿತ ವಿಚಾರದಲ್ಲಿ ಚೀಫ್ ಕಮಿಷನರಿಗೆ ಸಹಾಯಕರಾಗಿ ಇಬ್ಬರು ಎಗ್ಸಿಕ್ಯೂಟಿವ್ ಕೌನ್ಸಿಲರುಗಳನ್ನು ನೇಮಿಸುವ ಸೂಚನೆ ಇದೆ. ಅಧಿಕೃತವಾಗಿ ಮಂತ್ರಿಗಳ ವಿಚಾರ ತಿಳಿದು ಬಾರದಿದ್ದರೂ ಈ ವಿಚಾರಕ್ಕಾಗಿ ರೂಪಾಯಿ ೩೪,೦೦೦ ವನ್ನು ಬಡ್ಜೆಟ್ಟಿನಲ್ಲಿ ಇಡಲಾಗಿದೆ. ೧೯೫೭-೫೮ರಲ್ಲಿ ೫,೬೦೦ ಟನ್ ಅಕ್ಕಿಯನ್ನು ಮೈಸೂರಿಗೂ, ೩,೦೦೦ ಟನ್ನನ್ನು ಮಲಬಾರಿಗೂ ರವಾನಿಸಲಾಯಿತು.

ವಿದ್ಯಾ ಇಲಾಖೆ

ಕಾಲೇಜಿನ ವಿಚಾರದಲ್ಲಿ ಕಟ್ಟಡವಾಗದೆ ಇರುವ ತೊಂದರೆ ಎಲ್ಲರಿಗೂ ತಿಳಿದಿದೆ. ಕಟ್ಟಡವಾಗದ ಕಾರಣವೇ ಬಿ. ಎ., ಬಿ. ಎಸ್‌ಸಿ. ತರಗತಿಗಳನ್ನು ತೆರೆಯಲಾಗುವದಿಲ್ಲ. ಕಟ್ಟಡಕ್ಕೆ ಸಾಕಷ್ಟು ಹಣವಿಡಲಾಗಿದೆ. ಪೊನ್ನಂಪೇಟೆ ಮತ್ತು ಇತರ ಹೈಸ್ಕೂಲು ಕಟ್ಟಡಗಳನ್ನೂ ಪೂರೈಸಲಾಗುವದು. ಮೂಲಶಿಕ್ಷಣ ತರಬೇತಿಗಿರುವ ಕಟ್ಟಡ ತಯಾರಾದನಂತರವೇ ವೀರಾಜಪೇಟೆಯಲ್ಲಿರುವ ಉಪಾಧ್ಯಾಯರ ತರಬೇತಿ ಶಾಲೆಯನ್ನು ಪೊನ್ನಂಪೇಟೆಗೆ ವರ್ಗಾಯಿಸಲಾಗುವದು. ಕೊಡಗಿನ ಸಾರ್ವಜನಿಕರು ವಿದ್ಯೆಯ ಪಟ್ಟಿಗೆ ತುಂಬಾ ಜಾಗೃತರಾಗಿದ್ದಾರೆ. ಶಾಲೆಗಳು ಹೆಚ್ಚುತ್ತಿವೆ. ವಯಸ್ಕರ ಶಿಕ್ಷಣದ ಯೋಜನೆಯೊಂದನ್ನು ಮಾಡಿ ಕೇಂದ್ರ ಸರಕಾರದ ಒಪ್ಪಿಗೆ ಕಳುಹಿಸಲಾಗಿದೆ. ಕೇಂದ್ರದ ಒಪ್ಪಿಗೆ ದೊರೆತ ನಂತರ ಇದನ್ನು ಜಾರಿಯಲ್ಲಿ ತರಲಾಗುವದು. ದಳಿತ ವರ್ಗದವರ ವಿದ್ಯಾ ಖರ್ಚಿಗಾಗಿ ರೂ. ೪೨,೦೦೦ ಈ ವರ್ಷ ಖರ್ಚಾಯಿತು.

ವೈದ್ಯಕೀಯ

ಮಡಿಕೇರಿ ಆಸ್ಪತ್ರೆಯಲ್ಲಿ ಕಣ್ಣು ನೋವಿಗೆ ಚಿಕಿತ್ಸೆ ಮಾಡುವ ವ್ಯವಸ್ಥೆ ಮಾಡಲಾಗುವದು. ಸಿವಿಲ್ ಸರ್ಜನರು ಮತ್ತು ಇತರ ಡಾಕ್ಟರುಗಳು ಮಾಡುತ್ತಿರುವ ಉತ್ತಮ ಕೆಲಸದ ಕಾರಣ ಆಸ್ಪತ್ರೆಗಳಲ್ಲಿ ಸ್ಥಳವಿಲ್ಲದಾಗಿದೆ.

ಮಲೇರಿಯಾ ನಿವಾರಣಾ ಇಲಾಖೆಯು ಉತ್ತಮ ಕೆಲಸ ಮಾಡಿದೆ. ಇದರ ಕೆಲಸದ ಪರಿಣಾಮವಾಗಿ ಕೊಡಗಿನಲ್ಲಿ ಮಲೇರಿಯಾವು ಕಡಿಮೆಯಾಗಿದೆ.

ವ್ಯವಸಾಯ.

ಈ ವರ್ಷ ೮೭ ಕೆರೆಗಳನ್ನು ರಿಪೇರಿ ಮಾಡಲಾಯಿತು. ೨೭ ಕಟ್ಟೆ ಕಟ್ಟಲಾಯಿತು. ೮೦೦ ಟನ್ ನೆಲಗಡಲೆ ಗೊಬ್ಬರ ೩೦ ಟನ್ ಅಮೋನಿಯಾ ಸಲ್ಫೇಟ್, ೨೦ ಟನ್ ಸೂಪರ್ ಫಾಸ್ಫೇಟ್, ೧೫೫ ಟನ್ ಮೂಳೆಗೊಬ್ಬರವನ್ನು ರೈತರಿಗೆ ಸರಬರಾಯಿ ಮಾಡಲಾಗಿದೆ. ಸೊಪ್ಪುಗೊಬ್ಬರವನ್ನು ಪ್ರಚಾರ ಮಾಡಲಾಗಿದೆ. ಈ ವರ್ಷ ೧೫೧೦ ಎಕ್ರೆಯಲ್ಲಿ ಬತ್ತ, ೧೬೯೮ ಎಕ್ರೆಯಲ್ಲಿ ಕಿತ್ತಳೆ, ೩೬೬೮ ಎಕ್ರೆಯಲ್ಲಿ ಕಾಫಿ, ೧೦೦೦ ಎಕ್ರೆ ಅಡಿಕೆ ೨೧೦ ಎಕ್ರೆ ಇತರ ಆಹಾರ ಧಾನ್ಯ ಬೆಳೆಸಲಾಗಿದೆ. ೧೨೭,೮೨೭ ಟನ್ ಕಂಪೋಸ್ಟ್ ಗೊಬ್ಬರ ತಯಾರಿಸಲಾಯಿತೆಂದು ಅಂದಾಜು ಮಾಡಲಾಗಿದೆ.

ಜಾನುವಾರು ಇಲಾಖೆ.

'ಕೀ' ಗ್ರಾಮ ಯೋಜನೆಯನ್ನು ಜಾರಿಯಲ್ಲಿ ಪ್ರಥಮವಾಗಿ ತಂದು ಇದಕ್ಕಾಗಿ ಕಾಜೂರು ಗ್ರಾಮವನ್ನು ಆರಿಸಿಕೊಳ್ಳಲಾಗಿ ೧೯೫೮-೫೯ ರಲ್ಲಿ ಬೇರೆ ಕಡೆ ಇದನ್ನು ಹೆಚ್ಚಿಸಲಾಗುವದು. ವಯಸ್ಸಾದ ಮತ್ತು ಕರೆಯದ ದನಗಳಿಗಾಗಿ ಗೋಸದನದ ಯೋಜನೆ ಮಾಡಲಾಗುವದು. ೫೮-೫೯ ರಲ್ಲಿ ಗೋಶಾಲೆ ಹಾಕುವ ಯೋಜನೆಯನ್ನು ವಿಸ್ತರಿಸಲಾಗುವದು.

ಸಹಕಾರ.

ಸಹಕಾರ ಬ್ಯಾಂಕು ತೃಪ್ತಿಕರವಾಗಿ ಕೆಲಸ ಮಾಡುತ್ತಿದೆ. ದೀರ್ಘವಾಯಿದೆಯ ಸಾಲದ ಯೋಜನೆಗಾಗಿ ಒಬ್ಬ ಇನ್ಸ್‌ಪೆಕ್ಟರನ್ನೂ ಒಬ್ಬ ಗುಮಾಸ್ತರನ್ನೂ ಕೊಡಲಾಗಿದೆ. ಗ್ರಾಮ ಸಹಕಾರ ಬ್ಯಾಂಕುಗಳ ಏರ್ಪಾಡಾಗಿ ಏಳು ಬ್ಯಾಂಕುಗಳು ಕೆಲಸ ಮಾಡುತ್ತಿವೆ. ಈ ವರ್ಷ ಮೂರನ್ನು ತೆರೆಯಲಾಗುವದು. ಕೆಲವು ಸಂಘಗಳು ಗ್ರಾಮಾಭಿವೃದ್ಧಿ ಕೆಲಸ ಮಾಡಿವೆ. ಅವರೆ ಇದಕ್ಕಾಗಿ ಸರಕಾರದ ಸಹಾಯ ಕೇಳುವದು ನ್ಯಾಯವಲ್ಲ.

ಪಿ. ಡಬ್ಲ್ಯು. ಡಿ.

ಈ ವರ್ಷ ಪೊನ್ನಂಪೇಟೆ ಹೈಸ್ಕೂಲು, ಸರಕಾರಿ ಕಾಲೇಜು ಮತ್ತು ಏಂಟಿ ಮಲೇರಿಯಾ ಲೇಟರಿ, ಕಟ್ಟಡಗಳನ್ನು ಕೈಕೊಳ್ಳಲಾಗಿದೆ. ೧೯೫೮-೫೯ ರಲ್ಲಿ ಮಡಿಕೇರಿ ಫ್ರೇಜರ್‌ಪೇಟೆ ಮತ್ತು ಮಡಿಕೇರಿ ಸಿದ್ದಾಪುರ ರಸ್ತೆಗಳಿಗೆ ಎಸ್ಫಾಲ್ಟ್ ಹಾಕಲಾಗುವದು. ಕೈಗೊಂಡಿರುವ ಕಟ್ಟಡಗಳನ್ನು ಪೂರೈಸಲಾಗುವದು.

ಈ ವರ್ಷ ಜಿಲ್ಲಾ ಬೋರ್ಡಿನ ಅಧ್ಯಾಪಕರ ವೇತನಕ್ಕಾಗಿ ರೂ. ೨ ಲಕ್ಷ ಕೇಂದ್ರ ಸರಕಾರದ ಅನುಮತಿಯ ನಿರೀಕ್ಷಣೆಯಿಂದ ಇಡಲಾಗಿದೆ. ಈ ಹಣವನ್ನು ವ್ಯವಸಾಯ ಆದಾಯ ತೆರಿಗೆಯನ್ನು ಜಾರಿಗೆ ತರುವ ಮತ್ತು ೧-೧-೧೯೫೭ ರಿಂದ ಯಾವ ಜಿಲ್ಲಾ ಬೋರ್ಡು ಉದ್ಯೋಗಿಯು ವೇತನ ಬಾಕಿಯನ್ನು ೬೦% ಯನ್ನೂ ಕೇಳಬಾರದೆಂಬ ಭರವಸೆಯಿಂದ ಒದಗಿಸಲಾಗಿದೆ.'

ಫೈನಾನ್ಸ ಮೆಂಬರು ತಮ್ಮ ಭಾಷಣ ಮುಗಿಸಿದನಂತರ ಸದಸ್ಯರು ಬಡ್ಜೆಟ್ಟಿನ ಮೇಲೆ ತಮ್ಮ ಅಭಿಪ್ರಾಯ ವ್ಯಕ್ತ ಮಾಡಿದರು.

ಶ್ರೀ ಎಸ್. ಎಸ್. ನಾರಾಯಣ ಮೂರ್ತಿಯವರು.

ಮೋಸಾ ಬಡ್ಜೆಟ್ಟಾಗಿದೆ. ಜಿಲ್ಲಾ ಬೋರ್ಡು ಉದ್ಯೋಗಿಗಳ ವೇತನಕ್ಕೆಂದು ೨ ಲಕ್ಷ ಇಟ್ಟದ್ದಕ್ಕೆ ವಂದಿಸುತ್ತೇನೆ. ವ್ಯವಸಾಯ ಇಲಾಖೆಗೆ ಇಟ್ಟ ಹಣ ಸಾಲದು. ಅಮೇರಿಕಾ ಮತ್ತಿತರ ದೇಶಗಳಲ್ಲಿ ಜಪಾನಿನಲ್ಲಿ ಹನ್ನೆರಡಾಣೆ ವ್ಯವಸಾಯ ಅಭಿವೃದ್ಧಿಗೆ ಖರ್ಚು ಮಾಡುತ್ತಾರೆ. ಟ್ರಾಕ್ಟರುಗಳನ್ನು ಕ್ರಯಕ್ಕೆ ಕೊಡದೆ ಉಪಯೋಗಿಸುವ ದಾದಲ್ಲಿ ರೈತರಿಗೆ ಬಾಡಿಗೆಗೆ ಕೊಡಬಹುದು. ಕೊಡಗು ದನಗಳಿಗಾಗಿ ವೈದ್ಯರನ್ನು, ಆಳುಗಳಿಗಾಗಿ ಮಂಚಾನ್ನೂ ನೀಡಬೇಕಾಗಿದೆ. 'ಹೆಚ್ಚು ಬೆಳೆಯಿರಿ' ಯೋಜನೆಯು ಫಲಕಾರಿಯಾಗಿಲ್ಲ. ನಮ್ಮ ಉಳುವರಿಯು ವ್ಯಯವಾದರೂ ಉಳುವರಿಯು ವರ್ಷ ವರ್ಷ ಕಡಿಮೆಯಾಗುತ್ತಿದೆ. ರೈತನ ಬೆಳೆಗೆ ಯೋಗ್ಯಬೆಲೆ ಇಲ್ಲದ ಕಾರಣ ದುಡ್ಡು ಬೇರೆ ಇತರ ಮಾರ್ಗ

ದೀಪಸ್ತಂಭಗಳನ್ನು ಬೆಳಗಿಸುವದು ಹೆಚ್ಚಾಗಿದೆ. ಬತ್ತಕ್ಕೆ ಆರು ರೂಪಾಯಿ ಗಾಡಿಗೆ ಅರ್ಧ ಎರಡು ತಿಂಗಳ ಮಟ್ಟಿಗೆ ಏರಿಸಿದ್ದು ಅತ್ಯಪ್ರಕರ. ರೈತರ ಹಿತವನ್ನು ಗಾಳಿಗೆ ಚೆಲ್ಲಲಾಗಿದೆ. ಜಾನುವಾರು ಇಲಾಖೆಗೆ ಇಟ್ಟ ಹಣ ಸಾಲದು. ಪ್ರತಿ ಆಸ್ಪತ್ರೆಯ ವಾರ್ಷಿಕ ಔಷಧಿ ಮತ್ತಿತರ ಹತ್ಯಾರು ಖರ್ಚಿಗೆ ಸಾವಿರ ರೂಪಾಯಿಯಂತೆ ಇಟ್ಟರೆ ಎಲ್ಲಿಗೂ ಸಾಲದು. ಎರಡು ವರ್ಷಗಳ ಹಿಂದೆ ಅಖಿಲ ಕೊಡಗು ಜಾನುವಾರು ಜಾತ್ರೆಯ ಅಧ್ಯಕ್ಷಪದದಿಂದ ಡಾ. ಸೇನ್‌ರವರು ಹೇಳಿದಂತೆ ಗ್ರಾಮಾಂತರಗಳಲ್ಲಿ ಜಾನುವಾರು ಆಸ್ಪತ್ರೆಗಳು ಹೆಚ್ಚಬೇಕು. ಏನ್ನೆಯ ಮಟ್ಟಿಗೆ ಜನರು ಕೂಗಿಕೊಂಡು ಸ್ವಪ್ರಯತ್ನದಿಂದ ಮುಂದೆ ಬರಲೆತ್ನಿಸಿದರೂ ಸರಕಾರದ ತಕ್ಕ ಪ್ರೋತ್ಸಾಹವಿಲ್ಲ. ಕೊಡಗಿನಲ್ಲಿ ಟ್ರೇಡ್ ಯೂನಿಯನ್‌ಗಳು ಈಗೀಗ ಸ್ಥಾಪಿತವಾಗಿದ್ದರೂ ಸರಕಾರವು ಅವುಗಳಿಗೆ ಯೋಗ್ಯ ಉತ್ತೇಜನ ಕೊಡುತ್ತಿಲ್ಲ.

ಶ್ರೀ ಕೆ. ಪಿ. ಅಪ್ಪಯ್ಯನವರು

ಬಜೆಟ್ ಮೀಟಿಂಗನ್ನು ಇಷ್ಟು ತಡವಾಗಿ ನಡೆಸುವ ಪದ್ಧತಿಯನ್ನು ಮುಂದಕ್ಕೆ ನಿಷೇಧಿಸಬೇಕೆಂದು ಪ್ರಥಮತ ಹೇಳುತ್ತೇನೆ. ಬಜೆಟ್ಟಿನಲ್ಲಿ ಐದು ಲಕ್ಷ ಮಿಗತೆ ಇದ್ದರೂ ವರ್ಷಾಂತ್ಯದಲ್ಲಿ ಉಳಿವರಿಯೇ ತೋರಬಹುದು. ಕೊಡಗಿನ ಬಜೆಟ್ಟಿನ ಸ್ಥಿತಿ ತೃಪ್ತಿಕರವಾಗಿದೆ. ವ್ಯವಸಾಯ ಇಲಾಖೆ ತಿಂಗಳ ಮೊದಲಾಗಿನ ಪ್ರಾರಂಭದಲ್ಲಿ ಬಂದ ನಂತರ ಮುಂದಿನ ವರ್ಷಗಳಲ್ಲಿ ಉಳಿವರಿ ಬಜೆಟ್ಟೇ ಆಗಬಹುದು. ಫಾರೆಸ್ಟು ಇಲಾಖೆಯ ಉತ್ಪತ್ತಿ ಹೆಚ್ಚಿದೆಯೆಂದು ಖರ್ಚನ್ನೂ ಹೆಚ್ಚು ಮಾಡುವದು ಯೋಗ್ಯವಲ್ಲ. ವ್ಯವಸಾಯ ಇಲಾಖೆಯು ಮದ್ರಾಸ್ ಸರಕಾರವು ಅನುಸರಿಸಿರುವಂತೆ ಬೀಜ, ಗೊಬ್ಬರ ಸರಬರಾಯಿ ಮಾಡಿ ವ್ಯವಸಾಯವು ಶಾಸ್ತ್ರೀಯ ನಡೆಯುವಂತೆ ಮಾಡಬೇಕು. ಕೊಡಗಿನ ರೈತರ ಸ್ಥಿತಿ ಸುಧಾರಿಸಿಲ್ಲ. ವೈದ್ಯಕೀಯ ಅನುಕೂಲತೆ ಹೆಚ್ಚಿಸಬೇಕು. ಹೆರಿಗೆಯ ಮತ್ತು ಮಕ್ಕಳ ಆಸ್ಪತ್ರೆಗಳಾಗಬೇಕು. ಇವಕ್ಕಾಗಿ ವ್ಯಯವಾದ ಹಣವು ಎಂದೂ ನಷ್ಟವಲ್ಲ. ಹೊಡೆವ ಎತ್ತುಗಳ ಕ್ರಯದ ಹೆಚ್ಚಳದಿಂದ ಬಡರೈತನಿಗೆ ವಿಪರೀತ ತೊಂದರೆಯಾಗಿದೆ. ಡೈರಿ ಫಾರಮಿನ ಆಯುವ್ಯಯದ ಪಟ್ಟಿಯೊಂದನ್ನು ಕೌನ್ಸಿಲಿನ ಮುಂದಿಡಬೇಕಾದುದು ಆವಶ್ಯ. ಸಹಕಾರ ಇಲಾಖೆಯು ಯೋಗ್ಯ ಕೆಲಸ ಮಾಡುತ್ತಿದ್ದರೂ ಸರಕಾರ ಸಹಾಯ ಸಾಲದು. ಹೈಸ್ಕೂಲುಗಳ ಕಟ್ಟಡಗಳು ಈ ವರ್ಷವೇ ಸಿದ್ಧವಾಗಿ ಈ ಬರುವ ವಿದ್ಯಾ ವರ್ಷದಿಂದಲೇ ಶಾಲೆ ಪ್ರಾರಂಭವಾಗಬೇಕು. ಕಾಲೇಜು ಕಟ್ಟಡ ಶೀಘ್ರ ಆಗಬೇಕು. ಕಾಲೇಜಿನಲ್ಲಿ ಯೋಗ್ಯ ಶಿಕ್ಷಕರನ್ನು ಇಟ್ಟುಕೊಂಡು ಆದರ್ಶ ಕೆಲಸ ಮಾಡಿದ ಪ್ರಿನ್ಸಿಪಾಲರಾದ ವಿ. ಹೋಲ್ ಮನ್ನರನ್ನು ಮೆಚ್ಚಬೇಕಾಗಿದೆ. ಕೇಂದ್ರದ ವಶವಾಗಿರುವ ಪಿ. ಡಬ್ಲ್ಯು. ಡಿ. ಇಲಾಖೆಯಿಂದ ಕೆಲಸ ಸಮರ್ಪಕವಾಗಿ ನಡೆಯುತ್ತಿಲ್ಲ. ಅದನ್ನು ಬೇಗ ಅದರ ಹಿಂದಿನ ಸ್ಥಳೀಯ ಸರಕಾರಕ್ಕೆ ಬರುವಂತೆ ಮಾಡಬೇಕು.

ಶ್ರೀ ಎಚ್. ಟಿ. ಮುತ್ತಣ್ಣನವರು.

ಜನಪ್ರತಿನಿಧಿಗಳು ಅಭಿಪ್ರಾಯ ವ್ಯಕ್ತಮಾಡುವದಲ್ಲದೆ ಸರಕಾರವು ಅದನ್ನು ಗಮನಿಸುವಂತಿಲ್ಲ. ಸ್ವರಾಜ್ಯ ಬಂದೂ ಸರಕಾರವು ತನ್ನ ಹಳೇ ಧೋರಣೆಯನ್ನು ಬದಲಾಯಿಸದಿರುವದು ವಿಷಾದಕರ. ಬಜೆಟ್ಟು ಆಶಾದಾಯಕವಾಗಿದೆಯೆಂದು ಹೇಳುವಂತಿಲ್ಲ. ವ್ಯವಸಾಯಗಾರರ ಹಿತವನ್ನು ಲೆಕ್ಕಿಸಿಲ್ಲ. ಸರಕಾರದ ದಿನಚರಿ ಖರ್ಚಿಗೆ ಉತ್ಪತ್ತಿಯ ಹೆಚ್ಚಿನ ಅಂಶವು ಖರ್ಚಾಗುತ್ತಿದೆ. ರೆವಿನ್ಯೂ ಇಲಾಖೆಯ ಕೆಲಸವು ತೀರಾ ಅತೃಪ್ತಿಕರವಿದೆ. ಅನೇಕ ಕಾಗದ ಪತ್ರಗಳೇ ಕಾಣೆಯಾದ ವರ್ತಮಾನವಿದೆ. ನಾಡುಕಚೇರಿಗಳಲ್ಲಿ ಸರ್ವೇ ನಾಗದ ವಿಪರೀತ ದರಕಾಸ್ತುಗಳಿವೆಯಂತೆ. ಪಾರ್ಶ್ವವಾತನಿರೋಧದಿಂದ ಪ್ರಯೋಜನವಿಲ್ಲ. ಒಂದೋ ಪೂರ್ಣ ಪಾನನಿರೋಧ ಬರಬೇಕು. ಇಲ್ಲದಿದ್ದರೆ ಅದು ಬರುವವರೆಗೆ ಕೂಪನ್ ಪದ್ಧತಿಯನ್ನು ತೆಗೆದು ಹಾಕಿ ಸೀಲ್ ಬಾಟ್ಲಿಗಳಲ್ಲಿ ಬಾಟ್ಲಿಗೆ ರೂ. ೫ ದರದಲ್ಲಿ ಮಾರಾಟಮಾಡಬೇಕು. ಫಾರೆಸ್ಟ್ ಇಲಾಖೆಯು ಆಡಳಿತ ದಕ್ಷತೆಯಿಂದ ನಡೆಯುತ್ತಿಲ್ಲ. ಜಂಗಾವಿನ ದನಗಳ ಚಾರ್ಜನ್ನು ಏರಿಸಿದ್ದು ಅನ್ಯಾಯ. ವ್ಯವಸಾಯ ದೇಶವಾದ ಕೊಡಗಿನಲ್ಲಿ ನೀರಾವರಿ ಯೋಜನೆಯ ಸರಳ ಚಾಲನೆ ಸಿಗದಲ್ಲಿಲ್ಲ. ನಮ್ಮ ನಾಡಿನ ಇರಿಗೇಶನ್ ಕಮಿಟಿಯ ಪ್ರೆಸಿಡೆಂಟನು ನಾನಾಗಿದ್ದರೂ ಕಾರ್ಯತಃ ಯಾವುದೊಂದೂ ಆಗಿರುವದಿಲ್ಲ. ಹೆಚ್ಚು ಬೆಳೆಯಿರೆಂದು ಬಾಯಲ್ಲಿ ಹೇಳಿದ ಮಾತ್ರಕ್ಕೆ ಬೆಳೆಯಾಗಲಾರದು. ವಿದ್ಯಾ ಪ್ರಚಾರಕ್ಕೆ ಸಾಕಷ್ಟು ನಿಗವಿಟ್ಟಿಲ್ಲ. ಹಿಂದುಳಿದವರನ್ನು ಹಿಂದೆಯೇ ಬಿಡಲಾಗಿದೆ. ಶಾಲೆಗಳಲ್ಲಿ ಬೆಂಚು, ಸ್ಥಳಗಳಿಲ್ಲದೆ ೫೦, ೬೦ ಮಕ್ಕಳಿಗೆ ಒಬ್ಬ ಅಧ್ಯಾಪಕರು ಪಾಠ ಹೇಳುವ ಸ್ಥಿತಿ ಇದೆ. ಶಾಲೆಗಳಲ್ಲಿ ಶಿಸ್ತನ್ನು ಖಡ್ಡಾಯ ಜಾರಿಯಲ್ಲಿ ತರಬೇಕು. ವೈದ್ಯ ಇಲಾಖೆಯ ಕೆಲಸ ಸರಿಯಾಗಿ ನಡೆಯುತ್ತಿದ್ದರೂ ಅದಕ್ಕೆ ಕೊಡುವ ನೆರವು ಸಾಲದು. ಸೋಮವಾರಪೇಟೆ ಆಸ್ಪತ್ರೆಗೆ ಒಬ್ಬ ಹೆಚ್ಚಿನ ಡಾಕ್ಟರು ಬೇಕು. ವೆಟರ್ನರಿ ಇಲಾಖೆಯ ಕೆಲಸ ತೃಪ್ತಿಕರವಾಗಿದೆ. ಸೋಮವಾರಪೇಟೆಯಲ್ಲಿ ಕೋಳಿ ಸಾಕುವ ಫಾರಂ, 'ಕೀ' ವಿಲೇಜ್ ಯೋಜನೆ ಮಾಡಿದ್ದು ಸ್ತುತ್ಯಾರ್ಹ. ಸರಕಾರವು ಕೊಡಗಿನ ಪ್ರತಿ ಗ್ರಾಮಕ್ಕೆ ತಲುಪಿದೆ. ಬ್ಯಾಂಕಿನ ದೀರ್ಘಾವಧಿಯ ಯೋಜನೆಗೆ ಎರಡು ಇನ್ಸ್‌ಪೆಕ್ಟರುಗಳನ್ನು ಕೊಡಬೇಕು. ಹಿಂದುಳಿದವರಿಕ್ಕೆ ಪ್ರಜಾಪ್ರಭುತ್ವ ಸರಕಾರವಿದ್ದರೂ ಕೊಡಗಿನ ಸ್ಥಿತಿ ಬದಲಾಗಿಲ್ಲ. ಈ ಕೌನ್ಸಿಲಿನಿಂದ ದೇಶಕ್ಕೆ ಯಾವ ಹಿತವೂ ಆಗಿಲ್ಲ. ಕೊಡಗು ಯಾರ ತಲೆಹೊರೆಯಾಗಿಲ್ಲ. ಹಾಗಿರುವಾಗ ಅದಕ್ಕೆ ಜವಾಬ್ದಾರಿ ಸರಕಾರ ಕೊಡಲು ಅಭ್ಯಂತರವೇನು? ಬತ್ತದ ಬೆಲೆಯನ್ನು ಗಾಡಿಗೆ ರೂ. ೬ರಂತೆ ಏರಿಸಿ ಅದು ಮಾರ್ಚ್ ೧೬ ರಿಂದ ಮೇ ೧೫ರ ವರೆಗೆಂದು ನಿಶ್ಚಯಿಸಿದ್ದು ಯೋಗ್ಯವಲ್ಲ. ಈ ದರವು ಇಡೀ ವರ್ಷ ರೈತನಿಗೆ ದೊರೆಯುವಂತೆ ಮಾಡಬೇಕು.

ಸಶೇಷ

ಓದುಗರ ಓಲೆಗಳು

ಪೋಸ್ಟಲ್ ದರಗಳ ಏರಿಕೆ ನ್ಯಾಯವಲ್ಲ.

ಭಾರತ ಸರಕಾರದವರ ಉತ್ಪತ್ತಿಯನ್ನು ಹೆಚ್ಚಿಸುವ ರೀತಿ ನೀತಿಗಳಿಂದ ಬಡವರ ಕಷ್ಟ ನಷ್ಟಗಳು ಹೇಗೆ ಹೆಚ್ಚುತ್ತಿರುವದೆಂಬುದನ್ನು ಪದೇ ಪದೇ ಪ್ರಸ್ತಾಪಿಸುತ್ತಲೇ ಇದ್ದೇನೆ. ಇತ್ತೀಚೆಗೆ ಮೇ ೧ನೇ ತಾರೀಕಿನಿಂದ ವಿ. ಪಿ. ಛಾರ್ಜು, ರಿಜಿಸ್ಟ್ರೇಷನ್ ಫೀ, ಮನಿಯಾರ್ಡರ್ ಕಮಿಷನ್‌ಗಳನ್ನು ಹೆಚ್ಚಿಸಿರುವರು. ಇದಕ್ಕಿನ ಮೇಲೆ ಬರೆ ಎಳೆದಿದೆ. ವಿ. ಪಿ. ಚಾರ್ಜು ಮತ್ತು ರಿಜಿಸ್ಟ್ರೇಷನ್ ಫೀಜುಗಳು ಎಲ್ಲರ ಮೇಲೂ ಬೀಳುತ್ತವೆ. ಆದರೆ ಮನಿಯಾರ್ಡರ್ ಕಮಿಷನ್ ಮಾತ್ರ ಹಾಗಲ್ಲ. ಇದರ ಭಾರ ಸಂಪೂರ್ಣವಾಗಿ ಬಡವರ ಮೇಲೆ ಬೀಳುತ್ತದೆ. ೫,೧೦,೨೦ ಈ ರೀತಿ ಸಣ್ಣ ಪುಟ್ಟ ಮನಿಯಾರ್ಡರ್‌ಗಳನ್ನು ಕಳುಹಿಸುವವರೆಲ್ಲಾ ಬಡವರೇ ಹೊರತು ಶ್ರೀಮಂತರಲ್ಲ. ಈ ಮನಿಯಾರ್ಡರ್‌ಗಳೆಲ್ಲಾ ಪರ ಊರುಗಳಲ್ಲಿ ಓದುವ ಮಕ್ಕಳಿಗೋ ಪರ ಊರುಗಳಲ್ಲಿ ದುಡಿದು, ಸ್ವಂತ ಊರಿನಲ್ಲಿ ಬಿಟ್ಟು ಬಂದಿರುವ ಹೆಂಡತಿ ಮಕ್ಕಳಿಗೋ, ತಂದೆ ತಾಯಿಗಳಿಗೋ ಕಳುಹಿಸುವ ಬಡವರ ಮತ್ತು ಕೂಲಿಯವರ ಹಣ. ಶ್ರೀಮಂತರು ಮತ್ತು ವರ್ತಕರ ವ್ಯವಹಾರಗಳೆಲ್ಲಾ ಬ್ಯಾಂಕಿನ ಮೂಲಕ ನಡೆಯುತ್ತದೆ. ಈ ವ್ಯವಹಾರಗಳ ಖರ್ಚು ತೀರಾ ಸ್ವಲ್ಪ. ಉದಾಹರಣೆಗಾಗಿ ವ್ಯಾಪಾರದ ಭಾರತದ ಯಾವುದೇ ಊರಿಗಾಗಲೀ ಬ್ಯಾಂಕಿನ ಮೂಲಕ ಹಣ ರವಾನಿಸಲು ಬ್ಯಾಂಕಿನವರು ೧೦೦ ರೂ ಗಳಿಗೆ ೬ ಪೈ ಸಿಂಗ ೨ ಆಣೆ ಯವರೆಗೆ ಛಾರ್ಜು ಮಾಡುತ್ತಾರೆ. ಅದೇ ೧೦೦ ರೂ. ಗಳನ್ನು ಮನಿಯಾರ್ಡರ್ ಮಾಡಿದರೆ ಮೊದಲು ೧ ರೂ. ಇದ್ದದ್ದು ಈಗ ೧ ರೂ. ೮ ಆಣೆ ಕೊಡಬೇಕಾಗಿದೆ! ಇದೆಂತಹ ಅನ್ಯಾಯ? ಬಡವರ ಉದ್ಧಾರಕ್ಕಾಗಿ ಕಂಕಣತೊಟ್ಟಿರುವ ಭಾರತ ಸರಕಾರದವರು ಇಂತಹ ರೀತಿ ನೀತಿಗಳಿಂದ ಬಡವರ ಸುಲಿಗೆಯಾಗುವುದೆಂಬುದನ್ನು ಗಮನಿಸದೆ ಇಷ್ಟ ಬಂದಂತೆ ಮಾಡುವುದು ಸರ್ವಥಾ ನ್ಯಾಯವಲ್ಲ.

ಎರಡನೆಯದಾಗಿ ಸರಕಾರದವರು, ೫ ರೂ. ಗೆ ೨ ಆಣೆಯಿಂದ ಪ್ರಾರಂಭವಾಗಿ ಮನಿಯಾರ್ಡರ್ ಮೊತ್ತವು ಹೆಚ್ಚಿದಂತೆ ಕಮಿಷನ್ ಕಡಿಮೆ ಮಾಡಿರುತ್ತಾರೆ. ಇದರಲ್ಲಿ ಸಹ ಬಡವನ ಮೇಲೆ ಬೀಳುವ ಭಾರವೇ ಹೆಚ್ಚಾಗುತ್ತದೆ. ಆದುದರಿಂದ ಇದನ್ನು ಇಡೀ ದೇಶದ ಎಲ್ಲ ಪತ್ರಿಕಾ ಕರ್ತರೂ ಸಾರ್ವಜನಿಕ ಮುಖಂಡರೂ, ವರ್ತಕರೂ ಪ್ರತಿಯೊಬ್ಬರೂ ಪ್ರತಿಭಟಿಸಲೇಬೇಕು. ಸರ್ವಪ್ರಯತ್ನದಿಂದಲೂ ಎಲ್ಲಾ ಪೋಸ್ಟಲ್ ಛಾರ್ಜುಗಳ ಏರಿಕೆಯನ್ನು ರದ್ದು ಮಾಡುವಂತೆ ಪ್ರಯತ್ನಿಸಬೇಕು.

ಎಂ. ಆರ್. ಸಿ. ಬಸಪ್ಪ.

ಇದಲ್ಲವೇ ಸರಿಯಾದ ಅರ್ಥ?

ಪಾರ್ಲಿಮೆಂಟಿನಲ್ಲಿ ಕೊಡಗನ್ನು ಬೇರೆ ಪ್ರಾಂತ್ಯದೊಳಗೆ ಸಂಯೋಜನೆ ಮಾಡಬೇಕೆಂದು ತಾನು ಹೇಳಲಿಲ್ಲವೆಂದು ಕೊಡಗಿನ ಜನರು ತಪ್ಪು ಅಭಿಪ್ರಾಯಮಾಡಿರುವರೆಂದು ಶ್ರೀ ಪೂಣಚ್ಚನವರು ಈಗ ಅನ್ನುತ್ತಿರುವರಂತೆ. ಅವರ ಭಾಷಣವನ್ನು ಮನಸಿಟ್ಟು ಓದಿದವರಿಗೆ ಅವರು ಸಂಯೋಜನೆ ಎಂಬ ಶಬ್ದವನ್ನು ಉಪಯೋಗಿಸದಿದ್ದರೂ ಕೂಡ ಭಾಷಣದ ಸಾರಾಂಶವು ಕೊಡಗಿನಲ್ಲಿ ಸಂಯೋಜನೆ ಮಾಡಬೇಕೆಂದೇ ಆಗುತ್ತದೆ ಎಂಬುದರಲ್ಲಿ ಸಂಶಯವಿಲ್ಲ. ಮಂತ್ರಿ ಗಾಡ್ಗಿಲರವರು ಇದೇ ರೀತಿ ಮಾಡಿದ ಅಭಿಪ್ರಾಯವು ಸರಿಯಾದದ್ದಲ್ಲವೆಂದು ಶ್ರೀ ಪೂಣಚ್ಚನವರು ಅವರಿಗೆ ಬರೆದು ಒಂದು ಪತ್ರಕ್ಕೆ ಶ್ರೀ ಗಾಡ್ಗಿಲರವರು ಕೊಟ್ಟ ಉತ್ತರದಲ್ಲಿ ಸದರಿ ಭಾಷಣದಿಂದ ಸಂಯೋಜನೆ ಬೇಗನೆ ಮಾಡಬೇಕೆಂಬ ಅಭಿಪ್ರಾಯ ಆಗುತ್ತದಲ್ಲದೆ ಬೇರೆಯಲ್ಲವೆಂಬುದು ಅವರು ಪುನಃ ಹೇಳಿರುವರಂತೆ. ಜವಾಬ್ದಾರಿಯುಳ್ಳ ಕೇಂದ್ರ ಮಂತ್ರಿಯವರೇ ಈ ರೀತಿ ಪುನಃ ಹೇಳಿರುವಾಗ್ಲ ಶ್ರೀ. ಪೂಣಚ್ಚನವರು ತಾನು ಸಂಯೋಜನೆಯ ಅಭಿಪ್ರಾಯ ಪಡಲಿಲ್ಲವೆಂದು ಜನರನ್ನು ಸಮಾಧಾನಪಡಿಸಲು ಮಾಡುವ ಪ್ರಯತ್ನವು ವ್ಯರ್ಥವಲ್ಲವೇ?

ಇನ್ನೊಂದು ಕಡೆ ಸಂಯೋಜನಾ ಪಕ್ಷದವರು ಕೊಡಗಿನ ಸಂಯೋಜನೆಗಾಗಿ ಶ್ರೀ ಪೂಣಚ್ಚನವರು ಮಾಡಿದ ಪ್ರಯತ್ನಕ್ಕಾಗಿ ಅವರಿಗೆ ಅಭಿನಂದನೆಗಳನ್ನು ಸಲ್ಲಿಸಿರುವರೆಂದು ತಿಳಿಯಬರುತ್ತದೆ. ಇದರಿಂದ ಪೂಣಚ್ಚನವರ ಭಾಷಣದ ಅರ್ಥವು ಸಂಯೋಜನೆಯ ಪರವೆಂದು ಕೂಡ ಮಂತ್ರಿ ಗಾಡ್ಗಿಲರವರಂತೆ ಮತ್ತು ಇತರ ದೇಶೀಯರಂತೆ ತಿಳಿಕೊಂಡಿರೆ ಎಂಬುದು ವಿಷದವಾಗುತ್ತದೆ. ಇದೂ ಅಲ್ಲದೆ ಪೂಣಚ್ಚನವರು ಆ ಅಭಿನಂದನೆಗಳನ್ನು ಮೌನವಾಗಿ ಸ್ವೀಕರಿಸಿ ಅವರು ಆವರ ಮಾಡಿದ ಸಂಯೋಜನಾ ಪ್ರಯತ್ನಕ್ಕೆ ಮತ್ತೊಂದು ಸಾಕ್ಷಿಯಾಗಿದೆ. ಆದುದರಿಂದ ತನ್ನ ಧ್ಯೇಯವಾದ ಸಂಯೋಜನೆಗಾಗಿ ಸರ್ವಪ್ರಯತ್ನ ಮಾಡಿ ತನ್ನ ತಾನು ಯಾವ ಪಕ್ಷಕ್ಕೂ ಸೇರದವನಂತೆ ದೇಶೀಯರ ಬಹುಮತದ ಅಭಿಪ್ರಾಯ ದಂತೆ ನಡೆಯಲು ಸಿದ್ಧನಿರುವನೆಂದು ಹೇಳಿ ಜನರ ಕಣ್ಣಿಗೆ ಮಣ್ಣೆರಚಲು ಮಾಡುವ ಯತ್ನವನ್ನು ತಿಳಿಕೊಳ್ಳಲಾರದಷ್ಟು ಜನರು ತಿಳಿಗೇಡಿಗಳಲ್ಲವೆಂಬುದನ್ನು ಅವರು ಅರಿತಿರಲಿ.

ಎ. ಪಿ. ಎ

ಕೊಡಗು ಪೊಲೀಸ್ ಸುಪರಿಂಟೆಂಡೆಂಟರವರಲ್ಲಿ ವಿನಂತಿ.

ಮಡಿಕೇರಿಯಿಂದ ಭಾಗಮಂಡ್ಲಕ್ಕೆ ಒಂದು ಹೆಚ್ಚಿಗೆ ಬಸ್ಸು ಲೈಸನು ಕೊಡಿಸಿಕೊಡಬೇಕಾಗಿ ಅನೇಕ ದಫ ಕೇಳಿಕೊಂಡಾಗ್ಯೂ ದೊರಕಲಿಲ್ಲ. ಈಗ ೧೫ ದಿವಸಗಳಿಂದ ಭಾಗಮಂಡ್ಲದಿಂದ ಮಂಗಳೂರಿಗಾಗಿ ಹೋಗುವ ಬಸ್ಸೇ ನಿಂತು ಹೋಗಿದೆ. ಕಾರಣ ತಿಳಿಯದು. ಪ್ರಯಾಣಿಕರು ಬಂದು ಕಾದು ಕುಳಿತು ಸಾಕಾಗಿ ಸೀಟು ಇಲ್ಲದೆ ನಡೆದೇ ಹೋಗುವ ಕಾಲ ಬಂದಿದೆ. ಆದ್ದರಿಂದ ಪಡ್ಡೆ ಒಂದು ಹೊಸ ಲೈಸನ್ನು ಕೊಡಿಸಿಕೊಡುವದಕ್ಕಾಗಲೀ ಇಲ್ಲವೆ ಅಮ್ಮತ್ತಿಗಾಗಿ ಹೋಗುವ ೧೨ ಬಸ್ಸುಗಳ ಪೈಕಿ ಒಂದನ್ನು ಕಡಿಮೆ ಮಾಡಿ ಭಾಗಮಂಡಕ್ಕೆ ಹೋಗಲಿಕ್ಕಾಗಲೀ ಹುಕುಂ ಕೊಡಿಸಿಕೊಡಬೇಕಾಗಿ ವಿನಂತಿ. ಯಾವ ವಿಧದಲ್ಲೂ ಬೆಳಗ್ಗೆ ನಾಲ್ಕು ಬಸ್ಸುಗಳನ್ನು ಭಾಗಮಂಡ್ಲದಿಂದ ಮಡಿಕೇರಿಗೆ ಹೋಗಲು ಹುಕುಂ ಕೊಡಬೇಕಾಗಿ ಬೇಡುತ್ತೇವೆ.

ಪ್ರಯಾಣಿಕ.

ಕೊಡಗಿನ ಭವಿಷ್ಯ ಮತ್ತು ಸುಧಾರಣೆ.

(ಬರೆದು ಬಂದದ್ದು)

ಕೊಡಗಿನ ಭವಿಷ್ಯದ ವಿಚಾರ ಕಳೆದ ವಾರ ಪ್ರಕಟವಾದ ಅಗ್ರಲೇಖನವನ್ನೋದಿ ಮನಸ್ಸಿಗೆ ಸಮಾಧಾನವುಂಟಾಯಿತು. ಕೊಡಗಿನ ಭವಿಷ್ಯತ್ತನ್ನು ತೀರ್ಮಾನಿಸುವ ಹಕ್ಕು ಜನರದ್ದಾಗಿದೆ ಎಂಬುದನ್ನು ಇಂಡಿಯಾ ಸರಕಾರದವರು ಮಾನ್ಯಿಸಿರುವ ವಿಚಾರವು ಜನತೆಯಲ್ಲಿ ತುಂಬಾ ತೃಪ್ತಿಯನ್ನುಂಟುಮಾಡಿದೆ. ಕೊಡಗಿನಲ್ಲಿರುವ ಸಂಯೋಜನಾವಾದಿಗಳು ಈ ತತ್ವವನ್ನು ವಿರೋಧಿಸಿ ಕೊಡಗಿನ ಭವಿಷ್ಯತ್ತು ಇಲ್ಲಿಯ ಸರಕಾರದ ಆರ್ಥಿಕ ಸ್ಥಿತಿಯನ್ನು ಹೊಂದಿಕೊಂಡಿರುವದರಿಂದ ಅದನ್ನು ಆರ್ಥಿಕ ತಜ್ಞರೇ ತೀರ್ಮಾನಿಸಬೇಕೆಂಬ ಕಾರಣದಿಂದ ಇದನ್ನು ಇಂಡಿಯಾ ಸರಕಾರದವರೇ ಕೂಡಲೇ ಮಾಡಿಕೊಡಬೇಕೆಂದು ಒತ್ತಾಯಪಡಿಸುತ್ತಾ ಬಂದಿರುವರು. ಮೊನ್ನೆ ನಡೆದ ಪಾರ್ಲಿಮೆಂಟು ಚರ್ಚೆಯಲ್ಲೂ ಕೂಡ ಕೊಡಗಿನ ಪ್ರತಿನಿಧಿ [illegible] ಇಂಡಿಯಾ ಸರಕಾರದವರು ಕೊಡಗಿನ ಭವಿಷ್ಯತ್ತಿನ ವಿಚಾರ ಯಾವಾಗ [illegible]ನು ತೀರ್ಮಾನವನ್ನು ಕೊಡದ್ದರಿಂದ [illegible]ಲ್ಲಿ ಪಾರ್ಟಿಸಂಗಡಗಳಿರುವದಾಗಿದೆ. [illegible]ಕೆ ಒಂದು ತೀರ್ಮಾನ ಕೊಡುವ ವ[illegible] ಪಾರ್ಟಿಸಂಗಡಗಳು ಇದ್ದೇ ಇ[illegible] ಎಂದು ಸ್ಪಷ್ಟವಾಗಿ ಹೇಳಿರುವ [illegible]ನತೆಯ ಅಭಿಪ್ರಾಯ ತಿಳಿದು [illegible] ಕೊಡಬೇಕೆಂದು ಅವರು ಹೇಳಲಿಲ್ಲ. ಆದರೆ ಕೊಡಗನ್ನು ಪ್ರತ್ಯೇಕವಿಟ್ಟುಕೊಳ್ಳಬೇಕೆಂಬವರು ಯಾವುದೇ ಪ್ರದೇಶದ ಭವಿಷ್ಯತ್ತನ್ನು ತೀರ್ಮಾನಿಸುವ ಹಕ್ಕು ಅಲ್ಲಿಯ ಜನರಿಗೇ ಇರಬೇಕಾದ್ದು, ನಾವು ಗಳಿಸಿರುವ ಸ್ವಾತಂತ್ರ್ಯದ ಒಂದು ಮುಖ್ಯ ಭಾಗವಾದುದರಿಂದ ಕೊಡಗಿನ ಭವಿಷ್ಯತ್ತನ್ನು ತೀರ್ಮಾನಿಸುವ ವಿಚಾರವನ್ನು ಇಲ್ಲಿಯ ಜನರಿಗೆ ಬಿಡಬೇಕೆಂದು ದೀರ್ಘ ಕಾಲದಿಂದ ಚಳವಳ ನಡೆಸುತ್ತಾ ಬಂದಿರುವರು. ಇಂತಹ ಹಕ್ಕಿಗೆ ಧಕ್ಕೆ ತಗಲುವಂತಹ ಸಂದರ್ಭಗಳು ೧೯೪೯ರಲ್ಲಿಯೂ ಮತ್ತು ಪುನಃ ಕಳೆದ ತಿಂಗಳಲ್ಲಿಯೂ ಒದಗಿದ್ದವು. ಆದರೆ ದೈವವಶಾತ್ ಅವು ತಪ್ಪಿ ಪುನಃ ಈ ಹಕ್ಕು ಜನತೆಗೇ ಇದೆಯೆಂಬುದು ತಿಳಿದುಬಂದದ್ದು ಸಂತೋಷದ ವಿಚಾರ. ಮುಂದಕ್ಕಾದರೂ ಈ ಹಕ್ಕನ್ನು ಕಳಕೊಳ್ಳುವಂತಹ ಸಂದರ್ಭವು ಬಂದೊದಗಿದರೆ ಸ್ವಾಭಿಮಾನವಿರುವ ಪ್ರತಿಯೊಬ್ಬ ದೇಶೀಯನೂ ಎಷ್ಟು ತ್ಯಾಗವನ್ನು ಮಾಡಲು ದಯ ಸಿದ್ಧರಿರುವರೆಂಬುದರಲ್ಲಿ ಸಂದೇಹವಿಲ್ಲ

ಹೀಗೆ ಕೊಡಗಿನ ಭವಿಷ್ಯತ್ತನ್ನು ತೀರ್ಮಾನಿಸುವ ಸಂದರ್ಭವಾದರೂ ಜನತೆಗೆ ಬರುವ ನವೆಂಬರು ತಿಂಗಳಲ್ಲಿ ನಡೆಯುವ ಚುನಾವಣೆಯಲ್ಲಿ ದೊರೆಯುವದು. ಅನಂತರವೇ ಕಾರ್ಯಂ ಸುಧಾರಣೆಯ ವಿಚಾರವೂ ಮಾಡಲಾಗುವದೆಂದು ತಿಳಿಯಬರುತ್ತೆ. ಆದರೆ ಅಷ್ಟರೊಳಗೆ ಚೀಫ್ ಕಮಿಷನರ್ ಹುದ್ದೆಯನ್ನು ನಡೆಸುವವರು ಎಷ್ಟೇ ಒಳ್ಳೆಯವರಾದರೂ ಕೂಡ ಅವರ ಆಡಳಿತವು ಜನರ ಪ್ರತಿನಿಧಿಗಳ ಆಡಳಿತಕ್ಕಿಂತ ದೇಶೀಯರಿಗೆ ತೃಪ್ತಿಯನ್ನುಂಟುಮಾಡಲಾರದು. ಇದನ್ನು ಒಪ್ಪಿಕೊಂಡೇ ಇಂಡಿಯಾ ಸರಕಾರದವರು ಬರುವ ಚುನಾವಣೆಯವರೆಗೆ ಎಲ್ಲಾ ಚೀಫ್ ಕಮಿಶನರ್ ಪ್ರಾಂತಗಳಿಗೆ ಇಬ್ಬರು ಯಾ ಹೆಚ್ಚು (Executive Councilers) ಕಾರ್ಯಕಾರಿ ಕಮಿಟಿ ಮೆಂಬರುಗಳನ್ನು ನೇಮಿಸಲಾಗುವದೆಂದೂ ಸೂಚಿಸಿರುವರು. ಈ ಸಂಬಂಧದಲ್ಲಿ ಪಾರ್ಲಿಮೆಂಟಿನಲ್ಲಿ ನಡೆದ ಚರ್ಚೆಯಿಂದ ಈ ಕೌನ್ಸಿಲರುಗಳು ಜನಪ್ರಿಯ ಮುಂದಾಳುಗಳ ಪೈಕಿ ಹೆಕ್ಕಿ ತೆಗೆದು ಇಂಡಿಯಾ ಸರಕಾರದ ಪ್ರೆಸಿಡೆಂಟರಿಂದ ನೇಮಿಸಲಾಗುವರೆಂದೂ ಇವರಿಗೆ ಚೀಫ್ ಕಮಿಶನರಂತೆ ಕೆಲವು ಇಲಾಖೆಗಳ ಪೂರ್ಣ ಅಧಿಕಾರ ಕೊಡಲಾಗುವದೆಂದೂ, ಚೀಫ್ ಕಮಿಶನರು ತಮ್ಮ ಅಧೀನದಲ್ಲಿರುವ ಇಲಾಖೆಗಳ ಸಮ್ಮಂಧವಾಗಿಯೂ ಮತ್ತು ಒಟ್ಟಾರೆ ಆಡಳಿತದ ಸಂಬಂಧವಾಗಿಯೂ ಮುಖ್ಯ ವಿಚಾರಗಳಲ್ಲಿ ಈ ಮೆಂಬರುಗಳ ಆಲೋಚನೆಯನ್ನು ತೆಗೆದುಕೊಳ್ಳುವರೆಂದು ತಿಳಿಯಬರುತ್ತದೆ. ಇದನ್ನು ಜಾರಿಗೆ ತರಲು ಬೇಗನೆ ಪಾರ್ಲಿಮೆಂಟ್ ಸಭೆಯಲ್ಲಿ ಒಂದು ಮಸೂದೆಯನ್ನು ತರುವರೆಂದು ಗೊತ್ತಾಗಿದೆ. ಬರುವ ಚುನಾವಣೆಯವರೆಗೆ ಜನರ ನಿಜವಾದ ಪ್ರತಿನಿಧಿಗಳನ್ನು ಆರಿಸಿಕೊಳ್ಳುವ ಆಸ್ಪದವಿಲ್ಲದರಿಂದಲೇ ಈ ಕೌನ್ಸಿಲರುಗಳನ್ನು ಚುನಾಯಿಸುವ ಬದಲು ಇಂಡಿಯಾ ಸರಕಾರದ ಅಧ್ಯಕ್ಷರು ತನಗೆ ತಿಳಿದ ಮಟ್ಟಿಗೆ ಜನರ ವಿಶ್ವಾಸಕ್ಕೆ ಪಾತ್ರರಾದ ಮುಖಂಡರನ್ನು ನೇಮಿಸುವ ಏರ್ಪಾಡು ಮಾಡಲಾಗಿದೆ. ಈ ತಾತ್ಕಾಲಿಕ ಕಾಲದಲ್ಲಿ ಇದಕ್ಕಿಂತ ಉತ್ತಮ ಏರ್ಪಾಡು ಮಾಡಲು ಸಾಧ್ಯವಿಲ್ಲವೆಂಬುದು ಒಪ್ಪಬೇಕಾಗಿದೆ. ಈ ಮೆಂಬರುಗಳು ಬರೀ ಏಡ್ವೈಸರೀ ಅಂದರೆ ಸಲಹೆ ಕೊಡುವವರು ಮಾತ್ರವಾಗಿದ್ದರೆ ಚೀಫ್ ಕಮಿಷನರು ಅಂತಹ ಸಲಹೆಗಳನ್ನು ಇಷ್ಟ ಬಂದರೆ ಒಪ್ಪಲೂ ಬಹುದು ಯಾ ಬಿಡಲೂ ಬಹುದು ಎನ್ನುವದಾದರೆ ಈ ಏರ್ಪಾಡಿನಿಂದ ಪ್ರಯೋಜನವೇನಿಲ್ಲನ್ನಬಹುದಿತ್ತು. ಆದರೆ ಇವರು ಕಾರ್ಯಕಾರಿ ಮಂಡಳಿ ಮೆಂಬರಾಗಿದ್ದು ಆಡಳಿತದ ಜವಾಬ್ದಾರಿಯ ಭಾಗವಹಿಸುವವರಿರುವದರಿಂದ ಇವರ ಸಲಹೆಗಳನ್ನು ಚೀಫ್ ಕಮಿಷನರವರಿಗೆ ತಳ್ಳಿ ಹಾಕಲು ಸಾಧ್ಯವಾಗಲಾರದು. ಆದುದರಿಂದ ಈ ಏರ್ಪಾಡಿನಿಂದ ಪೂರ್ತಿಯಲ್ಲದಿದ್ದರೂ ತಕ್ಕಮಟ್ಟಿಗಾದರೂ ಜನತಾ ಸರಕಾರವನ್ನು ನಡೆಸುವಂತ ಅವಕಾಶ ದೊರೆತಂತಾಗುವದು. ಈಗಿನ ಸ್ಥಿತಿಯಲ್ಲಿ ಈ ಅವಕಾಶವನ್ನು ಕಳೆದುಕೊಳ್ಳುವದು ಉಚಿತವಲ್ಲ. ಸಿಕ್ಕಿದಷ್ಟು ಅವಕಾಶವನ್ನು ಉಪಯೋಗಿಸಿಕೊಂಡು ಹೆಚ್ಚಿನ ಅಧಿಕಾರ ಪಡೆಯಲು ಒಗ್ಗಟ್ಟಾಗಿ ಸಾಧಿಸುವದು ಯೋಗ್ಯವಾಗಿದೆ. ಬದಲು ಸಿಕ್ಕಿದನ್ನು ತಿರಸ್ಕಾರ ಮಾಡುವದರಿಂದ ನಷ್ಟವಲ್ಲದೆ ಲಾಭವಾಗಲಾರದು. ಕೊಡಗಿನಲ್ಲಿ ಎರಡು ತರದ ಅಭಿಪ್ರಾಯದ ಸಂಗಡಗಳಿರುವಲ್ಲಿ ಒಂದೊಂದು ಸಂಗಡದಿಂದ ಒಬ್ಬೊಬ್ಬರನ್ನು ಕೌನ್ಸಿಲರುಗಳಾಗಿ ನೇಮಿಸಿದರೆ ಇವರಲ್ಲಿ ತೋರಬಹುದಾದ ಭಿನ್ನಾಭಿಪ್ರಾಯಗಳಿಂದ ಚೀಫ್ ಕಮಿಷನರಿಗೆ ತನ್ನ ಮನಸ್ಸೋ ಇಚ್ಛೆ ನಡೆಯುವ ಅವಕಾಶವಿದೆ ಎಂಬ ಒಂದು ವಾದವಿದೆ. ಈ ಏರ್ಪಾಡನ್ನು ತಿರಸ್ಕರಿಸಿದರೆ ಚೀಫ್ ಕಮಿಷನರವರಿಗೆ ಮನಸ್ಸೋ ಇಚ್ಛೆ ನಡೆಯಲು ಹೆಚ್ಚಿನ ಅವಕಾಶ ಕೊಟ್ಟಂತಾಗುತ್ತದೆ. ಕೊಡಗಿನಲ್ಲಿರುವ ಎರಡು ಸಂಗಡದವರೂ ದೇಶದ ಹಿತ್ಯದೃಷ್ಟಿಯಿಂದಲೇ ಹೋರಾಡುತ್ತಿರುವವರು ಅನ್ನಿಸಿಕೊಳ್ಳುವರು. ಅಲ್ಲದೆ ಇಲ್ಲಿ ಜವಾಬ್ದಾರಿ ಸರಕಾರ ಸಿಕ್ಕದ್ದರಿಂದಲೇ ಜವಾಬ್ದಾರಿ ಸರಕಾರವಿರುವ ಬೇರೆ ಪ್ರಾಂತ್ಯಕ್ಕೆ ಸೇರಬೇಕೆಂದು ಸಂಯೋಜನಾ ಪಕ್ಷದವರು ವಾದಿಸುತ್ತಿರುವರು. ಅಂದ ಮೇಲೆ ತಾತ್ಕಾಲಿಕವಾಗಿ ಸ್ವಲ್ಪ ಮಟ್ಟಿಗಾದರೂ ದೊರೆಯುವ ಆಡಳಿತ ಜವಾಬ್ದಾರಿಯನ್ನು ಎರಡು ಪಕ್ಷದ ಪ್ರತಿನಿಧಿಗಳು ವಹಿಸಿಕೊಂಡು ದೇಶದ ಹಿತದೃಷ್ಟಿಯಿಂದ ಕಾರ್ಯಕಲಾಪವನ್ನು ನಡೆಸಿದ್ದೇ ಆದರೆ ದೇಶಕ್ಕೆ ಸ್ವಲ್ಪ ಮಟ್ಟಿಗಾದರೂ ಕಲ್ಯಾಣವಾಗುವದೆಂಬುದರಲ್ಲಿ ಸಂದೇಹವಿಲ್ಲ. ಎರಡು ಪಕ್ಷದವರೂ ಬರೀ ವಾದಮಾಡುತ್ತಾ ಕಾಲ ಕಳೆಯುವದರ ಬದಲು ಈ ಏರ್ಪಾಡಿನಿಂದ ದೊರೆಯಬಹುದಾದ ಆಡಳಿತ ಜವಾಬ್ದಾರಿಯನ್ನು ದೇಶದ ಅಭಿವೃದ್ಧಿಯ ದೃಷ್ಟಿಯಿಂದ ಕಾರ್ಯರೂಪಕ್ಕೆ ತರುವಂತಹ ಪ್ರಯತ್ನದಲ್ಲಿ ಒಗ್ಗಟ್ಟಾಗುವ ಸಂದರ್ಭವು ಒದಗಬಹುದು. ಇವೆಲ್ಲ ಕಾರಣಗಳಿಗಾಗಿ ದೇಶದ ಮುಂದಾಳುಗಳು ಮುಂಬರುವ ಈ ಸುಸಂದರ್ಭವನ್ನು ಕಳಕೊಳ್ಳದೆ ಸದುಪಯೋಗ ಪಡಿಸುವರೆಂದು ಆಶಿಸುವ.

ಇಂಡೊ-ಚೀನದಲ್ಲಿ ಕ್ಷೋಭೆ

ಇಂಡೊ-ಚೀನದಲ್ಲಿ ಫ್ರೆಂಚರ ಕೈಗೊಂಬೆಯಾಗಿರುವ ವಿಯಟ್ನಾಮು ಸರಕಾರ ಮತ್ತು ವಿಯಟ್-ಮಿನ್ಹ್ ದಂಗೆಗಾರರ ನಡುವೆ ನಡೆಯುತ್ತಿರುವ ಯುದ್ಧವು ಇತ್ತೀಚೆಗೆ ತೀಕ್ಷ್ಣವಾಗುತ್ತಾ ಬರುತ್ತಿದ್ದು ಕಮ್ಯುನಿಸ್ಟ ಚೀನವೂ ಯುದ್ಧದಲ್ಲಿ ಕೈಹಾಕುವ ಸಂಭವ ಇದೆಯೆಂದು ರಾಜಕೀಯ ನಿರೀಕ್ಷಕರು ಭೀತಿಗೊಂಡಿರುವರು.

ಕಳೆದ ವರ್ಷದ ಕೊನೆಯಲ್ಲಿ ವಿಯಟ್-ಮಿನ್ಹ್ ದಾಳಿಗಾರರ ಒತ್ತಡವು ಚೀನದ ಗಡಿಯಲ್ಲಿ ಹೆಚ್ಚಿದ ಪರಿಣಾಮವಾಗಿ ಫ್ರೆಂಚರು ಗಡಿ ಪ್ರದೇಶದ ಅನೇಕ ಕೋಟೆಗಳನ್ನು ವೈರಿಗೆ ಬಿಟ್ಟುಕೊಟ್ಟು ಹಿಂದೆ ಸರಿಯಬೇಕಾಯಿತು. ಅನಂತರದಲ್ಲಿ ಫ್ರೆಂಚ್ ಸೈನ್ಯಗಳು ಉಗ್ರ ಯುದ್ಧವನ್ನು ಹೂಡಿದೆಯಾದರೂ ಪೆಕಿಂಗ್ ಸರಕಾರವೂ ಫ್ರೆಂಚರ ವಿರುದ್ಧವಾಗಿ ಪ್ರಚಾರ ಕೈಕೊಂಡು ಯುದ್ಧದಲ್ಲಿ ನೇರಾಗಿ ಪ್ರವೇಶಿಸುವ ಭೀತಿ ಹಾಕಿದೆ.

ಆಸ್ಟ್ರಾಮಿನ ಮಾಜಿ ಚಕ್ರವರ್ತಿಗಳಾದ ಬಾವೊದಾಯಿಯವರ ಮುಖಂಡತ್ವದಲ್ಲಿ ಫ್ರೆಂಚ್ ಆಳರಸರು ಇಂಡೊ-ಚೀನದಲ್ಲಿ ವಿಯಟ್ನಾಮು ಸರಕಾರವನ್ನು ಏರ್ಪಡಿಸಿರುವರಾದರೂ ಈಗ ಅಲ್ಲಿ ನಡೆಯುತ್ತಿರುವ ಯುದ್ಧವು ಫ್ರೆಂಚರ ಮತ್ತು ಚೀನಿ ಕಮ್ಯುನಿಸ್ಟರ ನಡುವೆ ನಡೆಯುತ್ತಿರುವ ಯುದ್ಧವೆಂದು ಇಂಡೋ-ಚೀನದ ಜನರು ಮನಗಂಡಿರುವರು. ಇಂಡೋಚೀನದಲ್ಲಿ ಚೀನಿ ಜನರೂ ಹೆಚ್ಚಿನ ಸಂಖ್ಯೆಯಲ್ಲಿರುವರು. ಅದರೊಡನೆ ಫ್ರೆಂಚ್ ಸಾಮ್ರಾಜ್ಯಶಾಹಿಯ ದಬ್ಬಾಳಿಕೆಯಿಂದ ಇಂಡೋ-ಚೀನದ ಜನರು ನೊಂದಿರುವರು. ಇಷ್ಟಾದರೂ ಅವರು ಒಂದೇ ಸಲ ಚೀನಿ ಮುಂದಾಳು ಮೊಕ್ಸೆ-ಟುಂಗರಿಗೆ ಶರಣು ಹೋಗುವವರಲ್ಲ. ಹಾಗೆ ಅವರು ಶರಣು ಹೋಗುತ್ತಿದ್ದಲ್ಲಿ ಇಂಡೊ-ಚೀನವು ಕಮ್ಯುನಿಸ್ಟ ಚೀನದ ಕೈವಶವಾಗುತಿತ್ತು ಎನ್ನುವರೆ ಸಂಶಯವೂ ಇಲ್ಲ.

ಇತ್ತೀಚಿನ ವರದಿಗಳಲ್ಲಿ ಚೀನಿಯರು ಇಂಡೊ-ಚೀನದ ಗಡಿಯೊಳಗೆ ಪ್ರವೇಶಿಸಿರುವರೆಂದು ತಿಳಿದಿದೆ. ಆದುದರಿಂದ ಇಂದು ಇಂಡೊ-ಚೀನದ ಸ್ಥಿತಿಸ್ಫೋಟದಂತಿದ್ದು ಅಲ್ಲಿಯೂ ಚೀನವು ಕೈಹಾಕುವ ಲಕ್ಷಣವಿದೆ.

ಅಮೇರಿಕದಲ್ಲಿ ಮಲೇರಿಯಾ ಉಚ್ಚಾಟನೆ.

ಸಂಯುಕ್ತ ಅಮೇರಿಕದ ಸಾರ್ವಜನಿಕ ಆರೋಗ್ಯ ವರದಿಯ ಕಡೆಯಿಂದ ತಿಳಿದು ಬರುವಂತೆ ಅಮೇರಿಕದಲ್ಲ ಮಲೇರಿಯಾ ಹಾವಳಿಯು ಸಂಪೂರ್ಣ ತಡೆಯಲ್ಪಟ್ಟಿದೆಯಾಗಿ ಕೇಳಿ ಬರುತ್ತದೆ. ನುಸಿಗಳ ಮೂಲಕ ಹರಡುವ ಈ ಭೀಕರ ವ್ಯಾಧಿಯನ್ನು ಹೊಡೆದಟ್ಟಲು ಸಹಾಯಕವಾದ ಪರಿಣಾಮಕಾರೀ ಸಾಧನವೆಂದರೆ ನುಸಿಗಳನ್ನು ಕೊಲ್ಲುವ ಡಿ. ಡಿ. ಟಿ. ಎಂಬುದಾಗಿಯೂ ಕೇಳಿಬರುತ್ತದೆ. ಪ್ರಸ್ತುತ ಅಮೇರಿಕದಲ್ಲಿ ಮಲೇರಿಯಾಗ ಹೆಸರೇ ಅಳಿದು ಹೋಗುವಷ್ಟು ಡಿ. ಡಿ. ಟಿ. ಕ್ರಿಮಿನಾಶಕವು ಪರಿಣಾಮಕಾರಿಯಾಗಿದೆ.

AYURVEDA.

for EFFICACIOUS and GENUINE medicines

THE COCHIN AYURVEDIC LABORATORIES, LTD.
TRICHUR S. INDIA
Sole Agent for Coorg.
M/s WARUNNY DISPENSARY
MERCARA.

2-2

ಮೆಕಾರ್ಥರರು ಕಿತ್ತೊಗೆಯಲ್ಪಟ್ಟರು.

ಅಮೇರಿಕೆಯ ಅಧ್ಯಕ್ಷರಾದ ಟ್ರೂಮನ್ನರು ಕೋರಿಯಾದಲ್ಲಿ ಯುಕ್ತರಾಷ್ಟ್ರ ಸೈನ್ಯಗಳ ಮುಖ್ಯ ಸೇನಾಪತಿಗಳಾದ ಜನರಲ್ ಮೆಕಾರ್ಥರರನ್ನು ಅವರ ಸ್ಥಳದಿಂದ ಕಿತ್ತು ಹಾಕಿದರು. ಮೆಕಾರ್ಥರರು ಅಮೇರಿಕೆ ಹಾಗೂ ಯುಕ್ತ ರಾಷ್ಟ್ರಗಳ ಧೋರಣೆಗೆ ತಮ್ಮ ಹೃತ್ಪೂರ್ವಕ ಬೆಂಬಲವನ್ನು ಕೊಡಲಾರರು ಎನ್ನುವ ನಿರ್ಣಯಕ್ಕೆ ಬಂದು ಟ್ರೂಮನ್ನರು ತಾ. ೧೧ರಲ್ಲಿ ಅವರ ಎಲ್ಲಾ ಅಧಿಕಾರಗಳಿಂದ ಮೆಕಾರ್ಥರರನ್ನು ನಿವೃತ್ತಗೊಳಿಸಿದರು. ಮೆಕಾರ್ಥರರ ಉತ್ತರಾಧಿಕಾರಗಳಿಂದು ಜನರಲ್ ರಿಜ್‌ವೇ ಅವರು ನೇಮಕ ಮಾಡಲ್ಪಟ್ಟರು.

ಈಗ ಎರಡು ವಾರಗಳ ಹಿಂದೆ, ಚೀನಾವು ಕೋರಿಯಾದ ಒಪ್ಪಂದಕ್ಕೆ ಬರದಿದ್ದರೆ, ಕಮ್ಯುನಿಸ್ಟ ಚೀನಾದ ವಿರುದ್ಧ ಮಹಾ ಯುದ್ಧವನ್ನು ಪ್ರಾರಂಭಿಸಬೇಕೆಂದು ಸೂಚಿಸುತ್ತಾ, ದೂರಪ್ರಾಚ್ಯದ ಶ್ರೇಷ್ಠ ಸೇನಾಪತಿಗಳಾದ ಮೆಕಾರ್ಥರರು ಕೊಟ್ಟ ಪ್ರಕಟಣೆಯೇ ಅವರನ್ನು ಕಿತ್ತೊಗೆಯಲು ಕಾರಣವೆಂದು ತಿಳಿಯುತ್ತದೆ

ತಾ. ೧೧ರಲ್ಲಿ ವಿಶೇಷ ಪತ್ರಿಕಾ ಪರಿಷತ್ತಿನಲ್ಲಿ ಅಧ್ಯಕ್ಷ ಟ್ರೂಮನ್ನರು ಮಾತನಾಡುತ್ತಾ, ಮೆಕಾರ್ಥರರು ಅಮೇರಿಕೆ ಹಾಗೂ ಯುಕ್ತರಾಷ್ಟ್ರಗಳ ಧೋರಣೆಗಳಿಗೆ ತಮ್ಮ ಹೃತ್ಪೂರ್ವಕ ಬೆಂಬಲವನ್ನು ಕೊಡಲಾರದೆ ಹೋದ ಮೂಲಕ ಅವರನ್ನು ಎಲ್ಲಾ ಅಧಿಕಾರಗಳಿಂದಲೂ ನಿವೃತ್ತಿ ಮಾಡಲಾಗಿದೆ ಎಂಬುದಾಗಿ ಹೇಳಿದರು.

ಅವರ ಉತ್ತರಾಧಿಕಾರಿಗಳಾಗಿ ಜನರಲ್ ರಿಜ್ವೆ ಅವರನ್ನು ಮುಖ್ಯ ಸೇನಾಪತಿಗಳೆಂದು ನೇಮಕ ಮಾಡಲಾಗಿದೆ. ಕೊರಿಯಾದಲ್ಲಿ ಅಷ್ಟಮದಳದ ಸೇನಾಪತಿಗಳಾಗಿದ್ದ ಜನರಲ್ ರಿಜ್ವೆ ಅವರ ಸ್ಥಳಕ್ಕೆ ಜನರಲ್ ಜೇಮ್ಸ್‌ವ್ಯಾನ್‌ಫ್ಲೀಟ್ ಅವರನ್ನು ನೇಮಕಮಾಡಲಾಗಿದೆ.

ಅಧಿಕ ಪ್ರಸಂಗಕನ

ಈ ವಿಶೇಷ ಪತ್ರಿಕಾ ಪರಿಷತ್ತಿಗೆ ಪ್ರತಿನಿಧಿಗಳನ್ನು ಮುಂಚಿತವಾಗಿ ಕರೆಸಿಕೊಳ್ಳಲಾಗಿತ್ತು. ಇದಕ್ಕೆ ವೇಳೆಯನ್ನು ಪ್ರಾತಃಕಾಲ ೧ ಗಂಟೆಯೆಂದು ನಿರ್ದಿಷ್ಟ ಪಡಿಸಲಾಗಿತ್ತು. ಸಾಧ್ಯವಾದಷ್ಟು ಇದೇ ಕಾಲಕ್ಕೆ ಟೋಕಿಯೋದಲ್ಲಿರುವ ಮೆಕಾರ್ಥರರಿಗೂ ಈ ಆಜ್ಞೆಯು ಮುಟ್ಟುವ ದೃಷ್ಟಿಯಿಂದ ಈ ಕಾಲವನ್ನು ನಿರ್ದಿಷ್ಟ ಪಡಿಸಲಾಗಿತ್ತೆಂದು ತಿಳಿಯುತ್ತದೆ.

ಮೆಕಾರ್ಥರರ ಪ್ರಕಟಣೆಗಳು ಮತ್ತು ಅವರ ಕಾರ್ಯಗಳಿಗೂ ಹಾಗೂ ಅಧ್ಯಕ್ಷರ ಧೋರಣೆಗೂ ಎಷ್ಟು ಭಿನ್ನಾಭಿಪ್ರಾಯವಿದೆ ಎಂಬುದನ್ನು ತೋರ್ಪಡಿಸುವ ದೃಷ್ಟಿಯಿಂದ, ಶ್ವೇತ ಭವನವು ಅಧ್ಯಕ್ಷರ ಪ್ರಕಟಣೆಯೊಂದಿಗೆ ಒಂದು ನಿವೇದನ ಪತ್ರವನ್ನು ಪ್ರಕಟಿಸಿದೆ. ಸೈನಿಕ ಸಂಪರ್ಕ ಮಾರ್ಗಗಳ ಮೂಲಕ, ಜನರಲ್ ಮೆಕಾರ್ಥರರಿಗೆ ತಂತಿಯಿಂದ ತಿಳಿಸಲ್ಪಟ್ಟ ಅಧ್ಯಕ್ಷರ ಆಜ್ಞೆಯು ಸಂಕ್ಷೇಪವಾಗಿತ್ತಲ್ಲದೆ, ಉದ್ದೇಶಕ್ಕೆ ತಕ್ಕಷ್ಟಿದ್ದಿತು.

ಮೆಕಾರ್ಥರರನ್ನು ಮನೆಗೆ ಕಳಿಸಿದ ಬಗ್ಗೆ ಹೇಳುತ್ತಾ, ಅಧ್ಯಕ್ಷ ಟ್ರೂಮನ್ನರು, ಸೈನಿಕ ಸೇನಾಪತಿಗಳು ಸರ್ಕಾರದ ಧೋರಣೆ ಹಾಗೂ ಆದೇಶಗಳಿಗನುಸಾರವಾಗಿ ನಡೆದುಕೊಳತಕ್ಕದ್ದು. ಅದರಲ್ಲೂ ಸಂದಿಗ್ಧ ಪರಿಸ್ಥಿತಿಯಲ್ಲಿ ಇದು ಅತ್ಯಾವಶ್ಯಕವಾಗಿದೆ ಎಂಬುದಾಗಿ ಹೇಳಿದರು.

೧೫ ವರ್ಷಗಳ ನಂತರ

ಅಧ್ಯಕ್ಷ ಟ್ರೂಮನ್ನರ ಈ ಅನಿರೀಕ್ಷಿತ ಘೋಷಣೆಯಿಂದ ದಿಗಭ್ರಮೆಗೊಂಡ ಜನರಲ್ ಡೊಗ್ಲಾಸ್ ಮೆಕಾರ್ಥರರು ಆಜ್ಞೆಯನ್ನು ಸ್ವೀಕರಿಸಿದ ಕಾಲಕ್ಕೆ ತಮ್ಮ ಸ್ಥಾನದ ಸಂರಕ್ಷಣೆಗಾಗಿ ಸ್ಪಷ್ಟೀಕರಿಸುವ ಪ್ರಕಟಣೆಯೊಂದನ್ನು ತಯಾರಿಸುತ್ತಿದ್ದರೆಂದು ತಿಳಿಯುತ್ತದೆ. ಇಲ್ಲಿ ಈ ಅನಿರೀಕ್ಷಿತ ಬದಲಾವಣೆಯು ಹೇಗೆ ರೂಪುಗೊಳ್ಳುವುದೆಂಬುದು ಕೂಡಲೇ ತಿಳಿಯದಿದ್ದರೂ, ೭೧ ವರ್ಷದ ಜನರಲ್ ಮೆಕಾರ್ಥರರನ್ನು ಆದಷ್ಟು ಬೇಗನೆ ಮನೆಗೆ ಕರೆಸಿಕೊಳ್ಳಬಹುದೆಂಬುದನ್ನು ನಿರೀಕ್ಷಿಸಲಾಗಿತ್ತು.

ಹದಿನೈದು ವರ್ಷಗಳಾದರೂ ಮೆಕಾರ್ಥರರು ಸ್ವದೇಶಕ್ಕೆ ಹಿಂತಿರುಗಿರಲಿಲ್ಲ. ಈ ಅವಧಿಯಲ್ಲಿ ಬಂದ ಅನೇಕ ಆಮಂತ್ರಣಗಳನ್ನು ಅವರು ನಿರಾಕರಿಸಿದ್ದರು.

ನೇತಾಜಿ ಸುಭಾಸರಿಗೆ ೮ ವರ್ಷದ ಕುಮಾರಿ!

ನೇತಾಜಿ ಸುಭಾಷಚಂದ್ರ ಭೋಸರು ೧೯೪೨ರಲ್ಲಿ ಆಸ್ಟ್ರಿಯದ ಹೆಣ್ಣುಮಗಳೊಬ್ಬಳನ್ನು ಮದುವೆಯಾಗಿದ್ದರು, ಅವರಿಗೆ ಅನಿತಾ ಎಂಬ ಮಗಳು ಇರುವಳೆಂಬ ವಿಚಾರ ಈಗ ತಿಳಿದುಬಂದಿದೆ.

೧೯೪೩ನೇ ಫೆಬ್ರವರಿ ತಿಂಗಳು ೮ನೇ ತಾರೀಕಿನಂದು ಸುಭಾಸರು ಬರ್ಲಿನ್ನಿಂದ ಜಪಾನಿಗೆ ಹೊರಟ ಸಂದರ್ಭದಲ್ಲಿ ತನ್ನ ಅಣ್ಣ ಶರಚ್ಚಂದ್ರ ಭೋಸರಿಗೆ ಬರೆದ ಪತ್ರದಿಂದ ಈ ವಿಷಯವು ಹೊರಬಿದ್ದಿದೆ. ಈ ಪತ್ರದಲ್ಲಿ ನೇತಾಜಿಯು ತನ್ನ ಮದುವೆಯ ಸುದ್ದಿಯನ್ನು ತಿಳಿಸಿರುವುದಲ್ಲದೆ ತನಗಿರುವ ಮಗಳನ್ನು ತಾನು ಸತ್ತನಂತರ ಶರಚ್ಚಂದ್ರರು, ಪ್ರೀ[illegible]ಗ ಸಾಕಬೇಕೆಂದೂ, ಕೇಳಿಕೊಂಡ[illegible]

ಸುಭಾಸರ ಪತ್[illegible] ರಿಂಕೆಲ್ ೧೯೪[illegible] ಸ್ವೀಜರ್‌ಲೆಂಡಿಗೆ [illegible] ಸುಭಾಸರು ಈ ಪತ್ರ[illegible] ಗಳಿಗೆ ಒಪ್ಪಿಸಿದ್ದಳು. [illegible] ರ್ಷ ವಯಸ್ಸು, [illegible] ವಾಗಿದೆ.

ನೇತಾಜಿ ಚಿತ್ರದಿಂದ [illegible] ದ, ಎರಡು ಲಕ್ಷ ಇಪ್ಪತ್ತು ಸಾವಿರ ರೂಪಾಯಿಗಳನ್ನು ಸುಭಾಷನಿಧಿಯಾಗಿ ಮಾರ್ಪಡಿಸಿ, ಆದರಿಂದ ನೇತಾಜಿಯವರ ಕುಟುಂಬದ ರಕ್ಷಣೆಯನ್ನು ನಡೆಸುವ ವಿಚಾರವನ್ನು ಮೊನ್ನೆ ಡೆಲ್ಲಿಯಲ್ಲಿ ಕೂಡಿದ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಚರ್ಚಿಸಿತಂತೆ.

ಸರ್ದಾರ ಪಟೇಲರು ಜೀವಂತವಿದ್ದಾಗ ನೇತಾಜಿಯವರ ಹೆಂಡತಿ ಮತ್ತು ಮಗಳ ಜೀವನಕ್ಕಾಗಿ ಹಣದ ಸಹಾಯವನ್ನು ಮೇಲಿಂದ ಮೇಲೆ ಮಾಡುತ್ತಿದ್ದರೆಂದು ಇತ್ತೀಚೆಗೆ ಗೊತ್ತಾಗಿದೆ.

ತಿಳಿಸಿರಿ.

ಭೂಮಿ, ತೋಟ, ಜಾಗ ಪೇಟೆಯಲ್ಲಿ ಮನೆ ಅಥವ ಮನೆ ಸೈಟು ಮಾರಲಿರುವವರು ಮತ್ತು ಕೊಂಡುಕೊಳ್ಳಲಿಚ್ಛಿಸುವವರು ಈ ಕೆಳಗಿನ ಪತ್ತೆಯಲ್ಲಿ ವಿಚಾರಿಸಿರಿ. ಅಲ್ಲದೆ ಬೇಕಾದವರಿಗೆ ಕರೆಯುವ ಎಮ್ಮೆ, ಹಸ ಮತ್ತು ಉಳುವ ಎತ್ತು ಮತ್ತು ಕೋಣಗಳನ್ನೂ ಒದಗಿಸಿ ಕೊಡಲಾಗುವುದು. ಬೇಕಿರುವವರು ತಮಗೆ ಬೇಕಾದ ತಾರೀಕಿನ ಎಂಟು ದಿನಗಳಿಗೆ ಮುಂಚೆ ತಿಳಿಸಬೇಕಾಗಿದೆ. ವಿವರಗಳಿಗೆ ಈ ಪತ್ತೆಗೆ ಬರೆಯಬಹುದು.

D. A. N. & SONS.
Commission Agent,
Gonicoppal
S. Coorg.

26-11

ಕೊಡಗು ಪ್ರಾಂತೀಕ ಸಹಕಾರಿ, ಮಾರ್ಕೆಟಿಂಗ್, ಫೆಡರೇಷನ್ ಲಿಮಿಟೆಡ್., ವೀರಾಜಪೇಟೆ.

ನಮ್ಮಲ್ಲಿ ಕೋವಿಗಳು, ತೋಟಗಳು ಮತ್ತು ಎಲ್ಲಾ ತರಹದ ವ್ಯವಸಾಯದ ಹತ್ಯಾರುಗಳು ದೊರೆಯುತ್ತವೆ.

1. 32 ಪಿಸ್ತೂಲುಗಳು (Pistols) ಕ್ರಯ ರೂ. 162 ರಿಂದ 245ರ ವರೆಗೆ.
2. 12ನೇ ನಂಬರಿನ ಒಂಟಿ ಹೊಳವಿನ ಕೋವಿ ಕ್ರಯ ರೂ. 320-0-0
3. 12ನೇ ನಂಬರಿನ ಜೋಡು ಹೊಳವಿನ ಕೋವಿ (Webley & Scott)
4. 12ನೇ ನಂಬರಿನ ಜೋಡು ಹೊಳವಿನ ಕೋವಿ (Spanish make)
5. .32 ಪಿಸ್ತೂಲು ಮತ್ತುರಿವಾಲ್ವರುಗಳ ತೋಟಗಳೂ ಸಹ ದೊರೆಯುತ್ತವೆ.
6. ಕಾಫಿ ಮತ್ತು ಕಿತ್ತಳೆ ಗಿಡಗಳಿಗೆ ಸ್ಪ್ರೆಮಾಡುವ ಪಂಪುಗಳು (Spraying Pumps)
7. ¾" ⅝" ½" ⅜" ¼" ಕಬ್ಬಿಣದ ಸಲಾಕೆಗಳು.

ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

(ಆವಶ್ಯವಿರುವ ಕೋವಿಗಳಿಗೂ, ತೋಟಗಳಿಗೂ ಜಿಲ್ಲಾ ಮೇಜಿಸ್ಟ್ರೇಟರಿಂದ ವಿಶೇಷ ಪರ್ಮಿಟು "Special permit" ಪಡೆದವರಿಗೆ ಮಾತ್ರ ದೊರೆಯುವದು)

ಎಂ. ಎಸ್. ಸೋಮಯ್ಯ,
ಗೌರವ ಕಾರ್ಯದರ್ಶಿ.

62-30

ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಕೋ. ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ. (1931ರಲ್ಲಿ ಸ್ಥಾಪಿತವಾಗಿದೆ.

ಅಧಿಕೃತ ಶೇರು ಭಂಡವಾಳ	ರೂ.	10,00,000.
ವಸೂಲಾದ ಶೇರು ಮೊಬಲಗು	ರೂ.	1,79,000.
ಕ್ಷೇಮನಿಧಿ	ರೂ.	65,000.
ಇತರ ನಿಧಿಗಳು	ರೂ.	28,000.

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನೂ ಕೈಕೊಳ್ಳಲಾಗುವುದ

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ, ಬೆಳ್ಳಿ ನಗಗಳ ಈಡಿನ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ಕು ಡ್ರಾಫ್ಟುಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರಿನಿಟಿ ಮತ್ತು ವಾರ್ಡನ್ ಇನ್ಶೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ,
ಗೌ. ಕಾರ್ಯದರ್ಶಿ,

ಕೆ. ಪಿ. ಅಪ್ಪಯ್ಯ, M. L. C.
ಪ್ರೆಸಿಡೆಂಟ್ ಮತ್ತು ಖಜಾಂಚಿ.

Edited, Printed and Published by P. I. Belliappa at 'Kodagu' Press, Mercara, for 'Kodagu' Ltd.

Reg. No. M. 1580.
'KODAGU' MERCARA, (Coorg).

ಕೊಡಗು

ಸಂಪಾದಕರು—ಟಿ. ಐ. ಬೆಳ್ಳಿಯಪ್ಪನವರು] [ವಾರ್ಷಿಕ ಚಂದಾ ರೂ. 5–0–0.

ಸಂಪುಟ ೨೩	ತಾರೀಕು ೨೭–೪–೧೯೫೧ನೇ ಶುಕ್ರವಾರ	ಸಂಚಿಕೆ ೪೫

ಕೊಡಗು

ನ್ಯಾಯವಿಧಾಯಕ ಸಭೆ.

ಬಡ್ಜೆಟ್ ಠರಾವುಗಳು.

ಎಲ್ಲಾ ವ್ಯಕ್ತಿಗಳ ಹಿಡುವಳಿಗಳ ಸರ್ವೆಯನ್ನು ಪ್ರಥಮ ಮಾಡಿ ನಂತರ ಸೆಟ್ಲ್‌ಮೆಂಟ್ ಕಾರ್ಯಕ್ರಮ ಕೈಗೊಳ್ಳಬೇಕು ಎಂಬ ಶ್ರೀ ಸಿ. ಎಂ. ನಾಣಯ್ಯನವರ ಠರಾವಿನ ಬಗ್ಗೆ ಹಣದ ಅಡಚಣೆ ಬಾರದಿದ್ದರೆ ಬರುವ ವರ್ಷದಿಂದ ಪ್ರಾರಂಭಿಸಲಾಗುವದೆಂದು ಸರಕಾರವು ಭರವಸೆ ಕೊಟ್ಟ ಮೇರೆ ಸೂಚಕರು ಠರಾವನ್ನು ವಾಪಾಸು ತೆಗೆದುಕೊಂಡರು.

ಪ್ರತಿ ವರ್ಷ ಕಡಿಮೆ ಆರು ತಿಂಗಳವರೆಗೆ ಸರ್ವೆ ಶಾಲೆಯೊಂದನ್ನು ತೆರೆದು ತರಬೇತು ಕೊಡುವದಲ್ಲದೆ ವಿದ್ಯಾರ್ಥಿಗಳಿಗೆ ಯೋಗ್ಯ ವಿದ್ಯಾರ್ಥಿ ವೇತನದ ವ್ಯವಸ್ಥೆ ಮಾಡಬೇಕೆಂಬ ಠರಾವನ್ನು ಚರ್ಚೆಯ ನಂತರ ಸೂಚಕರಾದ ಶ್ರೀ ಕೆ. ಕೆ. ಬೆಳ್ಳಿಯಪ್ಪನವರು ವಾಪಾಸು ತೆಗೆದುಕೊಂಡರು.

ಪ್ರತಿಯೊಂದು ನಾಡು ಕಚೇರಿಗೆ ಒಬ್ಬ ಹೆಚ್ಚಿನ ಶ್ಯಾನುಭೋಗರನ್ನು ನೇಮಿಸಬೇಕು ಎಂಬ ಠರಾವಿನ ಬಗ್ಗೆ ಆ ವಿಚಾರ ಪರಿಶೀಲಿಸಲಾಗುವದೆಂದು ಸರಕಾರಿ ಮೆಂಬರರು ಭರವಸೆ ಕೊಟ್ಟ ಕಾರಣ ಸೂಚಕರಾದ ಶ್ರೀ ಕೆ. ಕೆ. ಬೆಳ್ಳಿಯಪ್ಪನವರು ಠರಾವನ್ನು ವಾಪಾಸು ತೆಗೆದುಕೊಂಡರು.

ಸಮರಿ ಕಂದಾಯ ಮಸೂದೆಯನ್ನು ವಾಪಾಸು ತೆಗೆದುಕೊಳ್ಳುವ ಬಗ್ಗೆ ಪುನಃ ಕೇಂದ್ರ ಸರಕಾರವನ್ನು ಕೇಳಿಕೊಳ್ಳುವದು ಎಂಬ ಬಗ್ಗೆ ಕೇಂದ್ರ ಸರಕಾರವು ಈಗಾಗಲೇ ಹಾಗೆ ಮಾಡಿರುವದರಿಂದ ಸೂಚಕರಾದ ಶ್ರೀ ಕೆ. ಪಿ. ಅಪ್ಪಯ್ಯನವರು ತಮ್ಮ ಠರಾವನ್ನು ವಾಪಾಸು ತೆಗೆದುಕೊಂಡರು.

ಪಾನನಿರೋಧವು ಜಯಪ್ರದವಾಗಲಿಲ್ಲವೆಂಬ ಖಚಿತ ಅಭಿಪ್ರಾಯವು ಜನತೆಯಲ್ಲಿರುವದರಿಂದಲೂ, ಅದನ್ನು ಮುಂದುವರಿಸುವದರಿಂದ ಪ್ರಯೋಜನವಿಲ್ಲದುದರಿಂದಲೂ ಈ ಕೌನ್ಸಿಲಿನ ಐದು ಜನ ಸದಸ್ಯರಿಂದೊಡಗೂಡಿದ ಒಂದು ಸಮಿತಿಯನ್ನು ನೇಮಿಸಿ ಈ ವಿಚಾರದಲ್ಲಿ ನಿಷ್ಪಕ್ಷಪಾತ ಪರಿಶೀಲನೆ ಮಾಡಿ ಪಾನನಿರೋಧದಿಂದ ಏನು ಸಾಧಿಸಿದೆ ಇದಕ್ಕಾಗಿ ಸರಕಾರಕ್ಕೆ ವರ್ಷಂಪ್ರತಿ ಲಕ್ಷಾಂತರ ರೂಪಾಯಿ ನಷ್ಟಮಾಡಿಕೊಳ್ಳುವದು ಯುಕ್ತವೇ ಎಂಬುದನ್ನು ನಿಶ್ಚಯಿಸಬೇಕೆಂಬ ಠರಾವನ್ನು ಶ್ರೀ ಕೆ. ಕೆ. ಬೆಳ್ಳಿಯಪ್ಪನವರು ವಾಪಾಸು ತೆಗೆದುಕೊಂಡರು.

ಎಲ್ಲಿ ಅವಶ್ಯವಿದೆಯೋ ಅಲ್ಲಿ ಸಿಬ್ಬಂದಿಯನ್ನು ಹೆಚ್ಚುಮಾಡಿ ಸುಂಕದ ವಸೂಲಾತಿ ಅಪ್ಪು ಸಂತೆ, ಮತ್ತು ಕಳ್ಳತನದಲ್ಲಿ ಭಟ್ಟಿ ಇಳಿಸುವ ಪದ್ಧತಿಯನ್ನು ಖಡಾಖಂಡಿತ ನಿಲ್ಲಿಸುವ ಏರ್ಪಾಡು ಮಾಡಬೇಕೆಂಬ ಶ್ರೀ ಟಿ. ಐ. ಬೆಳ್ಳಿಯಪ್ಪನವರ ಠರಾವು ಪಾಸಾಯಿತು.

ಏಲಕ್ಕಿ ಗೇಣಿಯ ಮಲೆಗಳ ಫಸಲನ್ನು ಸಾರ್ವಜನಿಕ ಹರಾಜಿನಲ್ಲಿ ಮಾರಾಟ ಮಾಡದೆ ಹಿಂದಿನ ಗೇಣಿದಾರರಿಗೆ ಶೀಘ್ರ ಅವುಗಳನ್ನು ಪುನಹ ಕೊಡಿಸುವ ಏರ್ಪಾಡು ಮಾಡಬೇಕು ಎಂಬ ಶ್ರೀ ಸಿ. ಎಂ. ದೇವಯ್ಯನವರ ಠರಾವಿನ ಬಗ್ಗೆ ಸೂಕ್ತವೆನಿಸಿದ ಸಂದರ್ಭಗಳಲ್ಲಿ ಹಾಗೆ ಮಾಡಲಾಗುವದೆಂಬ ಭರವಸೆ ಕೊಟ್ಟ ಕಾರಣ ಸೂಚಕರು ಠರಾವನ್ನು ವಾಪಾಸು ತೆಗೆದುಕೊಂಡರು.

ಚೀಫ್ ಫಾರೆಸ್ಟ್ ಆಫೀಸರಿಗೆ ಸಹಾಯ ಮಾಡಲೋಸುಗ ದಕ್ಷಿಣ ಕೊಡಗಿಗೊಂದು ಉತ್ತರ ಕೊಡಗಿಗೊಂದು ಹೀಗೆ ಎರಡು ಗಜೆಟೆಡ್ ರೇಂಕಿನ ಅ. ಫಾರೆಸ್ಟ್ ಆಫೀಸರುಗಳ ಹುದ್ದೆಯನ್ನು ಏರ್ಪಡಿಸಬೇಕೆಂಬ ಠರಾವನ್ನು ಶ್ರೀ ಕೆ. ಕೆ. ಬೆಳ್ಳಿಯಪ್ಪನವರು ವಾಪಾಸು ತೆಗೆದುಕೊಂಡರು.

ಕೊಡಗು ಫಾರೆಸ್ಟ್ ಇಲಾಖೆಗೆ ಸಬ್ ಡಿವಿಜನಲ್ ಆಫೀಸರ ಒಂದು ಹುದ್ದೆಯನ್ನು ಏರ್ಪಡಿಸಬೇಕು ಎಂಬ ತಮ್ಮ ಠರಾವನ್ನು ಶ್ರೀ ಕೆ. ಪಿ. ಕರುಂಬಯ್ಯನವರು ಸೂಚಿಸಲಿಲ್ಲ.

ರೇಂಜ್ ಆಫೀಸರುಗಳನ್ನು ನೇಮಿಸುವಾಗ ಫಾರೆಸ್ಟರುಗಳಾಗಿದ್ದು ಅನುಭವವಿರುವವರನ್ನು, ಅವರಿಗೆ ಉತ್ತೇಜನ ಕೊಡುವ ದೃಷ್ಟಿಯಿಂದ ನೇಮಿಸಬೇಕೆಂಬ ಠರಾವನ್ನು ಭರವಸೆಯ ಮೇರೆ ಶ್ರೀ ಕೆ. ಕೆ. ಬೆಳ್ಳಿಯಪ್ಪನವರು ವಾಪಾಸು ತೆಗೆದುಕೊಂಡರು.

ಮೂರು ವರ್ಷಗಳ ವರೆಗೆ ರೇಂಜ್ ಆಫೀಸರುಗಳಾಗಿ ಖಾಯಂ ಇದ್ದ ಖಾಲಿ ಸ್ಥಳಗಳಲ್ಲಿ ಕೆಲಸ ಮಾಡಿದ ಫಾರೆಸ್ಟರುಗಳನ್ನು ಅವರ ಹಳೇ ಫಾರೆಸ್ಟರು ಗ್ರೇಡಿಗೆ ಹಿಂದೆ ಕಳುಹಿಸುವ ಆಜ್ಞೆಯನ್ನು ಪುನರ್ವಿಮರ್ಶಿಸಬೇಕೆಂಬ ಶ್ರೀ ಕೆ. ಪಿ. ಕರುಂಬಯ್ಯನವರ ಠರಾವನ್ನು ಅವರು ಸೂಚಿಸಲಿಲ್ಲ.

ಈಗಿರುವ ಟ್ರೆಜರಿ ಆಫೀಸರೇ ಮಡಿಕೇರಿಯ ಸಬ್ ರಿಜಿಸ್ಟ್ರರೂ ಆಗಿದ್ದು ಇದರಿಂದ ಸಾರ್ವಜನಿಕರಿಗೆ ತುಂಬಾ ತೊಂದರೆಯಾಗುವ ಕಾರಣ ಸಬ್ ರಿಜಿಸ್ಟ್ರರ ಕೆಲಸವನ್ನು ಬೇರೆ ಯಾರಿಗಾದರೂ ವಹಿಸುವದು ಉತ್ತಮವೆಂಬ ಠರಾವಿನ ಬಗ್ಗೆ ಪರಿಶೀಲಿಸಿ ಅವಶ್ಯವಿದ್ದರೆ ಹಾಗೆ ಮಾಡಲಾಗುವದೆಂಬ ಭರವಸೆ ಮೇರೆ ಶ್ರೀ. ಎನ್. ಸೋಮಣ್ಣನವರು ತಮ್ಮ ಠರಾವನ್ನು ವಾಪಾಸು ತೆಗೆದುಕೊಂಡರು.

ಆಹಾರ ಬೋನಸ್ಸನ್ನು ವಿನಿಯೋಗಿಸುವ ಅವಧಿಯನ್ನು ನಡೆಯುತ್ತಿರುವ ಆರ್ಥಿಕ ವರ್ಷದ ಅಂತ್ಯದವರೆಗೆ ಹೆಚ್ಚಿಸಲು ಕೇಂದ್ರ ಸರಕಾರವನ್ನು ಕೇಳಿಕೊಳ್ಳಬೇಕೆಂಬ ಶ್ರೀ. ಕೆ. ಮಲ್ಲಪ್ಪನವರ ಠರಾವು ಒಮ್ಮತದಿಂದ ಪಾಸಾಯಿತು.

ಸಂಬಂಧಿಸಿದ ಹೊಳೆಗಳ ನೀರಿನ ಉಪಯೋಗದ ಬಗ್ಗೆ ಮೈಸೂರು ಮತ್ತು ಸ್ಥಳೀಯ ಸರಕಾರದಲ್ಲಿರುವ ತಕರಾರು ತೀರ್ಮಾನವಾಗುವ ವರೆಗೆ ಅವುಗಳಿಗೆ ಸಂಬಂಧಿಸಿದ ನೀರಾವರಿ ಯೋಜನೆಗಳ ಪರಿಶೀಲನೆಗೆ ಹಣ ಖರ್ಚು ಮಾಡುವದು ವ್ಯರ್ಥವಾದ ದರಿಂದ ಅಂಥಾ ಪರಿಶೀಲನೆಯನ್ನು ತತ್ಕಾಲ ನಿಲ್ಲಿಸಬೇಕು ಎಂಬ ಠರಾವನ್ನು ಶ್ರೀ. ಕೆ ಮಲ್ಲಪ್ಪನವರು ವಾಪಾಸು ತೆಗೆದುಕೊಂಡರು.

ಸರಕಾರಿ ಅತಿಥಿಗಳನ್ನು ಸತ್ಕರಿಸಲಿಕ್ಕಾಗಿ ಸಾಮಾನ್ಯ ಆಡಳಿತ ಖರ್ಚಿನಲ್ಲಿ ರೂ. ೫೦೦೦ ಹೆಚ್ಚು ಮಾಡಿ ಫಾರೆಸ್ಟ್ ಖರ್ಚಿನಿಂದ ಅಷ್ಟನ್ನು ಕಡಿಮೆ ಮಾಡುವದು ಎಂಬ ಶ್ರೀ ಕೆ. ಕೆ. ಬೆಳ್ಳಿಯಪ್ಪನವರ ಠರಾವು ಪಾಸಾಯಿತು.

ಹಿಂದಿನ ಗ್ರಾಮಾಭಿವೃದ್ಧಿ ಆಫೀಸರ ಬದಲು ಹರಿಜನರ ಹಿತವನ್ನು ನೋಡಲೋಸುಗ ಒಬ್ಬ ವಿಶೇಷ ಅಧಿಕಾರಿಯನ್ನು ನೇಮಿಸಬೇಕೆಂಬ ಶ್ರೀ ಎನ್. ಸೋಮಣ್ಣನವರ ಠರಾವು ಸೂಚಿಸಲ್ಪಡಲಿಲ್ಲ.

ಲೋಲಿ ಪತ್ತೆದಾರ ಕ್ರಿಮಿನಲ್ ಕೇಸುಗಳಲ್ಲಿ ಹೆಚ್ಚು ದಕ್ಷತೆಯ ತನಿಖೆ ನಡೆಯುವಂತೆ ಮಾಡಬೇಕೆಂಬ ಶ್ರೀ ಟಿ ಐ. ಬೆಳ್ಳಿಯಪ್ಪನವರ ಠರಾವು ಸರಕಾರಿ ಮೆಂಬರರ ಭರವಸೆ ಮೇರೆ ಹಿಂತೆಗೆಯಲ್ಪಟ್ಟಿತು.

ಮುಂಬರುವ ವಿದ್ಯಾವರ್ಷದಲ್ಲಿ ಕೊಡಗು ಸರಕಾರಿ ಕಾಲೇಜಿನಲ್ಲಿ ಬಿ. ಎ. ತರಗತಿಯನ್ನು ತೆರೆಯುವ ಏರ್ಪಾಡು ಮಾಡಬೇಕೆಂಬ ಠರಾವನ್ನು ಶ್ರೀ ಕೆ. ಕೆ. ಬೆಳ್ಳಿಯಪ್ಪನವರು ಚರ್ಚೆಯ ನಂತರ ಹಿಂತೆಗೆದುಕೊಂಡರು.

ಇದೇ ಅರ್ಥದ ತಮ್ಮ ಠರಾವನ್ನು ಶ್ರೀ ಕೆ. ಪಿ. ಕರುಂಬಯ್ಯನವರು ವಾಪಾಸು ತೆಗೆದುಕೊಂಡರು.

ಕೊಡಗಿನಲ್ಲಿ ಪ್ರಥಮ ದರ್ಜೆಯ ಕಾಲೇಜಾಗುವವರೆಗೆ ಸರಕಾರಿ ಕಾಲೇಜಿನಲ್ಲಿ ಈಗಿರುವ ಪ್ರಿನ್ಸಿಪಾಲರ ಸರ್ವಿಸ್ಸನ್ನೇ ಕೊಡುವಂತೆ ಮದ್ರಾಸು ಸರಕಾರ ಯಾ ವಿಶ್ವವಿದ್ಯಾಲಯವನ್ನು ಬರೆದು ಕೇಳುವದೆಂಬ ಶ್ರೀ ಕೆ. ಕೆ. ಬೆಳ್ಳಿಯಪ್ಪನವರ ಠರಾವು ಹಾಗೆ ಮಾಡಲಾಗುವದೆಂಬ ಸರಕಾರಿ ಮೆಂಬರರ ಭರವಸೆ ಮೇರೆ ಹಿಂತೆಗೆಯಲ್ಪಟ್ಟಿತು.

ಮೈಸೂರಿನ ಟೆಕ್ನಿಕಲ್ ಮತ್ತು ಆರ್ಟ್ಸ್ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಕೊಡಗಿನ ವಿದ್ಯಾರ್ಥಿಗಳಿಗೆ ವಿಧಿಸುತ್ತಿರುವ ದ್ವಿಗುಣ ಫೀಜನ್ನು ರದ್ದು ಮಾಡುವಂತೆ ಇಂಡಿಯಾ ಸರಕಾರದ ಮೂಲಕ ಮೈಸೂರು ಸರಕಾರವನ್ನು ಕೇಳುವದು ಎಂಬ ಠರಾವಿನ ಬಗ್ಗೆ ಸರಕಾರವು ಹಾಗೆ ಮಾಡುವದೆಂದ ಕಾರಣ ಸೂಚಕರಾದ ಶ್ರೀ ಕೆ. ಮಲ್ಲಪ್ಪನವರು ಠರಾವನ್ನು ಹಿಂತೆಗೆದು ಕೊಂಡರು.

ಹೈಯರ್ ಎಲಿಮೆಂಟರಿ ಶಾಲೆಗಳಲ್ಲಿ ಹರಿಜನವಿದ್ಯಾರ್ಥಿಗಳಿಗೆ ಮಧ್ಯಾಹ್ನದ ಊಟದ ಮತ್ತು ವಾಸದ ಏರ್ಪಾಡು ಮಾಡಬೇಕೆಂಬ ಶ್ರೀ. ನಾಣಯ್ಯನವರ ಠರಾವಿನ ಬಗ್ಗೆ ಎಲ್ಲಿ ಸಾಧ್ಯವೋ ಅಲ್ಲಿ ಮಾಡಲಾಗುವದೆಂದು ಸರಕಾರಿ ಮೆಂಬರರು ಹೇಳಿದ ಕಾರಣ ಸೂಚಕರು ಠರಾವನ್ನು ವಾಪಾಸು ತೆಗೆದುಕೊಂಡರು.

ಬೇಸಿಗೆ ರಜೆ ಕಳೆದು ಶಾಲೆ ಪ್ರಾರಂಭವಾಗುವದರೊಳಗೆ ಪೊನ್ನಂಪೇಟೆ ಹೈಸ್ಕೂಲು ವಿದ್ಯಾರ್ಥಿಗಳಿಗೆ ಒಂದು ಬೋರ್ಡಿಂಗ್ ನ ವ್ಯವಸ್ಥೆ ಮಾಡಬೇಕು ಎಂಬ ಠರಾವಿನ ಬಗ್ಗೆ ಹೈಸ್ಕೂಲು ಕಟ್ಟಡವಾದ ನಂತರ ಮಾಡಲಾಗುವದೆಂದು ಸರಕಾರಿ ಮೆಂಬರರು ಹೇಳಿದ ಕಾರಣ ಸೂಚಕರಾದ ಶ್ರೀ. ಸಿ. ಎಂ. ನಾಣಯ್ಯನವರು ಠರಾವನ್ನು ಹಿಂತೆಗೆದುಕೊಂಡರು.

ಹಂಗಾಮಿ ಕೆಲಸದಲ್ಲಿರುವ ಅಧ್ಯಾಪಕರಿಗೆ ಬೇಸಿಗೆ ರಜೆಯ ಸಮಯದ ದಿನಗಳ ವೇತನ ಕೊಡಲು ಏರ್ಪಾಡು ಮಾಡಬೇಕೆಂಬ ಠರಾವನ್ನು ಹಾಗೆ ಮಾಡಲು ಈ ಪ್ರಶ್ನೆಯನ್ನು ಪರಿಶೀಲಿಸಲಾಗುವದೆಂಬ ಭರವಸೆ ಮೇರೆ ಶ್ರೀ ಟಿ ಐ ಬೆಳ್ಳಿಯಪ್ಪನವರು ವಾಪಾಸು ತೆಗೆದುಕೊಂಡರು.

ಬೆಕ್ಕೆಸೊಡ್ಲೂರು ಹೈಯರ್ ಎಲಿಮೆಂಟರಿ ಶಾಲೆಗಾಗಿ ಗ್ರಾಮಸ್ಥರು ಕಟ್ಟಿಸಿದ ಕಟ್ಟಡದ ಖರ್ಚಿನ ಶೇಕಡ ೫೦ರಷ್ಟನ್ನು ಸರಕಾರವು ಕೊಡಬೇಕೆಂಬ ಠರಾವು ಸರಕಾರಿ ಮೆಂಬರರ ಭರವಸೆ ಮೇರೆ ಶ್ರೀ. ಸಿ. ಎಂ. ನಾಣಯ್ಯನವರಿಂದ ಹಿಂತೆಗೆಯಲ್ಪಟ್ಟಿತು.

ಜಿಲ್ಲಾ ಬೋರ್ಡಿನ ಹಿಡಿತದಲ್ಲಿರುವ ಎಲ್ಲಾ ಶಾಲೆಗಳನ್ನು ಸರಕಾರವು ವಹಿಸಿಕೊಳ್ಳಬೇಕೆಂಬ ಠರಾವನ್ನು ಶ್ರೀ. ಕೆ. ಕೆ. ಬೆಳ್ಳಿಯಪ್ಪನವರು ಸೂಚಿಸಿದರು. ಶ್ರೀಗಳಾದ ಎನ್. ಸೋಮಣ್ಣ, ಕೆ. ಮಲ್ಲಪ್ಪ, ಎಸ್ ನಾರಾಯಣಮೂರ್ತಿ, ಕೋರನ ದೇವಯ್ಯ, ಎಚ್. ಅಂಣಯ್ಯ, ಸಿ ಎಂ. ನಾಣಯ್ಯ ಇವರುಗಳು ಪರವಾಗಿ ಓಟು ಮಾಡಿ ಉಳಿದವರು ತಟಸ್ಥವಿದ್ದ ಕಾರಣ ಠರಾವು ಪಾಸಾಯಿತು.

ವೀರಾಜಪೇಟೆ ಉಪಾಧ್ಯಾಯರ ತರಬೇತು ಶಾಲೆಯಲ್ಲಿರುವ ವಿದ್ಯಾರ್ಥಿಗಳ ಮನೆ ಬತ್ಯವನ್ನು ಕೊಡಲು ಬಡ್ಜೆಟ್ಟಿನಲ್ಲಿ ಹಣವಿಡಬೇಕೆಂಬ ಠರಾವಿನ ಬಗ್ಗೆ ಹಾಗೆ ಇಡಲಾಗಿದೆಯೆಂದು ಹೇಳಿದ ಕಾರಣ ಸೂಚಕರಾದ ಶ್ರೀ ಟಿ. ಐ. ಬೆಳ್ಳಿಯಪ್ಪನವರು ಠರಾವನ್ನು ವಾಪಾಸು ತೆಗೆದುಕೊಂಡರು.

ಹೆಚ್ಚಿನ ವಿಳಂಬವಿಲ್ಲದೆ ಸೋಮವಾರಪೇಟೆ ಸಿವಿಲ್ ಆಸ್ಪತ್ರೆಗೆ ಒಬ್ಬ ಹೆಚ್ಚಿನ ಡಾಕ್ಟರನ್ನು ನೇಮಿಸುವದು ಎಂಬ ಠ

ರಾವನ್ನು ಶ್ರೀ ಎಚ್. ಟಿ. ಮುತ್ತಣ್ಣನವರು ವಾಪಾಸು ತೆಗೆದುಕೊಂಡರು.

ಮಡಿಕೇರಿ ಸಿವಿಲ್ ಆಸ್ಪತ್ರೆಗೆ ಮತ್ತೊಬ್ಬ ಹೆಚ್ಚಿನ ಡಾಕ್ಟರನ್ನು ನೇಮಿಸಬೇಕು ಎಂಬ ಠರಾವನ್ನು ಹಾಗೆ ಈ ಮೊದಲೇ ನೇಮಕ ಮಾಡಿರುವದರಿಂದ ಸೂಚಕರಾದ ಶ್ರೀ ಕೆ. ಕೆ. ಬೆಳ್ಳಿಯಪ್ಪನವರು ಠರಾವನ್ನು ವಾಪಾಸು ತೆಗೆದುಕೊಂಡರು.

ಪೊನ್ನಂಪೇಟೆಯಲ್ಲಿ ವ್ಯವಸಾಯ ತರಬೇತು ಶಾಲೆಯೊಂದನ್ನು ತೆರೆಯಬೇಕೆಂಬ ಠರಾವನ್ನು ಶ್ರೀ ಪಿ. ಎಂ. ನಾಣಯ್ಯನವರು ವಾಪಾಸು ತೆಗೆದುಕೊಂಡರು.

ದೇಶದ ವಿವಿಧ ಭಾಗಗಳಲ್ಲಿ ಖಾಸಗಿ ಹಿಡುವಳಿಗಳಲ್ಲಿ ಆದರ್ಶ ಹಾಗೂ ಶಾಸ್ತ್ರೀಯ ವ್ಯವಸಾಯದ ಪರೀಕ್ಷಾ ಕ್ಷೇತ್ರಗಳನ್ನು ಹೆಚ್ಚಿಸುವ ಆವಶ್ಯಕತೆಯ ಶ್ರೀ ಪಿ ಐ. ಬೆಳ್ಳಿಯಪ್ಪನವರ ಠರಾವು ಹಾಗೆ ಮಾಡುತ್ತಿರುವ ಕಾರಣ ಹಿಂತೆಗೆಯಲ್ಪಟ್ಟಿತು.

ತುಂಬಾ ಹೆಚ್ಚುತ್ತಿರುವ ವ್ಯವಸಾಯ ಇಲಾಖೆಯ ಖರ್ಚನ್ನು ಆವಶ್ಯಕವಾದ ಖರ್ಚು ಕಡಿತೆಯನ್ನು ಮಾಡಬೇಕೆಂಬ ಶ್ರೀ ಪಿ ಐ. ಬೆಳ್ಳಿಯಪ್ಪನವರ ಠರಾವನ್ನು ಪರಿಶೀಲಿಸಿ ಅವಶ್ಯ ತೋರಿದರೆ ಹಾಗೆ ಮಾಡಲಾಗುವದೆಂಬ ಸರಕಾರಿ ಮೆಂಬರರ ಭರವಸೆಯ ಮೇರೆ ಹಿಂತೆಗೆಯಲಾಯಿತು.

ಹಾಲು ಸರಬರಾಯಿ ಇಲಾಖೆಯನ್ನು ಜಾನುವಾರು ಇಲಾಖೆಯೊಡನೆ ಸಂಯೋಜಿಸಬೇಕೆಂಬ ಶ್ರೀ ಕೆ. ಕೆ. ಬೆಳ್ಳಿಯಪ್ಪನವರ ಠರಾವು ಹಿಂತೆಗೆಯಲ್ಪಟ್ಟಿತು.

ನಾಪೋಕ್ಲಿನಲ್ಲಿ ಈಗಿರುವ ಆಹಾರ ಸರಬರಾಯಿ ಇಲ್ಲದ ವಾರ್ಡನ್ನು ಮಾರ್ಕೆಟ ಮಾಡುವವರ ಬದಲು ಒಂದು ಶಿಶುವಿಹಾರವನ್ನು ತೆರೆಯಲೋಸುಗ ನಾಪೋಕ್ಲು ಮಹಿಳಾ ಸಮಾಜಕ್ಕೆ ಕೊಡುವದು ಎಂಬ ಶ್ರೀ ಕೆ. ಎಂ ದೇವಯ್ಯನವರ ಠರಾವಿನ ಬಗ್ಗೆ ಅದನ್ನು ಕಡವಾಗಿ ಕೊಡುವ ವಿಚಾರ ಆಲೋಚಿಸಲಾಗುವದೆಂದು ಸರಕಾರಿ ಮೆಂಬರರು ಹೇಳಿದ ಮೇರೆ ಠರಾವು ಹಿಂತೆಗೆಯಲ್ಪಟ್ಟಿತು.

ವ್ಯವಸಾಯ ಆದಾಯ ತೆರಿಗೆಯ ಮಸೂದೆಯನ್ನು ೧೯೫೦ರ ಸಾಲಿಗೆ ಜಾರಿಯಲ್ಲಿ ತರಬೇಕೆಂದೂ ಹಾಗೆ ಮಾಡಲು ಪ್ರತ್ಯೇಕ ತಿದ್ದುಪಡಿ ಮಸೂದೆಯ ಅವಶ್ಯಕತೆ ಇದ್ದರೆ ಹಾಗೆ ಮಾಡಬೇಕೆಂದೂ ಶ್ರೀ ಕೆ. ಕೆ. ಬೆಳ್ಳಿಯಪ್ಪನವರು ಕಳುಹಿಸಿದ್ದ ಠರಾವು ಹಿಂತೆಗೆಯಲ್ಪಟ್ಟಿತು.

ಇದೇ ಅರ್ಥದ ತಮ್ಮ ಠರಾವನ್ನು ಶ್ರೀ ಕೆ. ಪಿ. ಕರುಂಬಯ್ಯನವರು ವಾಪಾಸು ತೆಗೆದು ಕೊಂಡರು.

ಸೋಮವಾರಪೇಟೆ ಆಸ್ಪತ್ರೆಯನ್ನು ಶೀಘ್ರ ಬದಲಾವಣೆ ಮಾಡಬೇಕು ಎಂಬ ಶ್ರೀ ಎಚ್. ಟಿ ಮುತ್ತಣ್ಣನವರ ಠರಾವು ವಾಪಾಸು ತೆಗೆಯಲ್ಪಟ್ಟಿತು.

ಭಾಗಮಂಡ್ಲ ಶಾಲೆಯ ಬದಲಾವಣೆಗಾಗಿ ಸಿವಿಲ್ ವರ್ಕ್ಸ್ ಖರ್ಚಿನಲ್ಲಿ ರೂ ೧೦,೦೦೦/– ಹೆಚ್ಚಿಸಿ ಚೀಫ್ ಕಮಿಷನರ ಎಕ್ಸಿಕ್ಯೂಟಿವ್ ಕೌನ್ಸಿಲರುಗಳ ಖರ್ಚಿಗೆಂದು ಸಾಮಾನ್ಯ ಆಡಳಿತ ಖರ್ಚಿಗಿಟ್ಟಿರುವ ಹಣದಿಂದ ಅಷ್ಟು ಕಡಿಮೆ ಮಾಡಬೇಕೆಂಬ ಶ್ರೀ ಕೆ ಎಂ. ದೇವಯ್ಯನವರ ಠರಾವು ಹಿಂತೆಗೆಯಲ್ಪಟ್ಟಿತು.

ಎಷ್ಟು ತುರಿತವಾಗಿ ಸಾಧ್ಯವೋ ಅಷ್ಟು ತುರಿತದಲ್ಲಿ ಸೋಮವಾರಪೇಟೆ ಬಾಣಾವರ ರಸ್ತೆಯನ್ನು ರಿಪೇರಿ ಮಾಡಿಸಬೇಕೆಂಬ ಠರಾವನ್ನು ಭರವಸೆ ಮೇರೆ ಶ್ರೀ ಎಚ್. ಟಿ. ಮುತ್ತಣ್ಣನವರು ವಾಪಾಸು ತೆಗೆದುಕೊಂಡರು.

ವೀರಾಜಪೇಟೆ, ಗೋಣಿಕೊಪ್ಪಲು ರಸ್ತೆಯಲ್ಲಿ ವಹಿವಾಟು ಬಹು ಹೆಚ್ಚಿರುವ ಕಾರಣ ಮಡಿಕೇರಿ, ಫ್ರೇಜರ್‌ಪೇಟೆ ರಸ್ತೆಗಿಂಥಾ ಮೊದಲು ಈ ರಸ್ತೆಗೆ ತಾರು ಹಾಕುವ ಕೆಲಸವನ್ನು ಕೈಕೊಳ್ಳಬೇಕು ಎಂಬ ಠರಾವನ್ನು ಶ್ರೀ ಕೆ. ಕೆ. ಬೆಳ್ಳಿಯಪ್ಪನವರು ಹಿಂತೆಗೆದು ಕೊಂಡರು.

ಮಡಿಕೇರಿ ಮುನ್ಸಿಪಾಲಿಟಿಯೊಳಗಿರುವ ಪ್ರಾಂತೀಕ ರಸ್ತೆಗಳನ್ನು ಮುನ್ಸಿಪಾಲಿಟಿಯ ವಶಕ್ಕೊಪ್ಪಿಸಿ ಅವುಗಳ ದುರಸ್ತಿಗೆ ಸಾಕಷ್ಟು ಹಣ ಕೊಡಬೇಕು ಎಂಬ ಶ್ರೀ. ಕೆ. ಮಲ್ಲಪ್ಪನವರ ಠರಾವನ್ನು ಪರ್ಯಾಲೋಚಿಸಲಾಗುವದೆಂದು ಸರಕಾರಿ ಮೆಂಬರರು ಹೇಳಿದ ಕಾರಣ ಸೂಚಕರು ಠರಾವನ್ನು ವಾಪಾಸು ತೆಗೆದುಕೊಂಡರು.

ಮಡಿಕೇರಿಯಲ್ಲಿ ಕ್ಷಯ ರೋಗಕ್ಕಾಗಿ ಪ್ರತ್ಯೇಕ ಆಸ್ಪತ್ರೆಯನ್ನು ಕಟ್ಟುವದನ್ನು ನಿಲ್ಲಿಸಿ ಆ ಹಣವನ್ನು ಇತರ ಪ್ರಾಮುಖ್ಯ ಯೋಜನೆಗಳಿಗೆ ವಿನಿಯೋಗಿಸುವದಲ್ಲದೆ ಮಡಿಕೇರಿ ಸಿವಿಲ್ ಆಸ್ಪತ್ರೆಗೆ ಸಂಬಂಧಿಸಿ ಒಂದೆರಡು ಪ್ರತ್ಯೇಕ ಕೋಣೆಗಳನ್ನು ಕಟ್ಟಿ ಕ್ಷಯರೋಗಿಗಳಿಗೆ ಚಿಕಿತ್ಸೆಯ ಏರ್ಪಾಡು ಮಾಡುವದು ಎಂಬ ಠರಾವನ್ನು ಬಜೆಟ್ಟಿನಲ್ಲಿ ಕ್ಷಯರೋಗ ಆಸ್ಪತ್ರೆಗೆಂದು ಹಣ ಇಡದ ಕಾರಣ ಶ್ರೀ. ಕೆ. ಕೆ. ಬೆಳ್ಳಿಯಪ್ಪನವರು ವಾಪಾಸು ತೆಗೆದುಕೊಂಡರು.

ಬೇತರಿ, ಕೊಟ್ಟ ಮಡಿ ಸೇತುವೆಗಳು ಮತ್ತು ಕಾಲೇಜು ಕಟ್ಟಡಗಳನ್ನು ಶೀಘ್ರ ಕಟ್ಟಲು ಹೆಸರುವಾಸಿಯಾದ ಯಾವುದಾದರೂ ಇಂಜಿನಿಯರಿಂಗ್ ಕಂಪೆನಿಯೊಡನೆ ವ್ಯವಹಾರ ಮಾಡಬೇಕೆಂಬ ಠರಾವನ್ನು ಶ್ರೀ ಕೆ. ಪಿ. ಕರುಂಬಯ್ಯನವರು ವಾಪಾಸು ತೆಗೆದುಕೊಂಡರು.

ಕೇಂದ್ರದ ವಶವಿರುವ ಪಿ. ಡಬ್ಲ್ಯು. ಡಿ. ಇಲಾಖೆಯನ್ನು ಸ್ಥಳೀಯ ಸರಕಾರದ ವಶಕ್ಕೆ ಹಿಂದಿನಂತೆ ತರುವ ಬಗ್ಗೆ ಕೇಂದ್ರ ಸರಕಾರವನ್ನು ಕೇಳುವದು ಎಂಬ ಠರಾವನ್ನು ಹುದ್ರಾಸಿನೊಡನೆ ವ್ಯವಹಾರ ಮಾಡಲಾಗುತ್ತಿದೆಯೆಂಬ ಭರವಸೆ ಮೇರೆ ಶ್ರೀ. ಪಿ. ಐ ಬೆಳ್ಳಿಯಪ್ಪನವರು ವಾಪಾಸು ತೆಗೆದುಕೊಂಡರು.

ಕೊಡಗಿನ ಮಠಗಳು ಮತ್ತು ಹಿಂದೂ ದೇವಾಲಯಗಳೇ ಮೊದಲಾದ ಧಾರ್ಮಿಕ ಸಂಸ್ಥೆಗಳ ಮೇಲೆ ಯೋಗ್ಯವಾದ ಉಸ್ತುವಾರಿ ಮತ್ತು ಹಿಡಿತವಿಲ್ಲದಿರುವ ಕಾರಣ ಮದ್ರಾಸು ರಿಲೀಜಿಯಸ್ ಎಂಡೋಮೆಂಟ್ ಮಸೂದೆಯಂಥಾ ಮಸೂದೆಯೊಂದನ್ನು ಇಲ್ಲಿ ಜಾರಿಯಲ್ಲಿ ತರಬೇಕು ಎಂಬ ಠರಾವನ್ನು ಭರವಸೆ ಮೇರೆ ಶ್ರೀ. ಕೆ. ಎಂ. ದೇವಯ್ಯನವರು ವಾಪಾಸು ತೆಗೆದುಕೊಂಡರು.

ಇತರ ಠರಾವುಗಳು.

ಮಠಗಳಿಗೆ ಸಂಬಂಧಿಸಿದ ಸ್ವತ್ತುಗಳನ್ನು ಪರಾಧೀನ ಮಾಡಲು ಯಾವ ಅನುಮತಿಯನ್ನೂ ಕೊಡಕೂಡದೆಂದೂ ಈಗ ಗವರ್ನಮೆಂಟ್ನಿಂದ ಕೊಟ್ಟಿರುವ ಎಲ್ಲಾ ಅನುಮತಿಗಳನ್ನು ಹಿಂತೆಗೆಯಬೇಕೆಂದೂ ಈ ಸಭೆಯು ಸೂಚಿಸುತ್ತದೆ ಎಂಬ ಠರಾವು ಪ್ರೆಸಿಡೆಂಟರ ಕಾಸ್ಟಿಂಗ್ ಓಟಿನಿಂದ ಬಿದ್ದುಹೋಯಿತು.

ಹಿಂದೂ ಕೋವಿಲುಗಳ ದೇವಸ್ಥಾನಗಳು ಮತ್ತು ಮಠಗಳನ್ನು ಸರಿಯಾದ ವ್ಯವಸ್ಥೆಯಿಂದ ನಡೆಸುವ ಕಾರಣ ಮದ್ರಾಸು ರಿಲೀಜಿಯಸ್ ಎಂಡೋಮೆಂಟ್ ಜಿಲ್ಲೆಯ ಮಾದರಿಯ ಶಾಸನವನ್ನು ಇಲ್ಲಿ ಜಾರಿಗೆ ತರಬೇಕೆಂಬ ತನ್ನ ಠರಾವನ್ನು ಆ ರೀತಿಯ ಠರಾವು ಪಾಸಾದ ಕಾರಣ ಶ್ರೀ. ಕೆ. ಎಂ. ದೇವಯ್ಯನವರು ಸೂಚಿಸಲಿಲ್ಲ.

ನಿವೃತ್ತಿಯಾಗಲು ನಿಶ್ಚಯಿಸಿದ ವಯಸ್ಸಿಗೆ ಮುಟ್ಟಿದ ಸರಕಾರಿ ಅಧಿಕಾರಿಗಳಿಗೆ ಅಧಿಕಾರದ ಜೀವದಾನವನ್ನಾಗಲೀ, ಪುನಹ ಕೆಲಸ ಕೊಡುವದನ್ನಾಗಲೀ ಮನ್ನಿಸಬೇಕು ಎಂಬ ಠರಾವನ್ನು ಸರಕಾರಿ ಮೆಂಬರರ ಭರವಸೆ ಮೇರೆ ಶ್ರೀ. ಎಚ್ ಟಿ. ಮುತ್ತಣ್ಣನವರು ಹಿಂತೆಗೆದುಕೊಂಡರು.

ಹಾತೂರು ಹೈಸ್ಕೂಲನ್ನು ಗವರ್ನ್‌ಮೆಂಟ್ ಹೈಸ್ಕೂಲಾಗಿ ತೆಗೆದುಕೊಳ್ಳಬೇಕು ಎಂಬ ವಿಚಾರವನ್ನು ಬರುವ ವರ್ಷ ಪರ್ಯಾಲೋಚಿಸಲಾಗುವದೆಂದು ಸರಕಾರಿ ಮೆಂಬರರು ಹೇಳಿದ ಕಾರಣ ಠರಾವು ಹಿಂತೆಗೆಯಲ್ಪಟ್ಟಿತು.

ಪೊನ್ನಂಪೇಟೆ ಕಾನೂರು ರಸ್ತೆಯಲ್ಲಿ ಲಕ್ಷ್ಮಣತೀರ್ಥ ಹೊಳೆಗೆ ಒಂದು ಪಕ್ಕಾ ಸೇತುವೆಯನ್ನು ಕಟ್ಟಿಸಬೇಕು ಎಂಬ ಠರಾವನ್ನು ಶ್ರೀ. ಎಚ್ ಬಿ. ಅಣ್ಣಯ್ಯನವರು ಹಿಂತೆಗೆದುಕೊಂಡರು.

ಹಾತೂರು ಶಾಲೆಗೆ ಒಂದು ಬಾವಿ ತೋಡಿಸಲು ರೂ. ೬೦೦೦ ಮಂಜೂರ್ಮಾಡಬೇಕು ಎಂಬ ಠರಾವಿನ ಬಗ್ಗೆ ಬರುವ ವರ್ಷ ಇದನ್ನು ಆಲೋಚಿಸಲಾಗುವದೆಂದು ಸರಕಾರಿ ಮೆಂಬರರು ಹೇಳಿದ ಮೇರೆ ಶ್ರೀ ಎಚ್. ಬಿ. ಅಣ್ಣಯ್ಯನವರು ಠರಾವನ್ನು ವಾಪಾಸು ತೆಗೆದುಕೊಂಡರು.

ಗೋಣಿಕೊಪ್ಪ ಆಸ್ಪತ್ರೆಗೆ ಹೆಚ್ಚಿನ ಒಬ್ಬ ನರ್ಸ್, ಒಬ್ಬ ವಾರ್ಡ್‌ಬಾಯಿ ಮತ್ತು ಈಗಿರುವ ವಾರ್ಡನ್ನು ಡಯೆಟರಿ ವಾರ್ಡಾಗಿ ಮಾರ್ಪಡಿಸಲು ವಾರ್ಷಿಕ ರೂ. ೨೦೦೦/- ಆಸ್ಪತ್ರೆಗೆ ಕೊಡಬೇಕು ಎಂಬ ಠರಾವನ್ನು ಬರುವ ವರ್ಷ ಆಲೋಚಿಸಲಾಗುವದೆಂದು ಹೇಳಿದ ಮೇರೆ ಶ್ರೀ. ಎಚ್. ಬಿ. ಅಣ್ಣಯ್ಯನವರು ಹಿಂತೆಗೆದುಕೊಂಡರು.

ಈ ಸಂಸ್ಥಾನದ ಮಲನಾಡು ಭಾಗಗಳನ್ನು ಅಭಿವೃದ್ಧಿಗೊಳಿಸಲು ಇಲ್ಲಿಂದ ಕೇಂದ್ರ ಸರಕಾರವು ಸಂಗ್ರಹಿಸುವ ಆದಾಯ ತೆರಿಗೆಯ ಶೇಕಡ ಐವತ್ತನ್ನು ಇಲ್ಲಿಗೆ ಕೊಡಬೇಕೆಂಬ ಶ್ರೀ. ಕೆ. ಕೆ. ಬೆಳ್ಳಿಯಪ್ಪನವರ ಠರಾವು ಒಮ್ಮತದಿಂದ ಪಾಸಾಯಿತು,

ಈ ಸಂಸ್ಥಾನದಿಂದ ಕೇಂದ್ರ ಸರಕಾರಕ್ಕೆ ಹೋಗುವ ಸೆಂಟ್ರಲ್ ಎಕ್ಸೈಸ್ ಕಂದಾಯದಿಂದ ಶೇಕಡ ಐವತ್ತನ್ನು ಈ ಸಂಸ್ಥಾನಕ್ಕೆ ಕೊಡಬೇಕೆಂಬ ಶ್ರೀ ಕೆ. ಕೆ. ಬೆಳ್ಳಿಯಪ್ಪನವರ ಠರಾವು ಒಮ್ಮತದಿಂದ ಪಾಸಾಯಿತು

ಸರ್ಕಾರಿ ಕಂದಾಯ ಮಸೂದೆಯನ್ನು ಹಿಂತೆಗೆದುಕೊಳ್ಳಬೇಕೆಂಬ ಠರಾವನ್ನು ಹಾಗೆ ಕೇಂದ್ರ ಸರಕಾರವು ಹಿಂತೆಗೆದಿರುವ ಕಾರಣ ಶ್ರೀ ಕೆ. ಕೆ. ಬೆಳ್ಳಿಯಪ್ಪನವರು ಸೂಚಿಸಲಿಲ್ಲ.

ಡೆಲ್ಲಿ ಅಜಮೀರುಗಳಲ್ಲಿರುವಂತೆ ಕೊಡಗಿನ ಹಣಕಾಸಿನ ಲೆಕ್ಕವನ್ನು ಕೇಂದ್ರದೊಂದಿಗೆ ವಿಲೀನಗೊಳಿಸಲು ಬೇಕಾದ ಏರ್ಪಾಡು ಮಾಡಿ ತಾಂತ್ರಿಕ ಕಾರಣಗಳಿಗಾಗಿ ಕೊಡಗನ್ನು ಪ್ರತ್ಯೇಕ ಪ್ರಾಂತವಾಗಿಡಬೇಕು ಎಂಬ ಠರಾವನ್ನು ಶ್ರೀ ಕೆ. ಕೆ. ಬೆಳ್ಳಿಯಪ್ಪನವರು ಸೂಚಿಸಲಿಲ್ಲ.

ಪ್ರೆಸಿಡೆಂಟರ ಸಮಾರೋಪ ಭಾಷಣ.

ಸಾವಧಾನದಿಂದ ಕೌನ್ಸಿಲಿನ ಕಾರ್ಯ ಕಲಾಪಗಳಲ್ಲಿ ಆಸಕ್ತಿಯಿಂದ ಸಹಕರಿಸಿದ ನಿಮಗೆಲ್ಲರಿಗೂ ವಂದನೆಗಳು. ಬಹುಶಃ ಇದೇ ಈ ಕೌನ್ಸಿಲಿನ ಕಡೇ ಬಜೆಟ್ ಮೀಟಿಂಗಾಗಬಹುದು. ಕೌನ್ಸಿಲಿನ ಕಾರ್ಯ ಕಲಾಪಗಳಲ್ಲಿ ಸದಸ್ಯರು ಕೊಟ್ಟ ಸಲಹೆ, ಸಹಕಾರ ಹಾಗೂ ಸಹಾಯಗಳಿಗಾಗಿ ವಂದಿಸುತ್ತೇನೆ. ಆಡಳಿತದಲ್ಲಿ ತಿಳಿಸಿರುವಂತೆ ನೋಡಬೇಕಾದ ಸರಕಾರಿ ಉದ್ಯೋಗಿಗಳ ಪಕ್ಷ ಹಿರಿಯ ವಾದಿರಬಹುದು. ಕೌನ್ಸಿಲು ಸದಸ್ಯರು ನ್ಯಾಯವಾದ ವಿಚಾರಗಳನ್ನು ಮುಂದಿಟ್ಟರೆ ಅದಕ್ಕನುಗುಣ ವರ್ತಿಸಲು ಸಿದ್ಧನು. ನಿಮಗೆಲ್ಲಾ ಪುನಃ ವಂದಿಸುತ್ತೇನೆ.

ಇದರ ನಂತರ ಕೌನ್ಸಿಲು ಸಭೆಯು ಮುಕ್ತಾಯಗೊಂಡಿತು.

ನೋಟೀಸ್.

ವೀರಾಜಪೇಟೆನಾಡು ಅರಮೇರಿ ಗ್ರಾಮದ ಬಾಳೇಕುಟ್ಟಿರ ಮಂದಣ್ಣನವರ ಮಗ ಮುತ್ತಣ್ಣನು ತಿಳಿಯಪಡಿಸುವುದೇನೆಂದರೆ:—

ನನ್ನ ತಮ್ಮನಾದ ಮಾಚಯ್ಯನು ನಮ್ಮೆಲ್ಲರಿಗೂ ಹಕ್ಕಾಗಿ ನಮ್ಮಗಳ ಸ್ವಾಧೀನದಲ್ಲಿರುವ ಕುಟುಂಬದ ಅವಿಭಕ್ತ ಸೊತ್ತುಗಳನ್ನು ಗಿರ್ವಿ ವಗೈರೆ ಪರಾಧೀನ ಮಾಡುವ ಅಭಿಪ್ರಾಯ ಮತ್ತು ಏರ್ಪಾಡಿನಲ್ಲಿರುವುದಾಗಿ ತಿಳಿಯಬರುತ್ತದೆ.

ಸದರಿ ಮಾಚಯ್ಯನವರಿಗೆ ಕುಟುಂಬದ ಯಾವ ಸ್ವತ್ತನ್ನೂ ಯಾವ ವಿಧದಲ್ಲೂ ಪರಾಧೀನ ಮಾಡುವ ಆವಶ್ಯಕತೆ ಇರುವುದಿಲ್ಲ. ಅಲ್ಲದೆ ಅವರು ಈ ಮೊದಲು ನನಗೆ ತಿಳಿಯದೆ ಕುಟುಂಬದ ಆವಶ್ಯಕತೆ ಏನೂ ಇಲ್ಲದೆ ಪರಾಧೀನ ಮಾಡಿದ ಸ್ವತ್ತು ಈಗ ಜಂಟಿ ಕುಟುಂಬದ ಸೊತ್ತುಗಳ ಉತ್ಪತ್ತಿಯಿಂದ ಹಿಂದಕ್ಕೆ ಅವರ ಹೆಸರಿನಲ್ಲೇ ಪಡೆದುದನ್ನೂ ಸಹ ಅವರಿಗೆ ಯಾವ ವಿಧದಲ್ಲೂ ಪರಾಧೀನ ಮಾಡುವ ಹಕ್ಕು ಮತ್ತು ಆವಶ್ಯಕತೆ ಇರುವುದಿಲ್ಲ.

ಅವರಿಂದ ಯಾರಾದರೂ ಗಿರ್ವಿ, ಭೋಗ್ಯ, ಕ್ರಯಕ್ಕೆ ಚರ ಮತ್ತು ಸ್ಥಿರ ಸ್ವತ್ತುಗಳನ್ನು ಪಡೆದು ಕೊಂಡಲ್ಲಿ ಅವರಿಗೆ ಯಾವ ಹಕ್ಕೂ ಸಿಗಲಾರದು ಎಂದು ಈ ಮೂಲಕ ತಿಳಿಸಲಾಗಿದೆ.

ಬಿ. ಮುತ್ತಣ್ಣ

4–2

ಹಿಂದೂಸ್ಥಾನದ

ರೆಡ್‌ಕ್ರಾಸ್ ಸಂಸ್ಥೆ.

(ಕೊಡಗು ವೈದ್ಯ ಇಲಾಖೆಯವರಿಂದ)

ಮೇ ೮ ನೇ ತಾರೀಕು ಪ್ರಪಂಚದ ಎಲ್ಲಾ ಜನಾಂಗಗಳಿಗೂ ಅನ್ವಯಿಸುವ ಮಹಾ ದಿನ. ದುಃಖಿಗಳ, ರೋಗಿಗಳ ಯುದ್ಧರಂಗದಲ್ಲಿ ಗಾಯಹೊಂದಿ ನರಳುವವರ, ಸಾಂಕ್ರಾಮಿಕ ರೋಗಗಳಿಂದ ಕಷ್ಟಪಡುತ್ತಿರುವವರ, ಗರ್ಭಿಣಿಯರ, ಶಿಶುಗಳ ಸಂರಕ್ಷಣೆಗಾಗಿ ಜಾತಿಭೇದಗಳನ್ನು ಲೆಕ್ಕಿಸದೆ ಯುದ್ಧ ಕಾಲದಲ್ಲೂ, ಶಾಂತಿಕಾಲದಲ್ಲೂ ಒಂದೇ ರೀತಿಯಲ್ಲಿ 'ಜನಸೇವೆಯೇ ಜನಾರ್ದನ ಸೇವೆಯೆಂದು' ಲೋಕಸೇವೆ ಮಾಡುತ್ತಿರುವ ರೆಡ್‌ಕ್ರಾಸ್ ಸಂಸ್ಥೆಯ ಸ್ಥಾಪಕರೂ, ಪೋಷಕರೂ ಆದ ಹೆನ್ರಿಡ್ಯೂನಾಂಟ್ ಎಂಬ ಪ್ರಖ್ಯಾತ ವೈದ್ಯರ ೧೨೩ ನೇ ಜನ್ಮ ದಿನಾಚರಣೆಯೇ ಈ ದಿನವಾಗಿದೆ. ಗಾತ್ರದಲ್ಲಿ ಮೂರ್ತಿ ಚಿಕ್ಕದಾದರೂ ಈ ಮಹಾವ್ಯಕ್ತಿಯು ರೆಡ್‌ಕ್ರಾಸ್ ಸಂಸ್ಥೆಯನ್ನು ಸ್ಥಾಪಿಸುವ ಒಂದು ಮಹಾ ಧ್ಯೇಯದಿಂದ ಹಗಲಿರುಳೆನ್ನದೆ ದುಡಿದು ಅದರ ಪರಿಣಾಮವಾಗಿ ೧೮೬೩ ನೇ ಇಸವಿಯಲ್ಲಿ ಜಿನೀವಾ ಕಾನ್ಫರೆನ್ಸ್ ಎಂಬ ಪ್ರಾತಿನಿಧ್ಯ ಸಭೆಯಲ್ಲಿ ಹದಿನಾರು ಪ್ರಮುಖ ರಾಷ್ಟ್ರಗಳು ಸೇರಿ ಯುದ್ಧ ಕಾಲದಲ್ಲಿ ರಣಕ್ಷೇತ್ರದಲ್ಲಿ ಕೆಲಸ ಮಾಡುವ ವೈದ್ಯ ಇಲಾಖೆಯವರು ಪಕ್ಷಭೇದ ಇಲ್ಲದವರೆಂದೂ ಅವರ ಕೆಲಸ ಕಾರ್ಯಗಳಿಗೆ ತೊಂದರೆಯಾಗದಂತೆ ಯುದ್ಧಕ್ಕೆ ನಿಂತ ಎರಡು ಪಕ್ಷದವರೂ ನಡೆದುಕೊಳ್ಳತಕ್ಕದೆಂದೂ ಒಪ್ಪಿ, ಕೃತಿಜ್ಞೆಯನ್ನು ಮಾಡಿಸಿ ರೆಡ್‌ಕ್ರಾಸ್ ಸಂಸ್ಥೆಯನ್ನು ಅಂತರರಾಷ್ಟ್ರೀಯ ಸಂಸ್ಥೆಯನ್ನಾಗಿ ನಿರ್ಮಾಣಮಾಡಿದ ಮಹಾಪುರುಷನೇ ಹೆನ್ರಿಡ್ಯೂನಾಂಟ್. ರೆಡ್‌ಕ್ರಾಸ್ ಸಂಸ್ಥೆಯ ಮುಖ್ಯ ಉದ್ದೇಶಗಳೆಂದರೆ ಯುದ್ಧ ಮತ್ತು ಶಾಂತಿ ಕಾಲಗಳಲ್ಲಿ

(1) ರೋಗಿಗಳ ಮತ್ತು ಗಾಯ ಹೊಂದಿದವರ ಚಿಕಿತ್ಸೆ, ಸಂರಕ್ಷಣೆ ಮತ್ತು ಪೋಷಣೆ.

(2) ಶಿಶು ಸಂರಕ್ಷಣೆ.

(3) ಆಸ್ಪತ್ರೆಗಳಲ್ಲಿಯೂ ಮತ್ತು ಆರೋಗ್ಯ ಇಲಾಖೆಯ ಮುಖ್ಯ ಕೇಂದ್ರಗಳಲ್ಲಿಯೂ ಇರುವ ರೋಗಿಗಳಿಗೆ ಬೇಕಾದ ಸೌಕರ್ಯಗಳನ್ನು ಒದಗಿಸುವುದು.

(4) ಆರೋಗ್ಯ ಸಂರಕ್ಷಣೆ, ರೋಗಿಗಳ ಶುಶ್ರೂಷೆ, ಶಿಶು ಬಾಣಂತಿಗಳ ಸಂರಕ್ಷಣೆ ಮುಂತಾದ ಕಾರ್ಯಗಳಿಗೆ ಸಹಾಯವನ್ನು ಒದಗಿಸುವುದು.

(5) ಮುಂದಿನ ಜನಾಂಗವಾದ ಬಾಲಕ ಬಾಲಕಿಯರಲ್ಲಿ ಈ ಮಹಾ ಸಂಸ್ಥೆಯ ಸದುದ್ದೇಶಗಳನ್ನು ಪ್ರಚಾರಮಾಡುವಂತೆ ಮಕ್ಕಳ ರೆಡ್‌ಕ್ರಾಸ್ ಸಂಘವೆಂಬ ಒಂದು ಶಾಖೆಯನ್ನು ನಿರ್ಮಾಣಮಾಡಿ ಪ್ರೋತ್ಸಾಹವನ್ನು ಕೊಡುವುದು.

'ರೆಡ್‌ಕ್ರಾಸ್ ಸಂಘವೆಂಬುವುದು ಒಂದು ಅಂತರರಾಷ್ಟ್ರೀಯ ಸಂಸ್ಥೆ. ಜಾತಿ, ಮತಭೇದವಿಲ್ಲದೆ ಮಾನವ ಕುಟುಂಬದ ಕ್ಷೇಮಕ್ಕಾಗಿ ದುಡಿಯುವುದೇ ಇದರ ಧ್ಯೇಯ.

ಶಾಂತಿಕಾಲದಲ್ಲೂ ಯುದ್ಧ ಕಾಲದಲ್ಲೂ ಏಕರೀತಿ ಸೇವೆಮಾಡುವುದೇ ಇದರ ಮುಖ್ಯ ಕರ್ತವ್ಯ. ಶರೀರ ಆರೋಗ್ಯದ ಪುಷ್ಟಿಯನ್ನು ಅಭಿವೃದ್ಧಿಗೊಳಿಸಿ ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟಿ, ಪ್ರಪಂಚದ ಕಷ್ಟ, ಸಂಕಷ್ಟಗಳನ್ನು ನಿವಾರಿಸುವುದೇ ಇದರ ಪ್ರತಿಜ್ಞೆ. 'ಶಾಂತಿ, ಶಾಂತಿ, ಶಾಂತಿ' ಎಂಬ ಮಂತ್ರವನ್ನು ಪ್ರಪಂಚದ ಎಲ್ಲಾ ಮೂಲೆಗಳಲ್ಲೂ ಪ್ರತಿಧ್ವನಿಸುವಂತೆ ಮಾಡಿ, ಆಸ್ಪತ್ರೆಗಳನ್ನು ಕಟ್ಟಿ, ನರ್ಸುಗಳ ತರಬೇತು ಕೊಟ್ಟು, ಕರುಣೆ ಮತ್ತು ಕನಿಕರವೇ ಮನುಷ್ಯನಿಗೆ ಏಕ ಸಂಪತ್ತೆಂಬ ತತ್ವವನ್ನು ಲೋಕಕ್ಕೆ ಸಾರುವುದೇ ರೆಡ್‌ಕ್ರಾಸ್ ಸಂಸ್ಥೆಯ ಗುರಿ. ಈ ರೀತಿ ರೆಡ್‌ಕ್ರಾಸ್ ಸಂಸ್ಥೆಯು ಮೂಲದಿಂದಲೂ ಬೆಳೆದಿದೆ. ಹೆನ್ರಿಡ್ಯೂನಾಂಟರು ಈ ಉದ್ದೇಶಗಳನ್ನು ಅಕ್ಷರಶಃ ಪಾಲಿಸಿ ತನ್ನ ಜೀವಮಾನವನ್ನೇ ರೆಡ್‌ಕ್ರಾಸ್ ಸಂಘಕ್ಕಾಗಿ ಧಾರೆ ಎರೆದು ಅಮರವಾದ ಕೀರ್ತಿಯನ್ನು ಗಳಿಸಿದ್ದಾರೆ.

ಪ್ರಪಂಚದ ಶಾಂತಿ ಸುಖಗಳನ್ನು ಹಾರೈಸುವ ಈ ಮಹಾ ಸಂಘವು ಹಿಂದೂಸ್ಥಾನದಲ್ಲಿ ೧೯೨೦ ನೇ ಇಸವಿಯಲ್ಲಿ ಶಾಸನ ಬದ್ಧವಾಗಿ ಸ್ಥಾಪಿತವಾಯಿತು. ಮಹಾತ್ಮ ಗಾಂಧೀಜಿ ಮೊದಲಾಗಿ ಅನೇಕ ಪ್ರಮುಖ ಪುರುಷರು ಈ ಸಂಘದ ಅಭಿವೃದ್ಧಿಗಾಗಿ ದುಡಿದಿದ್ದಾರೆ. ಈಗ ಭಾರತ ರಿಪಬ್ಲಿಕಿನ ಅಧ್ಯಕ್ಷರೇ ಈ ಸಂಸ್ಥೆಯ ಅಧ್ಯಕ್ಷರಾಗಿಯೂ, ಇಂಡಿಯಾ ಸರಕಾರದ ಆರೋಗ್ಯ ಮಂತ್ರಿ ರಾಜಕುಮಾರಿ ಅಮೃತ ಕೌರವರು ಉಪಾಧ್ಯಕ್ಷರಾಗಿಯೂ, ಜನರಲ್ ಬಹದ್ದೂರ್ ಬಲವಂತಸಿಂಗ್ ಪುರಿಯವರು ಕಾರ್ಯದರ್ಶಿಗಳಾಗಿಯೂ ಈ ಸಂಸ್ಥೆಯನ್ನು ಪೋಷಿಸುತ್ತಿದ್ದಾರೆ. ಹಿಂದೂಸ್ಥಾನದ ಪ್ರತಿ ಪ್ರಾಂತ್ಯದಲ್ಲಿಯೂ ರೆಡ್ ಕ್ರಾಸ್ ಸಂಸ್ಥೆಯ ಶಾಖೆಗಳಿವೆ. ಕೊಡಗಿನಲ್ಲಿ ೧೯೨೨ ನೇ ಇಸವಿಯಲ್ಲಿ ರೆಡ್ ಕ್ರಾಸ್ ಸಂಘವು ಸ್ಥಾಪನೆಯಾಗಿ ಪ್ರಪಂಚದ ಮಹಾ ಯುದ್ಧದ ಪರಿಣಾಮವಾಗಿ ದೇಶದಲ್ಲಿ ಉಂಟಾಗಿದ್ದ ಅನೇಕ ಕಷ್ಟಗಳನ್ನು ನಿವಾರಿಸುವ ಕೆಲಸವನ್ನು ಸಾಧಿಸಿತು. ಈ ಸಂಘವು ೧೯೪೯ ನೇ ಇಸವಿಯಲ್ಲಿ ಕೈಕೊಂಡ ಕಾರ್ಯ ಕ್ರಮಗಳನ್ನು ಸಂಕ್ಷೇಪವಾಗಿ ಕೊಡಲಾಗಿದೆ.

೧. ಪಾಲಂಗಾಲ, ಹೆಬ್ಬಾಲೆ, ಬಿಟ್ಟಂಗಾಲ?ಯಲ್ಲಿ... ಸೇರಿ ಮತ್ತು ಅಮ್ಮತ್ತಿಯಲ್ಲಿ ನಾಲ್ಕು ಸೂಲಗಿತ್ತಿಯರನ್ನು ನೇಮಕ ಮಾಡಿ ಅವರು ಕ್ರಮವಾಗಿ ೬೬,೯೫,೨೦,೩೮ ಹೆರಿಗೆ ಕೆಲಸಗಳನ್ನು ಸುರಕ್ಷಿತವಾಗಿ ನೆರವೇರಿಸಿರುವರು.

೨. ಕೈಕಾಲು ಕತ್ತರಿಸಿ ಅಂಗಹೀನರಾದವರಿಗೆ ಕೃತಕ ಅಂಗಗಳನ್ನು ಉಚಿತವಾಗಿ ಕೊಡುವ ಏರ್ಪಾಡು.

೩. ರೆಡ್ ಕ್ರಾಸ್ ಸಂಘದ ವಾರ್ಷಿಕ ಸಪ್ತಾಹ ಆಚರಣೆ.

(a) ಆರೋಗ್ಯ ದಿನಾಚರಣೆ ಮತ್ತು ಪ್ರದರ್ಶನ.

(b) ಮಲೇರಿಯಾ ಪ್ರದರ್ಶನ.

(c) ೧ ವರ್ಷದಿಂದ ೫ ವರ್ಷ ಪ್ರಾಯದ ಶಿಶುಗಳನ್ನು ಪರೀಕ್ಷಿಸಿ, ಯೋಗ್ಯ ಬಹುಮಾನ ಹಂಚುವಿಕೆ

(d) ಬಡ ಜಗ್ಗರ? ಊಟ.

(e) ಹಾಲು ಮತ್ತು ಹಣ್ಣು ಹಂಚುವುದು, ಪ್ರದರ್ಶನ. ಉತ್ತಮವಾದ ಆಹಾರ ಪದಾರ್ಥಗಳನ್ನು ಏಕ ವಿಧಾನದಲ್ಲಿ ಭಕ್ಷಣ.

(f) ಮೆರವಣಿಗೆ

(g) ರೆಡ್‌ಕ್ರಾಸ್ ಸಂಘಕ್ಕೆ ಹಣ ಸಂಗ್ರಹ ಮಾಡಲು ಪ್ರವೇಶ ಧನ, ಬಾವುಟ ವಿಕ್ರಯ, ಆನೆಸವಾರಿ, ಲಾಟ್ರಿ, ತೆಂಗಿನ ಕಾಯಿ ಗುರಿ, ಚಾ ತಿಂಡಿ ವಿತರಣೆ ಮೊದಲಾದ ಏರ್ಪಾಡುಗಳು.

(h) ಆರೋಗ್ಯ ವಿಚಾರ, ಶಿಶು ಸಂರಕ್ಷಣೆ, ಗರ್ಭಿಣಿ ಸ್ತ್ರೀಯರ ಪೋಷಣೆ ಮೊದಲಾದ ವಿಷಯ ಬೋಧಪ್ರದವಾದ ಭಾಷಣ.

ಇನೂ ಅಲ್ಲದೆ ಪ್ರಚಾರ ಕಾರ್ಯದ ಸಲುವಾಗಿ ಶಾಲೆಯ ಹುಡುಗರ ಸಮ್ಮೇಳನವನ್ನು ಮಾಡಿ ಮಕ್ಕಳ ರೆಡ್ ಕ್ರಾಸ್ ಶಾಖೆಯನ್ನು ಪ್ರೋತ್ಸಾಹ ಗೊಳಿಸಲಾಗಿದೆ. ಈ ವಿಷಯದಲ್ಲಿ ಮಡಿಕೇರಿ ಹೈಸ್ಕೂಲುಗಳ ವಿದ್ಯಾರ್ಥಿಗಳೂ, ಕಾನ್ವೆಂಟಿನ ವಿದ್ಯಾರ್ಥಿನಿಯರೂ ಮತ್ತು ಇತರ ಶಾಲೆಗಳ ಚಿಕ್ಕ ಮಕ್ಕಳೂ ಉಪಾಧ್ಯಾಯರೂ ಭಾಗವಹಿಸಿ ರೆಡ್ ಕ್ರಾಸ್ ದಿನಾಚರಣೆಯನ್ನು ಯಶಸ್ವಿಯಾಗಿ ವರ್ಷಂಪ್ರತಿ ನೆರವೇರಿಸುತ್ತಿರುವುದು ತುಂಬಾ ಸಂತೋಷವಾಗಿದೆ. ಕೊಡಗಿನ ಚೀಫ್ ಕಮಿಷನರ್ ಸಾಹೇಬರು ರೆಡ್ ಕ್ರಾಸ್ ಸಂಘದ ಅಧ್ಯಕ್ಷರಾಗಿಯೂ ಸಿವಿಲ್ ಸರ್ಜನರು ಉಪಾಧ್ಯಕ್ಷರಾಗಿಯೂ, ಡಾಕ್ಟರ ಎಂ. ಯಸ್. ದೇವಯ್ಯನವರು ಮತ್ತು ಮಲೇರಿಯ ಆಫೀಸರವರು ಜಾಯಿಂಟ್ ಸೆಕ್ರೆಟರಿಗಳಾಗಿಯೂ ಮತ್ತು ಇತರ ಅನೇಕ ಪ್ರಮುಖರು ಕಮಿಟಿಯ ಸದಸ್ಯರುಗಳಾಗಿಯೂ ಆಗಾಗ ಸಭೆ ಸೇರಿ ಸಂಘದ ಕಾರ್ಯ ಕ್ರಮಗಳನ್ನು ಯಶಸ್ವಿಯಾಗಿ ಮಾಡಲು ಪ್ರಯತ್ನ ಪಡುತ್ತಿದ್ದಾರೆ.

ಲೋಕದ ಶಾಂತಿ ಸುಖಗಳನ್ನು ಹಾರೈಸಿ ಜಾತಿ, ಮತ, ಭೇದವಿಲ್ಲದೆ ಸೇವೆ ಮಾಡುವ ಈ ಸಂಘವು ಯಶಸ್ವಿಯಾಗಿ ಬಾಳುವಂತೆ ಸರ್ವರೂ ಪ್ರಯತ್ನ ಮಾಡಬೇಕು- ರೆಡ್‌ಕ್ರಾಸ್ ಸಂಸ್ಥೆಯ ಮೂಲ ಪುರುಷನಾದ ಹೆನ್ರಿಡ್ಯೂನಾಂಟ್ ಎಂಬ ಮಹಾಪುರುಷನ ಜನ್ಮದಿನಾಚರಣೆಯ ಈ ದಿನದಲ್ಲಿ ನಾವು ಅವರು ತೋರಿಸಿದ ದಾರಿಯಲ್ಲಿ ನಡೆಯುವಂತೆ ಬುದ್ಧಿಶಕ್ತಿಗಳನ್ನು ಭಗವಂತನು ದಯಪಾಲಿಸಬೇಕೆಂದು ಪ್ರಾರ್ಥಿಸಿ ಲೋಕದಲ್ಲಿ ಶಾಂತಿ ಸುಖ ಸಾಮ್ರಾಜ್ಯವನ್ನು ಕಟ್ಟಲು ಪ್ರಯತ್ನಿಸೋಣ.

ಕೌನ್ಸಿಲು ಠರಾವುಗಳು.

ಈ ಹಿಂದಿನ ಕೌನ್ಸಿಲು ಸಭೆಗಳಲ್ಲಿ ಪಾಸಾದ ಠರಾವುಗಳ ಮೇಲೆ ಚೀಫ್ ಕಮಿಷನರು ಹುಕುಂ ಈ ರೀತಿ ಇದೆ.

(೧) ಪಾರುಪತ್ಯಗಾರರ ಸಂಬಳದ ದರವನ್ನು ಪುನಹ ಬದಲಾಯಿಸಬೇಕೆಂದು ತಾ. ೧೮-೪-೫೦ ರಲ್ಲಿ ಪಾಸಾದ ಠರಾವಿಗೆ ಹಾಗೆ ಮಾಡುವರೆ ಇಂಡಿಯಾ ಸರಕಾರದವರು ಸಮ್ಮತಿ ಕೊಟ್ಟಿರುವದಿಲ್ಲ.

(೨) ಚೆಟ್ಟಿಮಾನಿ ಶಾಲೆಯನ್ನು ಹೈ. ಎಲಿಮೆಂಟರಿ ಶಾಲೆಯಾಗಿ ಮಾಡಲು ಆ ಶಾಲೆಗೆ ಸಾಕಷ್ಟು ಗ್ರಾಂಟು ಕೊಡಬೇಕು.

ಈ ವಿಚಾರದಲ್ಲಿ ಕೌನ್ಸಿಲು ಮತ್ತು ಜಿಲ್ಲಾ ಬೋರ್ಡು ಸದಸ್ಯರು ಸಹಾನುಭೂತಿಯುಳ್ಳವರಿದ್ದರೂ ಹಣದ ಅಭಾವದಿಂದ ಮಂಜೂರಿ ಕೊಡಲಾಗಿಲ್ಲ.

(೩) ಸಹಕಾರ ಮಾರ್ಕೆಟಿಂಗ್ ಸಂಘಗಳು ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಬತ್ತ ದಾಸ್ತಾನು ಮಳಿಗೆಗಳನ್ನು ಕಟ್ಟಲು ಆರ್ಥಿಕ ಸಹಾಯ ಕೊಡಬೇಕು.

ಈ ಸಂಘಗಳ ದಾಸ್ತಾನು ಮನೆಗಳಿಗೆಂದು ರೂ. ೮,೦೦೦ ಮಂಜೂರು ಕೊಡಲಾಗಿದೆ. ೧೯೫೧-೫೨ ಕ್ಕೆ ರೂ. ೨೫,೦೦೦ ವನ್ನು ಇದಕ್ಕಾಗಿ ಫುಡ್ ಬೋನಸ್ಸು ಫಂಡಿನಿಂದ ಇಡಲಾಗಿದೆ. ಪ್ಲಾನಿಂಗ್ ಕಮಿಷನಿನ ಗ್ರಾಂಟು ದೊರೆತರೆ ಹೆಚ್ಚಿನ ವ್ಯವಸ್ಥೆ ಮಾಡಲಾಗುವದು.

(೪) ಕೊಪ್ಪತೋಡು ರಿಪೇರಿಗೆ ಫುಡ್ ಬೋನಸ್ಸಿನಿಂದ ಹಣ ಕೊಡಬೇಕು.

ಈ ವಿಚಾರವನ್ನು ಅಲ್ಲಿಯ ಕ್ಷೇತ್ರದಲ್ಲಿ ಈ ಯೋಜನೆಯನ್ನು ನೇಮಕವಾಗಿರುವ ಸಮಿತಿಗೆ ಬಿಡಲಾಗಿದೆ. ಆ ಸಮಿತಿಯು ಇದನ್ನು ಮೊದಲು ಕೈಗೊಳ್ಳಬೇಕೆನ್ನುವದಾದರೆ ಹಾಗೆ ಮಾಡುವಂತೆ ಇರಿಗೇಶನ್ ಆಫೀಸರಿಗೆ ಸಲಹೆ ಕೊಡಲಾಗುವದು.

(೫) ಸರಕಾರದ ಆಡಳಿತ ವರದಿ ಮುತ್ತಿತರ ಪ್ರಕಟಣೆಗಳನ್ನು ಕೌನ್ಸಿಲು ಸದಸ್ಯರಿಗೆ ಸರಬರಾಯಿಮಾಡಬೇಕು.

ಸಾಮಾನ್ಯ ಆಡಳಿತ ವರದಿ, ಫಾರೆಸ್ಟ್ ಆಡಳಿತ ವರದಿ, ಸಹಕಾರ ಇಲಾಖಾ ವರದಿ, ವ್ಯವಸಾಯ ಇಲಾಖಾ ವರದಿಗಳ ಮೂರು ಮೂರು ಪ್ರತಿಗಳನ್ನು ಕೌನ್ಸಿಲ್ ಸೆಕ್ರೆಟರಿಗೆ ಕೊಟ್ಟು ಕೌನ್ಸಿಲು ಸದಸ್ಯರ ಉಪಯೋಗಕ್ಕಾಗಿ ಕೌನ್ಸಿಲು ವಾಚನಾಲಯದಲ್ಲಿ ಇಡಿಸಲಾಗುವದು.

(೬) ಬಂಪೊಳೆ ಹೈಡ್ರೊ ಎಲೆಕ್ಟ್ರಿಕ್ ಯೋಜನೆಯನ್ನು ಕೈಕೊಳ್ಳಬೇಕು.

ಈ ವಿಚಾರವು ಮದ್ರಾಸು ಸರಕಾರದೊಡನೆ ಪತ್ರವ್ಯವಹಾರ ರೂಪದಲ್ಲಿಯೇ ಇದೆ.

(೭) ಹಾರಂಗಿ ಮತ್ತು ಲಕ್ಷ್ಮಣತೀರ್ಥ ಯೋಜನೆಯನ್ನು ಜಾರಿಯಲ್ಲಿ ತರಬೇಕು.

ಈ ವಿಚಾರಗಳು ಇನ್ನೂ ಪರಿಶೀಲನೆಯಲ್ಲಿವೆ.

(೮) ಕೂಜಿಮಲ್ಲೆನ ಕೈಗಾರಿಕೆಯಲ್ಲಿ ತರಬೇತು ಪಡೆಯಲು ಕೆಲವು ಯುವಕರನ್ನು ಕಳುಹಿಸಬೇಕು.

ಈ ವಿಚಾರದಲ್ಲಿ ಸ್ಥಳೀಯ ಸರಕಾರವು ಮದ್ರಾಸು ಮತ್ತು ಮೈಸೂರು ಸರಕಾರಗಳೊಡನೆ ಪತ್ರವ್ಯವಹಾರ ನಡೆಸುತ್ತಿದೆ.

(೯) ಸೀರೆ ಮಾಡುವ ಮಗ್ಗಗಳನ್ನು ಕೊಂಡುಕೊಳ್ಳಲು ಹೆಚ್ಚು ಬೆಳೆಯಿರಿ ಯೋಜನೆಯ ಆಶ್ರಯದಲ್ಲಿ ಸಾಲ ಕೊಡಬೇಕು.

ಈ ವಿಚಾರವನ್ನು ಜಾರಿಯಲ್ಲಿ ತರಲಾಗುತ್ತಿದೆ.

ಕೊಡಗು

ತಾ. ೨೭-೪-೧೯೫೧ನೇ ಶುಕ್ರವಾರ

ವ್ಯವಸಾಯ ಆದಾಯ ತೆರಿಗೆ

ಕೊಡಗಿನಲ್ಲಿ ವ್ಯವಸಾಯ ಆದಾಯ ತೆರಿಗೆಯನ್ನು ಎತ್ತಬೇಕೆಂದು ಕಳೆದ ಜನವರಿ ತಿಂಗಳಲ್ಲಿ ಪಾಸು ಮಾಡಿದ ಮಸೂದೆಯ ಚರಿತ್ರೆಯು ವಿಶೇಷ ತರಹದ್ದಾಗಿದೆ. ಈ ಚರಿತ್ರೆಯು ಕೊಡಗಿನ ಸಂಯೋಜನಾವಾದಿಗಳ ಮನೋಭಾವನೆಯು ಯಾವ ರೀತಿ ಸಾಗುತ್ತಿದೆಯೆಂಬುದನ್ನು ಸ್ಪಷ್ಟಪಡಿಸುತ್ತದೆ. ಕಳೆದ ಯುದ್ಧದ ದೆಸೆಯಿಂದ ಜೀವನದ ಖರ್ಚು ಹೆಚ್ಚಾದಂತೆಯೇ ಇತರ ಎಲ್ಲಾ ಬಾಬುಗಳು ಹಾಗೂ ಸರಕಾರದ ವೆಚ್ಚವು ಏರುತ್ತಾ ಬಂದಿದೆ. ಇದಕ್ಕಾಗಿ ಉತ್ಪತ್ತಿಯನ್ನೂ ಕೂಡ ಹೆಚ್ಚಿಸಬೇಕಾಯಿತು. ಅದರೊಂದಿಗೆ ಜನೋಪಕಾರಿ ದೇಶಾಭಿವೃದ್ಧಿಯ ಕೆಲಸಗಳನ್ನು ಮಾಡುವ ಅನುಕೂಲವು ದೊರೆಯಿತು. ಈ ದೃಷ್ಟಿಯಿಂದಲೇ ೧೯೪೯ನೇ ಮಾರ್ಚ ತಿಂಗಳಲ್ಲಿ ಸರಕಾರದವರು ವ್ಯವಸಾಯ ಆದಾಯ ತೆರಿಗೆಯನ್ನು ಕೌನ್ಸಿಲಿನ ಮುಂದೆ ತಂದರು. ಆವರೆ ಕೊಡಗಿನಲ್ಲಿ ಆದಷ್ಟು ಬೇಗನೆ ನಿಶಾ ನಿಷೇಧವನ್ನು ಜಾರಿಯಲ್ಲಿ ತರಬೇಕೆಂದೂ, ಇದರಿಂದುಂಟಾಗುವ ನಷ್ಟವನ್ನು ಭರ್ತಿ ಮಾಡಲು ಮಾತ್ರ ಈ ತೆರಿಗೆಯನ್ನು ಹಾಕಬೇಕೆಂದೂ ಕೌನ್ಸಿಲು ಚುನಾಯಿತ ಪ್ರತಿನಿಧಿಗಳು ಈ ಮಸೂದೆಯನ್ನು ವಿರೋಧಿಸಿದರು. ಕೂಡಲೇ ಸರಕಾರವು ಇಂಡಿಯಾ ಸರಕಾರದ ಸೂಚನೆಯಂತೆ ಒಂದೇ ಬಾರಿಗೆ ಪೂರ್ಣ ನಿಶಾನಿಷೇಧವನ್ನು ಜಾರಿಗೆ ತಾರದೆ ನಿಯಂತ್ರಿತ ರೀತಿಯನ್ನು ಕೈಗೊಂಡು ನಂತರದ ಕೌನ್ಸಿಲು ಸಭೆಯಲ್ಲಿ ಪುನಹ ಈ ಮಸೂದೆಯನ್ನು ಚರ್ಚೆಗೆ ತಂದರು. ಅಷ್ಟರಲ್ಲಿ ಕೊಡಗಿನ ಭವಿಷ್ಯದ ನಿರ್ಧಾರಕ್ಕಾಗಿ ಡೆಲ್ಲಿಯಲ್ಲಿ ಒಂದು ಪರಿಷತ್ತು ನಡೆಸಲಾಗುವದೆಂದು ತಿಳಿಯ ಬಂದುದರಿಂದ ಈ ಮಸೂದೆಯನ್ನು ಸದರಿ ಕೌನ್ಸಿಲು ಸಭೆಯಲ್ಲಿ ಚರ್ಚೆಗೆ ಬಿಡಲು ಒಪ್ಪಿದರೂ ಚರ್ಚೆಯನ್ನು ಮತ್ತೊಂದು ಮೀಟಿಂಗಿಗೆ ಮುಂದರಿಸಿಡಲಾಯಿತು.

೧೯೫೦ನೇ ಜನವರಿ ಅಖೈರಿನಲ್ಲಿ ಸದರಿ ತಂದಾಯ ಮಸೂದೆಯು ತರಲ್ಪಟ್ಟು ಸಂಯೋಜನಾವಾದಿಗಳು ಇದಕ್ಕೆ ವಿರೋಧಿಸಿದರೂ ಕೂಡ ವ್ಯವಸಾಯ ಆದಾಯ ತೆರಿಗೆಯ ಮಸೂದೆಯು ಪಾಸಾಗದಿರುವ ಕಾರಣ ಸರಕಾರದ ಆದಾಯವನ್ನು ಹೆಚ್ಚಿಸಬೇಕಾದುದರಿಂದ ಪ್ರತ್ಯೇಕವಾದಿಗಳು ಇದಕ್ಕೆ ಒತ್ತಾಸೆ ಕೊಟ್ಟು ಇದನ್ನು ಒಂದು ಸಿಲೆಕ್ಟ್ ಸಮಿತಿಗೆ ಬಿಡಲಾಯಿತು. ಅದೇ ವರ್ಷ ಮಾರ್ಚ ತಿಂಗಳಲ್ಲಿ ನಡೆದ ಬಡ್ಜೆಟ್ ಮೀಟಿಂಗಿನಲ್ಲಿ ವ್ಯವಸಾಯ ಆದಾಯ ತೆರಿಗೆಯ ಮಸೂದೆಯು ಚರ್ಚೆಗೆ ಬಂದಾಗ್ಯೂ ಸಂಯೋಜನಾವಾದಿಗಳು ಪಾರ್ಟಿ ಮೀಟಿಂಗಿನಲ್ಲಿ ಇದನ್ನು ವಿರೋಧಿಸಲು ತೀರ್ಮಾನಿಸಿದ್ದು ಕೌನ್ಸಿಲು ಮೀಟಿಂಗಿನಲ್ಲಿ ಇದಕ್ಕೆ ಅನಿರೀಕ್ಷಿತವಾಗಿ ಒತ್ತಾಸೆಯನ್ನಿತ್ತು ಅವರದೇ ಬಹುಮತವಿರುವ ಒಂದು ಸಿಲೆಕ್ಟ್ ಕಮಿಟಿಗೆ ಇದನ್ನು ಬಿಡಲಾಯಿತು. ಈ ಸಿಲೆಕ್ಟ್ ಕಮಿಟಿಯು ಮಾಡಿಕೆಯಂತೆ ಒಂದೆರಡು ಮೀಟಿಂಗುಗಳಲ್ಲಿ ಬೇಕಾದ ತಿದ್ದುಪಡಿಯನ್ನು ಮಾಡದೆ ಹತ್ತು ಮೀಟಿಂಗುಗಳನ್ನು ಮಾಡಿ ದೀರ್ಘ ಕಾಲವನ್ನು ತಳ್ಳಿ ಮಸೂದೆಯಲ್ಲಿದ್ದ ಹೆಚ್ಚಿನ ದರವಾದ ರೂಪಾಯಿಗೆ ನಾಲ್ಕಾಣೆಯನ್ನು ಆರಾಣೆಗೆ ಏರಿಸುವಂತೆ ತೀರ್ಮಾನಿಸಿ ಪ್ಲಾಂಟರುಗಳು ಇವರಲ್ಲಿಗೆ ಬರುವಂತೆ ಮಾಡಿ ಪುನಹ ಆರನ್ನು ನಾಲ್ಕಾಣೆಗೆ ಇಳಿಸಿ ತಮ್ಮ ವರದಿಯನ್ನು ಕೌನ್ಸಿಲಿಗೆ ಒಪ್ಪಿಸಿದರು. ಇದರಿಂದ ತೃಪ್ತರಾಗದೆ ಸಿಲೆಕ್ಟ್ ಕಮಿಟಿಯ ಸದಸ್ಯರೊಬ್ಬರೇ ಈ ದರವನ್ನು ರೂಪಾಯಿಗೆ ಮೂರಾಣೆಗೆ ಇಳಿಸಬೇಕೆಂದು ತಿದ್ದುಪಡಿಯನ್ನು ತಂದರು. ಅದಕ್ಕೆ ಇಂಡಿಯಾ ಸರಕಾರವು ಒಪ್ಪಲಿಲ್ಲ. ಹೀಗೆ ಸಾವಕಾಶ ಮಾಡಿದುದರಿಂದ ಈ ಮಸೂದೆಯನ್ನು ಅದೇ ವರ್ಷ ಡಿಸೆಂಬರ್ ಕೌನ್ಸಿಲು ಸಭೆಯಲ್ಲಿ ಚರ್ಚಿಸಲು ಸಾಧ್ಯವಾಗಲಿಲ್ಲ. ಇದಕ್ಕಾಗಿ ಈ ವರ್ಷ ಜನವರಿ ತಿಂಗಳಲ್ಲಿ ಒಂದು ವಿಶೇಷ ಕೌನ್ಸಿಲು ಸಭೆಯನ್ನು ನಡೆಸಿದ್ದಾಯಿತು. ಈ ಸಭೆಯಲ್ಲಿ ಸಿಲೆಕ್ಟ್ ಕಮಿಟಿಯ ಸದಸ್ಯರೊಬ್ಬರು ಈ ಮಸೂದೆಗೆ ಇನ್ನೂ ತಿದ್ದುಪಡಿ ಅವಶ್ಯವಿರುವದರಿಂದ ಇದರ ಚರ್ಚೆಯನ್ನು ಬರುವ ಬಡ್ಜೆಟ್ ಮೀಟಿಂಗಿಗೆ ಮುಂದರಿಸಬೇಕೆಂದು ಮಾಡಿದ ಸೂಚನೆಯನ್ನು ಕೌನ್ಸಿಲಿನ ಬಹುಮತದವರು ಒಪ್ಪಲಿಲ್ಲ. ಮಸೂದೆಯನ್ನು ಚರ್ಚೆಯ ನಂತರ ಓಟಿಗೆ ಹಾಕಲಾಗಿ ಮಸೂದೆಯ ತತ್ವವನ್ನು ಒಮ್ಮೆ ಒಪ್ಪಿ ಸಿಲೆಕ್ಟ್ ಕಮಿಟಿಯಲ್ಲಿ ಬೇಕಾದ ತಿದ್ದುಪಡಿಗಳನ್ನು ಮಾಡಿದ ಸಂಯೋಜನಾ ಪಕ್ಷದವರು ಮಸೂದೆಗೆ ವಿರೋಧ ಮಾತಾಡಿ ಯಾವ ಕಡೆಗೂ ಓಟು ಮಾಡದೆ ತಟಸ್ಥರಾದರು. ಆದರೂ ಮಸೂದೆಯು ಬಹುಮತದಿಂದ ಪಾಸಾಯಿತು. ಇದರಿಂದಲೂ ತೃಪ್ತರಾಗದೆ ಸಂಯೋಜನಾವಾದಿಗಳು ಮೊನ್ನೆ ನಡೆದ ಬಡ್ಜೆಟ್ ಮೀಟಿಂಗಿನಲ್ಲಿ ಈ ತೆರಿಗೆಯನ್ನು ಕೊಡಗಿನ ವಿಲೀನೀಕರಣದ ತೀರ್ಮಾನದ ವರೆಗೆ ವಸೂಲ್ಮಾಡದೆ ಬಾಕಿಮಾಡಬೇಕೆಂದು ಠರಾವು ತಂದರು. ಹೀಗೆ ಇದನ್ನು ಬಾಕಿ ಮಾಡುವದಾದರೆ ಬಡ್ಜೆಟ್ಟಿನಲ್ಲಿ ತೋರಿಸಿರುವ ಇದರ ಉತ್ಪತ್ತಿ ಎಂಟು ಲಕ್ಷ ರೂಪಾಯಿಗಳನ್ನು ವಜಾಮಾಡಬೇಕಾಗುವದು ಮತ್ತು ಕಾಲೇಜು ಕಟ್ಟಡಕ್ಕೆ ಇಟ್ಟಿರುವ ನಾಲ್ಕು ಲಕ್ಷ ರೂಪಾಯಿ, ಜಿಲ್ಲಾ ಬೋರ್ಡ ನೌಕರರ ಸಂಬಳ ಬಡ್ತಿಗೆ ಇಟ್ಟಿರುವ ಎರಡು ಲಕ್ಷ ರೂಪಾಯಿ, ಗ್ರಾಮಾಂತರ ಶಾಲೆ, ಬಾವಿ ಮತ್ತು ಸಹಕಾರಿ ಕಟ್ಟಡಗಳಿಗೆ ಇಟ್ಟಿರುವ ಒಂದು ಲಕ್ಷ ರೂಪಾಯಿ ಇವೆಲ್ಲವನ್ನೂ ವಜಾ ಮಾಡಬೇಕಾಗುವದೆಂದು ಚೀಫ್ ಕಮಿಷನರು ವಿವರವಾಗಿ ಹೇಳಿದರು. ಆದರೂ ಕೂಡ ಸಂಯೋಜನಾವಾದಿಗಳು ಈ ಠರಾವಿಗೆ ಒತ್ತಾಸೆ ಕೊಟ್ಟರೂ ಅದು ಬಹುಮತದಿಂದ ಸೋಲಿಸಲ್ಪಟ್ಟಿತು. ಇದಕ್ಕೆ ಒತ್ತಾಸೆಯಾಗಿ ಕೊಡಗಿನ ಮೆಂಬರೂ ಈ ತೆರಿಗೆಯನ್ನು ಮುಂದಕ್ಕೆ ತಳ್ಳಬೇಕೆಂದು ಪಾರ್ಲಿಮೆಂಟಿನಲ್ಲಿ ಭಾಷಣ ಮಾಡಿರುವರು.

ಇದರಿಂದ ಸಂಯೋಜನಾವಾದಿಗಳ ಮುಖ್ಯ ಉದ್ದೇಶವು ಒಡೆದು ಕಾಣುತ್ತದೆ. ಕೊಡಗಿನ ಸರಕಾರದ ಉತ್ಪತ್ತಿಯನ್ನು ಹೆಚ್ಚಿಸಲು ಬಿಡದೆ ಖೋತಾ ಬಡ್ಜೆಟ್ಟನ್ನು ತೋರಿಸಿ ಕೂಡಲೇ ಕೊಡಗನ್ನು ದೊಡ್ಡ ಪ್ರಾಂತದೊಂದಿಗೆ ಸಂಯೋಜಿಸಲು ಇಂಡಿಯಾ ಸರಕಾರವನ್ನು ಒತ್ತಾಯಪಡಿಸುವದೇ ಇವರ ಗುರಿಯೆಂದು ನಿಸ್ಸಂದೇಹವಾಗಿ ಹೇಳಬಹುದು. ಆದ್ದರಿಂದಲೇ ಸರಕಾರದ ಆದಾಯವನ್ನು ಬಹುಮಟ್ಟಿಗೆ ಹೆಚ್ಚಿಸಬಹುದಾದ ಕೇವಲ ಅನುಕೂಲಸ್ಥರಿಗೆ ಬೀಳುವ ಈ ತೆರಿಗೆಯನ್ನು ಪ್ರಾರಂಭದಿಂದಲೇ ವಿರೋಧಿಸುತ್ತಾ ಬಂದು ಮಸೂದೆಯು ಪಾಸಾದ ಮೇಲೂ ಅದನ್ನು ತಡೆಯಲು ವಿಶ್ವಪ್ರಯತ್ನ ಮಾಡುತ್ತಿರುವದಾಗಿದೆ. ಈ ತೆರಿಗೆಯಾದರೂ ಬಡವರ ಮೇಲೆ ಬೀಳುವಂಥಾದ್ದಲ್ಲ. ತಕ್ಕ ಆದಾಯವಿದ್ದು ತೆರಿಗೆ ಕೊಡಲು ಶಕ್ತಿ ಇರುವವರು ಮಾತ್ರ ಇದನ್ನು ಕೊಡಬೇಕಾಗುವದು. ಕೊಡಗನ್ನು ಪ್ರತ್ಯೇಕ ಇಟ್ಟುಕೊಳ್ಳುವದರಿಂದ ದೇಶಕ್ಕೆ ಬಹುಮಟ್ಟಿನ ಹಿತವಾದೀತೆಂದು ನಂಬುವ ಅನುಕೂಲಸ್ಥರು, ಪ್ಲಾಂಟರುಗಳೂ, ಈ ತೆರಿಗೆಯನ್ನು ಕೊಡಲು ಸ್ವಲ್ಪವೂ ಹಿಂಜರಿಯಲಿಕ್ಕಿಲ್ಲವೆಂಬುದು ನಿಸ್ಸಂದೇಹ. ಹೇಗೂ ದೇಶದ ಭವಿಷ್ಯವು ಇಲ್ಲಿಯ ಜನರ ಕೈಯಲ್ಲೇ ಇದ್ದು ಅದನ್ನು ನಿರ್ಧರಿಸುವ ಅವಕಾಶವು ಬರುವ ಚುನಾವಣೆಯಲ್ಲಿ ಜನರಿಗೆ ದೊರೆಯುವದು. ಅಷ್ಟರಲ್ಲಿ ಈ ತೆರಿಗೆಯನ್ನು ಎತ್ತಿ ಸರಕಾರದ ಆರ್ಥಿಕ ಸ್ಥಿತಿಯನ್ನು ಭದ್ರಪಡಿಸಿ ದೇಶಕ್ಕೆ ಕಾಲೇಜು ಕಟ್ಟಡ, ಜಿಲ್ಲಾ ಬೋರ್ಡ ನೌಕರರ ವೇತನ ಮೊದಲಾದ ಜನಹಿತ ಕೆಲಸವನ್ನು ಮಾಡುವದಲ್ಲದೆ, ಕೊಡಗು ತನ್ನ ಕಾಲಿನಲ್ಲಿ ನಿಲ್ಲಲು ಶಕ್ತವಿದೆಯೆಂಬುದನ್ನೂ ಕೂಡ ಸ್ಪಷ್ಟಪಡಿಸಬೇಕಾಗಿದೆ. ಈ ದೃಷ್ಟಿಯಿಂದ ಕೌನ್ಸಿಲಿನ ತೀರ್ಮಾನವು ಯೋಗ್ಯವಾಗಿದೆ. ಇಂಡಿಯಾ ಸರಕಾರವು ಈ ಮಸೂದೆಯನ್ನು ಕೂಡಲೆ ಮಂಜೂರ್ಮಾಡಿ ವಸೂಲಾತಿಗೆ ಅನುಕೂಲಪಡಿಸುವರಾಗಿ ಆಶಿಸುತ್ತೇವೆ.

ವರ್ತಮಾನ.

ಕಾರ್ಗುಂದದಲ್ಲಿ ವಾರಕ್ಕೊಂದಾವರ್ತಿ ಇದ್ದ ಆಸ್ಪತ್ರೆಯನ್ನು ಏಪ್ರಿಲ್ ತಾ ೧೫ ರಿಂದ ವಾರಕ್ಕೆರಡಾವರ್ತಿ ಅಂದರೆ ಮಂಗಳವಾರ ಮತ್ತು ಶನಿವಾರ ಇರುವಂತೆ ಸರಕಾರದವರು ಏರ್ಪಡಿಸಿರುತ್ತಾರೆ.

ರಾಜೂರಿನಲ್ಲಿ ಜಾಭುವಾರುಗಳ ಆದರ್ಶ ಕೇಂದ್ರವೊಂದನ್ನು ತೆರೆಯುವ ಸಮಾರಂಭವು ಕೊಡಗಿನ ಚೀಫ್ ಕಮಿಷನರಿಂದ ತಾರೀಕು ೨೪-೪-೫೧ ರಲ್ಲಿ ನಡೆಯಿತು.

ಪಾರುಪತ್ತೆಗಾರರುಗಳಾದ ಶ್ರೀ. ಚನ್ನಿರ ಸುಂದಪ್ಪನವರನ್ನು ಮಡಿಕೇರಿಗೆ, ಭೀಮರಾವ್‌ರವರನ್ನು ಅಮ್ಮತಿಗೆ, ಮುಂಡೇಟಿರ ಸೋಮಣ್ಣನವರನ್ನು ವೀರಾಜಪೇಟೆಗೆ, ಕೆ. ಚಿಟ್ಯಪ್ಪನವರನ್ನು ಪೊನ್ನಂಪೇಟೆಗೆ, ಚಂಡಿರ ಬೆಳ್ಯಪ್ಪನವರನ್ನು ನಾಪೋಕ್ಲಿಗೆ ಮತ್ತು ಕೆ. ಸೋಮಪ್ಪನವರನ್ನು ಸೋಮವಾರಪೇಟೆಗೆ ೧-೫-೫೧ ರಿಂದ ವರ್ಗ ಮಾಡಿರುವರು.

ತಾರೀಕು ೧೬ನೇ ಸೋಮವಾರ ಕೋಣಗಣ ಗ್ರಾಮದ ಗಾಂಧಿ ಮಂಟಪದಲ್ಲಿ ಶ್ರೀ. ರಾಮಕೃಷ್ಣ ಪರಮಹಂಸರ ೧೧೬ನೇ ಜಯಂತ್ಯುತ್ಸವವನ್ನು ನಡೆಸಲಾಯಿತು. ಶ್ರೀಗಳಾದ ಕೆ. ರಾಮಭಟ್ಟರು ಅಧ್ಯಕ್ಷತೆ ವಹಿಸಿದ್ದರು. ಶ್ರೀಗಳಾದ ಪಿ. ಕರುಂಬಯ್ಯ ಕೆ. ಪೆಮ್ಮಯ್ಯ, ಪಿ. ಕೆ. ಪರಮೇಶ್ವರಯ್ಯ ಮೊದಲಾದವರು ಭಾಷಣ ಮಾಡಿದರು. ಶ್ರೀ. ಗೋಪಾಲಕೃಷ್ಣಯ್ಯನವರು ಹರಿಕಥೆಮಾಡಿದರು.

ಚೆಟ್ಟಿಮಾನಿ ಹೊಸ ಶಾಲಾ ಕಟ್ಟಡದ ಪ್ರಾರಂಭೋತ್ಸವವು ತಾ. ೨೨-೪-೫೧ ರಲ್ಲಿ ಚೀಫ್ ಕಮಿಷನರಿಂದ ನಡೆಯಿತು. ಕೌನ್ಸಿಲ್ ಮೆಂಬರುಗಳಾದ ಶ್ರೀ. ಎನ್ ಸೋಮಣ್ಣ, ಕೆ. ಮಲ್ಲಪ್ಪ, ಪಿ. ಐ. ಬೆಳ್ಯಪ್ಪ ಇವರುಗಳೂ ಜಿಲ್ಲಾ ಬೋರ್ಡ ಪ್ರೆಸಿಡೆಂಟರು ಶ್ರೀ ಐ. ಪಿ. ಕಾರ್ಯಪ್ಪನವರೂ ಹಾಜರಿದ್ದರು. ಈ ವರ್ಷ ಆ ಶಾಲೆಯಲ್ಲಿ ಆರನೇ ತರಗತಿ ತೆರೆಯುವ ನಿರ್ಣಯವಾಗಿದೆ.

೧೯೩೯-೪೫ ರಲ್ಲಿ ನಡೆದ ಯುದ್ಧದಲ್ಲಿ ಮದ್ರಾಸ್ ಸ್ಯಾಪರ್ಸ್ ಯೂನಿಟ್ಟಿನಲ್ಲಿ ಕೆಲಸ ಮಾಡಿ ಮಡಿದ ಯಾ ಬಿರುದುಗಳ ಹೊಂದಿದವರ ಹುಡುಗರು ಪ್ರಾಯ ೭ ರಿಂದ ೧೨ ರ ವಳಗೆ ಇರುವವರಿಗೆ "ಮದ್ರಾಸ್ ಸ್ಯಾಪರ್ಸ್ ವಾರ್ ಮೆಮೊರಿಯಲ್ ಬಾಯ್ಸ ಹೌಸ್" ನಲ್ಲಿ ಪ್ರವೇಶ ದೊರೆಯುವುದು. ಹೆಚ್ಚಿನ ವಿಷಯವನ್ನು ಮಡಿಕೇರಿಯಲ್ಲಿರುವ ಡಿಸ್ಟ್ರಿಕ್ಟ್ ಸೋಲ್ಜರ್ಸ್ ಸೈಲರ್ಸ್ ಬೋರ್ಡಿನ ಸೆಕ್ರೆಟರಿಯವರಿಂದ ತಿಳಿದು ಕೊಳ್ಳಬಹುದು.

ಕೊಡಗು ಪೋಲೀಸು ದಳಕ್ಕೆ ಸ್ಪೆಷಲ್ ಕಾನ್‌ಸ್ಟೇಬಲ್ಲುಗಳಾಗಿ ಸೇರಲು ಪ್ರಾಯ ೧೮ ರಿಂದ ೨೫ ರ ವಳಗೆ ಇದ್ದು ಚೆನ್ನಾಗಿ ಕನ್ನಡವಿದ್ದು ಓದಲು ಬರೆಯಲು ಗೊತ್ತಿರುವ ತರುಣರು ಬೇಕಾಗಿರುವರು. ಇಂಗ್ಲಿಷ್ ಭಾಷೆ ತಿಳಿದವರೂ ಸಹ ಸೇರಲು ಬಹುದು. ಸೇರಲು ಇಷ್ಟವುಳ್ಳವರು ಮಡಿಕೇರಿ ಡಿಸ್ಟ್ರಿಕ್ಟ್ ಎಂಪ್ಲಾಯಿಮೆಂಟ್ ಆಫೀಸಿಗೆ ಮೇ ತಾರೀಕು ಒಂದರಲ್ಲಿ ಹಾಜರಾಗಬೇಕಾಗಿದೆ.

೧೯೪೨ ನೇ 'ಕ್ವಿಟ್ ಇಂಡಿಯಾ' ಚಳವಳದಲ್ಲಿ ಜೈಲ ವಾಸವನ್ನನುಭವಿಸಿದ ಬೇಲೂರಿನ ಶ್ರೀ. ಬಿ. ಸಿ. ಸಿದ್ದಪ್ಪನವರು ತಾ. ೧೧-೪-೫೧ ರಲ್ಲಿ ಶಿವಾಧೀನರಾದರು.

ರೆಡ್‌ಕ್ರಾಸ್ ಸಂಘದ ಮಡಿಕೇರಿ ಶಾಖೆಯ ಆಶ್ರಯದಲ್ಲಿ ಶಿಶುಪ್ರದರ್ಶನವು ತಾ. ೧೮-೫-೫೧ ರಲ್ಲಿ ನಡೆಯುವದು.

ಕೊಡಗಿನ ಅ. ಕಮಿಷನರು ತಾ. ೧೬-೭-೫೧ ರಿಂದ ನಿವೃತ್ತರಾಗಬೇಕೆಂದೂ ಅವರ ಬದಲಿಗೆ ಕೇಂದ್ರ ಪಬ್ಲಿಕ್ ಸರ್ವಿಸ್ ಕಮಿಷನಿನವರು ಉಮೇದುವಾರರನ್ನು ಆರಿಸುವರೆಂದೂ ತಿಳಿಯಬಂದಿದೆ.

ಕರ್ನಾಟಕ ಪ್ರಾಂತ್ಯ.

ಪ್ರತ್ಯೇಕ ಕರ್ನಾಟಕ ಪ್ರಾಂತ್ಯವನ್ನು ಬೇಗನೆ ನಿರ್ಮಿಸಬೇಕೆಂದು ದೆಹಲಿಯಲ್ಲಿರುವ ಹೈದರಾಬಾದು, ಕೊಡಗು, ಮದ್ರಾಸು ಮತ್ತು ಬೊಂಬಾಯಿಯ ಕನ್ನಡ ಭಾಗದ ಪ್ರತಿನಿಧಿಗಳು ಶ್ರೀ. ಎಸ್ ನಿಜಲಿಂಗಪ್ಪನವರ ಮುಂದಾಳ್ತನದಲ್ಲಿ ಭಾರತ ಒಕ್ಕೂಟದ ಅಧ್ಯಕ್ಷರಾದ ಬಾಬು ರಾಜೇಂದ್ರಪ್ರಸಾದರಿಗೆ ಒಂದು ಮನವಿಯನ್ನರ್ಪಿಸಿರುವದಾಗಿ ಪ್ರಕಟವಾಗಿದೆ.

ಓದುಗರ ಓಲೆಗಳು

ಬಾಳೆಲೆ ಬಸ್ ಲೈನ್

ಅನೇಕ ವರ್ಷಗಳಿಂದ ಜೋರಾಗಿ ಬರೆದ ಫಲವಾಗಿ ಗೋಣಿಕೊಪ್ಪಲಿನಿಂದ ಬಾಳೆಲೆಗೆ ಹೋಗುವ ರಸ್ತೆಗೆ ಸರಕಾರವು ಕಲ್ಲು ಹಾಕಿಸಿ, (ಇನ್ನೂ ಪೂರ್ತಿಯಾಗಿಲ್ಲ!) ಒಂದು ಬಸ್ಸು ಲೈನನ್ನು ಕೊಟ್ಟಿದೆ. ಇದು ಸಂತೋಷದ ಸಂಗತಿ. 'ಕೂರ್ಗ್ ಚಾಂಪಿಯನ್ ಮೋಟರ್ ಸರ್ವಿಸ್' ಎಂಬ ಬಸ್ಸೊಂದು ಬೆಳಗ್ಗೆ ಏಳು ಗಂಟೆಗೆ ಬಾಳೆಲೆಯಿಂದ ಹೊರಟು, ವೀರಾಜಪೇಟೆಗಾಗಿ, ತಲಚೇರಿಗೆ ಹೋಗಿ, ಸಾಯಂಕಾಲ ಸುಮಾರು ಆರು ಗಂಟೆಗೆ ಹಿಂತಿರುಗುತ್ತದೆ. ಆದರೆ ಈ ಬಸ್ಸಿನಿಂದ ಪ್ರಯೋಜನವನ್ನು ಹೊಂದುತ್ತಿರುವವರು ಕೇವಲ ಬಾಳೆಲೆ ಮತ್ತು ಅದರ ಸುತ್ತಮುತ್ತಲಿನ ಜನರು ಮಾತ್ರ ಎಂದರೆ ಅತ್ಯುಕ್ತಿಯಾಗಲಾರದು! ಅಲ್ಲಿಂದ ಹೊರಡುವಾಗಲೇ ಬಸ್ಸಿನಲ್ಲಿ ಸ್ಥಳವಿಲ್ಲದಂತಾಗಿ, ದಾರಿಯುದ್ದಕ್ಕೂ ಕಾದಿರುವ ಜನರು ನಿರಾಶರಾಗಿ ಹಿಂದಿರುಗುವುದು, ಅಥವಾ ಬಿಸಿಲಲ್ಲಿ ಕಷ್ಟದಿಂದ ನಡೆದುಹೋಗುವುದು ಒಂದು ಮಾಮೂಲಾಗಿ ಹೋಗಿಬಿಟ್ಟಿದೆ! ಹೆಚ್ಚು ಜನರನ್ನು ತುಂಬಿಸಿಕೊಂಡರೆ ಪೋಲೀಸರು 'ಚಾರ್ಜ್' ಮಾಡುವರೆಂಬ ಭಯದಿಂದ ಎಷ್ಟೋ ಪ್ರಯಾಣಿಕರನ್ನೆಲ್ಲಾ ಬಸ್ಸಿನವರು ಬಿಟ್ಟೇ ಹೋಗಬೇಕಾಗಿದೆ. ಫಲವಾಗಿ, ಸಾಧಾರಣ ಇನ್ನೂ ಮೂರು ನಾಲ್ಕು ಬಸ್ಸುಗಳಿಗಿರುವಷ್ಟು ಜನರು ನಡೆದೇ ಹೋಗಬೇಕಾಗಿದೆ.

ಆದುದರಿಂದ ಸರಕಾರದವರು ಬಾಳೆಲೆಗೆ ಇನ್ನೊಂದು ಬಸ್ ಲೈನನ್ನು ಯಾರಿಗಾದರೂ ಕೊಟ್ಟು, ಕಷ್ಟಪಡುತ್ತಿರುವ ಪ್ರಯಾಣಿಕರಿಗೆ ಸಹಾಯಮಾಡಬೇಕಾಗಿ ವಿನಂತಿ. ಇಲ್ಲಿಗೆ ಬಸ್ ಲೈನನ್ನು ಬೇರೆ ಒಬ್ಬೊಬ್ಬರು ಕೇಳುತ್ತಿರುವರೆಂದು ತಿಳಿದು ಬಂದಿರುವುದರಿಂದ ಈ ವಿಷಯದಲ್ಲಿ ಹೆಚ್ಚಿನ ತೊಂದರೆಯೇ ಪಡಬೇಕಾಗುವಂತಿಲ್ಲ.

ಕೆ. ಸಿ. ಭೀಮಯ್ಯ.

ಇದು ಸರಿಯೇ?

ತಾರೀಕು ೧೭ರಲ್ಲಿ ಫ್ರೇಜರ್‌ಪೇಟೆಯ ಹತ್ತಿರದ ರಾಮೇಶ್ವರ ದೇವಸ್ಥಾನದ ಉತ್ಸವ ನಡೆದಿತ್ತು. ಅದೇ ದಿನ ಈ ಹೋಬಳಿಯ ಹರಿಜನೋದ್ಧಾರ ಸಂಘದ ವಾರ್ಷಿಕ ಮಹಾಸಭೆಯೂ ನಡೆದಿತು. ಸಭೆಗೆ ಅತಿಥಿಗಳಾಗಿ ಮಡಿಕೇರಿಯಿಂದ ಶ್ರೀಗಳಾದ ಎಸ್. ಸೋಮಣ್ಣ, ಡಾ. ನಂಜುಂಡೇಶ್ವರ, ಊರಿನ ದೇವಯ್ಯ ಇವರುಗಳು ಬಂದಿದ್ದರು. ಸ್ಥಳೀಯ ಸುಧಾರಕರೆನಿಸಿದ ಶ್ರೀ. ಕೆ. ನಂಬೀಶನ್ ಮತ್ತು ಕೆ. ಕೆ. ಐಯ್ಯಪ್ಪನವರಿದ್ದರು. ಸಾಯಂಕಾಲ ಕೆಲವೇ ಜನರೊಡನೆ ಮಡಿಕೇರಿಯಿಂದ ಮುಂದಾಳುಗಳೆನ್ನುವವರು ಕೆಲವು ಹರಿಜನರನ್ನು ಸೇರಿಸಿಕೊಂಡು ದೇವಸ್ಥಾನಕ್ಕೆ ನುಗ್ಗಿ ಅವರಿಗೆ ಪ್ರಸಾದ ಕೊಡಬೇಕೆಂದು ಪೂಜಾರಿಗೆ ಹೇಳಿದರು. ದೇವಸ್ಥಾನದ ಪ್ರೆಸಿಡೆಂಟರನ್ನು ಕೇಳದೆ ಹಾಗೆ ಮಾಡುವದಿಲ್ಲವೆಂದು ಪೂಜಾರಿ ಜೇವದ ಕಾರಣ ಈ ಮುಂದಾಳುಗಳು ಸರಕಾರವು ಪಾಸುಮಾಡಿರುವ ಮಂದಿರ ಪ್ರವೇಶ ಕಾನೂನಿನ ವಿಚಾರ ವಿವರಿಸಿ ಅದರಂತೆ ವರ್ತಿಸದ್ದಿದ್ದರೆ ಶಿಕ್ಷೆಯಾಗವದೆಂದರು. ಅರ್ಚಕರು ಇದನ್ನು ಪ್ರೆಸಿಡೆಂಟರಿಗೆ ತಿಳಿಸಲು ಹೋದರು. ಇಷ್ಟರಲ್ಲಿ ಅಲ್ಲಿದ್ದ ಕೆಲವು ಗ್ರಾಮಸ್ಥರು ಸೇರಿ ದೇವಸ್ಥಾನಕ್ಕೆ ಸಂಬಂಧಿಸಿದವರನ್ನು ಕೇಳದೆ ಹರಿಜನರನ್ನು ಸೇರಿಸಿದ್ದು ತಪ್ಪೆಂದು ರೇಗಿದರು. ಪೋಲೀಸರು ಬಂದು ಸಮಾಧಾನ ಮಾಡಿ ಮಡಿಕೇರಿಯಿಂದ ಬಂದವರನ್ನು ದೊಂಬಿಯಿಂದ ತಪ್ಪಿಸಿ ಕಾರಿನಲ್ಲಿ ಮಡಿಕೇರಿಗೆ ಕಳುಹಿಸಿದರು. ಈ ವರ್ತಮಾನ ಗ್ರಾಮಗಳಲ್ಲಿ ಹಬ್ಬಿ ಹೆಬ್ಬಾಲೆಯಿಂದ ಸುಮಾರು ಸಾವಿರದ ಐನೂರು ಜನರ ವರೆಗೆ ಬಂದು ದೇವಸ್ಥಾನದಲ್ಲಿ ಸೇರಿದರು. ಇವರೆಲ್ಲರೂ ಮಡಿಕೇರಿ ಮುಂದಾಳುಗಳ ವರ್ತನೆಯಿಂದ ರೇಗಿದ್ದರು. ಅವರ ಕೋಪವು ಹದ್ದುಮೀರಿತ್ತು. ಸ್ಥಳೀಯ ಮುಂದಾಳುಗಳೆಂದು ಕೊಂಡಿದ್ದ ನಂಬೀಶನ್ ಮತ್ತು ಐಯ್ಯಪ್ಪ ಇವರು ಮನೆಯೊಳಗೆ ಅಡಗಿ ಬಾಗಿಲು ಹಾಕಿಕೊಳ್ಳಬೇಕಾಯಿತು. ಅಲ್ಲಿಯ ಪೋಲೀಸರು, ಶ್ರೀ. ಹೋರಿಗೌಡನ ಅಪ್ಪಯ್ಯ, ಮೊದಲಾದವರು ಜನರನ್ನು ಸಮಾಧಾನ ಮಾಡಿದರು. ಆದರೂ ಮಡಿಕೇರಿಯಿಂದ ಪೋಲೀಸು ಸುಪರಿಂಟೆಂಡೆಂಟರನ್ನೂ ಇತರ ಪೋಲೀಸು ಉದ್ಯೋಗಿಗಳನ್ನು ಕರೆಸಬೇಕಾಯಿತು. ಅವರು ಬಂದು ಜನತೆಗೆ ಸಮಾಧಾನ ಹೇಳಿ ದೇವಸ್ಥಾನದ ಉತ್ಸವ ನಡೆಯುವಂತೆ ಮಾಡಿದರು. ದೇವಸ್ಥಾನಕ್ಕೆ ಸಂಬಂಧಿಸಿದ ಜನರನ್ನು ಕೇಳದೆ ಅವರ ಸಹಕಾರದಿಂದ ವರ್ತಿಸದೆ ಈ ರೀತಿ ಮುಂದಾಳುಗಳೆನ್ನುವವರು ಬೇಜವಾಬ್ದಾರಿಯಿಂದ ವರ್ತಿಸಿ ಅಶಾಂತಿಗೆ ಎಡೆಗೊಡುವುದು ಯಾವ ಹರಿಜನೋದ್ಧಾರವಿದು?

ಹಾಜರಿದ್ದವ.

ಮಲೇರಿಯೊದ ಹಾವಳಿ.

ಕೊಡಗಿಗೆ ಮಲೇರಿಯ ಡಿಪಾರ್ಟ್‌ಮೆಂಟು ಬಂದು ಕೆಲವೇ ತಿಂಗಳಗಳ ವರೆಗೆ ಬಹಳ ಮುತುವರ್ಜಿಯಿಂದ ಕೆಲಸ ಮಾಡಿದರು. ಆ ಸಮಯದಲ್ಲಿ ಪ್ರತಿಯೊಂದು ಮನೆಯೂ ಸಹ ಸ್ವಲ್ಪ ಮಟ್ಟಿಗೆ ಆರೋಗ್ಯವಲ್ಲಿತ್ತು. ಈಗ ಮಲೇರಿಯ ಡಿಪಾರ್ಟ್‌ಮೆಂಟಿನವರು ಮನೆಗಳಿಗೆ ಮದ್ದು ಚೆಲ್ಲುವ ಕಸಬನ್ನು ನಿಲ್ಲಿಸಿದಂತಿದೆ! ಮನೆಗಳಿಗೆ ಮದ್ದು ಚೆಲ್ಲಲಿಕ್ಕೆ ಬಾರದೆ ತಿಂಗಳು ಗಟ್ಟಲೆಯಾಗಲಿಕ್ಕೆ ಆಯಿತು. ಅಂತು ಅವರ ಬರುವಿಕೆಯೇ ಕಾಣುವುದಿಲ್ಲ. ಮಲೇರಿಯೊ ಡಿಪಾರ್ಟ್‌ಮೆಂಟಿನವರ ಮೇಲಾಧಿಕಾರಿಯು ಬರುವಾಗ ಮಾತ್ರ ಮಲೇರಿಯ ಡಿಪಾರ್ಟ್‌ಮೆಂಟಿನಲ್ಲಿ ನೇಮಕ ಹೊಂದಿದ ಇನ್ಸ್‌ಪೆಕ್ಟರುಗಳು ಬಹಳ ಮುತುವರ್ಜಿಯಿಂದ ಕೆಲಸ ಮಾಡಿಸುವುದು ಕಾಣ ಬರುವುದು. ಇದರಿಂದಾಗಿ ಮನೆ ಮನೆಗಳಲ್ಲಿ ಸೊಣ್ಣ, ಸೊಳ್ಳೆ, ಮತ್ತು ಇನ್ನಿತರ ಕ್ರಿಮಿಕೀಟಗಳ ಹಾವಳಿಯನ್ನು ತಡೆಯಲಸಾಧ್ಯವಾಗಿರುವುದು. ಇದನ್ನು ತಡೆಯಲು ಯಾವ ಸಾಹಿತ್ಯವೂ ಇಲ್ಲದ ನಮ್ಮಿಂದ ಸಾಧ್ಯವೇ? ದಿನೇ ದಿನೇ ಮಲೇರಿಯವು ಹರಡುತ್ತಿರುವುದು ಜನರೆಲ್ಲರೂ ಆರೋಗ್ಯವಿಲ್ಲದೆ ನರಳುತ್ತಿರುವರು. ಇನ್ನಾದರೂ ಈ ಮಲೇರಿಯೊ ಡಿಪಾರ್ಟ್‌ಮೆಂಟಿನವರು ಕಟ್ಟೆಮಂಚಳ್ಳಿ ಕಡೆ ಒಮ್ಮೆ ಬರುವರೇ?

ಮಲೇರಿಯದಿಂದ ನೊಂದವನು.

ಜೂಜಾಟ

ಈಗೀಗ ಕೊಡಗಿನಲ್ಲಿ ಜೂಜಾಟವು ಸರ್ವತೋಮುಖವಾಗಿ ವೃದ್ಧಿಯಾಗುತ್ತಲಿದೆ. ದೇಶದಲ್ಲಿ ಜನರ ಜೀವನವು ಸುಧಾರಿಸಿ ನಾಗರೀಕತೆ ಹೆಚ್ಚಿದಂತೆ ಜೊತೆಯಲ್ಲೇ ಕೆಟ್ಟ ವಿಷಯಗಳು ಜನರಲ್ಲಿ ತಲೆಎತ್ತಿವೆ. ಅವುಗಳಲ್ಲಿ ಜೂಜಾಟವು (ಇಸ್ಪೀಟ್) ಒಂದು. ಇದರ ವಿಷಯವಾಗಿ ತಿಳಿಯದೆ ಇರುವವರು ಬಹಳ ಕಡಿಮೆ. ಕುಡಿತದಂತೆ ಇದೂ ಒಂದು ಕೆಟ್ಟ ಅಭ್ಯಾಸ. ಈ ಆಟವು ಮನಸ್ಸಿನ ಜಿಗುಪ್ಸೆಯನ್ನು ದೂರಗೊಳಿಸಲೆಂದು ಮಾತ್ರ ತಿಳಿದುಕೊಳ್ಳಬಾರದು. ಆಡುವವರಲ್ಲಿ ಸಾಧಾರಣ ಶೇಕಡ ೪೦ ರಷ್ಟು ದುಡ್ಡಿಗಾಗಿ ಆಡುವವರು. ಇದು ಆಯೋಗ್ಯಕರ ಆಟವೆಂದು ತಿಳಿದರೂ ಸಹ ಅನೇಕ ಯೋಗ್ಯ ಜನರು ಆಡುವುದನ್ನು ನಾನು ನೋಡಿದ್ದೇನೆ.

ಈ ಆಟವು ಬಹಳ ಕೆಟ್ಟದ್ದೂ ಸಮಾಜಕ್ಕೆ ಹಾನಿಕರವಾದದ್ದೂ ಆಗಿದೆ. ನಮ್ಮ ಹಿರಿಯರು ಇಂದು ಆಡುತ್ತಿರುವ ಈ ದುಷ್ಪರಿಣಾಮಕಾರಿಯಾದ ಆಟವು ಮುಂದಕ್ಕೆ ಬೆಳೆಯದಂತೆ ಈಗಲೆ ತಡೆದು ಮುಂದಿನ ಜನಾಂಗವಾದ ನಮ್ಮನ್ನು ಯೋಗ್ಯ ಪ್ರಜೆಗಳನ್ನಾಗಿ ಮಾಡಬೇಕೆಂದು ವಿನಂತಿ. ಇದಕ್ಕಾಗಿ ಸರಕಾರವು ಸಹ ಹೆಚ್ಚು ಗಮನವಿಟ್ಟು ಕಠಿಣವಾದ ಆಜ್ಞೆಯನ್ನು ಹೊರಡಿಸಿ ಕ್ಷಿಪ್ರದಲ್ಲಿಯೇ ಜನರಲ್ಲಿರುವ ಈ ದುಶ್ಚಟವನ್ನು ಕಿತ್ತೊಗೆಯಬೇಕು.

ಬಿ. ಎ. ಕುಶಾಲಪ್ಪ.

ದಳ್ಳಾಳಿಗಳು

ಕೊಡಗಿನ ಬಡರೈತರ ಗೋಳು ನೋಡದ ಸರಕಾರವೆಂದರೆ ಕೊಡಗಿನ ಸರಕಾರ! ಬಡರೈತರು ಮಳೆ ಬಿಸಿಲೆನ್ನದೆ ಹಗಲಿರುಳು ದುಡಿದು ಬೆಳೆದ ಭತ್ತವನ್ನು ಅವನಿಗೆ ಸರಿಯಾಗಿ ಉಣಲು ಇಡದೆ ಮನೆ ಮನೆ ನುಗ್ಗಿ ಕಿತ್ತು ವೈಸೂರು ಸರಕಾರಕ್ಕೆ ಕಳುಹಿಸುವುದು ಒಂದು. ಬೆಳೆದ ಭತ್ತ ಮಾರಲು ಸರಿಯಾದ ರೀತಿಯ ವ್ಯವಸ್ಥೆ ಇಲ್ಲದೆ ಮಿಲ್ಲಿನವರಿಗೆ ರೈತರನ್ನು ಮಾರಿದ ನೀತಿ ಮತ್ತೊಂದು. ಭತ್ತಕ್ಕೆ ಬೆಲೆ ಗಾಡಿಗೆ ರೂ. ೬ ಹೆಚ್ಚಿದರೂ ಬಡ ರೈತರ ಭತ್ತ ಮಾರಿದ ಮೇಲೆ ಈ ಏರಿಕೆ! ಈಗ ಮುಂದಿನ ವರುಷ ಆರಂಭ ಮಾಡುವ ದಿನ ಬಂದಿದೆ. ಹೂಡುವ ಎತ್ತುಗಳ ಕ್ರಯ ಒಂದೆಡೆಯಾದರೆ ಮತ್ತು ಅದನ್ನು ತೆಗೆಯಲು ತೊಂದರೆ ಬೇರೊಂದೆಡೆ. ಎತ್ತು ವ್ಯಾಪಾರಕ್ಕೂ ಮಾನ ದೋಡಿಯ ವ್ಯಾಪಾರಿಗಳು ಗೋಣಿಕೊಪ್ಪಲಿಗೆ ಬಂದು ಬೇಕು ಬೇಕಾದ ಹಣ ಸುರಿದು ತೆಗೆದುಕೊಂಡು ಹೋಗಿ ಅಲ್ಲಿ ಜೆಟ್ಟಿನ ಲಾಭದ ವ್ಯಾಪಾರ ಮಾಡುತ್ತಿದ್ದಾರೆ. ಅವರಲ್ಲಿ ಹೂಡಲು ತೆಗೆದುಕೊಂಡು ಹೋಗುವವರು ಬಹಳ ಕಡಿಮೆ. ಇದರ ಜೊತೆಗೆ ಸಂತೆಗೆ ಬರುವ ಪ್ರತಿ ಒಂದು ದನಗಳ್ಳೂ ಖರಂತೆ ಇರುವ ದಳ್ಳಾಳಿಗಳ ಕಾಟ ವಿಪರೀತವಾಗಿದೆ. ನಮ್ಮ ಸರಕಾರ ಕೆಲವು ವರ್ಷಗಳ ಹಿಂದೆ ಸಂತೆಯಲ್ಲಿ ದನಗಳ ಮಾರಾಟಕ್ಕೆ ದಳ್ಳಾಳಿಗಳು ಇರಬಾರದಾಗಿ ಹುಕುಂ ಹೊರಡಿಸಿತ್ತು. ಆದರೆ ಮೊದಲು ೧೦ ಎತ್ತಿಗೆ ಒಬ್ಬರಂತೆ ಇದ್ದ ದಳ್ಳಾಳಿಗಳು ಈಗ ೧೦ ಎತ್ತಿಗೆ ೫೦ರ ಮೇಲೆ ಉತ್ಪನ್ನವಾಗಿರುತ್ತಾರೆ. ಕೊಡಗಿನ ಎತ್ತು ಮಾರುವ ಸ್ಥಳಗಳಲ್ಲೂ ದಳ್ಳಾಳಿಗಳಿಲ್ಲದ ರೀತಿ ಮಾಡಿದರೆ ಈ ಸಂತೆಯ ಒಳಗೆ ರೈತರಿಗೆ ಬೇಕಾದ ಎತ್ತುಗಳು ಕನಿಷ್ಠ ಪಕ್ಷ ಶೇಕಡ ೪೦ ಯೂ ೩೦% ಕಡಿಮೆ ದರದಲ್ಲಿ ದೊರೆಯ ಬಹುದು. ಒಂದು ಎತ್ತಿಗೆ ೧೦೦ ರೂಪಾಯಿ ಕ್ರಯವಾದರೆ ಅದರಲ್ಲಿ ೨೦ ರೂಪಾಯಿ ವರೆಗೆ ದಳ್ಳಾಳಿಗಳಿಗೂ ಬಾಕಿ ೩೦ ರೂಪಾಯಿ ಎತ್ತು ತಂದ ವ್ಯಾಪಾರಿಗೂ ಹೆಚ್ಚಿಗೆ ಲಾಭ ಇಟ್ಟುಕೊಳ್ಳುತ್ತಾರೆ. ದಳ್ಳಾಳಿಗಳು ಇರುವದರಿಂದ ಮಾಲಿಕನು ಅವನು ಮಾರುವ ಕ್ರಯಕ್ಕಿಂತ ಹೆಚ್ಚಿಗೆ ಹೇಳುವದಲ್ಲದೆ ಅದರ ಮೇಲೆ ಲಂಚ ಪೂರ್ತಿ ಹಣ ದಳ್ಳಾಳಿಗಳಿಗೆ ಕೊಡುವ ಒಪ್ಪಂದ ಇರುವದರಿಂದ ಅವನು ಸಹ ಕ್ರಯವನ್ನು ಹೆಚ್ಚಿಗೆ ಮಾಡುವದರಲ್ಲಿ ಹಿಂದೆ ನಿಲ್ಲುವುದಿಲ್ಲ. ಕಳೆದ ಸಂತೆಯಲ್ಲಿ ೪ ಎತ್ತುಗಳನ್ನು ತೆಗೆದು ಕೊಟ್ಟದಕ್ಕೆ ಮಾಲಿಕನಿಂದ ಸಿಕ್ಕಿದ ೩೫ ರೂಪಾಯಿಗಳನ್ನು ಮೂರು ದಳ್ಳಾಳಿಗಳು ಹಂಚುವ ಕಾಲಕ್ಕೆ ಜಗಳವಾಗಿ ಅವರವರೇ ಚೂರಿ ಹಿಡಿದ ಉದಾಹರಣೆ ಸಹ ಇದೆ. ಇವರು ಸಂತೆ ಆದಿತ್ಯವಾರವಾದರೆ ಗುರುವಾರದಿಂದಲೇ ಕೋಣಗಳನ್ನು ತರುವವರಿಗೆ ಕೊಡಗಿನ ಗೇಟಿನ ದಾಟಿಹೋಗಿ ಒಪ್ಪಂದ ಮಾಡಿ ಬರುತ್ತಾರೆ. ಈ ರೀತಿ ದನ ತರುವವನಿಗೆ ಆವನ ಇಷ್ಟದ ರೀತಿ ಕ್ರಯ ಸಿಕ್ಕಿದಾಗ ದಳ್ಳಾಳಿಗಳ ಮಾತಿನಂತೆ ವರ್ತಿಸುತ್ತಾರೆ. ಆದ್ದರಿಂದ ದನ ಮಾರಾಟ ಸಂತೆಯಲ್ಲಿ ದಳ್ಳಾಳಿಗಳ ಕನ್ನು ಖಡ್ಡಾಯ ನಿಲ್ಲಿಸಬೇಕಾಗಿದೆ.

ರೈತ

ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕಿನ ಧೀರ್ಘಾವಧಿಯ ಸಾಲ.

ಪ್ರಾಂತೀಕ ಬ್ಯಾಂಕಿನಲ್ಲು ಧೀರ್ಘಕಂತಿನ ಸಾಲ ಕೊಡುವಂತೆ ಬ್ಯಾಂಕಿನ ಒಂದೆರಡು ಮಹಾಸಭೆಗಳಲ್ಲಿ ಮಂಜೂರಾದ ಮೇರೆ ೧೯೫೦ನೇ ಇಸವಿಯಲ್ಲಿ ಮೇಲಿನ ಸಾಲ ಕೊಡಲಿಕ್ಕಾಗಿ ಮುಚ್ಚಾಸು ಭೂಮಿ ಅಡಮಾನು ಬ್ಯಾಂಕಿನಿಂದ ಫಾರಂಗಳನ್ನು ತರಿಸಿ ಅದೇ ಮೇರೆ ಇಲ್ಲಿ ಫಾರಂಗಳನ್ನು ತಯಾರಿಸಿಯೂ, ಸಾಲ ಆವಶ್ಯವಿರುವವರಿಗೆ ಕೊಡಲಾಯಿತು. ಸದ್ರಿ ಫಾರಂಗಳಿಗೆ ನಾಲ್ಕಾಣೆ ಕೊಟ್ಟು ಪಡೆದು ಅರ್ಜಿ ಬರೆದಾಯಿತು.

ಬಡವನು ಕುತೂಹಲದಿಂದ ಸದ್ರಿ ಫಾರಂಗಳನ್ನು ಪಡೆದು ನೆಂಟರುಗಳಿಗೆ ಫಾರಂ ತುಂಬಿಸಲಿಕ್ಕಾಗಿ ಬತ್ತ ಕೊಟ್ಟಿದ್ದಲ್ಲದೆ ಭೂಮಿಯ ಜಮಾಬಂಧಿ ನಕಲು ಜೆನ್ಸ್‌ಕಂಬರೆನ್ನು ಸರ್ಟಿಫಿಕೇಟು, ಕುಟುಂಬದವರ ಒಪ್ಪಿಗೆ ಫಾರಂ ಮತ್ತು ತ

ಆವಿ ಸಾಲದ ಸರ್ಟಿಫಿಕೇಟು ವಗೈರೆಗಳನ್ನು ಪಡೆಯಲು ರೂ. ಐದರಿಂದ ರೂ. ಹತ್ತರ ವರೆಗೆ ಖರ್ಚುಮಾಡಿ ಫಾರಂನ ಜೊತೆಯಲ್ಲಿ ಜೋಡಿಸಿ ಆತುರದಿಂದ ಬ್ಯಾಂಕಿನ ಅಫೀಸಿಗೆ ಕಳುಹಿಸಿದಾಯಿತು. ಸದ್ರಿ ಅರ್ಜಿಯು ಬ್ಯಾಂಕಿಗೆ ತಲಪಿ ತಿಂಗಳು ಮೂರು ನಾಲ್ಕು ಕಳೆದ ನಂತರ ಜನರ ಕಣ್ಣು ಕಟ್ಟಲಿಕ್ಕಾಗಿ ಸಹಕಾರಿ ಇನ್ಸ್‌ಪೆಕ್ಟರವರಿಗೆ ಕಳುಹಿಸಲಾಯಿತು. ಕೆಲವು ಇನ್ಸ್‌ಪೆಕ್ಟರವರು ಜನರಿಗೆ ಆತುರ ಹುಟ್ಟಿಸಿ ಬೇಕಾದ ಸಲಕರಣೆಗಳನ್ನು ಒದಗಿಸಿದಲ್ಲದೆ ಸಾಲಗಾರರ ಶೇರು ಮೊಬಲಗುಗಳನ್ನು ಸಹ ತೆಗೆದುಕೊಂಡರು. ಕೆಲವು ಇನ್ಸ್‌ಪೆಕ್ಟರುಗಳು ಜನರ ಕಣ್ಣು ಕಟ್ಟಲಿಕ್ಕಾಗಿ ಬ್ಯಾಂಕಿನವರು ನಮಗೆ ಕಳುಹಿಸಿದ್ದು ಈ ಸಾಲ ಈಗಲೇ ಸಿಕ್ಕಲಾರದೆಂದು ಅರ್ಜಿಗಳನ್ನು ಮೂಲೆಯಲ್ಲಿ ಇರಿಸಿದರು. ಈಗ ನೋಡುವಾಗ ಜನರ ಕಣ್ಣು ಕಟ್ಟಲಿಕ್ಕೆ ಮಾಡಿದೆಂದು ತೋರುತ್ತದೆ. ಶೇರು ವಗೈರೆ ತೆಗೆದು ಕಳುಹಿಸಿದ ಅರ್ಜಿಗಳು ಪುನಹ ವಾಪಾಸು ಬಂದಿವೆ ಎಂದು ವರ್ತಮಾನ. ಅಂತು ಇಂದು ಒಬ್ಬೊಬ್ಬರು ರೂ. ೧೫ ರಿಂದ ೩೦ ರ ವರೆಗೆ ಖರ್ಚು ಮಾಡಿದಲ್ಲದೆ ಹಗಲು ರಾತ್ರಿ ಓಡಾಡಿಯೂ ಸಹ ಮಾಡಿದಂತ ಅರ್ಜಿಗಳು ಮೂಲೆಯಲ್ಲಿ ಬಿದ್ದಿರುತ್ತೆ. ಜನರಿಂದ ಈ ಖರ್ಚು ಆಗಿದೆಯೆಂಬುದಕ್ಕೆ ನಾನು ದೃಷ್ಟಾಂತರ ಕೊಡುವವನಾಗಿದ್ದೇನೆ. ಇಷ್ಟೆಲ್ಲ ಕಷ್ಟ ನಷ್ಟ ಪಟ್ಟುಕೊಂಡ ಬಡವನಿಗೆ ಇನ್ನಾದರೂ ಒಡನೆ ಸಾಲ ಕೊಟ್ಟು ಆತನ ಕಷ್ಟ ಪರಿಹರಿಸುವಿರಾಗಿ ವಿನಂತಿಸುತ್ತೇನೆ.

K. A. S.

ಸ್ಥಳೀಕ ಸಂಸ್ಥೆಗಳ ಆರ್ಥಿಕ ಸುಧಾರಣೆ.

ಕೇಂದ್ರ ವಿಚಾರಣಾ ಕಮಿಟಿಯ ಸೂಚನೆಗಳು

ಜಿಲ್ಲಾ ಬೋರ್ಡು ಮತ್ತು ಮುನಿಸಿಪಾಲಿಟಿಗಳ ಆರ್ಥಿಕ ಪರಿಸ್ಥಿತಿ ತೃಪ್ತಿಕರವಲ್ಲವೆಂಬುದು ಎಲ್ಲರಿಗೂ ತಿಳಿದ ವಿಚಾರ. ಈ ಸಂಸ್ಥೆಗಳ ಆರ್ಥಿಕ ಪರಿಸ್ಥಿತಿಯು ಸುಧಾರಿಸಿ ಇವುಗಳಿಗೆ ಹೆಚ್ಚಿನ ಕರ್ತವ್ಯಗಳನ್ನು ಕೇಳಲು ರಾಷ್ಟ್ರದ ಆದಾಯದಲ್ಲಿ ಯೋಗ್ಯ ಭಾಗ ಹೇಗೆ ಕೊಡಬಹುದೆಂಬ ಪ್ರಶ್ನೆಯನ್ನು ಪರಿಶೀಲಿಸುವುದಕ್ಕಾಗಿ ಭಾರತ ಸರಕಾರವು ಒಂದು ವಿಚಾರಣಾ ಸಮಿತಿಯನ್ನು ನೇಮಕ ಮಾಡಿತ್ತು. ಕೇಂದ್ರ ಸರಕಾರಕ್ಕೆ ಈ ಸಮಿತಿಯವರು ಒಪ್ಪಿಸಿದ ವರದಿಯು ಈಗ ತಾನೆ ಪ್ರಕಟವಾಗಿರುತ್ತದೆ.

ಈಗ ಈ ಸ್ಥಳೀಕ ಸಂಸ್ಥೆಗಳಲ್ಲಿ ಹಣದ ಪರಿಸ್ಥಿತಿ ಏನೂ ತೃಪ್ತಿಕರವಿಲ್ಲ. ಇದರಿಂದಾಗಿ ಈ ಸಂಸ್ಥೆಗಳ ಅಧಿಕಾರವನ್ನು ತೆಗೆಯುತ್ತಾ ಬರುವ ಧೋರಣೆ ಮಾತ್ರ ಎಷ್ಟಕ್ಕೂ ನ್ಯಾಯವಲ್ಲ. ಬೋರ್ಡು ಮೊದಲಾದ ಸಂಸ್ಥೆಗಳು ಇದು ತನಕ ಮಾಡುತ್ತಾ ಬಂದ ಕಾರ್ಯಗಳನ್ನು ಒಂಸೊಂದನ್ನಾಗಿ ತೆಗೆದು ಸರಕಾರೀ ಖಾತೆಗಳ ಮೂಲಕವೇ ನಡೆಸತೊಡಗುವುದು ನಿಜವಾಗಿಯೂ ಅಪ್ರಗತಿಕಯೆಂಬ ಬಗ್ಗೆ ಏನೂ ಸಂಶಯವಿಲ್ಲ.

ಕೇಂದ್ರ ಸರಕಾರ ಮತ್ತು ಸಂಸ್ಥಾನ ಸರಕಾರಗಳು ವಸೂಲು ಮಾಡುವ ವಿವಿಧ ತೆರಿಗೆಗಳ ಪೈಕಿ ಕೆಲವೊಂದನ್ನು ಸ್ಥಳೀಕ ಸಂಸ್ಥೆಗಳ ಖರ್ಚಿನ ಬಗ್ಗೆ ಎಂಬುದಾಗಿ ಪ್ರತ್ಯೇಕಿಸಿಡುವುದು ಆವಶ್ಯವೆಂದು ಸಮಿತಿಯವರು ಸೂಚಿಸಿದ್ದಾರೆ.

ಈ ಸಮಿತಿಯು ೧೯೪೯ನೇ ಏಪ್ರಿಲ್ ತಿಂಗಳಲ್ಲಿ ನೇಮಿಸಲ್ಪಟ್ಟಿತು. ೧೯೪೮ರ ಆಗೋಸ್ತು ತಿಂಗಳಲ್ಲಿ ಎಲ್ಲಾ ಪ್ರಾಂತ್ಯಗಳ ಸ್ಥಳೀಕ ಸಂಸ್ಥೆಗಳ ಆಡಳಿತೆ ಖಾತೆಯ ಮಂತ್ರಿಗಳ ಪರಿಷತ್ತೊಂದು ಸೇರಿ ಈ ಬಗೆಯ ಸಮಿತಿಯನ್ನು ನೇಮಿಸುವುದು ಆವಶ್ಯವೆಂಬ ಸೂಚನೆ ಕೊಟ್ಟಿತು.

ಕೇಂದ್ರ ಸರಕಾರದ ಆದಾಯದ ಪೈಕಿ ರೈಲು, ಸಮುದ್ರ ಅಥವಾ ವಿಮಾನ ಮಾರ್ಗಗಳಿಂದ ಸಾಗಿಸಲ್ಪಡುವ ವಸ್ತುಲು ಅಥವಾ ಪ್ರಯಾಣಿಕರಿಂದ ವಸೂಲು ಮಾಡಲಾಗುವ ಟರ್ಮಿನಲ್ ಟ್ಯಾಕ್ಸ್ ಎಂಬ ಉತ್ಪತ್ತಿಯನ್ನು ಸಂಪೂರ್ಣವಾಗಿ ಸ್ಥಳೀಕ ಸಂಸ್ಥೆಗಳಿಗೆ ಕೊಡಬೇಕೆಂದು ಸಮಿತಿಯು ಸೂಚಿಸಿರುತ್ತದೆ

ಸಂಸ್ಥಾನ ಸರಕಾರಗಳ ಆದಾಯಗಳ ಪೈಕಿ ಈ ಕೆಳಗಿನವುಗಳನ್ನು ಸ್ಥಳೀಕ ಸಂಸ್ಥೆಗಳಿಗೆ ವರ್ಗಾಯಿಸುವಂತೆ ಸಮಿತಿಯವರು ಸೂಚಿಸಿದ್ದಾರೆ. ಭೂಮಿ ಮತ್ತು ಕಟ್ಟಡಗಳ ಮೇಲಿನ ತೆರಿಗೆಗಳು, ಗಣಿಗಳ ಹಕ್ಕುಗಳ ಉತ್ಪತ್ತಿ, ಸ್ಥಳೀಕ ಜನರ ಉಪಯೋಗಕ್ಕೆ ತರಲಾಗುವ ವಸ್ತುಗಳ ಮೇಲಿನ ತೆರಿಗೆಗಳು, ವಿದ್ಯುಚ್ಛಕ್ತಿಯಿಂದ ಸಿಕ್ಕುವ ಉತ್ಪತ್ತಿ, ವೃತ್ತಿ ತೆರಿಗೆಗಳು, ಇತರ ವ್ಯಾಪಾರ ಹಾಗೂ ನಾಟಕ ಸಿನೇಮಾ ಇತ್ಯಾದಿ ವಿನೋದಗಳ ಮೇಲಿನ ತೆರಿಗೆಗಳು ಇವನ್ನೆಲ್ಲ ಸ್ಥಳೀಕ ಸಂಸ್ಥೆಗಳಿಗೇನೇ ವರ್ಗಾಯಿಸಬೇಕಾಗಿ ಸೂಚನೆ.

ತೆರಿಗೆಗಳನ್ನು ಸ್ವತಂತ್ರವಾಗಿ ಹೇರಿಸಲು ಸ್ಥಳೀಕ ಸಂಸ್ಥೆಗಳಿಗೆ ಅಧಿಕಾರವಿಲ್ಲಿರುವುದಿಲ್ಲ. ಆಕ್ಟು ಅಥವಾ ನಿಯಮಗಳನ್ನು ಅತ್ಯಧಿಕ ಮಿತಿ ನಿರ್ಣಯಿಸುವ ಅಧಿಕಾರ ಸರಕಾರ ಇಟ್ಟುಕೊಂಡು ಇಂಥ ತೆರಿಗೆ ಹೇರಿಸುವ ಅಧಿಕಾರ ಈ ಸಂಸ್ಥೆಗಳಿಗೆ ಕೊಡಬೇಕೆಂದು ಸಮಿತಿಯವರು ತಮ್ಮ ವರದಿಯಲ್ಲಿ ಸೂಚಿಸಿದ್ದಾರೆ. ವಿಶೇಷ ಸಂದರ್ಭಗಳಲ್ಲಿ ಅಥವಾ ಈ ರೀತಿ ತೆರಿಗೆ ಹೇರಿಸಲು ಸ್ಥಳೀಕ ಸಂಸ್ಥೆ ಇಷ್ಟಪಡದಿರವುದಿಲ್ಲ. ಸರಕಾರದವರೇ ಇದನ್ನು ಹೇರಿಸಲು ಅಧಿಕಾರ ಇಟ್ಟುಕೊಳ್ಳುವಂತೆ ಸೂಚಿಸಲಾಗಿದೆ.

ದಿ ಟ್ರಾಪಿಕಲ್

ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

ಮೇನೇಜಿಂಗ್ ಡೈರೆಕ್ಟರ್:-ಲಾಲ ಶಂಕರ್ ಲಾಲ್.

ಮುಖ್ಯ ಕಛೇರಿ:- ಹೊಸ ಡೆಲ್ಲಿ.

52-1 ಸ್ಥಾಪಿಸಿದ ಡೈರೆಕ್ಟರರು:

ಪಂಡಿತ ಮೋತಿಲಾಲ್ ನೆಹರು. ಎಸ್. ಶ್ರೀನಿವಾಸ ಅಯ್ಯಂಗಾರ್

ಹಕೀಮ್ ಅಜಮಲಖಾನ್. ಡಾ|| ಎಂ. ಎ. ಅನ್ಸಾರಿ.

Transacts:-Life, Fire, Motor, and Marine.

ಯಂ. ಯು. ಅಚ್ಚಣ್ಣ, ಇನ್ಸ್‌ಪೆಕ್ಟರ್, ಮಡಿಕೇರಿ, ಕೊಡಗು.

ಎಂ. ಎ. ಬೆಳ್ಯಪ್ಪ, ಬ್ರಾಂಚ್ ಸೆಕ್ರೆಟರಿ, ಹಂಪನಕಟ್ಟೆ, ಮಂಗಳೂರು.

ಕೊಡಗು ಪ್ರಾಂತೀಕ ಸಹಕಾರಿ, ಮಾರ್ಕೆಟಿಂಗ್, ಫೆಡರೇಷನ್ ಲಿಮಿಟೆಡ್., ವೀರಾಜಪೇಟೆ

ನಮ್ಮಲ್ಲಿ ಕೋವಿಗಳು, ತೋಟೆಗಳು ಮತ್ತು ಎಲ್ಲಾ ತರಹದ ವ್ಯವಸಾಯದ ಹತ್ಯಾರುಗಳು ದೊರೆಯುತ್ತವೆ.

1. 32 ಪಿಸ್ತೂಲುಗಳು (Pistols) ಕ್ರಯ ರೂ. 162 ರಿಂದ 245ರ ವರೆಗೆ.
2. 12ನೇ ನಂಬರಿನ ಒಂಟಿ ಹೊಳವಿನ ಕೋವಿ ಕ್ರಯ ರೂ. 320-0-0
3. 12ನೇ ನಂಬರಿನ ಜೋಡು ಹೊಳವಿನ ಕೋವಿ (Wobley & Scott)
4. 12ನೇ ನಂಬರಿನ ಜೋಡು ಹೊಳವಿನ ಕೋವಿ (Spanish make)
5. .32 ಪಿಸ್ತೂಲು ಮತ್ತು ರಿವಾಲ್ವರುಗಳ ತೋಟೆಗಳೂ ಸಹ ದೊರೆಯುತ್ತವೆ.
6. ಕಾಫಿ ಮತ್ತು ಕಿತ್ತಳೆ ಗಿಡಗಳಿಗೆ ಸ್ಪ್ರೇಮಾಡುವ ಪಂಪುಗಳು (Spraying Pumps)
7. $\frac{3}{4}$" $\frac{5}{8}$" $\frac{1}{2}$" $\frac{3}{8}$" $\frac{1}{4}$" ಕಬ್ಬಿಣದ ಸಲಾಕೆಗಳು.

ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

(ಅವಶ್ಯವಿರುವ ಕೋವಿಗಳಿಗೂ, ತೋಟೆಗಳಿಗೂ ಜಿಲ್ಲಾ ಮೇಜಿಸ್ಟ್ರೇಟರಿಂದ ವಿಶೇಷ ಪರ್ಮಿಟು "Special permit" ಪಡೆದವರಿಗೆ ಮಾತ್ರ ದೊರೆಯುವದು)

ಎಂ. ಎಸ್. ಸೋಮಯ್ಯ,
ಗೌರವ ಕಾರ್ಯದರ್ಶಿ.

52-31

ಮಾರಾಟಕ್ಕಿದೆ.

ನೆಡಲಿಕ್ಕೆ ಲಾಯಕ್ಕಾದ ಕಿತ್ತಳೆ ಮತ್ತು ಯಾಲಕ್ಕಿ ಗಿಡಗಳು ಮತ್ತು ಸಸಿಗಳು ಲಕ್ಷಗಟ್ಲೆ ಮಾರಾಟಕ್ಕಿವೆ. ಹೆಚ್ಚಿನ ವಿಷಯಗಳಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಡಾಕ್ಟರ್ ಪಿ. ಯಂ. ಗಣಪತಿ.
ಗಣೇಶ್ ನರ್ಸರಿ.
ಸೋಮವಾರಪೇಟೆ.

ಆಯುರ್ವೇದ.

ಪರಿಣಾಮಕಾರಿಯಾದ ಮತ್ತು ಪರಿಶುದ್ಧ ಔಷಧಿಗಳಿಗೆ ದಿ ಕೊಚಿನ್ ಆಯುರ್ವೇದಿಕ್ ಲೇಬರೇಟರೀಸ್ ಲಿಮಿಟೆಡ್, ತ್ರಿಚೂರು, ದ. ಹಿಂದೂಸ್ತಾನ. ಕೊಡಗಿಗೆ ಸೋಲ್ ಏಜಂಟರು:—

ಮೆ|| ವಾರುಣಿ ಡಿಸ್ಪೆನ್ಸರಿ,
ಮಡಿಕೇರಿ.

2-1

ತಿಳಿಸಿರಿ.

ಭೂಮಿ, ತೋಟ, ಜಾಗ ಪೇಟೆಯಲ್ಲಿ ಮನೆ ಅಥವ ಮನೆ ಸೈಟು ಮಾರಲಿರುವವರು ಮತ್ತು ಕೊಂಡುಕೊಳ್ಳಲಿಚ್ಛಿಸುವವರು ಈ ಕೆಳಗಿನ ಪತ್ತೆಯಲ್ಲಿ ವಿಚಾರಿಸಿರಿ. ಇಲ್ಲದೆ ಬೇಲಾಯಿದವರಿಗೆ ಕರೆಯುವ ಎಮ್ಮೆ, ಹಸು ಮತ್ತು ಉಳುವ ಎತ್ತು ಮತ್ತು ಕೋಣಗಳನ್ನು ಒದಗಿಸಿ ಕೊಡಲಾಗುವುದು. ಬೇಕಾದವರು ತಮಗೆ ಬೇಕಾದ ತಾರೀಕಿನ ಎಂಟು ದಿನಗಳಿಗೆ ಮುಂಚೆ ತಿಳಿಸಬೇಕಾಗಿದೆ. ವಿವರಗಳಿಗೆ ಈ ಪತ್ತೆಗೆ ಬರೆಯಬಹುದು.

P. A. N. & SONS.
Commission Agent.
Gonicoppal
S. Coorg.

26-12

COMMISSION IN ARMED FORCES

Applications are invited from Intermediates, age between 18 and 21, and Matriculates, age between 15 and $17\frac{1}{2}$, for Commission in the Armed Forces. For full particulars, apply to the nearest Recruiting Office.

ಬಡ್ಜೆಟ್ಟಿನ ಮೇಲೆ ಜನ ಪ್ರತಿನಿಧಿಗಳ ಅಭಿಪ್ರಾಯ.

(ಕಳೆದ ಸಂಚಿಕೆಯಿಂದ ಮುಂದರಿದದ್ದು)

ಶ್ರೀ ಪಿ. ಐ. ಬೆಳ್ಯಪ್ಪನವರು

ಇಂದು ನಾವು ಸಭೆ ಸೇರಿರುವ ಸಂದರ್ಭವು ಪ್ರಾಮುಖ್ಯವಾದುದು. ಈ ವರ್ಷ ಅಂತ್ಯವಾಗುವದರೊಳಗೆ ಕೊಡಗಿನ ಭವಿಷ್ಯ ನಿರ್ಣಯವಾಗಬಹುದು. ೧೯೩೪ರ ನಂತರ ಕೊಡಗಿನ ಆರ್ಥಿಕ ಸ್ಥಿತಿಯನ್ನೊಮ್ಮೆ ಅವಲೋಕಿಸಿದರೆ ಕೊಡಗಿನ ಆದಾಯವು ಕ್ರಮಶಃ ಏರುತ್ತಿರುವದು ತೋರಿಬರುತ್ತದೆ. ೧೯೪೩ರ ನಂತರ ಆದಾಯವು ಬಹುಮಟ್ಟಿಗೆ ಏರಿ ಈಗ ಕೊಡಗಿನ ವಾರ್ಷಿಕ ಉತ್ಪತ್ತಿಯು ೫೦ ರಿಂದ ೬೦ ಲಕ್ಷದ ವರೆಗೆ ಇದೆ. ಈ ಪ್ರಾಂತಕ್ಕೆ ಕೌನ್ಸಿಲು ದೊರಕಿದ ಆ ಕಾಲದಲ್ಲಿ ಈ ಸರಕಾರಕ್ಕೆ ಯಾವುದೇ ಶಿಲ್ಕಿರಲಿಲ್ಲ. ಆಗಿನ ಉತ್ಪತ್ತಿಯು ೧೨ ಲಕ್ಷವನ್ನು ಮೀರುತ್ತಿರಲಿಲ್ಲ. ಅನೇಕ ಸಾರಿ ಕೇಂದ್ರವು ಕೊಡಗಿನ ನೆರವಿಗೆ ಬರಬೇಕೆಂದು ಕೇಳಿದ್ದೇವೆ. ಆದರೆ ಅಂಥಾ ಪರಿಸ್ಥಿತಿ ಈಗ ಇಲ್ಲ. ಈಗ ಕೊಡಗಿನಿಂದ ಸುಮಾರು ೨೮ ಲಕ್ಷ ರೂಪಾಯಿಗಳಷ್ಟು ಕೇಂದ್ರ ಸರಕಾರಕ್ಕೆ ಎಕ್ಸೈಜ್ ಕರವಾಗಿ ಹೋಗುತ್ತಿದ್ದರೂ ನ್ಯಾಯವಾಗಿ ಇದರಿಂದ ದೊರೆಯಬೇಕಾದ ಅಂಶ ಕೊಡಗಿಗೆ ದೊರೆಯುತ್ತಿಲ್ಲ. ಸರಕಾರದ ಆದಾಯದೊಂದಿಗೆ ಜನತೆಯ ಆರ್ಥಿಕ ಸ್ಥಿತಿಯೂ ಸುಧಾರಿಸುತ್ತಿದೆಯೆನ್ನಬಹುದು. ಕೇವಲ ಅರುವತ್ತು ಮೈಲು ಉದ್ದ ನಲ್ವತ್ತು ಮೈಲು ಅಗಲದ ಈ ದೇಶದಲ್ಲಿ ವ್ಯವಸಾಯಕ ಮತ್ತು ತೋಟಗಾರಿಕೆಯ ಉತ್ಪತ್ತಿಯು ಎಂಟರಿಂದ ಹತ್ತು ಕೋಟಿಗಳ ವರೆಗಿದೆಯೆಂದರೆ ಆಶ್ಚರ್ಯದ ಮಾತು. ಜನತೆಗೆ ಸಾಲವಿರಬಹುದಾದರೂ ಆ ಸಾಲ ಕೇವಲ ಉತ್ಪಾದಕ ಮಾರ್ಗಗಳಿಗಾಗಿ ಮಾಡಿದವಾಗಿವೆ. ಬಡ್ಜೆಟ್ಟಿನಲ್ಲಿ ಸುಮಾರು ೫ ಲಕ್ಷ ಕೊರತೆ ಇದೆಯೆಂದು ತೋರಿದರೂ ಅದಕ್ಕಾಗಿ ಗಾಬರಿ ಪಡಬೇಕಾಗಿಲ್ಲ. ಇತರ ಕೆಪಿಟಲ್ ಖರ್ಚುಗಳಿಗಾಗಿ ಹಣವಿಟ್ಟ ಕಾರಣ ಹೀಗಾಗಿದೆ. ಸರಕಾರದ ಆದಾಯ ಹೆಚ್ಚುತ್ತಿರುವ ಕಾರಣ, ಹೈಸ್ಕೂಲು, ಕಾಲೇಜು ಕಟ್ಟಡಗಳು, ಪಾನ ನಿರೋಧ, ವ್ಯವಸಾಯ ಇಲಾಖೆ ದ್ವಾರಾ ಲಕ್ಷ್ಮಣತೀರ್ಥ ಯೋಜನೆಗಳ ಪರಿಶೀಲನೆ ಮೊದಲಾದವನ್ನು ಮಾಡುವದು ಸಾಧ್ಯವಾಗಿದೆ. ಕೊಡಗಿನ ಆರ್ಥಿಕ ಭವಿಷ್ಯವು ಚೆನ್ನಾಗಿದೆ. ವ್ಯವಸಾಯ ಆದಾಯ ತೆರಿಗೆ ಮತ್ತು ರಿಸೆಟ್ಲ್‌ಮೆಂಟ್ ಇವುಗಳಿಂದ ೧೫ ಲಕ್ಷ ಬರಬಹುದು. ಕೊಡಗು ಕೇಂದ್ರಕ್ಕೆ ಭಾರವಾಗಿರದೆ ಸ್ವತಃ ಕಾಲಿನಲ್ಲೇ ನಿಂತಿದ್ದರೂ ಇದನ್ನು ಬೇರೆ ಪ್ರಾಂತದೊಡನೆ ವಿಲೀನಗೊಳಿಸುವ ಯತ್ನವು ಆಶ್ಚರ್ಯಕರ. ಕೊಡಗಿನ ಶತಮಾನಗಳ ಪ್ರತ್ಯೇಕ- ಅಸ್ತಿತ್ವವನ್ನು ಕೊಡಗಿನ ಜನತೆಯ ಅಭಿಮತ ತೆಗೆಯದೆ ನಿರ್ನಾಮಗೊಳಿಸಬೇಕೆಂಬುದು ಇನ್ನೂ ಆಶ್ಚರ್ಯಕರ. ಇದು ಭಾರತ ರಾಜ್ಯಘಟನೆಗೆ ವಿರುದ್ಧವಾದುದು. ಆದರೆ ಇತ್ತಲಾಗಿ ಜನತೆಯ ಅಭಿಪ್ರಾಯವನ್ನು ಮನ್ನಿಸಲಾಗುವದೆಂದು ತಿಳಿದು ಬಂದದು ಯೋಗ್ಯ. ಮುಂದಿನ ಚುನಾವಣೆಯಲ್ಲಿ ಜನರು ತಮ್ಮ ಅಭಿಪ್ರಾಯವನ್ನು ಸ್ಪಷ್ಟ ರೀತಿಯಿಂದ ಕೊಡುವರೆಂದು ನಂಬಲಾಗಿದೆ. ಈ ಮಧ್ಯೆ ಕೊಡಗಿನ ಆಡಳಿತವನ್ನು ಹೆಚ್ಚು ಜನಾನುರಾಗಿಯಾಗಿ ಮಾಡಲು ದೇಶದ ಮುಂದಾಳುಗಳಿಬ್ಬರನ್ನು ಕೌನ್ಸಿಲ್ಲರುಗಳಾಗಿ ಸೇರಿಸುವ ಸೂಚನೆ ಇದೆ. ಪಾರ್ಲಿಮೆಂಟಿನಲ್ಲಿ ಈ ಮಸೂದೆಯು ಶೀಘ್ರ ಬರಲಿದೆ. ಈ ಏರ್ಪಾಡಿನಂತೆ ನೇಮಕವಾಗುವ ಕೌನ್ಸಿಲ್ಲರುಗಳಿಗೆ ಯೋಗ್ಯ ಅಧಿಕಾರವಿರುವಂತೆ ಮಾಡುವದು ಅವಶ್ಯವಿದೆ.

ಶ್ರೀ ಕೆ. ಎಂ. ದೇವಯ್ಯನವರು.

ಬಡ್ಜೆಟ್ಟಿನಲ್ಲಿ ಹಣವಿಟ್ಟರೂ ಖರ್ಚುಮಾಡದೆ ಉಳಿಯುತ್ತದೆ. ಜಿಲ್ಲಾ ಬೋರ್ಡು ಉದ್ಯೋಗಿಗಳ ವೇತನಕ್ಕೆಂದು ಎರಡು ಲಕ್ಷ ಇರಿಸಿದ್ದು ಪ್ರಶಂಸಾರ್ಹವಾಗಿದೆ. ಫೈನಾನ್ಸ್ ಕಮಿಟಿಗೂ ಒಂದು ಲಕ್ಷಕ್ಕೆ ಮೀರಿ ಹಣವಿರಿಸಿದ್ದು ಯೋಗ್ಯ. ಈ ಹಣವೆಲ್ಲಾ ಖರ್ಚಾಗುವದೆಂದು ಭಾವಿಸುತ್ತೇನೆ. ಹೆಚ್ಚು ಬೆಳೆಯಿರಿ ಯೋಜನೆ ಪ್ರಯೋಜನವಾಗಲಿಲ್ಲ. ಕಿತ್ತಳೆಗೆ ಬರುವ ಫ್ರಂಚಿಂಗ್ ಕಾಯಿಲೆಯನ್ನು ತಡೆಗಟ್ಟುವದು ವ್ಯವಸಾಯ ಇಲಾಖೆಗೆ ಸಾಧ್ಯವಾಗಿರುವದಿಲ್ಲ. ಸರಕಾರವು ಬಡ ರೈತನನ್ನು ಮಾತ್ರ ಹೆಚ್ಚಿಗೆ ಬೆಳೆಯಲು ಒತ್ತಾಯ ಮಾಡುತ್ತಿದೆಯೇ ವಿನಾ ಪ್ಲಾಂಟರುಗಳನ್ನು ಒತ್ತಾಯಮಾಡುತ್ತಿಲ್ಲ. ಅವರಿಗೆ ಬೇಕಾದ ಆಹಾರ ಧಾನ್ಯಗಳನ್ನು ಅವರೇ ಬೆಳೆಸುವಂತೆ ಮಾಡಬೇಕು. ಮೈನರ್ ಇರಿಗೇಷನ್ ಕೆಲಸದ ಯೋಜನೆಯಂತೆ ಗ್ರಾಮಸ್ಥರು ಕೆಲಸ ಮಾಡಿದರೂ ಅವರಿಗೆ ಸಲ್ಲತಕ್ಕದ್ದನ್ನು ಸಕಾಲದಲ್ಲಿ ಕೊಡಲಾಗುತ್ತಿಲ್ಲ. ಗ್ರಾಮರಸ್ತೆಗಳಿಗೆ ಗಮನ ಇಲ್ಲದಾಗಿದೆ. ಮಲೇರಿಯಾ ನಿವಾರಣಾ ಇಲಾಖೆಯು ಉತ್ತಮ ಕೆಲಸ ಮಾಡಿದೆ. ವಯಸ್ಕರ ಶಿಕ್ಷಣದಂಥಾ ಪ್ರಾಮುಖ್ಯ ವಿಚಾರಕ್ಕೆ ಸಾಕಷ್ಟು ಗಮನಕೊಟ್ಟಿರುವದಿಲ್ಲ.

ಶ್ರೀ. ಪಿ. ಎಂ. ನಾಣಮ್ಮಯ್ಯನವರು.

ಸಾರ್ವಜನಿಕ ಆರೋಗ್ಯವು ಕೊಡಗಿನಲ್ಲಿ ಅಭಿವೃದ್ಧಿಗೊಳ್ಳುತ್ತಿದೆ. ಈ ಇಲಾಖೆಯ ಉಪಯೋಗಕ್ಕೆ ಸಾಕಷ್ಟು ಡಿ. ಡಿ. ಟಿ. ಮತ್ತು ಇತರ ಸಾಹಿತ್ಯಗಳು ಸಾಲದು. ಹೆಚ್ಚಿನ ಹಣ ಒದಗಿಸಬೇಕು. ವ್ಯವಸಾಯ ಇಲಾಖೆಗೆ ಇಟ್ಟ ಹಣವೂ ಸಾಲದು. ಆಸ್ಪತ್ರೆಯಲ್ಲಿರುವ ಕಾಯಿಲಸ್ಥರು ತಾವೇ ಪೇಟೆಂಟ್ ಔಷಧಿಗಳನ್ನು ತಂದುಕೊಳ್ಳಬೇಕೆನ್ನುವದು ಸರಿಯಲ್ಲ. ಗ್ರಾಮ ಆಸ್ಪತ್ರೆಗಳೂ, ಮೊಬಾಯಿಲ್ ಯೂನಿಟ್ಟುಗಳೂ ಹೆಚ್ಚಬೇಕು. ವಿದ್ಯಾ ಇಲಾಖೆಯಲ್ಲಿ ಶಾಲೆಗಳಲ್ಲಿ ಸ್ಥಳವಿಲ್ಲದಾಗಿದೆ. ಅಧ್ಯಾಪಕರ ಸಂಖ್ಯೆಯೂ ಸಾಲದು. ಉಪಾಧ್ಯಾಯರ ವರ್ಗಾವರ್ಗಿಯನ್ನು ವಿದ್ಯಾವರ್ಷದ ಆಖೈರಿನಲ್ಲಿ ಮಾಡುವದು ಸರಿಯಲ್ಲ. ವಯಸ್ಕರ ಶಿಕ್ಷಣಕ್ಕಾಗಿ ಸಾಕಷ್ಟು ಹಣವಿಟ್ಟಿದ್ದರೂ ಅದನ್ನು ಎಲ್ಲಿ ಖರ್ಚು ಮಾಡಲಾಗಿದೆಯೆಂಬುದು ತಿಳಿಯದು. ಕಡ್ಡಾಯ ಪ್ರಾಥಮಿಕ ಶಿಕ್ಷಣ ಜಾರಿಯಲ್ಲಿ ಬರಬೇಕು. ಗ್ರಾಮಾಭಿವೃದ್ಧಿಗೆ ಹೆಚ್ಚಿನ ಹಣಬೇಕು. ಹೆಚ್ಚು ಬೆಳೆಯಿರಿ ಯೋಜನೆ ತೃಪ್ತಿಕರವಾಗಿ ಕೆಲಸಮಾಡಿಲ್ಲ. ರೈತನ ಬೆಳೆಸಿಗೆ ಯೋಗ್ಯ ಬೆಲೆ ದೊರೆಯುತ್ತಿಲ್ಲ, ಇತರ ವಸ್ತುಗಳ ಬೆಲೆಗೆ ನಿಯಂತ್ರಣವಿಲ್ಲ. ಮರ ವ್ಯಾಪಾರಕ್ಕಾಗಿ ಜನರು ಕಾಡನ್ನು ಒಡಿಕವಿಲ್ಲದೆ ನಾಶಮಾಡುತ್ತಿದ್ದಾರೆ. ಬತ್ತ ಪ್ರೊಕ್ಯೂರ್ ಮಾಡುವ ಪದ್ಧತಿ ಸರಿಯಾಗಿಲ್ಲ. ಹೊರಗೆ ಕಳುಹಿಸಬೇಕಾದ ೧೦,೦೦೦ ಟನ್ನುಗಳಲ್ಲಿ ಕೇವಲ ೬,೦೦೦ ಟನ್ನು ಹೋಗಿದೆ. ಅಂತರಿಕ ಉಪಯೋಗಕ್ಕೆ ಇಡಬೇಕಾದ ೫,೦೦೦ ಟನ್ನುಗಳಲ್ಲಿ ೩,೦೦೦ ಮಾತ್ರ ಸಂಗ್ರಹಿಸಲಾಗಿದೆ.

ಶ್ರೀ ಕೆ. ಕೆ. ಬೆಳ್ಯಪ್ಪನವರು

ಕೊಡಗಿನ ಆದರ್ಶ ಚೀಫ್ ಕಮಿಷನರ ಆಡಳಿತ ಕ್ರಮ ಹೊಗಳಲರ್ಹವಾಗಿದೆ. ಉತ್ತಮವಾದ ಬಡ್ಜೆಟ್ಟಿಗಾಗಿ ವಂದಿಸುವೆನು. ಕೊಡಗಿನ ವಿಲೀನೀಕರಣ ಬೇಗ ಆಗಲಿರುವಾಗ ವ್ಯವಸಾಯ ಆದಾಯ ತೆರಿಗೆ ವಸೂಲು ಮಾಡಲೇಕೆ? ಅದ್ದರಿಂದ ಇದನ್ನು ಬಿಡಬೇಕು. ಕೊಡಗಿಗೆ ಎಗ್ಸಿಕ್ಯೂಟಿವ್ ಕೌನ್ಸಿಲರುಗಳ ನೇಮಕವಾದರೆ ಅವರು ವೇತನವಿಲ್ಲದೆ ಗೌರವಾರ್ಥ ಕೆಲಸ ಮಾಡಬೇಕು. ಸರಕಾರಿ ಉದ್ಯೋಗಿಗಳು ಅನಾವಶ್ಯಕ ಪ್ರಯಾಣ ಮಾಡಿ ಖರ್ಚು ಹೆಚ್ಚು ಮಾಡುತ್ತಾರೆ. ಜನಸಂಪರ್ಕವು ಉದ್ಯೋಗಿಗಳಿಗೆ ಕಡಿಮೆಯಾಗಿದೆ. ಜನತೆಗೆ ತಿಳಿದಿರುವ ಒಂದೇ ಇಲಾಖೆಯೆಂದರೆ ಸಹಕಾರ ಇಲಾಖೆ. ವ್ಯವಸಾಯ ಇಲಾಖೆಯ ವಿಚಾರ ಜನತೆಗೆ ತಿಳಿದೇ ಇಲ್ಲ. ಬೆಳೆಸುವವನಿಗೆ ಹೆಚ್ಚಿನ ಬೆಲೆ ಕೊಟ್ಟರೆ ತಾನಾಗಿಯೇ ಉತ್ಪಾದನೆ ಹೆಚ್ಚುಗುವದು. ಜಾನುವಾರು ಇಲಾಖೆ ತೃಪ್ತಿಕರವಾಗಿಲ್ಲ. ಅಧಿಕಾರಿಗಳು ಗ್ರಾಮಾಂತರಗಳನ್ನು ಸುತ್ತುವದಿಲ್ಲ. ಪೋಲೀಸ್ ಇಲಾಖೆಯ ಕೆಲಸ ತೃಪ್ತಿಕರವಾಗಿದೆ. ಲಂಚಗುಳಿತನ ಹೆಚ್ಚುತ್ತಿದೆ. ಹೊರಪ್ರಾಂತಗಳಿಗಿಂಥಾ ಇಲ್ಲಿಯ ಉದ್ಯೋಗಿಗಳು ಉತ್ತಮರು. ಚುನಾವಣೆಯಾದನಂತರ ವ್ಯವಸಾಯ ಆದಾಯ ತೆರಿಗೆಯನ್ನು ಜಾರಿಗೆ ತರುವದು ಹಿತ. ಶಾಲೆಗಳಲ್ಲಿ ಶಿಸ್ತು ಚೆನ್ನಾಗಿದೆ. ಕಾಲೇಜು ಪ್ರಿನ್ಸಿಪಾಲರ ಉತ್ತಮ ಕೆಲಸಕ್ಕಾಗಿ ಅವರನ್ನು ವಂದಿಸಬೇಕಾಗಿದೆ. ಕೊಡಗಿನಲ್ಲಿ ಎರಡು ರಾಜಕೀಯ ಪಕ್ಷಗಳಿರುವದರಿಂದ ಯಾವ ಪಕ್ಷಕ್ಕೆ ಸೇರದವರನ್ನು ಕೌನ್ಸಿಲರುಗಳಾಗಿ ಮಾಡುವದು ಹಿತ. ಫಾರೆಸ್ಟ್ ಇಲಾಖೆಯಿಂದ ತುಂಬಾ ಉತ್ಪತ್ತಿ ಬರುತ್ತಿದೆ. ವೈದ್ಯ ಇಲಾಖೆಯ ಕೆಲಸ ಚೆನ್ನಾಗಿದೆ. ವೀರಾಜಪೇಟೆ ಆಸ್ಪತ್ರೆಯಲ್ಲಿ ಚಾರ್ಜು ಮಾಡುವ ರೂಮ್ ಬಾಡಿಗೆ ಹೆಚ್ಚು. ಪಿ. ಡಬ್ಲ್ಯು. ಡಿ. ಇಲಾಖೆಯ ಕೆಲಸ ಚೆನ್ನಾಗಿದೆ.

ಶ್ರೀ ಕೆ. ಮಲ್ಲಪ್ಪನವರು.

ಫೈನಾನ್ಸ್ ಕಮಿಟಿಯ ಶಿಫಾರಸು ಒಪ್ಪಿಕೊಂಡದ್ದಕ್ಕೆ ವಂದಿಸುತ್ತೇನೆ. ಆ ಹಣವೆಲ್ಲಾ ವಿನಿಯೋಗವಾಗುವದೆಂದು ಭಾವಿಸುತ್ತೇನೆ. ಫಾರೆಸ್ಟೇ ನಮ್ಮ ಆದಾಯದ ಪ್ರಧಾನ ಮಾರ್ಗ. ಗಂಧದ ಉತ್ಪತ್ತಿ ಕಡಿಮೆ ಆಗುತ್ತಿದೆ. ಈಗ ವರ್ಷಕ್ಕೆ ೯೦ ಟನ್ನುಗಳಿಗೆ ಇಳಿದಿದೆ. ಗಂಧದ ನೀತಿಯನ್ನು ಪುನರ್ವಿಮರ್ಶಿಸಬೇಕು. ಗಂಧದ ಮರಗಳಿಗೆ ಕೊಡುವ ಬೋನಸ್ಸು ಸಾಲದು. ಬೆಳೆಯುವವರಿಗೆ ಕಡಿಮೆ ಶೇಕಡ ೫೦ ಕೊಡಬೇಕು. ಗುಡಿ ಕೈಗಾರಿಕೆಗಳಿಗೆ ಯಾವುದೇ ಪ್ರೋತ್ಸಾಹವಿಲ್ಲ. ರೇಶ್ಮೆ ಕೈಗಾರಿಕೆ, ರೇಷ್ಮೆ ಹುಳ ಸಾಕುವುದು ಜಾರಿಯಲ್ಲಿ ತರಬಹುದು. ಡೈರಿ ಫಾರಮ್ಮನ್ನು ಟೀಕಿಸುವದನ್ನು ನಾನು ಒಪ್ಪುತ್ತೇನೆ. ಬತ್ತಿದ ಹಸುಗಳನ್ನು ಫ್ರೇಜರ್ ಪೇಟೆಗೆ ಕಳುಹಿಸಬೇಕು. ಬಡ್ಜೆಟ್ಟು ತೃಪ್ತಿಕರವಾಗಿದೆ.

ಶ್ರೀ ಕೆ. ಪಿ. ಕರುಂಬಯ್ಯನವರು.

ಸರಕಾರವನ್ನು ಟೀಕೆ ಮಾಡುವುದು ಸಾಧಾರಣದ ಅಭ್ಯಾಸ. ಸ್ವಾತಂತ್ರ್ಯದ ನಂತರ ಸರಕಾರವು ನಮ್ಮ ಟೀಕೆಗಳಿಗೆ ತಕ್ಕಮಟ್ಟಿಗೆ ಕಿವಿಗೊಡುತ್ತಿದೆ. ಅದ್ದರಿಂದ ಹದ್ದು ಮೀರಿ ಟೀಕಿಸುವದು ಸರಿಯಲ್ಲ. ಆಡಳಿತದಲ್ಲಿ ಜನಾನುರಾಗಿ ಮುಂದಾಳುಗಳು ಭಾಗಗೊಳ್ಳುವಂತಾಗಬೇಕು. ಇದಕ್ಕಾಗಿ ೩೪,೦೦೦ ರೂಪಾಯಿ ಇಟ್ಟದ್ದು ಒಳ್ಳೆಯದು. ಪ್ರತ್ಯೇಕವಾದಿ ಪಕ್ಷವು ಈ ತಾತ್ಕಾಲಿಕ ಏರ್ಪಾಡನ್ನು ಮೆಚ್ಚುತ್ತದೆ. ಕೊಡಗಿನ ವಿಲೀನೀಕರಣದ ವಾರ್ತೆ ಜನತೆಯಲ್ಲಿ ಅಸಮಾಧಾನವನ್ನು ಉಂಟುಮಾಡಿತ್ತು. ಆದರೆ ಈ ವಿಚಾರದಲ್ಲಿ ಜನತೆಯ ಅಭಿಪ್ರಾಯಕ್ಕೆ ಆಸ್ಪದವಿದೆಯೆಂಬುದು ತೃಪ್ತಿಕರವಾಗಿದೆ. ಕೊಡಗಿನ ಆರ್ಥಿಕ ಸ್ಥಿತಿ ಉತ್ತಮಗೊಳ್ಳುತ್ತಿದೆ. ಬಡ್ಜೆಟ್ಟಿನಲ್ಲಿರುವ ೫ ಲಕ್ಷ ಕೊರತೆಯನ್ನು ನೋಡಿ ಕೇಂದ್ರದವರು ಕೊಡಗಿನದು ಕೊರತಾ ಬಡ್ಜೆಟ್ಟೆಂದು ಭಾವಿಸಬಹುದು. ಆದರೆ ಕೆಪಿಟಲ್ ಖರ್ಚುಗಳಿಗಾಗಿ ಹತ್ತು ಲಕ್ಷವಿಟ್ಟಿರುವ ಕಾರಣ ಈ ಕೊರತೆಯಾಗಿದೆ. ಇದನ್ನು ಕಳೆದರೆ ನಮ್ಮದು ಉಳಿವಿನ ಬಡ್ಜೆಟ್ಟಾಗುವದು. ನಮ್ಮ ಗುರಿಯು ಪೂರ್ಣ ಪಾನನಿರೋಧವಾಗಿರಬೇಕು. ಕೊಡಗಿನಲ್ಲಿ ಲೇಸನಿಂಗ್ ಪದ್ಧತಿ ಜಯಪ್ರದವಾಗಿಲ್ಲ. ಸಾರಾಯಿ ಕಳ್ಳಸಂತೆ ನಡೆಯುತ್ತಿದೆ. ಸರಕಾರವು ಸರಕಾರಿ ಡಿಪೋಗಳಲ್ಲಿ ಕಾಸ್ಟಿಗೆ ರೂ ೫/-ರಂತೆ ನಿರ್ಭಂದಕವಾಗಿ ಸಾರಾಯಿ ಮಾರುವ ಏರ್ಪಾಡು ಮಾಡಬೇಕು. ಬರುವ ಹತ್ತು ವರ್ಷಗಳಲ್ಲಿ ಕಡ್ಡಾಯ ಪ್ರಾಥಮಿಕ ಶಿಕ್ಷಣದ ಏರ್ಪಾಡು ಮಾಡಬೇಕು. ಕಾಲೇಜು ಕಟ್ಟಡವಾಗುವದೋ ಎಂಬ ಭಯ ಕೆಲವರಲ್ಲಿವೆ. ಎರಡು ವರ್ಷಗಳೊಳಗೆ ಆಗಲೇಬೇಕು. ಇದಕ್ಕೆ ವಿಶ್ವವಿದ್ಯಾಲಯದಿಂದ ವಿನಾಯಿತಿ ಪಡೆಯಬೇಕು. ಮಲೇರಿಯಾ ಇಲಾಖೆಯ ಕೆಲಸ

ತೃಪ್ತಿಕರ. ಕೊಡಗಿನಲ್ಲಿ ಜನನದ ಸಂಖ್ಯೆಯು ಮರಣದ ಸಂಖ್ಯೆಗಿಂತಾ ಹೆಚ್ಚಾಗುತ್ತಿದೆ. ಈ ಇಲಾಖೆಯು ಖಾಯಂ ಆಗಬೇಕು.

ಶ್ರೀ ಎನ್. ಸೋಮಣ್ಣನವರು.

ಕೊಡಗಿನ ತಾತ್ಕಾಲಿಕ ಆಡಳಿತ ರಚನೆಯ ವಿಚಾರದಲ್ಲಿ ಶ್ರೀ ಕೆ. ಪಿ. ಕರುಂಬಯ್ಯನವರ ಅಭಿಪ್ರಾಯವನ್ನು ನಾನು ಒಪ್ಪಲಾರೆ. ಕೌನ್ಸಿಲರುಗಳು ಸರಕಾರಿ ಅಧಿಕಾರಿಗಳಂತಾಗುವದರಿಂದ ಅಂಥಾವರ ಅವಶ್ಯಕತೆ ಇಲ್ಲ. ಚೀಫ್ ಕಮಿಷನರು ಈ ವರೆಗೆ ಜನಪ್ರತಿನಿಧಿಗಳ ಅಭಿಪ್ರಾಯಕ್ಕೆ ಮನ್ನಣೆ ಕೊಟ್ಟಂತೆಯೇ ಇವರ ಅಭಿಪ್ರಾಯಕ್ಕೂ ಕೂಡ. ಅದಕಲ್ಲೂ ರಾಜಕೀಯ ಭಿನ್ನಾಭಿಪ್ರಾಯವಿರುವ ಇಲ್ಲಿ ಪರಿಸ್ಥಿತಿ ಇನ್ನೂ ಹಾಳಾಗದಿರದು. ಐವತ್ತು ವರ್ಷಗಳ ಹಿಂದಿನ ಈ ಸುಧಾರಣೆಯನ್ನು ವಿರೋಧಿಸುತ್ತೇನೆ, ಇದರಿಂದ ಪ್ರಯೋಜನವಾಗುವದಿಲ್ಲ. ಎರಡು ಜವಾಬ್ದಾರಿ ಮಂತ್ರಿಗಳೂ ಕೊಡಗಿನ ವಿಲೀನೀಕರಣದ ವಿಚಾರ ಹೇಳಿದ್ದಾರೆ. ಚುನಾವಣೆಯ ನಂತರ ವಿಲೀನೀಕರಣವಾಗದಿದ್ದರೆ ಆಗ ಕೌನ್ಸಿಲರುಗಳನ್ನು ನೇಮಿಸಬಹುದು. ಆದ್ದರಿಂದ ಈಗ ಈ ಯೋಜನೆಯು ಅವಶ್ಯವಿಲ್ಲ. ಚುನಾವಣೆಯ ವರೆಗೆ ಈ ಮೊದಲಿನ ಯಾವದೇ ಏರ್ಪಾಡು ಆಗಲಾರದೆಂದು ಆಶಿಸುತ್ತೇನೆ. ಕೊಡಗಿನ ಭವಿಷ್ಯವು ಬರುವ ಚುನಾವಣೆಯಲ್ಲಿ ನಿರ್ಧಾರವಾಗುವದೆಂದು ಹೇಳುವದು ಹೇಗೆ? ಜನಾಭಿಪ್ರಾಯವನ್ನು ಕೇಳಲಾಗುವದೆಂದು ಯಾವ ಭರವಸೆಯಿಂದ ಹೇಳುವದು. ಈ ಮೊದಲು ಶ್ರೀ. ಪಿ. ಓ. ಪೆ. ನವರು ಹೇಳಿದಂತೆ ಜನತೆಯ ಅಭಿಪ್ರಾಯ ಈ ವಿಚಾರದಲ್ಲಿ ತೆಗೆಯಲ್ಪಡಲಾರದು. ಭಾರತದಲ್ಲಿ ಎರಡು ಪ್ರಜಾಪ್ರಭುತ್ವಗಳಿವೆ. ನಿಕೃಷ್ಟ ಪ್ರಜಾಪ್ರಭುತ್ವವು ಉತ್ಕೃಷ್ಟ ಪ್ರಜಾಪ್ರಭುತ್ವಕ್ಕೆ ಶಿರಬಾಗಬೇಕು. ಆದ್ದರಿಂದ ಚುನಾವಣೆಯು ಭವಿಷ್ಯ ನಿರ್ಣಯ ಮಾಡಲಾರದು.

ಫೈನಾನ್ಸ ಮೆಂಬರರ ಉತ್ತರ.

ಬಜೆಟ್ಟಿನ ಮೇಲಿನ ಚರ್ಚೆಗೆ ಫೈನಾನ್ಸ ಮೆಂಬರರು ಉತ್ತರವೀಯುತ್ತಾ ಕೆಲವರ ಟೀಕೆಯು ಹದ್ದಿನೊಳಗಿನದು. ಕೆಲವರದು ಹದ್ದುಮೀರಿದುದು. ಕೆಲವರದು ನಿರಾಧಾರವಾದುದು. ಈ ಬಜೆಟ್ಟು ಕೌನ್ಸಿಲು ಸದಸ್ಯರು ಹಿಂದೆ ಕೊಟ್ಟ ಸಲಹೆಗಳಂತೆಯೇ ತಯಾರಿಸಲ್ಪಟ್ಟಿದೆ. ಕೊಡಗಿನ ಆಡಳಿತದಲ್ಲಿ ಶಿಥಿಲತೆ ತೋರಿ ಬಂದಿದ್ದರೆ ಅದು ಖಜಾನೆಯ ಸಿಬ್ಬಂದಿ ಕೊರತೆಯ ಕಾರಣದಿಂದಾಗಿದೆ. ಸದಸ್ಯರೇ ಒಬ್ಬರೊಬ್ಬರಿಗೆ ವಿರೋಧ ಅಭಿಪ್ರಾಯ ವ್ಯಕ್ತಮಾಡುವದರಿಂದ ನಿಜಸ್ಥಿತಿಯು ಸರಕಾರಕ್ಕೆ ತಿಳಿಯದಾಗುತ್ತದೆ. ಸರಕಾರವು ಜಾನುವಾರು ಮತ್ತು ವ್ಯವಸಾಯ ಇಲಾಖೆಗಳ ಮೂಲಕ ರೈತನಿಗೆ ಹೆಚ್ಚು ಬೆಳೆಯಲು ತುಂಬಾ ಸಹಾಯ ಮಾಡುತ್ತಿದೆ. ಇಲಾಖೆಗಳ ಕೆಲಸದ ಸೌಲಭ್ಯವನ್ನು ರೈತರು ಹೊಂದಿಕೊಳ್ಳುವದನ್ನು ಇನ್ನೂ ಕಲಿತಿಲ್ಲ. ಕೊಡಗಿನಲ್ಲಿ ಟ್ರಾಕ್ಟರುಗಳನ್ನು ಉಪಯೋಗಿಸುವದು ಲಾಭದಾಯಕವಾಗಲಾರದು. ಶ್ರೀಮಂತ ರೈತರು ಇದರ ಪರಿಶೀಲನೆ ಮಾಡಲಿ. ಬಜೆಟ್ ಮೀಟಿಂಗು ತಡವಾಗಿ ಆಗಲು ಬಜೆಟ್ಟು ಸಕಾಲದಲ್ಲಿ ಪ್ರಿಂಟಾಗಿ ದೊರೆಯದ್ದೇ ಕಾರಣವಾಗಿದೆ. ಸರಕಾರಿ ಕಾಗದ ಪತ್ರಗಳು ಕಾಣೆಯಾಗಿವೆಯೆಂಬುದು ನಿರಾಧಾರವಾದುದು. ನಾಡು ಕಚೇರಿಗಳಲ್ಲಿ ಸರ್ವೆ ಕೆಲಸ ಬಾಕಿ ಇದೆಯೆಂಬುದು ನಿಜ. ಸೆಟ್ಲ್‌ಮೆಂಟ್ ಕೆಲಸಕ್ಕೆ ಸಿಬ್ಬಂದಿಯನ್ನು ಉಪಯೋಗಿಸಿದುದೇ ಕಾರಣ. ಉತ್ಪನ್ನದ ಬೆಲೆಯನ್ನು ಏರಿಸುವ ವಿಚಾರದಲ್ಲಿ ಸ್ಥಳೀಯ ಸರಕಾರವು ಪ್ರಯತ್ನಮಾಡಿದ್ದರೂ ಅಖಿಲ ಭಾರತ ದೃಷ್ಟಿಯಿಂದ ಒಂದೇ ತತ್ವ ಅನುಸರಿಸುತ್ತಿರುವ ಕೇಂದ್ರ ಸರಕಾರವು ಹಾಗೆ ಮಾಡಲು ಸಮ್ಮತಿಸಿಲ್ಲ. ಕೇವಲ ಎರಡು ತಿಂಗಳ ಒಂದು ಏರ್ಪಾಡನ್ನು ಮಾತ್ರ ಅದು ಒಪ್ಪಿದೆ. ಪ್ಲಾಂಟರುಗಳೂ ಆಹಾರ ಬೆಳೆಸಬೇಕೆಂದು ಒತ್ತಾಯ ಮಾಡಲಾಗುತ್ತಿದೆ. ಸಾರಾಯಿ ಮಾರಾಟದ ಅವ್ಯವಸ್ಥೆಯನ್ನು ತಡೆಯಲಿಕ್ಕಾಗಿ ಅತ್ಯುತ್ತಮ ಏರ್ಪಾಡಿಸಲಾದ ಕೂಪನ್ ಪದ್ಧತಿಯನ್ನು ಜಾರಿಯಲ್ಲಿ ತರಲಾಗಿದೆ

ವ್ಯವಸಾಯ ಆದಾಯ ತೆರಿಗೆ.

ಮುಂದರಿಸಿಡುವ ಸೂಚನೆ ಬಿದ್ದುಹೋಯಿತು.

ಕೊಡಗಿನ ವಿಲೀನೀಕರಣ ಪ್ರಶ್ನೆಯು ತೀರ್ಮಾನವಾಗುವವರೆಗೆ ವ್ಯವಸಾಯ ಆದಾಯತೆರಿಗೆ ಹಾಕುವದನ್ನು ಮುಂದರಿಸಬೇಕು ಎಂಬ ಠರಾವನ್ನು ಶ್ರೀ ಓ. ಎಂ ನಾಣಮ್ಮಯ್ಯನವರು ಸೂಚಿಸಿ ವ್ಯವಸಾಯ ಆದಾಯ ತೆರಿಗೆಯ ಮಸೂದೆಯನ್ನು ಜಾರಿಗೆ ತಂದುದು ಪಾನನಿರೋಧದಿಂದ ಸರಕಾರಕ್ಕೆ ಉಂಟಾಗ ಬಹುದಾದ ನಷ್ಟವನ್ನು ಭರ್ತಿ ಮಾಡಲು ಆಗಿದೆ. ಆದರೆ ಪಾರ್ಶ್ವ ಪಾನನಿರೋಧದಿಂದ ಸರಕಾರಕ್ಕೆ ನಷ್ಟವಾಗುತ್ತಿಲ್ಲ. ಆದ್ದರಿಂದ ಈ ಕಂದಾಯವನ್ನು ಈಗ ಹಾಕುವದು ನ್ಯಾಯವಿಲ್ಲ. ಕೊಡಗಿನ ಭವಿಷ್ಯವು ಬೇರೆ ಪ್ರಾಂತದೊಡನೆ ವಿಲೀನ ಹೊಂದಲಿರುವಾಗ ಪ್ಲಾಂಟರುಗಳ ಮೇಲೆ ಈ ಭಾರ ಹೊರಿಸಲೇಕೆ ಎಂದರು. ಸರಕಾರಿ ಮೆಂಬರರು ವಿರೋಧಿಸುತ್ತಾ ಈ ಮಸೂದೆಯು ಬಹುವಾಗಿ ಚರ್ಚಿಸಲ್ಪಟ್ಟಿದೆ. ಸಿಲೆಕ್ಟ್ ಕಮಿಟಿಯು ಹತ್ತು ಮೀಟಿಂಗುಗಳನ್ನು ನಡೆಸಿದೆ. ಕಳೆದ ಸಭೆಯಲ್ಲಿ ಪಾಸಾದ ಈ ಮಸೂದೆಯನ್ನು ಮುಂದೂಡಲೆತ್ನಿಸುವದು ಸರಿಯಲ್ಲ. ಇದನ್ನು ಮುಂದರಿಸಿದರೆ ಬಜೆಟ್ಟನ್ನೇ ಪುನಹ ವಿಮರ್ಶಿಸಬೇಕಾಗುವದು. ಏಕೆಂದರೆ ಇದರಿಂದ ಬಜೆಟ್ಟಿನಲ್ಲಿ ೧೩ ಲಕ್ಷದ ವರೆಗೆ ಕೊರತೆಯಾಗುವದು. ಕೇಂದ್ರ ಸರಕಾರವು ಅಂಥಾ ಬಜೆಟ್ಟನ್ನು ಒಪ್ಪಲಾರದು. ವಿಲೀನದ ಸಂದರ್ಭದಲ್ಲಿ ದೊಡ್ಡ ಭಾಗದ ನಿಯಮಗಳು ಸಣ್ಣ ಭಾಗಕ್ಕೆ ಅನ್ವಯಿಸುವವೆಂದು ಸಾಮಾನ್ಯವಾಗಿ ಹೇಳಬಹುದು. ಆದ್ದರಿಂದ ಆ ವಾದದಲ್ಲಿ ತಿರುಳಿಲ್ಲವೆಂದರು.

ಶ್ರೀ ಕೆ. ಪಿ. ಕರುಂಬಯ್ಯನವರು ಮಾತಾಡುತ್ತಾ ಕೊಡಗಿನ ವಿಲೀನದ ವಿಚಾರ ಪತ್ರಿಕೆಯ ವರ್ತಮಾನವೇ ವಿನಃ ಬೇರೆ ಅಧಿಕೃತವಾಗಿ ಏನೂ ಇಲ್ಲ. ಕೊಡಗಿನ ಭವಿಷ್ಯದ ಬಗ್ಗೆ ಜನಾಭಿಪ್ರಾಯವನ್ನು ತೆಗೆಯಲಾಗುವದೆಂದು ಇತ್ತಲಾಗಿ ಅಧಿಕೃತವಾಗಿ ತಿಳಿದುಬಂದಿದೆ. ನಮ್ಮ ಭವಿಷ್ಯವು ನಮ್ಮ ದೇಶದ ಆರ್ಥಿಕ ಸ್ಥಿತಿಯನ್ನವಲಂಬಿಸಿದೆ. ಈ ಕಂದಾಯ ಮಸೂದೆಯನ್ನು ಚೆನ್ನಾಗಿ ವಿಮರ್ಶಿಸಲಾಗಿದೆ. ಈ ವರ್ಷ ಜಾರಿಯಲ್ಲಿ ತರಬೇಕೆಂದು ಬಹುಮತದಿಂದ ಪಾಸಾಗಿದೆ. ಇದನ್ನು ಮುಂದರಿಸುವದರಲ್ಲಿ ಅರ್ಥವಿಲ್ಲ ಎಂದರು.

ಶ್ರೀ. ಎನ್. ಸೋಮಣ್ಣನವರು ಠರಾವನ್ನು ಅನುಮೋದಿಸುತ್ತಾ ಈ ಮಸೂದೆಯ ವಿಚಾರದಲ್ಲಿ ಏನೋ ಒಂದು ವಿಶೇಷ ಪರಿಸ್ಥಿತಿಯಿಂದ ಹಿಂದೆ ಬೆಂಬಲಕೊಡಲ್ಪಟ್ಟಿತು. ಇದನ್ನು ಮುಂದರಿಸಲೇಬೇಕು. ಜವಾಬ್ದಾರಿಯುತ ಮಂತ್ರಿಗಳೇ ಕೊಡಗಿನ ವಿಲೀನದ ವಿಚಾರ ಹೇಳುತ್ತಿದ್ದಾರೆ. ಹಾಗಿರುವಾಗ ಈ ಅನಾವಶ್ಯಕ ಕಂದಾಯವನ್ನು ಪ್ಲಾಂಟರುಗಳ ಮೇಲೆ ಹೊರಿಸಬಾರದು. ಸಂಯೋಜನೆಯಾದ ನಂತರವೂ ಈ ಕಂದಾಯ ವಸೂಲಾಗ್ಮಾಡಲ್ಪಡಬಹುದು ಈಗ ನಮಗೆ ಆಗಬೇಕಿರುವ ಕೆಲಸಗಳಿಗೆಲ್ಲ ಸಂಚಯವಾಗಿರುವ ಶಿಲ್ಕು ಇದೆ. ಅದನ್ನು ಖರ್ಚುಮಾಡಬಹುದು. ಆದ್ದರಿಂದ ಈ ಕಂದಾಯವನ್ನು ಮುಂದರಿಸಿಡುವದು ಯೋಗ್ಯವೆಂದರು.

ಶ್ರೀ. ಪಿ ಐ. ಬೆಳ್ಯಪ್ಪನವರು ಮಾತಾಡುತ್ತಾ ಸಂಯೋಜನಾ ಪಕ್ಷವು ಕೊಡಗಿನ ಆರ್ಥಿಕ ಸ್ಥಿತಿಯನ್ನು ಶಿಥಿಲಗೊಳಿಸಿ ಸಂಯೋಜನೆಗೆ ಅನುಮಾಡಲೆಂದೇ ಈ ಮಸೂದೆಯನ್ನು ಆದಿಯಿಂದಲೂ ವಿರೋಧಿಸಿದ್ದಾಗಿದೆ. ಈಗಲೂ ಕೂಡ ಆ ಕಾರಣಕ್ಕಾಗಿಯೇ ಮುಂದರಿಸಿಡಲು ವಾದಿಸುತ್ತಿದ್ದಾರೆ. ಇಂಡಿಯಾ ಸರಕಾರವು ಕೊಡಗಿನ ಭವಿಷ್ಯದ ನಿರ್ಣಯ ಮಾಡಿಲ್ಲ ಹಾಗೆ ನಿರ್ಣಯವು ಇಲ್ಲಿಯ ಜನರಿಂದಲೇ ಆಗಬೇಕಲ್ಲದೆ ಬೇರಿಲ್ಲ ಬರುವ ಚುನಾವಣೆಯಲ್ಲೇ ಇದು ನಿರ್ಧಾರವಾಗುವದು. ಕೊಡಗು ಪ್ರತ್ಯೇಕವಿರಬೇಕೆಂಬ ದೃಢನಂಬಿಕೆ ಇರುವ ನಾನು ಕೊಡಗಿನ ಜನರು ಬರುವ ಚುನಾವಣೆಯಲ್ಲಿ ಕೊಡಗು ಪ್ರತ್ಯೇಕವಿರಬೇಕೆಂಬ ಅಭಿಮತವನ್ನೀಯುವರೆಂದು ನಂಬಿರುವೆನು. ಈ ಕಂದಾಯ ಮಸೂದೆಯು ಜನಪ್ರತಿನಿಧಿಗಳಿಂದ ಅಂಗೀಕಾರವಾದುದು. ಇದನ್ನು ಮುಂದರಿಸುವದೆಂದರೆ ಪ್ರೆಸಿಡೆಂಟರು ಹೇಳಿದಂತೆ ಕಾಲೇಜು ಕಟ್ಟಡ ಜಿಲ್ಲಾ ಬೋರ್ಡ ಉದ್ಯೋಗಿಗಳ ವೇತನ ಮೊದಲಾದುವನ್ನು ಮುಂದೆ ಹಾಕಿದಂತೆ ಆದ್ದರಿಂದ ಇದು ಜಾರಿಯಲ್ಲಿ ಬರಲೇಬೇಕು.

ಸರಕಾರಿ ಮೆಂಬರರ ಉತ್ತರದ ನಂತರ ಓಟಿಗೆ ಹಾಕಲಾಗಿ ಆರು ಜನರು ಠರಾವಿಗೆ ಪರವಾಗಿಯೂ ಒಂಭತ್ತು ಜನರು ವಿರೋಧವಾಗಿಯೂ ಓಟು ಮಾಡಿದ ಕಾರಣ ಠರಾವು ಪಾಸಾಗಲಿಲ್ಲ.

ಕೊಡಗು ಪ್ರಾಂತೀಯ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಕೋ.-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ. (1921ರಲ್ಲಿ ಸ್ಥಾಪಿತವಾಗಿದೆ.

ಅಧಿಕೃತ ಶೇರು ಭಂಡವಾಳ	ರೂ.	10,00,000.
ವಸೂಲಾದ ಶೇರು ಮೊಬಲಗು	ರೂ.	1,79,000.
ಕ್ಷೇಮನಿಧಿ	ರೂ.	55,000.
ಇತರ ನಿಧಿಗಳು	ರೂ.	26,000.

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನೂ ಕೈಕೊಳ್ಳಲಾಗುವುದು

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ, ಬೆಳ್ಳಿ ನಗಗಳ ಆಧಾರದ ಮೇಲೆ ಸಹ ಸಾಲ ಕೊಡಲಾಗುವುದು. ಹಿಸಿಯೂ ಡ್ರಾಫ್ಟ್‌ಗಳ ಡಿಸ್ಕೌಂಟು ಮಾಡಲ್ಪಡುವುವು. ಟ್ರಿನಿಟಿ ಮತ್ತು ವಾರ್ಡನ್ ಇನ್ಶೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಗೌ. ಕಾರ್ಯದರ್ಶಿ. — ಕೆ. ಪಿ. ಅಪ್ಪಯ್ಯ, M. L. C. ಪ್ರೆಸಿಡೆಂಟ್ ಮತ್ತು ಮಜಾರ್ಟ್ಮೆ.

Edited, Printed and Published by P. I. Belliappa at 'Kodagu' Press, Mercara, for 'Kodagu' Ltd.

ಬೇಕಾಗಿದ್ದಾರೆ

1951–52 ರ ಸಾಲಿಗೆ ಮರಗೋಡು ಹೈಯರ್ ಎಲಿಮೆಂಟ್ರಿ ಶಾಲೆಗೆ S. S. L. C. ಪಾಸಾದ ಮತ್ತು ಹಿಂದಿಯಲ್ಲಿ ರಾಷ್ಟ್ರಭಾಷೆ ಆಗಿರುವ ಇಬ್ಬರು ಅಧ್ಯಾಪಕರು ಬೇಕಾಗಿದ್ದಾರೆ ಉಮೇದುವಾರರು. ತಾ. 5–5–51 ರ ಒಳಗೆ ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳುವುದು.

ಉಳುವಾರನ ಗಣಪತಿ
ಪ್ರೆಸಿಡೆಂಟ್,
2–1 ಶಾಲಾ ಬಡಾವಣೆ ಫಂಡು
ಮರಗೋಡು
ಮೂರ್ನಾಡು ಪೋಸ್ಟ್

Reg. No. M. 1550.
'KODAGU' MERCARA, (Coorg).

ಕೊಡಗು

ಸಂಪಾದಕರು—ಪಿ. ಐ. ಬೆಳ್ಳಿಯಪ್ಪನವರು] [ವಾರ್ಷಿಕ ಚಂದಾ ರೂ. ೬-೦-೦.
ಸಂಪುಟ ೨೯ | ತಾರೀಕು ೫-೫-೧೯೫೧ನೇ ಶುಕ್ರವಾರ | ಸಂಚಿಕೆ ೪೬

"ವಿಶಾಲತೆಯೇ ಜೀವನ; ಸಂಕೀರ್ಣತೆಯೇ ಮರಣ."

ಸ್ವಾಮಿ ದೇಶಿಕಾನಂದರವರ ಭಾಷಣ.

ಕೊಡಗಿನವರಾಗಿ ಶ್ರೀರಾಮಕೃಷ್ಣ ಆಶ್ರಮಕ್ಕೆ ಸೇರಿ ಸೇಲಮ್ಮಿನ ಶ್ರೀರಾಮಕೃಷ್ಣ ಮಠದ ಪ್ರೆಸಿಡೆಂಟರಾಗಿರುವ ಶ್ರೀ ದೇಶಿಕಾನಂದ ಸ್ವಾಮಿಯವರಿಗೆ ಮಡಿಕೇರಿ ವೇದಾಂತ ಸಂಘದವರೂ, ಪುರಜನರೂ ತಾರೀಕು ೩೦-೪-೫೧ ರಲ್ಲಿ ಒಂದು ಬಿನ್ನವತ್ತಳೆಯನ್ನರ್ಪಿಸಿ ಸತ್ಕರಿಸಿದರು. ಆ ಸಂದರ್ಭದಲ್ಲಿ ಸ್ವಾಮಿಯವರು 'ಪ್ರೇಮದ ಆವಶ್ಯಕತೆ' ಎಂಬ ವಿಷಯದಲ್ಲಿ ಭಾಷಣ ಮಾಡಿದರು. ಅದರ ಸಾರಾಂಶವನ್ನಿಲ್ಲಿ ಕೊಡಲಾಗಿದೆ.

'ನಿಮ್ಮ ಬಿನ್ನವತ್ತಳೆಯಲ್ಲಿ ಹೇಳಿದ ಮಾತುಗಳಿಂದ ಹೃದಯ ಉಕ್ಕಿ ನನ್ನ ಉದ್ವೇಗ ಹೆಚ್ಚಿದೆ. ನಿಮ್ಮ ಹೊಗಳಿಕೆಗೆ ತಕ್ಕ ಅರ್ಹತೆ ನನ್ನಲ್ಲಿರಲೆಂಬುದೇ ನನ್ನ ಸದಾಶಯ. ನಾನು ಸೇಲಂನಲ್ಲಿರುವವನು. ಅಲ್ಲಿಯ ಜನರ ಜೀವನವು ಕಷ್ಟಪ್ರಾಯವಾಗಿದೆ. ಹೊಟ್ಟೆಗೆ ಅನ್ನದ ಕೊರತೆ ಸತತ ಇದೆ. ಕುಡಿಯಲು ನೀರೂ ಇಲ್ಲ. ಕಳೆದ ವರ್ಷ ನೀರಿಗೆ ರೇಶನ್ ಮಾಡಲಾಗಿತ್ತು. ಈ ವರ್ಷವೂ ಹಾಗಾಗುವಂತಿದೆ. ಆದರೆ ಈ ಸುಂದರ ಪ್ರದೇಶದಲ್ಲಿ ಜೀವಿಸುತ್ತಿರುವ ನೀವು ಧನ್ಯರು. ಈ ಪವಿತ್ರ ಭೂಮಿಯ ಧೂಳೂ […]ಡ ನನಗೆ ಪವಿತ್ರವಾದುದು. ಹಾಗೆಂ[…]ಗ ಕೊಡಗಿನ ಮೇಲೆ ಹೆಚ್ಚಿನ ಮಮ[…]ಎಂದಲ್ಲ. ನನ್ನ ದೃಷ್ಟಿ ಇಂದು ಜಗ[…] ಆವರಿಸಿದೆ. ಅದರೊಳಗೆ ಕೊಡ[…] ಭಾಗವಾಗಿದೆ. ದಿವಂಗತ […] ತಮಾಶಿಸುಲ್ಲೋ ಯ ನ್ಯೆ[…] ಕೊಡಗಿನವರು ಸುಖಿಗಳು; […] ಐಶ್ವರ್ಯವಿದೆಯೆಂದಿದ್ದರು. ಹಾ[…]ವಾಗಿಯೂ ಕೊಡಗು ರಾಮ[…]ಎಂಬುದೇ ನನ್ನ ಆಶೆ […] ಭಿಕ್ಷು. ಇಡೀ ಜಗತ್ತೇ […]ಕ್ಷೇತ್ರ. ಇಂದು ಜಗ[…]ದಿಂದಾಗಿ ಅತಿ ನಿಕಟ ಸಂ[…]ಡೆದಿದೆ. ಇಂದು ನಾವು […] ಒಂದೆಂದು ಗಣಿಸದೆ ವ[…]ಲಾಗುವದಿಲ್ಲ. ಇಂದು […]ಜಗತ್ತು, ಒಂದೇ ಸರಕಾರ […]ಎಂಬ ಕನಸ್ಸು ಕಾಣುತ್ತಿ[ದ್ದೇವೆ] […]ದ ಆವಿಷ್ಕಾರಗಳಾದ […] ಮತ್ತಿತರ ಸಾಧನೆ[…]ನೇ ಕಟ್ಟುಂಬದಂತೆ […] ಕೊಡ ಆ ಬ್ರಹ[…]ಗಳು ಈ ಐಕ್ಯತೆಯನ್ನು ಕಳೆಕೊಳ್ಳುವದೇ ಮಹಾ ಪತನ. ಹಿಂದಿನ ಕಾಲದಲ್ಲಿ ಮಹಾ ತಪ್ಪುಗಳನ್ನು ಮಾಡಿದವರನ್ನು ಜನ ಸಂಪರ್ಕದಿಂದ ದೂರವಿಟ್ಟು ಬಹಿಷ್ಕಾರ ಹಾಕುತ್ತಿದ್ದರು. ಅದಕ್ಕಿಂತ ದೊಡ್ಡ ಶಿಕ್ಷೆ ಇರಲಾರದು. ಆದ್ದರಿಂದ ಐಕ್ಯತೆಯೇ ಜೀವನ, ಅನೈಕ್ಯತೆಯೇ ಮರಣವೆನ್ನಬಹುದು.

ನನ್ನ ಜೀವಮಾನದಲ್ಲಿ ಎರಡು ಜಗತ್ತಿನ ದುರಂತಕಾರಕ ಯುದ್ಧಗಳಾಗಿ ಹೋದವು. ಅವುಗಳಿಂದ ವಿಪರೀತ ಕಷ್ಟನಷ್ಟಪಟ್ಟೆವು. ಮತ್ತೊಂದು ಯುದ್ಧದ ಮೋಡಗಳು ಕಾಣುತ್ತಿವೆ. ಇದರ ಪರಿಣಾಮವು ಅನಿಷ್ಟಕಾರಿಯಾಗುವದರಲ್ಲಿ ಸಂಶಯವಿಲ್ಲ. ಈ ಯುದ್ಧದಲ್ಲಿ ಜಯಪಡೆದವನೂ ಸೋತವನೂ ನಿರ್ಬಲಗೊಳ್ಳುವದಲ್ಲದೆ ನಮ್ಮ ನಾಗರೀಕತೆ, ಸಂಸ್ಕೃತಿಗಳ ಸಮಾಧಿಯಾಗುವದು. ಯುದ್ಧಗಳಿಗೆ ಕಾರಣ ಶೋಷಣೆ. ಎಂದಿನ ವರೆಗೆ ಅಬಲರನ್ನು ಸಬಲರು, ಬಡವರನ್ನು ಸಿರಿವಂತರು ಸುಲಿಗೆ ಮಾಡುವದು ನಿಲ್ಲುವದಿಲ್ಲವೋ ಅಂದಿನ ವರೆಗೆ ಯುದ್ಧಗಳು ನಿಲ್ಲಲಾರವು. ಇಂದಿನ ರಾಜಕೀಯ ಧುರೀಣರು, ಜಗತ್ತಿನ ಈ ಅನಿಷ್ಟ ಸಮಸ್ಯೆಯ ಮೇಲ್ಮೈಯನ್ನು ಪರಿಶೀಲಿಸುತ್ತಿರುವರೇ ವಿನಾ ಆಳವಾಗಿ ಶೋಧಿಸುತ್ತಿಲ್ಲ. ನಾನೇನು ರಾಜಕಾರಿಣಿಯಲ್ಲ. ಸೇಲಮ್ಮನ್ನು ನನ್ನ ನಿವಾಸಸ್ಥಾನವಾಗಿ ಆರಿಸಿಕೊಂಡು ಡಾಕ್ಟರುಗಳ ಸಲಹೆಯಂತೆ ಜೀವಿಸುತ್ತಿರುವವನು. ಇದೇ ಮೊದಲಾಗಿ ಹೊರಗೆ ಬಂದು ನಾನು ನಾಲ್ಕು ಮಾತಾಡುವುದಾಗಿದೆ. ನಾನು ಕಾಯಿಲಸ್ಥ. ಆದ್ದರಿಂದ ಪ್ರಪಂಚದ ವಿದ್ಯಮಾನಗಳ ಬಗ್ಗೆ ಅಭ್ಯಾಸಮಾಡಿ ನಿರ್ದಿಷ್ಟ ಉತ್ತರ ಹೇಳುವ ಸಾಹಸಮಾಡಲಾರೆ.

ಜಗತ್ತಿನ ಈ ಯುದ್ಧಗಳನ್ನು ತಪ್ಪಿಸುವದೆಂತು? ಇದಕ್ಕೆ ಪ್ರಾಮುಖ್ಯವಾಗಿ ಮನುಷ್ಯನು ಎಂಥಾವನೆಂಬುದನ್ನು ಅರಿಯಬೇಕಾಗಿದೆ. ಮನುಷ್ಯನ ಬಗ್ಗೆ ಹಲವು ವಿವರಣೆಗಳಿವೆ. ಮನುಷ್ಯನು ಹಿಂಸಕ ಪ್ರಾಣಿ. ಮನುಷ್ಯನು ಸಂಘಚರ ಜೀವಿ. ಮನುಷ್ಯನು ಸ್ವಾಭಾವಿಕ ಬುದ್ಧಿಯವನು. ಆತನಿಗೆ ಆಹಾರದ, ಲೈಂಗಿಕ, ಸಾಮಾಜಿಕದ ಸ್ವಾಭಾವಿಕ ಬುದ್ಧಿ ಇದೆ ಎಂದು ಮೊದಲಾದ ವಿವರಣೆಗಳಿವೆ. ಆದರೆ ಇವು ಒಂದೊಂದೂ ಸತ್ಯವೆನಿಸಿದರೂ ಪೂರ್ಣ ಸತ್ಯವಲ್ಲ. ಮನುಷ್ಯನು ಇವೆಲ್ಲವುಗಳ ಸಮೀಕರಣಸ್ವರೂಪನು. ತನ್ನಲ್ಲಿರುವ ಈ ಎಲ್ಲ ಗುಣಗಳನ್ನು ಹಿಡಿತದಲ್ಲಿಟ್ಟು ಮುಂದೆ ಸಾಗಿದರೇನೇ ಮಾನವನ ಜೀವನವು ಪರಿಪೂರ್ಣವೆನಿಸುವದು. ಆದರೆ ವೇದಾಂತವು ಮಾನವನ ಬಗ್ಗೆ ಕೊಟ್ಟ ವಿವರಣೆಯು ಸರ್ವಗ್ರಾಹಿಯಾದುದು. ಸಾರಸತ್ವದಲ್ಲಿ ಮನುಷ್ಯನು ದೈವಾಂಶನು ಎಂದು ಅದು ನಿರ್ದಿಷ್ಟವಾಗಿ ನುಡಿಯುತ್ತದೆ. ಮನುಷ್ಯನ ನಿಜಸ್ವಭಾವವು ದೈವಿಕವಾದುದು. ನಮಗೆ ತಿಳಿದಿರಲಿ, ಇಲ್ಲದಿರಲೀ ಈ ದೈವೀ ಐಕ್ಯತೆಯ ಕಡೆಗೇ ಮಾನವನು ಧಾವಿಸುತ್ತಿದ್ದಾನೆ. ನೀರು ಎಲ್ಲಿ ಚೆಲ್ಲಲ್ಪಟ್ಟರೂ, ಯಾವ ಕಡೆಗೆ ಹರಿದರೂ ಕಟ್ಟಕಡೆಗೆ ಜಲಧಿಯನ್ನು ಸೇರಿ ತನ್ನ ಮುಕ್ತಿಯನ್ನು ಪಡೆದು ನಿಲ್ಲುವಂತೆ ಮಾನವನು ಸಂಸಾರ ಸಾಗರದಲ್ಲಿ ಸುತ್ತಿ ಸುಳಿದಾಡಿದರೂ ಕಡೆಗೆ ಆ ದೈವತ್ವದಲ್ಲಿ ಲೀನನಾಗಬೇಕು.

ಆದರೆ ಇಂದು ನಾವೆಲ್ಲಿರುವೆವು? ನಮ್ಮಲ್ಲಿ ಮಾಯೆ ತುಂಬಿದೆ. ಮೋಹ ಭ್ರಾಂತಿಗಳೆಂಬ ಕಡೆಯಿಂದ ಕುರುಡರಂತೆ ವರ್ತಿಸುತ್ತಿದ್ದೇವೆ. ಮುಸಲ್ಮಾನರ, ಮೊಗಲರ ನಂತರ ಬ್ರಿಟಿಷರ ಶತಮಾನಗಳ ಆಳಿಕೆಯು ನಮ್ಮನ್ನು ಗುಲಾಮರನ್ನಾಗಿ ಮಾಡಿದೆ. ನಮ್ಮಲ್ಲಿ ಜೀವವಿಲ್ಲ, ಪರಾನುಕರಣೆಯೇ ಸರ್ವಸ್ವವೆಂದು ನಂಬಿ ನಮ್ಮ ನಿಜವಾದ ಸ್ವಭಾವವನ್ನು ಮರೆತಿರುವೆವು. ಕಡೆಗೊಮ್ಮೆ ನಮಗೆ ಸ್ವಾತಂತ್ರ್ಯ ಬಂತು. 'ಸ್ವತಂತ್ರ [illegible]' ಎಂದು ಹಾಡಿ ಕುಣಿದೆವು. ಈಗ ನಾಲ್ಕು ವರ್ಷಗಳಾಯಿತು. ಈ ನಾಲ್ಕು ವರ್ಷಗಳ ಸ್ವತಂತ್ರ ಆಡಳಿತದಲ್ಲಿ ಜನಜೀವನಕ್ಕೆ ಎಷ್ಟು ಹಿತವಾಗಿದೆಯೆಂಬುದನ್ನು ನೀವೇ ಊಹಿಸಿಕೊಳ್ಳಿರಿ. ಗುಲಾಮನಾಗಿದ್ದವನಿಗೆ ಸ್ವಾತಂತ್ರ್ಯ ಕೊಡಲ್ಪಟ್ಟರೆ ಅತನು ಸರ್ವಾಧಿಕಾರಿಯಾಗುವನು. ಅದರಂತೆ ನಮ್ಮ ಕಥೆಯಾಗಿದೆ. ಈ ತೊಂದರೆ ತೊಡರುಗಳಿಂದ ಪಾರಾಗುವದೆಂತು?

ಈ ಸಂದರ್ಭದಲ್ಲಿ ಪೂರ್ವ ಮತ್ತು ಪಶ್ಚಿಮ ಸಂಸ್ಕೃತಿ, ನಾಗರೀಕತೆಗಳ ಸೂಕ್ಷ್ಮ ಪರಿಚಯವನ್ನು ಮಾಡಿಕೊಂಡರೆ ಹಿತವಾಗುವದು. ಪಾಶ್ಚಿಮಾತ್ಯ ನಾಗರೀಕತೆಯು ಗುಡ್ಡಗಳಲ್ಲಿ, ಸಮುದ್ರ ತೀರಾವಳಿಗಳಲ್ಲಿ ಪ್ರಾರಂಭವಾಯಿತು. ಗ್ರೀಕ್ ನಾಗರೀಕತೆಯೇ ಪಾಶ್ಚಿಮಾತ್ಯ ನಾಗರೀಕತೆಗೆ ರೂಪುಕೊಟ್ಟಿದ್ದು. ಪೂರ್ಣ ಭೌತಿಕವಾದದ ತಳಹದಿಯಲ್ಲಿ ನಿಂತಿರುವ ಆ ನಾಗರೀಕತೆಯು ಇಂದು ಆ ತಪ್ಪಿಗಾಗಿ ಮೂಗಿನ ಮೂಲಕ ತೆರಬೇಕಾಗಿ ಬಂದಿದೆ. ಪಾಶ್ಚಾತ್ಯ ನಾಗರೀಕತೆಯ ದೀರ್ಘ ಚರಿತ್ರೆಯನ್ನೊಮ್ಮೆ ಅವಲೋಕಿಸುವ. ಮಧ್ಯಕಾಲದ ಸ್ಪೈಯಿನಿನ ಮೂರಿಶ್ ವಿಶ್ವವಿದ್ಯಾಲಯ ಸಂಸ್ಕೃತಿ ಬೆಳಗಿ ಆರಿತು. ಜಗತ್ತಿನ ಆಕರ್ಷಕ ಕೇಂದ್ರವೆನಿಸಿದ ಪ್ಯಾರಿಸಿನ ಘನತೆ ಅಡಗಿತು. ಟೋಲೆಮಿ ಎಂಬ ವಿಖ್ಯಾತ ತತ್ವಜ್ಞಾನಿಯು ಭೂಮಿಯೇ ಜಗತ್ತಿನ ಕೇಂದ್ರವೆಂದನು. ಜರ್ಮನಿಯ ತತ್ವಜ್ಞಾನಿ ಕೋಪರ್ನಿಕಸನು ಸೂರ್ಯನೇ ಜಗತ್ತಿನ ಕೇಂದ್ರವೆಂದನು. ಇಂದು ನಮ್ಮ ತನವೇ (ಮಾನವನೇ ಸರ್ವಸ್ವವೆಂಬ ಮಾಯೆ) ಕೇಂದ್ರವಾಗಿದೆಯೆನ್ನಬಹುದು. ಅಂದು ವಿಖ್ಯಾತವೆನಿಸಿದ ಫ್ರಾನ್ಸು ಇಂದು ಜಗತ್ತಿನ ಹತ್ತನೇ ರಾಷ್ಟ್ರವಾಗಿ ಹಿನ್ನೆಲೆಗೆ ಸರಿದಿದೆ. ಪಾಶ್ಚಿಮಾತ್ಯ ನಾಗರೀಕತೆಯ ಸತತ ಪ್ರವಾಹದಲ್ಲಿ ಗ್ರೀಸ್, ರೋಮ್, ಅಸೀರಿಯಾ, ಕಾರ್ತೇಜ್ ಮೊದಲಾದುವು ಅಲೆಗಳಂತೆ ಮೇಲೆದ್ದು ನಾಶವಾದುವು. ಇಂದು ಅಮೇರಿಕಾವು ವಿಖ್ಯಾತವೆಂದು ಮೇಲೆದ್ದು ನಿಂತಿದೆ. ಭೌತಿಕವಾದದ ಈ ಸಂಸ್ಕೃತಿಯಲ್ಲಿ ರಾಷ್ಟ್ರ ರಾಷ್ಟ್ರಗಳ ಜೀವನವು ಕ್ಷಣಿಕವಾದುದೆಂಬುದು ನಮ್ಮ ಕಣ್ಣಿಗೆ ಕಾಣುತ್ತಿದೆ. ಈ ಭೌತಿಕ ತತ್ವದ ಸಹಾಯದಿಂದ ರೂಪುಗೊಂಡ ಅಸ್ತ್ರ ಶಸ್ತ್ರಗಳಿಂದಲೇ ಅದನ್ನು ರೂಪಿಸಿದವರ ನಾಶವಾಗಬಹುದು. ನಮ್ಮ ತಾಯಿಯಾದ ಪೌರ್ವಾತ್ಯ ನಾಗರೀಕತೆಯನ್ನು ಬಿಟ್ಟು ಮಧ್ಯ ಬಂದ ಸೊಗಸಿನ ಸುಂದರಿ ಪಾಶ್ಚಾತ್ಯ ಸಂಸ್ಕೃತಿಯನ್ನು ಅನುಸರಿಸಲೆತ್ನಿಸಿದ ನಮ್ಮ ಸ್ಥಿತಿ ಶೋಚನೀಯವಾಗಿದೆ. ನಮ್ಮ ತಾಯಿಯು ಮಲಿನ ವಸ್ತ್ರಧಾರಿಯಾಗಿ ಚೆನ್ನಾಗಿ ಕಾಣುತ್ತಿಲ್ಲವೆಂದು ಆಕೆಯನ್ನು ಬಿಟ್ಟು ಸೊಗಸಿನ ಪಾಶ್ಚಾತ್ಯ ಸಂಸ್ಕೃತಿಯನ್ನು ಅಮ್ಮನೆಂದು ಕರೆದೆವು. ಈಗ ಆಕೆ ನಮ್ಮನ್ನು ಬಿಟ್ಟುಗಲಿದ್ದಾಳೆ. ನಮ್ಮ ಮಾತೆಯೇ ನಮಗಲ್ಲದೆ ಬೇರಿಲ್ಲ. ಆಕೆಯಲ್ಲಿಗೆ ನಾವು ಹೋಗಬೇಕು. ನಮ್ಮನ್ನು ಸ್ವೀಕರಿಸಲು ಹೇಳಬೇಕು. ಆಕೆಯ ಮೇಲಿನ ಮಲಿನ ವಸ್ತ್ರಗಳನ್ನು ಬದಲಾಯಿಸಿ ಹೊಸ ವಸ್ತ್ರ ಉಡಿಸಬೇಕು. ಆಕೆ ಜಗತ್ತಿನ ರಾಣಿಯಾಗಿ ಮೆರೆಯುವದರಲ್ಲಿ ಸಂಶಯವಿಲ್ಲ.

ನಾವಿಂದು ಪಾಶ್ಚಿಮಾತ್ಯ ಸಂಸ್ಕೃತಿಯನ್ನು ಮೆಚ್ಚುವದರಿಂದ ಹೇಳಿ ಪ್ರಯೋಜನವಿಲ್ಲ. ಅಸ್ತಿಭಾರವಿಲ್ಲದೆ ಮನೆ ಕಟ್ಟಲಾರೆವು. ಕಟ್ಟಿದರೂ ಮನೆ ಕುಸಿದು ಬೀಳುವದು. ದೃಢವಾಗಿರುವ ಪೌರ್ವಾತ್ಯ ಸಂಸ್ಕೃತಿಯ ಆ ಭದ್ರ ತಳಹದಿಯಲ್ಲಿಯೇ ನಮ್ಮ ಭವ್ಯ ಗೋಪುರ ನಿಲ್ಲಬೇಕು. ಅದಕ್ಕಾಗಿ ಹಳೆದರ ಮತ್ತು ಹೊಸದರ ಸಮ್ಮಿಲನವಾಗಬೇಕು. ಆರ್ಷೇಯ ಅನುಭವ ತತ್ವಗಳನ್ನು ಇಂದಿನ ವಿಜ್ಞಾನದ ಸಹಾಯದಲ್ಲಿ ಕಾರ್ಯರಂಗಕ್ಕಿಳಿಸಬೇಕು. ಅರ್ಥಾತ್ ನಮ್ಮ ಮಾತು, ಕೃತಿಗಳಲ್ಲಿ ಸಂಬಂಧವಿರಬೇಕು. ಆದರೆ ನಾವು ಆಶ್ರಮದೊಳಗಿದ್ದಾಗ ಸ್ವಾಮಿ, ಭಕ್ತ. ಹೊರಗೆ ಬಂದಾಗ ಸ್ವಾರ್ಥಿ. ಸಾರ್ವಜನಿಕ ಸ್ಥಳದಲ್ಲಿ ಸುಧಾರಕ. ಈ ರೀತಿಯ ಭೇದವಿರುವದೇ ನಮ್ಮ ಅವನತಿಗೆ ಕಾರಣ. ಜೀವನವೆಂಬುದು ಅಖಂಡ ವಸ್ತು. ಅದರಲ್ಲಿ ಭೇದಕ್ಕೆಡೆಯಿಲ್ಲ. ಎಲ್ಲಿ ಯಾವ ಸ್ಥಳದಲ್ಲೂ ದೃಷ್ಟಿ ಒಂದೇ ಇರಬೇಕು. ಹಾಗಿರದಿದ್ದರೆ ಆ ನ್ಯೂನತೆಗಾಗಿ ಅಪಾರ ದುಃಖಕ್ಕೊಳಗಾಗಬೇಕಾಗುವದು. ಪಾಶ್ಚಿಮಾತ್ಯರು ತಮ್ಮ ಭೌತಿಕವಾದದ ನಾಗರೀಕತೆಗಾಗಿ ಹೆಮ್ಮೆಪಡುತ್ತಾರೆ. ಅದರೆ ಅಹಂಕಾರಕ್ಕೆ ಅವನತಿ ಇದ್ದೇ ಇದೆ. ಅವರು ಜಗತ್ತನ್ನು ಜಯಿಸಬಹುದು. ಆದರೆ

"ಪ್ರೇಮವೇ ದೇವರು. ದೇವರೇ ಪ್ರೇಮ."

ತತ್ವ ಅತ್ಮವನ್ನು ಕಳೆಕೊಂಡಿದ್ದಾರೆ. ಕೆಲವು ವರ್ಷಗಳ ಹಿಂದೆ ಬ್ರಿಟಿಷ್ ಸಾಮ್ರಾಜ್ಯದಲ್ಲಿ ಸೂರ್ಯನು ಕಂತುವುದಿಲ್ಲವೆಂದು ಹೇಳಲಾಗುತ್ತಿತ್ತು. ಆದರೆ ಕಳೆದ ಯುದ್ಧ ಸಮಯದಲ್ಲಿ ಬ್ರಿಟನಿಗೆ ಬೆಳಕೇ ಇರಲಿಲ್ಲ! ಗಬ್ಬನ್ನರ ಸಾಮ್ರಾಜ್ಯಗಳ ಪತನ, ಭಾರತ ಇಲ್ಲವೇ ಭಾಗವತಗಳನ್ನು ಓದಿದ ಹಾಗೆ ಸಾಮ್ರಾಜ್ಯಶಾಹಿಗಳೆಂದು ಮೆರೆದವರ ಕಥೆ ತಿಳಿಯುವದು. ಪಾಶ್ಚಿಮಾತ್ಯ ಸಂಸ್ಕೃತಿ ಸ್ಮಶಾನದತ್ತ ಸಾಗುತ್ತಿದೆ. ಸುಖ, ಭೋಗ ವಿಲಾಸಗಳ ಆಸೆಯಲ್ಲಿ ಚಂದ್ರಲೋಕಕ್ಕೆ ಪ್ರಯಾಣ ಮಾಡಲು ಯತ್ನಿಸುತ್ತಿದ್ದಾರೆ. ಎಲ್ಲಿ ಹೋಗರೂ ಒಬ್ಬರನ್ನು ಮತ್ತೊಬ್ಬರ ಮೇಲೆ ಎತ್ತಿ ಕಟ್ಟಿ ಪರಸ್ಪರ ಹೋರಾಡುವಂತೆ ಮಾಡಿ ಸುಖದಿಂದ ಬಾಳಲಿಚ್ಛಿಸುವ ಈ ನಾಗರಿಕತೆ ಚಿರಂತನವಲ್ಲ.

ಪೌರ್ವಾತ್ಯ ಸಂಸ್ಕೃತಿ, ನಾಗರೀಕತೆಗಳು ಗಂಗಾ, ಸಿಂಧು, ಯಾಂಗ್‌ಸ್ಟಿಕಿಯಾಂಗ್, ಯೂಫ್ರೆಟಿಸ್, ಟೈಗ್ರಿಸ್ ಮೊದಲಾದ ನದಿಗಳ ದಡದಲ್ಲಿ ಜನಿಸಿತು. ಇಂದು ನಾಗರಿಕರೆಂದು ಮೆಚ್ಚಿಕೊಳ್ಳುವ ಪಾಶ್ಚಿಮಾತ್ಯರು ಕಾಡು ಜೀವನ ನಡೆಸುತ್ತಿದ್ದಾಗ ಪೌರ್ವಾತ್ಯರು ಅಪೂರ್ವ ನಾಗರೀಕತೆಯನ್ನು ಸ್ಥಾಪಿಸಿದ್ದರು. ಮೊಹಂಜದಾರೋಕ್ಕೆ ಹೋಗಿದ್ದಾಗ ಅಲ್ಲಿಯ ಆ ಆರ್ಯ ನಾಗರೀಕತೆಯನ್ನು ಕಣ್ಣಾರೆ ನೋಡಿದ್ದೇನೆ. ಮಾರ್ಶಲ್‌ರವರು ಹೇಳುವಂತೆ ಈ ನಾಗರೀಕತೆಯು ಸುಮೇರಿಯನ್ ನಾಗರೀಕತೆಗಿಂಥ ೬೦೦೦ ವರ್ಷಗಳಷ್ಟು ಪ್ರಾಚೀನ ವಾದುದು. ಆ ಕಾಲದಲ್ಲೇ ಮೊಹಂಜದಾರೋ ಜನರು ಆರು ಅಂತಸ್ತಿನ ಮನೆಗಳನ್ನು ಕಟ್ಟಿದ್ದಾರೆ. ಇಟ್ಟಿಗೆಯ ಉಪಯೋಗ ಮಾಡಿದ್ದಾರೆ. ಚಿನ್ನ ಮುತ್ತಿತರ ಲೋಹಗಳನ್ನು ಬಳಸಿಕೊಂಡಿದ್ದಾರೆ. ಪೂರ್ವ ಸಂಸ್ಕೃತಿಯ ಮೂರು ಮುಖ್ಯ ಅಂಶಗಳೆಂದರೆ (೧) ಆತ್ಮದ ನೈವಿಕತೆ. (೨) ಅಸ್ತಿತ್ವದ ಐಕ್ಯತೆ. (೩) ದೈವತ್ವದ ಏಕತೆ. ನಿನ್ನ ನೆರೆಯವನನ್ನು ನಿನ್ನಂತೆಯೇ ತಿಳಿ ಎಂದು ಬೈಬಲು ಹೇಳಿದರೆ ನಿನ್ನ ಶತ್ರುವನ್ನೂ ನಿನ್ನಂತೆ ಭಾವಿಸೆಂದು ವೇದಾಂತ ಹೇಳುತ್ತಿದೆ. ಶತ್ರುವನ್ನು ದೂರೀಕರಿಸಿದರೆ ನಿನ್ನನ್ನೇ ದೂರೀಕರಿಸಿದಂತೆ. ಜಗತ್ತಿನ ಸಾರ ಒಂದೆ. ಮಣಿಮಾಲೆಯೊಳಗಿನ ದಾರದಂತೆ ಸರ್ವರಲ್ಲಿರುವ ಚೇತನವು ಒಂದೇ ಆಗಿದೆ. ಅದನ್ನೇ 'ಏಕಂ ಸತ್, ವಿಪ್ರಾ ಬಹುಧಾ ವದಂತಿ' ಎಂದು ಹೇಳಲಾಗುತ್ತಿದೆ. ಭಾರತದಲ್ಲಿ ದೇವರೊಬ್ಬರೆಂದರೂ ಆ ದೇವರಿಗೆ ೩೩ ಕೋಟಿ ಮುಖಗಳಿವೆ. ಪ್ರತಿಯೊಬ್ಬನೂ ದೇವರ ಅಂಶ ಹಾಗಿರುವಾಗ ದ್ವೇಷ ಯಾರ ಮೇಲೆ? ಮಹಾತ್ಮಾ ಗಾಂಧಿಯವರು ದೇವರನ್ನು ಸತ್ಯನೆನ್ನುತಿದ್ದರು. ಅದಕ್ಕೇ ಸತ್ಯವೇ ದೇವರೆಂದು ಅವರು ಮಾರ್ಪಡಿಸಿದರು. ಏಕೆಂದರೆ ದೇವರು ಇಲ್ಲವೆನ್ನುವವರಿರಬಹುದು. ಆದರೆ ಸತ್ಯವನ್ನು ತೆಗಳುವವರಿರಲಾರರು. ಹೀಗೆ ಸತ್ಯಸ್ವರೂಪನಾದ ಚಿನ್ಮಯ ವಸ್ತು ಸರ್ವರಲ್ಲಿರುವಾಗ ಯಾರನ್ನು ದ್ವೇಷಿಸುವದು ಯಾರನ್ನು ಪ್ರೀತಿಸುವದು? ದೇವರೇ ಪ್ರೇಮ; ಪ್ರೇಮವೇ ದೇವರು, ಪ್ರೇಮವು ಒಂದುಗೂಡಿಸುತ್ತದೆ. ದ್ವೇಷವು ಬೇರ್ಪಡಿಸುತ್ತದೆ. ವಿಶಾಲತೆಯೇ ಜೀವನ; ಸಂಕೀರ್ಣತೆಯೇ ನಾಶ.

ವಿಜ್ಞಾನವು ಇಂದು ಪರಮಾಣು, ಹೈಡ್ರೋಜನ್ ಬಾಂಬುಗಳ ಸಂಗ್ರಹ ಮಾಡುತ್ತಿದೆ. ೧೯ ನೇ ಶತಮಾನದಲ್ಲಿ ಅಣುವನ್ನು ವಿಭಾಗಿಸಲಾಗುವದಿಲ್ಲವೆಂದು ನಂಬಲಾಗಿತ್ತು. ೨೦ ನೇ ಶತಮಾನದಲ್ಲಿ ಜೆ. ಜೆ. ಥಾಮ್‌ಸನ್ನರು ಅಲ್ಫಾ ಬೀಟಾ ಕಿರಣಗಳ ಆವಿಷ್ಕಾರದಿಂದ ಅಣುವನ್ನು ವಿಭಾಗಿಸಬಹುದೆಂದರು. ಎಲೆಕ್ಟ್ರಾನ್, ಪ್ರೊಟಾನ್‌ಗಳ ಹೊರತು ಬೇರೆ ಇಲ್ಲವೆಂದು ನಂಬಲಾಗಿತ್ತು. ಈಗ ಅವುಗಳ ಅಸ್ತಿತ್ವಕ್ಕೂ ಕಾರಣವಾಗಿ ಹನ್ನೆರಡು ಮೇಸನ್ ಎಂಬ ಸೂಕ್ಷ್ಮಾಣುಗಳಿವೆಯೆಂದು ಕಂಡುಹಿಡಿಯಲಾಗಿದೆ. ವಿಜ್ಞಾನವು ಇಂದು ಸಂಶೋಧನೆ ಮಾಡಿ ಮಾಡಿ ಆಧ್ಯಾತ್ಮಿಕ ರಂಗಕ್ಕೆ ಕಾಲಿಕ್ಕುವಂತಿದೆ. ಜಗದ್ವಿಖ್ಯಾತ ವಿಜ್ಞಾನಿಯಾದ ಐನ್‌ಸ್ಟೀನರು ನವೀನವಾಗಿ ಪ್ರಕಟಿಸಿರುವ ಅನುಪಾತ ತತ್ವ ಸಿದ್ಧಾಂತಗಳನ್ನು ವಿಜ್ಞಾನ ಕರ್ಮಶಾಲೆಯ ಪ್ರಯೋಗದಿಂದ ಕಂಡುಹಿಡಿದುದಲ್ಲ. ಅವರಿಗೆ ಈಗ ಪರೀಕ್ಷಾಶಾಲೆಗಳ ಅಗತ್ಯವಿಲ್ಲ. ಆಧ್ಯಾತ್ಮಿಕ ಲೋಕದಲ್ಲಿ ಭಾರತದ ಆರ್ಯ ಋಷಿಮುನಿಗಳಂತೆ ಭಾವನಾ ಬಲದಿಂದ ಅಖಂಡ ತತ್ವಗಳನ್ನು ಅವರು ಕಾಣತೊಡಗಿದ್ದಾರೆ. ವಿಜ್ಞಾನವು ಪ್ರಾರಂಭವಾಗುವ ಮೊದಲೇ ಭಾರತದ ತತ್ವಜ್ಞರು ಜಗತ್ತು ಒಂದೇ ಶಕ್ತಿಯಿಂದ ಆಗಿದೆಯೆಂದರು. ಮೂರು ಬದಿಯ ಗಾಜಿನ ತುಂಡಿನ ಒಳಗಿಂದ ಬೆಳಕು ದಾಟುವಾಗ ರಂಗುರಂಗಿನ ಕಾಮನಬಿಲ್ಲನ್ನು ರಚಿಸುವಂತೆ ಸತ್ಯವು ಜೀವನವೆಂಬ ಗಾಜಿನಿಂದ ದಾಟುವಾಗ ಜಗತ್ತೆಂಬ ಈ ಮಾಯೆ ತೋರುವದು. ಅದ್ದರಿಂದಲೇ 'ಬ್ರಹ್ಮ ಸತ್ಯ, ಜಗನ್ಮಿಥ್ಯ ಜೀವೋ ಬ್ರಹ್ಮೈವ ನ ಪರಃ' ಎಂದು ಹೇಳಲ್ಪಟ್ಟಿದೆ. ವಸ್ತುವು ಬೇರೆಯಾದರೂ ತೋರುವದೆಲ್ಲ ನಮ್ಮ ಇಂದ್ರಿಯಜನ್ಯ ಜ್ಞಾನದ ಕಾರಣವಾಗಿದೆಯೆಂದು ಮನೋವಿಜ್ಞಾನ ಹೇಳುತ್ತದೆ. ಯಾವದೇ ಮನೋವಿಜ್ಞಾನದ ಗ್ರಂಥವೂ ಕಂಡ ಸ್ವಪ್ನದ ವಿಮರ್ಶೆಯನ್ನು ಮಾಡದೆ ಮುಕ್ತಾಯವಾಗದು. ಅದರಂತೆಯೇ ನಿದ್ರೆಯು ತತ್ವಜ್ಞಾನವೂ ಇದೆ. ಕೆಲವರು ನಿದ್ರೆಯಿಂದ ಅನನ್ಯ ಆನಂದವನ್ನು ಪಡೆಯುತ್ತಾರೆ, ಆ ಸಮಯದಲ್ಲಿ ಶರೀರವನ್ನೇ ಮರೆವೆವು. ಕೆಲವರು ಅದೇ ರೀತಿಯ ಆನಂದವನ್ನು ಪ್ರಾರ್ಥನೆಯಲ್ಲಿ ಪಡೆಯುವರು. ಕವಿಯು ತನ್ನ ಕವಿತೆಯಲ್ಲಿ, ಕಲಾವಿದನು ತನ್ನ ಚಿತ್ರದಲ್ಲಿ ಆ ಸುಖವನ್ನ ಪಡೆವರು. ರವೀಂದ್ರನಾಥ ಠಾಗೋರರು ಸುಂದರ ಪ್ರಕೃತಿ ಸೌಂದರ್ಯವನ್ನು ನೋಡಿ ಆ ಆನಂದ ಪಡೆದರು. ಸುಕೆಯನ್ನು ಸೇವಿಸುವವರು ಮತ್ತರಾಗಿ ಅದೇ ಆನಂದ ಪಡೆಯುವರು. ಆದ್ದರಿಂದ ಅವರವರ ಪ್ರಕೃತಿಯ ಗುಣಗಳಿಗನುಗುಣ ಅವರವರು ಸುಖಪಡೆಯುತ್ತಾರೆ. ಈ ತ್ರಿಗುಣಗಳಿಗನುಗುಣವಾಗಿಯೇ ಮಾನವನು ದೇವನೂ ಯಾ ದಾನವನಾಗುತ್ತಾನೆ. ಪ್ರಜಾಪತಿಯು ಒಮ್ಮೆ ತನ್ನ ಮಕ್ಕಳಿಗೆ ವಿದ್ಯೆ ಕಲಿಸಲಿಕ್ಕಾಗಿ ಅವರನ್ನು ಕರೆದು 'ದ' ಎಂದು ಹೇಳಿ ಅದರ ಅರ್ಥವೇನೆಂದು ಕೇಳಿದನು. ಪ್ರಥಮ ಬಂದ ಮಗುವು 'ದಮ' ಎಂದರೆ ಆತ್ಮ ಸಂಯಮನ ಎಂದಿತು. ಎರಡನೆಯ ಮಗು 'ದಯೆ' ಎಂದಿತು. ಮೂರನೆಯ ಮಗು 'ದಾನ' ಎಂದಿತು. ತಂದೆಗೆ ಸಂತೋಷವಾಯಿತು. ಮಕ್ಕಳು ತಮ್ಮಲ್ಲಿದ್ದ ಸತ್ವ, ರಜಸ, ತಮಸ್ಸು ತಾಮಸಗುಣಗಳಿಗನುಗುಣವಾಗಿ ಹಾಗೆ ಹೇಳಿದವು. ಇಂದೂ ಕೂಡ ಪ್ರತಿಯೊಬ್ಬನಲ್ಲಿ ಈ ಗುಣಗಳಿವೆ. ಸತತ ಇವುಗಳೊಳಗೆ ಘರ್ಷಣೆ ನಡೆಯುತ್ತಿದೆ. ಇವುಗಳನ್ನು ಹಿಡಿತದಲ್ಲಿಟ್ಟು ಸಮಗ್ರ ಜನಜೀವನಕ್ಕೆ ಸಹಕಾರಿಯಾಗುವದೇ ನಮ್ಮ ಸಂಸ್ಕೃತಿ, ನಾಗರಿಕತೆಯಾಗಿದೆ.

ಪಾಶ್ಚಿಮಾತ್ಯ ನಾಗರೀಕತೆಯಲ್ಲಿ ವಿಗ್ರಹಶಕ್ತಿಯು ತಂತಿ ಇದೆ. ಆದರೆ ಚೇತನವಿಲ್ಲ. ಪೌರ್ವಾತ್ಯಕ್ಕೆ ಚೇತನವಿದೆ. ತಂತಿ ಇಲ್ಲ. ಇವೆರಡು ಸಮ್ಮಿಲನದಿಂದಲೇ ಜಗತ್ತು ಶೋಭಾಯಮಾನವಾಗಿ ಬೆಳಗುವದು. ಹಾಗಾದರೆ ಮಾತ್ರ ನವಚೇತನ ಸ್ಫುರಿಸುವದು. ನವಯುಗ ಆರಂಭವಾಗುವದು, ಒಂದೇ ಜನ, ಒಂದೇ ಕುಟುಂಬ, ಒಂದೇ ಜಗತ್ತಾಗುವದು.

ಮಾನವನ ಜೀವನ ಗುರಿಯು 'ಸುಖಪ್ರಾಪ್ತಿ, ಕ್ಲೇಶ ಪರಿಹಾರ' ಕ್ಕಾಗಿ. ನಮಗೆ ಅಸುಖಬೇಡ. ಆದರೆ ಸುಖ ಹೇಗೆ ದೊರೆಯುವದು? ಸರಿಯಾದ ವಸ್ತು ದೊರೆಯಬೇಕಾದರೆ ತಪ್ಪಾದುದನ್ನು ಬಿಡಬೇಕು. ಇಂದು ನಮಗೆ ಧರ್ಮ, ಮತ ಎಂದರೆ ಏನು? ಇವೆಲ್ಲ ಅದಕ್ಕೆ ಸಹಾಯಕ ವಸ್ತುಗಳು. ತನಗೆ ಸರಿಯಾಗಿ ತಾನು ನಡೆಯುವದೇ ಧರ್ಮ. ಆತನು ಗುಹೆಯಲ್ಲಿರಲಿ, ಮನೆಯಲ್ಲಿರಲಿ ತನ್ನ ಆತ್ಮದ ಆಣತಿಯಂತಿದ್ದರೆ ಅದುವೆ ಧರ್ಮವೆನಿಸುವದು. ಧಾರ್ಮಿಕ ಸಂಸ್ಥೆಗಳು ಮೂಢ ನಂಬಿಕೆಯ, ಸಂಕೀರ್ಣ ದೃಷ್ಟಿಯ ಸಂಸ್ಥೆಗಳಾಗಿ ಯುದ್ಧ, ಘರ್ಷಣೆಗಳಿಗೆ ಕಾರಣವಾಗಿದೆ. ಹಿಂದೂ ದೇಶದ ಧಾರ್ಮಿಕ ಪ್ರಪಂಚದಲ್ಲಿ ವ್ಯಕ್ತಿಗಳಿಗೆ ಪ್ರಾಧಾನ್ಯತೆ ಇಲ್ಲ. ರಾಮಕೃಷ್ಣ, ಬುದ್ಧ ಯಾರೇ ಇರಲಿ; ಅವರಿಗೆ ಅಗ್ರಪೂಜೆಯಿಲ್ಲ. ತತ್ವಗಳಿಗೆ ಸನ್ಮಾನ. ಪಾಶ್ಚಿಮಾತ್ಯ ಧಾರ್ಮಿಕ ಕ್ಷೇತ್ರಗಳಲ್ಲಿ ತತ್ವಗಳಿಗಿಂಥ ಅವನ್ನು ಸಾರಿದ ವ್ಯಕ್ತಿಗಳಿಗೆ ಮಹತ್ವ ಹೆಚ್ಚು. ಅದ್ದರಿಂದ ಕ್ರೈಸ್ತನ ತತ್ವಗಳಿಗಿಂಥಾ ಕ್ರಿಸ್ತನಿಗೆ ಗೌರವ ಹೆಚ್ಚು.

ಮನುಷ್ಯನು ಏಕೆ ಪಾಪಮಾಡುತ್ತಾನೆ? ಶ್ರೀಕೃಷ್ಣನು ಭಗವದ್ಗೀತೆಯಲ್ಲಿ ಹೀಗೆ ಹೇಳುತ್ತಾನೆ. ಯಾವುದಾದರು ವಸ್ತುವಿನ ಬಗ್ಗೆ ಪದೇ ಪದೆ ಆಲೋಚಿಸಿದರೆ ಅದರ ಬಗೆ ಆಸೆ ಹುಟ್ಟುತ್ತದೆ. ಅದು ದೊರೆಯದಾಗ ಸಿಟ್ಟು ಬರುತ್ತದೆ. ಸಿಟ್ಟು ಬಂದಾಗ ಸ್ಮೃತಿ ಭ್ರಮೆಯಾಗುತ್ತದೆ. ಸ್ಮೃತಿ ಭ್ರಮೆಯಾದಾಗ ಬುದ್ಧಿನಾಶವಾಗುತ್ತದೆ. ಬುದ್ಧಿ ನಶವಾದಾಗ ಮನುಷ್ಯನು ನಾಶಹೊಂದುತ್ತಾನೆ. ಅದ್ದರಿಂದ ಕಾಮ ಅಂದರೆ ಲಾಲಸೆ ಹಿತವಲ್ಲ. ಕಾಮ, ಕ್ರೋಧ ಲೋಭ ಮೋಹ, ಮದ, ಮತ್ಸರಗಳೆಂಬ ಈ ಶತ್ರುಗಳು ನಮ್ಮನ್ನು ನರಕಕ್ಕೊಯ್ಯುತ್ತವೆ. ಕಾಮವಿಲ್ಲದಿರಬೇಕು. ತನಗಿದ್ದುದರಲ್ಲಿ ತೃಪ್ತನಾಗಿರುವವನು ರಾಜಾಧಿರಾಜರಿಗಿಂಥ ಮೇಲು. ಹದ್ದುಮೀರಿದ ಮಮತೆ, ಸಂಬಂಧಗಳು ದುಃಖಕ್ಕೆ ಕಾರಣ. ಪ್ರೀತಿಯು ದಿಕ್ಕುಗೆಟ್ಟು ಪತ್ತಿ ಹೋದರೆ ಮನುಷ್ಯನು ಸರ್ವನಾಶವಾಗಿ ಬಿಡುತ್ತಾನೆ. ಆತನ ಹಣ, ಮನೆ ಮಾರು, ಆಸ್ತಿ ಎಲ್ಲವೂ ಹಿಂದಿನಂತೆಯೇ ಇದ್ದರೂ ಶವದಂತೆ ವರ್ತಿಸುತ್ತಾನೆ. ಅದ್ದರಿಂದ ಈ ಷಡ್ವೈರಿಗಳಿಂದ ದೂರ ಸರಿಯಬೇಕು. ಉದ್ದವನು ಒಮ್ಮೆ ಭಗವಂತನನ್ನು ಕೇಳಿದನು 'ಹೇ ದೇವಾ, ನೀನು ಸ್ವರ್ಗಕ್ಕೆ ಹೋಗವಿಯೆಂದು ತಿಳಿದ ನಾನೇನು ಮಾಡಲಿ?' ಎಂದು ಕೇಳಿದನಂತೆ. 'ಪ್ರತಿಯೊಬ್ಬನ ಹೃದಯವೇ ನನ್ನ ಸಿಂಹಾಸನವಾಗಿರಲು ಭಯವೇಕೆ?' ಎಂದು ಭಗವಂತನು ನುಡಿದನಂತೆ. ಅದರಂತೆ ನಮ್ಮ ಹೃದಯವನ್ನು ಭಗವಂತನ ಸಿಂಹಾಸನವಾಗಿ ಮಾಡಬೇಕು. ಹಾಗಾಗಬೇಕಾದರೆ ಅಂತಃಶ್ಶತ್ರುಗಳನ್ನು ಹೊರತಳ್ಳಬೇಕು. ಭಗವಂತನನ್ನು ಪ್ರೀತಿಸದವನು ತನ್ನ ಪತ್ನಿ ಪುತ್ರರನ್ನು ಕಡೆಗೆ ತನ್ನನ್ನು ಕೂಡ ಪ್ರೀತಿಸಲಾರ. ಇದೇ ಮಾತನ್ನ ಯಾಜ್ಞವಲ್ಕ್ಯನು ಮೈತ್ರೇಯಿಗೆ ಹೇಳುತ್ತಾನೆ. ಹೆಂಡತಿಯನ್ನು ಗಂಡನು ಪ್ರೀತಿಸಬೇಕಾದುದು ಆಕೆಯ ಸೌಂದರ್ಯಕ್ಕಾಗಿ ಅಲ್ಲ ಆಕೆಯ ಆತ್ಮಕ್ಕಾಗಿ. ಮಗುವನ್ನಾಗಲೀ, ಇತರರನ್ನಾಗಲೀ ಆ ಆತ್ಮಕ್ಕಾಗಿಯೇ ಪ್ರೀತಿಸಬೇಕಾದುದು. ಆತ್ಮವು ಅಖಂಡ ವಸ್ತು. ಸರ್ವರಲ್ಲಿಯೂ ಆ ವಸ್ತುವಿರುವಾಗ ಬೇರೊಬ್ಬರನ್ನು ಟೀಕಿಸುವದು ಹೇಗೆ? ಬೇರೊಬ್ಬರನ್ನು ಕಡೆಗಣಿಸುವದು ಹೇಗೆ? ಇಂದಿನ ಪಾಶ್ಚಿಮಾತ್ಯ ಸಂಸ್ಕೃತಿಯಲ್ಲಿ ಶಾರೀರಿಕ, ಸಾಮಾಜಿಕ, ಆರ್ಥಿಕ, ನೈತಿಕ ಹೀಗೆ ಹಲವು ಬೆಲೆಗಳನ್ನು ಕಟ್ಟಲಾಗಿದೆ. ಆದರೆ ನಮ್ಮ ಸಂಸ್ಕೃತಿಯಲ್ಲಿ ಧರ್ಮ, ಅರ್ಥ, ಕಾಮ ಮತ್ತು ಮೋಕ್ಷ ಈ ನಾಲ್ಕು ಮಾತ್ರ. ಕಡೆಯದಾದ ಮೋಕ್ಷಸಾಧನೆಗಾಗಿ ಬೇರೆ ಯಾವುದನ್ನೂ ಅಪಿಸಬಹುದು. ತೊಟ್ಟಿಲಿಂದ ಚಟ್ಟದ ಸ್ಮಶಾನದವರೆಗೆ ಮನುಷ್ಯನು ಈ ಸಾಧನೆಗಾಗಿ ಜೀವಿಸಬೇಕು. ಇದಕ್ಕಾಗಿ ದೇವಸ್ಥಾನಗಳಲ್ಲಿ ಜೀವಿಸಬೇಕಿಲ್ಲ. ಗಂಟೆ ಜಾಗಟೆ ಬಾರಿಸಬೇಕಿಲ್ಲ. ಸಂಕೀರ್ಣದಿಂದ ವಿವಿಧ ಶಕ್ತಿಗಳನ್ನು ಒತ್ತಿ ಹಿಡಿದು ಆತ್ಮದ ಚೇತನ ಪೂರ್ಣ ಬೆಳವಣಿಗೆಯನ್ನು ●

(ಅನೇ ಪುಠಕ್ಕೆ ಸಾಗಿದೆ.)

‘ಫ್ರೋರ್ಟ್ ಕ್ಲಬ್, ಸ್ಪೋರ್ಟ್ಸ್.’

ಕೊಡಗಿನಲ್ಲಿ ಹಲವು ಕ್ಲಬ್‌ಗಳಿವೆ. ಪ್ರತಿಯೊಂದು ಪೇಟೆಗಳಲ್ಲೂ, ಹಲಕೆಲವು ಗ್ರಾಮಗಳಲ್ಲೂ ಕ್ಲಬ್‌ಗಳಿವೆ. ಈ ಕ್ಲಬ್ಬುಗಳೆಲ್ಲ ಸಾಧಾರಣವಾಗಿ ಇಸ್ಪೀಟು ಆಡುವದನ್ನೇ ತಮ್ಮ ಪ್ರಧಾನ ಕಾರ್ಯಕ್ರಮವಾಗಿ ಇಟ್ಟುಕೊಂಡಿರುವವು. ಇವುಗಳಲ್ಲಿ ಕೆಲವು ಜೂಜಾಟದ ಕೇಂದ್ರಗಳಾಗಿವೆಯೆಂದು ಪ್ರಾಯಃ ಜನಗಳು ಹೇಳುತ್ತಾರೆ. ಇವುಗಳೆಲ್ಲಕ್ಕೂ ಅಪವಾದವಾಗಿ ಮಡಿಕೇರಿ ಫ್ರೋರ್ಟ್ ಕ್ಲಬ್, ಉತ್ತಮ ಕಾರ್ಯಕ್ರಮವೊಂದನ್ನು ಸಾಧಿಸಿ ಕೊಡಗಿನ ಇತರ ಕ್ಲಬ್ಬುಗಳಿಗೆ ಆದರ್ಶಪ್ರಾಯವಾಗಿದೆ.

ಕ್ಲಬ್ಬುಗಳು ಆಟೋಟಗಳಿಗೆ ಯೋಗ್ಯ ಪ್ರೋತ್ಸಾಹ ಕೊಡಬೇಕು. ಮಡಿಕೇರಿ ಫ್ರೋರ್ಟ್ ಕ್ಲಬ್ಬು ಈ ವರ್ಷ ಬೇಡ್ ಮಿಂಟನ್, ಟೇಬಲ್ ಟೆನ್ನಿಸ್ ಮತ್ತು ಕೇರಂ ಆಟಗಳ ಸ್ಪರ್ಧೆಯನ್ನು ಏರ್ಪಡಿಸಿ ಕೊಡಗಿನ ವಿವಿಧ ಭಾಗಗಳಿಂದಲೂ, ಹೊರಗಿನಿಂದಲೂ ಟೀಮುಗಳನ್ನು ಆಹ್ವಾನಿಸಿತ್ತು. ಸುಮಾರು ೧೬ ಟೀಮುಗಳು ಹೆಸರು ಕೊಟ್ಟು ೧೪ ಟೀಮುಗಳು ಕೊನೆಯ ಸ್ಪರ್ಧೆಗಳಲ್ಲಿ ಭಾಗವಹಿಸಿದ್ದವು. ಹುಣಸೂರು, ಮೈಸೂರುಗಳಿಂದ ಸ್ಪರ್ಧಿಸಲು ಟೀಮುಗಳು ಬಂದಿದ್ದವು.

ಕಳೆದ ವಾರದಿಂದ ಮಡಿಕೇರಿ ಕೋಟೆಯ ಆವರಣದಲ್ಲಿ ಸ್ಪರ್ಧೆಗಳು ನಡೆದು ತಾರೀಕು ೨೯ರಲ್ಲಿ ಬಹುಮಾನ ವಿತರಣಾ ಸಮಾರಂಭವು ನಡೆಯಿತು. ಕೊಡಗಿನ ಚೀಫ್ ಕಮೀಷನರಾದ ಲೆ. ಕ. ದಯಾಸಿಂಗ್ ಬೇಡಿಯವರು ಅಧ್ಯಕ್ಷತೆ ವಹಿಸಿದ್ದರು. ಮೈಸೂರಿನ ಮುಖ್ಯ ನ್ಯಾಯಾಧೀಶರಾದ ಜಸ್ಟೀಸ್ ಮೇದಪ್ಪನವರೂ ಹಾಜರಿದ್ದರು. ಬಹುಮಾನ ವಿತರಣೆಯನ್ನು ಮಿಸೆಸ್ ಬೇಡಿಯವರು ಮಾಡಿದರು.

ಬಹುಮಾನಕ್ಕಾಗಿ ಅನೇಕ ಕಪ್ಪುಗಳನ್ನು, ಪಾರಿತೋಷಕಗಳನ್ನು ಸಂಗ್ರಹಿಸಲಾಗಿತ್ತು. ಬೇಡ್ ಮಿಂಟನ್ ಡಬಲ್ಸ್ ಆಟದಲ್ಲಿ ಮಡಿಕೇರಿ ಸ್ಪೋರ್ಟ್ ಕ್ಲಬ್ಬಿನವರು ಜಯಶೀಲರಾಗಿದ್ದರು. ಹುಣಸೂರಿನ ಬೇಡ್ ಮಿಂಟನ್ ಕ್ಲಬ್ಬಿನವರು ಕಡೇ ಆಟಕ್ಕೆ ನಿಂತಿದ್ದರು. ಕಡೇ ಆಟಕ್ಕೆ ನಿಂತವರಿಗೂ ಕಪ್ಪುಗಳು ಕೊಡಲ್ಪಟ್ಟವು. ಡಬಲ್ಸ್ ಆಟದಲ್ಲೂ ಫ್ರೋರ್ಟ್ ಕ್ಲಬ್ಬಿನವರು ಹುಣಸೂರಿನ ಸೆಕ್ರೆಟರಿಯವರ ಸ್ಪೋರ್ಟ್ಸ್ ಕ್ಲಬ್ಬಿನವರನ್ನು ಸೋಲಿಸಿ ಕಪ್ಪನ್ನು ಪಡೆದಿದ್ದರು. ಮಹಿಳೆಯರ ಡಬಲ್ಸ್ ಆಟದಲ್ಲಿ ಮಿಸ್ ಕೆ. ಎ. ಪಾರ್ವತಿ ಮತ್ತು ಪಿ. ಬಿ. ಕಮಲ ಇವರು ಮಿಸ್ ಪಿ. ಕೆ. ಪೊನ್ನಮ್ಮ ಮತ್ತು ಕೆ. ಎ. ಮುತ್ತಮ್ಮ ಇವರುಗಳನ್ನು ಸೋಲಿಸಿ ಕಪ್ಪನ್ನು ಗೆದ್ದರು. ಆಟೋಟಗಳ ಸ್ಪರ್ಧೆಯಲ್ಲಿ ಮಹಿಳೆಯರೂ ಭಾಗವಹಿಸಿದ್ದು ಪ್ರಶಂಸನೀಯ. ಆದರೆ ಇವರಿಗೆ ಜಯಶೀಲರಿಗೂ, ಸೋತವರಿಗೂ ಒಂದೇ ರೀತಿಯ ಕಪ್ಪುಗಳು ಕೊಡಲ್ಪಟ್ಟದ್ದು ಅಷ್ಟು ಸರಿಯಲ್ಲ.

ಟೇಬಲ್ ಟೆನ್ನಿಸ್ ಆಟದಲ್ಲಿ ಮದ್ರಾಸಿನ ಶ್ರೀ ಸಿ. ಎಸ್. ಚೆಂಗಪ್ಪನವರು ಮಂಗಳೂರಿನ ಜೋಸೆಫ್ರವರನ್ನು ಸೋಲಿಸಿ ಕಪ್ಪನ್ನು ಪಡೆದರು. ಕೇರಂ ಡಬಲ್ಸ್ ಆಟದಲ್ಲಿ ಜೋಸೆಫ್ ಸಹೋದರರು ಶ್ರೀ ಎ. ಎಸ್. ವೆಂಕಟರಾಮ್ ಮತ್ತು ಕೆ. ವಿ. ಅನಂತರಾಮ್ ಇವರನ್ನು ಸೋಲಿಸಿದರು. ಕೇರಂ ಸಿಂಗಲ್ಸ್ ಆಟದಲ್ಲಿ ಶ್ರೀ ಜೋಸೆಫ್ (ಅಣ್ಣ) ತಮ್ಮ ಶ್ರೀ ಜೋಸೆಫ್ (ತಮ್ಮ) ರವರನ್ನು ಸೋಲಿಸಿದರು. ಹೀಗೂ ಕ್ಲಬ್ಬು ಏರ್ಪಡಿಸಿದ ಸ್ಪರ್ಧೆಗಳು ಯಶಸ್ವಿಯಾಗಿ ನಡೆದವು. ಕೊಡಗಿನ ಇತರ ಕ್ಲಬ್ಬುಗಳೂ ಈ ಆದರ್ಶವನ್ನು ಅನುಸರಿಸಿ ಈ ರೀತಿ ಹಲವು ಆಟೋಟಗಳಲ್ಲಿ ಸ್ಪರ್ಧೆ ನಡೆಸಿ ಕೊಡಗಿನಲ್ಲಿ ಹಿಂದೆ ಬಿದ್ದಿರುವ ಆಟೋಟಗಳಿಗೆ ಜೀವನ ಕೊಟ್ಟು ಪ್ರೋತ್ಸಾಹಿಸಬೇಕಾಗಿದೆ. ಈ ದೃಷ್ಟಿಯಿಂದ ಸ್ಪೋರ್ಟ್ ಕ್ಲಬ್ಬಿನ ಆದರ್ಶವು ಪ್ರಶಂಸನೀಯವಾಗಿದೆ.

ಅಮೆರಿಕನ್ ಆಹಾರ ಸ್ವೀಕರಿಸುವುದು ಅಪಮಾನ.

“ಭಾರತಕ್ಕೆ ಆಹಾರ ಧಾನ್ಯ ನೀಡಬೇಕಾದರೆ ಅಮೆರಿಕಾವು ವಿಧಿಸಿರುವ ಷರತ್ತುಗಳು ಭಾರತ ರಾಷ್ಟ್ರದ ಸಾರ್ವಭೌಮಾಧಿಕಾರಕ್ಕೂ ರಾಷ್ಟ್ರೀಯ ಗೌರವಕ್ಕೂ ಕುಂದು ತರತಕ್ಕದ್ದು” ಎಂಬುದಾಗಿ ಮಾಸ್ಕೋ ರೇಡಿಯೋವು ತಾ. ೨೭ರಲ್ಲಿ ಇಂಗ್ಲೀಷಿನಲ್ಲಿ ಬ್ರಾಡ್‌ಕಾಸ್ಟ್ ಭಾಷಣ ಮಾಡುತ್ತಾ ಹೇಳಿದೆ.

ಅಮೇರಿಕಾವು ಭಾರತಕ್ಕೆ ಆಹಾರ ಧಾನ್ಯ ಕಳಿಸುವ ಬಗ್ಗೆ ಅನುಮಾನಿಸುತ್ತಿರುವಾಗ ಭಾರತದ ನೆರೆ ಮಹಾರಾಷ್ಟ್ರವಾದ ಚೀನಾ ರಿಪಬ್ಲಿಕ್ಕು ಉದಾರವಾಗಿ ಸಹಾಯ ಮಾಡಲು ಮುಂದೆ ಬಂದಿರುವದನ್ನು ಮಾಸ್ಕೋ ರೇಡಿಯೋ ಪ್ರಶಂಸಿಸಿ ಶ್ಲಾಘಿಸಿದೆ. ಏಷಿಯಾ ರಾಷ್ಟ್ರಗಳಿಗೂ ಇವರ ಹಾರೈಕೆಯನ್ನು ಎತ್ತಿ ತೋರಿಸಿದೆ.

“ಒಂದೆರಡು ತಿಂಗಳ ಹಿಂದೆ ತಾನೇ ಚೀನಾ ಸರಕಾರವು ಭಾರತಕ್ಕೆ ಹತ್ತು ಲಕ್ಷ ಟನ್ ಅಕ್ಕಿಯನ್ನು ಕಳುಹಿಸಿ ಕೊಟ್ಟಿದೆ. ಅಮೇರಿಕಾ ಕೊಡುವುದಾಗಿ ವಚನಗಳನ್ನು ಕೊಟ್ಟಿತ್ತೇ ಹೊರತು ಯಾವ ಕೆಲಸವನ್ನೂ ಮಾಡಿರಲಿಲ್ಲ. ಆದರೂ ಈ ಧಾನ್ಯದ ವಿನಿಮಯಕ್ಕೆ ಬದಲಾಗಿ ತನ್ನ ಪ್ರತಿನಿಧಿಗಳು ಮೇಲ್ವಿಚಾರಣೆ ನಡೆಸುವ ಸಂಪೂರ್ಣ ಅಧಿಕಾರ ಬೇಕೆಂದೂ ಆ ದುಡ್ಡು ಸಾಲದಿಲ್ಲ’ ಎಂದೂ ರೇಡಿಯೋ ಟೀಕಿಸಿ ಹೇಳಿದೆ.

“ಕೆಲವು ತಿಂಗಳುಗಳ ಹಿಂದೆ ತಾನೇ ಅಮೇರಿಕದ ಪ್ರಚಾರ ಪತ್ರಿಕೆಗಳು ೨೦ ಲಕ್ಷ ಟನ್ ಆಹಾರ ಧಾನ್ಯವನ್ನು ಯಾವ ಷರತ್ತೂ ಇಲ್ಲದೆ ಕೊಡಬೇಕೆಂದು ಹೇಳಿದ್ದವು. ಈ ದಾನವು ದಾರಿದ್ರ್ಯ ಪೀಡಿತ ಜನರಿಗೆ ಸಹಾಯವಾಗುವುದು. ಅಮೇರಿಕಾದ ಶಾಸನಸಭೆಯವರು ರಾಜಕೀಯ ಶಸ್ತ್ರಾಸ್ತ್ರಗಳನ್ನೇ ಯೋಚಿಸುವ ರಾಷ್ಟ್ರವಲ್ಲವೆಂಬ ಶಕ್ತಿ ಪ್ರದರ್ಶನದ ನೀತಿ ಅನುಸರಿಸಿದ್ದಲ್ಲವೆಂದೂ ಭಾರತವು ಭಾವಿಸಲು ಈ ಧಾನ್ಯ ದಾನವು ಸಹಾಯಕವಾಗುವುದೆಂದು ‘ನ್ಯೂಯಾರ್ಕ್ ಹೆರಾಲ್ಡ್ ಟ್ರಿಬ್ಯೂನ್’ ದಿನಪತ್ರಿಕೆಯು ಪ್ರಚಾರ ಮಾಡಿತು. ಮೊದಲು ಮಿ|| ಏಚೀಸನ್‌ರೂ ಅನಂತರ ಅಧ್ಯಕ್ಷ ಟ್ರೂಮನ್ನರೂ ಈ ಆಹಾರ ದಾನದ ಬಗ್ಗೆ ಆಗಸ್ಟಿಗೇ ಸಾರಿದರು. ಈ ಮಾತು ನಡೆದು ಎಷ್ಟೋ ದಿವಸವಾಗಿ ಹೋಯಿತು. ಇನ್ನೂ ಆ ಧಾನ್ಯವಿನ್ನೂ ಅವರ ಕಣಜದಲ್ಲೇ ಕೊಳೆತಿದೆ,, ಎಂಬುದಾಗಿ ಮಾಸ್ಕೋ ತಿಳಿಸಿದೆ.

ಚೀಫ್ ಕಮಿಷನರ್ ಪ್ರಾಂತಗಳ ಸುಧಾರಣಾ ಮಸೂದೆ.

ಈಗ ಇಂಡಿಯಾದಲ್ಲಿರುವ ಹನ್ನೊಂದು ಚೀಫ್ ಕಮಿಷನರ್ ಪ್ರಾಂತಗಳ ವ್ಯವಸ್ಥೆ (ಕೊಡಗನ್ನು ಸೇರಿ) ಆಡಳಿತದಲ್ಲಿ ಬದಲಾವಣೆಯನ್ನು ತರಲು ಚೀಫ್ ಕಮೀಷನರುಗಳಿಗೆ ಸಹಾಯ ಮಾಡಲು ಜನರಿಂದ ಚುನಾಯಿಸಲ್ಪಟ್ಟ ಕೌನ್ಸಿಲುಗಳನ್ನು ನೇಮಿಸುವ ಬಗ್ಗೆ ಮಸೂದೆಯು ಕಳೆದ ತಾರೀಖು ೩೦ರಲ್ಲಿ ಇಂಡಿಯಾ ಪಾರ್ಲಿಮೆಂಟಿನ ಮುಂದೆ ಸಂಸ್ಥಾನಗಳ ಮಂತ್ರಿಯವರಿಂದ ಚರ್ಚೆಗೆ ತರಲ್ಪಟ್ಟಿತು.

ರೂ. ೫೦,೦೦೦ ಬೆಲೆಯ ಆಭರಣಗಳು ಕೊಡಲ್ಪಡುತ್ತಿವೆ

ಡೆಲ್ಲಿಯಲ್ಲಿ ಚಿನ್ನವು ತೊಲೆಗೆ ರೂ. ೩.

ಭಾರತದ ಪ್ರಾಮುಖ್ಯ ಪತ್ರಿಕೆ ಮತ್ತು ಮಾಸಿಕಗಳಲ್ಲಿದ ನಮ್ಮ ನೂರಾರು ಗ್ರಾಹಕರು ಇವನ್ನು ಮುಕ್ತ ಕಂಠದಿಂದ ಹೊಗಳಿದ್ದಾರೆ. ಸಂಯುಕ್ತ ಪ್ರಾಂತದ ಮಹಾಲಿಯ ಸೇಠ್ ನಂದ ಕಿಶೋರ ಬಿ. ಎ. ಎಲ್. ಎಲ್. ಬಿ. ಯವರು ಹೀಗೆ ಬರೆಯುತ್ತಾರೆ “ಮಿನರ್ವ ಹೊಸ ಚಿನ್ನವನ್ನು ಆಭರಣಗಳೊಂದಿಗೆ ಕಳುಹಿಸಿ. ಈ ಚಿನ್ನವು ಒರೆ ಹಚ್ಚಿದಾಗ ಅಪ್ಪಟ ಚಿನ್ನದಂತೆಯೇ ತೋರುವದಲ್ಲದೆ ಇವನ್ನು ತಂತಿಯಾಗಿ ಎಳೆಯಬಹುದು. ಬಾಗದಂತೆ ಅಗಲವಾಗಿ ತಟ್ಟಬಹುದು. ಇದರ ಮೇಲಿನ ಚಿನ್ನದಂತೆಯೇ ಉಳಿಯುವದು. ಇದರಿಂದ ಯಾವ ಮಾದರಿಯ ನಗಗಳನ್ನು ಮಾಡಿಸಬಹುದು. ಇದು ಜಗತ್ತಿನ ಹೊಸ ಶೋಧ. ಬೆಲೆ ಒಂದು ತೊಲಕ್ಕೆ ರೂ. ೩-೦-೦, ಮೂರು ತೊಲಗಳಿಗೆ ರೂ. ೮-೮-೦, ಆರು ತೊಲಗಳಿಗೆ ರೂ. ೧೫-೦-೦, ಮತ್ತು ಹನ್ನೆರಡು ತೊಲಗಳಿಗೆ ರೂ. ೨೭-೦-೦.

ಈ ಚಿನ್ನವನ್ನು ಹಿಂದೂದೇಶದ ಹಳ್ಳಿ ಪಟ್ಟಣಗಳಲ್ಲಿ ಪ್ರಚಾರಿಸುವ ದೃಷ್ಟಿಯಿಂದ ಕಂಪೆನಿಯು ಈ ಕೆಳಗಿನ ಆಭರಣಗಳ ಬಹುಮಾನವನ್ನು ಗ್ರಾಹಕರಿಗೆ ಕೊಡಲು ನಿರ್ಧರಿಸಿದೆ. ಮೂರು ತೊಲೆಗಳನ್ನು ಕೊಳ್ಳುವವರಿಗೆ ನಾಲ್ಕು ಡೈಮಂಡ್ ಕಟ್ ಬಳೆಗಳೂ, ಎರಡು ಉಂಗುರಗಳು, ಆರು ತೊಲೆ ತೆಗೆದುಕೊಳ್ಳುವವರಿಗೆ ಒಂದು ನೆಕ್ಲೆಸ್, ಎರಡು ಉಂಗುರಗಳು, ಒಂದು ಜೊತೆ ವಾಲೆ, ನಾಲ್ಕು ಬಳೆಗಳು ಮತ್ತು ಜತೆಗೆ ಒಂದು ರಿಸ್ಟ್‌ವಾಚ್ ದೊರೆಯುವುದು. ಹಾಗೆಯೇ ೧೨ ತೊಲೆ ತಗೆದುಕೊಳ್ಳುವವರಿಗೆ ಒಂದು ರಾಣಿಹಾರ್, ನೆಕ್ಲೆಸ್, ಎಂಟು ಬಳೆ, ಎರಡು ಉಂಗುರಗಳು, ಎರಡು ಜೊತೆ ವಾಲೆ, ಒಂದು ರಿಸ್ಟ್ ಈ ಆಭರಣಗಳೆಲ್ಲ ಇಮಿಟೇಶನ್ ರತ್ನಗಳಿಂದ ಕೂಡಿದವು. ಶ್ರಮಿಯೂ ಗಡಿಯಾರದ ಬೆಲೆಯನ್ನು ಮಾರಾಟ ಮಾಡುವ ಭರವಸೆ ಕೊಡಲಾಗಿದೆ. ಏಜೆಂಟರುಗಳಾಗಿ ತಿಂಗಳಿಗೆ ರೂ. ೩೦೦ ರೂ ೫೦೦ ಸಂಪಾದಿಸಲು ಒಳ್ಳೆಯ ದಾರಿ. ಈ ಸುಸಂದರ್ಭವನ್ನು ಕಳಕೊಳ್ಳದಿರಲು ದಯವಿಟ್ಟು ಇಂದೇ ಬರೆಯಿರಿ. ಅಂಚೆ ಹಾಸಲು ಮತ್ತು ಪೇಕಿಂಗು ಮಾಫತ್ತು.

Minerva New Gold Ornaments house,
Bara Hindu (K. M.) Delhi 6.

4-1

WANTED.

A History Graduate to Hathur High School on a salary of Rs. 80–45/- from the 1st July 1951. Apply with certificates and testimonals.

Hathur,
27-4-51.

President,
Hathur High School
Samithi, Hathur
South Coorg.

ವಾರ್ತೆಗಳು

ಅಚಾರ್ಯ ಕೃಪಲಾನಿಯವರು ದಿಲ್ಲಿಯ ಇಂಡಿಯಾದ ‘ಪ್ರೆಸ್ ಕ್ಲಬ್’ ಪತ್ರಿಕಾ ಸಂಪಾದಕರ ಸಂಘದವರು ಬೇರೆ ಮೊತ್ತರಾಗಿ ಕೆಲಸ ಮಾಡಲು ಒಪ್ಪಿಕೊಂಡಿರುವರೆಂದು ಅಧಿಕೃತವಾಗಿ ಗೊತ್ತಾಗಿದೆ.

ಕಾಂಗ್ರೆಸ್ ಗವರ್ನರಾದ ಚಂದೂಲಾಲ ತ್ರಿವೇದಿಯವರನ್ನು ಕೇಂದ್ರ ಮಂತ್ರಿ ಮಂಡಳಕ್ಕೆ ಆ ಸ್ವಾತಂತ್ರ್ಯ ಸಚಿವರಾಗಿ ಎಂದು ವದಂತಿ ಹಬ್ಬಿದೆ. ಆದರೆ ಆ ಪದವಿ ಸಂಪೂರ್ಣ ಖಾತೆ ಇಲಾಖೆಯಲ್ಲಿ ಒಂದನ್ನು ಇವರಿಗೆ ಕೊಡಲು ನೆಹರೂರವರು ನಿಶ್ಚಯಿಸಿದ್ದಾರೆ. ಸ್ವಾತಂತ್ರ್ಯ ಬರುವ ಮೊದಲು ತ್ರಿವೇದಿಯವರು ಸಂಪೂರ್ಣ ಖಾತೆಯ ಕಾರ್ಯದರ್ಶಿಗಳಾಗಿದ್ದರು. ಅಂತಹ ಒಳ್ಳೆಯ ಅನುಭವನಾದರೆ ಸಹಾಯ ಯೋಗವನ್ನು ಪಡೆಯುವ ಸಲುವಾಗಿ ನೆಹರೂರವರು ತ್ರಿವೇದಿಯವರಿಗೆ ಈ ಆಮಂತ್ರಣ ಕೊಟ್ಟಿದ್ದಾರೆ. ಇವರು ಇದನ್ನು ಒಪ್ಪಿಕೊಂಡಿಲ್ಲವೆಂದು ತಿಳಿದು ಬಂದಿದೆ.

ಕೊಡಗು

ತಾ. ೫-೫-೧೯೫೧ನೇ ಶುಕ್ರವಾರ

ಸಾರಾಯಿ ರೇಶನ್.

ಮಹಾತ್ಮಾಗಾಂಧಿಯವರ ಮುಂದಾಳ್ತನದಲ್ಲಿ ದೀರ್ಘಕಾಲ ಹೋರಾಟ ನಡೆಸಿ ಹಿಂದೂದೇಶಕ್ಕೆ ಸ್ವಾತಂತ್ರ್ಯವನ್ನು ಗಳಿಸಿದ ಕಾಂಗ್ರೆಸ್ ಸಂಸ್ಥೆಯ ಮುಖ್ಯ ಗುರಿಗಳಲ್ಲಿ ಸಂಪೂರ್ಣ ಮದ್ಯ ನಿಷೇಧವು ಒಂದಾಗಿತ್ತು. ಈಗ ತಯಾರಾಗುವ ಹೊಸ ರಾಜ್ಯಘಟನೆಯಲ್ಲೂ ಮುಂದಿನ ಸರಕಾರದ ಗುರಿಯು ಹಿಂದೂದೇಶದಲ್ಲಿ ಸಂಪೂರ್ಣ ಮದ್ಯ ನಿಷೇಧವನ್ನು ಸಾಧಿಸಬೇಕೆಂಬುದೇ ಆಗಿದೆ. ಆದರೆ ಕಾಂಗ್ರೆಸ್ ಸಂಸ್ಥೆಯು ಮೊದಲು ಯೋಚಿಸಿದಷ್ಟು ಶೀಘ್ರವಾಗಿ ಈ ಧೋರಣೆಯನ್ನು ಈಗ ಜಾರಿಗೆ ತರುವುದು ಆರ್ಥಿಕ ತೊಂದರೆಯ ದೆಸೆಯಿಂದ ಉಚಿತವಲ್ಲವೆಂದು ಇಂಡಿಯಾ ಸರಕಾರದವರು ಅಭಿಪ್ರಾಯ ಪಡುತ್ತಿರುವರು. ಅಬ್ಕಾರಿ ಇಲಾಖೆಯಿಂದ ಪ್ರಾಂತೀಯ ಸರಕಾರಗಳಿಗೆ ತುಂಬಾ ಆದಾಯ ಬರುತ್ತಿದ್ದು ಈಗ ಥಟ್ಟನೆ ಪೂರ್ಣ ಮದ್ಯ ನಿಷೇಧವನ್ನು ಸಾಧಿಸಿದ್ದೇ ಆದರೆ ಆ ದೊಡ್ಡ ಉತ್ಪತ್ತಿಯು ಇಲ್ಲದಾಗಿ ಸರಕಾರದ ಖರ್ಚಿಗೆ ಹಣದ ಕೊರತೆ ಉಂಟಾಗುವದೆಂದು ಕಂಡು ಬಂದಿದೆ. ಆದುದರಿಂದ ಈ ಬಾಬಿನಿಂದ ಉಂಟಾಗುವ ಆದಾಯದ ಕೊರತೆಯನ್ನು ಬೇರೆ ಹೊಸ ತೆರಿಗೆಗಳಿಂದ ಭರ್ತಿಮಾಡಿಕೊಳ್ಳುವವರೆಗೆ ನಿಧಾನವಾಗಿ ಈ ಧೋರಣೆಯನ್ನು ಸಾಧಿಸಬೇಕೆಂದು ಅನ್ನುತ್ತಿರುವದಾಗಿದೆ.

ಮದ್ರಾಸು, ಬೊಂಬಾಯಿ, ಮಧ್ಯಪ್ರಾಂತ್ಯ, ಮೈಸೂರು ಮೊದಲಾದ ಸಂಸ್ಥಾನಗಳು ಪೂರ್ಣ ಮದ್ಯನಿಷೇಧವನ್ನು ಜಾರಿಯಲ್ಲಿತರಲು ಯತ್ನಿಸಿದ್ದರೂ ಕೊಡಗು ಸರಕಾರವು ಇಂಡಿಯಾ ಸರಕಾರದ ಸಲಹೆಯಂತೆ ಮುಂದಾಲೋಚನೆಯಿಂದ ಇಲ್ಲಿ ಥಟ್ಟನೆ ಸಂಪೂರ್ಣ ಪಾನನಿರೋಧವನ್ನು ಸಾಧಿಸುವುದರ ಬದಲು ಆರೋಗ್ಯ ದೃಷ್ಟಿಯಿಂದ ಹೆಚ್ಚಿನ ಹಾನಿಕರವಾದ ಸಾರಾಯಿ ಮಾರಾಟದಲ್ಲಿ ರೇಶನ್ ಪದ್ಧತಿಯನ್ನು ಜಾರಿಗೆ ತಂದು ಕಡಿಮೆ ಹಾನಿಕರವಾದ ಸೇಂದಿಯನ್ನು ಮೊದಲಿದ್ದಂತೆಯೇ ಸರಾಗವಾಗಿ ಮಾರಾಟಕ್ಕೆ ಬಿಟ್ಟರು. ಈ ಪದ್ಧತಿಯು ಬರೀ ಎರಡು ವರ್ಷಗಳಿಂದ ಮಾತ್ರ ಜಾರಿಯಲ್ಲಿದೆ. ಈ ಅಲ್ಪ ಅವಧಿಯಲ್ಲಿ ಇದರ ಪ್ರಯೋಜನವು ಜನತೆಗೆ ಮುಖ್ಯವಾಗಿ ಬಡವರಿಗೆ ಲಭಿಸಿದೆಯೆಂಬುದು ನಿರ್ವಿವಾದದ ವಿಷಯ. ಈ ಪದ್ಧತಿಯನ್ನು ಜಾರಿಗೆ ತರುವ ಹಿಂದಿನ ವರ್ಷ ಕೊಡಗಿನಲ್ಲಿ ೭೫,೦೦೦ ಗೆಲನ್ ಸಾರಾಯಿ ಖರ್ಚಾಗಿದ್ದು ಕಳೆದ ಎರಡು ವರ್ಷಗಳಲ್ಲಿ ವರ್ಷಕ್ಕೆ ಸರಾಸರಿ ಸುಮಾರು ೨೫,೦೦೦ ಗೆಲನು ಮಾತ್ರ ಖರ್ಚಾಗುತ್ತಿರುವುದನ್ನು ನೋಡಿದರೆ ಕೊಡಗಿನಲ್ಲಿ ಕುಡುಕತನವು ಸುಮಾರಾಗಿ ಎರಡಂಶದಷ್ಟು ಕಡಿಮೆಯಾಗಿದೆಯೆಂಬುದು ವಿಶದವಾಗುತ್ತದೆ. ಇದೇ ಅಲ್ಲದೆ ಈ ಮೊದಲು ಆದಂತೆ ಹಬ್ಬ, ಹುಣ್ಣಿಮೆಗಳಲ್ಲಿ ಕುಡಿದು ಉಂಟಾಗತಕ್ಕ ಜಗಳ ಕಲಹಗಳು ಬಹು ಮಟ್ಟಿಗೆ ಕಡಿಮೆಯಾಗಿವೆ. ಸಂತೆಗಳಲ್ಲಿ ಕುಡಿದು ಜುಗ್ಗಾಡಿ ನರ್ತಿಸುವವರನ್ನು ಕಾಣುವದು ಅಪರೂಪವಾಗಿದೆ. ಮದುವೆ ಮುಂಜಿಗಳಲ್ಲಿ ಸಾರಾಯಿ ಇಲ್ಲದಿದ್ದರೆ ನಡೆಯಲಾಗುವದಿಲ್ಲವೆಂಬ ಭಾವನೆ ಹೋಗಿ ಸಾರಾಯಿ ಕುಡಿಯುವದು ಒಂದು ಶಾಪವೆಂಬ ಭಾವನೆ ಬಂದಿದೆ. ಈ ಪಾರ್ಶ್ವ ಪಾನನಿರೋಧದಿಂದ ಕೊಡಗು ಪೂರ್ಣ ಪಾನನಿರೋಧದ ಗುರಿಗೆ ಸಾವಧಾನದಿಂದ ಸಾಗುತ್ತಿದೆ.

ಕೊಡಗಿನ ಸರಕಾರಕ್ಕೆ ಅಬ್ಕಾರಿ ಉತ್ಪತ್ತಿಯು ಚಿಕ್ಕದಾಗಿರಲಿಲ್ಲ. ಸುಮಾರು ಹತ್ತು ಲಕ್ಷ ರೂಪಾಯಿಗಳು ಇದರಿಂದ ಬರುತ್ತಿತ್ತು. ಪೂರ್ಣ ನಿರೋಧದಿಂದ ಇದೆಲ್ಲವನ್ನೂ ಒಂದೇ ಸಲನೆ ಕಳೆದುಕೊಂಡು ಆಡಳಿತ ನಡೆಸಲು ಸರಕಾರವು ಕಷ್ಟಪಡಬೇಕಾಗಿದ್ದಿತು. ಬದಲು ಈಗಿನ ಮುಂಜಾಗ್ರತೆಯ ಕ್ರಮವನ್ನು ಕೈಕೊಂಡುದರಿಂದ ಆ ಬಾಬಿನಲ್ಲಿ ಸರಕಾರವು ವರ್ಷಕ್ಕೆ ಆರೇ ಮೂರು ಲಕ್ಷ ರೂಪಾಯಿಗಳನ್ನು ಕಳೆದುಕೊಳ್ಳುತ್ತಿದೆ. ರೇಶನಿಂಗ್ ಪದ್ಧತಿಯಿಂದ ಜನತೆಗೆ ಉಂಟಾಗುತ್ತಿರುವ ಪ್ರಯೋಜನವನ್ನು ಗಮನಕ್ಕೆ ತೆಗೆದುಕೊಂಡರೆ ಈ ನಷ್ಟವು ಹೆಚ್ಚಿನದೆಂದು ಹೇಳಲಾಗದು. ಆದರೆ ರೇಶನಿಂಗಿನಲ್ಲಿ ಈಗ ಅಲ್ಲಲ್ಲಿ ಕಳ್ಳಸಂತೆಯಲ್ಲಿ ಸಾರಾಯಿಯು ಹೆಚ್ಚಿನ ಬೆಲೆಗೆ ಮಾರಾಟವಾಗುತ್ತಿದೆಯೆಂದೂ ಕಳ್ಳತನದಲ್ಲಿ ಸಾರಾಯಿ ತಯಾರಿಸುವದು ಹೆಚ್ಚುತ್ತಿದೆಯೆಂದೂ ವಾರ್ತೆಗಳಿವೆ. ಈ ಕಾರಣದಿಂದ ಪಾರ್ಶ್ವ ಪಾನನಿರೋಧ ಸಫಲವಾಗಲಿಲ್ಲವೆಂದು ಕೆಲವರು ಅನ್ನುತ್ತಿರುವರು. ಇದು ನಿಜವಲ್ಲ. ಮೇಲೆ ಕಾಣಿಸಿದಂತೆ ಇದರಿಂದ ಬಡ ಜನರಿಗೆ ತುಂಬಾ ಹಿತವಾಗಿದೆ. ಆದರೂ ಇದರಿಂದ ಇನ್ನೂ ಹೆಚ್ಚಿನ ಪ್ರಯೋಜನವನ್ನು ಹೊಂದುವದು ಸಾಧ್ಯವಿದೆ. ಇದನ್ನು ಸಾಧಿಸಲಿಕ್ಕಾಗಿ ಸರಕಾರವು ಎಚ್ಚೆತ್ತುಕೊಂಡು ಪಾನನಿರೋಧ ನಿಯಮಗಳಲ್ಲಿದ್ದ ಕೆಲವು ಕುಂದುಕೊರತೆಗಳನ್ನು ತಿದ್ದುಪಡಿ ಮಾಡಿರುವದಲ್ಲದೆ ಸಾರಾಯಿ ಲೈಸನ್ಸ್‌ಗಳನ್ನು ಒಬ್ಬರಿಂದ ಮತ್ತೊಬ್ಬರಿಗೆ ವರ್ಗಾಯಿಸಕೂಡದೆಂದೂ, ಸ್ತ್ರೀಯರಲ್ಲದೆ ಎಲ್ಲರೂ ಖುದ್ದಾಗಿ ಲೈಸನ್ಸ್ ತೋರಿಸಿ ತಮ್ಮ ಸಾರಾಯಿ ಕೊಂಡುಕೊಳ್ಳಬೇಕೆಂದೂ ನಿಬಂಧನೆಯನ್ನು ಮಾಡಿ ಕಳ್ಳಮಾರಾಟದ ಕೇಸುಗಳನ್ನು ಪತ್ತೆ ಹಚ್ಚಲು ಪ್ರತಿ ಎಕ್ಸೈಸ್ ಸಬ್ ಇನ್ಸ್‌ಪೆಕ್ಟರಿಗೆ ಮೂವರು ಪೋಲೀಸಿನವರನ್ನು ನೇಮಿಸಿರುವದು ಯೋಗ್ಯವಾಗಿದೆ.

ಈ ಅನುಕೂಲತೆಗಳನ್ನು ಉಪಯೋಗಿಸಿಕೊಂಡು ಈ ಇಲಾಖೆಯ ಸಿಬ್ಬಂದಿಯವರು ದೇಶೋದ್ಧಾರದ ಅಮೋಘವಾದ ಈ ಕಾರ್ಯವನ್ನು ಸಾಧಿಸಲು ಪ್ರಯತ್ನಿಸಿದರೆ ಈ ಕ್ರಮವು ಮತ್ತಷ್ಟು ಜಯಪ್ರದವಾಗುವದರಲ್ಲಿ ಸಂದೇಹವಿಲ್ಲ. ಇದರೊಂದಿಗೆ ಜನತೆಯೂ ಕೂಡ ತಮ್ಮ ಉದ್ಧಾರಕ್ಕಾಗಿ ಮಾಡಲ್ಪಡುತ್ತಿರುವ ಈ ಪ್ರಯತ್ನಕ್ಕೆ ಸಂಪೂರ್ಣ ಸಹಕಾರವನ್ನೀಯಬೇಕಾಗಿದೆ. ಜಾಗ್ರತೆಗೊಂಡಿರುವ ಈ ಪ್ರಯತ್ನದಲ್ಲಿ ಸರಕಾರದವರೊಡನೆ ಜನತೆಯು ಪರಿಪೂರ್ಣ ಸಹಕಾರ ಕೊಟ್ಟು ಬುದ್ಧಿಯಿಂದ ವರ್ತಿಸಿದರೆ ಇಡೀ ಹಿಂದೂದೇಶದಲ್ಲಿ ಪ್ರಥಮವಾಗಿ ಜಾರಿಗೆ ತಂದಿರುವ ಈ ಸಾರಾಯಿ ರೇಶನಿಂಗ್ ಪದ್ಧತಿಯನ್ನು ಪೂರ್ಣ ಜಯಪ್ರದವಾಗಿ ನಡೆಸಿ ಇತರ ಪ್ರದೇಶಗಳಿಗೆ ಆದರ್ಶವಾಗುವಂತೆ ಮಾಡಲು ಸಾಧ್ಯವಿದೆಯೆಂಬುದರಲ್ಲಿ ಸಂದೇಹವಿಲ್ಲ.

ವರ್ತಮಾನ.

ಸೇಲಂನಲ್ಲಿರುವ ಶ್ರೀರಾಮಕೃಷ್ಣ ಮಠದ ಪ್ರೆಸಿಡೆಂಟರಾದ ಸ್ವಾಮಿ ದೇಶಿಕಾನಂದಜಿಯವರಿಗೆ ಮಡಿಕೇರಿ ವೇದಾಂತ ಮಂಡಳಿಯವರು ತಾ. ೩೦ ರಲ್ಲಿ ಒಂದು ಬಿನ್ನವತ್ತಳೆಯನ್ನಿತ್ತು ಸತ್ಕರಿಸಿದರು. ಸ್ವಾಮಿಜಿಯವರು ತಾ. ೩ ರಲ್ಲಿ ಮಡಿಕೇರಿ ಮಹಿಳಾ ಸಮಾಜದಲ್ಲಿ ಭಾಷಣ ಮಾಡಿದರು. ತಾ. ೪ ರಲ್ಲಿ ವೇದಾಂತ ಮಂದಿರದಲ್ಲಿ ಭಾಷಣ ಮಾಡಲಿದ್ದಾರೆ.

ಮೈಸೂರು ಹೈಕೋರ್ಟಿನ ಚೀಫ್ ಜಸ್ಟೀಸರಾಗಿರುವ ಶ್ರೀ. ಮಲ್ಲೇಶ ಮೇದಪ್ಪನವರು ತಾ. ೧೮ ರಲ್ಲಿ ಮಡಿಕೇರಿಗೆ ಬಂದಾಗ ಮಡಿಕೇರಿಯ ಪುರಸಭೆಯವರು ಅವರಿಗೆ ಸ್ವಾಗತವಿತ್ತರು. ಅವರನ್ನು ಸತ್ಕರಿಸಲು ತಾರೀಖು ೧೦ ರಲ್ಲಿ ಮಡಿಕೇರಿಯಲ್ಲಿ ಒಂದು ಚಹಾಕೂಟವನ್ನು ಏರ್ಪಡಿಸಲಾಗಿದೆ.

ಅಖಿಲ ಕೊಡಗು ಅನ್ಯಕೋಮಿನ ಏಕ್ಯಾಭಿವೃದ್ಧಿ ನಿಧಿಯ ಮಹಾಸಭೆಯು ತಾ. ೬ ನೇ ಆದಿತ್ಯವಾರ ಮಧ್ಯಾಹ್ನ ೨ ಗಂಟೆಗೆ ಪೊನ್ನಂಪೇಟೆ ಹೈಸ್ಕೂಲು ಹಾಲ್‌ನಲ್ಲಿ ಡಾ. ಸಿ. ಎಂ. ಪೂಣಚ್ಚನವರ ಅಧ್ಯಕ್ಷತೆಯಲ್ಲಿ ನಡೆಯುವದು.

ಕರ್ನಾಟಕ ಪ್ರದೇಶ ಕಾಂಗ್ರೆಸ್ ಕಮಿಟಿಯ ಮಿಟಿಂಗೊಂದು ತಾ. ೧೦ ಮತ್ತು ೧೧ ರಲ್ಲಿ ಮಡಿಕೇರಿಯ ಗೌಡಸಮಾಜ ಭವನದ ಕಟ್ಟಡದಲ್ಲಿ ನಡೆಯುವದು.

ಕೊಡಗು ವಿದ್ಯಾಭಿವೃದ್ಧಿ ಫಂಡಿನ ವಾರ್ಷಿಕ ಮಹಾಸಭೆಯು ತಾ. ೨೩ ರಲ್ಲಿ ಅರಮೇರಿ ಗ್ರಾಮದಲ್ಲಿ ಶ್ರೀ. ಕೆ. ಕೆ. ಅಪ್ಪಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು.

ಎಸ್. ಎಸ್. ಎಲ್. ಸಿ. ಪಾಸಾಗಿ ಪ್ರಾಯ ೧೮ ರಿಂದ ೨೫ ರ ವರೆಗೆ ಇರುವ ತರುಣರಿಗೆ ಪೋಲೀಸ್ ಇಲಾಖೆಯಲ್ಲಿ ಸ್ಪೆಶಲ್ ಬ್ರಾಂಚ್ ಮತ್ತು ಪ್ರೊಬೆಶನರ್ ಸಬ್‌ಇನ್ಸ್‌ಪೆಕ್ಟರ್ ಕೆಲಸವು ಕಾದಿರುತ್ತದೆ. ಅರ್ಜಿದಾರರು ತಾರೀಖು ೫ ನೇ ಮೇಗೆ ಮುಂಚಿತವಾಗಿ ಮಡಿಕೇರಿ ಡಿಸ್ಟ್ರಿಕ್ಟ್ ಎಂಪ್ಲಾಯ್‌ಮೆಂಟ್ ಆಫೀಸಿನಿಂದ ಹೆಚ್ಚಿನ ವಿವರವನ್ನು ತಿಳಿದುಕೊಳ್ಳಬಹುದು.

ಸೋಮವಾರಪೇಟೆಯಲ್ಲಿ ವಕೀಲರಾಗಿದ್ದ ಆ. ಸಬ್‌ಜಡ್ಜರಾಗಿದ್ದ ಶ್ರೀ. ವೆಂಕಪ್ಪಗೌಡರವರನ್ನು ಜಿಲ್ಲಾ (ಸೆಶನ್ಸ್ ಕೋರ್ಟ) ಅಫೀಶಿಯಲ್ ಆಗಿ ನೇಮಿಸಲಾಗುತ್ತದೆ.

ಕೈಗಳಲ್ಲಿ ಕರಿಮೆಣಸು ಬೆಳೆಯ ಸಂಬಂಧದ ಪರೀಕ್ಷೆಗೆ ಬೇಕಾದ ಸಾಮಗ್ರಿಗಳು ಈ ತಾ. ೨೫ರ ಹೊತ್ತಿಗೆ ತಲಪುವವೆಂದು ತಿಳಿದು ಬಂದಿದೆ.

ಈ ಮೊದಲಿದ್ದ ಆರು ಎಕ್ಸೈಸ್ ಸಬ್ ಇನ್ಸ್‌ಪೆಕ್ಟರುಗಳಲ್ಲಿ ಮೂರು ಜನರಿಗೆ ಮಾತ್ರ ವಿಶಿಷ್ಟ ಪ್ರಾಂತಗಳನ್ನು ತೆಗೆದು ಹಾಕಿ, ಪ್ರತಿ ಕೆಲಸಕ್ಕೆ ಪ್ರತಿ ಸಬ್ ಇನ್ಸ್‌ಪೆಕ್ಟರಿಗೆ ಮೂವರು ಜತೆ ಪೋಲೀಸರನ್ನು ನೇಮಿಸಲಾಗಿದೆ.

ಮಕ್ಕಂದೂರು ಶಾಲೆಯ ಜೀವನಸ್ಥಾನದಲ್ಲಿ ಎರಡು ವರ್ಷಗಳಿಗೊಮ್ಮೆ ನಡೆಯುವ ದೊಡ್ಡ ಜಾತ್ರೆಯು ತಾ. ೬ ಮತ್ತು ೭ ರಲ್ಲಿ ನಡೆಯುವದು.

ವಾರ್ತೆಗಳು.

ಕೊರಿಯಾ ಯುದ್ಧದಲ್ಲಿ ವಸಂತ ಮಾಸದ ಪ್ರತಿಧಾಳಿಯನ್ನು ಮಾಡುವುದಕ್ಕಾಗಿ ಕಮ್ಯೂನಿಸ್ಟ್ ಸೈನ್ಯಗಳ ತಂಡ ತಂಡವಾಗಿ ಬರುತ್ತಿವೆ. ಮೂರು ಸಾವಿರ ಲಾರಿಗಳ ತುಂಬ ಸೈನಿಕರು ಧಾವಿಸುತ್ತಿರುವರೆಂದು ಮಿತ್ರ ಸೈನ್ಯದವರಿಂದ ತಿಳಿದು ಬಂದಿದೆ.

ಯೋಜನೆಗಾಗಿ ಕಮ್ಯೂನಿಸ್ಟರು ಈ ಗೆರಿಲ್ಲಾ ಯುದ್ಧವನ್ನು ಪ್ರಾರಂಭಿಸಿರುವರೆಂದು ಬರ್ಮಾ ವಿದೇಶ ಮಂತ್ರಿ ಹೇಳುತ್ತಿದ್ದಾರೆ. ಬರ್ಮಾದ ಕಡೆಗೆ ಸಹಾಯವನ್ನು ನೀಡಬೇಕಾದ ವಿಷಯಗಳನ್ನು ನಿರ್ಧರಿಸಲಾಗುತ್ತಿದೆ. ಇದರ ಬಗ್ಗೆ ನದಿಯ ಎರಡು ದಡದವರಿಗೂ ತೊಂದರೆ ಸಂಭವಿಸುವ ಸಂಭವನೆಯೆಂದು ತಿಳಿದು ಬಂದಿದೆ.

ಆಗಾಖಾನರ ಪುತ್ರ ರಾಜಕುಮಾರ ಅಲಿಖಾನರನ್ನು ಲಗ್ನವಾದ ರೀಟಾ ಹೇವರ್ತ್ (ಸಿನಿಮಾ ನಟಿ) ದಾಂಪತ್ಯ ವಿಚ್ಛೇದಕ್ಕಾಗಿ ಯೋಚಿಸುತ್ತಿರುವಳಾಗಿ ಪ್ರಕಟವಾಗಿದೆ.

ಆಗಾಖಾನರ ವಜ್ರಮಹೋತ್ಸವದ ಬಗ್ಗೆ ವಿವರಗಳನ್ನು ಅಮೇರಿಕೆಯ ಅಧಿಕಾರಿಗಳಿಗೆ ತಿಳಿಸಿದವರಿಗೆ ಬಹುಮಾನ ಬರುವ ಉತ್ಸವದ ಹಣದ ಭಾಗವನ್ನು ಕೊಡಬೇಕಾಗುತ್ತದೆ! ಈ ರೀತಿಯಾಗಿ ಕೊಟ್ಟ ದೊಡ್ಡ ಮೊತ್ತ ಅಂದರೆ ೨೯೫೦೬ ಪೌಂಡುಗಳು. ಆ ಹಣವನ್ನು ಪಾಲ್ಗೊಳ್ಳಲು ಹಂಚಲಾಯಿತು. ನಂತರ ಈ ಹಣ ಪಡೆದವರ ಕಡೆಯಿಂದ ಆದಾಯವನ್ನು ವಸೂಲು ಮಾಡಲಾಯಿತು.

ಅಮೇರಿಕೆಯ ಅಧ್ಯಾಪಕ ಡಾ. ಅರ್ನಾಲ್ಡ್ ರೆಕ್ಟರ್ ಹಾಗೂ ಕೌನ್ಸಿಲರು ಪತ್ನಿಯಿರುವ ಆನಂದ ಹೃದಯದಿಂದ ಹೇಗೆ ಸಂಬಂಧ ಕಡಿದುಕೊಳ್ಳಬೇಕೆಂಬ ವಿಶಿಷ್ಟ ವಿಚಾರವೊಂದನ್ನು ವಿವರಿಸಬೇಕಾಗಿದೆಯಂತೆ! ಹೇರಳ ಹಣವು ತಗುಲದ ಸಂತೋಷವನ್ನು ತರುತ್ತದೆಯೆಂದು ತಿಳಿಸುತ್ತಾರೆ.

ಅಖಿಲ ಭಾರತ ಸಾಧು ಸಮ್ಮೇಳನದ ಬಗ್ಗೆ ಎಲ್ಲ ಕಡೆಯಿಂದ ಸಾಧುಗಳು ಬರುತ್ತಿದ್ದಾರೆ. ವಿದೇಶದಿಂದ ಸಹ ಕೆಲವು ಸಾಧುಗಳು ಬರತಕ್ಕವರಿದ್ದಾರೆ. ಈ ಸಮ್ಮೇಳನದ ಕಾಲಕ್ಕೆ ಮೆರವಣಿಗೆಯಲ್ಲಿ ಆನೆಗಳನ್ನು ತರಬೇಕೆಂದು ಸಾಧುಗಳ ವಿಚಾರವಿತ್ತು. ಆದರೆ ಸಂರಕ್ಷಣೆಯ ದೃಷ್ಟಿಯಿಂದ ದಿಲ್ಲಿ ಅಧಿಕಾರಿಗಳು ಈ ಬಗ್ಗೆ ಅಪ್ಪಣೆಕೊಟ್ಟಿಲ್ಲ.

ಶ್ರೀ. ಬಿ. ಡಿ. ಗಣಪತಿಯವರ

ಪ್ರತಿಧ್ವನಿ, ಕುಸುಮಚಯ ಮತ್ತು ಪತ್ರಾವಳಿ.

ಕೆಲವು ಪತ್ರಿಕಾಭಿಪ್ರಾಯಗಳು.

" ಪ್ರಭಾತ " . ಮಂಗಳೂರು.

"ಆಯ್ದ ವಿಷಯಗಳಲ್ಲಿ ವೈವಿಧ್ಯವಿದೆ; ವಿಚಾರಗಳಲ್ಲಿ ನಾವಿನ್ಯತೆ ಇದೆ, ವರ್ಣನೆಗಳಲ್ಲಿ ಸಜೀವತೆ ಇದೆ, ಪಾತ್ರಗಳಲ್ಲಿ ವ್ಯಕ್ತಿತ್ವವಿದೆ. ಶೈಲಿಯಲ್ಲಿ ಸಾಧುರ್ಯವಿದೆ. ಭಾಷೆಯಲ್ಲಿ ಲಾಲಿತ್ಯವಿದೆ. ಕೃತಿಯಲ್ಲಿ ಸೌಂದರ್ಯವಿದೆ. ಎಲ್ಲರ ಪುಸ್ತಕ ಭಂಡಾರಗಳನ್ನಲಂಕರಿಸಲು ಯೋಗ್ಯವಾಗಿರುವ ಈ ಪುಸ್ತಕಗಳ ಮುದ್ರಣವೂ ಅಚ್ಚುಕಟ್ಟಾಗಿದೆ."

" ಜೈಹಿಂದ್ " ಹುಬ್ಬಳ್ಳಿ.

"ಭಕ್ತಿ, ಪ್ರೇಮ, ನೀತಿ ಬೋಧೆಗಳ ಪ್ರಭಾವ ಜನ[illegible] ಪ್ರಸಿದ್ಧ [illegible] ಮಧುರ [illegible] ಕುಸುಮಚಯವನ್ನು [illegible] ಕಾಣಬಹುದಾಗಿದೆ. [illegible] ಜೀವನ[illegible] [illegible] ಪತ್ರಾವಳಿಯಲ್ಲಿ [illegible]. ಶ್ರೀ. ಗಣಪತಿಯವರ [illegible] ಪ್ರತಿಧ್ವನಿ [illegible]"

" ನವಯುಗ " ಉಡುಪಿ.

"ಲೇಖಕರಿಗೆ [illegible] ಪ್ರೇಮವನ್ನು [illegible] ವನ್ನು [illegible]. ಕೊಡಗಿನ [illegible] ಚಿತ್ರಿಸುವಲ್ಲಿ ಶ್ರೀ. ಗಣಪತಿಯವರು [illegible]. ಪ್ರತಿಧ್ವನಿಯು [illegible] ಸ್ತೋತ್ರವಾಗಿದೆ."

" ನವಯುಗ " ಹುಬ್ಬಳ್ಳಿ.

ಗ್ರಂಥಕರ್ತರು ಈ ಪುಸ್ತಕಗಳಲ್ಲಿ [illegible] "ಕರ್ಮಸು ಕೌಶಲಂ" ಎಂಬ ಭಗವದ್ಗೀತೆಯ ವಾಕ್ಯ [illegible] ವಿಚಾರಗಳನ್ನು ಪತ್ರ, ಕಥೆ, ಕವನಗಳ ಮೂಲಕ [illegible] ಮಧುರ [illegible] ಶ್ರೀ. ಗಣಪತಿಯವರ ಪುಸ್ತಕಗಳು ಯೋಗ್ಯ [illegible] ಒದಗಿಸಲಿ ಎಂಬುದು [illegible]"

ಕನ್ನಡನಾಡಿನ ಪ್ರತಿಯೊಬ್ಬರೂ ಮುಕ್ತ ಕಂಠದಿಂದ ಹೊಗಳುತ್ತಿರುವ ಈ ಪುಸ್ತಕಗಳನ್ನು ತಪ್ಪದೆ ಓದಿರಿ.

ಪುಸ್ತಕ ದೊರೆಯುವ ಸ್ಥಳ:-
" ಕೊಡಗು " ಪ್ರೆಸ್,
ಮಡಿಕೇರಿ.

ದಿ ಟ್ರಾಪಿಕಲ್

ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

ಮ್ಯಾನೇಜಿಂಗ್ ಡೈರೆಕ್ಟರ್:- ಲಾಲ ಶಂಕರ್ ಲಾಲ್.
ಮುಖ್ಯ ಕಚೇರಿ:- ಹೊಸ ದೆಹಲಿ.

52-2   ಸ್ಥಾಪಿಸಿದ ಡೈರೆಕ್ಟರರು:

ಪಂಡಿತ ಮೋತಿಲಾಲ್ ನೆಹರು.   ಎಸ್. ಶ್ರೀನಿವಾಸ ಅಯ್ಯಂಗಾರ್
ಹಕೀಮ್ ಅಜಮಲಖಾನ್.   ಡಾ|| ಎಂ. ಎ. ಅನ್ಸಾರಿ.

Transacts:-Life, Fire, Motor, and Marine.

ಯಂ. ಯು. ಅಪ್ಪಯ್ಯ,   ಎಂ. ಎ. ಬೆಳ್ಯಪ್ಪ,
ಇನ್ಸ್‌ಪೆಕ್ಟರ್,   ಬ್ರಾಂಚ್ ಸೆಕ್ರೆಟರಿ,
ಮಡಿಕೇರಿ, ಕೊಡಗು.   ಹಂಪನಕಟ್ಟೆ, ಮಂಗಳೂರು.

ಓದುಗರ ಓಲೆಗಳು

ವಿದ್ಯಾರ್ಥಿ ಕಾಂಗ್ರೆಸ್

ಕೊಡಗಿನಲ್ಲಿಯೂ ವಿದ್ಯಾರ್ಥಿ ಕಾಂಗ್ರೆಸಿತ್ತು. ೧೯೪೨ರ ಆಂದೋಲನದ ಕಾಲಕ್ಕೆ ದೇಶದಲ್ಲಿ ಒಂದು ಚೇತನಕಾರಿ ಶಕ್ತಿಯಾಗಿ ಅದು ಕಾರ್ಯ ನಡೆಸಿತ್ತು. ಆದರೆ ಇಂದು ಕೊಡಗಿನಲ್ಲಿ ವಿದ್ಯಾರ್ಥಿ ಕಾಂಗ್ರೆಸು ಇದೆಯೋ ಎಂಬ ಸಂಶಯ ಬರುತ್ತಿದೆ. ಸ್ವಾತಂತ್ರ್ಯ ದೊರೆತ ನಂತರ ವಿದ್ಯಾರ್ಥಿ ಕಾಂಗ್ರೆಸಿನ ಅವಶ್ಯವಿಲ್ಲವೆಂದು ತಿಳಿದಿರಬಹುದೇ? ಹಾಗಿದ್ದರೆ ಅದು ತಪ್ಪಭಿಪ್ರಾಯ. ಎಂದಿಗಿಂತಾ ಇಂದು ವಿದ್ಯಾರ್ಥಿ ಕಾಂಗ್ರೆಸಿನ ಅವಶ್ಯಕತೆ ಹೆಚ್ಚಾಗಿದೆ. ಬಂದಿರುವ ಸ್ವಾತಂತ್ರ್ಯವನ್ನು ಜವಾಬ್ದಾರಿಯಾಗಿ ಅರಗಿಸಿಕೊಳ್ಳಲು ಇಂದು ನಿಸ್ವಾರ್ಥತೆಯಿಂದ ದುಡಿಯುವ ಯುವಕರ ಸಂಘಟನೆಯಾಗಬೇಕು. ಆಧಿಕಾರದ ಲಾಲಸೆಗೆ ಬೇಳಲೆ, ದುಡ್ಡಿನ ಮೋಹಕ್ಕೆ ಬಲಿಯಾಗದೆ ನಿಸ್ವಾರ್ಥತೆಯಿಂದ ದುಡಿಯಲು ವಿದ್ಯಾರ್ಥಿಗಳೇ ಹೆಚ್ಚು ಶಕ್ತರು. ಇಂದು ನಮಗೆ ಸ್ವಾತಂತ್ರ್ಯದೊರೆತು ಪ್ರತಿಯೊಬ್ಬ ನಾಗರೀಕನಿಗೂ ಅಪೂರ್ವ ಜವಾಬ್ದಾರಿ ಬಂದಿದೆ. ಆ ಜವಾಬ್ದಾರಿಯನ್ನು ನಿರ್ವಹಿಸಲು ಶಕ್ತರಾಗುವಂತೆ ಜನತೆಯನ್ನು ತಯಾರುಮಾಡುವ ಕಾರ್ಯ [illegible]. ಈ ಜವಾಬ್ದಾರಿಯನ್ನು [illegible] ನಾಗರೀಕ [illegible] ಕೈಕೊಳ್ಳಲು [illegible] ವಿದ್ಯಾರ್ಥಿ ಕಾಂಗ್ರೆಸು ಪ್ರಕಟ [illegible] ಮಾಡಬೇಕು. ನಮ್ಮ [illegible] ಶಿಕ್ಷಣ ಪ್ರಚಾರದಲ್ಲಿ ವಿದ್ಯಾರ್ಥಿಗಳು ಸಹಾ ಕೆಲಸ ಮಾಡಬಹುದಾಗಿದೆ. ಕೊಡಗಿನಲ್ಲಿ [illegible] ಕಾಲೇಜಾಗಿದ್ದು ಕಾಲೇಜಿನ ವಿದ್ಯಾರ್ಥಿಗಳು ಮುಂದಾಳ್ತನ ವಹಿಸಿ ದೇಶದ ವಿದ್ಯಾರ್ಥಿಗಳ ಸಂಘಟನೆ ಮಾಡಿ ದೇಶದ ಜನತೆಯ ಸೇವೆಗಾಗಿ ವಿದ್ಯಾರ್ಥಿಗಳ [illegible] ತಯಾರು ಮಾಡಬೇಕು. ರಜೆ ಇರುವ ಸಮಯಗಳಲ್ಲಿ, ಶನಿವಾರ, ಆದಿತ್ಯವಾರಗಳಲ್ಲಿ ಇವರು ಗ್ರಾಮ ಗ್ರಾಮಗಳನ್ನು ಸುತ್ತಿ ಆ ನಾಡಿಗೆ ಸೇವೆ ಮಾಡಬಹುದು. ಈ ಸೇವೆಯ ದೃಷ್ಟಿಯಿಂದ ಕೊಡಗಿನಲ್ಲಿ ವಿದ್ಯಾರ್ಥಿ ಕಾಂಗ್ರೆಸ್ ಮತ್ತೊಮ್ಮೆ ರೂಪುಗೊಳ್ಳುವದೇ?

ಎಚ್. ಎಂ. ಚಂಗಪ್ಪ.

ಮರಗೋಡು ಹೈಯರ್ ಎಲಿಮೆಂಟರಿ ಶಾಲೆ.

ಇದೊಂದು ಬೋರ್ಡ್ ಬೋರ್ಡಿನ ಶಾಲೆ. ಕಳೆದ ವರ್ಷ ಸುತ್ತು ಮುತ್ತಲಿನ ಹಾಲ್ಕು ಗ್ರಾಮದ ಜನರ ಆಸೀಕದ ಪ್ರಯತ್ನದಿಂದ ಇದು ಹೈಯರ್ ಎಲಿಮೆಂಟರಿ ಶಾಲೆಯಾಗಿದೆ. ಈ ವರ್ಷ ಈ ಶಾಲೆಯ ಮಕ್ಕಳು ರಾಷ್ಟ್ರಭಾಷಾ ಎಂಟ್ರೆನ್ಸ್ ಪರೀಕ್ಷೆಗೆ ಕುಳಿತಿದ್ದಾರೆ. ಆದರೆ ಈ ಶಾಲೆಯ ಏಳನೇ ಕ್ಲಾಸು ಎಂಟನೇ ಕ್ಲಾಸಿನವರಿಗೆ ಕೂಡ್ರು ಹೊರ್ತು ಇತ್ತ್ಯ [illegible] ಕೊಳ್ಳದೆ ಗ್ರಾಮಸ್ಥರೇ ಅದರ ಜವಾಬ್ದಾರಿಯನ್ನು ವಹಿಸುತ್ತಿರುವರು. ಶಾಲಾ ಕಟ್ಟಡವು ಎರಡು ಸಾರಿ ಬಿದ್ದು ಮತ್ತೊಮ್ಮೆ ಬಾರಿ ಎದ್ದು ನಿಂತಿದೆ. ಕಟ್ಟಡವು ಈಗ ಚೆನ್ನಾಗಿದೆ. ಆದರೆ ಈಗ ಚುನಾಯಿತರಾಗಿರುವ ಶಾಲಾ ಪಂಚಾಯಿತರು ತಮ್ಮ ಜವಾಬ್ದಾರಿಯನ್ನರಿತಂತೆ ತೋರುವುದಿಲ್ಲ. ಈ ಪಂಚಾಯಿತರ ಮೀಟಿಂಗಿನ ಸ್ಥಳ ಶಾಲಾ ಆಫೀಸಾಗಿದೆ. ಅಲ್ಲೇ ಕಾಫಿ, ಚಾ, ಬೀಡಿ, ಸಿಗರೇಟು ಸೇವಿಸುತ್ತಾರೆ. ಸೋಮವಾರಗಿನ ದಿನ ಪಾಠವು ಮುಗಿದು ಉಪಾಧ್ಯಾಯರು ಪಾಠ ಮಾಡಲಾರರು. ಮೇಲಾಗಿ ಇತರರಿಗೂ ಪಾಠ ಮಾಡಲು ಕೊಡದಿದ್ದರೆ ಇದೆ. ಶಾಲಾ ಕಟ್ಟಡದ್ದಮರ, ಕಲ್ಲು, ಧನ ಸಹಾಯ ಮಾಡಿದವರ ಹೆಸರುಗಳನ್ನು ಕೆತ್ತಿಸಿಟ್ಟದ್ದು ಓದುವ ಹಾಗಿಲ್ಲ. ಯೋಗ್ಯ ರೀತಿಯಲ್ಲಿ ಆ ಕಲ್ಲಿನ ಸ್ಥಾಪನೆಯನ್ನು ಮಾಡಿಲ್ಲ. ಇಷ್ಟೆಲ್ಲ ಆದರೂ ಬಡ ಗ್ರಾಮಸ್ಥರ ಮೇಲಿನ ಹೊರೆ ಇಳಿದಿಲ್ಲ. ಶಾಲಾ ಪಂಚಾಯಿತರು ಅಧ್ಯಾಪಕರೊಡನೆ ಸಹಕರಿಸಿ ಶಾಲೆಯ ಪ್ರಗತಿಗೆ ದುಡಿಯಬೇಕು. [illegible] ಅಧ್ಯಾಪಕರ ಮೇಲೆ ದರ್ಪ ಮಾಡಲು ನೋಡುವದರಿಂದ ಶಾಲೆಯ ಪ್ರಗತಿ ಸಾಧಿಸದು. ಕಳೆದ ವಾರದ 'ಕೊಡಗು' ಪತ್ರಿಕೆಯಲ್ಲಿ ಇಬ್ಬರು ಅಧ್ಯಾಪಕರಿಗಾಗಿ ಜಾಹೀರು ಮಾಡಿದ್ದರು. ಯೋಗ್ಯರನ್ನು ಆರಿಸಿ, ಆರಿಸಲ್ಪಟ್ಟವರಿಗೆ ಯೋಗ್ಯ ವೇತನದ ಏರ್ಪಾಡು ಮಾಡಿ ಅವರ ಕೆಲಸದ ಭರವಸೆ ಕೊಟ್ಟು ಅಧ್ಯಾಪಕರಿಗೆ ಪಂಚಾಯಿತರು ಸರ್ವ ಸಹಕಾರ ಕೊಡಬೇಕು. ಇವರು ಪರಸ್ಪರ ಹೊಂದಿಕೊಂಡು ಕೆಲಸ ಮಾಡದಿದ್ದರೆ ಶಾಲೆಯು ಅವನತಿಯಾಗುವದು ಖಚಿತ. ಒಟ್ಟಿನಿಂದ ಶಾಲೆಯ ಅಭಿಮಾನಿಗಳು ಶಾಲೆಯ ಕೆಲಸವು ಯೋಗ್ಯ ರೀತಿ ನಡೆಯುವಂತೆ ತಕ್ಕ ವಾತಾವರಣವನ್ನು ಕಲ್ಪಿಸಬೇಕಾಗಿದೆ.

"ನೋಟದ"

ವಾರ್ತೆ .

ಮಹರ್ಷಿ ಅರವಿಂದರ ಯೋಗ್ಯ ಸ್ಮಾರಕವೊಂದನ್ನು [illegible] ಮಾಡಿ, ಪಾಂಡಿಚೇರಿಯಲ್ಲಿ, ಡಾ|| ಶ್ಯಾಮಾಪ್ರಸಾದ ಮುಖರ್ಜಿಯವರ ಅಧ್ಯಕ್ಷತೆಯಲ್ಲಿ ಒಂದು ಸಭೆ ಸೇರಿದೆ. ಒಂದು ವಿಶ್ವ ವಿದ್ಯಾಲಯ ರಚನೆ ಬಗ್ಗೆ ಆಲೋಚನೆ ನಡೆದಿದೆ.

ಭಾರತದ ಲೆಜಿಸ್ಲೇಚರುಗಳಲ್ಲಿನ ೩೦೦೦ ಸ್ಥಾನಗಳಲ್ಲಿ ೨೫೦೦ ಸ್ಥಾನಗಳನ್ನು ಸೋಶಲಿಸ್ಟ್ ಪಕ್ಷದವರು ಸ್ಪರ್ಧಿಸುವರೆಂದೂ, ಸೋಶಲಿಸ್ಟ್ ಪಕ್ಷದ ತತ್ವಗಳನ್ನು ಹೋಲುವ ಮೂಲ ಧ್ಯೇಯವುಳ್ಳ ಪಕ್ಷಗಳೊಂದಿಗೆ (ಕೃಷಕ ಪ್ರಜಾಪಕ್ಷ, ಫಾರ್ವರ್ಡ್ ಬ್ಲಾಕದ ಒಂದು ವಿಭಾಗ ಮತ್ತು ಪ್ರಜಾಶಕ್ತಿ ಪಕ್ಷ) ಸೋಶಲಿಸ್ಟರು, ಚುನಾವಣೆಗಳನ್ನು ಹೋರಾಡುವ ಸಲುವಾಗಿ ಒಪ್ಪಂದಕ್ಕೆ ಬರುವರೆಂದೂ, ಅದರ ಕಮಿಟಿ ನಿಶ್ಚಯಿಸುವ ಯಾವ ಒಪ್ಪಂದವೂ ಇರಲಾರದೆಂದೂ, ಜಯಪ್ರಕಾಶ ನಾರಾಯಣರು, [illegible] ಪತ್ರಿಕಾ ಪ್ರತಿನಿಧಿಗಳ ಸಭೆಯಲ್ಲಿ ಹೇಳಿದರು.

ಭಾರತದ ಮಂತ್ರಿಮಂಡಳದಲ್ಲಿ ಗಲಿಬಿಲಿ

ಸಾರ್ವತ್ರಿಕ ಚುನಾವಣೆಗಳು ಹತ್ತಿರ ಸಮೀಪಿಸುತ್ತಿರುವಂತೆ ಭಾರತದ ರಾಜಕೀಯದಲ್ಲಿ ಹೊಸ ಹೊಸ ಸ್ಥಿತ್ಯಂತರಗಳು ಮೂಡಿಬರುತ್ತಿವೆ. ಕೇಂದ್ರದ ಮಂತ್ರಿಮಂಡಳದಲ್ಲೇ ಹೊಸ ಬಿಕ್ಕಟ್ಟು ತಲೆದೋರುತ್ತಿದೆ. ಬ್ರಿಟಿಷ್ ಮಂತ್ರಿಮಂಡಳದಲ್ಲಿ ಮಂತ್ರಿಗಳು ರಾಜಿನಾಮೆ ಕೊಟ್ಟಂತೆ ಕಳೆದ ಎರಡು ವಾರಗಳಿಂದ ಭಾರತ ಮಂತ್ರಿಮಂಡಳದಲ್ಲೂ ಇಬ್ಬರು ಮಂತ್ರಿಗಳು ತಮ್ಮ ಸರಕಾರದ ಧೋರಣೆಯನ್ನು ಟೀಕಿಸಿ ರಾಜಿನಾಮೆಕೊಟ್ಟು ಹೊರಹೋಗುವ ಹವ್ಯಾಸಕ್ಕಿಳಿದಿರುವರು.

ಕಾಯಿದೆ ಮಂತ್ರಿ ಡಾ. ಅಂಬೇಡಕರ್‌ರವರು ಬಹಿರಂಗವಾಗಿ ತಮ್ಮ ಸರಕಾರದ ಧೋರಣೆಯನ್ನೇ ಟೀಕಿಸಿರುವರು. ಸರಕಾರವು ಹರಿಜನರ ಕಡೆಗೆ ವಹಿಸಿರುವ ಧೋರಣೆ ಸಮಾಧಾನವಾಗಿಲ್ಲವೆಂಬುದೇ ಅವರ ದೂರು. ಇನ್ನು ಸಂಪರ್ಕ ಖಾತೆಯ ಮಂತ್ರಿಗಳಾದ ಶ್ರೀ. ರಾಫಿ ಅಹಮ್ಮದ್ ಕಿದ್ವಾಯಿಯವರು, ಮುಖ್ಯ ಮಂತ್ರಿಗಳು ಶ್ರೀ ವಿ. ಪಿ. ಮೆನನ್ ಮತ್ತು ಬರೋಡಾ ಮಹಾರಾಜರ ಕಡೆಗೆ ವಹಿಸಿದ ಧೋರಣೆಯನ್ನು ವಿರೋಧಿಸಿ ತಾವು ಮಂತ್ರಿಮಂಡಳದಿಂದ ಹೊರಹೋಗುವ ಸಿದ್ಧತೆಯಲ್ಲಿದ್ದಾರೆ. ಅವರು ಈಗಾಗಲೇ ರಾಜಿನಾಮೆ ಕೊಟ್ಟಿರುವರೆಂದೂ ತಿಳಿದುಬಂದಿದೆ.

ಡಾ. ಅಂಬೇಡಕರರು ಈ ತನಕ ರಾಜಿನಾಮೆ ಕೊಟ್ಟಿಲ್ಲ. ಆದರೆ ಅವರ ಧೋರಣೆಯಿಂದ ಕಾಂಗ್ರೆಸ್ ಪಕ್ಷದವರು ನೊಂದಿದ್ದು ಅವರು ಮಂತ್ರಿ ಮಂಡಳದಿಂದ ಹೊರ ಹೋಗಬೇಕೆಂದು ಅಪೇಕ್ಷಿಸುತ್ತಲಿರುವರು. ಈ ಹಕ್ಕಿಗೆಯಲ್ಲಿ ಮುಖ್ಯ ಮಂತ್ರಿ ನೆಹರೂರವರು ಯಾವ ಧೋರಣೆ ವಹಿಸಿರುವರು; ಅವರ ಪ್ರತಿಕ್ರಿಯೆಗಳೇನು ಎಂಬುದು ತಿಳಿದು ಬಂದಿಲ್ಲ.

ಡಾ|| ಅಂಬೇಡಕರರು ಮಂತ್ರಿಗಳಾಗಿ ಸ್ಥಾನ ಸ್ವೀಕರಿಸುವ ಮೊದಲು ಕಾಂಗ್ರೆಸ್ಸನ್ನು ಉಗ್ರವಾಗಿ ಟೀಕಿಸುತ್ತಿದ್ದರು. ಕಾಂಗ್ರೆಸ್ ಹರಿಜನೋದ್ಧಾರವನ್ನು ದೊಡ್ಡ ಧ್ಯೇಯವೆಂದು ಸಾರಿದೆಯಾದರೂ, ಹರಿಜನರ ನಿಜ ಉದ್ಧಾರವನ್ನು ಮಾಡಿಲ್ಲ ಎಂದು ಅವರು ಬಗಾಗ ಟೀಕಿಸಿದ್ದರು. ಅದಾದ್ದರಿಂದ ಸ್ವಾತಂತ್ರ್ಯಾನಂತರದಲ್ಲಿ ಅವರು ಕಾಂಗ್ರೆಸ್ ಮಂತ್ರಿಮಂಡಳವನ್ನು ಸೇರಿಕೊಂಡದ್ದು ದೊಡ್ಡ ಆಶ್ಚರ್ಯವೇ ಸರಿ.

ಈಗ ದೇಶವು ಅನೇಕ ಸಂಕಟಗಳನ್ನು ಎದುರಿಸುವ ಪ್ರಸಂಗ ಬಂದಿದ್ದು ಸರಕಾರವು ಅವುಗಳನ್ನು ಪೂರ್ತವಾಗಿ ಪರಿಹರಿಸಿಲ್ಲ. ಅದರಲ್ಲೂ ದಲಿತ ವರ್ಗದವರ ಸ್ಥಿತಿ ಇನ್ನೂ ಹೀನವಾಗಿದೆಯೆಂದು ಡಾ|| ಅಂಬೇಡಕರರು ಅಭಿಪ್ರಾಯಪಡುತ್ತಿವರಂತೆ. ಡಾ|| ಅಂಬೇಡಕರರು ಮಂತ್ರಿಮಂಡಳದಿಂದ ಹೊರಗಿರುವವರಾಗಿದ್ದರೆ ಸರಕಾರವನ್ನು ಸೋಲಿಸುವ ವಿಚಾರದಲ್ಲಿ ಬೇಕಾದಷ್ಟು ಟೀಕೆ ಮಾಡುವುದು ತಪ್ಪಾಗುತ್ತಿರಲಿಲ್ಲ. ಆದರೆ ಅವರು ಇದೀಗ ಮಂತ್ರಿ ಮಂಡಳದಲ್ಲೇ ಇದ್ದುಕೊಂಡು ದೇಶದ ಸೂತ್ರಗಳನ್ನು ಕೈಯಲ್ಲಿ ಹಿಡಿದುಕೊಂಡಿರುವರಾದುದರಿಂದ ಅವರು ಕಾಂಗ್ರೆಸ್ ಸರಕಾರದ ಮೇಲೆ ಹೊರಿಸುತ್ತಲಿರುವ ಅಪವಾದದಲ್ಲಿ ತಾವು ಸಹಭಾಗಿಗಳಾಗಿರುವರೆಂದು ಹೇಳಬೇಕಾಗಿದೆ. ದಲಿತರ ಪ್ರತಿನಿಧಿಗಳಾಗಿ ಮಂತ್ರಿ ಮಂಡಳದಲ್ಲಿದ್ದುಕೊಂಡು ದಲಿತರ ಉದ್ಧಾರವಾಗಲಿಲ್ಲ ಎಂದು ಅವರು ಪ್ರಲಾಪಿಸುತ್ತಿರುವುದು ತೀರಾ ಶೋಚನೀಯವಾಗಿರುತ್ತದೆ.

ಡಾ|| ಅಂಬೇಡಕರರ ಈ ವರ್ತನೆಯನ್ನು ನೋಡುವಾಗ ಅವರು ಮುಂಬರುವ ಸಾರ್ವತ್ರಿಕ ಚುನಾವಣೆಗಳಲ್ಲಿ ತಮ್ಮ ಕೈ ಮೇಲಾಗುವರೆ ಪ್ರಯತ್ನಿಸುವ ಲಕ್ಷಣಗಳು ಕಾಣುತ್ತಿವೆ. ರಾಜಿನಾಮೆಯು ಪ್ರಸಂಗವು ಚುನಾವಣೆಗೆ ಸಿದ್ಧತೆಯೆಂದು ಬೇರೆ ಹೇಳಬೇಕಾಗಿಲ್ಲ.

ಶ್ರೀ. ರಾಫಿ ಅಹಮ್ಮದ್ ಕಿದ್ವಾಯಿಯವರು ಕಾಂಗ್ರೆಸ್ ಪಕ್ಷದೊಡನೆ ಘರ್ಷಣೆಗಿಳಿದ ಸಂಗತಿ ಕಳೆದ ವರ್ಷದಿಂದ ಕೇಳಬರುತ್ತದೆ. ಅವರು ಕಾಂಗ್ರೆಸ್ಸಿನಲ್ಲಿ ಸಂಗಿಗಾರರಂತೆ ವರ್ತಿಸುತ್ತಿರುವರೆಂದೂ ತಿಳಿದಿದೆ. ಸಂಸ್ಥಾನ ಖಾತೆಯ ಕಾರ್ಯದರ್ಶಿಗಳಾದ ಶ್ರೀ ವಿ. ಪಿ. ಮೆನನ್‌ರವರನ್ನು ಒರಿಸ್ಸಾ ಪ್ರಾಂತದ ಗವರ್ನರರನ್ನಾಗಿ ನೇಮಕ ಮಾಡುವಾಗ ಮುಖ್ಯ ಮಂತ್ರಿ ನೆಹರೂರವರು ಮಂತ್ರಿ ಮಂಡಳದ ಸಮ್ಮತಿ ಪಡೆಯಲಿಲ್ಲವೇ ಈ ರಾಜಿನಾಮೆಗೆ ಕಾರಣವೆಂದು ಸುದ್ದಿ ಹಬ್ಬಿತು.

ಗವರ್ನರ ನೇಮಕದ ಪ್ರಶ್ನೆ ಬಂದಾಗ ಇಡೀ ಮಂತ್ರಿ ಮಂಡಳದ ಅನುಮತಿ ಕೇಳತಕ್ಕದೆಂಬ ಒಂದು ತಕ್ಷೀರದನ್ನು ಕಿದ್ವಾಯಿಯವರು ಎತ್ತಿ ಹಿಡಿದಿರುವರಾದರೂ ಅವರು ಶ್ರೀ. ವಿ. ಪಿ. ಮೆನನ್‌ರವರ ಮೇಲಿನ ದ್ವೇಷದಿಂದಲೇ ರಾಜಿನಾಮೆಯ ಭೀತಿ ಹಾಕಿರುವರೆಂದು ದಿಲ್ಲಿಯಲ್ಲಿ ತಿಳಿದಿದೆ. ಶ್ರೀ. ವಿ. ಪಿ. ಮೆನನ್ನರು ಗವರ್ನರ್ ಪದವೇರುವುದರೊಡನೆ ಬರೋಡದ ಮಹಾರಾಜರು ಸಿಂಹಾಸನವನ್ನು ಕಳೆದುಕೊಂಡದ್ದು ಕಿದ್ವಾಯಿಯವರಿಗೆ ದುಃಖಕರವಾಗಿ ಪರಿಣಮಿಸಿದೆಯಂತೆ. ಅಂತೂ ರಾಫಿ ಅಹಮ್ಮದ್ ಕಿದ್ವಾಯಿಯವರು ರಾಜಿನಾಮೆ ಕೊಟ್ಟ ಕಾರಣಗಳು ಅತ್ಯಂತ ಕ್ಷುಲ್ಲಕವಿದೆಯೆಂಬುದು ಸ್ಪಷ್ಟವಾಗುತ್ತದೆ. ಅವರು ಮಂತ್ರಿ ಮಂಡಳದ ಹೊರಗೆ ಹೋಗಿ ಕಾಂಗ್ರೆಸ್ ವಿರೋಧಿ ಗುಂಪನ್ನು ಬಲ ಪಡಿಸುವುದರಲ್ಲಿ ನಿರತರಾಗಬಹುದೆಂಬ ಸಂಶಯವೂ ಇದೆ.

'ನವಭಾರತ'

ಭಾರತದಲ್ಲಿ ಟೈಪ್‌ರೈಟರ್ ನಿರ್ಮಾಣ.

ಟೈಪ್‌ರೈಟರ್‌ಗಳನ್ನು ಭಾರತದಲ್ಲೇ ತಯಾರಿಸುವ ಎರಡು ನಿರ್ಮಾಣ ಸಂಸ್ಥೆಗಳು ಸದ್ಯದಲ್ಲೇ ಮುಂಬಯಿ ನಗರದಲ್ಲಿ ತಲೆಹುಟ್ಟುವವೆಂದು ಕೇಳಬರುತ್ತದೆ. ಈ ವರೆಗೆ ಟೈಪ್‌ರೈಟರ್‌ಗಳ ಬೇರೆ ಬೇರೆ ಭಾಗಗಳನ್ನು ಪರದೇಶಗಳಿಂದ ತರಿಸಿ ಭಾರತದಲ್ಲಿ ಅವುಗಳ ಜೋಡಣೆ ಮಾತ್ರ ನಡೆಯುತಿತ್ತು. ಇನ್ನು ಮುಂದೆ ಟೈಪ್‌ರೈಟರ್ ಯಂತ್ರದ ಬೇರೆ ಬೇರೆ ಭಾಗಗಳನ್ನು ಇಲ್ಲೇ ತಯಾರಿಸುವರು. ಹೊಸ ಕೈಗಾರಿಕೆಗೆ ಉತ್ತಮ ಭವಿಷ್ಯವಿದೆ ಎನ್ನುವುದಕ್ಕೆ ಅಡ್ಡಿಯಿಲ್ಲ.

ಆರೋಗ್ಯಕ್ಕಾಗಿ ಪಾದರಕ್ಷೆ.

ಪಾದರಕ್ಷೆಗಳನ್ನು ಹಾಕಿಕೊಳ್ಳದ ಕಾರಣದಿಂದಲೇ ಹಲವರು ರೋಗಪೀಡಿತರಾಗುತ್ತಾರೆಂದು ಬಳ್ಳಾರಿ ಸರಕಾರವು ಮನಗಂಡು ಜನರಿಗೆ ಅಗ್ಗದ ದರದಲ್ಲಿ ಪಾದರಕ್ಷೆಗಳನ್ನು ಒದಗಿಸುವ ಸಂಸ್ಥೆಯೊಂದನ್ನು ತೆರೆದಿದೆ. ಸಂಸ್ಥೆಯು ಕೇವಲ ಮೂರುವರೆ ರೂಪಾಯಿಗಳಿಗೆ ಒಂದು ಜೊತೆ ಪಾದರಕ್ಷೆಗಳನ್ನು ಮಾರಾಟ ಮಾಡುತ್ತಿದೆ.

ಪ್ರಾಣಿಗಳ ಭಂಡಾರ.

ಪುಸ್ತಕ ಭಂಡಾರಗಳಿಂದ ಓದುಗರು ತಮಗೆ ಬೇಕಾದ ಪುಸ್ತಕಗಳನ್ನು ಆರಿಸಿ ತೆಗೆದುಕೊಂಡು ಹೋಗುವಂತೆ ಅಮೇರಿಕದ ಒಂದೆಡೆಯಲ್ಲಿ ಪ್ರಾಣಿಗಳ ಸಂಗ್ರಹ ಏರ್ಪಟ್ಟಿದೆ.

ಈ ಭಂಡಾರದಲ್ಲಿರುವ ವಿವಿಧ ಪ್ರಾಣಿಗಳನ್ನು ಮಕ್ಕಳು ತಮ್ಮ ತಮ್ಮ ಮನೆಗಳಿಗೆ ತೆಗೆದುಕೊಂಡು ಹೋಗಿ ಅವುಗಳೊಡನೆ ಆಟವಾಡಬಹುದು.

ಒಬ್ಬೊಬ್ಬರು ಒಂದೊಂದು ಪ್ರಾಣಿಗಳನ್ನು ೧೪ ದಿವಸಗಳ ತನಕ ತಮ್ಮ ಮನೆಯಲ್ಲಿಟ್ಟುಕೊಳ್ಳಬಹುದು.

ಸಹಾಯ ಮಾಡದ ಸರಕಾರಕ್ಕೆ ತೆರಿಗೆ ಕೊಡಬಾರದು.

ಜರ್ಮನಿಯ ಸುಪ್ರಸಿದ್ಧ ವ್ಯಂಗ್ಯ ಚಿತ್ರಗಾರ ಜಬ್ಲ್ಯು ಬಾಗ್ನಿಯೊನ್ ಸರಕಾರದ ತೆರಿಗೆಯ ಬಾಧೆಯಿಂದ ತನ್ನ ಕೆಲಸವನ್ನೆ ನಿಲ್ಲಿಸಿರುವನು. ತಾನು ಆದಾಯ ತೆರಿಗೆ ಕೊಡುವುದಿಲ್ಲವೆಂದೂ ಅವನು ಹೇಳುತ್ತಾನೆ.

ಯಾಕೆ ತೆರಿಗೆ ಕೊಡುವುದಿಲ್ಲವೆಂದು ಕೇಳಿದಾಗ 'ನಾನು ಬಡವನಾಗಿದ್ದಾಗ ಸರಕಾರವು ನನಗೆ ಸಹಾಯ ಮಾಡಲಿಲ್ಲ. ಈಗ ನಾನು ಒಳ್ಳೆ ಸ್ಥಿತಿಯಲ್ಲಿರುವಾಗ ತೆರಿಗೆ ವಸೂಲು ಮಾಡುತ್ತಿದೆ. ಕೆಲಸ ಮಾಡದಿದ್ದರೂ ಚಿಂತಿಲ್ಲ; ತೆರಿಗೆ ಕೊಡುವುದಿಲ್ಲ' ಎಂದು ಅವನು ಹೇಳುತ್ತಾನೆ.

ಕೊರಿಯಾ ಯುದ್ಧ ನಿಲ್ಲಿಸುವ ಹೊಸ ಉಪಾಯ

ಸಂಯುಕ್ತ ಅಮೇರಿಕ ಕಾಂಗ್ರೆಸ್ಸಿನ ಅಣು ಬಾಂಬು ಪ್ರತಿನಿಧಿ ವಿ. ಅಲ್ಬರ್ಟ್ ಗೋರ್‌ರವರು ಕೊರಿಯಾ ಯುದ್ಧ ನಿಲ್ಲಿಸುವ ಬಗ್ಗೆ ಒಂದು ವಿಚಿತ್ರ ಸಲಹೆಯನ್ನು ಮಂಡಿಸಿರುವರು. ಕೊರಿಯಾದಲ್ಲಿನ ೩೮ನೆಯ ರೇಖೆಯ ಪ್ರದೇಶವನ್ನು ರೇಡಿಯೋ ಆಕ್ಟಿವ್ ವಿಧಾನದಿಂದ ಮಲಿನಗೊಳಿಸಿ ಅದನ್ನು ಪ್ರತಿಬಂಧಕವನ್ನಾಗಿ ಮಾಡಿಬಿಟ್ಟರೆ ಚೀನಾ ದಳಗಳು ಅದನ್ನು ದಾಟಿ ದಕ್ಷಿಣ ಗೋಡೆಗೆ ಹೋಗಲಾರವು ಎಂಬುದು ಮಿ. ಗೋರ್‌ರವರ ಸಲಹೆಯಾಗಿದೆ. ಕೊರಿಯಾದಲ್ಲಿ ಚೀನಿಯರನ್ನು ತಡೆಯಲು ಇದು ಹೊಸ ಉಪಾಯವೇನೊ ನಿಜ. ಆದರೆ ಅದರಿಂದ ಯುದ್ಧ ನಿಲ್ಲುವುದೇ? ಈ ತರದ ಯೋಜನೆಯಿಂದ ಯುದ್ಧದ ಅಮಾನುಷ ಕೊರಿಯಾದ ಜನರಿಗೆ ದುಃಖ ಹೊರಗೆ ಹಬ್ಬುವಂತಾಗದೇ?

ಪ್ರಕಟಣೆ.

ಇದರಿಂದ ಸಕಲ ಜನರಿಗೂ ತಿಳಿಯಪಡಿಸುವುದೇನೆಂದರೆ:—

ಪೊನ್ನಂಪೇಟೆ ತಾಲೂಕು ಅರುವತ್ತೊಕ್ಲು ಗ್ರಾಮದಲ್ಲಿರುವ ನಿಂಗೌಡನ ಮಗನಾದ ವೆಂಕಟಪ್ಪನವರು ಅಂದಾಜು 350 ಒಟ್ಟು ಭೂಮಿ, ಬಾಣೆ, ತೋಟ ಮತ್ತು ಇತರ ಸ್ಥಿರ ಆಸ್ತಿಯ ಸ್ವಾಧೀನದಲ್ಲಿರುತ್ತಾರೆ. ಸದರಿ ಆಸ್ತಿಗಳು ಪಿತ್ರಾರ್ಜಿತದ ಆಸ್ತಿಗಳಾಗಿರುತ್ತವೆ. ಸದರಿ ವೆಂಕಟಪ್ಪನವರಿಗೆ 8 ಗಂಡು ಮಕ್ಕಳು, 3 ಹೆಣ್ಣು ಮಕ್ಕಳು, ಇಬ್ಬರು ಹೆಂಡಿರು, ಮೊಮ್ಮಕ್ಕಳು ಇರುತ್ತಾರೆ. ಇವರೆಲ್ಲರಿಗೂ ಸದರಿ ಆಸ್ತಿಗಳಲ್ಲಿ ಹಕ್ಕಿದೆ. ಸದರಿ ವೆಂಕಟಪ್ಪನವರು ಕುಡಿತದವರಾಗಿಯೂ, ಇತರ ದುರ್ವ್ಯಸನಿಗಳಾಗಿಯೂ ತುಂಬಾ ಸಾಲ ಮಾಡಿರುತ್ತಾರೆ; ಮಾಡುತ್ತಲೂ ಇದ್ದಾರೆ. ಈ ಸಾಲಗಳ ಹೆಸರಿನಲ್ಲೂ, ಇನ್ನು ಸದರಿ ಕೆಟ್ಟ ಉದ್ದೇಶಗಳಿಗಾಗಿ ಹಣ ಪಡೆಯುವ ಉದ್ದೇಶಕ್ಕಾಗಿಯೂ ಸದರಿ ಆಸ್ತಿಗಳನ್ನು ಗಿರ್ವಿ, ಭೋಗ್ಯ ಅಥವಾ ಮಾರಾಟ ಮಾಡುವ ಪ್ರಯತ್ನದಲ್ಲಿರುತ್ತಾರೆಂದು ತಿಳಿದು ಬಂದಿದೆ. ಅವರ ವ್ಯವಹಾರಿಕ ಸಾಲಗಳನ್ನು ನಿವಾರಿಸುವ ಮತ್ತು ಕುಟುಂಬದ ಉದ್ದೇಶದಿಂದ ಸದರಿ ಆಸ್ತಿಗಳನ್ನು ಪಾಲುಮಾಡಲು ಕೋರಿ ನಾನು ಸದರಿ ವೆಂಕಟಪ್ಪನವರಿಂದ ಸದ್ರಿ ಆಸ್ತಿಗಳನ್ನು ಯಾರೂ ಪಡೆದುಕೊಳ್ಳಕೂಡದೆಂದು ಈ ಮೂಲಕ ಎಚ್ಚರಿಸಿದೆ. ಒಂದು ವೇಳೆ ಹಾಗೆ ಅವರಿಂದ ಯಾರಾದರೂ ಸದರಿ ಆಸ್ತಿಗಳ ಗಿರ್ವಿ ಆಗಲಿ, ಭೋಗ್ಯದಿಂದಾಗಲಿ ಹಣ ಕೊಟ್ಟದ್ದೇ ಆದರೆ ಅಥವಾ ಸದರಿ ಆಸ್ತಿಗಳನ್ನು ಕೊಂಡದ್ದೇ ಆದರೆ ಹಾಗೆ ಹಣಕೊಟ್ಟವರಿಗೆ ಸದ್ರಿ ಆಸ್ತಿಗಳಿಗೆ ಯಾವ ಹಕ್ಕೂ ಹೊರತು ಇಲ್ಲವೆಂದು ಈ ಮೂಲಕ ತಿಳಿಸಲಾಗಿದೆ.

ನಿಂಗೌಡನ ಮಗನಾದ ವೆಂಕಟಪ್ಪನವರ ಮಗ ವೆಂಕಟೇಶ್ವರನವರ ಸಹಿ ಮಾರ್ಕು ಇವನ್ನು (ತನ್ನ ಪರವಾಗಿಯೂ ಮತ್ತು ತನ್ನ ಮೈನರ್ ಮಕ್ಕಳ ಪರವಾಗಿಯೂ.)

8-1
1-5-1951

ಮಗು.

(ಲೇಖಕಿ:– ಕುಮಾರಿ ಪದ್ಮಾ, ಉಡುಪಿ)

ಓ! ನನ್ನ ಮಗುವೆ, ನೀನು ಮಲಗಿ ನಿದ್ದೆ ಹೋಗಿದ್ದೀಯೋ. ಸುಂದರವಾದ, ನಿನ್ನ ಎಳೆಯ ಹಸ್ತವೊಂದು, ದಿಂಬಾಗಿ, ತಲೆಯಡಿಗೆ ಬಿದ್ದುಕೊಂಡಿದೆ ಕಿಟಿಕಿಯಿಂದ ಬೀಸುವ, ತಂಗಾಳಿಗೆ ನಿನ್ನ ಮುದ್ದು ಮುಂಗುರುಳುಗಳು ಹಾರುತ್ತಿವೆ. ಎಂತಹ ಶಾಂತಿ, ತೃಪ್ತಿಯ ನಿದ್ರೆಯಿದು! ಆದರೆ, ನಾನೆಂತು ಮಲಗಲಿ? ನನ್ನ ಹೃದಯವು ಕಸಿವಿಸಿಗೊಳ್ಳುತ್ತಿದೆ. ನನ್ನ ಕಾರ್ಯ್ಯಾನದ ಅಧಿಕಾರವನ್ನು ನಿನ್ನೊಡನೆ ಹೇಗೆ ತೋರಲಿಚ್ಛಿಸಿದೆ? ನಿಜ, ನಿನ್ನಲ್ಲಿ ನಾನು ತಪ್ಪು ಮಾಡಿದೆ ಆಫೀಸಿನಿಂದ ಮನೆಗೆ ಬಾರದ ನಿನ್ನ ತಂದೆಗಾಗಿ, ಕಾಯುತ್ತಾ, ಕೈಯಲ್ಲೊಂದು ಪುಸ್ತಕವನ್ನು ಹಿಡಿದ, ಕಿಟಕಿಯ ಬಳಿ ಕಳಿತಿದ್ದೆ. ಥಟ್ಟನೆ, ವಿಚಾರ ಲಹರಿಯೊಂದು ಮನಸ್ಸನ್ನು ಹೊಕ್ಕು, ನನ್ನಂತರಂಗವನ್ನು ಅಲ್ಲೋಲಕಲ್ಲೋಲವಾಗಿರಿಸಿತು. ಅಪರಾಧಿಯಂತೆ ನಾಚಿಕೊಂಡ, ಇಲ್ಲಿ ನಿನ್ನ ಹಾಸಿಗೆಯ ಬಳಿ ನಿಂತಿರುವೆ.

ನಾನು ಯೋಚಿಸುತ್ತಿರುವೆ; ಮಗೂ, ನಿನ್ನನ್ನು ನಡೆಸಿಕೊಂಡು ಬಂದ ನನ್ನರೀತಿ ಯಾವುದು? ಬೆಳಗ್ಗೆ ಎದ್ದೊಡನೆಯೇ ಅಳಲನ್ನು ಹಿಡಿಯುವ ಆತುರದಿಂದ ಕೋಟೆಕ್ಕೆ ಓಡುವ ನಿನ್ನನ್ನು ಕಂಡು, ನನಗೆ ಕೋಪ ಉಂಟಾಗುತ್ತಿತ್ತು. ದಾಸಿಯನ್ನು ಬೆನ್ನ ಹಿಂದೆಯೇ ಕಳುಹಿಸಿ, ನಿನ್ನನ್ನು ಕರೆತರಿಸಿ, ಬೆಳಗ್ಗಿನ ಸಮಯದಲ್ಲಿ, ಓದಿದರೆ, ಚೆನ್ನಾಗಿ ಮನಸ್ಸಿನಲ್ಲಿ ಉಳಿಯುವುದೆಂದು ಪಾಠ ಪುಸ್ತಕಗಳನ್ನು ಕೈಯಲ್ಲಿ ಕೊಟ್ಟು, ಕುಳ್ಳಿರಿಸಿದ್ದೇನೆ.

ನಿನ್ನನ್ನು ಆಗಾಗ ಜರಿಯುತ್ತಿದ್ದೆ. ಏಕೆಂದರೆ, ನಿನ್ನ ವಸ್ತುಗಳೆಲ್ಲಾ, ಚೆಲ್ಲಾಪಿಲ್ಲಿಯಾಗಿ, ನೆಲದ ಮೇಲೆ ಬಿದ್ದುಕೊಂಡಿರುತ್ತವೆ. ಒಂದು ಶಿಸ್ತಿಲ್ಲ; ಒಂದು ಓರಣವಿಲ್ಲ; ದೊಡ್ಡ ಆಫೀಸರೊಬ್ಬರ ಮನೆಯಲ್ಲಿ, ಅಲ್ಲಲ್ಲಿ, ಕಸದಂತೆ ವಸ್ತುಗಳು ಹರಡಿಕೊಂಡಿರುವುದು, ನೋಡುವವರಿಗೆ ಚೆನ್ನಾಗಿರುವುದಿಲ್ಲವೆಂದು ನನ್ನ ಭಾವನೆಯಾಗಿತ್ತು, ನಿನ್ನನ್ನು ಆಗಾಗ ಹಂಗಿಸುತ್ತಿದ್ದೆ. ನಿನ್ನ ಬಟ್ಟೆಬರೆಗಳು ಮಲಿನವಾಗಿರುತಿದ್ದುವು. ಶಾಲೆಗೆ ಹೋಗುವಾಗ ಶರ್ಟಿಗೆ ಗುಂಡಿಯನ್ನು ಸಿಕ್ಕಿಸಿಕೊಳ್ಳದೆಯೇ ಹೋಗಿಬಿಡುತ್ತಿದ್ದೆ. 'ದರಿದ್ರ'ನೆಂದು ನಿನ್ನನ್ನು ಬಯ್ದಿರುವೆ. ಸಾಯಂಕಾಲ ನಾನು ನೆರೆಮನೆಯ ಗೆಳತಿಯರೊಡನೆ ಹರಟೆ ಕೊಚ್ಚಿ, ಹಿಂತಿರುಗುವಾಗ, ನಿನ್ನ ಗೆಳೆಯರೊಡನೆ, ಧೂಳಿನಲ್ಲಿ, ಕಲ್ಲಿನ ಮನೆಗಳನ್ನು ಕಟ್ಟುತ್ತಿರುತ್ತಿ. ಅದಕ್ಕೆ ಸಿಲ್ಲಿಕರೆದುರಿಗೆ, ನಿನ್ನನ್ನು ದರದರನೆ ಎಳೆದು ತಂದ, ಬಾಗಿಲಿಗೆ ಮೇಲಿನಿಂದ ಚಿಲಕವಿಕ್ಕಿ ಬಿಟ್ಟಿರುತ್ತೇನೆ. ಮನೆಯೊಳಗೆ ಮರದ ಗಾಡಿಯಿದೆ, ಉಕ್ಕಿನ ಚಿಕ್ಕ ರೈಲು ಬಂಡಿಯಿದೆ; ಬೆಳ್ಳಿಯ ರಥವಿದೆ; ಊದುವ ಶಂಖವಿದೆ; ಆದರೂ ಬಡ ಹುಡುಗರೊಡನೆ, ಬಯಲಲ್ಲಿ ಆಡುವುದೆಂದರೇನೆಂದು ಬೆನ್ನಿಗೆ ಒಂದೇಟು ಕೊಟ್ಟಿರುವೆ. ಊಟಕ್ಕೆ ಕುಳಿತಿರುವಾಗಲೂ, ನನ್ನ ಧ್ವನಿಯನ್ನು ತಾರಕಕ್ಕೇರಿಸಿ ಕೂಗಿದ್ದೇನೆ. ಬಟ್ಟಲ ಸುತ್ತಲೆಲ್ಲಾ ಅನ್ನ ಚೆಲ್ಲುತ್ತದೆ. ಒಮ್ಮೊಮ್ಮೆ ಹಾಲು, ಪೂರಾ ಚೆಲ್ಲುವುದು. ಮಗುವೊಮ್ಮೆ ಪದಾರ್ಥಗಳನ್ನು ಮುಟ್ಟದೆ, ಎದ್ದುಬಿಡುವೆ. ಒಂದೊಂದು ಸಲ ಅರ್ಧ ಘಂಟೆಯಾದರೂ ನಿನ್ನ ಊಟ ಮುಗಿಯುವುದಿಲ್ಲ.

ಚಳಿವನ್ನೆತ್ತಿ, ನಾನು ಮಾರ್ಕೆಟಿಗೆ ತರಕಾರಿ ತರಲು ಹೊರಟಾಗ ಚಾವಡಿಯಿಂದಲೇ ನೀನು ಕರೆದು ಹೇಳಿದೆ.

'ಬೇಗ ಬಾ ಅಮ್ಮಾ, ಬಿಸಿಲು ಸುಡುತ್ತದೆ'

'ನನಗೆ ಗೊತ್ತು; ನಿನ್ನ ಕೆಲಸವನ್ನು ನೋಡಿಕೋ' ಎನ್ನುತ್ತಾ ನಾನು ಹೋಗಿರುವೆ.

ಅಯ್ಯೋ ಮಗುವೆ, ನನಗೆ ನಿನ್ನ ಮೇಲೆ ಪ್ರೀತಿಯಿಲ್ಲವೆನ್ನುವಿಯೊ? ಇದೆ. ಅಪಾರ ಪ್ರೀತಿಯಿದೆ. ಆದರೆ, ನಿನ್ನ ಮನಸ್ಸು ಶಕ್ತಿಗಳಿಗಿಂತ, ಹಿರಿದಾದುದನ್ನು ನಾನು ಬಯಸಿದೆ. ಏಕೆಂದರೆ, ನಾನು ಹಿರಿಯಳಿದ್ದೆ. ನನ್ನ ವಯಸ್ಸಿನ ಅಳತೆ ಕೋಲಿನಿಂದ ನಿನ್ನನ್ನು ಅಳೆಯಲು ಪ್ರಯತ್ನಪಟ್ಟೆ

ಇಂದು ಬೆಳಗ್ಗೆ ನಾನು ದಿಗ್ಭ್ರಮೆ ಹೆಚ್ಚುತ್ತಿದ್ದೆ. ನೀನು ಹಲವು ಬಾರಿ, ಬಳಿಯಿಂದ ಅತ್ತಿತ್ತ ಸುತ್ತಿಡಹತ್ತಿದೆ. ನಿನ್ನ ಇಂಗಿತದ ಅರ್ಥ ನನಗೆ ತಿಳಿದಗೂ ಬಿರುಸಾಗಿಯೇ ಕೇಳಿದೆ,

'ಏಕೆ, ತಿರುಗುತ್ತಿರುವೆ?'

ನೀನು ಓಡಿ ಬಂದು, ನನಗೆ ತೆಕ್ಕೆಬಿದ್ದೆ. ನಿನ್ನ ಮೃದುವಾದ ಹಸ್ತಗಳು, ಕುತ್ತಿಗೆಯನ್ನು ಬಳಸಿದಾಗ ನಾನು ಅಸಮಾಧಾನ, ಅಶಾಂತಿ ಕ್ಷೋಭೆಗಳನ್ನು ಸಂಪೂರ್ಣವಾಗಿ ಕಳೆದುಕೊಂಡೆ. ನೀನು ಬಹಳ ಹೊತ್ತು ನಿಲ್ಲಲಿಲ್ಲ. ಮಗೂ, ಒಂದೇ ಓಟಕ್ಕೆ ಪುನಃ ಕಣ್ಣಿನಿಂದ ಮರೆಯಾದೆ.

ಮಗುವಿನ ಮನಸು ಎಷ್ಟು ನಿರ್ಮಲ, ಎಷ್ಟು ನಿಷ್ಕಲಂಕ, ನಿಷ್ಕಪಟ ಎನ್ನುವುದಕ್ಕೆ ಇದಕ್ಕಿಂತ ಬೇರೆ ಪ್ರಮಾಣ ಬೇಕೆ? ನಿನ್ನ ಮಮತೆ ಸಮುದ್ರದಂತೆ ಅಪಾರವಿದೆ. ಎಷ್ಟು ಬೇಗ ಕೋಪವನ್ನು ಹೀರಿ, ಅದೇ ಪ್ರಮಾಣದಲ್ಲಿ ಕೋಪವನ್ನು ಬಿಟ್ಟು ಕೊಡುವುದೆಂತೋ, ಅಂತೆಯೇ ನಿನ್ನ ಮನಸ್ಸು, ಹಿರಿಯರಾಡಿದ ಕೆಲವು ಕಟುನುಡಿಗಳಿಂದ ನೊಂದರೂ, ಮರುಕ್ಷಣವೇ ಅದನ್ನು ಮರೆತು ಬಿಡುವುದು.

ಬುದ್ಧ ದೇವರಿಗೆ, ಸಾಗರದ ಜಲಬಿಂದುಗಳನ್ನು ಲೆಕ್ಕಮಾಡುವ ಗಣಿತ ಬರುತ್ತಿತ್ತಂತೆ. ಅಷ್ಟೇ ಅಪಾರ, ಆಳವಾದ ನಿನ್ನ ಮಮತೆಯ, ಮೃದು ಮನಸ್ಸನ್ನು ಅಳೆದುಕೊಳ್ಳುವ, ಗಣಿತವನ್ನು ನಾನಿಂದು ಅರಿತುಕೊಂಡೆ. ಮಗೂ, ಇಂದು ನಾನು ಧನ್ಯಳಾದೆ.

ಇಂದಿನಿಂದ ನಿನ್ನನ್ನು ಬಯ್ಯಲಾರೆ ನಿನ್ನ ಮೇಲೆ ಕೈಯೆತ್ತಲಾರೆ; ಮೋಟಾರು ಬಂಡಿಗಳಿಂದ, ಕುದುರೆ ಗಾಡಿಗಳಿಂದ, ನಿರ್ಜೀವ ಆಟದ ವಸ್ತುಗಳಿಂದ ನಿನ್ನ ಉಲ್ಲಸಿತ ಚಟುವಟಿಕೆಗಳಿಗೆ ತಡೆಯನ್ನೊಡ್ಡುವುದಿಲ್ಲ. ದರಿದ್ರ, ಶ್ರೀಮಂತರೆಂಬ ಹೀನ ವಿಚಾರವನ್ನು, ನಿನಗೆ ಕಲಿಸಿಕೊಡಲು ಯತ್ನಿಸುವುದಿಲ್ಲ. ನೀನು ಆಡು ಮಗೂ; ಬಯಲಿನಲ್ಲಿ, ಗೆಳೆಯರೊಟ್ಟಿಗೆ ಚೆಂಡು ಬುಗುರಿಯನ್ನಾಡು, ಗೋಲಿ ಚಿಣ್ಣಿಯನ್ನಾಡು; ಶಿಸ್ತು, ಓರಣಗಳ ಕಟ್ಟಳೆಯಲ್ಲಿ ನಿನ್ನನ್ನು ಬಿಗಿಯುವುದಿಲ್ಲ. ಸದಾ ನೆಲದಲ್ಲಿ ಚೆಲ್ಲಾಪಿಲ್ಲಿಯಾಗಿ ಬಿದ್ದುಕೊಳ್ಳುವ, ನಿನ್ನ ಆಟಿಕೆಗಳು ನನ್ನ ಕಣ್ಣುಗಳಿಗೆ ಹಬ್ಬವನ್ನುಂಟುಮಾಡಲಿ.

ಇಂದೆನ್ನ ಜ್ಞಾನ ಚಕ್ಷುಗಳು ತೆರೆದುವು. ಕಣ್ಣಿದ್ದು ಕುರುಡಿಯಾದ ನಾನಿಂದು, ನೂತನ ಸುಂದರ ಬೆಳಕನ್ನು ಕಾಣುತ್ತಿದೆ. ಮಕ್ಕಳಿಗೂ ಸ್ವಾತಂತ್ರ್ಯ ಬೇಕು. ಅವರಿಗೂ, ತಮ್ಮದೇ ಆದೊಂದು ನಿಷ್ಕಪಟ, ಅಭಿಮಾನ, ಆತ್ಮ ಪ್ರತಿಷ್ಠೆಗಳು ಇರುತ್ತವೆ. ಈ ಸುಂದರ ಹಕ್ಕಿಗಳನ್ನು ಶಿಸ್ತು, ಓರಣ, ಜಾಣತನ ಎಂದು ಬಂಧಿಸಲೆತ್ನಿಸುವುದು ನಮ್ಮ ಅಜ್ಞಾನ. ಸ್ವಾತಂತ್ರ್ಯದ ಸದುಪಯೋಗವನ್ನು ತಿಳಿಮಾತುಗಳಲ್ಲಿ, ಸರಳ ನಡೆಗಳಲ್ಲಿ ತಿಳಿಸಲೆತ್ನಿಸಬೇಕೇ ವಿನಹ ಸ್ವಾತಂತ್ರ್ಯವನ್ನೇ ಕಸಿದುಕೊಳ್ಳುವುದು ತಿಳಿದವರ ರೀತಿಯಲ್ಲ; ಜೀವನದಲ್ಲಿ ಆದೂ ಮಕ್ಕಳೊಡಗೂಡಿ ಇರುವಲ್ಲಿ, ಸಹನೆಬೇಕು; ತಾಳ್ಮೆಬೇಕು.

ಇಂದು, ನೀನೆನಗೆ ಕಲಿಸಿದ ಪಾಠದಿಂದ ಲಜ್ಜಿತೆಯಾಗಿ, ನಿನ್ನ ಚರಣಗಳಿಗೆ, ವಂದಿಸಬೇಕೆಂದು ಎಣಿಸುತ್ತಿರುವೆ. ಮಗೂ, ದಿವ್ಯ ತತ್ವದ, ಸತ್ಯ ಸಂಗತಿ ಇದ. 'ಮಕ್ಕಳು ಯಾವಾಗಲೂ ಮಕ್ಕಳೇ'.

'ಪ್ರಭಾತ'

ನೋಟೀಸ್.

ವೀರಾಜಪೇಟೆ ತಾಲೂಕು ಅರಮೇರಿ ಗ್ರಾಮದ ಬಾಳೇಕುಟ್ಟಿರ ಮಂದಣ್ಣನವರ ಮಗ ಮುತ್ತಣ್ಣನು ತಿಳಿಯಪಡಿಸುವುದೇನೆಂದರೆ:—

ನನ್ನ ತಮ್ಮನಾದ ಮಾಚಯ್ಯನು ನಮ್ಮೆಲ್ಲರಿಗೂ ಹಕ್ಕಾಗಿ ನಮ್ಮಗಳ ಸ್ವಾಧೀನದಲ್ಲಿರುವ ಕುಟುಂಬದ ಅವಿಭಕ್ತ ಸೊತ್ತುಗಳನ್ನು ಗಿರ್ವಿ ವಗೈರೆ ಪರಾಧೀನ ಮಾಡುವ ಅಭಿಪ್ರಾಯ ಮತ್ತು ಏರ್ಪಾಡಿನಲ್ಲಿರುವುದಾಗಿ ತಿಳಿಯಬರುತ್ತದೆ.

ಸದರಿ ಮಾಚಯ್ಯನವರಿಗೆ ಕುಟುಂಬದ ಯಾವ ಸ್ವತ್ತನ್ನೂ ಯಾವ ವಿಧದಲ್ಲೂ ಪರಾಧೀನ ಮಾಡುವ ಆವಶ್ಯಕತೆ ಇರುವುದಿಲ್ಲ. ಅಲ್ಲದೆ ಅವರು ಈ ಮೊದಲು ನನಗೆ ತಿಳಿಯದೆ ಕುಟುಂಬದ ಅವಶ್ಯಕತೆ ಏನೂ ಇಲ್ಲದೆ ಪರಾಧೀನ ಮಾಡಿದ ಸ್ವತ್ತು ಈಗ ಜಂಟಿ ಕುಟುಂಬದ ಸೊತ್ತುಗಳ ಉತ್ಪತ್ತಿಯಿಂದ ಹಿಂದಕ್ಕೆ ಅವರ ಹೆಸರಿನಲ್ಲೇ ಪಡೆದುದನ್ನೂ ಸಹ ಅವರಿಗೆ ಯಾವ ವಿಧದಲ್ಲೂ ಪರಾಧೀನ ಮಾಡುವ ಹಕ್ಕು ಮತ್ತು ಅವಶ್ಯಕತೆ ಇರುವುದಿಲ್ಲ.

ಅವರಿಂದ ಯಾರಾದರೂ ಗಿರ್ವಿ, ಭೋಗ್ಯ, ಕ್ರಯಕ್ಕೆ ಚರ ಮತ್ತು ಸ್ಥಿರ ಸ್ವತ್ತುಗಳನ್ನು ಪಡೆದು ಕೊಂಡಲ್ಲಿ ಅವರಿಗೆ ಯಾವ ಹಕ್ಕೂ ಸಿಗಲಾರದು ಎಂದು ಈ ಮೂಲಕ ತಿಳಿಸಲಾಗಿದೆ.

ಬಿ. ಮುತ್ತಣ್ಣ

4–3

ಶ್ರೀ ಕೆ. ಯಂ. ಮೊಗಪ್ಪನವರು,
"ಕೊಡಗು" ಏಜೆಂಟರು,
ಸೋಮವಾರಪೇಟೆ.

ಕೊಡಗು ಪ್ರಾಂತೀಕ ಸಹಕಾರಿ, ಮಾರ್ಕೆಟಿಂಗ್, ಫೆಡರೇಷನ್ ಲಿಮಿಟೆಡ್., ವೀರಾಜಪೇಟೆ.

ನಮ್ಮಲ್ಲಿ ಕೋವಿಗಳು, ತೋಟಗಳು ಮತ್ತು ಎಲ್ಲಾ ತರಹದ ವ್ಯವಸಾಯದ ಹತ್ಯಾರುಗಳು ದೊರೆಯುತ್ತವೆ.

1. 32 ಪಿಸ್ತೂಲುಗಳು (Pistols) ಕ್ರಯ ರೂ. 162 ರಿಂದ 245ರ ವರೆಗೆ.
2. 12ನೇ ನಂಬರಿನ ಒಂಟಿ ಹೊಳವಿನ ಕೋವಿ ಕ್ರಯ ರೂ. 320–0–0
3. 12ನೇ ನಂಬರಿನ ಜೋಡು ಹೊಳವಿನ ಕೋವಿ (Webley & Scott)
4. 12ನೇ ನಂಬರಿನ ಜೋಡು ಹೊಳವಿನ ಕೋವಿ (Spanish make)
5. .32 ಪಿಸ್ತೂಲು ಮತ್ತು ರಿವಾಲ್ವರುಗಳ ತೋಟಗಳೂ ಸಹ ದೊರೆಯುತ್ತವೆ.
6. ಕಾಫಿ ಮತ್ತು ಕಿತ್ತಳೆ ಗಿಡಗಳಿಗೆ ಸ್ಪ್ರೇ ಮಾಡುವ ಪಂಪುಗಳು (Spraying Pumps)
7. $\frac{3}{4}$" $\frac{5}{8}$" $\frac{1}{2}$" $\frac{3}{8}$" $\frac{1}{4}$" ಕಬ್ಬಿಣದ ಸಲಾಕೆಗಳು.

ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

(ಅವಶ್ಯವಿರುವ ಕೋವಿಗಳಿಗೂ, ತೋಟಗಳಿಗೂ ಜಿಲ್ಲಾ ಮೇಜಿಸ್ಟ್ರೇಟರಿಂದ ವಿಶೇಷ ಪರ್ಮಿಟು "Special permit" ಪಡೆದಾಗ ಮಾತ್ರ ದೊರೆಯುವದು)

ಎಂ. ಎಸ್. ಸೋಮಯ್ಯ,
ಗೌರವ ಕಾರ್ಯದರ್ಶಿ.

62–32

(೩ನೇ ಪುಟದಿಂದ ಸಾಗಿದ್ದು)

ಯಬೇಕು. ಆದಕ್ಕಾಗಿ ಮನನ ಮಾಡಬೇಕು. ಯೋಚಿಸಬೇಕು. ಅದು ಸಾಧ್ಯವಿಲ್ಲದಿದ್ದರೆ ಮಾಡುವದನ್ನೆಲ್ಲಾ ದೇವರ ಹೆಸರಿನಲ್ಲಿ "ಕೃಷ್ಣಾರ್ಪಣಮಸ್ತು" ಎಂದು ಮಾಡಬೇಕು. ಅದೂ ಸಾಧ್ಯವಿಲ್ಲದಿದ್ದರೆ "ಸರ್ವ ಧರ್ಮಾ ಪರಿತ್ಯಜ್ಯ—ಮಾಮೇಕಂ ಶರಣಂ ವ್ರಜ" ಎಂಬಂತೆ ವರ್ತಿಸಬೇಕು. ಇದು ಗೀತೆಯ ಜೀವಾಳ. ತಮ್ಮ ದೈನಂದಿನ ಕೆಲಸಗಳನ್ನು ಧರ್ಮ ದೃಷ್ಟಿಯಿಂದ ಮಾಡಿಕೊಂಡು ಭಕ್ತಿಯಿಂದ ಒಂದೆರಡು ಬಾರಿ ಭಗವಂತನನ್ನು ನೆನೆದರೆ ಅದೇ ಸಾಕು. ಸತತ ಭಗವಂತನೊಡನೆ ಸುತ್ತುವ ನಾರದನಿಗಿಂತಲೂ ದಿನಕ್ಕೆ ಒಂದೆರಡು ಬಾರಿ ನಾರಾಯಣನನ್ನು ನೆನೆದು ಜೀವಿಸುವ ರೈತನು ಹೆಚ್ಚಿನ ಭಕ್ತನೆಂದು ತೋರಿಸಿದ ಕಥೆ ಎಲ್ಲರಿಗೂ ತಿಳಿದುದು. ಅದ್ದರಿಂದ ಯಾರು ನನ್ನನ್ನು ಸತತ ಚಿಂತಿಸುವರೋ ಅಂಥಾವರ ಯೋಗಕ್ಷೇಮದ ಭಾರವನ್ನು ನಾನು ಹೊತ್ತುಕೊಳ್ಳುವೆನೆಂದು ಭಗವಂತನು ಹೇಳಿರುವನು. ಅದ್ದರಿಂದ

"ಯತ್ ಕರೋಷಿ ಯದ್ ಅಶ್ನಾಸಿ
ಯಜ್ ಜುಹೋಷಿ ದದಾಸಿ ಯತ್
ಯತ್ ತಪಸ್ಯಾಸಿ ಕೌಂತೇಯ
ತತ್ ಕುರುಷ್ವ ಮದರ್ಪಣಮ್"

ಎಂದು ಹೇಳಿದಂತೆ ನಾವು ಮಾಡುವ ಸರ್ವ ಕೆಲಸವನ್ನೂ ಭಗವಂತನಿಗೆಂದು ಅರ್ಪಿಸಿ ಮಾಡುವದು ಉತ್ತಮ ಮಾರ್ಗ.

"ಬ್ರಹ್ಮಣ್ಯಾ ಧಾಯ ಕರ್ಮಾಣಿ
ಸಂಗಂ ತ್ಯಕ್ತ್ವ ಕರೋತಿ ಯಾ
ಲಿಪ್ಯತೆ ನಾ ಸಾ ಪಾಪೇನ
ಪದ್ಮ ಪತ್ರಂ ಇವಾಂಬಸಾ"

ಎಂಬಂತೆ ಸಂಬಂಧವನ್ನು ತೊರೆದು ತನ್ನ ಕೆಲಸವನ್ನು ದೇವರಿಗರ್ಪಿಸಿ ಯಾರು ಕ್ರಿಯೆ ಮಾಡುತ್ತಾರೋ ಅವರ್—ತಾವರೆ ಎಲೆಯು ನೀರಿನಲ್ಲಿದ್ದರೂ ನೀರಿನಿಂದ ನಿರ್ಲಿಪ್ತವಾಗಿರುವಂತೆ ಪಾಪವು ತಟ್ಟದು. ಅದ್ದರಿಂದ ದೇವರ ಮೇಲೆ ಸರ್ವಭಾರವಿಟ್ಟು ನಾವು ಕರ್ತವ್ಯವನ್ನು ಮಾಡೋಣ.

ಮಾದರಿ ವ್ಯವಸಾಯ ಯೋಜನೆ.

ಹಿಂದೂ ದೇಶದ ವ್ಯವಸಾಯ ಉತ್ಪತ್ತಿಯು ಇತರ ದೇಶಗಳಲ್ಲಿನ ಉತ್ಪತ್ತಿಗಿಂತಲೂ ಬಹುಮಟ್ಟಿಗೆ ಕಡಿಮೆಯಾಗಿದೆ. ನಮ್ಮ ವ್ಯವಸಾಯಗಾರರು ಈ ತನಕ ನವೀನ ರೀತಿಯ ಸುಧಾರಿಸಿದ ವ್ಯವಸಾಯ ಕ್ರಮಗಳನ್ನು ಕೈಕೊಳ್ಳದಿರುವುದೇ ಇದಕ್ಕೆ ಕಾರಣವಾಗಿದೆ. ವ್ಯವಸಾಯ ಕ್ರಮವನ್ನು ಸುಧಾರಿಸದ ಹೊರತು ನಮ್ಮ ದೇಶದಲ್ಲಿ ಸುಭಿಕ್ಷವುಂಟಾಗಲಾರದು ಮತ್ತು ಆಹಾರದ ಅಭಾವವು ದೂರವಾಗಲಾರದು.

ಇದನ್ನರಿತ ಕೊಡಗು ಸರಕಾರವು ಕೊಡಗಿಗೆ ದೊರಕುವ 'ಫುಡ್ ಬೋನಸ್' ಹಣವನ್ನು ಇಲ್ಲಿ ಸುಧಾರಿತ ವ್ಯವಸಾಯ ಕ್ರಮಗಳನ್ನು ಜಾರಿಗೆ ತರಲು ಉಪಯೋಗಿಸಿಕೊಳ್ಳುವಂತೆ ತೀರ್ಮಾನಿಸಿ, ಈ ಬಗ್ಗೆ ವ್ಯವಸಾಯ ಇಲಾಖೆಯು "ಮಾದರಿ ವ್ಯವಸಾಯ ಯೋಜನೆ"ಯನ್ನು ಪ್ರಚುರಪಡಿಸಿದೆ.

ಮೇಲ್ಕಂಡ ಯೋಜನೆ ಪ್ರಕಾರ ಹೆಚ್ಚು ಕಡಿಮೆ ಪ್ರತಿ ಐದು ಗ್ರಾಮಗಳಿಗೆ ಒಬ್ಬೊಬ್ಬ ಶ್ರಮ ವಹಿಸಿ ಕೆಲಸ ಮಾಡುವ ರೈತನನ್ನು ಆರಿಸಿ ಅವರ ಮೂಲಕ ಸುಧಾರಿಸಿದ ವ್ಯವಸಾಯ ಕ್ರಮಗಳನ್ನೂ, ಅವುಗಳಿಂದಾಗುವ ಪ್ರಯೋಜನಗಳನ್ನೂ ಅತನಿಗೂ ನೆರೆ ಹೊರೆಯ ರೈತರಿಗೂ ಪ್ರತ್ಯಕ್ಷವಾಗಿ ತೋರಿಸಿ ಕೊಡಲಾಗುವುದು. ಈ ರೀತಿ ಆರಿಸಲ್ಪಟ್ಟ ರೈತರು ಅವರವರ ಹಿಡುವಳಿಗಳಲ್ಲಿ ಅನುಸರಿಸುವ ವ್ಯವಸಾಯ ಕ್ರಮಗಳನ್ನು ಇತರರು ಆಗಿಂದಾಗ್ಗೆ ಪರಾಂಬರಿಸಿ ತಿಳಿದು ಕೊಂಡು ತಮ್ಮ ತಮ್ಮ ಹಿಡುವಳಿಗಳಲ್ಲಿ ಅನುಸರಿಸಬೇಕೆಂಬುದೇ ಈ ಯೋಜನೆಯ ಘನ ಉದ್ದಿಶ್ಯವಾಗಿರುತ್ತದೆ.

ಈ ಯೋಜನೆಯ ಪ್ರಕಾರ ಆರಿಸತಕ್ಕ ರೈತರಿಗೆ ಗದ್ದೆ, ತೋಟ, ಬಾಣೆ ಸೇರಿ ೩ ಏಕ್ರೆಯಿಂದ ೧೦ ಏಕ್ರೆಯ ವರೆಗೆ ಅವರದೇ ಆದ ಜಮೀನಿದ್ದು ಸ್ವತಃ ವ್ಯವಸಾಯ ಮಾಡತಕ್ಕವರಾಗಿರಬೇಕು. ಇವರು ಉತ್ತಮ ಬೀಜ, ಸುಧಾರಿತ ಕಬ್ಬಿಣದ ನೇಗಿಲು ವಗೈರೆ ಉಪಯೋಗಿಸಲು ತಯಾರಿದ್ದು ವ್ಯವಸಾಯ ಇಲಾಖೆಯು ಆಗಿಂದಾಗ್ಗೆ ಕೊಡಬಹುದಾದ ಸೂಚನೆಯ ಪ್ರಕಾರ ತನ್ನ ವ್ಯವಸಾಯಗಳನ್ನು ನಡೆಸಿಕೊಂಡು ಹೋಗುವಂತೆ ಮೊದಲಾಗಿ ಒಪ್ಪಿಗೆಯನ್ನು ಕೊಡಬೇಕು. ಅಲ್ಲದೆ ತಾವು ಮಾಡುವ ಕೆಲಸವನ್ನು ಇತರರು ಬಂದು ನೋಡಿ ಇತರರು ಕಲಿತುಕೊಳ್ಳಲು ಯಾವ ತರದ ಆತಂಕಗಳನ್ನೂ ಮಾಡಕೂಡದು. ವ್ಯವಸಾಯ ಇಲಾಖೆ ಇವರಿಗೆ ಬೇಕಾದ ಗೊಬ್ಬರ, ಬೀಜ, ಹತ್ಯಾರು ವಗೈರೆಗಳನ್ನು ಒದಗಿಸಿ ಕೊಡುವುದು. ಆಹಾರ ಪದಾರ್ಥದ ಬೆಳೆಗಳಿಗಿರುವ ಗೊಬ್ಬರವನ್ನು ಅರ್ಧ ಕ್ರಯದಲ್ಲೂ, ಇತರ ಬೆಳೆಗಳಿಗಿರುವ ಗೊಬ್ಬರವನ್ನು ಪೂರ್ತಿ ಕ್ರಯದಲ್ಲೂ, ಕಬ್ಬಿಣದ ನೇಗಿಲು, ಕಂತಿ ಮಳ್ಳು ಮತ್ತು ಇತರ ಹತ್ಯಾರುಗಳನ್ನು ಶೇಕಡಾ ೨೫ ರಷ್ಟು ಕಡಿಮೆ ದರದಲ್ಲಿಯೂ, ಬೀಜಗಳನ್ನು ಅರ್ಧ ಕ್ರಯದಲ್ಲಿಯೂ ಇವರಿಗೆ ಒದಗಿಸಿ ಕೊಡಲಾಗುವುದು. ಈ ರೀತಿಯ ರಿಯಾಯಿತಿಗಳನ್ನು ಪಡೆದು ಮಾದರಿ ರೈತರಾಗಿರಲು ಇಚ್ಛಿಯಿರತಕ್ಕವರು ಅವರವರಿಗೆ ಸಂಬಂಧ ಪಡುವ ಸಹಕಾರಿ ಯೂನಿಯನ್ನುಗಳ ಅಧ್ಯಕ್ಷರ ಮೂಲಕ ವ್ಯವಸಾಯ ಇಲಾಖಾ ಡೆಮಾನ್ ಸ್ಟ್ರೇಟರಿಗಾಗಲೀ ಯಾ ಗ್ರೇಜ್ವೇಟ್ ಅಸಿಸ್ಟೆಂಟರಿಗಾಗಲೀ ಅರ್ಜಿ ಬರಕೊಳ್ಳಬೇಕು. ಈ ಮೊದಲೇ ಸರ್ಕಲ್ ಆಫೀಸರುಗಳಿಗೆ ಅವರಿಗೆ ಸಂಬಂಧಿಸಿದ ಗ್ರಾಮಗಳ ಗುಂಪುಗಳನ್ನು ಕೊಡಲಾಗಿದೆ.

ಈ ರೀತಿ ಯೂನಿಯನ್ನು ಪ್ರೆಸಿಡೆಂಟರುಗಳೂ ಮತ್ತು ವ್ಯವಸಾಯ ಇಲಾಖಾ ಸರ್ಕಲ್ ಆಫೀಸರುಗಳೂ ಸೇರಿ ಆರಿಸಿದ ಮಾದರಿ ವ್ಯವಸಾಯಗಾರರು ವ್ಯವಸಾಯ ಇಲಾಖೆಯೊಂದಿಗೆ ಬಾಂಡು ಬರಕೊಂಡು ತನಗೆ ಅವಶ್ಯವಿರತಕ್ಕ ಬೀಜ, ಗೊಬ್ಬರ, ಹತ್ಯಾರುಗಳಿಗೆ ಅರ್ಜಿ ಬರಕೊಳ್ಳತಕ್ಕದ್ದು. ಅನಂತರ ಇಲಾಖೆಯ ಸೂಚನೆ ಮೇರೆ ತನ್ನ ತನ್ನ ಕೆಲಸಗಳನ್ನು ಬೇಗನೆ ಕೈಕೊಳ್ಳಬೇಕು. ಅಲ್ಲದೆ ಈ ರೀತಿ ನಾಯಿಸಲ್ಪಟ್ಟ ರೈತರಿಗೆ ವರ್ಷಕ್ಕೊಂದು ಸಲ ವ್ಯವಸಾಯ ತರಬೇತನ್ನೂ ಕೊಡಲಾಗುವುದು. ಈ ತರಬೇತನ್ನು ಬಿಡುವ ಸಮಯದಲ್ಲಿ ಏರ್ಪಾಡು ಮಾಡುವುದರಿಂದ ಎಲ್ಲರಿಗೂ ಇದರ ಪ್ರಯೋಜನವನ್ನು ಹೊಂದಿಕೊಳ್ಳಲು ಸಾಧ್ಯವಿದೆ. ಒಪ್ಪಂದಕ್ಕೆ ಸರಿಯಾಗಿ ನಡೆದುಕೊಂಡ ರೈತರಿಗೆ ಕಂದಾಯದಲ್ಲೂ ಕೂಡಾ ಕೆಲವು ಮಟ್ಟಿಗೆ ರಿಯಾಯಿತಿ ದೊರೆಯುತ್ತದೆ. ಈ ವ್ಯಕ್ತಿ ಯಾರಿಗಾದರೂ ಹಣ ಸಹಾಯವು ಬೇಕಾಗಿದ್ದರೆ ಮತ್ತು ಸಾಲಗಾರರಾಗಿಲ್ಲದವರಿಗೆ ಸರಿಯಾದ ಆಧಾರದ ಮೇರೆ ಸಹಕಾರಿ ಸಾಲವನ್ನಾಗಲೀ, ತಕಾವಿ ಸಾಲವನ್ನಾಗಲೀ ಒದಗಿಸಿ ಕೊಡಲಾಗುವುದು. ಅದ್ದರಿಂದ ಪ್ರತಿ ಗ್ರಾಮದ ಜನರು ಮುಂದೆ ಬಂದು ಈ ಯೋಜನೆಯು ಫಲಕಾರಿಯಾಗುವಂತೆ ಸಹಕರಿಸುವರಾಗಿ ಹಾರೈಸಲಾಗಿದೆ.

—ವ್ಯವಸಾಯ ಇಲಾಖೆ

ತಿಳಿಸಿರಿ.

ಭೂಮಿ, ತೋಟ, ಜಾಗ ಪೇಟೆಯಲ್ಲಿ ಮನೆ ಅಥವ ಮನೆ ಸೈಟು ಮಾರಲಿರುವವರು ಮತ್ತು ಕೊಂಡುಕೊಳ್ಳಲಿಚ್ಛಿಸುವವರು ಈ ಕೆಳಗಿನ ಪತ್ತೆಯಲ್ಲಿ ವಿಚಾರಿಸಿರಿ. ಅಲ್ಲದೆ ಬೇಕಾದವರಿಗೆ ಕರಿಯುವ ಎಮ್ಮೆ, ಹಸು ಮತ್ತು ಉಳುವ ಎತ್ತು ಮತ್ತು ಕೋಣಗಳನ್ನೂ ಒದಗಿಸಿ ಕೊಡಲಾಗುವುದು. ಬೇಕಿರುವವರು ತಮಗೆ ಬೇಕಾದ ತಾರೀಕಿನ ಎಂಟು ದಿನಗಳಿಗೆ ಮುಂಚೆ ತಿಳಿಸಬೇಕಾಗಿದೆ. ವಿವರಗಳಿಗೆ ಈ ಪತ್ತೆಗೆ ಬರೆಯಬಹುದು.

D. A. N. & SONS.
Commission Agent,
Gonicoppal
26-13 S. Coorg.

ಕೊಡಗು ಪ್ರಾಂತೀಯ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಕೋ. ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ. (1921ರಲ್ಲಿ ಸ್ಥಾಪಿತವಾಗಿದೆ.

ಅಧಿಕೃತ ಶೇರು ಭಂಡವಾಳ	ರೂ.	10,00,000.
ವಸೂಲಾದ ಶೇರು ಮೊಬಲಗು	ರೂ.	1,79,000.
ಕ್ಷೇಮನಿಧಿ	ರೂ.	65,000.
ಇತರ ನಿಧಿಗಳು	ರೂ.	28,000.

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನೂ ಕೈಕೊಳ್ಳಲಾಗುವುದು.

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ, ಬೆಳ್ಳಿ ನಗಗಳ ಆಧಾರದ ಮೇಲೆ ಸಹ ಸಾಲ ಕೊಡಲಾಗುವುದು. ಬಿಲ್ ಯಾ ಡ್ರಾಫ್ಟ್‌ಗಳ ಡಿಸ್ಕೌಂಟು ಮಾಡಲ್ಪಡುವುದು. ಫ್ರೆಸಿಟಿ ಮತ್ತು ವಾರ್ಡನ್ ಇನ್ಸೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಗೌ. ಕಾರ್ಯದರ್ಶಿ,

ಕೆ. ಪಿ. ಅಪ್ಪಯ್ಯ, M. L. A. ಪ್ರೆಸಿಡೆಂಟ್ ಮತ್ತು ಖಜಾಂಚಿ.

Edited, Printed and Published by P. I. Belliappa at 'Kodagu' Press, Mercara, for 'Kodagu' Ltd.

ಪ್ರಕಟಣೆ.

ವೀರರಾಜಪೇಟೆ ದೇವಾಂಗದ ಬೀದಿಯಲ್ಲಿ ಬಾವಿಯಿರುವ ಒಂದು ಹಂಚಿನ ಮನೆ, ಕೊಟ್ಟಿಗೆ, ಹಿತ್ಲು ವಗೈರೆಯಿಂದ 0.16 ವಿಸ್ತೀರ್ಣದ ಆಸ್ತಿಯೂ ಮತ್ತು ಸಿದ್ದಾಪುರ ಟೌನಿನಲ್ಲಿ ಚರ್ಚ್ ಎದುರು ಭಾಗ ರಸ್ತೆಬಾಜು 1.95 ಏಕರೆಗೆ ಜಾಗವೂ ಮಾರಾಟಕ್ಕಿದೆ.

ಖರೀದಿದಾರರು ಈ ಕೆಳಗಿನ ವಿಳಾಸಕ್ಕೆ ಬರೆಯುವುದು ಬೆಲೆ ಹನ್ನೊಂದು ಸಾವಿರ ರೂಪಾಯಿ ಯಾ ಇತರ ಪ್ರಸ್ತಾಪ.

ಯಂಸ್. ಯಲ್. ರಾಮಮೂರ್ತಿ
ಎಡ್ವಕೇಟ್,
26-4-51 ವೀರರಾಜಪೇಟೆ.

ಆಯುರ್ವೇದ.

ಪರಿಣಾಮಕಾರಿಯಾದ ಮತ್ತು ಪರಿಶುದ್ಧ ಔಷಧಿಗಳಿಗೆ ದಿ ಕೊಚಿನ್ ಆಯುರ್ವೇದಿಕ್ ಲೇಬರೇಟರೀಸ್ ಲಿಮಿಟೆಡ್, ತ್ರಿಚೂರು, ದ. ಹಿಂದೂಸ್ಥಾನ. ಕೊಡಗಿಗೆ ಸೋಲ್ ಏಜಂಟರು:—

ಮೆ|| ವಾರುಣಿ ಡಿಸ್ಪೆನ್ಸರಿ,
ಮಡಿಕೇರಿ.

2-2

Licence No. 60.
Licenced to Post without Prepayment

Reg. No. M. 1890.
'KODAGU' MERCARA, (Coorg).

ಕೊಡಗು

ಸಂಪಾದಕರು—ಟಿ. ಐ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. 5-0-0.

ಸಂಪುಟ ೨೯ | ತಾರೀಕು ೧೧-೫-೧೯೫೧ನೇ ಶುಕ್ರವಾರ | ಸಂಚಿಕೆ ೪೭

ಹರಿಜನ ಅಗ್ರಲೇಖ

ಆಹಾರ ನಿಯಂತ್ರಣದ ಪುನರ್ವಿಚಾರ.

ಈಚೆಗೆ ನಡೆದ ಸರ್ವೋದಯ ಸಮಾಜದ ಸಮ್ಮೇಲನದಲ್ಲಿ ಆಹಾರ ನಿಯಂತ್ರಣ ಮತ್ತು ಸೀದಾ ಪದ್ಧತಿಯ ಚರ್ಚೆ ತುಂಬ ಪ್ರಯೋಜನಕಾರಿಯಾಗಿ ಪರಿಣಮಿಸಿತು. ಯೋಜನಾ ಆಯೋಗದ ಸದಸ್ಯರಾದ ಶ್ರೀ ಆರ್. ಕೆ. ಪಾಟೀಲರು ಸರಕಾರದ ದೃಷ್ಟಿಕೋನವನ್ನು ವಿಸ್ತಾರವಾಗಿ ವಿವರಿಸಿದರು. ಭಾರತವು ಎರಡನೆ ಮಹಾಯುದ್ಧಕ್ಕಿಂತ ಮೊದಲೂ ಕೂಡ ವರ್ಷಕ್ಕೆ ೧೫ ಲಕ್ಷ ಟನ್ನುಗಳಷ್ಟು ಆಹಾರ ಧಾನ್ಯಗಳನ್ನು ಆಯಾತ ಮಾಡಿಕೊಳ್ಳುತ್ತಿತ್ತು. ಈಗ ದೇಶದ ವಿಭಜನೆ ಮತ್ತು ವರ್ಷಕ್ಕೆ ೪೦ ಲಕ್ಷದಂತೆ ಎಡಬಿಡದೆ ಬೆಳೆಯುತ್ತಿರುವ ಜನಸಂಖ್ಯೆ ಇವುಗಳಿಂದ ಪರಿಸ್ಥಿತಿ ಇನ್ನಷ್ಟು ಗಂಭೀರವಾಗಿದೆ. ಪರಿಣಾಮವಾಗಿ ಉಂಟಾದ ೬೫ ಲಕ್ಷ ಟನ್ ಆಹಾರ ಧಾನ್ಯದ ವಾರ್ಷಿಕ ಕೊರತೆಯಿಂದ ಬೆಲೆಗಳು ತೀವ್ರವಾಗಿ ಏರುವುದನ್ನು ತಡೆಯಬೇಕಾದರೆ ಆಹಾರ ನಿಯಂತ್ರಣಗಳನ್ನು ಯಥಾವತ್ತಾಗಿ ಇರಗೊಡಿಸುವುದೂ ವಿದೇಶಗಳಿಂದ ಆಯಾತ ಮಾಡಿಕೊಳ್ಳುವುದೂ ಅತ್ಯವಶ್ಯವಾಗಿದೆ.

ಈಗಿರುವ ಸ್ಥಿತಿಯಲ್ಲಿ ಆಹಾರ ನಿಯಂತ್ರಣಗಳನ್ನು ಕೆಲಮಟ್ಟಿಗೆ ಜಾರಿಯಲ್ಲಿಡುವುದು ಅವಶ್ಯವೆಂದೊಪ್ಪಿದರೂ ಆಚಾರ್ಯ ವಿನೋಬಾ ಮತ್ತು ಸಮ್ಮೇಲನದಲ್ಲಿ ಮಾತಾಡಿದ ಇನ್ನೂ ಅನೇಕ ಕಾರ್ಯಕರ್ತರು ನಿಯಂತ್ರಣ ವ್ಯವಸ್ಥೆಯ ಸ್ವರೂಪವನ್ನು ತೀವ್ರವಾಗಿ ಬದಲಾಯಿಸುವುದು ಅಗತ್ಯವೆಂದು ಹೇಳಿದರು. ಈ ಸೂಚನೆಗಳನ್ನು ಸರಕಾರದ ಮತ್ತು ಯೋಜನಾ ಆಯೋಗದ ಅವಗಾಹನೆಗಾಗಿ ಇಲ್ಲಿ ಸಂಗ್ರಹಿಸಿ ಕೊಡಲಾಗಿದೆ.

೧. ನಗರ ಪ್ರದೇಶಗಳಲ್ಲಿ ಸರಕಾರದವರು ಬಡವರಿಗೂ ಮಧ್ಯಮ ವರ್ಗದವರಿಗೂ ಮಾತ್ರವೇ ನಿಯಂತ್ರಿತ ದರಗಳಲ್ಲಿ ಕಾಳುಗಳನ್ನು ಒದಗಿಸುವ ಏರ್ಪಾಡು ಮಾಡಬೇಕು. ಸಮಾಜದ ಉಳಿದ ವರ್ಗಗಳು 'ಖುಲ್ಲಾ' ಪೇಟೆಯಲ್ಲಿ ಕೊಳ್ಳಲು ಸ್ವತಂತ್ರವಾಗಿರಬೇಕು. 'ಖುಲ್ಲಾ' ಪೇಟೆಗೂ ಸರಕಾರವು ಕಾಲ ಕಾಲಕ್ಕೆ 'ನ್ಯಾಯ್ಯ' ಧಾರಣೆಗಳನ್ನು ಗೊತ್ತು ಪಡಿಸಬೇಕು. ಯಾವನಾದರೊಬ್ಬ ನಾಗರಿಕನು ಈ 'ನ್ಯಾಯ್ಯ' ಧಾರಣೆಗಿಂತ ಹೆಚ್ಚು ಕೊಟ್ಟು ಕೊಳ್ಳಲು ಸಿದ್ಧನಾಗಿದ್ದರೆ ಅಂಥ ವ್ಯವಹಾರದ ಮೇಲೆ ಕಳ್ಳಪೇಟೆಯೆಂಬ ದೂಷಣೆ ಬರಕೂಡದು. ಆದರೆ ಯಾವನೊಬ್ಬ ಗಿರಾಕಿಗೆ ಯಾವುದೊಂದು ವಸ್ತುಗಾಗಿ ಬೇಡಿದ ಬೆಲೆ ಅನ್ಯಾಯವೆಂದೂ 'ನ್ಯಾಯ್ಯ' ದರಕ್ಕಿಂತ ಹೆಚ್ಚೆಂದೂ ತೋರಿಬಂದರೆ ಅವನು ಆ ಬಗ್ಗೆ ನ್ಯಾಯಸ್ಥಾನಕ್ಕೆ ಹೋಗಬಹುದು. ಅಂಥ ನಾಗರಿಕರಿಗೆ ಹೆಚ್ಚು ವೆಚ್ಚವಿಲ್ಲದೆ ಬೇಗನೇ ನ್ಯಾಯ ದೊರಕುವಂತೆ ಮಾಡಬೇಕು. ಇಂಥ 'ಖುಲ್ಲಾ' ಪೇಟೆಯ ಪದ್ಧತಿಯಿಂದ ಕಳ್ಳಪೇಟೆಗಳು ತಾವಾಗಿಯೇ ಮಾಯವಾಗುವುವಲ್ಲದೆ ಸರಕಾರಕ್ಕೆ 'ಕಳ್ಳ'ಪೇಟೆಯ ಬದಲು 'ಒಳ್ಳೆ' ಪೇಟೆಯಲ್ಲಿ ನಡೆದ ವ್ಯವಹಾರಗಳ ಮೇಲೆ ಉತ್ಪನ್ನ ಮತ್ತು ಮಾರಾಟ ಕರಗಳ ರೂಪದಲ್ಲಿ ಹೆಚ್ಚು ಆದಾಯವೂ ಬರುವುದು.

೨. ಆಹಾರ ಧಾನ್ಯಗಳ ಹಂಚುವಿಕೆಯನ್ನು ಆದಷ್ಟು ಮಟ್ಟಿಗೆ ಗಿರಾಕಿಗಳ ಸಹಕಾರಿ ಸಂಘಗಳ ಮೂಲಕವೇ ಮಾಡಬೇಕು. ಇದರಿಂದ ಆಹಾರದ ಆಡಳಿತೆಗಾಗಿ ಸರಕಾರಕ್ಕೆ ಈಗ ಆಗುತ್ತಿರುವ ವೆಚ್ಚದಲ್ಲಿ ಎಷ್ಟೋ ಅಂಶ ಉಳಿಯುವುದಲ್ಲದೆ ಪರ್ಮಿಟ್ ಕೊಡುವುದರಲ್ಲಿ ಸ್ವಜನಪಕ್ಷಪಾತ, ವಶೀಲಿ ಮೊದಲಾದ ಅನಾಚಾರಗಳ ಲೆಕ್ಕವಿಲ್ಲದಷ್ಟು ಅಪವಾದಗಳು ಬರುವುದೂ ತಪ್ಪುವುದು. ಒಂದು ನಗರದ ಅಥವಾ ಓಣಿಯ ನೂರಾರು ಕುಟುಂಬಗಳ ಒಂದು ಗಿರಾಕಿಗಳ ಸಹಕಾರಿ ಸಂಘದ ಮೂಲಕ ಆಹಾರ ಧಾನ್ಯಗಳನ್ನು ತಮಗೆ ಹಂಚಬೇಕೆಂದು ಅರ್ಜಿ ಮಾಡಿದರೆ ಆ ಅರ್ಜಿಯ ಪ್ರಾಮಾಣಿಕತೆಯನ್ನು ಪರೀಕ್ಷಿಸಿದ ನಂತರ ತಡಮಾಡದೆ ಅದಕ್ಕೆ ಪರವಾನಗಿ ಕೊಡಲಾಗುವುದೆಂದು ಸರಕಾರ ಕೂಡಲೆ ಸಾರಬೇಕು. ಸದ್ಯದ ಸರಕಾರಿ ವಿತರಣದ ವ್ಯವಸ್ಥೆ ಜನರಲ್ಲಿ ವಿಶ್ವಾಸವನ್ನು ಹುಟ್ಟಿಸಿಲ್ಲ. ಲಂಚಗುಳಿತನ ಮತ್ತು ಅಕ್ಷಮತೆಯ ಆರೋಪಗಳು ಬಹಿರಂಗವಾಗಿ ಅದರ ಮೇಲೆ ಹೊರಿಸಲ್ಪಡುತ್ತಿವೆ. ಗಿರಾಕಿಗಳ ಮೇಲೆಯೇ ಹಂಚುವ ಹೊಣೆಯನ್ನು ಹೊರಿಸಿದರೆ, ಸರಕಾರದ ಮೇಲೆ ಬರುವ ಟೀಕಾಟಿಪ್ಪಣಿಗಳಿಂದ ಅದು ಪಾರಾಗುವುದಲ್ಲದೆ ಕಾಂಗ್ರೆಸ್ಸಿಗರಿಗೂ ಇತರ ರಾಷ್ಟ್ರೀಯ ಕಾರ್ಯಕರ್ತರಿಗೂ ರಚನಾತ್ಮಕ ಕಾರ್ಯಕ್ಕೆ ಅವಕಾಶವನ್ನು ಕಲ್ಪಿಸಿಕೊಟ್ಟಂತಾಗುವುದು. ಈಗಿನ ಪರಿಸ್ಥಿತಿಯಲ್ಲಿರುವ ವಿಷಾದಮಯ ಅಂಶವೆಂದರೆ, ಅಧಿಕಾರಸ್ಥರಾಗಿರುವ ಕಾಂಗ್ರೆಸ್ಸಿಗರೂ ಸರಕಾರಿ ನೌಕರರೂ ತಮ್ಮ ಮೇಲೆ ಬಿದ್ದಿರುವ ಲೆಕ್ಕವಿಲ್ಲದಷ್ಟು ಹೊಣೆಗಳ ಭಾರದಿಂದ ಬಳಲುತ್ತಿರುವಾಗ ಅತ್ತ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಧೈರ್ಯದಿಂದ ಹೋರಾಡಿದ ಕಾರ್ಯಕರ್ತರ ದಂಡಿಗೆ ದಂಡೇ ಯಾವ ಕಾರ್ಯಕ್ರಮವೂ ಇಲ್ಲದೆ ವ್ಯಗ್ರವಾಗಿದೆ. ಆದ್ದರಿಂದ ಅವರು ಕೆಲಸವಿಲ್ಲದೆ ಸರಕಾರವನ್ನು ತೀಕ್ಷ್ಣವಾಗಿ ದೂಷಿಸುತ್ತಾ ಕಾಲಹರಣ ಮಾಡುತ್ತಾರೆ.

೩. ಗ್ರಾಮಾಂತರ ಪ್ರದೇಶಗಳಲ್ಲಿ ಹೊಲವಿಲ್ಲದ ಒಕ್ಕಲತನದ ಕೂಲಿಕಾರರಿಗೆ ಒಡೆಯರು ಕೂಲಿಯ ಒಂದಂಶವನ್ನು ಧಾನ್ಯ ರೂಪದಲ್ಲಿಯೇ ಕೊಡಬೇಕೆಂದು ಸರಕಾರದವರು ವಿಧಿಸಬೇಕು. ಇದರಿಂದ ಒಕ್ಕಲುತನದ ಕೂಲಿಕಾರರಿಗೆ ತಮ್ಮ ಕನಿಷ್ಟ ಆವಶ್ಯಕತೆಯಷ್ಟಾದರೂ ಆಹಾರ ದೊರೆತಂತಾಗುವುದು. ಧಾನ್ಯ ರೂಪದಲ್ಲಿ ಕೊಡಬೇಕಾದ ಕೂಲಿಯ ಪ್ರಮಾಣವನ್ನು ನಿರ್ದಿಷ್ಟ ಪಡಿಸಿಬಿಡಬೇಕು. ಹಣದ ರೂಪದಲ್ಲಿ ಕೊಡಬೇಕಾದ ಅಂಶವನ್ನು ಋತುಮಾನಕ್ಕನುಸಾರವಾಗಿ ಸ್ವಲ್ಪ ಹೆಚ್ಚು ಕಡಿಮೆ ಮಾಡಬಹುದು. ಆಚಾರ್ಯ ವಿನೋಬಾ ಅವರು ತಮ್ಮ ಕಾಲ್ನಡಿಗೆಯ ಸಂಚಾರ ಕಾಲದಲ್ಲಿ ಈ ಪದ್ಧತಿಯನ್ನು ಪ್ರತಿಪಾದಿಸುತ್ತ ಹೋಗಿದ್ದರು. ಅದರಿಂದ ಒಳ್ಳೇ ಪ್ರಯೋಜನವೂ ಆಗಿದೆ.

೪. ಈಗಿನ ಧಾನ್ಯ ವಸೂಲಿ ಪದ್ಧತಿಯನ್ನು ಬೇಗನೇ ಬಿಟ್ಟುಕೊಟ್ಟು ಅದರ ಬದಲಿಗೆ ಭೂಕಂದಾಯವನ್ನೇ ಧಾನ್ಯ ರೂಪದಲ್ಲಿ ವಸೂಲು ಮಾಡಬೇಕೆಂಬ ಸೂಚನೆಯನ್ನೂ ಆಚಾರ್ಯ ವಿನೋಬರು ಒತ್ತಿ ಹೇಳುತ್ತ ಬಂದಿದ್ದಾರೆ. ಇದರಿಂದ ನಿಯಂತ್ರಿತ ದರಗಳಲ್ಲಿ ಹಂಚಲು ತಕ್ಕಷ್ಟು ಧಾನ್ಯವನ್ನು ಸಂಗ್ರಹಿಸಲು ಸರಕಾರಕ್ಕೆ ಸಾಧ್ಯವಾಗುವುದು. ಭೂಕಂದಾಯವನ್ನು ನಿರ್ಣಯಿಸಿ ಎರಡು ದಶಕ ವರ್ಷಗಳು ಕಳೆದುಹೋಗಿವೆ. ಅದನ್ನೀಗ ಪುನರ್ವಿಮರ್ಶಿಸುವುದು ಆವಶ್ಯವಾಗಿದೆ. ಸಾರ್ವತ್ರಿಕ ಚುನಾವಣೆಗಳು ಮುಗಿಯುವವರೆಗೆ ಭೂಕಂದಾಯದ ಪುನರ್ವಿಮರ್ಶೆ ಮಾಡಲು ರಾಜ್ಯ ಸರಕಾರಗಳು ಹಿಂದೇಟು ಹಾಕುತ್ತಿರುವಂತೆ ಕಾಣುತ್ತದೆ. ಆದರೆ ನ್ಯಾಯವಾದುದನ್ನು ತಡವಿಲ್ಲದೆ ಮಾಡಲೇಬೇಕು.

೫. ಆಹಾರ ಧಾನ್ಯಗಳ ಉತ್ಪಾದನೆಗೆ ಸರಕಾರ ಪ್ರಥಮ ಪ್ರಾಶಸ್ತ್ಯ ಕೊಡಬೇಕು. ಆಹಾರವನ್ನು ಆಯಾತ ಮಾಡಿಕೊಳ್ಳಲು ಬೇಕಾದ ಡಾಲರುಗಳನ್ನು ಸಂಪಾದಿಸುವುದಕ್ಕೋಸ್ಕರ ದೇಶದಲ್ಲಿ ಸಣಬಿನ ಬೆಳೆ ಹೆಚ್ಚಿಸುವುದು ಅದೂರದರ್ಶಿತ್ವವೇ ಸರಿ. ಒಂದು ವೇಳೆ ಯುದ್ಧವೇ ಪ್ರಾರಂಭವಾದರೆ ಅಕ್ಕಿ ಗೋದಿಗಳ ಬದಲು ಜನರು ಸಣಬನ್ನು ತಿನ್ನಬಲ್ಲರೆ? ಆದುದರಿಂದ ಆಹಾರ ಸ್ವಾವಲಂಬನೆಯ ಬಗ್ಗೆ ಸರಕಾರದ ಧೋರಣೆ ನಿಸ್ಸಂದಿಗ್ಧವೂ ನಿಶ್ಚಿತವೂ ಆಗಿರಬೇಕು.

೬. 'ಹೆಚ್ಚು ಆಹಾರ ಬೆಳೆಯಿರಿ' ಎಂಬ ಯತ್ನವು ಯುದ್ಧ ಪ್ರಯತ್ನದಂತೆಯೇ ಪರಿಗಣಿಸಲ್ಪಡಬೇಕು. ಸರಕಾರದ ಕೃಷಿ ಖಾತೆಗಳು ತಮ್ಮ ಕರ್ತವ್ಯಪಾಲನೆಯಲ್ಲಿ ಹೆಚ್ಚು ದಕ್ಷವೂ ವ್ಯವಹಾರಿಕವೂ ಆಗಬೇಕಾಗಿದೆ. ಈಚೆಗಿನ ವರದಿಗಳಿಂದ ಬ್ರಿಟನ್ನಿನಲ್ಲಿ ಯುದ್ಧ ಪೂರ್ವಕ್ಕಿಂತ ಆಹಾರದ ಉತ್ಪಾದನೆ ನೂರಕ್ಕೆ ೪೦ರಷ್ಟು ಹೆಚ್ಚಾಗಿದೆಯೆಂದು ತಿಳಿಯುತ್ತದೆ. ಭಾರತದಲ್ಲಿಯೂ ಇಷ್ಟೇ ಪರಿಣಾಮಕಾರಿ ಪ್ರಯತ್ನಗಳೇಕಾಗಬಾರದು? ರಿಜರ್ವ್ ಬ್ಯಾಂಕ ವರದಿಯ ಪ್ರಕಾರ ಭಾರತದಲ್ಲಿನ ಆಹಾರ ಹೆಚ್ಚು ಬೆಳೆಯುವ ಕಾರ್ಯಕ್ರಮವು ತೀರ ಅಯಶಸ್ವಿಯಾಗಿದೆ. ಕೃಷಿ ಮಂತ್ರಿ ಶಾಖೆಯು ಈ ವರದಿಯನ್ನು ಗಂಭೀರವಾಗಿ ಪರ್ಯಾಲೋಚಿಸಿ ತನ್ನ ಯೋಜನೆಗಳನ್ನು ಆಮೂಲಾಗ್ರವಾಗಿ ಬದಲಾಯಿಸಬೇಕು. ಸರಕಾರದ ಯೋಜನೆಗಳ ಪ್ರಾಮಾಣಿಕತೆ ಮತ್ತು ವ್ಯವಹಾರಿಕತೆ ಮನವರಿಕೆಯಾದರೆ ಮಾತ್ರ ಜನರ ಸಹಕಾರ ದೊರೆಯಬಲ್ಲದು.

ಎಸ್ ಎನ್. ಅಗರವಾಲ

ನೋಟೀಸ್.

ವೀರಾಜಪೇಟೆನಾಡು ಅರಮೇರಿ ಗ್ರಾಮದ ಬಾಳೇಕುಟ್ಟಿರ ಮಂದಣ್ಣನವರ ಮಗ ಮುತ್ತಣ್ಣನು ತಿಳಿಯಪಡಿಸುವುದೇನೆಂದರೆ:—

ನನ್ನ ತಮ್ಮನಾದ ಮಾಚಯ್ಯನು ನಮ್ಮೆಲ್ಲರಿಗೂ ಹಕ್ಕಾಗಿ ನಮ್ಮಗಳ ಸ್ವಾಧೀನದಲ್ಲಿರುವ ಕುಟುಂಬದ ಅವಿಭಕ್ತ ಸೊತ್ತುಗಳನ್ನು ಗಿರ್ವಿ ವಗೈರೆ ಪರಾಧೀನ ಮಾಡುವ ಅಭಿಪ್ರಾಯ ಮತ್ತು ಏರ್ಪಾಡಿನಲ್ಲಿರುವುದಾಗಿ ತಿಳಿಯಬರುತ್ತದೆ.

ಸದರಿ ಮಾಚಯ್ಯನವರಿಗೆ ಕುಟುಂಬದ ಯಾವ ಸ್ವತ್ತನ್ನೂ ಯಾವ ವಿಧದಲ್ಲೂ ಪರಾಧೀನ ಮಾಡುವ ಆವಶ್ಯಕತೆ ಇರುವುದಿಲ್ಲ. ಅಲ್ಲದೆ ಅವರು ಈ ಮೊದಲು ನನಗೆ ತಿಳಿಯದೆ ಕುಟುಂಬದ ಆವಶ್ಯಕತೆ ಏನೂ ಇಲ್ಲದೆ ಪರಾಧೀನ ಮಾಡಿದ ಸ್ವತ್ತು ಈಗ ಜಂಟಿ ಕುಟುಂಬದ ಸೊತ್ತುಗಳ ಉತ್ಪತ್ತಿಯಿಂದ ಹಿಂದಕ್ಕೆ ಅವರ ಹೆಸರಿನಲ್ಲೇ ಪಡೆದುದನ್ನೂ ಸಹ ಅವರಿಗೆ ಯಾವ ವಿಧದಲ್ಲೂ ಪರಾಧೀನ ಮಾಡುವ ಹಕ್ಕು ಮತ್ತು ಆವಶ್ಯಕತೆ ಇರುವುದಿಲ್ಲ.

ಆದರಿಂದ ಯಾರಾದರೂ ಗಿರ್ವಿ, ಭೋಗ್ಯ, ಕ್ರಯಕ್ಕೆ ಚರ ಮತ್ತು ಸ್ಥಿರ ಸ್ವತ್ತುಗಳನ್ನು ಪಡೆದುಕೊಂಡಲ್ಲಿ ಅವರಿಗೆ ಯಾವ ಹಕ್ಕೂ ಸಿಗಲಾರದು ಎಂದು ಈ ಮೂಲಕ ತಿಳಿಸಲಾಗಿದೆ.

ಬಿ. ಮುತ್ತಣ್ಣ

4-4

॥ ಮುಂಬರುವ ಸಾರ್ವತ್ರಿಕ ಚುನಾವಣೆ ಕಾರ್ಯಕ್ರಮ ॥

[ಲೇ:— ಶ್ರೀ ಸುಕುಮಾರ ಸೇನ]

ಜನಸತ್ತೆಯ ಇತಿಹಾಸದಲ್ಲಿಯೇ ಅತಿ ದೊಡ್ಡದಾದ ಮತ್ತು ಮಹತ್ವದ ಪ್ರಜಾಪ್ರಭುತ್ವದ, ಪ್ರಯೋಗವನ್ನು ನಾವು ಹಿಂದುಸ್ತಾನದಲ್ಲಿ ಮಾಡತಕ್ಕವರಿದ್ದೇವೆಂಬದು ಹಲವು ಬಾರಿ ಕೇಳುತ್ತ ಇದ್ದೇವೆ. ಚೀನಾ ದೇಶವನ್ನು ಬಿಟ್ಟರೆ ಇಡೀ ಜಗತ್ತಿನಲ್ಲಿಯೇ ಹಿಂದುಸ್ಥಾನವು ಬಹುಸಂಖ್ಯಾಕ ಜನಕುಳ್ಳ ದೇಶವಾಗಿದ್ದು ಪ್ರಜಾಪ್ರಭುತ್ವ ತತ್ವದ ಮೇಲೆ ಚುನಾವಣೆಯನ್ನು ನಡೆಸತಕ್ಕವರಿದ್ದರಿಂದ ಇಂಥ ಹೇಳಿಕೆಗಳು ಅತಿಶಯೋಕ್ತಿವೆನಿಸಲಾರವು. ಸಂಸ್ಥಾನ ಮತ್ತು ಕೇಂದ್ರಗಳಲ್ಲಿ ತಮ್ಮಿಂದಲೇ ಆರಿಸಲ್ಪಟ್ಟ ಸರಕಾರಗಳನ್ನು ಚುನಾಯಿಸಲು ೧೯೫೧ ನೇ ನವಂಬರ್ ಅಥವಾ ಡಿಸೆಂಬರದೊಳಗಾಗಿ ಇಡೀ ದೇಶದ ಅರ್ಧ ಜನತೆಯು ಸಾಧಾರಣವಾಗಿ ೧೭ ಕೋಟಿ ಮತದಾರರು ತಮ್ಮ ಅಮೌಲ್ಯವಾದ ಮತಗಳನ್ನು ಕೊಡಲು ಮತಗಟ್ಟೆಗೆ ಹೋಗತಕ್ಕವರಿರುವರು. ಹಿಂದುಸ್ಥಾನದ ಭವಿತವ್ಯವನ್ನು ಶೀಘ್ರದಲ್ಲಿಯೇ ರೂಪಿಸಲಿರುವ ಈ ಭವ್ಯ ಕಾರ್ಯಕ್ರಮದ ನೋಟವನ್ನು ಅಕ್ಷಿಸಿದರೆ ಈ ಕೆಲಸದ ಮೋಹಕತ್ವ ಮತ್ತು ವ್ಯಾಪಕತೆಯ ಕಲ್ಪನೆಯು ಬರಬಹುದು. ಹಾಗಾದರೆ ಇಂಥ ಗುರುತರವಾದ ಕೆಲಸವನ್ನು ಕೈಕೊಳ್ಳಲು ಯೋಚಿಸಿದ ಉಪಾಯವೇನು? ಮತ್ತು ಅದನ್ನು ಕಾರ್ಯಗಾಣಿಸುವದು ಹೇಗೆ? ಎಂಬ ವಿಚಾರಗಳು ಅನೇಕರಿಗೆ ಬಂದಿರಬಹುದು. ಇದು ಸ್ವಾಭಾವಿಕವಾಗಿದೆ. ಮತ್ತು ಇವನ್ನೆಲ್ಲ ಮತದಾರರು ತಮ್ಮ ಮತವನ್ನು ಕೊಡುವದರ ಮೊದಲು ಚೆನ್ನಾಗಿ ಅರಿತುಕೊಳ್ಳುವದು ಅವರ ಆದ್ಯ ಕರ್ತವ್ಯವಾಗಿರುವದು.

ನಮ್ಮ ಇಂದಿನ ಹಿಂದೂಸ್ಥಾನದಲ್ಲಿ ೨೮ ಸಂಸ್ಥಾನಗಳಿದ್ದು ಅದನ್ನು 'ಅ' 'ಬ' 'ಕ' ಹೀಗೆ ಮೂರು ಗುಂಪುಗಳಲ್ಲಿ ವಿಭಾಗಿಸಿರುವರು. ಭಾಗ 'ಅ' ದಲ್ಲಿ ಹಿಂದೂಸ್ಥಾನಕ್ಕೆ ಸ್ವಾತಂತ್ರ್ಯವು ಸಿಗುವದಕ್ಕಿಂತ ಮುಂಚೆ ಇದ್ದ ಗವರ್ನರ್ ಪ್ರಾಂತಗಳೇ ಇದ್ದು ಅವುಗಳಲ್ಲಿ ವಿಲೀನವಾದ ಮತ್ತು ಪಾಕಿಸ್ಥಾನವಾದ ನಂತರ ಬಂದ ಕೆಲವು ಪ್ರದೇಶಗಳಿರುವವು. ಇವು ೯ ಸಂಸ್ಥಾನಗಳಿದ್ದು ಅವು ಅನುಕ್ರಮವಾಗಿ (೧) ಆಸಾಮ್ (೨) ಬಿಹಾರ್ (೩) ಮುಂಬೈ (೪) ಮಧ್ಯ ಪ್ರದೇಶ (ಮೊದಲಿನ ಮಧ್ಯ ಪ್ರಾಂತ) (೫) ಮದ್ರಾಸ್ (೬) ಒರಿಸಾ (೭) ಪಂಜಾಬ್ (೮) ಉತ್ತರ ಪ್ರದೇಶ (ಮೊದಲಿನ ಸಂಯುಕ್ತ ಪ್ರಾಂತ) ಮತ್ತು ಪಶ್ಚಿಮ ಬಂಗಾಲ ಇರುವವು. ಭಾಗ 'ಬ' ದಲ್ಲಿ ಪೂರ್ವದಲ್ಲಿ ರಾಜ ಮಹಾರಾಜರುಗಳಿಂದ ಆಳಲ್ಪಡುತ್ತಿದ್ದ ಸಂಸ್ಥಾನಗಳಿದ್ದು ಅವು ಈ ರೀತಿ ಇರುವವು (೧) ಹೈದರಾಬಾದ್ (೨) ಜಮ್ಮು ಮತ್ತು ಕಾಶ್ಮೀರ (೩) ಮಧ್ಯಪ್ರದೇಶ. (೪) ಮೈಸೂರು ೫, ಪತಿಯಾಲಾ ಮತ್ತು ಪೂರ್ವ ಪಂಜಾಬ್ ಸಂಸ್ಥಾನಗಳು ಅರ್ಥಾತ್ 'ಪೆಪ್ಸು'. (೬) ರಾಜಸ್ಥಾನ (೭) ಸೌರಾಷ್ಟ್ರ ಮತ್ತು (೮) ತಿರುವಂಕೂರ್ ಕೊಚ್ಚಿನ್ ಇವೆಲ್ಲ ಸಂಸ್ಥಾನಗಳಲ್ಲಿ ರಾಜಪ್ರಮುಖರಿಂದೊಡಗೂಡಿದ ಜನತಾ ಮಂತ್ರಿಮಂಡಳಗಳು ಇವೆ. ಅಥವಾ ಶೀಘ್ರದಲ್ಲಿಯೇ ತಲೆದೋರುವವು. ಹೈದರಾಬಾದ್, ಜಮ್ಮು ಕಾಶ್ಮೀರ, ಪೆಪ್ಸು ಮತ್ತು ರಾಜಸ್ಥಾನಗಳಿಗೆ ಈ ವರೆಗೆ ಲೋಕನಿಯುಕ್ತ ಮಂತ್ರಿ ಮಂಡಳಗಳು ಇರುವದಿಲ್ಲ. ಆದರೆ ಸಾರ್ವತ್ರಿಕ ಚುನಾವಣೆಯು ಮುಗಿದ ನಂತರ ಇವುಗಳಿಗೆ ಜಮ್ಮು ಮತ್ತು ಕಾಶ್ಮೀರ ಬಿಟ್ಟು ಮತದಾರರಿಂದ ಆರಿಸಿದ ಜನರ ಮಂತ್ರಿಮಂಡಳ ಮತ್ತು ಶಾಸನ ಸಭೆಗಳು ಅಸ್ತಿತ್ವದಲ್ಲಿ ಬರುವವು. ಭಾಗ 'ಕ' ದಲ್ಲಿ ಬರುವ ಸಂಸ್ಥಾನಗಳು ನೇರವಾಗಿ ಕೇಂದ್ರ ಸರಕಾರದ ಆಡಳಿತೆಯಲ್ಲಿದ್ದು ಅವುಗಳ ದೈನಂದಿನ ಕಾರಭಾರವು ಕೇಂದ್ರ ಸರಕಾರದಿಂದ ನೇಮಿಸಲ್ಪಟ್ಟ ಕಮಿಶನರರಿಂದ ಸಾಗಿದೆ. ಅವು ಅನುಕ್ರಮವಾಗಿ ೧೧ ಸಂಸ್ಥಾನಗಳಿದ್ದು ಈ ರೀತಿ ಇವೆ. ೧ ಅಜಮೀರ್, ೨ ಭೋಪಾಳ, ೩ ಬಿಲಾಸಪೂರ, ೪ ಕೊಡಗ, ೫ ಡಿಲ್ಲಿ, ೬ ಹಿಮಾಚಲ ಪ್ರದೇಶ ೭ ಕಚ್, ೮ ಮಣಿಪೂರ, ೯ ತ್ರಿಪುರಾ, ೧೦ ವಿಂಧ್ಯಪ್ರದೇಶ, ಮತ್ತು ೧೧ ಅಂದಮಾನ ಮತ್ತು ನಿಕೋಬಾರ ದ್ವೀಪಗಳು.

ಇವೆಲ್ಲ ೨೮ ಪ್ರದೇಶಗಳು ಕೂಡಿ ಭಾರತ ಒಕ್ಕೂಟವು ನಿರ್ಮಿತವಾಗಿದೆ. ಈ ಒಕ್ಕೂಟ ಪಾರ್ಲಿಮೆಂಟಿನಲ್ಲಿ ಕೆಳಮನೆ ಮತ್ತು ಮೇಲ್ಮನೆ ಎಂದು ಎರಡು ಸಭೆಗಳಿವೆ. ಕೆಳಮನೆಗೆ ಲೋಕ ಸಭೆಯೆಂದೂ ಮೇಲ್ಮನೆಗೆ ವಿಧಿಮಂಡಳವೆಂದೂ ಕರೆಯುವರು. ಕೆಳಮನೆಯು ಲೋಕ ಸಭೆಗೆ ಪ್ರೌಢ ಮತದಾನ ಪದ್ಧತಿಯಿಂದ ಆರಿಸಿದ್ದ ೪೯೬ ಸದಸ್ಯರು ಇರುವರು. ಭಾರತದ ರಾಜ್ಯ ಘಟನೆಯಂತೆ ಈ ಸಭೆಗೆ ೫೦೦ ಸದಸ್ಯರ ಮಿತಿಯಿದ್ದು ಜಮ್ಮು-ಕಾಶ್ಮೀರ ಮತ್ತು ಅಂದಮಾನ—ನಿಕೋಬಾರದ ಸದಸ್ಯರನ್ನು ಭಾರತದ ಅಧ್ಯಕ್ಷರೇ ಆರಿಸುವರು. ಮೇಲ್ಮನೆ ಅಥವಾ ವಿಧಿಮಂಡಳಕ್ಕೆ ೨೫೪ ಸದಸ್ಯರನ್ನು ಆರಿಸುವ ಹಕ್ಕಿದ್ದು ಅವರನ್ನೆಲ್ಲ ಅ, ಬ ಮತ್ತು ಕ ಭಾಗದ ಜನರಿಂದ ಆರಿಸಲಾಗುವದು. ೧೨ ಸದಸ್ಯರನ್ನು ರಾಷ್ಟ್ರಾಧ್ಯಕ್ಷರು ಅವರವರ ಯೋಗ್ಯತೆಗನುಸಾರವಾಗಿ, ಸಾಹಿತ್ಯ, ವಿಜ್ಞಾನ, ಕಲೆ, ಸಮಾಜ ಸೇವೆ ಅಥವಾ ತತ್ಸಮ ಕಾರ್ಯ ನಿರತ ಜನರನ್ನು ಆರಿಸುವರು. ಶಾಸನ ಸಭೆಯ ೨೦೪ ಸದಸ್ಯರಲ್ಲಿ ಮತ್ತು 'ಬ' ಭಾಗದಿಂದ (ಕಾಶ್ಮೀರ ಹೊರತು ಪಡಿಸಿ) ೧೯೦ ಸದಸ್ಯರನ್ನು ಆಯಾಭಾಗದ ಸರಿಸಮಾನವಾದ ಪ್ರಾತಿನಿಧ್ಯದಂತೆ ಆರಿಸಲಾಗುವದಲ್ಲದೆ, ಸದ್ಯಕ್ಕೆ ಒಕ್ಕೂಟ ಅಧ್ಯಕ್ಷರು ಕಾಶ್ಮೀರದಿಂದ ೪ ಪ್ರತಿನಿಧಿಗಳನ್ನು ಆರಿಸುವರು. ಉಳಿದ ೧೦ ಜನರನ್ನು ಪ್ರೌಢಮತದಾನ ಪದ್ಧತಿಯಿಂದ 'ಅ' ಭಾಗದ ವಿಶ್ವವಿದ್ಯಾಲಯಗಳಿಂದ ಆರಿಸಲಾಗುವದು.

ಈಗ ರಾಜ್ಯಾಂಗ ಶಾಸನ ಸಭೆಗಳೆಂದರೇನೆಂದು ನೋಡುವಾ. ಕೇವಲ ೭ ಸಂಸ್ಥಾನಗಳಿಗೆ ಮಾತ್ರ ಶಾಸನ ಸಭೆಗಳಿದ್ದು ಅವುಗಳಲ್ಲಿ ಮೇಲ್ಮನೆಗೆ ವಿಧಿಮಂಡಳವೆಂದೂ ಕೆಳಮನೆಗೆ ಶಾಸನ ಸಭೆಯೆಂದೂ ಕರೆಯುವರು. ಈ ಏಳು ಸಂಸ್ಥಾನಗಳೆಂದರೆ (೧) ಬಿಹಾರ, (೨) ಮುಂಬೈ, (೩) ಮದ್ರಾಸ, (೪) ಪಂಜಾಬ್, (೫) ಉತ್ತರ ಪ್ರದೇಶ, (೬) ಪಶ್ಚಿಮ ಬಂಗಾಲ ಮತ್ತು (೭) ಮೈಸೂರು ಇವುಗಳಲ್ಲಿ ಬಿಹಾರ, ಮುಂಬೈ, ಮದ್ರಾಸು ಮತ್ತು ಉತ್ತರ ಪ್ರದೇಶಗಳ ವಿಧಿಮಂಡಳಗಳಲ್ಲಿ ೭೨ ಸದಸ್ಯರೂ ಪಶ್ಚಿಮ ಬಂಗಾಳಕ್ಕೆ ೫೧ ಮತ್ತು ಪಂಜಾಬ ಮತ್ತು ಮೈಸೂರಿಗೆ ಕೂಡಿ ೪೦ ಸದಸ್ಯರೂ ಇರುವರು. ಈ ಸದಸ್ಯರಲ್ಲಿ ಕೆಲವರನ್ನು ನಿಯುಕ್ತ ಪದ್ಧತಿಯಿಂದಲೂ ಆರಿಸಲಾಗುವದು. ೧/೩ ಸದಸ್ಯರನ್ನು ಡಿಸ್ಟ್ರಿಕ್ಟ್ ಬೋರ್ಡ, ನಗರ ಸಭೆ ಮತ್ತು ಸಿಟಿ ಕಾರ್ಪೋರೇಶನ್ ಮೊದಲಾದವುಗಳಿಂದ ಆರಿಸಲಾಗುವದು. ಇನ್ನೊಂದು ಮೂರಾಂಶ ಸದಸ್ಯರನ್ನು ಶಾಸನ ಸಭೆಯ ಸದಸ್ಯರಲ್ಲಿ ಮತ್ತೆ ಆರಿಸಲಾಗುವದು. ೧/೧೨ ಸದಸ್ಯರನ್ನು ಕನಿಷ್ಟ ೩ ವರ್ಷಗಳ ಅವಧಿಯುಳ್ಳ ಪದವೀಧರರು, ಮಾಧ್ಯಮಿಕ ಶಾಲೆಯ ಅಧ್ಯಾಪಕರು ಆವರಿಗಳಿಗಿಂದ ಆರಿಸಿ ತೆಗೆದುಕೊಳ್ಳುವದರಲ್ಲಿ ಬರುವದು. ಉಳಿದ ೧/೬ ಜನರನ್ನು ಗವ್ಹರ್ನರ್ ಅಥವಾ ರಾಜಪ್ರಮುಖರು ಆ ಜನರು ಮಾಡಿದ—ಸಾರ್ವಜನಿಕ ಸೇವೆ, ಸಾಹಿತ್ಯ ಸೇವೆ ಅಥವಾ ಇನ್ನಿತರ ಸಹಕಾರೀ ಆಂದೋಲನದಲ್ಲಿ ಭಾಗವಹಿಸಿದವರಲ್ಲಿ ಆರಿಸಿ ತೆಗೆದುಕೊಳ್ಳುವರು.

"'ಕ' ಭಾಗದಲ್ಲಿ ಬರುವ ಸಂಸ್ಥಾನಗಳಿಗೆ (ಕೊಡಗು ಬಿಟ್ಟು) ಮತ್ತು ಜಮ್ಮು ಕಾಶ್ಮೀರಗಳಿಗೆ ಈಗ ಸದ್ಯಕ್ಕೆ ಲೋಕ ನಿಯುಕ್ತ ಶಾಸನ ಸಭೆಗಳಿಲ್ಲ. ಕೊಡಗಿಗೆ ಸದ್ಯ ಒಂದು ಶಾಸನ ಸಭೆಯು ಇರುವದು ಮತ್ತು ಆ ಶಾಸನ ಸಭೆಯೇ ಕಾರ್ಯಕಲಾಪಗಳನ್ನು ಸಾಗಿಸುವದು. ೧೬ ಸಂಸ್ಥಾನಗಳಲ್ಲಿ ಪ್ರತಿಯೊಂದಕ್ಕೆ ಒಂದು ಶಾಸನ ಸಭೆಯಿದ್ದು ಅದರಲ್ಲಿ ೭ ಸಂಸ್ಥಾನಗಳಿಗೆ ಮಾತ್ರ ಎರಡು ಮನೆಗಳಿದ್ದು ಉಳಿದ ೯ ಸಂಸ್ಥಾನಗಳಿಗೆ ಒಂದೇ ಮನೆ ಇದ್ದು ಅದಕ್ಕೆ ಶಾಸನ ಸಭೆ ಎಂದು ಕರೆಯುವರು. ಈ ಎಲ್ಲಾ ಸದಸ್ಯರು ಪ್ರೌಢ ಮತದಾನ ಪದ್ಧತಿಯಿಂದಲೇ ಆರಿಸಲ್ಪಡುವರು.

ಈ ಲೋಕ ಸಭೆ ಕುರಿತು ರಾಜ್ಯಘಟನೆಯಲ್ಲಿ ಎರಡು ಮುದ್ರೆಗಳಿರುವವು. ಮೊದಲನೆಯದಾಗಿ ಇಡೀ ಹಿಂದುಸ್ಥಾನದ ಸದಸ್ಯರನ್ನು ಆರಿಸುವಾಗ ನಿರ್ಧಿಷ್ಟಪಡಿಸಿದ ಜನ ಸಂಖ್ಯೆಯ ಮಿತಿಯನ್ನು ಒಂದೇ ಸಮನಾಗಿ ಹಂಚಿರುವರು. ಪ್ರತಿಯೊಬ್ಬ ನಾಗರಿಕನಿಗೆ ಸಮಾನತ್ವದ ಹಕ್ಕನ್ನು ನಮ್ಮ ರಾಜ್ಯಘಟನೆಯು ಕೊಟ್ಟಿರುವದರಿಂದ ಲೋಕ ಸಭೆಯಲ್ಲಿ ಪ್ರತಿಯೊರ್ವ ಸದಸ್ಯನಿಗೆ ಸಮಾನ ಮತಾಧಿಕಾರವು ಇರುವದು. ಎರಡನೆಯದಾಗಿ ಸ್ವಾಯತ್ತತೆಯ ದುರುಪಯೋಗವಾಗದಂತೆ ಲೋಕ ಸಭೆಗೆ ಆರಿಸಿ ಬರುವ ಸದಸ್ಯನ ಮತದಾರರ ಮಿತಿಯನ್ನು ರಾಜ್ಯಘಟನೆಯು ಹಾಕಿಕೊಟ್ಟಿದೆ. ೭,೫೦,೦೦೦ ಜನರಿಗೆ ಒಂದಕ್ಕಿಂತ ಕಡಿಮೆ ಆಗದಂತೆ ಮತ್ತು ೫,೦೦,೦೦೦ ಜನರಿಗೆ ಒಂದಕ್ಕಿಂತ ಹೆಚ್ಚಾಗದಂತೆ ಮತದಾರರನ್ನು ಆರಿಸಲಾಗುವದು. ಅಂದರೆ ೭½ ಲಕ್ಷ ಜನರಿಗಿಂತ ಕಡಿಮೆಯಾಗದಂತೆ ಜನ ವಸತಿಯುಳ್ಳ ಕ್ಷೇತ್ರದಿಂದ ಓರ್ವ ಸದಸ್ಯನನ್ನು ಆರಿಸುವ ಹಕ್ಕು ಲೋಕ ಸಭೆಗೆ ಇದೆ. ಇದರಿಂದ ೭೨೦೦೦೦ ಜನರಿಗೆ ಓರ್ವ ಮತದಾರನು ಆರಿಸಿ ಬರುವನು. ಆದರೆ ಮೇಲಿನ ನಿಬಂಧನೆ ಮಾತ್ರ ಅತಿ ಸಣ್ಣದಾದ 'ಕ' ಭಾಗದ ಸಂಸ್ಥಾನಗಳಿಗೆ ಅನ್ವಯಿಸುವದಿಲ್ಲ. ಪ್ರತಿಯೊಂದು ಸಂಸ್ಥಾನದ ಶಾಸನ ಸಭೆಯ ಸದಸ್ಯರನ್ನು ಆ ಸಂಸ್ಥಾನದ ಲೋಕ ಸಭಾ ಸದಸ್ಯರ ದ್ವಿಗುಣಿತ ಸಂಖ್ಯೆಯಲ್ಲಿ ಆರಿಸಲಾಗುವದು. ಉದಾಹರಣೆಗೆ ಉತ್ತರ ಪ್ರದೇಶ ಮತ್ತು ಮದ್ರಾಸು ಲೋಕ ಸಭೆಗೆ ಅನುಕ್ರಮವಾಗಿ ೮೬ ಮತ್ತು ೭೫ ಸದಸ್ಯರಿದ್ದಾರೆ. ಆ ಮೇರೆಗೆ ಅವರ ಐದು ಪಟ್ಟು ಜನರು ಅಂದರೆ ೪೩೦ ಮತ್ತು ೩೭೫ ಸದಸ್ಯರ ಶಾಸನ ಸಭೆಗೆ ಆರಿಸಿ ಬರುವರು. ಇದರೆ ಬಿಹಾರಿಗೆ ೬ ಪಟ್ಟು, ಬೊಂಬಾಯಿ, ಓರಿಸಾ, ಪಂಜಾಬು ಪಶ್ಚಿಮ ಬಂಗಾಲ ಮತ್ತು ಹೈದ್ರಾಬಾದಿಗೆ ೭ ಪಟ್ಟು, ಮಧ್ಯಪ್ರದೇಶ ಮತ್ತು ರಾಜಸ್ಥಾನಗಳಿಗೆ ೮ ಪಟ್ಟು, ಆಸಾಮ, ಮಧ್ಯ ಭಾರತ, ಮೈಸೂರು, ತ್ರಾವಣಕೋರ ಮತ್ತು ಕೊಚ್ಚಿನ್‌ಗಳಿಗೆ ೯ ಪಟ್ಟು, ಸೌರಾಷ್ಟ್ರಕ್ಕೆ ೧೦ ಪಟ್ಟು ಮತ್ತು ಪೆಪ್ಸುಗೆ ೧೨ ಪಟ್ಟು ಹೀಗೆ ಹಂಚಿಕೆ ಮಾಡಿರುವರು. ಈ ತರದ ಮತದಾರರ ವಿಭಾಗವನ್ನು ಯು. ಪಿ. ಮತ್ತು ಮದ್ರಾಸಿಗೆ ಕೂಡಿ ೫, ಬಿಹಾರದಲ್ಲಿ ೬, ಮುಂಬಾಯಿ, ಓರಿಸಾ, ಪಂಜಾಬ, ಮತ್ತು ಪಶ್ಚಿಮ ಬಂಗಾಳಕ್ಕೆ ಕೂಡಿ ೭ ಹೀಗೆ ಕೂಡಿಸಿ ಒಂದೇ ಲೋಕ ನಿಯುಕ್ತ ಸಭೆಯನ್ನಾಗಿ ಮಾರ್ಪಾಡು ಮಾಡಲಾಗಿರುವದು. ಈ ಬಗ್ಗೆ ದೇಶದಲ್ಲಿ ಸ್ವಲ್ಪ ಭಿನ್ನಾಭಿಪ್ರಾಯ ಕಾಣ ಬರುತ್ತದೆ. ಓರ್ವ ಸದಸ್ಯ ಮತದಾರ ವಿಭಾಗಕ್ಕೆ ಜನರ ಒಲವು ಕಂಡು ಬರುತ್ತಿದ್ದು ಹಿಂದುಳಿದ ವರ್ಗ ಅಥವಾ ಆದಿವಾಸಿ ವರ್ಗಕ್ಕಾಗಿ ಕಾಯ್ದಿಟ್ಟ ಸ್ಥಳಗಳಲ್ಲಿ ಮಾತ್ರ ದ್ವಿ-ಸದಸ್ಯ ಮತದಾರ ವಿಭಾಗಕ್ಕೆ ಭಿನ್ನಾಭಿಪ್ರಾಯ ಕಂಡು ಬರುವುದಿಲ್ಲ. ಈ ಹೊಸ ರಾಜ್ಯಘಟನೆಯಂತೆ ಹಿಂದುಳಿದ ಮತ್ತು ಆದಿವಾಸಿ ವರ್ಗಗಳಿಗಾಗಿ ಮುಂದಿನ ೧೦ ವರ್ಷಗಳ ವರೆಗೆ ಅವರ ಜನ ಸಂಖ್ಯೆಯ ಮೇಲಿಂದ ಸ್ಥಳಗಳನ್ನು 'ಅ' ಮತ್ತು 'ಬ' ಭಾಗದಲ್ಲಿ ಕಾಯ್ದಿಡಲಾಗಿದೆ.

ಮತದಾರ ವಿಭಾಗದ ಗಡಿ ನಿರ್ಣಯ ತತ್ವದ ಮೇಲೆ ಸ್ವಲ್ಪ ವಿಚಾರ ಮಾಡೋಣ. ಆಯಾ ಸಂಸ್ಥಾನದ ಪಾರ್ಲಿಮೆಂಟರಿ ಸದಸ್ಯರಿಂದೊಡಗೂಡಿದ ೭ ಜನರ ಒಂದು ಸಮಿತಿಯನ್ನು ಕಾಯಿದೆಯಂತೆ ಪಾರ್ಲಿಮೆಂಟರಿ ಪ್ರಬೋಧಕರು ನೇ

ವಿ. ಸಿದ್ಧ್ವಾರಿ. ಈ ಸಮಿತಿಯವರು ಚುನಾವಣೆ ಸಮಿತಿಯವರೊಂದಿಗೆ ಆಲೋಚನೆ ಮಾಡಿ ತಮ್ಮ ಗಡಿ ನಿರ್ಣಯವನ್ನು ಕೊಡುವರು. ಅಲ್ಲಿ ಪ ಮುಂದೆ ಚುನಾವಣಾ ಸಮಿತಿಯವರು ಅದನ್ನು ರಾಷ್ಟ್ರಾಧ್ಯಕ್ಷರಿಗೆ ಒಪ್ಪಿಸುವರು. ಅದರ ನಂತರ ರಾಷ್ಟ್ರಾಧ್ಯಕ್ಷರು ಅದನ್ನು ಪರಿಶೀಲಿಸಿ ಗಡಿನಿರ್ಣಯವನ್ನು ಜುಲೈಯಲ್ಲಿ ತರುವರು ಜುಲೈಯಲ್ಲಿ ತರುವ ಮುಂದಿನ ಪಾರ್ಲಿಮೆಂಟಿನಲ್ಲಿ ಚರ್ಚೆಯಾಗಿ ೨೦ ದಿನಗಳ ನಂತರ ಅದು ಅಮಲಿನಲ್ಲಿ ಬರುವದು. ಇದೆಲ್ಲವನ್ನು ಆಚರಣೆಯಲ್ಲಿ ತರುವುದಕ್ಕೋಸ್ಕರ ಮೊದಲು ಪಾರ್ಲಿಮೆಂಟಿನ ಗಡಿ ಸಮಿತಿಯವರು ನಿರ್ಣಯಿಸಿದ ಠರಾವನ್ನು ಸಾರ್ವಜನಿಕರ ಅವಗಾಹನೆಗೆ ಕೊಟ್ಟು ಅದರಿಂದ ಬರುವ ಸಲಹೆಗಳನ್ನು ಕೂಡ ನಿರೀಕ್ಷಿಸಿ ಯೋಗ್ಯ ಕಂಡದ್ದನ್ನು ಸೇರಿಸಿ ಕೊಂಡು ಮುಂದಿನ ಹೆಜ್ಜೆಯನ್ನಿಡಲಾಗುವದು. ಇನ್ನು ಸಂಸ್ಥಾನ ಶಾಸನಸಭೆಯ ಗಡಿನಿರ್ಣಯದ ಬಗ್ಗೆ ವಿಚಾರ ಮಾಡೋಣ. ಕನಿಷ್ಟ ೭೫,೦೦೦ಕ್ಕೆ ಓರ್ವನಂತೆ ಸದಸ್ಯನನ್ನು ಆರಿಸುವ ಹಕ್ಕು ಶಾಸನ ಸಭೆಗಿದೆ. ಇದು ಪೆಪ್ಸು ಮತ್ತು ಸೌರಾಷ್ಟ್ರಕ್ಕೆ ಅನ್ವಯಿಸುವದಿಲ್ಲ ಯಾಕೆಂದರೆ ಆ ಭಾಗದಿಂದ ರಾಜ್ಯಘಟನೆಯಂತೆ ಕನಿಷ್ಟ ೬೦ ಸದಸ್ಯರು ಆರಿಸಿ ಹೋಗಲೇ ಬೇಕಾಗಿದೆ. ಶಾಸನ ಸಭೆಯ ಆಸನಕ್ಕಾಗಿ ಕನಿಷ್ಟ ಮತದಾರರಂತೆ ಹೆಚ್ಚಿಗೆ ಮತದಾರರ ಸಂಖ್ಯೆಯ ವ್ಯಾಖ್ಯೆಯು ಎಲ್ಲಿಯೂ ಇಲ್ಲ ಅಂದಮಾತ್ರಕ್ಕೆ ಶಾಸನ ಸಭೆಯ ಚುನಾವಣೆಯ ಕ್ಷೇತ್ರದಲ್ಲಿ ಮೋಸಕ್ಕೆ ಆಸ್ಪದವಿರಬಹುದೆಂಬ ತಪ್ಪು ಕಲ್ಪನೆಯನ್ನು ಯಾರೂ ಮಾಡಿಕೊಳ್ಳಬಾರದು. ಲೋಕಸಭೆಯ ಚುನಾವಣೆಗೂ ಕೂಡ ರಾಜ್ಯಘಟನೆಯಲ್ಲಿ ಇದೇ ಕಾಯಿದೆಯನ್ನು ಅನ್ವಯಿಸಲಾಗಿದೆ. ಯಾವದಾದರೊಂದು ಸಂಸ್ಥಾನದಿಂದ ಶಾಸನ ಸಭೆಗೆ ಸದಸ್ಯರನ್ನು ಆರಿಸಿಕೊಡುವಾಗ ಮತದಾರರ ಸಂಖ್ಯೆಯ ಪರಿಮಿತಿಯು ಇಡೀ ಸಂಸ್ಥಾನದಲ್ಲಿ ಒಂದೇ ಸಮನಾಗಿರಬೇಕು. ಲೋಕಸಭಾ ಮತದಾರ ಕ್ಷೇತ್ರದಲ್ಲಿಯೂ ಕೂಡ ಇದೇ ಬಗೆಯ (ಅಂದರೆ ಪ್ರತ್ಯೇಕ) ಶಾಸನ ಸಭೆಯಲ್ಲಿ ನಾವು ಈ ಹಿಂದೆ ಓದಿದಂತೆ ೫, ೬, ೭, ೮, ೯, ೧೦ ಅಥವಾ ೧೨ ಮತದಾರರಂತೆ ವ್ಯವಸ್ಥೆಯನ್ನು ಮತದಾರರ ಸಂಖ್ಯೆಯು ಮೇಲಿಂದ ಮಾಡಲಾಗಿದೆ. ಅಂದರೆ ಸರ್ವಸಾಮಾನ್ಯವಾಗಿ ೧೨೦೦೦೦ ಜನರಿಗೊಂದು ಆಸನವಿರುವದು. ಇವೆಲ್ಲವನ್ನು ಲಕ್ಷ್ಯದಲ್ಲಿ ತಂದುಕೊಂಡರೆ ಮತದಾರ ಕ್ಷೇತ್ರದಲ್ಲಿ ಒಂದು ಸಂಘಟಕ್ಕಾಗಲೀ ಅಥವಾ ಪಕ್ಷಕ್ಕಾಗಲೀ ಚುನಾವಣೆಯಲ್ಲಿ ಮಿತಿ ಮೀರಿದ ಪ್ರಾಬಲ್ಯ ಅಥವಾ ಕುಟಿಲ ಕಾರಸ್ಥಾನ ಮಾಡಲಿಕ್ಕೆ ಆಸ್ಪದ ದೊರೆಯದ ಹಾಗೆ ನಮ್ಮ ರಾಜ್ಯಘಟನೆಯಲ್ಲಿ ವ್ಯವಸ್ಥೆ ಮಾಡಿದ್ದು ಕಂಡುಬರುವದು.

ಆದರೆ ಗಡಿನಿರ್ಣಯದಂತಹ ಕಠಿಣ ಕಾರ್ಯವನ್ನು ಮೂರ್ತಿಮಂತ್ರವಾಗಿ ಕಾರ್ಯಾಚರಣೆಯಲ್ಲಿ ತರುವ ಯೋಜನೆಗಳನ್ನು ಪರಿಶೀಲಿಸುವಾಗ ಮಾತ್ರ ಹಲವಾರು ತೊಂದರೆಗಳು ಹುಟ್ಟುತ್ತಾಗಿ ಆ ಸಮಿತಿಗೆ ಅನುಭವಿಸಿಕೊಳ್ಳುವದು ಖಂಡಿತ.

ಪ್ರಕಟಣೆ.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವುದೇನೆಂದರೆ:—

ಪೊನ್ನಂಪೇಟೆನಾಡು ಅರೆಕಾಡು ಗ್ರಾಮದಕ್ಷಿಣದ ಗಿರಿಗೌಡರ ಮನೆ ಸಂಜಪ್ಪನವರ ಮಗ ವೆಂಕಟಪ್ಪನವರ ಈ ಬಾಬು 350 ಒಟ್ಟು ಭೂಮಿ, ಅಕ್ಕಿ ಸೇರಿದ ಜಾಗ ಮತ್ತು ಕಿತ್ತಳೆ ತೋಟ ಸ್ವಾಧೀನವಿದ್ದು ಅನುಭವದಲ್ಲಿರುತ್ತಾರೆ. ಸದರಿ ಆಸ್ತಿಗಳು ಪಿತ್ರಾರ್ಜಿತದ ಆಸ್ತಿಗಳಾಗಿರುತ್ತವೆ. ಸದರಿ ವೆಂಕಟಪ್ಪನವರಿಗೆ 3 ಗಂಡು ಮಕ್ಕಳು, 3 ಹೆಣ್ಣು ಮಕ್ಕಳು, ಇಬ್ಬರು ಹೆಂಡಿರು, ಮತ್ತು ತಾಯಿ ಇರುತ್ತಾರೆ. ಇವರಿಗೂ ಸದರಿ ಆಸ್ತಿಗಳಲ್ಲಿ ಹಕ್ಕಿದೆ. ಸದರಿ ವೆಂಕಟಪ್ಪನವರು ಕುಡಿತದಕ್ಕಾಗಿಯೂ, ಇತರ ದುರ್ನಡತೆಗಳಿಗಾಗಿಯೂ ತುಂಬಾ ಸಾಲ ಮಾಡಿರುತ್ತಾರೆ; ಮಾಡುತ್ತಲೂ ಇದ್ದಾರೆ. ಈ ಸಾಲಗಳ ದೆಸೆಯಿಂದಲೂ, ಇನ್ನೂ ಸಾಲ ಕೆಟ್ಟ ಉದ್ದೇಶಗಳಿಗಾಗಿ ಹಣ ಪಡೆಯುವ ಉದ್ದೇಶಕ್ಕಾಗಿಯೂ ಸದರಿ ಆಸ್ತಿಗಳನ್ನು ಗಿರ್ವಿ, ಭೋಗ್ಯ ಅಥವಾ ಮಾರಾಟ ಮಾಡುವ ಪ್ರಯತ್ನದಲ್ಲಿರುತ್ತಾರೆಂದು ತಿಳಿದು ಬಂದಿದೆ. ಅವ್ಯವಹಾರಿಕ ಸಾಲಗಳನ್ನು ನಿವಾರಿಸುವ ಮತ್ತು ಮಕ್ಕಳ ಹಿತದೃಷ್ಟಿಯಿಂದ ಸದರಿ ಆಸ್ತಿಗಳನ್ನು ಪರಾಧೀನ ಮಾಡಲು ತೊಡಗುವ ಸದರಿ ವೆಂಕಟಪ್ಪನವರಿಂದ, ಸದ್ರಿ ಆಸ್ತಿಗಳನ್ನು ಯಾರೂ ಪಡಕೊಳ್ಳಕೂಡದೆಂದು ಈ ಮೂಲಕ ಎಚ್ಚರಿಸಿದೆ. ಒಂದು ವೇಳೆ ಹಾಗೆ ಅವರಿಂದ ಯಾರಾದರೂ ಸದರಿ ಆಸ್ತಿಗಳ ಗಿರ್ವಿಯಿಂದಾಗಲೀ ಭೋಗ್ಯದಿಂದಾಗಲೀ ಹಣ ಕೊಟ್ಟದ್ದೇ ಆದರೆ ಅಥವಾ ಸದರಿ ಆಸ್ತಿಗಳನ್ನು ಕೊಂಡುಕೊಂಡದ್ದೇ ಆದರೆ ಹಾಗೆ ಪಡಕೊಂಡವರಿಗೆ ಸದ್ರಿ ಆಸ್ತಿಗಳಿಗೆ ಯಾವ ಹಕ್ಕೂ ದೊರಕಲಾರದೆಂದು ಈ ಮೂಲಕ ತಿಳಿಸಲಾಗಿದೆ

ಗಿರಿಗೌಡನ ಮನೆ ಸಂಜಪ್ಪನವರ ಮಗ ವೆಂಕಟಪ್ಪನವರ ಪತ್ನಿ ಮುಂಡಮ್ಮ (ತನ್ನ ಪರವಾಗಿಯೂ ಮತ್ತು ತನ್ನ ಮೈನರ್ ಮಕ್ಕಳ ಪರವಾಗಿಯೂ.)

3-2
1-5-1951

ತಿಳಿಸಿರಿ.

ಭೂಮಿ, ತೋಟ, ಜಾಗ ಪೇಟೆಯಲ್ಲಿ ಮನೆ ಅಥವ ಮನೆ ಸೈಟು ಮಾರಲಿರುವವರು ಮತ್ತು ಕೊಂಡುಕೊಳ್ಳಲಿಚ್ಛಿಸುವವರು ಈ ಕೆಳಗಿನ ಪತ್ತೆಯಲ್ಲಿ ವಿಚಾರಿಸಿರಿ. ಅಲ್ಲದೆ ಬೇಕಾದವರಿಗೆ ಕರೆಯುವ ಎಮ್ಮೆ, ಹಸು ಮತ್ತು ಉಳುವ ಎತ್ತು ಮತ್ತು ಕೋಣಗಳನ್ನೂ ಒದಗಿಸಿ ಕೊಡಲಾಗುವುದು. ಬೇಕಿರುವವರು ತಮಗೆ ಬೇಕಾದ ತಾರೀಕಿನ ಎಂಟು ದಿನಗಳಿಗೆ ಮುಂದೆ ತಿಳಿಸಬೇಕಾಗಿದೆ. ವಿವರಗಳಿಗೆ ಈ ಪತ್ತೆಗೆ ಬರೆಯಬಹುದು.

D. A. N. & SONS,
Commission Agent,
Gonicoppal
S. Coorg.

26-14

ಕೊಡಗು ಪ್ರಾಂತೀಕ ಸಹಕಾರಿ, ಮಾರ್ಕೆಟಿಂಗ್, ಫೆಡರೇಷನ್ ಲಿಮಿಟೆಡ್., ವೀರಾಜಪೇಟೆ.

ನಮ್ಮಲ್ಲಿ ಕೋವಿಗಳು, ತೋಟೆಗಳು ಮತ್ತು ಎಲ್ಲಾ ತರಹದ ವ್ಯವಸಾಯದ ಹತ್ಯಾರುಗಳು ದೊರೆಯುತ್ತವೆ

1. 32 ಪಿಸ್ತೂಲುಗಳು (Pistols) ಕ್ರಯ ರೂ 162 ರಿಂದ 245ರ ವರೆಗೆ.
2. 12ನೇ ನಂಬರಿನ ಒಂಟಿ ಹೋಳವಿನ ಕೋವಿ ಕ್ರಯ ರೂ. 320-0-0
3. 12ನೇ ನಂಬರಿನ ಜೋಡು ಹೋಳವಿನ ಕೋವಿ (Webley & Scott)
4. 12ನೇ ನಂಬರಿನ ಜೋಡು ಹೋಳವಿನ ಕೋವಿ (Spanish make)
5. .32 ಪಿಸ್ತೂಲು ಮತ್ತು ರಿವಾಲ್ವರುಗಳ ತೋಟೆಗಳೂ ಸಹ ದೊರೆಯುತ್ತವೆ.
6. ಕಾಫಿ ಮತ್ತು ಕಿತ್ತಳೆ ಗಿಡಗಳಿಗೆ ಸ್ಪ್ರೆ ಮಾಡುವ ಪಂಪುಗಳು (Spraying Pumps)
7. ⅜" ⅝" ¼" ³⁄₁₆" ⅛" ಕಬ್ಬಿಣದ ಸಲಾಕೆಗಳು.

ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

(ಅವಶ್ಯವಿರುವ ಕೋವಿಗಳಿಗೂ, ತೋಟೆಗಳಿಗೂ ಜಿಲ್ಲಾ ಮೇಜಿಸ್ಟ್ರೇಟರಿಂದ ವಿಶೇಷ ಪರ್ಮಿಟು "Special permit" ಪಡೆದವರಿಗೆ ಮಾತ್ರ ದೊರೆಯುವುದು)

52-33

ಎಂ. ಎಸ್. ಸೋಮಯ್ಯ,
ಗೌರವ ಕಾರ್ಯದರ್ಶಿ.

ದಿ ಟ್ರಾಪಿಕಲ್
ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

ಮೇನೇಜಿಂಗ್ ಡೈರೆಕ್ಟರ್:— ಲಾಲ ಶಂಕರ್ ಲಾಲ್.
ಮುಖ್ಯ ಕಛೇರಿ:— ಹೊಸ ಡೆಲ್ಲಿ.

52-3 ಸ್ಥಾಪಿಸಿದ ಡೈರೆಕ್ಟರರು:

ಪಂಡಿತ ಮೋತಿಲಾಲ್ ನೆಹರು. ಎಸ್. ಶ್ರೀನಿವಾಸ ಅಯ್ಯಂಗಾರ್
ಹಕೀಂ ಅಜಮುಲಖಾನ್. ಡಾ|| ಎಂ. ಎ. ಅನ್ಸಾರಿ.

Transacts:-Life, Fire, Motor, and Marine.

ಯಂ. ಯಂ. ಅಚ್ಚಣ್ಣ, ಇನ್ಸ್‌ಪೆಕ್ಟರು, ಮಡಿಕೇರಿ, ಕೊಡಗು.

ಎಂ. ಎ. ಬೆಳ್ಯಪ್ಪ, ಬ್ರಾಂಚ್ ಸೆಕ್ರೆಟರಿ, ಹಂಪನಕಟ್ಟೆ, ಮಂಗಳೂರು.

ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟ್ರಾಗಿದೆ. (1921ರಲ್ಲಿ ಸ್ಥಾಪಿತವಾಗಿದೆ.

ಅಧಿಕೃತ ಶೇರು ಭಂಡವಾಳ	ರೂ.	10,00,000.
ವಸೂಲಾದ ಶೇರು ಮೊಬಲಗು	ರೂ.	1,99,400.
ಕ್ಷೇಮನಿಧಿ	ರೂ.	59,000.
ಇತರ ನಿಧಿಗಳು	ರೂ.	36,000.

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನೂ ಕೈಕೊಳ್ಳಲಾಗುವುದು

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ, ಬೆಳ್ಳಿ ನಗಗಳ ಈಡಿನ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ ಯೂ ಡ್ರಾಫ್ಟ್‌ಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರಿನಿಟಿ ಮತ್ತು ವಾಡರ್ನ್ ಇನ್ಶೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಗೌ. ಕಾರ್ಯದರ್ಶಿ,

ಕೆ. ಪಿ. ಅಪ್ಪಯ್ಯ, M. L. C. ಪ್ರೆಸಿಡೆಂಟ್ ಮತ್ತು ಏಜಂಟ್.

Edited Printed and Published by P. I. Belliappa at 'Kodagu' Press, Mercara, for 'Kodagu' Ltd.

ಕೊಡಗು

ತಾ. ೧೧-೫-೧೯೫೧ನೇ ಶುಕ್ರವಾರ

ಕಾಂಗ್ರೆಸ್ಸಿನ ಮುಂದಿನ ಸ್ಥಿತಿ.

ಕಾಂಗ್ರೆಸ್ ಮಹಾಸಂಸ್ಥೆಯು ಸ್ವಾತಂತ್ರ್ಯಕ್ಕಾಗಿ ಹೋರಾಟ ನಡೆಸುತ್ತಿದ್ದ ಕಾಲದಲ್ಲಿ ಅದರ ಸದಸ್ಯರು ದೇಶಸೇವೆಗಾಗಿ ತ್ಯಾಗಮಾಡುತ್ತಿದ್ದ ಕಾರಣ ಈ ಸಂಸ್ಥೆಯಲ್ಲಿ ಒಗ್ಗಟ್ಟಿದ್ದು ಬಲಾಢ್ಯವಾದ ಬ್ರಿಟಿಷ್ ಸರಕಾರವನ್ನು ಕೂಡ ಹೊರತಳ್ಳುವ ಶಕ್ತಿಯನ್ನು ಪಡೆಯಿತು. ಆದರೆ ಸ್ವಾತಂತ್ರ್ಯ ದೊರೆತ ನಂತರ, ಅದರಲ್ಲೂ ಕಾಂಗ್ರೆಸಿನ ನೈತಿಕ ಸೂತ್ರಧಾರಿಯಾಗಿದ್ದ ಮಹಾತ್ಮಾಗಾಂಧಿಯವರನ್ನು ಕಳಕೊಂಡ ಮೇಲೆ ಅದರ ಸದಸ್ಯರಲ್ಲಿ ಚಿಕ್ಕ ಒಳಸಂಗಡಗಳಾಗಿ ಅಧಿಕಾರಕ್ಕಾಗಿ ಹೋರಾಟ ಪ್ರಾರಂಭವಾಯಿತು. ಸ್ವರಾಜ್ಯ ದೊರೆತ ಬಳಿಕ ಕಾಂಗ್ರೆಸ್ ಸಮಿತಿಗಳಿಗೆ ಚುನಾವಣೆ ನಡೆದುದು ಈ ವರ್ಷ ಪ್ರಥಮವಾಗಿದೆ. ಅಲ್ಲದೆ ಈ ವರ್ಷ ಕೊನೆಯೊಳಗೆ ಪಾರ್ಲಿಮೆಂಟ್ ಸಭೆ ಹಾಗೂ ಪ್ರಾಂತೀಯ ಶಾಸನ ಸಭೆಗಳಿಗೆ ಸಾರ್ವತ್ರಿಕ ಚುನಾವಣೆ ನಡೆಯಲಿದೆ. ಈ ಕಾರಣದಿಂದ ಹಲವು ಪ್ರದೇಶಗಳಲ್ಲಿ ಕಾಂಗ್ರೆಸ್ ಸಂಸ್ಥೆಗಳಲ್ಲಿ ಅಧಿಕಾರದಲ್ಲಿದ್ದವರು ಬೇಗನೆ ನಡೆಯಲಿರುವ ಚುನಾವಣೆಯಲ್ಲಿ ತಮ್ಮ ಗುಂಪಿಗೆ ಸೇರಿದವರಲ್ಲೇ ಅಧಿಕಾರವನ್ನಿಟ್ಟುಕೊಳ್ಳಬೇಕೆಂಬ ದೃಷ್ಟಿಯಿಂದ ಕಾಂಗ್ರೆಸಿನ ಒಳಗೂ ಮತ್ತು ಹೊರಗೂ ಇದ್ದ ಗುಂಪಿನ ಕಾಂಗ್ರೆಸ್ ಪ್ರಾಥಮಿಕ ಅಧಿಕೃತ ಮತ್ತು ಸಕ್ರಿಯ ಮೆಂಬರುಗಳನ್ನು ಸೇರಿಸಲು ಸರಾಗವಾಗಿ ಬಿಡದೆ ಹಲವು ತರದ ಅಡಚಣೆಗಳನ್ನು ತಂದೊಡ್ಡಿ ಚುನಾವಣೆಯಲ್ಲೂ ಕೂಡ ಅಕ್ರಮಗಳನ್ನು ನಡೆಸಿ ಜನರಲ್ಲಿ ಕಾಂಗ್ರೆಸ್ಸಿನ ಒಳಗೇನೇ ತುಂಬಾ ಅತೃಪ್ತಿಗೆ ಎಡೆಮಾಡಿದರು. ಅಲ್ಲದೆ ಕಾಂಗ್ರೆಸ್ ಸರಕಾರಗಳಲ್ಲೂ ಕೂಡ ಜನರು ನಿರೀಕ್ಷಿಸಿದಷ್ಟು ದಕ್ಷತೆ ಮತ್ತು ಪ್ರಾಮಾಣಿಕತನದಿಂದ ಆಡಳಿತವು ನಡೆಸಲ್ಪಡದಿರುವದು ಜನತೆಯಲ್ಲಿ ಮತ್ತೂ ಅಸಮಾಧಾನಕ್ಕೆ ಅವಕಾಶವಾಯಿತು. ಇದೆಲ್ಲವನ್ನು ಸರಿಪಡಿಸುವ ಉದ್ದಿಶ್ಯದಿಂದಲೇ ಕಾಂಗ್ರೆಸಿನೊಳಗೇ ಡೆಮೊಕ್ರೆಟಿಕ್ ಪಕ್ಷವೊಂದು ಸ್ಥಾಪಿಸಲ್ಪಟ್ಟಿತು. ಆದರೆ ಇಂಥಾ ಪಂಗಡದಿಂದ ಕಾಂಗ್ರೆಸಿನ ಕೀರ್ತಿಗೂ ಶಕ್ತಿಗೂ ಧಕ್ಕೆ ತಗಲುವದೆಂದು ಪ್ರಧಾನಮಂತ್ರಿ ಪಂಡಿತ ಜವಾಹರಲಾಲ್ ನೆಹರೂ ಮತ್ತು ವಿದ್ಯಾಮಂತ್ರಿ ಮೌಲಾನಾ ಆಝಾದರು ಮುಂದಿಟ್ಟು ಮಾಡಿದ್ದರಿಂದ ಈ ಪಂಗಡದ ಮುಂದಾಳುಗಳು ಸೇರಿ ಈ ಪಕ್ಷವನ್ನು ರದ್ದುಗೊಳಿಸಲು ತೀರ್ಮಾನಿಸಿರುವರು. ಈ ತೀರ್ಮಾನದಿಂದ ಕಾಂಗ್ರೆಸಿನ ಒಗ್ಗಟ್ಟು ಬಲವಾಗಿದೆಯೆಂದು ಪ್ರಥಮದಲ್ಲಿ ತೋರಿತು. ಆದರೆ ಈ ಪಂಗಡದ ಮುಖಂಡರ ಹೇಳಿಕೆಯನ್ನು ವಿಮರ್ಶಿಸಿದರೆ ಕಾಂಗ್ರೆಸಿನೊಳಗೆ ಎಲ್ಲವೂ ಸರಿಯಾಗಿದೆಯೆಂದು ಕಾಂಗ್ರೆಸ್ಸನ್ನು ಬಲಪಡಿಸಲು ಈ ಪಕ್ಷವನ್ನು ರದ್ದು ಮಾಡಿರುವದಲ್ಲವೆಂದೂ ಬದಲು ಇವರು ಕಾಂಗ್ರೆಸನ್ನು ಬಿಟ್ಟು ಹೊರಗೆ ಬಂದು ಬೇರೊಂದು ಪಕ್ಷವನ್ನು ಏರ್ಪಡಿಸಲಿರುವರೆಂದೂ ತೋರಿಬರುತ್ತದೆ. ಇದು ನಿಜವಾದರೆ ಡೆಮೊಕ್ರೆಟಿಕ್ ಪಕ್ಷವನ್ನು ವಿಸರ್ಜನೆ ಮಾಡಿದುದಕ್ಕಾಗಿ ಸಂತೋಷಪಡಲು ಅವಕಾಶವಿಲ್ಲ. ಕಾಂಗ್ರೆಸಿನ ಶಕ್ತಿಯನ್ನು ಮೊದಲಿದ್ದಂತೆಯೇ ಇಟ್ಟುಕೊಳ್ಳಬೇಕಾದರೆ ಕಾಂಗ್ರೆಸಿನೊಳಗೆ ಈ ಮೊದಲು ಎಡೆಬಿಡದೆ ಹಲವು ವರ್ಷಗಳಿಂದ ಸೇವೆಮಾಡಿ ಸ್ವಾತಂತ್ರ್ಯ ಹೋರಾಟದಲ್ಲಿ ಶಕ್ತಿಮೀರಿ ತ್ಯಾಗಮಾಡಿದ ಮಹನೀಯರನ್ನು ಈ ಸಂಸ್ಥೆಯಿಂದ ಹೊರಹೋಗಲು ಬಿಡಬಾರದು. ಇಷ್ಟರ ವರೆಗೆ ಕಾಂಗ್ರೆಸ್ ಮೆಂಬರುಶಿಪನ್ನು ಮಾಡುವುದರಲ್ಲೂ ಮತ್ತು ಚುನಾವಣೆಯಲ್ಲೂ ಆದಂಥಾ ಅಕ್ರಮಗಳನ್ನು ನಿಷ್ಪಕ್ಷಪಾತ ದೃಷ್ಟಿಯಿಂದ ವಿಚಾರಿಸಿ ನ್ಯಾಯವಾದ ತೀರ್ಪನ್ನು ಕೊಡಬೇಕಾಗಿದೆ. ಪ್ರಾಂತೀಯ ಚುನಾವಣಾ ಟ್ರಿಬ್ಯೂನಲ್‌ಗಳೇ ಇಂಥಾ ವಿಚಾರಗಳಲ್ಲಿ ಪಕ್ಷವಹಿಸಿವೆಂದು ತಿಳಿದುಬಂದುದರಿಂದ ಈಗ ಕೇಂದ್ರ ಚುನಾವಣಾ ಟ್ರಿಬ್ಯೂನಲೊಂದನ್ನು ನೇಮಿಸಿರುವದಾಗಿದೆ. ಈ ಸಮಿತಿಯೂ ಅವರ ಮುಂದಿಟ್ಟಿರುವ ಪುಕಾರುಗಳನ್ನು ನಿಷ್ಪಕ್ಷಪಾತದಿಂದ ವಿಮರ್ಶಿಸುವುದಲ್ಲದೆ ಅಧಿಕಾರದಲ್ಲಿರುವವರು ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಅಹಮದಾಬಾದಿನ ತೀರ್ಮಾನದಂತೆ ಕಾಂಗ್ರೆಸಿನೊಳಗಿರುವ ಪಂಗಡಗಳ ಭಿನ್ನಬೇಧಗಳನ್ನು ತೆಗೆದು ಹಾಕಿ ಕಾಂಗ್ರೆಸಿನಲ್ಲಿ ಐಕ್ಯತೆಯನ್ನು ಸಾಧಿಸಲು ಸರ್ವಯತ್ನ ಮಾಡಬೇಕಾಗಿದೆ. ಈ ರೀತಿಯ ಪ್ರಯತ್ನವು ಇಷ್ಟರ ವರೆಗೆ ಪ್ರಾಂತಗಳಲ್ಲಾಗಲೀ, ಜಿಲ್ಲೆಗಳಲ್ಲಾಗಲೀ ಮಾಡಿದಂತೆ ಕಂಡುಬರುವದಿಲ್ಲ. ಅಧಿಕಾರದಲ್ಲಿರುವವರು ನಿಯಮನಿಬಂಧನೆಗಳನ್ನು ಉಪಯೋಗಿಸಿ ಬರೇ ಶಿಸ್ತನ್ನು ಜಾರಿಗೆ ತರಲು ಪ್ರಯತ್ನಿಸುತ್ತಾ ತಮಗೆ ವಿರುದ್ಧವಿರುವವರನ್ನು ಮೂಲೆಗೊತ್ತಲು ಯತ್ನಿಸಿದ್ದೇ ಆದರೆ ಇಂದಿನ ಸ್ಥಿತಿಯಲ್ಲಿ ಕಾಂಗ್ರೆಸಿನ ಒಗ್ಗಟ್ಟು ಹೆಚ್ಚಾಗಲಾರದು. ನಿಜವಾಗಲು ಅನ್ಯಾಯ, ತಪ್ಪುಗಳಿದ್ದಲ್ಲಿ ಸಹಾನುಭೂತಿಯಿಂದ ವಿಮರ್ಶಿಸಿ ಕಾಂಗ್ರೆಸ್ ಭಕ್ತರನ್ನು ಸಮಾಧಾನಗೊಳಿಸುವಂಥಾ ಧೋರಣೆಯನ್ನು ವಹಿಸುವದು ಈಗಿನ ಪರಿಸ್ಥಿತಿಯಲ್ಲಿ ಅತ್ಯವಶ್ಯವಾಗಿದೆ. ಈಗಾಗಲೇ ಕಾಂಗ್ರೆಸ್ಸಿನ ಹೊರಗೆ ಸಮತಾವಾದಿ, ಉಗ್ರಸಮತಾವಾದಿ, ಹಿಂದೂ ಮಹಾಸಭೆ ಮುಂತಾದ ಪಕ್ಷಗಳು ಕಾಂಗ್ರೆಸಿನ ವಿರುದ್ಧ ಟೊಂಕಕಟ್ಟಿ ಜನತೆಯನ್ನು ಸಂಘಟಿಸಲು ಪ್ರಾರಂಭಿಸಿವೆ. ಕಾಂಗ್ರೆಸ್ಸಿನೊಳಗೆ ಅವ್ಯವಸ್ಥೆಯಿಂದಾಗಿ ಆಂಧ್ರ ಮತ್ತು ಬಂಗಾಳಗಳಲ್ಲಿ ಪ್ರಜಾ ಪಾರ್ಟಿ, ತಮಿಳು ನಾಡು, ಮಲಬಾರು, ಉತ್ತರ ಪ್ರದೇಶ, ಬಿಹಾರಗಳಲ್ಲಿ ಇತರ ಪಕ್ಷಗಳು ರೂಪುಗೊಳ್ಳುತ್ತಿವೆ. ಇವೆಲ್ಲವುಗಳು ಕಾಂಗ್ರೆಸಿನ ಮುಂದಿನ ಜಯಕ್ಕೆ ಉತ್ತಮ ಚಿಹ್ನೆಗಳಲ್ಲ. ಕಾಂಗ್ರೆಸಿನಲ್ಲಿ ಅಧಿಕಾರದಲ್ಲಿರುವವರು ಈ ಚಿಹ್ನೆಗಳನ್ನು ನಿಗವಿಟ್ಟು ಆಲೋಚಿಸಿ ಕಾಂಗ್ರೆಸಿನ ತತ್ವಗಳ ಮೇಲೆ ವಿಶ್ವಾಸವಿರುವ ಪ್ರತಿಯೊಬ್ಬ ವ್ಯಕ್ತಿಗೂ ಈ ಸಂಸ್ಥೆಯಲ್ಲಿ ಅವಕಾಶ ಕೊಟ್ಟು ಕಾಂಗ್ರೆಸಿನ ಶಕ್ತಿಯನ್ನು ಕಾಪಾಡ ಬೇಕಾಗಿದೆ. ಕಾಂಗ್ರೆಸ್ಸು ಒಂದು ಮಹಾ ಸಂಸ್ಥೆ, ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿ ಜನತೆಯು ಈ ಸಂಸ್ಥೆಯನ್ನು ಪೂಜಿಸುತ್ತಿದ್ದಂತೆ ಮುಂದಿನ ಚುನಾವಣೆಯಲ್ಲೂ ಜನರು ಬೆಂಬಲವನ್ನೀಯುವರೆಂದು ಕಾಂಗ್ರೆಸಿನ ಕಾರ್ಯಕರ್ತರು ಕನಸು ಕಾಣುತ್ತಿದ್ದರೆ, ಬೇಗನೆ ಅವರು ನಿರಾಶರಾಗುವರಲ್ಲದೆ ಕಾಂಗ್ರೆಸು ತನ್ನ ಯಶಸ್ಸನ್ನು ಕಳಕೊಳ್ಳಬೇಕಾಗುವದು. ಆದುದರಿಂದ ಕಾಂಗ್ರೆಸು ಮುಂದಾಳುಗಳು ಸಕಾಲದಲ್ಲಿ ಎಚ್ಚೆತ್ತು ಯೋಗ್ಯ ಪ್ರಯತ್ನದಿಂದ ಕಾಂಗ್ರೆಸಿನ ಒಗ್ಗಟ್ಟನ್ನು ಸಾಧಿಸಿ ಆ ಮೂಲಕ ದೇಶದ ಕಲ್ಯಾಣಕ್ಕೆ ಕಾರಣರಾಗುವರೆಂದು ಆಶಿಸುತ್ತೇನೆ.

ವರ್ತಮಾನ.

ಡೆಲ್ಲಿಯಲ್ಲಿ ನಡೆಯುವ ಟೆಕ್ಸ್‌ಟೈಲ್ ಸಮ್ಮೇಳನಕ್ಕೆ ಹೋಗುವ ಚೀಫ್ ಕಮಿಷನರೊಂದಿಗೆ ಆ ಇಸಿ ಮನರೂ ತಾ ೫ ರಲ್ಲಿ ಹೋಗಿರುವರು. ಅವರು ತಾ. ೧೨ರಲ್ಲಿ ಬರಲಿರುವರು.

ಮೈಸೂರು ವಿಶ್ವ ವಿದ್ಯಾಲಯದ ಇಂಟರ್ ಮೀಡಿಯೇಟ್ ಪರೀಕ್ಷೆಯಲ್ಲಿ ಶ್ರೀ ಕೊಕ್ಕೇರ ಎಂ. ಸುಬ್ಬಯ್ಯನವರು ತೇರ್ಗಡೆಯಾಗಿರುವರು.

ತಾರೀಕ ೬ರಲ್ಲಿ ಮಡಿಕೇರಿ ಫೋರ್ಟ್ ಕ್ಲಬ್ಬಿನ ಆಶ್ರಯದಲ್ಲಿ ನಡೆದ ಬೇಡ್‌ಮಿಂಟನ್ ಸಿಂಗಲ್ಸ್ ಆಟವು ಆ ದಿನ ಮುಗಿಯದ ಕಾರಣ ತಾ. ೭ರಲ್ಲಿ ನಡೆಯಿತು. ಹುಣಸೂರಿನ ಶ್ರೀ ಸುಬ್ರಮಣ್ಯಂರವರು ಫೋರ್ಟ್ ಕ್ಲಬ್ಬಿನ ಶ್ರೀ ರಾಮರಾವ್‌ರವರನ್ನು ಸೋಲಿಸಿ ಕಪ್ಪನ್ನು ಗೆದ್ದರು. ಮೇಜರ್ ಸಿ. ಬಿ ಕಾರ್ಯಪ್ಪನವರು ಕಪ್ಪುಗಳನ್ನು ಕೊಟ್ಟರು.

ತಾ. ೧೦ ಮತ್ತು ೧೧ರಲ್ಲಿ ಮಡಿಕೇರಿಯಲ್ಲಿ ಜರುಗುವದೆಂದು ಪ್ರಕಟಿಸಿದ್ದ ಕೆ. ಪಿ. ಸಿ. ಸಿ. ಮೀಟಿಂಗು ನಡೆಯುವದಿಲ್ಲವೆಂದು ತಿಳಿದು ಬಂದಿದೆ.

ಮೈಸೂರು ವಿಶ್ವವಿದ್ಯಾಲಯದ ಬಿ. ಎಸ್‌ಸಿ. ಪರೀಕ್ಷೆಯಲ್ಲಿ ಶ್ರೀ ಚೆರಿಯಪಂಡ ಕಾಶಿ ಮತ್ತು ಶ್ರೀಮತಿ ಕೋಡಿಮಂಡಿಯಂಡ ರಾಣಿ ಇವರುಗಳು ತೇರ್ಗಡೆಯಾಗಿರುವರು.

ತಾರೀಕು ೧೧-೫-೫೧ರಲ್ಲಿ ಕೆನರಾ ಬ್ಯಾಂಕಿನ ಶಾಖೆಯೊಂದು ಸೋಮವಾರಪೇಟೆಯಲ್ಲಿ ಜಸ್ಟೀಸ್ ಪಾಲೇಕಂಡ ಮೇದಪ್ಪನವರ ಅಧ್ಯಕ್ಷತೆಯಲ್ಲಿ ತೆರೆಯಲ್ಪಡುವದು.

ದ. ಹಿಂದೂಸ್ಥಾನದ ರೋಬಸ್ಟಾ ಕಾಫಿ ಬೆಳೆಸುವವರ ವಾರ್ಷಿಕ ಮಹಾಸಭೆಯು ತಾ. ೧೬ನೇ ಬುಧವಾರ ಬೆಳಿಗ್ಗೆ ೧೧ ಗಂಟೆಗೆ ವೀರಾಜಪೇಟೆ ಮುನ್ಸಿಪಲ್ ಹಾಲ್‌ನಲ್ಲಿ ನಡೆಯುವದು.

ಕೊಡಗು ಸರಕಾರಿ ಕಾಲೇಜಿನ ವೈಸ್ ಪ್ರಿನ್ಸಿಪಾಲರೂ, ಗಣಿತ ಶಾಸ್ತ್ರದ ಪ್ರಾಧ್ಯಾಪಕರೂ ಆದ ಶ್ರೀ ವೆಂಕಟರಮಣರವರಿಗೆ ಸರಕಾರವು ನೋಟೀಸು ಕೊಟ್ಟು ಅವರ ಸರ್ವೀಸು ೧-೭-೫೧ರಿಂದ ಅಗತ್ಯವಿಲ್ಲವೆಂದು ತಿಳಿಸಿದೆಯೆಂದು ವರ್ತಮಾನ.

ಲಾಭದ ಲೆಕ್ಕ

ಅಮೇರಿಕದ ಸುಪ್ರಸಿದ್ಧ ಮೋಟಾರು ತಯಾರಿಸುವ ಜನರಲ್ ಮೋಟರ್ಸ್ ಸಂಸ್ಥೆಯು ೧೯೫೦ರಲ್ಲಿ ೪೧೫ ಕೋಟಿ ಲಾಭಗಳಿಸಿದೆಯಂತೆ. ಭಾರತ ಸರಕಾರವು ಕಳೆದ ವರ್ಷದಲ್ಲಿ ಒಟ್ಟು ೩೬೦ ಕೋಟಿ ರೂಪಾಯಿಗಳನ್ನು ಆದಾಯವಾಗಿ ಪಡೆದಿದೆ!

ಪ್ರಕಟಣೆ.

ವೀರಾಜಪೇಟೆ ದೇವಾಂಗದ ಬೀದಿಯಲ್ಲಿ ಬಾವಿಯಿರುವ ಒಂದು ಹೆಂಚಿನ ಮನೆ, ಕೊಟ್ಟಿಗೆ, ಹಿತ್ಲು ವಗೈರೆಯಿಂದ 0.16 ವಿಸ್ತೀರ್ಣದ ಆಸ್ತಿಯೂ ಮತ್ತು ಸಿದ್ದಾಪುರ ಟೌನಿನಲ್ಲಿ ಚರ್ಚ್ ಎದುರು ಭಾಗ ರಸ್ತೆ ಬಾಜು 1.95 ಏಕರಿನ ಜಾಗವೂ ಮಾರಾಟಕ್ಕಿದೆ.

ಖಾಯಿಸುದಾರರು ಈ ಕೆಳಗಿನ ವಿಳಾಸಕ್ಕೆ ಬರೆಯುವುದು. ಬೆಲೆ ಹನ್ನೊಂದು ಸಾವಿರ ರೂಪಾಯಿ ಯಾ ಇದರ ಸಮೀಪ.

ಯಸ್. ಯಸ್ ರಾಮಮೂರ್ತಿ
26-4-51 ಎಡ್ವೊಕೇಟ್,
ವೀರರಾಜಪೇಟೆ

ಜಾನುವಾರುಗಳು ಮಾರಾಟಕ್ಕಿವೆ.

ಹನ್ನೆರಡು ವರುಷ ಪ್ರಾಯದ ಒಂದು ಸಿಂಧಿ ಹಸು, ಒಂದು ಸೈವಾಲ್ ಹಸು, ಎರಡು ವರೆ ವರುಷದ ಒಂದು ಸಿಂಧಿ ಕಡಸು ಇವುಗಳು ತಾ|| ೧-೬-೫೧ ರಲ್ಲು ಸಾರ್ವಜನಿಕ ಹರಾಜಿನಲ್ಲಿ ಮಡಿಕೇರಿ ಡೈರಿ ಫಾರಂನಲ್ಲಿ ಮಾರಲ್ಪಡುವುವು.

ಅ ಮೊ. ಮುತ್ತಪ್ಪ.
ಚೀಫ್ ವೆಟಿರನರಿ ಆಫೀಸರ್,

ಮಾರಾಟಕ್ಕಿದೆ.

ಸೋಮವಾರಪೇಟೆ ನಾಡು ಗರಗಂದೂರು ಗ್ರಾಮದಲ್ಲಿ, ಸರಕಾರ ರಸ್ತೆ 17ನೇ ಮೈಲು ಕಲ್ಲಿನಿಂದ 3 ಫರ್ಲಾಂಗು ದೂರದಲ್ಲಿರುವ ನೀರಾವರಿ 1150 ಬಟ್ಟಿ ಭೂಮಿ, ಕೌಕೋಲು ಬಾರಿಪಟ್ಟಿ ಹಾಕಿ, ಹೆಂಚು ಹಾಕಿದ ಮನೆ, ಫಸಲಿಗೆ ಬರಲಿಕ್ಕಾದ 6 ಏಕ್ರೆ ಕಿತ್ತಳೆ ತೋಟ, 3 ಏಕ್ರೆ ಜಾಗ ವಗೈರೆ ಮಾರಾಟಕ್ಕಿದೆ. ಸದರಿ ಆಸ್ತಿಯು ತುಂಬಾ ವಿಸ್ತೀರ್ಣವಿರುವ ಪೈಸಾರಿ ಜಾಗಕ್ಕೆ ತಗಲಿಕೊಂಡಿದೆ. ಅಲ್ಲದೆ ಮಾದಾಪುರ ಟೌನಿನಲ್ಲಿರುವ ತಿಂಗಳಿಗೆ ರೂ. 50/-ಬಾಡಿಗೆ ಬರುವ ದೊಡ್ಡಮನೆಯೂ ಮಾರಾಟಕ್ಕಿದೆ. ಕ್ರಯ ರೂ 45 ಸಾವಿರ ಅಥವಾ ಅದಕ್ಕಿಂತ ಹೆಚ್ಚಿಗೆ ಕೊಡುವವರು, ಈ ಕೆಳಗಿನ ವಿಳಾಸಕ್ಕೆ ಪತ್ರ ಬರೆಯಬಹುದು.

N. K. GANADAYA,
Madapur post,
4-1 N. Coorg.

ಓದುಗರ ಓಲೆಗಳು

ಪುರಗೋಡು ಹೈಯರ್ ಎಲಿಮೆಂಟ್ರಿ ಶಾಲೆ

ತಾ. ೫-೫-೧೯೫೫ರ ಶಕ್ತಿಯ ವಾಚಕರ ಕಾಲಮಿನ ಶಿರೋನಾಮೆಯಲ್ಲಿ "ನೊಂದವ" ನೆಂಬುವರಿಂದ ಒಂದು ಲೇಖನ ಪ್ರಕಟವಾಗಿತ್ತು.

ಶ್ರೀಯುತರು ತನ್ನ ಸ್ವಾರ್ಥದ ಹಿತ ಕೆಲಸಗಳನ್ನು ತೆರೆಮರೆಯಲ್ಲಿರಿಸಿ ಗ್ರಾಮಸ್ಥರ ನಿಸ್ಸಹಾಯಕತೆಯನ್ನು, ತ್ಯಾಗ, ಶ್ರಮ ಮತ್ತು ವಿದ್ಯಾಭಿಮಾನವನ್ನು ತಮ್ಮ ಲೇಖನಿಯ ಚಾತುರ್ಯದಿಂದ ಎತ್ತಿ ತೋರಿಸಿದ್ದಾರೆ.

ಈ ಶಾಲೆಯ ಎರಡು ತರಗತಿಗಳಿಗೆ ಶಾಲಾ ಕಮಿಟಿಯವರಿಂದ (ಗ್ರಾಮಸ್ಥರಿಂದ) ನೇಮಕ ಹೊಂದಿದ ಅಧ್ಯಾಪಕರಿಂದ ಪಾಠ ಪ್ರವಚನ ನಡೆಯುತ್ತಿದೆ. ಈ ಅಧ್ಯಾಪಕರಿಗೆ ಯೋಗ್ಯ ವೇತನದ ಅನುಕೂಲ ಮಾಡಿಕೊಟ್ಟಿರುವುದರಿಂದಲೇ ಅವರು ಒಪ್ಪಿ ತಮ್ಮ ವೃತ್ತಿಯನ್ನು ಈ ಶಾಲೆಯಲ್ಲಿ ಕೈಕೊಂಡಿರುವುದಾಗಿದೆ.

ಶಿಸ್ತಿಗೆ ಭಂಗ ತರುವಂಥ ಚಟುವಟಿಕೆಗಳಿಗೆ ಕೈಹಾಕಿದ ಅಧ್ಯಾಪಕರಿಗೆ ಎಚ್ಚರಿಸಿದ್ದೇ ವಿನಹ ಅವರ ಮೇಲೆ ಸವಾರಿ ಮಾಡಲು ಹೊರಟಿಲ್ಲ.

'ನೊಂದವ'ರು ಇತ್ತಲಾಗಿ ಹಿರಿಯರಿಂದ ಕೂಡಿದ ಸಹಕಾರದ ಭಿಕ್ಷೆ ಬೇಡುತ್ತಾರೆ. ಅವರು ಬೇಡುವ ಸಹಕಾರವು ತನ್ನ ಆತ್ಮಗೌರವನ್ನು ಬಲಿಗೊಟ್ಟು, ಅಶಿಸ್ತನ್ನು, ಶಾಲಾಭಿವೃದ್ಧಿಗೂ, ಉನ್ನತಿಗೂ ಹಾನಿ ತರುವಂಥ ವಾತಾವರಣವನ್ನು ಕಲಿಸುವ ಆದರ್ಶದ ಸಹಕಾರ. ಶಾಲೆಯ ಕಾರ್ಯಕಲಾಪಗಳ ಬಗ್ಗೆ ಅವರು ಮಾಡಿದ ಆರೋಪಣೆಯು ಸತ್ಯದಿಂದ ಬಹು ದೂರವಾಗಿದೆ. ಸತ್ಯಾಂಶವನ್ನು ತಿಳಿಯಲು ಬಯಸುವವರು ಖುದ್ದು ಬಂದು ವಿಚಾರಿಸಿದರೇನೇ ಎಲ್ಲಾ ಸಂಗತಿ ವೇದ್ಯವಾಗುವುದು. ಇದೇ ಪತ್ರಿಕೆಯಲ್ಲಿ ಕೊಟ್ಟ ಜಾಹೀರನ್ನು ಪ್ರಸ್ತಾಪಿಸಿದ್ದಾರೆ. ಈ ಸಂಬಂಧ ಅವರ ಉದ್ದೇಶವೇನೇ ಇರಬಹುದು. ಅದು ನಮ್ಮ ನಿರ್ಧಾರಕ್ಕೆ ಯಾವ ಅಡ್ಡಿ ಬರಲಾರದೆಂದು ನಾನು ಧೈರ್ಯವಾಗಿ ಹೇಳಬಯಸುತ್ತೇನೆ.

ಇಂದು ಭಾರತಾದ್ಯಂತ ನೊಂದವರ ತಂಡ ಹಲವಾರು ಇವೆ. ಆ ಪೈಕಿ ನನ್ನ ಮಾನ್ಯ ಮಿತ್ರ ಈ 'ನೊಂದವ' ಯಾವ ಗುಂಪಿಗೆ ಸೇರಿದ್ದಾರೆ? ಇವರು ತನ್ನ ದೊಣ್ಣೆಯನ್ನು ಕತ್ತಲೆಯಲ್ಲಿ ಬೀಸಲು ಪ್ರಾರಂಭಿಸಿದ್ದಾರೆ. ಅದರ ಪರಿಣಾಮದ ಅನುಭವ ಅವರಿಗೆ ಇರಲಿಕ್ಕಿಲ್ಲ. 'ನೊಂದವ'ರು ತನ್ನ ನಿಜ ಹೆಸರನ್ನು ಏತಕ್ಕೆ ಪ್ರಕಟಿಸಲಿಲ್ಲ?

ಶಾಲಾ ಕಮಿಟಿಯ ಪ್ರೆಸಿಡೆಂಟ್

ದೇವಸ್ಥಾನ ಪ್ರವೇಶ

ಕೊಡಗಿಗೆ ಈ ಹಿಂದೆ ಚೀಫ್ ಕಮಿಷನರಾಗಿದ್ದ ಶ್ರೀ. ಸಿ. ಟಿ. ಮೊದಲಿಯಾರ್ ಇವರು ಹರಿಜನರ ಬಗ್ಗೆ ಸ್ವಲ್ಪ ಆಸ್ಥೆ ವಹಿಸಿದ್ದ ಕಾರಣ ಮಂದಿರ ಪ್ರವೇಶ ಮಸೂದೆಯು ಪಾಸಾಯಿತು. ಈ ಮಸೂದೆಯಂತೆ ಸಾರ್ವಜನಿಕ ದೇವಸ್ಥಾನ, ಪ್ರಾರ್ಥನಾ ಕ್ಷೇತ್ರಗಳಲ್ಲೆಲ್ಲ ಹರಿಜನರಿಗೆ ಪ್ರವೇಶವಿದೆ. ಆದರೆ ಈ ನಿಯಮವನ್ನು ಖಾಸಗಿಯಾಗಿರುವ ದೇವಸ್ಥಾನಗಳಿಗೂ ಅನ್ವಯಿಸಲೆತ್ನಿಸಿ ಅಶಾಂತಿಗೆ ಎಡೆ ಮಾಡಿದ ನಿದರ್ಶನಗಳಿವೆ. ದೇವಸ್ಥಾನದಲ್ಲಿ ಭಗವಂತನನ್ನು ಆರಾಧಿಸಲು ಇತರರಿಗಿರುವಂತೆಯೇ ಹರಿಜನರಿಗೂ ಅನು ಇರಬೇಕೆಂಬ ತತ್ವವನ್ನು ಯಾರೂ ವಿರೋಧಿಸಲಾರರು. ಆದರೆ ಸಮಾಜದಲ್ಲಿರುವವರೆಲ್ಲರೂ ಈ ರೀತಿಯ ಸಮನ್ವಯ ದೃಷ್ಟಿಯವರಲ್ಲ. ಸಮಾಜದಲ್ಲಿ ರೂಢಮೂಲವಾಗಿರುವ ಸಂಪ್ರದಾಯಗಳು ನೂರಾರು ಇವೆ. ಅವೆಲ್ಲವನ್ನು ಕ್ರಾಂತಿಕಾರಕವಾಗಿ ಬದಲಾಯಿಸಲೆತ್ನಿಸಿದರೆ ಸಮಾಜದಲ್ಲಿ ಸಂಶಯ ತಲೆದೋರುವದು. ಮಹಾತ್ಮಾ ಗಾಂಧಿಯವರೂ ಕೂಡ ಹೃದಯ ಪರಿವರ್ತನೆಯ ಮಾರ್ಗದಲ್ಲಿ ವಿಶ್ವಾಸವಿದ್ದವರು. ಆದ್ದರಿಂದ ಖಾಸಗಿ ಮಂದಿರಗಳಿಗೆ ಹರಿಜನರನ್ನು ಪ್ರವೇಶಿಸಲು ಪ್ರಯತ್ನಿಸುವಾಗ ಆ ದೇವಸ್ಥಾನವನ್ನು ನಡೆಸುವವರ ಹಾಗೂ ಆಸ್ತಿ ಸಂಬಂಧಿಸಿದವರ ಒಪ್ಪಿಗೆಯನ್ನು ಪಡೆದು ಮಾಡುವದು ಹಿತಕರ. ಹಾಗೆ ಮಾಡಲು ಒಪ್ಪದವರನ್ನು ಸಕಾರಣಗಳಿಂದ ಒಪ್ಪಿಸಿ ಅವರ ಹೃದಯಪರಿವರ್ತನೆ ಮಾಡುವದರಲ್ಲೇ ಮುಂದಾಳುಗಳ ಯೋಗ್ಯತೆ ವಿನಾ ಪೋಲೀಸರ ಸಹಾಯ ಪಡೆದು ಒಬ್ಬಿಬ್ಬರನ್ನು ದೇವಸ್ಥಾನದೊಳಗೆ ಸೇರಿಸಿಬಿಡುವದಲ್ಲ. ಆದ್ದರಿಂದ ಸಾರ್ವಜನಿಕ ಮುಂದಾಳುಗಳೆನ್ನುವವರು ನಿಜವಾದ ಹರಿಜನ ಸೇವಕರಾದರೆ ಆ ಬಗ್ಗೆ ಯೋಗ್ಯ ಮಾರ್ಗದಲ್ಲಿ ಜನರನ್ನು ಕೂಡಿಸುವ ಪವಿತ್ರ ಕಾರ್ಯವನ್ನು ನಿಷ್ಠೆಯಿಂದ ನಡೆಸಬೇಕು.

'ಹರಿಜನ ಬಂಧು.'

ಬೈನೆಮರ ಇರುವವರಿಗೆ

ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದು ಕಾಂಗ್ರೆಸ್ ಸರಕಾರವಾದರೂ ಕಳ್ಳಿನ ಪ್ರಾಬಲ್ಯ ತಗ್ಗಲಿಲ್ಲ. ಕಡುಕತನ ಎಂದಿನಂತೆ ಇಂದೂ ಇದೆ. ಸಾರಾಯಿಗೆ ಕಾನೂನ್ ಮಾಡಿದ ಕಾರಣ ಸೇಂದಿಯ ಹಾವಳಿ ಜೋರಾಗಿದೆ. ಪ್ರತಿ ಗ್ರಾಮಗಳಲ್ಲೂ ಬೈನೆ ಕಟ್ಟಿ ಕಳ್ಳಿನ ವ್ಯಾಪಾರವೂ, ಅನಾಹುತವೂ ನಡೆಯುತ್ತಿದೆ. ಬೈನೆ ಮರ ಇರುವವರು ಗ್ರಾಮದ ಹಾಗೂ ಜನತೆಯ ಹಿತದೃಷ್ಟಿಯಿಂದ ಬೈನೆ ಕಟ್ಟಲು ಕೊಡಬಾರದೆಂದು ಕೆಲವು ವರ್ಷಗಳ ಹಿಂದೆ ಪ್ರಚಾರ ನಡೆಯಿತು. ಹಲವು ಗ್ರಾಮಗಳು ಸಭೆ ಸೇರಿ ನಿರ್ಣಯ ಮಾಡಿಕೊಂಡು ಆ ನಿರ್ಣಯವನ್ನು ಯಾರೂ ಮೀರದಂತೆ 'ವಿಜಿಲೆನ್ಸ್' ಕಮಿಟಿಗಳನ್ನು ನೇಮಿಸಿದ್ದರು. ಇದಕ್ಕೆ ಸಾಕಷ್ಟು ಸರ್ಕಾರದ ಬೆಂಬಲವಿಲ್ಲದ ಕಾರಣವೋ ಏನೋ ಅದು ಅಲ್ಲೇ ನಿಂತಿತು. ಈಗ ಯಥಾಸ್ಥಿತಿ ಪ್ರತಿ ಗ್ರಾಮವು ಸೇಂದಿಯ ಕೇಂದ್ರವಾಗಿದೆ. ಇದರಿಂದಾಗಿ ಗ್ರಾಮಗಳಲ್ಲಿ ಹಲವು ರೀತಿಯ ಅನಾಚಾರಗಳು ನಡೆಯುತ್ತಿವೆ. ಸೋಮವಾರಪೇಟೆಯ ಹಾನಗಲ್ಲು ಗ್ರಾಮಸ್ಥರಾದ ನಾವು ಈ ಬಗ್ಗೆ ನಾಲ್ಕಾರು ಮೀಟಿಂಗು ನಡೆಸಿ ಗ್ರಾಮದಲ್ಲಿ ಸೇಂದಿಯನ್ನು ನಿಲ್ಲಿಸುವ ಪ್ರಯತ್ನ ಮಾಡುತ್ತಿರುವೆವು. ಹಾಗೆಯೇ ಪ್ರತಿ ಗ್ರಾಮದವರೂ ಕಾರ್ಯಕ್ರಮ ಕೈಕೊಂಡು ಸಮಾಜ ಉದ್ಧಾರದ ಕಾರ್ಯವನ್ನು ಮಾಡಬೇಕು. ಸರಕಾರವೂ ಇದಕ್ಕೆ ಬೆಂಬಲವೀಯಬೇಕು.

'ಗ್ರಾಮಸ್ಥ.'

ಏನು ಸಾಧಿಸಿದಂತಾಯಿತು?

ಒಂದು ವರ್ಷದ ಹಿಂದೆ ಭಾಗಮಂಡ್ಲ ದೇವಸ್ಥಾನಕ್ಕೆ ಹರಿಜನರನ್ನು ಸೇರಿಸಿದರು. ಪೋಲೀಸರ ಬಲದಿಂದ ಈ ಮಂದಿರ ಪ್ರವೇಶವೆನ್ನಬಹುದು. ಏಕೆಂದರೆ ಅಂದು ಈ ಕೆಲಸಕ್ಕೆ ಟೊಂಕಕಟ್ಟಿ ಬಂದಿದ್ದವರು ಪೋಲೀಸರ ಸಹಾಯ ಪಡೆದಿದ್ದರು. ಅಂದು ಮಂದಿರ ಪ್ರವೇಶ ನಡೆಯಿತು. ಬಹಳ ಸಂತೋಷದ ವಿಚಾರ. ಪ್ರತಿ ದೇವಸ್ಥಾನಗಳಲ್ಲೂ ಹರಿಜನರಿಗೆ ಪ್ರವೇಶವಿರಬೇಕು. ಮಹಾತ್ಮ ಗಾಂಧಿಯವರು ಹೇಳಿದಂತೆ ಯಾವ ದೇವಸ್ಥಾನಕ್ಕೆ ಹರಿಜನ ಪ್ರವೇಶದ ಅವಕಾಶವಿಲ್ಲವೋ ಆ ದೇವಸ್ಥಾನದಲ್ಲಿ ದೇವನಿರಲಾರ. ಆದರೆ ಇಂಥಾ ಒಂದು ಪ್ರವೇಶಕ್ಕೆ ಜನತೆಯೂ ಹರಿಜನರೂ ತಯಾರಾಗಬೇಕು. ಉದಾಹರಣೆಗೆ ಭಾಗಮಂಡ್ಲ ದೇವಸ್ಥಾನಕ್ಕೆ ಹರಿಜನರು ನಿರಾತಂಕವಾಗಿ ಹೋಗಬಹುದು. ಆದರೆ ಹರಿಜನರು ಹಾಗೆ ಮಾಡುತ್ತಿಲ್ಲ. ಅವರಲ್ಲಿ ನಾವು ನಿಕೃಷ್ಟರು, ಎಂಬ ಭಾವನೆ ಇನ್ನೂ ಇದೆ. ಇದನ್ನು ತೆಗೆದು ಹಾಕುವದೇ ಪ್ರಾಮುಖ್ಯವಾದ ಕೆಲಸ. ಇದಕ್ಕೆ ಅವರ ಆರ್ಥಿಕ ಸ್ಥಿತಿಯನ್ನು ಸುಧಾರಿಸುವ ಯತ್ನಗಳಾಗಬೇಕು. ಆರ್ಥಿಕ ದೃಷ್ಟಿಯಲ್ಲಿ ಚೆನ್ನಾಗಿರುವ ಹರಿಜನರು ಕ್ರಮಶಃ ಮುಂದರಿದು ಸಮಾಜದಲ್ಲಿ ತಮ್ಮ ಸ್ಥಾನವನ್ನು ಪಡೆಯುತ್ತಿರುವರು. ಆದ್ದರಿಂದ ಇಂದು ಹರಿಜನ ಸುಧಾರಕರೆಂದು ಹೊರಟವರು ಹರಿಜನರ ಜೀವನಮಟ್ಟವು ಮೇಲೇರಲು ತಕ್ಕ ವ್ಯವಸ್ಥೆ ಮಾಡಬೇಕಲ್ಲದೆ ಬಲಾತ್ಕಾರದ ಮಂದಿರ ಪ್ರವೇಶವು ಯಾವ ಹಿತವನ್ನೂ ಸಾಧಿಸದು. ಬದಲು ಈ ಪ್ರಯತ್ನವು ತಾವು ಸುಧಾರಕರೆಂದು ತೋರಿಸಿಕೊಂಡು ಮುಂದಿನ ಚುನಾವಣೆಯಲ್ಲಿ ಹರಿಜನರ ಬೆಂಬಲ ಪಡೆಯುವ ಸ್ವಾರ್ಥದೃಷ್ಟಿಯ ಯತ್ನವೆಂದು ತೋರಬಹುದು. ಆದ್ದರಿಂದ ಸುಧಾರಕರೆನ್ನುವವರು ಹರಿಜನರ ಈ ಸಮಸ್ಯೆಗೆ ಗಮನವೀಯಲಿ.

'ಹರಿಜನ'

ಸರಕಾರಕ್ಕೆ ವಿನಂತಿ.

ಕೊಡಗಿನಲ್ಲಿ ಗ್ರೋ ಮೋರ್ ಫುಡ್ ಚಳವಳಿಯಿಂದ ಎಷ್ಟೋ ಹೆಚ್ಚಿನ ಬೆಳೆ ಬೆಳೆಯಲಾಯಿತು. ಆದರೆ ಸರಕಾರವು ಬೆಲೆಯನ್ನು ಕಂಟ್ರೋಲ್ ಮಾಡಿದರು. ಹಿಂದಿನ ಕಾಲದಲ್ಲಿ ಗಾಡಿಗೆ ೬೦/- ರೂ, ಇದ್ದಾಗ ಎತ್ತುಗಳು ಜೊತೆಗೆ ೩೦/- ರಿಂದ ೪೫/-ರ ಒಳಗೆ ಸಿಕ್ಕುತ್ತಿದ್ದವು. ಈಗ ಭತ್ತಕ್ಕೆ ೧೭೮/- ರೂ ಕಂಟ್ರೋಲ್ ಮಾಡಿದ್ದಾರೆ. ಆದರೆ ಎತ್ತುಗಳ ಜೊತೆಗೆ ೨೦೦ಕ್ಕೆ ಕಮ್ಮಿಯಾಗಿ ಸಿಕ್ಕುವುದಿಲ್ಲ. ಸಿಕ್ಕುವದಾದರೂ ಅವುಗಳು ಆರಂಭಕ್ಕೆ ಯೋಗ್ಯ ರೀತಿಯಲ್ಲಿ ಇಲ್ಲದವು. ಈ ರೀತಿಯ ಬೆಲೆಯು ಏರುವುದು ಬರೀ ದಳ್ಳಾಳಿಗಳಿಂದಲೂ ಮತ್ತು ಮಾನಂದೋಡಿ ಗಿರಾಕಿಗಳಿಂದಲೂ ಎಂದರೆ ತಪ್ಪಾಗಲಾರದು. ಮಾನಂದೋಡಿಯಿಂದ ಶನಿವಾರವೇ ಬಂದು ದನಗಳಿಗೆ ಅವರಿಗೆ ತೋರಿದ ಬೆಲೆ ಕೊಟ್ಟು ವಾರಕ್ಕೆ ಕಡಿಮೆ ಪಕ್ಷ ೩೦೦ ರಾಸಿಗೆ ಕಡಿಮೆ ಇಲ್ಲದೆ ಅತ್ತ ಸಾಗುತ್ತಿವೆ. ಅವುಗಳನ್ನು ಮಲಬಾರಿಗೆ ಸಾಗಿಸಿ ಅಲ್ಲಿ ಪ್ರಾಣಹಾನಿ ಮಾಡಿ ಒಂದು ಪೌಂಡಿಗೆ ೨/- ರೂ. ಯಂತೆ ವಿಕ್ರಯಿಸುತ್ತಾರಂತೆ! ಅಲ್ಲದೆ ಸಂತೆಯಲ್ಲಿ ಒಬ್ಬ ಕೊಂಡು ಕೊಳ್ಳುವ ಮನುಷ್ಯನಿಗೆ ೫ ರಂತೆ ದಳ್ಳಾಳಿಗಳು ಇರುತ್ತಾರೆ. ಅವರು ಕಮೀಷನಿಗೋಸ್ಕರ ಕಂಡಾಬಟ್ಟೆ ಕ್ರಯವನ್ನು ಏರಿಸಿ ಬಡ ರೈತನನ್ನು ಹಾಳು ಮಾಡುತ್ತಾರೆ. ಹೆಚ್ಚಿನ ಬೆಲೆ ಕೊಡುವುದು ಅವಶ್ಯವಿಲ್ಲವೆಂದರೆ ಆತನಿಗೆ ಆರಂಭ ಮಾಡಲು ಸಾಧ್ಯವಿಲ್ಲ. ಇದೇ ವಿಚಾರವಾಗಿ ಆತನು ನಿರೀಕ್ಷಿಸಿದ ಬೆಲೆಯ ಮೇಲೆ ಬೆಲೆ ಕೊಟ್ಟು ತೆಗೆದುಕೊಳ್ಳಬೇಕಾಗುತ್ತೆ. ಆದುದರಿಂದ ಕೊಡಗಿಗೆ ಬರುವ ದನಗಳನ್ನು ಮಾನಂದೋಡಿಗೆ ಹೋಗದಂತೆಯೂ ಮತ್ತು ದಳ್ಳಾಳಿಗಳು ವ್ಯಾಪಾರ ಮಾಡಬೇಕಾದರೆ ವರ್ಷಕ್ಕೆ ೫೦೦/- ರೂ ಕಂದಾಯ ಕಟ್ಟುವಂತೆಯೂ ಏರ್ಪಡಿಸಿದರೆ ಕೊಡಗಿನ ಬಡ ರೈತರನ್ನು ಈ ಘನ ಸರಕಾರವು ಉದ್ಧರಿಸಿದ ಹಾಗಾಗುತಿತ್ತು.

"ಪ್ರೇಕ್ಷಕ"

ತಕ್ಷಣ ನಿಲ್ಲಬೇಕು

ನಮ್ಮ ದೇಶವು ವ್ಯವಸಾಯಕ್ಕೆ ಖ್ಯಾತಿಯನ್ನು ಪಡೆದಿರುವುದು ಎಲ್ಲರಿಗೂ ತಿಳಿದ ವಿಷಯ. ಇಲ್ಲಿನ ಜನರ ಬೆನ್ನೆಲುಬೇ ದನಕರುಗಳು ಎಂದು ಬೇರೆ ಹೇಳಬೇಕಾಗಿಲ್ಲ. ಇಲ್ಲಿಯ ರೈತರ ಆರ್ಥಿಕ ಮಟ್ಟವು ಹೀನ ಸ್ಥಿತಿಯಲ್ಲಿದ್ದರೂ ಉತ್ತಮವಾದ ದನಕರುಗಳ ಅಭಾವವೇ ಎಂಬುದು ನಿರ್ವಿವಾದದ ವಿಷಯವಾಗಿದೆ. ದನಕರುಗಳಿಗೆ ಹಸಿ ಹುಲ್ಲು, ಒಣ ಹುಲ್ಲು, ಕೈಹಿಂಡಿಯೇ ಆಹಾರ, ಸಾಧಾರಣವಾಗಿ ಪೇಟೆಗಳಲ್ಲಿರುವ ದನಕರುಗಳು ಹೆಚ್ಚಾಗಿ ಒಣ ಹುಲ್ಲಿನಿಂದಲೂ ಕೈಹಿಂಡಿಯಿಂದಲೇ ಜೀವಿಸುವುವಾಗಿವೆ.

ಈಗಲೇ ೧೦೦ಕಂತೆಗೆ ರೂ ೯/- ೧೦/-ರ ದರದಲ್ಲಿ ಮಲಬಾರಿನವರು ಮನೆಗೆ ಬಂದು ಹುಲ್ಲು ಸಾಗಿಸಲು ತೊಡಗಿದ್ದಾರೆ. ಈ ರೀತಿ ಒಣ ಹುಲ್ಲನ್ನು ಸಾಗಿಸಿದ್ದಾದರೆ ಇಲ್ಲಿಯ ದನಕರುಗಳ ಪಾಡು ಏನಾಗುವದೆಂದು ಬೇರೆ ಹೇಳಬೇಕಾಗಿಲ್ಲ. ಆದುದರಿಂದ ದೇಶದ ಜನರ ಹಿತದೃಷ್ಟಿಯಿಂದ ಮಲಬಾರಿಗೆ ಹುಲ್ಲನ್ನು ಸಾಗಿಸುವುದನ್ನು ತಕ್ಷಣ ನಿಲ್ಲಿಸಬೇಕಾಗಿ ಸಾರ್ವಜನಿಕರ ಪರವಾಗಿ ನನ್ನ ಕೋರಿಕೆ.

"ಬಪ್ಪು"

ಕಥೆ — ವಸಂತ

ಲೇ:— “ಟೀ ಕೇಕ್”

ವಸಂತ. ಎಂತಹ ಮುದ್ದಾದ ಹೆಸರು ಎನ್ನುವಿರೋ? ಹೆಸರೇನೋ ಮುದ್ದಾದ ಹೆಸರೇ. ಆದರೆ ಅವನನ್ನು ಕಂಡರೆ, ಅವನ ಹೆಸರನ್ನು ಕೇಳಿದರೆ ನನ್ನ ದೇಹವೇ ನಡುಗುವುದು.

ಆತ ನನ್ನ ಮನೆಗೆ ಒಂದು ತಿಂಗಳ ಹಿಂದೆ ಬಂದ ಅತಿಥಿ. ಅವನನ್ನು ನೋಡಬೇಕೆಂಬ ಕುತೂಹಲವು ನನಗೂ ನನ್ನಾಕೆಗೂ ಬಹಳ ದಿನಗಳಿಂದಲೂ ಇತ್ತು. ಅವನು ಬರುವ ದಿನವನ್ನು ಬಹಳ ಆತುರದಿಂದ ಕಾಯುತ್ತಿದ್ದೆವು. ಆ ದಿನವೂ ಬಂದಿತು.

ಒಂದು ತಿಂಗಳ ಹಿಂದೆ ಸೋಮವಾರ ಮಧ್ಯಾಹ್ನ ಸರಿ ಹನ್ನೆರಡುವರೆ ಗಂಟೆಗೆ ಆತ ಬಂದನು. ಬಹಳ ದಿನಗಳಿಂದವನ ಬರುವಿಕೆಯನ್ನು ಕಾಯುತ್ತಿದ್ದ ನಮ್ಮಿಬ್ಬರ ಬಯಕೆ ನೆರವೇರಿತು. ಅಂದು ನಮ್ಮಿಬ್ಬರಿಗೂ ವರ್ಣಿಸಲಸಾಧ್ಯವಾದ ಆನಂದ. ನಾನೂ ವಿಮಲೆಯೂ (ನನ್ನಾಕೆ) ಒಬ್ಬರನ್ನೊಬ್ಬರು ನೋಡಿ ನಗುತ್ತಿದ್ದೆವು. ಆನಂದವು ಅತಿಯಾದರೆ ಮಾತುಗಳೇ ಬರಲೊಲ್ಲವಂತೆ. ಹೀಗಾಯಿತು ನಮ್ಮಿಬ್ಬರ ಆಗಿನ ಸ್ಥಿತಿ. ಮುದ್ದು ಮುದ್ದಾದ ದೇಹ, ಕಾಂತಿಯುತವಾದ ಕಣ್ಣುಗಳು, ವಿಶಾಲವಾದ ಹಣೆ, ಆಜಾನು ಬಾಹುಗಳು, ಹುಡುಗಿಯಂತಿರುವ ಹಾಗೆ ತುಂಬಿದ ಕೆಂಪನ್ನ ಕೆನ್ನೆ, ಚುಂಬಿಸಲರ್ಹವಾದ ತುಟಿಗಳು. ಇದೇನ? ವಸಂತನೆಂದು, ಅವನೆಂದು ತರುಣಿಯ ವರ್ಣನೆಗೆ ಇಳಿದಿರುವನೆನ್ನುವಿರೋ, ಬೆದರಬೇಡಿ. ವಸಂತನು ಗಂಡು. ಅವನದು ಎಂತಹ ಕಲ್ಲನ್ನೂ ಕರಗಿಸುವ ಮೃದುವಾದ ಸ್ವರ.

ಆ ದಿನ ಅಂತು ಅವನನ್ನು ನೋಡಿ ಸಂತಸಗೊಂಡ ನನ್ನ ಮನವೀಗ ತಳಮಳಗೊಳ್ಳುತ್ತಿದೆ. ಇದುವರೆಗೆ ಪರಿಪೂರ್ಣವಾಗಿ ನನ್ನನ್ನು ಪ್ರೀತಿಸುತ್ತಿದ್ದ ವಿಮಲೆಯ ಮನವನ್ನವನೀಗ ಸೂರೆಗೊಂಡಿದ್ದಾನೆ. ಅವನು ಬಂದಂದಿನಿಂದ ವಿಮಲೆಗೆ ನನ್ನಲ್ಲಿರುವ ಪ್ರೇಮವು ‘ಮುಂಬಗಲ್ ನೆಳಲಿನಂತೆ’ ಕಡಿಮೆಯಾಗುತ್ತಿದೆ. ವಿಮಲೆಯು ಈಗ ಅವನನ್ನು ಹೆಚ್ಚು ಹೆಚ್ಚಾಗಿ ಪ್ರೀತಿಸುತ್ತಿದ್ದಾಳೆ. ವಿಮಲೆಯ ಅಂದಿನ ಪ್ರೀತಿ ಪಾತ್ರನಾನಾದರೆ ಅವಳ ಇಂದಿನ ಪ್ರೀತಿ ಪಾತ್ರ ವಸಂತ! ಅವನಿಲ್ಲದಲ್ಲಿ ವಿಮಲೆಯಿಲ್ಲ. ಅವಳಿಲ್ಲದಲ್ಲಿ ಅವನಿಲ್ಲ. ಯಾವಾಗ ನೋಡಿದರೂ ಇಬ್ಬರೂ ಕೂಡಿಯೇ ಇರುವರು.

ಪ್ರತಿದಿನವೂ ನಾನು ಆಫೀಸಿಗೆ ಹೊರಡುವಾಗ ವಿಮಲೆಯು ನನ್ನನ್ನು ಕಣಕಿ, ಕಾಡಿ, ಬೀಳ್ಕೊಡುತ್ತಿದ್ದಳು. ಆದರೆ ಈಗ ಆಫೀಸಿಗೆ ಹೊರಡುವಾಗ ವಿಮಲಾ ಎಂದರೆ, ‘ನಿಲ್ಲಿ, ಇಲ್ಲ ಹೋಗುವಿರಾ, ಹೋಗಿ ಬನ್ನಿ, ನಾನು ವಸಂತನ ಸ್ನಾನಕ್ಕೆ ನೀರನ್ನು ಸರಿ ಮಾಡುತ್ತಿದ್ದೇನೆ ಬರಲಾಗುವುದಿಲ್ಲ’ ಎನ್ನುವಳು.

ಯಾವಾಗಲೂ ಮಧ್ಯಾಹ್ನ ಊಟಕ್ಕೆ ಬರುವಾಗ ಕೈಯಲ್ಲಿ ಬಿಸಿ ಫೀಶಿನ ಚೆಂಬನ್ನು ಹಿಡಿದುಕೊಂಡು ನಗುತ್ತಾ ನನ್ನನ್ನು ಸ್ವಾಗತಿಸುತ್ತಿದ್ದಳು ವಿಮಲೆ. ಆದರೆ ಈಗ ಹಸಿದುಕೊಂಡು ಅವಳನ್ನು ಕಾಣುವ ಆತುರದಿಂದ ಬಿಸಿಲಿನಲ್ಲಿ ಬಳಲಿ ಬೆಂಡಾಗಿ ಬಸವಳಿದು ಬಾಯಾರಿ ಬಂದು ಅವಳನ್ನು ಕರೆದರೆ, ವಸಂತನು ನಿದ್ರಿಸುತ್ತಿರುವ ಮಂಚದ ಮೇಲೆ ಕೂತಿರುವಳು. ಮೆಲ್ಲನೆ, ‘ಎಂತಹ ಮನುಷ್ಯರು ನೀವು; ವಸಂತನು ನಿದ್ರಿಸುವುದು ಕಾಣುವುದಿಲ್ಲವೇ? ಹಾಗೆ ಸುಮ್ಮನೆ ಅರಚಿ ಅವನ ಕೋಪಕ್ಕೆ ಪಾತ್ರರಾಗಬೇಡಿ’ ಎನ್ನುವಳು. ನಿನ್ನೆ ಬಂದ ಅವನ ಕೋಪಕ್ಕೆ ಪತಿಯಾದ ನಾನು ಪಾತ್ರನಾಗಬೇಕಂತೆ! ಪತಿಗಿಂತ ಮಾಂಗಲ್ಯದಾನಿಗಿಂತ ಇಂದವಳಿಗೆ ವಸಂತನೇ ಹೆಚ್ಚಾದನ! ಇದನ್ನೆಲ್ಲಾ ನೋಡುವಾಗ ಅವಳನ್ನು ಅಲ್ಲೇ ಕಡಿದು ಬಿಸಾಡಬೇಕೆಂಬ ಸಿಟ್ಟು ಬರುತ್ತದೆ. ಆದರೇನು ಮಾಡುವುದು, ಸಿಟ್ಟನ್ನೇ ನುಂಗಬೇಕು, ‘ನುಂಗಿದರೆ ಗಂಟಲು ಸುಡುವುದು; ಉಗುಳಿದರೆ ಶುದ್ಧಿಗೆಡುವುದು’ ಎಂಬ ಸ್ಥಿತಿಯಾಕ್ಷಿ ನಾನಿರುವೆನು.

ಸಂಜೆ ಕೆಲಸದಿಂದ ಬಂದು, ಇನಿಯಳೊಡನೆ ಸರಸ ಸಲ್ಲಾಪವನ್ನೆಸಗುವ ಆ ಮಧುರ ವಾತಾವರಣದಲ್ಲಿ ವಾಯುವಿಹಾರಕ್ಕೆ ಹೋಗುವ ಬಾ ವಿಮಲಾ ಎಂದರೆ ‘ಈ ದಿನ ವಸಂತನಿಗೆ ಮೈಯಲ್ಲಿ ಸೌಖ್ಯವಿಲ್ಲ, ಆದುದರಿಂದ ನಾನು ಬರಲಾರೆ, ಬೇಕಾದರೆ ನೀವೇ ಹೋಗಿ ಬನ್ನಿ. ನಾಳೆ ವಸಂತನಿಗೆ ಸುಖವಾದರೆ ನಾವು ಮೂವರೂ ಹೋಗೋಣ. ಈ ದಿನ ನನ್ನನ್ನು ಕಾಡಬೇಡಿ’ ಎನ್ನುವಳು.

ರಾತ್ರಿ ಊಟವಾದ ನಂತರ, ನಲ್ಲೆಯ ನಲ್ನೋಟಗಳ ತೆಕ್ಕೆಯಲ್ಲಿ ನಲಿದಾಡುವ ಕಾಮಿನಿಯ ಕಮನೀಯ ಚುಂಬನವನ್ನಾಶಿಸುವ ಆ ಸಮಯದಲ್ಲಿ ‘ಬಾ, ವಿಮಲಾ, ವೀಳ್ಯವನ್ನು ಕೊಡುವುದಿಲ್ಲವೇ’ ಎಂದರೆ ಪ್ರತಿದಿನವೂ ನಾನು ಕರೆಯುವುದಕ್ಕೆ ಮುಂಚಿತವಾಗಿಯೇ ವೀಳ್ಯದೆಲೆಯ ಸುರುಳಿಯನ್ನು ನಗುತ್ತಾ ತನ್ನ ಕಡೆಗಣ್ಣ ನೋಟವನ್ನು ಬೀರುತ್ತಾ ತನ್ನ ಬಾಯೊಳಗೆ ತುರುಕುತ್ತಿದ್ದ, ನನ್ನ ‘ಮರೆಯಲಾರದ ಮಡದಿ’ ವಿಮಲೆಯು ‘ನಿಲ್ಲಿ ಏನು ಆತುರವಪ್ಪಾ, ಈ ಗಂಡಸರೇ ಹೀಗೆ, ವಸಂತನಿಗೆ ಹಾಲು ಕೊಟ್ಟು ಬರುತ್ತೇನೆ’ ಎನ್ನುವಳು. ಇದೀಗ ನನ್ನ ಪೂರ್ವಾರ್ಜಿತ ಕರ್ಮಫಲ; Love at first sight ನ ಪರಿಣಾಮ. ಕಾಲೇಜು ಹುಡುಗಿಯನ್ನು ಮದುವೆಯಾದುದರ ಫಲಿತಾಂಶ!

ನನಗೆ ಸಿಕ್ಕುವ ಸಂಬಳವೆಂದರೆ ಬರೀ ಅರುವತ್ತೈದು ರೂಪಾಯಿ. ಇಷ್ಟೆಲ್ಲವೂ ವಸಂತನ ಒಂದು ತಿಂಗಳ ಖರ್ಚಿಗೇ ಸಾಲದು. ನನಗೆ ಜ್ವರ ಬಂದಾಗ ಕ್ವಿನೀನು ಪಿಲ್ಸನ್ನು ಕೊಡುತ್ತಿದ್ದ ವಿಮಲೆಯು ಮೊನ್ನೆ ವಸಂತನಿಗೆ ಜ್ವರ ಬಂದಿದ್ದಾಗ, ಡಾಕ್ಟರನ್ನು ಕರೆಸಿ ಹದಿನೈದು ರೂಪಾಯಿಯನ್ನು ಚೆಲ್ಲಿದಳು. ಹಾಲನ್ನು ಕಾಣದವ ನಾನು! ಆದರೆ ಹಾಲಿಲ್ಲದ ಊಟ ವಸಂತನಿಗೆ ಸೇರುತ್ತಲೇ ಇರಲಿಲ್ಲ.

ದಿನದಿನವೂ ನನ್ನ ಕೋಣೆಯಿಂದ ನನ್ನ ಬಟ್ಟೆಗಳೆಲ್ಲಾ ಮಾಯವಾಗುತ್ತಿದ್ದವು. ನನ್ನ ಟವಲಿನ ಪತ್ತೆಯೇ ಇಲ್ಲ. ಟವಲನ್ನು ವಸಂತನ ಸ್ನಾನಕ್ಕೆ ಉಪಯೋಗಿಸಿದ್ದೇನೆ ಎನ್ನುವಳು. ನಾನು ಲೈಫ್‌ಬಾಯ್ ಸೋಪಿನಲ್ಲಿ ಸ್ನಾನಮಾಡಿದರೆ, ಲಕ್ಸ್ ಸೋಪ್ ಇಲ್ಲದೆ ಅವನ ಸ್ನಾನವೇ ಆಗುವಂತಿರಲಿಲ್ಲ. ವಿಮಲೆಗೂ ಪೌಡರಿಗೂ ಬಹಳ ದೂರ ಆದರೆ ಟಾಲ್ಕಂ ಪೌಡರ್ ಡಬ್ಬಿಯನ್ನು ಅವಳು ತರಿಸಿದ್ದಾಳೆ. ಏಕೆಂದು ಕೇಳಿದಾಗ ವಸಂತನ ಉಪಯೋಗಕ್ಕೆಂದಳು!

ಈ ದಿನ ಮಧ್ಯಾಹ್ನ ನಾನು ಊಟಕ್ಕೆ ಬಂದು ನನ್ನ ಕೋಣೆಯನ್ನು ನುಗ್ಗಿ ನೋಡುವಾಗ ವಸಂತನೂ, ವಿಮಲೆಯೂ ನನ್ನ ಹಾಸಿಗೆಯಲ್ಲೇ ಮಲಗಿದ್ದಾರೆ. ವಿಮಲೆಯು ವಸಂತನನ್ನಪ್ಪಿ ಪ್ರೀತಿಯಿಂದ ಮುದ್ದಿಡುತ್ತಿದ್ದಾಳೆ. ಇನ್ನೂ ಏಕೆ ಸುಮ್ಮನಿರುವೆನು? ಹೆಂಡತಿಗೆ ಹೊಡೆಯಲೇ? ಇನ್ನು ನನ್ನಿಂದ ತಡೆಯಲಾಗಲಿಲ್ಲ. ಕೂಡಲೇ ಇಬ್ಬರಿಗೂ ಮುದ್ದಿಟ್ಟೆ! ಇದೇಕೆಂದು ಬೆರಗಾಗಬೇಡಿ, ದಿಕ್ಕುಗೆಡಬೇಡಿ. ವಸಂತನು ನಮ್ಮಿಬ್ಬರ ಮಿತ್ರನಲ್ಲ, ಅವನು ನನ್ನ ವಂಶಾಂಕುರ ನಮ್ಮಿಬ್ಬರ ಪ್ರೇಮದ ಫಲ. ಒಂದು ತಿಂಗಳ ಹಿಂದೆ ಜನಿಸಿದ ನಮ್ಮಿಬ್ಬರ ಪ್ರೀತಿ ಪಾತ್ರ ಏಕಮಾತ್ರ ಪುತ್ರ! ಹಾಗಾದರೆ ಹೇಳಿ ನಾನು ಅವರಿಬ್ಬರಿಗೆ ವಿಧಿಸಿದ ಶಿಕ್ಷೆ ಸರಿಯೇ.

ಶೇಖ ಅಬ್ದುಲ್ಲಾರ ಹೇಳಿಕೆ.

ಕಾಶ್ಮೀರ ಸಮಸ್ಯೆಯನ್ನು ಮೂರು ವರ್ಷಗಳ ವರೆಗೆ ಬದಿಗೊತ್ತಿದ ನಂತರ ಭದ್ರತಾ ಮಂಡಳವು ಸಮಸ್ಯೆಯ ಪರಿಹಾರಕ್ಕಾಗಿ ಮುಖ್ಯ ತತ್ವಗಳಿಗೆ ಭಂಗಬರುವಂತಹ ಯೋಜನೆಯೊಡನೆ ಮುಂದೆ ಬಂದಿದೆ ಎಂದು ಕಾಶ್ಮೀರದ ಮುಖ್ಯ ಮಂತ್ರಿ ಶೇಖ ಮಹಮ್ಮದ ಅಬ್ದುಲ್ಲಾರವರ ಹೇಳಿಕೆ.

ಶ್ರೀನಗರದಿಂದ ೬ ಮೈಲು ದೂರವಿರುವ ಹಜರತಬಾಗ್ ಮಸ್ಲಿಮ್ ಮಸೀದೆಯಲ್ಲಿ ೫೦,೦೦೦ ಜನರ ಸಭೆಯಲ್ಲಿ ಮಾತನಾಡುತ್ತಿದ್ದರು.

ಮುಂದುವರಿಯುತ್ತ ಅವರು ಹೀಗೆ ನುಡಿದರು. ‘ಕಾಶ್ಮೀರದ ಮುಂದಿನ ರೂಪರೇಷೆ ಮತ್ತು ಅದರ ಸಂಬಂಧವು ಯಾವ ಕಡೆಗಿದೆಯೆಂಬುದನ್ನು ನಿರ್ಧರಿಸುವದಕ್ಕಾಗಿ ಬಹಳ ಆಲೋಚನೆಯನಂತರ ನಾವು ಘಟನಾ ಸಭೆಯನ್ನು ಕೂಡಿಸಲು ನಿರ್ಧರಿಸಿರುವೆವು. ಕಾಶ್ಮೀರದ ಪರಿಸ್ಥಿತಿಯನ್ನು ಅಭ್ಯಸಿಸಲು ಇಲ್ಲಿಗೆ ಬಂದ ಅಂತರ್‌ರಾಷ್ಟ್ರೀಯ ಮಧ್ಯಸ್ಥಗಾರರು ಮತ್ತು ಸಮಿತಿಗಳು ಕಾಶ್ಮೀರ ಸಮಸ್ಯೆಯು ಭಾರತ ಮತ್ತು ಪಾಕಿಸ್ಥಾನಗಳಿಗೆ ಮಾತ್ರ ಸಂಬಂಧಿಸಿದೆಯೆಂಬ ಭಾವನೆಯಿಂದ ಸಮಸ್ಯೆಯ ಪರಿಹಾರಕ್ಕಾಗಿ ಪ್ರಯತ್ನಿಸುವದರಿಂದ ಮೂಲದಲ್ಲಿಯೇ ಅವರು ತಪ್ಪಿದಂತಾಗಿದೆ. ಕೆಲವೇ ರಾಷ್ಟ್ರಗಳ ಘನತೆಯು ಗಂಡಾಂತರದಲ್ಲಿರುವದಕ್ಕಿಂತ ಲಕ್ಷಾವಧಿ ಜನರ ಭವಿತವ್ಯವು ಗಂಡಾಂತರದಲ್ಲಿರುವದೆಂಬನ್ನು ಅವರು ಪರಿಶೀಲಿಸುವದಿಲ್ಲ. ಆ ದುಷರಿಂದ ಅವರ ಪ್ರಯತ್ನವೆಲ್ಲ ಪ್ರಾರಂಭದಲ್ಲಿಯೇ ವಿಫಲವಾಗಲು ಕಾರಣವಾಗಿದೆ.

ತನ್ನ ಸೈನ್ಯ ಬಲದಿಂದ ಆಕ್ರಮಿಸಿದ ಪ್ರದೇಶವನ್ನು ತನ್ನ ಅಂಕೆಯಲ್ಲಿಟ್ಟುಕೊಂಡು ಇಡಿಯ ಕಾಶ್ಮೀರವು ಪಾಕಿಸ್ತಾನಕ್ಕೆ ಸೇರುವಂತ ವಾತಾವರಣದಲ್ಲಿ ಮತಗಣನೆಯನ್ನು ಮಾಡಲು ಪಾಕಿಸ್ಥಾನವು ಇಚ್ಛಿಸುತ್ತಿದೆ. ಇಂತಹ ವಿಧಾನವು ನಮಗೆಂದಿಗೂ ಒಪ್ಪಿತವಿಲ್ಲ’ ಎಂದೂ ಅವರು ನುಡಿದರು.

ನಾನು ರಾಷ್ಟ್ರೀಯ ಕಾಂಗ್ರೆಸ್ಸಿನ ಅಧ್ಯಕ್ಷನಿರುವದರಿಂದ ಜಮೀನುದಾರರಿಗೆ ಪರಿಹಾರ ಕೊಡುವದನ್ನು ನಾನು ವಿರೋಧಿಸುತ್ತೇನೆ. ಜಮೀನುದಾರರಿಗೆ ಪರಿಹಾರ ಕೊಡುವದನ್ನು ಘಟನಾ ಸಭೆಯೇ ನಿರ್ಣಯಿಸುವದಲ್ಲದೆ ಸಂಸ್ಥಾನದ ರಾಜಮನೆತನದ ಭವಿಷ್ಯದ ಬಗ್ಗೆಯೂ ಘಟನಾ ಸಮಿತಿಯೇ ನಿರ್ಣಯ ಕೊಡುವದು ಎಂದರು.

ಚೀಫ್ ಕಮಿಷನರ ಪ್ರಾಂತಗಳ ಸುಧಾರಣಾ ಮಸೂದೆ.

ಹಿಂದೂ ದೇಶದಲ್ಲಿರುವ ಹನ್ನೊಂದು ಚೀಫ್ ಕಮಿಷನರ್ ಪ್ರಾಂತಗಳ ಪೈಕಿ ಬಿಲಾಸ್‌ಪುರ ಒಂದನ್ನು ಬಿಟ್ಟು ಉಳಿದವುಗಳಿಗೆ ಬರುವ ಚುನಾವಣೆ ವರೆಗೆ ಚೀಫ್ ಕಮಿಷನರ ಗಳಿಗಿದ್ದ ಬಹುದಾದ ಜುಡಿಶಿಯಲ್ ಅಧಿಕಾರ ಒಂದನ್ನು ವಿನಾಯಿಸಿ ಇತರ ಆಡಳಿತ ಕಾರ್ಯ ಕಲಾಪಗಳಲ್ಲಿ ಸಹಾಯ ಮಾಡಲು ಎಡ್ವೈಸರುಗಳ ಕೌನ್ಸಿಲನ್ನು ಕೊಡುವ ಉದ್ದೇಶದಿಂದ ಒಂದು ಮಸೂದೆಯು ಪಾರ್ಲಿಮೆಂಟಿನ ಮುಂದೆ ಚರ್ಚೆಗೆ ಇಡಲ್ಪಟ್ಟಿದೆ. ಈ ಮಸೂದೆ ಪ್ರಕಾರ ಕೌನ್ಸಿಲರುಗಳ ಸಂಖ್ಯೆಯು ಎರಡರಿಂದ ಐದರ ವರೆಗೆ ಇಂಡಿಯಾ ಸರಕಾರದ ಪ್ರೆಸಿಡೆಂಟರಿಂದ ಅಗಿಂದಾಗ್ಯೆ ನಿಶ್ಚಯಿಸಲ್ಪಡುವದು. ಈ ಕೌನ್ಸಿಲರುಗಳು ಇಂಡಿಯಾ ಸರಕಾರದ ಪ್ರೆಸಿಡೆಂಟರಿಂದ ನೇಮಿಸಲ್ಪಡುವರು. ಈ ಕೌನ್ಸಿಲರುಗಳ ಸಂಬಳವನ್ನು ಚೀಫ್ ಕಮಿಷನರು ಪ್ರೆಸಿಡೆಂಟರ ಒಪ್ಪಿಗೆಯಿಂದ ನಿಶ್ಚಯಿಸುವರು.

(೧) ಕೌನ್ಸಿಲರುಗಳ ಅಧಿಕಾರಕ್ಕೆ ಬಿಟ್ಟುಕೊಡುವ ವಿಷಯ ಯಾವುವೆಂಬ ಕುರಿತು (೨) ಈ ಕೌನ್ಸಿಲಿನ ಕಾರ್ಯ ಕಲಾಪಗಳನ್ನು ದಕ್ಷತೆಯಿಂದ ನಡೆಸುವ ಬಗ್ಗೆ (೩) ಚೀಫ್ ಕಮೀಷನರಿಗೂ ಕೌನ್ಸಿಲರುಗಳಿಗೂ ಭಿನ್ನಾಭಿಪ್ರಾಯ ಉಂಟಾದಲ್ಲಿ ಕೌನ್ಸಿಲಿನಲ್ಲಿ ಓಟುಗಳು ಸರಿಸಮಾನವಾದಲ್ಲಿ, ಮತ್ತು ಕೌನ್ಸಿಲು ಮೀಟಿಂಗಿನಲ್ಲಿ ಚೀಫ್ ಕಮಿಷನರು ಗೈರಹಾಜರಾದಲ್ಲಿ ಯಾವರೀತಿ ವರ್ತಿಸಬೇಕೆಂಬುದಕ್ಕೆ ಪ್ರೆಸಿಡೆಂಟರು ನಿಯಮಗಳನ್ನು ಮಾಡತಕ್ಕದ್ದು.

ಪಾರ್ಲಿಮೆಂಟ್ ಮೆಂಬರನನ್ನು ಕೌನ್ಸಿಲರಾಗಿ ನೇಮಿಸಲು ಆತಂಕವಿಲ್ಲ.

ಶ್ರೀಮದ್ಭಗವದ್ಗೀತಾ.

ತನಗೆ ತಾನೇ ಶತ್ರುವು - ತನಗೆ ತಾನೇ ಮಿತ್ರನು.

(ಶ್ರೀ. ಕಾವೇರಿ ಆಶ್ರಮ ಇವರಿಂದ.)

ಶ್ಲೋ॥ ಉದ್ಧರೇದಾತ್ಮನಾತ್ಮಾನಂ
ನಾತ್ಮಾನಮವಸಾದಯೇತ್ ।
ಆತ್ಮೈವ ಹ್ಯಾತ್ಮನೋ ಬಂಧು
ರಾತ್ಮೈವ ರಿಪುರಾತ್ಮನಃ ॥

ಅರ್ಥ— ತನ್ನನ್ನು ತಾನೇ ಮೇಲಕ್ಕೆತ್ತಬೇಕು. ತನ್ನನ್ನು ಕೆಳಗಿಳಿಸಬಾರದು. ಏಕೆಂದರೆ ತನಗೆ ತಾನೇ ಮಿತ್ರನು ತನಗೆ ತಾನೇ ಶತ್ರುವು. (ಅಧ್ಯಾಯ ೬— ಶ್ಲೋಕ ೫)

ಸಮಾಜದ ಪ್ರತಿಯೊಬ್ಬ ವ್ಯಕ್ತಿಗೂ ಶುದ್ಧ ವ್ಯವಹಾರವಿದ್ದರೆ ಮಾತ್ರ ವ್ಯಕ್ತಿಗೂ ಸಮಾಜಕ್ಕೂ ಶಾಂತಿ ಇರುತ್ತದೆ. ಈ ರೀತಿಯ ಶಾಂತಿಯ ವಾತಾವರಣವಿದ್ದರೆ ಮಾತ್ರ ಮನಸ್ಸನ್ನು ಏಕಾಗ್ರಗೊಳಿಸಲು ಸಾಧ್ಯ.

ಮನಸ್ಸನ್ನು ಏಕಾಗ್ರಗೊಳಿಸಲು ಇನ್ನೊಂದು ಮುಖ್ಯ ವಿಷಯವಿದೆ. ಸಾಮ್ಯದೆಶೆ; ಎಂದರೆ ಎಲ್ಲವೂ ಶುಭವಾದುದು, ಎಲ್ಲವೂ ಮಂಗಳಕರವಾದುದು ಎಂಬ ಭಾವನೆ. ತಾನೊಬ್ಬನೇ ತನಗೆ ಬೇಕಾದವನು, ಉಳಿದವರೆಲ್ಲಾ ತನ್ನ ಶತ್ರುಗಳು ಎಂಬ ಭಾವನೆಯು ಹೋಗಬೇಕು. ಈ ಕೆಟ್ಟ ಭಾವನೆ ಉಳಿದಿರುವವರಿಗೆ ಮನಸು ಹೇಗೆ ಸ್ವಾಧೀನಕ್ಕೆ ಬಂದೀತು. ಗುಬ್ಬಚ್ಚಿಗೆ ಅವನ ಹಾಕ ಹೇಳಿದರೆ ಆದೀತೇ? ಅದು ಯಾವುದಕ್ಕೂ ಹೆದರುತ್ತದೆ. ಯಾವುದನ್ನು ಕಂಡರೂ ಅದಕ್ಕೆ ಸಂಶಯ. ಎಲ್ಲಿ ಯಾರು ತನನ್ನು ಹೊಡೆದಾರೋ ಬಡಿದಾರೋ ಎಂದು ಸಂಶಯ. ಒಂದು ನಿಮಿಷ ಸುಮ್ಮನೆ ಕೂರದು. ಆ ಕಡೆ ಈ ಕಡೆ ನೋಡುತ್ತಲೇ ಇರುತ್ತದೆ. ಸ್ವಲ್ಪ ಗಾಳಿ ಜಾಸ್ತಿ ಬೀಸಿದರೆ ಹೆದರಿ ಓಡುತ್ತದೆ. ಓಡಿ ಹೋಗಿ ಬೇರೆ ಕಡೆ ಕೂತರೆ ತಾನೆ ಇದಕ್ಕೆ ನೆಮ್ಮದಿಯೇ? ಅಲ್ಲೂ ಇದೇ ಗಾಬರಿ, ಸಂಶಯ. ಎಲ್ಲಿಯೂ ಒಂದು ನಿಮಿಷ ಕೂರಲಾರದು. ಹಿಂಸಕ ಪ್ರಾಣಿಗಳು ಹುಲಿ, ಸಿಂಹಗಳ ಸ್ಥಿತಿಯೂ ಹೀಗೆಯೇ. ಎಲ್ಲರೂ ತನ್ನ ಶತ್ರುಗಳು, ತನ್ನನ್ನು ಯಾರಾದರೂ ಕೊಂದಾರು ಎಂಬ ಸಂಶಯ ಇವಕ್ಕೆ ಇರುವಾಗ ನೆಮ್ಮದಿ ಎಲ್ಲಿಂದ ಬಂದೀತು.

ಈ ರೀತಿ ಸಂಶಯ ಭೀತಿ ಭಾವನೆ ಹೋಗಬೇಕು. ಸೃಷ್ಟಿಯ ಸಮಸ್ತವೂ ಶುಭವಾದುದು, ಮಂಗಳವಾದುದು, ಸರಿಯಾದುದು ಎಂಬ ಮನಸ್ಸಾಗಬೇಕು. ಕಿವಿಯಿಂದ ಕೇಳುವುದೆಲ್ಲಾ ಮಂಗಳಕರವಾದದ್ದು, ಕಣ್ಣಿಂದ ನೋಡುವುದೆಲ್ಲಾ ಶುಭವಾದುದು. ಎಲ್ಲರೂ ತನ್ನ ಮಿತ್ರರು, ಎಲ್ಲರೂ ಒಳ್ಳೆಯವರು ಎಂಬ ಭಾವನೆ ಬರಬೇಕು. ಇಂಗ್ಲೀಷ ಕವಿಯೊಬ್ಬನು ಇದನ್ನೇ ಹೇಳಿದ್ದಾನೆ.

God is his Heaven
And all is right with the world ಎಂದು. ಇದನ್ನೇ ನಮ್ಮ ಉಪನಿಷತ್ತು ಸಹ ಹೇಳಿದೆ.

ಸೃಷ್ಟಿಯು ನಿಜವಾಗಿಯೂ ಪವಿತ್ರವಾದುದು, ಮಂಗಳಕರವಾದುದು. ಆದರೆ ನಮ್ಮ ಮನಸ್ಸೇ ಕೆಟ್ಟು ಹೋಗಿದೆ. ನಮ್ಮ ದೃಷ್ಟಿಯೇ ಕಸರು. ನಾವು ಸೃಷ್ಟಿಯನ್ನು ಯಾವ ದೃಷ್ಟಿಯಿಂದ ನೋಡುತ್ತೇವೋ ಅದಕ್ಕೆ ತಕ್ಕಂತೆ ಅದು ನಮಗೆ ಕಾಣುತ್ತದೆ. ಪ್ರಪಂಚದಲ್ಲೆಲ್ಲಾ ನಮ್ಮ ಶತ್ರುಗಳು ತುಂಬಿದ್ದಾರೆ, ನಾನು ಮಾತ್ರ ನನ್ನ ಮಿತ್ರನೆಂಬ ದೃಷ್ಟಿಯಿಂದ ನೋಡಿದರೆ ನಮಗೆ ಹಾಗೆಯೇ ಕಾಣಿಸುತ್ತದೆ. ಇದು ನಮ್ಮ ದೃಷ್ಟಿದೋಷ. ಕೆಂಪು ಬಣ್ಣದ ಕನ್ನಡಿಯನ್ನು ಹಾಕಿ ನೋಡಿದರೆ ಸೃಷ್ಟಿ ಎಲ್ಲಾ ಕೆಂಪಗೆ ಕಾಣುತ್ತದೆ. ಬಿಳೀ ಕನ್ನಡಿ ಹಾಕಿ ನೋಡಿದರೆ ಬೆಳ್ಳಗೇ ಕಾಣಿಸುತ್ತದೆ. ಬೇರೆಯವರು ನಮ್ಮ ಮಿತ್ರರೆಂಬ ಭಾವನೆ ಇದ್ದರೆ ಅವರು ನಮ್ಮ ಮಿತ್ರರೇ ಆದಾರು, ಶತ್ರುವೆಂದು ಭಾವಿಸಿದರೆ ಶತ್ರುಗಳಾದರು. ಪಾಂಡು ಪುತ್ರನಾದ ಧರ್ಮರಾಯನಿಗೆ "ಅಜಾತ ಶತ್ರು" ಎಂದು ಒಂದು ಹೆಸರು. ಇವನಿಗೆ ಯಾರೂ ಶತ್ರುಗಳೇ ಇಲ್ಲ. ಕೌರವರೂ ಇವನ ಮಿತ್ರರೇ. ಇವನ ಸರ್ವಸ್ವವನ್ನು ಅಪಹರಿಸಿ ಕಾಡಿಗೆ ಅಟ್ಟಿದರೂ ಸಹ ಅವರು ಇವನ ಮಿತ್ರರೇ ಆಗಿದ್ದರು. ಕೌರವರು ತನ್ನ ಶತ್ರುಗಳು ಎಂಬ ಭಾವನೆ ಅಜಾತಶತ್ರುವಿಗೆ ಎಂದಿಗೂ ಬರಲೇ ಇಲ್ಲ. ಹೀಗಾದುದರಿಂದಲೇ ಧರ್ಮರಾಯನಿಗೆ ಕಡೆಯವರೆಗೂ ಧರ್ಮಮಾರ್ಗದಲ್ಲಿ ನಡೆದು ಧರ್ಮ ಯುದ್ಧ ಮಾಡಿ ಕೌರವರನ್ನು ಗೆಲ್ಲಲು ಸಾಧ್ಯವಾಯಿತು.

ಶ್ರೀ ರಾಮದಾಸರು ರಾಮಾಯಣವನ್ನು ಬರೆದು ತನ್ನ ಶಿಷ್ಯರಿಗೆ ಓದಿ ಹೇಳುತ್ತಿದ್ದರು. ಶ್ರೀರಾಮನ ಪರಮ ಭಕ್ತನಾದ ಆಂಜನೇಯನು ರಾಮಾಯಣ ಓದುವಲ್ಲೆಲ್ಲಾ ಬಂದಿರುತ್ತಾನೆಂಬ ನಂಬಿಕೆ. ಆದುದರಿಂದ ಅವನಿಗಾಗಿ ಒಂದು ಪೀಠವು ಖಾಲಿ ಇದ್ದೇ ಇರುತ್ತದೆ. ಆದರೆ ಆಂಜನೇಯನು ಪ್ರತ್ಯಕ್ಷವಾಗಿರುವುದಿಲ್ಲ. ರಾಮದಾಸರು ಸುಂದರ ಕಾಂಡವನ್ನು ಹೇಳುತ್ತಾ ಸೀತೆಯನ್ನು ಹುಡುಕಿಕೊಂಡು ಅಶೋಕವನದಲ್ಲಿ ಅಲೆದಾಡುತ್ತಿದ್ದ ಆಂಜನೇಯನ ವಿಷಯವನ್ನು ಹೇಳುತ್ತಿದ್ದರು. "ಕೋಪಾವೇಶದಿಂದ ವಾಯು ಪುತ್ರನು ಅಶೋಕ ವನದಲ್ಲಿ ಮರದಿಂದ ಮರಕ್ಕೆ ಹಾರುತ್ತಾ ಮರದಲ್ಲಿ ಆಗತಾನೆ ಅರಳಿದ್ದ ಶುಭ್ರವಾದ ಬಿಳೀ ಹೂಗಳನ್ನು ಕಂಡನು" ಎಂದು ಹೇಳಿದರು. ಕೂಡಲೇ ಆಂಜನೇಯನು ಪ್ರತ್ಯಕ್ಷನಾಗಿ "ರಾಮದಾಸರೇ ನಿಮ್ಮ ಮಾತುಗಳನ್ನು ಬದಲಾಯಿಸಬೇಕು. ನಾನು ಅಲ್ಲಿ ನೋಡಿದುದು ಕೆಂಪು ಹೂಗಳು, ಬಿಳೀ ಹೂಗಳಲ್ಲ" ಎಂದರು. ಶ್ರೀರಾಮದಾಸರು "ನೀನು ಕಂಡದು ಬಿಳೀ ಹೂಗಳೆಂದರು. ಆಂಜನೇಯನು "ಅದನ್ನು ಕಂಡವನು ನಾನು ಅವುಗಳು ಕೆಂಪು ಹೂಗಳು, ಆ ನಾನು ಸುಳ್ಳು ಹೇಳುತ್ತೇನೆಯೇ" ಎಂದನು. ಇಬ್ಬರೂ ತಾವು ಹೇಳಿದುದೇ ಸರಿ ಎನ್ನುತ್ತಿದ್ದರು. ಕಡೆಗೆ ದೂರು ಶ್ರೀರಾಮನಿಗೆ ಹೋಯಿತು. ಆಗ ಶ್ರೀರಾಮನು ಹೇಳಿದನು, ಆಂಜನೇಯನು ನೋಡಿದುದು ಬಿಳೀಹೂಗಳೇ ಆದರೆ ಕೋಪದಿಂದ ಕೆಂಗಣ್ಣು ಮಾಡಿಕೊಂಡಿದ್ದ ಹನುಮಂತನಿಗೆ ಅವು ಕೆಂಪಗೆ ಕಂಡವು." ಎಂದು ತೀರ್ಪುಕೊಟ್ಟನು.

ಇದರ ಅರ್ಥವೇನೆಂದರೆ ಮನುಷ್ಯನು ಯಾವ ದೃಷ್ಟಿಯಿಂದ ಈ ದೃಷ್ಟಿಯನ್ನು ನೋಡುತ್ತಾನೆಯೋ ಆ ರೀತಿ ಅದು ಕಾಣುತ್ತದೆ ಎಂದು. ಪ್ರಪಂಚವೆಲ್ಲಾ ಮಂಗಳವಾದುದು, ಶುಭವಾದುದು, ಬಂದು ಆದರ ಕಡೆಗೆ ನೋಡಿ ಅದು ಹಾಗೆಯೇ ಇರುತ್ತದೆ. ಸಂಶಯ ಪಡಬಾರದು. ದೇವರ ದೃಷ್ಟಿಯಲ್ಲಿ ಅಮಂಗಳ ಯಾವುದೂ ಇಲ್ಲ. ಯಾರಿಗೆ ಯಾರೂ ಶತ್ರುಗಳಲ್ಲ. ಎಲ್ಲರೂ ಒಂದೇ, ಎಲ್ಲರೂ ಅವನ ಮಕ್ಕಳು. ಎಲ್ಲರೂ ಅಣ್ಣ ತಮ್ಮಂದಿರು. ನಾನು ಇರುವುದು ಎಲ್ಲರಿಗಾಗಿ. ನಾನು ಎಲ್ಲರ ಹಿತಕ್ಕಾಗಿ ದುಡಿಯಬೇಕು. ಎಂಬ ಭಾವನೆ ಇರಬೇಕು.

ಹೀಗೆ ೬ ನೇ ಅಧ್ಯಾಯದಲ್ಲಿ ಭಗವಂತನನ್ನು ಪ್ರತ್ಯಕ್ಷ ಮಾಡಿಕೊಳ್ಳುವ ವಿಧಾನಗಳನ್ನು ಹೇಳಿದೆ. (೧) ಚಿತ್ತದ ಏಕಾಗ್ರತೆ. (೨) ಜೀವದಲ್ಲಿ ನಿಯಮಿತ ಆಚರಣೆ. (೩) ಸಾಮ್ಯದೆಶೆ ಅಥವಾ ಸಮತಾ ದೃಷ್ಟಿ ಈ ಮೂರು ಅಂಶಗಳ ಜೊತೆಗೆ ಇನ್ನೂ ೨ ವಿಷಯಗಳನ್ನು ಹೇಳಿದೆ. (೧) ಅಭ್ಯಾಸ. (೨) ವೈರಾಗ್ಯ.

ದೃಢ ಮನಸ್ಸಿನಿಂದ ಇವುಗಳನ್ನು ನಿತ್ಯವೂ ಅಭ್ಯಾಸ ಮಾಡುತ್ತಾ ಬರಬೇಕು. ಇಂದೇ ಮಾಡಿಯೇನು ಎಂದು ಹೇಳುವಂತಿಲ್ಲ. ಒಂದೇ ದಿನದಲ್ಲಿ ಮನಸ್ಸನ್ನು ಏಕಾಗ್ರತೆ ಗೊಳಿಸಲಾಗುವುದಿಲ್ಲ. ಅನೇಕ ಬೇಡದ ಅಭ್ಯಾಸಗಳಿಗೆ ಬಲಿಯಾಗಿ ನಮ್ಮ ಜೀವನದಲ್ಲಿ ಒಂದು ಮಿತಿ ಇರುವುದಿಲ್ಲ. ಒಳ್ಳೆಯದು ಕೆಟ್ಟದ್ದು ಎಂಬ ಭೇದ ಭಾವ ನಮ್ಮಲ್ಲಿ ಇವೆ. ಇವುಗಳನ್ನೆಲ್ಲಾ ಒಂದು ದಿನದಲ್ಲಿ ಹೋಗಲಾಡಿಸಲಾಗುವುದಿಲ್ಲ. ತಾಳ್ಮೆಯಿಂದಲೂ ದೃಢ ನಂಬಿಕೆಯಿಂದಲೂ ಪ್ರತಿ ನಿತ್ಯವೂ ಅಭ್ಯಾಸ ಮಾಡಬೇಕು. ಇದರಿಂದ ನಮಗೆ ದಿನ ದಿನಕ್ಕೆ ಹೆಚ್ಚು ಹೆಚ್ಚು ಸಫಲತೆ ಸಿಕ್ಕುತ್ತದೆ. ಅಭ್ಯಾಸದಿಂದ ಎಂದೇ ಒಂದು ದಿನ ಮನಸ್ಸು ಪೂರ್ಣವಾಗಿ ಅವರಲ್ಲಿಯೇ ಸ್ಥಿರಗೊಳ್ಳುತ್ತದೆ. ಅಭ್ಯಾಸದಿಂದ ನಮ್ಮ ಜೀವನದಲ್ಲಿ ಒಂದು ನಿಯಮಿತ ಆಚರಣೆ ಬಂದು ಹೋಗುತದೆ. ಮತ್ತು ನಾವು ಕಾಣುವುದು, ಕೇಳುವುದು ಆಗುವುದು. ಎಲ್ಲಾ ಮಂಗಳ ಕರವಾಗುದೆಂಬ ಜ್ಞಾನವೂ ಬರುತ್ತದೆ. ಇದಕ್ಕಾಗಿ ಅಭ್ಯಾಸ ಮುಖ್ಯವಾದುದು.

ವೈರಾಗ್ಯದ ವಿಷಯವನ್ನೂ ಭಗವದ್ಗೀತೆಯಲ್ಲಿ ಎಲ್ಲೆಲ್ಲಿಯೂ ಹೇಳಿದೆ. ಕಾಮ ಕ್ರೋಧಾದಿಗಳನ್ನು ಗೆಲ್ಲದಿದ್ದರೆ ಬೇರೆ ಯಾವ ಸಾಧನೆಯೂ ಕೈಗೂಡದು. ಕಾಮ ಕ್ರೋಧ ದಿಗಳು ನಮ್ಮಲ್ಲಿ ತುಂಬಿಕೊಂಡು ಇಂದ್ರಿಯಗಳನ್ನು ತಮ್ಮ ವಶಮಾಡಿಕೊಂಡುಬಿಡುತ್ತದೆ. ಮನುಷ್ಯನು ತನ್ನ ಸಹಜ ಸ್ವಭಾವವನ್ನೇ ಮರೆತುಬಿಟ್ಟು ಕಾಮ ಕ್ರೋಧಗಳೇ ತನ್ನ ನಿಜಸ್ವರೂಪವೆಂದು ನಂಬುವಷ್ಟು ಮಟ್ಟಿಗೆ ಮಾಡಿಬಿಡುತ್ತವೆ. ಮನುಷ್ಯನು ಸುಳ್ಳು ಹೇಳದೆಯೇ ಬದುಕುವಂತಿಲ್ಲ ಈಗಿನ ಕಾಲದಲ್ಲಿ ಎನ್ನುವುದನ್ನು ನಂಬುವಂತೆ ಮಾಡುತ್ತವೆ. ಕಾಫಿ ಕುಡಿಯದೆ ಸರಾಯಿ ಮೊದಲಾದುವನ್ನು ಕುಡಿಯದೆ, ಬೀಡಿ ಸಿಗರೇಟುಗಳಿಲ್ಲದೆ ಬದುಕಲು ಸಾಧ್ಯವೇ ಎನ್ನುತ್ತಾನೆ ಮನುಷ್ಯ. ನಾಟಕ ಸಿನೀಮಾಗಳನ್ನು ನೋಡದವನು, ಇಸ್ಪೀಟು ಆಟ ಬರದವನು ಸಮಾಜಕ್ಕೇ ಒಂದು ಕಳಂಕ ಎನಿಸುತ್ತಾನೆ. ಈ ಎಲ್ಲಾ ಕಾಮ ಕ್ರೋಧಾದಿಗಳ ಆಟಗಳನ್ನೂ ಮನುಷ್ಯನು ತನ್ನ ಸ್ವಭಾವ ಸಿದ್ಧವಾದ ನೀಚುಮಗಳೆಂದೂ ಅವುಗಳನ್ನು ಪಾಲಿಸಲೇ ಬೇಕೆಂದೂ ನಂಬುತ್ತಾನೆ. ಇವನು ಹೇಳುವ ಅರ್ಥದಲ್ಲಿ ಕಾಮ ಕ್ರೋಧಾದಿಗಳು ಮನುಷ್ಯ ಶರೀರದೊಡನೆ ಹುಟ್ಟಿದುದರಿಂದ ಅವುಗಳ ಬಲೆಗೆ ಬಿದ್ದು ಕೊಳಲಾಡುವುದು ಪ್ರಕೃತಿ ನಿಯಮವೆಂದಾಗುತ್ತದೆ. ಪಾಪ, ಇವನಿಗೆ ತನ್ನ ನಿಜಸ್ವರೂಪವೇನು ಗೊತ್ತು. ಈ ಶರೀರ ತಾನು, ಅದರಲ್ಲಿರುವ ಕಾಮ ಕ್ರೋಧಾದಿಗಳೇ ನನ್ನ ಗುಣಗಳೆಂದು ತಿಳಿದಿರುವಷ್ಟು ದಿನ ಇವನು ಈ ರೀತಿ ಆಡುತ್ತಾನೆ. ಆದರೆ ಈ ಶರೀರವೆನ್ನುವುದು ತಾನಲ್ಲ. ಇದರೊಳಗಿರುವ ಚಿನ್ಮಯನಾದ ಆತ್ಮನು ತಾನು, ಸೃಷ್ಟಿ ಕರ್ತನಾದ ಪರಮಾತ್ಮನ ಅಂಶ ತಾನು ಎನ್ನುವ ತಿಳುವಳಿಕೆ ಬಂದರೆ ಆಗ ಈ ಕಾಮ ಕ್ರೋಧಾದಿಗಳ ಆಟವನ್ನು ಏನೆಂದು ತಿಳಿಯಬಹುದು.

ನಾವು ಬೇರೆಯವರಲ್ಲಿ ಸುಲಭವಾಗಿ ತಪ್ಪು ಕಂಡು ಹಿಡಿಯುತ್ತೇವೆ. ಏಕೆಂದರೆ ನಾವು ಬೇರೆ, ಅವರು ಬೇರೆ ಎಂಬ ಭಾವ ನಮ್ಮಲ್ಲಿ ಬಂದಿರುತ್ತದೆ. ಆದುದರಿಂದ ಅವನ ತಪ್ಪು ಸುಲಭವಾಗಿ ಗೊತ್ತುಮಾಡಿಕೊಳ್ಳುತ್ತೇವೆ. ಹಾಗೆಯೇ ನಾನು ಬೇರೆ ನನ್ನ ಶರೀರ ಬೇರೆ ಎಂದು ತನ್ನ ಶರೀರವನ್ನು ತನ್ನಿಂದ ಬೇರೆ ಮಾಡಿಕೊಂಡಾಗ ತನ್ನಿಂದ (ಅಂದರೆ ತನ್ನ ಶರೀರದಿಂದ) ನಡೆಯುವ ತಪ್ಪುಗಳೆಲ್ಲಾ ಒಂದೊಂದಾಗಿ ಗೊತ್ತಾಗುತ್ತವೆ. ತನ್ನ ಮನಸ್ಸಿಗೆ ಬರುವ ಒಂದೊಂದು ಭಾವನೆಗಳು, ತನ್ನ ಇಂದ್ರಿಯಗಳು ಮಾಡುವ ಒಂದೊಂದು ಚೇಷ್ಟೆಗಳು ಇವುಗಳೆಲ್ಲಾ ಕಾಮ ಕ್ರೋಧಾದಿ ಅರಿಷಡ್ವರ್ಗಗಳ ಪ್ರೇರಣೆ ಹೌದೋ ಅಲ್ಲವೋ ಎನ್ನುವುದನ್ನು ಸೂಕ್ಷ್ಮವಾಗಿ ಗಮನಿಸಬೇಕು. ನಮ್ಮ ತಪ್ಪುಗಳು ನಮಗೇ ಗೊತ್ತಾಗುತ್ತವೆ. ಆಗ ಅವುಗಳನ್ನು ತಿದ್ದಿಕೊಳ್ಳಬೇಕು. ಇಂದ್ರಿಯಗಳು ಕರ್ಮ ಮಾಡಲು ತೊಡಗಿದರೆ ತಾನೇ ಪಾಪ ಕರ್ಮ ಮಾಡುತ್ತವೆ ಆದುದರಿಂದ ಕರ್ಮ ಮಾಡದೆಯೇ ಇದ್ದರೆ ಪಾಪ ಕರ್ಮ ನಡೆಯುವುದೇ ಇಲ್ಲ ಎಂಬ ತಿಳುವಳಿಕೆ ತಪ್ಪು. ಅಥವ ಇಂದ್ರಿಯಗಳಿಗೆ ವಿಷಯ ವಾಸನೆ ಇಲ್ಲದಂತೆ ಮಾಡಲು ಕಾಡಿಗೆ ಹೋದರೆ ಆ ವಿಷಯ ವಾಸನೆ ಇಲ್ಲದಂತಾಗುತ್ತದೆಂದು ತಿಳುವಳಿಕೆಯೂ ತಪ್ಪು.

ತನ್ನ ತಪ್ಪನ್ನು ತಾನು ನೋಡಿ ತಿದ್ದಿಕೊಳ್ಳುವುದು ಮುಖ್ಯ ಕರ್ತವ್ಯವಾಗಿದೆ. ತನ್ನ ತಪ್ಪನ್ನು ತಾನು ನೋಡಿ ತಿದ್ದುವುದರಿಂದಲೇ ತನ್ನ ಉದ್ಧಾರವಾಗುತ್ತದೆ. ಮನಸ್ಸಿನ ಇಚ್ಛೆ ಪ್ರಕಾರ ಜೀವನ ನಡೆಸಿದರೆ ತನಗೆ ತಾನೇ ಶತ್ರುವಾಗುತ್ತಾನೆ. ಎಲ್ಲರ ಮಿತ್ರತ್ವ ಮತ್ತು ಶತ್ರುತ್ವ ತನ್ನಲ್ಲೇ ಅಡಗಿದೆ. ತಾನೇ ಎಲ್ಲಕ್ಕೂ ಕಾರಣ.

ಗೃಹಲಕ್ಷ್ಮಿ

ಲೇ:—ಶ್ರೀ ಏರ್ಯ ಲಕ್ಷ್ಮೀನಾರಾಯಣ ಆಳ್ವ

'ನ ಗೃಹಂ ಗೃಹ ಮಿತ್ಯಾಹುಃ ಗೃಹಿಣಿ ಗೃಹಮುಚ್ಯತೇ' ಗೃಹವಾಗುವುದು ಕಟ್ಟಡದಿಂದಲ್ಲ ಗೃಹಿಣಿಯಿಂದ ಎಂದು ಒಬ್ಬ ಸಂಸ್ಕೃತ ಕವಿ ಹೇಳುತ್ತಾನೆ. ಅದೆಷ್ಟು ನಿಜ. ಬಿಸಿಲು, ಮಳೆ, ಚಳಿ, ಗಾಳಿಯಿಂದ ರಕ್ಷಿಸುವ ಮನೆಯನ್ನು ಪರೀಕ್ಷಿಸುವುದು ಅದರ ಉತ್ತಮವಾದ ಆಧಾರ ಸ್ತಂಭದಿಂದಲ್ಲ; ಅದರ ಆಧಾರ ಮತ್ತು ಜೀವಾಳವಾದ ಸ್ತ್ರೀಯು ಸ್ಫೂರ್ತಿ ಸ್ತಂಭದಿಂದ' ಎಂದು ಸ್ವಾಮಿ ವಿವೇಕಾನಂದರು ಒಮ್ಮೆ ಬರೆದುದರಲ್ಲಿ ಸತ್ಯವೇ ಮೂರ್ತಿಭವಿಸಿದೆ. ಸ್ತ್ರೀಯ ಪರಿಶುದ್ಧ ಚಾರಿತ್ರ್ಯದಿಂದ ಗೃಹವೇ ನಿತ್ಯಾನಂದದ ನಿಜ ನೆಲೆಯಾಗಬಲ್ಲುದು. ಅಂತಹ ಹಿರಿದಾದ ಶಕ್ತಿ ಆಕೆಯಲ್ಲಿ ಹುಟ್ಟಾ ಇದೆ. ಗೃಹ ಜೋಡಣೆಯ ನಡೆನುಡಿಗಳಲ್ಲಿ ಸತ್ಯಪ್ರೇಮಗಳು ಜೊತೆಗೂಡಿದರೆ ಸೌಂದರ್ಯದ ಹೊಳೆಯೇ ಹರಿದು ಆ ಗೃಹವೇ ಶಿವಧಾಮವಾಗಬಲ್ಲುದು. ಆರ್ಥಿಕ ಕ್ಷೇತ್ರದಲ್ಲಂತೂ ಆಕೆ ಎಂತು ಗಳಿಸದೆಯೂ ಉಳಿಸಬಲ್ಲಳು ಎಂಬುದನ್ನು ಎಲ್ಲರೂ ಬಲ್ಲರು. ಆದ್ದರಿಂದಲೇ ಹೆಣ್ಣನ್ನು ಗೃಹಲಕ್ಷ್ಮಿ ಎನ್ನುವುದು ಎಲ್ಲಾ ದೃಷ್ಟಿಯಿಂದಲೂ ಎಷ್ಟು ಸಮಂಜಸವಾಗಿದೆ.

ಹೆಣ್ಣಾಗಿ ಹುಟ್ಟಿದೊಡನೆ, ಒಂದು ಗೃಹದ ಒಡತಿಯಾದೊಡನೆ ನಾರಿ ಗೃಹಲಕ್ಷ್ಮಿಯಾಗುವಳೆಂದು ಯಾರು ತಿಳಿಯಲಾರರು. ಅಡ್ಡಹಾದಿ ಹಿಡಿದ ನಾರಿ ಗೃಹನಾಶಿನಿಯೂ ಆಗಬಲ್ಲಳು. ಹೆಣ್ಣು ಗೃಹಲಕ್ಷ್ಮಿಯಾಗಬೇಕಾದರೆ ಮೊತ್ತ ಮೊದಲು ಆಕೆಯಲ್ಲಿ ತನ್ನ ಮೂಲರೂಪವನ್ನು ಹೊಂದುವ ಹಂಬಲ ಮೂಡಬೇಕು. ನಂತರ ಆ ಹಂಬಲವನ್ನು ಕಾರ್ಯಕಾರಿ ಮಾಡುವುದಕ್ಕಾಗಿ ಬಹಳಷ್ಟು ದುಡಿಯಬೇಕು; ತಪಸ್ಸುಮಾಡಬೇಕು. ಆಕೆ ಹಳೆ ಕಾಲದ ಅಂಧವಿಶ್ವಾಸಗಳನ್ನು ತೊರೆದು, ಹೊಸಕಾಲದ ಬೆಡಗು ಬಿನ್ನಾಣಗಳಿಗೆ ಮಾರುಹೋಗದೆ—ಬಾಹ್ಯ ಪ್ರತಿಕ್ರಿಯೆಗಳಿಂದ ತನ್ನನ್ನು ರೂಪಿಸಿಕೊಳ್ಳದೆ ತನ್ನ ಆತ್ಮಶಕ್ತಿಯಿಂದಲೇ ಬೆಳೆಸಿಕೊಳ್ಳಬೇಕು. ಆಕೆ ತನ್ನ ದಿವ್ಯ ಚಕ್ಷುವಿನಿಂದ ಸ್ಥೂಲ ಆವರಣವನ್ನು ಭೇದಿಸಿ, ಸೂಕ್ಷ್ಮ ಆತ್ಮಸ್ವಭಾವವನ್ನೂ, ವಾಸ್ತವಿಕ ಸತ್ಯವನ್ನೂ ಅಂತರ್ನಿಹಿತ ಗೂಢತತ್ವವನ್ನೂ ಅರಿತು ತನ್ನನ್ನು ಅದಕ್ಕನುಗುಣವಾಗಿ ಬೆಳೆಯಿಸಿಕೊಂಡು, ತನ್ನ ಹೃದಯದ ಬಟ್ಟಲಲ್ಲಿ ತುಂಬಿದ ಪ್ರೇಮದ ಅಮೃತವನ್ನು ಸಿಂಪಡಿಸಿ ಗೃಹದಲ್ಲೇ ನಿತ್ಯಾನಂದದ ಸೆಲೆಯೊಡೆಯುವಂತೆ ಮಾಡಿದರೆ ಮಾತ್ರ ಆಕೆ ನಿಜವಾದ ಗೃಹಲಕ್ಷ್ಮಿಯಾಗಬಲ್ಲಳು.

ಇಂದು ನಾರಿಯರಲ್ಲಿ ಪ್ರಗತಿಶೀಲರೆನಿಸಿಕೊಂಡು ಹೆಂಗಳೆಯರ ಹಕ್ಕುಗಳಿಗಾಗಿ ಹೋರಾಡುತ್ತಿರುವ ಹೆಚ್ಚಿನ ಮಹಿಳೆಯರಿಗೆ ಗಂಡಸರ ಸ್ಥಾನಮಾನಗಳನ್ನು ಕಂಡು ಉಂಟಾದ ಮತ್ಸರವೇ ಸ್ಫೂರ್ತಿ. ಆದರೆ ಈ ಮನೋಭಾವದಿಂದ ಹೋರಾಡ ಹೊರಟರೆ ನಾರಿಯರ ಉನ್ನತಿಯಾಗುತ್ತದೆ ಎಂದು ಯಾರಾದರೂ ಭಾವಿಸಿದರೆ ಅದು ಮೂರ್ಖತನವಾದೀತು. ಸತ್ಯ ನ್ಯಾಯಗಳಿಗಾಗಿ ವಿಧಾಯಕ ರೀತಿಯಿಂದ ಪ್ರಯತ್ನಿಸುವುದನ್ನು ಬಿಟ್ಟು ಮೇಲಾಟಕ್ಕಾಗಿಯೇ ಹೋರಾಟಕ್ಕಿಳಿದರೆ ಅದರಿಂದ ಯಾರದೂ ಹಿತವಾಗಲಾರದು. ಸದ್ಗುಣಗಳಿಗಾಗಲೀ ದುರ್ಗುಣಗಳಿಗಾಗಲೀ ವಿಶಿಷ್ಟ ಶಕ್ತಿಯೊಂದಿದೆ. ಅವು ಎಲ್ಲಿ ತಲೆಯೆತ್ತುತ್ತವೋ ಅಲ್ಲೇ ಮೊದಲು ತಮ್ಮ ಪ್ರತಿಕ್ರಿಯೆಯನ್ನುಂಟುಮಾಡಿ ಮುಂದೆ ಹೊರ ಪ್ರಪಂಚದಲ್ಲಿ. ಆದ್ದರಿಂದ ಮತ್ಸರದಿಂದ ನಾರಿಯರು ಹೋರಾಟಕ್ಕಿಳಿದರೆ ಅದರಿಂದ ಅವರ ಅವನತಿಯೇ ಆದೀತು. ಬಸವಣ್ಣನವರು ಒಮ್ಮೆ ಹೇಳಿದ್ದಾರೆ. 'ಮನೆಯಕಿಚ್ಚು ಮನೆಯ ಸುಟ್ಟಲ್ಲದೆ ನೆರೆಮನೆಯ ಸುಡದು' ಎಂದು. ಹೆಣ್ಣು ಇದನ್ನರಿತು ಸಾತ್ವಿಕ ಹಾದಿಯಿಂದ ಮುಂದುವರಿಯುವುದು ಒಳಿತು. ಅದರಲ್ಲೇ ಆಕೆಯ ಉನ್ನತಿಯಿದೆ.

ಆತ್ಮಿಕವಾಗಿ ಅಲ್ಲದಿದ್ದರೂ ದೈಹಿಕ ಮತ್ತು ಮಾನಸಿಕವಾಗಿ ಹೆಣ್ಣು ಗಂಡುಗಳಲ್ಲಿ ಕೆಲವು ಭೇದಗಳಿವೆ ಎಂಬುದನ್ನು ನಾವೆಂದೂ ಮರೆಯಬಾರದು, ಆದ್ದರಿಂದಲೇ ಹೆಣ್ಣು ಗಂಡಿನ ಪ್ರತಿರೂಪವಾಗಬೇಕೆಂದು ಬಯಸುವುದು ನ್ಯಾಯವಲ್ಲ. ಅವರವರ ಪ್ರಕೃತಿಗೆ ಹೊಂದಿಕೆಯಾಗುವಂತಹ ಕಾರ್ಯಗಳನ್ನೇ ಅವರವರು ಕೈಕೊಳ್ಳಬೇಕು. ಇದನ್ನೇ ಗೀತೆಯಲ್ಲಿ 'ಸ್ವಧರ್ಮವೇ ಶ್ರೇಷ್ಠ ಮತ್ತು ಅದರಿಂದಲೇ ವ್ಯಕ್ತಿಯ ಉನ್ನತಿ. ಪರಧರ್ಮವು ಸುಖ ಮತ್ತು ಸುಲಭವಾಗಿ ಕಂಡರೂ ಅದರಿಂದ ವ್ಯಕ್ತಿಯ ಉನ್ನತಿಯಾಗದು' ಎಂದಿದೆ. ಇದನ್ನೇ ಆಚಾರ್ಯ ವಿನೋಬಾ ಭಾವೆಯವರು 'ಸ್ವಧರ್ಮದ ವಿನಾ ಬೇರಾವ ಆಶ್ರಯವೂ ನಮಗಿಲ್ಲ. ಸ್ವಧರ್ಮವನ್ನು ತಪ್ಪಿಸುವುದೆಂದರೆ ತನ್ನನ್ನೇ ಕಳೆದುಕೊಂಡಂತೆ, ಆತ್ಮಘಾತಕನ. ಸ್ವಧರ್ಮದ ಆಸರೆಯಲ್ಲೇ ನಾವು ಮುಂಬರಿಯಲು ಸಾಧ್ಯ. ಅಂತೇ ಅದನ್ನು ಯಾರೂ ಯಾವಾಗಲೂ ಬಿಡಬಾರದು. ಇದು ಒಂದು ಜೀವನದ ಮೂಲ ಸೂತ್ರ' ಎಂದಿದ್ದಾರೆ. ಇದನ್ನರಿತು ಮಾನವರು ತಮ್ಮ ಬುದ್ಧಿ, ಮನಸ್ಸು, ದೇಹಗಳಿಗೆ ಹೊಂದಿಕೆಯಾಗುವಂತ ಕಾರ್ಯಗಳನ್ನೇ ಕೈಕೊಳ್ಳಬೇಕು. ಬಾಳಿನ ಈ ಮೂಲಸೂತ್ರ ನಮ್ಮ ನಾರಿಯರ ಚಿತ್ತದ ಭಿತ್ತಿಯಿಂದ ಎಂದೂ ಅಳಿಸಿಹೋಗದಿರಲಿ

ಹೀಗೆನ್ನುವಾಗ ಹೆಣ್ಣು ಗಂಡಿನ ತೊತ್ತಾಗಿ ಮನೆಯೊಳಗೇ ಬಾಳಬೇಕೆಂದು ನಮ್ಮ ಭಾವನೆಯೆಂದು ಯಾರೂ ಭಾವಿಸದಿರಲಿ. ಅದನ್ನು ನಾವು ಈ ಮೊದಲೇ ಸ್ಪಷ್ಟಪಡಿಸಿದ್ದೇವೆ. ಹೆಣ್ಣಿಗೆ ಸ್ವಾತಂತ್ರ್ಯ ಬೇಕು ಆಕೆ ಗಂಡಿನ ಸಮಾನಳಾಗಿ ಬಾಳಬೇಕು ಎಂದು ನಮ್ಮ ಮತ ಆದರೆ ಆ ಸ್ವಾತಂತ್ರ್ಯ ಸ್ವೇಚ್ಛೆಯಾಗಬಾರದು ಎಂದೇ ನಮ್ಮ ಅಭಿಲಾಷೆ. ಸ್ತ್ರೀಯು ಸ್ವೇಚ್ಛಾಚಾರಕ್ಕಿಳಿದರೆ ಜಗತ್ತು ಒಮ್ಮೆಲೇ ಅವನತಿಗಿಳಿದಂತೆಯೇ. ಹೆಣ್ಣು ಸ್ವಾತಂತ್ರ್ಯದ ಹೆಸರಿನಲ್ಲಿ ಅಡ್ಡಹಾದಿಗಿಳಿದು ತನ್ನ ಸ್ತ್ರೀತನವನ್ನು ಕಳೆದುಕೊಂಡು ಮನೆಯ ಸುಖಶಾಂತಿಗಳನ್ನು ತನ್ನ ಕಾಲತುಳಿತಕ್ಕೆ ಬಲಿಕೊಡಬಾರದು. ಹೆಣ್ಣು ತನ್ನ ಬಾಳಿನ ಆಸರೆ ಎಂಬ ಅರಿವು ಗಂಡಿಗಿರಬೇಕಾದಂತೆ ಗಂಡೇ ತನ್ನ ಜೀವನದ ಆಧಾರ ಎಂಬ ನೆನಪು ಹೆಣ್ಣಿನಿಂದಲೂ ಮರೆತುಹೋಗಬಾರದು.

ಗಂಡಿನ ಸಹಕಾರದಿಂದ ಹೆಣ್ಣು ತಾನು ಇಂದಿರುವ ಸಂಕುಚಿತ ಕ್ಷೇತ್ರವನ್ನು ತೊರೆದು ಹೊರಬರಬೇಕು. ಜಗತ್ತನ್ನೇ ಅರಿಯುವ ಸಾಹಸ ಮಾಡಬೇಕು. ಹೀಗೆ ಅಪಾರವಾದ ಲೋಕಾನುಭವದಿಂದ ವಿಶಾಲ ಜ್ಞಾನವನ್ನು ಸಂಪಾದಿಸಿ, ತೀಕ್ಷ್ಣ ದೃಷ್ಟಿಯನ್ನು ಪಡೆದು ಆ ಮೂಲಕ ಸತ್ಯ ನ್ಯಾಯಗಳನ್ನು ಅರಿತು ಆಚರಿಸಿ ತನ್ನ ನೈತಿಕ ಮತ್ತು ಮಾನಸಿಕ ಮಟ್ಟವನ್ನು ಎತ್ತರಿಸಿಕೊಳ್ಳಬೇಕು. ಆದರೆ ಹೀಗೆ ಲೋಕಾನುಭವವನ್ನು ಪಡೆಯುವ ಲವಲವಿಕೆಯಲ್ಲಿ ಆಕೆ ಮನೆಯನ್ನೆಂದೂ ಮರೆಯಬಾರದು. ಮನೆಯೇ ಆಕೆಯ ಉತ್ತಮ ಶಿಕ್ಷಣ ಶಾಲೆ ಮತ್ತು ಪವಿತ್ರ ಕಾರ್ಯಕ್ಷೇತ್ರ. ಜ್ಞಾನಾರ್ಜನೆಯೂ ದೇಶಸೇವೆಯೂ ಅಲ್ಲಿಯೂ ಆಗಬಲ್ಲುದು.

ಜನಸೇವೆ, ದೇಶಸೇವೆಗಳ ಭರದಲ್ಲಿ ಕೆಲವು ಮಹಿಳೆಯರು ಮನೆಯನ್ನೇ ಮರೆತುಬಿಡುತ್ತಾರೆ. ಅವರು ತಮ್ಮ ಮಕ್ಕಳ ಲಾಲನೆಪಾಲನೆಗಳನ್ನು ಕೂಡಾ ಆಳುಕಾಳುಗಳ ಕೈಯಿಂದ ಮಾಡಿಸುತ್ತಾರೆ. ಇನ್ನು ಅನೇಕ ಮಹಿಳೆಯರು ಮತ್ತೂ ಮುಂದುವರಿದು ತಮ್ಮ ಸೌಂದರ್ಯ ಹಾಳಾಗಬಾರದೆಂದು ಚಿಕ್ಕ ಪ್ರಾಯದಲ್ಲೇ ಮಕ್ಕಳಿಗೆ ಮೊಲೆಹಾಲು ನಿಲ್ಲಿಸಿಬಿಡುತ್ತಾರೆ. ಈ ಪರಿಯ ದೇಶಸೇವೆ ಮತ್ತು ಸೌಂದರ್ಯಾಭಿಲಾಷೆಗಳಿಂದ ಹೆಣ್ಣು ತನ್ನನ್ನು ಮಾತ್ರವಲ್ಲದೆ ಸಮಾಜವನ್ನೇ ಅವನತಿಗೆ ನೂಕುತ್ತಾಳೆ. ಮಾತ್ರವಲ್ಲ ಮುಂದಿನ ಜನಾಂಗವು ಅಸಂಸ್ಕೃತವೂ ಅಬಲವೂ ಆಗಲು ಕಾರಣಳಾಗುತ್ತಾಳೆ. ಅಂತೆಂದೇ ಗಂಡು ಹಾದಿ ತಪ್ಪುವದಕ್ಕಿಂತ ಎಷ್ಟೋ ಹೆಚ್ಚಿನ ಅನರ್ಥ ಹೆಣ್ಣು ಹಾದಿ ತಪ್ಪಿದರೆ ಸಂಭವಿಸುತ್ತದೆ. ಇಂದಿನ ವರೆಗೆ ಹೆಣ್ಣು ಬಂಧನದಲ್ಲಿದ್ದು ಸಮಾಜದ ಪ್ರಗತಿ ಕುಂಠಿತವಾಗಿದ್ದರೆ ಇನ್ನು ಆಕೆ ಜ್ಞಾನಪರಿಪಕ್ವಳಾಗದೆ ಗಡಿಮೀರಿ ನಡೆಯುವುದರಿಂದ ಸಮಾಜವು ಅವನತಿ ಹೊಂದುವ ಭಯವೂ ಇದೆ ಈ ನೆನಹು ನಮ್ಮ ನಾರಿಯರ ಹೃದಯದಲ್ಲಿ ಅಚ್ಚೊತ್ತಿದಂತಿರಬೇಕು.

ಹೆಣ್ಣು ತನ್ನ ಹಕ್ಕನ್ನು ಪಡೆಯಲು ಗಂಡಿನೊಡನೆ ಎಂದೂ ತಾಮಸಿಕ ಹೋರಾಟ ಹೂಡಬಾರದು, ಅಂತಾದರೆ ಊಹಾತೀತ ಅನರ್ಥ ಸಂಭವಿಸೀತು. ಹೃದಯ ಹೃದಯಗಳು ಒಂದಾಗುವ ದಾರಿಯಲ್ಲಿ ಅಭೇದ್ಯಗೋಡೆಯೊಂದು ಎದ್ದು ನಿಂತೀತು. ಅಂತಾದರೆ ಮುಂದೆ ಎಲ್ಲವೂ ಕೊನೆಗೊಂಡಂತೆಯೇ ಸರಿ. ಇಬ್ಬರ ಬಾಳುವೆಯೂ ನರಕವೇ. ಹೋರಾಟವೇ ಬಾಳಿನ ದಿನಚರಿ. ತಾನಾಗಿ ಮಾಗಬೇಕಾದ ಹಣ್ಣನ್ನು ಒತ್ತಾಯದಿಂದ ಮಾಗಿಸಿದರೆ ಅದು ಕೊಳೆತು ಹೋದೀತು! ಇಲ್ಲದಿದ್ದರೆ ಹುಳಿಯಾದೀತು! ಹೆಣ್ಣಿಗೆ ಗಂಡನ್ನು ತನ್ನ ಪಾವಿತ್ರ್ಯದಿಂದ ಗೆಲ್ಲುವ ಶಕ್ತಿ ಹುಟ್ಟಾ ಇದೆ. ಆಕೆ ತನ್ನ ಕರ್ತವ್ಯದಿಂದ ಗಂಡಿಗೆ ಸತ್ಯವನ್ನು ಮನಗಾಣಿಸಿ ಆತನನ್ನೇ ತನ್ನ ಕಡೆಯ ವಕೀಲನನ್ನಾಗಿ ಮಾಡಿಕೊಳ್ಳಬೇಕು. ಅಂತಾದರೆ ಬಾಳಿನಲ್ಲಿ ನಲಿವು ಗೆಲಿವು ಸಂತಸಗಳ ಸುಗ್ಗಿ ಚಿಮ್ಮಿ ಬಂದೀತು.

ಸಂಸಾರದಲ್ಲಿ ಹೆಣ್ಣಿನ ಹೊಣೆ ಹೆಚ್ಚಿನದು. ಅಂತೆಯೇ ಆಕೆ ಕೈಬಿಟ್ಟರೆ ಮನೆಯೇ ನೆಲಕಚ್ಚೀತು—ನಾವಿಕನಿಲ್ಲದ ನಾವೆಯಂತೆ. ಆಕೆ ಮನೆಮಠಗಳನ್ನು ನಿರ್ಮಲವಾಗಿರಿಸಿ, ಪತಿಯನ್ನು ಸದಾ ಸಂತಸದಲ್ಲಿಟ್ಟು, ಮಕ್ಕಳನ್ನು ಭಾವೀ ಜನಾಂಗದ ಉತ್ತಮ ಪ್ರಜೆಗಳಾಗುವಂತೆ ಬೆಳೆಯಿಸಿ, ಹಿರಿಯರನ್ನು ಸೇವಿಸಿ, ಬಂಧು ಬಳಗದವರನ್ನು ತೃಪ್ತಿಸಿ, ನೆಂಟರಿಷ್ಟರನ್ನು ಸನ್ಮಾನಿಸಿ, ಆಳುಕಾಳುಗಳನ್ನು ಮಾತೆಯಂತೆ ಸಲಹಿ ಇಡೀ ಸಂಸಾರವೇ ಏಕೋಭಾವದಿಂದ ಏಕಮುಖವಾಗಿ ಸಾಗುವಂತೆ ಮಾಡಿದರೆ ಮಾತ್ರ ಗೃಹಲಕ್ಷ್ಮಿ ಎಂಬ ತನ್ನ ನಾಮವನ್ನು ಅನ್ವರ್ಥವಾಗಿಸುತ್ತಾಳೆ.

ಇಂದಿನ ಉನ್ಮಾದಿತ ಜಗತ್ತಿನ ಆಲ್ಲೋಲ ಕಲ್ಲೋಲಗಳಲ್ಲಿ ಬಿದ್ದು ದೆಸೆ ತಪ್ಪಿದ ಜನ 'ಮುಂದಿನ ಪೀಳಿಗೆಯಾದರೂ ಸುಖಶಾಂತಿಗಳ ತೊಟ್ಟಿಲಲ್ಲಿ ತೂಗಲಿ' ಎಂದು ಹಾರೈಸುತ್ತಿದೆ ಆ ಜನ ತಮ್ಮ ಹಾರೈಕೆಯ ಪೂರೈಕೆಗಾಗಿ ಹೆಣ್ಣಿನ ಕಡೆಗೆ ಆಶಾತುರ ದೃಷ್ಟಿಯಿಂದ ದಿಟ್ಟಿಸುತ್ತಿದೆ. ಹೆಣ್ಣು ತನ್ನ ನೈತಿಕ ಮತ್ತು ಮಾನಸಿಕ ಮಟ್ಟವನ್ನು ಎತ್ತರಿಸಿ ಉತ್ತಮ ಮಕ್ಕಳನ್ನು ಹಡೆದು ಅವರಿಗೆ ಯೋಗ್ಯ ಸಂಸ್ಕಾರವನಿತ್ತು ಬೆಳೆಯಿಸಿದರೆ ಇಂದಿನ ಮಂದಿಯ ಆಶೆ ಫಲಿಸುವುದರಲ್ಲಿ ಸಂದೇಹವೇನು? ಶಾಂತಿ ಪುಷ್ಟಿ ತುಷ್ಟಿಗಳ ತವರುಮನೆಯಾದೀತು ಬರುವ ಜಗತ್ತು. ಆದರಿಂದಲೆ ನಮ್ಮ ಇಂದಿನ ಕನಸನ್ನು ಮುಂದಿನ ನನಸಾಗಿಸುವ ಹೊಣೆ ಹೆಣ್ಣಿನ ಮೇಲಿದೆ.

ಜಗತ್ತಿನ ಶಾಂತಿದೂತೆಯಾಗಬಲ್ಲ ಯೋಗ್ಯತೆ ಹೆಣ್ಣಿಗಲ್ಲದೆ ಮತ್ತಾರಿಗಿದೆ? ಅಂತೆಂದೇ ಹೆಣ್ಣು ಜಗತ್ತಿನ ಶಾಂತಿದೂತೆಯಾಗಿ ಹೊರಬರಬೇಕು ಎಂದು ನಮ್ಮ ಆಶೆ. ಜಗತ್ತಿನಲ್ಲಿ ಶಾಂತಿ ನೆಲೆಗೊಳ್ಳಬೇಕಾದರೆ ಮನೆಮನೆಯಲ್ಲೂ ಸುಖಸಂತೃಪ್ತಿಗಳು ಮನೆಮಾಡಬೇಕು. ಇಲ್ಲದೆ ಹೋದರೆ ಜಗತ್ತಿನ ಶಾಂತಿ ಕನ್ನಡಿಯೊಳಗಿನ ಗಂಟು. ಏಕೆಂದರೆ ಮನೆಯಿಂದ ಹಿಡಿದ ಅಶಾಂತಿಯ ಕಿಡಿಯೇ ಸಮಾಜವನ್ನು ವ್ಯಾಪಿಸಿ ಮುಂದೆ ದೇಶವನ್ನು ಸುತ್ತುಗೊಂಡು ಕೊನೆಗೆ ಪ್ರಪಂಚವನ್ನೇ ಆಹುತಿಗೊಳ್ಳುತ್ತದೆ. ಅದುದರಿಂದಲೇ ಉತ್ತಮ ಗೃಹಿಣಿಯಾಗಿಯೇ ಹೆಣ್ಣು ಜಗತ್ತಿನ ಶಾಂತಿಯನ್ನು ಸಾಧ್ಯವಾಗಿಸಬಲ್ಲಳು. 'ಗೃಹಲಕ್ಷ್ಮಿಯೇ ಜಗಲ್ಲಕ್ಷ್ಮಿ' ಎಂಬ ಸತ್ಯವನ್ನು ನಮ್ಮ ಮಹಿಳೆಯರು ಎಂದೂ ಮರೆಯದಿರುವರೆಂದು ಹಾರೈಸೋಣ.

Licence No. 60.
Licenced to Post without Prepayment

Reg. No. M. 1650.
'KODAGU' MERCARA. (Coorg).

ಕೊಡಗು

ಸಂಪಾದಕರು—ಪಿ. ಐ. ಬೆಳ್ಳಿಯಪ್ಪನವರು] [ವಾರ್ಷಿಕ ಚಂದಾ ರೂ. ೫-೦-೦.

ಸಂಪುಟ ೨೯ | ತಾರೀಕು ೧೮-೧೧-೧೯೪೯ನೇ ಶುಕ್ರವಾರ | ಸಂಚಿಕೆ ೪೮

॥ ಚರಖಾ ಸಿದ್ಧಾಂತ ಶಾಂತಿಗೆ ದಾರಿ ॥

ಶ್ರೀ ಧೀರೇಂದ್ರ ಮಜುಂದಾರರ ಪ್ರಚಾರ.

"ಚರಖಾ ಸಿದ್ಧಾಂತದ ಹಾದಿ ಹಿಡಿಯದಿದ್ದಲ್ಲಿ ಭಾರತದಲ್ಲಿ ರಕ್ತ ಕ್ರಾಂತಿ ಖಂಡಿತ ಎಂಬುದಾಗಿ ಅಖಿಲ ಭಾರತ ಚರಖಾ ಸಂಘದ ಅಧ್ಯಕ್ಷರಾದ ಶ್ರೀ ಧೀರೇಂದ್ರ ಮಜುಂದಾರರು ವೈಸೂರು ಸಂಸ್ಥಾನದ ಪ್ರವಾಸದಲ್ಲಿ ನಾನಾ ಕಡೆಗಳಲ್ಲಿ ಮಾಡಿದ ಭಾಷಣಗಳಲ್ಲಿ ಒತ್ತಿ ಹೇಳಿದರು. ಅವರ ಭಾಷಣಗಳ ಪ್ರಮುಖಾಂಶಗಳನ್ನಿಲ್ಲಿ ಕೊಡಲಾಗಿದೆ:—

"ಭಾರತದ ಅತ್ಯಂತ ಎರಡು ವರ್ಗವಿದೆ. ಒಂದು ಹುಜೂರು ವರ್ಗ. ಎರಡನೆಯದು ಮಜೂರು ವರ್ಗ. ಮಜೂರವರ್ಗವು ಏಳು ಕೋಟಿ ಹಳ್ಳಿಗಳಲ್ಲಿ ನೆಲಸಿದೆ. ಬೆವರಿಂದ ಧಾನ್ಯ ಬೆಳೆಯುವ ಮಜೂರವರ್ಗವು ಗ್ರಾಮೂವಲಂಬಿಯಾಗಬೇಕು. ಇದರಿಂದ ಮಜೂರವರ್ಗವು ಎರಡು ಮುಖಗಳಲ್ಲಿ ಒಂದಾದ ಬಂಡವಾಳಶಾಹಿಯು ಶೋಷಣೆಯಿಂದ ವಿಮುಕ್ತಿಗೊಳ್ಳುವುದು. ಈ ಮಜೂರವರ್ಗವು ಹಳ್ಳಿ ಹಳ್ಳಿಗಳಲ್ಲಿ ಸುಸಂಘಟಿಸಿಕೊಂಡು ಗ್ರಾಮಪಂಚಾಯಿತಿ ಏರ್ಪಡಿಸಿಕೊಂಡು ಹುಜೂರು ವರ್ಗದ ಎರಡನೇ ಮುಖವಾದ ನೌಕರೀವರ್ಗದ ದುಂದು ಆಡಳಿತದ ಆವಶ್ಯಕತೆಯನ್ನು ನಿರಾಕರಿಸಬೇಕು. ಈ ಕಾರ್ಯವನ್ನು ಸಾಧನೆಗೆ ತರಲು ಗಾಂಧೀಜಿಯವರು ಸ್ವಾವಲಂಬನದ ಮಹಾ ಚಳುವಳಿ ನಡೆಸಲು ಇಚ್ಛಿಸಿದ್ದರು. ಇದಕ್ಕಾಗಿ ಚರಖಾ ಶಿಕ್ಷಣದಲ್ಲಿ ಉತ್ತೀರ್ಣರಾಗಿ ತ್ಯಾಗಜೀವನದ ದೀಕ್ಷಾವಲಂಬಿಯಾದ ಏಳು ಲಕ್ಷ ಯುವಕರ ತಂಡವನ್ನು ಕಟ್ಟಲು ಆಕಾಂಕ್ಷಿತರಾಗಿದ್ದರು. ಒಂದೊಂದು ಹಳ್ಳಿಗೆ ಒಬ್ಬೊಬ್ಬ ಈ ಚರಖಾ ತತ್ವಾವಲಂಬಿ ಯುವಕರು ಹೋಗಿ ನೆಲಸುವುದು. ಇವರು ಸ್ವಾವಲಂಬಿ ಹಾಗೂ ತ್ಯಾಗ ಜೀವನದಿಂದ ಇಡೀ ಹಳ್ಳಿಯ ಮುಖಂಡತ್ವವನ್ನು ಪಡೆದು, ಗ್ರಾಮ ಜೀವನದ ಇಂದಿನ ಸ್ವರೂಪವನ್ನು (ಹೆಪ್ಪು ಮಜ್ಜಿಗೆಯು ಕಾದ ಹಾಲನ್ನು ಕೆನೆ ಮೊಸರು ಮಾಡಿಕೊಳ್ಳುವಂತೆ) ಬದಲು ಮಾಡಿಕೊಳ್ಳಲು ಬಹುಕಾಲ ಬೇಕಿಲ್ಲ. ಆದರೆ ಈ ಯುವಕ ಮುಂದಾಳುಗಳು ಸೇವಾ ದೀಕ್ಷೆ ವಹಿಸಲು ಸಂಸಿದ್ಧರಾಗಿ ತಲೆಗೆ "ಶವ-ವಸ್ತ್ರ" ಕಟ್ಟಿಕೊಂಡೇ ತೆರಳಬೇಕಾಗಿದೆ.

ದೇಶಭಕ್ತರಿಗೆ ಮರ್ಯಾದೆ ಏಕೆ ಕಡಿಮೆಯಾಯಿತು?

ಲಂಡನ್ನಿನಲ್ಲಿದ್ದ ಸ್ವರಾಜ್ಯ ಸಿಂಹಾಸನವನ್ನು ದೆಹಲಿಗೆ ತಂದು ಕೂರಿಸಿ, ಈ ದಿನ ಸ್ವದೇಶಿ ರಾಜ್ಯಸ್ಥಾಪನೆ ಮಾಡುವ ವರೆವಿಗೂ, ದೇಶಭಕ್ತರಿಗೆ ದೇಶದಾದ್ಯಂತ ಮರ್ಯಾದೆ ಇದ್ದಿತು. ಇಂದು ಪರಿಸ್ಥಿತಿಯು ಭಿನ್ನವಾಗಿದೆ. ತಮ್ಮ ಚಿಕ್ಕ ಭವನಗಳನ್ನು ತೊರೆದು ಹಳ್ಳಿಗಳಿಗೆ ಸೇರಿ, ಕಷ್ಟಪಟ್ಟು ದುಡಿದ ನಮ್ಮ ಮುಖಂಡರು ಈ ದಿನ ಅರಮನೆಗಳ ಸೌಧಜೀವನ ಜರುಗಿಸುತ್ತಿರುವುದನ್ನು ಹಳ್ಳಿಯ ಬಂಧುಗಳು ಕಂಡಿದ್ದಾರೆ. ತ್ಯಾಗ ಜೀವನವು ಮುಂದೆ ಅನಭವಿಸುವ ಅಧಿಕಾರದ ಸೌಖ್ಯಕ್ಕಾಗಿ ಹಾಕಿದ ಬಂಡವಾಳದ ವ್ಯಾಪಾರವೆಂದು ಹಳ್ಳಿಯ ಬಂಧುಗಳು ಭಾವಿಸಿರುವುದರಿಂದ ಸ್ವದೇಶೀ ರಾಜ್ಯವನ್ನು ಗಾಂಧೀಜೀ ಕಲ್ಪನೆಯ ಸ್ವರಾಜ್ಯವನ್ನಾಗಿ ಮಾರ್ಪಡಿಸಲು ತೆರಳುವ ಯುವಜನ ಸ್ವಯಂಸೇವಕ ದಳವು "ಶವ ವಸ್ತ್ರವನ್ನು" ಮೊದಲೇ ತಲೆಗೆ ಕಟ್ಟಿಕೊಂಡ ಗ್ರಾಮಕ್ಕೆ ತೆರಳಬೇಕೆಂದು ತಿಳಿಸಿದ್ದು.

ಮನೆ ಮನೆಗಳಲ್ಲಿ ದೀಪೋತ್ಸವ ಆದಲ್ಲಿ 'ದೀಪಾವಳಿ" ಆದದ್ದಕ್ಕೆ ಗುರುತು. ತಾಬೀಜು ಕಟ್ಟಿದಲ್ಲಿ ಮೊಹರಂ ಜರುಗುತ್ತಿರುವುದಕ್ಕೆ ಗುರುತು. ಕ್ರಿಶ್ಚಿಯನ್ನರ ಮನೆಗಳಲ್ಲಿ ಶೃಂಗಾರವಾದರೇ ಕ್ರಿಸ್ ಮಸ್ ಹಬ್ಬ ಆಚರಿಸಲ್ಪಟ್ಟಿತೆಂದು ಹೇಳಬಹುದು. ಆದರೆ ಇದೇ ರೀತಿ ಆಗಸ್ಟ್ ೧೫ನೇ ದಿನ "ಉತ್ಸವ" "ಹಬ್ಬ"ಎಲ್ಲಿ ಆಚರಿಸಲ್ಪಡುತ್ತಿದೆ? ಪಟ್ಟಣಗಳ ದೊಡ್ಡ ದೊಡ್ಡ ಭವನಗಳಲ್ಲಿ ಅಧಿಕಾರವರ್ಗದ ಕಛೇರಿಗಳಲ್ಲಿ ಮಾತ್ರ ವೈಭವ ಕಾಣುತ್ತಿದ್ದೇವೆ. ಭಾರತದ ಏಳು ಲಕ್ಷ ಹಳ್ಳಿಗಳಲ್ಲಿ ಈ ವೈಭವ ಇಲ್ಲ. ಆದ್ದರಿಂದಲೇ ಈಗ ಬಂದಿರುವುದು ಕೇವಲ ಸ್ವದೇಶೀ ರಾಜ್ಯ. ಗಾಂಧೀಜೀ ಆಶಿಸಿದ್ದ ಬಡವರ ಸ್ವರಾಜ್ಯ; ಅರ್ಥಾತ್ ರಾಮರಾಜ್ಯವಲ್ಲ. ರಾಮರಾಜ್ಯ ಅರ್ಥಾತ್ ಸ್ವರಾಜ್ಯವನ್ನು ನೆಲೆಗೊಳಿಸದಿದ್ದಲ್ಲಿ ಸ್ವದೇಶೀ ಸಿಂಹಾಸನವನ್ನು ಸಹಸ್ರ ಚತುರ್ಮುಖೀ ಫ್ಯಾಸಿಸ್ಟ್ ರಾಕ್ಷಸನು ಆಕ್ರಮಿಸುವನು.

ಚತುರ್ಮುಖೀ ರಾಕ್ಷಸ

ಈ ಚತುರ್ಮುಖೀ ರಾಕ್ಷಸನ ನಾಲ್ಕು ಮುಖಗಳು:—೧ ವಿದೇಶೀ ಬಂಡವಾಳ; ೨. ಕಾತಾ ಬಿರ್ಲ ನೆಂದಲಾದ ಸ್ವದೇಶೀ ಬಂಡವಾಳಶಾಹಿ; ೩. ಬೆವರು ಹರಿಸದೇ ಅನ್ನ ಮತ್ತು ವಸ್ತ್ರ ಪಡೆವಲಂಬಿಗಳಾದ ನೌಕರ ವರ್ಗ ಮತ್ತು ದಳ್ಳಾಳಿಗಳಾದ ವ್ಯಾಪಾರಿಗಳು; ೪ ಈ ಬಂಡವಾಳಶಾಹಿಯು ದಶಕೊಳ್ಳಲ್ಪಟ್ಟ ಹಲವು ಮಂದಿ ಪ್ರಮುಖ ಹೆಸರಿನ ಮುಖಂಡರ ತಂಡ. ಈ ಚತುರ್ಮುಖೀ ರಾಕ್ಷಸನು ದೆಹಲಿಯ ಸ್ವದೇಶೀ ಸಿಂಹಾಸನವನ್ನು ಒಮ್ಮೆ ಆಕ್ರಮಿಸಿದರೆ ಅನೇಕ ಶತಮಾನಗಳ ಕಾಲ ಭಾರತದಲ್ಲಿ ಫ್ಯಾಸಿಜೀಮ್ ರಾಜ್ಯವು ನೆಲೆಗೊಳ್ಳುವುದು. ಆದುದರಿಂದ ಏಳು ಲಕ್ಷ ಹಳ್ಳಿಗಳು ಸ್ವಾವಲಂಬಿಯಾಗಬೇಕು; ಮತ್ತು ಸುಸಂಘಟಿತವಾಗಿ ಗ್ರಾಮ ಸ್ವರಾಜ್ಯ ನೆಲೆಗೊಳಿಸಬೇಕು.

ಈ ಕಾರ್ಯಸಾಧನೆಯಲ್ಲಿ ವೈಮನಸ್ಸಲ್ಲಿ ಬ್ರಿಟಿಷ್ ಸಾಮ್ರಾಜ್ಯಶಾಹಿಯ ಬದಲು ಈ ಚತುರ್ಮುಖೀ ರಾಕ್ಷಸನ ಸರ್ಕಾರ ಆದೀತು! ಬ್ರಿಟಿಷ್ ಸಾಮ್ರಾಜ್ಯ ಶಾಹಿಯು ದೇಶದ ಸಂಪತ್ತನ್ನು ಲೂಟಿ ಮಾಡಿ ಹಂಚಿಕೊಳ್ಳಲು ಲಂಡನ್ನಿಗೆ ಹೋಗಲು ಹೆಚ್ಚು ಕಾಲಾವಕಾಶ ಸಹ ಬೇಕಾಗಿದ್ದಿತು. ಈ ಚತುರ್ಮುಖೀ ರಾಕ್ಷಸನ ಸರ್ಕಾರದಲ್ಲಿ ಅಷ್ಟು ಕಾಲಾವಕಾಶ ಸಹ ಬೇಕಾಗಿರುವುದಿಲ್ಲ: ರಾಮರಾಜ್ಯ ನೆಲೆಸುವುದು ಬಿಟ್ಟು ಹರಾಮ್ ರಾಜ್ಯ ನೆಲಸೀತು.

ಮೇಲೆ ತಿಳಿಸಿದಂತಹ ಕಠಿಣ ಕಾಲವು ನಿಷ್ಕಾಮ ಸೇವಾ ದೇಶ ಸೇವಕರಿಗೆ ಉಂಟಾಗಬಹುದಾದರೂ ನಾನು ನಿರಾಶನಾಗಿಲ್ಲ. ಗಾಂಧೀಜೀ ಜನ್ಮಿಸಿರುವ ಈ ಪವಿತ್ರ ಭೂಮಿಯಲ್ಲಿ ದೇಶಭಕ್ತ ತ್ಯಾಗಿ ಯುವಕರ ಸಮುದಾಯ ಖಂಡಿತ ಮುಂದೆ ಬರುವುದೆಂದು ಆಶಿಸಿದ್ದೇನೆ. ಹಾಗೆ ಬಾರದಿದ್ದಲ್ಲಿ ಅಖಂಡ ತ್ಯಾಗದಿಂದ, ಗಾಂಧೀಜೀಯ ತಪೋಬಲದಿಂದ ಈಗ ಬಂದಿರುವ ಸ್ವದೇಶೀ ರಾಜ್ಯದ ಉಪಯೋಗವು ಮುಂದಿನ ಪೀಳಿಗೆಗೂ ಇಲ್ಲದಂತಾಗುವುದು. ಗಾಂಧೀಜೀ ಅನಂತರದ ಪೀಳಿಗೆಯು ಸ್ವರಾಜ್ಯ ನೆಲೆಗೊಳಿಸಲಾರದೆಂಬ ಘೋರ ಅಪಖ್ಯಾತಿ ಯುಗ ಯುಗಾಂತರಕ್ಕೂ ನಿಲ್ಲುವುದು. ಹೀಗಾಗದಿರಲು ಭಾರತದ ಬಹು ಸಂಖ್ಯಾತ ಪ್ರಜಾಕೋಟಿಯು ನೆಲಸಿರುವ ಗ್ರಾಮಗಳಲ್ಲಿ, ರಾಮರಾಜ್ಯವನ್ನು ಏರ್ಪಡಿಸಲು ನಿಷ್ಕಾಮ ಸ್ವಯಂ ಸೇವಕ ಬಂಧುಗಳು ಮುಂದೆ ಬರುವರೆಂಬ ಮಹತ್ವಾಕಾಂಕ್ಷೆಯಿಂದ ಕೂಡಿದ್ದೇನೆ

ಕಾಯಿಗೇ ಸ್ವಯಂವರದ ಸಿದ್ಧತೆ!

ಪೂರ್ವದಲ್ಲಿ ಇನ್ನೂ ಲಗ್ನವಾಗದೆ ಇರುವ ಕುಮಾರಿಯರಿಗಾಗಿ ಸ್ವಯಂವರದ ಸಿದ್ಧತೆ ಜರುಗುತ್ತಿದ್ದಿತು. ಈಗ ಕಾಲಸ್ಥಿತಿ ಬದಲಾಗಿದೆ! ಸ್ವದೇಶೀ ರಾಜ್ಯ ಮಾತೆಯು ಇಂದು ದೆಹಲಿ ಸಿಂಹಾಸನ ಏರಿದ್ದಾಳೆ. ಅತಿಥಿ ಸತ್ಕಾರಕ್ಕೆ ಹೆಸರಾದ ದೇಶ ನಮ್ಮದು. ಅಮೇರಿಕಾ ಒಂದು ಕಡೆ; ರಷ್ಯಾ ಒಂದು ಕಡೆ; ನಮ್ಮ ಹಿತಚಿಂತನೆಗಾಗಿ ಭಾರತಕ್ಕೆ ಬರಲು ಇಂದಿವೆ! ಇವುಗಳ ಸಲುವಾಗಿ ಎರಡು ಕಡೆಗಳಲ್ಲಿಯೂ ಎರಡು ಮಹಾದ್ವಾರಗಳ ರಚನೆ ಆಗಿದೆ! ಇವರಿಬ್ಬರಲ್ಲಿ ಗೆದ್ದವರಿಗೆ ವಿಜಯಮಾಲೆ ಹಾಕಿ ವರಿಸಲು ನಮ್ಮ ತಾಯಿ ಭಾರತ ಮಾತೆಯ ಕೈಲಿ ಈಗಾಗಲೇ ನಮ್ಮ ನಾಯಕರು ಹೂಮಾಲೆ ಕೊಟ್ಟಿರುವುದು ಅತ್ಯಂತ ನಾಚಿಕೆಗೇಡಿನ ಸಂಗತಿ

ಒಮ್ಮೆ ಅಮೇರಿಕಾವಾಗಲೀ ರಷ್ಯಾ ಆಗಲಿ ಬಂದು ನೆಲೆಸಿದಲ್ಲಿ ಗಾಂಧೀಜೀ ಕಲ್ಪನೆಯ ರಾಮರಾಜ್ಯ ಅರ್ಥಾತ್ ಸ್ವರಾಜ್ಯವು ಕನಸಿನ ಮಾತಾಗುವುದು.

"ದಿಲ್ ಮೆಗಾಂಧಿ; ದಿಮಾಗ್ ಮೆ ಅಂಗ್ರೇಜಿ"

ನಮ್ಮಲ್ಲಿರುವ ಮಹಾ ಮೇಧಾವಿಗಳು ಗಾಂಧೀ ಭಕ್ತಿಯ ಹೃದಯ, ಇಂಗ್ಲಿಷ್ ಸಾಮ್ರಾಜ್ಯ ಶಾಹಿ ಶ್ರದ್ಧೆಯ ತಲೆ ಹೊಂದಿದ ಮೇಧಾವಿಗಳು; ಗಾಂಧೀಜೀ ಸಾರಿದ ಚರಕಾ ಸಂದೇಶದಿಂದ ಭಾರತವು ನೂರ್ನೂರು ವರ್ಷಗಳ ಕಾಲದ ಹಿಂದಣ ನಾಗರೀಕತೆಗೆ ಹೋಗುವುದೆಂದಿದ್ದಾರೆ. ಮಾತೆತ್ತಿದರೆ ಅಂತರರಾಷ್ಟ್ರೀಯ ರಾಜಕೀಯವೆನ್ನುತ್ತಾರೆ. ಈಗ ಪ್ರಪಂಚ ಸಂಸ್ಥೆಯಲ್ಲಿ ಜರುಗುವುದಾದರೂ ಏನು?

ಯುದ್ಧವು ಜರುಗಿದಲ್ಲಿ ಜೀವನಾಧಾರ ವಸ್ತುಗಳು ತಯಾರಾಗುವ ಕೇಂದ್ರಗಳ ಮೇಲೆ ಮೊದಲು ಬಾಂಬುಗಳ ವೃಷ್ಟಿಯಾಗುವುದು. ಇದಕ್ಕೆ ಅನುಕೂಲಿಸುವಂತೆ ಸಾಧನ ಸಂಪತ್ತುಗಳ ತಯಾರಿಕೆಯು ಕಲವೇ ಪಟ್ಟಣಗಳಲ್ಲಿ ಜರುಗುವಂತೆ ಮಾಡುವುದು ಅಮೇರಿಕಾದ ನೀತಿ ಇದು ರಾಜನೀತಿಯೋ ಅಥವಾ ಯಾವ ಬಾಂಬುಗಳಿಂದಲೂ ನಾಶವಾಗದ ರಾಷ್ಟ್ರದ ಉತ್ಪತ್ತಿಯ ಕಾರ್ಯವನ್ನು ಏಳು ಲಕ್ಷ ಹಳ್ಳಿಗಳ ಪರ್ಣ ಕುಟೀರಗಳಿಗೆ ವಿಕೇಂದ್ರೀಕರಣ ಸಿದ್ಧಾಂತದ ಚರಖಾ ತತ್ವದ ಮೂಲಕ ನೆಲೆಗೊಳಿಸುವುದು ಹೆಚ್ಚಿನ ರಾಜನೀತಿಯೋ, ಎಂಬುದನ್ನು, ಗಾಂಧೀ ತತ್ವವಾದಿಗಳನ್ನು ಕೂಪ ಮಂಡೂಕಗಳೆಂದು ಸಾರುವ 'ದಿಲ್ ಮೇ ಗಾಂಧೀ ದಿಮಾಗ್ ಮೇ ಅಂಗ್ರೇಜ" ಯ ನಾಯಕರು ಗ್ರಹಿಸಲಿ.

ಕೋತಿ ಮತ್ತು ಬೆಕ್ಕುಗಳ ವರ್ಗಗಳು

ಹುಜೂರುವರ್ಗ ಮತ್ತು ಮಜೂರವರ್ಗದ ಬಾಂಧವ್ಯವನ್ನು ಬೆಕ್ಕುಗಳ ವ್ಯಾಜ್ಯ ಬಗೆಹರಿಸಲು ಬಂದ ಕೋತಿಯ ನ್ಯಾಯಕ್ಕೆ ಹೋಲಿಸಬೇಕಾಗಿದೆ. ತಾವು ಸ್ವಯಂ ಕಷ್ಟಪಟ್ಟು ಉತ್ಪತ್ತಿ ಮಾಡಿದ ಆಹಾರವನ್ನು ಹಂಚಿಕೊಳ್ಳಲಾಗದ ಬೆಕ್ಕುಗಳು ಅದನ್ನು ಕೋತಿಯ ಕೈಲಿ ಕೊಟ್ಟಂತಿವೆ ದುಡಿಮೆಯು ಮಜೂರವರ್ಗದ ಹಿತರಕ್ಷಣೆಯು ಇಂದೂ ಹುಜೂರು ವರ್ಗದ ಕೈಯಲ್ಲಿದೆ. ನೌಕರೀ ವರ್ಗ ಮತ್ತು ಕಮಿಷನ್ ಏಜಂಟರುದಾರರಾದ ವ್ಯಾಪಾರಸ್ಥರು ತಾವೂ ಶ್ರಮವಹಿಸುವುದಾಗಿ ಸಾರುವುದು, ಕೋತಿಯು ತಕ್ಕಡಿ ಹಿಡಿದು ನ್ಯಾಯಪಂಚಿಕೆಗಾಗಿ ಕಷ್ಟ ವಹಿಸಿದಂತೆಯೇ?

ಬೆಕ್ಕುಗಳ (ಮಜೂರವರ್ಗ) ಪರಿಹರಿಯು ಸ್ವಾವಲಂಬಿಯಾಗುವುದಲ್ಲದೇ, ನ್ಯಾಯ ಮಾಡಲು ಬರುವ ಕೋತಿ ಪಂಗಡದ ಸಹಾಯ ಬಯಸದಂತಾಗಬೇಕು. ಇದರ ಸಲುವಾಗಿ ಪ್ರತಿ ಗ್ರಾಮವೂ ಚರಖ ಸಿದ್ಧಾಂತದಂತೆ ಸ್ವಾವಲಂಬಿಯಾಗಬೇಕು, ಮತ್ತು ಪಂಚಾಯಿತಿ ಪದ್ಧತಿ ಏ

(ಆನೇ ಪುಟ ನೋಡಿ)

ಕಸ್ತೂರಬಾ ಮತ್ತು ಮಹಾತ್ಮಾ ಗಾಂಧಿ ನಿಧಿಗಳು

(ಹೊಸದಿಲ್ಲಿಯ VIGIL ಪತ್ರಿಕೆಯು ಮಾರ್ಚ ೧೦, ೧೭ ರ ಸಂಚಿಕೆಗಳಲ್ಲಿ ಮೇಲಿನ ನಿಧಿಗಳ ವ್ಯವಸ್ಥಾಪನೆಯ ಬಗ್ಗೆ ಕೆಲ ಟೀಕೆಗಳನ್ನು ಪ್ರಕಟಿಸಿತ್ತು. ಮುಂದೆ ಶ್ರೀ ಜೆ. ಸಿ. ಕುಮಾರಪ್ಪನವರು ಅದೇ ಪತ್ರಿಕೆಯಲ್ಲಿ ಈ ಟೀಕೆಗಳನ್ನು ಬೆಂಬಲಿಸಿ ಒಂದು ಪತ್ರವನ್ನು ಪ್ರಕಟಿಸಿದರು. ಈಗ ಎರಡೂ ನಿಧಿಗಳ ಅಧ್ಯಕ್ಷರಾಗಿರುವ ಶ್ರೀ ಜಿ. ವಿ. ಮಾವಳಂಕರರು ಈ ಟೀಕೆಗಳ ಬಗ್ಗೆ ಉದ್ದ ಉತ್ತರವನ್ನು ಒಂದು ಚಿಕ್ಕ ಪತ್ರಿಕೆಯಲ್ಲಿ ಪ್ರಕಟಿಸಿ ಹಂಚಿದ್ದಾರೆ. ಈ ನಿಧಿಗಳ ಬಗ್ಗೆ ಜನರಲ್ಲಿ ವಿಶೇಷ ಆಸ್ಥೆಯಿರುವುದರಿಂದ ಮೇಲಿನ ದೀರ್ಘವಾದ ಉತ್ತರವನ್ನು ಸಾರರೂಪಕ್ಕಿಳಿಸಿ ಇಲ್ಲಿ ಪ್ರಕಟಿಸಲಾಗಿದೆ.

ಕಿ. ಘ. ಮ)

ಕಸ್ತೂರಬಾ ನಿಧಿ

೧. ಧರ್ಮದರ್ಶಿಗಳು.

ಈ ನಿಧಿಯ ಹಣವನ್ನು ಬ್ಯಾಂಕಿನಲ್ಲಿ ಇಡಲಾಗಿದೆಯೆಂಬುದೂ ಇದರ ಧರ್ಮದರ್ಶಿಗಳು 'ಕೃಪಣರೂ ಮುಂದುವರಿದವರೂ ಇದ್ದು ಅವರಿಗೆ ರಚನಾತ್ಮಕ ಕಾರ್ಯದ ಕಲ್ಪನೆಯೇ ಇಲ್ಲ'ವೆಂಬುದೂ ಮುಖ್ಯ ಟೀಕೆಗಳಾಗಿ ಕಾಣುತ್ತವೆ. ಧರ್ಮದರ್ಶಿಗಳಲ್ಲಿ ಕೆಲವರು ಮುಂದುವರಿದವರೆಂಬುದು ನಿಜ. ಶ್ರೀ ದೇವದಾಸ ಗಾಂಧಿ, ಆಶಾದೇವಿ ಆರ್ಯನಾಯಕಂ, ಜಾನಕೀದೇವಿ, ಲಕ್ಷ್ಮೀನಾರಾಯಣ ಮತ್ತು ಸುಶೀಲಾ ಪೈಯವರು ಇದರ ಹನ್ನೆರಡು ಕಾರ್ಯಕಾರೀ ಸದಸ್ಯರಲ್ಲಿ ಕೆಲವರಾಗಿದ್ದಾರೆ. ಇವರಿಗೆ ರಚನಾತ್ಮಕ ಕಾರ್ಯದ ಕಲ್ಪನೆಯೇ ಇಲ್ಲವೆಂದು ಹೇಳಬಹುದೇ?

ಧರ್ಮದರ್ಶಿಗಳಲ್ಲಿ ಕೆಲ ವ್ಯಾಪಾರಿಗಳೂ ಇದ್ದರೂ ಅವರನ್ನು ಗಾಂಧೀಜಿಯೇ ಆಮಂತ್ರಿಸಿದ್ದರು. ರಚನಾತ್ಮಕ ಕಾರ್ಯದಲ್ಲಿ ತಮಗಿರುವ ಅಲ್ಪಜ್ಞಾನವನ್ನು ಬಲ್ಲ ಅವರು ನಿಧಿಯ ದೈನಂದಿನ ಕಾರ್ಯದಲ್ಲಿ ಕೈಹಾಕುವುದಿಲ್ಲ. ಅವರು ಲೆಕ್ಕಪತ್ರ ಇಡುವ ಬಗ್ಗೆ ಮತ್ತು ಉಳಿಕೆಯ ಹಣವನ್ನು ಯಾವ ರೀತಿ ತೊಡಗಿಸಬಹುದೆಂಬ ಬಗ್ಗೆ ಸಲಹೆ ಮಾತ್ರ ಕೊಡುತ್ತಾರೆ. ಗಾಂಧೀ ಸ್ಮಾರಕ ನಿಧಿಯು ಮಾತ್ರವಾದರೂ ಹೀಗೆಯೇ ಇದೆ.

೨. ವೆಚ್ಚ.

'ಬಂಡವಲದ ಮೇಲೆ ಆಯಾ ವರ್ಷದಲ್ಲಿ ಬಂದ ಬಡ್ಡಿಯನ್ನು ಕೂಡ ಪೂರ್ತಿ ವೆಚ್ಚ ಮಾಡುವದಿಲ್ಲ' ಎಂಬುದು ಕಸ್ತೂರಬಾನಿಧಿಯ ಮೇಲಿನ ಇನ್ನೊಂದು ಆಕ್ಷೇಪ. ೧೯೪೯ ಡಿಸೆಂಬರ್ ೩೧ಕ್ಕೆ ಮುಗಿಯುವ ವರ್ಷದಲ್ಲಿ (೧೯೫೦ರ ಲೆಕ್ಕಪತ್ರ ಇನ್ನೂ ಪೂರ್ತಿಯಾಗಿಲ್ಲ) ರೂ. ೩,೭೫,೩೦೬-೧೩-೩ ಬಡ್ಡಿ ಬಂದಿತ್ತು. ಆ ವರ್ಷದ ಆವೃತ್ತಿ ವೆಚ್ಚ ರೂ. ೬,೯೨,೬೮೪-೬-೮ ಆಗಿತ್ತು. ಮತ್ತು ಭೂಮಿ, ಕಟ್ಟಡ, ಕಾಯಂ ಸಾಮಾನು ಸರಂಜಾಮುಗಳ ಮೇಲೆ ೧೯೪೯ರ ಕೊನೆಯ ವರೆಗೆ ೨,೯೫,೩೬೦-೧೧-೮ ಹೆಚ್ಚುವರಿಯಾಗಿತ್ತು. ಹೀಗಿರುತ್ತ ಬಂಡವಲದ ಮೇಲಿನ ಬಡ್ಡಿಯನ್ನು ಕೂಡ 'ಪೂರ್ತಿ' ವೆಚ್ಚ ಮಾಡಿಲ್ಲೆಂಬುದು ಸರಿಯೇ?

೩. ಕಾರ್ಯದ ಕೇಂದ್ರಗಳು.

ಆಗಾಗ ನಡೆಸಿದ ಪ್ರತ್ಯಕ್ಷ ಕಾರ್ಯದ ವಾರ್ಷಿಕ ವರದಿಯನ್ನು ಪ್ರಕಟಿಸಲಾಗುತ್ತಿದೆ. ಯಾರು ಬೇಕಾದರೂ ಅವನ್ನು ತರಿಸಿಕೊಂಡು ನೋಡಬಹುದು. ಕಾರ್ಯದ ಸಂಕ್ಷಿಪ್ತ ವರದಿ ಹೀಗಿದೆ:

	೧೯೪೬	೧೯೪೭	೧೯೪೮	೧೯೪೯
ಗ್ರಾಮ ಸೇವೆಯ ಮೂಲ ಮತ್ತು ತಾತ್ಪೂರ್ತ ಶಿಕ್ಷಣ ಕೇಂದ್ರಗಳು	೫೨	೧೪೦	೧೭೦	೨೦೭
ಹುಂಗಿ ಮತ್ತು ಆರೋಗ್ಯ ಕೇಂದ್ರಗಳು	೧೦	೧೮	೩೨	೪೭
ಒಟ್ಟು	೬೨	೧೫೮	೨೦೨	೨೫೪

ಅಖಿಲ ಭಾರತದಲ್ಲಿ ಹಂಚಿರುವ ಈ ಕೇಂದ್ರಗಳಲ್ಲಿ ದುಡಿಯುತ್ತಿರುವ ಗ್ರಾಮಸೇವಿಕೆಯರ ಸಂಖ್ಯೆ ೩೮೪. ಇವರಲ್ಲದೆ ಇತರ ಕೇಂದ್ರಗಳಲ್ಲಿರುವ ಸೇವಿಕೆಯರು ಬೇರೆಯೇ.

ದೇಶದ ವಿಸ್ತಾರವಾದ ಗ್ರಾಮ ಪ್ರದೇಶಗಳಲ್ಲಿ ಕೆಲಸ ಮಾಡುತ್ತಿರುವ ಬಗ್ಗೆ ನಿಧಿಯು ಹೆಮ್ಮೆ ತಾಳಬಹುದು. ದೇಶದ ಆವಶ್ಯಕತೆಯ ದೃಷ್ಟಿಯಿಂದ ಕೇಂದ್ರಗಳ ಸಂಖ್ಯೆ ಕಡಿಮೆಯೆಂಬುದು ನಿಜ. ಆದರೆ ಇಡೀ ದೇಶದ ಆವಶ್ಯಕತೆಯನ್ನೆಲ್ಲ ಪೂರೈಸುವುದು ನಿಧಿಗೆ ಅಸಾಧ್ಯವೆಂಬುದು ಸ್ವಯಂವೇದ್ಯ. ಕಾರ್ಯಕರ್ತರನ್ನು ತಯಾರುಮಾಡಿ ಮೊದಲು ಕೇಂದ್ರಗಳನ್ನು ಸ್ಥಾಪಿಸುವುದಕ್ಕಿಂತ ಹೆಚ್ಚು ಮಾಡುವುದು ಅದಕ್ಕೆ ಸಾಧ್ಯವಿಲ್ಲ. ಉಳಿದ ಕೆಲಸವನ್ನು ಮಾಡುವ ಭಾರ ಸಾರ್ವಜನಿಕರದು ಮತ್ತು ರಾಜ್ಯ ಸರಕಾರಗಳದು. ದೀರ್ಘಕಾಲದಿಂದ ಕೆಲಸ ಮಾಡಿಲ್ಲವೆಂದೂ ಆಕ್ಷೇಪಿಸಲಾಗಿದೆ. ಆದರೆ ಇದರಲ್ಲಿ ಕೇವಲ ನಿತ್ಯ ಕಾರ್ಯಗಳನ್ನು ಮಾಡುವುದು ಉದ್ದೇಶವಾಗಿರದೆ ಬಾಪು ಹಾಕಿಕೊಟ್ಟ ರೀತಿಯಲ್ಲಿ ಕೆಲಸ ಮಾಡಬೇಕಾಗಿದೆ. ಪ್ರಥಮ ಕಾರ್ಯವೆಂದರೆ ಗಾಂಧೀ ದೃಷ್ಟಿಕೋನವುಳ್ಳ ಕಾರ್ಯಕರ್ತರನ್ನು ತಯಾರಿಸಿಕೊಳ್ಳುವುದು. ಇದಕ್ಕೆ ಸ್ವಾಭಾವಿಕವಾಗಿ ಸ್ವಲ್ಪ ಕಾಲ ಹಿಡಿಯುತ್ತದೆ.

ಮಹಾತ್ಮಾ ಗಾಂಧಿ ಸ್ಮಾರಕ ನಿಧಿ.

೧. ಪ್ರಾಸ್ತಾವಿಕ ಕಾರ್ಯ

ಈ ಕಾರ್ಯ ಇನ್ನೂ ಹೊಸದು. ಅದನ್ನು ನಡೆಸಲು ತಕ್ಕ ವ್ಯವಸ್ಥೆಯನ್ನು ನಿರ್ಮಿಸಬೇಕಾಗಿದೆ. ನಿಧಿ ಸಂಗ್ರಹ, ಅದರ ಲೆಕ್ಕ, ಸಲಹೆ ಸಮಿತಿ ಮತ್ತು ಪ್ರಾಂತಿಕ ಸಂಚಾಲಕರ ಆಯ್ಕೆಗಳಲ್ಲೇ ಸಾಕಷ್ಟು ಹೊತ್ತು ಹೋಯಿತು. ಮೂಲತಃ ನಿಧಿ ಸಂಗ್ರಹಕ್ಕಾಗಿ ನೇಮಕ ಹೊಂದಿದವರು ಸಕಾಲದಲ್ಲಿ ಉತ್ತರ ಕೊಡದಿದ್ದರೆ ಮತ್ತು ಲೆಕ್ಕ ಕಳಿಸದಿದ್ದರೆ ಧರ್ಮದರ್ಶಿಗಳು ಏನು ಮಾಡಬೇಕು? ಪ್ರಾರಂಭದಲ್ಲಿ ಕೆಲಸ ಮಾಡಿದವರೆಲ್ಲರೂ ಸಲಹೆ ಸಮಿತಿಗಳ ಸದಸ್ಯರ ಹೆಸರುಗಳನ್ನು ಸೂಚಿಸಲಿಕ್ಕೇ ಎಷ್ಟೋ ಹೊತ್ತು ತೆಗೆದುಕೊಂಡರು!

ಆದರೂ ಆಗಬೇಕಾದ ಒಟ್ಟು ೨೪ (೨೫?) ಪ್ರಾಂತಿಕ ಸಲಹೆ ಸಮಿತಿಗಳಲ್ಲಿ ೨೦ನ್ನು ಈಗಾಗಲೇ ರಚಿಸಲಾಗಿದ್ದು ಉಳಿದ ೪ (೫?) ಇನ್ನೂ ರಚಿಸಲ್ಪಡುವುದರಲ್ಲಿವೆ. ಇವುಗಳ ರಚನೆ ಧರ್ಮದರ್ಶಿಗಳ ಇಚ್ಛಾನುಸಾರವಾಗಿ ನಡೆಯುತ್ತಿರದೆ ನಿಧಿ ಕೂಡಿಸಿಕೊಟ್ಟವರು ಮತ್ತು ರಚನಾತ್ಮಕ ಕಾರ್ಯಕರ್ತರು ಸೂಚಿಸಿದ ಹೆಸರುಗಳಿಂದಲೇ ಆರಿಸಬೇಕಾಗುತ್ತದೆ. ಪ್ರತಿ ಸಲಹೆ ಸಮಿತಿಯಲ್ಲಿಯೂ ಸಮಾನ್ಯವಾಗಿ ೧೨ ಸದಸ್ಯರಿದ್ದು ಅವರಲ್ಲಿ ೫ ಜನರು ಸಂಗ್ರಾಹಕ ಸಂಸ್ಥೆಗಳ ಪ್ರತಿನಿಧಿಗಳಾಗಿರಬೇಕು. ಇನ್ನಾರು ಜನರು ಅಖಿಲ ಭಾರತ ಅಥವಾ ಪ್ರಾಂತಿಕ ಸ್ವರೂಪದ ರಚನಾತ್ಮಕ ಚಟುವಟಿಕೆಗಳಲ್ಲಿ ತೊಡಗಿದ ಸಂಸ್ಥೆಗಳ ಪ್ರತಿನಿಧಿಗಳು. ನಿಧಿಯಲ್ಲಿ ೧೦೦ಕ್ಕೆ ೧೫ರಷ್ಟನ್ನು ಕೊಟ್ಟ ಉದ್ದಿಮೆದಾರರಿಗೆ ಇರುವ ಪ್ರಾತಿನಿಧ್ಯ ಸ್ಥಾನ ಒಂದೇ ಮಾತ್ರ.

೨. ಸಹಾಯ ಧನ

ರಚನಾತ್ಮಕ ಕಾರ್ಯಕರ್ತರು ಸಾಕಷ್ಟು ಹಣವಿಲ್ಲದೆ ಹೆಚ್ಚು ಹೆಚ್ಚು ತೊಂದರೆಗಳನ್ನು ಅನುಭವಿಸಬೇಕಾಗಿದೆಯೆಂದೂ ಅ. ಭಾ. ಚರಕಾ ಸಂಘ, ಅ. ಭಾ. ಗ್ರಾಮೋದ್ಯೋಗ ಸಂಘ, ಹಿಂದುಸ್ಥಾನಿ ತಾಲಿಮಿ ಸಂಘ ಮೊದಲಾದ ಗಾಂಧೀಜಿ ಸ್ಥಾಪಿಸಿದ ಸಂಸ್ಥೆಗಳು ಹಣವಿಲ್ಲದೆ ಒದ್ದಾಡುತ್ತಿದ್ದರೂ ಗಾಂಧೀನಿಧಿಯಿಂದ ಅವುಗಳಿಗೆ ಹಣ ಕೊಡಲಾಗುತ್ತಿಲ್ಲೆಂದೂ ಮೇಲಿನ ಲೇಖದಲ್ಲಿ ಆರೋಪಿಸಲಾಗಿದೆ. ೧೯೫೦ರ ಕೊನೆಯ ವರೆಗೆ ನಿಧಿಯಿಂದ ಕೆಲ ಮುಖ್ಯ ಮುಖ್ಯ ರಚನಾತ್ಮಕ ಸಂಸ್ಥೆಗಳಿಗೆ ಕೊಟ್ಟ ಸಹಾಯ ಧನದ ಅಂಕಗಳು ಹೀಗಿವೆ.

		ರೂ.
(೧)	ಹಿಂದುಸ್ಥಾನಿ ತಾಲಿಮಿ ಸಂಘ	೧,೬೦,೦೦೦
(೨)	ಅ ಭಾ ಗ್ರಾಮೋದ್ಯೋಗ ಸಂಘ	೭೦,೦೦೦
(೩)	ಹರಿಜನ ಸೇವಕ ಸಂಘ, ದಿಲ್ಲಿ	೧,೦೬,೧೬೯
(೪)	ಭಾರತೀಯ ಆದಿಜಾತಿ ಸೇವಕ ಸಂಘ, ದಿಲ್ಲಿ	೫೬,೨೫೦
(೫)	ಜಾಗತಿಕ ಶಾಂತಿ ಸಮ್ಮೇಲನ	೧,೫೦,೦೦೦
(೬)	ಇತರ ಸಹಾಯ ಧನಗಳು	೮೯,೦೪೦
	ಒಟ್ಟು ರೂ.	೬,೩೧,೪೫೯

ಇವಲ್ಲದೆ ಈ ಕೆಳಗಿನ ಸಹಾಯ ಧನಗಳನ್ನೂ ಕೊಡಲಾಗಿದೆ.

		ರೂ.
(೧)	ಗುಜರಾಥ ವಿದ್ಯಾಪೀಠ, ಅಹಮದಾಬಾದ	೧,೩೫,೦೦೦
(೨)	ನಿಸರ್ಗ ಚಿಕಿತ್ಸಾ ಮಂದಿರ, ಉರುಳಿ ಕಾಂಚನ	೩,೪೫,೩೪೭

ಈ ಮೇಲಿನದು ಸೇರಿ ಒಟ್ಟು ರೂ. ೪,೬೯,೮೦೪ ಸಹಾಯ ಧನವನ್ನು ನಿಧಿಯ ಕೇಂದ್ರ ಸಂಸ್ಥೆಯು ತಾಲಿನ ಹಣದಿಂದ ಕೊಡಲಾಗಿದೆ

೩. ಸಹಾಯಗಳು

ನಿಧಿಯು ಪ್ರಾಂತಿಕ ಸಂಸ್ಥೆಗಳ ಮೂಲಕ ನಿಂದ ಪ್ರಾಂತಿಕ ಸಲಹೆ ಸಮಿತಿಗಳ ಸೂಚನೆಯಂತೆ ಅಥವಾ ಹಾಗೆಯೇ ಕೊಟ್ಟ ಹಣದ ಮೊತ್ತ ೧೯೫೦ ಕೊನೆಯ ವರೆಗೆ ರೂ. ೬,೦೨,೬೩೧-೯-೯ ಮಾತ್ರಾಗಿದೆ. ವಿವಿಧ ಸಂಸ್ಥೆಗಳು ನಡೆಸಿದ ಕಾರ್ಯಗಳನ್ನು, ಮೂಲನಿವಾಸಿ ಮತ್ತು ಗುಡ್ಡಗಾಡಿನ ಜನರಲ್ಲಿ ಮಾಡಿದ ಕಾರ್ಯ, ಮೂಲ ಶಿಕ್ಷಣ ಕಾರ್ಯ, ವೈದ್ಯಕೀಯ ಸಹಾಯ, ಹರಿಗೆಯ ಆಸ್ಪತ್ರೆಗಳು, ಗ್ರಾಮೋದ್ಯೋಗ, ಗೋಸೇವೆ, ಮಹಿಳೆಯರಲ್ಲಿ ಮತ್ತು ಹರಿಜನರಲ್ಲಿ ಕಾರ್ಯ ಇತ್ಯಾದಿಯಾಗಿ ವರ್ಗೀಕರಿಸಬಹುದು.

ಸ್ಮಾರಕ ನಿಧಿ ರಚನಾತ್ಮಕ ಕಾರ್ಯದಲ್ಲಿರುವ ಆಸ್ಥೆಯನ್ನು ತೋರಿಸಲು ಮೇಲಿನ ವಿವರಗಳು ಸಾಕೆಂದು ನಂಬುತ್ತೇನೆ.

೪. ಯೋಜನೆಗಳು

ಧರ್ಮದರ್ಶಿಗಳು ಇತರ ಹಲವು ಯೋಜನೆಗಳನ್ನೂ ಕೈಕೊಂಡಿದ್ದಾರೆ. ಹಲವು ವಿವರಗಳನ್ನು ಹೊಂದಿಸಿಕೊಳ್ಳಬೇಕಾಗಿರುವುದರಿಂದಲೂ ಕೆಲ ಯೋಜನೆಗಳನ್ನು ಇನ್ನೂ ನಿಶ್ಚಿತ ಸ್ವರೂಪಕ್ಕೆ ತರಬೇಕಾಗಿರುವುದರಿಂದಲೂ ಅವುಗಳ ಕಾರ್ಯ ಅಷ್ಟು ಭರದಿಂದ ಸಾಗಿಲ್ಲ. ಇವುಗಳಲ್ಲಿ ಈ ಕೆಳಗಿನವು ಪ್ರಾಮುಖ್ಯವಾಗಿವೆ.

(೧) ಗಾಂಧೀಜಿಯ ಲೇಖನಾದಿಗಳನ್ನು ಸಂಗ್ರಹಿಸಿ ದಿಲ್ಲಿ, ಸೇವಾಗ್ರಾಮ, ಅಹಮದಾಬಾದ ಮತ್ತು ಇನ್ನಾವುದಾದರೊಂದು ಸ್ಥಳದಲ್ಲಿ ವಸ್ತುಸಂಗ್ರಹಾಲಯವನ್ನು ಸ್ಥಾಪಿಸುವುದು.

(೨) ಈ ಅಪಾರವಾದ ಸಂಗ್ರಹವನ್ನು ಸೂಕ್ಷ್ಮ ಮುದ್ರಣ (ಮೈಕ್ರೋಫಿಲ್ಮಿಂಗ್) ಮತ್ತು ಫೋಟೋಸ್ಟೇಟಿಂಗ್ ಮಾಡುವ ಕಾರ್ಯ ಆಗಲೆ ಪ್ರಾರಂಭವಾಗಿದೆ.

(೩) ಗಾಂಧೀಜಿಯ ಸಂದರ್ಶನದಿಂದ ಪ್ರಾಮುಖ್ಯ ಪಡೆದ ಮತ್ತು ಆ ಸಂದರ್ಶನದಿಂದ ಯಾವುದಾದರೂ ಐತಿಹಾಸಿಕ ಘಟನೆ ಸಂಭವಿಸಿದ ಪ್ರತಿಯೊಂದು ಸ್ಥಳದಲ್ಲಿಯೂ ಯಾವುದಾದರೊಂದು ಸ್ಮಾರಕವನ್ನು ಸ್ಥಾಪಿಸುವುದು. ಈ ಕೆಲಸ ಅಖಿಲ ಭಾರತ ಸ್ವರೂಪದ್ದಾಗಿದ್ದು ಪ್ರಗತಿ ಹೊಂದುತ್ತಿದೆ.

(೪) ಗಾಂಧೀಜಿಯ ಜೀವನದ ಸಾಕ್ಷಿ ಚಲಚಿತ್ರಗಳು.

(೫) ಗಾಂಧೀಗೃಹಗಳ ಸ್ಥಾಪನೆ; ಅಂದರೆ ಗ್ರಾಮ ಸೇವಕರಿಗೆ ಉಳಿದುಕೊಂಡು ಸರ್ವೋದಯ ತತ್ವಾನುಸಾರವಾಗಿ ಸಾಧ್ಯವಾದಷ್ಟು ರಚನಾತ್ಮಕ ಕಾರ್ಯಗಳನ್ನು ನಡೆಸಲು ಉಪಯೋಗವಾಗುವಂತೆ ಹಳ್ಳಿಗಳಲ್ಲಿ ಕೇಂದ್ರಗಳನ್ನು ಸ್ಥಾಪಿಸುವುದು. ಇದರಲ್ಲಿ ಕಾರ್ಯಕರ್ತರನ್ನು ತರಬೇತಿಗೊಳಿಸುವ ಪ್ರಶ್ನೆ ಅಡಕವಾಗಿದ್ದು, ಅದು ಕೈಯಲ್ಲಿ ತೆಗೆದುಕೊಳ್ಳಲ್ಪಟ್ಟಿದೆ.

(೬) ಕುಷ್ಠರೋಗ ಕಾರ್ಯ, ಇದು

(ಬನೇ ಪುಟಕ್ಕೆ ಸಾಗಿದೆ)

ಕೊಡಗಿನ ಜನಾಭಿಪ್ರಾಯದಂತೆ ಅದರ ಭವಿಷ್ಯ ನಿರ್ಣಯ.

(ಬರೆದು ಬಂದುದು)

ಮಂತ್ರಿಗಳ ಹೇಳಿಕೆ

ಕೊಡಗು ಇಂಡಿಯಾ ಸರಕಾರದ ನೇರ ಆಡಳಿತಕ್ಕೊಳಪಟ್ಟಿದೆ. ಆದರೆ ಕೇಂದ್ರ ಸರಕಾರದ ಮಂತ್ರಿಗಳು ಹೇಳಿದ್ದಾರೆ ಕೊಡಗಿನ ಸಂಯೋಜನೆಯು ಅನಂತರವೇ. ಆದ ಕಾರಣ ವೃಥಾ ಜನರು ಕೂಗಾಡುವ ಪ್ರಯೋಜನವಿಲ್ಲವೆಂಬ ಅಪಪ್ರಚಾರವೊಂದು ನಡೆಯುತ್ತಿದೆ. ಕೇಂದ್ರದ ಮಂತ್ರಿ ಗಾಡ್ಗೀಳರು ಮಾತಾಡುತ್ತಾ ಶ್ರೀ. ಪೂಣಚ್ಚನವರ ವಾದವು ಕೊಡಗಿನ ಸಂಯೋಜನೆಯ ಅನಿವಾರ್ಯತೆಯನ್ನು ಸೂಚಿಸುತ್ತದೆಂದು ಹೇಳಿದರು. ಇದರಿಂದ ಅದು ಇಂಡಿಯಾ ಸರಕಾರದ ಆಗಲೀ, ಆ ಮಂತ್ರಿಗಳದ್ದಾಗಲೀ ಅಭಿಪ್ರಾಯವಲ್ಲವೆಂದಾಗುತ್ತದೆ. ಪೂಣಚ್ಚನವರು ಈ ವಿಚಾರ ಹೇಳುತ್ತಾ ತಾನು ಕೊಡಗಿನ ಸಂಯೋಜನೆಯ ವಿಚಾರ ಮಾತೇ ಎತ್ತಲಿಲ್ಲವೆಂದು ಹೇಳಿದ್ದಾರೆ. ಇದರಲ್ಲಿ ಯಾರದು ಸರಿ ಯಾರದು ತಪ್ಪು? ಶ್ರೀ ಪೂಣಚ್ಚನವರು ಸಂಯೋಜನೆಯ ವಿಚಾರ ಮಾತಾಡಿಲ್ಲವೆನ್ನುತ್ತಾರೆ. ಶ್ರೀ. ಗಾಡ್ಗೀಳರು ಪೂಣಚ್ಚನವರ ಮಾತು ಕೊಡಗಿನ ಸಂಯೋಜನೆ ಅನಿವಾರ್ಯವೆಂದು ತೋರಿಸುತ್ತದೆ ಎನ್ನುತ್ತಾರೆ! ಹೇಗೂ ಕೊಡಗಿನ ಭವಿಷ್ಯದ ಬಗ್ಗೆ ಯಾವ ನಿರ್ಣಯವೂ ಆಗಿಲ್ಲ. ಆದಕ್ಕೆ ಜನರು ಅಪಪ್ರಚಾರ ನಂಬಬಾರದು. ಶಾಸನ ಸಭೆಯಲ್ಲಿ ಮಂತ್ರಿ ಗೋಪಾಲಸ್ವಾಮಿ ಅಯ್ಯಂಗಾರರು ಒಂದಿಲ್ಲೊಂದು ದಿನ ಕೊಡಗು ಬೇರೆ ಪ್ರಾಂತದೊಡನೆ ವಿಲೀನವಾಗಬೇಕಾಗುವದೆಂದು ಹೇಳಿದ್ದರು. ಇದರಿಂದಲೂ ಸರಕಾರವು ಕೊಡಗಿನ ಭವಿಷ್ಯದ ಬಗ್ಗೆ ಯಾವ ನಿರ್ಣಯವನ್ನೂ ಮಾಡಿಲ್ಲವೆಂಬುದು ಸ್ಪಷ್ಟವಾಗುತ್ತದೆ.

ಜನರ ಅಭಿಪ್ರಾಯ.

ರಾಜ್ಯಘಟನೆಯ ೨೩೯ ನೇ ಸೆಕ್ಷನ್ ಪ್ರಕಾರ ಪ್ರೆಸಿಡೆಂಟರು ತಮಗೆ ಯುಕ್ತ ತೋರಿದ ರೀತಿಯಲ್ಲಿ ಜನರ ಅಭಿಪ್ರಾಯವನ್ನು ತೆಗೆಯಬೇಕೆಂದಿರುವದರಿಂದ ಮತದಾನ ಪದ್ಧತಿಯು ಬೇರೆ ಯಾವ ಸಾಧನೆಯ ಮೂಲಕ ಈ ಅಭಿಪ್ರಾಯ ತೆಗೆಯಲಾರರು ಎಂದು ಕೆಲವರು ವಾದಿಸುತ್ತಾರೆ. ರಾಜ್ಯಘಟನೆಯಂತೆ ಪ್ರೆಸಿಡೆಂಟರಿಗೆ ಯುಕ್ತ ತೋರಿದ ರೀತಿ ಜನತೆಯ ಅಭಿಪ್ರಾಯವನ್ನು ತೆಗೆದೇ ಕೊಡಗಿನ ಭವಿಷ್ಯ ನಿರ್ಣಯಿಸಲ್ಪಡುವದೆಂಬ ತತ್ವವನ್ನು ಎಲ್ಲರೂ ಒಪ್ಪುತ್ತಾರೆ. ಆದರೆ ಯಾವ ರೀತಿಯಲ್ಲಿ ಅಭಿಪ್ರಾಯ ತೆಗೆಯುವರೆಂಬುದು ವಿವಾದದ ಸಂಗತಿಯಾಗಿದೆ. ಓಟು ತೆಗೆದು ಇಂಡಿಯಾ ಸರಕಾರವು ಕೊಡಗಿನ ಭವಿಷ್ಯ ನಿರ್ಣಯ ಮಾಡಲಾರರು ಎಂದು ಹೇಳುವವರಿದ್ದಾರೆ. ಕೊಡಗಿನ ಜನತೆಯ ಅಭಿಪ್ರಾಯ ತೆಗೆಯುವ ಸೂಕ್ತವಾದ ಮತ್ತು ನ್ಯಾಯಬದ್ಧವಾದ ಮಾರ್ಗ ಓಟಿನ ಮೂಲಕ ಎಂಬುದರಲ್ಲಿ ಭಿನ್ನಾಭಿಪ್ರಾಯವಿಲ್ಲ. ಒಂದು ವೇಳೆ ಕೊಡಗಿನ ಭವಿಷ್ಯ ಪ್ರಶ್ನೆಯನ್ನು ಕೇಂದ್ರ ಸರಕಾರವು ಜನತೆಯ ಮುಂದಿಡದಿದ್ದರೂ ಮುಂದೆ ಚುನಾಯಿತವಾಗಲಿರುವ ಕೌನ್ಸಿಲು ಸದಸ್ಯರ ಅಭಿಪ್ರಾಯ ತೆಗೆಯಲೇಬೇಕಾಗುತ್ತದೆ. ಆವಾಗ ಬರೇ ಮಂತ್ರಿಗಳ ಹೇಳಿಕೆಯಿಂದ ಕೊಡಗಿನ ಜೀವನ ಮರಣದ ಪ್ರಶ್ನೆ ಎಂದೆನ್ನುವದಾಗದೆ. ಆ ಚುನಾವಣೆಯಲ್ಲಿ ಆರಿಸಿ ಬರುವ ಪ್ರತಿನಿಧಿಗಳ ಅಭಿಪ್ರಾಯವೇ ಜನರ ಅಭಿಪ್ರಾಯವಾಗುವದು.

ಜನತೆಯ ಅಭಿಪ್ರಾಯವನ್ನು ತೆಗೆಯುವ ಪ್ರಾಮುಖ್ಯತೆಯನ್ನು ಕೇಂದ್ರ ಸರಕಾರವು ಮರೆಯುವದಿಲ್ಲ. ಇಂಡಿಯಾದ ಹಿತದೃಷ್ಟಿಯಿಂದ ಇಂಡಿಯಾ ಸರಕಾರವು ಈ ಪ್ರಶ್ನೆಯನ್ನು ಬಗೆಹರಿಸಬೇಕೇ ವಿನಾ ಕೊಡಗಿನ ಜನರ ದೃಷ್ಟಿಯಿಂದ ಅಲ್ಲವೆಂದು ಕೆಲವರ ವಾದವಾಗಿದೆ. ಇಂಡಿಯಾದ ಹಿತದೃಷ್ಟಿಯಿಂದ ಕೊಡಗನ್ನು ಬಲಿಕೊಡಲು ಕೇಂದ್ರ ಸರಕಾರವು ತಯಾರಿಲ್ಲವೆ ಎಂದು ಕಣ್ಣಿಟ್ಟು ಕೇಳುತ್ತಾರೆ. ಇಂಡಿಯಾ ಸರಕಾರವೆಂದರೆ ಯಾರು? ಕೊಡಗಿನಂಥ ಚಿಕ್ಕ ದೊಡ್ಡ ಭಾಗಗಳ ಜನರಿಂದ ಕೂಡಿದುದೇ ಅಲ್ಲವೇ? ಹಾಗಿರುವಾಗ ಅಂಥ ಒಂದು ಭಾಗದ ಜನರ ಅಭಿಪ್ರಾಯಕ್ಕೆ ಕೇಂದ್ರ ಸರಕಾರವು ಬೆಲೆ ಕೊಡದಿರಲಾರದು. ಇಂಥ ಭಾಗಗಳ ಜನರನ್ನು ಅಖಂಡ ಹಿಂದೂ ದೇಶದ ದೃಷ್ಟಿಯಿಂದ ಅಶಾಂತಿಗೆ ಈಡು ಮಾಡುವಂತೆ ಯಾವ ಸರಕಾರವೂ ವರ್ತಿಸದು.

ಮೆನನ್ ಉವಾಚ

ಡೆಲ್ಲಿಯಲ್ಲಿ ಕಳೆದ ವರ್ಷ ನಡೆದ ಕೇವಲ ಹತ್ತು ಜನರ ಸಮ್ಮೇಳನದಲ್ಲಿ ಶ್ರೀ ವಿ. ಪಿ. ಮೆನನವರು “ಸೆಕ್ರೆಟರಿಯೆಟ್ ಡೆಮೊಕ್ರೆಸಿ”ಯ ವಿಚಾರ ಹೇಳಿ ಕೇಂದ್ರ ಸರಕಾರವು ೩೦ ಕೋಟಿ ಜನರ ಪ್ರತಿನಿಧಿಯಾಗಿರುವ ಕಾರಣ ಅದರ ಇಚ್ಛೆಯಂತೆ ಮಾಡುತ್ತದೆ ಎಂದು ಹೇಳಿದರೆಂದು ಕೆಲವರು ಹೇಳುತ್ತಾರೆ. ಅದು ನಿಜವಿದ್ದರೆ ೩೦ ಕೋಟಿ ಜನತೆಯ ಪ್ರತಿನಿಧಿಗಳು ಅಖಂಡ ಹಿಂದೂದೇಶದ ದೃಷ್ಟಿಯಿಂದ ತಮಗೆ ಕಂಡಂತೆ ವರ್ತಿಸದೆ ಕೊಡಗಿನ ಹತ್ತು ಜನ ಪ್ರತಿನಿಧಿಗಳನ್ನು ಡೆಲ್ಲಿಗೆ ಆಮಂತ್ರಿಸುವ ಆವಶ್ಯಕತೆ ಏನಿತ್ತು? ಆಮಂತ್ರಿಸಿದನಂತರವೂ ತಮ್ಮ ಇಚ್ಛೆಯಂತೆ ಮಾಡದೆ ಇಲ್ಲಿ ಭಿನ್ನಾಭಿಪ್ರಾಯ ಇರುವುದರಿಂದ ಕೊಡಗು ಹಿಂದಿನಂತೆಯೇ ಇರಲೀ ಎಂದು ಏಕೆ ಬಿಡಬೇಕಿತ್ತು?

ಡೆಲ್ಲಿಯಲ್ಲಿ ನಡೆದ ಸಮ್ಮೇಳನದ ನಡಾವಳಿಯ ವಿಚಾರದ ಕೂಗಾಟ ಒಂದಿದೆ. ಆ ಸಮ್ಮೇಳನವು ಖಾಸಗಿಯಾಗಿದ್ದು ಅದರ ಅಧಿಕೃತ ವರದಿಯನ್ನು ಕೇಂದ್ರ ಸರಕಾರವು ಕೂಡ ಪ್ರಕಟಿಸಿಲ್ಲ. ಇದನ್ನು ಪತ್ರಿಕೋದ್ಯೋಗದ ನಿಯಮಕ್ಕೆ ವಿರುದ್ಧವಾಗಿ ಪ್ರಕಟಿಸುವದು ಯುಕ್ತವಲ್ಲ. ಈ ವಿಚಾರದಲ್ಲಿ ಕೇಂದ್ರದೊಡನೆ ಪತ್ರವ್ಯವಹಾರ ನಡೆಸಿದಾಗ ಸಮ್ಮೇಳನದ ಅಧ್ಯಕ್ಷರೇ ಅದು ಖಾಸಗಿ ಸಭೆಯೆಂದೂ ಅದು ಪ್ರಕಟವಾಗುವದು ಸರಿಯಲ್ಲವೆಂದೂ ಬರೆದಿರುವರು. ಹಾಗಿರುವಾಗ ಆ ವಿಚಾರದಲ್ಲಿ ಗೊಂದಲ ಮಾಡಿಕೊಳ್ಳುವದರಲ್ಲಿ ಅರ್ಥವಿಲ್ಲ.

ಡೆಲ್ಲಿಯಲ್ಲಿ “ಸೆಕ್ರೆಟರಿಯೆಟ್ ಡೆಮೊಕ್ರೆಸಿ”ಯ ವಿಚಾರ ಹೇಳಿದರೆಂದು ವಾದಿಸುವ ಸಂಯೋಜನಾವಾದಿಗಳಿಗೆ ಅದೇ ಮೆನನರು ವಿರಾಜಪೇಟೆಗೆ ಬಂದಿದ್ದಾಗ ಅಲ್ಲಿಯ ಜನರು ಕೊಟ್ಟ ಬಿನ್ನವತ್ತಳೆಗೆ ಉತ್ತರ ಕೊಡುವಾಗ ಜನ ಅಭಿಪ್ರಾಯಕ್ಕೆ ವಿರುದ್ಧವಾಗಿ ಏನೂ ಮಾಡೆವು ಎಂದು ಹೇಳಿದ್ದು ಆಶ್ಚರ್ಯವೆಂದು ತೋರಬಹುದು. ಆದ್ದರಿಂದ ಆ ವಿಚಾರದಲ್ಲಿ ಜನರು ಹೆದರಬೇಕಾಗಿಲ್ಲ!

೬೦೦ ಸಂಸ್ಥಾನಗಳ ಕಥೆ!

ಹಿಂದೂ ದೇಶದ ೬೦೦ ಕ್ಕಿಂತ ಹೆಚ್ಚು ಸಂಸ್ಥಾನಗಳ ವಿಲೀನೀಕರಣವನ್ನು ಮಾಡಿದ ಕೇಂದ್ರವು ಕೊಡಗಿನಂಥ ಚಿಕ್ಕ ಪ್ರಾಂತವನ್ನು ವಿಲೀನಗೊಳಿಸದೆ ಬಿಡಲಾರದೆಂದು ವಾದಿಸುವವರು ಒಂದು ಸಂಗತಿಯನ್ನು ನೆನಪಿನಲ್ಲಿಡಬೇಕು. ಕೇಂದ್ರ ಸರಕಾರವು ಜನತೆಯ ಅಭಿಮತಕ್ಕೆ ವಿರುದ್ಧವಾಗಿ ಒಂದೇ ವಿಲೀನೀಕರಣವನ್ನು ಮಾಡಿಲ್ಲ. ಇದನ್ನು ಸರ್ದಾರ್ ಪಟೇಲರು ಹಲವು ಬಾರಿ ಪಾರ್ಲಿಮೆಂಟಿನಲ್ಲಿ ಒತ್ತಿ ಹೇಳಿದ್ದಾರೆ. ಸಂಸ್ಥಾನಗಳ ಅರಸರ ಆಡಳಿತದಿಂದ ಬೇಸತ್ತ ಜನತೆಯ ಬಹುಮತದ ಕೋರಿಕೆಯಂತೆ ವಿಲೀನೀಕರಣವನ್ನು ಮಾಡಿ ಅರಸರ ನಿರಂಕುಶ ಆಡಳಿತವನ್ನು ನಿರ್ನಾಮಗೊಳಿಸಿತೇ ವಿನಾ ಬೇರಿಲ್ಲ. ಒಡೆಯರು ಸಂಸ್ಥಾನಗಳಲ್ಲಿ ಕೆಲವರು ವಿಲೀನೀಕರಣಕ್ಕೆ ವಿರುದ್ಧ ಕೂಗೆಬ್ಬಿಸಿದರೂ ಬಹುಮತ ಜನವು ವಿಲೀನೀಕರಣಕ್ಕೆ ಒಪ್ಪಿದ್ದರಿಂದ ಕೇಂದ್ರ ಸರಕಾರವು ವರ್ತಿಸಿದೆ. ಆದ್ದರಿಂದ ಕೊಡಗಿನ ಬಹುಮತ ಜನರು ಕೊಡಗು ಪ್ರತ್ಯೇಕವಿರಬೇಕೆನ್ನುವುದಾದರೆ ಕೇಂದ್ರ ಸರಕಾರವು ಬಲಾತ್ಕಾರದಿಂದ ವಿಲೀನಗೊಳಿಸಿ ಕೊಡಗನ್ನು ಅಶಾಂತಿಯ ತವರು ಎಂದೂ ಮಾಡಲಾರದು. ಇಂಥಾ ಒಂದು ನಿರಂಕುಶ ಮಾರ್ಗವನ್ನು ಹಿಡಿಯಬಾರದೆಂದೇ ಕೇಂದ್ರ ಸರಕಾರವು ಚುನಾವಣೆಯ ಏರ್ಪಾಡು ಮಾಡುತ್ತಿದೆ. ಅವರಿಗೆ ತಾತ್ಕಾಲಿಕ ಕೌನ್ಸಿಲಿಗೆ ಆದೇಶವ ಅನುಮೋದಿಸುತ್ತಿದೆ. ಬಲಾತ್ಕಾರದಿಂದ ಜನರನ್ನು ಕೇಳದೆ ಒಂದಲ್ಲ ಒಂದು ದಿನ ವಿಲೀನಗೊಳಿಸುವದಾದರೆ ಇವೆಲ್ಲ ಏಕೆ? ವಿಲೀನಗೊಳಿಸಲು ನಿರ್ಣಯಿಸಿದ್ದರೆ ಆ ನಿರ್ಣಯದಂತೆ ಶೀಘ್ರ ಕಾರ್ಯ ಕೈಕೊಳ್ಳದೆ ಕಾಯಲು ಕೇಂದ್ರ ಸರಕಾರವು ಶುಭ ನಕ್ಷತ್ರ ನೋಡುತ್ತಿರುವದೇ ಕಾರಣವೆಂದು ಇವರ ಅಭಿಪ್ರಾಯವೇ?

ಜನತೆಯ ಹಕ್ಕು.

ಒಂದು ವೇಳೆ ಕೇಂದ್ರ ಸರಕಾರವು ಜನಾಭಿಪ್ರಾಯವನ್ನು ತೆಗೆಯದೆ ಸಂಯೋಜನೆಯ ಏರ್ಪಾಡು ಮಾಡುವದಾದರೆ ಅದನ್ನು ಎದುರಿಸುವ ನ್ಯಾಯಬದ್ಧವಾದ ಹಕ್ಕು ಜನತೆಗಿದೆ. ರಾಜ್ಯಘಟನೆಯ ೩೪೯ ನೇ ಪ್ರಕರಣದಂತೆ ಈ ಅಧಿಕಾರವು ಜನತೆಗಿದೆ. ಮೇಲಾಗಿ ರಾಜ್ಯಘಟನೆಯಲ್ಲಿ ವಿವರವಾಗಿ ಸೂಚಿಸಿರುವಂತೆ ಒಂದು ಪ್ರಾಂತ್ಯವನ್ನು ಸಂಯೋಜಿಸುವದಾದರೆ ಸಂಯೋಜನೆಗೊಳಗಾಗುವ ಮತ್ತು ಸಂಯೋಜನೆ ಮಾಡಿಕೊಳ್ಳುವ ಎರಡೂ ಪ್ರಾಂತಗಳೂ ಪರಸ್ಪರ ಒಪ್ಪಬೇಕಿದೆ. ಅವರು ಒಪ್ಪಿ ಗಟ್ಟಿ ನಿರ್ಣಯವಾದ ನಂತರ ರಾಜ್ಯಘಟನೆಯಲ್ಲಿ ತಿದ್ದುಪಡಿಯೂ ಆಗಬೇಕಾಗಿದೆ. ಎ, ಬಿ ವರ್ಗದ ಸಂಸ್ಥಾನಗಳಿಗಾಗಿ ಏರ್ಪಡಿಸಿದ ಈ ನಿಯಮಗಳನ್ನು ಅವಲೋಕಿಸಿದರೆ ಜನರ ಅಭಿಪ್ರಾಯವನ್ನು ಕೇಂದ್ರವು ಎಂದೂ ಕಡೆಗಣಿಸುವದಿಲ್ಲವೆಂಬುದು ವೇದ್ಯವಾಗುತ್ತದೆ. ೧೯೪೯ ರಲ್ಲಿ ನಡೆದ ಡೆಲ್ಲಿ ಸಮ್ಮೇಳನದ ಬಳಿಕ ಕೊಡಗಿನ ವಿಲೀನೀಕರಣದ ಬಗ್ಗೆ ತುಂಬಾ ಅಪಪ್ರಚಾರ ನಡೆಯಿತು. ಕೊಡಗಿನ ಜನರು ತಂತಿ ಮೂಲಕವೂ, ಇತರ ರೀತಿಯಿಂದಲೂ ತಮ್ಮ ಭಿನ್ನಾಭಿಪ್ರಾಯವನ್ನು ಕೇಂದ್ರ ಸರಕಾರದ ಮುಂದಿಟ್ಟಾಗ ಕೇಂದ್ರ ಸರಕಾರವು ಜನತೆಯ ಬಲವನ್ನು ನೋಡಿ ಅದರಂತೆ ವರ್ತಿಸಿದೆ. ಮೊನ್ನೆಯೂ ಕೂಡ ಜನತೆಯ ಅಭಿಪ್ರಾಯಕ್ಕೆ ಬಹು ವಿರುದ್ಧ ವರ್ತಿಸದೆ ಅದನ್ನು ಸ್ವೀಕರಿಸಿದೆ. ಆದ್ದರಿಂದ ಕೊಡಗಿನ ಭವಿಷ್ಯವು ಕೊಡಗಿನ ಜನತೆಯ ಕೈಯಲ್ಲಿದೆ.

ಸಂಯೋಜನಾ ವಾದಿಗಳಿಗೊಂದು ಮಾತು.

ದೇಶದ ಬಹುಮತ ಜನರು ಸಂಯೋಜನೆಗೆ ಬೆಂಬಲವಿದ್ದಾರೆ ಎಂದು ಕೂಗಿಕೊಳ್ಳುವ ಸಂಯೋಜನಾವಾದಿಗಳು ಜನರ ಅಭಿಪ್ರಾಯ ತೆಗೆಯಲು ಬಿಡಬಾರದೇಕೆ? ಜನರ ಅಭಿಪ್ರಾಯ ತೆಗೆಯದೆ ಕೇಂದ್ರವು ಬಲಾತ್ಕಾರದಿಂದ ಕೊಡಗಿನ ವಿಲೀನೀಕರಣವನ್ನು ಮಾಡಿಬಿಡಬೇಕೆಂದು ಇವರು ಪ್ರಯತ್ನಿಸುವದರ ಅರ್ಥವಾದರೂ ಏನು? ಸಂಯೋಜನಾವಾದಿಗಳು ಒಂದು ಮಾತನ್ನು ನೆನಪಿನಲ್ಲಿಡಬೇಕು. ಕೊಡಗಿನ ಭವಿಷ್ಯದ ಪ್ರಶ್ನೆಯು ಕೆಲವೊಂದು ಸ್ವಾರ್ಥೀ ರಾಜಕೀಯ ವಾದಿಗಳ ಮನಸ್ವೇಚ್ಛೆಯ ಚಕ್ಕಂದದ ಆಟವಲ್ಲ. ಅದು ಕೊಡಗಿನ ಪ್ರತಿಯೊಬ್ಬನಿಗೂ ಸಂಬಂಧಿಸಿದ ಜೀವನ ಮರಣ ಪ್ರಶ್ನೆ. ಇಂಥಾದ್ದನ್ನು ಕೊಡಗಿನ ಪರಿಚಯವಿಲ್ಲದ ಹೊರಗಿನವರು ನಿರ್ಣಯಿಸಿ ಬಿಡಬೇಕೆನ್ನುವ ನಿಮ್ಮ ವಾದದಲ್ಲಿ ನಿಮ್ಮ ಬೇಜವಾಬ್ದಾರಿಯು ಎದ್ದು ತೋರುತ್ತದೆ. ನಿಮ್ಮ ಈ ಬೇಜವಾಬ್ದಾರಿಯ ಕಾರಣವೇ ದಿನ ಕಳೆದಂತೆ ನಿಮ್ಮ ಬಲ ಕುಗ್ಗುತ್ತದೆ. ಕುಂದಿ ಹೋಗುತ್ತದೆ. ಅಂಧದೃಷ್ಟಿಯಿಂದ ನಿಮ್ಮ ಕಣ್ಣುಗಳು ಘೋರವಾದ ಡೆಲ್ಲಿಯತ್ತ ನೋಡುತ್ತಿವೆ. ಆ ಕಾರಣದಿಂದಲೇ ಕೊಡಗಿನ ಭವಿಷ್ಯ ಪ್ರಶ್ನೆಯನ್ನು ಕೊಡಗಿನ ಜನತೆಯ ಮುಂದಿಡಬಾರದೆಂದು ನೀವು ವಾದಿಸುವವರಾಗಿದ್ದೀರಿ. ಆದರೆ ಎಚ್ಚರಿಕೆ. ಜನತೆಯ ಜನ್ಮಸಿದ್ಧ ಹಕ್ಕನ್ನು ಯಾವ ಶಕ್ತಿಯೂ ಕಸಿದುಕೊಳ್ಳಲಾರದು.

ಶ್ರೀ ಕೆ. ಯಂ. ಮೊಗಪ್ಪನವರು,
“ಕೊಡಗು” ಏಜೆಂಟರು,
ಸೋಮವಾರಪೇಟೆ.

ಕೊಡಗು

ತಾ. ೧೮-೫-೧೯೫೧ನೇ ಶುಕ್ರವಾರ

ಎಂಪ್ಲಾಯಿಮೆಂಟ್ ಎಕ್ಸ್‌ಚೇಂಜ್.

ನಿರುದ್ಯೋಗಿಗಳಿಗೆ ಅವರ ಯೋಗ್ಯತೆಗೆ ತಕ್ಕ ಉದ್ಯೋಗಗಳನ್ನು ಒದಗಿಸಿಕೊಡುವ ಮತ್ತು ಮಾಲೀಕರಿಗೆ ಬೇಕಾದ ನೌಕರ ಯಾ ಕೆಲಸಗಾರರನ್ನು ಒದಗಿಸುವ ಉದ್ದೇಶದಿಂದ ಕೇಂದ್ರ ಸರಕಾರದ ಲೇಬರ್ ಶಾಖೆಯ ಆಶ್ರಯದಲ್ಲಿ ಪ್ರಾರಂಭವಾದ ಎಂಪ್ಲಾಯಿಮೆಂಟ್ ಎಕ್ಸ್‌ಚೇಂಜ್‌ಗಳು ದೇಶದ ವಿವಿಧ ಭಾಗಗಳಲ್ಲಿ ಕೆಲಸ ಮಾಡುತ್ತಿವೆ. ಜನರ ಸೇವೆಯನ್ನು ಗುರಿಯಾಗಿಟ್ಟುಕೊಂಡು ಕೆಲಸಗಾರರ ಹಾಗೂ ಮಾಲೀಕರ ಹಿತವನ್ನು ಕೋರುವ ಸಂಸ್ಥೆಗಳು ಇವಾಗಿವೆ. ಈ ಸಂಸ್ಥೆಗಳ ಸಹಾಯದಿಂದ ಮಾಲೀಕರಿಗೆ ಯೋಗ್ಯ ಕೆಲಸಗಾರರೂ, ಕೆಲಸಗಾರರಿಗೆ ಯೋಗ್ಯ ನೌಕರಿಯೂ ದೊರೆಯುವದು ಸುಲಭ ಸಾಧ್ಯವಾಗಿದೆ. ಈ ಸಂಸ್ಥೆಯು ಮುಖ್ಯವಾಗಿ ತನ್ನ ಸೇವೆಯನ್ನು ಸಲ್ಲಿಸುವದಾಗಿದೆ.

ಇಂಥಾ ಉತ್ತಮ ಗುರಿಯಿಂದ ಸ್ಥಾಪಿತವಾದ ಈ ಸಂಸ್ಥೆಯ ಶಾಖೆಯೊಂದು ಮಡಿಕೇರಿಯಲ್ಲಿ ಎರಡು ವರ್ಷಗಳ ಹಿಂದೆ ತೆರೆಯಲ್ಪಟ್ಟಿತು. ತಾ ೧-೫-೫೧ಕ್ಕೆ ಅಂತ್ಯವಾದ ಈ ಎರಡು ವರ್ಷಗಳ ಅವಧಿಯಲ್ಲಿ ೩೯೧೦ ಗಂಡಸರೂ ೩೧೯ ಹೆಂಗಸರೂ ಉದ್ಯೋಗಕ್ಕಾಗಿ ಈ ಸಂಸ್ಥೆಯ ನೆರವನ್ನು ಕೋರಿದ್ದಾರೆ. ಇವರಲ್ಲಿ ೭೯೬ ಗಂಡಸರಿಗೂ, ೧೪೨ ಹೆಂಗಸರಿಗೂ ಉದ್ಯೋಗವದಗಿಸಿ ಕೊಡಲಾಗಿದೆ. ಚಿಕ್ಕ ಪ್ರಾಂತವಾದ ಕೊಡಗಿನಲ್ಲಿ ಈ ಅಲ್ಪ ಅವಧಿಯಲ್ಲಿ ಮಾಡಿದ ಈ ಉತ್ತಮ ಕೆಲಸವು ಹೊಗಳ ಅರ್ಹವಾಗಿದೆ.

ಸರಕಾರದಿಂದ ಜನತೆಯ ಹಿತಕ್ಕಾಗಿ ದಕ್ಷತೆಯಿಂದ ನಡೆಸಲ್ಪಡುತ್ತಿರುವ ಈ ಎಕ್ಸ್‌ಚೇಂಜ್‌ಗಳೊಡನೆ ಜನರು ಸಹಕರಿಸಬೇಕು. ಕೆಲಸ ಬೇಕಿರುವವರೂ, ಕೆಲಸ ಕೊಡಬಲ್ಲವರೂ ಎಂಪ್ಲಾಯಿಮೆಂಟ್ ಎಕ್ಸ್‌ಚೇಂಜ್‌ಗಳ ವೇದಿಕೆಯಲ್ಲಿ ಕಲೆತು ಪರಸ್ಪರ ಹಿತಸಾಧಿಸಿಕೊಂಡುದೇ ಆದರೆ ನಿರುದ್ಯೋಗದಿಂದ ದೇಶದಲ್ಲಿ ಉಪಸ್ಥಿತವಾಗುವ ಅಶಾಂತಿಯನ್ನು ಕೆಲಮಟ್ಟಿಗೆ ಹೋಗಲಾಡಿಸಿದಂತಾಗುವದು. ಜನತೆಯ ಸಹಕಾರವು ಹೃತ್ಪೂರ್ವಕವಾಗಿ ದೊರೆತರೆ ಈ ಎರಡು ವರ್ಷಗಳಲ್ಲಿ ಮಾಡಿದುದಕ್ಕಿಂತಲೂ ಉತ್ತಮ ಕೆಲಸವನ್ನು ಈ ಶಾಖೆಯು ಮುಂದೆ ಮಾಡಬಲ್ಲದೆಂಬುದರಲ್ಲಿ ಸಂಶಯವಿಲ್ಲ.

ನಿರುದ್ಯೋಗಿಗಳಿಗೆ ಯೋಗ್ಯ ಕೆಲಸ ಒದಗಿಸುವ ಕಾರ್ಯದೊಂದಿಗೆ ಈ ಇಲಾಖೆಯು ಯೋಗ್ಯ ಜನರನ್ನು ಬೆತ್ತ, ಮರ ಮತ್ತಿತರ ಗುಡಿಕೈಗಾರಿಕೆಗಳಲ್ಲಿ, ಇಂಜಿನೀಯರಿಂಗ್ ಮತ್ತಿತರ ಔದ್ಯೋಗಿಕ ಉದ್ಯಮಗಳಲ್ಲಿ ತರಬೇತುಮಾಡುವ ಕೇಂದ್ರಗಳನ್ನು ಏರ್ಪಡಿಸಿ ಕೆಲಸ ಮಾಡುತ್ತಿದೆ. ತರಬೇತಿಗೆ ಬರುವ ವಿದ್ಯಾರ್ಥಿಗಳಲ್ಲಿ ಶೇಕಡ ೫೦ರಷ್ಟು ಜನರಿಗೆ ಮಾಸಿಕ ರೂ. ೩೫/-ರ ವೇತನ ಕೊಡುವ ಏರ್ಪಾಡೂ ಮಾಡಿದೆ. ದೇಶದಲ್ಲಿ ಹಬ್ಬಿರುವ ನಿರುದ್ಯೋಗ ನಿವಾರಣೆಗೆ ಈ ಶಾಖೆಯು ಉತ್ತಮ ಕೆಲಸ ಮಾಡುತ್ತಿದೆ. ಈ ಯೋಜನೆಯಂತೆ ವೀರಾಜಪೇಟೆಯಲ್ಲಿ ಸ್ಥಾಪಿತವಾದ ಕೈಗಾರಿಕಾ ಶಾಲೆಯ ವಿವಿಧ ತರಬೇತು ಶಾಖೆಗಳಲ್ಲಿ ಒಟ್ಟು ೮೬ ಜನರು ತರಬೇತು ಪಡೆಯುತ್ತಿದ್ದಾರೆ. ಈ ಶಾಲೆಯ ಉಪಯುಕ್ತತೆಯನ್ನು ಅರಿಯದೆ ಪ್ರಾರಂಭದಲ್ಲಿ ಸಾಕಷ್ಟು ಉಮೇದುವಾರರು ದೊರೆಯದೆ ಸ್ವಲ್ಪ ಪ್ರಯತ್ನಪಡಬೇಕಾಗಿ ಬಂದು ನಂತರ ಸಾಕಷ್ಟು ಸಂಖ್ಯೆ ದೊರೆತು ದಿನಕಳೆದಂತೆ ಇದರ ಉಪಯೋಗ ಜನತೆಗೆ ಮನವರಿಕೆಯಾಗುತ್ತಿದೆ. ಇಲ್ಲಿ ತರಬೇತು ಪಡೆದವರು ಹೊರಗೆ ಬಂದು ತಾವು ಕಲಿತ ಉದ್ಯಮಗಳನ್ನು ಕೈಕೊಂಡಾಗ ಈ ಸಂಸ್ಥೆಯು ಇನ್ನಷ್ಟು ಜನಾದರಣೀಯವಾಗದಿರದು.

ಆದರೆ ಈ ಶಾಲೆಯನ್ನು ಕೇವಲ ಎರಡು ವರ್ಷಗಳ ಮಟ್ಟಿಗೆ ತೆರೆದಿರುವದಾಗಿದೆ. ಅದರ ನಂತರ ಈ ಯೋಜನೆಯು ಅಲ್ಲಿಗೆ ಸಮಾಪ್ತಿಗೊಳ್ಳದೆ ಮುಂದರಿಸಲ್ಪಡುವಂತೆ ಕೇಂದ್ರ ಸರಕಾರವನ್ನು ಒತ್ತಾಯಪಡಿಸುವದು ಕೊಡಗಿನ ಜನತೆಯ ಮತ್ತು ಸರಕಾರದ ಕರ್ತವ್ಯ. ಕೊಡಗು ನೈಸರ್ಗಿಕ ಸಂಪತ್ತಿನಿಂದ ಕೂಡಿದ ದೇಶ. ಗುಡಿಕೈಗಾರಿಕೆಗಳಿಗೆ ಬೇಕಾದ ಕಚ್ಚಾ ಮಾಲುಗಳು ಹೇರಳವಾಗಿರುವ ಈ ಪ್ರಾಂತದಲ್ಲಿ ಇಂಥಾ ಒಂದು ತರಬೇತುಶಾಲೆಯು ಖಾಯಂ ಬೇಕಾಗಿದೆ. ಕೇಂದ್ರ ಸರಕಾರದವರು ಈ ಪ್ರಾಂತದ ಅವಶ್ಯಕತೆಯನ್ನರಿತು ಈ ತರಬೇತು ಶಾಲೆಯನ್ನು ಖಾಯಂ ಮಾಡಬೇಕೆಂದು ನಮ್ಮ ಕೋರಿಕೆಯಾಗಿದೆ.

ವರ್ತಮಾನ.

ತಾರೀಕು ೧-೬-೫೧ ರಿಂದ ಮಡಿಕೇರಿ ಸಿವಿಲ್ ಆಸ್ಪತ್ರೆಯಲ್ಲಿ ಮಂಗಳವಾರ, ಗುರುವಾರ ಮತ್ತು ಶನಿವಾರಗಳಲ್ಲಿ ಬೆಳಗ್ಗೆ ೧೧ ಗಂಟೆಯಿಂದ ಒಂದು ಗಂಟೆಯ ವರೆಗೆ ಕಣ್ಣಿಗೆ ಸಂಬಂಧಿಸಿದ ಕಾಯಿಲೆಗಳನ್ನು ಪರೀಕ್ಷಿಸುವ ಶಾಖೆಯನ್ನು ತೆರೆಯಲಾಗುವದೆಂದೂ, ಪ್ರತಿ ಬುಧವಾರ ಬೆಳಗೆ ೧೧ ಗಂಟೆಯಿಂದ ೩ ಗಂಟೆಯ ವರೆಗೆ ವೀರಾಜಪೇಟೆ ಸಿವಿಲ್ ಆಸ್ಪತ್ರೆಯಲ್ಲೂ ಪ್ರತಿ ಸೋಮವಾರ ಸೋಮವಾರಪೇಟೆ ಸಿವಿಲ್ ಆಸ್ಪತ್ರೆಯಲ್ಲೂ ಕಣ್ಣಿಗೆ ಸಂಬಂಧಿಸಿದ ಕಾಯಿಲೆಗಳ ಚಿಕಿತ್ಸೆ ಮಾಡಲಾಗುವದೆಂದೂ, ಕಣ್ಣು ರೋಗದ ಸಂಬಂಧ ವಿಶೇಷ ಪರಿಜ್ಞಾನ ಪಡೆದ ಡಾಕ್ಟರು ಇದನ್ನು ನಡೆಸುವರೆಂದೂ ತಿಳಿಯಬಂದಿದೆ.

ಕೊಡಗು ಟ್ರಾನ್ಸ್‌ಪೋರ್ಟ್ ಕಂಪೆನಿಗೆ ಸೇರಿದ್ದ ಬಸ್ ಛೇಸಿಸ್ ಒಂದನ್ನು ಮಾರಿದರೆಂದು ಕಂಪೆನಿಯವರು ದೂರು ಕೊಟ್ಟ ಮೇರೆ ಶ್ರೀ ಉಗ್ಗಪ್ಪ ಅಚ್ಚಣ್ಣನವರನ್ನು ದಸ್ತಗಿರಿ ಮಾಡಿ ಜಾಮೀನು ಮೇಲೆ ಬಿಡಲಾಗಿದೆ.

ಚೆಂಬು ಗ್ರಾಮಕ್ಕೆ ಬತ್ತ ಕೊಂಡು ಹೋಗುವ ಪರ್ಮಿಟು ಪಡೆದ ಲಾರಿಯೊಂದು ಎರಡು ಗಾಡಿ ಬತ್ತವನ್ನು ಸಂಪಾಜೆ ದಾಟಿ ಚೆಂಬುಗ್ರಾಮಕ್ಕೆ ತೆಗೆದುಕೊಂಡು ಹೋಗದೆ ಮಂಗಳೂರಿನತ್ತ ಸಾಗಿಸುತಿದ್ದುದನ್ನು ಕಂಡು ಪೋಲೀಸರು ಅವರನ್ನು ತಡೆದು ಒಬ್ಬ ಪರ್ಮಿಟುದಾರರನ್ನು ದಸ್ತಗಿರಿ ಮಾಡಿರುವದಲ್ಲದೆ ಅವರ ಮೇಲೆ ಮೊಕದ್ದಮ್ಮೆ ಹೂಡಲಾಗಿದೆಯಾಗಿ ವಾರ್ತೆ.

ಮಡಿಕೇರಿಯ ಸಾರ್ವಜನಿಕರು ತಾರೀಕು ೧೩-೫-೫೧ರಲ್ಲಿ ಜಸ್ಟೀಸ್ ಮೇದಪ್ಪನವರಿಗೆ ಕೊಟ್ಟ ಸತ್ಕಾರ ಕೂಟಕ್ಕೆ ಉತ್ತರವಾಗಿ ತಾ. ೧೫ರಲ್ಲಿ ಮೇದಪ್ಪನವರು ಒಂದು ಚಹಪಾನ ಕೂಟ ಏರ್ಪಡಿಸಿದ್ದರು.

ಕೊಡಗು ಫಾರೆಸ್ಟ್ ಕ್ಲಬ್ಬಿನ ವಾರ್ಷಿಕೋತ್ಸವವೂ, ಆ ಸಂಬಂಧ ಕ್ಲಬ್ಬಿನವರಿಗೂ, ಸಾರ್ವಜನಿಕರಿಗೂ ಆಟೋಟಗಳ ಸ್ಪರ್ಧೆಯೂ ತಾ. ೧೯-೫-೫೧ರಲ್ಲಿ ನಡೆಯುವದು. ಚೀಫ್ ಕಮಿಷನರವರು ಅಧ್ಯಕ್ಷತೆ ವಹಿಸುವರು.

ಕಾನೂರು ಹೈಯರ್ ಎಲಿಮೆಂಟರಿ ಶಾಲೆಯ ನೂತನ ಕಟ್ಟಡ ತೆರೆಯುವ ಮತ್ತು ವಾರಕ್ಕೆರಡಾವರ್ತಿಯ ಆಸ್ಪತ್ರೆ ತೆರೆಯುವ ಸಮಾರಂಭವು ಚೀಫ್ ಕಮಿಷನರಿಂದ ತಾ ೩೦-೫-೫೧ರಲ್ಲಿ ನಡೆಯುವದು.

ಶ್ರೀ ಕಕ್ಕೂರು ಭದ್ರಕಾಳಿ ದೇವರ ಹಬ್ಬವು ತಾ. ೨೧, ೨೨ ಮತ್ತು ೨೩ರಲ್ಲಿ ನಡೆಯುವವು.

ತಾರೀಕು ೮-೫-೫೧ರಲ್ಲಿ ಸೋಮವಾರಪೇಟೆಯಲ್ಲಿ ಶ್ರೀ ಜಗದ್ಗುರು ಶಾಂತಿವೀರ ದೇಶಿಕೇಂದ್ರ ಸಾರಂಗ ಸ್ವಾಮಿಗಳ ಮೆರವಣಿಗೆಯು ನಡೆಯಿತು. ಸ್ವಾಮಿಗಳು ಸೋಮವಾರಪೇಟೆ ನಿರಂಜನ ಮಠದಲ್ಲಿ ವಿಶ್ರಾಂತಿಗಾಗಿ ಇರುವರು.

ಲೋವರ್ ಸೆಕೆಂಡರಿ ಪರೀಕ್ಷಾ ಫಲಿತಾಂಶ.

ಕಳೆದ ಮಾರ್ಚ್ ತಿಂಗಳಲ್ಲಿ ನಡೆದ ಲೋವರ್ ಸೆಕೆಂಡರಿ ಪರೀಕ್ಷೆಯಲ್ಲಿ ಈ ಕೆಳಗಿನಂತೆ ವಿದ್ಯಾರ್ಥಿಗಳು ತೇರ್ಗಡೆಯಾಗಿರುವರು. ಸೆ.ಟ್ ಮೈಕೇಲ್ ಹೈಸ್ಕೂಲಿನಿಂದ ಪರೀಕ್ಷೆಗೆ ಕೂತ ೪೧ ವಿದ್ಯಾರ್ಥಿಗಳಲ್ಲಿ ೨೭, ಸೆಂಟ್ರಲ್ ಹೈಸ್ಕೂಲು ೧೧೧ರಲ್ಲಿ ೬೦, ಕಾನ್ವೆಂಟು ೩೦ರಲ್ಲಿ ೨೦, ವೀರಾಜಪೇಟೆ ಏನ್ಸ್ ಹೈಸ್ಕೂಲು ೫೧ರಲ್ಲಿ ೨೫, ಗವರ್ನಮೆಂಟ್ ಹೈಸ್ಕೂಲು ೯೮ರಲ್ಲಿ ೪೩, ಕೂಡ್ಲಿಪೇಟೆ ೨೫ರಲ್ಲಿ ೦, ಶನಿವಾರಸಂತೆ ೨೦ರಲ್ಲಿ ೧೦, ಸೋಮವಾರಪೇಟೆ ೫೩ರಲ್ಲಿ ೨೭, ಫ್ರೇಜರ್‌ಪೇಟೆ ೧೯ರಲ್ಲಿ ೧೨, ಹೆಬ್ಬಾಲೆ ೧೮ರಲ್ಲಿ ೬, ಸುಂಟಿಕೊಪ್ಪ ೨೮ರಲ್ಲಿ ೩, ಭಾಗಮಂಡಲ ೨೩ರಲ್ಲಿ ೧೧, ಬಿ. ಶೆಟ್ಟಿಗೇರಿ ೧೯ರಲ್ಲಿ ೧೧, ಕಾಕೋಟು ಪರಂಬು ೪೦ರಲ್ಲಿ ೧೪, ಪೊನ್ನಂಪೇಟೆ ೬೪ರಲ್ಲಿ ೩೦, [illegible] ೫೯ರಲ್ಲಿ ೧೬, ಪಾರಾಣೆ ೩೯ರಲ್ಲಿ ೧೨, ಟಿ. ಶೆಟ್ಟಿಗೇರಿ ೩೩ರಲ್ಲಿ ೭, ಕಕ್ಕಬೆ ೩೩ರಲ್ಲಿ ೧೧, ಕೊಟ್ಟೂರು ೩೬ರಲ್ಲಿ ೧೭, ಮೂರ್ನಾಡು ೪೯ರಲ್ಲಿ ೨೦, ಕೊಡ ೩೧ರಲ್ಲಿ ೨, ಕಲ್ತೋಡು ೬೨ರಲ್ಲಿ ೮, ಚೈಯಂಡಾಣೆ ೩೩ರಲ್ಲಿ ೮, ಬೇಗೂರು ೩೩ರಲ್ಲಿ ೧೫, ದೇವಣಗೇರಿ ೧೯ರಲ್ಲಿ ೩, ಕಾಕೂರು ೧೫ರಲ್ಲಿ ೩, ಅಮ್ಮತ್ತಿ ೫೨ರಲ್ಲಿ ೧೯, ಬಿರುನಾಣಿ ೨೨ರಲ್ಲಿ ೭, ಹಾತೂರು ೪೪ರಲ್ಲಿ ೧೮, ಮರಗೋಡು ೨೩ರಲ್ಲಿ ೧೦ ಮತ್ತು ನಾಪೋಕ್ಲು ೪೯ರಲ್ಲಿ ೨೯. ಕೊಡಗಿನಲ್ಲಿ ಒಟ್ಟಿಗೆ ಕೂತ ೧೨೩೯ ವಿದ್ಯಾರ್ಥಿಗಳಲ್ಲಿ ೪೯೯ ಜನರು ತೇರ್ಗಡೆಯಾಗಿರುವರು. ಶೇಕಡ ೪೦ ರಂತೆ ಫಲಿತಾಂಶವಾಯಿತು.

Situation Vacant

Manager required for Coorg Orange Growers Co-operative Society, Pollibetta, Coorg. Pay Rs. 150-5-200 E. B 10-250 plus D. A. of Rs. 45/-. Age over 30 Kannada speaking. Office and commercial experience necessary. Must be able to furnish personal surety for Rs. 5,000/-. Period of probation 1 year. Apply with copies of references to Orange Society, Pollibetta, Coorg.

WANTED.

15,000 c. ft. of Rosewood shipment logs and 15,000 c. ft. of matchwood, ~~immediately.~~

15,000 c ft. of Honne sq logs, Nandi, Mathi, and Junglewood - 5,000 c. ft. lately.

Hundred or above acres of Redeemed land/Timber of all kinds/near ~~metal~~ road side. For further perticulars please apply to-

C. G. Monnappa,
Timber merchant,
Ponnampet post,
South Coorg.

EAST & WEST INSURANCE CO., Ltd.

(ESTD: 1913)

H. O:- 'East & West Building', Apollo street Fort, Bombay No. 1.

STANDS FOR

SAFETY, SECURITY & SERVICE.

It is a progressive concern offering attractive schemes for Insurance suitable to all needs.

For Particulars apply to:-

K. P. JAMBULINGAM, *Branch Secretary, 329, Thambu Chetty St. Madras-1.*

OR

C. C. NANJAPPA, *Inspector of Agencies, Gonikopal. S. Coorg.*

ಓದುಗರ ಓಲೆಗಳು

ಯಾವುದು ನಿಜ?

ತಾ. ೧೬-೩-೫೧ ರಲ್ಲಿ ಇಂಡಿಯಾ ಪಾರ್ಲಿಮೆಂಟಿನಲ್ಲಿ ಚೀಫ್ ಕಮಿಷನರ್ ಪ್ರಾಂತಗಳಿಗೆ ಸುಧಾರಣೆಯ ವಿಚಾರ ಚರ್ಚಿಸಿದಾಗ್ಯೆ ಕೊಡಗಿನ ಪಾರ್ಲಿಮೆಂಟ್ ಮೆಂಬರಾದ ಶ್ರೀ ಪೂಣಚ್ಚನವರು ಮಾಡಿದ ಭಾಷಣದಿಂದ ಕೊಡಗನ್ನು ಕೂಡಲೇ ಮೈಸೂರು ಯಾ ಮದ್ರಾಸಿಗೆ ಸೇರಿಸಿಬಿಡಬೇಕೆಂಬ ಅಭಿಪ್ರಾಯವು ಎಲ್ಲರಿಗೂ ಮೂಡಿದಂತಾಗುವಂತಾಯಿತು ಎಂದು ಮಂತ್ರಿ ಗಾಡ್ಗಿಲ್ಲರು ಜವಾಬಿತ್ತರು. ಆದರೆ ಆ ರೀತಿ ಸಂಯೋಜನೆಯ ಭಾಷಣ ಮಾಡಿಲ್ಲವೆಂದೂ ಮಂತ್ರಿಯವರು ಆ ರೀತಿ ತಿಳಿದುಕೊಳ್ಳಲು ಕಾರಣವೇನೆಂದು ಗೊತ್ತಾಗುವದಿಲ್ಲವೆಂದು ಶ್ರೀ ಪೂಣಚ್ಚನವರು ಬಹಿರಂಗ ಪಡಿಸಿದರು. ಇವೆರಡು ಹೇಳಿಕೆಗಳನ್ನು ಓದಿದ ಬಡ ರೈತನಾದ ನನಗೆ ಯಾವುದು ನಿಜವೆಂಬುದನ್ನು ತಿಳಿಯಲು ಕಷ್ಟವಾಗಿದೆ. ಇವರಿಬ್ಬರೂ ಪಾರ್ಲಿಮೆಂಟಿನಲ್ಲಿ ಭಾಷಣಮಾಡಿದ ಜವಾಬ್ದಾರಿ ಮನುಷ್ಯರು. ಇವರಿಬ್ಬರ ಹೇಳಿಕೆಯಲ್ಲಿ ಯಾವುದನ್ನು ಜನತೆ ನಂಬಬೇಕಾಗಿದೆ ಎಂಬುದನ್ನು ಆಲೋಚಿಸುತ್ತಿದ್ದ ಸಮಯದಲ್ಲಿ ಮತ್ತೊಂದು ವಾರ್ತೆಯನ್ನು ಪತ್ರಿಕೆಯಲ್ಲಿ ನೋಡಿದೆನು. ಅದರ ಮೇರೆ—ಹೈದರಾಬಾದು, ಕೊಡಗು, ಬೊಂಬಾಯಿ ಮತ್ತು ಮದ್ರಾಸು ಪ್ರಾಂತ್ಯಗಳ ಪಾರ್ಲಿಮೆಂಟ್ ಪ್ರತಿನಿಧಿಗಳು ಕರ್ನಾಟಕ ಪ್ರಾಂತವನ್ನು ಕೂಡಲೇ ನಿರ್ಮಿಸಬೇಕೆಂದು ಶ್ರೀ ನಿಜಲಿಂಗಪ್ಪನವರ ಮುಂದಾಳ್ತನದಲ್ಲಿ ಯೂನಿಯನ್ ಪ್ರೆಸಿಡೆಂಟರಲ್ಲಿಗೆ ಹೋಗಿ ಮನವಿ ಪತ್ರ ಕೊಟ್ಟರೆಂದು ಪ್ರಕಟವಾಗಿತ್ತು. ಇದಕ್ಕೆ ಮೈಸೂರು ಪ್ರಾಂತದ ಪ್ರತಿನಿಧಿಗಳು ಸೇರಿರುವದಿಲ್ಲ. ಇದರಿಂದ ಮೈಸೂರಿನವರು ಕರ್ನಾಟಕ ಪ್ರಾಂತಕ್ಕೆ ಸೇರಲು ಇಷ್ಟಪಡುತ್ತಿಲ್ಲವೆಂಬುದು ಸ್ಪಷ್ಟವಾಗುತ್ತೆ. ಆದರೆ ನಾನು ಕೊಡಗಿನ ಸಂಯೋಜನೆ ವಿಚಾರವಾಗಿ ಪಾರ್ಲಿಮೆಂಟಿನಲ್ಲಿ ಭಾಷಣ ಮಾಡಲಿಲ್ಲವೆಂದೂ ದೇಶದ ಜನರ ಬಹುಮತದ ಅಭಿಪ್ರಾಯದಂತೆ ನಡೆಯಲು ಸಿದ್ಧನಿದ್ದೇನೆಂದೂ ಒತ್ತಿ ಹೇಳುತ್ತಿರುವ ಶ್ರೀ ಪೂಣಚ್ಚನವರು ಈ ಡೆಪ್ಯುಟೇಶನಿನೊಂದಿಗೆ ಸೇರಿ ಕರ್ನಾಟಕ ಪ್ರಾಂತ ರಚನೆಯಾಗಬೇಕೆಂದು ಪ್ರಯತ್ನಪಡಲು ಕಾರಣವೇನು? ಇದರಿಂದ ಶ್ರೀ ಪೂಣಚ್ಚನವರ ಉದ್ದೇಶ್ಯವು ವಿವರವಾಗಿ ಒಡೆದು ತೋರುತ್ತದೆ. ಬಾಯಿಯಲ್ಲಿ ಉಪ್ಪಿಟ್ಟುಕೊಂಡು ಸಪ್ಪೆ ಎಂದು ಹೇಳಿ ಜನರನ್ನು ಮರುಳುಮಾಡುವ ಆ ಕಾಲ ಕಳೆದು ಹೋಯಿತು. ಕೊಡಗಿನ ಭವಿಷ್ಯದ ವಿಚಾರ ತಾನು ಯಾವುದೊಂದೂ ಅಭಿಪ್ರಾಯವನ್ನು ವಯಕ್ತಿಕವಾಗಿ ಕೊಡುವದಿಲ್ಲವೆಂದು ಹೇಳುತ್ತಾ ಈ ವಿಚಾರದಲ್ಲಿ ಜನರ ಅಭಿಪ್ರಾಯ ತಿಳಿಯಲು ಯಾವುದೊಂದೂ ಪ್ರಯತ್ನಪಡದೆ ರಾಜ್ಯಘಟನಾ ಸಭೆಯಲ್ಲಿ ಮೂರು ವರ್ಷವೂ, ನಂತರ ಪಾರ್ಲಿಮೆಂಟಿನಲ್ಲಿ ಎರಡು ವರ್ಷವೂ ಕೊಡಗಿನ ಪ್ರತಿನಿಧಿಯಾಗಿ ಕುಳಿತ ಶ್ರೀ ಪೂಣಚ್ಚನವರ ಚಾತುರ್ಯಕ್ಕೆ ಏನೆನ್ನಬೇಕು? ಇದನ್ನು ಅರಿತುಕೊಳ್ಳಲು ಜನತೆಗೆ ಉತ್ತಮವಾದ ಅವಕಾಶವಾದರೆ ಬರುವ ಚುನಾವಣೆಯಾಗಿದೆ. ಪ್ರಾಯ ಪ್ರಬುದ್ಧರಾದವರಿಗೆ ಓಟಿನ ಹಕ್ಕು ದೊರೆತಿದ್ದರೂ ಕೊಡಗಿನ ಜನರು ಹೆಡ್ಡರಲ್ಲ; ದೇಶದ ಹಿತ ದೃಷ್ಟಿಯಿಂದ ತಮ್ಮ ಅಮೂಲ್ಯವಾದ ಮತವನ್ನು ಯೋಗ್ಯ ರೀತಿಯಲ್ಲಿ ಉಪಯೋಗಿಸುವರು ಎಂಬುದನು. ಜನರು ಸ್ಪಷ್ಟಪಡಿಸುವರಾಗಿ ನನ್ನ ನಂಬಿಕೆಯಾಗಿದೆ.

'ಕೊಡಗಿನವ'

ಕೊಡಗಿನ ಸರಿಗೆ ಎರಡು ಮಾತು

ಬಹುದಿನಗಳ ತರುವಾಯ ಬರೆಯುತ್ತಿದ್ದೇನೆ. ಕಳೆದ ವರ್ಷ ಸಾಧಾರಣ ಇದೇ ಅವಧಿಯಲ್ಲಿ ಬರೆದಿದ್ದೆ. ಅಲ್ಲಿಂದೀಚೆಗೆ ಯಾವ ಸುಧಾರಣೆಗಳೂ—ನಾನು ಬರೆದ ವಿಷಯದ ಕುರಿತು—ಆಗದ್ದರಿಂದ ಈಗ ಮತ್ತೊಮ್ಮೆ ಬರೆಯಬೇಕಾಗಿ ಬಂತು.

ಕೊಡಗು ಬಹು ಫಲವತ್ತಾದ ದೇಶ ಎಂದು ಎಷ್ಟೋ ಜನರು ಅಂದಿದ್ದಾರೆ. ಇರಬೇಕು ನ್ಯಾಯವಾಗಿ! ಹಣದಾಸೆಗಾಗಿ ಕೊಡಗಿನ ಎಷ್ಟೋ ರಮ್ಯ ಕಾಡುಗಳು ಬಲಿಯಾದವು. ಮರಗಳನ್ನು ಹೇರಿ ಹೇರಿ ಲಾರಿಗಳು ತೂತು ಬಿದ್ದವು; ಇಂದಿನ ಅವಸ್ಥೆಯಲ್ಲಿ ಇನ್ನೂ ಎಷ್ಟೋ ಬೀಳಲಿಕ್ಕಿವೆಯೆಂಬೇ ನನ್ನ ಭಾವನೆ.

ಹಲವು ವರ್ಷಗಳಿಂದೀಚೆಗೆ ಕೊಡಗಿನ ಮರಗಳು ಮಲಬಾರಿಗೂ ಮೈಸೂರಿಗೂ ಓಡುತ್ತಿವೆ. ಕೊಡಗಿನ ಅನೇಕರು ಅವುಗಳನ್ನು ಕಳುಹಿಸಿ ಧನಿಕರಾಗಿದ್ದಾರೆ; ಆಗುತ್ತಿದ್ದಾರೆ. ಇನ್ನನೇಕರು (ಹೆಚ್ಚಾಗಿ ಮಲಬಾರಿನವರು) ಇಲ್ಲಿ ಬಂದು ನೆಲಸಿದ್ದಾರೆ. ಕೊಡಗಿನ ಒಂದೊಂದೇ ತೊಲೆ ಮರವನ್ನು ಸಾಗಿಸುವಾಗ, ಅಲ್ಲಿಯ ಒಂದೊಂದೇ ಹನಿ ಮಳೆಯೂ ಸಾಗಿ ಹೋಗುತ್ತಿದೆ. ಇಂದು ನಮಗೆ ಇದರಿಂದಾಗುವ ಭೀಕರತೆಯು ಅರಿವಾಗಲಿಕ್ಕಿಲ್ಲ. ಆದರೆ, ಕ್ರಮೇಣ ವರ್ಷಗಳುರುಳಿದಂತೆ ನಾವದರ ಫಲವನ್ನು ಉಣ್ಣದೇ ಹೋಗಲಿಕ್ಕಿಲ್ಲ!

ಮರವ್ಯಾಪಾರಿಗಳು ಈ ಲೇಖನದಿಂದ ಕೋಪಗೊಳ್ಳಬಹುದು. ಬಡರೈತರ ಒಂದೊಂದು ಹನಿ ಕಣ್ಣೀರೂ ಅವರ ಹೃದಯವನ್ನು ಅಮ್ಲದಂತೆ ಸುಡುವಾಗ ಅವರಿಗದರರಿವಾದೀತು. ಮರ ವ್ಯಾಪಾರ ಬರೀ ಸ್ವಾರ್ಥಸಾಧನೆಗಾಗಿ! ಮರ ವ್ಯಾಪಾರದ ನಿಲ್ಲಿಸುವಿಕೆ ಕೊಡಗಿನ ಸಹಸ್ರಾರು ಬಡ ರೈತರ ಉದ್ಧಾರಕ್ಕಾಗಿ. 'ನೇಗಿಲ ಕುಲದೊಳಡಗಿದೆ ಕರ್ಮ, ನೇಗಿಲ ಮೇಲೆಯೆ ನಿಂತಿದೆ ಧರ್ಮ' ಎಂಬುದರ ನಗ್ನ ಸತ್ಯದರಿವಾಗಿದೆ ನನಗೀಗ. ಅಂಥಹ ನೇಗಿಲೇ ಉರುಳಿ ಹೋಗುವ ಕಾಲ ಕೊಡಗಿಗೆ ಬಂದೀತೆಂದು ಈಗ ಯಾರೂ ನೆನೆಯಲಿಕ್ಕಿಲ್ಲ. ಕಾಲ ಚಕ್ರದ ಉರುಳಿಲ್ಲಿ, ನಾವಿಂತು ವರ್ತಿಸುತ್ತಿದ್ದರೆ, ಅಂತಹ ಕಾಲ ಬಂದೇ ಬಂದೀತೆಂಬುದು ನಿರ್ವಿವಾದವಾಗಿದೆ. ನಾಳಿನ ಸ್ಥಿತಿಯನ್ನು ಇಂದೇ ಆಲೋಚಿಸಿ ಅದನ್ನು ಸ್ವಲ್ಪ ಮಟ್ಟಿಗಾದರೂ ಪರಿಹರಿಸಿಕೊಳ್ಳಬೇಕು. ನಾನೀಗ ಹೇಳುತ್ತಿರುವುದು ನಾಳೆಯೇ ಆಗತಕ್ಕ ಮಾತಲ್ಲ; ಭವಿಷ್ಯದ ಮಾತು ಹಲವು ವರ್ಷಗಳ ನಂತರದ ಮಾತು.

ಕೊಡಗಿನ ಬಡ ರೈತನನ್ನು ಈ ಮಹಾಘಾತದಿಂದ ಕಾಪಾಡಲು ಕೊಡಗು ಸರಕಾರಕ್ಕೆ ಸಾಧ್ಯವಿದೆ. ವರ್ಷಕ್ಕೆ ಇಂತಿಷ್ಟೇ ಮರ ಕೊಡಗಿನಿಂದ ಹೊರಗೆ ಹೋಗಬೇಕೆಂಬ ನಿಯಮವನ್ನಿಡುವುದು ಒಳ್ಳೆಯದು. ಇದರಿಂದಾಗಿ ಪರಿಸ್ಥಿತಿ ಸ್ವಲ್ಪ ಸುಧಾರಿಸಬಹುದು. ಸರಕಾರವಿರುವುದು ಜನತೆಗಾಗಿ; ಆದರಲ್ಲೂ ಬಡ ಜನತೆಗಾಗಿ. ಸರಕಾರಕ್ಕಾಗಿ ಜನತೆಯಲ್ಲ.

M. L. S.

ಕೊಡಗಿನ ಹರಿಜನರ ಸಂಕಟಗಳು.

ತಾ. ೮-೫-೫೧ ರಲ್ಲಿ ಶನಿವಾರಸಂತೆ ಬಿದುರೂರು ಹರಿಜನರ ಕೆ. ಬಸವಯ್ಯನು ತನ್ನ ಮಗನ ಮದುವೆಯನ್ನು ಕೂಡ್ಲೂರು ಗ್ರಾಮಕ್ಕೆ ಹೆಣ್ಣಿನ ಮನೆಗೆ ಕರೆದುಕೊಂಡು ಹೋದಾಗ ಸದರಿ ಬಸವಯ್ಯನು ಕುದುರೆ ಛತ್ರಿ ತರುತ್ತಾನೆಂದು, ಕೂಡ್ಲೂರ ಬಾಗಿಲಲ್ಲಿ, ಅಲ್ಲಿಯ ಮತ್ತು ಸುತ್ತುಮುತ್ತು ಗ್ರಾಮದ ಗೌಡಮಹನೀಯರು ಕೆ. ಬಸವಯ್ಯನ ಮದುವೆ ತಡೆದು, ಕುದುರೆ ಛತ್ರಿ ಕಿತ್ತು, ಹೊಡೆಯಲು ಕತ್ತಿದೊಣ್ಣೆ ಹಾಕಿಕೊಂಡು, ಆ ದಿನ ಇಡೀ ರಾತ್ರಿ ಕಾದಿದ್ದರು. ಆದರೆ ಕೆ. ಬಸವಯ್ಯನ ಅದೃಷ್ಟಕ್ಕೆ ಒಪ್ಪಿದ ಕುದುರೆ ಛತ್ರಿ ಆ ದಿನ ಸಿಕ್ಕದ ಕಾರಣ ಹಾಗೆಯೇ ಮದುವೆಯನ್ನು ಕರೆದುಕೊಂಡು ಹೋಗಿರುತ್ತಾರೆ. ಆಗ ಅಲ್ಲಿ ಕಾಯ್ದಿದ್ದ ಗೌಡಮಹನೀಯರು ಸದರಿ ಬಸವಯ್ಯನಲ್ಲಿ ನೀನು ಕುದುರೆ ಛತ್ರಿ ತಂದಿರುವುದಿಲ್ಲ. ನೀನು ಮಾತ್ರ ತಂದಿದ್ದರೆ ನಿಮ್ಮನ್ನು ಹೊಡೆದು ಹಾಕುತಿದ್ದೆವು. ಆದರೆ ಇನ್ನು ಮುಂದೆ ನೀವು ಕುದುರೆ ಛತ್ರಿ ಹಿಡಿಯಕೂಡದು ಎಂದು ಹೇಳಿ ಹೊರಟುಹೋದರಂತೆ.

ನಮ್ಮ ಮನೆಯಲ್ಲಿ ನಾವು ಮಾಡಿಕೊಳ್ಳುವ ಕಾರ್ಯಕ್ಕೂ ಉತ್ತಮ ವರ್ಗದವರ ಅಪ್ಪಣೆಯಾದರೆ ನಾವೇಕೆ ಅವರ ಮನೆಯ ಬಿಟ್ಟಿ ಕೆಲಸ ಮಾಡಬೇಕು? ಬಿಟ್ಟಿ ಕೆಲಸ ಮಾಡಲೇ ಬೇಕೆಂಬ ಕಾನೂನೇನಾದರೂ ಇದೆಯೋ? ನಾವುಗಳು ಇವರ ಮನೆಯ ಮದುವೆಯಾದರೆ ಆಯಾ ಗ್ರಾಮದ ಹರಿಜನರೆಲ್ಲರೂ ಸಂಬಳವಿಲ್ಲದೆ ೩-೪ ದಿನ ಬರೇ ಅನ್ನಕ್ಕೆ ಕೆಲಸ ಮಾಡಬೇಕು. ಸತ್ತರೆ ಬಿಟ್ಟಿ ಕೆಲಸ, ದನಕರು ಸತ್ತರೆ ನಾವೇ ಹೊರಬೇಕು. ಅಲ್ಲದೆ ಅದರ ಮದುವೆ ಮತ್ತು ಶುಭ ಕಾರ್ಯಗಳಲ್ಲಿ ನಾವು ವಾದ್ಯಮಾಡಿ, ಅವರ ಬೈಗಳ ಕೇಳಿಕೊಂಡು, ಅವರ ಮನಸಂತೋಷಪಡಿಸಬೇಕು. ಇಷ್ಟೆಲ್ಲ ಮಾಡಿದ ನಂತರವೂ ನಮ್ಮ ಪದ್ಧತಿಗಳಂತೆ ನಾವು ವರ್ತಿಸಲು ಆತಂಕ! ಇದಾವ ಸ್ವರಾಜ್ಯ. ಕೊಡಗಿನ ಹರಿಜನರ ಭಾಗ್ಯವೇ!

'ನೊಂದ ಹರಿಜನ'

ದೇವಸ್ಥಾನಗಳಿಗೆ ಹರಿಜನರ ಪ್ರವೇಶ

ಈ ಮೇಲಿನ ಶಿರೋನಾಮೆಯು ಹಲವರ ಶಿರವನ್ನು ತಿರುಗಿಸುತ್ತಲಿದೆ. ಅದೆಷ್ಟೊ ಸಮಯದಿಂದ ಈ ಕುರಿತಾದ ಟೀಕೆಗಳನ್ನೂ ಪ್ರತಿ ಟೀಕೆಗಳನ್ನೂ ಕೇಳಿ ಕೇಳಿ ಸಾಕಾಯಿತು. ಅದನ್ನೆ ಪುಷ್ಟೀಕರಿಸುವ ವಿಮರ್ಶೆಯಿದೊಂದು.

ಇದೇ ತಾ. ೯ ನೇ ಬುಧವಾರದ 'ಜನ್ಮಭೂಮಿ' ಪತ್ರಿಕೆಯಲ್ಲಿ 'ಕಣಿವೆ ದೇವಸ್ಥಾನಕ್ಕೆ ಹರಿಜನರ ಪ್ರವೇಶ' ಎಂಬ ಲೇಖನ ಓದಿದಾಗ ವಿಶೇಷ ಬೇಸರವಾಗಲಿ—ಆಶ್ಚರ್ಯವಾಗಲಿ ಆಗಲಿಲ್ಲ. ಯಾಕೆಂದರೆ ಜನರು ಅವರ ಕರ್ತವ್ಯ (?) ವನ್ನು ಮಾಡಿದ್ದಾರೆ. ಹಾಗೆ ಮಾಡುವುದೇ ಅವರ ಕರ್ತವ್ಯವೆಂದು ಅವರ ನಂಬಿಕೆ. 'ಗಾಂಧಿ' ಮತವನ್ನು ತ್ರಿಕರಣ ಪೂರ್ವಕವಾಗಿ ಅನುಮೋದಿಸುವ ಜನತೆಯ ತೀರ ವಿರಳತ್ವವೇ ಹಿಂದೂಸ್ಥಾನದ ಅವನತಿಗೆ ಕಾರಣವು. ಅನೇಕರು ಮಾತಿನಲ್ಲಿ ಗಾಂಧೀ ಹಿಂಬಾಲಕರು—ಅವರಲ್ಲಿ ನೂರಕ್ಕೆ ತೊಂಬತ್ತೊಂಬತ್ತು ಅಂತರ್ಯದಲ್ಲಿ ಸ್ವಾರ್ಥಪ್ರಿಯರು—ತ್ಯಾಗಗುಣ ಹೀನರು. ಸರ್ವಾಂತರ್ಯಾಮಿಯಾದ ಭಗವಂತನು ದೇವಸ್ಥಾನದೊಳಗೇನೆ ಬಂಧಿಸಲ್ಪಡಲಿಲ್ಲ—ಅವನನ್ನು ಜ್ಞಾನಿಯಾದವನಿಗೆ ಎಲ್ಲೂ ಕಾಣಬಹುದು. ಪರಿಸ್ಥಿತಿ ಹೀಗಿದ್ದರೂ ಪುರಜನರು ಹರಿಜನರನ್ನು ತಡೆಯುವುದು ಧರ್ಮವಾಗದು. ಏನೇ ಇದ್ದರೂ ದೇವಸ್ಥಾನಗಳಿಗೆ ನುಗ್ಗುವುದರಿಂದ ಪುರಜನರಿಗೆ ಕೇಡೂ ಹರಿಜನರಿಗೆ ಸರ್ವನಿಧಿಯೂ ಸಿಕ್ಕಿದಂತಾಗಲಾರದು. ನುಗ್ಗದಿರುವುದರಿಂದ ಪುರಜನರಿಗೆ ಕೀರ್ತಿಶ್ರೇಯಸ್ಸೂ ಹರಿಜನರಿಗೆ ಅವನತಿಯೂ ಬರಲಾರದು.

ದೇಶದ ಸಂಸ್ಕೃತಿಯೇ ಅದರ ಭದ್ರತೆಯು. ಭಾರತೀಯರೆಲ್ಲರೂ ಸಂಸ್ಕೃತರಾಗಬೇಕು. ಜಾತಿ ಭೇದಗಳಿಲ್ಲದೆ ನೀತಿ ಭೇದಗಳಿದ್ದು ಎಲ್ಲರಿಗೂ ಶಾಲಾಕಾಲೇಜುಗಳಿಗೆ ಪ್ರವೇಶದೊರೆಯುವಂತಾಗಬೇಕು. ಈ ದೇವಸ್ಥಾನಗಳೆಂಬ ವಿದ್ಯಾಜ್ಞಾನಗಳೆಂಬ ಪ್ರಸಾದವನ್ನು ಪಡೆಯಬೇಕು. ಸತ್ಯದೇವತೆಯ ಶಿಷ್ಯರಾಗಬೇಕು. ಶುಚಿತ್ವತೆಯ ಗೆಳೆಯರಾಗಬೇಕು. ಒಮ್ಮತವುಳ್ಳವರಾಗಬೇಕು. ಸರಿಯಾವುದು. ತಪ್ಪು ಯಾವುದು ಎಂದು ತಿಳಿಯುವ ದಿವ್ಯ ವಿವೇಚನಾಶಕ್ತಿ ಎಲ್ಲರಿಗೂ ಬರಬೇಕು. ಅಂದು ಹರಿಜನರ ಮಾತ್ರವಲ್ಲ ಜೀವಿತ ಮಾನವಕೋಟಿಯ ಉದ್ಧಾರವಾಗುವುದು. ಅಲ್ಲದೆ ವ್ಯರ್ಥ ನೂಕುನುಗ್ಗಾಟಗಳಿಂದ ಸಾರ್ಥಕ್ಯವಾಗಲಾರದು. ಒಂದೆರಡು 'ದೇವಸ್ಥಾನ ಪ್ರವೇಶ' ಸಂದರ್ಭದಲ್ಲಿ ನಾನೂ ಇದ್ದೆನು. ಅನೇಕ ಹರಿಜನರು ಅಳುತ್ತಿದ್ದರು. ಜನರಿಗೆ ಹೆದರಿಯಲ್ಲ—ಸಿಡಿಲಿನಂತಹ ಮಂತ್ರಪೂಜೆಗೂ ಅಕಲ್ಪಿತ ಮೂರ್ತಿಗೂ ಹೆದರಿ. ದೇವಾಲಯದ ಅಶುದ್ಧತೆಗೆ ಕಾರಣರಾದುದರಿಂದ 'ಅಮ್ಮ'ಗೆ ಸಿಟ್ಟಾಗುವುದೋ ಎಂದು. ಇಂತಹವರನ್ನು ದೇವಾಲಯದೊಳಗೆ ನುಗ್ಗಿಸಿಯೇನು? ನುಗ್ಗಿಸದೆಯೇನು? ದೇವನೆಲ್ಲಿ? ಭಕ್ತರೆಲ್ಲಿ?

'ರವಿಯುದಯ ಸೆ ನಿತೆಯೋದ ಮಳೆ' ಇದನ್ನೊಪ್ಪುವವರು—ಈ ಮೇಲಿನ ಅಭಿಪ್ರಾಯಕ್ಕೆ ಒಪ್ಪಬೇಕು. ಇಂದು ಕಣಿವೆಯಲ್ಲಿ ಒದೆದು ನೂಕಲ್ಪಟ್ಟ ಈ ತಿಕ್ಕಾಟವು ದೊಡ್ಡದಲ್ಲ. ಇಂತಹ ಬಿರುಕುಗಳು ಕೆಲವು ಕಾಲಗಳು ಕಳೆಯುವುದರೆ ಆಗೆ ಕೂಡಿಕೊಳ್ಳುತ್ತವೆ. ದೊಡ್ಡ ಬಿರುಕಿರುವ ಸ್ಥಳವೇ ಬೇರೆ. ಅಲ್ಲಲ್ಲಿ ಗಾಂಧೀವಾದದ ಕೊಲೆಯಾಗುತ್ತಿರುವುದರಿಂದ ಜನರೆಲ್ಲ ಹೀಗೆ ಗಲ್ಲಿಬ್ಬಿಸುತ್ತಿದ್ದಾರೆ. 'ಗೋಡ್ಸೆ'ಯು ಕೊಲೆಗಡುಕನಲ್ಲ—'ಸಹನಾಹೀನ'ನಷ್ಟೆ. ಆದರೆ ಅವನಿಗಿಂತ ದೊಡ್ಡ ಸಾವಿರಾರು ಗೋಡ್ಸೆಯರು ದಿನ ಒಂದಕ್ಕೆ ಶತಸಾವಿರ ಬಾರಿ ಗಾಂಧೀವಾದದ ಕೊಲೆ ಮಾಡುತ್ತಿದ್ದಾರೆ. ಬಾಪೂಜಿಯವರ ದಿವ್ಯ ನಾಮಕ್ಕೆ ಪರೋಕ್ಷವಾಗಿ ಕಳಂಕ ತರುತ್ತಿದ್ದಾರೆ. ಇಂದು ಜನತೆ ಎಚ್ಚತ್ತು ಆ ಕೊಲೆಯನ್ನು ಎದುರಿಸಬೇಕು. ತಡೆಗಟ್ಟಬೇಕು. ಅದು ಇಂದು ನಾಗರಿಕರ ಧ್ಯೇಯ.

ಒಂದೇ ತಾಯಿ ಮಕ್ಕಳು ಒಮ್ಮೆ (ಎಳವೆಯಲ್ಲಿ) ಕಾದಾಡಿಕೊಳ್ಳಬಹುದು.

ಏನೇ ಮಾಡಿಕೊಳ್ಳಬಹುದು. ಆದರೆ ಅರಿವುಳ್ಳವರಾದಾಗ ಅದನ್ನೆಲ್ಲ ಮರೆತು ಅನ್ಯೋನ್ಯವಾಗಿರುತ್ತಾರೆ. ಅಂತೆಯೇ ಕಣಿವೆಯು ಬಿಕ್ಕಟ್ಟು ಒಂದು ದಿನ ಒಕ್ಕಟ್ಟಿನಲ್ಲಿ ಲೀನವಾಗುವುದು. ಇಂದು ಪ್ರತಿಯೊಬ್ಬರೂ ತನ್ನನ್ನು ತಾವು ತಿದ್ದಿಕೊಳ್ಳಬೇಕು. ಇನ್ನೊಬ್ಬರಲ್ಲೇ ತಪ್ಪು ಹುಡುಕುತ್ತಾ ಇರುವುದು ಸುಲಭವಾದರೂ ಉಚಿತವಲ್ಲ.

ಜನಾರ್ದನ.

ಬೆಳೆ ಕಡಿಮೆ.

ಕೊಡಗಿನಲ್ಲಿ ಎಷ್ಟೋ ಕಡೆ 'ಬೆಳೆಕಡಿಮೆ' ಎಂಬ ಮಾತನ್ನು ನಾನು ಕೇಳಿದ್ದೇನೆ. ಕೊಡಗು ಈಗೀಗ ವ್ಯವಸಾಯದಲ್ಲಿ ಬಹು ಹಿಂದಕ್ಕೆ ಹೋಗುತ್ತಿದೆ. ಕಾರಣವೇನೆಂದರೆ, ಪಟ್ಟಣಗಳು ಉದ್ಧಾರವಾಗುತ್ತಿವೆ. ಹಳ್ಳಿಯ ಜನರನೇಕರು ನವೀನ ಪೋಷಾಕು ಧರಿಸಿ ಪಟ್ಟಣದಲ್ಲಿ ಮೆರೆಯಲು ಅಪೇಕ್ಷಿಸುತ್ತಿದ್ದಾರೆ. ಪಟ್ಟಣದ ಸುಖಜೀವನಕ್ಕೆ(?) ಬಲಿಯಾಗಿ ಹಳ್ಳಿಗೆ ಹೋಗದೇ ಇರುವವರೂ ಇದ್ದಾರೆ. ರೈತನ ಉತ್ಸಾಹ ಉಡುಗುತ್ತಾ ಬಂದಿದೆ. ಹಾಗಾಗಿ ಸರಿಯಾಗಿ ಗೊಬ್ಬರ ಹಾಕಲಾರನು. ಸರಿಯಾಗಿ ಉಳುಮೆ ಮಾಡಲಾರನು. ಹೀಗೆ ಉತ್ತು ಬಿತ್ತಿದ ನಂತರ ಆ ವರ್ಷ ಬೆಳೆ ಕಡಿಮೆಯಾದಾಗ ಆತ ಇನ್ನಷ್ಟು ನಿರುತ್ಸಾಹ ಪಡುತ್ತಾನೆ. ಬೆಳೆದದಕ್ಕೂ ಯೋಗ್ಯ ಬೆಲೆ ಇಲ್ಲ. ಒಂದನೆಯದಾಗಿ ಕೃಷಿ ಜೀವನದಲ್ಲಿ ವಿಶ್ವಾಸ ಕಡಿಮೆಯಾಗುತ್ತಿದೆ. ಪ್ರಕೃತಿ ಮಾತೆಯು ಮುನಿದಿದ್ದಾಳೆ. ಸರ್ಕಾರ ರೈತನನ್ನು ಕಡೆಗಣಿಸಿದೆ.

ರೈತರು ತಮ್ಮ ಜಡನಿದ್ರೆಯನ್ನು ಬಿಡಲಿ. ಪಟ್ಟಣದ ಬೆಡಗಿಗೆ ಮಾರುಹೋಗದಿರಲಿ. ವಿದ್ಯಾರ್ಥಿಗಳು — ಅವರು ನನ್ನ ಮೇಲೆ ಮುನಿಯದಿರಲಿ—ತಮ್ಮ ನಾಗರಿಕತೆಯನ್ನು ಕಿತ್ತೆಸೆದು ತಮ್ಮ ಸಂಘಟನೆಯನ್ನು ನಡೆಸಿ ಸಲಿಕೆ ಹಿಡಿಯಲಿ. ಕಷ್ಟಪಟ್ಟು ಕೆಲಸಮಾಡಿ ನಮ್ಮ ದೇಶದಲ್ಲಿ ಸುಭಿಕ್ಷವನ್ನು ತರುವುದು ನಮ್ಮೆಲ್ಲರ ಕರ್ತವ್ಯವಲ್ಲವೇ?

— ಸುಕ ಮೊರನ್

ವೀರಾಜಪೇಟೆ ಮುನ್ಸಿಪಾಲಿಟಿ ಪ್ರೆಸಿಡೆಂಟರಿಗೆ

ಎರಡು ಮೂರು ವರ್ಷಗಳ ಹಿಂದೆ ಕೋಟೆಬೆಟ್ಟ ಪಿತ ಜಾತ್ರೆ ಸಮಯದಲ್ಲಿ ಮುನ್ಸಿಪಲ ಹಾಲಿನಲ್ಲಿ ಪೋಲೀಸರಿಗೂ ಜನರಿಗೂ ತಿಕ್ಕಾಟವಾದದ್ದು ನಿಮಗೆ ನೆನಪಿದೆಯಷ್ಟೆ? ಆಗ ಮುನ್ಸಿಪಲ್ ಹಾಲಿನ ಎರಡು ಎರಡು ಸಿಮೆಂಟ್ ಕಂಬಗಳಲ್ಲಿ ಒಂದು ಉರುಳಿ ಬಿದ್ದುದನ್ನು, ನೀವು ಆ ವೇಳೆಯಲ್ಲಿ ಸ್ವತಃ ನೋಡಿರದಿದ್ದರೂ, ಈಗಲಾದರೂ ಅದು ಹಾಗೆ ಕಾಣುತ್ತಿಲ್ಲವಷ್ಟೆ? ಅಂದೊಮ್ಮೆ ಆಯಿತು ಆಗಿ ಹೋದ ಅನಾಹುತವನ್ನು ಅಳಿಸದೆ ಹಾಗೇ ಇರಬೇಕೆಂಬ ಅಭಿಪ್ರಾಯವೇ ನಿಮ್ಮದು? ಹೇಗೂ ಇರಲಿ. ಇನ್ನಾದರೂ ಅದನ್ನು ಸರಿಪಡಿಸಿ ವೀರರಾಜಪೇಟೆಯ ಮಾನವನ್ನುಳಿಸಿರಿ. ಕಂಡ ಕಂಡ ಜನರೆಲ್ಲಾ ಏನು ಆಡಿಕೊಳ್ಳುತ್ತಿದ್ದಾರೆ ಗೊತ್ತೇ? ಹಾಗೆಂದು ನೀವು 'ಎಲ್ಲರನ್ನೂ ಮೆಚ್ಚಿಸುವ' ಕೆಲಸ ಕೈಕೊಳ್ಳಬೇಕೆಂದಲ್ಲ; ಮುನ್ಸಿಪಲ್ ಹಾಲಿನ ಮರ್ಯಾದೆ ಉಳಿಯಲೆಂದು.

"ನಿಮ್ಮ ಪುರನಿವಾಸಿ"

ವೀರಾಜಪೇಟೆಯಲ್ಲಿ ಸಿಮೆಂಟು ಮಾರಾಟ

ವೀರಾಜಪೇಟೆಗೆ ತಾ ೩-೫-೧೯೫೧ರಿಂದ ಪ್ರತಿ ದಿನ ಎಡೆ ಬಿಡದೆ ಒಂದೆರಡು ಲಾರಿ ಸೀಮೆಂಟು ಎಸೋಸಿಯೆಟೆಡ್ ಸೀಮೆಂಟು ಕಂಪೆನಿಯವರ ಸಬ್ ಏಜಂಟರಾಗಿರುವ ಸಿ. ಪಿ. ಸಿ ಬಸ್ಸು ಆಫೀಸಿಗೆ ಬರುತ್ತಿದ್ದರೂ, ಸೀಮೆಂಟು ಅತ್ಯವಶ್ಯವಿರುವವರಿಗೆ ಸಿಕ್ಕುವುದು ಕಾಣುವುದಿಲ್ಲ. ಯಾವಾಗ ಹೋಗಿ ಸಿ. ಪಿ. ಸಿ. ಆಫೀಸಿನ ನೌಕರರನ್ನು ಕೇಳಿದರೂ ಸ್ಟಾಕ್ ಇಲ್ಲವೆಂಬ ಉತ್ತರ ದೊರೆಯುತ್ತದೆ. ಇನ್ನೂ ತರ್ಕಿಸಿ ಕೇಳಿದರೆ ಈಗ ತಾನೆ ಬಂತು, ಬಂದೊಡನೆ ತೀರಿ ಹೋಯಿತು. ಆದುದರಿಂದ ನಾಳೆ ಬನ್ನಿ, ಎಂಬ ಕಿವಿ ಮಾತು ಮಾತ್ರ ಕೇಳಿ ಬರುತ್ತದೆ. ನಾಳೆ ರಿಸರ್ವ್ ಮಾಡಬಹುದೇ ಎಂದು ಕೇಳಿದರೆ ಅದು ಸಾಧ್ಯವಿಲ್ಲವೆನ್ನುತ್ತಾರೆ. ಆದರೆ ಸಿ. ಪಿ. ಸಿ. ಆಫೀಸಿನಲ್ಲಿರುವ ನೌಕರರಿಗೆ ಬೇಕಾದವರಿಗೆ ಯಾವದೋ ಕಾರಣಗಳಿಂದ ಒಂದೊಂದು ಲಾರಿ ಸೀಮೆಂಟಿನ ವರೆಗೆ ಕೊಟ್ಟಿರುವ ನಮೂನೆ ಇದೆ. ಅಲ್ಲದೆ ಹೆಚ್ಚಾಗಿ ಸೀಮೆಂಟು ರಾತ್ರಿ ಬಂದು ಬೆಳಗಾಗುವುದರೊಳಗೆ ಮಾಯವಾಗುವ ಸಂಭವವೂ ಇದೆಯಂತೆ. ಹೇಗೂ ಸೀಮೆಂಟು ಮಾರಾಟಕ್ಕೆ ಯಾವ ಶಿಸ್ತೂ ಇರುವುದಿಲ್ಲ. ಸೀಮೆಂಟು ಇಂದಿನ ಕಾಲದಲ್ಲಿ ಆಹಾರ ವಸ್ತುವಿನಷ್ಟೆ ಅತ್ಯಾವಶ್ಯಕವಾದ ಪದಾರ್ಥವಾಗಿದೆ. ಇದನ್ನು ಮಾರಾಟ ಮಾಡುವಾಗ್ಗೆ ನ್ಯಾಯ ರೀತಿಯಲ್ಲಿ ಮಾರಾಟ ಮಾಡುವ ಅಭಿಲಾಷೆ ವೀರಾಜಪೇಟೆ ಸಿ. ಪಿ. ಸಿ. ಕಂಪೆನಿಯವರಿಗಿದ್ದರೆ, ಅವರು ಇಂದು ಸಹಕಾರ ಮಾರ್ಕೆಟಿಂಗ್ ಫೆಡರೇಶನ್‌ನವರು ಸಕ್ಕರೆ, ಜಿಂಕ್ ಶೀಟ್ ಮೊದಲಾದುದನ್ನು ಮಾರಾಟ ಮಾಡುವಾಗ್ಗೆ ಮೊದಲು ಕೊಂಡುಕೊಳ್ಳುವವರಿಂದ ಅಪ್ಲಿಕೇಶನ್ ತೆಗೆದುಕೊಂಡು ಆ ಮೇಲೆ ಅವರ ಅಪ್ಲಿಕೇಶನ್ ಬಂದ ತಾರೀಕನ್ನು ಮತ್ತು ಅವರ ಅವಶ್ಯಕತೆಯನ್ನು ವಿವೇಚಿಸಿ ಯೋಗ್ಯ ರೀತಿಯಲ್ಲಿ ಕೊಂಡುಕೊಳ್ಳುವವರಿಗೆ ತಿಳಿಸಿ ಮಾರಾಟ ಮಾಡುವಂತೆ ಇವರು ಸಹ ಮಾಡಬಹುದಿತ್ತು. ಆದರೆ ಯಾವದೋ ಕಾರಣಗಳಿಂದ ಸಿ. ಪಿ. ಸಿ. ಆಫೀಸಿನಲ್ಲಿ ಅವ್ಯವಸ್ಥೆಯ ರೀತಿಯಲ್ಲಿ ಸೀಮೆಂಟನ್ನು ಮಾರಾಟ ಮಾಡುವುದು ಶೋಚನೀಯವಾದುದು. ಆದುದರಿಂದ ದೇಶದ ಬಡಜನರ ಹಿತ ದೃಷ್ಟಿಯಿಂದ ಮೊನ್ನೆ ತಾನೆ ಮೈಸೂರು ಸರ್ಕಾರದವರು ಸೀಮೆಂಟು ನಿಯಂತ್ರಣವನ್ನು ಜಾರಿಗೆ ತಂದ ರೀತಿ ಕೊಡಗು ಸರ್ಕಾರದವರು ಈ ಸೀಮೆಂಟಿನ ಬೆಲೆಯ ಮತ್ತು ಮಾರಾಟದ ಮೇಲೆ ನಿಯಂತ್ರಣವನ್ನಿಟ್ಟು ದೇಶದಲ್ಲಿ ಸೀಮೆಂಟು ಅವಶ್ಯವಿರುವ ಎಲ್ಲಾ ಜನರಿಗೂ ಕಂಟ್ರೋಲು ಧಾರಣೆಗೆ ಸಿಕ್ಕುವಂತೆ ಮಾಡಿಸಿ ಕೊಡಬೇಕಾಗಿ ವಿನಂತಿ.

K. M. M.

ಕೊಡಗು ಪ್ರಾಂತೀಯ ಸಹಕಾರಿ, ಮಾರ್ಕೆಟಿಂಗ್, ಫೆಡರೇಷನ್ ಲಿಮಿಟೆಡ್., ವೀರಾಜಪೇಟೆ.

ನಮ್ಮಲ್ಲಿ ಕೋವಿಗಳು, ತೋಟೆಗಳು ಮತ್ತು ಎಲ್ಲಾ ತರಹದ ವ್ಯವಸಾಯದ ಉಪಕರಣಗಳು ದೊರೆಯುತ್ತವೆ.

1. 32 ಪಿಸ್ತೂಲುಗಳು (Pistols) ಕ್ರಯ ರೂ. 162 ರಿಂದ 245ರ ವರೆಗೆ.
2. 12ನೇ ನಂಬರಿನ ಒಂಟಿ ನಳಿಗೆಯ ಕೋವಿ ಕ್ರಯ ರೂ 320-0-0
3. 12ನೇ ನಂಬರಿನ ಜೋಡು ನಳಿಗೆಯ ಕೋವಿ (Webley & Scott)
4. 12ನೇ ನಂಬರಿನ ಜೋಡು ನಳಿಗೆಯ ಕೋವಿ (Spanish make)
5. .32 ಪಿಸ್ತೂಲ ಮತ್ತು ರಿವಾಲ್ವರುಗಳ ತೋಟೆಗಳೂ ಸಹ ದೊರೆಯುತ್ತವೆ.
6. ಕಾಫಿ ಮತ್ತು ಕಿತ್ತಳೆ ಗಿಡಗಳಿಗೆ ಸ್ಪ್ರೇ ಮಾಡುವ ಪಂಪುಗಳು (Spraying Pumps)
7. 1" 5/8" 1/2" 3/8" 1/4" ಕಬ್ಬಿಣದ ಸಲಾಕೆಗಳು

ಹೆಚ್ಚಿನ ವಿವರಗಳನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.
(ಅವಶ್ಯವಿರುವ ಕೋವಿಗಳಿಗೂ, ತೋಟೆಗಳಿಗೂ ಜಿಲ್ಲಾ ಮ್ಯಾಜಿಸ್ಟ್ರೇಟರಿಂದ ವಿಶೇಷ ಪರ್ಮಿಟು "Special permit" [illegible] ಬೇಕಾಗುವದು)

ಎಂ. ಎಸ್. ಸೋಮಯ್ಯ,
ಗೌರವ ಕಾರ್ಯದರ್ಶಿ.

52-34

ದಿ ಟ್ರಾಪಿಕಲ್

ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

ಮೇನೇಜಿಂಗ್ ಡೈರೆಕ್ಟರ್:-ಲಾಲ ಶಂಕರ್ ಲಾಲ್.
ಮುಖ್ಯ ಕಛೇರಿ:- ಹೊಸ ಡೆಲ್ಲಿ.

52-4 ಸ್ಥಾಪಿಸಿದ ಡೈರೆಕ್ಟರರು:

ಪಂಡಿತ ಮೋತಿಲಾಲ್ ನೆಹರು, ಎಸ್. ಶ್ರೀನಿವಾಸ ಅಯ್ಯಂಗಾರ್
ಹಕೀಮ್ ಅಜಮುಲಖಾನ್. ಡಾ|| ಎಂ. ಎ. ಅನ್ಸಾರಿ.

Transacts:--Life, Fire, Motor, and Marine.

ಯಂ. ಯು. ಅಚ್ಚಣ್ಣ, ಇನ್ಸ್‌ಪೆಕ್ಟರು, ಮಡಿಕೇರಿ, ಕೊಡಗು.
ಎಂ. ಎ. ಬೆಳ್ಯಪ್ಪ, ಬ್ರಾಂಚ್ ಸೆಕ್ರೆಟರಿ, ಹಂಪನಕಟ್ಟೆ, ಮಂಗಳೂರು.

ಕೊಡಗು ಪ್ರಾಂತೀಯ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ. [illegible]

ಅಧಿಕೃತ ಶೇರು ಭಂಡವಾಳ	ರೂ.	10,00,000.
ವಸೂಲಾದ ಶೇರು ಭಂಡವಾಳ	ರೂ.	1 99,400.
ರಿಸರ್ವ್ ನಿಧಿ	ರೂ.	69,000.
ಇತರ ನಿಧಿಗಳು	ರೂ.	36,000.

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನೂ ಕೈಕೊಳ್ಳಲಾಗುವುದು. ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದು. ಆದರೆ ಚಿನ್ನ, ಬೆಳ್ಳಿ ನಗಗಳ ಆಧಾರದ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ ಯಾ ಡ್ರಾಫ್ಟುಗಳ ಕಲೆಕ್ಷನ್ ಮಾಡಲ್ಪಡುವುದು. [illegible] ಇನ್ಶೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು [illegible]. ಹೆಚ್ಚಿನ ವಿವರಗಳನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಗೌ. ಕಾರ್ಯದರ್ಶಿ,
ಕೆ. ಪಿ. ಅಪ್ಪಯ್ಯ, M. L. C. ಪ್ರೆಸಿಡೆಂಟ್ ಮತ್ತು ಖಜಾಂಚಿ.

Edited Printed and Published by P. I. Bellappa at 'Kodagu' Press, Mercara, for 'Kodagu' Ltd.

ಇದು ತಿಳಿದವರು ಮಾಡುವ ಅಪರಾಧ.

ಭಾರತ ಪಾಕಿಸ್ಥಾನಗಳ ಪ್ರತಿಷ್ಠೆಯ ಚಳವಳಿಯಾದ ಕಾಶ್ಮೀರ ಸಂಬಂಧ ಈ ತನಕವೂ ಬಗೆಹರಿಯದೆ ಸಮಸ್ಯೆ ಇನ್ನಷ್ಟು ಕಠಿಣವಾಗುತ್ತ ಬಂದಿದೆ. ಸಂ. ರಾ. ಸಂಘವು ಸರಿಯಾದ ನ್ಯಾಯದಾನ ಮಾಡೀತೆಂದು ಭಾವಿಸಿದ್ದು ವ್ಯರ್ಥವೇ ಆಗಿದೆ. ಅಮೇರಿಕಾ ಹಾಗೂ ಬ್ರಿಟಿಷ್ ಪ್ರತಿನಿಧಿಗಳು ತಮ್ಮ ಜಾತೀಯ ಕುಬುದ್ಧಿಯ ಪ್ರದರ್ಶನವನ್ನು ಇಲ್ಲಿಯೂ ಮಾಡಿರುತ್ತಾರೆ. ಅಮೇರಿಕೆಯ ದುರಹಂಕಾರದ ಹಟಸಾಧನೆ ಜಗತ್ತಿಗೇ ಅಸಹ್ಯವಾಗಿರುವ ಸಂದರ್ಭದಲ್ಲಿ ಬ್ರಿಟನೂ ಅದರೊಂದಿಗೆ ಸೇರಿ ಆತ್ಮಹತ್ಯೆ ಮಾಡಿಕೊಳ್ಳುವ ಸ್ಥಿತಿಯನ್ನು ನಾವಿಂದು ಕಾಣುತ್ತಲಿದ್ದೇವೆ. ಲಾರ್ಡ್ ಮೌಂಟ್‌ಬ್ಯಾಟನ್ನರು ಗವರ್ನರ್ ಜನರಲ್ಲರಾಗಿರುವಾಗಲೇ ಕಾಶ್ಮೀರ ಯುದ್ಧ ನಡೆದು ಅದರಲ್ಲಿ ಪಾಕಿಸ್ಥಾನ ಪ್ರತ್ಯಕ್ಷ ಆಕ್ರಮಣ ನಡೆಸಿತೆಯೆಂಬುದನ್ನು ಅವರೂ ಅರಿತಿದ್ದಾರೆ. ಆ ಬಳಿಕ ಮಧ್ಯಸ್ಥಗಾರರಾಗಿ ಬಂದ ಡಿಕ್ಸನರು ಪಾಕಿಸ್ಥಾನ ಆಕ್ರಮಣ ರಾಷ್ಟ್ರವೆಂದು ಸಾರಿದ್ದಾರೆ. ಪಾಕಿಸ್ಥಾನದ ತಪ್ಪು, ಬೆಳದಿಂಗಳಷ್ಟು ಸತ್ಯವಾಗಿದ್ದರೂ ಅದನ್ನು ಮರೆಸಿ ಭಾರತಕ್ಕೆ ವಿರುದ್ಧವಾದ ಧೋರಣೆಯನ್ನು ಈ ಎರಡು ರಾಷ್ಟ್ರಗಳು ವಹಿಸಿದ್ದು ಶೋಚನೀಯ ಸಂಗತಿ. ಇಂಗ್ಲೆಂಡಿನ ಮುಖ್ಯ ಮಂತ್ರಿಗಳ ಸಭೆಯಲ್ಲಿ ಶ್ರೀ ಜವಾಹರಲಾಲರು ಕಾಶ್ಮೀರ ಪ್ರಕರಣದಲ್ಲಿ ಭಾರತದ ನಿಲುವೇನೆಂದು ಸ್ಪಷ್ಟೀಕರಿಸಿದ್ದಾರೆ. ತಿಳಿಗಿಯು ರಾ. ಸಂಘದಲ್ಲಿ ಭಾರತದ ಪ್ರತಿನಿಧಿ ತನ್ನ ಅಭಿಪ್ರಾಯವನ್ನು ಸ್ಪಷ್ಟೀಕರಿಸಿ ಆಂಗ್ಲೋ ಅಮೇರಿಕಾನರ ಗೊತ್ತುವಳಿಯನ್ನು ನಿರಾಕರಿಸಿದ್ದಾರೆ. ಭಾರತವು ಸಂ. ರಾ. ಸಂಘದ ಮಾರ್ಚ್ ತಿಂಗಳ ಗೊತ್ತುವಳಿಯನ್ನು ಸಂಪೂರ್ಣ ವಿರೋಧಿಸಿದರೂ ಪಾಕಿಸ್ಥಾನದ ಪ್ರೀತ್ಯರ್ಥವಾಗಿಯೂ, ಅಮೇರಿಕಾ ಬ್ರಿಟನ್‌ಗಳ ಭಾರತವು ಕಮ್ಯೂನಿಷ್ಟ ಪಕ್ಷ ಪಾತಿಯಾಗಿ ವರ್ತಿಸಿದ್ದರ ಸೇಡು ತೀರಿಸಿಕೊಳ್ಳುವದಕ್ಕಾಗಿಯೂ ಭಾರತದ ನಿರಾಕರಣೆಯನ್ನು ಕಡೆಗಣಿಸಿ ಪಾಕಿಸ್ಥಾನಕ್ಕನುಕೂಲವಾಗುವಂತೆ ಏಕಪಕ್ಷೀಯವಾಗಿ ವರ್ತಿಸಿವೆ. ಅಂತಲೇ ಫ್ರಾಂಕ್ ಗ್ರಾಹಮರು ಮಧ್ಯಸ್ಥಗಾರರಾಗಿ ನೇಮಕಗೊಂಡಿದ್ದಾರೆ, ಭಾರತ ಸರಕಾರವು ಈ ಮಧ್ಯಸ್ಥಗಾರನಿಗೆ ತನ್ನ ಸಹಕಾರವನ್ನು ನೀಡುವಂತಿಲ್ಲ. ನಿಶ್ಶಸ್ತ್ರೀಕರಣವು ಆತನ ಮೊದಲ ಕರ್ತವ್ಯವಾಗಿದ್ದರೆ ಭದ್ರತೆಯ ಹಲವು ಕಾರಣದ ಮೇಲೆ ಭಾರತವು ಅದರ ವಿರುದ್ಧವಾಗಿದೆ. ತೋರಿಕೆಯ ಮಟ್ಟಿಗೆ ಸಾರ್ವಜನಿಕ ಮತಗಣನೆಯಿಂದ ಕಾಶ್ಮೀರವು ಯಾವ ರಾಷ್ಟ್ರಕ್ಕೆ ಸೇರತಕ್ಕದ್ದೆಂಬುದನ್ನು ಅಲ್ಲಿಯ ಜನತೆಯಿಂದಲೇ ತೀರ್ಮಾನಿಸುವುದು ಮಧ್ಯಸ್ಥಗಾರನ ಮುಖ್ಯ ಕರ್ತವ್ಯವೆಂದು ಹೇಳಲಾಗಿದೆ. ಕಾಶ್ಮೀರೀ ಜನಾಂಗಗಳ ಪ್ರಜೆಗಳು ಈಗಾಗಲೇ ಈ ಮಧ್ಯಸ್ಥಗಾರನನ್ನು ಬಹಿಷ್ಕರಿಸಬೇಕು. ತಪ್ಪು ನಿಶಾನೆಯನ್ನು ಹಿಡಿದು ಹಿಂದೋಗುವಂತೆ ಆಗಬೇಕು – ಯಾವುದೇ ರೀತಿಯ ಸಹಕಾರ ಇಲ್ಲವೆ ಸತ್ಕಾರಗಳನ್ನು ನೀಡಬಾರದೆಂದು ನಿಶ್ಚಯಿಸಿದ್ದಾರೆ. ಭಾರತವೂ ಆತನೊಡನೆ ಸಹಕರಿಸುವ ಲಕ್ಷಣವನ್ನು ತೋರಿಸದೇ ಇರುವಾಗ ಪಾಕಿಸ್ಥಾನದ ಒಪ್ಪಿಗೆಯೊಂದರಿಂದಲೇ ಆತನು ಏನು ಸಾಧಿಸಿಯಾನೆಂಬುದು ಸ್ವಾರಸ್ಯದ ವಿಚಾರವಾಗಿದೆ.

ಕಾಶ್ಮೀರವನ್ನು ಏನಕೇನ ಪ್ರಕಾರೇಣ ಪಾಕಿಸ್ಥಾನಕ್ಕೆ ಸೇರಿಸಿಬಿಡಬೇಕೆಂದು ಜಾತೀಯವಾದಿ ಮುಸಲ್ಮಾನರು ಈಗಾಗಲೇ ನಾನಾ ರೀತಿಯ ಅಪಪ್ರಚಾರ ನಡೆಸಿದ್ದಾರೆ. ಕರಾಚಿಯಲ್ಲಿ ಇತ್ತೀಚಿಗೆ ತಲೆಯೆತ್ತಿರುವ 'ಹಿಂದೂಸ್ಥಾನ ಹಮಾರಾ' ಪಕ್ಷವು ಪಾಕಿಸ್ಥಾನದ ಮುಸಲ್ಮಾನರನ್ನು ಮಾತ್ರವಲ್ಲದೆ ಭಾರತದ ಮುಸಲ್ಮಾನರನ್ನು ಕೆರಳಿಸಿ ಭಾರತದ ವಿರುದ್ಧ ಏಳುವ ಹಾಗೆ ಪ್ರೇರೇಪಿಸಿದೆ. 'ಭಾರತದಲ್ಲಿಯ ಅಲ್ಪ ಸಂಖ್ಯಾತರಾದ ಮುಸಲ್ಮಾನರ ಪರಿಸ್ಥಿತಿಯು ಚಿಂತಾಜನಕವಾಗಿದೆ. ಅಲ್ಲಿಯ ಹಿಂದೂ ಮಹಾ ಸಭೆಯವರು ಮುಸಲ್ಮಾನರನ್ನು ಹಿಂದುಗಳನ್ನಾಗಿ ಮಾಡುವುದೇ ತಮ್ಮ ಉದ್ದೇಶವೆಂದು ಸಾರಿದ್ದನ್ನು ಭಾರತ ಸರಕಾರ ಸಹಿಸಿಕೊಂಡಿದೆ. ಇಂತಹ ಜಾತೀಯವಾದಿಗಳಿಗೆ ಪ್ರೋತ್ಸಾಹನೀಡಿದಂತಾಗಿದೆ. ಮುಸಲ್ಮಾನರ ಪರಿಸ್ಥಿತಿ ದೇಶಸ್ವತಂತ್ರವಾಗಿದ್ದರೂ ಬ್ರಿಟಿಶರ ಕಾಲಕ್ಕಿಂತಲೂ ಭಯಭೀತವಾಗಿರುತ್ತದೆ. ಆದುದರಿಂದ ವಿಚಾರ ವಿನಿಮಯದಿಂದಾಗಲೀ ಇಂತಹ ಪ್ರಮಾದಗಳನ್ನು ತಡೆಗಟ್ಟುವುದು 'ಹಿಂದೂಸ್ಥಾನ ಹಮಾರಾ'ದ ಮುಖ್ಯ ಕರ್ತವ್ಯವಾಗಿರುತ್ತದೆ. ಅದು ಸಾಧ್ಯವಾಗದೇ ಹೋದರೆ ಕೊನೆಗೆ ಶಸ್ತ್ರದಿಂದಲಾದರೂ ನಮ್ಮ ಹಕ್ಕು ಬಾಧ್ಯತೆಗಳನ್ನು ಕಾಯ್ದುಕೊಳ್ಳಬೇಕು' ಈ ರೀತಿಯ ಘೋಷಣೆಯೊಂದನ್ನು 'ಹಿಂದೂಸ್ಥಾನ ಹಮಾರಾ' ಸಂಘವು ಕರಾಚಿಯಿಂದ ಮೊನ್ನೆ ಸಾರಿತು. ಪಾಕಿಸ್ಥಾನದಲ್ಲಿ ಕೂಡ ಹಿಂದೂಸ್ಥಾನ ನಮ್ಮದೆನ್ನುವ ಹೆಸರನ್ನು ಇಟ್ಟುಕೊಂಡು ಮುಂದಕ್ಕೆ ಹಿಂದೂಸ್ಥಾನ ನಮಗೆ ಸಿಗಲೇಬೇಕೆಂದು ಈ ಜಾತೀಯವಾದಿಗಳು ಹೋರಾಟ ನಡೆಸಿದರೂ ನಡೆಸಬಹುದು. ನೆಹ್ರೂ ಲಿಯಾಖತ್ ಒಪ್ಪಂದಕ್ಕೂ ಈ ರೀತಿಯ ಅಸಂಬದ್ಧ ಪ್ರಲಾಪಕ್ಕೂ ಏನರ್ಥ? ಉಭಯ ರಾಷ್ಟ್ರಗಳೂ ಪರಸ್ಪರ ತಪ್ಪು ತಿಳುವಳಿಕೆಯನ್ನು ಕಿತ್ತೊಗೆದು ಸೋದರತ್ವದಿಂದ ಬಾಳಬೇಕೆಂದು ಹಾರೈಸಿದ್ದು ಹಾರೈಸಿದ್ದೇ. ಕ್ಷೋಭಕಾರಕ ಪ್ರಚಾರವನ್ನು ವಿರೋಧ ಅಭಿಪ್ರಾಯಗಳನ್ನು ವ್ಯಕ್ತಮಾಡಬಾರದೆಂದು ಸೂಚಿಸಿದ್ದು ಸೂಚಿಸಿದ್ದೇ. ಆದರೆ ಇಂದು ಪಾಕಿಸ್ಥಾನಿಗಳೇ ಇನ್ನೊಂದು ಪ್ರಮಾದಕ್ಕೆ ಮೂಲಪೀಠಿಕೆ ಹಾಕುತ್ತಲಿದ್ದಾರೆ. 'ಹಿಂದೂಸ್ಥಾನ ಹಮಾರಾ' 'ಆಜಾದ್ ಕಾಶ್ಮೀರ' ಮುಂತಾದ ಮುಸಲ್ಮಾನ ಜಾತೀಯ ಹಾಗೂ ಸ್ವಧರ್ಮೀಯ ಸಂಸ್ಥೆಗಳು ಕ್ರಾಂತಿಯ ಮೂಲಕ ಅರಾಜಕತೆಯನ್ನುಂಟು ಮಾಡುವ ಕಾರ್ಯಕ್ಕೆ ತೊಡಗಿವೆ. ಸದ್ಯಕ್ಕೆ ಪಾಕಿಸ್ಥಾನದ ಮುಖ್ಯ ಗುರಿ ಕಾಶ್ಮೀರವನ್ನು ಯಾವ ಪ್ರಯತ್ನದಿಂದಲಾದರೂ ಪಡೆಯಬೇಕೆಂಬುದೇ. ಪಾಕಿಸ್ಥಾನದ ರಾಜಕೀಯ ಸೂತ್ರಗಳೆಲ್ಲ ಅದನ್ನವಲಂಬಿಸಿಕೊಂಡೇ ಇರುತ್ತದೆ. ಸಾರ್ವಜನಿಕ ಚುನಾವಣೆಯ ಪ್ರಚಾರದಲ್ಲಿ ಕಾಶ್ಮೀರವೇ ಮುಖ್ಯ ಪ್ರಚಾರ ಸಾಧನವಾಗಿದೆ ಅಂತಲೇ ಎಲ್ಲ ಮುಸ್ಲಿಮರನ್ನು ಕೆರಳಿಸಿ ಕಾಶ್ಮೀರವನ್ನು ಪಡೆದೇ ತೀರಬೇಕೆಂಬ ಪಿತೂರಿಯನ್ನು ಹೂಡಿಕೊಂಡಿರುವ ಹಾಗಿದೆ.

'ಹಿಂದೂಸ್ತಾನ ಹಮಾರಾ' ಘೋಷಣೆಯನ್ನು ಅ. ಭಾ. ಮುಸ್ಲಿಮ ಪರಿಷತ್ತು ಸಂಪೂರ್ಣ ಅಲ್ಲಗಳೆದು ಭಾರತದಲ್ಲಿ ಮುಸ್ಲಿಮರು ಸುರಕ್ಷಿತವಾಗಿ ಜೀವನ ನಡೆಸುತ್ತಿದ್ದಾರೆ. ನೆಹ್ರೂರವರ ಧುರೀಣತ್ವದಲ್ಲಿ ಭಾರತೀಯ ಮುಸಲ್ಮಾನರಿಗೆ ಯಾವುದೇ ರೀತಿಯ ತೊಂದರೆಗಳಿರುವುದಿಲ್ಲ. ಭಾರತದಲ್ಲಿ ನಾವೆಲ್ಲ ಒಳ್ಳೆಯ ನಿಷ್ಠೆಯನ್ನು ಪ್ರದರ್ಶಿಸಿ, ಅದರ ಅಸ್ತಿವಾರದ ಸಲುವಾಗಿ ಕೊನೆಯತನಕವೂ ಹೋರಾಟ ನಡೆಸಲು ನಾವು ಸಿದ್ಧರಿದ್ದೇವೆಂದು ತನ್ನ ಎಚ್ಚರಿಕೆಯನ್ನು ಅನಿಷ್ಟಕಾರಕ ಅಪಪ್ರಚಾರಗಳನ್ನು ಕೈಗೊಂಡ ಪಾಕಿಸ್ತಾನಿಗಳಿಗೆ ಉತ್ತರಿಸಿದೆ. ಕಾಶ್ಮೀರದ ಪ್ರಶ್ನೆಯು ಪಾಶ್ಚಿಮಾತ್ಯ ರಾಷ್ಟ್ರಗಳ ಆದೇಶದಂತೆ ಬಗೆಹರಿಯದು. ಅದನ್ನು ಪರಿಹರಿಸುವಲ್ಲಿ ಜವಾಹರಲಾಲರೂ, ಲಿಯಾಖತ್ ಅಲೀಖಾನರೂ ಸಮರ್ಥರಿದ್ದಾರೆ. ಅವರೇ ಅದನ್ನು ಪರಿಹರಿಸಲಿ ಎಂದು ಅ. ಭಾ. ಮುಸ್ಲಿಮ ಪರಿಷತ್ತು ಅಭಿಪ್ರಾಯಪಟ್ಟಿದೆ.

ಇತ್ತ ಅ. ಭಾ. ಕಾಂಗ್ರೆಸ್ ಸಮಿತಿಯು ಕಾಶ್ಮೀರ ಪ್ರಕರಣದ ಕುರಿತು ಒಂದು ಗೊತ್ತುವಳಿಯನ್ನು ಮಾಡಿಯದೆ. ಆಂಗ್ಲೋ ಅಮೇರಿಕಾನರ ಗೊತ್ತುವಳಿಯನ್ನು ನಿರಾಕರಿಸಿ ಸಂ. ರಾ. ಸಂಘವು ನೇಮಿಸಿದ ಮಧ್ಯಸ್ಥಗಾರನೊಡನೆ ಸಹಕರಿಸತಕ್ಕದ್ದಲ್ಲ. ಭಾರತ ಸರಕಾರದ ನಕಾರಾತ್ಮಕ ಉತ್ತರವೂ ನಿಲುವೆಯೂ ಸ. ರಾ. ಸಂಘಕ್ಕೆ ಸರಿಯಾದ ಪ್ರತಿಕ್ರಿಯೆಂದು ಅಭಿಪ್ರಾಯವನ್ನು ವ್ಯಕ್ತಪಡಿಸಿ ಈ ಸಮಸ್ಯೆ ಸೌಹಾರ್ದದಿಂದ ಬಗೆಹರಿಯಲೆಂದು ಆಶಿಸಿದೆ.

ಅಂತೂ ಕಾಶ್ಮೀರವು ಅತ್ಯಂತ ಕುತೂಹಲದಾಯಿ ಪ್ರಕರಣ. ದ. ಕೋರಿಯ್ಯದ ಪ್ರಕರಣವು ಹೇಗೆ ಪ್ರಬಲ ರಾಷ್ಟ್ರಗಳ ಮುಯ್ಯಿಗೆ ಮುಯ್ಯಿ ತೀರಿಸಿಕೊಳ್ಳುವ ರಂಗವಾಯಿತೋ ಕಾಶ್ಮೀರವೂ ಅದೇ ಮಾದರಿಯ ರಂಗವಾಗಬಹುದೋ ಎನ್ನುವ ಶಂಕೆ ಮೂಡುತ್ತಲಿದೆ. ಅ. ಭಾ. ಮುಸ್ಲಿಮ ಪರಿಷತ್ತಿನ ಅಧ್ಯಕ್ಷರೆಂದ ಹಾಗೆ ಈ ಸಮಸ್ಯೆಯನ್ನು ಉಭಯ ರಾಷ್ಟ್ರಗಳ ಮುಖ್ಯ ಮಂತ್ರಿಗಳಿಗೆ ಬಿಟ್ಟುಕೊಡುವುದು ಒಳ್ಳೆಯ ಮುತ್ಸದ್ದಿತನದ ಕಾರ್ಯವೆಂಬುದು ಸಹಜವೇ. ಏಕೆಂದರೆ ಪರರ ಮಾರ್ಗದರ್ಶನದಲ್ಲಿ ಉಭಯ ರಾಷ್ಟ್ರಗಳಿಗೂ ಸುಖವಿಲ್ಲ. ಈಗ ಪಾಕಿಸ್ತಾನವನ್ನು ಎತ್ತಿ ಹಿಡಿದು ತಮ್ಮ ಸ್ವಾರ್ಥವನ್ನು ಸಾಧಿಸಿಕೊಳ್ಳುವ ಹಂಚಿಕೆಯನ್ನು ಆಂಗ್ಲೋ ಅಮೇರಿಕಾನರು ಮಾಡಿರುತ್ತಾರೆ. ಅವರ ಹಂಚಿಕೆಯು ಪಾಕಿಸ್ತಾನಕ್ಕೆ ಸಂಪೂರ್ಣ ಅನುಕೂಲ ಪರಿಸ್ಥಿತಿಯನ್ನು ಒದಗಿಸಿ ಕೊಡುವದರಿಂದ ಪಾಕಿಸ್ತಾನವು ವಿಶೇಷ ಆಸ್ಥೆ ವಹಿಸಿದೆ; ಮಾತ್ರವಲ್ಲ ಪಾಕಿಸ್ತಾನದ ಪಾಲಿಗೆ ಇದು ಒಳ್ಳೆಯ ಸಂಸಂಧಿ! ಆದರೆ ಸಪಕ್ಷದ ಮಧ್ಯಸ್ತಗಾರನ ನೇಮಕದಿಂದ ಯಾವ ಸಮಸ್ಯೆಯೂ ಬಗೆಹರಿಯಲಾರದು. ಭಾರತದ ಅಭಿಪ್ರಾಯವನ್ನು ಕಡೆಗಣಿಸಿ ಏಕಪಕ್ಷೀಯವಾಗಿ ತಮ್ಮ ಕಾರ್ಯವನ್ನು ಮುಂದೆ ಸಾಗಿಸಿದ ಸಂ. ರಾ. ಸಂಘದ ಕಾರ್ಯ ತೀರ ಅನುಚಿತ ಮಾತ್ರವಲ್ಲ ಖಂಡನೀಯ. ಈ ರೀತಿಯ ನಿರಂಕುಶ ಪ್ರಭುತ್ವದಿಂದ ಸಂ. ರಾ. ಸಂಘವು ದಿನದಿಂದ ದಿನಕ್ಕೆ ನೈತಿಕ ಮಟ್ಟವನ್ನು ಕಳೆದುಕೊಂಡು ಅದೋಗತಿಗಿಳಿಯುತ್ತಿದೆ. ಶಕ್ತ ಪಾತಕನ ಆಂಗ್ಲೋ ಅಮೇರಿಕಾನರ ಹುಟ್ಟುಗುಣ; ಆ ಧರ್ಮವನ್ನು ಇಲ್ಲಿಯೂ ಚೆನ್ನಾಗಿ ಪ್ರದರ್ಶಿಸಿದರು. ಆಂಗ್ಲೋ ಅಮೇರಿಕಾನರ ಓಲವನ್ನಷ್ಟೆ ಸಾಧಿಸುವ ಸಂ. ರಾ. ಸಂಘವು ದಿನದಿಂದ ದಿನಕ್ಕೆ ತನ್ನ ಆತ್ಮಿಕ ಶಕ್ತಿಯನ್ನು ಕಳೆದುಕೊಂಡು ನಿವೀರ್ಯವಾಗುತ್ತಲಿದೆ. ಜಗತ್ತಿಗೇ ನ್ಯಾಯದಾನ ಮಾಡುವ ಮಹಾ ಸಂಸ್ಥೆಯೊಂದು ಇಂತಹ ಮೋಹಕ್ಕೆ ಬಿದ್ದು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದು ದುಃಖದ ಸಂಗತಿ. ಕೊರಿಯದ ಪ್ರಕರಣವನ್ನರಿತುಕೊಂಡ ಮೇಲೂ ತಿರುಗಿ ಕಾಶ್ಮೀರವನ್ನು ದ್ವಿತೀಯ ಕೊರಿಯವನ್ನಾಗಿ ನಿರ್ಮಿಸಲೆತ್ನಿಸಿದ್ದು ವಿಘಾತಕ ಕಾರ್ಯ. ಇದು ತಿಳಿದವರು ಮಾಡುವ ಮಹಾಪರಾಧ! 'ನವಯುಗ'

ಮಾರಾಟಕ್ಕಿದೆ.

ಸೋಮವಾರಪೇಟೆ ನಾಡು ಗರಗಂದೂರು ಗ್ರಾಮದಲ್ಲಿ, ಸರಕಾರ ರಸ್ತೆ 17 ನೇ ಮೈಲು ಕಲ್ಲಿನಿಂದ 3 ಫರ್ಲಾಂಗು ದೂರದಲ್ಲಿರುವ ನೀರಾವರಿ 1150 ಬಟ್ಟಿ ಭೂಮಿ, ಕಾರೋಲು ಬಾರಿಪಟ್ಟೆ ಹಾಕಿ, ಹಂಚು ಹಾಕಿದ ಮನೆ, ಫಸಲಿಗೆ ಬರಲಿಕ್ಕಾದ 6 ಎಕ್ರೆ ಕಿತ್ತಳೆ ತೋಟ, 3 ಎಕ್ರೆ ಜಾಗ ವಗೈರೆ ಮಾರಾಟಕ್ಕಿದೆ. ಸದರಿ ಆಸ್ತಿಯು ತುಂಬಾ ವಿಸ್ತೀರ್ಣವಿರುವ ಪೈಸಾರಿ ಜಾಗಕ್ಕೆ ತಗಲಿಕೊಂಡಿದೆ. ಅಲ್ಲದೆ ಮಾದಾಪುರ ಟವುನಿನ್ನಲ್ಲಿರುವ ತಿಂಗಳಿಗೆ ರೂ. 50/-ಬಾಡಿಗೆ ಬರುವ ದೊಡ್ಡ ಮನೆಯೂ ಮಾರಾಟಕ್ಕಿದೆ. ಕ್ರಯ ರೂ. 45 ಸಾವಿರ ಅಥವಾ ಅದಕ್ಕಿಂತ ಹೆಚ್ಚಿಗೆ ಕೊಡುವವರು, ಈ ಕೆಳಗಿನ ವಿಳಾಸಕ್ಕೆ ಪತ್ರ ಬರೆಯಬಹುದು.

N. K. GANAPAYA,
Madapur post,
4-2 N. Coorg.

ತಿಳಿಸಿರಿ.

ಭೂಮಿ, ತೋಟ, ಜಾಗ ಪೇಟೆಯಲ್ಲಿ ಮನೆ ಅಥವ ಮನೆ ಸೈಟು ಮಾರಲಿರುವವರು ಮತ್ತು ಕೊಂಡುಕೊಳ್ಳಲಿಚ್ಛಿಸುವವರು ಈ ಕೆಳಗಿನ ಪತ್ತೆಯಲ್ಲಿ ವಿಚಾರಿಸಿರಿ. ಅಲ್ಲದೆ ಬೇಕಾದವರಿಗೆ ಕರೆಯುವ ಎಮ್ಮೆ, ಹಸು ಮತ್ತು ಉಳುವ ಎತ್ತು ಮತ್ತು ಕೋಣಗಳನ್ನು ಒದಗಿಸಿ ಕೊಡಲಾಗುವುದು. ಬೇಕಿರುವವರು ತಮಗೆ ಬೇಕಾದ ತಾರೀಕಿನ ಎಂಟು ದಿನಗಳಿಗೆ ಮುಂಚೆ ತಿಳಿಸಬೇಕಾಗಿದೆ. ವಿವರಗಳಿಗೆ ಈ ಪತ್ತೆಗೆ ಬರೆಯಬಹುದು.

P. A. N. & SONS,
Commission Agent,
Gonicoppal
26-15 S. Coorg.

ಚರಖಾ ಸಿದ್ಧಾಂತ ಶಾಂತಿಗೆ ದಾರಿ.

(೧ನೇ ಪುಟದಿಂದ ಸಾಗಿದ್ದು)

ರ್ಪಾಡಿನಿಂದ ಅತಿ ಖರ್ಚಿನ ದೆಹಲೀ ನೌಕರಶಾಹೀ ಸಹಾಯದ ಆವಶ್ಯಕತೆಯೇ ನಮಗೆ ಇಲ್ಲವೆಂದು ತಿಳಿಸಲು ನಾವು ಸುಸಂಘಟಿತರಾಗಬೇಕು. ಈ ಬೆಳವಣಿಗೆಗಾಗಿಯೇ ಆದರ್ಶ ಸ್ವಯಂ ಸೇವಕರು ಬೇಕೆಂದು ಗಾಂಧೀಜಿ ಆಶಿಸಿದ್ದು.

ಬ್ರಿಟಿಷರು ತಮ್ಮ ವರ್ಗದ ಅಂದರೆ ಶೋಷಣಾ ವರ್ಗದ ಅಥವಾ ಶ್ರೀಮಂತ ಕೋಟಿ ವರ್ಗದ ತಯಾರಿಕಾ ಕಾರ್ಖಾನೆಗಳನ್ನು ರಚಿಸಿದರು. ಈ ಕಾರ್ಖಾನೆಗಳಲ್ಲಿ ಮಜೂರಿ ವರ್ಗದ ಬೆಕ್ಕಿನ ಮರಿಗಳು ಸೇರಿದರು. ೬-೮ ವರ್ಷಗಳಲ್ಲಿ ಬೆಕ್ಕಿನ ಮರಿಗಳು ಕೋತಿಗಳಾಗಿಯೇ ಹೊರಗೆ ಬರುತ್ತಿವೆ! ಇಂಗ್ಲಿಷರ ವಿಶ್ವವಿದ್ಯಾನಿಲಯ ಹೈಸ್ಕೂಲುಗಳೇ ಈ ಶೋಷಣಾ ವರ್ಗಸೃಷ್ಟಿಯ ಕಾರ್ಖಾನೆಗಳು. ಇವನ್ನು ಬಹಿಷ್ಕರಿಸಲು ಗಾಂಧೀಜಿ ಮೂವತ್ತು ವರ್ಷಗಳ ಹಿಂದೆ ಸಾರಿದರು. ಇನ್ನಾದರೂ ಮುಂದಿನ ಪೀಳಿಗೆಯು ಶ್ರಮಜೀವೀ ವರ್ಗವಾಗಲು ದೇಶ ವಾರ್ಧಾ ಶಿಕ್ಷಣ ಕ್ರಮ ಅನುಸರಿಸಲಿ.

ತನ್ನನ್ನು ಉಳಿಸಿಕೊಂಡು ಅನ್ಯರಿಗಾಗಿ ಉಪದೇಶ ಮಾಡುವ ಚಟ!

ಪ್ರಕೃತಿಯು ಇಂದು ವರ್ಣರಹಿತ, ವರ್ಗರಹಿತ ಸಮಾಜ ಸೃಷ್ಟಿಯನ್ನು ಮಾಡುತ್ತಿರುವದನ್ನು ಎಲ್ಲ ಪಕ್ಷ, ಪಂಗಡಗಳೂ ಕಾಣುತ್ತಿವೆ. ಹಿಂದೂ ಮಹಾಸಭೆಯು ಬ್ರಾಹ್ಮಣ ಆತನ ಪಾಡಿಗಿರಲಿ, ಶೂದ್ರ ಅವನ ಪಾಡಿಗೆ ಉಳಿದು ವರ್ಣರಹಿತ ರಾಜ್ಯವಾಗಲೆನ್ನುವುದು; ಕಾಂಗ್ರೆಸ್ ಸರ್ಕಾರವಾದರೋ ಅಧಿಕಾರದ ಘನತೆ, ಗೌರವದ ಸಲುವಾಗಿ ಮಂತ್ರಿ ವರ್ಗಕ್ಕೆ, ಹಿರಿಯ ಅಧಿಕಾರಿ ವರ್ಗಕ್ಕೆ ಉಪ್ಪರಿಗೆಯ ಸೌಧಗಳು ಆಗತ್ಯವೆಂದು ಸಾರುತ್ತಾ ಇತರರಿಗೆ ವರ್ಗರಹಿತ ತತ್ವೋಪದೇಶ ಮಾಡುತ್ತಿದೆ. ಈ ರೀತಿ ತಮ್ಮನ್ನು ಉಳಿಸಿಕೊಂಡು ಅನ್ಯರಿಗಾಗಿ ಉಪದೇಶ ಮಾಡುವ ಚಟ ಎಲ್ಲರನ್ನೂ ಆವರಿಸಿದೆ

ಪ್ರಕೃತಿ ಪರಿವರ್ತನೆ ಬಯಸಿದೆ. ಇದು ಯಾವ ರೀತಿಯಿಂದ ಆಗಬೇಕು. ಒಂದು ರಷ್ಯಾದಲ್ಲಿ ಜರುಗಿದಂತೆ ರಕ್ತಕ್ರಾಂತಿಯ ರಸ್ತೆ, ಎರಡನೆಯದು ಗಾಂಧೀಜೀ ಮಾರ್ಗ. ಶ್ರಮಜೀವಿಗಳ ಆರ್ಥಿಕ ಸ್ಥಿತಿಯು ವಿಕೇಂದ್ರೀಕರಣ ಹಾಗೂ ಸ್ವಾವಲಂಬನದ ಖಾದೀ ತತ್ವದ ಮೂಲಕ ವ್ಯವಸ್ಥೆಗೊಳ್ಳಬೇಕು. ಮೊದಲಿನದು ಪ್ರತೀಕಾರಕ ರಕ್ತಕ್ರಾಂತಿ ಮಾರ್ಗ. ಎರಡನೆಯದು ಖಾದಿ ತತ್ವದಂತೆ ಸ್ವಾವಲಂಬಿಯಾಗುವುದು ಮತ್ತು ಗ್ರಾಮ ಗ್ರಾಮಗಳಲ್ಲಿ ಪಂಚಾಯಿತಿ ರಾಜ್ಯ ಏರ್ಪಡಿಸಿ ದುಂದು ಸರ್ಕಾರೀ ವೆಚ್ಚದ ಆಡಳಿತ ಆವಶ್ಯಕತೆಯನ್ನು ನಿರಾಕರಿಸುವ ಮಾರ್ಗ. ಮೊದಲಿನದು ವಿಜ್ಞಾನ ಬದ್ಧವಾದುದಲ್ಲ. ಅದೇ ರೀತಿ ಧರ್ಮದ ಆಧಾರದ ಮೇಲೂ ನಿಂತಿಲ್ಲ.

ವಿಜ್ಞಾನವು ಯಾವ ವಸ್ತುವೂ ನಾಶವಾಗುವುದಿಲ್ಲೆಂದು ಸಾರಿದೆ. ಇಂದು ಆಕ್ರೋಧದಿಂದ ತಲೆ ಕತ್ತರಿಸಿದರೆ, ಮತ್ತೆ ಆ ಜೀವಿಯು ಪುನರ್ ಜನ್ಮವೆತ್ತಿ ಪ್ರತೀಕಾರ ತೀರಿಸಿಕೊಳ್ಳುವನು. ಈ ರೀತಿ ಪ್ರತೀಕಾರಕ್ಕೆ ಪ್ರತಿ ಪ್ರತೀಕಾರ ಪರಂಪರೆಯು ನಡೆದು ದುಃಖ ಜೀವನವು ನಿರಂತರವಾಗುವುದು.

ರಾಜಪತಿ ಹೋಗಿ ದಳಪತಿ ಬಂದ ಹಾಗೆ!

ರಷ್ಯಾದಲ್ಲಿ ರಾಜ್ಯಪತಿ ವರ್ಗದ ತಲೆಯು ಕಡಿಸಲ್ಪಟ್ಟಿತು. ಈಗ ಕಡಿಯಲ್ಪಟ್ಟ ಆತ್ಮಗಳು ದಳಪತಿ ಸ್ವರೂಪದಲ್ಲಿ ಸರ್ವಾಧಿಕಾರತ್ವ ಜರುಗಿಸುತ್ತಿವೆ ಹಿಂದೆ ಅಲ್ಲಿ ಅರಚಲಾದರೂ ಸ್ವತಂತ್ರವಿದ್ದಿತು, ಇಂದು ಅಲ್ಲಿ ಅದೂ ಇಲ್ಲ. ಆದುದರಿಂದ ಬೆಕ್ಕುಗಳ ವರ್ಗವು (ಮಜೂರ ವರ್ಗವು) ಕೋತಿವರ್ಗವನ್ನು (ನೌಕರೀ ವರ್ಗ—ಮತ್ತು ಕಮಿಷನ್ ವ್ಯಾಪಾರೀ ವರ್ಗವನ್ನೂ) ಶಕ್ತಿಯಿಂದ ನಾಶ ಮಾಡಲು ಹೋಗದೆ ಗಾಂಧೀಜಿ ಬೋಧಿಸಿದಂತೆ ಸ್ವದೇಶಿ ರಾಜ್ಯ ತರಲು ಉಪದೇಶಿಸಿದ ಅಹಿಂಸಾತ್ಮಕ ಮಾರ್ಗವನ್ನೇ ಸ್ವರಾಜ್ಯ ಸ್ಥಾಪನೆಗೂ ಉಪಯೋಗಿಸಬೇಕಾಗಿದೆ. ಕೋತಿ ವರ್ಗ, ನೌಕರ ವರ್ಗ ಮತ್ತು ಕಮಿಷನ್ ವ್ಯಾಪಾರಿ ವರ್ಗವು ಕಾಲಸ್ಥಿತಿ ಅರಿತು ತಮಗೆ ಆಧಾರಿಗಳಾಗಿರುವ ಬೆಕ್ಕಿನ ವರ್ಗವನ್ನು (ಮಜೂರ ವರ್ಗವನ್ನು) ಅನುಸರಿಸಿ ತಾವೂ ಯಥಾಶಕ್ತಿ ಉತ್ಪಾದನಾ ಕಾರ್ಯದಲ್ಲಿ ತೊಡಗಬೇಕು.

ಈ ಹಾದಿ ಬಿಟ್ಟು (ಶ್ರಮಜೀವಿಗಳಾದ) ಬೆಕ್ಕುಗಳು (ಹುಜೂರು ವರ್ಗವಾದ) ಕೋತಿ ವರ್ಗಗಳನ್ನು ಹಿಂಸಾ ರೀತಿಯಿಂದ ನಾಶಪಡಿಸಲು ಹೊರಟು, ಕೋತಿ ವರ್ಗದ ವಂಶ ಇಲ್ಲದಂತೆ ಬಹು ಕಷ್ಟದಿಂದ ಮಾಡಬಹುದು. ಈ ಹೋರಾಟದಲ್ಲಿ ಬೆಕ್ಕುಗಳು ತಮ್ಮ ಶ್ರಮದ ಆಹಾರ ಹಂಚಿಕೊಳ್ಳುವ ಕಲೆಯನ್ನು ಕಲಿಯಲಾಗದೆ ಹಿಂದೆ ತಕ್ಕಡಿ ಹಿಡಿದ ಕೋತಿಯನ್ನು ಕರೆತಂದಂತೆ, ಕೋತಿಗೆ ಬದಲು ಮತ್ತೆ ಕರಡಿಯನ್ನು (ರಷ್ಯವನ್ನು) ಕರೆತರ ಬೇಕಾದೀತು.

ಹುಜೂರು ವರ್ಗಕ್ಕೆ ಎಚ್ಚರಿಕೆ.

ಶ್ರಮಜೀವಿಗಳ ಸೇವಕರು ಕಾವೇದರಿತ, ಅನರಂತ ತಾವೂ ಯಥಾಶಕ್ತಿ ಉತ್ಪಾದನೆ ಮಾಡಲು ನೌಕರ ವರ್ಗ ಮತ್ತು ಕಮಿಷನ್ ವ್ಯಾಪಾರಿ ವರ್ಗವು ವರ್ತಿಸಬೇಕು. ತಮ್ಮ ಚಂದ ಜೀವನದ ಹೊಳಪಿನ ಬಟ್ಟೆಯು ಮಾಸಲು ಬಂಸಿನ್ದರಾಗಬೇಕು. ಹೀಗಾಗದಿದ್ದಲ್ಲಿ ಸಹ ಈ ಹುಜೂರು ವರ್ಗದ ಬಟ್ಟೆಗಳು ಮಲಿನವಾಗುವುದೂ ಉಂಟು. ಮಣ್ಣಿನ ಶ್ರಮಜೀವದಿಂದಲ್ಲ; ಹಿಂಸಾಯುತ ಕೊಲೆಯು ಹರಿವ ರಕ್ತದಿಂದ

ಆದುದರಿಂದ ಭಾರತದಲ್ಲಿ ಗಾಂಧೀಜಿ ಕಲ್ಪನೆಯ ಗ್ರಾಮ ಸ್ವರಾಜ್ಯವನ್ನು ನೆಲೆಗೊಳಿಸಲು ಏಳು ಲಕ್ಷ ತ್ಯಾಗ ಜೀವನದ ಸ್ವಯಂ ಸೇವಕರು ಮುಂದೆ ಬರಬೇಕು.

'ಕಾಯಿನಾಡು'

ಕಸ್ತೂರಬಾ ಮತ್ತು ಮಹಾತ್ಮಾ ಗಾಂಧಿ ನಿಧಿಗಳು.

(೩ನೇ ಪುಟದಿಂದ ಸಾಗಿದ್ದು)

ನ್ನು ಸ್ಮಾರಕದ ಮಹತ್ವದ ಕಾರ್ಯರಂಗವಾಗಿ ಮಾಡಿಕೊಳ್ಳಬೇಕೆಂದು ನಿಧಿಯು ನಿರ್ಧರಿಸಿದೆ. ಕುಷ್ಟರೋಗ ಚಿಕಿತ್ಸಾ ಮಂಡಲದಿಂದ ಪ್ರಾಸ್ತಾವಿಕ ಕಾರ್ಯ ಆಗಲೇ ಪ್ರಾರಂಭವಾಗಿದೆ.

ನಾವೂನ್ಯ ತೊಂದರೆಗಳು

ಗಾಂಧೀಜಿ ಭಾವಿಸಿದ ರೀತಿಯ ರಚನಾತ್ಮಕ ಕಾರ್ಯವನ್ನು ಕೈಕೊಳ್ಳುವುದಕ್ಕೆ ಸಾಕಷ್ಟು ಕಾರ್ಯಕರ್ತರನ್ನು ಕಲೆಹಾಕುವುದೇ ನಿಧಿಗೆ ಒಂದು ಸಮಸ್ಯೆಯಾಗಿದೆಯೆಂಬುದನ್ನು ಸಾರ್ವಜನಿಕರು ಗಮನಿಸಬೇಕು. ಇಂಥ ಅಖಿಲ ಭಾರತ ಸ್ವರೂಪದ ಕಾರ್ಯಗಳಿಗೆ ಪ್ರಾಸ್ತಾವಿಕ ವಿಚಾರಣೆಯೂ ಯೋಜನೆಯೂ ಅವಶ್ಯವಾಗಿವೆ. ಇಲ್ಲದಿದ್ದರೆ ಹಣವು ಅಪವ್ಯಯ ಅಥವ ಕೇವಲ ದೈನಂದಿನ ಕಾರ್ಯದಲ್ಲಿ ವೆಚ್ಚವಾಗಿ ಹೋಗುವುದು. ಗಾಂಧೀಜಿಯ ಕಲ್ಪನೆಗಳಿಗನುಸಾರವಾಗಿ ತನಗೆ ಸಾಧ್ಯವಿದ್ದಷ್ಟು ಕೆಲಸ ಮಾಡುವುದು ನಿಧಿಯ ಕರ್ತವ್ಯ. ಕಸ್ತೂರಬಾ ನಿಧಿಯ ವಿಷಯದಲ್ಲಿ ಕೂಡ ಗಾಂಧೀಜಿಯ ಜೀವಮಾನದಲ್ಲಿಯೇ, ಅವರು ಹಣದ ಗಂಟು ಕಟ್ಟುವುದಿಲ್ಲವೆಂದೂ ಅವರೇನೂ ಮಾಡುತ್ತಿಲ್ಲೆಂದೂ ಆರೋಪಿಸಲಾಗಿತ್ತು. ಗಾಂಧೀಜಿಯು ಪ್ರತ್ಯಕ್ಷ ನಿರ್ದೇಶನದ ಕೆಳಗೆ ಪ್ರಾಸ್ತಾವಿಕ ಕಾರ್ಯವಾಗುತ್ತಿದೆಯೆಂಬುದನ್ನು ಟೀಕಾಕಾರರು ಮರೆತಿದ್ದರು. ಅಂಥ ಆರೋಪಗಳು ಬಂದಾಗ ಗಾಂಧೀಜಿ ನಕ್ಕು ನುಡಿಯುತ್ತಿದ್ದರು. 'ಹಣದ ಗಂಟು ಬಿಚ್ಚಬೇಕೋ ಬಿಡಬೇಕೋ ಎಂದು ನಿರ್ಣಯಿಸಬೇಕಾದವನು ನಾನು. ಅದನ್ನು ಸಾಧ್ಯವಿದ್ದಷ್ಟು ಸತ್ಕಾರ್ಯದಲ್ಲಿ ತೊಡಗಿಸಬೇಕೆಂದಿದ್ದೇನೆ. ಸಿಕ್ಕಾಬಟ್ಟೆ ವೆಚ್ಚ ಮಾಡಲಾರೆ.' ಗಾಂಧೀಜಿಯಷ್ಟು ಅಧಿಕಾರವಾಣಿಯಿಂದ ಅದೇ ಮಾತನ್ನು ಹೇಳಲು ಧೈರ್ಯ ನಮ್ಮದಲ್ಲ. ಆದರೆ ಗಾಂಧೀಜಿ ತೋರಿಸಿದ ರೀತಿಯಲ್ಲಿ ಸಾಗಲು ನಾವು ಶಕ್ತಿಮೀರಿ ಪ್ರಯತ್ನಿಸುತ್ತಿದ್ದೇವೆಂದು ಹೇಳಿಕೊಂಡರೆ ತಪ್ಪಾಗದು. ವಿಲಂಬಕ್ಕೆ ಇದೇ ಕಾರಣ ಎಂದು ಪ್ರತಿಯೊಬ್ಬ ಪ್ರಾಮಾಣಿಕ ಜಿಜ್ಞಾಸುವಿಗೂ ಸಮಾಧಾನವಾಗಬೇಕು ನಾವು ಯಶಸ್ವಿಗಳಾಗುವೆವೋ ಇಲ್ಲವೋ ಹೇಳಬರುವುದಿಲ್ಲ, ಆದರೆ ನಾವು ರಚಿಸುವುದೆಲ್ಲ ಗಾಂಧೀ ತತ್ವಗಳ ದೃಢವಾದ ತಳಹದಿಯ ಮೇಲೆ ರಚಿಸಲ್ಪಡುವಂತೆ ಸರ್ವ ಪ್ರಯತ್ನ ಮಾಡುವೆವು

ಪ್ರಚಾರ

ನಿಧಿಯ ಕಾರ್ಯ ರಚನಾತ್ಮಕವಾಗಿದ್ದು ಹೆಚ್ಚಾಗಿ ಹಳ್ಳಿಯಲ್ಲೇ ನಡೆಯುವುದರಿಂದ ನಗರಗಳಲ್ಲಿರುವ ಪತ್ರಿಕೆಗಳಲ್ಲಿ ಅದಕ್ಕೆ ತಕ್ಕಷ್ಟು ಪ್ರಚಾರ ಸಿಗಲಾರದು. ಅಲ್ಲದೆ ಈ ಕಾರ್ಯದಲ್ಲಿ ರಾಜಕಾರಣಕ್ಕಿರುವ ಆಕರ್ಷಣೆಯಿಲ್ಲ. ಪತ್ರಿಕೆಗಳು ಈ ನಿಧಿಗಳ ಕಾರ್ಯಕ್ಕೆ ವಿಶೇಷ ಪ್ರಸಿದ್ಧಿ ಕೊಡದಿರಲು ಇದೂ ಒಂದು ಕಾರಣ. ನಾವು ವಿಶೇಷವಾಗಿ ಪ್ರಸಿದ್ಧಿಯನ್ನು ಪ್ರಾರ್ಥಿಸಿಯೂ ಇಲ್ಲವೆಂದು ಒಪ್ಪಿಕೊಳ್ಳುವೆವು. ಕಟ್ಟಕಡೆಗೆ ಸಾಧಿಸಿದ ಕಾರ್ಯವೇ ಅದಕ್ಕೆ ಸಾಕ್ಷಿಯಾಗುವುದೆಂದು ನಂಬಿದ್ದೇವೆ. ಈಗಾಗಲೆ ಕಸ್ತೂರಬಾ ನಿಧಿಯ ಕಾರ್ಯವನ್ನು ಕಂಡವರೆಲ್ಲರೂ ಅದನ್ನು ಪ್ರಶಂಸಿಸಿದ್ದಾರೆಂದು ಹೇಳಲು ಸಂತೋಷಪಡಬೇಕಾಗುತ್ತದೆ.

ಜಿಜ್ಞಾಸುಗಳಿಗೆ ಬೇಕೆನಿಸುವ ವಿವರಗಳನ್ನು ಪೂರೈಸಲಿಕ್ಕೂ ಸೂಚನೆಗಳನ್ನು ಆದರದಿಂದ ಸ್ವೀಕರಿಸಲಿಕ್ಕೂ ಈ ನಿಧಿಗಳು ಯಾವಾಗಲೂ ಸಿದ್ಧವಾಗಿವೆ.

— ಜಿ. ವಿ. ಮಾವಲಂಕರ.

ಪ್ರಕಟಣೆ.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವುದೇನೆಂದರೆ:—

ಪೊನ್ನಂಪೇಟೆನಾಡು ತರುವತೆಂಶ್ಲ ಗ್ರಾಮದಲ್ಲಿರುವ ಗಿರಿಗೌಡನ ಮನೆ ನಂಜಪ್ಪನವರ ಮಗ ವೆಂಕಟಪ್ಪನವರು ಅಂದಾಜು 350 ಬಟ್ಟಿ ಭೂಮಿ, ಬಾಣೆ ಸೇರಿದ ಜಾಗ ಮತ್ತು ತಿಕ್ಕೆ ಕೋಟೆ ಸ್ವಾಧೀನವತ್ತು ಅನುಭವದಲ್ಲಿರುತ್ತಾರೆ. ಸದರಿ ಆಸ್ತಿಗಳ ಪಿತ್ರಾರ್ಜಿತವ ಆಸ್ತಿಗಳಾಗಿರುತ್ತವೆ. ಸದರಿ ವೆಂಕಟಪ್ಪನವರಿಗೆ 3 ಗಂಡು ಮಕ್ಕಳ, 3 ಹೆಣ್ಣು ಮಕ್ಕಳ, ಇಬ್ಬರ ಹೆಂಡಿರು, ಮತ್ತು ತಾಯಿ ಇರುತ್ತಾರೆ. ಇವರಿಗೂ ಸದರಿ ಆಸ್ತಿಗಳಲ್ಲಿ ಹಕ್ಕಿದೆ. ಸದರಿ ವೆಂಕಟಪ್ಪನವರು ಕುಡಿತದವರಾಗಿಯೂ, ಇತರ ದುರ್ವ್ಯಸನಿಗಳಾಗಿ ತುಂಬಾ ಸಾಲ ಮಾಡಿರುತ್ತಾರೆ; ಮಾಡುತ್ತಲೂ ಇದ್ದಾರೆ ಈ ಸಾಲಗಳ ದೆಸೆಯಿಂದಲೂ, ಇನ್ನೂ ಸದರಿ ಕೆಟ್ಟ ಉದ್ದೇಶಗಳಿಗಾಗಿ ಹಣ ಪಡೆಯುವ ಉದ್ದೇಶಕ್ಕಾಗಿಯೂ ಸದರಿ ಆಸ್ತಿಗಳನ್ನು ಗಿರ್ವಿ, ಭೋಗ್ಯ ಅಥವಾ ಮಾರಾಟ ಮಾಡುವ ಪ್ರಯತ್ನದಲ್ಲಿರುತ್ತಾರೆಂದು ತಿಳಿದು ಬಂದಿದೆ ಅವ್ಯವಹಾರಿಕ ಸಾಲಗಳನ್ನು ನಿವಾರಿಸುವ ಮತ್ತು ಪಡೆಯುವ ಉದ್ದೇಶದಿಂದ ಸದರಿ ಆಸ್ತಿಗಳನ್ನು ಪರಾಧೀನ ಮಾಡಲು ತೊಡಗಿರುವ ಸದರಿ ವೆಂಕಟಪ್ಪನವರಿಂದ, ಸದ್ರಿ ಆಸ್ತಿಗಳನ್ನು ಯಾರೂ ಪಡೆದುಕೊಳ್ಳಕೂಡದೆಂದು ಈ ಮೂಲಕ ಎಚ್ಚರಿಸಿದೆ. ಒಂದು ವೇಳೆ ಹಾಗೆ ಅವರಿಂದ ಯಾರಾದರೂ ಸದರಿ ಆಸ್ತಿಗಳ ಗಿರ್ವಿಯಿಂದಾಗಲೀ ಭೋಗ್ಯದಿಂದಾಗಲೀ ಹಣ ಕೊಟ್ಟದ್ದೇ ಆದರೆ ಅಥವಾ ಸದರಿ ಆಸ್ತಿಗಳನ್ನು ಕೊಂಡುಕೊಂಡದ್ದೇ ಆದರೆ ಹಾಗೆ ಪಡೆಕೊಂಡವರಿಗೆ ಸದ್ರಿ ಆಸ್ತಿಗಳಿಗೆ ಯಾವ ಹಕ್ಕೂ ದೊರಕಲಾರದೆಂದು ಈ ಮೂಲಕ ತಿಳಿಸಲಾಗಿದೆ.

ಗಿರಿಗೌಡನ ಮನೆ ನಂಜಪ್ಪನವರ ಮಗ ವೆಂಕಟಪ್ಪನವರ ಪತ್ನಿ ಮುಂಡವ್ವ (ತನ್ನ ಪರವಾಗಿಯೂ ಮತ್ತು ಚಿಕ್ಕ ಮೈನರ್ ಮಕ್ಕಳ ಪರವಾಗಿಯೂ.)

3-3
1-5-1951

ಶ್ರೀ ಟಿ. ಎನ್. ಗೋವಿಂದರಾಜು,
'ಕೊಡಗು' ಏಜೆಂಟರು,
ವೀರಾಜಪೇಟೆ.

Licence No. 60,
Licenced to Post without Prepayment

Reg. No. M. 1550,
'KODAGU' MERCARA, (Coorg).

ಕೊಡಗು

ಸಂಪಾದಕರು—ಬಿ. ಡಿ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. 6—0—0.

ಸಂಪುಟ ೨೯ | ತಾರೀಕು ೨೫—೫—೧೯೫೧ರನೇ ಶುಕ್ರವಾರ | ಸಂಚಿಕೆ ೪೯

ಜಿಲ್ಲಾ ಬೋರ್ಡು ಉಪಾಧ್ಯಾಯರ ಕೇಳಿಕೆ.

[ಬರೆದು ಬಂದದ್ದು]

ಹಳೇ ಪ್ರಶ್ನೆ.

ಜಿಲ್ಲಾ ಬೋರ್ಡು ಉದ್ಯೋಗಿಗಳ ಕೂಗು ಕೆಲವು ವರ್ಷಗಳಿಂದ ಕೇಳಿ ಬರುತ್ತಿದ್ದರೂ ಸಮರ್ಪಕವಾದ ಉತ್ತರವು ಇನ್ನೂ ಅವರಿಗೆ ದೊರೆತಿರುವದಿಲ್ಲ. ಸರಕಾರಿ ನೌಕರರಿಗೆ ದೊರೆಯುವ ರೀತಿಯ ವೇತನ, ತುಟ್ಟಿಭತ್ಯಗಳು ಇವರಿಗೂ ದೊರೆಯಬೇಕೆಂಬುದೇ ಅವರ ಕೂಗಾಗಿದೆ. ಆದರೆ ಸ್ಥಳೀಯ ಸ್ವರಾಜ್ಯ ಸಂಸ್ಥೆಯಾಗಿರುವ ಜಿಲ್ಲಾ ಬೋರ್ಡು ತನ್ನ ನಿಶ್ಚಿತ ವರಮಾನದಲ್ಲಿ ಈ ಹೆಚ್ಚಿನ ವೇತನ ದರವನ್ನು ಕೊಡಲಾರದೆಂಬುದು ಸರ್ವ ವಿದಿತವಾಗಿದೆ. ಅದಕ್ಕಾಗಿ ಜಿಲ್ಲಾ ಬೋರ್ಡನ್ನೇ ತೆಗೆದು ಹಾಕಿಬಿಡಬೇಕೆಂಬ ಪ್ರಚಾರವೂ ನಡೆಯಿತು. ಜಿಲ್ಲಾ ಬೋರ್ಡನ್ನು ತೆಗೆದು ಹಾಕಿ ಬಿಡುವದರಿಂದ ಪರಿಸ್ಥಿತಿಯು ಸುಧಾರಣೆಯಾಗದೆ ಬದಲು ಜನತೆಗೆ ಅಹಿತವೇ ಆಗುವದೆಂಬುದು ಈಗೀಗ ಜನರಿಗೆ ಮನವರಿಕೆಯಾಗುತ್ತಿದೆ. ಮದ್ರಾಸು ಮೊದಲಾದ ಹೊರ ಪ್ರಾಂತಗಳಲ್ಲಿ ಸ್ಥಳೀಯ ಸ್ವರಾಜ್ಯ ಸಂಸ್ಥೆಗಳನ್ನು ಬಲಪಡಿಸಿ, ಅವುಗಳಿಗೆ ಹೆಚ್ಚಿನ ಆರ್ಥಿಕ ಸಹಾಯವಿತ್ತು ಸ್ಥಿರಗೊಳಿಸುವ ಯತ್ನಗಳಾಗುತ್ತಿವೆ. ಆದ್ದರಿಂದ ಜಿಲ್ಲಾ ಬೋರ್ಡಿನ ಅಸ್ತಿತ್ವಕ್ಕೆ ಧಕ್ಕೆ ತರುವ ಯಾವ ಸೂಚನೆಯೂ ಜನಹಿತ ದೃಷ್ಟಿಯಿಂದಲ್ಲ. ಆದರೆ ಜಿಲ್ಲಾ ಬೋರ್ಡಿನ ಉದ್ಯೋಗಿಗಳ ನ್ಯಾಯಬದ್ಧವಾದ ಕೇಳಿಕೆಯನ್ನು ಸಲ್ಲಿಸುವ ಮಾರ್ಗವೇನು? ಅದಕ್ಕಾಗಿ ಸರಕಾರದ ನೆರವನ್ನು ಜಿಲ್ಲಾ ಬೋರ್ಡು ಕೇಳಿತು. ಬೋರ್ಡಿನ ಉದ್ಯೋಗಿಗಳೂ ತಮ್ಮ ಗುರಿಸಾಧಿಸಲು ಮುಷ್ಕರವನ್ನೂ ಮಾಡಿದರು. ಇದೆಲ್ಲ ಪ್ರಯತ್ನಗಳಿಂದ ಜಿಲ್ಲಾ ಬೋರ್ಡು ಉದ್ಯೋಗಿಗಳಿಗೆ ಅಲ್ಪಸ್ವಲ್ಪ ಹಿತವಾದರೂ ಅವರ ಪೂರ್ಣ ಕೇಳಿಕೆಯು ಸಲ್ಲಿಸಲ್ಪಟ್ಟಿರುವದಿಲ್ಲ.

ಪಕ್ಷ ರಾಜಕೀಯ

ಅಧ್ಯಾಪಕರ ಒಲವನ್ನು ಪಡೆಯಲು ಪೈಪೋಟಿಯು ಕೊಡಗಿನ ರಾಜಕೀಯ ಪಕ್ಷಗಳಲ್ಲಿ ನಡೆದು ಸಂಯೋಜನಾವಾದಿಗಳೊಬ್ಬರು ಅಧ್ಯಾಪಕರ ಸಂಘದ ಪ್ರೆಸಿಡೆಂಟರಾದ ಕಾರಣ ಜಿಲ್ಲಾ ಬೋರ್ಡು ಉದ್ಯೋಗಿಗಳ ಸಂಘವು ಈ ರಾಜಕೀಯ ತಿಕ್ಕಾಟದಿಂದ ತೊಂದರೆಗೊಳಗಾಗ ಬೇಕಾಯಿತು. ಜಿಲ್ಲಾ ಬೋರ್ಡಿನ ಉದ್ಯೋಗಿಗಳ ಕೇಳಿಕೆಯನ್ನು ಸಲ್ಲಿಸಬೇಕೆಂದು ಒಂದು ಪಕ್ಷವಾದಿಸಿದರೆ ಅದು ನ್ಯಾಯ ಸಮ್ಮತವಾದ ಕೇಳಿಕೆಯಲ್ಲವೆಂದು ಮತ್ತೊಂದು ವಾದಿಸಿತು. ಜಿಲ್ಲಾ ಬೋರ್ಡು ಉದ್ಯೋಗಿಗಳು ಮುಷ್ಕರ ಹೂಡಿದಾಗಲೂ ಕೂಡ ಅದನ್ನು ಮುರಿಯಲು ಈ ಪಕ್ಷಗಳು ವಿರುದ್ಧವಾಗಿ ವರ್ತಿಸಿದ್ದು ಸರ್ವ ವಿದಿತವಾಗಿದೆ. ಈ ರೀತಿಯಲ್ಲಿ ಕೊಡಗಿನ ಸಂಯೋಜನಾವಾದಿ ಮತ್ತು ಪ್ರತ್ಯೇಕವಾದಿ ಪಕ್ಷಗಳ ಪ್ರಭಾವವು ಈ ಸಮಸ್ಯೆಯ ಮೇಲೆ ಬಿದ್ದು ಸಮಸ್ಯೆಯು ರಾಜಕೀಯವಾದಿಗಳ ಚಕ್ಕಂದದಾಟಕ್ಕೆ ಒಳಪಟ್ಟು ಬಗೆ ಹರಿಯದೆ ಉಳಿದಿದೆ.

ಅಂದು ಆ ತಿಕ್ಕಾಟದ ಕಾಲಕ್ಕೆ ಸಂಯೋಜನಾ ಪಕ್ಷದವರು ಅಧ್ಯಾಪಕರ ಬೇಡಿಕೆಯು ನ್ಯಾಯವಾದುದೆಂದೂ, ಸರಕಾರಿ ಉದ್ಯೋಗಿಗಳಿಗೆ ದೊರೆಯುವ ಸರ್ವ ಸವಲತ್ತು ಅವರಿಗೆ ದೊರೆಯಬೇಕೆಂದೂ ವಾದಿಸಿದರು. ಪ್ರತ್ಯೇಕವಾದಿಗಳು ಸಕ್ರಿಯವಾಗಿ ಅಧ್ಯಾಪಕರ ಬೇಡಿಕೆಗೆ ವಿರೋಧ ಮಾಡದಿದ್ದರೂ ಅಧ್ಯಾಪಕರು ಸಂಯೋಜನವಾದಿಗಳ ಕೈಗೊಂಬೆಯಾಗಬಾರದೆಂಬ ಕಾರಣದಿಂದ ಅವರ ಬೇಡಿಕೆಗೆ ತಮ್ಮ ಬೆಂಬಲವನ್ನೀಯದೆ ದೂರನಿಂತರು.

ಸರ್ವರ ಅಂತರ್ಯ ಒಂದಾಗಿತ್ತು.

ರಾಜಕೀಯ ಕಾರಣಗಳಿಗಾಗಿ ಅಧ್ಯಾಪಕರ ಕೇಳಿಕೆಗೆ ಕೆಲವರು ವಿರೋಧಿಸಿದರೂ ತಮ್ಮ ಮಕ್ಕಳಿಗೆ ವಿದ್ಯೆ ಕಲಿಸುವ ಅಧ್ಯಾಪಕರಿಗೆ ಯೋಗ್ಯ ವೇತನ ದೊರೆತು ಅವರು ಮನಮುಟ್ಟಿ ಪಾಠ ಹೇಳುವ ವಾತಾವರಣ ಕಲ್ಪಿಸಲ್ಪಡಬೇಕೆಂಬ ಆಶೆ ಸರ್ವರ ಅಂತರ್ಯದಲ್ಲಿತ್ತು. ಕ್ರಮಶಃ ಈ ಅಭಿಪ್ರಾಯವು ಬಹಿರಂಗವಾಗಿ, ಸರ್ವರೂ ಅಧ್ಯಾಪಕರ ಬೇಡಿಕೆಯ ನ್ಯಾಯಶೀಲತೆಯನ್ನು ಎತ್ತಿ ಹೇಳತೊಡಗಿದರು. ಜಿಲ್ಲಾ ಬೋರ್ಡಿನಲ್ಲಿ ಹಣವಿಲ್ಲದಿದ್ದರೆ ಸರಕಾರವು ಬೋರ್ಡಿನ ನೆರವಿಗೆ ಬಂದು ಅಧ್ಯಾಪಕರ ಕೇಳಿಕೆಯು ಸಲ್ಲಿಸಲ್ಪಡುವಂತೆ ಮಾಡಬೇಕೆಂದು ಅಭಿಪ್ರಾಯವಾಯಿತು. ಸರಕಾರವು ಆದಿಯಿಂದಲೂ ಅಧ್ಯಾಪಕರ ಹಾಗೂ ಜಿಲ್ಲಾ ಬೋರ್ಡಿನ ಕೇಳಿಕೆಗೆ ನಕಾರ ತಾಳುತ್ತಾ ಬಂದಿತ್ತು. ಮುಖ್ಯ ದೇಶೀಯರ ಒತ್ತಾಯದ ಕಾರಣ ಸ್ವಲ್ಪ ಸಹಾಯ ಮಾಡಿದರೂ ಸಮಸ್ಯೆ ಬಗೆಹರಿದಿರುವದಿಲ್ಲ. ತನ್ನ ಉದ್ಯೋಗಿಗಳಿಗೆ ವೇತನ ಕೊಡುವದು ಬೋರ್ಡಿನ ಕರ್ತವ್ಯವೆಂದೂ ಆದ್ದರಿಂದ ಅದು ತನ್ನ ಆದಾಯವನ್ನು ಹೆಚ್ಚಿಸಿ ಕೊಳ್ಳಬೇಕೆಂದೂ ಸರಕಾರ ನುಡಿಯಿತು. ಆದರೆ ಬೋರ್ಡಿಗೆ ಅಷ್ಟು ಆದಾಯವನ್ನು ಹೆಚ್ಚಿಸಿ ಕೊಳ್ಳುವ ಅನುವಿಲ್ಲದ ಕಾರಣ ಸಮಸ್ಯೆ ಅಲ್ಲಿಯೇ ಉಳಿದು ಪುನಃ ಸರಕಾರದ ನೆರವನ್ನು ಕೇಳಬೇಕಾಯಿತು.

ಯಾರು ಯಾರ ಹಿತಸಾಧಕರು?

ಜಿಲ್ಲಾ ಬೋರ್ಡು ಅಧ್ಯಾಪಕರು, ಸಂಯೋಜನಾವಾದಿಗಳು ತಮ್ಮ ಹಿತರಕ್ಷಕರೆಂದೂ, ಪ್ರತ್ಯೇಕವಾದಿಗಳು ತಮಗೆ ಅಹಿತ ಬಯಸುವವರೆಂದೂ ಬಗೆದರು. ಹಲಕೆಲವರು ತಮ್ಮ ವಿರೋಧವನ್ನು ವ್ಯಕ್ತ ಮಾಡಿದರು. ಆದರೆ ಪರಿಸ್ಥಿತಿ ಹಾಗೆಯೇ ಉಳಿಯಲಿಲ್ಲ. ರಾಜಕೀಯಕ್ಕೆ ತತ್ವ ನೀತಿಗಳು ಇಲ್ಲ. ಇಂದು ಸ್ನೇಹಿತರೆಂಬುವವರು ನಾಳೆ ವಿರೋಧಿಗಳಾಗುವದು ಸಾಮಾನ್ಯದ ವಿಚಾರ. ರಾಜಕೀಯ ಚಕ್ಕಂದದಾಟಕ್ಕೆ ಒಳಗಾದ ಅಧ್ಯಾಪಕರ ಸಮಸ್ಯೆಯೂ ಅದೇ ಅವಸ್ಥೆಗೆ ಈಡಾಯಿತು.

ಜಿಲ್ಲಾ ಬೋರ್ಡು ಉದ್ಯೋಗಿಗಳ ಕೇಳಿಕೆಯ ಅವಶ್ಯಕತೆಯನ್ನರಿತು ಸ್ಥಳೀಯ ಸರಕಾರವು ಈ ವರ್ಷ ಅದಕ್ಕಾಗಿ ಬಡ್ಜೆಟ್ಟಿನಲ್ಲಿ ಎರಡು ಲಕ್ಷ ರೂಪಾಯಿಗಳನ್ನು ಪ್ರತ್ಯೇಕಿಸಿಟ್ಟಿತು. ಇದನ್ನು ಸಾಧಿಸಲಿಕ್ಕಾಗಿ ವ್ಯವಸಾಯ ಆದಾಯ ತೆರಿಗೆಯನ್ನು ಜಾರಿಯಲ್ಲಿ ತಂದಿತು. ವ್ಯವಸಾಯ ಆದಾಯ ತೆರಿಗೆ ಮಸೂದೆಯು ಚರ್ಚೆಗೆ ಬಂದಾಗ ಯಾರು ಅಧ್ಯಾಪಕರ ಹಿತಚಿಂತಕರು ಎಂಬುದು ಸ್ಪಷ್ಟವಾಯಿತು. ವ್ಯವಸಾಯ ಆದಾಯ ತೆರಿಗೆಯ ಮಸೂದೆಯನ್ನು ಮಂಡಿಸಿದ ಸರಕಾರಿ ಮೆಂಬರರು ಈ ಮಸೂದೆಯು ಸುಮಾರು ಎಂಟು ಲಕ್ಷ ಆದಾಯವನ್ನು ತರುವದೆಂದೂ ಇದರಲ್ಲಿ ೪ ಲಕ್ಷವನ್ನು ಕಾಲೇಜು ಕಟ್ಟಡಕ್ಕೂ, ೨ ಲಕ್ಷವನ್ನು ಜಿಲ್ಲಾ ಬೋರ್ಡು ಉದ್ಯೋಗಿಗಳ ವೇತನಕ್ಕೂ ಇನ್ನೆರಡು ಲಕ್ಷವನ್ನು ಫೈನಾನ್ಸ ಕಮಿಟಿಯ ಸೂಚನೆಯಂತೆ ವಿತರಣೆ ಮಾಡಲೂ ಕೊಡಲಾಗುವದೆಂದು ಹೇಳಿದರು. ಪ್ರತ್ಯೇಕವಾದಿಗಳು ಈ ಮಸೂದೆಗೆ ಪ್ರಾರಂಭದಿಂದಲೂ ಬೆಂಬಲವಿತ್ತು ಅದು ಶೀಘ್ರ ಜಾರಿಯಲ್ಲಿ ಬರಬೇಕೆಂದರು. ಆದರೆ ಸಂಯೋಜನಾವಾದಿಗಳು ಪ್ರಾರಂಭದಿಂದಲೂ ಈ ಮಸೂದೆಗೆ ವಿರೋಧ ಮಾಡಿದ್ದಾರೆ. ತಾವು ಅಧ್ಯಾಪಕರ ಹಿತಚಿಂತಕರೆಂದು ಹೇಳಿಕೊಂಡರೂ ಅಧ್ಯಾಪಕರಿಗೆ ಹಣ ಒದಗಿಸುವ ಈ ಮಸೂದೆಗೆ ವಿರೋಧಿಸಿದ್ದಾರೆ.

ಗುರಿಯ ಸಾಧನೆಗಾಗಿ

ಇದಕ್ಕೆ ಕಾರಣವಿಲ್ಲದೆ ಇಲ್ಲ. ಸಂಯೋಜನವಾದಿಗಳು ಅಧ್ಯಾಪಕರನ್ನು ಎತ್ತಿ ಹಿಡಿದಿದ್ದರೆ ಒಂದು ಕಾರಣಕ್ಕಾಗಿ. ಇಂದು ಅವರ ಹಿತಕಾರಕ ಮಸೂದೆಗೆ ವಿರೋಧಿಗಳಾಗಿದ್ದರೆ ಅದೂ ಒಂದು ಕಾರಣಕ್ಕಾಗಿ. ಅದು ತಮ್ಮ ರಾಜಕೀಯ ಗುರಿ ಸಾಧನೆಯ ಆ ಕಾರಣಕ್ಕಾಗಿಯೇ ಆಗಿದೆ. ಅಧ್ಯಾಪಕರನ್ನು ತಮ್ಮೊಡನೆ ಸೆಳೆದುಕೊಳ್ಳುವದು ಅಂದು ಅವರಿಗೆ ಬೇಕಿತ್ತು. ಅದಕ್ಕಾಗಿ ಅಧ್ಯಾಪಕರ ಹಿತಚಿಂತಕರೆಂದು ವರ್ತಿಸಿದರು. ಆದರೆ ಇಂದು ವ್ಯವಸಾಯ ಆದಾಯ ತೆರಿಗೆಯು ಜಾರಿಯಲ್ಲಿ ಬಂದರೆ ಕೊಡಗಿನ ಸುಮಾರು ೩೦೦ ಜಿಲ್ಲಾ ಬೋರ್ಡ ಅಧ್ಯಾಪಕರಿಗೆ ಆ ಮೂಲಕ ಹಿತವಾಗಬಹುದಾದರೂ ಕೊಡಗಿನ ಸುಮಾರು ೫೦೦೦ ಸಂಪನ್ನ ವ್ಯವಸಾಯಗಾರರಿಗೂ ಪ್ಲಾಂಟರುಗಳಿಗೂ ಅಹಿತವಾಗುತ್ತದೆ. ತಮ್ಮ ರಾಜಕೀಯ ಗುರಿಯಿಂದ ಮುಂದಿನ ಚುನಾವಣೆಯ ದೃಷ್ಟಿಯಲ್ಲಿ ಅಧ್ಯಾಪಕರ ಸಂಖ್ಯಾಸ್ಪದ ನೆರವಿಗಿಂತ ಪ್ಲಾಂಟರುಗಳ ಒಲವನ್ನು ಪಡೆಯುವದು ಹಿತವೆಂದು ಸಂಯೋಜನಾವಾದಿಗಳಿಗೆ ತೋರಿರಬೇಕು. ಆದ್ದರಿಂದ ಅಂದು ಅಧ್ಯಾಪಕರ ಸಂಘದ ಅಧ್ಯಕ್ಷತೆ ವಹಿಸಿ ಮುಂದಾಳ್ತನ ನಡೆಸಿದಂತೆ ಇಂದು ಪ್ಲಾಂಟರುಗಳ ಸಂಘದ ಆಡಳಿತ ಮಂಡಳಿಯೊಳಗೆ ಪ್ರವೇಶಿಸಿದ್ದಾರೆ. ಮುಂದಿನ ಚುನಾವಣೆಯಲ್ಲಿ ಪ್ಲಾಂಟರುಗಳ ಪಾತ್ರ ಬಹು ಮುಖ್ಯವಾದುದು. ಅವರ ವಶದಲ್ಲಿ ಬಹು ಸಂಖ್ಯೆಯಲ್ಲಿ ಮತದಾರರಿರುವರು. ತೋಟದಲ್ಲಿ ಕೆಲಸಮಾಡುವ ಮಜದೂರರೂ ಇತರರೂ ಅವರ ಆಶಯದಂತೆ ವರ್ತಿಸುವ ಕಾರಣ ಪ್ಲಾಂಟರುಗಳ ಒಲವನ್ನು ಗಳಿಸುವದು ಸಂಯೋಜನಾವಾದಿಗಳಿಗೆ ಬೇಕಿತ್ತು. ಆದ್ದರಿಂದ ಅಧ್ಯಾಪಕರಿಗೆ ಅಹಿತವಾದರೂ ಪ್ಲಾಂಟರುಗಳಿಗೆ ಹಿತವಾಗುವಂತೆ ಅವರು [illegible]

ಆದ್ದರಿಂದ ಒಂದು ವಿ[illegible]ಗಲು. ಮಾ[illegible]ವಾಗುತ್ತೆ ರಾಜಕೀಯ ಪಕ್ಷ[illegible]ವು ತಂತಮ್ಮ ಗುರಿಯನ್ನು ಸಾಧಿಸಲು ಯತ್ನಿಸುವವೇ ವಿನಾ ಅವುಗಳಿಂದ ಯಾರಿಗೂ ಹಿತವಾಗಲಾರದು. ಪ್ಲಾಂಟರುಗಳ ಒಲವನ್ನು ಪಡೆಯಲು ಅಧ್ಯಾಪಕರ ಹಿತವನ್ನು ಬಲಿಕೊಡಲು ತಯಾರಾದ ಆ ರಾಜಕೀಯ ಪಕ್ಷದಲ್ಲಿ ನ್ಯಾಯ ನೀತಿಗಳಿವೆಯೆಂದು ಹೇಳಲಾಗುವದಿಲ್ಲ. ನ್ಯಾಯ ನೀತಿಗಳಿಗೆ ಇಂದಿನ ರಾಜಕೀಯದಲ್ಲಿ ಸ್ಥಳವೆಲ್ಲಿದೆ?

Coorg Forest Department.

Elephants sale notice

Elephants of both sexes and of all sizes will be sold by auction on 9-6-1951 at 2 P. M. at Tittimathi. Further particulars may be had from the undersigned.

C. M. KUSHALAPPA,
Chief Forest Officer, Coorg

ಶ್ರೀ ಟಿ. ಎಸ್. ಗೋವಿಂದರಾಜು,
'ಕೊಡಗು' ಏಜೆಂಟರು,
ವೀರಾಜಪೇಟೆ.

॥ ಕಾಂಗೆಸ್ಸಿಗೆ ಆಚಾರ್ಯ ಕೃಪಲಾನಿಯವರ ರಾಜಿನಾಮೆ ॥

ವಿಕಚಿತ ಪ್ರಜಾಸತ್ತಾರಂಗದ ಅಧ್ಯಕ್ಷರಾದ ಆಚಾರ್ಯ ಜೆ. ಬಿ. ಕೃಪಲಾನಿಯವರು ತಾ ೧೭ರ ಮಧ್ಯಾಹ್ನ ತಾವು ಕಾಂಗ್ರೆಸಿಗೆ ರಾಜಿನಾಮೆ ಕೊಟ್ಟಿದ್ದನ್ನು ಪ್ರಕಟಿಸಿದರು.

ತಾ. ೧೭ ರಲ್ಲಿ ಡಿಲ್ಲಿಯಿಂದ ವಿಮಾನದಲ್ಲಿ ಬಂದ ಭಾರತ ಸರಕಾರದ ಸಂಪರ್ಕ ಮಂತ್ರಿ, ಶ್ರೀ. ರಾಫಿ ಅಹಮ್ಮದ್ ಕಿಡ್ವಾಯಿಯ ವರೊಡನೆ ಅಧಿಕಾವಧಿ ಚರ್ಚೆಯಾದ ನಂತರ ಈ ಪ್ರಕಟನೆಯು ಹೊರಬಿದ್ದಿತು.

ಆಚಾರ್ಯ ಕೃಪಲಾನಿಯವರು ೫೦೦೦ ಶಬ್ದಗಳ ರಾಜಿನಾಮೆ ಪತ್ರವನ್ನು ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಪುರುಷೋತ್ತಮದಾಸ ಟಂಡನ್ನರಿಗೆ ಕಳಿಸಿದ್ದು ಅದರ ಸಾರಾಂಶ ಹೀಗಿದೆ.

ಪ್ರಯತ್ನಗಳೆಲ್ಲ ವಿಫಲ.

ಪತ್ರಿಕೆಗಳಿಗೆ ಕಳಿಸಿದ ಈ ಪತ್ರದಲ್ಲಿ ಕಳೆದ ಕೆಲವು ತಿಂಗಳುಗಳಲ್ಲಿ, ಈ ಪತ್ರಗಳಲ್ಲಿ ಸರಳವಾಗಿ ಕಾಣಿಸಿದಂತೆ ಪುನರ್ವಿಚಾರ ಮಾಡುವ ಸಾಧ್ಯತೆಗಳೆಲ್ಲವನ್ನೂ ನಾವು ಒಳಹೊಕ್ಕು ನೋಡಿದೆವು. ಆದರೆ ಇಲ್ಲಿಯವರೆಗೆ ಕಾಂಗ್ರೆಸ್ ಅಧ್ಯಕ್ಷರು ಸ್ವೀಕರಿಸಿದ ಧೋರಣೆಯಿಂದ ಆ ದಿಶೆಯಲ್ಲಿಯ ನಮ್ಮ ಪ್ರಯತ್ನಗಳೆಲ್ಲವೂ ಅಯಶಸ್ವಿಯಾದುವು ... ಕಾಣಿಸಲಾಗಿದೆ.

ಪ್ರೀತಿಯ ಸಂಸ್ಥೆ.

ಮತ್ತೆ ಆ ಪತ್ರದಲ್ಲಿ 'ರಾಷ್ಟ್ರೀಯ ಹೋರಾಟದ ಮಹಾವಧಿಯಲ್ಲಿ ಯಾವುದರ ಸೇವೆ ಮಾಡಲು ನನಗೆ ಹಕ್ಕು ಇದ್ದಿತೊ ಹಾಗೂ ಯಾವುದನ್ನು ನಾನು ಪ್ರೀತಿಸುತ್ತಿರುವೆನೋ ಅಂಥಹ ಸಂಸ್ಥೆಯನ್ನು ತ್ಯಜಿಸುವ ವಿಚಾರ ಮಾಡುವಾಗ ನನಗೆ ಬಹು ವೇದನೆಯಾಗುತ್ತದೆ. ನನ್ನ ವಿಚಾರಗಳ ಪರಿಶೀಲನ ಮಾಡಿ ನಿತ್ಯ ಹಾಗೂ ಕಾಂಗ್ರೆಸ್ಸಿನಲ್ಲಿ ಅಧಿಕಾರ ವಹಿಸಿದವರ ಮೇಲೆ ಅವುಗಳ ಪ್ರತಿಕ್ರಿಯೆಗಳನ್ನು ವಿವೇಚಿಸಿದಾಗ ಸಂಸ್ಥೆಗೆ ರಾಜಿನಾಮೆ ಕೊಡುವುದೊಂದೇ ಅತಿ ಯೋಗ್ಯವೂ, ಗೌರವಯುಕ್ತವೂ ಆದ ಮಾರ್ಗವೆಂಬ ನಿರ್ಣಯಕ್ಕೆ ಬರಬೇಕಾದುದು ನನಗೆ ಖೇದದಾಯಕವಾಗಿದೆ. ಅದನ್ನೇ ನಾನೀಗ ಸ್ವೀಕರಿಸಿದ್ದೇನೆ' ಎಂದು ತಿಳಿಸಲಾಗಿದೆ.

ವಿಷಾದ ಹಾಗೂ ದುಃಖ

ಶ್ರೀ. ಕೃಪಲಾನಿಯವರು ಇಂತು ವಿವರಿಸಿದ್ದಾರೆ.

'ವಿಷಾದ ಹಾಗೂ ದುಃಖಗಳಿಂದ ರಾಜಿನಾಮೆ ಕೊಡುತ್ತೇನೆ. ದುಃಖವೇಕೆಂದರೆ, ರಾಷ್ಟ್ರವು ಅತ್ಯಂತ ಸೂಕ್ಷ್ಮ ಹಾಗೂ ಜಟಿಲ ಸಮಸ್ಯೆಗಳನ್ನು ಎದುರಿಸುವ ಈ ಸ್ಥಿತಿಯಲ್ಲಿ ಎಲ್ಲೆಲ್ಲೂ ವಿಪುಲವಾಗಿರುವ ಪ್ರತಿಕ್ರಿಯಾ ಶಕ್ತಿಗಳನ್ನು ವಿರೋಧಿಸುವದಕ್ಕಾಗಿ ತಾವು ಒಕ್ಕಟ್ಟಾಗದಿದ್ದುದು ರಾಷ್ಟ್ರೀಯ ಸ್ವರೂಪದ ಹಿನ್ನಡೆಯೆಂದು ಗಣಿಸಲ್ಪಡುವುದು.

ಸೂಕ್ತ ಸಂಸ್ಥೆಯೊಗಿಲ್ಲ.

'ಕಾಂಗ್ರೆಸು ಪ್ರಜಾಸತ್ತಾರಂಗವನ್ನು ಕಟ್ಟುವಾಗ ಕೊಟ್ಟ ನಮ್ಮ ಪ್ರಕಟನೆಯಲ್ಲಿ ಹೇಳಿದಂತೆ ಕಾಂಗ್ರೆಸ್ಸಿನ ಮೂಲ ತತ್ವ ಹಾಗೂ ಧೋರಣೆಗಳನ್ನು ನಾನು ಸಂಪೂರ್ಣ ಒಪ್ಪಿಕೊಳ್ಳುತ್ತೇನೆಂದು ಮತ್ತೊಮ್ಮೆ ಹೇಳಲು ಬಯಸುವೆನು. ಆದುದರಿಂದ ಸಂಸ್ಥೆಯನ್ನು ತ್ಯಜಿಸಲು ನಾನು ನಿಶ್ಚಯಿಸುವದೇಕೆಂದರೆ ಸಂಸ್ಥೆಯು ಈಗ ತತ್ವ ಧೋರಣೆಗಳಿಗೆ ಸೂಕ್ತ ಧನಿಯಾಗದ ರೀತಿಯಲ್ಲಿ ನಡೆದಿರುವ ಅದರ ಆಡಳಿತೆಯೇ ಕಾರಣ. ನಾನು ಕಾಂಗ್ರೆಸ್ಸಿನಲ್ಲಿ ಇಲ್ಲದಿದ್ದರೂ ಕೂಡ, ಕಾಂಗ್ರೆಸ್ಸಿನ ತತ್ವ ಹಾಗೂ ಧೋರಣೆಗಳ ಮಾರ್ಗದಲ್ಲಿ ಮುಂದಾಳುಗಳು ರಾಷ್ಟ್ರದ ಮುಂದಿರುವ ಕಾರ್ಯಕ್ರಮದಲ್ಲಿ ಸಹಕರಿಸಲು ನಾನು ಸದಾ ಸಿದ್ಧನಾಗಿ ಉಳಿಯುವೆನು. ನನ್ನ ಅಗಲುವಿಕೆಯು ಅವಿಭಕ್ತ ಕುಟುಂಬದಲ್ಲಿರಲು ಒಪ್ಪದ ಸಹೋದರನ ಅಗಲುವಿಕೆಯಂತಿದೆಯೆಂದು ಭಾವಿಸುತ್ತೇನೆ. ಮತ್ತು ಅವರು ಬೇರೆ ಇದ್ದು ಕೆಲವು ಕಾಲದ ನಂತರ ಮಹಾ ಕುಟುಂಬದ ಕಲ್ಯಾಣಕ್ಕಾಗಿ ಸೋದರ ಭಾವ ತಳೆದು ಒಕ್ಕಟ್ಟಿಗಿರಲು ಇಚ್ಛಿಸುವಂತಿದೆಯೆಂದೂ ಗ್ರಹಿಸುತ್ತೇನೆ. ಭಾಂತವೇ ಆ ಮಹಾ ಕುಟುಂಬ ಸನಗನಿಸಿದಂತೆ ರಾಷ್ಟ್ರೀಯ ಕಲ್ಯಾಣಕ್ಕಾಗಿ ನಾನು ಕೈಗೊಳ್ಳುವಂತ ನನ್ನೀ ಕ್ರಮದಿಂದ ನಮ್ಮ ವೈಯಕ್ತಿಕ ಗೌರವ ಹಾಗೂ ಸ್ನೇಹಗಳು ಶಿಥಿಲವಾಗದಿರಲೆಂದು ಆಶಿಸುತ್ತೇನೆ'

ಪಾರ್ಲಿಮೆಂಟ್ ಸದಸ್ಯತ್ವ.

ಕಾಂಗ್ರೆಸ್ಸಿಗೆ ರಾಜಿನಾಮೆ ಕೊಟ್ಟ ನಂತರದ ಸಂದರ್ಶನದಲ್ಲಿ ತಾವು ಪಾರ್ಲಿಮೆಂಟ್ ಸದಸ್ಯತ್ವಕ್ಕೆ ರಾಜೀನಾಮೆ ಕೊಡುವದಿಲ್ಲವೆಂದು ಹೇಳುವಾಗ ಮಂತ್ರಿ ಮೊದಲಾದವರಿಗಿಂತಲೂ ಹೆಚ್ಚಾಗಿ ತಾವು ಪಾರ್ಲಿಮೆಂಟಿನಲ್ಲಿ ರಾಷ್ಟ್ರದ ಜನತೆಯನ್ನು ಪ್ರತಿನಿಧಿಸುತ್ತಾರೆಂದು ಆಶಿಸಿ ನುಡಿದರು.

ಪಾರ್ಲಿಮೆಂಟ್ ಸದಸ್ಯತ್ವವನ್ನು ಬಿಟ್ಟುಕೊಡಬೇಕೆಂದು ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ಗೊತ್ತುವಳಿಯನ್ನು ಸ್ವೀಕರಿಸಿದ್ದಾದರೆ, ಆ ಗೊತ್ತುವಳಿಗೆ ಜನತಾ ಬೆಂಬಲವಿದ್ದ ಪಕ್ಷದಲ್ಲಿ ತಾವು ನಿಶ್ಚಯವಾಗಿ ಅದರಂತೆ ನಡೆಯುವರೆಂದು ಶ್ರೀ ಕೃಪಲಾನಿಯವರು ವಿದಿತಪಡಿಸಿದರು.

ವಿರೋಧಿ ಪಕ್ಷವಿಲ್ಲ.

ಸಧ್ಯಕ್ಕೆ ಅನವಶ್ಯವೆಂದು ಕಂಡು ಬಂದದ್ದರಿಂದ ಪಾರ್ಲಿಮೆಂಟಿನಲ್ಲಿ ವಿರೋಧಿ ಪಕ್ಷವನ್ನು ರಚಿಸುವದಿಲ್ಲವೆಂದೂ ಅವರು ಹೇಳಿದರು. ಪ್ರಜಾಸತ್ತ ರಂಗದ ಮತ್ತಿನ್ನಾವ ಸದಸ್ಯರು ಕಾಂಗ್ರೆಸ್ಸಿಗೆ ರಾಜಿನಾಮೆ ಕೊಡಬಹುದೆಂಬುದು ತಮಗರಿಯದೆಂದು ನುಡಿದರು.

ತಮ್ಮ ಮುಂದಿನ ಕಾರ್ಯಕ್ರಮವೇನೆಂದು ಕೇಳಿದರೆ ಇನ್ನೂ ಯಾವ ನಿರ್ಣಯವಿಲ್ಲೆಂದೂ, ನಿರೀಕ್ಷಿಸಬೇಕೆಂದೂ ಉತ್ತರಿಸಿದರು.

ರಾಜಿನಾಮೆಯ ಕಾರಣ.

ಕಾಂಗ್ರೆಸ್ ಅಧ್ಯಕ್ಷರೊಡನೆ ಅಭಿಪ್ರಾಯಭೇದಗಳೇ ತಮ್ಮ ರಾಜಿನಾಮೆಗೆ ಕಾರಣವೆಂದು ಶ್ರೀ. ಕೃಪಲಾನಿಯವರು ಸಾರಿದರು.

ಅಲ್ಲದೆ ರಾಷ್ಟ್ರದಲ್ಲಿರುವ ದುಸ್ಥಿತಿಯನ್ನು ಹಿಂತೆಗೆಯಲು ಕಾಂಗ್ರೆಸು ಅಸಮರ್ಥವಾದುದೂ ತಮ್ಮ ರಾಜಿನಾಮೆಯ ಮತ್ತೊಂದು ಕಾರಣವೆಂದು ವಿದಿತಪಡಿಸಿದರು. ಇಂತಹ ಅಸಮರ್ಥ ಕಾಂಗ್ರೆಸ್ಸಿನಲ್ಲಿ ಉಳಿಯುವದು ತಮಗೆ ಬೇಡವೆಂದು ಶ್ರೀ. ಕೃಪಲಾನಿಯವರು ಸಂದರ್ಶನಕಾರರಿಗೆ ನುಡಿದರು.

ಕೊಡಗು ಚೀಫ್ ಫಾರೆಸ್ಟ್ ಆಫೀಸು
ಮಡಿಕೇರಿ. ತಾ 16-5-1951

ನೋಟೀಸ್.

ಗೇಣಿ ಅವಧಿ ಮುಗಿದ ಏಲಕ್ಕಿ ಮಲೆಗಳಲ್ಲಿರುವ ಹಾಲಿ ವರ್ಷದ ಏಲಕ್ಕಿ ಫಲವನ್ನು ಎತ್ತುವಳಿ ಮಾಡುವ ಹಕ್ಕನ್ನು 1951 ನೇ ಇಸವಿ ಜೂನ್ ತಾರೀಕ 8 ನೇ ಶುಕ್ರವಾರ ಮತ್ತು 11 ನೇ ಸೋಮವಾರ ಸೋಮವಾರಪೇಟೆ ಮತ್ತು 13 ನೇ ಬುಧವಾರ ವೀರಾಜಪೇಟೆ ನಾಡು ಕಚೇರಿ ಬಳಿ ಮಧ್ಯಾಹ್ನ 2 ಗಂಟೆಗೆ ಸರಿಯಾಗಿ ಕೊಡಗು ಚೀಫ್ ಫಾರೆಸ್ಟ್ ಆಫೀಸರವರ ಪರ್ಸನಲ್ ಅಸಿಸ್ಟೆಂಟರವರಿಂದ ಬಹಿರಂಗವಾಗಿ ಹರಾಜು ಮಾಡಲ್ಪಡುವ ಸಂಗತಿ ಸಮಸ್ತ ಜನರಿಗೂ ಈ ಮೂಲಕ ತಿಳಿಯಪಡಿಸಲಾಗಿದೆ. ಖಾಯಿಸ್‌ದಾರರು ಸಮಯಕ್ಕೆ ಸರಿಯಾಗಿ ಹಾಜರಾಗಿ ಚಡಾವ ರಕಾಸ್ತು ಮೂಲಕ ಪಡೆಕೊಳ್ಳಬಹುದು.

ಹೆಚ್ಚಿನ ವಿವರಗಳನ್ನು ನಾಡ ಕಚೇರಿಗಳಿಂದಾಗಲೀ ರ್‍ಯಾಂಜ್ ಆಫೀಸರವರಿಂದಾಗಲೀ ಹರಾಜು ಇಸ್ತಿಹಾರ್ ಮೂಲಕ ತಿಳಿದು ಕೊಳ್ಳತಕ್ಕದ್ದು.

N. S. POONACHA.
For Chief Forest officer.

ತಿಳಿಸಿರಿ.

ಭೂಮಿ, ತೋಟ, ಜಾಗ ಪೇಟೆಯಲ್ಲಿ ಮನೆ ಅಥವ ಮನೆ ಸೈಟು ಮಾರಲಿರುವವರು ಮತ್ತು ಕೊಂಡುಕೊಳ್ಳಲಿಚ್ಛಿಸುವವರು ಈ ಕೆಳಗಿನ ಪತ್ರದಲ್ಲಿ ವಿಚಾರಿಸಿರಿ. ಅಲ್ಲದೆ ಬೇಕಾದವರಿಗೆ ಕರೆಯುವ ಎಮ್ಮೆ, ಹಸು ಮತ್ತು ಉಳುವ ಎತ್ತು ಮತ್ತು ಕೋಣಗಳನ್ನೂ ಒದಗಿಸಿ ಕೊಡಲಾಗುವುದು. ಬೇಕಾಗುವವರು ತಮಗೆ ಬೇಕಾದ ತಾರೀಕಿನ ಎಂಟು ದಿನಗಳಿಗೆ ಮುಂದೆ ತಿಳಿಸಬೇಕಾಗಿದೆ. ವಿವರಗಳಿಗೆ ಈ ಪತ್ತೆಗೆ ಬರೆಯಬಹುದು.

D. A. N. & SONS.
Commission Agent,
Gonicoppal
26-16 S.Coorg.

ಪ್ರಕಟಣೆ.

ಕೊಡಗು ಮುಜ್ರಾ ಇಲಾಖೆಗೆ ಸೇರಿದ ಮಡಿಕೇರಿ ತಾಲೂಕಿನ ... ನಾಡುಗಳ ಪರ ಮೆಂಬರಾಗಿದ್ದ ಮೆ. ಸಿ. ಎ ಮಂದಣ್ಣ ಬಿ ಎ ಬಿ. ಎಲ್. ಎಡೆನಾಲ್ಕು ನಾಡು ಕಿಗ್ಗಟ್ಟು ನಾಡುಗಳ ಪರ ಮೆಂಬರಾಗಿದ್ದ ಮೆ. ಸಿ. ಬಿ ... ನವರ ಮತ್ತು ನಂಜರಾಜಪಟ್ಣ ಏಳು ಸಾವಿರ ಸೀಮೆ ನಾಡುಗಳ ಪರ ಮೆಂಬರಾಗಿದ್ದ ಮೆ ವಿ. ಎನ್ ನಂಜಪ್ಪಶೆಟ್ಟಿ ಪರ ಮೆಂಬರು ತನದ ಅವಧಿ ಪೂರೈಸಿರುವದರಿಂದ ಸದರಿ ತಾಲ್ಲೂಕು ನಾಡುಗಳ ಪರ ಮೆಂಬರಾಗಲು ಇರ ಬಯಸುವವರು ಆ ಬಗ್ಗೆ ಅವರು ಇಲಖೆ ಪ್ರಸಿಡೆಂಟರವರ ಹೆಸರಿಗೆ ತಾರೀಕು 10-6-51 ವರೆಗೆ ಅರ್ಜಿ ಬರೆದುಕೊಳ್ಳತಕ್ಕದ್ದು. ... ಬಂದ ಅರ್ಜಿಯನ್ನು ಅಂಗೀಕರಿಸಲಾಗದಿಲ್ಲ. ಮಡಿಕೇರಿ ತಾಲ್ಲೂಕು ನಾಡುಗಳ ಪರ ಬಂದ ಅರ್ಜಿ ನೇರಿ ತಾರೀಕು 15-6 51 ರಲ್ಲಿ ಮಡಿಕೇರಿ ದೇವಸ್ಥಾನದ ಹಾಲಿನಲ್ಲಿ ಮಧ್ಯಾಹ್ನ 12 ಗಂಟೆಯಿಂದ 5 ಗಂಟೆವರೆಗೆ, ... ಏಳು ಸಾವಿರ ಸೀಮೆ ಪರ ಬಂದ ಅರ್ಜಿ ನೇರಿ ಸೋಮವಾರಪೇಟೆ ನಾಡು ಕಚೇರಿ ಬಳಿ ಮಧ್ಯಾಹ್ನ 12 ಗಂಟೆಯಿಂದ ಸಾಯಂಕಾಲ 5 ಗಂಟೆ ವರೆಗೆ ತಾರೀಕ 18-6-51 ರಲ್ಲಿ ಎಡೆನಾಲ್ಕುನಾಡ ಕಿಗ್ಗಟ್ಟುನಾಡುಗಳ ಪರ ಬಂದ ಅರ್ಜಿ ನೇರಿ ವೀರಾಜಪೇಟೆ ಗಣಪತಿ ದೇವಸ್ಥಾನದ ಒಳಿ ಮಧ್ಯಾಹ್ನ 12 ಗಂಟೆಯಿಂದ ಸಾಯಂಕಾಲ 5 ಗಂಟೆಯ ವರೆಗೆ ತಾರೀಕು 20 6-51 ರಲ್ಲೂ ಓಟ್ಸ್ ರಿಕಾರ್ಡ್ ಮಾಡಲಾಗುತ್ತೆ. ಓಟರುಗಳ ಪಟ್ಟಿಯಲ್ಲಿ ಹೆಸರು ದಾಖಲ್ಲು ಪಡಿಸಿಕೊಂಡವರೆಲ್ಲರೂ ಓಟು ಕೊಡಬಹುದು.

ತಾರೀಕು ರಾ ಬ. ಪಿ ಎ ಚಂಗಪ್ಪ
20-6-51 ಪ್ರೆಸಿಡೆಂಟ್

ಮಾರಾಟಕ್ಕಿದೆ.

ಸೋಮವಾರಪೇಟೆ ನಾಡು ... ದೂರು ಗ್ರಾಮದಲ್ಲಿ, ಸರಕಾರ ರಸ್ತೆ 17 ನೇ ಮೈಲು ಕಲ್ಲಿನಿಂದ 3 ಫರ್ಲಾಂಗ ದೂರದಲ್ಲಿರುವ ಸುಮಾರು 1150 ಬಟಿ ಭೂಮಿ, ಕೊಕೋಲು ಬಾರೆಟ್ಟಿ ಹಾಕಿ, ಹಂಚು ಹಾಕಿದ ಮನೆ, ಫಲಿಗೆ ಬರಲಿಕ್ಕಾದ 6 ಏಕ್ರೆ ಕಿತ್ತಳೆ ತೋಟ, 3 ಏಕ್ರೆ ಜಾಗ ಪಗೈರೆ ಮಾರಾಟಕ್ಕಿದೆ. ಸದರಿ ಆಸ್ತಿಯು ತಂಬಾ ವಿಸ್ತೀರ್ಣವಿರುವ ಪೈಸಾರಿ ಜಾಗಕ್ಕೆ ತಗಲಿಕೊಂಡಿದೆ. ಅಲ್ಲದೆ ಮಾದಾಪುರ ಟವುನಿನ್ನಲ್ಲಿರುವ ತಿಂಗಳಿಗೆ ರೂ. 50/-ಬಾಡಿಗೆ ಬರುವ ದೊಡ್ಡ ಮನೆಯೂ ಮಾರಾಟಕ್ಕಿದೆ ಕ್ರಯ ರೂ. 45 ಸಾವಿರ ಅಥವಾ ಅದಕ್ಕಿಂತ ಹೆಚ್ಚಿಗೆ ಕೊಡುವವರು, ಈ ಕೆಳಗಿನ ವಿಳಾಸಕ್ಕೆ ಪತ್ರ ಬರೆಯಬಹುದು.

N. K. GANAPAYA.
Madapur post,
4-3 N. Coorg.

ನೀವು ಯಾರ ಪತ್ನಿ?

ಹಾಗಾದರೆ..........ಓದಿ!

ಲೇ:— "ಗುಪ್ತ"

ನೀವೊಬ್ಬ ಮಂತ್ರಿಯ, ಗವರ್ನರರ ಯಾ ಚೀಫ್ ಕಮಿಷನರ ಪತ್ನಿಯಾದರೆ ಎಂಥಾ ಆಡಂಬರ! ದೇಶದ ಹೆಂಗಸರಲ್ಲಿ ಪ್ರಥಮರೆಂದು ಪರಿಗಣಿಸಲ್ಪಡುವಿರಿ. ಈ ಗೌರವದ ಕಾರಣದಿಂದ ನೀವು ನಿಮ್ಮನ್ನೇ ಮರೆತು ನಿಮ್ಮ ಪತಿಯಂತೆಯೇ ಅಧಿಕಾರ ಚಲಾಯಿಸುವಿರಿ! ಹಿಂದೆ ನೀವು ಕಷ್ಟದ ಕಾಲವನ್ನು ಕಂಡಿರಬಹುದು. ಆದರೂ ಈಗಿನ ಬಂಗ್ಲೆ, ಕಾರು, ಜನರ ತಲೆಬಾಗಿದ ಸತ್ಕಾರ, ಇವುಗಳು ನಿಮ್ಮ ತಲೆ ತಿರುಗಿಸುತ್ತವೆ. ನಿಮ್ಮ ಹಳೆಯದನ್ನು ಬಿಟ್ಟು ಈ ಹೊಸ ಆವರಣಕ್ಕೆ ಸರಿಹೊಂದಿಕೊಳ್ಳುವ ಯತ್ನದಲ್ಲಿ ನಿಮ್ಮ ಸಮಯ ವ್ಯಯವಾಗುತ್ತದೆ. ಕೆಲವು ವೇಳೆ ನಿಮ್ಮ ಪತಿಯನ್ನು ಬೈಯ್ಯುವ ಪರಿಸ್ಥಿತಿಯೂ ಬರುತ್ತದೆ. ಸಾರ್ವಜನಿಕ ಸಭೆಗಳಿಗೆ ಆಹ್ವಾನಿಸಿ ಸತ್ಕರಿಸಿ ನಾಲ್ಕು ಮಾತಾಡಬೇಕೆಂದಾಗ ನಿಮ್ಮನ್ನು ನೀವೇ ಬೈದುಕೊಳ್ಳುವಿರಿ. ಬಹುಮಾನ ವಿತರಣೆಯ ಸಮಾರಂಭಗಳಲ್ಲಿ ನಗುಮುಖದಿಂದ ತಲೆಬಾಗಿ ಹೂಮಾಲೆ ಧರಿಸುವಿರಿ. ನೀವು ನಿಮ್ಮ ಪತಿಯ ರಾಜಕೀಯದಲ್ಲಿ ಆಸಕ್ತಿ ತೋರುವಿರಿ, ಏನೂ ಅರ್ಥವಾಗದಿದ್ದರೂ ಹರಟುವಿರಿ. ನಿಮ್ಮ ಮತದಾರ ಕ್ಷೇತ್ರದ ಮತದಾರರು ಯಾರಾದರೂ ಮನೆಗೆ ಬಂದಾಗ ಮುಖ ತಿರುಗಿಸುವಿರಿ. ಈ ಹಾಳು ಹಳ್ಳಿಗಾಡಿನ ಜನರಿಂದ ನೆಲಕ್ಕೆ ಹಾಸಿದ ಕಾಶ್ಮೀರ ಕಂಬಳಿ ಮಾಸುವದೆಂದು!

ನೀವು ಸರಕಾರಿ ಗಜೆಟೆಡ್ ಉದ್ಯೋಗಿಯ ಪತ್ನಿಯಾಗಿದ್ದರೆ ವರ್ಷ ವರ್ಷಗಳ ಅಲಸಿ ಜೀವನದಿಂದ ಕೊಬ್ಬಿ ಬೆಳೆದು ದಪ್ಪವಾಗಿರುವಿರಿ. ನಿಮಗೆ ಚಿಂತೆ ದುಃಖಗಳ ಪರಿವೆ ಇಲ್ಲ. ಆಳುಗಳು ಮಾಡುವ ಅತೀ ಕ್ಷುಲ್ಲಕ ತಪ್ಪುಗಳಿಗೂ ಕಿಡಿಕಿಡಿಯಾಗುವಿರಿ. ನಿಮ್ಮ ಸಮಾನತೆಯವರೊಡನೆ ಮಾತ್ರ ನೀವು ಮಿಳಿತರಾಗುವದರಿಂದಲೂ, ಪ್ರತಿ ದಿನ ಊಟ, ಸತ್ಕಾರಗಳ ನಿರ್ವಾಹದಿರುವುದರಿಂದಲೂ ದೇಶದಲ್ಲಿ ರೇಶನ್ ಪದ್ಧತಿ ಜಾರಿಯಲ್ಲಿದೆಯೆಂಬುದರ ಅರಿವೇ ಆಗುವುದಿಲ್ಲ. ನಿಮಗೆ ಸಂತತಿ ಕಡಿಮೆ ಇದ್ದು ಮನೆಯಲ್ಲಿ ಗಲಾಟೆ ಕಡಿಮೆ. ಆಳುಗಳ ಪಡೆಯೇ ಮನೆಯಲ್ಲಿರುವದರಿಂದಲೂ, ಪತಿಯ ಆಫೀಸಿನಲ್ಲಿ ಕೆಲಸ ಮಾಡುವ ನೌಕರರನ್ನೂ ಬೇಕಾದಾಗ ನೀವು ಉಪಯೋಗಿಸಿಕೊಳ್ಳಬಹುದಾದುದರಿಂದಲೂ, ನಿಮಗೆ ಬೇಕುಬೇಡಗಳ ಗೊಡವೆ ಇರಲಾರದು. ನಿಮ್ಮ ಪತಿಯು ಕೆಳ ಅಂತಸ್ತಿನಿಂದ ಮೇಲೇರಿ ಈಗ ಗಜೆಟೆಡ್ ಆಗಿದ್ದರೆ ಅದರಂತೆ ನೀವೂ ಮಾರ್ಪಾಡಾಗಬೇಕಾದುದು ಅನಿವಾರ್ಯ. ಹಾಗೆ ಬದಲಾವಣೆಯಲ್ಲಿ ಎತ್ತರ ಹಿಮ್ಮಡಿಯ ಪಾದರಕ್ಷೆ, ಕ್ರೀಮ್, ಲಿಪ್‌ಸ್ಟಿಕ್‌ಗಳು ಬೇಕೆಂದೆನಿಸಿದರೂ ಸಮಾಜದ ಹೆದರಿಕೆಯಿಂದ ತಡವರಿಸಬೇಕಾಗುತ್ತದೆ.

ನೀವು ಸರಕಾರಿ ಖಚೇರಿಯ ಗುಮಾಸ್ತರೊಬ್ಬರ 'ಬೀಬಿ'ಯಾಗಿದ್ದರೆ ನಿಮ್ಮ ಆಸೆ ಭರವಸೆಗಳೇನೋ ಹಿರಿದಾದುದು. ಆದರೆ ಅವನ್ನು ಸಾಧಿಸುವ ಮಾರ್ಗ ಮಾತ್ರ ಕಿರಿದು. ನಿಮ್ಮ ಮೇಲಿನವರನ್ನು ಭಯದಿಂದ ನೋಡುವಿರಿ. ನಿಮ್ಮ ಕೆಳಗಿನವರನ್ನು ಕಡೆಗಣಿಸುವಿರಿ. ನಿಮ್ಮ ಮೇಲಿನವರ ಸೀರೆ, ಉಡುಗೆಗಳನ್ನು ನೋಡಿ ಅದರಂತೆ ಪಡೆಯಲು ಯತ್ನಿಸುವಿರಿ. ಪತಿದೇವನನ್ನು ಕಾಡುವಿರಿ. ಸಧ್ಯಮದಲ್ಲಿ ಪತಿಗೆ ವಂಚಿಸಿ, ಒಳಗಿಂದ ಪಡೆಯುವಿರಿ. ಹೇಗಾದರೂ ನಿಮ್ಮ ಮದುವೆಯ ಕಾಲಕ್ಕೆ ತವರುಮನೆಯಿಂದ ಕೊಟ್ಟ ಸೀರೆಗಳೇ ನಿಮ್ಮ ಅಮೂಲ್ಯ ಭಂಡಾರ. ಸಾಮಾಜಿಕ ಕೂಟಗಳಲ್ಲಿ ಇವೇ ನಿಮ್ಮ ಗೌರವವನ್ನು ಕಾಪಾಡುವವು. ನೀವು ಹೆತ್ತ ಮಕ್ಕಳ ಪಡೆಯು ನಿಮಗೆ ಭಾರವೆನಿಸುವದು. ಆದರೂ ನೀವು ಮಕ್ಕಳನ್ನು ಹಡೆಯುವದರಿಂದ ವಿಶ್ರಾಂತಿ ತೆಗೆದುಕೊಳ್ಳಲಾರಿರಿ!

ನೀವು ಪತ್ರಿಕೋದ್ಯೋಗಿಯ ಪತ್ನಿಯಾಗಿದ್ದರೆ ಏನು ದುರ್ದೈವ! ನಿಮ್ಮ ಪತಿಯು ಇಡೀ ಜಗತ್ತಿನ ಆಗುಹೋಗುಗಳನ್ನು, ಮಾನವಗಣದ ನಡತೆ ನೀತಿಗಳನ್ನು ಜನ ಜಂಗುಳಿಯ ಹೃದಯ ಪರೀಕ್ಷೆಯನ್ನು ಮಾಡುವದರಲ್ಲಿ ತಲ್ಲೀನರಾಗಿರುವರೇ ವಿನಾ ನಿಮ್ಮ ಹೃದಯವನ್ನು ಅರಿಯಲು ಯತ್ನಿಸರು. ನೀವು ಅವರಿಗಾಗಿ ಮಧ್ಯರಾತ್ರಿಯ ವರೆಗೆ ದೀಪ ಉರಿಸುತ್ತಾ ಕಾಯಬೇಕಾಗುವದು. ಮನೆಯ ಸರ್ವ ಜವಾಬ್ದಾರಿಯನ್ನು ನೀವೆ ವಹಿಸಬೇಕಾಗುವದು. ಮನೆಯಲ್ಲಿ ತೊಂದರೆ ಇರಲಿ, ಅನ್ನವೇ ಇಲ್ಲದಾಗಿರಲಿ ತನ್ನ ಕೆಲಸ, ಭಾವನೆಗಳಲ್ಲಿ ಆತನು ತಲ್ಲೀನನಾಗಿರುತ್ತಾನೆ. ನೀವು ಅವರೊಂದಿಗೆ ಇದ್ದರೂ ಅವರು ನಿಮ್ಮೊಂದಿಗೆ ಇರಲಾರರು!

ನೀವು ಸೈನ್ಯಾಧಿಕಾರಿಯ ಅರ್ಧಾಂಗಿಯಾಗಿದ್ದರೆ ಜೀವನವು ರಮ್ಯವಾಗಿ ನಿಮಗೆ ತೋರಬಹುದು. ಒಪ್ಪರ್ ಖಯಾಮನಂತೆ ತಿಂದು ಉಂಡು ಸಂತೋಷದಲ್ಲಿರುವದೇ ಜೀವನವೆಂದು ನಂಬಿದ ಪತಿಯ ಪ್ರೇರಣೆಯಂತೆ ನೀವು ಕುಣಿಯುವಿರಿ. ಪಾರ್ಟಿಗಳು ಔತಣಗಳು, ಡಾನ್ಸ್, ಪಾನೀಯಗಳು ಸೊಗಸೆನಿಸುವವು. ಸಮಾಜದ ಓಬೀರಾಯನ ನೀತಿ ನಡತೆಯ ತತ್ವಗಳು ನಿಮಗೆ ಲಗಾವಾಗಲಾರವು. ನಿಮ್ಮ ಪತಿದೇವನು ನಿಮ್ಮನ್ನು ಊರಲ್ಲಿ ಬಿಟ್ಟು ರಣಕ್ಷೇತ್ರಕ್ಕೆ ಹೋಗಿ ನಿಮಗೆ ಗೋಷ್ಠಿಯನ್ನೇ ಮರೆಯಬಹುದು. ಅಲ್ಲಿ ಅವರು ತಮ್ಮ ಮನಸೊಪ್ಪಿದವರೊಡನಿರಬಹುದು. ಆದರೆ ಅದು ನಿಮ್ಮ ವಿವಾಹ ಜೀವನಕ್ಕೆ ಬಾಧಕವಲ್ಲ! ನೀವೂ ಕೂಡ ನಿಮ್ಮ ಕಾಠಿಪಲ್ಲಿ ಕುಳಿತು ನಿಮಗೊಪ್ಪಿದವರನ್ನು ಸಂಜೆಗೆ ಊಟಕ್ಕೆ ಕರೆಯಲು ಸ್ವತಂತ್ರರು.

ನೀವು ಹಳ್ಳಿಯ ರೈತನೊಬ್ಬನ ಸ್ತ್ರೀಯ ತವೆಯಾಗಿದ್ದರೆ ನಿಮ್ಮ ಸ್ಥಿತಿಯನ್ನು ವರ್ಣಿಸಲು ಅಸಾಧ್ಯ. ನೀವು ಮನೆಯ ಸರ್ವ ಕೆಲಸದ ಜವಾಬ್ದಾರಿ ಹೊರಬೇಕು. ಅಡಿಗೆಯನ್ನು ಕಾಲಕಾಲಕ್ಕೆ ಮಾಡಿ ಪತಿಯೊಡನೆ ಗದ್ದೆಯಲ್ಲಿ ದುಡಿಯಲು ತಯಾರಾಗಬೇಕು. ನಿಮ್ಮ ದಿನವು ಬೆಳಗ್ಗಿನ ಐದು ಗಂಟೆಗೆ ಪ್ರಾರಂಭವಾದರೆ ರಾತ್ರಿ ಹತ್ತು ಗಂಟೆಗೆ ಅಂತ್ಯವಾಗುವದು. ಮನೆಯಲ್ಲಿ ಮಲಗಲು ನೀವು ತಡೆಯುವರಾದರೆ ಬೆಳಗ್ಗೆ ಏಳಲು ಮೊದಲಿಗರು. ನಿಮ್ಮ ಜೀವನವಿಡೀ ದುಡಿತ. ಆಳುಗಳ ಗಂಧವಿಲ್ಲದ ಮನೆ ನಿಮ್ಮದು. ಸಂಸಾರದ ಸರ್ವಭಾರ ನಿಮ್ಮ ಹೆಗಲಿನ ಮೇಲೆ. ವರ್ಷಕ್ಕೊಮ್ಮೆ ನಡೆಯುವ ಗ್ರಾಮದ ಒಂದೆರಡು ಹಬ್ಬಗಳೇ ನಿಮ್ಮ ಸರ್ವ ಸಿನೆಮಾ ನಾಟಕಗಳು! ಮದುವೆಯ ಕಾಲಕ್ಕೆ ತಂದೆ ತಾಯಿಗಳು ಕೊಟ್ಟ ಉತ್ತಮ ಬಟ್ಟೆಬರೆಗಳನ್ನು ತೊಡಲು ನಿಮಗೆ ಅವಕಾಶವೇ ದೊರೆಯಲಾರದು. ನಿಮಗೆ ಸುಖ ಸಂತೋಷ ಆನಂದಗಳ ಪರಿವೆ ಇಲ್ಲ. ಎಲ್ಲವನ್ನೂ ಕರ್ತವ್ಯ ದೃಷ್ಟಿಯಿಂದ ಮಾಡುವಿರಿ. ಮಕ್ಕಳನ್ನು ಹಡೆಯುವದೂ ನಿಮ್ಮದೊಂದು ಕರ್ತವ್ಯವೆ!

ನೀವು ಡಾಕ್ಟರರೊಬ್ಬರ ಅರಸಿಯಾಗಿದ್ದರೆ ಇತರರ ಕಾಯಿಲೆಯನ್ನು ಗುಣಪಡಿಸುವ ನಿಮ್ಮ ಪತಿಯ ಕೆಲಸವು ನಿಮ್ಮ ಕಾಯಿಲೆಯಾಗಿ ಪರಿಣಮಿಸುವದು. ನಿಮ್ಮ ಪತಿಯು ಜೊತೆಯಲ್ಲಿ ಸರಸವಾಡುತ್ತಿರುವಾಗಲೇ ಕಾಯಿಲಸ್ಥರು ನಿಮ್ಮ ಪತಿಯನ್ನು ಕರೆದೊಯ್ಯುವರು. ನಿಮಗೆ ತುಂಬಾ ಹಣವಿರಬಹುದು. ಆದರೆ ಅದನ್ನು ಸರಿಯಾಗಿ ಭೋಗಿಸಲು ಬೇಕಾದಾಗ ಪತಿ ಇರಲಾರ. ಒಂದೆಡೆ ಐಶ್ವರ್ಯವಿರಬಹುದು. ಆದರೆ ಮಗದೊಂದೆಡೆ ತಿರಸ್ಕೃತಳಂತೆ ಒಬ್ಬಳೇ ಇರಬೇಕು. ಜೀವನದಲ್ಲಿ ಒಂದು ಶೂನ್ಯತೆ ತೋರುವದು.

ನೀವು ಕಂಟ್ರಾಕ್ಟರು ಯಾ ವ್ಯಾಪಾರಸ್ಥರ 'ಬೇಗಂ' ಆಗಿದ್ದರೆ ನಿಮ್ಮ ಸುತ್ತಮುತ್ತೆಲ್ಲವೂ ದೊಡ್ಡದಾಗಿ ತೋರುವದು. ದೊಡ್ಡ ಹಣ, ದೊಡ್ಡ ಬಂಗ್ಲೆ, ದೊಡ್ಡ ಜನರ ಸವಾರಿ, ದೊಡ್ಡ ಹೊಟ್ಟೆ ಸರ್ವವೂ ದೊಡ್ಡವುಗಳು! ನಿಮ್ಮ ಪತಿಗೆ ಒಂದೇ ವಿಚಾರದ ಚಾವು. "ಹಣವೇ ಸರ್ವ ಗುಣ." ನಿಮ್ಮ ಜೀವನವು ಸರಾಗ ನಡೆಯುತ್ತದೆ. ನೀವು ಒಡವೆ, ಚಿನ್ನ ಬೆಳ್ಳಿಗಳಿಂದ ಶೋಭಿತರಾಗುವಿರಿ. ನಿಮ್ಮ ಭಾವನೆ ಗಾಂಭೀರ್ಯಗಳು ಆ ಅಂತಸ್ತಿನಲ್ಲೇ ಅಳೆಯಲ್ಪಡುವವು.

ನೀವು ಸಮಾಜದ ವನಿತೆಯಾಗಿ ಯಾರು ನಿಮಗಾಗಿ ಮೆಚ್ಚಮಾಡುವರೋ ಅವರೆಲ್ಲರ "ಸೋದರಿ" ಯಾದರೆ ನಿಮ್ಮ ಸ್ಥಿತಿಯು ಬೆಂಜಿಸುವಂಥಾದ್ದು! ನಿಮಗೆ ಮದುವೆಯೆಂಬುದು ಕಂಟ್ರಾಕ್ಟಿನಂತೆ; ಇಲ್ಲವೆ ಸಹಕಾರ ಪಾಲುಗಾರಿಕೆ ಇದ್ದಂತೆ. ಯಾರೂ ಎಷ್ಟೆಷ್ಟು ಬಂಡವಾಳ ಹಾಕುವರೋ ಅಷ್ಟಷ್ಟು ಲಾಭ ಪಡೆಯುವರು. ನಿಮ್ಮ ಉಡುಪಿನ ಆಕರ್ಷಣೆಯಿಂದ ಜಗತ್ತಿನ ನೀತಿ, ನಡತೆಗಳನ್ನು ನಿದ್ದೆಗೀಡು ಮಾಡಿ ಮರ್ತಿಸುವಿರಿ. ಕ್ಲಬ್ಬೇ ನಿಮ್ಮ ಜೀವನ ರಾತ್ರಿಯೇ ನಿಮ್ಮ ಹಗಲು. ಮಾದಕ ಪಾನೀಯಗಳ ವಾಸನೆ, ನಿಮ್ಮ ಲಿಪ್ ಸ್ಟಿಕ್, ರೂಜ್‌ಗಳ ಸವಾಸನೆಯಿಂದ ನಿಮ್ಮ ಹೃದಯದ ಹಾಗೂ ಮೆದುಳಿನ ಬಾಗಿಲುಗಳನ್ನು ಮುಚ್ಚಿ ಮದಾಂಧತೆಯಿಂದ ವರ್ತಿಸುವಿರಿ.

ಈ ಮೇಲಿನ ಯಾವುದೂ ನೀವಲ್ಲದಿದ್ದರೆ ನೀವು ಯಾರೆಂಬುದು ಬಹುಶಃ ನಿಮಗೆ ತಿಳಿದಿರಲಾರದು. ಇನ್ನೊಬ್ಬರು ಇದನ್ನು ತಿಳಿಯಬೇಕೆಂದೂ ನೀವು ಇಚ್ಛಿಸಿರಲಾರಿರಿ!

ವಾರ್ತೆಗಳು

ಭಾರತ ಸರಕಾರವು ಕಡಲೆಬೇಳೆ ಮತ್ತು ಬೇಸನ್ ಪರಮಾವಧಿ ಧರಗಳನ್ನು ನಿರ್ಧರಿಸಿದೆ. ಇದರ ಪ್ರಕಾರ ಮುಂಬಯಿ, ಹೈದರಾಬಾದ, ಮೈಸೂರು, ತಿರುವಾಂಕೂರು, ಕೊಚ್ಚಿ, ಕೊಡಗು ಮದ್ರಾಸುಗಳಲ್ಲಿ ಮಣಕ್ಕೆ ೧೬-೧೮ ರೂಪಾಯಿಗಳು.

ದೇಶದ ಸ್ವಾತಂತ್ರ್ಯ ರಕ್ಷಣೆಗಾಗಿ ಗಂಡಾಂತರಗಳನ್ನು ಎದುರಿಸಬೇಕಾದಲ್ಲಿ ಕನಿಷ್ಠ ೫೦ ಲಕ್ಷ ಸೈನ್ಯ ಬಲ ಬೇಕೆಂದು ಭಾರತದ ಮುಖ್ಯ ಸೇನಾಪತಿ ಜನರಲ್ ಕೆ. ಎಂ. ಕಾರ್ಯಪ್ಪನವರು ಡೆಹರಾಡೂನಿನಲ್ಲಿ ನಡೆಸಿ ಪತ್ರಿಕಾ ಪ್ರತಿನಿಧಿಗಳೊಡನೆ ಮಾತಾಡುತ್ತಾ ಹೇಳಿದರು.

EAST & WEST INSURANCE CO., Ltd.

(ESTD: 1913)

H. O:- 'East & West Building', Apollo street Fort, Bombay No. 1.

STANDS FOR

SAFETY, SECURITY & SERVICE.

It is a progressive concern offering attractive schemes for Insurance suitable to all needs.

For Particulars apply to:-

K. P. JAMBULINGAM.
Branch Secretary,
329, Thambu Chetty St.
Madras-1.

OR

C. C. NANJAPPA.
Inspector of Agencies,
Gonikopal.
S. Coorg.

4-2

ಕೊಡಗು

ತಾ. ೨೫-೫-೧೯೫೧ನೇ ಶುಕ್ರವಾರ

ಜಾತೀಯವಾದ

ನಮ್ಮ ರಾಜ್ಯಘಟನೆಯು ಗುರಿಯು ಭರತ ಖಂಡವನ್ನು ಜಾತ್ಯಾತೀತ ರಾಷ್ಟ್ರವಾಗಿ ಕಟ್ಟುವದೆಂಬುದನ್ನು ಎಲ್ಲರೂ ಬಲ್ಲರು. ನಮ್ಮ ರಾಜ್ಯಘಟನೆಯು ಪರಮ ಗುರಿಯಾದ ಇದು ಸಾಧ್ಯವಾಗಬೇಕಾದರೆ ಜನತೆಯ ಜೀವನದಲ್ಲಿ ಜಾತೀಯವಾದ ಕಹಿಯು ಇಲ್ಲದಾಗಬೇಕು. ಆದರೆ ಭರತಖಂಡದ ಸದ್ಯದ ಪರಿಸ್ಥಿತಿಯಲ್ಲಿ ಜಾತೀಯವಾದವು ಆಳವಾಗಿ ಬೇರು ಬಿಟ್ಟು ಬೆಳೆದಿರುವದು ತೋರಿಬರುವದು. ಭಾರತದಲ್ಲಿ ಮಹಾ ಸಮಸ್ಯೆಯಾಗಿ ಪ್ರತಿ ಹೆಜ್ಜೆಯಲ್ಲೂ ಎಡೆನಿಂತಿದ್ದ ಹಿಂದೂ ಮುಸ್ಲಿಂ ಜಾತೀಯವಾದವು ಸ್ವಾತಂತ್ರ್ಯದ ಉದಯದ ನಂತರ ಪಾಕಿಸ್ಥಾನದ ವಿಭಾಗದ ಮೇಲೆ ಉಗ್ರ ರೂಪವನ್ನು ತಾಳಿತ್ತು. ಕಡೆಗೆ ಅದು ಕ್ರಮಶಃ ಶಮನಗೊಂಡು ಇಂದು ಅದು ಭಾರತದಲ್ಲಿ ಪ್ರಧಾನ ಪ್ರಶ್ನೆಯಾಗಿಲ್ಲ. ಹಿಂದೂ ಮುಸ್ಲಿಂ ಜಾತಿಭೇದವಿದ್ದರೂ ಮುಸ್ಲಿಮರು ಭಾರತದಲ್ಲಿ ನ್ಯಾಯಬದ್ಧ ನಾಗರಿಕರಾಗಿ ಬಾಳಬೇಕೇ ವಿನಾ ಸಂಕೀರ್ಣ ದೃಷ್ಟಿಯ ಜಾತೀಯವಾದಿಗಳಾಗಿ ಅಲ್ಲ. ಅದಕ್ಕನುಗುಣವಾಗಿ ಮುಸ್ಲಿಮರು ಭಾರತದಲ್ಲಿ ಮಾರ್ಪಾಡು ಗೊಳ್ಳುತ್ತಿದ್ದಾರೆ.

ಆದರೆ ಹಿಂದುಗಳೊಳಗೆ ವಿಪರೀತವಾದ ಜಾತೀಯ ಪಂಗಡಗಳು ತಲೆದೋರಿ ಅನಿಷ್ಟ ಪರಿಣಾಮವನ್ನು ಮಾಡುತ್ತಿವೆ. ಬ್ರಾಹ್ಮಣರು, ಒಕ್ಕಲಿಗರು, ಸಿಕ್ಕರು, ಪಂಜಾಬಿಗಳು, ಬಂಗಾಳಿಗಳು, ಗುಜರಾತಿಗಳು, ತಮಿಳರು ಈ ರೀತಿಯ ಜಾತೀಯ ಮತ್ತು ಪ್ರಾಂತೀಯ ಭೇದವು ತಲೆದೋರಿ ಕೊಡಗಿದೆ.

ಹಿಂದೂ ಧರ್ಮದ ಹೆಸರಿನಲ್ಲಿ 'ಮುಟ್ಟಬೇಡ ದೂರನಿಲ್ಲು' ಎಂದು ಕೆಲವರನ್ನು ದೂರಕ್ಕೆ ತಳ್ಳಲಾಗುತ್ತಿದ್ದರೆ 'ಕಲಿಯುವದು ನಿನ್ನ ಕೆಲಸವಲ್ಲ' ಎಂದು ಕೆಲವರಿಗೆ ಬುದ್ಧಿ ಹೇಳಿ ಬಾಯಿಮುಚ್ಚಿಸಲಾಗುತ್ತಿದೆ. ಈ ಜಾತೀಯವಾದವು ಸರಕಾರಿ ನೌಕರಿಯ ಆಯ್ಕೆಯಲ್ಲೂ ತಲೆ ಇಕ್ಕಿ ನೌಕರರಲ್ಲಿಯೂ ವರ್ಗಕಲಹ ಪ್ರಾರಂಭವಾಗಿತ್ತು. ಈ ಮುನ್ನ ಶಾಲಾ ಕಾಲೇಜುಗಳಲ್ಲಿಯೂ ಜಾತೀಯವಾದವು ತಲೆದೋರಿ ಇಂಥಾ ಜಾತಿಯವರಿಗೆ ಇಷ್ಟಿಷ್ಟು ಸ್ಥಳಗಳೆಂಬ ಅನಿಷ್ಟ ವಿಭಾಗವು ಜಾರಿಯಲ್ಲಿ ಬಂದಿತ್ತು. ಹಿಂದೂ ಸಮಾಜದ ಇಂಥಾ ಹುಳುಕನ್ನು ಸರಿಪಡಿಸಿ ಅಖಂಡವಾದ ಜಾತ್ಯಾತೀತ ರಾಷ್ಟ್ರವನ್ನು ಕಟ್ಟಲು ಕೇಂದ್ರ ಸರಕಾರವು ತಯಾರಾಗಿದ್ದರೂ, ಜಾತೀಯವಾದಿ ಮಂತ್ರಿಗಳಿಂದ ನಡೆಸಲ್ಪಡುವ ಹಲವು ಪ್ರಾಂತಗಳಲ್ಲಿ ಜಾತೀಯವಾದವು ತಾನೇ ತಾನಾಗಿತ್ತು. ಕಾಲೇಜುಗಳಿಗೆ ವಿದ್ಯಾರ್ಥಿಗಳನ್ನು ಅವರ ಯೋಗ್ಯತೆಯ ಅಳತೆಯಿಂದಲ್ಲದೆ ಜಾತಿಯ ದೃಷ್ಟಿಯಿಂದ ಸೇರಿಸಲಾಗದೆಂದು ಭಾರತದ ನ್ಯಾಯಾಸ್ಥಾನದ ಮಂಡಲಗಳು ಅಭಿಪ್ರಾಯವಿತ್ತ ಮೇಲೆ ಹಲವು ಪ್ರಾಂತಗಳು ಈ ಜಾತೀಯವಾದವನ್ನು ಇತ್ತಲಾಗಿ ಆಡಳಿತ, ವಿದ್ಯಾ, ಮತ್ತಿತರ ರಂಗಗಳಿಂದ ತೊಲಗಿಸಲು ಯತ್ನಿಸುತ್ತಿವೆ.

ಕೆಲವು ವರ್ಷಗಳ ಮಟ್ಟಿಗೆ ಹಿಂದುಳಿದ ಪಂಗಡಗಳಿಗೆಂದು ಕೆಲವು ಸ್ಥಾನಗಳನ್ನು ಕಾಯ್ದಿರಿಸಬೇಕೆಂಬುದನ್ನು ರಾಜ್ಯಘಟನೆಯು ಒಪ್ಪಿದ್ದರೂ ಕ್ರಮಶಃ ಇದು ರದ್ದಾಗುವದು. ಏಕೆಂದರೆ ರಾಷ್ಟ್ರವನ್ನು ಜಾತೀಯ ಪಂಗಡಗಳ ದೃಷ್ಟಿಯಿಂದ ಅಳೆಯಲಾಗದು. ಯಾವ ಕಾಲಕ್ಕಾದರೂ ಯಾವ ದೇಶದಲ್ಲಾದರೂ ಜಾತೀಯ ದೃಷ್ಟಿಯಿಂದ ನೋಡಿದರೆ ಒಂದು ಕೋಮು ಮತ್ತೊಂದಕ್ಕಿಂಥಾ ಹಿಂದುಳಿದಿರುವದು ವಾಸ್ತವವಾಗಿದೆ. ಹಾಗೆ ಹಿಂದುಳಿದಿದೆಯೆಂದು ಅಂಥಾ ಕೋಮುಗಳಿಗೆ ವಿಶೇಷ ಸವಲತ್ತನ್ನು ಒದಗಿಸಿ ಕೊಡುವದು ಸೂಕ್ತವಲ್ಲ. ರಾಷ್ಟ್ರವನ್ನು ಏಕವಾಗಿ, ಜನತೆ ಎಲ್ಲವೂ ನಾಗರೀಕರು, ಸಮಾನ ಹಕ್ಕು ಬಾಧ್ಯತೆಗಳುಳ್ಳವರು, ಪ್ರತಿಯೊಬ್ಬನಿಗೂ ತನ್ನ ವಿಕಾಸ, ಅಭಿವೃದ್ಧಿಗಳಿಗೆ ಸಮಾನ ಹಕ್ಕಿದೆಯೆಂಬ ತತ್ವದ ಮೇಲೆ ಪರಿಗಣಿಸಬೇಕೇ ವಿನಾ ಜಾತೀಯ ಪಂಗಡಗಳ, ಪ್ರಾಂತೀಯ ವಿಭಾಗಗಳ ದೃಷ್ಟಿಯಿಂದಲ್ಲ.

ಇಂದಿನ ಸಮಾಜ ರಚನೆಯಲ್ಲಿ, ಸರಕಾರದ ಆಡಳಿತದಲ್ಲಿ ಸರ್ವ ಪ್ರಜೆಗಳಿಗೆ ಸಮಾನವಾದ ಹಕ್ಕು ಬಾಧ್ಯತೆಗಳಲ್ಲದೇ ಹೆರೆ ಸಲ್ಲುವದು. ಅದನ್ನು ಒದಗಿಸುವದು ಸರಕಾರದ ಆದ್ಯ ಕರ್ತವ್ಯ. ಮೂಲ ಭೂತವಾದ ಆ ಹಕ್ಕುಗಳು ಪ್ರತಿಯೊಬ್ಬನಿಗೆ ದೊರೆತನಂತರವೇ ಸರ್ವರೂ ಸಮಾನವೇ ದಿಶೆಯಲ್ಲಿ ಹಿಂತು ನಾವೆಲ್ಲರು ಭಾರತೀಯರೆಂದು ಹೇಳುವರಲ್ಲದೆ ಅನ್ಯಥಾ ಸಾಧ್ಯವಾಗದು. ಘಟನೆಯಲ್ಲಿ ಜಾತ್ಯಾತೀತ ರಾಷ್ಟ್ರದ ಗುರಿಯನ್ನಿಟ್ಟಿದ್ದರೂ ಆ ಗುರಿಸಾಧನೆಗೆ ಮಹಾಕಾರ್ಯ ಸಕ್ರೀಯವಾಗಿ ನಡೆಯಬೇಕು. ಪ್ರತಿಯೊಬ್ಬ ಪ್ರಜೆಯ ಜೀವನ ಮಟ್ಟ ಏರಿದಾಗಲೇ ಜಾತೀಯ ಭೂತವು ಮಾಯವಾಗುವದು. ಇಂದು ವಿದ್ಯಾವಂತನಾಗಿ, ಪದವಿಯಲ್ಲಿರುವ ಹರಿಜನರನ್ನು ಯಾರೂ ಮುಟ್ಟಲಾಗದವನೆಂದು ಭಾವಿಸುವದಿಲ್ಲ. ಅವರಲ್ಲಿ ಭೇದಭಾವವಿಲ್ಲ. ಎಲ್ಲರೂ ಒಂದಾಗಿ ಕಲೆತು ವರ್ತಿಸುವರು. ಆದ್ದರಿಂದ ಭಾರತವು ಜಾತ್ಯಾತೀತ ರಾಷ್ಟ್ರವಾಗಬೇಕಾದರೆ ಸಾಮಾಜಿಕ, ಆರ್ಥಿಕ ಮೊದಲಾದ ರಂಗದ ಏರುತಗ್ಗುಗಳು ನಾಶವಾಗಬೇಕು. ಸರಕಾರದ ದೃಷ್ಟಿಯಲ್ಲಿ ತನ್ನ ಪ್ರಜೆಗಳೆಲ್ಲ ಒಂದು ಎಂದಾದರೆ ಕ್ರಮಶಃ ಅದು ಸಮಾಜದಲ್ಲಿಯೂ ಒಂದಾಗಲು ಅನುವಾಗುವದು.

ನಮ್ಮ ದೇಶದಲ್ಲಿ ಒಡಕಿಗೂ, ನಮ್ಮ ಸರ್ವದಿನೆಯ ಅವನತಿಗೂ ನಮ್ಮ ಜಾತೀ ದೃಷ್ಟಿಯೇ ಕಾರಣ. ಚರಿತ್ರೆಯನ್ನು ಪರಿಶೀಲಿಸಿ ನೋಡಿದರೆ ಬುದ್ಧನ ಯೂ ಅಶೋಕನ ಕಾಲದಲ್ಲಿ ಹರಿಜನ ಬ್ರಾಹ್ಮಣರೆಂಬ ಭೇದವಿಡದೆ ಪ್ರತಿಯೊಬ್ಬನೂ ಸಹೋದರನನ್ನು ಸಮಾನನೆಂದು ಪರಿಗಣಿಸಿ ಬದುಕಿದ ಆ ಕಾಲದಲ್ಲಿ ಹಿಂದೂದೇಶದ ಕೀರ್ತಿ ಮೆರೆದಿತ್ತು. ಹಿಂದೂ ಮುಸ್ಲಿಮರಲ್ಲಿ ಅನ್ಯೋನ್ಯತೆಯನ್ನು ಸಂಸ್ಥಾಪಿಸಿದ್ದ ಅಕ್ಬರನ ಕಾಲದಲ್ಲೂ ಭರತಖಂಡದ ಕೀರ್ತಿಗೆ ಚ್ಯುತಿ ಇರಲಿಲ್ಲ. ಆದರೆ ಆ ಜಾತಿ, ಈ ಜಾತಿ ಎಂಬ ವಾದ ತಲೆಹಾಕಿದಾಗಲೆಲ್ಲ ನಮ್ಮ ಅವನತಿಯೂ ಆಗಿದೆ. ಆದ್ದರಿಂದ ಭರತಖಂಡದ ಉನ್ನತಿ, ಉತ್ಕರ್ಷವಾಗಬೇಕಾಗದರೆ ಈ ಜಾತೀಯತೆ ತೊಲಗದಿದ್ದರೆ ಆಗದು. ಆದ್ದರಿಂದ ಪ್ರತಿಯೊಬ್ಬ ನಾಗರಿಕನೂ, ಪ್ರತಿ ಸರಕಾರಗಳೂ ಈ ಜಾತೀಯ ಐಕ್ಯತೆಯೂ ಜಾತ್ಯಾತೀತ ರಾಷ್ಟ್ರರಚನೆಯು ಗುರಿಗಾಗಿ ಶ್ರಮಿಸಬೇಕಾಗಿದೆ.

ವರ್ತಮಾನ.

ಫ್ರೇಜರ್‌ಪೇಟೆಯ ಶ್ರೀ ಎಸ್. ಎಸ್. ರಾಮಶೆಟ್ಟಿಯವರ ಮಗ ಶ್ರೀ ಚಂದ್ರಶೇಖರ ಇವರು ಮದ್ರಾಸು ವಿಶ್ವವಿದ್ಯಾಲಯದ ಎಂ. ಬಿ. ಬಿ. ಎಸ್. ಪರೀಕ್ಷೆಯಲ್ಲಿ ತೇರ್ಗಡೆಯಾಗಿರುವರು.

ಕೊಯಮುತ್ತೂರು ಎಗ್ರಿಕಲ್ಚರಲ್ ಕಾಲೇಜಿನಲ್ಲಿ ಓದುತ್ತಿದ್ದ ಶ್ರೀ ಪಾರುವಂಗಡ ಪಿ. ನಂಜಪ್ಪನವರು ಕಳೆದ ಬಿ. ಎಸ್‌ಸಿ. ಏಜಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವರು.

ಮೈಸೂರು ವಿಶ್ವವಿದ್ಯಾಲಯದ ಇಂಟರ್ ಮೀಡಿಯೇಟ್ ಪರೀಕ್ಷೆಯಲ್ಲಿ ಶ್ರೀ ಕೆ. ಎ. ನಾಣಯ್ಯನವರು ಪಾಸಾಗಿರುವರು.

ಈ ವರ್ಷ ಬರುವ ಅಕ್ಟೋಬರ್ ತಾರೀಕು ೩ ರಿಂದ ಕ್ಷಯರೋಗ ನಿವಾರಣಾ ಸೀಲುಗಳನ್ನು ಮಾರಾಟ ಮಾಡುವ ವ್ಯವಸ್ಥೆಗಾಗಿ ಅದರ ಸಮಿತಿಯ ಸಭೆಯೊಂದನ್ನು ತಾ. ೨೮ರಲ್ಲಿ ಕೌನ್ಸಿಲು ಹಾಲ್‌ನಲ್ಲಿ ಏರ್ಪಡಿಸಲಾಗಿದೆ. ಅಖಿಲ ಭಾರತ ಕ್ಷಯರೋಗ ಸಂಘದ ಕಾರ್ಯದರ್ಶಿಯಾದ ಶ್ರೀ ಬಿ. ಎಂ. ಕಾರ್ಯಪ್ಪನವರು ಮಿಟಿಂಗಿಗೆ ಬರುವರೆಂದು ತಿಳಿದು ಬಂದಿದೆ.

ಕೊಡಗು ವ್ಯವಸಾಯ ಆದಾಯ ತೆರಿಗೆಯ ಮಸೂದೆಗೆ ಯೂನಿಯನ್ ಪ್ರೆಸಿಡೆಂಟರ ಒಪ್ಪಿಗೆ ದೊರೆತಿರುವದು.

ಪ್ರಖ್ಯಾತ ಭಾರತ ನಾಟ್ಯಗಾರರಾದ ಹುಬ್ಬಳ್ಳಿಯ ಶ್ರೀ ಗೋಪಿಚಂದರವರ ಶಿಷ್ಯೆಯಾಗಿ ನೃತ್ಯ ಅಭ್ಯಾಸ ಮಾಡುತ್ತಿರುವ ಶ್ರೀ ಕೋಟೆರಾಂಡ ಗೀತಾ ಬೋಪಯ್ಯನವರು ತಾ. ೨೧ ರಲ್ಲಿ ಮಡಿಕೇರಿ ಕಾವೇರಿ ಮಹಲ್‌ನಲ್ಲಿ ನೃತ್ಯಾಭಿನಯ ಮಾಡಿದರು. ಕೊಡಗಿನ ಚೀಫ್ ಕಮಿಷನರು ಅಧ್ಯಕ್ಷತೆ ವಹಿಸಿದ್ದರು.

ಪೊನ್ನಪ್ಪಪೇಟೆ ಗ್ರಾಮಾಭಿವೃದ್ಧಿ ಕೇಂದ್ರದಲ್ಲಿ ಜಾನುವಾರುಗಳ ಜಾತ್ರೆಯು ತಾ. ೨೬ ರಿಂದ ೨೮ ರ ವರೆಗೆ ನಡೆಯುವದೆಂದು ತಿಳಿಯ ಬರುತ್ತದೆ.

ಮಡಿಕೇರಿ ಸಿವಿಲ್ ಆಸ್ಪತ್ರೆಯ ರೋಗಿಗಳ ಮನೋರಂಜನೆಗಾಗಿ ಆಸ್ಪತ್ರೆಯಲ್ಲಿ ವಯರ್‌ಲೆಸ್ ರೇಡಿಯೋ ಒಂದನ್ನು ಸ್ಥಾಪಿಸಿ ಪ್ರತಿಯೊಂದು ವಾರ್ಡಿನಲ್ಲಿಯೂ ಲೌಡ್‌ಸ್ಪೀಕರುಗಳನ್ನಿಟ್ಟಿರುವರೆಂದೂ ಇದಕ್ಕೆ ಬೇಕಾದ ಹಣವನ್ನು ಸಿವಿಲ್ ಸರ್ಜನರಾದ ಶ್ರೀ. ಟಿ. ಬಿ. ಮೇದಪ್ಪನವರ ಪ್ರಯತ್ನದಿಂದ ಬ್ರಿಗೇಡಿಯರ್ ಅಪ್ಪಾರಂಡ ಸಿ. ಐಯ್ಯಪ್ಪನವರು ಕೊಟ್ಟಿರುವರೆಂದೂ ತಿಳಿಯ ಬರುತ್ತದೆ.

ತಾರೀಕು ೨೧ ರಲ್ಲಿ ನಾಪೋಕ್ಲು ನಾಡು ಸಹಕಾರಿ ಬ್ಯಾಂಕನ್ನು ತೆರೆಯುವ ಸಮಾರಂಭವು ಕೊಡಗಿನ ಚೀಫ್ ಕಮಿಷನರ್ ಕೆ. ಕ. ದೇಡಿಯವರ ಅಧ್ಯಕ್ಷತೆಯಲ್ಲಿ ನಡೆಯಿತು.

ಸಲ್ಲಕ್ಷಣ.

ಸಣ್ಣ ಮಕ್ಕಳ ಬಟ್ಟೆಗಳನ್ನು ಸ್ತ್ರೀಯರೇ, ಒಗೆದು ಶುದ್ಧ ಮಾಡುವಂತೆಯೇ ಪುರುಷರೂ ಮಾಡಬೇಕು. ಇದು ಪ್ರಜಾಪ್ರಭುತ್ವ ಸಂಸಾರದ ಸಲ್ಲಕ್ಷಣ ಎಂಬ ವಿಚಾರ ಬ್ರಿಟಿಶ ನ್ಯಾಶನಲ್ ಮ್ಯಾರೇಜ್ (ಬ್ರಿಟಿಶ ರಾಷ್ಟ್ರೀಯ ವಿವಾಹಸಮಿತಿ) ಸಮಿತಿಯ ವಾರ್ಷಿಕ ಪರಿಷತ್ತಿನಲ್ಲಿ ಚರ್ಚೆಗೆ ಬಂದಿದ್ದಿತು.

ಪ್ರೊ. ಬ್ರಿಯನ ಸ್ಟೇನ್ಲಿ ಇವರು ಈ ಬಗ್ಗೆ ವಾದಮಾಡುತ್ತ ಗಂಡನು ಹೆಂಡತಿಗೆ ಗೃಹಕೃತ್ಯದಲ್ಲಿ ಸಹಾಯಕವಾಗಬೇಕಾದದು ಸರಿಯಾದರೂ, ಮಕ್ಕಳ ಹೊಲಸು ಅರಿವೆಗಳನ್ನು ಗಂಡನೂ ಸಹ ತೊಳೆಯಬೇಕೆನ್ನುವುದು ಪ್ರಜಾಪ್ರಭುತ್ವಕ್ಕೆ ಸ್ವಲ್ಪ ಅತಿಯಾಯಿತೆಂದೇ ಗೊಣಗಿ ಕೊಂಡರು!

ವಿಷಾದ.

'ಕೊಡಗು ಟ್ರಾನ್ಸ್‌ಪೋರ್ಟ್ ಕಂಪೆನಿಯ ಬಸ್ ಚೇಸಿಸ್ ಒಂದನ್ನು ಮಾರಿದರೆಂದು ಕಂಪೆನಿಯವರು ದೂರು ಕೊಟ್ಟ ಮೇರೆ ಶ್ರೀ. ಉಗ್ಗಪ್ಪ ಅಚ್ಚಣ್ಣನವರನ್ನು ದಸ್ತಗಿರಿಮಾಡಿ ಜಾಮೀನು ಮೇರೆ ಬಿಡಲಾಗಿದೆ'ಯೆಂದು ತಪ್ಪಾಗಿ ಒಂದು ವರ್ತಿಯು ಕಳೆದ ವಾರದ ನಮ್ಮ ಸಂಚಿಕೆಯಲ್ಲಿ ಪ್ರಕಟವಾಗಿತ್ತು. ಇದಕ್ಕೆ ನಾವು ವಿಷಾದಿಸುತ್ತೇವೆ. ಆದರ ನಿಜಾಂಶ ಹೀಗಿದೆ. ಟ್ರಾನ್ಸ್‌ಪೋರ್ಟ್ ಕಂಪೆನಿಯ ಒಂದು ಚೇಸಿಸನ್ನು ಮಾರಿ ಅದರ ಹಣವನ್ನು ಕಂಪೆನಿಗೆ ಜಮಾಕೊಡಲಿಲ್ಲವೆಂದು ಕಂಪೆನಿಯವರು ಆ ಕಾಲಕ್ಕೆ ಕಂಪೆನಿಯ ಮೇನೇಜಿಂಗ್ ಡೈರೆಕ್ಟರಾಗಿದ್ದ ಶ್ರೀ. ಎ. ಸಿ. ಮಾದಪ್ಪನವರ ಮೇಲೂ, ಮೇನೇಜರಾಗಿದ್ದ ಶ್ರೀ ಉಗ್ಗಪ್ಪ ಅಚ್ಚಣ್ಣನವರ ಮೇಲೂ ಫಿರ್ಯಾದು ಪೋಲೀಸಿಗೆ ಕೊಟ್ಟಿರುತ್ತಾರೆಂದೂ ಈ ಬಗ್ಗೆ ತನಿಖೆ ನಡೆಯುತ್ತಿದೆಯೆಂದೂ ತಿಳಿಯ ಬಂದಿದೆ. ಈ ಸಂಬಂಧ ಶ್ರೀ. ಉಗ್ಗಪ್ಪ ಅಚ್ಚಣ್ಣ ಇವರ ದಸ್ತಗಿರಿಯಾದದ್ದಲ್ಲ.

ಕೆಲವು ತಿಂಗಳ ಹಿಂದೆ ಕೊಡಗು ಫಿಲ್ಮ್ ಎಕ್ಸ್‌ಛೇಂಜಿನ ಮಾಲೀಕರಾದ ಬಾಲಚಂದ್ ಶೇವ್‌ಚಂದ್‌ರವರನ್ನು ಬೆದರಿಸಿ ಕೆಲವು ಲಿಖಿತಪಟ್ಟಿಗಳಿಗೆ ಅವರಿಂದ ರುಜು ಪಡಕೊಂಡರೆಂಬ ವಗೈರೆಯಾದ ಅಪಾದನೆಗಳ ಮೇಲೆ ಶ್ರೀ. ಎ. ಸಿ. ಮಾದಪ್ಪನವರನ್ನು ಪೋಲೀಸಿನವರು ದಸ್ತಗಿರಿಮಾಡಿ ಜಾಮೀನು ಮೇರೆ ಬಿಡಲಾಗಿತ್ತು. ಈ ಕೇಸಿನ ಸಂಬಂಧ ಶ್ರೀ. ಮಾದಪ್ಪನವರಿಗೆ ಸಹಾಯ ಮಾಡಿದರೆಂಬ ಅಪಾದನೆಯ ಮೇಲೆ ಶ್ರೀ. ಉಗ್ಗಪ್ಪ ಅಚ್ಚಣ್ಣನವರನ್ನು ತಾ. ೧೧ರಲ್ಲಿ ದಸ್ತಗಿರಿ ಮಾಡಿ ಜಾಮೀನು ಮೇಲೆ ಬಿಟ್ಟಬಾಗಿದೆ.

[ಸಂ.

ಓದುಗರ ಓಲೆಗಳು

ಲಕ್ಷ್ಮಣ ತೀರ್ಥ ಕಟ್ಟೆ.

ಕೊಡಗಿನ ರೈತರ ಗೋಳು ಕೇಳುವ ಸರಕಾರ ಇನ್ನೂ ಬಂದಿಲ್ಲ. ಉತ್ಪತ್ತಿ ಜಾಸ್ತಿ ಆಗಲಾಗಿ ಸರಕಾರದ ಖರ್ಚು, ಉತ್ಪತ್ತಿಯ ಬಾಬುಗಳಲ್ಲದೆ ಬೇರೆ ವಿಷಯದಲ್ಲಿ ಖರ್ಚಾಗುತ್ತದೆಯೋ ಯಾ ದೇಶದ ರೈತರ ಉನ್ನತಿಗೆ ಖರ್ಚಾಗುತ್ತಿದೆಯೋ ನೋಡಬೇಕು

ರೈತರ ಹೊಟ್ಟೆಗೆ ಅನ್ನವಿಲ್ಲದೆ, ಮೈಗೆ ಬಟ್ಟೆ ಇಲ್ಲದೆ, ಗದ್ದೆಗೆ ನೀರಿಲ್ಲದೆ ದೇವರ ಮೇಲೆ ಭಾರಹಾಕಿ ಕಷ್ಟಪಟ್ಟು ಸಂಪಾದಿಸುವ ಬೆಳೆಗೆ ನಿಯಂತ್ರಣ-ಕಾನೂನು-ಇತ್ಯಾದಿ. ಆದರೆ ರೈತರಿಗೆ ಬೇಕಾದ ಕೆರೆ, ಬಾವಿಗಳು, ಚಿಕ್ಕ ನೀರಾವರಿ ಯೋಜನೆ, ಗ್ರಾಮಗಳಿಗೆ ಬೇಕಾದ ರಸ್ತೆ ವಗೈರೆ ಇನ್ನೂ ನಡೆಯುತ್ತಿಲ್ಲ ಅಂದರೆ ತಪ್ಪಾಗಲಾರದು. ಉದಾಹರಣೆಗಾಗಿ:—

ಲಕ್ಷ್ಮಣತೀರ್ಥ ಹೊಳೆಗೆ ಒಂದು ಕಟ್ಟೆಯನ್ನು ಕಟ್ಟಿ ಭತ್ತದ ಬೆಳೆಗೆ ಅಂದಾಜು ೩೦೦೦ ಎಕ್ರೆ ಭೂಮಿಗೆ ನೀರಿನ ಸರಬರಾಯಿ ಮಾಡಲಿಕ್ಕೆ ಒಂದು ಯೋಜನೆ ಹಾಕಿ ಎಷ್ಟೋ ವರ್ಷಗಳಾದವು. ಈಗ ತಿಳಿಯುವ ಮಟ್ಟಿಗೆ ಅದು ಆಗುವ ಹಾಗೆ ಕಾಣುವದಿಲ್ಲ.

ಈ ಕಟ್ಟೆಯ ಕೆಲಸಕ್ಕೆ ಮಧ್ಯಸರಕಾರದಿಂದ C. W. I. N. C. ಡಿಪಾರ್ಟ್‌ಮೆಂಟಿನ ಜನರನ್ನು ಕಳುಹಿಸಿದರು. ಇದರ ಉಸ್ತುವಾರಿಯನ್ನು ನೋಡಲೋಸುಗ ಡೆಲ್ಲಿಯಿಂದ ಡೆಪ್ಯುಟಿ ಡೈರೆಕ್ಟರು ಎಂತಲೂ ಡೈರೆಕ್ಟರೆಂತಲೂ ನಾಲ್ಕೈದು ಜನರು ಬಂದು ಹೋದರು. ಅವರ ಭತ್ಯಕ್ಕಾಗಿ ಎಷ್ಟು ಹಣ ಖರ್ಚಾಗಿದೆ? ಅವರು ಬೇರೆ ಬೇರೆ ಜನರು ಬಂದು ಮಾಡಿದ್ದೇನು? ಎಂಬ ವಿಷಯ ದೇಶದ ಜನರಿಗೆ ತಿಳಿಯಬೇಕಾಗಿದೆ.

ಕಟ್ಟೆ ಕೆಲಸಕ್ಕೆ ತಂದ ಜೀಪುಗಳನ್ನು ಲಾರಿಗಳನ್ನು ಇಲ್ಲಿಯ ಸರಕಾರಕ್ಕೆ ಬಿಟ್ಟು ಬಂದ ಇಂಜಿನೀಯರುಗಳು ಗಂಟು ಮೂಟೆ ಕಟ್ಟುತ್ತಾರಂತೆ! ಇದರಿಂದ ಸರಕಾರಕ್ಕೆ ಲಾಭವೇ ಯಾ ಇದರ ಉಪಯೋಗ ಪಡೆಯುವಂತ ಉದ್ಯೋಗಸ್ಥರಿಗೆ ಲಾಭವೇ?

ನಾಲ್ಕೇರಿ ಗ್ರಾಮದಲ್ಲಿ ಕಟ್ಟೆಯನ್ನು ಕಟ್ಟಿಸಿ ಮೂರು ತಿಂಗಳ ಮಟ್ಟಿಗೆ ನಾಲೆ ನೀರನ್ನು ಭತ್ತದ ಬೆಳೆಗೆ ಉಪಯೋಗಿಸಿದರೆ ಮೈಸೂರಿಗೆ ತೊಂದರೆ ಆಗುತ್ತದೆಂದು ಹೊಳೆಯಲ್ಲಿ ನೀರು ಸ್ಟಾಕು ನಿಲ್ಲಿಸಲಿಕ್ಕೆ ಬೇರೊಂದು ಕಟ್ಟೆಯನ್ನು ಕಟ್ಟಬೇಕೆಂದು ತೀರ್ಮಾನಿಸಿದರು. ಇವೆರಡಕ್ಕೂ ಸೇರಿ ೨೨ ಲಕ್ಷ ರೂಪಾಯಿ ಖರ್ಚಾಗುತ್ತದೆಂದು ಈಗ ಕಟ್ಟೆಯ ಕೆಲಸ ಬಾಕಿ ಅಂತೆ! ಹಾಗಾದರೆ ನಮ್ಮಲ್ಲಿಂದ ಹರಿಯುವ ಹೊಳೆಯ. ನೀರನ್ನು ನಮ್ಮ ಉಪಯೋಗಕ್ಕೆ ಬಿಟ್ಟರೆ ಇತರರಿಂದ ಉಪಯೋಗ ಸಿಕ್ಕುವ ಸಂದರ್ಭ ಇದ್ದರೂ ಸಿಕ್ಕದೆ ಇರುವಾಗ ಈ ರೈತರು ಸರಕಾರಕ್ಕೆ ಕಂದಾಯ ಕೊಡಬೇಕೆ? ಮೈಸೂರಿನವರಿಗೆ ನೀರು ನಿಲ್ಲಿಸಿಕೊಳ್ಳಲಿಕ್ಕೆ ಅಣೆಕಟ್ಟು ಕಟ್ಟಿಸುವ ಖರ್ಚು ಅವರು ಯಾಕೆ ಕೊಡಬಾರದು?

ಸರಕಾರದವರು ಕಟ್ಟೆ ಕಟ್ಟಿಸಿಕೊಡದೆ ರೈತರೇ ವರ್ಷ ವರ್ಷ ಮಣ್ಣಿನ ಕಟ್ಟೆಯನ್ನು ಕಟ್ಟಿ ನೀರು ಸಪ್ಲೈ ಮಾಡಿಕೊಂಡರೆ ಮೈಸೂರಿನ ಸರಕಾರಕ್ಕೆ ತಡೆಯಲಿಕ್ಕಾಗುತ್ತದೆಯೇ? ನಮಗೆ ಬೇಕಾದ ನೀರು ಮಾತ್ರ ತೆಗೆದುಕೊಳ್ಳುವಾಗ ನಾವೇಕೆ ಅಣೆಕಟ್ಟು ಕಟ್ಟಬೇಕು?

ನಾಲೆ ನೀರು ತೆಗೆದು ಭತ್ತ ಬೆಳೆಸಿದರೆ ಎರಡುವರೆ ಲಕ್ಷ ರೂಪಾಯಿ ಭತ್ತ ಜಾಸ್ತಿ ಬೆಳೆಯುತ್ತದಂತೆ. ಇದು ನಿಜವೇ? ಹಾಗಾದರೆ ಯಾಕೆ ಇಂಡಿಯಾ ಸರಕಾರದವರು ಈ ಹಣವನ್ನು ಖರ್ಚು ಮಾಡಬಾರದ? ಇದೆಲ್ಲಾ ತೊಂದರೆ ಯಾಕೆ ಬಂದಿರುವುದೆಂದರೆ ನಮ್ಮ ಸರಕಾರ ಇದರ ವಿಷಯ ತೊಂದರೆ ತೆಗೆದುಕೊಳ್ಳಲಿಲ್ಲವೆಂದೇ ಅರ್ಥ. ನಮ್ಮ ಪರವಾಗಿ ಡೆಲ್ಲಿಯಲ್ಲಿ ಕೆಲಸ ಮಾಡುವವರು ಯಾರೂ ಇಲ್ಲ ಎಂದರೆ ತಪ್ಪಾಗಲಾರದು. ಈ C. W. I N C. ಡಿಪಾರ್ಟುಮೆಂಟಿನವರು ಇಲ್ಲಿಯ ಇಂಜಿನೀಯರಿಂಗ್ ಡಿಪಾರ್ಟ್‌ಮೆಂಟಿನ ಕೈಗಳಿಗೆ ಕೆಲಸ ಕೊಡುತ್ತಿದ್ದರೆ ಈ ಕೆಲಸಕ್ಕೆ ಇಷ್ಟು ಅಡಚಣೆ ಬರುತ್ತಿರಲಿಲ್ಲವೆಂದು ಕಾಣುತ್ತದೆ. ಆದುದರಿಂದ ಸರಕಾರದವರು, ಮುಂದಾಳುಗಳು ಕೂಡಲೇ ಇದಕ್ಕೆ ನಿಗಾ ಇಡಬೇಕು. ವಿದ್ಯುಚ್ಛಕ್ತಿ ಬೆಳಕಿಗೆ ಕೊಡಗಿನ ಸರಕಾರವು ೨೫ ಲಕ್ಷ ರೂಪಾಯಿ ಖರ್ಚುಮಾಡುವದಾದರೆ ಈ ನೀರಾವರಿ ಯೋಜನೆಗೆ ಯಾಕೆ ಹಣ ಖರ್ಚು ಮಾಡಬಾರದು? ಆದುದರಿಂದ ಮುಂದೆ ಹೋಗುವದಕ್ಕೆ ಮೊದಲೇ ಕೆಲಸಕ್ಕೆ ಕೈಹಾಕಬೇಕು. ಈ ಅಣೆಕಟ್ಟಿನಿಂದಲೇ ದಕ್ಷಿಣ ಕೊಡಗಿಗೆ ಬೇಕಾದ ವಿದ್ಯುಚ್ಛಕ್ತಿಯನ್ನೂ ಸಹ ತೆಗೆಯಬಹುದೆಂದು ಕಾಣುತ್ತದೆ. ಆದುದರಿಂದ ಹೆಚ್ಚಿನ ಉತ್ಪತ್ತಿ ಬರುವ ಯೋಜನೆಗೆ ಮೊದಲು ಹಣ ಖರ್ಚುಮಾಡಬೇಕಾದದ್ದು ಸರಕಾರದ ಕರ್ತವ್ಯ ಆಗಿದೆ.

ಮುತ್ತಣ್ಣ.

ಮರಗೋಡು ಶಾಲಾ ಉಪಾಧ್ಯಾಯರ ಆಯ್ಕೆ

ಕಳೆದ ಮೇ ತಾ. ೧೬ನೇ ಬುಧವಾರ ದಿನ ಮರಗೋಡು ಶಾಲೆಯಲ್ಲಿ ಅವರ ಬಡಾವಣೆ ಸಂಘದ ಮುಖಾಂತರ ಇಬ್ಬರು ಉಪಾಧ್ಯಾಯರು ಆರಿಸಲ್ಪಟ್ಟರು. ಬಡಾವಣೆ ಸಂಘದವರು 'ಕೊಡಗು' ಪತ್ರಿಕೆಯಲ್ಲಿ ಸ್ಕೂಲ್ ಫೈನಲ್ ಪಾಸಾದ ಒಬ್ಬ ಮತ್ತು ಹಿಂದಿ ರಾಷ್ಟ್ರಭಾಷೆ ತೇರ್ಗಡೆಯಾದ ಒಬ್ಬ, ಹೀಗೆ ಇಬ್ಬರು ಉಪಾಧ್ಯಾಯರು ಬೇಕೆಂಬದಾಗಿ ಜಾಹೀರಾತು ಕೊಡಿಸಿದ್ದರು. ಅದೇ ಪ್ರಕಾರ ಉಮೇದ್ವಾರರು ತಮ್ಮ ಅರ್ಜಿಗಳನ್ನು ಸಂಘದ ಪ್ರೆಸಿಡೆಂಟರಿಗೆ ಕಳುಹಿಸಿದ ಮೇರೆಗೆ ಅವರಿಗೆ ಮೈಗಾಣ್ಕೆಗೆ (Interview) ೧೬ನೇ ತಾರೀಕಿನ ದಿನ ಶಾಲಾ ಕಮಿಟಿ ಎದುರಿಗೆ ಬರಬೇಕೆಂದು ನೋಟೀಸ್ ಕಳುಹಿಸಿದ್ದಕ್ಕೆ ಹಾಜರಿದ್ದವರು ಬರೇ ಒಬ್ಬರೆ. ಸಂಘದ ಸದಸ್ಯರ ತೀರ್ಪು ಕಳೆದನಂತರ ಹಾಜರಾದ ವ್ಯಕ್ತಿಯನ್ನು ಕರೆದು ನಿಮಗೆ ಚಾಕರಿ ನಮ್ಮಿಂದ ಕೊಡಲಾಗುವುದಿಲ್ಲ ಎಂದು ಕಳುಹಿಸಿ ಆ ದಿವಸ ಸಂಘದವರ ಮೈಗಾಣ್ಕೆಗೆ ಹಾಜರಿಲ್ಲದ ಸ್ಕೂಲ್ ಫೈನಲ್ ಪಾಸಾಗದ ಒಬ್ಬ ವ್ಯಕ್ತಿಗೆ ಕೊಟ್ಟರು. ಮತ್ತಾರೆ ಮೈಗಾಣ್ಕೆಗೆ ಹಾಜರಿಲ್ಲದ ವ್ಯಕ್ತಿಗೆ ಚಾಕರಿ ಕೊಡಬಹುದೇ? ಹಾಗಿದ್ದಲ್ಲಿ ಪತ್ರಿಕೆಯಲ್ಲಿ ಸ್ಕೂಲ್ ಫೈನಲ್ ಪಾಸಾದವರು ಬೇಕೆಂಬುದಾಗಿ ಜಾಹೀರಾತು ಇವರಿಗೇಕೆ ಬೇಕಿತ್ತು. ಆದುದರಿಂದ ಇದು ಅವರು ಮಾಡಿದ ದ್ರೋಹ ಅಲ್ಲದೆ ಬಡಾವಣೆ ಸಂಘದ ಸದಸ್ಯರಿಗೆ ದೊಡ್ಡ ಕಳಂಕವೆಂಬದಾಗಿ ತಿಳಿಯುತ್ತೇನೆ. ಇವರು ಮಾಡಿದ ಈ ಕೆಲಸವು ಶಾಲೆಯ ಉನ್ನತಿಯ ಬದಲು ಅವನತಿಯನ್ನು ತರಬ

ಜಿ ಜಿ ಎಸ್. ರಾಮು.

ಕುರ್ಗ್ ಟ್ರಾನ್ಸ್‌ಪೋರ್ಟ್ ಕಂಪೆನಿ

ಕೆಲವು ಅಶಕ್ತ ಜನರು ಕಂಪೆನಿಯ ಮೇಲೆ ಇಲ್ಲಸಲ್ಲದ ಆರೋಪ ಹೊರಿಸುತ್ತಿರುವರು. ಶೇರುದಾರರು ಹಾಕಿದ ಹಣವು ವಾಪಸು ದೊರೆಯದು. ಶೇರು ಮೊಬಲಗಿನ ಬೆಲೆಯು ಎಂಟಕ್ಕೆ ಇಳಿದು ಹೋಗಿದೆ ಎಂಬುದಾಗಿ ಅಪಪ್ರಚಾರ ಮಾಡಿರುವರು. ಈ ರೀತಿಯ ತಿರುಳಿಲ್ಲದ ಆರೋಪಣೆಗಳನ್ನು ಪ್ರಚಾರ ಮಾಡಿ ಕಂಪೆನಿಯ ಸದಸ್ಯರಲ್ಲಿ ಜಿಗುಪ್ಸೆ ಹುಟ್ಟಿಸುವ ಪ್ರಯತ್ನ ನಡೆಯುತ್ತಿದೆ. ೧೯೪೬ ರಿಂದ ೧೯೪೯ ರ ವರೆಗೆ ಕಂಪೆನಿಯ ಕೆಲಸವು ಸೂಕ್ತ ರೀತಿಯಿಂದ ನಡೆಯಲಿಲ್ಲವೆನ್ನಬಹುದಾದರೂ ಇತ್ತಲಾಗಿ ಕಂಪೆನಿಯ ಕೆಲಸವು ದಕ್ಷತೆಯಿಂದ ನಡೆಯುತ್ತಿದೆ. ಕಂಪೆನಿಗೆ ಅರ್ಧ ಲಕ್ಷಕ್ಕೂ ಮೀರಿ ಹಣ ಬರತಕ್ಕದ್ದಿದೆ. ಈ ವರೆಗೆ ಕಂಪೆನಿಯು ಸುಮಾರು ೪೧,೦೦೦ ಆದಾಯ ತೆರಿಗೆ ಕೊಟ್ಟಿದೆ. ಕಂಪೆನಿಯ ಲೆಕ್ಕ ಪರಿಶೋಧನಾ ವರದಿಯು ಶೀಘ್ರವಾಗಿ ಸದಸ್ಯರ ಹಸ್ತಗತವಾಗಲಿದೆ. ಹೊಸ ಬಸ್ಸುಗಳನ್ನು ಕೊಂಡು ಕೊಂಡು ಕೊಡಗಿನಲ್ಲಿ ಹತ್ತು ರೂಟ್‌ಗಳಲ್ಲಿ ದಕ್ಷತೆಯಿಂದ ಬಸ್ ಓಡಿಸುತ್ತಿದೆ. ಕಂಪೆನಿಯ ಸ್ಥಿತಿಯು ಭದ್ರವಾಗಿದೆ. ಇದು ಕೊಡಗಿನ ಜನತೆಯ ಕಂಪೆನಿಯಾಗಿದೆ. ಕೊಡಗಿನ ವಿವಿಧ ಭಾಗದ ನೂರಾರು ಜನರು ಪಾಲುದಾರರಾಗಿದ್ದಾರೆ. ಸದಸ್ಯರು ಅಶಕ್ತ ಜನರ ಸುಳ್ಳು ಪ್ರಚಾರಗಳಿಗೆ ಕಿವಿಕೊಡಬಾರದು. ಕಂಪೆನಿಯು ಸುಸ್ಥಿತಿಯಲ್ಲಿದೆ. ಮುಂದೆ ವಿಸ್ತಾರಗೊಂಡು ಬೆಳೆಯುವದೆಂಬುದರಲ್ಲಿ ಸಂಶಯವಿಲ್ಲ.

'ತಿಳಿದವ'

ಹಾನಗಲ್ಲು ಶೆಟ್ಟಳ್ಳಿ ಗ್ರಾಮ

ಸೋಮವಾರಪೇಟೆ ನಾಡು ಕೊಡಗಿನಲ್ಲಿ ಹಿಂದುಳಿದ ನಾಡು. ಈ ನಾಡಿನಲ್ಲಿ ಹಿಂದುಳಿದ ಗ್ರಾಮವಿದು. ಈ ಗ್ರಾಮದಲ್ಲಿ ಸುಮಾರು ನೂರು ಮನೆಗಳಿದ್ದು ೫೦೦ ಕ್ಕೂ ಮಿಕ್ಕಿ ಜನರಿರುವರು. ಈ ಗ್ರಾಮಕ್ಕೆ ಶಾಲೆ ಇಲ್ಲ. ಬೇರೆ ಗ್ರಾಮದಲ್ಲಿರುವ ಶಾಲೆಗೆ ಹೋಗಬೇಕಾದರೂ ಹೊಳೆ ದಾಟಬೇಕಿರುವದರಿಂದ ಮಕ್ಕಳಿಗೆ ಕಷ್ಟವಾಗಿದೆ. ಈ ಗ್ರಾಮಸ್ಥರಲ್ಲಿ ಸರಿಯಾಗಿ ಅಕ್ಷರಸ್ಥರೇ ಇಲ್ಲವೆನ್ನಬಹುದು. ಗ್ರಾಮಸ್ಥರು ಬಡವರಾಗಿರುವದರಿಂದ ಒಂದು ಶಾಲೆ ಕಟ್ಟಿಕೊಳ್ಳುವ ಚೇತನವೂ ಇಲ್ಲ. ಈ ಗ್ರಾಮದಲ್ಲಿ ಶಾಲೆಗೆ ಹೋಗುವ ವಯಸ್ಸಿನ ೩೦ಕ್ಕೂ ಮಿಕ್ಕಿದ ಮಕ್ಕಳಿದ್ದಾರೆ. ಆದ್ದರಿಂದ ಸರಕಾರವು ಈ ಗ್ರಾಮಕ್ಕೆ ಒಂದು ಶಾಲೆಯನ್ನು ಏರ್ಪಡಿಸಿ ಕೊಡಬೇಕು. ಈ ಗ್ರಾಮಕ್ಕೆ ರಸ್ತೆ, ಆಸ್ಪತ್ರೆ ಯಾವುದರ ಅನುಕೂಲತೆ ಇಲ್ಲ. ೧೯೫೦ ನೇ ಡಿಸಂಬರಿನಲ್ಲಿ ಗ್ರಾಮಸ್ಥರೇ ಸೇರಿ ಗ್ರಾಮಕ್ಕೆ ರಸ್ತೆಯನ್ನು ತಾವೇ ಮಾಡಿಕೊಂಡಿರುವೆವು. ಜಿಲ್ಲಾ ಬೋರ್ಡು ಇಲ್ಲಿ ಒಂದು ಶಾಲೆ ಸ್ಥಾಪಿಸಿಕೊಡಬೇಕು.

ಡಿ. ಎನ್. ತಮ್ಮಯ್ಯ

ಬೇಕಾಗಿದ್ದಾರೆ.

ಹಿಂದೂದೇಶದ ಕಾರ್ಮಿಕ ಮಂತ್ರಿಮಂಡಲ (Labour Ministry ದವರು ಮೀರಜಪೇಟೆಯಲ್ಲಿ ನಿರ್ಮಿಸಿರುವ ಔದ್ಯೋಗಿಕ ಮತ್ತು ವೃತ್ತಿ ಸಂಬಂಧವಾದ ಕೈಗಾರಿಕೆಯ ಕೇಂದ್ರಕ್ಕೆ ಉಮೇದುವಾರರು (ಅಪ್ಲಿಕೇಶನ್) ಬೇಕಾಗಿದೆ. ಚಿತ್ರದ ಕಲಸ, ದರ್ಜಿ ಕೆಲಸ ಮತ್ತು ಶೀಘ್ರಲಿಪಿ ಈ ಕಸುಬುಗಳಲ್ಲಿ ತರಬೇತು ಕೊಡಲಾಗುವದು. ಈ ತರಬೇತಿನ ಸಮಯವು ಹನ್ನೆರಡು ತಿಂಗಳುಗಳು. ಇದಕ್ಕೆ ಸೇರುವ ವಿದ್ಯಾರ್ಥಿಗಳು ಸಾಧಾರಣವಾಗಿ 18ರಿಂದ 25ರ ವರೆಗೆ ಪ್ರಾಯದವರಿರಬೇಕು. ಶೀಘ್ರಲಿಪಿಗೆ ವಿನಹ ಬೇರೆ ಕಸುಬಿಗೆ IV ಫಾರಂ ಓದಿರಬೇಕು. ಈ ಶಿಕ್ಷಣ ಉಚಿತವಾಗಿದ್ದು ಶೇಕಡ 50ರಷ್ಟು ಮಂದಿಗೆ ತಿಂಗಳಿಗೆ ರೂ. 25/- ವೇತನ ಕೊಡಲಾಗುವುದು

ಇದಕ್ಕೆ ಒಂದು ಕಮಿಟಿಯು ವಿದ್ಯಾರ್ಥಿಗಳನ್ನು ಆರಿಸುವುದು. ಶಿಕ್ಷಣ ಕೇಂದ್ರದ ಸೂಪರಿಂಟೆಂಡೆಂಟರು ಆಯ್ಕೆಯ (selection) ದಿನ ಮತ್ತು ತಾರೀಕನ್ನು ತಿಳಿಯಪಡಿಸುವರು. ನಿಶ್ಚಿತವಾದ ಅಪ್ಲಿಕೇಶನ್ ಫಾರಂಗಳನ್ನು ಶಿಕ್ಷಣ ಕೇಂದ್ರದ ಸೂಪರಿಂಟೆಂಡೆಂಟರವರಿಂದ ಅಥವಾ ಮಡಿಕೇರಿಯಲ್ಲಿರುವ ಡಿಸ್ಟ್ರಿಕ್ಟ್ ಎಂಪ್ಲಾಯಿಮೆಂಟ್ ಆಫೀಸಿನಿಂದ ಪಡೆದುಕೊಳ್ಳಬಹುದು

ಅಪ್ಲಿಕೇಶನ್ ಫಾರಂನ್ನು ಮೇ 29ರ ಒಳಗೆ ಶಿಕ್ಷಣ ಕೇಂದ್ರದ ಸೂಪರಿಂಟೆಂಡೆಂಟರಿಂದ ಇಲ್ಲವೇ ಎಂಪ್ಲಾಯಿಮೆಂಟ್ ಆಫೀಸಿನಿಂದ ಹೊಂದಿಕೊಂಡು ತಾ. 6-6-51ರ ಒಳಗೆ ಅರ್ಜಿ ಫಾರಂನ್ನು ಅವರಿಗೆ ಕಳುಹಿಸಿ ಕೊಡತಕ್ಕದ್ದು. ಆಯ್ಕೆಗೆ ಕರೆಯಲ್ಪಟ್ಟ ವಿದ್ಯಾರ್ಥಿಗಳು ತಮ್ಮ ಸ್ವಂತ ಖರ್ಚಿನಿಂದ ಅಲ್ಲಿಗೆ ಹಾಜರಾಗಬೇಕು

ಕಥೆ. ಬಹುಮಾನ.

ಲೇ:—'ವೃಂದಾವನಲಾಲ'

“ಜನರಿಂದ ತುಂಬಿದ ದೋಣಿಯು ಮುಳುಗುವದನ್ನು ನಾನು ನೋಡಿಲ್ಲ ಮಹಾರಾಜ” ಕನ್‌ವಾರಳು ತನ್ನ ಮಧುರ ಕಂಠದಿಂದ ಮುಗುಳು ನಗೆಗೂಡಿ ಹೇಳಿದಳು.

ಮೊಗಲ್ ಅರಸರಲ್ಲಿ ಕಡೆಯವನಾದ ಜಹಂದರಶಾಹನು ಆಕೆಯ ಕಡೆ ಆಸಕ್ತ ಕಣ್ಣನ್ನು ಹರಿಸಿ “ನೀನು ಇಷ್ಟಪಡುವದಾದರೆ ಅದನ್ನು ತೋರಿಸಬಲ್ಲೆ” ಎಂದನು.

ಕುನ್‌ವಾರ್ ಮತ್ತು ಜಹಂದರ ಬಾದಶಹರು ಡೆಲ್ಲಿ ಅರಮನೆಯ ಉಪ್ಪರಿಗೆಯಲ್ಲಿ ಕುಳಿತಿದ್ದರು. ಅದು ಮಳೆಗಾಲ. ಜಮುನಾ ನದಿಯು ತುಂಬಿ ಹರಿಯುತಿತ್ತು. ಡೆಲ್ಲಿಯಲ್ಲಿ ಬರಗಾಲವಾಗಿ ಜನರಿಗೆ ಉಣ್ಣಲು ಅನ್ನಕ್ಕೆ ಗತಿ ಇರಲಿಲ್ಲ. ಗೋಧಿಯು ದುಬಾರಿ ಬೆಲೆಗೆ ಕಳ್ಳಸಂತೆಯಲ್ಲಿ ಮಾರಲ್ಪಡುತ್ತಿತ್ತು. ಕೆಲವು ರೈತರು ದೋಣಿಯಲ್ಲಿ ಕೆಲವು ಚೀಲ ಗೋಧಿಯನ್ನಿಟ್ಟು ಹೊಳೆ ದಾಟುತ್ತಿದ್ದರು. ಕುನ್‌ವಾರಳು ಆ ದೋಣಿಯ ಕಡೆ ನೋಡಿದಳು. ಬಾದಶಹನನ್ನು ನೋಡಿ ಪುನಹ ಹೇಳಿದಳು. “ಮಹಾರಾಜ, ನನ್ನ ಜನ್ಮದಲ್ಲಿ ಜನ ತುಂಬಿದ ದೋಣಿ ಮುಳುಗುವದನ್ನು ನೋಡಿಲ್ಲ” ಆಕೆ ಪುನಹ ದೋಣಿಯತ್ತ ನೋಡಿದಳು. ಬಾದಶಹನೂ ಆ ಕಡೆ ನೋಡಿದನು. ಕುನ್‌ವಾರಳ ಇಂಗಿತದ ಅರಿವಾಯಿತು. ಬಾದಶಹನು ದೋಣಿಯನ್ನು ಮುಳುಗಿಸಲು ಅಳುಗಳಿಗೆ ಅಪ್ಪಣೆ ಇತ್ತನು. ಕ್ಷಿಪ್ರದಲ್ಲಿ ದೋಣಿಯು ಮುಳುಗಿಸಲ್ಪಟ್ಟಿತು. ಕುನ್‌ವಾರಳು ಮತ್ತು ಬಾದಶಹನು ಮುಳುಗುವ ಜನರು ಚಡಪಡಿಸುವದನ್ನು ನೋಡಿ ಹೃತ್ಪೂರ್ವಕವಾಗಿ ನಕ್ಕರು.

* * *

೧೭೧೨ ನೇ ಜುಲೈ ತಿಂಗಳಲ್ಲಿ ಡೆಲ್ಲಿಯಲ್ಲಿ ಬರಗಾಲ. ಆದರೆ ಬಾದಶಹನು ದೀಪೋತ್ಸವಕ್ಕೆ ಏರ್ಪಾಡು ಮಾಡಿದ್ದನು. ಬಹುಕಷ್ಟದಿಂದ ತನಗೆ ಸಿಂಹಾಸನ ದೊರೆತುದಕ್ಕಾಗಿ ಮೂರು ತಿಂಗಳಿಗೊಮ್ಮೆ ದೇವರ ಪ್ರೀತ್ಯರ್ಥವಾಗಿ ದೀಪೋತ್ಸವವನ್ನು ಬಾದಶಹನು ಜರುಗಿಸುತ್ತಿದ್ದನು. ಆ ವರ್ಷ ಎರಡು ಉತ್ಸವಗಳಾಗಿದ್ದವು. ಆ ಎರಡು ಉತ್ಸವಗಳಲ್ಲೇ ಡೆಲ್ಲಿಯಲ್ಲಿದ್ದ ಎಣ್ಣೆ ಎಲ್ಲವೂ ಖರ್ಚಾಗಿ ಎಣ್ಣೆ ದೊರೆಯುತ್ತಿರಲಿಲ್ಲ. ಆದ್ದರಿಂದ ಮೂರನೇ ದೀಪೋತ್ಸವವು ತುಪ್ಪದಿಂದ ನಡೆಯಲೆಂದು ಬಾದಶಹನ ಆಜ್ಞೆ ಆಗಿತ್ತು.

ದೀಪೋತ್ಸವದ ಆ ರಾತ್ರೆ ಕುನ್‌ವಾರಳು ಆನಂದ ಭರಿತೆಯಾಗಿದ್ದಳು. ದೀಪ ಹತ್ತಿಸಿದ ರಾತ್ರೆ ನೃತ್ಯದ ಏರ್ಪಾಡಿತ್ತು. ಬಾದಶಹನು ಸಂಗೀತ ನೃತ್ಯಗಳಿಗಾಗಿ ತವಕಿಸುತ್ತಿದ್ದನು. ಕುನ್‌ವಾರಳು ನರ್ತಕಿಯು ಮಗಳು. ಆಕೆ ಸೌಂದರ್ಯವತಿಯೂ ಆಗಿದ್ದಳು. ಆಕೆಯ ನೃತ್ಯವು ಮನಮೋಹಕವಾದುದು. ಇದಕ್ಕೆ ಬಾದಶಹನು ಮಾರು ಹೋಗಿದ್ದನು. ಆಕೆಗೆ ಅನೇಕ ಸಹೋದರರಿದ್ದರು. ಅವರಲ್ಲಿ ನಯಾಮತ್‌ಖಾನನು ಪ್ರಸಿದ್ಧ ಗಾಯಕನಾಗಿದ್ದನು. ಕುನ್‌ವಾರಳು ತನ್ನ ಸಹೋದರರಿಗಾಗಿ ಬಾದಶಹನಿಂದ ಹಣ, ಜಮೀನು, ಗೌರವ, ಪದವಿ ಎಲ್ಲವನ್ನು ಪಡೆದಿದ್ದಳು. ಆ ರಾತ್ರೆ ನಯಾಮತ್‌ಖಾನನು ಹಾಡಬೇಕೆಂದೂ ಕುನ್‌ವಾರಳು ನೃತ್ಯಮಾಡಬೇಕೆಂದೂ ನಿಶ್ಚಯವಾಯಿತು.

ಬಾದಶಹನು ಸ್ವತಹ ನೃತ್ಯ ವಿಶಾರದನೂ, ಸಂಗೀತ ಕಲಾವಿದನೂ ಆಗಿದ್ದನು. ಆದ್ದರಿಂದ ಬಾದಶಹನ ಮುಂದೆ ಹಾಡಲು ನಯಾಮತ್‌ಖಾನನು ಸಂಕೋಚಪಟ್ಟನು. ಜನ್ಮ ಜನ್ಮಾಂತರದ ವರೆಗೆ ಮರೆಯದ ಮಹಾ ಬಹುಮಾನ ಕೊಡುವದಾಗಿ ಬಾದಶಹನು ಹೇಳಿ ನಯಾಮತನು ಹಾಡುವಂತೆ ಪ್ರೇರೇಪಿಸಿದನು.

ನಯಾಮತನ ಸಂಗೀತ ಪ್ರಾರಂಭಿಸಿತು. ಕುನ್‌ವಾರಳ ನೃತ್ಯ ನಡೆಯಿತು. ನಯಾಮತನು ತನ್ನನ್ನೇ ಮರೆತು ತನ್ನ ಗಾನದಲ್ಲಿ ಮೈಮರೆತನು. ಕುನ್‌ವಾರಳು ತನ್ನ ನೃತ್ಯದಲ್ಲಿ ತಲ್ಲೀನಳಾದಳು. ಈ ಮಹಾ ಮೇಳದಲ್ಲಿ ತಲ್ಲೀನನಾದ ಬಾದಶಹನು ತಾನೂ ತನಗರಿವಿಲ್ಲದಂತೆ ಕುನ್‌ವಾರಳೊಂದಿಗೆ ನೃತ್ಯ ಮಾಡಿದನು.

ನೃತ್ಯ ಕೊನೆಗೊಂಡಿತು. ಬಾದಶಹನು ಕುನ್‌ವಾರಳನ್ನು ಹಿಡಿದಪ್ಪಿ ಮುದ್ದಿಸಿ ಇದು ಆಕೆಯ ಸ್ವರ್ಗೀಯ ನೃತ್ಯಕ್ಕೆ ಉಡುಗೊರೆ ಎಂದನು. ಮತ್ತೆ ನಯಾಮತನನ್ನು ಕರೆದು ಆತನನ್ನು ಮುಲ್ತಾನಿನ ಸುಬೇದಾರನಾಗಿ ಮಾಡಿದನು. ನಯಾಮತನ ಆನಂದಕ್ಕೆ ಮಿತಿ ಇರಲಿಲ್ಲ.

* * *

ನಯಾಮತನಿಗೆ ಸುಬೆದಾರಿ ದೊರೆತು ಎರಡು ವಾರಗಳಾಗಿದ್ದವು. ಮುಲ್ತಾನಿನ ವಜೀರನು ಆತನ ಕೆಲಸದ ವಿಚಾರದಲ್ಲಿ ನಯಾಮತನಿಗೆ ಏನೊಂದೂ ಸೂಚಿಸಿರಲಿಲ್ಲ. ನಯಾಮತನನ್ನು ಸುಬೆದಾರನೆಂದೂ ಪರಿಗಣಿಸಿರಲಿಲ್ಲ. ಆದ್ದರಿಂದ ನಯಾಮತನು ತಾನು ಖುದ್ದಾಗಿ ಹೋಗಿ ಆ ವಿಚಾರ ವಜೀರನನ್ನು ಕೇಳಿದನು.

ವಜೀರನು ನಯಾಮತನನ್ನು ಆದರಿಸಿ ಕುಳ್ಳಿರಿಸಿದನು. ನಯಾಮತನು ತಾನು ಸುಬೆದಾರನಾಗಿ ನೇಮಿಸಲ್ಪಟ್ಟುದನ್ನು ನುಡಿದನು. ವಜೀರನು ಹೇಳಿದನು—

'ನಯಾಮತ್, ನಿನ್ನನ್ನು ಸುಬೆದಾರನಾಗಿ ನೇಮಿಸಿದುದಕ್ಕೆ ಸಂತೋಷ. ಆದರೆ ನಿನ್ನ ಆ ಪದವಿಯನ್ನು ನೀನು ಪಡೆಯುವದಾದರೆ ಸಂಪ್ರದಾಯದಂತೆ ನನಗೆ ಕೊಡತಕ್ಕ ಕಾಣಿಕೆಯನ್ನು ಕೊಡಬೇಕು.'

'ಅರಸನಿಂದಲೇ ನೇಮಕವಾಗಿರುವಾಗ ಕಾಣಿಕೆ ಯಾಕೆ?'

'ವಜೀರನಿಗೆ! ಇಲ್ಲಿಯ ಪದ್ಧತಿಯನ್ನು ಮುರಿಯಲಾಗದು. ಕಾಣಿಕೆ ಕೊಡದಿದ್ದರೆ ನಿನಗೆ ತೊಂದರೆ ನಿಶ್ಚಿತ.'

'ಕಾಣಿಕೆ ಏನು?'

'ಒಂದು ಸಾವಿರ ಕೊಳಲುಗಳನ್ನು ನನಗೆ ನೀನು ಒಪ್ಪಿಸಿದಂದು ನಿನ್ನನ್ನು ಸುಬೆದಾರನಾಗಿ ಪರಿಗಣಿಸಲಾದೀತು.'

ನಯಾಮತನು ಈ ಕ್ಷುಲ್ಲಕ ಕಾಣಿಕೆಯನ್ನು ಒಪ್ಪಿಸುವದು ಸುಲಭವೆಂದು ನೆನಸಿ ತನ್ನ ಶಿಷ್ಯರು ಎತ್ತಿತರರಿಂದ ಕೊಳಲುಗಳನ್ನು ಸಂಗ್ರಹಿಸತೊಡಗಿದನು. ಎಷ್ಟು ಪ್ರಯತ್ನಿಸಿದರೂ ಡೆಲ್ಲಿಯಲ್ಲಿ ೪೦೦ ಕೊಳಲುಗಳಿಗಿಂತ ಹೆಚ್ಚು ಸಂಗ್ರಹಿಸಲಾಗಲಿಲ್ಲ. ಬೇರೆಲ್ಲಿಯೂ ದೊರೆಯುವಂತಿರಲಿಲ್ಲ. ಆದ್ದರಿಂದ ನಿರಾಶನಾಗಿ ನಯಾಮತನು ಈ ವಿಚಾರವನ್ನು ತನ್ನ ತಂಗಿ ಕುನ್‌ವಾರಳ ಮೂಲಕ ಬಾದಶಹನಿಗೆ ತಿಳಿಸಿದನು.

ಬಾದಶಹನ ಸಿಟ್ಟಿಗೆ ಮಿತಿ ಇರಲಿಲ್ಲ. ತನ್ನ ಆಜ್ಞೆಯನ್ನು ಜಾರಿಗೆ ತರಲು ಲಂಚ ಕೇಳುವದೇ ಎಂದು ಕ್ರುದ್ಧನಾದನು. ವಜೀರನನ್ನು ಕರೆಸಿ ವಿಚಾರಿಸಿದನು. ವಜೀರನು ತಾನು ಸಾವಿರ ಕೊಳಲುಗಳನ್ನು ಕೇಳಿದ್ದು ನಿಜವೆಂದು ಒಪ್ಪಿಕೊಂಡನು. ರಾಜನು ಕಿಡಿಕಿಡಿಯಾದನು. ಹಾಗೆ ಕೊಳಲುಗಳನ್ನು ಕೇಳಲು ಕಾರಣವೇನೆಂದು ಪ್ರಶ್ನಿಸಲು ವಜೀರನು ಹೇಳತೊಡಗಿದನು.

'ಮಹಾಪ್ರಭೂ, ನಮ್ಮ ರಾಜಸಭೆಯಲ್ಲಿ ಸುಬೆದಾರರು, ಮಾನ್‌ಸುಬೆದಾರರೆಂದು ಸಾವಿರ ಜನರಿದ್ದಾರೆ. ನೀವು ಕೊಳಲು ಬಾರಿಸುವ ಸಂಗೀತಗಾರನು ಸುಬೆದಾರನಾಗಲು ಯೋಗ್ಯನೆಂದು ಪರಿಗಣಿಸಿರುವದರಿಂದ ರಾಜಸಭೆಯಲ್ಲಿರುವ ಸುಬೆದಾರರ ಮತ್ತು ಮಾನ್‌ಸುಬೆದಾರರ ಕೈಯಲ್ಲಿರುವ ಕತ್ತಿಗಳನ್ನು ತೆಗೆದು ಹಾಕಿ ಅವರೆಲ್ಲರಿಗೆ ಕೊಳಲುಗಳನ್ನು ಕೊಡಬೇಕೆಂದಿದ್ದೇನೆ. ಇಂದಿನ ಪರಿಸ್ಥಿತಿಯಲ್ಲಿ, ನಿಮ್ಮ ಮನೋವೃತ್ತಿಯಲ್ಲಿ ಕೊಳಲೇ ಕತ್ತಿಗಿಂಥಾ ಹಿರಿದಾಗಿದೆ.'

ಬಾದಶಹನಿಗೆ ನಾಚಿಕೆಯಾದಂತಾಯಿತು. ಆತನು ನಯಾಮತನನ್ನು ಕರೆದು 'ನೀನು ಬೇರೆ ಯಾವುದಾದರೂ ಬಹುಮಾನವನ್ನು ಕೇಳು' ಎಂದನು!

---

೧೮ ಕೋಟಿ ಮತದಾರರು ೪೯೭೦ ಜನರನ್ನು ಚುನಾಯಿಸಬೇಕಾಗಿದೆ.

ಭಾರತದ ಮಹಾಚುನಾವಣೆಯ ಬಗ್ಗೆ ಈ ಕೆಳಗಿನ ಮಹತ್ವದ ಮಹತಿಯು ಸೀಮಾ ಸಮಿತಿಗಳ ನೇಮಕದ ಸಂಧರ್ಭದಲ್ಲಿ ಕಾಯದೆ ಸಚಿವರು ಪಾರ್ಲಿಮೆಂಟಿನ ಮುಂದೆ ಇಟ್ಟ ವರದಿಯಿಂದ ಹೊರಬಿದ್ದಿದೆ.

ಮತದಾನದಲ್ಲಿ ಭಾಗವಹಿಸುವ ಒಟ್ಟು ೧೮ ಕೋಟಿ ಜನರು ಪಾರ್ಲಿಮೆಂಟ ಮತ್ತು ಪ್ರಾಂತ ಶಾಸನ ಸಭೆಗಳಿಗೆ ಒಟ್ಟು ೪೯೧೦ ಜನರನ್ನು ಆರಿಸಿ ಕಳುಹಿಸಬೇಕಾಗಿದೆ.

ಪಾರ್ಲಿಮೆಂಟಿನಲ್ಲಿ

ಚುನಾವಣಾ ಸೀಮಾ ಸಮಿತಿಯು ಸದಸ್ಯರ ಸಂಖ್ಯೆಯ ಮೇಲಿನಿಂದ ಯಾವ ಯಾವ ಸಭೆಗಳಿಗೆ ಎಷ್ಟೆಷ್ಟು ಸದಸ್ಯರೆಂಬುದನ್ನು ಹೇಳಬಹುದಾಗಿದೆ.

ಪಾರ್ಲಿಮೆಂಟಿನಲ್ಲಿ ೪೮೬ ಚುನಾಯಿತ ಸದಸ್ಯರಿರುವರು. ಇವರಲ್ಲಿ ೩೭೪ ಜನರು ಎ ವರ್ಗದ ಪ್ರಾಂತಗಳಿಂದಲೂ ೯೬ ಜನರು ಬಿ ವರ್ಗದ ಪ್ರಾಂತಗಳಿಂದಲೂ ೧೬ ಜನರು ಸಿ ವರ್ಗದ ಪ್ರಾಂತಗಳಿಂದಲೂ ಆರಿಸಿ ಬರುವರು.

ಘಟನೆಯನ್ವಯ ಆಂಗ್ಲೋ ಇಂಡಿಯನ ಜನಾಂಗದಿಂದ, ಪ್ರಾತಿನಿಧ್ಯ ಸಾಲದೆಂದು ರಾಷ್ಟ್ರಾಧ್ಯಕ್ಷರಿಗೆ ಅನ್ನಿಸಿದರೆ ಇಬ್ಬರನ್ನು ನಾಮಂಕರಣ ಸದಸ್ಯರೆಂದು ತೆಗೆದುಕೊಳ್ಳಬಹುದು.

ಇದರ ಜೊತೆಗೆ ಕಾಶ್ಮೀರಕ್ಕೆ ಆರು ಜಾಗಗಳೂ ಅಂದಮಾನ ನಿಕೋಬರ ದ್ವೀಪಗಳಿಗೆ ನಾಮನೇಶನ್ ಮೂಲಕ ಒಂದು ಸ್ಥಳವೂ ಇರುವುದು. ಘಟನೆಯ ೮೧ ನೇ ಕಲಮದನ್ವಯ ಪಾರ್ಲಿಮೆಂಟಿನಲ್ಲಿ ಐದುನೂರು ಜನರಿಗಿಂತ ಹೆಚ್ಚು ಸದಸ್ಯರಿರಬಾರದೆಂಬ ನಿಯಮವಿದೆ. ಆದರೆ ಇತ್ತೀಚಿನ ಜನಗಣತಿಯ ಮೇಲಿನಿಂದ ಜನಸಂಖ್ಯೆ ಹೆಚ್ಚಾಗಿರುವುದು ಕಂಡು ಬರುವುದರಿಂದ ಇನ್ನು ಒಂದೆರಡು ವರುಷಗಳಲ್ಲಿ ಈ ಮಿತಿಯನ್ನು ಹೆಚ್ಚಿಸಲು ಘಟನೆಯ ಕಲಮನ್ನು ತಿದ್ದಬೇಕು.

ಶಾಸನ ಸಭೆಗಳಲ್ಲಿ

ಪ್ರಾಂತ ಶಾಸನ ಸಭೆಗಳಲ್ಲಿ ಒಟ್ಟು ಎಲ್ಲಾ ಸಭೆಗಳೂ ಸೇರಿ ೩೨೮೩ ಸದಸ್ಯರು ಇರಬೇಕು. ಇದರಲ್ಲಿ ೨೪೯೪ ಜನರು ಎ ವರ್ಗದ ರಾಜ್ಯಗಳಿಂದಲೂ ೭೬೧ ಜನರು ಬಿ ವರ್ಗದ ರಾಜ್ಯಗಳಿಂದಲೂ ಇರಬೇಕು. ವಿಂಧ್ಯ ಪ್ರದೇಶ ಮತ್ತು ಹಿಮಾಚಲದ ಪ್ರದೇಶಗಳಲ್ಲಿ ಶಾಸನ ಸಭೆಗಳು ರಚಿತವಾದಾಗ ಅಲ್ಲಿ ಒಂದೊಂದು ಸಭೆಗೆ ಅರುವತ್ತು ಸದಸ್ಯರು ಇರುವರು.

ವಿಧಿಮಂಡಲಗಳು

ಬಿಹಾರ, ಮುಂಬೈ, ಮದ್ರಾಸು, ಪಂಜಾಬ, ಉತ್ತರಪ್ರದೇಶ ಪ. ಬಂಗಾಲ ಮೈಸೂರು ಈ ರಾಜ್ಯಗಳಲ್ಲಿ ವಿಧಿಮಂಡಲಗಳಿರುವವು. ಇವುಗಳ ಒಟ್ಟು ಸಂಖ್ಯೆಯು ೪೧೯ ಇರುವುದು. ಇವರಲ್ಲಿ ೧೩೯ ಜನರನ್ನು ಸ್ಥಳೀಯ ಅಧಿಕಾರಿಗಳು ನಡೆಸುವ ಚುನಾವಣೆಯಿಂದಲೂ ೩೪ ಪದವಿಧರರಿಂದಲೂ ೩೪ ಶಿಕ್ಷಕರಿಂದಲೂ (ಮಾಧ್ಯಮಿಕ ದರ್ಜೆಗೆ ಕಡಿಮೆ ಇಲ್ಲದವರು) ಪ್ರಾಂತ ಶಾಸನ ಸಭೆಗಳಿಂದ ಅಪ್ರತ್ಯಕ್ಷ ಚುನಾವಣೆಯ ಮೂಲಕ ೧೩೯ ಜನರು ಗವರ್ನರರು, ಮತ್ತು ರಾಜಪ್ರಮುಖರಿಂದ ೭೩ ಜನರು ನಾಮಕರಣದ ಸದಸ್ಯರು. ಆಂಗ್ಲೋ ಇಂಡಿಯನ್‌ರಿಂದ ಗವರ್ನರರು ಸಹಿತ ಯೋಗ್ಯ ಪ್ರಾತಿನಿಧ್ಯಕ್ಕಾಗಿ ಸಾಕಷ್ಟು ಜನರನ್ನು ನೇಮಿಸಿಕೊಳ್ಳಬಹುದು.

ಮೂವರು ಮಾತ್ರ ಆರಿಸಿ ಬರುವ ಒಂದೇ ಒಂದು ಚುನಾವಣಾ ಕ್ಷೇತ್ರವೊಂದು ಇರುತ್ತದೆ. ಇದು ಜಲಪೈಗುರಿ ಮತ್ತು ಕೂಚಬಿಹಾರ.

ಚುನಾವಣಾ ಕಮಿಶನ್ನರಿಗೂ ಕೆಲವು ಪ್ರಾಂತದ ಪ್ರತಿನಿಧಿಗಳಿಗೂ ಸೀಮಾ ಸಮಿತಿಯ ಬಗ್ಗೆ ಬಂದಿದ್ದ ಮತಭೇದಗಳು ಬಗೆಹರಿಸಲ್ಪಟ್ಟವು. ಪರಿಶಿಷ್ಟ ವರ್ಗದವರ ಪ್ರಾತಿನಿಧ್ಯದ ಬಗೆಗೂ ಮುಖ್ಯವಾಗಿ ಭೇದ ಬಂದಿದ್ದಿತು. ಈ ಪರಿಶಿಷ್ಟ ವರ್ಗದವರನ್ನು ಜನ ಸಂಖ್ಯೆಯ ಪ್ರಮಾಣದ ಮೇಲೆ ಆರಿಸಿಕೊಳ್ಳಬೇಕೆಂದೂ ಸರ್ಕಾರವು ತೀರ್ಮಾನಿಸಿರುವುದು.

ಪಂಜಾಬದ ಸದಸ್ಯತ್ವದ ಸಂಖ್ಯೆಯ ಬಗ್ಗೆ ಮತಭೇದ ಇನ್ನು ಹಾಗೆಯೇ ಇರುವುದು. ಉತ್ತರ ಪ್ರದೇಶದ ಎರಡು ಜಾಗೆಗಳ ಡಾಂಗಜಿಲ್ಲೆಯ ಒಂದು ಪ್ರದೇಶ ಬಗ್ಗೆ ವಾದವಿವಾದವೆದ್ದಿದೆ. ಪಾರ್ಲಿಮೆಂಟು ಈ ವಿವಾದಾಸ್ಪದ ಪ್ರದೇಶದ ಸೀಮಾ ಸಮಿತಿಯ ವರದಿಯನ್ನು ಪರಿಶೀಲಿಸುವಾಗ್ಯ ನಿರ್ಬಂಧವಿಲ್ಲದ ಮತದಾನಕ್ಕೆ ಅವಕಾಶ ಕೊಡಲಾಗುವುದೆಂದು ಸದ್ಯಕ್ಕೆ ಒಪ್ಪಿಗೆಯಾಗಿದೆ.

"ಹಿಂದೂಸ್ಥಾನ್ ಹಮಾರಾ"

ಪಾಕಿಸ್ಥಾನ ಸರಕಾರದ ಅಧಿಕೃತ ಪತ್ರಿಕೆಯೆಂತಿರುವ 'ಡಾನ್' ಕಳೆದ ಏಪ್ರಿಲ್ ತಿಂಗಳ ತಾ. ೩೦ರಲ್ಲಿ ಮುಂಜಾನೆ ಹೊಸತೆಂದು ವಾರ್ತೆಯನ್ನು ಪ್ರಕಟಿಸಿತು. ಪಾಕಿಸ್ಥಾನದಲ್ಲಿ ಹೊಸತೊಂದು ಜಾತಿವಾದಿ ಪಕ್ಷವು ಭಾರತವನ್ನು ಪಾಕಿಸ್ಥಾನದೊಡನೆ ಒಂದುಗೂಡಿಸಿ ಮುಸ್ಲಿಮ ಆಡಳಿತೆಗೆ ಒಳಪಡಿಸುವ ಉದ್ದೇಶದಿಂದ ಸ್ಥಾಪನೆಯಾಗಿದೆ ಎಂಬುದೇ ಆ ವಾರ್ತೆಯ ಸಾರಾಂಶ.

ಆ ನೂತನ ಪಕ್ಷದ ಹೆಸರು 'ಹಿಂದುಸ್ಥಾನ್ ಹಮಾರಾ' ಎಂದಿದೆ. ವಿಭಜಿತ ಭಾರತವನ್ನು ಪುನಃ ಒಂದುಗೂಡಿಸಿ ಮುಸ್ಲಿಮ ಆಡಳಿತೆಗೊಳಪಡಿಸುವುದನ್ನೇ ಮುಖ್ಯ ಉದ್ದೇಶವನ್ನಿಟ್ಟುಕೊಂಡ ಪಕ್ಷವು ಯಾವುದೇ ರಾಜಕೀಯ ಧ್ಯೇಯ ಧೋರಣೆಗಳಿಲ್ಲದ ಮತಾಂಧತೆಯನ್ನು ಸಾರುವ ಮತಾಂಧ ದ್ವೇಷಿಯಾದವರೂ ಆ ಪಕ್ಷದ ಸ್ಥಾಪಕರಲ್ಲಿ ಒಬ್ಬರು. ನೆಹರೂ–ಲಿಯಾಕತ್ ಆಲಿ ಒಪ್ಪಂದ ಕಾರ್ಯಾಚರಣೆಗೆ ಸಂಪೂರ್ಣ ಬೆಂಬಲವಿತ್ತ ಆಮಿಲ ಪಾಕಿಸ್ಥಾನ ವೃತ್ತಪತ್ರ ಸಂಪಾದಕರ ಪರಿಷತ್ತಿನ ಉಪಾಧ್ಯಕ್ಷರು. ಇವರಲ್ಲದೆ ಇನ್ನಿತರ ಹಲವಾರು ಪ್ರತಿಷ್ಠಿತ ಪಾಕಿಸ್ಥಾನಿ ಮುಂದಾಳುಗಳು ಆ ಹೊಸ ಪಕ್ಷದ ಬೆನ್ನೆಲುಬಾಗಿರುವರು. ಪತ್ರಿಕಾ ಸಂಪಾದಕರು, ದೊಡ್ಡ ದೊಡ್ಡ ವಣಿಕ ವ್ಯಕ್ತಿಗಳು ಹಾಗೂ ರಾಜಕೀಯ ಮುಂದಾಳುಗಳೂ ಈ ಪಕ್ಷದ ಪ್ರೋತ್ಸಾಹಕ ವರ್ಗದಲ್ಲಿದ್ದಾರೆ.

ನೂತನ ಪಕ್ಷವು ತನ್ನ ಧ್ಯೇಯಗಳನ್ನು ಜನತೆಯ ಮುಂದಿಟ್ಟಿರುತ್ತದೆ. ಶಸ್ತ್ರಪ್ರಯೋಗವಿಲ್ಲದೆ (ಆದರೆ ಇತರ ವಿಧಾನಗಳು ಯಶಸ್ವಿಯಾಗದಿದ್ದಲ್ಲಿ ಹಿಂಸೆಯೇ ಕೊನೆಯ ಅಸ್ತ್ರವಾಗಬಹುದು.) 'ಹಿಂದುಸ್ಥಾನ ಹಮಾರಾ' ಪಕ್ಷವು ಭಾರತದಲ್ಲಿ ಹಿಂದುಗಳ ದಬ್ಬಾಳಿಕೆಯಿಂದ ಮುಸ್ಲಿಮರು, ಕ್ರೈಸ್ತರು, ಪಾರ್ಸಿ, ಸಿಖ್ಖ ಮತ್ತು ದಲಿತ ವರ್ಗ ಮೊದಲಾದ ಅಲ್ಪ ಸಂಖ್ಯಾತರನ್ನು 'ಇಸ್ಲಾಮ್' ತತ್ವದ ಮೂಲಕ ವಿಮೋಚನೆಗೊಳಿಸುವುದು ಎಂದು ಹೇಳಲಾಗಿದೆ. ಹಿಮಾಲಯದಿಂದ ಕನ್ಯಾಕುಮಾರಿ ಭೂಶಿರದ ತನಕ, ಬಂಗಾಳ ಅಖಾತದಿಂದ ಅರಬಿ ಸಮುದ್ರದ ತನಕ ಮುಸ್ಲಿಂ ಧರ್ಮ ಸ್ಥಾಪನೆ ಮಾಡುವುದೂ ನೂತನ ಪಕ್ಷದ ಇನ್ನೊಂದು ಉದ್ದೇಶ. ಭಾರತದಲ್ಲಿ ಹಿಂದೂ ಆಡಳಿತೆಯು ಹಿಂದೇತರರಿಗೆ ಮಾತ್ರ ಒಂದು ಹಾವಳಿಯಾಗಿ ಪರಿಣಮಿಸಿರುವುದಲ್ಲ ಮಾನವ ನಾಗರಿಕತೆಗೇನೆ ಒಂದು ಗಂಡಾಂತರವಾಗಿ ಪರಿಣಮಿಸಿದೆಯೆಂದೂ 'ಹಿಂದುಸ್ಥಾನ್ ಹಮಾರಾದ' ಮೊಸಳೆ ಕಣ್ಣೀರು.

ಭಾರತದಲ್ಲಿರುವ ಜಾತೀಯ ಸಂಸ್ಥೆಗಳನ್ನು ಭಾರತ ಸರಕಾರವು ನಿರ್ಮೂಲನ ಮಾಡಬೇಕೆಂದೂ ಈ ಪತ್ರಿಕೆಯು ಒಂದು ಆಹ್ವಾನವನ್ನೇ ಕೊಟ್ಟಿರುತ್ತದೆ.

ಪಾಕಿಸ್ಥಾನಿಗಳು ಹಿಂದುಗಳ 'ಅನ್ಯಾಯವನ್ನು ತಾಳಲಾರದೆ' ತಮ್ಮ ಧರ್ಮದ ಅಸ್ತಿತ್ವ ರಕ್ಷಣೆಯ ಸಲುವಾಗಿ ವಿಭಜನೆಯನ್ನು ಅಪೇಕ್ಷಿಸಿ, ಪಾಕಿಸ್ಥಾನವನ್ನು ಪಡೆದರು. ಆದರೆ ಅವರಿಗೀಗ ಭಾರತವೇ ಬೇಕಾಗಿದೆ. ಇದು ಕೇವಲ ವಿನೋದನೆಯ ಪ್ರಲಾಪವಲ್ಲ, ಉಂಡ ಮನೆಗೆ ಬೆಂಕಿ ಹತ್ತಿಸುವ ಇರಾದೆ, ನಾಗಿಣಿಗಳಂತೆ ಲೋಕವನ್ನಾಳುವ ದುರಾಶೆ!

ಕಾಂಗ್ರೆಸ್ ಚುನಾವಣೆಗಳು ಮುಂದೆ ಬೀಳುವವೇ ?

ಭಾರತದಲ್ಲಿ ಸಾರ್ವತ್ರಿಕ ಚುನಾವಣೆಗಳು ಬಹುಶಃ ಮುಂದಿನ ವರ್ಷಕ್ಕೆ ಮುಂದುವರಿಯುವವೆಂದು ನವದಿಲ್ಲಿಯ ಇಂಡಿಯನ್ ಎಸ್ಟ್ರೋನೋಮಿಕಲ್ ಎಂಡ್ ಎಸ್ಟ್ರೋಲೋಜಿಕಲ್ ಇನ್ಸ್ಟಿಟ್ಯೂಟಿನ ಡೈರೆಕ್ಟರ ಪಂಡಿತ ರಾಮಸ್ವರೂಪರ ಭವಿಷ್ಯ ನುಡಿದಿದ್ದಾರೆ. ಅವರು ಪ್ರಕಟಿಸಿದ ಬೇರೆ ಕೆಲವು ಭವಿಷ್ಯಗಳು ಈ ರೀತಿಯಾಗಿವೆ.

ಕಾಂಗ್ರೆಸ್ ಸಂಸ್ಥೆಯಲ್ಲಿ ದೊಡ್ಡ ಒಡಕುಂಟಾಗುವುದು; ಪರಿಣಾಮವಾಗಿ ಒಂದು ಉಚ್ಚ ಶ್ರೇಣಿಯ ಕಾಂಗ್ರೆಸ್ ಮುಂದಾಳುಗಳ ನೇತೃತ್ವದಲ್ಲಿ ಒಂದು ಹೊಸ ಪಕ್ಷವು ಹುಟ್ಟುವುದು. ಸಾರ್ವತ್ರಿಕ ಚುನಾವಣೆಯಲ್ಲಿ ಸುಮಾರು ಶೇಕಡಾ ೬೦ ರಷ್ಟು ಸ್ಥಾನಗಳನ್ನು ಪಡೆದು ಕಾಂಗ್ರೆಸ್ ಬಹುಮತ ಪಡೆವುದು.

ಪಂಡಿತ ರಾಮಸ್ವರೂಪರು ಗತವರ್ಷದಲ್ಲಿ ನುಡಿದ ಭವಿಷ್ಯ ನುಡಿಗಳಲ್ಲಿ: "ಜನರಲ್ ನೇಬ್ ಅಧ್ಯಕ್ಷರು ಅವಮಾನ ಹೊಂದಿ ಅಧಿಕಾರ ಚ್ಯುತರಾಗುತ್ತಾರೆ" "ನೇಪಾಳದಲ್ಲಿ ಕ್ರಾಂತಿಯುತ ವಿದ್ಯಮಾನಗಳು ಸಂಭವಿಸಬಹುದು" ಎಂಬೀ ಭವಿಷ್ಯ ವಾಕ್ಯಗಳು ಅಕ್ಷರಶಃ ನಿಜವಾಗಿವೆ.

ಈ ವರ್ಷದ ಜೂನ್ ತಿಂಗಳೊಳಗೆ ಬ್ರಿಟನಿನ ಸರ್ ವಿನ್ಸ್ಟನ್ ಚರ್ಚಿಲ್ಲರು ತಿರುಗಿ ಗೌರವ ಮನ್ನಣೆಗಳಿಗೆ ಪಾತ್ರವಾಗಬಹುದೆಂದೂ ಪಂಡಿತ ಶರ್ಮರು ಭವಿಷ್ಯ ನುಡಿರುವರು.

ಈ ವರ್ಷ ದೇಶದಲ್ಲಿ ಆಹಾರದ ಅಭಾವ ವಿಸರಬಹುದು; ಸಾಂಕ್ರಾಮಿಕ ರೋಗಗಳು ಮತ್ತು ಇತರ ನಿಸರ್ಗ ಸಂಬಂಧವಾದ ಆಪಾಂತರಗಳು ತಲೆದೋರಬಹುದು. ಬಿಹಾರ, ಬಂಗಾಳ, ಮುಂಬಾಯಿ ಮತ್ತು ಮಧ್ಯಪ್ರದೇಶ ಇವು ಹೆಚ್ಚಿನ ಕಷ್ಟನಷ್ಟಗಳಿಗೊಳಗಾಗಬಹುದು.

ಹೈದರಾಬಾದ ಮತ್ತು ದಕ್ಷಿಣ ಭಾರತದ ಪರಕೀಯ ವಸಾಹತುಗಳಲ್ಲಿ ಕಮ್ಯೂನಿಸ್ಟ ಚಟುವಟಿಕೆಗಳ ಪರಂಪರೆ ಹೆಚ್ಚಬಹುದು. ವ್ಯಾಪಾರ ವಹಿವಾಟುಗಳ ಮಟ್ಟಿಗೆ ಭಾರತಕ್ಕೆ ಹೆಚ್ಚಿನ ಲಾಭವಾಗುವ ಚಿಹ್ನೆಯೊಂದೂ ತೋರುವುದಿಲ್ಲ. ಧಾರಣೆಗಳು ಇನ್ನೂ ಏರಬಹುದು.

ಇನ್ನು ಮೂರು ತಿಂಗಳಲ್ಲಿ ಭಾರತ ಪಾಕಿಸ್ತಾನಗಳೊಳಗಣ ಸಂಬಂಧ ತೀರಾ ಕೆಟ್ಟು ಮತ್ತೊಮ್ಮೆ ವ್ಯಾಪಾರಿಕ ಬದ್ಧತೆ ಕಂಡು ಬರಬಹುದು.

ಪಾಕಿಸ್ಥಾನವು ಕಾಶ್ಮೀರವನ್ನು ಬಲವಂತ ಪ್ರಯೋಗದಿಂದ ಹೊಂದಲು ಪ್ರಯತ್ನಪಡಬಹುದು. ಆದರೆ ಈ ಯತ್ನದಲ್ಲಿ ಪಾಕಿಸ್ಥಾನಕ್ಕೆ ಯಶ ದೊರೆಯಲಾರದು. ಪಾಕಿಸ್ಥಾನದ ರಾಜಕೀಯವೂ ಕೆಡುವ ಸಂಭವವಿದೆ; ಅದರ ಪರಿಣಾಮವಾಗಿ ಲಿಯಾಕತ್ ಅಲಿ ಕೆಬಿನೆಟಿನಲ್ಲಿ ಹಲವು ಉಲ್ಲೇಖನೀಯ ಬದಲಾವಣೆಗಳು ತಲೆದೋರಬಹುದು.

೧೯೫೩ ರೊಳಗೆ ಮಾನವತೆಯು ಮತ್ತೊಂದು ಮಹಾ ಯುದ್ಧವನ್ನು ಎದುರಿಸಬೇಕಾಗುವುದು. ಆ ಯುದ್ಧವು [illegible] ಪ್ರಜಾಪ್ರಭುತ್ವ ರಾಷ್ಟ್ರಗಳ ವಿಜಯದಲ್ಲಿ ಪರಿಸಮಾಪ್ತಿಯಾಗುವುದು.

'ಪ್ರಭಾತ'

ಬ್ರಹ್ಮಚಾರಿಗಳ ಸಂಘ

ಬ್ರಹ್ಮಚಾರಿಗಳಾಗಿ ಜೀವಿಸುವುದರಿಂದ ಹಿತವಿದೆ. ಹಾಗೂ ಬ್ರಹ್ಮಚಾರಿಗಳಾಗಿ ಜೀವಿಸಿ ಸಾಮಾಜಿಕ, ನೈತಿಕ ಹಾಗೂ ಸಾಂಸ್ಕೃತಿಕ ಉದ್ಧಾರವನ್ನು ಸಾಧಿಸಬಹುದೆಂದು ಬೋಧಿಸುವ ಬ್ರಹ್ಮಚಾರಿಗಳ ನೂತನ ಸಂಘವೊಂದು ಲಕ್ನೋದಲ್ಲಿ ಏರ್ಪಟ್ಟಿದೆಯಂತೆ.

ರಷ್ಯದ ಇನ್ನೊಂದು ದಾಖಲೆ

ರಷ್ಯವು ಇತ್ತೀಚೆಗೆ ಎಲ್ಲರಿಗಿಂತಲೂ ಹೊಸ ದಾಖಲೆಗಳನ್ನು ಸ್ಥಾಪಿಸುವುದರಲ್ಲಿ ತೊಡಗಿದಂತಿದೆ. ರಷ್ಯದ ಕಮ್ಯುನಿಸ್ಟ ಪಕ್ಷದ ಮುಖಪತ್ರವಾದ 'ಪ್ರವಾಡಾ' ಇತ್ತೀಚೆಗೆ ಪ್ರಕಟಿಸಿದ ವರದಿಯೊಂದರಲ್ಲಿ ಸೋವಿಯಟ್‌ನಲ್ಲಿ ವಸಿಲಿ ಸೆಗಿರ್ಬಿಬ್ ಎಂಬವನು ೧೪೩ ವರ್ಷ ಪ್ರಾಯದವನಾದರೂ ಇನ್ನೂ ಬದುಕಿ ಉಳಿದಿರುವನೆಂದು ಹೇಳಲಾಗಿದೆ.

ಆ ಪತ್ರಿಕೆಯ ವರದಿ ಪ್ರಕಾರ ರಷ್ಯದಲ್ಲಿ ೧೦೦ ವರ್ಷ ಪ್ರಾಯ ದಾಟಿದವರು ೩೦,೦೦೦ ಮಂದಿ ಇದ್ದಾರಂತೆ.

ಹಸುರು ಬಣ್ಣದ ತಲೆಕೂದಲುಳ್ಳ ತರುಣಿ

ತನ್ನ ತಲೆಕೂದಲು ಇನ್ನಷ್ಟು ಸುಂದರವಾಗಬೇಕೆಂದು ಆಶಿಸಿ ೨೪ ವರ್ಷದ ತರುಣಿಯೊರ್ವಳು ಬ್ರಿಸ್ಟಲ್ ನಗರದ ಕೂದಲು ತಜ್ಞನಲ್ಲಿಗೆ ಹೋದಳು. ಆತನು ಆವಳ ತಲೆಕೂದಲ ಮೇಲೆ ನಡೆಸಿದ ಪ್ರಯೋಗದ ಫಲವಾಗಿ ಅವಳ ಕೂದಲು ಹಸುರು ಬಣ್ಣ ತಾಳಿತು. ಕೊನೆಗೆ ಈಗ ಬೂದು ಬಣ್ಣ ತಾಳಿದೆ. ಈಗ ಆ ಮಹಾಶಯನ ಮೇಲೆ ಅವಳು ೨,೫೦೦ ರೂಪಾಯಿ ನಷ್ಟ ಭರ್ತಿಗಾಗಿ ವ್ಯಾಜ್ಯ ಹೂಡಿರುವಳು.

ಮುಸಲೋನಿ ಪತ್ನಿ

ಮುಸಲೋನಿಯ ಪತ್ನಿಯಾದ ಡಾನಾ ರಾಕೆಲೆ ಮುಸಲೋನಿಯು ಈಗ ೬೦ ವರ್ಷ ವಯಸ್ಸಿನವಳಾಗಿದ್ದರೂ ತನ್ನ ಬಟ್ಟೆಗಳನ್ನು ತಾನೆ ಒಗೆದು, ತನ್ನ ಕೆಲಸ ತಾನೇ ಮಾಡಿಕೊಳ್ಳುತ್ತಾಳೆ. ಮುಸಲೋನಿಯು ಅಧಿಕಾರದಲ್ಲಿದ್ದಾಗ ಕೂಡ ಆಕೆಗೆ ಯಾವ ರೀತಿಯ ಸೌಲಭ್ಯಗಳೂ ದೊರೆತಿರಲಿಲ್ಲ.

ಸುಂಕ ಕೊಡದಿದ್ದ ಪದಾರ್ಥಗಳ ಪತ್ತೆ.

ಗೋವಾ ಪ್ರದೇಶದಿಂದ ಬೆಳಗಾವಿಗೆ ಸಾಮಾನು ಸಾಗಿಸಿ ಕಪ್ಪು ಮಾರ್ಕೆಟ್ಟಿನಲ್ಲಿ ವ್ಯಾಪಾರ ಮಾಡುತ್ತಿದ್ದರೆಂಬುದಾಗಿ ಹೇಳಲಾಗಿದ್ದ ಬೆಳಗಾವಿಯ ಪ್ರಮುಖ ವ್ಯಾಪಾರಿಗಳ ಉಗ್ರಾಣವನ್ನು ಶೋಧಿಸಿದಾಗ ಜಾಯಿಪತ್ರೆ, ಸಿಗರೇಟುಗಳ ಮತ್ತು ಇತರ ಪದಾರ್ಥಗಳು ಅಕ್ರಮವಾಗಿ ಸಾಗಿಸಲ್ಪಟ್ಟದ್ದು ಪತ್ತೆಯಾಯಿತು. ಸುಳ್ಳು ಲೆಕ್ಕ ಮತ್ತು ಸತ್ಯವಾದ ಲೆಕ್ಕಗಳೂ ಪತ್ತೆಯಾಗಿವೆ. ಇಲ್ಲಿ ದೊರಕಿದ ಪದಾರ್ಥಗಳ ಬೆಲೆಯು ೧ ಲಕ್ಷದ ೪೦ ಸಾವಿರ ರೂಪಾಯಿಗಳಷ್ಟೆಂದೂ ಆವು ಸುಂಕಕೊಡದವುಗಳೆಂದೂ ಹೇಳಲಾಗಿದೆ.

ಹೊಟ್ಟೆಯಲ್ಲಿದ್ದ ಚಿನ್ನದ ಪತ್ತೆ.

ಗೋವಾದಿಂದ ಮುಂಬಯಿಗೆ ಬಂದ ಸ್ತ್ರೀಯರಿಬ್ಬರು ಹಡಗಿನಲ್ಲಿ ಬಂದ ಪ್ರಯಾಣಿಕರಿಂದ ೬೦,೦೦೦ ರೂಪಾಯಿಗಳ ಬೆಲೆಯ ಚಿನ್ನವನ್ನು ವಶಪಡಿಸಿಕೊಳ್ಳಲಾಯಿತು. ಈ ಚಿನ್ನವನ್ನು ಅವರು ತಮ್ಮ ಹೊಟ್ಟೆಯಲ್ಲಿ ಬಚ್ಚಿಟ್ಟುಕೊಂಡಿದ್ದರು. ಇಬ್ಬರನ್ನು ಆಸ್ಪತ್ರೆಗೆ ಸೇರಿಸಿ ಅವರ ಹೊಟ್ಟೆಯಲ್ಲಿದ್ದ ೧೦ ಸಾವಿರ ಬೆಲೆಯ ಚಿನ್ನವನ್ನು ವಶಪಡಿಸಿಕೊಳ್ಳಲಾಯಿತು!

ಬೇಕಾಗಿದ್ದಾರೆ

ನೆಲಜಿ ಹೈಯರ್ ಎಲಿಮೆಂಟರಿ ಶಾಲೆಗೆ ಉಪಾಧ್ಯಾಯರು ಬೇಕಾಗಿದ್ದಾರೆ. ಸ್ಕೂಲ್ ಫೈನಲ್ ಪಾಸಾದವರು ಯಾ ಈ ವರ್ಷ ಪರೀಕ್ಷೆಗೆ ಕೂತವರು ಆಗಿರಬೇಕು. ಈ ತಿಂ. ೩೧ರೊಳಗೆ ಈ ಕೆಳಗಿನ ವಿಳಾಸಕ್ಕೆ ಬರೆಯತಕ್ಕದ್ದು.

ಪ್ರೆಸಿಡೆಂಟರು.
ನೆಲಜಿ ಶಾಲಾ ಕಮಿಟಿ
2-1 ಬಲ್ಲಮಾವಟಿ ಗ್ರಾಮ,
ನಾಪೋಕ್ಲು ಪೋಸ್ಟು.

ಮಾರಾಟಕ್ಕಿದೆ.

ನಾಪೋಕ್ಲು ಪೇಟೆಯಿಂದ ಅರ್ಧ ಫರ್ಲಾಂಗು ದೂರದಲ್ಲಿ ಪಾಡಿಕೇರಿ ರಸ್ತೆಯ ಪಕ್ಕದಲ್ಲಿರುವ ವಾಸಕ್ಕೆ ಯೋಗ್ಯವಾಗಿರುವ ಹೆಂಚು ಹಾಕಿದ ಹಂಚಿನ ಮನೆ ಮತ್ತು ಹಿತ್ತಲು ಮಾರಾಟಕ್ಕಿದೆ. ಮನೆಯ ಪಕ್ಕದಲ್ಲಿ ಸದಾ ನೀರು ಇರುವ ಕಲ್ಲುಕಟ್ಟಿದ ಸೇದು ಬಾವಿ ಇದೆ. ಮನೆಗೆ ತಿಂಗಳು ಒಂದರ ರೂ 12/- ಬಾಡಿಗೆ ಬರುತ್ತಿದೆ. ಖಾಯಿಸ್‌ದಾರರು ಈ ಕೆಳಗಿನ ಅಡ್ರೆಸ್ಸಿಗೆ ಬರೆಯಬಹುದು.

ಎ. ಎಂ. ಸೋಮಪ್ಪ,
ನಾಪೋಕ್ಲು,
1-1 ನಾಪೋಕ್ಲು ಪೋಸ್ಟು.

ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ. (1921ರಲ್ಲಿ ಸ್ಥಾಪಿತವಾಗಿದೆ.

ಅಧಿಕೃತ ಶೇರು ಭಂಡವಾಳ	ರೂ.	10,00,000.
ವಸೂಲಾದ ಶೇರು ಮೊಬಲಗು	ರೂ.	1,99,400.
ಕ್ಷೇಮನಿಧಿ	ರೂ.	59,000.
ಇತರ ನಿಧಿಗಳು	ರೂ.	36,000.

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನೂ ಕೈಕೊಳ್ಳಲಾಗುವುದು

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ, ಬೆಳ್ಳಿ ನಗಗಳ ಈಡಿನ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ಕು ಡ್ರಾಫ್ಟ್‌ಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರನಿಟಿ ಮತ್ತು ವಾರ್ಡನ್ ಇನ್ಶೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಗೌ. ಕಾರ್ಯದರ್ಶಿ,

ಕೆ. ಪಿ. ಅಪ್ಪಯ್ಯ, M. L. C. ಪ್ರೆಸಿಡೆಂಟ್ ಮತ್ತು ಖಜಾಂಚಿ.

ದಿ ಟ್ರಾಪಿಕಲ್

ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

ಮೇನೇಜಿಂಗ್ ಡೈರೆಕ್ಟರ್:–ಲಾಲ ಶಂಕರ್ ಲಾಲ್.

ಮುಖ್ಯ ಕಚೇರಿ:– ಹೊಸ ಡೆಲ್ಲಿ.

52–5 ಸ್ಥಾಪಿಸಿದ ಡೈರೆಕ್ಟರರು:

ಪಂಡಿತ ಮೋತಿಲಾಲ್ ನೆಹರು. ಎಸ್. ಶ್ರೀನಿವಾಸ ಅಯ್ಯಂಗಾರ್

ಹಕೀಮ್ ಅಜಮಲಖಾನ್. ಡಾ|| ಎಂ. ಎ. ಅನ್ಸಾರಿ.

Transacts:–Life, Fire, Motor, and Marine.

ಯಂ. ಯು. ಅಚ್ಚಂಣ, ಇನ್ಸಪೆಕ್ಟರು, ಮಡಿಕೇರಿ, ಕೊಡಗು.

ಎಂ. ಎ. ಬೆಳ್ಯಪ್ಪ, ಬ್ರಾಂಚ್ ಸೆಕ್ರಟರಿ, ಹಂಪನಕಟ್ಟ, ಮಂಗಳೂರು.

ಕೊಡಗು ಪ್ರಾಂತೀಕ ಸಹಕಾರಿ, ಮಾರ್ಕೆಟಿಂಗ್, ಫೆಡರೇಷನ್ ಲಿಮಿಟೆಡ್., ವೀರಾಜಪೇಟೆ.

ನಮ್ಮಲ್ಲಿ ಕೋವಿಗಳು, ತೋಟಗಳು ಮತ್ತು ಎಲ್ಲಾ ತರಹದ ವ್ಯವಸಾಯದ ಹತ್ಯಾರುಗಳು ದೊರೆಯುತ್ತವೆ.

1. 32 ಪಿಸ್ತೂಲುಗಳು (Pistols) ಕ್ರಯ ರೂ. 162 ರಿಂದ 245ರ ವರೆಗೆ.
2. 12ನೇ ನಂಬರಿನ ಒಂಟಿ ಹೊಳವಿನ ಕೋವಿ ಕ್ರಯ ರೂ. 320–0–0
3. 12ನೇ ನಂಬರಿನ ಜೋಡು ಹೊಳವಿನ ಕೋವಿ (Webley & Scott)
4. 12ನೇ ನಂಬರಿನ ಜೋಡು ಹೊಳವಿನ ಕೋವಿ (Spanish make)
5. .32 ಪಿಸ್ತೂಲು ಮತ್ತು ರಿವಾಲ್ವರುಗಳ ತೋಟಗಳೂ ಸಹ ದೊರೆಯುತ್ತವೆ.
6. ಕಾಫಿ ಮತ್ತು ಕಿತ್ತಳೆ ಗಿಡಗಳಿಗೆ ಸ್ಪ್ರೆ ಮಾಡುವ ಪಂಪುಗಳು (Spraying Pumps)
7. ⅜" ⅝" ¼" ¾" ½" ಕಬ್ಬಿಣದ ಸಲಾಕೆಗಳು.

ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

(ಆವಶ್ಯವಿರುವ ಕೋವಿಗಳಿಗೂ, ತೋಟಗಳಿಗೂ ಜಿಲ್ಲಾ ಮೇಜಿಸ್ಟ್ರೇಟರಿಂದ ವಿಶೇಷ ಪರ್ಮಿಟು "Special permit" ಪಡೆದವರಿಗೆ ಮಾತ್ರ ದೊರಕುವದು)

52–35

ಎಂ. ಎಸ್. ಸೋಮಯ್ಯ, ಗೌರವ ಕಾರ್ಯದರ್ಶಿ.

Edited, Printed and Published by P. I. Bellisppa at 'Kodagu' Press, Mercara, for 'Kodagu' Ltd.

ಕೊರಿಯದ ಯುದ್ಧ.

ಕೊರಿಯದ ಯುದ್ಧದಿಂದ ಚೀನವು ಹಿಂದೆ ಸರಿಯುವ ಸಲುವಾಗಿ ಮತ್ತು ಯುದ್ಧವನ್ನು ಸಂಧಾನದ ಮೂಲಕ ಅಂತ್ಯಗೊಳಿಸುವ ಸಲುವಾಗಿ ಯುಕ್ತರಾಷ್ಟ್ರ ಸಂಘವೂ ಏಶಿಯಾ–ಅರಬ ಗುಂಪಿನ ರಾಷ್ಟ್ರಗಳೂ ಮಾಡಿದ ಪ್ರಯತ್ನಗಳೆಲ್ಲವೂ ವಿಫಲವಾಗಿರುವಾಗ ಯುಕ್ತರಾಷ್ಟ್ರ ಸಂಘವು ಕೊರಿಯದ ಯುದ್ಧಕ್ಕೆ ಬೆನ್ನೆಲುಬಿನಂತಿರುವ ಚೀನದ ಮೇಲೆ ಹೆಚ್ಚಿನ ಕಾರ್ಯಕ್ರಮ ಕೈಕೊಳ್ಳುವುದಕ್ಕೆ ಇದೆ.

ಚೀನದ ಮೇಲೆ ಎಲ್ಲಾ ರಾಷ್ಟ್ರಗಳು ಸಂಪೂರ್ಣ ಆರ್ಥಿಕ ದಿಗ್ಬಂಧನ ಹಾಕಬೇಕೆಂದು ಅಮೇರಿಕೆಯು ಆಶಿಸಿದೆ. ಇದೀಗ ಯುಕ್ತರಾಷ್ಟ್ರದ ಸಮಿತಿಯು ಒಂದು ಗೊತ್ತುವಳಿಯಲ್ಲಿ ಸ್ವೀಕರಿಸಿದ್ದು ಆ ಗೊತ್ತುವಳಿಯಲ್ಲಿ ಕಮ್ಯುನಿಸ್ಟ ಚೀನಕ್ಕೆ ಶಸ್ತ್ರಾಸ್ತ್ರಗಳನ್ನು ತಯಾರಿಸುವುದಕ್ಕೆ ಸಹಾಯಕವಾಗುವ ಸರಕುಗಳನ್ನು, ಅಣುಶಕ್ತಿ ಸಾಮಗ್ರಿಗಳನ್ನು ಹಾಗೂ ಪೆಟ್ರೋಲನ್ನು ಕಳುಹಿಸಬಾರದೆಂದು ಹೇಳಲಾಗಿದೆ

ಕೊರಿಯದ ಯುದ್ಧದಲ್ಲಿ ಪ್ರಾಮುಖ್ಯ ಪಾತ್ರ ವಹಿಸಿರುವ ಕಮ್ಯುನಿಸ್ಟ ಚೀನದ ಮೇಲೆ ಸಂಪೂರ್ಣ ದಿಗ್ಬಂಧನ ಹಾಕಬೇಕೆಂದೂ ಅಮೇರಿಕೆಯು ಆತುರದಿಂದಿರುವುದಾದರೂ ಬ್ರಿಟನು ಅವಸರ ಪಡುವಂತಿಲ್ಲ. ಯಾಕೆಂದರೆ ಬ್ರಿಟನು ಕಮ್ಯುನಿಸ್ಟ್ ಚೀನದೊಡನೆ ಹೇರಳ ವ್ಯಾಪಾರ ಮಾಡುತ್ತಲಿದೆ. ದಿಗ್ಬಂಧನ ಹೂಡಿದ ಮಾತ್ರದಲ್ಲಿ ಮೊದಲಾಗಿ ಬ್ರಿಟನ್ ನಷ್ಟಕ್ಕೊಳಗಾಗುವುದು ಅದರೊಡನೆ ಯುಕ್ತರಾಷ್ಟ್ರ ಸಂಘವು ಹೆಚ್ಚಿನ ಕಾರ್ಯಕ್ರಮ ತೆಗೆದುಕೊಂಡ ಕೂಡಲೇ ಚೀನವು ಇನ್ನಷ್ಟು ಕಠಿಣ ಧೋರಣೆ ವಹಿಸಿ ಕೊರಿಯದ ಯುದ್ಧವನ್ನು ಅಂತ್ಯಗೊಳಿಸುವುದೇ ಅಸಾಧ್ಯವಾಗಿ ಪರಿಣಮಿಸಬಹುದಲ್ಲದೆ ದೂರಪೂರ್ವದ ಸಮಸ್ಯೆಗಳು ಇನ್ನೂ ಹೆಚ್ಚು ಕಠಿಣವಾಗುವ ಸಂಭವ ಇದೆ

ಅಮೇರಿಕೆಯು ಚೀನದ ಮೇಲೆ ನೇರಾಗಿ ದಾಳಿ ಮಾಡಲು ಸಿದ್ಧವಿಲ್ಲವೆಂಬುದನ್ನು ಜನರಲ್ ಮೆಕಾರ್ಥರರ ಪ್ರಕರಣದಿಂದ ತಿಳಿದುಬಂದಿದೆ. ಚೀನದ ಮೇಲೆ ದಾಳಿ ನಡೆಸಿದ ಮಾತ್ರದಲ್ಲಿ ದೂರ ಪೂರ್ವದ ಪರಿಸ್ಥಿತಿ ಸಂಪೂರ್ಣ ಹಾಳಾಗಿ ಜಾಗತಿಕ ಯುದ್ಧ ಪ್ರಾರಂಭವಾಗಿ ಅಮೇರಿಕೆಯು ಅಣುಶಕ್ತಿಯ ದಾಳಿಗಳನ್ನು ಎದುರಿಸಬೇಕಾಗುವುದೆಂದು ಅಧ್ಯಕ್ಷ ಟ್ರೂಮನ್‌ರವರು ಸ್ಪಷ್ಟಗೊಳಿಸಿರುವರು. ಆದುದರಿಂದ ಚೀನವನ್ನು ಮಣಿಸುವ ಸಲುವಾಗಿ ಇತರ ವಿಧಾನಗಳನ್ನು ಅನುಸರಿಸುವುದೇ ಉತ್ತಮವೆಂದು ಅಮೇರಿಕೆಯು ಮನಗಂಡು ಕಮ್ಯುನಿಸ್ಟ್ ಚೀನದ ಮೇಲೆ ಆರ್ಥಿಕ ಹಾಗೂ ನೌಕಾ ದಿಗ್ಬಂಧನ ಹೂಡುವರೆ ಮುಂದಾಗಿದೆ. ಮೊನ್ನೆ ತಾನೇ ಯುಕ್ತ ರಾಷ್ಟ್ರದ ಕಾರ್ಯನಿರ್ವಾಹಕ ಸಮಿತಿಯಲ್ಲಿ ಚೀನಕ್ಕೆ ಅವಶ್ಯಕ ಸರಕುಗಳ ಸಾಗಾಟವನ್ನು ನಿರ್ಬಂಧಿಸುವ ಗೊತ್ತುವಳಿ ಮಾನ್ಯವಾದುದರಿಂದ ಬ್ರಿಟನು ಉಭಯಸಂಕಟಕ್ಕೀಡಾಗಿದೆ.

ಹಾಂಗ್‌ಕಾಂಗ್‌ನ ಮೂಲಕ ಬ್ರಿಟನು ಚೀನದೊಡನೆ ಒಳ್ಳೆ ವ್ಯಾಪಾರಿ ಸಂಬಂಧವನ್ನಿಟ್ಟುಕೊಂಡಿದೆ. ಇತ್ತೀಚೆಗೆ ಚೀನದ ಕಮ್ಯುನಿಸ್ಟ್ ಸರಕಾರವು ಬ್ರಿಟಿಷ್ ಸಿಂಹವನ್ನು ಆಗಾಗ ಕೆಣಕುತ್ತಲಿದೆಯಾದರೂ ಬ್ರಿಟನು ತನ್ನ ವ್ಯಾಪಾರ ಸಂಬಂಧವನ್ನು ಈ ತನಕ ಕಳೆದುಕೊಂಡಿರುವುದಿಲ್ಲ ಮಾತ್ರವಲ್ಲ ಮುಂದಕ್ಕೂ ಕಳೆದುಕೊಳ್ಳುವ ಸಾಹಸದಿಂದ ಹಿಂಜರಿಯಬಹುದು. ಕಮ್ಯುನಿಸ್ಟ ಚೀನದ ಮೇಲೆ ಸಂಪೂರ್ಣ ದಿಗ್ಬಂಧನ ಹೂಡಿದ ಪರಿಣಾಮವಾಗಿ ಚೀನವನ್ನು ಹೊರ ಜಗತ್ತಿನಿಂದ ಸಂಪೂರ್ಣ ಬೇರ್ಪಡಿಸಿದಂತಾಗಿ ಅದು ರಷ್ಯದ ಕಡೆಗೆ ಇನ್ನೂ ಹೆಚ್ಚು ಸರಿದು ಅನಂತರ ಅದರೊಡನೆ ಸಂಧಾನ ಮಾಡಿಕೊಳ್ಳುವುದೇ ಅಸಾಧ್ಯವೆಂಬ ಅಭಿಪ್ರಾಯಪಡುತ್ತಿದೆ.

ಬ್ರಿಟಿಷ್ ಸರಕಾರವು ಚೀನದ ಮೇಲೆ ದಿಗ್ಬಂಧನ ಹೂಡುವ ಸಲುವಾಗಿ ಯುಕ್ತರಾಷ್ಟ್ರವು ಕೈಕೊಳ್ಳಲಿರುವ ಪ್ರಥಮ ಕಾರ್ಯಕ್ರಮಕ್ಕೆ ಬೆಂಬಲ ಕೊಡುವರೆ ಇನ್ನೆರಡು ಮುಖ್ಯ ಕಾರಣಗಳಿವೆ. ಒಂದು, ಅಮೇರಿಕೆಯು ಬ್ರಿಟನಿನ ರಕ್ಷ್ಯದ ಧೋರಣೆಯನ್ನು ಕಟುವಾಗಿ ಟೀಕಿಸುತ್ತಿರುವುದು. ಎರಡನೇಯದ್ದು, ಬ್ರಿಟನ್ನಲ್ಲಿ ಟೋರಿಗಳು ಸರಕಾರದ ಮೋರಚೆ ಬಡಲಾಗಬೇಕೆಂದ. ಒತ್ತಾಯ ಮಾಡುತ್ತಿರುವುದು.

ಇದೀಗ ಯುಕ್ತರಾಷ್ಟ್ರವು ಚೀನದ ಮತ್ತು ಉತ್ತರ ಕೊರಿಯದ ಮೇಲೆ ದಿಗ್ಬಂಧನ ಹೂಡುವ ಕಾರ್ಯಕ್ರಮಕ್ಕಿಳಿದಿದೆ. ಆದರೆ ಈ ಕಾರ್ಯಕ್ರಮವನ್ನು ಯಶಸ್ವಿಗೊಳಿಸುವ ಸಲುವಾಗಿ ಆದೆಷ್ಟು ರಾಷ್ಟ್ರಗಳು ಸಹಕರಿಸಲಿರುವವು ಎಂಬುದನ್ನು ನೋಡಬೇಕಾಗಿದೆ. ಪಶ್ಚಿಮ ಯುರೋಪಿನ ಮತ್ತು ಅಮೇರಿಕದಿಂದ ಮಾರ್ಷಲ್ ಸಹಾಯ ಪಡೆಯುತ್ತಿರುವ ರಾಷ್ಟ್ರಗಳು ಶೀಘ್ರಗಲ್ಲೇ ಈ ಕಾರ್ಯಕ್ರಮದಲ್ಲಿ ಸಹಕರಿಸುವುದು ಸಹಜವಾಗಿದ್ದರೂ ಏಶ್ಯಾ ಮತ್ತು ಮಧ್ಯ ಪೂರ್ವದ ರಾಷ್ಟ್ರಗಳು ಯಾವ ಧೋರಣೆ ವಹಿಸುವವು ಎಂಬುದನ್ನು ಈಗಲೇ ಹೇಳಿಬಿಡುವುದು ಸಾಧ್ಯವಿಲ್ಲ. ಭಾರತವಂತೂ ಕಮ್ಯುನಿಸ್ಟ ಚೀನದೊಡನೆ ನಿಕಟ ಸಂಬಂಧವಿಟ್ಟುಕೊಂಡಿದ್ದು ಭಾರತವು ಪ್ರಾಮುಖ್ಯವಾದ ಆಹಾರ ಧಾನ್ಯಗಳನ್ನು ಅಲ್ಲಿಂದ ತರಿಸುತ್ತಲಿವೆ. ಭಾರತದಿಂದಲೂ ಅನೇಕ ಸರಕುಗಳು ಚೀನಕ್ಕೆ ಸರಬರಾಯಿಯಾಗುತ್ತಲಿವೆ. ಆದುದರಿಂದ ಯುಕ್ತರಾಷ್ಟ್ರದ ನಿರ್ಣಯವು ಭಾರತಕ್ಕೆ ಹಾಗೂ ಏಶ್ಯಾದ ರಾಷ್ಟ್ರಗಳಿಗೆ ಒಂದು ಮಹಾ ಸಮಸ್ಯೆಯಾಗಿದೆ.

ಶ್ರೀ ಕೆ. ಯಂ. ಮೊಗಪ್ಪನವರು, "ಕೊಡಗು" ಏಜೆಂಟರು, ಸೋಮವಾರಪೇಟೆ.

Licence No. 60.
Licenced to Post without Prepayment

Reg. No. M. 1550.
'KODAGU' MERCARA, (Coorg).

ಕೊಡಗು

ಸಂಪಾದಕರು— ಪಿ. ಐ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. 5-0-0.

ಸಂಪುಟ ೩೦ | ತಾರೀಖು ೧೫-೬-೧೯೫೧ನೇ ಶುಕ್ರವಾರ | ಸಂಚಿಕೆ ೩

ಮನೆ, ಮಕ್ಕಳು ಮತ್ತು ಕೆಲಸ.

ಜಗತ್ತಿನ ಒಬ್ಬೊಬ್ಬರಿಗೆ ಒಂದೊಂದು ಸಮಸ್ಯೆಯಿದೆ. ಒಬ್ಬನ ಕಷ್ಟ ಒಂದಾದರೆ ಇನ್ನೊಬ್ಬನಿಗೆ ಇನ್ನೊಂದು ಕಷ್ಟ. ಶ್ರೀಮಂತರೆನಿಸಿ ಸುಖೋಪ ಭೋಗಗಳನ್ನು ಅನುಭವಿಸುತ್ತಿರುವವರಿಗೂ ಅನೇಕ ಆಪತ್ತುಗಳಿವೆ. ಅವರು ದುಃಖಿಸಬೇಕಾದ ದಿನಗಳೂ ಇವೆ. ಅಂತೂ, ಮನುಷ್ಯನು ಭಿಕಾರಿಯಾಗಲಿ, ಮಿಲಿಯಾಧಿಪತಿಯಾಗಲಿ ಸುಖದುಃಖ ಎರಡನ್ನೂ ಅನುಭವಿಸಲೇಬೇಕು. ಭಿಕಾರಿಯು ಶ್ರೀಮಂತಿಕೆಯ ಜೀವನಕ್ಕೇರುವ ಕನಸು ಕಾಣಬಹುದು. ಶ್ರೀಮಂತನು ಇನ್ನೂ ಹೆಚ್ಚಿನ ಶ್ರೀಮಂತಿಕೆ ಗಳಿಸುವ ಲವಲವಿಕೆ ತಾಳಬಹುದು. ಆದರೆ ಅವರೆಲ್ಲರೂ ಏಕ ಪ್ರಕಾರವಾಗಿ ತಮ್ಮ ತಮ್ಮ ದೈನಂದಿನ ಸಮಸ್ಯೆಗಳನ್ನು ಎದುರಿಸಲೇಬೇಕು. ತಮ್ಮ ತಮ್ಮ ಆಕಾಂಕ್ಷೆಗಳನ್ನು, ತಮ್ಮ ತಮ್ಮ ಸಾಮರ್ಥ್ಯದ ಮಟ್ಟಿಗೆ ಈಡೇರಿಸಿಕೊಳ್ಳುತ್ತಿದ್ದಾರೆ. ಇದಕ್ಕಿಂತಲೂ ಹೆಚ್ಚಿನದನ್ನು ಅಪೇಕ್ಷಿಸುವುದು ಮನುಷ್ಯನ ಗುಣ. ಇದ್ದುದರಲ್ಲೇ ತೃಪ್ತಿಪಡುವುದು ಸುಖಕ್ಕೆ ಕಾರಣವಾಗುವುದು.

ಮನುಷ್ಯನಲ್ಲಿ ನೂರಾರು ಆಕಾಂಕ್ಷೆಗಳಿರಬಹುದು. ಸರ್ವಸಾಮಾನ್ಯ ಮನುಷ್ಯನು ಅಪೇಕ್ಷಿಸುವುದು ಒಳ್ಳೆ ಆದಾಯದ ಉತ್ತಮ ಕೆಲಸ; ಸುಖದ ಸಂಸಾರ; ಒಳ್ಳೆ ಮಕ್ಕಳು; ಎಲ್ಲರೂ ಇರುವುದಕ್ಕೆ ಮನೆ— ಇವಿಷ್ಟು. ಇವುಗಳಲ್ಲಿ ಯಾವುದಾದರೊಂದು ಇಲ್ಲದೆ ಬಾಳು ಬಾಳೆನಿಸದು. ಕೆಲವರು ಮನೆಯೇ ಬೇಡವೆಂದು ಅಂದಲೆಯಬಹುದು. ಆದರೆ ಅಂಥವರ ಜೀವನದಲ್ಲಿ 'ಮನೆಯೊಂದು ಬೇಕಿತ್ತು' ಎಂಬ ಭಾವನೆ ಒಂದಲ್ಲ ಒಂದು ದಿನವಾದರೂ ಮೂಡಿಯೇ ಮೂಡುವುದು. ಕೆಲವರು ವಿವಾಹವೇ ಬೇಡವೆಂದು ವೈರಾಗ್ಯ ತಾಳಬಹುದು. ಇನ್ನೊಂದು ದಿನ ಒಬ್ಬಳ ಕೈಹಿಡಿಯಲೇಬೇಕಾಗುವುದು. ಮಕ್ಕಳು ಬೇಡವೆಂಬ ಅಲಕ್ಷ್ಯಭಾವದವರೂ ಇದ್ದಾರೆ. 'ಮಕ್ಕಳಿಲ್ಲದ ಬಾಳು ಬಾಳಲ್ಲ' ಎಂದುಅವರು ಕೊನೆಗೆ ಮನಗಾಣುವರು. ಮನುಷ್ಯನು ಜೀವನದಲ್ಲಿ ಮುಂದೆ ಸಾಗುವಾಗ ತಾನಾಗಿ ಈ ಬಂಧನಗಳಲ್ಲಿ ಸಿಲುಕುತ್ತಾನೆ. ಅವುಗಳು ಎದುರು ಬರುವಾಗ ಆನಂದದಿಂದ ಸ್ವಾಗತಿಸುತ್ತಾನೆ. ಸಂಕಷ್ಟಗಳನ್ನೂ ಎದುರಿಸುತ್ತಾನೆ – ಇವೆಲ್ಲ ಲೋಕದ ನಿಯಮ.

ಸಂಸಾರ

ಮನುಷ್ಯನು ಸಂಸಾರಿಯಾಗಲೇಬೇಕು. ಯುದ್ಧ, ಗಂಡಾಂತರಗಳು ಬರಬಹುದು. ಕೆಲಸವಿಲ್ಲದೆ ನಿರುದ್ಯೋಗತನ ಬರಬಹುದು. ಹಣ ಕಿಸೆ ತುಂಬಾ ಇರಬಹುದು; ಅಥವಾ ಪ್ರೇಯಸಿಯೊಡನೆ ಬೇಡುವ ದಿನವೂ ಬರಬಹುದು. ಆದರೆ ಇಡೀ ಕುಟುಂಬವು ಒಂದಾಗಿ ಯಜಮಾನನೊಡನೆ ನಿಂತು ಸುಖದುಃಖಗಳಲ್ಲಿ ಸಮಭಾಗಿಯಾಗುವುದು ಎಷ್ಟು ಆನಂದದ ಸಂಗತಿ! ಆಗ ಎಂತಹ ಕಷ್ಟಗಳೂ ಸಂಸಾರಿಕ ಜೀವನದಲ್ಲಿ ಮಾಯವಾಗುವವು.

ಹೆಚ್ಚು ಮಕ್ಕಳು ಬೇಡ ಎಂಬ ಕೆಲವರು ಅಭಿಪ್ರಾಯಪಡುತ್ತಾರೆ. ಕುಟುಂಬವು ಚಿಕ್ಕದಾದಷ್ಟು ಉತ್ತಮ ಎಂದು ಹಲವಾರು ಮಂದಿ ಹೇಳಬಹುದು. ಆದರೆ ಮನೆಯಲ್ಲಿ ಹೆಚ್ಚು ಸದಸ್ಯರು ಒಟ್ಟಾಗಿ ಇರುವುದು ಒಂದು ದೊಡ್ಡ ಆನಂದವೆಂದು ಅನೇಕರು ಅನುಭವದಿಂದಲೇ ಹೇಳುತ್ತಾರೆ.

ಮಕ್ಕಳು

ವಿವಾಹವಾದ ನಂತರದಲ್ಲಿ ಮಕ್ಕಳ ಪ್ರಶ್ನೆ ತಾನಾಗಿ ಬರುತ್ತದೆ. ನಮ್ಮ ದೇಶದಲ್ಲಿ ಎಲ್ಲದಕ್ಕೂ ಬರಗಾಲವಿದ್ದರೂ ಜನಸಂಖ್ಯೆ ಅಪರಿಮಿತವಾಗಿ ಏರುವುದಕ್ಕೆ ಯಾವ ತಡೆಯೂ ಇಲ್ಲ. ಆದರೂ ಕೆಲವರು ಮಕ್ಕಳೆಂದ ಕೂಡಲೇ ಅಂಜುತ್ತಾರೆ. ಸಂಸಾರ ದೊಡ್ಡದಾಗುವಾಗ ಅದನ್ನು ಪೋಷಿಸಲು ಆರ್ಥಿಕಸ್ಥಿತಿ ಉತ್ತಮವಿರಬೇಡವೇ? ಎಂಬುದೇ ಅವರನ್ನು ಕಾಡುತ್ತಿರುವ ಪ್ರಶ್ನೆ. ಜೀವನದಲ್ಲಿ ಭದ್ರತೆಯಿರಬೇಕೆಂಬುದೇ ಅವರ ಏಕಮಾತ್ರ ಇಚ್ಛೆ. ಹಾಗೆ ಭಾವಿಸಿಕೊಳ್ಳುವವರು ಭದ್ರತೆ ಭದ್ರತೆಯೆಂದು ಸಂಸಾರದ ಸುಖವನ್ನು ಕಳೆದುಕೊಳ್ಳುವರು. ವಿವಾಹವೆಂಬುದರ ಮುಖ್ಯ ಧ್ಯೇಯವೇ ಮುಂದಿನ ಜನಾಂಗವನ್ನು ನಿರ್ಮಿಸುವುದಾಗಿದೆ. ಅದರಲ್ಲಿ ಬೇರಾವ ಉದ್ದೇಶವಿಲ್ಲ. ಆದುದರಿಂದ ವೈವಾಹಿಕ ಜೀವನದ ಗುರಿ ತಪ್ಪಬಾರದು. ಮಿತಿಯಿಟ್ಟುಕೊಂಡಲ್ಲಿ ಹಿತವಿದೆ.

ಮಕ್ಕಳಾಗುವುದು ಸಾಮಾನ್ಯ ವಿಷಯ. ಆದರೆ ಸಂಸಾರದಲ್ಲಿ ಅದೊಂದು ಸಂತೋಷದ ಅನುಭವ. ಮಕ್ಕಳಾದ ಕೂಡಲೇ ನೆನೆಸದ ಹಲವಾರು ಸಂಕಷ್ಟಗಳು ಬರಬಹುದು. ಸ್ವಂತ ಆಸೆಯನ್ನು ಬಿಟ್ಟು ಹೋಗಬಹುದು. ಆದರೆ ಜೀವನದಲ್ಲಿ ಮುಂದಿನ ಜನಾಂಗಕ್ಕಾಗಿ ತ್ಯಾಗ ಮಾಡುವುದು ಮಾನವನ ಧರ್ಮ. ಅದರಲ್ಲಿ ಆನಂದವಿದೆ.

ದಂಪತಿಗಳು ಒಬ್ಬರನ್ನೊಬ್ಬರು ಪರಸ್ಪರ ಪ್ರೇಮದಿಂದ ಹತ್ತಿರ ಬಂದು ವಿವಾಹ ಬಂಧನಕ್ಕೆ ಸಿಲುಕಿ ತಾವು ಜೀವನದಲ್ಲಿ ಎಂದೆಂದಿಗೂ ಒಬ್ಬರನ್ನೊಬ್ಬರು ಅಗಲುವುದೇ ಇಲ್ಲವೆಂಬ ಘನ ನಿರ್ಧಾರ ಮಾಡಬಹುದು. ಜನ್ಮ ಜನ್ಮಗಳ ತನಕ ನಾವಿಬ್ಬರೂ ಒಂದೇ ಎಂಬ ಪವಿತ್ರ ಭಾವನೆ ಮೂಡಬಹುದು. ಆದರೆ ಜೀವನದ ಹಾದಿಯಲ್ಲಿ ಅನೇಕ ಎಡರುತೊಡರುಗಳು ಬರುವಾಗ ಧೈರ್ಯ, ಆಶ್ವಾಸನೆ, ಪರಸ್ಪರಾನುರಾಗ ಇವುಗಳೆಲ್ಲಾ ಕದಡಿಹೋಗಬಹುದು. ಒಮ್ಮೆ ಹೃದಯವ ಒಲವಿನವರೆನಿಸಿಕೊಂಡವರು ಮತ್ತೊಮ್ಮೆ ದೂರದವರೆಂಬ ತಾತ್ಸಾರ ತಲೆಯೆತ್ತಬಹುದು. ಸಂಸಾರದಲ್ಲಿ ಗಂಡಹೆಂಡಿರಲ್ಲಿ ಇಂಥಹ ಪ್ರಸಂಗಗಳು ತಲೆದೋರುವುದು ಅಸಹಜವಲ್ಲ. ಕೆಲವೊಮ್ಮೆ ಕ್ರೋಧ ಅಥವಾ ತಪ್ಪು ತಿಳುವಳಿಕೆಯ ಕಿಚ್ಚು ಸಂಸಾರದ ಸುಖಮಯ ವಾತಾವರಣವನ್ನು ದಹಿಸಬಹುದು. ಒಬ್ಬರನ್ನೊಬ್ಬರು ಅಗಲುವಂತಹ ದುರಂತವೂ ಬರಬಹುದು. ಆಗ ಅವರ ಸಂತಾನವು ಹರಿದ ಬಂಧನವನ್ನು ಪುನಃ ಜೋಡಿಸುವ ಸಾಧನವಾಗುವುದು. 'ತಮ್ಮ ಮಕ್ಕಳಿಗಾಗಿ ನಾವಿಬ್ಬರೂ ಇರಬೇಕಾಗುತ್ತದೆ' ಎಂದು ದಂಪತಿಗಳು ತಮ್ಮೊಳಗಿನ ಒಡಕನ್ನು ಮರೆತುಬಿಡುವರು, ಪುನಃ ಒಂದಾಗುವರು.

ಮನೆ

ಮನುಷ್ಯನಿಗೆ ಮನೆಗಿಂತ ಉತ್ತಮವಾದ ಆಶ್ರಯ ಬೇರೆಯಿಲ್ಲ. ಮನುಷ್ಯನು ತನ್ನ ನಿವಾಸವನ್ನು ಆಗಾಗ ಬದಲಾಯಿಸಬಹುದು. ಆದರೆ ಅವನಿಗಿಂತ ಮಂದಬುದ್ಧಿಯ ಮೃಗಪಕ್ಷಿಗಳು ತಮ್ಮ ಮನೆಯನ್ನು ಬದಲಾಯಿಸುವುದೆಂದರೆ ಸಹಿಸವು. ಜೀವಿಸುವ ಮನೆಯು ಸಂತೃಪ್ತ ಜೀವನ ಕಟ್ಟಲ್ಪಡುವುದು.

ಮನೆಮಾರುಗಳಿಲ್ಲದ ಭಿಕಾರಿಯೆನಿಸುವವನಿಗೂ ಒಂದು ಆಶ್ರಯವಿರಲೇಬೇಕಾಗುತ್ತದೆ. ಆ ಆಶ್ರಯಕ್ಕೆ ಮೇಲೆ ಮಾಡು ಇರಬೇಕೆಂದಿಲ್ಲ. ಸುತ್ತಲೂ ಗೋಡೆಗಳೇ ಇರಬೇಕೆಂದಿಲ್ಲ. ಆಕಾಶವೇ ಮಾಡು, ಗಾಳಿಯೋ ಗೋಡೆಯೆಂದಿದ್ದರೂ ಸಾಕು—ಆಶ್ರಯವೊಂದಿರಲೇಬೇಕು. ಇಂದಿನ ಆಶ್ರಯವನ್ನು ನಾಳೆ ಬೇಡವೆನ್ನಲಿಕ್ಕಾಗುವುದಿಲ್ಲ. ಎಲ್ಲಿ ಹೋದರೂ ತನ್ನ ನೆಲೆ ಅವನನ್ನು ಅಲ್ಲಿಗೇನೆ ಸೆಳೆಯುವುದು.

ಜಗತ್ತಿನ ಮನೆಯೊಂದು ಮನುಷ್ಯನಿಗೆ ಶಾಶ್ವತವಾಗಿರುವುದು ಸಾಧ್ಯವಿಲ್ಲ. ಆರ್ಥಿಕ ಸ್ಥಿತಿಗಳಿಗನುಸಾರವಾಗಿ ಆಶ್ರಯವನ್ನು ಕಲ್ಪಿಸಬೇಕಾಗುವುದು. ಇಂದಿನ ಆಶ್ರಯ ನಾಳೆ ಪರರದ್ದಾಗಬಹುದು, ಆಗ ಇನ್ನೊಂದು ಆಶ್ರಯವನ್ನು ಹುಡುಕಬೇಕಾಗುವುದು. ಆದರೆ ನಿರಂತರವಾಗಿ ಒಂದು ಆಶ್ರಯ ಬೇಕಾಗುವುದನ್ನು ತಪ್ಪಿಸಲು ಸಾಧ್ಯವಾದುದು. ಜೀವನದ ಹೆಚ್ಚಿನ ಭಾಗವು ಮನೆಗಾಗಿ ವ್ಯಯವಾಗುವುದು. ಮನೆಯನ್ನು ಆಧರಿಸಿಕೊಂಡೇ ಜೀವನವು ಮುಂದೆ ಸಾಗುವುದು. ಮನೆಯೆಂಬ ಆಧಾರ ಕಡಿದು ಹೋದಲ್ಲಿ ನೆಲೆಯಿಲ್ಲದ ನೀರಿನಲ್ಲಿ ತೇಲಾಡಿದಂತಾಗುವುದು.

ಕೆಲಸ

ಮನುಷ್ಯನು ಆಗರ್ಭ ಶ್ರೀಮಂತನಿರಲಿ, ಹುಟ್ಟು ಭಿಕಾರಿಯಾಗಿರಲಿ ಜೀವ ದಾಟಿಕೊಂಡು ವೃತ್ತಿ ಹಿಡಿಯಲೇಬೇಕು. ಅವನು ಮಾಡುವ ಕೆಲಸ ಅವನ ಯೋಗ್ಯತೆಯನ್ನು ತೋರಿಸುತ್ತದೆ. ಆದರೆ ಜೀವನದ ಹಲವಾರು ಘಟನೆಗಳು ಮನುಷ್ಯನನ್ನು ಒಂದು ಉದ್ಯಮದಿಂದ ಇನ್ನೊಂದಕ್ಕೆ ಸೆಗೆದುಕೊಂಡು ಹೋಗಬಹುದು. ಆಗ ಅವನು ತನ್ನ ಧ್ಯೇಯಕ್ಕೆ ಅಂಟಿಕೊಂಡು ತನ್ನ ವ್ಯಕ್ತಿಯನ್ನು ತ್ಯಜಿಸದಂತೆ ನೋಡಬೇಕಾಗುವುದು.

ಉದ್ಯೋಗದಲ್ಲಿರುವಾಗ ಭದ್ರತೆಯ ಆಸೆಯೂ ಬರುತ್ತದೆ. ಮಧ್ಯ ಪ್ರಾಯದ ಸಂದನಂತರ ಕೆಲಸ ಕಳಕೊಳ್ಳುವ ಭೀತಿ ಅತೀ ಕಠಿಣವಾಗಿ ಪರಿಣಮಿಸುತ್ತದೆ. ಆದರೆ ಅಷ್ಟರೊಳಗೆ ತಾನು ಮಾಡುವ ಕೆಲಸದಲ್ಲಿ ಒಬ್ಬನು ಸಂಪೂರ್ಣ ಕುಶಲನಾಗಿರುವಾಗ ಅಂಥಾ ಭೀತಿಯು ನಿರರ್ಥಕ. ಕೆಲಸದ ಭದ್ರತೆಯ ಭೀತಿಯಿಂದ ಮನುಷ್ಯನು ಗೌರವಕ್ಕೆ ಕುಂದುಂಟು ಮಾಡಿಕೊಳ್ಳಬಾರದು.

ಮನುಷ್ಯನು ಸುಖ ಜೀವನದ ಆಸೆಯಲ್ಲಿ ಮುಂದರಿಯುವಾಗ ಕಷ್ಟಗಳು ಬರುತ್ತವೆ. ಸುಖ ಎಂಬ ಆಸೆ ಮನುಷ್ಯನ ಧ್ಯೇಯ ಸಾಧನೆಯ ಮಾರ್ಗದಲ್ಲಿ ಮುಸುಕಾಗಿ ಪರಿಣಮಿಸುವುದು. 'ಜೀವನವು ಜೀವಿತಕ್ಕಾಗಿ, ಇತರರಿಗಾಗಿ' ಎಂದಾಗ ಮಾತ್ರ ಅದು ಸುಖಮಯವಾಗುವುದು; ಹಗುರವಾಗುವುದು.

"ನವಭಾರತ"

ವಾರ್ತೆಗಳು

ಭೂಮಿಸೇನೆಗೆ ಯೋಧರನ್ನು ಸಂಗ್ರಹಿಸುವ ಕಾರ್ಯವು ದಿಲ್ಲಿಗೆ ಸಮೀಪವಿರುವ ಶಹೀದಾಬಾದಲ್ಲಿ ತಾ. ೭ರಲ್ಲಿ ರಾಷ್ಟ್ರಾಧ್ಯಕ್ಷ ಡಾ. ರಾಜೇಂದ್ರ ಪ್ರಸಾದರಿಂದ ಪ್ರಾರಂಭವಾಯಿತು. ಮೊದಲನೆಯ ತಂಡದ ಯೋಧರೆಂದರೆ ೩೦ ವಿಶ್ವವಿದ್ಯಾಲಯ ವಿದ್ಯಾರ್ಥಿಗಳು. ಒಕ್ಕಲತನ ಮೊದಲಾದ ವಿಷಯಗಳಲ್ಲಿ ಇವರು ಶಿಕ್ಷಣ ಪಡೆದ ಬಳಿಕ ಇವರು ಹಳ್ಳಿಗಳಿಗೆ ಹೋಗಿ ಕೆಲಸ ಪ್ರಾರಂಭಿಸುವರು.

– ೧೯೫೧ನೇ ಏಪ್ರಿಲ್ ೩೦ರ ವರೆಗೆ ಒಟ್ಟು ೧೪೫೧೧ ಮುಸಲ್ಮಾನ ಸ್ತ್ರೀಯರನ್ನೂ ಬಾಲಕರನ್ನೂ ಶೋಧಿಸಿ ಅವರನ್ನು ಅವರವರ ಆಪ್ತೇಷ್ಟರ ಬಳಿಗೆ ಪಾಕಿಸ್ತಾನಕ್ಕೆ ಕಳಿಸಲಾಗಿದೆ. ಈ ಅವಧಿಯಲ್ಲಿ ಪಾಕಿಸ್ತಾನದಲ್ಲಿ ೭೫೦೧ ಹಿಂದೂ ಸ್ತ್ರೀಯರನ್ನು ಶೋಧಿಸಲಾಗಿದೆ.

ಶ್ರೀ ಟಿ. ಎನ್. ಗೋವಿಂದರಾಜು,
'ಕೊಡಗು' ಏಜೆಂಟರು,
ವೀರಾಜಪೇಟೆ.

ರಚನಾತ್ಮಕ ಕಾರ್ಯಕರ್ತರು ಮತ್ತು ರಾಜಕಾರಣ.

ಇದೇ ಸಂಚಿಕೆಯಲ್ಲಿ ಬೇರೊಂದು ಕಡೆ ಶ್ರೀ. ಜೆ. ಸಿ. ಕುಮಾರಪ್ಪನವರ 'ಮುಂದಿನ ಕ್ರಮ' ಎಂಬ ಲೇಖನವನ್ನು ಓದುಗರು ಕಾಣುವರು. ಅದನ್ನು ಮುದ್ರಿಸುವಲ್ಲಿ ಅವಶ್ಯಕತೆಗಿಂತ ಕಠೋರವೆನಿಸಿದ ಒಂದೆರಡು ಶಬ್ದಗಳನ್ನು ಬದಲಾಯಿಸಿದ್ದೇನೆ. ಇದಕ್ಕಾಗಿ ಅವರು ನನ್ನನ್ನು ಕ್ಷಮಿಸುವರೆಂದು ನಂಬಿದ್ದೇನೆ. ರಚನಾತ್ಮಕ ಕಾರ್ಯಕರ್ತನಾದ ನನ್ನ ಸ್ವಂತ ಅಭಿಪ್ರಾಯವೇನೆಂದರೆ, ಪ್ರತಿಯೊಬ್ಬ ನಾಗರಿಕನೂ— ರಚನಾತ್ಮಕ ಕಾರ್ಯಕರ್ತನೂ ನಾಗರಿಕನಷ್ಟೇ—ರಾಜಕಾರಣದಲ್ಲಿ ಅಂದರೆ ದೇಶದ ಆಡಳಿತೆ ಯೋಗ್ಯವಾಗಿರಬೇಕೆಂಬುದರಲ್ಲಿ ತಿಳುವಳಿಕೆಯಿಂದ ಆಸ್ಥೆ ವಹಿಸಬೇಕು; ಆದರೆ ಪ್ರತಿಯೊಬ್ಬ ನಾಗರಿಕನೂ ಯಾವುದೊಂದು ರಾಜಕೀಯ ಪಕ್ಷದ ಸದಸ್ಯನಾಗಿರಬೇಕೆಂದಿಲ್ಲ. ರಚನಾತ್ಮಕ ಕಾರ್ಯಕರ್ತರು ಎಲ್ಲ ರಾಜಕೀಯ ಪಕ್ಷಗಳಿಂದ ದೂರವಿರುವುದೇ ರಚನಾತ್ಮಕ ಕಾರ್ಯದ ದೃಷ್ಟಿಯಿಂದ ಶ್ರೇಯಸ್ಕರ. ಅಪವಾದಾತ್ಮಕವಾಗಿ ಕೆಲ ರಚನಾತ್ಮಕರ. ಕಾರ್ಯಕರ್ತರು ರಾಜಕೀಯ ಪಕ್ಷಗಳಲ್ಲಿ ಭಾಗ ವಹಿಸುವುದು ಅನಿವಾರ್ಯವಾಗಿರಬಹುದು. ಅದರಿಂದ ರಚನಾತ್ಮಕ ಕಾರ್ಯಕ್ಕೆ ಹಿತವೂ ಆಗಬಹುದು. ಎಲ್ಲ ರಚನಾತ್ಮಕ ಕಾರ್ಯಕರ್ತರೂ ಒಂದು ರಾಜಕೀಯ ಚಳವಳಿಯಲ್ಲಿ ಸೇರಬೇಕಾದ ಪ್ರಸಂಗಗಳೂ ಬರಬಹುದು. ಅದನ್ನೂ ಅಪವಾದಾತ್ಮಕವೆಂದೇ ಪರಿಗಣಿಸಬೇಕು.

ಪಾಕ್ಷಿಕ ರಾಜಕಾರಣಕ್ಕೂ ಕೇವಲ ರಾಜಕಾರಣಕ್ಕೂ ಇರುವ ಭೇದವನ್ನು ಅರಿತುಕೊಳ್ಳಬೇಕು. ಅನೇಕ ವೈಯಕ್ತಿಕ ಕಾಂಗ್ರೆಸಿಗರು—ಅನೇಕ ಮಂತ್ರಿಗಳು ಕೂಡ—ರಚನಾತ್ಮಕ ಕಾರ್ಯಕರ್ತರೆಂದು ಬಿರುದು ಹೊತ್ತ ನಮ್ಮಷ್ಟೇ ದೃಢವಾಗಿ ಗಾಂಧೀಜಿಯ ರಚನಾತ್ಮಕ ಕಾರ್ಯಕ್ರಮದಲ್ಲಿ ವಿಶ್ವಾಸವುಳ್ಳವರಿದ್ದಾರೆ. ಶ್ರೀ ಪ್ರಕಾಶಂ, ಕೃಪಲಾನಿ, ಡಾ. ಘೋಷ ಮೊದಲಾದ ಕಾಂಗ್ರೆಸ್ಸಿನಿಂದ ಹೊರಬಿದ್ದ ಹಲವರೂ ರಚನಾತ್ಮಕ ಕಾರ್ಯದಲ್ಲಿ ವಿಶ್ವಾಸವುಳ್ಳವರು. ಆದರೆ ರಾಜಕೀಯ ಯಂತ್ರದ ಭಾಗಗಳಾಗಿರುವಾಗ ಅವರ ವೈಯಕ್ತಿಕ ಅಭಿಪ್ರಾಯಕ್ಕೆ ಬಹಳ ಬೆಲೆ ಸಿಗುವುದಿಲ್ಲ. ಮೇಲ್ಕಾಣಿಸಿದ ಮುಖಂಡರುಗಳು ಸ್ಥಾಪಿಸಿದ ವಿರುದ್ಧ ಪಕ್ಷದಲ್ಲಿ ಆದರೂ—ಅದೂ ಇವೆರಡು ಪಕ್ಷಗಳಲ್ಲಿ ತಾತ್ವಿಕ ಮತಭೇದವಿಲ್ಲದಿರುವುದರಿಂದ ಅದೇ ಸ್ಥಿತಿ ಒದಗಬಹುದು.

ಆದ್ದರಿಂದ ರಚನಾತ್ಮಕ ಕಾರ್ಯಕರ್ತರಿಗೆ ವಿಶಿಷ್ಟ ಪಕ್ಷದೊಡನೆ ಐಕ್ಯಹೊಂದಲು ಕಷ್ಟವಾಗಿದೆ. ಅವರು ಆಯಾ ಹುರಿಯಾಳಿನ ಯೋಗ್ಯತೆಯನ್ನು ನೋಡಿಯೇ ನಿರ್ಣಯಿಸಬಲ್ಲರು. ಯಾವುದೊಂದು ರಾಜಕೀಯ ಪಕ್ಷವು ತನ್ನ ಪರವಾಗಿ ಹುರಿಯಾಳುಗಳನ್ನು ನಿಲ್ಲಿಸಕೂಡದು ಮತ್ತು ಪ್ರತಿಯೊಬ್ಬ ಹುರಿಯಾಳು ವೈಯಕ್ತಿಕವಾಗಿಯೇ ನಿಲ್ಲಬೇಕು, ಎಂದಾಗಲಿ, ನಾನು 'ಹರಿಜನ'ದಲ್ಲಿ ೧೯೪೮ರ ಏಪ್ರಿಲ್ ೨೫ ಮತ್ತು ಮೇ ೨೮ ಸಂಚಿಕೆಗಳಲ್ಲಿ ಒಂದು ಲೇಖನಮಾಲೆಯ ಮೂಲಕ ಪ್ರತಿಪಾದಿಸಿದಂತೆ ಮತದಾರರಿಗೆ ಆಯ್ದುಕೊಳ್ಳಲು ಸಂದರ್ಭ ದೊರೆಯುವಂತೆ ಪ್ರತಿಯೊಂದು ರಾಜಕೀಯ ಪಕ್ಷವೂ ಪ್ರತಿ ಮತದಾರ ಸಂಘದಲ್ಲಿಯೂ ತನ್ನ ಪರವಾಗಿ ನಿಲ್ಲುವ ಹುರಿಯಾಳುಗಳ ಯಾದಿಯೊಂದನ್ನು ಕೊಡುವಂಥಾ ವ್ಯವಸ್ಥೆ ಮಾಡುವುದು ಸಾಧ್ಯವಿದ್ದರೆ ತುಂಬ ಉತ್ತಮವಾಗುತ್ತಿತ್ತು. ಆದರೆ ರಾಜಕೀಯ ಪಕ್ಷಗಳ ಇಂದಿನ ರೀತಿನೀತಿಗಳಲ್ಲಿ ಇಂಥ ವ್ಯವಸ್ಥೆಗೆ ಒಪ್ಪಿಗೆ ದೊರೆಯುವುದು ದುಸ್ಸಂಭವವೆಂದು ನನ್ನ ಮತ. ಆದ್ದರಿಂದ ರಚನಾತ್ಮಕ ಕಾರ್ಯಕರ್ತರು ಅವುಗಳಲ್ಲಿ ಎರಕ ಹೊಂದದಿರುವುದೇ ಲೇಸು.

ಅನೇಕರು ನನಗೆ ಪತ್ರ ಬರೆದು ಕೃಪಲಾನಿ ಮತ್ತು ಗುಂಪಿನವರು ಕಾಂಗ್ರೆಸ್ಸಿನಿಂದ ಕಾಲು ಹೊರಗಿಟ್ಟದ್ದರ ಬಗ್ಗೆ ನನ್ನ ಅಭಿಪ್ರಾಯ ಕೇಳಿದ್ದಾರೆ. ಅವರು ಪ್ರಾಮಾಣಿಕ ಕ್ರಮ ಕೈಕೊಂಡಿದ್ದಾರೆಂದು ನನ್ನ ಮತ. ತಮ್ಮನ್ನೇ ತಾವು ಹತ್ತಿಕ್ಕಿಕೊಂಡು ವಿಫಲ ರಾಜಕೀಯ ಅವಸ್ಥೆಯಲ್ಲಿರುವಂತೆ ಅವರಿಗೆ ಅನಿಸಿತ್ತು. ಅವರ ಅಸಂತೋಷ ಪ್ರಸಿದ್ಧವೇ ಆಗಿತ್ತು. ವಿರೋಧಿ ಪಕ್ಷದ ಕ್ರಿಯಾಸ್ವಾತಂತ್ರ್ಯವೂ ಅವರಿಗಿದ್ದಿಲ್ಲ, ಸ್ವಪಕ್ಷದ ಮುಂದಾಳುಗಳೊಡನೆ ಸಮರಸವಾಗಿ ದುಡಿದೆವೆಂಬ ಸಂತುಷ್ಟಿಯೂ ಇದ್ದಿಲ್ಲ. ಅವರು ಅವಸರದಿಂದ ಹೆಜ್ಜೆಯಿಟ್ಟರೆಂದು ಯಾರೂ ದೂರುವಂತಿಲ್ಲ.

ಕಿ. ಘ. ಮಶ್ರೂವಾಲಾ.

॥ ಮುಂದಿನ ಕ್ರಮ ॥

'ಕಾಂಗ್ರೆಸಿನ ಉಪಯೋಗದ ಕಾಲ ಮುಗಿದು ಹೋಗಿದೆ' ಎಂದು ಗಾಂಧೀಜಿಯವರು ಸಾರಿ ಹೇಳಿದ ಅನಂತರ ಮೂರಕ್ಕಿಂತ ಹೆಚ್ಚು ಅಪಾಯಕರ ವರ್ಷಗಳು ಗತಿಸಿ ಹೋಗಿವೆ. ಆದರೆ ಶ್ರೀ ಪ್ರಕಾಶಂ ಡಾ|| ಪಿ. ಸಿ. ಘೋಷ, ಮತ್ತು ಆಚಾರ್ಯ ಕೃಪಲಾನಿಯವರಂಥ ಕೆಲವರು ಮಾತ್ರ ಮುಂದಾಗಿ ಆ ಸಂಸ್ಥೆಯನ್ನು ಬಿಟ್ಟುಕೊಡಲು ನಿರ್ಧರಿಸಿರುವರಲ್ಲದೆ ರಾಷ್ಟ್ರದಲ್ಲಿ ಚೈತನ್ಯವನ್ನು ತುಂಬಲು ಹೊಸ ಸಂಸ್ಥೆಯನ್ನು ಸ್ಥಾಪಿಸಲು ಹವಣಿಸಿದ್ದಾರೆ. ಇದನ್ನು ಕಾರ್ಯಕಾರಿ ಮಾಡಲಿಕ್ಕೆ ಯಾವ ಉಪಾಯವನ್ನು ಕೈಕೊಳ್ಳಲಾಗುವದೆಂಬುದನ್ನು ನಮ್ಮೆಲ್ಲರನೇಕರ ಮನಸ್ಸಿನಲ್ಲಿ ಕಟಿಯುತ್ತದೆ. ಈ ಪ್ರಶ್ನೆಯ ವಿಚಾರ ಮಾಡುವದಕ್ಕಾಗಿ ಪಾಟಣಾದಲ್ಲಿ ಜೂನ್ ತಿಂಗಳಿನಲ್ಲಿ ರಾಷ್ಟ್ರದ ಕಲ್ಯಾಣ ಕರ್ತರ ಸಮ್ಮೇಳನವೊಂದನ್ನು ಕರೆಯಬೇಕೆಂದು ನಿರ್ಧರಿಸಲಾಗಿದೆ.

ಕಾಂಗ್ರೆಸ್ ರಾಷ್ಟ್ರ ಸಂವರ್ಧಕ ರಚನಾತ್ಮಕ ಸಂಸ್ಥೆಯಾಗಿ ಮಾರ್ಪಡಬೇಕೆಂದು ಗಾಂಧೀಜಿ ಸೂಚಿಸಿದ್ದರು. ನಗರ ಮತ್ತು ಪಟ್ಟಣಗಳನ್ನು ಬಿಟ್ಟುಗೊಟ್ಟು ರಾಷ್ಟ್ರದಲ್ಲಿಯ ೭ ಲಕ್ಷ ಹಳ್ಳಿಗಳಲ್ಲಿ ಸಾಮಾಜಿಕ, ನೈತಿಕ ಮತ್ತು ಆರ್ಥಿಕ ಸ್ವಾತಂತ್ರ್ಯವನ್ನು ಸಂಪಾದಿಸುವದು ಮತ್ತು ರಾಜಕಾರಣದಿಂದ ಅಲಿಪ್ತವುಳಿಯುವದು ಈ ಸಂಸ್ಥೆಯ ಗುರಿಯಾಗಿರಬೇಕೆಂದು ಅವರ ಅಭಿಪ್ರಾಯವಾಗಿತ್ತು. ಅವರು ಹೇಳಿದಂತೆ ನಡೆಯುವ ಪುಂಸ್ಸಿದ್ಧತನ ಈಗಲಾದರೂ ನಮ್ಮಲ್ಲಿದೆಯೇ? ಇಲ್ಲವೇ ನಮ್ಮ ಮನಸ್ಸಿಗೆ ಬಂದಂತೆ ಸ್ವೇಚ್ಛಾಚಾರಗಳಾಗಿ ಕೊಳ್ಳದಲ್ಲಿ ಬೀಳಬಯಸುವೆವೋ?

ಬ್ರಿಟಿಶರಾಳಿಕೆಯ ಕಾಲದಲ್ಲಿ ರಚನಾತ್ಮಕ ಕಾರ್ಯವೂ ರಾಜಕಾರಣವೆಂದು ಭಾವಿಸಲಾಗುತ್ತಿದ್ದಿತು. ರಾಟಿ ತಿರುಗಿಸುವದೆಂದರೆ ಮ್ಯಾಂಚೆಸ್ಟರದೊಡನೆ ಹೋರಾಟ ಹೂಡುವದೆಂದೆಣಿಸಲಾಗುತ್ತಿತ್ತು. ಇದೆಲ್ಲ ಬದಲಾವಣೆ ಹೊಂದಬೇಕು. ಒಕ್ಕಲಿಗರ ಜೀವನವನ್ನು ಲಕ್ಷಿಸಿ ನಮ್ಮ ಹಳ್ಳಿಗಳ ಪುನರ್ ರಚನೆಯಲ್ಲಿ ನಾವು ಪ್ರಯತ್ನಿಸಲಿಕ್ಕೇಬೇಕು. ಪ್ರಜಾಪ್ರಭುತ್ವ ಜೀವನವನ್ನು ಸಾಗಿಸಲು ನಿಜವಾದ ತಳಹದಿ ಹಾಕಲು ಅನುಕೂಲವಾಗುವಂತೆ ಹಳ್ಳಿಯ ಸಾಮಾಜಿಕ ಮತ್ತು ಆರ್ಥಿಕ ಜೀವನವನ್ನು ಮಾರ್ಪಡಿಸಲಿಕ್ಕೇ ಬೇಕು. ಹಳ್ಳಿಯ ಜೀವನದ ಮುಖಾಂತರವೇ ರಾಷ್ಟ್ರಸೇವೆ ಮಾಡಲನುಕೂಲವಾಗುವಂತೆ ಶಿಕ್ಷಣ ಸಿಕ್ಕಬೇಕು. ರಾಜಕಾರಣವನ್ನೇನು ನಾವು ಬಿಟ್ಟುಕೊಡಬೇಕಾಗಿಲ್ಲ. ನಮ್ಮ ರಾಜಕಾರಣವು ನಮ್ಮ ಆರ್ಥಿಕ ಜೀವನಾನುವರ್ತಿಯಾಗಿರಬೇಕಲ್ಲದೆ ಅದರ ಮೇಲೆ ಪ್ರಭುತ್ವ ನಡೆಸಬಾರದು. ಔದ್ಯೋಗೀಕರಣದಲ್ಲಿ ಅತ್ಯಂತ ಪ್ರಗತಿ ಹೊಂದಿದ ಅಮೇರಿಕೆಯಲ್ಲಿ ಕೂಡ ಪರಿಸ್ಥಿತಿ ಹೀಗಿದೆಂದು ಅಲ್ಲಿಯ ಒಕ್ಕಲತನ ಶಾಖೆಯ ಕಾರ್ಯದರ್ಶಿ ಶ್ರೀ. ಬ್ರಾನ್‌ಮನ್ನರು ವರದಿ ಮಾಡಿರುವರು. 'ನಮ್ಮ ರಾಷ್ಟ್ರದ ಮತ್ತು ಇಡೀ ಜಗತ್ತಿನ ಹಿತ ಸಂಬಂಧಗಳ ದೃಷ್ಟಿಯಿಂದ ವಿಚಾರ ಮಾಡಿದರೆ ನಮ್ಮ ಗ್ರಾಮಾಂತರ ಜೀವನವನ್ನು ಸುಧಾರಿಸುವದು ಅತ್ಯವಶ್ಯ ಮತ್ತು ಕೈಗಾರಿಕೆಗಳಿಗೆ ಹೆಚ್ಚು ಪ್ರೋತ್ಸಾಹ ಕೊಡುವದು ಅಗತ್ಯ. ಇದು ಪ್ರಜಾಪ್ರಭುತ್ವ ತತ್ವಗಳಿಗೆ ಮತ್ತು ಮಾನವೀ ನ್ಯಾಯ ಹಾಗೂ ವ್ಯಕ್ತಿಯ ಶ್ರೇಷ್ಠತೆಗೆ ಅನುಗುಣವಾಗಿದೆ' ಎಂದು ಮುಂತಾಗಿ ನಮ್ಮ ಅಭಿಪ್ರಾಯವಾಗಿದೆಂದು ಅವರು ಹೇಳಿರುವರು. ಅಮೇರಿಕೆಗಿಂತ ನಮ್ಮ ದೇಶದಲ್ಲಿ ಎಲ್ಲಾ ಸಮಸ್ಯೆಗಳಲ್ಲಿ ಒಕ್ಕಲಿಗರ ಹಿತ ಸಂವರ್ಧನ ಸಮಸ್ಯೆಗೆ ಹೆಚ್ಚು ಮಹತ್ವ ಕೊಡಬೇಕಾದುದು ಅಗತ್ಯವಾಗಿದೆ.

ಇದನ್ನು ಹರಕು ಮುರುಕ್ಕಾಗಿ ಮಾಡಲಾಗದು. ಖಾದಿಯನ್ನೊಳಗೊಂಡು ಗ್ರಾಮೋದ್ಯೋಗಗಳನ್ನು ನಾವು ಸಂಘಟಿಸಬಹುದು. ಗ್ರಾಮಗಳ ಸ್ವಚ್ಛತೆ ಮತ್ತು ಆರೋಗ್ಯ ಸುಧಾರಣೆಗಾಗಿ ಕೆಲಸ ಮಾಡಬಹುದು. ಹಗಲು ಮತ್ತು ರಾತ್ರಿ ಶಾಲೆಗಳನ್ನು ತೆಗೆಯಬಹುದು. ಇವೆಲ್ಲ ಅನುಕೂಲವಾಗಿದ್ದರೂ ಗ್ರಾಮಗಳು ಅನ್ನ ಮತ್ತು ವಸ್ತ್ರಗಳಿಂದ ಸ್ವಯಂಪೂರ್ಣವಿಲ್ಲದೆ ಅಲ್ಲಿನ ಆರ್ಥಿಕ ಪರಿಸ್ಥಿತಿ ಚೆನ್ನಾಗಿಲ್ಲದಿದ್ದರೆ ಭದ್ರವಾದ ತಳಹದಿಯಲ್ಲಿ ಅವು ಉಳಿಯಲಾರವು. ಲಕ್ಷಾವಧಿ ಟನ್ನು ಆಹಾರ ಧಾನ್ಯಗಳನ್ನು ಪರ ದೇಶಗಳಿಂದ ಆಯಾತ ಮಾಡಿಕೊಂಡರೆ ಈ ಸಮಸ್ಯೆ ಬಗೆಹರಿಯದು. ಅದೊಂದು ಬಗೆಯಿಂದ ಖಾದಿ ಹೋಲಿದಂತೆ. ಆದ್ದರಿಂದ ಈಗಲಾದರೂ ನಮ್ಮ ಧುರೀಣರು ರಾಜಕಾರಣದ ಚದುರಂಗದಾಟವನ್ನು ಬಿಟ್ಟುಗೊಟ್ಟು ರಚನಾತ್ಮಕ ಕಾರ್ಯದತ್ತ ಮನಸು ತಿರುಗಿಸುವದು ಅತ್ಯವಶ್ಯವಾಗಿದೆ

ಸದ್ಯದ ಸರಕಾರವು ಎಷ್ಟೇ ಉತ್ಸಾಹ ಆಡಂಬರವನ್ನು ತೋರಿಸಿದರೂ ಅದೆಲ್ಲ ತಾತ್ಪೂರ್ತಿಕವೆಂದು ಸಿದ್ಧವಾಗಿದೆ. ನಮ್ಮ ಹಳ್ಳಿಗಳ ಸುಧಾರಣೆಗಾಗಿ ಅದು ಹೊಸತೇನನ್ನು ಯೋಚಿಸಿಲ್ಲ. ಎಲ್ಲಿಯಾದರೂ ಆ ಬಗೆಯ ಪ್ರಯತ್ನ ನಡೆದಿದ್ದರೆ ಅದರಿಂದ ಪರಿಸ್ಥಿತಿ ಮತ್ತಷ್ಟು ಕೆಟ್ಟಿದೆಯಲ್ಲದೆ ಸುಧಾರಿಸಿಲ್ಲ. ಏಕೆಂದರೆ ಸ್ಥಳೀಯ ಸಮಸ್ಯೆಗಳನ್ನರಿತುಕೊಳ್ಳದೆ ದೂರಿನಿಂದ ಪರಿಸ್ಥಿತಿಯನ್ನು ಸುಧಾರಿಸುವ ಪ್ರಯತ್ನವಾಡಲಾಗುತಿದೆ. ನಮ್ಮ ಹಳ್ಳಿಗರ ಜೀವನ ಮತ್ತು ಅವರ ಅತ್ಯವಶ್ಯವಾದ ಬೇಡಿಕೆಗಳ ಪ್ರತ್ಯಕ್ಷ ಪರಿಚಯವಿದ್ದ ಸರಕಾರ ನಮಗೆ ಬೇಕಾಗಿದೆ.

ಬೇಗನೆ ಪಾಟಣಾದಲ್ಲಿ ಕೂಡಲಿರುವ ನಮ್ಮ ಧುರೀಣರು ಧೈರ್ಯದಿಂದಲೂ ಏಕಾಗ್ರಚಿತ್ತದಿಂದಲೂ ಪರಿಸ್ಥಿತಿಯನ್ನು ಗಾಂಧೀಜಿ ಸೂಚಿಸಿದ ಮಾರ್ಗದಿಂದ ಎದುರಿಸಿ ದೇಶವನ್ನು ಸದ್ಯಕ್ಕಂತೂ ಅನಿವಾರ್ಯವೆಂದು ಕಾಣಿಸುವ ಸರ್ವನಾಶದಿಂದ ಉಳಿಸುವರೆ?

—ಜೆ. ಪಿ ಕುಮಾರಪ್ಪ.

ಸಾಧುಗಳ ಬಂಧನ

ಚಿಕ್ಕ ಮಕ್ಕಳಿಗೂ ಸ್ತ್ರೀಯರಿಗೂ ವಿಷ ಪ್ರಯೋಗ ಮಾಡುತ್ತಿದ್ದರೆಂದು ಬಂಧಿತರಾದ ಸಾಧುಗಳನ್ನು ನೋಡಲು ಸುಮಾರು ೨೦,೦೦೦ ನಾಗರಿಕರು ಪೋಲೀಸ ಠಾಣೆಯ ಹತ್ತಿರ ಕೂಡಿದ್ದರು. ಜನದಟ್ಟಣೆ ಹೆಚ್ಚಾದ್ದರಿಂದ ಒಂದು ಭೇದಿಕೆಯನ್ನು ಮಾಡಿ ಅದರ ಮೇಲೆ ಸಾಧುಗಳನ್ನು ನಿಲ್ಲಿಸಿ ಜನ ಸಮುದಾಯಕ್ಕೆ ತೋರಿಸಬೇಕಾಯಿತು.

ಮಕ್ಕಳಿಗೆ ವಿಷ ಪ್ರಯೋಗವಾಗುವದೆಂಬ ಹೆದರಿಕೆಯಿಂದ ಪಾಲಕರು ಮಕ್ಕಳನ್ನು ಶಾಲೆಗೆ ಕಳಿಸಲು ನಿರಾಕರಿಸಿದ್ದರಿಂದ ಪೋಲೀಸರು ಊರಲ್ಲಿಯ ಎಲ್ಲ ಸಾಧುಗಳನ್ನು ಬಂಧಿಸಿ ತಪಾಸು ಮಾಡಲಾಗಿ ಕೆಲವರ ಕಡೆ ವಿಷದ ಪುಡಿ ಮತ್ತು ಕಾಳುಗಳು ದೊರೆತವು.

ಸ್ಕೂಲ್ ಫೈನಲ್ ಪರೀಕ್ಷಾ ಫಲಿತಾಂಶ.

ಕಳೆದ ಮಾರ್ಚ್ ತಿಂಗಳಲ್ಲಿ ನಡೆದ ಸ್ಕೂಲ್ ಫೈನಲ್ ಪರೀಕ್ಷೆಗೆ ಕೊಡಗಿನ ವಿವಿಧ ಹೈಸ್ಕೂಲುಗಳಿಂದ ಕೂತ ವಿದ್ಯಾರ್ಥಿಗಳಲ್ಲಿ ಈ ಕೆಳಗಿನವರು ತೇರ್ಗಡೆಯಾಗಿರುವರು.

ವೀರಾಜಪೇಟೆ ಹೈಸ್ಕೂಲು.

ಶ್ರೀಗಳಾದ ಎ. ಎ. ಭುವನೇಶ್ವರಿ, ಅಜ್ಜಿಕಂಡ ಪೆಮ್ಮಯ್ಯ, ಕುಟ್ಟಂಡ ರಾಧಾ ದೇವಜನ ರಾಮಯ್ಯ, ಕೆ. ಎಂ. ಶಂಭು, ಎಸ್. ಪಿ. ಶಾಂತಪ್ಪ, ಕುಟ್ಟಂಡ ಕೆ. ಉತ್ತಪ್ಪ, ಎ ಎಸ್. ವಿಶ್ವನಾಥ, ಪಟ್ಟಡ ಚಿತ್ರ, ಬಲ್ಯಾಟಂಡ ಚಂಗಪ್ಪ. ಪಟ್ಟಮಾಡ ಗಣಪತಿ, ಪಾಂಡಂಡ ಕುಟ್ಟಪ್ಪ, ಜಾನ್ ಸಾಲ್ಡಾನಾ, ನೆಲ್ಲಮಕ್ಕಳ ನಾಣಪ್ಪ, ಕೆ. ಎ. ನರಸಿಂಗ, ಆಲ್ಬರ್ಟ್ ಡಿಸಿಲ್ವಾ, ಐರಿರ ಅಪ್ಪಚ್ಚು, ಮೇರಿಯಂಡ ಸಿ. ಉತ್ತಪ್ಪ, ಗೌಳಿಗರ ಸಿ. ಪೆರುಮಾಳು, ಮಾಳೇಟಿರ ಎಸ್. ಮಾದಯ್ಯ, ಕೀತಿಯಂಡ ಎ. ಮುತ್ತಣ್ಣ, ಕುಪ್ಪಂಡ ಎನ್. ದೇವಯ್ಯ, ಕೊಕ್ಕಲೆರ ಎಂ. ಬೋಪಯ್ಯ ಮತ್ತು ಚೇಂದಂಡ ಗಣಪತಿ ಇವರುಗಳು. ಪರೀಕ್ಷೆಗೆ ಕೂತ ೪೯ ವಿದ್ಯಾರ್ಥಿಗಳಲ್ಲಿ ೨೪ ಅಂದರೆ ಶೇ|| ೪೯ರಂತೆ ತೇರ್ಗಡೆಯಾಗಿದ್ದಾರೆ.

ಸೈಂಟ್ ಎನ್ಸ್ ಹೈಸ್ಕೂಲು, ವೀರಾಜಪೇಟೆ.

ಶ್ರೀಮತಿಯರಾದ ಎಂ. ಜಿ ಇಂದಿರಾ, ಕೆ. ಟಿ. ಭವಾನಿ, ಎಂ ಜಿ ಗೌರಮ್ಮ ಕೆ. ಎಂ. ಕಾವೇರಮ್ಮ, ಹೆಚ್. ಆರ್. ಜಯಮಾಲ, ಮೇಗ್ಡಲೇನ ಮೊರಾಸ್, ಮತ್ತು ಎ. ಪಿ. ಪಾರ್ವತಿ ಇವರುಗಳು. ಪರೀಕ್ಷೆಗೆ ಕೂತ ೧೫ರಲ್ಲಿ ೭. ಅಂದರೆ ಶೇಕಡ ೪೬.೬ರಂತೆ.

ಸೆಂಟ್ರಲ್ ಹೈಸ್ಕೂಲ್, ಮಡಿಕೇರಿ.

ಶ್ರೀಗಳಾದ ಮೊಣ್ಣಂಡ ಅಕ್ಕಮ್ಮ, ಮಾರ್ವಂಗಡ ಬೋಜಮ್ಮ, ಪಾಂಡನ ಮಂದಣ್ಣ, ಪೊಡನೋಳಂಡ ಮೀನಾಕ್ಷಿ, ಟಿ ಎಸ್. ರಾಜಗೋಪಾಲ್, ಮಾರ್ವಂಗಡ ಡಿ. ಅಪ್ಪಯ್ಯ, ಚೇರಂಡ ಎಂ. ಅಪ್ಪಯ್ಯ, ಅಬ್ದುಲ್ ಸತ್ತಾರ್, ನೆಲ್ಲಮಕ್ಕಳ ಬಿದ್ದಪ್ಪ. ಸಿಸಿಲಿ ಡಿಸೋಜ, ಕೆ. ಎಸ್ ಚಂಪಾವತಿ, ಮಾಡೆರ ಚಂಗಪ್ಪ, ಬೊಳ್ಳಂಡ ಈಶ್ವರ, ಕೊಡಂದೆರ ಗಣಪತಿ, ಎ. ಎಸ್. ಗೋವಿಂದಶರ್ಮ, ಹೆಚ್. ವಿ. ಕೃಷ್ಣ, ಚೆಪ್ಪುಡಿರ ಮಾಚಯ್ಯ, ಕೆ. ಕೆ. ಮಂಜುಳ, ಎಸ್. ಎಸ್. ಪದ್ಮಾವತಿ, ಹೆಚ್ ಆರ್. ಪಾರ್ಥಸಾರಥಿ, ರೋಸಿ ಡಿಸೋಜ, ಕಲ್ಯಟಂಡ ಸುಬ್ಬಯ್ಯ, ಬಲ್ಲಚಂಡ ಉತ್ತಯ್ಯ, ಮೇಕೇರಿರ ನಾಣಿಜ ಇವರುಗಳು. ಪರೀಕ್ಷೆಗೆ ಕೂತ ೪೬ರಲ್ಲಿ ೨೪. ಅಂದರೆ ಶೇಕಡ ೫೨.೧ರಂತೆ.

ಸೈಂಟ್ ಮೈಕೇಲ್ ಸ್ಕೂಲ್ ಮಡಿಕೇರಿ

ಶ್ರೀಗಳಾದ ವೈ ಉಮಾಶೈಣೈ, ಟಿ. ಬಿ. ರಾಜಮ್ಮ ಮತ್ತು ಕೇಳಪಂಡ ಅಚ್ಚಯ್ಯ ಇವರುಗಳು. ೨೧ರಲ್ಲಿ ೩. ಅಂದರೆ ಶೇಕಡ ೧೪ರಂತೆ

ಸೈಂಟ್ ಜೋಸೆಫ್ಸ್ ಕಾನ್ವೆಂಟ್, ಮಡಿಕೇರಿ.

ಶ್ರೀಗಳಾದ ಬಿ. ಸಿ. ಗಂಗಮ್ಮ, ಸಿ. ಎಂ. ಅಮ್ಮಕ್ಕ, ಕೊಂಗಂಡ ಎ. ಕಮಲ, ಎಂ. ಎಂ ಗಂಗಮ್ಮ, ನಿಡ್ಯಮಲೆ ಸುಶೀಲ ರೆವಲಿನ್ ಕಾರ್ಡರ್, ನೆರವಂಡ ಪಿ. ಕಮಲ, ಎ. ಎಂ. ಸುಬ್ಬಮ್ಮ, ಐಚೆಟ್ಟಿರ ಸರಸ್ವತಿ, ಎನ್ ಬಿ. ಪ್ರೇಮ, ಸಿ ವಿ. ಶಕುಂತಳ, ಎಸ್. ಬಿ. ಲೀಲಾವತಿ, ಬಿ ಕೆ, ಸಿತಾರ ಇವರುಗಳು. ಪರೀಕ್ಷೆಗೆ ಕೂತ ೧೭ರಲ್ಲಿ ೧೩. ಅಂದರೆ ಶೇಕಡ ೭೬.೪ರಂತೆ.

ಸೋಮವಾರಪೇಟೆ ಹೈಸ್ಕೂಲು.

ಶ್ರೀಗಳಾದ ಮಣವಟ್ಟೀರ ಕಟ್ಟಣ, ಬಿಟ್ಟಿಯಂಡ ಬೊಳ್ಳಮ್ಮ, ಹೊಸಮನೆ ಚಿಣ್ಣಪ್ಪ, ಎ. ಪಿ. ಚಂದ್ರಪ್ಪ, ಬಿ ಎಂ. ಹನುಮಂತಪ್ಪ, ಕೆ. ಸಿ. ಕೃಷ್ಣಪ್ಪ. ಡಿ. ಎಸ್. ಮಂಜುನಾಥ, ಜೆ. ಜಿ ಮಾಂತಯ್ಯ, ಟಿ. ವಿ ಮಹದೇವಮ್ಮ, ಬಿ. ಎಲ್. ನಾರಾಯಣಶೆಟ್ಟಿ, ಪಟ್ಟಿಹಾಡ ಸಿ. ಪೂಣಚ್ಚ, ಟಿ ಹೆಚ್. ಶಿವಾನಂದ, ಡಿ. ಆರ್ ಶಂಕರರಾಜಪ್ಪ, ಕೆ. ಬಿ. ತಿಮರುದ್ರಪ್ಪ, ಎಚ್. ಎಸ್ ಶಿವಮೂರ್ತಿ, ಎಸ್. ಎಚ್ ವೀರಪ್ಪ ಮತ್ತು ಎ. ಕೆ. ಸುವರ್ಣ ಇವರುಗಳು ೨೦ರಲ್ಲಿ ೧೭. ಅಂದರೆ ಶೇಕಡ ೮೫ರಂತೆ.

ನಾಪೋಕ್ಲು ಹೈಸ್ಕೂಲು.

ಶ್ರೀಗಳಾದ ಬಿಲ್ಲತಂಡ ಪಾರ್ವತಿ, ಗುಡ್ಡೆರ ಚಿಣ್ಣಯ್ಯ, ಕುಂಜಿಲನ ಮಂದಪ್ಪ, ಕಲಿಯಂಡ ನಾಣಯ್ಯ, ತೋಕ್ಕಿಯಂಡ ಪೊನ್ನಪ್ಪ, ಮೇಚಂಡ ಸೋಮಯ್ಯ, ಮುಕ್ಕಾಟಿರ ಸೋಮಯ್ಯ, ಚಿರೋಟಿರ ತಮ್ಮಯ್ಯ, ಎಂ. ಎಂ. ಅಬುಬಕರ್, ಬೊಳ್ಳಂಡ ಬೋಪಯ್ಯ, ಚಿಲ್ಲನ ಬೋಪಯ್ಯ, ಬೊಳ್ಳಚೆಟ್ಟಿರ ಕುಶಾಲಪ್ಪ, ಮುಕ್ಕಾಟಿರ ಕಾಳಪ್ಪ, ಮುಕ್ಕಾಟಿರ ನಾಣಯ್ಯ, ಕೋಟಿರ ಭೀಮಯ್ಯ, ನೆರವಂಡ ಗೌರಮ್ಮ, ಪೊನ್ನಚಂಡ ಚಂಗಪ್ಪ, ಕೋಡಿಮಣಿಯಂಡ ಸೋಮಪ್ಪ, ಚೇನಂಡ ಉತ್ತಯ್ಯ, ಮಾಟೀರಿ ಕೃಷ್ಣಯ್ಯ ಮತ್ತು ಕುಲ್ಲೇಟಿರ ಸೋಮಯ್ಯ ಇವರುಗಳು. ೩೯ರಲ್ಲಿ ೨೧. ಶೇಕಡ ೫೪ರಂತೆ.

ಪೊನ್ನಂಪೇಟೆ ಹೈಸ್ಕೂಲು.

ಶ್ರೀಗಳಾದ ಎಂ. ಎಸ್. ಜರ್‌ಹನ್ ಎ. ಎ. ದೇವಯ್ಯ, ಕೆ. ಎಸ್ ಗೋಪಾಲಕೃಷ್ಣ, ಬಿ ಎ. ಕಾರ್ಯಪ್ಪ, ಬಿ ಸಿ ಕಾರ್ಯಪ್ಪ ಪಿ. ಜಿ. ಕಾರ್ಯಪ್ಪ, ಜಿ. ಟಿ. ಕುಶಾಲಪ್ಪ, ಕೆ. ಎಂ. ಮಾದಪ್ಪ, ಎಂ. ಈ. ಮಹಮ್ಮದ್, ಪಿ ವಿ. ನಾರಾಯಣಮೂರ್ತಿ, ಎಂ. ಎ. ಪೂವಯ್ಯ, ಬಿ. ಎಸ್. ರಾಮಕೃಷ್ಣ, ಬಿ. ಎಸ್. ಶಂಭು, ಬಿ ಆರ್. ಸುಬ್ರಾಯ, ಮತ್ತು ಜಿ. ಟಿ ಬೋಂದಮ್ಮ ಇವರುಗಳು. ೨೫ರಲ್ಲಿ ೧೫ ಶೇಕಡ ೬೦ರಂತೆ.

ಕೊಡಗಿನಲ್ಲಿ ಒಟ್ಟಾಗಿ ಕುಳಿತ ೨೩೨ ವಿದ್ಯಾರ್ಥಿಗಳಲ್ಲಿ ೧೨೪ ತೇರ್ಗಡೆಯಾಗಿ ಶೇಕಡ ೫೩.೪ರಂತೆ ಪಾಸಾದಂತಾಯಿತು.

ಖಾಸಗಿಯಾಗಿ ಪರೀಕ್ಷೆಗೆ ಕೂತ ಶ್ರೀಗಳಾದ ಕುಂಡಿಯಂಡ ಮಾಚಯ್ಯ, ಮಾಳಂಗಡ ಅಪ್ಪಯ್ಯ, ಮನೆಯಪಂಡ ಅಪ್ಪಯ್ಯ, ಮಲ್ಲಂಗಡ ಚಂಗಪ್ಪ, ಸಿ. ಎಂ. ಅಬ್ದುಲ್ ಮಜೀದ್, ಬೊಮ್ಮೇರಿಯಂಡ ಮೊಣ್ಣಪ್ಪ, ಬಿದ್ದಂಡ ಉತ್ತಪ್ಪ, ಮನೆಯಪಂಡ ಗಂಗ, ಮನೆಯಪಂಡ ಯಶೋಧಮ್ಮ, ಸಿ. ಎಸ್. ಶಿವರಾಮು ಇವರುಗಳು ತೇರ್ಗಡೆಯಾಗಿರುವರು.

— ಭಿಕ್ಷಾವೃತ್ತಿ —

ಲೇ:- ಶ್ರೀ. ಕೆ. ಸಿ. ಭೀಮಯ್ಯ

ಆಚಾರ್ಯ ವಿನೋಬಾ ಭಾವೆಯವರು ನಮ್ಮ ದೇಶದ ಜನರನ್ನು, ಅವರವರ ಉದರ ಪೋಷಣಾ ಮಾರ್ಗವನ್ನನುಸರಿಸಿ ಭಿಕ್ಷುಕರು, ಉದ್ಯೋಗಸ್ಥರು ಮತ್ತು ಕಳ್ಳರು —ಎಂದು ಮೂರು ಪಂಗಡಗಳಾಗಿ ವಿಭಾಗಿಸಿದ್ದಾರೆ. ಅವರ ಅಭಿಪ್ರಾಯದಲ್ಲಿ ಯಾರು ಅತ್ಯಧಿಕ ಸಮಾಜ ಸೇವೆ ಮಾಡಿ, ಆ ಮೂಲಕ ತಮ್ಮ ಶರೀರ ಪೋಷಣೆಗೆ ಅತ್ಯವಶ್ಯವಿರುವ ಪ್ರತಿಫಲವನ್ನು ಮಾತ್ರ, ದೀನ ಉಪಕೃತ ಭಾವನೆಯಿಲ್ಲದೆ ಸ್ವಸ್ಥತೆಯಿಂದ ಸ್ವೀಕಾರ ಮಾಡುತ್ತಾರೋ ಅವರೇ ಭಿಕ್ಷುಕರು! ಯಾರು ವಿಶಿಷ್ಟ ಸಮಾಜ ಸೇವೆ ಮಾಡಿ ಅದಕ್ಕೆ ತಕ್ಕುದಾದ ಯೋಗ್ಯ ಪ್ರತಿಫಲವನ್ನ ಪಡೆಯುವರೋ ಅವರೇ ಉದ್ಯೋಗಸ್ಥರು! ಮತ್ತು ಯಾರು ಅತ್ಯಲ್ಪ ಸಮಾಜ ಸೇವೆ ಮಾಡಿ ಅಥವಾ ಸಮಾಜ ಸೇವೆಂಬ ನಾಟಕವನ್ನಭಿನಯಿಸಿ ಅಥವಾ ಸಮಾಜ ಸೇವೆಯನ್ನೇ ಮಾಡದೆ ಬದಲು ಪ್ರತ್ಯಕ್ಷ ಹಾನಿಯನ್ನುಂಟು ಮಾಡಿ ಆ ಮೂಲಕ ಅತ್ಯಧಿಕ ಲಾಭವನ್ನು ಉಪಭೋಗಿಸುವರೋ ಅವರೇ ಕಳ್ಳರು! ಎಂದ ಮೇಲೆ ಪ್ರತ್ಯಕ್ಷ ಕಳ್ಳರು, ದರೋಡೆಕೋರರು, ಕೊಲೆಪಾತಕರು. ಹೃತ್ಪೂರ್ವಕವಾಗಿ ಕರ್ತವ್ಯವನ್ನು ಮಾಡದೆ ಕೇವಲ ನಟನೆ ಮಾಡುವ ಎಲ್ಲಾ ಸರಕಾರಿ ನೌಕರರು, ವಕೀಲರು, ವೈದ್ಯರು ಶಿಕ್ಷಕರು, ವ್ಯಾಪಾರಸ್ಥರು, ಧರ್ಮೋಪದೇಶಕರೂ ಕೂಡ ಮೂರನೇ ಪಂಗಡಕ್ಕೆ ಸೇರಿದ "ಕಳ್ಳರು" ಎಂಬುದೇ ಅವರ ವಾದ! ಅದರ ಬೇಸಾಯ ಮಾಡುವ ರೈತ, ಶ್ರಮಜೀವಿಯಾದ ಕೂಲಿಗಾರ—ಇವರನ್ನು ಮಾತ್ರ ಎರಡನೆಯ ಪಂಗಡಕ್ಕೆ ಸೇರಿಸಬಹುದೆಂದು ಅವರ ಅಭಿಮತ.

ಸರಿ, ಹಾಗಾದರೆ ಒಂದನೇ ಪಂಗಡಕ್ಕೆ ಸೇರಿದವರು ಯಾರು? ಅವರ ಸಂಖ್ಯೆ ಎಷ್ಟಿರಬಹುದು? ಇದು ಸಾಧಾರಣವಾಗಿ ಬರತಕ್ಕ ಪ್ರಶ್ನೆ. ನಿಜವಾದ ಶ್ರದ್ಧೆ, ಭಕ್ತಿಗಳನ್ನು ವಹಿಸಿ, ಸಮಾಜದ ಸೇವೆಯನ್ನು ಹೃತ್ಪೂರ್ವಕವಾಗಿ ಮಾಡುವ ನಿಷ್ಕಾಮ ಕರ್ಮಿಗಳಾದ ಅಲ್ಪ ಸ್ವಲ್ಪ ಸಮಾಜ ಸುಧಾರಕರು ಮತ್ತು ಸಾಧು ಪುರುಷರು ಮಾತ್ರ ಈ ಪಂಗಡಕ್ಕೆ ಸೇರುತ್ತಾರೆ. ಇಂತವರ ಸಂಖ್ಯೆ ಬಹಳ ಕಡಿಮೆಯೆಂದು ಬೇರೆ ಹೇಳಬೇಕಾಗಿಲ್ಲ! ಅದು ಹಾಗಿರಲಿ.

ಅತ್ಯಧಿಕ ಸಮಾಜ ಸೇವೆ ಮಾಡಿ, ಅದರಿಂದ ಅತ್ಯಲ್ಪ ಪ್ರತಿಫಲವನ್ನು ಅದೂ ಶರೀರ ನಿರ್ವಹಣಾರ್ಥ ಮಾತ್ರ ಸ್ವೀಕರಿಸುವುದೇ ಭಿಕ್ಷೆ. ಹಾಗಾದರೆ ನಮ್ಮ ದೇಶದಲ್ಲಿಂದು ಐವತ್ತು ಲಕ್ಷಕ್ಕೂ ಮಿಕ್ಕಿ ಇರುವ "ಭಿಕ್ಷುಕ"ರೆನಿಸಿಕೊಂಡ ಆ ಜನರೆಲ್ಲರೂ ನಿಜವಾದ 'ಭಿಕ್ಷು'ಕರಲ್ಲವೆಂದಾಯಿತು; ಬದಲು ಅವರೆಲ್ಲರೂ ಮೂರನೇ ಪಂಗಡಕ್ಕೆ ಸೇರಿದ 'ಕಳ್ಳರೇ' ಎಂದೆನ್ನಬೇಕಾಗಿದೆ! ಇವರನ್ನು ಕುರಿತು ಆಚಾರ್ಯ ವಿನೋಬಾರವರು "ಇವರೂ ಸಹ ಒಂದು ಬಗೆಯ ಕಳ್ಳರೇ" ಎಂದು ಎತ್ತಿ ನುಡಿದಿದ್ದಾರೆ! ಇದನ್ನು ಕೇಳುವಾಗ ನಾವಿಂದು "ಭಿಕ್ಷು" ಎಂಬ ಪದಕ್ಕೆ ಅಪಾರ್ಥವನ್ನು ಕಲ್ಪಿಸಿಕೊಂಡಿರುವೆವೆಂದು ವೇದ್ಯವಾದಂತಾಯಿತು. ಉಣಲಿಕ್ಕೆ ಅನ್ನವಿಲ್ಲದೆ ಉಡಲಿಕ್ಕೆ ಬಟ್ಟೆಯಿಲ್ಲದೆ, ವಾಸಿಸಲಿಕ್ಕೆ ಮನೆಯಿಲ್ಲದೆ, ತಿರುಪೆಯೆತ್ತಿ ತಮ್ಮ ಜೀವನವನ್ನು ಹೊರೆಯುವ ಬಡ ಜನರನ್ನು "ಭಿಕ್ಷುಕ"ರೆಂದು ನಾವಿಂದು ಕರೆಯುತ್ತಿದ್ದೇವೆ. ಅವರಿಗೆ ಯಾವುದೊಂದೂ ಗೌರವ ಆದರಗಳನ್ನು ನಾವು ತೋರಿಸುತ್ತಿಲ್ಲ; ಅಂತಹ ಆದರ ಗೌರವಗಳನ್ನು ಗಳಿಸುವ ಅರ್ಹತೆಯಾವುದೂ ಅವರಲ್ಲಿ ಅಪರೂಪವೆಂದೇ ಎನ್ನಬೇಕು. ಯಾಕೆ, ಉದರ ಪೋಷಣೆಗೆ ಯಾವ ಮಾರ್ಗವೂ ತೋರದಿದ್ದಲ್ಲಿ ಭಿಕ್ಷಾವೃತ್ತಿಗಿಳಿಯುವುದೇ ಇಂದಿನ ಪಾಡಿಕೆಯಾಗಿ ಹೋಗಿಬಿಟ್ಟಿದೆ! ಫಲವಾಗಿ "ಭಿಕ್ಷೆ"ಯೆಂಬ ಶಬ್ದಕ್ಕೆ ಇಂದು ಬೆಲೆಯಿಲ್ಲದ ಹಾಗಿದೆ. "ಭಿಕ್ಷು" ಎಂಬ ಮಾನವನೇ ತಿರಸ್ಕಾರ ಭಾವದಿಂದ ಕಾಣುವಂತಾಗಿದ್ದಾನೆ! ಭಿಕ್ಷಾವೃತ್ತಿಯೆಂಬುದೇ ಹಾಸ್ಯಾಸ್ಪದವಾಗಿದೆ!

ಆದ್ದರಿಂದ ಈ ಹಾಸ್ಯಾಸ್ಪದ ರೀತಿಯ ಭಿಕ್ಷಾವೃತ್ತಿ ಮಾಯವಾಗುವಂತಾಗಬೇಕು. ಇದಕ್ಕೆ ಸರಕಾರವೂ, ನಮ್ಮ ಇಂದಿನ ಸಮಾಜ ಸುಧಾರಕರೂ, ದೇಶ ಪ್ರೇಮಿಗಳೂ ಒಂದಾಗಿ ಶ್ರಮಿಸಬೇಕಾಗಿದೆ. ಇಂಗ್ಲೆಂಡ್ ಮೊದಲಾದ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿರುವಂತೆ, ಭಿಕ್ಷುಕರನ್ನು ಅವರವರ ಶಕ್ತ್ಯಾನುಸಾರ ನಾನಾ ಉದ್ಯಮಗಳಲ್ಲಿ ಸೇರಿಸಿ ದುಡಿಯುವಂತೆ ಮಾಡಿ, ಸರಕಾರವು ಅವರ ಪಾಲನಾ ಕಾರ್ಯವನ್ನು ವಹಿಸಿಕೊಳ್ಳಬೇಕು. ಈ ತಿರುಪೆಯೆತ್ತುವ ಹವ್ಯಾಸವನ್ನೇ ನಿರ್ಮೂಲಮಾಡಬೇಕು. ಈ ವಿಚಾರದಲ್ಲಿ ಸ್ವಲ್ಪ ಪರಿಶ್ರಮವನ್ನು ತೆಗೆದುಕೊಂಡಡೆ ಆದರೆ, ಮುಂದೆ ಖಂಡಿತವಾಗಿಯೂ ಜಯವು ದೊರಕದಿರದು.

ನಮ್ಮ ಪಾಡಿಕೆಯ ಭಿಕ್ಷಾವೃತ್ತಿಯನ್ನು ನಡೆಸುವ ಬದಲು ಆಚಾರ್ಯವಿನೋಬಾರವರೆಣಿಸಿದಂತಹ 'ಭಿಕ್ಷಾವೃತ್ತಿ'ಯು ಜಾರಿಯಲ್ಲಿಬರಬೇಕು. ಮೇಲೆ ವಿಂಗಡಿಸಿದ ಒಂದನೇ ಪಂಗಡಕ್ಕೆ ಸೇರಿದ ಭಿಕ್ಷುಕರ ಸಂಖ್ಯೆಯು ಹೆಚ್ಚಾಗಬೇಕು. ಜಾಗತಿಕ ಸಮರದ ಭೀಕರತೆಯು ತಾಂಡವವಾಡುತ್ತಿರುವ ಈ ಅಶಾಂತಿಮಯ ಜಗತ್ತಿಗೆ ಇಂತಹ ಭಿಕ್ಷುಗಳ ಅವಶ್ಯಕತೆಯು ವಿಪರೀತವಿದೆಯೆಂದರೆ ಅತಿಶಯೋಕ್ತಿಯಾಗಲಾರದು! ಮಾನವತೆಯನ್ನು ಕಳೆದುಕೊಂಡು, ಧನಿಕನಾದಿಗಳ ದಾಸ್ಯತೆಯನ್ನು ಬಯಸಿ ವಿಶ್ವವಿನಾಶತೆಯನ್ನು ಆಹ್ವಾನಿಸುತ್ತಿರುವ ಈ ಪ್ರಪಂಚವನ್ನು ಉದ್ಧಾರಗೊಳಿಸಲು ಇಂತಹ ನಿಜ ಶ್ರದ್ಧಾಶಕ್ತಿಗಳಿಂದೊಡಗೂಡಿದ ಸಾಧು ಪುರುಷರ ನೆರವು ಅತೀ ಅಗತ್ಯವಾಗಿದೆ. 'ಭಿಕ್ಷಾವೃತ್ತಿ' ನಷ್ಟವಾಗುತ್ತಿದೆ. ಇದರ ಪುನರುದ್ಧಾರವಾಗಬೇಕು. ಎಂದು ಸಮರ್ಥರಾಮದಾಸರನ್ನುತ್ತಿದ್ದರಂತೆ. ಅವರ ಉದ್ದೇಶವು ಮೇಲೆಂದ ಮೊದಲನೆಪಂಗಡದ ಭಿಕ್ಷುಕರ ಸಂಖ್ಯೆಯನ್ನು ಹೆಚ್ಚಿಸುವುದೇ ಆಗಿದ್ದಿರಬೇಕು.

—ಆಧಾರದಿಂದ.

ಕೊಡಗು

ತಾ. ೧೫-೬-೧೯೫೧ನೇ ಶುಕ್ರವಾರ

ಸ್ಕೂಲ್ ಫೈನಲ್ ಪರೀಕ್ಷಾ ಫಲಿತಾಂಶ

ಈ ವರ್ಷದ ಸ್ಕೂಲ್ ಫೈನಲ್ ಪರೀಕ್ಷೆಗೆ ಕೂತ ೨೩೨ ವಿದ್ಯಾರ್ಥಿಗಳಲ್ಲಿ ೧೨೪ ಜನರು ತೇರ್ಗಡೆಯಾದುದರಿಂದ ಶೇಕಡ ೫೩ ರಂತೆ ವಿದ್ಯಾರ್ಥಿಗಳು ಪಾಸಾದಂತಾಯಿತು. ಒಂದು ವರ್ಷವಿಡೀ ಓದಿ ನೂರಕ್ಕೆ ೪೭ ರಷ್ಟು ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಸೋಲುವರೆಂಬುದು ವಿಷಾದಕರವಾದರೂ ಈ ವರ್ಷದ ಫಲಿತಾಂಶವು ಕಳೆದ ಎರಡು ವರ್ಷಗಳಿಗಿಂಥಾ ಉತ್ತಮವಾಗಿದೆ. ಪ್ರತಿ ಶಾಲೆಗಳನ್ನು ಎತ್ತಿ ಹೇಳುವದಾದರೆ ೧೯೪೯ ರಲ್ಲಿ ಸೆಂಟ್ರಲ್ ಹೈಸ್ಕೂಲಿನಲ್ಲಿ ಶೇಕಡ ೭೦ ರಂತೆಯೂ ೧೯೫೦ ರಲ್ಲಿ ಶೇಕಡ ೩೦ ರಂತೆಯೂ ಈ ವರ್ಷ ಶೇಕಡ ೫೨ ರಂತೆಯೂ ಪಾಸಾಗಿದೆ. ಕಾನ್ವೆಂಟಿನಲ್ಲಿ ೧೯೪೯ ರಲ್ಲಿ ಶೇಕಡ ೬೯ ರಂತೆಯೂ, ೧೯೫೦ ರಲ್ಲಿ ಶೇಕಡ ೩೫ ರಂತೆಯೂ ಈ ವರ್ಷ ಶೇಕಡ ೭೬ ರಂತೆಯೂ ತೇರ್ಗಡೆಯಾಗಿದ್ದಾರೆ. ಸೈಂಟ್ ಮೈಕೇಲ್ ಹೈಸ್ಕೂಲಿನಲ್ಲಿ ೧೯೪೯ ರಲ್ಲಿ ಶೇಕಡ ೧೩ ರಂತೆಯೂ, ೧೯೫೦ ರಲ್ಲಿ ೧೫ ರಂತೆಯೂ ಈ ವರ್ಷ ಶೇಕಡ ೧೪ ರಂತೆಯೂ ತೇರ್ಗಡೆಯಾಗಿರುವರು. ವೀರಾಜಪೇಟೆ ಹೈಸ್ಕೂಲಿನಲ್ಲಿ ೧೯೪೯ ರಲ್ಲಿ ಶೇಕಡ ೩೫ ರಂತೆಯೂ, ೧೯೫೦ ರಲ್ಲಿ ೨೫ ರಂತೆಯೂ ಈ ವರ್ಷ ಶೇಕಡ ೪೯ ರಂತೆಯೂ ತೇರ್ಗಡೆಯಾಗಿದ್ದಾರೆ. ಪೊನ್ನಂಪೇಟೆ ಹೈಸ್ಕೂಲಿನಲ್ಲಿ ೧೯೪೯ ರಲ್ಲಿ ಶೇಕಡ ೨೩ ರಂತೆಯೂ, ೧೯೫೦ ರಲ್ಲಿ ಶೇಕಡ ೨೫ ರಂತೆಯೂ ಈ ವರ್ಷ ಶೇಕಡ ೬೦ ರಂತೆಯೂ ತೇರ್ಗಡೆಯಾಗಿದ್ದಾರೆ. ನಾಪೋಕ್ಲು ಶಾಲೆಯಲ್ಲಿ ೧೯೪೯ ರಲ್ಲಿ ಶೇಕಡ ೪೩ ರಂತೆಯೂ, ೧೯೫೦ ರಲ್ಲಿ ಶೇಕಡ ೧೯ ರಂತೆಯೂ ಈ ವರ್ಷ ಶೇಕಡ ೫೨ ರಂತೆಯೂ ಪಾಸಾಗಿದ್ದಾರೆ. ಸೋಮವಾರಪೇಟೆ ಶಾಲೆಯಲ್ಲಿ ೧೯೪೯ ರಲ್ಲಿ ಶೇಕಡ ೩೧ ರಂತೆಯೂ ೧೯೫೦ ರಲ್ಲಿ ಶೇಕಡ ೫೦ ರಂತೆಯೂ ಈ ವರ್ಷ ಶೇಕಡ ೮೫ ರಂತೆಯೂ ತೇರ್ಗಡೆಯಾಗಿರುವರು. ಸೈಂಟ್ ಏನ್ಸ್ ಹೈಸ್ಕೂಲು ಹೊಸದಾಗಿ ಈ ವರ್ಷ ಪರೀಕ್ಷೆಗೆ ಕೂತದ್ದಾಗಿದೆ. ಶೇಕಡ ೪೬ ರಂತೆ ಅಲ್ಲಿ ಫಲಿತಾಂಶ ದೊರೆತಿದೆ.

ಈ ಪಟ್ಟಿಯನ್ನು ನೋಡಿ ಈ ಮೂರು ವರ್ಷಗಳ ಕಾರ್ಯಕಲಾಪಗಳನ್ನು ಅವಲೋಕಿಸಿದರೆ ಸೋಮವಾರಪೇಟೆ ಮತ್ತು ಪೊನ್ನಂಪೇಟೆ ಶಾಲೆಗಳು ಹೆಜ್ಜೆ ಹಿಂದಕ್ಕಿಡದೆ ಮುಂದರಿಯುತ್ತಿರುವದು ತೋರಿ ಬರುವದು. ಕಳೆದ ವರ್ಷದಂತೆಯೇ ಈ ವರ್ಷವೂ ಸೋಮವಾರಪೇಟೆ ಹೈಸ್ಕೂಲು ಕೊಡಗಿನ ಹೈಸ್ಕೂಲುಗಳಲ್ಲೆಲ್ಲಾ ಪ್ರಥಮ ಸ್ಥಾನವಿಟ್ಟುಕೊಂಡಿರುವದು ಸ್ತುತ್ಯ! ಆ ಶಾಲೆಯ ಮುಖ್ಯೋಪಾಧ್ಯಾಯರೂ, ಇತರ ಅಧ್ಯಾಪಕರೂ, ವಿದ್ಯಾರ್ಥಿಗಳೂ ವಂದನಾರ್ಹರು. ಮಡಿಕೇರಿ ಹುಡುಗಿಯರ ಶಾಲೆಯು ಈ ವರ್ಷ ಗತ ವರ್ಷದಂತೆಯೇ ದ್ವಿತೀಯ ಸ್ಥಾನವನ್ನಿಟ್ಟುಕೊಂಡಿದೆ. ಈ ಶಾಲೆಯ ಕಾರ್ಯಕಲಾಪಗಳು ಪ್ರಶಂಸನಾರ್ಹವೆಂದು ಹೇಳಬೇಕಾಗಿದೆ. ಕಳೆದ ವರ್ಷ ನಾಲ್ಕನೇ ಸ್ಥಾನದಲ್ಲಿದ್ದ ಪೊನ್ನಂಪೇಟೆ ಶಾಲೆಯು ಈ ವರ್ಷ ಮೂರನೆ ಸ್ಥಾನಕ್ಕೆ ಬಂದಿದೆ. ಈ ಶಾಲೆಯಲ್ಲಿ ಶಿಸ್ತಿಲ್ಲ, ಪಾಠ ಪ್ರವಚನ ಚೆನ್ನಾಗಿಲ್ಲವೆಂದು ಹಲವು ಪುಕಾರು ಕೇಳಿ ಬರುತ್ತಿತ್ತು. ಆದರೆ ಈ ವರ್ಷ ಅದು ಉತ್ತಮ ಫಲಿತಾಂಶವನ್ನು ತಂದಿದೆ. ಈ ಶಾಲೆಯ ಅಧ್ಯಾಪಕರ ಪ್ರಯತ್ನ ಹಾಗೂ ವಿದ್ಯಾರ್ಥಿಗಳ ಪರಿಶ್ರಮಗಳು ಹೊಗಳಲರ್ಹವಾಗಿವೆ.

ಸೆಂಟ್ರಲ್ ಹೈಸ್ಕೂಲು, ವೀರಾಜಪೇಟೆ ಗವರ್ನ್‌ಮೆಂಟ್ ಮತ್ತು ನಾಪೋಕ್ಲು ಹೈಸ್ಕೂಲುಗಳು ಯೋಗ್ಯರೀತಿ ಶ್ರಮವಹಿಸಿವೆಯೆಂಬುದು ಫಲಿತಾಂಶದಿಂದ ತಿಳಿಯಬರುತ್ತದೆ. ಇವು ಇನ್ನೂ ಶ್ರಮವಹಿಸಿ ಉತ್ತಮ ಫಲಿತಾಂಶವನ್ನು ಹೊರಡಿಸಿ ನಾಡಿನ ಸೇವೆ ಮಾಡುವವೆಂದು ನಂಬಲಾಗಿದೆ.

ಸೈಂಟ್ ಮೈಕೇಲ್ ಶಾಲೆಯ ಫಲಿತಾಂಶವು ಮೂರು ವರ್ಷಗಳಿಂದಲೂ ತೃಪ್ತಿಕರವಲ್ಲ. ಪ್ರಥಮ ವರ್ಷ ಈ ಶಾಲೆಯ ವಿಚಾರ ಬರೆದಾಗ "ಈ ಶಾಲೆಯ ತಪ್ಪನ್ನು ಈ ವರ್ಷ ಮನ್ನಿಸಬಹುದಾದರೂ ಮುಂದಿನ ವರ್ಷ ಅತ್ಯುತ್ತಮ ಫಲಿತಾಂಶವನ್ನು ಈ ಶಾಲೆಯು ಹೊರಡಿಸಿ ಎಲ್ಲರ ಹೊಗಳಿಗೆ ಪಾತ್ರವಾಗಬೇಕು" ಎಂದು ಆಶಿಸಿದ್ದೆವು. ಆದರೆ ಆ ಆಶೆ ಈಡೇರಲಿಲ್ಲ. ಈ ಶಾಲೆಯ ಪಾಠ ಪ್ರವಚನಗಳಲ್ಲಿ, ಇಲ್ಲವೇ ವಿದ್ಯಾರ್ಥಿಗಳ ಶಿಸ್ತಿನಲ್ಲಿ ಏನೋ ನ್ಯೂನತೆ ಇರಬೇಕು. ಇಲ್ಲದಿದ್ದರೆ ಮೂರು ವರ್ಷಗಳಿಂದಲೂ ಈ ಕನಿಷ್ಟ ಫಲಿತಾಂಶ ಬರಲು ಕಾರಣವಿಲ್ಲ. ಶಾಲೆಯ ಜವಾಬ್ದಾರಿ ಹೊತ್ತವರು ನ್ಯೂನತೆಯನ್ನು ಕಂಡುಕೊಂಡು ಪರಿಸ್ಥಿತಿಯನ್ನು ಸುಧಾರಿಸದಿದ್ದರೆ ತಮ್ಮ ಮಕ್ಕಳನ್ನು ಈ ಶಾಲೆಗೆ ಕಳುಹಿಸಲು ತಂದೆ ತಾಯಿಗಳು ಹಿಂಜರಿಯಬಹುದು. ಆದ್ದರಿಂದ ಸೂಕ್ತರೀತಿಯ ಕಾರ್ಯಕ್ರಮವನ್ನು ಕೈಕೊಳ್ಳುವದು ಶಾಲೆಯ ಅಸ್ತಿತ್ವದ ದೃಷ್ಟಿಯಿಂದ ಅತೀ ಅವಶ್ಯಕ.

ವೀರಾಜಪೇಟೆಯ ಸೈಂಟ್ ಏನ್ಸ್ ಹೈಸ್ಕೂಲು ಈ ವರ್ಷ ಪ್ರಥಮವಾಗಿ ಪರೀಕ್ಷೆಗೆ ಮಕ್ಕಳನ್ನು ಕಳುಹಿಸಿದೆ. ಶೇಕಡ ೪೬ ರಂತೆ ಮಕ್ಕಳು ತೇರ್ಗಡೆಯಾಗಿರುವದು ಮುಂದೆ ಈ ಶಾಲೆ ಉತ್ತಮ ಫಲಿತಾಂಶಗಳನ್ನು ಹೊರಡಿಸುವದೆಂಬುದಕ್ಕೆ ಸೂಚಕವಾಗಿದೆ.

ಹೇಗೂ ಈ ವರ್ಷ ಸೈಂಟ್ ಮೈಕೇಲ್ ಶಾಲೆಯೊಂದನ್ನು ಬಿಟ್ಟು ಉಳಿದ ಎಲ್ಲ ಶಾಲೆಗಳ ಫಲಿತಾಂಶವು ತೃಪ್ತಿಕರವಾಗಿದೆಯೆನ್ನಬಹುದಾದರೂ ಫಲಿತಾಂಶ ಇನ್ನೂ ಉತ್ತಮವಾಗುವದರ ಅವಶ್ಯಕತೆ ಇದೆ. ಶಾಲೆಯ ಪರೀಕ್ಷಾ ಫಲಿತಾಂಶ ಉತ್ತಮವಾಗಬೇಕೆಂದಾಗ ಆ ಜವಾಬ್ದಾರಿಯು ಕೇವಲ ಅಧ್ಯಾಪಕರದ್ದೆಂದು ಯಾರೂ ಭಾವಿಸಬಾರದು. ಅಧ್ಯಾಪಕರಷ್ಟೇ ಪೋಷಕರಿಗೂ ಜವಾಬ್ದಾರಿ ಇದೆ. ಅಧ್ಯಾಪಕರೂ, ಪೋಷಕರೂ ಪರಸ್ಪರ ಮಿಳಿತರಾಗಿ ಮಕ್ಕಳ ಪುರೋಭಿವೃದ್ಧಿಗಾಗಿ ತಮ್ಮ ತಮ್ಮ ಕ್ಷೇತ್ರವಾದ ಶಾಲೆ ಮತ್ತು ಮನೆಗಳಲ್ಲಿ ಯೋಗ್ಯರೀತಿ ಮೇಲ್ವಿಚಾರ ನಡೆಸಿ ಮಕ್ಕಳು ನಿಷ್ಠೆಯಿಂದ ವ್ಯಾಸಂಗ ಸಾಗಿಸುವಂತೆ ಮಾಡಬೇಕು. ಇಷ್ಟಾದರೆ ಸಾಲದು. ಸರಕಾರದ ಜವಾಬ್ದಾರಿಯೂ ಇಲ್ಲಿದೆ. ಶಾಲೆಗಳಿಗೆ ಅವಶ್ಯವಿರುವಷ್ಟು ಅಧ್ಯಾಪಕರನ್ನು ಸಕಾಲದಲ್ಲಿ ಕೊಡದಿದ್ದರೆ ಫಲಿತಾಂಶವು ಹಾಳಾಗುವದರಲ್ಲಿ ಸಂಶಯವಿಲ್ಲ. ೫೦, ೬೦ ವಿದ್ಯಾರ್ಥಿಗಳಿಗೆ ಒಬ್ಬ ಅಧ್ಯಾಪಕನು ಪಾಠ ಹೇಳುವಂತಾದರೆ ಫಲಿತಾಂಶ ಉತ್ತಮಗೊಳ್ಳುವದು ಸಾಧ್ಯವಿಲ್ಲ. ಆದ್ದರಿಂದ ಸರಕಾರವೂ ಕೂಡ ಖರ್ಚು ಉಳಿತಾಯದ ಅವ್ಯವಸ್ಥಿತ ಪ್ರಯತ್ನದಲ್ಲಿ ಶಾಲೆಗಳ ಅಭಿವೃದ್ಧಿಗೆ ಕೊಡಲಿ ಹಾಕದೆ ಈ ವಿಚಾರದಲ್ಲಿ ಸೂಕ್ತರೀತಿ ವರ್ತಿಸಬೇಕಾಗಿದೆ.

ವರ್ತಮಾನ.

ಈ ಕೆಲವು ದಿನಗಳ ಹಿಂದೆ ಅಖಿಲ ಭಾರತ ರೇಡಿಯೋ, ಮೈಸೂರು, ಇವರು ಕೊಡಗಿಗೆ ಬಂದು ಇಲ್ಲಿಯ ಜನತೆಯ ಸಂಸ್ಕೃತಿ, ರೀತಿ, ಕಥೆ, ಹಾಡು, ಮೊದಲಾದುವನ್ನು ಸಂಗ್ರಹಿಸಿಕೊಂಡು ಹೋದದನ್ನು ತಾ. ೧೪-೬-೫೧ನೇ ಗುರುವಾರ ಸಾಯಂಕಾಲ ೬.೩೦ ಗಂಟೆಗೆ ಬ್ರಾಡ್‌ಕಾಸ್ಟ್ ಮಾಡಿದರು.

ಬೀಹಾರ ಮತ್ತಿತರ ಬರಗಾಲ ಪೀಡಿತ ಪ್ರದೇಶಗಳ ಜನರ ಸಹಾಯಕ್ಕಾಗಿ ವಾರಕ್ಕೊಂದು ಹೊತ್ತು ಉಪವಾಸವಿದ್ದು ಆಹಾರ ಪದಾರ್ಥಗಳನ್ನುಳಿಸಬೇಕೆಂಬ ತಾ ೧-೫-೫೧ರ ಪಂ ಜವಾಹರರ ಸೂಚನೆಯಂತೆ ಕಾರ್ಯಕ್ರಮವನ್ನು ಕೈಗೊಳ್ಳಲು ಕೊಡಗಿನ ಚೀಫ್ ಕಮಿಶನರು ಶ್ರೀಗಳಾದ ಬಿ. ಎ. ಬೆಳ್ಯಪ್ಪ, ಸಿ ಡಿ ಬೋಪಯ್ಯ, ಕೆ ಜಿ. ಬೆಳ್ಯಪ್ಪ, ಪಿ ಐ ಬೆಳ್ಯಪ್ಪ, ಐ ಪಿ ಕಾರ್ಯಪ್ಪ, ಕೆ. ಟಿ. ಉತ್ತಪ್ಪ, ಪಿ. ಎ. ಚಂಗಪ್ಪ ಮತ್ತು ಮಡಿಕೇರಿ ಮುನ್ಸಿಪಾಲಿಟಿ ಪ್ರೆಸಿಡೆಂಟರಿಂದ ಕೂಡಿದ ಒಂದು ಕೇಂದ್ರ ಸಮಿತಿಯನ್ನು ನೇಮಿಸಿರುವರು.

ಮೈಸೂರು ವಿಶ್ವವಿದ್ಯಾಲಯದ ಎಸ್. ಎಸ್. ಎಲ್. ಸಿ ಪರೀಕ್ಷೆಯಲ್ಲಿ ಶ್ರೀಮತಿ ಮಡಿಕೇರಿಯಂಡ ಬಿ. ಮೀನಾಕ್ಷಿಯವರು ಇಡೀ ಮೈಸೂರಿನಲ್ಲಿ ಮೂರನೇ ರ‍್ಯಾಂಕ್ ಪಡೆದು ತೇರ್ಗಡೆಯಾಗಿರುವರು. ಶ್ರೀಮತಿ. ಕೋಡಿರ ಯು. ಕಾವೇರಮ್ಮನವರೂ ಶ್ರೀ ಎಂ. ಕೆ ಕಾರ್ಯಪ್ಪನವರೂ ಈ ಪರೀಕ್ಷೆಯಲ್ಲಿ ತೇರ್ಗಡೆಯಾಗಿದ್ದಾರೆ. ಮೈಸೂರು ವಿಶ್ವವಿದ್ಯಾಲಯದ ಬಿ. ಎ. (ಆನರ್ಸ್) ಪರೀಕ್ಷೆಯಲ್ಲಿ ಶ್ರೀ ಕೊಂಗಂಡ ಸಿ. ಗಣಪತಿಯವರು ಪಾಸಾಗಿದ್ದಾರೆ. ಇಂಟರ್ ಮೀಡಿಯೇಟ್ ಪರೀಕ್ಷೆಯಲ್ಲಿ ಎಂ ಸ್. ಎನ್. ಶಾಂತಿ ಬೋಪಯ್ಯನವರೂ, ಬಿ. ಎ ಪರೀಕ್ಷೆಯಲ್ಲಿ ಎ. ಸ್ ಸೀತಾ ಸುಬ್ಬಯ್ಯನವರೂ ತೇರ್ಗಡೆಯಾಗಿದ್ದಾರೆ.

ತಾ. ೩೧-೫-೫೧ರಲ್ಲಿ ಬೇಗೂರು ಗ್ರಾಮದಲ್ಲಿ ಅ. ವಿದ್ಯಾಧಿಕಾರಿಗಳಾದ ಶ್ರೀ ಎನ್. ಸಿ. ಸುಬ್ಬಯ್ಯನವರ ಅಧ್ಯಕ್ಷತೆಯಲ್ಲಿ ಒಂದು ಸಭೆ ನಡೆದು ಆ ಗ್ರಾಮಕ್ಕೆ ಒಂದು ಪ್ರಾಥಮಿಕ ಶಾಲೆಯನ್ನು ತೆರೆಯಲಾಯಿತು.

ಮದ್ರಾಸು ವಿಶ್ವವಿದ್ಯಾಲಯದ ಬಿ ಎ (ಆನರ್ಸ್) ಪರೀಕ್ಷೆಯಲ್ಲಿ ಶ್ರೀ ಐಚೆಟ್ಟಿರ ಗಂಗಮ್ಮನವರು ಒಂದನೇ ತರಗತಿಯಲ್ಲೂ, ಬಿ. ಈ ಫೈನಲ್ ಪರೀಕ್ಷೆಯಲ್ಲಿ ಶ್ರೀ ನೆಲ್ಲಮಕ್ಕಡ ಚಂಗಪ್ಪನವರೂ ಇಂಟರ್ ಮೀಡಿಯೇಟ್ ಪರೀಕ್ಷೆಯಲ್ಲಿ ಶ್ರೀಮತಿ ಕಂಜಿತಂಡ ಕೆ. ಪೂವಮ್ಮನವರೂ ಮತ್ತು ಶ್ರೀ ಕೆ ಗೋವಿಂದರಾಜು ಇವರೂ ತೇರ್ಗಡೆಯಾಗಿದ್ದಾರೆ.

ಜೂನ್ ತಾ. ೧೬ರ ಬೆಳಿಗ್ಗೆ ೯ ಗಂಟೆಯಿಂದ ನಂತರ ಪ್ರತಿ ಶನಿವಾರ ಆದಿತ್ಯವಾರಗಳಲ್ಲಿ ಸೆಂಟ್ರಲ್ ಹೈಸ್ಕೂಲಿನಲ್ಲಿ ಪ್ರಾಥಮಿಕ, ಮಾಧ್ಯಮಾ, ರಾಷ್ಟ್ರಭಾಷ, ಪ್ರವೇಶಿಕಾ ಮತ್ತು ವಿಶಾರದ ಹಿಂದೀ ತರಗತಿಗಳು ನಡೆಯುವವು. ದ. ಭಾ. ಹಿಂದೂಸ್ಥಾನಿ ಪ್ರಚಾರ ಸಭೆಯ ಪ್ರಮಾಣಿತ ಪ್ರಚಾರಕರು. ಹಿಂದೀ ಕಲಿಯ ಇಚ್ಛಿಸುವವರೆಲ್ಲರಿಗೂ ಉಚಿತ ಪಾಠ ಹೇಳುವರು.

ಕೊಡಗಿನ ಚೀಫ್ ಕಮಿಶನರು ಮಳೆಗಾಲ ಮುಗಿಯುವ ವರೆಗೆ ಫ್ರೇಜರ್‌ಪೇಟೆಯಲ್ಲಿ ವಾಸವಿರುವರೆಂದೂ ಪ್ರತಿ ಸೋಮವಾರ ಮತ್ತು ಶುಕ್ರವಾರ ಈ ಎರಡು ದಿನ ಮಡಿಕೇರಿಗೆ ಬರುವರೆಂದೂ ತಿಳಿಯಬರುತ್ತದೆ.

ಕೊಡಗಿನ ಡಿಸ್ಟ್ರಿಕ್ಟ್ ಜಡ್ಜರಾದ ಶ್ರೀ ಎನ್. ಮಂಜಪ್ಪನವರು ಅಸ್ವಸ್ಥರಾಗಿದ್ದು ಚಿಕಿತ್ಸೆಗಾಗಿ ಎರಡು ತಿಂಗಳು ರಜೆಯಲ್ಲಿ ಮದ್ರಾಸಿಗೆ ಹೋಗಿರುವರು.

ಪ್ರಾಥಮಿಕ ಶಿಕ್ಷಣ ಮಸೂದೆಯ ಸಿಲೆಕ್ಟ್ ಕಮಿಟಿಯ ಮೀಟಿಂಗ್ ಈ ದಿನ ಕೌನ್ಸಿಲು ಹಾಲ್‌ನಲ್ಲಿ ನಡೆಯಿತು.

ಎಡೆನಾಲ್ಕನಾಡು ಸಹಕಾರ ಕೂಟದ ಸಂಯೋಜಿತ ಸಂಘಗಳ ಕಾರ್ಯನಿರ್ವಾಹಕರ ಸಮ್ಮೇಳನವೊಂದು ತಾ. ೧೨-೬-೫೧ರಲ್ಲಿ ಸಹಕಾರ ಸಂಘಗಳ ರಿಜಿಸ್ಟ್ರಾರರವರ ಅಧ್ಯಕ್ಷತೆಯಲ್ಲಿ ನಡೆಯಿತು.

ತಾ. ೯-೬-೫೧ರಲ್ಲಿ ನಾಪೋಕ್ಲುನಾಡು ಪೇರೂರು ಗ್ರಾಮದ ಶ್ರೀ ಕೊಂಡಿಂಡ ಮ್ಮಪಕಟ್ಟಮ್ಮಯ್ಯನವರು ತಮ್ಮ ೭೮ನೆ ವಯಸ್ಸಿನಲ್ಲಿ ಮೃತರಾದರು.

ರೂ. ೧೦ ಬಹುಮಾನ.

ನನ್ನ ಬಾಪ್ತು ಈ ಕೆಳಗಿನ ಚಹರೆಯ ಎರಡು ಎಮ್ಮೆಗಳು ಕಳೆದ ೧೭ ದಿನಗಳಿಂದ ಕಾಣೆಯಾಗಿವೆ. ಪತ್ತೆ ಹಚ್ಚಿ ಕೊಟ್ಟವರಿಗೆ ಹತ್ತು ರೂಪಾಯಿಗಳ ಬಹುಮಾನ ಕೊಡಲಾಗುವದು.

(1) ಕರಿವರ್ಣದ ಸುಮಾರು ೪ ಅಡಿ ಎತ್ತರದ ಅಂದಾಜು ಒಂದು ಮೊಳ ಉದ್ದದ ಹಿಂಗೋಡಿನ ಕತ್ತಿಗೆಯಲ್ಲಿ ಬಿಳಿ ಕಂಠಮಾಲೆ ಇರುವ ಎಮ್ಮೆ.

(2) ಸ್ವಲ್ಪ ಬಿಳಿ ವರ್ಣದ ಅಂದಾಜು ೩½ ಅಡಿ ಎತ್ತರದ ಸುಮಾರು ಅರ್ಧಗೇಣು ಉದ್ದದ ಕೊಡು ಕೋಡಿನ ಬಿಳಿ ಕಂಠ ಮಾಲೆ ಇರುವ ಎಮ್ಮೆ.

ಜೆ ಮುಹಮ್ಮದ್ ಇಸಾಕ್,
ಬುಚ್ಚರ್,
1-1 ವೀರಾಜಪೇಟೆ.

St. ANN'S TEACHERS' TRAINING COLLEGE, MANGALORE.

Applications are invited from Kannada knowing lady students for the B. T. Degree course of the Madras University in this College. Hostel accomodation is available. College reopens on the 22nd of June. Apply early.

PRINCIPAL,
St. Ann's College,
Mangalore.

ಓದುಗರ ಓಲೆಗಳು

ಜಿಲ್ಲಾ ಮ್ಯಾಜಿಸ್ಟ್ರೇಟರ ನೇಮಕ

ಕೊಡಗು ಜಿಲ್ಲಾ ಮ್ಯಾಜಿಸ್ಟ್ರೇಟರಾದ ಶ್ರೀ. ಎನ್. ಸಿ. ಸುಬ್ಬಯ್ಯನವರು ಶೀಘ್ರ ನಿವೃತ್ತರಾಗುವರೆಂದೂ ಅವರ ಬದಲು ಹೊರಗಿನವರೊಬ್ಬರನ್ನು ನೇಮಿಸುವ ಏರ್ಪಾಡುಗಳಿವೆಯೆಂದೂ ವರ್ತಮಾನವಿದೆ. ಇದು ನಿಜವಾದರೆ ಈ ವರ್ತನೆಯನ್ನು ನಮ್ಮಂಥಾ ರೈತರ ಹಿತ ದೃಷ್ಟಿಯಿಂದ ಖಂಡಿಸಬೇಕಾಗಿದೆ. ಹೊರಗಿನವರನ್ನು ಆಮದು ಮಾಡುವ ಪದ್ಧತಿ ಎಂದೂ ಹಾನಿಕರವಾದುದು. ದೇಶದಲ್ಲಿ ಆ ಉದ್ಯೋಗವನ್ನು ನಡೆಸಲು ಶಕ್ತರೂ, ಯೋಗ್ಯರೂ ಇಲ್ಲದಿದ್ದರೆ ಹೊರಗಿನಿಂದ ತರುವುದರಲ್ಲಿ ಅರ್ಥವಿದೆ. ಅವರೆ ಯೋಗ್ಯರನ್ನು ಇಟ್ಟುಕೊಂಡು ಹೊರಗಿನಿಂದ ತರಿಸುವ ಏರ್ಪಾಡು ಅನ್ಯಾಯಕರವಾದುದು. ಮೇಲಾಗಿ ಹೊರಗಿನಿಂದ ಬರುವ ಎಂಥಾ ದಕ್ಷನಾದರೂ ಇಲ್ಲಿಯ ಜನರ ರೀತಿ ನೀತಿಗಳನ್ನು, ಈ ಪ್ರದೇಶದ ವೈಶಿಷ್ಟ್ಯಗಳನ್ನು ತಿಳಿದುಕೊಳ್ಳಲು ಬಹುದಿನಗಳು ಹಿಡಿಯುವವು. ಕೊಡಗಿನ ಚೀಫ್ ಕಮಿಷನರು ಕೊಡಗಿನ ಜನ ಜೀವನದ ಪೂರ್ಣ ಅರಿವಿಲ್ಲದ, ಇಲ್ಲಿಯ ಜನರ ಭಾಷೆಭಾವಗಳನ್ನರಿಯದ ಹೊರಗಿನವರಾದ ಕಾರಣ ಅವರಿಗೆ ಸಲಹೆಗಾರರಂತಿರುವ ಜಿಲ್ಲಾ ಮ್ಯಾಜಿಸ್ಟ್ರೇಟರು ಕೊಡಗಿನವರೇ ಆಗಬೇಕು. ಇಲ್ಲದಿದ್ದರೆ ಕೊಡಗಿನ ಸಾಮಾನ್ಯ ಜನತೆಗೆ ವಿಪರೀತ ತೊಂದರೆಯಾಗುವದು

ರೇಶನಿನ ಈ ಯುಗದಲ್ಲಿ ಕೊಡಗಿನ ರೇಶನಿಂಗ್ ಡೈರೆಕ್ಟರರಾಗಿರುವ ಜಿಲ್ಲಾ ಮ್ಯಾಜಿಸ್ಟ್ರೇಟರು ಹೊರಗಿನವರಾದರೆ ಏನು ಅಂತ ತೊಂದರೆ ಇದೆಯೆಂಬುದನ್ನು ಬೇರೆ ಹೇಳಬೇಕಾಗಿಲ್ಲ, ಆದರಲ್ಲೂ ಮೈಸೂರಿನವರಾದರೆ ಕೊಡಗಿನ ರೈತರ ಸ್ಥಿತಿ ಶೋಚನೀಯವಾಗುವುದು. ಮೈಸೂರಿನಲ್ಲಿ ಜಾರಿಯಲ್ಲಿರುವಂತೆ ರೈತನ ಮನೆಯಿಂದ ಬಲಾತ್ಕಾರವಾಗಿ ಆಹಾರ ಧಾನ್ಯಗಳನ್ನು ಸರಕಾರ ಕೊಂಡೊಯ್ಯುವಂತಾಗಬಹುದು. ಆದ್ದರಿಂದ ಕೊಡಗಿನ ಆಡಳಿತದ ಬೀಗದ ಕೈಯಂತಿರುವ ಈ ಹುದ್ದೆಗೆ ಸ್ಥಳೀಯರೊಬ್ಬರನ್ನು ನೇಮಿಸುವದು ಅತ್ಯಗತ್ಯ. ಇವರ ಕೈಯಲ್ಲೇ ಜನತೆಗೆ ಸಂಬಂಧಿಸಿದ ರೆವಿನ್ಯೂ ಇಲಾಖೆ, ರೇಶನ್ ಇಲಾಖೆ, ಮುಂಬರುವ ಚುನಾವಣಾ ಜವಾಬ್ದಾರಿಯೂ ಕೂಡ ಇರುವದರಿಂದ ಕೊಡಗಿನ ಸರಕಾರವು ಈ ಹುದ್ದೆಗೆ ಹೊರಗಿನವರನ್ನು ತರುವ ಅಪರಾಧ ಮಾಡಕೂಡದು.

ರೈತ.

ರಿಟ್ರೆಂಚ್‌ಮೆಂಟ್

ಚೀಫ್ ಕಮಿಷನರು ಆದಷ್ಟು ಕೊಡಗಿನ ಸರಕಾರದ ಆಡಳಿತ ಖರ್ಚನ್ನು ಕಡಿಮೆಮಾಡುವ ಮನೋವೃತ್ತಿಯುಳ್ಳವರೆಂದು ಹೇಳಬಹುದು. ಆ ಕಾರಣವಾಗಿಯೇ ಖಾಲಿಯಾದ ಸ್ಥಳಗಳಿಗೆ ಬೇಗ ಉದ್ಯೋಗಿಗಳನ್ನು ನೇಮಿಸದೆಯೂ ಕೆಲವು ಉದ್ಯೋಗಗಳನ್ನು ತೆರವಾಗಿ ಇಟ್ಟೂ ಅವರು ವರ್ತಿಸುತ್ತಿರಬಹುದು. ವಿದ್ಯಾ ಇಲಾಖೆಯಲ್ಲಿದ್ದ ಹಂಗಾಮಿ ಅಧ್ಯಾಪಕರಿಗೆ ರಜೆಯ ದಿನಗಳಲ್ಲಿ ವೇತನ ಕೊಡಲಾಗುವುದಿಲ್ಲವೆಂದು ನೋಟೀಸು ಕೊಟ್ಟದ್ದೂ ಇದೇ ಕಾರಣದಿಂದ ಎಂದೂ ಊಹಿಸಬಹುದು. ಈ ಊಹನೆ ನಿಜವಾದರೆ ಇದು ಶಿಸ್ತಿಲ್ಲದ ಒಂದು ವ್ಯವಸ್ಥೆ ಎಂದು ಹೇಳಬೇಕಾಗುವದು. ಕೊಡಗು ಸರಕಾರದ ಹಣ ಅನಾವಶ್ಯಕ ಕಾರಣಕ್ಕಾಗಿ ಹಲವೆಡೆ ಖರ್ಚಾಗುತ್ತಿದೆ. ದೇಶಕ್ಕೆ ಅಗತ್ಯವಿಲ್ಲದ ಹಲ ಕೆಲವು ಉದ್ಯೋಗಗಳೂ ಇವೆ. ಅವನ್ನು ತೆಗೆದು ಹಾಕಿ ಆಡಳಿತದಲ್ಲಿ ಮುಂದು ಖರ್ಚಾಗದಂತೆ ಮಾಡುವದು ಯೋಗ್ಯವೇ ವಿನಾ ರಜೆಯಲ್ಲಿರುವ ನೌಕರರ ವೇತನವನ್ನು ಅವರು ತಾತ್ಕಾಲಿಕ ಹುದ್ದೆಯಲ್ಲಿರುವರೆಂಬ ಕಾರಣದಿಂದ ಕೊಡದಿರುವದು ನೀತಿಯಲ್ಲ. ಆದ್ದರಿಂದ ಆಡಳಿತದಲ್ಲಿ ನಿಜವಾಗಿಯೂ ಖರ್ಚು ಉಳಿಕೆ ಮಾಡುವ ಒಲವು ಇದ್ದರೆ ಅವರೊಂದು ಯೋಗ್ಯರ ರಿಟ್ರೆಂಚ್‌ಮೆಂಟ್ ಸಮಿತಿಯೊಂದನ್ನು ಮಾಡಿ ಪರಿಶೀಲನೆಯ ನಂತರ ಅನಾವಶ್ಯಕವೆಂದು ತೋರಿದ ಹುದ್ದೆಗಳನ್ನು ತೆಗೆದು ಹಾಕಲಿ. ಆದರೆ ಅಂಥಾ ವ್ಯವಸ್ಥಿತ ನೀತಿಯು ಈಗ ಕಂಡು ಬರುತ್ತಿಲ್ಲ. ಒಂದೆಡೆ ಬಡ ಉದ್ಯೋಗಿಗಳಿಗೆ ತೊಂದರೆಯಾಗುತ್ತಿದ್ದರೆ ಮತ್ತೊಂದೆಡೆ ಹೊಸ ಅಧಿಕಾರಿಗಳ ನೇಮಕ ನಡೆಯುತ್ತಿದೆ. ಸರಕಾರವು ಇದನ್ನು ಗಮನಿಸಿ ವ್ಯವಸ್ಥಿತ ರೀತಿ ವರ್ತಿಸುವದೇ?

ನಿರೀಕ್ಷಕ

ಬಾಳೆಲೆ ಪೋಸ್ಟಾಫೀಸು!

ಬಾಳೆಲೆಗೊಂದು 'ಪೋಸ್ಟಾಫೀಸು ಬೇಕು, ಪೋಸ್ಟಾಫೀಸು ಬೇಕು' ಎಂದು ಎಷ್ಟು ಕೂಗಿಕೊಂಡರೂ, ಆ ಕೂಗು ಕೇವಲ ಅರಣ್ಯರೋಧನದಂತೆ ನಿಷ್ಪ್ರಯೋಜಕವೇ ಹೊರತು, ಈ ವರೆಗೂ ಅದರಿಂದ ಏನೂ ಪ್ರಯೋಜನವಾಗಲಿಲ್ಲ. ಇನ್ನು ಮುಂದಕ್ಕಾದರೂ ಆದೀತು ಎಂಬೊಂದು ಭರವಸೆಯನ್ನಿಟ್ಟುಕೊಂಡು ಈ ಲೇಖನವನ್ನು ಬರೆಯುವದಾಗಿದೆ

ಬಾಳೆಲೆಗೆ ಈ ಹರಿಗೆ ಬಂದ ದೊಡ್ಡ ಸರಕಾರಿ ಉದ್ಯೋಗಸ್ಥರೆಲ್ಲರೂ 'ಬಾಳೆಲೆ ಬತ್ತದ ಕಣಜ' 'ಕೊಡಗಿನ ಉಗ್ರಾಣ' ಎಂದು ಮುಂತಾಗಿ ಪ್ರಶಂಸೆಗಳನ್ನು ಮಾಡಿ ಹೋದರೇ ಹೊರತು, ಇಂತಹ ಒಂದು ಮುಖ್ಯವಾದ ಸ್ಥಳಕ್ಕೆ ಪೋಸ್ಟಾಫೀಸೊಂದು ಬಹಳ ಅಗತ್ಯವಿದೆಯೆಂದು ಯಾರೂ ಮನಗಾಣಲಿಲ್ಲ! ಮನಗಾಣುವುದಂತೂ ಇರಲಿ; ಇಲ್ಲಿಯ ಜನರು ಆ ವಿಷಯವನ್ನೆತ್ತಿ ಅನೇಕಬಾರಿ ಬೇಡಿಕೆಯನ್ನಿತ್ತರೂ, ಅದಕ್ಕೆ ಯಾವುದೊಂದೂ ಉತ್ತರವಿಲ್ಲ. ೧೯೪೪ರಲ್ಲಿ ಚೀಫ್ ಕಮಿಶನರಾಗಿದ್ದ ಶ್ರೀ ಸಿ. ಟಿ. ಮೊದಲಿಯಾರರು ಹೇಗೂ, ಜನರ ಕೂಗಿಗೆ 'ಓ' ಗೊಟ್ಟು ಬೇಗನೆ ಪೋಸ್ಟಾಫೀಸೊಂದನ್ನು ತೆರೆಯಲಾಗುವುದೆಂದು ವಚನವನ್ನಿತ್ತರು. ಎಲ್ಲರಿಗೂ ಸಂತೋಷವಾಯಿತು. ಆ–ದ–ರೆ

ಇನ್ನು ಮುಂದಕ್ಕಾದರೂ ಸಂಬಂಧಿಸಿದ ಅಧಿಕಾರಿಗಳು, ಈ ಸ್ಥಳದ ಪ್ರಾಮುಖ್ಯತೆಯನ್ನು ಗಣನೆಗೆ ತೆಗೆದುಕೊಂಡು, ಆದಷ್ಟು ಶೀಘ್ರಗತಿಯಿಂದ ಇಲ್ಲಿ ಪೋಸ್ಟಾಫೀಸೊಂದನ್ನು ತೆರೆದು ಇಲ್ಲಿಯ ಜನರ ಕಷ್ಟಗಳನ್ನು ನಿವಾರಿಸುವರೆಂದು ಹಾರೈಸಲಾಗಿದೆ. ಈಗ ಇಲ್ಲಿಗೆ ಬಸ್ಸು ಸರ್ವೀಸು ಇರುವದರಿಂದ ಈ ಕಾರ್ಯಕ್ಕೆ ಇನ್ನೂ ಅನುಕೂಲವೇ ಆಗಿದೆ. ನಮ್ಮ ಘನ ಸರಕಾರದವರು ಈ ಕೊರತೆಯನ್ನು ಒಮ್ಮೆ ಆಲಿಸಿ, ಅದಕ್ಕೆ ತಕ್ಕ ಪರಿಹಾರವನ್ನೀಯುವರೆ?

ಕೆ. ಸಿ. ಭೀಮಯ್ಯ.

ನಾಪೋಕ್ಲು ಪ್ರೌಢ ಶಾಲೆಯ ದುಸ್ಥಿತಿ.

ಈ ಶಾಲೆಯಲ್ಲಿ ಕಳೆದ ವರ್ಷಕ್ಕಿಂತ, ಈ ವರ್ಷ ವಿದ್ಯಾರ್ಥಿಗಳ ಸಂಖ್ಯೆ ಏರಿದೆ. ಕಳೆದ ವರ್ಷ ಸಾಧಾರಣ ೩೧ ಅಧ್ಯಾಪಕರಿದ್ದರು. ಈ ವರ್ಷ ಬರೇ ೨೫ ಅಧ್ಯಾಪಕರಿದ್ದಾರೆ. ಮಕ್ಕಳ ಸಂಖ್ಯೆ ಕಳೆದ ವರ್ಷಕ್ಕಿಂತಲೂ ಅಧಿಕವಾಗಿರುವಾಗ, ಈಗ ಉಪಾಧ್ಯಾಯರಿಗೆ ದಕ್ಷತೆಯಿಂದ ಕೆಲಸ ನಡೆಸುವದು ಅಸಾಧ್ಯವಾಗಿದೆ. ಹೆಚ್ಚಿನ ಉಪಾಧ್ಯಾಯರನ್ನು ಕೊಡಬೇಕೆಂದು ಸರಕಾರವನ್ನು ಕೋರಿಕೊಂಡಲ್ಲಿ 'ಸರಕಾರದಲ್ಲಿ ಹಣವಿಲ್ಲ, ಆದ್ದರಿಂದ ಎರಡು ಯಾ ಮೂರು ತಿಂಗಳ ವರೆಗೆ ಯಾವ ಹೊಸ ಉಪಾಧ್ಯಾಯರನ್ನೂ ನೇಮಿಸಲಾಗದು. ಹೇಗಾದರೂ ಸುಧಾರಿಸಿ; ಸಂಖ್ಯೆ ಏರುತ್ತಾ ಬಂದರೆ ಪ್ರವೇಶ ಕೊಡಬೇಡಿ' ಎಂಬ ಹಳೇ ಪುರಾಣವನ್ನೇ ಉಸುರುತ್ತಿರುವುದು ಸಂಬಂಧಿಸಿದ ಅಧಿಕಾರಿಗಳ ಕೆಲಸವಾಗಿದೆ. ಈ ಮಾತುಗಳಲ್ಲಿ ಎಳ್ಳಿನಷ್ಟು ಅರ್ಥವಿಲ್ಲ. ಯಾವ ಇಲಾಖೆಯನ್ನು ಬೇಕಾದರೂ ಅಲ್ಲಗಳೆಯಬಹುದು. ಅಲ್ಲಿ ಇವತ್ತು ಇಲ್ಲದಿದ್ದರೆ ನಾಳೆ ಕೆಲಸ ಮಾಡಬಹುದು. ಆದರೆ ಶಾಲೆಗಳಲ್ಲಿ ಹಾಗಲ್ಲ; ಸಮಯವು ಹಾಳಾದರೆ ವಿದ್ಯಾರ್ಥಿಗಳು ತುಂಬಾ ಕಷ್ಟಕೊಳಗಾಗುತ್ತಾರೆ. ಸರಿಯಾದ ವಿದ್ಯೆ ಅವರಿಗೆ ಸಿಕ್ಕುವುದಿಲ್ಲ. ತಡವಾಗಿ ಶಾಲೆಗೆ ಸೇರಿದರೆ ಹಿಂದಿನ ಪಾಠಗಳಲ್ಲಿ ಹಿಂದೆಯೇ ಬೀಳಬೇಕಾಗುವುದು. ಇದರಿಂದ ಪರೀಕ್ಷೆಯಲ್ಲಿ ತೇರ್ಗಡೆಯಾಗುವ ಸಂದರ್ಭ ಕಡಿಮೆಯಾಗಿ ಬಡ ತಂದೆ ತಾಯಿಗಳಿಗೂ ಅಪಾರ ನಷ್ಟವುಂಟಾಗವುದು. ೬೦,೭೦ ಮಕ್ಕಳಿರುವ ತರಗತಿಗೆ ಒಬ್ಬ ಅಧ್ಯಾಪಕನು ಪಾಠ ಹೇಳುವದು ಹೇಗೆ? ಬೋಧನ ಕ್ರಮವು ಹೇಗಾದೀತು? ಇವನ್ನರಿಯಲು ಅಧಿಕಾರಿಗಳಿಗೆ ಶಕ್ತಿ ಸಾಲದಾಯಿತೆ? 'ವಿದ್ಯಾರ್ಥಿಗಳಿಗೆ ಪ್ರವೇಶ ಕೊಡಬೇಡಿ' ಎಂದು ನುಡಿಯುವವರು ಮತ್ತೊಂದು ಶುದ್ಧ ಅಬದ್ಧದ ಮಾತು. ತನ್ನ ರಕ್ತದಿಂದ ಕಟ್ಟಿದ ಪ್ರೌಢ ಶಾಲೆಯಲ್ಲಿ, ತನ್ನ ಮಕ್ಕಳಿಗೆ ಪ್ರವೇಶವಿಲ್ಲವೆಂದರೆ ಇದು ಯಾವ ರೀತಿಯ ಸರಿಯಾದ ನ್ಯಾಯ? ಇದೆಂತಹ ಪ್ರಜಾಪ್ರಭುತ್ವ? ಇದಕ್ಕಾಗಿಯೇ ನಾಡಿನ ಜನರು ಶಕ್ತಿಮೀರಿ ಧನ ಸಹಾಯ ಮಾಡಿದ್ದು?

ಸಂಬಂಧಿಸಿದ ಅಧಿಕಾರಿಗಳು ಈಗ ಶಾಲೆಗೆ ಬಂದು ಕೆಲಸ ಮಾಡುವ ಕ್ರಮಗಳನ್ನು ಕಣ್ಣಾರೆ ಪರಾಂಬರಿಸಿ ನೋಡಿದರೆ ಅವರ ಮನಸ್ಸು ಕರಗದಿರದು. ಈ ರೀತಿ ನಮ್ಮ ದೇಶದ ಹೆಚ್ಚಿನ ಶಾಲೆಗಳು ದುಸ್ಥಿತಿಗೆ ಒಳಪಟ್ಟಿದೆ

೬೫,೭೦ ವಿದ್ಯಾರ್ಥಿಗಳಿಗೆ ಪಾಠ ಹೇಳವದಾದರೂ ಹೇಗೆ? ನಂತರ ಫೈನಲ್ ಪರೀಕ್ಷೆಯ ಫಲಿತಾಂಶದಲ್ಲಿ, ಬಹು ಸಂಖ್ಯಾತರು ತೇರ್ಗಡೆಯಾಗದಿದ್ದರೆ ನಮ್ಮಂತಹ ತಂದೆ ತಾಯಿಗಳ, ಮತ್ತು ಸರಕಾರದ ವಕ್ರ ದೃಷ್ಟಿ ಬಡ ಅಧ್ಯಾಪಕರ ಮೇಲೆ. ಆದ್ದರಿಂದ ಆದಷ್ಟು ಶೀಘ್ರದಲ್ಲಿ ಸರಕಾರದವರು ಸಾಕಷ್ಟು ಅಧ್ಯಾಪಕರನ್ನು ಒದಗಿಸುವರೆ!

ಕೆ. ಬಿ. ಬಾಬು.

ಪೋಲೀಸ್ ಅಧಿಕಾರಿಗಳಲ್ಲಿ ವಿನಂತಿ

ಕೊಡಗಿನಲ್ಲಿ ಪ್ರತಿ ವರ್ಷವೂ ಪೋಲೀಸಿನವರು ಕೋವಿಗಳನ್ನು ಚೆಕ್ ಮಾಡುವ ಪದ್ಧತಿ ಇದೆಯಷ್ಟೆ. ಅದೇ ಮೇರೆ ಈ ವರ್ಷವೂ ಏಪ್ರಿಲ್ ತಿಂಗಳಲ್ಲಿ ಒಂದು ದಿನ ಬೆಳಗೆ ೧೦ ಗಂಟೆಗೆ ನಾಪೋಕ್ಲು ಪೋಲೀಸು ಅಧಿಕಾರಿಗಳು ಬಲಮುರಿ ಗ್ರಾಮದ ಸಹಕಾರಿ ಸಂಘದ ಕಟ್ಟಡ ಬಳಿ ಬರುವರೆಂದೂ ಕೋವಿಯಿರುವ ಪ್ರತಿಯೊಬ್ಬರೂ ತಮ್ಮ ಕೋವಿಗಳನ್ನು ಗಂಟೆಗೆ ಸರಿಯಾಗಿ ತೆಗೆದುಕೊಂಡು ಬರಬೇಕಾಗಿಯೂ ಗ್ರಾಮದ ಪಟೇಲರು ಗ್ರಾಮಸ್ಥರಿಗೆ ತಿಳಿಸಿದ ಮೇರೆ ಕೋವಿಯಿರುವವರು ತಮ್ಮ ಕೋವಿಗಳನ್ನು ಗಂಟೆಗೆ ಸರಿಯಾಗಿ ತೆಗೆದುಕೊಂಡು ಬಂದು ಮಧ್ಯಾಹ್ನ ಒಂದು ಗಂಟೆ ವರೆಗೆ ಕಾಯುತ್ತಿದ್ದರೂ ಮೇಲ್ಕಂಡ ಅಫೀಸರುಗಳು ಬಾರದ ಕಾರಣ ಸುಮಾರು ಮುವತ್ತು ಜನರು ವಾಪಾಸು ಹೋಗಿದ್ದರು. ಆದರೆ ಅದೇ ದಿನ ಮಧ್ಯಾಹ್ನದ ವೇಳೆ ನಾಲ್ಕು ಗಂಟೆಗೆ ಆಫೀಸರುಗಳು ಬಂದು ಇದ್ದವರ ಕೋವಿಗಳನ್ನು ಚೆಕ್ ಮಾಡಿ ಹೋದರು. ಈಚೆಗೆ ಕಳೆದ ತಾ ೭-೬-೫೧ರಲ್ಲಿ ಒಬ್ಬ ಪೋಲೀಸಿನವರು ನಮ್ಮ ಗ್ರಾಮದ ಸುಮಾರು ೪೫ ಜನರಿಗೊಂದು ದೊಡ್ಡ ನೋಟೀಸಿನಲ್ಲಿ ಈ ತಿಂಗಳೊಳಗೆ ಒಂದು ವಾರದೊಳಗೆ ಚೆಕ್ ಮಾಡದ ಕೋವಿಗಳನ್ನು ಪೋಲೀಸು ಸ್ಟೇಶನಿಗೆ ತೆಗೆದುಕೊಂಡು ಹೋಗಿ ಹಾಜರು ಮಾಡಿ ಚೆಕ್ ಮಾಡಿದ ನಂತರ ಕೋವಿಗಳನ್ನು ತೆಗೆದುಕೊಂಡು ಹೋಗಬೇಕಾಗಿಯೂ, ಇದಕ್ಕೆ ತಪ್ಪಿದರೆ ಕಾನೂನು ಮೇರೆ ಕ್ರಮ ಜರುಗಿಸಲಾಗುತ್ತದೆಂದೂ ಆಫೀಸರು ದಸ್ತ್ರಾದೊಡನೆ ಒಂದು ಪಟ್ಟಿ ಮಾಡಿ ಅವರವರ ದಸ್ಕತ್ತು ತೆಗೆದುಕೊಳ್ಳುತಿದ್ದರು. ಈಗ ಪ್ರತಿಯೊಬ್ಬ ರೈತರೂ ಗದ್ದೆ ಕೆಲಸದಲ್ಲಿ ಮಗ್ನರಾಗಿರತಕ್ಕ ಅಲ್ಲದ ಮಳೆಯೂ ಜೋರಾಗಿದೆ. ಇಂಥಾ ಸಮಯದಲ್ಲಿ ನಮ್ಮ ಗ್ರಾಮದಿಂದ ಸುಮಾರು ಐದು ಮೈಲು ದೂರ ಇರುವ ಪೋಲೀಸು ಸ್ಟೇಶನಿಗೆ (ಎರಡು ಮೂರು ಕೋವಿಗಳು ಇರತಕ್ಕವರು ಇದ್ದಾರೆ) ತಮ್ಮ ಕೋವಿಗಳನ್ನು ತೆಗೆದುಕೊಂಡು ಹೋಗುವದು ತುಂಬಾ ಕಷ್ಟವಾಗುತ್ತೆ. ಆದ್ದರಿಂದ ಗರೀಬ ರೈತರ ಮೇಲೆ ತುಂಬಾ ದಯವಿಟ್ಟು ಇನ್ನೊಮ್ಮೆ ಪೋಲೀಸು ಅಧಿಕಾರಿಗಳು ಒಂದು ದಿನ ನಮ್ಮ ಗ್ರಾಮಕ್ಕೆ ನಿಶ್ಚಯಿಸಿದ ಸಮಯಕ್ಕೆ ಸರಿಯಾಗಿ ಬಂದು ನಮ್ಮ ಕೋವಿಗಳನ್ನು ಚೆಕ್ ಮಾಡಬೇಕಾಗಿ ನನ್ನ ವಿನಂತಿಯಾಗಿದೆ.

'ಬಲಮುರಿ ಗ್ರಾಮದ ರೈತ'

ಬರಲಿರುವ ಚುನಾವಣೆಗಳು.

ಬರಲಿರುವ ಮಹಾಚುನಾವಣೆಗಳಲ್ಲಿ ಬಹುಮಂದಿ ಅನಕ್ಷರಸ್ಥ ಓಟುದಾರರಿರುವುದರಿಂದ ಅವರಿಗೆ ಪರಿಚಿತವಾದ ಮತ್ತು ಸುಲಭವಾಗಿ ಗುರ್ತಿಸಲಾಗುವಂತಹ ಗುರುತನ್ನುಳ್ಳ ಬ್ಯಾಲಟ್ ಬಾಕ್ಸನ್ನು ಉಮೇದುವಾರರುಗಳಿಗೆ ಕೊಡಲಾಗುವುದು. ಓಟರುಗಳು ತಮ್ಮ ಉಮೇದುವಾರರ ಗುರುತು ಯಾವುದೆಂದು ತಿಳಿದುಕೊಂಡು ಆ ಗುರುತಿರುವ ಪೆಟ್ಟಿಗೆಯಲ್ಲಿ ಬ್ಯಾಲಟ್ ಕಾಗದ ಹಾಕಿದರೆ ಓಟಿಂಗ್ ಮುಗಿಯಿತು.

ಎಚ್ಚರಿಕೆ ದೃಷ್ಟಿಯಿಂದ ಅಂತಹ ಗುರುತನ್ನು ಪೆಟ್ಟಿಗೆಯ ಒಳಗೆ ಮತ್ತು ಹೊರಗೆ ಕೂಡ ಅಂಟಿಸಲಾಗುವುದು. ಇದರಿಂದ ಪೋಲಿಂಗ್ ನಂತರ ಹೊರಗಡೆಯ ಗುರುತು ಬಿದ್ದು ಹೋದರೂ ಒಳಗಿನ ಗುರುತಿನಿಂದ ಓಟುಗಳು ಯಾವ ಉಮೇದುವಾರರದೆಂದು ತಿಳಿಸಲು ಅನುಕೂಲ.

೧೯ ಗುರುತುಗಳು

ಚುನಾವಣಾ ಕಮಿಷನ್ನು ಈಗಾಗಲೇ ಹತ್ತೊಂಭತ್ತು ಗುರುತುಗಳ ಪಟ್ಟಿಯನ್ನು ತಯಾರಿಸಿದೆ. ಅವು ಯಾವುವೆಂದರೆ ಗುಡಿಸಲು, ಮರ, ಮನುಷ್ಯನ ಕೈ, ಹೂವು, ಉರಿಯುವ ದೀಪ, ಮೋಟಾರು ಕಾರು, ದೋಣಿ, ನೇಗಿಲು, ಹಕ್ಕಿ, ಧಾನ್ಯದ ತೆನೆ, ಚಂದ್ರ, ಕೊಡೆ, ತಕ್ಕಡಿ, ಹುಲ್ಲು, ಆನೆ, ಒಂಟೆ, ಕುದುರೆ, ಹೂಜಿ ಮತ್ತು ನಕ್ಷತ್ರ.

ಈ ಗುರುತುಗಳಲ್ಲಿ ಯಾವುದು ಹೆಚ್ಚಾಗಿ ಜನರ ಪರಿಚಯವಾಗಿದೆಯೋ ಅವನ್ನು ಮೊದಲೂ ಕಡಿಮೆ ಪರಿಚಯವಾದುದನ್ನು ಕೊನೆಯಲ್ಲೂ ಬರುವಂತೆ ಪಟ್ಟಿ ಸಿದ್ಧಗೊಳಿಸಲಾಗುತ್ತಿದೆ. ಮುಂಬರಲಿರುವ ಚುನಾವಣೆಗಳಲ್ಲಿ ಬಹುಮಂದಿ ನಾಗರೀಕತೆಯ ಸಾಮಾನು ಸರಂಜಾಮುಗಳ ಪರಿಚಯವೇ ಇಲ್ಲದಂತಹ ಹಿಂದುಳಿದ ಪಂಗಡಗಳ ಓಟುಗಳಿದ್ದಾರೆ. ಅವರಿಗೆ ಟ್ರೈನು, ಏರೋಪ್ಲೇನು ಮುಂತಾದ ಗುರುತುಗಳು ಅರ್ಥವಾಗುವುದಿಲ್ಲ. ಆದರೆ ಗುಡಿಸಲು ಮುಂತಾದ ಪುರಾತನ ವಸ್ತುಗಳನ್ನು ಮಾತ್ರ ಅಂತಹವರು ಗುರ್ತಿಸಬಲ್ಲರು.

ಕೇಂದ್ರ ಲೋಕ ಸಭೆಗೆ (ಹೌಸ್ ಆಫ್ ಪೀಪಲ್ಸ್) ಮತ್ತು ಸಂಸ್ಥಾನಗಳ ಶಾಸನ ಸಭೆಗಳಿಗೆ ಕೂಡಾ ಇವೇ ಗುರುತುಗಳನ್ನು ಉಪಯೋಗಿಸಲಾಗುವುದು. ಪ್ರತಿಯೊಬ್ಬ ಉಮೇದುವಾರನೂ ಒಂದೊಂದು ಗುರುತನ್ನು ಹೊಂದಿರುವನು. ಸಾಧ್ಯವಾದಷ್ಟು ಮಟ್ಟಿಗೆ ಈ ಗುರುತನ್ನು ಅವನ ಇಚ್ಛೆಗನುಸಾರವಾಗಿ ಕೊಡಲಾಗುವುದು.

ಗುರುತುಗಳ ಈಗಿನ ಪಟ್ಟಿಯು ಕಟ್ಟಕಡೆಯದಲ್ಲ. ರಾಜಕೀಯ ಪಾರ್ಟಿಗಳ ಸೂಚನೆಯಂತೆ ಅವಕ್ಕೆ ಇತರ ಗುರ್ತುಗಳೂ ಸೇರಿಸಲ್ಪಡಬಹುದು. ಆದರೆ ಅವು ಸಾಮಾನ್ಯವಾಗಿ ಎಲ್ಲರೂ ಅರಿಯುವಂತಿರಬೇಕು. ಆದರೆ ಒಂದು ಗುರುತು ಮತ್ತೊಂದು ಗುರುತಿನಿಂದ ಪ್ರತ್ಯೇಕವಾಗಿರಬೇಕು. ಒಂದಕ್ಕೊಂದು ಗಲಿಬಿಲಿಯಾಗುವ ಚಿಹ್ನೆಗಳು ಪ್ರಯೋಜನವಿಲ್ಲ. ಎರಡು ಬೇರೆ ಬೇರೆ ವಿಧದ ಪುಷ್ಪಗಳನ್ನು ಸೂಚಿಸುವಂತಿಲ್ಲ. ಅಂತೆಯೇ ಮತೀಯ ಸಂಬಂಧದ, ವಾದಾಸ್ಪದವಾದ ಮತ್ತು ಭಾವೋದ್ರೇಕಗಳನ್ನು ಮಾಡುವ ಹಸು, ಗುಡಿ, ಮಸೀದಿ ರಾಷ್ಟ್ರೀಯ ಧ್ವಜ ಅಥವ ರಾಷ್ಟ್ರೀಯ ಚಿಹ್ನೆ ಮುಂತಾದಂತಹ ಗುರುತುಗಳನ್ನು ಪಟ್ಟಿಯಲ್ಲಿ ಸೇರಿಸಲಾಗುವುದಿಲ್ಲ.

ಮುಖ್ಯ ರಾಜಕೀಯ ಪಕ್ಷಗಳಿಗೆಲ್ಲಾ ಗುರುತುಗಳನ್ನು ಕೊಟ್ಟ ನಂತರ, ಉಳಿದ ಗುರುತುಗಳನ್ನು ಅವುಗಳ ಪರಿಚಯಕ್ಕನುಸಾರವಾಗಿ ಸ್ವತಂತ್ರ ಉಮೇದುವಾರರಿಗೆ ನಿಗದಿ ಮಾಡಲಾಗುವುದು.

ಗುರುತುಗಳ ಪ್ರತಿಗಳ ಮುದ್ರಣ

ದೊಡ್ಡ ಪಕ್ಷಗಳಿಗೆ ಕೊಡಲ್ಪಟ್ಟ ಗುರುತುಗಳ ಪ್ರತಿಗಳನ್ನು ಅಚ್ಚು ಮಾಡುವ ವಿಷಯದಲ್ಲಿ ದೇಶದ ನಾಲ್ಕು ಸಾವಿರ ಸ್ಥಾನಗಳಿಗೂ ಆ ಪಕ್ಷ ಸ್ಪರ್ಧಿಸುವುದೇ ಎಂಬ ವಿಷಯದ ಮೇಲೆ ನಿಶ್ಚಯಿಸಲಾಗುವುದು. ಮತ್ತು ಸರಾಸರಿ ಒಂದು ಪೋಲಿಂಗ್ ಬೂತ್‌ಗೆ ೭೦೦ ಓಟರುಗಳಂತೆ ಲೆಕ್ಕಾಚಾರ ಹಾಕಿ, ಮೇಲೆ ತಿಳಿಸಿದಂತಹ ಸಂದರ್ಭಗಳಲ್ಲಿ ಎಂಟು ಲಕ್ಷ ಪ್ರತಿಗಳನ್ನು ಅಚ್ಚು ಮಾಡಿಸಲಾಗುವುದು. ಅವನ್ನು ಆಯಾಯ ಪ್ರದೇಶಗಳಲ್ಲಿ ಅಚ್ಚು ಮಾಡಿಸಲಾಗುವುದು.

ಸ್ವತಂತ್ರ ಉಮೇದುವಾರರ ಗುರುತುಗಳನ್ನೂ ಪೋಲಿಂಗ್ ತಾರೀಖಿಗೆ ಸಾಕಷ್ಟು ಮುಂಚಿತವಾಗಿಯೇ ಅಚ್ಚು ಮಾಡಿಸಲಾಗುವುದು. ಆದರೆ ಪಟ್ಟಿಯಲ್ಲಿನ ಅವುಗಳ ಸ್ಥಾನಕ್ಕನುಗುಣವಾಗಿ ಪ್ರತಿಗಳ ಸಂಖ್ಯೆ ಕಡಿಮೆ ಮಾಡಲಾಗುವುದು. ಈ ರೀತಿ ಪಟ್ಟಿಯಲ್ಲಿ ಕೊನೆಯ ಗುರುತಿನವನ್ನು ಅತಿ ಕಡಿಮೆ ಪ್ರತಿಗಳನ್ನು ಅಚ್ಚು ಮಾಡಲಾಗುವುದು. 'ತಾ. ನಾ.'

ಮಾಜಿ ಸಿಪಾಯಿಗಳ ಸಹಕಾರ ಸಂಘ

ಅಖಿಲ ಕೊಡಗು ಮಾಜಿ ಸಿಪಾಯಿಗಳ ವಿವಿಧ ಉದ್ದೇಶ ಸಹಕಾರ ಸಂಘದ ಮಹಾ ಸಭೆಯು ಮೀಟಿಂಗು ತಾರೀಖು ೩-೬-೧೯೫೧ ರಲ್ಲಿ ಗವರ್ನ್‌ಮೆಂಟ್ ಕಾಲೇಜಿನ ಹಾಲಿನಲ್ಲಿ ಮೇಜರ್ ಸಿ. ಬಿ. ಕಾರ್ಯಪ್ಪನವರ ಅಧ್ಯಕ್ಷತೆಯಲ್ಲಿ ಜರುಗಿತು. ಕೊಡಗು ಸಹಕಾರ ಸಂಘಗಳ ರಿಜಿಸ್ಟ್ರಾರ್ ಸಾಹೇಬರವರು ಹಾಜರಿದ್ದರು. ೧೩೦ ಮಂದಿ ಸದಸ್ಯರು ಸೇರಿದ್ದರು.

ಮಹಾಸಭೆಯ ಉದ್ದೇಶವನ್ನು ಕುರಿತು ಅಧ್ಯಕ್ಷರು ಪ್ರಥಮ ಭಾಷಣ ಮಾಡಿದನಂತರ ಕಾರ್ಯದರ್ಶಿಯವರು ಹಿಂದಿನ ಮಹಾಸಭೆಯ ವರದಿಯನ್ನು ಓದುತ್ತಾ ಈ ಸಂಘವು ಸ್ಥಾಪಿತವಾಗಬೇಕಾದರೆ ಭಾರತ ಸೇನಾಧಿಪತಿಗಳವರು ತಮ್ಮ ಪ್ರಥಮ ಸಂದರ್ಶನದಲ್ಲಿ ಮಾಜಿಸಿಪಾಯಿಗಳಿಗೆ ಕೊಟ್ಟ ಸಲಹೆಯಂತೆ ಹಲವು ಉತ್ಸಾಹಕರಿಂದ ರೂಪ ತಾಳಿ, ಪ್ರಥಮ ಕಾರ್ಯಕ್ರಮವಾಗಿ ಮೋಟಾರು ಸರ್ವಿಸನ್ನು ನಡೆಸುವ ಯತ್ನಮಾಡಿ ಆ ಬಗ್ಗೆ ಒಂದು ಬಸ್ಸು ಲೈನನ್ನು ಹೊಂದಿಸಿಕೊಂಡು ೧೯೫೧ ನೇ ಏಪ್ರಿಲ್ ೧೪ ರಿಂದ ಸರ್ವಿಸನ್ನು ನಡೆಸುತ್ತಿರುವುದಾಗಿಯೂ ಹಣದ ಅಭಾವದಿಂದ ಹೆಚ್ಚಿನ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿಲ್ಲವೆಂದೂ ಇನ್ನೂ ಹೆಚ್ಚಾಗಿ ಶೇರುದಾರರು ಸೇರಿ ಪ್ರೋತ್ಸಾಹಿಸಬೇಕೆಂದೂ ಹೇಳಿದರು.

ಇದಾದನಂತರ ಸಂಘದ ಬೈಲಾವನ್ನು ಓದಿ ಮಹಾಸಭೆಯ ಅಂಗೀಕಾರಕ್ಕೆ ಇಡಲಾಯಿತು. ಸ್ವಲ್ಪ ಚರ್ಚೆಯು ನಡೆದು ಸದ್ರಿ ಬೈಲಾವು ಮಹಾಸಭೆಯ ಒಪ್ಪಿಗೆಯನ್ನು ಪಡೆಯಿತು.

೧೯೫೧-೫೨ ನೇ ವರ್ಷದ ಸಾಲಿಗೆ ಈ ಕೆಳಗಿನ ೯ ಜನ ಡೈರೆಕ್ಟರನ್ನು ಚುನಾಯಿಸಲಾಯಿತು.

(೧) ಮೇಜರ್. ಸಿ. ಬಿ. ಕಾರ್ಯಪ್ಪ (ಪ್ರೆಸಿಡೆಂಟ್)

(೨) ಡಾಕ್ಟರ್ ಮಂಡೆಪಂಡ? ಮುಕ್ಕಾಟೀರ ಎಂ. ಚಂಗಪ್ಪ, (ವೈಸ್ ಪ್ರೆಸಿಡೆಂಟ್)

(೩) ಶ್ರೀ ಕೊಡಂದೇರ ಎಸ್. ಅಪ್ಪಚ್ಚು, (ಸೆಕ್ರೆಟರಿ)

(೪) ಶ್ರೀ ಎನ್. ಟಿ. ಪೊನ್ನಪ್ಪ, (ಮೇನೇಜಿಂಗ್ ಡೈರೆಕ್ಟರು)

(೫) ಮೇಜರ್. ಮಾಂಗೇರ ಎನ್. ಮಾದಪ್ಪ,

(೬) ಕ್ಯಾಪ್ಟನ್. ಕೆ. ಎ. ಪೊನ್ನಣ್ಣ,

(೭) ಶ್ರೀ ಸಿ ಬಿ ನಾಣಯ್ಯ,

(೮) ಕ್ಯಾಪ್ಟನ್. ಕೆ. ಎಂ. ಚಂಗಪ್ಪ

(೯) ಸರದಾರ್ ಬಹದ್ದೂರು ಪಟ್ಟಮಾಡ ಚಿಟ್ಟಿಯಪ್ಪ,

ರಿಜಿಸ್ಟ್ರಾರ್ ಸಾಹೇಬರವರು ಮಹಾಸಭೆಯನ್ನು ಕುರಿತು ಸಂಘದ ರೀತಿ ನೀತಿಗಳು ಮತ್ತು ಮಾಜಿ ಸಿಪಾಯಿಗಳ ಕರ್ತವ್ಯವನ್ನು ಕುರಿತು ಹಲವು ಬೋಧನೆಗಳನ್ನು ಕೊಟ್ಟರು.

ಮಡಿಕೇರಿಯಿಂದ ಮಾಕುಟ್ಟಕ್ಕಾಗಿ ಹಾಸನಕ್ಕೆ ಹೋಗುವ ಒಂದು ಮೋಟಾರು ಲೈನನ್ನು ಸರಕಾರದವರು ಮಂಜೂರು ಮಾಡಿ ಸದ್ರಿ ಲೈನನ್ನು ಮಾಜಿಸಿಪಾಯಿಗಳ ಸಂಘಕ್ಕೆ ಕೊಡುವಂತೆ ಸರಕಾರವನ್ನು ಕೇಳಿ ಕೊಳ್ಳಬೇಕೆಂದೂ ಮತ್ತು ಇಂಡಿಯಾ ಸರಕಾರದವರು ಸಂಘಕ್ಕೆ ೧ ಲಕ್ಷ ರೂಪಾಯಿ ಬಡ್ಡಿ ಇಲ್ಲದ ಸಾಲವನ್ನು ಕೊಡುವಂತೆ ಚೀಫ್ ಕಮಿಷನರು ಸಾಹೇಬರ ಒತ್ತಾಸೆಯನ್ನು ಕೋರಬೇಕೆಂದೂ ಠರಾವುಗಳು ಬಹುಮತದಿಂದ ಪಾಸಾಗಿವೆ. ಅಧ್ಯಕ್ಷರು ಅಂತ್ಯ ಭಾಷಣವನ್ನು ಮಾಡುತ್ತಾ ಸಂಘಕ್ಕೆ ೬೦೦೦/- ರೂಪಾಯಿಗಳ ಸಾಲವನ್ನು ಸಂತೋಷದಿಂದ ಕೊಟ್ಟ ಶ್ರೀ ಜಿ ಎ. ಮಂಜುನಾಥಯ್ಯ ಕಾಫಿ ಪ್ಲಾಂಟರ್ ಸುಂಟಿಕೊಪ್ಪ, ಅವರಿಗೆ ಕೃತಜ್ಞತೆಯನ್ನು ಮಹಾಸಭೆಯ ಪರವಾಗಿ ಅರ್ಪಿಸಿದರು. ಹಾಗೆಯೇ ಸಂಘದ ಹಿತಕಾಂಕ್ಷಿಗಳಾದ ಭಾರತದ ಪ್ರಧಾನ ಸೇನಾನಾಯಕರಿಗೂ ಚೀಫ್ ಕಮಿಷನರ್ ಸಾಹೇಬರವರಿಗೂ ಮತ್ತು ಅಸಿಸ್ಟೆಂಟ್ ಕಮಿಷನರ್, ಡಿಸ್ಟ್ರಿಕ್ಟ್ ಸುಪರಿಂಟೆಂಡೆಂಟ್ ಆಫ್ ಪೋಲೀಸ್, ರಿಜಿಸ್ಟ್ರಾರ್ ಸಾಹೇಬರವರಿಗೂ ಸಭೆಯ ಪರವಾಗಿ ಧನ್ಯವಾದಗಳನ್ನರ್ಪಿಸಿ ಸಭೆಯು ಮುಕ್ತಾಯವಾಯಿತು.

ನಿವೃತ್ತ ಕಮಿಟಿ ಮೆಂಬರುಗಳು ಸಲ್ಲಿಸಿದ ಸೇವೆಯನ್ನು ಚಿರ ದಾಖಲಾತಿ ಮಾಡುವಂತೆ ಮಹಾ ಸಭೆಯಲ್ಲಿ ತೀರ್ಮಾನವಾಯಿತು.

ಪ್ರ ಕ ಟ ಣೆ.

ರಂಗಸಮುದ್ರ ಗ್ರಾಮದ ಮಾಚಹಂಡ ಸೋಮಪ್ಪನು ಈ ಮೂಲಕ ಪ್ರಕಟಪಡಿಸುವುದೇನಂದರೆ:—

ಕಳೆದ ತಾ 6-4-51 ರ ಕೊಡಗು ಪತ್ರಿಕೆಯಲ್ಲಿ ಹೊಸಪಟ್ಟಣ ಗ್ರಾಮದ ಬೊಪ್ಪಂಡ ಸುಬ್ಬಯ್ಯನವರ ಹೆಸರಿನಲ್ಲಿ ಮಾರಾಟಕ್ಕೆ ಪ್ರಕಟಿಸಿದ ಆಸ್ತಿಯು ಕುಟುಂಬದ ಆಸ್ತಿಯಾಗಿದೆ. ಸದರಿ ಆಸ್ತಿಯನ್ನು ಮಾರಾಟ ಮಾಡಲು ಕುಟುಂಬಸ್ಥರು ಅಂದರೆ ಮೈನರ್ ಮಕ್ಕಳು ಇದ್ದು ತಕರಾರುಗಳಿರುವುದರಿಂದ ಕೊಂಡುಕೊಳ್ಳುವವರು ಇದರಿಂದ ಮುಂದೆ ಬರುವ ಎಲ್ಲಾ ಕಷ್ಟನಷ್ಟಗಳಿಗೂ ಜವಾಬ್ದಾರರಾಗತಕ್ಕದೆಂಬ ಸಂಗತಿ ಈ ಮೂಲಕ ತಿಳಿಸಿದೆ.

ಎಂ. ಸೋಮಪ್ಪ

ತಿ ಳಿ ಸಿ ರಿ.

ಭೂಮಿ, ತೋಟ, ಜಾಗ ಪೇಟೆಯಲ್ಲಿ ಮನೆ ಅಥವ ಮನೆ ಸೈಟು ಮಾರಲಿರುವವರೂ ಮತ್ತು ಕೊಂಡುಕೊಳ್ಳಲಿಚ್ಛಿಸುವವರೂ ಈ ಕೆಳಗಿನ ಪತ್ತೆಯಲ್ಲಿ ವಿಚಾರಿಸಿರಿ. ಅಲ್ಲದೆ ಬೇಕಾದವರಿಗೆ ಕರೆಯುವ ಎಮ್ಮೆ, ಹಸು ಮತ್ತು ಉಳುವ ಎತ್ತು ಮತ್ತು ಕೋಣಗಳನ್ನು ಒದಗಿಸಿ ಕೊಡಲಾಗುವುದು ಬೇಕಾದವರು ತಮಗೆ ಬೇಕಾದ ತಾರೀಕಿನ ಎಂಟು ದಿನಗಳಿಗೆ ಮುಂಚೆ ತಿಳಿಸಬೇಕಾಗಿದೆ. ವಿವರಗಳಿಗೆ ಈ ಪತ್ತೆಗೆ ಬರೆಯಬಹುದು

P. A. N. & SONS,
Commission Agent,
Gonicoppal
26-19 S. Coorg.

EAST & WEST INSURANCE CO., Ltd.

(ESTD: 1913)

H. O:- 'East & West Building', Apollo street Fort, Bombay No. 1.

STANDS FOR

SAFETY, SECURITY & SERVICE.

It is a progressive concern offering attractive schemes for Insurance suitable to all needs.

For Particulars apply to:-

K. P. JAMBULINGAM, *Branch Secretary, 329, Thambu Chetty St. Madras-1.*

OR 4-4

C. C. NANJAPPA, *Inspector of Agencies, Gonikopal. S. Coorg.*

ಇರಾಣದಲ್ಲಿ ಯುದ್ಧದ ಕಿಡಿಗೆ ಅವಕಾಶ.

ಕೊರಿಯಾ ಯುದ್ಧ ನಿಲ್ಲಿಸಲು ಸಂ. ರಾ. ಸಂಘದ ಸಿದ್ಧತೆ.

"ಜೈ ಹಿಂದ್" ಪತ್ರಿಕೆಯಿಂದ.

ಕಳೆದ ವಾರದಲ್ಲಿ ಕೊರಿಯಾ ರಣರಂಗಕ್ಕಿಂತಲೂ ಇರಾಣವು ಜಗತ್ತಿನ ಲಕ್ಷ್ಯವನ್ನು ಸೆಳೆದಿದೆ. ಇರಾಣದಲ್ಲಿಯ ಎಣ್ಣೆ ಉದ್ದಿಮೆಯು ರಾಷ್ಟ್ರೀಕರಣ ಮಾಡುವ ಮಸೂದೆಯು ಇರಾಣ ಪಾರ್ಲಿಮೆಂಟಿನಲ್ಲಿ ಪಾಸಾದಂದಿನಿಂದ ಇರಾಣಕ್ಕೆ ಜಗತ್ತಿನ ರಾಜಕಾರಣದಲ್ಲಿ ಮಹತ್ವದ ಸ್ಥಾನ ದೊರಕಿದೆ. ಇದಕ್ಕೆ ಕಾರಣವಿಲ್ಲದಿಲ್ಲ. ಇರಾಣದಲ್ಲಿಯ ಎಣ್ಣೆ ಕಣಿಗಳಿಂದ ಎಣ್ಣೆ ತೆಗೆಯುವ ಹಾಗೂ ಅದನ್ನು ಶುದ್ಧಗೊಳಿಸಿ ಮಾರಾಟಮಾಡುವ ಗುತ್ತಿಗೆಯನ್ನು ಆ್ಯಂಗ್ಲೋ-ಇರಾಣಿ ಕಂಪನಿಯು ಹಿಡಿದಿದ್ದು, ಅಬಾದಾನದಲ್ಲಿ ಅದು ಜಗತ್ತಿನಲ್ಲಿಯೇ ದೊಡ್ಡದಾದ ಎಣ್ಣೆ ಶುದ್ಧಗೊಳಿಸುವ ಕಾರಖಾನೆ ಸ್ಥಾಪಿಸಿದೆ. ೧೯೩೩ ರಲ್ಲಿ ಆ್ಯಂಗ್ಲೋ-ಇರಾಣಿ ಕಂಪನಿಯು ಇರಾಣ ಸರಕಾರದೊಡನೆ ಮಾಡಿಕೊಂಡ ಕರಾರಿನಂತೆ ಈ ಗುತ್ತಿಗೆಯು ೧೯೯೩ರ ವರೆಗೆ ಆ್ಯಂಗ್ಲೋ ಇರಾಣಿ ಕಂಪನಿಗೆ ಉಳಿಯತಕ್ಕದ್ದು. ಇದಕ್ಕೆ ಪ್ರತಿಫಲವೆಂದು ಈ ಕಂಪನಿಯವರು ಇರಾಣ ಸರಕಾರಕ್ಕೆ ಲಾಭದಲ್ಲಿ ನೂರಕ್ಕೆ ೨೦ ರಷ್ಟು ರಾಜ್ಯಾದಾಯವನ್ನು ಕೊಡಬೇಕು. ಅಲ್ಲದೆ ಪೆಟ್ರೋಲ ಮಾರಾಟದ ಮೇಲೆ ರೂಪಾಯಿಗೆ ೬ ಷೈಕ ಕೊಡಬೇಕು. ಮತ್ತು ಎಣ್ಣೆ ಕಣಿಗಳಿರುವ ದಕ್ಷಿಣ ಇರಾಣದಲ್ಲಿ ಜನರ ಆರೋಗ್ಯ, ಶಿಕ್ಷಣಗಳ ವ್ಯವಸ್ಥೆ ನೋಡಿಕೊಳ್ಳಬೇಕೆಂಬ ಕರಾರುಗಳಿಗೆ ಒಪ್ಪಿಕೊಂಡಿರುವರು. ಬ್ರಿಟಿಷರು ಕುಟಿಲ ರಾಜನೀತಿಯಿಂದ ಇರಾಣ ಸರಕಾರವನ್ನು ಇರುಕಿನಲ್ಲಿ ತಂದು ಈ ಸೌಲಭ್ಯಗಳನ್ನು ಪಡೆದಿದೆಯೆಂದೂ ಔದ್ಯೋಗಿಕ ರಾಷ್ಟ್ರೀಕರಣವು ಪ್ರತಿಯೊಂದು ದೇಶದ ಹಕ್ಕೆಂದೂ ಇರಾಣಿಗಳು ಅನ್ನುತ್ತಿದ್ದಾರೆ. ಅಲ್ಲಿ ರಾಷ್ಟ್ರೀಯ ಜಾಗ್ರತಿಯುಂಟಾಗಿರುವ ಎಲ್ಲಾ ರಾಜಕೀಯ ಪಕ್ಷಗಳು ಬ್ರಿಟಿಷರ ಈ ಕಂಪನಿಯು ಇರಾಣದ ನೈಸರ್ಗಿಕ ಸಂಪತ್ತಿನ ದುರ್ಲಾಭ ಪಡೆಯುವುದನ್ನು ತಪ್ಪಿಸಬೇಕೆಂದು ಎಣ್ಣೆಯ ಉದ್ದಿಮೆಯ ರಾಷ್ಟ್ರೀಕರಣದ ಧೋರಣಕ್ಕೆ ಬೆಂಬಲ ಕೊಟ್ಟರು. ಇದರಿಂದ ಇರಾಣ ಸರಕಾರವು ಆ್ಯಂಗ್ಲೋ ಇರಾಣಿ ಎಣ್ಣೆ ಕಂಪನಿಯ ಆಸ್ತಿಯನ್ನು ಕಾಬಾಜಿಯಿಂದ್ದು ವಶಪಡಿಸಿಕೊಳ್ಳುವ ಯೋಜನೆ ಸಿದ್ಧಪಡಿಸಿದೆ.

ಆ್ಯಂಗ್ಲೋ-ಇರಾಣಿ ಕಂಪನಿಯು ಗುತ್ತಿಗೆ ರದ್ದಾಗುವುದೆಂದರೆ ಬ್ರಿಟಿಷ್ ಸರಕಾರಕ್ಕೆ ದೊಡ್ಡ ಹಾನಿ ಎಂಬುವುದು ಸ್ಪಷ್ಟವಿದೆ. ಕೇವಲ ಈ ಕಂಪನಿಯಲ್ಲಿ ಬ್ರಿಟಿಷ್ ಸರಕಾರವು ತೊಡಗಿಸಿದ ೩೩೦ ದಶ ಲಕ್ಷ ಪೌಂಡುಗಳ ಬಂಡವಲದ ಹಾನಿಯಾಗುತ್ತಿದ್ದರೆ ಬ್ರಿಟಿಷ್ ಸರಕಾರವು ಅದನ್ನು ಸಂಧಾನದಿಂದ ಬಗೆಹರಿಸಿಕೊಳ್ಳಬಹುದಿತ್ತು. ಆದರೆ ಬ್ರಿಟನು ತನ್ನ ಪೆಟ್ರೋಲ್ ಪೂರೈಕೆಗೆ ಇರಾಣವನ್ನೇ ಅವಲಂಬಿಸಿದೆ. ಇರಾಣದಲ್ಲಿಯ ಎಣ್ಣೆಯು ಉಳಿದ ದೇಶಗಳಿಗೆ ಮಾರುವ ದರಕ್ಕಿಂತ ಅಗ್ಗದ ದರದಿಂದ ಬ್ರಿಟನ್ನಿಗೆ ಮಾರಲಾಗುತ್ತಿದೆ. ಅಲ್ಲದೆ ಆ್ಯಂಗ್ಲೋ-ಇರಾಣಿ ಎಣ್ಣೆ ಕಂಪನಿಯಿಂದ ೬೦ ದಶ ಲಕ್ಷ ಪೌಂಡು ಆದಾಯಕರವೆಂದು ಪ್ರತಿ ವರ್ಷ ದೊರೆಯುವದಲ್ಲದೆ ಲಾಭಾಂಶವೆಂದೂ ಸುಮಾರು ೬೦ ದಶ ಲಕ್ಷ ಪೌಂಡುಗಳು ಬ್ರಿಟಿಷ್ ಸರಕಾರಕ್ಕೆ ದೊರೆಯುತ್ತಿದೆ. ಮಧ್ಯ ಪ್ರಾಚ್ಯದಲ್ಲಿ ಸಮೃದ್ಧ ಎಣ್ಣೆ ಕಣಿಗಳಿರುವ ಇರಾಣದಿಂದ ಆ್ಯಂಗ್ಲೋ ಇರಾಣಿ ಕಂಪನಿಯು ಹೊರದೂಡಲ್ಪಟ್ಟರೆ ಬ್ರಿಟನಿಗೆ ಎಣ್ಣೆಯ ಕೊರತೆಯು ಆಗುವದು. ಅಲ್ಲದೆ ಅತರ ಯುದ್ಧ ಪ್ರಯತ್ನ ಹಾಗೂ ಮಧ್ಯಪೂರ್ವದಲ್ಲಿರುವ ಬ್ರಿಟನ ವರ್ಚಸು ಇವೆಲ್ಲಕ್ಕೂ ಹೊಡೆತ ಬೀಳುವದು. ಹೀಗಾಗಿ ಇರಾಣದ ಎಣ್ಣೆಗೆ ಬ್ರಿಟನರ ಪ್ರಾಣದಷ್ಟು ಮಹತ್ವವಿದೆ. ಆದುದರಿಂದ ಬ್ರಿಟಿಷರು ಇರಾಣದ ಎಣ್ಣೆ ಉದ್ದಿಮೆ ರಾಷ್ಟ್ರೀಕರಣವನ್ನು ವಿರೋಧಿಸುವದು ಸ್ವಾಭಾವಿಕ. ಬ್ರಿಟಿಷ್ ಸರಕಾರವು ಇರಾಣ ಸರಕಾರಕ್ಕೆ ಪತ್ರ ಬರೆದು '೧೯೯೩ರ ವರೆಗೆ ಆ್ಯಂಗ್ಲೋ-ಇರಾಣಿ ಕಂಪನಿಗೆ ಎಣ್ಣೆ ಉದ್ದಿಮೆ ಗುತ್ತಿಗೆ ಕೊಟ್ಟು ಕರಾರು ಮಾಡಿಕೊಂಡದ್ದನ್ನು ಇರಾಣ ಸರಕಾರವು ಏಕ ಪಕ್ಷೀಯವಾಗಿ ಮುರಿಯಲು ಬರಲಾರದೆಂದು ಹೇಳಿ ಅಂತರ್‌ರಾಷ್ಟ್ರೀಯ ಕಾರ್ಯಾಲಯವಾದ 'ದಿ ಹೇಗ್ ಕೋರ್ಟ'ಗೆ ಅರ್ಜಿ ಮಾಡಿಕೊಂಡಿತು. ಅಲ್ಲಿಯ ನ್ಯಾಯಮೂರ್ತಿಗಳು ಈ ಅರ್ಜಿಯ ವಿಚಾರ ಮಾಡಿ ಈ ನ್ಯಾಯವು ಎರಡು ದೇಶಗಳ ಸರಕಾರಗಳ ನಡುವಿನದೆ ಒಂದು ದೇಶದ ಸರಕಾರ ಮತ್ತು ಒಂದು ಕಂಪನಿಯ ನಡುವಿದೆ ಆದುದರಿಂದ ತನಗೆ ಕೈ ಹಾಕಲು ಬರುವುದಿಲ್ಲವೆಂದು ಬ್ರಿಟಿಷ್ ಸರಕಾರದ ಅರ್ಜಿಯನ್ನು ತಿರಸ್ಕರಿಸಿತು. ಆದರೂ ಇರಾಣ ಸರಕಾರದೊಡನೆ ಸಂಧಾನ ನಡೆಸಲು ಶಿಷ್ಟ ಮಂಡಲ ಕಳಿಸುವದಾಗಿ ಇರಾಣಕ್ಕೆ ತಿಳಿಸಿತು. ಇರಾಣದ ಮುಖ್ಯ ಮಂತ್ರಿ ಮುಸಾದೀಕರು ಬ್ರಿಟಿಷ್ ಸರಕಾರದ ಪರವಾಗಿ ಬರುವ ಯಾವುದೇ ಶಿಷ್ಟಮಂಡಲವನ್ನು ಸ್ವೀಕರಿಸಲು ಸಿದ್ಧರಿಲ್ಲವೆಂದು ಸ್ಪಷ್ಟವಾಗಿ ತಿಳಿಸಿದರಲ್ಲದೆ ಆ್ಯಂಗ್ಲೋ-ಇರಾಣಿ ಕಂಪನಿಯ ಪರವಾಗಿ ಬರುವ ಶಿಷ್ಟಮಂಡಲವನ್ನು ಸ್ವಾಗತಿಸುವುದಾಗಿ ಹೇಳಿರುವರು.

ಇಲ್ಲಿಯ ವರೆಗೆ ತಟಸ್ಥ ಧೋರಣೆವಹಿಸುವದಾಗಿ ಸಾರಿದ ಅಮೇರಿಕವು ಈಗ ಬ್ರಿಟಿಷರ ಪರವಾಗಿ ಇರಾಣ ಸರಕಾರದ ಮೇಲೆ ಒತ್ತಾಯ ತಂದು ಆಂಗ್ಲೋ-ಇರಾಣಿ ಕಂಪನಿಯ ಕೈಯಲ್ಲಿ ಎಣ್ಣೆ ಉದ್ದಿಮೆ ಉಳಿಯುವಂತೆ ಸಂಧಾನದಿಂದ ಈ ಸಮಸ್ಯೆ ಬಿಡಿಸಲು ಇರಾಣಕ್ಕೆ ಸೂಚಿಸಿದೆ. ಅಧ್ಯಕ್ಷ ಟ್ರೂಮನ್ನರು ಸ್ವತಃ ಇರಾಣ ಮುಖ್ಯ ಮಂತ್ರಿಗೆ ಪತ್ರ ಬರೆದಿರುವರು. ಆದರೂ ರಾಷ್ಟ್ರೀಕರಣ ಧೋರಣಕ್ಕೆ ಇರಾಣ ಸರಕಾರ ಅಂಟಿಕೊಂಡಿದೆ.

ಈಗ ಬ್ರಿಟನ ಸರಕಾರವು ಆ್ಯಂಗ್ಲೋ ಇರಾಣಿ ಎಣ್ಣೆ ಕಂಪನಿಯ ಪರವಾಗಿ ಶಿಷ್ಟಮಂಡಲ ಕಳಿಸಲಿಕ್ಕೂ ಇರಾಣದ ಎಣ್ಣೆ ಉದ್ದಿಮೆ ರಾಷ್ಟ್ರೀಕರಣದ ತತ್ವಕ್ಕೂ ಒಪ್ಪಿಕೊಂಡಿದೆ. ಆದರೆ ರಾಷ್ಟ್ರೀಕರಣದಿಂದ ಬ್ರಿಟನರ ಎಣ್ಣೆ ಪೂರೈಕೆ ಸರಾಗವಾಗಿ ಮೊದಲಿನಂತೆ ನಡೆಯಬೇಕೆಂಗೂ ಅದಕ್ಕಾಗಿ ಎಣ್ಣೆ ಶುದ್ಧೀಕರಣ ಮತ್ತು ಮಾರಾಟದ ಕೆಲಸ ಬ್ರಿಟಿಶ ಕಂಪನಿಯ ಕಡೆಗೇ ಉಳಿಯುವಂತೆ ನೋಡಿಕೊಳ್ಳಬೇಕೆಂದೂ ಧಡಪಡ ನಡೆದಿದೆ. ಈ ಸಂಧಾನದ ನೆವದಿಂದ ದೊರೆತ ವೇಳೆಯಲ್ಲಿ ಇರಾಣ ಪಾರ್ಲಿಮೆಂಟಿನಲ್ಲಿ ಒಡಕು ಹುಟ್ಟಿಸಿ ತನ್ನ ಬೇಡಿಕೆಗೆ ಸರಕಾರವು ಬಾಗಿ ಬರುವಂತೆ ಆಂತರಿಕ ಒತ್ತಾಯ ತರುವ ಕಾರಸ್ಥಾನವೂ ನಡೆದಿರುವದೆಂದು ಊಹಿಸಬಹುದಾಗಿದೆ. ಒಮ್ಮತದಿಂದ ಪಾಸಾದ ರಾಷ್ಟ್ರೀಕರಣ ಮಸೂದೆಯ ವಿರುದ್ಧ ಮೊನ್ನೆ ಇರಾಣ ಪಾರ್ಲಿಮೆಂಟಿನಲ್ಲಿ ರಾಷ್ಟ್ರೀಕರಣ ಧೋರಣ ಅವ್ಯವಹಾರ್ಯವೆಂದು ಓರ್ವ ಸದಸ್ಯನು ಪ್ರತಿಪಾದಿಸಿದನು. ಡಾ ಮುಸಾದಿಕರ ಮಂತ್ರಿ ಮಂಡಲದಲ್ಲಿಯೂ ಒಡಕು ಹುಟ್ಟಿದ ಸುದ್ದಿ ಬಂದಿದೆ. ಡಾ. ಮುಸಾದಿಕರು ರಾಜೀನಾಮೆ ಕೊಡುವ ಪ್ರಸಂಗ ಬಂದರೆ ಬ್ರಿಟಿಶರ ಪರವಾಗಿ ಇರುವ ಮಂತ್ರಿ ಮಂಡಲವು ಅಧಿಕಾರಕ್ಕೆ ಬರುವ ಮಾರ್ಗ ಸುಗಮವಾಗಬಹುದು. ಆದರೆ ಇರಾಣದ ಜನತೆಯು ಎಣ್ಣೆ ಉದ್ದಿಮೆಯ ರಾಷ್ಟ್ರೀಕರಣಕ್ಕೂ ಬ್ರಿಟಿಶರನ್ನು ಇರಾಣದ ಹೊರ ದೂಡುವದಕ್ಕೂ ಬೆಂಬಲ ಕೊಡುತ್ತಿರುವದರಿಂದ ಈ ಧೋರಣದ ವಿರುದ್ಧ ಇರಾಣ ಸರಕಾರ ವರ್ತಿಸಿದರೆ ಅಲ್ಲಿ ಆಂತರಿಕ ಅಶಾಂತ ಪರಿಸ್ಥಿತಿ ಹರಡಿ ರಶಿಯಾದ ಕೈವಾಡಕ್ಕೆ ಅವಕಾಶವುಂಟಾಗುವದು. ರಶಿಯಾದ ಗಡಿಗೆ ಹೊಂದಿರುವ ಇರಾಣದಲ್ಲಿ ಬ್ರಿಟಿಶರ ವರ್ಚಸ್ಸು ಇಲ್ಲದಂತಾಗುವದು ರಶಿಯಾಕ್ಕೆ ಬೇಕಾದ ವಿಷಯು. ಅಲ್ಲದೆ ಎಣ್ಣೆ ಕಣಿಗಳು ಬ್ರಿಟಿಶರ ಕೈಬಿಟ್ಟರೆ ಅಟ್ಲಾಂಟಿಕ ರಾಷ್ಟ್ರಗಳ ಬಲವು ಆ ಮಟ್ಟಿಗೆ ಕುಗ್ಗುವದೆಂದು ರಶಿಯಾದ ಎಣಿಕೆ. ಇರಾಣ ಸರಕಾರವು ರಶಿಯಾದ ಪ್ರಚೋದನೆ ಇಲ್ಲದೆ ರಾಷ್ಟ್ರೀಯ ಭಾವನೆಯಿಂದ ಈಗ ರಾಷ್ಟ್ರೀಕರಣದ ಬಗ್ಗೆ ಹಟ ಹಿಡಿದಿದೆಯೆಂದು ಗ್ರಹಿತಮಾಡಿಕೊಂಡರೂ ಅದು ವಿಫಲವಾಗುವಂಥ ಪರಿಸ್ಥಿತಿ ಬಂದರೆ ಇರಾಣವು ರಶಿಯಾ ಪಕ್ಷ ಒಲಿಯುವ ಸಂಭವ ಹೆಚ್ಚು. ಬ್ರಿಟಿಷರು ತಮ್ಮ ಹಿತ ಸಂಬಂಧ ಉಳಿಸಿಕೊಳ್ಳಲು ಇರಾಣದಲ್ಲಿ ಸೈನ್ಯವನ್ನಿಳಿಸಿದರೆ ರಶಿಯಾವು ೧೯೨೧ರ ಒಪ್ಪಂದದಂತೆ ತನ್ನ ಸೈನ್ಯವನ್ನೂ ಇರಾಣದಲ್ಲಿ ನುಗ್ಗಿಸಬಹುದು. ಹೀಗೆ ಇರಾಣದಲ್ಲಿ ಬಹಳ ಗಂಭೀರ ಪರಿಸ್ಥಿತಿ ತಲೆದೋರಿದೆ. ಅದರ ಪ್ರತಿಕ್ರಿಯೆ ಜಗತ್ತಿನ ಇತರ ರಾಜಕೀಯ ರಂಗದ ಮೇಲೂ ಆಗ ಹತ್ತಿದೆ.

ಕೊರಿಯಾ ಯುದ್ಧ.

ಇರಾಣದಲ್ಲಿ ಪರಿಸ್ಥಿತಿ ಪ್ರಕ್ಷುಬ್ಧವಾಗಿರುವದರಿಂದ ಅಲ್ಲಿ ರಶಿಯಾವನ್ನು ತಾವು ಎದುರಿಸುವದು ಅನಿವಾರ್ಯವೆಂಬ ಪಾಶ್ಚಾತ್ಯ ರಾಷ್ಟ್ರಗಳ ಅಭಿಪ್ರಾಯವಾಗಿರಲು ಸಾಕು. ಸಂಧಾನದಿಂದ ಇರಾಣದ ಸಮಸ್ಯೆ ಬಿಡದಿದ್ದರೆ ಇರಾಣದ ಎಣ್ಣೆ ಕಣಿಗಳನ್ನು ಉಳಿಸಿಕೊಳ್ಳುವದಕ್ಕಾಗಿ ಬ್ರಿಟಿಷ್ ಸರಕಾರವು ಇರಾಣದ ವಿರುದ್ಧ ದಂಡೋಪಾಯ ಕೈಕೊಳ್ಳಲು ನಿರ್ಧರಿಸಿದಂತೆ ತೋರುವದು. ಇರಾಣ ಅಖಾತದಲ್ಲಿ ಬ್ರಿಟಿಶ ನೌಕ ಪಡೆಯು ಬಂದಿದೆ. ಕೊಡೆ ವೈಮಾನಿಕರ ಪಡೆಗೆ ಸನ್ನದ್ಧರಾಗಿರಲು ಸೂಚನೆ ಕೊಟ್ಟ ಸುದ್ದಿ ಬಂದಿದೆ. ಬ್ರಿಟಿಶ ಸರಕಾರವು ಈ ದಂಡೋಪಾಯ ಕೈಕೊಂಡರೆ ಅದು ಇರಾಣದಲ್ಲಿ ರಶಿಯಾವನ್ನು ಎದುರಿಸಲೇ ಬೇಕಾಗುವದು. ಅದಕ್ಕಾಗಿ ಅಮೇರಿಕೆಯ ಬೆಂಬಲದ ಅಗತ್ಯವಿದೆ. ಅಮೇರಿಕೆಯೊಡನೆ ಗುಪ್ತ ಮಾತುಕತೆಗಳು ನಡೆದ ಫಲವಾಗಿ ಅನಿವಾರ್ಯ ಪ್ರಸಂಗ ಬಂದರೆ ಇರಾಣದಲ್ಲಿ ರಶಿಯಾದೊಡನೆ ಯುದ್ಧ ಪ್ರಾರಂಭಿಸಲು ಅಧ್ಯಕ್ಷ ಟ್ರೂಮನ್ನರು ಒಪ್ಪಿದಂತೆ ತೋರುವದು. ಅಂತೆಯೇ ಅವರು ಇರಾಣದ ಮುಖ್ಯ ಮಂತ್ರಿಗೆ ಎಚ್ಚರಿಕೆಯ ಪತ್ರವನ್ನು ಕೂಡ ಬರೆದಿರಲು ಸಾಕು.

ಅಮೇರಿಕೆ ಮತ್ತು ಪಶ್ಚಿಮ ರಾಷ್ಟ್ರಗಳಿಗೆ ರಶಿಯಾವನ್ನು ಬಗ್ಗು ಬಡೆಯಲು ಇರಾಣದಲ್ಲಿಯೇ ಯುದ್ಧ ಪ್ರಾರಂಭಿಸುವದು ಅನುಕೂಲವಾಗಿದೆ. ಇರಾಣ ಅಖಾತವು ಬ್ರಿಟಿಶರ ಕೈಯಲ್ಲಿರುವದರಿಂದ ಅದರ ಮಾರ್ಗದಲ್ಲಿಯ ರಾಷ್ಟ್ರಗಳಲ್ಲಿ ರಶಿಯಾದ ವರ್ಚಸ್ಸು ಇಲ್ಲದಿರುವದು ಯುದ್ಧರಂಗ ಸ್ಥಾಪಿಸಲು ಹೆಚ್ಚಿನ ಅನುಕೂಲತೆಯ ಅಂಶ. ಮೇಲಾಗಿ ಇರಾಣದಿಂದ ರಶಿಯಾಕ್ಕೆ ನುಗ್ಗಿ ಅಲ್ಲಿಯ ಎಣ್ಣೆ ಕಣಿಗಳ ಮೇಲೆ ದಾಳಿಮಾಡಲೂ ಬರುವಂತಿದೆ. ಹೀಗೆ ಯುದ್ಧವು ಅನಿವಾರ್ಯವಾದರೆ ಕೊರಿಯಾದಲ್ಲಿ ಅಮೇರಿಕೆಯ ಸೈನ್ಯ ಸಿಕ್ಕಿಕೊಂಡಿರುವದು ಯೋಗ್ಯವಾಗಲಾರದು. ಅಂತೆಯೇ ಕೊರಿಯಾ ಯುದ್ಧವನ್ನು ಹೇಗಾದರೂ ಮಾಡಿ ಮುಗಿಸಿ ಬಿಡಲು ಈಗ ಬ್ರಿಟಿಶ ಸರಕಾರವು ಅಮೇರಿಕೆಗೆ ಒತ್ತಾಯ ಪಡಿಸಹತ್ತಿದೆ ೩೮ನೇ ಅಕ್ಷಾಂಶದ ಆಚೆಗೆ ಉತ್ತರ ಕೊರಿಯನ್ ಕಮ್ಯೂನಿಸ್ಟರನ್ನು ದೂಡಿರುವದರಿಂದ ಸಂ. ರಾ. ಸಂಘದ ಸಂಧಾನ ಸಮಿತಿಯೂ ಆ ರೀತಿ ಅಭಿಪ್ರಾಯ ಪಟ್ಟಿದೆ. ಇದೇ ಅಭಿಪ್ರಾಯವನ್ನು ಭಾರತದ ಪ್ರತಿನಿಧಿ ಶ್ರೀ. ಬೆನಗಲ್ ನರಸಿಂಗರಾಯರು ಚೀನದ ಮೇಲೆ ಆರ್ಥಿಕ ದಿಗ್ಬಂಧನ ಹೇರುವ ಗೊತ್ತುವಳಿ ಚರ್ಚೆಗೆ ಬಂದಾಗ ಮಾಡಿದ್ದರು. ಆಗ ಸೂಚನೆಯನ್ನು ಹೀಯಾಳಿಸಿದ ಆ್ಯಂಗ್ಲೋ-ಅಮೇರಿಕನ್ ಪ್ರತಿನಿಧಿಗಳು ಈಗ ಅವರ ಸೂಚನೆಯನ್ನೇ ತಾವು ಮಾಡುತ್ತಿರುವದರಿಂದ ಅಮೇರಿಕೆಗೆ ಕೊರಿಯದಿಂದ ಗೌರವದಿಂದ ಮರಳಿ ಬರುವ ಆತುರತೆ ಹೆಚ್ಚಿದೆಯೆಂದು ಹೇಳಬೇಕಾಗಿದೆ.

ಚೀನೀ ಕಮ್ಯೂನಿಸ್ಟರು ಕೈಕೊಂಡ ವಸಂತ ಧಾಳಿ ನಿಷ್ಫಲವಾಗಿರುವುದರಿಂದ

ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಕೋ.ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ. (೧೯೩೧ರಲ್ಲಿ ಸ್ಥಾಪಿತವಾಗಿದೆ.

ಅಧಿಕೃತ ಶೇರು ಭಂಡವಾಳ	ರೂ.	10,00,000.
ವಸೂಲಾದ ಶೇರು ಮೊಬಲಗು	ರೂ.	1,99,400.
ಕ್ಷೇಮನಿಧಿ	ರೂ.	59,000.
ಇತರ ನಿಧಿಗಳು	ರೂ.	36,000.

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನೂ ಕೈಕೊಳ್ಳಲಾಗುವುದು

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುತ್ತಿರುವದಲ್ಲದೆ ಚಿನ್ನ, ಬೆಳ್ಳಿ ನಗಗಳ ಈಡಿನ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ಕು ಡ್ರಾಫ್ಟುಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರಿನಿಟಿ ಮತ್ತು ವಾರ್ಡನ್ ಇನ್ಶೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಗೌ. ಕಾರ್ಯದರ್ಶಿ,
ಕೆ. ಪಿ. ಅಪ್ಪಯ್ಯ, M. L. C. ಪ್ರೆಸಿಡೆಂಟ್ ಮತ್ತು ಖಜಾಂಚಿ.

ದಿ ಟ್ರಾಪಿಕಲ್
ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

ಮೇನೇಜಿಂಗ್ ಡೈರೆಕ್ಟರ್:–ಲಾಲ ಶಂಕರ್ ಲಾಲ್.
ಮುಖ್ಯ ಕಚೇರಿ:– ಹೊಸ ಡೆಲ್ಲಿ.

52–ಅ ಸ್ಥಾಪಿಸಿದ ಡೈರೆಕ್ಟರರು:

ಪಂಡಿತ ಮೋತಿಲಾಲ್ ನೆಹರು. ಎಸ್. ಶ್ರೀನಿವಾಸ ಅಯ್ಯಂಗಾರ್
ಹಕೀಮ್ ಅಜಮಲಖಾನ್. ಡಾ|| ಎಂ ಎ ಅನ್ಸಾರಿ.

Transacts:–Life, Fire, Motor, and Marine.

ಯಂ. ಯು. ಅಚ್ಚಣ್ಣ, ಇನ್ಸಪೆಕ್ಟರು, ಮಡಿಕೇರಿ, ಕೊಡಗು.
ಎಂ. ಎ. ಬೆಳ್ಯಪ್ಪ, ಬ್ರಾಂಚ್ ಸೆಕ್ರಟರಿ, ಹಂಪನಕಟ್ಟಾ, ಮಂಗಳೂರು.

ಕೊಡಗು ಪ್ರಾಂತೀಕ ಸಹಕಾರಿ, ಮಾರ್ಕೆಟಿಂಗ್, ಫೆಡರೇಷನ್ ಲಿಮಿಟೆಡ್., ವೀರಾಜಪೇಟೆ.

ನಮ್ಮಲ್ಲಿ ಕೋವಿಗಳು, ತೋಟಗಳು ಮತ್ತು ಎಲ್ಲಾ ತರಹದ ವ್ಯವಸಾಯದ ಹತ್ಯಾರುಗಳು ದೊರೆಯುತ್ತವೆ.

1. 32 ಪಿಸ್ತೂಲುಗಳು (Pistols) ಕ್ರಯ ರೂ. 162 ರಿಂದ 245ರ ವರೆಗೆ.
2. 12ನೇ ನಂಬರಿನ ಒಂಟಿ ಹೊಳವಿನ ಕೋವಿ ಕ್ರಯ ರೂ. 320–0–0
3. 12ನೇ ನಂಬರಿನ ಜೋಡು ಹೊಳವಿನ ಕೋವಿ (Webley & Scott)
4. 12ನೇ ನಂಬರಿನ ಜೋಡು ಹೊಳವಿನ ಕೋವಿ (Spanish make)
5. .32 ಪಿಸ್ತೂಲು ಮತ್ತು ರಿವಾಲ್ವರುಗಳ ತೋಟಗಳೂ ಸಹ ದೊರೆಯುತ್ತವೆ.
6. ಕಾಫಿ ಮತ್ತು ಕಿತ್ತಳೆ ಗಿಡಗಳಿಗೆ ಸ್ಪ್ರೇ ಮಾಡುವ ಪಂಪುಗಳು (Spraying Pumps)
7. ¾" ⅝" ½" ⅜" ¼" ದಪ್ಪದ ಸಲಾಕೆಗಳು.

ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

(ಅವಶ್ಯವಿರುವ ಕೋವಿಗಳಿಗೂ, ತೋಟಗಳಿಗೂ ಜಿಲ್ಲಾ ಮೇಜಿಸ್ಟ್ರೇಟರಿಂದ ವಿಶೇಷ ಪರ್ಮಿಟು "Special permit" ಪಡೆದವರಿಗೆ ಮಾತ್ರ ದೊರಕುವದು)

ಎಂ. ಎಸ್. ಸೋಮಯ್ಯ, ಗೌರವ ಕಾರ್ಯದರ್ಶಿ.

52–೩೦

Edited, Printed and Published by P. I. Belliappa at 'Kodagu' Press, Mercara, for 'Kodagu' Ltd.

ಅವರು ಕೊರಿಯಾದಲ್ಲಿ ತಮಗಾದ ಸೋಲಿನ ಅಪಕೀರ್ತಿ ತಪ್ಪಿಸಿಕೊಳ್ಳಲು ಈಗ ಯುದ್ಧ ವಿರಾಮಕ್ಕೆ ಒಪ್ಪುವ ಸಂಭವವಿದೆ ಎಂದು ಎಣಿಕೆ ಹಾಕಿ ಸಂ. ರಾ. ಸಂಘದ ಪರವಾಗಿ ಯುದ್ಧ ವಿರಾಮದ ಸೂಚನೆಯನ್ನು ಮುಂದೆ ಮಾಡಿ ಅದರ ಪ್ರಚಾರ ಜೋರಿನಿಂದ ನಡೆದಿದೆ. ರಷ್ಯಾದ ಬಣದಲ್ಲಿರುವ ಪೋಲೇಂಡಿನ ಪ್ರತಿನಿಧಿಯು ವ್ಯಕ್ತಪಡಿಸಿದ ಅಭಿಪ್ರಾಯ ನೋಡಿದರೆ ಅವೇ ಷರಾಯಿಗಳನ್ನು ಚೀನವು ಮುಂದೆ ಮಾಡುವದೆಂಬುದರಲ್ಲಿ ಸಂಶಯವಿಲ್ಲ. ಕೊರಿಯ ಯುದ್ಧ ನಿಲ್ಲಿಸುವ ಮೊದಲು ಫಾರ್ಮೋಸಾವನ್ನು ಚೀನಕ್ಕೆ ಮರಳಿ ಕೊಡುವದಕ್ಕೂ ಸಂ. ರಾ. ಸಂಘದಲ್ಲಿ ಕೆಂಪುಚೀನಕ್ಕೆ ಪ್ರಾತಿನಿಧ್ಯ ಕೊಡುವದಕ್ಕೂ ಅಮೇರಿಕಾ ಒಪ್ಪಬೇಕು. ಯುದ್ಧ ವಿರಾಮದ ನಂತರ ವಿದೇಶ ಸೇನೆಯೆಲ್ಲ ಕೊರಿಯಾದಿಂದ ಹೊರಟು ಹೋಗಬೇಕು. ಉತ್ತರ ಮತ್ತು ದಕ್ಷಿಣ ಕೊರಿಯಾಗಳ ಪಾರ್ಲಿಮೆಂಟಿನ ಸದಸ್ಯರ ಸಂಯುಕ್ತ ಮಂಡಲಕ್ಕೆ ಇಡೀ ಕೊರಿಯಾದಲ್ಲಿ ಸಂಯುಕ್ತ ಕೊರಿಯ ಸರಕಾರ ಸ್ಥಾಪಿಸಲು ಚುನಾವಣೆ ನಡೆಸಲು ಹಾಗೂ ಕೊರಿಯಾದ ಭವಿತವ್ಯವನ್ನು ನಿರ್ಧರಿಸಲು ಸಂಪೂರ್ಣ ಸ್ವತಂತ್ರವಿರಬೇಕು ಎಂಬ ಷರಾಯಿಗಳನ್ನು ಚೀನವು ಮುಂದೆ ಮಾಡುವ ಸಂಭವವಿದೆ. ಇದಕ್ಕೆ ಒಪ್ಪುವದೆಂದರೆ ಆಕ್ರಮಣಗಾರರನ್ನು ಸಂತೈಸಿದಂತಾಗುವದೆಂದು ಅಮೇರಿಕೆಯು ಒಪ್ಪಲಾರದು. ಹೀಗಾಗಿ ಕೊರಿಯಾ ಯುದ್ಧ ವಿರಾಮದ ಪ್ರಯತ್ನಕ್ಕೆ ಯಶ ಸಿಗಲಾರದೆಂಬುವುದು ಸ್ಪಷ್ಟವಿದೆ.

ಟಿಬೇಟಿನೊಡನೆ ಒಪ್ಪಂದ

ಕೆಂಪು ಚೀನವು ಕೊರಿಯಾದ ಯುದ್ಧದಲ್ಲಿ ಕೈಕೊಂಡ ಧಾಳಿಯು ವಿಫಲವಾದುದರಿಂದ ಅದರ ಪ್ರತಿಷ್ಠೆಗೆ ಧಕ್ಕೆ ಬಂದುದು ನಿಜ. ಆದರೆ ಟಿಬೇಟಿನೊಡನೆ ಪೇಕಿಂಗ್ ಸರಕಾರವು ಮಾಡಿಕೊಂಡ ಒಪ್ಪಂದದಿಂದ ಅದರ ಪ್ರತಿಷ್ಠೆ ದ್ವಿಗುಣಿತವಾಯಿತು. ಟಿಬೇಟು ಚೀನದ ಸಾರ್ವಭೌಮಾಧಿಕಾರ ಬೇಕೆಂದು ಕಳೆದ ನೂರು ವರ್ಷಗಳಿಂದ ಚೀನಿಯರು ಪ್ರಯತ್ನಿಸುತ್ತ ಬಂದಿದ್ದರೂ ಅವರಿಗೆ ಟಿಬೇಟಿನ ಮೇಲೆ ಸಾರ್ವಭೌಮಾಧಿಕಾರ ಪ್ರಸ್ಥಾಪಿಸುವದು ಶಕ್ಯವಾಗಿರಲಿಲ್ಲ. ಅತಿಕೆ ವರಿಷ್ಠಾಧಿಕಾರವಿದೆ ಎಂದು ಟಿಬೇಟು ಒಪ್ಪಿಕೊಂಡಿತ್ತು. ಆದರೂ ಅದು ಸ್ವತಂತ್ರ ಸಾರ್ವಭೌಮಾಧಿಕಾರವುಳ್ಳ ರಾಷ್ಟ್ರದಂತೆಯೇ ವ್ಯವಹರಿಸುತ್ತಿತ್ತು. ಚೀನದಲ್ಲಿ ಕಮ್ಯುನಿಸ್ಟ ಸರಕಾರ ಸ್ಥಾಪನೆಯಾದನಂತರ ಅವರಿಗೆ ಟಿಬೇಟು, ಚೀನದ ಅಂಗವೆಂದು ಒಪ್ಪಿಕೊಳ್ಳಲು ಹಚ್ಚದಿದ್ದರೆ ಟಿಬೇಟಿನಲ್ಲಿ ಚೀನದ ವೈರಿಗಳು ವಿಮಾನ ನಿಲ್ದಾಣಗಳನ್ನು ಕಟ್ಟಲು ಅವಕಾಶ ಪಡೆದು ಚೀನದ ಸ್ವಾತಂತ್ರ್ಯಕ್ಕೆ ಗಂಡಾಂತರ ಒದಗುವ ಪರಿಸ್ಥಿತಿ ಬರುವದೆಂದು ಅನಿಸಿತು. ಅಂತೆಯೇ ಟಿಬೇಟಿನ ಮೇಲೆ ಕಮ್ಯೂನಿಸ್ಟ ಸೈನ್ಯ ಧಾಳಿಯನ್ನೂ ಪ್ರಾರಂಭಿಸಿತು. ಆದರೆ ಸಂಧಾನದಿಂದ ಈ ಸಮಸ್ಯೆ ಬಿಡಿಸಬೇಕೆಂದು ಭಾರತವು ಸೂಚಿಸಿ ಸೈನ್ಯ ಕ್ರಮ ಕೈಗೊಂಡದನ್ನು ಪ್ರತಿಭಟಿಸಲು ಚೀನವು ಅದನ್ನು ಮನ್ನಿಸಿ ಸಂಧಾನಕ್ಕೆ ಒಪ್ಪಿಕೊಂಡದ್ದಲ್ಲದೆ ಕಮ್ಯುನಿಸ್ಟ ಸೈನ್ಯವನ್ನು ಟಿಬೇಟಿಗೆ ಸಂರಕ್ಷಣೆಗೆ ಇಡಬೇಕೆಂದೂ ಟಿಬೇಟಿನ ಸೈನ್ಯವು ಚೀನೀ ಸೈನ್ಯದಲ್ಲಿ ವಿಲೀನ ಹೊಂದುವದೆಂದೂ ಒಪ್ಪಿಕೊಂಡಿತು. ಟಿಬೇಟು–ಚೀನ ಒಪ್ಪಂದವು ಚೀನವು ರಾಜಕೀಯ ಕ್ಷೇತ್ರದಲ್ಲಿ ಪಡೆದ ಪ್ರಚಂಡ ವಿಜಯವೆಂದೇ ಹೇಳಬಹುದು.

ವಿದೇಶ ಮಂತ್ರಿಗಳ ಸಭೆ.

ಅಂತರ್ ರಾಷ್ಟ್ರೀಯ ಕ್ಷೇತ್ರದಲ್ಲಿ ಪೂರ್ವ–ಪಶ್ಚಿಮಗಳಲ್ಲಿ ಘರ್ಷಣೆಗೆ ಕಾರಣವಾದ ಸಮಸ್ಯೆಗಳನ್ನು ಬಿಚ್ಚು ಮನಸಿನಿಂದ ಚರ್ಚಿಸಿ ಜಾಗತಿಕ ಶಾಂತಿಗೆ ಭಂಗ ಬಾರದಂತೆ ಶಕ್ಯವಿದ್ದರೆ ನೋಡಿಕೊಳ್ಳುವ ಬಗ್ಗೆ ನಾಲ್ಕು ಪ್ರಬಲ ರಾಷ್ಟ್ರಗಳ ವಿದೇಶ ಮಂತ್ರಿಗಳ ಸಭೆ ಸೇರಬೇಕೆಂಬ ತತ್ವಕ್ಕೆ ಬ್ರಿಟನ್, ಫ್ರಾನ್ಸ್, ಅಮೇರಿಕಾ, ರಷ್ಯಾಗಳು ಒಪ್ಪಿಕೊಂಡವು. ಈ ಸಭೆಯಲ್ಲಿ ಚರ್ಚೆಗೆ ಬರಬೇಕಾದ ವಿಷಯ ಪಟ್ಟಿಯನ್ನು ಸಿದ್ಧಪಡಿಸಲು ಉಪವಿದೇಶ ಮಂತ್ರಿಗಳ ಸಭೆಯು ಪ್ಯಾರಿಸಿನಲ್ಲಿ ಸೇರಿ ನಾಲ್ಕು ತಿಂಗಳಾದರೂ ವಿಷಯ ಪತ್ರಿಕೆಯ ಬಗ್ಗೆ ಒಮ್ಮತವಾಗಿ ಅಟ್ಲಾಂಟಿಕ್ ಒಪ್ಪಂದದ ವಿಷಯವನ್ನು ವಿಷಯ ಪಟ್ಟಿಯಲ್ಲಿ ಸೇರಿಸಕೂಡದೆಂದು ಅಮೇರಿಕಾ, ಬ್ರಿಟನ್, ಫ್ರಾನ್ಸ್‌ಗಳ ವಾದ. ಹೀಗಾಗಿ ವಿಷಯ ಪಟ್ಟಿ ರಚಿಸುವಲ್ಲಿ ಕಾಲವ್ಯಯವಾಗುತ್ತ ಬಂದಿದೆ. ಉಪವಿದೇಶ ಮಂತ್ರಿಗಳ ಸಭೆಯು ವಿಸರ್ಜನೆಯೂ ಇಲ್ಲ. ಒಮ್ಮತಕ್ಕೂ ಬರುವ ಪರಿಸ್ಥಿತಿಯಿಲ್ಲ. ಹೀಗೆ ನಡೆದಿದೆ ಈ ಸಭೆ.

ಬೆಕ್ಕುಗಳಿಗೂ ಒಂದು ಹೊಟೇಲು

ಹಾಲಿವುಡ್‌ನಲ್ಲಿ ಓರ್ವ ಉತ್ಸಾಹಭರಿತ ಮಹಿಳೆ ಬೆಕ್ಕುಗಳಿಗಾಗಿಯೇ ಒಂದು ಹೋಟೆಲನ್ನು ತೆರೆದಿದ್ದಾಳೆ.

ಹಾಲಿವುಡ್‌ನಲ್ಲಿ ಅನೇಕ ಚಲಚ್ಚಿತ್ರ ನಟಿಯರಿದ್ದಾರೆ. ಅವರಲ್ಲಿ ಅನೇಕರಿಗೆ ಪ್ರೀತಿಯ ಬೆಕ್ಕುಗಳಿವೆ. ಆ ಬೆಕ್ಕುಗಳನ್ನು ಅವರು ಕೈಯಲ್ಲೇ ಹಿಡಿದುಕೊಂಡು ತಿರುಗಾಡುತ್ತಾರೆ. ಆದರೆ ಕೆಲಸ ಮಾಡುವಾಗ ಮಾತ್ರ ಅವುಗಳ ರಕ್ಷಣೆಯನ್ನು ಇತರರು ನೋಡಬೇಕಾಗುವುದರಿಂದ ಬೆಕ್ಕುಗಳಿಗಾಗಿ ತೆರೆಯಲ್ಪಟ್ಟ ಆ ಹೊಟೇಲು ಬಹಳ ಜನಪ್ರಿಯವಾಗಿದೆ. ಆ ಹೊಟೇಲಿನಲ್ಲಿ ಬೆಕ್ಕುಗಳಿಗೆ ಆಹಾರ ಮಾತ್ರವಲ್ಲ, ಆಟಗಳೂ ಇವೆ.

ವಜ್ರಗಳಿಂದ ತುಂಬಿದ ಕಾಲ್ಚೀಲ

ಚಲಚ್ಚಿತ್ರ ನಗರವಾದ ಹಾಲಿವುಡ್‌ನಲ್ಲಿ ಚಿತ್ರ ವಿಚಿತ್ರ ಫ್ಯಾಶನ್‌ಗಳು ತಲೆಯೆತ್ತುತ್ತಲಿವೆ. ಇತ್ತೀಚೆಗೆ ಕಂಡು ಬಂದಿರುವ ವಿಚಿತ್ರ ಫ್ಯಾಶನ್ ಎಂದರೆ ಕೆಲವು ನಟಿಯರು ಕಾಲ್ಚೀಲಗಳಿಗೆ ವಜ್ರಗಳನ್ನು ಕಟ್ಟುವದು. ಸಿನೇಮ ಜಗತ್ತಿನಲ್ಲೇ ಅತಿ ಸುಂದರವಾದ ಕಾಲುಗಳುಳ್ಳವಳೆಂದು ಹೆಸರು ಹೊಂದಿದ ಜೋನ್ ಬ್ಲೊಂಡೆಲ್ ಇತ್ತೀಚೆಗೆ ಹೊಸ ಚಿತ್ರವೊಂದರಲ್ಲಿ ಅನೇಕ ವಜ್ರಗಳಿಂದ ತುಂಬಿದ ಕಾಲ್ಚೀಲಗಳನ್ನು ಉಪಯೋಗಿಸಿದಳಂತೆ. ಅವುಗಳ ಬೆಲೆ ಜತೆಗೆ ೫,೦೦೦ ಡಾಲರುಗಳು.

Reg. No. M. 1030.
'KODAGU' MERCARA, (Coorg).

ಕೊಡಗು

ಸಂಪಾದಕರು—ಪಿ. ಎ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ 5-0-0.

ಸಂಪುಟ ೨೮ | ತಾರೀಕು ೧೭-೬-೧೯೪೯ನೇ ಶುಕ್ರವಾರ | ಸಂಚಿಕೆ ೩.

"ವಿರಸವೇ ಮರಣ ಸಮರಸವೇ ಜೀವನ."

[ಲೇ—ಶ್ರೀ ಬಿ ಡಿ ಗಣಪತಿ]

ಕಳೆದ ಐವತ್ತು ವರ್ಷಗಳ ಮಾನವನ ಜೀವಿತದಲ್ಲಿ ಅತೀ ಕ್ರಾಂತಿಕಾರಕ ಕಾಲವೆನ್ನಬಹುದು. ಈ ಕಾಲದಲ್ಲಿ ನಾನಾ ರೀತಿಯ ಆವಿಷ್ಕಾರಗಳ ಪ್ರಭಾವದಲ್ಲಿ ಸಿಕ್ಕಿ[illegible] ಆಗಿ ಜಗತ್ತು ಒಂದು ಗುರಿಯತ್ತ ಸಾಗುತ್ತಿದೆ. ವಿಜ್ಞಾನದ ವಿಚಿತ್ರ ಶೋಧನೆಗಳು, ಸಾಮಾಜಿಕ, ನೈತಿಕ ಕಲ್ಪನೆಗಳು, ಆರ್ಥಿಕ, ವಾಣಿಜ್ಯ ಸಂಬಂಧಗಳು ರಾಷ್ಟ್ರ ರಾಷ್ಟ್ರಗಳ ಗಡಿಯನ್ನು ಮೀರಿ ಸರ್ವಗ್ರಾಹಿಯಾಗಿ ಜಗತ್ತು ಒಂದು ಎನ್ನಿಸುತ್ತಿವೆ. ಪ್ರತಿ ದೇಶಗಳಲ್ಲಿ ಒಂದೊಂದು ಶೋಧನೆ ಆವಿಷ್ಕಾರವಾದರೂ ಅದು ಜಗತ್ತಿನ ಎಲ್ಲರ ಹಿತಕ್ಕೆ ಬರುತ್ತದೆ. ಪ್ರತಿ ರಾಷ್ಟ್ರಗಳು ತಮ್ಮದೇ ಆದ ಸಾಂಸ್ಕೃತಿಕ ಪದ್ಧತಿಯನ್ನು ಹಿಡಿದುಕೊಂಡರೂ ಪರಸ್ಪರ ಅವುಗಳಿಗೆ ಸಂಬಂಧವಿದೆ. ವ್ಯಾಪಾರವು ಅಂತರಾಷ್ಟ್ರೀಯ ರೂಪು ಧರಿಸಿದೆ. ರಾಜಕೀಯವು ಒಂದಕ್ಕೊಂದು ಆಧರಿಸಿ ನಿಂತಿದೆ. ಆರ್ಥಿಕವಾಗಿ, ರಾಜಕೀಯವಾಗಿ ಹೆಚ್ಚೇಕೆ ಭೌತಿಕ ಎಲ್ಲಾ ದೃಷ್ಟಿಯಿಂದ ಜಗತ್ತು ಒಂದೇ ಗುರಿಗೆ ಸಾಗುತ್ತಿದೆ. ಅನೇಕತೆಯನ್ನು ತಳೆದು ವಿವಿಧವಾಗಿ ತೋರಿದರೂ ಏಕತೆಯ ಕಡೆಗೇ ಧಾವಿಸುತ್ತಿದೆ. ಈ ಸಮಗ್ರ ಚಿಂತನದ ಪ್ರೇರಣೆಯೇ ಸಂಯುಕ್ತ ರಾಷ್ಟ್ರ ಸಂಘದ ಕಲ್ಪನೆಗೂ ಪ್ರೇರಕ [illegible]. ಒಂದೇ ಜಗತ್ತು, ಒಂದೇ ಸರಕಾರ, ಒಂದೇ ಜನಾಂಗವೆಂಬ ಪ್ರಚಾರ ಪ್ರಾರಂಭವಾಗಿರುವದಾದರೂ ಈ ಕಲ್ಪನೆ ಆಧುನಿಕ ವಾಹನ ಸೌಕರ್ಯಗಳು ನೆಲ, ಜಲ, ಆಕಾಶಗಳೆಂಬ ಭೇದವನ್ನು ಅಳಿಸಿ ಎಲ್ಲಾ ದೇಶಗಳನ್ನು ಹತ್ತಿರಕ್ಕೆ ತಂದು ನೆರೆಮನೆಗಳಂತೆ ಮಾಡಿವೆ. ಇಷ್ಟೆಲ್ಲಾ ಶಕ್ತಿಗಳು ಆ ಏಕತ್ವದ ಕಲ್ಪನೆಯತ್ತ ಸಾಗುತ್ತಿದ್ದರೂ ಮಾನವ ವ್ಯಕ್ತಿಯಲ್ಲಿ ಅವಶ್ಯಕ ಗುಣವಾದ ಸಮನ್ವಯ ದೃಷ್ಟಿ ಬಂದಿಲ್ಲ. ಅವನ ಸಂಕೀರ್ಣತೆ ಈ ವಿಶಾಲತೆಗನುಗುಣವಾಗಿ ಮಾಯವಾಗಿಲ್ಲ. ನಿಜ, ಮಾನವನು ಆಕಾಶದಲ್ಲಿ ಹಾರಬಲ್ಲನು. ಭೂಗರ್ಭವನ್ನು ಶೋಧಿಸಬಲ್ಲನು. ಸಾಗರದ ತಳವನ್ನು ಪರೀಕ್ಷಿಸಬಲ್ಲನು. ಆದರೆ ಗಟ್ಟಿ ನೆಲದ ಮೇಲೆ ಉತ್ತಮ ನೆರೆಯವನಾಗಿ, ಶಾಂತಿಪ್ರೇರಕ ಶಕ್ತಿಯಾಗಿ ಬಾಳಲಾರನು! ಮನುಷ್ಯನು ಪ್ರಾಣಿಗಳ ಮೇಲೆ ದಯೆ ತೋರಿಸಬಲ್ಲನು. ತನಗಿಂತಾ ಕೆಳಮಟ್ಟದಲ್ಲಿರುವವರ ಬಗ್ಗೆ ಅಯ್ಯೋ ಎನ್ನಬಲ್ಲನು. ಆದರೆ ತನ್ನ ಸಮಾನರನ್ನು ಕೆಳಗೆ ತಳ್ಳಲೆತ್ನಿಸುತ್ತಾನೆ. ತನಗಿಂತಾ ಮೇಲಿರುವವರನ್ನು ಎಳೆದು ಕೆಳಗೆ ಹಾಕಲು ಪ್ರಯತ್ನಿಸುತ್ತಾನೆ. ನಾಗರೀಕತೆಯು ಗಾವುದ ದೂರ ಕಾಲು ಹಾಕುತ್ತಾ ಬಂದರೂ ಸಹಾ ಮನುಷ್ಯನ ಸಂಕೀರ್ಣ ಹೃದಯದಲ್ಲಿ ಸ್ವಾರ್ಥದ ಕಿಡಿಯೇ ಉರಿಯುತ್ತಿದೆ!

ಇಂದು ಜಗತ್ತಿಗೆ ಅಂಟಿಕೊಂಡಿರುವ ಮಹಾರೋಗವೆಂದರೆ ಈ ಚಿಕ್ಕ ದೃಷ್ಟಿ, ನಾನು, ನನ್ನದ, ತನ್ನದು ಎಂಬ ಅಹಂವೃತ್ತಿ. ನಾವು ಇತರರಿಗಿಂತಾ ಹೆಚ್ಚಿನವರೆಂಬ ಹೆಮ್ಮೆ. ನಮ್ಮ ಜನಾಂಗ ಹಿರಿದಾದುದು ಉಳಿದವುಗಳು ಇದನ್ನು ಹಿಂಬಾಲಿಸಬೇಕು ಎಂಬ ಬುದ್ಧಿ ಜನಾಂಗಗಳಲ್ಲಿರುವವರೆಗೆ ಜನತೆಗೂ ಜಗತ್ತಿಗೂ ಶಾಂತಿ, ಪ್ರಗತಿಗಳಿಲ್ಲ. ನೆಪೋಲಿಯನನ ಕಾಲದ ಫ್ರಾನ್ಸ್ ತಾನೇ ಜಗತ್ತಿನ ಸ್ವಾಮಿಯೆಂದು ಇತರರನ್ನು ಒಗ್ಗಬಡಿಯಲೆತ್ನಿಸಿತು. ಸಾಮ್ರಾಜ್ಯವಾದಿ ಬ್ರಿಟನ್ನು ಜಗತ್ತಿನ ಹಿಂದುಳಿದ ಜನರ ರಕ್ಷಣೆಯ ಜವಾಬ್ದಾರಿ ತನ್ನದೆಂಬ ನೊಗ ಹಾಕಿತು. ರಷ್ಯಾವು ಜಗತ್ತಿನ ಜನತೆಯನ್ನು ಬಂಡವಾಳಗಾರರ ಹಿಡಿತದಿಂದ ಬಿಡಿಸುವದು ತನ್ನ ಧರ್ಮವೆಂದೂ ಎಲ್ಲರೂ ತನ್ನನ್ನು ಹಿಂಬಾಲಿಸಬೇಕೆಂದೂ ನಂಬಿದೆ. ಹಿಟ್ಲರನ ಜರ್ಮನಿಯು ಜಗತ್ತಿನಲ್ಲಿ ಆರ್ಯರಿಗೆ [illegible]ವೆಂದೂ, ಉಳಿದವರು ಕೆಳಮಟ್ಟದವರೆಂದೂ ಹೇಳಿಕೊಂಡಿತು. ಈ ರೀತಿ ನಾವು ಹೆಚ್ಚಿನವರು ಉಳಿದವರು ಕಡಿಮೆಯವರೆಂಬ ಭಾವನೆ ಕೇವಲ ರಾಷ್ಟ್ರಸೂತ್ರಧಾರರುಗಳಿಗೆ ಮಡಿಪು ಎಂದು ಯಾರೂ ಭಾವಿಸಬಾರದು.

ಧರ್ಮಗಳ ಉಗಮವು ಭಾರತದಲ್ಲಿ, ಜಗತ್ತಿಗೆ ದರ್ಶನದ ಬೆಳಕನ್ನು ಚೆಲ್ಲಿ ಜಗತ್ತನ್ನು ಉದ್ಧರಿಸಿದವರು ನಾವು. ನಮ್ಮ ದೇಶ ಪವಿತ್ರವಾದುದೆಂದು ಭಾವಿಸುವ ಭಾರತೀಯರಿದ್ದಾರೆ. ನಾವೇ ಜಗತ್ತಿನಲ್ಲಿ ನಾಗರೀಕರು ಎಂದು ನಂಬುವ ಚೈನೀಯರಿದ್ದಾರೆ. ಭಗವಂತನ ನೇರವಾದ ಮಕ್ಕಳು ನಾವು ಎಂದು ಭಾವಿಸುವ ಜಪಾನೀಯರಿದ್ದಾರೆ. ಈ ರೀತಿಯ ನಾವು ಹೆಚ್ಚಿನವರು ಉಳಿದವರು ಕಡಿಮೆಯವರು ಎಂಬ ಭಾವನೆ ರಾಷ್ಟ್ರ ರಾಷ್ಟ್ರಗಳಲ್ಲಿ ಮಾತ್ರವಲ್ಲ, ಜಾತಿ, ಕೋಮು, ವ್ಯಕ್ತಿಗಳಲ್ಲಿ ಹಬ್ಬಿದೆ. ಕೊಡಗಿನಲ್ಲಿ ಕೊಡವರು ತಾವು ಉತ್ತಮರು. ತಮಗೊಂದು ವಿಶಿಷ್ಟ ಸಂಸ್ಕೃತಿ ಇದೆ ಎನ್ನುತ್ತಾರೆ. ಬ್ರಾಹ್ಮಣರು ಎಲ್ಲರಿಗಿಂತಾ ನಾವು ಸರ್ವೋತ್ತಮರೆನ್ನುತ್ತಾರೆ. ವ್ಯಕ್ತಿಗಳಲ್ಲಿ ಕೂಡ ನಾನು ಬುದ್ಧಿವಂತ, ನನ್ನನ್ನು ಎಲ್ಲರೂ ಹಿಂಬಾಲಿಸಬೇಕು. ನಾನು ಸಿರಿವಂತ, ಎಲ್ಲರೂ ನನ್ನನ್ನು ಗೌರವಿಸಬೇಕು, ನಾನು ವಿದ್ಯಾವಂತ; ಎಲ್ಲರೂ ನನಗೆ ಮರ್ಯಾದೆ ಸಲ್ಲಿಸಬೇಕೆಂಬ ಭಾವನೆ ಸಾರ್ವತ್ರಿಕವಾಗಿದೆ. ಈ ಚಿಕ್ಕ ದೃಷ್ಟಿ, ಅಹಂವೃತ್ತಿಯೇ ಜಗತ್ತಿನ ಅಶಾಂತಿಗೂ, ವ್ಯಕ್ತಿಗಳ ಘರ್ಷಣೆಗೂ ಕಾರಣವಾಗಿದೆ. ಇದನ್ನು ಬರೆಯುತ್ತಿರುವ ನನ್ನ ಹೃದಯದಲ್ಲಿಯೂ ಈ ರೀತಿಯ ಸಂಕೀರ್ಣತೆ ಇದೆ. ಇದನ್ನು ಕಿತ್ತೊಗೆದು ಮಾನವಕುಲ ಒಂದು ಎಂಬ ಪಥದಲ್ಲಿ ಸಾಗುವದು ಸರ್ವರ ಪ್ರಯತ್ನವಾಗಿರಬೇಕು. ಇದರಿಂದಲೇ ಸರ್ವೋದಯ. ಅದೇ ಶಾಶ್ವತ ಶಾಂತಿಯ ಮಾರ್ಗ. ಈ ಸುಧಾರಣೆಯು ಸಂಯುಕ್ತ ರಾಷ್ಟ್ರ ಸಂಘದಿಂದಲೂ, ಇಲ್ಲವೇ ಯಾವದೇ ಸಮಾಜ ಸುಧಾರಣೆಯಿಂದಲೂ, ಆಗಲಾರದು. ವ್ಯಕ್ತಿಯ ಪರಿವರ್ತನೆಯಿಂದ ಇದಾಗಬೇಕು. '[illegible] ನಾ ಪರಮ ಕಿಂಚಿತ್' ಎಂದು ಉಪನಿಷತ್ತಿನಲ್ಲಿ ಹೇಳಿರುವಂತೆ ಮನುಷ್ಯನಿಂದ ಮಿಗಿಲಾದುದು ಬೇರೊಂದಿಲ್ಲ. ಮನುಷ್ಯನೆಂದರೆ ಕೇವಲ ಶರೀರ, ಜೀವಗಳು ಕೂಡಿ ಇರುವದರ ಪ್ರಭಾವದೊಳಗಡಗಿರುವ [illegible] ಕೂಡಿದ ವಸ್ತು ಮಾತ್ರವಲ್ಲ. ಆದ್ದರಿಂದಲೇ '[illegible] ಜೀವನವನ್ನು [illegible]ಗೊಳಿಸುವವನಿಗಿಂತಾ ಹೀನ ಭಾಗ್ಯನು ಬೇರಿಲ್ಲ' ಎಂದು ಹೇಳಲ್ಪಟ್ಟಿದೆ. [illegible] ಆತನ ಪರಿಚಯವೇ ನಮ್ಮ ಹೃದಯದ ಪರಿಚಯ, [illegible] ಜಗತ್ತಿನ ಪರಿಚಯ. ನಮ್ಮ ಜೀವನದ ಧ್ಯೇಯವನ್ನು ವಿಚಾರಿಸಿ, ಸತ್ಯದ ತತ್ವ ಚಿಂತನೆಗಳ ಆಧಾರದಿಂದ, ಸ್ವಾರ್ಥ, ವಿಷಯಾಸಕ್ತಿಗಳನ್ನು ಜಯಿಸಿ ಧಾರ್ಮಿಕ ಸ್ವಾತಂತ್ರ್ಯವನ್ನು ಪಡೆಯುವದನ್ನೇ ಮೋಕ್ಷವೆಂದು ಕರೆಯುತ್ತಾರೆ. ಇದು ಆ ಸರ್ವಾತ್ಮಕ ಪದ್ಧತಿಯನ್ನೇ ಸಾರುವ [illegible] ಜಗತ್ತು ಒಂದೆನ್ನುತ್ತದೆ! ಆದ್ದರಿಂದ ಜಗತ್ತು ಆಧುನಿಕ ವಿಜ್ಞಾನ ಶಾಸ್ತ್ರದ ಮೂಲಕ ಭೌತಿಕವಾಗಿ ಒಂದಾದರೆ ಸಾಲದು. ಆಧ್ಯಾತ್ಮಿಕ, ಮಾನಸಿಕ, ನೈತಿಕ [illegible]ವಾಗಿ ಒಂದಾಗಬೇಕು.

ಈ ಜಗತ್ತಿನಲ್ಲಿ ಯಾರೂ ಕೀಳಲ್ಲ, ಯಾರೂ ಮೇಲಲ್ಲ. ಆಕಾಶದಲ್ಲಿ ಹಾರಲು ಮನುಷ್ಯನು ಕಲಿತಿದ್ದರೆ ಸತತ ಹಾರಾಡುತ್ತಿರುವ ಪಕ್ಷಿಗಿಂತ ಹೆಚ್ಚಿನದೇನನ್ನೂ ಸಾಧಿಸಿದಂತಾಗಲಿಲ್ಲ. ನೀರಿನಡಿಯಲ್ಲಿ ಸಂಚರಿಸಲು ಕಲಿತಿದ್ದರೆ ನೀರೊಳಗಿನ ಜಲಜೀವಿಗಳಿಗಿಂತಾ ಹೆಚ್ಚಿನದನ್ನು ಸಾಧಿಸಿದಂತಾಗಲಿಲ್ಲ. ಆದ್ದರಿಂದ ಹೃದಯವನ್ನು ಜಯಿಸಬೇಕು. ಜಗತ್ತಿನಲ್ಲಿ ಆದರಿಂದ ಆ ಸಾಧನೆಯಾಗುತ್ತದೆ. ದಿನವಹಿ ಕಸಗುಡಿಸುವ ಹರಿಜನನೂ, ಪ್ರತಿ ದಿನ ದುಡಿಯುವ ರೈತನೂ, ಸಿರಿತನದ ಮಡಿಲಿನಲ್ಲಿಯ ನಾಗರೀಕನೂ, ಉತ್ತಮ ನೆನೆಸುವ ಬ್ರಾಹ್ಮಣನೂ ಒಬ್ಬರಿಗಿಂತಾ ಒಬ್ಬರು ಮಿಗಿಲಲ್ಲ. ಎಲ್ಲರೂ ಒಂದು. ಒಂದು ದೃಷ್ಟಿಯಿಂದ ಸಹಜ [illegible]ಗಳಾಗಿರುವ ಹರಿಜನ, ರೈತರೇ ಮಿಗಿಲೆಂದರೆ ತಪ್ಪಾಗದು. ಆದ್ದರಿಂದ ಜಾತೀಯವಾದದಲ್ಲಿ ಹುರುಳಿಲ್ಲ. ಒಂದೇ ತಂದೆಯ ಮಕ್ಕಳು ವಿವಿಧ ರೀತಿಯ ಉಡಿಗೆತೊಡಿಗೆ ಹಾಕಿಕೊಂಡಾಕ್ಷಣ ಯಾವ ರೀತಿ ಬೇರೆಯವರೆನ್ನಿಸಲ್ಪಡರೋ ಅದೇ ರೀತಿ ಭಗವಂತನ ಮಕ್ಕಳಾದ ನಮ್ಮಲ್ಲಿಯೂ ಒಂದೊಂದು ವೃತ್ತಿಗಳನ್ನು ಮಾಡುತ್ತಿದ್ದರೆ ಅದೇ ಕಾರಣಕ್ಕಾಗಿ ಒಬ್ಬರು ಉತ್ತಮರು ಮತ್ತೊಬ್ಬರು ಅಧಮರಲ್ಲ. ರಸ್ತೆ ಗುಡಿಸಿ ಶುಚಿಗೊಳಿಸುವ ಹರಿಜನನ ಕಾರ್ಯವು ದೇವಸ್ಥಾನದಲ್ಲಿ ಮಂತ್ರ ಹೇಳುವ ಬ್ರಾಹ್ಮಣನ ಕಾರ್ಯಕ್ಕಿಂತಾ ಎಂದೂ ಹೀನವಲ್ಲ. ಅದರಿಂದ ಎಲ್ಲರೂ ಸಮಾನರು, ಎಲ್ಲರೂ ಸಹೋದರರು.

ಪ್ರಪಂಚದಲ್ಲಿ ಯಾವುದನ್ನೂ ಇದು ಮೇಲು ಇದು ಕೀಳೆಂದು ನಿರ್ಧರಿಸಲಾಗುವದಿಲ್ಲ. ಅದರದರ ಸ್ಥಾನದಲ್ಲಿ ಪ್ರತಿಯೊಂದಕ್ಕೂ ಬೆಲೆ ಇದೆ. ಒಂದರ ಕೆಲಸವನ್ನು ಮತ್ತೊಂದು ಮಾಡಲಾರದು. ಜಗತ್ತಿನ ಘಟನೆಗಳ ಪ್ರತಿಯೊಂದೂ [illegible] ಒಂದು ಮತ್ತೊಂದರ ಸ್ಥಾನವನ್ನು ಆಕ್ರಮಿಸಿ ಅದರ ದುರುಪಯೋಗಪಡಿಸುವದು ಸಲ್ಲದು. ತೋಳ್ಬಲವಿರುವಾತನು ನಿರ್ಬಲರನ್ನು ಕೊಂದು ಅವರ ಸರ್ವಸ್ವವನ್ನೂ ದೋಚಿಕೊಳ್ಳುವದು ಹೇಗೆ ಅನ್ಯಾಯವೋ ಅದೇ ರೀತಿ ಬುದ್ಧಿವಂತನು ಬುದ್ಧಿ ಇಲ್ಲದವರನ್ನೂ, ವಿದ್ಯಾವಂತನು ವಿದ್ಯೆ ಇಲ್ಲದವನನ್ನೂ, ಸಿರಿವಂತನು ಬಡವನನ್ನೂ ಶೋಷಣ ಮಾಡುವದೂ ಅಪರಾಧ. ರಾಮನು ಲಕ್ಷ್ಮಣನಿಗೆ ಹೇಳುತ್ತಾನೆ. ('ಸತ್ಯೇನಾಯುಧಂ ಆಲಭೆ| ನೇಯಂ ಮಮ ಮಹೀ ಸೌಮ್ಯ | ದುರ್ಲಭಾ ಸಾಗರಾಂಬರಾ || ನಾಹೀಚ್ಛೇಯಂ ಅಧರ್ಮೇಣ ಶಕ್ರತ್ವಂ ಅಪಿ ಲಕ್ಷ್ಮಣ ||)' 'ನಾನು ಸತ್ಯದ ಕಾರಣಕ್ಕಾಗಿ ಆಯುಧ ಧರಿಸಿರುವೆನು (ಯುದ್ಧ ಮಾಡುವೆನು) ಇಡೀ ಜಗತ್ತನ್ನು ಗಳಿಸುವದು ನನಗೆ ಕಷ್ಟವಲ್ಲ. ಆದರೆ ಭೂಲೋಕದ ಪಟ್ಟವಿರಲಿ, ಅಧರ್ಮದ ಮಾರ್ಗದಿಂದ ದೊರೆಯುವದೆಂದರೆ ಸ್ವರ್ಗದ ಸ್ವಾಮಿತ್ವವೂ ನನಗೆ ಬೇಡ' ಆದ್ದರಿಂದ ಶಕ್ತಿ ಬುದ್ಧಿವಂತಿಕೆ ಇದೆಯೆಂದು ನ್ಯಾಯಬಾಹಿರ ಮಾರ್ಗಗಳಲ್ಲಿ ತನ್ನ ಸ್ವಾರ್ಥತೆಯನ್ನು ಸಾಧಿಸಿಕೊಳ್ಳುವದು ನೀತಿಯಲ್ಲ. ಈ ಚಿಕ್ಕ ಬುದ್ಧಿಯನ್ನು ಬಿಡಲು ಪ್ರತಿಯೊಬ್ಬನೂ ಪ್ರಯತ್ನಿಸಬೇಕು. ಈ ದೃಷ್ಟಿಯಿಂದ ರಾಜಕೀಯ, ವ್ಯಾಪಾರ, ಸಾಮಾಜಿಕ ಇಲ್ಲ ಯಾವದೇ ಕ್ಷೇತ್ರದಲ್ಲೂ ಆತ್ಮಪ್ರಶಂಸೆ ಮಾಡಿಕೊಂಡು ನಾನು ಇತರರಿಗಿಂತಾ ತಿಳಿದವನು, ಯೋಗ್ಯನೆಂದು ಮೇಲೇರಲೆತ್ನಿಸುವವನದು ದಾರಿತಪ್ಪಿದ ಜೀವನ.

ನಾವೆಲ್ಲರೂ ಜಗತ್ತಿನ ಶಾಂತಿಯನ್ನು ಬಯಸುತ್ತೇವೆ. ದೇಶದ ಪ್ರಗತಿಯನ್ನು ಆಶಿಸುತ್ತೇವೆ. ಆದರೆ ಶಾಂತಿ ಪ್ರಗತಿಗಳಿಗೆ ಸಹಾಯಕವಾದ ಕಾರ್ಯವನ್ನು ಮಾತ್ರ ಮಾಡಲಾರೆವು. [illegible] ಮಾನವನನ್ನು ಮಾರುವದನ್ನೇ ತನ್ನ ಉದ್ಯಮವಾಗಿಟ್ಟುಕೊಂಡವನು, [illegible] ಉತ್ಪನ್ನದ [illegible] ಪ್ರಚಾರ ಮಾಡಿದಂತೆ ಸಮಸ್ಥಿತಿಯಾಗಿದೆ!

ಜಗತ್ತು ಈ ಸ್ವಾರ್ಥಪರತೆಯ ಕೋಟಲೆಗೆ ಸಿಕ್ಕಿ ಪಥಗೆಟ್ಟು ವಿನಾಶದ ಕಡೆ ಸಾಗುತ್ತಿದೆ. ಪ್ರತಿಯೊಂದು ಜನಾಂಗ, ಪ್ರತಿಯೊಂದು ದೇಶದಲ್ಲಿ ಒಬ್ಬರಾದರೂ ಈ ಬುದ್ಧಿಯವರು, ಸಮಸ್ತ ಭಾವದವರು ರಾಜಕೀಯ ಸನ್ಯಾಸ ಸ್ವೀಕಾರ ಮಾಡಿ ಮಾನವ ಗಣದ ಉದ್ಧಾರಕ್ಕೆ ಪ್ರಯತ್ನಿಸಿದ್ದರೆ ಜಗತ್ತಿಗೆ ಹಾನಿ ತಪ್ಪಿದಲ್ಲ. 'ಸಂಘ ಜೀವನ ಮತ್ತು ಸರ್ವಲೋಕಾ ಪರಸ್ಪರ ಆಶ್ರಿತಾ ||' ಎಂದಂತೆ ಜಗತ್ತು ಒಂದು ಒಂದಕ್ಕೊಂದು ಅಧೀನವಾಗಿ, ಸಮಾನತೆಯ ತತ್ವದ ಮೇಲೆ ನಿಂತಿದೆ. ರಾಷ್ಟ್ರಗಳೇ, ಜನಾಂಗಗಳಾಗಲೀ, ವ್ಯಕ್ತಿಗಳಾಗಲೀ ಪರಸ್ಪರ ಶೋಷಣೆ, ಅಧಿಕಾರ [illegible] ಇಲ್ಲ ಎಲ್ಲರೂ ಒಂದು ಎಂಬ ತಿಳುವಳಿಕೆ [illegible] ಕಟ್ಟಿಟ್ಟದ್ದು.

ಜನತೆಯ ಆರೋಗ್ಯ.

ಸಿಡುಬು ರೋಗ.

ಕೆಲವರ ಮುಖದ ಮೇಲೆ ಗುಳಿಯಂತಿರುವ ಕಲೆಯುಳ್ಳ ಮಚ್ಚೆಗಳನ್ನು ನೋಡುತ್ತೇವೆ. ಮುಖದ ಬಣ್ಣವೂ ಕಣ್ಣು, ಮೂಗು, ತುಟಿ, ಗಲ್ಲ, ಇವುಗಳ ಮಾಟವೂ ಅಂದರೆ ಒಟ್ಟಿನಲ್ಲಿ ಮುಖಭಾವವು ಎಷ್ಟೇ ಸುಂದರವಾಗಿದ್ದರೂ ಆ ಮಚ್ಚೆಗಳ ದೆಸೆಯಿಂದ ಸೌಂದರ್ಯವು ಬಹುಮಟ್ಟಿಗೆ ಕಡಿಮೆಯಾಗಿರುವುದು. ಸಿಡುಬಿನ ಪರಿಣಾಮವೇ ಈ ಮಚ್ಚೆಗಳು. ಸೃಷ್ಟಿಯಲ್ಲಿ ಸೌಂದರ್ಯವೇ ಮೂರ್ತಿವೆತ್ತಂತಾದ ಯಾವುದೊಂದು ಮೊಗವನ್ನು ಅಭಿಮಾನದಿಂದ ಮುದ್ದಿಡುವ ಅದೇ ಹಸುಳೆಯು ಸಿಡುಬಿನ ಆಘಾತಕ್ಕೆ ಸಿಕ್ಕಿ ನರಳಿದ ನಂತರ ಮುಟ್ಟುವುದಕ್ಕೆ ಮಾತ್ರವಲ್ಲದೆ ದೂರದಿಂದ ನೋಡುವುದಕ್ಕೂ ಕೂಡ ಅಸಹ್ಯವಾಗಿ ತೋರುವುದು. ಅನೇಕ ಸಂದರ್ಭಗಳಲ್ಲಿ ಒಂದು ಇಲ್ಲದವಾ ಎರಡು ಕಣ್ಣುಗಳೂ ಸಿಡುಬಿನ ದೆಸೆಯಿಂದ ಕುರುಡಾಗಿರುವುದುಂಟು.

ಉತ್ಪತ್ತಿ

ಸಿಡುಬು ರೋಗವು ಅತಿ ಸೂಕ್ಷ್ಮವಾದ ಒಂದು ಬಗೆಯ ಅಣುಜೀವಿಗಳಿಂದ ಉತ್ಪತ್ತಿಯಾಗುವುದೆಂದು ಶಾಸ್ತ್ರಜ್ಞರು ಕಂಡುಹಿಡಿದ್ದಾರೆ. ಈ ಅಣುಜೀವಿಗಳನ್ನು ಸೂಕ್ಷ್ಮದರ್ಶಕ ಯಂತ್ರದಿಂದ ಮಾತ್ರ ನೋಡುವುದು ಸಾಧ್ಯವಾದರೂ ರೋಗದ ಹರಡುವಿಕೆಯ ವಿಚಾರದಲ್ಲಿ ಪ್ರಯೋಗಗಳನ್ನು ನಡೆಸಿ ಈ ಅಣುಜೀವಿಗಳ ಇರುವಿಕೆಯನ್ನು ಕಂಡುಹಿಡಿದಿದ್ದಾರೆ.

ರೋಗ ಹರಡುವ ಬಗೆ

ಸಿಡುಬು ರೋಗದಿಂದ ನರಳುತ್ತಿರುವ ಮನುಷ್ಯನ ಮೈಮೇಲೆ ಕಾಣುವ ಸಿಡುಬುಗಳ ಮೇಲೆ ಒಣಗುತ್ತಿರುವ ಹುರುಪಿನಲ್ಲಿ ಈ ಅಣುಜೀವಿಗಳು ಇರುತ್ತವೆಂದು ಸಿದ್ಧರಿಸಲಾಗಿದೆ. ಈ ಹುರುಪಿನಲ್ಲಿರುವ ಅಣುಜೀವಿಗಳು ಆರೋಗ್ಯವಂತರು ಉಸಿರಾಡುವಾಗ ಅವರು ಒಳಕ್ಕೆ ಎಳೆದುಕೊಳ್ಳುವ ಗಾಳಿಯಲ್ಲಿ ಅವರ ಶ್ವಾಸಕೋಶವನ್ನೂ, ಅಲ್ಲಿಂದ ಶರೀರದೊಳಗಿನ ರಕ್ತವನ್ನೂ ಹೊಕ್ಕು ಅಲ್ಲಿ ಅವುಗಳು ಲಕ್ಷಗಟ್ಟಲೆ ವೃದ್ಧಿಹೊಂದಿ ರೋಗವನ್ನುಂಟುಮಾಡುವುವು.

ರೋಗದ ಲಕ್ಷಣಗಳು

ಆರೋಗ್ಯವಂತನಿಗೆ ಈ ರೋಗದ ಸೋಂಕು ತಗಲಿದ ೧೨ ದಿವಸಗಳ ವರೆಗೆ ಆ ಮನುಷ್ಯನಲ್ಲಿ ರೋಗದ ಯಾವ ಲಕ್ಷಣಗಳೂ ಕಾಣುವುದಿಲ್ಲ. ಏಕೆಂದರೆ ಅಷ್ಟು ಕಾಲವು ಆ ಅಣುಜೀವಿಗಳು ಶರೀರಕ್ಕೆ ಉಪದ್ರವ ಕೊಡಲು ಬಲಯುತವಾಗಬೇಕಾದಷ್ಟು ಅಧಿಕ ಸಂಖ್ಯೆಯಲ್ಲಿ ವೃದ್ಧಿ ಹೊಂದಬೇಕು. ಈ ಅವಧಿಗೆ 'ಇನ್‌ಕ್ಯುಬೇಷನ್ ಪೀರಿಯಡ್' (ಅಂದರೆ ರೋಗವು ಶರೀರದೊಳಗೆ ಹೊಮ್ಮುವ ಕಾಲ) ಎಂದು ಹೆಸರು.

ಹಾಗೆ ಸೋಂಕು ತಗಲಿದ ೧೨ ದಿವಸಗಳ ಮೇಲೆ ಮೈನಡುಕ, ಜ್ವರ, ತಲೆನೋವು, ಸೊಂಟನೋವು ಇತ್ಯಾದಿಗಳು ಕಾಣಿಸಿಕೊಳ್ಳುತ್ತವೆ. ಮೂರನೆಯ ದಿವಸವಾದರೂ ನಾಲ್ಕನೆಯ ದಿವಸ ಅಗಲೋ ಆಗುವುದು. ಅಲ್ಲಿಂದ ಮೂರನೆಯ ದಿವಸ ಹಣೆಯ ಮೇಲೂ, ಕಪೋಲಗಳ ಮೇಲೂ, ಮೂಗಿನ ಮೇಲೂ ಗುಳ್ಳೆಗಳು ಏಳುತ್ತವೆ, ನಾಲ್ಕನೇ ದಿವಸ ಪಾದಗಳ ಮೇಲೂ ಪಾದಗಳ ಮಣಿಕಟ್ಟುಗಳ ಮೇಲೂ, ಬೆನ್ನಿನ ಮೇಲೂ, ಗುಳ್ಳೆಗಳು ಕಾಣುತ್ತವೆ. ಹೊಟ್ಟೆಯ ಮೇಲೂ ತೊಡೆಯ ಸಂದುಗಳಲ್ಲಿಯೂ ಎದೆಯ ಮೇಲೂ ಹೆಚ್ಚಾಗಿ ಕಾಣುವುದಿಲ್ಲ. ಆ ಮೇಲೆ ಮೂರು ದಿನಗಳ ವರೆಗೆ ಗುಳ್ಳೆಗಳಲ್ಲಿ ನೀರು ತುಂಬುತ್ತದೆ. ೬ನೇ ದಿವಸ ಗುಳ್ಳೆಗಳಲ್ಲಿರುವ ನೀರು ಹಾಲಿನಂತೆ ಪರಿವರ್ತನೆಗೊಳ್ಳುತ್ತದೆ. ಆಗ ಪುನಃ ಜ್ವರ ಬರುತ್ತದೆ. ಒಂಭತ್ತನೇಯ ದಿನ ಗುಳ್ಳೆಗಳಲ್ಲಿ ಹಾಲು ಪೂರ್ಣವಾಗಿ ತುಂಬಿದಂತೆ ಆಗುವುದು. ೧೦ ನೆಯ ದಿವಸದಿಂದ ಹಾಲು ಒಣಗುವುದಕ್ಕೆ ಪ್ರಾರಂಭವಾಗುತ್ತದೆ. ಆಗ ಜ್ವರವೂ ಇಳಿಯುತ್ತದೆ. ಗುಳ್ಳೆಗಳು ಕಾಣಿಸಿದ ೧೫ ನೆಯ ದಿನದಿಂದ ಗುಳ್ಳೆಗಳ ಮೇಲೆ ಹುರುಪು ಕಟ್ಟಿ ಅದು ಕ್ರಮೇಣ ಉದುರಿಹೋಗುತ್ತದೆ.

ಔಷಧೋಪಚಾರ

ಸಿಡುಬಿನಿಂದ ನರಳುವವರನ್ನು ಗುಣಪಡಿಸಲು ಯಾವ ಔಷಧವೂ ಇರಲಿಲ್ಲ. ಇತ್ತೀಚೆಗೆ 'ಸಲ್ಫಡ್ರಗ್ಸ್' ಎಂಬ ಔಷಧಿಗಳು ಪ್ರಚಾರಕ್ಕೆ ಬಂದಿವೆ. ಈ ಔಷಧಿಗಳನ್ನು ಸೇವಿಸುವುದರಿಂದ ರೋಗದ ಬೇನೆಯನ್ನು ಸ್ವಲ್ಪಮಟ್ಟಿಗೆ ಕಡಿಮೆ ಮಾಡಬಹುದು.

ಸಿಡುಬಿನಿಂದ ನರಳುತ್ತಿರುವವರನ್ನು ಉಪಚರಿಸುವುದರಲ್ಲಿ ಬಹಳ ಎಚ್ಚರಿಕೆ ಇರಬೇಕು. ರೋಗಿಯನ್ನು ಗಾಳಿಯು ಧಾರಾಳವಾಗಿ ಸಂಚರಿಸತಕ್ಕ ಕೋಣೆಯಲ್ಲಿರಿಸಬೇಕು. ಕೋಣೆಯು ಚೊಕ್ಕಟವಾಗಿರಬೇಕು. ಗುಳ್ಳೆಗಳಲ್ಲಿರುವ ಕೀವು ಹುರುಪು ಕಟ್ಟುವಾಗ ಆ ಹುರುಪಿನ ಸೂಕ್ಷ್ಮಕಣಗಳು ಗಾಳಿಯಲ್ಲಿ ತೂರಿಹೋಗಿ ಅವುಗಳಲ್ಲಿರುವ ಅಣುಜೀವಿಗಳಿಂದ ಇತರರಿಗೆ ರೋಗದ ಸೋಂಕು ಅಂಟಬಹುದಾಗಲು, ಕರ್ಪೂರವನ್ನು ಕೊಬ್ಬರಿ ಎಣ್ಣೆಯಲ್ಲಿ ಕಲಸಿ ಗುಳ್ಳೆಗಳಿಗೆ ಹಚ್ಚಬೇಕು. ಕರ್ಪೂರದಲ್ಲಿ ರೋಗದ ಅಣುಜೀವಿಗಳನ್ನು ಕೊಲ್ಲುವ ಶಕ್ತಿ ಇದೆ.

ರೋಗವು ಹರಡದಂತೆ ತಡೆಗಟ್ಟುವ ರೀತಿ

ಈಗ್ಗೆ ೧೫೦ ವರ್ಷಗಳ ಹಿಂದಿನ ವರೆಗೂ ಈ ಸಿಡುಬು ಕಾಡ್ಕಿಚ್ಚಿನಂತೆ ಹಬ್ಬಿದಾಗ ಅದಕ್ಕೆ ಬಲಿಯಾಗುತ್ತಿದ್ದುದು ವಿನಹ ಜನರಿಗೆ ಬೇರೆ ಮಾರ್ಗವೇ ತೋರಲಿಲ್ಲ. ಕ್ರಿಸ್ತಶಕ ೧೭೯೮ ನೆಯ ಇಸವಿಯಲ್ಲಿ ಜೆನ್ನರ್ ಎಂಬ ವೈದ್ಯನೊಬ್ಬನು ಲಸಿಕೆಯನ್ನು ತಯಾರಿಸಿ ಅದನ್ನು ಮನುಷ್ಯರಿಗೆ ಪ್ರಯೋಗಿಸುವುದರಿಂದ ಸಿಡುಬು ರೋಗವು ಅಂಟುವುದಿಲ್ಲವೆಂದು ಕಂಡುಹಿಡಿದು ಲೋಕಕ್ಕೇ ಮಹದುಪಕಾರ ಮಾಡಿದನು. ಅಲ್ಲಿಂದೀಚೆಗೆ ಎಲ್ಲಾ ದೇಶಗಳಲ್ಲಿಯೂ ಈ ಲಸಿಕೆಯಿಂದ ದೇವಿ ಹಾಕಿಸುವುದು ಬಳಕೆಗೆ ಬಂತು. ಜರ್ಮನಿ ಮುಂತಾದ ದೇಶಗಳಲ್ಲಿ ಮೊದಮೊದಲು ಮಕ್ಕಳಿಗೆ ಖಡ್ಡಾಯವಾಗಿ ದೇವಿ ಹಾಕಿಸಲೇಬೇಕೆಂಬ ಕಾನೂನ ಜಾರಿಯಲ್ಲಿತ್ತು. ನಮ್ಮ ದೇಶದಲ್ಲಿ ಈಗಲೂ ಆ ರೀತಿಯ ಕಾನೂನು ಜಾರಿಯಲ್ಲಿದೆ.

ರಕ್ಷಣೆ ಪಡೆಯಬಹುದಾದ ವಿವಿಧ ರೋಗಗಳ ಪೈಕಿ, ದೇವಿ ಹಾಕಿಸುವುದರಿಂದ ನೂರಕ್ಕೆ ನೂರು ಪಾಲು ಸಿಡುಬಿನಿಂದ ರಕ್ಷಣೆ ಪಡೆಯಬಹುದೆಂಬುದು ಅನುಭವದಿಂದ ಸಿದ್ಧಾಂತ ಮಾಡಲಾಗಿದೆ. ಉದಾಹರಣೆಗಾಗಿ ರಾಮನಗರ (ಕ್ಲೋಸ್‌ಪೇಟೆ)ದ ಆರೋಗ್ಯ ಕೇಂದ್ರದಲ್ಲಿ ಕ್ರಮವರಿತು ಎಲ್ಲರಿಗೂ ದೇವಿ ಹಾಕುವ ವ್ಯವಸ್ಥೆಯಿಂದ ಆರೋಗ್ಯ ಕೇಂದ್ರದ ಆವರಣದೊಳಗಿರತಕ್ಕ ಗ್ರಾಮಗಳಲ್ಲಿ ಯಾರಿಗೂ ಸಿಡುಬಿನ ಸೋಂಕು ಅಂಟದಂತೆ ತಡೆಗಟ್ಟಲಾಗಿತ್ತು.

ದೇವಿ ಹಾಕಿಸುವ ಕ್ರಮ

ಸಿಡುಬು ರೋಗಕ್ಕೆ ಇವರು ಗಂಡಸರು, ಇವರು ಹೆಂಗಸರು, ಇವು ಮಕ್ಕಳು, ಇವರು ಮುದುಕರು, ಇವರು ಬಡವರು, ಇವರು ಶ್ರೀಮಂತರು ಎಂಬ–ಯಾವ ವ್ಯತ್ಯಾಸವೂ ಇಲ್ಲ. ಆದರಲ್ಲಿಯೂ ಮಕ್ಕಳಿಗೆ ಇದು ಬಹು ಜಾಗ್ರತೆ ಅಂಟುವುದು. ಆದುದರಿಂದಲೇ ಮಗುವು ಹುಟ್ಟಿದ ಆರು ತಿಂಗಳೊಳಗಾಗಿ ಒಂದಾವರ್ತಿ ದೇವಿ ಹಾಕಿಸಲೇಬೇಕೆಂಬ ಕಾನೂನು ಜಾರಿಯಲ್ಲಿರುವುದು. ಒಮ್ಮೆ ದೇವಿ ಹಾಕಿಸಿಕೊಂಡರೆ ಅದರ ಪ್ರಭಾವವು ೩ ವರ್ಷಗಳಿಂದ ೫ ವರ್ಷಗಳ ವರೆಗೂ ಇರುವುದೆಂದು ತಿಳಿಯಬಂದಿದೆ. ಈ ಅವಧಿಯು ಅವಧಿಯು ಆಯಾ ವರವರ ಶರೀರ ಪ್ರಕೃತಿಯನ್ನು ಅವಲಂಬಿಸಿರುತ್ತದೆ.

ಹಳೆಯ ನಂಬಿಕೆ

ಒಮ್ಮೆ ಸಿಡುಬನ್ನು ಅನುಭವಿಸಿದವರಿಗೆ ಪುನಃ ಆ ರೋಗವು ಅಂಟುವುದಿಲ್ಲವೆಂದು ಅನೇಕರು ನಂಬಿದ್ದಾರೆ. ಆದರೆ ಒಮ್ಮೆ ಸಿಡುಬನ್ನು ಅನುಭವಿಸಿದವರೆಲ್ಲರೂ ಜೀವಾವಧಿ ರಕ್ಷಣೆ ಪಡೆದಿರುವರೆಂದು ಅನೇಕ ನಿದರ್ಶನಗಳಿಂದ ಸ್ಪಷ್ಟವಾಗಿ ವ್ಯಕ್ತಪಟ್ಟಿದೆ. ಆದ್ದರಿಂದ ಅಂಥವರೂ ಕೂಡ ದೀರ್ಘಾವಧಿ ಎಂದರೆ ಐದು ವರ್ಷಗಳಿಗೆ ಒಂದು ಬಾರಿಯಾದರೂ ದೇವಿಯನ್ನು ಹಾಕಿಸಿಕೊಳ್ಳುವುದು ಒಳ್ಳೆಯದು.

ತಕ್ಷಣದ ಮುಂಜಾಗ್ರತೆ

ಸಮೀಪದಲ್ಲಿ ಸಿಡುಬಿನ ಸೋಂಕು ಇರುವುದೆಂದು ತಿಳಿದ ಕೂಡಲೆ ಎಲ್ಲರೂ ದೇವಿ ಹಾಕಿಸಿಕೊಂಡು ರಕ್ಷಣೆ ಪಡೆಯಬೇಕು. ಸಿಡುಬು ಬಹು ಜಾಗ್ರತೆ ಅಂದರೆ ವಾಯುವೇಗದಲ್ಲಿ ಹರಡುವ ಸ್ವಭಾವವುಳ್ಳದ್ದರಿಂದ ದೇವಿ ಹಾಕಿಸಿಕೊಂಡು ರಕ್ಷಣೆ ಪಡೆಯುವುದರಲ್ಲಿ ಜನರು ಖಂಡಿತ ಉದಾಸೀನರಾಗಬಾರದು. ಈಗ ಅಲ್ಲಲ್ಲಿ ಸಿಡುಬಿನ ಉಪದ್ರವವು ತಲೆದೋರಿರುವುದೆಂದು ವರದಿಗಳು ಬರುತ್ತಿವೆ. ಆದ್ದರಿಂದ ಸಂಸ್ಥಾನಾದ್ಯಂತವೂ ಜನರು ಸ್ಥಳೀಯ ಡಾಕ್ಟರರಿಂದಲೋ ಆರೋಗ್ಯ ಇಲಾಖೆಯ ಸಿಬ್ಬಂದಿಯವರಿಂದಲೋ ದೇವಿ ಹಾಕಿಸಿಕೊಂಡು ಉಪದ್ರವವು ಹರಡದಂತೆ ಮುಂಜಾಗ್ರತೆ ಕ್ರಮವನ್ನು ಕೈಗೊಳ್ಳುವುದು ಜನಾರೋಗ್ಯ ದೃಷ್ಟಿಯಿಂದ ಅತ್ಯಾವಶ್ಯಕವಾಗಿದೆ.

—ಮೈಸೂರು ಆರೋಗ್ಯ ಪತ್ರಿಕೆಯಿಂದ

ಎಂಪೈರ್ ಆಫ್ ಇಂಡಿಯಾ

ಲೈಫ್ ಎಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಸ್ಥಾಪನೆ,—1897

48ನೇ ವಾರ್ಷಿಕ ವರದಿಯಲ್ಲಿನ ಕೆಲವು ಸ್ಪಷ್ಟ ಸಂಗತಿಗಳು	ಒಟ್ಟು ಆದಾಯ ...	1,07,09,000	ಮೀರಿದೆ
	ಚಾಲ್ತಿಯಿರುವ ವಿಮೆ ..	17,74,52,000	,,
	ಆಸ್ತಿ .	6,67,60,000	,,
ಕಂಪೆನಿಯು ಆದಿಯಲ್ಲಿ ಕೊಟ್ಟ ಕ್ಲೈಮುಗಳು		8,83,62,000	,,

ಬ್ರಾಂಚ್ ಕಛೇರಿ: ಡಿಸ್ಟ್ರಿಕ್ಟ್ ಬೋರ್ಡ್ ಬಿಲ್ಡಿಂಗ್, ಕೆಂಪೇಗೌಡರಸ್ತೆ, ಬೆಂಗಳೂರು.

ಏಜೆನ್ಸಿ ಅರ್ಜಿಗಳನ್ನು ಸ್ವಾಗತಿಸಿದೆ.

ಪ್ರಧಾನ ಕಛೇರಿ: ಎಂಪೈರ್ ಆಫ್ ಇಂಡಿಯಾ ಲೈಫ್ ಬಿಲ್ಡಿಂಗ್, ಬೊಂಬಾಯಿ

ವಿಮೆ ಮಾಡಲು ಇಲ್ಲವೇ ಪ್ರತಿನಿಧಿಸಲು

ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್.

ಇವರ ಸಲಹೆಗಿಂತ ಉತ್ತಮ ಮಾರ್ಗವಿಲ್ಲ

ಸಂಸ್ಥಾನಗಳನ್ನೊಳಗೊಂಡ ದಕ್ಷಿಣ ಹಿಂದೂಸ್ಥಾನದ ಮದ್ರಾಸ್ ಬ್ರಾಂಚಿನ ಸೆಕ್ರೆಟರಿಗಳು.

ದಿ ಬೊಂಬೆ ಲೈಫ್ ಅಶ್ಯೂರೆನ್ಸ್ ಕಂ. ಲಿಮಿಟೆಡ್.

30 ಮೌಂಟ್ ರೋಡ್, ಪೋ. ಬಾ ನಂ. 337, ಮದ್ರಾಸು 2

ಬೊಂಬೆ ಲೈಫ್ ಬಿಲ್ಡಿಂಗ್, ಪೋ ಬಾ ನಂ 1, ಉಡುಪಿ.

(ಟೆಲಿಫೋನ್ ನಂ. 8398)

ಇತರ ಆಫೀಸುಗಳು:—ಬೆಂಗಳೂರು, ತಿರುವೆಂಡ್ರಂ, ಕಲ್ಲಿಕೋಟೆ, ಮಂಗಳೂರು, ಮಧುರೆ, ಮತ್ತು ಬೊಂಬಾಯಿ.

ಸ್ವತಂತ್ರ ಭಾರತದಲ್ಲಿ.

ಈ ವಾರದ ಘಟನೆಗಳು.

ಲೇ:—“ಗಣೇಶ” ಮಡಿಕೇರಿ

ಆದರ್ಶನೀಯ.

ಮೊನ್ನೆಯಾಗಿ ಅಖಿಲಭಾರತ ಸಮಾಜವಾದಿ ಪಕ್ಷದ ಮುಖಂಡರಾದ ಡಾ. ರಾಮಮನೋಹರ ಲೋಹಿಯಾರವರನ್ನು ಡೆಲ್ಲಿ ಕಾರಾಗೃಹದಲ್ಲಿ ಸ್ಥಾನಬದ್ಧತೆಯಲ್ಲಿಡಲಾಗಿತ್ತು. ಆಗ ಡಾ. ಲೋಹಿಯಾರವರಿಗೆ ಪಂಡಿತ ಜವಾಹರ್‌ಲಾಲ್ ನೆಹರೂ ಮತ್ತು ಶ್ರೀಮತಿ ಇಂದಿರಾಗಾಂಧಿಯವರು ಒಂದು ಮಾವಿನ ಹಣ್ಣಿನ ಬುಟ್ಟಿಯನ್ನು ಕಳುಹಿಸಿಕೊಟ್ಟರು.

ಈ ವರ್ತನೆಯು ಲೋಹಿಯಾ ಮತ್ತು ನೆಹರೂರವರಲ್ಲಿರುವ ಸ್ನೇಹವನ್ನು ತೋರಿಸುತ್ತದಾದರೂ ಅವರಿಬ್ಬರ ವಿಶಾಲ ದೃಷ್ಟಿಯನ್ನೂ ಎತ್ತಿ ಹೇಳುತ್ತದೆ. ಜಾತಿ, ಮತ, ರಾಜಕೀಯ ಯಾವುದೇ ಭಿನ್ನಾಭಿಪ್ರಾಯವಿದ್ದರೂ ಸ್ನೇಹ ಮತ್ತು ಗುಣ ನಡತೆಗಳಿಗೆ ಚ್ಯುತಿ ಬರಬಾರದು. ನೆಹರೂರವರು ಲೋಹಿಯಾರವರಿಗೆ ಕಳುಹಿಸಿದ ಈ ಕಾಣಿಕೆಯು ಅಂಥಾ ಮನೋಭಾವದಿಂದ ಕೂಡಿದ್ದು.

ಜವಾಹರ್ ಮತ್ತು ಲೋಹಿಯಾರವರಲ್ಲಿ ರಾಜಕೀಯ ಭಿನ್ನಾಭಿಪ್ರಾಯವಿದೆ. ಅದರಲ್ಲಿಯೂ ಜವಾಹರರೇ ಮುಖ್ಯ ಮಂತ್ರಿಯಾಗಿರುವ ಇಂಡಿಯಾ ಸರಕಾರದ ಆಜ್ಞೆಯಂತೆಯೇ ಲೋಹಿಯಾರವರ ದಸ್ತಗಿರಿಯಾದುದಾಗಿದೆ. ಅಂಥಾವರಿಗೆ ಮಾವಿನ ಹಣ್ಣಿನ ಉಡುಗೊರೆ ಕಳುಹಿಸಿದ ಜವಾಹರಲಾಲರ ನಿರ್ವ್ಯಾಜ್ಯಸ್ನೇಹ, ಉದಾತ್ತ ಮನೋವೃತ್ತಿ ಪ್ರತಿಯೊಬ್ಬನಿಗೂ ಬೇಕು. ರಾಜಕೀಯ ಅಭಿಪ್ರಾಯ ಬೇಧವಿದ್ದ ಮಾತ್ರಕ್ಕೆ ವ್ಯಕ್ತಿದೂಷಣೆ ಮಾಡುತ್ತಾ ಶತ್ರುಗಳಂತೆ ವರ್ತಿಸುವ ಜನರು ಇದರಿಂದ ಪಾಠಕಲಿಯಬೇಕು.

ಅರಸರ ಹುಟ್ಟುಹಬ್ಬ.

ತಾರೀಖು ೬ರಲ್ಲಿ ಇಂಗ್ಲೆಂಡಿನ ಅರಸರಾದ ಆರನೇ ಜಾರ್ಜರು ಹುಟ್ಟಿದ ದಿನ. ಈ ದಿನವನ್ನು ಹಿಂದೂದೇಶವು ಆಚರಿಸಿತು. ಹಿಂದೂದೇಶವು ಸ್ವತಂತ್ರವಾಗಿ, ಬ್ರಿಟಿಷ್ ಸರಕಾರದ ಹಿಡಿತವಿಲ್ಲದಿರುವಾಗ ಈ ದಿನಾಚರಣೆಯ ಅವಶ್ಯಕತೆ ಏನಿತ್ತೆಂದು ಕೆಲವರು ಪ್ರಶ್ನಿಸುತ್ತಾರೆ. ರಾಜ್ಯಘಟನಾ ಸಭೆಗೆ ಈ ಕಾರಣಕ್ಕಾಗಿ ಒಂದು ದಿನ ರಜೆಯ ಸೂಚನೆ ಬಂದಾಗ ಅನೇಕರು ವಿರೋಧಿಸಿದರು. ಶತಮಾನಗಳವರೆಗೆ ನಮ್ಮನ್ನು ಗುಲಾಮರನ್ನಾಗಿ ಮಾಡಿದ ಬ್ರಿಟಿಷರ ಬಗ್ಗೆ ನಮ್ಮಲ್ಲಿ ಬೇಸರವಿರುವುದು ಸ್ವಾಭಾವಿಕ. ಆದರೆ ನಮ್ಮ ದ್ವೇಷ ಬ್ರಿಟಿಷ್ ಆಡಳಿತ ಕ್ರಮದ ವಿರುದ್ಧ, ವಿನಹ ಬ್ರಿಟಿಷರ ವಿರುದ್ಧವಲ್ಲ. ಆರನೇ ಜಾರ್ಜ್ ವ್ಯಕ್ತಿಯ ಮೇಲೆ ಭಾರತೀಯರಿಗೆ ದ್ವೇಷವಿಲ್ಲ. ಹಿಂದೂಸ್ಥಾನದ ಸಂಸ್ಕೃತಿ ಸಂಕೀರ್ಣವಾದುದಲ್ಲ. ಮಹಾತ್ಮಾಗಾಂಧಿಯವರ ಗರಡಿಯಲ್ಲಿ ಆಡಿ ಬೆಳೆದ ಭಾರತೀಯರು ವ್ಯಕ್ತಿದ್ವೇಷದ ಪರಿಧಿಯನ್ನು ದಾಟಿರಬೇಕು. ಮೇಲಾಗಿ ಇದು ಭಾರತೀಯ ರಿಪಬ್ಲಿಕದ ಕಡೆ ಜಯಂತಿ. ಹಿಂದೂದೇಶವನ್ನು ಸ್ವತಂತ್ರ ರಿಪಬ್ಲಿಕ್ ಎಂದು ಸಾರಿದ ನಂತರ ಈ ಸಂಪ್ರದಾಯ ನಿಂತು ಹೋಗುವದು. ಆದ್ದರಿಂದ ಇದಕ್ಕಾಗಿ ಬ್ರಿಟಿಷರ ಬಗ್ಗೆ ದ್ವೇಷ ಸಲ್ಲದ ಮಾತು. ಮುಂದೆ ನಿಂತ ಮೇಲೆ ಮರದ ಹಸಿಗಳಿಗೆ ಗಾಬರಿಗೊಳ್ಳಬಾರದು. ಬ್ರಿಟಿಷರ ಆಡಳಿತವೇ ನಾಶವಾಗಿದೆ. ಈ ಒಂದು ಸಂಪ್ರದಾಯಿಕ ಆಚರಣೆಯಿಂದ ಸ್ನೇಹ ಉಳಿಯುವದೇ ವಿನಹ ಯಾರಿಗೂ ಹಾನಿಯಾಗದು.

ವಿಭಜನೆ

ಹಿಂದೂದೇಶದಲ್ಲಿ ಈಗಿರುವ ವಿವಿಧ ಪ್ರಾಂತ, ವಿವಿಧ ಸಂಸ್ಥಾನಗಳನ್ನೆಲ್ಲಾ ಒಂದು ಕೂಡಿಸಿ ಆಡಳಿತ ಸೌಕರ್ಯದ ದೃಷ್ಟಿಯಿಂದ ಈಗಿನ ವಾಲಿಟರಿ ಪ್ರಾದೇಶಿಕ ವಿಭಾಗ ಕ್ಷೇತ್ರಕ್ಕೆ ಅನುಗುಣವಾಗಿ ಹಿಂದೂಸ್ಥಾನವನ್ನು ನಾಲ್ಕು ಅಥವ ಐದು ವಿಭಾಗ ಮಾಡಬೇಕೆಂಬ ಹೊಸ ಯೋಜನೆಯನ್ನು ರಾಜ್ಯಘಟನಾ ಸಮಿತಿಯ ಮುಂದೆ ಬಂಗಾಳದ ಕೆಲವು ಸದಸ್ಯರು ತಂದಿರುವರು. ಇವರ ಅಭಿಪ್ರಾಯದಂತೆ ಹಿಂದೂದೇಶಕ್ಕೆ ಒಂದೇ ಕಾಯಿದೆ ಮಂಡಲ, ಒಂದೇ ಮಂತ್ರಿಮಂಡಳ, ಈ ಆಡಳಿತ ಕ್ರಮ ವಿಭಾಗಕ್ಕಾಗಿ ದೇಶವನ್ನು ನಾಲ್ಕೈದು ಭಾಗಮಾಡಬೇಕೆಂದಿದೆ. ಈಗಿರುವ ವಿವಿಧ ರೀತಿಯ ಆಡಳಿತ, ಅಧಿಕಾರ ವರ್ಗದ ಬಹು ಸಂಖ್ಯೆ, ಆ ಪರಿಣಾಮವಾಗಿ ಹಬ್ಬುವ ಅವ್ಯವಸ್ಥೆ, ಅಪ್ರಾಮಾಣಿಕತೆ, ಘರ್ಷಣೆಗಳನ್ನು ನಿಲ್ಲಿಸಲು ಈ ಏರ್ಪಾಡು ಉತ್ತಮವೆಂದು ಅವರ ಮತ. ಹಿಂದೂದೇಶದ ರಾಜ್ಯಘಟನೆಯು ಪೂರ್ತಿಯಾಗುತ್ತಾ ಬರುತ್ತಿರುವಾಗ ಈ ವಿಷಯವನ್ನು ಎತ್ತಿಕೊಳ್ಳಬೇಕೇ ಎಂದು ವಿಚಾರಿಸಿ ಮುಂದುವರಿದೆ. ಮುಂದೆ ಬರಲಿರುವ ಭಾಷಾವಾರು ಪ್ರಾಂತ ರಚನಾ ಘರ್ಷಣೆ, ಪ್ರಾಂತೀಯ ಸರಕಾರಗಳ ಚಿಕ್ಕ [illegible] ಇವುಗಳನ್ನು ನಿವಾರಿಸಲು ಇದು ಯೋಗ್ಯವೆಂದು ಹಲವರು ಹೇಳುತ್ತಿದ್ದಾರೆ. ರಾಜ್ಯಘಟನಾ ಸಭೆಯು ಈ ಸೂಚನೆಯನ್ನು ಹೇಗೆ ಸ್ವಾಗತಿಸುವದೆಂದು ನೋಡಬೇಕು.

ಗುದ್ದಾಟದ ಚುನಾವಣೆ.

ಪಶ್ಚಿಮ ಬಂಗಾಳದ ನ್ಯಾಯ ವಿಧಾಯಕ ಸಭೆಯಲ್ಲಿ ತೆರವಾದ ಒಂದು ಸ್ಥಳಕ್ಕೆ ಚುನಾವಣೆ ನಡೆಯಿತು. ಈ ಚುನಾವಣೆಗೆ ಕಾಂಗ್ರೆಸಿನ ಪರಿಯಿಂದ ಶ್ರೀ. ಸುರೇಶಚಂದ್ರದಾಸರು, ಅವರಿಗೆ ವಿರೋಧವಾಗಿ ಶ್ರೀ. ಶರತ್‌ಚಂದ್ರಬೋಸರೂ, ಸ್ಪರ್ಧಿಸಿದ್ದರು. ಈ ಚುನಾವಣೆ ಪ್ರಚಾರದ ಕಾಲಕ್ಕೆ ಪರಿಸ್ಥಿತಿಯಲ್ಲಿ ಬಹು ಬಿಸಿ ಏರಿತ್ತು. ತಾ. ೧೧ರಲ್ಲಿ ಕೈಕೈ ಹತ್ತಿ, ಕೆಲವು ಜನರ ಮರಣವಾಗಿದೆ. ಶರತ್‌ಚಂದ್ರಬೋಸರು ಸ್ವಿಟ್ಜರ್ಲೆಂಡಿನಲ್ಲಿದ್ದಾರೆ. ಅವರ ಪರ ಇಲ್ಲಿ ಅವರ ಪಕ್ಷದವರು ಹೋರಾಡುತ್ತಿದ್ದಾರೆ. ತಾರೀಖು ೧೩ರಲ್ಲಿ ಚುನಾವಣೆ ನಡೆಯಿತು. ಚುನಾವಣೆಯಲ್ಲಿ ಶಾಂತಿಯನ್ನು ಕಾಯಲು ೧೫೦೦ ಮಂದಿ ಸಶಸ್ತ್ರ ಪೋಲೀಸರೂ, ೪೦೦ ಮಂದಿ ಅಧಿಕಾರಿಗಳೂ ನಿಯೋಜಿತರಾಗಿದ್ದರು. ಸ್ತ್ರೀಪೋಲೀಸ್ ದಳದವರ ಏರ್ಪಾಡೂ ಆಗಿತ್ತು. ಆದರೂ ಒಂದೆಡೆ ಶ್ರೀಮತಿ ಸುಚೇತಾ ಕೃಪಾಲಿನಿ, ರೇಣುಕಾ ರೇ ಮೊದಲಾದ ಮುಂದಾಳುಗಳ ಮೇಲೆ ಜನರು ಕೊಳೆ ಪದಾರ್ಥಗಳನ್ನು ಎಸೆದರು. ಚುನಾವಣೆಯಲ್ಲಿ ಶರತ್‌ಚಂದ್ರಬೋಸರು ಆರಿಸಿಬಂದಿರುವರು. ಬೋಸರಿಗೆ ೧೯೦೩೦ ಓಟುಗಳೂ ಕಾಂಗ್ರೆಸು ಪರಿಯ ದಾಸರಿಗೆ ೫೭೮೦ ಓಟುಗಳೂ ದೊರೆತವು.

ಫ್ರೆಂಚ್ ವಸಾಹತುಗಳು.

ಭಾರತದಲ್ಲಿ ಇನ್ನೂ ಫ್ರೆಂಚ್ ವಸಾಹತುಗಳಾಗಿ ಉಳಿದಿರುವ ಪಾಂಡಿಚೇರಿ, ಚಂದ್ರನಾಗೂರು ಮೊದಲಾದ ಐದು ಕ್ಷೇತ್ರಗಳ ಭವಿಷ್ಯವು ನಿರ್ಣಯವಾಗಿಲ್ಲ. ಬ್ರಿಟಿಷರು ಭಾರತವನ್ನು ಹಿಡಿದಾಗಲೇ ಈ ಭಾಗಗಳು ಫ್ರೆಂಚರ ವಶವಾಗಿವೆ. ಈಗ ಭಾರತ ಶರೀರದಲ್ಲಿದ್ದ ಪರದಾಸ್ಯರೋಗವು ವಾಸಿಯಾಗಿ ಶರೀರದ ಬಿಡುಗಡೆಯಾದರೂ ಆ ಬೆರಳಿನಲ್ಲಿ, ಈ ಕಾಲ್ಬೆರಳಿನಲ್ಲಿ ಎಂಬಂತೆ ಈ ಒಂದೆರಡು ವ್ರಣಗಳು ಉಳಿದುಕೊಂಡಿವೆ. ಈ ಬಗ್ಗೆ ಭಾರತ ಸರಕಾರವು ಆಸ್ಥೆವಹಿಸಿ ಈ ಭಾಗಗಳ ಭವಿಷ್ಯವನ್ನು ಅಲ್ಲಿಯ ಜನರೇ ತೀರ್ಮಾನಿಸುವ ಬಗ್ಗೆ ಮಾತುಕತೆಗಳಾಗಿವೆ. ಚಂದ್ರನಾಗೋರಿನಲ್ಲಿ ಈ ತಾ. ೧೯ ರಲ್ಲೂ ಉಳಿದ ನಾಲ್ಕು ವಸಾಹತುಗಳಲ್ಲಿ ಡಿಸೆಂಬರ್ ೧೧ ರಲ್ಲೂ ಮತಗಣನೆಯಾಗಲಿದೆ. ಆದರೆ ಮಧ್ಯ ಮಧ್ಯೆ ಫ್ರೆಂಚರು ತೊಂದರೆ ಕೊಡುತ್ತಿದ್ದಾರೆ. ಈ ವಸಾಹತುಗಳ ಆಡಳಿತವನ್ನು ಭಾರತಕ್ಕೊಪ್ಪಿಸಿ ಬ್ರಿಟಿಷರಂತೆ ಭಾರತದ ಜನರ ಕೀರ್ತಿ ಗಳಿಸುವ ಆಲೋಚನೆ ಮಾಡದೆ ಫ್ರೆಂಚ್ ಸರಕಾರವು ಚಡಪಡಿಸುತ್ತಿದೆ. ಆದರೆ ಇದು ಬಹು ಸಮಯದ ವರೆಗೆ ನಡೆಯಲಾರದು.

ಅಂತರರಾಷ್ಟ್ರೀಯ ರಂಗದಲ್ಲಿ.

ಪ್ರಾಮುಖ್ಯ ಘಟನೆ.

ಲೇ:—„ಗುಪ್ತ”

ನೇಪಾಳ.

ಭಾರತ ಉತ್ತರದಲ್ಲಿರುವ ಸ್ವತಂತ್ರ ರಾಜ್ಯವಾದ ನೇಪಾಳವು ಯುದ್ಧರಂಗವಾಗಿ ಅಸ್ಥಿರತೆಗೆ ಒಳಪಡುವ ಸೂಚನೆ ತೋರುತ್ತಿದೆ. ಇಲ್ಲಿಯ ಅರಸರ ರಾಣಾರೆಂಬ ಅಧಿಕಾರಿಗಳು ಆಡಳಿತ ನಡೆಸುತ್ತಿದ್ದಾರೆ. ಇವರು ನಿರಂಕುಶ ಆಡಳಿತ ಸ್ವತಂತ್ರ ಹಿಂದೂಸ್ಥಾನದ ಗಾಳಿ ಆ ದೇಶಕ್ಕೂ ಬೀಸಿದೆ. ಅಲ್ಲಿಯ ಜನರು ರಾಣಾರ ನಿರಂಕುಶ ಆಡಳಿತದ ವಿರುದ್ಧ ಚಳವಳ ಪ್ರಾರಂಭಿಸಿದ್ದಾರೆ. ಈ ಚಳವಳಕ್ಕೆ ಹಿಂದೂದೇಶದ ಸಮಾಜವಾದಿಗಳು ಬೆಂಬಲಕೊಡುತ್ತಿದ್ದಾರೆ. ಈ ಚಳವಳದ ಸಂಬಂಧ ಡೆಲ್ಲಿಯಲ್ಲಿಯ ನೇಪಾಳ ರಾಯಭಾರ ಕಚೇರಿಯನ್ನು ಮುತ್ತಿದು ಪ್ರದರ್ಶನ ನಡೆಸಿದ ಕಾರಣವೇ ಡಾ. ರಾಮಮನೋಹರ್ ಲೋಹಿಯಾರವರ ದಸ್ತಗಿರಿಯಾಗಿತ್ತು. ನೇಪಾಳ ಜನತಾ ಚಳವಳದ ಬಗ್ಗೆ ನೆಹರೂರವರು ತಮ್ಮ ಆಸಕ್ತಿ ಪ್ರಕಟಿಸಿದ್ದಾರೆ.

ಅಫಘಾನಿಸ್ಥಾನ

ಪಾಕಿಸ್ಥಾನ–ಅಫಘಾನಿಸ್ಥಾನಗಳೊಳಗೆ ಘರ್ಷಣೆ ಪ್ರಾರಂಭವಾಗಿದೆ. ಈ ಘರ್ಷಣೆಗೆ ಗಡಿನಾಡೇ ಕಾರಣ. ಗಡಿನಾಡು ಹಿಂದೂದೇಶಕ್ಕೆ ಸೇರಬೇಕೇ ಯಾ ಪಾಕಿಸ್ಥಾನಕ್ಕೆ ಸೇರಬೇಕೇ ಎಂಬ ಬಗ್ಗೆ ಹಿಂದೊಮ್ಮೆ ತೀರ್ಮಾನವಾಯಿತು. ಆಗ ಗಡಿನಾಡು ತನ್ನದೇ ಆದ ಪರ ನಿಸ್ಥಾನವಾಗುವದೆಂದು ಗಡಿನಾಡಿನ ಗಾಂಧಿ ಮುತ್ತಿತರರು ಚಳವಳ ಹೂಡಿದ್ದರು. ಅವರನ್ನು ಪಾಕಿಸ್ಥಾನ ಸರಕಾರವು ಜೈಲಿನಲ್ಲಿರಿಸಿದೆ. ಗಡಿನಾಡಿನ ಜನರ ಸಂಸ್ಕೃತಿ, ನೀತಿಯ ದೃಷ್ಟಿಯಿಂದಲೂ, ವಹಿವಾಟು, ಭೌಗೋಲಿಕ ಮೊದಲಾದ ಸಂಬಂಧದಿಂದಲೂ ತಮಗೆ ಸೇರಬೇಕೆಂದು ಅಫಘಾನಿಸ್ಥಾನವು ಹಿಂದಿನಿಂದಲೇ ವಾದಿಸುತ್ತಾ ಬಂದಿದೆ. ಪಾಕಿಸ್ಥಾನವು ಇದನ್ನು ಧಿಕ್ಕರಿಸಿ ಅನೇಕ ವೇಳೆ ಸೈನ್ಯ ಬಾಂಬುಗಳನ್ನು ಉಪಯೋಗಿಸಿದೆ. ಇತ್ತೀಚಿಗೆ ಇಕ್ಕಡೆಯ ವಾದವು ಬಿಸಿ ಏರಿದೆ. ಪಾಕಿಸ್ಥಾನಕ್ಕೆ ಹೋಗಿ ಬರುವ ವಾಹನಗಳನ್ನು ನಿಯಂತ್ರಿಸಲಾಗಿದೆ. ಪಾಕಿಸ್ಥಾನದ ದೊಂಗಿ ವರ್ತನೆಯು ಅನೇಕರಿಗೆ ಬೇಸರ ಹಿಡಿಸಿದೆ. ಅಲ್ಲಿಯ ಭವಿಷ್ಯ ಹೇಗಾಗುವದೋ ಮುಂದೆ ನೋಡಲಿದೆ.

ಬರ್ಮಾ ಹೋರಾಟ.

ಬರ್ಮಾದ ಒಳಗಿನ ಹೋರಾಟವು ಗಣ್ಯ ಬದಲಾವಣೆಯಿಲ್ಲದೆ ಸಾಗಿದೆ ಎನ್ನಬಹುದು. ಆದರೆ ಬರ್ಮಾ ರಾಜಧಾನಿಯಲ್ಲಿ ಸುಮಾರು ೩೦ ಮೈಲುಗಳ ದೂರದಲ್ಲಿ ಕಮ್ಯೂನಿಸ್ಟರು ಧಾಳಿ ಪ್ರಾರಂಭಿಸಿರುವರು. ಚಿಂದ್ವಿನ್ ನದಿಯ ಸೇತುವೆಗಳನ್ನು ಕತ್ತರಿಸಿರುವರು. ಇವರನ್ನು ಎದುರಿಸಲು ಬರ್ಮಾ ಸರಕಾರವು ಕೂಡಲೇ ಸೇನೆಗಳನ್ನು ಕಳುಹಿಸಿದೆ. ಅಲ್ಲಿ ನಡೆದ ಘರ್ಷಣೆಯಲ್ಲಿ ಆರು ಜನ ಕಮ್ಯೂನಿಸ್ಟರು ಸತ್ತರು. ಇಂಡಿಯಾ ಸರಕಾರವು ಆಸಾಮ್ ಗಡಿಯಲ್ಲಿ ತಕ್ಕ ಸಿದ್ಧತೆ ಮಾಡಿದೆ.

ಪ್ಯಾರಿಸ್ ಸಮ್ಮೇಳನ

ಜರ್ಮನಿಯ ಬಗ್ಗೆ ಒಂದು ಸೂಕ್ತ ತೀರ್ಮಾನಕ್ಕೆ ಬರುವ ಉದ್ದೇಶದಿಂದ ಪ್ಯಾರಿಸ್ ನಗರದಲ್ಲಿ ಕೂಡಿದ ರಷ್ಯಾ, ಅಮೇರಿಕಾ, ಬ್ರಿಟನ್ ಮತ್ತು ಫ್ರಾನ್ಸ್‌ಗಳ ವಿದೇಶ ಮಂತ್ರಿಗಳ ಸಮ್ಮೇಳನವು ನಿರರ್ಥಕವಾದಂತೆ. ಏಕೀಕೃತ ಜರ್ಮನಿಗೆ ಈ ಚತುರ್ರಾಷ್ಟ್ರಗಳ ಸಂಯುಕ್ತ ಆಡಳಿತವನ್ನು ಏರ್ಪಡಿಸುವ ಯೋಜನೆ ಜಯಶೀಲವಾಗಿಲ್ಲ. ಆ ಬಗ್ಗೆಯ ರಷ್ಯಾದ ಯೋಜನೆಗೂ ಪಾ

(೬ನೇ ಪುಟ ನೋಡಿರಿ)

ಕೊಡಗು

ತಾ. ೧೭-೬-೧೯೪೯ನೇ ಶುಕ್ರವಾರ

ಸ್ಕೂಲ್ ಫೈನಲ್ ಪರೀಕ್ಷಾ ಫಲಿತಾಂಶ.

ಸ್ಕೂಲ್ ಫೈನಲ್ ಪರೀಕ್ಷೆಯ ಫಲಿತಾಂಶ ಹೊರಬಿದ್ದಿದೆ. ಕೊಡಗಿನ ಏಳು ಹೈಸ್ಕೂಲುಗಳಿಂದ ಈ ವರ್ಷ ಪರೀಕ್ಷೆಗೆ ಕೂತ ೩೪೭ ವಿದ್ಯಾರ್ಥಿಗಳಲ್ಲಿ ೧೫೭ ವಿದ್ಯಾರ್ಥಿಗಳು ಅಂದರೆ ಶೇಕಡ ಸುಮಾರು ೪೪ ರಂತೆ ತೇರ್ಗಡೆಯಾಗಿದ್ದಾರೆ. ಇದು ತೃಪ್ತಿಕರವೆಂದು ಹೇಳಲಾಗುವದಿಲ್ಲ. ಈ ಸಂದರ್ಭದಲ್ಲಿ ಯಾವ ಹೈಸ್ಕೂಲು ಹೇಗೆ ಮುಂದರಿಯುತ್ತಿದೆ ಎಂಬುದರ ಪ್ರತ್ಯಕ್ಷಾವಲೋಕನವನ್ನಿಲ್ಲಿ ಮಾಡಿದರೆ ಅಪ್ರಸ್ತುತವಾಗಲಾರದು.

ಮಡಿಕೇರಿ ಸೆಂಟ್ರಲ್ ಹೈಸ್ಕೂಲಿನ ಪರೀಕ್ಷಾ ಫಲಿತಾಂಶವು ಹೊಗಳಲರ್ಹವಾಗಿದೆ. ಈ ಹೈಸ್ಕೂಲಿನಲ್ಲಿ ೧೯೪೭ರಲ್ಲಿ ಶೇಕಡ ೪೯ರಷ್ಟು ವಿದ್ಯಾರ್ಥಿಗಳು ಪಾಸಾಗಿದ್ದರು. ೧೯೪೮ರಲ್ಲಿ ಶೇಕಡ ೫೮ಕ್ಕೆ ಇದು ಏರಿತು. ಈ ವರ್ಷ ಶೇಕಡ ೭೦ರಂತೆ ತೇರ್ಗಡೆಯಾಗಿರುವದು ಶುಭ ಚಿಹ್ನೆ. ಈ ಮುನ್ನಡೆಯನ್ನೇ ಪಾಲಿಸಿಕೊಂಡು ಈ ಶಾಲೆಯು ಮುಂದೆ ಸಾಗುವಂತೆ ಅಧಿಕಾರಿವರ್ಗದವರು ತೊಂದರೆ ತೆಗೆದುಕೊಳ್ಳುವರೆಂದು ನಂಬಲಾಗಿದೆ.

ಮಡಿಕೇರಿ ಹುಡುಗಿಯರ ಶಾಲೆಯು ಎಂದಿನಂತೆ ಕೊಡಗಿನ ಶಾಲೆಗಳಲ್ಲಿ ಪ್ರಥಮ ದರ್ಜೆಯ ಫಲಿತಾಂಶವನ್ನು ಕೊಟ್ಟಿದ್ದರೂ ಅದರ ಕಾರ್ಯಕಲಾಪ ಪ್ರಗತಿಪಥದಲ್ಲಿ ಸಾಗಿಲ್ಲವೆನ್ನಬೇಕಾಗುತ್ತದೆ. ೧೯೪೭ರಲ್ಲಿ ಶೇಕಡ ೮೩ರಂತೆಯೂ, ೧೯೪೮ರಲ್ಲಿ ಶೇಕಡ ೮೭ರಂತೆಯೂ ಫಲಿತಾಂಶವನ್ನು ಕೊಟ್ಟ ಈ ಶಾಲೆ ಈ ವರ್ಷ ಶೇಕಡ ೭೦ಕ್ಕೆ ಇಳಿಯಬಾರದಿತ್ತು. ಈ ಶಾಲೆಯ ಅಧ್ಯಾಪಕ ವರ್ಗವು ಶ್ರಮವಹಿಸಿ ತಮ್ಮ ಈ ವರೆಗಿನ ಹೆಸರನ್ನು ಉಳಿಸಿಕೊಳ್ಳುವರೆಂದು ಆಶಿಸಲಾಗಿದೆ.

ವೀರಾಜಪೇಟೆ ಹೈಸ್ಕೂಲಿನ ಫಲಿತಾಂಶ ತೃಪ್ತಿಕರವಾಗಿಲ್ಲ. ೧೯೪೭ರಲ್ಲಿ ಶೇಕಡ ೬೩ರಂತೆಯೂ, ೧೯೪೮ರಲ್ಲಿ ೭೪ರಂತೆಯೂ ಫಲಿತಾಂಶ ಕೊಟ್ಟ ಈ ಶಾಲೆಯು ಈ ವರ್ಷ ಶೇಕಡ ೩೫ರ ಮಹಾಪಾತಕ್ಕಿಳಿದಿದೆ. ಇದು ಶುಭ ಚಿಹ್ನೆಯಲ್ಲ. ಈ ರೀತಿಯಲ್ಲಿ ಹಿಂದಡಿಯಿಡಲು ಶಾಲೆಯ ಬೋಧನೆಯಲ್ಲಿ ನ್ಯೂನತೆ ಇರಬೇಕು. ಅದರ ಕಾರಣವನ್ನು ಪರಿಶೀಲಿಸಿ ಕಂಡುಹಿಡಿದು ಮುಂದಿನ ವರ್ಷ ಉತ್ತಮ ಫಲಿತಾಂಶ ಕೊಡಬೇಕಾಗಿದೆ.

ಹೊಸದಾಗಿ ಸ್ಥಾಪಿತವಾದ ಹೈಸ್ಕೂಲುಗಳಲ್ಲಿ ಸೋಮವಾರಪೇಟೆ ಹೈಸ್ಕೂಲು ಪ್ರಥಮ ವರ್ಷ ಶೇಕಡ ೯೪ರಂತೆಯೂ, ದ್ವಿತೀಯ ವರ್ಷ ೫೩ರಂತೆಯೂ, ಈ ವರ್ಷ ಶೇಕಡ ೩೩ರಂತೆಯೂ ಫಲಿತಾಂಶ ಕೊಟ್ಟಿದೆ. ಈ ರೀತಿ ಶಾಲೆಯ ಸ್ಥಿತಿ ಕೆಳಗಿಳಿಯುತ್ತಿರುವದು ಶೋಚನೀಯ. ಪೊನ್ನಂಪೇಟೆ ಹೈಸ್ಕೂಲು ಇನ್ನೂ ಚೇತರಿಸಿಕೊಂಡಿಲ್ಲ. ಪ್ರಥಮ ವರ್ಷ ಶೇಕಡ ೫೫, ದ್ವಿತೀಯ ವರ್ಷ ಶೇಕಡ ೫೪, ಈ ವರ್ಷ ಶೇಕಡ ೨೫ರಂತೆ ಫಲಿತಾಂಶ ಕೊಟ್ಟಿದೆ. ಇದು ಎಂದೂ ತೃಪ್ತಿಕರವಲ್ಲ. ಶಾಲೆಯಲ್ಲಿ ಓದುವ ನೂರು ವಿದ್ಯಾರ್ಥಿಗಳಲ್ಲಿ ೭೫ ಜನರು ಪರೀಕ್ಷೆಯಲ್ಲಿ ಸೋಲುವದೆಂದರೆ ಅದು ಅಧ್ಯಾಪಕ ವರ್ಗದ ದಕ್ಷತೆಯನ್ನು ಎತ್ತಿ ತೋರಿಸುತ್ತದೆ! ಈ ಶಾಲೆ ಪ್ರಾರಂಭವಾದಂದಿನಿಂದಲೂ ಪರಿಸ್ಥಿತಿ ಹೀಗೆಯೇ ಇರುವದು ಶೋಭಿಸುವ ವಿಚಾರವಲ್ಲ. ಸಂಬಂಧಿಸಿದ ಅಧಿಕಾರಿಗಳು ಈ ಕನಿಷ್ಠ ಫಲಿತಾಂಶಕ್ಕೆ ಕಾರಣವೇನೆಂದು ಪರಿಶೀಲಿಸಿ ಅದನ್ನು ಸರಿಪಡಿಸಲು ಶೀಘ್ರ ಯತ್ನಿಸಬೇಕು. ನಾಪೋಕ್ಲು ಹೈಸ್ಕೂಲು ಈ ಮೂರು ಹೊಸ ಹೈಸ್ಕೂಲುಗಳಲ್ಲಿ ಉತ್ತಮವಾಗಿದೆ ಎನ್ನಬೇಕು. ಪ್ರಥಮ ವರ್ಷ ಶೇಕಡ ೪೪ರಂತೆ, ದ್ವಿತೀಯ ವರ್ಷ ೪೬ರಂತೆ, ಈ ವರ್ಷ ಶೇಕಡ ೪೦ರಂತೆ ಫಲಿತಾಂಶ ಕೊಟ್ಟಿದೆ. ಇದು ತೃಪ್ತಿಕರವೆಂದು ಹೇಳಲಾಗುವದಿಲ್ಲ. ಇನ್ನೂ ಅಭಿವೃದ್ಧಿಯಾಗಬೇಕು.

ಹೊಟ್ಟೆ ಬಟ್ಟೆಗೆ ಇಲ್ಲದಿದ್ದರೂ ಕೂಡ ಶಾಲೆಗಾಗಿ ಶಕ್ತಿಮೀರಿ ಸಹಾಯ ಮಾಡಿದ ಜನರು ಈ ಹೊಸ ಹೈಸ್ಕೂಲುಗಳಲ್ಲಿ ಇನ್ನೂ ಉತ್ತಮ ಫಲಿತಾಂಶಕ್ಕಾಗಿ ಆಶಿಸಿರುವರು. ಈ ಹೊಸ ಹೈಸ್ಕೂಲುಗಳ ಅಧ್ಯಾಪಕ ವರ್ಗವು ತಮ್ಮ ಜವಾಬ್ದಾರಿಯನ್ನು ಅರಿತು ತಮ್ಮ ಶಾಲೆಗಳನ್ನು ಪ್ರಗತಿ ಪಥದಲ್ಲಿ ಮುನ್ನಡೆಸುವರೆಂದು ನಂಬಿರುವೆವು.

ಈ ವರ್ಷ ಹೊಸದಾಗಿ ತೆರೆದಿರುವ ಸೆಂಟ್ ಮೈಕೇಲ್ ಹೈಸ್ಕೂಲಿನ ವಿಚಾರ ಎರಡು ಮಾತು ಹೇಳದಿರಲಾಗದು. ಈ ಶಾಲೆಯಿಂದ ಪರೀಕ್ಷೆಗೆ ಕೂತ ೩೧ ವಿದ್ಯಾರ್ಥಿಗಳಲ್ಲಿ ಕೇವಲ ಎರಡು ಜನರೇ ತೇರ್ಗಡೆಯಾಗಿರುವರೆಂದರೆ ಅಧ್ಯಾಪಕ ವರ್ಗವು ಈ ವರ್ಷವಿಡೀ ಮಕ್ಕಳಿಗೆ ಏನನ್ನು ಕಲಿಸಿತೆಂದು ಪ್ರಶ್ನಿಸಬೇಕಾಗುವದು. ಇದು ಖಾಸಗಿ ಶಾಲೆ ಹೌದು. ಸಾಧಾರಣವಾಗಿ ಖಾಸಗಿ ಶಾಲೆಗಳೇ ಹೆಚ್ಚಿನ ದಕ್ಷತೆಯಿಂದ ಕೆಲಸ ಮಾಡುವದಾಗಿವೆ. ಆದರೆ ಅದಕ್ಕೆ ಇಲ್ಲಿ ಒಂದು ಅಪವಾದವಾಗಿ ಈ ಶಾಲೆಯ ಈ ವರ್ಷದ ಫಲಿತಾಂಶವಿದೆ. ಇದು ಹೊಸ ಶಾಲೆಯಾದ್ದರಿಂದ ಈ ತಪ್ಪನ್ನು ಮನ್ನಿಸ ಬಹುದಾದರೂ ಆ ತಪ್ಪನ್ನು ಸರಿಪಡಿಸಿ ಮುಂದಿನ ವರ್ಷ ಅತ್ಯುತ್ತಮ ಫಲಿತಾಂಶವನ್ನು ಈ ಶಾಲೆಯು ತೋರಿಸಿ ಎಲ್ಲರಿಂದ ಹೊಗಳಿಕೆಗೆ ಪಾತ್ರವಾಗಲೆಂದು ನಮ್ಮ ಆಶೆ.

ಈ ವರ್ಷ ಪರೀಕ್ಷೆಗೆ ಕೂತ ೩೪೭ ವಿದ್ಯಾರ್ಥಿಗಳಲ್ಲಿ ನೂರಕ್ಕೆ ಸುಮಾರು ೬೦ ರಷ್ಟು ವಿದ್ಯಾರ್ಥಿಗಳು ತೇರ್ಗಡೆಯಾಗದಿರುವದು ವ್ಯಸನಕರ. ಕೊಡಗಿನ ವಿದ್ಯಾ ಇಲಾಖೆಯವರು ಈ ರೀತಿ ಬಡ ತಂದೆ ತಾಯಿಗಳ ಹಣವೂ, ವಿದ್ಯಾರ್ಥಿಗಳ ಚೇತನವೂ ಹಾಳಾಗುವಂತೆ ಮಾಡಬಾರದು. ಹೆಚ್ಚು ಶ್ರದ್ಧೆಯಿಂದ ಕೆಲಸ ನಡೆಯಬೇಕು. ಕೊಡಗಿನ ವಿದ್ಯಾ ಇಲಾಖೆಯು ಎಚ್ಚೆತ್ತು ಈ ನ್ಯೂನತೆಯನ್ನು ನಿವಾರಿಸುವದೇ?

ವರ್ತಮಾನ.

ಬೊಂಬಾಯಿ ವಿಶ್ವವಿದ್ಯಾಲಯದ ಇಂಟರ್ ಮೀಡಿಯೇಟ್ ಪರೀಕ್ಷೆಯಲ್ಲಿ ಶ್ರೀಮತಿ ಮಾರ್ಚಂಗಡ ಅಕ್ಕಮ್ಮನವರು ತೇರ್ಗಡೆಯಾಗಿದ್ದಾರೆ.

ತಾರೀಕು ೧೮-೫-೪೯ರಲ್ಲಿ ವೀರಾಜಪೇಟೆನಾಡು ಬಾಡಗ ಗ್ರಾಮದ ಶ್ರೀ ಕೀತಿಯಂಡ ಮೇದಪ್ಪನವರ ದನಗಳ ಗುಂಪಿಗೆ ಹುಲಿ ಬಿದ್ದು ಮೇದಪ್ಪನವರ ೫ ಕೋಣಗಳನ್ನೂ, ಒಂದು ಎಮ್ಮೆಯನ್ನೂ ಶ್ರೀ ನಂಬ್ಯಮಾಡ ಅಪ್ಪಚ್ಚನವರ ಒಂದು ಎಮ್ಮೆಯನ್ನೂ ಅಂತೂ ಒಟ್ಟು ಏಳು ರಾಸುಗಳನ್ನು ಕೊಂದು ಹಾಕಿತೆಂದು ತಿಳಿಸುತ್ತಾರೆ.

ಕರ್ತಮಾಡ ಕುಟುಂಬದ ಪಟ್ಟೇದಾರರಾಗಿದ್ದ ಕುಟ್ಟಂದಿ ಗ್ರಾಮದ ಶ್ರೀ ಮುತ್ತಣ್ಣನವರು ತಾ ೧೦-೬-೪೯ರಲ್ಲು ಶಿವಾಧೀನರಾದರು. ವೀರಾಜಪೇಟೆಯಲ್ಲಿದ್ದ ಶ್ರೀ ಕೋದಂಡ ಕಾರ್ಯಪ್ಪನವರು ತಾ. ೧೧-೬-೪೯ರಲ್ಲೂ ಸ್ವರ್ಗಸ್ಥರಾದರು.

ಮದ್ರಾಸು ವಿಶ್ವವಿದ್ಯಾಲಯದ ಬಿ. ಕಾಂ. ಪರೀಕ್ಷೆಯಲ್ಲಿ ಕುಟ್ಟೇಟಿರ ಕುಮಾರಿ ಬೊಳ್ಳಮ್ಮನವರು ತೇರ್ಗಡೆಯಾಗಿರುವರು. ಕೊಡಗಿನ ಯುವತಿಯರಲ್ಲಿ ಈ ಪರೀಕ್ಷೆಯಲ್ಲಿ ಪಾಸಾದವರಲ್ಲಿ ಇವರೇ ಮೊದಲನೆಯವರು.

ಮದ್ರಾಸಿನ ಪೋಲೀಸ್ ಕಮಿಷನರಾಗಿರುವ ಶ್ರೀ ಪೆಮ್ಮಂಡ ಮೊಣ್ಣಪ್ಪನವರಿಗೆ ಕಳೆದ ರಾಜರ ಜಯಂತ್ಯುತ್ಸವದಲ್ಲಿ "ಕಿಂಗ್ಸ್ ಪೋಲೀಸ್ ಮೆಡಲ್" ದೊರೆತಿದೆ.

ವಾಚಕರಲ್ಲಿ

ಅನಿರೀಕ್ಷಿತ ತೊಂದರೆಯ ಕಾರಣ ಈ ವಾರ ಕೇವಲ ಎಂಟೇ ಪುಟಗಳಿಂದಲೇ "ಕೊಡಗು" ಪ್ರಕಟಿಸಲ್ಪಡಬೇಕಾದುದಕ್ಕೆ ವಾಚಕರಲ್ಲಿ ಕ್ಷಮೆ ಬೇಡುತ್ತೇವೆ. ಮುಂದೆ ಎಂದಿನಂತೆ ೧೨ ಪುಟಗಳನ್ನು ಕೊಡಲಾಗುವದು.

ಮೇನೇಜರು,
"ಕೊಡಗು" ಪತ್ರಿಕೆ

ಕೊಡಗು ಸರಕಾರಿ ಕಾಲೇಜಿಗೆ ಲೆಕ್ಚರರಾಗಿ ಮಂಗಳೂರಿನ ಸಂಟ ಎಲೋಸಿಯಸ್ ಕಾಲೇಜಿನಲ್ಲಿ ೧೮ ವರ್ಷ ಸರ್ವಿಸಾದ ಶ್ರೀ ವಿ. ವೆಂಕಟರಮಣರಾವ್ ಎಂ. ಎ (ಪ್ರಥಮ ದರ್ಜೆ) ಎಲ್. ಟಿ ಯವರನ್ನೂ, ಚರಿತ್ರೆಯ ಲೆಕ್ಚರರಾಗಿ ಶ್ರೀಮತಿ ಸೋಮೆಯಂಡ ಟಿ. ಬೊಳ್ಳಮ್ಮ ಬಿ. ಎ (ಆನರ್ಸ್- ಪ್ರಥಮದರ್ಜೆ) ಇವರನ್ನು ನೇಮಿಸಲಾಗಿದೆ.

ಕೊಡಗು ಸರಕಾರದ ಕಾಲೇಜು ಮಡಿಕೇರಿಯಲ್ಲಿ ತಾ. ೩೦-೬-೪೯ರಲ್ಲಿ ತೆರೆಯಲ್ಪಡುವದು. ಹುಡುಗಿಯರಿಗೂ, ಹುಡುಗರಿಗೂ ನಿವಾಸಗೃಹದ ಏರ್ಪಾಡು ಮಾಡಿ ಸಸ್ಯ ಹಾಗೂ ಮಾಂಸಾಹಾರ ಎರಡರ ಏರ್ಪಾಡೂ ಮಾಡಲಾಗಿದೆ. ಕಾಲೇಜಿಗೆ ಸೇರಲಿಚ್ಛಿಸುವವರು ಆಯಾಯ ಹೈಸ್ಕೂಲುಗಳಲ್ಲಿ ದೊರೆಯುವ ಕಾಲೇಜಿನ ಅರ್ಜಿಫಾರಂಗಳಲ್ಲಿ ಸ್ಕೂಲ್ ಫೈನಲ್ ಪರೀಕ್ಷೆಯಲ್ಲಿ ತಾವು ಪಡೆದ ಮಾರ್ಕು ಮತ್ತು ಟ್ರಾನ್ಸ್‌ಫರ್ ಸರ್ಟಿಫಿಕೇಟಿನೊಂದಿಗೆ ಜಿಲ್ಲಾ ವಿದ್ಯಾಧಿಕಾರಿಗಳಿಗೆ ತಾ. ೨೫ರೊಳಗೆ ಬರೆಕೊಳ್ಳಬೇಕಾಗಿದೆ.

ಈ ವರ್ಷ ಕೊಡಗಿನಿಂದ ಎಸ್. ಎಸ್. ಎಲ್. ಸಿ. ಪರೀಕ್ಷೆಗೆ ಕೂತ ೩೪೭ ವಿದ್ಯಾರ್ಥಿಗಳಲ್ಲಿ ೧೫೭ ಜನರು ತೇರ್ಗಡೆಯಾಗಿರುವರು.

ಮೈಸೂರು ಫಾರೆಸ್ಟ್ ಸರ್ವಿಸಿನಲ್ಲಿ ಸಬ್ ಅಸಿಸ್ಟೆಂಟ್ ಕನ್ಸರ್ವೇಟರಾಗಿದ್ದ ಶ್ರೀ. ಮುಟ್ಟಿಯಂಡ ಸಿ ಮುತ್ತಣ್ಣನವರು ತಾ. ೮-೬-೪೯ರಲ್ಲಿ ಗುಂಡು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡರೆಂದು ತಿಳಿದು ಬಂದಿದೆ.

ಹಾರ್ಟಿಕಲ್ಚರಿಸ್ಟರಾಗಿದ್ದ ಇತ್ತಲಾಗಿ ಎಂಪ್ಲಾಯಿಮೆಂಟ್ ಆಫೀಸರಾಗಿದ್ದ ಶ್ರೀ ದೇವರಾಜನ್‌ರವರ ಬದಲು ಶ್ರೀ ನೆರವಂಡ ಕುಟ್ಟಪ್ಪನವರನ್ನು ಜಿಲ್ಲಾ ಎಂಪ್ಲಾಯಿಮೆಂಟ್ ಎಕ್ಸ್‌ಚೇಂಜ್ ಆಫೀಸರಾಗಿ ನೇಮಿಸಲಾಗಿದೆ.

ಸ್ಕೂಲ್ ಫೈನಲ್ ಪರೀಕ್ಷೆಯಲ್ಲಿ ತೇರ್ಗಡೆಯಾದವರಲ್ಲಿ ಯಾ ಕೂತವರಲ್ಲಿ ಕೊಡಗು ಸರಕಾರಿ ಸಹಕಾರ ಶಾಲೆಯಲ್ಲಿ ತರಬೇತು ಪಡೆಯಲಿಚ್ಛಿಸುವವರು ತಾ. ೨೫-೬-೪೯ರೊಳಗೆ ತಮ್ಮ ಅರ್ಜಿಗಳನ್ನು ಕಳುಹಿಸಬೇಕೆಂದೂ, ಆರಿಸಲ್ಪಟ್ಟ ಪ್ರತಿ ವಿದ್ಯಾರ್ಥಿಗೆ ಮಾಸಿಕ ರೂ. ೨೫ 'ಸ್ಟೈಪೆಂಡ್' ಕೊಡಲಾಗುವದೆಂದೂ ತಿಳಿಯ ಬಂದಿದೆ.

ಕಾಲದ ಬೆಲೆ.

ಮಾಜಿ ಬ್ರಿಟಿಷ್ ಮಹಾಪ್ರಧಾನಿ ಚರ್ಚಿಲ್ಲರು ಈಚೆಗೆ ರೇಡಿಯೋದಲ್ಲಿ '೨೦ನೇ ಶತಮಾನ, ಅದರಲ್ಲುಂಟಾದ ಆಶೆಗಳು ಎಷ್ಟು ಮಾತ್ರ ನೆರವೇರಿದವು' ಎಂಬ ವಿಷಯದಲ್ಲಿ ಮಾತನಾಡಿದರು. ಆದಕ್ಕಾಗಿ ಅವರಿಗೆ ೫೪ ನಿಮಿಷಗಳ ಕಾಲವನ್ನು ಕೊಟ್ಟಿದ್ದರು. ಅಂಥಾ ವಿಷಯವನ್ನು ಕುರಿತು ಮಾತನಾಡಬಲ್ಲ ಕೆಲವು ಮಂದಿ ಅಧಿಕಾರಿಗಳಲ್ಲಿ ಚರ್ಚಿಲ್ಲರು ಒಬ್ಬರು. ಆದುದರಿಂದ ಅವರಿಗೆ ನಿರ್ದಿಷ್ಟಪಡಿಸಲ್ಪಟ್ಟ ಕಾಲಪರಿಮಿತಿಯನ್ನು ಅತಿಕ್ರಮಿಸಿ ೨೫ ಸೆಕೆಂಡುಗಳು ಅಂದರೆ ಅರ್ಧ ನಿಮಿಷಕ್ಕೆ ಕಡಿಮೆಯಾಗಿ, ಮಾತನಾಡಿದರು. ಆ ೨೫ ಸೆಕೆಂಡುಗಳಲ್ಲಿ ವಾಣಿಜ್ಯ ಸಂಬಂಧವಾದ ಕಾರ್ಯಕ್ರಮವು ನಡೆಯಬೇಕಾಗಿತ್ತು. ಈ ಕಾರಣದಿಂದ ರೇಡಿಯೋ ಕಂಪೆನಿಗೆ ವಾಣಿಜ್ಯ ಸಂಸ್ಥೆಯಿಂದ ಬರಬೇಕಾದ ವರಮಾನ ನಷ್ಟವಾಯಿತಂತೆ! ಎಷ್ಟೆನ್ನುವಿರಾ? ೧೦೭೨೫೦ ರೂಪಾಯಿಗಳು! ಕಾಲದ ಬೆಲೆಯು ಎಷ್ಟು ಮಹತ್ವದ್ದು!

ಪ್ರಪಂಚದ ಅತಿದೊಡ್ಡ ವಿಮಾನ.

"ಬ್ರಿಸ್ಟಲ್ ಬ್ರಾಬ್ಯಾನ್" ಎಂಬ ವಿಮಾನವು ಪ್ರಪಂಚದಲ್ಲೆಲ್ಲಾ ಅತಿ ದೊಡ್ಡ ವಿಮಾನ. ಇದರ ತೂಕ ೧೩೦ ಟನ್‌ಗಳು. ಇದರಲ್ಲಿ ನೂರು ಜನಗಳಿಗಿಂತಲೂ ಹೆಚ್ಚಾಗಿ ಕುಳಿತುಕೊಳ್ಳಬಹುದು. ಈ ವಿಮಾನದಲ್ಲಿ ೮ ಎಂಜಿನ್‌ಗಳನ್ನಿಡಲಾಗಿದೆ. ಇವುಗಳ ಒಟ್ಟು ಅಶ್ವ ಶಕ್ತಿ ೨೦ ಸಾವಿರ. ಇದು ಮುಂದಿನ ಜುಲೈ ತಿಂಗಳಲ್ಲಿ ಹಾರಲು ಪ್ರಾರಂಭವಾಗುವುದು.

ಬ್ರಾಬ್ಯಾನ್ ೨ ಎಂಬುದು ಫಿಲ್ಟನ್‌ನಲ್ಲಾಗಲೇ ತಯಾರಾಗಿದೆ. ಇದರಲ್ಲಿಯೂ ೮ ಎಂಜಿನ್‌ಗಳಿರುತ್ತವೆ. 'ಬ್ರಾಬ್ಯಾನ್' ವಿಮಾನವನ್ನು ಟಪಾಲು ಸಾಗಿಸಲು ಉಪಯೋಗಿಸಲಾಗಿದೆ. ಹಾರಾಡುವ ಪ್ರಯೋಗ ಶಾಲೆಯಂತೆ ವಿಮಾನದ ಸಾಮಾನುಗಳನ್ನು ತರಲೂ ಉಪಯೋಗಿಸಲಾಗುವುದು, ಮತ್ತು ಪ್ರಯಾಣಿಕರ ಸೌಕರ್ಯಕ್ಕಾಗಿಯೂ ಉಪಯೋಗಿಸಲಾಗುವುದು.

ಸ್ಕೂಲ್ ಫೈನಲ್ ಪರೀಕ್ಷಾ ಫಲಿತಾಂಶ.

ಪೊನ್ನಂಪೇಟೆ ಹೈಸ್ಕೂಲು

ಶ್ರೀಗಳಾದ ಕರ್ತಮಾಡ ಬಿ. ಸೋಮಯ್ಯ, ಕೇಳಪಂಡ್ರ ಎಂ. ದೇವಯ್ಯ, ಬಾಚರಣಿಯಂಡ ಸಿ. ಐಯ್ಯಣ್ಣ, ಮಾಚಿಮಾಡ ಕೆ. ನಾಣಯ್ಯ, ಕಾಡ್ಯಮಾಡ ಕೆ. ಮುತ್ತಣ್ಣ, ಕೊಡಂದೆರ ಸಿ. ಸುಬ್ಬಯ್ಯ, ಕಾಳಿಮಾಡ ಎಂ. ಅಚ್ಚಪ್ಪ ಮತ್ತು ಕಾಳಂಡೆರ ಬಿ. ನಂಜಪ್ಪ ಇವರುಗಳು. ೩೫ ವಿದ್ಯಾರ್ಥಿಗಳಲ್ಲಿ ಎಂಟು ಜನರು

ನಾಪೋಕ್ಲು ಹೈಸ್ಕೂಲು

ಶ್ರೀಗಳಾದ ಪಿ. ಪಿ. ಅಪ್ಪಯ್ಯ, ಪಟ್ಟಡ ಎಂ. ಕಾರ್ಯಪ್ಪ, ಬಿ. ಎನ್. ಚಂಗಪ್ಪ, ಎನ್. ಕೆ. ಚಿಣ್ಣಪ್ಪ, ಕೆ. ಎಸ್. ಚಿಣ್ಣಪ್ಪ, ಎ. ಎಂ. ಚಂಡಯ್ಯ, ಬಿ. ಎಸ್. ದೇವಯ್ಯ, ಬಿ. ಬಿ. ಸುಬ್ರಾಯ, ಪಿ. ಎಂ. ಮಂಗಣ್ಣ, ಎ. ಟಿ. ಮುತ್ತಪ್ಪ, ಪಿ. ಎಂ. ಪೂಣಚ್ಚ, ಸಿ. ಪಿ. ಪೂಣಚ್ಚ, ಪಿ. ಎ. ಕರುಂಬಯ್ಯ, ಟಿ. ಎ. ನಾಣಯ್ಯ, ಬಿ. ಎಂ. ಕಾಳಪ್ಪ, ಜಿ. ಜಿ. ಸೀತಾರಾಮ್, ಜಿ. ಎಸ್. ವೆಂಕಟೇಶ ಮತ್ತು ಶ್ರೀಮತಿ ಕೆ. ಕೆ. ಪಾರ್ವತಿ ಇವರುಗಳು. ೬೩ ವಿದ್ಯಾರ್ಥಿಗಳಲ್ಲಿ ೧೮

ಮಡಿಕೇರಿ ಹುಡುಗಿಯರ ಹೈಸ್ಕೂಲ್

ಶ್ರೀಮತಿಯರಾದ ವಿ. ಪಿ. ಸರೋಜ, ಮಾಚಿಮಂಡ ಡಿ. ಜಯ, ಮಣವಟ್ಟಿರ ಎಂ. ಭಾಗೀರಥಿ, ಕೋದಂಡ ಬಿ. ಸೀತಾ, ಚೇಂದಂಡ ಜಿ. ಪೊನ್ನಮ್ಮ, ಬೊಮ್ಮಂಡ ಸಿ. ಅಕ್ಕಮ್ಮ, ಕಂಬಿರಂಡ ಎಂ. ಅಮ್ಮಕ್ಕ, ಪಾಲೇಕಂಡ ಎಂ. ಸುಬ್ಬಮ್ಮ, ಸುಬ್ಯಂಡ ಬಿ. ಸರೋಜಿನಿ, ಎಂ. ಜಿ. ಸೀತಮ್ಮ, ಅಪ್ಪನೆರವಂಡ ಕೆ. ಬೊಳ್ಳಮ್ಮ, ಪಾಂಡಂಡ ಸಿ. ಪೊನ್ನಮ್ಮ, ಮಾಳೇಟಿರ ಎ. ಪೂವಮ್ಮ, ಪುಟ್ಟಿಚಂಡ ಎನ್. ಸೀತಮ್ಮ, ಕೇಕಡ ಈ. ಕಾವೇರಿ, ಸೋಮೆಯಂಡ ಕಾಮಮ್ಮ, ಪಾಲೇಕಂಡ ಪಿ. ಅಕ್ಕಮ್ಮ, ಚನ್ನಿರ ಕೆ. ಬೋಜಮ್ಮ, ಕೆ. ವಿ. ಸರೋಜಿನಿ ಮತ್ತು ಮೇರಿ ವಿ. ಪಾಯಸ್ ಇವರುಗಳು. ಪರೀಕ್ಷೆಗೆ ಕೂತ ೨೯ ವಿದ್ಯಾರ್ಥಿನಿಯರಲ್ಲಿ ೨೧.

ಹೈಸ್ಕೂಲು ಸೋಮವಾರಪೇಟೆ

ಶ್ರೀಗಳಾದ ಡಿ. ಎನ್. ಚಿನ್ನರಾಜು, ಎಂ. ಪೊನ್ನಪ್ಪ, ಕೆ. ಬಿ. ಬೆಳ್ಳಪ್ಪ, ಎನ್. ರಾಮಚಂದ್ರ, ಬಿಟ್ಟಿಯಂಡ ಎಂ. ಗಣಪತಿ ಮತ್ತು ಶ್ರೀಮತಿಯರಾದ ೬. ಡಿ. ಬೋಜಮ್ಮ, ಎಚ್. ಎಲ್. ಅನಸೂಯ, ಮತ್ತು ಎ. ಕೆ. ಕಮಲಾಪ್ರಭಾ ಇವರುಗಳ. ಪರೀಕ್ಷೆಗೆ ಕೂತ ೨೬ ರಲ್ಲಿ ೮.

ಸೈಂಟ್ ಮೈಕೇಲ್ ಹೈಸ್ಕೂಲ್

ಶ್ರೀಗಳಾದ ಎ. ಡಬ್ಲ್ಯೂ. ಜಾರ್ಜ್, ಮತ್ತು ಜೇಮ್ಸ್ ರೊಡರಿಗ್ಸ್ ಇವರುಗಳು ೧ ರಲ್ಲಿ ೨.

ಸೆಂಟ್ರಲ್ ಹೈಸ್ಕೂಲ್ ಮಡಿಕೇರಿ

ಶ್ರೀಗಳಾದ ಬಿ. ಎಂ. ಐಯ್ಯಣ್ಣ, ೬. ಎಂ. ಗಣಪತಿ, ಸಿ. ಆರ್. ಗೋಪಾಲಕೃಷ್ಣ, ಪಿ. ಎಲ್. ಕೃಷ್ಣಶಾಸ್ತ್ರಿ, ಎನ್. ಬಿ. ನಾರಾಯಣ, ಕೆ. ಎಂ. ಪ್ರಕಾಶ್, ಕೆ. ಎ. ರಘುನಾಥರಾವ್, ಡಿ. ಕೆ. ಶ್ರೀನಿವಾಸ, ಕೆ. ಎಸ್. ಸುಂದರ, ಎಂ. ಎಸ್. ವಿಠಲರಾವ್, ಕೆ. ಕೆ. ಚಿಣ್ಣಪ್ಪ, ಎ. ಎ. ಗಣಪತಿ, ಪಿ. ಎ. ಮೊಣ್ಣಪ್ಪ, ಕೆ. ಎಂ. ಬೋಜಪ್ಪ, ಎ. ಎಂ. ಕಾರ್ಯಪ್ಪ, ಜಿ. ಕೆ. ಗಣಪತಿ, ಐ. ಎಸ್. ಕಾಶಿ, ಡಿ. ಸಿ. ಸುಬ್ಬಯ್ಯ, ಕೆ. ಎಂ. ಸುಬ್ಬಯ್ಯ, ಪಿ. ಸಿ. ಸೋಮಯ್ಯ, ಕೆ. ಪಿ. ಅಚ್ಚಯ್ಯ, ಐ. ಎಸ್. ಬಿದ್ದಪ್ಪ, ವೈ. ಟಿ. ಬೋಪಯ್ಯ, ಕೆ. ಎಂ. ಚಂಗಪ್ಪ, ಪಿ. ಸಿ. ದೇವಯ್ಯ, ಕೆ. ಟಿ. ಗಣಪತಿ, ಎನ್. ಪಿ. ಮಾದಯ್ಯ, ಮಹಮದ್ ಖಲೀಲ್, ಸಿ. ಜಿ. ಮಾತಂಡ, ಜಿ. ಜಿ. ಮುತ್ತಣ್ಣ, ಡಿ. ಪಿ. ಮುತ್ತಪ್ಪ, ಎಂ. ಎಂ. ನಂಜಪ್ಪ, ಎ. ಡಬ್ಲ್ಯೂ. ಪಾಲ್, ಕೆ. ಟಿ. ಪಳಂಗಪ್ಪ, ಐ. ಕೆ. ಪೊನ್ನಪ್ಪ, ಎಂ. ಜಿ. ಪೊನ್ನಪ್ಪ, ಎ. ಎ. ಪೂವಯ್ಯ, ಟಿ. ಆರ್. ರಂಗನಾಥ, ಎಚ್. ಪಿ. ರಂಗರಾಜ, ಕೆ. ಎಸ್. ಶಿವರಾವ್, ಎಂ. ಎಂ. ತಮ್ಮಯ್ಯ, ಕೆ. ಎನ್. ಉತ್ತಯ್ಯ ಮತ್ತು ಶ್ರೀಮತಿಯರಾದ ಕೆ. ಎಸ್. ಪೊನ್ನಮ್ಮ, ಎಸ್. ಎಸ್. ಸದ್ಗುಣವತಿ, ಸಿ. ಎಸ್. ಪಾರ್ವತಿ, ಕೊಡಂದೆರ ಎಂ. ಸೀತಮ್ಮ, ಇವರುಗಳು. ೬೭ರಲ್ಲಿ ೪೬.

ಮಡಿಕೇರಿಯಲ್ಲಿ ಖಾಸಗಿಯಾಗಿ ಕೂತ ಶ್ರೀಗಳಾದ ಎಚ್. ಎಸ್. ಶ್ರೀಪತಿ, ಮತ್ತು ಎ. ಈ. ಅಮ್ಮಣ್ಣ ಇವರು ತೇರ್ಗಡೆಯಾಗಿದ್ದಾರೆ.

ವೀರಾಜಪೇಟೆ ಹೈಸ್ಕೂಲ್

(ಈ ಶಾಲೆಯ ವಿದ್ಯಾರ್ಥಿಗಳ ಹೆಸರು ಸಕಾಲದಲ್ಲಿ ದೊರೆಯದ ಕಾರಣ ವಿದ್ಯಾರ್ಥಿಗಳ ನಂಬರನ್ನು ಪ್ರಕಟಿಸಲಾಗಿದೆ.) ೫೧೧೧೯, ೧೨೪, ೧೨೬, ೧೩೨, ೧೩೪, ೧೩೫, ೧೪೩, ೧೪೪, ೧೪೬, ೧೪೮, ೧೫೩, ೧೫೪, ೧೫೭, ೧೫೮, ೧೬೦, ೧೬೧, ೧೬೨, ೧೬೮, ೧೬೯, ೧೭೧, ೧೭೨, ೧೭೬, ೧೮೦, ೧೮೧, ಪರೀಕ್ಷೆ ಕೂತ ೬೮ ಜನರಲ್ಲಿ ೨೪ ಜನರು ತೇರ್ಗಡೆಯಾಗಿದ್ದಾರೆ.

ಈ ಕೇಂದ್ರದಲ್ಲಿ ಖಾಸಗಿಯಾಗಿ ಪರೀಕ್ಷೆಗೆ ಕೂತ ೬೮೮೭, ೮೯, ೯೦ ಈ ನಂಬರಿನವರು ತೇರ್ಗಡೆಯಾಗಿದ್ದಾರೆ.

WANTED

A Clerk knowing type writting and accountancy. Salary Rs. 50/- per mensum Please apply:-

X

C/o. Post Master,

1-1 Virajpet.

ನೋಟೀಸು.

ಕೊಡಗು ಕ್ಲಾತ್ ಮರ್ಚೆಂಟ್ಸ್ ಕಂಪನಿಯಿಂದ ಪೊನ್ನಂಪೇಟೆಯ ಶ್ರೀ ಎ. ಎಂ. ಶುಕ್ರಿ ಅಂಡ್ ಬ್ರದರ್ ಇವರಿಗೆ ಕೊಡಲ್ಪಟ್ಟ ೧೦೪೫ರಿಂದ ೧೦೫೭ರ ವರೆಗಿನ ೧೩ ಶೇರುಗಳ ನಂಬರು ೧೩ನೇ ಶೇರು ಸರ್ಟಿಫಿಕೇಟು ಕಾಣೆಯಾಗಿದೆ. ಇದನ್ನು ಪಡೆದಿರುವವರು ಈ ತಿಂಗಳ ಅಖೈರದೊಳಗೆ ಕೆಳಗಿನ ಕಚೇರಿಗೆ ಹಾಜರ್ ಮಾಡುವದು. ಅನಂತರ ಬಂದ ಯಾವ ವಿಚಾರಕ್ಕೂ ಗಮನ ಕೊಡಲಾಗುವದಿಲ್ಲವೆಂದು ಈ ಮೂಲಕ ತಿಳಿಸಿದೆ.

ಲಿಕ್ವಿಡೇಟರ್,

ಕೊಡಗು ಕ್ಲಾತ್ ಮರ್ಚೆಂಟ್ಸ್ ಕಂಪೆನಿ,

4-1 ಮಡಿಕೇರಿ.

ದಿ ಟ್ರಾಪಿಕಲ್

ಇನ್ಸೂರೆನ್ಸ್ ಕಂಪೆನಿ ಲಿಮಿಟೆಡ್.

ಮೇನೇಜಿಂಗ್ ಡೈರೆಕ್ಟರ್:- ಲಾಲ ಶಂಕರ್ ಲಾಲ್.

ಮುಖ್ಯ ಕಚೇರಿ:- ಹೊಸ ಡೆಲ್ಲಿ.

ಸ್ಥಾಪಿಸಿದ ಡೈರೆಕ್ಟರರು:

ಪಂಡಿತ ಮೋತಿಲಾಲ್ ನೆಹರು. ಎಸ್. ಶ್ರೀನಿವಾಸ ಅಯ್ಯಂಗಾರ್

ಹಕೀಮ್ ಅಜಮುಲಖಾನ್. ಡಾ|| ಎಂ. ಎ. ಅನ್ಸಾರಿ.

Transacts:—Life, Fire, Motor and Marine.

ನಮ್ಮ ಹೊಸ ವಿಸ್ತಾರದ ಯೋಜನೆಯಲ್ಲಿ ಆಕರ್ಷಕ ಕಮಿಷನ್ ಮೇಲೆ ಏಜನ್ಸಿಗೆ ದಯವಿಟ್ಟು ಕೆಳಗಿನ ವಿಳಾಸಕ್ಕೆ ಬರೆಯಿರಿ.

ಆರ್ಗನೈಜರ್	ಆರ್ಗನೈಜರ್
ದಕ್ಷಿಣ ಕೊಡಗು, ಪೊನ್ನಂಪೇಟೆ	ಉತ್ತರ ಕೊಡಗು, ಮಡಿಕೇರಿ
ಅಥವಾ	ಅಥವಾ
ಯಂ. ಯು. ಅಚ್ಚಣ್ಣ,	ಎಂ. ಎ. ಬೆಳ್ಯಪ್ಪ,
ಏಜೆನ್ಸಿ ಸುಪರಿಂಟೆಂಡೆಂಟ್,	ಬ್ರಾಂಚ್ ಸೆಕ್ರೆಟರಿ,
ಮಡಿಕೇರಿ, ಕೊಡಗು.	ಹಂಪನಕಟ್ಟಾ, ಮಂಗಳೂರು

ಭದ್ರತೆ! 17 ವರ್ಷಗಳ ಪರಿಪಕ್ವ ಅನುಕೂಲತೆ!!

ಅನುಭವಶೀಲತೆ!!

ದಿ ವಿಜಯ ಬೇಂಕ್ ಲಿಮಿಟೆಡ್

ಮುಖ್ಯ ಕಚೇರಿ,

ಕದ್ರಿ ರೋಡ್, ಮಂಗಳೂರು.

ನಿರಖು ಠೇವಣಾತಿ ಬಡ್ಡಿ ದರ:-

3	ತಿಂಗಳು	3%
6	,,	$3\frac{1}{4}$%
12	,,	$3\frac{1}{2}$%
24	,,	4 %

ರೂಪಾಯಿ ೧೫,೦೦೦ಕ್ಕೆ ಮೀರಿದ ಒಂದೇ ಡಿಪಾಜಿಟ್ಟಿಗೆ ಮೇಲಿನ ದರಕ್ಕಿಂತ $\frac{1}{4}$% ಹೆಚ್ಚಿಗೆ.

ಶಾಖೆಗಳು:- ಸಿಟಿ ಮಂಗಳೂರು, ಬೈಂದೂರು, ಕುಂದಾಪುರ, ಬ್ರಹ್ಮಾವರ, ಉಡುಪಿ, ಕಾಪು, ಕಾರ್ಕಳ, ಕಾಸರಗೋಡ, ಕಾಂಞಂಗಾಡ್, ಪುತ್ತೂರು, ಮಡಿಕೇರಿ ಮತ್ತು ಮುಂಬಯಿ.

ಒಟ್ಟು ವಹಿವಾಟು ಭಂಡವಾಳ ರೂ. ೪೦ ಲಕ್ಷಕ್ಕೂ ಮೀರಿದೆ.

ಎಲ್ಲಾ ವಿಧದ ಆಧುನಿಕ ಬೇಂಕಿಂಗ್ ವಹಿವಾಟುಗಳು ದಕ್ಷತೆಯಿಂದ ನಡೆಸಲ್ಪಡುವವು.

ಹೆಚ್ಚಿನ ವಿವರಗಳಿಗೆ ಬರೆಯಿರಿ:- ಏಜಂಟ್,

12-1 ಮಡಿಕೇರಿ ಶಾಖೆ, ಮಡಿಕೇರಿ.

ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ. (1921ರಲ್ಲಿ ಸ್ಥಾಪಿತವಾಗಿದೆ.

ಅಧಿಕೃತ ಶೇರು ಭಂಡವಾಳ	ರೂ.	10,00,000.
ವಸೂಲಾದ ಶೇರು ಮೊಬಲಗು	ರೂ.	1,65,000.
ಕ್ಷೇಮನಿಧಿ	ರೂ.	50,000.

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ, ಬೆಳ್ಳಿ ನಗಗಳ ಈಡಿನ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ಕು ಡ್ರಾಫ್ಟುಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರಿನಿಟಿ ಮತ್ತು ನಾರ್ಧರ್ನ್ ಇನ್ಷೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಕೆ. ಪಿ. ಅಪ್ಪಯ್ಯ, M. L. C.

ಗೌ. ಕಾರ್ಯದರ್ಶಿ, ಪ್ರೆಸಿಡೆಂಟ್ ಮತ್ತು ಖಜಾಂಚಿ.

(೩ನೇ ಪುಟದಿಂದ ಸಾಗಿದದ್ದು.)

ಪಾಶ್ಚಾತ್ಯ ರಾಷ್ಟ್ರಗಳ ಯೋಜನೆಗೂ ಹೊಂದಿಕೆಯಾಗದೆ ಬರೀಗುಲ್ಲು ನಿದ್ದೆಗೇಡೆಂಬಂತಾಗಿದೆ. ಪರಿಸ್ಥಿತಿ ಸಮಾಲೋಚನ ಪ್ರಾರಂಭವಾಗುವಾಗ ಹೇಗಿತ್ತೋ ಹಾಗೆಯೇ ಇದೆ. ಮುಂದೆ ನೋಡಬೇಕು ಜರ್ಮನಿಯ ಭವಿಷ್ಯ ಹೇಗಾಗುವದೆಂದು!

ಚೈನಾಯುದ್ಧ.

ಇಂದಿನ ಮಟ್ಟಿಗೆ ಲೋಕ ಪ್ರಾಮುಖ್ಯವಾದ ಈ ಪ್ರಶ್ನೆ ಇನ್ನೂ ತೀರ್ಮಾನವಾಗಿಲ್ಲ. ಚೈನಾದ ಭವಿಷ್ಯವು ಲೋಕದ ರಾಜಕೀಯ ತಕ್ಕಡಿಯನ್ನು ವ್ಯತ್ಯಾಸ ಮಾಡತಕ್ಕಂಥಾದ್ದು. ಇಡೀ ಜಗತ್ತಿನಲ್ಲೇ ಹೆಚ್ಚು ಜನಸಂಖ್ಯೆ ಅಂದರೆ ೫೦ ಕೋಟಿ ಜನರಿರುವ ಈ ದೇಶದ ಭವಿಷ್ಯವು ಜಗತ್ತಿನ ಪ್ರಶ್ನೆ. ಚೈನಾದಲ್ಲಿ ಕಮ್ಯೂನಿಷ್ಟರು ಬಹು ವೇಗದಿಂದ ಮುಂದೊತ್ತುತ್ತಿದ್ದರೂ ಸರಕಾರಿ ಪಕ್ಷದ ಬಲ ಇನ್ನೂ ಪ್ರತಿಭಟಿಸುತ್ತಿದೆ. ಕಮ್ಯೂನಿಷ್ಟರ ಸೇನೆಗಳ ಸಂಖ್ಯೆ ೧,೪೦೦,೦೦೦ ಎಂದು ಹೇಳಲಾಗಿದೆ ಆದರೆ ಇದೇ ಕಮ್ಯೂನಿಷ್ಟರ ಬಲವೆಂದು ಹೇಳಲಾಗದು. ಏಕೆಂದರೆ ತಾವು ಯುದ್ಧಮಾಡುವ ಕಡೆಯಲ್ಲಿ ಅವರು ಸ್ಥಳೀಯ ಯೋಧರನ್ನು ಸಂಗ್ರಹಿಸಿ ಕೆಲಸ ಮುಗಿದೊಡನೆಯೇ ಅವರನ್ನು ತಮ್ಮವರನ್ನಾಗಿ ಮಾಡಿಕೊಂಡು ಅವರವರ ಹೊಲಗದ್ದೆಗಳಿಗೆ ಕಳುಹಿಸುವದು ಇವರ ಸಂಪ್ರದಾಯ. ಕಮ್ಯೂನಿಷ್ಟರ ಈ ನೀತಿಯು ಅವರಿಗೆ ಬೇಕಾದಷ್ಟು ಜನಬಲವನ್ನು ಒದಗಿಸಿದೆ. ಸರಕಾರಿ ಸೈನ್ಯ ಸಂಖ್ಯೆಯೂ ಅಂದರೆ ಚಿಯಾಂಗರ ಪಕ್ಷದಲ್ಲಿ ಕಡಮೆ ಇಲ್ಲ ಸುಮಾರು ೧,೫೦೦,೦೦೦ ಯೋಧರಿರುವರೆಂದು ಅಂದಾಜು ಮಾಡಲಾಗಿದೆ. ಆದರೆ ಮೇಲಿಂದ ಮೇಲೆ ಆದ ಅಪಜಯ, ಆಡಳಿತ ಅವ್ಯವಸ್ಥೆಯು ಕಾರಣ ಇವರ ಮನೋಬಲವು ಪೂರ್ತಿ ಕಳೆದು ಹೋಗಿದೆ. ಈ ಚೇತನ ರಹಿತ ಸೈನಿಕರ ಸೈನ್ಯ ಆಯುಧಗಳ ಮೂರ್ತಿಯು ಕೈಯ ಕೂಡ ಗೋಲಿನಂತೆ ಶಕ್ತಿಹೀನ! ಚಿಯಾಂಗರ ಬಲವು ಈ ರೀತಿಯು ಒಳಗಿನ ಟೊಳ್ಳುತನ ಮತ್ತು ಹೊರಗಿನ ಕಮ್ಯೂನಿಷ್ಟ ಹೊಡೆತದಿಂದ ಕುಸಿಯುತ್ತಿದೆ

ರಷ್ಯಾದ ಕೈ

ಚೈನಾದ ಕಮ್ಯೂನಿಷ್ಟರಿಗೂ ರಷ್ಯಾಕ್ಕೂ ಸಂಬಂಧವನ್ನು ಹಲವರು ಕಲ್ಪಿಸಿದ್ದಾರೆ. ಚೀನಾದ ಕಮ್ಯೂನಿಷ್ಟರ ಪಶವಾರಿ ತಾವು ರಷ್ಯಾದ ನರವಾನರಂತೆ ಎಂದು ಕೆಲವರು ಭಾವಿಸುತ್ತಾರೆ ಚೀನೀ ಕಮ್ಯೂನಿಷ್ಟರ ಮೇಲೆ ರಷ್ಯಾದ ಪ್ರಭಾವ ಇಲ್ಲವೆಂದು ಹೇಳುವದು ಅಸಾಧ್ಯವಾದರೂ ಚೈನಾ ಕಮ್ಯೂನಿಷ್ಟರಿಗೂ ಮತ್ತು ರಷ್ಯಾ ಸರಕಾರಕ್ಕೂ ಭಿನ್ನಾಭಿಪ್ರಾಯ ಹುಟ್ಟಿದೆಯೆಂದು ಸುದ್ದಿ ಹುಟ್ಟಿದೆ. ಇದಕ್ಕೆ ಸಮರ್ಥನೆಯನ್ನು ಕೊಡುವಂತೆ ಚೈನಾವನ್ನು ಸಂದರ್ಶಿಸಿದ ಶ್ರೀ ಮನ್ನಾರಾಯಣ ಅಗರ್ವಾಲರವರು ಕಳೆದ ವಾರ ಬರೆದ ಲೇಖನದಲ್ಲಿ ಪ್ರಕಟವಾದ ವಿಚಾರವೂ ಇದೆ. ಕಮ್ಯೂನಿಷ್ಟರು ಚೈನೀ ಕಮ್ಯೂನಿಷ್ಟರಲ್ಲದವರನ್ನು ಕೂಡಿಕೊಂಡು ಸಮ್ಮಿಶ್ರ ಸರಕಾರ ಮಾಡಲಿರುವರಂತೆ. ಇದಕ್ಕೆ ಬಲಕೊಡುವಂತೆ ಶಾಂಘಾಯ ನಗರದಲ್ಲಿದ್ದ ತನ್ನ ರಾಯಭಾರಿ ಕಚೇರಿಯನ್ನು ರಷ್ಯವು ಇತ್ತಲಾಗಿ ಮುಚ್ಚಿದೆ. ರಷ್ಯಾ ಸರಕಾರ ಮತ್ತು ಚೈನೀ ಕಮ್ಯೂನಿಷ್ಟರಲ್ಲಿ ಭಿನ್ನಾಭಿಪ್ರಾಯವಿದೆಯೆಂದು ಸ್ಪಷ್ಟವಾಗಿ ಈಗ ಹೇಳುವದು ಸಾಧ್ಯವಿಲ್ಲದಿದ್ದರೂ, ಹಾಗಿದ್ದರೆ ಅದು ಹೊರಬರಲು ಹೆಚ್ಚಿಗೆ ದಿನಗಳು ಬೇಕಾಗಲಾರವು.

ವಾರದ ಕಥೆ.

ಆಕೆ ಅಗಲಿದ ನಂತರ.

ಲೇ:-"ವಿಧುರ" ಕೊಡಗು.

ನಾನು ವಿಚಿತ್ರ ಜಗತ್ತೊಂದರಲ್ಲಿ ಜೀವಿಸುತ್ತಿರುವೆನು. ಒಮ್ಮೊಮ್ಮೆ ನನಗೆ ಜೀವನವು ಸ್ವಪ್ನದಂತೆ ತೋರುತ್ತದೆ. ನಿಜವಾಗಿಯೂ ನಾನು ಜೀವಿಸುತ್ತಿರುವೆನೇ ಎಂಬ ಸಂಶಯ ಹುಟ್ಟುತ್ತದೆ! ನನ್ನ ಭಾವ ಸಾಮ್ರಾಜ್ಯದಲ್ಲಿ ಗತ ಜೀವನದ ಕನಸು ಕಾಣುತ್ತಾ ನಾನು ಜೀವನ್ಮೃತಾವಸ್ಥೆಯಲ್ಲಿರುವೆನು. ಈ ಜೀವನವನ್ನು ಅಂತ್ಯಗೊಳಿಸಲೇ ಎಂದು ಆಗಾಗ ಅನಿಸುತ್ತದೆ. ಜ್ಯೋತಿ ಆರಿದ ಈ ಕತ್ತಲು ಜೀವನ ಎಷ್ಟು ದಿನ?

ಆಕೆಯೊಡನೆ ನಾನು ಬಾಳಿದ ಆ ವರ್ಷಗಳು ಗುಲಾಬಿ ಹೂವಿನಂತೆ ಸುಂದರ ಆದರೆ ಆ ಹೂವಿನ ಬಾಳಿನಂತೆಯೇ ಎರಡೇ ದಿನದಲ್ಲೆಂಬಂತೆ ಕೊನೆಗೊಂಡಿತು. ಆದರೂ ಆ ಮಧುರಮಯ ಜೀವನದ ಸುಗಂಧ ಪರಿಮಳವು ಇನ್ನೂ ಇದೆ ನನ್ನ ಜೀವನಾಂತ್ಯದವರೆಗೂ ಇರುವದು. ಆ ಸುರ ಸುಗಂಧವೇ ನನ್ನನ್ನು ಭಾವ ಸಮಾಧಿಯಲ್ಲಿ ತನ್ಮಯನನ್ನಾಗಿ ಮಾಡುತ್ತಿದೆ

ಆಕೆಯು ನನ್ನ ಜೀವನದಲ್ಲಿ ಎಷ್ಟು ಮಹತ್ವದ ಸ್ಥಾನವನ್ನಾಕ್ರಮಿಸಿದ್ದಳು! ಅವಳಿಗಾಗಿಯೇ ನಾನು ಬದುಕುತ್ತಿದ್ದೆನೇ? ಇಲ್ಲದಿದ್ದರೆ ಅವಳಿಲ್ಲದ ಇಂದಿನ ನನ್ನ ಏಕಾಂಗಿ ಜೀವನವು ಇಷ್ಟು ಶೂನ್ಯವೇಕೆ? ಹಿಂದಿನಂತೆಯೇ ನನ್ನ ಬೇರೆ ಸ್ನೇಹಿತರಿದ್ದಾರೆ; ಬಂಧುಗಳಿದ್ದಾರೆ ಆದರೂ ಜೀವನದಲ್ಲಿ ಈ ಕತ್ತಲೆ ಏಕೆ?

ಮನುಷ್ಯನ ಹೃದಯವು ಎಷ್ಟು ಆಶ್ಚರ್ಯಕರ ವಸ್ತು. ಹೃದಯಗಳಲ್ಲಿ ಪರಸ್ಪರ ಸಾಮ್ಯವು ಎಷ್ಟಿದೆಯೋ ಅಷ್ಟೆ ಅಂತರವೂ ಕೂಡ. ಒಬ್ಬನ ಹೃದಯದ ಆಶಯ ಇನ್ನೊಬ್ಬನಿಗೆ ಹೇಗೆ ತಿಳಿಯುವದು? ಇಲ್ಲದಿದ್ದರೆ ಅವರೆಲ್ಲ ನನ್ನನ್ನು ಬಲಾತ್ಕರಿಸಲು ಕಾರಣವೇನು?

'ಛೇ, ನಿನಗೆ ಹೆಚ್ಚೇನು ವಯಸ್ಸಾಗಿದೆ? ನಿನ್ನ ವಯಸ್ಸಿನ ಅದೆಷ್ಟೊ ಜನರು ಪುನಹ ಮದುವೆಯಾಗಿಲ್ಲವೆ? ನೀನೇಕೆ ಆಗಬಾರದು?' ಎಂದು ಒಬ್ಬ ಸ್ನೇಹಿತನು ಹೇಳಿದರೆ, 'ಜೀವನವು ಜೀವಿಸಲಿಕ್ಕಾಗಿ; ಶುಷ್ಕ ವೇದಾಂತವನ್ನು ಬಿಟ್ಟು ಮರುವಿವಾಹ ಮಾಡಿಕೊ, ಮನೆಯ ಕಾರ್ಯಗಳು ನಡೆಯಬೇಡವೇ?' ಎಂದು ಇನ್ನೊಬ್ಬನು ಹೇಳುತ್ತಾನೆ 'ಗತಕಾಲವನ್ನು ಮರೆತುಬಿಡು ಭವಿಷ್ಯವನ್ನು ಸ್ವಾಗತಿಸು. ಹೊಸಜೀವನ ಪ್ರಾರಂಭಿಸು. ದೇವರು ನಿನಗೆ ಹಿತ ಮಾಡುವನು' ಎಂದು ನನಗೆ ಪಿತೃಪ್ರಾಯರಾದ ಮಾವನವರೇ ಹೇಳಿದರಲ್ಲವೇ?

ಅವರೆಲ್ಲರೂ ನನ್ನ ಮತ್ತು ನನ್ನ ಕುಟುಂಬದ ಹಿತದ ದೃಷ್ಟಿಯಿಂದಲೇ ಇದನ್ನೆಲ್ಲಾ ಹೇಳುತ್ತಿರುವರೆಂದು ನನಗೆ ಗೊತ್ತು. ಆದರೆ ನನ್ನ ಹೃದಯವು ನನ್ನ ಹಿಡಿತದಲ್ಲಿಲ್ಲ. ಅದು ಪುನರ್ವಿವಾಹಕ್ಕೆ ಒಪ್ಪದು. ಅದು ಆಕೆಯನ್ನು ಹುಡುಕುತ್ತಿದೆ. ಪುನರಾಗಮನವಿಲ್ಲದ ಆಕೆಯೊಡನೆ ಹೋಗಿರುವ ಆ ಮನಸ್ಸು ಹಿಂದಕ್ಕೆ ಬಾರಲಾರದು.

* * *

ನಮ್ಮದು ಪ್ರೇಮ ವಿವಾಹವಲ್ಲ. ತಂದೆ ತಾಯಿ ಸ್ನೇಹಿತರು ನೋಡಿ ಆಕೆಯನ್ನು ನಿಶ್ಚಯಮಾಡಿದರು. ಆಕೆಯು ನನ್ನ ಜೀವನದ ಪಾಲುಗಾತಿಯಾಗಿ ಇಂದಿಗೆ ೨೫ ವರ್ಷಗಳಾಗಿವೆ. ಆದರೆ ಅಂದಿನ ಸಾವಿತ್ರಿ ಇಂದೆಲ್ಲಿರುವಳು? ನಮ್ಮ ಈ ಕಾಲು ಶತಮಾನದ ಸಮರಸಜೀವನವು ರಸಪೂರ್ಣವಾಗಿತ್ತು. ನನ್ನ ಮತ್ತು ಸಾವಿತ್ರಿಯ ಅಭಿಪ್ರಾಯದಲ್ಲಿ ಭಿನ್ನತೆ ಬರಲಿಲ್ಲವೆಂದಲ್ಲ; ನಮ್ಮಿಬ್ಬರಲ್ಲಿ ಜಗಳವಾಗಲಿಲ್ಲವೆಂದಲ್ಲ. ಎಷ್ಟೋ ಬಾರಿ ಆ ರೀತಿ ಚಿಕ್ಕಪುಟ್ಟ ಜಗಳಗಳಾಗಿವೆ. ಈ ರೀತಿಯ ಜಗಳವಿಲ್ಲದಿದ್ದರೆ ದಾಂಪತ್ಯ ಜೀವನವು ಸಾರರಹಿತವಾಗಬಹುದು. ಈ ಪ್ರತಿಯೊಂದು ಘರ್ಷಣೆಯಲ್ಲಿಯೂ ಆಕೆಯ ವ್ಯಕ್ತಿತ್ವದ ಪರಿಚಯ ನನಗಾಗಿದೆ. ಹೆಂಗಸು ಮನೆಯ ಯಜಮಾನಿ ಎಂಬ ಅನುಭವ ಆಕೆಯಿಂದ ನನಗಾಯಿತು. ಗೃಹ ಸಂಸಾರದ ಸರ್ವ ಆಡಳಿತ ಆಕೆಯ ಕೈಯಲ್ಲಿ! ಅದ್ದರಿಂದಲೇ ಹೊರಗೆ ರಾಜಕೀಯದಲ್ಲಿ ಕೈಹಾಕಿ ದೇಶಕ್ಕಾಗಿ ಅಲ್ಪಸ್ವಲ್ಪ ಸೇವೆ ಮಾಡುವದು ನನಗೆ ಸಾಧ್ಯವಾಯಿತು. ಆಕೆಯ ಆಡಳಿತದಲ್ಲಿ ನಮ್ಮ ಕುಟುಂಬದ ಆರ್ಥಿಕ ಸ್ಥಿತಿ ಸುಧಾರಿಸಿದೆ; ಉತ್ಪತ್ತಿ ಚನ್ನಾಗಿದೆ ಯಾವುದಕ್ಕೂ ಕೊರತೆಯಿಲ್ಲ ಆಕೆಯ ಅಭಿರುಚಿಯಂತೆಯೇ, ಆಕೆಯ ನಿರ್ದೇಶದಿಂದ ಈ ಮನೆ ಕಟ್ಟಲ್ಪಟ್ಟಿದೆ ಆದರೆ ಆಕೆ ಇಲ್ಲದ ಈ ಮನೆಯಲ್ಲಿ, ಈ ಕುಟುಂಬದಲ್ಲಿ ಜೀವಿಸುವದು ನನಗೆ ಅಸಾಧ್ಯವಾಗಿದೆ.

ಮನುಷ್ಯನ ಜೀವನ ಎಷ್ಟು ಕ್ಷಣಿಕವಾಗಿದೆ. ಸಾವಿತ್ರಿಯು ಆ ಬೇಸಿಗೆಯ ದಿನಗಳಲ್ಲಿ ಮಳೆಗಾಲಕ್ಕೆಂದು ಹೊಲಿದ ಉಣ್ಣೆಯ ಸುಂದರ ಕೋಟು ಇಲ್ಲೇ ಇದೆ. ಆದರೆ ಅದನ್ನು ಧರಿಸುವ ಆಸೆ ನೆರವೇರಲಿಲ್ಲ ಅದನ್ನು ನೋಡುವಾಗ ಕಣ್ಣೀರು ತುಂಬಿ ಬರುತ್ತದೆ ಇದನ್ನೆಲ್ಲಾ ಮರೆಯುವದು ಹೇಗೆ ಸಾಧ್ಯ? ನನ್ನ ಐವತ್ತು ವರ್ಷ ಜೀವನದ ಅರ್ಧ ಭಾಗದಲ್ಲಿ, ಅದರಲ್ಲೂ ಪ್ರಮುಖಭಾಗದಲ್ಲಿ ನನ್ನೊಡನೆ ಸಮರಸಳಾಗಿ ಸುಖ, ದುಃಖ, ಕಷ್ಟ, ತ್ಯಾಗ, ಒಲವು, ನಿಲುವುಗಳಲ್ಲಿ ಸಹಭಾಗಿಯಾಗಿದ್ದ ಆಕೆಯನ್ನು ಮರೆಯುವದೆಂತು? ಈ ೨೫ ವರ್ಷಗಳ ನನ್ನ ಜೀವನದ ಪ್ರತಿ ಎಳೆಯಲ್ಲಿಯೂ ಆಕೆಯ ಶಾಶ್ವತ ಮುದ್ರೆ ಇದೆ. ಈ ೨೫ ವರ್ಷಗಳ ಜೀವನವನ್ನು ಮರೆತು ಬಿಡಬೇಕಂತೆ! ಇದನ್ನು ಮರೆತರೆ ನನ್ನ ಜೀವನದಲ್ಲಿ ಉಳಿದುದೇನು?

ಆಗ ಕಾಯಿಲೆಯಾಗಿ ನಿತ್ರಾಣಳಾಗಿದ್ದಾಗಲೂ ಆ ವಿಚಾರವನ್ನು ನನಗೆ ತಿಳಿಸದೆ ಸಹಿಸಿಕೊಳ್ಳಲಿಲ್ಲವೇ! ಪ್ರಾಣ ಹೋಗುವವರೆಗೂ ಮುಗುಳುನಗೆಯಿಂದಲೇ ವರ್ತಿಸಿದಳಲ್ಲವೆ! ನನಗೆ ಬೇಸರವಾಗಬಾರದೆಂದು ಎಷ್ಟೆಲ್ಲಾ ಕಷ್ಟಗಳನ್ನು ಸಹಿಸಿದಳು. ಕಡೇ ಸಮಯದ ಆ ಕಾತರದೃಷ್ಟಿಯನ್ನು ಜನ್ಮ ಜನ್ಮಗಳ ವರೆಗೆ ಮರೆಯಬಲ್ಲೆನೇ! ಆ ದೃಷ್ಟಿಯಲ್ಲಿ ನನ್ನ ಬಗೆಗೆ ಎಂಥಾ ವಿಶ್ವಾಸ! ಇಹದಲ್ಲಿ ಪತಿಪತ್ನಿಯರಾಗಿದ್ದ ನಾವು ಪರದಲ್ಲಿಯೂ ಜೊತೆ ಸೇರುವೆವು. ನಿಮಗಾಗಿ ಅಲ್ಲಿ ಕಾದಿರುವೆನು ಎಂದು ಹೇಳುವಂತೆ ಆ ದೃಷ್ಟಿ ಇತ್ತಲ್ಲವೇ? ಇದನ್ನೆಲ್ಲಾ ಮರೆಯುವದು ಸಾಧ್ಯವೇ? ನಾನು ಜೀವಿಸಿರುವ ವರೆಗೆ ಇದು ಸಾಧ್ಯವಿಲ್ಲ.

ಸೀತೆಯು ಭೂಮಿಯೊಳಗೆ ಅದೃಶ್ಯಳಾಗಿ ವಿಧುರನಾದ ಶ್ರೀರಾಮನು ಅಶ್ವಮೇಧಯಾಗವನ್ನು ಮಾಡುವ ಕಾಲಕ್ಕೆ ಪತ್ನಿಯಿಲ್ಲದ ಕಾರಣ ಅದನ್ನು ಮಾಡದೆ ನಿಲ್ಲಿಸುವ ನಿಶ್ಚಯ ಮಾಡಿದ್ದನು. ಜಗತ್ತಿಗೆ ಕಲ್ಯಾಣಕಾರಕವಾದ ಅಶ್ವಮೇಧಯಾಗವನ್ನು ಮಾಡುವ ದೃಷ್ಟಿಯಿಂದ ಶ್ರೀರಾಮನ ಗುರುವರ್ಯರು 'ಮತ್ತೊಂದು' ಮದುವೆಮಾಡಿಕೊಳ್ಳಬೇಕೆಂದು ಶ್ರೀರಾಮನನ್ನು ಒತ್ತಾಯ ಪಡಿಸಿದ್ದರು. ಲಕ್ಷ್ಮಣನೇ ಮೊದಲಾದ ತಮ್ಮಂದಿಯರೂ ಸಮ್ಮತಿಸಿದ್ದರು. ಆದರೆ ರಾಮನು ಹೇಳಿದ ಮಾತುಗಳೇನು? "ಜಗತ್ತಿನಲ್ಲಿ ಹುಟ್ಟಿದ್ದು ಒಬ್ಬಳೇ ಸೀತೆ ಆಕೆಯೇ ನನ್ನ ಪತ್ನಿ. ನಾನು ಇನ್ನೊಮ್ಮೆ ಮದುವೆಯಾಗಬೇಕಾದರೆ ಆ ಸೀತೆಯೇ ಮತ್ತೊಮ್ಮೆ ಹುಟ್ಟಿ ಬರಬೇಕೇ ವಿನಹ ಬೇರೆ ಕಲ್ಪನೆ ಸಲ್ಲದು" ಎಂದನಲ್ಲವೇ? ಅದ್ದರಿಂದಲೇ ಗುರುವಿನ ಸೂಚನೆಯಂತೆ ಸೀತೆಯಂತೆ ಚಿನ್ನದ ಪ್ರತಿಮೆಯೊಂದನ್ನು ಮಾಡಿ ಅದರೊಡನೆ ಕುಳಿತು ಶ್ರೀರಾಮನು ಅಶ್ವಮೇಧ ಯಾಗ ಮಾಡಿದನಲ್ಲವೇ? ಇಂದು ಭರತ ಖಂಡದ ಜ್ಯೋತಿಯಾಗಿರುವ ಪಂಡಿತ ಜವಾಹರರನ್ನು ಮದುವೆಯಾಗಲು ಯಾರು ಬೇಡವೆನ್ನುತ್ತಿದ್ದರು? ಚಿಕ್ಕ ಪ್ರಾಯದಲ್ಲೇ ಕಮಲಳನ್ನು ಕಳಕೊಂಡರೂ ಪತ್ನೀವ್ರತರಾಗಿ ತನ್ನ ಶೇಷ ಆಯುಷ್ಯವನ್ನು ತಪಸ್ಸಿನಂತೆ ಕಳೆಯುತ್ತಿಲ್ಲವೇನ?

ಬಹುಶಃ ನನ್ನ ಹಿತಚಿಂತಕರು ಇದನ್ನೆಲ್ಲಾ ಆಲೋಚಿಸಿರಲಿಕ್ಕಿಲ್ಲ. ನನ್ನ ಹೃದಯದ ವೇದನೆಯನ್ನು ಅರಿತಿರಲಿಕ್ಕಿಲ್ಲ ನಾನೇಕೆ ಪುನರ್ವಿವಾಹ ಮಾಡಿಕೊಳ್ಳಬೇಕೆಂದು ಇವರು ಏಕೆ ಪೀಡಿಸುತ್ತಿರುವರು? ಆಕೆಗಳಿಸಿದ ಸಂಪತ್ತು ಹಾಳಾಗದಂತಿರಬೇಕು, ಕುಟುಂಬ ಸುಸೂತ್ರವಾಗಿ ನಡೆಯಬೇಕು ಎಂದಲ್ಲವೇ? ಈ ಸಂಪತ್ತು, ಸುಖಗಳ ಬೆಲೆ ಆಕೆಯ ಪವಿತ್ರ ಪ್ರೇಮಕ್ಕಿಂತ ಮಿಗಿಲೆ? ಪ್ರಯತ್ನಿಸಿದರೆ ಇನ್ನೂ ಲಕ್ಷಾಂತರವಾಗಿ ಧನ ಸಂಗ್ರಹ ಮಾಡಬಲ್ಲೆ. ಆದರೆ ಸಾವಿತ್ರಿಯನ್ನು ಪಡೆಯುವದೆಂತು! ಆಕೆಯ ಪ್ರೇಮವನ್ನು ಬೆಲೆಕೊಟ್ಟು ಪಡೆಯಲಾಗುವದೇ! ಆಕೆಯ ಪ್ರೇಮಕ್ಕೆ ಪಾತ್ರನಾಗಬೇಕಾದರೆ ನನ್ನ ಉಳಿದ ಜೀವನ ತಪಸ್ಸಿನ ಜೀವನವಾಗಬೇಕು ಆಕೆ ಜೀವಂತವಿರುವಂತೆಯೇ ಭಾವಿಸಿ ಆಕೆಗೆ ಹಿತಕರವಾದ ಕೆಲಸ ಮಾಡಬೇಕು. ಇದರಿಂದ ನಾನು ಶ್ರೀರಾಮನಂತಾಗಲೀ ಯಾ ಪಂಡಿತ ಜವಾಹರರಂತಾಗಲೀ ಆದರ್ಶಪತಿ ಎನಿಸಿಕೊಳ್ಳಬೇಕೆಂದಲ್ಲ. ಆದರೆ ನನಗೂ ಒಂದು ಹೃದಯವಿದೆ. ನನ್ನ ಮತ್ತು ಸಾವಿತ್ರಿಯ ಜೀವನವು ರಾಮ-ಸೀತೆಯರಂತೆ, ಜವಾಹರ-ಕಮಲರಂತೆ ಉತ್ತುಂಗವಾದುದಲ್ಲವಾದರೂ ನಮ್ಮ ದಾಂಪತ್ಯ ಜೀವನದಲ್ಲೂ ಆ ಪ್ರೇಮದ ಝಲಕಿತ್ತು. ಆ ಸೌಹಾರ್ದತೆಯ ಮಾಧುರ್ಯವಿತ್ತು. ಜೀವನದ ಸಾರ್ಥಕತೆ ಇತ್ತು. ಅದೇ ನನ್ನ ಜೀವನದ ಬಂಡವಾಳ. ಈ ಬಂಡವಾಳವನ್ನು ಕಳೆದುಕೊಂಡು ನಾನು ಭಿಕಾರಿಯಾಗಲಾರೆ! ನನ್ನ ಜನ್ಮ ಜನ್ಮದ ಜೊತೆಗಾತಿಗೆ ಎರಡಣಿಸಲಾರೆ.

Edited, Printed and Published by P. I. Belliappa at 'Kodagu' Press, Mercara, for 'Kodagu' Ltd.

ವಿಶೇಷ ಲೇಖನ.

ಹೊಸ ಗ್ರಹಗಳ ಶೋಧನೆ.

ವಿಜ್ಞಾನಿಗಳು ವಿಚಿತ್ರ ವ್ಯಕ್ತಿಗಳು ಅವರದು ತಪಸ್ಸಿನ ಜೀವನ ಹಿಂದೂ ದೇಶದ ಮಹಾಋಷಿಗಳು ಹೇಗೆ ಐಹಿಕ ಭೋಗಭಾಗ್ಯಗಳನ್ನು ತ್ಯಜಿಸಿ, ಪರ್ವತ, ಗುಹೆಗಳಲ್ಲಿ ಆತ್ಮಾನುಸಂಧಾನ ಮಾಡಿ ವಿಚಿತ್ರ ಸಿದ್ಧಾಂತಗಳನ್ನು ಜಗತ್ತಿಗೆ ಸಾರಿದರೋ ಅದೇ ರೀತಿ ಆಧುನಿಕ ವಿಜ್ಞಾನಿಗಳೂ ಕೂಡ ಆರ್ಯಋಷಿಗಳ ಶೋಧನೆ ಆತ್ಮಕ್ಕೆ ಸಂಬಂಧಿಸಿ ಅಂತರ್ಮುಖವಾದರೆ ಈ ವಿಜ್ಞಾನಿಗಳದು ಭೌತಿಕ ವಿಚಾರಗಳಿಗೆ ಸಂಬಂಧಿಸಿ ಬಹಿರ್ಮುಖವಾಗಿದೆ ಈ ಶೋಧನೆಯಲ್ಲಿ ಅವರು ಕುಟುಂಬದ ಸುಖ, ಶರೀರದ ಲಾಲನೆ ಪೋಷಣೆ ಮೊದಲಾದುವನ್ನು ತ್ಯಜಿಸಿ ತಮ್ಮ ಪರೀಕ್ಷಾಲಯಗಳಲ್ಲಿ ತಮ್ಮ ಜೀವನವನ್ನು ತೇದು ವಿನಿಯೋಗಿಸುತ್ತಾರೆ ಈ ಆಧುನಿಕ ಸನ್ಯಾಸಿಗಳ ಸತತ ಪ್ರಯತ್ನ ಪರಿಶೋಧನಗಳಿಂದ ಈ ಮಾಯಾ ಜಗತ್ತಿನ ಅನೇಕ ವಿಚಾರಗಳು ಮಾನವ ಕುಲಕ್ಕೆ ಗೊತ್ತಾಗಿವೆ ಆದರೂ ಈ ಜಗತ್ತು ಅಸಂಖ್ಯಾತವಾದುದು ಅಪಾರ ವಿಚಿತ್ರತೆ ಅಪೂರ್ವವಾದುದು. ಮಾನವ ಬುದ್ಧಿಗೆ ಮೀರಿ ಅದು ನಿಂತಿದೆ ಮಾನವ ಬುದ್ಧಿಯು ಈ ವರೆಗೆ ಶೋಧಿಸಿ ತಿಳಿದುಕೊಂಡ ವಿಚಾರವೇನೂ ಕಡಿಮೆಯಲ್ಲ ಕಡಲಿನಾಳವನ್ನು ತಿಳಿದು ಕಡಲಗರ್ಭವನ್ನು ಹೊಕ್ಕು ಶೋಧನ ಮಾಡಿದ್ದಾನೆ ಆಗಮ್ಯವಾದ ಭೂಮಿಯ ಅಂತರ್ಯಕ್ಕಿಳಿದು ಅನೇಕ ಆವಿಷ್ಕಾರಗಳನ್ನು ಮಾಡಿದ್ದಾನೆ ಆಕಾಶದೆಡೆ ಧುಮುಕಿ ವರ್ಣನಾತೀತ ವಿಚಾರಗಳನ್ನು ಕಂಡುಕೊಂಡಿದ್ದಾನೆ ಪ್ರತಿಯೊಂದಕ್ಕೂ ಒಂದೊಂದು ಶಾಸ್ತ್ರದ ಹೆಸರಿಟ್ಟು ಜಗತ್ತಿನ ಗಟ್ಟನ್ನು ಹೊರಗೆಡಹಲು ಪ್ರಯತ್ನಿಸುತ್ತಿದ್ದಾನೆ

ಈ ಶೋಧನೆಯಲ್ಲಿ ಭೂಮಿಯಲ್ಲಿ ಮಾತ್ರ ಜೀವವಿರುವುದು ಆತನಿಗೆ ತೋರಿಬಂದಿದೆ ಅವರಿಂದ ಆತನು ಸೃಷ್ಟಿನ ಗಿಟ್ಟಿ ಅನಂತವಾದ ಆಕಾಶದಲ್ಲಿ ಭೂಮಿಯಲ್ಲಿರುವಂಥ ವಾತಾವರಣವೇ ಇದ್ದು ಅಲ್ಲಿ ಇಲ್ಲಿರುವಂತೆಯೇ ಜೀವಜಂತುಗಳು ಏಕಿಬಾರದು ಎಂಬ ಪ್ರಶ್ನೆಯನ್ನು ಆತನ ಆಗಾಗೆ ಕೇಳತ್ತಿದ್ದಾನೆ ಅಂಥಾ ಒಂದು ಆವಿಷ್ಕಾರವಾದರೆ ಭೂಮಿ ಮತ್ತು ಆ ಗ್ರಹದೊಡನೆ ಸಂಬಂಧ ಬೆಳೆಸುವ ಕನಸು ಕಟ್ಟಿದ್ದಾನೆ!

ಇದು ಕೇವಲ ಕನಸಲ್ಲ ಈ ಕಲ್ಪನೆಯು ಸತ್ಯಾಂಶದ ಶೋಧನೆಗಾಗಿ ಕಳೆದ ೩೦ ವರ್ಷಗಳಿಂದ ಪ್ರಯತ್ನ ನಡೆಯುತ್ತಿದೆ ೧೬೭೨ ರಲ್ಲಿ ಜಗದ್ವಿಖ್ಯಾತನಾದ ಸರ್ ಐಸಾಕ್ ನ್ಯೂಟನನು ಕಂಡು ಹಿಡಿದ ಸೂಕ್ಷ್ಮದರ್ಶಕ ಯಂತ್ರದ ಮಾದರಿಯ ಬೃಹದಾಕಾರದ ಯಂತ್ರವೊಂದನ್ನು ಅಮೇರಿಕಾದಲ್ಲಿ ತಯಾರಿಸಲಾಗಿದೆ

ಕೆಲಿಫೋರ್ನಿಯಾದ ಲಾಸ್ ಏಂಜಲ್ಸ್ ಮತ್ತು ಸಾನ್‌ಡಿಯಾಗೋಗಳ ಮಧ್ಯೆ ಇರುವ ಪಾಲೋಮರ್ ಬೆಟ್ಟದಲ್ಲಿ ಈ ಯಂತ್ರವನ್ನು ಅಳವಡಿಸಲಾಗಿದೆ. ಕೆಲಿಫೋರ್ನಿಯಾವನ್ನು ಆರಿಸಿಕೊಂಡುದರ ಕಾರಣವೆಂದರೆ ಈ ವಿಶಾಲ ಆಕಾಶದಲ್ಲಿ ಮನುಷ್ಯನಿಗೆ ಚಿರಪರಿಚಿತವಾದ ಭಾಗವು ಉತ್ತರವಾಗಿದೆ ಅಲ್ಲಿ ಪರಿಶೋಧನೆಗೆ ಸಹಾಯಕವಾದ ಪರಿಸ್ಥಿತಿ ಇದೆ. ಅಲ್ಲಿಯ ಎತ್ತರ, ಗಾಳಿಯ ಒತ್ತಡ ಮತ್ತಿತರ ವಿಚಾರಗಳೂ ಸಹಾಯಕವಾಗಿವೆ ಅಲ್ಲದೆ ಪ್ರಖ್ಯಾತ ಪರಿಶೋಧನಾ ಕೇಂದ್ರವಾದ ಮೌಂಟ್ ವಿಲ್ಸನ್ ವೇಧಶಾಲೆಯು ಇದಕ್ಕೆ ಹತ್ತಿರವೇ ಇದೆ

ಕೆಲವು ವರ್ಷಗಳ ಹಿಂದೆ ವಿಲ್ಸನ್ ಬೆಟ್ಟದ ಮೇಲೆ ನೂರು ಇಂಚು ವ್ಯಾಸದ ಕನ್ನಡಿ ಇರುವ ದೂರದರ್ಶಕ ಯಂತ್ರವನ್ನು ಉಪಯೋಗಿಸಿ ಆಕಾಶದ ಅಂತರ್ಯವನ್ನು ನೋಡಲಾಗಿ ಆ ವರೆಗೆ ತೋರಿಬಾರದಿದ್ದ ಅನೇಕ ವಿಚಾರಗಳು ವಿಜ್ಞಾನಿಗಳಿಗೆ ತೋರಿಬಂದುವು ಬ್ರಹ್ಮಗರ್ಭದಲ್ಲಡಗಿರುವ ಈ ವಿಚಾರಗಳನ್ನು ಸ್ಪಷ್ಟವಾಗಿ ತಿಳಿಯುವುದು ಆ ದೂರದರ್ಶಕ ಯಂತ್ರದಿಂದ ಸಾಧ್ಯವಾಗಲಿಲ್ಲ ಪ್ರಕೃತಿಯ ಈ ಗೂಢವನ್ನು ಅರಿಯಬೇಕೆಂಬ ಕುತೂಹಲದಿಂದ ಅಮೇರಿಕಾದ ರಾಕ್‌ಫೆಲ್ಲರ್ ಸಂಸ್ಥೆಯು ಕಳೆದ ೨೦ ವರ್ಷಗಳ ಹಿಂದಿನಿಂದಲೇ ಪ್ರಯತ್ನಿಸಿದೆ ಆ ಪ್ರಯತ್ನದ ಫಲವೇ ಇಂದು ಪಾಲೋಮರ್ ಬೆಟ್ಟದಲ್ಲಿ ತಯಾರಾಗಿರುವ ೨೦೦ ಇಂಚು ವ್ಯಾಸದ ಕನ್ನಡಿ ಇರುವ ನೂತನ ದೂರದರ್ಶಕ ಯಂತ್ರವಾಗಿದೆ

ಈ ಮಹಾಯಂತ್ರವನ್ನು ಅಲ್ಲಿ ಕಟ್ಟಲ್ಪಟ್ಟಿರುವ ದರ್ಶನಾಲಯದ ಗೋಪುರದಲ್ಲಿ ಅಳವಡಿಸಲಾಗಿದೆ ಈ ಗೋಪುರದ ವ್ಯಾಸವು ೧೩೭ ಅಡಿ ಇದ್ದು ಎತ್ತರವು ೧೩೫ ಅಡಿ ಇದೆ ಈ ಗೋಪುರದಲ್ಲಿ ಅಳವಡಿಸಿದ ಈ ಯಂತ್ರದ ನಾನಾ ದಿಕ್ಕಿಗೆ ತಿರುಗಿಸಲು ಸಾಧ್ಯವಾದ ಭಾಗದ ಭಾರವೇ ೧೦೦೦ ಟನ್ನುಗಳಿಗಿಂಥಾ ಹೆಚ್ಚಾಗಿದೆ ಈ ಮಹಾ ಯಂತ್ರದ ಕೆಲಸವು ಪೂರೈಸಿ ಮುಂದೆ ಶೋಧನೆಗೆ ತೊಡಗಬಹುದೆಂದು ತೀರ್ಮಾನಿಸಿ ಕೆಲಸಕ್ಕೆ ಪ್ರಾರಭಿಸಿದಾಗ ಈ ದೂರ ದರ್ಶಕ ಯಂತ್ರದ ಹೊರ ಕನ್ನಡಿಯ ಎತ್ತರವು ಒಂದು ಇಂಚಿನ ೨೦ ಮಿಲಿಯ ಪಾಲಿನಷ್ಟು ಹೆಚ್ಚು ಎಂದು ತಿಳಿದುಬಂತು! ಇದನ್ನು ಸರಿಪಡಿಸಲು ಈಗ ವಿಜ್ಞಾನಿಗಳು ತೊಡಗಿದ್ದಾರೆ. ಇದನ್ನು ಸರಿಪಡಿಸಲು ಒಂದು ವರ್ಷಬೇಕಾಗುವದಂತೆ!

ಈ ದೂರದರ್ಶಕ ಯಂತ್ರವು ಕೇವಲ ಟೆಲಿಸ್ಕೋಪಲ್ಲ ಇದು ಒಂದು ಮಿಲಿಯ ಕಣ್ಣುಗಳು ಸಂಗ್ರಹಿಸ ಬಹುದಾದಷ್ಟು ಬೆಳಕನ್ನು ಸಂಗ್ರಹಿಸ ಬಲ್ಲುದಲ್ಲದೆ ಭೂಮಿಯಿಂದ ಸಾವಿರ ಮಿಲಿಯ ಜ್ಯೋತಿ ವರ್ಷಗಳಿಗೆ (ಒಂದು ಜ್ಯೋತಿ ವರ್ಷವೆಂದರೆ ೫,೮೮೦,೦೦೦,೦೦೦,೦೦೦ ಮೈಲುಗಳು) ದೂರವಿರುವ ವಸ್ತುಗಳನ್ನು ವಿಜ್ಞಾನಿಗಳಿಗೆ ವಿಶದವಾಗುವಷ್ಟು ಸ್ಪಷ್ಟವಾಗಿ ಚಿತ್ರ ತೆಗೆಯುವ ಚಿತ್ರಗ್ರಾಹಕ ಯಂತ್ರವೂ ಆಗಿದೆ

ಈ ಯಂತ್ರವು ಹೀಗೆಯೇ ಕೆಲಸ ಮಾಡುತ್ತದೆಯೆಂಬುದನ್ನು ಹೇಳುವದೂ ಕಷ್ಟ ಹೇಳಿದರೆ ನಮ್ಮಂದವರಿಗೆ ಅರ್ಥವಾಗುವದೂ ಇಲ್ಲ! ಈ ಯಂತ್ರದಿಂದ ಅನೇಕ ವಿಚಿತ್ರ ಸಂಗತಿಗಳು ತೋರಿ ಬರಬಹುದು ಈ ಯಂತ್ರದ ಶಕ್ತಿ ಎಷ್ಟಿದೆಯೆಂದರೆ ೨೦,೦೦೦ ಮೈಲು ದೂರದಲ್ಲಿ ಉರಿಯುತ್ತಿರುವ ಮೇಣದ ಬತ್ತಿಯನ್ನು ಇದು ಕಂಡು ಹಿಡಿಯ ಬಲ್ಲದು! ಇಂಥಾ ಅಮೋಘ ಶಕ್ತಿ ಇರುವ ಕಾರಣ ಆಕಾಶದ ಅನಂತದಲ್ಲಿ ಅಡಗಿರುವ ಹೊಸ ವಿಚಾರಗಳನ್ನು ತಿಳಿಯಲು ಸಹಾಯಕವಾಗುವದು

ಒಂದು ವಿಚಾರ ನೆನೆಸಿದರೆ ಆಶ್ಚರ್ಯವಾಗುತ್ತದೆ ಆಕಾಶದಲ್ಲಿ ತೋರುವ ಲಕ್ಷಾಂತರ ನಕ್ಷತ್ರಗಳನ್ನೂ ಮನುಷ್ಯನು ಗುರ್ತಿಸಿದ್ದಾನೆ! ಅವುಗಳಲ್ಲಿ ಕೆಲವು ಆತನಿಗೆ ಚಿರಪರಿಚಿತವಾಗಿವೆ ಕೆಲವಕ್ಕೆ ಆತನ ಹೆಸರಿಟ್ಟು ಕೊಂಡಿದ್ದಾನೆ ಸಾಮಾನ್ಯರಾದ ನಮ್ಮಂದವರಿಗೂ ಒಂದೆರಡು ನಕ್ಷತ್ರಗಳ ಪರಿಚಯವಿದೆ ಆದರೆ ಖಗೋಳ ಶಾಸ್ತ್ರಜ್ಞನು ಕಣ್ಣಿಗೆ ತೋರುವ ನಕ್ಷತ್ರಗಳೇ ಅಲ್ಲ, ಕಣ್ಣಿಗೆ ತೋರದಿರುವ ಕೋಟ್ಯಂತರ ನಕ್ಷತ್ರಗಳ ಪರಿಚಯ ಮಾಡಿಕೊಂಡು, ಇನ್ನೂ ಅಪಾರವಾದ ಆ ಅನಂತ ಆಕಾಶದಲ್ಲಿ ಏನಿದೆಯೆಂಬುದನ್ನು ಹುಡುಕುತ್ತಿದ್ದಾನೆ! ಆತನು ಈಗ ರಚಿಸಿರುವ ದೂರದರ್ಶಕ ಯಂತ್ರವು ಈ ವರೆಗಿನ ದೂರದರ್ಶಯಂತ್ರಗಳ ಸಹಾಯದಿಂದ ನೋಡುತ್ತಿದ್ದ ಪರಿಧಿಯ ಆಚೆ ೬೦೦ ಮಿಲಿಯ ಟ್ರಿಲಿಯ ಮೈಲುಗಳ ವರೆಗೆ ನೋಡಬಲ್ಲದು!

ಭೂಮಿಯಿಂದ ೬೦೦ ಮಿಲಿಯ ಜ್ಯೋತಿ ವರ್ಷಗಳ ದೂರದಲ್ಲಿ ಇತ್ತೀಚೆಗಾಗಿ ನಾಲ್ಕು ಹೊಸ ನಕ್ಷತ್ರಗಳ ಶೋಧಯಾಗಿದೆ ಭೂಮಿಯಿಂದ ಐವತ್ತು ಮಿಲಿಯ ಜ್ಯೋತಿ ವರ್ಷಗಳ ದೂರದಲ್ಲಿ ಒಂದು ನಕ್ಷತ್ರವು ತೋರಿ ಬಂದಿದೆ ಅದು ೮೦ ಮಿಲಿಯ ಸೂರ್ಯರಿಗಿಂಥಾ ಮಿಗಿಲಾದ ತೇಜಸ್ಸಿನಿಂದ ಕೂಡಿದೆಯಂತೆ! ಇವುಗಳೆಲ್ಲ ಕೇವಲ ನಕ್ಷತ್ರಗಳಲ್ಲ ಅವು ಒಂದೊಂದು ಮಹಾ ಆಕಾರದ ಅಗ್ನಿಕುಂಡಗಳು ಅವುಗಳ ಆಳ, ಅವು ಎಂಥಾದ್ದರಿಂದಾಗಿವೆಯೆಂಬುದನ್ನು ದೇವನೇ ಬಲ್ಲ ಅಂಥಾ ಮಾನವನು ತನ್ನ ಪ್ರಯತ್ನದಿಂದ ಈ ವರೆಗೆ ಭೂಮಿಯಿಂದ ೧೦೦೦ ಮಿಲಿಯ ಜ್ಯೋತಿ ವರ್ಷಗಳ ದೂರವಿರುವ ವಸ್ತುಗಳನ್ನು ಕಂಡುಹಿಡಿದ್ದಾನೆ

ಈ ಲೇಖನವನ್ನು ಓದುವವರಿಗೆ ಜ್ಯೋತಿ ವರ್ಷವೆಂದರೇನೆಂದು ಅರ್ಥವಾಗದೆ ಹೋಗಬಹುದು. ಅದ ಅರ್ಥವಾಗದಿದ್ದರೆ ಈ ಲೇಖನವು ಅರ್ಥವಾಗದು. ಅಗಾಧ ವಿಶ್ವದ ಕಲ್ಪನೆಯೂ ಆಗಲಾರದು

ಬೆಳಕು ಒಂದು ಸೆಕೆಂಡಿಗೆ ೧,೮೬,೨೮೩ ಮೈಲು ವೇಗವಾಗಿ ಪ್ರಯಾಣ ಮಾಡುತ್ತದೆ ಈ ಸೆಕೆಂಡು ಮಿನಿಟಾಗಿ, ಈ ಮಿನಿಟು ಗಂಟೆಯಾಗಿ, ಈ ಗಂಟೆ ದಿವಸವಾಗಿ, ಈ ದಿವಸ ತಿಂಗಳಾಗಿ, ಈ ತಿಂಗಳು ವರ್ಷವಾದರೆ ಅದಕ್ಕೆ ಜ್ಯೋತಿ ವರ್ಷವೆನ್ನುತ್ತಾರೆ ಇದರಂತೆ ಒಂದು ಜ್ಯೋತಿ ವರ್ಷದೂರವೆಂದರೆ ಮೇಲೆ ಹೇಳಿದಂತೆ ೫,೮೮೦,೦೦೦,೦೦೦,೦೦೦ ಮೈಲುಗಳು ಮನುಷ್ಯನು ಕಂಡು ಹಿಡಿದಿರುವ ವಸ್ತುಗಳು ಇಂಥಾ ೧೦೦೦ ಮಿಲಿಯ ಜ್ಯೋತಿ ವರ್ಷಗಳ ದೂರದಲ್ಲಿವೆ ಜಗತ್ತು ಎಷ್ಟು ಅಗಾಧವಾದದ್ದು! ಅದರ ಕಲ್ಪನೆಯನ್ನು ಊಹಿಸಬಲ್ಲಿರಾ? ಮನುಷ್ಯನೆಂದರೂ ಎಂಥಾ ವಿಚಿತ್ರ ಪ್ರಾಣಿ! ಈ ಚಿಕ್ಕ ತಲೆಯ ಸಹಾಯದಿಂದ ಎಂಥಾ ಅದ್ಭುತಗಳನ್ನು ಮಾಡುತ್ತಿದ್ದಾನೆ ಎಲ್ಲವೂ ಒಡೆಯಲಾಗದ ಒಗಟು, ಅಳೆಯಲಾರದ ಎತ್ತರ!

(ಇಂಗ್ಲೀಷ ಇಲ್ಲಸ್ಟ್ರೇಟೆಡ್ ವೀಕ್ಲಿ ಪತ್ರಿಕೆಯ ಲೇಖನದ ಆಧಾರದಿಂದ)

ಲೇ— ಶ್ರೀ ಬಿ ಡಿ ಗಣಪತಿ

CRESCENT

FOR PROTECTION AND SERVICE.

It is best to represent and insure with

The CRESCENT Insurance Co , Lt d,

H O BOMBAY] *[Established 1919*

For particulars write to

Sri B. A. Poovaiah or **The Branch Manager,**
Organiser *22 B Mahatma Gandhi Road,*
Pollibetta Coorg. *Bangalore 1*

ಸುರಕ್ಷಿತವಾದ ಜೀವವಿಮೆ ಪಡೆಯಲು

ಕ್ರೆಸೆಂಟ್

ಇನ್ಶೂರೆನ್ಸ್ ಕಂಪೆನಿಗೆ ಬರೆಯಿರಿ.

ವೀರಾಜಪೇಟೆಗೆ 'ಕೊಡಗು' ಪತ್ರಿಕೆಯ ಏಜೆಂಟರು ಶ್ರೀ ಟಿ. ಎನ್. ಗೋವಿಂದರಾಜುರವರು.

ರೈತನ ಪ್ರಪಂಚ

ಜಪಾನ್ ದೇಶದಲ್ಲಿ ವ್ಯವಸಾಯದ ಮುನ್ನಡೆ.

ಜಪಾನ್ ದೇಶದಲ್ಲಿ ವ್ಯವಸಾಯವು ಕ್ರಮವಾಗಿ ಮುಂದುವರಿಯುತ್ತಿರುವಂತೆ ಅವರ ವರದಿಯಿಂದ ಕಂಡು ಬರುತ್ತದೆ. 1935-39ನೇ ಸಂವತ್ಸರಗಳಲ್ಲಿ ಜಪಾನ್ ದೇಶದಲ್ಲಿ ದವಸಗಳ ಉತ್ಪತ್ತಿಯು ಇತರ ಎಲ್ಲಾ ದೇಶಗಳಲ್ಲಿನ ಉತ್ಪತ್ತಿಗಿಂತಲೂ ಹೆಚ್ಚು ಕಂಡುಬರುತ್ತಿದೆ. ಈ ವರ್ಷಗಳಲ್ಲಿ ಅಲ್ಲಿಯ ಉತ್ಪತ್ತಿಯು ಅಮೇರಿಕ ದೇಶದ ಉತ್ಪತ್ತಿಯ ಎರಡು ಪಾಲಿಗಿಂತಲೂ ಹೆಚ್ಚಾಗಿತ್ತು.

ಜಪಾನ್ ದೇಶದಲ್ಲಿ ದವಸಗಳ ಉತ್ಪತ್ತಿಯು ಇಷ್ಟರ ಮಟ್ಟಿಗೆ ಹೆಚ್ಚಾಗಲು ಅಲ್ಲಿಯ ಜನರು ವ್ಯವಸಾಯಕ್ಕೆ ಬೇಕಾಗುವ ನೀರಿನ ಸರಬರಾಯಿಯನ್ನು ಸಾಕಷ್ಟು ಒದಗಿಸಿ ಕೊಂಡದ್ದು, ಹೆಚ್ಚು ಬೆಳೆಕೊಡುವ ಸುಧಾರಿಸಿದ ಬೀಜಗಳನ್ನು ಹೆಚ್ಚಾಗಿ ಉಪಯೋಗಿಸುವುದು ಮತ್ತು ಕೃತಕ ಗೊಬ್ಬರಗಳನ್ನು ಶಾಸ್ತ್ರೀಯ ರೀತಿ ಉಪಯೋಗಿಸುತ್ತಿರುವುದೇ ಮುಖ್ಯ ಕಾರಣಗಳಾಗಿವೆ. ಜಪಾನಿನಲ್ಲಿ ನೀರಿನ ಸರಬರಾಯಿಯ ಪ್ರಶ್ನೆಯು ಒಂದು ವಿಶೇಷ ತರದ ಸಂಗತಿಯಾಗಿದೆ. ದೇಶವು ಚಿಕ್ಕದಾಗಿ ಬೆಟ್ಟಗುಡ್ಡಗಳಿಂದ ಕೂಡಿರುವದರಿಂದ ಇಲ್ಲಿ ಹುಟ್ಟುವ ನದಿಗಳು ಬಹು ಬೇಗನೆ ಸಮುದ್ರವನ್ನು ಸೇರುತ್ತಿವೆ. ಬೆಟ್ಟಗುಡ್ಡಗಳ ಸೀಮೆಯಾದುದರಿಂದ ನದಿಗಳು ಮಳೆಗಾಲದಲ್ಲಿ ಬಹು ಬೇಗನೆ ಉಕ್ಕಿ ಹರಿಯುವದರಿಂದ ಪ್ರವಾಹದ ತೊಂದರೆಯು ವಿಪರೀತವಾಗಿ ಕಂಡುಬರುತ್ತದೆ. ಆದುದರಿಂದ ಅವರು ಈಗ ಪ್ರವಾಹದ ಹಾವಳಿಯನ್ನು ತಪ್ಪಿಸಿ ನೀರಿನ ಸರಬರಾಯಿಯನ್ನು ಸರಿಪಡಿಸಿ ಹೆಚ್ಚು ತೇವವನ್ನು ಅರಿಸುವ ಅನೇಕ ಯೋಜನೆಯನ್ನು ತಯಾರಿಸಿರುತ್ತಾರೆ. ಸಾಧಾರಣ ಐದು ಮಿಲಿಯ ಎಕ್ರೆ ಜಮೀನಿಗೆ ಸಂಬಂಧಿಸಿ ಈ ರೀತಿ ಸುಧಾರಿಸುವ ಯೋಜನೆಗಳನ್ನು ಅವರು ಕೈಕೊಂಡಿದ್ದಾರೆ ಈ ಪೈಕಿ ಶೇಕಡ 17ರಷ್ಟು ಕೆಲಸವನ್ನು ಅವರು ಈಗಾಗಲೇ ಕಳೆದ ಎರಡು ವರ್ಷಗಳಲ್ಲಿ ಪೂರ್ತಿಗೊಳಿಸಿದ್ದಾರೆ. ಜಪಾನಿನ ಜನ ಸಂಖ್ಯೆಯು ವರ್ಷಕ್ಕೆ ಒಂದು ಮಿಲಿಯದಂತೆ ಹೆಚ್ಚಾಗುತ್ತಿದೆ. ಆದರೆ ಮಂಚೂರಿಯ ಫಾರ್ಮೋಸಾ ಪ್ರದೇಶಗಳಿಂದ ಅವರಿಗೆ ಒದಗುತ್ತಿದ್ದ ಆಹಾರ ಸಾಮಗ್ರಿಗಳು ಆ ಪ್ರದೇಶಗಳು ಅವರ ಕೈತಪ್ಪಿ ಹೋದುದರಿಂದ ಈಗ ಅವರಿಗೆ ಒದಗುತ್ತಿಲ್ಲ. ಇದಕ್ಕಾಗಿ ಅವರು ಐದು ಮಿಲಿಯ ಎಕ್ರೆಯ ಯೋಜನೆಯನ್ನು ಒಡನೆ ಪೂರ್ತಿಗೊಳಿಸಬೇಕಾಗಿದೆ. ಜಪಾನ್ ಬಹು ಚಿಕ್ಕ ದೇಶವಾದರೂ ಇಲ್ಲಿಯ ವ್ಯವಸಾಯ ಪರಿಶೋಧನೆ ಮತ್ತು ಪ್ರಚಾರ ಸಂಸ್ಥೆಗಳು ಇತರ ದೇಶಗಳ ಸಂಸ್ಥೆಗಳಿಗಿಂತಲೂ ಬಹುಮಟ್ಟಿಗೆ ಮುಂದುವರಿದವುಗಳಾಗಿವೆ. ಇದಕ್ಕೆ ಒಂದು ಉದಾಹರಣೆಯನ್ನು ಹೇಳುವದಾದರೆ ನಮ್ಮ ಇಂಡಿಯಾ ದೇಶದಲ್ಲಿ ಸುಧಾರಿಸಿದ ಉತ್ತಮ ತರದ ಬೀಜಗಳನ್ನು ಶೇಕಡ ಐದರಷ್ಟು ಜಮೀನುಗಳಲ್ಲಿ ಉಪಯೋಗಿಸುತ್ತಿರುವಾಗ ಜಪಾನಿನಲ್ಲಿ ಹೆಚ್ಚು ಕಡಿಮೆಯಾಗಿ ಅವರ ಎಲ್ಲಾ ಜಮೀನುಗಳಲ್ಲಿಯೂ ಸುಧಾರಿಸಿದ ಬೀಜಗಳನ್ನೇ ಉಪಯೋಗಿಸುತ್ತಿದ್ದಾರೆ. ವ್ಯವಸಾಯ ಪರೀಕ್ಷಾ ಕೇಂದ್ರಗಳೂ, ಪ್ರಚಾರ ಸಂಸ್ಥೆಗಳೂ ಸಹಕಾರ ಸಂಸ್ಥೆಗಳೂ ಒಟ್ಟಾಗಿ ಶ್ರಮಿಸಿ ಕೆಲಸ ಮಾಡುತ್ತಿರುವುದೇ ಜಪಾನಿನಲ್ಲಿ ರೈತರೆಲ್ಲರೂ ಶಾಸ್ತ್ರೀಯ ವ್ಯವಸಾಯ ಕ್ರಮಗಳನ್ನು ಕೈಕೊಂಡು ದೇಶದ ಉತ್ಪತ್ತಿಯನ್ನು ಹೆಚ್ಚಿಸಿರುವುದಕ್ಕೆ ಕಾರಣವಾಗಿದೆ. ದೇಶದ ವಿವಿಧ ಭಾಗಗಳ ವ್ಯತ್ಯಾಸವಿದೆ. ಪರೀಕ್ಷಾ ಕ್ಷೇತ್ರಗಳು ಮಣ್ಣಿನಲ್ಲಿ ಆಯಾ ಸ್ಥಳಕ್ಕೆ ಸರಿಯಾದ ಬೀಜಗಳನ್ನು ಕಂಡು ಹಿಡಿದಿರುತ್ತವೆ. 1930ನೇ ಇಸವಿಯವರೆಗೂ ಜಪಾನಿನಲ್ಲಿ ಗೋದಿಯು ಮುಖ್ಯ ಬೆಳೆಯಾಗಿರಲಿಲ್ಲ. ಆದರೆ ಅವ 1932ನೇ ಇಸವಿಯ ಐದು ವರುಷದ ಯೋಜನೆಯು ಪೂರ್ತಿಯಾಗುವುದರೊಳಗೆ ರೋಗಗಳನ್ನು ತಡೆಯಲು ಶಕ್ತಿ ಇರುವ ಮತ್ತು ಮೊದಲಾಗಿ ಕೊಯಿಲಿಗೆ ಬರುವಂಥ ಗೋದಿ ಬೀಜಗಳನ್ನು ಕಂಡು ಹಿಡಿದುದರಿಂದ ಈ ಐದು ವರ್ಷಗಳಲ್ಲಿ ಗೋದಿ ಬೆಳೆಯ ವಿಸ್ತೀರ್ಣವು ಎರಡು ಪಾಲಿಗಿಂತಲೂ ಹೆಚ್ಚಾಗಿ ಹರಡಲಾಯಿತು. ಅದೇ ರೀತಿಯಲ್ಲಿ ಬತ್ತದ ಉತ್ಪತ್ತಿಯು ಶೇಕಡ 70ರಷ್ಟು, ಗೋದಿಯ ಉತ್ಪತ್ತಿಯು ೧೪೦ರಷ್ಟು, ಮತ್ತು ಬಾರ್ಲಿಯ ಉತ್ಪತ್ತಿಯು ೧೧೯ರಷ್ಟು ಹೆಚ್ಚಾಯಿತು.

ಪರೀಕ್ಷಾ ಕ್ಷೇತ್ರಗಳಲ್ಲಿ ತಯಾರಿಸಿದ ಉತ್ತಮ ತರದ ಬೀಜಗಳನ್ನೂ ಮತ್ತು ಇತರ ಪರೀಕ್ಷಾ ಫಲಿತಾಂಶಗಳನ್ನೂ ಸಹಕಾರಿ ಸಂಸ್ಥೆಗಳು ಜನರಿಗೆ ಪ್ರಚಾರ ಮಾಡುತ್ತವೆ. ಅಲ್ಲಿ ಪ್ರತಿಯೊಂದು ಅಥವಾ ಹತ್ತಿರದ ಎರಡು ಮೂರು ಗ್ರಾಮಗಳಿಗೆ ಒಬ್ಬ ವ್ಯವಸಾಯದಲ್ಲಿ ತರಬೇತು ಹೊಂದಿದ ಸಿಬ್ಬಂದಿಯು ಇರುತ್ತಾನೆ. ಅವನು ಅಲ್ಲಿಯ ಜನರ ಅವಶ್ಯಕತೆಯನ್ನು ಅರಿತುಕೊಂಡು ಅವುಗಳನ್ನು ಪರೀಕ್ಷಾ ಕ್ಷೇತ್ರಗಳಿಗೆ ತಿಳಿಸುತ್ತಾನೆ ಮತ್ತು ಪರೀಕ್ಷಾ ಕ್ಷೇತ್ರಗಳು ಕಂಡು ಹಿಡಿಯುವ ಹೊಸ ಹೊಸ ಬೀಜಗಳನ್ನು ಅವನಿಗೆ ಸೇರಿದ ಗ್ರಾಮಗಳ ಹವಾಗುಣ, ಮಣ್ಣಿಗೆ ಸರಿ ಬೀಳುತ್ತವೊ ಎಂಬುದನ್ನು ಮೊದಲಾಗಿ ಪರೀಕ್ಷಿಸಿ ಜನರಿಗೆ ಹಂಚುವ ಕೆಲಸವನ್ನು ಮಾಡುತ್ತಾನೆ. ಜಪಾನಿನ ವ್ಯವಸಾಯ ಪರೀಕ್ಷಾ ಕ್ಷೇತ್ರಗಳು ಈ ರೀತಿ ಹೊಸ ಹೊಸ ಉತ್ತಮ ತರದ ಬೀಜಗಳನ್ನು ಕಂಡು ಹಿಡಿದಿರುವುದು ಮಾತ್ರವಲ್ಲದೆ ಬೆಳೆಗಳಿಗೆ ಅತ್ಯಾವಶ್ಯವಾಗಿ ಬೇಕಾಗುವ ಸಾರಜನಕ, ರಂಜಕ ಮತ್ತು ಪೊಟ್ಯಾಶ್ ಗೊಬ್ಬರಗಳು ಆದಾಯದಾಯಕವಾದ ಬೆಳೆಗಳನ್ನು ಬೆಳೆಸಲು ಎಷ್ಟೆಷ್ಟು ಬೇಕಾಗುತ್ತವೆಂಬುದನ್ನು ಅಲ್ಲಲ್ಲಿ ಪರೀಕ್ಷಿಸಿ ಅಲ್ಲಿಯ ಮಣ್ಣಿಗೆ ಈ ಗೊಬ್ಬರಗಳು ಎಷ್ಟೆಷ್ಟು ಪರಿಮಾಣದಲ್ಲಿ ಬೇಕಾಗಿದೆ ಎಂಬುದನ್ನು ನಿರ್ಧರಿಸಿದ್ದಾರೆ. ೧೯೩೬ನೇ ಇಸವಿಯಿಂದ ೧೯೪೦ನೇ ಇಸವಿಯ ಈ ಅವಧಿಯಲ್ಲಿ ಜನರು ಹೆಚ್ಚುಹೆಚ್ಚಾಗಿ ಕೃತಕಗೊಬ್ಬರಗಳನ್ನು ಉಪಯೋಗಕ್ಕೆ ತಂದರೂ ಹಟ್ಟಿ ಗೊಬ್ಬರವೇ ಇನ್ನೂ ರೈತರ ಮುಖ್ಯ ಗೊಬ್ಬರವಾಗಿ ಉಳಿದಿವೆ. ವ್ಯವಸಾಯಕ್ಕೆ ಬೇಕಾಗುವ ಸಾರಜನಕದ ಅರ್ಧಭಾಗವೂ, ರಂಜಕದ ಶೇಕಡ ೯೩ರಷ್ಟೂ, ಪೊಟೇಸಿನ ಶೇಕಡ ೯೯.೫ರಷ್ಟೂ ಈಗಲೂ ಸಾಮಾನ್ಯ ಗೊಬ್ಬರಗಳ ಮೂಲಕವೇ ಅವರು ಒದಗಿಸಿಕೊಳ್ಳುತ್ತಿದ್ದಾರೆ. ಅವರು ಉಪಯೋಗಿಸುವ ಸಾಮಾನ್ಯ ಗೊಬ್ಬರಗಳು ಮುಖ್ಯವಾಗಿ ದನದ ಗೊಬ್ಬರ, ಕಾಂಪೋಸ್ಟ್ ಗೊಬ್ಬರ, ಹಸರು ಸೊಪ್ಪಿನ ಗೊಬ್ಬರ, ಜನರ ಮಲಮೂತ್ರಗಳು, ಸಮುದ್ರ ಕಳೆಗಳು ಮತ್ತು ಬೂದಿ. ಮೇಲೆ ಹೇಳಿದ ರೀತಿಯಲ್ಲಿ ಜಪಾನಿನಲ್ಲಿ ವ್ಯವಸಾಯ ಪರೀಕ್ಷಾ ಕ್ಷೇತ್ರಗಳು ಆಯಾಯ ಹವಾಗುಣಕ್ಕೆ ತಕ್ಕದಾದ ಉತ್ತಮ ತರದ ಬೀಜಗಳ ಕಂಡು ಹಿಡಿದು ಅಲ್ಲಿಯ ಬೆಳೆಗಳಿಗೆ ಯಾವ ಯಾವ ಗೊಬ್ಬರಗಳು ಎಷ್ಟೆಷ್ಟು ಪರಿಮಾಣದಲ್ಲಿ ಬೇಕಾಗುತ್ತದೆಂಬುವುದನ್ನು ಅನೇಕ ವರ್ಷಗಳ ವರೆಗೆ ಪರಿಶೋಧಿಸಿ ಕಂಡು ಹಿಡಿದಿರುತ್ತಾರೆ, ಮತ್ತು ಪ್ರಚಾರ ಸಂಸ್ಥೆಗಳು ಪರೀಕ್ಷಾ ಕ್ಷೇತ್ರಗಳಲ್ಲಿ ಸಿಕ್ಕಿದ ಫಲಿತಾಂಶಗಳನ್ನು ಜನರಲ್ಲಿ ಸರಿಯಾದ ರೀತಿಯಲ್ಲಿ ಪ್ರಚಾರಪಡಿಸಿ ದೇಶದ ಉತ್ಪತ್ತಿಯನ್ನು ಬಹುಮಟ್ಟಿಗೆ ಅಭಿವೃದ್ಧಿ ಪಡಿಸಿರುತ್ತಾರೆ. ಜಪಾನ್ ದೇಶವು ಕೈಗಾರಿಕೆಯಲ್ಲಿ ಬಹಳ ಮುಂದುವರಿದಿದೆ. ಅಲ್ಲಿ ವವಸಾಯಕ್ಕೆ ಯಂತ್ರಗಳನ್ನು ಹೆಚ್ಚಾಗಿ ಉಪಯೋಗಿಸಲು ಸಾಧ್ಯವಿಲ್ಲದೆ ಶೇಕಡ ೦.೦೪ ಭಾಗದಷ್ಟು ಜಮೀನು ಮಾತ್ರ ಯಂತ್ರಗಳಿಂದ ವ್ಯವಸಾಯ ಮಾಡಲಾಗುತ್ತಿದೆ. ಆದರೆ ಇಲ್ಲಿ ವ್ಯವಸಾಯದ ಹತ್ಯಾರು ಮತ್ತು ಯಂತ್ರಗಳನ್ನು ಬೇಕಾದಂತೆ ತಯಾರಿಸುವ ಅನುಕೂಲತೆ ಇರುವುದರಿಂದ ಇಂಡಿಯಾ ದೇಶನೇ ಮೊದಲಾದ ಪೂರ್ವಗೋಳದ ದೇಶದವರು ತಮಗೆ ಬೇಕಾಗುವ ವ್ಯವಸಾಯದ ಹತ್ಯಾರು ಮತ್ತು ಯಂತ್ರಗಳನ್ನು ಜಪಾನ್ ದೇಶದಿಂದ ಸಾಕಷ್ಟು ಒದಗಿಸಿಕೊಳ್ಳಲು ಸಾಧ್ಯವಿದೆ.

—ಕೊಡಗು ವ್ಯವಸಾಯ ಇಲಾಖೆ.

ದಿ ಕೂರ್ಗ್ ಜನರಲ್ ಇಂಡಸ್ಟ್ರೀಸ್ ಲಿಮಿಟೆಡ್,
ಮಡಿಕೇರಿ.

ಮಹಾಜನರಲ್ಲಿ ವಿನಂತಿ.

ನಮ್ಮ ಫ್ರೇಜರ್‌ಪೇಟೆ ಕಾರ್ಖಾನೆಯಲ್ಲಿ ಈಗಾಗಲೇ ಮೂಳೆಗೊಬ್ಬರ ತಯಾರಾಗುತ್ತಿರುವುದು ಎಲ್ಲರಿಗೂ ತಿಳಿದ ವಿಷಯ. ಈ ಸಂದರ್ಭದಲ್ಲಿ ನಿಮ್ಮ ನಿಮ್ಮ ಗ್ರಾಮಗಳಲ್ಲಿ ಸತ್ತ ದನಗಳ ಮತ್ತು ಇತರ ಪ್ರಾಣಿಗಳ ಮೂಳೆಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಜಮಾಯಿಸಿ ಮೇಲಿನ ವಿಳಾಸಕ್ಕೆ ತಿಳಿಸಿದಲ್ಲಿ ಅದನ್ನು ಅವರ ಬೆಲೆ ಕೊಟ್ಟು ಸಾಗಿಸುವ ಏರ್ಪಾಡನ್ನು ಮಾಡುತ್ತೇವೆ. ಅಥವ ಲಾರಿಗಟ್ಲೆ ಜಮಾಯಿಸಿದವರು ನಮ್ಮ ಫ್ರೇಜರ್‌ಪೇಟೆ ಕಾರ್ಖಾನೆಗೆ ತಂದು ಕೊಟ್ಟಲ್ಲಿ ಮಣ 1ರ 0-12-0 ಯಂತೆ ಬೆಲೆಗೆ ತೆಗೆದುಕೊಳ್ಳಲಾಗುವುದು.

ಈಗಾಗಲೇ ತಯಾರಾಗಿರುವ ಮೂಳೆ ಗೊಬ್ಬರಕ್ಕೆ ಖಾಯಿಸ್‌ದಾರರು ಬರಕೊಂಡಲ್ಲಿ ಅಗ್ರಸ್ಥಾನವನ್ನನುಸರಿಸಿ ಬಟವಾಡೆ ಮಾಡಲಾಗುವುದು.

ಸೂಚನೆ:—ನಮ್ಮ ಕಂಪನಿಯ ಶೇರುದಾರರಿಗೆ ಹೆಚ್ಚಿನ ರಿಯಾಯತಿ ಮತ್ತು ಮೊದಲಿನ ಹಕ್ಕು ಕೊಡಲಾಗುವುದು.

ಮಡಿಕೇರಿ,
ತಾ. 19-5-49

ಕೆ. ಕೆ. ತಿಮ್ಮಯ್ಯ,
ಮೇನೇಜಿಂಗ್ ಡೈರೆಕ್ಟರ್.

THE WARDEN INSURANCE CO., Ltd.
(H. O. BOMBAY)

Managing Directer— S. H. THAKER Esq.

Business in Force	Rs.	4,50,00,000
New Business	,,	1,35,00,000
Assets	,,	75,00,000

Transacts:
LIFE, FIRE, ACCIDENT etc:

For Particulars Please Apply to:

A. S. Aiyappa,
Branch secretary,
GANDHI NAGAR,
BANGALORE CITY.

ದಿ ವಾರ್ಡೆನ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್,
ಗಾಂಧಿನಗರ, ಬೆಂಗಳೂರು ಸಿಟಿ.

Licence No. 60.
Licenced to Post without Prepayment

Reg. No. M. 1550.
'KODAGU' MERCARA, (Coorg).

ಕೊಡಗು

ಸಂಪಾದಕರು—ಪಿ. ಐ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. 5-0-0.

ಸಂಪುಟ ೩೦ | ತಾರೀಕು ೨೭-೬-೧೯೫೧ನೇ ಶುಕ್ರವಾರ | ಸಂಚಿಕೆ ೭

ಗ್ರಾಮ ಪರಿಚಯ.

ಕಾನೂರು.

ಲೇ:—ಶ್ರೀ ಎಂ. ಎಸ್. ಪೊನ್ನಪ್ಪ—ಕಾನೂರು.

ಇಂದು ಹಳ್ಳಿವಾಸವು ಜನತೆಗೆ ಜಗುಪ್ಸೆಯಾಗಿ ಪಟ್ಟಣವಾಸಕ್ಕೆ ಹಾತೊರೆಯುತ್ತಿದ್ದಾರೆ. ಪಟ್ಟಣದಲ್ಲಿರುವವರ ಐಶ್ವರ್ಯ ಅಂತಸ್ತುಗಳನ್ನು ನೋಡಿ ಹಳ್ಳಿಯ ಅವಿದ್ಯಾವಂತ ಜನರು ಮರುಳಾಗಿ ಅವರಂತೆಯೇ ತಾವೂ ಅತಿ ಐಶ್ವರ್ಯವನ್ನು ಕೂಡಹಾಕಿ ರಾಜಭೋಗವನ್ನು ಅನುಭವಿಸಬೇಕೆಂದು ಹವಣಿಸುತ್ತಿದ್ದಾರೆ. ತಮ್ಮ ಹೊಲಗದ್ದೆಗಳನ್ನು ತ್ಯಜಿಸಿ ಹಣ ಸಂಗ್ರಹಕ್ಕಾಗಿ ವ್ಯಾಪಾರ ಮಾಡಲು ಉದ್ಯುಕ್ತರಾಗಿ ಪಟ್ಟಣಕ್ಕೆ ಹೋಗುವುದರಿಂದ ದೇಶದ ಆರ್ಥಿಕ ಸ್ಥಿತಿಯು ದುರವಸ್ಥೆಗೆ ಇಳಿಯುತ್ತಿದೆ. ಅದೂ ಅಲ್ಲದೆ ಜನರ ಆರ್ಥಿಕ ಸ್ಥಿತಿಯೂ ಕೆಟ್ಟು, ನೈತಿಕ ಮಟ್ಟದಿಂದ ಕೆಳಗಿಳಿದು, ಆಧ್ಯಾತ್ಮಿಕ ಜೀವನದಿಂದ ದೂರವಾಗಿ ಢಂಬಾಚಾರ, ಅತ್ಯಾಚಾರದಿಂದ ಅಧೋಗತಿಗಿಳಿಯುತ್ತಿದ್ದಾರೆ. ಇದನ್ನು ಮುಂದಾಗಿ ತಿಳಿದ ಬಾಪೂಜಿಯು 'ಗೋ ಬ್ಯಾಕ್ ಟು ದಿ ವಿಲೇಜ್' ಅಂದಿದ್ದರು. ಗ್ರಾಮವಾಸವು ಆಧ್ಯಾತ್ಮಿಕ ಜೀವಿಗೆ ಮಾತ್ರ ಸಾಧ್ಯವಿದೆ. ಹಾಗೆ ಪೇಟೆಪಟ್ಟಣಗಳ ಜಂಝಡದಿಂದ ದೂರವಾಗಿ ಶಾಂತಿಮಯವಾದ ವಾತಾವರಣದಲ್ಲಿ ಪರರನ್ನು ಕಿರುಕುಳಪಡಿಸದೆ ಪವಿತ್ರ ಜೀವನವನ್ನು ನಡೆಸಬೇಕೆಂದರೆ ಕಾನೂರಿಗೆ ಬನ್ನಿ (ರೇಷನ್ ಸಹಿತ!)

'ಕಾನೂರಿಗೆ ಬನ್ನಿ' ಎಂದಾಗ ನಮ್ಮಲ್ಲಿಗೆ ಯಾರೂ ಬರುವುದಿಲ್ಲವೆಂದಲ್ಲ. ಪಟ್ಟಣದಿಂದ ಏಳು ಮೈಲುಗಳ ದೂರದಲ್ಲಿದ್ದರೂ ಚುನಾವಣೆಗೆ ನಿಲ್ಲುವ ಹುರಿಯಾಳುಗಳೂ, ಚಂದಾ ಪಟ್ಟಿಯನ್ನು ಹೊತ್ತ ತರುವ ಸಾರ್ವಜನಿಕ 'ಸವಾರರೂ' ಡ್ಯೆಂಬರಿದು ಭತ್ಯ ಪಡೆಯುವ ಸರಕಾರಿ ನೌಕರರೂ ಇಲ್ಲಿಗೆ ಬರುತ್ತಾರೆ. ಇವರೆಲ್ಲರೂ ಸ್ವರ್ಗದ ಕಾಮಧೇನು ಕಲ್ಪವೃಕ್ಷವನ್ನು ಕಾನೂರಿಗೆ ತರುವುದಾಗಿಯೂ ಭರವಸೆ ಕೊಡುತ್ತಾರೆ. ಆದರೆ.........?

ಕಾನೂರಿಗೆ ಪೇಟೆಯಿಂದ ಲೋಕಲ್ ಫಂಡ್ ರಸ್ತೆಯೊಂದಿದೆ. ಎರಡು ಚಕ್ರದ ಗಾಡಿ, ನಾಲ್ಕು ಚಕ್ರದ ಜೀಪು ಆರು ಚಕ್ರದ ಲಾರಿಗಳು ಮಾತ್ರ ಓಡಾಡಬಹುದು. ಈ ರಸ್ತೆಯ ಸೊಗಸನ್ನು ತಿಳಿಯಬೇಕಿದ್ದರೆ ಈ ವಾಹನಗಳಲ್ಲಿ ಕುಳಿತು ಪ್ರಯಾಣ ಮಾಡಿ ನೋಡಬೇಕು. ಸಮುದ್ರದ ಅಲೆಗಳ ಮೇಲೆ ದೋಣಿಗಳು ಓಡಾಡಿದಂತಾಗುವುದು. ಎರಡೂ ಕೈಗಳು ಗಟ್ಟಿಯಾಗಿ ವಾಹನಗಳ ಬದಿಗಳನ್ನು ಹಿಡಿದಿರಬೇಕು. ಇಲ್ಲದಿದ್ದರೆ ನಿಮ್ಮ ಜೀವದ ಹಕ್ಕು ನಿಮಗಿರದು. ಇಷ್ಟು ಸುಪ್ರಯಾಣದ ನಂತರ ಕೊನೆಯಲ್ಲಿ ಲಕ್ಷ್ಮಣತೀರ್ಥ ಹೊಳೆಯು ಸಿಗುತ್ತದೆ. ಒಂದು ಸ್ಥಳದಲ್ಲಿ ನದಿಯಿದ್ದರೆ ಅದಕ್ಕೆ ಕಟ್ಟೆಕಟ್ಟಿ ನೀರಾವರಿ ಕಾಲುವೆಗಳನ್ನು ತೆಗಿಸಿ ರೈತರಿಗೆ ಹಿತವಾಗುವಂತೆ ಮಾಡುವುದು ಜನತಾ ಸರಕಾರದ ಕರ್ತವ್ಯ. ಹೆಚ್ಚು ಆಹಾರ ಪದಾರ್ಥವನ್ನು ಬೆಳೆಸಲನುಕೂಲವಾಗುವುದರಿಂದ ನದಿಯು ಪವಿತ್ರವೆನಿಸಿಕೊಳ್ಳುತ್ತದೆ; ಸರಕಾರವು ಜನಹಿತ ಸರಕಾರವೆನ್ನಿಸಿಕೊಳ್ಳುತ್ತದೆ. ಆದರೆ ಅಲ್ಲಿ ಹಾಗಲ್ಲ. ವಾಹನಗಳಲ್ಲಿ ಬಂದುವರು ಅದನ್ನು ನದಿಯ ಆಚೆ ದಡದಲ್ಲಿ ನಿಲ್ಲಿಸಿ ಪಾದರಕ್ಷೆಗಳನ್ನು ಕೈಯಲ್ಲಿ ಹಿಡಿದು, ಇಜಾರನ್ನು ಮೇಲಕ್ಕೆತ್ತಿ ಅಥವಾ ಬಿಚ್ಚಿ ನದಿಯಲ್ಲಿಳಿಯಬೇಕು. ಅಂದರೆ ಪೇಟೆಪಟ್ಟಣಗಳಿಂದ ಬರುವ ಸಾಂಕ್ರಾಮಿಕ ರೋಗ, ಅಂದರೆ ಮೋಸ, ದಗಾ, ಅಸತ್ಯವನ್ನು ತೊಳೆದುಕೊಂಡು ಕಾನೂರಿನಲ್ಲಿ ಕಾಲಿಡುವಿರಿ! ಮಳೆಗಾಲದಲ್ಲಾದರೆ ಸ್ನಾನ ಸಂಧ್ಯಾಕರ್ಮಗಳನ್ನು ಮುಗಿಸಿಕೊಂಡು ಅನ್ನದ ಆತುರದಿಂದ ಹಸಿವು ಬಾಯಾರಿಕೆಯಿಂದ ಈಚೆ ದಡವನ್ನು ಸೇರುವಿರಿ. ಮಳೆಗಾಲದಲ್ಲಿ ನದಿ ದಾಟುವವರು ಜೀವ ವಿಮೆ ಖಂಡಿತ ಮಾಡಿರಲೇಬೇಕು.

ನದಿ ದಾಟಿದ ನಂತರ ಒಂದು ನುರುಕು ಶಾಲೆಯು ಮುಂದಾಗುವುದು. ಇದೇ ಕಾನೂರು ಶಾಲೆ. ನಮ್ಮ ಜಿಲ್ಲಾ ಬೋರ್ಡಿನ ಆಡಳಿತದ ವೈಶಿಷ್ಟ್ಯವನ್ನು ಇಲ್ಲಿ ನೋಡಬಹುದು. ಹೊಸದಾಗಿ ಒಂದು ಶಾಲೆಯನ್ನು ಗ್ರಾಮದ ಜನರೇ ಕಟ್ಟಿಸುತ್ತಿದ್ದಾರೆ. ವಸೂಲಾದ ಚಂದಾ ಹಣದಿಂದ ಅರ್ಧ ಕೆಲಸ ಮುಗಿದು ಸರಕಾರವು ಭರವಸೆಯಿತ್ತ ಸಹಾಯ ಧನಕ್ಕಾಗಿ ಶಾಲೆಯು ಬಾಯಿ ತೆರೆದುಕೊಂಡು ಸರಕಾರದ ಕಡೆ ಆಶಾದೃಷ್ಟಿಯಿಂದ ನೋಡುತ್ತಿದೆ. ಇದರ ಎಡಭಾಗದಲ್ಲಿ ಧರ್ಮಾರ್ಥವಾಗಿ ಗ್ರಾಮದ ಉದಾರಿಯೊಬ್ಬರು ಕಟ್ಟಿಸಿದ ಆಸ್ಪತ್ರೆಯೊಂದಿದೆ. ಇದು ಅರಸಿನ ಕುಂಕುಮವಿಲ್ಲದ ಸ್ತ್ರೀಯಂತಾಗಿದೆ. ಔಷಧಿಯೂ ಇಲ್ಲ. ಡಾಕ್ಟರರೂ ಇಲ್ಲ. ಇನ್ನೂ ಮುಂದೆ ಹೋದರೆ ಕಾಫಿ ಹೋಟೇಲುಗಳು ಎರಡು ಸಿಗುವವು. 'ಉಡುಪಿ ಬ್ರಾಹ್ಮಣರ ಕಾಫಿ ಹೋಟೆಲು' ಆ ಸೇತು ಹಿಮಾಚಲದ ವರೆಗೂ ಇವರ ಬೋರ್ಡು ತೂಗುತ್ತಿರುವಾಗ ನಮ್ಮ ಊರಲ್ಲಿ ತೂಗುವುದೇನು ವಿಶೇಷ? ಹೋಟೇಲ ಹಿಂಬದಿಯು ಬ್ರಾಹ್ಮಣತನದ ಒರೆಗಲ್ಲಾಗಿದೆ. ಇವುಗಳಲ್ಲಿ ಸಕ್ಕರೆ ಬೆಲ್ಲವಿಲ್ಲದ ತಂಪಾದ ಚಾ, ಬಿಸಿ ಬಿಸಿ ಕಾಪಿ ದೊರೆಯುತ್ತೆ. ಪ್ರಯಾಣದ ಪರಿಶ್ರಮವನ್ನು ಇದನ್ನು ಕುಡಿದು ಮರೆಯಲೇಬೇಕು. ಪ್ರತಿಯೊಬ್ಬರಿಗೂ ಸ್ವರ್ಗಕ್ಕೆ ಹೋಗಬೇಕೆಂಬಾಸೆಯಿದೆ. ಆದರೆ ಸಾಯುವುದಕ್ಕೆ ಯಾರೂ ತಯಾರಿಲ್ಲ. ಸಾಯದೆ ಸ್ವರ್ಗ ಸಿಗುವುದೆ? ಶ್ರಮವಿಲ್ಲದೆ ಫಲವಿರುವುದೆ?

ಇಷ್ಟು ದೂರದ ಪ್ರಯಾಣದ ಪರಿಶ್ರಮದಿಂದ ನೀವು ಬೇಸತ್ತು ಹೋಗಬಹುದು. ರಸ್ತೆ, ಸೇತುವೆ, ಶಾಲೆ, ಆಸ್ಪತ್ರೆಗಳನ್ನು ಸರಿಯಾದ ವ್ಯವಸ್ಥೆಯಲ್ಲಿಡುವುದು ಸರಕಾರದ ಕೆಲಸ. ಅದರಲ್ಲೂ ರೈತರು ಕೈಹಾಕಬೇಕೆ? ಇನ್ನು ರಸ್ತೆಯಿಂದ ಗ್ರಾಮದ ಮನೆಗಳ ಕಡೆ ನಡೆಯಿರಿ. ಪ್ರತಿ ಮನೆಯಲ್ಲೂ ನಿಮಗೆ ಸ್ವಾಗತವಿದೆ ಆದರ ಸತ್ಕಾರವಿದೆ. ಅವರ ಹೊಲಮನೆಗಳನ್ನು ನೋಡುವುದೇ ಆನಂದ. ಪ್ರತಿಯೊಬ್ಬ ರೈತನಿಗೂ ತನ್ನದೇ ಆದ ಹೊಲ, ಮನೆ, ಕಾಫಿ ಕಿತ್ತಳೆಯ ತೋಟ, ಬಾಳೆ ಅಡಿಕೆ, ತೆಂಗು, ನಿಂಬೆ ಎಂಬದಾಗಿ ವಿವಿಧ ತೋಟಗಳು ಮನೆಯ ಸುತ್ತಲೂ ಇವೆ. ಮನೆಯ ಆವರಣದಲ್ಲಿ ಹೂವು ಹಣ್ಣು ತರಕಾರಿ ತೋಟಗಳು ನಂದನವನದಂತಿವೆ. ಪ್ರತಿ ಮನೆಯಲ್ಲೂ ಪವಿತ್ರ ಪ್ರೇಮದಿಂದ ಕೂಡಿದ ಸಂಸಾರವು ಎಂಥ ಸನ್ಯಾಸಿಯನ್ನಾದರೂ ಸಂಸಾರದಲ್ಲಿ ಕಾಲಿಡುವಂತೆ ಪ್ರೇರೇಪಿಸುತ್ತದೆ.

ಗ್ರಾಮದಲ್ಲಿ ಒಂದೆರಡು ದೇವಸ್ಥಾನಗಳನ್ನು ನೋಡಬಹುದು. ಪ್ರಾಣಿಗಳನ್ನು ಬಲಿತೆಗೆದುಕೊಳ್ಳುವ ಪದ್ಧತಿಯನ್ನು ಇಲ್ಲಿಯ ದೇವರುಗಳು ಬಿಟ್ಟಿದ್ದಾರೆ. ಬೇಕೆಂದರೂ ಇಲ್ಲಿಯ ಜನರು ಕೊಡುವಂತಿಲ್ಲ. ದೇವರನ್ನು ಇಲ್ಲಿಯವರು 'ಕಂಟ್ರೋಲ್' ಮಾಡಿದ್ದಾರೆ. ಸಾವಿರ ಬಲಿಕೊಡುವಲ್ಲಿ ಒಂದಕ್ಕಿಳಿಸಿದ್ದಾರೆ. ಇಲ್ಲಿ ಮನುಷ್ಯನನ್ನು ದೇವರು ಹಿಡಿದುಕೊಂಡು ಜೋಲಾಡಿಸುವುದಿಲ್ಲ. ಪಿಶಾಪಿಶಾಚಿಗಳು ಕಡಿಮೆ. ಇಲ್ಲಿಯ ಜನರಿಗೆ ಜನಪದ ಸಾಹಿತ್ಯದಲ್ಲಿ ಆಸಕ್ತಿ ಹೆಚ್ಚಾಗಿದೆ. ಬಸವೇಶ್ವರ ನಾಟಕಮಂಡಳಿಯು ಅನೇಕ ಪೌರಾಣಿಕ ನಾಟಕಗಳನ್ನು ಕಲಾಪೂರ್ಣವಾಗಿ ಅಭಿನಯಿಸುತ್ತದೆ. ಶ್ರೀಕೃಷ್ಣನು 'ವೆಸ್ಟೆಂಡ್' ಕೈಗಡಿಯಾರ ಕಟ್ಟಿಕೊಂಡು ರುಕ್ಮಿಣಿಯೊಡನೆ ಮುದ್ದಾಡುವುದಿಲ್ಲ. ಸಿನೆಮಾದಲ್ಲಿ ಗಂಡಸತ್ತಾಗ ಹೆಂಡತಿಯು ರಾಗ, ತಾಳ, ಲಯಗಳಿಗನುಸಾರವಾಗಿ ಶಾಸ್ತ್ರೀಯ ಸಂಗೀತವನ್ನು ಹಾಡುವಂತೆ ಈ ನಾಟಕದಲ್ಲಿ ಅಭಿನಯಿಸುವುದಿಲ್ಲ. ಸಿನೆಮಾದಲ್ಲಿ ಭರತನಾಟ್ಯ, ತ್ರಿಪುರನೃತ್ಯ, ಕಥಕಳಿಯಲ್ಲಿ ಕಾಣುವ 'ಕಪಿಕಳಿ' ಮಿಶ್ರಿತರ ಕಾಮಪ್ರಚೋದಕ ಅಭಿನಯಗಳನ್ನು ಇಲ್ಲಿ ನೋಡಲಾರಿರಿ. ಆದರ ಬದಲು ಜನರನ್ನು ಅಜ್ಞಾನದಿಂದ ಜ್ಞಾನಮಾರ್ಗಕ್ಕೆ ತಿರುಗಿಸುವ ಜನಪದ ಸಾಹಿತ್ಯದ ಶ್ರೀಮಾರ್ಗವನ್ನು ನೋಡಬಹುದು.

ಮುದುಕನೊಬ್ಬನು ಪ್ರಾಯದ ಹುಡುಗಿಯೊಬ್ಬಳನ್ನು ಎರಡನೆ ವಿವಾಹಮಾಡಿಕೊಳ್ಳುತ್ತಾನೆ. ಅವಳಿಗೆ ಆತನೊಡನೆ ಜೀವನವು ಬೇಸರಿಕೆಯಾಗಿ ನೆರೆಯವನೊಬ್ಬನೊಡನೆ ಸ್ನೇಹಬೆಳೆಸುತ್ತಾಳೆ. ದೃಷ್ಟಿ ಕಡಿಮೆಯಾದ ಮುದುಕನು ಇದನ್ನು ಹೇಗೋ ತಿಳಿದುಕೊಂಡು ಅವಳನ್ನು ಶಿಕ್ಷಿಸುತ್ತಾನೆ. ತನ್ನ ಹಿರಿಹೆಂಡತಿಯ ಮಗಳಿಗೆ ಲಗ್ನದ ಪ್ರಾಯವಾಗಿದ್ದರೂ ಲಗ್ನ ಮಾಡದೆ ನೆರೆಕರೆಯವರು ಕೇಳಿದಾಗ ತನ್ನದೇ ಆದ ಕವಿತಾಶೈಲಿಯ ಒಗಟಿನಲ್ಲಿ 'ಕೊಟ್ಸ್‌ಕತ್ತಿಲ್ ಕೊಡ್ಪದಿಲ್ಲ, ಬಾಳ್‌ಕತ್ತಿ ಬಪ್ಪದಿಲ್ಲ' ಎಂಬದಾಗಿ ಹೇಳುತ್ತಾನೆ. ಅಂದರೆ ಪ್ರಾಮುಖ್ಯಗೋಷ್ಠಿಗೆ ಯೋಗ್ಯತೆನಿಸಿಕೊಳ್ಳುವವರು ಕೇಳುವುದೂ ಇಲ್ಲ, ಸಾಮಾನ್ಯ ತರದ ವರನಿಗೆ ಕೊಡುವುದೂ ಇಲ್ಲವೆಂಬದಾಗಿ ಹೇಳಿ ಕಾಲ ನೂಕುತ್ತಿರುತ್ತಾನೆ. ಚಿಕ್ಕ ತಾಯಿಯ ಚಾಳಿಯನ್ನು ನೋಡಿದ ಮಗಳು ನೆರೆಮನೆಯ ಯುವಕನೊಡನೆ ಸಖ್ಯ ಬೆಳೆಸಿ ತಂದೆಯ ಕಣ್ತಪ್ಪಿಸಿ ನಡೆಯುತ್ತಾಳೆ. ತಂದೆಗೆ ಸಂದೇಹವುಂಟಾಗಿ ಕೇಳಿದಾಗ ಮಗಳು ಹೆಣ್ಣಿನ ಚತುರತೆಯನ್ನೆಲ್ಲಾ ಉಪಯೋಗಿಸಿ ತಂದೆಯ ಮನವೊಲಿಸಿಕೊಳ್ಳುತ್ತಾಳೆ. ಆದರೆ ಕೆಲವು ದಿನಗಳಲ್ಲಿ ಮಗಳ ಶರೀರ ಪ್ರಕೃತಿಯಲ್ಲಿ ಬದಲಾವಣೆ ಕಂಡು ಗಾಬರಿಗೊಳ್ಳುತ್ತಾನೆ. ನೆರೆಮನೆಯ ಯುವಕನು ಪಟ್ಟಣದ ಶಾಲೆಗೆ ಹೋಗಿ ಅರ್ಧಮರ್ಧ ಇಂಗ್ಲೀಷು ಕಲಿತದನ್ನು ಹಳ್ಳಿಗರ ಮುಂದೆ ಪ್ರದರ್ಶಿಸಿಕೊಂಡು ಆಧುನಿಕ ರೀತಿಯಲ್ಲಿ ಅಲಂಕರಿಸಿಕೊಂಡು ಸುತ್ತಾಡುತ್ತಿರುತ್ತಾನೆ. ಇದನ್ನು ನೋಡಿದ ತಂದೆಯು ಹಲ್ಲು ಕಚ್ಚಿಕೊಳ್ಳುತ್ತಾನೆ. ಆದರೆ ಏನೂ ಮಾಡಲಾಗುವುದಿಲ್ಲ. 'ಸ್ತ್ರೀ ಸ್ವಾತಂತ್ರ್ಯ' ಅಡ್ಡ ಬಂದು ಆ ಹುಡುಗನಿಗೇ ವಿವಾಹಮಾಡಿ ಕೊಡುತ್ತಾನೆ. ಮುದುಕನು ಕಲಿಗಾಲದ ಮಹಿಮೆಯೆಂದು ಕಾಲವನ್ನು ಹಳಿಯುತ್ತಾನಲ್ಲದೆ ವೃದ್ಧಾಪ್ಯದಲ್ಲಿ ಯುವತಿಯನ್ನು ಕಟ್ಟಿಕೊಂಡದ್ದು ಪ್ರಾಯಪೂರಿತ ಮಗಳನ್ನು ಲಗ್ನಮಾಡದೆ ಮನೆಯಲ್ಲಿಟ್ಟುಕೊಂಡದ್ದು ತನ್ನ ತಪ್ಪೆಂದು ತಿಳಿಯಲಾರ.

ಆಧುನಿಕ ನಾಗರಿಕತೆಗಾಗಿಯೂ ಧನಾರ್ಜನೆಗಾಗಿಯೂ ಜನತೆಯು ಇಂದು ಪೇಟೆಪಟ್ಟಣಗಳತ್ತ ಧಾವಿಸತೊಡಗಿ ಹಿಂದೂಸ್ಥಾನದ ಪ್ರಾಚೀನ ಸಂಸ್ಕೃತಿಯು ಹಾಳಾಗಿ ಜನತೆಯ ನೈತಿಕ ಮಟ್ಟವು ಅಧೋಗತಿಗಿಳಿಯುತ್ತಿದೆ. ಇದನ್ನು ಪುನರುದ್ಧಾರ ಮಾಡಬೇಕಾದರೆ ನಮ್ಮ ರಾಷ್ಟ್ರೀಯ ಸರಕಾರದ ಮತ್ತು ಸಾರ್ವಜನಿಕ ಕೆಲಸಗಾರರ ದೃಷ್ಟಿಯು ಗ್ರಾಮಗಳ ಕಡೆಗೆ ಹರಿಯಗೊಡಬೇಕು. ಬಾಪೂಜಿಯ ಕನಸಿನ ರಾಮರಾಜ್ಯವನ್ನು ಕಟ್ಟಬೇಕಾದರೆ ಹಳ್ಳಿಯ ಕಡೆಗೆ ಜನತೆಯ ಮನವು ಹರಿಯಬೇಕು. 'ಹಳ್ಳಿಮುಕ್ಕ ದಿಲ್ಲಿ ಕಡಿದ್ದಾನೆ?' ಎಂಬ ನಾಣ್ಣುಡಿಯು ಅಳಿಸಬೇಕು. ಈ ಹಳ್ಳಿ ಮುಕ್ಕನ ಓಟು ದಿಲ್ಲಿಯಲ್ಲಿ ಅಧಿಕಾರ ನಡಿಸಬಲ್ಲುದೆಂಬುದನ್ನು ತಿಳಿದುಕೊಳ್ಳಬೇಕು.

ನಿಮ್ಮ ಓಟು ಯಾರಿಗೆ?

ಕಾಂಗ್ರೆಸ್ಸಿಗರೋ–ಸೋಶಲಿಸ್ಟ್ ಪಾರ್ಟಿಗೋ– ಕಮ್ಯೂನಿಸ್ಟರಿಗೋ– ಪ್ರಜಾ ಪಾರ್ಟಿಗೋ– ಹಿಂದೂ ಮಹಾಸಭೆಗೋ ಎಂಬುದು ಕೇಳುವವರಿಗಿಂತ ಹೇಳುವವರಿಗೇ ದೊಡ್ಡ ಸಮಸ್ಯೆಯಾಗಿದೆ. ಈ ಬಾರಿಯ ಪ್ರೌಢ ಮತದಾನ ಪದ್ಧತಿಯ ಕ್ರಮದಿಂದ ಯಾವ ಪಾರ್ಟಿ ಗೆಲ್ಲಬಹುದೆಂಬುದೇ ಇನ್ನೊಂದು ಕುತೂಹಲ ಪೂರ್ಣವಾದ ವಿಚಾರ. ಭಾರತ ಇತಿಹಾಸದಲ್ಲಿಯೇ ಈ ಚುನಾವಣೆ ಮಹತ್ವದ್ದೆನ್ನಬೇಕು. ಹಣದ ಬಲದಿಂದಾಗಲೀ– ವ್ಯಕ್ತಿಕ ಪ್ರಭಾವದಿಂದಾಗಲೀ– ಈ ಬಾರಿ ಗೆಲ್ಲುವ ಸಂದರ್ಭ ಬಹಳ ಕಡಿಮೆ. ಬಿಸಿ ರಕ್ತದ ತರುಣರ ಒಲವು ಯಾವ ಕಡೆಗೆ ಹರಿಯಬಹುದೆಂಬುದನ್ನು ನಾವು ಊಹಿಸುವದು ಕಷ್ಟ ಸಾಧ್ಯವಾಗಿದೆ. ದೇಶದಲ್ಲಿ ನಿರುದ್ಯೋಗ ಹೆಚ್ಚಾಗಿರುವದರಿಂದ ದೇಶದ ತರುಣ ಜನಾಂಗ ಬಡತನ– ದಾರಿದ್ರ್ಯಗಳಿಗೆ ಸರಕಾರವೇ ಕಾರಣವೆಂದು, 'ನಮಗೆ ಕಮ್ಯೂನಿಸ್ಟ ಸರಕಾರ ಬರಲಿ' ಎನ್ನುತ್ತಾರೆ. ಕಮ್ಯೂನಿಸ್ಟ ಸರಕಾರ ಬಂದರೆ ಸರ್ವರಿಗೂ ಉದ್ಯೋಗ ದೊರಕಿ ಸರ್ವರಿಗೂ ಉಣಲು ಅನ್ನ, ಉಡಲು ಬಟ್ಟೆ ದೊರಕಬಹುದೆಂಬುದು ಅವರ ಕಲ್ಪನೆಯಾಗಿದೆ. ಹಳ್ಳಿಯಲ್ಲಿ ನುಡಿಯುವ ಬಡ ರೈತರಲ್ಲೂ ಒಂದು ಬಗೆಯ ಅಸಂತೃಪ್ತಿ– ಕ್ರಾಂತಿಯ ಭಾವನೆ ಮೂಡಿದೆ. ಸೋಶಲಿಸ್ಟ ಪಾರ್ಟಿ ಬಂದರೆ ಹೊಲ ಭೂಮಿ ಯೆಲ್ಲ ತಮ್ಮ ಸ್ವಾಧೀನಕ್ಕೆ ಬಂದು ತಾವೇ ಮಾಲೀಕರಾಗಬಹುದೆನ್ನುವ ಆಶಾವಾದಿಗಳಾಗಿದ್ದಾರೆ. ಸೋಶಲಿಸ್ಟರು ಕೊಡುವ ಭರವಸೆ ಆತಗಳಿಂದ ಕಾಂಗ್ರೆಸ್ಸಿನಿಂದ ತಮಗೆ ಸುಖವಿಲ್ಲವೆಂಬ ಅಭಿಪ್ರಾಯ ಹುಟ್ಟಿದೆ. ಇಂದು ದೇಶದ ಹಲವು ಕಡೆಗಳಲ್ಲಿ ಹೊಲದೊಡೆಯರಿಗೂ– ರೈತರಿಗೂ ಆದ ಜಗಳದಲ್ಲಿ ಸೋಶಲಿಸ್ಟರೇ ಮುಖ್ಯ ಪಾತ್ರಧಾರಿಗಳು. ಕೂಲಿಕಾರರು ಹಾಗೂ ಕಾರ್ಮಿಕ ವರ್ಗಗಳ ಸಂಘಟನೆಯಲ್ಲಿ ಕಮ್ಯೂನಿಸ್ಟ ಹಾಗೂ ಸೋಶಲಿಸ್ಟ ಪಕ್ಷಗಳ ಕೈವಾಡವೇ ಹೆಚ್ಚು! ಧರ್ಮನಿಷ್ಟರೂ, ಹಿಂದೂ ಮತಾಭಿಮಾನಿಗಳೂ, ಅಖಂಡ ಹಿಂದೂಸ್ಥಾನಕ್ಕಾಗಿ ಹೋರಾಡುವವರೂ ಹಿಂದೂ ಮಹಾಸಭೆಯ ಬಾಲ ಹಿಡಿಯುತ್ತಾರೆ. ಹಿಂದೂ ಮಹಾಸಭೆಯ ಧೋರಣೆಯ ಭರವಸೆಗಳೆಲ್ಲ ರಾಜಕೀಯ ಭರವಸೆಗಳಾಗಿರದೆ ಸಾಂಸ್ಕೃತಿಕ– ಧಾರ್ಮಿಕ ಪುನರುತ್ಥಾನದ ಭರವಸೆಗಳಿಂದ ಕೂಡಿದಂತವುಗಳಾಗಿವೆ. ಜಾತೀಯ ವಾದಿಗಳಿಗೆ ಹಿಂದೂ ಮಹಾಸಭೆಯೊಂದೇ ಆಧಾರಸ್ತಂಭ. ಹಿಂದೂ ಮಹಾಸಭೆಯೊಳಗೆ ಆರ್. ಎಸ್. ಎಸ್., ರಾಮರಾಜ್ಯ ಪರಿಷತ್, ಮುಂತಾದ ಜಾತೀಯ ಸಂಸ್ಥೆಗಳು ಅಂತರ್ಗತವಾಗುವದರಿಂದ ಅವರ ಶಕ್ತಿಯೇನೂ ಕಡಿಮೆಯಾಗಲಾರದು. ಈಚಿನ ಕಾಂಗ್ರೆಸ್ಸಿನ ಧೋರಣೆಯಿಂದಲೂ ಅಸಂತುಷ್ಟರಾದ ಸನಾತನಿಗಳು ತಮ್ಮ ಓಟುಗಳನ್ನು ಕಾಂಗ್ರೆಸ್ಸಿಗೆ ಹಾಕಿ ಅಪವಿತ್ರಗೊಳಿಸಲಾರೆವೆಂದು ಪಣ ತೊಟ್ಟಿದ್ದಾರೆ. ಸುಧಾರಿತ ಕಾಲದಲ್ಲೂ ಈ ಜಾತೀಯ ಪಕ್ಷಗಳಿಗೆ ಜಯ ಸಿಕ್ಕೀತೇ? ಎನ್ನುವ ಅನಾದರ ಹಲವರಲ್ಲಿದೆ. ಆದರೆ ಅಗರ್ಭ ಶ್ರೀಮಂತರೂ, ಶ್ರೀಮಂತ ವ್ಯಾಪಾರಿಗಳೂ, ಆರ್. ಎಸ್. ಎಸ್., ಹಿಂದೂ ಮಹಾಸಭೆಯ ಹಿನ್ನಲೆಯಲ್ಲಿದ್ದಾರೆನ್ನುವುದನ್ನು ಮರೆಯಬಾರದು. ಆರ್. ಎಸ್. ಎಸ್. ವಾದಿಗಳ ಸಾಂಘಿಕ ಶಕ್ತಿ–ಶಿಸ್ತು, ಸಂಘಟನೆ ನಮ್ಮ ದೇಶದ ಇನ್ನಾವ ಪಕ್ಷಗಳಲ್ಲೂ ಇರುವುದಿಲ್ಲ. ಪ್ರತ್ಯಕ್ಷವಾಗಿಯೂ ಅಪ್ರತ್ಯಕ್ಷವಾಗಿಯೂ ಜನ ಆ ಕಡೆ ಒಲಿಯುತ್ತಿದ್ದಾರೆ. ಪಾಕಿಸ್ಥಾನದೊಡನೆ ಭಾರತ ಬೆಳಸುತ್ತಿರುವ ಅತಿ ಮೈತ್ರಿ– ಹಿಂದೂ ಕೋಡು ಮಸೂದೆ ಮೊದಲಾದ ಕಾಂಗ್ರೆಸ್ಸಿನ ವಿಚಾರಗಳು ಆದೊಂದು ಸಂಗಡದ ರೋಷಕ್ಕೆ ಕಾರಣವಾಗಿ ಆ ಸಂಗಡವು ಹಿಂದೂ ಮಹಾಸಭೆಯಲ್ಲಿ ಐಕ್ಯಗೊಳ್ಳುವ ಧೃಡ ಮನಸ್ಸು ಮಾಡಿದೆ. ಹಿಂದೂ ಮಹಾಸಭೆ ಬಹುಮತವನ್ನು ಗಳಿಸಿ ರಾಜ್ಯದ ಆಳಿಕವನ್ನು ನಡೆಸಲು ಅಸಮರ್ಥವಾದರೂ ಇಂಗ್ಲೆಂಡಿನ ಕಾನ್ಸರ್ವೇಟಿವ್ ಪಕ್ಷ ಕೂಲಿಗಾರ ಸರಕಾರಕ್ಕೆ ಕೊಡುವ ಕಷ್ಟ ಪರಂಪರೆಗಳಷ್ಟೇ ಕಠಿಣವಾಗಬಹುದಾಗಿದೆ!

ಇನ್ನು ಸ್ವತಂತ್ರ ಪಕ್ಷ, ಪ್ರಜಾಪಾರ್ಟಿ ಮುಂತಾದವುಗಳು ಚುನಾವಣೆಯಲ್ಲಿ ಸ್ಪರ್ಧಿಸಲಿರುವವು. ಪ್ರಜಾಪಾರ್ಟಿಯು ಕಾಂಗ್ರೆಸ್ಸಿನಲ್ಲಿಯ ಕೆಲ ದೋಷವನ್ನು ಕಂಡು ತಾವು ಆ ಪಕ್ಷದಲ್ಲಿದ್ದು ಅದರ ಶುದ್ಧೀಕರಣ ಅಸಾಧ್ಯವೆಂದು ಮನಗಂಡು ಕಾಂಗ್ರೆಸ್ಸಿನಿಂದ ಸಿಡಿದು ಬೇರಾದವರ ಪಕ್ಷ. ಕೃಪಾಲಿನಿ, ಟಿ. ಪ್ರಕಾಶಂ, ಮುಂತಾದ ಪ್ರಭಾವಿ ಕಾಂಗ್ರೆಸ್ ವ್ಯಕ್ತಿಗಳು ಸೇರಿಕೊಂಡಿದ್ದಾರೆ. ಇನ್ನೂ ಹಲವು ಉಚ್ಚ ಕಾಂಗ್ರೆಸ್ಸಿಗರು ಆ ಪಕ್ಷಕ್ಕೆ ಸೇರುವ ಪೂರ್ವಸಿದ್ಧತೆಯಲ್ಲಿದ್ದಾರೆ. ದಿನದಿಂದ ದಿನಕ್ಕೆ ಕಾಂಗ್ರೆಸ್ಸನ್ನು ತ್ಯಜಿಸಿ ಈ ನೂತನ ಪಕ್ಷವನ್ನು ಸೇರುವ ಸುದ್ದಿಗಳು ಹೆಚ್ಚುತ್ತಿರುವುದನ್ನು ನೋಡುತ್ತಲಿದ್ದೇವೆ. ಕಾಂಗ್ರೆಸ್ಸಿಗರು ತಮ್ಮ ಹೊಣೆಯನ್ನರಿತುಕೊಳ್ಳದೆ ಸ್ವೇಚ್ಛಾಚಾರಿಗಳಾಗಿ ವಾಮಮಾರ್ಗವನ್ನು ಹಿಡಿದುದರಿಂದ ಈ ಪಕ್ಷ ಹುಟ್ಟುವುದು ಅನಿವಾರ್ಯವಾಯಿತೆಂದು ಕೃಪಲಾನಿಯವರು ಹೇಳುತ್ತಲಿದ್ದಾರೆ. ತತ್ವನಿಷ್ಟ ಕಾಂಗ್ರೆಸ್ಸಿಗರು ಈ ನೂತನ ಪಕ್ಷದ ಮೂಲಕ ದೇಶೋದ್ಧಾರ ಮಾಡುವ ಪ್ರತಿಜ್ಞೆ ತೊಟ್ಟಿರುವರಾದರೂ ಸ್ವಾರ್ಥದ ಗೃಷ್ಟಿಯಿಂದ ಪಕ್ಷದಲ್ಲಿ ಭಾಗವಹಿಸುವ ಸಾಹಸ ಮಾಡಿದವರಿಲ್ಲವೆಂದು ಹೇಳಲು ಬರುವಂತಿಲ್ಲ. ಜನತೆಯ ಒಲವನ್ನು ನೋಡಿ ಗಿದ್ದ ಎತ್ತಿನ ಬಾಲವನ್ನು ಹಿಡಿಯುವ ಧೋರಣೆ ವಹಿಸಿದ್ದನ್ನ ನಾವಿಂದು ಕಾಣಬಹುದಾಗಿದೆ.

ಅಂತೂ ಈ ಪಕ್ಷಗಳು ಊದುವ ಶಂಖವನ್ನಾದಿ ಕೀಟಲೆ ಕೂಡುವದಕ್ಕಿಂತ ಹೆಚ್ಚಿನದನ್ನೇನೂ ಮಾಡಲಾರವು! ಒಟ್ಟಿಗೆ ಹೇಳುವದಾದರೆ ಎಲ್ಲ ಪಕ್ಷಗಳೂ ಸ್ವಾರ್ಥದ ದೃಷ್ಟಿಯಿಂದಲೇ ಮೇಲಾಟನಡಿಸುವಂಥವುಗಳಾಗಿವೆ. ಅವರು ಹೇಳುವ ಘನವಾದ ಉದ್ದೇಶಗಳೂ ಭರವಸೆಗಳೂ ಕಾರ್ಯರೂಪದಲ್ಲೆಂದೂ ಬರುವಂತಿಲ್ಲ. ಸದ್ಯ ಚುನಾವಣೆಯ ಪ್ರಚಾರ ಸಾಧನಗಳಾದಾವೇ ಹೊರತು ಬೇರೇನೂ ಅವುಗಳಿಂದ ಆಗಲಾರದು. ಕಾಂಗ್ರೆಸ್ಸನ್ನು ಹೊರತು ಈಗಿಂದೀಗಲೇ ಯಾವ ಪಕ್ಷಕ್ಕೆ ಆಡಳಿತವನ್ನು ಒಪ್ಪಿಸಿಕೊಟ್ಟರೂ ಸರಕಾರವನ್ನು ನಡೆಸಬಲ್ಲ ಸಾಮರ್ಥ್ಯ ಅವುಗಳಿಗಿರುವುದಿಲ್ಲವೆಂಬುದು ಖಂಡಿತ. ಸ್ವಾತಂತ್ರ್ಯ ಸಿಕ್ಕ ಈ ನಾಲ್ಕು ವರ್ಷಗಳಲ್ಲಿ ಸಾಧಿಸಬೇಕಾದ ಕೆಲಸ ಬಹಳವಿರುತ್ತವೆ ಎಂಬುದನ್ನು ನಾವು ಒಪ್ಪುವದಾದರೂ ದೇಶದ ಹಲವಾರು ಕಠಿಣ ಪರಿಸ್ಥಿತಿಯನ್ನೆದುರಿಸಿ, ಸಾಧಿಸಿದ ಪ್ರಗತಿಯನ್ನು ನಾವು ಮರೆಯಲಾರೆವು. ಹಗಲುಗನಸುಗಳನ್ನೇ ಭರವಸೆಯಾಗಿ ಹೇಳುತ್ತಿರುವ ಸೋಶಲಿಸ್ಟ, ಕಮ್ಯೂನಿಸ್ಟ ಮೊದಲಾದ ಯಾವುದೇ ಪಕ್ಷವಾಗಿದ್ದರೂ ಒಂದೆ ವರುಷದಲ್ಲಿ ಆತ್ಮಹತ್ಯ ಮಾಡಿಕೊಳ್ಳುತ್ತಿತ್ತು! ಹೇಳುವರೇನೋ ಬಹಳವಿದ್ದಾರೆ. ಆದರೆ ಆಳುವ ಗುಣ– ಕರ್ತೃತ್ವ ಶಕ್ತಿಯಿರುವದು ಕೆಲವರಲ್ಲಿ ಮಾತ್ರ!

ಮಹಾಚುನಾವಣೆ ಹತ್ತಿರ ಬರುತ್ತಿರುವ ವೇಳೆ ಕಾಂಗ್ರೆಸ್ಸಿಗರ ಪಕ್ಷವನ್ನು ತ್ಯಜಿಸಿ ಕೆಲವರು ಬೇರೆ ಪಕ್ಷಗಳಿಗೆ ಸೇರುವ ಮನಸ್ಸುಮಾಡಿದ್ದು ನಿಜವಾಗಿಯೂ ವಿಷಾದದ ಸಂಗತಿ! ಯಾವ ಸಂಕಾರವೇ ಬರಲಿ; ಕಾಂಗ್ರೆಸ್ಸು ಬೇಡ ಎನ್ನುವ ಮಾತು ಜನತೆಯಿಂದ ಕೇಳುತ್ತಲಿದೆ. ಇಂತಹ ವಾದ ತೀರ ಅಜ್ಞಾನದ ಪರಮಾವಧಿಯಾಗಿದೆ. ಕಾಂಗ್ರೆಸ್ಸಿಗರಲ್ಲಿ ತಪ್ಪಿದೆ; ದೇಶಘಾತಕ ಕಾರ್ಯ ನಡೆದಿದೆ ಎನ್ನುವದನ್ನು ಒಪ್ಪೋಣ! ಆದರೆ ಇಂತಹ ಪ್ರಮಾದಗಳು ಪಕ್ಷಕ್ಕೆ ಸೇರಿದ ಕೆಲವರಿಂದ ಆಗಿದೆ. ಅಂತವರನ್ನು ಹೊರದೂಡಿ ನಿಜವಾದ ಪ್ರತಿನಿಧಿಗಳಾರೆಂಬುದನ್ನು ಜನತೆ ನಿಷ್ಕರ್ಷಿಸುವದರಲ್ಲೇ ಜಾಣತನವಿದೆ. ಹಿರಿಯ ಕಾಂಗ್ರೆಸ್ಸಿಗರು ಸ್ವಾತಂತ್ರ್ಯಕ್ಕಾಗಿ ತಾವು ನಡೆಸಿದ ಹೋರಾಟ, ತ್ಯಾಗಗಳ ಫಲವಾಗಿ ಇಂದೂ ನಿಸ್ವಾರ್ಥ ಬುದ್ಧಿಯಿಂದ ಸೇವಾತತ್ಪರರಾಗಿರುವದನ್ನು ನಾವು ಮರೆಯದಿರೋಣ. ನೆಹ್ರೂರವರ ಮುತ್ಸದ್ದಿತನ ಪ್ರಭಾವೀ ಧುರೀಣತ್ವ ಜಾಗತಿಕ ರಂಗದಲ್ಲಿ ಭಾರತಕ್ಕೆ ಕೀರ್ತಿ ತಂದಿದೆ. ವಿಪುಲವಾಗಿ ಬೆಳೆಯುತ್ತಿರುವ ನಮ್ಮ ಜನಕ್ಕೆ ಅನ್ನ, ಬಟ್ಟೆ, ಉದ್ಯೋಗಗಳನ್ನು ಒದಗಿಸಿ ಕೊಡುವುದು ಸುಲಭದ ಕೆಲಸವೇನಲ್ಲ. ಈಗ ಬಂದೊದಗಿದ ಆಹಾರದ ಬಿಕ್ಕಟ್ಟನ್ನು ಭಾರತದ ಯಾವ ಪಕ್ಷವೂ ಎದುರಿಸಲು ಸಮರ್ಥವಿಲ್ಲ. ವಿದೇಶಗಳಿಂದ ಬರುತ್ತಿರುವ ಆಹಾರ ಧಾನ್ಯಕ್ಕೆ ಕಾಂಗ್ರೆಸ್ಸು ಸರಕಾರದ ನೀತಿಯೇ ಮುಖ್ಯ ಕಾರಣವಾಗಿದೆ. ಮತದಾನ ಕೊಡುವವರು ಇದನ್ನು ಚೆನ್ನಾಗಿ ಲಕ್ಷಿಸಬೇಕು. ಮತದಾನ ಮಾಡುವದೆಂದರೆ ಹುಡುಗಾಟಿಕೆ ಇಲ್ಲವೆ ಮೋಜಿನ ವಿಚಾರವಲ್ಲ. ಪಾತ್ರಾಪಾತ್ರ ವಿಚಾರಣೆಯಿಂದ ವಿಮರ್ಶೆಯಿಂದಲೇ ನಮ್ಮ ರಾಷ್ಟ್ರದ ಭವಿತವ್ಯವನ್ನು ನಾವು ನಿಶ್ಚಯಿಸಬಲ್ಲೆವು. ಕಾಂಗ್ರೆಸ್ಸು ಹೇಗಿದ್ದರೂ ನಾಲ್ಕು ವರ್ಷದ ಅನುಭವ ಪಡೆದ ಹಿರಿಯ ಸಂಸ್ಥೆ. ತಾನು ಕೈಗೊಂಡಿರುವ ಮಹೋದ್ದೇಶಗಳು ಫಲಿಸಬೇಕಾದರೆ ಇನ್ನೂ ಸ್ವಲ್ಪ ಕಾಲ ಆ ಸಂಸ್ಥೆಗೆ ನಾವು ಅವಕಾಶ ಒದಗಿಸಿಕೊಡಬೇಕು.

ಸ್ಪರ್ಧಾಳುಗಳ ಮೇಲಾಟ ಈಗಾಗಲೇ ಆರಂಭವಾಗಿದೆ. ಕಾಂಗ್ರೆಸ್ಸಿನ ಟಿಕೇಟಿನಿಂದ ಸ್ಥಾನಮಾನವನ್ನು ಗಳಿಸುವ ಚಪಲ ಹಲವರಲ್ಲಿ ಕಾಣುತ್ತಲಿದೆ. ತಾವು ಜನತಾ ಪ್ರತಿನಿಧಿಗಳಾಗಿ ಸಾಧಿಸಬಹುದಾದ ಕಲ್ಪನೆ ಕೂಡ ಇಲ್ಲದೆ ಏನಕೇನ ಪ್ರಕಾರೇಣ ಸ್ಥಾನಗಳಿಸಿಕೊಳ್ಳಬೇಕೆಂಬ ಛಲ ತೊಟ್ಟಂತಿದೆ. ಇಂತಹ ಸಂದರ್ಭದಲ್ಲಿ ಜನತೆಯನ್ನು ನಾವು ಕೇಳಿಕೊಳ್ಳುವದಕ್ಕಿಂತ ಕಾಂಗ್ರೆಸ್ಸಿನ ಟಿಕೇಟನ್ನು ಕೊಡುವವರನ್ನೇ ಎಚ್ಚರಿಸಬೇಕಾಗಿದೆ. ಪ್ರಜಾಪ್ರತಿನಿಧಿತ್ವವನ್ನು ಸಾಧಿಸುವ ನಿಃಸ್ವಾರ್ಥ ವ್ಯಕ್ತಿಯನ್ನೇ ಆರಿಸಬೇಕು. ವ್ಯಕ್ತಿ ವೈಶಿಷ್ಟ್ಯ– ಪ್ರಾಂತೀಯ ಪಕ್ಷಪಾತ– ಮುಂತಾದವುಗಳಿಗೆ ಮನಸೋತು ಕಾಂಗ್ರೆಸ್ಸಿನ ಸ್ಥಾನಮಾನಕ್ಕೆ ಚ್ಯುತಿ ತರುವಲ್ಲಿ ತಮ್ಮ ಒಲವನ್ನು ಉಪಯೋಗಿಸಬಾರದು. ಆಗಿ ಹೋದ ದಿನಗಳ ಅನುಭವದಿಂದಲಾದರೂ ಭವಿಷ್ಯದ ಕುರಿತು ಗಂಭೀರವಾಗಿ ಯೋಚಿಸಬೇಕು.

ಭವ್ಯ ಭಾರತದ ಸುಂದರ ಕಲ್ಪನೆಯನ್ನಿಟ್ಟುಕೊಂಡವರು ತಮ್ಮ ಅನರ್ಘ್ಯವಾದ ಓಟನ್ನು ಯಾರಿಗೆ ಕೊಡಬಹುದೆನ್ನುವದನ್ನು ಮೊದಲಾಗಿ ಚಿಂತಿಸಬೇಕು. ತಮ್ಮ ಕಲ್ಪನೆ ಅಯಥಾರ್ಥವಾಗಿದ್ದರೆ ಉದ್ದೇಶವೆಲ್ಲ ವ್ಯರ್ಥವಾದೀತು. ನಿರ್ವಿಕಾರ ಮನಸ್ಸಿನಿಂದ ವಿವೇಚನೆ ಮಾಡಬೇಕು. ಪ್ರತಿಯೊಬ್ಬ ಮತದಾರನೂ ತನ್ನ ಓಟಿನ ಮಹತ್ವವನ್ನರಿತು ರಾಷ್ಟ್ರವನ್ನು ಭದ್ರವಾದ ತಳಹದಿಯ ಮೇಲೆ ನಿಲ್ಲಿಸಲೆತ್ನಿಸಬೇಕು. "ನನ್ನ ಒಂದು ಓಟಿನಿಂದೇನಾದೀತು?" ಎಂದು ಕಡೆಗಣಿಸಲಾಗದು! ನಮಗೀಗ ಪಕ್ಷಗಳ ಕೊರತೆಯಿಲ್ಲ; ರಾಷ್ಟ್ರವನ್ನು ಉಚ್ಛ್ರಾಯ ಸ್ಥಿತಿಗೆ ತರಬಲ್ಲ ಏಕಮಾತ್ರ ಪಕ್ಷ ಯಾವುದೆಂಬುದನ್ನು ಚಿಂತಿಸುವ ವಿಚಾರವಂತರ ಕೊರತೆಯಿದೆ! ತಮ್ಮ ಅಮೂಲ್ಯ ಮತದಾನದ ಮೂಲಕ ಜನತೆ ಆ ಕೊರತೆಯನ್ನು ನೀಗಿಸುವಂತಾಗಲಿ.

"ನವಯುಗ"

ಗಾಂಧಿ ಸಾಹಿತ್ಯ ಪ್ರಚಾರಕ್ಕಾಗಿ

ಭಾರತದ ಎಲ್ಲಾ ವರ್ಗಗಳ ಮತ್ತು ಕೋಮುಗಳ ಜನರಲ್ಲಿ ಗಾಂಧಿ ಸಾಹಿತ್ಯವನ್ನು ಪ್ರಚಾರಗೊಳಿಸುವ ಸಲುವಾಗಿ, ಗಾಂಧಿ ರಾಷ್ಟ್ರೀಯ ಸ್ಮಾರಕ ಪ್ರವಾಸಕ ಸಮಿತಿಯು ಗಾಂಧೀಜಿಯವರ ಬರಹಗಳನ್ನೆಲ್ಲಾ ದೇಶದ ಎಲ್ಲಾ ಭಾಷೆಗಳಲ್ಲಿ ಪ್ರಕಟಿಸಲು ನಿರ್ಧರಿಸಿರುವುದು. ಈ ಕುರಿತು ಪ್ರಚಾರ ಮತ್ತು ಪ್ರಕಟಣೆಗಳ ಬಗ್ಗೆ ಕೊನೆಯ ನಿರ್ಣಯ ಕೈಕೊಳ್ಳುವರೆ ಪ್ರವಾಸಕ ಸಮಿತಿಯ ಒಂದು ಸಭೆಯು ನವದೆಹಲಿಯಲ್ಲಿ ಸೇರಲಿದೆ. ರಾಷ್ಟ್ರೀಯ ನಿಧಿಯಲ್ಲಿ ರೂಪಾಯಿಗೆ ಒಂದಾಣೆಯಂತೆ ಈ ಪ್ರಚಾರಕ್ಕಾಗಿ ಖರ್ಚ ಮಾಡಲಾಗುವದು.

ಭಾರತೀಯರಾದ ನಾವು ನಮ್ಮ ಭವಿಷ್ಯ ... ಯನ್ನು ಹೊಸತು ನಾಲ್ಕು ವರ್ಷಗಳ ... ಈ ಅಧಿಕ ಸ್ವಾಮಿತ್ವ ... ವೆವು? ... ಯೋಗ್ಯತೆ ... ಗಿಸಿ ... ಜಗತ್ತಿನ ... ನಗರಗಳ ... ನಿಲ್ಲ ... ವೆವು? ನಾವು ರಾಜಕೀಯ ವಿಚಾರ ... ವಾಗುಬೇಕು. ಕಾಂಗ್ರೆಸ್, ಸೋಶ್ಯಾಲಿಸ್ಟರು ಈ ಪಂಗಡಗಳ ... ಹಾಗೂ ಆರ್ಥಿಕ ಮಹಾಸಭೆಗಳನ್ನು ಬಿಟ್ಟು ನಮ್ಮ ದಿನನಿತ್ಯದ ಕಾರ್ಯಕಲಾಪಗಳನ್ನು, ನಮ್ಮ ಸಾಮಾಜಿಕ ರೀತಿ ನೀತಿಗಳನ್ನು ಪರಿಶೀಲಿಸೋಣ. ಈ ಚಿಕ್ಕ ವಿಷಯಗಳೇ ನಾಗರಿಕರ ಯೋಗ್ಯತೆಯನ್ನು ಅಳೆಯುವದರಿಂದ ಆ ಅಳತೆಗೋಲಿನಿಂದ ಅಳೆದು ನೋಡಿದರೆ ಏನು ತೋರುವದು? ಎಂಬುದೇ ಪ್ರಶ್ನೆಯನ್ನು ಬಗೆಹರಿಸಲು ದ್ವೇಷರಹಿತವಾದ ಆ ಪ್ರಶ್ನೆಯನ್ನು ನಿರ್ವಿಕಾರ ದೃಷ್ಟಿಯಿಂದ ನೋಡಬೇಕು. ನ್ಯಾಯವಿವೇಚನೆ, ಹಾಗೂ ಚಿಕಿತ್ಸಕ ದೃಷ್ಟಿಯ ಕನ್ನಡಿ ಶುಭ್ರವಾಗಿರಬೇಕು, ಪವಿತ್ರ ಕನ್ನಡಿಯಲ್ಲಿ ನಮ್ಮ ನಿಜಸ್ವರೂಪ ಕುರೂಪವಾಗಿ ಕಂಡಿತೆಂದು ಕನ್ನಡಿ ತಿರುಗಿಸಬಾರದು. ನಾವು ಇಂದು ನಾವಿರುವಂತೆ ನಮ್ಮ ಯೋಗ್ಯತೆಯನ್ನು ಪರಿಶೀಲಿಸುವಾಗ ನಮ್ಮ ಹಿಂದಿನ ಹಿರಿಮೆಯು ಹೆಗ್ಗಳಿಕೆಯಾಗಲೀ ಮುಂದಿನ ಭವಿಷ್ಯದ ಸವಿಕಲ್ಪನೆಯಾಗಲೀ ಇಂದಿನ ನಿಜಸ್ಥಿತಿಯನ್ನು ಮರೆಮಾಚಬಾರದು. ಆದ್ದರಿಂದ ನಾವು ನೋಡುವ ಕನ್ನಡಿಯಲ್ಲಿ ನಮ್ಮ ಹಿಂದಿನ ಆರ್ಯರ ನಾಗರಿಕತೆ, ಸಂಸ್ಕೃತಿಗಳ ಛಾಯೆ ಯಾಗಲೀ, ಮುಂದಿನ ಭವ್ಯ ಭವಿಷ್ಯದ ಗಗನಕುಸುಮದ ಪಡಿನೆಳಲಾಗಲೀ ಬಿದ್ದಿರಬಾರದು. ಈ ರೀತಿ ಭೂತ ಮತ್ತು ಭವಿಷ್ಯಗಳಿಂದ ನಿರ್ಲಿಪ್ತವಾಗಿ ಸ್ವಕೃತದ ಪರಿಸ್ಥಿತಿಯನ್ನು ವಿವೇಚನೆಯ ಕನ್ನಡಿಯಲ್ಲಿ ನೋಡಿದರೆ ತೋರುವದೇನು?

ನಮ್ಮ ಸ್ವಾತಂತ್ರ್ಯದಿಂದ, ನಮ್ಮ ಜನನಿಯಾದ ಭಾರತಮಾತೆಯ ಮುಖದ ಮಾಲಿನ್ಯವು ಕಳೆದು ಗತ ಕಾಲಕ್ಕಿಂಥಾ ಶೋಭಾಯಮಾನವಾಗಿ ಬೆಳಗುತ್ತಿರುವದೇ? ಪರದಾಸ್ಯದ ಹರಕು ಜೀವನವು ಬದಲಾಗಿ ಸ್ವಾತಂತ್ರ್ಯದ ಹೊಸ ಕಳೆಯು ತುಂಬಿ ನಾಡಿನ ರಕ್ತನಾಳಗಳಲ್ಲಿ ಹೊಸ ಚೇತನ ಹೊಸ ಕಳೆ ತೋರುತ್ತಿರುವದೇ? ನಾವು ಕನಸುಕಟ್ಟಿದಂತೆ ನಮ್ಮ ಜನನಿಯು ಸುಸಜ್ಜಿತಳಾಗಿ, ಪರಮಾಲಂಕೃತಳಾಗಿ ತನ್ನ ಸೌಂದರ್ಯವನ್ನು ಬೆಳಗುತ್ತಿರುವಳೆ? ಇಲ್ಲ, ಎಂದು ಮುಂದುಮಾಡಿದ ಮುಖದಿಂದ ಹೇಳಬೇಕಾಗಿದೆ. ಬದಲು ಭಾರತ ಮಾತೆಯ ಸ್ಥಿತಿಯು ಇನ್ನೂ ಕನಿಷ್ಠ ಅಂತಸ್ತಿಗೆ ಇಳಿಯುತ್ತಿದೆ. ಇದು ಒಂದೆ ದೆಯಲ್ಲಲ್ಲ ಭರತಖಂಡದ ಆದಿಯಿಂದ ಅಂತ್ಯದ ವರೆಗಿನ ಪ್ರತಿ ಸಂಸ್ಥಾನಗಳಲ್ಲಿ!

ಅದು ನಗರವಿರಲಿ, ಪಟ್ಟಣವಿರಲಿ, ರೈಲ್ವೆ ಸ್ಟೇಶನವಿರಲಿ, ಹಳ್ಳಿ ಇರಲಿ ಎಲ್ಲಿ ಹೋದರೂ ನೀವು ಹೋದರೂ ಅಂತಹ ಸ್ಥಳ ಎಡೆಗಳಲ್ಲೂ ಕೊಳಕೇ ತುಂಬಿದೆ.

ನಾವು ಸಾಧಿಸಿದ ಸ್ವಾತಂತ್ರ್ಯ.

ಒಂದು ಅಂತರ್ನೋಟ.

ಲೇಖಕ:— "ಗುಪ್ತ" ಮಡಿಕೇರಿ.

... ಉಗುಳು ... ... ಇಂಥ ... ಎಲ್ಲೆಲ್ಲಿಯೂ ... ನೆನಪಿನ ದೇವಾಲಯವಿರಲಿ, ಶಿವನ ದೇವಸ್ಥಾನವಿರಲಿ, ಶಾಲೆಯು ಆಸ್ಪತ್ರೆಯಿರಲಿ, ... ಗೃಹವಿರಲಿ ಎಲ್ಲವೂ ಒಂದೇ ... ಚಿತ್ರದ ... ನಮ್ಮದು. ಮನೆಯಲ್ಲಿ ಹಣ್ಣು ... ತಿಂದರೆ ಅದರ ಸಿಪ್ಪೆಯನ್ನು ಸಿಕ್ಕಸಿಕ್ಕಲ್ಲಿ ಬಿಸಾಡುತ್ತೇವೆ. ಎಲೆ ಅಡಿಕೆಗಳನ್ನು, ಸಾರ್ವಜನಿಕ ಸ್ಥಳಗಳಲ್ಲಿ ಬಾಳೆಸಿಪ್ಪೆ, ... ಸಿಪ್ಪೆ, ಮೊದಲಾದುವನ್ನು ಬಿಸಾಡುವವು. ಹತ್ತಿರದಲ್ಲಿ ಕಸದಬುಟ್ಟಿ ಇದ್ದರೂ ... ಮಲಮೂತ್ರಗಳನ್ನು ಎಲ್ಲಿ ಮಾಡಬೇಕೆಂಬುದಕ್ಕೂ ಪದ್ಧತಿಯಿಲ್ಲ. ರಸ್ತೆಯ ಪಕ್ಕಗಳಲ್ಲಿ, ಶಾಲೆಯ ವರಾಂಡದಲ್ಲಿ, ಸಿಕ್ಕಿ ಸಿಕ್ಕಿದೆಡೆ ವಿಸರ್ಜನೆ ನಡೆಯುತ್ತದೆ. ದೊಡ್ಡವರು, ಸಭ್ಯರು ಎನಿಸಿದವರೇ ಸಾರ್ವಜನಿಕ ಸ್ಥಳಗಳನ್ನು ಹೊಲಸುಗೊಳಿಸುತ್ತಾರೆ. ಸಿಕ್ಕಿಲ್ಲದೆ ವರ್ತಿಸಿ, ಸಿಕ್ಕಿ ಸಿಕ್ಕಿದೆಡೆ ವಿಸರ್ಜಿಸಿ ಪ್ರಕೃತಿ ದೇವಿಯನ್ನು ಹೊಲಸುಗೆಡಿಸುತ್ತಾರೆ. ದೊಡ್ಡ ದೊಡ್ಡ ನಗರಗಳಲ್ಲಿ ಸಂಜೆ ಬೆಳಕು ಹೆಚ್ಚು ಪ್ರಕಾಶವಾಗಿ ಬೀಳದ ಬೀದಿ, ಗಲ್ಲಿಗಳನ್ನು ಇದಕ್ಕಾಗಿ ಉಪಯೋಗಿಸುತ್ತಾರೆ. ಈ ರೀತಿ ನಾಗರಿಕರಿಂದ ನೋಡಿಕೊಳ್ಳಲ್ಪಡುವ ಪೋಲೀಸರೇ ತಮ್ಮ ಲೈನುಗಳಲ್ಲಿ ಹೀಗೆ ಮಾಡುತ್ತಾರೆ! ಹಣ ವಾಗಿ ಸುಂದರಿ ಎನಿಸಿದ ಭಾರತಾಂಬೆಯು ನೊಬಗಿನ ಕೊಲೆಯಲ್ಲನೆ, ಆಕೆಯ ಶರೀರವು ದುರ್ವಾಸನೆಯಿಂದ ತುಂಬುವಂತಾಗಿದೆ. ಅದು ದೇವಸ್ಥಾನವಿರಲಿ, ಸಾರ್ವಜನಿಕ ಸ್ಥಳವಿರಲಿ, ಶಾಲೆ ಇರಲಿ, ಮನೆ ಇರಲಿ, ರಸ್ತೆ ಇರಲಿ, ಕೆರೆ ಇರಲಿ, ಪವಿತ್ರ ನದಿ ಇರಲೀ, ಎಲ್ಲೆಡೆಯನ್ನೂ ಹೊಲಸು ಹೊಲಗೇರಿಯಾಗಿ ಮಾಡಿದ್ದೇವೆ.

ಸ್ವಾತಂತ್ರ್ಯ ಬಂದನಂತರ ಅನೇಕ ನಗರಗಳ, ಬೀದಿಗಳ ಹೆಸರು ಬದಲಾಯಿತು. ಅನೇಕ ಎಡೆಗಳಲ್ಲಿ ರಸ್ತೆಗಳಲ್ಲಿ, ಮನೆಗಳಲ್ಲಿ, ಸಿನೇಮಾಗಳಲ್ಲಿ ಬೋರ್ಡುಗಳು ಹಾಕಲ್ಪಟ್ಟವೆ. ಆದರೆ ಅಂಥಾ ಬೋರ್ಡುಗಳು ಸರಿಯಾಗಿ ಇರಲಾರದವು ಅವುಗಳನ್ನು ರೂಪಗೆಡಿಸುವದು ನಮ್ಮಲ್ಲಿ ಹುಟ್ಟಿ ಬಂದ ಹವ್ಯಾಸ. ದೇವಸ್ಥಾನಗಳ, ಸಾರ್ವಜನಿಕ ಕಟ್ಟಡಗಳ, ಗೋರಿಸ್ಮಶಾನ ಮೊದಲಾದವುಗಳ ಗೋಡೆಗಳನ್ನು ಬರೆದು ರೂಪಗೆಡಿಸಿರುವೆವು. ಅಶ್ಲೀಲವಾದ ಚಿತ್ರಗಳು, ಅನೈತಿಕ ವಿಚಾರಗಳು, ಆ ಗೋಡೆಗಳಲ್ಲಿ ಬರೆಯಲ್ಪಟ್ಟು ಪ್ರತಿಯೊಂದು ಸ್ಥಳವೂ ನಮ್ಮ ಪ್ರಗತಿಪರ ಸಂಸ್ಕೃತಿಗೆ ಸಾಕ್ಷಿ ನುಡಿಯುತ್ತಿದೆ. ಉದಾಹರಣೆಗೆ ಓಂಕಾರೇಶ್ವರ ಮಂಟಪ, ಗದ್ದಿಗೆ, ರಾಜಾಸೀಟ್, ಹಂಪುಕೆರೆ ಮೊದಲಾದ ಕಟ್ಟಡಗಳನ್ನು ನೋಡಬಹುದು. ಕೊಡಗಿನಲ್ಲಿರುವ ಈ ದುಸ್ಥಿತಿಯೇ ಇನ್ನೂ ದೊ...

... ... ಇದೇ ನಮ್ಮ ನಮ್ಮ ... ಉರುವ ಸಂಸ್ಕೃತಿ ಇದೇ ನಮ್ಮ ನಮ್ಮ ಭಾರತವಾಸಿಗಳ ... ಕಾಲ ... ತೈಸಗೊಂಡ ಪರಾಗ!

ನಾಲ್ಕು ದಿವಸದ ಹಾಡಿದ ... ಸ್ವತಂತ್ರ ... ಪ್ರತಿ ನಾಗರಿಕನಿಗೆ ... ಗಂಭೀರ ... ಹಿಂದಿನ ... ಪರ ... ವನ್ನು ಪ್ರೇಮಿ ... ಆದರೆ ನಾವು ... ನಡೆವ ... ಸ್ವತಂತ್ರ ... ಭಾರತ ... ಇನ್ನೂ ಕಲ ... ... ನಮ್ಮ ... ವವು ... ಕಟ್ಟು ... ಗಿಯು ಕಟ್ಟಿ ... ... ಇಲ್ಲ ... ... ದೀಪವು ... ವಾಹಕ ... ಭಾರ ... ದನ್ನು ಅನ್ಯಾಯ ... ...

ನಾವು ... ದೃಷ್ಟಿಯಿಂದ ನಮ್ಮ ಸ್ವಾತಂತ್ರ್ಯ ... ಹೀಗಿರ ... ಹರಿಶೀಲಿಸಿ ನೋಡಿ ... ಯಿಕ್ಕೆ ... ಸಂಪತ್ತೇ ಕಾರಣ ... ನೀತಿ, ... ಸಾಮಾಜಿಕ ಕರ್ತವ್ಯ, ... ನಿ, ಸ್ನೇಹ, ... ರೂಪಿಯ ... ಅದರ ... ಗಳು ನಮ್ಮಲ್ಲಿವೆಯೇ? ನಮ್ಮಲ್ಲಿ ಬಹು ಮಂದಿಯು ಗತಿಲವೆಂದರೆ ಅದು ಕೇವಲ ಲೈಂಗಿಕ ಸ್ವೇಚ್ಛಾಕ್ಕೆ ಕಟ್ಟಿದ್ದು! ಸತ್ಯ, ಸಭ್ಯತೆ, ಗೌರವ, ನಂಬಿಕೆಗಳಿಗೆ ಸ್ಥಾನವಿಲ್ಲ ... ಗುಣಗಳ ... ರೂಪವನ್ನು ... ಸುವ ... ತಿಳಿಸುವ ಸಾಧನಗಳು. ಆಸ್ತಿ ಇದ್ದಿದ್ದರೆ ಶರೀರಕ್ಕೆ ರಕ್ತವು ದೊರೆಯುವಂತೆ, ಒಳಗೆ ಏನೂ ಇಲ್ಲ ... ನೆಟ್ಟಿಗೆ ನಿಲ್ಲುವಂತೆ ಈ ಗುಣಗಳಿಲ್ಲದ ... ಪ್ಪತ್ತು ತಲೆ ಎತ್ತಿ ನಿಲ್ಲಲಾರದು. ನಮ್ಮ ದೇಶದಲ್ಲಿ ಈ ಗುಣಗಳಿಗೆ ಒಂದಷ್ಟು ಒರಗಲು ಆಧಾರ ಪದ ... ಇಂದು ಬಡವನಿಗೆ ... ಒಂದು ಬೆಂಕಿ ನೆಟ್ಟಿಗೆಯನ್ನು ಕೂಡ ನ್ಯಾಯವಾದ ಬೆಲೆಗೆ ಪಡೆಯುವದು ಕಷ್ಟವಾಗಿದೆ.

ನಾವು ಬಹು ... ಸತ್ಯ ... ನಮ್ಮಲ್ಲಿದೆ ಎನ್ನುವವು. ಆದರೆ ಇದು ಎಲ್ಲೆಡೆಯೂ ದರ್ಪವೇ! ಸರಕಾರಿ ಉದ್ಯೋಗ ಮಾಡುವ ಜವಾನನಿಂದ ಹಿಡಿದು ಆಫೀಸರ ವರೆಗೂ ದರ್ಪದ ನೋಟ. ನಾಲ್ಕು ಕಟ್ಟು ಬೀಡಿ ಅಂಗಡಿ ಇಟ್ಟವನ್ನು ಹಾರಿಯಿಂದ ಹಿಡಿದು ಎಲ್ಲರೂ ದರ್ಪದಿಂದ ವರ್ತಿಸುತ್ತಾರೆ. ವ್ಯಾಪಾರಿಗಳು ತಾವು ಕೊಡುವ ಸಾಮಾನುಗಳನ್ನು ಧರ್ಮಕ್ಕೆ ಕೊಡುವವರಂತೆ ವರ್ತಿಸುತ್ತಾರೆ. ಅಧಿಕಾರಿಗಳು ಜನರಿಗಾಗಿ ತಾವು ಕೆಲಸಕ್ಕಿರುವಂತೆ ತೋರಿಸಿಕೊಳ್ಳುತ್ತಾರೆ. ಎಲ್ಲಿ ಯಾವ ಎಡೆ ನೋಡಿದರೂ ಅಹಂಕಾರ, ದರ್ಪ, ನಿಷ್ಠುರದ ಮಾತುಗಳೇ! 'ನಿಮಗೆ ವಂದನೆ' 'ಧನ್ಯವಾದ' ಈ ಮಾತುಗಳ ಸುಳಿವಿಲ್ಲದಾಗಿದೆ.

ಇದೆಲ್ಲ ಹೋಗಲಿ, ಸ್ವತಂತ್ರ ಭಾರತದ ನಾವು ಸಂತೋಷದಲ್ಲಿರುವೆವೇ? ನಮ್ಮಲ್ಲಿ ಶಿಳಹಾಸ್ಯ ಪ್ರವೃತ್ತಿ ಇದೆಯೇ? ಎಲ್ಲಿರಲು ಸಾಧ್ಯ? ನಮ್ಮ ಹೊಟ್ಟೆ ಬಟ್ಟೆಯ ಸ ಜಟಿಲ ಪ್ರಶ್ನೆಯು ಒತ್ತಡದಲ್ಲಿ ಹಾಸ್ಯಕ್ಕೆಡೆಯೆಲ್ಲಿ? ನಮ್ಮ ರಾಜಕೀಯ ಧುರೀಣರಲ್ಲಿ ... ಹಾಸ್ಯಪ್ರವೃತ್ತಿಯುಳ್ಳವರು ಕಡಿಮೆ. ಶ್ರೀ ಪ್ರಕಾಶರಂಥ ಒಬ್ಬಿಬ್ಬರನ್ನು ಬಿಟ್ಟರೆ ಇಲ್ಲವೇ ಇಲ್ಲವೆನ್ನಬಹುದು. ಜೀವನದಲ್ಲಿ ನಗು ವೆಂಬುದು ಪ ಳೆಗಾಲದಲ್ಲಿ ಬಿಸಿಲಿದ್ದಂತೆ! 'ಕೆಲಸವೇ ಪೂಜೆ' ಇರಬಹುದು, ಆದರೆ 'ನಗೆಯೇ ಜೀವನ' ಎಂದು ಸದ್ಗುರು ಪಡೆ ... ಅರು ಹೇಳುತ್ತಿದ್ದರು. ನಾವು ನಮ್ಮ ದೇವರನ್ನು ಸಚ್ಚಿದಾನಂದ, ಚಿದಾನಂದ ಎಂದು ಕರೆಯುವೆವು. ಆನಂದದ ಹೆಸರನ್ನಲ್ಲಿಯೇ ಸಂಭೋಧಿಸುವೆವು. ಆದರೆ ನಮ್ಮ ಜೀವನದಲ್ಲಿ ಹಾಸ್ಯ, ನಗು, ಆನಂದಗಳು ಎಲ್ಲಿವೆ? ನಗು, ಆನಂದಗಳಿಲ್ಲದ ಮನೆ ಸ್ಮಶಾನದಂತೆ! ಅಂಥಾ ಮನೆಗಳಿಂದ ಕೂಡಿದ ದೇಶವು ಭಿನ್ನವಾಗಿರುವದಂತು?

ಒಟ್ಟಿನಲ್ಲಿ ಹೇಳಬೇಕೆಂದಿದ್ದರೆ ನಮ್ಮಲ್ಲಿ ನೈಜ ಸೌಂದರ್ಯವಿಲ್ಲ. ನೀತಿ ಇಲ್ಲ, ಧರ್ಮಪ್ರವೃತ್ತಿ ಇಲ್ಲ, ಸಹಾಯಕ ಗುಣವಿಲ್ಲ, ಜೀವನದಲ್ಲಿ ಆನಂದವಿಲ್ಲ. ಹೀಗಿರುವಾಗ ಆ ಸ್ವಾತಂತ್ರ್ಯದ ಪ್ರಯೋಜನವಾದರೂ ಏನು? ಜೀವನದ ಅರ್ಥವಾದರೂ ಏನು? ನಿಜ, ದೇಶಕ್ಕೆ ಸ್ವಾತಂತ್ರ್ಯ ಬಂದಿದೆ. ಆದರೆ ಹಿಂದಿನ ಗುಲಾಮ ಬುದ್ಧಿಯ ಪ್ರಜೆಗಳು ಇಂದಿನ ಸ್ವತಂತ್ರ ಭಾರತದಲ್ಲಿರುವವರಿಗೂ ಯಾವ ವ್ಯತ್ಯಾಸವಿಲ್ಲ. ಸ್ವತಂತ್ರ ಭಾರತದ ಪ್ರಜೆಗಳೆಂದು ನಾವು ನಮಗೆ ಬೇಕಾದ ಬಾಹ್ಯಾಡಂಬರದ ಅನುಗುಣವಾಗಿ ಮಾರ್ಪಾಟಾಗದೆ ಹಿಂದಿನ ಹೀನ ಗುಣಗಳನ್ನೇ ಇಟ್ಟುಕೊಂಡು ಸ್ವತಂತ್ರರೆಂದರೆ ಅರ್ಥವೇನು? ಸ್ವಾತಂತ್ರ್ಯ ಬಂದನಂತರ ನಮ್ಮ ಯಾವ ಗುಣಗಳನ್ನು ನಾವು ತಿದ್ದಿಕೊಂಡಿರುವೆವು? ರಾಷ್ಟ್ರಹಿತಕ್ಕಾಗಿ ಯಾವ ರೀತಿ ದುಡಿದಿರುವೆವು? ನಮ್ಮನ್ನು ನಾವು ವಂಚನೆ ಮಾಡಿಕೊಂಡು ಸ್ವಾತಂತ್ರ್ಯ ಬಂದಿದೆಯೆಂದರೆ ಏನು ಪ್ರಯೋಜನವಾಗುವದೇ?

ಒಟ್ಟಿನಲ್ಲಿ ನಾವು ನಿಜವಾದ ಶಕ್ತಿಯಿಂದ ಗಳಿಸಿದ ದುರ್ಲಭವಾದ ವಸ್ತುವಲ್ಲದೇನೆ. ತ್ಯಾಗ, ಸಹನೆ, ಐಕ್ಯತೆ, ಭ್ರಾತೃತ್ವ ಮೊದಲಾದ ಗುಣಗಳಿಂದ ನೈಜ ಗಳ ದೂರದಲ್ಲಿದ್ದೇವೆ. ನಮ್ಮ ಭಾರತ ಮಾತೆಯನ್ನು ಸಂಪನ್ನ ವನ್ನಾಗಿ ಮಾಡಬೇಕು. ಭಾರತ ಮಾತೆಯ ನಮ್ಮ ಶೃಂಗರಿಸಿ ಸರ್ವರ ಹಿತಕಾರಿಣಿಯಾಗುವಂತೆ ಬೆಳೆಸಬೇಕೆಂಬುದನ್ನು ಮರೆಯುವೆವು. ಎಲ್ಲರ ಹಿತದಲ್ಲಿಯೇ ತನ್ನ ಹಿತವೆಂಬ ದನ್ನು ಮರೆತು ಸ್ವಾರ್ಥ ಸಂಕೀರ್ಣತೆಯಿಂದ ಸರ್ವನಾಶ ಮಾಡುತ್ತಿರುವೆವು. ಇನ್ನಾದರೂ ನಮ್ಮ ದೇಶದ ಬಗೆ ನಮಗೆ ಪ್ರೀತಿ ಇರಲಿ. ನಾವು ಮಾಡುವ ಪ್ರತಿ ಅವಹೇಳನವೂ ರಾಷ್ಟ್ರದೇವಿಯ ಮುಖಕ್ಕೆ ಕಲಂಕವೆಂಬುದರ ಅರಿವಾಗಲಿ. ನಮ್ಮ ಶರೀರವೂ, ಮನಸ್ಸೂ ಪವಿತ್ರವಾಗಿದ್ದರೆ ರಾಷ್ಟ್ರದೇವಿಯೂ ಶುಚಿಗೊಳ್ಳುವಳು. ನಾವು ಗುಣದ ಗಣಿಗಳಾದರೆ ರಾಷ್ಟ್ರದೇವಿಯೂ ಗುಣವತಿ ಎನಿಸುವಳು. ಏಕೆಂದರೆ ನಾವೇ ಅವಳು; ಅವಳೇ ನಾವು.

ಕೊಡಗು

ತಾ ೨೨-೬-೧೯೫೧ನೇ ಶುಕ್ರವಾರ

ಕಾಶ್ಮೀರ

"ಹಿಂದೂದೇಶದ ಒಂದು ಭಾಗವಾದ ಕಾಶ್ಮೀರದ ಮೇಲೆ ಅತ್ಯಾಚಾರ ನಡೆದಿದೆ. ಕಾಶ್ಮೀರದ ಜನತೆಯ ಮೇಲೆ ಧಾಳಿ ನಡೆಸಲಾಗಿದೆ. ಅವರ ವಿತ್ತ ಜೀವಿತಗಳು ನಾಶವಾಗಿ ಶಾಂತಿಯು ಕೆಡುತ್ತಿದೆ. ಧಾಳಿಗಾರರು ಕೊಲೆ ಸುಲಿಗೆ ನಡಸಿ ಕಾಶ್ಮೀರವನ್ನು ಆಕ್ರಮಿಸುತ್ತಾ ಬಂದಿದ್ದಾರೆ. ಇವರ ಈ ಧಾಳಿಗೆ ಪಾಕಿಸ್ತಾನವು ನೆರವು ನೀಡುತ್ತಿದೆ. ಈ ಧಾಳಿಗೆ ಬೇಕಾದ ಯುದ್ಧ ಸಾಮಗ್ರಿಗಳು, ವಾಹನ ಸಹಿವಾಟುಗಳು ಪಾಕಿಸ್ತಾನದಿಂದಲೇ ದೊರೆಯುತ್ತಿವೆ. ಪಾಕಿಸ್ತಾನವು ಒಳಗಿಂದೊಳಗೆ ಕಾಶ್ಮೀರವನ್ನು ನುಂಗಲು ಈ ಧಾಳಿ ನಡೆಸಿದೆ. ಆದ್ದರಿಂದ ಭದ್ರತಾ ಮಂಡಳವು ಅವರನ್ನು ಎಚ್ಚರಿಸಬೇಕು. ಪರಿಸ್ಥಿತಿಯನ್ನು ವಿಚಾರಿಸಿ ಯೋಗ್ಯ ನಿರ್ಣಯ ಕೊಡಬೇಕು." ಎಂದು ನೆಹರೂ ಸರಕಾರವು ಸಂಯುಕ್ತ ರಾಷ್ಟ್ರ ಸಂಘಕ್ಕೆ ದೂರು ಕೊಟ್ಟಿತು. ಈ ದೂರು ಕೊಟ್ಟಾಗ ಜವಾಹರರು ತಮ್ಮ ನೈಜ ಸ್ವಭಾವದಂತೆ ಸಂಯುಕ್ತ ರಾಷ್ಟ್ರವನ್ನು ನಂಬಿದ್ದರು. ಸಂಯುಕ್ತ ರಾಷ್ಟ್ರ ಸಂಘವು ತನ್ನ ಜವಾಬ್ದಾರಿಗನುಗುಣ ಕಾಶ್ಮೀರ ಸಮಸ್ಯೆಯನ್ನು ವಿಚಾರಿಸಿ ತಕ್ಕ ತೀರ್ಮಾನವನ್ನು ಕೊಟ್ಟೀತೆಂದು ನಂಬಿದ್ದರು. ಆ ಕಾಲಕ್ಕೆ ಮಹಾತ್ಮಾ ಗಾಂಧಿಯವರೊಬ್ಬರೇ ಇದರ ವಿರುದ್ಧ ನುಡಿದವರು. ಸಂಯುಕ್ತ ರಾಷ್ಟ್ರ ಸಂಘಕ್ಕೆ ಈ ಸಮಸ್ಯೆಯನ್ನು ತೆಗೆದುಕೊಂಡು ಹೋದುದು ಜಾಣತನವಾಗಲಿಲ್ಲವೆಂದು ಅವರು ಸ್ಪಷ್ಟವಾಗಿ ಹೇಳಿದ್ದರು. ಅದರಂತೆಯೇ ಇಂದು ಪರಿಸ್ಥಿತಿಯಾಯಿತು.

ಮೊದ ಮೊದಲಿಗೆ ಪಾಕಿಸ್ತಾನವು ಈ ಧಾಳಿಯಲ್ಲಿ ತನ್ನ ಕೈ ಇಲ್ಲವೆಂದು ನುಡಿಯುತ್ತಿತ್ತು. ಪಾಕಿಸ್ತಾನದ ವಿದೇಶ ಮಂತ್ರಿ ಡಾ|| ಜಫರುಲ್ಲಾಖಾನರು ಸಂಯುಕ್ತ ರಾಷ್ಟ್ರ ಸಭೆಯಲ್ಲಿ ಸುಳ್ಳಿನ ಮಳೆಗರೆದರು. ಕಡೆಗೆ ಭಾರತ ಸರಕಾರವು ಧಾಳಿಗಾರರಿಂದ ದೊರೆತ ಕಾಗದ ಪತ್ರಗಳನ್ನು ರುಜುವಾತಾಗಿ ಮುಂದಿಟ್ಟಾಗ ನಿರ್ವಾಹವಿಲ್ಲದೆ ಪಾಕಿಸ್ತಾನವು ತನ್ನ ಸೈನಿಕರು ಧಾಳಿ ಮಾಡಿರಬಹುದೆಂದು ಹೇಳಿತು. ಸಂಯುಕ್ತ ರಾಷ್ಟ್ರ ಸಂಘದ ಪ್ರೇಕ್ಷಕರು ಕಾಶ್ಮೀರ ಸಮಸ್ಯೆಯನ್ನು ಪರಿಶೀಲಿಸಲು ಬಂದಿದ್ದಾಗ ಅವರಿಗೆ ಪಾಕಿಸ್ತಾನವು ಧಾಳಿಯಲ್ಲಿ ಪ್ರತ್ಯಕ್ಷ ಪಾಲುಗೊಂಡಿತ್ತೆಂಬುದು ಗೋಚರವಾಯಿತು. ಆದರೂ ಸಂಯುಕ್ತ ರಾಷ್ಟ್ರ ಸಂಘದವರು ಪಾಕಿಸ್ತಾನವನ್ನು ಧಾಳಿಗಾರರೆಂದು ಸಾರಲಿಲ್ಲ. ಸಂಯುಕ್ತ ರಾಷ್ಟ್ರ ಸಂಘವು ಪರಿಸ್ಥಿತಿಯನ್ನು ಸರಿಯಾಗಿ ವಿವೇಚಿಸಿ ಒಂದು ನಿರ್ಣಯ ಮಾಡುವದರ ಬದಲು ಕ್ರಮಶಃ ಪಾಕಿಸ್ತಾನದ ಬೆನ್ನುತಟ್ಟಿಕೊಡಗಿತು. ಈ ಬೆಂಬಲದ ಕಾರಣವಾಗಿಯೇ ಇಂದು ಪಾಕಿಸ್ತಾನವು ತನ್ನ ವಾಗ್ಸರಣಿಯನ್ನು ಬದಲು ಮಾಡಿ ಹಿಂದೂದೇಶದ ದಬ್ಬಾಳಿಕೆಗೆ ಒಳಗಾದ ಕಾಶ್ಮೀರ ಜನತೆಯ ಬಿಡುಗಡೆಗಾಗಿ ಕಾನೂನು ಧರ್ಮಯುದ್ಧ ಹೂಡಬೇಕಾಯಿತೆಂದೂ ಭಾರತವು ಕಾಶ್ಮೀರದಲ್ಲಿ ಅನಾಚಾರ ಮಾಡುತ್ತಿದೆ ಎಂದೂ ಹೇಳುತ್ತಿದೆ!

ಕಾಶ್ಮೀರ ಸಮಸ್ಯೆಯ ವಿಚಾರದಲ್ಲಿ ಅನೇಕ ಸಂಧಾನ ಪ್ರಯತ್ನಗಳಾದವು. ಸಂಯುಕ್ತ ರಾಷ್ಟ್ರ ಸಂಘದಿಂದ ನಿರ್ದೇಶಿಸಲ್ಪಟ್ಟ ಮಧ್ಯಸ್ಥಗಾರರೂ ಪ್ರಯತ್ನಿಸಿ ವಿಫಲರಾದರು. ದಿನ ಕಳೆದಂತೆ ಪಾಕಿಸ್ತಾನವು ತಪ್ಪೆಲ್ಲವೂ ಭಾರತದೆಂದೇ ಹೇಳುತ್ತಿದೆ. ಕಾಶ್ಮೀರವು ಪಾಕಿಸ್ತಾನಕ್ಕೆ ಸೇರಬೇಕಾದುದೆಂದೂ, ಭಾರತ ಸೇನೆಗಳು ಕಾಶ್ಮೀರದಿಂದ ಹಿಂತೆಗೆಯಬೇಕೆಂದೂ ಕೂಗುತ್ತಿವೆ. ಆದರೂ ಬ್ರಿಟನ್, ಅಮೇರಿಕಾಗಳು, ಪಾಕಿಸ್ತಾನಕ್ಕೆ ಯಾವುದೇ ಬುದ್ಧಿ ಹೇಳಲಿಲ್ಲ. ಸಂಯುಕ್ತ ರಾಷ್ಟ್ರ ಸಂಘವೂ ತನ್ನ ಕರ್ತವ್ಯವನ್ನು ನಿರ್ವಹಿಸದೆ ಅಳ್ಳೆದೆಯಿಂದ ಸತಾಯಿಸುತ್ತಿದೆ. ಈ ರೀತಿಯ ವರ್ತನೆಯಿಂದಾಗಿ ನಾಲ್ಕಾರು ವರ್ಷವಾದರೂ ಕಾಶ್ಮೀರ ಸಮಸ್ಯೆ ಇನ್ನೂ ಬಗೆಹರಿಯದೆ ಉಳಿದಿದೆ.

ಭಾರತವು ಸ್ವತಂತ್ರವಾದುದರಿಂದ ವಿದೇಶೀ ಹಿಡಿತವು ಭಾರತದಿಂದ ಮಾಯವಾಯಿತು. ಆದರೆ ಬ್ರಿಟನ್ ಅಮೇರಿಕಾಗಳು ಕಾಶ್ಮೀರ ಸಮಸ್ಯೆಯು ಸಂಯುಕ್ತ ರಾಷ್ಟ್ರ ಸಂಘದ ಮುಂದೆ ಹೋದ ಸದವಕಾಶವನ್ನು ಉಪಯೋಗಿಸಿಕೊಂಡು ಮಧ್ಯಪ್ರಾಚ್ಯದಲ್ಲಿ ತಮ್ಮ ಕಾರಸ್ಥಾನವನ್ನು ನಡೆಸತೊಡಗಿದ್ದಾರೆ. ಪಾಕಿಸ್ತಾನದ ಬೆನ್ನು ಸವರುತ್ತ ಈ ಭಾಗದಲ್ಲಿ ತಮ್ಮ ಪ್ರಭಾವ ಬೀರಲು ಯತ್ನಿಸಿದ್ದಾರೆ. ಭದ್ರತಾ ಮಂಡಳದ ಸರ್ ಓವೆನ್ ಡಿಕ್ಸನರು ಪಾಕಿಸ್ತಾನವು ಧಾಳಿಗಾರನೆಂದು ವರದಿ ಮಾಡಿದರು. ಅದಕ್ಕನುಗುಣ ಕಾರ್ಯಕ್ರಮ ಕೈಕೊಳ್ಳದೆ ಭದ್ರತಾ ಮಂಡಳವು ಆ ವರದಿಯನ್ನು ಮೂಲೆಗೆ ಹಾಕಿತು. ಹಿಂದೂಸ್ಥಾನವನ್ನು ವಿಭಾಗಿಸಿದಂತೆಯೇ ಈಗ ಕಾಶ್ಮೀರವನ್ನು ಎರಡು ಭಾಗ ಮಾಡುವ ಸೂಚನೆಗಳಿವೆ. ಈ ಮಧ್ಯೆ ಭದ್ರತಾ ಮಂಡಳವು ತನ್ನ ಪ್ರತಿನಿಧಿ ಡಾ|| ಗ್ರಾಹಮರನ್ನು ಸಮಸ್ಯೆಯನ್ನು ತೀರ್ಮಾನಿಸಲು 'ಪಂಚಾಯಿತ'ನನ್ನಾಗಿ ಆರಿಸಿದೆ. ಪಾಕಿಸ್ತಾನವು ಅವರ ನೇಮಕವನ್ನು ಸ್ವಾಗತಿಸಿದೆ. ಈ ಕುಟಿಲ ಕಾರಸ್ಥಾನದ ಪರಿಚಯವುಳ್ಳ ಭಾರತ ಸರಕಾರವು ಅವರ ನೇಮಕವನ್ನು ತಿರಸ್ಕರಿಸಿ ಅವರೊಡನೆ ಸಹಕರಿಸುವದಿಲ್ಲವೆಂದು ಸ್ಪಷ್ಟವಾಗಿ ನುಡಿದಿದೆ. ಪಂಡಿತ ನೆಹರೂರವರು ತಮ್ಮ ಸ್ಪಷ್ಟ ವಚನದಿಂದ ಭಾರತಕ್ಕೆ ಅನ್ಯಾಯ ಬಗೆಯುವ ಸರ್ವ ಯತ್ನವನ್ನೂ ಎದುರಿಸಲಾಗುವದೆಂದು ಎಚ್ಚರಿಸಿದ್ದಾರೆ. ಪಾಕಿಸ್ತಾನವನ್ನು ಬೆನ್ನುತಟ್ಟುವ ಭರದಲ್ಲಿ ಇಂಗ್ಲೆಂಡ್ ಅಮೇರಿಕಾಗಳು ಭಾರತಕ್ಕೆ ಅನ್ಯಾಯ ಬಗೆದಿವೆ. ಈ ಅನ್ಯಾಯವನ್ನು ಮುಂದುವರಿಸಿದರೆ ಅದರ ಬಗ್ಗೆ ಆ ರಾಷ್ಟ್ರಗಳು ಪಶ್ಚಾತ್ತಾಪಪಡುವ ದಿನಗಳು ದೂರವಿರವು. ಏಕೆಂದರೆ ಭಾರತವು ಕಾಶ್ಮೀರದ ಬಗ್ಗೆ ಕಠಿಣ ಮನೋಭಾವವನ್ನು ತಳೆದಿದೆ. ಅಲ್ಲಿ ಅದು ಯಾರಿಗೂ ಬಿರಬಾಗಲಾರದು. ಅದರಿಂದ ಬರಬಹುದಾದ ಕಷ್ಟನಿಷ್ಠುರಗಳಿಗೆ ಅದು ಸಿದ್ಧವಾಗಿ ನಿಂತಿದೆ. ಇನ್ನಾದರೂ ಸಂಯುಕ್ತ ರಾಷ್ಟ್ರ ಸಂಘವು ತನ್ನ ಯೋಗ್ಯತೆಗೆ ಸರಿಯಾಗಿ ವರ್ತಿಸಬೇಡವೇ?

ಮಳೆ ಮಾನ.

ಜನವರಿ ಒಂದರಿಂದ ಈ ವರೆಗೆ ಮಡಿಕೇರಿಗೆ ೧೭ ಇಂಚು ೬೩ ಸೆಂಟು ಮಳೆಯಾಗಿದೆ. ಕಳೆದ ವರ್ಷ ಇದೇ ಅವಧಿಯಲ್ಲಿ ೨೭ ಇಂಚು ೮೧ ಸೆಂಟು ಆಗಿತ್ತು.

ಜೂನ್ ತಾರೀಕು ೧ರಿಂದ ೨೦ರ ವರೆಗೆ ಈ ವರ್ಷ ೧೩ ಇಂಚು ೩೮ ಸೆಂಟು ಮಳೆಯಾಗಿದೆ. ಕಳೆದ ವರ್ಷ ಇದೇ ಅವಧಿಯಲ್ಲಿ ೧೮.೧೮ ಇಂಚು ಆಗಿತ್ತು.

ಉತ್ತರ ಕೊಡಗು, ಕಾಥೋಲಿಕ ಸಮಾಜದ 'ಸೇಂಟ್ ತೆರೇಸಾದ' ಅಬ್ಬಿಗರ ಬಾಲಿಕೆಯ ಪ್ರೈವೇಟ್ ಶಾಲೆಯು ತಾರೀಕು ೩-೬-೫೧ನೇ ಭಾನುವಾರ ಕೊಡಗು ಜಿಲ್ಲಾ ವಿದ್ಯಾಧಿಕಾರಿಗಳಾದ ಶ್ರೀಮಾನ್ ಗಣೇಶರಾವ್‌ರವರಿಂದ ತೆರೆಯಲ್ಪಟ್ಟಿತು.

೧೯೫೦ರಲ್ಲಿ ಪ್ರಾರಂಭಿಸಿದ ಆಸಾಮ್ ನಿರಾಶ್ರಿತರ ಸಹಾಯ ನಿಧಿಗೆ ಕೊಡಗಿನಲ್ಲಿ ರೂ ೨೦,೨೦೦ ವಸೂಲಾಗಿದ್ದು ಅದನ್ನು ದಿಲ್ಲಿಗೆ ಕಳುಹಿಸಲಾಗಿದೆ. ಇನ್ನು ಮುಂದೆ ಈ ಫಂಡಿಗೆ ಬರತಕ್ಕ ದಾನ ಹಣವನ್ನು ಸ್ವೀಕರಿಸುವದಿಲ್ಲವೆಂದು ಕಾರ್ಯದರ್ಶಿಯವರು ತಿಳಿಸುತ್ತಾರೆ.

ವೀರಾಜಪೇಟೆ ಸರಕಾರಿ ಹೈಸ್ಕೂಲಿನ ವಿದ್ಯಾರ್ಥಿಗಳ ಚರ್ಚಾಕೂಟದ ಉದ್ಘಾಟನ ಸಮಾರಂಭವು ತಾ ೧೪ರಲ್ಲಿ ಶ್ರೀ ಅಪ್ಪರಂಡ ತಿಮ್ಮಯ್ಯನವರಿಂದ ನಡೆಸಲ್ಪಟ್ಟಿತು.

ಇತ್ತೀಚೆ ಚುನಾಯಿಸಲ್ಪಟ್ಟಿರುವ ಪ್ರಯುಕ್ತ ಕೊಡಗು ಶಾಸನ ಸಭೆಯ ಸದಸ್ಯತ್ವಕ್ಕೆ ರಾಜಿನಾಮೆ ಇತ್ತ ಶ್ರೀ ಸಿದ್ದಪ್ಪಾಜಿ ಮುದ್ದಪ್ಪನವರ ಬದಲು ಕೌನ್ಸಿಲಿನ ಸೆಕ್ರೆಟರಿಯವರಾಗಿ ಶ್ರೀ ಕಾರ್ಯೆರ ಕಟ್ಟಪ್ಪನವರನ್ನು ನೇಮಿಸಲಾಗಿದೆ. ಜಿಲ್ಲಾ ವಿದ್ಯಾಧಿಕಾರಿಗಳಾದ ಶ್ರೀ ಗಣೇಶರಾಯರನ್ನು ಕೌನ್ಸಿಲಿನ ವಿದ್ಯಾ ಇಲಾಖಾ ಸದಸ್ಯರಾಗಿ ನೇಮಿಸಲಾಗಿದೆ.

ಮದ್ರಾಸು ವಿಶ್ವವಿದ್ಯಾಲಯದ ಬಿ ಎ ಪರೀಕ್ಷೆಯಲ್ಲಿ ಶ್ರೀಗಳಾದ ಅಜ್ಜಿಕುಟ್ಟೀರ ಅಪ್ಪಣ್ಣ, ನೆಲ್ಲಮಕ್ಕಡ ಪೊನ್ನಪ್ಪ ಇವರುಗಳೂ, ಬಿ ಕಾಂ ಪರೀಕ್ಷೆಯಲ್ಲಿ ಶ್ರೀ ಎಚ್ ಎ ಸಚಿದಾನಂದರವರೂ, ಬಿ ಎಸ್ ಸಿ ಪರೀಕ್ಷೆಯಲ್ಲಿ ಶ್ರೀ ಕೇಚಿಯಂಡ ತಿಮ್ಮಯ್ಯ ಇವರೂ ತೇರ್ಗಡೆಯಾಗಿರುವರು.

ಮಂಗಳೂರು ಸ್ಟೇಟ್ ಎಗ್ನೆಸ್ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದ ಕುಮಾರಿ ನಡಿಕೇರಿಯಂಡ ನಂಜಮ್ಮ ಸುಬ್ಬಯ್ಯನವರು ಕಳೆದ ಇಂಟರ್‌ಮೀಡಿಯೇಟ್ ಪರೀಕ್ಷೆಯಲ್ಲಿ ಪ್ರಥಮ ದರ್ಜೆಯಲ್ಲಿ ಪಾಸಾಗಿರುತ್ತಾರೆ. ಇವರು ೯೫೦ರಲ್ಲಿ ೭೩೩ ಮಾರ್ಕುಗಳನ್ನು ಪಡೆದು ಮಂಗಳೂರು ಕಾಲೇಜುಗಳಲ್ಲಿ ಪ್ರಥಮ ಸ್ಥಾನವನ್ನು ಪಡೆದಿರುವರು. ಎರಡು ವರ್ಷಗಳ ಹಿಂದೆ ಎಸ್ ಎಸ್. ಎಲ್. ಸಿ. ಪರೀಕ್ಷೆಯಲ್ಲಿ ೬೦೦ರಲ್ಲಿ ೫೧೭ ಮಾರ್ಕುಗಳನ್ನು ಪಡೆದು ಮಂಗಳೂರಿನಲ್ಲಿ ೧ನೇಯಾಗಿ ತೇರ್ಗಡೆಹೊಂದಿದ್ದರು. ಈಗ ಇವರು ಮದರಾಸು ಪ್ರೆಸಿಡೆನ್ಸಿ ಕಾಲೇಜಿನಲ್ಲಿ 'ಸ್ಟೇಟಿಸ್ಟಿಕ್ಸ್ ಹಾನರ್ಸ್' ಓದಲುಹೋಗಿರುವರು.

ಮಡಿಕೇರಿ ಸೆಂಟ್ರಲ್ ಜೈಲಿನಲ್ಲಿ 'ಅಂಡರ್ ಟ್ರಯಲ್' ಕೈದಿಯಾಗಿದ್ದ ಪಣಿಯರ ಚಂದ ಎಂಬವನು ತಾ. ೧೪ರ ರಾತ್ರಿ ಜೈಲು ಗೋಡೆ ಹತ್ತಿ ತಪ್ಪಿಸಿಕೊಂಡು ಓಡಿಹೋಗಿರುವನು.

ಕೊಡಗು ಶಾಸನ ಸಭೆಯ ವಿಶೇಷ ಮೀಟಿಂಗೊಂದು ತಾ ೨೯-೬-೫೧ರಲ್ಲಿ ನಡೆಯುವದು.

ಕೊಡಗು ಸರಕಾರಿ ಕಾಲೇಜಿನ ಗಣಿತ ಶಾಸ್ತ್ರ ಬೋಧಕರಾಗಿದ್ದ ಶ್ರೀ. ವೆಂಕಟರಮಣರಾವ್ ಇವರ ಸರ್ವಿಸು ತಾ ೧-೭-೫೧ರಿಂದ ಅಗತ್ಯವಿಲ್ಲವೆಂದು ಕೊಟ್ಟ ನೋಟೀಸನ್ನು ಸರಕಾರವು ರದ್ದು ಮಾಡಿ ಅವರನ್ನು ಪುನಃ ಕೆಲಸಕ್ಕೆ ನೇಮಿಸಿರುವರು.

ಸ್ಕಾಲರ್ ಶಿಪ್ ಕಮಿಟಿಯ ಮೀಟಿಂಗೊಂದು ತಾರೀಕು ೨೨ರಲ್ಲಿ ಮಡಿಕೇರಿಯಲ್ಲಿ ನಡೆದು ಮದ್ರಾಸಿನ ಮೆಡಿಕಲ್, ಇಂಜಿನಿಯರಿಂಗ್, ಎಗ್ರಿಕಲ್ಚರ್ ಮೊದಲಾದ ಟೆಕ್ನಿಕಲ್ ಕಾಲೇಜುಗಳಿಗೆ ವಿದ್ಯಾರ್ಥಿಗಳನ್ನು ಆರಿಸಲಾಯಿತು.

'ಸಿ' ಭಾಗದ ಸಂಸ್ಥಾನಗಳು

ಕಳೆದ ವಾರ ಡೆಲ್ಲಿಯಲ್ಲಿ 'ಸಿ' ಭಾಗದ ಪ್ರಾಂತಗಳ ಪಾರ್ಲಿಮೆಂಟ್ ಮೆಂಬರುಗಳ ಸಭೆಯು ಡಾ|| ಪಟ್ಟಾಭಿ ಸೀತಾರಾಮಯ್ಯನವರ ಅಧ್ಯಕ್ಷತೆಯಲ್ಲಿ ನಡೆದು 'ಸಿ' ಭಾಗದ ಡೆಲ್ಲಿ, ಮಣಿಪುರ, ತ್ರಿಪುರ, ಕಚ್, ಬಿಲಾಸಪುರ, ಸಂಸ್ಥಾನಗಳನ್ನು ಬಿಟ್ಟು ಉಳಿದ ಎಲ್ಲಾ ಚಿಕ್ಕ ಪ್ರಾಂತಗಳನ್ನು ನೆರೆಯ ದೊಡ್ಡ ಪ್ರಾಂತಗಳಿಗೆ ಸಂಯೋಜನೆಮಾಡಿ ಬಾಕಿ ಉಳಿದ ಸಿ ಭಾಗದ ಪ್ರಾಂತಗಳಿಗೆ 'ಬಿ' ಭಾಗದ ಪ್ರಾಂತಗಳಂತೆ ಸುಧಾರಣೆ ಕೊಡಬೇಕೆಂದು ಸರಕಾರವನ್ನು ಕೇಳಿಕೊಂಡಿರುವರೆಂದು ವರದಿಯಾಗಿದೆ.

ಸಾರ್ವಜನಿಕರಲ್ಲಿ ವಿನಂತಿ.

ನನ್ನ ಬಾಪ್ತು ಸಾಧಾರಣ ಕಪ್ಪು ವರ್ಣದ ಅಂದಾಜ 4 ಅಡಿ ಎತ್ತರದ ಸುಮಾರ 1½ ಅಡಿ ಉದ್ದದ ನೆಟ್ಟಕೋಡಿನ ಬಲ ಬಗಲಲ್ಲಿ ಒಂದು ಗುಪ್ಪೆ ಇರುವ ಮೂರು ವರ್ಷದ ಕರೆಯುವ ಒಂದು ಹಸು ಮತ್ತು ಸಾಧಾರಣ ಕೆಂದವರ್ಣದ ಸುಮಾರು 6 ತಿಂಗಳು ಪ್ರಾಯದ ಇದರ ಗಂಡು ಕರು ಸಮೇತವಾಗಿ ಈಗ ಕೆಲವು ದಿನಗಳಲ್ಲಿ ನನ್ನ ಹೋಟೇಲಿನಿಂದ ಕಾಣೆಯಾಗಿರುತ್ತೆ. ಇದನ್ನು ಪತ್ತೆಮಾಡಿ ಕೊಟ್ಟವರಿಗೆ 15 ರೂಪಾಯಿ ಬಹುಮಾನ ಕೊಡುತ್ತೇನೆ.

ಶೆವಕಲ್ ಹೋಟೇಲ್,
ಮಾರ್ಕೆಟು ರೋಡು,
ವೀರಾಜಪೇಟೆ.

SALE.

About six thousand the best variety of orange plants are for sale at the rate of Rs 30/- per hundred. Hight of the plants range between 2½ to 3½ feet. For further particulars, please write to the below address

M. P. Appayya
Chinnalli Estate
Somwarpet Post
North Coorg

Wanted

A B Sc graduate, who had taken Physics, Chemistry and Mathematics under part II to Hathur High School from 1st of July. The salary will be Rs 80/-+45/ per mensum. Applications should reach the under signed not later than 28-6-51

President
Hathur High School

ಓದುಗರ ಓಲೆಗಳು

ಕೊಡಗು ಸರಕಾರಿ ಕಾಲೇಜು

ನಮ್ಮ ಕಾಲೇಜಿನ ಪ್ರಥಮ ಫಲಿತಾಂಶವು ಪ್ರಕಟವಾಗಿದೆ ಎಂಬ ವಿಷಯವನ್ನು ಎಲ್ಲರೂ ಒಪ್ಪಬೇಕಾಗಿದೆ. ಇದಕ್ಕೆ ಕಾರಣಭೂತರಾದ ಪ್ರಿನ್ಸಿಪಾಲರನ್ನು ಲೆಕ್ಚರರುಗಳನ್ನು ಮತ್ತು ಶ್ರಮವಹಿಸಿ ಓದಿ ಪಾಸಾದ ವಿದ್ಯಾರ್ಥಿ ವಿದ್ಯಾರ್ಥಿನಿಗಳನ್ನು ನಾವು ಅಭಿನಂದಿಸಬೇಕಾಗಿದೆ.

ಕಾಲೇಜಿನ ಮೊದಲಿನ ವರ್ಷದಲ್ಲಿ ಕೆಲವು ತೊಡಕುಗಳಿದ್ದರೂ ಅವನ್ನು ಸರಕಾರದ ಮತ್ತು ಮಕ್ಕಳ ತಂದೆ ತಾಯಿಗಳ ಸಹಕಾರದಿಂದ ಕಾಲೇಜಿನ ಮುಖ್ಯಾಧಿಕಾರಿಯು ನೀಗಿಸಿ ನಮ್ಮ ಕಾಲೇಜನ್ನು ಪ್ರಸಿದ್ಧಿಗೆ ತಂದದ್ದಕ್ಕಾಗಿ ಅವರಿಗೆ ನಾವು ವಂದಿಸಬೇಕಾಗಿದೆ.

ಇನ್ನು ಇದುವರೆಗೆ ನಮ್ಮ ಕಾಲೇಜಿನಲ್ಲಿದ್ದ ಇವನ್ನು ಒಂದೇ ತರಗತಿಯು ಇತ್ತು. ಹಾಗೆ ಈ ವರ್ಷದಿಂದಲೇ ಇಂಟರ್ ಮಿಡಿಯೆಟ್ ಕ್ಲಾಸನ್ನು ಮುಂದರಿಸಬೇಕೆಂದಿರುವ ಮುಖ್ಯವಾಗಿ ನಮ್ಮ ಕೃಷಿಕ ಜನರ ಮಕ್ಕಳಿಗೆ ಸಹಾಯ ಮಾಡಬೇಕಾಗಿ ನಾವು ಸರಕಾರವನ್ನು ಕೋರುತ್ತೇವೆ.

ಇಂಥ ಕಾಲೇಜು ಮಂದಿನ ವರ್ಷ ಕಾಲೇಜು ಸ್ಥಾಪನೆಯಾಗಿದ್ದಿದ್ದರೆ ಬೇರೆ ದೇಶದಲ್ಲಿ ತಮ್ಮ ವಿದ್ಯೆಯನ್ನು ಮುಂದರಿಸಲಿಕ್ಕೆ ಶಕ್ತರಲ್ಲದ ಕೃಷಿಕ ಜನರ ಮಕ್ಕಳು ತಮ್ಮ ವಿದ್ಯೆಯನ್ನು ಸುಲಭದಲ್ಲಿ ಪೂರೈಸಿಕೊಂಡು ಮುಂದುವರಿಯುತ್ತಿದ್ದರು. ಇನ್ನಾದರೂ ಶೀಘ್ರ ಬಿ. ಎ. ತರಗತಿ ತೆರೆಯಲ್ಪಡಲಿ.

ಕೃಷಿಕ.

ಇದು ನ್ಯಾಯವೇ?

ಇಡೀ ಕೊಡಗಿನಲ್ಲಿ ಹೈಸ್ಕೂಲ್ ಮುಖ್ಯೋಪಾಧ್ಯಾಯರಲ್ಲಿ ಬದಲಾವಣೆಗಳಾಯಿತು. ಈ ಸಂದರ್ಭದಲ್ಲಿ ವೀರರಾಜಪೇಟೆ ಹೈಸ್ಕೂಲ್‌ನಲ್ಲಿ ಮುಖ್ಯೋಪಾಧ್ಯಾಯರಾಗಿದ್ದ ಶ್ರೀ. ಎಂ. ಎ. ಚಂಗಪ್ಪನವರು ನಾಪೋಕ್ಲು ಶಾಲೆಗೆ ವರ್ಗಾಯಿಸಲ್ಪಟ್ಟು ಇದೇ ಶಾಲೆಯಲ್ಲಿ ಎರಡನೇ ಮುಖ್ಯೋಪಾಧ್ಯಾಯರಾಗಿದ್ದ ಶ್ರೀ. ಬಿ. ಎಸ್. ಪಿ. ಇ. ವಿರಲ್‌ರವರು ವೀರರಾಜಪೇಟೆಯ ಮುಖ್ಯೋಪಾಧ್ಯಾಯರಾದರು.

ಅವರು ಹೊಸ ಮುಖ್ಯೋಪಾಧ್ಯಾಯರಾದಂದಿನಿಂದ ಹೊಸ ಕಾನೂನೋ ಎಂಬಂತೆ ಕೆಲವು ತಿದ್ದುಪಡಿಗಳನ್ನು ಮಾಡಿದರು. ಅವರಲ್ಲಿ ಒಂದನ್ನು ಜನರಿಗೆ ಅಗತ್ಯವಾಗಿ ಎತ್ತಿ ತೋರಿಸಬೇಕಾಗಿದೆ. ಅದೇನೆಂದರೆ ಸಾಧಾರಣವಾಗಿ ಕೆಲವು ವರ್ಷಗಳಿಂದ ಎಲ್ಲಾ ಕಾಲೇಜುಗಳಲ್ಲಿಯೂ, ಶಾಲೆಗೆ ಬೇಕಾದ ನೆಕ್‌ಟೈ, ಉಡುಪುಗಳ ಮೊದಲಾದ ವೇಷಭೂಷಣಗಳಿಗೆ ಶಾಲೆಯ ಹುಡುಗರು ತಾವೇ ಕಟ್ಟಿಕೊಂಡು ಬರಬೇಕೆಂದು ಹೊಸ ಕಾನೂನಿನ ಪ್ರಕಾರ ಜೆ. ಸಾ. ಯು. ಸುತ್ತೋಲೆ. ಆದರೆ ವೀರರಾಜಪೇಟೆ ಹೈಸ್ಕೂಲಿಗೆ ಹೊಸ ಮುಖ್ಯೋಪಾಧ್ಯಾಯರು ಬಂದ ಕೆಲವೇ ದಿನಗಳಲ್ಲಿ ಕಾಮೇ ಇಬ್ಬರು ಹುಡುಗರನ್ನು ನೆಕ್‌ಟೈ ಉಪಯೋಗಿಸದ್ದಕ್ಕಾಗಿ ಶಿಕ್ಷಿಸಿದರು. ಇದು ನ್ಯಾಯವೇ? ಅವರು ಹೀಗೆ ಇಬ್ಬರು ಹುಡುಗರನ್ನು ಶಿಕ್ಷಿಸಿದ್ದನ್ನು ಉಳಿದ ಹುಡುಗರು ವಿರೋಧಿಸುವುದಲ್ಲ ಉಳಿದ ಜನರೂ ವಿರೋಧಿಸುತ್ತಾರೆ. ಶಾಲೆಯ ಇತರ ಹುಡುಗರು, ಮುಖ್ಯೋಪಾಧ್ಯಾಯರನ್ನು 'ನೀವು ಹೀಗೆ ನೇಮಕ ಮಾಡುವುದು ನ್ಯಾಯವೇ?' ಎಂದು ಕೇಳಿದ್ದಕ್ಕೆ ಅವರು, 'ಹಿಂದಿನ ವರ್ಷಗಳಲ್ಲಿ ನೀವು ಪೋಲಿಗಳಿಗೆ ನೆಕ್‌ಟೈ, ಉಡುಪುಗಳು ಕೆಲಸಗಳನ್ನು ಕೊಟ್ಟು ನಮ್ಮ ಶಾಲೆಗೆ ಕಟ್ಟಿ ಕೊಂಡು ಬರುತ್ತಿರಿ ಅದೇ ರೀತಿಯಲ್ಲಿ ಈ ವರ್ಷ ಆಗದೇ ಇರಲೆಂದು ನಾನೇ ಮುಖ್ಯೋಪಾಧ್ಯಾಯರಾದ ಇಬ್ಬರು ಹುಡುಗರನ್ನು ಮೇಲಿನ ಕೆಲಸಗಳಿಗೆ ನೇಮಕ ಮಾಡಿದೆ.' ಎಂದು ಉತ್ತರಕೊಟ್ಟರು.

ಇಂದಿನ ಪ್ರಜಾಪ್ರಭುತ್ವ ಕಾಲದಲ್ಲಿ ಸರ್ವ ಕೆಲಸಗಳಿಗೂ ಜನರ ಅಭಿಮತವನ್ನು ಪಡೆಯಬೇಕು. ಈಗಿನ ಸರಕಾರವು ಜನರ ಅಭಿಮತವನ್ನು ಪಡೆಯುತ್ತಿದೆ. ಹೀಗಿರುವಾಗ ನಮ್ಮ ಶಾಲೆಯ ಮುಖ್ಯೋಪಾಧ್ಯಾಯರ ನೀತಿ ಸರಿಯಾಗಿ ವರ್ತಿಸಬಹುದೇ?

S. C. B.

ನಮ್ಮ ಪ್ರಿನ್ಸಿಪಾಲರು.

ಕೊಡಗು ಸರಕಾರಿ ಕಾಲೇಜಿನ ಪ್ರಿನ್ಸಿಪಾಲರಾದ ಡಾ. ಹೇಲ್‌ವೆನ್‌ರವರು ಬರುವ ಆಗಸ್ಟ್ ತಿಂಗಳಿನಲ್ಲಿ ಮದ್ರಾಸು ಸರಕಾರದಲ್ಲಿ ತಮಗಿದ್ದ ಹಿಂದಿನ ಉದ್ಯೋಗಕ್ಕೆ ಹೋಗುವರೆಂಬ ವರ್ತಮಾನವಿದೆ. ಈ ವರ್ತಮಾನವು ನಿಜವಿದ್ದರೆ ಅವರು ಕೊಡಗಿನ ಸರಕಾರಿ ಕಾಲೇಜನ್ನು ಬಿಟ್ಟು ಹೋಗದಂತೆ ಏರ್ಪಡಿಸುವುದು ಅತ್ಯಾವಶ್ಯಕ ಕರ್ತವ್ಯ. ಕೊಡಗು ಸರಕಾರಿ ಕಾಲೇಜಿನ ಪ್ರಿನ್ಸಿಪಾಲರಾಗಿ ಕಳೆದ ಎರಡು ವರ್ಷಗಳ ತಮ್ಮ ದಕ್ಷ ಸೇವೆಯಿಂದ ಇವರು ಅಸ್ತಿತ್ವಕ್ಕೆ ಯೋಗ್ಯತೆಯನ್ನು ಸರ್ವರಿಗೂ ಮನವರಿಕೆ ಮಾಡಿಸಿದ್ದಾರೆ. ಅವರ ಕಾರ್ಯಕಲಾಪಗಳನ್ನು ಸಾರ್ವಜನಿಕರು ಮೆಚ್ಚಿರುವುದಲ್ಲದೆ ಕೊಡಗಿನ ಶಾಸನ ಸಭೆಯಲ್ಲೂ ಅವರ ಪ್ರಶಂಸೆ ಆಗಿದೆ.

ಕೊಡಗು ಸರಕಾರಿ ಕಾಲೇಜು ಇನ್ನೂ ಎರಡು ವರ್ಷಗಳ ಹಸುಗೂಸು. ಇದು ಇನ್ನೂ ಬೆಳೆದು ತನ್ನ ಕಾಲಿನ ಮೇಲೆ ನಿಲ್ಲಬೇಕಾದರೆ ದಕ್ಷರಾದ ಇಂಥವರ ನೆರವು ಮತ್ತು ಪೋಷಣೆ ಬೇಕು. ಆದ್ದರಿಂದ ಇವರು ಈ ಕಾಲೇಜನ್ನು ಬಿಟ್ಟು ಹೋಗಬಾರದು. ಜನತೆಯೂ ಕೂಡ ಇವರ ತಮಗೆ ಬೇಕೆಂಬುದನ್ನು ಸರಕಾರಕ್ಕೆ ಮನದಟ್ಟು ಮಾಡಿಸುವುದಲ್ಲದೆ ಸರಕಾರವು ಈ ಬಗ್ಗೆ ಕಾರ್ಯೋನ್ಮುಖವಾಗುವಂತೆ ಮಾಡಬೇಕು. ಪ್ರಿನ್ಸಿಪಾಲರು ತುಂಬಾ ಅನುಭವಸ್ಥರು. ಮದ್ರಾಸ್ ಸರಕಾರದ ತನ್ನ ಸುಮಾರು ೨೦ ವರ್ಷಗಳ ಸರ್ವಿಸಿನಲ್ಲಿ ಅತ್ಯುತ್ತಮ ಸೇವೆ ಸಲ್ಲಿಸಿರುವವರು. ಇವರ ಅಮೂಲ್ಯ ಗುಣವೆಂದರೆ ರಾಜಕೀಯ ವಿಚಾರಗಳಲ್ಲಿ ನಿರ್ಲಿಪ್ತತೆ. ಯುವಾಗಲೂ ವಿದ್ಯಾರ್ಥಿಗಳು ರಾಜಕೀಯ ಪ್ರಭಾವದಿಂದ ದೂರವಿರಬೇಕು. ಕೊಡಗಿನ ಪಕ್ಷರಾಜಕೀಯದ ಇಂದಿನ ಪರಿಸ್ಥಿತಿಯಲ್ಲಿ ಇವರಂಥವರೇ ಬೇಕು. ಆದ್ದರಿಂದ ಸ್ಥಳೀಯ ಸರಕಾರವು ಮದ್ರಾಸು ಸರಕಾರದೊಡನೆ ವ್ಯವಹಾರ ನಡೆಸಿ ಇವರು ಕೊಡಗಿನ ಕಾಲೇಜಿಗೆ ತಮ್ಮ ಸೇವೆಯನ್ನು ಇನ್ನೂ ಕೆಲವು ವರ್ಷ ಸಲ್ಲಿಸುವಂತೆ ಏರ್ಪಡಿಸಬೇಕಾಗಿದೆ.

"G"

ಇದಾವ ನೀತಿತತ್ವವೋ?

ನಮ್ಮ ಕೊಡಗು ಸರಕಾರದವರು ತುಂಬಾ ಮಿತವ್ಯಯದ ದೃಷ್ಟಿಯಿಂದ ಪಠಶಾಲೆ ನಡೆಸುತ್ತಿರುವರೆಂದೂ, ರಜೆಯಲ್ಲಿ ಅಧ್ಯಾಪಕರಿಗೆ ವೇತನ ಕೊಡದೆ, ಮಿಲಿಟರಿ ಆಫೀಸರುಗಳನ್ನೂ ಬೇಗ ಭರ್ತಿ ಮಾಡದೆ ಖರ್ಚು ಉಳಿತಾಯ ಮಾಡುತ್ತಿರುವರೆಂದೂ ಕೇಳಿದೆವು. ಆದರೆ ನಮ್ಮ ದೃಷ್ಟಿಯಲ್ಲಿ ಕೊಡಗಿನ ಸರಕಾರವು ಜನತೆಯ ದೃಷ್ಟಿಯಿಂದ ಅನಾವಶ್ಯವೆಂದು ತೋರುವ ಅನೇಕ ಖರ್ಚುಗಳನ್ನು ಮಾಡುತ್ತಿದೆ. ನಮ್ಮ ಹೊಸ ಚೀಫ್ ಕಮಿಷನರು ಬಂದನಂತರ 'ಬೆಂಗಳೂರು ಬಂಗ್ಲೆ'ಯನ್ನು ಸುಮಾರು ೬೦೦೦/- ರೂಪಾಯಿ ಖರ್ಚುಮಾಡಿ ಸರಿಪಡಿಸಿಗೊಳಿಸಿದ್ದಾರೆ. ಮೊನ್ನೆಯಾಗಿ ಮಡಿಕೇರಿಯಲ್ಲಿ ನಡೆದ ಚೀಫ್ ಕಮಿಷನರು ಫ್ರೇಜರ್‌ಪೇಟೆಗೆ ಕಟ್ಟಿಸಿದ ಬಂಗ್ಲೆಯನ್ನು ವರ್ಗಾಯಿಸಿದ್ದಾರೆ. ಈ ಬಂಗ್ಲೆಯನ್ನು ಸುಮಾರು ೩೦೦೦/- ವೆಚ್ಚದಿಂದ ರಿಪೇರಿಗೊಳಿಸಿರುವರಂತೆ! ಇಷ್ಟೇ ಅಲ್ಲ; ಅವರಿಗೆ ಬೇಕಾದ ನೀರು, ಹಾಲು ಮುಂತಾದ್ದುಗಳೆಲ್ಲ ಮಡಿಕೇರಿಯಿಂದ ಸಾಗಿಸಲ್ಪಡುತ್ತಿರುವದಂತೆ. ಅವರಿಗಾಗಿ ಮಡಿಕೇರಿಯಿಂದ ಡಾಕ್ಟರರೊಬ್ಬರು ಹೋಗಿ ಫ್ರೇಜರ್‌ಪೇಟೆಯಲ್ಲಿರುವರಂತೆ! ಇದೆಲ್ಲ ನಿಜವಾದರೆ ಇದಾವ ಮಿತವ್ಯಯ ವೆಂದು ಪ್ರಶ್ನಿಸಬೇಕಾಗಿದೆ. ಇಂದಿನ ಸ್ವಾತಂತ್ರ್ಯ ಯುಗದಲ್ಲಿ ಈ ರೀತಿಯ ದುಂದು ಹಿಂದಿನ ಬ್ರಿಟಿಷ್ ಆಡಳಿತವನ್ನು ಜ್ಞಾಪಕಕ್ಕೆ ತರುತ್ತಿದೆ. ಇಂಥ ವ್ಯಯಗಳಿಗಾಗಿ ತೆರಿಗೆ ಕಟ್ಟಿ ಇಲ್ಲದೆ, ಹೊಟ್ಟೆಗೆ ಅನ್ನವಿಲ್ಲದೆ ಪರಿತಪಿಸುತ್ತಿರುವ ಬಡಜನರ ಕೃಷಿಕನ ಬೆವರಿನಿಂದ ಬಂದ ಹಣವನ್ನು ವಿನಿಯೋಗವಾಗುತ್ತಿರುವುದು ಸರಿಯೆ?

ಕೊಡಗಿಗೆ ಯಾರನ್ನು ಕಳುಹಿಸಿದರೂ ಯಾರ ಬಂದು ಏನು ಮಾಡಿದರೂ ಇಲ್ಲಿಯ ಜನರು ಮಾತೆತ್ತುವುದಿಲ್ಲ. ಎಂಥಾ ನಿವೃತ್ತ ಅಧಿಕಾರಿಯಾದರೂ ತಾನು ಸಾಯುವ ವರೆಗೆ ಇಷ್ಟ ಆಡಳಿತ ನಡೆಸಬಹುದೆಂದು ದಿವಂಗತ ಸರ್ದಾರ್ ಪಟೇಲರು ಹೇಳಿದ್ದರು. ರಾಜಕೀಯ ಜಾಗೃತಿ ಸಾಕಷ್ಟು ಇಲ್ಲದ, ತಮ್ಮ ಹಕ್ಕು ಬಾಧ್ಯತೆಗಳನ್ನು ಅರಿಯದ ಇಲ್ಲಿಯ ಜನರು ಪ್ರಶ್ನಿಸುವುದಿಲ್ಲವೆಂದು ಅಧಿಕಾರವು ಸ್ವೇಚ್ಛೆ ಮಾಡುವಂತೆ ಸಾಗುತ್ತಿದೆ.

"ಬಡಕೃಷಿಕ"

ಕೊಡಗು ಸ್ಪೋರ್ಟ್ಸ್ ಸಂಸ್ಥೆ.

ಅಖಿಲ ಕೊಡಗಿಗೆ ಒಂದು ಸ್ಪೋರ್ಟ್ಸ್ ಸಂಸ್ಥೆಯನ್ನು ಸ್ಥಾಪಿಸುವ ದೃಷ್ಟಿಯಿಂದ ತಾ. ೧೫-೬-೫೧ ರಲ್ಲಿ ಮಡಿಕೇರಿ ನಾರ್ತ್‌ಕೂರ್ಗ್ ಕ್ಲಬ್ಬಿನಲ್ಲಿ ಬ್ರಿಗೇಡಿಯರ್ ಚೆಪ್ಪುಡೀರ ಪೊನ್ನಪ್ಪನವರ ಅಧ್ಯಕ್ಷತೆಯಲ್ಲಿ ಒಂದು ಸಭೆ ನೆರೆದಿತ್ತು. ಕೊಡಗಿಗೆ ಒಂದು ಕೇಂದ್ರ ಸ್ಪೋರ್ಟ್ಸ್ ಸಂಸ್ಥೆಯ ಅವಶ್ಯಕತೆಯನ್ನು ಒಪ್ಪಿ ಅದಕ್ಕಾಗಿ ತಯಾರಿಸಲ್ಪಟ್ಟ ಬೈಲಾವನ್ನು ಓದಿ ಒಪ್ಪಲಾಯಿತು. ತಾತ್ಕಾಲಿಕ ಸ್ಪೋರ್ಟ್ಸ್ ಕಮಿಟಿಯೊಂದನ್ನು ನೇಮಿಸಿ ಬ್ರಿಗೇಡಿಯರ್ ಪೊನ್ನಪ್ಪನವರನ್ನು ಅಧ್ಯಕ್ಷರಾಗಿಯೂ ಶ್ರೀ ಚೆನ್ನಿರ ಕರುಂಬಯ್ಯನವರನ್ನು ಉಪಾಧ್ಯಕ್ಷರಾಗಿಯೂ, ಶ್ರೀಗಳಾದ ಕೊರವಂಡ ತಿಮ್ಮಯ್ಯ ಮತ್ತು ಕೋಡಂದೆರ ಪೂವಯ್ಯ ಇವರುಗಳನ್ನು ಕಾರ್ಯದರ್ಶಿಗಳಾಗಿಯೂ ಆರಿಸಲಾಯಿತು.

ಕೊಡಗಿನಲ್ಲಿ ಆಟೋಟಗಳನ್ನೂ, ಶಾರೀರಿಕ ಶಿಕ್ಷಣಕ್ಕೆ ಸಂಬಂಧಿಸಿದ ಇತರ ಕಾರ್ಯಕಲಾಪಗಳನ್ನೂ ಶಾಸ್ತ್ರೀಯ ರೀತಿಯಲ್ಲಿ ಅಭಿವೃದ್ಧಿ ಪಡಿಸುವುದೇ ಈ ಸಂಘದ ಗುರಿಯಾಗಿದೆ. ಅಲ್ಲದೆ ಇಂಡಿಯಾ ಸ್ಪೋರ್ಟ್ಸ್ ಸಂಸ್ಥೆಯ ಸಂಯೋಜನೆಯನ್ನು ಪಡೆದು ಅಖಿಲ ಭಾರತ ಆಟೋಟ ಸ್ಪರ್ಧೆಗಳಿಗೆ ಕೊಡಗಿನಿಂದ ಯೋಗ್ಯರನ್ನು ಕಳುಹಿಸುವುದೂ ಸಂಘದ ಧ್ಯೇಯವಾಗಿದೆ. ಕೊಡಗಿನಲ್ಲಿರುವ ವಿವಿಧ ಸ್ಪೋರ್ಟ್ಸ್ ಕ್ಲಬ್ಬುಗಳು ಈ ಸಂಘದೊಡನೆ ಸಂಯೋಜನೆಯಾಗಲು ಕೇಳಲಾಗಿದೆಯೂ, ಈ ಸಂಘದ ಆಜೀವ ಸದಸ್ಯರಾಗಲು ಕೊಡಗಿನ ಅಧ್ಯಾಪಕ ಸಮಿತಿಯವರನ್ನು ಕೇಳಲಾಗಿದೆಯೂ, ಈ ಸಂಘಕ್ಕೆ ಧನ ಸಹಾಯಕ್ಕಾಗಿ ಚೀಫ್ ಕಮಿಷನರನ್ನು ಕೇಳುವುದಾಗಿಯೂ ಸಂಘದ ತಾತ್ಕಾಲಿಕ ಸಮಿತಿಗೆ ಅಧಿಕಾರ ಕೊಡಲಾಯಿತು.

ಮಾಜಿ ಸಿಪಾಯಿಗಳ ಸಂಘ

ಕೊಡಗು ಮಾಜಿ ಸಿಪಾಯಿಗಳ ವಿವಿಧೋದ್ದೇಶ ಸಹಕಾರ ಸಂಘದವರು, ಈಗ ನಡೆಸುತ್ತಿರುವ ಒಂದು ಬಸ್ಸಿನ ಜೊತೆಗೆ ಮಡಿಕೇರಿ ಮೂರ್ನಾಡು ಮಾರ್ಗಕ್ಕೆ ಒಂದು ಬಸ್ ಸರ್ವಿಸ್ ನಡೆಸುವ ಅಭಿಪ್ರಾಯದಲ್ಲಿದ್ದು ಈಗ ಅವರಲ್ಲಿ ತಕ್ಕಷ್ಟು ಹಣವಿಲ್ಲದ್ದರಿಂದ ಈ ಸಂಘದಲ್ಲಿ ಸೇರಿಕೊಳ್ಳಲು ಮಾಜಿ ಸಿಪಾಯಿಯೂ ಮುಂದೆ ಬರಬೇಕೆಂದೂ, ಈಗ ಸದಸ್ಯರಿರುವವರು ತಮ್ಮ ಪಾಲಿನ ಹಣವನ್ನು ಕಟ್ಟಬೇಕೆಂದೂ ಸದಸ್ಯರಲ್ಲದವರೂ ಸೇರಬೇಕೆಂದೂ ತಿಳಿಸುತ್ತಾರೆ. ಇವರು ಶೇಕಡ ೧೦ರ ಬಡ್ಡಿಯಲ್ಲಿ ಠೇವಣಿಯನ್ನೂ ಅಂಗೀಕರಿಸುವರು. ಹಣ ಕಳುಹಿಸುವವರು ಮಡಿಕೇರಿಯಲ್ಲಿರುವ ಈ ಸಂಘದ ಕಾರ್ಯದರ್ಶಿಯವರಿಗೆ ಹಣ ಕಳುಹಿಸಬಹುದು.

ತಿದ್ದುಪಡಿ.

ಕಳೆದ ವಾರದ ನಮ್ಮ ಸಂಚಿಕೆಯ ವರ್ತಮಾನ ಸಂಗ್ರಹದಲ್ಲಿ ವ್ಯವಸಾಯ ಪರಿಶೋಧನಾ ಕಾರಣಗಳಿಂದ ಕಿತ್ತಳೆ ಸಸಿಗಳು ನೂರಕ್ಕೆ ರೂ ೩೦ ರಂತೆ ದೊರೆಯುತ್ತವೆಂದು ಪ್ರಕಟವಾಗಿತ್ತು. ಅದನ್ನು ನೂರಕ್ಕೆ ರೂ. ೩೦ ಎಂದು ಓದಿಕೊಳ್ಳಬೇಕಾಗಿದೆ. ಅಲ್ಲದೆ ಫ್ರೇಜರ್‌ಪೇಟೆಯಲ್ಲಿ ತೆರೆಯಲ್ಪಡುವ ಸರ್ಕಾರಿ ಹೆಣ್ಣುಮಕ್ಕಳ ಶಾಲೆಗೆ ಸೇರಲು ಅರ್ಜಿ ಬರುವುದಕ್ಕೆ ಕಡೇ ತಾರೀಕು ೧೦-೬-೫೧ ಎಂದು ನಮ್ಮ ತಾ. ೮-೬-೫೧ರ ಸಂಚಿಕೆಯಲ್ಲಿ ಪ್ರಕಟವಾಗಿತ್ತು. ಅದನ್ನು ತಾ. ೧೦-೭-೫೧ ಎಂದು ಓದಿಕೊಳ್ಳುವುದು. ಅಲ್ಲದೆ ತಾ. ೮-೬-೫೧ರ ನಮ್ಮ ಸಂಚಿಕೆಯಲ್ಲಿ ಪ್ರಕಟವಾದ ಕೊಡಗು ಸರಕಾರಿ ಕಾಲೇಜಿನ ಇಂಟರ್ ಮೀಡಿಯೆಟ್ ಪರೀಕ್ಷಾ ಫಲಿತಾಂಶದಲ್ಲಿ ಪೂರ್ತಿ ಪಾಸಾದವರ ಪೈಕಿ ಶ್ರೀಮತಿ ಮಣವಟ್ಟೀರ ಎಂ. ಭಾಗೀರಥಿ ಇವರ ಹೆಸರು ಬಿಟ್ಟು ಹೋಗಿತ್ತು. ಅದನ್ನು ಸರಿಪಡಿಸಿಕೊಳ್ಳಬೇಕಾಗಿದೆ.

ಸಂಪಾದಕ.

ಪಾಟ್ನಾ ಪರಿಷತ್ತಿನಲ್ಲಿ ಆಚಾರ್ಯ ಕೃಪಲಾನಿಯವರ ಭಾಷಣ.

ನಮ್ಮ ಜನರು ಬಲಿ ಬಿದ್ದಿರುವ ನಿರಾಶಾವಾದ ಮತ್ತು ಅಧಃಪತನದಿಂದ ದೇಶವನ್ನು ಮೇಲೆತ್ತುವಂತೆ ಹೊಸ ಪಕ್ಷವು ತನ್ನ ಶಕ್ತಿ ಉತ್ಸಾಹಗಳನ್ನು ಉಪಯೋಗಿಸುವದೆಂದು ಆಚಾರ್ಯ ಜೆ. ಬಿ. ಕೃಪಾಲಿನಿಯವರು ಪಾಟ್ನಾ ಪರಿಷತ್ತಿನ ಅಧ್ಯಕ್ಷಸ್ಥಾನದಿಂದ ಹೊಸ ಪಕ್ಷದ ಜನನವನ್ನು ಸಾರುತ್ತಾ ಹೇಳಿದರು.

ಹೊಸ ಪಕ್ಷವು ಕಾಂಗ್ರೆಸಿನಿಂದಲೇ ಉತ್ಪವಿಸಿದುದಾಗಿದೆಯೆಂದೂ ಅವರು ನುಡಿದರು.

ಚುನಾವಣೆಯಲ್ಲಿ ಪಕ್ಷದ ಉತ್ಸಾಹವು ಅತಿ ಸ್ವಲ್ಪವಾಗಿ ವ್ಯಯವಾಗುವದು. ಈ ಹಿಂದಕ್ಕೆ ನಮ್ಮ ಜನತೆಯು ಸಾಧಿಸಲು ಪ್ರಯತ್ನಿಸಿದ ಸಂಗತಿಗಳನ್ನು ಪುನಃ ಸಾಧಿಸಲು ಪ್ರಯತ್ನಿಸುವಂತೆ ಅವರಲ್ಲಿ ಒಂದು ಹೊಸ ಆಶೆ, ಒಂದು ಹೊಸ ಉದ್ದೇಶ, ಒಂದು ಹೊಸ ಉತ್ಸಾಹವನ್ನು ತುಂಬಲು ಹೆಣಗಾಡುತ್ತೇನೆ ಎಂದು ಕೃಪಲಾನಿಯವರು ಮುಂದುವರಿಯುತ್ತಾ ತಿಳಿಸಿದರು.

ದೇಶದಲ್ಲಿಯ ಏಕಪಕ್ಷೀಯ ಆಳಿಕೆಯ ವಿರುದ್ಧ ಆಚಾರ್ಯ ಕೃಪಲಾನಿಯವರು ಬಲವಾದ ಪ್ರತಿಭಟನೆಯನ್ನು ಮಾಡಿದವಲ್ಲದೆ, ಪ್ರಜಾಸತ್ತಾತ್ಮಕ ರಾಜ್ಯದಲ್ಲಿ ವಿರೋಧಿ ಪಕ್ಷವನ್ನು ರಚಿಸದಂತೆ ಮಾಡುವದೆಂದರೆ ಜನತೆಯನ್ನು ಬಲಗುಂದಿಸಿ ಅವರನ್ನು ನಿಃಸಹಾಯಕರನ್ನಾಗಿ ಮಾಡುವದಾಗಿದೆಯೆಂದರು.

ವಿರೋಧಿ ಪಕ್ಷವನ್ನು ರಚಿಸಲು ಕಾಂಗ್ರೆಸಿಗರು ಮುಂದೆ ಬರುವ ಆವಶ್ಯಕತೆಯನ್ನು ವಿವರಿಸುತ್ತಾ "ಗಾಂಧೀಜಿಯವರ ನೇತೃತ್ವದಲ್ಲಿ ಸ್ವಾತಂತ್ರ್ಯದ ತತ್ವ ಮತ್ತು ಪರಂಪರೆಗಳನ್ನು ನಮ್ಮ ಕಣ್ಣ ಮುಂದಿಟ್ಟುಕೊಂಡು ಅಸಂಖ್ಯ ಕಷ್ಟ ನಷ್ಟಗಳನ್ನು ಅನುಭವಿಸಿ ಕೆಲಸ ಮಾಡಿದ ನಾವು ಇಂದು ಆ ಆಹ್ವಾನವನ್ನು ಸ್ವೀಕರಿಸದಿದ್ದರೆ ನಮ್ಮ ಪರಂಪರೆ ಅಥವಾ ಪ್ರಜಾಸತ್ತೆ ಇವೆರಡರ ಮೇಲೆಯೂ ನಂಬಿಗೆಯಿರದ ಬಲ-ಎಡ ಪಕ್ಷಗಳಿಗೆ ಸ್ಥಳವನ್ನು ಖಾಲಿ ಮಾಡಿ ಕೊಟ್ಟಂತಾಗುತ್ತದೆ. ಪರಿಷತ್ತಿನ ಪರಿಣಾಮವಾಗಿ ಹುಟ್ಟುವ ಈ ಹೊಸ ಪಕ್ಷವು ಬರಲಿರುವ ಚುನಾವಣೆಯನ್ನು ಅಲಕ್ಷಿಸಬಾರದು, ನಿಜವಾಗಿ ಹೇಳಬೇಕಾದರೆ ಯಾವ ಚುನಾವಣೆಯನ್ನೂ ಅಲಕ್ಷಿಸಬಾರದು. ಆದರೆ ಮತಗಳು ಮತ್ತು ಚುನಾವಣೆಗಳು ನಮ್ಮ ಮುಖ್ಯ ಉದ್ದೇಶಗಳಲ್ಲ. ನಾವು ನಮ್ಮ ಜನತೆಗೆ ಸೇವೆ ಸಲ್ಲಿಸಿ ಸಂಕಷ್ಟಗಳನ್ನನುಭವಿಸಿದರೆ ಅವರು ಸ್ವತಂತ್ರರಾಗಿ ಸುಖಿಗಳಾದಾರು. ಕಾಂಗ್ರೆಸು ತನ್ನ ಮಂತ್ರಿ ಶಾಖೆಗಳ ಮುಖಾಂತರವಾಗಿ ಹೊಂದುತ್ತಿರುವ ಬೆಂಬಲ ಘನತೆ ಮತ್ತು ಹಣವಿಲ್ಲದಿದ್ದರೂ ನಾವು ಚುನಾವಣೆಗಾಗಿ ಬೇಕಾದಷ್ಟು ಪ್ರಚಾರವನ್ನು ಮಾಡಿದ್ದೇವೆ.

ಆದುದರಿಂದ ನನ್ನ ಮಟ್ಟಿಗೆ ಇಷ್ಟು ಮಾತ್ರ ಹೇಳಬಲ್ಲೆ. ಈ ವಿಷಯದಲ್ಲಿ ನೀವು ನನ್ನ ಧುರೀಣತ್ವವನ್ನು ಸ್ವೀಕರಿಸಲು ಸಿದ್ಧರಿದ್ದರೆ ಚುನಾವಣೆಗಾಗಿ ಅಲ್ಪ ಸಮಯವಿದ್ದರೂ ಅದಕ್ಕಾಗಿ ನಾವು ಸ್ವಲ್ಪೇ ಶಕ್ತಿಯನ್ನು ಉಪಯೋಗಿಸಿದರೆ ಸಾಕಾಗುವದು. ಉಳಿದುದನ್ನು ಜನತೆಯು ಬಲಿ ಬಿದ್ದಿರುವ ನಿರಾಶಾವಾದ ಮತ್ತು ಅಧಃಪತನದಿಂದ ದೇಶವನ್ನು ಮೇಲೆತ್ತಲು ಉಪಯೋಗಿಸಲಾಗುವದು. ಈ ಹಿಂದಕ್ಕೆ ನಮ್ಮ ಜನತೆಯು ಸಾಧಿಸಲು ಪ್ರಯತ್ನಿಸಿದ ಸಂಗತಿಗಳನ್ನು ಸಾಧಿಸಲು ಪುನಃ ಪ್ರಯತ್ನಿಸುವಂತೆ ಅವರಲ್ಲಿ ಒಂದು ಹೊಸ ಆಶೆ, ಒಂದು ಹೊಸ ಉದ್ದೇಶ, ಒಂದು ಹೊಸ ಉತ್ಸಾಹವನ್ನು ತುಂಬಲು ಹೆಣಗಾಡುವೆವು ಎಂದು ಹೇಳಿದರು.

ಸದ್ಯದ ಆಡಳಿತ ಕ್ರಮದ ವಿರುದ್ಧ ಹೊಸ ಪಕ್ಷಕ್ಕಿರುವ ಸ್ಪಷ್ಟ ಮತಭೇದವನ್ನು ವಿವರಿಸುತ್ತಾ ಆಚಾರ್ಯ ಕೃಪಲಾನಿಯವರು ಈ ರೀತಿ ನುಡಿದರು.

ಸದ್ಯದ ಆಡಳಿತ ಯಂತ್ರವು ಸಮರ್ಥವಾಗಿದ್ದು ಪ್ರಾಮಾಣಿಕವಾಗಿರಬೇಕೆಂದು ನಾವು ಬಯಸುತ್ತೇವೆ. ಲಾಭಬಡಕತನ, ಕಾಳಸಂತೆ, ಕಳ್ಳತನದ ಸಂಗ್ರಹ ಮುಂತಾದವುಗಳೆಲ್ಲ ದೇವದತ್ತವಾದವುಗಳಲ್ಲವೆಂದು ನಮ್ಮ ಅಭಿಪ್ರಾಯವಿರುವದು. ಅವೆಲ್ಲ ಮಾನವನ ತಪ್ಪುಗಳಾಗಿದ್ದು ಮಾನವನ ನಿರ್ಮಿತ ಔಷಧಗಳಿಂದಲೇ ಅವುಗಳನ್ನು ಗುಣಪಡಿಸಲು ಸಾಧ್ಯವಿದೆ. ಪ್ರಜಾಶಕ್ತಿಯ ಮೇಲೆ ನಮಗೆ ನಂಬಿಗೆ ಇದೆ ಹೊರತು ವಾಕ್ ಹಾಗೂ ಭಾಷಣ ಸ್ವಾತಂತ್ರ್ಯಗಳನ್ನು ತಡೆಗಟ್ಟುವದರಲ್ಲಿ ಅಲ್ಲ. ಸಗಕಾರದಲ್ಲಿರುವ ಪ್ರತಿಷ್ಠಿತ ವ್ಯಕ್ತಿಗಳಿಂದ ಮತ್ತು ಅವರ "ಜೋ ಹುಕುಮ"ಗಳಿಂದ ಯಾವದೇ ತರದ ಬೆದರಿಕೆ ಗುತ್ತು ಆವೇಶಗಳಿಂದ ಪಡೆಯದ ಸ್ವತಂತ್ರ ಜನತೆಗಳ ಮೇಲೆ ನಮಗೆ ನಂಬಿಗೆ ಇದೆ. ವಿಧಾಯಕ ಕಾರ್ಯಕ್ರಮಗಳ ತಳಹದಿಯ ಮೇಲೆ ಮುಖ್ಯವಾಗಿ ಹಳ್ಳಿ ಪ್ರದೇಶಗಳಲ್ಲಿ ಕಾರ್ಯಪ್ರವೃತ್ತರಾಗಿ ದೇಶವನ್ನು ಕಟ್ಟುವದು ಸಾಧ್ಯವಿದೆ. ಸ್ವದೇಶೀ ಭಾವನೆಯನ್ನು ಪುನಃ ಉಂಟುಮಾಡಿ ಮತ್ತು ದೇಶದಾದ್ಯಂತ ನಿಯಮಿತ ಜೀವನವನ್ನು ನಡೆಸುವ ಪ್ರಚಾರದಿಂದ ಸದ್ಯದ ಆರ್ಥಿಕ ಬಿಕ್ಕಟ್ಟಿನಲ್ಲಿಯೇ ಉತ್ಪಾದನೆಯನ್ನು ಹೆಚ್ಚಿಸಲು ಬರುವದು. ಈಗಿದ್ದ ಪರಿಸ್ಥಿತಿಯಲ್ಲಿಯೇ ಉತ್ಪಾದನೆಯನ್ನು ಹೆಚ್ಚಿಸುವ ಒಳ್ಳೇ ವಿಧಾನವೆಂದರೆ ವಿಕೇಂದ್ರೀಕರಣವನ್ನು ಮಾಡಬೇಕು. ವಿಭಜಿತ ಭಾರತದಲ್ಲಿ ಬರೇ ಸ್ವಾತಂತ್ರ್ಯಗಳಿರದೆ ಅದೊಂದು ಸಂಯುಕ್ತ ರಾಷ್ಟ್ರವೆಂದು ತಿಳಿಯಬೇಕು. ಜಾತಿ ಭೇದ, ವರ್ಗಭೇದ ಜನಾಂಗಭೇದ ಮತ್ತಿನ್ನಿತರ ಪ್ರತಿಸ್ಪರ್ಧೆಗಳಿಗೆ ಅಸ್ಪದ ಕೊಡದೆ ಮೊದಲು ಭಾರತ ಅನಂತರ ವರ್ಗ ಹಿತದೃಷ್ಟಿಯಿಂದ ಆಲೋಚಿಸುವಂತೆ ಜನರನ್ನು ಅಣಿಗೊಳಿಸಬೇಕು.

ಕಾಂಗ್ರೆಸು ಮತ್ತು ಅದರ ಸರಕಾರಗಳು ನಮ್ಮ ಜನತೆಯ ವಿಚಾರಶಕ್ತಿಯನ್ನಿಟ್ಟುಕೊಂಡರೆ ದೇಶಕ್ಕೆ ಅಷ್ಟು ಒಳ್ಳೆಯದು. ಈ ವಿಚಾರಗಳನ್ನು ಯೋಜನೆ ಮತ್ತು ಧೋರಣೆಗಳ ಮುಖಾಂತರ ವ್ಯಕ್ತಪಡಿಸಿ ಅವುಗಳನ್ನು ಆಚರಣೆಯಲ್ಲಿ ತರಬೇಕು. ಅವುಗಳನ್ನು ಕಾರ್ಯರೂಪಕ್ಕೆ ತರುವಲ್ಲಿ ಯಾವದೇ ಅಡೆತಡೆಗಳನ್ನು ಲಕ್ಷಿಸಬಾರದು.

ಕಾಂಗ್ರೆಸು ಪಕ್ಷವು ಇದನ್ನು ಸಾಧಿಸಿದರೆ ಅಷ್ಟು ಒಳ್ಳೆಯದು. ಗಾಂಧೀಜಿಯವರ ಮಾರ್ಗದರ್ಶನದಲ್ಲಿ ಕಾಂಗ್ರೆಸು ಸ್ವೀಕರಿಸಿದ ಮೂಲ ತತ್ವಗಳನ್ನು ಕಾರ್ಯರೂಪಕ್ಕೆ ತರುವಲ್ಲಿ ನಾವು ಕಾಂಗ್ರೆಸಿನೊಡನಿದ್ದೇವೆ. ಎಷ್ಟಾದರೂ ನಾವು ಮಿತ್ರರೀತಿಯಿಂದ ವಿರೋಧಿಸುವವರು, ಇಂಗ್ಲಂಡದಲ್ಲಿ ಹೇಳುವಂತೆ ಅರಸು ಕಡೆಯ ವಿರೋಧಿಗಳು. ಜನತೆಯ ಆರೋಗ್ಯ ಸೌಖ್ಯಾದಿಗಳ ಸಲುವಾಗಿ ನಮ್ಮ ವ್ಯವಹಾರಿಕ ಯೋಜನೆಗಳನ್ನು ಕಾರ್ಯರೂಪಕ್ಕೆ ತರಲು ಒಪ್ಪುವ ಯಾವದೇ ಪಕ್ಷದೊಡನೆ ನಾವು ಸಹಕರಿಸಲು ಸಿದ್ಧರಿದ್ದೇವೆ. ಸ್ವಾತಂತ್ರ್ಯ ಯುದ್ಧದ ಅದೃಷ್ಟಗಳನ್ನು ಒಂದಾಗಿ ಅನುಭವಿಸಿದ ನಮ್ಮ ಹಿಂದಿನ ಮಿತ್ರರ ಹೆಗಲೆಗೆ ಹೆಗಲು ಹಚ್ಚಿ ಕಾರ್ಯಪ್ರವೃತ್ತರಾಗುವದಕ್ಕಿಂತ ಹೆಚ್ಚಿನ ಆನಂದವು ನಮಗೆ ಯಾವದಿದೆ?

ನಮ್ಮ ಪಿತೃ ಸಂಸ್ಥೆಯಾದ ಕಾಂಗ್ರೆಸಿನ ವಿರುದ್ಧ ಯಾವದೇ ವೈರ ಭಾವನೆಯಿಂದ ಸ್ಫೂರ್ತಿಯನ್ನು ತಾಳಿಲ್ಲ. ದೇಶದ ಎದುರಿಗೆ ಬರುವ ಸಮಸ್ಯೆಗಳನ್ನು ಸಂಯುಕ್ತವಾಗಿ ಎದುರಿಸಲು ನಾವು ಎಷ್ಟೋ ಬಾರಿ ಒಂದುಗೂಡುವೆವೆಂಬುದರಲ್ಲಿ ಸಂಶಯವಿಲ್ಲ. ನನ್ನ ರಾಜೀನಾಮೆ ಪತ್ರದಲ್ಲಿ ನಾನು ಹೇಳಿರುವಂತೆ "ಒಂದಾಗಿ ಜೀವಿಸಲು ಒಪ್ಪದ ಸಹೋದರರ ರೀತಿಯಲ್ಲಿ ನಾನು ಅಗಲುವಿಕೆಯನ್ನು ಗ್ರಹಿಸಿದ್ದೇನೆ. ಅವರು ಬೇರೆಯಾಗಿದ್ದರೂ ವಿಶಾಲ ಕುಟುಂಬದ ಭಾರತದ ಹಿತಕ್ಕಾಗಿ ಕೂಡುವ ಸಹೋದರಭಾವದ ಸಭೆಗಳಿಗೆ ಹೋಗುವಂತೆ ನಾನೂ ಬರಬಹುದು. ಏಕಾಏಕಿ ನಮ್ಮ ದಾರಿಗಳು ಇಂದು ಕವಲೊಡೆದಿವೆ. ಆದುದರಿಂದ ನಾವು ದೂರ ಹೋಗಿ ವಿಚಾರಧಾರೆಗಳನ್ನು ಜನರ ಮುಂದಿಡಲು ಬಯಸುತ್ತಿದ್ದೇವೆ. ಏಕೆಂದರೆ ಅವರೇ ನಮ್ಮ ನಿಜವಾದ ಒಡೆಯರಿದ್ದು ಅವರಿಂದಲೇ ಎಲ್ಲ ಅಧಿಕಾರಗಳು ಬರುತ್ತವೆ. ಆದುದರಿಂದ ಯಾವನ್ನು ಆರಿಸಬೇಕೋ ಅದು ಜನತೆಯನ್ನೇ ಕೂಡಿದೆ" ಎಂದು ಹೇಳಿದರು.

ಅನಂತರ ಕೃಪಲಾನಿಯವರು ತತ್ವ ಮತ್ತು "ಇಜಮ್"ಗಳ ಬಗ್ಗೆ ಪ್ರಸ್ತಾಪಿಸುತ್ತ ಈ ರೀತಿ ಹೇಳಿದರು.

"ಯಾವದೇ ಅರ್ಥವಿರದ ಅಥವಾ ಸಂಶಯಯುಕ್ತ ಅರ್ಥವಿರುವ ಮತ್ತು ವಿವಾದಾಸ್ಪದ ಶಬ್ದಗಳನ್ನುಪಯೋಗಿಸಿ ನಾವು ಗೊಂದಲದಲ್ಲಿ ಬೀಳದಿರೋಣ. ಸರಿಯಾದ ಅವಧಿಯೊಳಗೆ ಕಾರ್ಯರೂಪಕ್ಕೆ ತರಲಾಗುವಂತಹ ಸಬಲ ಯೋಜನೆಗಳ ತಳಹದಿಯ ಮೇಲೆ ನಾವು ಸಾಗೋಣ. ನಾವು ಇಲ್ಲಿಂದ ಚದರುವ ಮೊದಲು ಪರಿಶೀಲನೆಗಾಗಿ ಇಂತಹ ಯೋಜನೆಯೊಂದನ್ನು ನಿಮ್ಮೆದುರಿಗೆ ಇಡಲಾಗುವದು"

ಅನಂತರ ಅವರು ತಮ್ಮ ಆಮಂತ್ರಣಕ್ಕೆ ಮನ್ನಣೆಯಿತ್ತು ಪರಿಷತ್ತಿಗೆ ಬಂದವರ ಆಭಾರವನ್ನು ಮನ್ನಿಸುತ್ತಾ "ಸದ್ಯದ ಸರಕಾರದ ವಿರುದ್ಧವಾಗಿ ಮಿತ್ರತ್ವದ ಮತ್ತು ಘಟನಾತ್ಮಕ ವಿರೋಧವನ್ನು ಪ್ರದರ್ಶಿಸುವದಕ್ಕಾಗಿ ಅಖಿಲ ಭಾರತ ಸಂಸ್ಥೆಯೊಂದನ್ನು ಸ್ಥಾಪಿಸುವದು ಅತ್ಯಂತ ಕಠಿಣ ಮತ್ತು ಕಷ್ಟದ ಕಾರ್ಯವಾಗಿರುವದು ನಾವು ಎಲ್ಲವನ್ನು ಮೊದಲಿನಿಂದಲೇ ಪ್ರಾರಂಭಿಸಬೇಕಾಗಿದೆ. ಕಾಂಗ್ರೆಸಿನೊಡನೆ ಹೋಲಿಸಲು ಬರುವಂತಹ ಯಾವದೇ ವಿಶೇಷ ಗುಣವು ನಮ್ಮಲ್ಲಿಲ್ಲ. ಕಾಂಗ್ರೆಸಿನಲ್ಲಿರುವಂಥ ವ್ಯಕ್ತಿಗಳ, ಅದರ ಸಾಮರ್ಥ್ಯ, ಹಣ ಸಂಪತ್ತು, ಘನತೆ ಮತ್ತು ಸರಕಾರದ ಬಲವು ನಮ್ಮಲ್ಲಿಲ್ಲ. ಆದರೆ ಉದ್ದೇಶ ಪ್ರಾಮಾಣಿಕತನ, ದೃಢ ನಿರ್ಧಾರ, ಉತ್ಸಾಹಗಳು, ನಮ್ಮಲ್ಲಿವೆ. ಇವುಗಳಿದ್ದರೆ ಸಾಕು; ಉಳಿದವುಗಳು ತಾನೇ ಬರುತ್ತವೆ" ಎಂದು ಹೇಳಿದರು.

ಟೆಂಡರು ನೋಟಿಸ್

TENDERS INVITED FOR CARDAMOM MALAI.

ಕಡಿಯತ್ತುನಾಡಿನ ಚೆಲಾವರ ಗ್ರಾಮದಲ್ಲಿರುವ ಬಿದ್ದಂಡ ಕುಟುಂಬಕ್ಕೆ ಸೇರಿದ ೩೫೦ ಎಕರೆ ವಿಸ್ತೀರ್ಣವಿರುವ ಕಬ್ಬೆ ಏಲಕ್ಕಿ ಮಲೆಯನ್ನು ೩೧ ವರ್ಷಗಳ ಗೇಣಿಗೆ ಕೊಡಲಾಗುವದು. ಏಲಕ್ಕಿ ವ್ಯವಸಾಯಕ್ಕೆ ಅತ್ಯುತ್ತಮವಾಗಿದ್ದು ಈಗ ವರ್ಷಕ್ಕೆ ಒಂದು ಖಂಡಿ ಏಲಕ್ಕಿ ಬರುತ್ತಿದೆ. ಖಾಯಿಶ್‌ದಾರರು ತಮ್ಮ ಟೆಂಡರುಗಳನ್ನು ಈ ಕೆಳಗಿನ ಅಡ್ರೆಸಿಗೆ ತಾ ೧೫-೭-೫೧ ರೊಳಗೆ ಬರೆದುಕೊಳ್ಳುವದು.

ಬಿ. ಎಂ. ಕಾರ್ಯಪ್ಪ, B. A., L. T.,
ಪ್ರೆಸಿಡೆಂಟ್
ಬಿದ್ದಂಡ ಫ್ಯಾಮಿಲಿ ಟ್ರಸ್ಟ್ ಫಂಡ್,
"ಚಿತ್ರಾ"
4-2 ಮಡಿಕೇರಿ.

ತಿಳಿಸಿರಿ.

ಭೂಮಿ, ತೋಟ, ಜಾಗ ಪೇಟೆಯಲ್ಲಿ ಮನೆ ಅಥವ ಮನೆ ಸೈಟು ಮಾರಲಿರುವವರು ಮತ್ತು ಕೊಂಡುಕೊಳ್ಳಲಿಚ್ಛಿಸುವವರು ಈ ಕೆಳಗಿನ ಪತ್ತೆಯಲ್ಲಿ ವಿಚಾರಿಸಿರಿ. ಅಲ್ಲದೆ ಬೇಕಾದವರಿಗೆ ಕರಿಯುವ ಎಮ್ಮೆ, ಪಶು ಮತ್ತು ಉಳುವ ಎತ್ತು ಮತ್ತು ಕೋಣಗಳನ್ನೂ ಒದಗಿಸಿ ಕೊಡಲಾಗುವುದು. ಬೇಕಾದವರು ತಮಗೆ ಬೇಕಾದ ತಾರೀಕಿನ ಎಂಟು ದಿನಗಳಿಗೆ ಮುಂಚೆ ತಿಳಿಸಬೇಕಾಗಿದೆ. ವಿವರಗಳಿಗೆ ಈ ಪತ್ತೆಗೆ ಬರೆಯಬಹುದು

P. A. N. & SONS.
Commission Agent,
Gonicoppal
26-20 S. Coorg

ಶ್ರೀ ಪಿ. ಪೀತಾಂಬರರವರು,
"ಕೊಡಗು" ಏಜೆಂಟರು,
ಕೊಡ್ಲಿಪೇಟೆ.

ಕಿಸಾನ್ ಮಜದೂರ್ ಪ್ರಜಾ ಪಕ್ಷ.

ಅಖಿಲ ಭಾರತೀಯ ವಿರೋಧಪಕ್ಷವೊಂದರ ಸ್ಥಾಪನೆ.

ನಿರಾಶೆ ಮತ್ತು ನಿರುತ್ಸಾಹಗಳ ಕೂಪದಲ್ಲಿ ಬಿದ್ದಿರುವಂತಹ ನಮ್ಮ ರಾಷ್ಟ್ರದ ಜನತೆಯನ್ನು ಮೇಲಕ್ಕೆತ್ತಲು, ಕಾಂಗ್ರೆಸ್ ಸಂಸ್ಥೆಯನ್ನು ಬಿಟ್ಟವರೂ ಕಾಂಗ್ರೆಸ್ ಪಕ್ಷಕ್ಕೆ ತಿರುಗಿ ಬಿದ್ದವರೂ ತಮ್ಮ ಶಕ್ತಿ ಸಾಮರ್ಥ್ಯಗಳನ್ನು ವಿನಿಯೋಗಿಸಬೇಕು—ಎಂಬುದಾಗಿ ಆಚಾರ್ಯ ಕೃಪಲಾನಿಯವರು ಪಾಟ್ನಾದಲ್ಲಿಂದು ಸಮಾವೇಶವಾದ ಅಖಿಲ ಭಾರತ ರಾಜಕೀಯ ಸಮ್ಮೇಳನವನ್ನುದ್ದೇಶಿಸಿ ಭಾಷಣ ಮಾಡುತ್ತಾ ಹೇಳಿದರು.

ಈ ಪಕ್ಷದ ಕಾರ್ಯಕ್ರಮಗಳಲ್ಲಿ ಚುನಾವಣೆಯೆಂಬುದು ಕೇವಲ ಗೌಣ ವಿಚಾರವಾಗಿರಬೇಕೆಂದೂ, ಜನತೆಯ ಮನಸಿನಲ್ಲಿ ಹಿಂದೆ ಬಿತ್ತಿರುವಂತೆ ಹೊಸ ಆಸೆಯನ್ನೂ ಹೊಸ ನಂಬಿಕೆಯನ್ನೂ ಹೊಸ ಹುರುಪನ್ನೂ ಈ ನಾಯಕರುಗಳೂ ಮಾಜಿ ಕಾಂಗ್ರೆಸ್ ಸದಸ್ಯರುಗಳೂ ಬಿತ್ತಬೇಕೆಂದೂ ಕೃಪಲಾನಿ ಕೋರಿದರು.

ಭಾರತದಲ್ಲಿ ಅಖಿಲ ಭಾರತ ರಾಜಕೀಯ ವಿರೋಧ ಪಕ್ಷವೊಂದರ ಸ್ಥಾಪನೆಯನ್ನು ಈ ಸಮ್ಮೇಳನದಲ್ಲಿ ಆಚಾರ್ಯ ಕೃಪಲಾನಿಯವರು ನೆರವೇರಿಸಿದರು. ಸಮ್ಮೇಳನಕ್ಕೆ ಭಾರತದ ನಾನಾ ಪ್ರಾಂತಗಳಿಂದ ೧೫೦೦ ಮಂದಿ ಮಾಜಿ ಕಾಂಗ್ರೆಸ್ ಪ್ರತಿನಿಧಿಗಳು ಬಂದಿದ್ದರು.

ಕಾಂಗ್ರೆಸಿನಲ್ಲಿ ಕನ್ಸರ್ವೇಟಿವ್‌ಗಳು ಮತ್ತು ಉಗ್ರಗಾಮಿಗಳೆಂಬ ಎರಡು ನಿರ್ದಿಷ್ಟ ವಿಭಾಗಗಳಾದವೆಂದೂ ಆದ್ದರಿಂದಲೇ ಈಗ ಇಷ್ಟೊಂದು ಜನ ಕಾಂಗ್ರೆಸ್ಸನ್ನು ಬಿಟ್ಟು ಹೊರಬರಬೇಕಾಯಿತೆಂದೂ ಕೃಪಲಾನಿ ಹೇಳಿದರು. ಭಾರತದಲ್ಲಿನ ಈಗಿನ ಏಕಪಕ್ಷೀಯ ಆಡಳಿತವನ್ನು ಕೃಪಲಾನಿಯವರು ತೀವ್ರವಾಗಿ ಖಂಡಿಸಿದರು. ಪ್ರಜಾಪ್ರಭುತ್ವದಲ್ಲಿ ಜನತೆಗೆ ಸರ್ಕಾರಿ ವಿರೋಧ ಪಕ್ಷದ ನೆರವು ದೊರಕದಂತೆ ಮಾಡುವುದು ಜನತೆಯನ್ನು ಹೆಳವರಾಗಿ ಮಾಡಿದಂತೆ, ನಿಸ್ಸಹಾಯಕರಾಗಿ ಮಾಡಿದಂತೆ ಎಂಬುದಾಗಿಯೂ ಆಚಾರ್ಯ ಕೃಪಲಾನಿ ತಮ್ಮ ಈ ಅಧ್ಯಕ್ಷ ಭಾಷಣದಲ್ಲಿ ನುಡಿದರು.

ಆರು ಸಾವಿರ ಪದಗಳನ್ನೊಳಗೊಂಡ ದೀರ್ಘ ಭಾಷಣವನ್ನು ಆಚಾರ್ಯ ಕೃಪಲಾನಿ ಮಾಡಿದರು. ಕಾಂಗ್ರೆಸ್ಸಿನಿಂದ ತಮ್ಮ ಗುಂಪು ಹೊರಬರಬೇಕಾಗಿ ಬಂದುದರ ಕಾರಣಗಳನ್ನು ಶ್ರೀ ಕೃಪಲಾನಿ ವಿವರಿಸಿದರು.

ನೂತನ ಪಕ್ಷಕ್ಕೆ ಸಾರ್ವಜನಿಕ ಸ್ವಾಗತ ದೊರೆತೇ ದೊರೆಯುವುದೆಂದು ಅವರು ಒತ್ತಿ ಹೇಳಿದರು. ಕಾಂಗ್ರೆಸ್ ಸರಕಾರಗಳ ಆಡಳಿತಗಳನ್ನು ತೀವ್ರವಾಗಿ ಖಂಡಿಸಿದರು. ಏಕ ಪಕ್ಷೀಯ ಆಡಳಿತದ ಅನ್ಯಾಯಗಳನ್ನೂ ದುರಂತಗಳನ್ನೂ ಅವರು ತಿಳಿಸಿ ಎಚ್ಚರಿಸಿದರು.

ವಿರೋಧ ಪಕ್ಷವೊಂದನ್ನು ಸ್ಥಾಪಿಸುವುದರಲ್ಲಿ ಕಾಂಗ್ರೆಸ್ಸಿನವರೇ ಮುಂದೆ ಬರಬೇಕಾದುದರ ಆಗತ್ಯವನ್ನು ಕೃಪಲಾನಿ ಒತ್ತಿ ಹೇಳಿದರು.

'ಗಾಂಧೀಜಿಯವರ ನಾಯಕತ್ವದಲ್ಲಿ ಕೆಲಸ ಮಾಡಿ ದುಡಿದು ಮತ್ತು ನಾನಾ ಕಷ್ಟಗಳಿಗೆ ಗುರಿಯಾಗಿ ಶಿಕ್ಷೆಗಳನ್ನೂ ಹಿಂಸೆಗಳನ್ನೂ ಅನುಭವಿಸಿದ ನಾವುಗಳೇ ಈಗ ದೇಶದ ಮುಂದೆ ಎದ್ದಿರುವ ಸವಾಲನ್ನು ಸ್ವಾತಂತ್ರ್ಯ ಸಂಗ್ರಾಮ ಕಾಲದಲ್ಲಿನ ನಮ್ಮ ಸಂಪ್ರದಾಯಗಳು ಮತ್ತು ಉನ್ನತಾದರ್ಶಗಳಿಗನುಗುಣವಾಗಿ ಎದುರಿಸಿ ನಿಲ್ಲದಿದ್ದರೆ, ನಮ್ಮ ಸಂಪ್ರದಾಯಗಳಲ್ಲಿ ನಂಬಿಕೆಯಿಲ್ಲದಂತಹ ಮಂದಗಾಮಿಗಳ ಅಥವಾ ತೀವ್ರಗಾಮಿಗಳಾದ ಪಕ್ಷಗಳಿಗೆ ನಾವು ಈ ಅವಕಾಶವನ್ನು ಅನ್ಯಾಯವಾಗಿ ಬಿಟ್ಟು ಕೊಡುತ್ತೇವೆ' ಎಂಬುದಾಗಿಯೂ ಕೃಪಲಾನಿ ಒತ್ತಿ ಹೇಳಿದರು.

ಈ ಸಮಾವೇಶದ ಫಲವಾಗಿ ಸ್ಥಾಪಿತವಾಗುತ್ತಿರುವ ನೂತನ ಪಕ್ಷವು ಬರಲಿರುವ ಚುನಾವಣೆಗಳನ್ನೇ ಆಗಲಿ, ಹಾಗೆ ನೋಡಿದರೆ ಯಾವುದೇ ಚುನಾವಣೆಗಳನ್ನೇ ಆಗಲಿ, ನಿರಾಕರಿಸಬಾರದಾದರೂ ಬರೀ ಓಟುಗಳೇ ಅಥವಾ ಚುನಾವಣೆಗಳೇ ನಮ್ಮ ಪ್ರಾಥಮಿಕ ಉದ್ದೇಶಗಳಲ್ಲವೆಂಬುದನ್ನು ಅದು ಎಂದಿಗೂ ಮರೆಯಬಾರದು. ಜನತೆಯು ಸ್ವತಂತ್ರವಾಗಿಯೂ ಸುಖವಾಗಿಯೂ ಇರಬೇಕೆಂಬ ಉದ್ದೇಶದಿಂದ ನಾವು ದುಡಿಯುವುದಾದರೆ ಮತ್ತು ಅದಕ್ಕಾಗಿ ನಾವು ಕಷ್ಟಗಳನ್ನೂ ಯಾತನೆಗಳನ್ನೂ ಅನುಭವಿಸುವುದಾದರೆ ನಾವು ಕಾಂಗ್ರೆಸಿಗೆ ಅದರ ಮಂತ್ರಿಮಂಡಲಗಳ ಮೂಲಕ ಇರುವಂತಹ ಪ್ರತಿಷ್ಠೆ, ಅವಕಾಶ ಮತ್ತು ಆಶ್ರಯಗಳು ಇಲ್ಲದೇ ಹೋದರೂ ಕೂಡಾ, ಚುನಾವಣೆಗಳಿಗಾಗಿ ನಮ್ಮ ಪರವಾಗಿ ಒಳ್ಳೆಯ ಪ್ರಚಾರ ಮಾಡಿಕೊಂಡಂತಾಗುವುದು' ಎಂದೂ ಕೃಪಲಾನಿ ನುಡಿದರು.

ಪ್ರಜಾಸತ್ತಾತ್ಮಕವಾದ ಸುವ್ಯವಸ್ಥೆಯ ಆಡಳಿತಕ್ಕೆ, ಆಡಳಿತದಲ್ಲಿರುವ ಪಕ್ಷವಲ್ಲದೆ ಬೇರೊಂದು ವಿರೋಧ ಪಕ್ಷವೂ ಅಗತ್ಯವೆಂಬುದಾಗಿ ಅಖಿಲಭಾರತ ರಾಜಕೀಯ ಸಮ್ಮೇಳನದ ಅಂಗೀಕೃತವಾದ ನಿರ್ಣಯ ತಿಳಿಸುತ್ತದೆ.

ಸ್ವಾತಂತ್ರ್ಯ ಬಂದಂದಿನಿಂದ ಈಗಿನ ಸರಕಾರ ಆಡಳಿತ ವ್ಯವಸ್ಥೆಯಲ್ಲಿ ಜನರು ಕ್ರಮ ಕ್ರಮವಾಗಿ ದುಃಸ್ಥಿತಿಗೆ ಇಳಿಯುತ್ತಿದ್ದಾರೆಂದು ನಿರ್ಣಯ ಆಪಾದನೆ ಮಾಡಿದೆ!

ವ್ಯವಸಾಯೋತ್ಪನ್ನಕ್ಕೆ ಉಚಿತ ಬೆಲೆ ಕೊಡಬೇಕು. ಮತ್ತು ಜಮೀನಿಲ್ಲದ ಬೇಸಾಯದ ಕೂಲಿಗಳಿಗೂ ಇತರ ಕಾರ್ಮಿಕರಿಗೂ ನ್ಯಾಯವಾದ ಸಂಬಳ ಸಾರಿಗೆ ಕೊಡಬೇಕು. ಇವೇ ಪಕ್ಷದ ಧ್ಯೇಯಗಳೆಂದೂ ತಿಳಿಸುವ ನಿರ್ಣಯವೊಂದು ಅಂಗೀಕೃತವಾಯಿತು.

“ರಾಷ್ಟ್ರದಲ್ಲಿ ಎಲ್ಲಾ ಜಮೀನೂ ಉಳುವವನಿಗೇ ಸೇರಬೇಕು. ಯಾವ ಉದ್ಯೋಗದಲ್ಲಿರುವವರಿಗೇ ಆಗಲಿ ಅವರ ಕುಟುಂಬಕ್ಕೆ ಸಂತೃಪ್ತ ಜೀವನಕ್ಕೆ ಸಾಕಾಗುವಷ್ಟು ಸಂಬಳ ಸಾರಿಗೆ ದೊರಕಬೇಕು. ಕಾರ್ಮಿಕ ಅಥವಾ ಕೃಷಿಕನ ಸಂಪಾದನೆಯ ೨೦ ಪಾಲಿಗಿಂತಲೂ ಹೆಚ್ಚಾದ ಸಂಬಳ ಸಾರಿಗೆಯು ಉಳಿದ ಜೀವನ ಮಾರ್ಗದಲ್ಲಿರುವ ಯಾರಿಗೇ ಆಗಲಿ ದೊರಕಕೂಡದು” ಎಂಬುದಾಗಿ ಪ್ರಜಾಪಕ್ಷವು ನಿರ್ಣಯ ಮಾಡಿತು. ಆಡಳಿತ ವ್ಯವಸ್ಥೆ ಬದಲಾಗಬೇಕು; ಬ್ಲ್ಯಾಕ್ ಮಾರ್ಕೆಟ್ ಮಟ್ಟಹಾಕಬೇಕು—ಎಂಬ ತತ್ವ ಪ್ರಣಾಳಿಕೆಯನ್ನೂ ಅಂಗೀಕರಿಸಿತು.

ಪಾಕಿಸ್ಥಾನ ಕಾರಾಗಾರದಲ್ಲಿ ಸ್ಥಾನಬದ್ಧತೆಯಲ್ಲಿರುವ

ಗಡಿನಾಡಿನ ಗಾಂಧಿ.

ಶಸ್ತ್ರವೆತ್ತಲು ತಿರಸ್ಕರಿಸುವ, ಅಸತ್ಯ ನುಡಿಯಲು ಹೇಸುವ, ಡಂಭಕ್ಕೆ ಅಂಜುವ—ಸಹೋದರ ಪ್ರೇಮವನ್ನು ಪ್ರಚುರಿಸುವ, ಅಹಿಂಸೆ-ಶಾಂತಿಗಳನ್ನು ಬೋಧಿಸುವ—ಅನ್ಯಾಯಕ್ಕೆ ಬಗ್ಗದ, ಅವಹೇಳನದಿಂದ ಕುಗ್ಗದ—ಗಡಿನಾಡಿನ ಗಾಂಧಿ ಖಾನ್ ಅಬ್ದುಲ್ ಗಫಾರ್ ಖಾನರು ಪಾಕಿಸ್ಥಾನದಲ್ಲಿ ಸ್ಥಾನಬದ್ಧ ಕೈದಿಗಳಾಗಿರುವರು.

ಕೊಲೆ-ಸುಲಿಗೆಗಳಿಂದ ಜೀವಿಸುವವರನೇಕರು ಸ್ವೇಚ್ಛೆಯಾಗಿ-ಸ್ವತಂತ್ರರಾಗಿ ಸಂಚರಿಸುತ್ತಿರುವಾಗ, ಮಾನವ ಕಲ್ಯಾಣವನ್ನು ಉಪದೇಶಿಸುವ ಖಾನ್ ಸಹೋದರರು ಕಾರಾಗೃಹದಲ್ಲಿ ಬಂಧಿಗಳಾಗಿರುವರು!

ಗಡಿನಾಡಿನ ಗಾಂಧಿ ಖಾನ್ ಅಬ್ದುಲ್ ಗಫಾರ್ ಖಾನ್ ಮತ್ತು ಅವರ ಸಹೋದರ ಡಾ| ಖಾನ್ ಸಾಹೇಬರನ್ನು ಪಾಕೀಸ್ತಾನ ಸರಕಾರವು ಕಳೆದ ಮೂರು ವರ್ಷಗಳಿಂದ ಸ್ಥಾನಬದ್ಧತೆಯಲ್ಲಿರಿಸಿರುವುದಷ್ಟೆ. ಕಳೆದ ಜೂನ್ ತಾ ೧ರಂದು ಅಂಬಾಲಾದಲ್ಲಿ ಗಡಿನಾಡ 'ಪಿರ್ ಸಭಾ' (ಗಡಿನಾಡ ನಿರಾಶ್ರಿತರ ಸಂಘ) ಇದರ ಆಶ್ರಯದಲ್ಲಿ ನಡೆದ ಒಂದು ಬೃಹತ್ಸಭೆಯಲ್ಲಿ ಗಡಿನಾಡ ಗಾಂಧಿ ಮತ್ತು ಅವರ ಸಹೋದರರನ್ನು ಕೂಡಲೇ ಬಂಧವಿಮೋಚನೆಗೊಳಿಸುವಂತೆ ಜಗತ್ತಿನ ಎಲ್ಲಾ ಜನಾಂಗಗಳು (ಯು. ಎನ್. ಓ. ಕೂಡಾ) ಪಾಕೀಸ್ತಾನದೊಡನೆ ಒತ್ತಾಯ ಹೇರಬೇಕೆನ್ನುವ ಗೊತ್ತುವಳಿಯು ಸರ್ವಾನುಮತದಿಂದ ಕೈಗೊಳ್ಳಲ್ಪಟ್ಟಿತು.

ಬಾದಷಾ ಖಾನರು ತುರುಂಗದಲ್ಲಿ ದೀರ್ಘಕಾಲದಿಂದ ಅನಾರೋಗ್ಯದಲ್ಲಿ ನರಳುತ್ತಿರುವ ಬಗ್ಗೆ ಗೊತ್ತುವಳಿಯು ವಿಷಾದ ಸೂಚಿಸಿದುದಲ್ಲದೆ, ಪರಮಾತ್ಮನು ಬಾದಷಾ ಖಾನರಿಗೆ ಯೋಗ್ಯ ಆರೋಗ್ಯ ಕೊಟ್ಟು ಸಂರಕ್ಷಿಸಲಿ ಎಂದು ಪ್ರಾರ್ಥಿಸಲಾಯಿತು.

ಗಡಿನಾಡಿನ ಗಾಂಧಿಯವರ ಬೋಧನ ವಿವೇಚನೆಯಿಂದ ಜಗತ್ತಿನ ಶಾಂತಿಸ್ಥಾಪನೆಗೆ ಬಹಳ ಸಹಾಯವಾಗಬಹುದು. ಮಹಾತ್ಮಾಜಿಯವರನಂತರ ಪ್ರೀತಿ ಮತ್ತು ಅಹಿಂಸೆಗಳ ತತ್ವವನ್ನು ಪ್ರಾಯೋಗಿಕವಾಗಿ ಅನುಷ್ಠಾನಕ್ಕೆ ತಂದವರು ಗಡಿನಾಡಿನ ಗಾಂಧಿಯೊಬ್ಬರೇ. ಈ ಕಾರಣದಿಂದಲೇ ಜಾಗತಿಕ ಶಕ್ತಿಗಳು ಮತ್ತು ಯುಕ್ತರಾಷ್ಟ್ರ ಸಂಘವು ಗಡಿನಾಡಿನ ಗಾಂಧಿಯ ಬಿಡುಗಡೆಯ ಬಗ್ಗೆ ಪಾಕೀಸ್ತಾನ ಸರಕಾರವನ್ನು ಒತ್ತಾಯ ಪಡಿಸಲಾರವೇ? ಅವರ ಬಿಡುಗಡೆಯೊಡನೆ ಅವರ ಸಹೋದರ ಡಾ| ಖಾನಸಾಹೇಬರ ಮತ್ತು ಗಡಿನಾಡು ಜೈಲುಗಳಲ್ಲಿ ಪ್ರಸ್ತುತ ಪಾಕೀಸ್ತಾನದಿಂದ ಸ್ಥಾನಬದ್ಧತೆಯಲ್ಲಿರಿಸಲ್ಪಟ್ಟ ಸಾವಿರಾರು ಮಂದಿ ಖುದಾಯಿ ಖಿದ್ಮತ್‌ಗಾರರ ಬಿಡುಗಡೆಯೂ ಆಗದೇ?

ಭಾರತೀಯ ಖುದಾಯಿ ಖಿದ್ಮತ್‌ಗಾರದಳದ ಹಲವು ಮಂದಿ ಸದಸ್ಯರು ಮೇಲಿನ ಬೃಹತ್ಸಭೆಗೆ ಹಾಜರಾಗಿದ್ದರು. ಜೂನ್ ತಾ. ೧ನೇ ದಿನವನ್ನು 'ಗಡಿನಾಡಿನ ಹುತಾತ್ಮರ ದಿನ'ವನ್ನಾಗಿಯೂ ಆಚರಿಸಲಾಗಿತ್ತು. ಸರ್ದಾರ್ ಗಂಗಾ ಸಿಂಘರ ಇಬ್ಬರು ಮಕ್ಕಳು ಬ್ರಿಟಿಷ್ ಗೋಲಿಗೆ ಆಹುತಿಯಾಗಿದ್ದ ದಿನವದು. ಈ ಎರಡು ಮಕ್ಕಳ ಮೃತ ಶರೀರಗಳನ್ನು ಮೆರವಣಿಗೆಯಲ್ಲಿ ಒಯ್ಯುವ ಧೈರ್ಯಮಾಡಿದ ೧೪ ಮಂದಿ ಹಿಂದೂ, ಸಿಖ್ ಮತ್ತು ಮುಸ್ಲಿಮ್ ತರುಣರೂ ಬೆನ್ನಲ್ಲೇ ಬ್ರಿಟಿಷ್ ಗೋಲಿಗೆ ಆಹುತಿಯಾಗಿ ಹುತಾತ್ಮರಾಗಿದ್ದರು.

ಮೇಲೆ ಹೇಳಿದ ಇಬ್ಬರು ಹುತಾತ್ಮ ಬಾಲಕರ ತಂದೆ ಸರ್ದಾರ್ ಗಂಗಾ ಸಿಂಘರು ಈಗ ನಿರಾಶ್ರಿತರಾಗಿ ಕಸೌಲಿ ಎಂಬಲ್ಲಿ ವಾಸಿಸುತ್ತಾರೆ. ಅವರೂ ಮೇಲಿನ ಬೃಹತ್ಸಭೆಗೆ ಹಾಜರಾಗಿದ್ದರು. ಸಭೆಯ ಅಧ್ಯಕ್ಷಸ್ಥಾನವನ್ನು ಭಾರತೀಯ ಖುದಾಯಿ ಖಿದ್ಮತ್‌ಗಾರ ದಳದ ಅಧ್ಯಕ್ಷ ಡಾ| ಚಂದನಲಾಲರು ವಹಿಸಿದ್ದರು. ಅವರು ಇತರ ೭೫ ಮಂದಿ ಕೆಂಪಂಗಿಗಳೊಂದಿಗೆ ಸಭೆಯಲ್ಲಿ ಭಾಗವಹಿಸುವುದಕ್ಕಾಗಿಯೇ ದಿಲ್ಲಿಯಿಂದ ಆಗಮಿಸಿದ್ದರು.

ಪ್ರಭಾತ.

ಭಾರತದ ಮೊದಲ ವಜ್ರ ಗನಿ

ಭಾರತದ ಮೊದಲ ವಜ್ರ ಗನಿಯು ಸದ್ಯದಲ್ಲೇ ಪನ್ನಾ ಸಂಸ್ಥಾನದಲ್ಲಿ (ಈ ಸಂಸ್ಥಾನವು ಮಧ್ಯ ಹಿಂದೂಸ್ಥಾನದಲ್ಲಿದ್ದು ಈಗ ಮಧ್ಯ ಭಾರತ ಸರಕಾರದೊಡನೆ ವಿಲೀನೀಕರಣವಾಗಿದೆ) ಕಾರ್ಯಾಚರಣೆ ಆರಂಭಿಸಲಿದೆ. ಪನ್ನಾ ಡೈಯಮಂಡ್ ಸಿಂಡಿಕೇಟ್‌ರವರಿಗೆ ಗನಿಯಿಂದ ವಜ್ರ ಎತ್ತುವ ಬಗ್ಗೆ ಸೂಕ್ತ ಸಲಹೆಗಳನ್ನು ಕೊಡುವ ಬಗ್ಗೆ ಇಬ್ಬರು ವಿದೇಶೀ ವಜ್ರ ಗನಿ ತಜ್ಞರ ನೆರವು ಕೋರಲಾಗಿದೆ. ಆ ತಜ್ಞರು ಪ್ರಸ್ತುತ ಭಾರತದಲ್ಲಿ ಇರುವರು.

ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ. (1921ರಲ್ಲಿ ಸ್ಥಾಪಿತವಾಗಿದೆ.

ಅಧಿಕೃತ ಶೇರು ಭಂಡವಾಳ	ರೂ.	10,00,000.
ವಸೂಲಾದ ಶೇರು ಮೊಬಲಗು	ರೂ.	1,99,400.
ಕ್ಷೇಮನಿಧಿ	ರೂ.	59,000.
ಇತರ ನಿಧಿಗಳು	ರೂ.	36,000.

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನೂ ಕೈಕೊಳ್ಳಲಾಗುವುದು. ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ, ಬೆಳ್ಳಿ ನಗಗಳ ಈಡಿನ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ಕು ಡ್ರಾಫ್ಟ್‌ಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರಿನಿಟಿ ಮತ್ತು ವಾರ್ಡನ್ಸ್ ಇನ್ಶೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಗೌ. ಕಾರ್ಯದರ್ಶಿ,

ಕೆ. ಪಿ. ಅಪ್ಪಯ್ಯ, M. L. C. ಪ್ರೆಸಿಡೆಂಟ್ ಮತ್ತು ಖಜಾಂಚಿ.

ದಿ ಟ್ರಾಪಿಕಲ್

ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

ಮೇನೇಜಿಂಗ್ ಡೈರೆಕ್ಟರ್:- ಲಾಲ ಶಂಕರ್ ಲಾಲ್.

ಮುಖ್ಯ ಕಛೇರಿ:- ಹೊಸ ಡೆಲ್ಲಿ.

52-9

ಸ್ಥಾಪಿಸಿದ ಡೈರೆಕ್ಟರರು:

ಪಂಡಿತ ಮೋತಿಲಾಲ್ ನೆಹರು, ಎಸ್. ಶ್ರೀನಿವಾಸ ಅಯ್ಯಂಗಾರ್

ಹಕೀಮ್ ಅಜಮುಲಖಾನ್. ಡಾ|| ಎಂ. ಎ. ಅನ್ಸಾರಿ.

Transacts:-Life, Fire, Motor, and Marine.

ಯಂ. ಯು. ಅಚ್ಚಣ್ಣ, ಇನ್ಸ್‌ಪೆಕ್ಟರು, ಮಡಿಕೇರಿ, ಕೊಡಗು.

ಎಂ. ಎ. ಬೆಳ್ಯಪ್ಪ, ಬ್ರಾಂಚ್ ಸೆಕ್ರೆಟರಿ, ಹಂಪನಕಟ್ಟೆ, ಮಂಗಳೂರು.

ಕೊಡಗು ಪ್ರಾಂತೀಕ ಸಹಕಾರಿ, ಮಾರ್ಕೆಟಿಂಗ್, ಫೆಡರೇಷನ್ ಲಿಮಿಟೆಡ್., ವೀರಾಜಪೇಟೆ.

ನಮ್ಮಲ್ಲಿ ಕೋವಿಗಳು, ತೋಟೆಗಳು ಮತ್ತು ಎಲ್ಲಾ ತರಹದ ವ್ಯವಸಾಯದ ಹತ್ಯಾರುಗಳು ದೊರೆಯುತ್ತವೆ.

1. 32 ಪಿಸ್ತೂಲುಗಳು (Pistols) ಕ್ರಯ ರೂ. 162 ರಿಂದ 245ರ ವರೆಗೆ.
2. 12ನೇ ನಂಬರಿನ ಒಂಟಿ ಹೊಳವಿನ ಕೋವಿ ಕ್ರಯ ರೂ. 320-0-0
3. 12ನೇ ನಂಬರಿನ ಜೋಡು ಹೊಳವಿನ ಕೋವಿ (Webley & Scott)
4. 12ನೇ ನಂಬರಿನ ಜೋಡು ಹೊಳವಿನ ಕೋವಿ (Spanish make)
5. .32 ಪಿಸ್ತೂಲು ಮತ್ತು ರಿವಾಲ್ವರುಗಳ ತೋಟೆಗಳೂ ಸಹ ದೊರೆಯುತ್ತವೆ.
6. ಕಾಫಿ ಮತ್ತು ಕಿತ್ತಳೆ ಗಿಡಗಳಿಗೆ ಸ್ಪ್ರೇಮಾಡುವ ಪಂಪುಗಳು (Spraying Pumps)
7. ¾" ⅝" ½" ⅜" ¼" ಕಬ್ಬಿಣದ ಸಲಾಕೆಗಳು

ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

(ಅವಶ್ಯವಿರುವ ಕೋವಿಗಳಿಗೂ, ತೋಟೆಗಳಿಗೂ ಜಿಲ್ಲಾ ಮೇಜಿಸ್ಟ್ರೇಟರಿಂದ ವಿಶೇಷ ಪರ್ಮಿಟು "Special permit" ಪಡೆದವರಿಗೆ ಮಾತ್ರ ದೊರೆಯುವದು)

52-೧೧

ಎಂ. ಎಸ್. ಸೋಮಯ್ಯ, ಗೌರವ ಕಾರ್ಯದರ್ಶಿ.

Editor, Printed and Published by P. I. Belliappa at 'Kodagu' Press, Mercara, for 'Kodagu' Ltd.

ಪ್ರಾಚೀನ ಮತ್ತು ಆಧುನಿಕ ಸಂಸ್ಕೃತಿ ಮತ್ತು ಶಿಕ್ಷಣ.

ಲೇಖಕ:— ಶ್ರೀ ಚೇ. ಸೋ. ಮು.

ಸಂಸ್ಕೃತಿಯನ್ನು ವಿವರಿಸುವುದು ಸುಲಭವಲ್ಲ. ಸಂಸ್ಕೃತಿ ಎಂದರೆ ನನ್ನ ಅಭಿಪ್ರಾಯದಲ್ಲಿ ಒಂದು ಜನಾಂಗದ ಮೂಲ ಬೆಳವಣಿಗೆ ಮತ್ತು ಅದರ ಸಾಮಾಜಿಕ ಸುಧಾರಣೆ ಎಂದು ಹೇಳಬಹುದು. ಆ ದೃಷ್ಟಿಯಿಂದ ಮಹಾಭಾರತದ ಸಂಸ್ಕೃತಿ ಮತ್ತು ಆಧುನಿಕ ಸಂಸ್ಕೃತಿಯನ್ನು ತಾಳೆ ಹಾಕಿ ನೋಡಿದರೆ ಈಗಿನ ಸಂಸ್ಕೃತಿಯು ಬರೇ ಶಾರೀರಿಕ ಸುಧಾರಣೆಯಲ್ಲಿ ಮಗ್ನವಾಗಿದೆಯಲ್ಲದೆ ಭೌತಿಕ ದೃಷ್ಟಿಯಲ್ಲಿ ಬರೀ ಟೊಳ್ಳಾದ ಜೀವನವೆಂದರೆ ಅತಿಶಯೋಕ್ತಿ ಆಗಲಾರದು. ಮಾನವ ಕುಟುಂಬದಲ್ಲಿ ಈ ರೀತಿಯ ಭಾವನೆ ಬರಲು ನಮ್ಮ ಈಗಿನ ವಿದ್ಯಾಭ್ಯಾಸ ಮತ್ತು ಜೀವನ ಕ್ರಮವೇ ಇದರ ಮೂಲವೆಂದು ಹೇಳಿದರೆ ಎಲ್ಲರೂ ಒಪ್ಪಬೇಕಾದ ವಿಷಯ.

ನಮ್ಮ ಪುರಾಣ ಗ್ರಂಥ ಮಹಾಭಾರತದ ಕಾಲದ ಸಂಸ್ಕೃತಿಯ ವಿಷಯ ಬರೆದ ಒಬ್ಬ ಮೇಧಾವಿಯು ಆಧುನಿಕ ಸಂಸ್ಕೃತಿಯನ್ನು ಈ ಕೆಳಗಿನ ರೀತಿಯಲ್ಲಿ ವರ್ಣಿಸಿದ್ದಾರೆ. ನಮ್ಮ ಈಗಿನ ಸ್ಥಿತಿಗೆ ಎಷ್ಟರ ಮಟ್ಟಿಗೆ ಇದು ಸರಿಹೋಗುತ್ತದೆ ಎಂಬುದು ಇದರಿಂದ ವ್ಯಕ್ತವಾಗುತ್ತದೆ. 'ಮಹಾಭಾರತದಲ್ಲಿ ವರ್ಣಿತವಾಗಿರುವ ನಾಗರೀಕತೆಯನ್ನು ಧಾರ್ಮಿಕವೆಂದು ಹೇಳಬಹುದು. ಅದು ರೇಸು, ವಿವಾಹವಿಚ್ಛೇದ, ವ್ಯಭಿಚಾರ, ರಕ್ತಪಾತ, ರಾಜಕೀಯ ಮತ್ತು ಸಾಮಾಜಿಕ ವಂಚನೆ ಮೊದಲಾದುವುಗಳಿಂದ ಕೂಡಿದ ಆಧುನಿಕ ನಾಗರೀಕತೆಯಲ್ಲ. ಈ ನಾಗರೀಕತೆಯ ಉತ್ತಮಾಂಶವು ಭೌತಿಕ ಸುಖಲಾಲಸೆ, ಉನ್ಮಾದಕರ ಪಾನೀಯಗಳು, ಮನಮೋಹಕ ಹೆಂಗಸರು, ಮಧ್ಯರಾತ್ರಿಯ ಕುಣಿತ ಮತ್ತು ಸುಖಾಪೇಕ್ಷೆಯ ಬಯಕೆಯಲ್ಲ. ಮಹಾಭಾರತದ ಕಾಲದ ನಾಗರೀಕತೆಯ ಗುರಿಯು ಇವಾಗಿರಲಿಲ್ಲ. ಆ ಕಾಲದಲ್ಲಿ ನಾಗರೀಕತೆಯೆಂದರೆ ಮನವನ್ನು, ಮಾನವ ಹೃದಯವನ್ನು ಅಲ್ಲೋಲಕಲ್ಲೋಲ ಮಾಡುವ ಕಾಮಲೋಭಗಳನ್ನು ಹಿಡಿತದಲ್ಲಿಟ್ಟುಕೊಳ್ಳುವ ಆ ಎಣೆಯಿಲ್ಲದ ಆನಂದವಾಗಿತ್ತು. ಆ ನಾಗರೀಕತೆಯ ಗುರಿಯು ಧಾರ್ಮಿಕ ನಾಗರೀಕತೆಯನ್ನು ಹಬ್ಬಿಸಿ ಆ ಮೂಲಕ ಮಾನವನ ಮನಸ್ಸಿನ ಅತ್ಯಾಶ್ಚರ್ಯಕರ ಸಂಗತಿಗಳನ್ನು ಶೋಧಿಸಿ ತಿಳಿಯುವದಾಗಿತ್ತು.' ಈ ಮೇಲಿನ ಒಂದು ವಿವರಣೆ ಈಗಿನ ಸಂಸ್ಕೃತಿ ಮತ್ತು ಪೂರ್ವಿಕರ ಸಂಸ್ಕೃತಿಯನ್ನು ಎತ್ತಿ ತೋರಿಸುತ್ತದೆ.

ಇದೇ ರೀತಿ ಪಾಶ್ಚಿಮಾತ್ಯ ಶಿಕ್ಷಣ ಮತ್ತು ನಮ್ಮ ಪ್ರಾಚೀನ ಶಿಕ್ಷಣದ ಕ್ರಮವನ್ನು ಸಂಕ್ಷಿಪ್ತವಾಗಿ ವಾಚಕರ ಮುಂದಿಡುತ್ತೇನೆ. ಇದೂ ಕೂಡ ಎಷ್ಟರ ಮಟ್ಟಿಗೆ ನಮ್ಮ ಭಾರತಕ್ಕೆ ಅನ್ವಯಿಸುತ್ತದೆ ಎಂಬುದನ್ನು ವಿಚಾರಿಸಬೇಕು. ಪಾಶ್ಚಿಮಾತ್ಯ ಕ್ರಮದ ಶಿಕ್ಷಣವು ಹೆಚ್ಚಿನ ಮಟ್ಟಿಗೆ ನಮ್ಮ ಜ್ಞಾನವನ್ನು ತೀಕ್ಷ್ಣವಾಗಿ ಮಾಡುತ್ತದಲ್ಲದೆ ಹೃದಯವನ್ನು ಪರಿಶೋಧಿಸುವುದಿಲ್ಲ-(It trains true intellect and not true heart) ಎಂಬುದಾಗಿ ಸ್ವಾಮಿ ವಿವೇಕಾನಂದರು ಒಂದೆಡೆಯಲ್ಲಿ ಹೇಳಿರುವರು. ವಿದ್ಯಾಭ್ಯಾಸದ ಮುಖ್ಯ ಧ್ಯೇಯವು ವಿರಾಮ ಕಾಲವನ್ನು ಸದುಪಯೋಗಮಾಡುವುದೇ ಎಂದು ಅರಿಸ್ಟಾಟಲ್ ಎಂಬ ಗ್ರೀಕ್ ತತ್ವಜ್ಞಾನಿಯು ಹೇಳಿರುವರು (The noble employment of leisure should be the main aim of education) ಆದರೆ ಪಾಶ್ಚಿಮಾತ್ಯ ಶಿಕ್ಷಣವು ನಮ್ಮ ಬೌದ್ಧಿಕ ಜ್ಞಾನವನ್ನು ಪೂರ್ತಿ ಹಾಳುಮಾಡಿ ನಮ್ಮ ನೈತಿಕ ಹಾದಿಯನ್ನು ಕೂಡ ಪೂರ್ಣ ಕೆಡಿಸಿರುವುದು. ನಮ್ಮ ಈಗಿನ ಶಿಕ್ಷಣ ಕ್ರಮವನ್ನು ಕುರಿತು ಸ್ವಾಮಿ ವಿವೇಕಾನಂದರು ಒಂದೆಡೆಯಲ್ಲಿ ಈ ರೀತಿ ಹೇಳಿರುವರು.-

'ನೀವು ತುಂಬಾ ವಿದ್ಯಾವಂತರೆಂದು ಯೋಚಿಸುತ್ತಿರುವಿರಿ. ಎಂಥಾ ತಿಳಿಗೇಡಿ ವಿಚಾರವನ್ನು ನೀವು ಕಲಿತಿರುವಿರಿ? ಇತರರ ಭಾವನೆಯನ್ನು ವಿದೇಶಿ ಭಾಷೆಯ ಮೂಲಕ ಕಂಠಪಾಠ ಮಾಡಿ, ನಿಮ್ಮ ಮೆದುಳನ್ನು ಅವುಗಳಿಂದ ತುಂಬಿಸಿ ವಿಶ್ವವಿದ್ಯಾಲಯದ ಡಿಗ್ರಿಯೊಂದನ್ನು ಗಳಿಸಿ ನೀವು ಮಹಾವಿದ್ಯಾವಂತರೆಂದು ಭಾವಿಸುತ್ತೀರಿ. ನಿಮಗೆ ಧಿಕ್ಕಾರವಿರಲಿ! ಇದು ವಿದ್ಯೆಯೇ? ಒಂದೋ ಗುಮಾಸ್ತಗಿರಿ ಇಲ್ಲವೇ ಕಪಟ ತುಂಬಿದ ವಕೀಲ, ಇಲ್ಲವೇ ಹೆಚ್ಚು ಹೊಗಳಿಸಿಕೊಳ್ಳುವ ಗುಮಾಸ್ತಗಿರಿಯಾದ ಒಂದು ಡೆಪ್ಯುಟಿ ಮೇಜಿಸ್ಟ್ರೇಟ್! ಇದೇ ಈಗಿನ ವಿದ್ಯೆಯ ಪುರುಷಾರ್ಥವೇ? ಈ ವಿದ್ಯೆಯು ನಿಮಗಾಗಲೀ, ನಿಮ್ಮ ದೇಶಕ್ಕಾಗಲಿ ಯಾವ ಹಿತಮಾಡೀತು? ಕಣ್ದೆರೆಯಿರಿ. ಸಂಪತ್ತಿಗೆ ನೆಲೆಮನೆಯೆಂದು ಕೀರ್ತಿಪಡೆದ ಭರತಖಂಡದಲ್ಲಿ ಆಹಾರಕ್ಕಾಗಿ ಎಂಥಾ ಆರ್ತಸ್ವರವು ಕೇಳಿಬರುತ್ತದೆ, ಕೇಳಿರಿ. ನಿಮ್ಮ ವಿದ್ಯೆ ಈ ಬೇಡಿಕೆಯನ್ನು ಪರಿಹರಿಸುವದೇ? ಖಂಡಿತಾ ಇಲ್ಲ.' ಈ ಭವಿಷ್ಯವಾಣಿ ಇಂದಿನ ಭಾರತಕ್ಕೆ ಎಷ್ಟರ ಮಟ್ಟಿಗೆ ಸರಿಹೋಗುತ್ತದೆ. ಎಂಬುದನ್ನು ಎಲ್ಲರೂ ವಿಚಾರಿಸುವ ವಿಷಯವಾಗಿದೆ. ಯಾವ ಶಿಕ್ಷಣದಲ್ಲಿ ಶೀಲವಿಲ್ಲದೆ ಇದೆಯೋ ಆ ವಿದ್ಯೆಯ ಪದವೀಧರರು ದೇಶದ ಏಳಿಗೆಗೆ ಎಂದೂ ಸಹಾಯಕರಾಗರು. ಒಳ್ಳೇ ಶೀಲವೇ ವಿದ್ಯೆಯ ಮುಖ್ಯ ಲಕ್ಷಣ. ಆದುದರಿಂದ ಆಧುನಿಕ ಸಂಸ್ಕೃತಿಯಲ್ಲೂ ಮತ್ತು ನಮ್ಮ ಶಿಕ್ಷಣದಲ್ಲೂ ಇಡೀ ವಿಶ್ವದಲ್ಲಿ ಅದರಲ್ಲೂ ನಮ್ಮ ಭಾರತ ಭೂಮಿಯಲ್ಲಿ ಮಹತ್ತಾದ ಮಾರ್ಪಾಟುಗಳು ಈ ಎರಡು ಕ್ಷೇತ್ರಗಳಲ್ಲಿ ಆಗದಿದ್ದರೆ ಮಾನವ ವರ್ಗದ ಅಂತ್ಯವು ಬಹಳ ದೂರದಲ್ಲಿಲ್ಲವೆಂದು ಹೇಳಬೇಕಾಗಿಲ್ಲ. ಭಗವಂತನು ಇಡೀ ವಿಶ್ವವನ್ನು ಇಂತಹ ಒಂದು ಅವಘಡದಿಂದ ಕಾಪಾಡಲಿ.

ಜೈ ಹಿಂದ್.

Licence No. 60,
Licenced to Post without Prepayment

Reg. No. M. 1550.
'KODAGU' MERCARA, (Coorg).

ಕೊಡಗು

ಸಂಪಾದಕರು—ಪಿ. ಐ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. ೬–೦–೦.

ಸಂಪುಟ ೩೦ | ತಾರೀಕು ೨೯–೬–೧೯೫೧ನೇ ಶುಕ್ರವಾರ | ಸಂಚಿಕೆ ೫

ಭಾರತದಲ್ಲಾಗುತ್ತಿರುವ ಔದ್ಯೋಗಿಕ ಪ್ರಗತಿ.

ನೂಲು ಮತ್ತು ಬಟ್ಟೆ

ಹಿಂದುಸ್ಥಾನದಲ್ಲಿಯ ಸುಸಂಘಟಿತವಾದ ದೊಡ್ಡ ಉದ್ಯೋಗವೆಂದರೆ ಜವಳಿ ಗಿರಣಿಗಳದು. ೧೯೪೭ ರಿಂದ ೧೯೫೦ ವರೆಗೆ ಹಿಂದುಸ್ಥಾನದಲ್ಲಿ ಪ್ರತಿ ವರ್ಷ ಹುಟ್ಟುವಳಿಯಾದ ನೂಲು ಮತ್ತು ಬಟ್ಟೆ ಕೆಳಗಿನಂತಿದೆ:—

ವರ್ಷ	ನೂಲು (ಪೌಂಡ)	ಬಟ್ಟೆ (ಗಜ)
೧೯೪೭	೧೩,೯೫,೭೦೫	೩೭,೯೧,೯೧೪
೧೯೪೮	೧೪,೪೭,೬೧೬	೪೩,೧೦,೩೦೩
೧೯೪೯	೧೩,೫೯,೧೧೯	೩೯,೦೪,೨೦೩
೧೯೫೦	೧೧,೭೩,೦೩೭	೩೬,೬೭,೩೪೯

(ಅಂಕಿಗಳು ಸಾವಿರದಲ್ಲಿ)

ಈ ಅಂಕಿಗಳನ್ನು ನೋಡಿದರೆ ೧೯೪೮ ರಲ್ಲಿ ಹುಟ್ಟುವಳಿ ತೀರ ಹೆಚ್ಚಿಗಿದ್ದುದೂ ೧೯೫೦ ರಲ್ಲಿ ತೀರ ಕಡಿಮೆ ಇದ್ದುದೂ ಕಂಡುಬರುವದು. ೧೯೫೦ ರಲ್ಲಿ ಉತ್ಪಾದನೆ ಕಡಿಮೆಯಾಗಲು ಕಾರಣವೆಂದರೆ ಹತ್ತಿಯ ಕೊರತೆ, ಕೆಲಸಗಾರರ ಮುಷ್ಕರ, ಕೆಲಸ ತಪ್ಪಿಸುವದು ಮೊದಲಾದದ್ದು. ಕಳೆದ ವರ್ಷ ಮುಂಬಯಿಯಲ್ಲಿ ಸಮಾಜವಾದಿಗಳೂ ಕಮ್ಯುನಿಸ್ಟರೂ ಕೂಡಿ ನಡೆಸಿದ ಜವಳಿ ಕೆಲಸಗಾರರ ಮುಷ್ಕರದಿಂದ ನೂಲಿನ ಉತ್ಪಾದನೆಯಲ್ಲಿ ಮತ್ತು ಬಟ್ಟೆಯ ಉತ್ಪಾದನೆಯನ್ನು ೮೦ ಲಕ್ಷ ಪೌಂಡು ನೂಲು ಇಪ್ಪತ್ತು ಕೋಟಿ ಮೂವತ್ತು ಲಕ್ಷ ಗಜ ಬಟ್ಟೆ ಕಡಿಮೆಯಾಯಿತಲ್ಲದೆ ಹದಿನಾರು ಕೋಟಿ ಐವತ್ತು ಲಕ್ಷ ರೂಪಾಯಿಗಳ ಹಾನಿಯಾಯಿತು.

ಹಿಂದುಸ್ಥಾನದಲ್ಲಿ ಈಗ ನಡೆಯುವ ಗಿರಣಿಗಳಿಗೆ ಪ್ರತಿ ವರ್ಷ ೪೨ ಲಕ್ಷ ಬೇಲು ಅರಳೆ ಬೇಕಾಗುತ್ತದೆ. ಇದರಲ್ಲಿ ೩೬ ಲಕ್ಷ ಬೇಲುಗಳು ನಮ್ಮ ದೇಶದಲ್ಲಿದ್ದು ನಯ ಬಟ್ಟೆಗಾಗಿ ೬ ಲಕ್ಷ ಬೇಲುಗಳನ್ನು ಈಜಿಪ್ತ, ಪೂರ್ವ ಆಫ್ರಿಕಾ ಮತ್ತು ಸುಡಾನಗಳಿಂದ ತರಿಸಬೇಕಾಗುವದು. ದೇಶವಿಭಜನೆಯ ನಂತರ ಮತ್ತು ರೂಪಾಯಿಯ ಬೆಲೆ ಇಳಿಸಿದ ನಂತರ ಪಾಕಿಸ್ತಾನದ ಅರಳೆ ಬರುವದು ನಿಂತಿತು. ೧೯೫೦–೫೧ ರಲ್ಲಿ ನಮ್ಮ ದೇಶದಲ್ಲಿ ೩೨ ಲಕ್ಷ ಗಂಟು ಅರಳೆಯು ಉತ್ಪತ್ತಿಯಾಯಿತು. ಆದುದರಿಂದ ಕಡಿಮೆ ಬಿದ್ದ ಅರಳೆಯನ್ನು ಅಮೇರಿಕೆಯಿಂದ ತರಿಸಬೇಕಾಯಿತು. ಈ ಅರಳೆಯಿಂದ ನಯ ಬಟ್ಟೆ ಹೊರಡುವದರಿಂದ ಇಲ್ಲಿಯ ಗಿರಣಿಗಳ ಸ್ವರೂಪವೇ ಬದಲಾಗಿದೆ. ೧೯೪೮–೪೯ ರ ವರೆಗೆ ನಯ ಮತ್ತು ಅತಿನಯವಾದ ಬಟ್ಟೆ ಅನುಕ್ರಮವಾಗಿ ನೂರಕ್ಕೆ ೨೨ ಮತ್ತು ೨೯ ರಷ್ಟು ಹೊರಡುತ್ತಿತ್ತು. ಆದರೆ ೧೯೫೦ ರಲ್ಲಿ ೧೦೦ ಕ್ಕೆ ೩೮ ಮತ್ತು ೪೦ ರಷ್ಟು ಉತ್ಪಾದಿಸಲ್ಪಟ್ಟಿತು. ಇದರಿಂದ ಒರಟು ಬಟ್ಟೆಯ ಉತ್ಪಾದನೆ ಕಡಿಮೆಯಾಯಿತು. ಹಿಂದುಸ್ಥಾನದಿಂದ ನಿರ್ಯಾತವಾಗುವ ಬಟ್ಟೆಯಲ್ಲಿ ೧೦೦ ಕ್ಕೆ ೮೨ ರಷ್ಟು ಒರಟು ಮತ್ತು ಮಧ್ಯಮ ತರಗತಿಯದು. ಇದರಿಂದ ಇಲ್ಲಿಯ ಜನರಿಗೆ ಆ ಬಟ್ಟೆ ದೊರೆಯದೆ ನಯವಾದ ಬಟ್ಟೆಯನ್ನೇ ಉಪಯೋಗಿಸಬೇಕಾಯಿತು.

ಒಕ್ಕಲಿಗರು ಹೆಚ್ಚು ಹತ್ತಿ ಬೆಳೆಯುವಂತೆ ಪ್ರೋತ್ಸಾಹವನ್ನು ಕೊಡುವದಕ್ಕಾಗಿ ಪ್ರತಿ ಖಂಡಿಗೆ ೧೫೦ ರೂಪಾಯಿ ಬೆಲೆ ಹೆಚ್ಚಿಸಲಾಯಿತು. ೧೯೫೦ ರ ಪ್ರಾರಂಭದಲ್ಲಿ ನೂಲು ಮತ್ತು ನೂಲಿನ ಬಟ್ಟೆಯ ನಿರ್ಯಾತವು ಅನಿರ್ಬಂಧವಾಗಿ ಸಾಗಲು ಸರಕಾರವು ಅನುಮತಿ ಕೊಟ್ಟಿತು. ಯಾಕೆಂದರೆ ಗಿರಣಿಗಳಲ್ಲಿ ಸಂಗ್ರಹವೂ ಬಹಳವಿತ್ತು. ಆದರೆ ಇದ್ದುದರ ಬಹುಭಾಗವು ನಿರ್ಯಾತವಾದುದರಿಂದ ಇಲ್ಲಿಯ ಜನರಿಗೆ ಬಟ್ಟೆಯ ಕೊರತೆಯುಂಟಾಗ ಹತ್ತಿತು.

೧೯೪೭ ರಿಂದ ೧೯೪೮ ರ ವರೆಗೆ ಕೈಮಗ್ಗಗಳಿಗೆ ಸಾಕಷ್ಟು ನೂಲಿನ ಪೂರೈಕೆಯಾಗುತ್ತಿತ್ತು. ಆದರೆ ೧೯೫೦ ರಲ್ಲಿ ಈ ಪೂರೈಕೆಯು ಕೇವಲ ೧೦೦ ಕ್ಕೆ ೫೨ ರಷ್ಟು ಮಾತ್ರ ಆಯಿತು. ಅನಂತರ ನೂಲಿನ ನಿರ್ಯಾತವನ್ನು ನಿಲ್ಲಿಸಲಾಯಿತು. ಮತ್ತು ತಮಗೆ ಇಷ್ಟ ಬಂದವರಿಗೆ ತಮ್ಮ ಉತ್ಪಾದನೆಯಲ್ಲಿ ೯ ನೂಲನ್ನು ಕೊಡಬಹುದೆಂದು ಗಿರಣಿಯೊಡೆಯರಿಗೆ ಕೊಟ್ಟ ಸೌಲಭ್ಯವನ್ನೂ ನಿಲ್ಲಿಸಲಾಯಿತು. ಮತ್ತು ಹಲಕೆಲವು ಹೊಸ ಗಿರಣಿಗಳನ್ನೂ ಪ್ರಾರಂಭಿಸಲಾಯಿತು. ಈ ಗಿರಣಿಯೊಳಗಿಂದ ೨೫ ಲಕ್ಷ ಪೌಂಡು ನೂಲಿನ ಉತ್ಪಾದನೆಯಾಗಬಹುದೆಂದು ಲೆಕ್ಕ ಮಾಡಲಾಗಿದೆ. ಈಗ ಗಿರಣಿಗಳು ಬೇಕಾದಲ್ಲಿಂದ ಅರಳೆಯನ್ನು ಕೊಳ್ಳುವದಕ್ಕೂ ತಡೆಹಾಕಲಾಗಿದೆ.

ಕಲ್ಲಿದ್ದಲಿ

ನಮ್ಮ ದೇಶದ ಇನ್ನೊಂದು ಮಹತ್ವದ ಉತ್ಪಾದನೆಯೆಂದರೆ ಕಲ್ಲಿದ್ದಲಿ. ಇದೂ ನಿಯಂತ್ರಿತ ಉದ್ಯೋಗವಿದೆ. ಕಲ್ಲಿದ್ದಲಿಗೆ ನಮ್ಮ ದೇಶದಲ್ಲಿ ಕೊರತೆ ಇಲ್ಲ.

ಕಲ್ಲಿದ್ದಲಿಯ ಉತ್ಪಾದನೆ:–

೧೯೪೮ ರಲ್ಲಿ ೩ ಕೋಟಿ ೯೫ ಲಕ್ಷ ಟನ್
೧೯೪೯ ರಲ್ಲಿ ೩ ಕೋಟಿ ೧೪ ಲಕ್ಷ ಟನ್
೧೯೫೦ ರಲ್ಲಿ ೩ ಕೋಟಿ ೧೯ ಲಕ್ಷ ಟನ್

ಈ ಪ್ರಕಾರ ಇದ್ದರೂ ಸಾಗಣೆಯ ಅನಾನುಕೂಲತೆಯ ಮೂಲಕ ದೇಶದ ಬೇರೆ ಬೇರೆ ಸ್ಥಳಗಳಿಗೆ ಇದನ್ನು ಸಕಾಲಕ್ಕೆ ಕಳಿಸುವದಾಗಲಿಲ್ಲ. ಇಲ್ಲಿಂದ ಹಾಂಗಕಾಂಗ್, ಸಿಂಗಾಪುರ, ಬ್ರಹ್ಮದೇಶ, ಸಿಲೋನ ಈ ದೇಶಗಳಿಗೆ ನಮ್ಮ ಕಲ್ಲಿದ್ದಲಿ ಹೋಗುತ್ತಿದ್ದು ಈ ವರ್ಷದಿಂದ ಆಸ್ಟ್ರೇಲಿಯಾ, ಜಪಾನ್, ಈಜಿಪ್ತ ಮತ್ತು ಏಡನಗಳಿಗೂ ಇಲ್ಲಿಂದ ಈ ಸಾಮಗ್ರಿಯು ಹೋಗುತ್ತಲಿದೆ. ಮತ್ತು ಹೊಸ ಖರಾರಿನನ್ವಯ ಪಾಕಿಸ್ತಾನಕ್ಕೂ ಕೆಲಪ್ರಮಾಣದಲ್ಲಿ ಹೋಗಬಹುದು.

ಉಕ್ಕು ಮತ್ತು ಕಬ್ಬಿಣ.

೧೯೪೯ ರಲ್ಲಿ ೯ ಲಕ್ಷ ೩೦ ಸಾವಿರ ಟನ್ ಉಕ್ಕು ತಯಾರಾಗಿತ್ತು. ಅದು ೧೯೫೦ ರಲ್ಲಿ ೯ ಲಕ್ಷ ೮೩ ಸಾವಿರದ ವರೆಗೆ ಏರಿತ. ಆದರೂ ಕೊರಿಯಾ ಯುದ್ಧದ ಮೂಲಕ ಬೆಲೆಗಳು ಏರಿದ್ದರಿಂದ ೧೯೪೯ ರಲ್ಲಿ ೩ ಲಕ್ಷ ೮೭ ಸಾವಿರ ಟನ್ ಆಯಾತವಾದದ್ದು ೧೯೫೦ ರಲ್ಲಿ ೨ ಲಕ್ಷ ೮೪ ಸಾವಿರಕ್ಕಿಳಿಯಿತು. ಆದ್ದರಿಂದ ಉಕ್ಕಿನ ಕೊರತೆ ಕೆಲವಂಶದಲ್ಲಿ ಕಂಡುಬಂತು. ಇಲ್ಲಿಯ ಉತ್ಪಾದನೆಯಿಂದ ರೇಲ್ವೆಗಳಿಗೆ ಬೇಕಾದಷ್ಟನ್ನು ಪೂರೈಸಲಾದರೂ ಜನತೆಗೆ ಮಾತ್ರ ಸಾಕಷ್ಟು ಲಭ್ಯವಾಗಲಿಲ್ಲ. ಆದ್ದರಿಂದ ಉಕ್ಕಿನ ವಿತರಣೆಯ ಪದ್ಧತಿಯಲ್ಲಿ ಬದಲು ಮಾಡಲಾಯಿತು.

ಹಿಂದುಸ್ಥಾನದಲ್ಲಿ, ಟಾಟಾ ಆಯರ್ನ್ ಆ್ಯಂಡ್ ಸ್ಟೀಲ್ ಕಂಪೆನಿ, ಮೈಸೂರ್ ಆಯರ್ನ್ ವರ್ಕ್ಸ್ ಮತ್ತು ಬಂಗಾಲ ಸ್ಟೀಲ್ ಕಾರ್ಪೊರೇಶನ್ ಇವು ಉಕ್ಕಿನ ಉತ್ಪಾದನೆ ಮಾಡುವ ಮೂರು ಸಂಸ್ಥೆಗಳು. ಇವರಲ್ಲಿ ಟಾಟಾ ಕಂಪೆನಿಯವರು ಪ್ರತಿ ವರ್ಷ ೧ ಲಕ್ಷ ೮೧ ಸಾವಿರ ಟನ್ ಉಕ್ಕು ತಯಾರು ಮಾಡುವ ಹೊಸ ಯೋಜನೆಯೊಂದನ್ನು ಸಿದ್ಧಪಡಿಸಿದ್ದು ಅದಕ್ಕೆ ೨೫ ಕೋಟಿ ರೂಪಾಯಿಗಳು ತಗಲುವವು. ಇದರಲ್ಲಿ ಅರ್ಧ ಹಣವನ್ನು ಹಿಂದುಸ್ಥಾನ ಸರಕಾರವು ಕೊಡಲಿದ್ದು ಇನ್ನರ್ಧವನ್ನು ಕಂಪೆನಿಯು ಶೇಖರಿಸುವದು. ಈ ಕಾರಖಾನೆಯಿಂದ ಹೊರಡುವ ಮುಖ್ಯ ವಸ್ತುಗಳೆಂದರೆ ನೀರಿನ ಕೊಳವೆಗಳು.

ಮೈಸೂರು ಕಾರಖಾನೆಗೂ ಹಿಂದುಸ್ಥಾನ ಸರಕಾರವು ಸಾಲ ಕೊಡಲು ಒಪ್ಪಿದ್ದು ಅಲ್ಲಿ ಪ್ರತಿ ವರ್ಷ ೬೦ ಸಾವಿರ ಟನ್ ಉಕ್ಕು ಹೆಚ್ಚಾಗಿ ಉತ್ಪಾದಿಸಲ್ಪಡುವದು.

ಬಂಗಾಲ ಸ್ಟೀಲ ಕಾರ್ಪೊರೇಶನದವರು ಮತ್ತೆ ಎರಡು ಕೋಟಿ ಹೆಚ್ಚಿನ ಬಂಡವಾಳವನ್ನು ಹಾಕಿ ತಮ್ಮ ಉತ್ಪಾದನೆ ಹೆಚ್ಚಿಸಲಿದ್ದಾರೆ.

ಸಿಮೆಂಟ್.

೧೯೪೮ ರಲ್ಲಿ ೧೧ ಲಕ್ಷ ಟನ್ ಸಿಮೆಂಟಿನ ಉತ್ಪಾದನೆಯಾಗಿತ್ತು ಆದರೆ ೧೯೫೦ ರಲ್ಲಿ ಅದರ ಇಮ್ಮಡಿಗಿಂತ ಹೆಚ್ಚು ಅಂದರೆ ೨೬ ಲಕ್ಷ ಟನ್ ಉತ್ಪಾದಿಸಲಟ್ಟಿತು. ಹಿಂದುಸ್ಥಾನದಲ್ಲಿ ಒಟ್ಟು ೨೧ ಸಿಮೆಂಟ್ ಕಾರಖಾನೆಗಳಿದ್ದು ಅವೆಲ್ಲವೂ ತಮ್ಮ ಉತ್ಪಾದನೆ ಹೆಚ್ಚಿಸಿವೆ. ಈಗ ಮತ್ತೆ ೯ ಕಾರಖಾನೆಗಳ ಯೋಜನೆ ಪೂರ್ತಿಯಾಗಲಿದ್ದು ಈ ವರ್ಷದಲ್ಲಿ ಮತ್ತೆ ೧೦ ಲಕ್ಷ ಟನ್ನಿನ ವರೆಗೆ ಉತ್ಪಾದನೆ ಹೆಚ್ಚಬಹುದು. ಇಲ್ಲಿಂದ ಪರದೇಶಗಳಿಗೂ ಸಿಮೆಂಟಿನ ನಿರ್ಯಾತ ನಡೆದೇ ಇದೆ. ಹೋದ ವರ್ಷ ೪೦ ಸಾವಿರ ಟನ್ ಸಿಮೆಂಟನ್ನು ಪರದೇಶಗಳಿಗೆ ನಿರ್ಯಾತ ಮಾಡಲಾಯಿತು.

ಉಪ್ಪು,

ಹಿಂದುಸ್ಥಾನದಲ್ಲಿ ಒಟ್ಟು ೫೪೭೧ ಉಪ್ಪಿನ ನಿರ್ಮಿತಿ ಕೇಂದ್ರಗಳಿವೆ. ಇವು ೧೦೭ ಗುಂಪುಗಳಲ್ಲಿ ಇವೆ. ಅವುಗಳಲ್ಲಿ ಐದು ಕೇಂದ್ರ ಸರಕಾರದ ಒಡೆತನದ್ದಿವೆ. ಉಳಿದವು ಸರಕಾರದ ಒಡೆತನದ ಭೂಮಿಯಲ್ಲಿವೆ. ೧೯೪೮ ರಲ್ಲಿ ಉಪ್ಪಿನ ಕ್ಷೇತ್ರವು ೫೧,೪೯೫ ಇದ್ದದ್ದು ಈಗ ೫೫,೭೧೩ ಎಕರೆಗಳ ವರೆಗೆ ಪಸರಿಸಿದೆ. ೧೯೪೭ರಿಂದ ಪ್ರತಿ ವರ್ಷ ಕೆಳಗಿನಂತೆ ಉತ್ಪಾದನೆಯಾಯಿತು.

೧೯೪೭	ರಲ್ಲಿ	೫೧೭	ಲಕ್ಷ	ಮಣ
೧೯೪೮	,,	೬೩೫	,,	,,
೧೯೪೯	,,	೫೫೭	,,	,,
೧೯೫೦	,,	೭೧೩	,,	,,

ಇದರಲ್ಲಿ ಮಧ್ಯವರ್ತಿ ಸರಕಾರದ ಉತ್ಪಾದನ ಕೇಂದ್ರದಲ್ಲಿ ೧೦೦ ಕ್ಕೆ ೨೭ ರಷ್ಟಾಗುತ್ತಿದ್ದು ಮಧ್ಯವರ್ತಿ ಸರಕಾರದ ಮುಖಾಂತರ ೧೦೦ ಕ್ಕೆ ೬೦ ರಷ್ಟು ಆಗುತ್ತದೆ.

ಪ್ರಪಂಚದಲ್ಲಿ ಪ್ರತಿ ವರ್ಷ ಪ್ರತಿಯೊಬ್ಬನು ಉಪಯೋಗಿಸುವದು ೩೦ ಪೌಂಡು ಉಪ್ಪು. ಹಿಂದುಸ್ಥಾನದಲ್ಲಿ ವರ್ಷಕ್ಕೆ ಪ್ರತಿಯೊಬ್ಬನ ಪ್ರಮಾಣ ೧೪ ಪೌಂಡು ಇದೆ. ಮದ್ರಾಸದಲ್ಲಿ ಮಾತ್ರ ೨೦ ಪೌಂಡು ಇದೆ. ಈ ಲೆಕ್ಕದ ಮೇಲಿಂದ ೧೯೫೦ ರಲ್ಲಿ ಹಿಂದುಸ್ಥಾನಕ್ಕೆ ೬೮೩ ಲಕ್ಷ ಮಣ ಸಾಗುತ್ತಿತ್ತು. ಆದರೆ ಸೋಡಾ ಆ್ಯಶ್‌ಕ್ಕೆ ಹೆಚ್ಚು ಉಪ್ಪು ಬೇಕಾಗುವದು. ಆದುದರಿಂದ ಹೋದ ವರ್ಷ ೪೩ ಲಕ್ಷ ಮಣ ಉಪ್ಪನ್ನು ಪರದೇಶಗಳಿಂದ ತರಿಸಲಾಯಿತು. ಒಂದು ಲಕ್ಷ ಮಣ ಸೈಂಧವಲವಣವನ್ನು ಪಾಕಿಸ್ತಾನದಿಂದ ತರಿಸಲಾಯಿತು. ಮತ್ತು ಇದರಲ್ಲಿ ೫ ಲಕ್ಷ ಮಣವನ್ನು ಜಪಾನಕ್ಕೂ ೨೪ ಲಕ್ಷ ಮಣವನ್ನು ಪೂರ್ವ ಪಾಕಿಸ್ತಾನಕ್ಕೂ ಕಳಿಸಲಾಯಿತು.

ಕಾಗದ

ಕಾಗದದ ಉತ್ಪಾದನೆ ಬಗೆಗೆ ಹಿಂದುಸ್ಥಾನವು ಸ್ವಾವಲಂಬಿಯಾಗಿಲ್ಲ. ವೃತ್ತಪತ್ರಿಕೆಗಳಿಗೆ ಬೇಕಾಗುವ ಕಾಗದಕ್ಕಂತೂ ನಾವು ಸಂಪೂರ್ಣ ಪರಾವಲಂಬಿಗಳಾಗಿದ್ದೇವೆ. ಮಧ್ಯಪ್ರದೇಶದಲ್ಲಿ ವೃತ್ತಪತ್ರಿಕೆ ಕಾಗದದ ಗಿರಣಿಯೊಂದು ೧೯೫೨ ರಷ್ಟರಲ್ಲಿ ಪ್ರಾರಂಭವಾಗಲಿದ್ದು ಅಲ್ಲಿ ಪ್ರತಿ ವರ್ಷ ಸುಮಾರು ೫೦ ಸಾವಿರ ಟನ್ ಕಾಗದದ ಉತ್ಪಾದನೆಯಾಗಬಹುದೆಂದು ಅಂದಾಜು ಇದೆ. ಕಾಗದದ ಉತ್ಪಾದನೆ ಕೆಳಗಿನಂತಿದೆ—

೧೯೪೮	ರಲ್ಲಿ	೯೮,೬೮೦	ಟನ್
೧೯೪೯	,,	೧,೦೩,೨೦೦	,,
೧೯೫೦	,,	೧,೦೮,೯೨೬	,,

ಇಷ್ಟು ಕಾಗದದ ಉತ್ಪಾದನೆ ನಮ್ಮ ದೇಶದಲ್ಲಾಯಿತು. ಈ ರೀತಿಯಾಗಿ ನಮ್ಮ ಔದ್ಯೋಗಿಕ ಕ್ಷೇತ್ರದಲ್ಲಿ ಪ್ರಗತಿಯಾಗಿದ್ದುದು ಕಂಡು ಬಂದರೂ ಇನ್ನೂ ಸ್ವಾವಲಂಬಿಯಾಗುವಷ್ಟು ಸಾಧಿಸಲು ಹಳಷ್ಟಿದೆ. (ಜೈ ಹಿಂದ್)

— — —